translationWords

ಸಂವಹನ 35.1

[kn]

ಹಕ್ಕುಸ್ವಾಮ್ಯಗಳು ಮತ್ತು ಪರವಾನಗಿ

translationWords
ದಿನಾಂಕ: 2023-03-02
ಸಂವಹನ: 35.1
ಪ್ರಕಟಿಸಲಾಗಿದೆ: BCS

translationAcademy
ದಿನಾಂಕ: 2022-07-20
ಸಂವಹನ: 24.1
ಪ್ರಕಟಿಸಲಾಗಿದೆ: BCS

License

Creative Commons Attribution-ShareAlike 4.0 International (CC BY-SA 4.0)

This is a human-readable summary of (and not a substitute for) the license.

You are free to:

- **Share** — copy and redistribute the material in any medium or format
- **Adapt** — remix, transform, and build upon the material

for any purpose, even commercially.

The licensor cannot revoke these freedoms as long as you follow the license terms.

Under the following conditions:

- **Attribution** — You must attribute the work as follows: "Original work available at https://door43.org/." Attribution statements in derivative works should not in any way suggest that we endorse you or your use of this work.
- **ShareAlike** — If you remix, transform, or build upon the material, you must distribute your contributions under the same license as the original.

No additional restrictions — You may not apply legal terms or technological measures that legally restrict others from doing anything the license permits.

Notices:

You do not have to comply with the license for elements of the material in the public domain or where your use is permitted by an applicable exception or limitation.

No warranties are given. The license may not give you all of the permissions necessary for your intended use. For example, other rights such as publicity, privacy, or moral rights may limit how you use the material.

ಪರಿವಿಡಿ

translationWords **24**
Key Terms 24
ಅಂತ್ಯ ದಿನ, ಅಂತ್ಯ ದಿನಗಳು, ಅನಂತರದ ದಿನಗಳು 25
ಅಕ್ರಮ 26
ಅತಿಕ್ರಮಣ, ಅತಿಕ್ರಮಣಗಳು, ಉಲ್ಲಂಘನೆ 27
ಅಧಿಕಾರ 28
ಅನ್ಯ ಜನರು 29
ಅಪರಾಧ, ಅಪರಾಧಿ 30
ಅಪೊಸ್ತಲ, ಅಪೊಸ್ತಲತ್ವ 31
ಅಭಿಷೇಕಿಸು, ಅಭಿಷೇಕಿಸಿದ್ದು, ಅಭಿಷೇಕ 32
ಅಯ್ಯೋ 33
ಅಸಹ್ಯ, ಅಸಹ್ಯಕರ 34
ಆಜ್ಞಾಪಿಸು, ಆಜ್ಞೆಗಳನ್ನು, ಆಜ್ಞಾಪಿಸಲ್ಪಟ್ಟಿದೆ, ಆಜ್ಞೆ, ಆಜ್ಞೆಗಳು 35
ಆತ್ಮ, ಗಾಳಿ,ಶ್ವಾಸ 36
ಆಮೆನ್, ನಿಜವಾಗಿ 38
ಆಯ್ಕೆ ಮಾಡಿಕೊಂಡಿರುವ ವ್ಯಕ್ತಿ, ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವುದು, ಆಯ್ಕೆ ... 39
ಆರಾಧನೆ 41
ಆಶೀರ್ವದಿಸು, ಆಶೀರ್ವದಿಸಲ್ಪಟ್ಟಿದ್ದೇನೆ, ಆಶೀರ್ವಾದ 43
ಆಸಕ್ತಿ, ಉತ್ಸಾಹಭರಿತ 45
ಇಬ್ರಿ, ಇಬ್ರಿಯರು 46
ಇಸ್ರಾಯೇಲ, ಇಸ್ರಾಯೇಲ್ಯರು 47
ಉಪರಾಜ 48
ಎಚ್ಚರಿಸು, ಎಚ್ಚರಿಕೆ 49
ಎಲ್ಲೆಮೀರುವುದು 50
ಒಡಂಬಡಿಕೆ 51
ಒಡಂಬಡಿಕೆಯ ನಂಬಿಕೆ, ಒಡಂಬಡಿಕೆಯ ನಿಯತ್ತು, ಪ್ರೀತಿಯ ದಯೆ, ವಿಫಲವಾಗದ ಪ್ರೀತಿ 53
ಒಡಂಬಡಿಕೆಯ ಮಂಜೂಷ, ಯೆಹೋವನ ಮಂಜೂಷ 54
ಒಡೆಯ, ಒಡೆಯರು, ಕರ್ತನು, ಯಜಮಾನ, ಯಜಮಾನರು, ಅಯ್ಯಾ, ಸ್ವಾಮಿಗಳು 55
ಒಪ್ಪಿಕೋ, ಒಪ್ಪಿಕೊಂಡಿವೆ, ಒಪ್ಪಿಸುತ್ತದೆ, ಒಪ್ಪಿಕೊಳ್ಳುವಿಕೆ 57
ಒಳ್ಳೇಯದು, ಒಳ್ಳೇತನ 58
ಕಂಚುಕಿಯನು, ಕಂಚುಕಿಯರು 60
ಕನಿಕರ, ಕರುಣೆ 61
ಕಪಟಿ, ಕಪಟಿಗಳು, ಕಾಪಟ್ಯ 62
ಕರುಣೆ, ಕರುಣಾಮಯ 63
ಕರೆ, ಕರೆಯಲ್ಪಟ್ಟಿದ್ದೇನೆ 65
ಕರ್ತನ ದಿನ, ಯೆಹೋವನ ದಿನ 67
ಕರ್ತನ ಭೋಜನ 68
ಕರ್ತನಾದ ಯೆಹೋವ, ಯೆಹೋವ ದೇವರು 69
ಕಲ್ಲು, ಕಲ್ಲುಗಳು, ಕಲ್ಲುಗಳನ್ನು ಎಸೆಯುವುದು 70
ಕಾರ್ಯಗಳು, ಕ್ರಿಯೆಗಳು, ಕೆಲಸ, ಕೃತ್ಯಗಳು 71
ಕೀರ್ತನೆ 73
ಕುರಿಮರಿ, ದೇವರ ಕುರಿಮರಿ 74
ಕೃಪೆ, ಕೃಪೆಯುಳ್ಳ 76
ಕೆಟ್ಟ, ದುಷ್ಟ, ದುಷ್ಟತನ 77
ಕ್ರಮಶಿಕ್ಷಣೆ, ಕ್ರಮಪಡಿಸುವುದು, ಕ್ರಮಪಡಿಸಲಾಗಿದೆ, ಸ್ವಯಂ-ಕ್ರಮಶಿಕ್ಷಣೆ 79
ಕ್ರಿಸ್ತ, ಮೆಸ್ಸೀಯ 80
ಕ್ರಿಸ್ತನಲ್ಲಿ, ಯೇಸುವಿನಲ್ಲಿ, ಕರ್ತನಲ್ಲಿ, ಆತನಲ್ಲಿ 82
ಕ್ರಿಸ್ತವಿರೋಧಿ, ಕ್ರಿಸ್ತವಿರೋಧಿಗಳು 83
ಕ್ರೈಸ್ತನು 84

ಕ್ರೋಧ, ಕೋಪ 85
ಕ್ಷಮಿಸು, ಕ್ಷಮಿಸಲ್ಪಡು, ಕ್ಷಮಾಪಣೆ, ಕ್ಷಮೆ, ಕ್ಷಮಿಸುವಿಕೆ 86
ಗುಡಾರ 88
ಗುರುತು, ಗುರುತುಗಳು, ನಿರೂಪಣೆ, ಜ್ಞಾಪನೆ 89
ಘನಪಡಿಸು 90
ಚೀಯೋನಿನ ಕುಮಾರ್ತೆ 91
ಚೀಯೋನ್, ಚೀಯೋನ್ ಪರ್ವತ 92
ಚೊಚ್ಚಲತನದ ಹಕ್ಕು 93
ಜೀವನ, ಜೀವಿಸು, ಜೀವಿಸಿದೆ, ಜೀವಂತವಾಗಿರುವುದು 94
ಜ್ಞಾನಿ, ಜ್ಞಾನ 96
ತಂದೆಯಾದ ದೇವರು, ಪರಲೋಕದ ತಂದೆ, ತಂದೆ 97
ತಗ್ಗಿಸು, ತಗ್ಗಿಸಿಕೊಂಡಿದೆ, ದೀನತೆ 99
ತೀರ್ಪಿನ ದಿನ 100
ತೀರ್ಪು ಮಾಡು, ತೀರ್ಪು ಮಾಡಲಾಗುವುದು, ತೀರ್ಪು ಮಾಡಲಾಗಿದೆ, ಕಠಿಣವಾದ ತೀರ್ಪು 101
ತೀರ್ಪುಮಾಡು, ನ್ಯಾಯಾಧೀಶರು, ತೀರ್ಪು, ತೀರ್ಪುಗಳು 102
ತೊರೆ, ತೊರೆಯುವುದು, ತೊರೆಯಲ್ಪಟ್ಟಿದೆ, ಬಿಟ್ಟುಬಿಡಿ 104
ದತ್ತು ಸ್ವೀಕಾರ, ದತ್ತು ತೆಗೆದುಕೊಳ್ಳುವುದು, ದತ್ತು ತೆಗೆದುಕೊಂಡಿದ್ದಾರೆ 105
ದಯೆ, ದಯೆ ತೋರಿಸುತ್ತದೆ, ಇಷ್ಟವಾದ, ಪಕ್ಷಪಾತ 106
ದೀಕ್ಷಾಸ್ನಾನ ಮಾಡಿಸು, ದೀಕ್ಷಾಸ್ನಾನ ಮಾಡಿಸಿಕೊಳ್ಳಲಾದೆ, ದೀಕ್ಷಾಸ್ನಾನ 107
ದೂಷಣೆ, ದೇವದೂಷಣೆ, ಧರ್ಮನಿಂದೆಯ 109
ದೆವ್ವ ಹಿಡಿಯಲ್ಪಟ್ಟವರು 110
ದೆವ್ವ, ದುಷ್ಟಾತ್ಮ, ಅಶುದ್ಧ ಆತ್ಮ 111
ದೇವ ಪುತ್ರರು 112
ದೇವದೂತ, ಪ್ರಧಾನದೂತ 113
ದೇವರ ಚಿತ್ತ 115
ದೇವರ ಜನರು, ನನ್ನ ಜನರು 116
ದೇವರ ಮಗ, ಮಗ 117
ದೇವರ ಮನೆ, ಯೆಹೋವನ ಮನೆ 119
ದೇವರ ರಾಜ್ಯ, ಪರಲೋಕ ರಾಜ್ಯ 120
ದೇವರ ವಾಕ್ಯ, ದೇವರ ವಾಕ್ಯಗಳು, ಯೆಹೋವನ ವಾಕ್ಯ, ಕರ್ತನ ವಾಕ್ಯ, ಸತ್ಯ ವಾಕ್ಯ, ... 122
ದೇವರ ಸ್ವರೂಪ, ರೂಪ 124
ದೇವರು 125
ದೇವರು, ಸುಳ್ಳು ದೇವರು, ದೇವತೆ, ವಿಗ್ರಹ, ವಿಗ್ರಹಾರಾಧಕ, ವಿಗ್ರಹಾರಾಧಿಕರು, ... 127
ದೇವಾಲಯ, ಮನೆ, ದೇವರ ಮನೆ 129
ದೇಹ, ದೇಹಗಳು 131
ದೈವಭಕ್ತಿಯುಳ್ಳ, ದೈವಭಕ್ತಿ, ದೈವಭಕ್ತಿಯಿಲ್ಲದ, ದೈವಹೀನ, ಭಕ್ತಿಹೀನತೆ, ... 132
ದೈವಿಕ 134
ಧರ್ಮಶಾಸ್ತ್ರ, ಮೋಶೆಯ ಧರ್ಮಶಾಸ್ತ್ರ,ಯೆಹೋವನ ಧರ್ಮಶಾಸ್ತ್ರ, ದೇವರ ಧರ್ಮಶಾಸ್ತ್ರ, 135
ನಂಬಿಗೆಯ, ವಿಶ್ವಾಸಾರ್ಹತೆ, ವಿಶ್ವಾಸ ದ್ರೋಹಿ, ವಿಶ್ವಾಸ ದ್ರೋಹ 137
ನಂಬು, ನಂಬಿಕೆಗಳು, ನಂಬಿದೆ, ವಿಶ್ವಾಸಿ, ನಂಬಿಕೆ, ಅವಿಶ್ವಾಸಿ, ಅವಿಶ್ವಾಸಿಗಳು, ... 139
ನರಕ, ಬೆಂಕಿಯ ಕೆರೆ 142
ನಾಜಿರ, ನಾಜಿರರು, ನಾಜಿರ ಪ್ರತಿಜ್ಞೆ 143
ನಾವೆ 144
ನಾಶವಾಗುವುದು, ನಾಶವಾಗಿದೆ, ನಾಶವಾಗುತ್ತಿರುವುದು, ನಾಶ ಹೊಂದುವ 145
ನಿಜ, ಸತ್ಯ, ಸತ್ಯಾಸತ್ಯಗಳು 146
ನಿತ್ಯತೆ, ಅಮರತ್ವ, ನಿತ್ಯ, ನಿರಂತರ 148
ನಿರೀಕ್ಷೆ, ನಿರೀಕ್ಷಿಸಲಾಗಿದೆ, ಭರವಸೆ 150
ನಿರ್ಣಯಿಸು, ನಿರ್ಣಯಿಸಲ್ಪಟ್ಟಿದೆ 151
ನಿರ್ದೋಷ 152
ನಿರ್ದೋಷಿ 154
ನೀತಿ, ನೀತಿಯುತ, ಅನೀತಿ, ಅನೀತಿಯುತ, ನೀತಿ, ನೀತಿಯುತ 155
ನೆರವೇರಿಸು, ನೆರವೇರಿಕೆಯಾಗಿದೆ 157

ನೇಮಕ, ನೇಮಕಗಳು, ನೇಮಿಸಲ್ಪಟ್ಟವನು 158
ನ್ಯಾಯ, ನ್ಯಾಯವಾದ, ಅನ್ಯಾಯ, ಅನ್ಯಾಯವಾಗಿ, ಸಮರ್ಥಿಸಿ, ಸಮರ್ಥನೆ ಮಾಡುವುದು 159
ಪಂಚಾಶತ್ತಮ, ವಾರಗಳ ಹಬ್ಬಗಳ 161
ಪರಲೋಕ, ಆಕಾಶ, ಪರಲೋಕಗಳು, ಪರಲೋಕದ 162
ಪರಾತ್ಪರನು 163
ಪರಿಶುದ್ಧ ಸ್ಥಳ 164
ಪರಿಶುದ್ಧ, ಪರಿಶುದ್ಧತೆ, ಅಪರಿಶುದ್ಧತೆ, ಪವಿತ್ರತೆ 165
ಪರಿಶುದ್ಧನು 167
ಪರೀಕ್ಷೆ, ಪರೀಕ್ಷಿಸಲಾಗಿದೆ, ಪರೀಕ್ಷಿಸು, ಬೆಂಕಿಯಿಂದ ಪರೀಕ್ಷಿಸು 168
ಪವಾಡ, ಪವಾಡಗಳು, ಅದ್ಭುತ, ಅದ್ಭುತಗಳು, ಸೂಚಕ ಕಾರ್ಯ, ಸೂಚಕ ಕಾರ್ಯಗಳು 169
ಪವಿತ್ರ ಸ್ಥಳ 171
ಪವಿತ್ರಾತ್ಮ, ದೇವರ ಆತ್ಮ, ಕರ್ತನ ಆತ್ಮ, ಆತ್ಮ 172
ಪವಿತ್ರಾತ್ಮನಿಂದ ತುಂಬಿಸಲ್ಪಡುವುದು 174
ಪವಿತ್ರೀಕರಿಸು, ಪವಿತ್ರೀಕರಿಸುವುದು 175
ಪಶ್ಚಾತ್ತಾಪ ಹೊಂದು, ಪಶ್ಚಾತ್ತಾಪಪಡಿಸುವುದು, ಪಶ್ಚಾತ್ತಾಪಪಡಿಸಲಾಗಿದೆ, ... 176
ಪಸ್ಕ 177
ಪಾತಾಳ (ಹೇಡೆಸ್), ಸಮಾಧಿ (ಷಿಯೋಲ್) 178
ಪಾಪ ನಿವಾರಣೆ 179
ಪಾಪ, ಪಾಪಸಹಿತ, ಪಾಪಿ, ಪಾಪ ಮಾಡುವುದು 180
ಪುತ್ರ, ಪುತ್ರರು 182
ಪುನರುತ್ಥಾನ 184
ಪುನಸ್ಥಾಪಿಸು, ಪುನಸ್ಥಾಪಿಸುವುದು, ಪುನಸ್ಥಾಪಿಸಲಾಗಿದೆ, ಪುನಸ್ಥಾಪನೆ 185
ಪ್ರತಿಜ್ಞೆ, ಪ್ರತಿಜ್ಞೆಗಳು, ಪ್ರತಿಜ್ಞೆ ಮಾಡಿದೆ 186
ಪ್ರತಿಷ್ಠಾಪಿಸು, ಪ್ರತಿಷ್ಠಾಪಿಸಲ್ಪಟ್ಟಿದೆ, ಪ್ರತಿಷ್ಠೆ 187
ಪ್ರತ್ಯೇಕಿಸು 188
ಪ್ರಲಾಪ, ಪ್ರಲಾಪಗಳು 189
ಪ್ರವಾದಿ, ಪ್ರವಾದಿಗಳು, ಪ್ರವಾದನೆ, ಪ್ರವಾದಿಸು, ದರ್ಶಿ, ಪ್ರವಾದಿನಿ 190
ಪ್ರಾಣ, ಸ್ವಂತ 192
ಪ್ರಾಯಶ್ಚಿತ್ತ ಮುಚ್ಚಳ 193
ಪ್ರಾಯಶ್ಚಿತ್ತ, ವಿಮೋಚನೆ, ಬಿಡುಗಡೆಗಳು 194
ಪ್ರಾರ್ಥಿಸು, ಪ್ರಾರ್ಥನೆ 195
ಪ್ರಿಯ 196
ಪ್ರೀತಿ, ಪ್ರೀತಿಸುವ, ಪ್ರೀತಿಸುವುದು, ಪ್ರೀತಿಸಲ್ಪಟ್ಟಿದೆ 197
ಫರಿಸಾಯ, ಫರಿಸಾಯರು 199
ಬಂಧ, ಕಟ್ಟು, ಬಂಧಿಸಲ್ಪಟ್ಟ 200
ಬಲಗೈ 202
ಬಹಿರಂಗಪಡಿಸು, ಬಹಿರಂಗಪಡಿಸುವುದು, ಬಹಿರಂಗಪಡಿಸಿದೆ, ಪ್ರತ್ಯಕ್ಷಪಡಿಸು 203
ಬಾಧ್ಯನಾಗು, ಪಿತ್ರಾರ್ಜಿತ, ಬಾಧ್ಯಸ್ಥ 204
ಭಯ, ಭಯಪಾಡು, ಕಳವಳ ಭೀತಿ 206
ಭರವಸೆ, ಭರವಸೆವಿಡುವುದು, ಭರವಸೆವಿಟ್ಟಿದೆ, ನಂಬಿಗಸ್ತ, ವಿಶ್ವಾಸಾರ್ಹತೆ 207
ಮಕ್ಕಳು, ಮಗು 208
ಮಧ್ಯಸ್ಥಿಕೆ ಮಾಡು, ವಿಜ್ಞಾಪನೆ ಮಾಡಲಾಗಿದೆ, ವಿಜ್ಞಾಪನೆ 209
ಮನಸ್ಸಾಕ್ಷಿ, ಮನಸ್ಸಾಕ್ಷಿಗಳು 210
ಮನುಷ್ಯ ಕುಮಾರನು, ಮನುಷ್ಯನ ಮಗ 211
ಮನ್ನ 212
ಮಹತ್ವ 213
ಮಹಾ ಯಾಜಕ 214
ಮಹಾಯಾಜಕನ ಕವಚ (ಏಫೋದ್) 216
ಮಹಿಮೆ, ಮಹತ್ವವುಳ್ಳ, ಮಹಿಮೆಪಡಿಸು 217
ಮೂರ್ಖ, ಮೂರ್ಖತೆ, ಮೂರ್ಖತನ 219
ಮೂಲೆಗಲ್ಲು 220
ಯಜ್ಞವೇದಿ 221

ಯಾಜಕ, ಯಾಜಕರು, ಯಾಜಕತ್ವ 222
ಯೆಹೂದಿ, ಯೆಹೂದ್ಯ, ಯೆಹೂದ್ಯರು 224
ಯೆಹೂದ್ಯರ ಅರಸ, ಯೆಹೂದ್ಯರ ಅರಸ 225
ಯೆಹೋವ 226
ಯೇಸು, ಯೇಸು ಕ್ರಿಸ್ತ, ಕ್ರಿಸ್ತ ಯೇಸು 228
ಯೋಗ್ಯ, ಯೋಗ್ಯತೆ, ಅಯೋಗ್ಯ, ಯೋಗ್ಯರಹಿತ 230
ರಕ್ತ 231
ರಕ್ತಬೋಳ 232
ರಕ್ಷಕ, ಸಂರಕ್ಷಕ (ಅಥವಾ ಉದ್ಧಾರಕ) 233
ರಕ್ಷಿಸು, ರಕ್ಷಿಸುವುದು, ರಕ್ಷಿಸಲ್ಪಟ್ಟಿದೆ, ಸಂರಕ್ಷಣೆ, ರಕ್ಷಣೆ 234
ರಬ್ಬಿ 236
ರೋಷ, ಅಸೂಯೆ 237
ಲೋಕ, ಲೌಕಿಕ 238
ವರ 239
ವಾಗ್ದಾನ ಭೂಮಿ 240
ವಾಗ್ದಾನ, ವಾಗ್ದಾನಗಳು, ವಾಗ್ದಾನ ಮಾಡಲಾಗಿದೆ 241
ವಿಮೋಚನಾ ಮೌಲ್ಯ, ವಿಮೋಚನಾ ಮೌಲ್ಯವನ್ನು ಸಲ್ಲಿಸಿದೆ 242
ವಿಮೋಚಿಸು, ವಿಮೋಚಕ, ವಿಮೋಚನೆ 243
ವಿಶ್ವಾಸ 244
ವಿಶ್ವಾಸರಹಿತ, ವಿಶ್ವಾಸಘಾತುಕತೆ 245
ವ್ಯಭಿಚಾರ, ಹಾದರ, ವ್ಯಭಿಚಾರಿ, ವ್ಯಭಿಚಾರಿಣಿ 246
ಶಕ್ತಿ, ಶಕ್ತಿಗಳು 247
ಶತಾಧಿಪತಿ, ಶತಾಧಿಪತಿಗಳು 249
ಶರೀರ 250
ಶಾಪ, ಶಾಪಗ್ರಸ್ತ, ಶಪಿದನು, ಶಪಿಸುವುದು 251
ಶಾಸ್ತ್ರಿ, ಶಾಸ್ತ್ರಿಗಳು 252
ಶಿಲುಬೆ 253
ಶಿಲುಬೆಗೆ ಹಾಕುವುದು, ಶಿಲುಬೆಗೆ ಹಾಕಲ್ಪಟ್ಟರು 254
ಶಿಷ್ಯ, ಶಿಷ್ಯರು 255
ಶುದ್ಧ, ತೊಳೆಯು 257
ಶುದ್ಧ, ಶುದ್ಧೀಕರಿಸು, ಶುದ್ಧೀಕರಣೆ 259
ಶುಭವಾರ್ತೆ, ಸುವಾರ್ತೆ 260
ಶೇಷ 262
ಶೋಧಿಸು, ಶೋಧನೆ 263
ಸಂತರು 264
ಸಂಧಾನ, ಸಂಧಾನ ಮಾಡುವುದು, ಸಂಧಾನ ಮಾಡಲ್ಪಟ್ಟಿದೆ 265
ಸದ್ದುಕಾಯ, ಸದ್ದುಕಾಯರು 266
ಸಬ್ಬತ್ 267
ಸಭಾಪಾಲಕ 268
ಸಭಾಮಂದಿರ 269
ಸಭಾಸೇವಕ, ಸಭಾಸೇವಕರು 270
ಸಭೆ, ಸಭೆಗಳು 271
ಸರ್ವಶಕ್ತನು 273
ಸರ್ವಾಧಿಕಾರ 274
ಸಹವಾಸ 275
ಸಹೋದರ 276
ಸಾಕ್ಷ್ಯ, ಸಾಕ್ಷ್ಯ ಹೇಳು, ಸಾಕ್ಷಿ, ಸಾಕ್ಷಿಗಳು, ಪ್ರತ್ಯಕ್ಷಸಾಕ್ಷಿ, ... 277
ಸಾಮ್ಯ, ಸಾಮ್ಯಗಳು 279
ಸುನ್ನತಿ ಮಾಡು, ಸುನ್ನತಿ ಮಾಡಲಾಗಿದೆ, ಸುನ್ನತಿ, ಸುನ್ನತಿಯಿಲ್ಲದವರು, ... 280
ಸುವಾರ್ತಿಕನು 282
ಸೇನಾಧೀಶ್ವರನಾದ ಯೆಹೋವ, ಸೇನಾಧೀಶ್ವರನಾದ ದೇವರು, ಪರಲೋಕ ಸೇನೆ, ಆಕಾಶಗಳ ಸೈನ್ಯ, ... 283
ಸೇವಕನಿಗೆ, ಸೇವೆ 284

ಸೈತಾನ, ದೆವ್ವ, ದುಷ್ಟ 285
ಹನ್ನೆರಡು, ಹನ್ನೊಂದು 287
ಹುಳಿಯಿಲ್ಲದ ರೊಟ್ಟಿ 288
ಹೃದಯ 289
ಹೆಚ್ಚಿಸು, ಹೆಚ್ಚಿಸಲಾಗಿದೆ, ಹೆಚ್ಚಿಸುವುದು, ಮೇಲಕ್ಕೆ ಎತ್ತುವುದು 291
ಹೆಮ್ಮೆಪಡು, ಹೆಚ್ಚಳಪಡುವುದು 292
ಹೆಸರು 293
ಹೊಸದಾಗಿ ಹುಟ್ಟುವುದು, ದೇವರಿಂದ ಹುಟ್ಟುವುದು, ಹೊಸ ಜನ್ಮ 294

Names 295
ಅಂತಿಯೋಕ್ಯ 296
ಅಂದ್ರೆಯ 297
ಅಕ್ವಿಲ 298
ಅಜರ್ಯ 299
ಅತಲ್ಯ 300
ಅದೋನಿಯ 301
ಅನ್ನ 302
ಅಪೊಲ್ಲೋಸ 303
ಅಬಿಯಾತರ 304
ಅಬೀಮೆಲೆಕ 305
ಅಬೀಯ 306
ಅಬ್ನೇರ 307
ಅಬ್ರಹಾಮ, ಅಬ್ರಾಮ 308
ಅಬ್ಷಾಲೋಮ 309
ಅಮಚ್ಯ 310
ಅಮಾಲೇಕ, ಅಮಾಲೇಕ್ಯ, ಅಮಾಲೇಕ್ಯರು 311
ಅಮೋರಿಯ, ಅಮೋರಿಯರು 312
ಅಮ್ನೋನ್ 313
ಅಮ್ಮೋನ್, ಅಮ್ಮೋನಿಯ, ಅಮ್ಮೋನಿಯರು 314
ಅರಬ್ಬೀ, ಅರಬಿಯನು, ಅರಬ್ಬೀ ದೇಶದವರು 315
ಅರಾರಟ್ 316
ಅರ್ತಷಸ್ತ 317
ಅಶೇರ, ಅಶೇರ ವಿಗ್ರಹ ಸ್ತಂಭ, ಅಶೇರ ವಿಗ್ರಹ ಸ್ತಂಭಗಳು, ಅಷ್ಟೋರೆತ್, ಅಷ್ಟೋರೆತ್ ... 318
ಅಶ್ಯೂರ್, ಅಶ್ಯೂರನು, ಅಶ್ಯೂರದವರು, ಅಶ್ಯೂರ್ ಚಕ್ರವರ್ತಿ 319
ಅಷ್ಕೆಲೋನ್ 320
ಅಷ್ದೋದ್, ಅಜೋತ್ 321
ಅಹಜ್ಯ 322
ಅಹಷ್ವೇರೋಷ 323
ಅಹಾಬ 324
ಅಹೀಯ 325
ಆದಾಮ 326
ಆಮೋಚ 327
ಆಮೋಸ 328
ಆಯಿ 329
ಆರಾಬಾ 330
ಆರಾಮ್, ಅರಾಮ್ಯನು, ಅರಾಮ್ಯರು, ಅರಾಮ್ಯ ಲಿಪಿ (ಭಾಷೆ) 331
ಆರೋನ 332
ಆಶೇರ್ 333
ಆಸ 334
ಆಸಾಫ 335
ಆಸ್ಯ 336
ಆಹಾಜ 337
ಇಕೋನ್ಯ 338

ಇಜ್ರೇಲ್, ಇಜ್ರೇಲ್ಯನು 339
ಇತ್ರೊ, ರೆಗೂವೇಲ 340
ಇಥಿಯೋಪ್ಯ, ಇಥಿಯೋಪ್ಯದವನು 341
ಇಷಯ 342
ಇಷ್ಮಾಯೇಲ್, ಇಷ್ಮಾಯೇಲನು, ಇಷ್ಮಾಯೇಲರು 343
ಇಸಾಕ 344
ಇಸ್ಕರಿಯೋತ ಯೂದ 345
ಇಸ್ರಾಯೇಲ್ ರಾಜ್ಯ 346
ಇಸ್ರಾಯೇಲ್, ಇಸ್ರಾಯೇಲನು, ಇಸ್ರಾಯೇಲ್ಯರು, ಯಾಕೋಬ 347
ಇಸ್ಸಾಕಾರ್ 348
ಈಜೆಬೆಲ್ 349
ಉಜ್ಜೀಯ, ಅಜರ್ಯ 350
ಊರೀಯ 351
ಊರ್ 352
ಎಕ್ರೋನ್, ಎಕ್ರೋನಿಯರು 353
ಎಜ್ರ 354
ಎಣ್ಣೆಮರಗಳ ಪರ್ವತ 355
ಎದೋಮ್, ಎದೋಮಿ, ಎದೋಮಿಯರು, ಇಡುಮಿಯ 356
ಎಫೆಸ, ಎಫೆಸದವನು 357
ಎಫ್ರಾತ, ಎಫ್ರಾತದವನು, ಎಫ್ರಾತದವರು 358
ಎಫ್ರಾಯೀಮನು, ಎಫ್ರಾಯೀಮ್ಯರು 359
ಎಲಿಸಬೇತಳು 360
ಎಲೀಯ 361
ಎಲೀಷ 362
ಎಲ್ಯಾಕೀಮ್ 363
ಎಲ್ಲಾಜಾರ್ 364
ಎಸ್ತೇರಳು 365
ಏಂಗೆದೀ 366
ಏದೆನ್, ಏದೆನ್ ಉದ್ಯಾನವನ 367
ಏಲಾಮ್, ಏಲಾಮೀಯರು 368
ಏಸಾವ 369
ಐಗುಪ್ತ, ಐಗುಪ್ತ್ಯನು 370
ಒಮ್ರಿ 371
ಓಬದ್ಯ 372
ಕಪೆರ್ನೌಮ 373
ಕರ್ಮೆಲ್, ಕರ್ಮೆಲ್ ಪರ್ವತ 374
ಕಲ್ದೀಯ, ಕಲ್ದೀಯನು, ಕಲ್ದೀಯರು 375
ಕಾದೇಶ್ 376
ಕಾದೇಶ್, ಕಾದೇಶ್-ಬರ್ನೇಯ, ಕಾದೇಶಿನ ಮೆರೀಬಾ 377
ಕಾನಾ 378
ಕಾನಾನ್, ಕಾನಾನ್ಯ, ಕಾನಾನ್ಯರು 379
ಕಾಯಫ 380
ಕಾಯಿನ 381
ಕಾಲೇಬ್ 382
ಕಿದ್ರೋನ್ ಕಣಿವೆ 383
ಕಿಲಿಕ್ಯ 384
ಕುಪ್ರ 385
ಕುರೇನೆ 386
ಕೂಷ್ 387
ಕೆರೇತ್ಯರು 388
ಕೇದಾರ್ 389
ಕೈಸರ 390

ಕೈಸರೈ, ಫಿಲಿಪ್ಪನ ಕೈಸರೈ 391
ಕೊರಿಂಥ, ಕೊರಿಂಥದವರು 392
ಕೊರ್ನೇಲ್ಯ 393
ಕೊಲೊಸ್ಸೆ, ಕೊಲೊಸ್ಸೆಯದವರು 394
ಕೋರಹ, ಕೋರಹಿಯರು 395
ಕೋರೆಷನ್ 396
ಕ್ರೇತ, ಕ್ರೇತ್ಯರು 397
ಖರಾನ್ 398
ಗತೂರು, ಗತ್ ಊರಿನವನು, ಗತ್ ಊರಿನವರು 399
ಗಬ್ರಿಯೇಲ 400
ಗಲಾತ್ಯ, ಗಲಾತ್ಯದವರು 401
ಗಲಿಲಾಯ ಸಮುದ್ರ, ಕಿನ್ನೆರೆತ್ ಸಮುದ್ರ, ಗೆನೆಜರೇತ್ ಕೆರೆ, ತಿಬೇರಿಯ ಸಮುದ್ರ 402
ಗಲಿಲಾಯ, ಗಲಿಲಾಯದವನು, ಗಲಿಲಾಯದವರು 403
ಗಾಜಾ 404
ಗಾದ್ 405
ಗಿದ್ಯೋನ 406
ಗಿಬ್ಯೋನ್, ಗಿಬ್ಯೋನ್ಯರು, ಗಿಬ್ಯೋನ್ಯರು 407
ಗಿರ್ಗಾಷಿಯರು 408
ಗಿಲ್ಗಾಲ್ 409
ಗಿಲ್ಯಾದ್, ಗಿಲ್ಯಾದ್ಯನು, ಗಿಲ್ಯಾದ್ಯರು 410
ಗೆತ್ಸೇಮನೆ 411
ಗೆಬೆಯಾ 412
ಗೆರಾರ್ 413
ಗೆಷೂರ್ಯ, ಗೆಷೂರ್ಯರು 414
ಗೊಮೋರ 415
ಗೊಲ್ಗೊಥಾ 416
ಗೊಲ್ಯಾತನು 417
ಗೋಷೆನ್ 418
ಗ್ರೀಕ್, ಗ್ರೀಕನು ಗ್ರೀಕ್ ಪಂಡಿತ 419
ಗ್ರೀಸ್, ಗ್ರೀಕರು 420
ಚಿದ್ಕೀಯ 421
ಚೆಫನ್ಯ 422
ಚೋಗರ 423
ಜಕ್ಕಾಯ 424
ಜೆಕರ್ಯ (ಹಳೇ ಒಡಂಬಡಿಕೆ) 425
ಜೆಕರ್ಯ (ಹೊಸ ಒಡಂಬಡಿಕೆ) 426
ಜೆಬುಲೋನ 427
ಜೆಬೆದಾಯ 428
ಜೆರುಬ್ಬಾಬೆಲ್ 429
ಜೊಂಡುಗಳ ಸಮುದ್ರ, ಕೆಂಪು ಸಮುದ್ರ 430
ತಾಮಾರ 431
ತಾರ್ಷಿಷ್ 432
ತಾರ್ಸ 433
ತಿಮೊಥೆ 434
ತಿರ್ಜಾ 435
ತೀತ 436
ತುಖಿಕ 437
ತೂಬಲ್ 438
ತೂರ್, ತೂರಿನವರು 439
ತೆರಹ 440
ತೋಮ 441
ತ್ರೋವ 442

ಥೆಸ್ಸಲೋನಿಕ, ಥೆಸ್ಸಲೋನಿಕದವನು, ಥೆಸ್ಸಲೋನಿಕಾದವರು 443
ದಕ್ಷಿಣ ಪ್ರಾಂತ್ಯ (ನೆಗೆವ್) 444
ದಮಸ್ಕ 445
ದಾನಿಯೇಲ 446
ದಾನ್ 447
ದಾರ್ಯಾವೇಷ 448
ದಾವೀದ 449
ದಾವೀದ ನಗರ 451
ದಾವೀದನ ಮನೆ 452
ದೆಲೀಲಾ 453
ದೇವ ಮನುಷ್ಯ 454
ನಜರೇತ, ನಜರೇತಿನವನು 455
ನಫ್ತಾಲಿ 456
ನಹೂಮ 457
ನಾತಾನ್ 458
ನಾಮಾನ್ 459
ನಾಹೋರ್ 460
ನಿನೆವೆ, ನಿನೆವೆಯನು 461
ನೆಬುಕದ್ನೆಚರ 462
ನೆಹೆಮೀಯ 463
ನೈಲ್ ನದಿ, ಐಗುಪ್ತ ನದಿ, ನೈಲ್ 464
ನೋಹ 465
ಪದ್ದನ್ ಅರಾಮ್ 466
ಪಾರಸಿ, ಪಾರಸಿಯರು 467
ಪಾರಾನ್ 468
ಪಿಲಾತ 469
ಪೆಗೋರ್, ಪೆಗೋರ್ ಪರ್ವತ, ಬಾಳ್ ಪೆಗೋರ್ 470
ಪೆರೆಜೀಯರು 471
ಪೇತ್ರ, ಸೀಮೋನ ಪೇತ್ರ, ಕೇಫ 472
ಪೊಂತ 474
ಪೋಟೀಫರ 475
ಪೌಲ, ಸೌಲ 476
ಪ್ರಿಸ್ಕಿಲ್ಲ 478
ಫರೋಹ, ಐಗುಪ್ತ ಅರಸ 479
ಫಿನೇಹಾಸ 480
ಫಿಲಿಪ್ಪ, ಅಪೊಸ್ತಲ 481
ಫಿಲಿಪ್ಪ, ಸುವಾರ್ತಿಕನು 482
ಫಿಲಿಪ್ಪಿ, ಫಿಲಿಪ್ಪಿಯದವರು 483
ಫಿಲಿಷ್ಟಿಯ 484
ಫಿಲಿಷ್ಟಿಯನರು 485
ಫೊಯಿನೀಕೆ 486
ಬತ್ಶೆಬೆ 487
ಬರಬ್ಬ 488
ಬಾಬೆಲ್ 489
ಬಾಬೆಲ್, ಬಾಬೆಲು, ಬಾಬೆಲಿನವರು 490
ಬಾರೂಕ 491
ಬಾರ್ತೊಲೊಮಾಯ 492
ಬಾರ್ನಬ 493
ಬಾಳ್ 494
ಬಾಷ 495
ಬಾಷಾನ್ 496
ಬಿಳಾಮ 497

ಬತೂವೇಲ್ 498
ಬೆನಾಯ 499
ಬೆನ್ಯಾಮೀನ, ಬೆನ್ಯಾಮೀನ್ಯರು 500
ಬೆರೋಯ 501
ಬೆಲ್ಜೆಬೂಲನು 502
ಬೇತೇಲ್ 503
ಬೇತ್ ಷೆಮೆಷ್ 504
ಬೇತ್ಲೆಹೇಮ್, ಎಫ್ರಾತ 505
ಬೇಥಾನ್ಯ 506
ಬೇರ್ಷೆಬ 507
ಬೋವಜ 508
ಮಕೆದೋನ್ಯ 509
ಮಗ್ದಲದ ಮರಿಯ 510
ಮತಾಭಿಮಾನಿ ಎಂದು ಹೆಸರುಗೊಂಡ ಸೀಮೋನ 511
ಮತ್ತಾಯ, ಲೇವಿ 512
ಮನಸ್ಸೆ 513
ಮರಿಯ (ಮಾರ್ಥಳ ಸಹೋದರಿ) 514
ಮರಿಯಳು, ಯೇಸುವಿನ ತಾಯಿ 515
ಮಲಾಕಿ 517
ಮಹಾ ಹೆರೋದ್ 518
ಮಾಕಾ 519
ಮಾರ್ಥಳು 520
ಮಿಚ್ಪೆ 521
ಮಿದ್ಯಾನ್, ಮಿದ್ಯಾನನು, ಮಿದ್ಯಾನರು 522
ಮಿರ್ಯಾಮಳು 523
ಮೀಕ 524
ಮೀಕಾಯೇಲ 525
ಮೀಶಾಯೇಲ 526
ಮೆಲ್ಕೀಚೆದೆಕ 527
ಮೆಸಪೊತಾಮ್ಯ, ಆರಾಮ್ ನಹರೈಮ್ 528
ಮೇದ್ಯರು, ಮೇದ್ಯ 529
ಮೇಶೆಕ್ 530
ಮೊರ್ದೆಕೈ 531
ಮೋಫ್ 532
ಮೋಲೆಕ್ 533
ಮೋವಾಬ್, ಮೋವಾಬ್ಯನು, ಮೋವಾಬ್ಯರು 534
ಮೋಶೆ 535
ಯಾಕೋಬ (ಅಲ್ಫಾಯ ಮಗ) 536
ಯಾಕೋಬ (ಜೆಬೆದಾಯನ ಮಗ) 537
ಯಾಕೋಬ (ಯೇಸು ಸಹೋದರ) 538
ಯಾಕೋಬನ ಮಗನಾದ ಯೂದ 539
ಯಾರೊಬ್ಬಾಮ 540
ಯೂದಯ ಸೀಮೆ 541
ಯೂದಾ 542
ಯೂಫ್ರೇಟೀಸ್ ನದಿ, ಮಹಾ ನದಿ 543
ಯೆಫೆತ್ 544
ಯೆಫ್ತಾಹ 545
ಯೆಬೂಸ್, ಯೆಬೂಸಿ, ಯೆಬೂಸಿಯರು 546
ಯೆರಿಕೋ 547
ಯೆರೂಸಲೇಮ್ 548
ಯೆರೆಮೀಯ 550
ಯೆಶಯಾ 551

ಯಹೂದ, ಯಹೂದ ರಾಜ್ಯ 552
ಯೆಹಜ್ಕೇಲನು 553
ಯೆಹೋಯಾಕೀಮ 554
ಯೆಹೋಯಾಖೀನ 555
ಯೆಹೋಯಾದ 556
ಯೆಹೋರಾಮ, ಯೋರಾಮ 557
ಯೆಹೋಶುವ 558
ಯೆಹೋಷಾಫಾಟ @ 559
ಯೇಹು 560
ಯೊಪ್ಪ 561
ಯೊರ್ದನ್ ಹೊಳೆ, ಯೊರ್ದನ್ 562
ಯೋತಾಮ 563
ಯೋನ 564
ಯೋನಾತಾನ 565
ಯೋಬ 566
ಯೋರಾಮ 567
ಯೋವಾಬ 568
ಯೋವಾಷ 569
ಯೋವೇಲ 570
ಯೋಷೀಯ 571
ಯೋಸೇಫ (ಹಳೇ ಒಡಂಬಡಿಕೆ) 572
ಯೋಸೇಫ (ಹೊಸ ಒಡಂಬಡಿಕೆ) 573
ಯೋಹಾನ (ಅಪೊಸ್ತಲನು) 574
ಯೋಹಾನ (ಸ್ನಾನಿಕನು) 575
ಯೋಹಾನ ಮಾರ್ಕ 576
ರಬ್ಬಿ 577
ರಾಮಾ 578
ರಾಮೋತ್ 579
ರಾಹಾಬಳು 580
ರಾಹೇಲ 581
ರಿಮ್ಮೋನ್ 582
ರೂತಳು 583
ರೂಬೇನ್ 584
ರೆಬೆಕ್ಕ 585
ರೆಹಬ್ಬಾಮ 586
ರೋಮ್, ರೋಮಾ 587
ಲವಣ ಸಮುದ್ರ, ಮೃತ ಸಮುದ್ರ 588
ಲಾಜರನು 589
ಲಾಬಾನ 590
ಲಿವ್ಯಾತಾನ್ 591
ಲೂಕ 592
ಲೂಸ್ತ್ರ 593
ಲೆಬನೋನ್ 594
ಲೆಮೆಕ 595
ಲೇಯಾ 596
ಲೇವಿ, ಲೇವಿಯನು, ಲೇವಿಯರು, ಲೇವಿಯರ 597
ಲೋಟ 598
ವಷ್ಟಿ 599
ಶಾರೋನ್, ಶಾರೋನ್ ಬಯಲು 600
ಶಿನಾರ್ 601
ಶಿಮ್ಮೀ 602
ಶಿಲೋವ 603

ಶಕಮ್ 604
ಶೇಮ್ 605
ಸಂಸೋನ 606
ಸದೋಕ 607
ಸಮಾರ್ಯ, ಸಮಾರ್ಯದವನು 608
ಸಮುದ್ರ, ಮಹಾ ಸಮುದ್ರ, ಪಶ್ಚಿಮ ಸಮುದ್ರ, ಮೆಡಿಟರೇನಿಯನ್ ಸಮುದ್ರ 609
ಸಮುವೇಲ 610
ಸಾರಳು, ಸಾರಯಳು 611
ಸಿಮೆಯೋನ್ 612
ಸಿರಿಯಾ 613
ಸೀದೋನ್ 614
ಸೀನಾಯಿ 615
ಸೀಲ, ಸಿಲ್ವಾನ 616
ಸುಕ್ಕೋತ್ 617
ಸೃಷ್ಟಿಸುವಾತನು 618
ಸೆನ್ನೆರೀಬ 619
ಸೇಥ 620
ಸೇಬ 621
ಸೊದೋಮ್ 622
ಸೊಲೊಮೋನ 623
ಸೌಲ (ಹಳೇ ಒಡಂಬಡಿಕೆ) 624
ಸ್ತೆಫನ್ 625
ಹಗ್ಗಾಯ 626
ಹನನ್ಯ 627
ಹನೋಕ, ಎನೋಷ 628
ಹನ್ನ 629
ಹಬಕ್ಕೂಕ 630
ಹಮಾತ್, ಹಮಾತಿಯರು, ಲೆಬೋ ಹಮಾತ್ 631
ಹಮೋರ 632
ಹವ್ವ 633
ಹಾಗರಳು 634
ಹಾಮ್ 635
ಹಿಜ್ಕೀಯ 636
ಹಿತ್ತೀಯ, ಹಿತ್ತೀಯರು 637
ಹಿಲ್ಕೀಯ 638
ಹಿವ್ವಿಯನು, ಹಿವ್ವಿಯರು 639
ಹೆಬ್ರೋನ್ 640
ಹೆರೋದ, ಹೆರೋದ ಅಂತಿಪ 641
ಹೆರೋದ್ಯಳು 642
ಹೆರ್ಮೋನ್ ಪರ್ವತ 643
ಹೇಬೆಲ 644
ಹೋರೇಬ್ 645
ಹೋಶೇಯ 646

Other 647
forsake, forsaken, leave 648
ಅಂಗಳ, ಅಂಗಳಗಳು, ಅಂಗಳದ ಆವರಣ, ಅಂಗಳದ ಆವರಣಗಳು 649
ಅಂಜೂರದ ಹಣ್ಣು, ಅಂಜೂರದ ಹಣ್ಣುಗಳು 650
ಅಚ್ಚು, ಅಚ್ಚುಗಳನ್ನು, ಅಚ್ಚು ಹಾಕಲಾಗಿದೆ, ಅಚ್ಚು ಹಾಕುವುದು, ಅಚ್ಚು ಹಾಕುವವನು, ... 651
ಅದ್ಭುತ, ವಿಸ್ಮಯ, ಆಶ್ಚರ್ಯ, ಮಹಾದ್ಭುತ, ಮಹಾದ್ಭುತವಾದದ್ದು, ಅಚ್ಚರಿ, ಅಚ್ಚರಿಗಳು 652
ಅಧಿಕಾರಿ, ಅಧಿಕಾರಿಗಳು 653
ಅಧೀನವಾಗು, ಅಧೀನಪಡಿಸುವುದು, ಅಧೀನ ಮಾಡಿದೆ, ಅಧೀನ ಮಾಡುವುದು, ಅಧೀನತೆ, ... 654
ಅನುಕರಿಸು, ಅನುಕರಿಸುವವನು 655

ಅನ್ಯ 656
ಅಪರಾದ ಪರಿಹಾರಾರ್ಥ ಬಲಿ, ಅಪರಾದ ಪರಿಹಾರಾರ್ಥ ಬಲಿಗಳು 657
ಅಪರಾಧ, ಅಪರಾಧಗಳು, ಅಪರಾಧಿ, ಅಪರಾಧಿಗಳು 658
ಅಪವಿತ್ರ, ಅಪವಿತ್ರವಾಗಿದೆ, ಅಪವಿತ್ರಗೊಳಿಸುವುದು 659
ಅಭಿವೃದ್ಧಿ ಹೊಂದು, ಅಭಿವೃದ್ಧಿ ಹೊಂದಿದೆ, ಅಭಿವೃದ್ಧಿಯಾಗುವುದು 660
ಅಭಿವೃದ್ಧಿ ಹೊಂದು, ಅಭಿವೃದ್ಧಿಯಾಗು, ಅಭಿವೃದ್ಧಿ ಮಾಡಲ್ಪಟ್ಟಿರುತ್ತದೆ 661
ಅಭಿಷೆಕಿಸು, ಅಭಿಷೇಕಿಸಿದೆ, ಪಟ್ಟಾಭಿಷೇಕ, ಹಿಂದೆಯೇ ಯೋಜಿಸಲಾಗಿದೆ, ... 662
ಅಮಾವಾಸ್ಯೆ 663
ಅಮೂಲ್ಯ 664
ಅರಮನೆ, ಅರಮನೆಗಳು 665
ಅರಸ, ಅರಸರು, ರಾಜ್ಯ, ರಾಜ್ಯಗಳು, ರಾಜ್ಯಾಧಿಕಾರ, ರಾಜಪ್ರಭುತ್ವ 666
ಅರ್ಥಮಾಡಿಕೊಳ್ಳಿ, ಅರ್ಥಮಾಡಿಸುವುದು, ಆಲೋಚಿಸು 667
ಅರ್ಥವಿವರಣೆ ಹೇಳು, ಅರ್ಥವಿವರಣೆ ಹೇಳುವುದು, ಅರ್ಥವಿವರಣೆ ಹೇಳಲಾಗಿದೆ, ... 668
ಅರ್ಹತೆಯನ್ನು ಹೊಂದು, ಅರ್ಹತೆ ಹೊಂದಿದೆ, ಅನರ್ಹತೆಯುಳ್ಳದ್ದು 669
ಅಳಿಸಿ ಹಾಕು, ಅಳಿದುಹೋಗು, ಅಳಿದುಹೋಗಿದೆ, ವರೆಸು, ವರೆಸುಹಾಕು, ವರೆಸಿದೆ 670
ಅವಮಾನ, ಅವಮಾನವನ್ನುಂಟು ಮಾಡುತ್ತದೆ, ಅವಮಾನ ಮಾಡಿದೆ, ಅವಮಾನಕರ 671
ಅವಮಾನ, ನಾಚಿದ, ನಾಚಿಕೆಪಡು,ಅವಮಾನಿಸು, ನಿಂದೆ 672
ಅವಮಾನಿಸು, ಅವಮಾನಿಸಲ್ಪಟ್ಟಿದೆ, ಅವಮಾನ 674
ಅವಿಧೇಯತೆ, ಅವಿಧೇಯನಾಗುವಂತೆ ಮಾಡುವುದು, ಅವಿಧೇಯತೆ ತೋರಿಸಿದೆ, ದಂಗೆ ಏಳು 675
ಅಸಹ್ಯ, ಅಸಹ್ಯಿಸಿಕೊಳ್ಳಲಾಗಿದೆ, ಅಸಹ್ಯ ಹುಟ್ಟಿಸುವ 676
ಅಹಂಕಾರ, ಜಂಬ, ದುರಹಂಕಾರ 677
ಆಕಳು, ಆಕಳುಗಳು, ದನ, ದನಗಳು, ಕರು, ಕರುಗಳು, ಜಾನುವಾರು, ಪಡ್ಡೆ, ಎತ್ತು, ... 678
ಆಕ್ಷೇಪಣೆ, ಆಕ್ಷೇಪಣೆಗಳು, ಆಕ್ಷೇಪಿಸಿದೆ, ಆಕ್ಷೇಪಿಸುವುದು, ಆಕ್ಷೇಪಭರಿತವಾಗಿ 679
ಆಜ್ಞಾವಿಧಿ, ನಿಯಮಗಳು, ಅವಶ್ಯಕತೆಗಳು, ಕಠಿಣ ಕಾನೂನು, ಪದ್ಧತಿಗಳು 680
ಆಡಳಿತ, ಆಡಳಿತಗಾರ, ಪ್ರಾಧ್ಯಾಪಕ, ಅಧಿಕೃತ, ನಾಯಕ 681
ಆಣೆ, ಆಣೆಗಳು, ಪ್ರಮಾಣ, ಪ್ರಮಾಣಗಳು, ಆಣೆ ಇಡುವುದು, ಅದರ ಮೂಲಕ ಆಣೆಯನ್ನಿಡು, ಅದರ ... 682
ಆದರಣೆ, ಆದರಿಸುತ್ತದೆ, ಆದರಿಸಲ್ಪಟ್ಟಿದೆ, ಆದರಿಸುವುದು, ಆದರಿಸುವಾತನು, ... 683
ಆದೇಶ, ಆದೇಶಿಸು, ಆದೇಶಿಸಲಾಗಿದೆ, ಆದೇಶಿಸುವುದು, ಸೂಚನೆ, ಸೂಚನೆಗಳು, ಭೋದಕರು 684
ಆನಂದ, ಆನಂದಭರಿತ, ಆನಂದದಾಯಕತೆ, ಆನಂದಿಸು 685
ಆನಂದ, ಆನಂದಿಸು, ಉಲ್ಲಾಸ, ಹರ್ಷ 687
ಆನಂದಗೊಳಿಸು, ಆನಂದಗೊಳಿಸುವುದು, ಆನಂದ ಹೊಂದಿದೆ, ಆನಂದಕರ 688
ಆನೆಕಲ್ಲು, ಆನೆಕಲ್ಲುಗಳು, ಆಲಿಕಲ್ಲು, ಆಲಿಕಲ್ಲುಗಳು, ಆಲಿಕಲ್ಲಿನ ಮಳೆ 689
ಆಲೀವ್ (ಎಣ್ಣೆ ಮರದ ಹಣ್ಣು), ಆಲೀವ್.ಗಳು (ಎಣ್ಣೆ ಮರದ ಹಣ್ಣುಗಳು) 690
ಆಳ್ವಿಕೆ, ಆಳುವುದು, ಆಳ್ವಿಕೆ ಮಾಡಿದೆ, ಆಳ್ವಿಕೆ ಮಾಡುತ್ತಿರುವುದು 691
ಆಶ್ರಯ, ನಿರಾಶ್ರಿತ, ನಿರಾಶ್ರಿತರು, ತಂಗುದಾಣ, ತಂಗುದಾಣಗಳು, ಆಶ್ರಯ ಕೊಟ್ಟಿದೆ, ... 692
ಇಷ್ಟ, ಒಂದೇರೀತಿಯಾದ ಮನಸ್ಸು, ಹೋಲಿಸು, ಹೋಲಿಕೆ, ಹೋಲುತ್ತದೆ, ಅದರಂತೆಯೇ, ... 693
ಇಸ್ರಾಯೇಲ್ಯರ ಹನ್ನೆರಡು ಕುಲಗಳು, ಇಸ್ರಾಯೇಲನ ಮಕ್ಕಳಾದ ಹನ್ನೆರಡು ಕುಲಗಳು, ... 694
ಉನ್ನತ ಸ್ಥಳ, ಉನ್ನತ ಸ್ಥಳಗಳು 695
ಉಪದೇಶ ಉಪದೇಶಿಸುವುದು, ಉಪದೇಶಕ, ಸಾರು, ಸಾರುವುದು, ಸಾರಲ್ಪಡು, 696
ಉಪಪತ್ನಿ, ಉಪಪತ್ನಿಗೆಳು 698
ಉಪವಾಸ, ನಿರಾಹಾರ, ಉಪವಾಸವಿದ್ದೆ, ಉಪವಾಸವಿರುವುದು, ಉಪವಾಸಗಳು 699
ಉಬ್ಬಿಕೊಂಡಿದೆ 700
ಉರುಲು, ಉರುಲುಗಳು, ದೊರಕಿಸಿಕೋ, ದೊರಕಿಸಿಕೊಳ್ಳುವುದು, ದೊರಕಿಸಕೊಳ್ಳಲಾಗಿದೆ, ... 701
ಉಸಿರಾಟ, ಉಸಿರಾಡು 702
ಎಚ್ಚರಿಕೆ ಧ್ವನಿ, ತುತೂರಿ ಶಬ್ದ ಮಾಡುವುದು, ಹೆದರಿಕೆಯಾಗುವುದು 703
ಎಚ್ಚರಿಸುವದು, ಎಚ್ಚರಿಕೆ, ಅರಿವು 704
ಎಡವಿ ಬೀಳುವುದು, ಎಡವಿ ಬೀಳಿಸುವುದು, ಎಡವಿ ಬಿದ್ದಿದೆ, ಎಡವಿ ಬೀಳುತ್ತಿರುವುದು 705
ಎಣ್ಣೆ 706
ಎತ್ತಲ್ಪಡುವುದು 707
ಎದೆಕವಚ, ಎದೆಯತುಂಡು 708
ಎಬ್ಬಿಸು,ಎದ್ದೇಳು, ಎಬ್ಬಿಸುವುದು, ಎದ್ದೇಳು, ಎದ್ದಿದೆ 709
ಏಲಾ, ಏಲಾಗಳು 711

ಒಂಟೆ, ಒಂಟೆಗಳು 712
ಒಪ್ಪಿಸು, ಒಪ್ಪಿಸಲಾಗಿದೆ, ನಿಯಮಿತ ಕಾರ್ಯಗಳು, ತಿರುಗಿ ಒಪ್ಪಿಸು 713
ಒಳ ಅಂಗಿ, ಒಳ ಅಂಗಿಗಳು 714
ಒಳಗಾಗು, ಒಳಪಡಿಸುವುದು, ಅಧೀನವಾಗಿವೆ, 715
ಓಡು, ಓಡಿಸುವುದು, ಓಡುವವರು, ಓಡುತ್ತಾ ಇರುವುದು 716
ಔತಣ 717
ಔತಣ, ಔತಣ ಕೂಟಗಳು, ಔತಣ ಕೊಡುವುದು 718
ಕಂಚು 719
ಕಠಿಣ, ಕಠಿಣವಾದ, ಕಠಿಣಪಡಿಸುತ್ತದೆ, 720
ಕಣಜ, ಕಣಜಗಳು 722
ಕತ್ತಲು 723
ಕತ್ತೆ, ಹೆಸರುಗತ್ತೆ 724
ಕನಸು 725
ಕನ್ನಿಕೆ, ಕನ್ನಿಕೆಗಳು, ಕನ್ಯತ್ವ 726
ಕಪಾಲ 727
ಕಪ್ಪ 728
ಕರಗಿ, ಕರಗಿದೆ, ಕರಗುತ್ತಾಯಿದೆ, ಕರಗಿಸುವುದು, ಕರಗಿದ 729
ಕರಡಿ, ಕರಡಿಗಳು 730
ಕಲಹ ವಿವಾದಗಳು, ಜಗಳ, ವಾದ, ಸಂಘರ್ಷ 731
ಕಳಂಕ, ಕಳಂಕವಿಲ್ಲದ್ದು, ದೋಷ 732
ಕಳುಹಿಸು, ಕಳುಹಿಸುವುದು, ಹೊರಗೆ ಕಳುಹಿಸು, 733
ಕಳ್ಳ, ಕಳ್ಳರು, ಕದಿ, ಕದಿಯುವುದು, ಕದ್ದಿದೆ, ದರೋಡೆಕಾರ, ದರೋಡೆಕಾರರು, ಕಳ್ಳತನ, ... 734
ಕವಚ, ಶಸ್ತ್ರಾಸ್ತ್ರ 735
ಕಷ್ಟ, ಕಷ್ಟಗಳು, ಕಷ್ಟಪಟ್ಟಿದೆ, ಕಷ್ಟಪಡುವುದು, ಕಷ್ಟಗಳು 736
ಕಾನೂನು, ಕಾನೂನುಗಳು, ಕಾನೂನು ಮಾಡಲಾಗಿದೆ 738
ಕಾನೂನು, ನಿಯಮ 739
ಕಾನೂನುಬದ್ಧ, ಕಾನೂನುಬದ್ಧವಲ್ಲದ, ಕಾನೂನುಬದ್ಧ ಅಲ್ಲ , ಕಾನೂನು ಬಾಹಿರ, ಅಧರ್ಮ 740
ಕಾಮ, ಕಾಮಾಸಕ್ತಿ, ಕಾಮಗೊಂಡಿದೆ, ಕಾಮುಕ, ಕಾಮಾಶಕ್ತಿ 742
ಕಾವಲು ಗೋಪುರ, ಕಾವಲು ಗೋಪುರಗಳು, ಗೋಪುರ 743
ಕಿರೀಟ, ಕಿರೀಟಗಳು, ಕಿರೀಟ ಧರಿಸಲ್ಪಟ್ಟಿದೆ 744
ಕುಟುಂಬ, ಕುಟುಂಬದವರು 745
ಕುಡಿಯುವದು, ಕುಡುಕ 746
ಕುದುರೆ ಸವಾರ, ಅಶ್ವಾರೋಹಿಗಳು 747
ಕುದುರೆ, ಕುದುರೆಗಳು, ಯುದ್ಧ ಕುದುರೆ, ಯುದ್ಧ ಕುದುರೆಗಳು, ಕುದುರೆಯ ಹಿಂಭಾಗ 748
ಕುರಿದನಗಳು 749
ಕುರುಬ, ಕುರುಬರು, ಕಾಯುಕೊಂಡಿದ್ದೇನೆ, ಕಾಯುತ್ತಿರುವುದು 750
ಕುಲ, ಕುಲಗಳು, ಬುಡಕಟ್ಟು, ಬುಡಕಟ್ಟಿನವರು 752
ಕುಲುಮೆ (ಧಗಧಗನೆ ಉರಿಯುವ ಬೆಂಕಿ) 753
ಕುಷ್ಠರೋಗಿ, ಕುಷ್ಠರೋಗಿಗಳು, ಕುಷ್ಠರೋಗ, ಕುಷ್ಠರೋಗದ 754
ಕೂಗು, ಕೂಗುವುದು, ಕೂಗಿದರು, ಕೂಗುತ್ತಿದ್ದರು, ಮೊರೆ, ಮೊರೆಯಿಡುವುದು, ... 755
ಕೆಡುಕನು, ಕೆಡುಕು ಮಾಡುವವನು 756
ಕೆರ, ಕೆರಗಳು 757
ಕೆರೂಬಿ, ಕೆರೂಬಿಗಳು, ಕೆರೂಬಿಯರು 758
ಕೇಡು, ಪ್ರತಿದಂಡನೆ, ಪ್ರತಿದಂಡನೆಯಾಗಿದೆ, ಪ್ರತಿದಂಡನೆಯಾಗುವುದು, ... 759
ಕೊಂಬು, ಕೊಂಬುಗಳು, ಕೊಂಬುಗಳುಳ್ಳ 760
ಕೊಡಲಿ, ಕೊಡಲಿಗಳು 761
ಕೊಯ್ಯು, ಕೊಯ್ಯುತ್ತದೆ, ಕೊಯ್ದಿದೆ, ಕೊಯ್ಯುವವನು, ಕೊಯ್ಯುವವರು, ... 762
ಕೊಯ್ಲು, ಸುಗ್ಗಿ, ಕೊಯ್ಲು ಮಾಡಲ್ಪಟ್ಟಿದೆ, ಕೊಯ್ಲು ಮಾಡಲ್ಪಡುತ್ತಿದೆ, ... 763
ಕೊಲ್ಲು, ಹತ್ಯೆ 764
ಕೊಳಲು, ಕೊಳವೆ 765
ಕೋಪ, ಕೋಪಗೊಳ್ಳುವಿಕೆ, ಸಿಟ್ಟು 766
ಕೋಲು 767

ಕೂಲು, ಕೂಲುಗಳು 768
ಕ್ರೋಧ, ಕ್ರೋಧಕ್ಕೆ ಗುರಿಮಾಡುತ್ತದೆ, ಕ್ರೋಧದಲ್ಲಿರುವುದು 769
ಖಡ್ಗ, ಖಡ್ಗಗಳು, ಖಡ್ಗಗಳನ್ನು ಹಿಡಿಯುವವರು 770
ಖರ್ಜೂರ ವೃಕ್ಷ 771
ಗಂಟೆ, ಗಂಟೆಗಳು 772
ಗಂಧಕ, ಗಂಧಕದ 773
ಗಟ್ಟಿಯಾದ ಕುತ್ತಿಗೆ, ಮೊಂಡು, ಮೊಂಡುತನದಿಂದ, ಮೊಂಡುತನ 774
ಗದರಿಸು, ಖಂಡಿಸು 775
ಗರ್ಭ, ಗರ್ಭಗಳು 776
ಗರ್ಭತಾಳು, ಗರ್ಭತಾಳುವಳು, ಗರ್ಭತಾಳಿದಳು, ಗರ್ಭಧಾರಣೆ 777
ಗಾದೆನುಡಿ, ಗಾದೆನುಡಿಗಳು 778
ಗುಂಡಿ, ಗುಂಡಿಗಳು, ಮುಚ್ಚಿದ ಗುಂಡಿ 779
ಗುಡಿಸು, ಗುಡಿಸುವುದು, ಗುಡಿಸಿದೆ, ಗುಡಿಸುತ್ತಿರುವುದು 780
ಗುಣಪಡಿಸು, ಗುಣವಾಗಿದೆ, ಸ್ವಸ್ಥಪಡಿಸು, ಸ್ವಸ್ಥಪಡಿಸುವುದು, ಸ್ವಸ್ಥತೆ, ... 781
ಗುರಾಣಿ 783
ಗುರಿ ಮಾಡು, ಗುರಿ ಮಾಡಲ್ಪಟ್ಟಿದ್ದೀರಿ, ಗಮ್ಯ, ಗಮ್ಯ ಸ್ಥಾನಕ್ಕೆ ... 784
ಗುಲಾಮರನ್ನಾಗಿ ಮಾಡು, ಗುಲಾಮ, ಬಂಧಿತ ಗುಲಾಮ, ಬಂಧಿತ 785
ಗೊರಸ, ಗೊರಸಗಳು, ಕಾಲ್ಗೊರಸು 786
ಗೋಣಿ 787
ಗೋಧಿ 788
ಗ್ರಹಿಸುವಿಕೆ, ಒಪ್ಪಿಕೊಳ್ಳುವುದು, ಒಪ್ಪಿಕೊಳ್ಳಲಾಗಿದೆ 789
ಚದುರು, ಚದರಿಕೆ 790
ಚಾಡಿ, ಚಾಡಿಗಳು, ಚಾಡಿಕೋರ, ಮೂರ್ಖವಾಗಿ ಮಾತಾಡುವುದು 791
ಚಿತ್ರ, ಚಿತ್ರಗಳು, ಕೆತ್ತಿರುವ ಚಿತ್ರ, ಕೆತ್ತಿರುವ ಚಿತ್ರಗಳು, ಎರಕುಹೊಯ್ದ ಲೋಹದ ... 792
ಚಿರತೆ, ಚಿರತೆಗಳು 793
ಚೀಟು, ಚೀಟುಗಳು ಹಾಕುವುದು 794
ಚೊಚ್ಚಲು 795
ಜಂಡು, ಜಂಡುಗಳು 796
ಜಂಬದ 797
ಜನಗಣತಿ 798
ಜನರ ಗುಂಪು, ಜನಾಂಗಗಳು, ನಿರ್ದಿಷ್ಟ ಜನರು, ಜನರು 799
ಜವೆಗೋದಿ 801
ಜಾಗರೂಕತೆ, ಜಾಗರೂಕ, ಜಾಗರೂಕತೆಯಿಂದ 802
ಜಾಲೀಮರ 803
ಜಾವೆ (ಸತ್ಯವೇದದ ಸಮಯ), ಜಾವೆಗಳು 804
ಜಿಂಕೆ, ಹೆಣ್ಣು ಜಿಂಕೆ, ಹೆಣ್ಣು ಜಿಂಕೆಗಳು, ಜಿಂಕೆ ಮರಿಗಳು, ಗಂಡು ಜಿಂಕೆ, ಗಂಡು ... 805
ಜೀವ ಬಾಧ್ಯರ ಪುಸ್ತಕ 806
ಜೀವಿ, ಸೃಷ್ಟಿ 807
ಜುಡಾಯಿಸಮ್, ಯೆಹೂದ್ಯ ಧರ್ಮ 808
ಜೇನು, ಜೇನು ಗೂಡು 809
ಜೊತೆಗಾರ, ಜೊತೆಕೆಲಸದವನು, ಸ್ನೇಹಿತ 810
ಜೋಯಿಸರು 811
ಜ್ಞಾಪಕಾರ್ಥಕವಾಗಿ, ಜ್ಞಾಪಕಾರ್ಥವಾದ ಅರ್ಪಣೆ (ಧಾನ್ಯ ನೈವೇದ್ಯ) 812
ಡೇರೆ, ಡೇರೆಗಳು, ಗುಡಾರ ಮಾಡುವವರು 813
ತಂತಿವಾದ್ಯ, ತಂತಿವಾದ್ಯಕಾರ 814
ತಗ್ಗಿಸಿಕೊಂಡಿರುವುದು, ಅತಿ ಕಡಿಮೆ, ಕೆಳಮಟ್ಟ 815
ತಪ್ಪಿಸು, ಬಿಡುಗಡೆ ಮಾಡುವುದು, ಬಿಡುಗಡೆ ಮಾಡಲ್ಪಟ್ಟಿದೆ, ಬಿಡುಗಡೆ ... 816
ತಪ್ಪು, ತಪ್ಪುಗಳು, ತಪ್ಪು ಮಾಡಿದೆ, ತಪ್ಪಾಗಿ, ತಪ್ಪಿನಿಂದ, ತಪ್ಪು ಮಾಡುವವನು, ... 818
ತಲೆ 819
ತಿಂಗಳು, ತಿಂಗಳುಗಳು, ಮಾಸಿಕ 820
ತಿರಸ್ಕರಿಸು, ತಿರಸ್ಕರಿಸುವುದು, ತಿರಸ್ಕರಿಸಲಾಗಿದೆ, 821
ತಿರಸ್ಕಾರ, ತಿರಸ್ಕಾರಾರ್ಹ ಅಥವಾ ಹೇಯ 822

ತಿರುಗು, ದೂರಕ್ಕ ಸರಿ, ಹಿಂದಕ್ಕ ತಿರುಗು, ಹಿಂತಿರುಗು 823
ತಿಳಿಯಿರಿ, ಜ್ಞಾನ, ಅಜ್ಞಾತ, ಪ್ರತ್ಯೇಕಿಸು 825
ತಿವಿ, ತಿವಿಯುವುದು, ತಿವಿಯಲ್ಪಟ್ಟಿರುತ್ತದೆ, ತಿವಿಯುತ್ತಾ ಇರುವುದು 827
ತುತ್ತೂರಿ, ತುತೂರಿಯನ್ನು ಊದುವವರು 828
ತುರಾಯಿ 829
ತುಳಿದುಬಿಡು, ತುಳಿದುಬಿಡುವುದು, ತುಳಿದುಬಿಟ್ಟಿದೆ, ತುಳಿದುಬಿಡುತ್ತಾ ಇರುವುದು 830
ತುಳಿಸು, ತುಳಿಸುವುದು, ತುಳಿಸಿದೆ, ತುಳಿಸುತ್ತಿರುವುದು 831
ತೂಗುಹಾಕು, ತೂಗು ಹಾಕಲಾಗಿದೆ, ಗಲ್ಲಿಗೇರಿಸಲಾಗಿದೆ, ತೂಗು ಹಾಕುವುದು, ... 832
ತೂರು, ತೂರುವುದು, ತೂರಲ್ಪಟ್ಟಿದೆ, ತೂರುತ್ತಾಯಿರುವುದು, ಸೋಸು, ಸೋಸುವುದು 833
ತೆಲೆಮಾರು 834
ತೊಂದರೆ, ಪೀಡಿತ, ದುಃಖ, ನೋವು, ಸಂಕಷ್ಟಗಳು 835
ತೊಟ್ಟಿ, ತೊಟ್ಟಿಗಳು, ಬಾವಿ, ಬಾವಿಗಳು 836
ತೋಳ, ತೋಳಗಳು, ಅಡಗಿ ನಾಯಿಗಳು 837
ದಂಗೆ,ತಿರುಗಿ ಬೀಳು, ದಂಗೆ ಏಳು, ತಿರುಗಿ ಬೀಳುವವರು 838
ದರ್ಶನ ಗುಡಾರ 839
ದರ್ಶನ, ದರ್ಶನಗಳು, ಕಲ್ಪನೆ 840
ದಹನ ಬಲಿ, ದಹನ ಬಲಿಗಳು, ಅಗ್ನಿಯಿಂದ ಹೋಮ 841
ದಾನ ಧರ್ಮ 842
ದಾರಿತಪ್ಪುವುದು, ದಾರಿ ತಪ್ಪಿಹೋಗುವುದು, ದಾರಿ ತಪ್ಪಿಹೋದ, ದಾರಿ ತಪ್ಪುವಂತೆ ... 843
ದಾಳಿಂಬೆ ಹಣ್ಣು, ದಾಳಿಂಬೆ ಹಣ್ಣುಗಳು 844
ದಿನ 845
ದೀಪ, ದೀಪಗಳು 846
ದೀಪಸ್ತಂಭ, ದೀಪಸ್ತಂಭಗಳು 847
ದೀರ್ಘಶಾಂತಿ, ದೀರ್ಘಶಾಂತಿಯಿಂದ, ಅಸಹನೆ 848
ದುರ್ಗ, ದುರ್ಗಗಳು, ಕೋಟೆ ನಿರ್ಮಾಣಗಳು, ಬಲವಾದ, ಕೋಟೆ, ಕೋಟೆಗಳು 849
ದುರ್ಗತಿ 850
ದೂರು, ದೂರುಗಳು, ದೂರುಗಾರ, ಆರೋಪಗಳು 851
ದೃಢನಿಷ್ಠೆ 852
ದೃಢೀಕರಿಸು, ದೃಢೀಕರಿಸುವುದು, ದೃಢೀಕರಿಸಿದೆ, ದೃಢೀಕರಣ 853
ದೇವದಾರು, ದೇವದಾರು ವೃಕ್ಷಗಳು, ದೇವದಾರು ಕಟ್ಟಿಗೆ 854
ದೇಶ, ದೇಶಗಳು 855
ದ್ರಾಕ್ಷರಸ, ಬುದ್ದಲಿ, ಹೊಸ ದ್ರಾಕ್ಷಾರಸ 857
ದ್ರಾಕ್ಷಾರಸ ಗಾಣ 858
ದ್ರಾಕ್ಷಿ, ದ್ರಾಕ್ಷಿಗಳು, ದ್ರಾಕ್ಷಿಬಳ್ಳಿ 859
ದ್ರಾಕ್ಷಿತೋಟ, ದ್ರಾಕ್ಷಿತೋಟಗಳು 860
ದ್ರೋಹ, ದ್ರೋಹ ಮಾಡು, ದ್ರೋಹ ಮಾಡಿದನು, ದ್ರೋಹ ಮಾಡುತ್ತಿದ್ದಾನೆ, ದ್ರೋಹಿ, ... 861
ಧಾನ್ಯ ನೈವೇದ್ಯ, ಧಾನ್ಯ ನೈವೇದ್ಯಗಳು 862
ಧಾನ್ಯ, ಧಾನ್ಯಗಳು, ಹೊಲಗಳು 863
ಧೂಪ ದ್ರವ್ಯ, ಧೂಪ ದ್ರವ್ಯಗಳು 864
ಧೂಪದ್ರವ್ಯ 865
ಧೂಪವೇದಿ, ಧೂಪದ ವೇದಿಕೆ 866
ಧೈರ್ಯ, ಧೈರ್ಯಮಯ, ಪ್ರೋತ್ಸಾಹ, ಪ್ರೋತ್ಸಾಹಿಸು, ನಿರುತ್ಸಾಹ, ನಿರುತ್ಸಾಹಗೊಳಿಸು 867
ಧೈರ್ಯ, ಧೈರ್ಯವಾಗಿ, ಧೈರ್ಯಶಾಲಿ 869
ಧ್ಯಾನಿಸು, ಧ್ಯಾನಮಾಡು, ಧ್ಯಾನ 870
ಧ್ವಂಸ ಮಾಡು, ಧ್ವಂಸ ಮಾಡಿದೆ, ಧ್ವಂಸ ಮಾಡುತ್ತಿದೆ, ಧ್ವಂಸ, ಧ್ವಂಸಗಳು 871
ನಂದಿಸು, ನಂದಿಸಿದೆ, ನಂದಿಸುವುದಕ್ಕಾಗದ 872
ನಡಗು, ನಡಗುತ್ತಿರುವುದು 873
ನಡುಪಟ್ಟಿ, ಸುತ್ತು, ಸುತ್ತಲೂ ಸುತ್ತಿ, ಕಟ್ಟಿಹಾಕಿರುವ, ಪಟ್ಟಿ, ಪಟ್ಟಿಯಲ್ಲಿ ... 874
ನಡುವು (ಅಥವಾ ಸೊಂಟ) 875
ನಡೆ, ನಡೆಯುತ್ತಿರುವುದು 876
ನಡೆಸುವವನು, ಗೃಹನಿರ್ವಾಹಕ, ಗೃಹನಿರ್ವಾಹಕತ್ವ 877
ನಮಸ್ಕರಿಸು, ಅಡ್ಡಬೀಳು, ಕಾಲೂರಿ ಅಡ್ಡ ಬಿದ್ದು, ಮೊಣಕಾಲೂರಿ 878

ನರಳು, ನರಳುವುದು, ನರಳಿದ, ನರಳುತ್ತಿದ್ದ, 879
ನಾಚಿಕೆಗೇಡು, ನಾಚಿಕೆಗೇಡನ್ನುಂಟು ಮಾಡುತ್ತದೆ, ನಾಚಿಕೆಗೇಡು ಉಂಟಾಯಿತು, ಅಪಮಾನಕರ 880
ನಾಲಿಗೆ, ನಾಲಿಗೆಗಳು 881
ನಾಶಗೊಳಿಸು, ನಾಶಗೊಳಿಸುವುದು, ನಾಶಗೊಳಿಸಿದೆ 882
ನಿದ್ರಿಸು, ನಿದ್ರೆಯಲ್ಲಿ ಬೀಳುವುದು, ನಿದ್ದೆ ಮಾಡಿತು, ನಿದ್ದೆ ಮಾಡುವವನು, ... 883
ನಿರ್ದೋಷಿ, ನಿರ್ದೋಷಗಳು, ನಿರಪರಾಧಿಯಾಗಿರುವುದು 884
ನಿರ್ವಹಣೆ, ಕಾರ್ಯನಿರ್ವಾಹಕ, ಆಡಳಿತ ಮಾಡುವವರು, ಅಧಿಕಾರಿ, ಅಧಿಕೃತವಾದ, ನಾಯಕ 885
ನಿಲುವಂಗಿ, ನಿಲುವಂಗಿಗಳು, ನಿಲುವಂಗಿ ಧರಿಸಲಾಗಿದೆ 886
ನಿಶ್ಚಯತೆ, ನಿಶ್ಚಯ 887
ನೀಚ ಸಾಕ್ಷಿ, ಸುಳ್ಳು ವರದಿ, ಸುಳ್ಳು ಸಾಕ್ಷಿ, ಸುಳ್ಳು ಸಾಕ್ಷಿಗಳು 888
ನೀರಿನಬುಗ್ಗೆ, ನೀರಿನಬುಗ್ಗೆಗಳು, ಬುಗ್ಗೆ, ಬುಗ್ಗೆಗಳು 889
ನೀರು, ಆಳವಾದ 890
ನುಂಗು, ನುಂಗುತ್ತದೆ, ನುಂಗಿದೆ, ನುಂಗುತ್ತಾಯಿದೆ 891
ನೂಕು, ನೂಕಿದೆ, ನೂಕುವುದು 892
ನೆರಳು, ನೆರಳು ಕೊಡುವುದು, ಮಬ್ಬುಗವಿಸು, ಮಬ್ಬುಗವಿಸಿದೆ 893
ನೆರೆಹೊರೆಯವನು, ನೆರೆಹೊರೆಯವರು, ನೆರೆಹೊರೆತನ 894
ನೇಗಿಲು, ಉಳುತ್ತದೆ, ಉಳಲ್ಪಟ್ಟಿದೆ, ಉಳುತ್ತಾಯಿರುವುದು, ಉಳುವವರು, ಉಳುವವನು, ... 895
ನೇರಳೆ ಬಣ್ಣ 896
ನೊಗ, ನೊಗಗಳು, ನೊಗ ಹೂಡಿದೆ 897
ನೋವು 898
ನ್ಯಾಯಾಧೀಶ, ನ್ಯಾಯಾಧೀಶರು 899
ಪತ್ರಿಕೆ, ಪತ್ರ 900
ಪರದೆ, ಪರದೆಗಳು 901
ಪರದೇಶಿ, ಪರದೇಶಿಗಳು, ಅನ್ಯಲೋಕದ, ವಿದೇಶಿ, ವಿದೇಶೀಯ, ವಿದೇಶಿಯರು 902
ಪರಿಪೂರ್ಣ, ಪರಿಪೂರ್ಣತೆಯುಳ್ಳ, ಪರಿಪೂರ್ಣತೆ, ಪೂರ್ಣತೆ 903
ಪರಿಶುದ್ಧ ಪಟ್ಟಣ, ಪರಿಶುದ್ಧ ಪಟ್ಟಣಗಳು 904
ಪರಿಹಾಸ್ಯ, ಗೇಲಿ, ಗೇಲಿ ಮಾಡಿದರು, ಪರಿಹಾಸ್ಯ ಮಾಡುತ್ತಿರುವುದು, ಅಪಹಾಸ್ಯ ... 905
ಪಾಕ್ಷಿಕವಾಗಿ , ಪಕ್ಷಪಾತ 906
ಪಾತಾಳ, ಅಧೋಲೋಕದ ಕೂಪ 907
ಪಾದಗಳ ಪೀಠ 908
ಪಾನ ದ್ರವ್ಯಗಳು 909
ಪಾನಸೇವಕ, ಪಾನಸೇವಕರು 910
ಪಾಪ ಪರಿಹಾರಿಕ ಯಜ್ಞ, ಪಾಪ ಪರಿಹಾರಿಕ ಯಜ್ಞಗಳು 911
ಪಾರಿವಾಳ, ಕಪೋತ 912
ಪಾಲಿಸು, ಪ್ರಭುತ್ವ, ಪ್ರಭುತ್ವಗಳು, ರಾಜ್ಯಪಾಲ, ರಾಜ್ಯಪಾಲಕರು, ಆಡಳಿತಾಧಿಕಾರಿ, ... 913
ಪೀಡಿಸು, ಪೀಡಿಸುವುದು, ಪೀಡಿಸಲಾಗಿದೆ, ಪೀಡಿಸುತ್ತಾ ಇರುವುದು, ದಬ್ಬಾಳಿಕೆ, ... 914
ಪುಟ್ಟಿ, ಪುಟ್ಟಿಗಳು, ಪುಟ್ಟಿಗಳ ತುಂಬ 915
ಪೂರ್ವಕಾಲ ವೃತ್ತಾಂತಗಳು 916
ಪೂರ್ವಜ, ತಂದೆ, ತಂದೆಯರು, ಅನುವಂಶಿಕ ತಂದೆ, ತಾತ 917
ಪೌರ, ಪೌರತ್ವ 919
ಪ್ರಕಟಿಸು, ಪ್ರಕಟಿಸುವುದು, ಪ್ರಕಟಿಸಲಾಗಿದೆ, ಪ್ರಕಟಿಸಲಾಗುತ್ತಿದೆ, ಪ್ರಕಟನೆ, ... 920
ಪ್ರಚೋದಿಸು, ಪ್ರಚೋದಿಸುವುದು, ಪ್ರಚೋದಿಸಲಾಗಿದೆ 921
ಪ್ರತಿಜ್ಞೆ, ಪ್ರತಿಜ್ಞೆ ಮಾಡಲಾಗಿದೆ 922
ಪ್ರತಿಷ್ಠಿಸು, ಪ್ರತಿಷ್ಠೆ ಮಾಡುವುದು, ಪ್ರತಿಷ್ಠಿಸಲಾಗಿದೆ, ಪ್ರತಿಷ್ಠೆ 923
ಪ್ರಥಮ ಫಲಗಳು 924
ಪ್ರಧಾನ ಯಾಜಕರು 925
ಪ್ರಳಯ, ಪ್ರಳಯಗಳು, ಪ್ರಳಯ ಬಂದಿದೆ, ಪ್ರಳಯವಾಗುತ್ತಿದೆ, ಪ್ರಳಯದ ನಿರು 926
ಪ್ರಸವ ವೇದನೆ, ಪ್ರಸವ ವೇದನೆಯಲ್ಲಿ, ಪ್ರಸವ ವೇದನೆಗಳು 927
ಪ್ರಸಿದ್ಧ, ಪ್ರಸಿದ್ಧಗೊಳಿಸುವುದು, ಪ್ರಸಿದ್ಧನಾದವನು, ಪ್ರಸಿದ್ಧ ಹೊಂದಿದವರು 928
ಪ್ರಸಿದ್ಧ, ಪ್ರಸಿದ್ಧರಾಗಿರುವ 929
ಪ್ರಿಯ, ಪ್ರಿಯರು 930
ಫಲ, ಫಲಭರಿತ, ನಿಷ್ಫಲ 931

ಬಂಗಾರ, ಬಂಗಾರದ 933
ಬಂಜೆ 934
ಬಂಧಿಸು, ಬಂಧಿಸುವುದು, ಬಂಧಿಸಲಾಗಿದೆ, ಸ್ವಾಧೀನ 935
ಬಟ್ಟೆ, ತೊಡಿಸಲ್ಪಟ್ಟಿದೆ, ಬಟ್ಟೆಗಳು, ಉಡುಪುಗಳು, ಬಟ್ಟೆಗಳಿಲ್ಲದ, ವಸ್ತ್ರಗಳು 936
ಬದ್ಧನಾಗು, ಬದ್ಧನಾಗುವಂತೆ ಮಾಡು, ಬದ್ಧನಾದೆ, ಪ್ರತಿಜ್ಞೆ ಮಾಡು, ಜವಾಬ್ದಾರಿ 937
ಬರಗಾಲ, ಕ್ಷಾಮಗಳು 938
ಬರೆದಿದೆ 939
ಬಲ, ಬಲಪಡಿಸು, ಬಲವಾಗಿ 940
ಬಲವಾದ ಪಾನೀಯ, ಬಲವಾದ ಪಾನೀಯಗಳು 942
ಬಲಿಯಾಗುವುದು, ಬಲಿಯಾಗುತ್ತಿರುವುದು 943
ಬಳ್ಳಿ, ಬಳ್ಳಿಗಳು 944
ಬಹಿಷ್ಕಾರ, ಬಹಿಷ್ಕರಿಸುವುದು, ಬಹಿಷ್ಕರಿಸಲ್ಪಡುವುದು 945
ಬಹುಮಾನ, ಬಹುಮಾನಗಳು, ಬಹುಮಾನ ಕೊಡಲಾಗಿದೆ, ಬಹುಮಾನ ಕೊಡುವುದು, ಬಹುಮಾನ ಕೊಡುವವನು 946
ಬಾಗಿಲಿನ ನಿಲುವು ಪಟ್ಟಿಗಳು 947
ಬಾಗಿಲು, ಬಾಗಿಲುಗಳು, ಬಾಗಿಲು ಪ್ರತಿಬಂಧಗಳು, ದ್ವಾರಪಾಲಕ, ದ್ವಾರಪಾಲಕರು, ಬಾಗಿಲು ... 948
ಬಿಡುಗಡೆ, ಬಿಡುಗಡೆಯಾಗುತ್ತದೆ, ಸ್ವಾತಂತ್ಯ್ರ, ಬಿಡುಗಡೆ ಆದವನು, ಸ್ವಚಿತ್ತ, ... 949
ಬಿಲ್ಲು ಮತ್ತು ಬಾಣ, ಬಿಲ್ಲುಗಳು ಮತ್ತು ಬಾಣಗಳು 950
ಬಿಲ್ಲುಗಾರ, ಬಿಲ್ಲುಗಾರರು 951
ಬೀಜ, ವೀರ್ಯ 952
ಬೂದಿ, ಭಸ್ಮ, ಧೂಳಿ 953
ಬೆಂಕಿ, ಉದ್ರೇಕಕಾರಿ, ಧೂಪಾರತಿ, ಅಗ್ನಿಷ್ಟಿಕೆ, ಕುಲುಮೆ, ಕುಳುಮೆಗಳು 954
ಬೆಳಕು, ಪ್ರಕಾಶಿಸು, ಕಾಂತಿ, ಜ್ಞಾನೋದಯ 955
ಬೆಳ್ಳಿ 956
ಬೆಸ್ತರು, ಮೀನುಗಾರ 957
ಬೇಡು, ಮನವಿ ಮಾಡು, ಬೇಡಿಕೋ, ಬೇಡುವುದು, ಬೇಡಿದೆ, ಬೇಡುತ್ತಾ ಇರುವುದು, ಬೇಡಿಕೆಗಳು 958
ಬೇಡುವುದು, ಬೇಡಿಕೊಂಡರು, ಬೇಡಿಕೊಳ್ಳುವ, ಭಿಕ್ಷುಕ 959
ಬೋಧಕ, ಬೋಧಕರು 960
ಬೋಧಿಸು, ಬೋಧಿಸುವುದು,ಕಲಿಸದಿರುವುದು 961
ಭಯಭಕ್ತಿ ತೋರು, ಭಯಭಕ್ತಿ ತೋರಿಸಲಾಗಿದೆ, ಪೂಜ್ಯಭಾವ, ಭಯಭಕ್ತಿಗಳು, 962
ಭಯಾನಕ, ಭಯಂಕರ, ಭೀಕರ, ಭೀಕರವಾಗಿ, ಗಾಬರಿಗೊಂಡಿದೆ, ಗಾಬರಿಗೊಳಿಸುತ್ತದೆ 963
ಭರ್ಜಿ, ಭಲ್ಲೆಯಗಾರ 964
ಭವಿಷ್ಯಜ್ಞಾನ, ಮಾಂತ್ರಿಕ, ಕಣಿ ಹೇಳುವುದು, ಕಣಿ ಹೇಳುವವರು 965
ಭೂಮಿ, ನೆಲ 966
ಭೋಜನ ದ್ರವ್ಯ, ಭೋಜನ ದ್ರವ್ಯಗಳು, ಭೋಜನ ನೈವೇದ್ಯಗಳು 967
ಭ್ರಷ್ಟ, ಭ್ರಷ್ಟರಾದರು, ಭ್ರಷ್ಟಾಚಾರ, ಅವ್ಯವಹಾರ, ವಂಚಿತರ, ಅಪ್ರಾಮಾಣಿಕತೆ, 968
ಮಂತ್ರ, ಮಂತ್ರವಾಗಿರುವ, ಮಾಂತ್ರಿಕ, ಜೋಯಿಸರು 969
ಮಧ್ಯಸ್ಥ 970
ಮನಃಪೂರ್ವಕವಾಗಿ ಕೊಡುವ ಕಾಣಿಕೆ 971
ಮನಸ್ಸು, ಮನಪೂರ್ವಕ, ಜ್ಞಾಪಿಸು, ಜ್ಞಾಪಕ ಮಾಡಲಾಗಿದೆ, ಒಂದೇ ಮನಸ್ಸುಳ್ಳವರು 972
ಮನೆ, ಮನೆಗಳು, ಮೇಲ್ಛಾವಣಿ, ಮನೆಮೆಟ್ಟಿಲುಗಳು, ಕಣಜ, ಕಣಜಗಳು, ಮನೆಯಾಳುಗಳು 973
ಮನೆಯ ಸದಸ್ಯರು, 974
ಮರಣಿಸು, ಮರಣಿಸುತ್ತಾನೆ, ಮರಣಕರವಾದ, ಮರಣ, 975
ಮರುಭೂಮಿ, ಮರುಭೂಮಿಗಳು, ಬಂಜರಿ, ಬಂಜರಿ ಭೂಮಿಗಳು 977
ಮರ್ಮ, ಮರೆಯಾದ ಸತ್ಯ 978
ಮಲ, ಸಗಣಿ 979
ಮಹಾ ಭೀತಿ, ಭಯೋತ್ಪಾದಿಸು, ಭಯೋತ್ಪಾದಿಸಲಾಗಿದೆ, ಮಹಾ ಭೀತಿಗಳು, ಭಯಭೀತಿಯಿಂದ, ... 980
ಮಹಾಶರೀರಕ, ಮಹಾಶರೀರಕರು 981
ಮಾಂತ್ರಿಕ, ಮಾಂತ್ರಿಕರು, ಮಾಟಗಾರ್ತಿ, ಮಾಟಗಾರಿಕೆ, ಮಾಟ ಮಂತ್ರಗಳು, ಮಂತ್ರ ವಿದ್ಯೆ 982
ಮಾರಿರೋಗ, ಮಾರಿರೋಗಗಳು 983
ಮಿಡತೆ, ಮಿಡತೆಗಳು 984
ಮೀರು 985
ಮುಂತಿಳಿದಿರುವುದು, ಮುನ್ನರಿವು 986

ಮುಖ, ಮುಖಗಳು, ಅಭಿಮುಖವಾಗಿರು, ಮುಖದ, ಕಳಮುಖವಾಗಿ 987
ಮುಖ್ಯಸ್ಥ, ಮುಖ್ಯಸ್ಥರು 988
ಮುತ್ತಿಗೆ ಹಾಕು, ಮುತ್ತಿಗೆ ಹಾಕಲ್ಪಟ್ಟಿರುವುದು, ಮುತ್ತಿಗೆ ಹಾಕಲ್ಪಟ್ಟಿದೆ, ... 989
ಮುದ್ದು, ಮುದ್ದುಗಳು, ಮುದ್ದಿಡಲಾಗಿದೆ, ಮುದ್ದು ಕೊಡುವುದು 990
ಮುದ್ರೆ, ಮುದ್ರಿಸಲ್ಪಟ್ಟಿದೆ, ಮುದ್ರೆ ಹಾಕದಿರುವ 991
ಮುಳ್ಳು, ಮುಳ್ಳಿನ ಪೊದೆ, ಮುಳ್ಳಿನ ಪೊದೆಗಳು, ಮುಳ್ಳುಗಳು, ಮುಳ್ಳುಗಿಡ, ... 992
ಮುಸುಕು, ಮುಸುಕುಗಳು, ಮುಸುಕು ಹಾಕಲಾಗಿದೆ, ಮುಸುಕು ತೆರೆಯುವುದು 993
ಮೂಲಪಿತೃ, ಮೂಲಪಿತೃಗಳು 994
ಮೃಗ 995
ಮೇಕೆ, ಮೇಕೆಗಳು, ಮೇಕೆಯ ಚರ್ಮ, ಹೋತ, ಮರಿಗಳು 996
ಮೇಲಣ, ಅತ್ಯುನ್ನತದಲ್ಲಿ 997
ಮೇಲ್ವೀಚಾರಣೆ ಮಾಡು, ಮೇಲ್ವೀಚಾರಕ, ಮೇಲ್ವೀಚಾರಕರು 998
ಮೈಲಿಗೆ, ಮೈಲಿಗೆ ಮಾಡುತ್ತದೆ, ಅಶುದ್ಧ, ಮೈಲಿಗೆ ಮಾಡು, ಅಪವಿತ್ರಗೊಳಿಸು, ... 999
ಯಜ್ಞ, ಯಜ್ಞ ಅರ್ಪಣೆಗಳು, ಕಾಣಿಕೆ 1000
ಯಾತನೆ, ಯಾತನೆಪಟ್ಟಿದೆ, ಯಾತನೆಪಡುತ್ತಿರುವುದು, ಯಾತನೆ ಕೊಡುವವರು 1002
ಯುಕ್ತಿ, ಯುಕ್ತಿಯುಳ್ಳದ್ದಾಗಿ 1003
ಯೆಹೂದ್ಯರ ಅಧಿಕಾರಿಗಳು, ಯೆಹೂದ್ಯರ ನಾಯಕ 1004
ರಕ್ತಪಾತ 1005
ರಕ್ತಸಂಬಂಧಿ, ನಂಟರು, ಬಂಧುಬಾಂಧವರು, ರಕ್ತಸಂಬಂಧಿಗಳು, ಸೋದರ ಸಂಬಂಧಿಗಳು 1006
ರಥ, ರಥಗಳು, ಸಾರಥಿಗಳು 1007
ರಾಜಕುಮಾರ, ರಾಜಕುಮಾರರು, ರಾಜಕುಮಾರಿ, ರಾಜಕುಮಾರಿಗಳು 1008
ರಾಜದಂಡ, ರಾಜದಂಡಗಳು 1009
ರಾಜಯೋಗ್ಯ, ದೊರೆತನ 1010
ರಾಜ್ಯ, ರಾಜ್ಯಗಳು 1011
ರಾಣಿ, ರಾಣಿಗಳು 1013
ರಾಯಭಾರಿ, ಪ್ರತಿನಿಧಿ 1014
ರೊಟ್ಟಿ 1015
ಲಂಚ, ಲಂಚಗಳು, ಲಂಚ ತೆಗೆದುಕೊಂಡಿದೆ, ಲಂಚಗಾರಿಕೆ 1016
ಲಾಭ, ಪ್ರಯೋಜನಕರ, ಅಪ್ರಯೋಜನಕರ 1017
ಲೈಂಗಿಕ ಅನೈತಿಕತೆ, ಅನೈತಿಕತೆ, ಅನೈತಿಕ, ಜಾರತ್ವ 1018
ವಂಚಿಸು, ಮೋಸ, ಮೋಸಗಾರ, ಮೋಸದಿಂದ, ವಂಚನೆ, ಭ್ರಮೆಗಳು 1019
ವಂಶ, ವಂಶದವರು 1020
ವಂಶಾನುಗತವಾಗು, ಸಂತಾನದವರು, ಸಂತಾನದರಾಗಿದ್ದರು, ಸಂತಾನವು, ವಂಶಸ್ಥ, ವಂಶಸ್ಥರು 1021
ವಧು, ವಧುವಿನ 1022
ವಧೆ, ವಧೆಗಳು, ವಧೆ ಮಾಡಲ್ಪಟ್ಟಿದೆ, ವಧೆಯಾಗುತ್ತಿರುವುದು 1023
ವಯಸ್ಸು, ವೃದ್ಧ 1024
ವರ, ವರರು 1025
ವರದಿ, ವರದಿ ಮಾಡುವುದು, ವರದಿ ಮಾಡಲಾಗಿದೆ 1026
ವರ್ಷ, ವರ್ಷಗಳು 1027
ವಾಕ್ಯ, ವಾಕ್ಯಗಳು 1028
ವಾರ, ವಾರಗಳು 1029
ವಾರಸುದಾರ 1030
ವಿಕೃತ, ವಿಪರ್ಯಾಸವಾಗಿ, ವಕ್ರಮಾರ್ಗ, ವಕ್ರಮಾರ್ಗಗಳು, ವಿಪರೀತತೆಗಳು, ... 1031
ವಿಘ್ನ, ವಿಘ್ನಗಳು, ಎಡವು ಕಲ್ಲು 1032
ವಿಚಾರಣೆ, ವಿಚಾರಣೆಗಳು 1033
ವಿಚಾರಣೆ, ವಿಚಾರಿಸು, ವಿಚಾರಿಸಲಾಗಿದೆ, ವಿಚಾರಣೆಗಳು 1034
ವಿಚ್ಛೇದನ 1035
ವಿದೇಯತೆ, ಇಟ್ಟುಕೋ 1036
ವಿದ್ವಾಂಸರು, ಜೋಯಿಸರು 1037
ವಿಧ, ವಿಧಗಳು, ದಯೆ, ದಯಾಳುತನ 1038
ವಿಧಾನಸಭೆ, ವಿಧಾನಸಭೆಗಳು, ಗುಂಪುಸೇರಿಸು, ಗುಂಪು ಗೂಡಿಸಲ್ಪಟ್ಟಿದೆ 1039
ವಿರೋಧಿ, ವಿರೋಧಿಗಳು, ಶತ್ರು, ಶತ್ರುಗಳು 1040

ವಿವೇಚಿಸು, ವಿವೇಚಿಸಲ್ಪಟ್ಟಿದ, ವಿವೇಚಿಸಲ್ಪಡುತ್ತಿದ, ವಿವೇಚನ 1041
ವಿಶ್ರಾಂತಿ, ವಿಶ್ರಾಂತಿ ಕೊಡುವುದು, ವಿಶ್ರಾಂತಿ ತೆಗೆದುಕೊಳ್ಳಲಾಗಿದೆ, ... 1042
ವಿಸ್ಮಯ, ಭಯಂಕರನು 1043
ವೀಕ್ಷಿಸು, ವೀಕ್ಷಿಸುವುದು, ವೀಕ್ಷಿಸಿದೆ, ವೀಕ್ಷಿಸುತ್ತಿರುವುದು, ಕಾವಲುಗಾರ, ... 1044
ವೈಭವ 1045
ವ್ಯರ್ಥ, ವ್ಯರ್ಥವಾಗಿ 1046
ಶಂಕುಮರ (ಸೈಪ್ರಿಸ್ ಮರ) 1047
ಶಕ್ತಿ, ಶಕ್ತಿಯುಳ್ಳ, ಶಕ್ತಿಯುತ ಕೆಲಸ 1048
ಶಮೆದಮೆ, ಶಮೆದಮೆ ಹೊಂದಿರುವ 1049
ಶಾಸನ, ಶಾಸನಗಳು 1050
ಶಿಕ್ಷಿಸು, ಶಿಕ್ಷಿಸುವುದು, ಶಿಕ್ಷಿಸಿದೆ, ಶಿಕ್ಷಿಸುತ್ತಾ ಇರುವುದು, ಶಿಕ್ಷೆ, ... 1051
ಶೋಕಿಸು, ದುಃಖಿಸುತ್ತಾನೆ, ಪ್ರಲಾಪಿಸಿದೆ, ಪ್ರಲಾಪಿಸುವುದು, ದುಃಖಿಸುವನು, ... 1053
ಶ್ರಮೆ, ಶ್ರಮೆಗಳು, ಕೆಲಸ, ಕಠಿಣ ಕೆಲಸ 1054
ಸಂಕಟ, ಸಂಕಟಗಳು, ಸಂಕಟಪಟ್ಟಿದೆ, ಸಂಕಟಪಡುವುದು, ಸಂಕಟಗಾರ, ಸಂಕಟ ಕೊಡು 1055
ಸಂತಾನದವರು 1056
ಸಂದೇಶವಾಹಕ, ಸಂದೇಶವಾಹಕರು 1057
ಸಂಪ್ರದಾಯ 1058
ಸಂಬಂಧಗಳನ್ನು ಹೊಂದಿರುವುದು, ಪ್ರೀತಿ ಮಾಡುವುದು, ಇನ್ನೊಬ್ಬರೊಂದಿಗೆ ಮಲಗುವುದು, ... 1059
ಸಂಹರಿಸು, ಸಂಹರಿಸುವುದು, ನಿರ್ಮೂಲನ 1060
ಸದಸ್ಯ, ದೇಹದ ಭಾಗಗಳು 1061
ಸಮಯ, ಅಕಾಲಿಕ, ದಿನಾಂಕ 1062
ಸಮಾಧಾನ ಯಜ್ಞ, ಸಮಾಧಾನ ಯಜ್ಞಗಳು 1063
ಸಮಾಧಾನ, ಸಮಾಧಾನಭರಿತ, ಸಮಾದಾನಪಡಿಸುವವರು 1064
ಸಮಾಧಿ, ಸಮಾಧಿ ತೋಡುವವನು, ಸಮಾಧಿಗಳು, ಗೋರಿ, ಗೋರಿಗಳು, ಹೂಣಿಡುವ ಸ್ಥಳ 1066
ಸಮುದ್ರ ಹಸು 1067
ಸರ್ಪ, ಸರ್ಪಗಳು, ಹಾವು, ಹಾವುಗಳು, ವಿಷಸರ್ಪ, ವಿಷಸರ್ಪಗಳು 1068
ಸರ್ವಾಂಗಹೋಮ, ಸರ್ವಾಂಗಹೋಮಗಳು 1069
ಸಲಹೆ, ಸೂಚನೆ, ಸಲಹೆಗಾರ, ಸಲಹೆಗಾರರು, ಜ್ಞಾನದ ಆಲೋಚನೆ, ಆಲೋಚನೆ ಹೇಳುವಾತ 1070
ಸಸಿ ನಡು, ಸಸಿ ನೆಡುವುದು, ಸಸಿ ನೆಡಲಾಗಿದೆ, ಸಸಿ ನೆಡುತ್ತಾಯಿರುವುದು, ಸಸಿ ... 1071
ಸಹಿಸು, ತಾಳಿಕೊಳ್ಳುವವನು, ಹೊತ್ತುಕೊ 1072
ಸಹಿಸು, ಸಹಿಸುಕೊಳ್ಳುವುದು, ಸಹಿಸಿಕೊಂಡಿದೆ, ಸಹಿಸುಕೊಳ್ಳುತ್ತಾಯಿರು, ಸಹನೆ 1073
ಸಹೋದರಿ, ಸಹೋದರಿಯರು 1074
ಸಾತ್ವಿಕ, ಸಾಧುತ್ವ 1075
ಸಾಧಿಸು, ಪರಿಶ್ರಮ 1076
ಸಾಷ್ಟಾಂಗ ನಮಸ್ಕರಿಸು, ಸಾಷ್ಟಾಂಗ ನಮಸ್ಕರಿಸಿದೆ 1077
ಸಿಂಹಗಳು, ಸಿಂಹ, ಹೆಣ್ಣು ಸಿಂಹ, ಹೆಣ್ಣು ಸಿಂಹಗಳು 1078
ಸಿಂಹಾಸನ, ಸಿಂಹಾಸನಗಳು, ಸಿಂಹಾಸನದಲ್ಲಿರುವುದು 1079
ಸಿದ್ಧಾಂತ, ಬೋಧನೆ, ನಂಬಿಕೆಗಳು, ಸೂಚನೆಗಳು, ಜ್ಞಾನ 1080
ಸೀಮೆ, ಸೀಮೆಗಳು, ಪ್ರಾಂತೀಯ 1081
ಸುಂಕ, ಸುಂಕಗಳು, ಸುಂಕ ಹಾಕಿದೆ, ಸುಂಕ ಹಾಕುವುದು, ತೆರಿಗೆ, ಸುಂಕವನ್ನು ... 1082
ಸುರುಳಿ, ಸುರುಳಿಗಳು 1084
ಸುಳ್ಳು ಪ್ರವಾದಿ, ಸುಳ್ಳು ಪ್ರವಾದಿಗಳು 1085
ಸುಳ್ಳುಸುದ್ದಿ, ಅಪನಿಂದೆ ಮಾಡುವವರು, ನಿಂದಿಸುವುದು, ಅವಮಾನಿಸುವುದು 1086
ಸೂಳೆ, ಸೂಳೆತನ ಮಾಡಿದೆ, ಸೂಳೆಯಾಗಿಸು, ವೇಶ್ಯೆ, ಹಾದರಗಿತ್ತಿ 1087
ಸೃಷ್ಟಿಸು, ಸೃಷ್ಟಿಸಲ್ಪಟ್ಟ, ಸೃಷ್ಟಿ, ಸೃಷ್ಟಿಕರ್ತ 1088
ಸೆರೆ ಸಿಕ್ಕುವುದು, ಬಂಧಿತರು, ಬಂಧಿಸುವುದು, ಸೆರೆ ಸಿಕ್ಕಿದ್ದಾರೆ, ಸೆರೆಯಲ್ಲಿ 1089
ಸೆರೆ, ಖೈದಿಗಳು, ಬಂಧನ 1090
ಸೆರೆ, ಸೆರೆಹೊಯ್ಯುವುದು 1091
ಸೆಲಾ 1092
ಸೇನಾಧಿಪತಿ 1093
ಸೇವಕ, ಸೇವೆ, ಗುಲಾಮ, ಕೆಲಸಗಾರ, ಯುವಕ, ಯುವತಿಯರು 1094
ಸೇವಿಸು, ಸೇವಿಸುವುದು, ಸೇವಿಸಲ್ಪಟ್ಟಿದೆ, ಸೇವಿಸುವ 1096

ಸೈನಿಕ, ಸೈನಿಕರು, ಯೋಧ, ಯೋಧರು 1097
ಸ್ತಂಭ, ಸ್ತಂಭಗಳು, ಕಂಬ, ಕಂಬಗಳು 1098
ಸ್ತುತಿ, ಸ್ತುತಿಗಳು, ಸ್ತುತಿಸಿದೆ, ಸ್ತುತಿಗೆ ಯೋಗ್ಯನು 1099
ಸ್ಥಾಪಿಸು, ಸ್ಥಾಪಕರು, ಅಸ್ಥಿವಾರ 1100
ಸ್ವರ, ಸ್ವರಗಳು 1101
ಸ್ವರಮಂಡಲ, ಕಿನ್ನರಿ, ಕಿನ್ನರಿಗಳು 1102
ಸ್ವಾಧೀನಪಡಿಸಿಕೊ, ಸ್ವಾಧೀನ ಮಾಡಿಕೊಳ್ಳಲಾಗಿದೆ, ಸ್ವಾಸ್ಥ್ಯ, ಸ್ವಾಸ್ಥ್ಯಗಳು ... 1103
ಸ್ವೀಕರಿಸು, ಸ್ವಾಗತ, ಕೈಗೆತ್ತಿಕೊಳ್ಳುವುದು, ಸ್ವೀಕಾರ 1105
ಹಂದಿ, ಹಂದಿಗಳು, ಹಂದಿಮಾಂಸ, ಹಂದಿಗಳ ಗುಂಪು 1107
ಹಕ್ಕಲಾಯು, ಹಕ್ಕಲಾಯುವುದು, ಹಕ್ಕಲಾಯ್ದದ್ದು, ಹಕ್ಕಲಾಯುತ್ತಿರುವುದು 1108
ಹತ್ತನೆಯ, ಹತ್ತರಲ್ಲಿ, ದಶಮಾಂಶ, ದಶಮಾಂಶಗಳು 1109
ಹತ್ತು ಆಜ್ಞೆಗಳು 1110
ಹದ್ದು, ಹದ್ದುಗಳು 1111
ಹಬ್ಬ, ಹಬ್ಬಗಳು 1112
ಹಸ್ತ, ಹಸ್ತಗಳು, ಕೈಗೆ ಕೊಡಲ್ಪಟ್ಟಿದೆ, ಹಸ್ತಾಂತರ, ಹಸ್ತದಿಂದ, ಮೇಲೆ ... 1113
ಹಾಳು ಮಾಡು, ವಿನಾಶ, ಹಾಳುಬಿದ್ದ 1115
ಹಾಳು, ಹಾಳುಮಾಡುವುದು, ಹಾಳು ಮಾಡಿದೆ, ಹಾಳು ಮಾಡುತ್ತಿರುವುದು, ಹಾಳು ಭೂಮಿ, ಹಾಳು ... 1116
ಹಿಂಡು, ಹಿಂಡುಗಳು, ಸಮೂಹ, ಮಂದೆ, ಮಂದೆಗಳು 1117
ಹಿಂತಿರುಗಿ, ಹಿಂತಿರುಗುವುದು, ಹಿಂತಿರುಗಿದೆ, ಹಿಂತಿರುಗುತ್ತಾಯಿದೆ 1118
ಹಿಂಸಿಸು, ಹಿಂಸಿಸಿದೆ, ಹಿಂಸಿಸುತ್ತಾ ಇರುವುದು, ಹಿಂಸೆ, ಹಿಂಸೆಗಳು, ಹಿಂಸಕನು, ... 1119
ಹಿಂಸೆ, ಯಾತನೆ, ತೊಂದರೆ 1120
ಹಿಮ, ಹಿಮ ಬಿದ್ದಿದೆ, ಹಿಮ ಬೀಳುತ್ತಿದೆ 1121
ಹಿರಿಯ, ಹಳೆಯದು, ಹಳೆಯ 1122
ಹಿರಿಸಭೆ, ಹಿರಿಸಭೆಗಳು 1123
ಹುಡುಕು, ಹುಡುಕುವುದು, ಹುಡುಕುತ್ತಾ ಇರುವುದು, ಪಡೆ 1124
ಹುಳಿ, ಹುದುಗು ಹಿಟ್ಟು, ಹುದುಗುವುದು, ಹುದುಗಿದೆ, ಹುದುಗಿಲ್ಲ 1125
ಹೂಳಿಡುವುದು, ಸಮಾಧಿ ಮಾಡುವುದು, ಸಮಾಧಿ ಮಾಡಿದೆ, ಸಮಾಧಿ ಮಾಡುತ್ತಿದ್ದೇವೆ, ಸಮಾಧಿ ... 1126
ಹೆಣ್ಣುಕುರಿ, ಹೆಣ್ಣುಕುರಿಗಳು, ಟಗರು, ಟಗರುಗಳು, ಕುರಿ, ಕುರಿಮರಿ, ಕುರಿಮರಿಗಳು, ... 1127
ಹೆಮ್ಮೆ, ಹೆಮ್ಮೆಯ, ಗರ್ವ, ಗರ್ವದ 1128
ಹೊಟ್ಟು 1129
ಹೊಟ್ಟೆಕಿಚ್ಚು, ಆಸೆಪಡುವುದು 1130
ಹೊರ ಹಾಕು, ಹೊರಗೆ ಎಸೆ, ಹೊರಗೆ ಬಿಸಾಡು 1131
ಹೊರೆ, ಹೊರೆಗಳು, ಭಾರವಾದ, ಪ್ರಯಾಸಕರವಾದ 1132
ಹೊಲೆ, ಹೊಲೆಮಾಡಿದೆ, ಹೊಲೆ ಮಾಡುತ್ತಿದ್ದೇವೆ 1133
ಹೊಸ್ತಿಲು, ಹೊಸ್ತಿಲುಗಳು 1134

translationAcademy **1135**
ಅತಿಶಯೋಕ್ತಿ 1136
ಉಪಮಾಲಂಕಾರ. 1140
ಉಪಲಕ್ಷಣಾಲಂಕಾರ 1143
ಕಲ್ಪಿತ ಜ್ಞಾನ ಮತ್ತು ಸೂಚ್ಯ ಮಾಹಿತಿ 1145
ದ್ವಿರುಕ್ತಿಗಳು 1148
ನಾಮವಾಚಕ ಗುಣವಾಚಕಗಳು. 1150
ನುಡಿಗಟ್ಟುಗಳು. 1152
ಪರಿಚಯವಿಲ್ಲದ ವಿಷಯಗಳನ್ನು ಅನುವಾದಿಸುವುದು / ಭಾಷಾಂತರಿಸುವುದು. 1154
ಭಾವವಾಚಕ ನಾಮಪದಗಳು 1157
ರೂಪಕ ಅಲಂಕಾರ 1159
ಲಕ್ಷಣಾಲಂಕಾರ 1165
ಸಾದೃಶ್ಯತೆ. 1167
ಸೌಮ್ಯೋಕ್ತಿಗಳು. 1170
ಹೆಸರುಗಳನ್ನು ಹೇಗೆ ಭಾಷಾಂತರಿಸುವುದು 1172

ಕೊಡುಗೆದಾರರು **1176**
translationWords ಕೊಡುಗೆದಾರರು 1176
translationAcademy ಕೊಡುಗೆದಾರರು 1176

translationWords

Key Terms

ಅಂತ್ಯ ದಿನ, ಅಂತ್ಯ ದಿನಗಳು, ಅನಂತರದ ದಿನಗಳು

ಪದದ ಅರ್ಥವಿವರಣೆ:

“ಅಂತ್ಯ ದಿನಗಳು” ಅಥವಾ “ಅನಂತರದ ದಿನಗಳು” ಎನ್ನುವ ಪದವು ಸಾಧಾರಣವಾಗಿ ಈಗಿನ ಯುಗದ ಅಂತ್ಯಕಾಲ ವ್ಯವಧಿಯನ್ನು ಸೂಚಿಸುತ್ತದೆ.

- ಈ ಕಾಲಾವಧಿಯು ತಿಳಿಯದ ಅವಧಿಯನ್ನು ಹೊಂದಿರುತ್ತದೆ
- “ಅಂತ್ಯ ದಿನಗಳು” ಎನ್ನುವವು ದೇವರಿಂದ ತಿರುಗಿಕೊಂಡು ತಮಗೆ ಇಷ್ಟವಾದ ನಡತೆಯಲ್ಲಿರುವ ಜನರಿಗೆ ಮಾಡುವ ತೀರ್ಪಿನ ಸಮಯ.

ಅನುವಾದ ಸಲಹೆಗಳು:

- “ಅಂತ್ಯ ದಿನಗಳು” ಎನ್ನುವ ಪದವನ್ನು “ಕೊನೆಯ ದಿನಗಳು” ಅಥವಾ “ಅಂತ್ಯ ಕಾಲಗಳು” ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಸಂದರ್ಭಗಳಲ್ಲಿ ಈ ಪದವನ್ನು “ಪ್ರಪಂಚದ ಅಂತ್ಯ” ಅಥವಾ “ಈ ಪ್ರಪಂಚವು ಅಂತ್ಯಗೊಂಡಾಗ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕರ್ತನ ದಿನ, ತೀರ್ಪು ಮಾಡು, ತಿರುಗಿಕೋ, ಪ್ರಪಂಚ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೇತ್ರ.03:3-4
- ದಾನಿ.10:14-15
- ಇಬ್ರಿ.01:1-3
- ಯೆಶಯಾ.02:1-2
- ಯಾಕೋಬ.05:1-3
- ಯೆರೆ.23:19-20
- ಯೋಹಾನ.11:24-26
- ಮೀಕಾ.04:1

ಪದ ಡೇಟಾ:

- Strong's: H319, H3117, G2078, G2250

ಅಕ್ರಮ

ಪದದ ಅರ್ಥವಿವರಣೆ:

“ಅಕ್ರಮ” ಎನ್ನುವ ಪದವು “ಪಾಪ” ಎನ್ನುವ ಪದಕ್ಕೆ ಅರ್ಥವನ್ನೇ ಹೊಂದಿರುತ್ತದೆ, ಆದರೆ ಇನ್ನೂ ವಿಶೇಷವಾಗಿ ತಿಳಿದು ತಪ್ಪುಗಳನ್ನು ಮಾಡುವುದನ್ನು ಅಥವಾ ಭಯಂಕರ ದುಷ್ಟತನವನ್ನು ಸೂಚಿಸುತ್ತದೆ.

- “ಅಕ್ರಮ” ಎನ್ನುವ ಪದವು ಅಕ್ಷರಾರ್ಥವಾಗಿ ಕಾನೂನುಗಳನ್ನು ಉಲ್ಲಂಘನೆ ಮಾಡುವುದು ಅಥವಾ ಅವುಗಳನ್ನು ವಕ್ರೀಕರಣ ಮಾಡುವುದು ಎಂದರ್ಥ. ಇದು ಭಾರೀ ಅನ್ಯಾಯವನ್ನು ಸೂಚಿಸುತ್ತದೆ.
- ಅಕ್ರಮ ಎನ್ನುವುದು ಇತರ ಜನರಿಗೆ ವಿರುದ್ಧವಾಗಿ ಮಾಡುವ ಉದ್ದೇಶಪೂರ್ವಕವಾದ, ಹಾನಿಕರವಾದ ಕ್ರಿಯೆಗಳನ್ನು ಸೂಚಿಸುತ್ತದೆ.
- ಅಕ್ರಮ ಎನ್ನುವ ಪದಕ್ಕೆ ಹೇಳುವ ಇತರ ನಿರ್ವಚನೆಗಳಲ್ಲಿ “ವಕ್ರ ಸ್ವಭಾವ” ಮತ್ತು “ನೀಚತನ” ಎನ್ನುವ ಪದಗಳು ಒಳಗೊಂಡಿರುತ್ತವೆ, ಆ ಎರಡು ಪದಗಳು ಭಯಾನಕವಾದ ಪಾಪದ ಸ್ಥಿತಿಗತಿಗಳನ್ನು ವಿವರಿಸುತ್ತದೆ.

ಅನುವಾದ ಸಲಹೆಗಳು:

- “ಅಕ್ರಮ” ಎನ್ನುವ ಪದವನ್ನು “ದುಷ್ಟತನ” ಅಥವಾ “ವಕ್ರಬುದ್ಧಿಯ ಕ್ರಿಯೆಗಳು” ಅಥವಾ “ಹಾನಿಕರವಾದ ಕ್ರಿಯೆಗಳು” ಎಂದೂ ಅನುವಾದ ಮಾಡಬಹುದು.
- “ಪಾಪ” ಮತ್ತು “ಅಪರಾಧ” ಎನ್ನುವ ಪದಗಳು ವಾಕ್ಯಭಾಗಗಳಲ್ಲಿ ಕಾಣಿಸಿಕೊಂಡಂತೆ ಅನೇಕಸಲ “ಅಕ್ರಮ” ಎನ್ನುವ ಪದವು ಕಾಣಿಸಿಕೊಳ್ಳುತ್ತದೆ, ಈ ಪದಗಳ ಅನುವಾದದಲ್ಲಿ ಅನೇಕ ವಿಧಾನಗಳನ್ನು ಹೊಂದಿರುವುದು ತುಂಬಾ ಪ್ರಾಮುಖ್ಯ.

(ಈ ಪದಗಳನ್ನು ಸಹ ನೋಡಿರಿ : ಪಾಪ, ಅತಿಕ್ರಮಿಸು, ದೋಷ)

ಸತ್ಯವೇದದ ವಾಕ್ಯಗಳು:

- ದಾನಿ 9:13
- ವಿಮೋ 34:5-7
- ಆದಿ 15:14-16
- ಆದಿ 44:16
- ಹಬ 2:12
- ಮತ್ತಾಯ 13:41
- ಮತ್ತಾಯ 23:27-28
- ಮೀಕಾ 3:10

ಪದ ಡೇಟಾ:

- Strong's: H205, H1942, H5753, H5758, H5766, H5771, H5932, H5999, H7562, G00902, G00930, G04580, G38920, G41890

ಅತಿಕ್ರಮಣ, ಅತಿಕ್ರಮಣಗಳು, ಉಲ್ಲಂಘನೆ

ಪದದ ಅರ್ಥವಿವರಣೆ:

“ಅತಿಕ್ರಮಣ” ಎನ್ನುವ ಪದವು ನೈತಿಕವಾದ ನೀತಿಯನ್ನು, ನಿಯಮವನ್ನು ಆಜ್ಞೆಯನ್ನು ಮೀರುವುದನ್ನು ಸೂಚಿಸುತ್ತದೆ. “ಅತಿಕ್ರಮಣ” ಎಂದರೆ “ಉಲ್ಲಂಘಿಸುವುದು” ಎಂದರ್ಥ.

- ಅಲಂಕಾರಿಕವಾಗಿ “ಅತಿಕ್ರಮಣ” ಎನ್ನುವ ಪದವು “ಗೆರೆಯನ್ನು ದಾಟು” ಎಂದೂ ವಿವರಿಸುತ್ತದೆ, ಅಂದರೆ, ಒಬ್ಬ ವ್ಯಕ್ತಿಯ ಮತ್ತು ಇತರರ ಕ್ಷೇಮಕ್ಕಾಗಿ ಇಟ್ಟಿರುವ ಪರಿಮಿತಿಗೆ ಅಥವಾ ಗಡಿಗೆ ಅತೀತವಾಗಿ ಹೋಗುವುದು ಎಂದರ್ಥ.
- “ಅತಿಕ್ರಮಣ”, “ಪಾಪ”, “ಅಕ್ರಮ”, ಮತ್ತು “ಎಲ್ಲೆಮೀರು” ಎನ್ನುವ ಪದಗಳೆಲ್ಲವೂ ದೇವರಿಗೆ ವಿರುದ್ಧವಾಗಿ ನಡೆದುಕೊಳ್ಳುವುದನ್ನು ಮತ್ತು ಆತನ ಆಜ್ಞೆಗಳಿಗೆ ಅವಿಧೇಯತೆ ತೋರಿಸುವುದನ್ನು ಸೂಚಿಸುವ ಅರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- “ಅತಿಕ್ರಮಣ” ಎನ್ನುವ ಪದವನ್ನು “ಪಾಪ” ಅಥವಾ “ಅವಿಧೇಯತೆ” ಅಥವಾ “ತಿರಸ್ಕಾರ” ಎಂದೂ ಅನುವಾದ ಮಾಡಬಹುದು.
- “ಪಾಪ” ಅಥವಾ “ಅತಿಕ್ರಮಣ” ಅಥವಾ “ಎಲ್ಲೆಮೀರು” ಎಂದು ಅರ್ಥ ಬರುವ ಎರಡು ಪದಗಳನ್ನು ವಾಕ್ಯವಾಗಲಿ ಅಥವಾ ವಾಕ್ಯಭಾಗಲಿ ಉಪಯೋಗಿಸಿದ್ದರೆ, ಸಾಧ್ಯವಾದರೆ, ಈ ಪದಗಳನ್ನು ವಿಭಿನ್ನವಾಗಿ ಅನುವಾದ ಮಾಡುವುದು ತುಂಬಾ ಪ್ರಾಮುಖ್ಯ. ಒಂದೇ ಸಂದರ್ಭದಲ್ಲಿ ಒಂದೇ ಅರ್ಥಗಳೊಂದಿಗೆ ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಪದಗಳನ್ನು ಸತ್ಯವೇದವು ಉಪಯೋಗಿಸಿದಾಗ, ಸಾಧಾರಣವಾಗಿ ಏನು ಹೇಳಲ್ಪಟ್ಟಿದೆಯೆಂದು ಒತ್ತಿ ಹೇಳುವುದಕ್ಕೆ ಅಥವಾ ಅದರ ಪ್ರಾಮುಖ್ಯತೆಯನ್ನು ತೋರಿಸುವುದಕ್ಕೆ ಮಾತ್ರ ಹೇಳಲಾಗಿರುತ್ತದೆ, ಇದೇ ಇದರ ಉದ್ದೇಶವಾಗಿರುತ್ತದೆ.

(ನೋಡಿರಿ: ಸಮಾಂತರತ್ವ)

(ಈ ಪದಗಳನ್ನು ಸಹ ನೋಡಿರಿ : ಪಾಪ, ಎಲ್ಲೆಮೀರು, ಅಕ್ರಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.04:3-6
- ದಾನಿ.09:24-25
- ಗಲಾತ್ಯ.03:19-20
- ಗಲಾತ್ಯ.06:1-2
- ಅರಣ್ಯ. 14:17-19
- ಕೀರ್ತನೆ.032:1-2

ಪದ ಡೇಟಾ:

- Strong's: H898, H4603, H4604, H6586, H6588, G458, G459, G3845, G3847, G3848, G3928

ಅಧಿಕಾರ

ಅರ್ಥವಿವರಣೆ:

“ಅಧಿಕಾರ” ಎನ್ನುವ ಪದವು ಒಬ್ಬರ ಮೇಲೆ ಮತ್ತೊಬ್ಬರು ನಿಯಂತ್ರಣ ಮಾಡುವ ಮತ್ತು ಪ್ರಭಾವಕ್ಕೆ ಒಳಗಾಗುವಂತೆ ಮಾಡುವ ಶಕ್ತಿಗೆ ಸೂಚನೆಯಾಗಿರುತ್ತದೆ.

- ಅರಸರು ಮತ್ತು ಇತರ ಪಾಲನೆ ಮಾಡುವ ಪಾಲಕರು ಅವರು ಆಳುತ್ತಿರುವ ಜನರ ಮೇಲೆ ಅಧಿಕಾರವನ್ನು ಹೊಂದಿರುತ್ತಾರೆ.
- “ಅಧಿಕಾರಗಳು” ಎನ್ನುವ ಪದವು ಜನರಿಗೆ, ಪ್ರಭುತ್ವಗಳಿಗೆ ಅಥವಾ ಇತರರ ಮೇಲೆ ಅಧಿಕಾರವನ್ನು ಹೊಂದಿರುವ ಸಂಸ್ಥೆಗಳಿಗೆ ಕೂಡ ಸೂಚಿಸುತ್ತದೆ.
- “ಅಧಿಕಾರಗಳು” ಎನ್ನುವ ಪದವು ದೇವರ ಅಧಿಕಾರಕ್ಕೆ ತಮ್ಮನ್ನು ತಾವು ಒಪ್ಪಿಸಿಕೊಳ್ಳದ ಜನರ ಮೇಲೆ ಅಧಿಕಾರವನ್ನು ಹೊಂದಿರುವ ಆತ್ಮ ಸಂಬಂಧಿಗಳನ್ನು ಕೂಡ ಸೂಚಿಸುತ್ತದೆ.
- ಯಜಮಾನರು ತಮ್ಮ ಆಳುಗಳ ಮೇಲೆ ಅಥವಾ ದಾಸದಾಸಿಯರ ಮೇಲೆ ಅಧಿಕಾರವನ್ನು ಹೊಂದಿರುತ್ತಾರೆ. ತಂದೆತಾಯಿಗಳು ತಮ್ಮ ಮಕ್ಕಳ ಮೇಲೆ ಅಧಿಕಾರವನ್ನು ಹೊಂದಿರುತ್ತಾರೆ.
- ಸರ್ಕಾರಗಳು ತಮ್ಮ ಪೌರರನ್ನು ಆಳುವದಕ್ಕೆ ಕಾನೂನುಗಳನ್ನು ಮಾಡುವ ಅಧಿಕಾರವನ್ನು ಅಥವಾ ಹಕ್ಕನ್ನು ಹೊಂದಿರುತ್ತಾರೆ.

ಅನುವಾದ ಸಲಹೆಗಳು:

“ಅಧಿಕಾರ” ಎನ್ನುವ ಪದವನ್ನು “ನಿಯಂತ್ರಣ” ಅಥವಾ “ಹಕ್ಕು” ಅಥವಾ “ಅರ್ಹತೆಗಳು” ಎಂದೂ ಅನುವಾದ ಮಾಡಬಹುದು.

- ಕೆಲವೊಂದು ಬಾರಿ “ಅಧಿಕಾರ” ಎನ್ನುವುದು “ಶಕ್ತಿ” ಎಂದು ಅರ್ಥ ಕೊಡುವ ಪದವನ್ನು ಬಳಸಲು ಉಪಯೋಗಿಸಲ್ಪಡುತ್ತದೆ.
- “ಅಧಿಕಾರಗಳು” ಎನ್ನುವ ಪದವನ್ನು ಜನರು ಅಥವಾ ಜನರನ್ನು ಆಳುವ ಸಂಸ್ಥೆಗಳಿಗೆ ಸೂಚಿಸಿ ಉಪಯೋಗಿಸಿದಾಗ, ಅದನ್ನು “ನಾಯಕರು” ಅಥವಾ “ಪಾಲಕರು” ಅಥವಾ “ಶಕ್ತಿಗಳು” ಎಂದೂ ಅನುವಾದ ಮಾಡಬಹುದು.
- “ಈತನ ಸ್ವಂತ ಅಧಿಕಾರದಿಂದ” ಎನ್ನುವ ಮಾತನ್ನು ಕೂಡ “ಪಾಲಿಸುವದಕ್ಕೆ ತನ್ನ ಸ್ವಂತ ಹಕ್ಕಿನಿಂದ” ಅಥವಾ “ತನ್ನ ಸ್ವಂತ ಅರ್ಹತೆಗಳ ಆಧಾರದಿಂದ” ಎನ್ನುವ ಮಾತಗಳನ್ನು ಉಪಯೋಗಿಸಿ ಅನುವಾದ ಮಾಡಬಹುದು.
- “ಅಧಿಕಾರದ ಕೆಳಗೆ” ಎನ್ನುವ ಭಾವವ್ಯಕ್ತೀಕರಣವನ್ನು “ವಿಧೇಯರಾಗಲು ಬಾಧ್ಯತೆ” ಅಥವಾ “ಇತರರ ಆಜ್ಞೆಗಳಿಗೆ ವಿಧೇಯರಾಗಿರುವುದು” ಎಂದೂ ಅನುವಾದ ಮಾಡಬಹುದು.

(ಇವುಗಳನ್ನು ಸಹ ನೋಡಿರಿ : ಆದಿಪತ್ಯ, ರಾಜ, ಅಧಿಕಾರಿ, ಶಕ್ತಿ)

ಸತ್ಯವೇದದ ಉಲ್ಲೇಖಗಳು:

- ಕೊಲೊಸ್ಸೆ 2:10
- ಎಸ್ತೇರಳು 9:29
- ಆದಿಕಾಂಡ 41:35
- ಯೋನ 3:6-7
- ಲೂಕ 12:5
- ಲೂಕ 20:1-2
- ಮಾರ್ಕ 1:22
- ಮತ್ತಾಯ 8:9
- ಮತ್ತಾಯ 28:19
- ತೀತ 3:1

ಪದದ ಡೇಟಾ:

- Strong's: H8633, G08310, G14130, G18490, G18500, G20030, G27150, G52470

ಅನ್ಯ ಜನರು

ಸತ್ಯಾಂಶಗಳು:

“ಅನ್ಯ ಜನರು” ಎನ್ನುವ ಪದವು ಯೆಹೂದ್ಯನಲ್ಲದ ವ್ಯಕ್ತಿಯನ್ನು ಸೂಚಿಸುತ್ತದೆ. ಅನ್ಯಜನರಾಗಿರುವವರು ಯಾಕೋಬನ ಸಂತತಿಯಲ್ಲದವರು.

- ಸತ್ಯವೇದದಲ್ಲಿ “ಸುನ್ನತಿಮಾಡಿಸಿಕೊಳ್ಳದವನು” ಎನ್ನುವ ಪದವು ಅನ್ಯರಿಗೆ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ, ಯಾಕಂದರೆ ಅನ್ಯಜನರಲ್ಲಿ ಅನೇಕರು ಇಸ್ರಾಯೇಲ್ಯರು ಮಾಡಿಕೊಳ್ಳುವ ಹಾಗೆ ಅವರ ಗಂಡು ಮಕ್ಕಳಿಗೆ ಸುನ್ನತಿ ಮಾಡಿಸಿರುವುದಿಲ್ಲ.
- ಯಾಕಂದರೆ ದೇವರು ಯೆಹೂದ್ಯರನ್ನು ತನ್ನ ವಿಶೇಷವಾದ ಜನರಾಗಿರುವುದಕ್ಕೆ ಆದುಕೊಂಡಿದ್ದಾನೆ, ಅನ್ಯರು ಎಂದಿಗೂ ದೇವ ಜನರಾಗದ ಹೊರಿಗಿನವರೆಂದು ಅವರು ಆಲೋಚನೆ ಮಾಡುತ್ತಾರೆ.
- ಚರಿತ್ರೆಯಲ್ಲಿ ವಿವಿಧ ಕಾಲಗಳಲ್ಲಿ ಯೆಹೂದ್ಯರನ್ನು “ಇಸ್ರಾಯೇಲ್ಯರೆಂದು” ಅಥವಾ “ಇಬ್ರಿಯರೆಂದು” ಕರೆಯುತ್ತಾರೆ. ತಮ್ಮ ಜನಾಂಗದವರಲ್ಲದ ವ್ಯಕ್ತಿಯನ್ನು “ಅನ್ಯನು” ಎಂದು ಅವರು ಸೂಚಿಸುತ್ತಾರೆ.
- ಅನ್ಯ ಜನರು ಎನ್ನುವ ಪದವನ್ನು “ಯೆಹೂದ್ಯನಾಗದವನು” ಅಥವಾ “ಯೆಹೂದ್ಯನಲ್ಲದವನು” ಅಥವಾ “ಇಸ್ರಾಯೇಲನಾಗದವನು” (ಹಳೇ ಒಡಂಬಡಿಕೆ) ಅಥವಾ “ಯೆಹೂದಿಯಲ್ಲ” ಎಂದೂ ಅನುವಾದ ಮಾಡಬಹುದು.
- ಸಾಂಪ್ರದಾಯಿಕವಾಗಿ ಯೆಹೂದ್ಯರು ಅನ್ಯರೊಂದಿಗೆ ಸಹವಾಸ ಮಾಡುವುದಿಲ್ಲ ಮತ್ತು ತಿನ್ನುವುದಿಲ್ಲ, ಇದೇ ಆದಿ ಸಭೆಯಲ್ಲಿ ಮೊದಲ ಸಮಸ್ಯೆಯಾಗಿದ್ದಿತು.

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲ್, ಯಾಕೋಬ, ಯೆಹೂದ್ಯ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.09:13-16
- ಅಪೊ.ಕೃತ್ಯ.14:5-7
- ಗಲಾತ್ಯ.02:16
- ಲೂಕ.02:32
- ಮತ್ತಾಯ.05:47
- ಮತ್ತಾಯ.06:5-7
- ರೋಮಾ.11:25

ಪದ ಡೇಟಾ:

- Strong's: H1471, G1482, G1484, G1672

ಅಪರಾಧ, ಅಪರಾಧಿ

ಪದದ ಅರ್ಥವಿವರಣೆ:

“ಅಪರಾಧ” ಎನ್ನುವ ಪದವು ತಪ್ಪು ಮಾಡಿರುವುದನ್ನು ಅಥವಾ ಪಾಪ ಮಾಡಿರುವನ್ನು ಸೂಚಿಸುತ್ತದೆ.

- “ಅಪರಾಧಿಯಾಗಿರುವುದು” ಎಂದರೆ ದೇವರಿಗೆ ಅವಿಧೇಯತೆ ತೋರಿಸುವ ನೈತಿಕವಾಗಿ ತಪ್ಪು ಮಾಡಿರುವುದನ್ನು ಸೂಚಿಸುತ್ತದೆ.
- “ಅಪರಾಧಿ” ಎನ್ನುವ ಪದಕ್ಕೆ ವಿರುದ್ಧಾತ್ಮಕ ಪದ “ನಿರ್ದೋಷಿ” ಆಗಿರುತ್ತದೆ.

ಅನುವಾದ ಸಲಹೆಗಳು:

- “ಅಪರಾಧ” ಎನ್ನುವ ಪದವನ್ನು ಕೆಲವೊಂದು ಭಾಷೆಗಳಲ್ಲಿ “ಪಾಪ ಭಾರ” ಅಥವಾ “ಪಾಪದ ಲೆಕ್ಕ” ಎಂಬುದಾಗಿ ಅನುವಾದ ಮಾಡುತ್ತಾರೆ.
- “ಅಪರಾಧಿಯಾಗಿರುವುದು” ಎನ್ನುವ ಮಾತನ್ನು ಅನುವಾದ ಮಾಡುವ ಅನೇಕ ವಿಧಾನಗಳಲ್ಲಿ “ತಪ್ಪುಮಾಡಿದವನಾಗು” ಅಥವಾ “ನೈತಿಕವಾಗಿ ತಪ್ಪು ಮಾಡಿರುವುದು” ಅಥವಾ “ಪಾಪ ಮಾಡಿರುವುದನ್ನು” ಎನ್ನುವ ಅರ್ಥಗಳು ಬರುವ ಮಾತುಗಳನ್ನು ಒಳಗೊಂಡಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ನಿರ್ದೋಷಿ, ಅಕ್ರಮ, ಶಿಕ್ಷೆ, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.28:36-38
- ಯೆಶಯಾ.06:6-7
- ಯಾಕೋಬ.02:10-11
- ಯೋಹಾನ.19:4-6
- ಯೋನಾ.01:14-16

ಸತ್ಯವೇದದಿಂದ ಉದಾಹರಣೆಗಳು:

- **_39:02** ಆತನ (ಯೇಸುವಿನ) ಕುರಿತಾಗಿ ಸುಳ್ಳು ಹೇಳಿದ ಅನೇಕ ಸಾಕ್ಷಿಗಳನ್ನು ಅವರು ಕರೆದುಕೊಂಡು ಬಂದರು. ಆದರೆ, ಅವರು ಹೇಳಿದ ಮಾತುಗಳು ಅವರಲ್ಲಿಯೇ ಸರಿಯಾಗಿದ್ದಿಲ್ಲ, ಆದ್ದರಿಂದ ಯೆಹೂದ್ಯರ ನಾಯಕರು ಆತನು ಯಾವುದರ ವಿಷದಲ್ಲಿಯೂ _ ಅಪರಾಧಿಗಳೆಂದು __ ನಿರೂಪಿಸುವುದಕ್ಕಾಗಲಿಲ್ಲ.
- **_39:11** ಯೇಸುವಿನೊಂದಿಗೆ ಮಾತನಾಡಿದನಂತರ, ಪಿಲಾತನು ಜನಸಮೂಹದ ಕಡೆಗೆ ಹೋಗಿ, “ಈ ಮನುಷ್ಯನಲ್ಲಿ ನಾನು ಯಾವ **ಅಪರಾಧವನ್ನು** ಕಂಡುಕೊಳ್ಳಲಿಲ್ಲ” ಎಂದು ಹೇಳಿದನು. ಆದರೆ ಯೆಹೂದ್ಯ ನಾಯಕರು ಮತ್ತು ಜನಸಮೂಹಗಳು “ಅವನನ್ನು ಶಿಲುಬೆಗೇರಿಸಿ” ಎಂದು ಜೋರಾಗಿ ಕೂಗಿದರು! “ಈತನು **ಅಪರಾಧಿಯಲ್ಲ** ” ಎಂದು ಪಿಲಾತನು ಉತ್ತರ ಕೊಟ್ಟನು. ಆದರೆ ಅವರು ಇನ್ನೂ ಹೆಚ್ಚಾಗಿ ಕೂಗಿದರು. ಪಿಲಾತನು ಮೂರನೇಯಬಾರಿ “ಆತನು **ಅಪರಾಧಿಯಲ್ಲ** ” ಎನ್ನುವ ವಿಷಯವನ್ನು ಹೇಳಿದನು.
- **40:04** ಯೇಸುವನ್ನು ಇಬ್ಬರ ಕಳ್ಳರ ಮಧ್ಯೆದಲ್ಲಿ ಶಿಲುಬೆಗೆ ಹಾಕಿದರು. ಅವರಲ್ಲಿ ಒಬ್ಬನು ಯೇಸುವನ್ನು ಹೀಯಾಳಿಸಿದನು, ಆದರೆ ಇನ್ನೊಬ್ಬ, “ನಿನಗೆ ದೇವರ ಭಯವಿಲ್ಲವೋ?” ನಾವಾದರೋ _ **ಅಪರಾಧಿಗಳು** _ , ಆದರೆ ಈ ಮನುಷ್ಯನು ನಿರ್ದೋಷಿ ಯೆಂದು ಹೇಳಿದನು.
- **49:10** ನಿನ್ನ ಪಾಪದ ಕಾರಣದಿಂದ ನೀನು _ **ಅಪರಾಧಿ** _ ಯಾಗಿದ್ದೀ ಮತ್ತು ನೀನು ಸಾಯುವ ಅರ್ಹತೆಯನ್ನು ಹೊಂದಿದ್ದೀ.

ಪದ ಡೇಟಾ:

- Strong's: H816, H817, H818, H5352, H5355, G338, G1777, G3784, G5267

ಅಪೊಸ್ತಲ, ಅಪೊಸ್ತಲತ್ವ

ಅರ್ಥವಿವರಣೆ:

“ಅಪೊಸ್ತಲರು” ಎನ್ನುವವರು ದೇವರ ಕುರಿತಾಗಿ ಮತ್ತು ಆತನ ರಾಜ್ಯದ ಕುರಿತಾಗಿ ಬೋಧಿಸುವುದಕ್ಕೆ ಯೇಸುವಿನಿಂದ ಕಳುಹಿಸಲ್ಪಟ್ಟವರು. “ಅಪೊಸ್ತಲತ್ವ” ಎನ್ನುವ ಪದವು ಅಪೊಸ್ತಲರಾಗಿ ನೇಮಿಸಲ್ಪಟ್ಟಿರುವವರ ಅಧಿಕಾರವನ್ನು ಮತ್ತು ಸ್ಥಾನವನ್ನು ಸೂಚಿಸುತ್ತದೆ.

“ಅಪೊಸ್ತಲ” ಎನ್ನುವ ಪದಕ್ಕೆ “ಒಂದು ವಿಶೇಷವಾದ ಉದ್ದೇಶಕ್ಕಾಗಿ ಹೊರಗೆ ಕಳುಹಿಸಲ್ಪಟ್ಟವರು” ಎಂದರ್ಥ. ಯಾರಿಂದ ಅಪೊಸ್ತಲರಾಗಿ ಕಳುಹಿಸಲ್ಪಡುತ್ತಾರೋ ಅವರಿಗಿರುವ ಅಧಿಕಾರವನ್ನೇ ಅಪೊಸ್ತಲರೂ ಹೊಂದಿರುತ್ತಾರೆ.

- ಯೇಸುವಿನ ಅತೀ ಹತ್ತಿರದ ಹನ್ನೆರಡು ಮಂದಿ ಶಿಷ್ಯರು ಮೊಟ್ಟ ಮೊದಲ ಅಪೊಸ್ತಲರಾದರು. ಇತರರು, ಎಂದರೆ ಪೌಲ ಮತ್ತು ಯಾಕೋಬ, ಸಹ ಅಪೊಸ್ತಲರಾದರು.
- ದೇವರ ಶಕ್ತಿಯಿಂದ, ಅಪೊಸ್ತಲರು ಧೈರ್ಯವಾಗಿ ಸುವಾರ್ತೆಯನ್ನು ಸಾರಿದರು ಮತ್ತು ಅನೇಕ ಜನರನ್ನು ಗುಣಪಡಿಸಿದರು, ಮತ್ತು ಜನರೊಳಗಿಂದ ದೆವ್ವಗಳೆಲ್ಲವು ಹೊರಬರುವಂತೆ ಅವರು ಮಾಡಿದರು.

ಅನುವಾದ ಸಲಹೆಗಳು:

- “ಅಪೊಸ್ತಲ” ಎನ್ನುವ ಪದವನ್ನು “ಹೊರಗೆ ಕಳುಹಿಸಲ್ಪಟ್ಟ ಒಬ್ಬ ವ್ಯಕ್ತಿ” ಅಥವಾ “ಕಳುಹಿಸಲ್ಪಟ್ಟ ವ್ಯಕ್ತಿ” ಅಥವಾ “ಜನರಿಗೆ ದೇವರ ಸಂದೇಶವನ್ನು ಸಾರುವುದಕ್ಕೆ ಹೊರಗೆ ಹೋಗುವುದಕ್ಕೆ ಕರೆಯಲ್ಪಟ್ಟ ವ್ಯಕ್ತಿ” ಎನ್ನುವ ಪದಗಳಿಂದ ಅಥವಾ ನುಡಿಗಟ್ಟಿನಿಂದಲೂ ಅನುವಾದ ಮಾಡಬಹುದು.
- “ಅಪೊಸ್ತಲ” ಮತ್ತು “ಶಿಷ್ಯ” ಎನ್ನುವ ಪದಗಳನ್ನು ಬೇರೆ ಬೇರೆಯಾಗಿ ಅನುವಾದ ಮಾಡುವುದು ಇಲ್ಲಿ ತುಂಬಾ ಪ್ರಾಮುಖ್ಯ.
- ಅದೇರೀತಿ ಈ ಪದವನ್ನು ಜಾತೀಯ ಭಾಷೆಯಲ್ಲಿ ಅಥವಾ ಸ್ಥಳೀಯ ಭಾಷೆಯಲ್ಲಿ ಸತ್ಯವೇದದ ಅನುವಾದದಲ್ಲಿ ಯಾವರೀತಿ ಅನುವಾದ ಮಾಡಿದ್ದಾರೆಂಬುದನ್ನು ಕೂಡ ಪರಿಗಣಿಸಿರಿ. (ನೋಡಿರಿ ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಇವುಗಳನ್ನು ಸಹ ನೋಡಿರಿ : ಅಧಿಕಾರ, ಶಿಷ್ಯ, ಯಾಕೋಬ (ಜೆಬೆದಾಯನ ಮಗ), ಪೌಲ, ಹನ್ನೆರಡು)

ಸತ್ಯವೇದದ ಉಲ್ಲೇಖಗಳು:

- ಯೂದ 1:17-19
- ಲೂಕ 9:12-14

ಸತ್ಯವೇದದ ಕಥೆಗಳಿಂದ ಉದಾಹರಣೆಗಳು:

- **26:10** ಯೇಸು ಹನ್ನೆರಡು ಮಂದಿಯನ್ನು ಆರಿಸಿಕೊಂಡನು, ಅವರೇ ಆತನ _ ಅಪೊಸ್ತಲರು _ ಎಂದು ಕರೆಯಲ್ಪಟ್ಟವರು. _ ಅಪೊಸ್ತಲರು _ಯೇಸುವಿನೋಟ್ಟಿಗೆ ಪ್ರಯಾಣ ಮಾಡುತ್ತಾ ಆತನಿಂದ ಕಲಿತುಕೊಂಡರು.
- **30:01** ಯೇಸು ಅನೇಕ ಗ್ರಾಮಗಳಲ್ಲಿ ಜನರಿಗೆ ಬೋಧಿಸುವುದಕ್ಕೆ ಮತ್ತು ಪ್ರಸಂಗಿಸುವುದಕ್ಕೆ ತನ್ನ _ ಅಪೊಸ್ತಲರನ್ನು _ ಕಳುಹಿಸಿದರು.
- **38:02** ಯೂದನು ಯೇಸುವಿನ _ ಅಪೊಸ್ತಲರಲ್ಲಿ _ ಒಬ್ಬರಾಗಿದ್ದರು. ಇವನು _ ಅಪೊಸ್ತಲರ _ ಹಣದ ಚೀಲಕ್ಕೆ ಜವಾಬ್ದಾರಿ ವಹಿಸಿದ್ದನು, ಆದರೆ ಆತನು ಹಣವನ್ನು ಪ್ರೀತಿಸಿದ್ದನು ಮತ್ತು ಅನೇಕಸಲ ಆ ಚೀಲದಿಂದ ಹಣವನ್ನು ಕದ್ದಿದ್ದನು.
- **43:13** ಶಿಷ್ಯರೆಲ್ಲರೂ ತಮ್ಮನು ತಾವು _ ಅಪೊಸ್ತಲರ _ ಬೋಧನೆ, ಸಹವಾಸ, ಸೇರಿ ಊಟಮಾಡುವುದು, ಮತ್ತು ಪ್ರಾರ್ಥನೆಗಳಲ್ಲಿ ಕಾರ್ಯನಿರತರಾಗಿದ್ದರು.
- **46:08** ವಿಶ್ವಾಸಿಯಾಗಿದ್ದ ಬಾರ್ನಬ ಸೌಲನನ್ನು _ ಅಪೊಸ್ತಲರ _ ಬಳಿಗೆ ಕರೆದುಕೊಂಡು ಬಂದನು ಮತ್ತು ಸೌಲನು ದಮಸ್ಕದಲ್ಲಿ ಯಾವರೀತಿ ಧೈರ್ಯದಿಂದ ಸುವಾರ್ತೆಯನ್ನು ಸಾರಿದನೆಂದು ಅವರಿಗೆ ತಿಳಿಸಿದನು.

ಪದದ ದತ್ತಾಂಶ:

- Strong's: G06510, G06520, G24910, G53760, G55700

ಅಭಿಷೇಕಿಸು, ಅಭಿಷೇಕಿಸಿದ್ದು, ಅಭಿಷೇಕ

ಪದದ ಅರ್ಥವಿವರಣೆ:

“ಅಭಿಷೇಕ” ಎಂಬ ಪದವು ಒಬ್ಬ ವ್ಯಕ್ತಿ ಅಥವಾ ವಸ್ತುವಿನ ಮೇಲೆ ಎಣ್ಣೆಯನ್ನು ಹಚ್ಚುವುದು ಅಥವಾ ಸುರಿಯುವುದು ಎಂದರ್ಥ. ಕೆಲವೊಮ್ಮೆ ಎಣ್ಣೆಯಲ್ಲಿ ಪರಿಮಳ ದ್ರವ್ಯಗಳನ್ನು ಬೆರಸಲಾಗುತ್ತದೆ. ಇದು ಒಂದು ಒಳ್ಳೆಯ ಸುಗಂಧದ ವಾಸನೆಯನ್ನು ನೀಡುತ್ತದೆ. ಸತ್ಯವೇದದ ಸಮಯಗಳಲ್ಲಿ, ಎಣ್ಣೆಯಿಂದ ಅಭಿಷೇಕಿಸಲು ಅನೇಕ ಕಾರಣಗಳಿದ್ದವು.

- ಹಳೇ ಒಡಂಬಡಿಕೆಯಲ್ಲಿ, ಯಾಜಕರು, ಅರಸರು, ಮತ್ತು ಪ್ರವಾದಿಗಳನ್ನುದೇವರ ವಿಶೇಷವಾದ ಸೇವೆಗೋಸ್ಕರ ಪ್ರತ್ಯೇಕಿಸಲು ಎಣ್ಣೆಯಿಂದ ಅಭಿಷೇಕಿಸಲಾಗುತ್ತಿತ್ತು.
- ದೇವರನ್ನು ಮಹಿಮೆಪಡಿಸುವುದಕ್ಕೆ ಮತ್ತು ಆರಾಧಿಸುವುದಕ್ಕೆ ಉಪಯೋಗಿಸಲ್ಪಡುತ್ತಿರುವ ಯಜ್ಞವೇದಿಗಳು ಅಥವಾ ಗುಡಾರ ಎನ್ನುವ ವಸ್ತುಗಳ ಮೇಲೆ ಎಣ್ಣೆಯನ್ನು ಸುರಿಸಿ ಅಭಿಷೇಕ ಮಾಡಲಾಗುತ್ತಿತ್ತು.
- ಹೊಸ ಒಡಂಬಡಿಕೆಯಲ್ಲಿ ಅನಾರೋಗ್ಯ ಜನರ ಸ್ವಸ್ಥತೆಗಾಗಿ ಎಣ್ಣೆಯಿಂದ ಅಭಿಷೇಕಿಸಿಲಾಗುತ್ತಿತ್ತು.
- ಆರಾಧನೆ ಕ್ರಿಯೆಯಾಗಿ ತೋರ್ಪಡುವಂತೆ ಒಬ್ಬ ಸ್ತ್ರೀಯಿಂದ ಸುಗಂಧ ದ್ರವ್ಯದ ಎಣ್ಣೆಯೊಂದಿಗೆ ಯೇಸು ಅಭಿಷೇಕಿಸಲ್ಪಟ್ಟಿರುವ ಸಂದರ್ಭಗಳನ್ನು ಹೊಸ ಒಡಂಬಡಿಕೆಯಲ್ಲಿ ಎರಡು ಸಾರಿ ದಾಖಲಿಸಿದ್ದನ್ನು ನಾವು ನೋಡಬಹುದು. ಇದನ್ನು ಮಾಡುವ ಮೂಲಕ ಅವಳು ತನ್ನ ಭವಿಷ್ಯದ ಸಮಾಧಿಗಾಗಿ ಸಿದ್ಧಮಾಡುತ್ತಿದ್ದಾಳೆಂದು ಯೇಸು ಪ್ರತಿಕ್ರಿಯಿಸಿದನು.
- ಯೇಸು ಸತ್ತ ನಂತರ, ಆತನ ದೇಹವನ್ನು ತನ್ನ ಸ್ನೇಹಿತರು ಎಣ್ಣೆಗಳಿಂದ ಮತ್ತು ಸುಗಂಧ ದ್ರವ್ಯಗಳಿಂದ ಅಭಿಷೇಕ ಮಾಡಿ ಸಮಾಧಿಗೋಸ್ಕರ ಸಿದ್ಧಗೊಳಿಸಿದ್ದರು.
- “ಮೆಸ್ಸೀಯನು” (ಇಬ್ರಿಯ) ಮತ್ತು “ಕ್ರಿಸ್ತನು” (ಗ್ರೀಕ್) ಎನ್ನುವ ಬಿರುದುಗಳಿಗೆ “ಅಭಿಷೇಕಿಸಲ್ಪಟ್ಟವನು” ಎಂದರ್ಥ.
- ಯೇಸು ಮೆಸ್ಸೀಯ ಅಂದರೆ ಪ್ರವಾದಿಯಾಗಿರಲು, ಮಹಾ ಯಾಜಕನಾಗಿರಲು ಮತ್ತು ಅರಸನಾಗಿರಲು ಆಯ್ಕೆಮಾಡಲ್ಪಟ್ಟಿರುವನು ಮತ್ತು ಅಭಿಷೇಕ ಹೊಂದಿದವನೂ ಎಂದರ್ಥ.
- ಸತ್ಯವೇದದ ಸಮಯಗಳಲ್ಲಿ, ಒಬ್ಬ ಸ್ತ್ರೀಯು ತನ್ನನ್ನು ತಾನು ಲೈಂಗಿಕವಾಗಿ ಆಕರ್ಷಣೆಯುಳ್ಳವಳಾಗಿ ಮಾಡಿಕೊಳ್ಳಲು ಎಣ್ಣೆಯಿಂದ ತನ್ನನ್ನು ತಾನೇ ಅಭಿಷೇಕಿಸುತ್ತಿದ್ದಳು.

ಅನುವಾದ ಸಲಹೆಗಳು:

- ಸಂದರ್ಭಕ್ಕೆ ತಕ್ಕಹಾಗೆ, “ಅಭಿಷೇಕ” ಎನ್ನುವ ಪದವನ್ನು “ಎಣ್ಣೆಯನ್ನು ಹೊಯ್ಯುವುದು” ಅಥವಾ “ಎಣ್ಣೆಯನ್ನು ಹಚ್ಚುವುದು” ಅಥವಾ “ಸುಗಂಧ ದ್ರವ್ಯದ ಎಣ್ಣೆಯಿಂದ ಪ್ರತಿಷ್ಠೆ ಮಾಡುವುದು” ಎಂದೂ ಅನುವಾದ ಮಾಡಬಹುದು.
- “ಅಭಿಷೇಕಿಸಿದ್ದು” ಎನ್ನುವ ಪದವನ್ನು “ಎಣ್ಣೆಯಿಂದ ಪ್ರತಿಷ್ಠೆ ಮಾಡಲ್ಪಟ್ಟವನು” ಅಥವಾ “ನೇಮಿಸಲ್ಪಟ್ಟವನು” ಅಥವಾ “ಪ್ರತಿಷ್ಠೆ ಮಾಡಲ್ಪಟ್ಟವನು” ಎಂದೂ ಅನುವಾದ ಮಾಡಬಹುದು.
- “ಅಭಿಷೇಕ” ಎನ್ನುವ ಪದವು ಕೆಲವು ಸಂದರ್ಭಗಳಲ್ಲಿ “ನೇಮಕ” ಎಂದೂ ಅನುವಾದ ಮಾಡಬಹುದು.
- “ಅಭಿಷೇಕಿಸಲ್ಪಟ್ಟ ಯಾಜಕ” ಎನ್ನುವ ಮಾತನ್ನು “ಎಣ್ಣೆಯಿಂದ ಪ್ರತಿಷ್ಠೆ ಮಾಡಲ್ಪಟ್ಟ ಯಾಜಕನು” ಅಥವಾ “ಎಣ್ಣೆಯನ್ನು ಸುರಿಸುವುದರ ಮೂಲಕ ಪ್ರತ್ಯೇಕಿಸಲ್ಪಟ್ಟ ಯಾಜಕ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ಪ್ರತಿಷ್ಠೆ, ಮಹಾಯಾಜಕ, ಯೆಹೂದ್ಯರ ಅರಸ, ಯಾಜಕ, ಪ್ರವಾದಿ)

ಸತ್ಯವೇದದ ಉಲ್ಲೇಖ ವಚನಗಳು:

- 1 ಯೋಹಾನ 02:20
- 1 ಯೋಹಾನ 02:27
- 1 ಸಮುವೇಲ 16:2-3
- ಅಪೊ.ಕೃತ್ಯ. 04:27-28
- ಆಮೋಸ 06:5-6
- ವಿಮೋಚನಕಾಂಡ 29:5-7
- ಯಾಕೋಬ 05:13-15

ಪದದ ದತ್ತಾಂಶ:

- Strong's: H47, H430, H1101, H1878, H3323, H4397, H4398, H4473, H4886, H4888, H4899, H5480, H8136, G32, G218, G743, G1472, G2025, G3462, G5545, G5548

ಅಯ್ಯೋ

ಪದದ ಅರ್ಥವಿವರಣೆ:

“ಅಯ್ಯೋ” ಎನ್ನುವ ಪದವು ದೊಡ್ಡ ತೊಂದರೆಯ ಭಾವನೆಯನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿ ಗಂಭೀರವಾದ ತೊಂದರೆಯನ್ನು ಅನುಭವಿಸುತ್ತಾನೆಂದು ಕೊಡುವ ಎಚ್ಚರಿಕೆಯನ್ನೂ ಸೂಚಿಸುತ್ತದೆ.

- “ಅಯ್ಯೋ” ಎನ್ನುವ ಪದವು ಜನರು ಮಾಡಿದ ಪಾಪಗಳಿಗಾಗಿ ಶಿಕ್ಷೆಯಾಗಿ ಅವರು ಶ್ರಮೆಗಳನ್ನು ಅನುಭವಿಸುತ್ತಾರೆಂದು ಜನರಿಗೆ ಎಚ್ಚರಿಕೆಯನ್ನು ಕೊಡುವ ಮಾತಿನಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ.
- ಸತ್ಯವೇದದಲ್ಲಿ ಅನೇಕ ಸ್ಥಳಗಳಲ್ಲಿ “ಅಯ್ಯೋ” ಎನ್ನುವ ಪದವು ಅನೇಕಸಲ ಉಪಯೋಗಿಸಲ್ಪಟ್ಟಿರುತ್ತದೆ, ವಿಶೇಷವಾಗಿ ಭಯಂಕರವಾದ ತೀರ್ಪನ್ನು ಒತ್ತಿ ಹೇಳುತ್ತದೆ.
- “ಅಯ್ಯೋ, ನಾನು” ಅಥವಾ “ನನಗೆ ಸಂಭವಿಸಿದ ಗತಿ” ಎಂದು ಒಬ್ಬ ವ್ಯಕ್ತಿ ಹೇಳಿದಾಗ ಗಂಭೀರವಾದ ಶ್ರಮೆಯ ಕುರಿತಾಗಿ ದುಃಖವನ್ನು ವ್ಯಕ್ತಪಡಿಸುವುದು ಎಂದರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಅಯ್ಯೋ” ಎನ್ನುವ ಪದವನ್ನು “ಮಹಾ ದುಃಖ” ಅಥವಾ “ದುಃಖಸ್ಥಿತಿ” ಅಥವಾ “ವಿಪತ್ತು” ಅಥವಾ “ದುರಂತ” ಎಂದೂ ಅನುವಾದ ಮಾಡಬಹುದು.
- “ಅಯ್ಯೋ, (ಪಟ್ಟಣದ) ಗತಿ” ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನಗಳಲ್ಲಿ, “(ಪಟ್ಟಣಕ್ಕೆ) ಎಂತ ಭಯಂಕರವಾದ ಪರಿಸ್ಥಿತಿ” ಅಥವಾ “(ಪಟ್ಟಣದಲ್ಲಿ) ಜನರು ತುಂಬಾ ತೀವ್ರವಾಗಿ ಶಿಕ್ಷಿಸಲ್ಪಟ್ಟಿರುವುದು” ಅಥವಾ “ಆ ಜನರು ಅತೀ ಗಂಭೀರವಾಗಿ ಶ್ರಮೆಗಳನ್ನು ಅನುಭವಿಸುವರು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಅಯ್ಯೋ, ನಾನು” ಅಥವಾ “ನನಗೆ ಸಂಭವಿಸಿದ ಗತಿ!” ಎನ್ನುವ ಮಾತನ್ನು “ನಾನು ಎಷ್ಟು ದುಃಖ ಸ್ಥಿತಿಯಲ್ಲಿದ್ದೇನೆ!” ಅಥವಾ “ನಾನು ದುಃಖದಲ್ಲಿದ್ದೇನೆ!” ಅಥವಾ “ಇದು ನನಗೆ ಎಷ್ಟು ಭಯಂಕರವಾಗಿದೆ!” ಎಂದೂ ಅನುವಾದ ಮಾಡಬಹುದು.
- “ಅಯ್ಯೋ ನೀನು” ಎನ್ನುವ ಮಾತನ್ನು “ನೀನು ಅತೀ ಗಂಭೀರವಾಗಿ ಶ್ರಮೆ ಹೊಂದುವಿ” ಅಥವಾ “ನೀನು ಭಯಂಕರವಾದ ತೊಂದರೆಗಳನ್ನು ಅನುಭವಿಸುವಿ” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.13:17-18
- ಹಬ.02:12-14
- ಯೆಶಯಾ.31:1-2
- ಯೆರೆ.45:1-3
- ಯೂದಾ.01:9-11
- ಲೂಕ.06:24-25
- ಲೂಕ.17:1-2
- ಮತ್ತಾಯ.23:23-24

ಪದ ಡೇಟಾ:

- Strong's: H188, H190, H337, H480, H1929, H1945, H1958, G3759

ಅಸಹ್ಯ, ಅಸಹ್ಯಕರ

ಅರ್ಥವಿವರಣೆ:

“ಅಸಹ್ಯ” ಎನ್ನುವ ಪದವು ಹೇಸಿಗೆಯನ್ನು ಉಂಟುಮಾಡುವ ವಿಷಯಗಳಿಗೆ ಅಥವಾ ಅತೀ ಹೆಚ್ಚಾಗಿ ಇಷ್ಟವಾಗದ ವಿಷಯಗಳಿಗೆ ಸೂಚಿಸುವುದಕ್ಕೆ ಉಪಯೋಗಿಸಲಾಗುತ್ತದೆ.

- ಐಗುಪ್ತರು ಇಬ್ರಿಯರನ್ನು “ಅಸಹ್ಯ” ಜನರಾಗಿ ಕಾಣುತ್ತಿದ್ದರು. ಇದರ ಅರ್ಥವೇನೆಂದರೆ ಐಗುಪ್ತರು ಇಬ್ರಿಯರನ್ನು ಇಷ್ಟಪಡುತ್ತಿರಲಿಲ್ಲ ಮತ್ತು ಅವರ ಬಳಿಗೆ ಹೋಗುತ್ತಿರಲಿಲ್ಲ ಅಥವಾ ಅವರೊಂದಿಗೆ ಸಹವಾಸ ಮಾಡುವುದಕ್ಕೆ ಇವರು ಇಷ್ಟಪಡುತ್ತಿರಲಿಲ್ಲ.
- ಕೆಲವೊಂದು ವಿಷಯಗಳನ್ನು “ಯೆಹೋವನಿಗೆ ಅಸಹ್ಯ” ಎಂದು ಸತ್ಯವೇದವು ಕರೆಯುತ್ತದೆ, ಆ ವಿಷಯಗಳಲ್ಲಿ ಸುಳ್ಳಾಡುವುದು, ಗರ್ವ, ಮನುಷ್ಯರನ್ನು ಬಲಿಕೊಡುವುದು, ವಿಗ್ರಹಗಳಿಗೆ ಆರಾಧನೆ ಮಾಡುವುದು, ನರಹತ್ಯೆ, ಮತ್ತು ಲೈಂಗಿಕ ಪಾಪಗಳಾದ ವ್ಯಭಿಚಾರ ಮತ್ತು ಸಲಿಂಗ ಕಾರ್ಯಗಳನ್ನು ಒಳಗೊಂಡಿರುತ್ತದೆ.
- ಯೇಸು ಕ್ರಿಸ್ತನು ಅಂತ್ಯಕಾಲದ ಕುರಿತಾಗಿ ತನ್ನ ಶಿಷ್ಯರಿಗೆ ಬೋಧನೆ ಮಾಡುತ್ತಿರುವಾಗ, ದೇವರಿಗೆ ವಿರುದ್ಧವಾಗಿ ತಿರಿಗಿಬೀಳುವ , ಆರಾಧನೆಯ ಸ್ಥಳವನ್ನು ನಾಶಗೊಳಿಸುವುದಾಗಿರುವ “ಹಾಳು ಮಾಡುವ ಅಸಹ್ಯ ವಸ್ತುಗಳ” ಕುರಿತಾಗಿ ಪ್ರವಾದಿಯಾದ ದಾನಿಯೇಲನ ಮುಖಾಂತರ ಬಂದಿರುವ ಪ್ರವಾದನೆಯನ್ನು ಸೂಚಿಸಿದನು.

ಅನುವಾದ ಸಲಹೆಗಳು:

- “ಅಸಹ್ಯ” ಎನ್ನುವ ಪದವನ್ನು “ದೇವರು ದ್ವೇಷಿಸುವ ಕಾರ್ಯಗಳು” ಅಥವಾ “ಅಸಹ್ಯವಾದ ಕೃತ್ಯಗಳು” ಅಥವಾ “ಅಸಹ್ಯವಾದ ಆಚರಣೆ” ಅಥವಾ “ಅತೀ ಕೆಟ್ಟ ದುಷ್ಟ ಕಾರ್ಯ” ಎಂಬುದಾಗಿ ಕೂಡ ಅನುವಾದ ಮಾಡಬಹುದು.
- ಸಂದರ್ಭ ತಕ್ಕಂತೆ, “ಅಸಹ್ಯವಾದ ಕಾರ್ಯ” ಎನ್ನುವ ಮಾತನ್ನು “ಅತಿ ಹೆಚ್ಚಾಗಿ ದ್ವೇಷಿಸಲ್ಪಡುವದು” ಅಥವಾ “ಅತೀ ನೀಚವಾದ ಕಾರ್ಯ” ಅಥವಾ “ಸ್ವೀಕಾರ ಮಾಡಲಾಗದ ಕಾರ್ಯ” ಅಥವಾ “ಅತೀ ಹೆಚ್ಚಾಗಿ ದ್ವೇಷಿಸುವುದಕ್ಕೆ, ಅಸಹ್ಯಪಟ್ಟುಕೊಳ್ಳುವುದಕ್ಕೆ ಕಾರಣವಾದ ಕಾರ್ಯ” ಎಂಬುದಾಗಿ ಅನುವಾದ ಮಾಡಬಹುದು.
- “ಹಾಳು ಮಾಡುವ ಅಸಹ್ಯ ವಸ್ತುವು” ಎನ್ನುವ ಮಾತನ್ನು “ಜನರಿಗೆ ತುಂಬಾ ಹೆಚ್ಚಾಗಿ ಹಾನಿಯನ್ನುಂಟು ಮಾಡುವ ವಿನಾಶಕಾರಿಯಾದ ವಸ್ತುವು” ಅಥವಾ “ಅತೀ ಹೆಚ್ಚಾದ ನೋವನ್ನುಂಟು ಮಾಡುವ ಅಸಹ್ಯಕರವಾದ ವಸ್ತು” ಎಂಬುದಾಗಿಯೂ ಅನುವಾದ ಮಾಡಬಹುದು.

(ಇವುಗಳನ್ನು ಸಹ ನೋಡಿರಿ : /ವ್ಯಭಿಚಾರ, /ಅಪರಿಶುದ್ಧ, /ವಿನಾಶ, /ಸುಳ್ಳು ದೇವರು, /ಯಜ್ಞ)

ಸತ್ಯವೇದದ ಉಲ್ಲೇಖಗಳು:

- ಎಜ್ರನು 9:1-2
- ಆದಿಕಾಂಡ 46:34
- ಯೆಶಾಯ 1:13
- ಮತ್ತಾಯ 24:15
- ಜ್ಞಾನೋಕ್ತಿ 26:25

ಪದದ ದತ್ತಾಂಶ:

- Strong's: H0887, H6292, H8251, H8262, H8263, H8441, G9460

ಆಜ್ಞಾಪಿಸು, ಆಜ್ಞೆಗಳನ್ನು, ಆಜ್ಞಾಪಿಸಲ್ಪಟ್ಟಿದೆ, ಆಜ್ಞೆ, ಆಜ್ಞೆಗಳು

ಪದದ ಅರ್ಥವಿವರಣೆ:

“ಆಜ್ಞಾಪಿಸು” ಎಂಬ ಪದವು ಯಾರಿಗಾದರೂ ಏನನ್ನಾದರೂ ಮಾಡಲು ಆದೇಶಿಸುವುದು ಎಂದರ್ಥ. “ಆಜ್ಞೆಗಳು” ಎಂಬ ಪದವು ಕೆಲವೊಮ್ಮೆ ಹೆಚ್ಚು ಔಪಚಾರಿಕ ಮತ್ತು ಶಾಶ್ವತವಾದ ದೇವರ ಕೆಲವು ಆಜ್ಞೆಗಳನ್ನು ಸೂಚಿಸುತ್ತದೆ.

- "ಆಜ್ಞೆಗಳು" ಕೆಲವೊಮ್ಮೆ ಹೆಚ್ಚು ಔಪಚಾರಿಕ ಮತ್ತು ಶಾಶ್ವತವಾದ ದೇವರ ಕೆಲವು ಆಜ್ಞೆಗಳನ್ನು ಉಲ್ಲೇಖಿಸುತ್ತದೆ, ಉದಾಹರಣೆಗೆ, "ಹತ್ತು ಆಜ್ಞೆಗಳು".
- ಆಜ್ಞೆ ಎನ್ನುವುದು ಧನಾತ್ಮಕ ಆಲೋಚನೆಯಾಗಿರಬಹುದು “ನಿಮ್ಮ ತಂದೆತಾಯಿಗಳನ್ನು ಗೌರವಿಸಿರಿ” ಅಥವಾ ಋಣಾತ್ಮಕವಾಗಿರಬಹುದು (“ಕದಿಯಬಾರದು”).
- “ಆಜ್ಞೆಯನ್ನು ಹೊಂದು” ಎನ್ನುವದಕ್ಕೆ “ನಿಯಂತ್ರಣದಲ್ಲಿರು” ಅಥವಾ ಯಾವುದಾದರೊಂದರ/ಯಾರಾದರೊಬ್ಬರ “ಬಾಧ್ಯತೆ ತೆಗೆದುಕೊಳ್ಳಿರಿ” ಎಂದರ್ಥ.

ಅನುವಾದ ಸಲಹೆಗಳು:

- ಆ ಪದವನ್ನು ಇನ್ನೊಂದು ವಿಧಾನದಲ್ಲಿ ಅನುವಾದ ಮಾಡಬೇಕೆಂದರೆ, ಅದಕ್ಕೆ “ಕಾನೂನು” ಎಂದು ಅನುವಾದ ಮಾಡುವುದು ಉತ್ತಮ. “ಶಾಸನ” ಮತ್ತು “ಕಾಯಿದೆ” ಎನ್ನುವ ನಿರ್ವಚನಗಳೊಂದಿಗೆ ಕೂಡ ಹೋಲಿಸಿ ನೋಡಿರಿ.
- ಕೆಲವೊಂದುಸಲ ಅನುವಾದಕರು “ಆಜ್ಞಾಪಿಸು” ಮತ್ತು “ಆಜ್ಞೆ” ಎನ್ನುವ ಪದಗಳಿಗೆ ಬದಲಾಗಿ ಅವರ ಸ್ವಂತ ಭಾಷೆಯಲ್ಲಿ ಉಪಯೋಗಿಸುವ ಪದಗಳನ್ನು ಬಳಸುತ್ತಾರೆ.
- ಇನ್ನೂ ಕೆಲವರು ದೇವರು ಮಾಡಿದ ಶಾಶ್ವತವಾದ, ಮೂಲಭೂತ ಆಜ್ಞೆಗಳಿಗೆ ಸೂಚಿಸಲು ಆಜ್ಞೆ ಎನ್ನುವ ಪದಕ್ಕೆ ವಿಶೇಷವಾದ ಪದವನ್ನು ಉಪಯೋಗಿಸಲು ಪ್ರಾಧಾನ್ಯತೆಕೊಡುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಶಾಸನ, ಕಾಯಿದೆ, ಕಾನೂನು, ಹತ್ತು ಆಜ್ಞೆಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.01:5-7
- ಮತ್ತಾಯ.01:24-25
- ಮತ್ತಾಯ.22:37-38
- ಮತ್ತಾಯ.28:20
- ಅರಣ್ಯ.01:17-19
- ಲೂಕ.07:7-8

ಪದ ಡೇಟಾ:

- Strong's: H559, H560, H565, H1696, H1697, H1881, H2706, H2708, H2710, H2941, H2942, H2951, H3027, H3982, H3983, H4406, H4662, H4687, H4929, H4931, H4941, H5057, H5713, H5749, H6213, H6310, H6346, H6490, H6673, H6680, H7101, H7218, H7227, H7262, H7761, H7970, H8269, G1263, G1291, G1296, G1297, G1299, G1690, G1778, G1781, G1785, G2003, G2004, G2008, G2036, G2753, G3056, G3726, G3852, G3853, G4367, G4483, G4487, G5506

ಆತ್ಮ, ಗಾಳಿ,ಶ್ವಾಸ

ಪದದ ಅರ್ಥವಿವರಣೆ:

"ಆತ್ಮ" ಎಂಬ ಪದವು ವ್ಯಕ್ತಿಯ ಭೌತಿಕವಲ್ಲದ ಭಾಗವನ್ನು ಸೂಚಿಸುತ್ತದೆ. ಸತ್ಯವೇದದ ಕಾಲದಲ್ಲಿ, ವ್ಯಕ್ತಿಯ ಆತ್ಮದ ಪರಿಕಲ್ಪನೆಯು ವ್ಯಕ್ತಿಯ ಉಸಿರಾಟದ ಪರಿಕಲ್ಪನೆಗೆ ನಿಕಟ ಸಂಬಂಧ ಹೊಂದಿದೆ. ಈ ಪದವು ಗಾಳಿಯನ್ನು ಸಹ ಸೂಚಿಸುತ್ತದೆ, ಅಂದರೆ ನೈಸರ್ಗಿಕ ಜಗತ್ತಿನಲ್ಲಿ ಗಾಳಿಯ ಚಲನೆ.

- “ಆತ್ಮ” ಎಂಬ ಪದವು ಭೌತಿಕ ದೇಹವನ್ನು ಹೊಂದಿರದ, ಅಂದರೆ ದುಷ್ಟಶಕ್ತಿ ಎಂದು ಸೂಚಿಸುತ್ತದೆ.
- ಸಾಮಾನ್ಯವಾಗಿ, “ಆಧ್ಯಾತ್ಮಿಕ” ಎಂಬ ಪದವು ಭೌತಿಕವಲ್ಲದ ಜಗತ್ತಿನ ವಿಷಯಗಳನ್ನು ವಿವರಿಸುತ್ತದೆ.
- “ಆತ್ಮ” ಎಂಬ ಪದವು “ಬುದ್ಧಿವಂತಿಕೆಯ ಆತ್ಮ” ಅಥವಾ “ಎಲಿಯನ ಆತ್ಮ” ಇರುವಂತಹ “ಗುಣಲಕ್ಷಣಗಳನ್ನು ಹೊಂದಿದೆ” ಎಂದೂ ಅರ್ಥೈಸಬಹುದು. ಕೆಲವೊಮ್ಮೆ ಸತ್ಯವೇದದಲ್ಲಿ ಈ ಪದವನ್ನು ವ್ಯಕ್ತಿಯ ವರ್ತನೆ ಅಥವಾ ಭಾವನಾತ್ಮಕ ಸ್ಥಿತಿಯ ಸಂದರ್ಭದಲ್ಲಿ ಅನ್ವಯಿಸುತ್ತದೆ ಉದಾಹರಣೆಗೆ “ಭಯದ ಆತ್ಮ” ಮತ್ತು “ಅಸೂಯೆ ಮನೋಭಾವ”.
- ದೇವರು ಆತ್ಮ ಎಂದು ಯೇಸು ಹೇಳಿದನು.

ಅನುವಾದ ಸಲಹೆಗಳು:

- ಸಂದರ್ಭಕ್ಕೆ ಅನುಗುಣವಾಗಿ, “ಆತ್ಮನನ್ನು" ಭಾಷಾಂತರಿಸುವ ಕೆಲವು ವಿಧಾನಗಳಲ್ಲಿ “ಭೌತಿಕವಲ್ಲದ ಜೀವಿ” ಅಥವಾ “ಒಳಗಿನ ಭಾಗ” ಅಥವಾ “ಆಂತರಿಕ ಜೀವಿ” ಇರಬಹುದು.
- ಕೆಲವು ಸಂದರ್ಭಗಳಲ್ಲಿ, “ಆತ್ಮ” ಎಂಬ ಪದವನ್ನು “ದುಷ್ಟಶಕ್ತಿ” ಅಥವಾ “ದುಷ್ಟಶಕ್ತಿ” ಎಂದು ಅನುವಾದಿಸಬಹುದು.
- ಕೆಲವೊಮ್ಮೆ “ಆತ್ಮ” ಎಂಬ ಪದವನ್ನು ವ್ಯಕ್ತಿಯ ಭಾವನೆಗಳನ್ನು ವ್ಯಕ್ತಪಡಿಸಲು ಬಳಸಲಾಗುತ್ತದೆ, “ನನ್ನ ಆತ್ಮವು ನನ್ನ ಒಳಗಿನಿಂದ ದುಃಖಿತವಾಯಿತು.” ಇದನ್ನು "ನನ್ನ ಆತ್ಮದಲ್ಲಿ ದುಃಖಿತನಾಗಿದ್ದೇನೆ" ಅಥವಾ "ನಾನು ತುಂಬಾ ದುಃಖಿತನಾಗಿದ್ದೇನೆ" ಎಂದು ಅನುವಾದಿಸಬಹುದು.
- "ಆತ್ಮವು" ಎಂಬ ಪದವನ್ನು "ಪಾತ್ರ" ಅಥವಾ "ಪ್ರಭಾವ" ಅಥವಾ "ವರ್ತನೆ" ಅಥವಾ "ಆಲೋಚನೆ (ಅಂದರೆ) ನಿರೂಪಿಸಲಾಗಿದೆ" ಎಂದು ಅನುವಾದಿಸಬಹುದು.
- ಸಂದರ್ಭಕ್ಕೆ ಅನುಗುಣವಾಗಿ, “ಆಧ್ಯಾತ್ಮಿಕ” ವನ್ನು “ಭೌತಿಕವಲ್ಲದ” ಅಥವಾ “ಪವಿತ್ರಾತ್ಮದಿಂದ” ಅಥವಾ “ದೇವರ” ಅಥವಾ “ಭೌತಿಕವಲ್ಲದ ಪ್ರಪಂಚದ ಭಾಗ” ಎಂದು ಅನುವಾದಿಸಬಹುದು.
- “ಆಧ್ಯಾತ್ಮಿಕ ಪರಿಪಕ್ವತೆ” ಎಂಬ ಪದವನ್ನು “ಪವಿತ್ರಾತ್ಮಕ್ಕೆ ವಿಧೇಯತೆಯನ್ನು ತೋರಿಸುವ ದೈವಿಕ ನಡವಳಿಕೆ” ಎಂದು ಅನುವಾದಿಸಬಹುದು.
- “ಆಧ್ಯಾತ್ಮಿಕ ವರ” ಎಂಬ ಪದವನ್ನು “ಪವಿತ್ರಾತ್ಮವು ನೀಡುವ ವಿಶೇಷ ಸಾಮರ್ಥ್ಯ” ಎಂದು ಅನುವಾದಿಸಬಹುದು.
- ಕೆಲವೊಮ್ಮೆ ಈ ಪದವನ್ನು ಗಾಳಿಯ ಸರಳ ಚಲನೆಯನ್ನು ಉಲ್ಲೇಖಿಸುವಾಗ "ಗಾಳಿ" ಅಥವಾ ಜೀವಂತ ಜೀವಿಗಳಿಂದ ಉಂಟಾಗುವ ವಾಯು ಚಲನೆಯನ್ನು ಉಲ್ಲೇಖಿಸುವಾಗ "ಉಸಿರು" ಎಂದು ಅನುವಾದಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ದೂತ, ದೆವ್ವ, ಪವಿತ್ರಾತ್ಮ, ಪ್ರಾಣ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.05:05
- 1 ಯೋಹಾನ.04:03
- 1 ಥೆಸ್ಸ.05:23
- ಅಪೊ.ಕೃತ್ಯ.05:09
- ಕೊಲೊಸ್ಸ.01:09
- ಎಫೆಸ.04:23
- ಆದಿ.07:21-22
- ಆದಿ.08:01
- ಯೆಶಯಾ.04:04
- ಮಾರ್ಕ.01:23-26
- ಮತ್ತಾಯ.26:41
- ಫಿಲಿ.01:27

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **13:03** ಮೂರು ದಿನಗಳಾದನಂತರ ಜನರು ತಮ್ಮನ್ನು ತಾವು _ ಆತ್ಮೀಯಕವಾಗಿ _ ಸಿದ್ಧಪಡಿಸಿಕೊಂಡನಂತರ, ತುತೂರಿ ಧ್ವನಿಗಳ ಶಬ್ದಗಳಿಂದ, ಗುಡುಗುಗಳೊಂದಿಗೆ, ಸೀನಾಯಿ ಪರ್ವತದ ಮೇಲಕ್ಕೆ ದೇವರು ಇಳಿದು ಬಂದಿದ್ದಾರೆ.

- **40:07** “ಇದು ಮುಗಿಯಿತು! ತಂದೆಯೇ, ನಾನು ನನ್ನ _ ಆತ್ಮವನ್ನು _ ನಿನ್ನ ಕೈಗಳಿಗೆ ಒಪ್ಪಿಸಿಕೊಡುತ್ತಿದ್ದೇನೆ” ಎಂದು ಯೇಸು ಅತ್ತನು. ಆತನು ತನ್ನ ತಲೆಯನ್ನು ಬಾಗಿಸಿ, ತನ್ನ _ ಆತ್ಮವನ್ನು _ ಒಪ್ಪಿಸಿಕೊಟ್ಟನು.
- **45:05** ಸ್ತೆಫೆನನು ಸಾಯುತ್ತಿರುವಾಗ, “ಯೇಸು, ನನ್ನ _ ಆತ್ಮವನ್ನು _ ತೆಗೆದುಕೋ” ಎಂದು ಗಟ್ಟಿಯಾಗಿ ಕೂಗಿ ಅತ್ತನು.
- **48:07** ಈತನ ಮೂಲಕ ಎಲ್ಲಾ ಜನರ ಗುಂಪುಗಳು ಆಶೀರ್ವಾದ ಹೊಂದಿವೆ, ಯಾಕಂದರೆ ಯೇಸುವಿನಲ್ಲಿ ನಂಬಿಕೆ ಇಟ್ಟಿರುವ ಪ್ರತಿಯೊಬ್ಬನು ಪಾಪದಿಂದ ರಕ್ಷಣೆ ಹೊಂದಿದ್ದಾನೆ, ಮತ್ತು ಅಬ್ರಾಹಾಮನ _ ಆತ್ಮೀಯಕವಾದ _ ಸಂತಾನವಾಗಿ ಮಾರ್ಪಟ್ಟಿರುತ್ತಾನೆ.

ಪದ ಡೇಟಾ:

- Strong's: H178, H1172, H5397, H7307, H7308, G4151, G4152, G4153, G5326, G5427

ಆಮೆನ್, ನಿಜವಾಗಿ

ಅರ್ಥವಿವರಣೆ:

“ಆಮೆನ್” ಎಂದರೆ ಒಬ್ಬ ವ್ಯಕ್ತಿ ಹೇಳಿದ ಮಾತುಗಳಿಗೆ ಲಕ್ಷ್ಯ ಕೊಡಲು ಕರೆಯುವುದಕ್ಕೆ ಉಪಯೋಗಿಸುವ ಪದ ಅಥವಾ ಆ ಮಾತುಗಳನ್ನು ಒತ್ತಿ ಹೇಳುವುದಕ್ಕೆ ಉಪಯೋಗಿಸುವ ಪದವಾಗಿರುತ್ತದೆ. ಸಾಮಾನ್ಯವಾಗಿ ಈ ಪದವನ್ನು ಪ್ರಾರ್ಥನೆಯ ಕೊನೆಯ ಭಾಗದಲ್ಲಿ ಉಪಯೋಗಿಸುತ್ತಾರೆ. ಕೆಲವೊಂದು ಸಲ ಈ ಪದವನ್ನು “ ನಿಜವಾಗಿ” ಎಂದೂ ಅನುವಾದ ಮಾಡಬಹುದು.

- ಪ್ರಾರ್ಥನೆಯ ಕೊನೆಯ ಭಾಗದಲ್ಲಿ ಉಪಯೋಗಿಸುವಾಗ, “ಆಮೆನ್” ಎನ್ನುವ ಪದವು ಪ್ರಾರ್ಥನೆಯಲ್ಲಿ ಹೇಳಿದ ಮಾತುಗಳಿಗೆ ಸಮ್ಮತಿಯನ್ನು ತಿಳಿಸುತ್ತದೆ ಅಥವಾ ಮಾಡಿದ ಪ್ರಾರ್ಥನೆ ನೆರವೇರಿಸಲ್ಪಡಬೇಕು ಎನ್ನುವ ಆಸೆಯನ್ನು ವ್ಯಕ್ತಪಡಿಸುತ್ತಿದೆ.
- ಯೇಸು ಕ್ರಿಸ್ತನು ಹೇಳಿದ ಸತ್ಯ ಮಾತುಗಳನ್ನು ಎತ್ತಿ ಹಿಡಿಯಲು “ಆಮೆನ್” ಎಂದು ಯೇಸು ತನ್ನ ಬೋಧನೆಯಲ್ಲಿ ಉಪಯೋಗಿಸಿದ್ದಾನೆ. ಮುಂಚಿತವಾಗಿ ಮಾಡಿದ ಬೋಧನೆಗೆ ಸಂಬಂಧಪಟ್ಟ ಮತ್ತೊಂದು ಬೋಧನೆಯನ್ನು ಪರಿಚಯ ಮಾಡುವುದಕ್ಕೆ “ನಾನು ನಿಮ್ಮೊಂದಿಗೆ ಹೇಳುತ್ತಿದ್ದೇನೆ” ಎಂದು ಹೇಳುವುದರ ಮೂಲಕ ಆತನು ಬೋಧನೆಯನ್ನು ಮಾಡಿದನು.
- ಈ ರೀತಿಯಲ್ಲಿ ಯೇಸು “ಆಮೆನ್” ಎಂದು ಉಪಯೋಗಿಸುವಾಗ, ಕೆಲವೊಂದು ಆಂಗ್ಲ ಅನುವಾದಗಳು (ಮತ್ತು ಯುಎಲ್.ಟಿ) “ಖಂಡಿತವಾಗಿ” ಅಥವಾ “ನಿಜವಾಗಿ” ಎಂದು ಅನುವಾದ ಮಾಡಿವೆ.
- “ನಿಜವಾಗಿ” ಎನ್ನುವ ಪದಕ್ಕೆ ಇನ್ನೊಂದು ಅರ್ಥದಲ್ಲಿ ಕೆಲವೊಂದು ಸಲ “ನಿಶ್ಚಯವಾಗಿ” ಅಥವಾ “ಖಂಡಿತವಾಗಿ” ಎಂದು ಅನುವಾದ ಮಾಡಲಾಗಿದೆ ಮತ್ತು ಇದನ್ನು ಬೋಧಕನು ಹೇಳಿದ ಪ್ರತಿಯೊಂದು ಮಾತನ್ನು ಒತ್ತಿ ಹೇಳುವುದಕ್ಕೂ ಉಪಯೋಗಿಸಲಾಗಿದೆ.

ಅನುವಾದ ಸಲಹೆಗಳು:

- ಹೇಳಲಾದ ಏನನ್ನಾದರೂ ಒತ್ತಿ ಹೇಳುವುದಕ್ಕೆ ಉಪಯೋಗಿಸಿದ ಉದ್ದೇಶಿತ ಭಾಷೆಯು ವಿಶೇಷ ಪದ ಅಥವಾ ಪದಗುಚ್ಛವನ್ನು ಹೊಂದಿದೆಯೇ ಎಂಬುದನ್ನು ಪರಿಗಣಿಸಿರಿ.
- ಏನಾದರೊಂದನ್ನು ದೃಢೀಕರಿಸಲು ಅಥವಾ ಪ್ರಾರ್ಥನೆಯ ಕೊನೆಯ ಭಾಗದಲ್ಲಿ ಉಪಯೋಗಿಸುವಾಗ, “ಆಮೆನ್” ಎನ್ನುವುದನ್ನು “ಹಾಗೆಯೇ ನಡೆಯಲಿ” ಅಥವಾ “ಇದು ನೆರವೇರಿಸಲ್ಪಡಲಿ” ಅಥವಾ “ಇದು ನಿಜವಾಗಲಿ” ಎಂದು ಅನುವಾದ ಮಾಡಬಹುದು.
- “ನಿಜವಾಗಿ ನಾನು ನಿಮಗೆ ಹೇಳುತ್ತೇನೆ” ಎಂದು ಯೇಸು ಹೇಳಿದಾಗ, ಇದನ್ನು ಕೂಡ “ಹೌದು, ನಾನು ನಿಜ ನಿಜವಾಗಿ ನಿಮಗೆ ಹೇಳುತ್ತಿದ್ದೇನೆ” ಎಂದು ಅಥವಾ “ಅದು ನಿಜ, ಮತ್ತು ನಾನು ಕೂಡ ನಿಮಗೆ ಹೇಳುತ್ತಿದ್ದೇನೆ” ಎಂದು ಕೂಡ ಅನುವಾದ ಮಾಡಬಹುದು.
- “ನಿಜ ನಿಜವಾಗಿ ನಾನು ನಿಮಗೆ ಹೇಳುತ್ತಿದ್ದೇನೆ” ಎನ್ನುವ ಮಾತನ್ನು “ಇದನ್ನು ನಾನು ತುಂಬಾ ಖಂಡಿತವಾಗಿ ಹೇಳುತ್ತಿದ್ದೇನೆ” ಅಥವಾ “ನಾನು ಇದನ್ನು ನಿಮಗೆ ಮನಃಪೂರ್ವಕವಾಗಿ ಹೇಳುತ್ತಿದ್ದೇನೆ” ಅಥವಾ “ನಾನು ಹೇಳುತ್ತಿರುವ ಪ್ರತಿಯೊಂದು ಮಾತು ಸತ್ಯವಾದ ಮಾತಾಗಿರುತ್ತದೆ” ಎಂದು ಅನುವಾದ ಮಾಡಬಹುದು.

(ಇವುಳನ್ನು ಸಹ ನೋಡಿರಿ : ನೆರವೇರಿಸು, ನಿಜ)

ಸತ್ಯವೇದದ ಉಲ್ಲೇಖಗಳು:

- ಧರ್ಮೋಪದೇಶಕಾಂಡ 27:15
- ಯೋಹಾನ 5:19
- ಯೂದ 1:24-25
- ಮತ್ತಾಯ 26:33-35
- ಫಿಲೆಮೋನ 1:23-25
- ಪ್ರಕಟನೆ 22:20-21

ಪದದ ದತ್ತಾಂಶ:

- Strong's: H0543, G2810

ಆಯ್ಕೆ ಮಾಡಿಕೊಂಡಿರುವ ವ್ಯಕ್ತಿ, ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವುದು, ಆಯ್ಕೆ ಮಾಡಿಕೊ, ಆಯ್ಕೆಯಾಗಿರುವ ಜನರು, ಆಯ್ಕೆ ಮಾಡಲ್ಪಟ್ಟವನು, ಆರಿಸಿಕೊಂಡ

ಪದದ ಅರ್ಥವಿವರಣೆ:

“ಆರಿಸಿಕೊಂಡ” ಎನ್ನುವ ಪದಕ್ಕೆ “ಒಬ್ಬರನ್ನು ಆಯ್ಕೆ ಮಾಡಲ್ಪಟ್ಟವನು” ಅಥವಾ “ಆಯ್ಕೆಯಾದ ಜನರು” ಎಂದರ್ಥ ಮತ್ತು ಇದು ದೇವರು ತನ್ನ ಜನರಾಗಿರುವುದಕ್ಕೆ ಆರಿಸಿಕೊಂಡ ಅಥವಾ ನೇಮಿಸಿಕೊಂಡಿರುವ ಜನರನ್ನು ಸೂಚಿಸುತ್ತದೆ. “ಆಯ್ಕೆ ಮಾಡಲ್ಪಟ್ಟ ವ್ಯಕ್ತಿ” ಅಥವಾ “ದೇವರಿಂದ ಆಯ್ಕೆ ಮಾಡಲ್ಪಟ್ಟ ವ್ಯಕ್ತಿ” ಎನ್ನುವ ಪದವು ಮೆಸ್ಸೀಯನಾಗಿ ಆಯ್ಕೆಮಾಡಲ್ಪಟ್ಟ ಯೇಸುವಿಗೆ ಒಂದು ಬಿರುದಾಗಿ ಸೂಚಿಸುತ್ತದೆ.

- “ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವುದು” ಎನ್ನುವ ಪದಕ್ಕ ಏನಾದರೊಂದನ್ನು ನಿರ್ಣಯಿಸುವುದಕ್ಕೆ ಅಥವಾ ಯಾರಾದರೊಬ್ಬರನ್ನು ಅಥವಾ ಯಾವುದಾದರೊಂದನ್ನು ಆಯ್ಕೆ ಮಾಡುವುದು ಎಂದರ್ಥ. ದೇವರನ್ನು ಸೇವಿಸುವುದಕ್ಕೆ ಮತ್ತು ಆತನಿಗೆ ಸಂಬಂಧವಾಗಿರುವದಕ್ಕೆ ಆತನು ಜನರನ್ನು ನೇಮಿಸುವುದನ್ನು ಈ ಪದವನ್ನು ಅನೇಕಬಾರಿ ಉಪಯೋಗಿಸಲ್ಪಟ್ಟಿರುತ್ತದೆ.
- “ಆಯ್ಕೆ” ಮಾಡಲ್ಪಟ್ಟಿದೆ ಎನ್ನುವುದಕ್ಕೆ ಏನಾದರೊಂದನ್ನು ಮಾಡುವುದಕ್ಕೆ ಅಥವಾ ಏನಾದರೊಂದಾಗಿ ಇರುವುದಕ್ಕೆ “ಆರಿಸಿಕೊಳ್ಳಲಾಗಿದೆ” ಅಥವಾ “ನೇಮಿಸಲಾಗಿದೆ” ಎಂದರ್ಥ.
- ಪರಿಶುದ್ಧರಾಗಿರುವುದಕ್ಕೆ, ಒಳ್ಳೆಯ ಆತ್ಮೀಕವಾದ ಫಲವನ್ನು ಕೊಡುವುದಕ್ಕಾಗಿ ದೇವರು ತನ್ನ ಜನರನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ಮತ್ತು ಆತನಿಂದ ಪ್ರತ್ಯೇಕಿಸಲ್ಪಡುತ್ತಾರೆ. ಆದಕಾರಣ ಅವರನ್ನು “ಆಯ್ಕೆಮಾಡಲ್ಪಟ್ಟವನು” ಅಥವಾ “ಆರಿಸಿಕೊಂಡವರು” ಎಂದು ಕರೆಯುತ್ತಾರೆ.
- “ಆಯ್ಕೆ ಮಾಡಲ್ಪಟ್ಟವನು” ಎನ್ನುವ ಮಾತು ಕೆಲವೊಂದುಬಾರಿ ಸತ್ಯವೇದದಲ್ಲಿ ದೇವರು ತನ್ನ ಜನರ ಮೇಲೆ ನಾಯಕರನ್ನಾಗಿ ಆಯ್ಕೆಮಾಡಿಕೊಂಡಿರುವ ಅರಸನಾದ ದಾವೀದ ಮತ್ತು ಮೋಶೆಯಂತಿರುವ ಕೆಲವೊಂದು ನಿರ್ದಿಷ್ಟವಾದ ಜನರನ್ನು ಸೂಚಿಸುತ್ತದೆ. ದೇವರಿಂದ ಆಯ್ಕೆಯಾದ ಜನರಾಗಿರುವ ಇಸ್ರಾಯೇಲ್ ದೇಶವನ್ನು ಕೂಡ ಈ ಪದವು ಸೂಚಿಸುತ್ತದೆ.
- “ಆರಿಸಿಕೊಂಡ” ಎನ್ನುವ ಮಾತು ತುಂಬಾ ಹಳೇ ಮಾತಾಗಿರುತ್ತದೆ, ಇದಕ್ಕೆ “ಆಯ್ಕೆ ಮಾಡಲ್ಪಟ್ಟ ಜನರು” ಅಥವಾ “ಆಯ್ಕೆಯಾಗಿರುವ ಜನರು” ಎಂದರ್ಥ. ಮೂಲ ಭಾಷೆಯಲ್ಲಿ ಈ ಮಾತು ಬಹುವಚನವಾಗಿರುತ್ತದೆ, ವಿಶೇಷವಾಗಿ ಕ್ರಿಸ್ತನಲ್ಲಿರುವ ವಿಶ್ವಾಸಿಗಳನ್ನು ಸೂಚಿಸಿದಾಗ ಬಹುವಚನ ಪದವಾಗಿರುತ್ತದೆ.
- ಹಳೇ ಆಂಗ್ಲ ಸತ್ಯವೇದ ಅನುವಾದಗಳಲ್ಲಿ “ಆರಿಸಿಕೊಂಡ” ಎನ್ನುವ ಪದವನ್ನು “ಆಯ್ಕೆಮಾಡಲ್ಪಟ್ಟವನು” ಎನ್ನುವ ಪದವನ್ನು ಅನುವಾದ ಮಾಡುವುದಕ್ಕಾಗಿ ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿ ಉಪಯೋಗಿಸುತ್ತಿದ್ದರು. ಆಧುನಿಕ ಅನುವಾದಗಳಲ್ಲಿ “ಆರಿಸಿಕೊಂಡ” ಎನ್ನುವ ಪದವನ್ನು ಕೇವಲ ಹೊಸ ಒಡಂಬಡಿಕೆಯಲ್ಲಿ ಮಾತ್ರವೇ ಉಪಯೋಗಿಸುತ್ತಿದ್ದಾರೆ, ಅದೂ ಯೇಸುವಿನಲ್ಲಿ ನಂಬಿಕೆಯಿಡುವುದರ ಮೂಲಕ ದೇವರಿಂದ ರಕ್ಷಣೆ ಹೊಂದಿರುವ ಜನರನ್ನು ಸೂಚಿಸುವುದಕ್ಕೆ ಉಪಯೋಗಿಸುತ್ತಿದ್ದಾರೆ. ಸತ್ಯವೇದದ ವಾಕ್ಯಭಾಗಗಳಲ್ಲಿ ಎಲ್ಲೋ ಒಂದು ಸ್ಥಳದಲ್ಲಿ, ಅವರು ಈ ಪದವನ್ನು “ಆಯ್ಕೆ ಮಾಡಲ್ಪಟ್ಟವರು” ಎಂದು ಅಕ್ಷರಾರ್ಥವಾಗಿ ಅನುವಾದ ಮಾಡಿದ್ದಾರೆ.

ಅನುವಾದ ಸಲಹೆಗಳು:

“ಆರಿಸಿಕೊಂಡ” ಎನ್ನುವ ಪದವನ್ನು “ಆಯ್ಕೆಮಾಡಲ್ಪಟ್ಟವರು” ಅಥವಾ “ಆಯ್ಕೆ ಯಾಗಿರುವ ಜನರು” ಎನ್ನುವ ಪದದೊಂದಿಗೆ ಅಥವಾ ಮಾತಿನೊಂದಿಗೆ ಅನುವಾದ ಮಾಡುವುದು ಉತ್ತಮ. ಇದನ್ನು “ದೇವರು ಆಯ್ಕೆಮಾಡಿಕೊಂಡ ಜನರು” ಅಥವಾ “ದೇವರು ತನ್ನ ಜನರಿಗಾಗಿ ನೇಮಿಸಲ್ಪಟ್ಟ ಜನರು” ಎಂಬುದಾಗಿಯೂ ಅನುವಾದ ಮಾಡಬಹುದು.

- “ಆಯ್ಕೆ ಮಾಡಲ್ಪಟ್ಟವರು” ಎನ್ನುವ ಮಾತನ್ನು “ನೇಮಿಸಲ್ಪಟ್ಟವರು” ಅಥವಾ “ಆರಿಸಲ್ಪಟ್ಟವರು” ಅಥವಾ “ದೇವರಿಂದ ಆಯ್ಕೆಯಾದವರು” ಎಂದೂ ಅನುವಾದ ಮಾಡಬಹುದು.
- “ನಾನು ನಿನ್ನನ್ನು ಆಯ್ಕೆ ಮಾಡಿಕೊಂಡಿದ್ದೇನೆ” ಎನ್ನುವ ಮಾತನ್ನು “ನಾನು ನಿನ್ನನ್ನು ನೇಮಿಸಿದ್ದೇನೆ” ಅಥವಾ “ನಾನು ನಿನ್ನನ್ನು ಆರಿಸಿಕೊಂಡಿದ್ದೇನೆ” ಎಂದೂ ಅನುವಾದ ಮಾಡಬಹುದು.
- ಯೇಸುವನ್ನು ಸೂಚಿಸಿದಾಗ, “ಆಯ್ಕೆ ಮಾಡಲ್ಪಟ್ಟ ವ್ಯಕ್ತಿ” ಎನ್ನುವ ಮಾತನ್ನು “ದೇವರಿಂದ ಆಯ್ಕೆ ಮಾಡಲ್ಪಟ್ಟ ವ್ಯಕ್ತಿ” ಅಥವಾ “ದೇವರು ವಿಶೇಷವಾಗಿ ಆಯ್ಕೆಮಾಡಿಕೊಂಡಿರುವ ಮೆಸ್ಸೀಯ” ಅಥವಾ “ದೇವರು ನೇಮಿಸಿದ ವ್ಯಕ್ತಿ (ಜನರನ್ನು ರಕ್ಷಿಸುವುದಕ್ಕೆ)” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನೇಮಿಸು, ಕ್ರಿಸ್ತ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಯೋಹಾನ.01:1-3
- ಕೊಲೊಸ್ಸೆ.03:12-14
- ಎಫೆಸ.01:3-4
- ಯೆಶಯ.65:22-23
- ಲೂಕ.18:6-8
- ಮತ್ತಾಯ.24:19-22
- ರೋಮಾ.08:33-34

ಪದ ಡೇಟಾ:

- Strong's: H970, H972, H977, H1262, H1305, H4005, H6901, G138, G140, G1586, G1588, G1589, G1951, G4400, G4401, G4758, G4899, G5500

ಆರಾಧನೆ

ಪದದ ಅರ್ಥವಿವರಣೆ:

“ಆರಾಧನೆ” ಎನ್ನುವ ಪದಕ್ಕೆ ಯಾರಾದರೊಬ್ಬರಿಗೆ ವಿಶೇಷವಾಗಿ ದೇವರಿಗೆ ವಿಧೇಯರಾಗಿರುವುದು, ಅವರನ್ನು ಸ್ತುತಿಸುವುದು ಮತ್ತು ಅವರನ್ನು ಘನಪಡಿಸುವುದು ಎಂದರ್ಥವಾಗಿರುತ್ತದೆ.

- ಈ ಪದಕ್ಕೆ ಅನೇಕಬಾರಿ ಅಕ್ಷರಾರ್ಥವಾಗಿ “ಕೆಳಗೆ ಬಾಗುವುದು” ಅಥವಾ ಯಾರಾದರೊಬ್ಬರನ್ನು ತಗ್ಗಿಸಿಕೊಂಡು ಘನಪಡಿಸುವುದಕ್ಕೆ “ಸಾಷ್ಟಾಂಗ ನಮಸ್ಕರಿಸುವುದು” ಎಂದರ್ಥ.
- ನಾವು ದೇವರನ್ನು ಸ್ತುತಿಸುವುದರ ಮೂಲಕ ಮತ್ತು ಆತನಿಗೆ ವಿಧೇಯತೆ ತೋರಿಸಿ ಘನಪಡಿಸಿದಾಗ, ಆತನಿಗೆ ಸೇವೆ ಮಾಡಿದಾಗ ಆತನನ್ನು ನಾವು ಆರಾಧನೆ ಮಾಡುತ್ತಿದ್ದೇವೆ,
- ಇಸ್ರಾಯೇಲ್ಯರು ದೇವರನ್ನು ಆರಾಧನೆ ಮಾಡಿದಾಗ, ಅನೇಕಬಾರಿ ಇದರಲ್ಲಿ ಯಜ್ಞವೇದಿಯ ಬಳಿ ಪ್ರಾಣಿಯ ಬಲಿಯರ್ಪಣೆಯು ಒಳಗೊಂಡಿರುತ್ತದೆ.
- ಕೆಲವೊಂದು ಜನರು ಸುಳ್ಳು ದೇವರುಗಳನ್ನು ಆರಾಧನೆ ಮಾಡಿದ್ದಾರೆ.

ಅನುವಾದ ಸಲಹೆಗಳು:

- “ಆರಾಧನೆ” ಎನ್ನುವ ಪದವನ್ನು “ಕೆಳಕ್ಕೆ ಬಾಗುವುದು” ಅಥವಾ “ಘನಪಡಿಸು ಮತ್ತು ಸೇವೆ ಮಾಡು” ಅಥವಾ “ಘನಪಡಿಸು ಮತ್ತು ವಿಧೇಯತೆ ತೋರಿಸು” ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಸಂದರ್ಭಗಳಲ್ಲಿ ಇದನ್ನು “ತಗ್ಗಿಸುಕೊಂಡು ಸ್ತುತಿಸುವುದು” ಅಥವಾ “ಸ್ತುತಿ, ಘನವನ್ನು ಕೊಡು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಹೋಮ, ಸ್ತುತಿಸು, ಘನಪಡಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಕೊಲೊ.02:18-19
- ಧರ್ಮೋ.29:17-19
- ವಿಮೋ.03:11-12
- ಲೂಕ.04:5-7
- ಮತ್ತಾಯ.02:1-3
- ಮತ್ತಾಯ.02:7-8

ಸತ್ಯವೇದದಿಂದ ಉದಾಹರಣೆಗಳು:

- **13:04** ಆದನಂತರ ದೇವರು ಅವರಿಗೆ ಒಡಂಬಡಿಕೆಯನ್ನು ಕೊಟ್ಟನು ಮತ್ತು “ನಾನೇ ಯೆಹೋವನು, ಐಗುಪ್ತದಿಂದ ನಿಮ್ಮನ್ನು ರಕ್ಷಿಸಿದ ನಿಮ್ಮ ದೇವರು“ ಸುಳ್ಳು ದೇವರನ್ನು _ ಆರಾಧಿಸಬೇಡಿರಿ _” ಎಂದು ಹೇಳಿದನು.
- **14:02** ಕಾನಾನಿಯರು ದೇವರನ್ನು _ ಆರಾಧಿಸಲಿಲ್ಲ _ ಅಥವಾ ಆತನಿಗೆ ವಿಧೇಯತೆ ತೋರಿಸಲಿಲ್ಲ. ಅವರು ಸುಳ್ಳು ದೇವರುಗಳನ್ನು ಆರಾಧನೆ ಮಾಡಿದರು ಮತ್ತು ಅನೇಕ ದುಷ್ಟ ಕಾರ್ಯಗಳನ್ನು ಮಾಡಿದರು.
- **17:06** ಇಸ್ರಾಯೇಲ್ಯರೆಲ್ಲರು ದೇವರನ್ನು _ ಆರಾಧಿಸುವ _ ಅಂಟ್ಟು ಆತನಿಗೆ ಅರ್ಪಣೆಗಳನ್ನು ಅರ್ಪಿಸುವ ಸ್ಥಳವಾದ ದೇವಾಲಯವನ್ನು ನಿರ್ಮಿಸಬೇಕೆಂದು ದಾವೀದನು ಬಯಸಿದ್ದನು.
- **18:12** ಅರಸರಲ್ಲಿ ಅನೇಕರು ಮತ್ತು ಇಸ್ರಾಯೇಲ್ ರಾಜ್ಯದಲ್ಲಿ ಅನೇಕ ಜನರು ವಿಗ್ರಹಗಳನ್ನು _ ಆರಾಧಿಸಿದರು _.
- **25:07** “ಸೈತಾನನೇ, ನನ್ನಿಂದ ಹೊರಟು ಹೋಗು! ‘ಕರ್ತನಾದ ನಿಮ್ಮ ದೇವರನ್ನು ಮಾತ್ರವೇ _ ಆರಾಧಿಸು _ ಮತ್ತು ಆತನನ್ನು ಮಾತ್ರವೇ ಸೇವಿಸು’ ಎಂದು ಆತನು ತನ್ನ ಜನರಿಗೆ ಆಜ್ಞಾಪಿಸಿರುವುದು ದೇವರ ವಾಕ್ಯದಲ್ಲಿದೆ” ಎಂದು ಯೇಸು ಉತ್ತರಿಸಿದನು.
- **26:02** ಸಬ್ಬತ್ ದಿನದಂದು ಆತನು (ಯೇಸು)_ ಆರಾಧನೆ _ ಸ್ಥಳಕ್ಕೆ ಹೋದನು.
- **47:01** ಅಲ್ಲಿ ಅವರು ವ್ಯಾಪಾರಸ್ಥಳಾದ ಲುದ್ಯ ಎನ್ನುವ ಹೆಸರಿನ ಸ್ತ್ರೀಯಳನ್ನು ಭೇಟಿಯಾದರು. ಆಕೆ ದೇವರನ್ನು ಪ್ರೀತಿಸಿ, ಆತನನ್ನು _ ಆರಾಧಿಸಿದಳು _.
- **49:18** ನೀವು ಇತರ ಕ್ರೈಸ್ತರೊಂದಿಗೆ ಸೇರಿ ದೇವರನ್ನು _ ಆರಾಧಿಸಬೇಕೆಂದು _, ತನ್ನ ವಾಕ್ಯವನ್ನು ಅಧ್ಯಯನ ಮಾಡಬೇಕೆಂದು ಮತ್ತು ಪ್ರಾರ್ಥಿಸಬೇಕೆಂದು ದೇವರು ಹೇಳಿದನು, ಮತ್ತು ಆತನು ನಿಮಗಾಗಿ ಮಾಡಿರುವ ಎಲ್ಲಾ ಕಾರ್ಯಗಳನ್ನು ಇತರರೊಂದಿಗೆ ಹಂಚಿಕೊಳ್ಳಿರಿ ಎಂದು ಹೇಳಿದನು.

ಪದ ಡೇಟಾ:

- Strong's: H5457, H5647, H6087, H7812, G1391, G1479, G2151, G2318, G2323, G2356, G3000, G3511, G4352, G4353, G4573, G4574, G4576

ಆಶೀರ್ವದಿಸು, ಆಶೀರ್ವದಿಸಲ್ಪಟ್ಟಿದ್ದೇನೆ, ಆಶೀರ್ವಾದ

ಪದದ ಅರ್ಥವಿವರಣೆ:

ಯಾರನ್ನಾದರೂ ಅಥವಾ ಯಾವುದನ್ನಾದರು "ಆಶೀರ್ವದಿಸುವುದು" ಎಂದರೆ ಆಶೀರ್ವಾದ ಹೊಂದಿದವನಾಗಿರಲು ವ್ಯಕ್ತಿಗೆಯಾಗಲಿ ಅಥವಾ ವಸ್ತುವಿಗಾಗಲಿ ಪ್ರಯೋಜನಕಾರಿ ಸಂಗತಿಗಳು ಸಂಭವಿಸುವಂತೆ ಮಾಡುವುದು ಎಂದರ್ಥ.

- ಒಬ್ಬರನ್ನು ಆಶೀರ್ವಾದ ಮಾಡುವುದು ಎನ್ನುವುದಕ್ಕೆ ಆ ವ್ಯಕ್ತಿಗೆ ಪ್ರಯೋಜನಕರವಾದ ಕಾರ್ಯಗಳು ನಡೆಯಬೇಕೆಂದು ನಮ್ಮೊಳಗಿನ ಆಸೆಯನ್ನು ವ್ಯಕ್ತಗೊಳಿಸುವುದು ಎಂದರ್ಥ.
- ಸತ್ಯವೇದ ಕಾಲದಲ್ಲಿ ತಂದೆ ಅನೇಕ ಬಾರಿ ತನ್ನ ಮಕ್ಕಳ ಮೇಲೆ ಔಪಚಾರಿಕ ಆಶೀರ್ವಾದವನ್ನು ಪ್ರಕಟಿಸುತ್ತಿದ್ದರು.
- ಜನರು ದೇವರನ್ನು "ಆಶೀರ್ವಾದ" ಮಾಡಿದಾಗ ಅಥವಾ ದೇವರು ಆಶೀರ್ವಾದ ಹೊಂದಬೇಕೆಂದು ಆಸೆಯನ್ನು ವ್ಯಕ್ತಗೊಳಿಸಿದಾಗ, ಅವರು ಆತನನ್ನು ಮಹಿಮೆಪಡಿಸುತ್ತಿದ್ದಾರೆ ಎಂದರ್ಥ.
- "ಆಶೀರ್ವದಿಸು" ಎನ್ನುವ ಪದವು ಕೆಲವೊಂದು ಸಲ ಆಹಾರವನ್ನು ತಿನ್ನುವುದಕ್ಕೆ ಮುಂಚಿತವಾಗಿ ಆಹಾರವನ್ನು ಪವಿತ್ರಗೊಳಿಸುವುದಕ್ಕೆ ಉಪಯೋಗಿಸುತ್ತಿದ್ದರು, ಅಥವಾ ಆಹಾರಕ್ಕಾಗಿ ದೇವರನ್ನು ಮಹಿಮೆಪಡಿಸುವುದಕ್ಕಾಗಿ ಮತ್ತು ಕೃತಜ್ಞತೆಗಳನ್ನು ಸಲ್ಲಿಸುವುದಕ್ಕಾಗಿ ಉಪಯೋಗಿಸುತ್ತಿದ್ದರು.

ಅನುವಾದ ಸಲಹೆಗಳು:

- "ಆಶೀರ್ವದಿಸು" ಎನ್ನುವ ಪದವನ್ನು "ಸಮೃದ್ಧಿಯಾಗಿ ಒದಗಿಸಿಕೊಡು" ಅಥವಾ "ದಯೆಯಿಂದಲೂ ಮತ್ತು ಕರುಣೆಯಿಂದಲೂ ಇರು" ಎಂದೂ ಅನುವಾದ ಮಾಡಬಹುದು.
- "ದೇವರೇ ಈ ದೊಡ್ಡ ಆಶೀರ್ವಾದವನ್ನು ತಂದರು" ಎನ್ನುವದನ್ನು "ದೇವರು ಅನೇಕವಾದ ಒಳ್ಳೇಯ ಉಪಕಾರಗಳನ್ನು ಮಾಡಿದನು" ಅಥವಾ "ದೇವರು ಸಮೃದ್ಧಿಯಾಗಿ ಒದಗಿಸಿಕೊಟ್ಟನು" ಅಥವಾ "ಅನೇಕ ಒಳ್ಳೇಯ ಕಾರ್ಯಗಳು ನಡೆಯುವಂತೆ ದೇವರೇ ಕಾರಣನಾದನು" ಎಂದೂ ಅನುವಾದ ಮಾಡಬಹುದು.
- "ಅವನು ಆಶೀರ್ವದಿಸಲ್ಪಟ್ಟವನು" ಎನ್ನುವ ಮಾತನ್ನು "ಅವನು ಅನೇಕವಾದ ದೊಡ್ಡ ಪ್ರಯೋಜನೆಗಳನ್ನು ಹೊಂದಿಕೊಂಡವನು" ಅಥವಾ "ಅವನು ಒಳ್ಳೇಯ ಕಾರ್ಯಗಳನ್ನು ಅನುಭವಿಸುತ್ತಿದ್ದಾನೆ" ಅಥವಾ "ಅವನು ಸಮೃದ್ಧಿಯನ್ನು ಹೊಂದುವುದಕ್ಕೆ ದೇವರು ಕಾರಣನಾದನು" ಎಂದೂ ಅನುವಾದ ಮಾಡಬಹುದು.
- "ಒಬ್ಬ ವ್ಯಕ್ತಿ ಆಶೀರ್ವದಿಸಲ್ಪಟ್ಟವನು" ಎನ್ನುವ ಮಾತನ್ನು "ಒಬ್ಬ ವ್ಯಕ್ತಿಗೆ ಅನುಗ್ರಹಿಸಲ್ಪಟ್ಟಿರುವುದು ಎಷ್ಟು ಒಳ್ಳೇಯದು" ಎಂದೂ ಅನುವಾದ ಮಾಡಬಹುದು.
- "ದೇವರಿಗೆ ಆಶೀರ್ವಾದವಾಗಲಿ" ಎನ್ನುವ ಮಾತುಗಳನ್ನು "ಕರ್ತನೇ ಮಹಿಮೆಹೊಂದಲಿ" ಅಥವಾ "ಕರ್ತನಿಗೆ ಸ್ತೋತ್ರ" ಅಥವಾ "ನಾನು ದೇವರನ್ನು ಸ್ತುತಿಸುತ್ತಿದ್ದೇನೆ" ಎಂದೂ ಅನುವಾದ ಮಾಡಬಹುದು.
- ಆಹಾರವನ್ನು ಆಶೀರ್ವಾದ ಮಾಡುವ ಸಂದರ್ಭದಲ್ಲಿ, ಈ ಪದವನ್ನು "ಆಹಾರಕ್ಕಾಗಿ ದೇವರಿಗೆ ವಂದನೆಗಳು ಸಲ್ಲಿಸುವುದು" ಅಥವಾ "ಅವರಿಗೆ ಆಹಾರವನ್ನು ಕೊಟ್ಟಿದ್ದಕ್ಕಾಗಿ ದೇವರನ್ನು ಮಹಿಮೆಪಡಿಸುವುದು" ಅಥವಾ "ಅದಕ್ಕಾಗಿ ದೇವರನ್ನು ಮಹಿಮೆಪಡಿಸುವುದರ ಮೂಲಕ ಆಹಾರವನ್ನು ಪವಿತ್ರಗೊಳಿಸುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸ್ತೋತ್ರ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.10:
- ಅಪೊ.ಕೃತ್ಯ.13:34
- ಎಫೆಸ.01:03
- ಆದಿ.14:20
- ಯೆಶಯ.44:03
- ಯಾಕೋಬ.01:25
- ಲೂಕ.06:20
- ಮತ್ತಾಯ.26:26
- ನೆಹೆ.09:5
- ರೋಮಾ.04:09

ಸತ್ಯವೇದದಿಂದ ಉದಾಹರಣೆಗಳು:

- **01:07** ದೇವರು ಅದು ಒಳ್ಳೆಯದೆಂದು ನೋಡಿದನು ಮತ್ತು ಆತನು ಅದನ್ನು ಆಶೀರ್ವಾದ ಮಾಡಿದನು.

- **01:15** ದೇವರು ತನ್ನ ಸ್ವರೂಪದಲ್ಲಿ ಆದಾಮನನ್ನು ಮತ್ತು ಹವ್ವಳನ್ನು ಉಂಟು ಮಾಡಿದನು. ಆತನು ಅವರನ್ನು ಆಶೀರ್ವದಿಸಿ "ನೀವು ಅನೇಕಮಂದಿ ಮಕ್ಕಳನ್ನು, ಮೊಮ್ಮೊಕ್ಕಳನ್ನು ಹಡೆದು, ಭೂಮಿಯನ್ನು ತುಂಬಿಸಿರಿ" ಎಂದು ಅವರಿಗೆ ಹೇಳಿದನು.

1:16_ ದೇವರು ಎಲ್ಲಾ ಕಾರ್ಯಗಳನ್ನು ಮಾಡಿದನಂತರ ವಿಶ್ರಾಂತಿ ತೆಗೆದುಕೊಂಡರು. ಆತನು ಏಳನೆಯ ದಿನವನ್ನು _ಆಶೀರ್ವಾದ ಮಾಡಿದನು ಮತ್ತು ಅದನ್ನು ಪರಿಶುದ್ಧ ದಿನವನ್ನಾಗಿ ಮಾಡಿದನು, ಯಾಕಂದರೆ ಆ ದಿನದಂದು ಆತನ ಕೆಲಸದಿಂದ ವಿಶ್ರಾಂತಿ ಪಡೆದ ದಿನವಾಗಿತ್ತು.

- **04:04**"ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನಿನ್ನನ್ನು

-

ಆಶೀರ್ವದಿಸುವವರನ್ನು ಆಶೀರ್ವದಿಸುವೆನು ಮತ್ತು ನಿನ್ನನ್ನು ಶಪಿಸುವವರನ್ನು ನಾನು ಶಪಿಸುವೆನು. ಭೂಮಿಯ ಮೇಲಿರುವ ಎಲ್ಲಾ ಕುಟುಂಬಗಳು ನಿನ್ನಿಂದ ಆಶೀರ್ವದಿಸಲ್ಪಡುವವು ."

- **04:07** ಮೆಲ್ಕಿಚೆದೆಕ ಅಬ್ರಹಾಮನನ್ನು **ಆಶೀರ್ವದಿಸಿದನು** ಮತ್ತು "ಭೂಮ್ಯಾಕಾಶವನ್ನು ನಿರ್ಮಾಣ ಮಾಡಿದ ಪರಾತ್ಪರನಾದ ದೇವರ ಆಶೀರ್ವಾದವು ಅಬ್ರಾಮನಿಗೆ ದೊರೆಯಲಿ" ಎಂದು ಹೇಳಿದನು.
- **07:03** ಇಸಾಕನು ಏಸಾವನಿಗೆ ತನ್ನ **ಆಶೀರ್ವಾದವನ್ನು** ಕೊಡಬೇಕೆಂದು ಬಯಸಿದ್ದನು.
- **08:05**ಯೋಸೇಫನು ಸೆರೆಮನೆಯಲ್ಲಿದ್ದರೂ ದೇವರಿಗೆ ನಂಬಿಗಸ್ಥನಾಗಿದ್ದನು, ದೇವರು ಅವನನ್ನು **ಆಶೀರ್ವಾದ** ಮಾಡಿದನು.

ಪದ ಡೇಟಾ:

- Strong's: H833, H835, H1288, H1289, H1293, G1757, G2127, G2128, G2129, G3106, G3107, G3108, G6050

ಆಸಕ್ತಿ, ಉತ್ಸಾಹಭರಿತ

ಪದದ ಅರ್ಥವಿವರಣೆ:

“ಆಸಕ್ತಿ” ಅಥವಾ “ಉತ್ಸಾಹಭರಿತ” ಎನ್ನುವ ಪದಗಳು ಒಂದು ಆಲೋಚನೆಯನ್ನು ಅಥವಾ ಒಬ್ಬ ವ್ಯಕ್ತಿಯನ್ನು ಬೆಂಬಲಿಸುವುದಕ್ಕೆ ತುಂಬಾ ಬಲವಾಗಿ ಸಮರ್ಥಿಸುವುದನ್ನು ಸೂಚಿಸುತ್ತದೆ.

- ಆಸಕ್ತಿ ಎನ್ನುವದರಲ್ಲಿ ಬಲವಾದ ಆಶೆಯು ಮತ್ತು ಒಳ್ಳೇಯ ಕಾರ್ಯಕ್ಕಾಗಿ ಪ್ರೇರೇಪಿಸುವ ಕಾರ್ಯಗಳೂ ಒಳಗೊಂಡಿರುತ್ತವೆ. ದೇವರಿಗೆ ತುಂಬಾ ವಿಶ್ವಾಸಾರ್ಹವಾಗಿ ವಿಧೇಯನಾಗುವ ಮತ್ತು ಅದನ್ನು ಮಾಡುವುದಕ್ಕೆ ಇತರರಿಗೆ ಬೋಧಿಸುವ ವ್ಯಕ್ತಿಯನ್ನು ವಿವರಿಸುವುದಕ್ಕೆ ಈ ಪದವನ್ನು ಅನೇಕಬಾರಿ ಉಪಯೋಗಿಸುತ್ತಿರುತ್ತಾರೆ.
- ಉತ್ಸಾಹಭರಿತವಾಗಿರುವುದು ಎನ್ನುವುದರಲ್ಲಿ ಏನಾದರೊಂದು ಮಾಡುವುದರಲ್ಲಿ ತೀವ್ರ ಪ್ರಯತ್ನ ಮಾಡುತ್ತಿರುವುದು ಮತ್ತು ಆ ಪ್ರಯಾಸೆಯಲ್ಲಿ ನಿರಂತರವಾಗಿ ಮುಂದೆವರಿಯುತ್ತಿರುವುದು ಒಳಗೊಂಡಿರುತ್ತದೆ.
- “ಸೇನಾಧೀಶ್ವರನಾದ ಕರ್ತನಲ್ಲಿನ ಆಸಕ್ತಿ” ಅಥವಾ “ಯೆಹೋವನ ಆಸಕ್ತಿ” ಎನ್ನುವ ಮಾತುಗಳು ದೇವರು ತನ್ನ ಜನರನ್ನು ಆಶೀರ್ವಾದ ಮಾಡುವುದರಲ್ಲಿ ಅಥವಾ ಅವರಿಗೆ ನ್ಯಾಯವನ್ನುಂಟು ಮಾಡುವುದರಲ್ಲಿ ನಿರಂತರವಾಗಿ ಮಾಡುವ ಕ್ರಿಯೆಗಳನ್ನು, ದೇವರ ಬಲವನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

ಅನುವಾದ ಸಲಹೆಗಳು:

- “ಉತ್ಸಹಭರಿತವಾಗಿರುವುದು” ಎನ್ನುವ ಮಾತನ್ನು “ಬಲವಾದ ಶ್ರದ್ಧೆಯಿಂದ ಇರುವುದು” ಅಥವಾ “ತೀವ್ರ ಪ್ರಯತ್ನ ಮಾಡುವುದು” ಎಂದೂ ಅನುವಾದ ಮಾಡಬಹುದು.
- “ಆಸಕ್ತಿ” ಎನ್ನುವ ಪದವನ್ನು “ಬಲವಾದ ಭಕ್ತಿ” ಅಥವಾ “ಉತ್ಸಾಹಪೂರ್ವಕವಾದ ನಿರ್ಣಯ” ಅಥವಾ “ನೀತಿಯುತವಾದ ಉತ್ಸಾಹ” ಎಂದೂ ಅನುವಾದ ಮಾಡಬಹುದು.
- “ನಿಮ್ಮ ಮನೆಗಾಗಿ ಆಸಕ್ತಿ” ಎನ್ನುವ ಮಾತನ್ನು “ನಿಮ್ಮ ದೇವಾಲಯವನ್ನು ಬಲವಾಗಿ ಘನಪಡಿಸಿರಿ” ಅಥವಾ “ನಿಮ್ಮ ಮನೆಯನ್ನು ಚೆನ್ನಾಗಿ ನೋಡಿಕೊಳ್ಳುವುದಕ್ಕೆ ಉತ್ಸಾಹಪೂರ್ವಕವಾದ ಬಯಕೆಯನ್ನು ಹೊಂದಿರಿ” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.12:31
- 1 ಅರಸ.19:9-10
- ಅಪೊ.ಕೃತ್ಯ.22:3
- ಗಲಾತ್ಯ.04:17
- ಯೆಶಯಾ.63:15
- ಯೋಹಾನ.02:17-19
- ಫಿಲಿಪ್ಪಿ.03:6
- ರೋಮಾ.10:1-3

ಪದದ ಡೇಟಾ:

- Strong's: H7065, H7068, G2205, G2206, G2207, G6041

ಇಬ್ರಿ, ಇಬ್ರಿಯರು

ಪದದ ಅರ್ಥವಿವರಣೆ:

“ಇಬ್ರಿಯರು” ಇಸಾಕ ಮತ್ತು ಯಾಕೋಬರ ಮೂಲಕ ಅಬ್ರಾಹಾಮನಿಂದ ಬಂದ ಸಂತಾನದ ಜನರಾಗಿರುತ್ತಾರೆ. ಅಬ್ರಾಹಾಮನನ್ನೇ ಮೊಟ್ಟ ಮೊದಲು ಸತ್ಯವೇದದಲ್ಲಿ “ಇಬ್ರಿಯನು” ಎಂದು ಕರೆಯಲ್ಪಟ್ಟಿದ್ದಾನೆ.

- “ಇಬ್ರಿ” ಎನ್ನುವ ಪದವು ಇಬ್ರಿಯರು ಮಾತನಾಡುವ ಭಾಷೆಯನ್ನು ಕೂಡ ಸೂಚಿಸುತ್ತದೆ. ಹಳೇ ಒಡಂಬಡಿಕೆಯ ಹೆಚ್ಚಿನ ಭಾಗವನ್ನು ಇಬ್ರಿಯ ಭಾಷದಲ್ಲಿಯೇ ಬರೆದಿರುತ್ತಾರೆ.
- ಸತ್ಯವೇದದಲ್ಲಿ ಅನೇಕ ಸ್ಥಳಗಳಲ್ಲಿ ಇಬ್ರಿಯರನ್ನು “ಯೆಹೂದ್ಯದ ಜನರು” ಅಥವಾ “ಇಸ್ರಾಯೇಲ್ಯರು” ಎಂದು ಕರೆಯಲ್ಪಟ್ಟಿದ್ದಾರೆ. ವಾಕ್ಯದಲ್ಲಿ ಈ ಮೂರು ಪದಗಳನ್ನು ಉಪಯೋಗಿಸುವುದು ಉತ್ತಮ, ಯಾಕಂದರೆ ಈ ಪದಗಳು ಒಂದೇ ವರ್ಗದ ಜನರನ್ನು ಸೂಚಿಸುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲ್, ಯೆಹೂದ್ಯ, ಯೆಹೂದ್ಯ ನಾಯಕರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.26:12-14
- ಆದಿ.39:13-15
- ಆದಿ.40:14-15
- ಆದಿ.41:12-13
- ಯೋಹಾನ.05:1-4
- ಯೋಹಾನ.19:12-13
- ಯೋನ.01:8-10
- ಫಿಲಿಪ್ಪಿ.03:4-5

ಪದ ಡೇಟಾ:

- Strong's: H5680, G1444, G1445, G1446, G1447

ಇಸ್ರಾಯೇಲ, ಇಸ್ರಾಯೇಲ್ಯರು

ಸತ್ಯಾಂಶಗಳು:

"ಇಸ್ರಾಯೇಲ" ಎನ್ನುವ ಪದವು ದೇವರು ಯಾಕೋಬನಿಗೆ ಕೊಟ್ಟ ಹೆಸರಾಗಿತ್ತು. ಈ ಪದಕ್ಕೆ "ಅವನು ದೇವರೊಂದಿಗೆ ಹೋರಾಟ ಮಾಡುವನು" ಎಂದರ್ಥ.

- ಯಾಕೋಬನ ಸಂತತಿಯವರು "ಇಸ್ರಾಯೇಲ್ ಜನರು" ಅಥವಾ "ಇಸ್ರಾಯೇಲ್ ದೇಶ" ಅಥವಾ "ಇಸ್ರಾಯೇಲ್ಯರು" ಎಂಬುದಾಗಿ ಕರೆಯಲ್ಪಟ್ಟರು.
- ದೇವರು ತನ್ನ ಒಡಂಬಡಿಕೆಯನ್ನು ಇಸ್ರಾಯೇಲ್ ಜನರೊಂದಿಗೆ ವಿಸ್ತರಿಸಿದರು. ಅವರು ಆತನು ಆದುಕೊಂಡ ಜನರಾಗಿದ್ದರು.
- ಇಸ್ರಾಯೇಲ್ ದೇಶದವರು ಹನ್ನೆರಡು ಕುಲಗಳಿಗೆ ಸಂಬಂಧಪಟ್ಟವರಾಗಿದ್ದರು.
- ಅರಸನಾದ ಸೊಲೊಮೋನನು ಮರಣಿಸಿದನಂತರ ಇಸ್ರಾಯೇಲ್ ದೇಶವು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿತು: ದಕ್ಷಿಣ ರಾಜ್ಯವನ್ನು "ಯೂದಾ" ಎಂದು ಕರೆದರು, ಮತ್ತು ಉತ್ತರ ರಾಜ್ಯವನ್ನು "ಇಸ್ರಾಯೇಲ್" ಎಂದು ಕರೆದರು.
- "ಇಸ್ರಾಯೇಲ್" ಎನ್ನುವ ಪದವನ್ನು ಅನೇಕಬಾರಿ "ಇಸ್ರಾಯೇಲ್ ಜನರು" ಅಥವಾ "ಇಸ್ರಾಯೇಲ್ ದೇಶ" ಎಂದು ಸಂದರ್ಭಾನುಗುಣವಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಯಾಕೋಬ, ಇಸ್ರಾಯೇಲ್ ರಾಜ್ಯ, ಯೂದಾ, ದೇಶ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.10:01
- 1 ಅರಸ.08:02
- ಅಪೊ.ಕೃತ್ಯ.02:36
- ಅಪೊ.ಕೃತ್ಯ.07:24
- ಅಪೊ.ಕೃತ್ಯ.13:23
- ಯೋಹಾನ.01:49-51
- ಲೂಕ.24:21
- ಮಾರ್ಕ.12:29
- ಮತ್ತಾಯ.02:06
- ಮತ್ತಾಯ.27:09
- ಫಿಲಿಪ್ಪ.03:4-5

ಸತ್ಯವೇದದಿಂದ ಉದಾಹರಣೆಗಳು:

- **08:15** ಹನ್ನೆರಡು ಮಂದಿ ಮಕ್ಕಳ ಸಂತಾನದವರು _ ಇಸ್ರಾಯೇಲ್ _ ಹನ್ನೆರಡು ಕುಲಗಳಾದರು.
- **09:03** ಅನೇಕ ಭವನಗಳನ್ನು ಮತ್ತು ಪಟ್ಟಣವೆಲ್ಲವನ್ನು ಕಟ್ಟಬೇಕೆಂದು ಐಗುಪ್ತರು _ ಇಸ್ರಾಯೇಲ್ಯರನ್ನು _ ಬಲವಂತ ಮಾಡಿದರು.
- **09:05** ಇಸ್ರಾಯೇಲ್ ಸ್ತ್ರೀ ಒಬ್ಬ ಗಂಡು ಮಗುವಿಗೆ ಜನ್ಮ ಕೊಟ್ಟಳು.
- **10:01** ಇಸ್ರಾಯೇಲ್ ದೇವರು ಹೀಗೆನ್ನುತ್ತಾನೆ "'ನನ್ನ ಜನರನ್ನು ಕಳುಹಿಸು" ಎಂದು ಅವರು ಹೇಳಿದರು.
- **14:12** ಇದೆಲ್ಲವನ್ನು ಹೊರತುಪಡಿಸಿ, ದೇವರಿಗೆ ಮತ್ತು ಮೋಶೆಗೆ ವಿರುದ್ಧವಾಗಿ _ ಇಸ್ರಾಯೇಲ್ _ ಜನರು ದೂರು ಹೇಳಿದರು ಮತ್ತು ಗುನುಗುಟ್ಟಿದರು.
- **15:09** ಆ ದಿನದಂದು _ ಇಸ್ರಾಯೇಲನಿಗಾಗಿ _ ದೇವರು ಹೋರಾಟ ಮಾಡಿದರು. ಆತನು ಅಮೋರಿಯರಿಯರಲ್ಲಿ ಗೊಂದಲವನ್ನುಂಟು ಮಾಡಿದನು ಮತ್ತು ದೊಡ್ಡ ದೊಡ್ಡ ಆನೆಕಲ್ಲುಗಳನ್ನು ಕಳುಹಿಸಿದನು, ಆಗ ಅಮೋರಿಯರಲ್ಲಿ ಅನೇಕರು ಸತ್ತರು.
- **15:12** ಈ ಹೋರಾಟವಾದನಂತರ, ದೇವರು ಪ್ರತಿಯೊಂದು _ ಇಸ್ರಾಯೇಲ್ _ ಕುಲಕ್ಕೆ ವಾಗ್ದಾನ ಭೂಮಿಯನ್ನು ಹಂಚಿದನು. ಆದನಂತರ, ದೇವರು _ ಇಸ್ರಾಯೇಲ್ _ ಗಡಿಗಳಲ್ಲಿರುವ ಪ್ರತಿಯೊಬ್ಬರಿಗೆ ಸಮಾಧಾನವನ್ನು ಕೊಟ್ಟರು.
- **16:16** ಆದ್ದರಿಂದ _ ಇಸ್ರಾಯೇಲ್ಯರು _ ವಿಗ್ರಹಗಳಿಗೆ ಆರಾಧನೆ ಮಾಡುತ್ತಿದ್ದಕ್ಕಾಗಿ, ಅವರನ್ನು ದೇವರು ಶಿಕ್ಷಿಸಿದರು.
- **43:06"** ಇಸ್ರಾಯೇಲ್ ಜನರೇ, ನೀವು ಇದುವರೆಗೆ ತಿಳಿದುಕೊಂಡಂತೆ ಮತ್ತು ನೋಡಿದಂತೆ, ಯೇಸು ದೇವರ ಶಕ್ತಿಯಿಂದ ಅನೇಕವಾದ ಸೂಚಕ ಕ್ರಿಯೆಗಳನ್ನು ಮತ್ತು ಅದ್ಭುತಗಳನ್ನು ಮಾಡಿದನು."

ಪದ ಡೇಟಾ:

- Strong's: H3478, H3479, H3481, H3482, G935, G2474, G2475

ಉಪರಾಜ

ಪದದ ಅರ್ಥವಿವರಣೆ:

“ಉಪರಾಜ” ಎನ್ನುವ ಪದವು ರೋಮಾ ಸಾಮ್ರಾಜ್ಯದ ಭಾಗವನ್ನು ಆಳಿದ ಪ್ರಭುತ್ವ ಅಧಿಕಾರಿಗಳನ್ನು ಸೂಚಿಸುತ್ತದೆ. ಪ್ರತಿಯೊಬ್ಬ ಉಪರಾಜನು ರೋಮಾ ಸಾಮ್ರಾಜ್ಯದ ಅಧಿಕಾರದಲ್ಲಿರಬೇಕು.

- “ಉಪರಾಜ” ಎನ್ನುವ ಪದಕ್ಕೆ “ಚತುರ್ಥಾಧಿಪತಿಗಳಲ್ಲಿ ಒಬ್ಬನು” ಎಂದರ್ಥ.
- ದಯೋಕ್ಲೆಶಿಯನ್ ಚಕ್ರವರ್ತಿಯ ಕೆಳಗೆ ಆರಂಭಿಸಿ, ರೋಮಾ ಸಾಮ್ರಾಜ್ಯದಲ್ಲಿ ನಾಲ್ಕು ಮುಖ್ಯ ಭಾಗಗಳಿದ್ದವು, ಅವುಗಳಲ್ಲಿ ಪ್ರತಿಯೊಂದು ಭಾಗವನ್ನು ಒಬ್ಬೊಬ್ಬ ಉಪರಾಜನು ಆಳಬೇಕಾಗಿರುತ್ತಿತ್ತು.
- ಯೇಸುವಿನ ಜನನ ಸಮಯದ ಕಾಲದಲ್ಲಿ ಅರಸನಾಗಿರುವ “ಮಹಾ” ಹೆರೋದನ ರಾಜ್ಯವು ಹೆರೋದನು ಸತ್ತುಹೋದನಂತರ ನಾಲ್ಕು ಮುಖ್ಯ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿತು, ಮತ್ತು ಅವುಗಳನ್ನು ತನ್ನ ಮಕ್ಕಳು “ಉಪರಾಜರಾಗಿ” ಅಥವಾ “ನಾಲ್ಕು ಮಂದಿ ಪಾಲಕರಾಗಿ” ಆಳಿದರು.
- ಪ್ರತಿಯೊಂದು ಭಾಗದಲ್ಲಿ ಒಂದಕ್ಕಿಂತ ಹೆಚ್ಚಾಗಿ “ಸೀಮೆಗಳು” ಎಂದು ಕರೆಯಲ್ಪಡುವ ವಿಭಾಗಗಳನ್ನು ಇರುತ್ತಿದ್ದವು, ಉದಾಹರಣೆಗೆ, ಗಲಿಲಾಯ ಅಥವಾ ಸಮಾರ್ಯ.
- ಹೊಸ ಒಡಂಬಡಿಕೆಯಲ್ಲಿ “ಉಪರಾಜನಾದ ಹೆರೋದ” ಎಂದು ಅನೇಕಸಲ ದಾಖಲಿಸಲಾಗಿದೆ. ಇವನನ್ನು “ಹೆರೋದ್ ಅಂತಿಪ” ಎಂದೂ ಕರೆಯಲ್ಪಟ್ಟಿರುತ್ತಾನೆ.
- “ಉಪರಾಜ” ಎನ್ನುವ ಈ ಪದವನ್ನು “ಪ್ರಾಂತೀಯ ರಾಜ್ಯಪಾಲಕ” ಅಥವಾ “ಪ್ರಾಂತ್ಯದ ಪಾಲಕ” ಅಥವಾ “ಪಾಲಕ” ಅಥವಾ “ರಾಜ್ಯಪಾಲರು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಹೆರೋದ್ ಅಂತಿಪ, ಸೀಮೆ, ರೋಮ್, ಪಾಲಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.03:1-2
- ಲೂಕ.09:7-9
- ಮತ್ತಾಯ.14:1-2

ಪದ ಡೇಟಾ:

- Strong's: G5075, G5076

ಎಚ್ಚರಿಸು, ಎಚ್ಚರಿಕೆ

ಪದದ ಅರ್ಥವಿವರಣೆ:

“ಎಚ್ಚರಿಸು” ಎನ್ನುವ ಪದಕ್ಕೆ ಸರಿಯಾದದ್ದನ್ನು ಮಾಡಬೇಕೆಂದು ಒಬ್ಬರನ್ನು ಬಲವಾಗಿ ಪ್ರೋತ್ಸಾಹಗೊಳಿಸುವುದು ಮತ್ತು ಆರೈಸುವುದು. ಅಂಥಹ ಪ್ರೋತ್ಸಾಹವನ್ನೇ “ಎಚ್ಚರಿಕೆ” ಎಂದು ಕರೆಯುತ್ತಾರೆ.

- ಎಚ್ಚರಿಕೆ ಮಾಡುವುದಕ್ಕೆ ಉದ್ದೇಶವೇನೆಂದರೆ ಇತರ ಜನರು ಪಾಪವನ್ನು ಮಾಡದೇ ದೇವರ ಚಿತ್ತವನ್ನು ಅನುಸರಿಸುವಂತೆ ನೋಡಿಕೊಳ್ಳುವುದು.
- ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರು ಒಬ್ಬರಿಗೊಬ್ಬರು ಕಠಿಣವಾಗಿಯೂ ಅಥವಾ ಥಟ್ಟನೆಯಾಗಿ ಎಚ್ಚರಿಸಿಕೊಳ್ಳದೇ, ಪ್ರೀತಿಯಲ್ಲಿ ಎಚ್ಚರಿಸಿಕೊಳ್ಳಿರಿ ಎಂದು ಬೋಧಿಸಲ್ಪಟ್ಟಿದೆ,

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಎಚ್ಚರಿಸು” ಎನ್ನುವ ಪದವನ್ನು “ಬಲವಾಗಿ ಕೇಳಿಕೊಳ್ಳಿ” ಅಥವಾ “ಮನವೊಲಿಸು” ಅಥವಾ “ಸಲಹೆಕೊಡು” ಎಂದೂ ಅನುವಾದ ಮಾಡಬಹುದು.
- ಎಚ್ಚರಿಸುವವರು ಕೋಪಗೊಂಡಿರುತ್ತಾರೆನ್ನುವ ಭಾವನೆ ಅನುವಾದ ಪದಗಳಲ್ಲಿ ಬರದಂತೆ ನೋಡಿಕೊಳ್ಳಿರಿ. ಈ ಪದವು ಬಲವನ್ನು ಮತ್ತು ತೀವ್ರತೆಯನ್ನು ತಿಳಿಸಬೇಕು, ಆದರೆ ಕೋಪದಿಂದ ಮಾತನಾಡುವುದನ್ನು ಸೂಚಿಸಬಾರದು.
- ಅನೇಕ ಸಂದರ್ಭಗಳಲ್ಲಿ “ಎಚ್ಚರಿಸು” ಎನ್ನುವ ಪದವನ್ನು “ಪ್ರೋತ್ಸಾಹಿಸು” ಎನ್ನುವ ಪದಕ್ಕಿಂತ, ಪ್ರೇರೇಪಿಸು, ಧೈರ್ಯ ತುಂಬು, ಅಥವಾ ಒಬ್ಬರನ್ನು ಆದರಿಸು ಎಂದು ಅರ್ಥ ಬರುವ ಪದಗಳಿಂದ ಅನುವಾದ ಮಾಡಲಾಗುತ್ತದೆ.
- ಈ ಪದವನ್ನು ಸಹಜವಾಗಿ ವಿಭಿನ್ನ ರೀತಿಯಲ್ಲಿ “ಒತ್ತಿ ಹೇಳು” ಎಂದೂ ಅನುವಾದಿಸುತ್ತಾರೆ, ಇದಕ್ಕೆ ಒಬ್ಬರ ಕೆಟ್ಟ ನಡತೆಗಾಗಿ ಅವರನ್ನು ಸರಿಪಡಿಸುವುದು ಅಥವಾ ಅವರಿಗೆ ಎಚ್ಚರಿಕೆ ಕೊಡುವುದು ಎಂದರ್ಥ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.02:3-4
- 1 ಥೆಸ್ಸ.02:10-12
- 1 ತಿಮೊಥೆ.05:1-2
- ಲೂಕ.03:18-20

ಪದ ಡೇಟಾ:

- Strong's: G3867, G3870, G3874, G4389

ಎಲ್ಲೆಮೀರುವುದು

ಪದದ ಅರ್ಥವಿವರಣೆ:

“ಎಲ್ಲೆಮೀರು” ಎನ್ನುವ ಪದಕ್ಕೆ ಒಬ್ಬರ ಹಕ್ಕುಗಳನ್ನು ಉಲ್ಲಂಘಿಸುವುದು ಅಥವಾ ನಿಯಮಗಳನ್ನು ಮೀರುವುದು ಎಂದರ್ಥ. “ಎಲ್ಲೆಮೀರು” ಎಂದರೆ “ಎಲ್ಲೆಮೀರುವ” ಕ್ರಿಯೆ ಎಂದರ್ಥ.

- ಈ ಪದವು "ಎಲ್ಲೆಮೀರುವುದು" ಎಂಬ ಪದಕ್ಕೆ ಹೋಲುತ್ತದೆ, ಆದರೆ ಸಾಮಾನ್ಯವಾಗಿ ದೇವರ ವಿರುದ್ಧವಾಗಿ ಇತರ ಜನರ ವಿರುದ್ಧ ಎಲ್ಲೆಮೀರುವುದು ವಿವರಿಸಲು ಇದನ್ನು ಹೆಚ್ಚಾಗಿ ಬಳಸಲಾಗುತ್ತದೆ.
- ಅತಿಕ್ರಮಣವು ನೈತಿಕ ಕಾನೂನು ಅಥವಾ ನಾಗರಿಕ ಕಾನೂನಿನ ಉಲ್ಲಂಘನೆಯಾಗಿರಬಹುದು.
- ಅತಿಕ್ರಮಣವು ಇನ್ನೊಬ್ಬ ವ್ಯಕ್ತಿಯ ವಿರುದ್ಧ ಮಾಡಿದ ಪಾಪವೂ ಆಗಿರಬಹುದು.
- ಈ ಪದವು "ಪಾಪ" ಮತ್ತು "ಉಲ್ಲಂಘನೆ ಅಥವಾ ಎಲ್ಲೆಮೀರುವುದು" ಎಂಬ ಪದಗಳಿಗೆ ಸಂಬಂಧಿಸಿದೆ, ವಿಶೇಷವಾಗಿ ಇದು ದೇವರಿಗೆ ಅವಿಧೇಯತೆಗೆ ಸಂಬಂಧಿಸಿದೆ. ಎಲ್ಲಾ ಪಾಪಗಳು ದೇವರ ವಿರುದ್ಧದ ಅಪರಾಧಗಳಾಗಿವೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ ‘ವಿರುದ್ಧವಾಗಿ ಎಲ್ಲೆಮೀರು” ಎನ್ನುವ ಮಾತನ್ನು “ವಿರುದ್ಧವಾಗಿ ಪಾಪ ಮಾಡು” ಅಥವಾ “ನಿಯಮವನ್ನು ಉಲ್ಲಂಘಿಸು” ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಭಾಷೆಗಳಲ್ಲಿ “ಗೆರೆಯನ್ನು ದಾಟುವುದು” ಎನ್ನುವ ಮಾತನ್ನು ಹೊಂದಿರುತ್ತದೆ, ಇದನ್ನು “ಎಲ್ಲೆಮೀರು” ಅನುವಾದ ಮಾದುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.
- ಸತ್ಯವೇದದ ವಾಕ್ಯಭಾಗದಲ್ಲಿರುವ ಅರ್ಥದೊಂದಿಗೆ ಈ ಪದವನ್ನು ಹೇಗೆ ಇಡಿಸುತ್ತದೆಯೆಂದು ಗಮನಿಸಿರಿ, “ಅತಿಕ್ರಮಣ” ಮತ್ತು “ಪಾಪ” ಎನ್ನುವ ಪದಗಳಿಗೆ ಅರ್ಥವನ್ನು ಹೊಂದಿರುವ ಇತರ ಪದಗಳೊಂದಿಗೆ ಹೋಲಿಸಿ ನೋಡಿರಿ.

(ಈ ಪದಗಳನ್ನು ಸಹ ನೋಡಿರಿ : ಅವಿಧೇಯತೆ, ಅಕ್ರಮ, ಪಾಪ, ಅತಿಕ್ರಮಣ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಸಮು.25:28
- 2 ಪೂರ್ವ.26:16-18
- ಕೊಲೊ.02:13
- ಎಫೆಸ.02:01
- ಯೆಹೆ.15:7-8
- ರೋಮಾ.05:17
- ರೋಮಾ.05:20-21

ಪದ ಡೇಟಾ:

- Strong's: H816, H817, H819, H2398, H4603, H4604, H6586, H6588, G264, G3900

ಒಡಂಬಡಿಕೆ

ಪದದ ಅರ್ಥವಿವರಣೆ

"ಒಡಂಬಡಿಕೆ" ಎನ್ನುವ ಪದವು ಒಂದು ಅಥವಾ ಎರಡು ಪಕ್ಷದವರು ನೆರವೇರಿಸಬೇಕಾಗಿದ್ದು, ಯಾವುದಾದರು ಒಂದು ಕಾರ್ಯವನ್ನು ಮಾಡಬೇಕೆಂದು ಎರಡು ಪಕ್ಷದವರ ನಡುವೆ ನಿರ್ಣಯಿಸಿ ಸಾಂಪ್ರದಾಯಕವಾಗಿ ಮಾಡಿಕೊಳ್ಳುವ ಒಪ್ಪಂದವನ್ನು ಸೂಚಿಸುತ್ತದೆ.

- ವ್ಯಕ್ತಿಗಳ ನಡುವೆ, ಜನರ ಗುಂಪಿಗಳ ನಡುವೆ ಅಥವಾ ದೇವರು ಮತ್ತು ಮನುಷ್ಯರ ನಡುವೆ ಈ ಒಪ್ಪಂದ ಮಾಡಿಕೊಳ್ಳಬಹುದು.
- ಇಬ್ಬರು ವ್ಯಕ್ತಿಗಳು ಒಡಂಬಡಿಕೆಯನ್ನು ಮಾಡಿಕೊಂಡಾಗ, ಅವರು ಏನಾದರು ಮಾಡುತ್ತೇವೆ ಎಂದು ವಾಗ್ದಾನ ಮಾಡುತ್ತಾರೆ ಮತ್ತು ಅವರು ಆ ವಾಗ್ದಾನ ನೆರವೇರಿಸಬೇಕು.
- ವಿವಾಹ ಒಡಂಬಡಿಕೆ, ವ್ಯಾಪಾರ ನಿಬಂಧನೆ, ಮತ್ತು ದೇಶಗಳ ನಡುವೆ ಒಪ್ಪಂದಗಳು, ಮಾನವ ಒಡಂಬಡಿಕೆ ಉದಾಹರಣೆಗಳಾಗಿವೆ.
- ಸತ್ಯವೇದದುದ್ದಕ್ಕು ದೇವರು ತನ್ನ ಜನರೊಂದಿಗೆ ಅನೇಕ ಒಡಂಬಡಿಕೆಗಳನ್ನು ಮಾಡಿದ್ದಾನೆ.
- ಕೆಲವೊಂದು ಒಡಂಬಡಿಕೆಗಳಲ್ಲಿ, ದೇವರು ತನ್ನ ಕೆಲಸವನ್ನು ಯಾವುದೇ ಷರತ್ತುಗಳಿಲ್ಲದೆ ಮಾಡಲು ವಾಗ್ದಾನ ಮಾಡಿದ್ದಾನೆ. ಉದಾಹರಣೆಗೆ, ವಿಶ್ವಾದ್ಯಂತ ಪ್ರವಾಹದಿಂದ ಭುಲೋಕವನ್ನು ಎಂದಿಗೂ ನಾಶ ಮಾಡುವದಿಲ್ಲವೆಂದು ಎಲ್ಲಾ ಮಾನವ ಜಾತಿಯೊಂದಿಗೆ ದೇವರು ವಾಗ್ದಾನ ಮಾಡಿ ಒಡಂಬಡಿಕೆಯನ್ನು ಸ್ಥಿರಪಡಿಸಿದಾಗ, ಈ ವಾಗ್ದಾನವನ್ನು ನೆರವೇರಿಸುವದರಲ್ಲಿ ಮನುಷ್ಯರು ಮಾಡಬೇಕದ ಕೆಲಸ ಒಂದು ಇರುವದಿಲ್ಲ.
- ಬೇರೆ ಒಡಂಬಡಿಕೆಗಳಲ್ಲಿ, ಮನುಷ್ಯರು ತಮ್ಮ ಕೆಲಸವನ್ನು ಮಾಡಿದ್ದರೆ ಮತ್ತು ಆತನಿಗೆ ವಿಧೇಯರಾಗಿದ್ದರೆ ಮಾತ್ರ ತನ್ನ ಪಕ್ಷದ ಕಾರ್ಯವನ್ನು ಮಾಡುವೆನೆಂದು ದೇವರು ವಾಗ್ದಾನ ಮಾಡಿದನು.

“ಹೊಸ ಒಡಂಬಡಿಕೆ” ಎನ್ನುವ ಪದವು ತನ್ನ ಮಗನಾದ, ಯೇಸು ಕ್ರಿಸ್ತನ ಮುಕಾಂತರ ದೇವರು ತನ್ನ ಜನರೊಂದಿಗೆ ಮಾಡಿದ ಒಪ್ಪಂದ ಅಥವಾ ಬಾಧ್ಯತೆಯನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ “ಹೊಸ ಒಡಂಬಡಿಕೆ” ಎನ್ನುವ ಭಾಗದಲ್ಲಿ ದೇವರ “ನೂತನ ನಿಬಂಧನೆಯ” ಕುರಿತಾಗಿ ವಿವರಿಸಲ್ಪಟ್ಟಿದೆ.
- ಈ ನೂತನ ನಿಬಂಧನವು ಹಳೆ ಒಡಂಬಡಿಕೆಯ ಕಾಲದಲ್ಲಿ ದೇವರು ಇಸ್ರಾಯೇಲರ ಸಂಗಡ ಮಾಡಿದ “ಹಳೆ” ನಿಬಂಧನಕ್ಕೆ ವಿರುದ್ಧವಾಗಿದೆ.
- ಹಳೆಯ ಒಡಂಬಡಿಕೆಯಗಿಂತ ಹೊಸ ಒಡಂಬಡಿಕೆ ತುಂಬಾ ಉತ್ತಮವಾಗಿದೆ ಯಾಕಂದರೆ ಅದು ಮನುಷ್ಯರ ಪಾಪಗಳನ್ನು ಶಾಶ್ವತವಾಗಿ ಪರಿಹಾರಮಾಡಿರುವ ಯೇಸು ಕ್ರಿಸ್ತನ ಬಲಿಯಾಗದ ಮೇಲೆ ಆಧಾರವಾಗಿದೆ. ಹಳೆ ಒಡಂಬಡಿಕೆಯ ಬಲಿಯಗದಲ್ಲಿ ಇದು ಮಾಡಿರಲಿಲ್ಲ.
- ಯೇಸುವಿನ ವಿಶ್ವಾಸಿಗಳು ಆಗಿರುವವರ ಹೃದಯಗಳ ಮೇಲೆ ದೇವರು ಈ ನೂತನ ಒಡಂಬಡಿಕೆಯನ್ನು ಬರೆದಿದ್ದಾರೆ. ದೇವರಿಗೆ ವಿಧೇಯರಾಗಿರಲು ಮತ್ತು ಪರಿಶುದ್ಧ ಜೀವಿತವನ್ನು ಹೊಂದಿರಲು ಪ್ರಾರಂಭಿಸುವಂತೆ ಅದು ಅವರನ್ನು ಪ್ರೇರೇಪಿಸುತ್ತದೆ.
- ಅಂತ್ಯ ಕಾಲದಲ್ಲಿ ದೇವರು ತನ್ನ ರಾಜ್ಯವನ್ನು ಭೂಲೋಕದಲ್ಲಿ ಸ್ಥಿರಪಡಿಸಿದಾಗ ಹೊಸ ಒಡಂಬಡಿಕೆ ಸಂಪೂರ್ಣವಾಗಿ ನೆರವೇರುತ್ತದೆ. ದೇವರು ಪ್ರಪಂಚವನ್ನು ಸೃಷ್ಟಿಸಿದಾಗ ಹೇಗಿತ್ತೋ ಅದೇರೀತಿರಲ್ಲಿ ಮತ್ತೋಮ್ಮೆ ಎಲ್ಲವು ಒಳ್ಳೆಯದಾಗಿರುತ್ತದೆ.

ಅನುವಾದ ಸಲಹೆಗಳು:

- ಸಂಧರ್ಭಕ್ಕೆ ತಕ್ಕಹಾಗೆ, ಈ ಪದವನ್ನು “ಬಂಧನದ ಒಪ್ಪಂದ” ಅಥವಾ “ಸಂಪ್ರದಾಯಕ ಒಪ್ಪಂದ” ಅಥವಾ “ವಾಗ್ದಾನ” ಅಥವಾ “ಒಪ್ಪಂದ” ಎಂದು ಅನುವಾದ ಮಾಡಬಹುದು.
- ಒಂದು ಅಥವಾ ಎರಡು ಪಕ್ಷದವರು ನೆರವೇರಿಸಬೇಕಾದ ಕಾರ್ಯದ ವಿಷಯವಾಗಿ ಮಾಡಿರುವ ಒಪ್ಪಂದದ ಪ್ರಕಾರ ಬೇರೆ ಭಾಷೆಗಳಲ್ಲಿ ನಿಬಂಧನ ಎನ್ನುವ ಪದಕ್ಕೆ ಬೇರೆ ಪದಗಳನ್ನು ಉಪಯೋಗಿಸಿರ ಬಹುದು. ಒಡಂಬಡಿಕೆ ಒಂದು ಪಕ್ಷಕ್ಕೆ ಸೇರಿದ್ದು ಆಗಿದ್ದರೆ, ಅದನ್ನು “ವಾಗ್ದಾನ” ಅಥವಾ “ಪ್ರತಿಜ್ಞೆ” ಎಂದು ಅನುವಾದ ಮಾಡಬಹುದು.
- ಜನರು ಒಡಂಬಡಿಕೆ ಮಾಡಲು ಪ್ರಸ್ತಾಪಿಸಿದ್ದಾರೆ ಎಂದು ಅರ್ಥಕೊಡದಂತೆ ನೋಡಿಕೊಳ್ಳಿರಿ. ದೇವರು ಮತ್ತು ಮನುಷ್ಯರ ನಡುವೆ ಮಾಡಿರುವ ಎಲ್ಲಾ ನಿಬಂಧನೆಗಳು, ದೇವರೇ ಆ ನಿಬಂಧನಗಳನ್ನು ಪ್ರಾರಂಭಿಸಿದ್ದಾರೆ.
- “ನೂತನ ಒಡಂಬಡಿಕೆ ” ಎನ್ನುವ ಪದವನ್ನು “ಹೊಸ ಸಂಪ್ರದಾಯಕ ಒಪ್ಪಂದ” ಅಥವಾ “ಹೊಸ ಒಪ್ಪಂದ” ಅಥವಾ “ಹೊಸ ಕರಾರು” ಎಂದು ಅನುವಾದ ಮಾಡಬಹುದು.
- ಈ ಪದವಿನ್ಯಾಸಗಳಲ್ಲಿ “ಹೊಸ” ಎನ್ನುವ ಪದಕ್ಕೆ “ತಾಜಾ” ಅಥವಾ “ಹೊಸ ವಿಧಾನ” ಅಥವಾ “ಇನ್ನೊಂದು” ಎಂದು ಅರ್ಥ ಕೊಡುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಒಡಂಬಡಿಕೆ, ವಾಗ್ದಾನ)

ಸತ್ಯವೇದದ ಅನುಬಂಧ ವಾಕ್ಯಗಳು:

- ಆದಿ.09:12
- ಆದಿ.17:07
- ಆದಿ.31:44
- ವಿಮೋ.34:10-11
- ಯೆಹೋ.24:24-26
- 2 ಸಮು.23:5
- 2 ಅರಸ.18:11-12

- ಮಾರ್ಕ.14:24
- ಲೂಕ.01:73
- ಲೂಕ.22:20
- ಅಪೊ.ಕೃತ್ಯ.07:08
- 1 ಕೊರಿಂಥ.11:25-26
- 2 ಕೊರಿಂಥ.03:06
- ಗಲಾತ್ಯ.03:17-18
- ಇಬ್ರಿ.12:24

ಸತ್ಯವೇದ ಕತೆಗಳಿಂದ ಕೆಲವು ಉದಾಹರಣೆಗಳು:

- **04:09** ದೇವರು ಅಬ್ರಹಾಮನೊಂದಿಗೆ _ಒಡಂಬಡಿಕೆ _ ಮಾಡಿದನು. _ಒಡಂಬಡಿಕೆ _ ಎಂದರೆ ಎರಡು ಪಕ್ಷದವರು ಮಾಡುವ ಒಪ್ಪಂದವಾಗಿದೆ.
- **05:04** "ಇಷ್ಮಾಯೇಲನನ್ನು ಆಶೀರ್ವದಿಸಿ, ಅವನನ್ನು ಅಭಿವೃದ್ಧಿಮಾಡಿ ಅವನಿಗೆ ಅತ್ಯಧಿಕವಾದ ಸಂತಾನವನ್ನು ಕೊಡುವೆನು. ಆದರೆ ಆ ನನ್ನ **ಒಡಂಬಡಿಕೆಯನ್ನು** ಇಸಾಕನೊಂದಿಗೆ ಸ್ಥಾಪಿಸಿಕೊಳ್ಳುತ್ತೇನೆ."
- **06:04** ಬಹು ಕಾಲದ ನಂತರ, ಅಬ್ರಹಾಮನು ತೀರಿಹೊದನು ಮತ್ತು ದೇವರು ಅವನೊಂದಿಗೆ ಮಾಡಿದ _ಒಡಂಬಡಿಕೆ _ ಅವನ ಮಗನಾದ ಇಸಾಕನ ಮೇಲೂ ಉಂಟಾಯಿತು.
- **07:10** ದೇವರು ಅಬ್ರಹಾಮನಿಗೆ ಮತ್ತು ಇಸಾಕನಿಗೆ ಮಾಡಿದ _ಒಡಂಬಡಿಕೆ _ ಯಾಕೋಬನ ಮೇಲೂ ಉಂಟಾಯಿತು."
- **13:02** "ನೀವು ನನ್ನ ಮಾತುಗಳನ್ನು ಶ್ರದ್ಧೆಯಿಂದ ಕೇಳಿ, ನನ್ನ **ಒಡಂಬಡಿಕೆಯನ್ನು** ಕಾಪಾಡಿಕೊಂಡರೆ, ನೀವು ನನಗೆ ಶ್ರೇಷ್ಠ ಯಾಜಕರೂ, ಪರಿಶುದ್ಧ ಜನರೂ ಆಗಿರುವಿರಿ" ಎಂದು ದೇವರು ಮೋಶೆ ಮತ್ತು ಇಸ್ರಯೇಲ್ ಜನರೊಂದಿಗೆ ಹೇಳಿದನು.
- **13:04** "ಐಗುಪ್ಟ್ಯರು ಮಾಡಿಸುವ ಬಿಟ್ಟೀ ಸೇವೆಯನ್ನು ನಾನು ನಿಮಗೆ ತಪ್ಪಿಸಿದಾಗ ಯೆಹೋವನೆಂಬ ನಾನೇ ನಿಮ್ಮ ದೇವರಗಿದ್ದೇನೆ" ಎಂದು ದೇವರು ಅವರಿಗೆ **ಒಡಂಬಡಿಕೆ** ಮಾಡಿದರು. ಬೇರೆ ಯಾವ ದೇವರನ್ನು ನೀವು ಸೇವಿಸಬಾರದು."
- **15:13** ಸಿನಾಯ್ ಬೆಟ್ಟದಲ್ಲಿ ಯೆಹೋವ ದೇವರು ಇಸ್ರಾಯೇಲ್ಯರೊಂದಿಗೆ ಮಾಡಿದ _ಒಡಂಬಡಿಕೆ _ ವಿಧೇಯರಾಗಬೇಕೆನ್ನುವ ಕರ್ತವ್ಯವನ್ನು ಯೆಹೋಶುವ ಜನರಿಗೆ ನೆನಪು ಮಾಡಿದನು.
- **21:05** ಪ್ರವಾದಿಯಾದ ಯೆರೆಮೀಯನ ಮುಖಾಂತರ, ದೇವರು ಒಂದು **ಹೊಸ ಒಡಂಬಡಿಕೆಯನ್ನು** ಮಾಡುವೆನೆಂದು ವಾಗ್ದಾನ ಮಾಡಿದನು, ಆದರೆ ಆ ಒಡಂಬಡಿಕೆ ದೇವರು ಇಸ್ರಾಯೇಲರೊಂದಿಗೆ ಮಾಡಿದಂತೆ ಇರುವದ್ದಿಲ್ಲ. **ಹೊಸ ಒಡಂಬಡಿಕೆಯಲ್ಲಿ**, ದೇವರು ತನ್ನ ಆಜ್ಞೆಗಳನ್ನು ಜನರ ಹೃದಯಗಳ ಮೇಲೆ ಬರೆಯುವನು, ಜನರು ತಮ್ಮ ದೇವರನ್ನು ವ್ಯಕ್ತಿಗತವಾಗಿ ತಿಳಿದಿರುವರು, ಅವರು ಆತನ ಪ್ರಜೆಯಾಗಿರುವರು, ಮತ್ತು ದೇವರು ಅವರ ಪಾಪಗಳನ್ನು ಕ್ಷಮಿಸುವನು. ಮೆಸ್ಸಿಯ ಆ **ಹೊಸಒಡಂಬಡಿಕೆ ಯನ್ನು** ಪ್ರಾರಂಭಿಸುವನು.
- **21:14** ಮೆಸ್ಸಿಯನ ಮರಣ ಮತ್ತು ಪುನರುತ್ಥಾನದ ಮೂಲಕ, ದೇವರು ಪಾಪಿಗಳನ್ನು ರಕ್ಷಿಸುವ ತನ್ನ ಪ್ರಣಾಳಿಕೆಯನ್ನು ನೆರವೇರಿಸುವನು ಮತ್ತು **ಹೊಸ ಒಡಂಬಡಿಕೆಯನ್ನು** ಪ್ರಾರಂಭಿಸುವನು.
- **38:05** ಆ ಮೇಲೆ ಪಾನಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಸಲ್ಲಿಸಿ ಅವರಿಗೆ ಕೊಟ್ಟು, "ಇದರಲ್ಲಿರುವುದನ್ನು ಎಲ್ಲರೂ ಕುಡಿಯಿರಿ; ಇದು ನನ್ನ ರಕ್ತ. ಇದು ಬಹುಜನರ ಪಾಪಗಳ ಕ್ಷಮಾಪಣೆಗಾಗಿ ಸುರಿಸಲ್ಪಡುವ **ಹೊಸ ಒಡಂಬಡಿಕೆಯ** ರಕ್ತ. ಇದನ್ನು ಪಾನ ಮಾಡುವಾಗೆಲ್ಲ ನನ್ನನ್ನು ನೆನಪು ಮಾಡಿಕೊಳ್ಳಿರಿ."
- **48:11** ಆದರೆ ದೇವರು ಈಗ **ಹೊಸ ಒಡಂಬಡಿಕೆಯನ್ನು** ಮಾಡಿದ್ದಾರೆ, ಅದು ಎಲ್ಲರಿಗೂ ಸಿಗುತ್ತದೆ. ಯಾಕಂದರೆ ಈ **ಹೊಸ ಒಡಂಬಡಿಕೆಯ** ಮೂಲಕ, ಯಾರಾದರು ಯೇಸು ಕ್ರಿಸ್ತನನ್ನು ನಂಬಿದರೆ ಅವರು ದೇವರ ಮಕ್ಕಳಾಗಬಹುದು.

ಪದ ಡೇಟಾ:

- Strong's: H1285, H2319, H3772, G802, G1242, G4934

ಒಡಂಬಡಿಕೆಯ ನಂಬಿಕೆ, ಒಡಂಬಡಿಕೆಯ ನಿಯತ್ತು, ಪ್ರೀತಿಯ ದಯೆ, ವಿಫಲವಾಗದ ಪ್ರೀತಿ

ಪದದ ಅರ್ಥವಿವರಣೆ

ದೇವರು ತನ್ನ ಪ್ರಜೆಗಳೊಂದಿಗೆ ಮಾಡಿದ ವಾಗ್ದಾನಗಳನ್ನು ನೆರೆವೇರಿಸುವ ಬದ್ಧತೆಯನ್ನು ವಿವರಿಸಲು ಈ ಪದವನ್ನು ಉಪಯೋಗಿಸುತ್ತಾರೆ.

- "ಒಡಂಬಡಿಕೆಗಳು" ಎನ್ನುವ ಸಾಂಪ್ರದಾಯಕ ಒಪ್ಪಂದಗಳ ಮೂಲಕ ದೇವರು ಇಸ್ರಾಯೇಲ್ಯರಿಗೆ ವಾಗ್ದಾನಗಳನ್ನು ಮಾಡಿದ್ದಾನೆ.
- ಯೆಹೋವನ "ಒಡಂಬಡಿಕೆಯ ನಂಬಿಕೆ" ಅಥವಾ "ಒಡಂಬಡಿಕೆಯ ನಿಯತ್ತು" ಆತನು ತನ್ನ ಜನರೊಂದಿಗೆ ಮಾಡಿದ ವಾಗ್ದಾನಗಳನ್ನು ನೆರವೇರಿಸುವನು ಎನ್ನುವ ವಾಸ್ತವಿಕೆಯನ್ನು ಸೂಚಿಸುತ್ತಿದೆ.
- ದೇವರು ತಾನು ಮಾಡಿದ ನಿಬಂಧನೆಯ ವಾಗ್ದಾನವನ್ನು ನೆರವೇರಿಸುವಾತನು ಎನ್ನುವುದು ತನ್ನ ಜನರ ಮೇಲೆ ತನ್ನ ಕೃಪೆಯನ್ನು ತೋರಿಸುತ್ತಿದ್ದಾನೆ ಎನ್ನುವ ಭಾವವನ್ನು ವ್ಯಕ್ತಪಡಿಸುತ್ತಿದೆ.
- "ನಿಯತ್ತು" ಎನ್ನುವ ಪದವು ಬದ್ಧತೆ ಮತ್ತು ಭರವಸೆ ಇಡಬಹುದು, ವಾಗ್ದಾನ ಮಾಡಿರುವದನ್ನು ನೆರವೇರಿಸುವುದು, ಮತ್ತು ಇನ್ನೊಬ್ಬರಿಗೆ ಪ್ರಯೋಜನಕರವಾಗಿರಿವುದು ಎನ್ನುವವುಗಳಿಗೆ ಸೂಚಿಸುತ್ತದೆ.

ಅನುವಾದ ಸಲಹೆಗಳು:

- "ಒಡಂಬಡಿಕೆ" ಮತ್ತು "ನಂಬಿಕೆ" ಎನ್ನುವ ಪದಗಳನ್ನು ಹೇಗೆ ಅನುವಾದ ಮಾಡಿದ್ದರೆ ಎನ್ನುವದರ ಮೇಲೆ ಈ ಪದವನ್ನು ಅನುವಾದ ಮಾಡುವುದು ಆಧಾರವಾಗಿರುತ್ತದೆ.
- "ನಂಬಿಕೆಯಾದ ಪ್ರೀತಿ" ಅಥವಾ "ನಿಯತ್ತು, ಬದ್ಧತೆಯ ಪ್ರೀತಿ" ಅಥವಾ "ಭರವಸೆ ಇಡಬಹುದಾದ ಪ್ರೀತಿ" ಎಂದು ಈ ಪದವನ್ನು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಿಬಂಧನೆ, ನಂಬಿಕೆ, ಕೃಪೆ, ಇಸ್ರಾಯೇಲ್ಯರು, ದೇವರ ಜನರು, ವಾಗ್ದಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಜ್ರ.03:10-11
- ಅರಣ್ಯ.14:17-19

ಪದ ಡೇಟಾ:

- Strong's: H2617

ಒಡಂಬಡಿಕೆಯ ಮಂಜೂಷ, ಯೆಹೋವನ ಮಂಜೂಷ

ಪದದ ಅರ್ಥವಿವರಣೆ:

ಈ ಪದಗಳು ವಿಶೇಷವಾದ ಕಟ್ಟಿಗೆಯ ಪೆಟ್ಟಿಗೆಯನ್ನು, ಅದರ ಮೇಲೆ ಬಂಗಾರದ ಹೊದಿಕೆಯನ್ನು, ಅದರಲ್ಲಿ ಹತ್ತು ಆಜ್ಞೆಗಳನ್ನು ಬರೆದಿರುವ ಎರಡು ಹಲಗೆಗಳನ್ನು ಸೂಚಿಸುತ್ತದೆ. ಅದರಲ್ಲಿ ಆರೋನನ ಕೋಲು ಮತ್ತು ಮನ್ನ ಪಾತ್ರೆಯು ಒಳಗೊಂಡಿರುತ್ತದೆ.

- "ಮಂಜೂಷ" ಎನ್ನುವ ಪದವು ಇಲ್ಲಿ "ಪೆಟ್ಟಿಗೆ" ಅಥವಾ "ಗೂಡು" ಅಥವಾ "ಪಾತ್ರೆ" ಎಂದೂ ಅನುವಾದ ಮಾಡಬಹುದು.
- ಈ ಗೂಡಿನಲ್ಲಿರುವ ವಸ್ತುಗಳು ದೇವರ ಒಡಂಬಡಿಕೆಯ ಇಸ್ರಾಯೇಲ್ಯರನ್ನು ನೆನಪಿಸುತ್ತದೆ.
- ಒಡಂಬಡಿಕೆಯ ಮಂಜೂಷವು "ಅತೀ ಪರಿಶುದ್ಧ ಸ್ಥಳದಲ್ಲಿ" ಮಾತ್ರ ಕಂಡುಬರುತ್ತದೆ.
- ಗುಡಾರದಲ್ಲಿರುವ ಅತಿ ಪರಿಶುದ್ಧ ಸ್ಥಳದಲ್ಲಿಟ್ಟ ಒಡಂಬಡಿಕೆಯ ಮಂಜೂಷದ ಮೇಲೆ ದೇವರ ಸನ್ನಿಧಿಯು ಇಳಿದು ಬರುತ್ತಿತ್ತು, ಅಲ್ಲಿಯೇ ಇಸ್ರಾಯೇಲ್ಯರ ಪಕ್ಷವಾಗಿ ಮೋಶೆಯೊಂದಿಗೆ ದೇವರು ಮಾತನಾಡುವ ಸ್ಥಳವಾಗಿತ್ತು.
- ದೇವಾಲಯದಲ್ಲಿರುವ ಅತಿ ಪರಿಶುದ್ಧ ಸ್ಥಳದಲ್ಲಿಟ್ಟ ಒಡಂಬಡಿಕೆಯ ಮಂಜೂಷದ ಸಮಯದಲ್ಲಿ, ಕೇವಲ ಪ್ರಧಾನ ಯಾಜಕನು ಮಾತ್ರವೇ ಮಂಜೂಷದ ಬಳಿಗೆ ಹೋಗುವುದಕ್ಕೆ ಸಾಧ್ಯ, ಅದು ಕೂಡ ವರ್ಷಕ್ಕೊಮ್ಮೆ ದೋಷ ಪರಿಹಾರ ದಿನದಂದು ಮಾತ್ರ ಗುಡಾರದೊಳಗೆ ಪ್ರವೇಶಿಸಬೇಕು.
- ಅನೇಕ ಆಂಗ್ಲ ಅನುವಾದಗಳಲ್ಲಿ "ಒಡಂಬಡಿಕೆಯ ಆಜ್ಞೆಗಳನ್ನು" ಅಕ್ಷರಾರ್ಥವಾಗಿ "ಸಾಕ್ಷಿ" ಎಂಬುದಾಗಿ ಅನುವಾದಿಸಿದ್ದಾರೆ. ಹತ್ತು ಆಜ್ಞೆಗಳು ದೇವರು ತನ್ನ ಜನರೊಂದಿಗೆ ಮಾಡಿದ ಒಡಂಬಡಿಕೆಗೆ ಸಾಕ್ಷಿಯಾಗಿವೆ ಅಥವಾ ಆಧಾರವಾಗಿವೆ ಎನ್ನುವ ಸತ್ಯಕ್ಕೆ ಇದು ಸೂಚನೆಯಾಗಿರುತ್ತದೆ. "ಒಡಂಬಡಿಕೆಯ ಧರ್ಮಶಾಸ್ತ್ರ" ಎಂಬುದಾಗಿಯೂ ಇದನ್ನು ಅನುವಾದ ಮಾಡಿದ್ದಾರೆ.

(ಈ ಪದಗಳನ್ನು ಸಹ ನೋಡಿರಿ : ಮಂಜೂಷ, ಒಡಂಬಡಿಕೆ, ದೋಷ ಪರಿಹಾರ, ಪರಿಶುದ್ಧ ಸ್ಥಳ, ಸಾಕ್ಷಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.06:14-15
- ವಿಮೋ.25:10-11
- ಇಬ್ರಿ.09:3-5
- ನ್ಯಾಯಾ.20:27-28
- ಅರಣ್ಯ.07:89
- ಪ್ರಕ.11:19

ಪದ ಡೇಟಾ:

- Strong's: H727, H1285, H3068

ಒಡೆಯ, ಒಡೆಯರು, ಕರ್ತನು, ಯಜಮಾನ, ಯಜಮಾನರು, ಅಯ್ಯಾ, ಸ್ವಾಮಿಗಳು

ಪದದ ಅರ್ಥವಿವರಣೆ:

“ಒಡೆಯ” ಎನ್ನುವ ಪದವು ಇತರ ಜನರ ಮೇಲೆ ಅಧಿಕಾರವನ್ನು ಅಥವಾ ಒಡೆತನವನ್ನು ಹೊಂದಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.

- ಈ ಪದವನ್ನು ಕೆಲವೊಂದುಸಲ ಯೇಸುವನ್ನು ಸೂಚಿಸಿದಾಗ ಅಥವಾ ಅನೇಕ ದಾಸದಾಸಿಯರನ್ನು ಇಟ್ಟುಕೊಂಡ ಒಬ್ಬ ವ್ಯಕ್ತಿಯನ್ನು ಸೂಚಿಸಿದಾಗ “ಯಜಮಾನ” ಎಂಬುದಾಗಿ ಅನುವಾದ ಮಾಡಿದ್ದಾರೆ,
- ಕೆಲವೊಂದು ಆಂಗ್ಲ ಭಾಷೆಯ ಅನುವಾದಗಳಲ್ಲಿ ಈ ಪದವನ್ನು ಉನ್ನತ ಸ್ಥಾನದಲ್ಲಿರುವ ಒಬ್ಬರನ್ನು ಸೌಮ್ಯವಾಗಿ ಸೂಚಿಸುವ ಸಂದರ್ಭಗಳನ್ನು “ಅಯ್ಯಾ” ಎಂಬುದಾಗಿ ಉಪಯೋಗಿಸಿದ್ದಾರೆ.

ಆಂಗ್ಲ ಭಾಷೆಯಲ್ಲಿ "ಒಡೆಯರು" (ಲಾರ್ಡ್) ಎನ್ನುವ ಪದದಲ್ಲಿ ಮೊದಲನೇ ಅಕ್ಷರವು ದೊಡ್ಡದಾಗಿದ್ದರೆ, ಅದು ಖಂಡಿತವಾಗಿ ದೇವರನ್ನೇ ಸೂಚಿಸುತ್ತಿದೆ ಎಂದರ್ಥ. (ಏನೇಯಾಗಲಿ, ಯಾರಾದರೊಬ್ಬರನ್ನು ಸೂಚಿಸುವುದಕ್ಕೆ ಉಪಯೋಗಿಸಿದರೆ ಅಥವಾ ವಾಕ್ಯದ ಆರಂಭದಲ್ಲಿ ಈ ಪದವನ್ನು ಉಪಯೋಗಿಸಿದಾಗ ಮೊದಲನೇ ಅಕ್ಷರವು ದೊಡ್ಡದಾಗಿದರೆ, ಅದಕ್ಕೆ “ಅಯ್ಯಾ” ಅಥವಾ “ಯಜಮಾನರು” ಎಂದು ಅರ್ಥವನ್ನು ಹೊಂದಿರುತ್ತದೆಯೆಂದು ಗಮನಿಸಿ.)

- ಹಳೇ ಒಡಂಬಡಿಕೆಯಲ್ಲಿ “ಕರ್ತನಾದ ಸರ್ವಶಕ್ತ ದೇವರು” ಅಥವಾ “ಕರ್ತನಾದ ಯೆಹೋವ” ಅಥವಾ “ಯೆಹೋವನೇ ನಮ್ಮ ಕರ್ತನು” ಎನ್ನುವ ಮಾತುಗಳ ಹಾಗೆಯೇ ಈ ಪದವು ಉಪಯೋಗಿಸಲ್ಪಟ್ಟಿದೆ.
- ಹೊಸ ಒಡಂಬಡಿಕೆಯಲ್ಲಿ “ಕರ್ತನಾದ ಯೇಸು” ಮತ್ತು “ಕರ್ತನಾದ ಯೇಸು ಕ್ರಿಸ್ತ” ಎಂದು ಅನೇಕ ಮಾತುಗಳಲ್ಲಿ ಅಪೊಸ್ತಲರು ಈ ಪದವನ್ನು ಉಪಯೋಗಿಸಿದ್ದಾರೆ, ಇದು ಯೇಸು ದೇವರೆಂದು ತಿಳಿಸುತ್ತದೆ.
- ಹೊಸ ಒಡಂಬಡಿಕೆಯಲ್ಲಿರುವ “ಕರ್ತನು” ಎನ್ನುವ ಪದವು ಕೂಡ ದೇವರನ್ನು ಸೂಚಿಸುವುದಕ್ಕೆ ನೇರವಾಗಿ ಉಪಯೋಗಿಸಿದ್ದಾರೆ, ವಿಶೇಷವಾಗಿ ಹಳೇ ಒಡಂಬಡಿಕೆಯಿಂದ ತೆಗೆದುಕೊಂಡಿರುವ ಲೇಖನ ಭಾಗಗಳಲ್ಲಿ ಉಪಯೋಗಿಸಿದ್ದಾರೆ. ಉದಾಹರಣೆಗೆ, “ಯೆಹೋವನ ಹೆಸರಿನ ಮೇಲೆ ಬರುವವನು ಆಶೀರ್ವಾದ ಹೊಂದಿದ್ದಾನೆ” ಎಂದು ಹಳೇ ಒಡಂಬಡಿಕೆಯ ವಾಕ್ಯದಲ್ಲಿದೆ ಮತ್ತು “ಕರ್ತನ ಹೆಸರಿನಲ್ಲಿ ಬರುವವನು ಆಶೀರ್ವಾದ ಹೊಂದಿದ್ದಾನೆ” ಎಂದು ಹೊಸ ಒಡಂಬಡಿಕೆಯ ವಾಕ್ಯದಲ್ಲಿದೆ.
- ಯು ಎಲ್ ಟಿ ಮತ್ತು ಯು ಎಸ್ ಟಿ ಯಲ್ಲಿ “ಕರ್ತ” ಎನ್ನುವ ಬಿರುದನ್ನು “ಯಜಮಾನ” ಎಂದು ಅರ್ಥ ಬರುವ ಇಬ್ರಿ ಮತ್ತು ಗ್ರೀಕ್ ಪದಗಳನ್ನು ಅನುವಾದ ಮಾಡುವುದಕ್ಕೆ ಉಪಯೋಗಿಸಿರುತ್ತಾರೆ. ದೇವರ ನಾಮವಾಗಿರುವ ಯೆಹೋವ ಎನ್ನುವ ಹೆಸರನ್ನು ಅನುವಾದ ಮಾಡುವುದಕ್ಕೆ ಇದನ್ನು ಉಪಯೋಗಿಸಲಿಲ್ಲ, ಆದರೆ ಅನೇಕ ಅನುವಾದಗಳಲ್ಲಿ ಹಾಗೆಯೇ ಮಾಡಿದ್ದಾರೆ.
- ಕೆಲವೊಂದು ಭಾಷೆಗಳಲ್ಲಿ “ಕರ್ತ” ಎನ್ನುವ ಪದವನ್ನು “ಯಜಮಾನ” ಅಥವಾ “ಪಾಲಕ” ಅಥವಾ ಸರ್ವೋಚ್ಚ ಪಾಲನೆಯನ್ನು ಮಾಡುವ ಅಥವಾ ಮಾಲಿಕತ್ವವನ್ನು ತೋರಿಸುವ ಬೇರೊಂದು ಪದವನ್ನಿಟ್ಟು ಅನುವಾದ ಮಾಡಿದ್ದಾರೆ.
- ಕೆಲವೊಂದು ಸೂಕ್ತವಾದ ಸಂದರ್ಭಗಳಲ್ಲಿ ಈ ಪದವು ದೇವರನ್ನು ಮಾತ್ರವೇ ಸೂಚಿಸುತ್ತದೆಯೆಂದು ಓದುಗಾರರಿಗೆ ಸ್ಪಷ್ಟವಾಗಿ ಹೇಳುವುದಕ್ಕೆ ಅನೇಕವಾದ ಅನುವಾದಗಳಲ್ಲಿ ಈ ಪದದಲ್ಲಿನ ಮೊದಲನೇ ಅಕ್ಷರವನ್ನು ದೊಡ್ಡದಾಗಿಟ್ಟಿರುತ್ತಾರೆ.
- ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿರುವ ಹಳೇ ಒಡಂಬಡಿಕೆಯ ಲೇಖನ ಭಾಗಗಳಲ್ಲಿ “ಕರ್ತನಾದ ದೇವರು” ಎನ್ನುವ ಪದವನ್ನು ಉಪಯೋಗಿಸಿದ್ದಾರೆ, ಇದು ಸ್ಪಷ್ಟವಾಗಿ ದೇವರನ್ನು ಮಾತ್ರವೇ ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಈ ಪದವು ದಾಸದಾಸಿಯರನ್ನು ಇಟ್ಟುಕೊಂಡಿರುವ ಒಬ್ಬ ವ್ಯಕ್ತಿಯನ್ನು ಸೂಚಿಸಿದಾಗ, “ಯಜಮಾನ” ಎನ್ನುವ ಪದಕ್ಕೆ ಸಮಾನವಾಗಿ ಅನುವಾದ ಮಾಡಬಹುದು. ಒಬ್ಬ ಕೆಲಸಗಾರನು ತನ್ನ ಮೇಲಾಧಿಕಾರಿಯನ್ನು ಸೂಚಿಸುವುದಕ್ಕೆ ಈ ಪದವನ್ನೇ ಬಳಸುತ್ತಾನೆ.
- ಯೇಸುವನ್ನು ಸೂಚಿಸಿದಾಗ, ಬೋಧಿಸುವ ಒಬ್ಬ ವ್ಯಕ್ತಿ ಧರ್ಮೋಪದೇಶಕರಾಗಿದ್ದ ಸಂದರ್ಭದಲ್ಲಿ, ಇದನ್ನು ಆ ಧರ್ಮೋಪದೇಶಕನನ್ನು ಗೌರವಪೂರ್ವಕವಾಗಿ ಸೂಚಿಸುವುದಕ್ಕೆ “ಬೋಧಕನು” ಎಂಬುದಾಗಿ ಅನುವಾದ ಮಾಡಬಹುದು.
- ಒಬ್ಬ ವ್ಯಕ್ತಿ ಯೇಸುವಿನ ಕುರಿತಾಗಿ ಗೊತ್ತಿಲ್ಲದೇ ಆತನನ್ನು ಸೂಚಿಸುತ್ತಿದ್ದಾನೆಂದರೆ “ಯಜಮಾನ” ಎನ್ನುವ ಪದವನ್ನು “ಅಯ್ಯಾ” ಎಂದು ಗೌರವಪೂರ್ವಕವಾಗಿ ಅನುವಾದ ಮಾಡಬಹುದು. ಒಬ್ಬ ಮನುಷ್ಯನನ್ನು ಸುಸಂಸ್ಕೃತವಾಗಿ ಕರೆಯುವ ವಿಧಾನದಲ್ಲಿ ಬೇರೊಂದು ಸಂದರ್ಭಗಳಲ್ಲಿ ಈ ಅನುವಾದವನ್ನು ಉಪಯೋಗಿಸುತ್ತಾರೆ.
- ತಂದೆಯಾದ ದೇವರನ್ನಾಗಲಿ ಅಥವಾ ಯೇಸುವನ್ನಾಗಲಿ ಸೂಚಿಸಿದಾಗ, ಈ ಪದವು ಒಂದು ಬಿರುದಾಗಿ ಪರಿಗಣಿಸಲಾಗುತ್ತದೆ, ಆಂಗ್ಲ ಭಾಷೆಯಲ್ಲಿ "Lord" (ಲಾರ್ಡ್) ಎನ್ನುವ ಪದದಲ್ಲಿ ಮೊದಲನೇ ಅಕ್ಷರವು ದೊಡ್ಡದಾಗಿ ಬರೆಯಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ದೇವರು, ಯೇಸು, ಪಾಲಕ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.39:1-2
- ಯೆಹೋ.03:9-11
- ಕೀರ್ತನೆ.086:15-17
- ಯೆರೆ.27:1-4

- ಪ್ರಲಾಪ.02:1-2
- ಯೆಹೆ.18:29-30
- ದಾನಿ.09:9-11
- ದಾನಿ.09:17-19
- ಮಲಾಕಿ.03:1-3
- ಮತ್ತಾಯ.07:21-23
- ಲೂಕ.01:30-33
- ಲೂಕ.16:13
- ರೋಮಾ.06:22-23
- ಎಫೆಸ.06:9
- ಫಿಲಿಪ್ಪಿ.02:9-11
- ಕೊಲೊಸ್ಸ.03:22-25
- ಇಬ್ರಿ.12:14-17
- ಯಾಕೋಬ.02:1-4
- 1 ಪೇತ್ರ.01:3-5
- ಯೂದಾ.01:5-6
- ಪ್ರಕ.15:3-4

ಸತ್ಯವೇದದಿಂದ ಉದಾಹರಣೆಗಳು:

- **_25:05** ಆದರೆ ಯೇಸು ಲೇಖನಗಳನ್ನು ಕ್ರೋಡೀಕರಿಸುತ್ತಾ ಸೈತಾನನಿಗೆ ಉತ್ತರ ಕೊಟ್ಟನು. "ದೇವರ ವಾಕ್ಯದಲ್ಲಿ, "ನಿಮ್ಮ ದೇವರಾದ **ಕರ್ತನನ್ನು** _ ಪರೀಕ್ಷೆ ಮಾಡಬೇಡಿರಿ" ಎಂದು ಆತನು ತನ್ನ ಜನರಿಗೆ ಆಜ್ಞಾಪಿಸಿದ್ದಾನೆ.
- **_25:07** "ಸೈತಾನ್, ನನ್ನಿಂದ ಹೊರಟು ಹೋಗು! ದೇವರ ವಾಕ್ಯದಲ್ಲಿ "ನಿಮ್ಮ ದೇವರಾದ **ಕರ್ತನನ್ನು** _ ಮಾತ್ರವೇ ಆರಾಧನೆ ಮಾಡಿರಿ ಮತ್ತು ಆತನನ್ನೇ ಸೇವಿಸಿರಿ" ಎಂದು ಆತನು ತನ್ನ ಜನರಿಗೆ ಆಜ್ಞಾಪಿಸಿದ್ದಾನೆ .
- **_26:03** ಇದು _ ಕರ್ತನ _ ಶುಭ ವರ್ಷವಾಗಿರುತ್ತದೆ.
- **_27:02** "_ ಕರ್ತನಾದ _ ನಿನ್ನ ದೇವರನ್ನು ನಿನ್ನ ಪೂರ್ಣ ಹೃದಯದಿಂದಲೂ, ಪೂರ್ಣ ಆತ್ಮದಿಂದಲೂ, ಪೂರ್ಣ ಬಲದಿಂದಲೂ ಮತ್ತು ಪೂರ್ಣ ಮನಸ್ಸಿನಿಂದಲೂ ಪ್ರೀತಿಸಬೇಕು" ಎಂದು ದೇವರ ಧರ್ಮಶಾಸ್ತ್ರ ಹೇಳುತ್ತಿದೆಯೆಂದು ಧರ್ಮಶಾಸ್ತ್ರದಲ್ಲಿ ನಿಪುಣನು ಉತ್ತರಿಸಿದನು.
- **_31:05** " **ಬೋಧಕನೇ** _ ನಿನೇಯಾಗಿದ್ದರೆ, ನೀರಿನ ಮೇಲೆ ನಡೆದು ನಿನ್ನ ಹತ್ತಿರಕ್ಕೆ ಬರಲು ಆಜ್ಞಾಪಿಸು" ಎಂದು ಪೇತ್ರನು ಯೇಸುವಿಗೆ ಹೇಳಿದನು.
- **_43:09** "ದೇವರು ಯೇಸುವನ್ನು _ ಕರ್ತನನ್ನಾಗಿಯೂ _ ಮತ್ತು ಮೆಸ್ಸೀಯನನ್ನಾಗಿಯೂ ಮಾಡಿದ್ದಾನೆಂದು ಖಂಡಿತವಾಗಿ ತಿಳಿದುಕೊಳ್ಳಿರಿ!"
- **_47:03** ಈ ದೆವ್ವ ಹೇಳಿದ್ದಕ್ಕೆ ಅರ್ಥವೇನೆಂದರೆ, ಅದು ಜನರಿಗಾಗಿ ಭವಿಷ್ಯತ್ತನ್ನು ಹೇಳಿದೆ, ಅವಳು ಕಣಿ ಹೇಳುತ್ತಿರುವದರಿಂದ ತನ್ನ __ ಯಜಮಾನರಿಗೆ __ ಬಹು ಆದಾಯವಾಗುತ್ತಿತ್ತು.
- **_47:11** " **ಯಜಮಾನನಾದ** _ ಯೇಸುವಿನಲ್ಲಿ ನಂಬಿಕೆಯಿಡು, ನೀನು ಮತ್ತು ನಿನ್ನ ಕುಟುಂಬವು ರಕ್ಷಿಸಲ್ಪಡುವುದು" ಎಂದು ಪೌಲನು ಉತ್ತರಕೊಟ್ಟನು.

ಪದ ಡೇಟಾ:

- Strong's: H113, H136, H1167, H1376, H4756, H7980, H8323, G203, G634, G962, G1203, G2962

ಒಪ್ಪಿಕೋ, ಒಪ್ಪಿಕೊಂಡಿವೆ, ಒಪ್ಪಿಸುತ್ತದೆ, ಒಪ್ಪಿಕೊಳ್ಳುವಿಕೆ

ಪದದ ಅರ್ಥವಿವರಣೆ:

ಒಪ್ಪಿಕೋ ಎನ್ನುವ ಪದಕ್ಕೆ ಸತ್ಯವಾದದ್ದನ್ನು ಒಪ್ಪಿಕೊಳ್ಳುವುದು ಅಥವಾ ಅದನ್ನು ದೃಢೀಕರಿಸುವುದು ಎಂದರ್ಥ. “ಒಪ್ಪಿಕೊಳ್ಳುವಿಕೆ” ಎನ್ನುವುದು ಸತ್ಯವಾದ ವಿಷಯವನ್ನು ಒಪ್ಪಿಕೊಳ್ಳುವುದು ಅಥವಾ ಅದನ್ನು ವ್ಯಾಖ್ಯೆಯನ್ನಾಗಿ ಹೇಳುವುದು.

- “ಒಪಿಕೋ” ಎನ್ನುವ ಪದವು ದೇವರ ಕುರಿತಾದ ಸತ್ಯವನ್ನು ಧೈರ್ಯವಾಗಿ ಹೇಳುವುದನ್ನು ಸೂಚಿಸುತ್ತದೆ. ನಾವು ಪಾಪಿಗಳೆಂದು ಗ್ರಹಿಸುವುದನ್ನು ಅಥವಾ ಒಪ್ಪಿಕೊಳ್ಳುವುದನ್ನೂ ಸೂಚಿಸುತ್ತದೆ.
- ಜನರು ತಮ್ಮ ಪಾಪಗಳನ್ನು ದೇವರ ಬಳಿ ಒಪ್ಪಿಕೊಂಡರೆ, ಆತನು ಅವರನ್ನು ಕ್ಷಮಿಸುತ್ತಾನೆಂದು ಸತ್ಯವೇದವು ಹೇಳುತ್ತಿದೆ.
- ವಿಶ್ವಾಸಿಗಳು ತಮ್ಮ ಪಾಪಗಳನ್ನು ಒಬ್ಬರಲ್ಲೊಬ್ಬರು ಒಪ್ಪಿಕೊಂಡಾಗ, ಇದು ಆತ್ಮೀಕವಾದ ಸ್ವಸ್ಥತೆಯನ್ನು ತೆಗೆದುಕೊಂಡು ಬರುವುದೆಂದು ಅಪೊಸ್ತಲನಾದ ಯಾಕೋಬನು ತನ್ನ ಪತ್ರಿಕೆಯಲ್ಲಿ ಬರೆದಿದ್ದಾನೆ.
- ಯೇಸು ಕ್ರಿಸ್ತ ಒಡೆಯನೆಂದು ಒಂದಾನೊಂದು ದಿನ ಪ್ರತಿಯೊಬ್ಬರೂ ಒಪ್ಪಿಕೊಳ್ಳಬೇಕಾಗುತ್ತದೆಯೆಂದು ಅಥವಾ ಪ್ರಕಟಿಸಬೇಕಾಗುತ್ತದೆಯೆಂದು ಅಪೊಸ್ತಲನಾದ ಪೌಲನು ಫಿಲಿಪ್ಪಿದವರಿಗೆ ಬರೆದಿದ್ದಾನೆ.
- ಜನರು ಯೇಸು ಒಡೆಯನೆಂದು ಮತ್ತು ದೇವರು ಆತನನ್ನು ಮರಣದಿಂದ ಎಬ್ಬಿಸಿದ್ದಾರೆಂದು ನಂಬಿ ಒಪ್ಪಿಕೊಳ್ಳುವುದಾದರೆ, ಅವರು ರಕ್ಷಿಸಲ್ಪಡುತ್ತಾರೆಂದು ಪೌಲನು ಕೂಡ ಹೇಳಿದ್ದಾನೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ “ಒಪ್ಪಿಕೋ” ಎನ್ನುವ ಪದವನ್ನು “ಅರಿಕೆ” ಅಥವಾ “ಸಾಕ್ಷಿ ಕೊಡು” ಅಥವಾ “ಘೋಷಣೆ ಮಾಡು” ಅಥವಾ “ತಿಳಿಸು” ಅಥವಾ “ದೃಢೀಕರಿಸು” ಎಂದೂ ಅನುವಾದ ಮಾಡಬಹುದು.
- “ಒಪ್ಪಿಕೊಳ್ಳುವಿಕೆ” ಎನ್ನುವ ಪದವನ್ನು “ಘೋಷಣೆ ಮಾಡು” ಅಥವಾ “ಸಾಕ್ಷಿ ಕೊಡು” ಅಥವಾ “ನಾವು ನಂಬುವುದನ್ನು ವ್ಯಾಖ್ಯಾನಿಸು” ಅಥವಾ “ಪಾಪವನ್ನು ಅರಿಕೆ ಮಾಡುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬಿಕೆ, ಸಾಕ್ಷಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.01:8-10
- 2 ಯೋಹಾನ.01:7-8
- ಯಾಕೋಬ.05:16-18
- ಯಾಜಕ.05:5-6
- ಮತ್ತಾಯ.03:4-6
- ನೆಹೆ.01:6-7
- ಫಿಲಿಪ್ಪ.02:9-11
- ಕೀರ್ತನೆ.038:17-18

ಪದ ಡೇಟಾ:

- Strong's: H3034, H8426, G1843, G3670, G3671

ಒಳ್ಳೆಯದು, ಒಳ್ಳೆತನ

ಪದದ ಅರ್ಥವಿವರಣೆ:

"ಒಳ್ಳೆಯದು" ಎನ್ನುವ ಪದಕ್ಕೆ ಸಂದರ್ಭಾನುಸಾರವಾಗಿ ಎರಡು ವಿಭಿನ್ನ ಅರ್ಥಗಳು ಇರುತ್ತವೆ. ಈ ಎರಡು ವಿಭಿನ್ನವಾದ ಅರ್ಥಗಳನ್ನು ಅನುವಾದ ಮಾಡುವುದಕ್ಕೆ ಅನೇಕ ಭಾಷೆಗಳು ವಿವಿಧವಾದ ಪದಗಳನ್ನು ಉಪಯೋಗಿಸುತ್ತವೆ.

ಸಾಧಾರಣವಾಗಿ ದೇವರ ನಡತೆ, ಉದ್ದೇಶಗಳು ಮತ್ತು ಚಿತ್ತಗಳಿಗೆ ಇದು ಸರಿಯಾದ ಪ್ರತಿಯೊಂದು ಒಳ್ಳೆಯದು.

- "ಒಳ್ಳೆಯದಾದ" ಪ್ರತಿಯೊಂದು ಮೆಚ್ಚಿಸಬಹುದು, ಶ್ರೇಷ್ಠವಾಗಿರಬಹುದು, ಸಹಾಯಕರವಾಗಿರಬಹುದು, ಸೂಕ್ತವಾಗಿರಬಹುದು, ಪ್ರಯೋಜನಕರವಾಗಿರಬಹುದು ಅಥವಾ ನೈತಿಕವಾಗಿ ಸರಿಯಾಗಿರಬಹುದು.
- ಒಬ್ಬ ವ್ಯಕ್ತಿ ತಾನು ಮಾಡುವ ಕೆಲಸದಲ್ಲಿ ಅಥವಾ ಉದ್ಯೋಗದಲ್ಲಿ ನೈಪುಣ್ಯತೆಯಿದ್ದು ಮಾಡುವ ಕೆಲಸಗಳಲ್ಲಿ "ಒಳ್ಳೆಯ" ವ್ಯಕ್ತಿಯಾಗಿರಬಹುದು, ಇವರನ್ನು "ಒಳ್ಳೆಯ ರೈತ" ಎಂದು ಕರೆಯಬಹುದು.
- ಸತ್ಯವೇದದಲ್ಲಿ "ಒಳ್ಳೆಯದು" ಎನ್ನುವದಕ್ಕೆ ಸಾಧಾರಣ ಅರ್ಥವು ಅನೇಕಸಾರಿ "ಕೆಟ್ಟದ್ದು" ಎನ್ನುವುದಕ್ಕೆ ವಿರುದ್ಧಾತ್ಮಕ ಪದವಾಗಿರುತ್ತದೆ.
- "ಒಳ್ಳೆಯತನ" ಎನ್ನುವ ಪದವು ಸಹಜವಾಗಿ ನೈತಿಕವಾಗಿ ಒಳ್ಳೇಯದಾಗಿರುವುದನ್ನು ಅಥವಾ ಆಲೋಚನೆಗಳಲ್ಲಿ ಮತ್ತು ಕ್ರಿಯೆಗಳಲ್ಲಿ ನೀತಿಯಿಂದ ಇರುವುದನ್ನು ಸೂಚಿಸುತ್ತದೆ.
- ದೇವರ ಒಳ್ಳೆಯತನ ಎನ್ನುವುದು ದೇವರು ತನ್ನ ಜನರಿಗೆ ಒಳ್ಳೇಯ ಮತ್ತು ಪ್ರಯೋಜನಕರವಾದವುಗಳನ್ನು ಕೊಡುವುದರ ಮೂಲಕ ಆತನು ಅವರನ್ನು ಹೇಗೆ ಆಶೀರ್ವಾದ ಮಾಡುತ್ತಿದ್ದಾನೆನ್ನುವುದನ್ನು ಸೂಚಿಸುತ್ತದೆ. ಇದು ಆತನ ನೈತಿಕತೆಯ ಪರಿಪೂರ್ಣತೆಯನ್ನು ಕೂಡ ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಅನುವಾದ ಭಾಷೆಯಲ್ಲಿ "ಒಳ್ಳೇಯ" ಎನ್ನುವ ಪದಕ್ಕೆ ಸಾಧಾರಣ ಪದವನ್ನು ಈ ಸಾಧಾರಣ ಅರ್ಥವು ಸರಿಯಾಗಿ ಸ್ವಾಭಾವಿಕವಾಗಿ ಬಂದಾಗ ಉಪಯೋಗಿಸಬಹುದು, ವಿಶೇಷವಾಗಿ ಕೆಟ್ಟದ್ದು ಎನ್ನುವುದಕ್ಕೆ ವಿರುದ್ಧವಾಗಿ ಬರುವ ಸಂದರ್ಭಗಳಲ್ಲಿ ಚೆನ್ನಾಗಿ ಬಳಸಬಹುದು.
- ಸಂದರ್ಭಾನುಸಾರವಾಗಿ ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ದಯೆ" ಅಥವಾ "ಅತ್ಯುತ್ತಮ" ಅಥವಾ "ದೇವರನ್ನು ಮೆಚ್ಚಿಸುವುದು" ಅಥವಾ "ನೀತಿವಂತ" ಅಥವಾ "ನೈತಿಕವಾದ ನಡತೆ" ಅಥವಾ "ಪ್ರಯೋಜನಕರ" ಎನ್ನುವ ಪದಗಳನ್ನು ಕೂಡ ಒಳಗೊಂಡಿರುತ್ತದೆ.
- "ಒಳ್ಳೇಯ ನೆಲ" ಎನ್ನುವ ಮಾತನ್ನು "ಫಲವತ್ತಾದ ಭೂಮಿ" ಅಥವಾ "ಉತ್ಪಾದಕ ಭೂಮಿ" ಎಂದೂ ಅನುವಾದ ಮಾಡಬಹುದು; "ಒಳ್ಳೇಯ ಬೆಳೆ" ಎನ್ನುವ ಮಾತನ್ನು "ಸಮೃದ್ಧವಾದ ಸುಗ್ಗಿ" ಅಥವಾ "ಹೆಚ್ಚಿನ ಪ್ರಮಾಣದಲ್ಲಿ ಬೆಳೆಗಳು" ಎಂದೂ ಅನುವಾದ ಮಾಡಬಹುದು.
- "ಅವರಿಗೆ ಒಳ್ಳೆದನ್ನು ಮಾಡು" ಎನ್ನುವ ಮಾತು ಇತರರಿಗೆ ಪ್ರಯೋಜನಕರವಾದದ್ದು ಏನಾದರೊಂದನ್ನು ಮಾಡು ಎಂದರ್ಥ ಮತ್ತು ಇದನ್ನು "ಅವರಿಗೆ ದಯೆ ತೋರಿಸು" ಅಥವಾ "ಸಹಾಯ ಮಾಡು" ಅಥವಾ ಒಬ್ಬ ವ್ಯಕ್ತಿಗೆ "ಪ್ರಯೋಜನ" ಮಾಡು ಎಂದೂ ಅನುವಾದ ಮಾಡಬಹುದು.

"ಸಬ್ಬತ್ ದಿನದಂದು ಒಳ್ಳೆದನ್ನು ಮಾಡು" ಎನ್ನುವದಕ್ಕೆ "ಸಬ್ಬತ್ ದಿನದಂದು ಇತರರಿಗೆ ಸಹಾಯವಾಗುವ ಕಾರ್ಯಗಳನ್ನು ಮಾಡು" ಎಂದರ್ಥ.

- ಸಂದರ್ಭಾನುಸಾರವಾಗಿ "ಒಳ್ಳೆಯತನ" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಲ್ಲಿ "ಆಶೀರ್ವಾದ" ಅಥವಾ "ದಯಾಳುತನ" ಅಥವಾ "ನೈತಿಕ ಪರಿಪೂರ್ಣತೆ" ಅಥವಾ "ನೀತಿ" ಅಥವಾ "ಪವಿತ್ರತೆ" ಎನ್ನುವ ಪದಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಕೆಟ್ಟ, ಪರಿಶುದ್ಧ, ಪ್ರಯೋಜನ, ನೀತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.05:22-24
- ಆದಿ.01:11-13
- ಆದಿ.02:9-10
- ಆದಿ.02:15-17
- ಯಾಕೋಬ.03:13-14
- ರೋಮಾ.02:3-4

ಸತ್ಯವೇದದಿಂದ ಉದಾಹರಣೆಗಳು:

- **01:04** ದೇವರು ಮಾಡಿದ ಸೃಷ್ಟಿಯನ್ನು _ ಒಳ್ಳೆಯದೆಂದು __ ಆತನು ನೋಡಿದನು.
- **01:11** _ **ಒಳ್ಳೆಯ** _ ಮತ್ತು ಕೆಟ್ಟದ್ದು ಎನ್ನುವ ಜ್ಞಾನವುಳ್ಳ ವೃಕ್ಷವನ್ನು ದೇವರು ಸ್ಥಾಪಿಸಿದರು.
- **01:12** "ಮನುಷ್ಯನು ಒಬ್ಬಂಟಿಗನಾಗಿರುವುದು _ **ಒಳ್ಳೆಯದಲ್ಲ** _" ಎಂದು ದೇವರು ಹೇಳಿದನು.
- **02:04** "ನೀವು ಇದನ್ನು ತಿಂದ ತಕ್ಷಣವೇ, ನೀವು ದೇವರಂತೆ ಆಗುವಿರಿಯೆಂದು ಮತ್ತು ಆತನಂತೆಯೇ ನಿಮಗೂ _ **ಒಳ್ಳೆಯ** _ ಮತ್ತು ಕೆಟ್ಟ ಸಂಗತಿಗಳ ಅರಿವು ಬರುತ್ತದೆಯೆಂದು ದೇವರಿಗೆ ಚೆನ್ನಾಗಿ ಗೊತ್ತು.

- **08:12** “ನೀವು ನನ್ನನ್ನು ಗುಲಾಮನನ್ನಾಗಿ ಮಾರಿದಾಗ ನೀವು ಕೆಟ್ಟ ಕಾರ್ಯವನ್ನು ಮಾಡುವುದಕ್ಕೆ ಪ್ರಯತ್ನಪಟ್ಟಿದ್ದೀರಿ, ಆದರೆ ದೇವರು ಕೆಟ್ಟದ್ದನ್ನು _ ಒಳ್ಳೇಯದಾಗಿ __ ಉಪಯೋಗಿಸಿಕೊಂಡರು!”
- **14:15** ಯೆಹೋಶುವನು _ ಒಳ್ಳೇಯ __ ನಾಯಕನು, ಯಾಕಂದರೆ ಆತನು ದೇವರಿಗೆ ವಿಧೇಯನಾಗಿದ್ದನು ಮತ್ತು ಜನರನ್ನು ನಡೆಸುವುದಕ್ಕೆ ಸಾಮರ್ಥ್ಯವನ್ನು ಹೊಂದಿದ್ದನು.
- **18:13** ಈ ಅರಸರುಗಳಲ್ಲಿ ಕೆಲವರು ದೇವರನ್ನು ಆರಾಧನೆ ಮಾಡಿ, ನ್ಯಾಯವಾಗಿ ಆಳಿದ _ **ಒಳ್ಳೇಯ** _ ಮನುಷ್ಯರಾಗಿದ್ದರು.
- **28:01** “ _ **ಒಳ್ಳೇಯ** ಬೋಧಕನೇ, ನಿತ್ಯಜೀವವನ್ನು ಪಡೆಯುವದಕ್ಕೆ ನಾನೇನು ಮಾಡಬೇಕು?” “ನನ್ನನ್ನು ಯಾಕೆ _ ಒಳ್ಳೇಯವನೆಂದು _ **ಕರೆಯುತ್ತಾಯಿದ್ದೀಯ?** ಒಳ್ಳೇಯವನು __ ದೇವರು ಒಬ್ಬರೇ ಎಂದು ಯೇಸು ಅವನಿಗೆ ಹೇಳಿದನು.

ಪದ ಡೇಟಾ:

- Strong's: H117, H145, H155, H202, H239, H410, H1580, H1926, H1935, H2532, H2617, H2623, H2869, H2895, H2896, H2898, H3190, H3191, H3276, H3474, H3788, H3966, H4261, H4399, H5232, H5750, H6287, H6643, H6743, H7075, H7368, H7399, H7443, H7999, H8231, H8232, H8233, H8389, H8458, G14, G15, G18, G19, G515, G744, G865, G979, G1380, G2095, G2097, G2106, G2107, G2108, G2109, G2114, G2115, G2133, G2140, G2162, G2163, G2174, G2293, G2565, G2567, G2570, G2573, G2887, G2986, G3140, G3617, G3776, G4147, G4632, G4674, G4851, G5223, G5224, G5358, G5542, G5543, G5544

ಕಂಚುಕಿಯನು, ಕಂಚುಕಿಯರು

ಪದದ ಅರ್ಥವಿವರಣೆ

“ಕಂಚುಕಿಯ” ಎನ್ನುವ ಪದವು ಅಂಗಚ್ಛೇದನೆ ಮಾಡಿಸಿಕೊಂಡಿರುವ ವ್ಯಕ್ತಿಯನ್ನು ಸೂಚಿಸುತ್ತದೆ. ಸ್ವಲ್ಪ ಕಾಲದ ನಂತರ ಈ ಪದವನ್ನು ಯಾವ ವಿರೂಪತೆ ಇಲ್ಲದ್ದಿದ್ದರು ಪ್ರಭುತ್ವ ಉದ್ಯೋಗಿಗಳನ್ನು ಸೂಚಿಸುವದಕ್ಕೆ ಉಪಯೋಗಿಸುವ ಸಹಜವಾದ ಪದವಾಯಿತು.

- ಕಂಚುಕಿಯರಲ್ಲಿ ಕೆಲವರು ಜನ್ಮದಿಂದಲ್ಲೇ ಆ ರೀತಿಯಲ್ಲಿದ್ದಾರೆಂದು, ಅದಕ್ಕೆ ಕಾರಣ ಹಾನಿಗೊಳಗಾದ ಲೈಂಗಿಕ ಅಂಗಗಳು ಅಥವಾ ಅವರು ಲೈಂಗಿಕ ಕಾರ್ಯಗಳನ್ನು ಮಾಡುವದಕ್ಕಾಗದ ಅಸಮರ್ಥತೆಯನ್ನು ಹೊಂದಿರುವರೆಂದು ಯೇಸು ಹೇಳಿದ್ದರೆ. ಕೆಲವರು ಕಂಚುಕಿಯರಂತೆ ಬಾಳಲು ಬ್ರಹ್ಮಚರ್ಯ ಜೀವನವನ್ನು ಎನ್ನಿಸಿಕೊಳ್ಳುತ್ತಾರೆ.
- ಪ್ರಾಚೀನ ಕಾಲದಲ್ಲಿ, ಸ್ತ್ರೀಯರ ನಿವಾಸ ಸ್ಥಳಗಳಿಗೆ ಕಾವಲುಗಾರರಾಗಿ ಇರಲು ಕಂಚುಕಿಯರನ್ನು ಅರಸರು ತಮ್ಮ ಸೇವಕರನ್ನಾಗಿ ನೇಮಿಸಿಕೊಳ್ಳುತ್ತಿದ್ದರು.
- ಕಂಚುಕಿಯರಲ್ಲಿ ಕೆಲವರು ಪ್ರಭುತ್ವ ಉದ್ಯೋಗಿಗಳಾಗಿದ್ದರು, ಉದಾಹರಣೆಗೆ ಅಡವಿಯಲ್ಲಿ ಫಿಲಿಪ್ಪನು ಕಂಡ ಇಥಿಯೋಪ್ಯ ದೇಶದ ಕಂಚುಕಿಯನು.

(ಈ ಪದಗಳನ್ನು ಸಹ ನೋಡಿರಿ : ಫಿಲಿಪ್ಪ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.08:26-28
- ಅಪೊ.ಕೃತ್ಯ.08:36-38
- ಅಪೊ.ಕೃತ್ಯ.08:39-40
- ಯೆಶಯ.39:7-8
- ಯೆರೆ.34:17-19
- ಮತ್ತಾಯ.19:10-12

ಪದ ಡೇಟಾ:

- Strong's: H5631, G2134, G2135

ಕನಿಕರ, ಕರುಣೆ

ಪದದ ಅರ್ಥವಿವರಣೆ:

“ಕನಿಕರ” ಎನ್ನುವ ಪದವು ಜನರ ಮೇಲೆ ಅಥವಾ ವಿಶೇಷವಾಗಿ ಶ್ರಮೆಗಳನ್ನು ಅನುಭವಿಸುತ್ತಿರುವವರ ಮೇಲೆ ದಯೆಯನ್ನು ತೋರಿಸುವ ಭಾವನೆಯನ್ನು ಸೂಚಿಸುತ್ತದೆ. “ಕರುಣೆಯುಳ್ಳ” ವ್ಯಕ್ತಿಯು ಇತರ ಜನರ ಬಗ್ಗೆ ಕಾಳಜಿ ವಹಿಸುತ್ತಾನೆ ಮತ್ತು ಸಹಾಯ ಮಾಡುತ್ತಾನೆ.

- “ಕನಿಕರ” ಎನ್ನುವ ಪದವು ಅಗತ್ಯತೆಯಲ್ಲಿರುವ ಜನರ ಕುರಿತಾಗಿ ಕಾಳಜಿ ಇಡುವುದನ್ನು, ಅವರಿಗೆ ಸಹಾಯ ಮಾಡುವುದಕ್ಕೆ ಕ್ರಿಯೆಯಲ್ಲಿ ಪ್ರೀತಿ ತೋರಿಸುವುದನ್ನು ಸೂಚಿಸುತ್ತದೆ.
- ದೇವರು ಕರುಣೆಯುಳ್ಳವನು ಎಂದು ಸತ್ಯವೇದ ಹೇಳುತ್ತದೆ, ಅಂದರೆ ಆತನು ಪ್ರೀತಿಯನ್ನು ಮತ್ತು ಕನಿಕರವನ್ನು ಹೊಂದಿರುವಾತನು ಎಂದರ್ಥ.
- ಪೌಲನು ಕೊಲೊಸ್ಸದವರಿಗೆ ಬರೆದ ಪತ್ರಿಕೆಯಲ್ಲಿ “ಕನಿಕರವನ್ನು ಧರಿಸಿಕೊಳ್ಳಿರಿ” ಎಂದು ಅವರಿಗೆ ಬರೆದಿದ್ದಾನೆ. ಅಗತ್ಯತೆಯಲ್ಲಿರುವ ಜನರಿಗೆ ಸಹಾಯ ಮಾಡಬೇಕೆಂದು ಮತ್ತು ಜನರ ಕುರಿತಾಗಿ ಕಾಳಜಿ ವಹಿಸಬೇಕೆಂದು ಆತನು ಅವರಿಗೆ ಆಜ್ಞಾಪಿಸಿದ್ದಾನೆ.

ಅನುವಾದ ಸಲಹೆಗಳು:

- “ಕನಿಕರ” ಎನ್ನುವ ಪದಕ್ಕೆ “ಅತ್ಯಂತ ಕರುಣೆ” ಎಂದರ್ಥವಾಗಿರುತ್ತದೆ. ಈ ಪದಕ್ಕೆ “ಕರುಣೆ” ಅಥವಾ “ಸಹಾನುಭೂತಿ” ಎನ್ನುವ ಅರ್ಥಗಳು ಇವೆ. ಇತರ ಭಾಷೆಗಳು ಈ ಅರ್ಥಗಳು ಬರುವ ತಮ್ಮ ಸ್ವಂತ ಪದಗಳನ್ನು ಒಳಗೊಂಡಿರಬಹುದು.
- “ಕನಿಕರ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ಆಳವಾದ ಆರೈಕೆ” ಅಥವಾ “ಸಹಾಯ ಮಾಡುವ ಕರುಣೆ” ಎನ್ನುವ ಮಾತುಗಳೂ ಒಳಗೊಂಡಿರುತ್ತವೆ.
- “ಕರುಣೆ” ಎನ್ನುವ ಪದಕ್ಕೆ “ಇತರರನ್ನು ನೋಡಿಕೊಳ್ಳುವುದು ಮತ್ತು ಸಹಾಯ ಮಾಡುವುದು” ಅಥವಾ “ಆಳವಾಗಿ ಪ್ರೀತಿಸುವುದು ಮತ್ತು ಕರುಣೆ ತೋರಿಸುವುದು” ಎನ್ನುವ ಮಾತುಗಳನ್ನು ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.01:8-10
- ಹೋಶೆಯ.13:14
- ಯಾಕೋಬ.05:9-11
- ಯೋನ.04:1-3
- ಮಾರ್ಕ.01:40-42
- ರೋಮಾ.09:14-16

ಪದ ಡೇಟಾ:

- Strong's: H2550, H7349, H7355, H7356, G1653, G3356, G3627, G4697, G4834, G4835

ಕಪಟಿ, ಕಪಟಿಗಳು, ಕಾಪಟ್ಯ

ಪದದ ಅರ್ಥವಿವರಣೆ:

“ಕಪಟಿ” ಎನ್ನುವ ಪದವು ನೀತಿವಂತನೆಂದು ಕಾಣಿಸಿಕೊಳ್ಳುವುದಕ್ಕೆ ಕಾರ್ಯಗಳನ್ನು ಮಾಡುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ, ಆದರೆ ಇಂಥವರು ರಹಸ್ಯವಾಗಿ ದುಷ್ಟ ಕಾರ್ಯಗಳನ್ನು ಮಾಡುತ್ತಿರುತ್ತಾರೆ. “ಕಾಪಟ್ಯ” ಎನ್ನುವ ಪದವು ಒಬ್ಬ ವ್ಯಕ್ತಿ ನೀತಿವಂತನೆಂದು ಆಲೋಚನೆ ಮಾಡುವಷ್ಟು ರೀತಿಯಲ್ಲಿ ಜನರನ್ನು ಮೋಸಗೊಳಿಸುವ ನಡತೆಯನ್ನು ಸೂಚಿಸುತ್ತದೆ.

- ಕಪಟಿಗಳು ಒಳ್ಳೇಯ ಕಾರ್ಯಗಳು ಮಾಡುತ್ತಾ ಕಾಣಿಸಿಕೊಳ್ಳಬೇಕೆಂದು ಬಯಸುತ್ತಾರೆ, ಇದರಿಂದ ಜನರು ಅವರನ್ನು ಒಳ್ಳೇಯ ಜನರು ಎಂಬುದಾಗಿ ಆಲೋಚನೆ ಮಾಡುತ್ತಾರೆ.
- ಅನೇಕಬಾರಿ ಕಪಟಿ ತಾನು ಮಾಡುವ ಪಾಪದ ಕಾರ್ಯಗಳನ್ನು ಇತರರು ಮಾಡುತ್ತಿದ್ದರೇ, ಅವರನ್ನು ವಿಮರ್ಶಿಸುತ್ತಾ ಇರುತ್ತಾನೆ.
- ಯೇಸು ಫರಿಸಾಯರನ್ನು ಕಪಟಿಗಳು ಎಂದು ಕರೆದಿದ್ದಾನೆ ಯಾಕಂದರೆ ಅವರು ಭಕ್ತಿಪೂರ್ವಕವಾಗಿ ಇದ್ದಂತೆ ಕೆಲವೊಂದು ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದರು ಮತ್ತು ಕೆಲವೊಂದು ಆಹಾರಗಳನ್ನು ಮಾತ್ರ ತಿನ್ನುತ್ತಿದ್ದರು, ಆದರೆ ಅವರು ಜನರ ಮೇಲೆ ದಯೆಯನ್ನು ಅಥವ ಒಳ್ಳೇಯತನವನ್ನು ತೋರಿಸುತ್ತಿರಲಿಲ್ಲ.
- ಕಪಟಿಗಳು ಬೇರೆಯವರಲ್ಲಿ ತಪ್ಪುಗಳನ್ನು ಎತ್ತಿ ತೋರಿಸುತ್ತಾ ಇರುತ್ತಾರೆ, ಆದರೆ ಅವನ ತಪ್ಪುಗಳನ್ನು ಮಾತ್ರ ಸರಿಪಡಿಸಿಕೊಳ್ಳುವುದಿಲ್ಲ.

ಅನುವಾದ ಸಲಹೆಗಳು:

- ಕೆಲವೊಂದು ಭಾಷೆಗಳಲ್ಲಿ “ಎರಡು ಮುಖಗಳಿರುವವನು” ಎನ್ನುವ ಮಾತು ಇರುತ್ತದೆ, ಇದು ಕಪಟಿಯನ್ನು ಅಥವಾ ಕಪಟಿಯ ಕ್ರಿಯೆಗಳನ್ನು ಸೂಚಿಸುತ್ತದೆ.
- “ಕಪಟಿ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ವಂಚನೆ” ಅಥವಾ “ನಟನೆ” ಅಥವಾ “ಅಹಂಕಾರಿ, ಮೋಸ ಮಾಡುವ ವ್ಯಕ್ತಿ” ಎಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಕಾಪಟ್ಯ” ಎನ್ನುವ ಪದವನ್ನು “ಮೋಸ” ಅಥವಾ “ನಕಲಿ ಕ್ರಿಯೆಗಳು” ಅಥವಾ “ನಟಿಸುವುದು” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.02:13-14
- ಲೂಕ.06:41-42
- ಲೂಕ.12:54-56
- ಲೂಕ.13:15-16
- ಮಾರ್ಕ.07:6-7
- ಮತ್ತಾಯ.06:1-2
- ರೋಮಾ.12:9-10

ಪದ ಡೇಟಾ:

- Strong's: H120, H2611, H2612, G505, G5272, G5273

ಕರುಣೆ, ಕರುಣಾಮಯ

ಪದದ ಅರ್ಥವಿವರಣೆ:

“ಕರುಣೆ’ ಮತ್ತು “ಕರುಣಾಮಯ” ಎನ್ನುವ ಎರಡು ಪದಗಳು ಅಗತ್ಯತೆಯಲ್ಲಿರುವ ಜನರಿಗೆ ಸಹಾಯ ಮಾಡುವುದನ್ನು ಸೂಚಿಸುತ್ತದೆ, ವಿಶೇಷವಾಗಿ ಅಗತ್ಯತೆಯಲ್ಲಿರುವವರು ತುಂಬಾ ದೀನ ಸ್ಥಿತಿಯಲ್ಲಿ ಅಥವಾ ಕೆಳ ಮಟ್ಟದಲ್ಲಿ ಇದ್ದಾಗ ಮಾಡುವ ಸಹಾಯವನ್ನು ಸೂಚಿಸುತ್ತದೆ.

- “ಕರುಣೆ” ಎನ್ನುವ ಪದವು ಜನರು ಮಾಡಿದ ತಪ್ಪುಗಳಿಗೆ ಅವರನ್ನು ಶಿಕ್ಷಿಸಬಾರದೆನ್ನುವ ಅರ್ಥವನ್ನು ಒಳಗೊಂಡಿರುತ್ತದೆ.
- ಅರಸನಾಗಿರುವ ಒಬ್ಬ ಶಕ್ತಿಯುಳ್ಳ ಒಬ್ಬ ವ್ಯಕ್ತಿ, ಜನರಿಗೆ ಹಾನಿ ಮಾಡುವ ವಿಧಾನದಲ್ಲಿ ನಡೆದುಕೊಳ್ಳುವ ಬದಲಾಗಿ ಅವರು ಸುಖವಾಗಿ ಚೆನ್ನಾಗಿ ನೋಡಿಕೊಳ್ಳುವಾಗ ಅವನನ್ನು “ಕರುಣಾಮಯ” ಎಂದು ಹೇಳಲಾಗುತ್ತದೆ.
- ಕರುಣಾಮಯವಾಗಿ ಇರುವುದೆಂದರೆ ನಮಗೆ ವಿರುದ್ಧವಾಗಿ ತಪ್ಪು ಮಾಡಿದವರನ್ನು ಕ್ಷಮಿಸುವುದು ಎಂದರ್ಥ.
- ಯಾರಾದರೂ ತುಂಬಾ ಅಗತ್ಯತೆಯಲ್ಲಿರುವಾಗ ಅವರಿಗೆ ನಾವು ಸಹಾಯ ಮಾಡಿದಾಗ, ನಾವು ಅವರ ಮೇಲೆ ಕರುಣೆ ತೋರಿಸುತ್ತಿದ್ದೇವೆ ಎಂದರ್ಥ.
- ದೇವರು ನಮ್ಮ ವಿಷಯದಲ್ಲಿ ಕರುಣಾಮಯನಾಗಿದ್ದಾನೆ, ಮತ್ತು ನಾವೂ ಇತರರ ವಿಷಯದಲ್ಲಿ ಕರುಣೆಯನ್ನು ತೋರಿಸಬೇಕೆಂದು ಆತನು ನಮ್ಮಿಂದ ಬಯಸುತ್ತಿದ್ದಾನೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಕರುಣೆ” ಎನ್ನುವ ಪದವನ್ನು “ದಯೆ” ಅಥವಾ “ಕನಿಕರ” ಅಥವಾ “ಅನುಕಂಪ” ಎಂದೂ ಅನುವಾದ ಮಾಡಬಹುದು.
- “ಕರುಣಾಮಯ” ಎನ್ನುವ ಪದವನ್ನು “ಅನುಕಂಪವನ್ನು ತೋರಿಸುವುದು” ಅಥವಾ “ದಯೆಯಿಂದ ಇರುವುದು” ಅಥವಾ “ಕ್ಷಮಿಸುವುದು” ಎಂದೂ ಅನುವಾದ ಮಾಡಬಹುದು.
- “ಕರುಣೆಯನ್ನು ತೋರಿಸು” ಅಥವಾ “ಕರುಣೆ ಹೊಂದಿರು” ಎನ್ನುವ ಮಾತನ್ನು “ದಯೆಯಿಂದ ನಡೆದುಕೋ” ಅಥವಾ “ಇತರರ ವಿಷಯದಲ್ಲಿ ಕನಿಕರದಿಂದಿರು” ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕನಿಕರ, ಕ್ಷಮಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.01:3-5
- 1 ತಿಮೊಥೆ.01:13
- ದಾನಿ.09:17-17
- ವಿಮೋ.34:6
- ಆದಿ.19:16-16
- ಇಬ್ರಿ.10:28-29
- ಯಾಕೋಬ.02:13
- ಲೂಕ.06:35-36
- ಮತ್ತಾಯ.09:27
- ಫಿಲಿಪ್ಪಿ.02:25-27
- ಕೀರ್ತನೆ.041:4-6
- ರೋಮಾ.12:1

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **19:16** ವಿಗ್ರಹಾರಾಧನೆಯನ್ನು ನಿಲ್ಲಿಸಿ, ಇತರರ ವಿಷಯದಲ್ಲಿ _ ಕರುಣೆ_ ಮತ್ತು ನ್ಯಾಯಗಳನ್ನು ತೋರಿಸುವುದು ಆರಂಭಿಸಬೇಕೆಂದು ಅವರು (ಪ್ರವಾದಿಗಳು) ಎಲ್ಲ ಜನರಿಗೆ ಹೇಳಿದರು.
- **19:17** ಬಾವಿಯ ಕೆಳ ಭಾಗದಲ್ಲಿರುವ ಮಣ್ಣಿನೊಳಗೆ ಆತನು (ಯೆರೆಮೀಯ) ಮುಳುಗಿ ಹೋಗಿದ್ದನು, ಆದರೆ ಅರಸನು ಅವನ ಮೇಲೆ _ ಕರುಣೆ _ ತೋರಿಸಿದನು ಮತ್ತು ಯೆರೆಮೀಯನು ಸಾಯದೆ ಆ ಬಾವಿಯೊಳಗಿಂದ ಅವನನ್ನು ಹೊರ ತೆಗೆದುಕೊಂಡು ಬರಬೇಕೆಂದು ತನ್ನ ದಾಸರಿಗೆ ಆಜ್ಞಾಪಿಸಿದನು.
- **20:12** ಪಾರಸೀಕ ಸಾಮ್ರಾಜ್ಯವು ಬಲವಾದದ್ದು, ಆದರೆ ಅವರು ಜಯಿಸಿದ ಜನರ ವಿಷಯದಲ್ಲಿ ಕರುಣಾಮಯವಾಗಿತ್ತು.
- **27:11** “ಈ ಮೂವರಲ್ಲಿ ಯಾವನು ಕಳ್ಳರ ಕೈಗೆ ಸಿಕ್ಕಿದವನಿಗೆ ನೆರೆಯವನಾದನೆಂದು ನಿನಗೆ ತೋರುತ್ತದೆ ಹೇಳು?” ಎಂದು ಯೇಸು ಆ ಧರ್ಮೋಪದೇಶಕನಿಗೆ ಕೇಳಿದನು. ಅವನು, “ಅವನಿಗೆ _ **ಕರುಣೆ** _ ತೋರಿಸಿದವನೇ” ಎಂದು ಉತ್ತರಿಸಿದನು.

- **32:11** “ಇಲ್ಲ, ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ ಹೋಗಿ ಕರ್ತನು ನಿನ್ನಲ್ಲಿ _ ಕರುಣೆಯಿಟ್ಟು _ ನಿನಗೆ ಏನೇನು ಉಪಕಾರಗಳನ್ನು ಮಾಡಿದ್ದಾನೋ ಅದನ್ನು ಹೇಳು” ಎಂದು ಯೇಸು ಅವನಿಗೆ ಹೇಳಿದನು.
- **34:09**

“ಆದರೆ ತೆರಿಗೆ ಸಂಗ್ರಹಿಸುವವನು ಧಾರ್ಮಿಕ ಆಡಳಿತಗಾರರಿಂದ ದೂರವಿರುತ್ತಾನೆ, ಸ್ವರ್ಗದತ್ತಲೂ ನೋಡಲಿಲ್ಲ. ಬದಲಾಗಿ, ಅವನು ತನ್ನ ಎದೆಯ ಮೇಲೆ ಬಡಿದು, ‘ದೇವರೇ, ದಯವಿಟ್ಟು ನಾನು ಪಾಪಿಯಾಗಿದ್ದರಿಂದ ನನಗೆ ಕರುಣೆಸು ’ ಎಂದು ಪ್ರಾರ್ಥಿಸಿದನು.

ಪದ ಡೇಟಾ:

- Strong's: H2551, H2603, H2604, H2616, H2617, H2623, H3722, H3727, H4627, H4819, H5503, H5504, H5505, H5506, H6014, H7349, H7355, H7356, H7359, G1653, G1655, G1656, G2433, G2436, G3628, G3629, G3741, G4698

ಕರೆ, ಕರೆಯಲ್ಪಟ್ಟಿದ್ದೇನೆ

ಪದದ ಅರ್ಥವಿವರಣೆ:

“ಕರೆ” ಮತ್ತು “ಕರೆಯಲ್ಪಟ್ಟಿದ್ದೇನೆ” ಎನ್ನುವ ಪದಗಳು ಸಾಮಾನ್ಯವಾಗಿ ಜೋರಾಗಿ ಮಾತನಾಡುವುದನ್ನು ಅರ್ಥೈಸುತ್ತವೆ, ಆದರೆ "ಕರೆ" ಎಂಬ ಪದವು ಒಬ್ಬ ವ್ಯಕ್ತಿಯನ್ನು ಹೆಸರಿಸುವುದು ಅಥವಾ ಕರೆಯುವುದು ಎಂದರ್ಥ. ಇದಕ್ಕೆ ಇನ್ನು ಕೆಲವು ಅರ್ಥಗಳಿವೆ.

- ಒಬ್ಬರನ್ನು “ಕರೆಯಲ್ಪಟ್ಟಿದ್ದೇನೆ” ಎಂದರೆ ದೂರದಲ್ಲಿರುವ ಒಬ್ಬರನ್ನು ಗಟ್ಟಿಯಾಗಿ ಕಿರಿಚಿ ಮಾತನಾಡುವುದು. ಇದಕ್ಕೆ ಸಹಾಯಕ್ಕೆ ಬೇಡಿಕೊಳ್ಳುವುದು ಎನ್ನುವ ಅರ್ಥವೂ ಬರುತ್ತದೆ, ವಿಶೇಷವಾಗಿ ದೇವರ ಸಹಾಯಕ್ಕಾಗಿ ಬೇಡಿಕೊಳ್ಳುವ ಅರ್ಥವನ್ನು ಕೊಡುತ್ತದೆ.
- ಸತ್ಯವೇದದಲ್ಲಿ ಅನೇಕಬಾರಿ, “ಕರೆ” ಎನ್ನುವ ಪದಕ್ಕೆ “ಅಪ್ಪಣೆ ಕೊಡು” ಅಥವಾ “ಬರಲು ಅಜ್ಞಾಪಿಸು” ಅಥವಾ “ಬರುವುದಕ್ಕೆ ಮನವಿ ಮಾಡು” ಎನ್ನುವ ಅರ್ಥಗಳು ಇವೆ.
- ದೇವರು ತನ್ನ ಬಳಿಗೆ ಬರುವುದಕ್ಕೆ ಜನರನ್ನು ಕರೆಯುತ್ತಿದ್ದಾರೆ ಮತ್ತು ಆತನ ಪ್ರಜೆಯಾಗಿರುವುದಕ್ಕೆ ಇಷ್ಟಪಡುತ್ತಿದ್ದಾರೆ. ಇದೆ ಅವರ “ಕರೆ”.
- ದೇವರು ಜನರನ್ನು “ಕರೆದಿದ್ದಾನೆ” ಎನ್ನುವದಕ್ಕೆ ದೇವರು ತನ್ನ ಜನರು ತನ್ನ ಮಕ್ಕಳಾಗಿರಲು, ತನ್ನ ದಾಸರಾಗಿರಲು ಮತ್ತು ಯೇಸು ಕ್ರಿಸ್ತನ ಮೂಲಕ ತನ್ನ ರಕ್ಷಣೆ ಸಂದೇಶವನ್ನು ಪ್ರಕಟಿಸುವವರಾಗಿರುವುದಕ್ಕೆ ಆರಿಸಿಕೊಂಡಿದ್ದಾರೆ ಅಥವಾ ನೇಮಿಸಿಕೊಂಡಿದ್ದಾರೆ ಎಂದರ್ಥ.
- ಈ ಪದವನ್ನು ಯಾರನ್ನಾದರೂ ಹೆಸರಿಸುವ ಸಂದರ್ಭದಲ್ಲಿಯೂ ಉಪಯೋಗಿಸುತ್ತದೆ. ಉದಾಹರಣೆಗೆ, “ಈತನ ಹೆಸರು ಯೋಹಾನ ಎಂದು ಕರೆಯಲಾಗುತ್ತದೆ ” ಅಂದರೆ, “ಈತನಿಗೆ ಯೋಹಾನ ಎಂದು ಹೆಸರಿಡಲಾಗಿದೆ” ಅಥವಾ “ಈತನ ಹೆಸರು ಯೋಹಾನ”.
- “ಹೆಸರಿನಿಂದ ಕರೆಯಲ್ಪಡುವುದು” ಎಂದರೆ ಒಬ್ಬರ ಹೆಸರನ್ನು ಇನ್ನೊಬ್ಬರು ಕೊಡುವುದು ಎಂದರ್ಥ. ಆತನು ತನ್ನ ಜನರನ್ನು ತನ್ನ ಹೆಸರಿನಿಂದ ಕರೆದಿದ್ದಾರೆಂದು ದೇವರು ಹೇಳಿದ್ದಾರೆ.
- ವಿಭಿನ್ನ ಅಭಿವ್ಯಕ್ತಿ, “ನಾನು ಹೆಸರಿನಿಂದ ನಿನ್ನನ್ನು ಕರೆದಿದ್ದೇನೆ” ಎನ್ನುವ ಮಾತಿಗೆ ದೇವರು ಆ ವ್ಯಕ್ತಿಯನ್ನು ವಿಶೇಷವಾಗಿ ಆಯ್ಕೆ ಮಾಡಿಕೊಂಡಿದ್ದಾರೆ.

ಅನುವಾದ ಸಲಹೆಗಳು:

- “ಕರೆ” ಎನ್ನುವ ಪದವು “ಅಪ್ಪಣೆ ಕೊಡು” ಎನ್ನುವ ಮಾತಿನಿಂದ ಅನುವಾದ ಮಾಡಬಹುದು, ಇದು ಉದ್ದೇಶಪೂರ್ವಕ ಅಥವಾ ಸಂಕಲ್ಪಪೂರ್ವಕ ಕರೆ ಮಾಡುವ ಕಲ್ಪನೆಯನ್ನು ಒಳಗೊಂಡಿರುತ್ತದೆ.
- “ನಿನ್ನಲ್ಲಿ ಮೊರೆಯಿಡುವುದು” ಎಂಬ ಅಭಿವ್ಯಕ್ತಿಯು “ಸಹಾಯಕ್ಕಾಗಿ ನಿನ್ನನ್ನು ಬೇಡಿಕೊಳ್ಳುತ್ತಿದ್ದೇನೆ” ಅಥವಾ “ನಿನಗೆ ತುರ್ತಾಗಿ ಪ್ರಾರ್ಥಿಸುತ್ತಿದ್ದೇನೆ” ಎಂದೂ ಅನುವಾದ ಮಾಡಬಹುದು.
- ದೇವರು ನಮ್ಮನ್ನು ಆತನ ದಾಸರಾಗಿರುವುದಕ್ಕೆ “ಕರೆದಿದ್ದಾನೆ” ಎಂದು ಸತ್ಯವೇದವು ಹೇಳುವ ಪ್ರತಿಯೊಂದುಬಾರಿ, ಆತನ ದಾಸರಾಗಿರಲು “ವಿಶೇಷವಾಗಿ ನಮ್ಮನ್ನು ಆದುಕೊಂಡಿದ್ದಾರೆ” ಅಥವಾ “ನಮ್ಮನ್ನು ನೇಮಿಸಿಕೊಂಡಿದ್ದಾರೆ” ಎಂದೂ ಅನುವಾದ ಮಾಡಬಹುದು.
- “ನೀನು ಆತನ ಹೆಸರನ್ನು ಕರೆಯಲೇಬೇಕು” ಎನ್ನುವದನ್ನು “ನೀನು ತಪ್ಪದೇ ಆತನ ಹೆಸರಿನಿಂದ ಕರೆಯಬೇಕು” ಎಂದೂ ಅನುವಾದ ಮಾಡಬಹುದು.
- “ಆತನ ಹೆಸರು ಕರೆಯಲ್ಪಟ್ಟಿದೆನೆ” ಎನ್ನುವ ಮಾತನ್ನು “ಆತನ ಹೆಸರು” ಅಥವಾ “ಆತನನ್ನು ಹೆಸರಿಸಲಾಗಿದೆ” ಎಂದೂ ಅನುವಾದ ಮಾಡಬಹುದು.
- “ಕರೆಯಲ್ಪಡು” ಎನ್ನುವ ಮಾತನ್ನು “ಗಟ್ಟಿಯಾಗಿ ಹೇಳು” ಅಥವಾ “ಕೂಗು” ಅಥವಾ “ಗಟ್ಟಿಯಾದ ಸ್ವರದಿಂದ ಹೇಳು” ಎಂದೂ ಅನುವಾದ ಮಾಡಬಹುದು. ಪದಗಳಿಗೆ ಮಾಡುತ್ತಿರುವ ಅನುವಾದವನ್ನು ಒಬ್ಬ ವ್ಯಕ್ತಿ ಕೋಪದಿಂದ ಇದ್ದು ಮಾತನಾಡುತ್ತಿದ್ದಾನೆನ್ನುವ ಭಾವನೆ ಬಾರದಂತೆ ನೋಡಿಕೊಳ್ಳಿರಿ.
- “ನಿನ್ನ ಕರೆ” ಎನ್ನುವ ಭಾವವ್ಯಕ್ತೀಕರಣಕ್ಕೆ, “ನಿಮ್ಮ ಉದ್ದೇಶ” ಅಥವಾ “ನಿಮಗಾಗಿ ದೇವರಿಟ್ಟಿರುವ ಉದ್ದೇಶ” ಅನ್ವ “ನಿಮಗಾಗಿ ದೇವರಿಟ್ಟಿರುವ ವಿಶೇಷವಾದ ಕೆಲಸ” ಎಂದೂ ಅನುವಾದ ಮಾಡಬಹುದು.
- “ಯೆಹೋವ ಹೆಸರಿನಲ್ಲಿ ಕರೆ” ಎನ್ನುವದನ್ನು “ದೇವರಲ್ಲಿ ನಿರೀಕ್ಷಿಸು ಮತ್ತು ಆತನ ಮೇಲೆ ಆತುಕೋ” ಅಥವಾ “ಕರ್ತನಲ್ಲಿ ನಂಬು ಮತ್ತು ಆತನಿಗೆ ವಿಧೇಯನಾಗು” ಎಂದೂ ಅನುವಾದ ಮಾಡಬಹುದು.
- ಎನಾದರೊಂದಕ್ಕಾಗಿ “ಕರೆ ನೀಡು” ಎನ್ನುವದನ್ನು “ಬೇಡಿಕೆ” ಅಥವಾ “ಮನವಿ ಮಾಡು” ಅಥವಾ “ಆಜ್ಞಾಪಿಸು” ಎಂದು ಅನುವಾದ ಮಾಡಬಹುದು.
- “ನೀವು ನನ್ನ ಹೆಸರಿನಿಂದ ಕರೆಯಲ್ಪಟ್ಟಿದ್ದೀರಿ" ಎನ್ನುವ ಭಾವವ್ಯಕ್ತೀಕರಣಕ್ಕೆ, “ನಾನು ನಿನ್ನನ್ನು ತಿಳಿದಿದ್ದೇನೆ ಮತ್ತು ನಿನ್ನನ್ನು ಆರಿಸಿಕೊಂಡಿದ್ದೇನೆ" ಎಂದು ಅನುವಾದ ಮಾಡಬಹುದು.
- “ಹೆಸರಿಟ್ಟು ನಾನು ನಿನ್ನನ್ನು ಕರೆದಿದ್ದೇನೆ” ಎಂದು ದೇವರು ಹೇಳಿದಾಗ, ಇದನ್ನು “ನನಗೆ ನೀನು ಚೆನ್ನಾಗಿ ಗೊತ್ತು ಮತ್ತು ನಾನು ನಿನ್ನನು ಆಯ್ಕೆ ಮಾಡಿಕೊಂಡಿದ್ದೇನೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪ್ರಾರ್ಥನೆ, cry)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.18:24
- 1 ಥೆಸ್ಸ.04:07
- 2 ತಿಮೊಥೆ.01:09

- ಎಫೆಸ.04:01
- ಗಲಾತ್ಯ.01:15
- ಮತ್ತಾಯ.02:15
- ಫಿಲಿಪ್ಪ.03:14

ಪದ ಡೇಟಾ:

- Strong's: H559, H2199, H4744, H6817, H7121, H7123, H7769, H7773, G154, G363, G1458, G1528, G1941, G1951, G2028, G2046, G2564, G2821, G2822, G2840, G2919, G3004, G3106, G3333, G3343, G3603, G3686, G3687, G4316, G4341, G4377, G4779, G4867, G5455, G5537, G5581

ಕರ್ತನ ದಿನ, ಯೆಹೋವನ ದಿನ

ವಿವರಣೆ:

“ಯೆಹೋವನ ದಿನ” ಎನ್ನುವ ಹಳೇ ಒಡಂಬಡಿಕೆಯ ಮಾತು ಒಂದು ವಿಶೇಷವಾದ ಕಾಲವನ್ನು (ಅಥವಾ ಕಾಲಗಳನ್ನು) ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ, ಆ ಸಮಯದಲ್ಲಿ ದೇವರು ಪಾಪಗಳನ್ನು ಮಾಡಿದ ಜನರನ್ನು ಶಿಕ್ಷಿಸುತ್ತಾನೆ.

- “ಕರ್ತನ ದಿನ” ಎನ್ನುವ ಹೊಸ ಒಡಂಬಡಿಕೆಯ ಮಾತನ್ನು ಸಾಧಾರಣವಾಗಿ ಅಂತ್ಯಕಾಲದಲ್ಲಿ ಜನರಿಗೆ ನ್ಯಾಯತೀರ್ಪು ಮಾಡುವುದಕ್ಕೆ ಕರ್ತನಾದ ಯೇಸು ಹಿಂದಿರುಗಿ ಬರುವ ಎರಡನೇ ಬರೋಣದ ಸಮಯವನ್ನು ಅಥವಾ ದಿನವನ್ನು ಸೂಚಿಸುವುದಕ್ಕೆ ಉಪಯೋಗಿಸಿರುತ್ತಾರೆ.
- ಕೊನೆಗೆ “ಕಡೇ ದಿನ” ಎಂದು ಭವಿಷ್ಯತ್ತಿನಲ್ಲಿ ನ್ಯಾಯತೀರ್ಪಿನ ಸಮಯವನ್ನು ಮತ್ತು ಪುನರುತ್ಥಾನವನ್ನು ಕೂಡ ಕೆಲವೊಂದುಬಾರಿ ಸೂಚಿಸುತ್ತದೆ. ಕರ್ತನಾದ ಯೇಸು ಪಾಪಿಗಳಿಗೆ ನ್ಯಾಯತೀರ್ಪು ಮಾಡುವುದಕ್ಕೆ ಹಿಂದಿರುಗಿ ಬರುವಾಗ ಈ ಸಮಯವು ಆರಂಭವಾಗುತ್ತದೆ, ಆಗ ಆತನ ಆಳ್ವಿಕೆಯನ್ನು ಶಾಶ್ವತವಾಗಿ ಸ್ಥಿರಪಡಿಸುತ್ತಾನೆ.
- ಈ ಮಾತುಗಳಲ್ಲಿರುವ “ದಿನ” ಎನ್ನುವ ಪದವು ಕೆಲವೊಂದುಬಾರಿ ಜೀವನದಲ್ಲಿ ಉಪಯೋಗಿಸುವ ಅಕ್ಷರಾರ್ಥ ದಿನವನ್ನು ಸೂಚಿಸಬಹುದು ಅಥವಾ ಇದು ಒಂದು ದಿನಕ್ಕಿಂತ ಹೆಚ್ಚಾದ ಕಾಲವನ್ನು ಸೂಚಿಸುವ “ಸಮಯ” ಅಥವಾ “ಸಂದರ್ಭ” ಎನ್ನುವದನ್ನೂ ಸೂಚಿಸಬಹುದು.
- ಕೆಲವೊಂದುಬಾರಿ ಶಿಕ್ಷೆ ಎನ್ನುವುದು ದೇವರನ್ನು ನಂಬದಿರುವವರ ಮೇಲೆ “ದೇವರ ಕೋಪಾಗ್ನಿ ಸುರಿಸಲ್ಪಡುತ್ತದೆ” ಎಂದೂ ಸೂಚಿಸಲ್ಪಡುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಕ್ಕೆ ತಕ್ಕಂತೆ, “ಯೆಹೋವನ ದಿನ” ಎನ್ನುವ ಮಾತಿಗೆ ಬೇರೊಂದು ಮಾತುಗಳು ಉಪಯೋಗಿಸುವುದಾದರೆ “ಯೆಹೋವನ ಸಮಯ” ಅಥವಾ “ಯೆಹೋವನು ತನ್ನ ಶತ್ರುಗಳನ್ನು ಶಿಕ್ಸಿಸುವ ಸಮಯ” ಅಥವಾ “ಯೆಹೋವನ ಕೋಪಾಗ್ನಿಯ ಸಮಯ” ಎಂದು ಉಪಯೋಗಿಸಬಹುದು.
- “ಕರ್ತನ ದಿನ” ಎನ್ನುವ ಮಾತಿಗೆ ಬೇರೊಂದು ಮಾತುಗಳನ್ನು ಉಪಯೋಗಿಸುವುದಾದರೆ, “ಕರ್ತನ ನ್ಯಾಯತೀರ್ಪಿನ ಸಮಯ” ಅಥವಾ “ಜನರಿಗೆ ನ್ಯಾಯತೀರ್ಪು ಮಾಡುವುದಕ್ಕೆ ಕರ್ತನಾದ ಯೇಸು ಹಿಂದುರಿಗಿ ಬರುವ ಸಮಯ” ಎನ್ನುವ ಮಾತುಗಳನ್ನು ಉಪಯೋಗಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ದಿನ, ನ್ಯಾಯತೀರ್ಪಿನ ದಿನ, ಕರ್ತನ, ಪುನರುತ್ಥಾನ, ಯೆಹೋವ)

ಸತ್ಯವೇದದ ವಾಕ್ಯಗಳು:

- 1 ಕೊರಿಂಥ 5:5
- 1 ಥೆಸ್ಸ 5:2
- 2 ಪೇತ್ರ 3:10
- 2 ಥೆಸ್ಸ 2:2
- ಅಪೊ ಕೃತ್ಯ.02:20-21
- ಫಿಲಿಪ್ಪ 1:9-11

ಪದ ಡೇಟಾ:

- Strong's: H3068, H3117, G22500, G29620

ಕರ್ತನ ಭೋಜನ

ಪದದ ಅರ್ಥವಿವರಣೆ:

“ಕರ್ತನ ಭೋಜನ” ಎನ್ನುವ ಮಾತು ಯೇಸು ಯೆಹೂದ್ಯರ ನಾಯಕರಿಂದ ಬಂಧಿಸಲ್ಪಟ್ಟ ರಾತ್ರಿಯಲ್ಲಿ ಆತನ ಶಿಷ್ಯರೊಂದಿಗೆ ಊಟ ಮಾಡಿದ ಪಸ್ಕ ಭೋಜನವನ್ನು ಸೂಚಿಸುವುದಕ್ಕೆ ಅಪೊಸ್ತಲನಾದ ಪೌಲನಿಂದ ಉಪಯೋಗಿಸಲ್ಪಟ್ಟಿರುವ ಪದವಾಗಿರುತ್ತದೆ.

- ಈ ಭೋಜನ ಸಂದರ್ಭದಲ್ಲಿ ಯೇಸು ರೊಟ್ಟಿಯನ್ನು ಮುರಿದು, ಇದನ್ನು ಆತನ ದೇಹವೆಂದು ಕರೆದನು, ಈ ದೇಹವು ಅತೀ ಶೀಘ್ರವಾಗಿ ಹೊಡಿಸಲ್ಪಡುವದು ಮತ್ತು ಕೊಲ್ಲಲ್ಪಡುವುದು ಎಂದು ಹೇಳಿದನು.
- ಆತನು ದ್ರಾಕ್ಷಾರಸದ ಬಟ್ಟಲನ್ನು ತೆಗೆದುಕೊಂಡು ಅದನ್ನು ಆತನ ರಕ್ತವೆಂದು ಹೇಳಿದನು, ಪಾಪಗಳ ಸರ್ವಾಂಗಹೋಮವಾಗಿ ಆತನು ಮರಣಿಸಿದಾಗ ಅದು ಸುರಿಸಲ್ಪಡುತ್ತದೆಯೆಂದು ಹೇಳಿದನು.
- ಯೇಸುವಿನ ಹಿಂಬಾಲಕರೆಲ್ಲರು ಸೇರಿ ಬರುವಾಗ ಈ ಭೋಜನವನ್ನು ಹಂಚಿಕೊಳ್ಳಬೇಕೆಂದು ಆತನು ಆಜ್ಞಾಪಿಸಿದನು, ಆವರು ತಪ್ಪದೇ ಆತನ ಮರಣ ಮತ್ತು ಪುನರುತ್ಥಾನಗಳನ್ನು ನೆನಪಿಸಿಕೊಳ್ಳಬೇಕು.
- ಆತನು ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ಯೇಸುವಿನಲ್ಲಿ ನಂಬಿಕೆ ಇಟ್ಟಿರುವ ಪ್ರತಿಯೊಬ್ಬ ವಿಶ್ವಾಸಿ ಕರ್ತನ ಭೋಜನವನ್ನು ಆಚರಣೆ ಮಾಡಬೇಕೆಂದು ಸ್ಥಾಪಿಸಿದ್ದನ್ನು ನಾವು ನೋಡಬಹುದು.
- ಕರ್ತನ ಭೋಜನವನ್ನು ಸೂಚಿಸುವುದಕ್ಕೆ ಈಗಿನ ಸಭೆಗಳಲ್ಲಿ “ಸಂಸ್ಕಾರ” ಎಂದು ಕರೆಯುತ್ತಾರೆ. “ಕರ್ತನ ಭೋಜನ” ಎನ್ನುವ ಮಾತು ಕೂಡ ಉಪಯೋಗಿಸಲ್ಪಟ್ಟಿದೆ.

ಅನುವಾದ ಸಲಹೆಗಳು:

- ಈ ಪದವನ್ನು “ಕರ್ತನ ಮೇಜು” ಅಥವಾ “ನಮ್ಮ ಕರ್ತನಾದ ಯೇಸುವಿನ ಊಟ” ಅಥವಾ “ಕರ್ತನಾದ ಯೇಸುವಿನ ನೆನಪಿನಲ್ಲಿ ಊಟ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ: ಪಸ್ಕ)

ಸತ್ಯವೇದದ ವಾಕ್ಯಗಳು:

- 1 ಕೊರಿಂಥ.11:20-22
- 1 ಕೊರಿಂಥ.11:25-26

ಪದ ಡೇಟಾ:

- Strong's: G11730, G29600

ಕರ್ತನಾದ ಯೆಹೋವ, ಯೆಹೋವ ದೇವರು

ಸತ್ಯಾಂಶಗಳು:

ಹಳೇ ಒಡಂಬಡಿಕೆಯಲ್ಲಿ "ಕರ್ತನಾದ ಯೆಹೋವ" ಎನ್ನುವ ಮಾತು ಒಬ್ಬನೇ ದೇವರೆಂದು ಸೂಚಿಸುವುದಕ್ಕೆ ಅತೀ ಹೆಚ್ಚಾಗಿ ಉಪಯೋಗಿಸಲ್ಪಟ್ಟಿದೆ.

- "ಕರ್ತನು" ಎನ್ನುವ ಪದವು ದೈವಿಕವಾದ ಬಿರುದಾಗಿರುತ್ತದೆ ಮತ್ತು "ಯೆಹೋವ" ಎನ್ನುವುದು ದೇವರ ವೈಯುಕ್ತಿಕ ಹೆಸರಾಗಿರುತ್ತದೆ.
- "ಯೆಹೋವ" ಎನ್ನುವುದು ಅನೇಕಬಾರಿ "ದೇವರು" ಎನ್ನುವ ಪದದೊಂದಿಗೆ "ಯೆಹೋವ ದೇವರು" ಎಂಬುದಾಗಿ ಸೇರಿರುತ್ತದೆ.

ಅನುವಾದ ಸಲಹೆಗಳು:

- "ಯೆಹೋವ" ಎನ್ನುವ ಪದವನ್ನು ದೇವರ ವೈಯುಕ್ತಿಕ ಹೆಸರಿಗೆ ಅನುವಾದವಾಗಿ ಉಪಯೋಗಿಸಲಾಗಿರುತ್ತದೆ, "ಕರ್ತನಾದ ಯೆಹೋವ" ಮತ್ತು "ಯೆಹೋವ ದೇವರು" ಎನ್ನುವ ಮಾತುಗಳು ಅಕ್ಷರಾರ್ಥವಾಗಿ ಉಪಯೋಗಿಸಬಹುದು. ಈ ಪದವು ದೇವರನ್ನು ಸೂಚಿಸಿದಾಗ ಅನೇಕವಾದ ಸಂದರ್ಭಗಳಲ್ಲಿ "ಕರ್ತನು" ಎನ್ನುವ ಪದವನ್ನು ಯಾವರೀತಿ ಅನುವಾದ ಮಾಡಿದ್ದಾರೆಂದು ನೋಡಿಕೊಳ್ಳಿರಿ.
- ಕೆಲವೊಂದು ಭಾಷೆಗಳಲ್ಲಿ ಹೆಸರಾದ ಮೇಲೆ ಬಿರುದುಗಳನ್ನು ಇಡುತ್ತಾರೆ ಮತ್ತು ಈ ಮಾತನ್ನು "ಯೆಹೋವ ಕರ್ತನು" ಎಂಬುದಾಗಿ ಅನುವಾದ ಮಾಡುತ್ತಾರೆ. ಅನುವಾದ ಮಾಡುವ ಭಾಷೆಯಲ್ಲಿ ಯಾವುದು ಸ್ವಾಭಾವಿಕವಾದದ್ದೆಂದು ಗಮನಿಸಿರಿ: "ಕರ್ತನು" ಎನ್ನುವ ಬಿರುದು "ಯೆಹೋವ" ಎನ್ನುವ ಹೆಸರಿಗೆ ಮುಂದೆ ಬರುತ್ತದೋ ಅಥವಾ ಹಿಂದೆ ಬರುತ್ತದೋ?
- "ಯೆಹೋವ ದೇವರು" ಎನ್ನುವ ಮಾತು "ಯೆಹೋವ ಎಂದು ಕರೆಯಲ್ಪಡುವ ದೇವರು" ಅಥವಾ "ಜೀವಿಸುವ ದೇವರು" ಅಥವಾ "ದೇವರಾಗಿರುವ ನಾನು" ಎನ್ನುವ ಮಾತುಗಳಿಗೆ ಸಂಬಂಧಿಸಿರುತ್ತದೆ.
- ಒಂದುವೇಳೆ "ಯೆಹೋವ" ಎನ್ನುವ ಪದವನ್ನು "ಕರ್ತನು" ಎಂಬುದಾಗಿ ಸಂಪ್ರದಾಯಿಕವಾಗಿ ಅನುವಾದ ಮಾಡುವುದಾಗಿದ್ದರೆ, "ಕರ್ತನಾದ ಯೆಹೋವ" ಎನ್ನುವ ಮಾತನ್ನು "ಕರ್ತನಾದ ದೇವರು" ಅಥವಾ "ಕರ್ತನಾಗಿರುವ ದೇವರು" ಎಂದೂ ಅನುವಾದ ಮಾಡಬಹುದು. ಬೇರೊಂದು ರೀತಿಯ ಅನುವಾದಗಳಲ್ಲಿ "ಯಜಮಾನನಾದ ಕರ್ತನು" ಅಥವಾ "ದೇವರಾಗಿರುವ ಕರ್ತನು" ಎಂಬುದಾಗಿ ಅನುವಾದ ಮಾಡಬಹುದು.
- "ಕರ್ತನಾದ ಯೆಹೋವ" ಎನ್ನುವ ಮಾತು "ಕರ್ತಾದಿ ಕರ್ತನು" ಎಂದೂ ಸೂಚಿಸುವುದಿಲ್ಲ, ಯಾಕಂದರೆ ಓದುಗಾರರು ಈ ಎರಡು ಪದಗಳನ್ನು ವ್ಯತ್ಯಾಸಗೊಳಿಸುವುದಕ್ಕೆ ಉಪಯೋಗಿಸಿರುವ ಸಂಪ್ರದಾಯಿಕವಾದ ದೊಡ್ಡ ದೊಡ್ಡ ಅಕ್ಷರಗಳನ್ನು ಗಮನಿಸುವುದಿಲ್ಲ ಮತ್ತು ಅದು ವಿಚಿತ್ರವಾಗಿ ಕಾಣಿಸಿಕೊಳ್ಳುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೇವರು, ಯಜಮಾನ, ಕರ್ತನು, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.04:3-4
- 2 ಸಮು.07:21-23
- ಧರ್ಮೋ.03:23-25
- ಯೆಹೆ.39:25-27
- ಯೆಹೆ.45:18-20
- ಯೆರೆ.44:26-28
- ನ್ಯಾಯಾ.06:22-24
- ಮೀಕಾ.01:2-4

ಪದ ಡೇಟಾ:

- Strong's: H136, H430, H3068, G2316, G2962

ಕಲ್ಲು, ಕಲ್ಲುಗಳು, ಕಲ್ಲುಗಳನ್ನು ಎಸೆಯುವುದು

ಪದದ ಅರ್ಥವಿವರಣೆ:

ಕಲ್ಲು ಎನ್ನುವುದು ಬಂಡೆಯ ಒಂದು ಚೂರಾಗಿರುತ್ತದೆ. ಒಬ್ಬರ ಮೇಲೆ "ಕಲ್ಲನ್ನು" ಎಸೆ ಎಂದರೆ ಒಬ್ಬ ವ್ಯಕ್ತಿಯನ್ನು ಸಾಯಿಸಬೇಕೆನ್ನುವ ಉದ್ದೇಶದೊಂದಿಗೆ ಆ ವ್ಯಕ್ತಿಯ ಮೇಲೆ ದೊಡ್ಡ ದೊಡ್ಡ ಬಂಡೆಗಳನ್ನು ಮತ್ತು ಕಲ್ಲುಗಳನ್ನು ಎಸೆಯುವುದು ಎಂದರ್ಥ. "ಕಲ್ಲನ್ನು ಎಸೆಯುವುದು" ಎಂದರೆ ಒಬ್ಬರ ಮೇಲೆ ಕಲ್ಲುಗಳನ್ನು ಎಸೆಯುವ ಸಂಘಟನೆಯನ್ನು ಸೂಚಿಸುವುದಾಗಿರುತ್ತದೆ.

- ಪುರಾತನ ಕಾಲಗಳಲ್ಲಿ ಕಲ್ಲುಗಳನ್ನು ಎಸೆಯುವುದೆನ್ನುವುದು ಜನರು ಮಾಡಿದ ಅಪರಾಧಗಳಿಗೆ ಶಿಕ್ಷೆಯಾಗಿ ಜನರನ್ನು ಸಾಯಿಸುವ ಒಂದು ಸರ್ವ ಸಾಧಾರಣವಾದ ವಿಧಾನವಾಗಿರುತ್ತದೆ.
- ವ್ಯಭಿಚಾರ ಎನ್ನುವಂತಹ ಪಾಪಗಳನ್ನು ಮಾಡಿದಾಗ ಆ ಜನರನ್ನು ಕಲ್ಲುಗಳನ್ನು ಎಸೆದು ಸಾಯಿಸಿರಿ ಎಂದು ದೇವರು ಇಸ್ರಾಯೇಲ್ಯರ ನಾಯಕರಿಗೆ ಆಜ್ಞಾಪಿಸಿದನು.
- ಹೊಸ ಒಡಂಬಡಿಕೆಯಲ್ಲಿ ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಒಬ್ಬ ಸ್ತ್ರೀಯಳನ್ನು ಯೇಸು ಕ್ಷಮಿಸಿದರು ಮತ್ತು ಆಕೆಯ ಮೇಲೆ ಕಲ್ಲುಗಳು ಬೀಳದಂತೆ ಜನರನ್ನು ನಿಲ್ಲಿಸಿದರು.
- ಯೇಸುವಿನ ಕುರಿತಾಗಿ ಸಾಕ್ಷಿಯನ್ನು ಹೇಳಿದ್ದಕ್ಕೆ ಕಲ್ಲುಗಳನ್ನು ಎಸೆಯುವುದರ ಮೂಲಕ ಸಾಯಿಸಲ್ಪಟ್ಟ ಮೊಟ್ಟ ಮೊದಲ ವ್ಯಕ್ತಿಯಾಗಿ ಸತ್ಯವೇದದಲ್ಲಿ ದಾಖಲಿಸಲ್ಪಟ್ಟಿದ್ದಾನೆ.
- ಲೂಸ್ತ್ರ ಪಟ್ಟಣದಲ್ಲಿ ಅಪೊಸ್ತಲನಾದ ಪೌಲನ ಮೇಲೆ ಕಲ್ಲುಗಳನ್ನು ಎಸೆದರು, ಆದರೆ ತನ್ನ ಗಾಯಗಳ ಮೂಲಕ ಆತನು ಸತ್ತುಹೋಗಲಿಲ್ಲ.

(ಈ ಪದಗಳನ್ನು ಸಹ ನೋಡಿರಿ : ವ್ಯಭಿಚಾರ, ಬದ್ಧನಾಗು, ಅಪರಾಧ, ಮರಣ, ಲೂಸ್ತ್ರ, ಸಾಕ್ಷಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:57-58
- ಅಪೊ.ಕೃತ್ಯ.07:59-60
- ಅಪೊ.ಕೃತ್ಯ.14:5-7
- ಅಪೊ.ಕೃತ್ಯ.14:19-20
- ಯೋಹಾನ.08:4-6
- ಲೂಕ.13:34-35
- ಲೂಕ.20:5-6
- ಮತ್ತಾಯ.23:37-39

ಪದ ಡೇಟಾ:

- Strong's: H68, H69, H810, H1382, H1496, H1530, H2106, H2672, H2687, H2789, H4676, H4678, H5553, H5601, H5619, H6344, H6443, H6697, H6864, H6872, H7275, H7671, H8068, G2642, G2991, G3034, G3035, G3036, G3037, G4074, G4348, G5586

ಕಾರ್ಯಗಳು, ಕ್ರಿಯೆಗಳು, ಕೆಲಸ, ಕೃತ್ಯಗಳು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಕಾರ್ಯಗಳು," "ಕ್ರಿಯೆಗಳು," ಮತ್ತು "ಕೃತ್ಯಗಳು," ಎನ್ನುವ ಪದಗಳು ದೇವರು ಅಥವಾ ಜನರು ಸಾಧಾರಣವಾಗಿ ಮಾಡುವ ಕೆಲಸಗಳನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತವೆ.

- ಸತ್ಯವೇದದಲ್ಲಿ, ಈ ಪದಗಳನ್ನು ಸಾಮಾನ್ಯವಾಗಿ ದೇವರು ಮತ್ತು ಮಾನವರನ್ನು ಉಲ್ಲೇಖಿಸಲು ಬಳಸಲಾಗುತ್ತದೆ.
- "ಕೆಲಸ" ಎನ್ನುವ ಪದವು ಇತರ ಜನರಿಗೆ ಸೇವೆ ಮಾಡುವುದಕ್ಕೆ ಮಾಡುವ ಯಾವುದೇ ಕಾರ್ಯವನ್ನು ಅಥವಾ ಯಾವುದೇ ಕೃತ್ಯವನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.
- ದೇವರ "ಕಾರ್ಯಗಳು" ಮತ್ತು "ತನ್ನ ಕೈಗಳ ಕೆಲಸ" ಎನ್ನುವ ಮಾತುಗಳು ಆತನು ಮಾಡುವ ಅಥವಾ ಆತನು ಮಾಡಿದ ಎಲ್ಲಾ ಕಾರ್ಯಗಳನ್ನು ಸೂಚಿಸುತ್ತವೆ, ಈ ಮಾತುಗಳಲ್ಲಿ ಪ್ರಪಂಚವನ್ನು ಸೃಷ್ಟಿಸುವುದು, ಪಾಪಿಗಳನ್ನು ರಕ್ಷಿಸುವುದು, ಎಲ್ಲಾ ಜೀವಿಗಳ ಅಗತ್ಯತೆಗಳನ್ನು ಪೂರೈಸುವುದು ಮತ್ತು ಒಂದು ಸ್ಥಳದಲ್ಲಿ ಇಡೀ ವಿಶ್ವವನ್ನು ಇಟ್ಟಿರುವುದು ಒಳಗೊಂಡಿರುತ್ತವೆ. "ಕ್ರಿಯೆಗಳು" ಮತ್ತು "ಕೃತ್ಯಗಳು" ಎನ್ನುವ ಪದಗಳು "ಅದ್ಭುತ ಕೃತ್ಯಗಳು" ಅಥವಾ "ಆಶ್ಚರ್ಯ ಕ್ರಿಯೆಗಳು" ಎನ್ನುವ ಮಾತುಗಳಂತೆ ದೇವರ ಅದ್ಭುತಗಳನ್ನು ಸೂಚಿಸುವುದಕ್ಕೂ ಉಪಯೋಗಿಸಲ್ಪಟ್ಟಿರುತ್ತದೆ.
- ಒಬ್ಬ ವ್ಯಕ್ತಿ ಮಾಡುವ ಕಾರ್ಯಗಳು ಅಥವಾ ಕ್ರಿಯೆಗಳು ಒಳ್ಳೇಯದಾಗಿರುತ್ತವೆ ಅಥವಾ ಕೆಟ್ಟದ್ದಾಗಿರುತ್ತವೆ.
- ವಿಶ್ವಾಸಿಗಳು ಒಳ್ಳೇಯ ಕಾರ್ಯಗಳನ್ನು ಮಾಡಬೇಕೆಂದು ಪವಿತ್ರಾತ್ಮನು ಅವರನ್ನು ಬಲಗೊಳಿಸುತ್ತಾನೆ, ಇವುಗಳನ್ನೇ "ಒಳ್ಳೇಯ ಫಲ" ಎಂದು ಕರೆಯುತ್ತಾರೆ.
- ಜನರು ತಮ್ಮ ಒಳ್ಳೇಯ ಕಾರ್ಯಗಳಿಂದ ರಕ್ಷಿಸಲ್ಪಡುವುದಿಲ್ಲ; ಅವರು ಯೇಸುವಿನಲ್ಲಿ ನಂಬಿಕೆ ಇಡುವುದರ ಮೂಲಕ ರಕ್ಷಣೆ ಹೊಂದುತ್ತಾರೆ.
- ಒಬ್ಬ ವ್ಯಕ್ತಿಯ "ಕೆಲಸ" ಎನ್ನುವುದು ಆ ವ್ಯಕ್ತಿ ಜೀವಿಸುವುದಕ್ಕೆ ಮಾಡುವುದಾಗಿರಬಹುದು ಅಥವಾ ದೇವರಿಗೆ ಸೇವೆ ಮಾಡುವುದಾಗಿರಬಹುದು. ದೇವರು "ಕೆಲಸ ಮಾಡಿದ್ದಾರೆ" ಎಂಬುದಾಗಿ ಸತ್ಯವೇದವು ಸೂಚಿಸುತ್ತದೆ.

ಅನುವಾದ ಸಲಹೆಗಳು:

- "ಕಾರ್ಯಗಳು" ಅಥವಾ "ಕ್ರಿಯೆಗಳು" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನದಲ್ಲಿ "ಕೃತ್ಯಗಳು" ಅಥವಾ "ಮಾಡಿದ ಕೆಲಸಗಳು" ಎಂದಾಗಿ ಅನುವಾದ ಮಾಡಬಹುದು.
- ದೇವರ "ಕಾರ್ಯಗಳು" ಅಥವಾ "ಕ್ರಿಯೆಗಳು" ಮತ್ತು "ತನ್ನ ಕೈ ಕೆಲಸಗಳು" ಎಂದು ಸೂಚಿಸಿದಾಗ, ಈ ಎಲ್ಲಾ ಮಾತುಗಳನ್ನು "ಆಶ್ಚರ್ಯ ಕಾರ್ಯಗಳು" ಅಥವಾ "ಶಕ್ತಿಯುತವಾದ ಕೃತ್ಯಗಳು" ಅಥವಾ "ಆತನು ಮಾಡುವ ಅತ್ಯದ್ಭುತವಾದ ಕೆಲಸಗಳು" ಎಂದೂ ಅನುವಾದ ಮಾಡಬಹುದು.
- "ದೇವರ ಕೆಲಸ" ಎನ್ನುವ ಮಾತನ್ನು "ದೇವರು ಮಾಡುವ ಕಾರ್ಯಗಳು" ಅಥವಾ "ದೇವರು ಮಾಡುವ ಆಶ್ಚರ್ಯಕಾರ್ಯಗಳು" ಅಥವಾ "ದೇವರು ಮಾಡುವ ಅದ್ಭುತ ಕಾರ್ಯಗಳು" ಅಥವಾ "ದೇವರು ಮಾಡಿದ ಪ್ರತಿಯೊಂದು ಕಾರ್ಯ" ಎಂದೂ ಅನುವಾದ ಮಾಡಬಹುದು.
- "ಕೆಲಸ" ಎನ್ನುವ ಪದವು 'ಕೆಲಸಗಳು" ಎನ್ನುವ ಪದಕ್ಕೆ ಏಕವಚನ ಪದವಾಗಿರುತ್ತದೆ, ಉದಾಹರಣೆಗೆ, "ಪ್ರತಿಯೊಂದು ಒಳ್ಳೇಯ ಕೆಲಸ" ಅಥವಾ "ಪ್ರತಿಯೊಂದು ಒಳ್ಳೇಯ ಕ್ರಿಯೆ".
- "ಕಾರ್ಯ" ಎನ್ನುವ ಪದಕ್ಕೆ "ಸೇವೆ" ಅಥವಾ "ಕೆಲಸ" ಎನ್ನುವ ವಿಸ್ತಾರವಾದ ಅರ್ಥವನ್ನು ಹೊಂದಿರುತ್ತದೆ. ಉದಾಹರಣೆಗೆ, "ಕರ್ತನಲ್ಲಿ ನಿನ್ನ ಕೆಲಸ" ಎನ್ನುವ ಮಾತನ್ನು "ಕರ್ತನಿಗಾಗಿ ನೀನು ಏನು ಮಾಡುವಿ" ಎಂದೂ ಅನುವಾದ ಮಾಡಬಹುದು.
- "ನಿನ್ನ ಸ್ವಂತ ಕೆಲಸವನ್ನು ಪರೀಕ್ಷಿಸಿಕೋ" ಎನ್ನುವ ಮಾತನ್ನು "ನೀನು ಮಾಡುತ್ತಿರುವುದು ದೇವರ ಚಿತ್ತವೋ ಇಲ್ಲವೋ ಎಂದು ನಿಶ್ಚಯ ಮಾಡಿಕೊಳ್ಳಿರಿ" ಅಥವಾ "ನೀವು ಮಾಡುತ್ತಿರುವುದು ದೇವರನ್ನು ಮೆಚ್ಚಿಸುವುದೋ ಇಲ್ಲವೋ ಎಂದು ನೋಡಿಕೊಳ್ಳಿರಿ" ಎಂದೂ ಅನುವಾದ ಮಾಡಬಹುದು.
- "ಪವಿತ್ರಾತ್ಮನ ಕಾರ್ಯ" ಎನ್ನುವ ಮಾತನ್ನು "ಪವಿತ್ರಾತ್ಮನ ಅಧಿಕಾರ" ಅಥವಾ "ಪವಿತ್ರಾತ್ಮನ ಸೇವೆ" ಅಥವಾ "ಪವಿತ್ರಾತ್ಮನ ಕಾರ್ಯಗಳು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಫಲ, ಪವಿತ್ರಾತ್ಮ, ಆಶ್ಚರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.03:11-12
- ಅಪೊ.ಕೃತ್ಯ.02:8-11
- ದಾನಿ.04:36-37
- ವಿಮೋ.34:10-11
- ಗಲಾತ್ಯ.02:15-16
- ಯಾಕೋಬ.02:14-17
- ಮತ್ತಾಯ.16:27-28
- ಮೀಕ.02:6-8
- ರೋಮಾ.03:27-28
- ತೀತ.03:4-5

ಪದ ಡೇಟಾ:

- Strong's: H4566, H4567, H4611, H4659, H5949, G2041

ಕೀರ್ತನೆ

ಪದದ ಅರ್ಥವಿವರಣೆ:

“ಕೀರ್ತನೆ” ಎನ್ನುವ ಪದವು ಪರಿಶುದ್ಧವಾದ ಹಾಡನ್ನು ಸೂಚಿಸುತ್ತದೆ, ಅನೇಕ ಬಾರಿ ಹಾಡಿಕೊಳ್ಳುವುದಕ್ಕೆ ಬರೆಯಲ್ಪಟ್ಟ ಪದ್ಯರೂಪದಲ್ಲಿರುತ್ತದೆ.

- ಹಳೇ ಒಡಂಬಡಿಕೆಯ ಪುಸ್ತಕವಾಗಿರುವ ಕೀರ್ತನೆಗಳ ಗ್ರಂಥವು ಅರಸನಾದ ದಾವೀದ, ಇತರ ಇಸ್ರಾಯೇಲ್ಯರಾದ ಮೋಶೆ, ಸೊಲೊಮೋನ, ಮತ್ತು ಆಸಾಫ, ಇನ್ನೂ ಅನೇಕರಿಂದ ಬರೆಯಲ್ಪಟ್ಟಿರುವ ಹಾಡುಗಳ ಸಂಗ್ರಹವಾಗಿರುತ್ತದೆ.
- ಇಸ್ರಾಯೇಲ್ ದೇಶವು ದೇವರನ್ನು ಆರಾಧನೆ ಮಾಡುವ ಕೀರ್ತನೆಗಳನ್ನು ಉಪಯೋಗಿಸುತ್ತಿದ್ದರು.
- ಸಂತೋಷ, ನಂಬಿಕೆ ಮತ್ತು ಗೌರವವನ್ನು, ಅದೇ ರೀತಿಯಾಗಿ ಬಾಧೆ ಮತ್ತು ದುಃಖಗಳನ್ನು ವ್ಯಕ್ತಪಡಿಸಲು ಕೀರ್ತನೆಗಳನ್ನು ಉಪಯೋಗಿಸಬಹುದು.
- ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರು ದೇವರನ್ನು ಆರಾಧಿಸುವ ವಿಧಾನವನ್ನಾಗಿ ಆತನಿಗೆ ಕೀರ್ತನೆಗಳನ್ನು ಹಾಡಬೇಕೆಂದು ಆಜ್ಞಾಪಿಸಲ್ಪಟ್ಟಿದ್ದರು.

(ಈ ಪದಗಳನ್ನು ಸಹ ನೋಡಿರಿ : ದಾವೀದ, ನಂಬಿಕೆ, ಸಂತೋಷ, ಮೋಶೆ, ಪರಿಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.13:33
- ಅಪೊ.ಕೃತ್ಯ.13:35
- ಕೊಲೊಸ್ಸ.03:16
- ಲೂಕ.20:42

ಪದ ಡೇಟಾ:

- Strong's: H2158, H2167, H4210, G5567, G5568

ಕುರಿಮರಿ, ದೇವರ ಕುರಿಮರಿ

ಪದದ ಅರ್ಥವಿವರಣೆ:

"ಕುರಿಮರಿ" ಎನ್ನುವ ಪದವು ಚಿಕ್ಕ ಕುರಿಯನ್ನು ಸೂಚಿಸುತ್ತದೆ. ಕುರಿಗಳು ದಪ್ಪಗಿರುವ ಉಣ್ಣೆ ಕೂದಲು ಇರುವ ನಾಲ್ಕು ಕಾಲುಗಳ ಪ್ರಾಣಿಗಳು, ಇವುಗಳನ್ನು ಯೆಹೋವನಿಗೆ ಸರ್ವಾಂಗಹೋಮ ಮಾಡುವುದಕ್ಕಾಗಿ ಉಪಯೋಗಿಸುತ್ತಿದ್ದರು. ಯೇಸುವು "ದೇವರ ಕುರಿಮರಿ" ಎಂದು ಕರೆಯಲ್ಪಟ್ಟನು, ಯಾಕಂದರೆ ಜನರ ಪಾಪಗಳಿಗಾಗಿ ಆತನು ಕ್ರಯಧನವನ್ನು ಸಲ್ಲಿಸಲು ಬಲಿಯಾದನು.

- ಈ ಪ್ರಾಣಿಗಳು ತುಂಬಾ ಸುಲಭವಾಗಿ ಪಕ್ಕ ದಾರಿಗೆ ಹೋಗುತ್ತವೆ ಮತ್ತು ಇವುಗಳಿಗೆ ಸಂರಕ್ಷಿಸುವವರು ಬೇಕೇ ಬೇಕಾಗುತ್ತಾರೆ. ದೇವರು ಮನುಷ್ಯರೆಲ್ಲರನ್ನು ಕುರಿಗಳಿಗೆ ಹೋಲಿಸಿದ್ದಾನೆ.
- ದೇವರು ತನ್ನ ಜನರನ್ನು ಭೌತಿಕವಾಗಿ ಪರಿಪೂರ್ಣವಾದ ಕುರಿಗಳನ್ನು ಮತ್ತು ಕುರಿಮರಿಗಳನ್ನು ಆತನಿಗೆ ಸರ್ವಾಂಗಹೋಮ ಮಾಡಲು ಆಜ್ಞಾಪಿಸಿದನು.
- ಯೇಸುವನ್ನು "ದೇವರ ಕುರಿಮರಿ" ಎಂದು ಕರೆಯಲ್ಪಟ್ಟನು, ಈತನು ಜನರ ಪಾಪಗಳಿಗೆ ಕ್ರಯಧನವನ್ನು ಸಲ್ಲಿಸಲು ಬಲಿಯಾಗಿದ್ದಾನೆ. ಈತನು ಪರಿಪೂರ್ಣನಾಗಿದ್ದಾನೆ, ಯಾವದೋಷವಿಲ್ಲದ ಬಲಿಯಾಗಿದ್ದಾನೆ, ಯಾಕಂದರೆ ಈತನು ಸಂಪೂರ್ಣವಾಗಿ ಯಾವ ಪಾಪವಿಲ್ಲದವನಾಗಿದ್ದನು.

ಅನುವಾದ ಸಲಹೆಗಳು:

- ಭಾಷೆಯಲ್ಲಿ ಕುರಿಗಳು ಗೊತ್ತಿದ್ದರೆ, ಅವುಗಳ ಮರಿಗಳನ್ನು "ಕುರಿಮರಿ" ಮತ್ತು "ದೇವರ ಕುರಿಮರಿ" ಎನ್ನುವ ಪದಗಳನ್ನು ಉಪಯೋಗಿಸಿ ಅನುವಾದ ಮಾಡಬೇಕಾಗಿರುತ್ತದೆ.
- "ದೇವರ ಕುರಿಮರಿ" ಎನ್ನುವ ಮಾತನ್ನು "ದೇವರ (ಬಲಿಯಾಗುವ) ಕುರಿಮರಿ", ಅಥವಾ "ದೇವರಿಗೆ ಬಲಿಯಾದ ಕುರಿಮರಿ" ಅಥವಾ "ದೇವರಿಂದ ಬಂದ (ಬಲಿಯಾಗುವ) ಕುರಿಮರಿ" ಎಂದೂ ಅನುವಾದ ಮಾಡಬಹುದು.
- ಕುರಿಗಳ ಬಗ್ಗೆ ಗೊತ್ತಿಲ್ಲದಿದ್ದರೆ, ಈ ಪದವನ್ನು "ಚಿಕ್ಕ ಕುರಿ" ಎಂಬುದಾಗಿ ಅನುವಾದ ಮಾಡಬಹುದು, ಆದರೆ ಆ ಮಾತಿಗೆ ಪುಟದ ಕೆಳಭಾಗದಲ್ಲಿ ಎಂಥ ಕುರಿಯೆಂದು ವಿವರಣೆಯನ್ನು ಕೊಡಿರಿ. ಆ ಸೂಚನೆಯು ಆ ಪ್ರಾಂತ್ಯಕ್ಕೆ ಸಂಬಂಧಪಟ್ಟಿರುವ ಹಿಂಡುಗಳಲ್ಲಿ ಜೀವಿಸುವ ಅಂಜುಬುರುಕವಾಗಿರುವ, ಸಂರಕ್ಷಣೆಯಿಲ್ಲದ, ಆಚೆ ಹೋಗುವ ದಾರಿ ತಪ್ಪುವ ಪ್ರಾಣಿಗೆ ಈ ಕುರಿ ಮತ್ತು ಕುರಿಮರಿಗಳನ್ನು ಹೋಲಿಸಬೇಕು.
- ಈ ಪದವನ್ನು ಸ್ಥಳೀಯ ಅಥವಾ ಜಾತೀಯ ಭಾಷೆಯಲ್ಲಿರುವ ಸತ್ಯವೇದದಲ್ಲಿ ಹೇಗೆ ಅನುವಾದ ಮಾಡಿದ್ದಾರೆನ್ನುವುದನ್ನು ಕೂಡ ನೋಡಿಕೊಳ್ಳಿರಿ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕುರಿಗಳು, ಕುರುಬ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.12:1-3
- ಎಜ್ರಾ.08:35-36
- ಯೆಶಯಾ.66:3
- ಯೆರೆ.11:18-20
- ಯೋಹಾನ.01:29-31
- ಯೋಹಾನ.01:35-36
- ಯಾಜಕ.14:21-23
- ಯಾಜಕ.17:1-4
- ಲೂಕ.10:3-4
- ಪ್ರಕ.15:3-4

ಸತ್ಯವೇದದಿಂದ ಉದಾಹರಣೆಗಳು:

- **05:07** ಅಬ್ರಾಹಾಮನು ಮತ್ತು ಇಸಾಕನು ಸರ್ವಾಂಗಹೋಮವನ್ನು ಕೊಡುವ ಸ್ಥಳಕ್ಕೆ ಹೋದಾಗ, "ತಂದೆಯೇ, ಸರ್ವಾಂಗಹೋಮಕ್ಕೆ ನಮ್ಮ ಬಳಿ ಕಟ್ಟಿಗೆಗಳು ಇದ್ದಾವೆ, ಆದರೆ _ ಕುರಿಮರಿ _ ಎಲ್ಲಿದೆ?" ಎಂದು ಇಸಾಕನು ಕೇಳಿದನು.
- **11:02** ದೇವರು ತನ್ನಲ್ಲಿ ನಂಬಿದವರ ಚೊಚ್ಚಲ ಮಗುವನ್ನು ರಕ್ಷಿಸುವುದಕ್ಕೆ ಆತನು ಒಂದು ಮಾರ್ಗವನ್ನು ಕೊಟ್ಟನು. ಪ್ರತಿಯೊಂದು ಕುಟುಂಬವು ಒಂದು ಪರಿಪೂರ್ಣವಾದ _ ಕುರಿಮರಿಯನ್ನು _ ಅಥವಾ ಮೇಕೆಯನ್ನು ಆಯ್ದುಕೊಳ್ಳಬೇಕು ಮತ್ತು ಅದನ್ನು ಕೊಲ್ಲಬೇಕು.
- **24:06** ಆ ಮರುದಿನ, ಯೇಸು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಪಡೆಯುವುದಕ್ಕೆ ಬಂದನು. ಯೋಹಾನನು ಆತನನ್ನು ನೋಡಿ, "ಅಗೋ! ಲೋಕದ ಪಾಪವನ್ನು ನಿವಾರಣೆ ಮಾಡಲು ದೇವರು ನೇಮಿಸಿದ ಯಜ್ಞದ _ ಕುರಿಮರಿ _" ಎಂದು ಹೇಳಿದನು.
- **45:08** "ಅವರು ಆತನನ್ನು ಸಾಯಿಸುವುದಕ್ಕೆ _ ಕುರಿಮರಿಯಂತೆ _ ನಡೆಸಿದರು, ಮತ್ತು _ ಕುರಿಮರಿಯು _ ಮೌನವಾಗಿದ್ದಂತೆಯೇ, ಆತನು ಒಂದು ಮಾತನ್ನು ಮಾತನಾಡಲಿಲ್ಲ.

- **48:08** ಅಬ್ರಾಹಾಮನ ಮಗನಾದ ಇಸಾಕನನ್ನು ಸರ್ವಾಂಗಹೋಮವನ್ನಾಗಿ ಅರ್ಪಿಸಬೇಕೆಂದು ದೇವರು ಅಬ್ರಾಹಾಮನನ್ನು ಕೇಳಿದಾಗ, ತನ್ನ ಮಗನಾದ ಇಸಾಕನಿಗೆ ಬದಲಾಗಿ ಸರ್ವಾಂಗ ಹೋಮವನ್ನು ಮಾಡುವುದಕ್ಕೆ ದೇವರು _ ಕುರಿಮರಿಯನ್ನು _ ಒದಗಿಸಿಕೊಟ್ಟಿದ್ದರು. ನಾವೆಲ್ಲರು ನಮ್ಮ ಪಾಪಗಳಿಗಾಗಿ ಸಾಯುವವರಾಗಿದ್ದೇವೆ! ಆದರೆ ನಮ್ಮ ಸ್ಥಾನದಲ್ಲಿ ಮರಣಿಸುವುದಕ್ಕೆ ಸರ್ವಾಂಗ ಹೋಮವನ್ನಾಗಿ ದೇವರು ತನ್ನ _ ಕುರಿಮರಿಯಾದ _ ಯೇಸುವನ್ನು ಅನುಗ್ರಹಿಸಿದ್ದಾನೆ.
- **48:09** ದೇವರು ಐಗುಪ್ತದಲ್ಲಿ ಕೊನೆಯ ಮಾರಿರೋಗವನ್ನು ಕಳುಹಿಸಿಕೊಟ್ಟಾಗ, ಪರಿಪೂರ್ಣವಾದ _ ಕುರಿಮರಿಯನ್ನು _ ಕೊಂದು, ಅದರ ರಕ್ತವನ್ನು ಬಾಗಿಲಿನ ಎರಡು ಕಡೆಗೆ ಮತ್ತು ಮೇಲ್ಭಾಗದಲ್ಲಿ ಹಚ್ಚಬೇಕೆಂದು ಆತನು ಇಸ್ರಾಯೇಲ್ಯಲ್ ಕುಟುಂಬದವರಿಗೆ ಹೇಳಿದನು.

ಪದ ಡೇಟಾ:

- Strong's: H7716, G721, G2316

ಕೃಪೆ, ಕೃಪೆಯುಳ್ಳ

ಪದದ ಅರ್ಥವಿವರಣೆ:

“ಕೃಪೆ” ಎನ್ನುವ ಪದವು ಸಹಾಯ ಅಥವಾ ಆಶೀರ್ವಾದ ಹೊಂದದ ಒಬ್ಬ ವ್ಯಕ್ತಿಗೆ ಅದನ್ನು ಕೊಡುವುದನ್ನು ಸೂಚಿಸುತ್ತದೆ. “ಕೃಪೆಯುಳ್ಳ” ಎನ್ನುವ ಪದವು ಇತರರಿಗೆ ಕೃಪೆಯನ್ನು ತೋರಿಸುವ ಒಬ್ಬ ವ್ಯಕ್ತಿಯನ್ನು ವಿವರಿಸುತ್ತಾ ಹೇಳುತ್ತದೆ.

- ಪಾಪಾತ್ಮಗಳಾಗಿರುವ ಮನುಷ್ಯರ ವಿಷಯದಲ್ಲಿ ದೇವರ ಕೃಪೆ ಉಚಿತವಾಗಿ ಕೊಡಲ್ಪಡುತ್ತಿರುವ ಒಂದು ವರವಾಗಿರುತ್ತದೆ.
- ಕೃಪೆಯ ಪರಿಕಲ್ಪನೆಯು ದಯೆಯಿಂದ ಇರುವುದನ್ನು ಮತ್ತು ಹಾನಿಕರವಾದ ಕೆಲಸಗಳನ್ನು ಅಥವಾ ಕೆಟ್ಟ ಕೆಲಸಗಳನ್ನು ಮಾಡಿದ ವ್ಯಕ್ತಿಯನ್ನು ಕ್ಷಮಿಸುವುದನ್ನು ಸೂಚಿಸುತ್ತದೆ.
- “ಕೃಪೆಯನ್ನು ಕಂಡುಕೊ” ಎನ್ನುವ ಮಾತಿಗೆ ದೇವರಿಂದ ಕರುಣೆಯನ್ನು ಮತ್ತು ಸಹಾಯವನ್ನು ಪಡೆದುಕೊಳ್ಳುವುದು ಎಂದರ್ಥ. ಇದು ಅನೇಕಬಾರಿ ದೇವರಿಗೆ ಮೆಚ್ಚುಗೆಯಾದವರಿಗೆ ಸಹಾಯ ಮಾಡುವ ಅರ್ಥವನ್ನೂ ಒಳಗೊಂಡಿರುತ್ತದೆ.

ಅನುವಾದ ಸಲಹೆಗಳು:

- “ಕೃಪೆ” ಎನ್ನುವ ಪದವನ್ನು ಅನುವಾದ ಮಾಡುವ ಇತರ ವಿಧಾನಗಳಲ್ಲಿ “ದೈವಿಕವಾದ ದಯೆ” ಅಥವಾ “ದೇವರ ದಯೆ” ಅಥವಾ “ಪಾಪಿಗಳಿಗಾಗಿ ದೇವರ ದಯೆ ಮತ್ತು ಕ್ಷಮಾಪಣೆ” ಅಥವಾ “ಕರುಣೆಯುಳ್ಳ ದಯೆ” ಎಂದೆನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಕೃಪೆಯುಳ್ಳ” ಎನ್ನುವ ಪದವನ್ನು “ಕೃಪಾಭರಿತ” ಅಥವಾ “ದಯೆ” ಅಥವಾ “ಕರುಣೆಯುಳ್ಳ” ಅಥವಾ “ಕರುಣೆಯುಳ್ಳ ದಯೆ” ಎಂದೂ ಅನುವಾದ ಮಾಡಬಹುದು.
- “ಅವನು ದೇವರ ಕಣ್ಣುಗಳಲ್ಲಿ ಕೃಪೆಯನ್ನು ಕಂಡುಕೊಂಡನು” ಎನ್ನುವ ಮಾತನ್ನು “ಅವನು ದೇವರಿಂದ ಕರುಣೆಯನ್ನು ಪಡೆದುಕೊಂಡಿದ್ದಾನೆ” ಅಥವಾ “ದೇವರು ಕರುಣೆಯುಳ್ಳವನಾಗಿ ಅವನಿಗೆ ಸಹಾಯ ಮಾಡಿದನು” ಅಥವಾ “ದೇವರು ತನ್ನ ದಯೆಯನ್ನು ಅವನಿಗೆ ತೋರಿಸಿದನು” ಅಥವಾ “ದೇವರು ಅವನನ್ನು ಇಷ್ಟಪಟ್ಟನು, ಅದಕ್ಕೆ ಅವನಿಗೆ ಸಹಾಯ ಮಾಡಿದನು” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:32-33
- ಅಪೊ.ಕೃತ್ಯ.06:8-9
- ಅಪೊ.ಕೃತ್ಯ.14:3-4
- ಕೊಲೊಸ್ಸೆ.04:5-6
- ಕೊಲೊಸ್ಸೆ.04:18
- ಆದಿ.43:28-29
- ಯಾಕೋಬ.04:6-7
- ಯೋಹಾನ.01:16-18
- ಫಿಲಿಪ್ಪ.04:21-23
- ಪ್ರಕ.22:20-21

ಪದ ಡೇಟಾ:

- Strong's: H2580, H2587, H2589, H2603, H8467, G2143, G5485, G5543

ಕೆಟ್ಟ, ದುಷ್ಟ, ದುಷ್ಟತನ

ಪದದ ಅರ್ಥವಿವರಣೆ:

"ಕೆಟ್ಟ" ಮತ್ತು "ದುಷ್ಟ" ಎನ್ನುವ ಪದಗಳು ದೇವರ ಪರಿಶುದ್ಧ ಗುಣಲಕ್ಷಣಗಳಿಗೆ ಮತ್ತು ಆತನ ಚಿತ್ತಕ್ಕೆ ವಿರುದ್ಧಾಗಿರುವ ಪ್ರತಿಯೊಂದು ಕಾರ್ಯವನ್ನು ಸೂಚಿಸುತ್ತವೆ.

- "ಕೆಟ್ಟ" ಎನ್ನುವ ಪದವು ಒಬ್ಬ ವ್ಯಕ್ತಿಯ ನಡತೆಯನ್ನು ಸೂಚಿಸುವಾಗ, "ದುಷ್ಟ" ಎನ್ನುವುದು ಒಬ್ಬ ವ್ಯಕ್ತಿಯ ನಡತೆಗಿಂತ ಹೆಚ್ಚಾದ ಕೆಟ್ಟತನವನ್ನು ಸೂಚಿಸಬಹುದು. ಆದರೆ, ಎರಡು ಪದಗಳು ಅರ್ಥ ಕೊಡುವುದರಲ್ಲಿ ಒಂದೇ ಅರ್ಥವನ್ನು ಕೊಡುತ್ತವೆ.
- "ದುಷ್ಟತನ" ಎನ್ನುವ ಪದವು ಜನರು ದುಷ್ಟ ಕಾರ್ಯಗಳನ್ನು ಮಾಡುವಾಗ ಉಂಟಾಗುವ ಸ್ಥಿತಿಯನ್ನು ಸೂಚಿಸುತ್ತದೆ.
- ಕೆಟ್ಟತನಕ್ಕೆ ಫಲಿತಗಳು ಸ್ಪಷ್ಟವಾಗಿ ತೋರಿಸಲ್ಪಟ್ಟಿವೆ, ಜನರು ಇತರರನ್ನು ಸಾಯಿಸುವುದು, ಅವರ ವಸ್ತುಗಳನ್ನು ಕದಿಯುವುದು, ಸುಳ್ಳುಸುದ್ದಿ ಹೇಳುವುದರ ಮೂಲಕ, ಕ್ರೂರರಾಗಿ ಇರುವುದರ ಮೂಲಕ ಮತ್ತು ಕರುಣೆಯಿಲ್ಲದವರಾಗಿ ಇರುವುದರ ಮೂಲಕ ಯಾವರೀತಿ ಹಾನಿ ಮಾಡುತ್ತಾರೆಂದು ಹೇಳಲ್ಪಟ್ಟಿದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, "ಕೆಟ್ಟ" ಮತ್ತು "ದುಷ್ಟ" ಎನ್ನುವ ಪದಗಳನ್ನು "ಚೆನ್ನಾಗಿಲ್ಲದಿರುವುದು" ಅಥವಾ "ಪಾಪಪೂರ್ಣವಾದದ್ದು" ಅಥವಾ "ಅನೈತಿಕವಾದದ್ದು" ಎಂದೂ ಅನುವಾದ ಮಾಡಬಹುದು.
- ಈ ಪದವನ್ನು ಅನುವಾದ ಮಾಡುವ ಇನ್ನೊಂದು ವಿಧಾನಗಳಲ್ಲಿ "ಒಳ್ಳೆಯದಲ್ಲ" ಅಥವಾ "ನೀತಿಯಲ್ಲದ್ದು" ಅಥವಾ "ನೈತಿಕತೆಯಿಲ್ಲದ್ದು" ಎನ್ನುವ ಪದಗಳನ್ನು ಉಪಯೋಗಿಸಬಹುದು.
- ಅನುವಾದ ಮಾಡುವ ಭಾಷೆಯಲ್ಲಿ ಉಪಯೋಗಿಸುವ ಪದಗಳು ಸಂದರ್ಭಕ್ಕೆ ತಕ್ಕಂತೆ ಸ್ವಾಭಾವಿಕವಾಗಿ ಇರುವ ಪದಗಳು ಅಥವಾ ಮಾತುಗಳನ್ನು ಉಪಯೋಗಿಸಲು ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಅವಿಧೇಯತೆ, ಪಾಪ, ಒಳ್ಳೆಯದು, ನೀತಿ, ದೆವ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.24:10-11
- 1 ತಿಮೊಥೆ.06:9-10
- 3 ಯೋಹಾನ.01:9-10
- ಆದಿ.02:15-17
- ಆದಿ.06:5-6
- ಯೋಬ.01:1-3
- ಯೋಬ.08:19-20
- ನ್ಯಾಯಾ.09:55-57
- ಲೂಕ.06:22-23
- ಮತ್ತಾಯ.07:11-12
- ಜ್ಞಾನೋ.03:7-8
- ಕೀರ್ತನೆ.022:16-17

ಸತ್ಯವೇದದಿಂದ ಉದಾಹರಣೆಗಳು:

- **02:04** "ನೀವು ಇದನ್ನು ತಿಂದ ಮರುಕ್ಷಣವೇ, ನೀವು ದೇವರಂತೆ ಆಗುತ್ತೀರಿ ಮತ್ತು ಆತನಿಗೆ ತಿಳಿದಿರುವಂತೆ ನಿಮಗೆ ಕೂಡ ಒಳ್ಳೆಯದು _ ಕೆಟ್ಟದ್ದು _ ಎನ್ನುವ ಅರಿವು ಉಂಟಾಗುತ್ತದೆಯೆಂದು ದೇವರಿಗೆ ಗೊತ್ತು."
- **03:01** ಬಹುಕಾಲವಾದನಂತರ ಈ ಲೋಕದಲ್ಲಿ ಅನೇಕ ಜನರು ಜೀವಿಸಿದ್ದರು. ಅವರು _ **ದುಷ್ಟರಾದರು** _ ಮತ್ತು ಹಿಂಸೆಯನ್ನುಂಟು ಮಾಡುವವರಾದರು.
- **03:02** ಆದರೆ ನೋಹನು ದೇವರ ದಯೆಯನ್ನು ಪಡೆದುಕೊಂಡನು. _ **ದುಷ್ಟ** _ ಜನರ ಮಧ್ಯೆದಲ್ಲಿ ಇವನೇ ನೀತಿವಂತನಾಗಿದ್ದನು.
- **04:02** _ **ಕೆಟ್ಟದ್ದನ್ನು** _ ಮಾಡುವುದಕ್ಕೆ ಎಲ್ಲರು ಸೇರಿ ಕೆಲಸ ಮಾಡುತ್ತಿರುವುದನ್ನು ದೇವರು ನೋಡಿದರು, ಅವರು ಇನ್ನೂ ಅನೇಕ ಪಾಪ ಕಾರ್ಯಗಳನ್ನು ಮಾಡಬಹುದು.
- **08:12** "ನನ್ನನ್ನು ಗುಲಾಮನನ್ನಾಗಿ ನೀವು ಮಾರಿದಾಗ ನೀವು _ **ಕೆಟ್ಟದ್ದನ್ನು** ಮಾಡುವುದಕ್ಕೆ ಯತ್ನಿಸಿದ್ದೀರಿ, ಆದರೆ ದೇವರು ಒಳ್ಳೆಯದಕ್ಕಾಗಿ **ಕೆಟ್ಟದ್ದನ್ನು** _ ಉಪಯೋಗಿಸಿಕೊಂಡಿದ್ದಾರೆ!"
- **14:02** ಅವರು (ಕಾನಾನ್ಯರು) ಸುಳ್ಳು ದೇವರುಗಳನ್ನು ಆರಾಧನೆ ಮಾಡಿದರು ಮತ್ತು ಅನೇಕ _ **ದುಷ್ಟ** _ ಕಾರ್ಯಗಳನ್ನು ಮಾಡಿದರು.

- **17:01** ಆದರೆ ಇವನು ದೇವರಿಗೆ ವಿಧೇಯನಾಗದಂತ _ **ದುಷ್ಟ** _ ಮನುಷ್ಯನಾಗಿ ಮಾರ್ಪಟ್ಟನು, ಆದ್ದರಿಂದ ಅವನ ಸ್ಥಾನದಲ್ಲಿ ಅರಸನಾಗಿರಲು ದೇವರು ಇನ್ನೊಬ್ಬ ವ್ಯಕ್ತಿಯನ್ನು ಆರಿಸಿಕೊಂಡರು.
- **18:11** ಇಸ್ರಾಯೇಲ್ ಹೊಸ ರಾಜ್ಯದಲ್ಲಿದ್ದ ಅರಸರೆಲ್ಲರು _ **ದುಷ್ಟರಾಗಿದ್ದರು** _ .
- **29:08** ಅರಸನು ತುಂಬಾ ಹೆಚ್ಚಾದ ಸಿಟ್ಟಿನಲ್ಲಿದ್ದನು, ಅದಕ್ಕೆ ಅವನು _ **ದುಷ್ಟ** _ ದಾಸನನ್ನು ಸೆರೆಮನೆಯೊಳಗೆ ಹಾಕಿದನು, ಅವನು ತನ್ನ ಎಲ್ಲಾ ಸಾಲವನ್ನು ತೀರಿಸುವತನಕ ಆ ಸೆರೆಮನೆಯಲ್ಲಿಯೇ ಬಿದ್ದಿರುವನು.
- **45:02** ಇವನು (ಸ್ತೆಫೆನನು) ದೇವರ ಕುರಿತಾಗಿ ಮತ್ತು ಮೋಶೆಯ ಕುರಿತಾಗಿ _ **ಕೆಟ್ಟ** _ ಮಾತುಗಳನ್ನಾಡಿದ್ದನ್ನು ನಾವು ಕೇಳಿದೆವು!" ಎಂದು ಅವರು ಹೇಳಿದರು.
- **50:17** ಆತನು (ಯೇಸು) ಪ್ರತಿಯೊಬ್ಬರ ಕಣ್ಣೀರನ್ನು ಹೊರೆಸುವನು ಮತ್ತು ಅಲ್ಲಿ ಯಾವ ಶ್ರಮೆಯು, ಬಾಧೆಯು, ಅಳುವುದು, _ **ಕೆಟ್ಟತನವು** _, ನೋವು, ಅಥವಾ ಮರಣವು ಇರುವುದಿಲ್ಲ.

ಪದ ಡೇಟಾ:

- Strong's: H205, H605, H1100, H1681, H1942, H2154, H2162, H2617, H3415, H4209, H4849, H5753, H5766, H5767, H5999, H6001, H6090, H7451, H7455, H7489, H7561, H7562, H7563, H7564, G92, G113, G459, G932, G987, G988, G1426, G2549, G2551, G2554, G2555, G2556, G2557, G2559, G2560, G2635, G2636, G4151, G4189, G4190, G4191, G5337

ಕ್ರಮಶಿಕ್ಷಣೆ, ಕ್ರಮಪಡಿಸುವುದು, ಕ್ರಮಪಡಿಸಲಾಗಿದೆ, ಸ್ವಯಂ-ಕ್ರಮಶಿಕ್ಷಣೆ

ಪದದ ಅರ್ಥವಿವರಣೆ:

“ಕ್ರಮಶಿಕ್ಷಣೆ” ಎನ್ನುವ ಪದವು ನೈತಿಕವಾದ ನಡತೆಗಾಗಿ ಕೆಲವೊಂದು ನಿರ್ದಿಷ್ಟವಾದ ನಿಯಮಗಳಿಗೆ ವಿಧೇಯರಾಗುವಂತೆ ಜನರನ್ನು ತರಬೇತಿಗೊಳಿಸುವುದನ್ನು ಸೂಚಿಸುವುದು.

- ತಂದೆತಾಯಿಗಳು ತಮ್ಮ ಮಕ್ಕಳನ್ನು ನೈತಿಕವಾಗ ಮಾರ್ಗದರ್ಶನವನ್ನು ಕೊಟ್ಟು ಕ್ರಮಶಿಕ್ಷಣೆ ಕೊಡುತ್ತಾರೆ ಮತ್ತು ಅವುಗಳಿಗೆ ವಿಧೇಯರಾಗಬೇಕೆಂದು ಅವರಿಗೆ ಬೋಧನೆ ಮಾಡಿ, ಅವರನ್ನು ನಿರ್ದೇಶಿಸುತ್ತಾರೆ.
- ಅದೇರೀತಿಯಾಗಿ, ದೇವರು ಕೂಡ ತನ್ನ ಆತ್ಮೀಯ ಮಕ್ಕಳು ತಮ್ಮ ಜೀವನಗಳಲ್ಲಿ ಆರೋಗ್ಯಕರವಾದ ಆತ್ಮೀಯತೆಯನ್ನು ತೋರಿಸುವುದಕ್ಕೆ ಅಂದರೆ ಸಂತೋಷ, ಪ್ರೀತಿ, ಸಮಾಧಾನಗಳನ್ನು ತೋರಿಸುವುದಕ್ಕೆ ಸಹಾಯ ಮಾಡಲು ಆತನು ಅವರಿಗೆ ಕ್ರಮಶಿಕ್ಷಣೆಯನ್ನು ಕೊಡುತ್ತಾನೆ.
- ಕ್ರಮಶಿಕ್ಷಣೆಯಲ್ಲಿ ದೇವರನ್ನು ಮೆಚ್ಚಿಸುವ ಜೀವನ ಜೀವಿಸುವುದು ಹೇಗೆಂದು ಎನ್ನುವ ವಿಷಯಕ್ಕೆ ಸಂಬಂಧಪಟ್ಟ ವಿಷಯಗಳೆಲ್ಲವೂ ಒಳಗೊಂಡಿರುತ್ತವೆ, ಅದೇರೀತಿಯಾಗಿ ದೇವರ ಚಿತ್ತಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಖಂಡಿತವಾಗಿ ಶಿಕ್ಷೆ ಕೊಡಲಾಗುತ್ತದೆ.
- ಸ್ವಯಂ-ಕ್ರಮಶಿಕ್ಷಣೆ ಎನ್ನುವುದು ಒಬ್ಬರ ಸ್ವಂತ ಜೀವನದಲ್ಲಿ ನೈತಿಕವಾದ ಮತ್ತು ಆತ್ಮೀಯಕವಾದ ನಿಯಮಗಳನ್ನು ಅನ್ವಯಿಸುಕೊಳ್ಳುವ ಪದ್ಧತಿಯಾಗಿರುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ “ಕ್ರಮಶಿಕ್ಷಣೆ” ಎನ್ನುವ ಪದವನ್ನು “ತರಬೇತಿ ಕೊಟ್ಟು, ಆಜ್ಞಾಪಿಸು” ಅಥವಾ “ನೈತಿಕವಾಗಿ ಮಾರ್ಗದರ್ಶನ ನೀಡು” ಅಥವಾ “ತಪ್ಪುಗಳನ್ನು ಮಾಡಿದರೆ ಶಿಕ್ಷೆಯನ್ನು ಕೊಡು” ಎಂದೂ ಅನುವಾದ ಮಾಡಬಹುದು.
- “ಕ್ರಮಶಿಕ್ಷಣೆ” ಎನ್ನುವ ನಾಮಪದವನ್ನು “ನೈತಿಕವಾಗಿ ತರಬೇತಿ ಕೊಡುವುದು” ಅಥವಾ “ಶಿಕ್ಷೆ ಕೊಡುವುದು” ಅಥವಾ “ನೈತಿಕವಾಗಿ ತಿದ್ದುಪಡಿಸುವುದು” ಅಥವಾ “ನೈತಿಕವಾಗಿ ಮಾರ್ಗದರ್ಶನ ನೀಡುವುದು ಮತ್ತು ಆದೇಶ ಮಾಡುವುದು” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಎಫೆಸ.06:4
- ಇಬ್ರಿ.12:4-6
- ಜ್ಞಾನೋ.19:17-18
- ಜ್ಞಾನೋ.23:13-14

ಪದ ಡೇಟಾ:

- Strong's: H4148, G1468

ಕ್ರಿಸ್ತ, ಮೆಸ್ಸೀಯ

ಸತ್ಯಾಂಶಗಳು;

“ಮೆಸ್ಸೀಯ” ಮತ್ತು “ಕ್ರಿಸ್ತ” ಎನ್ನುವ ಪದಗಳಿಗೆ “ಅಭಿಷೇಕಿಸಲ್ಪಟ್ಟವನು ಅಥವಾ ಅಭಿಷಿಕ್ತನು” ಎಂದರ್ಥ ಮತ್ತು ಈ ಪದವು ದೇವರ ಮಗನಾಗಿರುವ ಯೇಸುವನ್ನು ಸೂಚಿಸುತ್ತಿದೆ.

- “ಮೆಸ್ಸೀಯ” ಮತ್ತು “ಕ್ರಿಸ್ತ” ಎನ್ನುವ ಎರಡೂ ಪದಗಳು ದೇವರ ಮಗನನ್ನು ಸೂಚಿಸುವುದಕ್ಕೆ ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿವೆ. ದೇವರು ಈತನನ್ನು ತನ್ನ ಜನರನ್ನು ಆಳುವುದಕ್ಕೆ ಮತ್ತು ಅವರ ಪಾಪಗಳಿಂದ, ಮರಣದಿಂದ ಬಿಡಿಸಿ ರಕ್ಷಿಸುವುದಕ್ಕೆ ಅರಸನಾಗಿ ನೇಮಿಸಿದ್ದನು.
- ಮೆಸ್ಸೀಯ ಈ ಭೂಮಿಗೆ ಬರುವುದಕ್ಕೆ ಮುಂಚೆ ಸುಮಾರು ನೂರಾರು ವರ್ಷಗಳ ಮುಂದೆ ಹಳೇ ಒಡಂಬಡಿಕೆಯಲ್ಲಿ ಮೆಸ್ಸೀಯ ಕುರಿತು ಪ್ರವಾದಿಗಳು ಅನೇಕ ಪ್ರವಾದನೆಗಳನ್ನು ಬರೆದಿದ್ದರು.
- ಈ ಪದದ ಅರ್ಥವಾಗಿರುವ “ಅಭಿಷೇಕಿಸಲ್ಪಟ್ಟವನು ಅಥವಾ ಅಭಿಷಿಕ್ತನು” ಎನ್ನುವ ಪದವು ಹಳೇ ಒಡಂಬಡಿಕೆಯಲ್ಲಿ ಈ ಭೂಲೋಕಕ್ಕೆ ಬರುವಂತಹ ಮೆಸ್ಸಯ್ಯಾನನ್ನೇ ಸೂಚಿಸುತ್ತದೆ.
- ಈ ಪ್ರವಾದನೆಗಳಲ್ಲಿ ಅನೇಕ ಪ್ರವಾದನೆಗಳನ್ನು ಯೇಸು ನೆರವೇರಿಸಿದ್ದರು ಮತ್ತು ಆತನು ಮೆಸ್ಸೀಯ ಎಂದು ನಿರೂಪಣೆಯಾಗುವುದಕ್ಕೆ ಅನೆಕವಾದ ಅದ್ಭುತ ಕಾರ್ಯಾಗಳನ್ನು ಮಾಡಿದನು; ಈ ಪ್ರವಾದನೆಗಳಲ್ಲಿ ಉಳಿದವುಗಳು ಆತನು ಹಿಂದುರಿಗಿ ಬಂದಾಗ ನೆರವೇರಿಸುತ್ತಾನೆ.
- “ಕ್ರಿಸ್ತ” ಎನ್ನುವ ಪದವು “ಕ್ರಿಸ್ತ ಯೇಸು” ಮತ್ತು "ಕ್ರಿಸ್ತನು" ಎಂದು ಸಾಮಾನ್ಯವಾಗಿ ಶೀರ್ಷಿಕೆಯಾಗಿ ಬಳಸಲಾಗುತ್ತದೆ.
- ಯೇಸು ಕ್ರಿಸ್ತ“ಕ್ರಿಸ್ತ” ನಲ್ಲಿರುವಂತೆ "ಕ್ರಿಸ್ತ" ಕೂಡ ಅವನ ಹೆಸರಿನ ಭಾಗವಾಗಿ ಬಳಸಲ್ಪಟ್ಟಿದೆ.

ಅನುವಾದ ಸಲಹೆಗಳು:

- ಈ ಪದವನ್ನು “ಅಭಿಷೇಕಿಸಲ್ಪಟ್ಟವನು” ಅಥವಾ “ದೇವರ ಅಭಿಷೇಕಿಸಲ್ಪಟ್ಟ ರಕ್ಷಕನು” ಎಂದು ಅರ್ಥ ಬರುವಂತಹ ಮಾತುಗಳಿಂದಲೂ ಅನುವಾದ ಮಾಡಬಹುದು.
- ಅನೇಕ ಭಾಷೆಗಳಲ್ಲಿ “ಕ್ರಿಸ್ತ” ಅಥವಾ “ಮೆಸ್ಸೀಯ” ಎನ್ನುವ ಪದಗಳನ್ನು ಕ್ರಿಸ್ತ ಎಂದು ಅನುವಾದ ಮಾಡದೇ ಆ ಪದವನ್ನು ಹಾಗೆಯೇ ಉಚ್ಚರಿಸಿ, ಹಾಗೆಯೇ ಬರೆಯುತ್ತಿರುತ್ತಾರೆ. (ನೋಡಿರಿ: ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)
- ಲಿಪ್ಯಂತರಣ ಮಾಡಿದ ಪದದಲ್ಲಿ ಈ ಪದದ ಅರ್ಥವಿವರಣೆಯನ್ನಿಟ್ಟು ಬರೆಯಬಹುದು, ಉದಾಹರಣೆಗೆ, “ಕ್ರಿಸ್ತ, ಅಭಿಷಿಕ್ತನು”.
- ಈ ಪದವನ್ನು ಸತ್ಯವೇದದಲ್ಲಿ ಯಾವರೀತಿ ಅನುವಾದ ಮಾಡಿದ್ದಾರೆಂದು ನೋಡಿಕೊಳ್ಳಿರಿ, ಅದರಿಂದ ಈ ಪದವನ್ನು ಸರಿಯಾಗಿ ಸೂಚಿಸುವ ಪದವನ್ನೇ ಇಟ್ಟಿದ್ದೇವೋ ಇಲ್ಲವೋ ಎಂದು ಸ್ಪಷ್ಟವಾಗುತ್ತದೆ.
- “ಮೆಸ್ಸೀಯ” ಮತ್ತು “ಕ್ರಿಸ್ತ” ಎನ್ನುವ ಪದಗಳಿಗೆ ಅನುವಾದವು ಸಂದರ್ಭಕ್ಕೆ ತಕ್ಕಂತೆ ಇದೆಯೋ ಇಲ್ಲವೋ ಎಂದು ನೋಡಿಕೊಳ್ಳಿರಿ. ಇವೆರಡು ಒಂದೇ ವಚನದಲ್ಲಿ ಕಾಣಿಸುವ ವಚನವನ್ನು ನೋಡಿರಿ (ಯೋಹಾನ.1:41).

(ಇದನ್ನು ಸಹ ನೋಡಿರಿ: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೇವರ ಮಗ, ದಾವೀದ, ಯೇಸು, ಅಭಿಷಿಕ್ತ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.05:1-3
- ಅಪೊ.ಕೃತ್ಯ.02:34-36
- ಅಪೊ.ಕೃತ್ಯ.05:40-42
- ಯೋಹಾನ.01:40-42
- ಯೋಹಾನ.03:27-28
- ಯೋಹಾನ.04:25-26
- ಲೂಕ.02:10-12
- ಮತ್ತಾಯ.01:15-17

ಸತ್ಯವೇದದಿಂದ ಉದಾಹರಣೆಗಳು:

- **17:07** ಪಾಪದಿಂದ ಲೋಕದ ಜನರನ್ನು ರಕ್ಷಿಸುವ ದೇವರು ಆಯ್ಕೆಮಾಡಿಕೊಂಡವನೇ _ **ಮೆಸ್ಸೀಯ**_.
- **17:08** ಇದು ನಡೆಯುವುದಕ್ಕಾಗಿ, _ ಮೆಸ್ಸೀಯ _ ಬರುವುದಕ್ಕೆ ಮುಂಚಿತವಾಗಿ ಇಸ್ರಾಯೇಲ್ಯರು ಸುಮಾರು 1,000 ವರ್ಷಗಳ ಕಾಲ ಎದುರುನೋಡ ಬೇಕಾಗಿತ್ತು.
- **21:01** ಆರಂಭದಲ್ಲಿಯೇ ದೇವರು _ **ಮೆಸ್ಸೀಯನನ್ನು** _ ಕಳುಹಿಸಬೇಕೆಂದು ಪ್ರಣಾಳಿಕೆ ಮಾಡಿದ್ದನು.
- **21:04** _ಮೆಸ್ಸೀಯ _ ದಾವೀದನ ಸಂತಾನದವರಲ್ಲಿ ಒಬ್ಬನಾಗಿರುವನೆಂದು ದೇವರು ಅರಸನಾದ ದಾವೀದನಿಗೆ ವಾಗ್ದಾನ ಮಾಡಿದ್ದನು.
- **21:05** _ ಮೆಸ್ಸೀಯ _ ಹೊಸ ಒಡಂಬಡಿಕೆಯನ್ನು ಆರಂಭಿಸುವನು.

- **21:06** _ ಮೆಸ್ಸೀಯ _ ಪ್ರವಾದಿ, ಯಾಜಕ ಮತ್ತು ಅರಸನಾಗಿರುತ್ತಾನೆಂದು ದೇವರ ಪ್ರವಾದಿಗಳೂ ಹೇಳಿದ್ದರು.
- **21:09** _ **ಮೆಸ್ಸೀಯ** _ ಕನ್ಯೆಯಿಂದ ಹುಟ್ಟಿ ಬರುತ್ತಾನೆಂದು ಪ್ರವಾದಿಯಾದ ಯೆಶಯಾ ಪ್ರವಾದಿಸಿದನು.
- **43:07** "ನಿನ್ನ _ **ಪವಿತ್ರನಿಗೆ** _ ಕೊಳೆಯಲು ಬಿಡಲಾರೆ" ಎಂದು ಹೇಳುವ ಪ್ರವಾದನೆಯನ್ನು ನೆರವೇರಿಸಲು ದೇವರು ಆತನನ್ನು ತಿರುಗಿ ಎಬ್ಬಿಸಿದನು.
- **43:09** _"ಯೇಸು ಒಡೆಯನಾಗಿರಲು ಮತ್ತು _ ಮೆಸ್ಸೀಯಯಾಗಿರಲು" ದೇವರ ಕಾರಣವಾಗಿದ್ದಾರೆಂದು ನಿಶ್ಚಯವಾಗಿ ತಿಳಿದುಕೊಳ್ಳಿರಿ!
- **43:11** "ನಿಮ್ಮಲ್ಲಿ ಪ್ರತಿಯೊಬ್ಬರೂ ಮಾನಸಾಂತರ ಹೊಂದಬೇಕು ಮತ್ತು ಯೇಸು _ **ಕ್ರಿಸ್ತನ** _ ನಾಮದಲ್ಲಿ ದೀಕ್ಷಾಸ್ನಾನ ಹೊಂದಬೇಕು, ಯಾಕಂದರೆ ಇದರಿಂದ ದೇವರು ನಿಮ್ಮ ಪಾಪಗಳನ್ನು ಕ್ಷಮಿಸುತ್ತಾನೆ" ಎಂದು ಪೇತ್ರನು ಉತ್ತರ ಕೊಟ್ಟನು.
- **46:06** ಯೇಸು ದೇವರೇ _ **ಮೆಸ್ಸೀಯ** _ ಎಂದು ಸೌಲನು ಯೆಹೂದ್ಯರೊಂದಿಗೆ ವಾದಿಸಿದನು.

ಪದ ಡೇಟಾ:

- Strong's: H4899, G3323, G5547

ಕ್ರಿಸ್ತನಲ್ಲಿ, ಯೇಸುವಿನಲ್ಲಿ, ಕರ್ತನಲ್ಲಿ, ಆತನಲ್ಲಿ

ಪದದ ಅರ್ಥವಿವರಣೆ:

“ಕ್ರಿಸ್ತನಲ್ಲಿ” ಎನ್ನುವ ಮಾತು ಮತ್ತು ಅದಕ್ಕೆ ಸಂಬಂಧಪಟ್ಟ ಮಾತುಗಳು ಯೇಸುಕ್ರಿಸ್ತನಲ್ಲಿ ನಂಬಿಕೆಯನ್ನಿಡುವುದರ ಮೂಲಕ ಆತನ ಸಂಬಂಧದಲ್ಲಿರುವ ಸ್ಥಿತಿಯನ್ನು ಅಥವಾ ಸ್ಥಾನವನ್ನು ಸೂಚಿಸುತ್ತದೆ.

- “ಕ್ರಿಸ್ತಯೇಸುವಿನಲ್ಲಿ, ಯೇಸುಕ್ರಿಸ್ತನಲ್ಲಿ, ಕರ್ತನಾದ ಯೇಸುವಿನಲ್ಲಿ, ಕರ್ತನಾದ ಯೇಸು ಕ್ರಿಸ್ತನಲ್ಲಿ” ಎನ್ನುವ ಇತರ ಸಂಬಂಧಿತವಾದ ಮಾತುಗಳು ಒಳಗೊಂಡಿರುತ್ತವೆ.
- “ಕ್ರಿಸ್ತನಲ್ಲಿ” ಎನ್ನುವ ಪದಕ್ಕೆ ಬರುವ ಸಾಧಾರಣವಾದ ಅರ್ಥಗಳಲ್ಲಿ, “ನೀವು ಕ್ರಿಸ್ತನಿಗೆ ಸಂಬಂಧಪಟ್ಟಿರುವದರಿಂದ” ಅಥವಾ “ನೀವು ಕ್ರಿಸ್ತನೊಂದಿಗಿರುವ ಸಂಬಂಧದ ಮೂಲಕ” ಅಥವಾ “ನಿಮಗೆ ಕ್ರಿಸ್ತನಲ್ಲಿರುವ ನಂಬಿಕೆಯ ಆಧಾರದ ಮೇಲೆ” ಎನ್ನುವ ಅರ್ಥಗಳು ಬರುತ್ತವೆ.
- ಯೇಸುವನ್ನು ನಂಬುವ ಸ್ಥಿತಿಯಲ್ಲಿರುವುದು ಮತ್ತು ಆತನ ಶಿಷ್ಯರಾಗಿರುವುದು ಎನ್ನುವ ಒಂದೇ ಅರ್ಥವನ್ನು ಈ ಎಲ್ಲಾ ಸಂಬಂಧಿತವಾದ ಪದಗಳು ಹೊಂದಿರುತ್ತವೆ.
- ಸೂಚನೆ: ಕೆಲವೊಂದುಬಾರಿ “ಯಲ್ಲಿ” ಎನ್ನುವ ಪದವು ಕ್ರಿಯೆಗೆ ಸಂಬಂಧಪಟ್ಟಿರುತ್ತದೆ. ಉದಾಹರಣೆಗೆ, “ಕ್ರಿಸ್ತನಲ್ಲಿ ಹಂಚು” ಎನ್ನುವುದಕ್ಕೆ ಕ್ರಿಸ್ತನನ್ನು ತಿಳಿದುಕೊಳ್ಳುವುದರ ಮೂಲಕ ಬರುವ ಪ್ರಯೋಜನಗಳನ್ನು “ಹಂಚುವುದರಲ್ಲಿರು” ಎಂದರ್ಥ. ಕ್ರಿಸ್ತ”ನಲ್ಲಿ ಮಹಿಮೆ” ಎನ್ನುವುದಕ್ಕೆ ಯೇಸು ಯಾರೆಂದು ತಿಳಿದು ಮತ್ತು ಆತನು ಮಾಡಿದ ಕಾರ್ಯಕ್ಕಾಗಿ ದೇವರನ್ನು ಸ್ತುತಿಸು ಮತ್ತು ಸಂತೋಷವಾಗಿರು ಎಂದರ್ಥ. ಕ್ರಿಸ್ತ”ನಲ್ಲಿ ನಂಬಿಕೆಯಿಡುವುದು” ಎನ್ನುವುದಕ್ಕೆ ಆತನನ್ನು ರಕ್ಷಕನನ್ನಾಗಿ ನಂಬಿ, ಆತನ ಕುರಿತಾಗಿ ತಿಳಿದುಕೊಳ್ಳುವುದು ಎಂದರ್ಥ.

ಅನುವಾದ ಸಲಹೆಗಳು:

- ಸಂದರ್ಭಾನುಗುಣವಾಗಿ, “ಕ್ರಿಸ್ತನಲ್ಲಿ” ಮತ್ತು “ಕರ್ತನಲ್ಲಿ” (ಮತ್ತು ಅದಕ್ಕೆ ಸಂಬಂಧಪಟ್ಟ ಮಾತುಗಳನ್ನು) ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ ಅನೇಕ ಮಾತುಗಳು ಒಳಗೊಂಡಿರುತ್ತವೆ:
- “ಕ್ರಿಸ್ತನಿಗೆ ಸಂಬಂಧಪಟ್ಟವರು”
- “ಕ್ರಿಸ್ತನಲ್ಲಿ ನೀನು ನಂಬಿಕೆ ಇಟ್ಟಿರುವುದರಿಂದ”
- “ಕ್ರಿಸ್ತನು ನಮ್ಮನ್ನು ರಕ್ಷಿಸಿದ್ದರಿಂದ”
- “ಕರ್ತನ ಸೇವೆಯಲ್ಲಿ”
- “ಕರ್ತನ ಮೇಲೆ ಆತುಕೊಳ್ಳುವುದು”
- “ಕರ್ತನು ಮಾಡಿದ ಕಾರ್ಯದಿಂದ”
- ಕ್ರಿಸ್ತ”ನಲ್ಲಿ ನಂಬಿಕೆಯಿಟ್ಟಿರುವ” ಜನರು ಅಥವಾ ಕ್ರಿಸ್ತನಲ್ಲಿ “ವಿಶ್ವಾಸವನ್ನು ಹೊಂದಿರುವ” ಜನರು ಕ್ರಿಸ್ತನು ಹೇಳಿದ ಪ್ರತಿಯೊಂದು ಮಾತನ್ನು ನಂಬುತ್ತಾರೆ ಮತ್ತು ಆತನು ಕಲ್ವಾರಿ ಶಿಲುಬೆಯಲ್ಲಿ ಮಾಡಿರುವ ತ್ಯಾಗದಿಂದ ಮತ್ತು ಅವರ ಪಾಪಗಳಿಗೆ ಸಲ್ಲಿಸಿದ ಕ್ರಯಧನದಿಂದ ಅವರನ್ನು ರಕ್ಷಿಸಿಕೊಳ್ಳುವುದಕ್ಕೆ ಆತನಲ್ಲಿ ಭರವಸೆ ಇಡುತ್ತಾರೆ, ಕೆಲವೊಂದು ಭಾಷೆಗಳಲ್ಲಿ ಒಂದೇ ಪದವನ್ನು ಹೊಂದಿರುತ್ತಾರೆ, “ಆತನಲ್ಲಿ ನಂಬಿಕೆಯಿಡು” ಅಥವಾ “ಆತನಲ್ಲಿ ಹಂಚು” ಅಥವಾ “ಆತನಲ್ಲಿ ಭರವಸೆವಿಡು” ಎನ್ನುವ ಕ್ರಿಯಾಪದಗಳನ್ನು ಉಪಯೋಗಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ಕರ್ತನು, ಯೇಸು, ನಂಬು, ವಿಶ್ವಾಸ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.02:05
- 2 ಕೊರಿಂಥ.02:17
- 2 ತಿಮೊಥೆ.01:01
- ಗಲಾತ್ಯ.01:22
- ಗಲಾತ್ಯ.02:17
- ಫಿಲೇ.01:06
- ಪ್ರಕ.01:10
- ರೋಮಾ.09:01

ಪದ ಡೇಟಾ:

- Strong's: G1519, G2962, G5547

ಕ್ರಿಸ್ತವಿರೋಧಿ, ಕ್ರಿಸ್ತವಿರೋಧಿಗಳು

ಪದದ ಅರ್ಥವಿವರಣೆ:

“ಕ್ರಿಸ್ತವಿರೋಧಿ” ಎನ್ನುವ ಪದವು ಯೇಸು ಕ್ರಿಸ್ತನಿಗೆ ಅಥವಾ ಆತನ ಬೋಧನೆಗಳಿಗೆ ವಿರುದ್ಧವಾಗಿ ಮತ್ತು ಆತನ ಕಾರ್ಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವ ವ್ಯಕ್ತಿಯನ್ನು ಸೂಚಿಸುತ್ತದೆ. ಪ್ರಪಂಚದಲ್ಲಿ ಕ್ರಿಸ್ತವಿರೋಧಿಗಳು ಅನೇಕರಿದ್ದಾರೆ.

- ಯೇಸುಕ್ರಿಸ್ತ ಮೆಸ್ಸಯ್ಯಾ ಅಲ್ಲವೆಂದು ಅಥವಾ ಯೇಸು ದೇವರೂ ಅಲ್ಲ ಮತ್ತು ಮನುಷ್ಯನೂ ಅಲ್ಲವೆಂದು ಹೇಳಿ ಮನುಷ್ಯರನ್ನು ಮೋಸಗೊಳಿಸುವ ವ್ಯಕ್ತಿಯೇ ಕ್ರಿಸ್ತವಿರೋಧಿಯೆಂದು ಅಪೊಸ್ತಲನಾದ ಯೋಹಾನನು ಬರೆಯುತ್ತಿದ್ದಾನೆ.
- ಯೇಸುವಿನ ಕಾರ್ಯಗಳನ್ನು ತಿರಸ್ಕರಿಸುವ ಕ್ರಿಸ್ತವಿರೋಧಿಯ ಸಾಮಾನ್ಯ ಆತ್ಮ ಪ್ರಪಂಚದಲ್ಲಿದೆಯೆಂದು ಸತ್ಯವೇದವು ಕೂಡ ಬೋಧಿಸುತ್ತಿದೆ.
- ಹೊಸ ಒಡಂಬಡಿಕೆ ಪುಸ್ತಕದ ಪ್ರಕಟನೆ ಗ್ರಂಥದ 13ನೇ ಅಧ್ಯಾಯದಲ್ಲಿನ ಮೃಗವನ್ನು ಸಾಮಾನ್ಯವಾಗಿ ಕೊನೆಯ “ಕ್ರಿಸ್ತವಿರೋಧಿ” ಎಂದು ಗುರುತಿಸಲ್ಪಡುತ್ತಾನೆ, ಇವನು ಅಂತ್ಯಕಾಲದಲ್ಲಿ ಹೊರಬರುತ್ತಾನೆ. ದೇವರ ಜನರನ್ನು ನಾಶಗೊಳಿಸಲು ಈ ಮನುಷ್ಯನು ಪ್ರಯತ್ನಿಸುತ್ತಾನೆ, ಆದರೆ ಇವನು ಯೇಸುವಿನ ಮೂಲಕ ಸೋಲಿಸಲ್ಪಡುತ್ತಾನೆ.
- ಅಪೊಸ್ತಲನಾದ ಪೌಲನು ಈ ಮನುಷ್ಯನನ್ನು "ಅಧರ್ಮಸ್ವರೂಪನು" ಎಂದು ಸೂಚಿಸುತ್ತಾನೆ (2 ಥೆಸ 2:3) ಮತ್ತು ಕ್ರೈಸ್ತ ವಿರೋಧಿಯ ಸಾಮಾನ್ಯ ಆತ್ಮವನ್ನು "ಅಧರ್ಮಸ್ವರೂಪನ ಗುಪ್ತ ಬಲ" ಎಂದು ಹೇಳುತ್ತಾನೆ.

(2 ಥೆಸ. 2:7).

ಅನುವಾದ ಸಲಹೆಗಳು:

- ಈ ಪದವನ್ನು ಇನ್ನೊಂದು ರೀತಿಯಲ್ಲಿ ಅನುವಾದ ಮಾಡುವದರಲ್ಲಿ “ಕ್ರಿಸ್ತನ-ಎದುರಾಳಿ” ಅಥವಾ “ಕ್ರಿಸ್ತನ ಶತ್ರು” ಅಥವಾ “ಕ್ರಿಸ್ತನಿಗೆ ವಿರುದ್ಧವಾಗಿ ನಡೆದುಕೊಳ್ಳುವ ವ್ಯಕ್ತಿ” ಎನ್ನುವ ಪದಗಳನ್ನೂ ಸೇರಿಸಬಹುದು.
- “ಕ್ರಿಸ್ತವಿರೋಧಿಯ ಆತ್ಮವು” ಎನ್ನುವ ಮಾತು “ಕ್ರಿಸ್ತನಿಗೆ ವಿರುದ್ಧವಾಗಿ ನಡೆದುಕೊಳ್ಳುವ ಆತ್ಮ” ಅಥವಾ “ಕ್ರಿಸ್ತನ ಕುರಿತು ಸುಳ್ಳು ಬೋಧನೆಗಳನ್ನು ಮಾಡುವವರು” ಅಥವಾ “ಕ್ರಿಸ್ತನ ಕುರಿತು ಸುಳ್ಳು ಮಾತುಗಳನ್ನು ನಂಬುವ ಸ್ವಭಾವ” ಅಥವಾ “ಕ್ರಿಸ್ತನ ಕುರಿತು ಸುಳ್ಳು ಬೋಧನೆಗಳನ್ನು ಬೋಧಿಸುವ ಆತ್ಮ” ಎಂದೂ ಅನುವಾದ ಮಾಡಬಹುದು.
- ಅದೇ ರೀತಿ ಈ ಪದವನ್ನು ಜಾತೀಯ ಭಾಷೆಯಲ್ಲಿ ಅಥವಾ ಸ್ಥಳೀಯ ಭಾಷೆಯಲ್ಲಿ ಸತ್ಯವೇದ ಅನುವಾದದಲ್ಲಿ ಯಾವರೀತಿ ಅನುವಾದ ಮಾಡಿದ್ದಾರೋ ಕೂಡ ನೋಡಿರಿ. (ಅನುವಾದ ಸಲಹೆಗಳು: /ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ತೋರಿಕೆ, ಶ್ರಮೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.02:18-19
- 1 ಯೋಹಾನ.04:1-3
- 2 ಯೋಹಾನ.01:7-8

ಪದ ಡೇಟಾ:

- Strong's: G500

ಕ್ರೈಸ್ತನು

ಅರ್ಥವಿವರಣೆ:

ಯೇಸು ಪರಲೋಕಕ್ಕೆ ಹಿಂತಿರುಗಿ ಹೋದ ಮೇಲೆ ಸ್ವಲ್ಪಕಾಲವಾದನಂತರ, ಜನರು "ಕ್ರೈಸ್ತರು" ಎಂದು ಹೆಸರನ್ನು ಇಟ್ಟುಕೊಂಡರು, ಇದಕ್ಕೆ "ಕ್ರಿಸ್ತನ ಹಿಂಬಾಲಕರು" ಎಂದರ್ಥ.

- ಅಂತಿಯೋಕ್ಯ ಪಟ್ಟಣದಲ್ಲಿ ಯೇಸುವಿನ ಹಿಂಬಾಲಕರನ್ನು ಮೊಟ್ಟ ಮೊದಲು "ಕ್ರೈಸ್ತರು" ಎಂದು ಕರೆಯಲಾಯಿತು.
- ಯಾವ ಒಬ್ಬ ವ್ಯಕ್ತಿ ಯೇಸುವನ್ನು ದೇವರ ಮಗನೆಂದು ನಂಬಿರುತ್ತಾನೋ ಮತ್ತು ತನ್ನ ಪಾಪಗಳಿಂದ ತನ್ನನ್ನು ರಕ್ಷಿಸುವುದಕ್ಕೆ ಯೇಸುವನ್ನು ನಂಬಿರುತ್ತಾನೋ ಅವನೇ ಕ್ರೈಸ್ತನು.
- ನಮ್ಮ ಆಧುನಿಕ ಕಾಲದಲ್ಲಿ, "ಕ್ರೈಸ್ತನು" ಎನ್ನುವ ಪದವು ಅನೇಕಬಾರಿ ಕ್ರೈಸ್ತ ಧರ್ಮಕ್ಕೆ ಸೇರಿದವನೆಂದು ಗುರುತಿಸುವ , ಆದರೆ ಅವರು ನಿಜವಾಗಿ ಯೇಸುವನ್ನು ಹಿಂಬಾಲಿಸದವರಿಗೆ ಉಪಯೋಗಿಸುತ್ತಿದ್ದಾರೆ . ಸತ್ಯವೇದದಲ್ಲಿ "ಕ್ರೈಸ್ತನು" ಎನ್ನುವುದಕ್ಕೆ ಈ ಅರ್ಥವಲ್ಲ.
- ಯಾಕಂದರೆ ಸತ್ಯವೇದದಲ್ಲಿ "ಕ್ರೈಸ್ತನು" ಎನ್ನುವ ಪದವನ್ನು ಯಾವಾಗಲೂ ಯೇಸುವನ್ನು ನಿಜವಾಗಿ ನಂಬಿದವರಿಗೆ ಮಾತ್ರ ಸೂಚಿಸಲಾಗಿತ್ತು. ಒಬ್ಬ ಕ್ರೈಸ್ತನನ್ನು "ವಿಶ್ವಾಸಿ" ಎಂದೂ ಕರೆಯುತ್ತಾರೆ.

ಅನುವಾದದ ಸಲಹೆಗಳು:

- ಈ ಪದವನ್ನು "ಕ್ರಿಸ್ತ-ಹಿಂಬಾಲಕ" ಅಥವಾ "ಕ್ರಿಸ್ತನ ಅನುಚಾರಕ" ಅಥವಾ "ಕ್ರಿಸ್ತ-ಮನುಷ್ಯ" ಎಂದೂ ಅನುವಾದ ಮಾಡಬಹುದು.
- ಈ ಪದದ ಅನುವಾದವು ಶಿಷ್ಯನು ಅಥವಾ ಅಪೊಸ್ತಲನು ಎನ್ನುವ ಪದಗಳಿಗೆ ಉಪಯೋಗಿಸುವ ಪದಗಳಿಗಿಂತ ಭಿನ್ನವಾಗಿ ಅನುವಾದ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ಈ ಪದವನ್ನು ಅನುವಾದ ಮಾಡುತ್ತಿರುವಾಗ ಕೇವಲ ಒಂದು ಗುಂಪಿಗೆ ಮಾತ್ರವಲ್ಲದೇ, ಯೇಸುವಿನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರನ್ನು ಸೂಚಿಸುವಂತೆ ನೋಡಿಕೊಳ್ಳಿರಿ.
- ಸ್ಥಳೀಯ ಅಥವಾ ರಾಷ್ಟ್ರೀಯ ಭಾಷೆಯಲ್ಲಿರುವ ಸತ್ಯವೇದದ ಅನುವಾದಗಳಲ್ಲಿ ಈ ಪದವನ್ನು ಯಾವರೀತಿ ಅನುವಾದಿಸಿದ್ದಾರೆಂಬುದನ್ನು ಪರಿಗಣಿಸಿ. (ಅನುವಾದ ಸಲಹೆಗಳು: ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಇವುಗಳನ್ನು ಸಹ ನೋಡಿರಿ : ಅಂತಿಯೋಕ್ಯ, ಕ್ರಿಸ್ತನು, ಸಭೆ, ಶಿಷ್ಯನು, ನಂಬಿಕೆ, ಯೇಸು, ದೇವರ ಮಗ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ. 6:7-8
- 1 ಪೇತ್ರ 4:16
- ಅಪೊ.ಕೃತ್ಯ. 11:26
- ಅಪೊ.ಕೃತ್ಯ. 26:28

ಸತ್ಯವೇದದಿಂದ ಉದಾಹರಣೆಗಳು:

- **46:9** ಅಂತಿಯೋಕ್ಯದಲ್ಲಿಯೇ ಯೇಸುವಿನಲ್ಲಿ ನಂಬಿಕೆಯಿಟ್ಟವರನ್ನು ಮೊಟ್ಟ ಮೊದಲು **ಕ್ರೈಸ್ತರೆಂದು** ಕರೆಯಲಾಯಿತು.
- **47:14** ಯೇಸುವಿನ ಕುರಿತಾಗಿ ಶುಭವಾರ್ತೆಯನ್ನು ಬೋಧಿಸಲು ಮತ್ತು ಸಾರಲು ಪೌಲನು ಮತ್ತು ಇತರ _ಕ್ರೈಸ್ತ _ನಾಯಕರು ಅನೇಕ ಪಟ್ಟಣಗಳಿಗೆ ಪ್ರಯಾಣ ಮಾಡಿದರು.
- **49:15** ಯೇಸು ನಿನಗಾಗಿ ಏನು ಮಾಡಿದ್ದಾನೆಂದು ತಿಳಿದು, ಆತನಲ್ಲಿ ನೀನು ನಂಬಿಕೆ ಇಡುವುದಾದರೆ, ಆಗ ನೀನು **ಕ್ರೈಸ್ತನು** ಎಂಬುದಾಗಿ ಕರೆಯಲ್ಪಡುವಿ!
- **49:16** ನೀನು **ಕ್ರೈಸ್ತರಾಗಿದ್ದರೆ**, ಯೇಸು ಮಾಡಿದ ಕಾರ್ಯದಿಂದ ದೇವರು ನಿಮ್ಮ ಎಲ್ಲಾ ಪಾಪಗಳನ್ನು ಕ್ಷಮಿಸಿದ್ದಾನೆ.
- **49:17** ನೀನು **ಕ್ರೈಸ್ತರಾಗಿದ್ದರೂ** ಸಹ, ನೀವು ಪಾಪ ಮಾಡುವದಕ್ಕೆ ಶೋಧನೆಗೆ ಒಳಗಾಗುತ್ತೀ.
- **50:3** ಆತನು ಪರಲೋಕಕ್ಕೆ ಹಿಂತಿರುಗಿ ಹೋಗುವುದಕ್ಕೆ ಮುಂಚಿತವಾಗಿ, ಸುವಾರ್ತೆಯನ್ನು ಕೇಳದ ಪ್ರತಿಯೊಬ್ಬರಿಗೆ ನೀವು ಶುಭವಾರ್ತೆಯನ್ನು ಸಾರಿರಿ ಎಂದು ಯೇಸು **ಕ್ರೈಸ್ತರಿಗೆ** ಹೇಳಿದನು.
- **50:11** ಯೇಸು ಹಿಂದುರಿಗಿ ಬರುವಾಗ, ಮರಣ ಹೊಂದಿದ ಪ್ರತಿಯೊಬ್ಬ

ಕ್ರೈಸ್ತನು ಮರಣದಿಂದ ಎಬ್ಬಿಸಲ್ಪಡುವನು ಮತ್ತು ಆಕಾಶದಲ್ಲಿ ಆತನನ್ನು ಭೇಟಿಯಾಗುವನು.

ಪದದ ಡೇಟಾ:

- Strong's: G55460

ಕ್ರೋಧ, ಕೋಪ

ಪದದ ಅರ್ಥವಿವರಣೆ:

ಕ್ರೋಧ ಎನ್ನುವುದು ಕೆಲವೊಂದು ಬಾರಿ ಅತೀ ಹೆಚ್ಚಿನ ಕಾಲ ಇರುವ ಗಂಭೀರವಾದ ಕೋಪವನ್ನು ಸೂಚಿಸುತ್ತದೆ. ಇದು ವಿಶೇಷವಾಗಿ ಪಾಪದ ಕುರಿತಾಗಿ ದೇವರ ನೀತಿಯುತವಾದ ತೀರ್ಪನ್ನು ಮತ್ತು ದೇವರಿಗೆ ವಿರುದ್ಧವಾಗಿ ತಿರಸ್ಕಾರ ಮಾಡುವ ಜನರ ಶಿಕ್ಷೆಯನ್ನು ಸೂಚಿಸುತ್ತದೆ(ಇದು ಮಾನವ ವ್ಯಕ್ತಿಯ ವಿಷಯದಲ್ಲಿ ನಿಜವಾಗಬಹುದು).

- ಸತ್ಯವೇದದಲ್ಲಿ “ಕ್ರೋಧ” ಎನ್ನುವ ಪದವು ಸಾಧಾರಣವಾಗಿ ದೇವರಿಗೆ ವಿರುದ್ಧವಾಗಿ ಪಾಪ ಮಾಡಿದವರ ಮೇಲೆ ದೇವರು ಕೋಪಪಡುವುದನ್ನು ಸೂಚಿಸುತ್ತದೆ.
- “ದೇವರ ಕ್ರೋಧ” ಎನ್ನುವ ಮಾತು ಕೂಡ ಪಾಪಕ್ಕಾಗಿ ದೇವರು ಮಾಡುವ ತೀರ್ಪನ್ನು ಮತ್ತು ಶಿಕ್ಷೆಯನ್ನು ಸೂಚಿಸುತ್ತದೆ.
- ದೇವರ ಕ್ರೋಧ ಎನ್ನುವುದು ಯಾರ್ಯಾರು ತಮ್ಮ ಪಾಪಗಳ ವಿಷಯವಾಗಿ ಪಶ್ಚಾತ್ತಾಪ ಹೊಂದದವರಿಗೆ ದೇವರು ಕೊಡುವ ನೀತಿಯುತವಾದ ದಂಡನೆಯಾಗಿರುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, ಈ ಪದವನ್ನು ಅನುವಾದ ಬೇರೊಂದು ವಿಧಾನಗಳಲ್ಲಿ “ಗಂಭೀರವಾದ ಕೋಪ” ಅಥವಾ “ನೀತಿಯುತವಾದ ಶಿಕ್ಷೆ” ಅಥವಾ “ಕೋಪ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ದೇವರ ಕ್ರೋಧದ ಕುರಿತಾಗಿ ಮಾತನಾಡುವಾಗ, ಈ ಪದವನ್ನು ಅನುವಾದ ಮಾಡುವುದಕ್ಕೆ ಉಪಯೋಗಿಸುವ ಶಬ್ದವಾಗಲಿ ಅಥವಾ ಮಾತಾಗಲಿ ಕ್ರೋಧದ ಪಾಪದ ಯೋಗ್ಯತೆಯನ್ನು ಸೂಚಿಸದಂತೆ ನೋಡಿಕೊಳ್ಳಿರಿ. ದೇವರ ಕ್ರೋಧವು ನ್ಯಾಯವಾದದ್ದು ಮತ್ತು ಪರಿಶುದ್ಧ ವಾದದ್ದು.

(ಈ ಪದಗಳನ್ನು ಸಹ ನೋಡಿರಿ : ತೀರ್ಪು ಮಾಡು, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಥೆಸ್ಸ.01:8-10
- 1 ತಿಮೊಥೆ.02:8-10
- ಲೂಕ.03:7
- ಲೂಕ.21:23
- ಮತ್ತಾಯ.03:07
- ಪ್ರಕ.14:10
- ರೋಮಾ.01:18
- ರೋಮ.05:8-09

ಪದ ಡೇಟಾ:

- Strong's: H639, H2197, H2528, H2534, H2740, H3707, H3708, H5678, H7107, H7109, H7110, H7265, H7267, G2372, G3709, G3949, G3950

ಕ್ಷಮಿಸು, ಕ್ಷಮಿಸಲ್ಪಡು, ಕ್ಷಮಾಪಣೆ, ಕ್ಷಮೆ, ಕ್ಷಮಿಸುವಿಕೆ

ಪದದ ಅರ್ಥವಿವರಣೆ:

ಒಬ್ಬರನ್ನು ಕ್ಷಮಿಸು ಎನ್ನುವುದಕ್ಕೆ ಅವರು ನೋಯಿಸುವಂತಹ ಕೆಲಸ ಮಾಡಿದ್ದರೂ ಆ ವ್ಯಕ್ತಿಯ ಮೇಲೆ ದ್ವೇಷವನ್ನು ಇಟ್ಟುಕೊಳ್ಳಬೇಡ. "ಕ್ಷಮಾಪಣೆ" ಎನ್ನುವುದು ಒಬ್ಬರನ್ನು ಕ್ಷಮಿಸುವ ಕ್ರಿಯೆಯನ್ನು ಸೂಚಿಸುತ್ತದೆ.

- ಒಬ್ಬರನ್ನು ಕ್ಷಮಿಸುವುದು ಎನ್ನುವುದಕ್ಕೆ ಆ ವ್ಯಕ್ತಿ ಮಾಡಿದ ತಪ್ಪು ಕೆಲಸಕ್ಕೆ ಅಥವಾ ಪಾಪಗಳಿಗೆ ಯಾವ ಶಿಕ್ಷೆಯನ್ನು ಕೊಡದೇ ಇರುವುದು ಎಂದರ್ಥ.
- "ಸಾಲವನ್ನು ಕ್ಷಮಿಸು" ಎಂದೆನ್ನುವ ಮಾತಿನ ಅರ್ಥದಂತೆ ಈ ಪದವನ್ನು ಅಲಂಕಾರಿಕವಾಗಿ ಉಪಯೋಗಿಸಿದರೆ, "ರದ್ದುಗೊಳಿಸು" ಎನ್ನುವ ಅರ್ಥ ಬರುತ್ತದೆ,
- ಜನರು ತಮ್ಮ ಪಾಪಗಳನ್ನು ಒಪ್ಪಿಕೊಂಡರೆ, ಯೇಸುವು ಶಿಲುಬೆಯ ಮೇಲೆ ಮಾಡಿದ ತ್ಯಾಗಪೂರಿತವಾದ ಮರಣದ ಆಧಾರದ ಮೇಲೆ ದೇವರು ಅವರನ್ನು ಕ್ಷಮಿಸುವನು.
- ನಾನು ಕ್ಷಮಿಸಿದಂತೆಯೇ ನೀವೂ ಇತರರನ್ನು ಕ್ಷಮಿಸಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದ್ದಾನೆ.

"ಕ್ಷಮೆ" ಎನ್ನುವ ಪದಕ್ಕೆ ಕ್ಷಮಿಸುವುದು ಮತ್ತು ಒಬ್ಬರು ಮಾಡಿದ ಪಾಪಕ್ಕೆ ಅವರನ್ನು ಶಿಕ್ಷಿಸದಿರುವುದು ಎನ್ನುವ ಅರ್ಥಗಳು ಇವೆ.

- ಈ ಪದಕ್ಕೆ "ಕ್ಷಮಿಸು" ಎನ್ನುವ ಒಂದೇ ರೀತಿಯ ಅರ್ಥವು ಹೊಂದಿರುತ್ತದೆ, ಆದರೆ ಅಪರಾಧ ಭಾವನೆಗೆ ಒಳಗಾದ ವ್ಯಕ್ತಿಯನ್ನು ಶಿಕ್ಷಿಸಬಾರದೆನ್ನುವ ಸಾಧಾರಣವಾದ ನಿರ್ಣಯವನ್ನು ತೆಗೆದುಕೊಳ್ಳುವ ಅರ್ಥವನ್ನು ಒಳಗೊಂಡಿರುತ್ತದೆ.
- ನ್ಯಾಯಾಲಯದಲ್ಲಿ ನ್ಯಾಯಾಧೀಶರು ಅಪರಾಧ ಮಾಡಿದ ವ್ಯಕ್ತಿಯನ್ನು ಕ್ಷಮಿಸುವ ಅವಕಾಶವಿದೆ.
- ನಾವು ಪಾಪದ ವಿಷಯದಲ್ಲಿ ಅಪರಾಧಕ್ಕೆ ಒಳಗಾಗಿದ್ದರೂ, ಯೇಸುಕ್ರಿಸ್ತ ನಮ್ಮನ್ನು ನರಕಕ್ಕೆ ಕಳುಹಿಸುವ ಶಿಕ್ಷೆಯನ್ನು ಕೊಡದೇ, ಆತನು ಶಿಲುಬೆಯಲ್ಲಿ ಮಾಡಿದ ತ್ಯಾಗಪೂರಿತವಾದ ಮರಣದಿಂದ ನಮ್ಮನ್ನು ಕ್ಷಮಿಸಿದ್ದಾನೆ

ಅನುವಾದ ಸಲಹೆಗಳು:

- ಸಂದರ್ಭಕ್ಕೆ ಅನುಸಾರವಾಗಿ, "ಕ್ಷಮಿಸು" ಎನ್ನುವ ಪದವನ್ನು "ಕ್ಷಮೆ" ಅಥವ "ರದ್ದುಗೊಳಿಸು" ಅಥವಾ "ಬಿಡುಗಡೆ ಮಾಡು" ಅಥವಾ (ಒಬ್ಬರ ಮೇಲೆ) "ಯಾವ ದ್ವೇಷವನ್ನು ಇಟ್ಟುಕೊಳ್ಳಬೇಡ" ಎಂದೂ ಅನುವಾದ ಮಾಡಬಹುದು.
- "ಕ್ಷಮಾಪಣೆ" ಎನ್ನುವ ಪದವನ್ನು "ಅಸಮಾಧಾನವನ್ನು ಅಭ್ಯಾಸ ಮಾಡಬೇಡ" ಅಥವಾ "ಅಪರಾಧಿ ಎಂದು ಯಾರನ್ನೂ ನಿರ್ಧರಿಸಬೇಡ" ಅಥವಾ "ಕ್ಷಮಿಸುವ ಕ್ರಿಯೆ" ಎಂದೂ ಅರ್ಥ ಬರುವ ಮಾತುಗಳಿಂದ ಅನುವಾದ ಮಾಡಬಹುದು.
- ಕ್ಷಮಿಸುವುದಕ್ಕೆ ಸಾಧಾರಣವಾಗಿ ನಿರ್ಣಯ ತೆಗೆದುಕೊಳ್ಳುವುದಕ್ಕೆ ಬೇರೊಂದು ಪದವು ಭಾಷೆಯಲ್ಲಿ ಇರುವುದಾದರೆ, ಅದನ್ನು "ಕ್ಷಮೆ" ಎನ್ನುವ ಪದಕ್ಕೆ ಬದಲಾಗಿ ಉಪಯೋಗಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ಅಪರಾಧ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.50:17
- ಅರಣ್ಯ.14:17-19
- ಧರ್ಮೋ.29:20-21
- ಯೆಹೋ.24:19-20
- 2 ಅರಸ.05:17-19
- ಕೀರ್ತನೆ.025:11
- ಕೀರ್ತನೆ.025:17-19
- ಯೆಶಯಾ.55:6-7
- ಯೆಶಯಾ.40:02
- ಲೂಕ.05:21
- ಅಪೊ.ಕೃತ್ಯ.08:22
- ಎಫೆಸ.04:31-32
- ಕೊಲೊಸ್ಸೆ.03:12-14
- 1 ಯೋಹಾನ.02:12-14

ಸತ್ಯವೇದ ಕತೆಗಳಿಂದ ಉದಾಹರೆಣೆಗಳು:

- **07:10** ಆದರೆ ಏಸಾವನು ಯಾಕೋಬನನ್ನು _ ಕ್ಷಮಿಸಿದ್ದನು _ ಮತ್ತು ಅವರು ಒಬ್ಬರನ್ನೊಬ್ಬರು ನೋಡಿಕೊಳ್ಳುವುದಕ್ಕೆ ಸಂತೋಷಪಟ್ಟರು.

- **13:15** ಆದನಂತರ ಮೋಶೆ ಮತ್ತೊಮ್ಮೆ ಪರ್ವತವನ್ನು ಏರಿದನು ಮತ್ತು ದೇವರೇ ಈ ಜನರನ್ನು _ ಕ್ಷಮಿಸು _ ಎಂದು ಪ್ರಾರ್ಥನೆ ಮಾಡಿದನು. ದೇವರು ಮೋಶೆಯ ಪ್ರಾರ್ಥನೆಯನ್ನು ಕೇಳಿ, ಅವರನ್ನು _ ಕ್ಷಮಿಸಿದನು _.
- **17:13** ದಾವೀದನು ತನ್ನ ಪಾಪಕ್ಕಾಗಿ ಪಶ್ಚಾತ್ತಾಪಪಟ್ಟನು ಮತ್ತು ದೇವರು ಅವನನ್ನು _ ಕ್ಷಮಿಸಿದನು _.
- **21:05** ಹೊಸ ಒಡಂಬಡಿಕೆಯಲ್ಲಿ ದೇವರು ತನ್ನ ಧರ್ಮಶಾಸ್ತ್ರವನ್ನು ತನ್ನ ಜನರ ಮೇಲೆ ಬರೆಯುತ್ತಾನೆ, ಜನರು ದೇವರನ್ನು ವೈಯುಕ್ತಿಕವಾಗಿ ತಿಳಿದುಕೊಳ್ಳುತ್ತಾರೆ, ಅವರು ಆತನ ಪ್ರಜೆಯಾಗಿರುವರು, ಮತ್ತು ದೇವರು ಆವರ ಪಾಪಗಳನ್ನು _ ಕ್ಷಮಿಸುವನು _.
- **29:01** “ಬೋಧಕನೆ, ನನ್ನ ಸಹೋದರನು ನನಗೆ ವಿರುದ್ಧವಾಗಿ ಪಾಪಗಳನ್ನು ಮಾಡಿದಾಗ, ನಾನು ಎಷ್ಟುಸಲ _ ಕ್ಷಮಿಸಬೇಕು _?” ಎಂದು ಒಂದು ದಿನ ಪೇತ್ರನು ಯೇಸುವನ್ನು ಕೇಳಿದನು,
- **29:08** ನೀನು ನನ್ನನ್ನು ಬೇಡಿಕೊಂಡಿದ್ದರಿಂದ ನಾನು ನಿನ್ನನ್ನು _ ಕ್ಷಮಿಸುತ್ತಿದ್ದೇನೆ _.
- **38:05** ಆದನಂತರ ಯೇಸು ಪಾತ್ರೆಯನ್ನು ತೆಗೆದುಕೊಂಡು, “ಇದನ್ನು ಕುಡಿಯಿರಿ. ಇದು ಪಾಪಗಳನ್ನು _ ಕ್ಷಮಿಸುವುದಕ್ಕೆ _ ಸುರಿಸಲ್ಪಡುವ ನನ್ನ ಹೊಸ ಒಡಂಬಡಿಕೆಯ ರಕ್ತ” ಎಂದು ಹೇಳಿದನು.

ಪದ ಡೇಟಾ:

- H5546, H5547, H3722, H5375, H5545, H5547, H7521, G859, G863, G5483

ಗುಡಾರ

ಪದದ ಅರ್ಥವಿವರಣೆ:

ಗುಡಾರ ಎನ್ನುವುದು ಇಸ್ರಾಯೇಲ್ಯರು ಸುಮಾರು 40 ವರ್ಷಗಳ ಕಾಲ ಅರಣ್ಯದಲ್ಲಿ ಪ್ರಯಾಣ ಮಾಡಿದ ಸಮಯದಲ್ಲಿ ಅವರು ದೇವರನ್ನು ಆರಾಧಿಸುವುದಕ್ಕೆ ಇಟ್ಟುಕೊಂಡಿರುವ ವಿಶೇಷವಾದ ರಚನೆಯಿಂದ ಕೂಡಿದ ಗುಡಾರವಾಗಿದ್ದಿತ್ತು.

- ಈ ಒಂದು ದೊಡ್ಡ ಗುಡಾರವನ್ನು ನಿರ್ಮಿಸುವುದಕ್ಕೆ ದೇವರು ಇಸ್ರಾಯೇಲ್ಯರಿಗೆ ಎಲ್ಲಾ ರೀತಿಯ ಸೂಚನೆಗಳನ್ನು ಕೊಟ್ಟಿದ್ದರು, ಅದರಲ್ಲಿ ಎರಡು ಕೊಠಡಿಗಳಿದ್ದವು, ಇದರ ಸುತ್ತಲು ಗೋಡೆಗಳಿಂದ ಕೂಡಿದ ಪ್ರಾಂಗಣವಿದ್ದಿತ್ತು.
- ಇಸ್ರಾಯೇಲ್ಯರು ಅರಣ್ಯದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾವಣೆಯಾದಾಗ, ಯಾಜಕರು ಗುಡಾರವನ್ನು ತೆಗೆದುಕೊಂಡು ಅವರು ನಿವಾಸ ಮಾಡುವುದಕ್ಕೆ ಹೋಗುತ್ತಿರುವ ಬೇರೊಂದು ಸ್ಥಳಕ್ಕೆ ಹೊತ್ತಿಕೊಂಡು ಹೋಗಬೇಕಾಗಿದ್ದಿತ್ತು. ಅವರು ಹೋಗಿರುವ ಹೊಸ ಸ್ಥಳದ ಮಧ್ಯಭಾಗದಲ್ಲಿ ಅದನ್ನು ಪುನಃ ನಿರ್ಮಿಸಬೇಕಾಗಿರುತ್ತಿತ್ತು.
- ಗುಡಾರ ಎನ್ನುವುದನ್ನು ಬಟ್ಟೆ, ಮೇಕೆ ಕೂದಲು, ಮತ್ತು ಪ್ರಾಣಿಗಳ ಚರ್ಮಗಳಿಂದ ಮಾಡಿದ ತೆರೆಗಳನ್ನು ಕಟ್ಟಿಗೆ ಚೌಕಟ್ಟುಗಳಿಗೆ ಇಳಿಹಾಕುವುದರ ಮೂಲಕ ನಿರ್ಮಿಸುತ್ತಿದ್ದರು. ಇದರ ಸುತ್ತಮುತ್ತಲಿರುವ ಪ್ರಾಂಗಣವನ್ನು ಹೆಚ್ಚಿನ ತೆರೆಗಳಿಂದ ಸುತ್ತುವರಿಯಲ್ಪಟ್ಟಿರುತ್ತದೆ.
- ಗುಡಾರದಲ್ಲಿರುವ ಎರಡು ಭಾಗಗಳಲ್ಲಿ ಒಂದು ಪರಿಶುದ್ಧವಾದ ಸ್ಥಳ (ಧೂಪವನ್ನು ಹಾಕುವುದಕ್ಕೆ ಯಜ್ಞವೇದಿಯನ್ನು ಇಟ್ಟಿರುವ ಸ್ಥಳವಾಗಿರುತ್ತದೆ) ಮತ್ತು ಇನ್ನೊಂದು ಅತಿ ಪರಿಶುದ್ಧ ಸ್ಥಳವಾಗಿರುತ್ತದೆ (ಒಡಂಬಡಿಕೆಯ ಮಂಜೂಷವನ್ನು ಇಟ್ಟಿರುವ ಸ್ಥಳವಾಗಿರುತ್ತದೆ).
- ಗುಡಾರದ ಪ್ರಾಂಗಣದಲ್ಲಿ ಪ್ರಾಣಿಗಳನ್ನು ದಹಿಸುವುದಕ್ಕಿರುವ ಯಜ್ಞವೇದಿಯನ್ನು ಮತ್ತು ಧಾರ್ಮಿಕ ಶುದ್ಧೀಕರಣಕ್ಕೆ ಒಂದು ವಿಶೇಷವಾದ ಗಂಗಾಳವನ್ನು ಇಟ್ಟಿರುತ್ತಾರೆ.
- ಸೊಲೊಮೋನನ ಮೂಲಕ ಯೆರೂಸಲೇಮಿನಲ್ಲಿ ದೇವಾಲಯವನ್ನು ಕಟ್ಟಿದಾಗ ಇಸ್ರಾಯೇಲ್ಯರು ಗುಡಾರವನ್ನು ಉಪಯೋಗಿಸುವುದನ್ನು ನಿಲ್ಲಿಸಿದರು.

ಅನುವಾದ ಸಲಹೆಗಳು:

- “ಗುಡಾರ” ಎನ್ನುವ ಪದಕ್ಕೆ “ನಿವಾಸವಾಗಿರುವ ಸ್ಥಳ” ಎಂದರ್ಥ. ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನದಲ್ಲಿ “ಪರಿಶುದ್ಧ ಗುಡಾರ” ಅಥವಾ “ದೇವರು ಇರುವ ಗುಡಾರ” ಅಥವಾ “ದೇವರ ಗುಡಾರ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಈ ಪದಕ್ಕೆ ಮಾಡಿರುವ ಅನುವಾದವು “ದೇವಾಲಯ” ಎನ್ನುವ ಪದಕ್ಕೆ ಬೇರೆಯಾಗಿರುವಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಯಜ್ಞವೇದಿ, ಧೂಪ ವೇದಿಕೆ, ಒಡಂಬಡಿಕೆಯ ಮಂಜೂಷ, ದೇವಾಲಯ, ಭೇಟಿ ಮಾಡುವ ಗುಡಾರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.21:28-29
- 2 ಪೂರ್ವ.01:2-5
- ಅಪೊ.ಕೃತ್ಯ.07:43
- ಅಪೊ.ಕೃತ್ಯ.07:44-46
- ವಿಮೋ.38:21-23
- ಯೆಹೋ.22:19-20
- ಯಾಜಕ.10:16-18

ಪದ ಡೇಟಾ:

- Strong's: H168, H4908, H5520, H5521, H5522, H7900, G4633, G4634, G4636, G4638

ಗುರುತು, ಗುರುತುಗಳು, ನಿರೂಪಣೆ, ಜ್ಞಾಪನೆ

ಪದದ ಅರ್ಥವಿವರಣೆ:

ಗುರುತು ಎನ್ನುವುದು ಒಂದು ವಿಶೇಷವಾದ ಅರ್ಥವನ್ನು ನೀಡುವ ಉದ್ದೇಶವು, ಸಂಘಟನೆ, ಅಥವಾ ಕ್ರಿಯೆಯಾಗಿರುತ್ತದೆ.

- "ಗುರುತು" ಎಂಬ ಪದವು ಸಾಮಾನ್ಯವಾಗಿ ವಿಶೇಷ ಅರ್ಥವನ್ನು ತಿಳಿಸುವ ವಸ್ತು, ಘಟನೆ ಮತ್ತು ಕ್ರೀಯೆಯನ್ನು ಸೂಚಿಸುತ್ತದೆ. .
- ಆಕಾಶದಲ್ಲಿ ದೇವರು ಉಂಟುಮಾಡಿದ ಕಾಮನಬಿಲ್ಲುಗಳು ಪ್ರಚಂಚದಾದ್ಯಂತ ಪ್ರಳಯವನ್ನು ಬರಮಾಡುವುದರ ಮೂಲಕ ಎಲ್ಲಾ ಮನುಷ್ಯರನ್ನು ನಾಶಮಾಡುವುದಿಲ್ಲವೆಂದು ದೇವರು ಮಾಡಿದ ವಾಗ್ದಾನವನ್ನು ಜನರಿಗೆ ನೆನಪು ಮಾಡುವ ಗುರುತುಗಳಾಗಿರುತ್ತವೆ.
- ಇಸ್ರಾಯೇಲ್ಯರು ದೇವರೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದಾರೆಂದು ಹೇಳುವುದಕ್ಕೆ ಗುರುತಾಗಿರಲು ಅವರ ಮಕ್ಕಳಿಗೆ ಸುನ್ನತಿಯನ್ನು ಮಾಡಬೇಕೆಂದು ದೇವರು ಅವರಿಗೆ ಆಜ್ಞಾಪಿಸಿದರು.
- ಗುರುತುಗಳು ಕೆಲವೊಂದು ಮುಖ್ಯಾಂಶಗಳನ್ನು ಹೇಳುತ್ತವೆ:
- ಬೆತ್ಲೆಹೇಮಿನಲ್ಲಿ ಯಾವ ಶಿಶುವು ಮೆಸ್ಸೀಯನಾಗಿ ಹುಟ್ಟಿದ್ದಾನೆಂದು ಕುರುಬರು ತಿಳಿದುಕೊಳ್ಳುವುದಕ್ಕೆ ಸಹಾಯ ಮಾಡಲು ದೂತನು ಒಂದು ಗುರುತನ್ನು ಹೇಳಿರುವುದನ್ನು ಲೂಕನ ಸುವಾರ್ತೆಯಲ್ಲಿ ವಿವರಿಸಲಾಗಿದೆ..
- ಧರ್ಮ ಸಂಬಂಧವಾದ ನಾಯಕರು ಬಂಧಿಸಬೇಕಾದ ಯೇಸು ಯಾರೆಂದು ತಿಳಿದುಕೊಳ್ಳುವುದಕ್ಕೆ ಒಂದು ಗುರುತಾಗಿ ಯೂದನು ಯೇಸುವಿಗೆ ಮುದ್ದಿಟ್ಟಿದ್ದನು.
- ಗುರುತುಗಳು ಕೆಲವೊಂದನ್ನು ನಿಜವೆಂದು ನಿರೂಪಿಸುತ್ತದೆ.
- ಐಗುಪ್ತವನ್ನು ನಾಶಪಡಿಸಲು ಬಂದಂತಹ ವ್ಯಾಧಿಗಳು ಯೆಹೋವನು ಯಾರೆಂದು ಗುರುತಿಸುತ್ತದೆ, ಮತ್ತು ಯೆಹೋವನು ಐಗುಪ್ತ ದೇವರಿಗಿಂತ ಹಾಗೂ ಫರೋಹನನಿಗಿಂತ ದೊಡ್ಡವನು ಎಂದು ವಿಮೋಚನಕಾಂಡ ಪುಸ್ತಕವು ನಿರೂಪಿಸುತ್ತದೆ.
- ಅಪೊಸ್ತಲರು ಮತ್ತು ಪ್ರವಾದಿಗಳಿಂದ ನಡೆದ ಅನೇಕ ಅದ್ಭುತ ಕಾರ್ಯಗಳು ಅವರು ದೇವರ ಸಂದೇಶವನ್ನು ಪ್ರಕಟಿಸುತ್ತಿದ್ದಾರೆಂದು ನಿರೂಪಿಸುವುದಕ್ಕೆ ಗುರುತುಗಳಾಗಿರುತ್ತವೆ.
- ಯೇಸು ಮಾಡಿದ ಅನೇಕ ಆಶ್ಚರ್ಯಗಳೆಲ್ಲವು ಈತನು ನಿಜವಾಗಿಯೂ ಮೆಸ್ಸೀಯನೆಂದು ನಿರೂಪಿಸುವ ಗುರುತುಗಳಾಗಿದ್ದವು.

ಅನುವಾದ ಸಲಹೆಗಳು:

- ಸಂದರ್ಭಾನುಗುಣವಾಗಿ "ಗುರುತು" ಎನ್ನುವದನ್ನು "ಸಂಕೇತ" ಅಥವಾ "ಚಿಹ್ನೆ" ಅಥವಾ "ಕರೆ" ಅಥವಾ "ಆಧಾರ" ಅಥವಾ "ಪುರಾವೆ" ಅಥವಾ "ಸೂಚನೆ" ಎಂದೂ ಅನುವಾದ ಮಾಡಬಹುದು.
- "ಕೈಗಳಿಂದ ಸಂಕೇತಗಳನ್ನು ಮಾಡು" ಎನ್ನುವ ಮಾತನ್ನು "ಕೈಗಳನ್ನು ಅಲುಗಾಡಿಸು" ಅಥವಾ "ಕೈಗಳಿಂದ ಸೂಚನೆಗಳನ್ನು ಕೊಡು" ಅಥವಾ "ಸೂಚನೆಗಳನ್ನು ಕೊಡು" ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಭಾಷೆಗಳಲ್ಲಿ ಯಾವುದಾದರೊಂದನ್ನು ನಿರೂಪಿಸುವ "ಗುರುತು" ಎನ್ನುವ ಪದಕ್ಕೆ ಒಂದೇ ಪದವನ್ನು ಹೊಂದಿರಬಹುದು, ಮತ್ತು ಆಶ್ಚರ್ಯಕಾರ್ಯವನ್ನು ಸೂಚಿಸುವ ಪದವು "ಸೂಚಕ ಕ್ರಿಯೆ" ಎನ್ನುವ ಮಾತನ್ನು ಬಳಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಆಶ್ಚರ್ಯಕಾರ್ಯ, ಅಪೊಸ್ತಲ, ಕ್ರಿಸ್ತ, ಒಡಂಬಡಿಕೆ, ಸುನ್ನತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.02:18-19
- ವಿಮೋ.04:8-9
- ವಿಮೋ.31:12-15
- ಆದಿ.01:14-15
- ಆದಿ.09:11-13
- ಯೋಹಾನ.02:17-19
- ಲೂಕ.02:10-12
- ಮಾರ್ಕ.08:11-13
- ಕೀರ್ತನೆ.089:5-6

ಪದ ಡೇಟಾ:

- Strong's: H226, H852, H2368, H2858, H4150, H4159, H4864, H5251, H5824, H6161, H6725, H6734, H7560, G364, G880, G1213, G1229, G1718, G1730, G1732, G1770, G3902, G4102, G4591, G4592, G4953, G4973, G5280

ಘನಪಡಿಸು

ಪದದ ಅರ್ಥವಿವರಣೆ:

“ಘನಪಡಿಸು” ಮತ್ತು “ಘನಪಡಿಸುವುದು” ಎನ್ನುವ ಪದಗಳು ಒಬ್ಬರಿಗೆ ಗೌರವ ಕೊಡುವುದನ್ನು, ಮಾನ್ಯತೆ ನೀಡುವುದನ್ನು ಅಥವಾ ಭಕ್ತಿ ಮಾಡುವುದನ್ನು ಸೂಚಿಸುತ್ತದೆ.

- ಘನಪಡಿಸುವುದೆನ್ನುವುದು ಅತ್ಯುನ್ನತ ಸ್ಥಾನದಲ್ಲಿರುವ ಮತ್ತು ಮುಖ್ಯವಾದ ವ್ಯಕ್ತಿಗಳಿಗೆ ಕೊಡುವುದಾಗಿರುತ್ತದೆ. ಉದಾಹರಣೆಗೆ, ದೇವರು ಅಥವಾ ಒಬ್ಬ ಅರಸ.
- ಒಬ್ಬರನ್ನೊಬ್ಬರು ಗೌರವಿಸಿಕೊಳ್ಳಿರಿ ಎಂದು ದೇವರು ಕ್ರೈಸ್ತರಿಗೆ ಅಪ್ಪಣೆ ಕೊಟ್ಟಿದ್ದಾನೆ.
- ಮಕ್ಕಳು ಕೂಡ ತಮ್ಮ ತಂದೆತಾಯಿಗಳನ್ನು ಘನಪಡಿಸಬೇಕೆಂದು ಆಜ್ಞಾಪಿಸಲ್ಪಟ್ಟಿದ್ದಾರೆ, ಅದರಲ್ಲಿ ಅವರನ್ನು ಗೌರವಿಸುವುದು ಮತ್ತು ಅವರಿಗೆ ವಿಧೇಯರಾಗಿರುವುದು ಒಳಗೊಂಡಿರುತ್ತದೆ.
- “ಘನಪಡಿಸು” ಮತ್ತು “ಮಹಿಮೆ” ಎನ್ನುವ ಪದಗಳು ಅನೇಕಸಲ ಎರಡು ಸೇರಿಸಿ ಉಪಯೋಗಿಸಲ್ಪಟ್ಟಿರುತ್ತವೆ, ವಿಶೇಷವಾಗಿ ಯೇಸುವಿಗೆ ಸೂಚಿಸಿದಾಗ ಉಪಯೋಗಿಸಲ್ಪಟ್ಟಿರುತ್ತವೆ. ಈ ಪದಗಳು ಒಂದೇ ಅರ್ಥವನ್ನು ಸೂಚಿಸುವ ಎರಡು ವಿಧಾನಗಳಾಗಿರುತ್ತವೆ.
- ದೇವರನ್ನು ಘನಪಡಿಸುವುದರಲ್ಲಿ ಕೃತಜ್ಞತೆ ಹೇಳುವುದು ಮತ್ತು ಆತನನ್ನು ಮಹಿಮೆಪಡಿಸುವುದು ಒಳಗೊಂಡಿರುತ್ತದೆ ಮತ್ತು ಆತನು ಎಷ್ಟು ದೊಡ್ಡವನೆಂದು ತೋರಿಸುವ ವಿಧಾನದಲ್ಲಿ ಜೀವಿಸುವುದು ಮತ್ತು ಆತನಿಗೆ ವಿಧೇಯತೆ ತೋರಿಸುವುದರ ಮೂಲಕ ಆತನಿಗೆ ಗೌರವವನ್ನು ತೋರಿಸುತ್ತೇವೆ.

ಅನುವಾದ ಸಲಹೆಗಳು:

- “ಘನಪಡಿಸು” ಎನ್ನುವದನ್ನು ಅನುವಾದ ಮಾಡುವ ವಿಧಾನಗಳಲ್ಲಿ “ಗೌರವಿಸು” ಅಥವಾ “ಮಾನ್ಯತೆ ಕೊಡು” ಅಥವಾ “ಹೆಚ್ಚಿನ ಗೌರವವನ್ನು ಕೊಡು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಘನಪಡಿಸು” ಎನ್ನುವ ಪದವನ್ನು “ವಿಶೇಷವಾದ ಗೌರವವನ್ನು ತೋರಿಸು” ಅಥವಾ “ಸ್ತುತಿ ಹೊಂದುವಂತೆ ಮಾಡು” ಅಥವಾ “ಹೆಚ್ಚಿನ ಗೌರವವನ್ನು ತೋರಿಸು” ಅಥವಾ “ಉನ್ನತ ಬೆಲೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಗೌರವಿಸು, ಮಹಿಮೆ, ಮಹಿಮೆ, ಸ್ತುತಿ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಸಮು.02:8
- ಅಪೊ.ಕೃತ್ಯ.19:17
- ಯೋಹಾನ.04:44
- ಯೋಹಾನ.12:26
- ಮಾರ್ಕ.06:04
- ಮತ್ತಾಯ.15:06

ಪದ ಡೇಟಾ:

- Strong's: H1420, H1921, H1922, H1923, H1926, H1927, H1935, H2082, H2142, H3366, H3367, H3368, H3372, H3373, H3374, H3444, H3513, H3519, H3655, H3678, H5081, H5375, H5457, H6213, H6286, H6437, H6942, H6944, H6965, H7236, H7613, H7812, H8597, H8416, G820, G1391, G1392, G1784, G2151, G2570, G3170, G4411, G4586, G5091, G5092, G5093, G5399

ಚೀಯೋನಿನ ಕುಮಾರ್ತೆ

ಅರ್ಥವಿವರಣೆ:

“ಚೀಯೋನಿನ ಕುಮಾರ್ತೆ” ಎನ್ನುವ ಮಾತು ಇಸ್ರಾಯೇಲ್ ಜನರನ್ನು ಸೂಚಿಸುವ ಅಲಂಕಾರಿಕ ಮಾತಾಗಿರುತ್ತದೆ. ಈ ಮಾತನ್ನು ಸಹಜವಾಗಿ ಪ್ರವಾದನೆಗಳಲ್ಲಿ ಉಪಯೋಗಿಸುತ್ತಾರೆ.

- ಹಳೇ ಒಡಂಬಡಿಕೆಯಲ್ಲಿ “ಚೀಯೋನ್” ಎನ್ನುವ ಪದವು ಅನೇಕಬಾರಿ ಯೆರೂಸಲೇಮಿನ ಪಟ್ಟಣಕ್ಕೆ ಉಪಯೋಗಿಸಿದ ಮತ್ತೊಂದು ಪದವಾಗಿರುತ್ತದೆ.
- “ಚೀಯೋನ್” ಮತ್ತು “ಯೆರೂಸಲೇಮ್” ಎನ್ನುವ ಪದಗಳು ಕೂಡ ಇಸ್ರಾಯೇಲ್ ಜನರನ್ನು ಸೂಚಿಸುತ್ತವೆ.
- “ಕುಮಾರ್ತೆ” ಎನ್ನುವ ಪದವು ಪ್ರೀತಿ ವಿಶ್ವಾಸಗಳಿಗೆ ಸೂಚನೆಯಾಗಿರುತ್ತದೆ. ದೇವರು ತನ್ನ ಜನರ ಮೇಲೆ ಸಹನೆ ಮತ್ತು ಜಾಗರೂಕತೆಯನ್ನು ಇಟ್ಟಿದ್ದಾರೆನ್ನುವುದಕ್ಕೆ ಅಲಂಕಾರಿಕ ಮಾತಾಗಿರುತ್ತದೆ.

ಅನುವಾದ ಸಲಹೆಗಳು:

- ಈ ಪದವನ್ನು ಉಪಯೋಗಿಸುವ ವಿಧಾನಗಳಲ್ಲಿ “ಚೀಯೋನಿನಿಂದ ಬಂದ ನನ್ನ ಇಸ್ರಾಯೇಲ್ ಕುಮಾರ್ತೆ” ಅಥವಾ “ಚೀಯೋನಿನ ಜನರೇ” ನನಗೆ ಕುಮಾರ್ತೆಯಂತೆ ಇದ್ದೀರಿ ಅಥವಾ “ಚೀಯೋನ್, ನನ್ನ ಪ್ರೀತಿಯ ಇಸ್ರಾಯೇಲ್ ಜನರೆ” ಎನ್ನುವ ಮಾತುಗಳನ್ನೂ ಉಪಯೋಗಿಸುತ್ತಾರೆ.
- “ಚೀಯೋನ್” ಎನ್ನುವ ಪದವನ್ನು ಸತ್ಯವೇದದಲ್ಲಿ ಅನೇಕಬಾರಿ ಉಪಯೋಗಿಸಿದ್ದರಿಂದ, ಇದನ್ನು ಹಾಗೆಯೇ ಉಪಯೋಗಿಸುವುದು ಒಳ್ಳೇಯದು. ಅನುವಾದದಲ್ಲಿ ಈ ಮಾತಿನ ಅರ್ಥವನ್ನು ಮತ್ತು ಪ್ರವಾದನೆಯಲ್ಲಿ ಉಪಯೋಗಿಸುವ ವಿಧಾನದಲ್ಲಿ ವಿವರಿಸುವುದು ಒಳ್ಳೇಯದು.
- “ಕುಮಾರ್ತೆ” ಎನ್ನುವ ಪದವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವುದರಿಂದ ಅದನ್ನು ಹಾಗೆಯೇ ಉಪಯೋಗಿಸುವುದು ಒಳ್ಳೇಯದು.

(ಇವುಗಳನ್ನು ಸಹ ನೋಡಿರಿ : ಯೆರೂಸಲೇಮ್, ಪ್ರವಾದಿ, ಚೀಯೋನ್)

ಸತ್ಯವೇದದ ಅನುಬಂಧ ವಾಕ್ಯಗಳು:

- ಯೆರೆ.6:2
- ಯೋಹಾನ.12:15
- ಮತ್ತಾಯ.21:5

ಪದದ ಡೇಟಾ:

- Strong's: H1323, H6726

ಚೀಯೋನ್, ಚೀಯೋನ್ ಪರ್ವತ

ಅರ್ಥವಿವರಣೆ:

ವಾಸ್ತವಿಕವಾಗಿ "ಚೀಯೋನ್" ಅಥವಾ "ಚೀಯೋನ್ ಪರ್ವತ" ಎನ್ನುವ ಪದವು ಯೆಬೂಸಿಯರಿಂದ ಅರಸನಾದ ದಾವೀದನು ವಶಪಡಿಸಿಕೊಂಡಿರುವ ಕೋಟೆ ಅಥವಾ ಬಲವಾದ ಬುರುಜನ್ನು ಸೂಚಿಸುತ್ತದೆ. ಈ ಎರಡು ಪದಗಳು ಯೆರೂಸಲೇಮ್ ಪಟ್ಟಣವನ್ನು ಸೂಚಿಸುತ್ತವೆ.

- ಚೀಯೋನ್ ಪರ್ವತವು ಮತ್ತು ಮೊರಿಯಾ ಬೆಟ್ಟವು ಯೆರೂಸಲೇಮ್ ಪಟ್ಟಣವಿರುವ ಸ್ಥಳದಲ್ಲಿ ಎರಡು ಬೆಟ್ಟಗಳಾಗಿರುತ್ತವೆ. ಸ್ವಲ್ಪ ಕಾಲವಾದನಂತರ "ಚೀಯೋನ್" ಮತ್ತು "ಚೀಯೋನ್ ಪರ್ವತ" ಎನ್ನುವ ಎರಡು ಪದಗಳು ಈ ಎರಡು ಬೆಟ್ಟಗಳನ್ನು ಮತ್ತು ಯೆರೂಸೇಲಮ್ ಪಟ್ಟಣವನ್ನು ಸೂಚಿಸುವುದಕ್ಕೆ ಸಾಧಾರಣವಾಗಿ ಉಪಯೋಗಿಸುತ್ತಿದ್ದರು. ಕೆಲವೊಂದುಬಾರಿ ಯೆರೂಸಲೇಮಿನಲ್ಲಿರುವ ದೇವಾಲಯವನ್ನು ಸೂಚಿಸುವುದಕ್ಕೂ ಉಪಯೋಗಿಸುತ್ತಿದ್ದರು. (ನೋಡಿರಿ: ಲಾಕ್ಷಣಿಕ ಪ್ರಯೋಗ)
- ದಾವೀದನು ಚೀಯೋನನ್ನು ಅಥವಾ ಯೆರೂಸಲೇಮನ್ನು "ದಾವೀದನ ನಗರ" ಎಂದು ಹೆಸರಿಟ್ಟನು. ಇದು ದಾವೀದನ ಸ್ವಂತ ಊರಾಗಿರುವ ಬೆತ್ಲೆಹೇಮಿಗೆ ಬೇರೆಯಾಗಿರುತ್ತದೆ, ಇದನ್ನೂ ದಾವೀದನ ನಗರ ಎಂದು ಕರೆಯುತ್ತಾರೆ.
- "ಚೀಯೋನ್" ಎನ್ನುವ ಪದವನ್ನು ಸಹಜವಾಗಿ ಅಲಂಕಾರಿಕವಾಗಿ ಉಪಯೋಗಿಸುತ್ತಾರೆ, ಇದನ್ನು ಇಸ್ರಾಯೇಲ್ಯರನ್ನು ಅಥವಾ ದೇವರ ಆತ್ಮೀಯ ರಾಜ್ಯವನ್ನು ಅಥವಾ ದೇವರು ಸೃಷ್ಟಿಸುವ ಹೊಸ ಪರಲೋಕದ ಯೆರೂಸಲೇಮನ್ನು ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ.

(ಇವುಗಳನ್ನು ಸಹ ನೋಡಿರಿ : ಅಬ್ರಾಹಾಮ, ದಾವೀದ, ಯೆರೂಸಲೇಮ್, ಬೆತ್ಲೆಹೇಮ್, ಯೆಬೂಸಿಯರು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.11:5
- ಆಮೋಸ.1:2
- ಯೆರೆ.51:35
- ಕೀರ್ತನೆ.76:1-3
- ರೋಮಾ.11:26

ಪದದ ಡೇಟಾ:

- Strong's: H6726

ಚೊಚ್ಚಲತನದ ಹಕ್ಕು

ಪದದ ಅರ್ಥವಿವರಣೆ

ಸತ್ಯವೇದದಲ್ಲಿ ಸಹಜವಾಗಿ "ಚೊಚ್ಚಲತನದ ಹಕ್ಕು" ಎನ್ನುವ ಪದವನ್ನು, ಕುಟುಂಬದ ಹೆಸರು ಮತ್ತು ಕುಟುಂಬದಲ್ಲಿ ಹುಟ್ಟಿದ ಚೊಚ್ಚಲ ಮಗನಿಗೆ ಕೊಡಲ್ಪಡುವ ಲೌಕಿಕ ಆಸ್ತಿಯನ್ನು ಸೂಚಿಸುತ್ತಿದೆ.

- ಚೊಚ್ಚಲತನದ ಹಕ್ಕುನಲ್ಲಿ ತಂದೆಯ ಪಿತ್ರಾರ್ಜಿತ ಆಸ್ತಿಯಲ್ಲಿ ಎರಡು ಪಾಲು ಚೊಚ್ಚಲ ಮಗನಿಗೆ ಸಿಗುತ್ತದೆ.
- ಅರಸನು ಮರಣಿಸಿದ ನಂತರ ರಾಜ್ಯವನ್ನು ಆಳುವದಕ್ಕೆ ಚೊಚ್ಚಲತನದ ಹಕ್ಕು ಅವನ ಚೊಚ್ಚಲ ಮಗನಿಗೆ ಅಧಿಕಾರ ನೀಡುತ್ತದೆ.
- ಏಸಾವನು ತನ್ನ ಚೊಚ್ಚಲತನದ ಹಕ್ಕನ್ನು ತನ್ನ ತಮ್ಮನಾದ ಯಾಕೋಬನಿಗೆ ವಿಕ್ರಯಿಸಿದನು. ಆದಕಾರಣ, ಚೊಚ್ಚಲ ಮಗನಾದ ಏಸಾವ ಅನುಭವಿಸ ಬೇಕಾದ ಆಶೀರ್ವಾದವನ್ನು ಯಾಕೋಬನು ಸಂಪಾದಿಸಿಕೊಂಡನು.
- ಚೊಚ್ಚಲ ಮಗನ ಹೆಸರಿನಲ್ಲಿ ತನ್ನ ಕುಟುಂಬದ ವಂಶವನ್ನು ಗ್ರಹಿಸುವ ಭಾಗ್ಯವು ಚೊಚ್ಚಲತನದ ಹಕ್ಕುನಲ್ಲಿ ಒಂದಾಗಿದೆ.

ಅನುವಾದ ಸಲಹೆಗಳು:

- "ಚೊಚ್ಚಲತನದ ಹಕ್ಕು" ಎನ್ನುವ ಪದವನ್ನು "ಚೊಚ್ಚಲ ಮಗನ ಹಕ್ಕುಗಳು ಮತ್ತು ಆಸ್ತಿ" ಅಥವಾ "ಕುಟುಂಬದ ಗೌರವ" ಅಥವಾ "ಚೊಚ್ಚಲ ಮಗನ ಭಾಗ್ಯ ಮತ್ತು ಸ್ವಾಸ್ಥ್ಯ" ಎಂದು ಅನುವಾದ ಮಾಡಬಹುದು

(ಈ ಪದಗಳನ್ನು ಸಹ ನೋಡಿರಿ : ಚೊಚ್ಚಲ ಮಗ, ಸ್ವಾಸ್ಥ್ಯ, ವಂಶ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.05:1-3
- ಆದಿ.25:31-34
- ಆದಿ.43:32-34
- ಇಬ್ರಿ.12:14-17

ಪದ ಡೇಟಾ:

- Strong's: H1062, G4415

ಜೀವನ, ಜೀವಿಸು, ಜೀವಿಸಿದೆ, ಜೀವಂತವಾಗಿರುವುದು

ಪದದ ಅರ್ಥವಿವರಣೆ:

"ಜೀವನ" ಎಂಬ ಪದವು ಭೌತಿಕವಾಗಿ ಸತ್ತವರ ವಿರುದ್ಧ ದೈಹಿಕವಾಗಿ ಜೀವಂತವಾಗಿರುವುದನ್ನು ಸೂಚಿಸುತ್ತದೆ. “ಭೌತಿಕವಾದ ಜೀವನ” ಮತ್ತು “ಆತ್ಮೀಯಕವಾದ ಜೀವನ” ಎನ್ನುವ ಮಾತುಗಳಿಗೆ ಅರ್ಥವೇನೆಂಬುವುದನ್ನು ಈ ಕೆಳಕಂಡ ಚರ್ಚೆಗಳು ಹೇಳುತ್ತವೆ.

1. ಭೌತಿಕವಾದ ಜೀವನ

- “ಜೀವನ” ಎನ್ನುವ ಪದವು ಕೂಡ “ಜೀವನ ರಕ್ಷಿಸಲ್ಪಟ್ಟಿದೆ” ಎಂದೆನ್ನುವ ಮಾತಿನಲ್ಲಿರುವಂತೆ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.
- ಕೆಲವೊಂದುಬಾರಿ “ಜೀವನ” ಎನ್ನುವ ಪದವು “ತನ್ನ ಜೀವನ ಸಂತೋಷಕರವಾಗಿದೆ” ಎನ್ನುವ ಮಾತಿನಲ್ಲಿರುವಂತೆ ಜೀವನದ ಅನುಭವನ್ನು ಕೂಡ ಸೂಚಿಸುತ್ತದೆ.
- “ತನ್ನ ಜೀವನದ ಅಂತ್ಯವು” ಎನ್ನುವ ಮಾತಿನಲ್ಲಿರುವಂತೆ ಈ ಪದವು ಒಬ್ಬ ವ್ಯಕ್ತಿಯ ಜೀವನ ಕಾಲವ್ಯವಧಿಯನ್ನು ಸೂಚಿಸುತ್ತದೆ.
- “ನನ್ನ ತಾಯಿ ಇನ್ನೂ ಜೀವಿಸುತ್ತಿದ್ದಾರೆ” ಎನ್ನುವ ಮಾತಿನಲ್ಲಿ ಜೀವನ ಎಂಬ ಪದವು ದೈಹಿಕವಾಗಿ ಜೀವಂತವಾಗಿರುವುದನ್ನು ಉಲ್ಲೇಖಿಸಬಹುದು. "ಅವರು ನಗರದಲ್ಲಿ ವಾಸಿಸುತ್ತಿದ್ದರು" ಅವರು ಎಲ್ಲೋ ವಾಸಿಸುವಂತೆ ಉಲ್ಲೇಖಿಸಬಹುದು.
- ಸತ್ಯವೇದದಲ್ಲಿ “ಜೀವನ” ಎನ್ನುವ ಪರಿಕಲ್ಪನೆಯು ಅನೇಕಬಾರಿ “ಮರಣ” ಎನ್ನುವ ಪರಿಕಲ್ಪನೆಗೆ ವಿರುದ್ಧವಾಗಿ ಉಪಯೋಗಿಸಲ್ಪಟ್ಟಿರುತ್ತದೆ.

2. ಆತ್ಮೀಕವಾದ ಜೀವನ

- ಒಬ್ಬ ವ್ಯಕ್ತಿ ದೇವರೊಂದಿಗೆ ಇರುವ ಯೇಸುವಿನಲ್ಲಿ ನಂಬಿದಾಗ ಆ ವ್ಯಕ್ತಿ ಆತ್ಮೀಕವಾದ ಜೀವನವನ್ನು ಹೊಂದಿರುತ್ತಾನೆ, ಆ ವ್ಯಕ್ತಿಯಲ್ಲಿ ಪವಿತ್ರಾತ್ಮನು ಜೀವಿಸುವದರಿಂದ ಜೀವನ ರೂಪಾಂತರವಾಗುತ್ತದೆ.
- ಆತ್ಮೀಕವಾದ ಜೀವನಕ್ಕೆ ವಿರುದ್ಧವಾಗಿ ಆತ್ಮೀಯಕವಾದ ಮರಣ ಎಂದು ಕರೆಯುತ್ತಾರೆ, ಇದಕ್ಕೆ ದೇವರಿಂದ ದೂರವಾಗುವುದು ಮತ್ತು ನಿತ್ಯ ಶಿಕ್ಷೆಯನ್ನು ಅನುಭವಿಸುವುದು ಎಂದರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಜೀವನ” ಎನ್ನುವ ಪದವನ್ನು “ಅಸ್ತಿತ್ವದಲ್ಲಿರುವುದು” ಅಥವಾ “ವ್ಯಕ್ತಿ” ಅಥವಾ “ಪ್ರಾಣ” ಅಥವಾ “ಇರುವುದು” ಅಥವಾ “ಅನುಭವ” ಎಂದೂ ಅನುವಾದ ಮಾಡಬಹುದು.
- “ಜೀವಿಸು” ಎನ್ನುವ ಪದವನ್ನು “ನಿವಾಸ ಮಾಡು” ಅಥವಾ “ಇರು” ಅಥವಾ “ಅಸ್ತಿತ್ವದಲ್ಲಿರು” ಎಂದೂ ಅನುವಾದ ಮಾಡಬಹುದು.
- “ತನ್ನ ಜೀವನದ ಅಂತ್ಯ” ಎನ್ನುವ ಮಾತನ್ನು “ಅವನು ಜೀವಿಸುವುದನ್ನು ನಿಲ್ಲಿಸಿದಾಗ” ಎಂದು ಅನುವಾದ ಮಾಡಬಹುದು.
- “ಅವರ ಜೀವನಗಳನ್ನು ಕಾಪಾಡಿದನು” ಎನ್ನುವ ಮಾತನ್ನು “ಅವರು ಜೀವಿಸುವುದಕ್ಕೆ ಅನುಮತಿಸಲ್ಪಟ್ಟರು” ಅಥವಾ “ಅವರನ್ನು ಸಾಯಿಸಲಿಲ್ಲ” ಎಂದೂ ಅನುವಾದ ಮಾಡಬಹುದು.
- “ಅವರು ತಮ್ಮ ಜೀವನಗಳನ್ನು ಅಪಾಯಕ್ಕೊಳಗಾಗಿಸಿಕೊಂಡರು” ಎನ್ನುವ ಮಾತನ್ನು “ಅವರು ತಮ್ಮ ಜೀವನಗಳನ್ನು ಅಪಾಯದಲ್ಲಿ ಇರಿಸಿಕೊಂಡರು” ಅಥವಾ “ಅವರನ್ನು ಸಾಯಿಸಿಕೊಳ್ಳುವ ಕಾರ್ಯವನ್ನು ಅವರು ಮಾಡಿಕೊಂಡರು” ಎಂದೂ ಅನುವಾದ ಮಾಡಬಹುದು.
- ಆತ್ಮೀಕವಾಗಿ ಜೀವಿಸುವುದರ ಕುರಿತಾಗಿ ಸತ್ಯವೇದವು ಮಾತನಾಡಿದಾಗ, “ಜೀವನ” ಎನ್ನುವ ಪದವನ್ನು “ಆತ್ಮೀಕವಾದ ಜೀವನ” ಅಥವಾ “ನಿತ್ಯಜೀವ” ಎಂದು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.
- “ಆತ್ಮೀಕ ಜೀವನ” ಎನ್ನುವ ಉದ್ದೇಶದ ಮಾತನ್ನು “ನಮ್ಮ ಆತ್ಮಗಳಲ್ಲಿ ನಾವು ಜೀವಿಸುವಂತೆ ದೇವರು ಮಾಡುತ್ತಿದ್ದಾರೆ” ಅಥವಾ “ದೇವರ ಆತ್ಮದಿಂದ ಹೊಸ ಜೀವನ” ಅಥವಾ “ನಮ್ಮ ಸ್ವಂತ ಅಂತರಂಗದಲ್ಲಿ ಜೀವಂತರಾಗಿರುವಂತೆ ಮಾಡಿದನು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ಜೀವನವನ್ನು ಅನುಗ್ರಹಿಸು” ಎನ್ನುವ ಮಾತನ್ನು “ಜೀವಿಸುವುದಕ್ಕೆ ಕಾರಣವಾಗು” ಅಥವಾ “ನಿತ್ಯ ಜೀವವನ್ನು ಕೊಡು” ಅಥವಾ “ನಿತ್ಯದಲ್ಲಿ ಜೀವಿಸುವುದಕ್ಕೆ ಕಾರಣವಾಗಿ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ: ಮರಣ, ನಿತ್ಯಜೀವ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಪೇತ್ರ.01:03
- ಅಪೊ.ಕೃತ್ಯ.10:42
- ಆದಿ.02:07
- ಆದಿ.07:22
- ಇಬ್ರಿ.10:20
- ಯೆರೆ.44:02
- ಯೋಹಾನ.01:04

- ನ್ಯಾಯಾ.02:18
- ಲೂಕ.12:23
- ಮತ್ತಾಯ.07:14

ಸತ್ಯವೇದ ಕಥೆಗಳಿಂದ ಉದಾಹರಣೆಗಳು:

- **01:10** ಆದ್ದರಿಂದ ದೇವರು ಮಣ್ಣನ್ನು ತೆಗೆದುಕೊಂಡು, ಮನುಷ್ಯನ ರೂಪವನ್ನು ಮಾಡಿ, ಅವನೊಳಗೆ _ ಜೀವವನ್ನು _ ಊದಿದನು.
- **03:01** ಸ್ವಲ್ಪ ಕಾಲವಾದನಂತರ, ಅನೇಕ ಜನರು ಲೋಕದಲ್ಲಿ _ಜೀವಿಸುತ್ತಿದ್ದರು _.
- **08:13** ಯೋಸೇಫನ ಅಣ್ಣಂದಿಯರು ಮನೆಗೆ ಹಿಂತಿರುಗಿ ಹೋದನಂತರ, ತಮ್ಮ ತಂದೆಯಾದ ಯಾಕೋಬನಿಗೆ ಯೋಸೇಫನು ಇನ್ನೂ _ಜೀವಂತವಾಗಿದ್ದಾನೆ _, ಅವನು ಸಂತೋಷವಾಗಿದ್ದಾನೆಂದು ಹೇಳಿದರು.
- **17:09** ಆದರೆ, ತನ್ನ ದಾವೀದನ _ಜೀವನದ _ ಅಂತ್ಯ ಭಾಗದಲ್ಲಿ ದೇವರ ಮುಂದೆ ಭಯಂಕರ ಪಾಪವನ್ನು ಮಾಡಿದನು.
- **27:01** ಒಂದು ದಿನ ಯೆಹೂದ್ಯರ ಧರ್ಮಶಾಸ್ತ್ರದಲ್ಲಿ ಪಂಡಿತನಾಗಿರುವ ಒಬ್ಬ ವ್ಯಕ್ತಿ ಯೇಸುವನ್ನು ಪರೀಕ್ಷೆ ಮಾಡುವುದಕ್ಕೆ ಬಂದು, “ಬೋಧಕನೇ, ನಿತ್ಯ _ ಜೀವವನ್ನು _ ಪಡೆಯುವದಕ್ಕೆ ನಾನೇನು ಮಾಡಬೇಕು?” ಎಂದು ಕೇಳಿದನು.
- **35:05** “ನಾನೇ ಪುನರುತ್ಥಾನವು ಮತ್ತು _ಜೀವವು _ ಆಗಿದ್ದೇನೆ” ಎಂದು ಯೇಸು ಹೇಳಿದನು.
- **44:05** “ಯೇಸುವನ್ನು ಸಾಯಿಸಬೇಕೆಂದು ರೋಮಾ ಪಾಲಕನಿಗೆ ಹೇಳಿದ ವ್ಯಕ್ತಿ ನೀನೇ ಆಗಿದ್ದೀ. ನೀನು _ಜೀವಾಧಿಪತಿಯನ್ನು _ ಸಾಯಿಸಿದ್ದೀ, ಆದರೆ ದೇವರು ಆತನನ್ನು ಮರಣದಿಂದ ಎಬ್ಬಿಸಿದನು.”

ಪದ ಡೇಟಾ:

- Strong's: H1934, H2416, H2417, H2421, H2425, H5315, G198, G222, G227, G806, G590

ಜ್ಞಾನಿ, ಜ್ಞಾನ

ಪದದ ಅರ್ಥವಿವರಣೆ:

“ಜ್ಞಾನಿ” ಎನ್ನುವ ಪದವು ಮಾಡುವುದಕ್ಕೆ ನೈತಿಕವಾದ ವಿಷಯವನ್ನು ಮತ್ತು ಸರಿಯಾದದ್ದನ್ನು ಅರ್ಥಮಾಡಿಕೊಂಡು, ಅದರಂತೆಯೇ ನಡೆಯುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ. “ಜ್ಞಾನ” ಎಂದರೆ ನಿಜವಾದದ್ದನ್ನು ಮತ್ತು ನೈತಿಕವಾಗಿ ಸರಿಯಾದದ್ದನ್ನು ಅರ್ಥಮಾಡಿಕೊಂಡು, ಅದರ ಪ್ರಕಾರ ನಡೆದು ಅಭ್ಯಾಸ ಮಾಡುವುದು ಎಂದರ್ಥ.

- ಜ್ಞಾನಿಯಾಗಿರುವುದರಲ್ಲಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಒಳಗೊಂಡಿರುತ್ತದೆ, ವಿಶೇಷವಾಗಿ ದೇವರನ್ನು ಮೆಚ್ಚಿಸುವದನ್ನು ಮಾಡಲು ಆರಿಸಿಕೊಳ್ಳುವುದು.
- ದೇವರಿಗೆ ಕಿವಿಗೊಟ್ಟು ಆತನ ಚಿತ್ತವನ್ನು ನಮ್ರತೆಯಿಂದ ಪಾಲಿಸುವ ಮೂಲಕ ಜನರು ಬುದ್ಧಿವಂತರಾಗುತ್ತಾರೆ.
- ಜನರು ದೇವರನ್ನು ಕೇಳುವ ಮೂಲಕ ಮತ್ತು ಆತನ ಚಿತ್ತವನ್ನು ವಿನಮ್ರವಾಗಿ ಪಾಲಿಸುವ ಮೂಲಕ ಜ್ಞಾನಿಯಾಗಿರುತ್ತಾರೆ .*ಜ್ಞಾನಿಯಾದ ವ್ಯಕ್ತಿಯು ತನ್ನ ಜೀವನದಲ್ಲಿ ಸಂತೋಷ, ದಯೆ, ಪ್ರೀತಿ ಮತ್ತು ತಾಳ್ಮೆಯಂತಹ ಪವಿತ್ರಾತ್ಮದ ಫಲವನ್ನು ತೋರಿಸುತ್ತಾನೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಜ್ಞಾನಿ” ಎನ್ನುವ ಪದವನ್ನು ಅನುವಾದ ಮಾಡುವುದರಲ್ಲಿ “ದೇವರಿಗೆ ವಿಧೇಯನಾಗಿರುವುದು” ಅಥವಾ “ಸಂವೇದನಾಶೀಲ ಮತ್ತು ವಿಧೇಯನು” ಅಥವಾ “ದೇವರಲ್ಲಿ ಭಯಭಕ್ತಿಯುಳ್ಳ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಜ್ಞಾನ” ಎನ್ನುವ ಪದವನ್ನು “ಜ್ಞಾನಿ ಜೀವನ” ಅಥವಾ “ಸಂವೇದನಾಶೀಲ ಮತ್ತು ವಿಧೇಯನಾಗಿರುವ ಜೀವನ” ಅಥವಾ “ಒಳ್ಳೆಯ ತೀರ್ಪು” ಎಂದರ್ಥವನ್ನು ಕೊಡುವ ಮಾತು ಅಥವಾ ಪದವನ್ನು ಉಪಯೋಗಿಸಿ ಅನುವಾದ ಮಾಡಬಹುದು.
- “ಜ್ಞಾನಿ” ಮತ್ತು “ಜ್ಞಾನ” ಎನ್ನುವ ಪದಗಳನ್ನು ನೀತಿವಂತ ಅಥವಾ ವಿಧೇಯನು ಎನ್ನುವ ಪದಗಳಿಗೆ ವಿಭಿನ್ನವಾಗಿರುತ್ತವೆಯೆನ್ನುವ ವಿಧಾನದಲ್ಲಿ ಅನುವಾದ ಮಾಡುವುದು ಉತ್ತಮ.

(ಈ ಪದಗಳನ್ನು ಸಹ ನೋಡಿರಿ : ವಿಧೇಯತೆ ತೋರಿಸು, ಫಲ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.06:03
- ಕೊಲೊ.03:15-17
- ವಿಮೋ.31:06
- ಆದಿ.03:06
- ಯೆಶಯಾ.19:12
- ಯೆರೆ.18:18
- ಮತ್ತಾಯ.07:24

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **02:05** ಆಕೆಯು ಕೂಡ _ ಜ್ಞಾನಿಯಾಗಬೇಕೆಂದು _ ಬಯಸಿದಳು, ಇದರಿಂದ ಆಕೆ ಕೆಲವೊಂದು ಫಲಗಳನ್ನು ತಿಂದು, ಅದನ್ನು ತಿಂದಳು.
- **18:01** ಸೊಲೊಮೋನನು _ ಜ್ಞಾನಕ್ಕಾಗಿ _ ಬೇಡಿಕೊಂಡಾಗ, ದೇವರು ಸಂತೋಷಪಟ್ಟನು ಮತ್ತು ಆತನು ಅವನನ್ನು ಲೋಕದಲ್ಲಿ _ ಜ್ಞಾನಿಯನ್ನಾಗಿ _ ಮಾಡಿದನು.
- **23:09** ಸ್ವಲ್ಪಕಾಲವಾದನಂತರ, ಪೂರ್ವ ದಿಕ್ಕಿನಲ್ಲಿರುವ ದೇಶಗಳಿಂದ ಬಂದ _ ಜೋಯಿಸರು _ ಆಕಾಶದಲ್ಲಿ ಅಸಹಜವಾದ ನಕ್ಷತ್ರವನ್ನು ನೋಡಿದರು.
- **45:01** ಅವನು (ಸ್ತೆಫೆನ) ಒಳ್ಳೇಯ ಖ್ಯಾತಿಯನ್ನು ಹೊಂದಿದ್ದನು, ಮತ್ತು ಪವಿತ್ರಾತ್ಮನಿಂದಲೂ, _ ಜ್ಞಾನದಿಂದಲೂ _ ತುಂಬಿದ್ದನು.

ಪದ ಡೇಟಾ:

- Strong's: H998, H1350, H2445, H2449, H2450, H2451, H2452, H2454, H2942, H3820, H3823, H6195, H6493, H6912, H7535, H7919, H7922, H8454, G4678, G4679, G4680, G4920, G5428, G5429, G5430

ತಂದೆಯಾದ ದೇವರು, ಪರಲೋಕದ ತಂದೆ, ತಂದೆ

ಸತ್ಯಾಂಶಗಳು:

"ತಂದೆಯಾದ ದೇವರು" ಮತ್ತು "ಪರಲೋಕದ ತಂದೆ" ಎನ್ನುವ ಪದಗಳು ಒಬ್ಬನೇ ನಿಜವಾದ ದೇವರಾಗಿರುವ ಯೆಹೋವನನ್ನೇ ಸೂಚಿಸುತ್ತವೆ. ಅದೇ ಅರ್ಥವು ಬರುವಂತಹ "ತಂದೆ" ಎನ್ನುವ ಇನ್ನೊಂದು ಪದವನ್ನು ಅನೇಕಬಾರಿ ಯೇಸು ಆತನನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

- ದೇವರು ತಂದೆಯಾದ ದೇವರಾಗಿ, ಮಗನಾದ ದೇವರಾಗಿ ಮತ್ತು ಪವಿತ್ರಾತ್ಮ ದೇವರಾಗಿ ಅಸ್ತಿತ್ವದಲ್ಲಿದ್ದಾರೆ. ಪ್ರತಿಯೊಬ್ಬರು ಸಂಪೂರ್ಣವಾದ ದೇವರಾಗಿದ್ದಾರೆ ಮತ್ತು ಅವರು ಒಬ್ಬರೇಯಾದ ದೇವರಾಗಿರುತ್ತಾರೆ. ಈ ರಹಸ್ಯವನ್ನೇ ಅನೇಕಮಂದಿ ಮನುಷ್ಯರು ಅರ್ಥಮಾಡಿಕೊಳ್ಳುವುದಿಲ್ಲ.
- ತಂದೆಯಾದ ದೇವರು ಮತ್ತು ಮಗನಾದ ದೇವರು (ಯೇಸು) ಲೋಕದೊಳಗೆ ಕಳುಹಿಸಲ್ಪಟ್ಟಿದ್ದಾರೆ, ಆತನು ಪವಿತ್ರಾತ್ಮನನ್ನು ಜನರೊಳಗೆ ಕಳುಹಿಸಿದ್ದಾನೆ.
- ಮಗನಾದ ದೇವರಲ್ಲಿ ನಂಬುವ ಪ್ರತಿಯೊಬ್ಬ ವ್ಯಕ್ತಿ ತಂದೆಯಾದ ದೇವರಿಗೆ ಮಗನಾಗುತ್ತಾನೆ, ಮತ್ತು ಪವಿತ್ರಾತ್ಮ ದೇವರು ಆ ವ್ಯಕ್ತಿಯಲ್ಲಿ ಬಂದು ನಿವಾಸ ಮಾಡುತ್ತಾನೆ. ಇದು ಇನ್ನೊಂದು ರಹಸ್ಯ, ಇದನ್ನು ಮನುಷ್ಯರು ಅರ್ಥಮಾಡಿಕೊಳ್ಳುವುದಿಲ್ಲ.

ಅನುವಾದ ಸಲಹೆಗಳು:

- "ತಂದೆಯಾದ ದೇವರು" ಎನ್ನುವ ಮಾತನ್ನು ಅನುವಾದ ಮಾಡುವುದರಲ್ಲಿ ಮನುಷ್ಯನಾಗಿರುವ ತಂದೆಯನ್ನು ಸೂಚಿಸುವುದಕ್ಕೆ ಅನುವಾದ ಭಾಷೆಯಲ್ಲಿ ಸ್ವಾಭಾವಿಕವಾಗಿ ಉಪಯೋಗಿಸುವ ಪದವನ್ನು ಇತ್ತು ಅನುವಾದ ಮಾಡುವುದು ಉತ್ತಮ.
- "ಪರಲೋಕದ ತಂದೆ" ಎನ್ನುವ ಮಾತನ್ನು "ಪರಲೋಕದಲ್ಲಿ ನಿವಾಸಿಸುವ ತಂದೆ" ಅಥವಾ "ಪರಲೋಕದಲ್ಲಿರುವ ತಂದೆಯಾದ ದೇವರು" ಅಥವಾ "ಪರಲೋಕದಿಂದ ಬಂದ ನಮ್ಮ ತಂದೆಯಾದ ದೇವರು" ಎಂದೂ ಅನುವಾದ ಮಾಡಬಹುದು.
- ದೇವರನ್ನು ಸೂಚಿಸುವಾಗ ಆಂಗ್ಲ ಭಾಷೆಯಲ್ಲಿರುವ "Father" (ಫಾದರ್) ಎನ್ನುವ ಪದದಲ್ಲಿ ಮೊದಲ ಅಕ್ಷರವು ದೊಡ್ಡದಾಗಿ ಇಟ್ಟಿರುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಪೂರ್ವಜ, ದೇವರು, ಪರಲೋಕ, ಪವಿತ್ರಾತ್ಮ, ಯೇಸು, ದೇವರ ಮಗ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.08:4-6
- 1 ಯೋಹಾನ.02:1-3
- 1 ಯೋಹಾನ.02:22-23
- 1 ಯೋಹಾನ.03:1-3
- ಕೊಲೊಸ್ಸೆ.01:1-3
- ಎಫೆಸ.05:18-21
- ಲೂಕ.10:22
- ಮತ್ತಾಯ.05:15-16
- ಮತ್ತಾಯ.23 :8-10

ಸತ್ಯವೇದದಿಂದ ಉದಾಹರಣೆಗಳು:

- **24:09** ಒಬ್ಬನೇ ನಿಜವಾದ ದೇವರಿದ್ದಾನೆ. ಆದರೆ _ **ತಂದೆಯಾದ ದೇವರು** _ ಮಾತನಾಡಿದ್ದನ್ನು ಯೋಹಾನನು ಕೇಳಿಸಿಕೊಂಡನು ಮತ್ತು ಆತನು ಯೇಸುವಿಗೆ ದೀಕ್ಷಾಸ್ನಾನವನ್ನು ಕೊಟ್ಟಾಗ ಮಗನಾದ ಯೇಸುವನ್ನು ಮತ್ತು ಪವಿತ್ರಾತ್ಮನನ್ನು ನೋಡಿದನು.
- **29:09** "ನೀವು ನಿಮ್ಮ ಹೃದಯಾಂತರಾಳದಿಂದ ನಿಮ್ಮ ಸಹೋದರನನ್ನು ಕ್ಷಮಿಸದಿದ್ದರೆ ನಿಮ್ಮಲ್ಲಿ ಪ್ರತಿಯೊಬ್ಬರಿಗೆ ನನ್ನ _ **ಪರಲೋಕದ ತಂದೆಯು** _ ಇದನ್ನೇ ಮಾಡುತ್ತಾನೆ" ಎಂದು ಯೇಸು ಹೇಳಿದನು.
- **37:09** ತದನಂತರ ಯೇಸು ಪರಲೋಕದ ಕಡೆಗೆ ನೋಡಿ, "_ ತಂದೆಯೇ __ ನನ್ನ ಮನವಿಯನ್ನು ಕೇಳಿದ್ದಕ್ಕಾಗಿ ವಂದನೆಗಳು" ಎಂದು ಹೇಳಿದನು.
- **40:07** ಆದನಂತರ "ಸಮಾಪ್ತವಾಯಿತು! _ ತಂದೆಯೇ __ , ನನ್ನ ಆತ್ಮವನ್ನು ನಿಮ್ಮ ಕೈಗಳಿಗೆ ಒಪ್ಪಿಸುತ್ತಿದ್ದೇನೆ" ಎಂದು ಯೇಸು ಗಟ್ಟಿಯಾಗಿ ಅತ್ತರು.
- **42:10** "ಹೋಗಿರಿ, ಸಮಸ್ತ ಜನರ ಗುಂಪುಗಳನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ _ ತಂದೆ __, ಮಗ, ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಕೊಟ್ಟು, ನಾನು ನಿಮಗೆ ಆಜ್ಞಾಪಿಸಿದ ಪ್ರತಿಯೊಂದಕ್ಕೆ ವಿಧೇಯರಾಗಬೇಕೆಂದು ಅವರಿಗೆ ಬೋಧಿಸಿರಿ.
- **43:08** "ಈಗ ಯೇಸು _ **ತಂದೆಯಾದ ದೇವರ** _ ಬಲಗಡೆಯಲ್ಲಿದ್ದಾರೆ".
- **50:10** "ನೀತಿವಂತರು ಅವರ _ ತಂದೆಯಾದ ದೇವರ __ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುತ್ತಾ ಇರುವರು".

ಪದ ಡೇಟಾ:

- Strong's: H1, H2, G3962

ತಗ್ಗಿಸು, ತಗ್ಗಿಸಿಕೊಂಡಿದೆ, ದೀನತೆ

ಪದದ ಅರ್ಥವಿವರಣೆ:

“ತಗ್ಗಿಸು” ಎನ್ನುವ ಪದವು ಇತರರಿಗಿಂತ ತಾನೇ ಉತ್ತಮ ವ್ಯಕ್ತಿಯೆಂದು ಆಲೋಚನೆ ಮಾಡದ ವ್ಯಕ್ತಿಯನ್ನು ವಿವರಿಸುತ್ತದೆ. ಅವನಲ್ಲಿ ಗರ್ವ ಅಥವಾ ಅಹಂಕಾರಗಳು ಇರುವುದಿಲ್ಲ. ದೀನತೆ ಎನ್ನುವುದು ತಗ್ಗಿಸಿಕೊಂಡಿರುವ ಗುಣವಾಗಿರುತ್ತದೆ.

- ದೇವರ ಮುಂದೆ ತಗ್ಗಿಸಿಕೊಂಡಿರುವುದು ಎನ್ನುವುದಕ್ಕೆ ದೇವರ ಔನ್ನತ್ಯವನ್ನು, ಜ್ಞಾನವನ್ನು ಮತ್ತು ಪರಿಪೂರ್ಣತೆಯನ್ನು ತಿಳಿದು ಅವುಗಳೊಂದಿಗೆ ಒಬ್ಬರ ಬಲಹೀನತೆಯನ್ನು ಮತ್ತು ಅಪರಿಪೂರ್ಣತೆಯನ್ನು ಅರ್ಥಮಾಡಿಕೊಳ್ಳುವುದು ಎಂದರ್ಥ.
- ಒಬ್ಬ ವ್ಯಕ್ತಿ ತನ್ನನ್ನು ತಾನು ತಗ್ಗಿಸಿಕೊಂಡಾಗ, ಆ ವ್ಯಕ್ತಿ ತನ್ನನ್ನು ತಾನು ಪ್ರಾಮುಖ್ಯವಲ್ಲದ ಸ್ಥಿತಿಯಲ್ಲಿರಿಸಿಕೊಳ್ಳುತ್ತಾನೆ.
- ದೀನತೆ ಎನ್ನುವುದು ಒಬ್ಬರ ಸ್ವಂತ ಅಗತ್ಯತೆಗಳಿಗಿಂತ ಇತರ ಅಗತ್ಯತೆಗಳನ್ನು ಹೆಚ್ಚಾಗಿ ನೋಡಿಕೊಳ್ಳುವುದಾಗಿರುತ್ತದೆ.
- ದೀನತೆ ಎನ್ನುವುದು ಒಬ್ಬರ ವರಗಳನ್ನು ಮತ್ತು ಸಾಮರ್ಥ್ಯಗಳನ್ನು ಉಪಯೋಗಿಸಿಕೊಳ್ಳುವಾಗ ಸಾಧಾರಣ ವರ್ತನೆಯೊಂದಿಗೆ ಸೇವೆ ಮಾಡುವುದು ಎಂದರ್ಥ.
- “ತಗ್ಗಿಸಿಕೊ” ಎನ್ನುವ ಮಾತನ್ನು “ಗರ್ವದಿಂದ ಇರಬೇಡ” ಎಂದೂ ಅನುವಾದ ಮಾಡಬಹುದು.
- “ದೇವರ ಮುಂದೆ ನಿನ್ನನ್ನು ನೀನು ತಗ್ಗಿಸಿಕೊ” ಎನ್ನುವ ಮಾತನ್ನು “ನಿನ್ನ ಚಿತ್ತವನ್ನು ದೇವರಿಗೆ ಸಮರ್ಪಿಸಿ, ಆತನ ಶ್ರೇಷ್ಟತೆ ಗುರುತಿಸು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಗರ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯಾಕೋಬ.01:21
- ಯಾಕೋಬ.03:13
- ಯಾಕೋಬ.04:10
- ಲೂಕ.14:11
- ಲೂಕ.18:14
- ಮತ್ತಾಯ.18:4
- ಮತ್ತಾಯ.23:12

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **17:02**ದಾವೀದನು ದೇವರಿಗೆ ವಿಧೇಯನಾಗಿರುವ ಮತ್ತು ಆತನಲ್ಲಿ ಭರವಸೆವಿಟ್ಟಿರುವ _ **ದೀನತೆಯುಳ್ಳ** _ ಮತ್ತು ನೀತಿವಂತನಾದ ಮನುಷ್ಯ.
- **34:10** “ದೇವರು ಅಹಂಕಾರಿಗಳನ್ನು _ **ತಗ್ಗಿಸುವನು** _, ಮತ್ತು ಆತನು **ದೀನ ಸ್ವಭಾವವುಳ್ಳವರನ್ನು** __ ಮೇಲಕ್ಕೆ ಎತ್ತುವನು.”

ಪದ ಡೇಟಾ:

- Strong's: H1792, H3665, H6031, H6035, H6038, H6041, H6800, H6819, H7511, H7807, H7812, H8213, H8214, H8215, H8217, H8467, G858, G4236, G4239, G4240, G5011, G5012, G5013, G5391

ತೀರ್ಪಿನ ದಿನ

ಪದದ ಅರ್ಥವಿವರಣೆ:

“ತೀರ್ಪಿನ ದಿನ” ಎನ್ನುವ ಪದವು ದೇವರು ಪ್ರತಿಯೊಬ್ಬರ ವಿಷಯದಲ್ಲಿ ತೀರ್ಪು ಮಾಡುವ ಭವಿಷ್ಯತ್ತಿನ ಸಮಯವನ್ನು ಸೂಚಿಸುತ್ತದೆ.

- ದೇವರು ಎಲ್ಲಾ ಜನರಿಗೆ ತೀರ್ಪು ಮಾಡುವುದಕ್ಕೆ ತನ್ನ ಮಗನಾದ ಯೇಸುಕ್ರಿಸ್ತನನ್ನು ಇಟ್ಟಿದ್ದಾನೆ.
- ತೀರ್ಪಿನ ದಿನದಂದು ಕ್ರಿಸ್ತನು ತನ್ನ ನೀತಿಯುತವಾದ ನಡತೆಯ ಆಧಾರದ ಮೇಲೆ ಜನರಿಗೆ ತೀರ್ಪು ಮಾಡುತ್ತಾನೆ.

ಅನುವಾದ ಸಲಹೆಗಳು:

- ಈ ಪದವನ್ನು “ತೀರ್ಪು ಮಾಡುವ ಸಮಯ” ಎಂದೂ ಅನುವಾದ ಮಾಡಬಹುದು, ಯಾಕಂದರೆ ಇದು ಒಂದು ದಿನಕ್ಕಿಂತ ಹೆಚ್ಚಿನ ದಿನಗಳನ್ನು ಸೂಚಿಸಬಹುದು.
- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ದೇವರು ಎಲ್ಲಾ ಜನರನ್ನು ತೀರ್ಪು ಮಾಡುವ ಅಂತ್ಯಕಾಲ” ಎನ್ನುವ ಮಾತು ಒಳಗೊಂಡಿರುತ್ತದೆ.
- ಕೆಲವೊಂದು ಅನುವಾದಗಳಲ್ಲಿ ಈ ಪದವನ್ನು ಒಂದು ವಿಶೇಷವಾದ ದಿನದ ಹೆಸರಾಗಿ ಅಥವಾ ಒಂದು ವಿಶೇಷವಾದ ಸಮಯದ ಹೆಸರಾಗಿ ತೋರಿಸುವುದಕ್ಕೆ ಪ್ರಯತ್ನಪಟ್ಟರು: “ತೀರ್ಪಿನ ದಿನ” ಅಥವಾ “ತೀರ್ಪಿನ ಸಮಯ.”

(ಈ ಪದಗಳನ್ನು ಸಹ ನೋಡಿರಿ : ನ್ಯಾಯಾಧೀಶ, ಯೇಸು, ಆಕಾಶ, ನರಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.10:10-12
- ಲೂಕ.11:31
- ಲೂಕ.11:32
- ಮತ್ತಾಯ.10:14-15
- ಮತ್ತಾಯ.12:36-37

ಪದ ಡೇಟಾ:

- Strong's: H2962, H3117, H4941, G2250, G2920, G2962

ತೀರ್ಪು ಮಾಡು, ತೀರ್ಪು ಮಾಡಲಾಗುವುದು, ತೀರ್ಪು ಮಾಡಲಾಗಿದೆ, ಕಠಿಣವಾದ ತೀರ್ಪು

ಪದದ ಅರ್ಥವಿವರಣೆ:

“ತೀರ್ಪು ಮಾಡು” ಅಥವಾ “ಕಠಿಣವಾದ ತೀರ್ಪು” ಎನ್ನುವ ಪದಗಳು ಒಬ್ಬ ವಕ್ತಿ ಯಾವುದಾದರೊಂದು ತಪ್ಪು ಮಾಡಿದ್ದಕ್ಕೆ ಆ ವ್ಯಕ್ತಿಯನ್ನು ತೀರ್ಪು ಮಾಡುವುದನ್ನು ಸೂಚಿಸುತ್ತದೆ.

- “ತೀರ್ಪು ಮಾಡು” ಎನ್ನುವ ಪದಕ್ಕೆ ಕೆಲವೊಂದುಸಲ ಒಬ್ಬ ವ್ಯಕ್ತಿ ತಪ್ಪು ಮಾಡಿದ್ದಕ್ಕೋಸ್ಕರ ಆ ವ್ಯಕ್ತಿಯನ್ನು ಶಿಕ್ಷಿಸುವುದು ಎಂದರ್ಥ.
- “ತೀರ್ಪು ಮಾಡು” ಎನ್ನುವ ಪದಕ್ಕೆ ಕೆಲವೊಂದುಸಲ ಕಠಿಣವಾಗಿ ಒಬ್ಬರನ್ನು ತೀರ್ಪು ಮಾಡು ಅಥವಾ ಒಬ್ಬರ ಮೇಲೆ ತಪ್ಪಾಗಿ ಆರೋಪಣೆ ಮಾಡುವುದು ಎಂದರ್ಥ.
- “ಕಠಿಣವಾದ ತೀರ್ಪು” ಎನ್ನುವ ಪದವು ಒಬ್ಬರ ಮೇಲೆ ದೋಷಾರೋಪಣೆ ಮಾಡುವುದು ಅಥವಾ ಒಬ್ಬರಿಗೆ ಶಿಕ್ಷೆ ಕೊಡುವ ಕ್ರಿಯೆಯನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ ಈ ಪದವನ್ನು “ಕಠಿಣವಾಗಿ ತೀರ್ಪು ಮಾಡು” ಅಥವಾ “ತಪ್ಪಾಗಿ ವಿಮರ್ಶೆ ಮಾಡು” ಎಂದೂ ಅನುವಾದ ಮಾಡಬಹುದು.
- “ಅವನಿಗೆ ತೀರ್ಪು ಮಾಡು” ಎನ್ನುವ ಮಾತನ್ನು “ಅವನು ಅಪರಾಧಿಯೆಂದು ತೀರ್ಪು ಮಾಡು” ಅಥವಾ “ಅವನು ಮಾಡಿದ ಪಾಪಕ್ಕೆ ಅವರು ತಪ್ಪದೇ ಶಿಕ್ಷೆಯನ್ನು ಹೊಂದಬೇಕೆಂದು ಹೇಳು” ಎಂದೂ ಅನುವಾದ ಮಾಡಬಹುದು.
- “ಕಠಿಣವಾದ ತೀರ್ಪು” ಎನ್ನುವ ಪದವನ್ನು “ಕಠಿಣವಾಗಿ ತೀರ್ಪು ಮಾಡುವುದು” ಅಥವಾ “ಅಪರಾಧಿಯೆಂದು ಪ್ರಕಟಿಸುವುದು” ಅಥವಾ “ಅಪರಾಧಕ್ಕೆ ಶಿಕ್ಷೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ತೀರ್ಪು, ಶಿಕ್ಷಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.03:19-22
- ಯೋಬ.09:27-29
- ಯೋಹಾನ.05:24
- ಲೂಕ.06:37
- ಮತ್ತಾಯ.12:7-8
- ಜ್ಞಾನೋ.17:15-16
- ಕೀರ್ತನೆ.034:21-22
- ರೋಮಾ.05:16-17

ಪದ ಡೇಟಾ:

- Strong's: H6064, H7034, H7561, H8199, G176, G843, G2607, G2613, G2631, G2632, G2633, G2917, G2919, G2920, G5272, G6048

ತೀರ್ಪುಮಾಡು, ನ್ಯಾಯಾಧೀಶರು, ತೀರ್ಪು, ತೀರ್ಪುಗಳು

ಪದದ ಅರ್ಥವಿವರಣೆ:

"ತೀರ್ಪು ಮಾಡು" ಮತ್ತು "ತೀರ್ಪು" ಎನ್ನುವ ಪದಗಳು ಅನೇಕಸಲ ಯಾವುದಾದರೊಂದು ನೈತಿಕವಾಗಿ ಸರಿಯೋ ಅಥವಾ ತಪ್ಪೋ ಎಂದೆನ್ನುವುದರ ಕುರಿತಾಗಿ ನಿರ್ಣಯ ತೆಗೆದುಕೊಳ್ಳುವುದನ್ನು ಸೂಚಿಸುತ್ತದೆ.

- "ದೇವರ ತೀರ್ಪು" ಎನ್ನುವ ಮಾತು ಅನೇಕ ಸಲ ಯಾವುದಾದರೊಂದನ್ನು ಅಥವಾ ಯಾರಾದರೊಬ್ಬರು ಪಾಪಿಯೆಂದು ಶಿಕ್ಷಿಸುವುದಕ್ಕೆ ತೆಗೆದುಕೊಳ್ಳುವ ಆತನ ನಿರ್ಣಯವನ್ನು ಸೂಚಿಸುತ್ತದೆ.
- ದೇವರ ತೀರ್ಪು ಸಾಧಾರಣವಾಗಿ ಜನರ ಪಾಪಗಳಿಗಾಗಿ ಅವರನ್ನು ಶಿಕ್ಷಿಸುವುದರ ಕುರಿತಾಗಿಯೇ ಇರುತ್ತದೆ.
- "ತೀರ್ಪು ಮಾಡು" ಎನ್ನುವ ಪದಕ್ಕೆ "ಶಿಕ್ಷಿಸು" ಎನ್ನುವ ಅರ್ಥವೂ ಇದೆ. ಈ ವಿಧಾನದಲ್ಲಿ ಒಬ್ಬರನ್ನೊಬ್ಬರು ತೀರ್ಪು ಮಾಡಿಕೊಳ್ಳಬಾರದೆಂದು ದೇವರು ತನ್ನ ಜನರಿಗೆ ಹೇಳಿದನು.
- ಇನ್ನೊಂದು ಅರ್ಥವೇನಂದರೆ "ಅವರ ಮಧ್ಯೆದಲ್ಲಿ ತೀರ್ಮಾನ ಮಾಡು" ಅಥವಾ "ಅವರ ಮಧ್ಯೆದಲ್ಲಿ ತೀರ್ಪು ಮಾಡು" ಎಂದು ಹೇಳಬಹುದು, ಅವರ ಮಧ್ಯೆದಲ್ಲಿರುವ ಜಗಳದಲ್ಲಿ ಯಾರು ಸರಿಯೆಂದು ತೀರ್ಮಾನ ಮಾಡುವುದು ಎಂದರ್ಥ.
- ಕೆಲವೊಂದು ಸಂದರ್ಭಗಳಲ್ಲಿ, ದೇವರ "ತೀರ್ಪುಗಳೆಲ್ಲವು" ಯಾವುದು ಸರಿಯೆಂದು ಮತ್ತು ಯಾವುದು ನೀತಿಯೆಂದು ಆತನು ನಿರ್ಣಯ ಮಾಡುವುದಾಗಿರುತ್ತದೆ. ಅವುಗಳೆಲ್ಲವೂ ಆತನ ವಿಧಿಗಳಿಗೆ, ನ್ಯಾಯಶಾಸನಗಳಿಗೆ ಅಥವಾ ಉಪದೇಶಗಳಿಗೆ ಹೋಲಿಕೆಯಾಗಿರುತ್ತವೆ.
- "ತೀರ್ಪು" ಎನ್ನುವುದು ಜ್ಞಾನದಿಂದ ತೆಗೆದುಕೊಳ್ಳುವ ನಿರ್ಣಯ ಸಾಮರ್ಥ್ಯವನ್ನು ಸೂಚಿಸುತ್ತದೆ. "ತೀರ್ಪು" ಮಾಡದ ಕೊರತೆಯಿರುವ ಒಬ್ಬ ವ್ಯಕ್ತಿಗೆ ಜ್ಞಾನದ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಜ್ಞಾನದ ಕೊರತೆಯಿದೆಯೆಂದರ್ಥ.

ಅನುವಾದ ಸಲಹೆಗಳು:

- ಸಂದರ್ಭಾನುಗುಣವಾಗಿ, "ತೀರ್ಪು ಮಾಡು" ಎನ್ನುವದನ್ನು ಅನುವಾದ ಮಾಡುವ ವಿಧಾನದಲ್ಲಿ "ನಿರ್ಣಯಿಸು" ಅಥವಾ "ಖಂಡಿಸು" ಅಥವಾ "ಶಿಕ್ಷಿಸು" ಅಥವಾ "ವಿಧಿಸು" ಎನುವ ಪದಗಳು ಸೇರಿಬರುತ್ತವೆ.
- "ತೀರ್ಪು" ಎನ್ನುವ ಪದವನ್ನು "ಶಿಕ್ಷೆ" ಅಥವಾ "ನಿರ್ಣಯ" ಅಥವಾ "ತೀರ್ಮಾನ" ಅಥವಾ "ವಿಧಿ" ಅಥವಾ "ಖಂಡನೆ" ಎಂದೂ ಅನುವಾದ ಮಾಡಬಹುದು.
- ಇನ್ನೂ ಕೆಲವು ಸಂದರ್ಭಗಳಲ್ಲಿ, "ತೀರ್ಪಿನಲ್ಲಿ" ಎನ್ನುವ ಮಾತನ್ನು "ತೀರ್ಪು ಮಾಡುವ ದಿನದಂದು" ಅಥವಾ "ದೇವರು ಜನರನ್ನು ತೀರ್ಪು ಮಾಡುವ ಸಮಯದಲ್ಲಿ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ವಿಧಿ, ತೀರ್ಪು ಮಾಡು, ತೀರ್ಪಿನ ದಿನ, ನ್ಯಾಯ, ಧರ್ಮಶಾಸ್ತ್ರ, ಧರ್ಮಶಾಸ್ತ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.04:17-18
- 1 ಅರಸ.03:7-9
- ಅಪೊ.ಕೃತ್ಯ.10:42-43
- ಯೆಶಯಾ.03:13-15
- ಯಾಕೋಬ.02:1-4
- ಲೂಕ.06:37
- ಮೀಕಾ.03:9-11
- ಕೀರ್ತನೆ.054:1-3

ಸತ್ಯವೇದದಿಂದ ಉದಾಹರಣೆಗಳು:

- **19:16** ದುಷ್ಟ ಕಾರ್ಯಗಳು ಮಾಡುವುದನ್ನು ನಿಲ್ಲಿಸದಿದ್ದರೆ ಮತ್ತು ದೇವರಿಗೆ ವಿಧೇಯತೆಯನ್ನು ತೋರಿಸುವುದು ಆರಂಭಿಸಿದಿದ್ದರೆ, ದೇವರು ಅವರನ್ನು ಅಪರಾಧಿಗಳೆಂದು _ ತೀರ್ಪು __ ಮಾಡುತ್ತಾರೆ ಮತ್ತು ಆತನು ಅವರನ್ನು ಶಿಕ್ಷಿಸುತ್ತಾರೆಂದು ಪ್ರವಾದಿಗಳು ಜನರನ್ನು ಎಚ್ಚರಿಸಿದ್ದರು.
- **21:08** ಅರಸ ಎಂದರೆ ಒಂದು ರಾಜ್ಯವನ್ನು ಆಳುವವನು ಮತ್ತು ಜನರಿಗೆ _ ತೀರ್ಪು ಮಾಡುವವನೂ ಆಗಿರುತ್ತಾನೆ. ಬರುವ ಮೆಸ್ಸೀಯ ತನ್ನ ಪೂರ್ವಜನಾಗಿರುವ ದಾವೀದನ ಸಿಂಹಾಸನದ ಮೇಲೆ ಕೂಡುವ ಪರಿಪೂರ್ಣತೆಯುಳ್ಳ ಅರಸನಾಗಿರುತ್ತಾನೆ. ಆತನು ಪ್ರಪಂಚವನ್ನೆಲ್ಲಾ ಶಾಶ್ವತವಾಗಿ ಆಳುವನು, ಮತ್ತು ಆತನು ಯಥಾರ್ಥವಾಗಿ __ ತೀರ್ಪು _ ಮಾಡುವವನಾಗಿರುತ್ತಾನೆ ಮತ್ತು ಯಾವಾಗಲೂ ನೀತಿಯುತವಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾನೆ.
- **39:04** "ನಮಗೆ ಇನ್ನಾವ ಸಾಕ್ಷಿಯೂ ಬೇಕಾಗಿಲ್ಲ, ಆತನು ದೇವರ ಮಗನೆಂದು ಅವನ ಕುರಿತಾಗಿ ಹೇಳಿರುವುದನ್ನು ನೀವು ಕೇಳಿದ್ದೀರಿ. ಈಗ ನಿನ್ನ _ **ತೀರ್ಪು** _ ಏನು?" ಎಂದು ಮಹಾ ಯಾಜಕನು ಕೋಪಗೊಂಡು ತನ್ನ ವಸ್ತ್ರಗಳನ್ನು ಹರಿದುಕೊಂಡು, ಇತರ ಧರ್ಮ ನಾಯಕರ ಮೇಲೆ ಗಟ್ಟಿಯಾಗಿ ಕಿರುಚುತ್ತಾನೆ!

- **50:14** ಯೇಸುವಿನಲ್ಲಿ ನಂಬಿಕೆಯಿಡದ ಪ್ರತಿಯೊಬ್ಬರಿಗೆ ದೇವರೇ _ ತೀರ್ಪು __ ಮಾಡುವನು. ಆತನು ಅವರನ್ನು ನರಕದಲ್ಲಿ ಹಾಕುವನು, ಅಲ್ಲಿ ಅವರು ಅಳುತ್ತಾಯಿರುವರು ಮತ್ತು ಶಾಶ್ವತವಾದ ದುಃಖದಲ್ಲಿದ್ದು ಯಾವಾಗಲೂ ಹಲ್ಲುಗಳನ್ನು ಕಡಿಯುತ್ತಾ ಇರುವರು.

ಪದ ಡೇಟಾ:

- Strong's: H148, H430, H1777, H1778, H1779, H1780, H1781, H1782, H2940, H4055, H4941, H6414, H6415, H6416, H6417, H6419, H6485, H8196, H8199, H8201, G144, G350, G968, G1106, G1252, G1341, G1345, G1348, G1349, G2917, G2919, G2920, G2922, G2923, G4232

ತೊರೆ, ತೊರೆಯುವುದು, ತೊರೆಯಲ್ಪಟ್ಟಿದೆ, ಬಿಟ್ಟುಬಿಡಿ

ಪದದ ಅರ್ಥವಿವರಣೆ:

“ತೊರೆ” ಎನ್ನುವ ಪದಕ್ಕೆ ಯಾರಾದರೊಬ್ಬರನ್ನು ಬಿಟ್ಟುಬಿಡುವುದು ಅಥವಾ ಯಾವುದಾದರೊಂದನ್ನು ಕೈಬಿಡುವುದು. “ತೊರೆಯಲ್ಪಟ್ಟ” ಒಬ್ಬ ವ್ಯಕ್ತಿ ಇನ್ನೊಬ್ಬರಿಂದ ಕೈಬಿಡಲ್ಪಟ್ಟಿರುತ್ತಾನೆ ಅಥವಾ ಇನ್ನೊಬ್ಬರಿಂದ ಬಹಿಷ್ಕರಿಸಲ್ಪಟ್ಟಿರುತ್ತಾನೆ.

- ಜನರು ದೇವರನ್ನು “ತೊರೆದಾಗ”, ಆತನಿಗೆ ಅವರು ಅವಿಧೇಯತೆ ತೋರಿಸುವುದರ ಮೂಲಕ ಆತನಿಗೆ ವಿಶ್ವಾಸದ್ರೋಹವನ್ನು ಮಾಡಿದವರಾಗಿರುತ್ತಾರೆ.
- ದೇವರು ಜನರನ್ನು “ತೊರೆದಾಗ”, ಆತನು ಅವರಿಗೆ ಸಹಾಯ ಮಾಡುವುದನ್ನು ನಿಲ್ಲಿಸುತ್ತಾನೆ ಮತ್ತು ಅವರೆಲ್ಲರು ತಿರುಗಿ ಆತನ ಬಳಿಗೆ ಬರಬೇಕೆಂದು ಬಯಸುವ ಕ್ರಮದಲ್ಲಿ ಅವರೆಲ್ಲರು ಶ್ರಮೆಗಳನ್ನು ಹೊಂದುವುದಕ್ಕೆ ಅನುಮತಿ ಕೊಡುತ್ತಾನೆ.
- ದೇವರ ಬೋಧನೆಗಳನ್ನು ಅನುಸರಿಸದೇ ಇರುವುದನ್ನು ಅಥವಾ ತೊರೆಯುವುದು ಹೇಗೋ ಹಾಗೆಯೇ ಈ ಪದವು ವಸ್ತುಗಳನ್ನು ಬಿಟ್ಟುಬಿಡುವುದನ್ನೂ ಸೂಚಿಸುತ್ತದೆ,
- “ಆತನು ನಿನ್ನನ್ನು ತೊರೆದಿದ್ದಾನೆ” ಎನ್ನುವ ಮಾತಿನಲ್ಲಿರುವಂತೆ ಅಥವಾ ಒಬ್ಬರು “ತೊರೆಯಲ್ಪಟ್ಟಿದ್ದಾರೆ” ಎಂದು ಸೂಚಿಸುವ ಮಾತಿನಂತೆ, “ತೊರೆಯಲ್ಪಟ್ಟಿದ್ದೀ” ಎನ್ನುವ ಪದವನ್ನು ಭೂತ ಕಾಲದಲ್ಲಿಯೂ ಉಪಯೋಗಿಸಬಹುದು,

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಬಿಟ್ಟುಬಿಡುವುದು” ಅಥವಾ “ನಿರ್ಲಕ್ಷ್ಯ” ಅಥವಾ “ಕೈಬಿಡುವುದು” ಅಥವಾ “ಇಲ್ಲಿಂದ ಪಾರಾಗು” ಅಥವಾ “ಹಿಂದಕ್ಕೆ ಬಿಡು” ಎಂದು ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಉಪಯೋಗಿಸಬಹುದು.
- ದೇವರ ಧರ್ಮಶಾಸ್ತ್ರವನ್ನು “ತೊರೆ” ಎನ್ನುವ ಮಾತನ್ನು “ದೇವರ ಧರ್ಮಶಾಸ್ತ್ರಕ್ಕೆ ಅವಿಧೇಯತೆ ತೋರಿಸು” ಎಂದೂ ಅನುವಾದ ಮಾಡಬಹುದು. ಇದನ್ನು “ಬಿಟ್ಟುಬಿಡು” ಅಥವಾ “ಕೈಬಿಡು” ಅಥವಾ ಆತನ ಬೋಧನೆಗಳಿಗೆ ಅಥವಾ ಆತನ ಧರ್ಮಶಾಸ್ತ್ರಕ್ಕೆ “ವಿಧೇಯತೆ ತೋರಿಸುವುದನ್ನು ನಿಲ್ಲಿಸು” ಎಂದೂ ಅನುವಾದ ಮಾಡಬಹುದು.
- “ತೊರೆಯಲ್ಪಡುವುದು” ಎನ್ನುವ ಮಾತನ್ನು “ಬಿಟ್ಟು ಬಿಡಲ್ಪಡುವುದು” ಅಥವಾ “ಬಿಡಲ್ಪಟ್ಟವರು” ಎಂದೂ ಅನುವಾದ ಮಾಡಬಹುದು.
- ಈ ಪದವನ್ನು ಅನುವಾದ ಮಾಡುವುದಕ್ಕೆ ಅನೇಕ ವಿಭಿನ್ನವಾದ ಪದಗಳನ್ನು ಉಪಯೋಗಿಸಲು ಇದು ತುಂಬಾ ಸ್ಪಷ್ಟವಾಗಿದೆ, ವಾಕ್ಯದಲ್ಲಿ ಒಬ್ಬ ವ್ಯಕ್ತಿಯನ್ನು ತೊರೆಯುವುದು ಅಥವಾ ಒಂದು ವಸ್ತುವನ್ನು ಬಿಟ್ಟುಬಿಡುವುದು ಇದೆಯೋ ಇಲ್ಲವೋ ಎನ್ನುವುದರ ಮೇಲೆ ಆಧಾರಪಟ್ಟಿರುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.06:11-13
- ದಾನಿ.11:29-30
- ಆದಿ.24:26-27
- ಯೆಹೋ.24:16-18
- ಮತ್ತಾಯ.27:45-47
- ಜ್ಞಾನೋ.27:9-10
- ಕೀರ್ತನೆ.071:17-18

ಪದ ಡೇಟಾ:

- Strong's: H488, H2308, H5203, H5428, H5800, H5805, H7503, G646, G657, G863, G1459, G2641,

ದತ್ತು ಸ್ವೀಕಾರ, ದತ್ತು ತೆಗೆದುಕೊಳ್ಳುವುದು, ದತ್ತು ತೆಗೆದುಕೊಂಡಿದ್ದಾರೆ

ಅರ್ಥವಿವರಣೆ:

“ದತ್ತು ತೆಗೆದುಕೊಳ್ಳುವುದು” ಅಥವಾ “ದತ್ತು ಸ್ವೀಕಾರ” ಎನ್ನುವ ಪದಗಳು ಒಬ್ಬನು ಶಾರೀರಿಕವಾಗಿ ತನ್ನ ತಂದೆತಾಯಿಗಳಲ್ಲದವರಿಗೆ ಕಾನೂನುಬದ್ಧವಾಗಿ ಮಗು ಆಗುವ ಪ್ರಕ್ರಿಯೆಯನ್ನು ಸೂಚಿಸುತ್ತವೆ.

- ದೇವರು ಹೇಗೆ ಜನರನ್ನು ತನ್ನ ಕುಟುಂಬದಲ್ಲಿ ಭಾಗಸ್ಥರನ್ನಾಗಿಯೂ ಅವರನ್ನು ತನ್ನ ಆತ್ಮೀಕ ಮಕ್ಕಳಾಗಿಯೂ ಮಾಡಿಕೊಳ್ಳುತ್ತಾನೆ ಎನ್ನುವುದನ್ನು ವಿವರಿಸಿ ಹೇಳುವುದಕ್ಕೆ “ದತ್ತು ಸ್ವೀಕಾರ” ಅಥವಾ “ದತ್ತು ತೆಗೆದುಕೊಳ್ಳುವುದು” ಎಂಬ ಪದಗಳನ್ನು ಸತ್ಯವೇದವು ಅಲಂಕಾರಿಕ ರೂಪದಲ್ಲಿ ಉಪಯೋಗಿಸಿದೆ.
- ದತ್ತು ತೆಗೆದುಕೊಂಡಿರುವ ಮಕ್ಕಳ ಹಾಗೆ ಇರುವ ವಿಶ್ವಾಸಿಗಳನ್ನು ದೇವರು ಯೇಸು ಕ್ರಿಸ್ತನೊಂದಿಗೆ ಸಹ ಬಾಧ್ಯರನ್ನಾಗಿ ಮಾಡಿ, ದೇವರ ಪುತ್ರರಿಗೂ ಪುತ್ರಿಯರಿಗೂ ಇರುವ ಎಲ್ಲಾ ಹಕ್ಕುಗಳನ್ನು ಅವರಿಗೆ ಅನುಗ್ರಹಿಸಿದ್ದಾನೆ.

ಅನುವಾದ ಸಲಹೆಗಳು:

- ಭಾಷಾಂತರ ಮಾಡುವ ಭಾಷೆಯಲ್ಲಿ ಈ ವಿಶೇಷವಾದ ತಂದೆತಾಯಿ ಮಕ್ಕಳ ಸಂಬಂಧವನ್ನು ವಿವರಿಸುವುದಕ್ಕೆ ಇರುವಂಥ ಪದ ಬಳಕೆ ಮಾಡಿ ಈ ಪದವನ್ನು ಭಾಷಾಂತರ ಮಾಡಬಹುದು. ಈ ಪದದಲ್ಲಿ ಅಲಂಕಾರಿಕ ಭಾಷೆಯು ಅಥವಾ ಆತ್ಮೀಕ ಅರ್ಥವು ಇದೆಯೆಂದು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ನೋಡಿಕೊಳ್ಳಿರಿ.
- “ದತ್ತು ಮಕ್ಕಳಾಗಿರುವ ಅನುಭವ ಹೊಂದಿರಿ” ಎನ್ನುವ ಮಾತಿಗೆ, ‘ದೇವರು ತನ್ನ ಮಕ್ಕಳಾಗಿ ದತ್ತು ಸ್ವೀಕಾರ ಮಾಡಿದ್ದಾನೆ” ಅಥವಾ “ದೇವರ (ಆತ್ಮೀಕ) ಮಕ್ಕಳಾಗಿರಿ” ಎಂದು ಅನುವಾದ ಮಾಡಬಹುದು.
- “ದತ್ತು ಮಕ್ಕಳಾಗುವುದಕ್ಕೆ ಕಾಯುತ್ತಿರುವುದು” ಎಂಬುದನ್ನು “ದೇವರ ಮಕ್ಕಳಾಗುವುದಕ್ಕೆ ಎದುರುನೋಡಿರಿ” ಅಥವಾ “ದೇವರು ತನ್ನ ಮಕ್ಕಳಾಗಿ ಸ್ವೀಕಾರ ಮಾಡುವುದಕ್ಕೆ ನಿರೀಕ್ಷೆಯಿಂದ ಕಾಯಿರಿ" ಎಂದು ಅನುವಾದ ಮಾಡಬಹುದು.
- “ಅವರನ್ನು ದತ್ತು ತೆಗೆದುಕೊಳ್ಳಿರಿ” ಎನ್ನುವ ಮಾತನ್ನು “ತನ್ನ ಸ್ವಂತ ಮಕ್ಕಳನ್ನಾಗಿ ಅವರನ್ನು ಸ್ವೀಕರಿಸಿರಿ” ಅಥವಾ “ತನ್ನ ಸ್ವಂತ (ಆತ್ಮೀಕ) ಮಕ್ಕಳಾಗಿ ಮಾಡಿಕೊಳ್ಳಿರಿ” ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಬಾಧ್ಯರಾಗಿರುವುದು, ಸ್ವಾಸ್ಥ್ಯ, ಆತ್ಮ)

ಸತ್ಯವೇದದ ಉಲ್ಲೇಖ ವಚನಗಳು:

- ಎಫೆಸ. 01:5-6
- ಗಲಾತ್ಯ. 04:3-5
- ರೋಮಾ. 08:14-15
- ರೋಮಾ. 08:23
- ರೋಮಾ. 09:04

ಪದದ ದತ್ತಾಂಶ:

- Strong's: G5206

ದಯೆ, ದಯೆ ತೋರಿಸುತ್ತದೆ, ಇಷ್ಟವಾದ, ಪಕ್ಷಪಾತ

ಪದದ ಅರ್ಥವಿವರಣೆ:

ಸಾಮಾನ್ಯವಾಗಿ "ದಯೆ" ಎಂದರೆ ಅನುಮೋದನೆ ಎಂದರ್ಥ. ಇನ್ನೊಬ್ಬ ವ್ಯಕ್ತಿಗೆ ದಯೆ ತೋರುವ ಯಾರಾದರೂ ಆ ವ್ಯಕ್ತಿಯನ್ನು ಧನಾತ್ಮಕವಾಗಿ ಪರಿಗಣಿಸುತ್ತಾರೆ ಮತ್ತು ಅವರನ್ನು ಅನುಮೋದಿಸುತ್ತಾರೆ.

- "ಪಕ್ಷಪಾತ" ಎನ್ನುವ ಪದಕ್ಕೆ ಕೇವಲ ಕೆಲವರ ವಿಷಯದಲ್ಲಿ ಮಾತ್ರ ದಯೆಯನ್ನು ಅಥವಾ ಇಷ್ಟವನ್ನು ತೋರಿಸುವ ರೀತಿಯಲ್ಲಿ ನಡೆದುಕೊಳ್ಳುವುದು ಎಂದರ್ಥ. ಒಬ್ಬರ ಮೇಲೊಬ್ಬರು ಅಥವಾ ಒಂದರ ಮೇಲೊಂದು ಇಷ್ಟವನ್ನುಂಟು ಮಾಡಿಕೊಳ್ಳುವುದು ಎಂದರ್ಥ, ಯಾಕಂದರೆ ಆ ವ್ಯಕ್ತಿ ಅಥವಾ ಆ ವಸ್ತು ತುಂಬಾ ಪ್ರಾಮುಖ್ಯ. ಸಾಧಾರಣವಾಗಿ, ಪಕ್ಷಪಾತ ಎನ್ನುವುದು ಸರಿಯಾದದ್ದಲ್ಲವೆಂದು ಪರಿಗಣಿಸಲಾಗಿದೆ.
- ಯೇಸು ದೇವರ ಮತ್ತು ಮನುಷ್ಯನ "ದಯೆಯಲ್ಲಿ " ಬೆಳೆದನು. ದೇವರು ಮತ್ತು ಮನುಷ್ಯರು ಆತನ ನಡುವಳಿಕೆಯನ್ನು ಮತ್ತು ನಡತೆಯನ್ನು ಅನುಮೋದಿಸಿದ್ದಾರೆಂದು ಇದು ಅರ್ಥೈಸುತ್ತದೆ.
- ಒಬ್ಬರಿಂದ "ದಯೆಯನ್ನು ಪಡೆದುಕೋ" ಎನ್ನುವ ಮಾತಿಗೆ ಆ ವ್ಯಕ್ತಿಯಿಂದ ಇನ್ನೊಬ್ಬರು ಅನುಮೋದನೆ ಹೊಂದುವುದು ಎಂದರ್ಥ.
- ಅರಸನು ಒಬ್ಬರಿಗೆ ದಯೆ ತೋರಿಸಿದಾಗ, ಆ ವ್ಯಕ್ತಿಯ ಮನವಿಯನ್ನು ಅನುಮೋದಿಸಿದ್ದಾನೆ ಮತ್ತು ಅದಕ್ಕೆ ಅನುಮತಿ ಕೊಟ್ಟಿದ್ದಾನೆ ಎಂದರ್ಥ.
- "ದಯೆ" ಎನ್ನುವುದು ಕೆಲವರ ಪ್ರಯೋಜನಕ್ಕಾಗಿ ಇನ್ನೊಬ್ಬ ವ್ಯಕ್ತಿಯ ವಿಷಯದಲ್ಲಿ ನಡೆದುಕೊಳ್ಳುವ ನಡೆತೆ ಅಥವಾ ಒಂದು ಸೂಚನೆಯೂ ಆಗಿರಬಹುದು.

ಅನುವಾದ ಸಲಹೆಗಳು:

- ದಯೆ ಎಂಬ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಆಶೀರ್ವಾದ" ಅಥವಾ "ಪ್ರಯೋಜನ" ಅಥವ "ಅನುಮೋದನೆ" ಎಂಬ ಪದಗಳನ್ನು ಉಪಯೋಗಿಸುತ್ತಾರೆ.
- "ಯೆಹೋವನ ಇಷ್ಟವಾದ ವರ್ಷ" ಎನ್ನುವ ಮಾತನ್ನು "ಯೆಹೋವನು ದೊಡ್ಡ ಆಶೀರ್ವಾದವನ್ನು ತೆಗೆದುಕೊಂಡು ಬಂದ ವರ್ಷ (ಅಥವಾ ಸಮಯ)" ಎಂದೂ ಅನುವಾದ ಮಾಡುತ್ತಾರೆ.
- "ಪಕ್ಷಪಾತ" ಎನ್ನುವ ಪದವನ್ನು "ಆದ್ಯತೆ ಕೊಡುವುದು" ಅಥವಾ "ಅನುಕೂಲಕರವಾಗಿರುವುದು" ಅಥವಾ "ಅನ್ಯಾಯವಾದ ರೀತಿಯಲ್ಲಿ ನೋಡಿಕೊಳ್ಳುವುದು" ಎಂದೂ ಅನುವಾದ ಮಾಡಬಹುದು. ಈ ಪದವು "ಅತ್ಯಂತ ಪ್ರೀತಿ" ಎನ್ನುವ ಪದಕ್ಕೆ ಹತ್ತಿರವಾಗಿರುತ್ತದೆ, ಇದಕ್ಕೆ "ಹೆಚ್ಚಿನ ಆದ್ಯತೆ ಇರುವ ಅಥವಾ ಹೆಚ್ಚಾಗಿ ಪ್ರೀತಿಸಲ್ಪಟ್ಟ ವ್ಯಕ್ತಿ" ಎಂದರ್ಥ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.02:25-26
- 2 ಪೂರ್ವ.19:6-7
- 2 ಕೊರಿಂಥ.01:11
- ಅಪೊ.ಕೃತ್ಯ.24:26-27
- ಆದಿ.41:14-16
- ಆದಿ.47:25-26
- ಆದಿ.50:4-6

ಪದ ಡೇಟಾ:

- Strong's: H995, H1156, H1293, H1779, H1921, H2580, H2603, H2896, H5278, H5375, H5414, H5922, H6213, H6437, H6440, H7521, H7522, H7965, G1184, G3685, G4380, G4382, G5485, G5486

ದೀಕ್ಷಾಸ್ನಾನ ಮಾಡಿಸು, ದೀಕ್ಷಾಸ್ನಾನ ಮಾಡಿಸಿಕೊಳ್ಳಲಾದೆ, ದೀಕ್ಷಾಸ್ನಾನ

ಅರ್ಥವಿವರಣೆ:

ಹೊಸ ಒಡಂಬಡಿಕೆಯಲ್ಲಿ, ಒಬ್ಬ ಕ್ರೈಸ್ತನು ತನ್ನ ಪಾಪಗಳು ತೊಳೆಯಲ್ಪಟ್ಟಿದೆ ಎಂಬುದನ್ನು ಮತ್ತು ಕ್ರಿಸ್ತನೊಂದಿಗೆ ಐಕ್ಯತೆ ಹೊಂದಿರುವದನ್ನು ಸೂಚಿಸಲು ಧಾರ್ಮಿಕವಾಗಿ ಸ್ನಾನ ಮಾಡುವದನ್ನು “ದೀಕ್ಷಾಸ್ನಾನ” ಮತ್ತು "ದೀಕ್ಷಸ್ನಾನ ಮಾಡಿಸು” ಎಂದು ಕರೆಯುತ್ತಾರೆ.

ಅನುವಾದ ಸಲಹೆಗಳು:

- ಒಬ್ಬ ವ್ಯಕ್ತಿ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡ ಕುರಿತಾಗಿ ಕ್ರೈಸ್ತರಿಗೆ ಅನೇಕ ವಿಧವಾದ ಅಭಿಪ್ರಾಯಗಳುಂಟು. ನೀರನ್ನು ಅನೇಕ ವಿಧವಾಗಿ ಅನ್ವಯಿಸಲು ಅವಕಾಶ ನೀಡುವಂತೆ ಈ ಪದವನ್ನು ಸಾಮಾನ್ಯವಾಗಿ ಅನುವಾದ ಮಾಡುವುದು ಒಳ್ಳೆಯದು.
- ಸಂಧರ್ಭಾನುಸಾರವಾಗಿ, “ದೀಕ್ಷಾಸ್ನಾನ ಮಾಡಿಸು” ಎನ್ನುವ ಪದವನ್ನು “ಪರಿಶುದ್ಧಗೊಳಿಸು”, “ಸುರಿಯುವುದು”, “ಮುಳುಗುವುದು”, “ತೊಳೆಯಲ್ಪಡುವುದು” ಅಥವಾ “ಆತ್ಮೀಯವಾಗಿ ಶುಚಿಗೊಳ್ಳುವುದು” ಎಂದು ಅನುವಾದ ಮಾಡಬಹುದು. ಉದಾಹರಣೆಗೆ, “ನಿನಗೆ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸುವುದು” ಎನ್ನುವ ವಾಕ್ಯವನ್ನು “ನಿನ್ನನ್ನು ನೀರಿನಲ್ಲಿ ಮುಳುಗಿಸುವುದು” ಎಂದು ಅನುವಾದ ಮಾಡಬಹುದು.
- “ದೀಕ್ಷಾಸ್ನಾನ” ಎನ್ನುವ ಪದವನ್ನು “ಪರಿಶುದ್ಧಗೊಳಿಸುವುದು”, “ಸುರಿಯುವುದು”, “ಪವಿತ್ರಗೊಳಿಸು” ಅಥವಾ “ಆತ್ಮೀಯವಾಗಿ ಶುಚಿಗೊಳ್ಳುವುದು” ಎಂದು ಅನುವಾದ ಮಾಡಬಹುದು.
- ಹಾಗೆಯೇ ಈ ಪದವನ್ನು ಸ್ಥಳಿಯ ಅಥವಾ ರಾಜ್ಯ ಭಾಷೆಗಳಲ್ಲಿ ಹೇಗೆ ಅನುವಾದ ಮಾಡಿರುವರೆಂದು ಸಹ ಗಮನಿಸಿ.

(ಇದನ್ನು ನೋಡಿರಿ: ಗೊತ್ತಿಲ್ಲದ ವಿಷಯಗಳನ್ನು ಹೇಗೆ ಅನುವಾದ ಮಾಡುವುದು)

(ಇವುಗಳನ್ನು ಸಹ ನೋಡಿರಿ : ಯೋಹಾನ (ಸ್ನಾನಿಕನಾದ), ಪಶ್ಚಾತ್ತಾಪ, ಪವಿತ್ರಾತ್ಮ)

ಸತ್ಯವೇದದ ಉಲ್ಲೇಖಗಳು:

- ಅಪೊ.ಕೃತ್ಯ. 2:38
- ಅಪೊ.ಕೃತ್ಯ. 8:36
- ಅಪೊ.ಕೃತ್ಯ. 9:18
- ಅಪೊ.ಕೃತ್ಯ.10:48
- ಲೂಕ. 3:16
- ಮತ್ತಾಯ. 3:14
- ಮತ್ತಾಯ.28:18-19

ಸತ್ಯವೇದ ಕಥೆಗಳಿಂದ ಉದಾಹರಣೆಗಳು:

- **24:3** ಯೋಹಾನನ ಸಂದೇಶವನ್ನು ಜನರು ಕೇಳಿದಾಗ, ಅನೇಕರು ಅವರ ಪಾಪಗಳಿಂದ ಪಶ್ಚಾತಾಪ ಪಟ್ಟರು, ಮತ್ತು ಯೋಹಾನನು ಅವರಿಗೆ **ದೀಕ್ಷಾಸ್ನಾನ** ಮಾಡಿಸಿದನು. ಯೋಹಾನನಿಂದ **ದೀಕ್ಷಾಸ್ನಾನ** ಹೊಂದಿಕೊಳ್ಳುವದಕ್ಕೆ ಅನೇಕ ಧಾರ್ಮಿಕ ನಾಯಕರುಗಳು ಬಂದರು, ಆದರೆ ಅವರು ಪಶ್ಚಾತಾಪಪಡಲಿಲ್ಲ ಅಥವಾ ಅವರ ಪಾಪಗಳನ್ನು ಒಪ್ಪಿಕೊಳ್ಳಲ್ಲಿಲ್ಲ.
- **24:6** ಮರುದಿನ, ಯೋಹಾನನಿಂದ **ದೀಕ್ಷಾಸ್ನಾನ** ಮಾಡಿಸಿಕೊಳ್ಳುವುದಕ್ಕೆ ಯೇಸು ಬಂದನು.
- **24:7**ಯೋಹಾನನು ಯೇಸುವಿಗೆ ಹೇಳಿದನು, “ನಿನಗೆ **ದೀಕ್ಷಾಸ್ನಾನ** ಮಾಡಿಸಲು ನಾನು ಯೋಗ್ಯನಲ್ಲ”. ನಾನೇ ನಿನ್ನಿಂದ **ದೀಕ್ಷಾಸ್ನಾನ** ಮಾಡಿಸಿಕೊಳ್ಳಬೇಕಾಗಿತ್ತು.”
- **42:10** "ಆದುದರಿಂದ ನೀವು ಹೊರಟುಹೋಗಿ, ಎಲ್ಲಾ ಜನಾಂಗಗಳನ್ನು ಶಿಷ್ಯರನ್ನಾಗಿ ಮಾಡಿ ಅವರಿಗೆ ತಂದೆ, ಮಗ, ಪವಿತ್ರಾತ್ಮನ ಹೆಸರಿನಲ್ಲಿ **ದೀಕ್ಷಾಸ್ನಾನ** ಮಾಡಿಸಿರಿ ಮತ್ತು ನಾನು ನಿಮಗೆ ಆಜ್ಞಾಪಿಸಿದ ಎಲ್ಲವನ್ನು ಅನುಸರಿಸುವುದಕ್ಕೆ ಅವರಿಗೆ ಉಪದೇಶ ಮಾಡಿರಿ".
- **43:11** ಪೇತ್ರನು ಉತ್ತರವಾಗಿ ಅವರಿಗೆ, “ನಿಮ್ಮ ಪಾಪಗಳು ಕ್ಷಮಿಸಲ್ಪಡುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನಲ್ಲಿ **ದೀಕ್ಷಾಸ್ನಾನ** ಮಾಡಿಸಿಕೊಳ್ಳಲಿ” ಎಂದು ಹೇಳಿದನು.
- **43:12** ಪೇತ್ರನು 3,000 ಹೇಳಿದ್ದನ್ನು ಸುಮಾರು ಮೂರು ಸಾವಿರ ಜನರು ನಂಬಿದರು ಮತ್ತು ಯೇಸುವಿನ ಶಿಷ್ಯರಾದರು. ಅವರು **ದೀಕ್ಷಾಸ್ನಾನ** ಮಾಡಿಸಿಕೊಂಡು ಯೆರೂಸಲೇಮಿನ ಸಭೆಯಲ್ಲಿ ಸೇರಿಸಲ್ಪಟ್ಟರು.
- **45:11** ಫಿಲಿಪ್ಪನು ಮತ್ತು ಕಂಚುಕಿಯು ದಾರಿಯಲ್ಲಿ ಹೋಗುತ್ತಿರುವಾಗ, ಅವರು ನೀರಿರುವ ಜಾಗಕ್ಕೆ ಬಂದರು. ಕಂಚುಕಿಯು ಹೀಗೆಂದನು, “ಆಗೋ, ನೀರು; ನನಗೆ **ದೀಕ್ಷಾಸ್ನಾನ** ವಾಗುವುದಕ್ಕೆ ಅಡ್ಡಿ ಏನು?"
- **46:5** ಕೂಡಲೇ ಸೌಲನ ಕಣ್ಣು ಕಾಣಿಸಿದವು ಮತ್ತು ಅನನೀಯನು ಅವನಿಗೆ**ದೀಕ್ಷಾಸ್ನಾನ** ಮಾಡಿಸಿದನು.
- **49:14** ನೀವು ಆತನನ್ನು ನಂಬಬೇಕೆಂದು ಮತ್ತು **ದೀಕ್ಷಾಸ್ನಾನ** ಮಾಡಿಸಿಕೊಳ್ಳಬೇಕೆಂದು ಯೇಸು ಆಹ್ವಾನಿಸುತ್ತಿದ್ದಾನೆ.

ಪದದ ದತ್ತಾಂಶ:

- Strong's: G09070

ದೂಷಣೆ, ದೇವದೂಷಣೆ, ಧರ್ಮನಿಂದೆಯ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ, ದೇವರಿಗೆ ಅಥವಾ ಜನರಿಗೆ ಅಗೌರವ ತೋರುವದನ್ನು "ದೂಷಣೆ" ಎಂದು ಸೂಚಿಸಲಾಗಿದೆ. ಇನ್ನೊಬ್ಬರ ಕುರಿತಾಗಿ "ದೇವದೂಷಣೆ" ಅಂದರೆ ಬೇರೆಯವರು ಅವನ ಕುರಿತಾಗಿ ಕೆಟ್ಟದಾಗಿ ಅಥವಾ ಅಸತ್ಯವಾಗಿ ಯೋಚಿಸುವಂತೆ ಆ ವ್ಯಕ್ತಿಗೆ ವಿರುದ್ಧವಾಗಿ ಮಾತಾಡುವುದು ಎಂದರ್ಥ.

- ಅನೇಕ ಬಾರಿ, ದೇವದೂಷಣೆ ಎಂದರೆ ಆತನ ಕುರಿತಾಗಿ ಸುಳ್ಳು ಹೇಳುವುದು ಅಥವಾ ಅವನನ್ನು ಅವಮಾನಿಸುವುದು ಅಥವಾ ಅಗೌರವಪಡಿಸುವಂತೆ ಮಾತನಾಡುವುದು ಅಥವಾ ಆತನಿಗೆ ಅಗೌರವ ತರುವಂತೆ ಅನೈತಿಕವಾಗಿ ಪ್ರವರ್ತಿಸುವುದು ಎಂದರ್ಥ.
- ಒಬ್ಬ ಮನುಷ್ಯನು ನಾನೇ ದೇವರು ಎಂದು ಹೇಳಿಕೊಳ್ಳುವುದು ಅಥವಾ ನಿಜವಾದ ದೇವರಲ್ಲದೆ ಮತ್ತೊಂದು ದೇವರು ಇದ್ದನೆಂದು ಹೇಳುವುದು ದೂಷಣೆಯಾಗಿರುತ್ತದೆ.
- ದೇವ ದೂಷಣೆ ಮಾಡುವ ಜನರನ್ನು ಸೂಚಿಸಲು ಕೆಲವೊಂದು ಆಂಗ್ಲ ಅನುವಾದಗಳಲ್ಲಿ "ಅಪನಿಂದಕ" ಎಂದು ಅನುವಾದ ಮಾಡಿದ್ದಾರೆ.

ಅನುವಾದ ಸಲಹೆಗಳು:

- "ಕೆಟ್ಟ ಸಂಗತಿಗಳನ್ನು ಹೇಳುವುದು" ಅಥವಾ "ದೇವರನ್ನು ಅಗೌರವಪಡಿಸುವುದು" ಅಥವಾ "ಅಪನಿಂದಕ" ಎಂದು "ದೇವ ದೂಷಣೆ" ಎನ್ನುವ ಪದವನ್ನು ಅನುವಾದ ಮಾಡಬಹುದು.
- "ಬೇರೆಯವರ ಕುರಿತಾಗಿ ಸುಳ್ಳು ಮಾತಾಡುವುದು" ಅಥವಾ "ಅಪನಿಂದಕ" ಅಥವಾ "ಸುಳ್ಳು ಸುದ್ದಿಗಳನ್ನು ಹರಡಿಸುವುದು" ಎಂದು "ದೂಷಣೆ" ಎನ್ನುವ ಪದವನ್ನು ಅನುವಾದ ಮಾಡಬಹುದು

(ಈ ಪದಗಳನ್ನು ಸಹ ನೋಡಿರಿ : ಅಗೌರವ, ಅಪನಿಂದಕ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ತಿಮೋಥಿ.01:12-14
- ಅಪೊ.ಕೃತ್ಯ.06:11
- ಅಪೊ.ಕೃತ್ಯ.26:9-11
- ಯಾಕೋಬ.02:5-7
- ಯೋಹಾನ.10:32-33
- ಲೂಕ.12:10
- ಮಾರ್ಕ.14:64
- ಮತ್ತಾಯ.12:31
- ಮತ್ತಾಯ.26:65
- ಕೀರ್ತನೆ.074:10

ಪದ ಡೇಟಾ:

- Strong's: H1288, H1442, H2778, H5006, H5007, H5344, G987, G988, G989

ದೆವ್ವ ಹಿಡಿಯಲ್ಪಟ್ಟವರು

ಪದದ ಅರ್ಥವಿವರಣೆ:

ದೆವ್ವ ಹಿಡಿಯಲ್ಪಟ್ಟ ಒಬ್ಬ ವ್ಯಕ್ತಿಯೊಳಗೆ ದೆವ್ವ ಅಥವಾ ದುಷ್ಟಾತ್ಮ ಇದ್ದು ಅವನ ಆಲೋಚನೆಗಳನ್ನು ಮತ್ತು ಮಾಡುವ ಕ್ರಿಯೆಗಳನ್ನು ನಿಯಂತ್ರಿಸುತ್ತಿರುತ್ತದೆ.

- ಅನೇಕಬಾರಿ ದೆವ್ವ ಹಿಡಿದ ಒಬ್ಬ ವ್ಯಕ್ತಿ ತನ್ನನ್ನು ತಾನು ಹಾನಿ ಮಾಡಿಕೊಳ್ಳುತ್ತಾನೆ ಅಥವಾ ಇನ್ನೊಬ್ಬರಿಗೆ ಹಾನಿ ಮಾಡುತ್ತಾನೆ ಯಾಕಂದರೆ ದೆವ್ವ ಆ ರೀತಿ ಮಾಡುವಂತೆ ಪ್ರೇರೇಪಿಸುತ್ತದೆ.
- ಯೇಸು ದೆವ್ವ ಹಿಡಿದ ಜನರನ್ನು ಆ ದೆವ್ವಗಳಿಗೆ ಹೊರಬರಬೇಕೆಂದು ಆಜ್ಞಾಪಿಸುವುದರ ಮೂಲಕ ಗುಣಪಡಿಸಿದನು. ದೆವ್ವಗಳನ್ನು "ಹೋಗಲಾಡಿಸುವುದು" ಎಂದು ಇದನ್ನು ಅನೇಕಬಾರಿ ಕರೆಯುತ್ತಾರೆ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ದೆವ್ವ ನಿಯಂತ್ರಿಸುತ್ತದೆ" ಅಥವಾ "ದುರಾತ್ಮದಿಂದ ನಿಯಂತ್ರಿಸಲ್ಪಡುತ್ತಿದೆ" ಅಥವಾ "ದುರಾತ್ಮ ಒಳಗಡೆ ನಿವಾಸ ಮಾಡುತ್ತಿದೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದೆವ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಮಾರ್ಕ.01:32-34
- ಮತ್ತಾಯ.04:23-25
- ಮತ್ತಾಯ.08:16-17
- ಮತ್ತಾಯ.08:33-34

ಸತ್ಯವೇದದಿಂದ ಉದಾಹರಣೆಗಳು:

- **26:09** _ ದೆವ್ವಗಳನ್ನು _ ಒಳಗೊಂಡ ಅನೇಕಮಂದಿ ಜನರನ್ನು ಯೇಸುವಿನ ಬಳಿಗೆ ಕರೆದುಕೊಂಡು ಬಂದರು.
- **32:02** ಅವರು ನದಿಯ ಆಚೆ ಕಡೆಗೆ ಸೇರಿದನಂತರ, _ ದೆವ್ವ ಹಿಡಿದ ಒಬ್ಬ ವ್ಯಕ್ತಿ _ ಯೇಸುವಿನ ಬಳಿಗೆ ಓಡಿಬಂದನು.
- **32:06** _ ದೆವ್ವ _ ಇದ್ದ ಒಬ್ಬ ಮನುಷ್ಯನು ಗಟ್ಟಿಯಾಗಿ ಅತ್ತು, "ಪರಾತ್ಪರ ಮಗನಾದ ಯೇಸು ನನ್ನನ್ನು ಏನು ಮಾಡಬೇಕೆಂದಿದ್ದೀ? ದಯವಿಟ್ಟು ನನಗೆ ತೊಂದರೆ ಕೊಡಬೇಡ!" ಎಂದು ಕೂಗಿ ಹೇಳಿದನು.
- **32:09** ಆ ಊರಿನಲ್ಲಿರುವ ಜನರೆಲ್ಲರು ಬಂದು _ ದೆವ್ವಗಳನ್ನು _ ಒಳಗೊಂಡ ಮನುಷ್ಯನನ್ನು ನೋಡಿದರು.
- **47:03** ಅವರು (ಪೌಲ ಮತ್ತು ಸೀಲ) ನಡೆದ ಪ್ರತಿಯೊಂದು ದಿನ, _ ದೆವ್ವ _ ಹಿಡಿದ ಆ ಹುಡುಗಿ ಅವರನ್ನು ಹಿಂಬಾಲಿಸುತ್ತಿದ್ದಳು.

ಪದ ಡೇಟಾ:

- Strong's: G1139

ದೆವ್ವ, ದುಷ್ಟಾತ್ಮ, ಅಶುದ್ಧ ಆತ್ಮ

ಪದದ ಅರ್ಥವಿವರಣೆ:

ಈ ಎಲ್ಲಾ ಪದಗಳು ದೆವ್ವಗಳನ್ನು ಸೂಚಿಸುತ್ತವೆ, ಇವು ದೇವರ ಚಿತ್ತಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಆತ್ಮಗಳಾಗಿರುತ್ತವೆ.

- ದೇವರು ತನಗೆ ಸೇವೆ ಮಾಡುವುದಕ್ಕಾಗಿ ದೂತರನ್ನು ಸೃಷ್ಟಿಸಿಕೊಂಡಿದ್ದಾರೆ. ಸೈತಾನನು ದೇವರ ವಿರುದ್ಧ ಎದ್ದಾಗ ಕೆಲವು ದೂತರು ದೇವರ ವಿರುದ್ಧ ಎದ್ದರು, ಪರಲೋಕದಿಂದ ಹೊರ ಹಾಕಲ್ಪಟ್ಟರು. ದೆವ್ವಗಳು ಮತ್ತು ದುಷ್ಟಾತ್ಮಗಳೆಲ್ಲವು "ಬಿದ್ದುಹೋಗಿರುವ ದೂತರು" ಎಂದು ನಂಬಲಾಗಿದೆ.
- ಕೆಲವೊಂದುಬಾರಿ ಈ ದೆವ್ವಗಳನ್ನು "ಅಶುದ್ಧ ಆತ್ಮಗಳು" ಎಂದು ಕರೆಯಲ್ಪಟ್ಟಿವೆ. "ಅಶುದ್ಧ" ಎನ್ನುವ ಪದಕ್ಕೆ "ಅಪವಿತ್ರ" ಅಥವಾ "ದುಷ್ಟ" ಅಥವಾ "ಅಪರಿಶುದ್ಧ" ಎಂದರ್ಥ.
- ಯಾಕಂದರೆ ದೆವ್ವಗಳು ಸೈತಾನನನ್ನು ಸೇವಿಸುತ್ತವೆ, ಅವು ದುಷ್ಟ ಕಾರ್ಯಗಳನ್ನು ಮಾಡುತ್ತವೆ. ಕೆಲವೊಂದುಬಾರಿ ಅವು ಮನುಷ್ಯರೊಳಗೆ ನಿವಾಸ ಮಾಡಿ, ಆ ಮನುಷ್ಯರನ್ನು ನಿಯಂತ್ರಿಸುತ್ತವೆ.
- ಮನುಷ್ಯರಿಗಿಂತ ದೆವ್ವಗಳು ತುಂಬಾ ಶಕ್ತಿಯುತವಾದವುಗಳು, ಆದರೆ ಅವು ದೇವರಿಗಿಂತ ಶಕ್ತಿಯುತವಾದವುಗಳಲ್ಲ.

ಅನುವಾದ ಸಲಹೆಗಳು:

- "ದೆವ್ವ" ಎನ್ನುವ ಪದವನ್ನು "ದುಷ್ಟಾತ್ಮ" ಎಂದೂ ಅನುವಾದ ಮಾಡಬಹುದು.
- "ಅಶುದ್ಧ ಆತ್ಮ" ಎನ್ನುವ ಪದವನ್ನು "ಅಪವಿತ್ರಾತ್ಮ" ಅಥವಾ "ಭ್ರಷ್ಟ ಆತ್ಮ" ಅಥವಾ "ದುಷ್ಟಾತ್ಮ" ಎಂದೂ ಅನುವಾದ ಮಾಡಬಹುದು.
- ಈ ಪದಕ್ಕೆ ಉಪಯೋಗಿಸುವ ಪದವು ಅಥವಾ ಮಾತು ದೆವ್ವ ಎಂದು ಸೂಚಿಸುವುದಕ್ಕೆ ಉಪಯೋಗಿಸುವ ಪದಕ್ಕೆ ವಿಭಿನ್ನವಾಗಿರಲು ನೋಡಿಕೊಳ್ಳಿರಿ.
- "ದೆವ್ವ" ಎನ್ನುವ ಪದವನ್ನು ಸ್ಥಳೀಯ ಅಥವಾ ಜಾತೀಯ ಭಾಷೆಯಲ್ಲಿ ಯಾವರೀತಿ ಉಪಯೋಗಿಸುತ್ತಾರೆಂದು ಒಮ್ಮೆ ತಿಳಿದುಕೊಳ್ಳಿರಿ. (ಅನುವಾದ ಸಲಹೆಗಳು: ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೆವ್ವ ಹಿಡಿಯಲ್ಪಟ್ಟವನು, ಸೈತಾನ್, ಸುಳ್ಳು ದೇವರು, ಸುಳ್ಳು ದೇವರು, ದೂತ, ದುಷ್ಟ, ಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯಾಕೋಬ.02:18-20
- ಯಾಕೋಬ.03:15-18
- ಲೂಕ.04:35-37
- ಮಾರ್ಕ.03:20-22
- ಮತ್ತಾಯ.04:23-25

ಸತ್ಯವೇದದಿಂದ ಉದಾಹರಣೆಗಳು:

- **26:09**ದೆವ್ವಗಳನ್ನು ____ ಒಳಗೊಂಡ ಅನೇಕಮಂದಿ ಜನರನ್ನು ಯೇಸುವಿನ ಬಳಿಗೆ ಕರೆದುಕೊಂಡು ಬಂದರು. ಯೇಸು ಅವುಗಳನ್ನು ಆಜ್ಞಾಪಿಸಿದಾಗ, ____ ದೆವ್ವಗಳು ____ ಅ ಜನರಿಂದ ಹೊರಬಂದವು, ಮತ್ತು ಅನೇಕಬಾರಿ "ನೀನು ದೇವರ ಮಗ" ಎಂದು ಗಟ್ಟಿಯಾಗಿ ಕಿರುಚಿದವು.
- ____32:08 ಆ ಮನುಷ್ಯನೊಳಗಿನಿಂದ ____ದೆವ್ವಗಳು ____ ಹೊರಬಂದವು ಮತ್ತು ಹೋಗಿ ಹಂದಿಗಳೊಳಗೆ ಸೇರಿಕೊಂಡವು.
- ____47:05 ಒಂದು ದಿನ ದಾಸಿಯಾಗಿರುವ ಗಟ್ಟಿಯಾಗಿ ಕಿರುಚಿತ್ತಿರುವಾಗ, ಪೌಲನು ಆಕೆಯ ಕಡೆಗೆ ತಿರುಗಿ, ಅವಳೊಳಗಿರುವ ____ ದುರಾತ್ಮಕ್ಕೆ ____, "ಅವಳನ್ನು ಬಿಟ್ಟು ಹೋಗು ಎಂದು ಯೇಸು ಕ್ರಿಸ್ತನ ಹೆಸರಿನಲ್ಲಿ ಆಜ್ಞಾಪಿಸುತ್ತಿದ್ದೇನೆ" ಅಂದನು. ಆ ಕ್ಷಣದಲ್ಲೇ ____ ದುರಾತ್ಮವು ____ ಆಕೆಯನ್ನು ಬಿಟ್ಟು ಹೋಗಿತು.
- **49:02** ಆತನು (ಯೇಸು) ನೀರಿನ ಮೇಲೆ ನಡೆದನು, ಬಿರುಗಾಳಿಯನ್ನು ಸುಮ್ಮನಿರಿಸಿದನು, ಅನೇಕ ರೋಗಿಗಳನ್ನು ಗುಣಪಡಿಸಿದನು, ____ ದೆವ್ವಗಳನ್ನು ____ ಹೋಗಲಾಡಿಸಿದನು, ಸತ್ತಂತ ಅನೇಕರನ್ನು ಜೀವಂತವಾಗಿ ಎಬ್ಬಿಸಿದನು ಮತ್ತು ಐದು ರೊಟ್ಟಿಗಳು, ಎರಡು ಮೀನುಗಳನ್ನು ಸುಮಾರು 5,000 ಜನರಿಗೆ ಹಂಚಿದನು.

ಪದ ಡೇಟಾ:

- Strong's: H2932, H7307, H7451, H7700, G169, G1139, G1140, G1141, G1142, G4190, G4151, G4152, G4189

ದೇವ ಪುತ್ರರು

ಪದದ ಅರ್ಥವಿವರಣೆ:

“ದೇವ ಪುತ್ರರು” ಎನ್ನುವ ಮಾತು ಅನೇಕ ಅರ್ಥಗಳಿರುವ ಅಲಂಕಾರಿಕ ಮಾತಾಗಿರುತ್ತದೆ.

- ಹೊಸ ಒಡಂಬಡಿಕೆಯಲ್ಲಿ “ದೇವ ಪುತ್ರರು” ಎನ್ನುವ ಮಾತು ಯೇಸುವಿನಲ್ಲಿ ನಂಬಿಕೆ ಇಟ್ಟಿರುವ ಎಲ್ಲಾ ವಿಶ್ವಾಸಿಗಳನ್ನು ಸೂಚಿಸುತ್ತದೆ ಮತ್ತು ಇದನ್ನು ಅನೇಕಬಾರಿ “ದೇವರ ಮಕ್ಕಳು” ಎಂಬುದಾಗಿ ಅನುವಾದ ಮಾಡಲಾಗಿರುತ್ತದೆ, ಯಾಕಂದರೆ ಈ ಮಾತಿನಲ್ಲಿ ಸ್ತ್ರೀ, ಪುರುಷರೂ ಒಳಗೊಂಡಿರುತ್ತಾರೆ.
- ಈ ಮಾತಿನ ಉಪಯೋಗವು ಮನುಷ್ಯರ ತಂದೆ ಮತ್ತು ಮಗ ಸಂಬಂಧದಲ್ಲಿ ಪುತ್ರರಾಗಿರುವದರಿಂದ ಉಂಟಾಗುವ ಎಲ್ಲಾ ಸವಲತ್ತುಗಳಿರುವಂತೆಯೇ ದೇವರೊಂದಿಗಿರುವ ಸಂಬಂಧದ ಕುರಿತಾಗಿ ಮಾತನಾಡುತ್ತದೆ,
- ಆದಿಕಾಂಡ 6ನೇ ಅಧ್ಯಾಯದಲ್ಲಿಕಾಣಿಸುವ “ದೇವ ಪುತ್ರರು” ಎನ್ನುವ ಪದವನ್ನು ಕೆಲವರು ಕೆಳಗೆ ಬಿದ್ದ ದೂತರು ಅಂದರೆ ದುಷ್ಟ ಆತ್ಮಗಳು ಅಥವಾ ದೆವ್ವಗಳು ಎಂದು ವ್ಯಾಖ್ಯಾನಿಸುತ್ತಿದ್ದಾರೆ. ಇನ್ನೂ ಕೆಲವರು ಇವರು ಸೇತನ ವಂಶಸ್ಥರು ಅಥವಾ ಶಕ್ತಿಯುತವಾದ ಪಾಲನಾ ಅಧಿಕಾರಿಗಳು ಎಂದು ಸೂಚಿಸುತ್ತಿರಬಹುದು.
- ಹೊಸ ಒಡಂಬಡಿಕೆಯಲ್ಲಿ “ದೇವ ಪುತ್ರರು” ಎನ್ನುವ ಮಾತು ಯೇಸುವಿನಲ್ಲಿ ನಂಬಿಕೆಯಿಟ್ಟಿರುವ ಪ್ರತಿಯೊಬ್ಬ ವಿಶ್ವಾಸಿಯನ್ನು ಸೂಚಿಸುತ್ತದೆ ಮತ್ತು ಇದನ್ನು “ದೇವರ ಮಕ್ಕಳು” ಎಂದೂ ಅನುವಾದ ಮಾಡಲಾಗಿರುತ್ತದೆ, ಯಾಕಂದರೆ ಈ ಮಾತಿನಲ್ಲಿ ಸ್ತ್ರೀ ಪುರುಷರು ಒಳಗೊಂಡಿರುತ್ತಾರೆ.
- ಈ ಮಾತಿನ ಉಪಯೋಗವು ಮನುಷ್ಯರ ತಂದೆ ಮತ್ತು ಮಗ ಸಂಬಂಧದಲ್ಲಿ ಪುತ್ರರಾಗಿರುವದರಿಂದ ಉಂಟಾಗುವ ಎಲ್ಲಾ ಸವಲತ್ತುಗಳಿರುವಂತೆಯೇ ದೇವರೊಂದಿಗಿರುವ ಸಂಬಂಧದ ಕುರಿತಾಗಿ ಮಾತನಾಡುತ್ತದೆ,
- “ದೇವರ ಮಗ” ಎನ್ನುವ ಬಿರುದು ವಿಭಿನ್ನವಾದ ಮಾತಾಗಿರುತ್ತದೆ: ಇದು ದೇವರ ಒಬ್ಬನೇ ಮಗನಾಗಿರುವ ಯೇಸುವನ್ನು ಸೂಚಿಸುವಂತಹ ಮಾತಾಗಿರುತ್ತದೆ.

ಅನುವಾದ ಸಲಹೆಗಳು:

- “ದೇವ ಪುತ್ರರು” ಎನ್ನುವ ಮಾತನ್ನು ಯೇಸುವಿನ ವಿಶ್ವಾಸಿಗಳಿಗೆ ಉಪಯೋಗಿಸಿದಾಗ, ಇದನ್ನು “ದೇವರ ಮಕ್ಕಳು” ಎಂದು ಅನುವಾದ ಮಾಡಬಹುದು.
- ಆದಿಕಾಂಡ 6:2 ಮತ್ತು 4ರಲ್ಲಿರುವ “ದೇವ ಪುತ್ರರು” ಎನ್ನುವ ಮಾತನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ದೂತರು”, “ಆತ್ಮಗಳು”, “ಪ್ರಕೃತಾತೀತವಾದ ಜೀವಿಗಳು” ಅಥವಾ “ದೆವ್ವಗಳು” ಎನ್ನುವ ಪದಗಳು ಅಥವಾ ಮಾತುಗಳು ಒಳಗೊಂಡಿರುತ್ತವೆ.
- “ಮಗ” ಎನ್ನುವ ಅನುಬಂಧನವನ್ನು ನೋಡಿರಿ.

(ಈ ಪದಗಳನ್ನು ಸಹ ನೋಡಿರಿ : ದೂತ, ದೆವ್ವ, ಮಗ, ದೇವರ ಮಗ, ಪಾಲಕ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.06:1-3
- ಆದಿ.06:4
- ಯೋಬ.01:6-8
- ರೋಮಾ.08:14-15

ಪದ ಡೇಟಾ:

- Strong's: H430, H1121, G2316, G5043, G5207

ದೇವದೂತ, ಪ್ರಧಾನದೂತ

ಅರ್ಥವಿವರಣೆ:

ದೇವದೂತ ಎಂದರೆ ದೇವರು ಉಂಟುಮಾಡಿದ ಅತ್ಯಂತ ಶಕ್ತಿಯುಳ್ಳ ಆತ್ಮೀಕ ಜೀವಿ. ದೇವದೂತರು ದೇವರು ಹೇಳಿದ ಪ್ರತಿಯೊಂದನ್ನು ಮಾಡುವುದರ ಮೂಲಕ ದೇವರಿಗೆ ಸೇವೆ ಮಾಡುವುದಕ್ಕಾಗಿ ಉಂಟುಮಾಡಿದವರಾಗಿದ್ದಾರೆ. "ಪ್ರಧಾನದೂತ" ಎನ್ನುವ ಪದವು ಇತರ ದೂತರನ್ನು ನಡೆಸುವುದಕ್ಕೆ ಅಥವಾ ಪಾಲಿಸುವುದಕ್ಕೆ ನೇಮಿಸಲ್ಪಟ್ಟ ವಿಶೇಷವಾದ ದೂತನಾಗಿರುತ್ತಾನೆ.

- "ದೇವದೂತ" ಎಂಬ ಪದಕ್ಕೆ ಅಕ್ಷರಶಃ "ಸಂದೇಶಕ" ಎಂದರ್ಥ.
- "ಪ್ರಧಾನದೂತ" ಎಂಬ ಪದಕ್ಕೆ "ಮುಖ್ಯ ಸಂದೇಶಕ" ಎಂದರ್ಥ. "ಪ್ರಧಾನ ದೂತ" ಎಂದು ಸತ್ಯವೇದದಲ್ಲಿ ಒಬ್ಬ ದೂತನನ್ನು ಮಾತ್ರವೇ ಉಲ್ಲೇಖಿಸಲಾಗಿದೆ ಅವನೇ ಮೀಕಾಯೇಲನು.
- ಸತ್ಯವೇದದಲ್ಲಿ, ದೇವದೂತರು ದೇವರಿಂದ ಪಡೆದ ಸಂದೇಶಗಳನ್ನು ಜನರಿಗೆ ಕೊಟ್ಟರು. ದೇವರು ಬಯಸಿದ್ದನ್ನು ಜನರು ಮಾಡಬೇಕೆನ್ನುವುದರ ಕುರಿತಾಗಿ ಇರುವ ಆಜ್ಞೆಗಳು ಕೂಡ ಈ ಸಂದೇಶಗಳಲ್ಲಿ ಒಳಪಟ್ಟಿರುತ್ತವೆ.
- ಭವಿಷ್ಯತ್ತಿನಲ್ಲಿ ನಡೆಯುವ ಘಟನೆಗಳ ಕುರಿತಾಗಿ ಅಥವಾ ಈಗಾಗಲೇ ನಡೆದ ಘಟನೆಗಳ ಕುರಿತಾಗಿ ಕೂಡ ದೂತರು ಜನರಿಗೆ ತಿಳಿಸಿದ್ದಾರೆ.
- ದೇವದೂತರು ದೇವರ ಪ್ರತಿನಿಧಿಗಳಾಗಿ ದೇವರು ಕೊಟ್ಟ ಅಧಿಕಾರವನ್ನು ಪಡೆದಿರುತ್ತಾರೆ ಮತ್ತು ಸತ್ಯವೇದದಲ್ಲಿ ಕೆಲವು ಬಾರಿ ದೇವರೇ ಮಾತನಾಡಿದ ಹಾಗೆಯೇ ಅವರು ಮಾತನಾಡುತ್ತಿದ್ದರು.
- ದೇವ ದೂತರು ದೇವರಿಗೆ ಸೇವೆ ಮಾಡುವ ಇನ್ನೊಂದು ವಿಧಗಳು ಜನರನ್ನು ಸಂರಕ್ಷಿಸುವ ಮತ್ತು ಬಲಪಡಿಸುವ ಮೂಲಕ.
- "ಯೆಹೋವನ ದೂತರು," ಎನ್ನುವ ವಿಶೇಷವಾದ ನುಡಿಗಟ್ಟು, ಒಂದು ಅರ್ಥಕ್ಕಿಂತ ಹೆಚ್ಚಾದ ಅರ್ಥಗಳನ್ನು ಹೊಂದಿರುತ್ತದೆ: (1) "ಯೆಹೋವನಿಗೆ ಪ್ರತಿನಿಧಿಯಾಗಿರುವ ದೇವದೂತ" ಅಥವಾ "ಯೆಹೋವನನ್ನು ಸೇವಿಸುವ ಸಂದೇಶಕ" ಎನ್ನುವ ಅರ್ಥಗಳಿರಬಹುದು. (2) ಆತನು ಒಬ್ಬ ವ್ಯಕ್ತಿಯೊಂದಿಗೆ ಮಾತನಾಡುತ್ತಿರುವಾಗ ದೂತನಂತೆ ಕಾಣಿಸಿಕೊಳ್ಳುವ, ಯೆಹೋವನನ್ನೇ ಇದು ಸೂಚಿಸಬಹುದು. ಈ ಅರ್ಥಗಳಲ್ಲಿ ಯಾವುದಾದರೊಂದು ಯೆಹೋವನೇ ವೈಯುಕ್ತಿಕವಾಗಿ ಮಾತನಾಡುತ್ತಿರುವಂತೆ "ನಾನೇ" ಎಂದು ದೂತ ಉಪಯೋಗಿಸುವುದನ್ನು ವಿವರಿಸಬಹುದು.

ಅನುವಾದ ಸಲಹೆಗಳು:

- "ದೇವ ದೂತ" ಎನ್ನುವ ಪದವನ್ನು ಅನುವಾದಿಸುವ ವಿಧಾನಗಳಲ್ಲಿ "ದೇವರಿಂದ ಬಂದ ಸಂದೇಶಕರು" ಅಥವಾ "ದೇವರ ಪರಲೋಕದ ಸೇವಕನು" ಅಥವಾ "ದೇವರ ಆತ್ಮ ಸಂದೇಶಕರು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಪ್ರಧಾನದೂತ" ಎನ್ನುವ ಪದವು "ಮುಖ್ಯ ದೇವದೂತ" ಅಥವಾ "ದ್ದೇವ ದೂತರ ಆಡಳಿತ ಮುಖ್ಯಸ್ಥ" ಅಥವಾ "ದ್ದೇವ ದೂತರ ನಾಯಕ" ಎಂದು ಕೂಡ ಅನುವಾದ ಮಾಡುತ್ತಾರೆ.
- ಈ ಪದಗಳನ್ನು ರಾಷ್ಟ್ರೀಯ ಭಾಷೆಯಲ್ಲಿ ಅಥವಾ ಇನ್ನೊಂದು ಸ್ಥಳೀಯ ಭಾಷೆಯಲ್ಲಿ ಯಾವ ರೀತಿ ಅನುವಾದ ಮಾಡಿದ್ದಾರೆಂಬುದನ್ನು ಪರಿಗಣಿಸಿರಿ.
- "ಯೆಹೋವನ ದೂತ" ಎನ್ನುವ ನುಡಿಗಟ್ಟನ್ನು "ದೂತ" ಮತ್ತು "ಯೆಹೋವ" ಎನ್ನುವ ಪದಗಳನ್ನು ಉಪಯೋಗಿಸಿ ಅನುವಾದ ಮಾಡಬೇಕು. ಆ ನುಡಿಗಟ್ಟು ವಿವಿಧ ವ್ಯಾಖ್ಯಾನಗಳಿಗೆ ಅನುಮತಿ ಕೊಡುತ್ತದೆ. ಸಾಧ್ಯವಾದಷ್ಟು ಅನುವಾದಗಳು "ಯೆಹೋವನಿಂದ ಬಂದ ದೂತ" ಅಥವಾ "ಯೆಹೋವನಿಂದ ಕಳುಹಿಸಲ್ಪಟ್ಟ ದೂತ" ಅಥವಾ "ದೂತನಂತೆ ಕಾಣುವ, ಯೆಹೋವ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಇವುಗಳನ್ನು ಸಹ ನೋಡಿರಿ: /ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಇವುಗಳನ್ನು ಸಹ ನೋಡಿರಿ : ಮುಖ್ಯ, ಪ್ರಧಾನ, ಸಂದೇಶಕ, ಮೀಕಾಯೇಲ, ಮುಖ್ಯಸ್ಥ, ಸೇವಕ)

ಸತ್ಯವೇದದ ಉಲ್ಲೇಖಗಳು:

- 2 ಸಮುವೆಲ. 24:16
- ಅಪೊ.ಕೃತ್ಯ. 10:3-6
- ಅಪೊ.ಕೃತ್ಯ. 12:23
- ಕೊಲೊಸ್ಸೆ 2:18-19
- ಆದಿಕಾಂಡ 48:16
- ಲೂಕ 2:13
- ಮಾರ್ಕ 8:38
- ಮತ್ತಾಯ 13:50
- ಪ್ರಕಟನೆ 1:20
- ಜೆಕರ್ಯ 1:09

ಸತ್ಯವೇದದ ಕಥೆಗಳಿಂದ ಉದಾಹರಣೆಗಳು:

- **2:12** ಜೀವ ವೃಕ್ಷದ ಹಣ್ಣನ್ನು ಯಾರೂ ತಿನ್ನದಂತೆ ದೇವರು ಆ ತೋಟದ ಪ್ರವೇಶ ದ್ವಾರದಲ್ಲಿ ದೊಡ್ಡ ದೊಡ್ಡ, ಶಕ್ತಿಯುಳ್ಳ **ದೂತರನ್ನು** ಇಟ್ಟಿದ್ದಾನೆ.
- **22:03** ದೂತನು ಜೆಕರ್ಯನಿಗೆ ಪ್ರತ್ಯುತ್ತರವಾಗಿ, "ನಿಮಗೆ ಶುಭವಾರ್ತೆಯನ್ನು ತರುವುದಕ್ಕೆ ನಾನು ದೇವರಿಂದ ಕಳುಹಿಸಲ್ಪಟ್ಟಿದ್ದೇನೆ."
- **23:06** ಕೂಡಲೇ, ಪ್ರಕಾಶಮಾನವಾದ **ದೂತ** ಅವರಿಗೆ (ಕುರುಬರಿಗೆ) ಪ್ರತ್ಯಕ್ಷನಾದನು , ಮತ್ತು ಅವರು ಭಯಪಟ್ಟರು. "ನೀವು ಹೆದರಬೇಡಿರಿ, ಯಾಕಂದರೆ ನಿಮಗೆ ಹೇಳುವುದಕ್ಕೆ ನನ್ನ ಬಳಿ ಶುಭವಾರ್ತೆ ಇದೆ" ಎಂದು **ದೂತನು** ಹೇಳಿದನು.
- **23:07** ಕೂಡಲೇ, ದೇವರನ್ನು ಸ್ತುತಿಸುವ **ದೂತರೊಂದಿಗೆ** ಆಕಾಶವೆಲ್ಲಾ ತುಂಬಿತು.
- **25:08** ಆದನಂತರ, **ದೂತರು** ಬಂದು ಯೇಸುವಿಗೆ ಪರಿಚಾರ ಮಾಡಿದರು.
- **38:12** ಯೇಸು ತುಂಬಾ ಮನೋವ್ಯಥೆಪಟ್ಟನು, ಆತನ ಬೆವರು ರಕ್ತದ ಹನಿಗಳಾಗಿ ಮಾರ್ಪಟ್ಟಿತು. ಆತನನ್ನು ಬಲಪಡಿಸುವುದಕ್ಕೆ ದೇವರು **ದೂತನನ್ನು** ಕಳುಹಿಸಿಕೊಟ್ಟನು.
- **38:15** "ನನ್ನನ್ನು ರಕ್ಷಿಸುವುದಕ್ಕೆ **ದೂತರ** ಸೈನ್ಯವನ್ನು ಕಳುಹಿಸು ಎಂದು ನಾನು ತಂದೆಯನ್ನು ಬೇಡಿಕೊಳ್ಳಬಹುದು".

ಪದದ ದತ್ತಾಂಶ:

- Strong's: H0047, H0430, H4397, H4398, H8136, G00320, G07430, G24650

ದೇವರ ಚಿತ್ತ

ಪದದ ಅರ್ಥವಿವರಣೆ:

"ದೇವರ ಚಿತ್ತ" ಎನ್ನುವ ಮಾತು ದೇವರ ಆಶೆಗಳನ್ನು ಮತ್ತು ಯೋಜನೆಗಳನ್ನು ಸೂಚಿಸುತ್ತದೆ.

- ದೇವರ ಚಿತ್ತವು ವಿಶೇಷವಾಗಿ ಜನರೊಂದಿಗೆ ತನ್ನ ಸ್ಪಂದನೆಯನ್ನು ಮತ್ತು ಆತನಿಗೆ ಜನರು ಹೇಗೆ ಸ್ಪಂದಿಸಬೇಕೆನ್ನುವುದರ ಕುರಿತಾದ ಆತನ ಬಯಕೆಯನ್ನು ಸೂಚಿಸುತ್ತದೆ.
- ಈ ಮಾತು ಆತನು ಉಂಟು ಮಾಡಿದ ಸೃಷ್ಟಿಗಾಗಿ ತನ್ನ ಆಲೋಚನೆಗಳನ್ನು ಅಥವಾ ಆಸೆಗಳನ್ನು ಸೂಚಿಸುತ್ತದೆ.
- "ಚಿತ್ತ" ಎನ್ನುವ ಪದಕ್ಕೆ "ಅಪೇಕ್ಷೆ" ಅಥವಾ "ಆಸೆ" ಎಂದರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- "ದೇವರ ಚಿತ್ತ" ಎನ್ನುವ ಮಾತನ್ನು "ದೇವರು ಆಶಿಸುವ ವಿಷಯಗಳು" ಅಥವಾ "ದೇವರು ಮಾಡಿದ್ದಂತ ಯೋಜನೆ" ಅಥವಾ "ದೇವರ ಉದ್ದೇಶಗಳು" ಅಥವಾ "ದೇವರನ್ನು ಮೆಚ್ಚಿಸುವವು" ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.02:15-17
- 1 ಥೆಸ್ಸ.04:3-6
- ಕೊಲೊ.04:12-14
- ಎಫೆಸ.01:1-2
- ಯೋಹಾನ.05:30-32
- ಮಾರ್ಕ.03:33-35
- ಮತ್ತಾಯ.06:8-10
- ಕೀರ್ತನೆ.103:21

ಪದ ಡೇಟಾ:

- Strong's: H6310, H6634, H7522, G1012, G1013, G2307, G2308, G2309, G2596

ದೇವರ ಜನರು, ನನ್ನ ಜನರು

ಪದದ ಅರ್ಥವಿವರಣೆ:

“ದೇವರ ಜನರು” ಎನ್ನುವ ಮಾತು ದೇವರೊಂದಿಗೆ ವಿಶೇಷವಾದ ಸಂಬಂಧವನ್ನು ಹೊಂದಿರುವುದಕ್ಕೆ ಆತನು ಲೋಕದೊಳಗಿಂದ ಕರೆದ ಜನರನ್ನು ಸೂಚಿಸುತ್ತದೆ.

- “ನನ್ನ ಜನರು” ಎಂದು ದೇವರು ಹೇಳಿದಾಗ, ಆತನು ತನ್ನೊಂದಿಗೆ ಸಂಬಂಧವನ್ನು ಹೊಂದಿರುವ ಮತ್ತು ಆಯ್ಕೆ ಮಾಡಿಕೊಂಡಿರುವ ಜನರ ಕುರಿತಾಗಿ ಮಾತನಾಡುತ್ತಿದ್ದಾನೆ.
- ದೇವರ ಜನರು ಆತನಿಂದ ಆದುಕೊಂಡಿರುತ್ತಾರೆ ಮತ್ತು ಆತನನ್ನು ಮೆಚ್ಚಿಸುವ ವಿಧಾನದಲ್ಲಿ ಜೀವಿಸುವುದಕ್ಕೆ ಈ ಲೋಕದೊಳಗಿಂದ ಪ್ರತ್ಯೇಕಿಸಲ್ಪಟ್ಟಿರುತ್ತಾರೆ. ಆತನು ಕೂಡ ಅವರನ್ನು ತನ್ನ ಮಕ್ಕಳೆಂದು ಕರೆಯುತ್ತಾನೆ.
- ಹಳೇ ಒಡಂಬಡಿಕೆಯಲ್ಲಿ “ದೇವರ ಜನರು” ದೇವರಿಂದ ಆಯ್ಕೆ ಮಾಡಲ್ಪಟ್ಟಿರುವ ಮತ್ತು ಆತನಿಗೆ ವಿಧೇಯತೆ ತೋರಿಸುವುದಕ್ಕೆ, ಆತನನ್ನು ಸೇವಿಸುವುದಕ್ಕೆ ಲೋಕದ ಎಲ್ಲಾ ದೇಶಗಳಿಂದ ಪ್ರತ್ಯೇಕಿಸಲ್ಪಟ್ಟಿರುವ ಇಸ್ರಾಯೇಲ್ ದೇಶವನ್ನು ಸೂಚಿಸುತ್ತದೆ.
- ಹೊಸ ಒಡಂಬಡಿಕೆಯಲ್ಲಿ “ದೇವರ ಜನರು” ಎನ್ನುವ ಮಾತು ವಿಶೇಷವಾಗಿ ಯೇಸುವಿನಲ್ಲಿ ನಂಬಿಕೆಯಿಟ್ಟಿರುವ ಮತ್ತು ಸಭೆ ಎಂದು ಕರೆಯಲ್ಪಡುವ ಎಲ್ಲಾ ಜನರನ್ನು ಸೂಚಿಸುತ್ತದೆ. ಇದರಲ್ಲಿ ಯೆಹೂದ್ಯರು ಮತ್ತು ಅನ್ಯರು ಕೂಡ ಒಳಗೊಂಡಿರುತ್ತಾರೆ.

ಅನುವಾದ ಸಲಹೆಗಳು:

- “ದೇವರ ಜನರು” ಎನ್ನುವ ಮಾತನ್ನು “ದೇವ ಜನರು” ಅಥವಾ “ದೇವರನ್ನು ಆರಾಧಿಸುವ ಜನರು” ಅಥವಾ “ದೇವರನ್ನು ಸೇವಿಸುವ ಜನರು” ಅಥವಾ “ದೇವರಿಗೆ ಸಂಬಂಧಪಟ್ಟ ಜನರು” ಎಂದೂ ಅನುವಾದ ಮಾಡಬಹುದು.
- “ನನ್ನ ಜನರು” ಎಂದು ದೇವರು ಹೇಳುತ್ತಿರುವಾಗ, ಇದನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ನಾನು ಆದುಕೊಂಡಿರುವ ಜನರು” ಅಥವಾ “ನನ್ನನ್ನು ಆರಾಧಿಸುವ ಜನರು” ಅಥವಾ “ನನಗೆ ಸಂಬಂಧಪಟ್ಟ ಜನರು” ಎಂದೂ ಅನುವಾದ ಮಾಡಬಹುದು.
- ಅದೇ ರೀತಿಯಾಗಿ, “ನಿನ್ನ ಜನರು” ಎನ್ನುವ ಮಾತನ್ನು “ನಿನಗೆ ಸಂಬಂಧಪಟ್ಟ ಜನರು” ಅಥವಾ “ನಿನಗೆ ಸಂಬಂಧಪಟ್ಟ ನೀನು ಆಯ್ಕೆ ಮಾಡಿಕೊಂಡಿರುವ ಜನರು” ಎಂದೂ ಅನುವಾದ ಮಾಡಬಹುದು.
- “ಆತನ ಜನರು” ಎನ್ನುವ ಮಾತನ್ನು ಕೂಡ “ಆತನಿಗೆ ಸಂಬಂಧಪಟ್ಟಿರುವ ಜನರು” ಅಥವಾ “ಆತನಿಗೆ ಸಂಬಂಧಪಟ್ಟಿರುವ ದೇವರು ಆದುಕೊಂಡಿರುವ ಜನರು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲ್, ಜನರ ಗುಂಪು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.11:1-3
- ಅಪೊ.ಕೃತ್ಯ.07:33-34
- ಅಪೊ.ಕೃತ್ಯ.07:51-53
- ಅಪೊ.ಕೃತ್ಯ.10:36-38
- ದಾನಿ.09:24-25
- ಯೆಶಯಾ.02:5-6
- ಯೆರೆ.06:20-22
- ಯೋವೆ.03:16-17
- ಮೀಕ.06:3-5
- ಪ್ರಕ.13:7-8

ಪದ ಡೇಟಾ:

- Strong's: H430, H5971, G2316, G2992

ದೇವರ ಮಗ, ಮಗ

ಸತ್ಯಾಂಶಗಳು:

“ದೇವರ ಮಗ” ಎನ್ನುವ ಮಾತು ಮನುಷ್ಯನಾಗಿ ಈ ಲೋಕಕ್ಕೆ ಬಂದಿರುವ ದೇವರ ವಾಕ್ಯವಾಗಿರುವ ಯೇಸುವನ್ನು ಸೂಚಿಸಿದನು. ಈತನು ಅನೇಕಬಾರಿ “ಒಬ್ಬನೇ ಮಗ” ಎಂಬುದಾಗಿಯೂ ಸೂಚಿಸಲ್ಪಟ್ಟಿದ್ದಾನೆ.

- ದೇವರ ಮಗನು ತಂದೆಯಾದ ದೇವರ ಹಾಗೆಯೇ ಒಂದೇ ಸ್ವಭಾವವನ್ನು ಹೊಂದಿರುತ್ತಾನೆ, ಮತ್ತು ಆತನು ಸಂಪೂರ್ಣವಾದ ದೇವರಾಗಿದ್ದಾನೆ.
- ತಂದೆಯಾದ ದೇವರು, ಮಗನಾದ ದೇವರು ಮತ್ತು ಪವಿತ್ರಾತ್ಮ ದೇವರು ಒಂದೇ ಮೂಲಭೂತವಾಗಿರುತ್ತಾರೆ.
- ಮನುಷ್ಯರ ಮಕ್ಕಳಂತೆಯಲ್ಲದೇ ದೇವರ ಮಗ ಯಾವಾಗಲೂ ಅಸ್ತಿತ್ವದಲ್ಲಿರುತ್ತಾನೆ.
- ಆದಿಯಲ್ಲಿ ತಂದೆ ಮತ್ತು ಪವಿತ್ರಾತ್ಮರವರೊಂದಿಗೆ ದೇವರ ಮಗ ಈ ಲೋಕವನ್ನು ಸೃಷ್ಟಿಸುವ ಸಂದರ್ಭದಲ್ಲಿದ್ದಾನೆ.

ಯಾಕಂದರೆ ಯೇಸು ದೇವರ ಮಗನಾಗಿದ್ದಾನೆ, ಆತನು ತನ್ನ ತಂದೆಯನ್ನು ಪ್ರೀತಿಸಿದ್ದಾನೆ ಮತ್ತು ಆತನಿಗೆ ವಿಧೇಯನಾಗಿದ್ದಾನೆ, ಮತ್ತು ತಂದೆಯು ಈತನನ್ನು ಪ್ರೀತಿಸಿದ್ದಾನೆ.

ಅನುವಾದ ಸಲಹೆಗಳು:

- “ದೇವರ ಮಗ” ಎನ್ನುವ ಪದವನ್ನು ಸರ್ವ ಸಾಧಾರಣವಾಗಿ ಮನುಷ್ಯನ ಮಗನನ್ನು ಸೂಚಿಸುವುದಕ್ಕೆ ಸ್ವಾಭಾವಿಕವಾಗಿ ಉಪಯೋಗಿಸುವ ಭಾಷೆಯ “ಮಗ” ಎನ್ನುವ ಪದದೊಂದಿಗೆ ಅನುವಾದ ಮಾಡುವುದು ಉತ್ತಮ.
- ಅನುವಾದ ಮಾಡಿರುವ “ಮಗ” ಎನ್ನುವ ಪದವು, “ತಂದೆ” ಎನ್ನುವ ಪದದೊಂದಿಗೆ ಸರಿಹೊಂದುವಂತೆ ನೋಡಿಕೊಳ್ಳಿರಿ, ಅನುವಾದ ಭಾಷೆಯಲ್ಲಿ ನಿಜವಾದ ತಂದೆ-ಮಗ ಸಂಬಂಧವನ್ನು ವ್ಯಕ್ತಪಡಿಸುವುದಕ್ಕೆ ಸ್ವಾಭಾವಿಕವಾಗಿ ಉಪಯೋಗಿಸುವ ಪದಗಳಾಗಿರುತ್ತವೆ.
- ಆಂಗ್ಲ ಭಾಷೆಯಲ್ಲಿ “ಮಗ” ಎನ್ನುವ ಪದದಲ್ಲಿ ಮೊದಲನೇ ಅಕ್ಷರವನ್ನು ದೊಡ್ಡದಾಗಿ ಉಪಯೋಗಿಸಿದಾಗ, ಇದು ದೇವರ ಕುರಿತಾಗಿ ಮಾತನಾಡುತ್ತಿದೆಯೆಂದು ತಿಳಿಸುತ್ತದೆ.
- ಆಂಗ್ಲ ಭಾಷೆಯಲ್ಲಿ “ಮಗ” ಎನ್ನುವ ಪದದಲ್ಲಿ ಮೊದಲನೇ ಅಕ್ಷರವನ್ನು ಉಪಯೋಗಿಸಿದಾಗ, ಆ ಪದವು “ದೇವರ ಮಗ” ಎಂಬುದಾಗಿ ಸೂಚಿಸುತ್ತದೆ, ವಿಶೇಷವಾಗಿ ಇದು “ತಂದೆ” ಎಂದು ಉಪಯೋಗಿಸಿದ ಸಂದರ್ಭದಲ್ಲಿಯೂ ಇದು ಕಾಣಿಸಿಕೊಳ್ಳುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ಪೂರ್ವಜ, ದೇವರು, ತಂದೆಯಾದ ದೇವರು, ಪವಿತ್ರಾತ್ಮ, ಯೇಸು, ಮಗ, ದೇವರ ಮಕ್ಕಳು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.04:10
- ಅಪೊ.ಕೃತ್ಯ.09:20
- ಕೊಲೊಸ್ಸ.01:17
- ಗಲಾತ್ಯ.02:20
- ಇಬ್ರಿ.04:14
- ಯೋಹಾನ.03:18
- ಲೂಕ.10:22
- ಮತ್ತಾಯ.11:27
- ಪ್ರಕ.02:18
- ರೋಮಾ.08:29

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **22:05** “ಪವಿತ್ರಾತ್ಮನು ನಿನ್ನ ಮೇಲಕ್ಕೆ ಬರುವನು, ಮತ್ತು ದೇವರ ಶಕ್ತಿಯು ನಿನ್ನನ್ನು ಆವರಿಸುವುದು” ಎಂದು ದೂತನು ಹೇಳಿದನು. ಇದರಿಂದ ಶಿಶುವು ಪರಿಶುದ್ಧನಾಗಿರುವನು, ದೇವರ _ ಮಗನಾಗಿರುವನು _.”
- **24:09** “ಪವಿತ್ರಾತ್ಮನು ಕೆಳಕ್ಕೆ ಇಳಿದು ಬರುವನು ಮತ್ತು ನೀನು ದೀಕ್ಷಾಸ್ನಾನ ಕೊಡುವ ವ್ಯಕ್ತಿಯ ಮೇಲಕ್ಕೆ ಬರುವನು, ಆ ವ್ಯಕ್ತಿ _ ದೇವರ ಮಗನಾಗಿರುತ್ತಾನೆ _” ಎಂದು ದೇವರು ಯೋಹಾನನಿಗೆ ಹೇಳಿದನು.
- **31:08** ಶಿಷ್ಯರು ಆಶ್ಚರ್ಯಪಟ್ಟರು. “ನಿಜವಾಗಿ ನೀನು _ ದೇವರ ಮಗ _ “ ಎಂದು ಆತನಿಗೆ ಹೇಳುತ್ತಾ ಅವರು ಯೇಸುವನ್ನು ಆರಾಧಿಸಿದರು.
- **37:05** “ಹೌದು, ಬೋಧಕನೆ! ನೀನು _ ದೇವರ ಮಗನಾಗಿರುವ _ ಮೆಸ್ಸೀಯನೆಂದು ನಾನು ನಂಬುತ್ತಿದ್ದೇನೆ” ಎಂದು ಮಾರ್ಥಳು ಉತ್ತರಿಸಿದಳು.
- **42:10** ಆದ್ದರಿಂದ ನೀವು ಹೋಗಿ, ಎಲ್ಲಾ ಜನರ ಗುಂಪುಗಳನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆ, _ ಮಗ _, ಪವಿತ್ರಾತ್ಮ ಹೆಸರಿನಲ್ಲಿ ಅವರಿಗೆ ದೀಕ್ಷಾಸ್ನಾನ ಮಾಡಿಸಿರಿ ಮತ್ತು ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಅವರಿಗೆ ಬೋಧಿಸಿ, ಅವುಗಳಿಗೆ ವಿಧೇಯರಾಗಬೇಕೆಂದು ಹೇಳಿರಿ.”
- **46:06** ಆ ಕ್ಷಣದಲ್ಲಿಯೇ, ಸೌಲನು ದಮಸ್ಕದಲ್ಲಿರುವ ಯೆಹೂದ್ಯರಿಗೆ “ಯೇಸು _ ದೇವರ ಮಗ _ “ ಎಂದು ಬೊಧಿಸಲು ಆರಂಭಿಸಿದನು!”

- **49:09** ಆದರೆ ದೇವರು ಈ ಲೋಕವನ್ನು ಎಷ್ಟೋ ಪ್ರೀತಿಸಿದನು, ತನ್ನ ಒಬ್ಬೇ _ ಮಗನನ್ನು _ ಕೊಟ್ಟನು, ಆದ್ದರಿಂದ ಯೇಸುವಿನಲ್ಲಿ ನಂಬಿಕೆ ಇಡುವ ಪ್ರತಿಯೊಬ್ಬರು ತನ್ನ ಪಾಪಗಳಿಗೆ ಶಿಕ್ಷೆಯನ್ನು ಹೊಂದದೇ ಸದಾಕಾಲವೂ ದೇವರೊಂದಿಗೆ ಜೀವಿಸುವನು.

ಪದ ಡೇಟಾ:

- Strong's: H426, H430, H1121, H1247, G2316, G5207

ದೇವರ ಮನೆ, ಯೆಹೋವನ ಮನೆ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ “ದೇವರ ಮನೆ” ಮತ್ತು “ಯೆಹೋವನ ಮನೆ” ಎನ್ನುವ ಪದಗಳು ದೇವರು ಆರಾಧಿಸಲ್ಪಡುವ ಸ್ಥಳವನ್ನು ಸೂಚಿಸುತ್ತವೆ.

- ಈ ಪದವು ಗುಡಾರವನ್ನು ಅಥವಾ ದೇವಾಲಯವನ್ನು ಸೂಚಿಸುವುದಕ್ಕೂ ತುಂಬಾ ವಿಶೇಷವಾಗಿ ಉಪಯೋಗಿಸಲ್ಪಟ್ಟಿರುತ್ತದೆ.
- ಕೆಲವೊಂದುಸಲ “ದೇವರ ಮನೆ” ಎನ್ನುವುದು ದೇವರ ಜನರನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಆರಾಧನೆಯ ಸ್ಥಳವನ್ನು ಸೂಚಿಸುವಾಗ, ಈ ಪದವನ್ನು “ದೇವರನ್ನು ಆರಾಧನೆ ಮಾಡುವುದಕ್ಕೋಸ್ಕರ ಇರುವ ಮನೆ” ಅಥವಾ “ದೇವರನ್ನು ಆರಾಧಿಸುವ ಸ್ಥಳ” ಎಂದೂ ಅನುವಾದ ಮಾಡಬಹುದು.
- ಇದು ದೇವಾಲಯವನ್ನು ಅಥವಾ ಗುಡಾರವನ್ನು ಸೂಚಿಸಿದಾಗ, ಇದನ್ನು “ದೇವರನ್ನು ಆರಾಧನೆ ಮಾಡುವ (ಅಥವಾ “ದೇವರು ಪ್ರಸನ್ನತೆಯು ಇರುವ ಸ್ಥಳ” ಅಥವಾ “ದೇವರು ತನ್ನ ಜನರನ್ನು ಭೇಟಿ ಮಾಡುವ ಸ್ಥಳ”) ದೇವಾಲಯ (ಅಥವಾ ಗುಡಾರ)” ಎಂದೂ ಅನುವಾದ ಮಾಡಬಹುದು.
- ದೇವರು “ನಿವಾಸವಾಗಿರುವ” ಸ್ಥಳವನ್ನಾಗಿ ಹೇಳುವ ಕ್ರಮದಲ್ಲಿ, ಅಂದರೆ ತನ್ನನ್ನು ಆರಾಧಿಸುವವರಿಂದ ಆರಾಧನೆ ಹೊಂದುವುದಕ್ಕೆ ಮತ್ತು ತನ್ನ ಜನರೊಂದಿಗೆ ಭೇಟಿ ಮಾಡುವ ಸ್ಥಳದಲ್ಲಿ ಆತನ ಆತ್ಮವು ಇರುತ್ತದೆಯೆಂದು ಸೂಚಿಸುವುದಕ್ಕೆ ಅನುವಾದದಲ್ಲಿ “ಮನೆ” ಎನ್ನುವ ಪದವು ಉಪಯೋಗಿಸುವುದು ತುಂಬಾ ಪ್ರಾಮುಖ್ಯವಾದದ್ದು,

(ಈ ಪದಗಳನ್ನು ಸಹ ನೋಡಿರಿ : ದೇವರ ಜನರು, ಗುಡಾರ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.03:14-15
- 2 ಪೂರ್ವ.23:8-9
- ಎಜ್ರಾ.05:12-13
- ಆದಿ.28:16-17
- ನ್ಯಾಯಾ.18:30-31
- ಮಾರ್ಕ.02:25-26
- ಮತ್ತಾಯ.12:3-4

ಪದ ಡೇಟಾ:

- Strong's: H426, H430, H1004, H1005, H3068, G2316, G3624

ದೇವರ ರಾಜ್ಯ, ಪರಲೋಕ ರಾಜ್ಯ

ಪದದ ಅರ್ಥವಿವರಣೆ:

"ದೇವರ ರಾಜ್ಯ" ಮತ್ತು "ಪರಲೋಕ ರಾಜ್ಯ" ಎನ್ನುವ ಪದಗಳು ದೇವರು ತನ್ನ ಜನರ ಮೇಲೆ ಮತ್ತು ಎಲ್ಲಾ ಸೃಷ್ಟಿಯ ಮೇಲೆ ತನ್ನ ಅಧಿಕಾರವನ್ನು ಮತ್ತು ಪಾಲನೆಯನ್ನು ಸೂಚಿಸುತ್ತದೆ.

- ಯೆಹೂದ್ಯರು ದೇವರ ಹೆಸರನ್ನು ನೇರವಾಗಿ ಹೇಳುವುದನ್ನು ತಪ್ಪಿಸಲು "ಪರಲೋಕ" ಎನ್ನುವ ಪದವನ್ನು ಅನೇಕಸಲ ದೇವರನ್ನು ಸೂಚಿಸುವುದಕ್ಕೆ ಉಪಯೋಗಿಸಿದ್ದಾರೆ, (ನೋಡಿರಿ: ಲಾಕ್ಷಣಿಕ ಪ್ರಯೋಗ)
- ಹೊಸ ಒಡಂಬಡಿಕೆಯ ಮತ್ತಾಯನು ಬರೆದ ಪುಸ್ತಕದಲ್ಲಿ ದೇವರ ರಾಜ್ಯವನ್ನು "ಪರಲೋಕ ರಾಜ್ಯವನ್ನಾಗಿ" ಸೂಚಿಸಿದ್ದಾನೆ, ಬಹುಶಃ ಯಾಕಂದರೆ ಪ್ರಾಥಮಿಕವಾಗಿ ಆತನು ಈ ಪುಸ್ತಕವನ್ನು ಯೆಹೂದ್ಯ ಪ್ರೇಕ್ಷಕರಿಗೆ ಬರೆಯುತ್ತಿದ್ದಾನೆ.
- ದೇವರ ರಾಜ್ಯ ಎನ್ನುವುದು ದೇವರು ಎಲ್ಲಾ ಜನರನ್ನು ಆತ್ಮೀಯಕವಾಗಿ ಪಾಲಿಸುತ್ತಿದ್ದಾನೆನ್ನುವುದನ್ನು ಮತ್ತು ಭೌತಿಕ ಪ್ರಪಂಚವನ್ನು ಪಾಲಿಸುತ್ತಿದ್ದಾನೆನ್ನುವುದನ್ನು ಸೂಚಿಸುತ್ತದೆ.
- ನೀತಿಯಿಂದ ಆಳಲು ದೇವರು ಮೆಸ್ಸೀಯನನ್ನು ಕಳುಹಿಸುವನೆಂದು ಹಳೇ ಒಡಂಬಡಿಕೆ ಪ್ರವಾದಿಗಳು ಹೇಳಿದ್ದಾರೆ. ದೇವರ ಮಗನಾದ ಯೇಸು ಮೆಸ್ಸೀಯನಾಗಿದ್ದಾನೆ, ಈತನು ದೇವರ ರಾಜ್ಯವನ್ನು ಎಂದೆಂದಿಗೂ ಆಳುತ್ತಿರುವನು.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, "ದೇವರ ರಾಜ್ಯ" ಎನ್ನುವ ಮಾತನ್ನು "ದೇವರ ಆಳ್ವಿಕೆ (ಅರಸನಾಗಿ)" ಅಥವಾ "ಅರಸನಾಗಿ ದೇವರು ಪಾಲನೆ ಮಾಡುವಾಗ" ಅಥವಾ "ಎಲ್ಲಾವುದರ ಮೇಲೆ ದೇವರ ಆಳ್ವಿಕೆ" ಎಂದೂ ಅನುವಾದ ಮಾಡಬಹುದು.
- "ಪರಲೋಕ ರಾಜ್ಯ" ಎನ್ನುವ ಮಾತನ್ನು "ಅರಸನಾಗಿ ಪರಲೋಕದಿಂದ ದೇವರ ಆಳ್ವಿಕೆ" ಅಥವಾ "ಪರಲೋಕದಲ್ಲಿರುವ ದೇವರ ಆಳ್ವಿಕೆ" ಅಥವಾ "ಪರಲೋಕದ ರಾಜ್ಯಭಾರ" ಅಥವಾ "ಎಲ್ಲಾವುದರ ಮೇಲೆ ಪರಲೋಕದ ಆಳ್ವಿಕೆ" ಎಂದೂ ಅನುವಾದ ಮಾಡಬಹುದು. ಒಂದು ವೇಳೆ ಈ ಮಾತನ್ನು ಅತೀ ಸಾಧಾರಣವಾಗಿ ಮತ್ತು ಸ್ಪಷ್ಟವಾಗಿ ಅನುವಾದ ಮಾಡುವುದಾದರೆ, "ದೇವರ ರಾಜ್ಯ" ಎನ್ನುವ ಪದವನ್ನು ಅನುವಾದ ಮಾಡಬಹುದು.
- ಕೆಲವೊಂದು ಅನುವಾದಕರು "ಪರಲೋಕ" ಎನ್ನುವ ಪದವನ್ನು ದೇವರಿಗೆ ಸೂಚಿಸುವಂತೆ ಉಪಯೋಗಿಸಿದ್ದಾರೆ. ಕೆಲವೊಬ್ಬರು ವಾಕ್ಯದಲ್ಲಿ ಸೂಚನೆಯನ್ನು ಕೊಟ್ಟಿರಬಹುದು, "ಪರಲೋಕ ರಾಜ್ಯ" ಎನ್ನುವದನ್ನು "ದೇವರ ರಾಜ್ಯ" ಎಂಬುದಾಗಿ ಬರೆದಿರಬಹುದು.
- ಸತ್ಯವೇದದಲ್ಲಿ ಪುಟದ ಕೆಳ ಭಾಗದಲ್ಲಿ ಈ ಮಾತಿನಲ್ಲಿರುವ "ಪರಲೋಕ" ಎನ್ನುವ ಪದಕ್ಕೆ ವಿವರಣೆಯನ್ನು ಕೊಟ್ಟಿರಬಹುದು.

(ಈ ಪದಗಳನ್ನು ಸಹ ನೋಡಿರಿ : ದೇವರು, ಪರಲೋಕ, ಅರಸ, ರಾಜ್ಯ, ಯೆಹೂದ್ಯರ ಅರಸ, ಆಳ್ವಿಕೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಥೆಸ್ಸ.01:305
- ಅಪೊ.ಕೃತ್ಯ.08:12-13
- ಅಪೊ.ಕೃತ್ಯ.28:23
- ಕೊಲೊಸ್ಸ.04:11
- ಯೋಹಾನ.03:03
- ಲೂಕ.07:28
- ಲೂಕ.10:09
- ಲೂಕ.12:31-32
- ಮತ್ತಾಯ.03:02
- ಮತ್ತಾಯ.04:17
- ಮತ್ತಾಯ.05:10
- ರೋಮಾ.14:17

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **24:02** "ಮಾನಸಾಂತರ ಹೊಂದಿರಿ, ದೇವರ _ ರಾಜ್ಯ _ ಸಮೀಪವಾಗಿದೆ" ಎಂದು ಹೇಳುತ್ತಾ ಅವನು (ಯೋಹಾನ) ಅವರಿಗೆ ಸಂದೇಶವನ್ನು ಹೇಳಿದನು.
- **28:06** "ಐಶ್ವರ್ಯವಂತನು ಪರಲೋಕ _ ರಾಜ್ಯದಲ್ಲಿ _ ಸೇರುವುದು ಕಷ್ಟ, ಹೌದು, ಐಶ್ವರ್ಯವಂತನು ದೇವರ _ ರಾಜ್ಯದಲ್ಲಿ _ ಸೇರುವುದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವುದು ಸುಲಭ" ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು.
- **29:02"** ದೇವರ ರಾಜ್ಯ ತನ್ನ ಸೇವಕರಿಂದ ಲೆಕ್ಕವನ್ನು ತೆಗೆದುಕೊಳ್ಳಬೇಕೆಂದಿದ್ದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ" ಎಂದು ಯೇಸು ಹೇಳಿದನು.

- **34:01** ದೇವರ ರಾಜ್ಯದ _ ಕುರಿತಾಗಿ ಅನೇಕವಾದ ಸಾಮ್ಯಗಳನ್ನು ಯೇಸು ಹೇಳಿದರು. ಉದಾಹರಣೆಗೆ, "_ ದೇವರ ರಾಜ್ಯವು ಸಾಸಿವೆ ಕಾಳಿಗೆ ಹೋಲಿಕೆಯಾಗಿದೆ, ಒಬ್ಬ ಮನುಷ್ಯನು ಅದನ್ನು ತೆಗೆದುಕೊಂಡು ಹೋಗಿ ತನ್ನ ಹೊಲದಲ್ಲಿ ಬಿತ್ತಿದನು" ಎಂದು ಆತನು ಹೇಳಿದನು.
- **34:03 "** ದೇವರ ರಾಜ್ಯವು ಹುಳಿ ಹಿಟ್ಟಿಗೆ ಹೋಲಿಕೆಯಾಗಿರುತ್ತದೆ. ಅದನ್ನು ಒಬ್ಬ ಸ್ತ್ರೀ ತೆಗೆದುಕೊಂಡು ಮೂರು ಸೇರು ಹಿಟ್ಟಿನಲ್ಲಿ ಕಲಿಸಿಡಲು ಆ ಹಿಟ್ಟೆಲ್ಲಾ ಹುಳಿಯಾಯಿತು" ಎಂದು ಯೇಸು ಮತ್ತೊಂದು ಸಾಮ್ಯವನ್ನು ಹೇಳಿದನು.
- **34:04 "** ದೇವರ ರಾಜ್ಯವು ಹೊಲದಲ್ಲಿ ಮುಚ್ಚಿಟ್ಟ ನಿಧಿಗೆ ಹೋಲಿಕೆಯಾಗಿದೆ. ಒಬ್ಬನು ಅದನ್ನು ಕಂಡುಕೊಂಡು ಅದನ್ನು ಮೊತ್ತೊಂದುಬಾರಿ ಮುಚ್ಚಿಟ್ಟನು.
- **34:05"** ದೇವರ ರಾಜ್ಯವು ಉತ್ತಮವಾದ ಮುತ್ತುಗಳನ್ನು ಹುಡುಕುವ ವ್ಯಾಪಾರಸ್ಥನಿಗೆ ಹೋಲಿಕೆಯಾಗಿದೆ".
- **42:09** ಆತನು ಜೀವಂತವಾಗಿದ್ದಾನೆಂದು ಅನೇಕ ವಿಧಗಳಲ್ಲಿ ಆತನು ತನ್ನ ಶಿಷ್ಯರಿಗೆ ತೋರಿಸಿಕೊಂಡಿದ್ದಾರೆ ಮತ್ತು ಆತನು ಅವರಿಗೆ _ ದೇವರ ರಾಜ್ಯದ _ ಕುರಿತಾಗಿ ಹೇಳಿದನು.
- **49:05** ದೇವರ ರಾಜ್ಯವು ಈ ಲೋಕದಲ್ಲಿರುವವುಗಳಿಗಿಂತ ತುಂಬಾ ಬೆಲೆಯುಳ್ಳದ್ದೆಂದು ಯೇಸು ಹೇಳಿದ್ದಾರೆ.
- **50:02** "ಈ ಲೋಕದಲ್ಲಿರುವ ಪ್ರತಿಯೊಬ್ಬರಿಗೆ ಮತ್ತು ಭೂಮಿಯ ಕಟ್ಟ ಕಡೆಯ ಭಾಗಗಳಲ್ಲಿರುವ ಜನರಿಗೆ _ ದೇವರ ರಾಜ್ಯದ _ ಕುರಿತಾದ ಶುಭವಾರ್ತೆಯನ್ನು ನನ್ನ ಶಿಷ್ಯರು ಹೇಳುವರು" ಎಂದು ಯೇಸು ಈ ಭೂಮಿ ಮೇಲೆ ಸಂಚಾರ ಮಾಡಿದ ದಿನಗಳಲ್ಲಿ ಹೇಳಿದರು.

ಪದ ಡೇಟಾ:

- Strong's: G932, G2316, G3772

ದೇವರ ವಾಕ್ಯ, ದೇವರ ವಾಕ್ಯಗಳು, ಯೆಹೋವನ ವಾಕ್ಯ, ಕರ್ತನ ವಾಕ್ಯ, ಸತ್ಯ ವಾಕ್ಯ, ಲೇಖನ, ಲೇಖನಗಳು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ದೇವರ ವಾಕ್ಯ" ಎನ್ನುವ ಮಾತು ದೇವರು ಜನರೊಂದಿಗೆ ಸಂಭಾಷಿಸಿದ ಪ್ರತಿಯೊಂದು ಮಾತನ್ನು ಸೂಚಿಸುತ್ತದೆ. ಇದರಲ್ಲಿ ಹೇಳಲ್ಪಟ್ಟ ಮತ್ತು ಬರೆಯಲ್ಪಟ್ಟ ಸಂದೇಶಗಳು ಒಳಗೊಂಡಿರುತ್ತವೆ. ಯೇಸುವನ್ನು ಕೂಡ "ದೇವರ ವಾಕ್ಯ' ಎಂದು ಕರೆಯಲ್ಪಟ್ಟಿದ್ದಾನೆ.

- "ಲೇಖನಗಳು" ಎಂದರೆ "ಬರವಣಿಗೆಗಳು" ಎಂದರ್ಥ. ಹಳೇ ಒಡಂಬಡಿಕೆಯಲ್ಲಿರುವ ಇಬ್ರಿ ಲೇಖನಗಳನ್ನು ಸೂಚಿಸುವವು ಮತ್ತು ಇವುಗಳನ್ನು ಹೊಸ ಒಡಂಬಡಿಕೆಯಲ್ಲಿ ಮಾತ್ರವೇ ಉಪಯೋಗಿಸಿರುತ್ತಾರೆ. ಈ ಬರವಣಿಗೆಗಳು ದೇವರು ತನ್ನ ಜನರು ಬರೆಯಬೇಕೆಂದು ಹೇಳಿರುವ ಆತನ ಸಂದೇಶಗಳಾಗಿರುತ್ತವೆ, ಇದರಿಂದ ಭವಿಷ್ಯತ್ತಿನಲ್ಲಿ ಅನೇಕ ವರ್ಷಗಳ ಕಾಲ ಜನರು ಈ ಲೇಖನಗಳನ್ನು ಓದುತ್ತಾರೆ.
- "ಯೆಹೋವನ ವಾಕ್ಯ" ಮತ್ತು "ಕರ್ತನ ಮಾತು" ಎನ್ನುವ ಮಾತುಗಳು ಅನೇಕಬಾರಿ ಸತ್ಯವೇದದಲ್ಲಿ ದೇವರು ಒಬ್ಬ ಪ್ರವಾದಿಗೆ ಅಥವಾ ಇತರ ವ್ಯಕ್ತಿಗಳಿಗೆ ಕೊಡಲ್ಪಟ್ಟಿರುವ ವಿಶೇಷವಾದ ಸಂದೇಶವನ್ನು ಸೂಚಿಸುತ್ತವೆ.
- ಕೆಲವೊಂದುಬಾರಿ ಈ ಮಾತು "ವಾಕ್ಯ" ಅಥವಾ "ನನ್ನ ಮಾತು" ಅಥವಾ "ನಿನ್ನ ಮಾತು" ಎಂಬುದಾಗಿ ಕಾಣಿಸಿಕೊಳ್ಳುತ್ತದೆ (ಇದು ದೇವರ ವಾಕ್ಯದ ಕುರಿತಾಗಿ ಮಾತನಾಡುವಾಗ ಮಾತ್ರ ಅನ್ವಯವಾಗುತ್ತವೆ).
- ಹೊಸ ಒಡಂಬಡಿಕೆಯಲ್ಲಿ ಯೇಸುವನ್ನು "ವಾಕ್ಯ" ಮತ್ತು "ದೇವರ ವಾಕ್ಯ" ಎಂದು ಕರೆದಿದ್ದಾರೆ. ಈ ಬಿರುದುಗಳಿಗೆ ಅರ್ಥವೇನೆಂದರೆ ಯೇಸು ಸಂಪೂರ್ಣವಾಗಿ ದೇವರು ಯಾರೆಂದು ತೋರಿಸಿದ್ದಾರೆ, ಯಾಕಂದರೆ ಈತನು ದೇವರಾಗಿದ್ದಾನೆ.

"ಸತ್ಯದ ವಾಕ್ಯ" ಎನ್ನುವ ಮಾತನ್ನು ಇನ್ನೊಂದು ರೀತಿಯಲ್ಲಿ "ದೇವರ ವಾಕ್ಯ" ಎಂದು ಸೂಚಿಸಬಹುದು, ಇದು ಆತನ ಸಂದೇಶವು ಅಥವಾ ಬೋಧನೆಯು ಆಗಿರುತ್ತದೆ. ಇದು ಕೇವಲ ಒಂದು ವಾಕ್ಯವನ್ನು ಮಾತ್ರವೇ ಸೂಚಿಸುವುದಿಲ್ಲ.

- ದೇವರ ಸತ್ಯವಾಕ್ಯದಲ್ಲಿ ದೇವರು ತನ್ನ ಕುರಿತಾಗಿ ಜನರಿಗೆ ಪ್ರತಿಯೊಂದನ್ನು ಹೇಳಿಕೊಂಡಿರುವ ವಿಷಯಗಳು, ಆತನ ಸೃಷ್ಟಿ, ಮತ್ತು ಯೇಸುವಿನ ಮೂಲಕ ರಕ್ಷಣೆಯ ಪ್ರಣಾಳಿಕೆಯು ಒಳಗೊಂಡಿರುತ್ತವೆ.
- ಈ ಮಾತು ದೇವರು ನಮಗೆ ಹೇಳಿರುವ ಪ್ರತಿಯೊಂದೂ ಮಾತು ಸತ್ಯ, ವಿಶ್ವಾಸಾರ್ಹ ಮತ್ತು ನೈಜವಾಗಿದೆ ಎಂಬ ಅಂಶವನ್ನು ಒತ್ತಿ ಹೇಳುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ ಈ ಮಾತನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಯೆಹೋವನ ಸಂದೇಶ" ಅಥವಾ "ದೇವರ ಸಂದೇಶ" ಅಥವಾ "ದೇವರಿಂದ ಬಂದಿರುವ ಬೋಧನೆಗಳು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಕೆಲವೊಂದು ಭಾಷೆಗಳಲ್ಲಿ ಈ ಪದವನ್ನು ಬಹುವಚನ ಪದವನ್ನಾಗಿ ಉಪಯೋಗಿಸುವುದು ಸಹಜ, "ದೇವರ ವಾಕ್ಯಗಳು" ಅಥವಾ "ಯೆಹೋವನ ವಾಕ್ಯಗಳು" ಎಂದೂ ಉಪಯೋಗಿಸುತ್ತಾರೆ.
- "ಯೆಹೋವನ ವಾಕ್ಯ ಬಂದಿದೆ" ಎನ್ನುವ ಮಾತು ದೇವರು ತನ್ನ ಪ್ರವಾದಿಗಳಿಗೆ ಅಥವಾ ತನ್ನ ಜನರಿಗೆ ಹೇಳಿರುವವುಗಳನ್ನು ಪರಿಚಯ ಮಾಡುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತವೆ. ಈ ಮಾತನ್ನು "ಯೆಹೋವನು ಈ ಸಂದೇಶವನ್ನು ಹೇಳಿದ್ದಾನೆ" ಅಥವಾ "ಯೆಹೋವನು ಈ ಮಾತುಗಳನ್ನು ನುಡಿದಿದ್ದಾನೆ" ಎಂದೂ ಅನುವಾದ ಮಾಡಬಹುದು.
- "ಲೇಖನ" ಅಥವಾ "ಲೇಖನಗಳು" ಎನ್ನುವ ಪದವನ್ನು "ಬರವಣಿಗೆಗಳು" ಅಥವಾ "ದೇವರಿಂದ ಬಂದಿರುವ ಸಂದೇಶವು ಬರೆಯಲ್ಪಟ್ಟಿದೆ" ಎಂದೂ ಅನುವಾದ ಮಾಡಬಹುದು. ಈ ಪದವು ಅಥವಾ ಮಾತನ್ನು "ಮಾತು" ಎನ್ನುವ ಪದದ ಅನುವಾದಕ್ಕೆ ವಿಭಿನ್ನವಾಗಿ ಅನುವಾದ ಮಾಡಬೇಕಾಗಿರುತ್ತದೆ.
- "ವಾಕ್ಯ" ಎನ್ನುವ ಪದವು ಮಾತ್ರವೇ ಕಂಡುಬಂದಾಗ, ಅದು ದೇವರ ವಾಕ್ಯವನ್ನು ಸೂಚಿಸುತ್ತದೆ, ಇದನ್ನು "ಸಂದೇಶ" ಅಥವಾ "ದೇವರ ವಾಕ್ಯ" ಅಥವಾ "ಬೋಧನೆಗಳು" ಎಂದೂ ಅನುವಾದ ಮಾಡಬಹುದು. ಮೇಲೆ ಹೇಳಲ್ಪಟ್ಟಿರುವ ಅನುವಾದಗಳನ್ನೂ ಪರಿಗಣಿಸಿರಿ.
- ಸತ್ಯವೇದವು ಯೇಸುವನ್ನು "ವಾಕ್ಯ" ಎಂದು ಸೂಚಿಸಿದಾಗ, ಈ ಮಾತನ್ನು ಅಥವಾ ಪದವನ್ನು "ಸಂದೇಶ" ಅಥವಾ "ಸತ್ಯ" ಎಂದೂ ಅನುವಾದ ಮಾಡಬಹುದು.
- ಸತ್ಯವಾಕ್ಯ" ಎನ್ನುವ ಮಾತನ್ನು "ದೇವರು ನಿಜವಾದ ಸಂದೇಶ" ಅಥವಾ "ದೇವರ ವಾಕ್ಯ, ಇದು ನಿಜ" ಎಂದೂ ಅನುವಾದ ಮಾಡಬಹುದು.
- ಈ ಪದವನ್ನು ಅನುವಾದ ಮಾಡುವಾಗ ನಿಜವಾಗಿ ಎನ್ನುವ ಪದವನ್ನು ಸೇರಿಸಿ ಅನುವಾದ ಮಾಡುವುದು ತುಂಬಾ ಪ್ರಾಮುಖ್ಯವಾದ ವಿಷಯ.

(ಈ ಪದಗಳನ್ನು ಸಹ ನೋಡಿರಿ : ಪ್ರವಾದಿ, ನಿಜ, ವಾಕ್ಯ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.15:1-3
- 1 ಅರಸ.13:1-3
- ಯೆರೆ.36:1-3
- ಲೂಕ.08:11-13
- ಯೋಹಾನ.05:39-40
- ಅಪೊ.ಕೃತ್ಯ.06:2-4

- ಅಪೊ.ಕೃತ್ಯ.12:24-25
- ರೋಮಾ.01:1-3
- 2 ಕೊರಿಂಥ.06:4-7
- ಎಫೆಸ.01:13-14
- 2 ತಿಮೊಥೆ.03:16-17
- ಯಾಕೋಬ.01:17-18
- ಯಾಕೋಬ.02:8-9

ಸತ್ಯವೇದದಿಂದ ಉದಾಹರಣೆಗಳು:

- **25:07** "ನಿಮ್ಮ ದೇವರಾದ ಕರ್ತನನ್ನು ಮಾತ್ರವೇ ಆರಾಧನೆ ಮಾಡಿರಿ ಮತ್ತು ಆತನನ್ನು ಮಾತ್ರವೇ ಸೇವಿಸಿರಿ" ಎಂದು _ ದೇವರ ವಾಕ್ಯದಲ್ಲಿ _ ಆತನು ತನ್ನ ಜನರಿಗೆ ಆಜ್ಞಾಪಿಸಿದ್ದಾರೆ.
- **33:06** "ಬೀಜವು _ **ದೇವರ ವಾಕ್ಯವೇ** _ " ಎಂದು ಯೇಸು ವಿವರಿಸಿ ಹೇಳಿದನು.
- **42:03** ಮೆಸ್ಸೀಯನ ಕುರಿತಾಗಿ _ **ದೇವರ ವಾಕ್ಯ** _ ಏನು ಹೇಳುತ್ತಿದೆಯೆಂದೆನ್ನುವುದರ ಕುರಿತಾಗಿ ಯೇಸು ಅವರಿಗೆ ವಿವರಿಸಿ ಹೇಳಿದನು.
- **42:07** "_ **ದೇವರ ವಾಕ್ಯದಲ್ಲಿ** ನನ್ನ ಕುರಿತಾಗಿ ಬರೆಯಲ್ಪಟ್ಟಿರುವ ಪ್ರತಿಯೊಂದು ನೆರವೇರಿಸಲ್ಪಡಬೇಕೆಂದು ನಾನು ನಿಮಗೆ ಹೇಳುತ್ತಿದೇನೆ" ಎಂದು ಯೇಸು ಹೇಳಿದರು. ಆದನಂತರ ಆತನು ತಮ್ಮ ಮನಗಳನ್ನು ತೆರೆದನು, ಇದರಿಂದ ಅವರು **ದೇವರ ವಾಕ್ಯವನ್ನು** _ ಅರ್ಥಮಾಡಿಕೊಳ್ಳುವರು.
- **45:10** ಯೇಸುವಿನ ಕುರಿತಾದ ಶುಭವಾರ್ತೆಯನ್ನು ಅವನಿಗೆ ಹೇಳುವುದಕ್ಕೆ ಫಿಲಿಪ್ಪನು ಕೂಡ ಇತರ _ **ಲೇಖನ ಭಾಗಗಳನ್ನು** _ ಉಪಯೋಗಿಸಿದನು.
- **48:12** ಆದರೆ ಯೇಸುವು ಎಲ್ಲಾ ಪ್ರವಾದಿಗಳಿಗಿಂತ ದೊಡ್ಡವನು. ಆತನೇ _ **ದೇವರ ವಾಕ್ಯ** _ ಆಗಿದ್ದಾನೆ.
- **49:18** ನೀವು ಇತರ ಕ್ರೈಸ್ತರೊಂದಿಗೆ ಸೇರಿ ಆತನನ್ನು ಆರಾಧನೆ ಮಾಡಬೇಕೆಂದು, ಆತನ _ ವಾಕ್ಯವನ್ನು _ ಅಧ್ಯಯನ ಮಾಡಬೇಕೆಂದು, ಪ್ರಾರ್ಥನೆ ಮಾಡಬೇಕೆಂದು ಮತ್ತು ನಿಮಗೆ ಮಾಡಿದ ಪ್ರತಿಯೊಂದು ಕಾರ್ಯವನ್ನು ಇತರರಿಗೆ ಹೇಳಬೇಕೆಂದು ದೇವರು ನಿಮಗೆ ಹೇಳುತ್ತಿದ್ದಾನೆ.

ಪದ ಡೇಟಾ:

- Strong's: H561, H565, H1697, H3068, G3056, G4487

ದೇವರ ಸ್ವರೂಪ, ರೂಪ

ಪದದ ಅರ್ಥವಿವರಣೆ:

"ರೂಪ" ಎನ್ನುವ ಪದವು ಇನ್ನೊಂದರಂತೆ ಬೇರೊಂದು ಕಾಣಿಸಿಕೊಳ್ಳುವುದನ್ನು ಅಥವಾ ಇನ್ನೊಬ್ಬರ ನಡತೆಯಲ್ಲಿ ಅಥವಾ ಮೂಲತತ್ವದಲ್ಲಿ ಕಾಣಿಸಿಕೊಳ್ಳುವುದನ್ನು ಸೂಚಿಸುತ್ತದೆ. "ದೇವರ ಸ್ವರೂಪ" ಎನ್ನುವ ಮಾತು ಸಂದರ್ಭಾನುಸಾರವಾಗಿ ಅನೇಕ ವಿಧಾನಗಳಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ.

- ಆರಂಭ ಕಾಲದಲ್ಲಿ ದೇವರು ಮನುಷ್ಯರನ್ನು "ಆತನ ರೂಪದಲ್ಲಿ" ಉಂಟು ಸೃಷ್ಟಿಸಿದ್ದಾನೆ, ಅದನ್ನು "ಆತನ ಹೋಲಿಕೆಯಲ್ಲಿ" ಎಂದೂ ಉಪಯೋಗಿಸುತ್ತಾರೆ. ಜನರು ದೇವರ ರೂಪವನ್ನು ಪ್ರತಿಬಿಂಬಿಸುವ ನಿರ್ದಿಷ್ಟವಾದ ಗುಣಲಕ್ಷಣಗಳನ್ನು ಹೊಂದಿರುತ್ತಾರೆಂದು ಇದಕ್ಕೆ ಅರ್ಥವಾಗಿರುತ್ತದೆ, ಭಾವೋದ್ರೇಕವನ್ನು ಅನುಭವಿಸುವ ಸಾಮರ್ಥ್ಯ, ಮಾತನಾಡುವುದಕ್ಕೆ ಮತ್ತು ಕಾರಣ ಹೇಳುವುದಕ್ಕೆ ಸಾಮರ್ಥ್ಯ, ಮತ್ತು ಶಾಶ್ವತವಾಗಿ ಜೀವಿಸುವ ಆತ್ಮವನ್ನು ಹೊಂದಿರುತ್ತಾರೆ.
- ದೇವರ ಮಗನಾದ ಯೇಸು "ದೇವರ ಸ್ವರೂಪವಾಗಿರುತ್ತಾನೆ", ಅದಕ್ಕೆ ಆತನೂ ದೇವರಾಗಿರುತ್ತಾನೆ ಎಂದು ಸತ್ಯವೇದವು ಬೋಧಿಸುತ್ತದೆ. ಮನುಷ್ಯರ ಹಾಗೆ ಯೇಸು ಸೃಷ್ಟಿಸಲ್ಪಟ್ಟಿಲ್ಲ. ನಿತ್ಯತ್ವದಿಂದ ಮಗನಾದ ದೇವರು ಎಲ್ಲಾ ದೈವಿಕ ಗುಣಲಕ್ಷಣಗಳನ್ನು ಹೊಂದಿರುತ್ತಾನೆ, ಯಾಕಂದರೆ ಈತನಲ್ಲಿ ತಂದೆಯಾದ ದೇವರಲ್ಲಿರುವ ಒಂದೇ ಮೂಲತತ್ವವು ಇರುತ್ತದೆ.

ಅನುವಾದ ಸಲಹೆಗಳು:

- ಯೇಸುವನ್ನು ಸೂಚಿಸುವಾಗ, "ದೇವರ ಸ್ವರೂಪ" ಎನ್ನುವ ಮಾತು "ದೇವರ ನಿಖರವಾದ ಹೋಲಿಕೆ" ಅಥವಾ "ದೇವರಂತೆಯೇ ಒಂದೇ ಮೂಲತತ್ವ" ಅಥವಾ "ದೇವರ ಹಾಗೆಯೇ ಇರುವುದು" ಎಂದೂ ಅನುವಾದ ಮಾಡಬಹುದು.
- ಮನುಷ್ಯರಿಗೆ ಸೂಚಿಸಿ ಹೇಳಿದಾಗ, "ದೇವರು ಅವರನ್ನು ತನ್ನ ಸ್ವರೂಪದಲ್ಲಿ ಸೃಷ್ಟಿಸಿಕೊಂಡಿದ್ದಾನೆ" ಎನ್ನುವ ಮಾತನ್ನು "ದೇವರು ತನ್ನ ಹೋಲಿಕೆಯಲ್ಲಿಯೇ ಅವರನ್ನು ಸೃಷ್ಟಿಸಿದ್ದಾನೆ" ಅಥವಾ "ದೇವರು ಅವರನ್ನು ತನ್ನ ಸ್ವಂತ ಗುಣಗಳಿರುವಂತೆಯೇ ಅವರನ್ನು ಅದೇ ಗುಣಲಕ್ಷಣಗಳಿಂದ ಸೃಷ್ಟಿಸಿಕೊಂಡಿದ್ದಾನೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಚಿತ್ರ, ದೇವರ ಮಗ, ದೇವರ ಮಗ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಕೊರಿಂಥ.04:3-4
- ಕೊಲೊಸ್ಸ.03:9-11
- ಆದಿ.01:26-27
- ಆದಿ.09:5-7
- ಯಾಕೋಬ.03:9-10
- ರೋಮಾ.08:28-30

ಪದ ಡೇಟಾ:

- Strong's: H4541, H1544, H2553, H6456, H6459, H6754, H6816, H8403, G504, G179

ದೇವರು

ಸತ್ಯಾಂಶಗಳು:

ಸತ್ಯವೇದದಲ್ಲಿ "ದೇವರು" ಎಂಬ ಪದವು ವಿಶ್ವವನ್ನು ಶೂನ್ಯದಿಂದ ಸೃಷ್ಟಿಯನ್ನುಂಟು ಮಾಡಿದ ನಿತ್ಯನಾದವನನ್ನು ಸೂಚಿಸುತ್ತದೆ. ದೇವರು ತಂದೆ, ಮಗ ಮತ್ತು ಪವಿತ್ರಾತ್ಮರಾಗಿ ಅಸ್ತಿತ್ವದಲ್ಲಿದ್ದಾರೆ. ದೇವರ ವೈಯುಕ್ತಿಕ ಹೆಸರು "ಯೆಹೋವ" ಆಗಿರುತ್ತದೆ.

- ದೇವರು ಯಾವಾಗಲೂ ಅಸ್ತಿತ್ವದಲ್ಲಿರುತ್ತಾರೆ; ಯಾವುದೂ ಅಸ್ತಿತ್ವದಲ್ಲಿರುವುದಕ್ಕೆ ಮುಂಚಿತವಾಗಿಯೇ ಆತನು ಅಸ್ತಿತ್ವದಲ್ಲಿದ್ದನು, ಮತ್ತು ಆತನು ಎಂದಿಗೂ ಎಂದೆಂದಿಗೂ ನಿರಂತರವಾಗಿ ಅಸ್ತಿತ್ವದಲ್ಲಿರುತ್ತಾನೆ.
- ಈತನೇ ನಿಜವಾದ ದೇವರು ಮತ್ತು ಈ ವಿಶ್ವದಲ್ಲಿ ಪ್ರತಿಯೊಂದರ ಮೇಲೆ ಅಧಿಕಾರವನ್ನು ಹೊಂದಿರುವಾತನಾಗಿರುತ್ತಾನೆ.
- ದೇವರು ಪರಿಪೂರ್ಣ ನೀತಿವಂತನು, ಅನಂತ ಜ್ಞಾನಿ, ಪರಿಶುದ್ಧನು, ಪಾಪರಹಿತನು, ನ್ಯಾಯವಂತನು, ಕರುಣೆಯುಳ್ಳವನು ಮತ್ತು ಪ್ರೀತಿಯುಳ್ಳವನು ಆಗಿರುತ್ತಾನೆ.
- ಈತನು ಒಡಂಬಡಿಕೆಯನ್ನು ನೆರವೇರಿಸುವ ದೇವರು, ಆತನು ಮಾಡಿದ ವಾಗ್ದಾನಗಳನ್ನು ನೆರವೇರಿಸುವಾತನು.
- ದೇವರನ್ನು ಆರಾಧಿಸುವುದಕ್ಕಾಗಿಯೇ ಜನರು ಸೃಷ್ಟಿಸಲ್ಪಟ್ಟಿದ್ದಾರೆ ಮತ್ತು ಅವರು ಆತನನ್ನು ಮಾತ್ರವೇ ಆರಾಧನೆ ಮಾಡಬೇಕು.
- ದೇವರು ತನ್ನ ಹೆಸರು "ಯೆಹೋವ (ಅಥವಾ ಯಾವ್ಹೆ)" ಎಂದು ಪ್ರಕಟಿಸಿದನು, ಇದಕ್ಕೆ "ಆತನಿದ್ದಾನೆ" ಅಥವಾ "ಇರುವಾತನು" ಅಥವಾ "(ಯಾವಾಗಲೂ) ಅಸ್ತಿತ್ವದಲ್ಲಿರುವಾತನು" ಎಂದರ್ಥ.
- ಸತ್ಯವೇದವು ಸುಳ್ಳು "ದೇವರಗಳ" ಕುರಿತಾಗಿಯೂ ಬೋಧಿಸುತ್ತದೆ, ಇದರಲ್ಲಿ ಜನರು ತಪ್ಪಾಗಿ ಆರಾಧಿಸುವ ವಿಗ್ರಹಗಳು ಒಳಗೊಂಡಿರುತ್ತವೆ.

ಅನುವಾದ ಸಲಹೆಗಳು:

- "ದೇವರು" ಎನ್ನುವ ಪದವನ್ನು "ದೈವತ್ವ" ಅಥವಾ "ಸೃಷ್ಟಿಕರ್ತ" ಅಥವಾ "ಪರಮಾತ್ಮ" ಎಂದೂ ಅನುವಾದ ಮಾಡಬಹುದು.
- "ದೇವರು" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ, "ಪರಮ ಸೃಷ್ಟಿಕರ್ತ" ಅಥವಾ "ಅನಂತ ಸಾರ್ವಭೌಮ ಕರ್ತ" ಅಥವಾ "ನಿತ್ಯತ್ವದಲ್ಲಿರುವ ಪರಮಾತ್ಮ" ಎಂದೂ ಅನುವಾದ ಮಾಡಬಹುದು.
- ದೇವರು ಎನ್ನುವ ಪದವನ್ನು ಸ್ಥಳೀಯ ಅಥವಾ ರಾಷ್ಟ್ರೀಯ ಭಾಷೆಗಳಲ್ಲಿ ಯಾವ ರೀತಿ ಸೂಚಿಸುತ್ತಾರೆನ್ನುವದನ್ನು ನೋಡಿಕೊಳ್ಳಿರಿ. ಅನುವಾದ ಮಾಡುವ ಭಾಷೆಯಲ್ಲಿ "ದೇವರು" ಎನ್ನುವ ಪದಕ್ಕೆ ಇನ್ನೊಂದು ಪದವೂ ಇರಬಹುದು. ಒಂದುವೇಳೆ ಇದ್ದರೆ, ಮೇಲೆ ವಿವರಿಸಿದಂತೆ ನಿಜವಾದ ದೇವರಿಗೆ ಇರುವ ಗುಣಲಕ್ಷಣಗಳೆಲ್ಲವುಗಳನ್ನು ತೋರಿಸುವ ಪದವು ಇದೆಯೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡುವುದು ಉತ್ತಮ.
- ಅನೇಕ ಭಾಷೆಗಳಲ್ಲಿ ನಿಜವಾದ ದೇವರು ಎಂದು ಹೇಳುವುದಕ್ಕೆ ಮೊದಲನೇ ಅಕ್ಷರವನ್ನು ದೊಡ್ಡ ಅಕ್ಷರವನ್ನಾಗಿ ಬರೆಯುತ್ತಾರೆ, ಇದರಿಂದ ಸುಳ್ಳು ದೇವರು ಯಾರು ಎನ್ನುವುದು ಸ್ಪಷ್ಟವಾಗಿ ತಿಳಿಯುತ್ತದೆ.
- ಈ ವ್ಯತ್ಯಾಸವನ್ನು ತಿಳಿಸುವುದಕ್ಕೆ ಇನ್ನೊಂದು ವಿಧಾನ ಇದೆ, ಅದು ಆಂಗ್ಲ ಭಾಷೆಯಲ್ಲಿ "God" (ಗಾಡ್ (ನಿಜವಾದ ದೇವರು) - ಮೊದಲ ಅಕ್ಷರವಾಗಿರುವ "ಜಿ" ಎನ್ನುವುದು ದೊಡ್ಡದಾಗಿರುತ್ತದೆ) ಮತ್ತು "god" (ಗಾಡ್ (ಸುಳ್ಳು ದೇವರು) - ಮೊದಲ ಅಕ್ಷರವಾಗಿರುವ "ಜಿ" ಎನ್ನುವುದು ಚಿಕ್ಕದಾಗಿರುತ್ತದೆ).
- "ನಾನು ಅವರಿಗೆ ದೇವರಾಗಿರುತ್ತೇನೆ ಮತ್ತು ಅವರು ನನ್ನ ಜನರಾಗಿರುತ್ತಾರೆ" ಎನ್ನುವ ಮಾತನ್ನು "ದೇವರಾಗಿರುವ ನಾನು ಈ ಜನರನ್ನು ಪಾಲಿಸುತ್ತೇನೆ ಮತ್ತು ಅವರು ನನ್ನನ್ನು ಆರಾಧಿಸುವರು" ಎಂದೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಸೃಷ್ಟಿಸು, ಸುಳ್ಳು ದೇವರು, ತಂದೆಯಾದ ದೇವರು, ಪವಿತ್ರಾತ್ಮ, ಸುಳ್ಳು ದೇವರು, ದೇವರ ಮಗ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.01:5-7
- 1 ಸಮು.10:7-8
- 1 ತಿಮೊಥೆ.04:9-10
- ಕೊಲೊಸ್ಸೆ.01:15-17
- ಧರ್ಮೋ.29:14-16
- ಎಜ್ರಾ.03:1-2
- ಆದಿ.01:1-2
- ಹೋಶೆಯ.04:11-12
- ಯೆಶಯಾ.36:6-7
- ಯಾಕೋಬ.02:18-20
- ಯೆರೆ.05:4-6
- ಯೋಹಾನ.01:1-3
- ಯೆಹೋ.03:9-11
- ಪ್ರಲಾಪ.03:40-43

- ಮೀಕಾ.04:4-5
- ಫಿಲಿಪ್ಪ.02:5-8
- ಜ್ಞಾನೋ.24:11-12
- ಕೀರ್ತನೆ.047:8-9

ಸತ್ಯವೇದದಿಂದ ಉದಾಹರಣೆಗಳು:

- **_01:01** _ **ದೇವರು** __ ವಿಶ್ವವನ್ನು ಸೃಷ್ಟಿಸಿದನು, ಪ್ರತಿಯೊಂದನ್ನು ಆರು ದಿನಗಳಲ್ಲಿ ಉಂಟು ಮಾಡಿದನು.
- **_01:15** _ **ದೇವರು** __ ತನ್ನ ಸ್ವರೂಪದಲ್ಲಿ ಸ್ತ್ರೀ ಪುರುಷರನ್ನು ಉಂಟುಮಾಡಿದನು.
- **_05:03** " ನಾನು ಸರ್ವಶಕ್ತನಾದ **ದೇವರು** _. ನಾನು ನಿನ್ನೊಂದಿಗೆ ಒಡಂಬಡಿಕೆಯನ್ನು ಮಾಡುವೆನು."
- **_09:14** "ನಾನು ಇರುವಾತನಾಗಿದ್ದೇನೆ. "ಇರುವಾತನೆಂಬುವವನು ನನ್ನನ್ನು ಕಳುಹಿಸಿದ್ದಾನೆ" ಎಂದು ಅವರಿಗೆ ಹೇಳು ಎಂದು **ದೇವರು** ಹೇಳಿದನು. "ನಾನು ಯೆಹೋವನು, ನಿನ್ನ ಪಿತೃಗಳಾದ ಅಬ್ರಹಾಮ, ಇಸಾಕ, ಮತ್ತು ಯಾಕೋಬ _ ದೇವರು __ ಆಗಿದ್ದೇನೆ. ಎಂದೆಂದಿಗೂ ಇರುವ ನನ್ನ ಹೆಸರು ಇದೇ" ಎಂದೂ ಅವರಿಗೆ ಹೇಳು.
- **_10:02** ಈ ಮಾರಿರೋಗಗಳ ಮೂಲಕ **ದೇವರು** _ ಫರೋಹನಿಗಿಂತಲೂ ಮತ್ತು ಎಲ್ಲಾ ಐಗುಪ್ತರಗಿಂತಲೂ ಎಷ್ಟು ದೊಡ್ಡವನೆಂದು ಆತನು ತೋರಿಸಿಕೊಂಡನು.
- **_16:01** ನಿಜ _ ದೇವರಾದ__ ಯೆಹೋವನನ್ನು ಬಿಟ್ಟು ಇಸ್ರಾಯೇಲ್ಯರು ಕಾನಾನ್ ದೇವರುಗಳನ್ನು ಆರಾಧನೆ ಮಾಡುವುದಕ್ಕೆ ಆರಂಭಿಸಿದರು.
- **_22:07** ಮೆಸ್ಸೀಯನನ್ನು ಅಂಗೀಕರಿಸುವುದಕ್ಕೆ ಜನರನ್ನು ಸಿದ್ಧಪಡಿಸುವ **ಅತ್ಯುನ್ನತ ದೇವರಾದ** _ ಪ್ರವಾದಿಯೆಂದು ನನ್ನ ಮಗನಾಗಿರುವ ನೀನು ಕರೆಯಲ್ಪಡುವಿ!"
- **_24:09** ಒಬ್ಬ **ದೇವರು** ಮಾತ್ರ ಇದ್ದಾನೆ. ಆದರೆ ತಂದೆಯಾದ **ದೇವರು** _ ಮಾತನಾಡಿದ್ದನ್ನು ಯೋಹಾನನು ಕೇಳಿಸಿಕೊಂಡನು ಮತ್ತು ಆತನು ಯೇಸುವಿಗೆ ದೀಕ್ಷಾಸ್ನಾನವನ್ನು ಕೊಟ್ಟಾಗ ಮಗನಾದ ಯೇಸುವನ್ನು ಮತ್ತು ಪವಿತ್ರಾತ್ಮನನ್ನು ನೋಡಿದನು.
- **_25:07** "ಕರ್ತನಾದ ನಿನ್ನ **ದೇವರನ್ನು** _ ಮಾತ್ರ ಆರಾಧನೆ ಮಾಡು ಮತ್ತು ಆತನನ್ನೇ ನೀನು ಸೇವಿಸು".
- **_28:01** "ಒಳ್ಳೇಯವನು ಒಬ್ಬನೇ, ಅವನೇ **ದೇವರು** _."
- **_49:09** ಆದರೆ **ದೇವರು** ಲೋಕದಲ್ಲಿರುವ ಪ್ರತಿಯೊಬ್ಬರನ್ನು ಹೆಚ್ಚಾಗಿ ಪ್ರೀತಿಸಿದನು, ಇದರಿಂದ ಆತನು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಯೇಸುವಿನಲ್ಲಿ ನಂಬಿಕೆ ಇಡುವ ಪ್ರತಿಯೊಬ್ಬನು ತನ್ನ ಪಾಪಗಳಿಗಾಗಿ ಶಿಕ್ಷಿಸಲ್ಪಡುವುದಿಲ್ಲ, ಆದರೆ **ದೇವರೊಂದಿಗೆ** _ ಸದಾಕಾಲವೂ ಜೀವಿಸುವನು.
- **_50:16** ಆದರೆ ಒಂದಾನೊಂದು ದಿನ **ದೇವರು** _ ಪರಿಪೂರ್ಣವಾದ ಹೊಸ ಆಕಾಶವನ್ನು ಮತ್ತು ಹೊಸ ಭೂಮಿಯನ್ನು ಉಂಟು ಮಾಡುವನು.

ಪದ ಡೇಟಾ:

- Strong's: H136, H305, H410, H426, H430, H433, H2486, H2623, H3068, H3069, H3863, H4136, H6697, G112, G516, G932, G935, G1096, G1140, G2098, G2124, G2128, G2150, G2152, G2153, G2299, G2304, G2305, G2312, G2313, G2314, G2315, G2316, G2317, G2318, G2319, G2320, G3361, G3785, G4151, G5207, G5377, G5463, G5537, G5538

ದೇವರು, ಸುಳ್ಳು ದೇವರು, ದೇವತೆ, ವಿಗ್ರಹ, ವಿಗ್ರಹಾರಾಧಕ, ವಿಗ್ರಹಾರಾಧಿಕರು, ವಿಗ್ರಹ ಪೂಜೆ, ವಿಗ್ರಹಾರಾಧನೆ

ಪದದ ಅರ್ಥವಿವರಣೆ:

ಸುಳ್ಳು ದೇವರು ಎಂದರೆ ಜನರು ನಿಜವಾದ ದೇವರನ್ನು ಬಿಟ್ಟು ಬೇರೆ ಯಾವುದಾದರೊಂದನ್ನು ದೇವರು ಎಂದು ಭಾವಿಸಿ ಆರಾಧನೆ ಮಾಡುವುದು ಎಂದರ್ಥ. "ದೇವತೆ" ಎನ್ನುವ ಪದವು ವಿಶೇಷವಾಗಿ ಹೆಣ್ಣು ಸುಳ್ಳು ದೇವರನ್ನು ಸೂಚಿಸುತ್ತದೆ.

- ಈ ಸುಳ್ಳು ದೇವರುಗಳು ಅಥವಾ ದೇವತೆಗಳು ಅಸ್ತಿತ್ವದಲ್ಲಿರುವದಿಲ್ಲ (ನಿಜವಾಗಿಲ್ಲ). ಯೆಹೋವನೇ ನಿಜವಾದ ದೇವರು.
- ಜನರು ಕೆಲವೊಂದುಬಾರಿ ತಮ್ಮ ಸುಳ್ಳು ದೇವರಿಗೆ ಚಿಹ್ನೆಗಳಾಗಿ ಆರಾಧನೆ ಮಾಡಿಕೊಳ್ಳುವುದಕ್ಕೆ ಕೆಲವೊಂದು ವಸ್ತುಗಳನ್ನು ವಿಗ್ರಹಗಳನ್ನಾಗಿ ಮಾಡಿಕೊಳ್ಳುತ್ತಾರೆ.
- ಸತ್ಯವೇದದಲ್ಲಿ ದೇವ ಜನರು ಅನೇಕ ಸಲ ಸುಳ್ಳು ದೇವರುಗಳನ್ನು ಆರಾಧನೆ ಮಾಡುವ ಕ್ರಮದಲ್ಲಿ ನಿಜವಾದ ದೇವರಿಗೆ ವಿಧೇಯತೆಯನ್ನು ತೋರಿಸದೆ ಆಅನಿಂದ ದೂರ ಹೋಗಿದ್ದಾರೆ.
- ಜನರು ಆರಾಧಿಸುವ ಸುಳ್ಳು ದೇವರುಗಳಲ್ಲಿ ಮತ್ತು ವಿಗ್ರಹಗಳಲ್ಲಿ ಶಕ್ತಿ ಇದೆಯೆಂದು ನಂಬಿಕೆಯನ್ನುಂಟು ಮಾಡುವುದರಲ್ಲಿ ದೆವ್ವಗಳು ಅನೇಕಬಾರಿ ಜನರನ್ನು ಮೋಸ ಮಾಡುತ್ತವೆ.
- ಸತ್ಯವೇದದ ಕಾಲದಲ್ಲಿ ಜನರಿಂದ ಆರಾಧಿಸಲ್ಪಟ್ಟ ಅನೇಕ ಸುಳ್ಳು ದೇವರುಗಳಲ್ಲಿ ಬಾಳ್, ದಾಗೋನ್ ಮತ್ತು ಮೋಲೆಕನು ಮ್ಮೂಖ್ಯರ್ ಸುಳ್ಳುದೇವರಾಗಿದ್ದವು.
- ಪುರಾತನ ಕಾಲದಲ್ಲಿನ ಜನರು ಅಶೇರ ಮತ್ತು ಅರ್ತೆಮೀ ದೇವಿ (ಡಯಾನ) ಎನ್ನುವ ದೇವತೆಗಳನ್ನು ಆರಾಧಿಸುತ್ತಿದ್ದರು.

ವಿಗ್ರಹ ಎನ್ನುವುದು ಆರಾಧನೆ ಮಾಡುವುದಕ್ಕಾಗಿ ಜನರು ಮಾಡಿಕೊಂಡಿರುವ ಒಂದು ವಸ್ತು ಮಾತ್ರ, . "ವಿಗ್ರಹ ಪೂಜೆ" ಎನ್ನುವ ಮಾತು ನಿಜವಾದ ದೇವರಿಗಿಂತ ಬೇರೆ ಸುಳ್ಳು ದೇವರುಗಳಿಗೆ ಹೆಚ್ಚಾದ ಗೌರವವನ್ನು ಕೊಡುವುದನ್ನು ವಿವರಿಸುತ್ತದೆ.

- ಜನರು ಆರಾಧಿಸುವ ಸುಳ್ಳು ದೇವರುಗಳಿಗೆ ಪ್ರತಿನಿಧಿಗಳಾಗಿ ವಿಗ್ರಹಗಳನ್ನು ಇಟ್ಟುಕೊಳ್ಳುತ್ತಾರೆ.
- ಈ ಸುಳ್ಳು ದೇವರುಗಳು ಅಸ್ತಿತ್ವದಲ್ಲಿರುವುದಿಲ್ಲ; ಯೆಹೋವನಿಗಿಂತ ಬೇರೊಂದು ದೇವರು ಯಾರೂ ಇಲ್ಲ.
- ಕೆಲವೊಂದುಬಾರಿ ವಿಗ್ರಹಗಳಿಗೆ ಶಕ್ತಿಯಿಲ್ಲದಿದ್ದರೂ, ಅವುಗಳಿಗೆ ಶಕ್ತಿಯಿದೆ ಎನ್ನುವ ರೀತಿಯಲ್ಲಿ ದೆವ್ವಗಳು ಕೆಲಸ ಮಾಡುತ್ತವೆ,
- ವಿಗ್ರಹಗಳನ್ನು ತುಂಬಾ ಬೆಲೆಯುಳ್ಳವುಗಳಾದ ಬಂಗಾರ, ಬೆಳ್ಳಿ, ಕಂಚು, ಅಥವಾ ವಿಪರೀತ ಬೆಲೆಯ ಮರಗಳಿಂದ ತಯಾರು ಮಾಡುತ್ತಾರೆ.
- "ವಿಗ್ರಹಪೂಜೆ ಮಾಡುವ ರಾಜ್ಯ" ಎನ್ನುವದಕ್ಕೆ "ವಿಗ್ರಹಗಳನ್ನು ಆರಾಧನೆ ಮಾಡುವ ರಾಜ್ಯದ ಜನರು" ಅಥವಾ "ಭುಲೋಕದಲ್ಲಿರುವವುಗಳನ್ನು ಆರಾಧನೆ ಮಾಡುವ ರಾಜ್ಯದ ಜನರು" ಎಂದರ್ಥ.
- "ವಿಗ್ರಹ ಪೂಜೆಯ ಆಕಾರ" ಎನ್ನುವ ಮಾತಿಗೆ "ಕೆತ್ತಿದ ಚಿತ್ರ" ಅಥವಾ "ಕೆತ್ತಿದ ವಿಗ್ರಹ" ಎನ್ನುವ ಬೇರೊಂದು ಪದಗಳನ್ನು ಉಪಯೋಗಿಸಬಹುದು.

ಅನುವಾದ ಸಲಹೆಗಳು:

- ಅನುವಾದ ಮಾಡುವ ಭಾಷೆಯಲ್ಲಿ ಅಥವಾ ಅಕ್ಕಪಕ್ಕ ಭಾಷೆಯಲ್ಲಿ "ಸುಳ್ಳು ದೇವರು" ಎನ್ನುವ ಪದವನ್ನು ಸೂಚಿಸುವ ಬೇರೊಂದು ಪದಗಳಿರಬಹುದು.
- "ವಿಗ್ರಹ" ಎನ್ನುವ ಪದವು "ಸುಳ್ಳು ದೇವರಿಗೆ" ಸೂಚಿಸುವುದಕ್ಕೆ ಉಪಯೋಗಿಸಿರುತ್ತಾರೆ.
- ಆಂಗ್ಲ ಭಾಷೆಯಲ್ಲಿ "g" (ಚಿಕ್ಕ "ಜಿ") ಎನ್ನುವ ಚಿಕ್ಕ ಅಕ್ಷರವು ಸುಳ್ಳು ದೇವರುಗಳನ್ನು ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ. "G" (ದೊಡ್ಡ "ಜಿ") ಎನ್ನುವ ದೊಡ್ಡ ಅಕ್ಷರವು ನಿಜವಾದ ದೇವರನ್ನು ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ. ಇತರ ಭಾಷೆಗಳಲ್ಲಿಯೂ ಈ ರೀತಿ ಮಾಡುತ್ತಾರೆ.
- ಸುಳ್ಳು ದೇವರುಗಳನ್ನು ಸೂಚಿಸುವುದಕ್ಕೆ ಸಂಪೂರ್ಣವಾಗಿ ಬೇರೊಂದು ಪದವನ್ನು ಉಪಯೋಗಿಸುವ ಇನ್ನೊಂದು ವಿಧಾನವು ಇರುತ್ತದೆ.
- ಕೆಲವೊಂದು ಭಾಷೆಗಳಲ್ಲಿ ಸುಳ್ಳು ದೇವರು ಯಾವ ಲಿಂಗವೆಂದು ಅಂದರೆ ಗಂಡು ಅಥವಾ ಹೆಣ್ಣು ಎಂದು ನಿರ್ಧರಿಸುವ ಪದವನ್ನು ಉಪಯೋಗಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ದೇವರು, ಅಶೇರ, ಬಾಳ್, ಮೋಲೆಕ, ದೆವ್ವ, ರೂಪ, ರಾಜ್ಯ, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- ಆದಿ.35:02
- ವಿಮೋ.32:01
- ಕೀರ್ತನೆ.031:06
- ಕೀರ್ತನೆ.081:8-10
- ಯೆಶಯಾ.44:20
- ಅಪೊ.ಕೃತ್ಯ.07:43
- ಅಪೊ.ಕೃತ್ಯ.07:43
- ಅಪೊ.ಕೃತ್ಯ.15:02

- ಅಪೊ.ಕೃತ್ಯ.19:27
- ರೋಮಾ.02:22
- ಗಲಾತ್ಯ.04:8-9
- ಗಲಾತ್ಯ.05:19-21
- ಕೊಲೊಸ್ಸೆ.03:05
- 1 ಥೆಸ್ಸ.01:09

ಸತ್ಯವೇದದಿಂದ ಉದಾಹರಣೆಗಳು:

- **10:02** ಈ ಎಲ್ಲಾ ಮಾರಿರೋಗಗಳ ಮೂಲಕ, ಫರೋಹನಿಗಿಂತ, ಐಗುಪ್ತ _ ದೇವರುಗಳಿಗಿಂತ_ ಹೆಚ್ಚಾಗಿ ಅತಿ ಶಕ್ತಿಯುಳ್ಳ ದೇವರು ಇದ್ದಾರೆಂದು ದೇವರು ಫರೋಹನಿಗೆ ತೋರಿಸಿದ್ದಾನೆ.
- **13:04** ಆದನಂತರ ದೇವರು ಅವರಿಗೆ ಒಡಂಬಡಿಕೆಯನ್ನು ಕೊಟ್ಟರು, “ನಾನೇ ಯೆಹೋವನು, ನಿಮ್ಮನ್ನು ಐಗುಪ್ತ ಗುಲಾಮಗಿರಿಯಿಂದ ರಕ್ಷಿಸಿದ ನಿಮ್ಮ ದೇವರು” ಬೇರೊಂದು _ ದೇವರುಗಳನ್ನು _ ಆರಾಧಿಸಬೇಡಿರಿ”. ಎಂದು ಹೇಳಿದನು.
- **14:02** ಅವರು (ಕಾನಾನಿಯರು)_ ಸುಳ್ಳು ದೇವರುಗಳನ್ನು _ ಆರಾಧಿಸಿದರು ಮತ್ತು ಅನೇಕ ದುಷ್ಟ ಕಾರ್ಯಗಳನ್ನು ಮಾಡಿದರು.
- **16:01** ಇಸ್ರಾಯೇಲ್ಯರು ನಿಜವಾದ ದೇವರಾದ ಯೆಹೋವನನ್ನು ಆರಾಧನೆ ಮಾಡುವುದಕ್ಕೆ ಬದಲಾಗಿ ಕಾನಾನ್ಯ _ ದೇವರುಗಳನ್ನು _ ಆರಾಧನೆ ಮಾಡಲಾರಂಭಿಸಿದರು.
- **18:13** ಆದರೆ ಯೂದಾ ರಾಜ್ಯದ ಅರಸರಲ್ಲಿ ಅನೇಕರು ದುಷ್ಟರು, ಭ್ರಷ್ಟರು ಮತ್ತು ಅವರು ವಿಗ್ರಹಗಳನ್ನು ಪೂಜಿಸುವವರಾಗಿದ್ದರು. ಅರಸರಲ್ಲಿ ಕೆಲವರು ತಮ್ಮ ಮಕ್ಕಳನ್ನು ಸುಳ್ಳು _ ದೇವರುಗಳಿಗೆ _ ಬಲಿ ಕೊಟ್ಟಿದ್ದಾರೆ.

ಪದ ಡೇಟಾ:

- Strong's: H205, H367, H410, H426, H430, H457, H1322, H1544, H1892, H2553, H3649, H4656, H4906, H5236, H5566, H6089, H6090, H6091, H6456, H6459, H6673, H6736, H6754, H7723, H8163, H8251, H8267, H8441, H8655, G1493, G1494, G1495, G1496, G1497, G2299, G2712

ದೇವಾಲಯ, ಮನೆ, ದೇವರ ಮನೆ

ಸತ್ಯಾಂಶಗಳು:

ದೇವಾಲಯ ಎನ್ನುವುದು ಒಂದು ಭವನ, ಇದರ ಸುತ್ತಮುತ್ತ ಗೋಡೆಗಳಿದ್ದು ಅದರೊಳಗೆ ಒಂದು ಪ್ರಾಂಗಣವಿರುತ್ತದೆ, ಇಲ್ಲಿಗೆ ಇಸ್ರಾಯೇಲ್ಯರು ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಮತ್ತು ದೇವರಿಗೆ ಹೋಮಗಳನ್ನು ಅರ್ಪಿಸುವುದಕ್ಕೆ ಬರುತ್ತಿದ್ದರು. ಇದು ಯೆರೂಸಲೇಮ್ ಪಟ್ಟಣದಲ್ಲಿ ಮೋರಿಯಾ ಪರ್ವತದ ಮೇಲೆ ಇದ್ದಿತ್ತು.

- "ದೇವಾಲಯ" ಎನ್ನುವ ಪದವು ಅನೇಕಬಾರಿ ಸಂಪೂರ್ಣ ದೇವಾಲಯ ಸಂಕೀರ್ಣವನ್ನು ತೋರಿಸುತ್ತದೆ, ಮುಖ್ಯ ಭವನದ ಸುತ್ತಲಿರುವ ಪ್ರಾಂಗಣಗಳನ್ನು ಇದರಲ್ಲಿ ಒಳಗೊಂಡಿರುತ್ತದೆ. ಈ ಪದವು ಕೆಲವೊಂದುಬಾರಿ ಭವನವನ್ನು ಮಾತ್ರವೇ ಸೂಚಿಸುತ್ತದೆ.
- ದೇವಾಲಯ ಭವನದಲ್ಲಿ ಎರಡು ಕೊಠಡಿಗಳಿರುತ್ತವೆ, ಅವು ಯಾವುವೆಂದರೆ ಒಂದು ಪರಿಶುದ್ಧ ಸ್ಥಳ, ಮತ್ತೊಂದು ಅತಿ ಪರಿಶುದ್ಧ ಸ್ಥಳ.
- ದೇವರು ತನ್ನ ದೇವಾಲಯನ್ನು ಆತನು ನಿವಾಸವಾಗಿರುವ ಸ್ಥಳವೆಂದು ಸೂಚಿಸಿದ್ದಾರೆ.
- ಅರಸನಾದ ಸೊಲೊಮೋನನು ತನ್ನ ಆಳ್ವಿಕೆಯಲ್ಲಿ ದೇವಾಲಯವನ್ನು ನಿರ್ಮಿಸಿದನು. ಇದು ಯೆರೂಸಲೇಮಿನಲ್ಲಿ ಆರಾಧನೆ ಮಾಡುವುದಕ್ಕೆ ಶಾಶ್ವತ ಸ್ಥಳವಾಗಿ ಇರುತ್ತಿತ್ತು.
- ಹೊಸ ಒಡಂಬಡಿಕೆಯಲ್ಲಿ "ಪವಿತ್ರಾತ್ಮನ ದೇವಾಲಯ" ಎನ್ನುವ ಮಾತನ್ನು ಯೇಸುವಿನಲ್ಲಿ ಭರವಸೆವಿಟ್ಟಿರುವ ಜನರ ಗುಂಪನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

ಅನುವಾದ ಸಲಹೆಗಳು:

- ಜನರು "ದೇವಾಲಯದಲ್ಲಿದ್ದಾರೆ" ಎಂದು ವಾಕ್ಯವು ಸಾಧಾರಣವಾಗಿ ಹೇಳಿದಾಗ, ಇದು ಭವನದ ಆಚೆಯಲ್ಲಿರುವ ಪ್ರಾಂಗಣಗಳನ್ನು ಸೂಚಿಸುತ್ತಿದೆ ಎಂದರ್ಥ. ಇದನ್ನು "ದೇವಾಲಯ ಪ್ರಾಂಗಣಗಳಲ್ಲಿ" ಅಥವಾ "ದೇವಾಲಯ ಸಂಕೀರ್ಣದಲ್ಲಿ" ಎಂದೂ ಅನುವಾದ ಮಾಡಬಹುದು.
- ಇದು ಭವನವನ್ನೇ ಸೂಚಿಸಿದಾಗ, ಕೆಲವೊಂದು ಅನುವಾದಗಳು "ದೇವಾಲಯ" ಎನ್ನುವ ಪದವನ್ನು "ದೇವಾಲಯ ಭವನ" ಎಂಬುದಾಗಿ ಸ್ಪಷ್ಟತೆಗಾಗಿ ಅನುವಾದ ಮಾಡಿರುತ್ತಾರೆ.
- "ದೇವಾಲಯ" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ, "ದೇವರ ಪರಿಶುದ್ಧವಾದ ಮನೆ" ಅಥವಾ "ಪರಿಶುದ್ಧವಾದ ಆರಾಧನೆ ಸ್ಥಳ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಸತ್ಯವೇದದಲ್ಲಿ ಅನೇಕಬಾರಿ ದೇವಾಲಯವನ್ನು "ಯೆಹೋವನ ಮನೆ" ಅಥವಾ "ದೇವರ ಮನೆ" ಎಂಬುದಾಗಿ ಸೂಚಿಸಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಹೋಮ, ಸೊಲೊಮೋನ, ಬಾಬೆಲೋನಿಯ, ಪವಿತ್ರಾತ್ಮ, ಗುಡಾರ, ಪ್ರಾಂಗಣ, ಚಿಯೋನ್, ಮನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.03:02
- ಅಪೊ.ಕೃತ್ಯ.03:08
- ಯೆಹೆ.45:18-20
- ಲೂಕ.19:46
- ನೆಹೆ.10:28
- ಕೀರ್ತನೆ.079:1-3

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **17:06** ಇಸ್ರಾಯೇಲ್ಯರೆಲ್ಲರು ದೇವರನ್ನು ಆರಾಧಿಸುವ ಮತ್ತು ಆತನಿಗೆ ಅರ್ಪಣೆಗಳನ್ನು ಅರ್ಪಿಸುವ _ ದೇವಾಲಯವನ್ನು _ ನಿರ್ಮಿಸಬೇಕೆಂದು ಬಯಸಿದ್ದನು.
- **18:02** ಯೆರೂಸಲೇಮಿನಲ್ಲಿ ಸೊಲೊಮೋನನು _ ದೇವಾಲಯವನ್ನು _ ನಿರ್ಮಿಸಿದನು, ಯಾಕಂದರೆ ತನ್ನ ತಂದೆ ದಾವೀದನು ಪ್ರಣಾಳಿಕೆ ಹಾಕಿ, ಎಲ್ಲಾ ವಸ್ತುಗಳನ್ನು ಸಂಗ್ರಹಿಸಿದ್ದನು. ಇಸ್ರಾಯೇಲ್ಯರು ಗುಡಾರದ ಬಳಿ ಭೇಟಿಯಾಗುವುದಕ್ಕೆ ಬದಲಾಗಿ, ಅವರು ನಿರ್ಮಿಸಿದ _ ದೇವಾಲಯದ _ ಹತ್ತಿರ ದೇವರನ್ನು ಆರಾಧಿಸಿದರು ಮತ್ತು ಆತನಿಗೆ ಯಜ್ಞಗಳನ್ನು ಅರ್ಪಿಸಿದರು. ದೇವರು ಬಂದು, _ ದೇವಾಲಯದಲ್ಲಿ _ ನಿವಾಸವಾಗಿದ್ದರೂ, ಆತನು ಅವರೊಂದಿಗೆ ಅವರ ಮಧ್ಯೆದಲ್ಲಿ ನಿವಾಸವಾಗುತ್ತಿದ್ದರು.
- **20:07** ಅವರು (ಬಾಬೆಲೋನಿಯರು) ಯೆರೂಸಲೇಮ್ ಪಟ್ಟಣವನ್ನು ಹಿಡಿದುಕೊಂಡರು, _ ದೇವಾಲಯವನ್ನು _ ಕೆಡವಿದರು, ಮತ್ತು ಅದರಲ್ಲಿರುವ ಎಲ್ಲಾ ನಿಧಿಗಳನ್ನು ತೆಗೆದುಕೊಂಡರು.
- **20:13** ಜನರು ಯೆರೂಸಲೇಮಿನೊಳಗೆ ಬಂದಾಗ, ಅವರು ದೇವಾಲಯವನ್ನು _ ದೇವಾಲಯ _ ಮತ್ತು ಪಟ್ಟಣದ ಸುತ್ತಮುತ್ತಲಿರುವ ಗೋಡೆಗಳನ್ನು ನಿರ್ಮಿಸಿದರು.

- **25:04** ಆದನಂತರ ಸಾತಾನನು ಯೇಸುವನ್ನು _ ದೇವಾಲಯದ _ ಮೇಲಿನ ತುದಿ ಭಾಗಕ್ಕೆ ಕರೆದುಕೊಂಡು ಹೋದರು, ಅಲ್ಲಿ "ನೀನು ದೇವರ ಮಗನಾದರೆ, ನೀನು ಕೆಳಗೆ ಬೀಳು, ಯಾಕಂದರೆ "ನಿನ್ನ ಪಾದಗಳು ಬಂಡೆಗೆ ತಗಲದಂತೆ ನಿನ್ನನ್ನು ಹಿಡಿದುಕೊಳ್ಳುವುದಕ್ಕೆ ದೇವರು ದೂತರನ್ನು ಕಳುಹಿಸುವನೆಂದು' ಬರೆಯಲ್ಪಟ್ಟಿದೆ" ಎಂದು ಹೇಳಿದನು.
- **40:07** ಆತನು ಮರಣಿಸಿದನಂತರ, ಅಲ್ಲಿ ಭೂಕಂಪ ಉಂಟಾಯಿತು ಮತ್ತು _ ದೇವಾಲಯದಲ್ಲಿ _ ದೇವರ ಸನ್ನಿಧಿಯಿಂದ ಜನರನ್ನು ಬೇರ್ಪಡಿಸುವ ದೊಡ್ಡ ತೆರೆ ಎರಡು ಭಾಗಗಳಾಗಿ ಮೇಲಿಂದ ಕೆಳಕ್ಕೆ ಹರಿದುಹೋಯಿತು.

ಪದ ಡೇಟಾ:

- Strong's: H1004, H1964, H1965, G1493, G2411, G3485

ದೇಹ, ದೇಹಗಳು

ಪದದ ಅರ್ಥವಿವರಣೆ:

"ದೇಹ" ಎನ್ನುವ ಪದವು ಅಕ್ಷರಾರ್ಥವಾಗಿ ಒಬ್ಬ ವ್ಯಕ್ತಿಯ ಅಥವಾ ಒಂದು ಪ್ರಾಣಿಯ ಭೌತಿಕ ಶರೀರವನ್ನು ಸೂಚಿಸುತ್ತದೆ. ಒಂದು ವಸ್ತುವನ್ನು ಅಥವಾ ಗುಂಪಿನಲ್ಲಿರುವ ವೈಯುಕ್ತಿಕ ಸದಸ್ಯರನ್ನು ಸೂಚಿಸುವುದಕ್ಕೆ ಅಲಂಕಾರ ರೂಪದಲ್ಲಿಯೂ ಈ ಪದವನ್ನು ಉಪಯೋಗಿಸುತ್ತಾರೆ.

- ಅನೇಕಬಾರಿ "ದೇಹ" ಎನ್ನುವ ಪದವನ್ನು ಸತ್ತಂತ ಪ್ರಾಣಿಯನ್ನು ಅಥವಾ ಸತ್ತಂತ ವ್ಯಕ್ತಿಯನ್ನು ಸೂಚಿಸುತ್ತದೆ. ಕೆಲವೊಂದುಬಾರಿ ಇದನ್ನು "ಮೃತ ದೇಹ" ಅಥವಾ "ಶವ" ಎಂದೂ ಸೂಚಿಸುತ್ತಾರೆ.
- ಯೇಸು ತನ್ನ ಕೊನೆಯ ಪಸ್ಕ ಭೋಜನದ ಸಮಯದಲ್ಲಿ ತನ್ನ ಶಿಷ್ಯರಿಗೆ, "ಇದು ನನ್ನ ದೇಹ (ರೊಟ್ಟಿ)" ಎಂದು ಹೇಳಿದಾಗ, ಎಲ್ಲಾ ಜನರ ಪಾಪಗಳಿಗಾಗಿ "ಮುರಿಯಲ್ಪಡುವ" (ಜಜ್ಜಲ್ಪಡುವ) ತನ್ನ ಭೌತಿಕ ದೇಹದ ಕುರಿತಾಗಿಯೇ ಆತನು ಅದನ್ನು ಹೇಳಿದ್ದನು.
- ಸತ್ಯವೇದದಲ್ಲಿ ಕ್ರೈಸ್ತರ ಗುಂಪನ್ನು "ಕ್ರಿಸ್ತನ ದೇಹ" ಎಂಬುದಾಗಿ ಹೇಳಲ್ಪಟ್ಟಿದೆ.
- ಭೌತಿಕ ದೇಹದಲ್ಲಿ ಅನೇಕ ಭಾಗಗಳು ಇರುವಂತೆಯೇ, "ಕ್ರಿಸ್ತನ ದೇಹದಲ್ಲಿಯೂ" ಅನೇಕಮಂದಿ ವೈಯುಕ್ತಿಕ ಸದಸ್ಯರು ಇರುತ್ತಾರೆ.
- ದೇವರಿಗೆ ಸೇವೆ ಮಾಡಲು ಮತ್ತು ಆತನಿಗೆ ಮಹಿಮೆಯನ್ನು ತರಲು ಎಲ್ಲಾ ಗುಂಪು ಸೇರಿ ಕೆಲಸ ಮಾಡುವುದಕ್ಕೆ ಸಹಾಯ ಮಾಡಲು ಕ್ರಿಸ್ತನ ದೇಹದಲ್ಲಿ ಪ್ರತಿಯೊಬ್ಬ ವೈಯುಕ್ತಿಕ ವಿಶ್ವಾಸಿ ಒಂದು ವಿಶೇಷವಾದ ಕೆಲಸವನ್ನು ಹೊಂದಿರುತ್ತಾನೆ.
- ಯೇಸುವನ್ನು ಕೂಡ ಎಲ್ಲಾ ವಿಶ್ವಾಸಿಗಳ "ದೇಹದ" "ತಲೆ" (ನಾಯಕ) ಎಂಬುದಾಗಿ ಸೂಚಿಸಲ್ಪಟ್ಟಿದ್ದಾನೆ. ಒಬ್ಬ ವ್ಯಕ್ತಿಯ ತಲೆಯು ತನ್ನ ಶರೀರವು ಏನು ಮಾಡಬೇಕೆಂದು ಹೇಳುತ್ತದೋ, ಹಾಗೆಯೇ ಯೇಸು ತನ್ನ "ದೇಹದ" ಸದಸ್ಯರಾದ ಕ್ರೈಸ್ತರನ್ನು ನಿರ್ದೇಶಿಸುವವನು ಮತ್ತು ಅವರಿಗೆ ಮಾರ್ಗದರ್ಶಕನೂ ಆಗಿರುತ್ತಾನೆ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಉತ್ತಮ ವಿಧಾನವು ಯೋಜನೆಯ ಭಾಷೆಯಲ್ಲಿ ಭೌತಿಕ ಶರೀರವನ್ನು ಸೂಚಿಸುವುದಕ್ಕೆ ಅತಿ ಹೆಚ್ಚಾಗಿ ಉಪಯೋಗಿಸುವ ಪದವನ್ನು ಬಳಸುವುದು. ಉಪಯೋಗಿಸಿದ ಪದವು ಕೀಳಾಗಿ ತೋರಿಸುವ ಪದವಾಗಿರದಂತೆ ನೋಡಿಕೊಳ್ಳಿರಿ.
- ವಿಶ್ವಾಸಿಗಳ ಸಮೂಹವನ್ನು ಸೂಚಿಸುವಾಗ, ಕೆಲವೊಂದು ಭಾಷೆಗಳಲ್ಲಿ "ಕ್ರಿಸ್ತನ ಆತ್ಮೀ ದೇಹ" ಎಂದು ಹೇಳುವುದಕ್ಕೆ ಈ ಪದವು ಬಹುಶಃ ಹೆಚ್ಚಾದ ಸ್ವಾಭಾವಿಕವಾಗಿರಬಹುದು.
- "ಇದು ನನ್ನ ದೇಹ" ಎಂದು ಯೇಸು ಹೇಳಿದಾಗ, ಇದನ್ನು ಅಕ್ಷರಾರ್ಥವಾಗಿ ಅನುವಾದ ಮಾಡುವುದು ಉತ್ತಮ, ಇದಕ್ಕೆ ಒಂದು ಸೂಚನೆಯನ್ನಿಟ್ಟು ವಿವರಿಸುವುದು ಅತ್ಯಗತ್ಯ.
- ಮೃತ ದೇಹವನ್ನು ಸೂಚಿಸುವಾಗ ಕೆಲವೊಂದು ಭಾಷೆಗಳಲ್ಲಿ ಒಂದು ವಿಶೇಷವಾದ ಪದವು ಇರಬಹುದು, ವ್ಯಕ್ತಿಯ ಶರೀರವಾದರೆ "ಶವ" ಎಂದೂ ಅಥವಾ ಪ್ರಾಣಿಯಾದರೆ "ಹೆಣ" ಎಂದೂ ಉಪಯೋಗಿಸುತ್ತಾರೆ. ಈ ಪದವನ್ನು ಅನುವಾದ ಮಾಡುವಾಗ ಸಂದರ್ಭಾನುಸಾರವಾಗಿ ಮತ್ತು ಅಂಗೀಕೃತವಾಗಿ ಇರುವಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ತಲೆ, hand; face; loins; righthand; tongue)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.10:12
- 1 ಕೊರಿಂಥ.05:05
- ಎಫೆಸ.04:04
- ನ್ಯಾಯಾ.14:08
- ಅರಣ್ಯ.06:6-8
- ಕೀರ್ತನೆ.031:09
- ರೋಮಾ.12:05

ಪದ ಡೇಟಾ:

- Strong's: H990, H1320, H1460, H1465, H1472, H1480, H1655, H3409, H4191, H5038, H5085, H5315, H6106, H6297, H7607, G4430, G4954, G4983, G5559

ದೈವಭಕ್ತಿಯುಳ್ಳ, ದೈವಭಕ್ತಿ, ದೈವಭಕ್ತಿಯಿಲ್ಲದ, ದೈವಹೀನ, ಭಕ್ತಿಹೀನತೆ, ದೇವರಿಲ್ಲದಿರುವಿಕೆ

ಪದದ ಅರ್ಥವಿವರಣೆ:

"ದೈವಭಕ್ತಿಯುಳ್ಳ" ಎನ್ನುವ ಪದವನ್ನು ದೇವರು ಏನೆಂದು ತೋರಿಸುವ ವಿಧಾನದಲ್ಲಿ ಮತ್ತು ದೇವರನ್ನು ಘನಪಡಿಸುವ ವಿಧಾನದಲ್ಲಿ ಜೀವಿಸುವ ಒಬ್ಬ ವ್ಯಕ್ತಿಯನ್ನು ವಿವರಿಸುವುದಕ್ಕೆ ಉಪಯೋಗಿಸಲಾಗಿರುತ್ತದೆ. "ದೈವಭಕ್ತಿ" ಎನ್ನುವುದು ದೇವರ ಚಿತ್ತವನ್ನು ಮಾಡುವುದರ ಮೂಲಕ ದೇವರನ್ನು ಘನಪಡಿಸುವ ನಡತೆಯ ಗುಣ.

- ದೈವಿಕ ಗುಣಲಕ್ಷಣವನ್ನು ಹೊಂದಿರುವ ಒಬ್ಬ ವ್ಯಕ್ತಿ ಪವಿತ್ರಾತ್ಮನ ಫಲಗಳಾಗಿರುವ ಪ್ರೀತಿ, ಸಂತೋಷ, ಸಮಾಧಾನ, ಸಹನೆ, ದಯೆ ಮತ್ತು ಶಮೆದಮೆಗಳನ್ನು ತೋರಿಸುತ್ತಾನೆ.

ದೈವಭಕ್ತಿಯ ಗುಣವು ಒಬ್ಬ ವ್ಯಕ್ತಿಯು ಪವಿತ್ರಾತ್ಮನನ್ನು ಹೊಂದಿದ್ದಾನೆಂದು ಮತ್ತು ಅವನು ಆತನಿಗೆ ವಿಧೇಯನಾಗುತ್ತಿದ್ದಾನೆಂದು ತೋರಿಸುತ್ತದೆ.

"ದೈವಭಕ್ತಿಯಿಲ್ಲದ" ಮತ್ತು "ದೇವರಿಲ್ಲದ" ಎನ್ನುವ ಪದಗಳು ದೇವರಿಗೆ ವಿರುದ್ಧವಾಗಿ ತಿರಸ್ಕಾರ ಮಾಡುವ ಜನರನ್ನು ಸೂಚಿಸುತ್ತವೆ. ದೇವರ ಆಲೋಚನೆ ಇಲ್ಲದೇ ದುಷ್ಟ ಮಾರ್ಗದಲ್ಲಿ ಜೀವಿಸುವುದೆನ್ನುವುದು "ಭಕ್ತಿಹೀನತೆ" ಅಥವಾ "ದೇವರಿಲ್ಲದಿರುವಿಕೆ" ಎಂದೂ ಕರೆಯುತ್ತಾರೆ.

- ಈ ಪದಗಳಿಗೆ ಅರ್ಥಗಳೆಲ್ಲವು ಸಮಾನವಾಗಿರುತ್ತವೆ. ಆದರೆ, "ದೈವಹೀನ" ಅಥವಾ "ದೇವರಿಲ್ಲದಿರುವಿಕೆ" ಎನ್ನುವ ಪದಗಳು ಹೆಚ್ಚಿನ ತೀವ್ರ ಸ್ಥಿತಿಯನ್ನು ವಿವರಿಸುತ್ತಿವೆ, ಅಂದರೆ ಜನರಾಗಲಿ ಅಥವಾ ದೇಶಗಳಾಗಲಿ ದೇವರ ಕುರಿತಾಗಿ ಸ್ವಲ್ಪವು ಗೊತ್ತಿಲ್ಲದಿರುವುದನ್ನು ಅಥವಾ ಅವರನ್ನು ಆಳುವುದಕ್ಕೆ ಆತನಿಗೆ ಅಧಿಕಾರ ಇದೆಯೆನ್ನುವ ಚಿಕ್ಕ ಸಂಗತಿಯು ತಿಳಿದವರನ್ನು ಸೂಚಿಸುತ್ತಿವೆ.
- ದೇವರು ಭಕ್ತಿಹೀನರಾದ ಜನರ ಮೇಲೆ ಮತ್ತು ಆತನ ಮಾರ್ಗಗಳನ್ನು, ಆತನನ್ನು ತಿರಸ್ಕರಿಸುವ ಪ್ರತಿಯೊಬ್ಬರ ಮೇಲೆ ತನ್ನ ತೀರ್ಪನ್ನು ಮತ್ತು ಕೋಪವನ್ನು ಪ್ರಕಟಿಸುತ್ತಾನೆ,

ಅನುವಾದ ಸಲಹೆಗಳು:

- "ದೈವಭಕ್ತಿಯುಳ್ಳ" ಎನ್ನುವ ಮಾತನ್ನು "ದೈವಭಕ್ತಿಯುಳ್ಳ ಜನರು" ಅಥವಾ "ದೇವರಿಗೆ ವಿಧೇಯರಾಗುವ ಜನರು" ಎಂದೂ ಅನುವಾದ ಮಾಡಬಹುದು. (ನೋಡಿರಿ: ನಾಮಾಂಕಿತ)
- "ದೈವಭಕ್ತಿಯುಳ್ಳ" ಎನ್ನುವ ವಿಶೇಷಣವನ್ನು "ದೇವರಿಗೆ ವಿಧೇಯನಾಗುವ" ಅಥವಾ "ನೀತಿವಂತ" ಅಥವಾ ದೇವರನ್ನು ಮೆಚ್ಚಿಸುವ" ಎಂದೂ ಅನುವಾದ ಮಾಡಬಹುದು.
- "ದೈವಿಕ ಪದ್ಧತಿಯಲ್ಲಿ" ಎನ್ನುವ ಮಾತನ್ನು "ದೇವರಿಗೆ ವಿಧೇಯತೆ ತೋರಿಸುವ ವಿಧಾನದಲ್ಲಿ" ಅಥವಾ "ದೇವರನ್ನು ಮೆಚ್ಚಿಸುವ ಕ್ರಿಯೆಗಳು ಮತ್ತು ಮಾತುಗಳು" ಎಂದೂ ಅನುವಾದ ಮಾಡಬಹುದು.
- "ದೈವಭಕ್ತಿ" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ "ದೇವರನ್ನು ಮೆಚ್ಚಿಸುವ ವಿಧಾನದಲ್ಲಿ ನಡೆದುಕೊಳ್ಳುವುದು" ಅಥವಾ "ದೇವರಿಗೆ ವಿಧೇಯತೆ ತೋರಿಸುವುದು" ಅಥವಾ "ನೀತಿಯುತ ಮಾರ್ಗದಲ್ಲಿ ಜೀವಿಸುವುದು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಸಂದರ್ಭಾನುಸಾರವಾಗಿ "ದೈವಭಕ್ತಿಯಿಲ್ಲದ" ಎನ್ನುವ ಪದವನ್ನು "ದೇವರಿಗೆ ಮೆಚ್ಚಿಕೆಯಾಗದಿರುವುದು" ಅಥವಾ "ಅನೈತಿಕತೆ" ಅಥವಾ "ದೇವರಿಗೆ ಅವಿಧೇಯರಾಗುವುದು" ಎಂದೂ ಅನುವಾದ ಮಾಡಬಹುದು.
- "ದೈವಹೀನ" ಮತ್ತು "ದೇವರಿಲ್ಲದಿರುವಿಕೆ" ಎನ್ನುವ ಪದಗಳು "ದೇವರಿಲ್ಲ" ಜನರು ಅಥವಾ "ದೇವರ ಆಲೋಚನೆ ಇಲ್ಲದವರು" ಅಥವಾ "ದೇವರನ್ನು ಮರೆತು ನಡೆದುಕೊಳ್ಳುವುದು" ಎನ್ನುವ ಅಕ್ಷರಾರ್ಥಗಳಿವೆ.
- "ಭಕ್ತಿಹೀನತೆ" ಅಥವಾ "ದೇವರಿಲ್ಲದಿರುವಿಕೆ" ಎನ್ನುವ ಪದಗಳನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ದುಷ್ಟತನ" ಅಥವಾ "ಕೆಟ್ಟ" ಅಥವಾ "ದೇವರನ್ನು ತಿರಸ್ಕರಿಸುವುದು" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕೆಟ್ಟ, ಘನಪಡಿಸು, ವಿಧೇಯತೆ, ನೀತಿವಂತ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಬ.27:8-10
- ಜ್ಞಾನೋ.11:9-11
- ಅಪೊ.ಕೃತ್ಯ.03:11-12
- 1 ತಿಮೊಥೆ.01:9-11
- 1 ತಿಮೊಥೆ.04:6-8
- 2 ತಿಮೊಥೆ.03:10-13
- ಇಬ್ರಿ.12:14-17
- ಇಬ್ರಿ.11:7
- 1 ಪೇತ್ರ.04:17-19
- ಯೂದ.01:14-16

ಪದ ಡೇಟಾ:

- Strong's: H430, H1100, H2623, H5760, H7563, G516, G763, G764, G765, G2124, G2150, G2152, G2153, G2316, G2317

ದೈವಿಕ

ಪದದ ಅರ್ಥವಿವರಣೆ:

“ದೈವಿಕ” ಎನ್ನುವ ಪದವು ದೇವರಿಗೆ ಸಂಬಂಧಿಸಿದ ಪ್ರತಿಯೊಂದು ವಿಷಯವನ್ನು ಸೂಚಿಸುತ್ತದೆ.

- ಈ ಪದವನ್ನು ಉಪಯೋಗಿಸುವ ಕೆಲವೊಂದು ವಿಧಾನಗಳಲ್ಲಿ “ದೈವಿಕ ಅಧಿಕಾರ”, “ದೈವಿಕ ನ್ಯಾಯತೀರ್ಪು”, “ದೈವಿಕ ಸ್ವಭಾವ”, “ದೈವಿಕ ಶಕ್ತಿ”, ಮತ್ತು “ದೈವಿಕ ಮಹಿಮೆ” ಎಂದೂ ಉಪಯೋಗಿಸಿದ್ದಾರೆ.
- ಸತ್ಯವೇದದಲ್ಲಿರುವ ಒಂದು ವಾಕ್ಯಭಾಗದಲ್ಲಿ “ದೈವಿಕ” ಎನ್ನುವ ಪದವನ್ನು ತಪ್ಪು ದೈವಿಕತ್ವದ ಕುರಿತಾಗಿ ವಿವರಿಸುವುದಕ್ಕೆ ಉಪಯೋಗಿಸಿದ್ದಾರೆ.

ಅನುವಾದ ಸಲಹೆಗಳು:

- “ದೈವಿಕ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ದೇವರ” ಅಥವಾ “ದೇವರಿಂದ” ಅಥವಾ “ದೇವರಿಗೆ ಸಂಬಂಧಪಟ್ಟ” ಅಥವಾ “ದೇವರಿಂದ ಉಂಟಾದ ಗುಣಲಕ್ಷಣ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಉದಾಹರಣೆಗೆ, “ದೈವಿಕ ಅಧಿಕಾರ” ಎನ್ನುವ ಮಾತನ್ನು “ದೇವರ ಅಧಿಕಾರ” ಅಥವಾ “ದೇವರಿಂದ ಬರುವ ಅಧಿಕಾರ” ಎಂದು ಅನುವಾದ ಮಾಡಬಹುದು.
- “ದೈವಿಕ ಮಹಿಮೆ” ಎನ್ನುವ ಮಾತನ್ನು “ದೇವರ ಮಹಿಮೆ” ಅಥವಾ “ದೇವರಿಗಿರುವ ಮಹಿಮೆ” ಅಥವಾ “ದೇವರಿಂದ ಬರುವ ಮಹಿಮೆ” ಎಂದೂ ಅನುವಾದ ಮಾಡಬಹುದು.
- ಸುಳ್ಳು ದೇವರಿಗೆ ಸಂಬಂಧಪಟ್ಟ ವಿಷಯಗಳನ್ನು ವಿವರಿಸುವಾಗ ಕೆಲವೊಂದು ಅನುವಾದಕರು ಬೇರೊಂದು ಪದವನ್ನು ಉಪಯೋಗಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ಸುಳ್ಳು ದೇವರು, ಮಹಿಮೆ, ದೇವರು, ತೀರ್ಪು, ಶಕ್ತಿ)

ಸತ್ಯವೇದದ ವಾಕ್ಯಗಳು :

- 2 ಕೊರಿಂಥ 10:3-4
- 2 ಪೇತ್ರ 1:4
- ರೋಮಾ 1:20

ಪದ ಡೇಟಾ:

- Strong's: G23040, G29990

ಧರ್ಮಶಾಸ್ತ್ರ, ಮೋಶೆಯ ಧರ್ಮಶಾಸ್ತ್ರ,ಯೆಹೋವನ ಧರ್ಮಶಾಸ್ತ್ರ, ದೇವರ ಧರ್ಮಶಾಸ್ತ್ರ,

ಪದದ ಅರ್ಥವಿವರಣೆ:

ಅತ್ಯಂತ ಸರಳವಾಗಿ, "ಧರ್ಮಶಾಸ್ತ್ರ" ಎಂಬ ಪದವು ಅನುಸರಿಸಬೇಕಾದ ನಿಯಮ ಅಥವಾ ಸೂಚನೆಯನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ, "ಧರ್ಮಶಾಸ್ತ್ರ" ಎಂಬ ಪದವನ್ನು ಸಾಮಾನ್ಯವಾಗಿ ಯಾವುದನ್ನಾದರೂ ಉಲ್ಲೇಖಿಸಲು ಬಳಸಲಾಗುತ್ತದೆ ಮತ್ತು ದೇವರು ತನ್ನ ಜನರು ಪಾಲಿಸಬೇಕೆಂದು ಮತ್ತು ಮಾಡಬೇಕೆಂದು ದೇವರು ಬಯಸುತ್ತಾನೆ. "ಮೋಶೆಯ ಧರ್ಮಶಾಸ್ತ್ರ" ಎಂಬ ನಿರ್ದಿಷ್ಟ ಪದವು ಇಸ್ರಾಯೇಲ್ಯರಿಗೆ ವಿಧೇಯರಾಗಲು ದೇವರು ಮೋಶೆಗೆ ನೀಡಿದ ಆಜ್ಞೆಗಳು ಮತ್ತು ಸೂಚನೆಗಳನ್ನು ಸೂಚಿಸುತ್ತದೆ.

- ಸಂದರ್ಭಾನುಸಾರವಾಗಿ “ಧರ್ಮಶಾಸ್ತ್ರ” ಎನ್ನುವುದು ಈ ಕೆಳಕಂಡವುಗಳನ್ನು ಸೂಚಿಸುತ್ತದೆ:
- ದೇವರು ಇಸ್ರಾಯೇಲ್ಯರಿಗೋಸ್ಕರ ಎರಡು ಕಲ್ಲಿನ ಶಿಲೆಗಳ ಮೇಲೆ ಬರೆದ ಹತ್ತು ಆಜ್ಞೆಗಳು
- ಮೋಶೆಗೆ ಕೊಡಲ್ಪಟ್ಟ ಎಲ್ಲಾ ಆಜ್ಞೆಗಳು
- ಒಡಂಬಡಿಕೆಯ ಮೊದಲು ಐದು ಪುಸ್ತಕಗಳು
- ಸಂಪೂರ್ಣ ಹಳೆ ಒಡಂಬಡಿಕೆ (ಹೊಸ ಒಡಂಬಡಿಕೆಯಲ್ಲಿ ಸೂಚಿಸಿದ “ವಾಕ್ಯಗಳು”).
- ದೇವರ ಎಲ್ಲಾ ಆದೇಶಗಳು ಮತ್ತು ಚಿತ್ತ
- ಇಬ್ರಿಯ ವಾಕ್ಯಗಳು (ಅಥವಾ “ಹಳೇ ಒಡಂಬಡಿಕೆ”) ಸೂಚಿಸುವುದಕ್ಕೆ ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಿದ “ಧರ್ಮಶಾಸ್ತ್ರ ಮತ್ತು ಪ್ರವಾದಿಗಳು” ಎನ್ನುವ ಮಾತು

ಅನುವಾದ ಸಲಹೆಗಳು:

- ಈ ಪದಗಳನ್ನು “ಧರ್ಮಶಾಸ್ತ್ರಗಳು” ಎನ್ನುವ ಬಹುವಚನ ಪದದಿಂದಲೂ ಅನುವಾದ ಮಾಡಬಹುದು, ಯಾಕಂದರೆ ಅವು ಅನೇಕವಾದ ಆದೇಶಗಳನ್ನು ಸೂಚಿಸುತ್ತವೆ.
- “ಮೋಶೆಯ ಧರ್ಮಶಾಸ್ತ್ರ” ಎನ್ನುವ ಮಾತನ್ನು “ಇಸ್ರಾಯೇಲ್ಯರಿಗೆ ಕೊಡುವುದಕ್ಕೆ ದೇವರು ಮೋಶೆಗೆ ಹೇಳಿರುವ ಆಜ್ಞೆಗಳು” ಎಂದೂ ಅನುವಾದ ಮಾಡಬಹದು.
- ಸಂದರ್ಭಾನುಗುಣವಾಗಿ, “ಮೋಶೆಯ ಧರ್ಮಶಾಸ್ತ್ರ” ಎನ್ನುವ ಮಾತನ್ನು “ದೇವರು ಮೋಶೆಗೆ ಹೇಳಿದ ಧರ್ಮಶಾಸ್ತ್ರ” ಅಥವಾ “ಮೋಶೆ ಬರೆದಿರುವ ಧರ್ಮಶಾಸ್ತ್ರ” ಅಥವಾ “ಇಸ್ರಾಯೇಲ್ಯರಿಗೆ ಕೊಡಬೇಕೆಂದು ದೇವರು ಮೋಶೆಗೆ ಹೇಳಿದ ಧರ್ಮಶಾಸ್ತ್ರ” ಎಂದೂ ಅನುವಾದ ಮಾಡಬಹುದು.
- “ಧರ್ಮಶಾಸ್ತ್ರ” ಅಥವಾ “ದೇವರ ಧರ್ಮಶಾಸ್ತ್ರ” ಅಥವಾ “ದೇವರ ಆಜ್ಞೆಗಳು” ಎನ್ನುವ ಮಾತುಗಳನ್ನು ಅನುವಾದ ಮಾಡುವ ವಿಧಾನಗಳಲ್ಲಿ “ದೇವರಿಂದ ಬಂದಿರುವ ಆಜ್ಞೆಗಳು” ಅಥವಾ “ದೇವರ ಆಜ್ಞೆಗಳು” ಅಥವಾ “ದೇವರು ಕೊಟ್ಟ ಶಾಸನಗಳು” ಅಥವಾ “ದೇವರು ಆಜ್ಞಾಪಿಸಿದ ಪ್ರತಿಯೊಂದು” ಅಥವಾ “ದೇವರ ಎಲ್ಲಾ ಆದೇಶಗಳು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಯೆಹೋವನ ಧರ್ಮಶಾಸ್ತ್ರ” ಎನ್ನುವ ಮಾತನ್ನು “ಯೆಹೋವನ ಆಜ್ಞೆಗಳು” ಅಥವಾ “ವಿಧೇಯತೆ ತೋರಿಸಬೇಕೆಂದು ಯೆಹೋವನು ಹೇಳಿದ ಆದೇಶಗಳು” ಅಥವಾ “ಯೆಹೋವನಿಂದ ಬಂದಿರುವ ಆಜ್ಞೆಗಳು” ಅಥವಾ “ಯೆಹೋವನು ಆಜ್ಞಾಪಿಸಿದ ವಿಷಯಗಳು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆದೇಶ, ಮೋಶೆ, ಹತ್ತು ಆಜ್ಞೆಗಳು, ಕಾನೂನುಬದ್ಧ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.15:06
- ದಾನಿ.09:13
- ವಿಮೋ.28:42-43
- ಎಜ್ರಾ.07:25-26
- ಗಲಾತ್ಯ.02:15
- ಲೂಕ.24:44
- ಮತ್ತಾಯ.05:18
- ನೆಹೆ.10:29
- ರೋಮಾ.03:19-20

ಸತ್ಯವೇದ ಕಥೆಗಳಿಂದ ಉದಾಹರಣೆಗಳು:

- **13:07** ದೇವರು ಕೂಡ ಅನುಸರಿಸುವುದಕ್ಕೆ ಅನೇಕವಾದ ನಿಯಮಗಳನ್ನು ಮತ್ತು _ ಧರ್ಮಶಾಸ್ತ್ರಗಳನ್ನು _ ಕೊಟ್ಟಿದ್ದಾನೆ. ಒಂದುವೇಳೆ ಜನರು ಈ _ ಧರ್ಮಶಾಸ್ತ್ರಕ್ಕೆ _- ವಿಧೇಯರಾದರೆ, ದೇವರು ಅವರನ್ನು ಆಶೀರ್ವಾದ ಮಾಡಿ, ಅವರನ್ನು ಸಂರಕ್ಷಿಸುತ್ತಾರೆಂದು ವಾಗ್ದಾನ ಮಾಡಿದ್ದರು. ಒಂದುವೇಳೆ ಅವರು ಅವಿಧೇಯರಾದರೆ ದೇವರು ಅವರನ್ನು ಶಿಕ್ಷಿಸುತ್ತಾನೆ.

- **13:09** ದೇವರ ಧರ್ಮಶಾಸ್ತ್ರಕ್ಕೆ ಅವಿಧೇಯರಾಗುವ ಪ್ರತಿಯೊಬ್ಬರೂ ದೇವರಿಗೆ ಸರ್ವಾಂಗಹೋಮವನ್ನಾಗಿ ಮಾಡಲು ಗುಡಾರದ ಮುಂದಿರುವ ಯಜ್ಞವೇದಿಯ ಬಳಿಗೆ ಒಂದು ಪ್ರಾಣಿಯನ್ನು ಕರೆದುಕೊಂಡು ಬರಬೇಕು.
- **15:13** ಚಿಯೋನಿನಲ್ಲಿ ದೇವರು ಇಸ್ರಾಯೇಲ್ಯರೊಂದಿಗೆ ಮಾಡಿದ ಒಡಂಬಡಿಕೆಗೆ ವಿಧೇಯರಾಗಬೇಕೆಂದು ಜನರ ಬಾಧ್ಯತೆಯನ್ನು ಯೆಹೋಶುವ ಅವರಿಗೆ ಜ್ಞಾಪಕ ಮಾಡಿದ್ದಾನೆ. ದೇವರಿಗೆ ನಂಬಿಗಸ್ತರಾಗಿರುತ್ತೇವೆಂದು ಜನರೆಲ್ಲರು ವಾಗ್ದಾನ ಮಾಡಿದರು ಮತ್ತು _ ಆತನ ಧರ್ಮಶಾಸ್ತ್ರವನ್ನು _ ಅನುಸರಿಸಿದರು.
- **16:01** ಯೆಹೋಶುವ ಮರಣಿಸಿದನಂತರ ಇಸ್ರಾಯೇಲ್ಯರು ದೇವರಿಗೆ ಅವಿಧೇಯರಾದರು ಮತ್ತು ಉಳಿದ ಕಾನಾನ್ಯರನ್ನು ಹೊರಗೆ ಹೋಗಲಾಡಿಸಲಿಲ್ಲ ಅಥವಾ _ ದೇವರ ಧರ್ಮಶಾಸ್ತ್ರಕ್ಕೆ _ ವಿಧೇಯರಾಗಲಿಲ್ಲ.
- **21:05** ಹೊಸ ಒಡಂಬಡಿಕೆಯಲ್ಲಿ ದೇವರು ತನ್ನ _ ಧರ್ಮಶಾಸ್ತ್ರವನ್ನು _ ಜನರ ಹೃದಯಗಳ ಮೇಲೆ ಬರೆಯುತ್ತಾರೆ, ಇದರಿಂದ ಜನರು ದೇವರನ್ನು ವೈಯುಕ್ತಿಕವಾಗಿ ತಿಳಿದುಕೊಳ್ಳುತ್ತಾರೆ, ಅವರು ತನ್ನ ಜನರಾಗಿರುತ್ತಾರೆ, ಮತ್ತು ದೇವರು ಅವರ ಪಾಪಗಳನ್ನು ಕ್ಷಮಿಸುತ್ತಾರೆ.
- **27:01** ದೇವರ ಧರ್ಮಶಾಸ್ತ್ರದಲ್ಲಿ ಏನು ಬರೆಯಲ್ಪಟ್ಟಿದೆ?" ಎಂದು ಯೇಸು ಉತ್ತರಿಸಿದರು.
- **28:01** "ನನ್ನನ್ನು ಒಳ್ಳೆಯವನು ಎಂದು ಯಾಕೆ ಕರೆಯುತ್ತಿದ್ದೀರಿ?" ಒಳ್ಳೆಯವನು ಒಬ್ಬನೇ ಇದ್ದಾನೆ, ಆತನೇ ದೇವರು. ಆದರೆ ನಿಮಗೆ ನಿತ್ಯಜೀವ ಬೇಕೆಂದಿದ್ದರೆ, _ ದೇವರ ಆಜ್ಞೆಗಳಿಗೆ _ ವಿಧೇಯನಾಗು" ಎಂದು ಯೇಸು ಅವನಿಗೆ ಹೇಳಿದನು.

ಪದ ಡೇಟಾ:

- Strong's: H430, H1881, H1882, H2706, H2710, H3068, H4687, H4872, H4941, H8451, G2316, G3551, G3565

ನಂಬಿಗೆಯ, ವಿಶ್ವಾಸಾರ್ಹತೆ, ವಿಶ್ವಾಸ ದ್ರೋಹಿ, ವಿಶ್ವಾಸ ದ್ರೋಹ

ಪದದ ಅರ್ಥವಿವರಣೆ:

ದೇವರಿಗೆ "ನಂಬಿಗೆಯ" ಎನ್ನುವುದಕ್ಕೆ ದೇವರ ಬೋಧನೆಗಳ ಪ್ರಕಾರ ನಿರಂತರವಾಗಿ ಜೀವಿಸುವುದು ಎಂದರ್ಥ. ಆತನಿಗೆ ವಿಧೇಯತೆ ತೋರಿಸುವುದರ ಮೂಲಕ ಆತನಿಗೆ ಪ್ರಾಮಾಣಿಕವಾಗಿರುವುದು ಎಂದರ್ಥ. ವಿಶ್ವಾಸರ್ಹದಿಂದ ನಡೆದುಕೊಳ್ಳುವುದು ಅಥವಾ ಆ ಸ್ಥಾನದಲ್ಲಿರುವುದನ್ನು "ವಿಶ್ವಾಸಾರ್ಹತೆ" ಎಂದು ಕರೆಯುತ್ತಾರೆ.

- ನಂಬಿಗೆಯ ಒಬ್ಬ ವ್ಯಕ್ತಿ ತಾನು ಕೊಟ್ಟಿರುವ ಎಲ್ಲಾ ವಾಗ್ದಾನಗಳನ್ನು ಪೂರೈಸುವುದರಲ್ಲಿ ನಿಷ್ಠಾವಂತನಾಗಿರುತ್ತಾನೆ ಮತ್ತು ಇತರ ಜನರ ವಿಷಯದಲ್ಲಿ ತನ್ನ ಬಾಧ್ಯತೆಗಳನ್ನು ಯಾವಾಗಲೂ ನೆರವೇರಿಸುತ್ತಾ ಇರುತ್ತಾನೆ.
- ನಂಬಿಕೆಯ ಒಬ್ಬ ವ್ಯಕ್ತಿ ತನಗೆ ಕೊಟ್ಟಿರುವ ಕೆಲಸವನ್ನು ಮಾಡುವುದರಲ್ಲಿ ಅದು ಎಷ್ಟು ಕಷ್ಟವಾದರೂ ಮುಂದುವರೆಯುತ್ತಾ ಇರುತ್ತಾನೆ.
- ದೇವರಿಗೆ ವಿಶ್ವಾಸಾರ್ಹತೆ ಎಂದರೆ ದೇವರು ನಮ್ಮನ್ನು ಏನು ಮಾಡಬೇಕೆಂದು ಆಜ್ಞಾಪಿಸಿದ್ದಾರೋ ಅದನ್ನು ಮಾಡುವುದರಲ್ಲಿ ನಿರತರಾಗಿರುವುದು ಎಂದರ್ಥ.

"ಅಪನಂಬಿಕತ್ವ" ಎನ್ನುವ ಪದವು ದೇವರು ಆಜ್ಞಾಪಿಸಿದ್ದವುಗಳನ್ನು ಮಾಡದಿರುವ ಜನರನ್ನು ಸೂಚಿಸುತ್ತದೆ. ಅಪನಂಬಿಗೆಯನಾಗಿದ್ದು ಜೀವಿಸುವುದು ಅಥವಾ ಅವನ ಸ್ಥಿತಿಯನ್ನೇ "ಅಪನಂಬಿಕತ್ವ" ಎಂದು ಕರೆಯುತ್ತಾರೆ.

- ಇಸ್ರಾಯೇಲ್ ಜನರು ವಿಗ್ರಹಾರಾಧನೆ ಮಾಡಿದಾಗ ಮತ್ತು ಅವರು ದೇವರಿಗೆ ಅವಿಧೇಯರಾದಾಗ ಅವರನ್ನು "ಅಪನಂಬಿಗಸ್ತರು" ಎಂದು ಕರೆಯಲ್ಪಟ್ಟಿದ್ದಾರೆ.
- ವಿವಾಹದಲ್ಲಿ ಜೊತೆ ಮಾಡಲ್ಪಟ್ಟವರು ಒಂದುವೇಳೆ ಯಾರೂ ವ್ಯಭಿಚಾರ ಮಾಡಿದರೂ ಅವರು ತಮ್ಮ ಗಂಡನಿಗೆ ಅಥವಾ ಹೆಂಡತಿಗೆ "ಅಪನಂಬಿಗಸ್ತರಾಗಿರುತ್ತಾರೆ".
- ಇಸ್ರಾಯೇಲ್ಯರ ಅವಿಧೇಯ ನಡೆತೆಗೆ ದೇವರು "ವಿಶ್ವಾಸ ದ್ರೋಹಿಗಳು" ಎನ್ನುವ ಪದವನ್ನು ಉಪಯೋಗಿಸಿದರು. ಅವರು ದೇವರಿಗೆ ವಿಧೇಯರಾಗಿರಲಿಲ್ಲ ಅಥವಾ ಆತನನ್ನು ಗೌರವಿಸಲಿಲ್ಲ.

ಅನುವಾದ ಸಲಹೆಗಳು:

- ಅನೇಕ ಸಂದರ್ಭಗಳಲ್ಲಿ "ನಂಬಿಗೆಯ" ಎನ್ನುವ ಪದವನ್ನು "ನಿಷ್ಠೆಯುಳ್ಳ" ಅಥವಾ "ಸಮರ್ಪಣೆಯುಳ್ಳ" ಅಥವಾ "ಅವಲಂಬಿತವಾದ" ಎನ್ನುವ ಪದಗಳಿಂದಲೂ ಅನುವಾದ ಮಾಡಬಹುದು.
- ಬೇರೊಂದು ಸಂದರ್ಭಗಳಲ್ಲಿ "ನಂಬಿಗೆಯ" ಎನ್ನುವ ಪದವನ್ನು "ನಿರಂತರವಾಗಿ ನಂಬುವುದು" ಎಂದು ಅಥವಾ "ದೇವರಿಗೆ ವಿಧೇಯರಾಗುವುದರಲ್ಲಿ ಮತ್ತು ನಂಬುವುದರಲ್ಲಿ ದೃಢಚಿತ್ತದಿಂದ ಇರುವುದು" ಎಂದು ಅರ್ಥವನ್ನು ಕೊಡುವ ಪದದಿಂದ ಅಥವಾ ಮಾತಿನಿಂದ ಅನುವಾದ ಮಾಡಬಹುದು.
- "ವಿಶ್ವಾಸಾರ್ಹ" ಎನ್ನುವ ಪದಕ್ಕೆ ಪರ್ಯಾಯ ಪದಗಳಾಗಿ "ನಂಬುವದರಲ್ಲಿ ಮುಂದುವರೆಯುವುದು" ಅಥವಾ "ನಿಷ್ಠೆಯಿಂದ ಇರುವುದು" ಅಥವಾ "ನಂಬಲರ್ಹ" ಅಥವಾ "ದೇವರಿಗೆ ವಿಧೇಯತೆ ತೋರಿಸುವುದು ಮತ್ತು ನಂಬುವುದು" ಎನ್ನುವ ಪದಗಳನ್ನು ಉಪಯೋಗಿಸಬಹುದು.
- ಸಂದರ್ಭಕ್ಕೆ ತಕ್ಕಂತೆ, "ವಿಶ್ವಾಸ ದ್ರೋಹಿ" ಎನ್ನುವ ಪದವನ್ನು "ಅಪನಂಬಿಗಸ್ತನು" ಅಥವಾ "ನಂಬಲರ್ಹವಾಗದ" ಅಥವಾ "ಅವಿಧೇಯನು" ಅಥವಾ "ನಿಷ್ಠಾವಂತನಲ್ಲದವನು" ಎಂದೂ ಅನುವಾದ ಮಾಡಬಹುದು.
- "ವಿಶ್ವಾಸ ದ್ರೋಹಿ" ಎನ್ನುವ ಮಾತು "(ದೇವರಿಗೆ) ವಿಶ್ವಾಸಾರ್ಹರಾಗಿರದ ಜನರು" ಅಥವಾ "ವಿಶ್ವಾಸ ದ್ರೋಹಿಗಳಾದ ಜನರು" ಅಥವಾ "ದೇವರಿಗೆ ಅವಿಧೇಯರಾದ ಜನರು" ಅಥವಾ "ದೇವರಿಗೆ ವಿರುದ್ಧವಾಗಿ ತಿರಸ್ಕಾರ ಮಾಡಿದ ಜನರು" ಎಂದೂ ಅನುವಾದ ಮಾಡಬಹುದು.
- "ವಿಶ್ವಾಸ ದ್ರೋಹ" ಎನ್ನುವ ಪದವು "ಅವಿಧೇಯತೆ" ಅಥವಾ "ವಿಶ್ವಾಸಘಾತುಕ" ಅಥವಾ "ವಿಧೇಯನಾಗದ ಅಥವಾ ನಂಬಲರ್ಹವಾಗದ" ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಭಾಷೆಗಳಲ್ಲಿ "ವಿಶ್ವಾಸ ದ್ರೋಹಿ" ಎನ್ನುವ ಪದವು "ಅಪನಂಬಿಕೆ" ಎನ್ನುವ ಪದಕ್ಕೆ ಸಂಬಂಧಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ವ್ಯಭಿಚಾರ, ನಂಬು, ಅವಿಧೇಯತೆ, ವಿಶ್ವಾಸ, ನಂಬು)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.24:49
- ಯಾಜಕ.26:40-42
- ಅರಣ್ಯ..12:6-8
- ಯೆಹೋ.02:14
- ನ್ಯಾಯಾ.02:16-17
- 1 ಸಮು.02:9
- ಕೀರ್ತನೆ.012:1
- ಜ್ಞಾನೋ.11:12-13
- ಯೆಶಯಾ.01:26

- ಯೆರೆ.09:7-9
- ಹೋಶೆಯ.05:5-7
- ಲೂಕ.12:45-46
- ಲೂಕ.16:10-12
- ಕೊಲೊಸ್ಸೆ.01:7-8
- 1 ಥೆಸ್ಸ.05:23-24
- 3 ಯೋಹಾನ.01:5-8

ಸತ್ಯವೇದದಿಂದ ಉದಾಹರಣೆಗಳು:

- **08:05** ಯೋಸೇಫನು ಸೆರೆಮನೆಯಲ್ಲಿದ್ದಾಗಲೂ ದೇವರಿಗೆ _ ವಿಶ್ವಾಸಾರ್ಹನಾಗಿದ್ದನು _, ಮತ್ತು ದೇವರು ಅವನನ್ನು ಆಶೀರ್ವಾದ ಮಾಡಿದನು.
- **14:12** ಆದರೂ, ದೇವರು ಅಬ್ರಾಹಾಮ, ಇಸಾಕ ಮತ್ತು ಯಾಕೋಬರೊಂದಿಗೆ ಮಾಡಿದ ಆತನ ವಾಗ್ದಾನಗಳಲ್ಲಿ _ ನಂಬಿಗಸ್ಥನಾಗಿದ್ದನು _.
- **15:13** ದೇವರಿಗೆ _ ನಂಬಿಗಸ್ಥರಾಗಿರಲು _ ಮತ್ತು ಆತನ ಕಟ್ಟಳೆಗಳನ್ನು ಕೈಗೊಳ್ಳಲು ಜನರು ವಾಗ್ದಾನ ಮಾಡಿದರು.
- **17:09** ದಾವೀದನು ನ್ಯಾಯದಿಂದ ಆಳಿದನು ಮತ್ತು ಅನೇಕ ವರ್ಷಗಳ _ ವಿಶ್ವಾಸಾರ್ಹನಾಗಿ _ ಜೀವಿಸಿದನು ಮತ್ತು ದೇವರು ಅವನನ್ನು ಆಶೀರ್ವಾದ ಮಾಡಿದನು. ಆದರೆ, ತನ್ನ ಜೀವನದ ಅಂತ್ಯದಲ್ಲಿ ದೇವರಿಗೆ ವಿರುದ್ಧವಾಗಿ ಭಯಂಕರವಾರ ಪಾಪವನ್ನು ಮಾಡಿದನು.
- **18:04** ಸೊಲೊಮೋನನ _ ವಿಶ್ವಾಸಘಾತುಕಕ್ಕಾಗಿ _ ದೇವರು ಸೊಲೊಮೋನನ ಮೇಲೆ ಕೋಪಗೊಂಡಿದ್ದನು, ಸೊಲೊಮೋನನ ಮರಣದನಂತರ ಇಸ್ರಾಯೇಲ್ ದೇಶವನ್ನು ಎರಡು ರಾಜ್ಯಗಳಾಗಿ ವಿಂಗಡಿಸುತೇನೆಂದು ಆತನು ವಾಗ್ದಾನ ಮಾಡಿದನು.
- **35:12** “ಈ ಎಲ್ಲಾ ವರ್ಷಗಳು ನಾನು ನಿನಗಾಗಿ ತುಂಬಾ _ ವಿಶ್ವಾಸಾರ್ಹನಾಗಿ _ ಕೆಲಸ ಮಾಡಿದೆನು” ಎಂದು ಹಿರಿಯ ಮಗ ತನ್ನ ತಂದೆಗೆ ಹೇಳಿದ್ದಾನೆ.
- **49:17** ಆದರೆ ದೇವರು _ ನಂಬಿಗಸ್ತನು _ ಮತ್ತು ನೀವು ನಿಮ್ಮ ಪಾಪಗಳನ್ನು ಒಪ್ಪಿಕೊಂಡರೆ, ಆತನು ನಿಮ್ಮನ್ನು ಕ್ಷಮಿಸುವನು.
- **50:04** ಅಂತ್ಯದವರೆಗೂ ನೀನು ನನಗೆ _ ವಿಶ್ವಾಸಾರ್ಹನಾಗಿದ್ದರೆ _, ದೇವರು ನಿನ್ನನ್ನು ರಕ್ಷಿಸುವನು.”

ಪದ ಡೇಟಾ:

- Strong's: H529, H530, H539, H540, H571, H898, H2181, H4603, H4604, H4820, G569, G571, G4103

ನಂಬು, ನಂಬಿಕೆಗಳು, ನಂಬಿದೆ, ವಿಶ್ವಾಸಿ, ನಂಬಿಕೆ, ಅವಿಶ್ವಾಸಿ, ಅವಿಶ್ವಾಸಿಗಳು, ಆಪನಂಬಿಕೆ

ಪದದ ಅರ್ಥವಿವರಣೆ:

“ನಂಬು” ಮತ್ತು “ನಂಬಿಕೆಯಿಡು” ಎನ್ನುವ ಪದಗಳು ನಿಕಟ ಸಂಭಂದವನ್ನು ಹೊಂದಿದೆ, ಆದರೆ ಸ್ವಲ್ಪ ವಿಭಿನ್ನ ಅರ್ಥವನ್ನು ಹೊಂದಿರುತ್ತದೆ.

1. ನಂಬು

- ಏನಾದರೊಂದನ್ನು ನಂಬುವುದು ಎಂದರೆ ಅದು ಸತ್ಯವೆಂದು ಅಂಗೀಕಾರ ಮಾಡುವುದು ಅಥವಾ ಅದರಲ್ಲಿ ಭರವಸೆಯಿಡುವುದು.
- ಯಾರಾದರೊಬ್ಬರನ್ನು ನಂಬುವುದು ಎಂದರೆ ಆ ವ್ಯಕ್ತಿ ಹೇಳಿದ್ದು ಸತ್ಯ ಎಂದು ಒಪ್ಪಿಕೊಳ್ಳುವುದು.

2. ನಂಬಿಕೆಯಿಡು

- ಒಬ್ಬರಲ್ಲಿ “ನಂಬಿಕೆಯಿಡುವುದು” ಎನ್ನುವುದಕ್ಕೆ ಆ ವ್ಯಕ್ತಿಯಲ್ಲಿ “ಭರವಸೆ” ಇಡು ಎಂದರ್ಥ. ಈ ಮಾತಿಗೆ ಆತನು ಹೇಳುವದೆಲ್ಲಾ ಆತನಾಗಿದ್ದಾನೆಂದು ಆ ವ್ಯಕ್ತಿಯಲ್ಲಿ ಭರವಸೆ ಇಡುವುದು ಎಂದರ್ಥ, ಆತನು ಯಾವಾಗಲೂ ಸತ್ಯವನ್ನೇ ನುಡಿಯುತ್ತಾನೆ ಮತ್ತು ಆತನು ಮಾಡುತ್ತೇನೆ ಎಂದು ವಾಗ್ದಾನ ಮಾಡಿದ್ದ ಪ್ರತಿಯೊಂದನ್ನು ಮಾಡಿ ತೋರಿಸುತ್ತಾನೆ.
- ಯಾವುದಾದರೊಂದರಲ್ಲಿ ಒಬ್ಬ ವ್ಯಕ್ತಿ ನಿಜವಾದ ನಂಬಿಕೆಯನ್ನು ಇಟ್ಟಾಗ, ಆ ನಂಬಿಕೆಯು ತೋರಿಸುವ ವಿಧಾನದಲ್ಲಿಯೇ ಆತನು ನಡೆದುಕೊಳ್ಳುತ್ತಾನೆ.
- “ವಿಶ್ವಾಸವನ್ನು ಹೊಂದಿರು” ಎನ್ನುವ ಮಾತಿಗೆ ಸಾಧಾರಣವಾಗಿ “ನಂಬಿಕೆಯಿಡು” ಎನ್ನುವ ಮಾತಿಗೆ ಇರುವ ಅರ್ಥವನ್ನೇ ಹೊಂದಿರುತ್ತದೆ.
- “ಯೇಸುವಿನಲ್ಲಿ ನಂಬಿಕೆಯಿಡು” ಎನ್ನುವದಕ್ಕೆ ಆತನು ದೇವರ ಮಗನೆಂದು, ಆತನು ದೇವರು ಮತ್ತು ಈ ಭೂಲೋಕಕ್ಕೆ ಮನುಷ್ಯನಾಗಿ ಬಂದವನೆಂದು ಮತ್ತು ನಮ್ಮ ಪಾಪಗಳಿಗಾಗಿ ಕ್ರಯಧನವನ್ನು ಸಲ್ಲಿಸುವುದಕ್ಕೆ ಮರಣಹೊಂದಿದವನೆಂದು ನಂಬುವುದು ಎಂದರ್ಥ, ರಕ್ಷಕನನ್ನಾಗಿ ಆತನನ್ನು ನಂಬುವುದು ಮತ್ತು ಆತನಿಗೆ ಮಹಿಮೆ ತರುವ ವಿಧಾನದಲ್ಲಿ ಜೀವಿಸುವುದು ಎಂದರ್ಥ.

3. ವಿಶ್ವಾಸಿ

ಸತ್ಯವೇದದಲ್ಲಿ “ವಿಶ್ವಾಸಿ” ಎನ್ನುವ ಪದವು ಯೇಸುವನ್ನು ರಕ್ಷಕನನ್ನಾಗಿ ನಂಬಿ, ಆತನ ಮೇಲೆಯೇ ಆತುಕೊಳ್ಳುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.

- “ವಿಶ್ವಾಸಿ” ಎನ್ನುವ ಪದವು ಅಕ್ಷರಾರ್ಥವಾಗಿ “ನಂಬುವ ವ್ಯಕ್ತಿ” ಎಂದರ್ಥ.
- “ಕ್ರೈಸ್ತನು” ಎನ್ನುವ ಪದವು ಕೊನೆಗೆ ವಿಶ್ವಾಸಿಗಳಿಗೆ ಒಂದು ಮುಖ್ಯ ಬಿರುದಾಗಿದೆ ಏಕೆಂದರೆ ಅವರು ಕ್ರಿಸ್ತನನ್ನು ನಂಬುತ್ತಾರೆ ಮತ್ತು ಆತನ ಬೋಧನೆಗಳಿಗೆ ವಿಧೇಯರಾಗಿರುತ್ತಾರೆ.

4. ಅಪನಂಬಿಕೆ

“ಅಪನಂಬಿಕೆ” ಎನ್ನುವ ಪದವು ಯಾವುದಾದರೊಂದನ್ನು ಅಥವಾ ಯಾರಾದರೊಬ್ಬರನ್ನು ನಂಬದೇ ಇರುವುದನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ “ಅಪನಂಬಿಕೆ” ಎನ್ನುವುದು ಯಾರೇಯಾಗಲಿ ಯೇಸುವನ್ನು ರಕ್ಷಕನನ್ನಾಗಿ ನಂಬದೇಯಿರುವ ಅಥವಾ ಭರವಸವನ್ನಿಡದ ತತ್ವವನ್ನು ಸೂಚಿಸುತ್ತದೆ.
- ಯೇಸುವಿನಲ್ಲಿ ನಂಬಿಕೆಯಿಡದ ಒಬ್ಬ ವ್ಯಕ್ತಿಯನ್ನು “ಅವಿಶ್ವಾಸಿ” ಎಂದು ಕರೆಯುತ್ತಾರೆ.

ಅನುವಾದ ಸಲಹೆಗಳು:

- “ನಂಬು” ಎನ್ನುವ ಪದವನ್ನು “ಸತ್ಯವಾಗಿರುವದಕ್ಕೆ ತಿಳಿದುಕೋ” ಅಥವಾ “ನೀತಿವಂತನಾಗುವುದಕ್ಕೆ ತಿಳಿದುಕೋ” ಎಂದೂ ಅನುವಾದ ಮಾಡಬಹುದು.
- “ನಂಬಿಕೆಯಿಡು” ಎನ್ನುವ ಪದವನ್ನು ಅಥವಾ ಮಾತನ್ನು “ಸಂಪೂರ್ಣವಾಗಿ ಭರವಸೆವಿಡು” ಅಥವಾ “ಭರವಸೆವಿಡು ಮತ್ತು ವಿಧೇಯನಾಗು” ಅಥವಾ “ನಂಬಿದವರ ಮೇಲೆ ಸಂಪೂರ್ಣವಾಗಿ ಆತುಕೋ ಮತ್ತು ಹಿಂಬಾಲಿಸು” ಎಂದೂ ಅನುವಾದ ಮಾಡಬಹುದು.
- “ಯೇಸುವನ್ನು ನಂಬು” ಅಥವಾ “ಕ್ರಿಸ್ತನಲ್ಲಿ ವಿಶ್ವಾಸಿ” ಎಂದೂ ಕೆಲವೊಂದು ಅನುವಾದಗಳು ಬರೆಯುತ್ತಾರೆ,
- ಈ ಪದವನ್ನು “ಯೇಸುವಿನಲ್ಲಿ ಭರವಸೆಯನ್ನಿಟ್ಟ ವ್ಯಕ್ತಿ” ಅಥವಾ “ಯೇಸುವನ್ನು ಅರಿತ ಒಬ್ಬ ವ್ಯಕ್ತಿ ಮತ್ತು ಆತನಿಗಾಗಿ ಜೀವಿಸುವ ವ್ಯಕ್ತಿ” ಎಂದು ಅರ್ಥ ಬರುವ ಮಾತುಗಳಿಂದ ಅನುವಾದ ಮಾಡಬಹುದು.
- “ವಿಶ್ವಾಸಿ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ರೀತಿಯಲ್ಲಿ. “ಯೇಸುವಿನ ಹಿಂಬಾಲಕ” ಅಥವಾ “ಯೇಸುವನ್ನು ಅರಿತ ಮತ್ತು ಆತನಿಗೆ ವಿಧೇಯನಾಗುವ ಒಬ್ಬ ವ್ಯಕ್ತಿ” ಎಂದೂ ಅನುವಾದ ಮಾಡಬಹುದು.
- “ವಿಶ್ವಾಸಿ” ಎನ್ನುವ ಪದವು ಕ್ರಿಸ್ತನಲ್ಲಿರುವ ಪ್ರತಿಯೊಬ್ಬ ವಿಶ್ವಾಸಿಗೂ ಸಾಧಾರಣವಾಗಿ ಉಪಯೋಗಿಸುವ ಪದ, ಆದರೆ “ಶಿಷ್ಯ” ಮತ್ತು “ಅಪೊಸ್ತಲ” ಎನ್ನುವ ಪದಗಳು ಯೇಸು ಈ ಭೂಮಿಯ ಮೇಲಿದ್ದು ನಡೆದಾಗ ಆತನ ಜೊತೆಯಲ್ಲಿರುವ ಮತ್ತು ಆತನನ್ನು ತಿಳಿದಿರುವ ಜನರಿಗೆ

ವಿಶೇಷವಾಗಿ ಉಪಯೋಗಿಸುತ್ತಿದ್ದರು. ಈ ಪದಗಳ ವಿಶಿಷ್ಟತೆಯನ್ನು ಕಾಪಾಡಲು ಈ ಪದಗಳನ್ನು ವಿವಿಧವಾದ ರೀತಿಯಲ್ಲಿ ಅನುವಾದ ಮಾಡುವುದು ಒಳ್ಳೆಯದು.
- "ಅವಿಶ್ವಾಸ" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ವಿಶ್ವಾಸ ಕಡಿಮೆ" ಅಥವಾ "ನಂಬುತ್ತಾಯಿಲ್ಲ" ಎಂದೂ ಸೇರಿಸಬಹುದು.
- "ಅವಿಶ್ವಾಸಿ" ಎನ್ನುವ ಪದವನ್ನು "ಯೇಸುವಿನಲ್ಲಿ ನಂಬಿಕೆಯಿಡದ ಒಬ್ಬ ವ್ಯಕ್ತಿ" ಅಥವಾ "ರಕ್ಷಕನಾಗಿ ಯೇಸುವಿನಲ್ಲಿ ಭರವಸೆವಿಡದ ಒಬ್ಬ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬು, ಅಪೊಸ್ತಲ, ಕ್ರೈಸ್ತ, ಶಿಷ್ಯ, ನಂಬಿಕೆ, ಭರವಸೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.15:6-8
- ಆದಿ.45:24-26
- ಯೋಬ.09:16-18
- ಹಬ.01:5-7
- ಮಾರ್ಕ.06:4-6
- ಮಾರ್ಕ.01:14-15
- ಲೂಕ.09:41-42
- ಯೋಹಾನ.01:12-13
- ಅಪೊ.ಕೃತ್ಯ.06:5-6
- ಅಪೊ.ಕೃತ್ಯ.09:40-43
- ಅಪೊ.ಕೃತ್ಯ.28:23-24
- ರೋಮಾ.03:3-4
- 1 ಕೊರಿಂಥ.06:1-3
- 1 ಕೊರಿಂಥ.09:3-6
- 2 ಕೊರಿಂಥ.06:14-16
- ಇಬ್ರಿ.03:12-13
- 1 ಯೋಹಾನ.03:23-24

ಸತ್ಯವೇದದಿಂದ ಉದಾಹರಣೆಗಳು:

- _**03:04** ಬರುವಂಥಹ ಪ್ರಳಯದ ಕುರಿತಾಗಿ ನೋಹನು ಜನರನ್ನು ಎಚ್ಚರಿಸಿದನು ಮತ್ತು ದೇವರಿಗೆ ತಿರುಗಿಕೊಳ್ಳಿರಿ ಎಂದು ಹೇಳಿದನು, ಆದರೆ ಅವರು ಆತನನ್ನು _ **ನಂಬಲಿಲ್ಲ** __.
- _**04:08** ಅಬ್ರಹಾಮನು ದೇವರ ವಾಗ್ದಾನವನ್ನು **ನಂಬಿದನು** _. ಅಬ್ರಾಮನು ನೀತಿವಂತನೆಂದು ದೇವರು ಪ್ರಕಟನೆ ಮಾಡಿದರು ಯಾಕಂದರೆ ಆತನು ದೇವರ ವಾಗ್ದಾನವನ್ನು __ ನಂಬಿದ್ದನು _.
- _**11:02** ಆತನಲ್ಲಿ ___ ನಂಬಿಕೆಯಿಟ್ಟ ಪ್ರತಿಯೊಬ್ಬರ ಮೊದಲ ಸಂತಾನವನ್ನು ರಕ್ಷಿಸುವುದಕ್ಕೆ ದೇವರು ಒಂದು ಮಾರ್ಗವನ್ನುಂಟು ಮಾಡಿದರು.
- _**11:06** ಆದರೆ ಐಗುಪ್ತರು ದೇವರನ್ನು _ ನಂಬಲಿಲ್ಲ __ ಅಥವಾ ಆತನ ಆಜ್ಞೆಗಳಿಗೆ ವಿಧೇಯರಾಗಲಿಲ್ಲ.
- _**37:05** "ನಾನೇ ಪುನರುತ್ಥಾನವು ಮತ್ತು ಜೀವವೂ ಆಗಿದ್ದೇನೆ" ಎಂದು ಯೇಸು ಹೇಳಿದನು. ನನ್ನಲ್ಲಿ **ನಂಬಿಕೆಯಿಡುವವರೆಲ್ಲರು** ಸತ್ತರೂ ಜೀವಿಸುವರು. ನನ್ನಲ್ಲಿ **ನಂಬಿಕೆಯಿಡುವ** ಪ್ರತಿಯೊಬ್ಬರೂ ಎಂದಿಗೂ ಸತ್ತುಹೋಗುವುದಿಲ್ಲ. ನೀವು ಇದನ್ನು _ **ನಂಬುತ್ತಿದ್ದೀರಾ**__?"
- _**43:01** ಯೇಸು ಪರಲೋಕಕ್ಕೆ ಹಿಂದುರಿಗಿ ಹೋದಾಗ, ಯೇಸು ಶಿಷ್ಯರಿಗೆ ಆಜ್ಞಾಪಿಸಿದಂತೆಯೇ ಅವರು ಯೆರೂಸಲೇಮಿನಲ್ಲಿ ಉಳಿದುಕೊಂಡರು. **ವಿಶ್ವಾಸಿಗಳು** _ ಅಲ್ಲಿ ನಿರಂತರವಾಗಿ ಪ್ರಾರ್ಥನೆ ಮಾಡುವುದಕ್ಕೆ ಭೇಟಿಯಾಗುತ್ತಿದ್ದರು.
- _**43:03** ವಿಶ್ವಾಸಿಗಲೆಲ್ಲರೂ ಸೇರಿ ಬಂದಾಗ, ಅವರಿರುವ ಮನೆಯಲ್ಲಿ ಆಕಸ್ಮಿಕವಾಗಿ ಬಲವಾದ ಗಾಳಿಯಂಥೆ ಒಂದು ಶಬ್ದದೊಂದಿಗೆ ತುಂಬಿಸಲ್ಪಟ್ಟಿತ್ತು. ಇದಾದನಂತರ **ವಿಶ್ವಾಸಿಗಳ** _ ಎಲ್ಲರ ತಲೆಗಳ ಮೇಲೆ ಅಗ್ನಿ ಜ್ವಾಲೆಗಳಂತೆ ಕಾಣಿಸಿಕೊಂಡವು.
- _**43:13** ಪ್ರತಿದಿನ ಅನೇಕರು _ ವಿಶ್ವಾಸಿಗಳಾಗುತ್ತಿದ್ದರು __.
- _**46:06** ಆ ದಿನದಂದು ಅನೇಕ ಜನರು ಯೇಸುವಿನ ಹಿಂಬಾಲಕರನ್ನು ಹಿಂಸಿಸುವುದುನ್ನು ಆರಂಭಿಸಿದರು. ಇದರಿಂದ _ ವಿಶ್ವಾಸಿಗಳು __ ಅನೇಕ ಸ್ಥಳಗಳಿಗೆ ಚದರಿಹೋದರು. ಆದರೆ ಇಂಥಹ ಸಂದರ್ಭದಲ್ಲಿಯೂ ಅವರು ಹೊರಟ ಪ್ರತಿಯೊಂದು ಸ್ಥಳದಲ್ಲಿ ಯೇಸುವಿನ ಕುರಿತಾಗಿ ಪ್ರಕಟನೆ ಮಾಡಿದರು.
- _**46:01** ಸ್ತೆಫೆನನನ್ನು ಸಾಯಿಸಿದ ಮನುಷ್ಯರ ವಸ್ತ್ರಗಳಿಗೆ ಕಾವಲುಗಾರನಾಗಿದ್ದಾಗ ಸೌಲನು ಯೌನಸ್ಥನಾಗಿದ್ದನು. ಆಗ ಅವನು ಯೇಸುವಿನಲ್ಲಿ ನಂಬಿಕೆಯಿಟ್ಟಿರಲಿಲ್ಲ, ಆದ್ದರಿಂದ ಅವನು _ **ವಿಶ್ವಾಸಿಗಳನ್ನು** __ ಹಿಂಸೆಗೆ ಗುರಿಮಾಡಿದನು.
- _**46:09** ಯೆರೂಸಲೇಮಿನಲ್ಲಿ ಹಿಂಸೆಯಾದನಂತರ ಬೇರೊಂದು ಸ್ಥಳಗಳಿಗೆ ಹೊರಟ ವಿಶ್ವಾಸಿಗಳಲ್ಲಿ **ಕೆಲವರು ಅಂತಿಯೋಕ್ಯ ಪಟ್ಟಣದವರೆಗೆ ಹೋಗಿದ್ದರು ಮತ್ತು ಆ ಪಟ್ಟಣದಲ್ಲಿ ಯೇಸುವಿನ ಸುವಾರ್ತೆಯನ್ನು ಹಂಚಿದರು. ಯೇಸುವಿನಲ್ಲಿ** _ ವಿಶ್ವಾಸಿಗಳಾದ _ ಅಂತಿಯೋಕ್ಯದವರು ಮೊಟ್ಟ ಮೊದಲಬಾರಿಗೆ "ಕ್ರೈಸ್ತರು" ಎಂದು ಕರೆಯಲ್ಪಟ್ಟರು.
- _**47:14** ಸಭೆಗಳಲ್ಲಿರುವ _ ವಿಶ್ವಾಸಿಗಳನ್ನು __ ಪ್ರೋತ್ಸಹಿಸಲು ಮತ್ತು ಅವರಿಗೆ ಬೋಧನೆ ಮಾಡಲು ಅವರು ಕೂಡ ಅನೇಕ ಪತ್ರಿಕೆಗಳನ್ನು ಬರೆದಿದ್ದರು.

ಪದ ಡೇಟಾ:

- Strong's: H539, H540, G543, G544, G569, G570, G571, G3982, G4100, G4102, G4103, G4135

ನರಕ, ಬೆಂಕಿಯ ಕೆರೆ

ಪದದ ಅರ್ಥವಿವರಣೆ:

ನರಕ ಎನ್ನುವುದು ಕೊನೆಯಿಲ್ಲದ ನೋವು ಮತ್ತು ಶ್ರಮೆಯ ಅಂತಿಮ ಸ್ಥಳವಾಗಿದೆ, ಅಲ್ಲಿಯೇ ದೇವರು ತನಗೆ ವಿರುದ್ಧವಾಗಿ ನಡೆದುಕೊಳ್ಳುವವರನ್ನು ಮತ್ತು ಯೇಸುವಿನ ತ್ಯಾಗದ ಮೂಲಕ ಅವರನ್ನು ರಕ್ಷಿಸುವ ತನ್ನ ಯೋಜನೆಯನ್ನು ತಿರಸ್ಕರಿಸುವ ಪ್ರತಿಯೊಬ್ಬರನ್ನು ಶಿಕ್ಷಿಸುತ್ತಾನೆ. ಇದನ್ನು "ಬೆಂಕಿಯ ಕೆರೆ" ಎಂಬುದಾಗಿಯೂ ಸೂಚಿಸಿದ್ದಾರೆ.

- ನರಕವನ್ನು ಬೆಂಕಿ ಮತ್ತು ಭಯಂಕರವಾದ ಹಿಂಸೆ ಇರುವ ಸ್ಥಳವೆಂದು ವಿವರಿಸಿದ್ದಾರೆ.
- ಸೈತಾನನು ಮತ್ತು ಸೈತಾನನ್ನು ಹಿಂಬಾಲಿಸುವ ಪ್ರತಿಯೊಂದು ದುರಾತ್ಮವು ನಿತ್ಯಶಿಕ್ಷೆ ಹೊಂದುವುದಕ್ಕೆ ನರಕದಲ್ಲಿ ಹಾಕಲ್ಪಡುತ್ತಾರೆ.
- ಜನರು ತಮ್ಮ ಪಾಪಗಳಿಗಾಗಿ ಯೇಸುವಿನ ಬಲಿಯಾಗದಲ್ಲಿ ನಂಬದವರು ಮತ್ತು ಅವರನ್ನು ರಕ್ಷಿಸುವುದಕ್ಕೆ ಆತನಲ್ಲಿ ಭರವಸೆವಿಡದ ಜನರು ನರಕದಲ್ಲಿ ನಿರಂತರವಾಗಿ ಶಿಕ್ಷೆ ಹೊಂದುತ್ತಾಯಿರುವರು.

ಅನುವಾದ ಸಲಹೆಗಳು:

- ಈ ಪದಗಳು ವಿವಿಧವಾದ ಸಂದರ್ಭಗಳಲ್ಲಿ ಕಂಡುಬರುವುದರಿಂದ ಬಹುಶಃ ಇವುಗಳನ್ನು ವಿಭಿನ್ನವಾದ ರೀತಿಯಲ್ಲಿ ಅನುವಾದ ಬೇಕಾಗಿರುತ್ತದೆ.
- "ಬೆಂಕಿಯ ಕೆರೆ" ಎನ್ನುವ ಮಾತಿನಲ್ಲಿ ಇರುವಂತೆ ಕೆಲವೊಂದು ಭಾಷೆಗಳಲ್ಲಿ "ಕೆರೆ" ಎನ್ನುವ ಪದವನ್ನು ಉಪಯೋಗಿಸುವುದಿಲ್ಲ, ಯಾಕಂದರೆ ಇದು ನೀರನ್ನು ಸೂಚಿಸುತ್ತದೆ.
- "ನರಕ" ಎನ್ನುವ ಪದವನ್ನು "ಸಂಕಟದ ಸ್ಥಳ" ಅಥವಾ "ನೋವು ಮತ್ತು ಕತ್ತಲೆಯ ಅಂತಿಮ ಸ್ಥಳ" ಎಂದೂ ಅನುವಾದ ಮಾಡಬಹುದು.
- "ಬೆಂಕಿಯ ಕೆರೆ" ಎನ್ನುವ ಪದವನ್ನು "ಬೆಂಕಿಯ ಸಮುದ್ರ" ಅಥವಾ "ಹೆಚ್ಚಾದ ಬೆಂಕಿ (ಹಿಂಸೆಗಳ)" ಅಥವಾ "ಬೆಂಕಿಯ ನೆಲ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪರಲೋಕ, ಮರಣ, ಹೇಡೆಸ್, ಕೂಪ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯಾಕೋಬ.03:5-6
- ಲೂಕ.12:4-5
- ಮಾರ್ಕ.09:42-44
- ಮತ್ತಾಯ.05:21-22
- ಮತ್ತಾಯ.05:29-30
- ಮತ್ತಾಯ.10:28-31
- ಮತ್ತಾಯ.23:32-33
- ಮತ್ತಾಯ.25:41-43
- ಪ್ರಕ.20:13-15

ಸತ್ಯವೇದದಿಂದ ಉದಾಹರಣೆಗಳು:

- **50:14** ಆತನು (ದೇವರು) ಅವರನ್ನು **ನರಕದೊಳಗೆ** _ ಹಾಕುವನು, ಅಲ್ಲಿ ಅವರು ಅಳುವುದು ಮತ್ತು ಕೋಪದಲ್ಲಿ ಹಲ್ಲುಗಳನ್ನು ಕಡಿಯುವುದೂ ಇರುತ್ತದೆ. ಆ ಬೆಂಕಿಯು ಹೊರಗೆ ಎಲ್ಲಿಗೂ ಹೋಗದೆ , ಅವರನ್ನು ನಿರಂತರವಾಗಿ ಸುಡುತ್ತಾ ಇರುತ್ತದೆ, ಮತ್ತು ಹುಳಗಳು ಅವರನ್ನು ತಿನ್ನುವುದನ್ನು ನಿಲ್ಲಿಸುವುದಿಲ್ಲ.
- **50:15** ದೇವರಿಗೆ ವಿಧೇಯತೆ ತೋರಿಸದೆ ಅವನನ್ನು ಹಿಂಬಾಲಿಸುವುದಕ್ಕೆ ನಿರ್ಣಯ ಮಾಡಿಕೊಳ್ಳುವ ಪ್ರತಿಯೊಬ್ಬರೊಂದಿಗೆ ಸೈತಾನನನ್ನು ಆತನು **ನರಕದೊಳಗೆ** _ ಹಾಕುವನು, ಆಲ್ಲಿ ಅವನು ಯುಗಯುಗಗಳು ಸುಡಲ್ಪಡುತ್ತಾ ಇರುವನು,

ಪದ ಡೇಟಾ:

- Strong's: H7585, G86, G439, G440, G1067, G3041, G4442, G4443, G4447, G4448, G5020, G5394, G5457

ನಾಜಿರ, ನಾಜಿರರು, ನಾಜಿರ ಪ್ರತಿಜ್ಞೆ

ಸತ್ಯಾಂಶಗಳು:

“ನಾಜಿರ” ಎನ್ನುವ ಪದವು “ನಾಜಿರ ಪ್ರತಿಜ್ಞೆಯನ್ನು” ತೆಗೆದುಕೊಂಡಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ. ಈ ಪ್ರತಿಜ್ಞೆಯನ್ನು ಪುರುಷರು ಮಾತ್ರವೇ ತೆಗೆದುಕೊಳ್ಳುತ್ತಾರೆ, ಆದರೆ ಸ್ತ್ರೀಯರು ಕೂಡ ತೆಗೆದುಕೊಳ್ಳುತ್ತಾರೆ

- ನಾಜೀರ ಪ್ರತಿಜ್ಞೆಯನ್ನು ತೆಗೆದುಕೊಂಡಿರುವ ಒಬ್ಬ ವ್ಯಕ್ತಿ ಆ ಪ್ರತಿಜ್ಞೆಯನ್ನು ನೆರವೇರಿಸುವವರೆಗೂ ಅಂದರೆ ಆ ನಿರ್ದಿಷ್ಟ ಕಾಲದವರೆಗೂ ದ್ರಾಕ್ಷಿಗಳಿಂದ ಮಾಡಿದ ಪಾನವನ್ನಾಗಲಿ ಅಥವಾ ಆಹಾರವನ್ನಾಗಲಿ ತೆಗೆದುಕೊಳ್ಳುವುದಿಲ್ಲವೆಂದು ಒಪ್ಪಂದ ಮಾಡಿಕೊಂಡಿರುತ್ತಾನೆ. ಈ ನಿರ್ದಿಷ್ಟ ಕಾಲದಲ್ಲಿ ಇವನು ತನ್ನ ಕೂದಲನ್ನು ಕತ್ತರಿಸಿಕೊಳ್ಳುವುದಿಲ್ಲ, ಮತ್ತು ಶವದ ಬಳಿಗೆ ಹೋಗುವುದಿಲ್ಲ.
- ಇಟ್ಟಿಕೊಂಡಿರುವ ನಿರ್ಧಿಷ್ಠ ಕಾಲವು ಮುಗಿದನಂತರ, ಆ ಪ್ರತಿಜ್ಞೆಯು ನೆರವೇರಿಸಲ್ಪಡುತ್ತದೆ, ನಾಜಿರನು ಯಾಜಕನ ಬಳಿಗೆ ಹೋಗಿ, ಅರ್ಪಣೆಯನ್ನು ಅರ್ಪಿಸಬೇಕು. ಇದರಲ್ಲಿ ತನ್ನ ಕೂದಲನ್ನು ಕತ್ತರಿಸಿ, ಅವುಗಳನ್ನು ಸುಟ್ಟು ಹಾಕುವುದನ್ನು ಒಳಗೊಂಡಿರುತ್ತದೆ. ಎಲ್ಲಾ ಕಟ್ಟಳೆಗಳನ್ನು ತೆಗೆದುಹಾಕಲಾಗುತ್ತದೆ.
- ನಾಜಿರ ಪ್ರತಿಜ್ಞೆಯ ಕೆಳಗೆ ಇರುವ ಸಂಸೋನನು ಹಳೇ ಒಡಂಬಡಿಕೆಯಲ್ಲಿ ಎಲ್ಲರಿಗೆ ಚೆನ್ನಾಗಿ ಗೊತ್ತಿದ್ದವನಾಗಿರುತ್ತಾನೆ.
- ಜೆಕರ್ಯನ ಮಗನಾಗಿರುವ ಸ್ನಾನೀಕನಾದ ಯೋಹಾನನು ಬಲವಾದ ಪಾನವನ್ನು ಕುಡಿಯುವುದಿಲ್ಲವೆಂದು ದೂತನು ಜೆಕರ್ಯನಿಗೆ ಹೇಳುತ್ತಾನೆ, ಇದರಿಂದ ಯೋಹಾನನು ನಾಜಿರ ಕೆಳಗೆ ಇದ್ದಾನೆಂದು ತಿಳಿದುಬರುತ್ತಿದೆ.
- ಅಪೊಸ್ತಲರ ಕೃತ್ಯಗಳಲ್ಲಿರುವ ವಾಕ್ಯಭಾಗದ ಪ್ರಕಾರ ಅಪೊಸ್ತಲನಾದ ಪೌಲನು ಕೂಡ ಒಂದಾನೊಂದುಸಲ ಅಪೊಸ್ತಲರ ಕೃತ್ಯಗಳಲ್ಲಿರುವ ವಾಕ್ಯಭಾಗದ ಪ್ರಕಾರ ಈ ಪ್ರತಿಜ್ಞೆಯನ್ನು ತೆಗೆದುಕೊಂಡಿರಬಹುದು,

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಯೋಹಾನ (ಸ್ನಾನಿಕನು), ಸರ್ವಾಂಗ ಹೋಮ, ಸಂಸೋನ, ಪ್ರತಿಜ್ಞೆ, ಜೆಕರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.18:18-19
- ಆಮೋಸ.02:11-12
- ನ್ಯಾಯಾ.13:3-5
- ಅರಣ್ಯ.06:1-4

ಪದ ಡೇಟಾ:

- Strong's: H5139

ನಾವೆ

ಪದದ ಅರ್ಥವಿವರಣೆ:

“ನಾವೆ” ಎನ್ನುವ ಪದವು ಅಕ್ಷರಾರ್ಥವಾಗಿ ಹಿಡಿದುಕೊಳ್ಳುವುದಕ್ಕೆ ಮಾಡಿರುವ ಅಥವಾ ಏನಾದರೊಂದನ್ನು ಸಂರಕ್ಷಿಸುವುದಕ್ಕೆ ಮಾಡಿದ ಆಯಾತಾಕಾರದಲ್ಲಿರುವ ಕಟ್ಟಿಗೆಯ ಪೆಟ್ಟಿಗೆಯನ್ನು ಸೂಚಿಸುತ್ತದೆ. ನಾವೆ ಎನ್ನುವುದು ದೊಡ್ಡದಾಗಿರಬಹುದು ಅಥವಾ ಚಿಕ್ಕದಾಗಿರಬಹುದು, ಇದನ್ನು ಯಾವ ಉದ್ದೇಶಕ್ಕಾಗಿ ಉಪಯೋಗ ಮಾಡುತ್ತಿದ್ದೇವೆ ಎನ್ನುವದರ ಮೇಲೆ ಆಧಾರಪಟ್ಟಿರುತ್ತದೆ.

- ಆಂಗ್ಲ ಸತ್ಯವೇದದಲ್ಲಿ, “ನಾವೆ” ಎನ್ನುವ ಪದವನ್ನು ಮೊಟ್ಟ ಮೊದಲು ಪ್ರಪಂಚದಲ್ಲೆಲ್ಲಾ ಬರುತ್ತಿರುವ ಪ್ರಳಯದಿಂದ ತಪ್ಪಿಸಿಕೊಳ್ಳಲು ನೋಹನು ನಿರ್ಮಿಸಿದ ಅತೀ ದೊಡ್ಡ ಕಟ್ಟಿಗೆಯ ಆಯಾತಾಕಾರದ ಹಡಗಿಗೆ ಸೂಚಿಸಲಾಗಿದೆ. ನಾವೆಗೆ ಸಪಾಟವಾದ ಅಡಿಭಾಗ, ಮೇಲ್ಛಾವಣಿ ಮತ್ತು ಗೋಡೆಗಳು ಇರುತ್ತವೆ.
- ಈ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ಅತೀ ದೊಡ್ಡ ಹಡಗು” ಅಥವಾ “ದೋಣಿ” ಅಥವಾ “ಸರಕುಗಳನ್ನು ಹೊಯ್ಯುವ ಹಡಗು” ಅಥವಾ “ಅತೀ ದೊಡ್ಡ, ಪೆಟ್ಟಿಗೆಯ ಆಕಾರದ ಹಡಗು” ಎಂದೆನ್ನುವ ಪದಗಳನ್ನು ಒಳಗೊಂಡಿರುತ್ತವೆ.

ಈ ದೊಡ್ಡ ಹಡಗನ್ನು ಸೂಚಿಸುವುದಕ್ಕೆ ಉಪಯೋಗಿಸಿದ ಇಬ್ರಿಯ ಪದವನ್ನೇ ಮೋಶೆಯು ಕೂಸಾಗಿರುವಾಗ ತನ್ನ ತಾಯಿಯು ಕೂಸಾಗಿದ್ದ ಮೋಶೆಯನ್ನು ಬಚ್ಚಿಡುವುದಕ್ಕೆ ನೈಲ್ ನದಿಯಲ್ಲಿ ಇಟ್ಟ ಪೆಟ್ಟಿಗೆಗೆ ಅಥವಾ ಬುಟ್ಟಿಗೆ ಕೂಡ ಅದೇ ಪದವನ್ನು ಉಪಯೋಗಿಸಿದ್ದಾರೆ. ಇಂಥಹ ಸಂದರ್ಭದಲ್ಲಿ ಸಹಜವಾಗಿ “ಬುಟ್ಟಿ” ಎಂದೂ ಅನುವಾದ ಮಾಡುತ್ತಾರೆ.

- “ಒಡಂಬಡಿಕೆಯ ಮಂಜೂಷ” ಎಂದು ಉಪಯೋಗಿಸಿದ ನುಡಿಗಟ್ಟಿನಲ್ಲಿ “ಮಂಜೂಷ” ಎನ್ನುವ ಪದಕ್ಕೆ ಬೇರೊಂದು ಇಬ್ರಿಯ ಪದವನ್ನು ಉಪಯೋಗಿಸಿದ್ದಾರೆ. ಇದನ್ನು “ಪೆಟ್ಟಿಗೆ” ಅಥವಾ “ಗೂಡು” ಅಥವಾ “ಪಾತ್ರೆ” ಎಂದೂ ಅನುವಾದ ಮಾಡಬಹುದು.
- “ನಾವೆ” ಎನ್ನುವ ಪದವನ್ನು ಅನುವಾದ ಮಾಡಲು ಆಯ್ಕೆ ಮಾಡಿಕೊಂಡಾಗ, ಇದು ಎಂಥಾ ಅಳತೆಯಲ್ಲಿದೆ ಮತ್ತು ಇದು ಯಾವುದಕ್ಕೆ ಉಪಯೋಗಿಸಿದ್ದಾರೆ ಎನ್ನುವದನ್ನು ಪ್ರತಿ ಸಂದರ್ಭದಲ್ಲಿ ನೋಡುವುದು ತುಂಬಾ ಪ್ರಾಮುಖ್ಯ.

(ಇವುಗಳನ್ನು ಸಹ ನೋಡಿರಿ : ಒಡಂಬಡಿಕೆಯ ಮಂಜೂಷ, ಬುಟ್ಟಿ)

ಸತ್ಯವೇದದ ಉಲ್ಲೇಖಗಳು :

- 1 ಪೇತ್ರ 3:18-20
- ವಿಮೋಚನಾ 16:33-36
- ವಿಮೋಚನಾ 30:5-6
- ಆದಿಕಾಂಡ 8:4-5
- ಲೂಕ 17:25-27
- ಮತ್ತಾಯ 24:37-39

ಪದದ ದತ್ತಾಂಶ:

- Strong's: H0727, H8392, G27870

ನಾಶವಾಗುವುದು, ನಾಶವಾಗಿದೆ, ನಾಶವಾಗುತ್ತಿರುವುದು, ನಾಶ ಹೊಂದುವ

ಪದದ ಅರ್ಥವಿವರಣೆ:

“ನಾಶವಾಗುವುದು” ಎನ್ನುವ ಪದಕ್ಕೆ ಸಾಯುವುದು ಅಥವಾ ನಾಶಗೊಳಿಸಲ್ಪಡುವುದು ಎಂದರ್ಥ, ಸಹಜವಾಗಿ ಈ ಪದಕ್ಕೆ ಇತರ ವಿಪತ್ತು ಅಥವಾ ಹಿಂಸೆಯ ಫಲಿತಾಂಶವಾಗಿರುತ್ತದೆ. ಸತ್ಯವೇದದಲ್ಲಿ ಇದಕ್ಕೆ ವಿಶೇಷವಾಗಿ ನಿತ್ಯ ನರಕದಲ್ಲಿ ಶಿಕ್ಷೆಯನ್ನು ಹೊಂದುವುದು ಎಂದರ್ಥ.

"ನಾಶವಾಗುವುದು" ಎಂಬುವುದರ ಆಧ್ಯಾತ್ಮಿಕ ಅರ್ಥ

- "ತಮ್ಮ ರಕ್ಷಣಕ್ಕಾಗಿ ಯೇಸುವನ್ನು ನಂಬಲು ನಿರಾಕರಿಸಿದವರು "ನಾಶವಾಗುತ್ತಿರುವ" ಜನರಾಗಿದ್ದಾರೆ.
- ಪ್ರತಿಯೊಬ್ಬರೂ ದೈಹಿಕವಾಗಿ ಸಾಯುತ್ತಾರೆ, ಆದರೆ ತಮ್ಮ ರಕ್ಷಣಕ್ಕಾಗಿ ಯೇಸುವನ್ನು ನಂಬದವರು ಶಾಶ್ವತವಾಗಿ ನಾಶವಾಗುತ್ತಾರೆ.
- “ನಾಶವಾಗುತ್ತಿರುವ” ಜನರೆಲ್ಲರೂ ನರಕಕ್ಕೆ ಪಾತ್ರರಾಗಿರುವ ಪ್ರತಿಯೊಬ್ಬರು ಎಂದರ್ಥ, ಯಾಕಂದರೆ ಅವರ ರಕ್ಷಣೆಗಾಗಿ ಯೇಸುವಿನಲ್ಲಿ ನಂಬಿಕೆಯಿಡುವುದಕ್ಕೆ ತಿರಸ್ಕಾರ ಮಾಡುವುದು ಎಂದರ್ಥ.
- ಯೋಹಾನ.3:16 ವಚನವು ಬೋಧಿಸುವ “ನಾಶ” ಎನ್ನುವುದಕ್ಕೆ ಪರಲೋಕದಲ್ಲಿ ನಿತ್ಯತ್ವದಲ್ಲಿ ಜೀವಿಸದಿರುವುದು ಎಂದರ್ಥ.

ಅನುವಾದ ಸಲಹೆಗಳು:

- ಸಂದರ್ಭಾನುಗುಣವಾಗಿ, ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ನಿತ್ಯತ್ವದಲ್ಲಿ ಸಾಯುವುದು” ಅಥವಾ “ನರಕದಲ್ಲಿ ಶಿಕ್ಷೆ ಹೊಂದುವುದು” ಅಥವಾ “ನಾಶಗೊಳಿಸಲ್ಪಡುವುದು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ನಾಶವಾಗುವುದು” ಎನ್ನುವ ಪದವು “ಅಸ್ತಿತ್ವದಲ್ಲಿರದಿರುವುದು” ಎನ್ನುವ ಅರ್ಥವು ಮಾತ್ರವೇ ಹೊಂದದ ಪದ ಅಥವಾ ಅಭಿವ್ಯಕ್ತಿಯನ್ನು ಬಳಸಲು ಪ್ರಯತ್ನಿಸಿ.

(ಈ ಪದಗಳನ್ನು ಸಹ ನೋಡಿರಿ : ಮರಣ, ನಿತ್ಯತ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.01:22-23
- 2 ಕೊರಿಂಥ.02:16-17
- 2 ಥೆಸ್ಸ.02:8-10
- ಯೆರೆ.18:18-20
- ಕೀರ್ತನೆ.049:18-20
- ಜೆಕರ್ಯ.09:5-7
- ಜೆಕರ್ಯ.13:8-9

ಪದ ಡೇಟಾ:

- Strong's: H6, H7, H8, H1478, H1820, H5486, H5595, H6544, H8045, G599, G622, G684, G853, G1311, G2704, G4881, G5356

ನಿಜ, ಸತ್ಯ, ಸತ್ಯಾಸತ್ಯಗಳು

ಪದದ ಅರ್ಥವಿವರಣೆ:

“ಸತ್ಯ” ಎನ್ನುವ ಪದವು ಸತ್ಯಾಂಶಗಳಾಗಿರುವ ಒಂದು ಅಥವಾ ಹೆಚ್ಚಿನ ಪರಿಕಲ್ಪನೆಗಳನ್ನು, ನಿಜವಾಗಿ ನಡೆದ ಸಂಘಟನೆಗಳನ್ನು ಮತ್ತು ನಿಜವಾಗಿ ಹೇಳಲ್ಪಟ್ಟ ವ್ಯಾಖ್ಯೆಗಳನ್ನು ಸೂಚಿಸುತ್ತದೆ. ಅಂಥಹ ಪರಿಕಲ್ಪನೆಗಳು “ನಿಜವಾಗಿ” ಹೇಳಲ್ಪಟ್ಟಿರುತ್ತವೆ.

- ನಿಜ ಸಂಗತಿಗಳೆಲ್ಲವು ಅಸ್ತಿತ್ವದಲ್ಲಿ ನಡೆದ, ವಾಸ್ತವಿಕವಾಗಿರುವ, ಮೋಸವಲ್ಲದ, ನ್ಯಾಯವಾಗಿರುವ, ತರ್ಕಬದ್ಧವಾಗಿರುವ ಮತ್ತು ನಡೆದ ಸಂಗತಿಗಳಾಗಿರುವ ಸಂದರ್ಭಗಳಾಗಿರುತ್ತವೆ.
- ಸತ್ಯ ಎಂದರೆ ತಿಳುವಳಿಕೆ, ನಂಬಿಕೆಗಳು ಅಥವಾ ಸತ್ಯವಾದ ಹೇಳಿಕೆ.
- ಪ್ರವಾದನೆಯು “ನಿಜವಾಗಿದೆ” ಅಥವಾ “ನಿಜವಾಗುತ್ತದೆ” ಎನ್ನುವ ಮಾತಿಗೆ ಹೇಳಿದ ಪ್ರಕಾರವೇ ಇದು ನಡೆದಿದೆ ಅಥವಾ ಅದರ ಪ್ರಕಾರವೇ ನಡೆಯುತ್ತದೆ ಎಂದರ್ಥವಾಗಿರುತ್ತದೆ.
- "ಸತ್ಯ" ಎಂಬ್ವ ಸತ್ಯವೇದದ ಪರಿಕಲ್ಪನೆಯಲ್ಲಿ ವಿಶ್ವಾಸಾರ್ಹ ಮತ್ತು ನಿಷ್ಠಾವಂತ ವಿಧಾನದಲ್ಲಿ ನಡೆದುಕೊಳ್ಳುವ ಪರಿಕಲ್ಪನೆಯು ಒಳಗೊಂಡಿರುತ್ತದೆ.
- ಯೇಸು ತಾನು ಮಾತನಾಡಿದ ಮಾತುಗಳಲ್ಲಿ ದೇವರ ಸತ್ಯವನ್ನು ಪ್ರಕಟಿಸಿದ್ದಾನೆ.
- ದೇವರ ವಾಕ್ಯವೇ ಸತ್ಯ. ಇದು ನಿಜವಾಗಿ ನಡೆದ ಸಂಘಟನೆಗಳ ಕುರಿತಾಗಿ ಹೇಳುತ್ತದೆ, ದೇವರ ಕುರಿತಾಗಿ ಮತ್ತು ದೇವರು ಮಾಡಿದ ಎಲ್ಲಾ ಸೃಷ್ಟಿಯ ಕುರಿತಾಗಿ ಬೋಧಿಸುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ ಮತ್ತು ಹೇಳಲ್ಪಟ್ಟಿರುವ ಸಂಗತಿಗಳ ಪ್ರಕಾರ , “ನಿಜ” ಎನ್ನುವ ಪದವನ್ನು “ವಾಸ್ತವ” ಅಥವಾ “ನಡೆದ ಸಂಗತಿ” ಅಥವಾ “ಸರಿಯಾದ” ಅಥವಾ “ಸರಿ” ಅಥವಾ “ನಿರ್ದಿಷ್ಟ” ಅಥವಾ “ಪ್ರಾಮಾಣಿಕವಾದ” ಎಂದೂ ಅನುವಾದ ಮಾಡಬಹುದು.
- “ಸತ್ಯ” ಎನ್ನುವ ಪದವನ್ನು ಅನುವಾದ ಮಾಡುವದರಲ್ಲಿ “ನಿಜವಾದದ್ದು” ಅಥವಾ “ಸತ್ಯಾಂಶವು” ಅಥವಾ “ನಿರ್ದಿಷ್ಟವಾದದ್ದು” ಅಥವಾ “ನಿಯಮ” ಎನ್ನುವ ಪದಗಳು ಒಳಗೊಂಡಿರುತ್ತವೆ.
- “ನಿಜವಾಗು” ಎನ್ನುವ ಮಾತನ್ನು “ವಾಸ್ತವಿಕವಾಗಿ ನಡೆಯುವ ಸಂಗತಿ” ಅಥವಾ “ನೆರವೇರಿಸಲ್ಪಡುವುದು” ಅಥವಾ “ಹೇಳಿದ ಪ್ರಕಾರ ನಡೆಯುವುದು” ಎಂದೂ ಅನುವಾದ ಮಾಡಬಹುದು.
- “ಸತ್ಯವನ್ನು ಹೇಳು” ಅಥವಾ “ಸತ್ಯವನ್ನು ಮಾತನಾಡು” ಎನ್ನುವ ಮಾತುಗಳನ್ನು “ನಿಜವಾದದ್ದನ್ನು ಹೇಳು” ಅಥವಾ “ವಾಸ್ತವಿಕವಾಗಿ ನಡೆದದ್ದನ್ನು ಹೇಳು” ಅಥವಾ “ನಂಬುವಂತಹ ವಿಷಯಗಳನ್ನು ಹೇಳು” ಎಂದೂ ಅನುವಾದ ಮಾಡಬಹುದು.
- “ಸತ್ಯವನ್ನು ಅಂಗೀಕರಿಸು” ಎನ್ನುವ ಮಾತನ್ನು “ದೇವರ ಕುರಿತಾದ ಸತ್ಯವನ್ನು ನಂಬು” ಎಂದೂ ಅನುವಾದ ಮಾಡಬಹುದು.
- “ಆತ್ಮದಲ್ಲಿ ಮತ್ತು ಸತ್ಯದಲ್ಲಿ ದೇವರನ್ನು ಆರಾಧಿಸು” ಎನ್ನುವ ಮಾತಿನಲ್ಲಿ, “ಸತ್ಯದಲ್ಲಿ” ಎನ್ನುವ ಪದವನ್ನು “ದೇವರು ನಮಗೆ ಹೇಳಿದವುಗಳಿಗೆ ವಿಶ್ವಾಸಾರ್ಹದಿಂದ ವಿಧೇಯರಾಗುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬು, ವಿಶ್ವಾಸಾರ್ಹ, ನೆರವೇರಿಸು, ವಿಧೇಯತೆ ತೋರಿಸು, ಪ್ರವಾದಿ, ಅರಿತುಕೋ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.05:6-8
- 1 ಯೋಹಾನ.01:5-7
- 1 ಯೋಹಾನ.02:7-8
- 3 ಯೋಹಾನ.01:5-8
- ಅಪೊ.ಕೃತ್ಯ.26:24-26
- ಕೊಲೊ.01:4-6
- ಆದಿ.47:29-31
- ಯಾಕೋಬ.01:17-18
- ಯಾಕೋಬ.03:13-14
- ಯಾಕೋಬ.05:19-20
- ಯೆರೆ.04:1-3
- ಯೋಹಾನ.01:9
- ಯೋಹಾನ.01:16-18
- ಯೋಹಾನ.01:49-51
- ಯೋಹಾನ.03:31-33
- ಯೆಹೋ.07:19-21
- ಪ್ರಲಾಪ.05:19-22
- ಮತ್ತಾಯ.08:8-10

- ಮತ್ತಾಯ.12:15-17
- ಕೀರ್ತನೆ.026:1-3
- ಪ್ರಕ.01:19-20
- ಪ್ರಕ.15:3-4

ಸತ್ಯವೇದದಿಂದ ಉದಾಹರಣೆಗಳು:

- **02:04** “ಇದು _ ನಿಜವಲ್ಲ _! ನೀನು ಸಾಯುವುದಿಲ್ಲ” ಎಂದು ಹಾವು ಸ್ತ್ರೀಯಳಲ್ಲಿ ಸ್ಪಂದಿಸಿತು.
- **14:06** ತಕ್ಷಣವೇ ಕಾಲೇಬನು ಮತ್ತು ಯೆಹೋಶುವನು, ಇತರ ಗೂಢಚಾರಿಗಳು “ಕಾನಾನಿನಲ್ಲಿರುವ ಜನರು ತುಂಬಾ ಎತ್ತರವಾಗಿದ್ದಾರೆ ಮತ್ತು ಬಲವಾಗಿದ್ದಾರೆ, ಆದರೆ ನಾವು ತಪ್ಪದೇ ಅವರನ್ನು ಸೋಲಿಸಬಹುದು!” ಎಂದು ಹೇಳಿದರು.
- **16:01** _ **ನಿಜ** _ ದೇವರಾಗಿರುವ ಯೆಹೋವನನ್ನು ಬಿಟ್ಟು, ಇಸ್ರಾಯೇಲ್ಯರು ಕಾನಾನ್ ದೇವರುಗಳನ್ನು ಆರಾಧನೆ ಮಾಡುವುದಕ್ಕೆ ಆರಂಭಿಸಿದರು.
- **31:08** “_ **ನಿಜವಾಗಿ** _ ನೀನು ದೇವರ ಮಗ” ಎಂದು ಹೇಳುತ್ತಾ ಅವರು ಯೇಸುವನ್ನು ಆರಾಧಿಸಿದರು.
- **39:10** “ದೇವರ ಕುರಿತಾಗಿ _ **ಸತ್ಯವನ್ನು** ಹೇಳುವುದಕ್ಕೆ ನಾನು ಈ ಭೂಲೋಕಕ್ಕೆ ಬಂದಿದ್ದೇನೆ. ಸತ್ಯವನ್ನು **ಪ್ರೀತಿಸುವ ಪ್ರತಿಯೊಬ್ಬನು ನನ್ನ ಮಾತನ್ನು ಕೇಳುವನು.” “**_ ಸತ್ಯ ಎಂದರೇನು?” ಎಂದು ಪಿಲಾತನು ಹೇಳಿದನು.

ಪದ ಡೇಟಾ:

- Strong's: H199, H389, H403, H529, H530, H543, H544, H551, H571, H935, H3321, H3330, H6237, H6656, H6965, H7187, H7189, G225, G226, G227, G228, G230, G1103, G3303, G3483, G3689, G4103, G4137

ನಿತ್ಯತೆ, ಅಮರತ್ವ, ನಿತ್ಯ, ನಿರಂತರ

ಪದದ ಅರ್ಥವಿವರಣೆ:

“ಅಮರತ್ವ” ಮತ್ತು “ನೀತ್ಯ” ಎನ್ನುವ ಪದಗಳು ಒಂದೇ ರೀತಿಯ ಸಮಾನಾರ್ಥವನ್ನು ಹೊಂದಿರುತ್ತವೆ ಮತ್ತು ಎಂದೆಂದಿಗೂ ನಿರಂತರವಾಗಿರುವ ಅಥವಾ ಯಾವಾಗಲೂ ಅಸ್ತಿತ್ವದಲ್ಲಿರುವವುಗಳನ್ನು ಸೂಚಿಸುತ್ತದೆ.

- “ನಿತ್ಯತೆ” ಎನ್ನುವ ಪದವು ಆರಂಭವು ಅಥವಾ ಅಂತ್ಯವು ಇಲ್ಲದ ಸ್ಥಿತಿಯನ್ನು ಸೂಚಿಸುತ್ತದೆ. ಎಂದಿಗೂ ಕೊನೆಯಾಗದ ಜೀವನವನ್ನೂ ಇದು ಸೂಚಿಸುತ್ತದೆ.
- ಭೂಮಿಯ ಮೇಲಿರುವ ಈ ಪ್ರಸ್ತುತ ಜೀವನದನಂತರ, ಮನುಷ್ಯರು ನಿತ್ಯತೆಯಲ್ಲಿರುತ್ತಾರೆ, ಆದರೆ ಅದು ದೇವರೊಂದಿಗೆ ಪರಲೋಕದಲ್ಲಾಗಲಿ ಅಥವಾ ದೇವರಿಂದ ದೂರವಾಗಿ ನರಕದಲ್ಲಾಗಲಿ ಇರುತ್ತಾರೆ.
- “ನಿತ್ಯಜೀವ” ಮತ್ತು “ಅಮರತ್ವದಲ್ಲಿರುವ ಜೀವನ” ಎನ್ನುವ ಪದಗಳು ಪರಲೋಕದಲ್ಲಿ ದೇವರೊಂದಿಗೆ ಎಂದೆಂದಿಗೂ ಜೀವಿಸುವುದಕ್ಕೆ ಸೂಚಿಸಲು ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲಾಗಿರುತ್ತದೆ.
- “ನಿರಂತರ ಮತ್ತು ಎಂದಿಗೂ” ಎನ್ನುವ ಮಾತು ಎಂದಿಗೂ ಕೊನೆಯಾಗದ ಸಮಯದ ಆಲೋಚನೆಯನ್ನು ಮತ್ತು ನಿತ್ಯ ಜೀವ ಅಥವಾ ಅಮರತ್ವ ಎನ್ನುವ ಮಾತುಗಳನ್ನು ಹೊಂದಿರುತ್ತದೆ.

“ನಿರಂತರ” ಎನ್ನುವುದು ಎಂದಿಗೂ ಕೊನೆಯಾಗದ ಸಮಯವನ್ನು ಸೂಚಿಸುತ್ತದೆ. ಕೆಲವೊಂದುಬಾರಿ “ಬಹುಕಾಲ” ಎನ್ನುವ ಅರ್ಥವನ್ನು ಕೊಡುವುದಕ್ಕೆ ಇದನ್ನು ಅಲಂಕಾರಿಕ ಭಾಷೆಯಲ್ಲಿ ಉಪಯೋಗಿಸುತ್ತಾರೆ.

- “ನಿರಂತರ ಮತ್ತು ಎಂದೆಂದಿಗೂ” ಎನ್ನುವ ಮಾತು ಯಾವುದಾದರೊಂದು ಯಾವಾಗಲೂ ನಡೆಯುತ್ತದೆ ಅಥವಾ ಯಾವಾಗಲೂ ಅಸ್ತಿತ್ವದಲ್ಲಿರುತ್ತದೆಯೆಂದು ತಿಳಿಸುತ್ತಿದೆ.
- “ನಿರಂತರ ಮತ್ತು ಎಂದೆಂದಿಗೂ” ಎನ್ನುವ ಮಾತು ಅಮರತ್ವ ಎಂದರೇನು ಅಥವಾ ನಿತ್ಯಜೀವ ಎಂದರೇನು ಎನ್ನುವ ವಿಷಯವನ್ನು ವ್ಯಕ್ತಗೊಳಿಸುವ ವಿಧಾನವಾಗಿರುತ್ತದೆ. ಈ ಪದದಲ್ಲಿಯೂ ಕೊನೆಯಿಲ್ಲದ ಸಮಯ ಎನ್ನುವ ಆಲೋಚನೆಯನ್ನು ಹೊಂದಿರುತ್ತದೆ
- ದಾವೀದನ ಸಿಂಹಾಸನವು “ನಿರಂತರವಾಗಿ” ಇರುವುದೆಂದು ದೇವರು ಹೇಳಿದರು. ದಾವೀದನ ಸಂತಾನವಾಗಿರುವ ಯೇಸುವು ಅರಸನಾಗಿ ನಿರಂತರವಾಗಿ ಆಳುತ್ತಾನೆನ್ನುವ ಸತ್ಯವನ್ನು ಇದು ಸೂಚಿಸುತ್ತದೆ.

ಅನುವಾದ ಸಲಹೆಗಳು:

- “ನಿತ್ಯ” ಅಥವಾ “ಅಮರತ್ವ” ಎನ್ನುವ ಪದಗಳನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಕೊನೆಯಿಲ್ಲದ” ಅಥವಾ “ಎಂದಿಗೂ ನಿಂತುಹೋಗದ” ಅಥವಾ “ಯಾವಾಗಲೂ ಮುಂದುವರೆಯುವ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ನಿತ್ಯ ಜೀವ” ಮತ್ತು “ಅಮರತ್ವ ಜೀವನ” ಎನ್ನುವ ಪದಗಳನ್ನು “ಎಂದಿಗೂ ಕೊನೆಯಾಗದ ಜೀವನ” ಅಥವಾ “ಎಂದಿಗೂ ನಿಂತುಹೋಗದೇ ಮುಂದುವರೆಯುವ ಜೀವನ” ಅಥವಾ “ಎಂದೆಂದಿಗೂ ಜೀವಿಸುವುದಕ್ಕೆ ನಮ್ಮ ದೇಹಗಳು ಎಬ್ಬಿಸಲ್ಪಡುವವು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ನಿತ್ಯತೆ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಸಮಯವು ಮುಗಿದರೂ ಅಸ್ತಿತ್ವದಲ್ಲಿರುವುದು” ಅಥವಾ “ಕೊನೆಯಿಲ್ಲದ ಜೀವನ” ಅಥವಾ “ಪರಲೋಕದಲ್ಲಿರುವ ಜೀವನ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಸ್ಥಳೀಯ ಅಥವಾ ಜಾತೀಯ ಭಾಷೆಗಳಲ್ಲಿರುವ ಬೈಬಲ್ ಅನುವಾದದಲ್ಲಿ ಈ ಪದವನ್ನು ಯಾವರೀತಿ ಅನುವಾದ ಮಾಡಿದ್ದಾರೆನ್ನುವದನ್ನೂ ನೋಡಿಕೊಳ್ಳಿರಿ. (ನೋಡಿರಿ: ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)
- “ನಿರಂತರ” ಎನ್ನುವ ಪದವನ್ನು “ಯಾವಾಗಲೂ” ಅಥವಾ “ಕೊನೆಯಿಲ್ಲದ” ಎಂದೂ ಅನುವಾದ ಮಾಡಬಹುದು.
- “ನಿರಂತರವಾಗಿ ಇರುವ” ಎನ್ನುವ ಮಾತನ್ನು “ಯಾವಾಗಲೂ ಅಸ್ತಿತ್ವದಲ್ಲಿರುವ” ಅಥವಾ “ಎಂದಿಗೂ ನಿಂತುಹೋಗದ” ಅಥವಾ “ಯಾವಾಗಲೂ ಮುಂದುವರೆಯುವ” ಎಂದೂ ಅನುವಾದ ಮಾಡಬಹುದು.
- “ನಿರಂತರ ಮತ್ತು ಎಂದೆಂದಿಗೂ” ಎಂದು ಎದ್ದುಕಾಣುವ ಮಾತನ್ನು “ಯಾವಾಗಲೂ ಮತ್ತು ಯಾವಾಗಲೂ” ಅಥವಾ “ಎಂದಿಗೂ ಕೊನೆಯಾಗದ” ಅಥವಾ “ಅದು ಎಂದೆಂದಿಗೂ ಕೊನೆಯಾಗದ” ಎಂದೂ ಅನುವಾದ ಮಾಡಬಹುದು.
- ದಾವೀದನ ಸಿಂಹಾಸನವು ನಿರಂತರವಾಗಿ ಇರುವುದು ಎನ್ನುವದನ್ನು “ದಾವೀದನ ಸಂತಾನವು ನಿರಂತರವಾಗಿ ಆಳುತ್ತಾ ಇರುವರು” ಅಥವಾ “ದಾವೀದನ ಸಂತಾನವು ಯಾವಾಗಲೂ ಆಳುತ್ತಾ ಇರುವರು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದಾವೀದ, ಪಾಲಿಸು, ಜೀವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.17:7-8
- ಆದಿ.48:3-4
- ವಿಮೋ.15:17-18
- 2 ಸಮು.03:28-30
- 1 ಅರಸ.02:32-33

- ಯೋಬ.04:20-21
- ಕೀರ್ತನೆ.021:3-4
- ಯೆಶಯಾ.09:6-7
- ಯೆಶಯಾ.40:27-28
- ದಾನಿ.07:17-18
- ಲೂಕ.18:18-21
- ಅಪೊ.ಕೃತ್ಯ.13:46-47
- ರೋಮಾ.05:20-21
- ಇಬ್ರಿ.06:19-20
- ಇಬ್ರಿ.10:11-14
- 1 ಯೋಹಾನ.01:1-2
- 1 ಯೋಹಾನ.05:11-12
- ಪ್ರಕ.01:4-6
- ಪ್ರಕ.22:3-5

ಸತ್ಯವೇದದಿಂದ ಉದಾಹರಣೆಗಳು:

- **27:01** ಒಂದು ದಿನ ಯೆಹೂದ್ಯರ ಧರ್ಮಶಾಸ್ತ್ರದಲ್ಲಿ ನಿಪುಣನಾಗಿರುವ ಒಬ್ಬ ಯೇಸುವನ್ನು ಪರೀಕ್ಷೆ ಮಾಡಲು ಯೇಸುವಿನ ಬಳಿಗೆ ಬಂದು, “ಬೋಧಕನೆ, ನಾನು _ ನಿತ್ಯಜೀವವನ್ನು _ ಹೊಂದಿಕೊಳ್ಳುವುದಕ್ಕೆ ಏನು ಮಾಡಬೇಕು?” ಎಂದು ಕೇಳಿದನು.
- **28:01** ಒಂದು ದಿನ ಶ್ರೀಮಂತನಾದ ಒಬ್ಬ ಯೌವನಸ್ಥನು ಯೇಸು ಬಳಿಗೆ ಬಂದು, “ಒಳ್ಳೇಯ ಬೋಧಕನೆ, ನಾನು _ ನಿತ್ಯಜೀವವನ್ನು _ ಹೊಂದಿಕೊಳ್ಳಬೇಕಾದರೆ ಏನು ಮಾಡಬೇಕು?” ಎಂದು ಕೇಳಿದನು. “ಯಾವುದು ಒಳ್ಳೇಯದು ಎನ್ನುವುದರ ಕುರಿತಾಗಿ ನನ್ನನ್ನು ಯಾಕೆ ಕೇಳುತ್ತೀ? ಎಂದು ಯೇಸು ಅವನಿಗೆ ಉತ್ತರ ಕೊಟ್ಟನು. ಒಳ್ಳೆಯವನು ಒಬ್ಬನೇ ಇದ್ದಾನೆ, ಅವರೇ ದೇವರು ಎಂದು ಹೇಳಿದನು. ಆದರೆ ನಿನಗೆ _ ನಿತ್ಯಜೀವ _ ಬೇಕೆಂದಿದ್ದರೆ, ದೇವರ ಆಜ್ಞೆಗಳನ್ನು ಕೈಗೊಳ್ಳು ಎಂದು ಹೇಳಿದನು.
- **28:10** “ಯಾರ್ಯಾರು ನನಗೋಸ್ಕರ ಮನೆಗಳನ್ನು, ಅಣ್ಣತಮ್ಮಂದಿಯರನ್ನು, ಅಕ್ಕತಂಗಿಯರನ್ನು, ತಂದೆಯನ್ನು, ತಾಯಿಯನ್ನು, ಮಕ್ಕಳನ್ನು ಅಥವಾ ಅಸ್ತಿಪಾಸ್ತಿಗಳನ್ನು ಕಳೆದುಕೊಳ್ಳುತ್ತಾರೋ, ಅವರು 100 ಪಟ್ಟು ಹೆಚ್ಚಾಗಿ ತಿರುಗಿ ಹೊಂದಿಕೊಳ್ಳುವರು ಮತ್ತು _ ನಿತ್ಯಜೀವವನ್ನು _ ಪಡೆದುಕೊಳ್ಳುವರು” ಎಂದು ಯೇಸು ಉತ್ತರಕೊಟ್ಟರು.

ಪದ ಡೇಟಾ:

- Strong's: H3117, H4481, H5331, H5703, H5705, H5769, H5865, H5957, H6924, G126, G165, G166, G1336

ನಿರೀಕ್ಷೆ, ನಿರೀಕ್ಷಿಸಲಾಗಿದೆ, ಭರವಸೆ

ಪದದ ಅರ್ಥವಿವರಣೆ:

ನಿರೀಕ್ಷೆ ಎಂದರೆ ಬಯಸಿದ್ದನ್ನು ನಡೆಯಬೇಕೆಂದು ಬಲವಾಗಿ ಆಸೆ ಪಡುವುದಾಗಿರುತ್ತದೆ. ನಿರೀಕ್ಷೆಯು ಭವಿಷ್ಯತ್ತಿನಲ್ಲಿ ನಡೆಯುವ ಒಂದು ಕಾರ್ಯಕ್ಕೆ ಸಂಬಂಧಪಟ್ಟು ನಿಶ್ಚಿತವನ್ನು ಅಥವಾ ಅನಿಶ್ಚಿತತೆಯನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ "ನಿರೀಕ್ಷೆ" ಎನ್ನುವುಡು ಕೂಡಾ "ಭರವಸೆ" ಎನ್ನುವ ಅರ್ಥವನ್ನು ಹೊಂದಿರುತ್ತದೆ, ಉದಾಹರಣೆಗೆ, "ಕರ್ತನಲ್ಲಿ ನನ್ನ ನಿರೀಕ್ಷೆ". ದೇವರು ತನ್ನ ಜನರಿಗೆ ವಾಗ್ದಾನ ಮಾಡಿರುವದನ್ನು ತಪ್ಪದೇ ಹೊಂದಿಕೊಳ್ಳುತ್ತೇವೆನ್ನುವುದನ್ನು ಸೂಚಿಸುತ್ತದೆ.
- ಕೆಲವೊಂದುಬಾರಿ ಯುಎಲ್.ಬಿ ಅನುವಾದಗಳು ಮೂಲ ಭಾಷೆಯಲ್ಲಿರುವ ಪದವನ್ನು "ನಿಶ್ಚಯತೆ" ಎಂದೂ ಅನುವಾದ ಮಾಡಿದ್ದಾರೆ. ಯೇಸುವನ್ನು ರಕ್ಷಕನನ್ನಾಗಿ ಸ್ವೀಕಾರ ಮಾಡಿ ಯೇಸುವಿನಲ್ಲಿ ನಂಬಿದ ಪ್ರತಿಯೊಬ್ಬರೂ ದೇವರು ವಾಗ್ದಾನ ಮಾಡಿದ್ದನ್ನು ಹೊಂದಿಕೊಳ್ಳುತ್ತೇವೆನ್ನು ಭರವಸೆ (ಅಥವಾ ನಿಶ್ಚಯತೆ, ಅಥವಾ ನಿರೀಕ್ಷೆ) ಹೊಂದಿರುತ್ತಾರೆ ಎನ್ನುವ ಸಂದರ್ಭಗಳಲ್ಲಿ ಹೊಸ ಒಡಂಬಡಿಕೆಯಲ್ಲಿ ಇದು ಬಹುಶಃ ಅನುವಾದ ಮಾಡಿರಬಹುದು.
- "ನಿರೀಕ್ಷೆಯಿಲ್ಲದಿರುವುದು" ಎನ್ನುವುದಕ್ಕೆ ಒಳ್ಳೇಯದು ನಡೆಯುತ್ತದೆಯೆಂದು ಎದುರುನೋಡದೇ ಇರುವುದು ಎಂದರ್ಥ. ಇದಕ್ಕೆ ನಡೆಯಬೇಕಾದದ್ದು ನಡೆಯುವುದಿಲ್ಲ ಎಂದರ್ಥ.

ಅನುವಾದ ಸಲಹೆಗಳು:

- ಕೆಲವೊಂದು ಸಂದರ್ಭಗಳಲ್ಲಿ "ನಿರೀಕ್ಷೆ" ಎನ್ನುವ ಪದವನ್ನು "ಬಯಸು" ಅಥವಾ "ಆಸೆ" ಅಥವಾ "ಎದುರುನೋಡು" ಎಂದೂ ಅನುವಾದ ಮಾಡಬಹುದು.
- "ಆ ವಿಷಯದಲ್ಲಿ ನಿರೀಕ್ಷೆಯಿಲ್ಲ" ಎನ್ನುವ ಮಾತನ್ನು "ಅದರಲ್ಲಿ ಭರವಸೆ ಯಾವುದೂ ಇಲ್ಲ" ಅಥವಾ "ಒಳ್ಳೇಯದು ಯಾವುದೂ ನಡೆಯುತ್ತದೆಯೆಂದು ಎದುರುನೋಡುವಂಗಿಲ್ಲ" ಎಂದೂ ಅನುವಾದ ಮಾಡಬಹುದು.
- "ಯಾವುದೇ ನಿರೀಕ್ಷೆ ಇಲ್ಲ" ಎನ್ನುವ ಮಾತನ್ನು "ಒಳ್ಳೇಯದಾಗುವುದನ್ನು ಎದುರುನೋಡುವಂಗಿಲ್ಲ" ಅಥವಾ "ಯಾವುದೇ ಭದ್ರತೆಯಿಲ್ಲ" ಅಥವಾ "ಯಾವ ಒಳ್ಳೇಯ ಕಾರ್ಯವು ನಡೆಯುವುದಿಲ್ಲ ಎನ್ನುವುದು ಖಂಡಿತ" ಎಂದೂ ಅನುವಾದ ಮಾಡಬಹುದು.
- "ಅದರ ಮೇಲೆ ನಿನ್ನ ನಿರೀಕ್ಷೆಯನ್ನಿಡು" ಎನ್ನುವ ಮಾತನ್ನು "ಅದರಲ್ಲಿ ನಿನ್ನ ನಿಶ್ಚಯತೆಯನ್ನಿಡು" ಅಥವಾ "ಅದರಲ್ಲಿ ಭರವಸೆಯನ್ನಿಡು" ಎಂದೂ ಅನುವಾದ ಮಾಡಬಹುದು.
- "ನಿನ್ನ ವಾಕ್ಯದಲ್ಲಿ ನಾನು ನಿರೀಕ್ಷೆಯನ್ನು ಪಡೆದೆ" ಎನ್ನುವ ಮಾತನ್ನು "ನಿನ್ನ ವಾಕ್ಯವು ಸತ್ಯವೆಂದು ನಾನು ನಿಶ್ಚಯತೆ ಹೊಂದಿದ್ದೇನೆ" ಅಥವಾ "ನಿನ್ನಲ್ಲಿ ಭರವಸೆವಿಡುವುದಕ್ಕೆ ನಿನ್ನ ಮಾತುಗಳು ನನಗೆ ಸಹಾಯ ಮಾಡುತ್ತಿವೆ" ಅಥವಾ "ನಿನ್ನ ವಾಕ್ಯಕ್ಕೆ ನಾನು ವಿಧೇಯನಾಗುವ, ನಾನು ಖಂಡಿತವಾಗಿ ಆಶೀರ್ವಾದವನ್ನು ಪಡೆದುಕೊಳ್ಳುತ್ತಿದ್ದೇನೆ" ಎಂದೂ ಅನುವಾದ ಮಾಡಬಹುದು.
- ದೇವರಲ್ಲಿ "ನಿರೀಕ್ಷೆ" ಎನ್ನುವ ಮಾತುಗಳನ್ನು "ದೇವರಲ್ಲಿ ಭರವಸೆ" ಅಥವಾ "ದೇವರು ವಾಗ್ದಾನ ಮಾಡಿದ್ದನ್ನು ಖಂಡಿತವಾಗಿ ಮಾದುತ್ತಾರೆನ್ನುವ ನಿಶ್ಚಯತೆಯನ್ನು ತಿಳಿದುಕೊಂಡಿರುವುದು" ಅಥವಾ "ದೇವರು ನಂಬಿಗಸ್ತನೆಂದು ನಿಶ್ಚಯತೆಯಿಂದ ಇರುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆಶೀರ್ವದಿಸು, ನಿಶ್ಚಯತೆ, ಒಳ್ಳೇಯದು, ವಿಧೇಯನಾಗು, ಭರವಸೆವಿಡು, ದೇವರ ವಾಕ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.29:14-15
- 1 ಥೆಸ್ಸ.02:17-20
- ಅಪೊ.ಕೃತ್ಯ.24:14-16
- ಅಪೂ.ಕೃತ್ಯ.26:6-8
- ಅಪೊ.ಕೃತ್ಯ.27:19-20
- ಕೊಲೊಸ್ಸ.01:4-6
- ಯೋಬ.11:20

ಪದ ಡೇಟಾ:

- Strong's: H982, H983, H986, H2620, H2976, H3175, H3176, H3689, H4009, H4268, H4723, H7663, H7664, H8431, H8615, G91, G560, G1679, G1680, G2070

ನಿರ್ಣಯಿಸು, ನಿರ್ಣಯಿಸಲ್ಪಟ್ಟಿದೆ

ಪದದ ಅರ್ಥವಿವರಣೆ:

“ನಿರ್ಣಯಿಸು” ಮತ್ತು “ನಿರ್ಣಯಿಸಲ್ಪಟ್ಟಿದೆ” ಎನ್ನುವ ಪದಗಳು ಯಾವುದಾದರೊಂದು ನಡೆಯುವುದಕ್ಕೆ ಮುಂಚಿತವಾಗಿ ಪ್ರಣಾಳಿಕೆ ಮಾಡುವುದನ್ನು ಅಥವಾ ನಿರ್ಣಯಿಸಲ್ಪಟ್ಟಿರುವುದನ್ನು ಸೂಚಿಸುತ್ತದೆ.

- ಈ ಪದವು ವಿಶೇಷವಾಗಿ ನಿತ್ಯ ಜೀವವನ್ನು ಹೊಂದುವುದಕ್ಕೆ ದೇವರು ಜನರನ್ನು ಮುಂಚಿತವಾಗಿಯೇ ನಿರ್ಣಯಿಸಿದ್ದನ್ನು ಸೂಚಿಸುತ್ತದೆ.
- ಕೆಲವೊಂದುಬಾರಿ “ಮೊದಲೇ ನೇಮಿಸಲ್ಪಟ್ಟಿರುವುದು” ಎನ್ನುವ ಪದವು ಉಪಯೋಗಿಸಲ್ಪಟ್ಟಿರುತ್ತದೆ, ಇದಕ್ಕೆ ಮುಂಚಿತವಾಗಿಯೇ ನಿರ್ಣಯಿಸುವುದು ಎಂದರ್ಥ.

ಅನುವಾದ ಸಲಹೆಗಳು:

- “ನಿರ್ಣಯಿಸು” ಎನ್ನುವ ಪದವನ್ನು “ಮುಂಚಿತವಾಗಿಯೇ ನಿರ್ಣಯಿಸು” ಅಥವಾ “ಸಮಯ ಬರುವುದಕ್ಕೆ ಮುಂಚಿತವಾಗಿ ನಿರ್ಣಯಿಸು” ಎಂದೂ ಅನುವಾದ ಮಾಡಬಹುದು.
- “ನಿರ್ಣಯಿಸಲ್ಪಟ್ಟಿರುತ್ತದೆ” ಎನ್ನುವ ಪದವನ್ನು “ಅನೇಕ ವರ್ಷಗಳ ಹಿಂದೆ ನಿರ್ಣಯಿಸಲ್ಪಡುವುದು” ಅಥವಾ “ಮುಂದೆ ನಡೆಯುವ ಕಾರ್ಯವನ್ನು ಪ್ರಣಾಳಿಕೆ ಮಾಡುವುದು’ ಅಥವಾ “ಮೊದಲೇ ನಿರ್ಧರಿಸುವುದು” ಎಂದೂ ಅನುವಾದ ಮಾಡಬಹುದು.
- “ನಮ್ಮನ್ನು ಮುಂದೆ ನಿರ್ಣಯಿಸಿದ್ದಾರೆ” ಎನ್ನುವ ಮಾತನ್ನು “ನಮ್ಮನ್ನು ಅನೇಕ ವರ್ಷಗಳ ಹಿಂದೆಯೇ ನಿರ್ಣಯಿಸಲ್ಪಟ್ಟಿರುತ್ತೇವೆ” ಅಥವಾ “ಮುಂದಿನ ಕಾಲದಲ್ಲಿ ನಾವು ಹೀಗೆ ಇರುತ್ತೇವೆಂದು ಈಗಾಗಲೇ ಮುಂಚಿತವಾಗಿಯೇ ನಿರ್ಣಯಿಸಲ್ಪಟ್ಟಿರುತ್ತೇವೆ” ಎಂದೂ ಅನುವಾದ ಮಾಡಬಹುದು.
- ಈ ಪದದ ಅರ್ಥಕ್ಕೂ ಮತ್ತು “ಮುಂತಿಳಿಯುವುದು” ಎನ್ನುವ ಪದಕ್ಕೂ ವ್ಯತ್ಯಾಸವಿರುತ್ತದೆಯೆಂದು ತಿಳಿದುಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಮುಂತಿಳಿಯುವುದು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.02:6-7

ಪದ ಡೇಟಾ:

- Strong's: G4309

ನಿರ್ದೋಷ

ಪದದ ಅರ್ಥವಿವರಣೆ:

“ನಿರ್ದೋಷ” ಎನ್ನುವ ಪದಕ್ಕೆ ಇತರ ತಪ್ಪುಗಳನ್ನು ಅಥವಾ ಅಕ್ರಮ ಅಪರಾಧವನ್ನು ಮಾಡದಿರುವುದು ಎಂದರ್ಥ. ಇದು ಸಾಧಾರಣವಾಗಿ ಕೆಟ್ಟ ಕಾರ್ಯಗಳಲ್ಲಿರದ ಜನರನ್ನು ಸೂಚಿಸುತ್ತದೆ.

- ಒಬ್ಬ ವ್ಯಕ್ತಿ ತಪ್ಪು ಮಾಡಿದ್ದಾನೆಂದು ಆರೋಪಿಸಲ್ಪಟ್ಟಿದ್ದರೆ, ಆ ವ್ಯಕ್ತಿ ಆ ತಪ್ಪು ಮಾಡಲಿಲ್ಲವೆಂದು ನಿರ್ಧಾರವಾದಾಗ ಆತನನ್ನು ನಿರ್ದೋಷಿ ಎಂದು ಕರೆಯುತ್ತಾರೆ.
- “ನಿರ್ದೋಷ” ಎನ್ನುವ ಪದವು ಯಾವ ದೋಷವನ್ನು ಮಾಡದ ಜನರು ಹೊಂದಿಕೊಳ್ಳುವ ಶಿಕ್ಷೆಗೆ ಗುರಿಯಾದವರನ್ನು ಸೂಚಿಸುತ್ತದೆ. ಉದಾಹರಣೆಗೆ, ಸೈನ್ಯವು “ನಿರ್ದೋಷದ ಜನರ” ಮೇಲೆ ಧಾಳಿ ಮಾಡುವುದು.

ಅನುವಾದ ಸಲಹೆಗಳು:

- ಅನೇಕ ಸಂದರ್ಭಗಳಲ್ಲಿ, “ನಿರ್ದೋಷ” ಎನ್ನುವ ಪದವನ್ನು “ಅಪರಾಧವಲ್ಲದ್ದು” ಅಥವಾ “ಬಾಧ್ಯತೆಯಲ್ಲದ್ದು” ಅಥವಾ ಏನಾದರೊಂದರ ವಿಷಯದಲ್ಲಿ “ಆರೋಪ ಮಾಡಲಾರದ್ದು” ಎಂದೂ ಅನುವಾದ ಮಾಡಬಹುದು.
- ಸಾಧಾರಣವಾಗಿ ನಿರ್ದೋಷ ಜನರನ್ನು ಸೂಚಿಸಿದಾಗ, ಈ ಪದವನ್ನು “ಯಾವ ತಪ್ಪನ್ನೂ ಮಾಡದವರು” ಅಥವಾ “ಕೆಟ್ಟ ಕಾರ್ಯಗಳಲ್ಲಿ ಕಾರ್ಯನಿರತರಾಗಿರುವವರು” ಎಂದೂ ಅನುವಾದ ಮಾಡಬಹುದು.
- ಆಗಾಗ್ಗ ಕಾಣಿಸಿಕೊಳ್ಳುವ “ನಿರ್ದೋಷ ರಕ್ತ” ಎನ್ನುವ ಮಾತನ್ನು “ಕೊಲ್ಲಲ್ಪಡುವುದಕ್ಕೆ ಯಾವ ತಪ್ಪನ್ನು ಮಾಡದ ಜನರು” ಎಂದೂ ಅನುವಾದ ಮಾಡಬಹುದು.
- “ಸುರಿಸಲ್ಪಟ್ಟ ನಿರ್ದೋಷ ರಕ್ತ” ಎನ್ನುವ ಈ ಮಾತಿಗೆ “ನಿರ್ದೋಷ ಜನರನ್ನು ಸಾಯಿಸುವುದು” ಅಥವಾ “ಸಾಯಿಸುವಷ್ಟು ತಪ್ಪು ಮಾಡದೇ ಇರುವ ಜನರನ್ನು ಕೊಲ್ಲುವುದು” ಎಂದೂ ಅನುವಾದ ಮಾಡಬಹುದು.
- ಒಬ್ಬರು ಸಾಯಿಸಲ್ಪಟ್ಟಿದ್ದಾರೆನ್ನುವ ಸಂದರ್ಭದಲ್ಲಿ, “ನಿರ್ದೋಷಿಯ ರಕ್ತ” ಎನ್ನುವ ಮಾತು “ಮರಣ ಹೊಂದುವಷ್ಟು ಅಪರಾಧವಲ್ಲ” ಎಂದೂ ಅನುವಾದ ಮಾಡಬಹುದು.
- ಯೇಸುವಿನ ಕುರಿತಾದ ಸುವಾರ್ತೆಯನ್ನು ಕೇಳದ ಮತ್ತು ಅದನ್ನು ಸ್ವೀಕರಿಸದ ಜನರ ಕುರಿತಾಗಿ ಮಾತನಾಡುವಾಗ, “ರಕ್ತದ ನಿರ್ದೋಷವು” ಎನ್ನುವ ಮಾತನ್ನು “ಅವರು ಆತ್ಮೀಯಕರಾಗಿ ಸತ್ತಿದ್ದರೂ ಅಥವಾ ಬದುಕಿದ್ದರೂ, ಅವರ ವಿಷಯದಲ್ಲಿ ಯಾವ ಜವಾಬ್ದಾರಿ ಇರುವುದಿಲ್ಲ” ಅಥವಾ “ಈ ಸಂದೇಶವನ್ನು ಅವರು ಸ್ವೀಕರಿಸಿದರೂ, ಸ್ವೀಕರಿಸದೇ ಇದ್ದರೂ ಜವಾಬ್ದಾರಿ ಇರುವುದಿಲ್ಲ” ಎಂದೂ ಅನುವಾದ ಮಾಡಬಹುದು.
- “ನಾನು ನಿರ್ದೋಷ ರಕ್ತಕ್ಕೆ ದ್ರೋಹ ಮಾಡಿದ್ದೇನೆ” ಎಂದು ಯೂದನು ಹೇಳಿದಾಗ, “ಯಾವ ತಪ್ಪನ್ನು ಮಾಡದಿರುವ ಮನುಷ್ಯನಿಗೆ ನಾನು ದ್ರೋಹ ಮಾಡಿದ್ದೇನೆ” ಅಥವಾ “ಪಾಪರಹಿತ ಒಬ್ಬ ಮನುಷ್ಯನ ಮರಣಕ್ಕೆ ನಾನು ಕಾರಣನಾಗಿದ್ದೇನೆ” ಎಂದು ಆವನು ಹೇಳುತ್ತಿದ್ದಾನೆ.
- “ಈ ನಿರ್ದೋಷನಾಗಿರುವ ಮನುಷ್ಯನ ರಕ್ತದ ವಿಷಯದಲ್ಲಿ ನಾನು ನಿರ್ದೋಷಿಯಾಗಿರುತ್ತೇನೆ” ಎಂದು ಯೇಸುವಿನ ಕುರಿತಾಗಿ ಪಿಲಾತನು ಹೇಳಿದ ಮಾತನ್ನು “ಯಾವ ತಪ್ಪನ್ನು ಮಾಡದ ಈ ಮನುಷ್ಯನನ್ನು ಸಾಯಿಸುವುದರಲ್ಲಿ ನನಗೆ ಯಾವ ಸಂಬಂಧವಿಲ್ಲ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಪರಾಧ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.04:3-4
- 1 ಸಮು.19:4-5
- ಅಪೊ.ಕೃತ್ಯ.20:25-27
- ವಿಮೋ.23:6-9
- ಯೆರೆ.22:17-19
- ಯೋಬ.09:21-24
- ರೋಮಾ.16:17-18

ಸತ್ಯವೇದದಿಂದ ಉದಾಹರಣೆಗಳು:

- **08:06** ಎರಡು ವರ್ಷಗಳಾದ ಮೇಲೆ, ಯೋಸೇಫನು **ನಿರ್ದೋಷಿಯಾಗಿದ್ದರೂ** _ , ಯೋಸೇಫನು ಸೆರೆಯಲ್ಲಿಯೇ ಇದ್ದನು.
- **40:04** ಅವರಲ್ಲೊಬ್ಬರು ಯೇಸುವನ್ನು ಹಿಯಾಳಿಸಿದನು, ಆದರೆ ಇನ್ನೊಬ್ಬನು, “ನಿನಗೆ ದೇವರ ಭಯವಿಲ್ಲವೋ?” ಎಂದು ಕೇಳಿದನು. ನಾವಾದರೋ ಅಪರಾಧಿಗಳು, ಆದರೆ ಈ ಮನುಷ್ಯನು _ ನಿರ್ದೋಷಿಯಾಗಿದ್ದಾನೆ __.”
- **40:08** ಯೇಸುವಿಗೆ ಕಾವಲಿಯಾಗಿದ್ದ ಸೈನಿಕನು ಸಂಭವಿಸುತ್ತಿರುವ ಎಲ್ಲವುಗಳನ್ನು ನೋಡಿ, “ಈತನು ನಿಜವಾಗಿ **ನಿರ್ದೋಷಿಯಾಗಿದ್ದಾನೆ** __ ಈತನು ದೇವರ ಮಗನಾಗಿದ್ದಾನೆ” ಎಂದು ಹೇಳಿದನು.

ಪದ ಡೇಟಾ:

- Strong's: H2136, H2600, H2643, H5352, H5355, H5356, G121

ನಿರ್ದೋಷಿ

ಅರ್ಥವಿವರಣೆ

“ನಿರ್ದೋಷಿ” ಎನ್ನುವ ಪದಕ್ಕೆ “ದೋಷ ಇಲ್ಲದವನು” ಎಂದರ್ಥ. ದೇವರನ್ನು ಪೂರ್ಣಮನಸ್ಸಿನಿಂದ ವಿಧೇಯರಾಗಿರುವವರನ್ನು ಸೂಚಿಸಲು ಇದನ್ನು ಉಪಯೋಗಿಸುತ್ತಾರೆ, ಅಂದರೆ ಆದರೆ ಆ ವ್ಯಕ್ತಿಯಲ್ಲಿ ಪಾಪವಿಲ್ಲವೆಂದು ಅರ್ಥವಲ್ಲ.

- ಅಬ್ರಹಾಮನು ಮತ್ತು ನೋಹನು ದೇವರ ಸನ್ನಿಧಿಯಲ್ಲಿ ನಿರ್ದೋಷಿಗಳೆಂದು ಪರಿಗಣಿಸಲ್ಪಟ್ಟರು.
- “ನಿರ್ದೋಷಿ” ಎಂದು ಖ್ಯಾತಿ ಹೊಂದಿರುವವನು ದೇವರನ್ನು ಗೌರವಿಸುವ ರೀತಿಯಲ್ಲಿ ನಡೆದುಕೊಳ್ಳುವನು.
- ಒಂದು ವಚನದ ಪ್ರಕಾರ ನಿರ್ದೋಷಿಯಾದ ವ್ಯಕ್ತಿ ಎಂದರೆ “ದೇವರಲ್ಲಿ ಭಯಭಕ್ತಿಯುಳ್ಳವನಾಗಿರುವವನು ಮತ್ತು ಕೆಟ್ಟದ್ದನ್ನು ನಿರಾಕರಿಸುವವನು”.

ಅನುವಾದ ಸಲಹೆಗಳು:

- “ಅವನ ಗುಣದಲ್ಲಿ ಯಾವ ತಪ್ಪಿಲ್ಲದವನು” ಅಥವಾ “ದೇವರಿಗೆ ಸಂಪೂರ್ಣವಾಗಿ ವಿಧೇಯನಾಗುವವನು” ಅಥವಾ “ಪಾಪವನ್ನು ತಡೆಯುವವನು” ಅಥವಾ “ಕೆಟ್ಟತನವನ್ನು ದೂರವಾಗಿ ಇಡುವವನು” ಎಂದು ಇದನ್ನು ಅನುವಾದ ಮಾಡಬಹುದು.

ಸತ್ಯವೇದದ ಉಲ್ಲೇಖಗಳು :

- 1 ಥೆಸಲೋನಿಕ 2:10-12
- 1 ಥೆಸಲೋನಿಕ 3:11-13
- 2 ಪೇತ್ರ 3:14-16
- ಕೊಲೊಸ್ಸೆ 1:21-23
- ಆದಿಕಾಂಡ 17:1-2
- ಫಿಲಿಪ್ಪಿ 2:14-16
- ಫಿಲಿಪ್ಪಿ 3:6-7

ಪದದ ದತ್ತಾಂಶ:

- Strong's: H5352, H5355, H8535, G02730, G02740, G02980, G03380, G04100,

G04230

ನೀತಿ, ನೀತಿಯುತ, ಅನೀತಿ, ಅನೀತಿಯುತ, ನೀತಿ, ನೀತಿಯುತ

ಪದದ ಅರ್ಥವಿವರಣೆ:

“ನೀತಿಯುತ” ಎನ್ನುವ ಪದವು ದೇವರು ಖಂಡಿತವಾದ ಒಳ್ಳೆಯತನ, ನ್ಯಾಯ, ನಂಬಿಕೆತನ ಮತ್ತು ಪ್ರೀತಿ ಎನ್ನುವವುಗಳನ್ನು ಸೂಚಿಸುತ್ತದೆ. ಈ ಗುಣಲಕ್ಷಣಗಳೆಲ್ಲವು ಸೇರಿ ದೇವರನ್ನು “ನೀತಿವಂತನನ್ನಾಗಿ” ಮಾಡುತ್ತವೆ. ದೇವರು ನೀತಿವಂತನಾಗಿರುವದರಿಂದ, ಆತನು ತಪ್ಪದೇ ಪಾಪವನ್ನು ಖಂಡಿಸುತ್ತಾನೆ.

- ಈ ಪದಗಳನ್ನು ಅನೇಕಬಾರಿ ದೇವರಿಗೆ ವಿಧೇಯನಾಗುವ ವ್ಯಕ್ತಿಯನ್ನು ಮತ್ತು ನೈತಿಕವಾಗಿ ಒಳ್ಳೆಯತನದಿಂದ ಇರುವ ವ್ಯಕ್ತಿಯನ್ನು ವಿವರಿಸುವುದಕ್ಕೆ ಉಪಯೋಗಿಸಲ್ಪಡುತ್ತವೆ. ಏನೇಯಾದರೂ, ಜನರೆಲ್ಲರೂ ಪಾಪ ಮಾಡಿದ್ದರಿಂದ, ದೇವರನ್ನು ಬಿಟ್ಟು ಯಾವ ಮನುಷ್ಯನೂ ನೀತಿವಂತನಲ್ಲ.
- ಸತ್ಯವೇದದಲ್ಲಿ “ನೀತಿವಂತರೆಂದು” ಕರೆಯಲ್ಪಟ್ಟಿರುವ ಜನರ ಉದಾಹರಣೆಗಳಲ್ಲಿ ನೋಹ, ಯೋಬ, ಅಬ್ರಾಹಾಮ, ಜೆಕರ್ಯ, ಮತ್ತು ಎಲೀಸಬೇತಳು ಇರುತ್ತಾರೆ.
- ಜನರು ತಮ್ಮನ್ನು ರಕ್ಷಿಸಬೇಕೆಂದು ಯೇಸುವಿನಲ್ಲಿ ಭರವಸೆ ಇಟ್ಟಾಗ, ದೇವರು ಅವರ ಪಾಪಗಳಿಂದ ಅವರನ್ನು ತೊಳೆಯುವನು ಮತ್ತು ಯೇಸುವಿನ ನೀತಿಯ ಕಾರಣದಿಂದ ಅವರನ್ನು ನೀತಿವಂತರೆಂದು ಪ್ರಕಟಿಸುವನು.

“ಅನೀತಿ” ಎನ್ನುವ ಪದಕ್ಕೆ ಪಾಪವನ್ನು ಮಾಡುವುದು ಮತ್ತು ನೈತಿಕವಾಗಿ ಭ್ರಷ್ಟತ್ವದಲ್ಲಿರುವುದು ಎಂದರ್ಥ. “ಅನೀತಿಯುತ ಎನ್ನುವ ಪದವು ಪಾಪ ಸ್ವಭಾವದಿಂದ ಇರುವ ಸ್ಥಿತಿಯನ್ನು ಅಥವಾ ಪಾಪವನ್ನು ಸೂಚಿಸುತ್ತದೆ.

- ಈ ಪದಗಳೆಲ್ಲವೂ ವಿಶೇಷವಾಗಿ ದೇವರ ಬೋಧನೆಗಳಿಗೆ ಮತ್ತು ಆಜ್ಞೆಗಳಿಗೆ ಅವಿಧೇಯತೆಯನ್ನು ತೋರಿಸುವ ವಿಧಾನದಲ್ಲಿ ಜೀವನ ಮಾಡುವುದನ್ನು ಸೂಚಿಸುತ್ತವೆ.
- ಅನೀತಿಯುತವಾದ ಜನರು ತಮ್ಮ ಆಲೋಚನೆಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಅನೈತಿಕ ವ್ಯಕ್ತಿಗಳಾಗಿರುತ್ತಾರೆ.
- ಕೆಲವೊಂದುಬಾರಿ “ಅನೀತಿಯು” ವಿಶೇಷವಾಗಿ ಯೇಸುವಿನಲ್ಲಿ ನಂಬದ ಜನರನ್ನು ಸೂಚಿಸುತ್ತದೆ.

“ನೀತಿ” ಮತ್ತು “ನೀತಿಯುತ” ಎನ್ನುವ ಪದಗಳು ದೇವರ ಆಜ್ಞೆಗಳನ್ನು ಅನುಸರಿಸುವ ವಿಧಾನದಲ್ಲಿ ನಡೆದುಕೊಳ್ಳುವುದನ್ನು ಸೂಚಿಸುತ್ತದೆ.

- ಈ ಪದಗಳ ಅರ್ಥದಲ್ಲಿ ಲಂಬವಾಗಿ ನಿಂತಿಕೊಂಡಿರುವ ಆಲೋಚನೆಯು ಮತ್ತು ಮುಂದಕ್ಕೆ ನೇರವಾಗಿ ನೋಡುವ ಆಲೋಚನೆಯನ್ನು ಒಳಗೊಂಡಿರುತ್ತದೆ.
- “ನೀತಿ”ಯಿಂದ ಇರುವ ವ್ಯಕ್ತಿ ಎಂದರೆ ದೇವರ ನಿಯಮಗಳಿಗೆ ವಿಧೇಯನಾಗಿರುವ ವ್ಯಕ್ತಿ ಮತ್ತು ದೇವರ ಚಿತ್ತಕ್ಕೆ ವಿರುದ್ಧವಾಗಿ ಕೆಲಸ ಕಾರ್ಯಗಳನ್ನು ಮಾಡದಿರುವ ವ್ಯಕ್ತಿ ಎಂದರ್ಥ.
- “ಪೂರ್ಣತೆ” ಮತ್ತು “ನೀತಿ” ಎನ್ನುವ ಪದಗಳು ಒಂದೇ ಅರ್ಥಗಳನ್ನು ಹೊಂದಿರುತ್ತವೆ ಮತ್ತು ಕೆಲವೊಂದುಬಾರಿ ಸಮಾನಾಂತರ ನಿರ್ಣಯಗಳಲ್ಲಿ ಉಪಯೋಗಿಸಲ್ಪಡುತ್ತವೆ, ಉದಾಹರಣೆಗೆ, “ಪೂರ್ಣತೆ ಮತ್ತು ನೀತಿಯುತ”. (ನೋಡಿರಿ: ಸಮಾನಾಂತರ)

ಅನುವಾದ ಸಲಹೆಗಳು:

- ಇದು ದೇವರನ್ನು ಸೂಚಿಸಿ ವಿವರಿಸುವಾಗ, “ನೀತಿ” ಎನ್ನುವ ಪದವನ್ನು “ಪರಿಪೂರ್ಣವಾಗಿ ಒಳ್ಳೇಯದು ಮತ್ತು ನ್ಯಾಯವಾದದ್ದು” ಅಥವಾ “ಯಾವಾಗಲೂ ನ್ಯಾಯವಾಗಿ ನಡೆದುಕೊಳ್ಳುವುದು” ಎಂದೂ ಅನುವಾದ ಮಾಡಬಹುದು.
- ದೇವರ “ನೀತಿಯುತವು” ಎನ್ನುವ ಮಾತನ್ನು “ಪರಿಪೂರ್ಣವಾದ ನಂಬಿಗಸ್ಥಿಕೆಯನ್ನು ಮತ್ತು ಒಳ್ಳೇಯತನ” ಎಂದೂ ಅನುವಾದ ಮಾಡಬಹುದು.
- ದೇವರಿಗೆ ವಿಧೇಯರಾಗಿರುವ ಜನರ ಕುರಿತಾಗಿ ಈ ಪದವು ವಿವರಿಸುವಾಗ, “ನೀತಿ” ಎನ್ನುವ ಪದವನ್ನು “ನೈತಿಕವಾಗಿ ಒಳ್ಳೇಯದು” ಅಥವಾ “ನ್ಯಾಯವಾದದ್ದು” ಅಥವಾ “ದೇವರು ಇಷ್ಟಪಡುವ ಜೀವನವನ್ನು ಜೀವಿಸುವುದು” ಎಂದೂ ಅನುವಾದ ಮಾಡಬಹುದು.
- “ನೀತಿವಂತ” ಎನ್ನುವ ಪದವನ್ನು “ನೀತಿವಂತ ಜನರು” ಅಥವಾ “ದೇವರಿಗೆ ಭಯಪಡುವ ಜನರು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, “ನೀತಿಯುತವಾದ” ಎನ್ನುವ ಮಾತನ್ನು “ಒಳ್ಳೆಯತನ” ಅಥವಾ “ದೇವರ ಮುಂದೆ ಪರಿಪೂರ್ಣವಾಗಿರುವುದು” ಅಥವಾ “ದೇವರಿಗೆ ವಿಧೇಯತೆಯನ್ನು ತೋರಿಸುವುದರ ಮೂಲಕ ಸರಿಯಾದ ಮಾರ್ಗದಲ್ಲಿ ನಡೆದುಕೊಳ್ಳುವುದು” ಅಥವಾ “ಪರಿಪೂರ್ಣವಾದ ಒಳ್ಳೇಯದನ್ನೇ ಮಾಡುವುದು” ಎಂದು ಅರ್ಥಗಳಿರುವ ಮಾತುಗಳೊಂದಿಗೆ ಅನುವಾದ ಮಾಡಬಹುದು.
- ಕೆಲವೊಂದುಬಾರಿ “ನೀತಿವಂತರು” ಎನ್ನುವ ಪದವನ್ನು ಅಲಂಕಾರಿಕವಾಗಿ ಉಪಯೋಗಿಸುತ್ತಾರೆ ಮತ್ತು “ಜನರು ತಾವು ಒಳ್ಳೆಯವರೆಂದು ಆಲೋಚಿಸುವವರನ್ನು” ಅಥವಾ “ನೀತಿವಂತರಾಗಿ ಕಾಣುವ ಜನರನ್ನು” ಸೂಚಿಸುತ್ತದೆ.
- “ಅನೀತಿ” ಎನ್ನುವ ಪದವನ್ನು ಸಾಧಾರಣವಾಗಿ “ನೀತಿಯಲ್ಲದ್ದು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ದುಷ್ಟತ್ವ” ಅಥವಾ “ಅನೈತಿಕತೆ” ಅಥವಾ “ದೇವರಿಗೆ ವಿರುದ್ಧವಾಗಿ ತಿರಸ್ಕಾರ ಮಾಡುವ ಜನರು” ಅಥವಾ “ಪಾಪ ಸ್ವಭಾವವುಳ್ಳವರು” ಎನ್ನುವ ಮಾತುಗಳೂ ಒಳಗೊಂಡಿರುತ್ತವೆ.
- “ಅನೀತಿವಂತ” ಎನ್ನುವ ಮಾತನ್ನು “ಅನೀತಿವಂತ ಜನರು” ಎಂದೂ ಅನುವಾದ ಮಾಡಬಹುದು.
- “ಅನೀತಿಯುತವಾದ” ಎನ್ನುವ ಪದವನ್ನು “ಪಾಪ” ಅಥವಾ “ದುಷ್ಟ ಆಲೋಚನೆಗಳು ಮತ್ತು ದುಷ್ಟ ಕ್ರಿಯೆಗಳು” ಅಥವಾ “ದುಷ್ಟತ್ವ” ಎಂದೂ ಅನುವಾದ ಮಾಡಬಹುದು.
- ಸಾಧ್ಯವಾದರೆ, ಈ ಪದಗಳು “ನೀತಿ, ನೀತಿಯುತವಾದ” ಎನ್ನುವ ಪದಗಳೊಂದಿಗೆ ಇರುವ ಸಂಬಂಧವನ್ನು ತೋರಿಸುವ ವಿಧಾನದಲ್ಲಿ ಇದನ್ನು ಅನುವಾದ ಮಾಡುವುದು ಉತ್ತಮವಾಗಿರುತ್ತದೆ.

- "ನೀತಿ" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಉನ್ನತವಾಗಿ ನಡೆದುಕೊಳ್ಳುವುದು" ಅಥವಾ "ಸರಿಯಾಗಿ ನಡೆದುಕೊಳ್ಳುವ ವ್ಯಕ್ತಿ" ಅಥವಾ "ದೇವರ ಆಜ್ಞೆಗಳನ್ನು ಅನುಸರಿಸುವ ವ್ಯಕ್ತಿ" ಅಥವಾ "ದೇವರಿಗೆ ವಿಧೇಯನಾಗಿರುವ ವ್ಯಕ್ತಿ" ಅಥವಾ "ಸರಿಯಾದ ವಿಧಾನದಲ್ಲಿ ನಡೆದುಕೊಳ್ಳುವ ವ್ಯಕ್ತಿ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ನೀತಿಯುತವಾದ" ಎನ್ನುವ ಪದವನ್ನು "ನೈತಿಕವಾಗಿ ಪವಿತ್ರತೆಯನ್ನು ಹೊಂದಿರುವುದು" ಅಥವಾ "ಒಳ್ಳೇಯ ನೈತಿಕವಾದ ಸ್ಥಿತಿ" ಅಥವಾ "ಸರಿಯಾದದ್ದು" ಎಂದೂ ಅನುವಾದ ಮಾಡಬಹುದು.
- "ನೀತಿಯುತ" ಎನ್ನುವ ಪದವನ್ನು "ನೀತಿವಂತರಾಗಿರುವ ಜನರು" ಅಥವಾ "ನೀತಿಯುಳ್ಳ ಜನರು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದುಷ್ಟ, ವಿಶ್ವಾಸಾರ್ಹ, ಒಳ್ಳೇಯ, ಪರಿಶುದ್ಧ, ಪೂರ್ಣತೆ, ನ್ಯಾಯ, ಧರ್ಮಶಾಸ್ತ್ರ, ಆಜ್ಞೆ, ವಿಧೇಯತೆ ತೋರಿಸು, ಪವಿತ್ರ, ನೀತಿ, ಪಾಪ, ನ್ಯಾಯವಲ್ಲದ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.19:15-16
- ಯೋಬ.01:6-8
- ಕೀರ್ತನೆ.037:28-30
- ಕೀರ್ತನೆ.049:14-15
- ಕೀರ್ತನೆ.107:41-43
- ಪ್ರಸಂಗಿ.12:10-11
- ಯೆಶಯಾ.48:1-2
- ಯೆಹೆ.33:12-13
- ಮಲಾಕಿ.02:5-7
- ಮತ್ತಾಯ.06:1-2
- ಅಪೊ.ಕೃತ್ಯ.03:13-14
- ರೋಮಾ.01:29-31
- 1 ಕೊರಿಂಥ.06:9-11
- ಗಲಾತ್ಯ.03:6-9
- ಕೊಲೊಸ್ಸ.03:22-25
- 2 ಥೆಸ್ಸ.02:8-10
- 2 ತಿಮೊಥೆ.03:16-17
- 1 ಪೇತ್ರ.03:18-20
- 1 ಯೋಹಾನ.01:8-10
- 1 ಯೋಹಾನ.05:16-17

ಸತ್ಯವೇದದಿಂದ ಉದಾಹರಣೆಗಳು:

- _**03:02** ಆದರೆ ನೋಹನು ದೇವರ ದಯೆಯನ್ನು ಪಡೆದುಕೊಂಡನು. ಆತನು **ನೀತಿವಂತನಾಗಿದ್ದನು** _, ದುಷ್ಟ ಜನರ ಮಧ್ಯದಲ್ಲಿ ಜೀವಿಸುತ್ತಿದ್ದನು.
- _**04:08** ಅಬ್ರಾಹಾಮನು **ನೀತಿವಂತನೆಂದು** _ ದೇವರು ಹೇಳಿದರು, ಯಾಕಂದರೆ ಆತನು ದೇವರ ವಾಗ್ದಾನದಲ್ಲಿ ನಂಬಿಕೆ ಇಟ್ಟಿದ್ದನು.
- _**17:02** ದಾವೀದನು ತಗ್ಗಿಸಿಕೊಂಡಿದ್ದನು ಮತ್ತು ದೇವರಿಗೆ ವಿಧೇಯನಾದ ಮತ್ತು ಭರವಸೆವಿಟ್ಟಿರುವ **ನೀತಿವಂತನಾಗಿದ್ದನು** _ .
- _**23:01** ಮರಿಯಳ ಜೊತೆಯಲ್ಲಿ ಪ್ರಧಾನ ಮಾಡಲ್ಪಟ್ಟಿರುವ ಯೋಸೇಫನು **ನೀತಿವಂತನಾಗಿದ್ದನು** _.
- _**50:10 ನೀತಿವಂತರಾಗಿರುವವರು** _ ತಮ್ಮ ತಂದೆಯಂತೆಯೇ ದೇವರ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು.

ಪದ ಡೇಟಾ:

- Strong's: H205, H1368, H2555, H3072, H3474, H3476, H3477, H3483, H4334, H4339, H4749, H5228, H5229, H5324, H5765, H5766, H5767, H5977, H6662, H6663, H6664, H6665, H6666, H6968, H8535, H8537, H8549, H8552, G93, G94, G458, G1341, G1342, G1343, G1344, G1345, G1346, G2118, G3716, G3717

ನೆರವೇರಿಸು, ನೆರವೇರಿಕೆಯಾಗಿದೆ

ಪದದ ಅರ್ಥವಿವರಣೆ:

"ನೆರವೇರಿಸು" ಎನ್ನುವ ಪದಕ್ಕೆ ಬಯಸಿದ ಏನನ್ನಾದರೂ ಸಾಧಿಸು ಅಥವಾ ಪೂರ್ಣಗೊಳಿಸು ಎಂದರ್ಥ.

- ಪ್ರವಾದನೆಯು ನೆರವೇರಿಕೆಯಾದಾಗ, ಪ್ರವಾದನೆಯಲ್ಲಿ ಹೇಳಲ್ಪಟ್ಟಿರುವದನ್ನು ದೇವರು ನಡೆಸಿದ್ದಾರೆ ಎಂದರ್ಥ.
- ಒಬ್ಬ ವ್ಯಕ್ತಿ ಒಂದು ವಾಗ್ದಾನವನ್ನು ಅಥವಾ ಪ್ರತಿಜ್ಞೆಯನ್ನು ನೆರವೇರಿಸುವುದಾದರೆ, ಆತನು ಮಾಡುತ್ತೇನೆ ಎಂದು ಹೇಳಿದ ವಾಗ್ದಾನವನ್ನು ನೆರವೇರಿಸಿದ್ದಾನೆ ಎಂದರ್ಥ.
- ಜವಾಬ್ದಾರಿಯನ್ನು ಪೂರೈಸು ಎನ್ನುವುದಕ್ಕೆ ಕೊಡಲ್ಪಟ್ಟ ಅಥವಾ ಅಗತ್ಯವುಳ್ಳ ಕೆಲಸವನ್ನು ಮಾಡುವುದು ಎಂದರ್ಥ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ "ನೆರವೇರಿಸು" ಎನ್ನುವ ಪದವನ್ನು "ಸಾಧಿಸು" ಅಥವಾ "ಪೂರ್ತಿಗೊಳಿಸು" ಅಥವಾ "ನಡೆಯುವಂತೆ ಮಾಡು" ಅಥವಾ "ವಿಧೇಯನಾಗು" ಅಥವಾ "ನಿರ್ವಹಿಸು" ಎಂದೂ ಅನುವಾದ ಮಾಡಬಹುದು.
- "ನೆರವೇರಿಸಲ್ಪಟ್ಟಿದೆ" ಎನ್ನುವ ಮಾತಿಗೆ "ನಿಜವಾಗಿ ನೆರವೇರಿದೆ" ಅಥವಾ "ನಡೆದಿದೆ" ಅಥವಾ "ನಡೆಯುತ್ತಿದೆ" ಎಂದೂ ಅನುವಾದ ಮಾಡಬಹುದು.
- "ನೆರವೇರಿಸು" ಎನ್ನುವ ಪದವನ್ನು ಅನುವಾದಿಸುವ ವಿಧಾನಗಳಲ್ಲಿ, "ನಿನ್ನ ಸೇವೆಯನ್ನು ನೆರವೇರಿಸು" ಎನ್ನುವ ಮಾತಿನಂತೆ, "ಸಂಪೂರ್ತಿಗೊಳಿಸು" ಅಥವಾ "ನಿರ್ವಹಿಸು" ಅಥವಾ "ಅಭ್ಯಾಸ ಮಾಡು" ಅಥವಾ "ಸೇವೆ ಮಾಡುವುದಕ್ಕೆ ದೇವರು ನಿಮ್ಮನ್ನು ಕರೆದಂತೆಯೇ ಇತರ ಜನರನ್ನು ರಕ್ಷಿಸು" ಎಂದು ಅನೇಕ ಪದಗಳನ್ನು ಸೇರಿಸಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಎಫೆಸ, ಪೌಲ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.02:26-27
- ಅಪೊ.ಕೃತ್ಯ.03:17-18
- ಯಾಜಕ.22:17-19
- ಲೂಕ.04:20-22
- ಮತ್ತಾಯ.01:22-23
- ಮತ್ತಾಯ.05:17-18
- ಕೀರ್ತನೆ.116:12-15

ಸತ್ಯವೇದದಿಂದ ಉದಾಹರಣೆಗಳು:

- **_24:04** "ನೋಡಿರಿ ನಾನು ನಿಮ್ಮ ಬಳಿಗೆ ನನ್ನ ದೂತನನ್ನು ಕಳುಹಿಸುತ್ತಿದ್ದೇನೆ, ಅವನು ನಿಮ್ಮ ಮಾರ್ಗವನ್ನು ಸಿದ್ಧಪಡಿಸುವನು" ಎಂದು ಪ್ರವಾದಿಗಳು ಹೇಳಿದ್ದನ್ನು ಯೋಹಾನನು _ ನೇರವೆರಿಸಿದನು _.
- **_40:03** ಯೇಸುವಿನ ವಸ್ತ್ರಗಳಿಗಾಗಿ ಸೈನಿಕರು ಜೂಜಾಡಿದರು. ಅವರು ಈ ರೀತಿ ಮಾಡಿದಾಗ, "ಅವರ ಮಧ್ಯೆದಲ್ಲಿರುವ ನನ್ನ ವಸ್ತ್ರಗಳನ್ನು ಅವರು ವಿಂಗಡಿಸಿದರು, ಮತ್ತು ನನ್ನ ವಸ್ತ್ರಗಳಿಗಾಗಿ ಚೀಟು ಹಾಕಿದರು" ಎಂದು ಹೇಳಲ್ಪಟ್ಟ ಪ್ರವಾದನೆಯು ಅವರು **ನೆರವೇರಿಸಿದರು** _ .
- **_42:07** "ದೇವರ ವಾಕ್ಯದಲ್ಲಿ ನನ್ನ ಕುರಿತು ಬರೆಯಲ್ಪಟ್ಟ ಪ್ರತಿಯೊಂದು ತಪ್ಪದೇ **ನೆರವೇರಿಸಲ್ಪಡಬೇಕು** _ ಎಂದು ನಾನು ನಿಮಗೆ ಹೇಳಿದ್ದೇನು" ಎಂದು ಯೇಸು ಹೇಳಿದರು.
- **_43:05_** "ಅಂತ್ಯಕಾಲದಲ್ಲಿ ನಾನು ನನ್ನ ಆತ್ಮವನ್ನು ಸುರಿಸುತ್ತೇನೆ" ಎಂದು ದೇವರು ಹೇಳಿದ ಮಾತುಗಳು ಪ್ರವಾದಿಯಾದ ಯೋವೇಲನಿಂದ ಪ್ರವಾದಿಸಲ್ಪಟ್ಟವು.
- **_43:07** 'ನಿನ್ನ ಪವಿತ್ರನಿಗೆ ಕೊಳೆಯಲು ಬಿಡಲಾರೆ' ಎಂದು ಹೇಳುವ ಪ್ರವಾದನೆಯನ್ನು ಇದು **ನೆರವೇರಿಸಿತು** _."
- **_44:05** "ನೀನು ಮಾಡಿದ್ದನ್ನು ನೀನು ಅರ್ಥಮಾಡಿಕೊಳ್ಳದಿದ್ದರೂ, ಮೆಸ್ಸೀಯ ಶ್ರಮೆ ಹೊಂದಬೇಕು ಮತ್ತು ಸಾಯಬೇಕು ಎನ್ನುವ ಪ್ರವಾದನೆಗಳನ್ನು __ ನೆರವೇರಿಸುವುದಕ್ಕೆ __ ನಿನ್ನ ಕ್ರಿಯೆಗಳನ್ನು ದೇವರು ಉಪಯೋಗಿಸಿಕೊಂಡಿದ್ದಾರೆ.

ಪದ ಡೇಟಾ:

- Strong's: H1214, H5487, G1096, G4138

ನೇಮಕ, ನೇಮಕಗಳು, ನೇಮಿಸಲ್ಪಟ್ಟವನು

ಪದದ ಅರ್ಥವಿವರಣೆ:

“ನೇಮಕ” ಮತ್ತು “ನೇಮಿಸಲ್ಪಟ್ಟವನು” ಎನ್ನುವ ಪದಗಳು ಒಂದು ವಿಶೇಷವಾದ ಕೆಲಸವನ್ನು ಅಥವಾ ಪಾತ್ರವನ್ನು ನೆರವೇರಿಸಲು ಯಾರಾದರೊಬ್ಬರನ್ನು ಆಯ್ಕೆ ಮಾಡಿಕೊಳ್ಳುವದನ್ನು ಸೂಚಿಸುತ್ತದೆ.

- “ನೇಮಿಸಲ್ಪಟ್ಟಿರುವುದು” ಎಂದರೆ “ನಿತ್ಯಜೀವವನ್ನು ಹೊಂದುವುದಕ್ಕೆ ನೇಮಿಸಲ್ಪಟ್ಟವನು” ಎಂಬಂತೆ ಏನನ್ನಾದರೂ ಪಡೆದುಕೊಳ್ಳುವುದಕ್ಕೆ “ಆಯ್ಕೆ ಮಾಡಲ್ಪಟ್ಟವನು” ಎನ್ನುವದನ್ನೂ ಸೂಚಿಸುತ್ತದೆ. ಜನರು “ನಿತ್ಯಜೀವವನ್ನು ಹೊಂದಿಕೊಳ್ಳುವುದಕ್ಕೆ ನೇಮಿಸಲ್ಪಟ್ಟಿದ್ದಾರೆ” ಎನ್ನುವ ಮಾತಿಗೆ, ಅವರು ನಿತ್ಯಜೀವವನ್ನು ಪಡೆದುಕೊಳ್ಳುವುದಕ್ಕೆ ಆಯ್ಕೆಯಾಗಿದ್ದಾರೆ ಎಂದರ್ಥವನ್ನು ಕೊಡುತ್ತದೆ.
- “ನೇಮಿಸಲ್ಪಟ್ಟ ಸಮಯ” ಎನ್ನುವ ಮಾತು ಏನಾದರು ಮಾಡಲು ದೇವರು “ಆಯ್ಕೆ ಮಾಡಿಕೊಂಡ ಸಮಯ” ಅಥವಾ “ಯೋಜಿತ ಸಮಯ” ವನ್ನು ಸೂಚಿಸುತ್ತದೆ.

“ನೇಮಕ” ಎನ್ನುವ ಪದವು ಯಾರಾದರೊಬ್ಬರು ಎನಾದರೊಂದು ಕೆಲಸವನ್ನು ಮಾಡುವುದಕ್ಕೆ ಅವರನ್ನು “ಆಜ್ಞಾಪಿಸು” ಅಥವಾ “ನಿಯೋಜಿಸು” ಎನ್ನುವ ಅರ್ಥವನ್ನೂ ಕೊಡುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಗುಣವಾಗಿ, “ನೇಮಕ” ಎನ್ನುವ ಪದವನ್ನು ಅನುವಾದ ಮಾಡುವುದರಲ್ಲಿ “ಆಯ್ಕೆ ಮಾಡು” ಅಥವಾ “ನಿಯೋಜಿಸು” ಅಥವಾ “ಸಂಪ್ರದಾಯಿಕವಾಗಿ ಆಯ್ಕೆ ಮಾಡು” ಅಥವಾ “ಆರಿಸು” ಎನ್ನುವ ಪದಗಳನ್ನೂ ಸೇರಿಸಬಹುದು.
- “ನೇಮಿಸಲ್ಪಟ್ಟವನು” ಎನ್ನುವ ಪದವನ್ನು “ನಿಯೋಜಿಸಲ್ಪಟ್ಟಿದೆ” ಅಥವಾ “ಯೋಜಿಸಲ್ಪಟ್ಟಿದೆ” ಅಥವಾ “ವಿಶೇಷವಾಗಿ ಆಯ್ಕೆ ಮಾಡಲ್ಪಟ್ಟಿದೆ” ಎಂಬುದಾಗಿಯೂ ಅನುವಾದ ಮಾಡಬಹುದು.
- “ನೇಮಿಸಲ್ಪಟ್ಟವನಾಗಿ” ಎನ್ನುವ ಮಾತು “ಆಯ್ಕೆ ಮಾಡಲ್ಪಟ್ಟವನಾಗಿ” ಎಂಬುದಾಗಿಯೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.08:10-12
- ಅಪೊ.ಕೃತ್ಯ.03:19-20
- ಅಪೊ.ಕೃತ್ಯ.06:2-4
- ಅಪೊ.ಕೃತ್ಯ.13:48-49
- ಆದಿ.41:33-34
- ಅರಣ್ಯ.03:9-10

ಪದ ಡೇಟಾ:

- Strong's: H561, H977, H2163, H2296, H2706, H2708, H2710, H3198, H3245, H3259, H3677, H3983, H4150, H4151, H4152, H4487, H4662, H5324, H5344, H5414, H5567, H5975, H6310, H6485, H6565, H6635, H6680, H6923, H6942, H6966, H7760, H7896, G322, G606, G1299, G1303, G1935, G2525, G2749, G4287, G4384, G4929, G5021, G5087

ನ್ಯಾಯ, ನ್ಯಾಯವಾದ, ಅನ್ಯಾಯ, ಅನ್ಯಾಯವಾಗಿ, ಸಮರ್ಥಿಸಿ, ಸಮರ್ಥನೆ ಮಾಡುವುದು

ಪದದ ಅರ್ಥವಿವರಣೆ:

“ನ್ಯಾಯ” ಮತ್ತು “ನ್ಯಾಯವಾದ” ಎನ್ನುವ ಪದಗಳು ದೇವರ ನ್ಯಾಯಶಾಸನಗಳ ಪ್ರಕಾರ ಜನರನ್ನು ಸರಿಯಾಗಿ ನೋಡಿಕೊಳ್ಳುವುದನ್ನು ಸೂಚಿಸುತ್ತದೆ. ಇತರ ಜನರು ಕೂಡ ನ್ಯಾಯವಂತರೆಂದು ಅವರ ವಿಷಯದಲ್ಲಿ ಸರಿಯಾದ ವರ್ತನೆಯ ದೇವರ ಸ್ಥಿರತೆಯನ್ನು ಮಾನವ ಕಾನೂನುಗಳೂ ಪ್ರತಿಬಿಂಬಿಸುತ್ತವೆ.

- “ನ್ಯಾಯವಾಗಿ” ಇರುವುದು ಎಂದರೆ ಇತರರ ವಿಷಯದಲ್ಲಿ ಸರಿಯಾದ ವಿಧಾನದಲ್ಲಿರುವ ಮತ್ತು ಚೆನ್ನಾಗಿರುವ ಕ್ರಿಯೆಗಳನ್ನು ಮಾಡುವುದು ಎಂದರ್ಥ. ದೇವರ ದೃಷ್ಟಿಯಲ್ಲಿ ನೈತಿಕವಾಗಿರುವ ಸರಿಯಾದದ್ದನ್ನೇ ಮಾಡುವುದಕ್ಕೆ ಯಥಾರ್ಥತೆಯನ್ನು ಮತ್ತು ಸಮಗ್ರತೆಯನ್ನು ಸೂಚಿಸುತ್ತದೆ.
- “ನ್ಯಾಯವಾಗಿ” ನಡೆದುಕೊಳ್ಳುವುದು ಎನ್ನುವುದಕ್ಕೆ ದೇವರ ನ್ಯಾಯಶಾಸನಗಳ ಪ್ರಕಾರ ಸರಿಯಾದ, ಒಳ್ಳೇಯದಾದ ಮತ್ತು ನಿಖರವಾದ ವಿಧಾನದಲ್ಲಿ ಜನರೊಂದಿಗೆ ವರ್ತಿಸುವುದು ಎಂದರ್ಥ.
- “ನ್ಯಾಯವಾದ-ನಡತೆ”ಯನ್ನು ಪಡೆದುಕೊಳ್ಳುವುದು ಎನ್ನುವುದಕ್ಕೆ ಕಾನೂನಿನ ಕೆಳಗೆ ಸರಿಯಾಗಿ ನಡೆಸಲ್ಪಡುವುದು ಎಂದರ್ಥ, ಅದು ಕಾನೂನುಗಳಿಂದ ಸಂರಕ್ಷಿಸಲ್ಪಡಬಹುದು ಅಥವಾ ಕಾನೂನು ಉಲ್ಲಂಘನೆ ಮಾಡಿದ್ದಕ್ಕಾಗಿ ಶಿಕ್ಷೆಯನ್ನು ಪಡೆಯುವುದೂ ಆಗಿರಬಹುದು.
- ಕೆಲವೊಂದುಬಾರಿ “ನ್ಯಾಯ” ಎನ್ನುವ ಪದವು “ನೀತಿಯುತ” ಅಥವಾ “ದೇವರ ನ್ಯಾಯಶಾಸನಗಳನ್ನು ಅನುಸರಿಸುವುದು” ಎನ್ನುವ ವಿಶಾಲ ಅರ್ಥವನ್ನು ಹೊಂದಿರುತ್ತದೆ.

“ಅನ್ಯಾಯ” ಮತ್ತು “ಅನ್ಯಾಯವಾಗಿ” ಎನ್ನುವ ಪದಗಳು ಜನರ ವಿಷಯದಲ್ಲಿ ಸರಿಯಾಗಿ ನಡೆದುಕೊಳ್ಳದ ಪದ್ಧತಿಯನ್ನು ಮತ್ತು ಅವರಿಗೆ ಹಾನಿಯನ್ನುಂಟು ಮಾಡುವ ವರ್ತನೆಯನ್ನು ಸೂಚಿಸುತ್ತದೆ.

- “ಅಧರ್ಮ” ಎನ್ನುವ ಪದವು ಒಬ್ಬ ವ್ಯಕ್ತಿ ಕೆಟ್ಟದ್ದನ್ನು ಅನುಭವಿಸುವದಕ್ಕೆ ಅರ್ಹನಾಗದಿದ್ದರೂ ಅವನಿಗೆ ಕೆಟ್ಟದ್ದೇ ನಡೆಯುವದನ್ನು ಸೂಚಿಸುತ್ತದೆ ಇದು ಜನರ ವಿಷಯದಲ್ಲಿ ಸರಿಯಾಗಿ ನೋಡಿಕೊಳ್ಳದ ವಿಧಾನವನ್ನು ಸೂಚಿಸುತ್ತದೆ.
- ಅನ್ಯಾಯ ಎನ್ನುವುದಕ್ಕೆ ಕೆಲವೊಂದು ಜನರನ್ನು ಚೆನ್ನಾಗಿ ನೋಡಿಕೊಳ್ಳುತ್ತಿರುವಾಗ, ಇನ್ನೂ ಕೆಲವರನ್ನು ಕೆಟ್ಟದ್ದಾಗಿ ನೋಡಿಕೊಳ್ಳುವ ಅರ್ಥವು ಇರುತ್ತದೆ.
- ಅನ್ಯಾಯವಾದ ರೀತಿಯಲ್ಲಿ ಯಾರಾದರೂ ನಡೆದುಕೊಳ್ಳುತ್ತಿದ್ದರೆ, ಅವರು “ಪಕ್ಷಪಾತಿಯಾಗಿರುತ್ತಾನೆ” ಅಥವಾ “ದುಷ್ಟ ಆಲೋಚನೆಯನ್ನು ಹೊಂದಿರುತ್ತಾನೆ”, ಯಾಕಂದರೆ ಅವನು ಜನರ ವಿಷಯದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಾಯಿಲ್ಲ.

“ಸಮರ್ಥಿಸು” ಮತ್ತು “ಸಮರ್ಥನೆ ಮಾಡು” ಎನ್ನುವ ಪದಗಳು ಅಪರಾಧಿಯಾಗಿರುವ ಒಬ್ಬ ವ್ಯಕ್ತಿಯನ್ನು ನೀತಿವಂತನನ್ನಾಗಿ ಮಾಡುವುದನ್ನು ಸೂಚಿಸುತ್ತದೆ. ದೇವರೊಬ್ಬನೇ ಪ್ರತಿಯೊಬ್ಬ ಮನುಷ್ಯನನ್ನು ನೀತಿವಂತರನ್ನಾಗಿ ಸಮರ್ಥಿಸುವವನಾಗಿರುತ್ತಾನೆ.

- ದೇವರು ಜನರನ್ನು ನೀತಿವಂತರನ್ನಾಗಿ ಸಮರ್ಥಿಸಿದಾಗ, ಆತನು ಅವರ ಪಾಪಗಳನ್ನು ಕ್ಷಮಿಸುವನು ಮತ್ತು ಅವರನ್ನು ಪಾಪರಹಿತರಾದ ಜನರನ್ನಾಗಿ ಮಾಡಿದನು. ಆತನು ಜನರು ಮಾಡಿದ ಪಾಪಗಳಿಂದ ರಕ್ಷಿಸಲು ಯೇಸುವಿನಲ್ಲಿ ಭರವಸೆವಿಟ್ಟು ಪಶ್ಚಾತ್ತಾಪಪಡುವ ಪ್ರತಿ ಪಾಪಿಯನ್ನು ಸಮರ್ಥಿಸುವನು ಅಥವಾ ನೀತಿವಂತರನ್ನಾಗಿ ಮಾಡುವನು.
- “ಸಮರ್ಥಿಸುವುದು” ಎನ್ನುವುದು ದೇವರು ಜನರ ಪಾಪಗಳನ್ನು ಕ್ಷಮಿಸುವಾಗ ಮಾಡುವ ಕೆಲಸವನ್ನು ಮತ್ತು ಆತನ ದೃಷ್ಟಿಯಲ್ಲಿ ಆ ವ್ಯಕ್ತಿಯನ್ನು ನೀತಿವಂತನನ್ನಾಗಿ ನಿರ್ಣಯಿಸುವುದನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ನ್ಯಾಯ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ನೈತಿಕವಾಗಿ ಸರಿಯಾದದ್ದು” ಅಥವಾ “ನ್ಯಾಯೋಚಿತ” ಎಂದೂ ಅನುವಾದ ಮಾಡಬಹುದು.
- “ನ್ಯಾಯವಾದ” ಎನ್ನುವ ಪದವನ್ನು “ನ್ಯಾಯೋಚಿತವಾದ ನಡವಳಿಕೆ” ಅಥವಾ “ಅರ್ಹ ಪರಿಣಾಮಗಳು” ಎಂದೂ ಅನುವಾದ ಮಾಡಬಹುದು.
- “ನ್ಯಾಯವಾಗಿ ನಡೆದುಕೊಳ್ಳುವುದು” ಎನ್ನುವ ಪದವನ್ನು “ನ್ಯಾಯೋಚಿತವಾಗಿ ನಡೆದುಕೊಳ್ಳಿರಿ” ಅಥವಾ “ನ್ಯಾಯವಾದ ವಿಧಾನದಲ್ಲಿ ವರ್ತಿಸುವುದು” ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಸಂದರ್ಭಗಳಲ್ಲಿ, “ನ್ಯಾಯ” ಎನ್ನುವ ಪದವನ್ನು “ನೀತಿಯುತ” ಅಥವಾ “ಪ್ರಾಮಾಣಿಕ” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, “ಅನ್ಯಾಯ” ಎನ್ನುವ ಪದವನ್ನು “ಅನ್ಯಾಯೋಚಿತ” ಅಥವಾ “ಪಕ್ಷಪಾತ” ಅಥವಾ “ಅನೀತಿವಂತ” ಎಂದೂ ಅನುವಾದ ಮಾಡಬಹುದು.
- “ಅನ್ಯಾಯ” ಎನ್ನುವ ಮಾತನ್ನು “ಅನ್ಯಾಯಸ್ಥರು” ಅಥವಾ “ಅನ್ಯಾಯ ಜನರು” ಅಥವಾ “ಇತರರನ್ನು ಚೆನ್ನಾಗಿ ನೋಡಿಕೊಳ್ಳದ ಜನರು” ಅಥವಾ “ಅನೀತಿವಂತರಾದ ಜನರು” ಅಥವಾ “ದೇವರಿಗೆ ಅವಿಧೇಯರಾಗಿರುವ ಜನರು” ಎಂದೂ ಅನುವಾದ ಮಾಡಬಹುದು.
- “ಅನ್ಯಾಯವಾಗಿ” ಎನ್ನುವ ಪದವನ್ನು “”ಅನ್ಯಾಯವಾದ ನಡತೆಯಲ್ಲಿ” ಅಥವಾ “ತಪ್ಪಾಗಿ” ಅಥವಾ “ಅನ್ಯಾಯೋಚಿತವಾಗಿ” ಎಂದೂ ಅನುವಾದ ಮಾಡಬಹುದು.
- “ಅನ್ಯಾಯ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ, “ತಪ್ಪಾಗಿ ನಡೆದುಕೊಳ್ಳುವುದು” ಅಥವಾ “ಅನ್ಯಾಯೋಚಿತವಾಗಿ ಕ್ರಿಯೆಗಳನ್ನು ಮಾಡುವುದು” ಎನ್ನುವ ಮಾತುಗಳು ಸೇರಿಸಬಹುದು. (ನೋಡಿರಿ: ಅಮೂರ್ತ ನಾಮಪದಗಳು)
- “ಸಮರ್ಥಿಸು” ಎನ್ನುವ ಮಾತನ್ನು ಅನುವಾದ ಬೇರೊಂದು ವಿಧಾನಗಳಲ್ಲಿ, “ಒಬ್ಬರನ್ನು ನೀತಿವಂತರನ್ನಾಗಿ ಪ್ರಕಟಿಸುವುದು” ಅಥವಾ “ಒಬ್ಬರನ್ನು ನೀತಿವಂತರನ್ನಾಗಿ ಮಾಡುವುದು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

- 'ಸಮರ್ಥನೆ ಮಾಡುವುದು" ಎನ್ನುವ ಮಾತು "ನೀತಿಯನ್ನು ಪ್ರಕಟಿಸುವುದು" ಅಥವಾ "ನೀತಿವಂತರಾಗುವುದು" ಅಥವಾ "ನೀತಿಯುತವಾಗಿ ಜನರನ್ನು ಮಾಡುವುದು" ಎಂದೂ ಅನುವಾದ ಮಾಡಬಹುದು.
- "ಸಮರ್ಥನೆ ಮಾಡುವುದರಲ್ಲಿ ಫಲಿಸುವುದು" ಎನ್ನುವ ಮಾತನ್ನು "ದೇವರು ಅನೇಕಮಂದಿ ಜನರನ್ನು ನೀತಿವಂತರನ್ನಾಗಿ ಸಮರ್ಥಿಸಿದ್ದಾನೆ" ಅಥವಾ "ಇದರಿಂದ ದೇವರು ಜನರನ್ನು ನೀತಿವಂತರನ್ನಾಗಿ ಮಾಡಿದನು" ಎಂದೂ ಅನುವಾದ ಮಾಡಬಹುದು.
- "ನಮ್ಮ ಸಮರ್ಥನೆಯಲ್ಲಿ" ಎನ್ನುವ ಮಾತನ್ನು "ದೇವರಿಂದ ನಾವು ನೀತಿವಂತರಾಗುವ ಕ್ರಮದಲ್ಲಿ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕ್ಷಮಿಸು, ಅಪರಾಧ, ತೀರ್ಪು ಮಾಡು, ನೀತಿ, ನೀತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.44:16
- 1 ಪೂರ್ವ.18:14
- ಯೆಶಯಾ.04:4
- ಯೆರೆ.22:03
- ಯೆಹೆ.18:16-17
- ಮೀಕಾ.03:8
- ಮತ್ತಾಯ.05:43-45
- ಮತ್ತಾಯ.11:19
- ಮತ್ತಾಯ.23:23-24
- ಲೂಕ.18:03
- ಲೂಕ.18:08
- ಲೂಕ.18:13-14
- ಲೂಕ.21:20-22
- ಲೂಕ.23:41
- ಅಪೊ.ಕೃತ್ಯ.13:38-39
- ಅಪೊ.ಕೃತ್ಯ.28:04
- ರೋಮಾ.04:1-3
- ಗಲಾತ್ಯ.03:9
- ಗಲಾತ್ಯ.03:11
- ಗಲಾತ್ಯ.05:3-4
- ತೀತ.03:6-7
- ಇಬ್ರಿ.06:10
- ಯಾಕೋಬ.02:24
- ಪ್ರಕ.15:3-4

ಸತ್ಯವೇದದಿಂದ ಉದಾಹರಣೆಗಳು:

- **17:09** ದಾವೀದನು _ ನ್ಯಾಯವಾಗಿ _ ಆಳಿದನು ಮತ್ತು ಅನೇಕ ವರ್ಷಗಳ ಕಾಲ ನಂಬಿಗಸ್ತನಾಗಿದ್ದನು ಮತ್ತು ದೇವರು ಆತನನ್ನು ಆಶೀರ್ವಾದ ಮಾಡಿದನು.
- **18:13** ಯೂದಾ ಅರಸರಲ್ಲಿ ಕೆಲವರು _ ನ್ಯಾಯವಾಗಿ _ ಅಳಿದ ಒಳ್ಳೇಯ ಮನುಷ್ಯರಿದ್ದರು ಮತ್ತು ದೇವರನ್ನು ಆರಾಧನೆ ಮಾಡಿದ್ದರು.
- **19:16** ವಿಗ್ರಹಾರಾಧನೆ ನಿಲ್ಲಿಸಬೇಕೆಂದು, ಇತರರ ವಿಷಯದಲ್ಲಿ ಕರುಣೆ ತೋರಿಸುವುದನ್ನು ಮತ್ತು _ ನ್ಯಾಯವಾಗಿ _ ನಡೆದುಕೊಳ್ಳುವುದನ್ನು ಆರಂಭಿಸಬೇಕೆಂದು ಅವರು (ಪ್ರವಾದಿಗಳು) ಜನರೆಲ್ಲರಿಗೆ ಹೇಳಿದರು.
- **50:17** ಯೇಸು ಸಮಾಧಾನದಿಂದ, _ ನ್ಯಾಯದಿಂದ _ ಆತನ ರಾಜ್ಯವನ್ನು ಆಳುವನು ಮತ್ತು ಆತನು ತನ್ನ ಜನರೊಂದಿಗೆ ಯಾವಾಗಲೂ ಇರುವನು

ಪದ ಡೇಟಾ:

- Strong's: H205, H2555, H3477, H4941 H5765, H5766, H5767, H6662, H6663, H6664, H6666, H8003, H8264, H8636, G91, G93, G94, G1342, G1344, G1345, G1346, G1347, G1738

ಪಂಚಾಶತ್ತಮ, ವಾರಗಳ ಹಬ್ಬಗಳ

ಸತ್ಯಾಂಶಗಳು:

"ವಾರಗಳ ಹಬ್ಬಗಳು" ಎನ್ನುವುದು ಪಸ್ಕ ಹಬ್ಬ ಆದನಂತರ ಐವತ್ತು ದಿನಗಳವರೆಗೂ ಆಚರಿಸುವ ಯೆಹೂದ್ಯ ಹಬ್ಬವಾಗಿರುತ್ತದೆ. ಕೆಲವು ಕಾಲವಾದನಂತರ ಇದನ್ನು "ಪಂಚಾಶತ್ತಮ" ಎಂದು ಸೂಚಿಸುತ್ತಾರೆ.

- ವಾರಗಳ ಹಬ್ಬ ಎನ್ನುವುದು ಪ್ರಥಮ ಫಲಗಳ ಹಬ್ಬ ಆದನಂತರ ಏಳು ವಾರಗಳ (ಐವತ್ತು ದಿನಗಳು) ವರೆಗೆ ನಡೆಯುವ ಹಬ್ಬವಾಗಿರುತ್ತದೆ. ಹೊಸ ಒಡಂಬಡಿಕೆ ಕಾಲದಲ್ಲಿ ಈ ಹಬ್ಬವನ್ನು "ಪಂಚಾಶತ್ತಮ" ಎಂದು ಕರೆಯುತ್ತಾರೆ, ಈ ಪದಕ್ಕೆ "ಐವತ್ತು" ಎಂದರ್ಥವಾಗಿರುತ್ತದೆ.
- ವಾರಗಳ ಹಬ್ಬ ಎನ್ನುವುದನ್ನು ಧಾನ್ಯದ ಕೊಯ್ಲಿನ ಆರಂಭವನ್ನು ಆಚರಿಸುವುದಕ್ಕೆ ಇಟ್ಟಿರುತ್ತಾರೆ. ದೇವರು ಮೊಟ್ಟಮೊದಲಾಗಿ ಮೋಶೆಗೆ ಶಿಲಾಶಾಸನಗಳ ಮೇಲೆ ಇಸ್ರಾಯೇಲ್ಯರಿಗೆ ಕೊಟ್ಟ ಧರ್ಮಶಾಸ್ತ್ರವನ್ನು ನೆನಪಿಸಿಕೊಳ್ಳುವ ಸಂದರ್ಭವನ್ನೂ ಸೂಚಿಸುತ್ತದೆ.
- ಹೊಸ ಒಡಂಬಡಿಕೆಯಲ್ಲಿ, ಪಂಚಾಶತ್ತಮ ದಿನವು ವಿಶೇಷವಾದ ಸಂದರ್ಭವಾಗಿರುತ್ತದೆ ಯಾಕಂದರೆ ಒಂದು ವಿಶೇಷವಾದ ವಿಧಾನದಲ್ಲಿ ಯೇಸುವಿನ ವಿಶ್ವಾಸಿಗಳು ಪವಿತ್ರಾತ್ಮನನ್ನು ಪಡೆದುಕೊಂಡಿರುವ ಸಂದರ್ಭವಾಗಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ: ಹಬ್ಬ, ಪ್ರಥಮ ಫಲಗಳು, ಕೊಯ್ಲು, ಪವಿತ್ರಾತ್ಮ, ಎಬ್ಬಿಸು)

ಸತ್ಯವೇದದ ವಾಕ್ಯಗಳು:

- 2 ಪೂರ್ವ 8:12-13
- ಅಪೊ.ಕೃತ್ಯ 2:4
- ಅಪೊ.ಕೃತ್ಯ 20:15-16
- ಧರ್ಮೋ 16:16-17
- ಅರಣ್ಯ 28:26

ಪದ ಡೇಟಾ:

- Strong's: H2282, H7620, G40050

ಪರಲೋಕ, ಆಕಾಶ, ಪರಲೋಕಗಳು, ಪರಲೋಕದ

ಪದದ ಅರ್ಥವಿವರಣೆ:

“ಪರಲೋಕ” ಎನ್ನುವ ಪದವು ಸಹಜವಾಗಿ ದೇವರು ನಿವಾಸ ಸ್ಥಳವನ್ನು ಸೂಚಿಸುತ್ತದೆ. ಅದೇ ಪದವು ಸಂದರ್ಭಾನುಗುಣವಾಗಿ “ಆಕಾಶ” ಎಂದೂ ಅರ್ಥ ಕೊಡುತ್ತದೆ.

- “ಪರಲೋಕಗಳು” ಎಂಬ ಪದವು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಸೇರಿದಂತೆ ಭೂಮಿಯ ಮೇಲೆ ನಾವು ನೋಡುವ ಎಲ್ಲವನ್ನೂ ಸೂಚಿಸುತ್ತದೆ. ಇದು ಭೂಮಿಯಿಂದ ನಾವು ನೇರವಾಗಿ ನೋಡಲಾಗದ ದೂರದ ಗ್ರಹಗಳಂತಹ ಪರಲೋಕದ ದೇಹಗಳನ್ನು ಸಹ ಒಳಗೊಂಡಿದೆ.
- “ಆಕಾಶ” ಎಂಬ ಪದವು ಭೂಮಿಯ ಮೇಲಿರುವ ನೀಲಿ ವಿಸ್ತಾರವನ್ನು ಮೋಡಗಳು ಮತ್ತು ನಾವು ಉಸಿರಾಡುವ ಗಾಳಿಯನ್ನು ಸೂಚಿಸುತ್ತದೆ. ಆಗಾಗ್ಗೆ ಸೂರ್ಯ ಮತ್ತು ಚಂದ್ರರನ್ನು "ಆಕಾಶದಲ್ಲಿ" ಎಂದು ಹೇಳಲಾಗುತ್ತದೆ.
- ಸತ್ಯವೇದದಲ್ಲಿನ ಕೆಲವು ಸಂದರ್ಭಗಳಲ್ಲಿ, “ಪರಲೋಕ” ಎಂಬ ಪದವು ಆಕಾಶ ಅಥವಾ ದೇವರು ವಾಸಿಸುವ ಸ್ಥಳವನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಮತ್ತಾಯನ ಪುಸ್ತಕದಲ್ಲಿನ “ಪರಲೋಕದ ರಾಜ್ಯ” ಕ್ಕೆ, “ಪರಲೋಕ” ಎಂಬ ಪದವನ್ನು ಇಟ್ಟುಕೊಳ್ಳುವುದು ಉತ್ತಮ, ಏಕೆಂದರೆ ಇದು ಮತ್ತಾಯನ ಸುವಾರ್ತೆಗೆ ವಿಶಿಷ್ಟವಾಗಿದೆ.
- “ಪರಲೋಕಗಳು” ಅಥವಾ “ಪರಲೋಕದ ದೇಹಗಳು” ಎಂಬ ಪದಗಳನ್ನು “ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು” ಅಥವಾ “ವಿಶ್ವದಲ್ಲಿನ ಎಲ್ಲಾ ನಕ್ಷತ್ರಗಳು” ಎಂದೂ ಅನುವಾದಿಸಬಹುದು.
- “ಪರಲೋಕದ ನಕ್ಷತ್ರಗಳು” ಎಂಬ ಮಾತನ್ನು “ಆಕಾಶದಲ್ಲಿನ ನಕ್ಷತ್ರಗಳು” ಅಥವಾ “ತಾರಾಂಗಣದ ನಕ್ಷತ್ರಗಳು” ಅಥವಾ “ವಿಶ್ವದಲ್ಲಿನ ನಕ್ಷತ್ರಗಳು” ಎಂದು ಅನುವಾದಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ದೇವರ ರಾಜ್ಯ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.08:22-24
- 1 ಥೆಸ್ಸ.01:8-10
- 1 ಥೆಸ್ಸ.04:17
- ಧರ್ಮೋ.09:01
- ಎಫೆಸ.06:9
- ಆದಿ.01:01
- ಆದಿ.07:12
- ಯೋಹಾನ.03:13
- ಯೋಹಾನ.03:27
- ಮತ್ತಾಯ.05:18
- ಮತ್ತಾಯ.05:46-48

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **04:02** ಅವರು _ ಆಕಾಶವನ್ನು _ ತಲುಪುವುದಕ್ಕೆ ದೊಡ್ಡ ಗೋಪುರವನ್ನು ನಿರ್ಮಿಸುವುದಕ್ಕೆ ಆರಂಭಿಸಿದರು.
- **14:11** ಆತನು (ದೇವರು)_ ಪರಲೋಕದಿಂದ _ ಆಹಾರವನ್ನು ಕೊಟ್ಟನು, ಇದನ್ನು “ಮನ್ನ” ಎಂದು ಕರೆಯುತ್ತಾರೆ.
- **23:07** ಆಕಸ್ಮಿಕವಾಗಿ, ದೇವರನ್ನು ಸ್ತುತಿಸುವ ದೂತರಗಳೊಂದಿಗೆ ಆಕಾಶಗಳು ತುಂಬಿಸಲ್ಪಟ್ಟವು, ಅವೆಲ್ಲವೂ “_ ಪರಲೋಕದಲ್ಲಿರುವ _ ದೇವರಿಗೆ ಮಹಿಮೆ ಉಂಟಾಗಲಿ ಮತ್ತು ಭೂಮಿಯ ತನಗೆ ಇಷ್ಟವಾದ ಜನರಿಗೆ ಸಮಾಧಾನ ಉಂಟಾಗಲಿ” ಎಂದು ಹೇಳುತ್ತಿದ್ದವು.
- **29:09** “ನಿಮ್ಮ ಹೃದಯದಿಂದ ನಿಮ್ಮ ಸಹೋದರನನ್ನು ಕ್ಷಮಿಸದಿದ್ದರೆ ನಿಮ್ಮಲ್ಲಿರುವ ಪ್ರತಿಯೊಬ್ಬರಿಗೆ ನನ್ನ _ ಪರಲೋಕದ _ ತಂದೆ ಇದನ್ನೇ ಮಾಡುತ್ತಾನೆ” ಎಂದು ಯೇಸು ಹೇಳಿದರು.
- **37:09** ಆದನಂತರ ಯೇಸು _ ಪರಲೋಕದ _ ಕಡೆಗೆ ನೋಡಿ, “ತಂದೆಯೇ, ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕಾಗಿ ನಿಮಗೆ ವಂದನೆಗಳು” ಎಂದು ಹೇಳಿದನು.
- **42:11** ಆದನಂತರ ಯೇಸು _ ಪರಲೋಕಕ್ಕೆ _ ಹೋದನು, ಮತ್ತು ಅವರು ನೋಡುತ್ತಿರುವಾಗಲೇ ಮೇಘವು ಆತನನ್ನು ಆವರಿಸಿತು.

ಪದ ಡೇಟಾ:

- Strong's: H1534, H6160, H6183, H7834, H8064, H8065, G932, G2032, G3321, G3770, G3771, G3772

ಪರಾತ್ಪರನು

ಸತ್ಯಾಂಶಗಳು:

“ಪರಾತ್ಪರನು” ಎನ್ನುವ ಪದವು ದೇವರಿಗೆ ಬಿರುದಾಗಿರುತ್ತದೆ. ಇದು ಆತನ ಔನ್ನತ್ಯವನ್ನು ಅಥವಾ ಅಧಿಕಾರವನ್ನು ಸೂಚಿಸುತ್ತದೆ.

- ಈ ಪದಕ್ಕಿರುವ ಅರ್ಥವೂ “ಸಾರ್ವಭೌಮಾಧಿಕಾರ” ಅಥವಾ “ಸರ್ವೋಚ್ಚ” ಎನ್ನುವ ಪದಗಳಿಗಿರುವ ಅರ್ಥವನ್ನೇ ಹೊಂದಿರುತ್ತದೆ.
- “ಪರಾತ್ಪರ” ಎನ್ನುವ ಈ ಬಿರುದು ಭೌತಿಕವಾದ ಎತ್ತರವನ್ನು ಅಥವಾ ದೂರವನ್ನು ಸೂಚಿಸುವುದಿಲ್ಲ. ಈ ಪದವು ಆತನ ಅತ್ಯಧಿಕ ಮಹತ್ವವನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಈ ಪದವನ್ನು “ಪರಾತ್ಪರ ದೇವರು” ಅಥವಾ “ಅತ್ಯುನ್ನತ ಸರ್ವೋಚ್ಚ ಸ್ಥಾನವಿರುವವನು” ಅಥವಾ “ದೇವರಾಗಿರುವ ಪರಾತ್ಪರನು” ಅಥವಾ “ಮಹತ್ವವುಳ್ಳವನು” ಅಥವಾ “ಸರ್ವೋನ್ನತನು” ಅಥವಾ “ಎಲ್ಲಾವುದಕ್ಕಿಂತ ದೊಡ್ಡವನಾಗಿರುವ ದೇವರು” ಎಂದೂ ಅನುವಾದ ಮಾಡಬಹುದು.
- “ಸರ್ವೋನ್ನತನು” ಎನ್ನುವ ಪದವನ್ನು ಉಪಯೋಗಿಸಿದಾಗ, ಇದು ಭೌತಿಕವಾದ ಎತ್ತರವನ್ನು ಸೂಚಿಸದಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ದೇವರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:47-50
- ಅಪೊ.ಕೃತ್ಯ.16:16-18
- ದಾನಿ.04:17-18
- ಧರ್ಮೋ.32:7-8
- ಆದಿ.14:17-18
- ಇಬ್ರಿ.07:1-3
- ಹೋಶೆಯ.07:16
- ಪ್ರಲಾಪ.03:34-36
- ಲೂಕ.01:30-33

ಪದ ಡೇಟಾ:

- Strong's: H5945, G5310

ಪರಿಶುದ್ಧ ಸ್ಥಳ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ ಕಂಡುಬರುವ "ಪರಿಶುದ್ಧ ಸ್ಥಳ" ಮತ್ತು "ಅತಿ ಪರಿಶುದ್ಧ ಸ್ಥಳ" ಎನ್ನುವ ಪದಗಳು ಗುಡಾರ ಅಥವಾ ದೇವಾಲಯ ಭವನದ ಎರಡು ಭಾಗಗಳನ್ನು ಸೂಚಿಸುತ್ತದೆ.

- "ಪರಿಶುದ್ಧ" ಸ್ಥಳವು ಮೊದಲನೇ ಭಾಗ (ಅಥವಾ ಮೊದಲನೇ ಕೊಠಡಿ), ಇದರಲ್ಲಿ ಧೂಪವೇದಿ ಮತ್ತು ವಿಶೇಷವಾದ ಮೇಜಿನ ಮೇಲೆ "ಸಮ್ಮುಖದ ನೈವೇದ್ಯದ ರೊಟ್ಟಿಗಳು" ಇಡಲ್ಪಟ್ಟಿರುತ್ತವೆ.
- "ಅತಿ ಪರಿಶುದ್ಧ ಸ್ಥಳ" ಎರಡನೇ ಭಾಗವಾಗಿರುತ್ತದೆ, ಅದು ಒಳಗಡೆ ಇರುವ ಕೊಠಡಿ, ಮತ್ತು ಅದರಲ್ಲಿ ಒಡಂಬಡಿಕೆಯ ಮಂಜೂಷವನ್ನು ಇಟ್ಟಿರುತ್ತಾರೆ.
- ತುಂಬಾ ದಪ್ಪವಾಗಿರುವ, ಒಜೆಯಾಗಿರುವ ಒಂದು ತೆರೆ ಒಳಗಡೆ ಕೊಠಡಿಯನ್ನು ಮತ್ತು ಹೊರಗಿನ ಕೊಠಡಿಯನ್ನು ಬೇರ್ಪಡಿಸುತ್ತದೆ.
- ಮಹಾ ಯಾಜಕನು ಮಾತ್ರವೇ ಅತಿ ಪರಿಶುದ್ಧ ಸ್ಥಳಕ್ಕೆ ಹೋಗಲು ಅನುಮತಿ ಹೊಂದಿರುತ್ತಾನೆ.
- ಕೆಲವೊಂದುಬಾರಿ "ಪರಿಶುದ್ಧ ಸ್ಥಳ" ಎನ್ನುವ ಮಾತು ಗುಡಾರದ ಅಥವಾ ದೇವಾಲಯದ ಅಂಗಳದ ಆವರಣವನ್ನು ಮತ್ತು ಭವನವನ್ನೂ ಸೂಚಿಸುತ್ತದೆ. ದೇವರಿಗೆ ಪ್ರತ್ಯೇಕಿಸಿರುವ ಯಾವುದೇ ಸ್ಥಳವನ್ನು ಸಾಧಾರಣವಾಗಿ ಈ ಪದವು ಸೂಚಿಸುತ್ತದೆ.

ಅನುವಾದ ಸಲಹೆಗಳು:

- "ಪರಿಶುದ್ಧ ಸ್ಥಳ" ಎನ್ನುವ ಪದವನ್ನು "ದೇವರಿಗೆ ಪ್ರತ್ಯೇಕಿಸಿರುವ ಕೊಠಡಿ" ಅಥವಾ "ದೇವರನ್ನು ಭೇಟಿ ಮಾಡುವುದಕ್ಕೆ ವಿಶೇಷವಾದ ಕೊಠಡಿ" ಅಥವಾ "ದೇವರಿಗಾಗಿ ಕಾಯ್ದಿರಿಸಿರುವ ಸ್ಥಳ" ಎಂದೂ ಅನುವಾದ ಮಾಡಬಹುದು.
- "ಅತಿ ಪರಿಶುದ್ಧ ಸ್ಥಳ" ಎನ್ನುವ ಮಾತನ್ನು "ದೇವರಿಗೋಸ್ಕರ ಹೆಚ್ಚಾಗಿ ಪ್ರತ್ಯೇಕಿಸಿರುವ ಕೊಠಡಿ" ಅಥವಾ "ದೇವರನ್ನು ಭೇಟಿ ಮಾಡುವುದಕ್ಕೆ ಅತಿ ವಿಶೇಷವಾದ ಕೊಠಡಿ" ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, "ಪರಿಶುದ್ಧ ಸ್ಥಳ" ಎನ್ನುವ ಸಾಧಾರಣ ಮಾತನ್ನು ಅನುವಾದ ಮಾಡುವ ವಿಧಾನಗಳಲ್ಲಿ "ಪ್ರತಿಷ್ಠಾಪಿಸಿದ ಸ್ಥಳ" ಅಥವಾ "ದೇವರು ಪ್ರತ್ಯೇಕಿಸಿಕೊಂಡಿರುವ ಸ್ಥಳ" ಅಥವಾ "ದೇವಾಲಯದ ಸಂಕೀರ್ಣದಲ್ಲಿ ಪರಿಶುದ್ಧವಾದ ಸ್ಥಳ" ಅಥವಾ "ದೇವರ ಪರಿಶುದ್ಧ ಆಲಯದ ಅಂಗಳದ ಆವರಣ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಧೂಪವೇದಿ, ಒಡಂಬಡಿಕೆಯ ಮಂಜೂಷ, ರೊಟ್ಟಿ, ಪ್ರತಿಷ್ಠಾಪಿಸು, ಅಂಗಳ, ತೆರೆ, ಪರಿಶುದ್ಧ, ಪ್ರತ್ಯೇಕಿಸು, ಗುಡಾರ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.06:16-18
- ಅಪೊ.ಕೃತ್ಯ.06:12-15
- ವಿಮೋ.26:31-33
- ವಿಮೋ.31:10-11
- ಯೆಹೆ.41:1-2
- ಎಜ್ರಾ.09:8-9
- ಇಬ್ರಿ.09:1-2
- ಯಾಜಕ.16:17-19
- ಮತ್ತಾಯ.24:15-18
- ಪ್ರಕ.15:5-6

ಪದ ಡೇಟಾ:

- Strong's: H1964, H4720, H4725, H5116, H6918, H6944, G39, G40, G3485, G5117

ಪರಿಶುದ್ಧ, ಪರಿಶುದ್ಧತೆ, ಅಪರಿಶುದ್ಧತೆ, ಪವಿತ್ರತೆ

ಪದದ ಅರ್ಥವಿವರಣೆ:

“ಪರಿಶುದ್ಧ” ಮತ್ತು “ಪರಿಶುದ್ಧತೆ” ಎನ್ನುವ ಪದಗಳು ಪಾಪ ಸ್ವಭಾವವುಳ್ಳ ಮತ್ತು ಅಪರಿಪೂರ್ಣವಾದ ಪ್ರತಿಯೊಂದರರಿಂದ ಸಂಪೂರ್ಣವಾಗಿ ಪ್ರತ್ಯೇಕಿಸಲ್ಪಟ್ಟ ದೇವರ ಗುಣಲಕ್ಷಣವನ್ನು ಸೂಚಿಸುತ್ತದೆ.

- ದೇವರೊಬ್ಬನೇ ಪರಿಶುದ್ಧನಾಗಿರುತ್ತಾನೆ. ಆತನು ಜನರನ್ನು ಮತ್ತು ವಸ್ತುಗಳನ್ನು ಪವಿತ್ರಗೊಳಿಸುವನು.
- ದೇವರಿಗೆ ಸಂಬಂಧಪಟ್ಟ ಒಬ್ಬ ವ್ಯಕ್ತಿ ಪರಿಶುದ್ಧನಾಗಿದ್ದರೆ, ಅವನನ್ನು ದೇವರಿಗೆ ಸೇವೆಯನ್ನು ಮಾಡುವುದಕ್ಕೋಸ್ಕರ ಮತ್ತು ಆತನಿಗೆ ಮಹಿಮೆ ತರುವಂತೆ ಪ್ರತಿಷ್ಠೆ ಮಾಡಬೇಕು.
- ಒಂದು ವಸ್ತುವನ್ನು ದೇವರು ಪರಿಶುದ್ಧವಾದದ್ದು ಎಂದು ಪ್ರಕಟಿಸಿದರೆ, ಅದನ್ನು ಆತನ ಮಹಿಮೆಗಾಗಿ ಮತ್ತು ಆತನ ಸೇವೆಯಲ್ಲಿ ಉಪಯೋಗಿಸುವುದಕ್ಕಾಗಿ ಆತನು ಪ್ರತಿಷ್ಠೆ ಮಾಡಿರುತ್ತಾನೆ.
- ದೇವರು ಅನುಮತಿ ಕೊಟ್ಟರೆ ಮಾತ್ರ ಜನರು ಆತನ ಬಳಿಗೆ ಹೋಗುವುದಕ್ಕೆ ಸಾಧ್ಯ, ಯಾಕಂದರೆ ಆತನು ಪರಿಶುದ್ಧನು ಮತ್ತು ಅವರು ಮನುಷ್ಯರು, ಪಾಪ ಸ್ವಭಾವವುಳ್ಳವರೂ ಮತ್ತು ಅಪರಿಪೂರ್ಣರು ಆಗಿರುತ್ತಾರೆ.
- ಹಳೇ ಒಡಂಬಡಿಕೆಯಲ್ಲಿ ಆತನಿಗೆ ಸೇವೆ ಮಾಡುವುದಕ್ಕಾಗಿ ಆತನು ಯಾಕರನ್ನು ಪರಿಶುದ್ಧ ಜನರನ್ನಾಗಿ ಪ್ರತ್ಯೇಕಿಸಿದನು. ಅವರು ದೇವರನ್ನು ಸಮೀಪಿಸುವಾಗ ತಮ್ಮ ಪಾಪಗಳಿಂದ ಸಾಂಪ್ರದಾಯಿಕವಾಗಿ ತೊಳೆಯಲ್ಪಡಬೇಕಾಗಿತ್ತು.
- ಪರಿಶುದ್ಧವಾದ ಕೆಲವು ನಿರ್ದಿಷ್ಠ ಸ್ಥಳಗಳೆಂದು ಮತ್ತು ದೇವರಿಗೆ ಸಂಬಂಧಪಟ್ಟ ವಸ್ತುಗಳೆಂದು ಅಥವಾ ದೇವರು ತನ್ನನ್ನು ತಾನು ತೋರಿಸಿಕೊಳ್ಳುವ ಆತನ ದೇವಾಲಯ ಎನ್ನುವಂತವುಗಳಿಂದ ದೇವರು ಪ್ರತ್ಯೇಕಿಸಲ್ಪಟ್ಟಿದ್ದನು,

ಅಕ್ಷರಾರ್ಥವಾಗಿ, “ಅಪರಿಶುದ್ಧ” ಎನ್ನುವ ಪದಕ್ಕೆ “ಪರಿಶುದ್ಧವಲ್ಲದ್ದು” ಎಂದರ್ಥ. ಇದು ದೇವರನ್ನು ಘನಪಡಿಸದ ವ್ಯಕ್ತಿಯನ್ನು ಅಥವಾ ಯಾವುದಾದರೊಂದನ್ನು ವಿವರಿಸುತ್ತದೆ.

- ದೇವರಿಗೆ ವಿರುದ್ಧವಾಗಿ ತಿರಸ್ಕರಿಸುವದರಿಂದ ಆತನನ್ನು ಅಗೌರವಪಡಿಸುವ ವ್ಯಕ್ತಿಯನ್ನು ವಿವರಿಸುವುದಕ್ಕೆ ಈ ಪದವು ಉಪಯೋಗಿಸಲ್ಪಟ್ಟಿರುತ್ತದೆ.
- “ಅಪರಿಶುದ್ಧವಾದದ್ದು” ಎಂದು ಕರೆಯಲ್ಪಡುವ ಒಂದು ವಸ್ತುವು ಸಾಮಾನ್ಯವಾದ, ಲೌಕಿಕವಾದ ಅಥವಾ ಅಶುದ್ಧವಾದ ವಸ್ತುವು ಎಂದು ವಿವರಿಸಲ್ಪತ್ತಿರುತ್ತದೆ. ಇದು ದೇವರಿಗೆ ಸಂಬಂಧಪಟ್ಟಿದ್ದಲ್ಲ.

“ಪವಿತ್ರವಾದದ್ದು” ಎನ್ನುವ ಪದವು ದೇವರನ್ನು ಆರಾಧಿಸುವುದಕ್ಕೆ ಸಂಬಂಧಪಟ್ಟಿದ್ದನ್ನು ವಿವರಿಸುತ್ತದೆ ಅಥವಾ ಸುಳ್ಳು ದೇವರುಗಳ ಅನ್ಯ ಆರಾಧನೆಗೆ ಸಂಬಂಧಪಟ್ಟಿದ್ದನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ “ಪವಿತ್ರತೆ” ಎನ್ನುವ ಪದವು ಸುಳ್ಳು ದೇವರುಗಳನ್ನು ಆರಾಧಿಸುವುದರಲ್ಲಿ ಉಪಯೋಗಿಸುವ ಇತರ ವಸ್ತುಗಳನ್ನು ಮತ್ತು ಕಲ್ಲಿನ ಸ್ತಂಭಗಳನ್ನು ವಿವರಿಸುವುದಕ್ಕೆ ಉಪಯೋಗಿಸಲಾಗಿರುತ್ತದೆ. ಇದನ್ನು “ಧಾರ್ಮಿಕತೆ” ಎಂದೂ ಅನುವಾದ ಮಾಡಬಹುದು.
- “ಪವಿತ್ರವಾದ ಹಾಡುಗಳು” ಮತ್ತು “ಪವಿತ್ರವಾದ ಸಂಗೀತ” ಎನ್ನುವ ಮಾತುಗಳು ದೇವರ ಮಹಿಮೆಗಾಗಿ ಹಾಡುವ ಅಥವಾ ಬಾರಿಸುವ ಸಂಗೀತವನ್ನು ಸೂಚಿಸುತ್ತದೆ. ಇದನ್ನು “ಯೆಹೋವಾನನ್ನು ಆರಾಧಿಸುವುದಕ್ಕೆ ಸಂಗೀತ” ಅಥವಾ “ದೇವರನ್ನು ಸ್ತುತಿಸುವ ಹಾಡುಗಳು” ಎಂದೂ ಅನುವಾದ ಮಾಡಬಹುದು.
- “ಪವಿತ್ರವಾದ ಕರ್ತವ್ಯಗಳು” ಎನ್ನುವ ಮಾತು “ಭಕ್ತಿಸಂಬಂಧವಾದ ಕರ್ತವ್ಯಗಳನ್ನು” ಅಥವಾ ದೇವರನ್ನು ಆರಾಧಿಸುವುದಕ್ಕೆ ಜನರನ್ನು ನಡೆಸಲು ಯಾಜಕನು ಮಾಡುವ “ಆಚರಣೆಗಳನ್ನು” ಸೂಚಿಸುತ್ತದೆ. ಇದು ಸುಳ್ಳು ದೇವರುಗಳನ್ನು ಆರಾಧಿಸುವುದಕ್ಕೆ ಅನ್ಯ ಯಾಜಕನಿಂದ ನಡೆಸಲ್ಪಡುವ ಆಚರಣೆಗಳನ್ನೂ ಸೂಚಿಸುತ್ತದೆ.

ಅನುವಾದ ಸಲಹೆಗಳು:

- “ಪರಿಶುದ್ಧ” ಎನ್ನುವ ಪದವನ್ನು ಅನುವಾದ ವಿಧಾನಗಳಲ್ಲಿ “ದೇವರಿಗಾಗಿ ಪ್ರತ್ಯೇಕಿಸು” ಅಥವಾ “ದೇವರಿಗೆ ಸಂಬಂಧಪಟ್ಟು” ಅಥವಾ “ಸಂಪೂರ್ಣವಾಗಿ ಸುರಿಸು” ಅಥವಾ “ಸಂಪೂರ್ಣವಾಗಿ ಪಾಪರಹಿತವಾಗಿರು” ಅಥವಾ “ಪಾಪದಿಂದ ಪ್ರತ್ಯೇಕಿಸಲ್ಪಡು” ಎನ್ನುವ ಮಾತುಗಳೂ ಬಹುಶಃ ಸೇರಿಸಲ್ಪಡಬಹುದು.
- “ಪರಿಶುದ್ಧವನ್ನಾಗಿ ಮಾಡು” ಎನ್ನುವ ಮಾತು ಅನೇಕಬಾರಿ ಆಂಗ್ಲದಲ್ಲಿ “ಪವಿತ್ರಗೊಳಿಸು” ಎಂದೂ ಅನುವಾದ ಮಾಡಬಹುದು. ಇದನ್ನು “ದೇವರ ಮಹಿಮೆಗಾಗಿ (ಒಬ್ಬರನ್ನು) ಪ್ರತ್ಯೇಕಿಸು” ಎಂದೂ ಅನುವಾದ ಮಾಡಬಹುದು.
- “ಅಪರಿಶುದ್ಧತೆ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ಪರಿಶುದ್ಧವಲ್ಲದ್ದು” ಅಥವಾ “ದೇವರಿಗೆ ಸಂಬಂಧವಿಲ್ಲದಿರುವುದು” ಅಥವಾ “ದೇವರನ್ನು ಘನಪಡಿಸದಿರುವುದು” ಅಥವಾ “ದೈವಿಕವಲ್ಲದ್ದು” ಇನ್ನುವ ಮಾತುಗಳು ಒಳಗೊಂಡಿರುತ್ತವೆ.
- ಕೆಲವೊಂದು ಸಂದರ್ಭಗಳಲ್ಲಿ “ಅಪರಿಶುದ್ಧವಾದದ್ದು” ಎನ್ನುವ ಪದವನ್ನು “ಅಶುಚಿಯಾದದ್ದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪವಿತ್ರಾತ್ಮ, ಪ್ರತಿಷ್ಠಾಪಿಸು, ಪವಿತ್ರಗೊಳಿಸು, ಪ್ರತ್ಯೇಕಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- ಆದಿ.28:22

- 2 ಅರಸ.03:02
- ಪ್ರಲಾಪ.04:01
- ಯೆಹೆ.20:18-20
- ಮತ್ತಾಯ.07:6
- ಮಾರ್ಕ.08:38
- ಅಪೊ.ಕೃತ್ಯ.07:33
- ಅಪೊ.ಕೃತ್ಯ.11:08
- ರೋಮಾ.01:02
- 2 ಕೊರಿಂಥ.12:3-5
- ಕೊಲೊಸ್ಸ.01:22
- 1 ಥೆಸ್ಸ.03:13
- 1 ಥೆಸ್ಸ.04:07
- 2 ತಿಮೊಥೆ.03:15

ಸತ್ಯವೇದ ಕಥೆಗಳಿಂದ ಉದಾಹರಣೆಗಳು:

- **01:16** ಆತನು (ದೇವರು) ಏಳನೇ ದಿನವನ್ನು ಆಶೀರ್ವಾದ ಮಾಡಿದನು ಮತ್ತು ಅದನ್ನು _ ಪರಿಶುದ್ಧವನ್ನಾಗಿ _ ಮಾಡಿದನು, ಯಾಕಂದರೆ ಆ ದಿನದಂದು ಆತನು ತನ್ನ ಕೆಲಸದಿಂದ ವಿಶ್ರಾಂತಿ ತೆಗೆದುಕೊಂಡನು.
- **09:12** "ನೀನು _ ಪರಿಶುದ್ಧವಾದ _ ನೆಲದ ಮೇಲೆ ನಿಂತುಕೊಂಡಿದ್ದೀ."
- **13:01** "ನೀವು ನನಗೆ ವಿಧೇಯರಾಗಿ, ನನ್ನ ಒಡಂಬಡಿಕೆಯನ್ನು ಅನುಸರಿಸಿದರೆ, ನೀವು ನನ್ನ ಸ್ವತ್ತಾಗಿಯು, ಯಾಜಕರ ರಾಜ್ಯವನ್ನಾಗಿ ಮತ್ತು _ ಪರಿಶುದ್ಧ _ ಜನರಾಗಿ ಇರುವಿರಿ."
- **13:05** "ಯಾವಾಗಲೂ ಸಬ್ಬತ ದಿನವನ್ನು _ ಪರಿಶುದ್ಧ _ದಿನವನ್ನಾಗಿ ಆಚರಿಸಿರಿ."
- **22:05** "ಆದ್ದರಿಂದ ಆ ಮಗುವು _ ಪರಿಶುದ್ಧನಾಗಿರುವನು _, ದೇವರ ಮಗನಾಗಿರುತ್ತಾನೆ."
- **50:02** ಯೇಸು ಎರಡನೇ ಬರೋಣಕ್ಕಾಗಿ ಕಾದಿದ್ದ ನಾವೆಲ್ಲರು _ ಪರಿಶುದ್ಧರಾಗಿ _ ಮತ್ತು ಆತನನ್ನು ಘನಪಡಿಸುವವರಾಗಿ ಇರಬೇಕೆಂದು ದೇವರು ನಮ್ಮಿಂದ ಬಯಸುತ್ತಿದ್ದಾನೆ.

ಪದ ಡೇಟಾ:

- Strong's: H430, H2455, H2623, H4676, H4720, H6918, H6922, H6942, H6944, H6948, G37, G38, G39, G40, G41, G42, G462, G1859, G2150, G2412, G2413, G2839, G3741, G3742

ಪರಿಶುದ್ಧನು

ಪದದ ಅರ್ಥವಿವರಣೆ:

“ಪರಿಶುದ್ಧನು” ಎನ್ನುವ ಪದವು ಸತ್ಯವೇದದಲ್ಲಿ ಯಾವಾಗಲೂ ದೇವರನ್ನು ಮಾತ್ರ ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಈ ಬಿರುದು ಅಥವಾ ಈ ಪದವು ಅನೇಕಬಾರಿ “ಇಸ್ರಾಯೇಲ್ಯರ ಸದಮಲ ಸ್ವಾಮಿ” ಎನ್ನುವ ಮಾತಿನಲ್ಲಿ ಕಂಡುಬರುತ್ತದೆ.
- ಹೊಸ ಒಡಂಬಡಿಕೆಯಲ್ಲಿ ಯೇಸುವು “ಪರಿಶುದ್ಧನು” ಎಂಬುದಾಗಿ ಸೂಚಿಸಲ್ಪಟ್ಟಿದ್ದಾನೆ.
- “ಪರಿಶುದ್ಧನು” ಎನ್ನುವ ಪದವನ್ನು ಕೆಲವೊಂದುಸಲ ಸತ್ಯವೇದದಲ್ಲಿ ದೇವದೂತನಿಗೆ ಸೂಚಿಸಲಾಗಿದೆ.

ಅನುವಾದ ಸಲಹೆಗಳು:

- ವಾಸ್ತವಿಕವಾಗಿ “ಪರಿಶುದ್ಧನು” (ಇರುವಾತನಾಗಿರುವ “ಒಬ್ಬನಿಗೆ” ಅನ್ವಯಿಸಲಾಗುತ್ತದೆ) ಎನ್ನುವುದು ಅಕ್ಷರಶಃ ಪದ. ಅನೇಕ ಭಾಷೆಗಳು (ಆಂಗ್ಲ ಭಾಷೆಯಂತೆ) ಇದನ್ನು ನಾಮಪದವನ್ನಾಗಿ ಅನುವಾದ ಮಾಡುತ್ತಾರೆ, (“ಒಬ್ಬನು” ಅಥವಾ “ದೇವರು” ಎಂಬುದಾಗಿ ಅನುವಾದಿಸುತ್ತಾರೆ).
- ಈ ಪದವನ್ನು “ಪರಿಶುದ್ಧನಾದ ದೇವರು” ಅಥವಾ “ಪ್ರತ್ಯೇಕಿಸಲ್ಪಟ್ಟವನು” ಎಂಬುದಾಗಿಯೂ ಅನುವಾದ ಮಾಡುತ್ತಾರೆ.
- “ಇಸ್ರಾಯೇಲರ ಸದಮಲ ಸ್ವಾಮಿ” ಎನ್ನುವ ಮಾತನ್ನು “ಇಸ್ರಾಯೇಲ್ಯರು ಆರಾಧನೆ ಮಾಡುವ ಪರಿಶುದ್ಧನಾದ ದೇವರು” ಅಥವಾ “ಇಸ್ರಾಯೇಲ್ಯರನ್ನು ಆಳುವ ಸದಮಲ ಸ್ವಾಮಿ” ಎಂದೂ ಅನುವಾದ ಮಾಡಬಹುದು.
- “ಪರಿಶುದ್ಧ” ಎಂದು ಭಾಷಾಂತರಿಸಲು ಬಳಿಸಿದ ಅದೇ ಪದ ಅಥವಾ ಪದಗುಚ್ಛವನ್ನು ಅನುವಾದಿಸುವುದು ಉತ್ತಮವಾಗಿದೆ.

(ಈ ಪದಗಳನ್ನು ಸಹ ನೋಡಿರಿ : ಪರಿಶುದ್ಧ, ದೇವರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.02:20-21
- 2 ಅರಸ.19:20-22
- ಅಪೊ.ಕೃತ್ಯ.02:27-28
- ಅಪೊ.ಕೃತ್ಯ.03:13-14
- ಯೆಶಯಾ.05:15-17
- ಯೆಶಯಾ.41:14-15
- ಲೂಕ.04:33-34

ಪದ ಡೇಟಾ:

- Strong's: H2623, H376, H6918, G40, G3741

ಪರೀಕ್ಷೆ, ಪರೀಕ್ಷಿಸಲಾಗಿದೆ, ಪರೀಕ್ಷಿಸು, ಬೆಂಕಿಯಿಂದ ಪರೀಕ್ಷಿಸು

ಪದದ ಅರ್ಥವಿವರಣೆ:

"ಪರೀಕ್ಷೆ" ಎನ್ನುವ ಪದವು ಒಬ್ಬ ವ್ಯಕ್ತಿಯ ಬಲಗಳನ್ನು ಮತ್ತು ಬಲಹೀನತೆಗಳನ್ನು ಎತ್ತಿ ತೋರಿಸುವ ಕಷ್ಟವನ್ನು ಅಥವಾ ಬಾಧೆಯನ್ನು ತೋರಿಸುತ್ತದೆ.

- ದೇವರು ಜನರನ್ನು ಪರೀಕ್ಷಿಸುತ್ತಾರೆ, ಆದರೆ ಆತನು ಅವರು ಪಾಪ ಮಾಡುವಷ್ಟು ಪರೀಕ್ಷೆ ಮಾಡುವುದಿಲ್ಲ. ಏನೇಯಾಗಲಿ, ಸೈತಾನನು ಜನರು ಪಾಪ ಮಾಡುವಂತೆ ಶೋಧಿಸುತ್ತಾನೆ.
- ದೇವರು ಕೆಲವೊಂದುಬಾರಿ ಜನರ ಪಾಪವನ್ನು ತೋರಿಸುವುದಕ್ಕೆ ಪರೀಕ್ಷೆಗಳನ್ನು ಉಪಯೋಗಿಸುತ್ತಾನೆ. ಪರೀಕ್ಷೆಯು ಒಬ್ಬ ವ್ಯಕ್ತಿ ಪಾಪ ಮಾಡದಂತೆ ಮತ್ತು ದೇವರಿಗೆ ಅದರ ಮೂಲಕ ಹತ್ತಿರವಾಗುವಂತೆ ಸಹಾಯ ಮಾಡುತ್ತದೆ.
- ಬಂಗಾರ ಮತ್ತು ಇತರ ಲೋಹಗಳು ಎಷ್ಟರ ಮಟ್ಟಿಗೆ ಬೆಲೆಯುಳ್ಳವುಗಳೆಂದು ಮತ್ತು ಎಷ್ಟರಮಟ್ಟಿಗೆ ಗಟ್ಟಿಯಾದವುಗಳೆಂದು ಪರೀಕ್ಷಿಸಲಾಗಿದೆ. ಈ ಉದಾಹರಣೆಯಂತೆಯೇ, ದೇವರು ತನ್ನ ಜನರನ್ನು ಪರೀಕ್ಷಿಸುವುದಕ್ಕೆ ಅನೇಕ ಬಾಧೆಗಳಿರುವ ಕಠಿಣ ಪರಿಸ್ಥಿತಿಗಳನ್ನು ಅನುಮತಿಸುತ್ತಾರೆ.
- "ಪರೀಕ್ಷೆಗೆ ಇಡಲಾಗಿದೆ" ಎನ್ನುವ ಮಾತಿಗೆ "ಇದು ಬೆಲೆಯುಳ್ಳದ್ದೆಂದು ನಿರೂಪಿಸುವುದಕ್ಕೆ ಯಾರಾದರೊಬ್ಬರನ್ನು ಅಥವಾ ಯಾವುದಾದರೊಂದನ್ನು ಸವಾಲ್ ಬೀಸುವುದು" ಎಂದರ್ಥ.
- ದೇವರನ್ನು ಪರೀಕ್ಷೆಗೆ ಇಡುವುದೆನ್ನುವ ಸಂದರ್ಭದಲ್ಲಿ, ಆತನು ನಮಗಾಗಿ ಯಾವುದಾದರೊಂದು ಅದ್ಭುತ ಮಾಡುವುದಕ್ಕೆ ಪ್ರಯತ್ನಿಸುವುದು, ಆತನ ಕರುಣೆಯನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸುಕೊಳ್ಳುವುದು ಎಂದರ್ಥವಾಗಿರುತ್ತದೆ.
- ದೇವರನ್ನು ಪರೀಕ್ಷೆ ಮಾಡುವುದು ತಪ್ಪು ಎಂದು ಯೇಸು ಸೈತಾನನಿಗೆ ಹೇಳಿದನು. ಆತನು ಪ್ರತಿಯೊಬ್ಬರ ಮೇಲೆ ಮತ್ತು ಪ್ರತಿಯೊಂದರ ಮೇಲೆ ಸರ್ವಶಕ್ತನು, ಪರಿಶುದ್ಧ ದೇವರು ಆಗಿದ್ದಾರೆ.

ಅನುವಾದ ಸಲಹೆಗಳು:

- "ಪರೀಕ್ಷೆ" ಎನ್ನುವ ಪದವನ್ನು "ಸವಾಲು" ಅಥವಾ "ಕಷ್ಟಗಳನ್ನು ಅನುಭವಿಸುವುದಕ್ಕೆ ಕಾರಣವಾಗು" ಅಥವಾ "ನಿರೂಪಿಸು" ಎಂದೂ ಅನುವಾದ ಮಾಡಬಹುದು.
- "ಪರೀಕ್ಷೆ" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ, "ಸವಾಲು" ಅಥವಾ "ಕಷ್ಟದ ಅನುಭವ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಪರೀಕ್ಷೆಗೆ ನಿಲ್ಲಿಸು" ಎನ್ನುವ ಮಾತನ್ನು "ಶೋಧಿಸು" ಅಥವಾ "ಸವಾಲನ್ನು ಬೀಸು" ಎಂದೂ ಅನುವಾದ ಮಾಡಬಹುದು.
- ದೇವರನ್ನು ಪರೀಕ್ಷಿಸುವ ಸಂದರ್ಭದಲ್ಲಿ ಇದನ್ನು "ದೇವರ ಪ್ರೀತಿಯನ್ನು ನಿರೂಪಿಸುಕೊಳ್ಳುವುದಕ್ಕೆ ಆತನನ್ನು ಬಲವಂತಿಕೆ ಮಾಡುವುದಕ್ಕೆ ಯತ್ನಿಸುವುದು" ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಸಂದರ್ಭಗಲ್ಲಿ ದೇವರ ವಿಷಯವೇ ಬರದಿರುವಾಗ, "ಪರೀಕ್ಷೆ" ಎನ್ನುವ ಪದಕ್ಕೆ "ಶೋಧಿಸು" ಎಂದರ್ಥವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಶೋಧಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.04:01
- 1 ಥೆಸ್ಸ.05:21
- ಅಪೊ.ಕೃತ್ಯ.15:10
- ಆದಿ.22:01
- ಯೆಶಯಾ.07:13
- ಯಾಕೋಬ.01:12
- ಪ್ರಲಾಪ.03:40-43
- ಮಲಾಕಿ.03:10
- ಫಿಲಿಪ್ಪಿ.01:10
- ಕೀರ್ತನೆ.026:02

ಪದ ಡೇಟಾ:

- Strong's: H5254, H5713, H5715, H5749, H6030, H8584, G1242, G1263, G1303, G1382, G1957, G3140, G3141, G3142, G3143, G3984, G4303, G4451, G4828, G6020

ಪವಾಡ, ಪವಾಡಗಳು, ಅದ್ಭುತ, ಅದ್ಭುತಗಳು, ಸೂಚಕ ಕಾರ್ಯ, ಸೂಚಕ ಕಾರ್ಯಗಳು

ಪದದ ಅರ್ಥವಿವರಣೆ:

“ಪವಾಡ” ಎನ್ನುವುದು ಯಾವುದಾದರೊಂದನ್ನು ಮಾಡುವುದಕ್ಕೆ ದೇವರು ಬಿಟ್ಟು ಯಾರೂ ಮಾಡುವುದಕ್ಕೆ ಸಾಧ್ಯವಾಗದ ಆಶ್ಚರ್ಯ ಕಾರ್ಯ ಎಂದರ್ಥ.

- ಯೇಸು ಮಾಡಿದ ಅನೇಕ ಪಾವಡಗಳಲ್ಲಿ ಬಿರುಗಾಳಿಯನ್ನು ಶಾಂತಗೊಳಿಸುವುದು ಮತ್ತು ಹುಟ್ಟು ಕುರುಡನನ್ನು ಗುಣಪಡಿಸಿದ್ದು ಒಳಗೊಂಡಿರುತ್ತದೆ.
- ಪವಾಡಗಳನ್ನು ಕೆಲವೊಂದುಬಾರಿ “ಅದ್ಭುತಗಳು” ಎಂದು ಕರೆಯುತ್ತಾರೆ, ಯಾಕಂದರೆ ಮನುಷ್ಯರೆಲ್ಲರು ಅದ್ಭುತ ಅಥವಾ ಆಶ್ಚರ್ಯ ಕಾರ್ಯಗಳಿಂದ ತುಂಬಿಸಲ್ಪಡುವಂತೆ ಮಾಡುತ್ತವೆ.
- “ಅದ್ಭುತ” ಎನ್ನುವ ಪದವು ಕೂಡ ಸಾಧಾರಣವಾಗಿ ದೇವರ ಶಕ್ತಿಯ ಅದ್ಭುತವಾದ ತೋರಿಕೆಗಳನ್ನು ಸೂಚಿಸುತ್ತದೆ, ಹೇಗೆಂದರೆ ಆತನು ಭೂಮಿ ಮತ್ತು ಆಕಾಶಗಳನ್ನು ಸೃಷ್ಟಿ ಮಾಡಿದನು.
- ಪಾವಡಗಳನ್ನು “ಸೂಚಕ ಕ್ರಿಯೆಗಳು” ಎಂದೂ ಕರೆಯುತ್ತಾರೆ, ಯಾಕಂದರೆ ಸರ್ವ ವಿಶ್ವದ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿರುವ ಸರ್ವಶಕ್ತನು ದೇವರೇ ಎಂದು ಆಧಾರಗಳಾಗಿ ಅಥವಾ ಸೂಚನೆಗಳಾಗಿ ಅವು ಉಪಯೋಗಿಸಲ್ಪಟ್ಟಿರುತ್ತವೆ.
- ಕೆಲವೊಂದು ಪಾವಡಗಳು ವಿಮೋಚನೆಯ ದೇವರ ಕಾರ್ಯಗಳಾಗಿರುತ್ತವೆ, ಹೇಗೆಂದರೆ ಐಗುಪ್ತದಲ್ಲಿ ಗುಲಾಮಗಿರಿಯಿಂದ ಆತನು ಇಸ್ರಾಯೇಲ್ಯರನ್ನು ರಕ್ಷಿಸಿದನು ಮತ್ತು ಸಿಂಹಗಳ ಬಾಯಿಗಳಿಂದ ದಾನಿಯೇಲನನ್ನು ದೇವರು ರಕ್ಷಿಸಿದನು.
- ಇನ್ನಿತರ ಅದ್ಭುತಗಳು ತೀರ್ಪಿನ ಕುರಿತಾದ ದೇವರ ಕಾರ್ಯಗಳಾಗಿರುತ್ತವೆ, ಆತನು ನೋಹನ ಕಾಲದಲ್ಲಿ ಪ್ರಪಂಚವ್ಯಾಪ್ತವಾಗಿ ಪ್ರಳಯವನ್ನು ಕಳುಹಿಸಿದನು ಮತ್ತು ಮೋಶೆಯ ಕಾಲದಲ್ಲಿ ಐಗುಪ್ತ ದೇಶದ ಮೇಲೆ ಭಯಂಕರವಾದ ಮಾರಿರೋಗಗಳನ್ನು ಬರಮಾಡಿದನು.
- ದೇವರ ಅದ್ಭುತಕಾರ್ಯಗಳಲ್ಲಿ ಕೆಲವೊಂದು ರೋಗಿಗಳಾಗಿರುವ ಜನರನ್ನು ಭೌತಿಕವಾಗಿ ಸ್ವಸ್ಥಪಡಿಸಿರುವ ಅಥವಾ ಸತ್ತವರನ್ನು ತಿರುಗಿ ಜೀವಂತರನ್ನಾಗಿ ಮಾಡಿರುವ ಕಾರ್ಯಗಳು ಒಳಗೊಂಡಿರುತ್ತವೆ.
- ಯೇಸು ಜನರನ್ನು ಗುಣಪಡಿಸಿದಾಗ, ಬಿರುಗಾಳಿಯನ್ನು ಶಾಂತಗೊಳಿಸಿದಾಗ, ನೀರಿನ ಮೇಲೆ ನಡೆದಾಗ, ಮತ್ತು ಸತ್ತವರನ್ನು ಎಬ್ಬಿಸಿದಾಗ ಆತನಲ್ಲಿ ದೇವರ ಶಕ್ತಿ ಕಾಣಿಸಿಕೊಂಡಿರುತ್ತದೆ. ಈ ಎಲ್ಲ ಕಾರ್ಯಗಳು ಪಾವಡಗಳಾಗಿರುತ್ತದೆ.
- ಪ್ರವಾದಿಗಳು ಮತ್ತು ಅಪೊಸ್ತಲರು ಅನೆಕವಾದ ಸ್ವಸ್ಥತೆಯ ಪಾವಡಗಳನ್ನು ಮಾಡುವುದಕ್ಕೆ ದೇವರು ಅವರನ್ನು ಬಲಪಡಿಸಿದ್ದನು, ಇವು ಕೇವಲ ದೇವರ ಶಕ್ತಿಯಿಂದ ಮಾತ್ರವೇ ನಡೆದಿರುತ್ತವೆ.

ಅನುವಾದ ಸಲಹೆಗಳು:

- “ಪಾವಡಗಳು” ಅಥವಾ “ಅದ್ಭುತಗಳು” ಎನ್ನುವ ಪದಗಳಿಗೆ ಮಾಡುವ ಅನುವಾದದಲ್ಲಿ “ದೇವರು ಮಾಡುವ ಅಸಾಧ್ಯವಾದ ಕಾರ್ಯಗಳು” ಅಥವಾ “ದೇವರ ಶಕ್ತಿಯುಳ್ಳ ಕಾರ್ಯಗಳು” ಅಥವಾ “ದೇವರ ಅದ್ಭುತ ಕಾರ್ಯಗಳು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಸೂಚಕ ಕ್ರಿಯೆಗಳು ಮತ್ತು ಅದ್ಭುತಗಳು” ಎನ್ನುವ ಮಾತನ್ನು “ನಿರೂಪಣೆಗಳು ಮತ್ತು ಆಶ್ಚರ್ಯ ಕಾರ್ಯಗಳು” ಅಥವಾ “ದೇವರ ಶಕ್ತಿಯನ್ನು ನಿರೂಪಣೆ ಮಾಡುವ ಅದ್ಭುತಕರವಾದ ಮಾತುಗಳು” ಅಥವಾ “ದೇವರು ಎಷ್ಟು ದೊಡ್ಡವನೆಂದು ತೋರಿಸುವ ಅದ್ಭುತಕರವಾದ ಆಶ್ಚರ್ಯ ಕಾರ್ಯಗಳು” ಎಂದೂ ಅನುವಾದ ಮಾಡಬಹುದು.
- ಅದ್ಭುತಕರವಾದ ಸೂಚನೆಯ ಈ ಅರ್ಥಕ್ಕೂ ಯಾವುದಾದರೊಂದಕ್ಕೆ ಅಧಾರ ಕೊಡುವ ಅಥವಾ ನಿರೂಪಣೆ ಮಾಡುವ ಸೂಚನೆಯಿಂದ ಬರುವ ಅರ್ಥಕ್ಕೂ ವ್ಯತ್ಯಾಸವಿರುತ್ತದೆ. ಆದರೆ ಆ ಎರಡು ಒಂದಕ್ಕೊಂದು ಸಂಬಂಧಿತವಾಗಿರಬಹುದು.

(ಈ ಪದಗಳನ್ನು ಸಹ ನೋಡಿರಿ : ಶಕ್ತಿ, ಪ್ರವಾದಿ, ಅಪೊಸ್ತಲ, ಸೂಚಕ ಕ್ರಿಯೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಥೆಸ್ಸ.02:8-10
- ಅಪೊ.ಕೃತ್ಯ.04:15-18
- ಅಪೊ.ಕೃತ್ಯ.04:21-22
- ದಾನಿ.04:1-3
- ಧರ್ಮೋ.13:1-3
- ವಿಮೋ.03:19-22
- ಯೋಹಾನ.02:11
- ಮತ್ತಾಯ.13:57-58

ಸತ್ಯವೇದದಿಂದ ಉದಾಹರಣೆಗಳು:

- **16:08** ಗಿದ್ಯೋನನು ದೇವರ ಬಳಿ ಎರಡು _ ಸೂಚಕ ಕ್ರಿಯೆಗಳನ್ನು _ ತೋರಿಸಲು ಕೇಳಿದನು, ಇದರಿಂದ ಅವನು ಇಸ್ರಾಯೇಲ್ಯರನ್ನು ಕಾಪಾಡುವುದಕ್ಕೆ ದೇವರು ತನ್ನನ್ನು ಉಪಯೋಗಿಸಿಕೊಳ್ಳುತ್ತಾರೆಂದು ಖಚಿತಪಡಿಸಿಕೊಳ್ಳಬಹುದು.
- **19:14** ದೇವರು ಎಲೀಷನ ಮೂಲಕ ಅನೇಕವಾದ _ ಆಶ್ಚರ್ಯಕಾರ್ಯಗಳನ್ನು _ ಮಾಡಿದನು.

- **37:10** ಈ _ ಆಶ್ಚರ್ಯಕಾರ್ಯದಿಂದಲೇ _ ಯೆಹೂದ್ಯರಲ್ಲಿ ಅನೇಕರು ಯೇಸುವಿನಲ್ಲಿ ನಂಬಿಕೆಯಿಟ್ಟರು.
- **43:06** "ಇಸ್ರಾಯೇಲ್ ಜನಾಂಗದವರೇ, ನಿಮಗೆ ಗೊತ್ತಿರುವಂತೆಯೇ ಮತ್ತು ನೀವು ನೋಡಿರುವಂತೆಯೇ ದೇವರ ಶಕ್ತಿಯಿಂದ ಅನೇಕ _ ಸೂಚಕ ಕ್ರಿಯೆಗಳನ್ನು _ ಮತ್ತು _ ಅದ್ಭುತ ಕಾರ್ಯಗಳನ್ನು _ ಮಾಡಿದ ಯೇಸುವಾಗಿರುತ್ತಾನೆ."
- **49:02** ಯೇಸು ದೇವರೆಂದು ನಿರೂಪಿಸುವುದಕ್ಕೆ ಆತನು ಅನೇಕ _ ಆಶ್ಚರ್ಯಕಾರ್ಯಗಳನ್ನು _ ಮಾಡಿದನು. ಆತನು ನೀರಿನ ಮೇಲೆ ನಡೆದನು, ಬಿರುಗಾಳಿಯನ್ನು ಶಾಂತಗೊಳಿಸಿದನು, ಅನೇಕಮಂದಿ ರೋಗಿಗಳನ್ನು ಗುಣಪಡಿಸಿದನು, ದೆವ್ವಗಳನ್ನು ಹೋಗಲಾಡಿಸಿದನು, ಸತ್ತ ಜನರನ್ನು ಎಬ್ಬಿಸಿದನು, ಮತ್ತು ಐದು ರೊಟ್ಟಿ, ಎರಡು ಚಿಕ್ಕ ಮೀನುಗಳನ್ನು ತೆಗೆದುಕೊಂಡು ಸುಮಾರು 5,000 ಜನರಿಗೆ ಸಾಕಾದ ಆಹಾರವನ್ನು ಒದಗಿಸಿಕೊಟ್ಟನು.

ಪದ ಡೇಟಾ:

- Strong's: H226, H852, H2368, H2858, H4150, H4159, H4864, H5251, H5824, H5953, H6381, H6382, H6383, H6395, H6725, H7560, H7583, H8047, H8074, H8539, H8540,, G880, G1213, G1229, G1411, G1569, G1718, G1770, G1839, G2285, G2296, G2297, G3167, G3902, G4591, G4592, G5059

ಪವಿತ್ರ ಸ್ಥಳ

ಪದದ ಅರ್ಥವಿವರಣೆ:

"ಪವಿತ್ರ ಸ್ಥಳ" ಎನ್ನುವ ಪದವನ್ನು ಅಕ್ಷರಾರ್ಥವಾಗಿ "ಪರಿಶುದ್ಧ ಸ್ಥಾನ" ಎಂದರ್ಥ ಮತ್ತು ಇದು ದೇವರು ಪರಿಶುದ್ಧ ಮಾಡಿದ ಮತ್ತು ಪವಿತ್ರ ಮಾಡಿದ ಸ್ಥಳವನ್ನು ಸೂಚಿಸುತ್ತದೆ. ಇದನ್ನು ಸಂರಕ್ಷಣೆ ಮತ್ತು ಭದ್ರತೆಯನ್ನು ಕೊಡುವ ಸ್ಥಳವನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ "ಪವಿತ್ರ ಸ್ಥಳ" ಎನ್ನುವ ಪದವನ್ನು ಅನೇಕಬಾರಿ "ಪರಿಶುದ್ಧ ಸ್ಥಳ" ಮತ್ತು "ಅತಿ ಪರಿಶುದ್ಧ ಸ್ಥಳ"ಗಳನ್ನು ಹೊಂದಿರುವ ದೇವಾಲಯ ಭವನವನ್ನು ಅಥವಾ ಗುಡಾರವನ್ನು ಸೂಚಿಸುತ್ತದೆ.
- ದೇವರು ತನ್ನ ಇಸ್ರಾಯೇಲ್ ಜನರ ಮಧ್ಯೆದಲ್ಲಿ ನಿವಾಸ ಮಾಡುವ ಸ್ಥಳವನ್ನಾಗಿ ದೇವರು ಈ ಪವಿತ್ರವಾದ ಸ್ಥಳವನ್ನು ಸೂಚಿಸಿದ್ದಾನೆ.
- ದೇವರು ತನ್ನನ್ನು ತಾನು "ಪವಿತ್ರ ಸ್ಥಳ" ಎಂಬುದಾಗಿ ಕರೆದುಕೊಂಡನು ಅಥವಾ ಜನರು ತಮಗೆ ಸಂರಕ್ಷಣೆಯನ್ನು ಕಂಡುಕೊಳ್ಳುವ ಭದ್ರತೆಯ ಸ್ಥಳವನ್ನಾಗಿ ಕರೆದುಕೊಂಡನು.

ಅನುವಾದ ಸಲಹೆಗಳು:

- ಈ ಪದಕ್ಕೆ ಪ್ರಾಥಮಿಕ ಅರ್ಥವು "ಪರಿಶುದ್ಧ ಸ್ಥಳವು" ಅಥವಾ "ಪ್ರತ್ಯೇಕಿಸಲ್ಪಟ್ಟ ಸ್ಥಳ" ಎಂದಾಗಿರುತ್ತದೆ.
- ಸಂದರ್ಭಾನುಸಾರವಾಗಿ, "ಪವಿತ್ರ ಸ್ಥಳ" ಎನ್ನುವ ಮಾತನ್ನು "ಪರಿಶುದ್ಧ ಸ್ಥಳ" ಅಥವಾ "ಪವಿತ್ರ ಭವನ" ಅಥವಾ "ದೇವರ ನಿವಾಸವಾಗುವ ಪರಿಶುದ್ಧವಾದ ಸ್ಥಳ" ಅಥವಾ "ಸಂರಕ್ಷಣೆಯ ಪರಿಶುದ್ಧವಾದ ಸ್ಥಳ" ಅಥವಾ "ಭದ್ರತೆಯ ಪರಿಶುದ್ಧ ಸ್ಥಳ" ಎಂದೂ ಅನುವಾದ ಮಾಡಬಹುದು.
- "ಪವಿತ್ರವಾದ ಶೆಕೆಲ್" ಎನ್ನುವ ಮಾತನ್ನು "ಗುಡಾರಕ್ಕಾಗಿ ಕೊಡಲ್ಪಡುವ ಒಂದು ವಿಧವಾದ ಶೆಕೆಲ್" ಅಥವಾ "ದೇವಾಲಯವನ್ನು ನೋಡಿಕೊಳ್ಳುವುದಕ್ಕೆ ತೆರಿಗೆ ಕಟ್ಟುವುದರಲ್ಲಿ ಉಪಯೋಗಿಸುವ ಶೆಕೆಲ್" ಎಂದೂ ಅನುವಾದ ಮಾಡಬಹುದು.
- ಗಮನಿಸಿ: ಈ ಪದಕ್ಕೆ ಮಾಡಿದ ಅನುವಾದವು ಈಗಿನ ಆಧುನಿಕ ಸಭೆಯಲ್ಲಿ ಆರಾಧನೆ ಮಾಡುವುದಕ್ಕೆ ಉಪಯೋಗಿಸುವ ಕೊಠಡಿಯನ್ನು ಸೂಚಿಸದಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಪರಿಶುದ್ಧ, ಪವಿತ್ರಾತ್ಮ, ಪರಿಶುದ್ಧ, ಪ್ರತ್ಯೇಕಿಸು, ಗುಡಾರ, ತೆರಿಗೆ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆಮೋಸ.07:12-13
- ವಿಮೋ.25:3-7
- ಯೆಹೆ.25:3-5
- ಇಬ್ರಿ.08:1-2
- ಲೂಕ.11:49-51
- ಅರಣ್ಯ.18:1-2
- ಕೀರ್ತನೆ.078:67-69

ಪದ ಡೇಟಾ:

- Strong's: H4720, H6944, G39

ಪವಿತ್ರಾತ್ಮ, ದೇವರ ಆತ್ಮ, ಕರ್ತನ ಆತ್ಮ, ಆತ್ಮ

ಸತ್ಯಾಂಶಗಳು:

ಈ ಎಲ್ಲಾ ಪದಗಳು ದೇವರಾಗಿರುವ ಪವಿತ್ರಾತ್ಮನನ್ನು ಸೂಚಿಸುತ್ತವೆ. ಒಬ್ಬರಾದ ನಿಜವಾದ ದೇವರು ನಿತ್ಯತ್ವದಲ್ಲಿ ತಂದೆ, ಮಗ ಮತ್ತು ಪವಿತ್ರಾತ್ಮರಾಗಿ ಅಸ್ತಿತ್ವದಲ್ಲಿದ್ದಾರೆ.

- ಪವಿತ್ರಾತ್ಮನನ್ನು "ಆತ್ಮ", "ಯೆಹೋವನ ಆತ್ಮ" ಮತ್ತು "ಸತ್ಯದ ಆತ್ಮ" ಎಂಬುದಾಗಿಯೂ ಸೂಚಿಸುತ್ತದೆ.
- ಯಾಕಂದರೆ ಪವಿತ್ರಾತ್ಮನು ದೇವರಾಗಿದ್ದಾರೆ, ಆತನು ಪರಿಪೂರ್ಣವಾದ ಪವಿತ್ರತೆ, ಅನಂತವಾದ ಶುದ್ಧತೆ, ಮತ್ತು ಆತನ ಸ್ವಭಾವದಲ್ಲಿ , ಆತನು ಮಾಡುವ ಪ್ರತಿಯೊಂದು ಕಾರ್ಯದಲ್ಲಿ ನೈತಿಕವಾದ ಪರಿಪೂರ್ಣತೆಯನ್ನು ಹೊಂದಿರುತ್ತಾನೆ.
- ತಂದೆ ಮತ್ತು ಮಗನೊಂದಿಗೆ, ಪವಿತ್ರಾತ್ಮನು ಸರ್ವ ಸೃಷ್ಟಿಯನ್ನುಂಟು ಮಾಡುವದರಲ್ಲಿ ಸಕ್ರಿಯವಾಗಿದ್ದನು.
- ದೇವರ ಮಗನಾಗಿರುವ ಯೇಸು ಪರಲೋಕಕ್ಕೆ ಹೋದಾಗ, ದೇವರು ತನ್ನ ಜನರನ್ನು ನಡೆಸುವುದಕ್ಕೆ, ಬೋಧಿಸುವುದಕ್ಕೆ, ಆದರಿಸುವುದಕ್ಕೆ ಮತ್ತು ದೇವರ ಚಿತ್ತವನ್ನು ಮಾಡಲು ಅವರನ್ನು ಬಲಪಡಿಸುವುದಕ್ಕೆ ಪವಿತ್ರಾತ್ಮನನ್ನು ಕಳುಹಿಸಿಕೊಟ್ಟನು.
- ಪವಿತ್ರಾತ್ಮನು ಯೇಸುವನ್ನು ನಡೆಸಿದನು ಮತ್ತು ಆತನು ಯೇಸುವಿನಲ್ಲಿ ನಂಬಿದ ಪ್ರತಿಯೊಬ್ಬರನ್ನು ನಡೆಸುತ್ತಾನೆ.

ಅನುವಾದ ಸಲಹೆಗಳು:

- ಈ ಪದವನ್ನು "ಪವಿತ್ರ" ಮತ್ತು "ಆತ್ಮ" ಎನ್ನುವ ಈ ಪದಗಳಂತೆಯೇ ಸುಲಭವಾದ ಪದದೊಂದಿಗೆ ಅನುವಾದ ಮಾಡಬಹುದು.
- ಈ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ "ಪವಿತ್ರ ಆತ್ಮ" ಅಥವಾ "ಪರಿಶುದ್ಧನಾಗಿರುವ ಆತ್ಮ" ಅಥವಾ "ಆತ್ಮ ದೇವರು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಪರಿಶುದ್ಧ, ಆತ್ಮ, ದೇವರು, ಕರ್ತನು, ತಂದೆಯಾದ ದೇವರು, ದೇವರ ಮಗ, ವರ)

ಸತ್ಯವೇದದ ಅನುಬಂಧ ವಾಕ್ಯಗಳ :

- 1 ಸಮು.10:10
- 1 ಥೆಸ್ಸ.04:7-8
- ಅಪೊ.ಕೃತ್ಯ.08:17
- ಗಲಾತ್ಯ.05:25
- ಆದಿ.01:1-2
- ಯೆಶಯಾ.63:10
- ಯೋಬ.33:04
- ಮತ್ತಾಯ.12:31
- ಮತ್ತಾಯ.28:18-19
- ಕೀರ್ತನೆ.051:10-11

ಸತ್ಯವೇದದಿಂದ ಉದಾಹರಣೆಗಳು:

- **01:01** ಆದರೆ _ ದೇವರ ಆತ್ಮವು _ ನೀರಿನ ಮೇಲೆ ಚಲಿಸುತ್ತಿತ್ತು.
- **24:08** ಯೇಸುವು ದೀಕ್ಷಾಸ್ನಾನ ಪಡೆದು ನೀರಿನೊಳಗಿಂದ ಹೊರ ಬಂದಾಗ, _ ದೇವರ ಆತ್ಮವು _ ಪಾರಿವಾಳದ ಆಕಾರದಲ್ಲಿ ಕಾಣಿಸಿಕೊಂಡಿತು ಮತ್ತು ಇಳಿದು ಬಂದು, ಆತನ ಮೇಲೆ ಇಳಿಯಿತ್ತು.
- **26:01** ಸೈತಾನನ ಶೋಧನೆಗಳನ್ನು ಜಯಿಸಿದ ನಂತರ, ಯೇಸು ತಾನು ನಿವಾಸವಾಗಿದ್ದ ಗಲಿಲಾಯ ಸೀಮೆಗೆ _ ಪವಿತ್ರಾತ್ಮನ _ ಶಕ್ತಿಯೊಂದಿಗೆ ಹಿಂದುರಿಗಿದನು.
- **26:03** "ದೇವರು ತನ್ನ _ ಆತ್ಮವನ್ನು _ ನನಗೆ ಕೊಟ್ಟಿದ್ದಾನೆ, ಆದ್ದರಿಂದ ನಾನು ಬಡವರಿಗೆ ಶುಭವಾರ್ತೆಯನ್ನು ಸಾರುವುದಕ್ಕೆ, ಸೆರೆಯಲ್ಲಿರುವವರನ್ನು ಬಿಡುಗಡೆ ಮಾಡುವುದಕ್ಕೆ, ಕುರುಡರಿಗೆ ಕಣ್ಣು ಕೊಡುವುದಕ್ಕೆ, ಹಿಂಸಿಸಲ್ಪಟ್ಟವರನ್ನು ಬಿಡಿಸುವುದಕ್ಕೆ ಆತನು ನನ್ನನ್ನು ಕಳುಹಿಸಿದನು.
- **42:10** "ಹೋಗಿರಿ, ಸಮಸ್ತ ಜನರ ಗುಂಪುಗಳನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆ, ಮಗ, ಮತ್ತು _ ಪವಿತ್ರಾತ್ಮನ _ ಹೆಸರಿನಲ್ಲಿ ದೀಕ್ಷಾಸ್ನಾನ ಕೊಟ್ಟು, ನಾನು ನಿಮಗೆ ಆಜ್ಞಾಪಿಸಿದ ಪ್ರತಿಯೊಂದಕ್ಕೆ ವಿಧೇಯರಾಗಬೇಕೆಂದು ಅವರಿಗೆ ಬೋಧಿಸಿರಿ.
- **43:03** ಅವರೆಲ್ಲರು _ ಪವಿತ್ರಾತ್ಮನೊಂದಿಗೆ _ ತುಂಬಿಸಲ್ಪಟ್ಟರು ಮತ್ತು ಅವರು ಅನ್ಯ ಭಾಷೆಗಳಲ್ಲಿ ಮಾತನಾಡುವುದಕ್ಕೆ ಆರಂಭಿಸಿದರು.
- **43:08** "ಯೇಸು ವಾಗ್ದಾನ ಮಾಡಿದಂತೆಯೇ ಆತನು _ ಪವಿತ್ರಾತ್ಮನನ್ನು _ ಕಳುಹಿಸಿದನು. ನೀವೀಗ ನೋಡುತ್ತಿರುವ ಮತ್ತು ಕೇಳುತ್ತಿರುವ ಕಾರ್ಯಗಳನ್ನು ಮಾಡುತ್ತಿರುವುದು ಪವಿತ್ರಾತ್ಮ ದೇವರೇ ."
- **43:11** "ನಿಮ್ಮಲ್ಲಿ ಪ್ರತಿಯೊಬ್ಬರು ಮಾನಸಾಂತರ ಹೊಂದಿ, ಯೇಸು ಕ್ರಿಸ್ತನ ನಾಮದಲ್ಲಿ ದೀಕ್ಷಾಸ್ನಾನ ಹೊಂದಬೇಕು, ಆಗ ದೇವರು ನಿಮ್ಮ ಪಾಪಗಳನ್ನು ಕ್ಷಮಿಸುತ್ತಾರೆ. ಇದಾದನಂತರ ಆತನು ನಿಮಗೆ ಪವಿತ್ರಾತ್ಮನ _ ವರವನ್ನು ಕೊಡುತ್ತಾನೆ _."

- **45:01** ಆತನು (ಸ್ತೆಫೆನ) ಒಳ್ಳೆಯ ಸಾಕ್ಷ್ಯವನ್ನು ಹೊಂದಿದ್ದನು, ಮತ್ತು _ ಪವಿತ್ರಾತ್ಮನಿಂದಲೂ _, ಜ್ಞಾನದಿಂದಲೂ ತುಂಬಿಸಲ್ಪಟ್ಟಿದ್ದನು.

ಪದ ಡೇಟಾ:

- Strong's: H3068, H6944, H7307, G40, G4151

ಪವಿತ್ರಾತ್ಮನಿಂದ ತುಂಬಿಸಲ್ಪಡುವುದು

ಪದದ ಅರ್ಥವಿವರಣೆ:

ದೇವರ ಚಿತ್ತವನ್ನು ನೆರವೇರಿಸುವಂತೆ ಪವಿತ್ರಾತ್ಮನು ಒಬ್ಬ ವ್ಯಕ್ತಿಗೆ ಶಕ್ತಿಯನ್ನು ನೀಡುತ್ತಾನೆ ಎಂದು ಹೇಳಲು "ಪವಿತ್ರಾತ್ಮನಿಂದ ತುಂಬಿಸಲ್ಪಡುವುದು" ಎನ್ನುವ ವಾಕ್ಯವು ಅಲಂಕಾರಿಕ ರೂಪದಲ್ಲಿ ಉಪಯೋಗಿಸಲ್ಪಟ್ಟಿದೆ,

- "ತುಂಬಿಸಲ್ಪಟ್ಟ" ಎನ್ನುವ ಪದವು ಅನೇಕಬಾರಿ "ನಿಯಂತ್ರಿಸಲ್ಪಟ್ಟ" ಎಂದು ಅರ್ಥವಾಗಿರುತ್ತದೆ.
- ಜನರು ಪವಿತ್ರಾತ್ಮನ ನಾಯಕತ್ವದಲ್ಲಿ ನಡೆಯುವಾಗ ಮತ್ತು ದೇವರು ಏನು ಬಯಸುತ್ತಾನೋ ಅದನ್ನು ಮಾಡಲು ಆತನನ್ನು ಸಂಪೂರ್ಣವಾಗಿ ಅವಲಂಬಿಸಿದರೆ ಅವರು "ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿದ್ದಾರೆ" ಎಂದರ್ಥ.

ಅನುವಾದ ಸಲಹೆಗಳು:

- ಈ ವಾಕ್ಯವನ್ನು "ಪವಿತ್ರಾತ್ಮನಿಂದ ಶಕ್ತಿಹೊಂದಿರುವುದು" ಅಥವಾ "ಪವಿತ್ರಾತ್ಮ ಸ್ವಾಧೀನದಲ್ಲಿರುವುದು" ಎಂದು ಅನುವಾದ ಮಾಡಬಹುದು. ಆದರೆ ಪವಿತ್ರಾತ್ಮನು ಬಲವಂತವಾಗಿ ಅವರು ಕೆಲಸಮಾಡುವಂತೆ ಮಾಡುತ್ತಿದ್ದಾನೆಂದು ಅರ್ಥಬರೆದಂತೆ ಗಮನವಹಿಸಿರಿ.
- "ಅವನು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿದ್ದಾನೆ" ಎನ್ನುವ ವಾಕ್ಯವನ್ನು "ಪವಿತ್ರಾತ್ಮನ ಶಕ್ತಿಯಿಂದಲೇ ಅವನು ಜೀವಿಸುತ್ತಿದ್ದಾನೆ" ಅಥವಾ "ಅವನು ಪವಿತ್ರಾತ್ಮನಿಂದ ನಡೆಸಲ್ಪಡುತ್ತಿದ್ದಾನೆ" ಅಥವಾ "ಪವಿತ್ರಾತ್ಮನು ಅವನನ್ನು ಸಂಪೂರ್ಣವಾಗಿ ನಡೆಸುತ್ತಿದ್ದಾನೆ" ಎಂದು ಅನುವಾದ ಮಾಡಬಹುದು.
- "ಆತ್ಮನಲ್ಲಿ ಜೀವಿಸು" ಎನ್ನುವ ಸಮಾನಾರ್ಥವನ್ನು ಈ ಭಾವನೆ ನೀಡುತ್ತಿದೆ ಆದರೆ "ಪವಿತ್ರಾತ್ಮನಿಂದ ತುಂಬಿಸಲ್ಪಡುವುದು" ಎನ್ನುವ ವಾಕ್ಯವು ಒಬ್ಬ ವ್ಯಕ್ತಿ ಜೀವನದಲ್ಲಿ ಸಂಪೂರ್ಣವಾಗಿ ಪವಿತ್ರಾತ್ಮನೇ ನಡೆಸುತ್ತಿದ್ದಾನೆ ಎನ್ನುವ ಪರಿಪೂರ್ಣತೆಯನ್ನು ಒತ್ತಾಯಿಸಿ ಹೇಳುತ್ತಿದೆ. ಆದಕಾರಣ ಈ ಎರಡು ಭಾವನೆಗಳನ್ನು ಬೇರೆ ಬೇರೆಯಾಗಿ ಅನುವಾದ ಮಾಡಬೇಕು.

(ಈ ಪದಗಳನ್ನು ಸಹ ನೋಡಿರಿ : ಪವಿತ್ರಾತ್ಮನು)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.04:31
- ಅಪೊ.ಕೃತ್ಯ.05:17
- ಅಪೊ.ಕೃತ್ಯ.06:8-9
- ಲೂಕ.01:15
- ಲೂಕ.01:39-41
- ಲೂಕ.04:1-2

ಪದ ಡೇಟಾ:

- Strong's: G40, G4130, G4137, G4151

ಪವಿತ್ರೀಕರಿಸು, ಪವಿತ್ರೀಕರಿಸುವುದು

ಪದದ ಅರ್ಥವಿವರಣೆ:

ಪವಿತ್ರೀಕರಿಸು ಎಂದರೆ ಪರಿಶುದ್ಧವನ್ನಾಗಿ ಮಾಡು ಅಥವಾ ಪ್ರತ್ಯೇಕಿಸು ಎಂದರ್ಥ. ಪವಿತ್ರೀಕರಣ ಎನ್ನುವುದು ಪರಿಶುದ್ಧವನ್ನಾಗಿ ಮಾಡುವ ವಿಧಾನ ಎಂದರ್ಥ.

- ಹಳೇ ಒಡಂಬಡಿಕೆಯಲ್ಲಿ ದೇವರ ಸೇವೆಗಾಗಿ ಕೆಲವೊಂದು ನಿರ್ದಿಷ್ಟವಾದ ಜನರು ಮತ್ತು ವಸ್ತುಗಳು ಪವಿತ್ರೀಕರಿಸಲ್ಪಡುತ್ತವೆ, ಅಥವಾ ಪ್ರತ್ಯೇಕಿಸಲ್ಪಡುತ್ತವೆ.
- ಯೇಸುವಿನಲ್ಲಿ ನಂಬಿದ ಜನರನ್ನು ದೇವರು ಪವಿತ್ರೀಕರಿಸುವರೆಂದು ಹೊಸ ಒಡಂಬಡಿಕೆ ಬೋಧಿಸುತ್ತದೆ. ಆತನಿಗೆ ಸೇವೆ ಮಾಡುವುದಕ್ಕೆ ಆತನು ಅವರನ್ನು ಪ್ರತ್ಯೇಕಿಸುವನು ಮತ್ತು ಪರಿಶುದ್ಧಗೊಳಿಸುವನು.
- ಯೇಸುವಿನಲ್ಲಿ ನಂಬಿಕೆ ಇಟ್ಟಿರುವ ಜನರು ತಮ್ಮನ್ನು ತಾವು ದೇವರಿಗಾಗಿ ಪವಿತ್ರೀಕರಿಸಿಕೊಳ್ಳಬೇಕೆಂದು, ಅವರು ಮಾಡುವ ಪ್ರತಿಯೊಂದು ಕಾರ್ಯದಲ್ಲಿ ಪರಿಶುದ್ಧರಾಗಿರಬೇಕೆನ್ನುವ ಆಜ್ಞೆಯನ್ನು ಹೊಂದಿರುತ್ತಾರೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಪವಿತ್ರೀಕರಿಸು” ಎನ್ನುವ ಪದವನ್ನು “ಪ್ರತ್ಯೇಕಿಸು” ಅಥವಾ “ಪರಿಶುದ್ಧವನ್ನಾಗಿ ಮಾಡು” ಅಥವಾ “ಶುದ್ಧೀಕರಿಸು” ಎಂದೂ ಅನುವಾದ ಮಾಡಬಹುದು.
- ಜನರು ತಮ್ಮನ್ನು ತಾವು ಪವಿತ್ರೀಕರಿಸಿಕೊಳ್ಳುವಾಗ, ಅವರು ತಮ್ಮನ್ನು ತಾವು ಶುದ್ಧೀಕರಿಸಿಕೊಳ್ಳುವರು ಮತ್ತು ದೇವರಿಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳುವರು. ಇದೇ ಅರ್ಥವನ್ನು ಹೊಂದಿರುವ ಪದವಾಗಿರುವ “ಪ್ರತಿಷ್ಠಾಪಿಸು” ಎನ್ನುವ ಪದವನ್ನು ಸತ್ಯವೇದದಲ್ಲಿ ಉಪಯೋಗಿಸಿರುತ್ತಾರೆ.
- ಇದರ ಅರ್ಥವು “ಪ್ರತಿಷ್ಠಾಪಿಸು” ಎಂದಾಗಿದ್ದಾಗ, ಈ ಪದವನ್ನು “ದೇವರ ಸೇವೆಗಾಗಿ ಯಾರಾದರೊಬ್ಬರನ್ನು (ಅಥವಾ ಯಾವುದಾದರೊಂದನ್ನು) ಪ್ರತಿಷ್ಠೆ ಮಾಡು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, “ನಿನ್ನ ಪವಿತ್ರೀಕರಣ” ಎನ್ನುವ ಮಾತನ್ನು “ನಿನ್ನನ್ನು ಪರಿಶುದ್ಧ ಮಾಡುವುದು” ಅಥವಾ “(ದೇವರಿಗಾಗಿ) ನಿನ್ನನ್ನು ಪ್ರತ್ಯೇಕಿಸುವುದು” ಅಥವಾ “ನಿನ್ನನ್ನು ಪರಿಶುದ್ಧ ಮಾಡುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪ್ರತಿಷ್ಠಾಪಿಸು, ಪರಿಶುದ್ಧ, ಪ್ರತ್ಯೇಕಿಸಿಕೋ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಥೆಸ್ಸ.04:3-6
- 2 ಥೆಸ್ಸ.02:13
- ಆದಿ.02:1-3
- ಲೂಕ.11:2
- ಮತ್ತಾಯ.06:8-10

ಪದ ಡೇಟಾ:

- Strong's: H6942, G37, G38

ಪಶ್ಚಾತ್ತಾಪ ಹೊಂದು, ಪಶ್ಚಾತ್ತಾಪಪಡಿಸುವುದು, ಪಶ್ಚಾತ್ತಾಪಪಡಿಸಲಾಗಿದೆ, ಪಶ್ಚಾತ್ತಾಪ

ಪದದ ಅರ್ಥವಿವರಣೆ:

"ಪಶ್ಚಾತ್ತಾಪ ಹೊಂದು" ಮತ್ತು "ಪಶ್ಚಾತ್ತಾಪ" ಎನ್ನುವ ಪದಗಳು ಪಾಪದಿಂದ ಮರಳಿಕೋ ಮತ್ತು ತಿರುಗಿ ದೇವರ ಬಳಿಗೆ ಬಾ ಎನ್ನುವುದನ್ನೇ ಸೂಚಿಸುತ್ತವೆ.

- "ಪಶ್ಚಾತ್ತಾಪ ಹೊಂದು" ಎನ್ನುವುದಕ್ಕೆ ಆಕ್ಷರಾರ್ಥವು "ಒಬ್ಬರ ಮನಸ್ಸನ್ನು ಮಾರ್ಪಡಿಸು" ಎಂದರ್ಥವಾಗಿರುತ್ತದೆ.
- ಸತ್ಯವೇದದಲ್ಲಿ "ಪಶ್ಚಾತ್ತಾಪ ಹೊಂದು" ಎನ್ನುವ ಮಾತು ಸಾಧಾರಣವಾಗಿ ಪಾಪ ಸ್ವಭಾವದಿಂದ, ಆಲೋಚನೆ ಮತ್ತು ಕ್ರಿಯೆಯ ಮಾನವ ವಿಧಾನದಿಂದ ತಿರುಗಿಕೊಳ್ಳುವುದನ್ನು, ಮತ್ತು ದೇವರ ವಿಧಾನದ ಆಲೋಚನೆ ಮತ್ತು ಕ್ರಿಯೆಗಳ ಕಡೆಗೆ ತಿರುಗಿಕೊಳ್ಳುವುದನ್ನು ಸೂಚಿಸುತ್ತದೆ.
- ಜನರು ತಮ್ಮ ಪಾಪಗಳ ವಿಷಯದಲ್ಲಿ ನಿಜವಾಗಿ ಪಶ್ಚಾತ್ತಾಪಪಟ್ಟಿದ್ದರೆ, ದೇವರು ಅವರನ್ನು ಕ್ಷಮಿಸುತ್ತಾರೆ ಮತ್ತು ಅವರು ಆತನಿಗೆ ವಿಧೇಯತೆ ತೋರಿಸುವುದಕ್ಕೆ ಆರಂಭಿಸಲು ಸಹಾಯ ಮಾಡುತ್ತಾರೆ.

ಅನುವಾದ ಸಲಹೆಗಳು:

- "ಪಶ್ಚಾತ್ತಾಪ ಹೊಂದು" ಎನ್ನುವ ಮಾತನ್ನು "(ದೇವರ ಕಡೆಗೆ) ತಿರುಗಿಕೋ" ಅಥವಾ "ಪಾಪದಿಂದ ತಿರುಗಿಕೊಂಡು, ದೇವರ ಕಡೆಗೆ ಮರಳುವುದು" ಅಥವಾ "ದೇವರ ಕಡೆಗೆ ತಿರುಗಿಕೊಂಡು, ಪಾಪದಿಂದ ದೂರಾಗುವುದು" ಎನ್ನುವ ಅರ್ಥಗಳು ಬರುವ ಮಾತುಗಳಿಂದ ಅನುವಾದ ಮಾಡಬಹುದು.
- "ಪಶ್ಚಾತ್ತಾಪ " ಎನ್ನುವ ಪದವನ್ನು ಅನೇಕಬಾರಿ "ಪಶ್ಚಾತ್ತಾಪ ಹೊಂದು" ಎನ್ನುವ ಕ್ರಿಯಾಪದದೊಂದಿಗೆ ಅನುವಾದ ಮಾಡಬಹುದು. ಉದಾಹರಣೆಗೆ, "ದೇವರು ಇಸ್ರಾಯೇಲ್ಯರಿಗೆ ಪಶ್ಚಾತ್ತಾಪವನ್ನು ಅನುಗ್ರಹಿಸಿದ್ದಾರೆ" ಎನ್ನುವ ಮಾತನ್ನು "ಇಸ್ರಾಯೇಲ್ ಪಶ್ಚಾತ್ತಾಪ ಹೊಂದಲು ದೇವರೇ ಬಲಗೊಳಿಸಿದ್ದಾರೆ" ಎಂದೂ ಅನುವಾದ ಮಾಡಬಹುದು.
- "ಪಶ್ಚಾತ್ತಾಪ" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಪಾಪದಿಂದ ತಿರುಗಿಕೋ" ಅಥವಾ "ಪಾಪದಿಂದ ದೂರಾಗಿ, ದೇವರ ಕಡೆಗೆ ತಿರುಗಿಕೊಳ್ಳುವುದು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಕ್ಷಮಿಸು, ಪಾಪ, ತಿರುಗು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.03:19-20
- ಲೂಕ.03:3
- ಲೂಕ.03:8
- ಲೂಕ.05:29-32
- ಲೂಕ.24:45-47
- ಮಾರ್ಕ.01:14-15
- ಮತ್ತಾಯ.03:1-3
- ಮತ್ತಾಯ.03:10-12
- ಮತ್ತಾಯ.04:17
- ರೋಮಾ.02:3-4

ಸತ್ಯವೇದದಿಂದ ಉದಾಹರಣೆಗಳು:

- _**16:02** ಅನೇಕವರ್ಷಗಳು ದೇವರಿಗೆ ಅವಿಧೇಯತೆಯನ್ನು ತೋರಿಸದ ಮೇಲೆ ಮತ್ತು ತಮ್ಮ ಶತ್ರುಗಳಿಂದ ಒತ್ತಡಕ್ಕೆ ಗುರಿ ಮಾಡಿದ ಮೇಲೆ, ಇಸ್ರಾಯೇಲ್ಯರು **ಪಶಾತ್ತಾಪ ಹೊಂದಿದರು** _ ಮತ್ತು ತಮ್ಮನ್ನು ರಕ್ಷಿಸಬೇಕೆಂದು ದೇವರಲ್ಲಿ ಕೇಳಿಕೊಂಡರು.
- _**17:13** ದಾವೀದನು ತನ್ನ ಪಾಪದ ಕುರಿತು **ಪಶ್ಚಾತ್ತಾಪ ಹೊಂದಿದನು** _ ಮತ್ತು ದೇವರು ಅವನನ್ನು ಕ್ಷಮಿಸಿದನು.
- _**19:18** ಅವರು **ಪಶ್ಚಾತ್ತಾಪ ಹೊಂದದಿದ್ದರೆ** _ ದೇವರು ಅವರನ್ನು ನಾಶಗೊಳಿಸುತ್ತಾರೆಂದು ಅವರು (ಪ್ರವಾದಿಗಳು) ಜನರನ್ನು ಎಚ್ಚರಿಸಿದರು.
- _**24:02** ಅನೇಕರು ಯೋಹಾನನ ಮಾತುಗಳನ್ನು ಕೇಳಲು ಅರಣ್ಯಕ್ಕೆ ಬಂದರು. " **ಪಶ್ಚಾತ್ತಾಪ ಹೊಂದಿರಿ** _, ದೇವರ ರಾಜ್ಯವು ಸಮೀಪವಾಗಿದೆ!" ಎಂದೂ ಹೇಳುತ್ತಾ ಆತನು ಅವರಿಗೆ ಪ್ರಕಟಿಸಿದನು.
- _**42:08** "ಪ್ರತಿಯೊಬ್ಬರು ತಮ್ಮ ಪಾಪಗಳಿಗೆ ಕ್ಷಮೆಯನ್ನು **ಪಡೆದುಕೊಳ್ಳುವುದಕ್ಕೆ** _ ಪ್ರತಿಯೊಬ್ಬರು ಪಶ್ಚಾತ್ತಾಪ ಹೊಂದಬೇಕೆಂದು ನನ್ನ ಶಿಷ್ಯರು ಪ್ರಕಟಿಸುವರು ಎಂದು ಲೇಖನಗಳಲ್ಲಿ ಕೂಡ ಬರೆಯಲ್ಪಟ್ಟಿರುತ್ತದೆ."
- _**44:05** "ಆದ್ದರಿಂದ ಈಗ, **ಪಶ್ಚಾತ್ತಾಪ ಹೊಂದಿರಿ** _ ಮತ್ತು ದೇವರ ಕಡೆಗೆ ತಿರುಗಿಕೊಳ್ಳಿರಿ, ಇದರಿಂದ ನಿಮ್ಮ ಪಾಪಗಳು ತೊಳೆಯಲ್ಪಡುತ್ತವೆ."

ಪದ ಡೇಟಾ:

- Strong's: H5150, H5162, H5164, G278, G3338, G3340, G3341

ಪಸ್ಕ

ಸತ್ಯಾಂಶಗಳು:

"ಪಸ್ಕ" ಎನ್ನುವುದು ಪ್ರತಿ ವರ್ಷ ಯೆಹೂದ್ಯರು ಆಚರಿಸುವ ಧಾರ್ಮಿಕ ಹಬ್ಬದ ಹೆಸರಾಗಿರುತ್ತದೆ, ಐಗುಪ್ತದಲ್ಲಿ ಗುಲಾಮಗಿರಿಯಿಂದ ತಮ್ಮ ಪೂರ್ವಜರಾದ ಇಸ್ರಾಯೇಲ್ಯರನ್ನು ದೇವರು ಯಾವರೀತಿ ರಕ್ಷಿಸಿದ್ದಾರೆಂದು ನೆನಪು ಮಾಡಿಕೊಳ್ಳುವುದಕ್ಕೆ ಈ ಹಬ್ಬವನ್ನು ಮಾಡುತ್ತಾರೆ.

- ಈ ಹಬ್ಬದ ಹೆಸರು ದೇವರು ಇಸ್ರಾಯೇಲ್ಯರ ಮನೆಗಳನ್ನು "ದಾಟಿ ಹೋಗಿದ್ದಾನೆ", ಅವರ ಮಕ್ಕಳನ್ನು ಸಾಯಿಸಲಿಲ್ಲ, ಆದರೆ ಐಗುಪ್ತರ ಮೊದಲ ಸಂತಾನವಾಗಿರುವ ಗಂಡು ಮಕ್ಕಳನ್ನು ಸಾಯಿಸಿದನು ಎನ್ನುವ ಸತ್ಯದ ಘಟನೆಯೊಳಗಿಂದ ಬಂದಿದ್ದಾಗಿರುತ್ತದೆ.
- ಪಸ್ಕ ಆಚರಣೆಯಲ್ಲಿ ಅವರು ಕೊಂದು, ಚೆನ್ನಾಗಿ ಸುಟ್ಟ ಪರಿಪೂರ್ಣವಾದ ಕುರಿಮರಿ ವಿಶೇಷವಾದ ಊಟ ಮತ್ತು ಅದರೊಂದಿಗೆ ಹುಳಿಯಿಲ್ಲದ ರೊಟ್ಟಿಯನ್ನು ಹೊಂದಿರುತ್ತಾರೆ. ಐಗುಪ್ತದಿಂದ ಇಸ್ರಾಯೇಲ್ಯರು ರಕ್ಷಿಸಲ್ಪಟ್ಟ ದಿನದ ಮುಂಚಿನ ರಾತ್ರಿ ಅವರು ಊಟ ಮಾಡಿದ ಊಟವನ್ನು ಈ ಆಹಾರ ಪದಾರ್ಥಗಳು ಜ್ಞಾಪಕ ಮಾಡುತ್ತವೆ.
- ಇಸ್ರಾಯೇಲ್ಯರ ಮನೆಗಳನ್ನು ದೇವರು ಹೇಗೆ "ದಾಟಿ ಹೋದರು" ಎಂದು ಆಚರಿಸಿಕೊಳ್ಳಬೇಕೆಂದು ಮತ್ತು ಐಗುಪ್ತದಲ್ಲಿರುವ ಗುಲಾಮಗಿರಿಯಿಂದ ಆತನು ಹೇಗೆ ಬಿಡುಗಡೆಗೊಳಿಸಿದನೆಂದು ಜ್ಞಾಪಕ ಮಾಡಿಕೊಳ್ಳುವುದರ ಕ್ರಮದಲ್ಲಿ ಪ್ರತಿ ವರ್ಷವು ಈ ಊಟವನ್ನು ಮಾಡಬೇಕೆಂದು ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದರು

ಅನುವಾದ ಸಲಹೆಗಳು:

- "ಪಸ್ಕ" ಎನ್ನುವ ಪದವನ್ನು "ದಾಟು" ಮತ್ತು "ಹಾದು ಹೋಗು" ಅಥವಾ ಇದೇ ಅರ್ಥಬರುವ ಬೇರೊಂದು ಪದಗಳಿಂದ ಅನುವಾದ ಮಾಡಬಹುದು.
- ಈ ಹಬ್ಬದ ಹೆಸರು ಇಸ್ರಾಯೇಲ್ಯರ ಮಕ್ಕಳನ್ನು ಸಂರಕ್ಷಿಸುತ್ತಾ, ಅವರ ಮನೆಗಳನ್ನು ದಾಟಿ ಹೋಗುವುದರಲ್ಲಿ ಕರ್ತನ ದೂತ ಏನು ಮಾಡಿತೆಂದು ವಿವರಿಸುವುದಕ್ಕೆ ಉಪಯೋಗಿಸುವ ಪದಗಳೊಂದಿಗೆ ಸ್ಪಷ್ಟವಾದ ಸಂಬಂಧವನ್ನು ಹೊಂದಿದ್ದರೆ ಎಷ್ಟೋ ಸಹಾಯಕವಾಗಿರುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.05:6-8
- 2 ಕೊರಿಂಥ.30:13-15
- 2 ಅರಸ.23:21-23
- ಧರ್ಮೋ.16:1-2
- ವಿಮೋ.12:26-28
- ಎಜ್ರಾ.06:21-22
- ಯೋಹಾನ.13:1-2
- ಯೆಹೋ.05:10-11
- ಯಾಜಕ.23:4-6
- ಅರಣ್ಯ.09:1-3

ಸತ್ಯವೇದದಿಂದ ಉದಾಹರಣೆಗಳು:

- **12:14** ಐಗುಪ್ತರ ಮೇಲೆ ದೇವರ ಜಯವನ್ನು ಜ್ಞಾಪಕ ಮಾಡಿಕೊಳ್ಳುವುದಕ್ಕೆ ಮತ್ತು ಪ್ರತಿ ವರ್ಷ _ ಪಸ್ಕ _ ಹಬ್ಬವನ್ನು ಆಚರಿಸುವುದರ ಮೂಲಕ ಗುಲಾಮಗಿರಿಯಿಂದ ಅವರ ಬಿಡುಗಡೆಯನ್ನು ಜ್ಞಾಪಕ ಮಾಡಿಕೊಳ್ಳುವುದಕ್ಕೆ ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದನು.
- **38:01** ಪ್ರತಿ ವರ್ಷ ಯೆಹೂದ್ಯರು _ ಪಸ್ಕವನ್ನು _ ಆಚರಿಸಿದರು. ಅನೇಕ ಶತಾಬ್ದಗಳಿಂದ ಐಗುಪ್ತದಲ್ಲಿರುವ ಗುಲಾಮಗಿರಿಯಿಂದ ತಮ್ಮ ಪೂರ್ವಜರನ್ನು ದೇವರು ಹೇಗೆ ರಕ್ಷಿಸಿದರೆನ್ನುವುದರ ಕುರಿತಾಗಿಯೇ ಈ ಆಚರಣೆಯಾಗಿತ್ತು.
- **38:04** ಯೇಸು ತನ್ನ ಶಿಷ್ಯರೊಂದಿಗೆ _ ಪಸ್ಕವನ್ನು _ ಆಚರಿಸಿದರು.
- **48:09** ದೇವರು ರಕ್ತವನ್ನು ನೋಡಿದಾಗ, ಅವರ ಮನೆಗಳಿಂದ ಆತನು ಹಾದು ಹೋದನು ಮತ್ತು ಅವರ ಚೊಚ್ಚಲ ಮಕ್ಕಳನ್ನು ಸಾಯಿಸಲಿಲ್ಲ. ಈ ಸಂಘಟನೆಯನ್ನು _ ಪಸ್ಕ _ ಎಂದು ಕರೆಯುತ್ತಾರೆ.
- **48:10** ಯೇಸು ನಮ್ಮ _ ಪಸ್ಕ _ ಕುರಿಮರಿಯಾಗಿದ್ದಾನೆ. ಈತನು ಪರಿಪೂರ್ಣನು ಮತ್ತು ಪಾಪರಹಿತನು ಆಗಿದ್ದನು, ಮತ್ತು _ ಪಸ್ಕ _ ಆಚರಣೆಯ ಸಮಯದಲ್ಲಿಯೇ ಆತನನ್ನು ಸಾಯಿಸಿದ್ದರು.

ಪದ ಡೇಟಾ:

- Strong's: H6453, G3957

ಪಾತಾಳ (ಹೇಡೆಸ್), ಸಮಾಧಿ (ಷಿಯೋಲ್)

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ ಉಪಯೋಗಿಸಲ್ಪಟ್ಟ "ಪಾತಾಳ" ಮತ್ತು "ಸಮಾಧಿ" ಎನ್ನುವವುಗಳು ಜನರ ಮರಣವನ್ನು ಮತ್ತು ಮರಣದನಂತರ ಜನರ ಆತ್ಮಗಳು ಹೋಗಿ ಸೇರುವ ಸ್ಥಳವನ್ನು ಸೂಚಿಸುತ್ತವೆ. ಅವುಗಳ ಅರ್ಥವು ಒಂದೇಯಾಗಿರುತ್ತದೆ.

- ಇಬ್ರಿ ಪದವಾದ "ಷಿಯೋಲ್" ಎನ್ನುವ ಪದವು ಹಳೇ ಒಡಂಬಡಿಕೆಯಲ್ಲಿ ಉಪಯೋಗಿಸಲಾಗಿರುತ್ತದೆ, ಇದು ಸಾಧಾರಣವಾಗಿ ಮರಣದ ಸ್ಥಳವನ್ನು ಸೂಚಿಸುತ್ತದೆ.
- ಹೊಸ ಒಡಂಬಡಿಕೆಯಲ್ಲಿ ಗ್ರೀಕ್ ಪದವಾದ "ಹೇಡೆಸ್" (ಅಥವಾ ಪಾತಾಳ) ಎನ್ನುವ ಪದವು ದೇವರನ್ನು ವಿರೋಧಿಸಿಸ ಜನರ ಆತ್ಮಗಳಿಗಾಗಿ ಸಿದ್ಧ ಮಾಡಿದ ಸ್ಥಳವನ್ನು ಸೂಚಿಸುತ್ತದೆ. ಈ ಆತ್ಮಗಳು ಪಾತಾಳಕ್ಕೆ "ಇಳಿದು" ಹೋಗುತ್ತಿವೆ ಎಂಬುದಾಗಿ ಸೂಚಿಸಲ್ಪಟ್ಟಿವೆ. ಕೆಲವೊಂದುಬಾರಿ ಇದಕ್ಕೆ ವಿರುದ್ಧತ್ಮಾಕವಾಗಿ ಪರಲೋಕಕ್ಕೆ "ಏರಿ" ಹೋಗುತ್ತಿವೆ ಎಂದು ಹೇಳಲಾಗುತ್ತದೆ, ಯೇಸುವಿನಲ್ಲಿ ನಂಬಿದ ಜನರ ಆತ್ಮಗಳು ಜೀವಂತವಾಗಿರುತ್ತವೆ.
- "ಹೇಡೆಸ್" (ಅಥವಾ ಪಾತಾಳ) ಎನ್ನುವ ಪದವು ಪ್ರಕಟನೆ ಗ್ರಂಥದಲ್ಲಿ "ಮರಣ" ಎನ್ನುವ ಪದದೊಂದಿಗೆ ಸೇರಿಸಿ ಹೇಳಲಾಗಿರುತ್ತದೆ. ಅಂತ್ಯಕಾಲದಲ್ಲಿ ಮರಣ ಮತ್ತು ಹೇಡೆಸ್ (ಅಥವಾ ಪಾತಾಳ) ಗಳನ್ನು ಬೆಂಕಿಯ ಕೆರೆಯಾದ ನರಕದೊಳಗೆ ಎಸೆಯಲ್ಪಡುತ್ತವೆ.

ಅನುವಾದ ಸಲಹೆಗಳು:

- ಹಳೇ ಒಡಂಬಡಿಕೆಯಲ್ಲಿ ಉಪಯೋಗಿಸಿದ "ಷಿಯೋಲ್" (ಅಥವಾ ಸಮಾಧಿ) ಎನ್ನುವ ಪದವನ್ನು "ಮರಣದ ಸ್ಥಳ" ಅಥವಾ "ಸತ್ತಂತ ಆತ್ಮಗಳಿರುವ ಸ್ಥಳ" ಎಂಬುದಾಗಿಯೂ ಅನುವಾದ ಮಾಡಬಹುದು. ಈ ಪದವನ್ನು ಕೆಲವೊಂದು ಭಾಷಾಂತರಗಳಲ್ಲಿ ಸಂದರ್ಭಾನುಸಾರವಾಗಿ "ಗುಂಡಿ" ಅಥವಾ "ಮರಣ" ಎಂದು ಅನುವಾದ ಮಾಡುತ್ತಾರೆ.
- ಹೊಸ ಒಡಂಬಡಿಕೆಯಲ್ಲಿ ಪದವಾದ "ಹೇಡೆಸ್" (ಅಥವಾ ಪಾತಾಳ) ಎನ್ನುವ ಪದವನ್ನು "ನಂಬದಿರುವ ಸತ್ತಂತ ಆತ್ಮಗಳ ಸ್ಥಳ" ಅಥವಾ "ಸತ್ತವರು ಹಿಂಸೆ ಹೊಂದುವ ಸ್ಥಳ" ಅಥವಾ "ನಂಬದೇ ಸತ್ತ ಜನರ ಆತ್ಮಗಳ ಸ್ಥಳ" ಎಂದೂ ಅನುವಾದ ಮಾಡುತ್ತಾರೆ.

ಕೆಲವೊಂದು ಭಾಷಾಂತರಗಳಲ್ಲಿ "ಷಿಯೋಲ್" ಮತ್ತು "ಹೇಡೆಸ್" ಎನ್ನುವ ಪದಗಳನ್ನು ಹಾಗೆಯೇ ಇಟ್ಟಿರುತ್ತಾರೆ, ಅನುವಾದ ಮಾಡುವ ಭಾಷೆಯ ಶಬ್ದಗಳ ಮಾದರಿಗೆ ಸರಿಹೊಗುವಂತೆ ಉಚ್ಚರಿಸುತ್ತಾರೆ. (ನೋಡಿರಿ: ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

- ಇದನ್ನು ವಿವರಿಸುವುದಕ್ಕೆ ಪ್ರತಿಯೊಂದು ಪದಕ್ಕೆ ಮಾತನ್ನು ಸೇರಿಸಬಹುದು, ಈ ರೀತಿ ಮಾಡುವುದಕ್ಕೆ ಕೆಲವೊಂದು ಉದಾಹರಣೆಗಳು ಇಲ್ಲಿವೆ, "ಸಮಾಧಿ, ಸತ್ತಂತ ಜನರು ಹೋಗುವ ಸ್ಥಳ" ಅಥವಾ "ಪಾತಾಳ, ಮರಣದ ಸ್ಥಳ" ಎಂಬುದಾಗಿ ಆ ಪದಗಳನ್ನು ವಿವರಿಸಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಮರಣ, ಪರಲೋಕ, ನರಕ, ಸಮಾಧಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.02:29-31
- ಆದಿ.44:27-29
- ಯೋನಾ.02:1-2
- ಲೂಕ.10:13-15
- ಲೂಕ.16:22-23
- ಮತ್ತಾಯ.11:23-24
- ಮತ್ತಾಯ.16:17-18
- ಪ್ರಕ.01:17-18

ಪದ ಡೇಟಾ:

- Strong's: H7585, G86

ಪಾಪ ನಿವಾರಣೆ

ಪದದ ಅರ್ಥವಿವರಣೆ:

“ಪಾಪ ನಿವಾರಣೆ” ಎನ್ನುವ ಪದವು ದೇವರ ಕೋಪಾಗ್ನಿಯನ್ನು ಸಮಾಧಾನಪಡಿಸಲು ಮತ್ತು ದೇವರ ನೀತಿಯನ್ನು ನೆರವೇರಿಸಲು ಅಥವಾ ತೃಪ್ತಿಪಡಿಸಲು ಮಾಡಲ್ಪಟ್ಟ ತ್ಯಾಗವನ್ನು ಸೂಚಿಸುತ್ತದೆ.

- ಯೇಸು ಕ್ರಿಸ್ತನ ತ್ಯಾಗಪೂರಿತವಾದ ರಕ್ತದ ಅರ್ಪಣೆಯು ಮಾನವಕುಲದ ಪಾಪಗಳಿಗಾಗಿ ದೇವರೇ ಮಾಡಿದ ಪಾಪ ನಿವಾರಣೆಯಾಗಿರುತ್ತದೆ.
- ಶಿಲುಬೆಯಲ್ಲಿ ಯೇಸುವಿನ ಮರಣವು ಪಾಪಕ್ಕೆ ವಿರುದ್ಧವಾದ ದೇವರ ಕೋಪಾಗ್ನಿಯನ್ನು ಸಮಾಧಾನಪಡಿಸುತ್ತದೆ. ಈ ಕಾರ್ಯದಿಂದ ದೇವರು ಜನರ ಮೇಲೆ ತನ್ನ ದಯೆಯನ್ನು ತೋರಿಸುವನು ಮತ್ತು ಅವರಿಗೆ ನಿತ್ಯಜೀವವನ್ನು ಅನುಗ್ರಹಿಸುವನು.

ಅನುವಾದ ಸಲಹೆಗಳು:

- ಈ ಪದವನ್ನು “ಸಮಾಧಾನಗೊಳಿಸುವುದು” ಅಥವಾ “ದೇವರು ಜನರ ಪಾಪಗಳನ್ನು ಕ್ಷಮಿಸಲು ಮತ್ತು ಜನರ ಮೇಲೆ ದಯೆಯನ್ನು ತೋರಿಸುವಂತೆ ಮಾಡುವುದು” ಎಂದೂ ಅನುವಾದ ಮಾಡಬಹುದು.
- “ಪ್ರಾಯಶ್ಚಿತ್ತ” ಎನ್ನುವ ಪದವು “ಪಾಪ ನಿವಾರಣೆ” ಎನ್ನುವ ಪದದ ಅರ್ಥಕ್ಕೆ ತುಂಬಾ ಸಮೀಪವಾಗಿರುತ್ತದೆ. * ಈ ಎರಡು ಪದಗಳನ್ನು ಹೇಗೆ ಉಪಯೋಗಿಸಲ್ಪಟ್ಟಿರುತ್ತವೆಯೆಂದು ಹೋಲಿಸಿ ನೋಡುವುದು ತುಂಬಾ ಪ್ರಾಮುಖ್ಯ.

(ಈ ಪದಗಳನ್ನು ಸಹ ನೋಡಿರಿ : ಪ್ರಾಯಶ್ಚಿತ್ತ, ನಿತ್ಯ, ಕ್ಷಮಿಸು, ಯಜ್ಞ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.02:1-3
- 1 ಯೋಹಾನ.04:9-10
- ರೋಮಾ.03:25-26

ಪದ ಡೇಟಾ:

- Strong's: G2434, G2435

ಪಾಪ, ಪಾಪಸಹಿತ, ಪಾಪಿ, ಪಾಪ ಮಾಡುವುದು

ಪದದ ಅರ್ಥವಿವರಣೆ:

"ಪಾಪ" ಎನ್ನುವ ಪದವು ದೇವರ ಚಿತ್ತಕ್ಕೆ ಮತ್ತು ಆತನ ಆಜ್ಞೆಗಳಿಗೆ ವಿರುದ್ಧವಾಗಿ ಮಾಡುವ ಕ್ರಿಯೆಗಳು, ಆಲೋಚನೆಗಳು ಮತ್ತು ಪದಗಳನ್ನು ಸೂಚಿಸುತ್ತದೆ. ಪಾಪ ಎನ್ನುವುದು ದೇವರು ನಮ್ಮನ್ನು ಮಾಡಬೇಕೆಂದು ಬಯಸಿದ ಯಾವುದಾದರೊಂದು ಕಾರ್ಯವನ್ನು ಮಾಡದೇ ಇರುವುದನ್ನೂ ಸೂಚಿಸುತ್ತದೆ.

- ದೇವರಿಗೆ ಇಷ್ಟವಾಗಿರದ ಅಥವಾ ಆತನಿಗೆ ವಿಧೇಯತೆ ತೋರಿಸದ ಪ್ರತಿಯೊಂದು ಕ್ರಿಯೆಯಲ್ಲಿ ಮತ್ತು ಇತರ ಜನರು ಇವುಗಳ ಕುರಿತಾಗಿ ಗೊತ್ತಿಲ್ಲದ ವಿಷಯಗಳಲ್ಲಿಯೂ ಪಾಪವು ಒಳಗೊಂಡಿರುತ್ತದೆ,
- ದೇವರ ಚಿತ್ತಕ್ಕೆ ಅವಿಧೇಯತೆಯನ್ನು ತೋರಿಸುವ ಆಲೋಚನೆಗಳು ಮತ್ತು ಕ್ರಿಯೆಗಳನ್ನು "ಪಾಪಸಹಿತ" ಎಂದೂ ಕರೆಯುತ್ತಾರೆ.
- ಆದಾಮನು ಪಾಪ ಮಾಡಿರುವ ಕಾರಣದಿಂದಲೇ ಎಲ್ಲಾ ಜನರು "ಪಾಪ ಸ್ವಭಾವದಿಂದ" ಹುಟ್ಟಿದ್ದಾರೆ, ಆ ಸ್ವಭಾವವು ಅವರನ್ನು ನಿಯಂತ್ರಿಸುತ್ತದೆ ಮತ್ತು ಅವರು ಪಾಪ ಮಾಡುವಂತೆ ಕಾರಣವಾಗುತ್ತದೆ.
- "ಪಾಪಿ" ಎಂದರೆ ಪಾಪವನ್ನು ಮಾಡುವ ವ್ಯಕ್ತಿ ಎಂದರ್ಥ, ಆದ್ದರಿಂದ ಪ್ರತಿಯೊಬ್ಬ ಮನುಷ್ಯನು ಪಾಪಿಯಾಗಿರುತ್ತಾನೆ.
- ಕೆಲವೊಂದುಬಾರಿ "ಪಾಪಿಗಳು" ಎನ್ನುವ ಪದವನ್ನು ಫರಿಸಾಯರು ಎನ್ನುವ ಜನರಿಂದ ಉಪಯೋಗಿಸಲ್ಪಡುತ್ತದೆ, ಇದನ್ನು ಫರಿಸಾಯರು ಧರ್ಮಶಾಸ್ತ್ರಕ್ಕೆ ಒಳಗಾಗಬೇಕೆಂದು ಹೇಳಿದಾಗ ಧರ್ಮಶಾಸ್ತ್ರಕ್ಕೆ ಒಳಗಾಗದ ಜನರನ್ನು ಸೂಚಿಸುತ್ತದೆ.
- "ಪಾಪಿ" ಎನ್ನುವ ಪದವು ಇತರ ಜನರಿಗಿಂತಲೂ ಪಾಪಿಗಳಾಗಿರುವುದಕ್ಕೆ ಪರಿಗಣಿಸಲ್ಪಟ್ಟ ಜನರ ಕುರಿತಾಗಿಯೂ ಈ ಪದವನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ, ಈ ಪದವನ್ನು ತೆರಿಗೆ ವಸೂಲಿದಾರರಿಗೆ ಮತ್ತು ಸೂಳೆಯರಿಗೆ ಕೊಡಲ್ಪಟ್ಟಿರುತ್ತದೆ.

ಅನುವಾದ ಸಲಹೆಗಳು:

- "ಪಾಪ" ಎನ್ನುವ ಪದವನ್ನು "ದೇವರಿಗೆ ಅವಿಧೇಯತೆ" ಅಥವಾ "ದೇವರ ಚಿತ್ತಕ್ಕೆ ವಿರುದ್ಧವಾಗಿ ಹೋಗುವುದು" ಅಥವಾ "ದುಷ್ಟ ನಡತೆ ಮತ್ತು ಆಲೋಚನೆಗಳು" ಅಥವಾ "ತಪ್ಪನ್ನು ಮಾಡುವುದು" ಎನ್ನುವ ಅರ್ಥಗಳಿರುವ ಮಾತುಗಳನ್ನು ಅಥವಾ ಪದಗಳೊಂದಿಗೆ ಅನುವಾದ ಮಾಡಬಹುದು.
- "ಪಾಪ" ಎನ್ನುವ ಪದವನ್ನು "ದೇವರಿಗೆ ಅವಿಧೇಯತೆ ತೋರಿಸು" ಅಥವಾ "ತಪ್ಪನ್ನು ಮಾಡು" ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ "ಪಾಪಸಹಿತ" ಎನ್ನುವ ಪದವನ್ನು "ಸಂಪೂರ್ಣವಾಗಿ ತಪ್ಪನ್ನು ಮಾಡುವುದು" ಅಥವಾ "ದುಷ್ಟನಾಗಿರುವುದು" ಅಥವಾ "ಅನೈತಿಕವಾಗಿರುವುದು" ಅಥವಾ "ದುಷ್ಟ ಅಥವಾ ಕೆಟ್ಟ" ಅಥವಾ "ದೇವರಿಗೆ ವಿರುದ್ಧವಾಗಿ ತಿರಸ್ಕಾರ ಮಾಡುವುದು" ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ "ಪಾಪಿ" ಎನ್ನುವ ಪದವನ್ನು "ಪಾಪಗಳನ್ನು ಮಾಡುವ ವ್ಯಕ್ತಿ" ಅಥವಾ "ಕೆಟ್ಟ ಕೆಲಸಗಳನ್ನು ಮಾಡುವ ವ್ಯಕ್ತಿ" ಅಥವಾ "ದೇವರಿಗೆ ಅವಿಧೇಯನಾಗಿರುವ ವ್ಯಕ್ತಿ" ಅಥವಾ "ಧರ್ಮಶಾಸ್ತ್ರಕ್ಕೆ ಒಳಗಾಗದ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.
- "ಪಾಪಿಗಳು" ಎನ್ನುವ ಪದವನ್ನು "ಹೆಚ್ಚಾಗಿ ಪಾಪ ಮಾಡುವ ಜನರು" ಅಥವಾ "ಜನರು ತುಂಬಾ ಪಾಪವನ್ನು ಮಾಡಿದವರಾಗಿ ಪರಿಗಣಿಸಲ್ಪಟ್ಟಿದ್ದಾರೆ" ಅಥವಾ "ಅನೈತಿಕವಾದ ಜನರು" ಎಂದೂ ಅನುವಾದ ಮಾಡಬಹುದು.
- "ಸುಂಕ ವಸೂಲಿದಾರರು ಮತ್ತು ಪಾಪಿಗಳು" ಎನ್ನುವ ಮಾತನ್ನು ಅನುವಾದ ಮಾಡುವುದರಲ್ಲಿ "ಪ್ರಭುತ್ವಕ್ಕಾಗಿ ಹಣವನ್ನು ಶೇಕರಣೆ ಮಾಡುವ ಜನರು, ಮತ್ತು ಅತೀ ಪಾಪಗಳನ್ನು ಮಾಡುವ ಜನರು" ಅಥವಾ "ಪಾಪಗಳನ್ನು ಮಾಡುವ ಜನರು, ಅದರಲ್ಲಿ ತೆರಿಗೆ ವಸೂಲಿದಾರರು ಇದ್ದಾರೆ" ಎಂದೂ ಅನುವಾದ ಮಾಡಬಹುದು.
- ಪಾಪಸಹಿತವಾದ ನಡತೆ ಮತ್ತು ಆಲೋಚನೆಗಳು ಎನ್ನುವವುಗಳನ್ನು ಇತರ ಜನರು ನೋಡದಿದ್ದರೂ ಅಥವಾ ಅವುಗಳ ಕುರಿತಾಗಿ ತಿಳಿದುಕೊಳ್ಳದಿದ್ದರೂ ಈ ಪದದಲ್ಲಿ ಒಳಗೊಂಡಿರುತ್ತವೆಯೆಂದು ತಿಳಿದುಕೊಳ್ಳಿರಿ,
- "ಪಾಪ" ಎನ್ನುವ ಪದವು ಸಾಧಾರಣವಾಗಿರಬೇಕು, ಮತ್ತು "ದುಷ್ಟತ್ವ", "ಕೆಟ್ಟತನ" ಎನ್ನುವ ಪದಗಳಿಗೆ ವಿಭಿನ್ನವಾಗಿರಬೇಕು.

(ಈ ಪದಗಳನ್ನು ಸಹ ನೋಡಿರಿ : ಅವಿಧೇಯತೆ, ಕೆಟ್ಟ, ಮಾಂಸ, ಸುಂಕ ವಸೂಲಿದಾರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.09:1-3
- 1 ಯೋಹಾನ.01:10
- 1 ಯೋಹಾನ.02:02
- 2 ಸಮು.07:12-14
- ಅಪೊ.ಕೃತ್ಯ.03:19
- ದಾನಿ.09:24
- ಆದಿ.04:7
- ಇಬ್ರಿ.12:02
- ಯೆಶಯಾ.53:11
- ಯೆರೆ.18:23
- ಯಾಜಕ.04:14

- ಲೂಕ.15:18
- ಮತ್ತಾಯ.12:31
- ರೋಮಾ.06:23
- ರೋಮಾ.08:04

ಸತ್ಯವೇದದಿಂದ ಉದಾಹರಣೆಗಳು:

- **03:15** "ಅವರು ದೇವರ ಮಕ್ಕಳಾಗುವ ಸಮಯದಿಂದ ಅವರು _ ಪಾಪಾತ್ಮರಾಗಿದ್ದರೂ _ ಜನರು ಮಾಡುವ ದುಷ್ಟ ಕಾರ್ಯಗಳಿಗೋಸ್ಕರ ನೆಲವನ್ನು ಎಂದಿಗೂ ಶಪಿಸುವುದಿಲ್ಲ, ಅಥವಾ ಪ್ರಳಯವನ್ನು ಬರಮಾಡುವುದರ ಮೂಲಕ ಲೋಕವನ್ನು ನಾಶಮಾಡುವುದಿಲ್ಲ" ಎಂದು ದೇವರು ಹೇಳಿದರು.
- **13:12** ದೇವರು ಜನರು ಮಾಡುವ ಪಾಪದ ಕಾರಣದಿಂದ ಅವರೊಂದಿಗೆ ತುಂಬಾ ಕೋಪದಿಂದ ಇದ್ದನು ಮತ್ತು ಅವರನ್ನು ನಾಶಗೊಳಿಸಬೇಕೆಂದು ಆಲೋಚನೆ ಮಾಡಿಕೊಂಡಿದ್ದನು.
- **20:01** ಯೆಹೂದ್ಯ ಮತ್ತು ಇಸ್ರಾಯೇಲ್ ಎರಡು ರಾಜ್ಯಗಳು ದೇವರಿಗೆ ವಿರುದ್ಧವಾಗಿ _ ಪಾಪ ಮಾಡಿದವು _. ಸೀನಾಯಿ ಬೆಟ್ಟದ ಮೇಲೆ ದೇವರು ಅವರೊಂದಿಗೆ ಮಾಡಿದ ಒಡಂಬಡಿಕೆಯನ್ನು ಮುರಿದರು.
- **21:13** ಮೆಸ್ಸೀಯಾನು ಪರಿಪೂರ್ಣನಾಗಿರುತ್ತಾನೆ, ಆತನಲ್ಲಿ ಯಾವ _ ಪಾಪವು _ ನೆಲೆಗೊಂಡಿರುವುದಿಲ್ಲ ಎಂದು ಪ್ರವಾದಿಗಳು ಕೂಡ ಹೇಳಿದ್ದಾರೆ. ಇತರ ಜನರು ಮಾಡಿದ _ ಪಾಪಗಳಿಗೆ _ ಶಿಕ್ಷೆಯನ್ನು ಪಡೆದುಕೊಳ್ಳುವುದಕ್ಕೆ ಆತನು ಮರಣ ಹೊಂದಿದನು.
- **35:01** ಒಂದು ದಿನ ಯೇಸುವು ಅನೇಕಮಂದಿ ಸುಂಕದವರಿಗೆ ಮತ್ತು ಆತನು ಮಾತುಗಳನ್ನು ಕೇಳುವುದಕ್ಕೆ ಬಂದಿರುವ _ ಪಾಪಿಗಳಿಗೆ _ ಬೋಧನೆ ಮಾಡುತ್ತಿದ್ದನು.
- **38:05** ಯೇಸು ಪಾತ್ರೆಯನ್ನು ತೆಗೆದುಕೊಂಡು ಮತ್ತು "ಇದನ್ನು ಕುಡಿಯಿರಿ. ಇದು ಎಲ್ಲಾ _ ಪಾಪಗಳನ್ನು _ ಕ್ಷಮಿಸುವುದಕ್ಕೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಆಗುವ ಹೊಸ ಒಡಂಬಡಿಕೆ" ಎಂದು ಹೇಳಿದನು.
- **43:11** "ನಿಮ್ಮಲ್ಲಿ ಪ್ರತಿಯೊಬ್ಬರು ಪಶ್ಚಾತ್ತಾಪ ಹೊಂದಿ, ಯೇಸುವಿನ ನಾಮದಲ್ಲಿ ದೀಕ್ಷಾಸ್ನಾನ ಹೊಂದಬೇಕು, ಇದರಿಂದ ದೇವರು ನಿಮ್ಮ _ ಪಾಪಗಳನ್ನು _ ಕ್ಷಮಿಸುವನು" ಎಂದು ಪೇತ್ರನು ಅವರಿಗೆ ಉತ್ತರ ಕೊಟ್ಟನು.
- **48:08** ನಮ್ಮ ಎಲ್ಲಾ _ ಪಾಪಗಳಿಗೋಸ್ಕರ _ ಸಾಯುವವರಾಗಿದ್ದೇವೆ!
- **49:17** ನೀವು ಕ್ರೈಸ್ತರಾಗಿದ್ದರೂ, ನೀವು_ ಪಾಪ _ ಮಾಡುವುದಕ್ಕೆ ಶೋಧನೆಗೆ ಒಳಗಾಗುವಿರಿ. ಆದರೆ ದೇವರು ನಂಬಿಗಸ್ತನು ಮತ್ತು ನೀವು ನಿಮ್ಮ _ ಪಾಪಗಳನ್ನು _ ಒಪ್ಪಿಕೊಂಡರೆ, ಆತನು ನಿಮ್ಮನ್ನು ಕ್ಷಮಿಸುವನು. ನೀವು _ ಪಾಪಕ್ಕೆ _ ವಿರುದ್ಧವಾಗಿ ಹೋರಾಡುವುದಕ್ಕೆ ಆತನು ನಿಮಗೆ ಬಲವನ್ನು ಕೊಡುವನು.

ಪದ ಡೇಟಾ:

- Strong's: H817, H819, H2398, H2399, H2400, H2401, H2402, H2403, H2408, H2409, H5771, H6588, H7683, H7686, G264, G265, G266, G268, G361, G3781, G3900, G4258

ಪುತ್ರ, ಪುತ್ರರು

ಪದದ ಅರ್ಥವಿವರಣೆ:

ಸ್ತ್ರೀ ಪುರುಷರಿಗೆ ಸಂತಾನವಾಗಿರುವ ಗಂಡು ಮಗುವನ್ನು ತಮ್ಮ ಜೀವಮಾನವೆಲ್ಲ "ಮಗ (ಅಥವಾ ಪುತ್ರ)" ಎಂದು ಕರೆಯುತ್ತಾರೆ. ಇವನನ್ನು ಆ ಮನುಷ್ಯನ ಮಗನೆಂದು ಮತ್ತು ಆ ಸ್ತ್ರೀಯಳ ಮಗನೆಂದು ಕರೆಯಲ್ಪಡುತ್ತಾನೆ. "ದತ್ತುಪುತ್ರ" ಎನ್ನುವ ಪದವು ಸ್ವಂತ ಮಗನ ಸ್ಥಾನದಲ್ಲಿ ಕಾನೂನುಬದ್ಧವಾಗಿ ಸೇರಿಕೆಯಾಗಿರುವ ಗಂಡು ಮಗ ಎಂದರ್ಥವಾಗಿರುತ್ತದೆ.

- ಅದೇ ಹಿಂದಿನ ಪೀಳಿಗೆಯಿಂದ ವ್ಯಕ್ತಿಯ ತಂದೆ, ತಾಯಿ ಅಥವಾ ಪೂರ್ವಜರನ್ನು ಗುರುತಿಸಲು "ಅವರ ಪುತ್ರ" ಎಂಬ ಪದಗುಚ್ಛವನ್ನು ಬಳಸಲಾಗಿದೆ. ಈ ಪದಗುಚ್ಛವನ್ನು ವಂಶಾವಳಿಗಳಲ್ಲಿ ಮತ್ತು ಇತರ ಅನೇಕ ಸ್ಥಳಗಳಲ್ಲಿ ಬಳಸಲಾಗುತ್ತದೆ.
- "ಇಸ್ರಾಯೇಲ್ಯರ ಪುತ್ರರು" ಎಂಬುವುದನ್ನು ಸಾಮಾನ್ಯವಾಗಿ ಇಸ್ರಾಯೇಲ್ ಮಕ್ಕಳನ್ನು ಸೂಚಿಸುತ್ತದೆ (ಆದಿಕಾಂಡದ ನಂತರ).
- "ಪುತ್ರ" ಎನ್ನುವ ಪದವು ಮಾತನಾಡುವ ಮಗುವಿಗಿಂತ ಚಿಕ್ಕ ಶಿಶುವನ್ನು ಅಥವಾ ಬಾಲಕನನ್ನು ಸೂಚಿಸುವ ವಿನಯವಾದ ನಡೆನುಡಿಯಾಗಿ ಉಪಯೋಗಿಸಲ್ಪಟ್ಟಿರುತ್ತದೆ,
- ಕೆಲವೊಂದುಬಾರಿ "ದೇವರ ಪುತ್ರರು" ಎನ್ನುವ ಮಾತನ್ನು ಕ್ರಿಸ್ತನಲ್ಲಿರುವ ವಿಶ್ವಾಸಿಗಳನ್ನು ಸೂಚಿಸುವುದಕ್ಕೆ ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ.
- ದೇವರು ಇಸ್ರಾಯೇಲನ್ನು ತನ್ನ "ಮೊದಲ ಪುತ್ರ ಅಥವಾ ಚೊಚ್ಚಲ ಮಗ" ಎಂಬುದಾಗಿ ಕರೆದಿದ್ದಾನೆ. ಇದು ದೇವರು ಇಸ್ರಾಯೇಲ್ ದೇಶವನ್ನು ತನ್ನ ವಿಶೇಷವಾದ ಜನರಾಗಿರುವುದಕ್ಕೆ ಆಯ್ಕೆ ಮಾಡಿಕೊಂದಿದ್ದಾನೆಂದು ಸೂಚಿಸುತ್ತದೆ. ಇದು ದೇವರ ವಿಮೋಚನಾ ಸಂದೇಶ ಮತ್ತು ರಕ್ಷಣೆಯ ಮುಖಾಂತರ ಬಂದಿರುತ್ತದೆ, ಇದರ ಫಲಿತಾಂಶದಿಂದ ಅನೇಕಮಂದಿ ಇತರ ಜನರು ತನ್ನ ಆತ್ಮೀಯಕವಾದ ಮಕ್ಕಳಾಗಿ ಮಾರ್ಪಟ್ಟರು.
- "ಪುತ್ರ" ಎನ್ನುವ ಪದವು ಅನೇಕಬಾರಿ "ಗುಣಲಕ್ಷಣಗಳನ್ನು ಹೊಂದಿರುವ ವ್ಯಕ್ತಿ" ಎನ್ನುವ ಅಲಂಕಾರಿಕ ಅರ್ಥವನ್ನು ಹೊಂದಿರುತ್ತದೆ. ಈ ಪದಕ್ಕೆ ಉದಾಹರಣೆಗಳಲ್ಲಿ "ಬೆಳಕಿನ ಮಕ್ಕಳು", "ಅವಿಧೇಯತೆಯ ಮಕ್ಕಳು", "ಸಮಾಧಾನ ಪುತ್ರ" ಮತ್ತು "ಗುಡುಗಿನ ಪುತ್ರರು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಇವರ ಪುತ್ರ" ಎನ್ನುವ ಪದವು ಒಬ್ಬ ವ್ಯಕ್ತಿಯ ತಂದೆಯನ್ನು ಹೇಳುವುದಕ್ಕೆ ಕೂಡ ಉಪಯೋಗಿಸುತ್ತಾರೆ. ಈ ಪದವನ್ನು ವಂಶಾವಳಿಗಳಲ್ಲಿ ಮತ್ತು ಇನ್ನಿತರ ವಾಕ್ಯಭಾಗಗಳಲ್ಲಿ ಉಪಯೋಗಿಸಿರುತ್ತಾರೆ.
- ತಂದೆಯ ಹೆಸರನ್ನು ಕೊಡುವುದಕ್ಕೆ "ಇವರ ಪುತ್ರ" ಎನ್ನುವ ಮಾತನ್ನು ಉಪಯೋಗಿಸುವಾಗ, ಅನೇಕಬಾರಿ ಒಂದೇ ಹೆಸರನ್ನು ಹೊಂದಿರುವ ಜನರನ್ನು ಪ್ರತ್ಯೇಕಿಸಿ ಹೇಳುವುದಕ್ಕೆ ಸಹಾಯ ಮಾಡುತ್ತದೆ. ಉದಾಹರಣೆಗೆ, 1 ಅರಸರು 4 ಅಧ್ಯಾಯದಲ್ಲಿ "ಚಾದೋಕನ ಪುತ್ರನಾದ ಅಜರ್ಯನು" ಮತ್ತು "ನಾತಾನನ ಪುತ್ರನಾದ ಅಜರ್ಯನು" ಮತ್ತು 2 ಅರಸ 15ನೇಯ ಅಧ್ಯಾಯದಲ್ಲಿ "ಅಮಚ್ಯ್ ಪುತ್ರನಾದ ಅಜರ್ಯನು" ಎಂದು ಮೂವರು ಬೇರೆ ಬೇರೆ ವ್ಯಕ್ತಿಗಳನ್ನು ನೋಡುತ್ತಿದ್ದೇವೆ.

ಅನುವಾದ ಸಲಹೆಗಳು:

- ಈ ಪದವು ಹೆಚ್ಚಾಗಿ ಕಾಣಿಸಿಕೊಳ್ಳುವುದರಲ್ಲಿ ಮಗನನ್ನು ಸೂಚಿಸುವುದಕ್ಕೆ ಭಾಷೆಯಲ್ಲಿ ಉಪಯೋಗಿಸುವ ಅಕ್ಷರಾರ್ಥವಾದ ಪದದಿಂದ "ಪುತ್ರ" ಎನ್ನುವ ಪದವನ್ನು ಅನುವಾದ ಮಾಡುವುದು ಉತ್ತಮ.
- "ದೇವರ ಪುತ್ರ" ಎನ್ನುವ ಮಾತನ್ನು ಅನುವಾದ ಮಾಡುವಾಗ, ಅನುವಾದ ಮಾಡುವ ಭಾಷೆಯಲ್ಲಿ "ಮಗ" ಎನ್ನುವುದಕ್ಕೆ ಉಪಯೋಗಿಸುವ ಸಾಧಾರಣವಾದ ಪದವನ್ನು ಉಪಯೋಗಿಸಬಹುದು.
- ಪುತ್ರನಿಗಿಂತಲು ವಂಶಸ್ಥರನ್ನು ಈ ಪದವು ಸೂಚಿಸಿದಾಗ, "ದಾವೀದನ ವಂಶಸ್ಥನು" ಎಂದು ಯೇಸುವನ್ನು ಸೂಚಿಸುವಂತೆಯೇ ಅಥವಾ ನಿಜವಾದ ಮಗನಲ್ಲದ ಗಂಡು ಸಂತಾನವನ್ನು ಸೂಚಿಸುವುದಕ್ಕೆ "ಪುತ್ರ" ಎಂದು ಕೆಲವೊಂದುಬಾರಿ ಉಪಯೋಗಿಸಿದ ವಂಶಾವಳಿಗಳಲ್ಲಿರುವಂತೆಯೇ "ವಂಶಸ್ಥನು" ಎನ್ನುವ ಪದವನ್ನು ಉಪಯೋಗಿಸಬಹುದು,
- ಕೆಲವೊಂದುಬಾರಿ "ಪುತ್ರರು" ಎನ್ನುವ ಪದವನ್ನು "ಮಕ್ಕಳು" ಎಂಬುದಾಗಿಯೂ ಅನುವಾದ ಮಾಡಬಹುದು, ಹೀಗೆ ಉಪಯೋಗಿಸಿದಾಗ ಅದರಲ್ಲಿ ಸ್ತ್ರೀ ಪುರುಷರನ್ನು ಸೂಚಿಸುವದಂತಾಗಿರುತ್ತದೆ. ಉದಾಹರಣೆಗೆ, "ದೇವರ ಪುತ್ರರು" ಎನ್ನುವ ಮಾತನ್ನು "ದೇವರ ಮಕ್ಕಳು" ಎಂದೂ ಅನುವಾದ ಮಾಡಬಹುದು. ಯಾಕಂದರೆ ಇದರಲ್ಲಿ ಹೆಣ್ಣು ಮಕ್ಕಳು ಮತ್ತು ಸ್ತ್ರೀಯರು ಕೂಡ ಒಳಗೊಂಡಿರುತ್ತಾರೆ.
- "ಇವರ ಪುತ್ರ" ಎನ್ನುವ ಮಾತನ್ನು "ಇವರ ಗುಣಲಕ್ಷಣಗಳನ್ನು ಹೊಂದಿರುವ ವ್ಯಕ್ತಿ" ಅಥವಾ "ಅವರಂತೆಯೇ ಇರುವ ವ್ಯಕ್ತಿ ಅಥವಾ ಹೊಂದಿಕೊಂಡಿರುವ ವ್ಯಕ್ತಿ" ಅಥವಾ ಇವರಂತೆಯೇ ನಟನೆ ಮಾಡುವ ವ್ಯಕ್ತಿ" ಎಂದೂ ಅನುವಾದ ಮಾಡಬಹುದು;.

(ಈ ಪದಗಳನ್ನು ಸಹ ನೋಡಿರಿ : ಅಜರ್ಯ, ವಂಶಸ್ಥನು, ಪೂರ್ವಜ, ಚೊಚ್ಚಲ ಮಗ, ದೇವರ ಮಗ, ದೇವರ ಮಕ್ಕಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.18:14-17
- 1 ಅರಸ.13:1-3
- 1 ಥೆಸ್ಸ.05:4-7
- ಗಲಾತ್ಯ.04:6-7
- ಹೋಶೆಯ.11:1-2
- ಯೆಶಯಾ.09:6-7
- ಮತ್ತಾಯ.03:16-17

- ಮತ್ತಾಯ.05:9-10
- ಮತ್ತಾಯ.08:11-13
- ನೆಹೆ.10:28-29

ಸತ್ಯವೇದದಿಂದ ಉದಾಹರಣೆಗಳು:

- **04:08** ದೇವರು ಅಬ್ರಾಹಾಮನೊಂದಿಗೆ ಮಾತನಾಡಿ, ಅವನು _ **ಮಗನನ್ನು** _ ಹೊಂದುವನು ಎಂದು ಮತ್ತು ತನ್ನ ಸಂತಾನದವರು ಆಕಾಶದಲ್ಲಿರುವ ನಕ್ಷತ್ರಗಳಂತೆ ವಿಸ್ತರಿಸುವರು ಎಂದು ಆತನು ಮತ್ತೊಮ್ಮೆ ವಾಗ್ದಾನ ಮಾಡಿದನು.
- **04:09** "ನಿನ್ನ ಸ್ವಂತ ಶರೀರದಿಂದಲೇ ನಾನು ನಿನಗೆ ಒಬ್ಬ _ **ಮಗನನ್ನು** _ ಕೊಡುತ್ತೇನೆ" ಎಂದು ದೇವರು ಹೇಳಿದರು.
- **05:05** ಒಂದು ವರ್ಷವಾದನಂತರ, ಅಬ್ರಾಹಾಮನಿಗೆ 100 ವರ್ಷಗಳು ಮತ್ತು ಸಾರಳಿಗೆ 90 ವರ್ಷಗಳ ವಯಸ್ಸು ಇದ್ದಾಗ, ಸಾರಳು ಅಬ್ರಾಹಾಮನ _ **ಮಗನಿಗೆ** _ ಜನ್ಮವನ್ನು ಕೊಟ್ಟಳು.
- **05:08** ಅವರು ಹೋಮ ಕೊಡುವ ಸ್ಥಳವನ್ನು ತಲುಪಿದಾಗ, ಅಬ್ರಾಹಾಮನು ತನ್ನ _ **ಮಗನಾದ** ಇಸಾಕನನ್ನು ಕಟ್ಟಿ, ಯಜ್ಞವೇದಿಯ ಮೇಲೆ ಮಲಗಿಸಿದನು. ಅವನು ತನ್ನ _ ಮಗನನ್ನು _ **ಸಾಯಿಸುವುದಕ್ಕೆ ಹೋಗುತ್ತಿರುವಾಗ, "ನಿಲ್ಲಿಸು! ಮಗುವನ್ನು ಸಾಯಿಸಬೇಡ! ನೀನು ನನಗೆ ಭಯಪಡುತ್ತಿದ್ದೀಯೆಂದು ನಾನೀಗ ತಿಳಿದುಕೊಂಡೆನು ಯಾಕಂದರೆ ನಿನ್ನ ಒಬ್ಬನೇ** ಮಗನನ್ನು __ ನನ್ನಿಂದ ದೂರ ಮಾಡುವುದಕ್ಕೆ ಪ್ರಯತ್ನಪಟ್ಟಿಲ್ಲ " ಎಂದು ದೇವರು ಹೇಳಿದನು.
- **09:07** ಆಕೆ ಶಿಶುವನ್ನು ನೋಡಿದಾಗ, ಆಕೆಯ ಸ್ವಂತ _ **ಮಗ** _ ಎಂಬುದಾಗಿ ಅವನನ್ನು ಎತ್ತಿಕೊಂಡಳು.
- **11:06** ದೇವರು ಐಗುಪ್ತರ _ ಚೊಚ್ಚಲ ಮಕ್ಕಳನ್ನು __ ಸಂಹಾರ ಮಾಡಿದನು.
- **18:01** ಅನೇಕ ವರ್ಷಗಳಾದನಂತರ, ದಾವೀದನು ಮರಣಿಸಿದನು, ಮತ್ತು ತನ್ನ _ **ಮಗನಾಗಿರುವ** _ ಸೊಲೊಮೋನನು ಆಳ್ವಿಕೆ ಮಾಡುವುದಕ್ಕೆ ಆರಂಭಿಸಿದನು.
- **26:04** "ಇವನು ಯೋಸೇಫನ _ ಮಗನಲ್ಲವೋ _?" ಎಂದು ಅವರು ಹೇಳಿದರು.

ಪದ ಡೇಟಾ:

- Strong's: H1060, H1121, H1123, H1248, H3173, H3206, H3211, H4497, H5209, H5220, G3816, G5043, G5207

ಪುನರುತ್ಥಾನ

ಪದದ ಅರ್ಥವಿವರಣೆ:

“ಪುನರುತ್ಥಾನ” ಎನ್ನುವ ಪದವು ಸತ್ತಂತ ನಂತರ ತಿರುಗಿ ಜೀವಂತವಾಗುವ ಕಾರ್ಯವನ್ನು ಸೂಚಿಸುತ್ತದೆ.

- ಯಾರಾದರೊಬ್ಬರು ಪುನರುತ್ಥಾನವಾಗುವುದೆಂದರೆ ಸತ್ತಂತ ಆ ವ್ಯಕ್ತಿಯನ್ನು ತಿರುಗಿ ಜೀವಂತವನ್ನಾಗಿ ಮಾಡುವುದು ಎಂದರ್ಥವಾಗಿರುತ್ತದೆ. ಈ ಕಾರ್ಯವನ್ನು ಮಾಡುವುದಕ್ಕೆ ದೇವರಿಗೆ ಮಾತ್ರ ಶಕ್ತಿ ಇರುತ್ತದೆ.
- “ಪುನರುತ್ಥಾನ” ಎನ್ನುವ ಪದವನ್ನು ಅನೇಕಬಾರಿ ಯೇಸು ಸತ್ತನಂತರ ಆತನು ತಿರುಗಿ ಜೀವಂತವಾಗಿರುವ ಕಾರ್ಯವನ್ನು ಸೂಚಿಸುತ್ತದೆ.
- “ನಾನೇ ಪುನರುತ್ಥಾನ ಮತ್ತು ನಾನೇ ಜೀವ” ಎಂದು ಯೇಸು ಹೇಳಿದಾಗ, ಆತನ ಮಾತಿಗೆ ಆತನೇ ಪುನರುತ್ಥಾನಕ್ಕೆ ಆಧಾರ, ಜನರು ಸತ್ತಾಗ ಅವರನ್ನು ಜೀವಂತರನ್ನಾಗಿ ಮಾಡುವುದಕ್ಕೆ ಕಾರಣನು ಆಗಿರುತ್ತಾನೆಂದು ಅರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- ಒಬ್ಬ ವ್ಯಕ್ತಿಯ “ಪುನರುತ್ಥಾನ” ಎನ್ನುವ ಮಾತನ್ನು “ಜೀವಂತವಾಗುವುದಕ್ಕೆ ತಿರುಗಿ ಬರುವುದು” ಅಥವಾ “ಸತ್ತಂತ ವ್ಯಕ್ತಿಯನ್ನು ತಿರುಗಿ ಜೀವಂತವನ್ನಾಗಿ ಮಾಡುವುದು” ಎಂದೂ ಅನುವಾದ ಮಾಡಬಹುದು.
- ಈ ಮಾತಿಗೆ ಅಕ್ಷರಾರ್ಥವು ಏನೆಂದರೆ “ಎಬ್ಬಿಸುವುದು” ಅಥವಾ “(ಮರಣದಿಂದ) ಎಬ್ಬಿಸುವ ಕಾರ್ಯ” ಎಂದರ್ಥವಾಗಿರುತ್ತದೆ. ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ ಹೀಗೆಯೇ ಬಳಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಜೀವ, ಮರಣ, ಎಬ್ಬಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.15:12-14
- 1 ಪೇತ್ರ.03:21-22
- ಇಬ್ರಿ.11:35-38
- ಯೋಹಾನ.05:28-29
- ಲೂಕ.20:27-28
- ಲೂಕ.20:34-36
- ಮತ್ತಾಯ.22:23-24
- ಮತ್ತಾಯ.22:29-30
- ಫಿಲಿಪ್ಪಿ.03:8-11

ಸತ್ಯವೇದದಿಂದ ಉದಾಹರಣೆಗಳು:

- **_21:14** ಮೆಸ್ಸೀಯ ಮರಣ ಮತ್ತು **ಪುನರುತ್ಥಾನದ** _ ಮೂಲಕ, ದೇವರು ಪಾಪಿಗಳನ್ನು ರಕ್ಷಿಸುವುದಕ್ಕೆ ಹಾಕಿರುವ ತನ್ನ ಪ್ರಣಾಳಿಕೆಯು ಪೂರ್ತಿಯಾಯಿತು ಮತ್ತು ಹೊಸ ಒಡಂಬಡಿಕೆಯನ್ನು ಆರಂಭಿಸಿದನು.
- **_37:05** “ನಾನೇ **ಪುನರುತ್ಥಾನ** _ ಮತ್ತು ಜೀವ”, ನನ್ನಲ್ಲಿ ನಂಬುವ ಅಥವಾ ಭರವಸೆಯಿಡುವ ಪ್ರತಿಯೊಬ್ಬರು ಸತ್ತರೂ ಅವರು ತಿರುಗಿ ಬದುಕುವರು ಎಂದು ಯೇಸು ಉತ್ತರಿಸಿದನು.

ಪದ ಡೇಟಾ:

- Strong's: G386, G1454, G1815

ಪುನಸ್ಥಾಪಿಸು, ಪುನಸ್ಥಾಪಿಸುವುದು, ಪುನಸ್ಥಾಪಿಸಲಾಗಿದೆ, ಪುನಸ್ಥಾಪನೆ

ಪದದ ಅರ್ಥವಿವರಣೆ:

“ಪುನಸ್ಥಾಪಿಸು” ಮತ್ತು “ಪುನಸ್ಥಾಪನೆ” ಎನ್ನುವ ಪದಗಳು ಯಾವುದಾದರೊಂದನ್ನು ತನ್ನ ಪೂರ್ವ ಸ್ಥಿತಿಗೆ ಮತ್ತು ಉತ್ತಮ ಸ್ಥಿತಿಗೆ ತೆಗೆದುಕೊಂಡುಬರುವುದನ್ನು ಸೂಚಿಸುತ್ತದೆ.

- ರೋಗದಿಂದ ಇರುವ ಶರೀರ ಭಾಗವು ಪುನರ್ಸ್ಥಾಪನೆಗೊಂಡಾಗ, ಅದು “ಗುಣವಾಗಿದೆ” ಎಂದರ್ಥವಾಗಿರುತ್ತದೆ.
- ಮುರಿದು ಹೋಗಿರುವ ಸಂಬಂಧವು ತಿರುಗಿ ಕಟ್ಟಲ್ಪಟ್ಟರೆ ಅಥವಾ ಪುನಸ್ಥಾಪನೆಗೊಂಡರೆ ಅದನ್ನು “ಸಂಧಾನವಾಗಿದೆ” ಎಂದು ಕರೆಯುತ್ತಾರೆ. ದೇವರು ಪಾಪ ಸ್ವಭಾವವುಳ್ಳ ಜನರನ್ನು ಪುನರ್.ಸ್ಥಾಪನೆ ಮಾಡುವರು ಮತ್ತು ಆತನ ಬಳಿಗೆ ಅವರೆಲ್ಲರನ್ನು ಹಿಂದಕ್ಕೆ ಕರೆದುಕೊಂಡುಬರುವರು.
- ಜನರು ತಮ್ಮ ಸ್ವಂತ ದೇಶದಲ್ಲಿ ತಿರುಗಿ ಪುನರ್ ಸ್ಥಾಪನೆಗೊಂಡಾಗ, ಅವರು ಆ ದೇಶಕ್ಕೆ “ಹಿಂದುರಿಗಿ ಬಂದಿದ್ದಾರೆ” ಅಥವಾ “ಹಿಂದಕ್ಕೆ ಕರೆಯಲ್ಪಟ್ಟಿದ್ದಾರೆ”.

ಅನುವಾದ ಸಲಹೆಗಳು:

- ಸಂದರ್ಭಾನುಗುಣವಾಗಿ, “ಪುನಸ್ಥಾಪಿಸು” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ, “ನವೀಕರಿಸು” ಅಥವಾ “ಮರುಪಾವತಿಸು” ಅಥವಾ “ಹಿಂದಿರುಗು” ಅಥವಾ “ಗುಣಪಡಿಸು” ಅಥವಾ “ಹಿಂದಕ್ಕೆ ಕರೆದುಕೊಂಡು ಬಾ” ಎನ್ನುವ ಮಾತುಗಳು ಒಳಗೊಂಡಿವೆ.
- ಈ ಪದಕ್ಕೆ ಬೇರೊಂದು ಮಾತುಗಳು “ಹೊಸದಾಗಿ ಮಾಡು” ಅಥವಾ “ತಿರುಗಿ ಹೊಸದಾಗಿ ಮಾಡು” ಎಂದಾಗಿರುತ್ತವೆ.
- ಆಸ್ತಿ “ಪುನರ್ ಸಂಗ್ರಹಿಸಿದಾಗ” ಅದನ್ನು “ಪರಿಷ್ಕರಿಸಲಾಗಿದೆ” ಅಥವಾ “ಪುನರ್ ಸ್ಥಾನಕ್ಕೆ ತರಲಾಗಿದೆ” ಅಥವಾ ತನ್ನ ಯಜಮಾನನಿಗೆ “ಹಿಂದಕ್ಕೆ ಕೊಡಲಾಗಿದೆ” ಎಂದು ಹೇಳಲಾಗುತ್ತದೆ.
- ಸಂದರ್ಭಾನುಗುಣವಾಗಿ, “ಪುನಸ್ಥಾಪನೆ” ಎನ್ನುವ ಪದವನ್ನು “ನವೀಕರಣ” ಅಥವಾ “ಸ್ವಸ್ಥತೆ” ಅಥವಾ “ಸಂಧಾನ” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.05:8-10
- ಅಪೊ.ಕೃತ್ಯ.03:21-23
- ಅಪೊ.ಕೃತ್ಯ.15:15-18
- ಯೆಶಯಾ.49:5-6
- ಯೆರೆ.15:19-21
- ಪ್ರಲಾಪ.05:19-22
- ಯಾಜಕ.06:5-7
- ಲೂಕ.19:8-10
- ಮತ್ತಾಯ.12:13-14
- ಕೀರ್ತನೆ.080:1-3

ಪದ ಡೇಟಾ:

- Strong's: H7725, H7999, H8421, G600, G2675

ಪ್ರತಿಜ್ಞೆ, ಪ್ರತಿಜ್ಞೆಗಳು, ಪ್ರತಿಜ್ಞೆ ಮಾಡಿದೆ

ಪದದ ಅರ್ಥವಿವರಣೆ:

ಪ್ರತಿಜ್ಞೆ ಎನ್ನುವುದು ಒಬ್ಬ ವ್ಯಕ್ತಿ ದೇವರೊಂದಿಗೆ ಮಾಡುವ ವಾಗ್ದಾನವಾಗಿರುತ್ತದೆ. ಒಬ್ಬ ವ್ಯಕ್ತಿ ದೇವರಿಗೆ ಆರಾಧನೆ ಭಾವವನ್ನು ತೋರಿಸುವುದಕ್ಕೆ ಅಥವಾ ವಿಶೇಷವಾಗಿ ದೇವರನ್ನು ಘನಪಡಿಸುವುದಕ್ಕೆ ಒಂದು ನಿರ್ದಿಷ್ಟವಾದ ಕಾರ್ಯವನ್ನು ಮಾಡುವುದಕ್ಕೆ ವಾಗ್ದಾನ ಮಾಡುವುದು ಆಗಿರುತ್ತದೆ.

- ಒಬ್ಬ ವ್ಯಕ್ತಿ ಪ್ರತಿಜ್ಞೆ ಮಾಡಿದನಂತರ, ಆ ವ್ಯಕ್ತಿ ಆ ಆಣೆಯನ್ನು ನೆರವೇರಿಸುವುದಕ್ಕೆ ಬಾಧ್ಯತೆಯನ್ನು ಪಡೆದಿರುತ್ತಾನೆ.
- ಅವನು ಒಂದುವೇಳೆ ತನ್ನ ಪ್ರತಿಜ್ಞೆಯನ್ನು ನೆರವೇರಿಸದಿದ್ದರೆ ದೇವರು ಅವನಿಗೆ ತೀರ್ಪು ಮಾಡುತ್ತಾನೆಂದು ಸತ್ಯವೇದವು ಬೋಧನೆ ಮಾಡುತ್ತಿದೆ.
- ಕೆಲವೊಂದುಬಾರಿ ಆ ವ್ಯಕ್ತಿ ತನ್ನನ್ನು ರಕ್ಷಿಸುವುದಕ್ಕೆ ದೇವರನ್ನು ಕೇಳಿಕೊಳ್ಳಬಹುದು ಅಥವಾ ಪ್ರತಿಜ್ಞೆಯನ್ನು ನೆರವೇರಿಸುವುದರಲ್ಲಿ ತನಗಾಗಿ ಮಾರ್ಪಾಟು ಕೊಡಬಹುದು.
- ಆದರೆ ಒಬ್ಬ ವ್ಯಕ್ತಿಯ ತನ್ನ ಪ್ರತಿಜ್ಞೆಯ ವಿಷಯವಾಗಿ ಕೇಳಿಕೊಳ್ಳುವ ಮನವಿಯನ್ನು ದೇವರು ನೆರವೇರಿಸಬೇಕಾದ ಅವಶ್ಯಕತೆಯಿರುವುದಿಲ್ಲ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ “ಪ್ರತಿಜ್ಞೆ” ಎನ್ನುವ ಪದವನ್ನು “ಗಂಭೀರವಾದ ಭರವಸೆ” ಅಥವಾ “ದೇವರೊಂದಿಗೆ ಮಾಡಿರುವ ವಾಗ್ದಾನ” ಎಂದೂ ಅನುವಾದ ಮಾಡಬಹುದು.
- ಪ್ರತಿಜ್ಞೆ ಎನ್ನುವುದು ದೇವರೊಂದಿಗೆ ಮಾಡುವ ಒಂದು ವಿಶೇಷವಾದ ಪ್ರಮಾಣ ವಚನವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ವಾಗ್ದಾನ, ಆಣೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.07:27-28
- ಅಪೊ.ಕೃತ್ಯ.21:22-24
- ಆದಿ.28:20-22
- ಆದಿ.31:12-13
- ಯೋನ.01:14-16
- ಯೋನ.02:9-10
- ಜ್ಞಾನೋ.07:13-15

ಪದ ಡೇಟಾ:

- Strong's: H5087, H5088, G2171

ಪ್ರತಿಷ್ಠಾಪಿಸು, ಪ್ರತಿಷ್ಠಾಪಿಸಲ್ಪಟ್ಟಿದೆ, ಪ್ರತಿಷ್ಠೆ

ಪದದ ಅರ್ಥವಿವರಣೆ:

ಪ್ರತಿಷ್ಠಾಪಿಸು ಎನ್ನುವ ಪದಕ್ಕೆ ದೇವರ ಸೇವೆಗಾಗಿ ಯಾವುದಾದರೊಂದನ್ನು ಅಥವಾ ಯಾರಾದರೊಬ್ಬರನ್ನು ಸಮರ್ಪಿಸು ಎಂದರ್ಥ. ಪ್ರತಿಷ್ಠೆ ಮಾಡಲ್ಪಟ್ಟ ಒಬ್ಬ ವ್ಯಕ್ತಿ ಅಥವಾ ಒಂದು ವಸ್ತು ಪರಿಶುದ್ಧವಾಗಿ ಪರಿಗಣಿಸಲಾಗುತ್ತದೆ ಮತ್ತು ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟವರು ಎಂದು ಹೇಳಲಾಗುತ್ತದೆ.

- ಈ ಪದದ ಸಮಾನಾರ್ಥಕ ಪದವೇನೆಂದರೆ “ಪವಿತ್ರೀಕರಿಸು” ಅಥವಾ “ಪರಿಶುದ್ಧಗೊಳಿಸು”, ಆದರೆ ಇದಕ್ಕೆ ಸಹಜವಾಗಿ ಬರುವ ಅರ್ಥವೇನೆಂದರೆ ದೇವರ ಸೇವೆಗಾಗಿ ಒಬ್ಬರನ್ನು ಪ್ರತ್ಯೇಕಿಸುವುದು ಎಂದರ್ಥ.
- ದೇವರಿಗಾಗಿ ಪ್ರತಿಷ್ಟಾಪನೆ ಮಾಡಿದ ವಸ್ತುಗಳಲ್ಲಿ ಬಲಿಕೊಡುವ ಪ್ರಾಣಿಗಳು, ದಹನಬಲಿ ಕೊಡುವ ಯಜ್ಞವೇದಿ ಮತ್ತು ಗುಡಾರಗಳಿದ್ದವು.
- ದೇವರಿಗೆ ಪ್ರತಿಷ್ಟಾಪನೆ ಮಾಡಲ್ಪಟ್ಟ ಪ್ರಜೆಗಳಲ್ಲಿ ಯಾಜಕರು, ಇಸ್ರಾಯೇಲ್ ಜನರು ಮತ್ತು ಹಿರಿಯ ಗಂಡು ಮಗ ಇದ್ದಿದ್ದರು.
- “ಪ್ರತಿಷ್ಠಾಪಿಸು” ಎನ್ನುವ ಪದವು ಕೆಲವೊಂದುಬಾರಿ “ಪವಿತ್ರಗೊಳಿಸು” ಎನ್ನುವ ಅರ್ಥವನ್ನೇ ಹೊಂದಿರುತ್ತದೆ, ವಿಶೇಷವಾಗಿ ಇದು ದೇವರ ಸೇವೆಗಾಗಿ ವಸ್ತುಗಳನ್ನು ಅಥವಾ ಜನರನ್ನು ಸಿದ್ಧಗೊಳಿಸುವ ಸಂಬಂಧದಲ್ಲಿ ಅನ್ವಯವಾಗುತ್ತದೆ, ಇದರಿಂದ ಅವರು ಅಥವಾ ಅವುಗಳು ದೇವರ ಸೇವೆಗಾಗಿ ಅಂಗೀಕರಿಸಲ್ಪಟ್ಟಿರುತ್ತಾರೆ ಮತ್ತು ಅಂಗೀಕಾರವಾಗಿರುತ್ತವೆ.

ಅನುವಾದ ಸಲಹೆಗಳು:

- “ಪ್ರತಿಷ್ಠಾಪಿಸು” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ದೇವರ ಸೇವೆಗಾಗಿ ಪ್ರತ್ಯೇಕಿಸು” ಅಥವಾ “ದೇವರ ಸೇವೆಗಾಗಿ ಪವಿತ್ರೀಕರಿಸು” ಎನ್ನುವ ಪದಗಳು ಒಳಗೊಂಡಿರುತ್ತವೆ.
- “ಪರಿಶುದ್ಧ” ಮತ್ತು “ಶುದ್ಧೀಕರಿಸು” ಎನ್ನುವ ಪದಗಳನ್ನು ಕೂಡ ಒಂದುಬಾರಿ ನೋಡಿರಿ.

(ಈ ಪದಗಳನ್ನು ಸಹ ನೋಡಿರಿ : ಪರಿಶುದ್ಧ, ಪವಿತ್ರ, ಶುದ್ಧೀಕರಣ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.04:3-5
- 2 ಪೂರ್ವ.13:8-9
- ಯೆಹೆ.44:19

ಪದ ಡೇಟಾ:

- Strong's: H2763, H3027, H4390, H4394, H5144, H5145, H6942, H6944, G1457, G5048

ಪ್ರತ್ಯೇಕಿಸು

ಪದದ ಅರ್ಥವಿವರಣೆ:

“ಪ್ರತ್ಯೇಕಿಸು” ಎನ್ನುವ ಪದಕ್ಕೆ ಒಂದು ನಿರ್ದಿಷ್ಟವಾದ ಉದ್ದೇಶವನ್ನು ನೆರವೇರಿಸುವುದಕ್ಕೆ ಯಾವುದಾದರೊಂದರಿಂದ ಪ್ರತ್ಯೇಕಿಸುವುದು ಎಂದರ್ಥ. ಯಾವುದಾದರೊಂದನ್ನು ಅಥವಾ ಒಬ್ಬ ವ್ಯಕ್ತಿಯನ್ನು “ಪ್ರತ್ಯೇಕಿಸುವುದು” ಎಂದರೆ ಅವರನ್ನು ಅಥವಾ ಅದನ್ನು “ಪ್ರತ್ಯೇಕಿಸು” ಎಂದರ್ಥವಾಗಿರುತ್ತದೆ.

- ದೇವರನ್ನು ಸೇವಿಸುವುದಕ್ಕೆ ಇಸ್ರಾಯೇಲ್ಯರು ಪ್ರತ್ಯೇಕಿಸಲ್ಪಟ್ಟಿರುತ್ತಾರೆ.
- ದೇವರು ಬಯಸಿದ ಕೆಲಸವನ್ನು ಮಾಡುವುದಕ್ಕೆ ಪೌಲನನ್ನು ಮತ್ತು ಬರ್ನಾಬನನ್ನು ಪ್ರತ್ಯೇಕಿಸಬೇಕೆಂದು ಪವಿತ್ರಾತ್ಮನು ಅಂತಿಯೋಕ್ಯದಲ್ಲಿರುವ ಕ್ರೈಸ್ತರಿಗೆ ಆಜ್ಞಾಪಿಸಿದನು.
- ದೇವರ ಸೇವೆಗಾಗಿ “ಪ್ರತ್ಯೇಕಿಸಲ್ಪಟ್ಟ” ಒಬ್ಬ ವಿಶ್ವಾಸಿ ದೇವರ ಚಿತ್ತವನ್ನು ನೆರವೇರಿಸುವುದಕ್ಕೆ “ಪ್ರತಿಷ್ಠಾಪನೆ” ಮಾಡಿದ್ದಾನೆ ಎಂದರ್ಥ.
- “ಪರಿಶುದ್ಧ” ಎನ್ನುವದಕ್ಕೆ ಅನೇಕ ಅರ್ಥಗಳಲ್ಲಿ ಒಂದು ಅರ್ಥವು ಏನೆಂದರೆ ದೇವರಿಗೆ ಸಂಬಂಧಪಟ್ಟಿರುವಂತೆ ಪ್ರತ್ಯೇಕಿಸಲ್ಪಡುವುದು ಮತ್ತು ಲೋಕದ ಪಾಪ ಸ್ವಭಾವದ ಮಾರ್ಗಗಳಿಂದ ಪ್ರತ್ಯೇಕಿಸಲ್ಪಡುವುದು ಎಂದರ್ಥವಾಗಿರುತ್ತದೆ.
- ಯಾರಾದರೊಬ್ಬರನ್ನು “ಪವಿತ್ರೀಕರಿಸುವುದು” ಎಂದರೆ ಆ ವ್ಯಕ್ತಿಯನ್ನು ದೇವರ ಸೇವೆಗಾಗಿ ಪ್ರತ್ಯೇಕಿಸಲ್ಪಡುವುದು ಎಂದರ್ಥ.

ಅನುವಾದ ಸಲಹೆಗಳು:

- “ಪ್ರತ್ಯೇಕಿಸು” ಎನ್ನುವ ಪದವನ್ನು ಅನುವಾದ ಮಾಡುವುದರಲ್ಲಿ “ವಿಶೇಷವಾಗಿ ಆಯ್ಕೆ ಮಾಡು” ಅಥವಾ “ನಿಮ್ಮ ಮಧ್ಯೆದೊಳಗಿಂದ ಪ್ರತ್ಯೇಕಿಸಿರಿ” ಅಥವಾ “ಒಂದು ವಿಶೇಷವಾದ ಕೆಲಸಕ್ಕಾಗಿ ಪಕ್ಕಕ್ಕೆ ಬರುವುದು” ಎನ್ನುವ ಪದಗಳು ಒಳಗೊಂಡಿರುತ್ತವೆ.
- “ಪ್ರತ್ಯೇಕಿಸಲ್ಪಡುವುದು” ಎನ್ನುವ ಮಾತಿಗೆ “ಯಾವುದಾದರೊಂದರಿಂದ ಪ್ರತ್ಯೇಕಿಸಲ್ಪಡುವುದು” ಅಥವಾ “ಒಂದು ವಿಶೇಷವಾದ ಕೆಲಸಕ್ಕೆ ವಿಶೇಷವಾಗಿ ಅಭಿಷೇಕ ಹೊಂದುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪರಿಶುದ್ಧ, ಪವಿತ್ರೀಕರಿಸು, ನೇಮಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಫೆಸ.03:17-19
- ವಿಮೋ.31:12-15
- ನ್ಯಾಯಾ.17:12-13
- ಅರಣ್ಯ.03:11-13
- ಫಿಲಿಪ್ಪಿ.01:1-2
- ರೋಮ.01:1-3

ಪದ ಡೇಟಾ:

- Strong's: H2764, H4390, H5674, H6918, H6942, H6944, G37, G38, G40, G873

ಪ್ರಲಾಪ, ಪ್ರಲಾಪಗಳು

ಅರ್ಥವಿವರಣೆ:

“ಪ್ರಲಾಪ” ಮತ್ತು “ಪ್ರಲಾಪಗಳು” ಎನ್ನುವ ಪದಗಳು ಶೋಕ, ದುಃಖ, ಅಥವಾ ಕೊರಗುವಿಕೆ ಬಲದ ವ್ಯಕ್ತೀಕರಣವನ್ನು ಸೂಚಿಸುತ್ತವೆ.

- ಕೆಲವೊಂದುಬಾರಿ ಇದು ಪಾಪ ಮಾಡಿದ್ದಕ್ಕಾಗಿ ಆಳವಾದ ವಿಷಾದವನ್ನು ಅಥವಾ ವಿಪತ್ತನ್ನು ಅನುಭವಿಸಿದ ಜನರಿಗೆ ತೋರಿಸುವ ಕರುಣೆಯನ್ನು ಇದು ಒಳಗೊಂಡಿರುತ್ತದೆ.
- ಪ್ರಲಾಪದಲ್ಲಿ ಶೋಕ, ಅಳುವುದು ಅಥವಾ ಗೋಳಿಡುವುದು ಒಳಗೊಂಡಿರುತ್ತದೆ.

ಅನುವಾದ ಸಲಹೆಗಳು:

- “ಪ್ರಲಾಪ” ಎನ್ನುವ ಪದವನ್ನು “ಹೆಚ್ಚಾಗಿ ಅಳುವುದು” ಅಥವಾ “ಶೋಕದಲ್ಲಿ ಗೋಳಾಡುವುದು” ಅಥವಾ “ದುಃಖದಲ್ಲಿರುವುದು” ಎಂದೂ ಅನುವಾದ ಮಾಡಬಹುದು.
- “ಪ್ರಲಾಪಗಳು” (ಅಥವಾ “ಪ್ರಲಾಪ”) ಎನ್ನುವ ಪದವನ್ನು “ಜೋರಾಗಿ ಗೋಳಾಡುವುದು ಮತ್ತು ಅಳುವುದು” ಅಥವಾ “ಹೆಚ್ಚಾಗಿ ದುಃಖಪಡುವುದು” ಅಥವಾ “ದುಃಖಕರವಾಗಿ ಬಿಕ್ಕಿ ಬಿಕ್ಕಿ ಅಳುವುದು” ಅಥವಾ “ಶೋಕದಲ್ಲಿ ಅಳುವುದು” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು:

- ಆಮೋಸ.8:9-10
- ಯೆಹೆ.32:1-2
- ಯೆರೆ.22:18
- ಯೋಬ.27:15-17
- ಪ್ರಲಾಪ.2:5
- ಪ್ರಲಾಪ.2:8
- ಮೀಕಾ.2:4
- ಕೀರ್ತನೆ.102:1-2
- ಜೆಕರ್ಯ.11:2

ಪದದ ಡೇಟಾ:

- Strong's: H0056, H0421, H0578, H0592, H1058, H4553, H5091, H5092, H5594, H6088, H6969, H7015, H8567, G23540, G23550, G28700, G28750

ಪ್ರವಾದಿ, ಪ್ರವಾದಿಗಳು, ಪ್ರವಾದನೆ, ಪ್ರವಾದಿಸು, ದರ್ಶಿ, ಪ್ರವಾದಿನಿ

ಪದದ ಅರ್ಥವಿವರಣೆ:

"ಪ್ರವಾದಿ" ಎನ್ನುವವನು ದೇವರ ಸಂದೇಶವನ್ನು ಜನರಿಗೆ ತಿಳಿಸುವ ಒಬ್ಬ ವ್ಯಕ್ತಿಯಾಗಿರುತ್ತಾನೆ. ಈ ಕೆಲಸವನ್ನು ಮಾಡುವ ಸ್ತ್ರೀಯನ್ನು "ಪ್ರವಾದಿನಿ" ಎಂದು ಕರೆಯುತ್ತಾರೆ.

- ಅನೇಕಬಾರಿ ಪ್ರವಾದಿಗಳು ಜನರನ್ನು ತಮ್ಮ ಪಾಪಗಳಿಂದ ಹಿಂದುರಿಗಿ, ದೇವರಿಗೆ ವಿಧೇಯರಾಗಿರಬೇಕೆಂದು ಎಚ್ಚರಿಸಿದ್ದಾರೆ.
- "ಪ್ರವಾದನೆ" ಎನ್ನುವುದು ಪ್ರವಾದಿ ಮಾತನಾಡುವ ಸಂದೇಶವಾಗಿರುತ್ತದೆ. "ಪ್ರವಾದಿಸು" ಎಂದರೆ ದೇವರ ಸಂದೇಶಗಳನ್ನು ಮಾತನಾಡುವುದು ಎಂದರ್ಥ.
- ಅನೇಕಬಾರಿ ಪ್ರವಾದಿಸುವ ಸಂದೇಶವು ಭವಿಷ್ಯತ್ತಿನಲ್ಲಿ ನಡೆಯುವ ಕಾರ್ಯಗಳ ಕುರಿತಾಗಿರುತ್ತದೆ.
- ಹಳೇ ಒಡಂಬಡಿಕೆಯಲ್ಲಿ ಅನೇಕ ಪ್ರವಾದನೆಗಳು ಈಗಾಗಲೇ ನೆರವೇರಿಸಲ್ಪಟ್ಟಿರುತ್ತವೆ.
- ಸತ್ಯವೇದದಲ್ಲಿ ಅನೇಕ ಪುಸ್ತಕಗಳು ಪ್ರವಾದಿಗಳಿಂದ ಬರೆಯಲ್ಪಟ್ಟಿರುತ್ತವೆ, ಕೆಲವೊಂದುಬಾರಿ "ಪ್ರವಾದಿಗಳು" ಎಂಬುದಾಗಿ ಸೂಚಿಸಲ್ಪಟ್ಟಿರುತ್ತದೆ.
- "ನ್ಯಾಯಪ್ರಮಾಣ ಮತ್ತು ಪ್ರವಾದಿಗಳು" ಎನ್ನುವ ಮಾತಿನ ಉದಾಹರಣೆಯನ್ನು ತೆಗೆದುಕೊಂಡರೆ, ಈ ಮಾತು ಇಬ್ರಿಯ ಲೇಖಗಳೆಲ್ಲವುಗಳನ್ನು ಸೂಚಿಸುತ್ತವೆ, ಇವುಗಳನ್ನು "ಹಳೇ ಒಡಂಬಡಿಕೆ" ಎಂದೂ ಕರೆಯುತ್ತಾರೆ.
- ಪ್ರವಾದಿ ಎನ್ನುವ ಹೆಸರಿಗೆ ಹಳೇಯ ಹೆಸರು "ದರ್ಶಿ" ಅಥವಾ "ನೋಡುವ ವ್ಯಕ್ತಿ" ಎಂದಾಗಿರುತ್ತದೆ.
- "ದರ್ಶಿ" ಎನ್ನುವ ಪದವು ಕೆಲವೊಂದುಬಾರಿ ಸುಳ್ಳು ಪ್ರವಾದಿಯನ್ನು ಅಥವಾ ಕಣಿ ಹೇಳುವುದನ್ನು ಅಭ್ಯಾಸ ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- "ಪ್ರವಾದಿ" ಎನ್ನುವ ಪದವನ್ನು "ದೇವರ ಪ್ರತಿನಿಧಿ" ಅಥವಾ "ದೇವರು ಪಕ್ಷವಾಗಿ ಮಾತನಾಡುವ ವ್ಯಕ್ತಿ" ಅಥವಾ "ದೇವರ ಸಂದೇಶಗಳನ್ನು ಮಾತನಾಡುವ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.
- "ದರ್ಶಿ" ಎನ್ನುವ ಪದವನ್ನು "ದರ್ಶಗಳನ್ನು ನೋಡುವ ವ್ಯಕ್ತಿ" ಅಥವಾ "ದೇವರಿಂದ ಭವಿಷ್ಯತ್ತನ್ನು ನೋಡುವ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.
- "ಪ್ರವಾದಿನಿ" ಎನ್ನುವ ಪದವನ್ನು "ದೇವರಿಗಾಗಿ ಮಾತನಾಡುವ ಪ್ರತಿನಿಧಿ" ಅಥವಾ "ದೇವರ ಪಕ್ಷವಾಗಿ ಮಾತನಾಡುವ ಸ್ತ್ರೀ" ಅಥವಾ "ದೇವರ ಸಂದೇಶಗಳನ್ನು ಮಾತನಾಡುವ ಸ್ತ್ರೀ" ಎಂದೂ ಅನುವಾದ ಮಾಡಬಹುದು.
- "ಪ್ರವಾದನೆ" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ, "ದೇವರಿಂದ ಬಂದಿರುವ ಸಂದೇಶ" ಅಥವಾ "ಪ್ರವಾದಿಯ ಸಂದೇಶ" ಎನ್ನುವ ಮಾತುಗಳನ್ನು ಉಪಯೋಗಿಸುತ್ತಾರೆ.
- "ಪ್ರವಾದಿಸು" ಎನ್ನುವ ಪದವನ್ನು "ದೇವರಿಂದ ಬಂದಿರುವ ಮಾತುಗಳನ್ನಾಡುವುದು" ಅಥವಾ "ದೇವರ ಸಂದೇಶವನ್ನು ಹೇಳು" ಎಂದೂ ಅನುವಾದ ಮಾಡಬಹುದು.
- ಅಲಂಕಾರಿಕ ಮಾತುಗಳಲ್ಲಿ, "ನ್ಯಾಯಪ್ರಮಾಣ ಮತ್ತು ಪ್ರವಾದಿಗಳು" ಎನ್ನುವ ಮಾತನ್ನು "ಪ್ರವಾದಿಗಳ ಮತ್ತು ನ್ಯಾಯಪ್ರಮಾಣದ ಪುಸ್ತಕಗಳು" ಅಥವಾ "ದೇವರ ಕುರಿತಾಗಿ ಮತ್ತು ತನ್ನ ಜನರ ಕುರಿತಾಗಿ ಬರೆಯಲ್ಪಟ್ಟ ಪ್ರತಿಯೊಂದು ವಿಷಯವು" ಎಂದೂ ಅನುವಾದ ಮಾಡಬಹುದು, ಅದರಲ್ಲಿ ದೇವರ ಆಜ್ಞೆಗಳು ಮತ್ತು ಆತನ ಪ್ರವಾದಿಗಳು ಪ್ರಕಟಿಸಿರುವುದು ಒಳಗೊಂಡಿರುತ್ತದೆ."
- ಸುಳ್ಳು ದೇವರ ಪ್ರವಾದಿಯನ್ನು (ಅಥವಾ ದರ್ಶಿಯನ್ನು) ಸೂಚಿಸಿದಾಗ, ಉದಾಹರಣೆಗೆ, "ಸುಳ್ಳು ಪ್ರವಾದಿ (ದರ್ಶಿ)" ಅಥವಾ "ಸುಳ್ಳು ದೇವರ ಪ್ರವಾದಿ (ದರ್ಶಿ)" ಅಥವಾ "ಬಾಳ್ ಪ್ರವಾದಿ" ಎನ್ನುವುದು ತುಂಬಾ ಅತ್ಯಗತ್ಯ.

(ಈ ಪದಗಳನ್ನು ಸಹ ನೋಡಿರಿ : ಬಾಳ್, ಕಣಿ, ಸುಳ್ಳು ದೇವರು, ಸುಳ್ಳು ಪ್ರವಾದಿ, ನೆರವೇರಿಸು, ಧರ್ಮಶಾಸ್ತ್ರ, ದರ್ಶನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.02:14-16
- ಅಪೊ.ಕೃತ್ಯ.03:24-26
- ಯೋಹಾನ.01:43-45
- ಮಲಾಕಿ.04:4-6
- ಮತ್ತಾಯ.01:22-23
- ಮತ್ತಾಯ.02:17-18
- ಮತ್ತಾಯ.05:17-18
- ಕೀರ್ತನೆ.051:1-2

ಸತ್ಯವೇದದಿಂದ ಉದಾಹರಣೆಗಳು:

- **12:12** ಐಗುಪ್ತರೆಲ್ಲರೂ ಸತ್ತಿದ್ದಾರೆಂದು ಇಸ್ರಾಯೇಲ್ಯರು ನೋಡಿದಾಗ, ಅವರು ದೇವರಲ್ಲಿ ಭರವಸೆ ಇಟ್ಟರು ಮತ್ತು ಮೋಶೆ ದೇವರ _ **ಪ್ರವಾದಿ** _ ಎಂದು ನಂಬಿದರು.
- **17:13** ದಾವೀದನು ಮಾಡಿದ ವಿಷಯದಲ್ಲಿ ದೇವರು ತುಂಬಾ ಹೆಚ್ಚಾಗಿ ಕೋಪಗೊಂಡಿದ್ದರು, ಅದಕ್ಕಾಗಿ ದಾವೀದನು ಎಂಥ ಭಯಂಕರವಾದ ಪಾಪವನ್ನು ಮಾಡಿದ್ದಾನೆಂದು ತಿಳಿಸಲು, ಆತನು _ **ಪ್ರವಾದಿಯಾದ** _ ನಾತಾನನನ್ನು ಕಳುಹಿಸಿದನು.
- **19:01** ಇಸ್ರಾಯೇಲ್ಯರ ಚರಿತ್ರೆಯಲ್ಲೆಲ್ಲಾ ದೇವರು ಅವರನ್ನು _ **ಪ್ರವಾದಿಗಳ** ಬಳಿಗೆ ಕಳುಹಿಸಿದರು. **ಪ್ರವಾದಿಗಳು** _ ದೇವರಿಂದ ಸಂದೇಶಗಳನ್ನು ಕೇಳಿಸಿಕೊಂಡು, ಆ ದೇವರ ಸಂದೇಶಗಳನ್ನು ಜನರಿಗೆ ಹೇಳಿದರು.
- **19:06** ಸುಮಾರು 450 ಮಂದಿ ಬಾಳ್ ಪ್ರವಾದಿಗಳನ್ನು ಸೇರಿಸಿ, ಇಸ್ರಾಯೇಲ್ ರಾಜ್ಯದಲ್ಲಿರುವ ಎಲ್ಲಾ ಜನರು ಕಾರ್ಮೆಲ್ ಪರ್ವತದ ಬಳಿಗೆ ಬಂದರು.
- **19:17** ಜನರು ಹೆಚ್ಚಿನ ಮಟ್ಟಿಗೆ ದೇವರಿಗೆ ವಿಧೇಯತೆಯನ್ನು ತೋರಿಸಿದ್ದಿಲ್ಲ. ಅವರು ಹೆಚ್ಚಾಗಿ _ **ಪ್ರವಾದಿಗಳಲ್ಲಿ** _ ದುಷ್ಟ ನಡತೆಯಿಂದ ನಡೆದುಕೊಳ್ಳುತ್ತಿದ್ದರು ಮತ್ತು ಕೆಲವೊಂದುಬಾರಿ ಅವರು ಸಾಯಿಸಲ್ಪಡುತ್ತಿದ್ದರು.
- **21:09**ಮೆಸ್ಸೀಯ ಕನ್ಯೆಯ ಗರ್ಭದಿಂದ ಹುಟ್ಟುವನು ಎಂದು _ **ಪ್ರವಾದಿಯಾದ** ಯೆಶಾಯನು _ **ಪ್ರವಾದಿಸಿದ್ದನು** __ .
- **43:05** " ಯೋವೇಲನಿಂದ ಬಂದಿರುವ ಪ್ರವಾದನೆಯು ಇದು ನೆರವೇರಿಸಲ್ಪಡುವುದು ಎನ್ನುವುದರಲ್ಲಿ "ಅಂತ್ಯಕಾಲದಲ್ಲಿ, ನಾನು ನನ್ನ ಆತ್ಮವನ್ನು ಸುರಿಸುತ್ತೇನೆ" ಎಂದು ದೇವರು ಹೇಳಿದ ಮಾತನ್ನು ಹೇಳಿದ್ದನು."
- **43:07** "ನೀನು ನಿನ್ನ ಪರಿಶುದ್ಧನನ್ನು ಸಮಾಧಿಯೊಳಗೆ ಬಿಡುವುದಿಲ್ಲ" ಎಂದು ಹೇಳಿದ _ **ಪ್ರವಾದನೆಯು** _ ನೆರವೇರಿಸಲ್ಪಟ್ಟಿದೆ."
- **48:12** ದೇವರ ವಾಕ್ಯವನ್ನು ಸಾರಿದ ಮೋಶೆಯು ದೊಡ್ಡ _ ಪ್ರವಾದಿಯಾಗಿದ್ದನು **. ಆದರೆ ಯೇಸುವು ಎಲ್ಲರಿಗಿಂತ ದೊಡ್ಡ** _ ಪ್ರವಾದಿಯಾಗಿರುತ್ತಾನೆ __. ಆತನೇ ದೇವರ ವಾಕ್ಯವಾಗಿದ್ದಾನೆ.

ಪದ ಡೇಟಾ:

- Strong's: H2372, H2374, H4853, H5012, H5013, H5016, H5017, H5029, H5030, H5031, H5197, G2495, G4394, G4395, G4396, G4397, G4398, G5578

ಪ್ರಾಣ, ಸ್ವಂತ

ಪದದ ಅರ್ಥವಿವರಣೆ:

"ಪ್ರಾಣ" ಎನ್ನುವುದು ಒಬ್ಬ ವ್ಯಕ್ತಿಯಲ್ಲಿ ಅಂತಃರಂಗವು, ಕಾಣಿಸದಿರುವ ನಿತ್ಯತ್ವದ ಭಾಗವೂ ಆಗಿರುತ್ತದೆ. ಇದು ಒಬ್ಬ ವ್ಯಕ್ತಿಯ ಭೌತಿಕ ಭಾಗವಲ್ಲದ್ದನ್ನು ಸೂಚಿಸುತ್ತದೆ.

- “ಪ್ರಾಣ” ಮತ್ತು “ಆತ್ಮ” ಎನ್ನುವ ಪದಗಳು ಎರಡು ವಿಭಿನ್ನ ಪರಿಕಲ್ಪನೆಗಳಾಗಿರಬಹುದು, ಅಥವಾ ಅವು ಒಂದೇ ಪರಿಕಲ್ಪನೆಯನ್ನು ಸೂಚಿಸುವ ಎರಡು ಪದಗಳಾಗಿಯೂ ಇರಬಹುದು.
- ಒಬ್ಬ ವ್ಯಕ್ತಿ ಸತ್ತಾಗ, ತನ್ನ ಪ್ರಾಣವು ತನ್ನ ಶರೀರವನ್ನು ಬಿಟ್ಟುಹೋಗುವುದು.
- “ಪ್ರಾಣ” ಎನ್ನುವ ಪದವು ಕೆಲವೊಂದು ಬಾರಿ ಸಂಪೂರ್ಣ ವ್ಯಕ್ತಿಯನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿಯೂ ಉಪಯೋಗಿಸಲ್ಪಟ್ಟಿರುತ್ತದೆ. ಉದಾಹರಣೆಗೆ, “ಪಾಪಗಳನ್ನು ಮಾಡುವ ಪ್ರಾಣ” ಎನ್ನುವ ಮಾತಿಗೆ “ಪಾಪಗಳನ್ನು ಮಾಡುವ ವ್ಯಕ್ತಿ” ಎಂದರ್ಥ ಮತ್ತು “ನನ್ನ ಪ್ರಾಣವು ನೊಂದಿದೆ” ಎನ್ನುವ ಮಾತಿಗೆ “ನಾನು ದಣಿದಿದ್ದೇನೆ” ಎಂದರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- “ಪ್ರಾಣ” ಎನ್ನುವ ಪದವನ್ನು “ಅಂತಃರಂಗ” ಅಥವಾ “ಅಂತಃರಂಗದಲ್ಲಿರುವ ವ್ಯಕ್ತಿ” ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಸಂದರ್ಭಗಳಲ್ಲಿ “ನನ್ನ ಪ್ರಾಣ” ಎನ್ನುವ ಮಾತನ್ನು “ನಾನು” ಅಥವಾ “ನಾನೇ” ಎಂದೂ ಅನುವಾದ ಮಾಡಬಹುದು.
- “ಪ್ರಾಣ” ಎನ್ನುವ ಪದವನ್ನು ಸಹಜವಾಗಿ “ವ್ಯಕ್ತಿ” ಅಥವಾ “ಅವನು” ಅಥವಾ “ಆತನು” ಎಂದು ಸಂದರ್ಭಾನುಗುಣವಾಗಿ ಅನುವಾದ ಮಾಡಲಾಗುತ್ತದೆ.
- ಕೆಲವೊಂದು ಭಾಷೆಗಳಲ್ಲಿ “ಪ್ರಾಣ” ಮತ್ತು “ಆತ್ಮ” ಎನ್ನುವ ಪರಿಕಲ್ಪನೆಗಳಿಗೆ ಒಂದೇ ಪದವನ್ನು ಹೊಂದಿರಬಹುದು.
- ಇಬ್ರಿ.4:12ನೇ ವಾಕ್ಯದಲ್ಲಿ “ಪ್ರಾಣ ಮತ್ತು ಆತ್ಮವನ್ನು ವಿಭಜಿಸುತ್ತಾ” ಎನ್ನುವ ಅಲಂಕಾರಿಕ ಮಾತಿಗೆ “ಆಳವಾಗಿ ವಿವೇಚಿಸುವುದು ಅಥವಾ ಅಂತಃರಂಗ ವ್ಯಕ್ತಿಯನ್ನು ತೋರಿಸುವುದು” ಎಂದರ್ಥವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಪೇತ್ರ.02:08
- ಅಪೊ.ಕೃತ್ಯ.02:27-28
- ಅಪೊ.ಕೃತ್ಯ.02:41
- ಆದಿ.49:06
- ಯೆಶಯ.53:10-11
- ಯಾಕೋಬ.01:21
- ಯೆರೆ.06:16-19
- ಯೋನ.02:7-8
- ಲೂಕ.01:47
- ಮತ್ತಾಯ.22:37
- ಕೀರ್ತನೆ.019:07
- ಪ್ರಕ.20:4

ಪದ ಡೇಟಾ:

- Strong's: H5082, H5315, H5397, G5590

ಪ್ರಾಯಶ್ಚಿತ್ತ ಮುಚ್ಚಳ

ಪದದ ಅರ್ಥವಿವರಣೆ:

“ಪ್ರಾಯಶ್ಚಿತ್ತ ಮುಚ್ಚಳ” ಎನ್ನುವದನ್ನು ಒಡಂಬಡಿಕೆಯ ಮಂಜೂಷದ ಮೇಲೆ ಮುಚ್ಚುವುದಕ್ಕೆ ಉಪಯೋಗಿಸುವ ಬಂಗಾರದ ಹಲಗೆಯಾಗಿರುತ್ತದೆ. ಅನೇಕ ಆಂಗ್ಲ ಅನುವಾದಗಳಲ್ಲಿ “ಪ್ರಾಯಶ್ಚಿತ್ತ ಹಲಗೆ” ಎಂದೂ ಸೂಚಿಸಿದ್ದಾರೆ.

- ಪ್ರಾಯಶ್ಚಿತ್ತ ಮುಚ್ಚಳ ಸುಮಾರು 115 ಸೆಂಟಿ ಮೀಟರ್ ಉದ್ದ ಮತ್ತು 70 ಸೆಂಟಿ ಮೀಟರ್ ಅಗಲ ಇರುತ್ತದೆ.
- ಪ್ರಾಯಶ್ಚಿತ್ತ ಮುಚ್ಚಳದ ಮೇಲೆ ಎರಡು ಬಂಗಾರದ ಕೆರೂಬಿಗಳನ್ನು ಇಟ್ಟು, ಅವುಗಳ ರೆಕ್ಕೆಗಳು ಅದಕ್ಕೆ ಅಂಟಿಕೊಂಡಿರುವಂತೆ ಮಾಡಿರುತ್ತಾರೆ.
- ಯೆಹೋವನು ಪ್ರಾಯಶ್ಚಿತ್ತ ಮುಚ್ಚಳ ಮೇಲೆ ಇರುವ ಕೆರೂಬಿಗಳ ರೆಕ್ಕೆಗಳ ಮಧ್ಯೆದಲ್ಲಿ ಇಸ್ರಾಯೇಲ್ಯರೊಂದಿಗೆ ಭೇಟಿಯಾಗುತ್ತಾನೆಂದು ಹೇಳಿದನು, ಜನರ ಪ್ರತಿನಿಧಿಯಾಗಿ ಯೆಹೋವನನ್ನು ಭೇಟಿಯಾಗುವುದಕ್ಕೆ ಕೇವಲ ಪ್ರಧಾನ ಯಾಜಕನಿಗೆ ಮಾತ್ರ ಅನುಮತಿ ಇದ್ದಿತ್ತು.
- ಕೆಲವೊಂದುಸಲ ಈ ಪ್ರಾಯಶ್ಚಿತ್ತ ಮುಚ್ಚಳವನ್ನು “ಕೃಪಾಸನ” ಎಂದು ಸೂಚಿಸಿದ್ದಾರೆ. ಯಾಕಂದರೆ ಪಾಪ ಸ್ವಭಾವಿಗಳಾದ ಜನರನ್ನು ವಿಮೋಚಿಸುವುದಕ್ಕೆ ದೇವರ ಕೃಪೆಯು/ಕರುಣೆಯು ಕೆಳಗೆ ಇಳಿದು ಬರುತ್ತಿತ್ತು.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ವಿಮೋಚಿಸುತ್ತೇನೆಂದು ದೇವರು ವಾಗ್ದಾನ ಮಾಡಿದ ಮಂಜೂಷದ ಮುಚ್ಚಳ” ಅಥವಾ “ದೇವರು ವಿಮೋಚಿಸುವ ಸ್ಥಳ” ಅಥವಾ “ದೇವರು ಕ್ಷಮಿಸುವ ಮತ್ತು ಸಮಾಧಾನಪಡಿಸುವ ಮಂಜೂಷದ ಮುಚ್ಚಳ” ಎನ್ನುವ ಮಾತುಗಳೂ ಒಳಗೊಂಡಿರುತ್ತವೆ.
- “ತ್ಯಾಗದ ಸ್ಥಳ” ಎಂದೂ ಅರ್ಥ ಬರುತ್ತದೋ.
- ಈ ಪದದೊಂದಿಗೆ “ಪ್ರಾಯಶ್ಚಿತ್ತ”, “ತ್ಯಾಗ” ಮತ್ತು “ವಿಮೋಚನೆ” ಎನ್ನುವ ಪದಗಳನ್ನು ಅನುವಾದನೆ ಮಾಡುತ್ತಿರುವ ಪದಗಳನ್ನು ಹೋಲಿಸಿ ನೋಡಿರಿ.

(ಈ ಪದಗಳನ್ನು ಸಹ ನೋಡಿರಿ : ಒಡಂಬಡಿಕೆಯ ಮಂಜೂಷ, ಪ್ರಾಯಶ್ಚಿತ್ತ, ಕೆರೂಬಿ, ತ್ಯಾಗ, ವಿಮೋಚನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.25:15-18
- ವಿಮೋ.30:5-6
- ವಿಮೋ.40:17-20
- ಯಾಜಕ.16:1-2
- ಅರಣ್ಯ.07:89

ಪದ ಡೇಟಾ:

- Strong's: H3727, G2435

ಪ್ರಾಯಶ್ಚಿತ್ತ, ವಿಮೋಚನೆ, ಬಿಡುಗಡೆಗಳು

ಪದದ ಅರ್ಥವಿವರಣೆ:

“ವಿಮೋಚನೆ” ಮತ್ತು “ಪ್ರಾಯಶ್ಚಿತ್ತ” ಎನ್ನುವ ಪದಗಳು ಜನರ ಪಾಪಗಳಿಗೋಸ್ಕರ ದೇವರು ಯಾವರೀತಿ ತ್ಯಾಗವನ್ನು ಮಾಡಿದ್ದಾರೆಂದು ಮತ್ತು ಪಾಪಕ್ಕಾಗಿ ತನ್ನ ಕೋಪಾಗ್ನಿಯನ್ನು ಯಾವರೀತಿ ಶಮನಗೊಳಿಸಿಕೊಂಡಿದ್ದಾರೆಂದು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ, ಇಸ್ರಾಯೇಲ್ಯರು ತಾವು ಮಾಡಿದ ಪಾಪಗಳಿಗೋಸ್ಕರ ಒಂದು ಪ್ರಾಣಿಯನ್ನು ಬಲಿ ಕೊಟ್ಟು ರಕ್ತದ ಬಲಿದಾನವನ್ನು ಅರ್ಪಿಸುವುದರ ಮೂಲಕ ತಾತ್ಕಾಲಿಕವಾದ ಪ್ರಾಯಶ್ಚಿತ್ತವನ್ನು ದೇವರು ಅನುಮತಿಸಿದ್ದರು.
- ಹೊಸ ಒಡಂಬಡಿಕೆಯಲ್ಲಿ ದಾಖಲಿಸಿದಂತೆ, ಶಿಲುಬೆಯ ಮೇಲೆ ಕ್ರಿಸ್ತನ ಮರಣವು ಸತ್ಯ ಮತ್ತು ಅದೇ ಪಾಪಕ್ಕಾಗಿ ಮಾಡಿದ ಶಾಶ್ವತವಾದ ಪ್ರಾಯಶ್ಚಿತ್ತವಾಗಿರುತ್ತದೆ.
- ಯೇಸು ಮರಣ ಹೊಂದಿದಾಗ, ಜನರ ಹೊಂದಬೇಕಾದ ಶಿಕ್ಷೆಯನ್ನು ಆವರು ತನ್ನ ಮೇಲೆ ಹಾಕಿಕೊಂಡಿದ್ದಾರೆ ಯಾಕಂದರೆ ಜನರ ಪಾಪಗಳಿಂದ ಬಿಡಿಸುವುದಕ್ಕೋಸ್ಕರ ಆ ತ್ಯಾಗವನ್ನು ಮಾಡಿದ್ದರು. ಆತನು ತನ್ನ ತ್ಯಾಗಪೂರಿತವಾದ ಮರಣದಿಂದ ಪ್ರಾಯಶ್ಚಿತ್ತವಾದ ಬೆಲೆಯನ್ನು ಸಲ್ಲಿಸಿದ್ದಾರೆ.

ಅನುವಾದ ಸಲಹೆಗಳು:

- “ವಿಮೋಚನೆ” ಎನ್ನುವ ಪದವನ್ನು “ಬೆಲೆಯನ್ನು ಸಲ್ಲಿಸು” ಅಥವಾ “ಕ್ರಯಧನವನ್ನು ಕೊಡು” ಅಥವಾ “ಒಬ್ಬರ ಪಾಪಗಳು ಕ್ಷಮಿಸಲ್ಪಡುವಂತೆ ಮಾಡು” ಅಥವಾ “ಮಾಡಿದ ಅಪರಾಧಕ್ಕೆ ಪರಿಹಾರ ಸಲ್ಲಿಸು” ಎಂದೂ ಅನುವಾದ ಮಾಡಬಹುದು.
- “ಪ್ರಾಯಶ್ಚಿತ್ತ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನದಲ್ಲಿ “ಕ್ರಯಧನ” ಅಥವಾ “ಪಾಪಕ್ಕಾಗಿ ಸಲ್ಲಿಸಬೇಕಾದ ತ್ಯಾಗ” ಅಥವಾ “ಕ್ಷಮಾಪಣೆಯನ್ನು ಅನುಗ್ರಹಿಸುವುದು” ಎನ್ನುವ ಮಾತುಗಳೂ ಒಳಗೊಂಡಿರುತ್ತವೆ.
- ಈ ಪದವನ್ನು ಅನುವಾದ ಮಾಡುವಾಗ ಹಣವನ್ನು ಪಾವತಿಸುವ ಅರ್ಥವು ಬರದಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಪ್ರಾಯಶ್ಚಿತ್ತ ಮುಚ್ಚಳ, ಕ್ಷಮಿಸು, ತ್ಯಾಗ, ಸಮಾಧಾನಪಡು, ವಿಮೋಚಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.43:25-27
- ಯೆಹೆ.45:18-20
- ಯೆಹೆ.04:20-21
- ಯೆಹೆ.05:8-10
- ಯೆಹೆ.28:19-22

ಪದ ಡೇಟಾ:

- Strong's: H3722, H3725, G2643

ಪ್ರಾರ್ಥಿಸು, ಪ್ರಾರ್ಥನೆ

ಪದದ ಅರ್ಥವಿವರಣೆ:

"ಪ್ರಾರ್ಥಿಸು" ಮತ್ತು "ಪ್ರಾರ್ಥನೆ" ಎನ್ನುವ ಪದಗಳು ದೇವರೊಂದಿಗೆ ಮಾತನಾಡುವುದನ್ನು ಸೂಚಿಸುತ್ತವೆ. ಈ ಪದಗಳು ಸುಳ್ಳು ದೇವರೊಂದಿಗೆ ಮಾತನಾಡಲು ಪ್ರಯತ್ನಿಸುವ ಜನರನ್ನು ಸೂಚಿಸುವುದಕ್ಕೆ ಸಹ ಉಪಯೋಗಿಸಲಾಗುತ್ತದೆ.

- ಜನರು ಮೌನವಾಗಿದ್ದು ಪ್ರಾರ್ಥಿಸುತ್ತಿದ್ದರು, ತಮ್ಮ ಆಲೋಚನೆಗಳಿಂದ ದೇವರೊಂದಿಗೆ ಮಾತನಾಡುತ್ತಿರುತ್ತಾರೆ, ಅಥವಾ ಅವರು ಗಟ್ಟಿಯಾಗಿ ಪ್ರಾರ್ಥಿಸುತ್ತಿದ್ದರು, ಅವರ ಸ್ವರದಿಂದ ದೇವರೊಂದಿಗೆ ಮಾತನಾಡುತ್ತಿರುತ್ತಾರೆ. ದಾವೀದನು ಕೀರ್ತನೆ ಪುಸ್ತಕಗಳಲ್ಲಿ ಆತನು ತನ್ನ ಪ್ರಾರ್ಥನೆಗಳನ್ನು ಬರೆದುಕೊಂಡಿರುವಂತೆಯೇ ಕೆಲವೊಂದುಬಾರಿ ಪ್ರಾರ್ಥನೆಗಳನ್ನು ಬರೆಯುತ್ತಿರುತ್ತಾರೆ.
- ಪ್ರಾರ್ಥನೆಯಲ್ಲಿ ಕರುಣೆಗಾಗಿ ದೇವರನ್ನು ಕೇಳಿಕೊಳ್ಳುವುದು, ಸಮಸ್ಯೆಯಲ್ಲಿ ಸಹಾಯಕ್ಕಾಗಿ ಕೇಳಿಕೊಳ್ಳುವುದು ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳುವುದರಲ್ಲಿ ಜ್ಞಾನಕ್ಕಾಗಿ ಬೇಡಿಕೊಳ್ಳುವುದು ಒಳಗೊಂಡಿರುತ್ತದೆ.
- ಅನೇಕಬಾರಿ ಜನರು ರೋಗಿಗಳಾಗಿರುವ ಜನರನ್ನು ಗುಣಪಡಿಸುವುದಕ್ಕೆ ಅಥವಾ ಇತರ ವಿಧಾನಗಳಲ್ಲಿ ಆತನ ಸಹಾಯವು ಬೇಕಾಗಿರುವ ಪ್ರತಿಯೊಬ್ಬರಿಗೆ ಸಹಾಯಕ್ಕಾಗಿ ಪ್ರಾರ್ಥನೆ ಮಾಡುತ್ತಿರುತ್ತಾರೆ.
- ಜನರು ದೇವರಿಗೆ ಪ್ರಾರ್ಥನೆ ಮಾಡುವಾಗ ಆತನನ್ನು ಸ್ತುತಿಸುತ್ತಾರೆ ಮತ್ತು ಆತನಿಗೆ ಕೃತಜ್ಞತೆಗಳನ್ನು ಹೇಳುತ್ತಿರುತ್ತಾರೆ.
- ಪ್ರಾರ್ಥನೆ ದೇವರ ಬಳಿ ಪಾಪಗಳನ್ನು ಒಪ್ಪಿಕೊಳ್ಳುವುದು ಮತ್ತು ನಮ್ಮನ್ನು ಕ್ಷಮಿಸಬೇಕೆಂದು ಆತನನ್ನು ಬೇಡಿಕೊಳ್ಳುವುದು ಒಳಗೊಂಡಿರುತ್ತದೆ.
- ಕೆಲವೊಂದು ಬಾರಿ ದೇವರೊಂದಿಗೆ ಮಾತನಾಡುವುದನ್ನು ಆತನೊಂದಿಗೆ "ಸಂಭಾಷಿಸುವುದು" ಎಂದು ಕರೆಯುತ್ತಾರೆ. ಅಂದರೆ ಆತನ ಆತ್ಮದೊಂದಿಗೆ ನಮ್ಮ ಆತ್ಮವು ಸಂಭಾಷಿಸುವುದು, ಆತನ ಸನ್ನಿಧಿಯಲ್ಲಿ ಸಂತೋಷಿಸುವುದು ಮತ್ತು ನಮ್ಮ ಭಾವನೆಗಳನ್ನು ಹಂಚಿಕೊಳ್ಳುವುದು ಎಂದರ್ಥ.
- ಈ ಪದವನ್ನು 'ದೇವರೊಂದಿಗೆ ಮಾತನಾಡುವುದು" ಅಥವಾ "ದೇವರೊಂದಿಗೆ ಸಂಭಾಷಿಸುವುದು" ಎಂದೂ ಅನುವಾದ ಮಾಡಬಹುದು. ಈ ಪದವನ್ನು ಅನುವಾದ ಮಾಡುವಾಗ ಮೌನವಾಗಿದ್ದು ಪ್ರಾರ್ಥನೆ ಮಾಡುವುದೂ ಒಳಗೊಂಡಿರಬೇಕು.

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ಕ್ಷಮಿಸು, ಸ್ತುತಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಥೆಸ್ಸ.03:09
- ಅಪೊ.ಕೃತ್ಯ.08:24
- ಅಪೊ.ಕೃತ್ಯ.14:26
- ಕೊಲೊಸ್ಸ.04:04
- ಯೋಹಾನ.17:09
- ಲೂಕ.11:1
- ಮತ್ತಾಯ.05:43-45
- ಮತ್ತಾಯ.14:22-24

ಸತ್ಯವೇದದಿಂದ ಉದಾಹರಣೆಗಳು:

- **06:05** ಇಸಾಕನು ರೆಬೆಕ್ಕಳಿಗಾಗಿ _ ಪ್ರಾರ್ಥಿಸಿದನು _ , ಮತ್ತು ದೇವರು ಆಕೆ ಅವಳಿ ಮಕ್ಕಳಿಗೆ ಗರ್ಭವನ್ನು ಧರಿಸಲು ಅನುಮತಿಸಿದನು.
- **13:12** ಆದರೆ ಮೋಶೆ ಅವರಿಗಾಗಿ _ ಪ್ರಾರ್ಥಿಸಿದನು _, ಮತ್ತು ದೇವರು ಆತನ _ ಪ್ರಾರ್ಥನೆಯನ್ನು _ ಕೇಳಿಸಿಕೊಂಡನು ಮತ್ತು ಅವರನ್ನು ನಾಶಮಾಡಲಿಲ್ಲ.
- **19:08** "ಬಾಳ್, ನಮ್ಮ ಪ್ರಾರ್ಥನೆಯನ್ನು ಕೇಳು!" ಎಂದು ಬಾಳ್ ಪ್ರವಾದಿಗಳು ಬಾಳ್.ಗೆ _ ಪ್ರಾರ್ಥಿಸಿದರು _.
- **21:07** ಯಾಜಕರು ಕೂಡ ಜನರಿಗಾಗಿ ದೇವರಿಗೆ _ ಪ್ರಾರ್ಥನೆ ಮಾಡಿದರು _ .
- **38:11** ನೀವು ಶೋಧನೆಯೊಳಗೆ ಪ್ರವೇಶಿದಂತೆ _ ಪ್ರಾರ್ಥನೆ _ ಮಾಡಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು.
- **43:13** ಅಪೊಸ್ತಲರ ಬೋಧನೆಗಳನ್ನು ಶಿಷ್ಯರು ನಿರಂತರವಾಗಿ ಕೇಳಿಸಿಕೊಂಡರು, ಎಲ್ಲರು ಸೇರಿ ಸಮಯವನ್ನು ಕಳೆದರು, ಎಲ್ಲರು ಸೇರಿ ಊಟ ಮಾಡಿದರು ಮತ್ತು ಒಬ್ಬರಿಗೊಬ್ಬರು _ ಪ್ರಾರ್ಥನೆ _ ಮಾಡಿಕೊಂಡರು.
- **49:18** ಕ್ರೈಸ್ತರೆಲ್ಲರು ಸೇರಿ ದೇವರನ್ನು ಆರಾಧಿಸಬೇಕೆಂದು, ಆತನ ವಾಕ್ಯವನ್ನು ಧ್ಯಾನ ಮಾಡಬೇಕೆಂದು, _ ಪ್ರಾರ್ಥನೆ _ ಮಾಡಬೇಕೆಂದು ಮತ್ತು ಆತನು ನಿಮಗಾಗಿ ಮಾಡಿದ ಕಾರ್ಯಗಳನ್ನು ಇತರರೊಂದಿಗೆ ಹೇಳಬೇಕೆಂದು ದೇವರು ಅವರಿಗೆ ಹೇಳಿದನು.

ಪದ ಡೇಟಾ:

- Strong's: H559, H577, H1156, H2470, H3863, H3908, H4994, H6279, H6293, H6419, H6739, H7592, H7878, H7879, H7881, H8034, H8605, G154, G1162, G1189, G1783, G2065, G2171, G2172, G3870, G4335, G4336

ಪ್ರಿಯ

ಪದದ ಅರ್ಥವಿವರಣೆ

"ಪ್ರಿಯ" ಎಂಬ ಪದವು ಬೇರೊಬ್ಬರಿಗೆ ಪ್ರೀತಿಸುವ ಮತ್ತು ಪ್ರಿಯವಾದ ವ್ಯಕ್ತಿಯನ್ನು ವಿವರಿಸುವ ಅಭಿವ್ಯಕ್ತಿಯಾಗಿದೆ.

- “ಪ್ರಿಯ” ಎನ್ನುವ ಪದಕ್ಕೆ “ಪ್ರೀತಿಸುವ (ವ್ಯಕ್ತಿ)” ಅಥವಾ “ಪ್ರೀತಿಸಲ್ಪಡುವ ವ್ಯಕ್ತಿ” ಎಂದು ಅಕ್ಷರಾರ್ಥವಾಗಿದೆ.
- ದೇವರು ಯೇಸು ಯೇಸುವನ್ನು ತನ್ನ “ಪ್ರಿಯ ಮಗನು” ಎಂದು ಸಂಬೋಧಿಸಿದರು.
- ಕ್ರೈಸ್ತರ ಸಭೆಗಳಿಗೆ ಬರೆದಂತ ಪತ್ರಿಕೆಗಳಲ್ಲಿ, ಅಪೊಸ್ತಲರು ತಮ್ಮ ಸಹ ವಿಶ್ವಾಸಿಗಳನ್ನು “ಪ್ರಿಯ” ಎಂದು ಕರೆದಿರುವರು.

ಅನುವಾದ ಸಲಹೆಗಳು:

- ಈ ಪದವನ್ನು “ಪ್ರೀತಿ” ಅಥವಾ “ಪ್ರೀತಿಸುವ ವ್ಯಕ್ತಿ” ಅಥವಾ “ಅತಿ ಪ್ರಿಯನು” ಅಥವಾ “ಬಹು ಪ್ರಿಯನು” ಎಂದು ಅನುವಾದ ಮಾಡಬಹುದು.
- ಒಬ್ಬ ಸನ್ನಿಹಿತನಾದ ಸ್ನೇಹಿತನ ಕುರಿತಾಗಿ ಮಾತನಾಡುವಾಗ, ಈ ಪದವನ್ನು “ನನ್ನ ಪ್ರಿಯ ಮಿತ್ರ” ಅಥವಾ “ಬಹು ಪ್ರಿಯನಾದ ನನ್ನ ಮಿತ್ರ” ಎಂದು ಅನುವಾದ ಮಾಡಬಹುದು. ಆಂಗ್ಲ ಭಾಷೆಯಲ್ಲಿ “ನನ್ನ ಪ್ರಿಯ ಗೆಳಯನಾದ, ಪಾಲ್” ಅಥವಾ “ಪಾಲ್, ಎನ್ನುವ ನನ್ನ ಪ್ರಿಯ ಗೆಳಯ” ಎಂದು ಸಂಬೋಧಿಸುವುದು ಸರ್ವ ಸಾಧಾರಣವಾದ ವಿಷಯ. ಬೇರೆ ಬಾಷೆಗಳಲ್ಲಿ ಈ ವಾಕ್ಯವನ್ನು ಬೇರೆ ರೀತಿಯಲ್ಲಿ ಹೇಳುವುದು ಸಾಧಾರಣವಾದ ವಿಷಯವಾಗಿರುತ್ತದೆ.
- “ಪ್ರಿಯ” ಎನ್ನುವ ಪದವು ದೇವರ ಪ್ರೀತಿಯಿಂದ ಬಂದಿದೆ ಎಂದು ನಾವು ಗಮನಿಸಬೇಕು, ಅದು ಯಾವ ಷರತ್ತು ಇಲ್ಲದ್ದು, ಸ್ವಾರ್ಥವಿಲ್ಲದ್ದು ಮತ್ತು ತ್ಯಾಗಪೂರಿತವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಪ್ರೀತಿ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.04:14
- 1 ಯೋಹಾನ.03:02
- 1 ಯೋಹಾನ.04:07
- ಮಾರ್ಕ.01:11
- ಮಾರ್ಕ.12:06
- ಪ್ರಕಟನೆ.20:9
- ರೋಮಾ.16:6-08
- ಪರಮ.01:14

ಪದ ಡೇಟಾ:

- Strong's: H157, H1730, H2532, H3033, H3039, H4261, G25, G27, G5207

ಪ್ರೀತಿ, ಪ್ರೀತಿಸುವ, ಪ್ರೀತಿಸುವುದು, ಪ್ರೀತಿಸಲ್ಪಟ್ಟಿದೆ

ಪದದ ಅರ್ಥವಿವರಣೆ:

ಒಬ್ಬ ವ್ಯಕ್ತಿಯನ್ನು ಪ್ರೀತಿಸುವುದು ಎಂದರೆ ಆ ವ್ಯಕ್ತಿಯ ಕುರಿತಾಗಿ ಕಾಳಜಿ ವಹಿಸುವುದು ಮತ್ತು ಆ ವ್ಯಕ್ತಿಗೆ ಪ್ರಯೋಜನಕರವಾಗುವ ಕಾರ್ಯಗಳನ್ನು ಮಾಡುವುದು ಎಂದರ್ಥ. "ಪ್ರೀತಿ" ಎನ್ನುವ ಪದಕ್ಕೆ ವಿಭಿನ್ನ ಅರ್ಥಗಳಿರುತ್ತವೆ, ಕೆಲವೊಂದು ಭಾಷೆಗಳಲ್ಲಿ ವಿಭಿನ್ನ ಪದಗಳನ್ನು ಉಪಯೋಗಿಸಿ ಪ್ರೀತಿಯನ್ನು ವ್ಯಕ್ತಪಡಿಸಬಹುದು:

ದೇವರಿಂದ ಬರುವ ಪ್ರೀತಿ ತನ್ನ ವಿಷಯದಲ್ಲಿ ಯಾವ ಪ್ರಯೋಜನವನು ಹೊಂದದಿದ್ದರೂ ಇತರರ ಒಳ್ಳೆಯ ವಿಷಯಗಳ ಮೇಲೆ ಕೇಂದ್ರೀಕರಿಸುತ್ತದೆ. ಈ ರೀತಿಯ ಪ್ರೀತಿ ಇತರರು ಏನು ಮಾಡಿದ್ದಾರೆಂದು ಯೋಚಿಸದೇ ಅವರಿಗೋಸ್ಕರ ಪ್ರೀತಿಯನ್ನು ಹಂಚುತ್ತದೆ. ದೇವರೇ ಪ್ರೀತಿಯಾಗಿದ್ದಾನೆ ಮತ್ತು ನಿಜವಾದ ಪ್ರೀತಿಗೆ ಆತನೇ ಆಧಾರವಾಗಿದ್ದಾನೆ.

- ಪಾಪ ಮರಣಗಳಿಂದ ರಕ್ಷಿಸುವ ಕ್ರಮದಲ್ಲಿ ಆತನ ಜೀವನವನ್ನು ಸರ್ವಾಂಗಹೋಮ ಮಾಡುವುದರ ಮೂಲಕ ಈ ರೀತಿಯಾದ ಪ್ರೀತಿಯನ್ನೇ ಯೇಸು ತೋರಿಸಿದ್ದಾನೆ. ತ್ಯಾಗಪೂರಿತವಾಗಿ ಇತರರನ್ನು ಪ್ರೀತಿಸಬೇಕೆಂದು ಆತನು ತನ್ನ ಶಿಷ್ಯರಿಗೆ ಹೇಳಿದನು.
- ಈ ರೀತಿಯಾದ ಪ್ರೀತಿಯಿಂದ ಜನರು ಇತರರನ್ನು ಪ್ರೀತಿಸಿದರೆ, ಇತರರು ವೇಗವಾಗಿ ಆಲೋಚನೆ ಮಾಡುವಂತೆ ಅವರು ತೋರಿಸಿದವರಾಗಿರುತ್ತದೆ. ಈ ರೀತಿಯಾದ ಪ್ರೀತಿಯಲ್ಲಿ ವಿಶೇಷವಾಗಿ ಇತರರನ್ನು ಕ್ಷಮಿಸುವುದು ಒಳಗೊಂಡಿರುತ್ತದೆ.
- ಯುಎಲ್ ಟಿ ಯಲ್ಲಿ "ಪ್ರೀತಿ" ಎನ್ನುವ ಪದವು ಈ ರೀತಿಯಾದ ತ್ಯಾಗಪೂರಿತವಾದ ಪ್ರೀತಿಯನ್ನೇ ಸೂಚಿಸುತ್ತದೆ, ಈ ಪದಕ್ಕೆ ಬೇರೆಯಾದ ಅರ್ಥವನ್ನು ಅನುವಾದ ಮಾಡುವದರಲ್ಲಿ ಸೂಚಿಸದಿದ್ದರೆ ಹೊರತು ಬೇರೆ ಅರ್ಥ ಇರುವುದಿಲ್ಲ.

ಹೊಸ ಒಡಂಬಡಿಕೆಯಲ್ಲಿ ಇನ್ನೊಂದು ಪದವು ಸಹೋದರ ಪ್ರೀತಿಯಯನ್ನು, ಅಥವಾ ಸ್ನೇಹಿತನಿಗಾಗಿ ತೋರಿಸುವ ಪ್ರೀತಿ ಅಥವಾ ಕುಟುಂಬ ಸದಸ್ಯರ ಪ್ರೀತಿಯನ್ನು ಸೂಚಿಸುತ್ತದೆ.

- ಈ ಪದವು ಸ್ನೇಹಿತರು ಅಥವಾ ಬಂಧುಗಳ ಮಧ್ಯೆದಲ್ಲಿರುವ ಸ್ವಾಭಾವಿಕವಾದ ಮನುಷ್ಯರ ಪ್ರೀತಿಯನ್ನು ಸೂಚಿಸುತ್ತದೆ.
- "ಅವರು ಔತಣ ಕೂಟದಲ್ಲಿ ಪ್ರಾಮುಖ್ಯವಾದ ಆಸನಗಳಲ್ಲಿ ಕುಳಿತುಕೊಳ್ಳಲು ಇಷ್ಟಪಡುತ್ತಾರೆ" ಇಂತಹ ಸಂದರ್ಭಗಳಲ್ಲಿ ಈ ಪದಗಳನ್ನು ಬಳಸಬಹುದು. "ಹೆಚ್ಚಾಗಿ ಇಷ್ಟಪಡುತ್ತಾರೆ" ಅಥವಾ "ಬಹಳ ಹೆಚ್ಚಾಗಿ ಅಪೇಕ್ಷಿಸುತ್ತಾರೆ" ಎಂದು ಇದರ ಅರ್ಥವಾಗಿರುತ್ತದೆ.

"ಪ್ರೀತಿ" ಎನ್ನುವ ಪದವು ಒಬ್ಬ ಪುರುಷನಿಗೆ ಮತ್ತು ಒಬ್ಬ ಸ್ತ್ರೀಯಳ ಮಧ್ಯೆದಲ್ಲಿರುವ ಪ್ರಣಯ ಪ್ರೇಮವನ್ನೂ ಸೂಚಿಸುತ್ತದೆ. "ಯಾಕೋಬನನ್ನು ನಾನು ಪ್ರೀತಿಸಿದೆ, ಆದರೆ ಏಸಾವನನ್ನು ದ್ವೇಷಿಸಿದೆ" ಎನ್ನುವ ಅಲಂಕಾರಿಕ ಮಾತಿನಲ್ಲಿರುವ "ಪ್ರೀತಿ" ಎನ್ನುವ ಪದವು ದೇವರು ಯಾಕೋಬನೊಂದಿಗೆ ಮಾಡಿರುವ ಒಡಂಬಡಿಕಲ್ಲಿರುವುದಕ್ಕೆ ಆತನು ಯಾಕೋಬನನ್ನು ಆಯ್ಕೆಮಾಡಿಕೊಂಡಿರುವುದನ್ನು ಸೂಚಿಸುತ್ತದೆ. ಇದನ್ನು 'ಆಯ್ಕೆಮಾಡಲಾಗಿದೆ" ಎಂದೂ ಅನುವಾದ ಮಾಡಬಹುದು. ಏಸಾವನು ಕೂಡ ದೇವರಿಂದ ಆಶೀರ್ವಾದವನ್ನು ಹೊಂದಿಕೊಂಡಿದ್ದರೂ, ಅವನು ಒಡಂಬಡಿಕೆಯಲ್ಲಿರುವ ಧನ್ಯತೆಯು ಸಿಕ್ಕಿರಲಿಲ್ಲ. "ದ್ವೇಷಿಸಿದ್ದೇನೆ" ಎನ್ನುವ ಪದವು "ತಿರಸ್ಕರಿಸಿದ್ದೇನೆ" ಅಥವಾ "ಆಯ್ಕೆ ಮಾಡಿಕೊಂಡಿಲ್ಲ" ಎಂದರ್ಥ ಬರುವ ಅಲಂಕಾರಿಕ ಭಾಷೆಯಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ.

ಅನುವಾದ ಸಲಹೆಗಳು:

- ಅನುವಾದದ ಸೂಚನೆಯಲ್ಲಿ ಹೇಳದಿದ್ದರೆ ಹೊರತು, ಯುಎಲ್.ಟ್ಲ್ಲಿರುವ "ಪ್ರೀತಿ" ಎನ್ನುವ ಪದವು ದೇವರಿಂದ ಬರುವ ತ್ಯಾಗಪೂರಿತವಾದ ಪ್ರೀತಿಯನ್ನು ಸೂಚಿಸುತ್ತದೆ.
- ಕೆಲವೊಂದು ಭಾಷೆಗಳಲ್ಲಿ ಸ್ವಾರ್ಥರಹಿತವಾದ ಈ ಕ್ರಿಯೆಗಳಿಗೆ ವಿಶೇಷವಾದ ಪದವನ್ನು ಉಪಯೋಗಿಸುತ್ತಿರಬಹುದು, ದೇವರ ಬಳಿರುವ ತ್ಯಾಗಪೂರಿತವಾದ ಪ್ರೀತಿಯನ್ನು ಸೂಚಿಸುತ್ತವೆ. ಈ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ, "ಭಕ್ತಿಯುಳ್ಳ, ನಂಬಿಗಸ್ತ ಆರೈಕೆ" ಅಥವಾ "ಸ್ವಾರ್ಥರಹಿತವಾಗಿ ಆರೈಸುವುದು" ಅಥವಾ "ದೇವರಿಂದ ಬಂದ ಪ್ರೀತಿ" ಎನ್ನುವ ಮಾತುಗಳು ಒಳಗೊಂಡಿರುತ್ತವೆ. ದೇವರ ಪ್ರೀತಿಯನ್ನು ಅನುವಾದ ಮಾಡುವುದಕ್ಕೆ ಉಪಯೋಗಿಸುವ ಪದವು ಇತರರ ಪ್ರಯೋಜನೆಗಳಿಗಾಗಿ ಒಬ್ಬರ ಸ್ವಂತ ಇಷ್ಟಗಳನ್ನು ಕೂಡ ಬಿಟ್ಟುಕೊಡುವ ಅರ್ಥವನ್ನು ಮತ್ತು ಇತರರು ಏನು ಮಾಡಿದರೂ ಅದನ್ನು ಲೆಕ್ಕಿಸಿದೆ ಅವರನ್ನು ಪ್ರೀತಿಸುವುದನ್ನು ಒಳಗೊಂಡಿರಬೇಕು.
- ಕೆಲವೊಂದು ಸಲ ಆಂಗ್ಲದಲ್ಲಿರುವ "ಪ್ರೀತಿ" ಎನ್ನುವ ಪದವು ಸ್ನೇಹಿತರಿಗಾಗಿ ಮತ್ತು ಕುಟುಂಬ ಸದಸ್ಯರಿಗಾಗಿ ಆಳವಾದ ಆರೈಕೆಯನ್ನು ವಿವರಿಸುತ್ತದೆ. ಕೆಲವೊಂದು ಭಾಷೆಗಳಲ್ಲಿ "ಬಹಳ ಹೆಚ್ಚಾಗಿ" ಅಥವಾ "ಆರೈಸು" ಅಥವಾ "ಬಲವಾದ ಪ್ರೀತಿಯನ್ನು ಹೊಂದಿರು" ಎನ್ನುವ ಅರ್ಥ ಬರುವ ಮಾತಿನೊಂದಿಗೆ ಅಥವಾ ಪದದೊಂದಿಗೆ ಈ ಪದವನ್ನು ಅನುವಾದ ಮಾಡಬಹುದು.
- ಯಾವುದಾದರೊಂದರ ಕುರಿತಾಗಿ ಬಲವಾದ ಪ್ರಾಮುಖ್ಯತೆಯನ್ನು ವ್ಯಕ್ತಪಡಿಸುವುದಕ್ಕೆ "ಪ್ರೀತಿ" ಎನ್ನುವ ಪದವನ್ನು ಉಪಯೋಗಿಸುವ ಸಂದರ್ಭಗಳಲ್ಲಿ, ಇದನ್ನು "ಬಲವಾಗಿ ಆದ್ಯತೆ" ಅಥವಾ "ಬಹಳ ಹೆಚ್ಚಾಗಿ" ಅಥವಾ "ಬಹಳ ಹೆಚ್ಚಾಗಿ ಅಪೇಕ್ಷಿಸುವುದು" ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಭಾಷೆಗಳಲ್ಲಿ ಗಂಡ ಮತ್ತು ಹೆಂಡತಿಯ ಮಧ್ಯೆದಲ್ಲಿರುವ ಲೈಂಗಿಕವಾದ ಅಥವಾ ಪ್ರಣಯದ ಪ್ರೀತಿಯನ್ನು ಸೂಚಿಸುವ ಪ್ರತ್ಯೇಕವಾದ ಪದವನ್ನು ಹೊಂದಿರುತ್ತವೆ.
- ಅನೇಕ ಭಾಷೆಗಳಲ್ಲಿ "ಪ್ರೀತಿ"ಯನ್ನು ಕ್ರಿಯಾರೂಪಕದಲ್ಲಿ ವ್ಯಕ್ತಗೊಳಿಸಬೇಕಾಗಿರುತ್ತದೆ. ಉದಾಹರಣೆಗಾಗಿ, ಅವರು "ಪ್ರೀತಿ ಎಂದರೆ ಸಹನೆ, ಪ್ರೀತಿ ಎಂದರೆ ದಯೆ" ಎಂದು ಅನುವಾದ ಮಾಡುವುದಾದರೆ, "ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಪ್ರೀತಿ ಮಾಡುವದಾದರೆ, ಆ ವ್ಯಕ್ತಿ ಅವನೊಂದಿಗೆ ಸಹನೆಯಿಂದ ಮತ್ತು ದಯೆಯಿಂದ ಇರುತ್ತಾನೆ" ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ಒಡಂಬಡಿಕೆ, ಮರಣ, ತ್ಯಾಗ, ರಕ್ಷಿಸು, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.13:4-7
- 1 ಯೋಹಾನ.03:1-3
- 1 ಥೆಸ್ಸ.04:9-12
- ಗಲಾತ್ಯ.05:22-24
- ಆದಿ.29:15-18
- ಯೆಶಯಾ.56:6-7
- ಯೆರೆ.02:1-3
- ಯೋಹಾನ.03:16-18
- ಮತ್ತಾಯ.10:37-39
- ನೆಹೆ.09:32-34
- ಫಿಲಿಪ್ಪಿ.01:9-11
- ಪರಮ.01:1-4

ಸತ್ಯವೇದದಿಂದ ಉದಾಹರಣೆಗಳು:

- **27:02** "ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬಲದಿಂದಲೂ ಮತ್ತು ಪೂರ್ಣ ಮನಸ್ಸಿನಿಂದಲೂ _ **ಪ್ರೀತಿಸು** " ಮತ್ತು ನಿನ್ನಂತೆಯೇ ನಿನ್ನ ನೆರೆಹೊರೆಯವರನ್ನು **ಪ್ರೀತಿಸು** _ " ಎಂದು ದೇವರ ಧರ್ಮಶಾಸ್ತ್ರದಲ್ಲಿದೆಯಲ್ಲ ಎಂದು ಧರ್ಮಶಾಸ್ತ್ರದ ಪಂಡಿತನು ಉತ್ತರಿಸಿದನು.
- **33:08** "ಮುಳ್ಳಿನ ನೆಲವು ಒಬ್ಬ ವ್ಯಕ್ತಿ ದೇವರ ವಾಕ್ಯವನ್ನು ಕೇಳಿದವನನ್ನು, ಕಾಲ ಕಳೆಯುತ್ತಿರುವಂತೆ ಅವನು ದೇವರಿಗಾಗಿರುವ _ ಪ್ರೀತಿಯೊಳಗಿಂದ _ ಜೀವನದ ಸಂತೋಷಗಳು, ಸಂಪತ್ತುಗಳು ಮತ್ತು ಆರೈಕೆಗಳು ಎಲ್ಲಾ ಅಳಿದು ಹೋಗುತ್ತವೆ."
- **36:05** ಪೇತ್ರನು ಮಾತನಾಡುತ್ತಿರುವಾಗ, ಒಂದು ಪ್ರಕಾಶಮಾನವಾದ ಮೇಘವು ಅವರ ಮೇಲೆ ಇಳಿದು ಬಂದಾಗ, ಆ ಮೇಘದೊಳಗಿಂದ "ಈತನು ನನ್ನ ಪ್ರಿಯ ಮಗನು, ಈತನನ್ನು ನಾನು ಬಹಳವಾಗಿ ಮೆಚ್ಚಿದ್ದೇನೆ" ಎನ್ನುವ ಸ್ವರವು ಕೇಳಿಬಂತು.
- **39:10** "ಸತ್ಯವನ್ನು _ **ಪ್ರೀತಿಸುವ** _ ಪ್ರತಿಯೊಬ್ಬರೂ ನನ್ನ ಮಾತನ್ನು ಕೇಳುತ್ತಾರೆ."
- **47:01** ಆಕೆ (ಲುದ್ಯಳ) ದೇವರನ್ನು _ **ಪ್ರೀತಿಸಿದ್ದಳು** _ ಮತ್ತು ಆರಾಧನೆ ಮಾಡಿದ್ದಳು.
- **48:01** ದೇವರು ಸರ್ವಸೃಷ್ಟಿಯನ್ನು ಉಂಟುಮಾಡಿದಾಗ, ಪ್ರತಿಯೊಂದೂ ಪರಿಪೂರ್ಣವಾಗಿದ್ದಿತ್ತು. ಅವಾಗ ಪಾಪವೇ ಇದ್ದಿರಲಿಲ್ಲ. ಆದಾಮನು ಮತ್ತು ಹವ್ವಳು ಒಬ್ಬರಿಗೊಬ್ಬರು _ **ಪ್ರೀತಿಸಿಕೊಂಡಿದ್ದರು** ಮತ್ತು ದೇವರನ್ನು **ಪ್ರೀತಿಸಿದ್ದರು** _.
- **49:03** ನಿನ್ನನು ನೀನು ಪ್ರೀತಿಸಿಕೊಳ್ಳುವ ರೀತಿಯಲ್ಲಿಯೇ ಇತರ ಜನರನ್ನು ನೀನು _ **ಪ್ರೀತಿಸಬೇಕಾಗಿರುತ್ತದೆ** _ ಎಂದು ಆತನು (ಯೇಸು) ಹೇಳಿದನು.
- **49:04** ನಿನ್ನ ಸಂಪತ್ತಿಗಿಂತಲೂ, ನೀನು _ **ಪ್ರೀತಿ** ಮಾಡುವ ಬೇರೊಂದು ವಿಷಯಗಿಂತಲೂ ನೀನು ಹೆಚ್ಚಾಗಿ ದೇವರನ್ನು **ಪ್ರೀತಿ** _ ಮಾಡಬೇಕಾಗಿರುತ್ತದೆಯೆಂದು ಆತನು (ಯೇಸು) ಹೇಳಿದನು.
- **49:07** ದೇವರು ಪಾಪಿಗಳನ್ನು ಹೆಚ್ಚಾಗಿ _ **ಪ್ರೀತಿ** _ ಮಾಡಿದ್ದಾರೆಂದು ಯೇಸು ಹೇಳಿದನು.
- **49:09** ಲೋಕದಲ್ಲಿರುವ ಪ್ರತಿಯೊಬ್ಬರನ್ನು ದೇವರು ಹೆಚ್ಚಾಗಿ _ **ಪ್ರೀತಿಸಿದ್ದಾರೆ** _, ಅದು ಹೇಗೆಂದರೆ ತನ್ನ ಒಬ್ಬನೇ ಮಗನಾದ ಯೇಸುವನ್ನು ಕೊಡುವಷ್ಟು ಪ್ರೀತಿ ಮಾಡಿದ್ದಾರೆ, ಈ ಯೇಸುವಿನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರು ತಮ್ಮ ಪಾಪಗಳಿಗಾಗಿ ಶಿಕ್ಷೆಯನ್ನು ಹೊಂದುವುದಿಲ್ಲ, ಆದರೆ ಸದಾಕಾಲವೂ ದೇವರೊಂದಿಗೆ ಇರುತ್ತಾರೆ.
- **49:13** ದೇವರು ನಿನ್ನನ್ನು _ **ಪ್ರೀತಿಸಿದ್ದಾರೆ** _ ಮತ್ತು ನೀನು ಯೇಸುವಿನಲ್ಲಿ ನಂಬಿಕೆ ಇಡಬೇಕೆಂದು ಬಯಸುತ್ತಿದ್ದಾರೆ, ಇದರಿಂದ ಆತನು ನಿನ್ನೊಂದಿಗೆ ತುಂಬಾ ಹತ್ತಿರವಾದ ಸಂಬಂಧವನ್ನು ಹೊಂದಿರುತ್ತಾರೆ.

ಪದ ಡೇಟಾ:

- Strong's: H157, H158, H159, H160, H2245, H2617, H2836, H3039, H4261, H5689, H5690, H5691, H7355, H7356, H7453, H7474, G25, G26, G5360, G5361, G5362, G5363, G5365, G5367, G5368, G5369, G5377, G5381, G5382, G5383, G5388

ಫರಿಸಾಯ, ಫರಿಸಾಯರು

ಸತ್ಯಾಂಶಗಳು:

ಫರಿಸಾಯರು ಯೇಸುವಿನ ಕಾಲದಲ್ಲಿ ಯೆಹೂದ್ಯ ಧರ್ಮ ನಾಯಕರ ಪ್ರಾಮುಖ್ಯವಾದ ಶಕ್ತಿಯುತವಾದ ಗುಂಪಾಗಿರುತ್ತದೆ.

- ಅವರಲ್ಲಿ ಅನೇಕರು ಮಧ್ಯ ತರಗತಿಯ ವ್ಯಾಪಾರಿಗಳಾಗಿದ್ದರು, ಮತ್ತು ಅವರಲ್ಲಿ ಇನ್ನೂ ಕೆಲವರು ಯಾಜಕರೂ ಆಗಿದ್ದರು.
- ಫರಿಸಾಯರಾಗಿರುವ ಯೆಹೂದ್ಯರ ನಾಯಕರೆಲ್ಲರು ಮೋಶೆಯ ಧರ್ಮಶಾಸ್ತ್ರಕ್ಕೆ ವಿಧೇಯತೆ ತೋರಿಸುವುದರಲ್ಲಿ ಮತ್ತು ಇತರ ಯೆಹೂದ್ಯ ನಿಯಮಗಳನ್ನು ಮತ್ತು ಆಚಾರಗಳನ್ನು ಅನುಸರಿಸುವುದರಲ್ಲಿ ತುಂಬಾ ಕಟ್ಟುನಿಟ್ಟಾಗಿದ್ದರು.
- ಅವರಿಗೆ ಅವರ ಸುತ್ತ ಇರುವ ಅನ್ಯರನ್ನು ಪ್ರಭಾವಿಸುವುದಕ್ಕಿಂತ ಯೆಹೂದ್ಯರ ಜನರನ್ನು ಪ್ರತ್ಯೇಕಿಸಬೇಕೆನ್ನುವದರ ಮೇಲೆ ಹೆಚ್ಚಾಗಿ ಮನಸ್ಸನ್ನಿಟ್ಟಿರುತ್ತಾರೆ. “ಫರಿಸಾಯ” ಎನ್ನುವ ಪದವು “ಪ್ರತ್ಯೇಕಿಸು” ಎನ್ನುವ ಪದದಿಂದ ಬಂದಿರುತ್ತದೆ.
- ಸತ್ತನಂತರ ಜೀವನವಿದೆಯೆನ್ನುವುದರ ಮೇಲೆ ಫರಿಸಾಯರು ನಂಬಿಕೆ ಇಟ್ಟಿರುತ್ತಾರೆ; ಅವರು ದೂತರಿದ್ದಾರೆಂದು ಮತ್ತು ಇತರ ಆತ್ಮೀಕ ಜೀವಿಗಳು ಇದ್ದಾವೆಂದು ಕೂಡ ನಂಬುತ್ತಿದ್ದರು.
- ಫರಿಸಾಯರು ಮತ್ತು ಸದ್ದುಕಾಯರು ಯೇಸುವನ್ನು, ಕ್ರೈಸ್ತರನ್ನು ವಿರೋಧಿಸಿದ್ದರು.

(ಈ ಪದಗಳನ್ನು ಸಹ ನೋಡಿರಿ : ಕೌನ್ಸಿಲ್, ಯೆಹೂದ್ಯ ನಾಯಕರು, ಧರ್ಮಶಾಸ್ತ್ರ, ಸದ್ದುಕಾಯರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.26:4-5
- ಯೋಹಾನ.03:1-2
- ಲೂಕ.11:43-44
- ಮತ್ತಾಯ.03:7-9
- ಮತ್ತಾಯ.05:19-20
- ಮತ್ತಾಯ.09:10-11
- ಮತ್ತಾಯ.12:1-2
- ಮತ್ತಾಯ.12:38-40
- ಫಿಲಿಪ್ಪಿ.03:4-5

ಪದ ಡೇಟಾ:

- Strong's: G5330

ಬಂಧ, ಕಟ್ಟು, ಬಂಧಿಸಲ್ಪಟ್ಟ

ಪದದ ಅರ್ಥವಿವರಣೆ:

“ಬಂಧಿಸು” ಎನ್ನುವ ಪದಕ್ಕೆ ಏನಾದರೊಂದನ್ನು ಕಟ್ಟು ಅಥವಾ ಸುರಕ್ಷಿತವಾಗಿರಲು ಅದನ್ನು ಕಟ್ಟು ಎಂದರ್ಥ. ಏನಾದರೊಂದನ್ನು ಜೊತೆಯಲ್ಲಿ ಸೇರಿಸುವುದು ಅಥವಾ ಅವುಗಳನ್ನು ಕಟ್ಟುವುದನ್ನು “ಕಟ್ಟು” ಎಂದು ಕರೆಯುತ್ತಾರೆ. ಈ ಪದದ ಭೂತ ಕಾಲ ಪದವೇ “ಬಂಧಿಸಲ್ಪಟ್ಟ” ಎನ್ನುವ ಪದವಾಗಿರುತ್ತದೆ.

- “ಬಂಧಿಸಲ್ಪಟ್ಟಿರುವುದು” ಎನ್ನುವದಕ್ಕೆ ಏನಾದರೊಂದು ಸುತ್ತಲೂ ಏನಾದರೊಂದನ್ನು ಕಟ್ಟಿರುವುದು ಅಥವಾ ಸುತ್ತಿರುವುದು ಎಂದರ್ಥ.
- ಅಲಂಕಾರ ರೂಪದಲ್ಲಿ ಆಣೆ ಮಾಡುವುದಕ್ಕೆ ಒಬ್ಬ ವ್ಯಕ್ತಿ “ಬಂಧಿಸಲ್ಪಟ್ಟಿರುತ್ತಾನೆ” ಎಂದು ಹೇಳುತ್ತೇವೆ, ಅದಕ್ಕೆ ಅವನು ಮಾಡಿದ ವಾಗ್ದಾನವನ್ನು ಮಾಡುವುದಕ್ಕೆ “ನೆರವೇರಿಸುವ ಬಾಧ್ಯತೆಯಿದೆ” ಎಂದರ್ಥ.
- “ಕಟು” ಎನ್ನುವ ಪದವು ಯಾವುದೇ ಒಂದು ಬಂಧನದಲ್ಲಿರುವುದನ್ನು, ಸೀಮಿತವಾಗಿರುವುದನ್ನು, ಅಥವಾ ಯಾರದರೊಬ್ಬರನ್ನು ಸೆರೆಯಲ್ಲಿಡುವುದನ್ನು ಸೂಚಿಸುತ್ತದೆ. ವಾಸ್ತವಿಕವಾಗಿ ಇದು ಒಬ್ಬ ವ್ಯಕ್ತಿಯನ್ನು ಎಲ್ಲಿಗೆ ಹೋಗದಂತೆ ಕಟ್ಟಿ ಹಾಕುವ ಹಗ್ಗಗಳನ್ನು ಅಥವಾ ಸಂಕೋಲೆಗಳನ್ನು ಮತ್ತು ಭೌತಿಕ ಸರಪಣಿಗಳನ್ನು ಸೂಚಿಸುತ್ತದೆ,
- ಸತ್ಯವೇದ ಕಾಲದಲ್ಲಿ ಹಗ್ಗಗಳು ಅಥವಾ ಸರಪಣಿಗಳು ಎನ್ನುವ ಕಟ್ಟುಗಳನ್ನು ಸೆರೆಯಾಳುಗಳನ್ನು ಗೋಡೆಗೆ ಕಟ್ಟಿಹಾಕುವುದಕ್ಕೆ ಅಥವಾ ಒಂದು ಬಂಡೆಯ ಸೆರೆಮನೆಯ ನೆಲದಲ್ಲಿ ಕಟ್ಟುವುದಕ್ಕೆ ಉಪಯೋಗಿಸುತ್ತಿದ್ದರು.
- “ಕಟ್ಟು” ಎನ್ನುವ ಪದವು ಕೂಡ ಒಂದು ಗಾಯವು ಗುಣವಾಗುವುದಕ್ಕೆ ಅದರ ಸುತ್ತಲು ಒಂದು ಬಟ್ಟೆಯಿಂದ ಸುತ್ತಿ ಕಟ್ಟುವದಕ್ಕೂ ಉಪಯೋಗಿಸುತ್ತಾರೆ.
- ಸತ್ತಂತ ವ್ಯಕ್ತಿಯನ್ನು ಸಮಾಧಿ ಕಾರ್ಯಕ್ರಮಕ್ಕಾಗಿ ಸಿದ್ಧಪಡಿಸುವ ಕ್ರಮದಲ್ಲಿ ಒಂದು ಬಟ್ಟೆಯೊಂದಿಗೆ ಸುತ್ತಿ “ಬಂಧಿಸಲ್ಪಟ್ಟಿರುತ್ತಾರೆ”.
- “ಕಟ್ಟು” ಎನ್ನುವ ಪದವು ಏನಾದರೊಂದು ಅಥವಾ ಒಂದು ಪಾಪವು ಒಬ್ಬರನ್ನು ದಾಸರನ್ನಾಗಿ ಮಾಡಿಕೊಳ್ಳುವುದನ್ನು ಅಥವಾ ನಿಯಂತ್ರಿಸುವುದನ್ನು ಸೂಚಿಸಲು ಅಲಂಕಾರ ರೂಪದಲ್ಲಿ ಉಪಯೋಗಿಸುತ್ತಾರೆ.
- ಜನರು ಮಾನಸಿಕವಾಗಿ, ಆತ್ಮೀಯಕವಾಗಿ ಮತ್ತು ಭೌತಿಕವಾಗಿ ತುಂಬಾ ಹತ್ತಿರವಾದ ಸಂಬಂಧವನ್ನು ಹೊಂದಿಕೊಂಡಿದ್ದರೆ ಅದನ್ನು ಕೂಡ ಬಂಧನ ಎಂದು ಕರೆಯುತ್ತಾರೆ. ಈ ಪದವನ್ನು ವಿವಾಹ ಬಂಧನ ಎಂದೂ ಉಪಯೋಗಿಸುತ್ತಾರೆ.
- ಉದಾಹರೆಣೆಗೆ, ಗಂಡ ಹೆಂಡತಿಯರಿಬ್ಬರು “ಬಂಧಿಸಲ್ಪಟ್ಟಿರುತ್ತಾರೆ” ಅಥವಾ ಒಬ್ಬರಿಗೊಬ್ಬರು ಕಟ್ಟಿ ಹಾಕಲ್ಪಟ್ಟಿರುತ್ತಾರೆ. ಈ ಬಂಧನವು ಮುರಿದು ಹೋಗಬಾರದೆಂದು ದೇವರ ಬಯಕೆಯಾಗಿರುತ್ತದೆ.

ಅನುವಾದ ಸಲಹೆಗಳು:

- “ಬಂಧಿನ” ಎನ್ನುವ ಪದವು “ಕಟ್ಟು” ಅಥವು “ಕಟ್ಟಲ್ಪಡುವುದು” ಅಥವಾ “ಸುತ್ತು (ಸುತ್ತಲೂ)” ಎಂದೂ ಅನುವಾದ ಮಾಡಬಹುದು.
- ಅಲಂಕಾರ ರೂಪದಲ್ಲಿ ಇದನ್ನು “ನಿಗ್ರಹಿಸು” ಅಥವಾ “ತಡೆಗಟ್ಟು” ಅಥವಾ “ಯಾವುದಾದರೊಂದರಿಂದ ದೂರವಿರು” ಎಂದೂ ಅನುವಾದ ಮಾಡಬಹುದು.
- ಮತ್ತಾಯ 16 ಮತ್ತು 18 ಅಧ್ಯಾಯಗಳಲ್ಲಿ ವಿಶೇಷವಾಗಿ ಉಪಯೋಗಿಸಲ್ಪಟ್ಟಿರುವ “ನಿರ್ಬಂಧಿಸು” ಎನ್ನುವ ಪದಕ್ಕೆ “ನಿಷೇಧಿಸು” ಅಥವಾ “ಅನುಮತಿಸಬೇಡ” ಎಂದರ್ಥ.
- ‘ಕಟ್ಟುಗಳು” ಎನ್ನುವ ಪದವನ್ನು “ಸರಪಣಿಗಳು” ಅಥವಾ “ಹಗ್ಗಗಳು” ಅಥವಾ “ಸಂಕೋಲೆಗಳು” ಎಂದೂ ಅನುವಾದ ಮಾಡಬಹುದು.
- “ನಿರ್ಬಂಧಿಸು” ಎನ್ನುವ ಪದವನ್ನು ಅಲಂಕಾರ ರೂಪದಲ್ಲಿ “ಗಂಟು” ಅಥವಾ “ಸಂಪರ್ಕ” ಅಥವಾ “ಹತ್ತಿರ ಸಂಬಂಧ” ಎಂದೂ ಅನುವಾದ ಮಾಡಬಹುದು.
- “ಸಮಾಧಾನ ಬಂಧ” ಎನ್ನುವ ಮಾತಿಗೆ “ಸಮಾದಾನದಲ್ಲಿರುವುದು, ಇದು ಒಬ್ಬರಿಗೊಬ್ಬರು ಅತೀ ಹತ್ತಿರವಾದ ಸಂಬಂಧದಲ್ಲಿ ಜನರನ್ನು ಇರಿಸುತ್ತದೆ” ಅಥವಾ “ಆ ಸಮಾಧಾನವು ಇಬ್ಬರನ್ನು ಕಟ್ಟಿ ಹಾಕುತ್ತದೆ” ಎಂದರ್ಥ.
- “ನಿರ್ಬಂಧಿಸು” ಎನ್ನುವ ಮಾತನ್ನು “ಸುತ್ತಲೂ ಸುತ್ತು” ಅಥವಾ “ಪಟ್ಟಿಕಟ್ಟು” ಎಂದೂ ಅನುವಾದ ಮಾಡಬಹುದು.
- ಒಬ್ಬರು ಆಣೆ ಮಾಡಿದವುಗಳೊಂದಿಗೆ “ಬಂಧಿಸಲ್ಪಟ್ಟಿದ್ದಾರೆ” ಎನ್ನುವ ಮಾತಿಗೆ “ಆಣೆಯನ್ನು ನೆರವೇರಿಸಲು ವಾಗ್ದಾನ ಮಾಡಿದ್ದಾರೆ” ಅಥವಾ “ಆಣೆಯನ್ನು ನೆರವೇರಿಸಲು ಒಪ್ಪಿಕೊಂಡಿದ್ದಾರೆ” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, “ಬಂಧಿಸಲ್ಪಟ್ಟಿದೆ” ಎನ್ನುವ ಪದವನ್ನು “ಕಟ್ಟಲ್ಪಟ್ಟಿದೆ” ಅಥವಾ “ಕಟ್ಟಿಹಾಕಲ್ಪಟ್ಟಿದೆ” ಅಥವಾ “ಸರಪಣಿಯಿಂದ ಕಟ್ಟಿಹಾಕಲ್ಪಟ್ಟಿದೆ” ಅಥವಾ “(ನೆರವೇರಿಸುವುದಕ್ಕೆ) ಬಾಧ್ಯತೆ ತೆಗೆದುಕೊಳ್ಳಲಾಗಿದೆ” ಅಥವಾ “ಮಾಡಲು ಬೇಕಾಗಿರುತ್ತದೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನೆರವೇರಿಸು, ಸಮಾಧಾನ, ಸೆರೆಮನೆ, ದಾಸನು, ಆಣೆ)

ಸತ್ಯವೇದದ ಅನುಬಂಧ ವಾಕ್ಯಗಳು:

- ಯಾಜಕ.08:6-7

ಪದ ಡೇಟಾ:

- Strong's: H247, H481, H519, H615, H631, H632, H640, H1366, H1367, H1379, H2280, H2706, H3256, H3533, H3729, H4147, H4148, H4205, H4562, H5650, H5656, H5659, H6029, H6123, H6616, H6696, H6872, H6887, H7194, H7405, H7573, H7576, H8198, H8244, H8379, G254, G331, G332, G1195, G1196, G1198, G1199, G1210, G1397, G1398, G1401, G1402, G2611, G2615, G3734, G3784, G3814, G4019, G4029, G4385, G4886, G4887, G5265

ಬಲಗೈ

ಪದದ ಅರ್ಥವಿವರಣೆ:

"ಬಲಗೈ" ಎಂಬ ಪದವು ವ್ಯಕ್ತಿಯ ದೇಹದ ಬಲಭಾಗದಲ್ಲಿರುವ ಕೈಯನ್ನು ಸೂಚಿಸುತ್ತದೆ. ಬೈಬಲ್ನಲ್ಲಿ, ಈ ಪದವನ್ನು ವ್ಯಕ್ತಿಯ ಬಲಭಾಗದಲ್ಲಿರುವ ಇತರ ದೇಹದ ಭಾಗಗಳನ್ನು, ವ್ಯಕ್ತಿಯ ಬಲದ ದಿಕ್ಕನ್ನು, ದಕ್ಷಿಣದ ದಿಕ್ಕನ್ನು ಅಥವಾ ಆಡಳಿತಗಾರನ ಬಲಭಾಗದಲ್ಲಿರುವ ಗೌರವ ಅಥವಾ ಬಲದ ಸ್ಥಳವನ್ನು ಸೂಚಿಸಲು ಸಾಂಕೇತಿಕವಾಗಿ ಬಳಸಲಾಗುತ್ತದೆ. ಅಥವಾ ಇತರ ಪ್ರಮುಖ ವ್ಯಕ್ತಿ

- ಬಲಗೈಯನ್ನು ಶಕ್ತಿ, ಅಧಿಕಾರ, ಅಥವಾ ಬಲಗಳಿಗೆ ಗುರುತಾಗಿ ಉಪಯೋಗಿಸುತ್ತಾರೆ.
- ಯೇಸುವು (ಸಭೆಯ) ವಿಶ್ವಾಸಿಗಳ ದೇಹದ ತಲೆಯಾಗಿ ತಂದೆಯಾದ ದೇವರ “ಬಲಗಡೆಯಲ್ಲಿ” ಕುಳಿತಿದ್ದಾರೆಂದು ಸತ್ಯವೇದವು ವಿವರಿಸುತ್ತಿದೆ.
- ಒಬ್ಬ ವ್ಯಕ್ತಿಯ ಬಲಗೈಯನ್ನು ಒಬ್ಬ ವ್ಯಕ್ತಿಯನ್ನು ಆಶೀರ್ವಾದ ಮಾಡುವಾಗ ಆ ವ್ಯಕ್ತಿಯ ತಲೆಯ ಮೇಲೆ ಇಟ್ಟಾಗ ವಿಶೇಷವಾಗಿ ಘನಪಡಿಸುವುದನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ (ಉದಾಹರಣೆಗೆ, ಪಿತೃವಾಗಿರುವ ಯಾಕೋಬನು ತನ್ನ ಮಗನಾಗಿರುವ ಎಫ್ರಾಯೀಮನನ್ನು ಬಲಗೈ ಇಟ್ಟು ಆಶೀರ್ವಾದ ಮಾಡಿದ್ದನು).
- ಯಾರಾದರೊಬ್ಬರ “ಬಲಗೈಗೆ ಸೇವೆ ಮಾಡುವುದು” ಎಂದರೆ ಆ ವ್ಯಕ್ತಿಗೆ ವಿಶೇಷವಾಗಿ ಸಹಾಯಕವಾಗಿರುವ ಮತ್ತು ಪ್ರಾಮುಖ್ಯವಾಗಿರುವ ಸೇವೆಯನ್ನು ಮಾಡುತ್ತಿರುವ ವ್ಯಕ್ತಿಯಾಗಿರುವುದು ಎಂದರ್ಥ.

ಅನುವಾದ ಸಲಹೆಗಳು:

- “ಬಲಗೈ” ಎನ್ನುವ ಪದವು ಕೆಲವೊಂದುಬಾರಿ ಅಕ್ಷರಾರ್ಥವಾಗಿ ಒಬ್ಬ ವ್ಯಕ್ತಿ ಬಲಗೈಯನ್ನು ಸೂಚಿಸುತ್ತದೆ, ಉದಾಹರಣೆಗೆ, ರೋಮಾ ಸೈನಿಕರು ಯೇಸುವನ್ನು ಹಿಯಾಳಿಸುವುದಕ್ಕೆ ಯೇಸುವಿನ ಬಲಗೈಯಲ್ಲಿ ಕೋಲನ್ನು ಇಟ್ಟಿದ್ದರು. ಈ ಕೈಯನ್ನು ಸೂಚಿಸುವುದಕ್ಕೆ ಭಾಷೆಯು ಉಪಯೋಗಿಸುವ ಪದವನ್ನು ಉಪಯೋಗಿಸಿ ಈ ಪದವನ್ನು ಅನುವಾದ ಮಾಡಬಹುದು.
- ಅಲಂಕಾರಿಕ ಉಪಯೋಗಗಳಲ್ಲಿ, ಅನುವಾದ ಭಾಷೆಯಲ್ಲಿ “ಬಲಗೈ” ಎನ್ನುವ ಪದಕ್ಕೆ ಒಂದೇ ಅರ್ಥವನ್ನು ಹೊಂದಿರದಿದ್ದರೆ, ಆದೆ ಅರ್ಥವನ್ನು ಹೊಂದಿರುವ ಬೇರೊಂದು ಪದವು ಆ ಭಾಷೆಯಲ್ಲಿ ಇದೆಯೋ ಇಲ್ಲವೋ ಎಂದು ನೋಡಿರಿ.
- “ಬಲಗೈಯಲ್ಲಿ” ಎನ್ನುವ ಪದವನ್ನು “ಬಲ ಬದಿಯಲ್ಲಿ” ಅಥವಾ “ಘನಪಡಿಸುವ ಸ್ಥಳದ ಪಕ್ಕದಲ್ಲಿ” ಅಥವಾ “ಬಲ ಸ್ಥಾನದಲ್ಲಿ” ಅಥವಾ “ಸಹಾಯ ಮಾಡುವುದಕ್ಕೆ ಸಿದ್ಧರಾಗಿರುವುದು” ಎಂದೂ ಅನುವಾದ ಮಾಡಬಹುದು.
- ಆತನ ಬಲಗೈಯೊಂದಿಗೆ” ಎನ್ನುವ ಮಾತನ್ನು ಅನುವಾದ ಮಾಡುವದರಲ್ಲಿ “ಅಧಿಕಾರದೊಂದಿಗೆ” ಅಥವಾ “ಶಕ್ತಿಯನ್ನು ಉಪಯೋಗಿಸುತ್ತಾ” ಅಥವಾ “ಆತನ ಆಶ್ಚರ್ಯಕರವಾದ ಬಲದೊಂದಿಗೆ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ತನ್ನ ಬಲಗೈ ಮತ್ತು ತನ್ನ ಶಕ್ತಿಯುತವಾದ ಕೈ” ಎನ್ನುವ ಅಲಂಕಾರಿಕ ಮಾತು ದೇವರ ಶಕ್ತಿ ಮತ್ತು ಆತನ ಶ್ರೇಷ್ಠವಾದ ಬಲವನ್ನು ಕುರಿತು ಹೇಳುವ ಎರಡು ವಿಧಾನಗಳಾಗಿರುತ್ತವೆ. ಈ ಮಾತನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಆತನ ಅದ್ಭುತವಾದ ಬಲ ಮತ್ತು ಶಕ್ತಿಯುತವಾದ ಅಧಿಕಾರ” ಎಂದೂ ಅನುವಾದ ಮಾಡಲಾಗುತ್ತದೆ.
- “ಅವರ ಬಲಗೈ ಸುಳ್ಳುತನವಾಗಿರುತ್ತದೆ” ಎನ್ನುವ ಮಾತನ್ನು “ಅವರ ಕುರಿತಾಗಿ ಆತೀ ಹೆಚ್ಚಾಗಿ ಘನಪಡಿಸುವ ವಿಷಯವೂ ಸುಳ್ಳುಗಳಿಂದ ಕೆಟ್ಟುಹೋಗಿರುತ್ತದೆ” ಅಥವಾ “ಅವರ ಘನ ಸ್ಥಾನವು ಮೋಸ ಮಾಡುವುದರ ಮೂಲಕ ಭ್ರಷ್ಟವಾಗಿರುತ್ತದೆ” ಅಥವಾ “ಅವರು ತಮ್ಮನ್ನು ತಾವು ಶಕ್ತಿವಂತರೆಂದು ಹೇಳಿಕೊಳ್ಳುವುದಕ್ಕೆ ಸುಳ್ಳುಗಳನ್ನು ಉಪಯೋಗಿಸುತ್ತಾರೆ” ಎಂದೂ ಅನುವಾದ ಮಾಡುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಆರೋಪಿಸು, ದುಷ್ಟ, ಘನಪಡಿಸು, ಶಕ್ತಿ, ಶಿಕ್ಷಿಸು, ಮೀರು)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.02:33
- ಕೊಲೊಸ್ಸ.03:01
- ಗಲಾತ್ಯ.02:09
- ಆದಿ.48:14
- ಇಬ್ರಿ.10:12
- ಪ್ರಲಾಪ.02:03
- ಮತ್ತಾಯ.25:33
- ಮತ್ತಾಯ.26:64
- ಕೀರ್ತನೆ.044:03
- ಪ್ರಕ.02:1-2

ಪದ ಡೇಟಾ:

- Strong's: H3225, H3231, H3233, G1188

ಬಹಿರಂಗಪಡಿಸು, ಬಹಿರಂಗಪಡಿಸುವುದು, ಬಹಿರಂಗಪಡಿಸಿದೆ, ಪ್ರತ್ಯಕ್ಷಪಡಿಸು

ಪದದ ಅರ್ಥವಿವರಣೆ:

“ಬಹಿರಂಗಪಡಿಸು” ಎನ್ನುವ ಪದಕ್ಕೆ ಯಾವುದಾದರೊಂದನ್ನು ಎಲ್ಲರಿಗೆ ತಿಳಿಯುವಂತೆ ಮಾಡು ಎಂದರ್ಥ. “ಪ್ರತ್ಯಕ್ಷತೆ” ಎನ್ನುವುದಕ್ಕೆ ಯಾವುದಾದರೊಂದನ್ನು ಸ್ಪಷ್ಟವಾಗಿ ಗೊತ್ತುಪಡಿಸುವುದು ಎಂದರ್ಥವಾಗಿರುತ್ತದೆ.

ದೇವರು ಜನರೊಂದಿಗೆ ಮಾತನಾಡುವುದರ ಮೂಲಕ ಮತ್ತು ಅವರಿಗೆ ಬರೆದ ಸಂದೇಶಗಳ ಮೂಲಕ, ಮತ್ತು ಆತನು ಉಂಟು ಮಾಡಿದ ಸರ್ವ ಸೃಷ್ಟಿಯ ಮೂಲಕ ತನ್ನನ್ನು ತಾನು ತೋರಿಸಿಕೊಂಡಿದ್ದಾರೆ ಅಥವಾ ಬಹಿರಂಗಪಡಿಸಿಕೊಂಡಿದ್ದಾರೆ.

- ದೇವರು ಕನಸುಗಳು ಅಥವಾ ದರ್ಶನಗಳ ಮೂಲಕ ತನ್ನನ್ನು ತಾನು ಬಹಿರಂಗಪಡಿಸುತ್ತಾನೆ ಅಥವಾ ತೋರಿಸುತ್ತಾನೆ.
- “ಯೇಸುಕ್ರಿಸ್ತನಿಂದ ಉಂಟಾದ ಪ್ರತ್ಯಕ್ಷತೆಯ” ಮೂಲಕ ಪೌಲನು ಸುವಾರ್ತೆಯನ್ನು ಪಡೆದುಕೊಂಡಿದ್ದಾನೆಂದು ಹೇಳಿದಾಗ, ತನಗೆ ಸುವಾರ್ತೆಯನ್ನು ಯೇಸುವೇ ತನಗೆ ತಾನಾಗಿಯೇ ವಿವರಿಸಿದ್ದಾನೆಂದು ಅದರ ಅರ್ಥವಾಗಿರುತ್ತದೆ.
- ಹೊಸ ಒಡಂಬಡಿಕೆಯಲ್ಲಿರುವ “ಪ್ರಕಟನೆ” ಗ್ರಂಥದಲ್ಲಿ ಅಂತ್ಯಕಾಲದಲ್ಲಿ ನಡೆಯುವ ಸಂಘಟನೆಗಳ ಕುರಿತಾಗಿ ದೇವರು ಬಹಿರಂಗಪಡಿಸಿದ ವಿಷಯಗಳು ಒಳಗೊಂಡಿರುತ್ತವೆ. ಆತನು ಅಪೊಸ್ತಲನಾದ ಯೋಹಾನನಿಗೆ ದರ್ಶನಗಳ ಮೂಲಕ ಅವುಗಳನ್ನು ಬಹಿರಂಗಪಡಿಸಿದನು.

ಅನುವಾದ ಸಲಹೆಗಳು:

- “ಬಹಿರಂಗಪಡಿಸು” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ತಿಳಿಯುವಂತೆ ಮಾಡು” ಅಥವಾ “ಬಯಲುಮಾಡು” ಅಥವಾ “ಸ್ಪಷ್ಟವಾಗಿ ತೋರಿಸು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಸಂದರ್ಭಾನುಸಾರವಾಗಿ, “ಪ್ರಕಟಣೆ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ದೇವರಿಂದ ಸಂಭಾಷಣೆ” ಅಥವಾ “ದೇವರು ಬಹಿರಂಗಪಡಿಸಿದ ವಿಷಯಗಳು” ಅಥವಾ “ದೇವರ ಕುರಿತಾಗಿ ಬೋಧಿಸುವುದು” ಎನ್ನುವ ಮಾತುಗಳು ಒಳಗೊಂಡಿರುತ್ತವೆ. ಅನುವಾದದಲ್ಲಿ “ಬಹಿರಂಗಪಡಿಸು” ಎನ್ನುವ ಅರ್ಥವನ್ನು ಉಪಯೋಗಿಸುವುದೇ ಉತ್ತಮವಾದದ್ದು.
- “ಪ್ರತ್ಯಕ್ಷತೆ ಇಲ್ಲದಿರುವಾಗ” ಎನ್ನುವ ಮಾತನ್ನು “ದೇವರು ಜನರಿಗೆ ತನ್ನನ್ನು ತಾನು ತೋರಿಸಿಕೊಳ್ಳದಿರುವಾಗ” ಅಥವಾ “ದೇವರು ತನ್ನ ಜನರೊಂದಿಗೆ ಮಾತನಾಡದಿರುವಾಗ” ಅಥವಾ “ದೇವರು ಜನರ ಮಧ್ಯೆದಲ್ಲಿ ಸಂಭಾಷಣೆ ಮಾಡದಿರುವಾಗ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಶುಭವಾರ್ತೆ, ಶುಭವಾರ್ತೆಗಳು, ಕನಸು, ದರ್ಶನ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.11:1-2
- ಎಫೆಸ.03:3-5
- ಗಲಾತ್ಯ.01:11-12
- ಪ್ರಲಾಪ.02:13-14
- ಮತ್ತಾಯ.10:26-27
- ಫಿಲಿಪ್ಪಿ.03:15-16
- ಪ್ರಕ.01:1-3

ಪದ ಡೇಟಾ:

- Strong's: H241, H1540, H1541, G601, G602, G5537

ಬಾಧ್ಯನಾಗು, ಪಿತ್ರಾರ್ಜಿತ, ಬಾಧ್ಯಸ್ಥ

ಪದದ ಅರ್ಥವಿವರಣೆ:

"ಬಾಧ್ಯನಾಗು" ಎನ್ನುವ ಪದವು ಒಬ್ಬ ವ್ಯಕ್ತಿಯಿಂದ ಅಥವಾ ತಂದೆತಾಯಿಗಳಿಂದ ತೆಗೆದುಕೊಳ್ಳುವ ಬೆಲೆಯುಳ್ಳದ್ದನ್ನು ಸೂಚಿಸುತ್ತದೆ, ಯಾಕಂದರೆ ಆ ವ್ಯಕ್ತಿಯೊಂದಿಗೆ ವಿಶೇಷವಾದ ಸಂಬಂಧವಿರುತ್ತದೆ. "ಪಿತ್ರಾರ್ಜಿತ" ಎನ್ನುವುದು ಹೊಂದಿಕೊಂಡಿರುವುದನ್ನು ಅಥವಾ ಪಡೆದುಕೊಂಡಿರುವುದನ್ನು ಸೂಚಿಸುತ್ತದೆ. ವ್ಯಕ್ತಿಯೊಂದಿಗಿನ ವಿಶೇಷ ಸಂಬಂಧದಿಂದಾಗಿ ಈ ಪದವು ಇನ್ನೊಬ್ಬ ವ್ಯಕ್ತಿಯಿಂದ ಅಮೂಲ್ಯವಾದದ್ದನ್ನು ಪಡೆಯುವುದನ್ನು ಸಹ ಸೂಚಿಸುತ್ತದೆ.

- ಪಡೆದುಕೊಂಡಿರುವ ಭೌತಿಕವಾದ ಪಿತ್ರಾರ್ಜಿತ ಬಹುಶಃ ಅದು ಹಣ, ಭೂಮಿ, ಅಥವಾ ಅಸ್ತಿಪಾಸ್ತಿಯಾಗಿರಬಹುದು.
- ಕಾನಾನ್ ಭೂಮಿಯನ್ನು ಅಬ್ರಾಹಾಮನು ಮತ್ತು ತನ್ನ ಸಂತಾನದವರು ಸ್ವಾಧೀನ ಮಾಡಿಕೊಳ್ಳುತ್ತಾರೆಂದು, ಮತ್ತು ಅದು ಅವರಿಗೆ ಶಾಶ್ವತವಾಗಿ ಇರುತ್ತದೆಯೆಂದು ದೇವರು ಅವರೊಂದಿಗೆ ವಾಗ್ದಾನ ಮಾಡಿದ್ದನು.

ಅನುವಾದ ಸಲಹೆಗಳು:

- ಪಿತ್ರಾರ್ಜಿತ ಅಥವಾ ಬಾಧ್ಯಸ್ಥ ಎನ್ನುವ ಉದ್ದೇಶದಲ್ಲಿ ಅನುವಾದ ಮಾಡುವ ಭಾಷೆಯಲ್ಲಿ ಮುಂಚಿತವಾಗಿಯೇ ಪದಗಳು ಇದ್ದಾವೋ ಇಲ್ಲವೋ ಎಂದು ನೋಡಿರಿ, ಆ ಪದಗಳನ್ನೇ ಉಪಯೋಗಿಸಿರಿ.
- ಸಂದರ್ಭಾನುಸಾರವಾಗಿ, "ಬಾಧ್ಯನಾಗು" ಎನ್ನುವ ಪದಕ್ಕೆ ಪರ್ಯಾಯ ಪದಗಳಾಗಿ "ಪಡೆದುಕೋ" ಅಥವಾ "ಸ್ವಾಧೀನಪಡಿಸಿಕೋ" ಅಥವಾ "ಅದರ ಆಸ್ತಿಪಾಸ್ತಿಗಳಲ್ಲಿ ಬಾಧ್ಯಸ್ಥನಾಗು" ಎಂದೂ ಉಪಯೋಗಿಸಬಹುದು.
- "ಪಿತ್ರಾರ್ಜಿತ" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ "ವಾಗ್ದಾನ ಮಾಡಿದ ಬಹುಮಾನ" ಅಥವಾ "ಸ್ಥಿರವಾದ ಆಸ್ತಿಪಾಸ್ತಿ" ಎನ್ನುವ ಪದಗಳು ಒಳಗೊಂಡಿರಬಹುದು.
- "ಬಾಧ್ಯಸ್ಥ" ಎನ್ನುವ ಪದವನ್ನು "ತಂದೆಯ ಆಸ್ತಿಪಾಸ್ತಿಗಳನ್ನು ಪಡೆದುಕೊಳ್ಳುವ ಸವಲತ್ತು ಹೊಂದಿರುವ ಮಗ" ಅಥವಾ "(ದೇವರ) ಆತ್ಮೀಯಕವಾದ ಆಸ್ತಿಪಾಸ್ತಿಗಳನ್ನು ಅಥವಾ ಆಶೀರ್ವಾದಗಳನ್ನು ಪಡೆಯುವುದಕ್ಕೆ ಆದುಕೊಂಡಿರುವ ವ್ಯಕ್ತಿ" ಎನ್ನುವ ಅರ್ಥಗಳು ಬರುವ ಮಾತುಗಳಿಂದ ಅನುವಾದ ಮಾಡಬಹುದು.
- "ಪಿತ್ರಾರ್ಜಿತ" ಎನ್ನುವ ಪದವನ್ನು "ದೇವರಿಂದ ಬಂದ ಆಶೀರ್ವಾದಗಳು" ಅಥವಾ "ಪಿತ್ರಾರ್ಜಿತ ಆಶೀರ್ವಾದಗಳು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಬಾಧ್ಯಸ್ಥ, ಕಾನಾನ್, ವಾಗ್ದಾನ ಭೂಮಿ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.06:9-11
- 1 ಪೇತ್ರ.01:04
- 2 ಸಮು.21:03
- ಅಪೊ.ಕೃತ್ಯ.07:4-5
- ಧರ್ಮೋ.20:16
- ಗಲಾತ್ಯ.05:21
- ಆದಿ.15:07
- ಇಬ್ರಿ.09:15
- ಯೆರೆ.02:07
- ಲೂಕ.15:11
- ಮತ್ತಾಯ.19:29
- ಕೀರ್ತನೆ.079:01

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **04:06** ಕಾನಾನಿಗೆ ಅಬ್ರಾಮನು ಬಂದಾಗ, "ನಿನ್ನ ಸುತ್ತಮುತ್ತ ನೋಡು" ಎಂದು ದೇವರು ಹೇಳಿದರು. ನೀನು ನೋಡುತ್ತಿರುವ ಭೂಮಿಯನ್ನೆಲ್ಲಾ _ ಸ್ವಾಸ್ಥ್ಯವನ್ನಾಗಿ _ ನಿನಗೂ ಮತ್ತು ನಿನ್ನ ಸಂತಾನದವರಿಗೂ ಕೊಡುತ್ತೇನೆ.
- **27:01** ಒಂದು ದಿನ, ಯೆಹೂದ್ಯರ ಧರ್ಮಶಾಸ್ತ್ರದಲ್ಲಿ ಪಂಡಿತನಾಗಿರುವ ಒಬ್ಬ ವ್ಯಕ್ತಿ ಯೇಸುವನ್ನು ಪರೀಕ್ಷೆ ಮಾಡುವುದಕ್ಕೆ ಆತನ ಬಳಿಗೆ ಬಂದು, "ಬೋಧಕನೇ, ನಿತ್ಯಜೀವವನ್ನು _ ಪಡೆದುಕೊಳ್ಳುವುದಕ್ಕೆ _ ನಾನೇನು ಮಾಡಬೇಕು?" ಎಂದು ಕೇಳಿದನು.
- **35:03** "ಇಬ್ಬರ ಪುತ್ರರನ್ನು ಪಡೆದ ಒಬ್ಬ ಮನುಷ್ಯನಿದ್ದನು. ಚಿಕ್ಕವನು ತನ್ನ ತಂದೆ ಬಳಿಗೆ ಬಂದು, "ತಂದೆಯೇ, ಈಗ ನನಗೆ ನನ್ನ _ ಸ್ವಾಸ್ಥ್ಯ _ ಬೇಕು!" ಎಂದು ಕೇಳಿದನು. ಆದ್ದರಿಂದ ತಂದೆ ತನಗಿರುವ ಆಸ್ತಿಪಾಸ್ತಿಯನ್ನೆಲ್ಲಾ ತನ್ನ ಇಬ್ಬರು ಮಕ್ಕಳಿಗೆ ಎರಡು ಭಾಗ ಮಾಡಿದನು.

ಪದ ಡೇಟಾ:

- Strong's: H2490, H2506, H3423, H3425, H4181, H5157, H5159, G2816, G2817, G2819, G2820

ಭಯ, ಭಯಪಾಡು, ಕಳವಳ ಭೀತಿ

ಪದದ ಅರ್ಥವಿವರಣೆ:

"ಭಯ" ಎಂಬ ಪದವು ಅವರ ಸುರಕ್ಷತೆ ಅಥವಾ ಯೋಗಕ್ಷೇಮಕ್ಕೆ ಸಂಭಾವ್ಯ ಬೆದರಿಕೆಯನ್ನು ಅನುಭವಿಸುವಾಗ ವ್ಯಕ್ತಿಯು ಅನುಭವಿಸುವ ಅಹಿತಕರ ಭಾವನೆಯನ್ನು ಸೂಚಿಸುತ್ತದೆ. ಆದಾಗ್ಯೂ, ಸತ್ಯವೇದದಲ್ಲಿ, "ಭಯ" ಎಂಬ ಪದವು ಇನ್ನೊಬ್ಬ ವ್ಯಕ್ತಿಯ ಬಗ್ಗೆ ಆರಾಧನೆ, ಗೌರವ, ವಿಸ್ಮಯ ಅಥವಾ ವಿಧೇಯತೆಯ ಮನೋಭಾವವನ್ನು ಸೂಚಿಸುತ್ತದೆ, ಸಾಮಾನ್ಯವಾಗಿ ದೇವರು ಅಥವಾ ರಾಜನಂತಹ ಶಕ್ತಿಶಾಲಿ ವ್ಯಕ್ತಿ. "ಭೀತಿ" ಎಂಬ ಪದವು ತೀವ್ರ ಅಥವಾ ತೀವ್ರವಾದ ಭಯವನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಭಯ” ಎನ್ನುವ ಪದವನ್ನು “ಕಳವಳಗೊಳ್ಳುವುದು” ಅಥವಾ “ಆಳವಾಗಿ ಗೌರವ ಕೊಡುವುದು” ಅಥವಾ “ಪೂಜಿಸುವುದು” ಅಥವಾ “ವಿಸ್ಮಯ ಹೊಂದುವುದು” ಎಂದೂ ಅನುವಾದ ಮಾಡಬಹುದು.
- “ಕಳವಳ” ಎನ್ನುವ ಪದವನ್ನು “ಭಯಭೀತಗೊಳ್ಳುವುದು” ಅಥವಾ “ಹೆದರುವುದು” ಅಥವಾ “ಭಯದಿಂದರುವುದು” ಎಂದೂ ಅನುವಾದ ಮಾಡಬಹುದು.
- “ಅವರೆಲ್ಲರ ಮೇಲೆ ದೇವರ ಭಯವಿದೆ” ಎನ್ನುವ ವಾಕ್ಯವನ್ನು “ಅಕಸ್ಮಿಕವಾಗಿ ಅವರೆಲ್ಲರು ದೇವರೆಂದರೆ ಆಳವಾದ ವಿಸ್ಮಯವನ್ನು ಮತ್ತು ಗೌರವವನ್ನು ಪಡೆದುಕೊಂಡರು” ಅಥವಾ “ತತ್.ಕ್ಷಣವೇ, ಅವರೆಲ್ಲರು ಆಶ್ಚರ್ಯಕ್ಕೊಳಗಾದರೂ ಮತ್ತು ದೇವರನ್ನು ಆಳವಾಗಿ ಗೌರವಿಸಿದರು” ಅಥವಾ “ಅದಾದನಂತರ, ಅವರೆಲ್ಲರು ದೇವರ ವಿಷಯದಲ್ಲಿ ಕಳವಳ ಹೊಂದಿದರು (ಆತನ ಪರಾಕ್ರಮ ಶಕ್ತಿಯನ್ನು ಕಂಡು)” ಎಂದೂ ಅನುವಾದ ಮಾಡಬಹುದು.
- “ಭಯಗೊಳ್ಳದಿರು” ಎನ್ನುವ ಮಾತನ್ನು “ಕಳವಳಗೊಳ್ಳಬೇಡ” ಅಥವಾ “ಕಳವಳಪಡುವುದನ್ನು ನಿಲ್ಲಿಸು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆಶ್ಚರ್ಯ, ವಿಸ್ಮಯ, ಕರ್ತನು, ಶಕ್ತಿ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.04:18
- ಅಪೊ.ಕೃತ್ಯ.02:43
- ಅಪೊ.ಕೃತ್ಯ.19:15-17
- ಆದಿ.50:21
- ಯೆಶಯಾ.11:3-5
- ಯೋಬ.06:14
- ಯೋನ.01:09
- ಲೂಕ.12:05
- ಮತ್ತಾಯ.10:28
- ಜ್ಞಾನೋ.10:24-25

ಪದ ಡೇಟಾ:

- Strong's: H367, H926, H1204, H1481, H1672, H1674, H1763, H2119, H2296, H2727, H2729, H2730, H2731, H2844, H2849, H2865, H3016, H3025, H3068, H3372, H3373, H3374, H4032, H4034, H4035, H4116, H4172, H6206, H6342, H6343, H6345, H6427, H7264, H7267, H7297, H7374, H7461, H7493, H8175, G870, G1167, G1168, G1169, G1630, G1719, G2124, G2125, G2962, G5398, G5399, G5400, G5401

ಭರವಸೆ, ಭರವಸೆವಿಡುವುದು, ಭರವಸೆವಿಟ್ಟಿದೆ, ನಂಬಿಗಸ್ತ, ವಿಶ್ವಾಸಾರ್ಹತೆ

ಪದದ ಅರ್ಥವಿವರಣೆ:

ಯಾವುದಾದರೊಂದನ್ನು ಅಥವಾ ಯಾರಾದರೊಬ್ಬರನ್ನು "ನಂಬು" ಎನ್ನುವುದಕ್ಕೆ ಆ ವಸ್ತುವು ಅಥವಾ ಆ ವ್ಯಕ್ತಿ ನಿಜವೆಂದು ಅಥವಾ ಭರವಸೆಇಡತಕ್ಕದ್ದೆಂದು/ಭರವಸೆ ಇಡತಕ್ಕವನೆಂದು ನಂಬುವುದು ಎಂದರ್ಥ. ಆ ನಂಬಿಕೆಯನ್ನು ಕೂಡ "ಭರವಸೆ" ಎಂದು ಕರೆಯುತ್ತಾರೆ. "ವಿಶ್ವಾಸಾರ್ಹ' ವ್ಯಕ್ತಿ ಎಂದರೆ ಸರಿಯಾದದ್ದನ್ನು ಮತ್ತು ನಿಜವಾದದ್ದನ್ನು ಹೇಳುವುದಕ್ಕೆ ಮತ್ತು ಮಾಡುವುದಕ್ಕೆ ಭರವಸೆವಿಡುವ ಒಬ್ಬ ವ್ಯಕ್ತಿ ಎಂದರ್ಥ, ಮತ್ತು ಅದಕ್ಕಾಗಿ "ವಿಶ್ವಾಸಾರ್ಹತೆ" ಎನ್ನುವ ಗುಣಲಕ್ಷಣವನ್ನು ಹೊಂದಿರುವ ವ್ಯಕ್ತಿ ಎಂದರ್ಥ.

- ಭರವಸೆ ಎನ್ನುವುದು ನಂಬಿಕೆಗೆ ತುಂಬಾ ಹತ್ತಿರವಾಗಿರುತ್ತದೆ. ನಾವು ಒಬ್ಬ ವ್ಯಕ್ತಿಯಲ್ಲಿ ಭರವಸೆವಿಟ್ಟರೆ, ಮಾಡುವುದಕ್ಕೆ ಅವರು ಮಾಡಿದ ವಾಗ್ದಾನವನ್ನು ನೆರವೇರಿಸುವುದಕ್ಕೆ ಆ ವ್ಯಕ್ತಿಯಲ್ಲಿ ನಾವು ನಂಬಿಕೆಯನ್ನಿಡುವುದು ಎಂದರ್ಥ.
- ಯಾರಾದರೊಬ್ಬರಲ್ಲಿ ಭರವಸೆಯನ್ನು ಹೊಂದಿರುವುದೆನ್ನುವುದು ಕೂಡ ಆ ವ್ಯಕ್ತಿಯ ಮೇಲೆ ಆಧಾರಪಟ್ಟಿರುವುದು ಎಂದರ್ಥ.
- ಯೇಸುವಿನಲ್ಲಿ "ಭರವಸೆ" ಇಡುವುದು ಎಂದರೆ ಆತನು ದೇವರೆಂದು ನಂಬುವುದು, ನಮ್ಮ ಪಾಪಗಳಿಗಾಗಿ ಕ್ರಯಧನವನ್ನು ಸಲ್ಲಿಸುವುದಕ್ಕೆ ಆತನು ಶಿಲುಬೆಯ ಮೇಲೆ ಸತ್ತನೆಂದು, ಮತ್ತು ನಮ್ಮ ರಕ್ಷಿಸುವುದಕ್ಕೆ ಆತನ ಮೇಲೆ ಆತುಕೊಳ್ಳಬಹುದೆಂದು ಅರ್ಥವಾಗಿರುತ್ತದೆ.
- "ವಿಶ್ವಾಸಾರ್ಹವಾದ ಮಾತು" ಎನ್ನುವುದು ಹೇಳಲ್ಪಟ್ಟಿರುವ ಮಾತು ನಿಜವೆಂದು ಪರಿಗಣಿಸುವುದನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- "ಭರವಸೆ" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ "ನಂಬು" ಅಥವಾ 'ವಿಶ್ವಾಸವನ್ನು ಹೊಂದಿರು" ಅಥವಾ "ನಿಶ್ಚಯತೆ ಹೊಂದಿರು" ಅಥವಾ "ಆಧಾರಪಡು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಇದರಲ್ಲಿ ನಿನ್ನ ಭರವಸೆವಿಡು" ಎನ್ನುವ ಮಾತು "ಭರವಸೆಯಲ್ಲಿ" ಎನ್ನುವ ಮಾತಿಗೆ ಅರ್ಥವೂ ಒಂದೇ ಆಗಿರುತ್ತದೆ.
- "ವಿಶ್ವಾಸಾರ್ಹ" ಎನ್ನುವ ಮಾತನ್ನು "ಆಧಾರಪಡುವಯೋಗ್ಯನು" ಅಥವಾ "ಭರವಸೆ ಇಡತಕ್ಕ" ಅಥವಾ "ಯಾವಾಗಲೂ ಭರವಸೆಯುಳ್ಳ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬು, ನಿಶ್ಚಯತೆ, ವಿಶ್ವಾಸ, ವಿಶ್ವಾಸಭರಿತ, ನಿಜ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.09:22-24
- 1 ತಿಮೊಥೆ.04:9-10
- ಹೋಶೆಯ.10:12-13
- ಯೆಶಯಾ.31:1-2
- ನೆಹೆ.13:12-14
- ಕೀರ್ತನೆ.031:5-7
- ತೀತ.03:8

ಸತ್ಯವೇದದಿಂದ ಉದಾಹರಣೆಗಳು:

- **12:12** ಐಗುಪ್ತೀಯರು ಸತ್ತು ಹೋಗಿದ್ದಾರೆಂದು ಇಸ್ರಾಯೇಲ್ಯರು ನೋಡಿದಾಗ, ಅವರು _ ದೇವರಲ್ಲಿ _ ಭರವಸೆವಿಟ್ಟರು ಮತ್ತು ಮೋಶೆ ದೇವರ ಪ್ರವಾದಿಯೆಂದು ನಂಬಿದರು.
- **14:15** ಯೆಹೋಶುವನು ಒಳ್ಳೇಯ ನಾಯಕನು, ಯಾಕಂದರೆ ಆತನು ದೇವರಲ್ಲಿ _ ಭರವಸೆವಿಟ್ಟಿದ್ದನು _ ಮತ್ತು ಆತನಿಗೆ ವಿಧೇಯತೆಯನ್ನು ತೋರಿಸಿದನು.
- **17:02** ದೇವರಲ್ಲಿ _ ಭರವಸೆವಿಟ್ಟ _ ಮತ್ತು ಆತನಿಗೆ ವಿಧೇಯತೆ ತೋರಿಸಿದ ನೀತಿವಂತನಾದ ಮನುಷ್ಯನು ಮತ್ತು ಹೆಚ್ಚಾಗಿ ತಗ್ಗಿಸಿಕೊಂಡವನು ದಾವೀದನಾಗಿದ್ದನು.
- **34:06** ಜನರು ತಮ್ಮ ಒಳ್ಳೇಯ ಕ್ರಿಯೆಗಳಲ್ಲಿ _ ಭರವಸೆವಿಟ್ಟಿರುವ _ ಜನರ ಕುರಿತಾಗಿ ಮತ್ತು ಇತರ ಜನರನ್ನು ತೊರೆಯುವವರ ಕುರಿತಾಗಿ ಯೇಸು ಒಂದು ಕಥೆಯನ್ನು ಹೇಳಿದನು.

ಪದ ಡೇಟಾ:

- Strong's: H539, H982, H1556, H2620, H2622, H3176, H4009, H4268, H7365, G1679, G3872, G3982, G4006, G4100, G4276

ಮಕ್ಕಳು, ಮಗು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಮಗು" ಎನ್ನುವ ಪದವು ಅನೇಕಬಾರಿ ಕೂಸಿಗೆ ಮತ್ತು ವಯಸ್ಸಿನಲ್ಲಿ ಚಿಕ್ಕ ಮಗುವಿಗೆ ಸಾಧಾರಣವಾಗಿ ಸೂಚಿಸಲ್ಪಟ್ಟಿರುತ್ತದೆ. "ಮಕ್ಕಳು" ಎನ್ನುವ ಪದವು ಮಗು ಎನ್ನುವ ಪದಕ್ಕೆ ಬಹುವಚನ ಪದವಾಗಿರುತ್ತದೆ ಮತ್ತು ಇದಕ್ಕೆ ಅನೇಕವಾದ ಅಲಂಕಾರ ಉಪಯೋಗಗಳನ್ನು ಹೊಂದಿರುತ್ತದೆ.

- ಸತ್ಯವೇದದಲ್ಲಿ ಶಿಷ್ಯರನ್ನು ಅಥವಾ ಹಿಂಬಾಲಕರನ್ನು ಕೆಲವೊಂದುಸಲ "ಮಕ್ಕಳು" ಎಂದು ಕರೆಯಲಾಗಿದೆ.
- ಅನೇಕಬಾರಿ "ಮಕ್ಕಳು" ಎನ್ನುವ ಪದವು ಒಬ್ಬ ವ್ಯಕ್ತಿಯ ಸಂತಾನದವರನ್ನು ಸೂಚಿಸುವುದಕ್ಕೆ ಉಪಯೋಗಿಸಿರುತ್ತಾರೆ.
- "ಇತರರ ಮಕ್ಕಳು" ಎನ್ನುವ ಮಾತನ್ನು ಏನಾದರೊಂದರ ಗುಣಲಕ್ಷಣವನ್ನು ಹೊಂದಿಕೊಂಡಿರುವುದಕ್ಕೆ ಸೂಚನೆಯಾಗಿರುತ್ತದೆ. ಇದಕ್ಕೆ ಕೆಲವೊಂದು ಉದಾಹರಣೆಗಳು ಈ ಕೆಳಗಿನಂತಿರುತ್ತವೆ :
- ಬೆಳಕಿನ ಮಕ್ಕಳು
- ವಿಧೇಯತೆಯುಳ್ಳ ಮಕ್ಕಳು
- ದೆವ್ವದ ಮಕ್ಕಳು
- ಈ ಪದವು ಆತ್ಮೀಯಕ ಮಕ್ಕಳಾಗಿರುವ ಪ್ರಜೆಯನ್ನೂ ಸೂಚಿಸುತ್ತದೆ. ಉದಾಹರಣೆಗೆ, "ದೇವರ ಮಕ್ಕಳು" ಎನ್ನುವ ಮಾತು ಯೇಸುವಿನಲ್ಲಿಟ್ಟಿರುವ ನಂಬಿಕೆಯಿಂದ ದೇವರಿಗೆ ಸಂಬಂಧಪಟ್ಟ ಜನರನ್ನು ಸೂಚಿಸುತ್ತಿದೆ.

ಅನುವಾದ ಸಲಹೆಗಳು:

- ಒಬ್ಬ ವ್ಯಕ್ತಿಯ ಮೊಮ್ಮೊಕ್ಕಳನ್ನು ಅಥವಾ ಮೊಮ್ಮೊಕ್ಕಳ ಮೊಮ್ಮೊಕ್ಕಳನ್ನು ಸೂಚಿಸುವಾಗ "ಮಕ್ಕಳು" ಎನ್ನುವ ಪದವನ್ನು "ವಂಶಸ್ಥರು" ಎಂದೂ ಅನುವಾದ ಮಾಡಬಹುದು,
- ಸಂದರ್ಭಕ್ಕೆ ತಕ್ಕಂತೆ, "ಇತರರ/ಇತರೆ ಮಕ್ಕಳು" ಎನ್ನುವ ಪದವನ್ನು, "ಇತರ ಯಾವುದೊಂದರ/ಯಾರಾದರೊಬ್ಬರ ಗುಣಲಕ್ಷಣಗಳನ್ನು ಹೊಂದಿರುವ ಜನರು" ಎಂದಾಗಲಿ ಅಥವಾ "ಇತರರಂತೆ/ಇತರ ಯಾವುದಾದರೊಂದರಂತೆ ನಡೆದುಕೊಳ್ಳುವ ಜನರು" ಎಂದೂ ಅನುವಾದ ಮಾಡಬಹುದು.
- ಸಾಧ್ಯವಾದರೆ "ದೇವರ ಮಕ್ಕಳು" ಎನ್ನುವ ಮಾತನ್ನು ಅಕ್ಷರಾರ್ಥವಾಗಿ ಅನುವಾದ ಮಾಡಬಹುದು, ಯಾಕಂದರೆ ದೇವರು ನಮ್ಮ ಪರಲೋಕದ ತಂದೆಯಾಗಿದ್ದರಿಂದ ಮತ್ತು ಅದು ಅತೀ ಪ್ರಾಮುಖ್ಯವಾದ ವಾಕ್ಯಾನುಸಾರವಾದ ಅಂಶ ಆಗಿರುವದರಿಂದ ಆ ರೀತಿ ಇರುವುದು ಸರಿಯೇ. ಒಂದುವೇಳೆ ಆ ಮಾತಿಗೆ ಅನುವಾದ ಇನ್ನೊಂದು ರೀತಿಯಾಗಿ ಮಾಡಬೇಕೆಂದರೆ, "ದೇವರಿಗೆ ಸಂಬಂಧಪಟ್ಟ ಜನರು" ಅಥವಾ "ದೇವರ ಆತ್ಮೀಯಕ ಮಕ್ಕಳು" ಎಂದೂ ಅನುವಾದ ಮಾಡಬಹುದು.

ಯೇಸು ತನ್ನ ಶಿಷ್ಯರನ್ನು "ಮಕ್ಕಳು" ಎಂದು ಕರೆದಾಗ, ಅದನ್ನು "ಪ್ರಿಯ ಸ್ನೇಹಿತರೆ" ಅಥವಾ "ನನ್ನ ಪ್ರೀತಿಯ ಶಿಷ್ಯರೇ" ಎಂದೂ ಅನುವಾದ ಮಾಡಬಹುದು.

- ಯೇಸುವಿನಲ್ಲಿ ನಂಬಿಕೆಯಿಟ್ಟಿರುವ ವಿಶ್ವಾಸಿಗಳನ್ನು "ಮಕ್ಕಳು" ಎಂದು ಪೌಲ ಮತ್ತು ಯೋಹಾನರು ಸೂಚಿಸಿದ್ದಾರೆ, ಇಲ್ಲಿ ಈ ಪದವನ್ನು "ಪ್ರೀತಿಯ ಸಹ ವಿಶ್ವಾಸಿಗಳು" ಎಂದು ಅನುವಾದ ಮಾಡಬಹುದು.
- "ವಾಗ್ದಾನದ ಮಕ್ಕಳು" ಎನ್ನುವ ಮಾತನ್ನು "ದೇವರು ಜನರಿಗೆ ಮಾಡಿದ ವಾಗ್ದಾನವನ್ನು ಹೊಂದಿದವರು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ವಂಶದವರು, ವಾಗ್ದಾನ, ಮಗ, ಆತ್ಮ, ನಂಬು, ಪ್ರಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.02:27-29
- 3 ಯೋಹಾನ.01:1-4
- ಗಲಾತ್ಯ.04:19-20
- ಆದಿ.45:9-11
- ಯೆಹೋ.08:34-35
- ನೆಹೆ.05:4-5

ಪದ ಡೇಟಾ:

- Strong's: H1069, H1121, H1123, H1129, H1323, H1397, H1580, H2029, H2030, H2056, H2138, H2145, H2233, H2945, H3173, H3205, H3206, H3208, H3211, H3243, H3490, H4392, H5271, H5288, H5290, H5759, H5764, H5768, H5953, H6185, H7908, H7909, H7921, G730, G815, G1025, G1064, G1471, G3439, G3515, G3516, G3808, G3812, G3813, G3816, G5040, G5041, G5042, G5043, G5044, G5206, G5207, G5388

ಮಧ್ಯಸ್ಥಿಕೆ ಮಾಡು, ವಿಜ್ಞಾಪನೆ ಮಾಡಲಾಗಿದೆ, ವಿಜ್ಞಾಪನೆ

ಪದದ ಅರ್ಥವಿವರಣೆ:

“ಮಧ್ಯಸ್ಥಿಕೆ ಮಾಡು” ಮತ್ತು “ವಿಜ್ಞಾಪನೆ” ಎನ್ನುವ ಪದಗಳು ಒಬ್ಬ ವ್ಯಕ್ತಿಯ ಪಕ್ಷವಾಗಿ ಇನ್ನೊಬ್ಬರನ್ನು ಬೇಡಿಕೊಳ್ಳುವುದನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ ಇದು ಸಾಧಾರಣವಾಗಿ ಇತರರಿಗೋಸ್ಕರ ಪ್ರಾರ್ಥಿಸುವುದನ್ನು ಸೂಚಿಸುತ್ತದೆ.

- “ಅದರ ಕುರಿತಾಗಿ ವಿಜ್ಞಾಪನೆ ಮಾಡು” ಅಥವಾ “ಅದರ ಕುರಿತಾಗಿ ಮಧ್ಯಸ್ಥಿಕೆ ಮಾಡು” ಎನ್ನುವ ಮಾತುಗಳು ಇತರ ಜನರ ಪ್ರಯೋಜನಕ್ಕಾಗಿ ದೇವರನ್ನು ಬೇಡಿಕೊಳ್ಳುವುದು ಎಂದರ್ಥ.
- ಪವಿತ್ರಾತ್ಮನು ನಮಗೋಸ್ಕರ ಮಧ್ಯಸ್ಥಿಕೆ ಮಾಡುತ್ತಾನೆಂದು, ಅಂದರೆ ಆತನು ನಮಗಾಗಿ ದೇವರಿಗೆ ಪ್ರಾರ್ಥನೆ ಮಾಡುತ್ತಾನೆಂದು ಸತ್ಯವೇದ ಬೋಧನೆ ಮಾಡುತ್ತದೆ.
- ಅಧಿಕಾರಿಕವಾಗಿ ಒಬ್ಬರು ಇನ್ನೊಬ್ಬರಿಗೆ ಇತರ ಜನರಿಗಾಗಿ ಮಾಡುವ ಬೇಡಿಕೆಗಳಿಂದ ಒಬ್ಬ ವ್ಯಕ್ತಿ ಮಧ್ಯಸ್ಥಿಕೆ ಮಾಡುತ್ತಾನೆ.

ಅನುವಾದ ಸಲಹೆಗಳು:

- “ಮಧ್ಯಸ್ಥಿಕೆ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಅದರಗೋಸ್ಕರ ಬೇಡುವುದು” ಅಥವಾ “(ಯಾರಾದರೊಬ್ಬರಿಗಾಗಿ) ಎನಾದರೊಂದನ್ನು ಮಾಡುವುದಕ್ಕೆ (ಇನ್ನೊಬ್ಬರ ಬಳಿ) ಬೇಡಿಕೊಳ್ಳುವುದು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ವಿಜ್ಞಾಪನೆಗಳು” ಎನ್ನುವನಾಮಪದವನ್ನು “ಬೇಡುವುದು” ಅಥವಾ ‘ಮನವಿಗಳು” ಅಥವಾ “ತುರ್ತು ಪ್ರಾರ್ಥನೆಗಳು” ಎಂದೂ ಅನುವಾದ ಮಾಡಬಹುದು.
- “ಅದರಿಗೋಸ್ಕರ ವಿಜ್ಞಾಪನೆ ಮಾಡು” ಎನ್ನುವ ಮಾತನ್ನು “ಪ್ರಯೋಜನಕ್ಕಾಗಿ ಮನವಿಗಳನ್ನು ಮಾಡುವುದು” ಅಥವಾ “ಅವರ ಪಕ್ಷವಾಗಿದ್ದು ಬೇಡುವುದು” ಅಥವಾ “ಸಹಾಯಕ್ಕಾಗಿ ದೇವರನ್ನು ಕೇಳುವುದು” ಅಥವಾ “(ಯಾರಾದರೊಬ್ಬರನ್ನು) ಆಶೀರ್ವಾದ ಮಾಡುವುದಕ್ಕೆ ದೇವರನ್ನು ಬೇಡುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪ್ರಾರ್ಥಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಇಬ್ರಿ.07:25-26
- ಯೆಶಯಾ.53:12
- ಯೆರೆ.29:6-7
- ರೋಮಾ.08:26-27
- ರೋಮಾ.08:33-34

ಪದ ಡೇಟಾ:

- Strong's: H6293, G1783, G1793, G5241

ಮನಸ್ಸಾಕ್ಷಿ, ಮನಸ್ಸಾಕ್ಷಿಗಳು

ಪದದ ಅರ್ಥವಿವರಣೆ:

ಮನಸ್ಸಾಕ್ಷಿ ಎನ್ನುವುದು ಒಬ್ಬ ವ್ಯಕ್ತಿಯ ಆಲೋಚನೆಯ ವಿಭಾಗವಾಗಿರುತ್ತದೆ, ಇದರ ಮೂಲಕದಿಂದಲೇ ಒಬ್ಬ ವ್ಯಕ್ತಿ ಪಾಪ ಮಾಡುತ್ತಿದ್ದಾನೆ ಎನ್ನುವದನ್ನು ದೇವರು ಆ ವ್ಯಕ್ತಿಗೆ ತಿಳಿಸುತ್ತಾನೆ.

- ಯಾವುದು ಸರಿಯೋ ಮತ್ತು ಯಾವುದು ತಪ್ಪೋ ಎನ್ನುವದರ ಮಧ್ಯೆಯಿರುವ ವ್ಯತ್ಯಾಸವನ್ನು ತಿಳಿದುಕೊಳ್ಳಲು ಅವರಿಗೆ ಸಹಾಯ ಮಾಡುವುದಕ್ಕೆ ದೇವರು ಮನಸ್ಸಾಕ್ಷಿಯನ್ನು ಜನರಿಗೆ ಕೊಟ್ಟಿರುತ್ತಾನೆ.
- ದೇವರಿಗೆ ವಿಧೇಯನಾಗುವ ಒಬ್ಬ ವ್ಯಕ್ತಿಯನ್ನು "ಪವಿತ್ರ"ವಾದ ಅಥವಾ "ಶುದ್ಧವಾದ" ಅಥವಾ "ಸ್ವಚ್ಛವಾದ" ಮನಸ್ಸಾಕ್ಷಿ ಇರುವ ವ್ಯಕ್ತಿಯೆಂದು ಕರೆಯಲ್ಪಟ್ಟಿದ್ದಾನೆ.
- ಒಬ್ಬ ವ್ಯಕ್ತಿಗೆ "ಶುದ್ಧವಾದ ಮನಸ್ಸಾಕ್ಷಿ" ಇರುವುದಾದರೆ, ಆ ವ್ಯಕ್ತಿ ಯಾವ ಪಾಪವನ್ನು ಮರೆಮಾಚುತ್ತಿಲ್ಲ ಎಂದರ್ಥ.
- ತಮ್ಮ ಮನಸ್ಸಾಕ್ಷಿಯನ್ನು ನಿರ್ಲಕ್ಷ್ಯ ಮಾಡಿ, ತಾವು ಪಾಪ ಮಾಡಿದ್ದೇವೆಂದು ತಿಳಿದು ಅಪರಾಧಕ್ಕೊಳಗಾಗದಿದ್ದರೆ ತಮ್ಮ ಮನಸ್ಸಾಕ್ಷಿಗಳು ಯಾವುದು ತಪ್ಪು ಎಂದು ಗ್ರಹಿಸುವುದುರಲ್ಲಿ ಕೆಲಸ ಮಾಡುತ್ತಿಲ್ಲವೆಂದು ಅದರ ಅರ್ಥವಾಗಿರುತ್ತದೆ. ಇಂಥಹ ಮನಸ್ಸಾಕ್ಷಿಯನ್ನೇ "ಬಾಡಿಹೋದ ಮನಸ್ಸಾಕ್ಷಿ" ಎಂದು ಸತ್ಯವೇದ ಕರೆಯುತ್ತದೆ, ಇದು ಬಿಸಿ ಕಬ್ಬಿಣದಂತೆ "ಮುದ್ರೆ" ಹಾಕಲ್ಪಟ್ಟಿರುವ ಹಾಗೆ ಇರುತ್ತೆದೆ. ಅಂಥಹ ಮನಸ್ಸಾಕ್ಷಿಯನ್ನು "ಅರಿವುಯಿರದ" ಮತ್ತು "ಮಾಲಿನ್ಯವಾದ" ಮನಸ್ಸಾಕ್ಷಿಯೆಂದು ಕರೆಯುತ್ತಾರೆ.
- ಈ ಪದವನ್ನು ಅನುವಾದ ಮಾಡುವ ಇನ್ನೊಂದು ವಿಧಾನಗಳಲ್ಲಿ "ಅಂತರಂಗದ ನೈತಿಕ ಮಾರ್ಗದರ್ಶಿ" ಅಥವಾ "ನೈತಿಕ ಆಲೋಚನೆ" ಎಂದೂ ಅನುವಾದ ಮಾಡುತ್ತಾರೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.01:18-20
- 1 ತಿಮೊಥೆ.03:8-10
- 2 ಕೊರಿಂಥ.05:11-12
- 2 ತಿಮೊಥೆ.01:3-5
- ರೋಮಾ.09:1-2
- ತೀತ.01:15-16

ಪದ ಡೇಟಾ:

- Strong's: G4893

ಮನುಷ್ಯ ಕುಮಾರನು, ಮನುಷ್ಯನ ಮಗ

ಪದದ ಅರ್ಥವಿವರಣೆ:

"ಮನುಷ್ಯ ಕುಮಾರ" ಎನ್ನುವ ಬಿರುದು ಯೇಸುವನ್ನು ಸೂಚಿಸಿಕೊಳ್ಳುವುದಕ್ಕೆ ಯೇಸುವಿನಿಂದಲೇ ಉಪಯೋಗಿಸಲ್ಪಟ್ಟಿರುತ್ತದೆ. ಆತನು "ನಾನು" ಅಥವಾ "ನಾನೇ" ಎನ್ನುವ ಪದಗಳನ್ನು ಉಪಯೋಗಿಸುವುದಕ್ಕೆ ಬದಲಾಗಿ ಈ ಮಾತನ್ನು ಉಪಯೋಗಿಸಿರುತ್ತಾರೆ.

- ಸತ್ಯವೇದದಲ್ಲಿ "ಮನುಷ್ಯ ಮಗ" ಎನ್ನುವ ಮಾತು ಮನುಷ್ಯನನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ. ಇದಕ್ಕೆ "ಮಾನವ" ಎಂದರ್ಥ.
- ಹಳೇ ಒಡಂಬಡಿಕೆಯ ಪುಸ್ತಕವಾಗಿರುವ ಯೆಹೆಜ್ಕೇಲ ಗ್ರಂಥದಲ್ಲೆಲ್ಲಾ ದೇವರು ಯೆಹೆಜ್ಕೇಲನನ್ನು "ನರಪುತ್ರ" ಎಂಬುದಾಗಿ ಸೂಚಿಸಿರುವುದನ್ನು ನಾವು ನೋಡಬಹುದು. ಉದಾಹರಣೆಗೆ, "ನರಪುತ್ರನೆ, ನೀನು ತಪ್ಪದೇ ಪ್ರವಾದಿಸಬೇಕು" ಎಂದು ದೇವರು ಹೇಳಿದ್ದಾರೆ.
- "ಮನುಷ್ಯನ ಮಗ" ಮೇಘಗಳೊಂದಿಗೆ ಬರುತ್ತಿರುವುದನ್ನು ಪ್ರವಾದಿಯಾದ ದಾನಿಯೇಲನು ದರ್ಶನವನ್ನು ಕಂಡನು, ಇದು ಬರುವ ಮೆಸ್ಸೀಯನಿಗೆ ಸೂಚನೆಯಾಗಿದ್ದಿತ್ತು.
- ಮನುಷ್ಯ ಕುಮಾರನು ತಿರುಗಿ ಮೇಘಗಳ ಮೇಲೆ ಬರುವನೆಂದು ಯೇಸು ಕೂಡ ಹೇಳಿದ್ದಾನೆ.
- ಈ ಎಲ್ಲಾ ವಚನಗಳು ಮೇಘಗಳ ನಡುವೆ ಬರುವ ಮನುಷ್ಯ ಕುಮಾರನು ಬರುತ್ತಾನೆನ್ನುವುದು ಮೆಸ್ಸೀಯನಾಗಿರುವ ಯೇಸು ದೇವರಾಗಿದ್ದಾನೆ ಎಂದು ತಿಳಿಸುತ್ತದೆ.

ಅನುವಾದ ಸಲಹೆಗಳು:

- "ಮನುಷ್ಯ ಕುಮಾರನು" ಎಂದು ಯೇಸು ಉಪಯೋಗಿಸಿದಾಗ, ಇದನ್ನು "ಮನುಷ್ಯನಾಗಿ ಬಂದಿರುವ ವ್ಯಕ್ತಿ" ಅಥವಾ "ಪರಲೋಕದಿಂದ ಬಂದಿರುವ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಅನುವಾದಗಳು ಕೆಲವೊಮ್ಮೆ ಈ ಬಿರುದುನೊಂದಿಗೆ "ನಾನು" ಅಥವಾ "ನಾನೇ" (ಮನುಷ್ಯನಾಗಿರುವ ನಾನೇ) ಎಂಬುದಾಗಿಯೂ ಉಪಯೋಗಿಸಿರುತ್ತಾರೆ, ಯಾಕಂದರೆ ಯೇಸುವು ತನ್ನ ಕುರಿತಾಗಿಯೇ ಮಾತನಾಡುತ್ತಿದ್ದಾನೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಈ ರೀತಿ ಉಪಯೋಗಿಸಿರುತ್ತಾರೆ.
- ಈ ಪದದ ಅನುವಾದವು ತಪ್ಪಾದ ಅರ್ಥವನ್ನು ಕೊಡದಂತೆ ನೋಡಿಕೊಳ್ಳಿರಿ (ಯೇಸು ಮನುಷ್ಯ ಕುಮಾರನು ಮಾತ್ರವೇ ಆಗಿರುತ್ತಾನೆನ್ನುವ ತಪ್ಪಾದ ಭಾವನೆಯನ್ನು ಕೊಡದಂತೆ ಅಥವಾ ಅಕ್ರಮ ಮಗ ಎನ್ನುವುದನ್ನು ಸೂಚಿಸದಂತೆ ನೋಡಿಕೊಳ್ಳಿರಿ).
- ಈ ಪದವು ಒಬ್ಬ ವ್ಯಕ್ತಿಗೆ ಸೂಚಿಸುವುದಕ್ಕೆ ಉಪಯೋಗಿಸಿದಾಗ, "ಮನುಷ್ಯನ ಮಗ" ಎನ್ನುವ ಮಾತನ್ನು "ನೀನು, ಮನುಷ್ಯನು" ಅಥವಾ "ನೀನು, ಮಾನವನು" ಅಥವಾ "ಮಾನವಾಳಿ" ಅಥವಾ "ಮನುಷ್ಯನು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆಕಾಶ, ಮಗ, ದೇವರ ಮಗ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:54-56
- ದಾನಿ.07:13-14
- ಯೆಹೆ.43:6-8
- ಯೋಹಾನ.03:12-13
- ಲೂಕ.06:3-5
- ಮಾರ್ಕ.02:10-12
- ಮತ್ತಾಯ.13:36-39
- ಕೀರ್ತನೆ.080:17-18
- ಪ್ರಕ.14:14-16

ಪದ ಡೇಟಾ:

- Strong's: H120, H606, H1121, H1247, G444, G5207

ಮನ್ನ

ಅರ್ಥವಿವರಣೆ:

ಮನ್ನ ಎನ್ನುವುದು ಧಾನ್ಯದ ಹಾಗಿರುವ ಬಿಳಿಯ ಪದಾರ್ಥವಾಗಿರುತ್ತದೆ, ಇದನ್ನು ದೇವರು ಐಗುಪ್ತದಿಂದ ಇಸ್ರಾಯೇಲ್ಯರು ಹೊರಬಂದು ಅರಣ್ಯದಲ್ಲಿ ಜೀವಿಸಿದ 40 ವರ್ಷಗಳ ಕಾಲ ತಿನ್ನುವುದಕ್ಕೆ ಕೊಟ್ಟ ಆಹಾರವಾಗಿರುತ್ತದೆ.

- ಮನ್ನ ಎನ್ನುವುದು ಇಬ್ಬನಿ ಕೆಳಗೆ ನೆಲದ ಮೇಲೆ ಪ್ರತಿ ಉದಯ ಕಾಲದಲ್ಲಿ ಕಾಣಿಸಿಕೊಳ್ಳುವ ತೆಳುವಾದ ಚಕ್ಕೆಗಳ ಹಾಗೆ ಕಾಣಿಸಿಕೊಳ್ಳುತ್ತವೆ. ಇದು ಜೇನಿನ ಹಾಗೆ ತುಂಬಾ ಸಿಹಿಯಾಗಿರುತ್ತವೆ.
- ಇಸ್ರಾಯೇಲ್ಯರು ಈ ಮನ್ನವನ್ನು ಸಬ್ಬತ್ ದಿನವನ್ನು ಹೊರತುಪಡಿಸಿ ಪ್ರತಿಯೊಂದು ದಿನ ಸಂಗ್ರಹಿಸಿಕೊಳ್ಳುತ್ತಿದ್ದರು.
- ಸಬ್ಬತ್ ದಿನಕ್ಕೆ ಮುಂದಿನ ದಿನದಂದು ಎರಡುಪಟ್ಟು ಮನ್ನವನ್ನು ಸಂಗ್ರಹಿಸಿಕೊಳ್ಳಬೇಕೆಂದು ದೇವರು ಇಸ್ರಾಯೇಲ್ಯರಿಗೆ ಹೇಳಿದನು, ಇದರಿಂದ ಅವರು ವಿಶ್ರಾಂತಿ ದಿನದಂದು ಅದನ್ನು ಸಂಗ್ರಹಿಸಿಕೊಳ್ಳುತ್ತಿರಲಿಲ್ಲ.
- “ಮನ್ನ” ಎನ್ನುವ ಪದಕ್ಕೆ “ಏನಿದು?” ಎಂದರ್ಥ.
- ಸತ್ಯವೇದದಲ್ಲಿ ಮನ್ನ ಎನ್ನುವುದು “ಪರಲೋಕದಿಂದ ಬಂದಿರುವ ಆಹಾರ” ಮತ್ತು “ಪರಲೋಕದಿಂದ ಬಂದ ಧಾನ್ಯ” ಎಂದೂ ಸೂಚಿಸುತ್ತದೆ.

ಅನುವಾದ ಸಲಹೆಗಳು

- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ತೆಳುವಾದ ಬಿಳಿಯ ಚಕ್ಕೆಗಳ ಆಹಾರ” ಅಥವಾ “ಪರಲೋಕದಿಂದ ಬಂದ ಆಹಾರ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಸ್ಥಳೀಯ ಅಥವಾ ಜಾತೀಯ ಭಾಷೆಯಲ್ಲಿ ಸತ್ಯವೇದದ ಅನುವಾದದಲ್ಲಿ ಈ ಪದವನ್ನು ಯಾವರೀತಿ ಅನುವಾದ ಮಾಡಿದ್ದಾರೆಂದು ನೋಡಿಕೊಳ್ಳಿರಿ. (ನೋಡಿ: ಅಪರಿಚಿತರನ್ನು ಹೇಗೆ ಅನುವಾದಿಸುವುದು)

(ಇವುಗಳನ್ನು ಸಹ ನೋಡಿರಿ: ರೊಟ್ಟಿ, ಮರುಭೂಮಿ, ಧಾನ್ಯ, ಪರಲೋಕ, ಸಬ್ಬತ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.8:3
- ವಿಮೋ.16:27
- ಇಬ್ರಿ.9:3-5
- ಯೋಹಾನ.6:30-31
- ಯೆಹೋ.5:12

ಪದದ ಡೇಟಾ:

- Strong's: H4478, G31310

ಮಹತ್ವ

ಪದದ ಅರ್ಥವಿವರಣೆ:

“ಮಹತ್ವ” ಎನ್ನುವ ಪದವು ಶ್ರೇಷ್ಠತೆ ಮತ್ತು ವೈಭವವನ್ನು ಸೂಚಿಸುತ್ತದೆ, ಅನೇಕಸಲ ಈ ಪದವು ಅರಸನ ವೈಭೋಗಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ.

- ಸತ್ಯವೇದದಲ್ಲಿ “ಮಹತ್ವ” ಎನ್ನುವ ಪದವು ಆಗಾಗ್ಗೆ ವಿಶ್ವದ ಮೇಲೆ ಸರ್ವೋಚ್ಚ ಅರಸನಾಗಿರುವ ದೇವರ ಶ್ರೇಷ್ಠತೆಯನ್ನು ಸೂಚಿಸುತ್ತದೆ,
- “ನಿಮ್ಮ ಮಹತ್ವ” ಎನ್ನುವ ಮಾತು ಅರಸನು ಸೂಚಿಸುವ ವಿಧಾನವಾಗಿರುತ್ತದೆ.

ಅನುವಾದ ಸಲಹೆಗಳು:

- ಈ ಪದವನ್ನು “ಅರಸನ ಶ್ರೇಷ್ಠತೆ” ಅಥವಾ “ರಾಜ ವೈಭವ” ಎಂದೂ ಅನುವಾದ ಮಾಡಬಹುದು.
- “ನಿನ್ನ ಮಹತ್ವ” ಎನ್ನುವ ಮಾತನ್ನು “ನಿಮ್ಮ ಔನ್ನತ್ಯ” ಅಥವಾ “ನಿಮ್ಮ ಘನವೆತ್ತ” ಎಂಬುದಾಗಿ ಅನುವಾದ ಮಾಡಬಹುದು, ಅಥವಾ ಅನುವಾದ ಮಾಡುವ ಭಾಷೆಯಲ್ಲಿ ಪಾಲಕನನ್ನು ಸೂಚಿಸುವ ಸ್ವಾಭಾವಿಕ ವಿಧಾನವನ್ನು ಸೂಚಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ಅರಸ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೇತ್ರ.01:16-18
- ದಾನಿ.04:36-37
- ಯೆಶಯಾ.02:9-11
- ಯೂದಾ.01:24-25
- ಮೀಕ.05:4-5

ಪದ ಡೇಟಾ:

- Strong's: H1347, H1348, H1420, H1923, H1926, H1935, H7238, G3168, G3172

ಮಹಾ ಯಾಜಕ

ಪದದ ಅರ್ಥವಿವರಣೆ:

“ಮಹಾ ಯಾಜಕನು” ಎನ್ನುವ ಮಾತು ಇಸ್ರಾಯೇಲ್ಯರ ಎಲ್ಲಾ ಯಾಜಕರುಗಳಿಗೆ ನಾಯಕನಾಗಿ ವರ್ಷಕ್ಕೊಮ್ಮೆ ಸೇವೆ ಮಾಡುವುದಕ್ಕೆ ನೇಮಿಸಲ್ಪಟ್ಟಿರುವ ಒಬ್ಬ ವಿಶೇಷ ಯಾಜಕನನ್ನು ಸೂಚಿಸುತ್ತದೆ.

- ಮಹಾ ಯಾಜಕನಿಗೆ ವಿಶೇಷವಾದ ಬಾಧ್ಯತೆಗಳಿರುತ್ತವೆ. ವರ್ಷಕ್ಕೊಮ್ಮೆ ವಿಶೇಷವಾದ ಬಲಿಯಾಗವನ್ನು ಅರ್ಪಿಸುವುದಕ್ಕೆ ದೇವಾಲಯದಲ್ಲಿರುವ ಅತೀ ಪರಿಶುದ್ಧವಾದ ಸ್ಥಳದೊಳಗೆ ಹೋಗುವುದಕ್ಕೆ ಅನುಮತಿಸಲ್ಪಟ್ಟ ಏಕೈಕ ವ್ಯಕ್ತಿಯಾಗಿರುತ್ತಾನೆ.
- ಇಸ್ರಾಯೇಲ್ಯರಲ್ಲಿ ಅನೇಕ ಯಾಜಕರು ಇರುತ್ತಾರೆ, ಆದರೆ ಆ ಸಮಯದಲ್ಲಿ ಕೇವಲ ಒಬ್ಬ ಮಹಾ ಯಾಜಕನು ಮಾತ್ರವೇ ಹೋಗಬೇಕು.
- ಯೇಸು ಬಂಧಿಸಲ್ಪಟ್ಟಾಗ, ಕಾಯಫ ಅಧಿಕಾರಿಕ ಪ್ರಧಾನ ಯಾಜಕನಾಗಿದ್ದನು. ಕಾಯಫ ಮಾಮನಾದ ಅನ್ನನು ಕುರಿತಾಗಿಯೂ ದಾಖಲಿಸಲಾಗಿದೆ, ಯಾಕಂದರೆ ಇವನು ಮಾಜಿ ಪ್ರಧಾನ ಯಾಜಕನಾಗಿದ್ದನು, ಬಹುಶಃ ಆ ಸಮಯದಲ್ಲಿ ಜನರ ಮೇಲೆ ಅಧಿಕಾರ ಮತ್ತು ಶಕ್ತಿಯನ್ನು ಹೊಂದಿದವನಾಗಿರಬಹುದು.

ಅನುವಾದ ಸಲಹೆಗಳು:

- “ಮಹಾ ಯಾಜಕ” ಎನ್ನುವ ಪದವನ್ನು “ಅತಿ ಮುಖ್ಯ ಯಾಜಕ” ಅಥವಾ “ಅತ್ಯುನ್ನತ ಶ್ರೇಣಿ ಹೊಂದಿದ ಯಾಜಕ” ಎಂದೂ ಅನುವಾದ ಮಾಡಬಹುದು.
- ಈ ಮಹಾ ಯಾಜಕ ಎನ್ನುವ ಈ ಪದಕ್ಕಿಂತ “ಪ್ರಧಾನ ಯಾಜಕ” ಎನ್ನುವ ಪದವು ಬೇರೆಯಾಗಿರುತ್ತದೆ. ಇದನ್ನ ಒಂದುಸಲ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಅನ್ನ, ಕಾಯಫ, ಪ್ರಧಾನ ಯಾಜಕ, ಯಾಜಕ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.05:26-28
- ಅಪೊ.ಕೃತ್ಯ.07:1-3
- ಅಪೊ.ಕೃತ್ಯ.09:1-2
- ವಿಮೋ.30:10
- ಇಬ್ರಿ.06:19-20
- ಯಾಜಕ.16:32-33
- ಲೂಕ.03:1-2
- ಮಾರ್ಕ.02:25-26
- ಮತ್ತಾಯ.26:3-5
- ಮತ್ತಾಯ.26:51-54

ಸತ್ಯವೇದದಿಂದ ಉದಾಹರಣೆಗಳು:

- **13:08** _ ಮಹಾ ಯಾಜಕನನ್ನು _ ಬಿಟ್ಟು ಯಾರೂ ಆ ತೆರೆಯ ಆ ಕಡೆಗೆ ಹೋಗಬಾರದು, ಯಾಕಂದರೆ ದೇವರು ಆ ಸ್ಥಳದಲ್ಲಿ ನಿವಾಸವಾಗಿರುತ್ತಾರೆ.
- **21:07** ಬರುವ ಮೆಸ್ಸೀಯನು ಪರಿಪೂರ್ಣನಾದ _ ಮಹಾ ಯಾಜಕನಾಗಿರುತ್ತಾನೆ _, ಈತನೇ ದೇವರಿಗೆ ತನ್ನನ್ನು ತಾನೇ ಪರಿಪೂರ್ಣವಾದ ಸರ್ವಾಂಗಹೋಮವನ್ನಾಗಿ ಅರ್ಪಿಸಿಕೊಲ್ಲುತ್ತಾನೆ.
- **38:03** ಯೆಹೂದ್ಯ ನಾಯಕರೆಲ್ಲರೂ _ ಪ್ರಧಾನ ಯಾಜನಿಂದ _ ನಡೆಸಲ್ಪಟ್ಟರು, ಯೇಸುವನ್ನು ಹಿಡಿಸಿಕೊಡುವುದಕ್ಕೆ ಯೂದಾನಿಗೆ ಮೂವತ್ತು ಬೆಳ್ಳಿ ನಾಣ್ಯಗಳನ್ನು ಕೊಟ್ಟರು.
- **39:01** ಸೈನಿಕರು ಯೇಸುವನ್ನು _ ಮಹಾ ಯಾಜಕನ _ ಮನೆಗೆ ಕರೆದುಕೊಂಡು ಹೋದರು, ಅಲ್ಲಿ _ ಮಹಾ ಯಾಜಕನಿಂದ _ ಯೇಸುವಿಗೆ ಪ್ರಶ್ನೆ ಹಾಕುವುದಕ್ಕೆ ಕರೆದೊಯ್ದರು.
- **39:03** ಕೊನೆಗೆ, _ ಮಹಾ ಯಾಜಕನು _ ಯೇಸುವನ್ನು ನೇರವಾಗಿ ನೋಡಿದನು ಮತ್ತು “ನೀನು ಮೆಸ್ಸೀಯನೋ, ಜೀವಿಸುವ ದೇವರ ಮಗನೋ? ನಮಗೆ ಹೇಳು” ಎಂದು ಕೇಳಿದನು.
- **44:07** ಇದಾದನಂತರ ಆ ಮರುದಿನದಂಡು, ಯೆಹೂದ್ಯರ ನಾಯಕರು ಪೇತ್ರನನ್ನು ಮತ್ತು ಯೋಹಾನನನ್ನು _ ಮಹಾ ಯಾಜಕನ _ ಬಳಿಗೆ ಮತ್ತು ಇತರ ನಾಯಕರ ಬಳಿಗೆ ಕರೆದುಕೊಂಡು ಬಂದರು.
- **45:02** ಅದಕ್ಕಾಗಿ ಧರ್ಮದ ನಾಯಕರು ಸ್ತೆಫೆನನನ್ನು ಬಂಧಿಸಿ, _ ಮಹಾ ಯಾಜಕನ _ ಬಳಿಗೆ ಕರೆದುಕೊಂಡು ಬಂದರು ಮತ್ತು ಯೆಹೂದ್ಯರ ಇತರ ನಾಯಕರು ಸ್ತೆಫೆನನ ಕುರಿತಾಗಿ ತಪ್ಪಾದ ಸಾಕ್ಷಿಗಳನ್ನು ಹೆಚ್ಚಾಗಿ ಹೊರಿಸಿದರು.
- **46:01** ದಮಸ್ಕನಲ್ಲಿರುವ ಕ್ರೈಸ್ತರನ್ನು ಬಂಧಿಸಿ, ಅವರನ್ನು ಯೆರೂಸಲೇಮಿಗೆ ಕರೆದುಕೊಂಡು ಬರುವುದಕ್ಕೆ _ ಮಹಾ ಯಾಜಕನು _ ಸೌಲನಿಗೆ ಅನುಮತಿ ಕೊಟ್ಟನು.

- **48:06** ಯೇಸು ದೊಡ್ಡ _ ಮಹಾ ಯಾಜಕನಾಗಿರುತ್ತಾನೆ _ . ಇತರ ಯಾಜಕರಂತಲ್ಲದೆ, ಪ್ರಪಂಚದಲ್ಲಿರುವ ಪ್ರತಿಯೊಬ್ಬರ ಪಾಪಗಳನ್ನು ತೆಗೆದುಹಾಕುವುದಕ್ಕೆ ಒಂದೇ ಸಲ ಬಲಿಯಾಗಿ ತನ್ನನ್ನು ತಾನು ಅರ್ಪಿಸಿಕೊಂಡನು. ಯೇಸು ಪರಿಪೂರ್ಣನಾದ _ ಮಹಾ ಯಾಜಕನಾಗಿದ್ದನು _, ಯಾಕಂದರೆ ಪ್ರತಿಯೊಬ್ಬ ಮನುಷ್ಯನು ಮಾಡಿರುವ ಪ್ರತಿಯೊಂದು ಪಾಪಕ್ಕೆ ಬರಬೇಕಾದ ಶಿಕ್ಷೆಯನ್ನು ಆತನೇ ವಹಿಸಿದ್ದಾನೆ.

ಪದ ಡೇಟಾ:

- Strong's: H7218, H1419, H3548, G748, G749

ಮಹಾಯಾಜಕನ ಕವಚ (ಏಫೋದ್)

ಪದದ ಅರ್ಥವಿವರಣೆ

ಏಫೋದ್ ಎನ್ನುವುದು ಇಸ್ರಾಯೇಲ್ ಯಾಜಕರು ಧರಿಸುತ್ತಿದ್ದ ಮುಂಗವಚವಾಗಿತ್ತು. ಅದಕ್ಕೆ ಎರಡು ಭಾಗಗಳಿದ್ದವು, ಮುಂದೆ ಮತ್ತು ಹಿಂದೆ, ಆ ಎರಡು ಭಾಗಗಳನ್ನು ಭುಜಗಳ ಮೇಲೆ ಕಟ್ಟಿಕೊಳ್ಳುತ್ತಿದ್ದರು ಮತ್ತು ಸೊಂಟಕ್ಕೆ ನಡಿಕಟ್ಟಿಕೊಳ್ಳುತ್ತಿದ್ದರು.

- ಒಂದು ವಿಧವಾದ ಏಫೋದ್ ನಾರೆಯಿಂದ ಮಾಡಲ್ಪಡುತ್ತಿತ್ತು ಮತ್ತು ಅದನ್ನು ಸಾಮಾನ್ಯವಾದ ಯಾಜಕರು ಧರಿಸುತ್ತಿದ್ದರು.
- ಮಹಾಯಾಜಕನು ಧರಿಸುತ್ತಿದ್ದ ಏಫೋದ್ ಬಂಗಾರ, ನೀಲಿ, ನೇರಳೆ ಮತ್ತು ಕೆಂಪು ಬಣ್ಣಗಳ ನೂಲುನಿಂದ ಕಸೂತಿ ಕೆಲಸ ಮಾಡಲ್ಪಟ್ಟಿತ್ತು.
- ಮಹಾಯಾಜಕನ ಏಫೋದ್ ಮುಂಭಾಗದಲ್ಲಿ ಎದೆಗೆ ಧರಿಸುವ ಪದಕವಿತ್ತು. ಎದೆಗೆ ಧರಿಸುವ ಪದಕ ಹಿಂಭಾಗದಲ್ಲಿ ಊರೀಮ್ ಮತ್ತು ತುಮ್ಮೀಮ್ (ಪ್ರಕಟಣೆ ಮತ್ತು ಸತ್ಯ) ಎಂಬ ಕಲ್ಲುಗಳನ್ನು ಇಡಲ್ಪಟ್ಟಿದ್ದವು, ಕೆಲವು ವಿಷಯಗಳಲ್ಲಿ ಯೆಹೋವನ ಚಿತ್ತವನ್ನು ತಿಳಿದುಕೊಳ್ಳಲು ಈ ಕಲ್ಲುಗಳನ್ನು ಉಪಯೋಗಿಸುತ್ತಿದ್ದರು.
- ನ್ಯಾಯಸ್ಥಾಪಕನಾದ ಗಿದ್ಯೋನ್ ಮೂರ್ಖವಾಗಿ ಎದೆಗೆ ಧರಿಸುವ ಪದಕವನ್ನು ಮಾಡಿದನು ಮತ್ತು ಇಸ್ರಾಯೇಲ್ ಅದನ್ನು ವಿಗ್ರಹವಾಗಿ ಆರಾಧಿಸಿದರು.

(ಈ ಪದಗಳನ್ನು ಸಹ ನೋಡಿರಿ : ಯಾಜಕನು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.02:18-19
- ವಿಮೋ.28:4-5
- ಹೊಶೆಯ.03:4-5
- ನ್ಯಾಯ.08:27-28
- ಯಾಜ.08:6-7

ಪದ ಡೇಟಾ:

- Strong's: H641, H642, H646

ಮಹಿಮೆ, ಮಹತ್ವವುಳ್ಳ, ಮಹಿಮೆಪಡಿಸು

ಪದದ ಅರ್ಥವಿವರಣೆ:

"ಮಹಿಮೆ" ಎಂಬ ಪದವು ಬೆಲೆ, ಮೌಲ್ಯ, ಪ್ರಾಮುಖ್ಯತೆ, ಗೌರವ, ವೈಭವ ಅಥವಾ ಗಾಂಭೀರ್ಯ ಸೇರಿದಂತೆ ಪರಿಕಲ್ಪನೆಗಳ ಕುಟುಂಬಕ್ಕೆ ಒಂದು ಸಾಮಾನ್ಯ ಪದವಾಗಿದೆ. “ಮಹಿಮೆಪಡಿಸು” ಎಂಬ ಪದದ ಅರ್ಥ ಯಾರಿಗಾದರೂ ಅಥವಾ ಯಾವುದಕ್ಕೂ ಮಹಿಮೆಯನ್ನು ಸೂಚಿಸುವುದು, ಅಥವಾ ಏನಾದರೂ ಅಥವಾ ಯಾರಾದರೂ ಎಷ್ಟು ಮಹತ್ವವುಳ್ಳದ್ದು ಎಂಬುದನ್ನು ತೋರಿಸುವುದು ಅಥವಾ ಹೇಳುವುದು

- ಸತ್ಯವೇದದಲ್ಲಿ "ಮಹಿಮೆ" ಎಂಬ ಪದವನ್ನು ವಿಶೇಷವಾಗಿ ದೇವರನ್ನು ವಿವರಿಸಲು ಬಳಸಲಾಗುತ್ತದೆ, ಅವರು ಹೆಚ್ಚು ಮೌಲ್ಯಯುತ, ಹೆಚ್ಚು ಯೋಗ್ಯರು, ಹೆಚ್ಚು ಮುಖ್ಯರು, ಹೆಚ್ಚು ಗೌರವಾನ್ವಿತರು, ಹೆಚ್ಚು ಭವ್ಯರು ಮತ್ತು ಲೋಕದಲ್ಲಿರುವ ಎಲ್ಲರಿಗಿಂತ ಅಥವಾ ಭವ್ಯವಾದವರು. ಅವನ ಪಾತ್ರದ ಬಗ್ಗೆ ಎಲ್ಲವೂ ಅವನ ಮಹಿಮೆಯನ್ನು ತಿಳಿಸುತ್ತದೆ.
- ಜನರು ಅದ್ಭುತ ಕಾರ್ಯಗಳ ಬಗ್ಗೆ ಹೇಳುವದರ ಮೂಲಕ ದೇವರನ್ನು ಮಹಿಮೆಪಡಿಸಬಹುದು. ಅವರು ದೇವರ ಪಾತ್ರಕ್ಕೆ ಅನುಗುಣವಾಗಿ ಜೀವಿಸುವ ಮೂಲಕ ದೇವರನ್ನು ವೈಭವೀಕರಿಸಬಹುದು, ಏಕೆಂದರೆ ಹಾಗೆ ಮಾಡುವುದರಿಂದ ಅವನ ಮೌಲ್ಯ, ಪ್ರಾಮುಖ್ಯತೆ, ಗೌರವ, ವೈಭವ ಮತ್ತು ಮಹಿಮೆಯನ್ನು ಇತರರಿಗೆ ತೋರಿಸುತ್ತದೆ.
- “ಮಹಿಮೆಯಲ್ಲಿ” ಎಂಬುದರ ಅಭಿವ್ಯಕ್ತಿ ಎಂದರೆ ಯಾವುದರ ಬಗ್ಗೆ ಹೆಮ್ಮೆ ಪಡುವುದು ಅಥವಾ ಅಹಂಕಾರ ಪಡುವುದು.

ಹಳೆಯ ಒಡಂಬಡಿಕೆ

- ಹಳೆಯ ಒಡಂಬಡಿಕೆಯಲ್ಲಿ "ಯೆಹೋವನ ಮಹಿಮೆ" ಎಂಬ ನಿರ್ದಿಷ್ಟ ನುಡಿಗಟ್ಟು ಸಾಮಾನ್ಯವಾಗಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಯೆಹೋವನ ಉಪಸ್ಥಿತಿಯ ಕೆಲವು ಗ್ರಹಿಸಬಹುದಾದ ಅಭಿವ್ಯಕ್ತಿಯನ್ನು ಸೂಚಿಸುತ್ತದೆ.

ಹೊಸ ಒಡಂಬಡಿಕೆ

- ತಂದೆಯಾದ ದೇವರು ಯೇಸು ಎಷ್ಟು ಮಹತ್ವವುಳ್ಳವರು ಎಂದು ಪೂರ್ಣ ಪ್ರಮಾಣದಲ್ಲಿ ಎಲ್ಲ ಜನರಿಗೆ ತಿಳಿಸುವ ಮೂಲಕ ದೇವರ ಮಗನನ್ನು ಮಹಿಮೆಪಡಿಸುವನು.
- ಕ್ರಿಸ್ತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರೂ ಆತನೊಂದಿಗೆ ಮಹಿಮೆ ಹೊಂದುತ್ತಾರೆ. "ಮಹಿಮೆಪಡಿಸು " ಎಂಬ ಪದದ ಈ ಬಳಕೆಯು ಒಂದು ವಿಶಿಷ್ಟ ಅರ್ಥವನ್ನು ಹೊಂದಿದೆ. ಕ್ರಿಸ್ತನಲ್ಲಿ ನಂಬಿಕೆಯಿಡುವ ಜನರನ್ನು ಜೀವಕ್ಕೆ ಏರಿಸಿದಾಗ, ಯೇಸುವಿನ ಪುನರುತ್ಥಾನದ ನಂತರ ಕಾಣಿಸಿಕೊಂಡಂತೆ ಅವರನ್ನು ದೈಹಿಕವಾಗಿ ಬದಲಾಯಿಸಲಾಗುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಕ್ಕೆ ಅನುಗುಣವಾಗಿ, “ಮಹಿಮೆಯನ್ನು ಭಾಷಾಂತರಿಸಲು ವಿಭಿನ್ನ ಮಾರ್ಗಗಳಲ್ಲಿ “ವೈಭವ” ಅಥವಾ “ಗಾಂಭೀರ್ಯ” ಅಥವಾ “ಅದ್ಭುತ ಶ್ರೇಷ್ಠತೆ” ಅಥವಾ “ವಿಪರೀತ ಮೌಲ್ಯ” ಸೇರಿವೆ.
- “ಮಹತ್ವವುಳ್ಳ” ಎಂಬ ಪದವನ್ನು “ಮಹಿಮೆಯಿಂದ ತುಂಬಿದೆ” ಅಥವಾ “ಅತ್ಯಂತ ಅಮೂಲ್ಯವಾದದ್ದು” ಅಥವಾ “ಪ್ರಕಾಶಮಾನವಾಗಿ ಹೊಳೆಯುವ” ಅಥವಾ “ಅದ್ಭುತವಾದ ಭವ್ಯ” ಎಂದು ಅನುವಾದಿಸಬಹುದು.
- “ದೇವರಿಗೆ ಮಹಿಮೆ ಕೊಡು” ಎಂಬ ಅಭಿವ್ಯಕ್ತಿಯನ್ನು “ದೇವರ ಶ್ರೇಷ್ಠತೆಯನ್ನು ಗೌರವಿಸು” ಅಥವಾ “ದೇವರ ವೈಭವದಿಂದಾಗಿ ದೇವರನ್ನು ಸ್ತುತಿಸು” ಅಥವಾ “ದೇವರು ಎಷ್ಟು ಶ್ರೇಷ್ಠನೆಂದು ಇತರರಿಗೆ ತಿಳಿಸಿ” ಎಂದು ಅನುವಾದಿಸಬಹುದು.
- “ಮಹಿಮೆಪಡಿಸು” ಎಂಬ ಅಭಿವ್ಯಕ್ತಿಯನ್ನು “ಹೊಗಳಿಕೆ” ಅಥವಾ “ಹೆಮ್ಮೆ ಪಡಿಸು” ಅಥವಾ “ಹೆಮ್ಮೆಪಡುವ” ಅಥವಾ “ಆನಂದವನ್ನು ಪಡೆದುಕೊಳ್ಳಿ” ಎಂದೂ ಅನುವಾದಿಸಬಹುದು.
- “ಮಹಿಮೆಪಡಿಸು” ಅನ್ನು “ಮಹಿಮೆ ಕೊಡು” ಅಥವಾ “ಮಹಿಮೆಯನ್ನು ತಂದುಕೊಡು” ಅಥವಾ “ಉತ್ತಮವಾಗಿ ಕಾಣಿಸಿಕೊಳ್ಳಲು ಕಾರಣ” ಎಂದೂ ಅನುವಾದಿಸಬಹುದು.
- “ದೇವರನ್ನು ಮಹಿಮೆಪಡಿಸು” ಎಂಬ ಪದವನ್ನು “ದೇವರನ್ನು ಸ್ತುತಿಸು” ಅಥವಾ “ದೇವರ ಶ್ರೇಷ್ಠತೆಯ ಬಗ್ಗೆ ಮಾತನಾಡು” ಅಥವಾ “ದೇವರು ಎಷ್ಟು ಶ್ರೇಷ್ಠನೆಂದು ತೋರಿಸು” ಅಥವಾ “ದೇವರನ್ನು ಗೌರವಿಸಿ (ಅವನನ್ನು ಪಾಲಿಸುವ ಮೂಲಕ)” ಎಂದು ಅನುವಾದಿಸಬಹುದು.
- “ಮಹಿಮೆಹೊಂದು ” ಎಂಬ ಪದವನ್ನು “ಬಹಳ ಶ್ರೇಷ್ಠವೆಂದು ತೋರಿಸಬೇಕು” ಅಥವಾ “ಹೊಗಳಬೇಕು” ಅಥವಾ “ಉದಾತ್ತರಾಗಿರಿ” ಎಂದು ಅನುವಾದಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ಹೆಚ್ಚಿಸು, ವಿಧೇಯತೆ, ಸ್ತುತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.24:16
- ಅರಣ್ಯ.14:9-10

- ಯೆಶಯಾ.35:0 2
- ಲೂಕ.18:43
- ಲೂಕ.02:9
- ಯೋಹಾನ.12:28
- ಅಪೊ.ಕೃತ್ಯ.03:13-14
- ಅಪೊ.ಕೃತ್ಯ.07:1-3
- ರೋಮಾ.08:17
- 1 ಕೊರಿಂಥ.06:19-20
- ಫಿಲಿಪ್ಪ.02:14-16
- ಫಿಲಿಪ್ಪ.04:19
- ಕೊಲೊಸ್ಸೆ.03:1-4
- 1 ಥೆಸ್ಸ.02:5
- ಯಾಕೋಬ.02:1-4
- 1 ಪೇತ್ರ.04:15-16
- ಪ್ರಕ.15:4

ಸತ್ಯವೇದದಿಂದ ಉದಾಹರಣೆಗಳು:

- **23:07**

ತಕ್ಷಣವೇ, ಆಕಾಶಗಳು ದೇವರನ್ನು ಸ್ತುತಿಸುತ್ತಿರುವ ದೂತರಗಳೊಂದಿಗೆ ತುಂಬಿಸಲ್ಪಟ್ಟಿತು, ಆ ದೂತರು "ಪರಲೋಕದಲ್ಲಿರುವ ದೇವರಿಗೆ _ ಮಹಿಮೆಯುಂಟಾಗಲಿ _ ಮತ್ತು ಆತನಿಗೆ ಇಷ್ಟವಾದ ಜನರಿಗೆ ಭೂಮಿಯ ಮೇಲೆ ಸಮಾಧಾನವಾಗಲಿ" ಎಂದು ಹೇಳಿದವು.

- **25:06** ಆದನಂತರ ಸೈತಾನನು ಲೋಕದಲ್ಲಿರುವ ಎಲ್ಲಾ ರಾಜ್ಯಗಳನ್ನು ಮತ್ತು ಅವುಗಳ _ ಮಹಿಮೆಯನ್ನು _ ಯೇಸುವಿಗೆ ತೋರಿಸಿ, "ನನಗೆ ಅಡ್ಡಬಿದ್ದು ನಮಸ್ಕಾರ ಮಾಡಿ ಆರಾಧನೆ ಮಾಡಿದರೆ ನಾನು ನಿನಗೆ ಈ ಎಲ್ಲವನ್ನು ಅನುಗ್ರಹಿಸುತ್ತೇನೆ" ಎಂದು ಹೇಳಿದನು.
- **37:01**ಈ ವಾರ್ತೆಯನ್ನು ಯೇಸು ಕೇಳಿಸಿಕೊಂಡಾಗ, "ಈ ರೋಗವು ಮರಣದಲ್ಲಿ ಅಂತ್ಯವಾಗುವುದಿಲ್ಲ, ಆದರೆ ಇದು ದೇವರ _ ಮಹಿಮೆಗಾಗಿ _ ಬಂದಿರುತ್ತದೆ" ಎಂದು ಹೇಳಿದನು.
- **37:08**

"ನೀನು ನನ್ನಲ್ಲಿ ನಂಬಿಕೆಯಿಡುವುದಾದರೆ ?", ನೀನು ದೇವರ _ ಮಹಿಮೆಯನ್ನು _ ಕಾಣುವಿ ಎಂದು ನಾನು ನಿನಗೆ ಹೇಳಲಿಲ್ಲವೋ" ಎಂದು ಯೇಸು ಹೇಳಿದನು.

ಪದದ ಮಾಹಿತಿ :

- Strong's: H117, H142, H155, H215, H1342, H1921, H1926, H1935, H1984, H3367, H3513, H3519, H3520, H6286, H6643, H7623, H8597, G1391, G1392, G1740, G1741, G2744, G4888

ಮೂರ್ಖ, ಮೂರ್ಖತೆ, ಮೂರ್ಖತನ

ಪದದ ಅರ್ಥವಿವರಣೆ:

“ಮೂರ್ಖ” ಎನ್ನುವ ಪದವು ಯಾವಾಗಲೂ ತಪ್ಪು ನಿರ್ಣಯಗಳನ್ನು ತೆಗೆದುಕೊಳ್ಳುವ ವ್ಯಕ್ತಿಯನ್ನು ಸೂಚಿಸುತ್ತದೆ, ವಿಶೇಷವಾಗಿ ಅವಿಧೇಯತೆಯನ್ನು ಆರಿಸಿಕೊಳ್ಳುವುದು. “ಮೂರ್ಖತೆ” ಎನ್ನುವ ಪದವು ಜ್ಞಾನಿಯಾಗದ ಅಥವಾ ಜ್ಞಾನವಿಲ್ಲದ ನಡತೆಯನ್ನು ವಿವರಿಸುತ್ತದೆ.

- ಸತ್ಯವೇದದಲ್ಲಿ “ಮೂರ್ಖ” ಎನ್ನುವ ಪದವು ಸಹಜವಾಗಿ ದೇವರನ್ನು ನಂಬದ ಅಥವಾ ದೇವರಿಗೆ ವಿಧೇಯನಾಗದ ವ್ಯಕ್ತಿಯನ್ನು ಸೂಚಿಸುತ್ತದೆ. ಇದು ಯಾವಾಗಲೂ ದೇವರಲ್ಲಿ ನಂಬಿಕೆಯಿಡುವ ಮತ್ತು ದೇವರಿಗೆ ವಿಧೇಯನಾಗುವ ವ್ಯಕ್ತಿಗೆ ವ್ಯತಿರಿಕ್ತವಾಗಿದೆ.
- ಕೀರ್ತನೆಗಳಲ್ಲಿ ದೇವರನ್ನು ನಂಬದ ವ್ಯಕ್ತಿ ಮೂರ್ಖನೆಂದು ಮತ್ತು ದೇವರು ಇದ್ದಾರೆನ್ನುವುದಕ್ಕೆ ದೇವರು ಉಂಟು ಮಾಡಿದ ಸೃಷ್ಟಿಯಲ್ಲಿರುವ ಎಲ್ಲಾ ಆಧಾರಗಳನ್ನು ನಿರ್ಲಕ್ಷ್ಯ ಮಾಡುವ ವ್ಯಕ್ತಿಯನ್ನು ಮೂರ್ಖನೆಂದು ದಾವೀದನು ವಿವರಿಸಿದ್ದಾನೆ,
- ಹಳೇ ಒಡಂಬಡಿಕೆಯಲ್ಲಿರುವ ಜ್ಞಾನೋಕ್ತಿಗಳ ಪುಸ್ತಕವು ಕೂಡ ಮೂರ್ಖ ಎಂದರೇನು, ಅಥವಾ ಮೂರ್ಖತೆಯ ವ್ಯಕ್ತಿ ಎಂದರೇನು ಎನ್ನುವುದಕ್ಕೆ ಅನೇಕ ವಿವರಣೆಗಳನ್ನು ಕೊಟ್ಟಿರುವುದನ್ನು ನಾವು ನೋಡಬಹುದು.
- “ಮೂರ್ಖತನ” ಎನ್ನುವ ಪದವು ಜ್ಞಾನದಿಂದಿರದ ಪ್ರತಿಯೊಂದು ಕ್ರಿಯೆಯನ್ನು ಸೂಚಿಸುತ್ತದೆ, ಯಾಕಂದರೆ ಅದು ದೇವರಿಗೆ ವಿರುದ್ಧವಾಗಿರುತ್ತದೆ. “ಮೂರ್ಖತನ” ಎನ್ನುವುದು ಅನೇಕಬಾರಿ ಅಪಾಯಕರವಾದ ಅಥವಾ ಹಾಸ್ಯಾಸ್ಪದವಾದ ಯಾವುದಾದರೊಂದರ ಅರ್ಥವನ್ನು ಒಳಗೊಂಡಿರುತ್ತದೆ.

ಅನುವಾದ ಸಲಹೆಗಳು:

- “ಮೂರ್ಖ” ಎನ್ನುವ ಪದವನ್ನು “ಮೂರ್ಖತೆಯಿಂದಿರುವ ವ್ಯಕ್ತಿ” ಅಥವಾ “ಜ್ಞಾನಿಯಲ್ಲದ ವ್ಯಕ್ತಿ” ಅಥವಾ “ಪ್ರಜ್ಞಾಶೂನ್ಯನಾದ ವ್ಯಕ್ತಿ” ಅಥವಾ “ಅದೈವಿಕ ವ್ಯಕ್ತಿ” ಎಂದೂ ಅನುವಾದ ಮಾಡಬಹುದು.
- “ಮೂರ್ಖತೆ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ತಿಳುವಳಿಕೆ ಕೊರತೆ” ಅಥವಾ “ಅಜ್ಞಾನಿ” ಅಥವಾ “ಪ್ರಜ್ಞಾಶೂನ್ಯತೆ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಜ್ಞಾನಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಪ್ರಸಂಗಿ.01:17
- ಎಫೆಸ.05:15-15
- ಗಲಾತ್ಯ.03:3
- ಆದಿ.31:26-28
- ಮತ್ತಾಯ.07:26
- ಮತ್ತಾಯ.25:8
- ಜ್ಞಾನೋ.13:16
- ಕೀರ್ತನೆ.049:13

ಪದ ಡೇಟಾ:

- Strong's: H191, H196, H200, H1198, H1984, H2973, H3684, H3687, H3688, H3689, H3690,

H5014 H5034, H5036, H5039, H5528, H5529, H5530, H5531, H6612, H8417, H8602, H8604, G453, G454, G781, G801, G877, G878, G2757, G3150, G3154, G3471, G3472, G3473, G3474, G3912

ಮೂಲೆಗಲ್ಲು

ಪದದ ಅರ್ಥವಿವರಣೆ:

“ಮೂಲೆಗಲ್ಲು” ಎನ್ನುವ ಪದವು ಭವನದ ಅಡಿಪಾಯದ ಮೂಲೆಯಲ್ಲಿಡುವ ವಿಶೇಷವಾಗಿ ಕತ್ತರಿಸಿದ ಒಂದು ದೊಡ್ಡ ಕಲ್ಲನ್ನು ಸೂಚಿಸುತ್ತದೆ.

- ಭವನ ನಿರ್ಮಾಣಕ್ಕೆ ಉಪಯೋಗಿಸುವ ಇತರ ಬೇರೆ ಕಲ್ಲುಗಳನ್ನು ಮೂಲೆಗಲ್ಲಿಗೆ ತಕ್ಕಂತೆ ಅಳತೆ ಮಾಡಿ ಅವುಗಳನ್ನು ಇಡುತ್ತಾರೆ.
- ಇಡೀ ನಿರ್ಮಾಣವೆಲ್ಲಾ ಸ್ಥಿರವಾಗಿ ಮತ್ತು ಬಲವಾಗಿ ಇರುವುದಕ್ಕೆ ಇದು ತುಂಬಾ ಪ್ರಾಮುಖ್ಯವಾದ ಕಲ್ಲಾಗಿರುತ್ತದೆ.
- ಹೊಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನನ್ನು “ಮೂಲೆಗಲ್ಲು” ಎಂದು ಮತ್ತು ವಿಶ್ವಾಸಿಗಳೆಲ್ಲರನ್ನು ಅದರ ಮೇಲೆ ಕಟ್ಟುವ ನಿರ್ಮಾಣದ ಕಲ್ಲುಗಳೆಂದು ಅಲಂಕಾರಿಕವಾಗಿ ಉಪಯೋಗಿಸಿ ಹೇಳಿದ್ದಾರೆ.
- ಭವನದ ಮೂಲೆಗಳ್ಳು ಯಾವರೀತಿ ಇಡೀ ನಿರ್ಮಾಣವನ್ನು ನಿರ್ಧರಿಸುತ್ತದೋ ಮತ್ತು ಆ ಭವನಕ್ಕೆ ಬೆಂಬಲವನ್ನು ಕೊಡುತ್ತದೋ ಅದೇ ರೀತಿ ಯೇಸುಕ್ರಿಸ್ತನು ಕೂಡ ವಿಶ್ವಾಸಿಗಳೆಲ್ಲರಿಗೂ ಮೂಲೆಗಲ್ಲಾಗಿದ್ದು ಬೆಂಬಲವನ್ನು ಕೊಡುತ್ತಾನೆ.

ಅನುವಾದ ಸಲಹೆಗಳು:

- “ಮೂಲೆಗಲ್ಲು” ಎನ್ನುವ ಪದವನ್ನು “ಭವನದ ಮುಖ್ಯ ಕಲ್ಲು” ಅಥವಾ “ಬುನಾದಿ ಕಲ್ಲು” ಎಂದೂ ಅನುವಾದ ಮಾಡಬಹುದು.
- ಅನುವಾದ ಮಾಡುವ ಭಾಷೆಯಲ್ಲಿ ಭವನದ ಬುನಾದಿಗೆ ಪ್ರಾಮುಖ್ಯವಾಗಿ ಬೆಂಬಲವನ್ನು ಕೊಡುವ ಕಲ್ಲಿನ ಇನ್ನೊಂದು ಹೆಸರು ಇರುವುದಾದರೆ ಅದನ್ನು ಉಪಯೋಗಿಸಿರಿ. ಇದ್ದರೂ ಈ ಪದವನ್ನು ಕೂಡ ಉಪಯೋಗಿಸಬಹುದು.
- ಈ ಪದವನ್ನು “ಭವನದ ಮೂಲೆಯಲ್ಲಿ ಹಾಕುವ ಅಡಿಪಾಯದ ಕಲ್ಲು” ಎಂದೂ ಅನುವಾದ ಮಾಡಬಹುದು.
- ಭವನದ ನಿರ್ಮಾಣವು ಭದ್ರವಾಗಿಯು ಮತ್ತು ಬಲವಾಗಿಯೂ ಇರುವುದಕ್ಕೆ ಉಪಯೋಗಿಸುವ ಒಂದು ದೊಡ್ಡ ಕಲ್ಲು ಎನ್ನುವ ಸತ್ಯಾಂಶವನ್ನು ತಿಳಿದಿರುವುದು ತುಂಬಾ ಪ್ರಾಮುಖ್ಯವಾದ ವಿಷಯ.
- ನಿರ್ಮಿಸುವ ಭವನಗಳಿಗೆ ಕಲ್ಲುಗಳನ್ನು ಉಪಯೋಗಿಸದಿದ್ದರೆ, “ದೊಡ್ಡ ಕಲ್ಲು” (ದೊಡ್ಡ ಬಂಡೆ) ಎಂದು ಅರ್ಥ ಬರುವ ಇನ್ನೊಂದು ಪದವನ್ನೂ ಉಪಯೋಗಿಸಬಹುದು, ಆದರೆ ಅದು ಚೆನ್ನಾಗಿ ರೂಪಗೊಂಡ ಮತ್ತು ಹೊಂದಿಕೊಳ್ಳುವ ಕಲ್ಪನೆಯನ್ನು ಹೊಂದಬೇಕು.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:11
- ಎಫೆಸ.02:20
- ಮತ್ತಾಯ.21:42
- ಕೀರ್ತನೆ.118:22

ಪದ ಡೇಟಾ:

- Strong's: H68, H6438, H7218, G204, G1137, G2776, G3037

ಯಜ್ಞವೇದಿ

ಪದದ ಅರ್ಥವಿವರಣೆ:

ಯಜ್ಞವೇದಿ ಎನ್ನುವುದು ಇಸ್ರಾಯೇಲ್ಯರು ದೇವರಿಗೆ ಕಾಣಿಕೆಯಾಗಿ ಪ್ರಾಣಿಗಳನ್ನು ಮತ್ತು ಧಾನ್ಯಗಳನ್ನು ಅರ್ಪಿಸುವುದಕ್ಕೆ ನಿರ್ಮಿಸಿಕೊಂಡಿರುವ ಎತ್ತರಿಸಿದ ಆವರಣವಾಗಿದೆ.

- ಸತ್ಯವೇದದ ಕಾಲದಲ್ಲಿ ಮಣ್ಣಿನಿಂದ ಅನೇಕವಾದ ಚಿಕ್ಕ ಚಿಕ್ಕ ಯಜ್ಞವೇದಿಗಳನ್ನು ಕಟ್ಟುತ್ತಿದ್ದರು ಅಥವಾ ಸ್ಥಿರವಾಗಿ ಯಾವಾಗಲೂ ನಿಂತಿರುವಂತೆ ದೊಡ್ಡ ದೊಡ್ಡ ಕಲ್ಲುಗಳನ್ನು ನಿಲ್ಲಿಸುತ್ತಿದ್ದರು.
- ಕೆಲವೊಂದು ವಿಶೇಷವಾಗಿ ಪೆಟ್ಟಿಗೆ ಆಕಾರದಲ್ಲಿರುವ ಯಜ್ಞ ವೇದಿಗಳನ್ನು ಕಟ್ಟಿಗೆಗಳಿಂದ ಮಾಡಿ, ಅದರ ಮೇಲೆ ಬಂಗಾರ, ಹಿತ್ತಾಳೆ, ಅಥವಾ ಕಂಚು ಲೋಹಗಳೊಂದಿಗೆ ಹೊದಿಸಿ ತಯಾರು ಮಾಡುತ್ತಿದ್ದರು.
- ಇಸ್ರಾಯೇಲ್ಯರ ಸುತ್ತಮುತ್ತಲು ವಾಸಮಾಡುತ್ತಿದ್ದ ಅನ್ಯಜನರು ಕೂಡ ತಮ್ಮ ದೇವತೆಗಳಿಗೆ ಬಲಿಗಳನ್ನು ಅರ್ಪಿಸುವುದಕ್ಕೆ ಯಜ್ಞವೇದಿಗಳನ್ನು ನಿರ್ಮಿಸಿಕೊಂಡಿದ್ದರು.

(ಈ ಪದಗಳನ್ನು ಸಹ ನೋಡಿರಿ : ಧೂಪ ಯಜ್ಞವೇದಿ, ಸುಳ್ಳು ದೇವರು, ಧಾನ್ಯಗಳ ಅರ್ಪಣೆ, ಬಲಿ)

ಸತ್ಯವೇದದ ಉಲ್ಲೇಖ ವಚನಗಳು:

- ಆದಿಕಾಂಡ 08:20
- ಆದಿಕಾಂಡ 22:09
- ಯಾಕೋಬ 02:21
- ಲೂಕ 11:49-51
- ಮತ್ತಾಯ 05:23
- ಮತ್ತಾಯ 23:19

ಸತ್ಯವೇದದ ಕಥೆಗಳ ಉದಾಹರಣೆಗಳು:

- **03:14** ನೋಹನು ನಾವೆಯೊಳಗೆ ಹೊರಬಂದಾಗ, ಆತನು ಒಂದು _ಯಜ್ಞವೇದಿ _ಯನ್ನು ಕಟ್ಟಿದನು ಮತ್ತು ಸರ್ವಾಂಗ ಹೋಮಕ್ಕೆ ಉಪಯೋಗಿಸುವ ಕೆಲವೊಂದು ಪ್ರಾಣಿಗಳನ್ನು ಬಲಿ ಅರ್ಪಿಸಿದನು.
- **05:08** ಅವರು ಸರ್ವಾಂಗಹೋಮ ಮಾಡುವ ಸ್ಥಳಕ್ಕೆ ಬಂದಾಗ, ಅಬ್ರಹಾಮನು ತನ್ನ ಮಗನಾದ ಇಸಾಕನ ಕೈಕಾಲುಗಳನ್ನು ಕಟ್ಟಿ ಹಾಕಿ, ಅವನನ್ನು **ಯಜ್ಞವೇದಿಯ** ಮೇಲೆ ಮಲಗಿಸಿದನು.
- **13:09** ಯಾಜಕನು ಪ್ರಾಣಿಯನ್ನು ಕೊಂದು, ಅದನ್ನು **ಯಜ್ಞವೇದಿ** ಮೇಲೆ ಸುಡುವನು.
- **16:06** ಅವನು (ಗಿದ್ಯೋನನು) ಹೊಸ ಯಜ್ಞವೇದಿಯನ್ನು ಕಟ್ಟಿ ದೇವರಿಗೆ ಸಮರ್ಪಿಸಿದನು, ವಿಗ್ರಹವನ್ನಿಡುವ ಆ ಸ್ಥಳಕ್ಕೆ ಹತ್ತಿರವಾಗಿರುವ **ಯಜ್ಞವೇದಿಯ** ಸ್ಥಳದಲ್ಲೇ ದೇವರಿಗೆ ಸರ್ವಾಂಗ ಹೋಮವನ್ನು ಅರ್ಪಿಸಿದನು.

ಪದದ ದತ್ತಾಂಶ:

- Strong's: H741, H2025, H4056, H4196, G1041, G2379

ಯಾಜಕ, ಯಾಜಕರು, ಯಾಜಕತ್ವ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ ಯಾಜಕ ಎಂದರೆ ದೇವ ಜನರ ಪ್ರತಿನಿಧಿಯಾಗಿ ದೇವರಿಗೆ ಅರ್ಪಣೆಗಳನ್ನು ಅರ್ಪಿಸಲು ಆಯ್ಕೆ ಮಾಡಿಕೊಂಡಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ. "ಯಾಜಕತ್ವ" ಎನ್ನುವ ಪದವು ಯಾಜಕನಾಗಿರುವ ಸ್ಥಿತಿ ಅಥವಾ ಯಾಜಕನ ಕರ್ತ್ಯವ್ಯವನ್ನು ಸೂಚಿಸುವ ಹೆಸರಾಗಿರುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಇಸ್ರಾಯೇಲ್ ಜನರ ಪಕ್ಷವಾಗಿ ದೇವರಿಗೆ ಯಾಜಕರಾಗಿರಲು ದೇವರು ಆರೋನನನ್ನು ಮತ್ತು ತನ್ನ ಸಂತಾನದವರನ್ನು ಆದುಕೊಂಡಿದ್ದನು.
- "ಯಾಜಕತ್ವ" ಎನ್ನುವುದು ಲೇವಿಯರ ವಂಶದಲ್ಲಿ ತಂದೆಯಿಂದ ಮಗನಿಗೆ ಹೋಗುವ ಬಾಧ್ಯತೆಯು ಮತ್ತು ಹಕ್ಕು ಆಗಿರುತ್ತದೆ.
- ಇಸ್ರಾಯೇಲ್ ಯಾಜಕರು ಜನರ ಹೋಮಗಳನ್ನು ದೇವರಿಗೆ ಅರ್ಪಿಸುವ ಬಾಧ್ಯತೆಯನ್ನು ಮತ್ತು ದೇವಾಲಯದಲ್ಲಿ ಮಾಡುವ ಕೆಲಸಗಳ ಬಾಧ್ಯತೆಗಳನ್ನು ಪಡೆದುಕೊಂಡಿದ್ದರು.
- ಯಾಜಕರು ಕೂಡ ಇತರ ಧರ್ಮ ಕಾರ್ಯಗಳನ್ನು ಮಾಡುವುದರ ಜೊತೆಗೆ ದೇವ ಜನರ ಪಕ್ಷವಾಗಿ ದೇವರಿಗೆ ಪ್ರಾರ್ಥನೆಗಳನ್ನು ನಿರಂತರವಾಗಿ ಮಾಡುತ್ತಿದ್ದರು.
- ಯಾಜಕರು ಜನರ ಮೇಲೆ ಸಾಂಪ್ರದಾಯಿಕವಾದ ಆಶೀರ್ವಾದಗಳನ್ನು ನುಡಿಯುತ್ತಿದ್ದರು ಮತ್ತು ದೇವರ ಆಜ್ಞೆಗಳನ್ನು ಆವರಿಗೆ ಬೋಧನೆ ಮಾಡುತ್ತಿದ್ದರು.
- ಯೇಸುವಿನ ಕಾಲದಲ್ಲಿ ಯಾಜಕರಲ್ಲಿ ಅನೇಕ ರೀತಿಯಾದ ಹಂತಗಳು ಇದ್ದಿದ್ದವು, ಅದರಲ್ಲಿ ಪ್ರಧಾನ ಯಾಜಕರಿದ್ದರು ಮತ್ತು ಮಹಾ ಯಾಜಕನು ಇದ್ದಿದ್ದನು.
- ದೇವರ ಸನ್ನಿಧಿಯಲ್ಲಿ ನಮಗಾಗಿ ವಿಜ್ಞಾಪನೆ ಮಾಡುವ "ಮಹೋನ್ನತನಾದ ಯಾಜಕನು" ಯೇಸುವಾಗಿದ್ದಾನೆ. ಪಾಪಗಳಿಗಾಗಿ ಅಂತಿಮ ಯಜ್ಞವನ್ನಾಗಿ ಆತನು ತನ್ನನ್ನು ತಾನೇ ಅರ್ಪಿಸಿಕೊಂಡನು. ಇದಕ್ಕೆ ಮನುಷ್ಯರ ಯಾಜಕರಿಂದ ಮಾಡುವ ಯಜ್ಞಗಳೆಲ್ಲವು ಬೇಕಾದ ಅವಶ್ಯಕತೆಯಿರುವುದಿಲ್ಲವೆಂದು ಇದರ ಅರ್ಥವಾಗಿರುತ್ತದೆ.
- ಹೊಸ ಒಡಂಬಡಿಕೆಯಲ್ಲಿ ಯೇಸುವಿನಲ್ಲಿರುವ ಪ್ರತಿಯೊಬ್ಬ ವಿಶ್ವಾಸಿ "ಯಾಜಕ"ನಾಗಿರುತ್ತಾನೆ, ಈ ವಿಶ್ವಾಸಿಯು ತನಗಾಗಿ ಮತ್ತು ತನ್ನ ಇತರ ಜನರಿಗಾಗಿ ವಿಜ್ಞಾಪನೆ ಮಾಡುವುದಕ್ಕೆ ಪ್ರಾರ್ಥನೆಯಲ್ಲಿ ದೇವರಿಗೆ ನೇರವಾಗಿ ಬರುವ ಅವಕಾಶವನ್ನು ಹೊಂದಿರುತ್ತಾನೆ.
- ಪುರಾತನ ಕಾಲಗಳಲ್ಲಿ ಬಾಳ್ ಎನ್ನುವಂತಹ ಸುಳ್ಳು ದೇವರುಗಳಿಗೆ ಅರ್ಪಣೆಗಳನ್ನು ಅರ್ಪಿಸಿದ ಅನ್ಯ ಯಾಜಕರೂ ಇದ್ದಿದ್ದರು.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ "ಯಾಜಕ" ಎನ್ನುವ ಪದವನ್ನು "ತ್ಯಾಗ ಮಾಡಿಕೊಂಡ ವ್ಯಕ್ತಿ" ಅಥವಾ "ದೇವರ ಪ್ರತಿನಿಧಿ" ಅಥವಾ "ತ್ಯಾಗ ಮಾಡಿಕೊಂಡಿರುವ ಮಧ್ಯಸ್ಥ" ಅಥವಾ "ದೇವರನ್ನು ಪ್ರತಿನಿಧಿಸುವುದಕ್ಕೆ ಆತನು ಆಯ್ಕೆ ಮಾಡಿಕೊಂಡಿರುವ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.
- ಅನುವಾದ ಮಾಡಿದ "ಯಾಜಕ" ಎನ್ನುವ ಪದವು "ಮಧ್ಯಸ್ಥ" ಎನ್ನುವ ಪದಕ್ಕೆ ವಿಭಿನ್ನವಾಗಿರಬೇಕು.
- ಕೆಲವೊಂದು ಅನುವಾದಗಳಲ್ಲಿ "ಇಸ್ರಾಯೇಲ್ ಯಾಜಕ" ಅಥವಾ "ಯೆಹೂದ್ಯ ಯಾಜಕ" ಅಥವಾ "ಯೆಹೋವನ ಯಾಜಕ" ಅಥವಾ "ಬಾಳ್ ಯಾಜಕ" ಎಂದು ಸ್ಪಷ್ಟತೆಗಾಗಿ ವಿವರಿಸಿ ಹೇಳುವುದಕ್ಕೆ ಪ್ರಾಧಾನ್ಯತೆ ಕೊಡುತ್ತಾರೆ. ಇದರಿಂದ ಇದು ಈಗಿನ ಕಾಲದ ಯಾಜಕನನ್ನು ತೋರಿಸುವುದಿಲ್ಲ.
- ಅನುವಾದ ಮಾಡಲ್ಪಟ್ಟಿರುವ "ಯಾಜಕ" ಎನ್ನುವ ಪದವು "ಪ್ರಧಾನ ಯಾಜಕ" ಮತ್ತು "ಮಹಾ ಯಾಜಕ" ಮತ್ತು "ಲೇವಿ" ಮತ್ತು "ಪ್ರವಾದಿ" ಎನ್ನುವ ಪದಗಳಿಗೆ ವಿಭಿನ್ನ ವಾಗಿರಬೇಕು.

(ಈ ಪದಗಳನ್ನು ಸಹ ನೋಡಿರಿ : ಆರೋನ, ಪ್ರಧಾನ ಯಾಜಕರು, ಮಹಾ ಯಾಜಕ, ಮಧ್ಯಸ್ಥ, ಹೋಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.06:40-42
- ಆದಿ.14:17-18
- ಆದಿ.47:20-22
- ಯೋಹಾನ.01:19-21
- ಲೂಕ.10:31-32
- ಮಾರ್ಕ.01:43-44
- ಮಾರ್ಕ.02:25-26
- ಮತ್ತಾಯ.08:4
- ಮತ್ತಾಯ.12:3-4
- ಮೀಕ.03:9-11
- ನೆಹೆ.10:28-29
- ನೆಹೆ.10:34-36
- ಪ್ರಕಟನೆ.01:4-6

ಸತ್ಯವೇದದಿಂದ ಉದಾಹರಣೆಗಳು:

- **04:07** “ಮೆಲ್ಕಿಚೆದೆಕನು ಮಹೋನ್ನತನ ದೇವರ _ ಯಾಜಕನಾಗಿದ್ದನು _”
- **13:09** ಯಾರಾದರೂ ದೇವರ ನ್ಯಾಯಪ್ರಮಾಣಕ್ಕೆ ಅವಿಧೇಯತೆಯನ್ನು ತೋರಿಸಿದ್ದರೆ, ಅವರು ದೇವರಿಗೆ ಹೋಮ ಮಾಡುವುದಕ್ಕಾಗಿ ಗುಡಾರದ ಮುಂದಿರುವ ಯಜ್ಞವೇದಿಯ ಬಳಿಗೆ ಒಂದು ಪ್ರಾಣಿಯನ್ನು ತೆಗೆದುಕೊಂಡುಬರಬೇಕು. _ ಯಾಜಕನು _ ಆ ಪ್ರಾಣಿಯನ್ನು ಕೊಂದು, ಅದನ್ನು ಯಜ್ಞವೇದಿಯ ಮೇಲಿಟ್ಟು ದಹಿಸುತ್ತಾನೆ. ಪ್ರಾಣಿಯ ರಕ್ತವು ಆ ವ್ಯಕ್ತಿಯು ಮಾಡಿದ ಪಾಪವನ್ನು ಮುಚ್ಚುತ್ತದೆ, ಮತ್ತು ಅವನನ್ನು ದೇವರ ದೃಷ್ಟಿಯಲ್ಲಿ ಶುದ್ಧನಾದ ವ್ಯಕ್ತಿಯನ್ನಾಗಿಟ್ಟಿರುತ್ತದೆ. ದೇವರು ಮೋಶೆಯ ಅಣ್ಣನಾಗಿರುವ ಆರೋನನನ್ನು ಆಯ್ಕೆ ಮಾಡಿಕೊಂಡನು ಮತ್ತು ಆರೋನನ ಸಂತತಿಯವರು ಆತನಿಗೆ _ ಯಾಜಕರಾಗಿದ್ದರು _.
- **19:07** ಆದ್ದರಿಂದ ಬಾಳ್ _ ಯಾಜಕರು _ ಹೋಮವನ್ನು ಸಿದ್ಧಗೊಳಿಸಿದರು, ಆದರೆ ಅವರು ಅದನ್ನು ಬೆಂಕಿಯಿಂದ ಹಚ್ಚುವುದಕ್ಕೆ ಸಾಧ್ಯವಾಗಲಿಲ್ಲ.
- **21:07** ಇಸ್ರಾಯೇಲ್ _ ಯಾಜಕನು _ ಜನರ ಪಾಪಗಳ ಶಿಕ್ಷೆಗೆ ಬದಲಾಗಿ ಜನರ ಪಕ್ಷವಾಗಿ ದೇವರಿಗೆ ಹೋಮಗಳನ್ನು ಮಾಡುವ ವ್ಯಕ್ತಿಯಾಗಿರುತ್ತಾನೆ. _ ಯಾಜಕರು _ ಜನರಿಗೋಸ್ಕರ ದೇವರ ಬಳಿ ಪ್ರಾರ್ಥನೆಯೂ ಮಾಡುತ್ತಿದ್ದರು.

ಪದ ಡೇಟಾ:

- Strong's: H3547, H3548, H3549, H3550, G748, G749, G2405, G2406, G2407, G2409, G2420

ಯೆಹೂದಿ, ಯೆಹೂದ್ಯ, ಯೆಹೂದ್ಯರು

ಸತ್ಯಾಂಶಗಳು:

ಯೆಹೂದಿಗಳು ಅಬ್ರಾಹಾಮನ ಮೊಮ್ಮೊಗನಾದ ಯಾಕೋಬನ ಸಂತಾನದ ಜನರಾಗಿರುತ್ತಾರೆ. "ಯೆಹೂದಿ" ಎನ್ನುವ ಪದವು "ಯೂದಾ" ಎನ್ನುವ ಪದದಿಂದ ಬಂದಿರುತ್ತದೆ.

- ಬಾಬೆಲೋನಿಯದಲ್ಲಿ ಇಸ್ರಾಯೇಲ್ಯರ ಸೆರೆಯಿಂದ ಯೂದಾಗೆ ತಿರುಗಿಬಂದನಂತರ ಜನರು ಅವರನ್ನು "ಯೆಹೂದ್ಯರು" ಎಂದು ಕರೆಯುವುದಕ್ಕೆ ಆರಂಭಿಸಿದರು.
- ಮೆಸ್ಸೀಯನಾದ ಯೇಸು ಯೆಹೂದ್ಯನಾಗಿದ್ದನು. ಆದರೆ, ಯೆಹೂದ್ಯ ಧರ್ಮದ ನಾಯಕರು ಯೇಸುವನ್ನು ತಿರಸ್ಕರಿಸಿದರು ಮತ್ತು ಆತನು ಸಾಯಿಸಬೇಕೆಂದು ಬೆಂಬಲ ಕೊಟ್ಟರು.
- "ಯೆಹೂದ್ಯರು" ಎನ್ನುವ ಪದವು ಅನೇಕಬಾರಿ ಯೆಹೂದ್ಯರಾದ ಜನರೆಲ್ಲರನ್ನು ಸೂಚಿಸದೇ ಯೆಹೂದ್ಯ ನಾಯಕರನ್ನು ಮಾತ್ರವೇ ಸೂಚಿಸುತ್ತದೆ. ಬೇರೆ ಸಂದರ್ಭಗಳಲ್ಲಿ ಕೆಲವೊಂದು ಅನುವಾದಗಳಲ್ಲಿ "ನಾಯಕರು" ಎಂದು ಸೇರಿಸಿ ಹೇಳುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಯಾಕೋಬ, ಇಸ್ರಾಯೇಲ್, ಬಾಬೆಲೋನಿಯ, ಯೆಹೂದ್ಯ ನಾಯಕರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.02:5-7
- ಅಪೊ.ಕೃತ್ಯ.10:27-29
- ಅಪೊ.ಕೃತ್ಯ.14:5-7
- ಕೊಲೊಸ್ಸ.03:9-11
- ಯೋಹಾನ.02:13-14
- ಮತ್ತಾಯ.28:14-15

ಸತ್ಯವೇದದಿಂದ ಉದಾಹರಣೆಗಳು:

- **20:11** ಇಸ್ರಾಯೇಲ್ಯರನ್ನು ಈಗ _ ಯೆಹೂದ್ಯರೆಂದು _ ಕರೆಯಲ್ಪಡುತ್ತಿದ್ದಾರೆ ಮತ್ತು ಅವರಲ್ಲಿ ಅನೇಕರು ಬಾಬೆಲೋನಿಯಾದಲ್ಲೇ ಜೀವಿಸಿದ್ದರು.
- **20:12** ಆದ್ದರಿಂದ, ಸೆರೆಯಲ್ಲಿ ಎಪ್ಪತ್ತು ವರ್ಷಗಳು ಇದ್ದಾದನಂತರ, _ ಯೆಹೂದ್ಯರಲ್ಲಿ _ ಒಂದು ಚಿಕ್ಕ ಗುಂಪು ಯೂದಾದಲ್ಲಿರುವ ಯೆರೂಸಲೇಮ್ ಪಟ್ಟಣಕ್ಕೆ ಹಿಂದುರಿಗೆ ಬಂದರು.
- **37:10** ಈ ಅದ್ಭುತ ಕಾರಣದಿಂದ _ ಯೆಹೂದ್ಯರಲ್ಲಿ _ ಅನೇಕರು ಯೇಸುವಿನಲ್ಲಿ ನಂಬಿಕೆ ಇಟ್ಟರು.
- **37:11** ಆದರೆ _ ಯೆಹೂದ್ಯರ _ ಧರ್ಮ ನಾಯಕರಲ್ಲಿ ಅಸೂಯೆ ಇದ್ದಿತ್ತು, ಆದ್ದರಿಂದ ಅವರು ಯೇಸುವನ್ನು ಮತ್ತು ಲಾಜರನನ್ನು ಹೇಗೆ ಸಾಯಿಸಬೇಕೆಂದು ಪ್ರಣಾಳಿಕೆ ಹಾಕುವುದಕ್ಕೆ ಎಲ್ಲರು ಸೇರಿಕೊಂಡಿದ್ದರು.
- **40:02** ಶಿಲುಬೆಯಲ್ಲಿ ಇಳಿಹಾಕಲ್ಪಟ್ಟ ಯೇಸುವಿನ ತಲೆಯ ಮೇಲೆ "_ ಯೆಹೂದ್ಯರ _ ಅರಸ" ಎಂಬುದಾಗಿ ಒಂದು ಸೂಚನೆಯನ್ನು ಅವರು ಬರೆಯಬೇಕೆಂದು ಪಿಲಾತನು ಆಜ್ಞಾಪಿಸಿದ್ದನು.
- **46:06** ಆ ಕ್ಷಣದಲ್ಲೇ, "ಯೇಸು ದೇವರ ಮಗ" ಎಂದು ಹೇಳುತ್ತಾ ದಮಸ್ಕದಲ್ಲಿ _ ಯೆಹೂದ್ಯರಿಗೆ _ ಸೌಲನು ಪ್ರಸಂಗ ಮಾಡುವುದಕ್ಕೆ ಆರಂಭಿಸಿದನು.

ಪದ ಡೇಟಾ:

- Strong's: H3054, H3061, H3062, H3064, H3066, G2450, G2451, G2452, G2453, G2454

ಯೆಹೂದ್ಯರ ಅರಸ, ಯೆಹೂದ್ಯರ ಅರಸ

ಪದದ ಅರ್ಥವಿವರಣೆ:

"ಯೆಹೂದ್ಯರ ಅರಸ" ಎನ್ನುವ ಮಾತು ಒಂದು ಬಿರುದಾಗಿರುತ್ತದೆ, ಇದು ಮೆಸ್ಸೀಯನಾದ ಯೇಸುವನ್ನು ಸೂಚಿಸುತ್ತದೆ.

- "ಯೆಹೂದ್ಯರ ಅರಸ"ನಾಗಿ ಹುಟ್ಟಿರುವ ಶಿಶುವನ್ನು ನೋಡುವುದಕ್ಕೆ ಬೆತ್ಲೆಹೇಮಿಗೆ ಪ್ರಯಾಣ ಮಾಡುತ್ತಿರುವ ಜ್ಞಾನಿಗಳಿಂದ ಉಪಯೋಗಿಸಲ್ಪಟ್ಟಾಗ ಈ ಬಿರುದನ್ನು ಮೊಟ್ಟ ಮೊದಲು ಸತ್ಯವೇದದಲ್ಲಿ ದಾಖಲಿಸಲಾಗಿದೆ.
- "ನಿನಗೆ ಹುಟ್ಟುವ ಮಗನು ದಾವೀದನ ವಂಶಸ್ಥನಾಗಿರುತ್ತಾನೆ, ಈತನು ಅರಸನಾಗಿ ನಿರಂತರವಾಗಿ ಆಳುವವನಾಗಿರುತ್ತಾನೆ" ಎಂದು ದೂತನು ಮರಿಯಳಿಗೆ ಹೇಳಿದನು.
- ಯೇಸುವನ್ನು ಶಿಲುಬೆಗೇರಿಸುವುದಕ್ಕೆ ಮುಂಚಿತವಾಗಿ, ರೋಮಾ ಸೈನಿಕರು ಯೇಸುವನ್ನು ಹಿಯಾಳಿಸುತ್ತಾ "ಯೆಹೂದ್ಯರ ಆರಸ" ಎಂದು ಕೂಗಿದರು. ಈ ಮಾತನ್ನು ಯೇಸುವಿನ ಶಿಲುಬೆಯ ಮೇಲೆ ಒಂದು ಕಟ್ಟಿಗೆಯ ಹಲಿಗೆಯ ಮೇಲೆ ಬರೆದಿದ್ದರು.
- ಯೇಸು ನಿಜವಾಗಿಯೂ ಯೆಹೂದ್ಯರ ಅರಸನಾಗಿರುತ್ತಾನೆ ಮತ್ತು ಎಲ್ಲಾ ಸೃಷ್ಟಿಗೂ ಅರಸನಾಗಿರುತ್ತಾನೆ.

ಅನುವಾದ ಸಲಹೆಗಳು:

- "ಯೆಹೂದ್ಯರ ಅರಸ" ಎನ್ನುವ ಮಾತನ್ನು "ಯೆಹೂದ್ಯರಿಗೆ ಅರಸ" ಅಥವಾ "ಯೆಹೂದ್ಯರನ್ನು ಆಳುವ ಅರಸ" ಅಥವಾ "ಯೆಹೂದ್ಯರ ಸರ್ವೋಚ್ಚ ಪಾಲಕ" ಎಂದೂ ಅನುವಾದ ಮಾಡಬಹುದು.
- ಅನುವಾದದಲ್ಲಿ ಇತರ ಸ್ಥಳಗಳಲ್ಲಿ "ಅರಸ" ಎನ್ನುವ ಮಾತನ್ನು ಹೇಗೆ ಅನುವಾದ ಮಾಡಿದ್ದಾರೆಂದು ಪರಿಶೀಲನೆ ಮಾಡಿರಿ.

(ಈ ಪದಗಳನ್ನು ಸಹ ನೋಡಿರಿ : ವಂಶಸ್ಥರು, ಯೆಹೂದ, ಯೇಸು, ಅರಸ, ರಾಜ್ಯ, ದೇವರ ರಾಜ್ಯ, ಜ್ಞಾನಿಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.23:3-5
- ಲೂಕ.23:36-38
- ಮತ್ತಾಯ.02:1-3
- ಮತ್ತಾಯ.27:11-14
- ಮತ್ತಾಯ.27:35-37

ಸತ್ಯವೇದದಿಂದ ಉದಾಹರಣೆಗಳು:

- **23:09** ಸ್ವಲ್ಪ ಕಾಲವಾದನಂತರ, ಪೂರ್ವ ದೇಶಗಳಿಂದ ಬಂದಿರುವ ಜ್ಞಾನಿಗಳು ಆಕಾಶದಲ್ಲಿ ಅಸಹಜವಾಗಿ ಕಾಣಿಸಿಕೊಂಡ ನಕ್ಷತ್ರವನ್ನು ನೋಡಿದರು. _ ಯೆಹೂದ್ಯರ ಹೊಸ ಅರಸನು _ ಹುಟ್ಟುತ್ತಿದ್ದಾನೆ ಎನ್ನುವುದಕ್ಕೆ ಇದೇ ಅರ್ಥವೆಂದು ಅವರು ತಿಳಿದುಕೊಂಡರು.
- **39:09** "ನೀನು _ ಯೆಹೂದ್ಯರ ಅರಸನೋ_? " ಎಂದು ಪಿಲಾತನು ಯೇಸುವನ್ನು ಕೇಳಿದನು.
- **39:12** ರೋಮಾ ಸೈನಿಕರು ಯೇಸುವನ್ನು ಕೋಲಿನಿಂದ ಹೊಡೆದು, ಒಂದು ಹಗ್ಗವನ್ನು ನಡುವಿಗೆ ಕಟ್ಟಿ, ಆತನ ತಲೆಯ ಮೇಲೆ ಮುಳ್ಳಿನ ಕಿರೀಟವನ್ನು ಧರಿಸಿದರು. "ನೋಡು, _ ಯೆಹೂದ್ಯರ ಅರಸನೇ_ ?" ಎಂದು ಹೇಳುತ್ತಾ ಆತನನ್ನು ಹಿಯಾಳಿಸಿದರು.
- **40:02** "ಯೆಹೂದ್ಯರ ಅರಸ" ಎಂಬುದಾಗಿ ಒಂದು ಗುರುತನ್ನು ಶಿಲುಬೆಯಲ್ಲಿರುವ ಯೇಸುವಿನ ತಲೆಯ ಮೇಲೆ ಇಡಬೇಕೆಂದು ಪಿಲಾತನು ಅವರಿಗೆ ಆಜ್ಞಾಪಿಸಿದನು.

ಪದ ಡೇಟಾ:

- Strong's: G935, G2453

ಯೆಹೋವ

ಸತ್ಯಾಂಶಗಳು:

"ಯೆಹೋವ" ಎನ್ನುವ ಪದವು ದೇವರ ವೈಯುಕ್ತಿಕ ಹೆಸರಾಗಿರುತ್ತದೆ, ದೇವರು ಈ ಹೆಸರನ್ನು ಮೋಶೆಗೆ ಉರಿಯುತ್ತಿರುವ ಪೊದೆಯ ಬಳಿ ಹೇಳಿರುತ್ತಾರೆ.

- "ಯೆಹೋವ" ಎನ್ನುವ ಹೆಸರು "ಇರುವಾತನು" ಅಥವಾ "ಅಸ್ತಿತ್ವದಲ್ಲಿದ್ದಾನೆ" ಎನ್ನುವ ಅರ್ಥಗಳಿರುವ ಪದದಿಂದ ಬಂದಿರುತ್ತದೆ.
- "ಯೆಹೋವ" ಎನ್ನುವ ಹೆಸರಿಗೆ ಸಾಧ್ಯವಾಗುವ ಅರ್ಥಗಳಲ್ಲಿ "ಆತನಿದ್ದಾನೆ" ಅಥವಾ "ಇರುವಂತೆ ಮಾಡುವವನು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಈ ಹೆಸರು ದೇವರು ಯಾವಾಗಲೂ ಜೀವಿಸಿದ್ದಾನೆ ಮತ್ತು ಎಂದಿಗೂ ನಿರಂತರವಾಗಿ ಜೀವಿಸುವಾತನಾಗಿದ್ದಾನೆಂದು ತಿಳಿಯಪಡಿಸುತ್ತಿದೆ. ಇದಕ್ಕೆ ಆತನು ಯಾವಾಗಲೂ ಇರುವಾತನಾಗಿದ್ದಾನೆಂದರ್ಥವೂ ಇದೆ.
- ಸಂಪ್ರದಾಯಿಕವಾಗಿ, ಅನೇಕ ಬೈಬಲ್ ಅನುವಾದಗಳು "ಯೆಹೋವ" ಎನ್ನುವ ಹೆಸರನ್ನು ಪ್ರತಿನಿಧಿಸುವುದಕ್ಕೆ "ಕರ್ತನು" ಅಥವಾ "ಯೆಹೋವನಾದ ದೇವರು" ಎನ್ನುವ ಪದಗಳನ್ನು ಉಪಯೋಗಿಸಿದ್ದಾರೆ. ಈ ಸಂಪ್ರದಾಯವು ಇತಿಹಾಸದ ಸತ್ಯಾಂಶದಿಂದ ಉಂಟಾಯಿತು, ಯೆಹೋವನ ಹೆಸರನ್ನು ತಪ್ಪಾಗಿ ಉಚ್ಚರಿಸುವತ್ತೆವೇನೋ ಎಂದು ಯೆಹೂದ್ಯ ಜನರು ಹೆದರಿಕೆಪಟ್ಟಿದ್ದರು, ಇದಕ್ಕಾಗಿ ವಾಕ್ಯದಲ್ಲಿ "ಯೆಹೋವ" ಎನ್ನುವ ಹೆಸರಿಗೆ ಬದಲಾಗಿ ಪ್ರತಿಯೊಂದುಸಾರಿ 'ಕರ್ತನು" ಎಂದು ಹೇಳುವುದನ್ನು ಆರಂಭಿಸಿರುತ್ತಾರೆ. ಆಧುನಿಕ ಬೈಬಲ್.ಗಳಲ್ಲಿ ದೇವರ ವೈಯುಕ್ತಿಕ ಹೆಸರಿಗೆ ಗೌರವವನ್ನು ತೋರಿಸುವುದಕ್ಕೆ ಮತ್ತು ಲಾರ್ಡ್ (Lord) ಎನ್ನುವ ಇಬ್ರಿ ಭಾಷೆಯ ಪದದಿಂದ ವಿಭಿನ್ನವಾಗಿರುವುದಕ್ಕೆ ಆಂಗ್ಲ ಭಾಷೆಯಲ್ಲಿ ಲಾರ್ಡ್ ("LORD") ಎನ್ನುವ ಪದವನ್ನು ದೊಡ್ಡ ಅಕ್ಷರಗಳಾಗಿ ಬರೆದಿರುತ್ತಾರೆ.
- ಯುಎಲ್.ಬಿ ಮತ್ತು ಯುಡಿಬಿ ವಾಕ್ಯಭಾಗಗಳು ಯಾವಾಗಲೂ ಈ ಪದವನ್ನು ಹಳೇ ಒಡಂಬಡಿಕೆಯಲ್ಲಿ ಇಬ್ರಿ ವಾಕ್ಯದಲ್ಲಿರುವಂತೆಯೇ "ಯೆಹೋವ" ಎಂದಾಗಿ ಅನುವಾದ ಮಾಡಿರುತ್ತಾರೆ.
- "ಯೆಹೋವ" ಎನ್ನುವ ಹೆಸರು ಹೊಸ ಒಡಂಬಡಿಕೆಯ ಮೂಲ ಭಾಷೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ; ಕೇವಲ "ಕರ್ತನು" ಎನ್ನುವ ಗ್ರೀಕ್ ಪದವನ್ನು ಮಾತ್ರವೇ ಉಪಯೋಗಿಸಿರುತ್ತಾರೆ, ಹಳೇ ಒಡಂಬಡಿಕೆಯಿಂದ ತೆಗೆದಿರುವ ವಾಕ್ಯಗಳಲ್ಲಿಯೂ ಕರ್ತನು ಎಂಬುದಾಗಿಯೇ ಉಪಯೋಗಿಸಿರುತ್ತಾರೆ.
- ಹಳೇ ಒಡಂಬಡಿಕೆಯಲ್ಲಿ ದೇವರು ತನ್ನ ಕುರಿತಾಗಿ ಮಾತನಾಡಿದಾಗ, ಆತನು ಅನೇಕಬಾರಿ ಸರ್ವನಾಮವನ್ನು ಉಪಯೋಗಿಸುವುದರ ಬದಲಾಗಿ ತನ್ನ ಹೆಸರನ್ನು ಉಪಯೋಗಿಸುತ್ತಿದ್ದನು.
- "ನಾನು" ಅಥವಾ "ನಾನೇ" ಎನ್ನುವ ಸರ್ವನಾಮವು ಜೋಡಿಸುವದರಿಂದ, ದೇವರು ಮಾತನಾಡುತ್ತಿದ್ದಾರೆಂದು ಓದುಗಾರರಿಗೆ ಯುಎಲ್.ಬಿ ಸೂಚಿಸುತ್ತಿದೆ.

ಅನುವಾದ ಸಲಹೆಗಳು:

- "ಯೆಹೋವ" ಎನ್ನುವ ಹೆಸರನ್ನು "ನಾನೇ" ಅಥವಾ "ಜೀವಿಸುವಾತನು" ಅಥವಾ "ಇರುವಾತನು" ಅಥವಾ "ಸಜೀವವುಳ್ಳವನು" ಎಂದರ್ಥಗಳಿರುವ ಮಾತಿನೊಂದಿಗೆ ಅಥವಾ ಪದದೊಂದಿಗೆ ಅನುವಾದ ಮಾಡಬಹುದು.
- "ಯೆಹೋವ" ಎನ್ನುವ ಹೆಸರನ್ನು ಹೇಗೆ ಉಚ್ಚರಿಸಬೇಕೆನ್ನುವ ವಿಧಾನದಲ್ಲಿಯೂ ಈ ಪದವು ಬರೆದಿರುತ್ತಾರೆ.
- ಕೆಲವೊಂದು ಸಭೆಯ ಸಂಸ್ಥೆಗಳಲ್ಲಿ "ಯೆಹೋವ" ಎನ್ನುವ ಹೆಸರನ್ನು ಉಪಯೋಗಿಸುವುದಿಲ್ಲ ಮತ್ತು ಆದರೆ ಸಂಪ್ರದಾಯಿಕವಾಗಿ "ಕರ್ತನು" ಎಂದು ಉಪಯೋಗಿಸುತ್ತಾರೆ. ಇಲ್ಲಿ ಗಮನಿಸಬಹುದಾದ ಪ್ರಾಮುಖ್ಯವಾದ ವಿಷಯ ಏನೆಂದರೆ ಇದನ್ನು ಗಟ್ಟಿಯಾಗಿ ಓದುತ್ತಿರುವಾಗ ಬಹುಶಃ ಗಲಿಬಿಲಿಯಾಗುತ್ತಿರಬಹುದು, ಯಾಕಂದರೆ ಇದು "ಕರ್ತನು" ಎನ್ನುವ ಬಿರುದಿನಂತೆಯೇ ಉಚ್ಚರಿಸಲ್ಪಡುತ್ತದೆ. ಕೆಲವೊಂದು ಭಾಷೆಗಳಲ್ಲಿ "ಕರ್ತನು" ಎನ್ನುವ ಬಿರುದಿಗೂ ಮತ್ತು (ಯೆಹೋವ) ಎನ್ನುವ ಹೆಸರಾಗಿ ಉಪಯೋಗಿಸುವ ಪದಕ್ಕೂ ವ್ಯತ್ಯಾಸ ತೋರಿಸುವುದಕ್ಕೆ ವ್ಯಾಕರಣ ಸಂಬಂಧವಾದ ಗುರುತನ್ನು ಅಥವಾ ಬೇರೊಂದು ಪದದ ಜೋಡಣೆಯನ್ನು ಇಟ್ಟಿರುತ್ತಾರೆ.
- ಮೂಲ ಭಾಷೆಯಲ್ಲಿರುವ ಕಾಣಿಸಿಕೊಳ್ಳುವಂತೆಯೇ ಅಕ್ಷರಾರ್ಥವಾದ ಪದವು ಯೆಹೋವ ಎನ್ನುವ ಹೆಸರನ್ನೇ ಇಡುವುದು ಉತ್ತಮವಾದ ಕೆಲಸ, ಆದರೆ ಕೆಲವೊಂದು ಅನುವಾದಗಳು ಕೆಲವೊಂದು ಸ್ಥಳಗಳಲ್ಲಿ ಮಾತ್ರ ವಾಕ್ಯವನ್ನು ಸ್ವಾಭಾವಿಕವಾಗಿಯು ಮತ್ತು ಸ್ಪಷ್ಟವಾಗಿರಲು ಸರ್ವನಾಮವನ್ನು ಮಾತ್ರವೇ ಉಪಯೋಗಿಸುವುದಕ್ಕೆ ನಿರ್ಣಯಿಸಿಕೊಂಡಿರುತ್ತಾರೆ..
- "ಯೆಹೋವನು ಹೀಗೆನ್ನುತ್ತಾನೆ, " ಎನ್ನುವ ವಾಕ್ಯವನ್ನು ಉಪಯೋಗಿಸಿ ಮಾತುಗಳನ್ನು ಪರಿಚಯಿಸುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೇವರು, ಒಡೆಯ, ಕರ್ತನು, ತೋರಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.21:19-20
- 1 ಸಮು.16:6-7
- ದಾನಿ.09:3-4
- ಯೆಹೆ.17:24
- ಆದಿ.02:4-6
- ಆದಿ.04:3-5

- ಆದಿ.28:12-13
- ಹೋಶೆಯ.11:12
- ಯೆಶಯಾ.10:3-4
- ಯೆಶಯಾ.38:7-8
- ಯೋಬ.12:9-10
- ಯೆಹೋ.01:8-9
- ಪ್ರಲಾಪ.01:4-5
- ಯಾಜಕ.25:35-38
- ಮಲಾಕಿ.03:4-5
- ಮೀಕ.02:3-5
- ಮೀಕ.06:3-5
- ಅರಣ್ಯ.08:9-11
- ಕೀರ್ತನೆ.124:1-3
- ರೂತಳು.01:19-21
- ಜೆಕರ್ಯ.14:5

ಸತ್ಯವೇದದಿಂದ ಉದಾಹರಣೆಗಳು:

- **09:14** “ನಾನು ಇರುವಾತನಾಗಿದ್ದೇನೆ”. ‘ಇರುವಾತನು ನಿನ್ನ ಬಳಿಗೆ ನನ್ನನ್ನು ಕಳುಹಿಸಿದ್ದಾನೆ’ ‘ನಾನು ನಿಮ್ಮ ಪಿತೃಗಳಾದ ಅಬ್ರಾಹಾಮ, ಇಸಾಕ, ಮತ್ತು ಯಾಕೋಬರ ದೇವರಾದ _ **ಯೆಹೋವ** _, ಇದೆ ನನ್ನ ಹೆಸರು ಎಂದಿಗೂ ಇರುವುದು’” ಎಂದೂ ಅವರಿಗೆ ಹೇಳು ಎಂದು ದೇವರು ಹೇಳಿದರು.
- **13:04** ಆದನಂತರ ದೇವರು ಅವರಿಗೆ ಒಡಂಬಡಿಕೆಯನ್ನು ಕೊಟ್ಟರು, ಮತ್ತು “ಐಗುಪ್ತದಲ್ಲಿ ನಿಮ್ಮನ್ನು ಗುಲಾಮಗಿರಿಯಿಂದ ರಕ್ಷಿಸಿದ ನಿಮ್ಮ ದೇವರಾದ _ **ಯೆಹೋವ** _ ನಾನೇ ಆಗಿದ್ದೇನೆ” ಇತರ ದೇವರುಗಳನ್ನು ಆರಾಧನೆ ಮಾಡಬೇಡಿರಿ” ಎಂದು ಎಂದು ಹೇಳಿದನು.
- **13:05** “ವಿಗ್ರಹಗಳನ್ನು ಮಾಡಬೇಡಿರಿ, ಅಥವಾ ಅವುಗಳನ್ನು ಆರಾಧಿಸಬೇಡಿರಿ, ಯಾಕಂದರೆ ನಾನು _ **ಯೆಹೋವ** _, ರೋಷವುಳ್ಳ ದೇವರಾಗಿದ್ದೇನೆ.”
- **16:01** ಇಸ್ರಾಯೇಲ್ಯರು ನಿಜ ದೇವರಾಗಿರುವ _ ಯೆಹೋವನನ್ನು __ ಬಿಟ್ಟು, ಕಾನಾನ್ಯ ದೇವರುಗಳನ್ನು ಆರಾಧನೆ ಮಾಡುವುದಕ್ಕೆ ಆರಂಭಿಸಿದರು.
- **19:10** “ಅಬ್ರಾಹಾಮ, ಇಸಾಕ, ಯಾಕೋಬರ ದೇವರಾಗಿರುವ _ ಯೆಹೋವನೇ __, ನೀನು ಇಸ್ರಾಯೇಲ್ ದೇವರೆಂದು ಮತ್ತು ನಾನು ನಿನ್ನ ಸೇವಕನೆಂದು ಈ ದಿನದಂದು ನಮಗೆ ತೋರಿಸಿಕೋ” ಎಂದು ಎಲೀಯ ಪ್ರಾರ್ಥನೆ ಮಾಡಿದನು.

ಪದ ಡೇಟಾ:

- Strong's: H3050, H3068, H3069

ಯೇಸು, ಯೇಸು ಕ್ರಿಸ್ತ, ಕ್ರಿಸ್ತ ಯೇಸು

ಸತ್ಯಾಂಶಗಳು:

ಯೇಸು ದೇವರ ಮಗ. "ಯೇಸು" ಎನ್ನುವ ಹೆಸರಿಗೆ "ಯೆಹೋವ ರಕ್ಷಿಸುವನು" ಎಂದರ್ಥ. "ಕ್ರಿಸ್ತ" ಎನ್ನುವ ಪದವು ಬಿರುದಾಗಿರುತ್ತದೆ, ಇದಕ್ಕೆ "ಅಭಿಷಿಕ್ತ" ಎಂದರ್ಥ ಮತ್ತು ಇದಕ್ಕೆ ಮತ್ತೊಂದು ಹೆಸರು "ಮೆಸ್ಸೀಯ".

- ಈ ಎರಡು ಹೆಸರುಗಳು ಯಾವಾಗಲೂ "ಯೇಸು ಕ್ರಿಸ್ತ" ಎಂದು ಅಥವಾ "ಕ್ರಿಸ್ತ ಯೇಸು" ಎಂದು ಬರದಿರುತ್ತವೆ. ಜನರ ಪಾಪಗಳಿಗಾಗಿ ನಿತ್ಯಶಿಕ್ಷೆಯಿಂದ ಜನರನ್ನು ರಕ್ಷಿಸುವದಕ್ಕೆ ಬಂದ ದೇವರ ಮಗ ಮೆಸ್ಸೀಯ ಎಂದು ಈ ಎಲ್ಲಾ ಹೆಸರುಗಳು ಒತ್ತಿ ಹೇಳುತ್ತವೆ.
- ಅದ್ಭುತವಾದ ವಿಧಾನದಲ್ಲಿ, ದೇವರ ನಿತ್ಯನಾದ ಮಗನು ಒಬ್ಬ ಮನುಷ್ಯನಾಗಿ ಹುಟ್ಟುವುದಕ್ಕೆ ಪವಿತ್ರಾತ್ಮನು ಕಾರಣನಾದನು. ದೇವದೂತನು ಅವನ ತಾಯಿಗೆ ಆತನನ್ನು "ಯೇಸು" ಎಂದು ಕರೆಯಬೇಕೆಂದು ಹೇಳಿದನು ಏಕೆಂದರೆ ಅವನು ಜನರನ್ನು ಅವರ ಪಾಪದಿಂದ ರಕ್ಷಿಸಲು ಉದ್ದೇಶಿಸಿದ್ದಾನೆ.
- ಯೇಸು ಅನೇಕವಾದ ಅದ್ಭುತ ಕಾರ್ಯಗಳನ್ನು ಮಾಡಿರುವದರಿಂದ ಆತನು ದೇವರೆಂದು, ಆತನು ಕ್ರಿಸ್ತನೆಂದು, ಅಥವಾ ಮೆಸ್ಸೀಯನೆಂದು ತೋರಿಕೆಯಾಗಿದೆ.

ಅನುವಾದ ಸಲಹೆಗಳು:

- ಅನೇಕ ಭಾಷೆಗಳಲ್ಲಿ "ಯೇಸು" (ಅಥವಾ ಜೀಸಸ್) ಮತ್ತು "ಕ್ರಿಸ್ತ" (ಕ್ರೈಸ್ಟ್) ಎನ್ನುವ ಪದಗಳನ್ನು ಮೂಲ ಭಾಷೆಯಲ್ಲಿ ಇರುವಂತೆಯೇ ಒಂದೇ ರೀತಿಯಾಗಿ ಉಚ್ಚರಿಸುತ್ತಾರೆ. ಉದಾಹರಣೆಗೆ, "ಜಿಸಕ್ರಿಸ್ಟೋ," "ಜೀಜಸ್ ಕ್ರಿಸ್ಟಸ್", "ಯೆಸಸ್ ಕ್ರಿಸ್ಟಸ್" ಅಥವಾ "ಹೇಸುಕ್ರಿಷ್ಟೊ" ಎನ್ನುವ ಪದಗಳು ವಿವಿಧವಾದ ಭಾಷೆಗಳಲ್ಲಿ ಅನುವಾದ ಬೇರೊಂದು ವಿಧಾನದ ಪದಗಳಾಗಿರುತ್ತವೆ.
- "ಕ್ರಿಸ್ತ" ಎನ್ನುವ ಪದಕ್ಕೆ ಕೆಲವೊಂದು ಭಾಷೆಗಳಲ್ಲಿ ಕೇವಲ "ಮೆಸ್ಸೀಯ" ಎನ್ನುವ ಪದವನ್ನೇ ಎಲ್ಲಾ ಕಡೆಗೆ ಉಪಯೋಗಿಸುತ್ತಿರುತ್ತಾರೆ.
- ಈ ಪದಗಳನ್ನು ಸ್ಥಳೀಯ ಅಥವಾ ಜಾತೀಯ ಭಾಷೆಯಲ್ಲಿ ಯಾವರೀತಿ ಉಚ್ಚರಣೆ ಮಾಡುತ್ತಾರೋ ಎಂದು ನೋಡಿಕೊಳ್ಳಿರಿ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ದೇವರು, ತಂದೆಯಾದ ದೇವರು, ಮಹಾ ಯಾಜಕ, ದೇವರ ರಾಜ್ಯ, ಮರಿಯ, ಕ್ರಿಸ್ತ, ದೇವರ ಮಗ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.06:9-11
- 1 ಯೋಹಾನ.02:1-3
- 1 ಯೋಹಾನ.04:15-16
- 1 ತಿಮೊಥೆ.01:1-2
- 2 ಪೇತ್ರ.01:1-2
- 2 ಥೆಸ್ಸ.02:13-15
- 2 ತಿಮೊಥೆ.01:8-11
- ಅಪೊ.ಕೃತ್ಯ.02:22-24
- ಅಪೊ.ಕೃತ್ಯ.05:29-32
- ಅಪೊ.ಕೃತ್ಯ.10:36-38
- ಇಬ್ರಿ.09:13-15
- ಇಬ್ರಿ.10:19-22
- ಲೂಕ.24:19-20
- ಮತ್ತಾಯ.01:20-21
- ಮತ್ತಾಯ.04:1-4
- ಫಿಲಿಪ್ಪ.02:5-8
- ಫಿಲಿಪ್ಪ.02:9-11
- ಫಿಲಿಪ್ಪ.04:21-23
- ಪ್ರಕ.01:4-6

ಸತ್ಯವೇದದಿಂದ ಉದಾಹರಣೆಗಳು:

- _**22:04** "ನೀನು ಗರ್ಭಿಣಿಯಾಗುವಿ ಮತ್ತು ಒಂದು ಗಂಡು ಮಗುವಿಗೆ ಜನ್ಮವನ್ನು ಕೊಡುವಿ" ಎಂದು ದೂತ ಹೇಳಿತು. ನೀನು ಆತನಿಗೆ **ಯೇಸು** _ ಎಂದು ಹೆಸರು ಇಡಬೇಕು ಮತ್ತು ಆತನು ಮೆಸ್ಸೀಯನಾಗಿರುವನು."

- _**23:02** “ಆತನಿಗೆ **ಯೇಸು** _ (ಈ ಪದಕ್ಕೆ “ಯೆಹೋವನು ರಕ್ಷಿಸುವನು” ಎಂದರ್ಥ) ಎಂದು ಹೆಸರಿಡಬೇಕು, ಯಾಕಂದರೆ ಆತನು ಜನರ ಪಾಪಗಳಿಂದ ಬಿಡಿಸುವನು.”
- _**24:07 ಯೇಸು** _ ಯಾವ ಪಾಪವನ್ನು ಮಾಡದಿದ್ದರೂ, ಯೋಹಾನನು ಆತನಿಗೆ (ಯೇಸುವಿಗೆ) ದೀಕ್ಷಾಸ್ನಾನವನ್ನು ಕೊಟ್ಟನು,
- _**24:09** ದೇವರು ಒಬ್ಬನೇ ಇದ್ದಾನೆ. ಆದರೆ ಯೋಹಾನನು ತಂದೆಯ ಸ್ವರವನ್ನು ಕೇಳಿದನು, **ಯೇಸುವನ್ನು** ನೋಡಿದನು ಮತ್ತು ಆತನು **ಯೇಸುವಿಗೆ** _ ದೀಕ್ಷಾಸ್ನಾನ ಕೊಟ್ಟನಂತರ ಪವಿತ್ರಾತ್ಮನನ್ನು ನೋಡಿದನು.
- _**25:08** ಸೈತಾನನ ಶೋಧನೆಗಳಿಗೆ **ಯೇಸು** _ ಅವಕಾಶ ಕೊಡಲಿಲ್ಲ, ಆದ್ದರಿಂದ ಸೈತಾನನು ಆತನನ್ನು ಬಿಟ್ಟು ಹೋದನು.
- _**26:08** ಆದನಂತರ, **ಯೇಸು** ಗಲಿಲಾಯ ಪ್ರಾಂತ್ಯಕ್ಕೆ ಹೊರಟು ಹೋದನು, ಮತ್ತು ಆತನ ಬಳಿಗೆ ಹೆಚ್ಚಿನ ಜನಸಮೂಹಗಳು ಬಂದವು. ಅವರು ರೋಗಿಗಳಾಗಿದ್ದವರನ್ನು ಅಥವಾ ಅಂಗವಿಕಲರನ್ನು ಹೆಚ್ಚಾಗಿ ಕರೆದುಕೊಂಡುಬಂದರು, ಅವರಲ್ಲಿ ಕುರುಡರು, ಕುಂಟರು, ಕಿವುಡರು, ಅಥವಾ ಮೂಕರು ಇದ್ದಿದ್ದರು. **ಯೇಸು** _ ಅವರೆಲ್ಲರನ್ನು ಮುಟ್ಟಿ ಗುಣಪಡಿಸಿದರು.
- _**31:03** ಆದನಂತರ, **ಯೇಸು** _ ಪ್ರಾರ್ಥನೆಯನ್ನು ಮುಗಿಸಿದನು ಮತ್ತು ಶಿಷ್ಯರ ಬಳಿಗೆ ಹೊರಟನು. ಆತನು ನೀರಿನ ಮೇಲೆ ನಡೆದುಕೊಂಡು ಅವರ ದೋಣಿ ಇರುವ ಕಡೆಗೆ ಬಂದನು.
- _**38:02 ಯೇಸು** _ ಮೆಸ್ಸೀಯ ಎಂದು ಯೆಹೂದ್ಯರೆಲ್ಲರು ಒಪ್ಪಿಕೊಂಡಿಲ್ಲವೆಂದು ಮತ್ತು ಆತನನ್ನು ಅವರು ಕೊಲ್ಲಬೇಕೆಂದಿದ್ದರೆಂದು ಅವನಿಗೆ (ಯೂದಾನಿಗೆ) ಗೊತ್ತು.
- _**40:08** ತನ್ನ ಮರಣದ ಮೂಲಕ ಜನರೆಲ್ಲರೂ ದೇವರ ಬಳಿಗೆ ಬರುವ ಒಂದು ಮಾರ್ಗವನ್ನು **ಯೇಸು** _ ತೆರೆದನು.
- _**42:11** ಆದನಂತರ, **ಯೇಸು** ಪರಲೋಕಕ್ಕೆ ಎತ್ತಲ್ಪಟ್ಟನು, ಅವರು ನೋಡದಂತೆ ಒಂದು ಮೇಘವು ಆತನನ್ನು ಆವರಿಸಿತು. **ಯೇಸು** _ ಎಲ್ಲವನ್ನು ಆಳುವುದಕ್ಕೆ ತಂದೆ ಬಲಗಡೆಯಲ್ಲಿ ಕುಳಿತುಕೊಂಡಿದ್ದಾನೆ.
- _**50:17** _ ಯೇಸು _ ಮತ್ತು ತನ್ನ ಜನರು ಹೊಸ ಭೂಮಿಯ ಮೇಲೆ ನಿವಾಸ ಮಾಡುವರು ಮತ್ತು ಆತನು ಉಂಟಾದ ಪ್ರತಿಯೊಂದರ ಮೇಲೆ ಶಾಶ್ವತವಾಗಿ ಆಳುತ್ತಾಯಿರುವನು. ಆತನು ಕಣ್ಣೀರನ್ನು ಹೊರೆಸುವನು ಮತ್ತು ಆಲ್ಲಿ ಯಾವ ನೋವು, ಬಾಧೆ, ಅಳು, ಕೆಟ್ಟತನ, ಶ್ರಮೆ, ಅಥವಾ ಮರಣ ಇರುವುದಿಲ್ಲ. ಯೇಸು _ ನ್ಯಾಯದಿಂದಲೂ ಮತ್ತು ಸಮಾಧಾನದಿಂದಲೂ ಆತನ ರಾಜ್ಯವನ್ನು ಆಳುವನು, ಮತ್ತು ಆತನು ತನ್ನ ಜನರೊಂದಿಗೆ ಯಾವಾಗಲೂ ಇರುವನು.

ಪದ ಡೇಟಾ:

- Strong's: G2424, G5547

ಯೋಗ್ಯ, ಯೋಗ್ಯತೆ, ಅಯೋಗ್ಯ, ಯೋಗ್ಯರಹಿತ

ಪದದ ಅರ್ಥವಿವರಣೆ:

“ಯೋಗ್ಯ” ಎನ್ನುವ ಪದವು ಗೌರವ ಅಥವಾ ಘನ ಮಾನಗಳಿಗೆ ಅರ್ಹರಾಗಿರುವ ವ್ಯಕ್ತಿಯನ್ನು ಅಥವಾ ಯಾವುದೇ ಒಂದು ವಿಷಯವನ್ನು ಸೂಚಿಸುತ್ತದೆ. “ಯೋಗ್ಯತೆಯನ್ನು ಹೊಂದಿರು” ಎನ್ನುವ ಮಾತಿಗೆ ಬೆಲೆಯುಳ್ಳದ್ದಾಗಿರುವುದು ಅಥವಾ ಪ್ರಾಮುಖ್ಯತೆಯಿಂದಿರುವುದು ಎಂದರ್ಥ. “ಯೋಗ್ಯರಹಿತ” ಎನ್ನುವ ಪದಕ್ಕೆ ಯಾವುದೇ ಬೆಲೆಯನ್ನು ಹೊಂದದಿರುವುದು ಎಂದರ್ಥ.

- ಯೋಗ್ಯವಾಗಿರುವುದು ಎನ್ನುವುದು ಪ್ರಾಮುಖ್ಯತೆಯನ್ನು ಹೊಂದಿರುವುದು ಅಥವಾ ಬೆಲೆಯುಳ್ಳದ್ದಾಗಿರುವುದು ಎನ್ನುವುದಕ್ಕೆ ಸಂಬಂಧಪಟ್ಟಿರುತ್ತದೆ.

“ಅಯೋಗ್ಯವಾಗಿರುವುದು” ಎನ್ನುವ ಮಾತಿಗೆ ಯಾವುದೇ ವಿಶೇಷವಾದ ಗಮನಕ್ಕೆ ಅರ್ಹರಾಗದಿರುವುದು ಎಂದರ್ಥ.

- ಯೋಗ್ಯವೆಂದು ಭಾವಿಸಬೇಡಿ ಎನ್ನುವ ಮಾತಿಗೆ ಇನ್ನೊಬ್ಬರಿಗಿಂತ ಕಡಿಮೆ ಪ್ರಾಮುಖ್ಯತೆಯಿದೆಯೆಂದು ಭಾವಿಸುವುದು,ಅಥವಾ ದಯೆಯನ್ನು ಅಥವಾ ಘನತೆಯನ್ನು ಪಡೆದುಕೊಳ್ಳುವ ಅರ್ಹತೆಯಿಲ್ಲವೆಂದು ಭಾವಿಸುವುದು ಎಂದರ್ಥ.

“ಅಯೋಗ್ಯ” ಮತ್ತು “ಯೋಗ್ಯರಹಿತ” ಎನ್ನುವ ಪದಗಳು ಒಂದೊಕ್ಕೊಂದು ಸಂಬಂಧವನ್ನು ಹೊಂದಿರುತ್ತವೆ, ಆದರೆ ಅವುಗಳ ಅರ್ಥಗಳು ಬೇರೆ ಬೇರೆಯಾಗಿರುತ್ತವೆ. “ಅಯೋಗ್ಯ” ಎನ್ನುವ ಪದಕ್ಕೆ ಯಾವುದೇ ಘನತೆಗೆ ಅಥವಾ ಗೌರವಕ್ಕೆ ಅರ್ಹವಾಗದಿರುವುದು ಎಂದರ್ಥವಾಗಿರುತ್ತದೆ. “ಯೋಗ್ಯರಹಿತವಾಗಿರುವುದು” ಎಂದರೆ ಯಾವುದೇ ಉದ್ದೇಶವನ್ನು ಅಥವಾ ಬೆಲೆಯನ್ನು ಹೊಂದದಿರುವುದು ಎಂದರ್ಥ.

ಅನುವಾದ ಸಲಹೆಗಳು:

- “ಯೋಗ್ಯ” ಎನ್ನುವ ಪದವನ್ನು “ಅರ್ಹವಾಗಿರುವುದು” ಅಥವಾ “ಪ್ರಾಮುಖ್ಯತೆ” ಅಥವಾ “ಬೆಲೆಯುಳ್ಳದ್ದು” ಎಂದೂ ಅನುವಾದ ಮಾಡಬಹುದು.
- “ಯೋಗ್ಯ” ಎನ್ನುವ ಪದವನ್ನು “ಬೆಲೆ” ಅಥವಾ “ಪ್ರಾಮುಖ್ಯತೆ” ಎಂದೂ ಅನುವಾದ ಮಾಡಬಹುದು.
- “ಯೋಗ್ಯವನ್ನು ಹೊಂದಿರುವುದು” ಎನ್ನುವ ಮಾತನ್ನು “ಬೆಲೆಯನ್ನು ಹೊಂದಿರುವುದು” ಅಥವಾ “ಪ್ರಾಮುಖ್ಯವಾದದ್ದು” ಎಂದೂ ಅನುವಾದ ಮಾಡಬಹುದು.
- “ಇತರೆಗಳಿಗಿಂತ ಯೋಗ್ಯವಾದದ್ದು” ಎನ್ನುವ ಮಾತನ್ನು “ಇತರೆಗಳಿಗಿಂತ ಹೆಚ್ಚಿನ ಬೆಲೆಯುಳ್ಳದ್ದು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ಅಯೋಗ್ಯ” ಎನ್ನುವ ಪದವನ್ನು “ಅಪ್ರಾಮುಖ್ಯ” ಅಥವಾ “ಗೌರವಕ್ಕೆ ಯೋಗ್ಯವಲ್ಲದ” ಅಥವಾ “ಅರ್ಹವಲ್ಲದಾಗಿರುವುದು” ಎಂದೂ ಅನುವಾದ ಮಾಡಬಹುದು.
- “ಅಯೋಗ್ಯ” ಎನ್ನುವ ಮಾತನ್ನು “ಬೆಲೆಯಿಲ್ಲದರಿವುದು” ಅಥವಾ “ಉದ್ದೇಶವಿಲ್ಲದಿರುವುದು” ಅಥವಾ “ಯೋಗ್ಯವಲ್ಲದ್ದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಘನಪಡಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಸಮು.22:04
- 2 ಥೆಸ್ಸ.01:11-12
- ಅಪೊ.ಕೃತ್ಯ.13:25
- ಅಪೊ.ಕೃತ್ಯ.25:25-27
- ಅಪೊ.ಕೃತ್ಯ.26:31
- ಕೊಲೊ.01:9-10
- ಯೆರೆ.08:18-19
- ಮಾರ್ಕ.01:07
- ಮತ್ತಾಯ.03:10-12
- ಫಿಲಿಪ್ಪ.01:25-27

ಪದ ಡೇಟಾ:

- Strong’s: H117, H639, H1929, H3644, H4242, H4373, H4392, H4592, H4941, H6994, H7386, H7939, G96, G514, G515, G516, G2425, G2661, G2735

ರಕ್ತ

ಅರ್ಥವಿವರಣೆ:

“ರಕ್ತ” ಎಂಬ ಪದವು ಪೆಟ್ಟು ಅಥವಾ ಗಾಯವಾದಾಗ ವ್ಯಕ್ತಿಯ ಚರ್ಮದಿಂದ ಹೊರಬರುವ ಕೆಂಪು ದ್ರವವನ್ನು ಸೂಚಿಸುತ್ತದೆ. ರಕ್ತವು ವ್ಯಕ್ತಿಯ ಇಡೀ ದೇಹಕ್ಕೆ ಜೀವ ನೀಡುವ ಪೋಷಕಾಂಶಗಳನ್ನು ಒದಗಿಸುತ್ತದೆ. ಸತ್ಯವೇದದಲ್ಲಿ, "ರಕ್ತ" ಎಂಬ ಪದವನ್ನು ಸಾಂಕೇತಿಕವಾಗಿ "ಜೀವನ" ಮತ್ತು/ ಅಥವಾ ಹಲವಾರು ಇತರ ಪರಿಕಲ್ಪನೆಗಳನ್ನು ಅರ್ಥೈಸಲು ಬಳಸಲಾಗುತ್ತದೆ.

- ಜನರು ದೇವರಿಗೆ ಬಲಿಗಳನ್ನು ಅರ್ಪಿಸಿದಾಗ, ಅವರು ಒಂದು ಪ್ರಾಣಿಯನ್ನು ಕೊಂದು ಅದರ ರಕ್ತವನ್ನು ಬಲಿಪೀಠದ ಮೇಲೆ ಸುರಿಯುವರು. ಇದು ಜನರ ಪಾಪಗಳಿಗೆ ಪಾವತಿಸಲು ಪ್ರಾಣಿಗಳ ಜೀವನದ ತ್ಯಾಗವನ್ನು ಸಂಕೇತಿಸುತ್ತದೆ.
- “ಮಾಂಸ ಮತ್ತು ರಕ್ತ” ಎಂಬ ಅಭಿವ್ಯಕ್ತವು ಮನುಷ್ಯರನ್ನು ಸೂಚಿಸುತ್ತದೆ.
- “ಸ್ವಂತ ಮಾಂಸ ಮತ್ತು ರಕ್ತ” ಎಂಬ ಅಭಿವ್ಯಕ್ತವು ರಕ್ತ ಸಂಬಂಧ ಹೊಂದಿರುವ ಜನರನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಭಾಷೆಯಲ್ಲಿ ಉಪಯೋಗಿಸುವ ಪದದೊಂದಿಗೆ ಮಾತ್ರವೇ ಅನುವಾದ ಮಾಡಿರಿ.
- “ರಕ್ತ ಮಾಂಸಗಳು” ಎನ್ನುವ ಮಾತನ್ನು “ಜನರು” ಅಥವಾ “ಮನುಷ್ಯರು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ನನ್ನ ಸ್ವಂತ ಶರೀರ ಮತ್ತು ಸ್ವಂತ ರಕ್ತ” ಎನ್ನುವ ಮಾತನ್ನು “ನನ್ನ ಸ್ವಂತ ಕುಟುಂಬ” ಅಥವಾ “ನನ್ನ ಸ್ವಂತ ಬಂಧುಗಳು” ಅಥವಾ “ನನ್ನ ಸ್ವಂತ ಜನರು” ಎಂಬುದಾಗಿಯೂ ಅನುವದಾ ಮಾಡಬಹುದು.
- ಅನುವಾದ ಮಾಡುವ ಭಾಷೆಯಲ್ಲಿ ಈ ಅರ್ಥ ಬರುವ ಬೇರೊಂದು ಮಾತು ಇದ್ದರೆ, ಆ ಮಾತನ್ನು “ರಕ್ತ ಮಾಂಸಗಳು” ಎನ್ನುವ ಮಾತಿಗೆ ಆ ಪದವನ್ನು ಉಪಯೋಗಿಸಬಹುದು. .

(ಈ ಪದಗಳನ್ನು ಸಹ ನೋಡಿರಿ: ರಕ್ತ ಸುರಿಸು; ಮಾಂಸ; ಜೀವ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.01:07
- 1 ಸಮು.14:32
- ಅಪೊ.ಕೃತ್ಯ.02:20
- ಅಪೊ.ಕೃತ್ಯ.05:28
- ಕೊಲೊಸ್ಸ.01:20
- ಗಲಾತ್ಯ.01:16
- ಆದಿ.04:11
- ಕೀರ್ತನೆ.016:4
- ಕೀರ್ತನೆ.105:28-30

ಸತ್ಯವೇದದಿಂದ ಉದಾಹರಣೆಗಳು:

- **08:03** ಯೋಸೇಫನ ಅಣ್ಣಂದಿಯರು ಮನೆಗೆ ಹಿಂದುರಿಗಿ ಬರುವುದಕ್ಕೆ ಮುಂಚಿತವಾಗಿ, ಅವರು ಯೋಸೇಫನ ಅಂಗಿಯನ್ನು ಅರಿದು, ಅದನ್ನು ಒಂದು ಹೋತದ _ ರಕ್ತದೊಳಗೆ _ ಅದ್ದಿದರು.
- **10:03** ದೇವರು ನೈಲ್ ನದಿಯನ್ನು _ರಕ್ತವನ್ನಾಗಿ _ ಮಾಡಿದನು, ಆದರೆ ಫರೋಹನು ಇಸ್ರಾಯೇಲ್ಯರು ಹೊರ ಹೋಗಲು ಬಿಡಲಿಲ್ಲ.
- **11:05** ಇಸ್ರಾಯೇಲ್ಯರ ಎಲ್ಲಾ ಮನೆಗಳ ಬಾಗಿಲಗಳ ಸುತ್ತಲು _ ರಕ್ತವನ್ನು_ ಹಚ್ಚಿದರು, ಇದರಿಂದ ದೇವರು ಆ ಮನೆಗಳ ಮೂಲಕ ಹಾದುಹೋಗಿ, ಆ ಮನೆಗಳಲ್ಲಿರುವ ಪ್ರತಿಯೊಬ್ಬರನ್ನು ಸುರಕ್ಷಿತವಾಗಿಟ್ಟನು. ಕುರಿಯ **ರಕ್ತದಿಂದ** ಅವರೆಲ್ಲರು ರಕ್ಷಣೆ ಹೊಂದಿದರು.
- **13:09** ಬಲಿಯಾದ ಪ್ರಾಣಿಯ _ ರಕ್ತವು _ ಒಬ್ಬ ವ್ಯಕ್ತಿಯ ಪಾಪವನ್ನು ಕಪ್ಪಿತು ಮತ್ತು ಆ ವ್ಯಕ್ತಿ ದೇವರ ದೃಷ್ಟಿಯಲ್ಲಿ ಶುದ್ಧನಾಗಿ ಕಾಣುವಂತೆ ಮಾಡಿತು.
- **38:05** ಯೇಸು ಪಾನ ಪಾತ್ರೆಯನ್ನು ತೆಗೆದುಕೊಂಡು, ಇದು ಪಾಪಗಳ ಕ್ಷಮೆಗಾಗಿ ಸುರಿಸಲ್ಪಡುತ್ತಿರುವ “ನನ್ನ ಹೊಸ ಒಡಂಬಡಿಕೆಯ _ ರಕ್ತ _, ಇದರಲ್ಲಿರುವುದು ಎಲ್ಲರೂ ಕುಡಿಯಿರಿ” ಎಂದು ಹೇಳಿದನು.
- **48:10** ಒಬ್ಬ ವ್ಯಕ್ತಿ ಯೇಸುವನ್ನು ನಂಬಿದಾಗ, ಯೇಸುವಿನ _ ರಕ್ತವು _ ಆ ವ್ಯಕ್ತಿಯ ಪಾಪಗಳನ್ನು ತೆಗೆದು ಹಾಕುವುದು ಮತ್ತು ಅವನ ಮೇಲೆ ಬರುವ ದೇವರ ಶಿಕ್ಷೆಯನ್ನು ತೊಲಗಿಸುವುದು.

ಪದ ಡೇಟಾ:

- Strong's: H1818, H5332, G129, G130, G131,

ರಕ್ತಬೋಳ

ಅರ್ಥವಿವರಣೆ:

ರಕ್ತಬೋಳ ಎನ್ನುವುದು ಆಫ್ರಿಕಾ ಮತ್ತು ಏಷ್ಯಗಳಲ್ಲಿ ಬೆಳೆಯುವ ಸುಗಂಧ ಸಸ್ಯಗಳಿಂದ ತಯಾರಿಸುವ ಸುಗಂಧ ದ್ರವ್ಯ ಅಥವಾ ತೈಲವಾಗಿರುತ್ತದೆ. ಇದು ಸಾಂಬ್ರಾಣಿಗೆ ಸಂಬಂಧಪಟ್ಟಿರುತ್ತದೆ.

- ರಕ್ತಬೋಳವನ್ನು ಧೂಪದ್ರವ್ಯ, ಸುಗಂಧ ಮತ್ತು ಔಷಧವನ್ನು ತಯಾರಿಸುವುದಕ್ಕೆ ಉಪಯೋಗಿಸುತ್ತಾರೆ ಮತ್ತು ಶವಗಳನ್ನು ಸಮಾಧಿಗೆ ಸಿದ್ಧಗೊಳಿಸುವುದಕ್ಕೆ ಕೂಡ ಉಪಯೋಗಿಸುತ್ತಾರೆ.
- ಯೇಸುವು ಜನಿಸಿದಾಗ ಆತನಿಗೆ ಜೋಯಿಸರು ಕೊಟ್ಟ ಉಡುಗೊರೆಗಳಲ್ಲಿ ರಕ್ತಬೋಳವು ಒಂದಾಗಿರುತ್ತದೆ.
- ಯೇಸುವನ್ನು ಶಿಲುಬೆಗೆ ಏರಿಸಿದಾಗ ನೋವನ್ನು ಕಡಿಮೆ ಮಾಡುವುದಕ್ಕೆ ರಕ್ತಬೋಳದಲ್ಲಿ ದ್ರಾಕ್ಷಾರಸವನ್ನು ಕಲಸಿಕೊಟ್ಟಿದ್ದರು.

(ಇವುಗಳನ್ನು ಸಹ ನೋಡಿರಿ : ಸಾಂಬ್ರಾಣಿ, ಜೋಯಿಸರು)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.30:22-25
- ಆದಿ.37:25-26
- ಯೋಹಾನ.11:1-2
- ಮಾರ್ಕ.15:23
- ಮತ್ತಾಯ.2:11-12

ಪದದ ಡೇಟಾ:

- Strong's: H3910, H4753, G34640, G46660, G46690

ರಕ್ಷಕ, ಸಂರಕ್ಷಕ (ಅಥವಾ ಉದ್ಧಾರಕ)

ಸತ್ಯಾಂಶಗಳು:

“ಸಂರಕ್ಷಕ” ಎನ್ನುವ ಪದವು ಆಪಾಯಕರ ಸ್ಥಿತಿಯಿಂದ ಇತರರನ್ನು ಕಾಪಾಡುವ ಅಥವಾ ರಕ್ಷಿಸುವ ವ್ಯಕ್ತಿಯನ್ನು ಸೂಚಿಸುತ್ತದೆ. ಇತರರಿಗಾಗಿ ತನ್ನ ಬಲವನ್ನು ಒದಗಿಸಿಕೊಡುವ ಅಥವಾ ತನ್ನ ಬಲವನ್ನು ಕೊಟ್ಟು ರಕ್ಷಿಸುವ ವ್ಯಕ್ತಿಯನ್ನು ಕೂಡ ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ದೇವರು ಇಸ್ರಾಯೇಲ್ ರಕ್ಷಕನಾಗಿ ಸೂಚಿಸಲ್ಪಟ್ಟಿದ್ದಾನೆ, ಯಾಕಂದರೆ ಆತನು ಅವರನ್ನು ಅನೇಕಸಲ ತಮ್ಮ ವೈರಿಗಳಿಂದ ರಕ್ಷಿಸಿದ್ದನು, ಅವರಿಗೆ ಬಲವನ್ನು ಕೊಟ್ಟಿದ್ದನು, ಮತ್ತು ಅವರು ಜೀವನ ಮಾಡುವುದಕ್ಕೆ ಬೇಕಾದವುಗಳನ್ನೆಲ್ಲಾ ಅನುಗ್ರಹಿಸಿದ್ದನು.

ಹಳೆಒಂಡಂಬಡಿಕೆಯಲ್ಲಿ, ದೇವರು ಇಸ್ರಾಯೇಲ್ಯರನ್ನು ಆಕ್ರಮಿಸಲು ಬಂದ ಇತರ ಗುಂಪುಗಳ ವಿರುದ್ಧ ಮುನ್ನೆಡೆಸುವ ಮೂಲಕ ಅವರನ್ನು ರಕ್ಷಿಸಲು ನ್ಯಾಯಧೀಶರನ್ನು ನೇಮಿಸಿದನು. ಕೆಲೊವೊಮ್ಮೆ ಈ ನ್ಯಾಯಾಧೀಶರನ್ನು "ಸಂರಕ್ಷಕ" ಎಂದು ಕರೆಯಲಾಗುತ್ತಿತ್ತು. ಹಳೆ ಒಡಂಬಡಿಕೆಯ ನ್ಯಾಯಸ್ಥಾಪಕರು ಪುಸ್ತಕದಲ್ಲಿ ನ್ಯಾಯಾಡೀಶರು ಇಸ್ರಾಯೇಲ್ಯರನ್ನು ಆಳುತ್ತಿದ್ದ ಸಮಯವನ್ನು ದಾಖಿಸಲಾಗಿದೆ.

- ಹೊಸ ಒಡಂಬಡಿಕೆಯಲ್ಲಿ “ರಕ್ಷಕ” ಎನ್ನುವ ಪದವನ್ನು ಯೇಸು ಕ್ರಿಸ್ತನನ್ನು ಸೂಚಿಸುವುದಕ್ಕೆ ವಿವರಣೆಯಾಗಿ ಅಥವಾ ಬಿರುದಾಗಿ ಉಪಯೋಗಿಸಲ್ಪಟ್ಟಿರುತ್ತದೆ, ಯಾಕಂದರೆ ಜನರು ಮಾಡಿದ ಪಾಪಗಳಿಗಾಗಿ ಹೊಂದುವ ನಿತ್ಯ ಶಿಕ್ಷೆಯಿಂದ ಅವರನ್ನು ಆತನು ರಕ್ಷಿಸುವನು. ಆತನು ತಮ್ಮ ಪಾಪಗಳ ನಿಯಂತ್ರಣದಿಂದಲೂ ಅವರನ್ನು ಬಿಡಿಸುವನು.

ಅನುವಾದ ಸಲಹೆಗಳು:

- ಸಾಧ್ಯವಾದರೆ “ರಕ್ಷಕ” ಎನ್ನುವ ಪದವನ್ನು “ರಕ್ಷಿಸು” ಮತ್ತು “ರಕ್ಷಣೆ” ಎನ್ನುವ ಪದಗಳಿಗೆ ಸಂಬಂಧಪಟ್ಟ ಪದಗಳನ್ನು ಉಪಯೋಗಿಸಿ ಅನುವಾದ ಮಾಡಿರಿ.
- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ರಕ್ಷಿಸುವ ವ್ಯಕ್ತಿ” ಅಥವಾ “ರಕ್ಷಿಸುವ ದೇವರು” ಅಥವಾ “ಅಪಾಯದಿಂದ ಬಿಡುಗಡೆ ಮಾಡುವ ವ್ಯಕ್ತಿ” ಅಥವಾ “ವೈರಿಗಳಿಂದ ಕಾಪಾಡುವ ವ್ಯಕ್ತಿ” ಅಥವಾ “ಪಾಪದಿಂದ (ಜನರನ್ನು) ಕಾಪಾಡುವ ವ್ಯಕ್ತಿಯಾದ ಯೇಸು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಬಿಡುಗಡೆ ಮಾಡು, ಯೇಸು, ರಕ್ಷಿಸು, ಕಾಪಾಡು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.04:9-10
- 2 ಪೇತ್ರ.02:20-22
- ಅಪೊ.ಕೃತ್ಯ.05:29-32
- ಯೆಶಯಾ.60:15-16
- ಲೂಕ.01:46-47
- ಕೀರ್ತನೆ.106:19-21

ಪದ ಡೇಟಾ:

- Strong's: H3467, G4990

ರಕ್ಷಿಸು, ರಕ್ಷಿಸುವುದು, ರಕ್ಷಿಸಲ್ಪಟ್ಟಿದೆ, ಸಂರಕ್ಷಣೆ, ರಕ್ಷಣೆ

ಪದದ ಅರ್ಥವಿವರಣೆ:

“ರಕ್ಷಿಸು” ಎನ್ನುವ ಪದವು ಯಾರೇ ಒಬ್ಬರು ಯಾವುದಾದರೊಂದು ಕೆಟ್ಟದ್ದನ್ನು ಅಥವಾ ಹಾನಿಕರವಾದದ್ದನ್ನು ಅನುಭವಿಸದಂತೆ ಅವರನ್ನು ಕಾಪಾಡುವುದನ್ನು ಸೂಚಿಸುತ್ತದೆ. “ಸಂರಕ್ಷಣೆಯಿಂದಿರುವುದು” ಎಂದರೆ ಹಾನಿಯಿಂದ ಅಥವಾ ಅಪಾಯಕರ ಸ್ಥಿತಿಯಿಂದ ಸಂರಕ್ಷಿಸುವುದು ಎಂದರ್ಥ.

- ಭೌತಿಕ ಅರ್ಥವನ್ನು ಸೂಚಿಸಿದಾಗ, ಜನರು ಹಾನಿಕರವಾದವುಗಳಿಂದ, ಅಪಾಯದಿಂದ ಅಥವಾ ಮರಣದಿಂದ ರಕ್ಷಿಸಲ್ಪಡುವರು ಅಥವಾ ತಪ್ಪಿಸಲ್ಪಡುವರು.
- ಆತ್ಮೀಯ ಅರ್ಥವನ್ನು ಸೂಚಿಸಿದಾಗ, ಒಬ್ಬ ವ್ಯಕ್ತಿ ಶಿಲುಬೆಯ ಮೇಲೆ ಯೇಸುವಿನ ಮರಣದ ಮೂಲಕ “ರಕ್ಷಿಸಲ್ಪಟ್ಟಿದ್ದಾನೆಂದರೆ”, ಆ ವ್ಯಕ್ತಿಯನ್ನು ದೇವರು ಕ್ಷಮಿಸಿ, ತಾನು ಮಾಡಿದ ಪಾಪಕ್ಕೆ ನರಕದಲ್ಲಿ ಶಿಕ್ಷೆಯನ್ನು ಅನುಭವಿಸದಂತೆ ಮಾಡಿದ್ದಾನೆಂದರ್ಥ.
- ಜನರು ಅಪಾಯದಿಂದ ಜನರನ್ನು ರಕ್ಷಿಸಿಕೊಳ್ಳಬಹುದು ಅಥವಾ ತಪ್ಪಿಸಬಹುದು, ಆದರೆ ದೇವರು ಮಾತ್ರವೇ ಜನರನ್ನು ತಮ್ಮ ಪಾಪಗಳಿಗಾಗಿ ನಿತ್ಯ ಶಿಕ್ಷೆಯನ್ನು ಅನುಭವಿಸದಂತೆ ಮಾಡುವ ಶಕ್ತನಾಗಿದ್ದಾನೆ.

“ರಕ್ಷಣೆ” ಎನ್ನುವ ಪದವು ದುಷ್ಟತ್ವದಿಂದ ಮತ್ತು ಅಪಾಯದಿಂದ ರಕ್ಷಣೆ ಹೊಂದುವುದನ್ನು ಅಥವಾ ತಪ್ಪಿಸಲ್ಪಡುವುದನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ “ರಕ್ಷಣೆ” ಎನ್ನುವುದು ಸಾಧಾರಣವಾಗಿ ಯೇಸುವಿನಲ್ಲಿ ನಂಬಿಕೆ ಇಟ್ಟು, ತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಡೆಯುವವರಿಗೆ ದೇವರಿಂದ ಅನುಗ್ರಹಿಸಲ್ಪಟ್ಟ ಆತ್ಮೀಯಕವಾದ ಮತ್ತು ನಿತ್ಯ ಬಿಡುಗಡೆಯನ್ನು ಸೂಚಿಸುತ್ತದೆ.
- ದೇವರು ತನ್ನ ಜನರನ್ನು ತಮ್ಮ ಭೌತಿಕವಾದ ಶತ್ರುಗಳಿಂದ ತಮ್ಮನ್ನು ಬಿಡುಗಡೆಗೊಳಿಸುವ ಅಥವಾ ರಕ್ಷಿಸುವುದರ ಕುರಿತಾಗಿಯೂ ಸತ್ಯವೇದವು ಮಾತನಾಡುತ್ತಿದೆ.

ಅನುವಾದ ಸಲಹೆಗಳು:

- “ರಕ್ಷಿಸು” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಬಿಡುಗಡೆ ಮಾಡು” ಅಥವಾ “ಹಾನಿಯಿಂದ ತಪ್ಪಿಸು” ಅಥವಾ ‘ಹಾನಿಕರವಾದ ಮಾರ್ಗದಿಂದ ತಪ್ಪಿಸು” ಅಥವಾ “ಮರಣಿಸುವುದರಿಂದ ಕಾಪಾಡು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಯಾರು ತಮ್ಮ ಜೀವನಗಳನ್ನು ರಕ್ಷಿಸಿಕೊಳ್ಳುತ್ತಾರೋ” ಎನ್ನುವ ಮಾತನಲ್ಲಿರುವ “ರಕ್ಷಿಸು” ಎನ್ನುವ ಪದವನ್ನು “ಭದ್ರಪಡಿಸಿಕೊಳ್ಳುವರೋ” ಅಥವಾ “ಸಂರಕ್ಷಿಸಿಕೊಳ್ಳುವರೋ” ಎಂದೂ ಅನುವಾದ ಮಾಡಬಹುದು.
- “ಸುರಕ್ಷಿತ” ಎನ್ನುವ ಪದವನ್ನು “ಅಪಾಯದಿಂದ ಸಂರಕ್ಷಿಸಲ್ಪಡುವುದು” ಅಥವಾ “ಹಾನಿಯುಂಟು ಮಾಡದ ಸ್ಥಳದಲ್ಲಿ” ಎಂದೂ ಅನುವಾದ ಮಾಡಬಹುದು.
- “ರಕ್ಷಣೆ” ಎನ್ನುವ ಪದವನ್ನು “ರಕ್ಷಿಸು” ಅಥವಾ “ಕಾಪಾಡು” ಎನ್ನುವ ಪದಗಳಿಗೆ ಸಂಬಂಧಪಟ್ಟಿರುವ ಪದಗಳನ್ನು ಉಪಯೋಗಿಸಿ ಅನುವಾದ ಮಾಡಬಹುದು, ಉದಾಹರಣೆಗೆ, “(ಜನರ ಪಾಪಗಳಿಗಾಗಿ ಕೊಡಲ್ಪಟ್ಟ ಶಿಕ್ಷೆಯಿಂದ) ದೇವರು ಜನರನ್ನು ರಕ್ಷಿಸುವುದು” ಅಥವಾ “(ಜನರ ಶತ್ರುಗಳಿಂದ) ದೇವರು ತನ್ನ ಜನರನ್ನು ಕಾಪಾಡುವುದು” ಎನ್ನುವ ಮಾತುಗಳಂತೆ ಅನುವಾದ ಮಾಡಬಹುದು.
- “ದೇವರೇ ನನ್ನ ರಕ್ಷಣೆ” ಎನ್ನುವ ಮಾತನ್ನು “ನನ್ನನ್ನು ರಕ್ಷಿಸುವವನು ದೇವರೊಬ್ಬರೇ” ಎಂದೂ ಅನುವಾದ ಮಾಡಬಹುದು.
- “ರಕ್ಷಣೆ ಬಾವಿಗಳಿಂದ ನೀನು ನೀರನ್ನು ಬರಮಾಡುವಿ” ಎನ್ನುವ ಮಾತನ್ನು “ದೇವರು ನಿನ್ನನ್ನು ಕಾಪಾಡುವದರಿಂದ ನೀರಿನ ಹಾಗೆಯೇ ನಿನ್ನನ್ನು ದಣಿವಾರಿಸುವನು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಶಿಲುಬೆ, ಬಿಡುಗಡೆ, ಶಿಕ್ಷಿಸು, ಪಾಪ, ರಕ್ಷಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.49:16-18
- ಆದಿ.47:25-26
- ಕೀರ್ತನೆ.080:1-3
- ಯೆರೆ.16:19-21
- ಮೀಕ.06:3-5
- ಲೂಕ.02:30-32
- ಲೂಕ.08:36-37
- ಅಪೊ.ಕೃತ್ಯ.04:11-12
- ಅಪೊ.ಕೃತ್ಯ.28:28
- ಅಪೊ.ಕೃತ್ಯ.02:20-21
- ರೋಮಾ.01:16-17
- ರೋಮಾ.10:8-10
- ಎಫೆಸ.06:17-18
- ಫಿಲಿಪ್ಪಿ.01:28-30

- 1 ತಿಮೊಥೆ.01:15-17
- ಪ್ರಕ.19:1-2

ಸತ್ಯವೇದದಿಂದ ಉದಾಹರಣೆಗಳು:

- **09:08** ಮೋಶೆ ತನ್ನ ಸಹ ಇಸ್ರಾಯೇಲ್ಯರನ್ನು _ **ರಕ್ಷಿಸುವುದಕ್ಕೆ** _ ಯತ್ನಿಸಿದನು.
- **11:02** ದೇವರಲ್ಲಿ ನಂಬಿಕೆಯಿಟ್ಟಿರುವ ಜನರ ಮೊದಲ ಸಂತಾನ ಗಂಡು ಮಗುವನ್ನು (ಚೊಚ್ಚಲ ಮಗುವನ್ನು)_ **ರಕ್ಷಿಸುವುದಕ್ಕೆ** _ ಆತನು ಒಂದು ಮಾರ್ಗವನ್ನು ಅನುಗ್ರಹಿಸುವನು.
- **12:05** "ಹೆದರಬೇಡಿರಿ! ಈ ದಿನದಂದು ದೇವರು ನಿಮಗಾಗಿ ಯುದ್ಧ ಮಾಡುವನು ಮತ್ತು ನಿಮ್ಮನ್ನು _ **ರಕ್ಷಿಸುವನು** _ ಎಂದು ಮೋಶೆ ಇಸ್ರಾಯೇಲ್ಯರಿಗೆ ಹೇಳಿದನು.
- **12:13** ಇಸ್ರಾಯೇಲ್ಯರು ದೇವರನ್ನು ಸ್ತುತಿಸುವುದಕ್ಕೆ ಮತ್ತು ತಮ್ಮ ಹೊಸ ಸ್ವಾತಂತ್ರ್ಯವನ್ನು ಆಚರಿಸಿಕೊಳ್ಳುವುದಕ್ಕೆ ಅನೇಕವಾದ ಹಾಡುಗಳನ್ನು ಹಾಡಿದರು, ಯಾಕಂದರೆ ಆತನು ಅವರನ್ನು ಐಗುಪ್ತ ಸೈನ್ಯದಿಂದ _ ರಕ್ಷಿಸಿದ್ದನು __.
- **16:17** ಈ ವಿಧವಾದ ಪದ್ಧತಿಯು ಅನೇಕಸಲ ನಡೆದಿತ್ತು: ಇಸ್ರಾಯೇಲ್ಯರು ಪಾಪ ಮಾಡುತ್ತಿದ್ದರು, ದೇವರು ಅವರನ್ನು ಶಿಕ್ಷಿಸುತ್ತಿದ್ದನು, ಅವರು ಪಶ್ಚಾತ್ತಾಪ ಹೊಂದುತ್ತಿದ್ದರು, ಮತ್ತು ದೇವರು ಅವರನ್ನು _ **ರಕ್ಷಿಸುವುದಕ್ಕೆ** _ ವಿಮೋಚಕನನ್ನು ಕಳುಹಿಸುತ್ತಿದ್ದನು.
- **44:08** "ನೀವು ಯೇಸುವನ್ನು ಶಿಲುಬೆಗೆ ಹಾಕಿದ್ದೀರಿ, ಆದರೆ ದೇವರು ಆತನನ್ನು ತಿರುಗಿ ಎಬ್ಬಿಸಿ, ಜೀವಂತವನ್ನಾಗಿ ಮಾಡಿದ್ದಾನೆ! ನೀವು ಆತನನ್ನು ತಿರಸ್ಕಾರ ಮಾಡಿದ್ದೀರಿ, ಆದರೆ ಯೇಸುವಿನ ಶಕ್ತಿಯಿಂದ ಬಿಟ್ಟು, ಇನ್ನು ಬೇರೆ ಯಾವ ಮಾರ್ಗದಿಂದಲೂ _ ರಕ್ಷಣೆ __ ಹೊಂದುವುದಕ್ಕೆ ಸಾಧ್ಯವಿಲ್ಲ.
- **47:11** ಸೆರೆಮನೆಯ ಅಧಿಕಾರಿ ನಡುಗುತ್ತಾ ಪೌಲ ಮತ್ತು ಸೀಲರವರ ಬಳಿಗೆ ಬಂದು, "_ ರಕ್ಷಣೆ ಹೊಂದುವುದಕ್ಕೆ ನಾನೇನು ಮಾಡಬೇಕು?" ಎಂದು ಕೇಳಿದನು. "ಬೋಧಕನಾಗಿರುವ ಯೇಸುವಿನಲ್ಲಿ ನಂಬಿಕೆಯಿಡು, ನೀನು ಮತ್ತು ನಿನ್ನ ಕುಟುಂಬವು __ ರಕ್ಷಣೆ _ ಹೊಂದುವರು" ಎಂದು ಪೌಲನು ಉತ್ತರಿಸಿದನು.
- **49:12** ಒಳ್ಳೇಯ ಕಾರ್ಯಗಳು ನಿನ್ನನ್ನು _ **ರಕ್ಷಿಸುವುದಿಲ್ಲ** _.
- **49:13** ಯೇಸುವಿನಲ್ಲಿ ನಂಬಿಕೆಯಿಡುವ ಮತ್ತು ಆತನನ್ನು ತಮ್ಮ ಒಡೆಯನನ್ನಾಗಿ ಸ್ವೀಕರಿಸುವ ಪ್ರತಿಯೊಬ್ಬರನ್ನು ದೇವರು _ **ರಕ್ಷಿಸುವನು** . ಆದರೆ ಆತನಲ್ಲಿ ನಂಬಿಕೆ ಇಡದವರನ್ನು ಆತನು **ರಕ್ಷಿಸುವುದಿಲ್ಲ** _.

ಪದ ಡೇಟಾ:

- Strong's: H983, H2421, H3444, H3467, H3468, H4190, H4422, H4931, H6403, H7682, H7951, H7965, H8104, H8668, G803, G804, G806, G1295, G1508, G4982, G4991, G4992, G5198

ರಬ್ಬಿ

ಅರ್ಥವಿವರಣೆ:

“ರಬ್ಬಿ” ಎನ್ನುವ ಮಾತು ಅಕ್ಷರಾರ್ಥವಾಗಿ “ನನ್ನ ಬೋಧಕನು” ಅಥವಾ “ನನ್ನ ಗುರುವು” ಎಂದರ್ಥ.

- ಯೆಹೂದ ಧರ್ಮದ ಬೋಧಕನನ್ನು, ವಿಶೇಷವಾಗಿ ದೇವರ ಧರ್ಮಶಾಸ್ತ್ರದ ಬೋಧಕನನ್ನು ಸಂಬೋಧಿಸುವುದಕ್ಕೆ ಉಪಯೋಗಿಸಲ್ಪಟ್ಟಿರುವ ಗೌರವವುಳ್ಳ ಬಿರುದಾಗಿರುತ್ತದೆ.
- ಸ್ನಾನೀಕನಾದ ಯೋಹಾನನು ಮತ್ತು ಯೇಸುವು ಕೆಲವು ಬಾರಿ ತಮ್ಮ ಶಿಷ್ಯರಿಂದ “ರಬ್ಬಿ” ಎಂದು ಕರೆಯಲ್ಪಟ್ಟಿದ್ದರು.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ನನ್ನ ಬೋಧಕನು” ಅಥವಾ “ನನ್ನ ಗುರುವು” ಅಥವಾ “ಮಾನ್ಯ ಗುರುವು” ಅಥವಾ “ಧಾರ್ಮಿಕ ಗುರುವು” ಎನ್ನುವ ಮಾತುಗಳು ಒಳಗೊಂಡಿರುತ್ತವೆ. ಕೆಲವೊಂದು ಭಾಷೆಗಳಲ್ಲಿ ವಂದನೆಗಳನ್ನು ಹೇಳುವುದಕ್ಕೆ ಈ ರೀತಿ ಅಕ್ಷರಗಳನ್ನು ದೊಡ್ಡದಾಗಿ ಬರೆಯುತ್ತಾರೆ, ಇನ್ನೂ ಕೆಲವು ಭಾಷೆಗಳಲ್ಲಿ ಆ ರೀತಿ ಉಪಯೋಗಿಸುವುದಿಲ್ಲ.
- ಗುರುಗಳನ್ನು ಸಾಧಾರಣವಾಗಿ ಸಂಬೋಧಿಸುವ ವಿಶೇಷವಾದ ವಿಧಾನವನ್ನು ಯೋಜನಾ ಭಾಷೆಗಳಲ್ಲಿ ಉಪಯೋಗಿಸುತ್ತಿರಬಹುದು.
- ಅನುವಾದ ಮಾಡಲ್ಪಟ್ಟಿರುವ ಈ ಪದವು ಯೇಸು ಪಾಠಶಾಲೆಯ ಗುರುವೆಂದು ಸೂಚಿಸದಂತೆ ನೋಡಿಕೊಳ್ಳಿರಿ.
- ಸ್ಥಳೀಯ ಅಥವಾ ರಾಷ್ಟ್ರೀಯ ಭಾಷೆಯಲ್ಲಿ ಅನುವಾದ ಮಾಡಿದ ಸತ್ಯವೇದಗಳಲ್ಲಿ “ರಬ್ಬಿ” ಎನ್ನುವ ಪದವನ್ನು ಯಾವರೀತಿ ಅನುವಾದ ಮಾಡಿದ್ದಾರೆಂದು ಗಮನಿಸಿರಿ.

(ನೋಡಿ: ಅಪರಿಚಿತರನ್ನು ಹೇಗೆ ಅನುವಾದಿಸುವುದು)

(ಇದನ್ನೂ ಸಹ ನೋಡಿರಿ : ಗುರುವು)

ಸತ್ಯವೇದದ ಅನುಬಂಧ ವಾಕ್ಯಗಳು:

- ಯೋಹಾನ.1:49-51
- ಯೋಹಾನ.6:24-25
- ಮಾರ್ಕ.14:43-46
- ಮತ್ತಾಯ.23:8-10

ಪದದ ಡೇಟಾ:

- Strong's: G44610

ರೋಷ, ಅಸೂಯೆ

ಪದದ ಅರ್ಥವಿವರಣೆ:

“ರೋಷ” ಮತ್ತು “ಅಸೂಯೆ” ಎನ್ನುವ ಪದಗಳು ಸಂಬಂಧದ ಪವಿತ್ರತೆಯನ್ನು ಸಂರಕ್ಷಿಸಿಕೊಳ್ಳುವುದಕ್ಕೆ ಹುಟ್ಟುವ ಬಲವಾದ ಆಸೆಯನ್ನು ಸೂಚಿಸುತ್ತದೆ. ಒಬ್ಬರ ಅಥವಾ ಯಾವುದಾದರೊಂದರ ಆಸ್ತಿಯನ್ನು ಕಾಪಾಡಿಕೊಳ್ಳುವುದಕ್ಕೆ ಹುಟ್ಟುವ ಬಲವಾದ ಆಸೆಯನ್ನೂ ಸೂಚಿಸುತ್ತದೆ.

- ವಿವಾಹ ಬಂಧನದಲ್ಲಿ ಅಪನಂಬಿಗಸ್ತರಾದ ಗಂಡನ ಮೇಲೆ ಹೆಂಡತಿ ಅಥವಾ ಹೆಂಡತಿಯ ಮೇಲೆ ಗಂಡನು ಹೊಂದಿರುವ ಕೋಪದ ಭಾವನೆಯನ್ನು ವಿವರಿಸುವುದಕ್ಕೆ ಅನೇಕಸಲ ಈ ಪದಗಳು ಉಪಯೋಗಿಸಲ್ಪಟ್ಟಿವೆ.
- ಈ ಪದಗಳನ್ನು ಸತ್ಯವೇದದಲ್ಲಿ ಉಪಯೋಗಿಸಿದಾಗ, ದೇವರ ಪ್ರಜೆಯು ಯಾವ ಪಾಪದಿಂದ ಕಲೆಯಾಗದೆ, ಯಾವಾಗಲೂ ಪವಿತ್ರರಾಗಿರಬೇಕೆಂದು ದೇವರ ಬಲವಾದ ಆಸೆಯನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತವೆ.
- ದೇವರು ಕೂಡ ತನ್ನ ಹೆಸರಿಗಾಗಿ “ರೋಷವುಳ್ಳವನಾಗಿರುತ್ತಾನೆ”, ಆ ಹೆಸರನ್ನು ಘನಪಡಿಸಬೇಕೆಂದು ಮತ್ತು ಗೌರವಿಸಬೇಕೆಂದು ಆಸೆಯನ್ನು ಹೊಂದಿರುತ್ತಾನೆ.
- ಈ ಪದಕ್ಕೆ ಹೊಟ್ಟೆಕಿಚ್ಚು ಎನ್ನುವ ಇನ್ನೊಂದು ಅರ್ಥವೂ ಇದೆ, ಬೇರೊಬ್ಬರು ಯಶಸ್ವಿಯಾಗುತ್ತಿದ್ದೆ ಅಥವಾ ಅವರು ಪ್ರಸಿದ್ಧಿ ಹೊಂದುತ್ತಿದ್ದರೆ ಕೋಪಬರುವುದನ್ನು ಸೂಚಿಸುತ್ತದೆ. ಈ ಪದದ ಅರ್ಥವು “ಅಸೂಯೆ” ಎನ್ನುವ ಪದಕ್ಕೆ ಬರುವ ಅರ್ಥಕ್ಕೆ ತುಂಬಾ ಹತ್ತಿರವಾಗಿರುತ್ತದೆ.

ಅನುವಾದ ಸಲಹೆಗಳು:

- “ರೋಷ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ಬಲವಾಗಿ ಸಂರಕ್ಷಿಸಿಕೊಳ್ಳುವ ಆಸೆ” ಅಥವಾ “ಸ್ವಾರ್ಥವುಳ್ಳ ಆಸೆ” ಎನ್ನುವ ಪದಗಳು ಒಳಗೊಂಡಿರುತ್ತವೆ.
- ‘ರೋಷ” ಎನ್ನುವ ಪದವನ್ನು “ಬಲವಾಗಿ ಸಂರಕ್ಷಿಸಿಕೊಳ್ಳುವ ಆಸೆ” ಅಥವಾ “ಸ್ವಾರ್ಥವುಳ್ಳ ಆಸೆ” ಎಂದೂ ಅನುವಾದ ಮಾಡಬಹುದು.
- ದೇವರ ಕುರಿತಾಗಿ ಮಾತನಾಡುತ್ತಿರುವಾಗ, ಈ ಪದಗಳು ಇನ್ನೊಬ್ಬರ ವಿಷಯದಲ್ಲಿ ಅಸಮಾಧಾನವಿರುವ ಅನಾನುಕೂಲವಾದ ಅರ್ಥ ಬರದಂತೆ ನೋಡಿಕೊಳ್ಳಿರಿ.
- ಹೆಚ್ಚಾಗಿ ಯಶಸ್ವಿಯಾಗುತ್ತಿರುವ ಬೇರೆ ಜನರ ವಿಷಯದಲ್ಲಿ ಕೋಪ ಮಾಡಿಕೊಂಡು ತಪ್ಪಾಗಿ ಆಲೋಚನೆ ಮಾಡುವ ಜನರ ಸಂದರ್ಭದಲ್ಲಿ, “ಅಸೂಯೆ” ಅಥವಾ “ಹೊಟ್ಟೆಕಿಚ್ಚು” ಎಂದೂ ಉಪಯೋಗಿಸಬಹುದು. ಆದರೆ ಈ ಪದಗಳನ್ನು ದೇವರಿಗೆ ಉಪಯೋಗಿಸಬಾರದು.

(ಈ ಪದಗಳನ್ನು ಸಹ ನೋಡಿರಿ : ಹೊಟ್ಟೆಕಿಚ್ಚು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಕೊರಿಂಥ.12:20-21
- ಧರ್ಮೋ.05:9-10
- ವಿಮೋ.20:4-6
- ಯೆಹೆ.36:4-6
- ಯೆಹೋ.24:19-20
- ನಹೂ.01:2-3
- ರೋಮಾ.13:13-14

ಪದ ಡೇಟಾ:

- Strong's: H7065, H7067, H7068, H7072, G2205, G3863

ಲೋಕ, ಲೌಕಿಕ

ಪದದ ಅರ್ಥವಿವರಣೆ:

“ಲೋಕ” ಎನ್ನುವ ಪದವು ಸಾಧಾರಣವಾಗಿ ವಿಶ್ವದಲ್ಲಿ ಒಂದು ಭಾಗವಾಗಿರುವ ಜನರು ನಿವಾಸವಾಗಿರುವ ಭೂಮಿಯನ್ನು ಸೂಚಿಸುತ್ತದೆ. * “ಲೌಕಿಕ” ಎನ್ನುವ ಪದವು ಈ ಲೋಕದಲ್ಲಿ ನಿವಾಸವಾಗುತ್ತಿರುವ ಜನರ ನಡತೆಗಳನ್ನು ಮತ್ತು ಕೆಟ್ಟ ಬೆಲೆಗಳನ್ನು ವಿವರಿಸುತ್ತದೆ.

- ಇದರ ಸಾಧಾರಣ ಭಾವನೆಯಲ್ಲಿ “ಲೋಕ” ಎನ್ನುವ ಪದವು ಆಕಾಶಗಳನ್ನು ಮತ್ತು ಭೂಮಿಯನ್ನು, ಅವುಗಳಲ್ಲಿರುವ ಪ್ರತಿಯೊಂದನ್ನು ಸೂಚಿಸುತ್ತದೆ,
- ಅನೇಕ ಸಂದರ್ಭಗಳಲ್ಲಿ “ಲೋಕ” ಎನ್ನುವ ಪದವು ವಾಸ್ತವಿಕವಾಗಿ “ಲೋಕದಲ್ಲಿರುವ ಜನರನ್ನು” ಸೂಚಿಸುತ್ತದೆ.
- ಕೆಲವೊಂದುಬಾರಿ ಇದು ಭೂಮಿಯ ಮೇಲಿರುವ ದುಷ್ಟ ಜನರನ್ನು ಸೂಚಿಸುತ್ತದೆ ಅಥವಾ ದೇವರಿಗೆ ವಿಧೇಯರಾಗದ ಜನರನ್ನು ಸೂಚಿಸುತ್ತದೆ.
- ಅಪೊಸ್ತಲರು ಕೂಡ “ಲೋಕ” ಎನ್ನುವ ಪದವನ್ನು ಈ ಲೋಕದಲ್ಲಿ ಜೀವಿಸುತ್ತಿರುವ ಜನರ ಕೆಟ್ಟ ಬೆಲೆಗಳನ್ನು ಮತ್ತು ಸ್ವಾರ್ಥ ನಡತೆಗಳನ್ನು ಸೂಚಿಸುವುದಕ್ಕೆ ಉಪಯೋಗಿಸಿರುತ್ತಾರೆ. ಇದರಲ್ಲಿ ಮನುಷ್ಯರ ಪ್ರಯಾಸೆಗಳ ಮೇಲೆ ಆಧಾರಪಟ್ಟಿರುವ ಸ್ವನೀತಿ ಭಕ್ತಿ ಆಚಾರಗಳು ಕೂಡ ಒಳಗೊಂಡಿರುತ್ತದೆ.
- ಈ ಬೆಲೆಗಳ ಮೇಲೆ ಉಂಟು ಮಾಡಲ್ಪಟ್ಟ ಕಾರ್ಯಗಳನ್ನು ಮತ್ತು ಜನರನ್ನು “ಲೌಕಿಕ” ಎಂದು ಕರೆಯಲ್ಪಟ್ಟಿದ್ದಾರೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ “ಲೋಕ” ಎನ್ನುವ ಪದವನ್ನು “ವಿಶ್ವ” ಅಥವಾ “ಈ ಲೋಕದ ಜನರು” ಅಥವಾ “ಲೋಕದಲ್ಲಿ ಭ್ರಷ್ಟವಾಗಿರುವ ವಿಷಯಗಳು” ಅಥವಾ ‘ಲೋಕದಲ್ಲಿ ಜನರ ದುಷ್ಟ ಭಾವನೆಗಳು” ಎಂದೂ ಅನುವಾದ ಮಾಡಬಹುದು.
- “ಲೋಕವೆಲ್ಲಾ” ಎನ್ನುವ ಮಾತಿಗೆ ಅನೇಕಬಾರಿ “ಅನೇಕ ಜನರು” ಎಂದರ್ಥವಾಗಿರುತ್ತದೆ, ಮತ್ತು ಒಂದು ನಿರ್ದಿಷ್ಟವಾದ ಪ್ರಾಂತ್ಯದಲ್ಲಿ ಜೀವಿಸುವ ಜನರನ್ನು ಸೂಚಿಸುತ್ತದೆ. ಉದಾಹರಣೆಗೆ, “ಲೋಕವೆಲ್ಲಾ ಐಗುಪ್ತಿಗೆ ಬಂತು” ಎನ್ನುವ ಮಾತನ್ನು “ಸುತ್ತಮುತ್ತಲಿರುವ ದೇಶಗಳಿಂದ ಅನೇಕ ಜನರು ಐಗುಪ್ತಕ್ಕೆ ಬಂದರು” ಅಥವಾ “ಐಗುಪ್ತಕ್ಕೆ ಸುತ್ತಮುತ್ತಲಿರುವ ದೇಶಗಳಿಂದ ಜನರು ಅಲ್ಲಿಗೆ ಬಂದರು” ಎಂದೂ ಅನುವಾದ ಮಾಡಬಹುದು.
- “ಲೋಕ ಜನರೆಲ್ಲಾ ರೋಮಾ ಜನಗಣತಿಯಲ್ಲಿ ದಾಖಲು ಮಾಡಿಕೊಳ್ಳುವುದಕ್ಕೆ ತಮ್ಮ ತಮ್ಮ ಊರುಗಳಿಗೆ ಹೋದರು” ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನದಲ್ಲಿ “ರೋಮಾ ಸಾಮ್ರಾಜ್ಯದಿಂದ ಆಳಲ್ಪಡುತ್ತಿರುವ ಪ್ರಾಂತ್ಯಗಳಲ್ಲಿ ಜೀವಿಸುತ್ತಿರುವ ಅನೇಕ ಜನರು ಹೊರಟರು... “ ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ಲೌಕಿಕ” ಎನ್ನುವ ಪದವು “ದುಷ್ಟ” ಅಥವಾ “ಪಾಪಸ್ವಭಾವ” ಅಥವಾ “ಸ್ವಾರ್ಥ” ಅಥವಾ “ಅದೈವಿಕ” ಅಥವಾ “ಭ್ರಷ್ಟ” ಅಥವಾ “ಈ ಲೋಕದಲ್ಲಿರುವ ಜನರ ಭ್ರಷ್ಟ ನಿಯಮಗಳಿಂದ ಪ್ರಭಾವಕ್ಕೊಳಗಾಗುವಿಕೆ” ಎಂದೂ ಅನುವಾದ ಮಾಡಬಹುದು.
- “ಲೋಕದಲ್ಲಿರುವ ಈ ಕಾರ್ಯಗಳನ್ನು ಹೇಳುವುದು” ಎನ್ನುವ ಮಾತನ್ನು “ಲೋಕದ ಜನರಿಗೆ ಈ ಕಾರ್ಯಗಳನ್ನು ಹೇಳುವುದು” ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಸಂದರ್ಭಗಳಲ್ಲಿ “ಲೋಕದಲ್ಲಿ” ಎನ್ನುವ ಮಾತನ್ನು “ಲೋಕದ ಜನರ ಮಧ್ಯೆದಲ್ಲಿ ಜೀವಿಸುವುದು” ಅಥವಾ “ಅದೈವಿಕ ಜನರ ಮಧ್ಯೆದಲ್ಲಿ ಜೀವಿಸುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಭ್ರಷ್ಟ, ಆಕಾಶ, ರೋಮ್, ದೈವಿಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.02:15-17
- 1 ಯೋಹಾನ.04:4-6
- 1 ಯೋಹಾನ.05:4-5
- ಯೋಹಾನ.01:29-31
- ಮತ್ತಾಯ.13:36-39

ಪದ ಡೇಟಾ:

- Strong's: H776, H2309, H2465, H5769, H8398, G1093, G2886, G2889, G3625

ವರ

ಪದದ ಅರ್ಥವಿವರಣೆ:

“ವರ” ಎನ್ನುವ ಪದವು ಒಬ್ಬರಿಗೆ ಕೊಡುವ ಅಥವಾ ನೀಡುವ ಯಾವುದಾದರೊಂದನ್ನು ಸೂಚಿಸುತ್ತದೆ. ಹಿಂದುರಿಗಿ ಪಡೆದುಕೊಳ್ಳುವುದಕ್ಕೆ ಎದುರುನೋಡದೇ ಕೊಡುವುದನ್ನೇ ಕಾಣಿಕೆ ಎಂದು ಹೇಳುತ್ತಾರೆ.

- ಹಣ, ಆಹಾರ, ಬಟ್ಟೆಗಳು ಅಥವಾ ಇತರ ಯಾವುದೇ ವಸ್ತುಗಳನ್ನು ಬಡ ಜನರಿಗೆ ಕೊಟ್ಟರೆ ಅವುಗಳನ್ನು “ವರಗಳು” ಎಂದು ಕರೆಯುತ್ತಾರೆ.
- ಸತ್ಯವೇದದಲ್ಲಿ ದೇವರಿಗೆ ಕೊಡುವ ಅರ್ಪಣೆ ಅಥವಾ ದೇವರಿಗೆ ಮಾಡುವ ಸರ್ವಾಂಗ ಹೋಮವಾಗಲಿ ಅದನ್ನೂ ಕಾಣಿಕೆ ಎಂದು ಕರೆಯುತ್ತಾರೆ.
- ರಕ್ಷಣೆ ವರ ಎನ್ನುವದು ಯೇಸುವಿನಲ್ಲಿ ನಂಬಿಕೆಯಿಡುವುದರ ಮೂಲಕ ದೇವರು ನಮಗೆ ಕೊಡುವ ವರವಾಗಿರುತ್ತದೆ.
- ಹೊಸ ಒಡಂಬಡಿಕೆಯಲ್ಲಿ “ವರಗಳು” ಎನ್ನುವ ಪದವನ್ನು ಇತರ ಜನರಿಗೆ ಸೇವೆ ಮಾಡುವುದಕ್ಕೆ ಕ್ರೈಸ್ತರೆಲ್ಲರಿಗೆ ದೇವರು ಕೊಡುವ ವಿಶೇಷವಾದ ಅತ್ಮೀಯಕವಾದ ಸಾಮರ್ಥ್ಯಗಳನ್ನು ಸೂಚಿಸುವುದಕ್ಕೆ ಉಪಯೋಗಿಸಲಾಗಿದೆ.

ಅನುವಾದ ಸಲಹೆಗಳು:

- “ವರ” ಎನ್ನುವ ಸಾಧಾರಣ ಪದವನ್ನು “ಏನಾದರೊಂದು ಕೊಡಲ್ಪಟ್ಟಿರುವುದು” ಎನ್ನುವ ಅರ್ಥ ಬರುವ ಮಾತಿನೊಂದಿಗೆ ಅಥವಾ ಪದದೊಂದಿಗೆ ಅನುವಾದ ಮಾಡಬಹುದು.
- ದೇವರಿಂದ ಬರುವ ವಿಶೇಷವಾದ ಸಾಮರ್ಥ್ಯ ಅಥವಾ ವರವನ್ನು ಒಬ್ಬ ವ್ಯಕ್ತಿ ಪಡೆದುಕೊಂಡ ಸಂದರ್ಭದಲ್ಲಿ, “ಆತ್ಮನಿಂದ ಬಂದ ವರ” ಎನ್ನುವ ಮಾತನ್ನು “ಆತ್ಮೀಕ ಸಾಮರ್ಥ್ಯ” ಅಥವಾ “ಪವಿತ್ರಾತ್ಮನಿಂದ ಬರುವ ವಿಶೇಷವಾದ ಸಾಮರ್ಥ್ಯ” ಅಥವಾ “ದೇವರು ಕೊಟ್ಟ ವಿಶೇಷವದ ಅತ್ಮೀಕವಾದ ನೈಪುಣ್ಯತೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆತ್ಮ, ಪವಿತ್ರಾತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.12:01
- 2 ಸಮು.11:08
- ಅಪೊ.ಕೃತ್ಯ.08:20
- ಅಪೊ.ಕೃತ್ಯ.10:04
- ಅಪೊ.ಕೃತ್ಯ.11:17
- ಅಪೊ.ಕೃತ್ಯ.24:17
- ಯಾಕೋಬ.01:17
- ಯೋಹಾನ.04:9-10
- ಮತ್ತಾಯ.05:23
- ಮತ್ತಾಯ.08:4

ಪದ ಡೇಟಾ:

- Strong's: H814, H4503, H4864, H4976, H4978, H4979, H4991, H5078, H5083, H5379, H7810, H8641, G334, G1390, G1394, G1431, G1434, G1435, G3311, G5486

ವಾಗ್ದಾನ ಭೂಮಿ

ಸತ್ಯಾಂಶಗಳು:

“ವಾಗ್ದಾನ ಭೂಮಿ” ಎನ್ನುವ ಪದವು ಸತ್ಯವೇದದ ಚರಿತ್ರೆಯಲ್ಲಿ ಮಾತ್ರ ಕಂಡುಬರುತ್ತದೆ ಹೊರತು, ಸತ್ಯವೇದದಲ್ಲಿರುವ ವಾಕ್ಯಭಾಗಗಳಲ್ಲಿ ಕಂಡುಬರುವುದಿಲ್ಲ. ದೇವರು ಅಬ್ರಾಹಾಮನಿಗೆ ಮತ್ತು ತನ್ನ ಸಂತಾನದವರಿಗೆ ಕೊಡಲು ವಾಗ್ದಾನ ಮಾಡಿದ ಕಾನಾನ್ ಭೂಮಿಯನ್ನು ಸೂಚಿಸುವ ಪರ್ಯಾಯ ವಿಧಾನವಾಗಿರುತ್ತದೆ.

- ಅಬ್ರಾಮನು ಊರ್ ಎನ್ನುವ ಪಟ್ಟಣದಲ್ಲಿ ನಿವಾಸ ಮಾಡುತ್ತಿರುವಾಗ, ಕಾನಾನ್ ಭೂಮಿಯಲ್ಲಿ ಜೀವಿಸುವುದಕ್ಕೆ ಹೋಗು ದೇವರು ತನಗೆ ಆಜ್ಞೆಯನ್ನು ಕೊಟ್ಟರು. ಆತನು ಮತ್ತು ತನ್ನ ಸಂತಾನದವರಾಗಿರುವ ಇಸ್ರಾಯೇಲ್ಯರು ಅನೇಕ ವರ್ಷಗಳ ಕಾಲ ಅಲ್ಲಿಯೇ ಜೀವಿಸಿದ್ದರು.
- ಭಯಂಕರವಾದ ಬರಗಾಲ ಬಂದಾಗ ಕಾನಾನ್ ಭೂಮಿಯಲ್ಲಿ ಆಹಾರವಿಲ್ಲದ ಸಮಯದಲ್ಲಿ, ಇಸ್ರಾಯೇಲ್ಯರು ಐಗುಪ್ತಕ್ಕೆ ಹೊರಟರು.
- ಆ ಐಗುಪ್ತ ದೇಶದಲ್ಲಿ ನಾಲ್ಕು ನೂರು ವರ್ಷಗಳಾದನಂತರ, ದೇವರು ಐಗುಪ್ತದಲ್ಲಿ ಗುಲಾಮಗಿರಿಯಿಂದ ಇಸ್ರಾಯೇಲ್ಯರನ್ನು ಬಿಡುಗಡೆ ಮಾಡಿದನು ಮತ್ತು ಅವರನ್ನು ತಿರುಗಿ ದೇವರು ತಮಗೆ ಕೊಡುತ್ತೇನೆಂದು ವಾಗ್ದಾನ ಮಾಡಿದ ಕಾನಾನ್ ದೇಶಕ್ಕೆ ಬರ ಮಾಡಿದನು.

ಅನುವಾದ ಸಲಹೆಗಳು:

- “ವಾಗ್ದಾನ ಭೂಮಿ” ಎನ್ನುವ ಪದವನ್ನು “ದೇವರು ಅಬ್ರಾಹಾಮನಿಗೆ ಕೊಡುತ್ತೇನೆಂದು ಹೇಳಿದ ಭೂಮಿ” ಅಥವಾ “ದೇವರು ಅಬ್ರಾಹಾಮನಿಗೆ ವಾಗ್ದಾನ ಮಾಡಿದ ಭೂಮಿ” ಅಥವಾ “ದೇವರು ತನ್ನ ಜನರಿಗೆ ವಾಗ್ದಾನ ಮಾಡಿದ ಭೂಮಿ” ಅಥವಾ “ಕಾನಾನ್ ದೇಶ” ಎಂದೂ ಅನುವಾದ ಮಾಡಬಹುದು.
- ಸತ್ಯವೇದ ವಾಕ್ಯಭಾಗಗಳಲ್ಲಿ ಈ ಪದವು “ದೇವರು ವಾಗ್ದಾನ ಮಾಡಿದ ಭೂಮಿ” ಎನ್ನುವ ರೂಪದಲ್ಲಿ ಕಂಡುಬರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ವಾಗ್ದಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.08:1-2
- ಯೆಹೆ.07:26-27

ಸತ್ಯವೇದದಿಂದ ಉದಾಹರಣೆಗಳು:

- **12:01** ಅವರು (ಇಸ್ರಾಯೇಲ್ಯರು) ಹೆಚ್ಚಿನ ಕಾಲ ಇಸ್ರಾಯೇಲ್ಯರಾಗಿರಲಿಲ್ಲ, ಮತ್ತು ಅವರು _ ವಾಗ್ದಾನ ದೇಶಕ್ಕೆ _ ಹೋದರು!
- **14:01** ದೇವರು ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯ ಭಾಗವಾಗಿ ಅವರು ನ್ಯಾಯಪ್ರಮಾಣಕ್ಕೆ ವಿಧೇಯರಾಗಬೇಕೆಂದು ಆತನು ಬಯಸಿದ್ದನ್ನು ದೇವರು ಇಸ್ರಾಯೇಲ್ಯರಿಗೆ ಹೇಳಿದಾದನಂತರ ಕಾನಾನ್ ಎಂದು ಕರೆಯಲ್ಪಡುವ _ ವಾಗ್ದಾನ ಭೂಮಿಯ _ ಕಡೆಗೆ ಸೀನಾಯಿಯಿಂದ ದೇವರು ಅವರನ್ನು ನಡೆಸುವುದಕ್ಕೆ ಆರಂಭಿಸಿದರು.
- **14:02** ದೇವರು _ ವಾಗ್ದಾನ ಭೂಮಿಯನ್ನು _ ಅಬ್ರಾಹಾಮ, ಇಸಾಕ, ಮತ್ತು ಯಾಕೋಬರ ಸಂತಾನಕ್ಕೆ ಕೊಡುತ್ತೇನೆಂದು ದೇವರು ಅವರಿಗೆ ವಾಗ್ದಾನ ಮಾಡಿದರು, ಆದರೆ ಈಗ ಅಲ್ಲಿ ಅನೇಕ ಜನರ ಗುಂಪುಗಳು ಜೀವಿಸುತ್ತಾಯಿವೆ.
- **14:14** ಆದನಂತರ ದೇವರು ಮತ್ತೊಮ್ಮೆ ತನ್ನ ಜನರನ್ನು _ ವಾಗ್ದಾನ ಭೂಮಿ _ ತುದಿ ಭಾಗಕ್ಕೆ ನಡೆಸಿದರು.
- **15:02** ಇಸ್ರಾಯೇಲ್ಯರು _ ವಾಗ್ದಾನ ಭೂಮಿಯೊಳಗೆ _ ಪ್ರವೇಶಿಸುವುದಕ್ಕೆ ಯೊರ್ದನ್ ನದಿಯನ್ನು ದಾಟಬೇಕಾಗಿರುತ್ತದೆ.
- **15:12** ಈ ಯುದ್ಧದನಂತರ, ದೇವರು ಇಸ್ರಾಯೇಲ್ ಪ್ರತಿಯೊಂದು ಕುಲಕ್ಕೂ _ ವಾಗ್ದಾನ ಭೂಮಿಯಲ್ಲಿ _ ತಮ್ಮದೇಯಾದ ಸ್ವಂತ ಭಾಗವನ್ನು ಹಂಚಿಕೊಟ್ಟಿದ್ದಾರೆ.
- **20:09** ಈ ಕಾಲದಲ್ಲಿ ದೇವ ಜನರು _ ವಾಗ್ದಾನ ಭೂಮಿಯನ್ನು _ ಬಿಟ್ಟು ಹೋಗುವುದಕ್ಕೆ ಬಲವಂತ ಮಾಡಲ್ಪಟ್ಟಿದ್ದರು, ಇದನ್ನೇ ಸೆರೆ ಎಂದು ಕರೆಯುತ್ತಾರೆ.

ಪದ ಡೇಟಾ:

- Strong's: H776, H3068, H3423, H5159, H5414, H7650

ವಾಗ್ದಾನ, ವಾಗ್ದಾನಗಳು, ವಾಗ್ದಾನ ಮಾಡಲಾಗಿದೆ

ಪದದ ಅರ್ಥವಿವರಣೆ:

ಕ್ರಿಯಾಪದವಾಗಿ ಬಳಸಲಾದಾಗ, 'ವಾಗ್ದಾನ' ಎಂಬ ಪದವು ತಾನು ಹೇಳಿದ್ದನ್ನು ಪೂರೈಸಲು ತನ್ನನ್ನು ತಾನು ಬಾಧ್ಯತೆ ಮಾಡಿಕೊಳ್ಳುವ ರೀತಿಯಲ್ಲಿ ಏನನ್ನಾದರೂ ಮಾಡುತ್ತೇನೆ ಎಂದು ಹೇಳುವ ವ್ಯಕ್ತಿಯ ಕ್ರಿಯೆಯನ್ನು ಸೂಚಿಸುತ್ತದೆ.

- ದೇವರು ತನ್ನ ಜನರೊಂದಿಗೆ ಮಾಡಿದ ಅನೇಕ ವಾಗ್ದಾನಗಳನ್ನು ಸತ್ಯವೇದದಲ್ಲಿ ದಾಖಲಿಸಲಾಗಿರುತ್ತದೆ.
- ಒಡಂಬಡಿಕೆಗಳಂತೆ ಸಾಂಪ್ರದಾಯಿಕವಾದ ಒಪ್ಪಂದಗಳ ಪ್ರಾಮುಖ್ಯವಾದ ಭಾಗವೇ ವಾಗ್ದಾನವಾಗಿರುತ್ತದೆ.
- ವಾಗ್ದಾನ ಎನ್ನುವುದು ಯಾವಾಗಲೂ ಮಾಡಿದ ವಾಗ್ದಾನ ನಡೆಯುತ್ತದೆಯೆಂದು ನಿಶ್ಚಯಿಸುವುದಕ್ಕೆ ಒಂದು ಪ್ರಮಾಣ ವಚನವಾಗಿರುತ್ತದೆ.

ಅನುವಾದ ಸಲಹೆಗಳು:

- "ವಾಗ್ದಾನ" ಎನ್ನುವ ಪದವನ್ನು "ನಿಬದ್ಧತೆ" ಅಥವಾ "ಭರವಸೆ" ಅಥವಾ "ಖಾತರಿ" ಎಂದೂ ಅನುವಾದ ಮಾಡಬಹುದು.
- "ಏನಾದರೊಂದು ಮಾಡುವುದಕ್ಕೆ ವಾಗ್ದಾನ ಮಾಡುವುದು" ಎನ್ನುವ ಮಾತು "ನೀನು ಏನಾದರೊಂದು ಮಾಡಲು ಯಾರಾದರೊಬ್ಬರಿಗೆ ಖಾತರಿ ಕೊಡು" ಅಥವಾ "ಏನಾದರೊಂದನ್ನು ಮಾಡುವುದಕ್ಕೆ ಬದ್ಧನಾಗಿರುವುದು" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಒಡಂಬಡಿಕೆ, ಪ್ರಮಾಣ ವಚನ, ಆಣೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.03:15-16
- ಆದಿ.25:31-34
- ಇಬ್ರಿ.11:8-10
- ಯಾಕೋಬ.01:12-13
- ಅರಣ್ಯ.30:1-2

ಸತ್ಯವೇದದಿಂದ ಉದಾಹರಣೆಗಳು:

- **03:15** "ಜನರು ಚಿಕ್ಕ ವಯಸ್ಸಿನಲ್ಲಿರುವ ಸಮಯದಿಂದ ಜನರು ಪಾಪ ಸ್ವಭಾವವುಳ್ಳವರಾಗಿದ್ದರೂ ಪ್ರಳಯವನ್ನು ಬರಮಾಡುವುದರ ಮೂಲಕ ಪ್ರಪಂಚವನ್ನು ನಾಶಗೊಳಿಸುವುದಾಗಲಿ ಅಥವಾ ಜನರು ದುಷ್ಟ ಕಾರ್ಯಗಳನ್ನು ಮಾಡುವುದರಿಂದಾಗಲಿ ನಾನು ಭೂಮಿವನ್ನು ಎಂದಿಗೂ ಶಪಿಸುವುದಿಲ್ಲ ಎಂದು ನಾನು _ **ವಾಗ್ದಾನ** _ ಮಾಡುತ್ತಿದ್ದೇನೆ" ಎಂದು ದೇವರು ಹೇಳಿದರು.
- **03:16** ದೇವರು ತನ್ನ _ **ವಾಗ್ದಾನಕ್ಕೆ** ಗುರುತಾಗಿ ಮೊಟ್ಟ ಮೊದಲನೇ ಮುಗಿಲುಬಿಲ್ಲನ್ನು ಉಂಟು ಮಾಡಿದನು. ಆಕಾಶದಲ್ಲಿ ಮುಗಿಲುಬಿಲ್ಲು ಕಾಣಿಸಿಕೊಳ್ಳುವ ಪ್ರತಿಯೊಂದುಬಾರಿ, ದೇವರು ತಾನು ಮಾಡಿದ **ವಾಗ್ದಾನವನ್ನು** _ ಮತ್ತು ತನ್ನ ಜನರನ್ನು ಜ್ಞಾಪಿಸಿಕೊಳ್ಳುವರು.
- **04:08** ದೇವರು ಅಬ್ರಾಮನೊಂದಿಗೆ ಮಾತನಾಡಿದನು ಮತ್ತು ಮತ್ತೊಮ್ಮೆ ತನಗೆ ಮಗನು ಹುಟ್ಟುವನೆಂದು ಮತ್ತು ತನ್ನ ಸಂತಾನವು ಆಕಾಶದಲ್ಲಿ ನಕ್ಷತ್ರಗಳಂತೆ ಆಗುವರೆಂದು _ **ವಾಗ್ದಾನ** ಮಾಡಿದನು. ಅಬ್ರಾಮನು ದೇವರ **ವಾಗ್ದಾನವನ್ನು** _ ನಂಬಿದನು.
- **05:04** "ನಿನ್ನ ಹೆಂಡತಿ ಸಾರಾಯಳು ಮಗನನ್ನು ಹಡೆಯುವಳು, ಇವನು _ **ವಾಗ್ದಾನ** _ ಪುತ್ರನಾಗಿ ಇರುವನು."
- **08:15** ದೇವರು ಅಬ್ರಾಹಾಮನಿಗೆ ಕೊಟ್ಟಿರುವುದು ತನ್ನ ಮಕ್ಕಳಾಗಿರುವ ಇಸಾಕ, ಯಾಕೋಬ, ಮತ್ತು ಯಾಕೋಬನ ಹನ್ನೆರಡು ಮಂದಿ ಮಕ್ಕಳಿಗೆ ಮತ್ತು ಅವರ ಕುಟುಂಬಗಳಿಗೆ ಅನ್ವಯವಾಗುತ್ತದೆಯೆಂದು ಒಡಂಬಡಿಕೆ _ **ವಾಗ್ದಾನಗಳಲ್ಲಿ** _ ಇರುತ್ತದೆ.
- **17:14** ದಾವೀದನು ದೇವರಿಗೆ ಅಪನಂಬಿಗಸ್ತನಾಗಿದ್ದರೂ, ದೇವರು ತನ್ನ _ **ವಾಗ್ದಾನಗಳಲ್ಲಿ** _ ನಂಬಿಗಸ್ತನಾಗಿದ್ದಾನೆ.
- **50:01** ಯೇಸು ಲೋಕದ ಅಂತ್ಯದಲ್ಲಿ ಹಿಂದುರಿಗಿ ಬರುತ್ತಾನೆಂದು ಆತನು _ **ವಾಗ್ದಾನ** ಮಾಡಿದನು. ಆತನು ಇಂದಿಗೂ ಬರದೇ ಇದ್ದರೂ, ಆತನು ತಪ್ಪದೇ ತನ್ನ **ವಾಗ್ದಾನದ** _ ಪ್ರಕಾರ ಮಾಡುವವನಾಗಿದ್ದಾನೆ.

ಪದ ಡೇಟಾ:

- Strong's: H559, H562, H1696, H8569, G1843, G1860, G1861, G1862, G3670, G4279

ವಿಮೋಚನಾ ಮೌಲ್ಯ, ವಿಮೋಚನಾ ಮೌಲ್ಯವನ್ನು ಸಲ್ಲಿಸಿದೆ

ಪದದ ಅರ್ಥವಿವರಣೆ:

“ವಿಮೋಚನಾ ಮೌಲ್ಯ” ಎನ್ನುವ ಮಾತು ಸೆರೆಯಲ್ಲಿರುವ ವ್ಯಕ್ತಿಯನ್ನು ಬಿಡುಗಡೆ ಮಾಡುವುದಕ್ಕೆ ಕಟ್ಟಬೇಕಾದ ಅಥವಾ ಬೇಡಿಕೆ ಮಾಡಲ್ಪಟ್ಟಿರುವ ಹಣದ ಮೊತ್ತವನ್ನು ಅಥವಾ ಇತರ ಪಾವತಿಯನ್ನು ಸೂಚಿಸುತ್ತದೆ.

- ಕ್ರಿಯಾಪದವಾಗಿರುವ “ವಿಮೋಚನಾ ಮೌಲ್ಯ” ಎನ್ನುವ ಮಾತಿಗೆ ಸೆರೆಗೆ ಹಾಕಲ್ಪಟ್ಟಿರುವ, ಗುಲಾಮಗಿರಿಯಲ್ಲಿರುವ ಅಥವಾ ಬಂಧಿಯಾಗಿರುವ ಒಬ್ಬ ವ್ಯಕ್ತಿಯನ್ನು ರಕ್ಷಿಸುವ ಕ್ರಮದಲ್ಲಿ ಏನಾದರೊಂದು ಸ್ವಯಂ ತ್ಯಾಗ ಮಾಡುವುದು ಅಥವಾ ಪಾವತಿಯನ್ನು ಮಾಡುವುದು ಎಂದರ್ಥವಾಗಿರುತ್ತದೆ. “ತಿರುಗಿ ಕೊಂಡುಕೊಳ್ಳು” ಎನ್ನುವ ಅರ್ಥವು “ವಿಮೋಚಿಸು” ಎನ್ನುವ ಅರ್ಥಕ್ಕೆ ಸಮಾನವಾಗಿರುತ್ತದೆ.
- ಪಾಪಕ್ಕೆ ದಾಸತ್ವದಿಂದ ಪಾಪಿಗಳಾದ ಜನರನ್ನು ಬಿಡಿಸುವುದಕ್ಕೆ ವಿಮೋಚನಾ ಮೌಲ್ಯವಾಗಿ ಯೇಸು ತನ್ನ ಮರಣಕ್ಕಾಗಿ ತನ್ನನ್ನು ತಾನು ಅರ್ಪಿಸಿಕೊಳ್ಳುವುದಕ್ಕೆ ಅನುಮತಿಸಿದನು. ಜನರ ಪಾಪಗಳಿಗಾಗಿ ಕ್ರಯಧನವನ್ನು ಸಲ್ಲಿಸುವುದರ ಮೂಲಕ ತನ್ನ ಜನರನ್ನು ಹಿಂದಕ್ಕೆ ಕರೆದುಕೊಂಡುಬಂದಿರುವ ಈ ದೇವರ ಕಾರ್ಯವನ್ನು ಸತ್ಯವೇದದಲ್ಲಿ “ವಿಮೋಚನೆ’ ಎಂದೂ ಕರೆಯುತ್ತಾರೆ.

ಅನುವಾದ ಸಲಹೆಗಳು:

- “ವಿಮೋಚನಾ ಮೌಲ್ಯ” ಎನ್ನುವ ಈ ಪದವನ್ನು “ಬಿಡುಗಡೆ ಮಾಡುವುದಕ್ಕೆ ಪಾವತಿಸು” ಅಥವಾ ‘ಬಿಡುಗಡೆ ಮಾಡುವುದಕ್ಕೆ ಹಣವನ್ನು ಸಲ್ಲಿಸು” ಅಥವಾ “ಹಿಂದಕ್ಕೆ ತಿರುಗಿ ಬರಲು ಕೊಂಡುಕೊಳ್ಳು” ಎಂದೂ ಅನುವಾದ ಮಾಡಬಹುದು.
- “ವಿಮೋಚನಾ ಮೌಲ್ಯವನ್ನು ಸಲ್ಲಿಸು” ಎನ್ನುವ ಮಾತನ್ನು “(ಬಿಡುಗಡೆ ಮಾಡುವುದಕ್ಕೆ) ಹಣವನ್ನು ಸಲ್ಲಿಸು” ಅಥವಾ “(ಜನರನ್ನು ಬಿಡುಗಡೆಗೊಳಿಸಲು) ದಂಡವನ್ನು ಕಟ್ಟು” ಅಥವಾ “ಪಾವತಿಸಬೇಕಾದದ್ದನ್ನು ಸಲ್ಲಿಸು” ಎಂದೂ ಅನುವಾದ ಮಾಡಬಹುದು.
- “ವಿಮೋಚನಾ ಮೌಲ್ಯ” ಎನ್ನುವ ನಾಮಪದವನ್ನು “ಹಿಂದಕ್ಕೆ ಪಡೆಯಲು ಕೊಂಡುಕೊಳ್ಳುವುದು” ಅಥವಾ “ದಂಡವನ್ನು ಸಲ್ಲಿಸಿದೆ” ಅಥವಾ “(ಭೂಮಿಯನ್ನು ಅಥವಾ ಜನರನ್ನು ಹಿಂದಕ್ಕೆ ತಿರುಗಿ ಹೊಂದಲು ಪಾವತಿಸು ಅಥವಾ ಬಿಡುಗಡೆ ಮಾಡುವುದಕ್ಕೆ) “ಹಣವನ್ನು ಕಟ್ಟಿದೆ”
- “ವಿಮೋಚನಾ ಮೌಲ್ಯ” ಮತ್ತು “ವಿಮೋಚನೆ” ಎನ್ನುವ ಪದಗಳು ಆಂಗ್ಲ ಭಾಷೆಯಲ್ಲಿ ಒಂದೇ ಅರ್ಥವನ್ನು ಒಳಗೊಂಡಿರುತ್ತವೆ, ಆದರೆ ಕೆಲವೊಂದುಸಲ ಸ್ವಲ್ಪ ವ್ಯತ್ಯಾಸದೊಂದಿಗೆ ಉಪಯೋಗಿಸುತ್ತಾರೆ. ಈ ಅರ್ಥಕ್ಕಾಗಿ ಇತರ ಭಾಷೆಗಳು ಒಂದೇ ಒಂದು ಪದವನ್ನು ಉಪಯೋಗಿಸುತ್ತಿರಬಹುದು.
- ಅನುವಾದ ಮಾಡಿದ ಈ ಪದಕ್ಕೆ “ಪ್ರಾಯಶ್ಚಿತ್ತ” ಎನ್ನುವ ಪದದ ಅರ್ಥಕ್ಕೂ ವ್ಯತ್ಯಾಸವಿರುವಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಪ್ರಾಯಶ್ಚಿತ್ತ, ವಿಮೋಚಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.02:5-7
- ಯೆಶಯಾ.43:2-3
- ಯೋಬ.06:21-23
- ಯಾಜಕ.19:20-22
- ಮತ್ತಾಯ.20:25-28
- ಕೀರ್ತನೆ.049:6-8

ಪದ ಡೇಟಾ:

- Strong's: H1350, H3724, H6299, H6306, G487, G3083

ವಿಮೋಚಿಸು, ವಿಮೋಚಕ, ವಿಮೋಚನೆ

ಪದದ ಅರ್ಥವಿವರಣೆ:

"ವಿಮೋಚಿಸು" ಎಂಬ ಪದವು ಏನನ್ನಾದರೂ ಅಥವಾ ಹಿಂದೆ ಒಡೆತನದ ಅಥವಾ ಸೆರೆಯಲ್ಲಿರುವ ಯಾರನ್ನಾದರೂ ಮರಳಿ ಖರೀದಿಸುವುದನ್ನು ಸೂಚಿಸುತ್ತದೆ. "ವಿಮೋಚಕ" ಎಂದರೆ ಏನನ್ನಾದರೂ ಅಥವಾ ಯಾರನ್ನಾದರೂ ವಿಮೊಚಿಸಿದವನು

- ಜನರು ಅಥವಾ ವಸ್ತುಗಳನ್ನು ಹೇಗೆ ವಿಮೊಚಿಸುವದು ಎಂಬುದರ ಕುರಿತು ದೇವರು ಇಸ್ರಾಯೇಲ್ಯರಿಗೆ ನಿಯಮಗಳನ್ನು ಕೊಟ್ಟನು. ಉದಾಹರಣೆಗೆ, ಗುಲಾಮಗಿರಿಯಲ್ಲಿದ್ದ ವ್ಯಕ್ತಿಯನ್ನು ಯಾರಾದರೂ ಬೆಲೆ ಪಾವತಿಸುವ ಮೂಲಕ ವಿಮೊಚಿಸಬಹುದು, ಇದರಿಂದ ಗುಲಾಮನು ಮುಕ್ತನಾಗಿ ಹೋಗಬಹುದು. “ದಾಸತ್ವ” ಎಂಬ ಪದವು ಈ ಸಂಪ್ರದಾಯವನ್ನು ಸಹ ಸೂಚಿಸುತ್ತದೆ.
- ಯಾರೊಬ್ಬರ ಭೂಮಿಯನ್ನು ಮಾರಾಟ ಮಾಡಿದ್ದರೆ, ಆ ವ್ಯಕ್ತಿಯ ಸಂಬಂಧಿಯು ಆ ಭೂಮಿಯನ್ನು "ಪುನಃ ಪಡೆದುಕೊಳ್ಳಬಹುದು" ಅಥವಾ "ಮರಳಿ ಖರೀದಿಸಬಹುದು" ಇದರಿಂದ ಅದು ಕುಟುಂಬದಲ್ಲಿ ಉಳಿಯುತ್ತದೆ.
- ಈ ಪದ್ಧತಿಗಳು ದೇವರು ಪಾಪದ ಗುಲಾಮಗಿರಿಯಲ್ಲಿರುವ ಜನರನ್ನು ಹೇಗೆ ಉದ್ಧರಿಸುತ್ತಾನೆ ಎಂಬುದನ್ನು ತೋರಿಸುತ್ತದೆ. ಅವನು ಶಿಲುಬೆಯಲ್ಲಿ ಮರಣಹೊಂದಿದಾಗ, ಯೇಸು ಜನರ ಪಾಪಗಳಿಗೆ ಸಂಪೂರ್ಣ ಬೆಲೆ ಕೊಟ್ಟನು ಮತ್ತು ಮೋಕ್ಷಕ್ಕಾಗಿ ತನ್ನ ಮೇಲೆ ನಂಬಿಕೆಯಿಟ್ಟವರೆಲ್ಲರನ್ನೂ ಉದ್ಧರಿಸಿದನು. ದೇವರಿಂದ ವಿಮೋಚನೆಗೊಂಡ ಜನರನ್ನು ಪಾಪ ಮತ್ತು ಅದರ ಶಿಕ್ಷೆಯಿಂದ ಮುಕ್ತಗೊಳಿಸಲಾಗುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಕ್ಕೆ ಅನುಗುಣವಾಗಿ, "ವಿಮೋಚಿಸು " ಎಂಬ ಪದವನ್ನು "ಮರಳಿ ಖರೀದಿಸು" ಅಥವಾ "ಉಚಿತ (ಯಾರಿಗಾದರೂ)" ಅಥವಾ "ಸುಲಿಗೆ" ಎಂದು ಅನುವಾದಿಸಬಹುದು.
- "ವಿಮೋಚನೆ" ಎಂಬ ಪದವನ್ನು "ವಿಮೋಚನಾ ಮೌಲ್ಯ" ಅಥವಾ "ಬಿಡುಗಡೆಯ ಪಾವತಿ" ಅಥವಾ "ಮರಳಿ ಖರೀದಿಸುವುದು" ಎಂದು ಅನುವಾದಿಸಬಹುದು.
- “ವಿಮೋಚನಾ ಮೌಲ್ಯ” ಮತ್ತು “ವಿಮೋಚಿಸು” ಪದಗಳು ಮೂಲತಃ ಒಂದೇ ಅರ್ಥವನ್ನು ಹೊಂದಿವೆ, ಆದ್ದರಿಂದ ಕೆಲವು ಭಾಷೆಗಳು ಈ ಎರಡೂ ಪದಗಳನ್ನು ಭಾಷಾಂತರಿಸಲು ಕೇವಲ ಒಂದು ಪದವನ್ನು ಹೊಂದಿರಬಹುದು. "ವಿಮೋಚನಾ ಮೌಲ್ಯ" ಎಂಬ ಪದವು ಏನನ್ನಾದರೂ ಅಥವಾ ಯಾರನ್ನಾದರೂ "ಬಿಡುಗಡೆ" ಮಾಡಲು ಅಗತ್ಯವಾದ ಪಾವತಿಯನ್ನು ಸಹ ಅರ್ಥೈಸಬಲ್ಲದು. "ವಿಮೋಚಿಸು" ಎಂಬ ಪದವು ನಿಜವಾದ ಪಾವತಿಯನ್ನು ಎಂದಿಗೂ ಸೂಚಿಸುವುದಿಲ್ಲ.

(ಈ ಪದಗಳನ್ನು ಸಹ ನೋಡಿರಿ : ಬಿಡುಗಡೆ, ವಿಮೋಚನಾ ಮೌಲ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಕೊಲೊಸ್ಸ.01:13-14
- ಎಫೆಸ.01:7-8
- ಎಫೆಸ.05:16
- ಗಲಾತ್ಯ.03:13-14
- ಗಲಾತ್ಯ.04:5
- ಲೂಕ.02:38
- ರೂತಳು.02:20

ಪದದ ಡೇಟಾ:

- Strong's: H1350, H1353, H6299, H6302, H6304, H6306, H6561, H7069, G59, G629, G1805, G3084, G3085

ವಿಶ್ವಾಸ

ಪದದ ಅರ್ಥವಿವರಣೆ:

ಸಾಧಾರಣವಾಗಿ "ವಿಶ್ವಾಸ" ಎನ್ನುವ ಪದವು ಒಬ್ಬರಲ್ಲಿ ಅಥವಾ ಯಾವುದಾದರೊಂದಲ್ಲಿ ನಂಬಿಕೆ, ಭರವಸೆ ಅಥವಾ ನಿಶ್ಚಯತೆ ಹೊಂದಿರುವುದನ್ನು ಸೂಚಿಸುತ್ತದೆ.

- ಒಬ್ಬರಲ್ಲಿ "ವಿಶ್ವಾಸದಿಂದಿರು" ಎನ್ನುವುದಕ್ಕೆ ಆತನು ಹೇಳುವ ಪ್ರತಿಯೊಂದು ಮಾತು ಮತ್ತು ಪ್ರತಿಯೊಂದು ಕಾರ್ಯವು ಸತ್ಯವೆಂದು ಮತ್ತು ವಿಶ್ವಾಸಾರ್ಹವೆಂದು ನಂಬುವುದಾಗಿರುತ್ತದೆ.
- "ಯೇಸುವಿನಲ್ಲಿ ವಿಶ್ವಾಸವನ್ನು ಹೊಂದಿರು" ಎನ್ನುವ ಮಾತಿಗೆ ಯೇಸುವಿನ ಕುರಿತಾದ ದೇವರ ಬೋಧನೆಗಳೆಲ್ಲವುಗಳನ್ನು ನಂಬು ಎಂದರ್ಥ. ಇದು ವಿಶೇಷವಾಗಿ ಯೇಸುವಿನಲ್ಲಿ ಜನರು ಇಡುವ ಭರವಸೆಯನ್ನು ಮತ್ತು ಅವರ ಪಾಪಗಳಿಂದ ಅವರನ್ನು ತೊಳೆಯುವ ಆತನ ತ್ಯಾಗವನ್ನು ಮತ್ತು ಅವರು ಪಾಪ ಮಾಡಿದ್ದರಿಂದ ಅವರು ಹೊಂದುವ ಶಿಕ್ಷೆಯಿಂದ ಅವರನ್ನು ರಕ್ಷಿಸುವುದನ್ನು ಸೂಚಿಸುತ್ತದೆ.
- ಯೇಸುವಿನಲ್ಲಿ ನಿಜವಾದ ವಿಶ್ವಾಸ ಅಥವಾ ನಂಬಿಕೆಯು ಒಬ್ಬ ವ್ಯಕ್ತಿ ಒಳ್ಳೆಯ ಆತ್ಮೀಕವಾದ ಫಲಗಳನ್ನು ಕೊಡುವಂತೆ ಮಾಡುತ್ತದೆ ಅಥವಾ ಒಳ್ಳೆಯ ನಡತೆಯನ್ನುಂಟು ಮಾಡುತ್ತದೆ, ಯಾಕಂದರೆ ಪವಿತ್ರಾತ್ಮನು ಆ ವಿಶ್ವಾಸಿಯಲ್ಲಿ ನಿವಾಸಿಯಾಗಿರುತ್ತಾನೆ.
- "ವಿಶ್ವಾಸ" ಎನ್ನುವುದು ಕೆಲವೊಂದುಬಾರಿ ಯೇಸುವಿನ ಕುರಿತಾದ ಬೋಧನೆಗಳೆಲ್ಲವನ್ನೂ ಸಾಧಾರಣವಾಗಿ ಸೂಚಿಸುತ್ತದೆ, ಅದು "ವಿಶ್ವಾಸದ ನಂಬಿಕೆಗಳು" ಎನ್ನುವ ಮಾತಿನಲ್ಲಿರುವಂತೆ ಆ ಬೋಧನೆಗಳನ್ನು ಸೂಚಿಸುತ್ತದೆ.
- "ವಿಶ್ವಾಸದಿಂದಿರು" ಅಥವಾ "ವಿಶ್ವಾಸವನ್ನು ಬಿಟ್ಟುಬಿಡು" ಎನ್ನುವ ಮಾತುಗಳ ಸಂದರ್ಭದಲ್ಲಿ, "ವಿಶ್ವಾಸ" ಎನ್ನುವ ಪದವು ಯೇಸುವಿನ ಕುರಿತಾದ ಎಲ್ಲಾ ಬೋಧನೆಗಳನ್ನು ನಂಬುವುದರ ಸ್ಥಿತಿಯನ್ನು ಅಥವಾ ಸ್ಥಾನವನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಕೆಲವೊಂದು ಸಂದರ್ಭಗಳಲ್ಲಿ "ವಿಶ್ವಾಸ" ಎನ್ನುವ ಪದವನ್ನು "ನಂಬಿಕೆ" ಅಥವಾ "ಅಪರಾಧ ನಿರ್ಣಯ" ಅಥವಾ "ಆತ್ಮವಿಶ್ವಾಸ" ಅಥವಾ "ಭರವಸೆ" ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಭಾಷೆಗಳಲ್ಲಿ ಈ ಪದಗಳನ್ನು ಕ್ರಿಯಾಪದಗಳನ್ನಾಗಿ ಬಳಸುತ್ತಾರೆ, "ನಂಬು". (ನೋಡಿರಿ: ಅಮೂರ್ತ ನಾಮಪದಗಳು)
- "ವಿಶ್ವಾಸದಿಂದಿರು" ಎನ್ನುವ ಮಾತನ್ನು "ಯೇಸುವಿನಲ್ಲಿ ವಿಶ್ವಾಸದಿಂದಿರುವುದು" ಅಥವಾ "ಯೇಸುವಿನಲ್ಲಿರುವ ನಂಬಿಕೆಯನ್ನು ಮುಂದುವರಿಸುವುದು" ಎಂದೂ ಅನುವಾದ ಮಾಡಬಹುದು.
- "ವಿಶ್ವಾಸದ ಆಳವಾದ ನಂಬಿಕೆಗಳನ್ನು ಅವರು ತಪ್ಪದೇ ಹೊಂದಿರಬೇಕು" ಎನ್ನುವ ವಾಕ್ಯವನ್ನು "ಅವರಿಗೆ ಯೇಸುವಿನ ಕುರಿತಾಗಿ ಹೇಳಲ್ಪಟ್ಟ ಪ್ರತಿಯೊಂದು ಸಂಗತಿಗಳನ್ನು ಅವರು ತಪ್ಪದೆ ನಂಬಬೇಕಾಗಿರುತ್ತದೆ" ಎಂದೂ ಅನುವಾದ ಮಾಡಬಹುದು.
- "ವಿಶ್ವಾಸದಲ್ಲಿ ನನ್ನ ನಿಜವಾದ ಮಗನು" ಎನ್ನುವ ಮಾತಿಗೆ "ನನಗೆ ನನ್ನ ಮಗನಂತೆ ಯಾರಿದ್ದಾರೆ, ಯಾಕಂದರೆ ಯೇಸುವಿನಲ್ಲಿ ನಂಬಿಕೆಯಿಡುವುದಕ್ಕೆ ನಾನು ಅವನಿಗೆ ಹೇಳಿದ್ದೇನೆ" ಎಂದು ಅಥವಾ "ಯೇಸುವಿನಲ್ಲಿ ನಂಬಿಕೆಯಿಟ್ಟ ನನ್ನ ಆತ್ಮೀಯಕವಾದ ಮಗನು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬು, ನಂಬಿಗೆಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.04:6-8
- ಅಪೊ.ಕೃತ್ಯ.06:7
- ಗಲಾತ್ಯ.02:20-21
- ಯಾಕೋಬ.02:18-20

ಸತ್ಯವೇದದಿಂದ ಉದಾಹರಣೆಗಳು:

- **_05:06** ಇಸಾಕನು ಯೌವನಸ್ಥನಾಗಿದ್ದಾಗ, "ನಿನ್ನ ಒಬ್ಬನೇ ಮಗನಾದ ಇಸಾಕನನ್ನು ತೆಗೆದುಕೊಂಡು, ನನಗೆ ಅವನನ್ನು ಬಲಿ ಕೊಡು" ಎಂದು ಹೇಳುವುದರ ಮೂಲಕ ದೇವರು ಅಬ್ರಾಹಾಮನ _ ವಿಶ್ವಾಸವನ್ನು _ ಪರೀಕ್ಷೆ ಮಾಡಿದನು,
- **_31:07** "ನೀನು ಸ್ವಲ್ಪ **ವಿಶ್ವಾಸವನ್ನು** _ ಹೊಂದಿಕೊಂಡಿದ್ದೀಯ, ಯಾಕೆ ಸಂದೇಹ ಪಡುತ್ತೀ?" ಎಂದು ಆತನು (ಯೇಸು) ಪೇತ್ರನಿಗೆ ಹೇಳಿದನು.
- **_32:16** "ನಿನ್ನ __ ವಿಶ್ವಾಸವೇ __ ನಿನ್ನನ್ನು ಗುಣಪಡಿಸಿದೆ, ಸಮಾಧಾನದಿಂದ ಹೋಗು" ಎಂದು ಯೇಸು ಆಕೆಗೆ ಹೇಳಿದನು.
- **_38:09** "ಸೈತಾನನಿಗೆ ನೀವೆಲ್ಲರೂ ಬೇಕಾಗಿದ್ದಾರೆ, ಆದರೆ ಪೇತ್ರನೆ, ನಿಮ್ಮ **ವಿಶ್ವಾಸವು** _ ವಿಫಲವಾಗಬಾರದೆಂದು ನಿಮ್ಮೆಲ್ಲರಿಗಾಗಿ ನಾನು ಪ್ರಾರ್ಥನೆ ಮಾಡಿದ್ದೇನೆ,

ಪದ ಡೇಟಾ:

- Strong's: H529, H530, G1680, G3640, G4102, G6066

ವಿಶ್ವಾಸರಹಿತ, ವಿಶ್ವಾಸಘಾತುಕತೆ

ಪದದ ಅರ್ಥವಿವರಣೆ

“ವಿಶ್ವಾಸರಹಿತ” ಎನ್ನುವ ಪದಕ್ಕೆ ವಿಶ್ವಾಸ ಅಥವಾ ನಂಬಿಕೆ ಇಲ್ಲವೆಂದು ಅರ್ಥ.

- ದೇವರಲ್ಲಿ ನಂಬಿಕೆಯಿಲ್ಲದ ಜನರನ್ನು ಕುರಿತಾಗಿ ಈ ಪದವನ್ನು ಉಪಯೋಗಿಸುತ್ತಾರೆ. ಅವರು ಅನೈತಿಕವಾಗಿ ಮಾಡುವ ಕೆಲಸದ ಮೂಲಕ ಅವರ ಅಪನಂಬಿಕೆಯನ್ನು ತೋರಿಸುತ್ತದೆ.
- ಇಸ್ರಾಯೇಲ್ ಜನರು ವಿಶ್ವಾಸರಹಿತರಾಗಿದ್ದರೆಂದು ಮತ್ತು ದೇವರಿಗೆ ಅವಿಧೇಯರಾಗಿದ್ದರೆಂದು ಯೆರೆಮೀಯ ಪ್ರವಾದಿ ಅವರನ್ನು ಆರೋಪಿಸಿದನು.
- ಯೆಹೋವನಿಗೆ ವಿಧೇಯತೆ ತೋರದ ಅಥವಾ ಆರಾಧಿಸದ ಜನರು ಮಾಡುವಂತೆ ಅವರು ವಿಗ್ರಹಾರಧನೆ ಮಾಡಿದರು ಮತ್ತು ಅದೈವಿಕ ಪದ್ಧತಿಗಳನ್ನು ಆಚರಿಸುತ್ತಿದ್ದರು.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ವಿಶ್ವಾಸರಹಿತ” ಎನ್ನುವ ಪದವನ್ನು “ಅವಿಶ್ವಾಸ” ಅಥವಾ “ಅಪನಂಬಿಕೆ” ಅಥವಾ “ದೇವರಿಗೆ ಅವಿಧೇಯರಾಗಿರುವುದು” ಅಥವಾ “ನಂಬುವುದಿಲ್ಲ” ಎಂದು ಅನುವಾದ ಮಾಡಬಹುದು.
- “ವಿಶ್ವಾಸಘಾತುಕತೆ” ಎನ್ನುವ ಪದವನ್ನು “ಅಪನಂಬಿಕೆ” ಅಥವಾ “ಅವಿಶ್ವಾಸ” ಅಥವಾ “ದೇವರಿಗೆ ಅವಿಧೇಯತೆ ತೋರುವುದು” ಎಂದು ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ನಂಬಿಕೆ, ವಿಶ್ವಾಸ, ಅವಿಧೇಯತೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.43:6-8
- ಎಜ್ರ.09:1-2
- ಯೆರೆ.02:18-19
- ಜ್ಞಾನೋ.02:20-22
- ಪ್ರಕಟನೆ.21:7-8

ಪದ ಡೇಟಾ:

- Strong's: G571

ವ್ಯಭಿಚಾರ, ಹಾದರ, ವ್ಯಭಿಚಾರಿ, ವ್ಯಭಿಚಾರಿಣಿ

ಅರ್ಥವಿವರಣೆ:

"ವ್ಯಭಿಚಾರ" ಎನ್ನುವ ಪದವು ಮದುವೆ ಮಾಡಿಕೊಂಡಿರುವ ವ್ಯಕ್ತಿಯು ತನ್ನ ಸಂಗಾತಿ ಅಲ್ಲದವರೊಂದಿಗೆ ಲೈಂಗಿಕ ಸಂಬಂಧ ಇಟ್ಟುಕೊಂಡ ಪಾಪವನ್ನು ಸೂಚಿಸುತ್ತದೆ. ಅವರಿಬ್ಬರೂ ವ್ಯಭಿಚಾರ ಮಾಡಿದ ತಪ್ಪಿತಸ್ಥರಾಗಿರುತ್ತಾರೆ. "ಹಾದರ" ಎಂಬ ಪದವು ಈ ರೀತಿಯ ವರ್ತನೆಯ ಕುರಿತು ಅಥವಾ ಇಂತಹ ಪಾಪ ಮಾಡುವ ವ್ಯಕ್ತಿಯ ಕುರಿತು ವಿವರಿಸುತ್ತದೆ.

- "ವ್ಯಭಿಚಾರಿ" ಎನ್ನುವ ಪದವು ಸಹಜವಾಗಿ ವ್ಯಭಿಚಾರವನ್ನು ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ.
- "ವ್ಯಭಿಚಾರಿಣಿ" ಎನ್ನುವ ಪದವು ಕೆಲವೊಂದು ಸಲ ನಿರ್ದಿಷ್ಟವಾಗಿ ವ್ಯಭಿಚಾರ ಮಾಡಿದ ಸ್ತ್ರೀಯನ್ನು ಸೂಚಿಸುತ್ತದೆ.
- ಗಂಡ ಹೆಂಡತಿಯರು ತಮ್ಮ ವಿವಾಹ ಒಡಂಬಡಿಕೆಯಲ್ಲಿ ಒಬ್ಬರಿಗೊಬ್ಬರು ಮಾಡಿರುವ ವಾಗ್ದಾನಗಳನ್ನು ವ್ಯಭಿಚಾರವು ಮುರಿದುಹಾಕುತ್ತದೆ.
- ದೇವರು ಇಸ್ರಾಯೇಲ್ಯರಿಗೆ ವ್ಯಭಿಚಾರ ಮಾಡಬಾರದೆಂದು ಆಜ್ಞಾಪಿಸಿದನು.

ಅನುವಾದ ಸಲಹೆಗಳು:

- ಅನುವಾದ ಮಾಡಬೇಕಾದ ಭಾಷೆಯಲ್ಲಿ "ವ್ಯಭಿಚಾರ" ಎಂಬ ಅರ್ಥವು ಕೊಡುವ ಪದವು ಇಲ್ಲದಿದ್ದರೆ, ಈ ಪದವನ್ನು "ಇನ್ನೊಬ್ಬರ ಹೆಂಡತಿಯೊಂದಿಗೆ ಲೈಂಗಿಕ ಸಂಬಂಧವನ್ನು ಇಟ್ಟುಕೊಳ್ಳುವುದು" ಎಂದು ಅಥವಾ "ಇನ್ನೊಬ್ಬರ ಹೆಂಡತಿಯೊಂದಿಗೆ ಅಥವಾ ಗಂಡನೊಂದಿಗೆ ಅಕ್ರಮ ಸಂಬಂಧದಲ್ಲಿರುವುದು" ಎಂದು ಅನುವಾದ ಮಾಡಬಹುದು.
- ಕೆಲವೊಂದು ಭಾಷೆಗಳಲ್ಲಿ ವ್ಯಭಿಚಾರದ ಕುರಿತಾಗಿ ಪರೋಕ್ಷವಾಗಿ, "ಇನ್ನೊಬ್ಬರ ಹೆಂಡತಿಯೊಂದಿಗೆ ಅಥವಾ ಗಂಡನೊಂದಿಗೆ ಮಲಗುವುದು" ಅಥವಾ "ಹೆಂಡತಿಗೆ ಅಪನಂಬಿಗಸ್ತರಾಗಿರುವುದು" ಎಂದು ಹೇಳುತ್ತಾರೆ. (ನೋಡಿರಿ: ಸೌಮ್ಯೋಕ್ತಿ)

(ಈ ಪದಗಳನ್ನು ಸಹ ನೋಡಿರಿ: ತಪ್ಪು ಮಾಡುವುದು, ಒಡಂಬಡಿಕೆ, ಲೈಂಗಿಕವಾದ ಅನೈತಿಕತೆ, ಇನ್ನೊಬ್ಬರೊಂದಿಗೆ ಮಲಗುವದು, ನಂಬಿಗಸ್ತಿಕೆ)

ಸತ್ಯವೇದದ ಉಲ್ಲೇಖ ವಚನಗಳು:

- ವಿಮೋಚನಕಾಂಡ 20:14
- ಹೋಶೇಯ 04:1-2
- ಲೂಕ 16:18
- ಮತ್ತಾಯ 05:28
- ಮತ್ತಾಯ 12:39
- ಪ್ರಕಟನೆ 02:22

ಸತ್ಯವೇದದ ಕಥೆಗಳ ಉದಾಹರಣೆಗಳು:

- **13:06** "**ವ್ಯಭಿಚಾರ** ಮಾಡಬೇಡಿರಿ."
- **28:02** "**ವ್ಯಭಿಚಾರ** ಮಾಡಬೇಡಿರಿ."
- **34:07** "ದೇವರೇ ನಿಮಗೆ ವಂದನೆಗಳು, ಯಾಕಂದರೆ ನಾನು ಕಳ್ಳರಂತೆ, ಅನ್ಯಾಯಸ್ಥರಂತೆ, **ವ್ಯಭಿಚಾರಗಳಂತೆ**, ಅಥವಾ ಸುಂಕದವರಂತೆ ಪಾಪಿಯಲ್ಲ ಎಂದು ಒಬ್ಬ ಧಾರ್ಮಿಕ ನಾಯಕನು ಪ್ರಾರ್ಥನೆ ಮಾಡಿದ್ದನು.

ಪದದ ದತ್ತಾಂಶ:

- Strong's: H5003, H5004, G3428, G3429, G3430, G3431, G3432

ಶಕ್ತಿ, ಶಕ್ತಿಗಳು

ಪದದ ಅರ್ಥವಿವರಣೆ:

"ಶಕ್ತಿ" ಎನ್ನುವ ಪದವು ಕಾರ್ಯಗಳನ್ನು ಮಾಡುವುದಕ್ಕೆ ಅಥವಾ ಅನೇಕ ಕಾರ್ಯಗಳನ್ನು ನಡೆಯುವುದಕ್ಕೆ ಸಾಮರ್ಥ್ಯವನ್ನು ಸೂಚಿಸುತ್ತದೆ, ಈ ಪದವು ಅನೇಕಸಲ ಉನ್ನತ ಬಲವನ್ನು ಸೂಚಿಸುತ್ತವೆ. "ಶಕ್ತಿಗಳು" ಎನ್ನುವ ಪದವು ಅನೇಕ ಕಾರ್ಯಗಳನ್ನು ಮಾಡಲು ಉನ್ನತ ಸಾಮರ್ಥ್ಯವನ್ನು ಹೊಂದಿರುವ ಮನುಷ್ಯರನ್ನು ಅಥವಾ ಆತ್ಮಗಳನ್ನು ಸೂಚಿಸುತ್ತವೆ.

- "ದೇವರ ಶಕ್ತಿ" ಎನ್ನುವ ಮಾತು ಪ್ರತಿಯೊಂದನ್ನು ಮಾಡುವ ದೇವರ ಸಾಮರ್ಥ್ಯವನ್ನು ಸೂಚಿಸುತ್ತದೆ, ವಿಶೇಷವಾಗಿ ಮನುಷ್ಯರು ಮಾಡುವುದಕ್ಕಾಗದಿರುವ ಅನೇಕ ಕಾರ್ಯಗಳನ್ನು ಮಾಡುವ ಸಾಮರ್ಥ್ಯವನ್ನು ಸೂಚಿಸುತ್ತದೆ.
- ದೇವರು ಸೃಷ್ಟಿಸಿದ ಪ್ರತಿಯೊಂದರ ಮೇಲೆ ಆತನಿಗೆ ಸಂಪೂರ್ಣವಾದ ಶಕ್ತಿಯಿರುತ್ತದೆ.
- ದೇವರು ಬಯಸಿದ ಕಾರ್ಯಗಳನ್ನು ಮಾಡಲು ದೇವರು ತನ್ನ ಜನರಿಗೆ ಶಕ್ತಿಯನ್ನು ಕೊಡುತ್ತಾರೆ, ಇದರಿಂದ ಅವರು ಜನರನ್ನು ಗುಣಪಡಿಸಿದಾಗ ಅಥವಾ ಅನೇಕ ಅದ್ಭುತಕಾರ್ಯಗಳನ್ನು ಮಾಡಿದಾಗ, ಅವರು ದೇವರು ಕೊಟ್ಟ ಶಕ್ತಿಯಿಂದಲೇ ಮಾಡುತ್ತಿರುತ್ತಾರೆ.
- ಯಾಕಂದರೆ ಯೇಸು ಮತ್ತು ಪವಿತ್ರಾತ್ಮರು ಕೂಡಾ ದೇವರಾಗಿದ್ದಾರೆ, ಅವರು ಇದೇ ಶಕ್ತಿಯನ್ನು ಹೊಂದಿರುತ್ತಾರೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ "ಶಕ್ತಿ" ಎನ್ನುವ ಪದವನ್ನು "ಸಾಮರ್ಥ್ಯ" ಅಥವಾ "ಬಲ" ಅಥವಾ "ಬಲವುಳ್ಳ" ಅಥವಾ "ಅದ್ಭುತಗಳನ್ನು ಮಾಡುವುದಕ್ಕೆ ಸಾಮರ್ಥ್ಯ" ಅಥವಾ "ನಿಯಂತ್ರಣ" ಎಂದೂ ಅನುವಾದ ಮಾಡಬಹುದು.
- "ಶಕ್ತಿಗಳು" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಶಕ್ತಿಯುತವಾದವುಗಳು" ಅಥವಾ "ನಿಯಂತ್ರಿಸುವ ಆತ್ಮಗಳು" ಅಥವಾ "ಇತರರನ್ನು ನಿಯಂತ್ರಿಸುವವರು" ಎನ್ನುವ ಮಾತುಗಳೂ ಒಳಗೊಂಡಿರುತ್ತವೆ.
- "ನಮ್ಮ ಶತ್ರುಗಳ ಶಕ್ತಿಯಿಂದ ನಮ್ಮನ್ನು ರಕ್ಷಿಸು" ಎನ್ನುವ ಮಾತನ್ನು "ನಮ್ಮ ಶತ್ರುಗಳಿಂದ ಬರುವ ಒತ್ತಡದಿಂದ ನಮ್ಮನ್ನು ರಕ್ಷಿಸು" ಅಥವಾ "ನಮ್ಮ ಶತ್ರುಗಳ ನಿಯಂತ್ರಣದಿಂದ ನಮ್ಮನ್ನು ಬಿಡಿಸು" ಎಂದೂ ಅನುವಾದ ಮಾಡಬಹುದು. ಇಂಥಹ ಸಂದರ್ಭದಲ್ಲಿ "ಶಕ್ತಿ" ಎನ್ನುವ ಪದವು ಇತರರನ್ನು ಒತ್ತಾಯಗೊಳಿಸುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಒಬ್ಬರ ಬಲವನ್ನು ಉಪಯೋಗಿಸುವುದು ಎನ್ನುವ ಅರ್ಥವನ್ನು ಹೊಂದಿರುತ್ತದೆ,

(ಈ ಪದಗಳನ್ನು ಸಹ ನೋಡಿರಿ : ಪವಿತ್ರಾತ್ಮ, ಯೇಸು, ಅದ್ಭುತ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.01:4-5
- ಕೊಲೊಸ್ಸ.01:11-12
- ಆದಿ.31:29-30
- ಯೆರೆ.18:21-23
- ಯೂದಾ.01:24-25
- ನ್ಯಾಯಾ.02:18-19
- ಲೂಕ.01:16-17
- ಲೂಕ.04:14-15
- ಮತ್ತಾಯ.26:62-64
- ಫಿಲಿಪ್ಪಿ.03:20-21
- ಕೀರ್ತನೆ.080:1-3

ಸತ್ಯವೇದದಿಂದ ಉದಾಹರಣೆಗಳು:

- **22:05** "ಪವಿತ್ರಾತ್ಮನು ನಿಮ್ಮ ಬಳಿಗೆ ಬರುವನು, ಮತ್ತು ನಿಮ್ಮ ಮೇಲೆ ದೇವರ _ ಶಕ್ತಿ _ ಇಳಿದು ಬಂದು ಆವರಿಸುವುದು. ಆದ್ದರಿಂದ ದೇವರ ಮಗನಾಗಿರುವ ಶಿಶುವು ಪವಿತ್ರನಾಗಿರುತ್ತಾನೆ." ಎಂದು ದೂತನು ವಿವರಿಸಿ ಹೇಳಿದನು.
- **26:01** ಸೈತಾನಿನ ಶೋಧನೆಗಳನ್ನು ಜಯಿಸಿದನಂತರ, ಯೇಸು ಪವಿತ್ರಾತ್ಮನ _ ಶಕ್ತಿಯಲ್ಲಿ _ ಹಿಂದುರಿಗಿ ತಾನು ನಿವಾಸವಾಗಿರುವ ಗಲಿಲಾಯ ಸೀಮೆಗೆ ಹೊರಟು ಹೋದನು.
- **32:15** ಯೇಸು ತನ್ನೊಳಗಿಂದ _ ಶಕ್ತಿ _ ಹೊರಟು ಹೋಯಿತೆಂದು ತನ್ನಲ್ಲಿ ತಕ್ಷಣವೇ ತಿಳಿದುಕೊಂಡನು.
- **42:11** ಯೇಸು ಮರಣದಿಂದ ಎದ್ದುಬಂದನಂತರ ನಲವತ್ತು ದಿನಗಳು, "ನನ್ನ ತಂದೆಯು ನಿಮ್ಮ ಮೇಲೆ ಪವಿತ್ರಾತ್ಮನನ್ನು ಕಳುಹಿಸಿ _ ಶಕ್ತಿಯನ್ನು _ ಅನುಗ್ರಹಿಸುವವರೆಗೂ ಯೆರೂಸಲೇಮಿನಲ್ಲಿಯೇ ಇರಿ" ಎಂದು ಆತನು ತನ್ನ ಶಿಷ್ಯರೊಂದಿಗೆ ಹೇಳಿದನು.
- **43:06** "ಇಸ್ರಾಯೇಲ್ ಜನರೇ, ನಿಮಗೆ ಗೊತ್ತಿದ್ದು, ನೀವು ನೋಡುತ್ತಿರುವಂತೆಯೇ, ದೇವರ _ ಶಕ್ತಿಯಿಂದ _ ಅನೇಕ ಸೂಚಕ ಕ್ರಿಯೆಗಳನ್ನು ಮತ್ತು ಅದ್ಭುತಗಳನ್ನು ಮಾಡಿದ ವ್ಯಕ್ತಿ ಯೇಸುವಾಗಿದ್ದಾನೆ.

- **44:08**

ಪದ ಡೇಟಾ:

- Strong's: H410, H1369, H2220, H2428, H2429, H2632, H3027, H3028, H3581, H4475, H4910, H5794, H5797, H5808, H6184, H7786, H7980, H7981, H7983, H7989, H8280, H8592, H8633, G1411, G1415, G1756, G1849, G1850, G2478, G2479, G2904, G3168

ಶತಾಧಿಪತಿ, ಶತಾಧಿಪತಿಗಳು

ಪದದ ಅರ್ಥವಿವರಣೆ:

ಶತಾಧಿಪತಿ ರೋಮಾ ಸೈನ್ಯದ ಅಧಿಕಾರಿ ಆಗಿರುತ್ತಾನೆ ಇವರ ಕೆಳಗೆ 100 ಮಂದಿ ಸೈನಿಕರು ಕೆಲಸ ಮಾಡುತ್ತಿರುತ್ತಾರೆ.

- ಈ ಪದವನ್ನು “ನೂರು ಮಂದಿಗೆ ನಾಯಕನು” ಅಥವಾ “ಸೈನ್ಯದ ನಾಯಕ” ಅಥವಾ “ನೂರು ಮಂದಿಗೆ ಉಸ್ತುವಾರಿ ಅಧಿಕಾರಿ” ಎಂದು ಅರ್ಥ ಬರುವ ಮಾತುಗಳಿಂದಲೂ ಅನುವಾದ ಮಾಡಬಹುದು.
- ಒಬ್ಬ ರೋಮಾ ಶತಾಧಿಪತಿ ತನ್ನ ಸೇವಕನನ್ನು ಗುಣಪಡಿಸಬೇಕೆಂದು ಕೇಳಿಕೊಳ್ಳಲು ಯೇಸುವಿನ ಬಳಿಗೆ ಬಂದಿದ್ದನು.
- ಯೇಸುವಿನ ಶಿಲುಬೆಯ ಮರಣದ ಉಸ್ತುವಾರಿ ವಹಿಸಿದ್ದ ಶತಾಧಿಪತಿಯು ಯೇಸುವಿನ ಮರಣವನ್ನು ವೀಕ್ಷಿಸಿದಾಗ ಆಶ್ಚರ್ಯಚಿಕಿತನಾದನು..
- ದೇವರು ಪೇತ್ರನ ಬಳಿಗೆ ಶತಾಧಿಪತಿಯನ್ನು ಕಳುಹಿಸಿದನು, ಇದರಿಂದ ಪೇತ್ರನು ಕ್ರಿಸ್ತನ ಕುರಿತಾದ ಸುವಾರ್ತೆಯನ್ನು ಅವನಿಗೆ ತಿಳಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.10:1-2
- ಅಪೊ.ಕೃತ್ಯ.27:1-2
- ಅಪೊ.ಕೃತ್ಯ.27:42-44
- ಲೂಕ.07:2-5
- ಲೂಕ.23:46-47
- ಮಾರ್ಕ.15:39-41
- ಮತ್ತಾಯ.08:5-7
- ಮತ್ತಾಯ.27:54-56

ಪದ ಡೇಟಾ:

- Strong's: G1543, G2760

ಶರೀರ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಶರೀರ" ಎನ್ನುವ ಪದವು ಅಕ್ಷರಾರ್ಥವಾಗಿ ಮನುಷ್ಯರ ಅಥವಾ ಪ್ರಾಣಿಗಳ ಭೌತಿಕ ದೇಹದಲ್ಲಿನ ಮೃಧು ಅಂಗಾಂಶವನ್ನು ಸೂಚಿಸುತ್ತದೆ.

- "ಶರೀರ" ಎನ್ನುವ ಪದವನ್ನು ಮನುಷ್ಯರೆಲ್ಲರನ್ನು ಅಥವಾ ಜೀವರಾಶಿಗಳನ್ನು ಸೂಚಿಸುವುದಕ್ಕೆ ಅಲಂಕಾರಿಕ ವಿಧಾನದಲ್ಲಿ ಸತ್ಯವೇದವು ಕೂಡ ಉಪಯೋಗಿಸುತ್ತದೆ.
- ಹೊಸ ಒಡಂಬಡಿಕೆಯಲ್ಲಿ "ಶರೀರ" ಎನ್ನುವ ಪದವನ್ನು ಮನುಷ್ಯರ ಪಾಪ ಸ್ವಭಾವನ್ನು ಸೂಚಿಸುವುದಕ್ಕೆ ಉಪಯೋಗಿಸಿದ್ದಾರೆ. ಇದನ್ನು ಅನೇಕಬಾರಿ ಅವರ ಆತ್ಮೀಕವಾದ ಸ್ವಭಾವಕ್ಕೆ ವಿರುದ್ಧವಾಗಿ ಉಪಯೋಗಿಸಿದ್ದಾರೆ.
- "ಸ್ವಂತ ರಕ್ತಶರೀರಗಳು" ಎನ್ನುವ ಮಾತು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ರಕ್ತ ಸಂಬಂಧವಿರುವುದನ್ನು ಸೂಚಿಸುತ್ತದೆ, ಉದಾಹರಣೆಗೆ ತಂದೆತಾಯಿಗಳು, ಅಣ್ಣತಮ್ಮ, ಮಗು ಅಥವಾ ಮೊಮ್ಮೊಗ.
- "ಶರೀರ ಮತ್ತು ರಕ್ತ" ಎನ್ನುವ ಮಾತು ಕೂಡ ಒಬ್ಬ ವ್ಯಕ್ತಿಯ ಪೂರ್ವಜರನ್ನು ಅಥವಾ ಸಂತಾನದವರನ್ನು ಸೂಚಿಸುತ್ತದೆ.
- "ಒಂದೇ ಶರೀರ" ಎನ್ನುವ ಮಾತು ವಿವಾಹದಲ್ಲಿ ಸ್ತ್ರೀ ಪುರುಷರಿಬ್ಬರು ಭೌತಿಕವಾಗಿ ಏಕವಾಗುವುದನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಪ್ರಾಣಿಯ ಶರೀರದ ಕುರಿತಾದ ಸಂದರ್ಭದಲ್ಲಿ, "ಶರೀರ" ಎನ್ನುವ ಪದವನ್ನು "ದೇಹ" ಅಥವಾ "ಚರ್ಮ" ಅಥವಾ "ಮಾಂಸ" ಎಂದೂ ಅನುವಾದ ಮಾಡಬಹುದು.
- ಎಲ್ಲಾ ಜೀವರಾಶಿಗಳಿಗೆ ಇದನ್ನು ಸೂಚಿಸುವುದಕ್ಕೆ ಉಪಯೋಗಿಸಿದಾಗ, ಈ ಪದವನ್ನು "ಜೀವಿಸುವ ಪ್ರಾಣಿಗಳು" ಅಥವಾ "ಜೀವಿಸುವ ಪ್ರತಿಯೊಂದು" ಎಂದೂ ಅನುವಾದ ಮಾಡಬಹುದು.
- ಸಾಧಾರಣವಾಗಿ ಜನರೆಲ್ಲರನ್ನು ಸೂಚಿಸುವಾಗ, ಈ ಪದವನ್ನು "ಜನರು" ಅಥವಾ "ಮನುಷ್ಯರು" ಅಥವಾ ಜೀವಿಸುವ ಪ್ರತಿಯೊಬ್ಬರು" ಎಂದೂ ಅನುವಾದ ಮಾಡಬಹುದು.
- "ಶರೀರ ಮತ್ತು ರಕ್ತ" ಎನ್ನುವ ಮಾತನ್ನು "ಬಂಧುಗಳು" ಅಥವಾ "ಕುಟುಂಬ" ಅಥವಾ "ನಂಟರು" ಅಥವಾ "ಕುಟುಂಬ ವಂಶದವರು" ಎಂದೂ ಅನುವಾದ ಮಾಡಬಹುದು. ಕೆಲವೊಂದು ಸಂದರ್ಭಗಳಲ್ಲಿ ಈ ಪದವನ್ನು "ಪೂರ್ವಜರು" ಅಥವಾ "ಸಂತಾನದವರು" ಎಂದೂ ಅನುವಾದ ಮಾಡುತ್ತಾರೆ.
- ಕೆಲವೊಂದು ಭಾಷೆಗಳಲ್ಲಿ "ಶರೀರ ಮತ್ತು ರಕ್ತ" ಎನ್ನುವ ಪದಗಳಿಗೆ ಬರುವ ಒಂದೇ ಅರ್ಥದ ಪದಗಳನ್ನು ಉಪಯೋಗಿಸುತ್ತಾರೆ.
- "ಒಂದೇ ಶರೀರವಾಗಿರುವುದು" ಎನ್ನುವ ಮಾತನ್ನು "ಲೈಂಗಿಕವಾಗಿ ಐಕ್ಯವಾಗಿರುವುದು" ಅಥವಾ "ಒಂದೇ ಶರೀರವಾಗಿ ಮಾರ್ಪಡುವುದು" ಅಥವಾ "ಆತ್ಮ ದೇಹಗಳಲ್ಲಿ ಒಬ್ಬ ವ್ಯಕ್ತಿಯಂತೆ ಇರುವುದು" ಎಂದೂ ಅನುವಾದ ಮಾಡಬಹುದು. ಈ ಪದವು ಅನುವಾದ ಮಾಡುವ ಭಾಷೆಯಲ್ಲಿ ಮತ್ತು ಸಂಸ್ಕೃತಿಯಲ್ಲಿ ಅಂಗೀಕಾರ ಮಾಡುತ್ತಾರೋ ಇಲ್ಲವೋ ಎಂದು ಪರಿಶೀಲನೆ ಮಾಡಬೇಕಾದ ಅವಶ್ಯಕತೆ ಇದೆ. ನೋಡಿರಿ: ನಯನುಡಿ. ಈ ಪದವನ್ನು ಅಲಂಕಾರಿಕ ಭಾಷೆಯಲ್ಲಿಯೂ ಅರ್ಥಮಾಡಿಕೊಳ್ಳಬಹುದು, ಸ್ತ್ರೀ ಪುರುಷರು ನಿಜವಾಗಿ "ಒಂದು ಶರೀರವಾಗಿ ಮಾರ್ಪಡುತ್ತಾರೆ" ಅಥವಾ ಒಬ್ಬ ವ್ಯಕ್ತಿಯಾಗಿರುತ್ತಾರೆಂದು ಅದರ ಅರ್ಥವಲ್ಲ.

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.02:16
- 2 ಯೋಹಾನ.01:07
- ಎಫೆಸ.06:12
- ಗಲಾತ್ಯ.01:16
- ಆದಿ.02:24
- ಯೋಹಾನ.01:14
- ಮತ್ತಾಯ.16:17
- ರೋಮಾ.08:08

ಪದ ಡೇಟಾ:

- Strong's: H829, H1320, H1321, H2878, H3894, H4207, H7607, H7683, G2907, G4559, G4560, G4561

ಶಾಪ, ಶಾಪಗ್ರಸ್ತ, ಶಪಿದನು, ಶಪಿಸುವುದು

ಪದದ ಅರ್ಥವಿವರಣೆ

ಶಾಪಗ್ರಸ್ತ ಒಂದು ವಸ್ತು ಅಥವಾ ವ್ಯಕ್ತಿಗೆ ನಕಾರಾತ್ಮಕವಾದ ವಿಷಯಗಳು ಸಂಭವಿಸಬೇಕೆಂದು ಹೇಳುವುದು "ಶಾಪ" ಎನ್ನುವ ಪದಕ್ಕೆ ಅರ್ಥವಾಗಿದೆ.

- ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವಿಗೆ ಕೇಡು ಆಗಬೇಕೆಂದು ಹೇಳುವಿಕೆ ಶಾಪವಾಗಿರುತ್ತದೆ.
- ಯಾರಿಗಾದರೂ ಕೆಟ್ಟ ವಿಷಯಗಳು ನಡೆಯಬೇಕೆಂದು ಬಯೇಕೆ ಇರುವುದು ಸಹ ಶಾಪದ ಒಂದು ರೂಪವಾಗಿರಬಹುದು.
- ಯಾರಾದರು ಯಾರಿಗಾದರೂ ನಕಾರಾತ್ಮಕವಾದ ಸಂಗತಿಗಳು ನಡೆಯುವಂತೆ ಶಿಕ್ಷಿಸುವುದು ಸಹ ಶಾಪವನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- "ಕೆಟ್ಟ ಕಾರ್ಯಗಳು ನಡೆಯುವಂತೆ ಮಾಡುವುದು" ಅಥವಾ "ಕೆಟ್ಟ ಕಾರ್ಯ ನಡೆಯಬೇಕೆಂದು ಘೋಷಿಸುವುದು" ಅಥವಾ "ದುಷ್ಟ ಕಾರ್ಯಗಳು ನಡೆಯುವಂತೆ ಆಣೆಯಿದುವುದು" ಎಂದು ಈ ಪದವನ್ನು ಅನುವಾದ ಮಾಡಬಹುದು.
- ದೇವರು ತನ್ನ ಅವಿಧೇಯ ಜನರನ್ನು ಶಪಿಸಿದರು ಎನ್ನುವ ಸಂದರ್ಭದಲ್ಲಿ, "ಕೆಟ್ಟ ಕಾರ್ಯಗಳು ನಡೆಯುವಂತೆ ಅಪ್ಪಣೆಕೊಟ್ಟು ಶಿಕ್ಷಿಸುವುದು" ಎಂದು ಅನುವಾದ ಮಾಡಬಹುದು.
- "ಶಾಪಗ್ರಸ್ತ" ಎನ್ನುವ ಪದವನ್ನು ಜನರನ್ನು ಕುರಿತಾಗಿ ಹೇಳಲ್ಪಟ್ಟಿರುವಾಗ ಅದನ್ನು "(ಈ ವ್ಯಕ್ತಿಯು) ಬಹಳ ತೊಂದರೆಯನ್ನು ಅನುಭವಿಸುತ್ತಾನೆ" ಎಂದು ಅನುವಾದ ಮಾಡಬಹುದು.
- "ಶಾಪಗ್ರಸ್ತನಾದವನು" ಎನ್ನುವ ಪದವನ್ನು "(ಈ ವ್ಯಕ್ತಿ) ಹೆಚ್ಚಿನ ಸಂಕಟಗಳನ್ನು ಅನುಭವಿಸಲಿ" ಎಂದು ಅನುವಾದ ಮಾಡಬಹುದು.
- "ಭೂಮಿಯು ಶಪಿತವಾಗಿದೆ" ಎನ್ನುವ ವಾಕ್ಯವನ್ನು "ಮಣ್ಣು ಸಾರವಂತವಾಗಿರುವದಿಲ್ಲ" ಎಂದು ಅನುವಾದ ಮಾಡಬಹುದು.
- "ನಾನು ಹುಟ್ಟಿದ ದಿನ ಶಪಿತವಾಗಲಿ" ಎನ್ನುವ ವಾಕ್ಯವನ್ನು "ನಾನು ಎಷ್ಟು ಸಂಕಟವನ್ನು ಅನುಭವಿಸುತ್ತಿದ್ದೇನೆ, ನಾನು ಹುಟ್ಟದಿದ್ದರೆ ಚೆನ್ನಾಗಿರುತಿತ್ತು" ಎಂದು ಅನುವಾದ ಮಾಡಬಹುದು.
- ಹೀಗಿದ್ದಲ್ಲಿ, ಅನುವಾದ ಮಾಡಲ್ಪಡುವ ಭಾಷೆಯಲ್ಲಿ "ಶಾಪಗ್ರಸ್ತನಾದವನು" ಎನ್ನುವ ಪದಕ್ಕೆ ಸಮಾನಾರ್ಥಕ ಪದವಿದ್ದರೆ ಅದನ್ನೇ ಉಪಯೋಗಿಸುವುದು ಒಳ್ಳೆಯದು.

(ಈ ಪದಗಳನ್ನು ಸಹ ನೋಡಿರಿ : ಆಶೀರ್ವಾದ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.14:24-26
- 2 ಪೇತ್ರನು.02:12-14
- ಗಲಾತ್ಯ.03:10-12
- ಗಲಾತ್ಯ.03:13-14
- ಆದಿ.03:14-15
- ಆದಿ.03:17-19
- ಯಾಕೋಬ.03:9-10
- ಅರಣ್ಯ.22:5-6
- ಕೀರ್ತನೆ.109:28-29

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **02:09** ಯೆಹೋವನಾದ ದೇವರು ಸರ್ಪಕ್ಕೆ "ನೀನು **ಶಾಪಗ್ರಸ್ತನಾಗಿರುವೆ**" ಎಂದು ಹೇಳಿದನು.
- **02:11** "ಈಗ ಭೂಮಿಯು **ಶಾಪಗ್ರಸ್ತವಾಯಿತು**, ನೀನು ಆಹಾರವನ್ನು ಬೆಳೆಸಲು ಕಷ್ಟಪಟ್ಟು ಬೆವರು ಸುರಿಸಬೇಕು"
- **04:04** "ನಿನ್ನನ್ನು ಆಶಿರ್ವಾದಿಸುವವರನ್ನು ನಾನು ಆಶಿರ್ವಾದಿಸುವೆನು; ನಿನ್ನನ್ನು **ಶಪಿಸುವವರನ್ನು** ನಾನು **ಶಪಿಸುವೆನು**."
- **39:07** ಆದರೆ ಅವನು, "ಈ ಮನುಷ್ಯನನ್ನು ನಾನರಿಯೆ" ಎಂದು ಹೇಳಿ ತನ್ನನ್ನು **ಶಪಿಸಿಕೊಂಡನು**.
- **50:16** ಆದಾಮ ಮತ್ತು ಹವ್ವ ದೇವರಿಗೆ ಅವಿಧೇಯರಾಗಿ ಲೋಕಕ್ಕೆ ಪಾಪವನ್ನು ಪ್ರವೇಶಿಸುವಂತೆ ಮಾಡಿದರು, ದೇವರು ಅದನ್ನು **ಶಪಿಸಿ** ನಾಶ ಮಾಡಲು ನಿಶ್ಚಯಿಸಿದನು.

ಪದ ಡೇಟಾ:

- Strong's: H422, H423, H779, H1288, H2763, H2764, H3994, H5344, H6895, H7043, H7045, H7621, H8381, G331, G332, G685, G1944, G2551, G2652, G2653, G2671, G2672, G6035

ಶಾಸ್ತ್ರಿ, ಶಾಸ್ತ್ರಿಗಳು

ಪದದ ಅರ್ಥವಿವರಣೆ:

ಶಾಸ್ತ್ರಿಗಳು ಪ್ರಭುತ್ವದ ಅಧಿಕಾರಿಗಳಾಗಿದ್ದರು, ಇವರು ತಮ್ಮ ಹಸ್ತಗಳ ಮೂಲಕ ಪ್ರಾಮುಖ್ಯವಾದ ಪ್ರಭುತ್ವದ ಅಥವಾ ಧರ್ಮಸಂಬಂಧವಾದ ಪತ್ರಗಳನ್ನು ನಕಲು ಮಾಡುವುದರಲ್ಲಿ ಅಥವಾ ಬರೆಯುವುದರಲ್ಲಿ ಬಾಧ್ಯತೆಯನ್ನು ತೆಗೆದುಕೊಂಡಿದ್ದರು. ಯೆಹೂದ್ಯ ಶಾಸ್ತ್ರಿಗೆ ಇನ್ನೊಂದು ಹೆಸರು "ಯೆಹೂದ್ಯ ಧರ್ಮಶಾಸ್ತ್ರದಲ್ಲಿ ನಿಪುಣರು" ಎಂದಾಗಿತ್ತು.

- ಹಳೇ ಒಡಂಬಡಿಕೆಯ ಪುಸ್ತಕಗಳನ್ನು ಭದ್ರಪಡಿಸುವುದರಲ್ಲಿ ಮತ್ತು ನಕಲು ಮಾಡುವುದರಲ್ಲಿ ಶಾಸ್ತ್ರಿಗಳನ್ನು ಬಾಧ್ಯತೆಯನ್ನು ಹೊಂದಿದ್ದರು.
- ದೇವರ ಧರ್ಮಶಾಸ್ತ್ರದ ಮೇಲೆ ಭಕ್ತಿಸಂಬಂಧವಾದ ಅಭಿಪ್ರಾಯಗಳನ್ನು ಮತ್ತು ವ್ಯಾಖ್ಯೆಗಳನ್ನು ಅನುವಾದ ಮಾಡುತ್ತಿದ್ದರು, ಭದ್ರಪಡಿಸುತ್ತಿದ್ದರು ಮತ್ತು ನಕಲು ಮಾಡುತ್ತಿದ್ದರು.
- ಅನೇಕ ಸಮಯಗಳಲ್ಲಿ ಶಾಸ್ತ್ರಿಗಳು ಪ್ರಾಮುಖ್ಯವಾದ ಪ್ರಭುತ್ವ ಅಧಿಕಾರಿಗಳಾಗಿದ್ದರು.
- ಸತ್ಯವೇದದಲ್ಲಿ ಪ್ರಮುಖ ಶಾಸ್ತ್ರಿಗಳಲ್ಲಿ ಬಾರೂಕ ಮತ್ತು ಎಜ್ರಗಳಿದ್ದರು.
- ಹೊಸ ಒಡಂಬಡಿಕೆಯಲ್ಲಿ "ಶಾಸ್ತ್ರಿಗಳು" ಎನ್ನುವ ಪದವನ್ನು "ಧರ್ಮಶಾಸ್ತ್ರದ ಬೋಧಕರು" ಎಂದೂ ಅನುವಾದ ಮಾಡಬಹುದು.
- ಹೊಸ ಒಡಂಬಡಿಕೆಯಲ್ಲಿ ಶಾಸ್ತ್ರಿಗಳು "ಫರಿಸಾಯರು" ಎನ್ನುವ ಧರ್ಮ ಗುಂಪಿನಲ್ಲಿ ಭಾಗವಾಗಿರುತ್ತಾರೆ, ಮತ್ತು ಎರಡು ಗುಂಪುಗಳ ಹೆಸರುಗಳನ್ನು ಅನೇಕಬಾರಿ ಸೇರಿ ದಾಖಲಿಸಿರುವುದನ್ನು ನಾವು ನೋಡಬಹುದು.

(ಈ ಪದಗಳನ್ನು ಸಹ ನೋಡಿರಿ : ಧರ್ಮಶಾಸ್ತ್ರ, ಫರಿಸಾಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:5-7
- ಲೂಕ.07:29-30
- ಲೂಕ.20:45-47
- ಮಾರ್ಕ.01:21-22
- ಮಾರ್ಕ.02:15-16
- ಮತ್ತಾಯ.05:19-20
- ಮತ್ತಾಯ.07:28-29
- ಮತ್ತಾಯ.12:38-39
- ಮತ್ತಾಯ.13:51-53

ಪದ ಡೇಟಾ:

- Strong's: H5608, H5613, H7083, G1122

ಶಿಲುಬೆ

ಪದದ ಅರ್ಥವಿವರಣೆ

ನೆಲದಲ್ಲಿ ಒಂದು ಮರದ ಸ್ತಂಭವನ್ನು ನೆಟ್ಟು ಅದಕ್ಕೆ ಮೇಲಿನ ಭಾಗದ ಹತ್ತಿರ ಇನ್ನೊಂದು ಮರದ ಸ್ತಂಭವನ್ನು ಅಡ್ಡವಾಗಿ ಜೋಡಿಸಿದರೆ ಅದನ್ನು ಸತ್ಯವೇದದ ಕಾಲದಲ್ಲಿ ಶಿಲುಬೆ ಎಂದು ಕರೆಯುತ್ತಿದ್ದರು.

- ರೋಮಾ ಸಾಮ್ರಾಜ್ಯದ ಕಾಲದಲ್ಲಿ, ಅಪರಾಧಿಗಳನ್ನು ಶಿಕ್ಷಿಸಲು ರೋಮಾ ಸರ್ಕಾರವು ಅವರನ್ನು ಶಿಲುಬೆಗೆ ಕಟ್ಟಿಹಾಕಿ ಅಥವಾ ಮೊಳೆ ಹೊಡೆದು ಸಾಯುವವರೆಗೆ ಅವರನ್ನು ಅಲ್ಲಿಯೇ ಬಿಡುತ್ತಿದ್ದರು.
- ಯೇಸು ಮಾಡದ ಅಪರಾಧಗಳಿಗೆ ತಪ್ಪಾಗಿ ಆರೋಪಿಸಲ್ಪಟ್ಟಿದ್ದನು ಮತ್ತು ರೋಮಾ ಪುರದವರು ಆತನನ್ನು ಶಿಲುಬೆಯ ಮರಣ ಶಿಕ್ಷೆ ಹಾಕಿದರು.
- ನದಿ ಅಥವಾ ಕೆರೆಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವ ಕ್ರಿಯೆಯನ್ನು ತೋರಿಸುವ “ದಾಟು” ಎನ್ನುವ ಕ್ರಿಯಾಪದದ ಅರ್ಥದಿಂದ ಈ ಪದ ಬೇರೊಂದು ಅರ್ಥವನ್ನು ಹೊಂದಿದೆ ಎಂದು ಗಮನಿಸಿ.

ಅನುವಾದ ಸಲಹೆಗಳು:

- ಅನುವಾದದ ಭಾಷೆಯಲ್ಲಿ ಶಿಲುಬೆಯ ಆಕಾರವನ್ನು ಸೂಚಿಸುವಂತೆ ಯಾವುದಾದರು ಪದವನ್ನು ಈ ಪದಕ್ಕೆ ಅನುಗುಣವಾಗಿ ಉಪಯೋಗಿಸಬಹುದು.
- ಶಿಲುಬೆಯ ಕುರಿತು ವಿವರಿಸುವಾಗ ಅದು ಜನರನ್ನು ಕೊಲ್ಲುವದಕ್ಕೆ ಉಪಯೋಗಿಸುತ್ತಿದ್ದರೆಂದು, ಅದನ್ನು “ಶಿಕ್ಷೆಯ ಸ್ತಂಭ” ಅಥವಾ “ಮರಣದ ಮರ” ಎಂದಾಗಲಿ ಕರೆಯಬಹುದು ಎಂದು ಗಮನದಲ್ಲಿಟ್ಟುಕೊಳ್ಳಿರಿ.
- ಈ ಪದವನ್ನು ಸ್ಥಾನಿಕವಾಗಿ ಅಥವಾ ರಾಷ್ಟ್ರ ಭಾಷೆಯಲ್ಲಿ ಹೇಗೆ ಅನುವಾದ ಮಾಡಿದ್ದಾರೆಂದು ಸಹ ಗಮನಿಸಬೇಕು. (ಇದನ್ನು ನೋಡಿರಿ: ಗೊತ್ತಿಲ್ಲದವುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಶಿಲುಬೆಗೆ ಹಾಕುವುದು, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.01:17
- ಕೊಲೊಸ್ಸೇ.02:15
- ಗಲಾತ್ಯ.06:12
- ಯೋಹಾನ.19:18
- ಲೂಕ.09:23
- ಲೂಕ.23:26
- ಮತ್ತಾಯ.10:38
- ಫಿಲಿಪ್ಪಿ.02:08

ಸತ್ಯವೇದದಿಂದ ಕೆಲವು ಉದಾಹರಣೆಗಳು:

- **40:01** ಸೈನಿಕರು ಯೇಸುವನ್ನು ಅಪಹಾಸ್ಯ ಮಾಡಿದ ನಂತರ, ಅವರು ಆತನನ್ನು ಶಿಲುಬೆಗೆ ಹಾಕಲು ಕರೆದುಕೊಂಡು ಹೋದರು. ಆತನು ಮರಣಕ್ಕೆ ಒಳಗಾಗುವ **ಶಿಲುಬೆಯನ್ನು** ಆತನೇ ಹೊತ್ತಿಕೊಂಡು ಹೋಗುವಂತೆ ಅವರು ಮಾಡಿದರು.
- **40:02** “ಕಪಾಲಸ್ಥಳ” ಎಂಬ ಸ್ಥಳಕ್ಕೆ ಯೇಸುವನ್ನು ಸೈನಿಕರು ಕರೆದುಕೊಂಡು ಬಂದರು ಮತ್ತು ಆತನ ಕೈಕಾಲುಗಳನ್ನು **ಶಿಲುಬೆಗೆ** ಮೊಳೆ ಹೊಡೆದರು.
- **40:05** ಯಹೂದಿಯ ನಾಯಕರು ಮತ್ತು ಜನರ ಗುಂಪಿನಲ್ಲಿದ್ದ ಬೇರೆ ಜನರು ಯೇಸುವನ್ನು ಅಪಹಾಸ್ಯ ಮಾಡಿದರು. “ನೀನು ದೇವರ ಮಗನಾದರೆ **ಶಿಲುಬೆಯಿಂದ** ಇಳಿದು ಬಂದು ನಿನ್ನನ್ನು ನೀನೆ ಕಾಪಾಡಿಕೋ ಆಗ ನಾವು ನಿನ್ನನ್ನು ನಂಬುತ್ತೇವೆ” ” ಎಂದು ಅವರು ಆತನೊಂದಿಗೆ ಹೇಳಿದರು.
- **49:10** ಯೇಸು **ಶಿಲುಬೆಯ** ಮೇಲೆ ಮರಣಿಸಿದಾಗ ಆತನು ನಿಮ್ಮ ಶಿಕ್ಷೆಯನ್ನು ಸ್ವೀಕರಿಸಿದನು.
- **49:12** ಯೇಸು ದೇವರ ಮಗನೆಂದು ಆತನು ನಿಮಗಾಗಿ **ಶಿಲುಬೆಯಲ್ಲಿ** ನಿಮಗೆ ಬದಲಾಗಿ ಸತ್ತನೆಂದು ಮತ್ತು ದೇವರು ಆತನನ್ನು ಮತ್ತೆ ಎಬ್ಬಿಸಿದನೆಂದು ನೀವು ನಂಬಬೇಕು.

ಪದ ಡೇಟಾ:

- Strong's: G4716

ಶಿಲುಬೆಗೆ ಹಾಕುವುದು, ಶಿಲುಬೆಗೆ ಹಾಕಲ್ಪಟ್ಟರು

ಪದದ ಅರ್ಥವಿವರಣೆ

"ಶಿಲುಬೆಗೆ ಹಾಕುವುದು" ಎಂದರೆ ಯಾರಾದರು ಒಬ್ಬ ವ್ಯಕ್ತಿಯನ್ನು ಶಿಲುಬೆಗೆ ಮೊಳೆಹೊಡೆದು ಮತ್ತು ಅವನು ಅತಿ ಘೋರವಾದ ನೋವಿನಲ್ಲಿ ಅಲ್ಲಿಯೇ ಸಾಯುವದಕ್ಕೆ ಬಿಡುವ ಶಿಕ್ಷೆ ಎಂದರ್ಥ.

- ಅಪರಾಧಿಯನ್ನು ಶಿಲುಬೆಗೆ ಮೊಳೆಹೊಡೆಯುತ್ತಾರೆ ಅಥವಾ ಕಟ್ಟಿಹಾಕುತ್ತಾರೆ. ಶಿಲುಬೆಗೆ ಹಾಕಲ್ಪಟ್ಟ ಜನರು ರಕ್ತ ಹೀನತೆ ಅಥವಾ ಉಸಿರುಗಟ್ಟುವಿಕೆಯಿಂದ ಸತ್ತುಹೋದರು.
- ಪ್ರಾಚೀನ ರೋಮಾ ಸಾಮ್ರಾಜ್ಯದಲ್ಲಿ ಅತಿ ಘೋರವಾದ ಅಪರಾಧಿಗಳಿಗೆ ಅಥವಾ ಅವರ ಸರ್ಕಾರದ ಅಧಿಕಾರವನ್ನು ಉಲ್ಲಂಘಿಸುವವರಿಗೆ ಈ ವಿಧವಾದ ಶಿಕ್ಷೆಯನ್ನು ಕೊಡುತ್ತಿದ್ದರು.
- ಯೇಸುವನ್ನು ಶಿಲುಬೆಗೆ ಹಾಕಲು ತಮ್ಮ ಸೈನಿಕರಿಗೆ ಅಪ್ಪಣೆ ನೀಡಬೇಕೆಂದು ಯಹೂದಿಯರ ಮತಾಧಿಕರಿಗಳು ರೋಮಾ ಪ್ರಭುತ್ವದವರನ್ನು ಬೇಡಿಕೊಂಡರು. ಸೈನಿಕರು ಯೇಸುವನ್ನು ಶಿಲುಬೆಗೆ ಮೊಳೆಹೊಡೆದರು. ಆತನ ಅಲ್ಲಿ ಆರು ಘಂಟೆಗಳ ಕಾಲ ನೋವನ್ನು ಅನುಭವಿಸಿ ಆ ನಂತರ ಸತ್ತುಹೋದರು.

ಅನುವಾದ ಸಲಹೆಗಳು:

- "ಶಿಲುಬೆಗೆ ಹಾಕುವುದು" ಎನ್ನುವ ಪದವನ್ನು "ಶಿಲುಬೆಯ ಮೇಲೆ ಸಾಯಿಸುವುದು" ಅಥವಾ "ಶಿಲುಬೆಗೆ ಮೊಳೆಯುವ ಮೂಲಕ ಮರಣದಂಡನೆ" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಶಿಲುಬೆ, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.02:22-24
- ಗಲಾತ್ಯ.02:20-21
- ಲೂಕ.23:20-22
- ಲೂಕ.23:33-34
- ಮತ್ತಾಯ.20:17-19
- ಮತ್ತಾಯ.27:23-24

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **39:11** ಆದರೆ ಯಹೂದಿಯ ನಾಯಕರು ಮತ್ತು ಜನರು "ಆತನನ್ನು (ಯೇಸುವನ್ನು)**ಶಿಲುಬೆಗೆ ಹಾಕಿರಿ**!" ಎಂದು ಕೂಗಿ ಹೇಳಿದರು.
- **39:12** ಗದ್ದಲ ಹೆಚ್ಚಾಗುತ್ತದೆ ಎಂದು ಪಿಲಾತನು ತಿಳಿದು ಯೇಸುವನ್ನು **ಶಿಲುಬೆಗೆ ಹಾಕುವುದಕ್ಕೆ** ತನ್ನ ಸೈನಿಕರಿಗೆ ಒಪ್ಪಿಸಿದನು. ಯೇಸು ಕ್ರಿಸ್ತನನ್ನು ಶಿಲುಬೆಗೇರಿಸುವದರ ವಿಷಯದಲ್ಲಿ ಪ್ರಮುಖ ಪತ್ರ ವಹಿಸಿದರು.
- **40:01** ಸೈನಿಕರು ಯೇಸುವನ್ನು ಅಪಹಾಸ್ಯ ಮಾಡಿದ ಮೇಲೆ ಆತನನ್ನು **ಶಿಲುಬೆಗೆ ಹಾಕುವದಕ್ಕೆ** ಕರೆದುಕೊಂಡುಹೋಗಿದರು. ಆತನು ಮರಣಿಸುವ ಶಿಲುಬೆಯನ್ನು ಆತನೇ ಹೊತ್ತಿಕೊಂಡು ಹೋಗುವಂತೆ ಅವರು ಮಾಡಿದುರು.
- **40:04** ಇಬ್ಬರು ಕಳ್ಳರ ಮಧ್ಯದಲ್ಲಿ ಯೇಸುವನ್ನು **ಶಿಲುಬೆಗೆ ಹಾಕಿದರು**.
- **43:06** "ಇಸ್ರಾಯೇಲ್ ಜನರೇ, ನನ್ನ ಮಾತುಗಳನ್ನು ಕೇಳಿರಿ;, ನಜರೇತಿನ ಯೇಸು ಇದ್ದನಲ್ಲಾ, ನಿಮಗೂ ತಿಳಿದಿರುವಂತೆ ದೇವರು ಆತನ ಕೃಪೆಯಿಂದ ಮಹತ್ತುಗಳನ್ನೂ ಅದ್ಭುತಗಳನ್ನೂ ಸೂಚಕಕಾರ್ಯಗಳನ್ನೂ ನಿಮ್ಮಲ್ಲಿ ನಡಿಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು ನಿಮಗೆ ತೋರಿಸಿಕೋಟ್ಟನು. ಆದರೂ ನೀವು ಆತನನ್ನು **ಶಿಲುಬೆಗೆ ಹಾಕಿ** ಮೊಳೆಜಡಿದು ಕೊಂದಿರಿ.
- **43:09** "ನೀವು ಯೇಸು ಎಂಬ ಈ ಮನುಷ್ಯನನ್ನು **ಶಿಲುಬೆಗೆ ಹಾಕಿ** ಕೊಂದಿದ್ದೀರ"
- **44:08** "ನೀವು ನೋಡುತ್ತಿರುವಂತಹ, ನಿಮಗೆ ಗುರುತಿರುವಂತಹ ಈ ಮನುಷ್ಯನು ಗುಣವಾಗುವುದಕ್ಕೆ ಯೇಸುವಿನ ಹೆಸರಿನಲ್ಲಿ ಇಟ್ಟ ಅವನ ನಂಬಿಕೆಯೇ ಕಾರಣ. ನೀವು ಯೇಸುವನ್ನು **ಶಿಲುಬೆಗೆ ಹಾಕಿ** ಕೊಲ್ಲಿಸಿದ್ದೀರಿ, ಆದರೆ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು!"

ಪದ ಡೇಟಾ:

- Strong's: G388, G4362, G4717, G4957

ಶಿಷ್ಯ, ಶಿಷ್ಯರು

ಪದದ ಅರ್ಥವಿವರಣೆ:

“ಶಿಷ್ಯ” ಎನ್ನುವ ಪದವು ಬೋಧಕರೊಂದಿಗೆ ಹೆಚ್ಚಾದ ಸಮಯವನ್ನು ಕಳೆಯುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ, ಆ ಬೋಧಕನ ಗುಣಲಕ್ಷಣಗಳಿಂದ ಮತ್ತು ಬೋಧನೆಗಳಿಂದ ಕಲಿತುಕೊಳ್ಳುವುದನ್ನು ಸೂಚಿಸುತ್ತದೆ.

- ಯೇಸುವನ್ನು ಹಿಂಬಾಲಿಸಿದ ಜನರೆಲ್ಲರು ಆತನ ಬೋಧನೆಗಳನ್ನು ಕೇಳಿಸಿಕೊಂಡು ಮತ್ತು ಅವುಗಳಿಗೆ ವಿಧೇಯರಾಗಿರುವವರನ್ನು ಆತನ “ಶಿಷ್ಯರು” ಎಂದು ಕರೆಯಲ್ಪಟ್ಟಿದ್ದರು.
- ಸ್ನಾನಿಕನಾದ ಯೋಹಾನನಿಗೂ ಶಿಷ್ಯರಿದ್ದರು.
- ಯೇಸು ಸೇವೆ ಮಾಡಿದ ಕಾಲದಲ್ಲಿ, ಅನೇಕಮಂದಿ ಶಿಷ್ಯರು ಆತನನ್ನು ಹಿಂಬಾಲಿಸಿ, ಆತನ ಬೋಧನೆಗಳನ್ನು ಕೇಳಿದರು.
- ಯೇಸು ಹನ್ನೆರಡು ಮಂದಿ ಶಿಷ್ಯರನ್ನು ತನಗೆ ಅತೀ ಹತ್ತಿರವಾದ ಶಿಷ್ಯರಾಗಿರಲು ಆರಿಸಿಕೊಂಡರು; ಈ ಶಿಷ್ಯರೇ ಆತನ “ಅಪೊಸ್ತಲರಾಗಿ” ಕರೆಯಲ್ಪಟ್ಟರು.
- ಯೇಸುವಿನ ಹನ್ನೆರಡು ಮಂದಿ ಅಪೊಸ್ತಲರು ಆತನ “ಶಿಷ್ಯರಾಗಿ” ಅಥವಾ “ಹನ್ನೆರಡು ಮಂದಿ ಶಿಷ್ಯರಾಗಿ” ಗುರುತಿಸಲ್ಪಟ್ಟರು.
- ಯೇಸುವು ಪರಲೋಕಕ್ಕೆ ಆರೋಹಣವಾಗುವುದಕ್ಕೆ ಮುಂಚಿತವಾಗಿ, ಯೇಸುವಿನ ಶಿಷ್ಯರಾಗುವುದು ಹೇಗೆಂದು ಇತರರಿಗೂ ಬೋಧನೆ ಮಾಡಬೇಕೆಂದು ಆತನು ತನ್ನ ಶಿಷ್ಯರಿಗೆ ಆಜ್ಞಾಪಿಸಿದನು.
- ಯೇಸುವಿನಲ್ಲಿ ನಂಬಿಕೆಯಿಟ್ಟವರು ಯಾರೇಯಾಗಲಿ, ಆತನ ಬೋಧನೆಗಳಿಗೆ ವಿಧೇಯರಾಗುತ್ತಾರೆ, ಅವರನ್ನೇ ಯೇಸು ಶಿಷ್ಯರು ಎಂದು ಕರೆಯಲ್ಪಡುತ್ತಾರೆ.

ಅನುವಾದ ಸಲಹೆಗಳು:

- “ಶಿಷ್ಯ” ಎನ್ನುವ ಪದವನ್ನು “ಹಿಂಬಾಲಕ” ಅಥವಾ “ವಿದ್ಯಾರ್ಥಿ” ಅಥವಾ “ತರಬೇತಿ ಹೊಂದುವವರು” ಅಥವಾ “ಕಲಿತುಕೊಳ್ಳುವವರು” ಎಂದು ಅರ್ಥಕೊಡುವ ಪದಗಳೊಂದಿಗೆ ಅನುವಾದ ಮಾಡಬಹುದು.
- ಅನುವಾದ ಮಾಡಿದ ಈ ಪದವು ಕೇವಲ ತರಗತಿ ಕೊಠಡಿಯಲ್ಲಿ ಕಲಿತುಕೊಳ್ಳುವ ವಿಧ್ಯಾರ್ಥಿಯನ್ನು ಮಾತ್ರವೇ ಸೂಚಿಸದಂತೆ ನೋಡಿಕೊಳ್ಳಿರಿ.
- ಅನುವಾದ ಮಾಡಿದ ಈ ಪದವು ಖಂಡಿತವಾಗಿ ಅಪೊಸ್ತಲ ಎನ್ನುವ ಪದಕ್ಕೆ ಬೇರೆಯಾಗಿರಬೇಕು.

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ನಂಬು, ಯೇಸು, ಸ್ನಾನೀಕನಾದ ಯೋಹಾನ, ಹನ್ನೆರಡು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೂ.ಕೃತ್ಯ.06:1
- ಅಪೂ.ಕೃತ್ಯ.09:26-27
- ಅಪೂ.ಕೃತ್ಯ.11:25-26
- ಅಪೂ.ಕೃತ್ಯ.14:21-22
- ಯೋಹಾನ.13:23-25
- ಲೂಕ.06:39-40
- ಮತ್ತಾಯ.11:1-3
- ಮತ್ತಾಯ.26:33-35
- ಮತ್ತಾಯ.27:62-64

ಸತ್ಯವೇದದಿಂದ ಉದಾಹರಣೆಗಳು:

- **30:08** ಎಲ್ಲಾ ಜನರಿಗೆ ಕೊಡುವುದಕ್ಕೆ ಆತನು (ಯೇಸು) ರೊಟ್ಟಿಗಳನ್ನು ತನ್ನ _ ಶಿಷ್ಯರಿಗೆ _ ರೊಟ್ಟಿಗಳನ್ನು ಕೊಟ್ಟನು. _ ಶಿಷ್ಯರು _ ಆ ಆಹಾರವನ್ನು ಹಂಚಿದರು, ಆದರೂ ಕಡಿಮೆಯಾಗಲೇಯಿಲ್ಲ.
- **38:01** ಮೂರು ವರ್ಷಗಳಾದನಂತರ ಬಹಿರಂಗವಾಗಿ ಯೇಸು ಬೋಧಿಸುವುದಕ್ಕೂ ಮತ್ತು ಪ್ರಸಂಗಿಸುವುದಕ್ಕೂ ಆರಂಭಿಸಿದನು, ಯೆರೂಸಲೇಮಿನಲ್ಲಿ ಅವರೊಂದಿಗೆ ಪಸ್ಕ ಹಬ್ಬವನ್ನು ನಡೆಸಬೇಕೆಂದು ಮತ್ತು ಆ ಸ್ಥಳದಲ್ಲೇ ನನ್ನನ್ನು ಸಾಯಿಸುತ್ತಾರೆಂದು ಯೇಸು ತನ್ನ _ ಶಿಷ್ಯರಿಗೆ _ ಹೇಳಿದನು.
- **38:11** ಯೇಸು ತನ್ನ _ ಶಿಷ್ಯರೊಂದಿಗೆ _ ಗೆತ್ಸೇಮನೆ ಎಂದು ಕರೆಯಲ್ಪಡುವ ಸ್ಥಳಕ್ಕೆ ಹೊರಟನು. ಅವರು ಶೋಧನೆಗೆ ಗುರಿಯಾಗದಂತೆ ಪ್ರಾರ್ಥನೆ ಮಾಡಬೇಕೆಂದು ಯೇಸು ತನ್ನ _ ಶಿಷ್ಯರಿಗೆ _ ಹೇಳಿದನು.
- **42:10** “ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಇರುವ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದುದರಿಂದ ನೀವು ಹೊರಟುಹೋಗಿ ಎಲ್ಲಾ ಜನಾಂಗಗಳನ್ನು _ ಶಿಷ್ಯರನ್ನಾಗಿ _ಮಾಡಿ, ಅವರಿಗೆ ತಂದೆ, ಮಗ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿರಿ. ನಾನು ನಿಮಗೆ ಆಜ್ಞಾಪಿಸಿದ ಎಲ್ಲವನ್ನು ಅನುಸರಿಸುವುದಕ್ಕೆ ಅವರಿಗೆ ಉಪದೇಶ ಮಾಡಿರಿ” ಎಂದು ಯೇಸು ತನ್ನ _ ಶಿಷ್ಯರಿಗೆ _ ಹೇಳಿದನು.

ಪದ ಡೇಟಾ:

- Strong's: H3928, G3100, G3101, G3102

ಶುದ್ಧ, ತೊಳೆಯು

ಪದದ ಅರ್ಥವಿವರಣೆ:

“ಶುದ್ಧ” ”ಎಂಬ ಪದವು ಸಾಮಾನ್ಯವಾಗಿ ಯಾರೊಬ್ಬರಿಂದ / ಯಾವುದೋ ಕೊಳಕು ಅಥವಾ ಕಲೆಗಳನ್ನು ತೆಗೆದುಹಾಕುವುದು ಅಥವಾ ಮೊದಲಿಗೆ ಯಾವುದೇ ಕೊಳಕು ಅಥವಾ ಕಲೆಗಳನ್ನು ಹೊಂದಿರದಿರುವುದನ್ನು ಸೂಚಿಸುತ್ತದೆ. "ತೊಳೆಯುವುದು" ಎಂಬ ಪದವು ನಿರ್ದಿಷ್ಟವಾಗಿ ಯಾರೋ / ಯಾವುದೋ ಕೊಳಕು ಅಥವಾ ಕಲೆಗಳನ್ನು ತೆಗೆದುಹಾಕುವ ಕ್ರಿಯೆಯನ್ನು ಸೂಚಿಸುತ್ತದೆ.

- “ಶುದ್ಧೀಕರಿಸು” ಎನ್ನುವ ಪದವನ್ನು ಯಾವುದಾದರೊಂದನ್ನು “ಶುದ್ಧ” ಮಾಡುವ ಪದ್ಧತಿಯ ಕ್ರಿಯೆಯನ್ನು ಸೂಚಿಸುತ್ತದೆ. ಇದನ್ನು “ತೊಳೆ” ಅಥವಾ “ಪವಿತ್ರಗೊಳಿಸು” ಎಂದೂ ಅನುವಾದ ಮಾಡಬಹುದು.
- ಹಳೇ ಒಡಂಬಡಿಕೆಯಲ್ಲಿ ದೇವರು ಇಸ್ರಾಯೇಲ್ಯರಿಗೆ “ಶುದ್ಧ” ಪ್ರಾಣಿಗಳು ಯಾವುವು ಮತ್ತು “ಅಶುದ್ಧ” ಪ್ರಾಣಿಗಳು ಯಾವುವೆಂದು ವಿಶೇಷವಾಗಿ ಹೇಳಿದ್ದನು. ಹೋಮಕ್ಕಾಗಿ ಮತ್ತು ತಿನ್ನುವುದಕ್ಕೆ ಕೇವಲ ಶುದ್ಧ ಪ್ರಾಣಿಗಳನ್ನು ಮಾತ್ರವೇ ಉಪಯೋಗಿಸುವುದಕ್ಕೆ ಅನುಮತಿಸಿದ್ದನು. ಈ ಸಂದರ್ಭದಲ್ಲಿ “ಶುದ್ಧ” ಎನ್ನುವ ಪದಕ್ಕೆ ಹೋಮಕ್ಕಾಗಿ ಉಪಯೋಗಿಸಲು ದೇವರಿಗೆ ಅಂಗೀಕೃತವಾದ ಪ್ರಾಣಿ ಎಂದರ್ಥ.
- ಒಬ್ಬ ವ್ಯಕ್ತಿಗೆ ಚರ್ಮ ರೋಗವಿದ್ದರೆ ಆ ವ್ಯಕ್ತಿಯ ಚರ್ಮವು ಇನ್ನು ಮುಂದೆ ಯಾವ ಅಂಟುರೋಗವಿಲ್ಲದೆ ಗುಣವಾಗುವವರೆಗೂ ಅಶುದ್ಧನು ಎಂದರ್ಥ, ಆ ವ್ಯಕ್ತಿಯನ್ನು “ಶುದ್ಧನು” ಎಂದು ತಿರುಗಿ ಹೇಳುವವರೆಗೂ ಚರ್ಮವನ್ನು ಶುದ್ಧೀಕರಿಸುವುದಕ್ಕೋಸ್ಕರ ನಿಯಮಗಳಿಗೆ ವಿಧೇಯನಾಗಬೇಕು.
- “ಶುದ್ಧ” ಎನ್ನುವ ಪದವು ಕೆಲವೊಂದುಬಾರಿ ನೈತಿಕ ಪವಿತ್ರತೆಯನ್ನು ಸೂಚಿಸಲು ಅಲಂಕಾರಿಕವಾಗಿ ಉಪಯೋಗಿಸುತ್ತಾರೆ.

ಸತ್ಯವೇದದಲ್ಲಿ “ಅಶುದ್ಧ” ಎನ್ನುವ ಪದವು ದೇವರು ತನ್ನ ಜನರು ಮುಟ್ಟಕೂಡದ, ತಿನ್ನಬಾರದ, ಅಥವಾ ಬಲಿಯಾಗಿ ಅರ್ಪಿಸಬಾರದ ವಿಷಯಗಳನ್ನು ಸೂಚಿಸಲು ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.

- ಯಾವ ಯಾವ ಪ್ರಾಣಿಗಳು “ಶುದ್ಧವೋ” ಮತ್ತು ಯಾವ ಯಾವ ಪ್ರಾಣಿಗಳು “ಅಶುದ್ಧವೋ” ಎನ್ನುವುದರ ಕುರಿತಾಗಿ ದೇವರು ಇಸ್ರಾಯೇಲ್ಯರಿಗೆ ಆಜ್ಞೆಗಳನ್ನು ಕೊಟ್ಟರು. ಅಶುದ್ಧವಾದ ಪ್ರಾಣಿಗಳು ಬಲಿಗೆ ಅಥವಾ ತಿನ್ನುವುದಕ್ಕೆ ಉಪಯೋಗಿಸಲು ಅನುಮತಿಯಿಲ್ಲ.
- ಚರ್ಮ ರೋಗಗಳಿಂದಿರುವ ಜನರು ಗುಣವಾಗುವವರೆಗೂ ಅವರನ್ನು “ಅಶುದ್ಧರು” ಎಂದು ಕರೆಯುತ್ತಿದ್ದರು.
- ಇಸ್ರಾಯೇಲ್ಯರು “ಅಶುದ್ಧ” ವಾದವುಗಳನ್ನು ಮುಟ್ಟಿದರೆ, ಅವರು ತಮ್ಮನ್ನು ತಾವೇ ಒಂದು ಕಾಲಾವದಿಯವರೆಗೆ ಅಶುದ್ಧರು ಎಂದು ಹೇಳಿಕೊಳ್ಳುತ್ತಿದ್ದರು.
- ಅಶುದ್ಧವಾದವುಗಳನ್ನು ತಿನ್ನುವುದರ ಕುರಿತಾಗಿ ಅಥವಾ ಅವುಗಳನ್ನು ಮುಟ್ಟಿಕೊಳ್ಳುವುದರ ಕುರಿತಾಗಿ ದೇವರ ಆಜ್ಞೆಗಳಿಗೆ ವಿಧೇಯತೆ ತೋರಿಸುವುದೆನ್ನುವುದು ದೇವರ ಸೇವೆಗಾಗಿ ಇಸ್ರಾಯೇಲ್ಯರನ್ನು ಪ್ರತ್ಯೇಕಿಸಲ್ಪಟ್ಟವರನ್ನಾಗಿ ಇರಿಸುತ್ತದೆ.
- ಈ ಭೌತಿಕವಾದ ಮತ್ತು ಸಾಂಪ್ರದಾಯಿಕವಾದ ಅಶುದ್ಧತೆಯು ನೈತಿಕ ಅಶುದ್ಧತೆಗೆ ಗುರುತಾಗಿರುತ್ತದೆ.
- ಇನ್ನೊಂದು ಅಲಂಕಾರಿಕ ಭಾಷೆಯಲ್ಲಿ “ಅಶುದ್ಧ ಆತ್ಮ” ಎನ್ನುವುದು ದುಷ್ಟಾತ್ಮಕ್ಕೆ ಸೂಚನೆಯಾಗಿರುತ್ತದೆ.

ಅನುವಾದ ಸಲಹೆಗಳು:

- ಈ ಪದವನ್ನು “ಸ್ವಚ್ಛ” ಅಥವಾ “ಪವಿತ್ರ” (ಮಾಲಿನ್ಯವಾಗದೆ ಎನ್ನುವ ಅರ್ಥ ಬರುವ ಪದ) ಎನ್ನುವ ಸಾಧಾರಣ ಪದದೊಂದಿಗೆ ಅನುವಾದ ಮಾಡಬಹುದು.
- ಈ ಪದವನ್ನು ಅನುವಾದ ಮಾಡುವ ಇನ್ನೊಂದು ವಿಧಾನದಲ್ಲಿ, “ಆಚರಣೆ ಶುದ್ಧತೆ” ಅಥವಾ “ದೇವರಿಗೆ ಸ್ವೀಕೃತವಾದದ್ದು” ಎನ್ನುವ ಮಾತುಗಳೂ ಒಳಗೊಂಡಿರುತ್ತವೆ.
- “ಶುದ್ಧೀಕರಿಸು” ಎನ್ನುವದನ್ನು “ತೊಳೆ” ಅಥವಾ “ಪವಿತ್ರಗೊಳಿಸು” ಎಂದೂ ಅನುವಾದ ಮಾಡಬಹುದು.
- “ಶುದ್ಧ” ಮತ್ತು “ಶುದ್ಧೀಕರಿಸು” ಎನ್ನುವ ಪದಗಳನ್ನು ಅಲಂಕಾರಿಕ ಭಾವನೆಯಲ್ಲಿಯೂ ಅರ್ಥಮಾಡಿಕೊಳ್ಳುವಂತೆ ನೋಡಿಕೊಳ್ಳಿರಿ.
- “ಅಶುದ್ಧ” ಎನ್ನುವ ಪದವನ್ನು “ಶುದ್ಧವಿಲ್ಲದ್ದು” ಅಥವಾ “ದೇವರ ದೃಷ್ಟಿಯಲ್ಲಿ ಅಯೋಗ್ಯವಾದದ್ದು” ಅಥವಾ “ಭೌತಿಕವಾಗಿ ಅಶುದ್ಧವಾದದ್ದು” ಅಥವಾ “ಕೊಳೆಯಾದದ್ದು” ಎಂದೂ ಅನುವಾದ ಮಾಡಬಹುದು.
- ಅಶುದ್ಧ ಆತ್ಮ ಎಂದು ದೆವ್ವವನ್ನು ಸೂಚಿಸಿದಾಗ, “ಅಶುದ್ಧ” ಎನ್ನುವ ಪದವನ್ನು “ದುಷ್ಟ” ಅಥವಾ “ಕೊಳೆಯಾದದ್ದು” ಎಂದೂ ಅನುವಾದ ಮಾಡಬಹುದು.
- ಈ ಪದದ ಅನುವಾದವು ಆತ್ಮೀಕ ಅಶುದ್ಧತೆಯನ್ನು ಅನುಮತಿಸಬೇಕು. ಮುಟ್ಟುವುದಕ್ಕೂ, ತಿನ್ನುವುದಕ್ಕೂ ಅಥವಾ ಬಲಿ ಕೊಡುವುದಕ್ಕೂ ಯೋಗ್ಯವಿಲ್ಲವೆಂದು ದೇವರು ಹೇಳಿದ ಪ್ರತಿಯೊಂದನ್ನು ಸೂಚಿಸಬೇಕು.

(ಈ ಪದಗಳನ್ನು ಸಹ ನೋಡಿರಿ : ಕೊಳಕು, ದೆವ್ವ, ಪವಿತ್ರ, ಹೋಮ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.07:02
- ಆದಿ.07:08
- ಧರ್ಮೋ.12:15
- ಕೀರ್ತನೆ.051:07

- ಜ್ಞಾನೋ.20:29-30
- ಯೆಹೆ.24:13
- ಮತ್ತಾಯ.23:27
- ಲೂಕ.05:13
- ಅಪೊ.ಕೃತ್ಯ.08:07
- ಅಪೊ.ಕೃತ್ಯ.10:27-29
- ಕೊಲೊಸ್ಸ.03:05
- 1 ಥೆಸ್ಸ.04:07
- ಯಾಕೋಬ.04:08

ಪದ ಡೇಟಾ:

- Strong's: H1249, H1252, H1305, H2134, H2135, H2141, H2398, H2548, H2834, H2889, H2890, H2891, H2893, H2930, H2931, H2932, H3001, H3722, H5079, H5352, H5355, H5356, H6172, H6565, H6663, H6945, H7137, H8552, H8562, G167, G169, G2511, G2512, G2513, G2839, G2840, G3394, G3689

ಶುದ್ಧ, ಶುದ್ಧೀಕರಿಸು, ಶುದ್ಧೀಕರಣೆ

ಪದದ ಅರ್ಥವಿವರಣೆ:

“ಶುದ್ಧ” ಎನ್ನುವ ಪದಕ್ಕೆ ಯಾವ ದೋಷಗಳೂ ಇಲ್ಲದಿರುವುದು ಅಥವಾ ಮಿಶ್ರಣವಿಲ್ಲದಿರುವುದು, ಅದರಲ್ಲಿ ಬೇರೆ ಯಾವುದೂ ಇರಬಾರದು. ಯಾವುದಾದರೊಂದನ್ನು ಶುದ್ಧೀಕರಿಸುವುದು ಎಂದರೆ ಅದನ್ನು ಚೊಕ್ಕಟಗೊಳಿಸು ಎಂದರ್ಥ ಮತ್ತು ಅದನ್ನು ಮಲಿನಗೊಳಿಸುವ ಅಥವಾ ಕಲುಷಿತಗೊಳಿಸುವವುಗಳನ್ನು ತೆಗೆದುಹಾಕುವುದು ಎಂದರ್ಥ.

- ಹಳೇ ಒಡಂಬಡಿಕೆ ಆಜ್ಞೆಗಳಿಗೆ ಸಂಬಂಧಪಟ್ಟಂತೆ, “ಶುದ್ಧೀಕರಿಸು” ಮತ್ತು “ಶುದ್ಧೀಕರಣ” ಎನ್ನುವ ಪದಗಳು ಪ್ರಾಮುಖ್ಯವಾಗಿ ಒಬ್ಬ ವ್ಯಕ್ತಿಯನ್ನು ಅಥವಾ ವಸ್ತುವನ್ನು ಅಶುದ್ಧವನ್ನಾಗಿ ಮಾಡುವ ವಿಷಯಗಳಿಂದ ಶುದ್ಧೀಕರಣ ಮಾಡುವುದುದನ್ನು ಸೂಚಿಸುತ್ತದೆ, ಉದಾಹರಣೆಗೆ, ರೋಗ, ದೇಹದ ದ್ರವಗಳು, ಅಥವಾ ಶಿಶು ಜನನ ಎನ್ನುವಂಥವುಗಳು.
- ಹಳೇ ಒಡಂಬಡಿಕೆಯು ಕೂಡ ಪಾಪದಿಂದ ಹೇಗೆ ಶುದ್ಧೀಕರಣ ಹೊಂದಬೇಕೆಂದು ಜನರಿಗೆ ಹೇಳುವ ಆಜ್ಞೆಗಳನ್ನು ಒಳಗೊಂಡಿರುತ್ತದೆ, ಸಾಧಾರಣವಾಗಿ ಪ್ರಾಣಿಯನ್ನು ಬಲಿ ಕೊಡುವುದರ ಮೂಲಕ ಶುದ್ಧೀಕರಣವು ಇರುತ್ತದೆ. ಇದು ತಾತ್ಕಾಲಿಕವಾಗಿರುತ್ತದೆ ಮತ್ತು ಯಜ್ಞಗಳು ಮತ್ತೇ ಮತ್ತೇ ಮಾಡಬೇಕಾದ ಪರಿಸ್ಥಿತಿ ಇರುತ್ತದೆ.
- ಹೊಸ ಒಡಂಬಡಿಕೆಯಲ್ಲಿ ಶುದ್ಧೀಕರಣೆ ಅನೇಕಬಾರಿ ಪಾಪದಿಂದ ತೊಳೆಯಲ್ಪಡುವುದನ್ನು ಸೂಚಿಸುತ್ತದೆ.
- ಜನರು ತಮ್ಮ ಪಾಪಗಳಿಂದ ಸಂಪೂರ್ಣವಾಗಿ ಮತ್ತು ಶಾಶ್ವತವಾಗಿ ಶುದ್ಧೀಕರಿಸಲ್ಪಡುವ ಒಂದೇ ವಿಧಾನ ಏನೆಂದರೆ ಪಶ್ಚಾತ್ತಾಪ ಹೊಂದಿ, ದೇವರ ಕ್ಷಮೆಯನ್ನು ಪಡೆದುಕೊಳ್ಳುವುದರ ಮೂಲಕ ಮತ್ತು ಯೇಸುವಿನಲ್ಲಿ, ತನ್ನ ತ್ಯಾಗದಲ್ಲಿ ನಂಬಿಕೆಯಿಡುವುದರ ಮೂಲಕ ಸಾಧ್ಯವಾಗುತ್ತದೆ.

ಅನುವಾದ ಸಲಹೆಗಳು:

- “ಶುದ್ಧೀಕರಿಸು” ಎನ್ನುವ ಪದವನ್ನು “ಪವಿತ್ರಗೊಳಿಸು” ಅಥವಾ “ತೊಳೆ” ಅಥವಾ “ಎಲ್ಲಾ ಕಲ್ಮಷಗಳಿಂದ ತೊಳೆ” ಅಥವಾ “ಎಲ್ಲಾ ಪಾಪಗಳಿಂದ ಬಿಡುಗಡೆ ಹೊಂದು” ಎಂದೂ ಅನುವಾದ ಮಾಡಬಹುದು.
- “ಅವರ ಶುದ್ಧೀಕರಣಕ್ಕೆ ಸಮಯವು ಮುಗಿದು ಹೋದಾಗ” ಎನ್ನುವ ಮಾತನ್ನು “ಅನೇಕ ದಿನಗಳ ಕಾಲ ಎದುರುನೋಡುವುದರ ಮೂಲಕ ಅವರು ತಮ್ಮನ್ನು ತಾವು ಶುದ್ಧೀಕರಣ ಹೊಂದಿದಾಗ” ಎಂದೂ ಅನುವಾದ ಮಾಡಬಹುದು.
- “ಪಾಪಗಳಿಗಾಗಿ ಶುದ್ಧೀಕರಣವನ್ನು ಅನುಗ್ರಹಿಸಿದಾಗ” ಎನ್ನುವ ಮಾತನ್ನು “ಜನರು ತಮ್ಮ ಪಾಪಗಳಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದುವುದಕ್ಕೆ ಮಾರ್ಗವನ್ನು ಅನುಗ್ರಹಿಸಿದಾಗ” ಎಂದೂ ಅನುವಾದ ಮಾಡಬಹುದು.
- “ಶುದ್ಧೀಕರಣ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ತೊಳೆಯುವುದು” ಅಥವಾ “ಆತ್ಮಿಕವಾಗಿ ತೊಳೆಯುವುದು” ಅಥವಾ “ಧಾರ್ಮಿಕವಾಗಿ ಸ್ವಚ್ಚಗೊಳಿಸಲ್ಪಡುವುದು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಪ್ರಾಯಶ್ಚಿತ್ತ, ಶುದ್ಧ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.01:5-8
- ವಿಮೋ.31:6-9
- ಇಬ್ರಿ.09:13-15
- ಯಾಕೋಬ.04:8-10
- ಲೂಕ.02:22-24
- ಪ್ರಕ.14:3-5

ಪದ ಡೇಟಾ:

- Strong's: H1249, H1252, H1253, H1305, H1865, H2134, H2135, H2141, H2212, H2398, H2403, H2561, H2889, H2890, H2891, H2892, H2893, H3795, H3800, H4795, H5343, H5462, H6337, H6884, H6942, H8562, G48, G49, G53, G54, G1506, G2511, G2512, G2513, G2514

ಶುಭವಾರ್ತೆ, ಸುವಾರ್ತೆ

ಪದದ ಅರ್ಥವಿವರಣೆ:

"ಸುವಾರ್ತೆ" ಎನ್ನುವ ಪದಕ್ಕೆ ಅಕ್ಷರಾರ್ಥವು "ಶುಭವಾರ್ತೆ" ಎಂದರ್ಥ, ಇದು ಜನರನ್ನು ಸಂತೋಷಪಡಿಸುವ ಮತ್ತು ಅವರಿಗೆ ಪ್ರಯೋಜನಕರವಾಗಿರುವ ಯಾವುದಾದರೊಂದನ್ನು ಜನರಿಗೆ ಹೇಳುವ ಪ್ರಕಟನೆಗಳನ್ನು ಅಥವಾ ಸಂದೇಶವನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ ಈ ಪದವು ಶಿಲುಬೆಯಲ್ಲಿ ಮಾಡಿದ ಯೇಸುವಿನ ಬಲಿಯಾಗದ ಮೂಲಕ ಜನರಿಗೆ ಉಂಟಾಗುವ ದೇವರ ರಕ್ಷಣೆಯ ಕುರಿತಾದ ಸಂದೇಶವನ್ನು ಸಹಜವಾಗಿ ಸೂಚಿಸುತ್ತದೆ.
- ಅನೇಕ ಆಂಗ್ಲ ಸತ್ಯವೇದಗಳಲ್ಲಿ "ಶುಭವಾರ್ತೆ" ಎನ್ನುವ ಪದವು ಸಹಜವಾಗಿ "ಸುವಾರ್ತೆ" ಎಂದು ಅನುವಾದ ಮಾಡಿದ್ದಾರೆ, ಮತ್ತು "ಯೇಸು ಕ್ರಿಸ್ತನ ಸುವಾರ್ತೆ" "ದೇವರ ಸುವಾರ್ತೆ" ಅಥವಾ "ರಾಜ್ಯ ಸುವಾರ್ತೆ" ಎಂದೆನ್ನುವ ಮಾತುಗಳನ್ನು ಉಪಯೋಗಿಸಿದ್ದಾರೆ.

ಅನುವಾದ ಸಲಹೆಗಳು:

ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ, "ಶುಭ ಸಂದೇಶ" ಅಥವಾ "ಶುಭ ಪ್ರಕಟನೆ" ಅಥವಾ "ದೇವರ ರಕ್ಷಣೆಯ ಸಂದೇಶ" ಅಥವಾ "ಯೇಸುವಿನ ಕುರಿತಾಗಿ ದೇವರ ಬೋಧನೆಗಳು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.

- ಸಂದರ್ಭಾನುಸಾರವಾಗಿ "ಶುಭವಾರ್ತೆ" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ, "ಇನ್ನೊಂದರ ಕುರಿತಾಗಿ ಶುಭವಾರ್ತೆ/ ಸಂದೇಶ" ಅಥವಾ "ಇನ್ನೊಬ್ಬರಿಂದ ಶುಭ ಸಂದೇಶ" ಅಥವಾ "ಇನ್ನೊಂದರ ಕುರಿತಾಗಿ ದೇವರು ಹೇಳುವ ಒಳ್ಳೇಯ ವಿಷಯಗಳು" ಅಥವಾ "ದೇವರು ತನ್ನ ಜನರನ್ನು ಹೇಗೆ ರಕ್ಷಿಸುತ್ತಾರೆಂಬುದನ್ನು ದೇವರು ಹೇಳುವುದು" ಎನ್ನುವ ಮಾತುಗಳು ಸೇರಿಸಿ ಉಪಯೋಗಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ರಾಜ್ಯ, ಬಲಿ, ರಕ್ಷಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಥೆಸ್ಸ.01:05
- ಅಪೊ.ಕೃತ್ಯ.08:25
- ಕೊಲೊಸ್ಸೆ.01:23
- ಗಲಾತ್ಯ.01:06
- ಲೂಕ.08:1-3
- ಮಾರ್ಕ.01:14
- ಫಿಲಿಪ್ಪ.02:22
- ರೋಮಾ.01:03

ಸತ್ಯವೇದದಿಂದ ಉದಾಹರಣೆಗಳು:

- **23:06** "ಹೆದರಬೇಡಿರಿ, ಯಾಕಂದರೆ ನಾನು ನಿಮಗೆ ಹೇಳುವುದಕ್ಕೆ _ ಶುಭವಾರ್ತೆ_ ನನ್ನ ಬಳಿ ಇದೆ. ಬೋಧಕನಾಗಿರುವ ಮೆಸ್ಸೀಯ ಬೆತ್ಲೆಹೇಮಿನಲ್ಲಿ ಹುಟ್ಟಿದ್ದಾನೆ" ಎಂದು ದೂತ ಹೇಳಿತು.
- **26:03** "ದೇವರು ತನ್ನ ಆತ್ಮವನ್ನು ನನಗೆ ಕೊಟ್ಟಿದ್ದಾನೆ, ಆದ್ದರಿಂದ ನಾನು ಬಡವರಿಗೆ _ ಶುಭವಾರ್ತೆಯನ್ನು _ ಸಾರುವುದಕ್ಕೆ, ಸೆರೆಯಲ್ಲಿರುವವರನ್ನು ಬಿಡುಗಡೆ ಮಾಡುವುದಕ್ಕೆ, ಕುರುಡರಿಗೆ ಕಣ್ಣು ಕೊಡುವುದಕ್ಕೆ, ಹಿಂಸಿಸಲ್ಪಟ್ಟವರನ್ನು ಬಿಡಿಸುವುದಕ್ಕೆ ಆತನು ನನ್ನನ್ನು ಕಳುಹಿಸಿದನು. ಇದು ಕರ್ತನು ನೇಮಿಸಿರುವ ಶುಭ ವರ್ಷ"
- **45:10** ಯೇಸುವಿನ _ ಸುವಾರ್ತೆಯನ್ನು _ ಅವನಿಗೆ ಹೇಳಲು ಫಿಲಿಪ್ಪನು ಕೂಡ ಇತರ ವಾಕ್ಯಭಾಗವನ್ನು ಉಪಯೋಗಿಸಿಕೊಂಡನು.
- **46:10** ಅನೇಕ ಸ್ಥಳಗಳಲ್ಲಿ _ ಯೇಸುವಿನ ಕುರಿತಾದ ಸುವಾರ್ತೆಯನ್ನು ಪ್ರಕಟಿಸುವುದಕ್ಕೆ _ ಅವರು ಅವರನ್ನು ಕಳುಹಿಸಿದರು.
- **47:01** ಒಂದು ದಿನ ಪೌಲನು ಮತ್ತು ತನ್ನ ಸ್ನೇಹಿತನಾದ ಸೀಲನು _ ಯೇಸುವಿನ ಕುರಿತಾದ ಸುವಾರ್ತೆಯನ್ನು _ ಸಾರಲು ಫಿಲಿಪ್ಪಿ ಪಟ್ಟಣಕ್ಕೆ ಹೋದರು.
- **47:13** ಯೇಸುವಿನ ಕುರಿತಾದ ಸುವಾರ್ತೆಯು ವಿಸ್ತರಣೆಯಾಗುತ್ತಾ ಇತ್ತು, ಮತ್ತು ಸಭೆಯು ಬೆಳೆಯುತ್ತಾ ಇತ್ತು.
- **50:01** ಸುಮಾರು 2,000 ವರ್ಷಗಳಿಂದ, ಪ್ರಪಂಚದಾದ್ಯಂತ ಇರುವ ಅನೇಕ ಕೋಟ್ಯಾಂತ ಜನರು ಮೆಸ್ಸೀಯನಾದ _ ಯೇಸುವಿನ ಕುರಿತಾದ ಸುವಾರ್ತೆಯನ್ನು _ ಕೇಳುತ್ತಾ ಇದ್ದಾರೆ.
- **50:02** ಯೇಸು ಈ ಭೂಮಿಯ ಮೇಲೆ ಜೀವಿಸುತ್ತಿರುವಾಗ, "ಪ್ರಪಂಚದಲ್ಲಿರುವ ಪ್ರತಿಯೊಂದು ಸ್ಥಳಗಳಲ್ಲಿರುವ ಜನರಿಗೆ ದೇವರ ರಾಜ್ಯದ ಕುರಿತಾದ _ ಸುವಾರ್ತೆಯನ್ನು _ ನನ್ನ ಶಿಷ್ಯರು ಪ್ರಕಟಿಸುವರು, ಇದಾದನಂತರ ಅಂತ್ಯ ಬರುತ್ತದೆ" ಎಂದು ಹೇಳಿದನು.
- **50:03** ಆತನು ಪರಲೋಕಕ್ಕೆ ಹೋಗುವುದಕ್ಕೆ ಮುಂಚಿತವಾಗಿ, ಸುವಾರ್ತೆಯನ್ನು ಕೇಳದ ಜನರಿಗೆಲ್ಲರಿಗೆ _ ಸುವಾರ್ತೆಯನ್ನು _ ಸಾರಲು ಯೇಸು ಕ್ರೈಸ್ತರಿಗೆ ಹೇಳಿದನು.

ಪದ ಡೇಟಾ:

- Strong's: G2097, G2098, G4283

ಶೇಷ

ಪದದ ಅರ್ಥವಿವರಣೆ:

“ಶೇಷ” ಎನ್ನುವ ಪದವು ಅಕ್ಷರಾರ್ಥವಾಗಿ ಒಂದು ದೊಡ್ಡ ಗುಂಪಿನಿಂದ “ಉಳಿದಿರುವ” ಅಥವಾ “ಉಳಿದ” ವಸ್ತುಗಳನ್ನು ಅಥವಾ ಜನರನ್ನು ಸೂಚಿಸುತ್ತದೆ.

- ಅನೇಕಬಾರಿ “ಶೇಷ” ಎನ್ನುವುದು ಜೀವನ ಅಪಾಯಕರವಾದ ಪರಿಸ್ಥಿತಿಯಲ್ಲಿ ಹಾದು ಹೋಗುತ್ತಿರುವ ಜನರನ್ನು ಅಥವಾ ಹಿಂಸೆಗಳಲ್ಲಿ ಹಾದು ಹೋಗುತ್ತಿದ್ದರೂ ದೇವರಿಗೆ ನಂಬಿಗಸ್ತರಾಗಿರುವ ಜನರನ್ನು ಸೂಚಿಸುತ್ತದೆ.
- ಹೊರಗಿನವ್ಯಂದ ದಾಳಿಗೆ ಗುರಿ ಮಾಡಲ್ಪಟ್ಟಿರುವ ಉಳಿದ ಜನರಾಗಿ ಯೆಹೂದ್ಯ ಗುಂಪನ್ನು ಯೆಶಯಾ ಸೂಚಿಸಿದ್ದಾನೆ ಮತ್ತು ಕಾನಾನಿನಲ್ಲಿ ವಾಗ್ದಾನ ಭೂಮಿಯಲ್ಲಿ ಜೀವಿಸುವುದಕ್ಕೆ ಹಿಂದುರಿಗಿ ಹೋದ ಜನರನ್ನು ಸೂಚಿಸಿದ್ದಾನೆ.
- ದೇವರ ಕೃಪೆಯನ್ನು ಪಡೆದುಕೊಳ್ಳುವುದಕ್ಕೆ ದೇವರಿಂದ ಆದುಕೊಂಡ ಜನರಾಗಿರುವ “ಶೇಷ” ಜನರ ಕುರಿತಾಗಿ ಪೌಲನು ಮಾತನಾಡುತ್ತಿದ್ದಾನೆ.
- “ಶೇಷ” ಎನ್ನುವ ಪದವು ನಂಬಿಗಸ್ತರಾಗಿರದ ಅಥವಾ ಜೀವಿಸುವುದಕ್ಕಾಗಿರದ ಅಥವಾ ಆಯ್ಕೆ ಮಾಡಿಕೊಂಡಿರದ ಇತರ ಜನರಿಗೂ ಇದು ಅನ್ವಯವಾಗುತ್ತದೆ.

ಅನುವಾದ ಸಲಹೆಗಳು:

- “ಈ ಜನರ ಶೇಷವು” ಎನ್ನುವ ಈ ಮಾತನ್ನು “ಈ ಜನರಲ್ಲಿ ಉಳಿದವರು” ಅಥವಾ “ನಂಬಿಗಸ್ತರಾಗಿಯೇ ಇರುವ ಜನರು” ಅಥವಾ “ಬಿಡಲ್ಪಟ್ಟಿರುವ ಜನರು” ಎಂದೂ ಅನುವಾದ ಮಾಡಬಹುದು.
- “ಶೇಷ ಜನರೆಲ್ಲರು” ಎನ್ನುವ ಮಾತನ್ನು “ಉಳಿದ ಎಲ್ಲಾ ಜನರು” ಅಥವಾ “ಶೇಷ ಜನರು” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.15:15-18
- ಆಮೋಸ.09:11-12
- ಯೆಹೆ.06:8-10
- ಆದಿ.45:7-8
- ಯೆಶಯಾ.11:10-11
- ಮೀಕ.04:6-8

ಪದ ಡೇಟಾ:

- Strong's: H3498, H3499, H5629, H6413, H7604, H7605, H7611, H8281, H8300, G2640, G3005, G3062

ಶೋಧಿಸು, ಶೋಧನೆ

ಪದದ ಅರ್ಥವಿವರಣೆ:

ಯಾರಾದರೊಬ್ಬರನ್ನು ಶೋಧಿಸು ಎನ್ನುವ ಮಾತಿಗೆ ಆ ವ್ಯಕ್ತಿ ಯಾವುದಾದರೊಂದು ತಪ್ಪು ಮಾಡುವಂತೆ ಪ್ರೇರೇಪಿಸು ಎಂದರ್ಥ.

- ಶೋಧನೆ ಎಂದರೆ ಒಬ್ಬ ವ್ಯಕ್ತಿ ಯಾವುದಾದರೊಂದು ತಪ್ಪನ್ನು ಮಾಡುವಂತೆ ಬಯಸಲು ಕಾರಣವಾಗುವ ಯಾವುದೇ ವಿಷಯವನ್ನು ಸೂಚಿಸುತ್ತದೆ.
- ಜನರು ತಮ್ಮ ಸ್ವಂತ ಪಾಪ ಸ್ವಭಾವದಿಂದ ಮತ್ತು ಇತರ ಜನರಿಂದ ಶೋಧಿಸಲ್ಪಡುತ್ತಾರೆ.
- ದೇವರಿಗೆ ಅವಿಧೇಯತೆ ತೋರಿಸುವಂತೆ ಮತ್ತು ಕೆಟ್ಟ ಕಾರ್ಯಗಳನ್ನು ಮಾಡುವುದರ ಮೂಲಕ ದೇವರಿಗೆ ವಿರುದ್ಧವಾಗಿ ಪಾಪ ಮಾಡುವಂತೆ ದೇವರು ಜನರನ್ನು ಶೋಧಿಸುತ್ತಾರೆ.
- ಸೈತಾನನು ಯೇಸುವನ್ನು ಶೋಧಿಸಿದನು ಮತ್ತು ಕೆಟ್ಟ ಕಾರ್ಯವನ್ನು ಮಾಡುವಂತೆ ಆತನನ್ನು ಪ್ರೇರೇಪಿಸಲು ಯತ್ನಿಸಿದನು, ಆದರೆ ಯೇಸು ಸೈತಾನಿನ ಎಲ್ಲಾ ಶೋಧನೆಗಳನ್ನು ಜಯಿಸಿದನು ಮತ್ತು ಯಾವ ಪಾಪವು ಮಾಡಲಿಲ್ಲ.
- "ದೇವರನ್ನು ಶೋಧಿಸುವ" ಒಬ್ಬ ವ್ಯಕ್ತಿ ಆತನು ಯಾವುದಾದರೊಂದು ತಪ್ಪು ಮಾಡುವುದಕ್ಕೆ ಪ್ರಯತ್ನಿಸುತ್ತಿಲ್ಲ, ಆದರೆ ಇದಕ್ಕೆ ಬದಲಾಗಿ, ದೇವರು ತನ್ನನ್ನು ಶಿಕ್ಷಿಸಬೇಕೆನ್ನುವ ಆಲೋಚನೆಯಿಂದ ದೇವರಿಗೆ ಅವಿಧೇಯತೆ ತೋರಿಸುವುದರಲ್ಲಿ ಮೊಂಡುತನ ಮುಂದುವರಿಯುತ್ತಿದ್ದಾನೆಂದರ್ಥ. ಇದನ್ನೇ "ದೇವರನ್ನು ಪರೀಕ್ಷಿಸುವುದು" ಎಂದೂ ಕರೆಯುತ್ತಾರೆ.

ಅನುವಾದ ಸಲಹೆಗಳು:

- "ಶೋಧಿಸು" ಎನ್ನುವ ಪದವನ್ನು "ಪಾಪ ಮಾಡುವುದಕ್ಕೆ ಯತ್ನಿಸು" ಅಥವಾ "ಪ್ರಲೋಭೆಗೊಳಿಸು" ಅಥವಾ "ಪಾಪ ಮಾಡುವುದಕ್ಕೆ ಆಶೆಯನ್ನು ಹುಟ್ಟಿಸು" ಎಂದೂ ಅನುವಾದ ಮಾಡಬಹುದು.
- "ಶೋಧನೆಗಳು" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಶೋಧಿಸುವ ವಿಷಯಗಳು" ಅಥವಾ "ಯಾರಾದರೊಬ್ಬರು ಪಾಪ ಮಾಡಲು ಪ್ರಲೋಭೆಗೊಳಿಸುವ ವಿಷಯಗಳು" ಅಥವಾ "ಯಾವುದಾದರೊಂದು ತಪ್ಪು ಮಾಡುವುದಕ್ಕೆ ಆಶೆಯನ್ನು ಹುಟ್ಟಿಸುವ ವಿಷಯಗಳು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ದೇವರನ್ನು ಶೋಧಿಸು" ಎನ್ನುವ ಮಾತನ್ನು "ಪರೀಕ್ಷೆ ಮಾಡುವುದಕ್ಕೆ ದೇವರನ್ನು ನಿಲ್ಲಿಸು" ಅಥವಾ "ದೇವರನ್ನು ಪರೀಕ್ಷಿಸು" ಅಥವಾ "ದೇವರ ಸಹನೆಯನ್ನು ಶೋಧಿಸು" ಅಥವಾ "ದೇವರು ಶಿಕ್ಷಿಸುವಂತೆ ಮಾಡು" ಅಥವಾ "ಮೊಂಡುತನದಿಂದ ದೇವರಿಗೆ ಅವಿಧೇಯತೆ ತೋರಿಸುವುದರಲ್ಲಿ ಮುಂದೆವರಿ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅವಿಧೇಯತೆ, ಸೈತಾನ, ಪಾಪ, ಪರೀಕ್ಷಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.03:4-5
- ಇಬ್ರಿ.04:14-16
- ಯಾಕೋಬ.01:12-13
- ಲೂಕ.04:1-2
- ಲೂಕ.11:3-4
- ಮತ್ತಾಯ.26:39-41

ಸತ್ಯವೇದದಿಂದ ಉದಾಹರಣೆಗಳು:

- **25:01** ಸೈತಾನನು ಯೇಸುವಿನ ಬಳಿಗೆ ಬಂದನು ಮತ್ತು ಪಾಪ ಮಾಡುವಂತೆ ಆತನನ್ನು _ **ಶೋಧಿಸಿದನು** _.
- **25:08** ಸೈತಾನಿನ _ **ಶೋಧನೆಗಳಿಗೆ** _ ಯೇಸುವು ಒಳಗಾಗಲಿಲ್ಲ, ಅದಕ್ಕಾಗಿ ಸೈತಾನನು ಆತನಿಂದ ಪಾರಾದನು.
- **38:11** ನೀವು _ **ಶೋಧನೆಯೊಳಗೆ** _ ಪ್ರವೇಶಿಸದಂತೆ ಪ್ರಾರ್ಥನೆ ಮಾಡಿಕೊಳ್ಳಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು.

ಪದ ಡೇಟಾ:

- Strong's: H974, H4531, H5254, G551, G1598, G3985, G3986, G3987

ಸಂತರು

ಪದದ ಅರ್ಥವಿವರಣೆ:

“ಸಂತರು” ಎನ್ನುವ ಪದಕ್ಕೆ ಅಕ್ಷರಾರ್ಥವು “ಪವಿತ್ರರು” ಎಂದರ್ಥ, ಈ ಪದವು ಯೇಸುವಿನಲ್ಲಿ ನಂಬಿಕೆಯಿಟ್ಟ ವಿಶ್ವಾಸಿಗಳನ್ನು ಸೂಚಿಸುತ್ತದೆ.

- ಸ್ವಲ್ಪಕಾಲವಾದನಂತರ ಸಭೆಯ ಚರಿತ್ರೆಯಲ್ಲಿ, ಒಬ್ಬ ವ್ಯಕ್ತಿ ತಾನು ಮಾಡಿದ ಒಳ್ಳೇಯ ಕಾರ್ಯಗಳನ್ನು ನೋಡಿ, ಆ ವ್ಯಕ್ತಿಗೆ “ಸಂತ” ಎನ್ನುವ ಬಿರುದನ್ನು ಕೊಡಲ್ಪಟ್ಟಿದೆ.
- ಯೇಸುವಿನ ವಿಶ್ವಾಸಿಗಳು ಅವರು ಮಾಡಿದ ಒಳ್ಳೇಯ ಕಾರ್ಯಗಳಿಂದ ಸಂತರು ಅಥವಾ ಪವಿತ್ರರು ಆಗಿರುವುದಿಲ್ಲ, ಆದರೆ ಯೇಸುವಿನ ರಕ್ಷಣೆಯ ಕಾರ್ಯದಲ್ಲಿ ತಮ್ಮ ವಿಶ್ವಾಸವನ್ನು ಇಡುವುದರ ಮೂಲಕ ಆಗಿರುತ್ತಾರೆ. ಈತನು ಅವರನ್ನು ಪರಿಶುದ್ಧರನ್ನಾಗಿ ಮಾಡುವ ಏಕೈಕ ವ್ಯಕ್ತಿಯಾಗಿರುತ್ತಾನೆ.

ಅನುವಾದ ಸಲಹೆಗಳು:

- “ಸಂತರು” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಪವಿತ್ರರು” ಅಥವಾ “ಪವಿತ್ರವಾದ ಜನರು” ಅಥವಾ “ಯೇಸುವಿನಲ್ಲಿ ನಂಬಿಕೆ ಇಟ್ಟಿರುವ ಪರಿಶುದ್ಧ ವಿಶ್ವಾಸಿಗಳು” ಅಥವಾ “ಪ್ರತ್ಯೇಕಿಸಲ್ಪಟ್ಟವರು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಈ ಮಾತು ಕೇವಲ ಒಂದು ಕ್ರೈಸ್ತ ಗುಂಪಿನ ಜನರನ್ನು ಮಾತ್ರ ಸೂಚಿಸದಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಪರಿಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ತಿಮೊಥೆ.05:10
- 2 ಕೊರಿಂಥ.09:12-15
- ಪ್ರಕ.16:6
- ಪ್ರಕ.20:9-10

ಪದ ಡೇಟಾ:

- Strong's: H2623, H6918, H6922, G40

ಸಂಧಾನ, ಸಂಧಾನ ಮಾಡುವುದು, ಸಂಧಾನ ಮಾಡಲ್ಪಟ್ಟಿದೆ

ಪದದ ಅರ್ಥವಿವರಣೆ:

“ಸಂಧಾನ” ಮಾಡುವುದು ಮತ್ತು “ಸಂಧಾನ” ಎನ್ನುವ ಪದಗಳು ಒಬ್ಬರಿಗೊಬ್ಬರು ಶತ್ರುಗಳಾಗಿರುವ ಜನರ ಮಧ್ಯದಲ್ಲಿ “ಸಮಾಧಾನವನ್ನುಂಟು ಮಾಡು” ಎನ್ನುವದನ್ನು ಸೂಚಿಸುತ್ತದೆ. “ಸಂಧಾನ” ಎನ್ನುವುದು ಸಮಾಧಾನವನ್ನುಂಟು ಮಾಡುವ ಕ್ರಿಯೆಯಾಗಿರುತ್ತದೆ.

- ಸತ್ಯವೇದದಲ್ಲಿ ಈ ಪದವು ಸಾಧಾರಣವಾಗಿ ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಯಜ್ಞದ ಬಲಿಯನ್ನಾಗಿ ಮಾಡುವದರಿಂದ ತನ್ನನ್ನು ತಾನು ಜನರೊಂದಿಗೆ ಸಮಾಧಾನ ಮಾಡಿಕೊಂಡಿದ್ದಾರೆ.
- ಪಾಪ ಮಾಡಿದ ಕಾರಣದಿಂದ, ಮನುಷ್ಯರೆಲ್ಲರೂ ದೇವರ ಶತ್ರುಗಳಾಗಿರುತ್ತಾರೆ. ಆದರೆ ಆತನ ಕರುಣೆ ಪ್ರೀತಿಗಳಿಂದ, ದೇವರು ಯೇಸುವಿನ ಮೂಲಕ ತನ್ನೊಂದಿಗೆ ಸಮಾಧಾನ ಮಾಡಿಕೊಳ್ಳುವುದಕ್ಕೆ ಜನರಿಗೆ ಒಂದು ಮಾರ್ಗವನ್ನು ಉಂಟು ಮಾಡಿದ್ದಾನೆ.
- ಜನರು ತಮ್ಮ ಪಾಪಗಳಿಗಾಗಿ ಕ್ರಯಧನವನ್ನಾಗಿ ಮಾಡಿದ ಯೇಸುವಿನ ಯಜ್ಞದಲ್ಲಿ ಭರವಸೆವಿಡುವುದರ ಮೂಲಕ, ಜನರು ಕ್ಷಮೆಯನ್ನು ಹೊಂದುವರು ಮತ್ತು ದೇವರೊಂದಿಗೆ ಸಮಾಧಾನವನ್ನು ಪಡೆದುಕೊಳ್ಳುವರು.

ಅನುವಾದ ಸಲಹೆಗಳು:

- “ಸಂಧಾನ ಮಾಡು” ಎನ್ನುವ ಮಾತನ್ನು “ಸಮಾಧಾನವನ್ನುಂಟು ಮಾಡು” ಅಥವಾ “ಒಳ್ಳೇಯ ಸಂಬಂಧಗಳನ್ನು ಪುನಃ ಸ್ಥಾಪಿಸು” ಅಥವಾ “ಸ್ನೇಹಿತರಾಗುವಂತೆ ಮಾಡು” ಎಂದೂ ಅನುವಾದ ಮಾಡಬಹುದು.
- “ಸಂಧಾನ” ಎನ್ನುವ ಪದವನ್ನು “ಒಳ್ಳೇಯ ಸಂಬಂಧಗಳನ್ನು ಪುನಃ ಸ್ಥಾಪನೆ ಮಾಡುವುದು” ಅಥವಾ “ಸಮಾಧಾನವನ್ನುಂಟು ಮಾಡುವುದು” ಅಥವಾ ‘ಸಮಾಧಾನಕರವಾದ ಸಂಬಂಧಗಳನ್ನುಂಟು ಮಾಡುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸಮಾಧಾನ, ಸರ್ವಾಂಗ ಹೋಮ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಕೊರಿಂಥ.05:19
- ಕೊಲೊಸ್ಸ.01:18-20
- ಮತ್ತಾಯ.05:24
- ಜ್ಞಾನೋ.13:17-18
- ರೋಮಾ.05:10

ಪದ ಡೇಟಾ:

- Strong's: H2398 , H3722 , G604 , G1259 , G2433 , G2643, G2644

ಸದ್ದುಕಾಯ, ಸದ್ದುಕಾಯರು

ಪದದ ಅರ್ಥವಿವರಣೆ:

ಸದ್ದುಕಾಯರು ಯೇಸು ಕ್ರಿಸ್ತನ ಕಾಲದಲ್ಲಿ ಯೆಹೂದ್ಯ ಯಾಜಕರ ರಾಜಕೀಯ ಗುಂಪಾಗಿತ್ತು. ಅವರು ರೋಮಾ ಪಾಲನೆಯನ್ನು ಬೆಂಬಲಿಸುತ್ತಿದ್ದರು ಮತ್ತು ಪುನರುತ್ಥಾನದಲ್ಲಿ ನಂಬಿಕೆಯಿಟ್ಟಿದ್ದಿಲ್ಲ.

- ಅನೇಕಮಂದಿ ಸದ್ದುಕಾಯರು ಶ್ರೀಮಂತರಾಗಿದ್ದರು, ಉನ್ನತ ತರಗತಿಯ ಯೆಹೂದ್ಯರೂ ಆಗಿದ್ದರು, ಇವರೇ ಪ್ರಧಾನ ಯಾಜಕ ಮತ್ತು ಮಹಾ ಯಾಜಕ ಎನ್ನುವ ಶಕ್ತಿಯುತವಾದ ನಾಯಕತ್ವ ಸ್ಥಾನಗಳನ್ನು ನಡೆಸುತ್ತಿದ್ದರು.
- ದೇವಾಲಯ ಸಂಕೀರ್ಣವನ್ನು ನೋಡಿಕೊಳ್ಳುವುದು ಮತ್ತು ಅರ್ಪಣೆಯ ಹೋಮಗಳನ್ನು ಅರ್ಪಿಸುವ ಯಾಜಕ ಕರ್ತವ್ಯಗಳನ್ನು ಸದ್ದುಕಾಯರ ವಹಿಸುತ್ತಿದ್ದರು.
- ಸದ್ದುಕಾಯರು ಮತ್ತು ಫರಿಸಾಯರು ಯೇಸುವನ್ನು ಶಿಲುಬೆಗೆ ಏರಿಸುವುದಕ್ಕೆ ರೋಮಾ ನಾಯಕರನ್ನು ಬಲವಾಗಿ ಪ್ರಭಾವಗೊಳಿಸಿದ್ದರು.
- ಯೇಸುವು ಎರಡು ಧಾರ್ಮಿಕ ಗುಂಪುಗಳಿಗೆ ವಿರುದ್ಧವಾಗಿ ಮಾತನಾಡಿದ್ದರು, ಯಾಕಂದರೆ ಅವರಲ್ಲಿ ಸ್ವಾರ್ಥವು ಮತ್ತು ವೇಷಧಾರಣೆಯೂ ಇತ್ತು.

(ಈ ಪದಗಳನ್ನು ಸಹ ನೋಡಿರಿ : ಪ್ರಧಾನ ಯಾಜಕರು, ಕೌನ್ಸಿಲ್, ಮಹಾ ಯಾಜಕ, ವೇಷಧಾರಿ, ಯೆಹೂದ್ಯ ನಾಯಕರು, ಫರಿಸಾಯ, ಯಾಜಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:1-4
- ಅಪೊ.ಕೃತ್ಯ.05:17-18
- ಲೂಕ.20:27-28
- ಮತ್ತಾಯ.03:7-9
- ಮತ್ತಾಯ.16:1-2

ಪದ ಡೇಟಾ:

- Strong's: G4523

ಸಬ್ಬತ್

ಪದದ ಅರ್ಥವಿವರಣೆ:

“ಸಬ್ಬತ್” ಎನ್ನುವ ಪದವು ವಾರದ ಏಳನೇಯ ದಿನವನ್ನು ಸೂಚಿಸುತ್ತದೆ, ಈ ದಿನದಂದು ಯಾವ ಕೆಲಸವನ್ನು ಮಾಡದೇ ವಿಶ್ರಾಂತಿ ತೆಗೆದುಕೊಂಡಿರಲು ಪ್ರತ್ಯೇಕಿಸಬೇಕೆಂದು ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದರು.

- ದೇವರು ಈ ಸರ್ವ ಸೃಷ್ಟಿಯನ್ನು ಆರು ದಿನಗಳಲ್ಲಿ ಮಾಡಿ ಮುಗಿಸಿದನಂತರ, ಆತನು ಏಳನೇಯ ದಿನದಂದು ವಿಶ್ರಾಂತಿ ತೆಗೆದುಕೊಂಡನು. ಈ ರೀತಿಯಲ್ಲಿಯೇ, ಆತನನ್ನು ಆರಾಧನೆ ಮಾಡುವುದಕ್ಕೆ ಮತ್ತು ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ ವಿಶೇಷ ದಿನವನ್ನಾಗಿ ಏಳನೇ ದಿನವನ್ನು ಪ್ರತ್ಯೇಕಿಸಬೇಕೆಂದು ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದರು.
- “ಸಬ್ಬತ್ ದಿನವನ್ನು ಪರಿಶುದ್ಧವೆಂದು ಎಣಿಸಿ ” ಆಜ್ಞೆಯು ಹತ್ತು ಆಜ್ಞೆಗಳಲ್ಲಿ ಒಂದಾಗಿರುತ್ತದೆ, ದೇವರು ಇಸ್ರಾಯೇಲ್ಯರಿಗಾಗಿ ಮೋಶೆ ಕೊಟ್ಟಿರುವ ಶಿಲಾಶಾಸನಗಳ ಮೇಲೆ ದೇವರು ಬರೆದಿರುವ ಆಜ್ಞೆಯಾಗಿತ್ತು.
- ದಿನಗಳು ಎಣಿಸುವ ಯೆಹೂದ್ಯರ ವಿಧಾನದ ಪ್ರಕಾರ, ಸಬ್ಬತ್ ದಿನವು ಶುಕ್ರವಾರ ಸಾಯಂಕಾಲ ಆರಂಭವಾಗಿ ಶನಿವಾರ ಸಾಯಂಕಾಲದವರೆಗೆ ಇರುತ್ತದೆ.
- ಸತ್ಯವೇದದಲ್ಲಿ ಕೆಲವೊಂದುಬಾರಿ ಸಬ್ಬತ್ ಎನ್ನುವುದನ್ನು ಕೇವಲ ಸಬ್ಬತ್ ಎಂದು ಕರೆಯಲ್ಪಡದೆ “ಸಬ್ಬತ್ ದಿನ” ಎಂದು ಕರೆಯಲ್ಪಟ್ಟಿದೆ.

ಅನುವಾದ ಸಲಹೆಗಳು:

- ಈ ಪದವನ್ನು ‘ವಿಶ್ರಾಂತಿ ದಿನ” ಅಥವಾ “ವಿಶ್ರಾಂತಿಗಾಗಿ ನೇಮಿಸಿದ ದಿನ” ಅಥವಾ “ಕೆಲಸ ಮಾಡದ ದಿನ” ಅಥವಾ “ವಿಶ್ರಾಂತಿ ತೆಗೆದುಕೊಳ್ಳುವ ದೇವರ ದಿನ” ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಅನುವಾದಗಳಲ್ಲಿ ಈ ಪದದ ಮೊದಲನೇ ಅಕ್ಷರವನ್ನು ದೊಡ್ಡದಾಗಿ ಮಾಡಿ ತೋರಿಸುತ್ತಾರೆ, ಉದಾಹರಣೆಗೆ, “ಸಬ್ಬತ್ ದಿನ” ಅಥವಾ “ವಿಶ್ರಾಂತಿ ದಿನ”.
- ಸ್ಥಳೀಯ ಅಥವಾ ಜಾತೀಯ ಭಾಷೆಯಲ್ಲಿ ಈ ಪದವನ್ನು ಹೇಗೆ ಅನುವಾದ ಮಾಡಿದ್ದಾರೆಂದು ಗಮನಿಸಿರಿ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ವಿಶ್ರಾಂತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.31:2-3
- ಅಪೊ.ಕೃತ್ಯ.13:26-27
- ವಿಮೋ.31:12-15
- ಯೆಶಯಾ.56:6-7
- ಪ್ರಲಾಪ.02:5-6
- ಯಾಜಕ.19:1-4
- ಲೂಕ.13:12-14
- ಮಾರ್ಕ.02:27-28
- ಮತ್ತಾಯ.12:1-2
- ನೆಹೆ.10:32-33

ಸತ್ಯವೇದದಿಂದ ಉದಾಹರಣೆಗಳು:

- **13:05** “_ ಸಬ್ಬತ್ ದಿನವನ್ನು _ ಪರಿಶುದ್ಧ ದಿನವನ್ನಾಗಿ ನೋಡಿಕೊಳ್ಳುವುದರಲ್ಲಿ ನಿಶ್ಚಯ ಮಾಡಿಕೊಳ್ಳಿರಿ. ಆರು ದಿನಗಳು ನಿಮ್ಮ ಎಲ್ಲಾ ಕೆಲಸಗಳನ್ನು ಮಾಡಿರಿ, ಏಳನೇ ದಿನವು ನನ್ನನ್ನು ಘನ ಪಡಿಸುವುದಕ್ಕೆ ಮತ್ತು ನೀವು ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ ಪ್ರತ್ಯೇಕಿಸಿರಿ.
- **26:02** ಯೇಸು ನಿವಾಸ ಮಾಡಿರುವ ಸ್ಥಳವು ಮತ್ತು ತನ್ನ ಬಾಲ್ಯ ದಿನಗಳು ಎಲ್ಲವು ಕಳೆದ ನಜರೇತಿಗೆ ಹೋದನು. _ ಸಬ್ಬತ್ ದಿನದಂದು _ ಆತನು ಆರಾಧನೆ ಮಾಡುವ ಸ್ಥಳಕ್ಕೆ ಹೋದನು.
- **41:03** ಯೇಸುವನ್ನು ಮಡಿದ ದಿನದ ಆ ಮರುದಿನವು _ ಸಬ್ಬತ್ ದಿನವಾಗಿದ್ದಿತ್ತು _, ಮತ್ತು ಆ ದಿನದಂದು ಸಮಾಧಿಯ ಬಳಿಗೆ ಹೋಗುವುದಕ್ಕೆ ಯೆಹೂದ್ಯರಿಗೆ ಅನುಮತಿಯಿದ್ದಿಲ್ಲ.

ಪದ ಡೇಟಾ:

- Strong's: H4868, H7676, H7677, G4315, G4521

ಸಭಾಪಾಲಕ

ಪದದ ಅರ್ಥವಿವರಣೆ:

“ಸಭಾಪಾಲಕ” ಎನ್ನುವ ಪದವು ಅಕ್ಷರಾರ್ಥವಾಗಿ “ಕುರುಬ” ಎನ್ನುವ ಪದಕ್ಕೆ ಸಮಾನವಾಗಿರುತ್ತದೆ. ಈ ಪದವನ್ನು ವಿಶ್ವಾಸಿಗಳ ಗುಂಪಿಗೆ ಆತ್ಮೀಯ ನಾಯಕನಾಗಿರುವ ಒಬ್ಬ ವ್ಯಕ್ತಿಗೆ ಕೊಡಲ್ಪಟ್ಟ ಬಿರುದಾಗಿ ಉಪಯೋಗಿಸಲಾಗಿರುತ್ತದೆ.

- ಆಂಗ್ಲ ಬೈಬಲ್ ಅನುವಾದಗಳಲ್ಲಿ “ಪಾಸ್ಟರ್” ಅಥವಾ “ಸಭಾಪಾಲಕ” ಎನ್ನುವ ಪದವು ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ ಕೇವಲ ಒಂದೇ ಒಂದು ವಚನದಲ್ಲಿ ಕಂಡುಬರುತ್ತದೆ. ಈ ಪದಕ್ಕೆ ಪರ್ಯಾಯ ಪದವಾಗಿರುವ “ಕುರುಬ” ಎನ್ನುವ ಪದವನ್ನು ಪ್ರತಿಯೊಂದು ಸ್ಥಳದಲ್ಲಿ ಉಪಯೋಗಿಸಲಾಗಿರುತ್ತದೆ.
- ಕೆಲವೊಂದು ಭಾಷೆಗಳಲ್ಲಿ “ಪಾಸ್ಟರ್” (ಸಭಾಪಾಲಕ) ಎನ್ನುವ ಪದಕ್ಕೆ “ಕುರುಬ” ಎನ್ನುವ ಪದವನ್ನು ಉಪಯೋಗಿಸಿರುತ್ತಾರೆ.
- ಇದೇ ಪದಕ್ಕೆ ಸಮಾಂತರ ಪದವಾಗಿರುವ “ಒಳ್ಳೇಯ ಕುರುಬ” ಎನ್ನುವ ಪದವನ್ನು ಯೇಸುವನ್ನು ಸೂಚಿಸುವುದಕ್ಕೆ ಉಪಯೋಗಿಸಿರುತ್ತಾರೆ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಭಾಷೆಯಲ್ಲಿ “ಕುರುಬ” ಎನ್ನುವ ಪದವನ್ನು ಉಪಯೋಗಿಸುವುದು ಉತ್ತಮ.
- ಈ ಪದವನ್ನು ಅನುವಾದ ಮಾಡುವ ಇತರ ವಿಧಾನಗಳಲ್ಲಿ “ಆತ್ಮೀಯ ಕುರುಬ” ಅಥವಾ “ಕಾಯುವ ಕ್ರೈಸ್ತ ನಾಯಕ” ಎನ್ನುವ ಪದಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಕುರುಬ, ಕುರಿಗಳು)

ಸತ್ಯವೇದದ ಅನುಬಂಧ ವಾಕ್ಯಗಳು:

- ಎಫೆಸ.04:11-13

ಪದ ಡೇಟಾ:

- Strong's: H7462, G4166

ಸಭಾಮಂದಿರ

ಪದದ ಅರ್ಥವಿವರಣೆ:

ಸಭಾಮಂದಿರ ಎನ್ನುವುದು ದೇವರನ್ನು ಆರಾಧಿಸುವುದಕ್ಕೆ ಯೆಹೂದ್ಯರೆಲ್ಲರು ಒಂದು ಸ್ಥಳದಲ್ಲಿ ಭೇಟಿಯಾಗುವ ಭವನವಾಗಿರುತ್ತದೆ.

- ಪುರಾತನ ಕಾಲಗಳಲ್ಲಿ, ಸಭಾಮಂದಿರ ಸೇವೆಗಳಲ್ಲಿ ಪ್ರಾರ್ಥನೆಯ ಕಾಲಗಳು, ಲೇಖನಗಳನ್ನು ಓದುವುದು, ಮತ್ತು ಲೇಖನಗಳ ಕುರಿತಾಗಿ ಬೋಧನೆಯನ್ನು ಒಳಗೊಂಡಿರುತ್ತದೆ.
- ಯೆಹೂದ್ಯರು ವಾಸ್ತವಿಕವಾಗಿ ಸಭಾಮಂದಿರಗಳನ್ನು ತಮ್ಮ ಸ್ವಂತ ಪಟ್ಟಣಗಳಲ್ಲಿ ದೇವರನ್ನು ಆರಾಧಿಸುವುದಕ್ಕೆ ಮತ್ತು ಪ್ರಾರ್ಥನೆ ಮಾಡುವುದಕ್ಕೆ ಉಪಯೋಗಿಸುವ ಸ್ಥಳಗಳಾಗಿ ಉಪಯೋಗಿಸುತ್ತಿದ್ದರು, ಯಾಕಂದರೆ ಅವರೆಲ್ಲರು ಅನೇಕರು ಯೆರೂಸಲೇಮಿನಲ್ಲಿರುವ ದೇವಾಲಯದಿಂದ ತುಂಬಾ ದೂರದಲ್ಲಿ ನಿವಾಸ ಮಾಡುತ್ತಿದ್ದರು.
- ಯೇಸು ಅನೇಕಬಾರಿ ಸಭಾಮಂದಿರಗಳಲ್ಲಿ ಬೋಧನೆ ಮಾಡಿದ್ದನು ಮತ್ತು ಅನೇಕ ಜನರನ್ನು ಆ ಸ್ಥಳಗಳಲಿಯೇ ಗುಣಪಡಿಸಿದ್ದನು.
- “ಸಭಾಮಂದಿರ” ಎನ್ನುವ ಪದವು ಅಲ್ಲಿ ಕೂಡುವ ಜನರ ಗುಂಪನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಗುಣಪಡಿಸು, ಯೆರೂಸಲೇಮ್, ಯೆಹೂದ್ಯ, ಪ್ರಾರ್ಥನೆ, ದೇವಾಲಯ, ದೇವರ ವಾಕ್ಯ, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.06:8-9
- ಅಪೊ.ಕೃತ್ಯ.14:1-2
- ಅಪೊ.ಕೃತ್ಯ.15:19-21
- ಅಪೊ.ಕೃತ್ಯ.24:10-13
- ಯೋಹಾನ.06:57-59
- ಲೂಕ.04:14-15
- ಮತ್ತಾಯ.06:1-2
- ಮತ್ತಾಯ.09:35-36
- ಮತ್ತಾಯ.13:54-56

ಪದ ಡೇಟಾ:

- Strong's: H4150, G656, G752, G4864

ಸಭಾಸೇವಕ, ಸಭಾಸೇವಕರು

ಪದದ ಅರ್ಥವಿವರಣೆ:

ಸಭಾಸೇವಕ ಎನ್ನುವವನು ಸ್ಥಳೀಯ ಸಭೆಯಲ್ಲಿ ಸೇವೆ ಮಾಡುವ ವ್ಯಕ್ತಿಯಾಗಿರುತ್ತಾನೆ, ಪ್ರಯೋಗಾತ್ಮಕವಾದ ಅಗತ್ಯತೆಗಳನ್ನು ನೋಡಿ ಅಂದರೆ ಆಹಾರ ಅಥವಾ ಧನ ಎನ್ನುವ ಅಗತ್ಯತೆಗಳಿರುವಾಗ ಸಹ ವಿಶ್ವಾಸಿಗಳಿಗೆ ಸಹಾಯ ಮಾಡುವವನಾಗಿರುತ್ತಾನೆ.

- "ಡೀಕನ್" ಎನ್ನುವ ಪದವನ್ನು ಗ್ರೀಕ್ ಪದದಿಂದ ನೇರವಾಗಿ ತೆಗೆದುಕೊಳ್ಳಲಾಗಿದೆ, ಇದಕ್ಕೆ "ಸೇವಕ" ಅಥವಾ "ಪರಿಚಾರಕನು" ಎಂದರ್ಥ.
- ಆದಿ ಕ್ರೈಸ್ತರಿರುವ ಸಮಯದಿಂದ ಹಿಡಿದು ಸಭಾಸೇವಕನ ಪಾತ್ರ ಮತ್ತು ಸೇವೆಯು ಸಭೆಯಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ.
- ಉದಾಹರಣೆಗೆ, ಹೊಸ ಒಡಂಬಡಿಕೆಯಲ್ಲಿ ಸಭಾಸೇವಕರು ಸಭೆಯಲ್ಲಿ ವಿಶ್ವಾಸಿಗಳು ಹಂಚಿಕೊಳ್ಳುವ ಆಹಾರವಾಗಿರಲಿ ಅಥವಾ ಧನವಾಗಿರಲಿ ಮತ್ತು ಇನ್ನಾವುದೇಯಾಗಿರಲಿ ಅವರ ಮಧ್ಯೆದಲ್ಲಿರುವ ವಿಧವೆಯಾರಿಗೂ ಸಮಾನವಾಗಿ ಹಂಚುವದನ್ನು ನೋಡಿಕೊಳ್ಳಬೇಕಾಗಿತ್ತು.
- "ಸಭಾಸೇವಕ" ಎನ್ನುವ ಪದವನ್ನು "ಸಭೆಯ ಸೇವಕನು" ಅಥವಾ "ಸಭೆಯ ಕೆಲಸಗಾರನು" ಅಥವಾ "ಸಭೆಯ ದಾಸನು" ಅಥವಾ ಸ್ಥಳೀಯ ಕ್ರೈಸ್ತ ಸಮಾಜಕ್ಕೆ ಪ್ರಯೋಜನಕರವಾದ ವಿಶೇಷ ಕಾರ್ಯಗಳನ್ನು ಮಾಡಲು ಸಂಪ್ರದಾಯಿಕವಾಗಿ ನೇಮಿಸಿಕೊಳ್ಳುವ ವ್ಯಕ್ತಿಯನ್ನು ಸೂಚಿಸುವ ಇತರ ಯಾವುದೇ ಪದವನ್ನೂ ಅನುವಾದದಲ್ಲಿ ಉಪಯೋಗಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ಸೇವಕ, ದಾಸನು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.03:8-10
- 1 ತಿಮೊಥೆ.03:11-13
- ಫಿಲಿಪ್ಪ.01:1-2

ಪದ ಡೇಟಾ:

- Strong's: G1249

ಸಭೆ, ಸಭೆಗಳು

ಪದದ ಅರ್ಥವಿವರಣೆ:

ಹೊಸ ಒಡಂಬಡಿಕೆಯಲ್ಲಿ "ಸಭೆ" ಎನ್ನುವ ಪದವು ದೇವರ ವಾಕ್ಯವನ್ನು ಕೇಳುವುದಕ್ಕೆ ಮತ್ತು ಪ್ರಾರ್ಥನೆ ಮಾಡುವುದಕ್ಕೆ ನಿರಂತರವಾಗಿ ಭೇಟಿಯಾಗುವ ಮತ್ತು ಯೇಸುವಿನಲ್ಲಿ ನಂಬಿಕೆಯಿಟ್ಟ ವಿಶ್ವಾಸಿಗಳ ಸ್ಥಳೀಯ ಗುಂಪನ್ನು ಸೂಚಿಸುತ್ತದೆ. "ಸಾರ್ವತ್ರಿಕ ಸಭೆಗಳು" ಎನ್ನುವ ಪದವು ಅನೇಕಬಾರಿ ಕ್ರೈಸ್ತರೆಲ್ಲರಿಗೂ ಸೂಚಿಸುತ್ತದೆ.

- ಈ ಪದಕ್ಕೆ ನಿಜವಾದ ಅಕ್ಷರಾರ್ಥವಾದ ಅರ್ಥವೇನಂದರೆ "ಕರೆಯಲ್ಪಟ್ಟ" ಕೂಟ ಅಥವಾ ಒಂದು ವಿಶೇಷವಾದ ಉದ್ದೇಶಕ್ಕಾಗಿ ಎಲ್ಲರು ಒಂದಾಗಿ ಸೇರಿಬರುವ ಜನ ಸಮೂಹ.
- ಕ್ರಿಸ್ತನ ಪರಿಪೂರ್ಣ ದೇಹದಲ್ಲಿ ಸೇರಿಬರುವ ಪ್ರತಿಯೊಂದು ಸ್ಥಳದ ಎಲ್ಲಾ ವಿಶ್ವಾಸಿಗಳನ್ನು ಈ ಪದವು ಸೂಚಿಸುತ್ತಿರುವಾಗ, ಕೆಲವೊಂದು ಸತ್ಯವೇದ ಅನುವಾದಗಳು ಸ್ಥಳೀಯ ಸಭೆಯಿಂದ ಬೇರ್ಪಡಿಸಲು "ಸಾರ್ವತ್ರಿಕ ಸಭೆ" ಎಂದು ಕರೆದಿದ್ದಾರೆ.
- ಅನೇಕ ಬಾರಿ ನಿರ್ದಿಷ್ಟ ನಗರದಲ್ಲಿರುವ ವಿಶ್ವಾಸಿಗಳು ಒಬ್ಬರ ಮನೆಯಲ್ಲಿ ಭೇಟಿಯಾಗುತ್ತಾರೆ. ಈ ಸ್ಥಳೀಯ ಸಭೆಗಳಿಗೆ ಆ ನಗರದ ಹೆಸರನ್ನು ಕೊಡಲ್ಪಟ್ಟಿದೆ, ಉದಾಹರಣೆಗೆ "ಎಫೆಸದಲ್ಲಿರುವ ಸಭೆ".
- ಸತ್ಯವೇದದಲ್ಲಿ "ಸಭೆ" ಎನ್ನುವ ಪದವನ್ನು ಭವನಕ್ಕೆ ಸೂಚಿಸಲಿಲ್ಲ.

ಅನುವಾದ ಸಲಹೆಗಳು:

- "ಸಭೆ" ಎನ್ನುವ ಪದವನ್ನು "ಎಲ್ಲರು ಒಂದುಗೂಡುವುದು" ಅಥವಾ "ಕೂಟ" ಅಥವಾ "ಜನಸಮೂಹ" ಅಥವಾ "ಒಂದು ಸಲ ಎಲ್ಲರು ಭೇಟಿಯಾಗುವುದು" ಎಂದೂ ಅನುವಾದ ಮಾಡಬಹುದು.
- ಈ ಪದವನ್ನು ಅನುವಾದ ಮಾಡುತ್ತಿರುವಾಗ ಉಪಯೋಗಿಸುವ ಪದವಾಗಲಿ ಅಥವಾ ಮಾತಾಗಲಿ ಎಲ್ಲಾ ವಿಶ್ವಾಸಿಗಳನ್ನು ಸೂಚಿಸುವದಾಗಿರಬೇಕೇ ಹೊರತು ಯಾವುದೋ ಒಂದು ಚಿಕ್ಕ ಗುಂಪನ್ನು ಮಾತ್ರ ಸೂಚಿಸುವುದಾಗಿರಬಾರದು.
- "ಸಭೆ" ಎನ್ನುವ ಪದವನ್ನು ಅನುವಾದ ಮಾಡುವಾಗ ಭವನಕ್ಕೆ ಸೂಚಿಸದಂತೆ ನೋಡಿಕೊಳ್ಳಿರಿ.
- ಹಳೇ ಒಡಂಬಡಿಕೆಯಲ್ಲಿ "ಕೂಟ" ಎಂದು ಉಪಯೋಗಿಸಿದ ಶಬ್ದವನ್ನು ಈ ಪದಕ್ಕೂ ಉಪಯೋಗಿಸಲಾಗಿರುತ್ತದೆ.
- ಜಾತೀಯ ಅಥವಾ ಸ್ಥಳೀಯ ಸತ್ಯವೇದ ಅನುವಾದದಲ್ಲಿ ಈ ಪದವನ್ನು ಯಾವ ರೀತಿ ಅನುವಾದ ಮಾಡಿದ್ದಾರೋ ನೋಡಿಕೊಳ್ಳಿರಿ. (ಇದನ್ನೂ ನೋಡಿರಿ: ಗೊತ್ತಿಲ್ಲದವುಗಳನ್ನು ಯಾವ ರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ವಿಧಾನಸಭೆ, ನಂಬಿಕೆ, ಕ್ರೈಸ್ತ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.05:12
- 1 ಥೆಸ್ಸ.02:14
- 1 ತಿಮೊಥೆ.03:05
- ಅಪೊ.ಕೃತ್ಯ.09:31
- ಅಪೊ.ಕೃತ್ಯ.14:23
- ಅಪೊ.ಕೃತ್ಯ.15:41
- ಕೊಲೊಸ್ಸ.04:15
- ಎಫೆಸ.05:23
- ಮತ್ತಾಯ.16:18
- ಫಿಲಿಪ್ಪ.04:15

ಸತ್ಯವೇದದಿಂದ ಉದಾಹರಣೆಗಳು:

- **43:12** ಪೇತ್ರ ಮಾಡಿದ ಪ್ರಸಂಗವನ್ನು ಸುಮಾರು 3,000 ಜನರು ನಂಬಿದರು ಮತ್ತು ಅವರೆಲ್ಲರು ಯೇಸುವಿಗೆ ಶಿಷ್ಯರಾದರು. ಅವರೆಲ್ಲರು ದೀಕ್ಷಾಸ್ನಾನ ಹೊಂದಿದರು ಮತ್ತು ಯೆರೂಸಲೇಮಿನಲ್ಲಿರುವ __ ಸಭೆಯಲ್ಲಿ __ ಭಾಗಿಗಳಾದರು.
- **46:09** ಅಂತಿಯೋಕ್ಯದಲ್ಲಿ ಅನೇಕ ಜನರು ಯೆಹೂದ್ಯರಲ್ಲ, ಆದರೆ ಮೊಟ್ಟ ಮೊದಲನೇ ಬಾರಿ ಅವರಲ್ಲಿ ಅನೇಕರು ವಿಶ್ವಾಸಿಗಳಾದರು. __ ಸಭೆಯನ್ನು __ ಬಲಗೊಳಿಸಲು ಮತ್ತು ಯೇಸುವಿನ ಕುರಿತಾಗಿ ಈ ಹೊಸ ವಿಶ್ವಾಸಿಗಳಿಗೆ ಹೆಚ್ಚಾಗಿ ಬೋಧನೆ ಮಾಡಲು ಬಾರ್ನಬ ಮತ್ತು ಸೌಲರಿಬ್ಬರು ಆಲ್ಲಿಗೆ ಹೊರಟರು.
- **46:10** ಆದ್ದರಿಂದ ಅಂತಿಯೋಕ್ಯದಲ್ಲಿರುವ __ ಸಭೆ __ ಬಾರ್ನಬ ಮತ್ತು ಸೌಲರಿಬ್ಬರ ಮೇಲೆ ತಮ್ಮ ಕೈಗಳನ್ನಿಟ್ಟು ಪ್ರಾರ್ಥನೆ ಮಾಡಿತು. ಇದಾದನಂತರ ಅವರು ಇನ್ನೂ ಅನೇಕವಾದ ಸ್ಥಳಗಲ್ಲಿ ಯೇಸುವಿನ ಶುಭವಾರ್ತೆಯನ್ನು ಸಾರಲು ಅವರಿಬ್ಬರನ್ನು ಕಳುಹಿಸಿದರು.
- **47:13** ಶುಭವಾರ್ತೆಯು ವ್ಯಾಪಕವಾಗುತ್ತಾ ಇತ್ತು, ಮತ್ತು __ ಸಭೆ __ ಬೆಳೆಯುತ್ತಾ ಇತ್ತು.

- **50:01** ಸುಮಾರು 2,000 ವರ್ಷಗಳಿಂದ ಪ್ರಪಂಚವ್ಯಾಪಕವಾಗಿ ಅನೇಕ ಮಂದಿ ಜನರು ಮೆಸ್ಸೀಯ ಯೇಸುವಿನ ಕುರಿತಾದ ಸುವಾರ್ತೆಯನ್ನು ಕೇಳುತ್ತಿದ್ದಾರೆ. __ ಸಭೆ __ ಬೆಳೆಯುತ್ತಾ ಇತ್ತು.

ಪದ ಡೇಟಾ:

- Strong's: G1577

ಸರ್ವಶಕ್ತನು

ಸತ್ಯಾಂಶಗಳು:

“ಸರ್ವಶಕ್ತನು” ಎನ್ನುವ ಪದಕ್ಕೆ “ಸಕಲ ಶಕ್ತಿಯುಳ್ಳವನು” ಎಂಬ ಅಕ್ಷರಾರ್ಥವು ಇದೆ. ಸತ್ಯವೇದದಲ್ಲಿ ಈ ಪದವನ್ನು ಕೇವಲ ದೇವರನ್ನು ಮಾತ್ರ ಸೂಚಿಸುತ್ತದೆ.

- “ಸರ್ವಶಕ್ತನು” ಅಥವಾ “ಸರ್ವಶಕ್ತನಾದವನು” ಎನ್ನುವ ಬಿರುದುಗಳು ದೇವರನ್ನು ಮಾತ್ರ ಸೂಚಿಸುತ್ತದೆ. ಆತನಿಗೆ ಪ್ರತಿಯೊಂದರ ಮೇಲೆಯೂ, ಪ್ರತಿಯೊಬ್ಬರ ಮೇಲೆಯೂ ಸರ್ವ ಅಧಿಕಾರವು ಮತ್ತು ಶಕ್ತಿಯು ಉಳ್ಳವನಾಗಿದ್ದಾನೆಂದು ತೋರಿಸುತ್ತದೆ.
- ಈ ಪದವನ್ನು “ಸರ್ವಶಕ್ತನಾದ ದೇವರು”, “ದೇವರು ಸರ್ವಶಕ್ತನು” ಮತ್ತು “ಸರ್ವಶಕ್ತನಾದ ಕರ್ತನ”, "ಕರ್ತನಾದ ದೇವರು ಸರ್ವಶಕ್ತನು” ಎಂದು ದೇವರನ್ನು ವರ್ಣಿಸುವುದಕ್ಕೂ ಉಪಯೋಗಿಸುತ್ತಾರೆ.

ಅನುವಾದ ಸಲಹೆಗಳು:

- ಈ ಪದವನ್ನು “ಎಲ್ಲಾ ಶಕ್ತಿಯನ್ನು ಹೊಂದಿದವನು” ಅಥವಾ “ಸಂಪೂರ್ಣವಾದ ಶಕ್ತಿಯನ್ನು ಪಡೆದವನು” ಅಥವಾ “ಸಂಪೂರ್ಣ ಶಕ್ತಿಯನ್ನು ಹೊಂದಿದ ದೇವರು” ಎಂದು ಕೂಡ ಅನುವಾದ ಮಾಡಬಹುದು.
- “ಕರ್ತನಾದ ದೇವರು ಸರ್ವಶಕ್ತನು” ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನಗಳಲ್ಲಿ “ದೇವರು, ಶಕ್ತಿಯುಳ್ಳ ಅಧಿಪತಿಯು” ಅಥವಾ “ಶಕ್ತಿಯುಳ್ಳ ಸಾರ್ವಭೌಮಾಧಿಕಾರಿಯಾದ ದೇವರು” ಅಥವಾ “ಎಲ್ಲಾವುದರ ಮೇಲೆ ಯಜಮಾನನಾದ ಶಕ್ತಿಯುಳ್ಳ ದೇವರು” ಎನ್ನುವವುಗಳನ್ನು ಕೂಡ ಒಳಪಡಿಸಬಹುದು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೇವರು, ಕರ್ತನು, ಶಕ್ತಿ)

ಸತ್ಯವೇದದ ಉಲ್ಲೇಖ ವಚನಗಳು:

- ವಿಮೋಚನಕಾಂಡ 06:2-5
- ಆದಿಕಾಂಡ 17:01
- ಆದಿಕಾಂಡ 35:11-13
- ಯೋಬ 08:03
- ಅರಣ್ಯಕಾಂಡ 24:15-16
- ಪ್ರಕಟನೆ 01:7-8
- ರೂತಳು 01:19-21

ಪದದ ದತ್ತಾಂಶ:

- Strong's: H7706, G3841

ಸರ್ವಾಧಿಕಾರ

ಪದದ ಅರ್ಥವಿವರಣೆ:

“ಸರ್ವಾಧಿಕಾರ” ಎನ್ನುವ ಪದವು ಶಕ್ತಿಯನ್ನು, ನಿಯಂತ್ರಣವನ್ನು ಅಥವಾ ಜನರ ಮೇಲೆ, ಪ್ರಾಣಿಗಳ ಮೇಲೆ ಅಥವಾ ಭೂಮಿಯ ಮೇಲೆ ಅಧಿಕಾರವನ್ನು ಸೂಚಿಸುತ್ತದೆ.

- ಯೇಸುಕ್ರಿಸ್ತನಿಗೆ ಯಾಜಕನಾಗಿ, ಪ್ರವಾದಿಯಾಗಿ ಮತ್ತು ಅರಸನಾಗಿ ಭೂಮಿಯ ಮೇಲೆ ಸರ್ವಾಧಿಕಾರವು ಕೊಡಲ್ಪಟ್ಟಿದೆಯೆಂದು ಆತನು ಹೇಳಿದ್ದಾರೆ.
- ಶಿಲುಬೆಯಲ್ಲಿ ಯೇಸುವಿನ ಮರಣದಿಂದ ಸೈತಾನಿನ ಆಧಿಪತ್ಯವು ಸಂಪೂರ್ಣವಾಗಿ ಸೋಲಿಸಲಾಗಿದೆ.
- ಸೃಷ್ಟಿಕಾರ್ಯದ ಸಮಯದಲ್ಲಿ ದೇವರು ಮನುಷ್ಯನಿಗೆ ಮೀನು, ಪಕ್ಷಿಗಳು, ಮತ್ತು ಭೂಮಿಯ ಮೇಲಿರುವ ಎಲ್ಲಾ ಜೀವಿಗಳ ಮೇಲೆ ಆಧಿಪತ್ಯವನ್ನು ಮಾಡಬೇಕೆಂದು ಹೇಳಿದ್ದನು.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಅಧಿಕಾರ” ಅಥವಾ “ಶಕ್ತಿ” ಅಥವಾ “ನಿಯಂತ್ರಣ” ಎನ್ನುವ ಪದಗಳನ್ನು ಉಪಯೋಗಿಸುತ್ತಾರೆ.
- “ಎಲ್ಲಾವುದರ ಮೇಲೆ ಆಧಿಪತ್ಯವನ್ನು ಹೊಂದಿರು” ಎನ್ನುವ ಮಾತನ್ನು “ಎಲ್ಲಾವುದರ ಮೇಲೆ ಆಡಳಿತ ಮಾಡು” ಅಥವಾ “ಎಲ್ಲವನ್ನು ನಡೆಸು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ಶಕ್ತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.05:10-11
- ಕೊಲೊಸ್ಸೆ.01:13
- ಯೂದಾ.01:25

ಪದ ಡೇಟಾ:

- Strong's: H1166, H4474, H4475, H4896, H4910, H4915, H7287, H7300, H7980, H7985, G2634, G2904, G2961, G2963

ಸಹವಾಸ

ಪದದ ಅರ್ಥವಿವರಣೆ

ಸಹಜವಾಗಿ, "ಸಹವಾಸ" ಎನ್ನುವ ಪದವು ಒಂದೇ ರೀತಿಯದ ಅನುಭವಗಳು ಮತ್ತು ಆಸಕ್ತಿಗಳು ಹೊಂದಿರುವ ಗುಂಪಿನ ಜನರಲ್ಲಿರುವ ಸ್ನೇಹಪೂರ್ವಕವಾದ ಸಂಭಾಷಣೆಯನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ, "ಸಹವಾಸ" ಎನ್ನುವ ಪದವು ಸಹಜವಾಗಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟ ವಿಶ್ವಾಸಿಗಳ ಐಕ್ಯತೆಯನ್ನು ಸೂಚಿಸುತ್ತದೆ.
- ಕ್ರಿಸ್ತನು ಮತ್ತು ಪವಿತ್ರಾತ್ಮನ ಜೊತೆಗಿರುವ ಸಂಬಂಧದ ಮೂಲಕ ವಿಶ್ವಾಸಿಗಳು ಒಬ್ಬರು ಇನ್ನೊಬ್ಬರ ಜೊತೆಗೆ ಹಂಚಿಕೊಳ್ಳುವ ಸಂಬಂಧವಾಗಿರುತ್ತದೆ.
- ಆರಂಭ ಕ್ರೈಸ್ತರು ಅವರ ಸಹವಾಸವನ್ನು ದೇವರ ವಾಕ್ಯವನ್ನು ಕೇಳುವುದರ ಮೂಲಕ ಮತ್ತು ಜೊತೆಗೆ ಪ್ರಾರ್ಥಿಸುವದರ ಮೂಲಕ, ಅವರ ವಸ್ತುಗಳನ್ನು ಹಂಚಿಕೊಳ್ಳುವದರ ಮೂಲಕ ಮತ್ತು ಜೊತೆಯಾಗಿ ಊಟ ಮಾಡುವುದರ ಮೂಲಕ ಅವರ ಸಹವಾಸವನ್ನು ವ್ಯಕ್ತಪಡಿಸಿಕೊಂಡರು.
- ಯೇಸು ಕ್ರಿಸ್ತನಲ್ಲಿ ಮತ್ತು ಆತನು ಶಿಲುಬೆ ಮರಣ ಹೊಂದಿದರ ಮೂಲಕ ದೇವರು ಹಾಗೂ ಮನುಷ್ಯರ ನಡುವೆ ಇದ್ದ ಅಂತರವನ್ನು ತೊಲಗಿತು ಎಂದು ನಂಬುವುದರ ಮೂಲಕ ದೇವರೊಂದಿಗೆ ಕ್ರೈಸ್ತರು ಸಹವಾಸ ಹೊಂದಿರುತ್ತಾರೆ.

ಅನುವಾದ ಸಲಹೆಗಳು:

- "ಸಹವಾಸ" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳು ಯಾವುವೆಂದರೆ "ಜೊತೆಯಾಗಿ ಹಂಚಿಕೊಳ್ಳುವುದು" ಅಥವಾ "ಸಂಬಂಧ" ಅಥವಾ "ಸಹಚರ" ಅಥವಾ "ಕ್ರೈಸ್ತರ ಸಮುದಾಯ".

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.01:3-4
- ಅಪೊ.ಕೃತ್ಯ.02:40-42
- ಫಿಲಿಪ್ಪ.01:3-6
- ಫಿಲಿಪ್ಪ.02:1-2
- ಫಿಲಿಪ್ಪ.03:8-11
- ಕೀರ್ತನೆ.055:12-14

ಪದ ಡೇಟಾ:

- Strong's: H2266, H8667, G2842, G2844, G3352, G4790

ಸಹೋದರ

ಪದದ ಅರ್ಥವಿವರಣೆ:

“ಸಹೋದರ” ಎನ್ನುವ ಪದವು ಸಹಜವಾಗಿ ಒಂದೇ ತಂದೆ ತಾಯಿಗೆ ಹುಟ್ಟಿದ ಪುರುಷ ವ್ಯಕ್ತಿಯ ಒಡಹುಟ್ಟಿದವರನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ “ಸಹೋದರರು” ಎನ್ನುವ ಪದವನ್ನು ಸಾಧಾರಣವಾಗಿ ಬಂಧುಗಳಿಗೆ ಉಪಯೋಗಿಸಿದ್ದರು, ಬಂಧುಗಳೆಂದರೆ ಒಂದೇ ಕುಲದಲ್ಲಿ, ಒಂದೇ ಜನರ ವರ್ಗದಲ್ಲಿ ಅಥವಾ ಒಂದೇ ವಂಶದಲ್ಲಿ ಇರುವ ಸದಸ್ಯರಿಗೆ ಸೂಚಿಸಲಾಗಿದೆ.
- ಹೊಸ ಒಡಂಬಡಿಕೆಯಲ್ಲಿ ಅನೇಕ ಬಾರಿ ಅಪೊಸ್ತಲರು “ಸಹೋದರರು” ಎಂದು ಉಪಯೋಗಿಸಿದ್ದಾರೆ, ಇದು ತಮ್ಮ ಸಹ ಕ್ರೈಸ್ತರನ್ನು (ಕ್ರೈಸ್ತರಾಗಿರುವ ಸ್ತ್ರೀ ಪುರುಷರನ್ನು) ಸೂಚಿಸುತ್ತದೆ, ಕ್ರಿಸ್ತನಲ್ಲಿರುವ ಎಲ್ಲಾ ವಿಶ್ವಾಸಿಗಳು ಒಂದೇ ಆತ್ಮೀಯಕ ಕುಟುಂಬದಲ್ಲಿ ಸದಸ್ಯರಾಗಿರುತ್ತಾರೆ, ದೇವರೇ ಇವರಿಗೆ ಪರಲೋಕದ ತಂದೆಯಾಗಿರುತ್ತಾನೆ.
- ಹೊಸ ಒಡಂಬಡಿಕೆಯಲ್ಲಿ ಕೆಲವೊಂದುಬಾರಿ ಒಬ್ಬ ಸಹ ಕ್ರೈಸ್ತಳಾಗಿರುವ ಸ್ತ್ರೀಯನ್ನು ಕುರಿತು ವಿಶೇಷವಾಗಿ ಹೇಳುವಾಗ, ಆಕೆಯನ್ನು “ಸಹೋದರಿ” ಎಂದು ಅಪೊಸ್ತಲರು ಉಪಯೋಗಿಸಿದ್ದಾರೆ, ಅಥವಾ ಇದರಲ್ಲಿ ಸ್ತ್ರೀ ಪುರುಷರು ಒಳಗೊಂಡಿರುತಾರೆ. ಉದಾಹರಣೆಗೆ, ಯಾಕೋಬನು “ಒಬ್ಬ ಸಹೋದರ ಅಥವಾ ಒಬ್ಬ ಸಹೋದರಿ ತನಗೆ ಆಹಾರವಾಗಲಿ ಅಥವಾ ಬಟ್ಟೆಯಾಗಲಿ ಬೇಕೆಂದಿರುವಾಗ” ಎಂದು ಉಲ್ಲೇಖಿಸುವಾಗ ಅವರು ಎಲ್ಲಾ ವಿಶ್ವಾಸಿಗಳನ್ನು ಬಗ್ಗೆ ಮಾತನಾಡುತ್ತಿದ್ದಾನೆಂದು ಒತ್ತಿಹೇಳುತ್ತಾನೆ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಭಾಷೆಯಲ್ಲಿ ಸ್ವಂತ ಸಹೋದರನನ್ನು ಸೂಚಿಸುವ ಮತ್ತು ಅಕ್ಷರಾರ್ಥ ಬರುವ ಪದಗಳೊಂದಿಗೆ ಅಥವಾ ಮಾತುಗಳೊಂದಿಗೆ ಅನುವಾದ ಮಾಡುವುದು ಉತ್ತಮ. ಆದರೆ ಈ ಪದವು ತಪ್ಪಾದ ಅರ್ಥವನ್ನು ಕೊಡಬಾರದು.
- ವಿಶೇಷವಾಗಿ ಹಳೇ ಒಡಂಬಡಿಕೆಯಲ್ಲಿ “ಸಹೋದರರು” ಎಂದು ಉಪಯೋಗಿಸಿದಾಗ ಒಂದೇ ಕುಟುಂಬಕ್ಕೆ, ಒಂದೇ ವಂಶಕ್ಕೆ ಅಥವಾ ಒಂದೇ ವರ್ಗದ ಜನರಿಗೆ ಸೇರಿದ ಸದಸ್ಯರನ್ನೇ ಸೂಚಿಸುತ್ತಿದ್ದರು, ಅನುವಾದಗಳಲ್ಲಿ “ಬಂಧುಗಳು” ಅಥವಾ “ವಂಶದ ಸದಸ್ಯರು” ಅಥವಾ “ಸಹ ಇಸ್ರಾಯೇಲ್ಯರು” ಎನ್ನುವ ಪದಗಳನ್ನು ಸೇರಿಸಬಹುದು.
- ಕ್ರಿಸ್ತನಲ್ಲಿರುವ ಸಹ ವಿಶ್ವಾಸಿಯನ್ನು ಸೂಚಿಸುವ ಸಂದರ್ಭದಲ್ಲಿ ಈ ಪದವನ್ನು “ಕ್ರಿಸ್ತನಲ್ಲಿ ಸಹೋದರ” ಅಥವಾ “ಅತ್ಮೀಕ ಸಹೋದರ” ಎಂದೂ ಅನುವಾದ ಮಾಡಬಹುದು.
- ಸ್ತ್ರೀ ಪುರುಷರನ್ನು ಸೇರಿಸಿ ಸೂಚಿಸುವಾಗ “ಸಹೋದರ” ಎನ್ನುವ ಪದವು ತಪ್ಪಾದ ಅರ್ಥವನ್ನು ಕೊಡುತ್ತದೆ, ಸ್ತ್ರೀ ಪುರುಷರನ್ನು ಸೇರಿಸಿ ಉಪಯೋಗಿಸುವ ಅತೀ ಹೆಚ್ಚಾದ ಸಾಧಾರಣವಾದ ರಕ್ತ ಸಂಬಂಧ ಪದವನ್ನು ಉಪಯೋಗಿಸಬಹುದು.
- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ ಸ್ತ್ರೀ ಪುರುಷರಾದ ವಿಶ್ವಾಸಿಗಳನ್ನು ಸೂಚಿಸುವ “ಸಹ ವಿಶ್ವಾಸಿಗಳು” ಅಥವಾ “ಕ್ರೈಸ್ತ ಸಹೋದರರು ಮತ್ತು ಸಹೋದರಿಯರು” ಎನ್ನುವ ಮಾತುಗಳನ್ನು ಉಪಯೋಗಿಸಬಹುದು.
- ಕೇವಲ ಪುರುಷರು ಮಾತ್ರವೇ ಸೂಚಿಸಲ್ಪಟ್ಟಿದ್ದಾರೋ ಅಥವಾ ಸ್ತ್ರೀ ಪುರುಷರೂ ಸೇರಿ ಸೂಚಿಸಲ್ಪಟ್ಟಿದ್ದಾರೋ ಎಂದು ನಿಶ್ಚಯತೆಯನ್ನು ಹೊಂದಲು ಸಂದರ್ಭವನ್ನು ಚೆನ್ನಾಗಿ ಪರಿಶೀಲನೆ ಮಾಡಿರಿ.

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ತಂದೆಯಾದ ದೇವರು, ಸಹೋದರಿ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.07:26
- ಆದಿ.29:10
- ಲೇವಿ.19:17
- ನೆಹೆ.03:01
- ಫಿಲಿಪ್ಪ.04:21
- ಪ್ರಕ.01:09

ಪದ ಡೇಟಾ:

- Strong's: H251, H252, H264, H1730, H2992, H2993, H2994, H7453, G80, G81, G2385, G2455, G2500, G4613, G5360, G5569

ಸಾಕ್ಷ್ಯ, ಸಾಕ್ಷ್ಯ ಹೇಳು, ಸಾಕ್ಷಿ, ಸಾಕ್ಷಿಗಳು, ಪ್ರತ್ಯಕ್ಷಸಾಕ್ಷಿ, ಪ್ರತ್ಯಕ್ಷಸಾಕ್ಷಿಗಳು

ಪದದ ಅರ್ಥವಿವರಣೆ:

ಒಬ್ಬ ವ್ಯಕ್ತಿ "ಸಾಕ್ಷ್ಯ" ಕೊಡುತ್ತಿರುವಾಗ, ಆ ವ್ಯಕ್ತಿ ತನಗೆ ಗೊತ್ತಿರುವ ವಿಷಯದ ಕುರಿತಾಗಿ ವ್ಯಾಖ್ಯೆಯನ್ನು ಮಾಡುತ್ತಿದ್ದಾನೆ, ಆ ವ್ಯಾಖ್ಯೆಯು ಸತ್ಯವೆಂದು ಪ್ರಕಟಿಸುತ್ತಿದ್ದಾನೆ. "ಸಾಕ್ಷ್ಯ ಹೇಳು" ಎನ್ನುವದಕ್ಕೆ "ಸಾಕ್ಷ್ಯ" ಕೊಡು ಎಂದರ್ಥ.

- ಅನೇಕಬಾರಿ ಒಬ್ಬ ವ್ಯಕ್ತಿ ತಾನು ನೇರವಾಗಿ ಅನುಭವಿಸಿದ ವಿಷಯದ ಬಗ್ಗೆ "ಸಾಕ್ಷಿ ಹೇಳುತ್ತಿದ್ದಾನೆ".
- "ಸುಳ್ಳು ಸಾಕ್ಷ್ಯ" ನೀಡುವ ಸಾಕ್ಷಿಯು ಏನಾಯಿತು ಎಂಬುದರ ಸತ್ಯವನ್ನು ಹೇಳುವುದಿಲ್ಲ.
- ಕೆಲವೊಂದುಬಾರಿ "ಸಾಕ್ಷ್ಯ" ಎನ್ನುವ ಪದವು ಪ್ರವಾದಿ ಹೇಳಿದ ಪ್ರವಾದನೆಯನ್ನು ಸೂಚಿಸುತ್ತದೆ.
- ಹೊಸ ಒಡಂಬಡಿಕೆಯಲ್ಲಿ ಈ ಪದವನ್ನು ಅನೇಕಬಾರಿ ಯೇಸುವಿನ ಹಿಂಬಾಲಕರು ಹೇಗೆ ಯೇಸುವಿನ ಜೀವನ, ಮರಣ ಮತ್ತು ಪುನರುತ್ಥಾನಗಳ ಕುರಿತಾಗಿ ಸಾಕ್ಷ್ಯವನ್ನು ಹಂಚಿಕೊಂಡಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ.

"ಸಾಕ್ಷಿ" ಎನ್ನುವ ಪದವು ನಡೆದಿರುವ ಸಂಘಟನೆಯನ್ನು ನಿಜವಾಗಿ ವೈಯುಕ್ತಿಕವಾಗಿ ಅನುಭವಿಸಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ. ಸಾಧಾರಣವಾಗಿ ಸಾಕ್ಷಿ ಎಂದರೆ ಒಬ್ಬ ವ್ಯಕ್ತಿ ತನಗೊತ್ತಿರುವ ಸತ್ಯವಾದ ವಿಷಯದ ಕುರಿತಾಗಿ ಸಾಕ್ಷ್ಯವನ್ನು ಹಂಚಿಕೊಳ್ಳುವುದೂ ಆಗಿರುತ್ತದೆ. "ಪ್ರತ್ಯಕ್ಷಸಾಕ್ಷಿ" ಎನ್ನುವ ಪದವು ಒಬ್ಬ ವ್ಯಕ್ತಿ ನಡೆದ ಸಂಘಟನೆಯನ್ನು ಕಣ್ಣಾರೆ ನೋಡಿದ್ದನ್ನು ಒತ್ತಿ ಹೇಳುತ್ತದೆ.

- ಯಾವುದಾದರೊಂದರ ಕುರಿತಾಗಿ "ಸಾಕ್ಷಿ" ಕೊಡುವುದು ಎಂದರೆ ಅದು ಸಂಭವಿಸಿರುವುದನ್ನು ನೋಡಿರುವುದು.
- ವಿಚಾರಣೆ ಮಾಡುವಾಗ, ಸಾಕ್ಷಿ "ಸಾಕ್ಷಿಯನ್ನು ಕೊಡುತ್ತಾನೆ" ಅಥವಾ "ಸಾಕ್ಷಿಯನ್ನು ಹೊಂದಿರುತ್ತಾನೆ" ಎಂದರ್ಥ. "ಸಾಕ್ಷ್ಯ ಹೇಳು" ಎನ್ನುವ ಅರ್ಥದಂತೆಯೇ ಇದಕ್ಕೂ ಅದೇ ಅರ್ಥವು ಬರುತ್ತದೆ.
- ಸಾಕ್ಷಿಗಳು ತಾವು ನೋಡಿದ ಅಥವಾ ಕೇಳಿದವುಗಳ ಕುರಿತಾಗಿ ಸತ್ಯವನ್ನು ಹೇಳುವುದಕ್ಕೆ ಇರುತ್ತಾರೆ.
- ನಡೆದ ಸಂಘಟನೆಯ ಕುರಿತಾಗಿ ಸತ್ಯವನ್ನು ಹೇಳದ ಸಾಕ್ಷಿಯನ್ನು "ಸುಳ್ಳು ಸಾಕ್ಷಿ" ಎಂದು ಕರೆಯುತ್ತಾರೆ. "ಸುಳ್ಳು ಸಾಕ್ಷಿಯನ್ನು ಕೊಡು" ಅಥವಾ "ಸುಳ್ಳು ಸಾಕ್ಷಿಯನ್ನು ಹೊತ್ತಿರು" ಎಂದು ಅವನಿಗೆ ಹೇಳಿರುತ್ತಾರೆ.
- "ಅವರಿಬ್ಬರ ಮಧ್ಯೆದಲ್ಲಿ ಸಾಕ್ಷಿಯಾಗಿರು" ಎನ್ನುವ ಮಾತಿಗೆ ಒಪ್ಪಂದ ಮಾಡಲ್ಪಟ್ಟಿರುವ ವಿಷಯಕ್ಕೆ ಯಾರಾದರೊಬ್ಬರು ಅಥವಾ ಯಾವುದಾದರೊಂದು ಅಧಾರವಾಗಿರುವುದು ಎಂದರ್ಥ. ಒಪ್ಪಂದದಲ್ಲಿರುವ ಇಬ್ಬರು ವ್ಯಕ್ತಿಗಳು ಏನು ಮಾಡಬೇಕೆಂದು ವಾಗ್ದಾನ ಮಾಡಿದ್ದನ್ನು ಮಾಡುವದಕ್ಕೆ ಸಾಕ್ಷಿ ಖಚಿತಪಡಿಸುವನು.

ಅನುವಾದ ಸಲಹೆಗಳು:

- "ಸಾಕ್ಷ್ಯ ಹೇಳು" ಅಥವಾ "ಸಾಕ್ಷ್ಯವನ್ನು ಕೊಡು" ಎನ್ನುವ ಪದವನ್ನು ಅಥವಾ ಮಾತನ್ನು "ಸತ್ಯಾಂಶಗಳನ್ನು ಹೇಳು" ಅಥವಾ "ನೋಡಿರುವುದನ್ನು ಅಥವಾ ಕೇಳಿರುವುದನ್ನು ಹೇಳು" ಅಥವಾ "ವೈಯುಕ್ತಿಕ ಅನುಭವದಿಂದ ಹೇಳು" ಅಥವಾ "ಆಧಾರವನ್ನು ಕೊಡು" ಅಥವಾ "ನಡೆದಿರುವುದನ್ನು ಹೇಳು" ಎಂದೂ ಅನುವಾದ ಮಾಡಬಹುದು.
- "ಸಾಕ್ಷ್ಯ" ಎನ್ನುವ ಪದವನ್ನು ಅನುವಾದ ಮಾಡುವುದರಲ್ಲಿ "ನಡೆದಿರುವ ಸಂಘಟನೆಯ ಕುರಿತು ವರದಿಕೊಡು" ಅಥವಾ "ಸತ್ಯವಾದದ್ದನ್ನು ವ್ಯಾಖ್ಯಾನಿಸು" ಅಥವಾ "ಆಧಾರ" ಅಥವಾ "ಹೇಳಿದ ವಿಷಯಗಳು" ಅಥವಾ "ಪ್ರವಾದನೆ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಅವರಿಗೆ ಸಾಕ್ಷ್ಯವಾಗಿ" ಎನ್ನುವ ಮಾತನ್ನು "ಸತ್ಯವಾದದ್ದನ್ನು ಅವರಿಗೆ ತೋರಿಸು" ಅಥವಾ "ಸತ್ಯವಾದದ್ದನ್ನು ಅವರಿಗೆ ನಿರೂಪಿಸು" ಎಂದೂ ಅನುವಾದ ಮಾಡಬಹುದು.
- "ಆವರಿಗೆ ವಿರುದ್ಧವಾಗಿ ಸಾಕ್ಷ್ಯವಾಗಿ" ಎನ್ನುವ ಮಾತನ್ನು "ಅವರ ಪಾಪವನ್ನು ಅವರಿಗೆ ತೋರಿಸುವ ವಿಷಯ" ಅಥವಾ "ಅವರ ವೇಷಧಾರವನ್ನು ಎತ್ತಿ ತೋರಿಸುವುದು" ಅಥವಾ "ಅವರು ತಪ್ಪು ಮಾಡುತ್ತಿದ್ದಾರೆಂದು ನಿರೂಪಿಸುವ ವಿಷಯ" ಎಂದೂ ಅನುವಾದ ಮಾಡಬಹುದು.
- "ಸುಳ್ಳು ಸಾಕ್ಷ್ಯವನ್ನು ಕೊಡುವುದು" ಎನ್ನುವ ಮಾತನ್ನು "ಸುಳ್ಳು ವಿಷಯಗಳನ್ನು ಹೇಳು" ಅಥವಾ "ನಿಜವಲ್ಲದ ವಿಷಯಗಳನ್ನು ವ್ಯಾಖ್ಯಾನಿಸು" ಎಂದೂ ಅನುವಾದ ಮಾಡಬಹುದು.

"ಸಾಕ್ಷಿ" ಅಥವಾ "ಪ್ರತ್ಯಕ್ಷ ಸಾಕ್ಷಿ" ಎನ್ನುವ ಪದವನ್ನು "ಅದನ್ನು ನೋಡಿದ ವ್ಯಕ್ತಿ" ಅಥವಾ "ಅದು ನಡೆದಿದೆಯೆಂದು ನೋಡಿದ ಒಬ್ಬ ವ್ಯಕ್ತಿ" ಅಥವಾ "(ಆ ವಿಷಯಗಳನ್ನು) ನೋಡಿದ ಮತ್ತು ಕೇಳಿದ ವ್ಯಕ್ತಿಗಳು" ಎಂದು ಅರ್ಥ ಬರುವ ಮಾತುಗಳೊಂದಿಗೆ ಅಥವಾ ಪದಗಳೊಂದಿಗೆ ಅನುವಾದ ಮಾಡಬಹುದು.

- "ಸಾಕ್ಷಿಯನ್ನು" ಹೊಂದಿರುವ ವಿಷಯ ಎನ್ನುವ ಮಾತನ್ನು "ಖಾತರಿ" ಅಥವಾ "ನಮ್ಮ ವಾಗ್ದಾನಕ್ಕೆ ಚಿಹ್ನೆ" ಅಥವಾ "ಇದು ನಿಜವೆಂದು ಸಾಕ್ಷಿ ಕೊಡುವ ಯಾವುದಾದರೊಂದು" ಎಂದೂ ಅನುವಾದ ಮಾಡಬಹುದು.
- "ನೀವು ನನ್ನ ಸಾಕ್ಷಿಗಳಾಗಿರುವಿರಿ" ಎನ್ನುವ ಮಾತನ್ನು "ನೀವು ನನ್ನ ಕುರಿತಾಗಿ ಇತರ ಜನರಿಗೆ ಹೇಳುವಿರಿ" ಅಥವಾ "ನಾನು ನಿಮಗೆ ಬೋಧನೆ ಮಾಡಿದ ಸತ್ಯವನ್ನು ನೀವು ಜನರಿಗೆ ಬೋಧಿಸುವಿರಿ" ಅಥವಾ "ನನ್ನಿಂದು ನೀವು ಕೇಳಿದ ಮತ್ತು ನಾನು ಮಾಡಿರುವ ಸಂಗತಿಗಳನ್ನು ನೀವು ನೋಡಿರುವವುಗಳನ್ನು ಜನರಿಗೆ ಹೇಳುವಿರಿ" ಎಂದೂ ಅನುವಾದ ಮಾಡಬಹುದು.
- "ಸಾಕ್ಷಿ ಕೊಡು" ಎನ್ನುವ ಮಾತನ್ನು "ನೋಡಿದ್ದನ್ನು ಹೇಳು" ಅಥವಾ "ಸಾಕ್ಷ್ಯವನ್ನು ಹೇಳು" ಅಥವಾ "ನಡೆದಿರುವುದನ್ನು ವ್ಯಾಖ್ಯಾನಿಸು" ಎಂದೂ ಅನುವಾದ ಮಾಡಬಹುದು.
- ಯಾವುದಾದರೊಂದಕ್ಕೆ "ಸಾಕ್ಷಿಯನ್ನು ಕೊಡು" ಎನ್ನುವ ಮಾತನ್ನು "ಯಾವುದಾದರೊಂದನ್ನು ನೋಡು" ಅಥವಾ "ನಡೆದಿರುವುದನ್ನು ಅನುಭವಿಸು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕಪೆರ್ನೌಮ, ಗಲಿಲಾಯ, ಯೊರ್ದನ್ ಹೊಳೆ, ಲವಣ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.31:27-29
- ಲೂಕ.06:3-5
- ಮಾರ್ಕ.26:59-61
- ಮತ್ತಾಯ.01:43-44
- ಮತ್ತಾಯ.01:6-8
- ಮತ್ತಾಯ 03:31-33
- ಮತ್ತಾಯ.04:32-33
- ಮತ್ತಾಯ.07:44-46
- ಅಪೊ.ಕಾರ್ಯ.13:30-31
- ರೋಮ.01:8-10
- 1 ಥೆಸ್ಸ.02:10-12
- 1 ತಿಮೊಥೆ.05:19-20
- 2 ತಿಮೊಥೆ.01:8-11
- 2 ಪೇತ್ರ.01:16-18
- 1 ಯೋಹಾನ.05:6-8
- 3 ಯೋಹಾನ.01:11-12
- ಪ್ರಕ.12:11-12

ಸತ್ಯವೇದದಿಂದ ಉದಾಹರಣೆಗಳು:

- **_39:02** ಮನೆಯ ಒಳಭಾಗದಲ್ಲಿ, ಯೆಹೂದ್ಯರ ನಾಯಕರು ಯೇಸುವನ್ನು ವಿಚಾರಣೆಗಾಗಿ ನಿಲ್ಲಿಸಿದ್ದರು. ಆತನ ಕುರಿತಾಗಿ ಸುಳ್ಳು ಹೇಳುವ ಅನೇಕ _ ಸುಳ್ಳು ಸಾಕ್ಷಿಗಳನ್ನು __ ಅವರು ತೆಗೆದುಕೊಂಡುಬಂದರು.
- **_39:04** ಮಹಾ ಯಾಜಕನು ಕೋಪಗೊಂಡು ತನ್ನ ವಸ್ತ್ರಗಳನ್ನು ಹರಿದುಕೊಂಡು, “ನಮಗೆ ಇನ್ನೇನು ಹೆಚ್ಚಿನ _ ಸಾಕ್ಷಿಗಳು __ ಬೇಕಾಗಿಲ್ಲ. ಈತನು ದೇವರ ಮಗನೆಂದು ಹೇಳುವ ಮಾತುಗಳನ್ನು ನೀನು ಅವನ ಕುರಿತಾಗಿ ಕೇಳಿಸಿಕೊಂಡಿರುವೆ. ನಿನ್ನ ತೀರ್ಪು ಏನು?” ಎಂದು ಕೂಗಿದನು.
- **_42:08** “ಪ್ರತಿಯೊಬ್ಬರು ತಾವು ಮಾಡಿದ ಪಾಪಗಳಿಗೆ ಕ್ಷಮಾಪಣೆಯನ್ನು ಪಡೆದುಕೊಳ್ಳುವುದಕ್ಕೆ ಪಶ್ಚಾತ್ತಾಪ ಹೊಂದಿಕೊಳ್ಳಬೇಕೆಂದು ನನ್ನ ಶಿಷ್ಯರು ಪ್ರಕಟಿಸುವರೆಂದು ಲೇಖನಗಳಲ್ಲಿ ಕೂಡ ಬರೆಯಲ್ಪಟ್ಟಿದೆ. ಅವರು ಈ ಸುವಾರ್ತೆ ಪ್ರಕಟಿಸುವುದನ್ನು ಯೆರೂಸಲೇಮಿನಲ್ಲಿ ಆರಂಭಿಸಿ, ಎಲ್ಲಾ ಸ್ಥಳಗಳಲ್ಲಿರುವ ಜನರ ಗುಂಪುಗಳ ಮಧ್ಯಕ್ಕೆ ಹೋಗಿ ಸಾರುವರು. ಈ ಎಲ್ಲಾ ಕಾರ್ಯಗಳಿಗೆ ನೀವೇ _ ಸಾಕ್ಷಿಗಳಾಗಿದ್ದೀರಿ __.”
- **_43:07** “ದೇವರು ಯೇಸುವನ್ನು ಜೀವಂತವನ್ನಾಗಿ ಎಬ್ಬಿಸಿದ್ದಾನೆನ್ನುವದಕ್ಕೆ ನಾವು _ ಸಾಕ್ಷಿಗಳಾಗಿದ್ದೇವೆ __.”

ಪದ ಡೇಟಾ:

- Strong's: H5707, H5713, H5715, H5749, H6030, H8584, G267, G1263, G1957, G2649, G3140, G3141, G3142, G3143, G3144, G4303, G4828, G4901, G5575, G5576, G5577, G6020

ಸಾಮ್ಯ, ಸಾಮ್ಯಗಳು

ಪದದ ಅರ್ಥವಿವರಣೆ:

“ಸಾಮ್ಯ” ಎನ್ನುವ ಪದವು ಸಾಧಾರಣವಾಗಿ ನೈತಿಕ ಸತ್ಯವನ್ನು ಬೋಧಿಸುವುದಕ್ಕೆ ಅಥವಾ ವಿವರಿಸುವುದಕ್ಕೆ ಉಪಯೋಗಿಸುವ ನೀತಿ ಪಾಠವನ್ನು ಅಥವಾ ಚಿಕ್ಕ ಕಥೆಯನ್ನು ಸೂಚಿಸುತ್ತದೆ.

- ಯೇಸು ತನ್ನ ಶಿಷ್ಯರಿಗೆ ಬೋಧಿಸುವುದಕ್ಕೆ ಸಾಮ್ಯಗಳನ್ನು ಉಪಯೋಗಿಸಿದನು. ಆತನು ಸಾಮ್ಯಗಳನ್ನು ಜನ ಸಮೂಹಗಳಿಗೆ ಹೇಳಿದರೂ, ಆತನು ಆ ಸಾಮ್ಯಗಳನ್ನು ಹೆಚ್ಚಿನ ಮಟ್ಟಿಗೆ ವಿವರಿಸಲಿಲ್ಲ.
- ಯೇಸುವಿನಲ್ಲಿ ನಂಬಿಕೆಯಿಡದ ಫರಿಸಾಯರಂತ ಜನರಿಂದ ಸತ್ಯವನ್ನು ಮರೆಮಾಡಿ, ಯೇಸು ತನ್ನ ಶಿಷ್ಯರಿಗೆ ಸತ್ಯವನ್ನು ತಿಳಿಸುವುದಕ್ಕೆ ಸಾಮ್ಯವನ್ನು ಉಪಯೋಗಿಸಲಾಗಿರುತ್ತದೆ.
- ದಾವೀದನ ಪಾಪವು ಎಷ್ಟು ಭಯಂಕರವಾದದ್ದೋ ಎಂದು ತೋರಿಸುವುದಕ್ಕೆ ಪ್ರವಾದಿಯಾದ ನಾತಾನನು ಅರಸನಾದ ದಾವೀದನಿಗೆ ಒಂದು ಸಾಮ್ಯವನ್ನು ಹೇಳಿದನು.
- ಒಳ್ಳೇಯ ಸಮಾರ್ಯದವನ ಕಥೆಯೇ ಕಥೆಯಾಗಿರುವ ಸಾಮ್ಯದ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಯೇಸುವಿನ ಬೋಧನೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಶಿಷ್ಯರಿಗೆ ಸಹಾಯ ಮಾಡುವುದಕ್ಕೆ ನೀತಿ ಪಾಠವನ್ನಾಗಿ ಯೇಸು ಹೋಲಿಸಿದ ಹಳೇ ಮತ್ತು ಹೊಸ ಬುದ್ದಲಿಗಳ ಸಾಮ್ಯವು ಒಂದು ಉದಾಹರಣೆಯಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಸಮಾರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.05:36
- ಲೂಕ.06:39-40
- ಲೂಕ.08:4-6
- ಲೂಕ.08:9-10
- ಮಾರ್ಕ.04:1-2
- ಮತ್ತಾಯ.13:3-6
- ಮತ್ತಾಯ.13:10-12
- ಮತ್ತಾಯ.13:13-14

ಪದ ಡೇಟಾ:

- Strong's: H1819, H4912, G3850, G3942

ಸುನ್ನತಿ ಮಾಡು, ಸುನ್ನತಿ ಮಾಡಲಾಗಿದೆ, ಸುನ್ನತಿ, ಸುನ್ನತಿಯಿಲ್ಲದವರು, ಸುನ್ನತಿಯಾಗದವರು

ಪದದ ಅರ್ಥವಿವರಣೆ:

"ಸುನ್ನತಿ ಮಾಡು" ಎನ್ನುವ ಪದಕ್ಕೆ ಗಂಡು ಮಗುವಿನ ಅಥವಾ ಒಬ್ಬ ಪುರುಷನ ಮರ್ಮಾಂಗದ ಆಗ್ರ ಚರ್ಮವನ್ನು ಕತ್ತರಿಸಬೇಕೆಂದರ್ಥ. ಸುನ್ನತಿ ಕಾರ್ಯಕ್ರಮವು ಬಹುಶಃ ಈ ವಿಧಾನದಲ್ಲಿ ಮಾಡುತ್ತಿರಬಹುದು.

- ದೇವರು ತನ್ನ ಜನರೊಂದಿಗೆ ಮಾಡುವ ಒಡಂಬಡಿಕೆಯ ಗುರುತಾಗಿ ಅಬ್ರಹಾಮನ ಕುಟುಂಬದಲ್ಲಿರುವ ಪ್ರತಿ ಗಂಡು ಮಕ್ಕಳಿಗೆ ಮತ್ತು ತನ್ನ ದಾಸರಿಗೆ ಸುನ್ನತಿ ಮಾಡಿಸಬೇಕೆಂದು ದೇವರು ಅಬ್ರಹಾಮನಿಗೆ ಅಪ್ಪಣೆ ಕೊಟ್ಟನು.
- ಅಬ್ರಹಾಮನ ವಂಶದವರೆಲ್ಲರೂ ತಮ್ಮ ಕುಟುಂಬದಲ್ಲಿ ಜನಿಸಿದ ಪ್ರತಿಯೊಬ್ಬ ಗಂಡು ಮಗುವಿಗೆ ಇದನ್ನು ಮಾಡುವ ಕಾರ್ಯಕ್ರಮವನ್ನು ಮುಂದೆವರಿಸಬೇಕೆಂದು ದೇವರು ಆಜ್ಞಾಪಿಸಿದರು.
- "ಹೃದಯದ ಸುನ್ನತಿ" ಎನ್ನುವ ಮಾತು "ಕತ್ತರಿಸಿ ಹೊರ ಹಾಕು" ಅಥವಾ ಒಬ್ಬ ವ್ಯಕ್ತಿಯಿಂದ ಪಾಪವನ್ನು ತೊಲಗಿಸು ಎನ್ನುವ ಅರ್ಥ ಬರುವುದಕ್ಕೆ ಅಲಂಕಾರ ರೂಪದಲ್ಲಿ ಉಪಯೋಗಿಸಲಾಗಿದೆ.
- ಆತ್ಮೀಯ ಅರ್ಥದಲ್ಲಿ ಉಪಯೋಗಿಸಿದ "ಸುನ್ನತಿ ಮಾಡಲಾಗಿದೆ" ಎನ್ನುವ ಮಾತು ಯೇಸುವಿನ ರಕ್ತದಿಂದ ತನ್ನ ಜನರ ಪಾಪಗಳನ್ನು ಶುದ್ಧೀಕರಿಸಲ್ಪಟ್ಟ ಜನರನ್ನು ಸೂಚಿಸುತ್ತದೆ.
- "ಸುನ್ನತಿಯಿಲ್ಲದವರು" ಎನ್ನುವ ಪದವು ಭೌತಿಕವಾಗಿ ಸುನ್ನತಿ ಮಾಡಿಕೊಳ್ಳದವರನ್ನು ಸೂಚಿಸುತ್ತದೆ. ಈ ಪದವು ಆತ್ಮೀಯಕವಾಗಿ ಸುನ್ನತಿ ಮಾಡಿಕೊಳ್ಳದ ಜನರನ್ನು ಅಂದರೆ ದೇವರೊಂದಿಗೆ ಸಹವಾಸವಿಲ್ಲದ ಜನರನ್ನು ಸೂಚಿಸುತ್ತದೆ.

"ಸುನ್ನತಿಯಿಲ್ಲದವರು" ಮತ್ತು "ಸುನ್ನತಿಯಾಗದವರು" ಎನ್ನುವ ಪದಗಳು ಭೌತಿಕವಾಗಿ ಸುನ್ನತಿ ಮಾಡಿಸಿಕೊಳ್ಳದ ಒಬ್ಬ ಪುರುಷನನ್ನು ಸೂಚಿಸುತ್ತಿವೆ. ಈ ಪದಗಳು ಕೂಡ ಅಲಂಕಾರ ರೂಪದಲ್ಲಿ ಉಪಯೋಗಿಸಿದ್ದಾರೆ.

- ಐಗುಪ್ತ ದೇಶಕ್ಕೂ ಸುನ್ನತಿ ಮಾಡಿಸಿಕೊಳ್ಳಬೇಕಾದ ಅವಶ್ಯಕತೆಯಿದೆ. "ಸುನ್ನತಿ ಮಾಡಿಸಿಕೊಳ್ಳದಿರುವ" ಕಾರಣದಿಂದ ಐಗುಪ್ತ ದೇಶವು ಸೋತುಹೋಗುವುದೆನ್ನುವದರ ಕುರಿತಾಗಿ ದೇವರು ಮಾತನಾಡಿದಾಗ, ಸುನ್ನತಿ ಮಾಡಿಸಿಕೊಳ್ಳುವುದಿಲ್ಲವೆಂದು ತಿರಸ್ಕಾರ ಮಾಡಿದ ಐಗುಪ್ತ ಜನರನ್ನು ಆತನು ಸೂಚಿಸುತ್ತಿದ್ದಾನೆ.
- "ಹೃದಯ ಸುನ್ನತಿ ಮಾಡಿಸಿಕೊಳ್ಳದ" ಜನರನ್ನು ಅಥವಾ "ಹೃದಯದಲ್ಲಿ ಸುನ್ನತಿಯಿಲ್ಲದ ಜನರನ್ನು" ಸತ್ಯವೇದವು ಸೂಚಿಸುತ್ತಿದೆ. ಈ ವಿಧಾನವು ಇವರೆಲ್ಲರೂ ದೇವರ ಜನರಲ್ಲವೆಂದು ಅಲಂಕಾರ ರೂಪದಲ್ಲಿ ಹೇಳುವದಾಗಿರುತ್ತದೆ ಮತ್ತು ಇವರೆಲ್ಲರೂ ದೇವರಿಗೆ ಅವಿಧೇಯತೆ ತೋರಿಸುವ ಜನರಾಗಿರುತ್ತಾರೆ.
- ಸುನ್ನತಿ ಎನ್ನುವ ಪದಕ್ಕೆ ಭಾಷೆಯಲ್ಲಿ ಬೇರೊಂದು ಪದವನ್ನು ಉಪಯೋಗಿಸಿದ್ದರೆ, "ಸುನ್ನತಿಯಿಲ್ಲದವರು" ಎನ್ನುವ ಪದವನ್ನು "ಸುನ್ನತಿಯಾಗಲಿಲ್ಲ" ಎಂದೂ ಅನುವಾದ ಮಾಡಬಹುದು.
- "ಸುನ್ನತಿಯಾಗದವರು" ಎನ್ನುವ ಭಾವವ್ಯಕ್ತೀ ಕರಣವನ್ನು "ಸುನ್ನತಿ ಮಾಡಿಸಿಕೊಳ್ಳದ ಜನರು" ಅಥವಾ "ದೇವರಿಗೆ ಸಂಬಂಧವಲ್ಲದ ಜನರು" ಎಂದು ಸಂದರ್ಭಕ್ಕೆ ತಕ್ಕಂತೆ ಅನುವಾದ ಮಾಡಬಹುದು.
- ಈ ಪದವನ್ನು ಅನುವಾದ ಮಾಡುವ ಅಲಂಕಾರ ಭಾವನೆಗಳ ಇತರ ವಿಧಾನಗಳಲ್ಲಿ, "ದೇವರ ಜನರಲ್ಲ" ಅಥವಾ "ದೇವರಿಗೆ ಸಂಬಂಧವಿಲ್ಲದ ಜನರು ತಿರಸ್ಕಾರ ಸ್ವಭಾವಿಗಳು" ಅಥವಾ "ದೇವರಿಗೆ ಸಂಬಂಧಪಟ್ಟವರೆಂದು ಯಾವ ಗುರುತು ಇಲ್ಲದ ಜನರು" ಎನ್ನುವ ಅನೇಕ ಮಾತುಗಳು ಒಳಗೊಂಡಿರುತ್ತವೆ.
- "ಹೃದಯದಲ್ಲಿ ಮಾಡಿಸಿಕೊಳ್ಳದ ಸುನ್ನತಿ" ಎನ್ನುವ ಮಾತಿನ ಭಾವವ್ಯಕ್ತೀಕರಣಕ್ಕೆ "ಪಟ್ಟುಬಿಡದ ತಿರಸ್ಕಾರ ಸ್ವಭಾವಿಗಳು" ಅಥವಾ "ನಂಬುವುದಕ್ಕೆ ತಿರಸ್ಕರಿಸುವ ಜನರು" ಎಂದೂ ಅನುವಾದ ಮಾಡಬಹುದು. ಸಾಧ್ಯವಾದರೆ ಭಾವವ್ಯಕ್ತೀಕರಣವನ್ನಿಡುವುದು ಒಳ್ಳೇಯದು, ಯಾಕಂದರೆ ಆತ್ಮೀಯ ಸುನ್ನತಿ ತುಂಬಾ ಪ್ರಾಮುಖ್ಯವಾದ ವಿಷಯ.

ಅನುವಾದ ಸಲಹೆಗಳು:

- ಅನುವಾದ ಮಾಡುವ ಭಾಷೆಯ ಸಂಸ್ಕೃತಿಯಲ್ಲಿ ಪುರುಷರ ಮೇಲೆ ಸುನ್ನತಿಗಳನ್ನು ನಡೆಸುವುದಾದರೆ, ಇದನ್ನು ಸೂಚಿಸುವುದಕ್ಕೆ ಉಪಯೋಗಿಸಿದ ಪದವನ್ನೇ ಈ ಪದಕ್ಕೂ ಉಪಯೋಗಿಸಬೇಕು.
- ಈ ಪದವನ್ನು ಅನುವಾದಿಸುವ ಬೇರೊಂದು ವಿಧಾನಗಳಲ್ಲಿ, "ಸುತ್ತಲು ಕತ್ತರಿಸು" ಅಥವಾ "ವೃತ್ತಾಕಾರದಲ್ಲಿ ಕತ್ತರಿಸು" ಅಥವಾ "ಆಗ್ರ ಚರ್ಮವನ್ನು ಕತ್ತರಿಸಿಬಿಡು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಸುನ್ನತಿ ಕುರಿತಾಗಿ ಗೊತ್ತಿಲ್ಲದ ಕೆಲವೊಂದು ಸಂಸ್ಕೃತಿಗಳಲ್ಲಿ, ಕೆಳ ಭಾಗದಲ್ಲಿ ಇದರ ಕುರಿತಾಗಿ ವಿವರಿಸುವುದು ಅತ್ಯಗತ್ಯವಾಗಿರಬಹುದು.
- ಈ ಪದವನ್ನು ಅನುವಾದ ಮಾಡುತ್ತಿರುವಾಗ, ಇದು ಸ್ತ್ರೀಯರಿಗೆ ಸಂಬಂಧವಾಗಿರದಂತೆ ನೋಡಿಕೊಳ್ಳಬೇಕು. "ಪುರುಷರ" ಅರ್ಥವು ಮಾತ್ರವೇ ಒಳಗೊಂಡಿರುವ ಪದದೊಂದಿಗೆ ಅಥವಾ ಮಾತಿನೊಂದಿಗೆ ಅನುವಾದ ಮಾಡುವುದು ಅತ್ಯಗತ್ಯವಾಗಿರಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಹಾಮ, ಒಡಂಬಡಿಕೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.17:9-11
- ಆದಿ.17:12-14
- ವಿಮೋ.12:47-48
- ಲೇವಿ.26:40-42
- ಯೆಹೋ.05:2-3
- ನ್ಯಾಯಾ.15:17-18
- 2 ಸಮು.01:17-20
- ಯೆರೆ.09:25-26
- ಯೆಹೆ.32:24-25
- ಅಪೊ.ಕೃತ್ಯ.10:44-45
- ಅಪೊ.ಕೃತ್ಯ.11:1-3
- ಅಪೊ.ಕೃತ್ಯ.15:1-2
- ಅಪೊ.ಕೃತ್ಯ.11:1-3
- ರೋಮಾ.02:25-27
- ಗಲಾತ್ಯ.05:3-4
- ಎಫೆಸ.02:11-12
- ಫಿಲಿಪ್ಪ.03:1-3
- ಕೊಲೊಸ್ಸ.02:10-12
- ಕೊಲೊಸ್ಸ.02:13-15

ಸತ್ಯವೇದದಿಂದ ಉದಾಹರಣೆಗಳು:

- **05:03** “ನಿನ್ನ ಕುಟುಂಬದಲ್ಲಿ ಪ್ರತಿಯೊಬ್ಬ ಪುರುಷನು _ ಸುನ್ನತಿ _ ಮಾಡಿಸಿಕೊಳ್ಳಬೇಕು”.
- **05:05** _ **“ಅಬ್ರಹಾಮನು ತನ್ನ ಕುಟುಂಬದಲ್ಲಿರುವ ಪ್ರತಿಯೊಬ್ಬ ಪುರುಷನಿಗೆ** _ ಸುನ್ನತಿ __ ಮಾಡಿಸಿದನು.

ಪದ ಡೇಟಾ:

- Strong's: H4135, H4139, H5243, H6188, H6189, H6190, G203, G564, G1986, G4059, G4061

ಸುವಾರ್ತಿಕನು

ಪದದ ಅರ್ಥವಿವರಣೆ:

ಯೇಸು ಕ್ರಿಸ್ತನ ಸುವಾರ್ತೆಯನ್ನು ಸಾರುವ ವ್ಯಕ್ತಿಯನ್ನು "ಸುವಾರ್ತಿಕನು" ಎಂದು ಕರೆಯುತ್ತಾರೆ.

- "ಸುವಾರ್ತಿಕನು" ಎನ್ನುವ ಪದಕ್ಕೆ "ಶುಭವಾರ್ತೆಯನ್ನು ಸಾರುವವನು" ಎಂದು ಅಕ್ಷರಾರ್ಥವಾಗಿದೆ.
- ಆತನ ಪಾಪ ಪರಿಹಾರ ಬಲಿಯ ಮೂಲಕ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ದೇವರ ರಾಜ್ಯದಲ್ಲಿ ಹೇಗೆ ಪಾಲುಹೊಂದಬೇಕೆನ್ನುವ ಶುಭವಾರ್ತೆಯನ್ನು ಸಾರಲು ಯೇಸು ತನ್ನ ಶಿಷ್ಯರನ್ನು ಕಳುಹಿಸಿದನು.
- ಈ ಶುಭವಾರ್ತೆಯನ್ನು ಸಾರಲು ಎಲ್ಲಾ ಕ್ರೈಸ್ತರು ಪ್ರೋತ್ಸಾಹ ಹೊಂದಿದ್ದಾರೆ.
- ಈ ಶುಭವಾರ್ತೆಯನ್ನು ಪ್ರಭಾವಿತವಾಗಿ ಪ್ರಕಟಿಸಲು ವಿಶೇಷವಾದ ಆತ್ಮಿಯ ವರವನ್ನು ಹೊಂದಿರುತ್ತಾರೆ. ಇಂತಹ ಜನರು ಸುವಾರ್ತಿಕಾರಣ ಮಾಡುವ ವರವನ್ನು ಹೊಂದಿದ್ದರೆಂದು ಹೇಳಲ್ಪಟ್ಟಿದೆ ಮತ್ತು ಇವರನ್ನು "ಸುವಾರ್ತಿಕರು" ಎಂದು ಕರೆಯುತ್ತಾರೆ.

ಅನುವಾದ ಸಲಹೆಗಳು:

- "ಸುವಾರ್ತಿಕನು" ಎನ್ನುವ ಪದವನ್ನು "ಶುಭವಾರ್ತೆ ಬೋಧಿಸುವವನು" ಅಥವಾ "ಶುಭವಾರ್ತೆ ಸಾರುವವನು" ಅಥವಾ "(ಯೇಸು ಕ್ರಿಸ್ತನ ಕುರಿತಾಗಿ) ಶುಭವಾರ್ತೆಯನ್ನು ಸಾರುವ ವ್ಯಕ್ತಿ" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಶುಭವಾರ್ತೆ, ಆತ್ಮ, ವರ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ತಿಮೊಥೆ.04:05
- ಎಫೆಸೆ.04:11-13

ಪದ ಡೇಟಾ:

- Strong's: G2099

ಸೇನಾಧೀಶ್ವರನಾದ ಯೆಹೋವ, ಸೇನಾಧೀಶ್ವರನಾದ ದೇವರು, ಪರಲೋಕ ಸೇನೆ, ಆಕಾಶಗಳ ಸೈನ್ಯ, ಸೇನಾಧೀಶ್ವರನಾದ ಕರ್ತನು

ಪದದ ಅರ್ಥವಿವರಣೆ:

"ಸೇನಾಧೀಶ್ವರನಾದ ಯೆಹೋವ" ಮತ್ತು "ಸೇನಾಧೀಶ್ವರನಾದ ದೇವರು" ಎನ್ನುವ ಮಾತುಗಳು ದೇವರಿಗೆ ವಿಧೇಯತೆ ತೋರಿಸುವ ಸಾವಿರಾರು ದೂತಗಳ ಮೇಲೆ ಆತನಿಗಿರುವ ಅಧಿಕಾರವನ್ನು ವ್ಯಕ್ತಗೊಳಿಸುವ ಬಿರುದುಗಳಾಗಿರುತ್ತವೆ.

- "ಸೈನ್ಯ" ಅಥವಾ "ಸೈನ್ಯಗಳು" ಎನ್ನುವ ಪದವು ಯಾವುದಾದರೊಂದರ ಹೆಚ್ಚಿನ ಸಂಖ್ಯೆಯನ್ನು ಸೂಚಿಸುವ ಪದಗಳಾಗಿರುತ್ತವೆ, ಉದಾಹರಣೆಗೆ ಜನರ ಸೇನೆ ಅಥವಾ ನಕ್ಷತ್ರಗಳ ಅಸಂಖ್ಯಾತ ಗುಂಪು. ಈ ಪದವು ಎಲ್ಲಾ ಆತ್ಮಗಳನ್ನು ಮತ್ತು ಅನೇಕ ದುರಾತ್ಮಗಳನ್ನು ಕೂಡ ಸೂಚಿಸುತ್ತದೆ. ಇದು ಯಾವುದನ್ನು ಸೂಚಿಸುತ್ತದೆಯೆಂದು ಅಲ್ಲಿ ಹೇಳಲ್ಪಡುವ ಸಂದರ್ಭವೇ ಸ್ಪಷ್ಟಗೊಳಿಸುತ್ತದೆ.
- ಈ ಮಾತುಗಳು "ಆಕಾಶಗಳ ಸೈನ್ಯ" ಎನ್ನುವ ಮಾತಿಗೆ ಸಮಾಂತರವಾಗಿರುತ್ತದೆ, ಇದು ಆಕಾಶದಲ್ಲಿರುವ ಗ್ರಹಗಳನ್ನು, ನಕ್ಷತ್ರಗಳನ್ನು ಮತ್ತು ಇತರ ವಿಶ್ವದಲ್ಲಿರುವ ಭಾಗಗಳನ್ನು ಸೂಚಿಸುತ್ತದೆ.
- ಹೊಸ ಒಡಂಬಡಿಕೆಯಲ್ಲಿ "ಸೇನಾಧೀಶ್ವರನಾದ ಕರ್ತನು" ಎನ್ನುವ ಮಾತಿಗೆ "ಸೇನಾಧೀಶ್ವರನಾದ ಯೆಹೋವ" ಎನ್ನುವ ಮಾತಿಗಿರುವ ಅರ್ಥವಿರುತ್ತದೆ, ಆದರೆ ಆ ರೀತಿ ಇಲ್ಲಿ ಭಾಷಾಂತರ ಮಾಡಲಿಲ್ಲ, ಯಾಕೆಂದರೆ ಇಬ್ರಿ ಪದವಾಗಿರುವ 'ಯೆಹೋವ" ಎನ್ನುವ ಪದವನ್ನು ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲಿಲ್ಲ.

ಅನುವಾದ ಸಲಹೆಗಳು:

- "ಸೇನಾಧೀಶ್ವರನಾದ ಯೆಹೋವ" ಎನ್ನುವ ಮಾತನ್ನು ಅನುವಾದ ಮಾಡುವುದರಲ್ಲಿ "ದೂತರನ್ನು ಆಳುವ ಯೆಹೋವ" ಅಥವಾ "ದೂತರ ಸೈನ್ಯಗಳನ್ನು ಆಳುವ ಯೆಹೋವ" ಅಥವಾ "ಸರ್ವ ಸೃಷ್ಟಿಯನ್ನು ಆಳುವ ಯೆಹೋವ" ಎನ್ನುವ ಮಾತುಗಳನ್ನು ಉಪಯೋಗಿಸಬಹುದು.
- "ಸೇನಾಧೀಶ್ವರನಾದ ದೇವರು" ಮತ್ತು "ಸೇನಾಧೀಶ್ವರನಾದ ಕರ್ತನು" ಎನ್ನುವ ಮಾತುಗಳಲ್ಲಿರುವ "ಸೇನೆಗಳು" ಎನ್ನುವ ಪದವನ್ನು ಮೇಲೆ ಇರುವ "ಸೇನಾಧೀಶ್ವರನಾದ ಯೆಹೋವ" ಎನ್ನುವ ಮಾತಿನಲ್ಲಿರುವಂತೆಯೇ ಅನುವಾದ ಮಾಡಬಹುದು.
- ಕೆಲವೊಂದು ಸಭೆಗಳು "ಯಾವ್ವೆ" ಎನ್ನುವ ಪದವನ್ನು ಸ್ವೀಕರಿಸುವುದಿಲ್ಲ, ಇದಕ್ಕೆ ಬದಲಾಗಿ ಅನೇಕ ಭಾಷಾಂತರಗಳ ಸಂಪ್ರದಾಯವನ್ನು ಅನುಸರಿಸಿ "ಕರ್ತನು" ಎನ್ನುವ ಪದವನ್ನು ಬಳಸುವುದಕ್ಕೆ ಪ್ರಾಮುಖ್ಯತೆ ಕೊಡುತ್ತಾರೆ. ಇಂಥಹ ಸಭೆಗಳಲ್ಲಿ "ಸೇನಾಧೀಶ್ವರನಾದ ಕರ್ತನು" ಎನ್ನುವ ಮಾತನ್ನೇ ಹಳೇ ಒಡಂಬಡಿಕೆಯಲ್ಲಿರುವ "ಸೇನಾಧೀಶ್ವರನಾದ ಯೆಹೋವ" ಎನ್ನುವ ಮಾತಿಗೆ ಬದಲಾಗಿ ಉಪಯೋಗಿಸಿರುತ್ತಾರೆ.

(ಈ ಪದಗಳನ್ನು ಸಹ ನೋಡಿರಿ: ದೂತ, ಅಧಿಕಾರ, ದೇವರು, ಕರ್ತನು, ಕರ್ತನಾದ ಯೆಹೋವ, ಯೆಹೋವ)

ಸತ್ಯವೇದದಲ್ಲಿರುವ ಅನುಬಂಧ ವಾಕ್ಯಗಳು:

- ಜೆಕರ್ಯ.13:1-2

ಪದ ಡೇಟಾ:

- Strong's: H430, H3068, H6635

ಸೇವಕನಿಗೆ, ಸೇವೆ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಸೇವೆ" ಎನ್ನುವ ಪದವು ದೇವರ ಕುರಿತಾಗಿ ಇತರರಿಗೆ ಬೋಧನೆ ಮಾಡುವುದರ ಮೂಲಕ ಅವರಿಗೆ ಸೇವೆ ಮಾಡುವುದನ್ನು ಮತ್ತು ಅವರ ಆತ್ಮೀಯಕವಾದ ಅಗತ್ಯತೆಗಳನ್ನು ನೋಡಿಕೊಳ್ಳುವುದನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಯಾಜಕರು ದೇವರಿಗೆ ಅರ್ಪಣೆಗಳನ್ನು ಮಾಡುವುದರ ಮೂಲಕ ದೇವಾಲಯದಲ್ಲಿ ಆತನಿಗೆ "ಸೇವೆ" ಮಾಡುತ್ತಿದ್ದರು.
- ಅವರ "ಸೇವೆ"ಯಲ್ಲಿ ದೇವಾಲಯವನ್ನು ಚೆನ್ನಾಗಿ ನೋಡಿಕೊಳ್ಳುವುದು ಮತ್ತು ಜನರ ಪಕ್ಷವಾಗಿ ದೇವರಿಗೆ ಪ್ರಾರ್ಥನೆಗಳನ್ನು ಅರ್ಪಿಸುವುದು ಒಳಗೊಂಡಿರುತ್ತದೆ.
- ಜನರಿಗೆ "ಸೇವೆ" ಮಾಡುವ ಕೆಲಸದಲ್ಲಿ ದೇವರ ಕುರಿತಾಗಿ ಅವರಿಗೆ ಬೋಧನೆ ಮಾಡುವುದರ ಮೂಲಕ ಅವರಿಗೆ ಆತ್ಮೀಯಕವಾಗಿ ಸೇವೆ ಮಾಡುವುದೂ ಒಳಗೊಂಡಿರುತ್ತದೆ.
- ಈ ಪದವು ಜನರಿಗೆ ಭೌತಿಕವಾದ ವಿಧಾನಗಳಲ್ಲಿ ಸೇವೆ ಮಾಡುವುದನ್ನೂ ಸೂಚಿಸುತ್ತದೆ, ಬಡವರಿಗೆ ಊಟವನ್ನು ಒದಗಿಸಿಕೊಡುವುದು ಮತ್ತು ರೋಗಿಗಳಿಗೆ ವೈದ್ಯಕೀಯ ಸೇವೆಯನ್ನು ಮಾಡಿಸುವುದು ಒಳಗೊಂಡಿರುತ್ತದೆ.

ಅನುವಾದ ಸಲಹೆಗಳು:

- ಜನರಿಗೆ ಸೇವೆ ಮಾಡುವ ಸಂದರ್ಭದಲ್ಲಿ, "ಸೇವಕನಿಗೆ" ಎನ್ನುವ ಪದವನ್ನು "ಸೇವೆ ಮಾಡು" ಅಥವಾ "ಜಾಗೃತಿ ತೆಗೆದುಕೋ" ಅಥವಾ "ಅವರ ಅಗತ್ಯತೆಗಳನ್ನು ಪೂರೈಸು" ಎಂದೂ ಅನುವಾದ ಮಾಡಬಹುದು.
- ದೇವಾಲಯದಲ್ಲಿ ಸೇವೆ ಮಾಡುವುದನ್ನು ಸೂಚಿಸಿದಾಗ, "ಸೇವಕ" ಎನ್ನುವ ಪದವನ್ನು "ದೇವಾಲಯದಲ್ಲಿ ಸೇವೆ ಮಾಡು" ಅಥವಾ "ಜನರಿಗಾಗಿ ದೇವರಿಗೆ ಅರ್ಪಣೆಗಳನ್ನು ಅರ್ಪಿಸು" ಎಂದೂ ಅನುವಾದ ಮಾಡಬಹುದು.
- ದೇವರಿಗೆ ಸೇವೆ ಮಾಡುವ ಸಂದರ್ಭದಲ್ಲಿ ಈ ಪದವನ್ನು "ಸೇವೆ ಮಾಡು" ಅಥವಾ "ದೇವರಿಗಾಗಿ ಕೆಲಸ ಮಾಡು" ಎಂದೂ ಅನುವಾದ ಮಾಡಬಹುದು.
- "ಸೇವೆ ಮಾಡಿದೆ" ಎನ್ನುವ ಮಾತನ್ನು "ಜಾಗೃತಿ ತೆಗೆದುಕೊಂಡಿದೆ" ಅಥವಾ "ಕೊಡಲ್ಪಟ್ಟಿದೆ" ಅಥವಾ "ಸಹಾಯ ಮಾಡಲ್ಪಟ್ಟಿದೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸೇವೆ ಮಾಡು, ಅರ್ಪಣೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.20:23-26
- ಅಪೊ.ಕೃತ್ಯ.06:2-4
- ಅಪೊ.ಕೃತ್ಯ.21:17-19

ಪದ ಡೇಟಾ:

- Strong's: H6399, H8120, H8334, H8335, G1247, G1248, G1249, G2023, G2038, G2418, G3008, G3009, G3010, G3011, G3930, G5256, G5257, G5524

ಸೈತಾನ, ದೆವ್ವ, ದುಷ್ಟ

ಸತ್ಯಾಂಶಗಳು:

ದೆವ್ವವು ದೇವರು ಸೃಷ್ಟಿಸಿದ ಆತ್ಮವಾಗಿದ್ದರೂ, ಅವನು ದೇವರ ವಿರುದ್ಧ ದಂಗೆ ಎದ್ದನು ಮತ್ತು ದೇವರ ಶತ್ರುವಾದನು. ದೆವ್ವವನ್ನು "ಸೈತಾನ" ಮತ್ತು "ದುಷ್ಟನು" ಎಂದೂ ಕರೆಯುತ್ತಾರೆ.

- ದೆವ್ವವು ದೇವರನ್ನು ಮತ್ತು ದೇವರು ಉಂಟು ಮಾಡಿದ ಪ್ರತಿಯೊಂದನ್ನು ದ್ವೇಷಿಸುತ್ತದೆ, ಯಾಕಂದರೆ ಅವನಿಗೆ ದೇವರ ಸ್ಥಾನ ಬೇಕಾಗಿರುತ್ತದೆ
- ಜನರು ದೇವರಿಗೆ ವಿರುದ್ಧವಾಗಿ ತಿರಸ್ಕಾರ ಮಾಡುವುದಕ್ಕೆ ಸೈತಾನನು ಅವರನ್ನು ಶೋಧಿಸುತ್ತಾನೆ.
- ಸೈತಾನ ನಿಯಂತ್ರಣದಿಂದ ಜನರನ್ನು ರಕ್ಷಿಸುವುದಕ್ಕೆ ದೇವರು ತನ್ನ ಒಬ್ಬನೇ ಮಗನಾಗಿರುವ ಯೇಸುವನ್ನು ಕಳುಹಿಸಿದನು.
- "ಸೈತಾನ" ಎನ್ನುವ ಹೆಸರಿಗೆ "ಅಪವಾದಿ" ಅಥವಾ "ವೈರಿ" ಎಂದರ್ಥ.
- "ದೆವ್ವ" ಎನ್ನುವ ಹೆಸರಿಗೆ "ಆರೋಪಿ" ಎಂದರ್ಥ.

ಅನುವಾದ ಸಲಹೆಗಳು:

- "ದೆವ್ವ" ಎನ್ನುವ ಪದವನ್ನು "ಆರೋಪಿ" ಅಥವಾ "ದುಷ್ಟನು" ಅಥವಾ "ದುರಾತ್ಮಗಳಿಗೆ ಅರಸನು" ಅಥವಾ "ಪ್ರಧಾನ ದುಷ್ಟಾತ್ಮನು" ಎಂದೂ ಅನುವಾದ ಮಾಡುತ್ತಾರೆ.
- "ಸೈತಾನ" ಎನ್ನುವ ಪದವನ್ನು "ವಿರೋಧಿ" ಅಥವಾ "ಎದುರಾಳಿ" ಎಂದೂ ಅನುವಾದ ಮಾಡಬಹುದು. ಅಥವಾ ಅವನು ದೆವ್ವ ಎಂದು ತೋರಿಸುವ ಇತರ ಹೆಸರಿನಿಂದ ಅನುವಾದ ಮಾಡಬಹುದು.
- ಈ ಪದವನ್ನು ರಾಕ್ಷಸ ಮತ್ತು ದುಷ್ಟ ಶಕ್ತಿ ಎನ್ನುವ ಪದಗಳಿಗೆ ವಿಭಿನ್ನವಾಗಿ ಅನುವಾದ ಮಾಡಬೇಕಾಗಿರುತ್ತದೆ.
- ಸ್ಥಳೀಯ ಅಥವಾ ಜಾತೀಯ ಭಾಷೆಯಲ್ಲಿ ಈ ಪದಗಳನ್ನು ಹೇಗೆ ಅನುವಾದ ಮಾಡಬೇಕೆಂದು ಗಮನಿಸಿರಿ.

(ನೋಡಿರಿ: ಗೊತ್ತಿಲ್ಲದವುಗಳನ್ನು ಯಾವ ರೀತಿ ಅನುವಾದ ಮಾಡಬೇಕು)

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೆವ್ವ, ದುಷ್ಟ, ದೇವರ ರಾಜ್ಯ, ಶೋಧಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.03:08
- 1 ಥೆಸ್ಸ.02:17-20
- 1 ತಿಮೊಥೆ.05:15
- ಅಪೊ.ಕೃತ್ಯ.13:10
- ಯೋಬ.01:08
- ಮಾರ್ಕ.08:33
- ಜೆಕರ್ಯ.03:01

ಸತ್ಯೆವೇದ ಕತೆಗಳಿಂದ ಉದಾಹರಣೆಗಳು:

- **21:01** ಹವ್ವಳನ್ನು ಮೋಸಗೊಳಿಸಿದ ಹಾವು _ ಸೈತಾನನಾಗಿದ್ದನು _. ಮೆಸ್ಸೀಯ ಬಂದು _ ಸೈತಾನನನ್ನು _ ಪೂರ್ತಿಯಾಗಿ ಸೋಲಿಸುವನೆಂದು ವಾಗ್ದಾನದ ಅರ್ಥವಾಗಿರುತ್ತದೆ.
- **25:06** ಸೈತಾನನು ಯೇಸುವಿಗೆ ಎಲ್ಲಾ ರಾಜ್ಯಗಳನ್ನು ಮತ್ತು ಅವುಗಳ ಮಹಿಮೆಯನ್ನು ತೋರಿಸಿದನು, ಮತ್ತು "ನೀನು ನನಗೆ ಅಡ್ಡಬಿದ್ದು, ಆರಾಧನೆ ಮಾಡಿದರೆ ಈ ಎಲ್ಲಾ ರಾಜ್ಯಗಳನ್ನು ನಾನು ನಿನಗೆ ಕೊಡುತ್ತೇನೆ" ಎಂದು ಹೇಳಿದನು.
- **25:08** ಸೈತಾನನ _ ಶೋಧನೆಗಳಿಗೆ ಯೇಸುವು ಒಳಗಾಗಲಿಲ್ಲ, ಇದರಿಂದ _ ಸೈತಾನನು _ ಆತನನ್ನು ಬಿಟ್ಟು ಹೋದನು.
- **33:06** "ಬೀಜವು ದೇವರ ವಾಕ್ಯವೇ. ಮಾರ್ಗವು ದೇವರ ವಾಕ್ಯವನ್ನು ಕೇಳುವ ವ್ಯಕ್ತಿಯಾಗಿರುತ್ತಾನೆ, ಆದರೆ ಆ ವಾಕ್ಯವನ್ನು ಅರ್ಥ ಮಾಡಿಕೊಳ್ಳುವುದಿಲ್ಲ, ಮತ್ತು _ ದೆವ್ವವು _ ಆ ವಾಕ್ಯವನ್ನು ಅವನಿಂದ ತೆಗೆದುಕೊಳ್ಳುವನು."
- **38:07** ಯೂದನು ಆ ರೊಟ್ಟಿಯನ್ನು ತೆಗೆದುಕೊಂಡನಂತರ, _ ಸೈತಾನನು _ ಅವನೊಳಗೆ ಪ್ರವೇಶಿಸಿದನು.
- **48:04** ಹವ್ವಳ ಸಂತಾನದಲ್ಲಿ ಒಬ್ಬರು _ ಸೈತಾನನ _ ತಲೆಯನ್ನು ಜಜ್ಜುವನು ಎಂದು ದೇವರು ವಾಗ್ದಾನ ಮಾಡಿದ್ದಾರೆ ಮತ್ತು _ ಸೈತನಾನು _ ಆತನ ಹಿಮ್ಮಡಿಯನ್ನು ಕಚ್ಚುವನು. _ ಸೈತಾನನು _ ಮೆಸ್ಸೀಯನನ್ನು ಸಾಯಿಸುತ್ತಾನೆಂದು ಇದರ ಅರ್ಥವಾಗಿರುತ್ತದೆ. ಆದರೆ ದೇವರು ಆತನನ್ನು ತಿರುಗಿ ಎಬ್ಬಿಸುವವನಾಗಿದ್ದಾನೆ, ಮತ್ತು ಆದನಂತರ ಮೆಸ್ಸೀಯ _ ಸೈತಾನನ _ ಶಕ್ತಿಯನ್ನು ಶಾಶ್ವತವಾಗಿ ಜಜ್ಜುತ್ತಾನೆ.
- **49:15** ದೇವರು ನಿನ್ನನ್ನು _ ಸೈತಾನನ _ ಕತ್ತಲೆಯ ರಾಜ್ಯದಿಂದ ಹೊರತಂದು, ಬೆಳಕು ಎನ್ನುವ ದೇವರ ರಾಜ್ಯದೊಳಗೆ ನಿನ್ನನ್ನು ಇಡುತ್ತಾನೆ.
- **50:09** "ಕಳೆಯು _ ದುಷ್ಟನಿಗೆ _ ಸಂಬಂಧಪಟ್ಟಿರುವ ಜನರನ್ನು ಪ್ರತಿನಿಧಿಸುತ್ತಿದೆ. ಕಳೆಯನ್ನು ಬಿತ್ತಿದ ವೈರಿಯೂ _ ದುಷ್ಟನಿಗೆ _ ಪ್ರತಿನಿಧಿಸುತ್ತಾನೆ."

- **50:10** “ಲೋಕದ ಅಂತ್ಯವು ಮುಗಿದ ತಕ್ಷಣವೇ, ದೂತರು _ ದುಷ್ಟನಿಗೆ _ ಸಂಬಂಧಪಟ್ಟವರನ್ನು ಒಂದು ಸ್ಥಳಕ್ಕೆ ಕೂಡಿಸುತ್ತಾನೆ ಮತ್ತು ಅವರನ್ನು ಧಗಧಗನೆ ಉರಿಯುತ್ತಿರುವ ಬೆಂಕಿಯೊಳಗೆ ಹಾಕುತ್ತಾನೆ, ಅಲ್ಲಿ ಅವರು ಅಳುವರು ಮತ್ತು ಭಯಂಕರವಾದ ಶ್ರಮೆಯಲ್ಲಿ ಹಲ್ಲುಗಳನ್ನು ಕಡಿಯುತ್ತಾ ಇರುವರು.
- **50:15** ಯೇಸು ಹಿಂದಿರುಗಿ ಬರುವಾಗ, ಆತನು ಸಂಪೂರ್ಣವಾಗಿ _ ಸೈತಾನನನ್ನು _ ಮತ್ತು ತನ್ನ ರಾಜ್ಯವನ್ನು ನಾಶಗೊಳಿಸುವನು. ಆತನು _ ಸೈತಾನನನ್ನು _ ಮತ್ತು ದೇವರಿಗೆ ವಿಧೇಯರಾಗದೇ ಅವನನ್ನು ಹಿಂಬಾಲಿಸುವ ಪ್ರತಿಯೊಬ್ಬರನ್ನೂ ಶಾಶ್ವತವಾಗಿ ಸುಟ್ಟು ಹೋಗುವುದಕ್ಕೆ ನರಕದಲ್ಲಿ ಎಸೆಯುತ್ತಾನೆ,

ಪದ ಡೇಟಾ:

- Strong's: H7700, H7854, H8163, G1139, G1140, G1141, G1142, G1228, G4190, G4566, G4567

ಹನ್ನೆರಡು, ಹನ್ನೊಂದು

ಪದದ ಅರ್ಥವಿವರಣೆ:

“ಹನ್ನೆರಡು” ಎನ್ನುವ ಪದವು ಯೇಸು ತನಗೆ ಶಿಷ್ಯರಾಗಿರುವುದಕ್ಕೆ ಅಥವಾ ಅಪೊಸ್ತಲರಾಗಿರುವುದಕ್ಕೆ ಆಯ್ಕೆ ಮಾಡಿಕೊಂಡಿರುವ ಹನ್ನೆರಡು ಮಂದಿಯನ್ನು ಸೂಚಿಸುತ್ತದೆ. ಯೂದಾನು ತನ್ನನ್ನು ತಾನು ಸಾಯಿಸಿಕೊಂಡನಂತರ, ಅವರು “ಹನ್ನೊಂದು” ಮಂದಿ ಕರೆಯಲ್ಪಟ್ಟರು.

- ಯೇಸುವಿಗೆ ಇವರನ್ನು ಬಿಟ್ಟು ಇತರ ಶಿಷ್ಯರು ಅನೇಕಮಂದಿ ಇದ್ದಿದ್ದರು, ಆದರೆ “ಹನ್ನೆರಡು” ಎನ್ನುವ ಈ ಬಿರುದು ಯೇಸುವಿಗೆ ತುಂಬಾ ಹತ್ತಿರವಾಗಿರುವ ಜನರನ್ನು ಪ್ರತ್ಯೇಕಿಸಿ ತೋರಿಸುತ್ತದೆ.
- ಈ ಹನ್ನೆರಡು ಮಂದಿ ಶಿಷ್ಯರ ಹೆಸರುಗಳು ಮತ್ತಾಯ 10, ಮಾರ್ಕ 3, ಮತ್ತು ಲೂಕ 6 ಅಧ್ಯಾಯಗಳಲ್ಲಿ ಪಟ್ಟಿ ಮಾಡಿ ದಾಖಲಿಸಲಾಗಿರುತ್ತದೆ.
- ಕೆಲವೊಂದುಬಾರಿ ಯೇಸುವು ಪರಲೋಕಕ್ಕೆ ಹಿಂದುರಿಗಿ ಹೋದಾಗ, “ಹನ್ನೊಂದು” ಮಂದಿ ಯೂದನ ಸ್ಥಾನದಲ್ಲಿರುವುದಕ್ಕೆ ಮತ್ತೀಯ ಎನ್ನುವ ಹೆಸರಿನ ಶಿಷ್ಯನನ್ನು ಆಯ್ಕೆ ಮಾಡಿಕೊಂಡರು. ಆದನಂತರ, ಅವರು ತಿರುಗಿ “ಹನ್ನೆರಡು” ಎಂಬುದಾಗಿ ಕರೆಯಲ್ಪಟ್ಟರು.

ಅನುವಾದ ಸಲಹೆಗಳು:

- ಅನೇಕ ಭಾಷೆಗಳಲ್ಲಿ ಇದಕ್ಕೆ ನಾಮಪದವನ್ನು ಜೋಡಿಸುವುದು ಅತೀ ಸ್ವಾಭಾವಿಕವಾಗಿರುತ್ತದೆ ಅಥವಾ ತುಂಬಾ ಸ್ಪಷ್ಟವಾಗಿರುತ್ತದೆ, “ಹನ್ನೆರಡು ಮಂದಿ ಅಪೊಸ್ತಲರು” ಅಥವಾ “ಯೇಸುವಿನ ಹನ್ನೆರಡು ಮಂದಿ ಹತ್ತಿರವಾದ ಶಿಷ್ಯರು” ಎಂದು ಹೇಳಲಾಗುತ್ತದೆ.
- “ಹನ್ನೊಂದು” ಎನ್ನುವ ಪದವನ್ನು “ಉಳಿದ ಯೇಸುವಿನ ಹನ್ನೊಂದು ಮಂದಿ ಶಿಷ್ಯರು” ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಅನುವಾದಗಳಲ್ಲಿ ಇವು ಬಿರುದುಗಳಾಗಿ ಕೊಡಲ್ಪಟ್ಟಿವೆ ಎಂದು ತೋರಿಸುವುದಕ್ಕೆ “ಹನ್ನೆರಡು” ಮತ್ತು “ಹನ್ನೊಂದು” ಎನ್ನುವ ಪದಗಳಲ್ಲಿನ ಮೊದಲನೇ ಅಕ್ಷರವನ್ನು ದೊಡ್ಡದಾಗಿ ಉಪಯೋಗಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ಶಿಷ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.15:5-7
- ಅಪೊ.ಕೃತ್ಯ.06:2-4
- ಲೂಕ.09:1-2
- ಲೂಕ.18:31-33
- ಮಾರ್ಕ.10:32-34
- ಮತ್ತಾಯ.10:5-7

ಪದ ಡೇಟಾ:

- Strong's: G1427, G1733

ಹುಳಿಯಿಲ್ಲದ ರೊಟ್ಟಿ

ಪದದ ಅರ್ಥವಿವರಣೆ:

“ಹುಳಿಯಿಲ್ಲದ ರೊಟ್ಟಿ” ಎನ್ನುವ ಮಾತು ಹುಳಿಯಿಲ್ಲದೆ ಮಾಡುವ ರೊಟ್ಟಿಯನ್ನು ಸೂಚಿಸುತ್ತದೆ. ಈ ವಿಧವಾದ ರೊಟ್ಟಿ ಸಪಾಟವಾಗಿರುತ್ತದೆ ಯಾಕಂದರೆ ಇದು ಉಬ್ಬುಕೊಳ್ಳುವುದಕ್ಕೆ ಇದರಲ್ಲಿ ಹುಳಿ ಇರುವುದಿಲ್ಲ.

- ದೇವರು ಇಸ್ರಾಯೇಲ್ಯರನ್ನು ಐಗುಪ್ತದಲ್ಲಿನ ಗುಲಾಮಗಿರಿಯಿಂದ ಬಿಡುಗಡೆಯಾದಾಗ, ಐಗುಪ್ತರ ರೊಟ್ಟಿ ಉಬ್ಬಿಕೊಳ್ಳುವುದಕ್ಕೆ ಮುಂಚಿತವಾಗಿ ಆಲಸ್ಯ ಮಾಡದಂತೆ ಅತೀ ಶೀಘ್ರವಾಗಿ ಐಗುಪ್ತನ್ನು ಬಿಟ್ಟು ಹೋಗಬೇಕೆಂದು ಆತನು ಅವರಿಗೆ ಹೇಳಿದನು. ಇದರಿಂದ ಅವರು ತಮ್ಮ ಆಹಾರದಲ್ಲಿನ ಹುಳಿಯಿಲ್ಲದ ರೊಟ್ಟಿಯನ್ನು ತಿಂದರು. ಆ ದಿನದಿಂದ ಹುಳಿಯಿಲ್ಲದ ರೊಟ್ಟಿ ಪ್ರತಿ ವರ್ಷ ಆಚರಿಸುವ ಪಸ್ಕ ಹಬ್ಬದಲ್ಲಿ ಉಪಯೋಗಿಸಲಾಗುತ್ತಿತ್ತು, ಇದು ನಡೆದಿರುವ ಆ ಸಮಯವನ್ನು ಜ್ಞಾಪಕ ಮಾಡುತ್ತದೆ.
- ಹುಳಿ ಎನ್ನುವುದು ಕೆಲವೊಂದುಬಾರಿ ಪಾಪಕ್ಕೆ ಗುರುತಾಗಿ ಉಪಯೋಗಿಸುವುದರಿಂದ, “ಹುಳಿಯಿಲ್ಲದ ರೊಟ್ಟಿ” ಎನ್ನುವುದು ಒಬ್ಬ ದೇವರನ್ನು ಘನಪಡಿಸುವ ವಿಧಾನದಲ್ಲಿ ಆ ವ್ಯಕ್ತಿಯ ಜೀವನದಿಂದ ಪಾಪವನ್ನು ತೆಗೆಯಲ್ಪಟ್ಟಿದೆ ಎನ್ನುವುದನ್ನು ಪ್ರತಿನಿಧಿಸುತ್ತದೆ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಹುಳಿ ಇಲ್ಲದ ರೊಟ್ಟಿ” ಅಥವಾ “ಉಬ್ಬಿಕೊಳ್ಳದ ಸಪಾಟವಾದ ರೊಟ್ಟಿ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಈ ಪದಕ್ಕೆ ಮಾಡಿರುವ ಆನುವಾದವು “ಹುಳಿ, ಹುದುಗು” ಎನ್ನುವ ಪದವನ್ನು ನೀವು ಹೇಗೆ ಅನುವಾದ ಮಾಡುದ್ದೀರಿ ಎನ್ನುವುದಕ್ಕೆ ಸರಿಯಾಗಿರಲು ನೋಡಿಕೊಳ್ಳಿರಿ.
- ಕೆಲವು ಸಂದರ್ಭಗಳಲ್ಲಿ “ಹುಳಿಯಿಲ್ಲದ ರೊಟ್ಟಿ” ಎನ್ನುವ ಮಾತು “ಹುಳಿಯಿಲ್ಲದ ರೊಟ್ಟಿಯ ಔತಣ” ಎನ್ನುವ ಮಾತನ್ನು ಸೂಚಿಸುತ್ತದೆ ಮತ್ತು ಆ ವಿಧಾನದಲ್ಲಿಯೇ ಇದನ್ನು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ರೊಟ್ಟಿ, ಐಗುಪ್ತ, ಹಬ್ಬ, ಪಸ್ಕ, ಪಾಪ, ಹುಳಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.05:6-8
- 2 ಪೂರ್ವ.30:13-15
- ಅಪೊ.ಕೃತ್ಯ.12:3-4
- ವಿಮೋ.23:14-15
- ಎಜ್ರಾ.06:21-22
- ಆದಿ.19:1-3
- ನ್ಯಾಯಾ.06:21
- ಯಾಜಕ.08:1-3
- ಲೂಕ.22:1-2

ಪದ ಡೇಟಾ:

- Strong's: H4682, G106

ಹೃದಯ

ಪದದ ಅರ್ಥವಿವರಣೆ:

“ಹೃದಯ” ಎನ್ನುವ ಪದವು ಜನರು ಮತ್ತು ಪ್ರಾಣಿಗಳಲ್ಲಿ ದೇಹದಾದ್ಯಂತ ರಕ್ತವನ್ನು ಪಂಪ್ ಮಾಡುವ ಆಂತರಿಕ ದೈಹಿಕ ಅಂಗವನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ ಅನೇಕಬಾರಿ ಒಬ್ಬರ ಆಲೋಚನೆಗಳನ್ನು, ಭಾವನೆಗಳನ್ನು, ಆಸೆಗಳನ್ನು ಅಥವಾ ಚಿತ್ತವನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ "ಹೃದಯ" ಉಪಯೋಗಿಸಲ್ಪಟ್ಟಿದೆ.

- “ಕಠಿಣ ಹೃದಯ” ಹೊಂದಿರುವುದೆನ್ನುವುದು ದೇವರಿಗೆ ವಿಧೇಯತೆ ತೋರಿಸಲು ತಿರಸ್ಕರಿಸುವ ಒಬ್ಬ ವ್ಯಕ್ತಿಯ ಮೊಂಡುತನದ ಸಾಧಾರಣ ವ್ಯಕ್ತೀಕರಣವನ್ನು ತೋರಿಸುತ್ತದೆ.
- “ನನ್ನ ಹೃದಯಯದಿಂದ” ಅಥವಾ “ನನ್ನ ಪೂರ್ಣ ಹೃದಯದೊಂದಿಗೆ” ಎನ್ನುವ ಮಾತುಗಳು ಯಾವ ಅಡಚಣೆಯಿಲ್ಲದೆ ಏನಾದರೊಂದನ್ನು ಮಾಡುವುದು, ಸಂಪೂರ್ಣ ಬದ್ಧತೆಯೊಂದಿಗೆ ಮತ್ತು ಇಷ್ಟತೆಯೊಂದಿಗೆ ಎಂದರ್ಥ.
- “ಇದನ್ನು ನಿನ್ನ "ಹೃದಯಕ್ಕೆ ತೆಗೆದುಕೋ” ಇನ್ನುವ ಮಾತಿಗೆ ಮಾಡುವ ವಿಷಯವನ್ನು ಗಂಭೀರವಾಗಿ ಮಾಡು ಮತ್ತು ಅದನ್ನು ಒಬ್ಬರ ಜೀವನಕ್ಕೆ ಅನ್ವಯಿಸು ಎಂದರ್ಥ.
- “ಮುರಿಯಲ್ಪಟ್ಟಿರುವ ಹೃದಯ” ಎನ್ನುವ ಮಾತು ತುಂಬಾ ಹೆಚ್ಚಾದ ಬಾಧೆಯಲ್ಲಿರುವ ಒಬ್ಬ ವ್ಯಕ್ತಿಯನ್ನು ವಿವರಿಸುತ್ತದೆ. ಆ ವ್ಯಕ್ತಿ ಮಾನಸಿಕವಾಗಿ ತುಂಬಾ ಆಳವಾಗಿ ನೋಯಿಸಲ್ಪಟ್ಟಿರುತ್ತಾನೆ.

ಅನುವಾದ ಸಲಹೆಗಳು:

- ಕೆಲವೊಂದು ಭಾಷೆಗಳಲ್ಲಿ ವಿಭಿನ್ನವಾದ ಶರೀರ ಭಾಗಗಳನ್ನು ಸೂಚಿಸುತ್ತದೆ, ಅಂದರೆ “ಹೊಟ್ಟೆ” ಅಥವಾ “ಪಿತ್ತಜನಕಾಂಗ” ಎನ್ನುವ ಅಂಗಗಳನ್ನು ಅವರ ಆಲೋಚನೆಗಳನ್ನು ಸೂಚಿಸಲು ಅಲಂಕಾರಿಕವಾಗಿ ಉಪಯೋಗಿಸುತ್ತಾರೆ.
- ಕೆಲವೊಂದು ಭಾಷೆಗಳಲ್ಲಿ ಈ ಎಲ್ಲಾ ಪರಿಕಲ್ಪನೆಗಳನ್ನು ವ್ಯಕ್ತಪಡಿಸುವುದಕ್ಕೆ ಒಂದೇ ಪದವನ್ನು ಉಪಯೋಗಿಸುತ್ತಾರೆ ಮತ್ತು ಬೇರೆ ರೀತಿಯ ಭಾವನೆಗಳನ್ನು ವ್ಯಕ್ತಗೊಳಿಸಲು ಬೇರೊಂದು ಪದವನ್ನು ಉಪಯೋಗಿಸುತ್ತಾರೆ.
- “ಹೃದಯ” ಅಥವಾ ಶರೀರದಲ್ಲಿರುವ ಬೇರೊಂದು ಭಾಗಗಳು ಈ ಅರ್ಥವನ್ನು ಸೂಚಿಸದಿದ್ದರೆ, ಕೆಲವೊಂದು ಭಾಷೆಗಳು ಇದರ ಅರ್ಥವನ್ನು ಅಕ್ಷರಾರ್ಥವಾಗಿ ಹೇಳಬೇಕಾಗಿರುತ್ತದೆ, ಅಂದರೆ “ಆಲೋಚನೆಗಳು” ಅಥವಾ “ಭಾವನೆಗಳು” ಅಥವಾ “ಆಸೆಗಳು” ಎಂದು ಹೇಳಬೇಕಾಗಿರುತ್ತದೆ.
- ಸಂದರ್ಭಾನುಗುಣವಾಗಿ, “ನನ್ನ ಹೃದಯವೆಲ್ಲಾ” ಅಥವಾ “ನನ್ನ ಸಂಪೂರ್ಣ ಹೃದಯದೊಂದಿಗೆ” ಎನ್ನುವ ಮಾತುಗಳನ್ನು “ನನ್ನ ಪೂರ್ಣ ಶಕ್ತಿಯಿಂದ” ಅಥವಾ “ಸಂಪೂರ್ಣವಾದ ಪ್ರತಿಷ್ಠೆಯಿಂದ” ಅಥವಾ “ಸಂಪೂರ್ಣವಾಗಿ” ಅಥವಾ “ಸಂಪೂರ್ಣವಾದ ಬದ್ಧತೆಯೊಂದಿಗೆ” ಎಂದೂ ಅನುವಾದ ಮಾಡಬಹುದು.
- “ಇದನ್ನು ಹೃದಯಕ್ಕೆ ತೆಗೆದುಕೋ” ಎನ್ನುವ ಮಾತನ್ನು “ಇದನ್ನು ತುಂಬಾ ಗಂಭೀರವಾಗಿ ತೆಗೆದುಕೋ” ಅಥವಾ “ಇದರ ಕುರಿತಾಗಿ ಜಾಗೃತಿಯಾಗಿ ಆಲೋಚನೆ ಮಾಡು” ಎಂದೂ ಅನುವಾದ ಮಾಡಬಹುದು.
- ‘ಕಠಿಣ-ಹೃದಯವಿದ್ದವನು” ಎನ್ನುವ ಮಾತನ್ನು “ಮೊಂಡುತನದಿಂದ ತಿರಸ್ಕಾರ ಮಾಡುವವನು” ಅಥವಾ “ವಿಧೇಯತೆ ತೋರಿಸುವುದಕ್ಕೆ ತಿರಸ್ಕರಿಸುವುದು” ಅಥವಾ “ನಿರಂತರವಾಗಿ ದೇವರಿಗೆ ಅವಿಧೇಯತೆಯನ್ನು ತೋರಿಸುವುದು” ಎಂದೂ ಅನುವಾದ ಮಾಡಬಹುದು.
- “ಹೃದಯ ಮುರಿದವನು” ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನಗಳಲ್ಲಿ “ತುಂಬಾ ಬಾಧೆ” ಅಥವಾ “ಆಳವಾಗಿ ನೋಯಿಸಲ್ಪಟ್ಟ ಭಾವನೆ” ಎನ್ನುವ ಪದಗಳು ಸೇರಿಸಲ್ಪಟ್ಟಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಕಠಿಣ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.03:17
- 1 ಥೆಸ್ಸ.02:04
- 2 ಥೆಸ್ಸ.03:13-15
- ಅಪೊ.ಕೃತ್ಯ.08:22
- ಅಪೊ.ಕೃತ್ಯ.15:09
- ಲೂಕಾ.08:15
- ಮಾರ್ಕ.02:06
- ಮತ್ತಾಯ.05:08
- ಮತ್ತಾಯ.22:37

ಪದ ಡೇಟಾ:

- Strong's: H1079, H2436, H2504, H2910, H3519, H3629, H3820, H3821, H3823, H3824, H3825, H3826, H4578, H5315, H5640, H7130, H7307, H7356, H7907, G674, G1282, G1271, G2133, G2588, G2589, G4641, G4698, G5590

ಹೆಚ್ಚಿಸು, ಹೆಚ್ಚಿಸಲಾಗಿದೆ, ಹೆಚ್ಚಿಸುವುದು, ಮೇಲಕ್ಕೆ ಎತ್ತುವುದು

ಪದದ ಅರ್ಥವಿವರಣೆ:

ಹೆಚ್ಚಿಸು ಎನ್ನುವ ಪದಕ್ಕೆ ಒಬ್ಬರನ್ನು ಹೆಚ್ಚಾಗಿ ಪ್ರಶಂಸಿಸುವುದು ಮತ್ತು ಹೆಚ್ಚಾಗಿ ಗೌರವಿಸುವುದು ಎಂದರ್ಥ. ಉನ್ನತ ಸ್ಥಾನದಲ್ಲಿ ಒಬ್ಬರನ್ನು ಇರಿಸುವುದು ಎನ್ನುವ ಅರ್ಥವೂ ಈ ಪದಕ್ಕೆ ಇದೆ.

- ಸತ್ಯವೇದದಲ್ಲಿ, "ಹೆಚ್ಚಿಸು" ಎನ್ನುವ ಪದವು ದೇವರನ್ನು ಹೆಚ್ಚಿಸುವುದಕ್ಕೋಸ್ಕರವೆ ಉಪಯೋಗಿಸಲ್ಪಟ್ಟಿರುತ್ತದೆ.
- ಒಬ್ಬ ವ್ಯಕ್ತಿ ತನ್ನನ್ನು ತಾನು ಹೆಚ್ಚಿಸಿಕೊಂಡರೆ, ಅದಕ್ಕೆ ಅವನು ಅಹಂಕಾರ ವಿಧಾನದಲ್ಲಿ ಅಥವಾ ಗರ್ವದಿಂದ ತನ್ನ ಕುರಿತು ಆಲೋಚನೆ ಮಾಡಿಕೊಳ್ಳುವುದು ಎಂದರ್ಥ.

ಅನುವಾದ ಸಲಹೆಗಳು:

- "ಹೆಚ್ಚಿಸು" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನದಲ್ಲಿ "ಹೆಚ್ಚಾಗಿ ಪ್ರಶಂಸಿಸು" ಅಥವಾ "ಘನವಾಗಿ ಗೌರವಿಸು" ಅಥವಾ "ಸ್ತೋತ್ರ ಮಾಡು" ಅಥವಾ "ಉನ್ನತವಾಗಿ ಮಾತನಾಡು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಕೆಲವೊಂದು ಸಂದರ್ಭಗಳಲ್ಲಿ "ಉನ್ನತ ಸ್ಥಾನದಲ್ಲಿರಿಸು" ಅಥವಾ "ಹೆಚ್ಚಾದ ಗೌರವವನ್ನು ಕೊಡು" ಅಥವಾ "ಗರ್ವದಿಂದ ಮಾತನಾಡು" ಎಂದು ಅರ್ಥ ಬರುವ ಮಾತುಗಳೊಂದಿಗೆ ಅನುವಾದ ಮಾಡಬಹುದು.
- "ನಿನ್ನನ್ನು ನೀನು ಹೆಚ್ಚಿಸಿಕೊಳ್ಳಬೇಡ" ಎನ್ನುವ ಮಾತನ್ನು "ನಿನ್ನ ಕುರಿತಾಗಿ ನೀನು ಹೆಚ್ಚಾಗಿ ಆಲೋಚನೆ ಮಾಡಿಕೊಳ್ಳಬೇಡ" ಅಥವಾ "ನಿನ್ನ ಕುರಿತಾಗಿ ಬಡಿವಾರ ಮಾಡಬೇಡ" ಎಂದೂ ಅನುವಾದ ಮಾಡಬಹುದು.
- ತಮ್ಮನ್ನು ತಾವು ಹೆಚ್ಚಿಸಿಕೊಳ್ಳುವವರು" ಎನ್ನುವ ಮಾತಿಗೆ "ಅವರ ಕುರಿತಾಗಿ ಅವರು ಗರ್ವದಿಂದ ಆಲೋಚನೆ ಮಾಡಿಕೊಳ್ಳುವವರು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸ್ತುತಿ ಮಾಡು, ಆರಾಧನೆ, ಮಹಿಮೆ, ಹೊಗಳಿಕೆ, ಗರ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.05:5-7
- 2 ಸಮು.22:47-49
- ಅಪೊ.ಕೃತ್ಯ.05:29-32
- ಫಿಲಿಪ್ಪ.02:9-11
- ಕೀರ್ತನೆ.018:46-47

ಪದ ಡೇಟಾ:

- Strong's: H1361, H4984, H5375, H5549, H5927, H7311, H7426, H7682, G1869, G5229, G5251, G5311, G5312

ಹೆಮ್ಮೆಪಡು, ಹೆಚ್ಚಳಪಡುವುದು

ಪದದ ಅರ್ಥವಿವರಣೆ:

“ಹೆಮ್ಮೆಪಡು” ಎನ್ನುವ ಪದಕ್ಕೆ ಯಾವುದಾದರೊಂದರ ಕುರಿತಾಗಿ ಅಥವಾ ಯಾರಾದರೊಬ್ಬರ ಕುರಿತಾಗಿ ಹೆಗ್ಗಳಿಕೆಯಿಂದ ಮಾತನಾಡಿಕೊಳ್ಳುವುದು ಎಂದರ್ಥ. ಅನೇಕಬಾರಿ ಈ ಪದಕ್ಕೆ ಒಬ್ಬರು ತನ್ನ ಕುರಿತಾಗಿ ಜಂಭ ಕೊಚ್ಚಿಕೊಳ್ಳುವುದು ಎಂದರ್ಥ.

- “ಹೆಚ್ಚಳಪಡುವವನು” ತನ್ನ ಕುರಿತಾಗಿ ತಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ.
- ಇಸ್ರಾಯೇಲ್ಯರು ತಮ್ಮ ವಿಗ್ರಹಗಳಲ್ಲಿ "ಹೆಮ್ಮೆಪಟ್ಟದ್ದರಿಂದ" ದೇವರು ಅವರನ್ನು ಖಂಡಿಸಿದನು. ಅವರು ನಿಜವಾದ ದೇವರನ್ನು ಬಿಟ್ಟು ಸುಳ್ಳು ದೇವರುಗಳನ್ನು ಅಹಂಕಾರದಿಂದ ಆರಾಧನೆ ಮಾಡಿದರು.
- ಜನರು ತಮ್ಮ ಸಿರಿ, ತಮ್ಮ ಬಲ, ತಮ್ಮ ಹೊಲಗದ್ದೆಗಳು ಮತ್ತು ತಮ್ಮ ಕಾನೂನುಗಳ ಕುರಿತಾಗಿ ಹೆಮ್ಮೆಪಡುವ ಜನರ ಕುರಿತಾಗಿ ಸತ್ಯವೇದವು ಮಾತನಾಡುತ್ತದೆ. ಇದರಿಂದ ಅವರು ಈ ಎಲ್ಲಾ ವಿಷಯಗಳ ಕುರಿತಾಗಿ ಹೆಮ್ಮೆ ಪಡುತ್ತಿದ್ದಾರೆಂದು ಇದರ ಅರ್ಥವಾಗಿರುತ್ತದೆ ಮತ್ತು ಈ ಎಲ್ಲಾವುಗಳನ್ನು ಕೊಡುವವರು ದೇವರೇ ಎನ್ನುವ ಜ್ಞಾನವನ್ನು ಹೊಂದಿರುವುದಿಲ್ಲವೆಂದು ತಿಳಿದು ಬರುತ್ತದೆ.
- ಬದಲಾಗಿ, ಇಸ್ರಾಯೇಲ್ಯರು ದೇವರನ್ನು ಅರಿತಿದ್ದಾರೆನ್ನುವ ಸತ್ಯವನ್ನು ಕುರಿತಾಗಿ “ಹೆಮ್ಮೆಪಡ” ಬೇಕು ಅಥವಾ ಗರ್ವದಿಂದರಬೇಕೆಂದು ದೇವರು ಒತ್ತಾಯಿಸಿದನು.
- ಕರ್ತನಲ್ಲಿ ಹೆಮ್ಮೆ ಪಡುವುದರ ಕುರಿತಾಗಿ ಅಪೊಸ್ತಲನಾದ ಪೌಲನು ಕೂಡ ಮಾತನಾಡುತ್ತಿದ್ದಾನೆ, ಆತನು ಅವರಿಗೆ ಮಾಡಿದ ಎಲ್ಲಾ ಉಪಕಾರಗಳಿಗಾಗಿ ದೇವರಲ್ಲಿ ಆನಂದಪಟ್ಟು ಮತ್ತು ಆತನಿಗೆ ಕೃತಜ್ಞತೆಯಿಂದ ಇರಬೇಕೆಂದು ಇದರ ಅರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- “ಹೆಮ್ಮೆಪಡು” ಎನ್ನುವ ಪದವನ್ನು ಅನುವಾದ ಇತರ ವಿಧಾನಗಳಲ್ಲಿ “ಜಂಭಕೊಚ್ಚು” ಅಥವಾ “ಗರ್ವದಿಂದ ಮಾತಾಡು” ಅಥವಾ “ಗರ್ವದಿಂದಿರು” ಎನ್ನುವ ಪದಗಳು ಒಳಗೊಂಡಿರುತ್ತವೆ.
- “ಹೆಚ್ಚಳಪಡುವುದು” ಎನ್ನುವ ಮಾತು “ಗರ್ವದ ಮಾತುಗಳಿಂದ ತುಂಬಿರುವುದು” ಅಥವಾ “ಅಹಂಕಾರದಿಂದಿರುವುದು” ಅಥವಾ “ಒಬ್ಬರ ಕುರಿತಾಗಿ ಗರ್ವದಿಂದ ಮಾತನಾಡುವುದು” ಎನ್ನುವ ಮಾತುಗಳಿಂದಲೂ ಅನುವಾದ ಮಾಡಬಹುದು.
- ದೇವರನ್ನು ತಿಳಿದುಕೊಳ್ಳುವುದರ ಕುರಿತಾಗಿ ಅಥವಾ ಆತನನ್ನು ಹೆಚ್ಚಿಸುವುದರ ಸಂದರ್ಭದಲ್ಲಿ, “ಹೆಮ್ಮೆಪಡು” ಅಥವಾ “ಹೆಚ್ಚಿಸು” ಅಥವಾ “ಆತನ ಕುರಿತಾಗಿ ಆನಂದಪಡು” ಅಥವಾ “ಆತನ ಕುರಿತು ಆತನಿಗೆ ವಂದನೆಗಳನ್ನು ಸಲ್ಲಿಸು” ಎಂದೂ ಅನುವಾದ ಮಾಡಬಹುದು.
- “ಗರ್ವ” ಎನ್ನುವದಕ್ಕೆ ಕೆಲವೊಂದು ಭಾಷೆಗಳಲ್ಲಿ ಎರಡು ಪದಗಳು ಇರುತ್ತವೆ: ಒಂದು ಋಣಾತ್ಮಕವಾದದ್ದು, ಅಹಂಕಾರದಿಂದಿರುವ ಅರ್ಥವು ಬರುವ ಶಬ್ದ, ಮತ್ತು ಇನ್ನೊಂದು ಧನಾತ್ಮಕವಾದದ್ದು, ಒಬ್ಬರ ಕೆಲಸ, ಕುಟುಂಬ ಅಥವಾ ದೇಶದ ಕುರಿತಾಗಿ ಹೆಮ್ಮೆ ಪಡುವ ಅರ್ಥ ಬರುವಂಥದ್ದು.

ಅನುವಾದ ಸಲಹೆಗಳು:

(ಈ ಪದಗಳನ್ನು ಸಹ ನೋಡಿರಿ : ಗರ್ವ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.20:11
- 2 ತಿಮೊಥೆ.03:1-4
- ಯಾಕೋಬ.03:14
- ಯಾಕೋಬ.04:15-17
- ಕೀರ್ತನೆ.044:08

ಪದ ಡೇಟಾ:

- Strong's: H1984, H3235, H6286, G212, G213, G174O, G2620, G2744, G2745, G2746, G3166

ಹೆಸರು

ಪದದ ಅರ್ಥವಿವರಣೆ:

"ಹೆಸರು" ಎಂಬ ಪದವು ನಿರ್ದಿಷ್ಟ ವ್ಯಕ್ತಿ ಅಥವಾ ವಸ್ತುವನ್ನು ಕರೆಯುವ ಪದವನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ "ಹೆಸರು" ಎನ್ನುವ ಪದವು ಹಲವಾರು ವಿಭಿನ್ನ ಪರಿಕಲ್ಪನೆಗಳನ್ನು ಉಲ್ಲೇಖಿಸಲು ಹಲವಾರು ರೀತಿಯಲ್ಲಿ ಬಳಸಲಾಗುತ್ತದೆ.

- ಕೆಲವು ಸಂದರ್ಭಗಳಲ್ಲಿ, "ಹೆಸರು" ವ್ಯಕ್ತಿಯ ಖ್ಯಾತಿಯನ್ನು ಉಲ್ಲೇಖಿಸಬಹುದು, "ನಾವು ನಮಗಾಗಿ ಹೆಸರನ್ನು ಮಾಡೋಣ"ದಲ್ಲಿರುವ ಪ್ರಕಾರ.
- "ಹೆಸರು" ಎನ್ನುವ ಪದವು ಯಾವುದಾದರೊಂದನ್ನು ಜ್ಞಾಪಕ ಮಾಡಿಕೊಳ್ಳುವುದನ್ನು ಸೂಚಿಸುತ್ತದೆ. ಉದಾಹರಣೆಗೆ, "ವಿಗ್ರಹಗಳ ಹೆಸರುಗಳನ್ನು ತೆಗೆದುಹಾಕು" ಎನ್ನುವ ಮಾತಿಗೆ ವಿಗ್ರಹಗಳೆಲ್ಲವನ್ನು ನಾಶಮಾಡು ಎಂದರ್ಥ, ಇದರಿಂದ ಅವುಗಳನ್ನು ಎಂದಿಗೂ ಜ್ಞಾಪಕಮಾಡಿಕೊಳ್ಳಬಾರದು ಅಥವಾ ಆರಾಧನೆ ಮಾಡಬಾರದು ಎಂದರ್ಥ.
- "ದೇವರ ಹೆಸರಿನಲ್ಲಿ" ಮಾತನಾಡುವುದು ಎಂದರೆ ಆತನ ಶಕ್ತಿ ಮತ್ತು ಅಧಿಕಾರಗಳೊಂದಿಗೆ ಮಾತನಾಡುವುದು ಅಥವಾ ಆತನ ಪ್ರತಿನಿಧಿಯಾಗಿ ಮಾತನಾಡುವುದು ಎಂದರ್ಥ.
- ಯಾರಾದರೊಬ್ಬರ "ಹೆಸರು" ಎನ್ನುವ ಮಾತು ಸಂಪೂರ್ಣವಾಗಿ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ, ಉದಾಹರಣೆಗೆ, "...ಆಕಾಶದ ಕೆಳಗೆ ಮನುಷ್ಯರಿಗೆ ಕೊಟ್ಟಿರುವ ಮತ್ತ್ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ." (ನೋಡಿರಿ: ಲಾಕ್ಷಣಿಕ ಪ್ರಯೋಗ)

ಅನುವಾದ ಸಲಹೆಗಳು:

- "ಆತನ ಒಳ್ಳೇಯ ಹೆಸರು" ಎನ್ನುವ ಮಾತನ್ನು "ಆತನ ಒಳ್ಳೇಯ ಖ್ಯಾತಿ" ಎಂದೂ ಅನುವಾದ ಮಾಡಬಹುದು.
- "ಯಾರಾದರೊಬ್ಬರ ಅಥವಾ ಯಾವುದಾದರೊಂದರ ಹೆಸರಿನಲ್ಲಿ" ಎನಾದರೊಂದನ್ನು ಮಾಡುವುದು ಎನ್ನುವುದನ್ನು "ಅಧಿಕಾರದೊಂದಿಗೆ' ಅಥವಾ "ಅನುಮತಿಯೊಂದಿಗೆ" ಅಥವಾ ಆ ವ್ಯಕ್ತಿಯ "ಪ್ರತಿನಿಧಿ" ಎಂದೂ ಅನುವಾದ ಮಾಡಬಹುದು.
- "ನಾವೆಲ್ಲರೂ ಹೆಸರುವಾಸಿಯಾಗೋಣ" ಎನ್ನುವ ಮಾತನ್ನು "ನಮ್ಮ ಕುರಿತಾಗಿ ಅನೇಕ ಜನರು ತಿಳಿದುಕೊಳ್ಳುವಂತೆ ಮಾಡುವುದು" ಅಥವಾ "ನಾವು ತುಂಬಾ ಪ್ರಾಮುಖ್ಯವಾದವರೆಂದು ಎಲ್ಲಾ ಜನರು ಆಲೋಚನೆ ಮಾಡುವಂತೆ ಮಾಡು" ಎಂದೂ ಅನುವಾದ ಮಾಡಬಹುದು.
- "ಆತನ ಹೆಸರನ್ನಿಟ್ಟು ಕರೆ" ಎನ್ನುವ ಮಾತನ್ನು "ಅವನಿಗೆ ಹೆಸರಿಡು" ಅಥವಾ "ಒಂದು ಹೆಸರನ್ನು ಅವನಿಗೆ ಕೊಡು" ಎಂದೂ ಅನುವಾದ ಮಾಡಬಹುದು.
- "ನಿನ್ನ ಹೆಸರನ್ನು ಪ್ರೀತಿಸುವ ಪ್ರತಿಯೊಬ್ಬರು" ಎನ್ನುವ ಮಾತನ್ನು "ನಿನ್ನನ್ನು ಪ್ರೀತಿಸುವ ಪ್ರತಿಯೊಬ್ಬರು" ಎಂದು ಅನುವಾದ ಮಾಡಬಹುದು.
- "ವಿಗ್ರಹಗಳ ಹೆಸರುಗಳನ್ನು ತೆಗೆದುಹಾಕು" ಎನ್ನುವ ಮಾತನ್ನು "ಅನ್ಯ ವಿಗ್ರಹಗಳಿಂದ ಬಿಡುಗಡೆ ಹೊಂದು, ಇದರಿಂದ ಅವುಗಳನ್ನು ತಿರುಗಿ ನೆನಸಿಕೊಳ್ಳಬಾರದು" ಅಥವಾ "ಜನರು ಸುಳ್ಳು ದೇವರುಗಳನ್ನು ಆರಾಧನೆ ಮಾಡದಂತೆ ಮಾಡು" ಅಥವಾ "ಎಲ್ಲಾ ವಿಗ್ರಹಗಳನ್ನು ಸಂಪೂರ್ಣವಾಗಿ ತೆಗೆದುಹಾಕು, ಇದರಿಂದ ಜನರು ಅವುಗಳ ಕುರಿತಾಗಿ ಎಂದಿಗೂ ಆಲೋಚನೆ ಮಾಡುವುದಿಲ್ಲ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕರೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.02:12
- 2 ತಿಮೊಥೆ.02:19
- ಅಪೊ.ಕೃತ್ಯ.04:07
- ಅಪೊ.ಕೃತ್ಯ.04:12
- ಅಪೊ.ಕೃತ್ಯ.09:27
- ಆದಿ.12:1-02
- ಆದಿ.35:10
- ಮತ್ತಾಯ.18:05

ಪದ ಡೇಟಾ:

- Strong's: H5344, H7121, H7761, H8034, H8036, G2564, G3686, G3687, G5122

ಹೊಸದಾಗಿ ಹುಟ್ಟುವುದು, ದೇವರಿಂದ ಹುಟ್ಟುವುದು, ಹೊಸ ಜನ್ಮ

ಪದದ ಅರ್ಥವಿವರಣೆ:

"ಹೊಸದಾಗಿ ಹುಟ್ಟುವುದು" ಎನ್ನುವ ಪದವು ಮೊಟ್ಟಮೊದಲು ಕ್ರಿಸ್ತಯೇಸು ಉಪಯೋಗಿಸಿರುತ್ತಾರೆ, ಇದಕ್ಕೆ ಆತ್ಮೀಯಕವಾಗಿ ಸತ್ತಂತ ಒಬ್ಬ ಮನುಷ್ಯನನ್ನು ಆತ್ಮೀಯಕವಾಗಿ ತಿರುಗಿ ಬದುಕುವಂತೆ ಮಾಡುವ ದೇವರ ಕ್ರಿಯೆ ಎಂದರ್ಥ. "ದೇವರಿಂದ ಹುಟ್ಟುವುದು" ಮತ್ತು "ಆತ್ಮನಿಂದ ಜನಿಸುವುದು" ಎನ್ನುವ ಪದಗಳು ಕೂಡ ಒಬ್ಬ ವ್ಯಕ್ತಿಗೆ ಹೊಸದಾದ ಆತ್ಮೀಕ ಜೀವನ ಕೊಡಲ್ಪಟ್ಟಿದೆ ಎನ್ನುವದನ್ನು ಸೂಚಿಸುತ್ತವೆ.

- ಸರ್ವ ಜನರು ಆತ್ಮೀಯಕತೆಯಲ್ಲಿ ಸತ್ತವರಾಗಿ ಜನಿಸಿದ್ದರು ಮತ್ತು ಅವರು ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿದಾಗ "ಹೊಸ ಜನ್ಮವನ್ನು" ಪಡೆದರು.
- ಅತ್ಮೀಯಕವಾಗಿ ಹೊಸ ಜನ್ಮದ ಆ ಕ್ಷಣದಲ್ಲಿಯೇ ಹೊಸ ವಿಶ್ವಾಸಿಯಲ್ಲಿ ದೇವರ ಪವಿತ್ರಾತ್ಮನು ನಿವಾಸವಾಗಿರಲು ಪ್ರಾರಂಭಿಸುತ್ತಾನೆ ಮತ್ತು ತನ್ನ ಜೀವನದಲ್ಲಿ ಒಳ್ಳೆಯ ಆತ್ಮೀಯಕವಾದ ಫಲಗಳನ್ನು ಕೊಡುವುದಕ್ಕೆ ಆ ವ್ಯಕ್ತಿಯನ್ನು ಬಲಪಡಿಸುತ್ತಾನೆ.
- ಒಬ್ಬ ವ್ಯಕ್ತಿಯು ಹೊಸದಾಗಿ ಹುಟ್ಟಿ ಆತನ ಮಗನಾಗುವಂತೆ ಮಾಡುವುದು ದೇವರ ಕೆಲಸವಾಗಿದೆ.

ಅನುವಾದ ಸಲಹೆಗಳು:

- "ಹೊಸದಾಗಿ ಹುಟ್ಟುವುದು" ಎನ್ನುವ ಮಾತನ್ನು ಅನುವಾದಿಸುವ ಬೇರೊಂದು ವಿಧಾನಗಳಲ್ಲಿ "ಪುನಃ ಹುಟ್ಟುವುದು" ಅಥವಾ "ಆತ್ಮೀಯಕವಾಗಿ ಜನಿಸುವುದು" ಎನ್ನುವ ಪದಗಳು ಒಳಗೊಂಡಿರುತ್ತವೆ.
- ಈ ಮಾತನ್ನು ಅಕ್ಷರಾರ್ಥವಾಗಿ ಅನುವಾದ ಮಾಡುವುದು ಒಳ್ಳೆಯದು ಮತ್ತು ಹುಟ್ಟುವ ಸಮಯದಲ್ಲಿ ಉಪಯೋಗಿಸುವ ಸಾಧಾರಣ ಭಾಷೆಯ ಪದವನ್ನು ಉಪಯೋಗಿಸಿರಿ.
- "ಹೊಸ ಜನ್ಮ" ಎನ್ನುವ ಮಾತು "ಆತ್ಮೀಕ ಜನನ" ಎಂದೂ ಬಹುಶಃ ಅನುವಾದ ಮಾಡಬಹುದು.
- "ದೇವರಿಂದ ಹುಟ್ಟುವುದು" ಎನ್ನುವ ಮಾತನ್ನು "ಹೊಸದಾಗಿ ಹುಟ್ಟಿದ ಶಿಶುವಿನಂತೆ ಹೊಸ ಜೀವನವನ್ನು ಹೊಂದುವುದಕ್ಕೆ ದೇವರೇ ಕಾರಣವಾಗಿರುತ್ತಾನೆ" ಅಥವಾ "ದೇವರಿಂದ ಹೊಸ ಜೀವನ ಕೊಡಲ್ಪಟ್ಟಿದೆ" ಎಂದೂ ಅನುವಾದ ಮಾಡಬಹುದು.
- ಇದೇ ರೀತಿಯಾಗಿ, "ಆತ್ಮನಿಂದ ಹುಟ್ಟುವುದು" ಎನ್ನುವ ಮಾತನ್ನೂ "ಪವಿತ್ರಾತ್ಮನಿಂದ ಹೊಸ ಜೀವನ ಕೊಡಲ್ಪಟ್ಟಿದೆ" ಅಥವಾ "ದೇವರ ಮಗುವಾಗುವುದಕ್ಕೆ ಪವಿತ್ರಾತ್ಮನ ಮೂಲಕ ಬಲವನ್ನು ಹೊಂದಿದ್ದಾನೆ" ಅಥವಾ "ಈಗಲೇ ಹುಟ್ಟಿದ ಶಿಶುವಿನಂತೆ ಹೊಸ ಜೀವನವನ್ನು ಹೊಂದಲು ಪವಿತ್ರಾತ್ಮ ದೇವರೇ ಕಾರಣವಾಗಿರುತ್ತಾರೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪವಿತ್ರಾತ್ಮ, ರಕ್ಷಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.03:9
- 1 ಪೇತ್ರ.01:03
- 1 ಪೇತ್ರ.01:23
- ಯೋಹಾನ.03:04
- ಯೋಹಾನ.03:07
- ತೀತ.03:05

ಪದ ಡೇಟಾ:

- Strong's: G313, G509, G1080, G3824

translationWords

Names

ಅಂತಿಯೋಕ್ಯ

ಸತ್ಯಾಂಶಗಳು:

ಅಂತಿಯೋಕ್ಯ ಎನ್ನುವದು ಹೊಸ ಒಡಂಬಡಿಕೆಯಲ್ಲಿ ಎರಡು ಪಟ್ಟಣಗಳ ಹೆಸರಾಗಿರುತ್ತದೆ. ಒಂದು ಸಿರಿಯಾದಲ್ಲಿದೆ, ಇದು ಮೆಡಿಟರೆನಿಯನ್ ಸಮುದ್ರದ ಕರಾವಳಿ ದಿಕ್ಕಿಗೆ ತುಂಬಾ ಹತ್ತಿರದಲ್ಲಿರುತ್ತದೆ. ಇನ್ನೊಂದು ಪಿಸಿದ್ಯ ರೋಮಾ ಸೀಮೆಯಲ್ಲಿದೆ, ಇದು ಕೊಲೊಸ್ಸ ಪಟ್ಟಣಕ್ಕೆ ಹತ್ತಿರದಲ್ಲಿರುತ್ತದೆ.

- ಸಿರಿಯಾ ಅಂತಿಯೋಕ್ಯದಲ್ಲಿರುವ ಸ್ಥಳೀಯ ಸಭೆಯು ಯೇಸುವಿನಲ್ಲಿ ನಂಬಿದವರನ್ನು "ಕ್ರೈಸ್ತರೆಂದು" ಕರೆದ ಮೊಟ್ಟ ಮೊದಲನೇ ಸ್ಥಳ. ಅನ್ಯರನ್ನು ಸುವಾರ್ತೆಯಿಂದ ತಲುಪುವುದಕ್ಕೆ ಮಿಷನರೀಗಳನ್ನು ಕಳುಹಿಸುವುದರಲ್ಲಿ ಈ ಸಭೆಯು ತುಂಬಾ ಹೆಚ್ಚಾದ ಕೆಲಸವನ್ನು ಮಾಡಿತ್ತು.
- ಕ್ರೈಸ್ತರಾಗುವುದಕ್ಕೆ ಯೆಹೂದ್ಯರ ನಿಯಮ ನಿಬಂಧನೆಗಳನ್ನು ಅನುಸರಿಸಬೇಕಾಗಿರುವುಡಿಲ್ಲವೆಂದು ತಿಳಿದುಕೊಳ್ಳುವುದಕ್ಕೆ ಯೆರೂಸಲೇಮಿನಲ್ಲಿರುವ ಸಭೆಯ ನಾಯಕರು ಸಿರಿಯಾದಲ್ಲಿರುವ ಅಂತಿಯೋಕ್ಯ ಸಭೆಯಲ್ಲಿರುವ ವಿಶ್ವಾಸಿಗಳಿಗೆ ಒಂದು ಪತ್ರವನ್ನು ಕಳುಹಿಸಿದರು
- ಪೌಲ, ಬಾರ್ನಬ ಮತ್ತು ಯೋಹಾನ ಮಾರ್ಕರವರು ಸುವಾರ್ತೆಯನ್ನು ಹಂಚುವುದಕ್ಕೆ ಪಿಸಿದ್ಯದಲ್ಲಿರುವ ಅಂತಿಯೋಕ್ಯಗೆ ಪ್ರಯಾಣ ಮಾಡಿದರು. ಇತರ ಪಟ್ಟಣಗಳಿಂದ ಬಂದ ಕೆಲವರು ಯೆಹೂದ್ಯರು ಸಮಸ್ಯೆಯನ್ನುಂಟು ಮಾಡುವುದಕ್ಕೆ ಬಂದಿದ್ದರು, ಮತ್ತು ಅವರು ಪೌಲನನ್ನು ಕೊಲ್ಲುವುದಕ್ಕೆ ಪ್ರಯತ್ನ ಮಾಡಿದರು. ಆದರೆ ಯೆಹೂದ್ಯರು ಮತ್ತು ಅನ್ಯರೆಲ್ಲರೂ ಮತ್ತು ಇತರ ಅನೇಕರು ಬೋಧನೆಯನ್ನು ಕೇಳಿ, ಯೇಸುವಿನಲ್ಲಿ ನಂಬಿಕೆ ಇಟ್ಟರು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾರ್ನಬ, ಕೊಲೊಸ್ಸ, ಯೋಹಾನ ಮಾರ್ಕ, ಪೌಲ, ಸೀಮೆ, ರೋಮಾ, ಸಿರಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.03:10-13
- ಅಪೊ.ಕೃತ್ಯ.06:5-6
- ಅಪೊ.ಕೃತ್ಯ.11:19-21
- ಅಪೊ.ಕೃತ್ಯ.11:25-26
- ಗಲಾತ್ಯ.02:11-12

ಪದ ಡೇಟಾ:

- Strong's: G491

ಅಂದ್ರೆಯ

ಸತ್ಯಾಂಶಗಳು:

ಅಂದ್ರೆಯನು ಯೇಸು ಆರಿಸಿಕೊಂಡಿರುವ ಹನ್ನೆರಡು ಮಂದಿ ಶಿಷ್ಯರುಗಳಲ್ಲಿ ಒಬ್ಬರಾಗಿದ್ದರು (ಇವರು ಅಪೊಸ್ತಲರು ಎಂದು ಕರೆಯಲ್ಪಟ್ಟಿದ್ದರು).

- ಅಂದ್ರೆಯನ ಸಹೋದರ ಸೀಮೋನ ಪೇತ್ರನಾಗಿದ್ದನು. ಇವರಿಬ್ಬರು ಮೀನುಗಾರರಾಗಿದ್ದರು.
- ಯೇಸು ಪೇತ್ರ ಮತ್ತು ಅಂದ್ರೆಯರನ್ನು ತನ್ನ ಶಿಷ್ಯರಾಗಿರಲು ಕರೆದಾಗ, ಅವರು ಗಲಿಲಾಯ ಸಮುದ್ರದಲ್ಲಿ ಮೀನುಗಳನ್ನು ಹಿಡಿಯುತ್ತಿದ್ದರು.
- ಪೇತ್ರನು ಮತ್ತು ಅಂದ್ರೆಯನು ಯೇಸುವನ್ನು ಭೇಟಿಯಾಗುವುದಕ್ಕೆ ಮುಂಚಿತವಾಗಿ, ಅವರು ದೀಕ್ಷಾಸ್ನಾನ ಕೊಡುವ ಯೋಹಾನ ಶಿಷ್ಯರಾಗಿದ್ದರು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲರ, ಶಿಷ್ಯ, ಹನ್ನೆರಡು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.01:12-14
- ಯೋಹಾನ.01:40-42
- ಮಾರ್ಕ.01:16-18
- ಮಾರ್ಕ.01:29-31
- ಮಾರ್ಕ.03:17-19
- ಮತ್ತಾಯ.04:18-20
- ಮತ್ತಾಯ.10:2-4

ಪದ ಡೇಟಾ:

- Strong's: G406

ಅಕ್ವಿಲ

ಸತ್ಯಾಂಶಗಳು:

ಅಕ್ವಿಲ ಕಪ್ಪು ಸಮುದ್ರ ದಕ್ಷಿಣ ಕರಾವಳಿಯ ಪ್ರಾಂತ್ಯವಾಗಿರುವ, ಪೊಂತ ಸೀಮೆಯಿಂದ ಬಂದಿರುವ ಯೂದಾ ಕ್ರೈಸ್ತನಾಗಿದ್ದನು.

- ಅಕ್ವಿಲ ಮತ್ತು ಪ್ರಿಸ್ಕಿಲ್ಲ ರವರು ಇಟಲಿಯ ರೋಮಾದಲ್ಲಿ ಸ್ವಲ್ಪಕಾಲ ನಿವಾಸವಾಗಿದ್ದರು, ಆದರೆ ಆದಾದನಂತರ ರೋಮಾ ಚಕ್ರವರ್ತಿ ಕ್ಲೌದ್ಯನು ರೋಮಾ ನಗರವನ್ನು ಬಿಟ್ಟು ಹೋಗಬೇಕೆಂದು ಎಲ್ಲಾ ಯೆಹೂದ್ಯರಿಗೆ ಅಪ್ಪಣೆ ಕೊಟ್ಟನು.
- ಇದಾದನಂತರ ಅಕ್ವಿಲ ಮತ್ತು ಪ್ರಿಸ್ಕಿಲ್ಲ ರವರು ಕೊರಿಂಥಗೆ ಪ್ರಯಾಣಿಸಿದರು, ಅಲ್ಲಿಯೇ ಅವರು ಅಪೊಸ್ತಲನಾದ ಪೌಲನನ್ನು ಭೇಟಿಯಾದರು.
- ಅವರು ಪೌಲನ ಜೊತೆಗೆ ಗುಡಾರಗಳನ್ನು ಮಾಡುವ ಕಸುಬನ್ನು ಮಾಡುತ್ತಿದ್ದರು, ಅಷ್ಟೇಅಲ್ಲದೆ, ಅವರು ತನ್ನ ಸೇವೆಯ ಕೆಲಸದಲ್ಲಿಯೂ ಸಹಾಯ ಮಾಡಿದ್ದರು.
- ಅಕ್ವಿಲ ಮತ್ತು ಪ್ರಿಸ್ಕಿಲ್ಲರವರು ಯೇಸುವಿನ ಕುರಿತಾದ ಸತ್ಯವನ್ನು ವಿಶ್ವಾಸಿಗಳಿಗೆ ತಿಳಿಸಿದ್ದರು; ಆ ವಿಶ್ವಾಸಿಗಳಲ್ಲಿ ಒಬ್ಬರು ಬೋಧನೆ ಮಾಡುವ ವರವನ್ನು ಪಡೆದ ಅಪೊಲ್ಲೋಸ್ ಎನ್ನುವ ಹೆಸರಿನವನಾಗಿದ್ದನು.

(ಅನುವಾದ ಸಲಹೆಗಳು: /ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ತೋರಿಕೆ, ಶ್ರಮೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.16:19-20
- 2 ತಿಮೊಥೆ.04:19-22
- ಅಪೊ.ಕೃತ್ಯ.18:1-3
- ಅಪೊ.ಕೃತ್ಯ.18:24-26

ಪದ ಡೇಟಾ:

- Strong's: G207

ಅಜರ್ಯ

ಸತ್ಯಾಂಶಗಳು:

ಅಜರ್ಯ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಅನೇಕರಿದ್ದಾರೆ.

- ಒಬ್ಬ ಅಜರ್ಯ ಬಾಬೆಲೋನಿಯ ಹೆಸರಾದ ಅಬೇದ್ನೆಗೋ ಹೆಸರಿನ ಮೂಲಕ ಚೆನ್ನಾಗಿ ಗೊತ್ತು. ಈತನು ನೆಬುಕದ್ನೆಚರ ಸೈನ್ಯದಿಂದ ಸೆರೆಗೊಯ್ಯಲ್ಪಟ್ಟ ಯೂದಾದಿಂದ ಹೊರಟ ಅನೇಕಮಂದಿ ಇಸ್ರಾಯೇಲ್ಯರಲ್ಲಿ ಒಬ್ಬರಾಗಿದ್ದರು ಮತ್ತು ಇವರನ್ನು ಬಾಬೆಲೋನಿಯದಲ್ಲಿ ನಿವಾಸವಾಗಿರಲು ಕರೆದೊಯ್ಯಲ್ಪಟ್ಟಿದ್ದರು. ಅಜರ್ಯ ಮತ್ತು ತನ್ನ ಜೊತೆಯಲ್ಲಿರುವ ಇಸ್ರಾಯೇಲ್ಯರಾದ ಹನನ್ಯ, ಮೀಶಾಯೇಲರು ಬಾಬೆಲೋನಿಯ ಅರಸನನ್ನು ಆರಾಧಿಸುವುದನ್ನು ತಿರಸ್ಕರಿಸಿದರು, ಅದಕ್ಕಾಗಿ ಅವನು ಅವರಗೆ ಶಿಕ್ಷೆಯಾಗಿ ಅವರನ್ನು ಧಗಧಗನೆ ಉರಿಯುತ್ತಿರುವ ಬೆಂಕಿ ಕೊಂಡದಲ್ಲಿ ಹಾಕಿಸಿದನು. ಆದರೆ ದೇವರು ಅವರನ್ನು ಸಂರಕ್ಷಿಸಿದನು ಮತ್ತು ಅವರಿಗೆ ಯಾವ ಹಾನಿ ಆಗಿರಲಿಲ್ಲ.
- ಯೂದಯ ಅರಸನಾದ ಉಜ್ಜೀಯನನ್ನು ಕೂಡ “ಅಜರ್ಯ” ಎಂದು ಕರೆಯುತ್ತಿದ್ದರು.
- ಇನ್ನೊಬ್ಬ ಅಜರ್ಯ ಹಳೇ ಒಡಂಬಡಿಕೆಯಲ್ಲಿ ಪ್ರಧಾನ ಯಾಜಕನಾಗಿದ್ದನು.
- ಪ್ರವಾದಿಯಾದ ಯೆರೆಮೀಯ ಕಾಲದಲ್ಲಿ, ಅಜರ್ಯ ಎಂದು ಹೆಸರಿರುವ ಒಬ್ಬ ಮನುಷ್ಯನು ಇಸ್ರಾಯೇಲ್ಯರಿಗೆ ತಮ್ಮ ನಿವಾಸ ಸ್ಥಳವನ್ನು ಬಿಟ್ಟು ದೇವರಿಗೆ ಅವಿಧೇಯರಾಗಿರಿ ಎಂದು ತಪ್ಪಾಗಿ ಬೇಡಿಕೊಂಡನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಬಾಬೇಲ್, ದಾನಿಯೇಲ, ಹನನ್ಯ, ಮೀಶಾಯೇಲ, ಉಜ್ಜೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:36-38
- 1 ಅರಸ.04:1-4
- 2 ಪೂರ್ವ.15:1-2
- ದಾನಿ.01:6-7
- ಯೆರೆ.43:1-3

ಪದ ಡೇಟಾ:

- Strong's: H5838

ಅತಲ್ಯ

ಸತ್ಯಾಂಶಗಳು:

ಅತಲ್ಯ ಯೂದಾ ರಾಜ್ಯದ ಅರಸನಾದ ಯೆಹೋರಾಮನ ದುಷ್ಟ ಹೆಂಡತಿಯಾಗಿದ್ದಳು. ಈಕೆ ಇಸ್ರಾಯೇಲ್ ದುಷ್ಟ ಅರಸನಾದ ಒಮ್ರಿಯ ಮೊಮ್ಮೊಗಳು.

- ಅತಲ್ಯ ಮಗನಾದ ಅಹಜ್ಯನು ಯೆಹೋರಾಮನು ಸತ್ತನಂತರ ಅರಸನಾದನು.
- ತನ್ನ ಮಗನಾದ ಅಹಜ್ಯನು ಸತ್ತನಂತರ, ಅತಲ್ಯಳು ಉಳಿದ ಅರಸನ ಕುಟುಂಬವನ್ನೆಲ್ಲಾ ಕೊಳ್ಳುವುದಕ್ಕೆ ಪ್ರಣಾಳಿಕೆ ಮಾಡಿದಳು.
- ಆದರೆ ಅತಲ್ಯಳ ಕೊನೆಯ ಮೊಮ್ಮೊಗನಾದ ಯೆಹೋವಾಷನು ಮಾತ್ರ ತನ್ನ ಸೋದರತ್ತೆಯಿಂದ ಬಚ್ಚಿಟ್ಟಲ್ಪಟ್ಟನು ಮತ್ತು ಆಕೆಯಿಂದ ಹತವಾಗದೇ ಸಂರಕ್ಷಿಸಲ್ಪಟ್ಟನು. ಅತಲ್ಯಳು ಆ ದೇಶವನ್ನು ಆರು ವರ್ಷ ಆಳಿದನಂತರ, ಆಕೆ ಕೊಂದಲ್ಪಟ್ಟಳು ಮತ್ತು ಯೆಹೋವಾಷನು ಅರಸನಾದನು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಹಜ್ಯ, ಯೆಹೋರಾಮ, ಯೆಹೋವಾಷ, ಒಮ್ರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.22:1-3
- 2 ಪೂರ್ವ.24:6-7
- 2 ಅರಸ.11:1-3

ಪದ ಡೇಟಾ:

- Strong's: H6721

ಅದೋನಿಯ

ನಿರ್ವಚನ:

ಅದೋನಿಯ ಅರಸನಾದ ದಾವೀದನ ನಾಲ್ಕನೆಯ ಮಗನು.

- ಅದೋನಿಯನು ತನ್ನ ಅಣ್ಣಂದಿಯರಾದ ಅಬ್ಷಾಲೋಮನು ಮತ್ತು ಅಮ್ನೋನನು ಮರಣ ಹೊಂದಿದನಂತರ ಇಸ್ರಾಯೇಲ್ ಅರಸನಾಗಲು ತುಂಬಾ ಪ್ರಯತ್ನಪಟ್ಟನು.
- ಏನೇಯಾಗಲಿ, ದಾವೀದನ ಮಗನಾದ ಸೊಲೊಮೋನನು ಅರಸನಾಗುವನೆಂದು ದೇವರು ವಾಗ್ದಾನ ಮಾಡಿದ್ದರು. ಆದ್ದರಿಂದ ಅದೋನಿಯನ ಒಳಸಂಚು ಆಲೋಚನೆಗಳೆಲ್ಲಾ ಬಿಸಾಕಲ್ಪಟ್ಟವು ಮತ್ತು ಕೊನೆಗೆ ಸೊಲೊಮೋನನು ಅರಸನಾದನು.
- ಅದೋನಿಯ ಎರಡನೆಯಬಾರಿ ಅರಸನಾಗುವುದಕ್ಕೆ ಪ್ರಯತ್ನಪಟ್ಟಾಗ, ಸೊಲೊಮೋನನು ಅವನನ್ನು ಸಾಯಿಸಿದನು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : /ದಾವೀದ, /ಸೊಲೊಮೋನ)

ಸತ್ಯವೇದದ ಅನುಬಂಧ ವಾಕ್ಯಗಳು :

ಪದ ಡೇಟಾ:

- Strong's: G138

ಅನ್ನ

ಸತ್ಯಾಂಶಗಳು:

ಅನ್ನನು ಸುಮಾರು 10 ವರ್ಷಗಳ ಕಾಲದವರೆಗೂ ಯೆರೂಸಲೇಮಿನಲ್ಲಿ ಯೆಹೂದ್ಯರ ಪ್ರಧಾನ ಯಾಜಕನಾಗಿದ್ದನು, ಅಂದರೆ ಸುಮಾರು ಕ್ರಿ.ಶ.6 ರಿಂದ 15 ರವರೆಗೆ ಕೆಲಸ ಮಾಡಿರಬಹುದು. ಇದಾದನಂತರ ಇವರನ್ನು ರೋಮಾ ಪ್ರಭುತ್ವದವರು ಪ್ರಧಾನ ಯಾಜಕತ್ವದಿಂದ ತೆಗೆದು ಹಾಕಿತು, ಆದರೂ ಇವರು ಯೆಹೂದಿಯರಲ್ಲಿ ಪ್ರಭಾವವನ್ನುಂಟು ಮಾಡುವ ನಾಯಕನಾಗಿ ಮುಂದೆವರಿದರು.

- ಅನ್ನನು ಕಾಯಫನಿಗೆ ಮಾವನಾಗಿದ್ದನು, ಈ ಕಾಯಫ ಯೇಸು ಸೇವೆ ಮಾಡುವ ದಿನಗಳಲ್ಲಿ ಮುಖ್ಯ ಪ್ರಧಾನ ಯಾಜಕನಾಗಿದ್ದನು.
- ಪ್ರಧಾನ ಅಧಿಕಾರಿಗಳು ತಮ್ಮ ಸ್ಥಳದಿಂದ ಇಳಿದುಹೋದನಂತರ, ಅವರು ಇನ್ನೂ ಆ ಬಿರುದುಗಳನ್ನು ಹೊಂದಿರುತ್ತಾರೆ ಮತ್ತು ಅವರು ಮಾಡುತ್ತಿರುವ ಉದ್ಯೋಗದ ಬಾಧ್ಯತೆಗಳನ್ನು ಹೊಂದಿರುತ್ತಾರೆ. ಆದ್ದರಿಂದ, ಅನ್ನನು ಕಾಯಫ ಮತ್ತು ಇತರರ ಯಾಜಕತ್ವದ ಕಾಲಗಳಲ್ಲಿ ಪ್ರಧಾನ ಯಾಜಕನಾಗಿ ಕರೆಯಲ್ಪಡುತ್ತಿದ್ದನು.
- ಯೇಸುವನ್ನು ಯೆಹೂದ್ಯರ ನಾಯಕರ ಮಧ್ಯೆದೊಳಗೆ ತೀರ್ಪಿಗಾಗಿ ಕರೆದುಕೊಂಡುಬರುವ ಸಮಯದಲ್ಲಿ, ಪ್ರಶ್ನೆಗಳನ್ನು ಕೇಳುವುದಕ್ಕೆ ಮೊಟ್ಟಮೊದಲು ಯೇಸುವನ್ನು ಅನ್ನನ ಬಳಿಗೆ ಯೇಸುವನ್ನು ಕರೆದುಕೊಂಡು ಬಂದರು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಪ್ರಧಾನ ಯಾಜಕ, ಯಾಜಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:5-7
- ಯೋಹಾನ.18:22-24
- ಲೂಕ.03:1-2

ಪದ ಡೇಟಾ:

- Strong's: G452

ಅಪೊಲ್ಲೋಸ

ಸತ್ಯಾಂಶಗಳು:

ಅಪೊಲ್ಲೋಸನು ಐಗುಪ್ತದಲ್ಲಿರುವ ಅಲೆಗ್ಜಾಂಡ್ರಿಯಾ ಪಟ್ಟಣದಿಂದ ಬಂದಿರುವ ಯೆಹೂದ್ಯನಾಗಿದ್ದನು, ಈತನಿಗೆ ಯೇಸುವಿನ ಕುರಿತಾಗಿ ಜನರಿಗೆ ಬೋಧಿಸುವುದರಲ್ಲಿ ವಿಶೇಷವಾದ ಸಾಮರ್ಥ್ಯವನ್ನು ಹೊಂದಿರುತ್ತಾನೆ.

- ಅಪೊಲ್ಲೋಸನು ಇಬ್ರಿ ಲೇಖನಗಳಲ್ಲಿ ಚೆನ್ನಾಗಿ ತರಬೇತಿ ಹೊಂದಿದವನು ಮತ್ತು ಒಳ್ಳೇಯ ಪ್ರಸಂಗೀಕನು ಆಗಿದ್ದನು.
- ಈತನು ಎಫೆಸದಲ್ಲಿರುವ ಕ್ರೈಸ್ತರಾದ ಅಕ್ವಿಲ ಮತ್ತು ಪ್ರಿಸ್ಕಿಲ್ಲರವರಿಂದ ಪರಿಚಯವಾದನು.
- ಯೇಸುವಿನಲ್ಲಿ ನಂಬಿಕೆಯನ್ನಿಡಲು ಜನರಿಗೆ ಸಹಾಯ ಮಾಡುವ ಒಂದೇ ಒಂದು ಗುರಿಯನ್ನು ತಲುಪುವದರಲ್ಲಿ ಪೌಲನು ಮತ್ತು ಅಪೊಲ್ಲೋಸನು, ಹಾಗೆಯೇ ಇತರ ಸುವಾರ್ತಿಕರು ಮತ್ತು ಬೋಧಕರು ಕೆಲಸ ಮಾಡುತ್ತಿದ್ದರೆಂದು ಪೌಲನೇ ಒತ್ತಿ ಹೇಳುತ್ತಿದ್ದಾನೆ.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವ ರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಕ್ವಿಲ, ಎಫೆಸ, ಪ್ರಿಸ್ಕಿಲ್ಲ, ದೇವರ ವಾಕ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.01:13
- 1 ಕೊರಿಂಥ.16:12
- ಅಪೊ.ಕೃತ್ಯ.18:25
- ತೀತ.03:13

ಪದ ಡೇಟಾ:

- Strong's: G625

ಅಬಿಯಾತರ

ನಿರ್ವಚನ :

ಅಬಿಯಾತರನು ಅರಸನಾದ ದಾವೀದನ ಕಾಲದಲ್ಲಿ ಇಸ್ರಾಯೇಲ್ ದೇಶಕ್ಕೆ ಪ್ರಧಾನ ಯಾಜಕನಾಗಿದ್ದನು.

- ಅರಸನಾದ ಸೌಲನು ಯಾಜಕರನ್ನು ಕೊಂದಾಗ, ಅಬಿಯಾತರನು ತಪ್ಪಿಸಿಕೊಂಡು ಅರಣ್ಯದಲ್ಲಿರುವ ದಾವೀದನ ಬಳಿಗೆ ಹೋಗುತ್ತಾನೆ.
- ಅಬಿಯಾತರನು ಮತ್ತು ಪ್ರಧಾನ ಯಾಜಕನಾದ ಚಾದೋಕನು ದಾವೀದನ ಆಳ್ವಿಕೆಯಲ್ಲಿ ತುಂಬಾ ನಂಬಿಕೆಯಿಂದ ಸೇವೆಯಲ್ಲಿದ್ದರು.
- ದಾವೀದನು ಮರಣವಾದನಂತರ, ಸೊಲೊಮೋನನು ರಾಜನಾಗುವುದಕ್ಕೆ ಬದಲಾಗಿ ಅದೋನಿಯಾ ಅರಸನಾಗಲು ಅಬಿಯಾತರನು ಅದೋನಿಗೆ ಸಹಾಯ ಮಾಡಿದನು.
- ಈ ಕಾರಣದಿಂದ ಅರಸನಾದ ಸೊಲೊಮೋನನು ಅಬಿಯಾತರನನ್ನು ಯಾಜಕತ್ವದಿಂದ ತೊಲಗಿಸಿದನು.

(ಈ ಪದಗಳನ್ನು ಸಹ ನೋಡಿರಿ : ಚಾದೋಕ, ಸೌಲ,, ಸೊಲೊಮೋನ, ಅದೋನಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- /1 ಪೂರ್ವ.27:32-34
- /1 ಅರಸು.01:7-8
- /1 ಅರಸು.02:22-23
- /2 ಸಮೂ.17:15-16
- /ಮಾರ್ಕ.02:25-26

ಪದ ಡೇಟಾ:

- Strong's: H54, G8

ಅಬೀಮೆಲೆಕ

ಸತ್ಯಾಂಶಗಳು:

ಅಬೀಮೆಲೆಕ ಅಬ್ರಹಾಮನು ಮತ್ತು ಇಸ್ಸಾಕನು ಕಾನಾನ್ ದೇಶಕ್ಕೆ ಹೋಗಿ ನಿವಾಸ ಮಾಡಲು ಹೋಗುವ ಸಮಯದಲ್ಲಿ ಗೆರಾರ್ ಪ್ರಾಂತ್ಯವನ್ನು ಆಳ್ವಿಕೆ ಮಾಡುತ್ತಿರುವ ಫಿಲಿಷ್ಟೀಯರ ಅರಸನಾಗಿದ್ದನು.

- ಅಬ್ರಾಹಾಮನು ಸಾರಾಳನ್ನು ತನ್ನ ಹೆಂಡತಿಯೆಂದು ಹೇಳಿಕೊಳ್ಳದೆ, ತನ್ನ ತಂಗಿಯೆಂದು ಹೇಳಿಕೊಳ್ಳುವುದರ ಮೂಲಕ ಅರಸನಾದ ಅಬೀಮೆಲೆಕನನ್ನು ಮೋಸ ಮಾಡಿದ್ದನು.
- ಅಬ್ರಹಾಮ ಮತ್ತು ಅಬೀಮೆಲೆಕರಿಬ್ಬರು ಬೇರ್ಷೆಬದಲ್ಲಿರುವ ಬಾವಿಗಳನ್ನು ಹೊಂದಿಕೊಳ್ಳುವ ವಿಷಯದಲ್ಲಿ ಒಂದು ಒಪ್ಪಂದಕ್ಕೆ ಬಂದರು.
- ಅನೇಕ ವರ್ಷಗಳಾದನಂತರ, ರೆಬೆಕ್ಕಳು ತನ್ನ ಸಹೋದರಿಯೆಂದು, ತನ್ನ ಹೆಂಡತಿಯಲ್ಲವೆಂದು ಇಸ್ಸಾಕನು ಕೂಡ ಅಬೀಮೆಲೆಕನಿಗೆ ಮತ್ತು ಇತರ ಗೆರಾರ್ ಮನುಷ್ಯರಿಗೆ ಹೇಳುವುದರ ಮೂಲಕ ಮೋಸಗೊಳಿಸಿದನು.
- ಅರಸನಾದ ಅಬೀಮೆಲೆಕನು ತನ್ನೊಂದಿಗೆ ಸುಳ್ಳನ್ನು ಹೇಳಿದ್ದಕ್ಕೋಸ್ಕರ ಅಬ್ರಹಾಮನನ್ನು ಮತ್ತು ಕೆಲವು ಕಾಲವಾದನಂತರ ಇಸ್ಸಾಕನನ್ನು ಗದರಿಸಿದನು.
- ಅಬೀಮೆಲೆಕ ಎಂದು ಹೆಸರಿರುವ ಇನ್ನೊಬ್ಬ ವ್ಯಕ್ತಿ ಗಿದ್ಯೋನ್ ಮಗನಾಗಿದ್ದನು ಮತ್ತು ಯೋತಾಮನಿಗೆ ಸಹೋದರನಾಗಿದ್ದನು. ಕೆಲವೊಂದು ಅನುವಾದಗಳಲ್ಲಿ ಅರಸನಾದ ಅಬೀಮೆಲೆಕ ಎನ್ನುವ ವ್ಯಕ್ತಿಗೆ ಬೇರೆಯಾಗಿರುವ ವ್ಯಕ್ತಿಗಳು ಅದೇ ಹೆಸರಿನ ಮೇಲೆ ಇದ್ದು, ಅವರ ಹೆಸರುಗಳಿಗೆ ಬೇರೆಯಾದ ಅಕ್ಷರಗಳನ್ನು ಉಪಯೋಗಿಸಿರಬಹುದು, ಅದನ್ನು ಸರಿಯಾಗಿ ನೋಡಿ ಹಾಕಿರಿ.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : /ಸ್ವಾಸ್ಥ್ಯ, /ಇಸ್ರಾಯೇಲ್, /ಯಾಕೋಬ, /ಯಾಜಕ, /ಕುಲ)

ಸತ್ಯವೇದದ ಅನುಬಂಧ ವಾಕ್ಯಗಳು :

- /2 ಸಮೂ.11:21
- /ಆದಿ.20:1-3
- /ಆದಿ.20:4-5
- /ಆದಿ.21:22-24
- /ಆದಿ.26:9-11
- /ನ್ಯಾಯಾ.09:52-54

ಪದ ಡೇಟಾ:

- Strong's: H40

ಅಬೀಯ

ಸತ್ಯಾಂಶಗಳು:

ಅಬೀಯ ಯೂದಾ ಅರಸನಾಗಿ ಕ್ರಿ.ಪೂ.915 ರಿಂದ 913 ರವರೆಗೆ ಆಳ್ವಿಕೆ ಮಾಡಿದ್ದನು. ಇವನು ಅರಸನಾದ ಯಾರೊಬ್ಬಾಮನ ಮಗನಾಗಿದ್ದನು. ಅಬೀಯ ಹೆಸರಿನ ಮೇಲೆ ಇರುವ ಇತರ ಜನರು ಕೂಡ ಹಳೇ ಒಡಂಬಡಿಕೆಯಲ್ಲಿ ಸೇವೆಯನ್ನು ಮಾಡಿದ್ದರು.

- ಸಮೂವೇಲ ಮಕ್ಕಳಾಗಿರುವ ಅಬೀಯ ಮತ್ತು ಯೋವೇಲರು ಬೇರ್ಷೆಬದಲ್ಲಿರುವ ಇಸ್ರಾಯೇಲ್ಯರ ಜನರ ಮೇಲೆ ನಾಯಕರಾಗಿದ್ದರು. * ಯಾಕಂದರೆ ಅಬೀಯ ಮತ್ತು ತನ್ನ ಸಹೋದರನು ಯಥಾರ್ಥವಾಗಿರದೇ ಲೋಭಿಗಳಾಗಿದ್ದರು. ಆದ್ದರಿಂದ ಜನರೆಲ್ಲರು ಸಮೂವೇಲನ ಹತ್ತಿರಕ್ಕೆ ಹೋಗಿ ನಿಮ್ಮ ಮಕ್ಕಳಿಗೆ ಬದಲಾಗಿ ನಮಗೆ ಬೇರೊಬ್ಬ ಅರಸನನ್ನು ನೇಮಿಸು ಎಂದು ಕೇಳಿಕೊಂಡರು.
- ಅಬೀಯ ಅರಸನಾದ ದಾವೀದನ ಆಳ್ವಿಕೆಯಲ್ಲಿ ದೇವಾಲಯದಲ್ಲಿ ಸೇವೆ ಮಾಡುವ ಯಾಜಕರುಗಳಲ್ಲಿ ಒಬ್ಬರಾಗಿದ್ದರು.
- ಅಬೀಯ ಅರಸನಾದ ಯಾರೊಬ್ಬಾಮನ ಮಕ್ಕಳಲ್ಲಿ ಒಬ್ಬನಾಗಿದ್ದನು.
- ಬಾಬೆಲೋನಿನ ಸೆರೆಯಿಂದ ಯೆರೂಸಲೇಮಿಗೆ ಕರೆದುಕೊಂಡು ಬಂದಾಗ ಅಬೀಯ ಜೆರೂಬ್ಬಾಬೆಲ್ ಜೊತೆಯಲ್ಲಿ ಹಿಂದಿರುಗಿ ಬಂದ ಪ್ರಧಾನ ಯಾಜಕನಾಗಿದ್ದನು.

(ಅನುವಾದ ಸಲಹೆಗಳು : /ಹೆಸರುಗಳನ್ನು ಅನುವಾದ ಮಾಡಿರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- /1 ಅರಸು.15:1-3
- /1 ಸಮೂ.08:1-3
- /2 ಪೂರ್ವ.13:1-3
- /2 ಪೂರ್ವ.13:19-22
- /ಲೂಕ.01.5-7

ಪದ ಡೇಟಾ:

- Strong's: H29, G7

ಅಬ್ನೇರ

ನಿರ್ವಚನ:

ಅಬ್ನೇರನು ಹಳೇ ಒಡಂಬಡಿಕೆಯಲ್ಲಿ ಅರಸನಾದ ಸೌಲನಿಗೆ ಸೋದರ ಸಂಬಂಧಿ.

- ಅಬ್ನೇರನು ಸೌಲನ ಸೈನ್ಯದಲ್ಲಿ ಮುಖ್ಯ ನಾಯಕನಾಗಿದ್ದನು ಮತ್ತು ದಾವೀದನು ಒಬ್ಬ ರಣ ಶೂರನಾದ ಗೊಲ್ಯಾತನನ್ನು ಸಾಯಿಸಿದನಂತರ, ಈ ಅಬ್ನೇರನೇ ದಾವೀದನನ್ನು ಸೌಲನಿಗೆ ಪರಿಚಯ ಮಾಡಿದನು.
- ಅರಸನಾದ ಸೌಲನ ಮರಣದನಂತರ, ಇಸ್ರಾಯೇಲನಲ್ಲಿ ಅರಸನಾಗಿ ಸೌಲನ ಮಗನಾದ ಈಷ್ಬೋಶೆತನನ್ನು ಅಬ್ನೇರನೇ ನೇಮಿಸಿದನು.
- ಕೆಲವು ಕಾಲವಾದನಂತರ, ದಾವೀದನ ಸೇನಾಪತಿಯಾದ ಯೋವಾಬನಿಂದ ಅಬ್ನೇರನನ್ನು ವಿಶ್ವಾಸಘಾತುಕವಾಗಿ ಸಾಯಿಸಲ್ಪಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.26:26-28
- 1 ಅರಸು.02:5-6
- 1 ಅರಸು.02:32-33
- 1 ಸಮೂ.17:55-56
- 2 ಸಮೂ.03:22-23

ಪದ ಡೇಟಾ:

- Strong's: H74

ಅಬ್ರಹಾಮ, ಅಬ್ರಾಮ

ಸತ್ಯಾಂಶಗಳು:

ಅಬ್ರಾಮನು ಇಸ್ರಾಯೇಲ್ಯರಿಗೆ ತಂದೆಯಾಗಿರಲು ದೇವರು ಆಯ್ಕೆಮಾಡಿಕೊಂಡಿರುವ ವ್ಯಕ್ತಿ. ಇವರು ಕಲ್ದೀಯರ ಊರ್ ಎನ್ನುವ ಪಟ್ಟಣದಿಂದ ಬಂದಿರುವ ವ್ಯಕ್ತಿಯಾಗಿದ್ದನು. ದೇವರು ಈತನ ಹೆಸರನ್ನು "ಅಬ್ರಹಾಮ" ಎಂದು ಬದಲಾಯಿಸಿದನು.

- "ಅಬ್ರಾಮ" ಎನ್ನುವ ಹೆಸರಿಗೆ "ಉನ್ನತನಾದ ತಂದೆ" ಎಂದರ್ಥ.
- "ಅಬ್ರಹಾಮ" ಎನ್ನುವ ಹೆಸರಿಗೆ "ಅನೇಕ ಜನಾಂಗಗಳಿಗೆ ಮೂಲ ಪಿತೃ" ಎಂದರ್ಥ.
- ನಿನಗೆ ಅತ್ಯಧಿಕ ಸಂತಾನವನ್ನು ಕೊಡುವೆನು ಅವರು ದೊಡ್ಡ ಜನಾಂಗವಾಗಿ ಮಾರ್ಪಡುವರು ಎಂದು ದೇವರು ಅಬ್ರಹಾಮನೊಂದಿಗೆ ವಾಗ್ದಾನ ಮಾಡಿದರು.
- ಅಬ್ರಹಾಮನು ದೇವರನ್ನು ನಂಬಿದನು ಮತ್ತು ಆತನಿಗೆ ವಿಧೇಯನಾದನು. ದೇವರು ಅಬ್ರಹಾಮನನ್ನು ಕಲ್ದೀಯ ದೇಶದಿಂದ ಕಾನಾನ್ ಎಂಬ ದೇಶಕ್ಕೆ ನಡಿಸಿದನು.
- ಅಬ್ರಹಾಮನು ಮತ್ತು ತನ್ನ ಹೆಂಡತಿಯಾದ ಸಾರಾಳು ತುಂಬಾ ವೃದ್ಧಾಪ್ಯದಲ್ಲಿರುವಾಗ, ಕಾನಾನ್ ಭೂಮಿಯಲ್ಲಿ ಜೀವಿಸುತ್ತಿರುವಾಗ, ಅವರಿಗೆ ಗಂಡು ಮಗನಾದ ಇಸಾಕನನ್ನು ಹೊಂದಿಕೊಂಡಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಕಲ್ದೀಯ, ಸಾರಾಳು, ಇಸಾಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.03:6-9
- ಆದಿ.11:29-30
- ಆದಿ.21:1-4
- ಆದಿ.22:1-3
- ಯಾಕೋಬ.02:21-24
- ಮತ್ತಾಯ.01:1-3

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **04:06**_ ಅಬ್ರಾಮನು ಕಾನಾನ್ ದೇಶಕ್ಕೆ ಬಂದಾಗ, "ನಿನ್ನ ಸುತ್ತಮುತ್ತ ಇರುವದೆಲ್ಲವನ್ನು ನೋಡು, ನೀನು ನೋಡುತ್ತಿರುವ ಈ ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಯವರಿಗೂ ಸ್ವಾಸ್ಥ್ಯವಾಗಿ ಕೊಡುವೆನು" ಎಂದು ದೇವರು ಹೇಳಿದರು.
- **05:04** ದೇವರು _ **ಅಬ್ರಾಮನ __ ಹೆಸರನ್ನು** _ಅಬ್ರಹಾಮ ಎಂದು ಮಾರ್ಪಡಿಸಿದರು. ಇದಕ್ಕೆ "ಅನೇಕ ಜನಾಂಗಗಳಿಗೆ ಪಿತೃ" ಎಂದರ್ಥ.
- **05:05** ಒಂದು ವರ್ಷವಾದನಂತರ, ಅಬ್ರಹಾಮನು 100 ವರ್ಷಗಳ ವಯಸ್ಸು ಹೊಂದಿಕೊಂಡಾಗ ಮತ್ತು ಸಾರಾಳು 90 ವರ್ಷಗಳ ವಯಸ್ಸು ಬಂದಾಗ, ಸಾರಾಳು ಅಬ್ರಹಾಮನ ಮಗನಿಗೆ ಜನನವನ್ನು ಕೊಟ್ಟಳು.
- **05:06** ಇಸಾಕನು ಯೌವನಸ್ಥನಾಗಿರುವಾಗ, ದೇವರು, "ನಿನ್ನ ಒಬ್ಬನೇ ಮಗನಾದ ಇಸಾಕನನ್ನು ಕರೆದುಕೊಂಡು ಹೋಗಿ, ಅವನನ್ನು ನನಗೆ ಬಲಿಯಾಗಿ ಅರ್ಪಿಸು" ಎಂದು ಹೇಳುವುದರ ಮೂಲಕ _ ಅಬ್ರಹಾಮನ _ ನಂಬಿಕೆಯನ್ನು ಪರೀಕ್ಷೆ ಮಾಡಿದನು,
- **06:01** ಅಬ್ರಹಾಮನು _ **ವೃದ್ಧ ವಯಸ್ಸಿಗೆ ಬಂದಾಗ, ತನ್ನ ಮಗನಾದ ಇಸಾಕನು ದೊಡ್ಡವನಾಗಿದ್ದರಿಂದ,** _ ಅಬ್ರಹಾಮನು ತನ್ನ ಸೇವಕರಲ್ಲಿ ಒಬ್ಬರನ್ನು ಕರೆಕಳುಹಿಸಿ, ತನ್ನ ಸಂಬಂಧಿಕರಿರುವ ಸ್ಥಳಕ್ಕೆ ಕಳುಹಿಸಿ, ತನ್ನ ಮಗನಾದ ಇಸಾಕನಿಗೆ ಹೆಣ್ಣನ್ನು ಹುಡಕಬೇಕೆಂದು ಹೇಳಿದನು.
- **06:04** ತುಂಬಾ ಹೆಚ್ಚು ಕಾಲವಾದನಂತರ, _ **ಅಬ್ರಹಾಮನು** _ ತೀರಿಕೊಂಡನು ಮತ್ತು ಒಡಂಬಡಿಕೆಯಲ್ಲಿ ದೇವರು ತನ್ನೊಂದಿಗೆ ಮಾಡಿದ ಪ್ರತಿಯೊಂದು ವಾಗ್ದಾನವನ್ನು ಇಸಾಕನೊಂದಿಗೆ ಮಾಡಿ ಮುಂದೆವರಿಸಿದನು.
- **21:02** ಲೋಕದಲ್ಲಿರುವ ಸಮಸ್ತ ಜನಾಂಗಗಳು ಆತನ ಮೂಲಕ ಆಶೀರ್ವಾದವನ್ನು ಪಡೆಯುತ್ತಾರೆಂದು ದೇವರು _ ಅಬ್ರಹಾಮನೊಂದಿಗೆ _ ವಾಗ್ದಾನ ಮಾಡಿದ್ದನು.

ಪದ ಡೇಟಾ:

- Strong's: H87, H85, G11

ಅಬ್ಷಾಲೋಮ

ಸತ್ಯಾಂಶಗಳು:

ಅಬ್ಷಾಲೋಮನು ಅರಸನಾದ ದಾವೀದನಿಗೆ ಮೂರನೆಯ ಮಗನಾಗಿದ್ದನು. ಈತನು ಬಹು ಸುಂದರವಾಗಿದ್ದನು ಮತ್ತು ಕೋಪಗೊಳ್ಳುವ ಸ್ವಭಾವವನ್ನು ಹೊಂದಿದವನಾಗಿದ್ದನು.

- ಅಬ್ಷಾಲೋಮ ತಂಗಿಯಾದ ತಾಮಾರಳು ಅವನ ಸಹೋದರನಾದ ಅಮ್ನೋನನಿಂದ ಮಾನಭಂಗಕ್ಕೆ ಗುರಿಯಾಗಿದ್ದಳು. ಅದಕ್ಕಾಗಿ ಅಬ್ಷಾಲೋಮನು ಅಮ್ನೋನನನ್ನು ಕೊಲ್ಲಬೇಕೆಂದು ಉಪಾಯ ಮಾಡಿದ್ದನು.
- ಅಮ್ನೋನನನ್ನು ಕೊಂದನಂತರ, ಅಬ್ಷಾಲೋಮನು ತಪ್ಪಿಸಿಕೊಂಡು ಗೆಷೂರಿಗೆ (ತನ್ನ ತಾಯಿ ಬಂದಿರುವ ಸ್ಥಳಕ್ಕೆ) ಓಡಿಹೋದನು ಮತ್ತು ಅಲ್ಲಿ ಮೂರು ವರ್ಷಗಳ ಕಾಲ ಇದ್ದುಕೊಂಡಿದ್ದನು. ಇದಾದನಂತರ ಅವನು ಯೆರೂಸಲೇಮಿಗೆ ತಿರುಗಿ ಬರಬೇಕೆಂದು ಅರಸನಾದ ದಾವೀದನು ಕರೆಕಳುಗಿಸಿದನು, ಆದರೆ ಸುಮಾರು ಎರಡು ವರ್ಷಗಳ ಕಾಲ ತನ್ನ ಹತ್ತಿರಕ್ಕೆ ಬರುವುದಕ್ಕೆ ದಾವೀದನು ಅಬ್ಷಾಲೋಮನಿಗೆ ಅನುಮತಿ ಕೊಟ್ಟಿರಲಿಲ್ಲ.
- ಅಬ್ಷಾಲೋಮನು ಕೆಲವೊಂದು ಜನರನ್ನು ಅರಸನಾದ ದಾವೀದನಿಗೆ ವಿರುದ್ಧವಾಗಿ ಎಬ್ಬಿಸಿದ್ದನು ಮತ್ತು ಅವನಿಗೆ ವಿರುದ್ಧವಾಗಿ ಒಂದು ದಂಗೆಯನ್ನು ನಡೆಸಿದ್ದನು.
- ದಾವೀದನ ಸೈನ್ಯವು ಅಬ್ಷಾಲೋಮನಿಗೆ ವಿರುದ್ಧವಾಗಿ ಹೋರಾಟ ಮಾಡಿ, ಅವನನ್ನು ಸಾಯಿಸಿದರು. ಇದೆಲ್ಲಾ ನಡೆದಾಗ ದಾವೀದನು ತುಂಬಾ ದುಃಖದಲ್ಲಿ ಮುಳುಗಿದ್ದನು.

(ಅನುವಾದ ಸಲಹೆಗಳು : ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಗೆಷೂರ್, ಅಮ್ನೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:1-3
- 1 ಅರಸು.01:5-6
- 2 ಸಮೂ.15:1-2
- 2 ಸಮೂ.17:1-4
- 2 ಸಮೂ.18:18
- ಕೀರ್ತನ.003:1-2

ಪದ ಡೇಟಾ:

- Strong's: H53

ಅಮಚ್ಯ

ಸತ್ಯಾಂಶಗಳು:

ಅಮಚ್ಯ ತಂದೆ ಅರಸನಾದ ಯೋವಾಷನು ಕೊಂದು ಹಾಕಲ್ಪಟ್ಟಾಗ ಯೆಹೂದ ರಾಜ್ಯವನ್ನು ಆಳುವುದಕ್ಕೆ ಅರಸನಾದನು.

- ಅರಸನಾದ ಅಮಚ್ಯ ಯೆಹೂದ ರಾಜ್ಯವನ್ನು ಕ್ರಿ.ಪೂ.796 ರಿಂದ 767 ರವರೆಗೆ ಸುಮಾರು ಇಪ್ಪತ್ತೊಂಭತ್ತು ವರ್ಷಗಳ ಕಾಲ ಆಳಿದನು.
- ಇವರು ಒಳ್ಳೆಯ ಅರಸರಾಗಿದ್ದರು, ಆದರೆ ವಿಗ್ರಹಗಳಿಗೆ ಆರಾಧನೆ ಮಾಡುವ ಸ್ಥಳಗಳನ್ನು ತೆಗೆದು ಹಾಕಲಿಲ್ಲ.
- ಅಮಚ್ಯ ಕೊನೆಗೆ ತನ್ನ ತಂದೆಗೆ ಕೊಲೆಗೆ ಕಾರಣವಾದ ಎಲ್ಲಾ ಜನರನ್ನು ಸಾಯಿಸಿದನು.
- ಈತನು ತನಗೆ ವಿರುದ್ಧವಾಗಿರುವ ಎದೋಮ್ಯರನ್ನು ಸೋಲಿಸಿದನು ಮತ್ತು ಅವರೆಲ್ಲರನ್ನು ಯೆಹೂದ ರಾಜ್ಯದ ವಶದಲ್ಲಿರುವಂತೆ ಮಾಡಿದನು.
- ಈತನು ಯುದ್ಧ ಮಾಡುವುದಕ್ಕೆ ಇಸ್ರಾಯೇಲ್ ಅರಸನಾದ ಯೋವಾಷನಿಗೆ ಸವಾಲು ಬೀಸಿದನು. ಯೆರೂಸಲೇಮಿನ ಗೋಡೆಗಳ ಭಾಗವು ಕೆಳಗೆ ಬಿದ್ದುಹೋಗಿತ್ತು ಮತ್ತು ದೇವಾಲಯದ ಬೆಳ್ಳಿ, ಬಂಗಾರಗಳು ಕದಿಯಲ್ಪಟ್ಟಿದ್ದವು.
- ಕೆಲವು ವರ್ಷಗಳಾದನಂತರ, ಅರಸನಾದ ಅಮಚ್ಯನು ಯೆಹೋವ ದೇವರಿಂದ ದೂರವಾದರು ಮತ್ತು ಯೆರೂಸಲೇಮಿನಲ್ಲಿರುವ ಕೆಲವೊಂದು ಮನುಷ್ಯರು ಇವನನ್ನು ಸಿಕ್ಕಿಸಿಕೊಂಡು, ಸಾಯಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಯೋವಾಷ, ಎದೋಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:10-12
- 1 ಪೂರ್ವ.04:34-38
- 2 ಪೂರ್ವ.25:9-10
- 2 ಅರಸ.14:8-10

ಪದ ಡೇಟಾ:

- Strong's: H558

ಅಮಾಲೇಕ, ಅಮಾಲೇಕ್ಯ, ಅಮಾಲೇಕ್ಯರು

ಸತ್ಯಾಂಶಗಳು:

ಅಮಾಲೇಕ್ಯರು ಅಲೆಮಾರಿಗಳು, ಕಾನಾನ್ ದಕ್ಷಿಣ ಭಾಗದ ಎಲ್ಲಾ ಕಡೆ ನಿವಾಸ ಮಾಡಿದವರು, ಅಂದರೆ ನೆಗೆವ್ ಮರುಭೂಮಿಯಿಂದ ಅರಬ ದೇಶದವರೆಗೂ ನಿವಾಸ ಮಾಡಿದ ಜನರು. ಈ ವರ್ಗದ ಜನರು ಏಸಾವನ ಮೊಮ್ಮೊಗನಾದ ಅಮಾಲೇಕನಿಂದ ಬಂದ ಸಂತಾನದವರು,

- ಇಸ್ರಾಯೇಲ್ಯರು ಕಾನಾನ್.ಗೆ ಬಂದು ಜೀವಿಸುವ ಸಮಯದಿಂದ ಅಮಾಲೇಕ್ಯರು ಅವರಿಗೆ ಶತ್ರುಗಳಾಗಿದ್ದರು.
- “ಅಮಾಲೇಕ” ಎನ್ನುವ ಪದವು ಕೆಲವೊಂದುಬಾರಿ ಎಲ್ಲಾ ಅಮಾಲೇಕ್ಯರನ್ನು ಸೂಚಿಸುವುದಕ್ಕೆ ಅಲಂಕಾರವಾಗಿ ಉಪಯೋಗಿಸಿದ್ದಾರೆ. (ನೋಡಿರಿ : ಅಲಂಕಾರ ರೂಪದಲ್ಲಿರುವ ಮಾತುಗಳು)
- ಅಮಾಲೇಕ್ಯರಿಗೆ ವಿರುದ್ಧವಾಗಿ ನಡೆದ ಒಂದು ಯುದ್ಧದಲ್ಲಿ, ಮೋಶೆ ತನ್ನ ಕೈಗಳನ್ನು ಮೇಲಕ್ಕೆ ಎತ್ತಿದಾಗ, ಇಸ್ರಾಯೇಲ್ಯರು ಜಯವನ್ನು ಹೊಂದಿದರು. ಯಾವಾಗ ಆತನ ಕೈಗಳು ಸೋತುಗೊಂಡು, ಅವುಗಳನ್ನು ಕೆಳಕ್ಕೆ ಇಳಿಸಿದಾಗ, ಅವರು ಸೋತು ಹೋದರು. ಆದ್ದರಿಂದ ಇಸ್ರಾಯೇಲ್ಯರ ಸೈನ್ಯವು ಅಮಾಲೇಕ್ಯರನ್ನು ಸೋಲಿಸುವವರೆಗೂ ಮೋಶೆಯ ಕೈಗಳನ್ನು ಎತ್ತಿ ಹಿಡಿಯಲು ಆರೋನನು ಮತ್ತು ಹೂರನು ಸಹಾಯ ಮಾಡಿದರು.
- ಅರಸನಾದ ದಾವೀದನು ಮತ್ತು ಅರಸನಾದ ಸೌಲನು ಅಮಾಲೇಕ್ಯರ ವಿರುದ್ಧ ಸೈನ್ಯದ ಯುದ್ಧ ಕಾರ್ಯಗಳನ್ನು ನಡೆಸಿದರು.
- ಅಮಾಲೇಕ್ಯರ ಮೇಲೆ ಒಂದುಬಾರಿ ಜಯವನ್ನು ಪಡೆದನಂತರ, ದೇವರು ಸೌಲನಿಗೆ ಮಾಡಬೇಕಾದ ಕೆಲಸವನ್ನು ಮಾಡದೇ ಇರುವುದರಿಂದ, ಅಮಾಲೇಕ್ಯರ ಅರಸನನ್ನು ಸಾಯಿಸದೇ ಬಿಟ್ಟಿದ್ದರಿಂದ ಮತ್ತು ಕೆಲವೊಂದನ್ನು ಕದ್ದ ಕಾರಣದಿಂದ ಸೌಲನು ದೇವರಿಗೆ ಅವಿಧೇಯತೆಯನ್ನು ತೋರಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅರಾಬ, ದಾವೀದ, ಏಶಾವ, ನಿಗೆವ, ಸೌಲ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.04:42-43
- 2 ಸಮು.01:8-10
- ವಿಮೋ.17:8-10
- ಅರಣ್ಯ.14:23-25

ಪದ ಡೇಟಾ:

- Strong's: H6002, H6003

ಅಮೋರಿಯ, ಅಮೋರಿಯರು

ಸತ್ಯಾಂಶಗಳು:

ಅಮೋರಿಯರು ನೋಹನ ಮೊಮ್ಮೊಗನಾದ ಕಾನಾನನಿಂದ ಬಂದ ಶಕ್ತಿಯುತವಾದ ಜನಾಂಗ ಗುಂಪು.

- ಈ ಹೆಸರಿಗೆ "ಉನ್ನತ ಸ್ಥಳ" ಎಂದರ್ಥ, ಇದು ಪರ್ವತ ಪ್ರಾಂತ್ಯಗಳನ್ನು ಸೂಚಿಸುತ್ತದೆ, ಅವರು ಅಲ್ಲಿಯೇ ನಿವಾಸ ಮಾಡುತ್ತಿದ್ದರು ಅಥವಾ ವಾಸ್ತವಿಕವಾಗಿ ಹೇಳಬೇಕಂದರೆ ಅವರೆಲ್ಲರೂ ತುಂಬಾ ಎತ್ತರವಾಗಿದ್ದರು.
- ಯೊರ್ದನ್ ನದಿಯ ಎರಡು ಬದಿಗೆ ಅಮ್ಮೋನಿಯರು ಜೀವನ ಮಾಡುತ್ತಿದ್ದರು. ಆಯಿ ಪಟ್ಟಣವು ಅಮೋರಿಯರ ನಿವಾಸ ಸ್ಥಾನವಾಗಿತ್ತು.
- ದೇವರು "ಅಮೋರಿಯರ ಪಾಪವನ್ನು" ಸೂಚಿಸುತ್ತಿದ್ದಾರೆ, ಆ ಪಾಪದಲ್ಲಿ ಅವರು ತಮ್ಮ ಸುಳ್ಳು ದೇವರುಗಳನ್ನು ಆರಾಧನೆ ಮಾಡುವುದೂ ಇದ್ದಿತ್ತು ಮತ್ತು ಪಾಪ ಕೃತ್ಯಗಳನ್ನು ಮಾಡುವುದೂ ಒಳಗೊಂಡಿತ್ತು.
- ದೇವರು ಆಜ್ಞಾಪಿಸಿದಂತೆಯೇ ಯೆಹೋಶುವನು ಅಮೋರಿಯರನ್ನು ನಾಶಗೊಳಿಸಲು ಇಸ್ರಾಯೇಲ್ಯರನ್ನು ನಡೆಸಿದನು.`

ಸತ್ಯವೇದದ ಅನುಬಂಧ ವಾಕ್ಯಗಳು :

- ಆಮೋಸ.02:9-10
- ಯೆಹೆ.16:1-3
- ಆದಿ.10:15-18
- ಆದಿ.15:14-16
- ಯೆಹೋ.09:9-10

ಸತ್ಯವೇದದಿಂದ ಉದಾಹರಣೆಗಳು:

- **15:07** ಸ್ವಲ್ಪಕಾಲವಾದನಂತರ, ಕಾನಾನ್.ನಲ್ಲಿ ಇತರ ಜನಾಂಗಗಳ ಅರಸರು, _ ಅಮ್ಮೋನಿಯರು _, ಇಸ್ರಾಯೇಲ್ಯರೊಂದಿಗೆ ಗಿಬ್ಯೋನ್ಯರು ಸಮಾಧಾನದ ಔತಣವನ್ನು ಮಾಡಿಕೊಂಡಿದ್ದಾರೆಂದು ಕೇಳಿಸಿಕೊಂಡರು, ಆದ್ದರಿಂದ ಅವರೆಲ್ಲರು ತಮ್ಮ ಸೈನ್ಯಗಳನ್ನು ಒಂದು ದೊಡ್ಡ ಸೈನ್ಯವನ್ನಾಗಿ ಮಾಡಿಕೊಂಡು ಗಿಬ್ಯೋನ್ ಮೇಲೆ ಧಾಳಿ ಮಾಡಿದರು.
- **15:08** ಬೆಳಗಿನ ಜಾವದಲ್ಲಿ _ ಅಮ್ಮೋನಿಯರ _ ಸೈನ್ಯಗಳು ಬಂದು ಅವರ ಮೇಲೆ ಧಾಳಿ ಮಾಡಿದ್ದನ್ನು ಕಂಡು ಅವರು ಬೆರಗಾದರು.
- **15:09** ಆ ದಿನದಂದು ದೇವರು ಇಸ್ರಾಯೇಲ್ಯರಿಗೋಸ್ಕರ ಹೋರಾಟ ನಡೆಸಿದರು. ಆತನು _ ಅಮ್ಮೋನಿಯರೆಲ್ಲರನ್ನು _ ಗೊಂದಲಕ್ಕೆ ಗುರಿ ಮಾಡಿದನು ಮತ್ತು ದೊಡ್ಡ ದೊಡ್ಡ ಆಲಿಕಲ್ಲುಗಳನ್ನು ಕಳುಹಿಸಿದನು, ಅವು _ ಅಮ್ಮೋನಿಯರನ್ನು _ ಸಾಯಿಸಿದವು.
- **15:10** ದೇವರು ಆಕಾಶದಲ್ಲಿ ಒಂದು ಸ್ಥಳದಲ್ಲಿಯೇ ಸೂರ್ಯನು ನಿಂತುಕೊಂಡಿರುವಂತೆ ಮಾಡಿದನು, ಆದ್ದರಿಂದ ಇಸ್ರಾಯೇಲ್ಯರು _ ಅಮ್ಮೋನಿಯರನ್ನು _ ಸಂಪೂರ್ಣವಾಗಿ ಸೋಲಿಸುವುದಕ್ಕೆ ಬೇಕಾದಷ್ಟು ಸಮಯವಿದ್ದಿತ್ತು.

ಪದ ಡೇಟಾ:

- Strong's: H567,

ಅಮ್ನೋನ್

ಸತ್ಯಾಂಶಗಳು:

ಅಮ್ನೋನನು ಅರಸನಾದ ದಾವೀದನ ಹಿರಿಯ ಮಗನಾಗಿದ್ದನು ತನ್ನ ತಾಯಿ ಅರಸನಾದ ದಾವೀದನ ಹೆಂಡತಿ ಅಹೀನೋವಮಳು.

- ಅಮ್ನೋನನು ತನ್ನ ಸಹೋದರಿಯಾದ ತಾಮಾರಳನ್ನು ಮಾನಭಂಗ ಮಾಡಿದನು. ಈಕೆ ಅಬ್ಷಾಲೋಮನ ಸಹೋದರಿಯಾಗಿದ್ದಳು.
- ಈ ಕಾರಣದಿಂದ, ಅಬ್ಷಾಲೋಮನು ಅಮ್ನೋನನನ್ನು ಸಿಕ್ಕಿಸಿಕೊಂಡು ಕೊಂದು ಹಾಕಿದನು.

(ಈ ಪದಗಳನ್ನು ಸಹ ನೋಡಿರಿ : ದಾವೀದ, ಅಬ್ಷಾಲೋಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:1-3
- 2 ಸಮು.13:1-2
- 2 ಸಮು.13:7-9

ಪದ ಡೇಟಾ:

- Strong's: H550

ಅಮ್ಮೋನ್, ಅಮ್ಮೋನಿಯ, ಅಮ್ಮೋನಿಯರು

ಸತ್ಯಾಂಶಗಳು:

“ಅಮ್ಮೋನ್ ಜನರು” ಅಥವಾ “ಅಮ್ಮೋನಿಯರು” ಎನ್ನುವವರು ಕಾನಾನ್ ದೇಶದಲ್ಲಿ ಒಂದು ವರ್ಗದ ಜನರಾಗಿರುತ್ತಾರೆ. ಅವರು ಲೋಟನ ಚಿಕ್ಕ ಮಗಳಿಗೆ ಹುಟ್ಟಿದ ಗಂಡು ಮಗುವಾದ ಬೆನಮ್ಮಿಯಿಂದ ಬಂದ ಸಂತಾನದವರು.

- “ಅಮ್ಮೋನಿಯಳು” ಎನ್ನುವ ಪದವು ವಿಶೇಷವಾಗಿ ಅಮ್ಮೋನ್ ಸ್ತ್ರೀಯರಿಗೆ ಸೂಚಿಸುತ್ತದೆ. ಇದನ್ನು “ಅಮ್ಮೋನ್ ಸ್ತ್ರೀ” ಎಂಬುದಾಗಿಯೂ ಅನುವಾದ ಮಾಡುತ್ತಾರೆ.
- ಅಮ್ಮೋನಿಯರು ಯೊರ್ದನ್ ನದಿಯ ಪೂರ್ವ ದಿಕ್ಕಿಗೆ ನಿವಾಸ ಮಾಡುತ್ತಿದ್ದರು ಮತ್ತು ಅವರು ಇಸ್ರಾಯೇಲ್ಯರಿಗೆ ಶತ್ರುಗಳಾಗಿದ್ದರು.
- ಒಂದು ವಿಷಯದಲ್ಲಿ, ಅಮ್ಮೋನಿಯರು ಇಸ್ರಾಯೇಲ್ಯರನ್ನು ಶಪಿಸುವುದಕ್ಕೆ ಪ್ರವಾದಿಯಾದ ಬಿಳಾಮನನ್ನು ಹಿಡಿದಿದ್ದರು, ಆದರೆ ದೇವರು ಅದನ್ನು ಮಾಡುವುದಕ್ಕೆ ಅನುಮತಿ ನೀಡಲಿಲ್ಲ.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಶಾಪ, ಯೊರ್ದನ್ ನದಿ, ಲೋಟ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.19:1-3
- ಯೆಹೆ.25:1-2
- ಆದಿ.19:36-38
- ಯೆಹೋ.12:1- 2
- ನ್ಯಾಯಾ.11:26-28
- ಜೆಫ.02:8-9

ಪದ ಡೇಟಾ:

- Strong's: H5983, H5984, H5985

ಅರಬ್ಬೀ, ಅರಬಿಯನು, ಅರಬ್ಬೀ ದೇಶದವರು

ಸತ್ಯಾಂಶಗಳು :

ಅರಬ್ಬೀ ಎನ್ನುವುದು ಪ್ರಪಂಚದಲ್ಲಿಯೇ ಅತೀ ದೊಡ್ಡ ಪರ್ಯಾಯ ದ್ವೀಪ, ಸುಮಾರು 3,000,000 ಚದರ ಕಿಲೋಮೀಟರ್.ಗಳಷ್ಟು ಭೂಮಿಯನ್ನು ಹೊಂದಿರುತ್ತದೆ. ಇದು ಇಸ್ರಾಯೇಲ್ ಆಗ್ನೇಯ ಭಾಗದಲ್ಲಿ ಕಂಡುಬರುತ್ತದೆ ಮತ್ತು ಇದರ ಗಡಿಗಳೆಲ್ಲವೂ ಕೆಂಪು ಸಮುದ್ರ, ಅರಬ್ಬೀ ಸಮುದ್ರ ಮತ್ತು ಪರ್ಷಿಯನ್ ಗಲ್ಫ್.ಗಳಿಂದ ಆವರಿಸಲ್ಪಟ್ಟಿರುತ್ತದೆ.

- "ಅರಬಿಯನು" ಎನ್ನುವ ಪದವು ಅರಬ್ಬೀ ದೇಶದಲ್ಲಿ ನಿವಾಸ ಮಾಡುವವರನ್ನು ಸೂಚಿಸುತ್ತದೆ ಅಥವಾ ಅರಬ್ಬೀ ದೇಶಕ್ಕೆ ಸಂಬಂಧಪಟ್ಟವರನ್ನು ಕೂಡ ಸೂಚಿಸುತ್ತದೆ.
- ಅರಬ್ಬೀ ದೇಶದಲ್ಲಿ ಜೀವಿಸಿದ ಆದಿ ಜನರೆಲ್ಲರೂ ಶೇಮ್ ಮೊಮ್ಮೊಕ್ಕಳಾಗಿರುತ್ತಾರೆ. ಅರಬ್ಬೀಯ ಇತರ ಆದಿ ನಿವಾಸಿಗಳೆಲ್ಲರೂ ಅಬ್ರಹಾಮನ ಮಗನಾದ ಇಷ್ಮಾಯೇಲ್ ಮತ್ತು ತನ್ನ ಸಂತಾನದವರು, ಅದೇರೀತಿಯಾಗಿ ಏಸಾವನ ಸಂತಾನದವರು ಆಗಿರುತ್ತಾರೆ.
- ಇಸ್ರಾಯೇಲ್ಯರು 40 ವರ್ಷಗಳ ಕಾಲ ಮರುಭೂಮಿಯ ಸೀಮೆಯಲ್ಲಿ ಪ್ರಯಾಣ ಮಾಡಿದ ಸ್ಥಳವು ಅರಬ್ಬೀ ದೇಶದಲ್ಲೇ ಕಂಡುಬರುತ್ತದೆ.
- ಯೇಸುವಿನಲ್ಲಿ ನಂಬಿಕೆಯಿಟ್ಟ ವಿಶ್ವಾಸಿಯಾದನಂತರ, ಅಪೊಸ್ತಲನಾದ ಪೌಲನು ಅರಬ್ಬೀ ಮರುಭೂಮಿಯಲ್ಲಿ ಸುಮಾರು ಎರಡು ವರ್ಷಗಳ ಕಾಲ ಸಮಯವನ್ನು ಕಳೆದರು.
- ಸೀನಾಯಿ ಪರ್ವತವು ಅರಬ್ಬೀ ದೇಶದಲ್ಲಿದೆಯೆಂದು ಪೌಲನು ಗಲಾತ್ಯದಲ್ಲಿರುವ ಕ್ರೈಸ್ತರಿಗೆ ಬರೆದ ಪತ್ರಿಕೆಯಲ್ಲಿ ಬರೆದಿದ್ದನು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಏಸಾವ, ಗಲಾತ್ಯ, ಇಷ್ಮಾಯೇಲ್, ಶೇಮ್, ಸೀನಾಯಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.10:14-15
- ಅಪೊ.ಕೃತ್ಯ.02:8-11
- ಗಲಾತ್ಯ.01:15-17
- ಗಲಾತ್ಯ.04:24-25
- ಯೆರೆ.25:24-26
- ನೆಹೆ.02:19-20

ಪದ ಡೇಟಾ:

- Strong's: H6152, H6153, H6163, G688, G690

ಅರಾರಟ್

ಸತ್ಯಾಂಶಗಳು:

ಸತ್ಯವೇದದಲ್ಲಿ “ಅರಾರಟ್” ಎನ್ನುವ ಹೆಸರು ಒಂದು ಪರ್ವತ ಶ್ರೇಣಿಗೆ, ಒಂದು ರಾಜ್ಯಕ್ಕೆ ಮತ್ತು ಒಂದು ದೇಶಕ್ಕೆ ಕೊಡಲ್ಪಟ್ಟಿದೆ.

- “ಅರಾರಟ್ ದೇಶ” ಎನ್ನುವುದು ಈಗಿನ ಟರ್ಕಿ ದೇಶದಲ್ಲಿನ ಈಶಾನ್ಯ ಭಾಗದಲ್ಲಿ ಬಹುಶಃ ಕಂಡುಬರಬಹುದು.
- ನೋಹನ ಕಾಲದಲ್ಲಿ ಬಂದಿರುವ ಪ್ರಳಯದಲ್ಲಿನ ನೀರೆಲ್ಲಾ ಹಿಮ್ಮೆಟ್ಟಿದನಂತರ ನೋಹನ ನಾವೆಯು ಅರಾರಟ್ ಎನ್ನುವ ಪರ್ವತದ ಹೆಸರಿನ ಮೇಲೆಯೇ ಬಂದು ನಿಂತಿತ್ತು.
- ಈ ಆಧುನಿಕ ಕಾಲದಲ್ಲಿ, “ಅರಾರಟ್ ಪರ್ವತ” ಎಂದು ಕರೆಯಲ್ಪಡುವ ಪರ್ವತವು ಅನೇಕಬಾರಿ ಸತ್ಯವೇದದಲ್ಲಿ ಕರೆಯಲ್ಪಡುವ “ಅರಾರಟ್ ಪರ್ವತಗಳು” ಎನ್ನುವ ಸ್ಥಳವನ್ನು ಸೂಚಿಸುತ್ತಿರಬಹುದೆನ್ನುವ ಆಲೋಚನೆಯುಂಟು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನಾವೆ, ನೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.19:35-37
- ಆದಿ.08:4-5
- ಯೆಶಯಾ.37:38
- ಯೆರೆ.51:27-28

ಪದ ಡೇಟಾ:

- Strong's: H780

ಅರ್ತಷಸ್ತ

ಸತ್ಯಾಂಶಗಳು:

ಅರ್ತಷಸ್ತ ಪರ್ಷಿಯ ಚಕ್ರವರ್ತಿಯಾಗಿ ಸುಮಾರು ಕ್ರಿ.ಪೂ.464 ರಿಂದ 424 ರವರೆಗೆ ರಾಜ್ಯವನ್ನಾಳಿದ ಅರಸನಾಗಿದ್ದನು.

- ಅರ್ತಷಸ್ತನ ಆಳ್ವಿಕೆಯಲ್ಲಿ ಯೆಹೂದದಿಂದ ಬಂದಿರುವ ಇಸ್ರಾಯೇಲ್ಯರು ಬಾಬೆಲೋನಿಯಾಗೆ ಸೆರೆಗೆ ಒಯ್ಯಲ್ಪಟ್ಟಿದ್ದರು, ಆ ಸಮಯದಲ್ಲಿ ಅವರು ಪರ್ಷಿಯ ರಾಜ್ಯಾಧಿಕಾರದ ಕೆಳಗೆ ಇದ್ದಿದ್ದರು.
- ಅರ್ತಷಸ್ತನು ಯಾಜಕನಾದ ಎಜ್ರಾನನ್ನು ಮತ್ತು ಇತರ ಯೆಹೂದ್ಯ ನಾಯಕರನ್ನು ಬಾಬೆಲೋನಿಯನ್ನು ಬಿಟ್ಟು, ದೇವರ ಧರ್ಮಶಾಸ್ತ್ರವನ್ನು ಇಸ್ರಾಯೇಲ್ಯರಿಗೆ ಬೋಧಿಸಲು ಯೆರೂಸಲೇಮಿಗೆ ಹೋಗುವುದಕ್ಕೆ ಅನುಮತಿ ನೀಡಿದರು.
- ಈ ಸಮಯವಾದನಂತರ, ಯೆರೂಸಲೇಮಿನ ಸುತ್ತಲು ಬಿದ್ದು ಹೋದ ಗೋಡೆಗಳನ್ನು ತಿರಿಗಿ ಕಟ್ಟುವುದಕ್ಕೆ ಯೆಹೂದ್ಯರನ್ನು ನಡೆಸಲು ಯೆರೂಸಲೇಮಿಗೆ ತಿರುಗಿ ಹೋಗುವುದಕ್ಕೆ ಅರ್ತಷಸ್ತನು ತನ್ನ ಬಳಿಯಿರುವ ಪಾನಸೇವಕನಾದ ನೆಹೆಮೀಯನಿಗೆ ಕೂಡ ಅನುಮತಿ ಕೊಟ್ಟನು.
- ಪರ್ಷಿಯ ಆಡಳಿತದಲ್ಲಿ ಬಾಬೆಲ್ ಇರುವದರಿಂದ, ಅರ್ತಷಸ್ತನನ್ನು ಕೆಲವೊಂದುಸಲ “ಬಾಬೆಲೋನಿಯ ಅರಸ” ಎಂದು ಕರೆಯಲ್ಪಡುತ್ತಿದ್ದನು.
- ಅರ್ತಷಸ್ತ ಎನ್ನುವ ವ್ಯಕ್ತಿ ಅಹಷ್ವೇರೋಷ ಅಲ್ಲ, ಇವರಿಬ್ಬರು ಬೇರೆ ಬೇರೆಯಾಗಿರುತ್ತಾರೆ.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಹಷ್ವೇರೋಷ, ಬಾಬೆಲೋನ್, ಪಾನಸೇವಕ, ಎಜ್ರಾ, ನೆಹೆಮೀಯ, ಪರ್ಷಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಜ್ರಾ.04:7-8
- ಎಜ್ರಾ.07:1-5
- ನೆಹೆ.02:1-2
- ನೆಹೆ.13:6-7

ಪದ ಡೇಟಾ:

- Strong's: H783

ಅಶೇರ, ಅಶೇರ ವಿಗ್ರಹ ಸ್ತಂಭ, ಅಶೇರ ವಿಗ್ರಹ ಸ್ತಂಭಗಳು, ಅಷ್ಟೋರೆತ್, ಅಷ್ಟೋರೆತ್ ದೇವತೆಗಳು

ಪದದ ಅರ್ಥವಿವರಣೆ:

ಅಶೇರ ಎನ್ನುವುದು ಒಂದು ದೇವತೆಯ ಹೆಸರು, ಅದನ್ನು ಹಳೇ ಒಡಂಬಡಿಕೆಯ ಕಾಲದಲ್ಲಿ ಕಾನಾನ್ಯ ಜನರ ಗುಂಪುಗಳು ಆರಾಧನೆ ಮಾಡುತ್ತಿದ್ದರು. "ಅಷ್ಟೋರೆತ್" ಎನ್ನುವದು "ಅಶೇರ" ಹೆಸರಿಗೆ ಬೇರೊಂದು ಹೆಸರಾಗಿರಬಹುದು, ಅಥವಾ ಇಲ್ಲದಿದ್ದರೆ ಅದೇ ಹೆಸರಿನ ದೇವತೆಯಿರುವ ಬೇರೊಂದು ಹೆಸರಾಗಿರಬಹುದು.

- "ಆಶೇರ ವಿಗ್ರಹ ಸ್ತಂಭ" ಎನ್ನುವ ಮಾತು ಕೆತ್ತಿದ ಮರದ ಚಿತ್ರಗಳಿಗೆ ಅಥವಾ ಈ ದೇವತೆಯನ್ನು ಪ್ರತಿಬಿಂಬಿಸುವ ಕೆತ್ತಿದ ಮರಗಳಿಗೆ ಸೂಚಿಸಬಹುದು.
- ಆಶೇರ ವಿಗ್ರಹಸ್ತಂಭಗಳು ಬಾಳ್ ಎನ್ನುವ ಸುಳ್ಳು ದೇವರ ಯಜ್ಞವೇದಿಗಳ ಹತ್ತಿರ ಇಡುತ್ತಿದ್ದರು, ಯಾಕಂದರೆ ಈ ಬಾಳ್ ದೇವರು ಆಶೇರ ಗಂಡನೆಂದು ಭಾವಿಸುತ್ತಿದ್ದರು. ಕೆಲವೊಂದು ಜನರ ಗುಂಪುಗಳು ಬಾಳ್ ದೇವರನ್ನು ಸೂರ್ಯ ದೇವರೆಂದು ಮತ್ತು ಆಶೇರ ಅಥವಾ ಅಷ್ಟೋರೆತ್ ದೇವತೆಯನ್ನು ಚಂದ್ರ ದೇವತೆಯೆಂದು ಆರಾಧನೆ ಮಾಡುತ್ತಿದ್ದರು.
- ಆಶೇರ ದೇವತೆಯ ಕೆತ್ತಿದ ಚಿತ್ರಗಳೆಲ್ಲವನ್ನು ನಾಶಗೊಳಿಸಬೇಕೆಂದು ದೇವರು ಇಸ್ರಾಯೇಲ್ಯರಿಗೆ ಅಪ್ಪಣೆ ಕೊಟ್ಟನು.
- ಗಿದ್ಯೋನ್, ಅರಸನಾದ ಆಸ, ಮತ್ತು ಅರಸನಾದ ಯೋಷೀಯ ಎನ್ನುವ ಕೆಲವರು ಇಸ್ರಾಯೇಲ್ ನಾಯಕರು ದೇವರಿಗೆ ವಿಧೇಯರಾದರು ಮತ್ತು ಈ ವಿಗ್ರಹಗಳೆಲ್ಲವುಗಳನ್ನು ನಾಶಗೊಳಿಸಲು ಜನರನ್ನು ನಡೆಸಿದರು.
- ಅರಸನಾದ ಸೊಲೊಮೋನ, ಅರಸನಾದ ಮನಷ್ಷೆ, ಮತ್ತು ಅರಸನಾದ ಆಹಾಬ ಎನ್ನುವ ಇತರ ಇಸ್ರಾಯೇಲ್ ನಾಯಕರು ಆಶೇರ ವಿಗ್ರಹ ಸ್ತಂಭಗಳಿಂದ ಬಿಡುಗಡೆಯಾಗಲಿಲ್ಲ ಮತ್ತು ಈ ವಿಗ್ರಹಗಳನ್ನು ಆರಾಧಿಸುವಂತೆ ಜನರನ್ನು ಪ್ರಭಾವಗೊಳಿಸಿದ್ದಾರೆ.

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ಬಾಳ್, ಗಿದ್ಯೋನ್, ರೂಪ, ಸೊಲೊಮೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.18:4-5
- 2 ಅರಸ.21:1-3
- ಯೆಶಯಾ.27:9
- ನ್ಯಾಯಾ.03:7-8
- ಮೀಕಾ.05:12-15

ಪದ ಡೇಟಾ:

- Strong's: H842, H6252, H6253

ಅಶ್ಶೂರ್, ಅಶ್ಶೂರನು, ಅಶ್ಶೂರದವರು, ಅಶ್ಶೂರ್ ಚಕ್ರವರ್ತಿ

ಸತ್ಯಾಂಶಗಳು:

ಅಶ್ಶೂರ್ ಎನ್ನುವುದು ಇಸ್ರಾಯೇಲ್ಯರು ಕಾನಾನ್ ದೇಶದಲ್ಲಿ ನಿವಾಸ ಮಾಡುತ್ತಿರುವಾಗ ಅತ್ಯಂತ ಶಕ್ತಿಯುಳ್ಳ ದೇಶವಾಗಿದ್ದಿತ್ತು. ಅಶ್ಶೂರ್ ಸಾಮ್ರಾಜ್ಯವು ಅಶ್ಶೂರ್ ಅರಸನಿಂದ ಪಾಲಿಸಲ್ಪಡುವ ದೇಶಗಳ ಸಮೂಹ.

- ಅಶ್ಶೂರ್ ದೇಶವು ಈಗಿನ ಇರಾಕಿನ ಉತ್ತರ ದಿಕ್ಕಿನಲ್ಲಿರುವ ಸೀಮೆಯಲ್ಲಿ ಕಂಡುಬರುತ್ತದೆ.
- ಅಶ್ಶೂರಿನವರು ತಮ್ಮ ಚರಿತ್ರೆಯಲ್ಲಿ ಅನೇಕ ಸಂದರ್ಭಗಳಲ್ಲಿ ಇಸ್ರಾಯೇಲ್ಯರಿಗೆ ವಿರುದ್ಧವಾಗಿ ಯುದ್ಧವನ್ನು ನಡೆಸಿದರು.
- ಕ್ರಿ.ಪೂ.722ನೇ ವರ್ಷದಲ್ಲಿ, ಅಶ್ಶೂರಿನವರು ಸಂಪೂರ್ಣವಾಗಿ ಇಸ್ರಾಯೇಲ್ ರಾಜ್ಯದ ಮೇಲೆ ಜಯವನ್ನು ಹೊಂದಿಕೊಂಡರು ಮತ್ತು ಅನೇಕಮಂದಿ ಇಸ್ರಾಯೇಲ್ಯರನ್ನು ಅಶ್ಶೂರಿಗೆ ಕರದೊಯ್ಯುವುದಕ್ಕೆ ಬಲವಂತಿಕೆ ಮಾಡಿದರು.
- ಅಶ್ಶೂರದವರು ಸಮಾರ್ಯದಿಂದ ಇಸ್ರಾಯೇಲ್ ದೇಶಕ್ಕೆ ಕರೆದುಕೊಂಡು ಬಂದಿರುವ ಅನ್ಯರನ್ನು ಆಲ್ಲಿ ಉಳಿದಂತ ಇಸ್ರಾಯೇಲ್ಯರು ವಿವಾಹ ಮಾಡಿಕೊಂಡರು. ಅವರಿಂದ ಬಂದಿರುವ ಸಂತಾನದವರನ್ನೇ ಸಮಾರ್ಯದವರು ಎಂದು ಕರೆದರು.

(ಈ ಪದಗಳನ್ನು ಸಹ ನೋಡಿರಿ : ಸಮಾರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.10:11-14
- ಆದಿ.25:17-18
- ಯೆಶಯಾ.07:16-17
- ಯೆರೆ.50:17-18
- ಮೀಕಾ.07:11-13

ಸತ್ಯವೇದದಿಂದ ಉದಾಹರಣೆಗಳು:

- **20:02** ಅವರನ್ನು ನಾಶಪಡಿಸಲು ತಮ್ಮ ಶತ್ರುಗಳನ್ನು ಅನುಮತಿಸಿದ್ದಕ್ಕಾಗಿ ದೇವರು ಎರಡು ರಾಜ್ಯಗಳನ್ನು ಶಿಕ್ಷಿಸಿದರು. ಶಕ್ತಿಯುತವಾದ ಕ್ರೂರ ದೇಶವಾದ _ ಅಶ್ಶೂರ್ ಸಾಮ್ರಾಜ್ಯದಿಂದ _ ಇಸ್ರಾಯೇಲ್ ರಾಜ್ಯವು ನಾಶಕ್ಕೊಳಗಾಗಿತು. _ ಅಶ್ಶೂರಿನವರು _ ಇಸ್ರಾಯೇಲ್ ರಾಜ್ಯದಲ್ಲಿ ಅನೇಕರನ್ನು ಕೊಂದು ಹಾಕಿದರು, ಬೆಲೆಯುಳ್ಳ ಪ್ರತಿಯೊಂದನ್ನು ತೆಗೆದುಕೊಂಡರು ಮತ್ತು ದೇಶದಲ್ಲಿ ಸಾಕಷ್ಟು ಭೂಭಾಗವನ್ನು ಸುಟ್ಟು ಹಾಕಿದರು.
- **20:03** _ ಅಶ್ಶೂರ್ ದೇಶದವರು _ ಎಲ್ಲಾ ನಾಯಕರನ್ನು, ಶ್ರೀಮಂತರನ್ನು, ಮತ್ತು ನೈಪುಣ್ಯವಿರುವವರನ್ನು ಒಂಗೂಡಿಸಿ ತಮ್ಮ ದೇಶಕ್ಕೆ ಸೆರೆ ಹಿಡಿದು ಕರೆದುಕೊಂಡು ಹೋದರು.
- **20:04** ಇದಾದನಂತರ _ ಅಶ್ಶೂರಿನವರು _ ಇಸ್ರಾಯೇಲ್ ರಾಜ್ಯವು ನಿವಾಸವಾಗಿರುವ ಸ್ಥಳದಲ್ಲಿ ಜೀವಿಸುವಂತೆ ಅನ್ಯರನ್ನು ಅಲ್ಲಿರಿಸಿದರು.

ಪದ ಡೇಟಾ:

- Strong's: H804, H1121

ಅಷ್ಕೆಲೋನ್

ಸತ್ಯಾಂಶಗಳು:

ಸತ್ಯವೇದದಲ್ಲಿ ನಡೆದ ಸಂಘಟನೆಗಳ ಕಾಲದಲ್ಲಿ, ಅಷ್ಕೆಲೋನ್ ಎನ್ನುವುದು ಫಿಲಿಷ್ಟಿಯನರ ಪ್ರಮುಖ ನಗರ, ಇದು ಮೆಡಿಟರೇನಿಯನ್ ಸಮುದ್ರದ ಕರಾವಳಿ ಪ್ರಾಂತ್ಯದಲ್ಲಿರುತ್ತದೆ. ಇದು ಇವತ್ತಿಗೂ ಇಸ್ರಾಯೇಲ್ ದೇಶದಲ್ಲಿದೆ.

- ಅಷ್ಕೆಲೋನ್ ಎನ್ನುವುದು ಫಿಲಿಷ್ಟಿಯನರ ಐದು ಪ್ರಾಮುಖ್ಯ ಪಟ್ಟಣಗಳಲ್ಲಿ ಒಂದಾಗಿರುತ್ತದೆ, ಉಳಿದ ಆ ನಾಲ್ಕು ಪಟ್ಟಗಳು ಯಾವುವೆಂದರೆ ಅಷ್ದೋದ್, ಎಕ್ರೋನ್, ಗತೂರು ಮತ್ತು ಗಾಜಾ.
- ಇಸ್ರಾಯೇಲ್ಯರು ಸಂಪೂರ್ಣವಾಗಿ ಅಷ್ಕೆಲೋನ್ ಜನರನ್ನು ಗೆಲ್ಲಲಿಲ್ಲ, ಆದರೂ ಯೂದಾ ರಾಜ್ಯವು ಅವರ ಬೆಟ್ಟದ ದೇಶವನ್ನು ಸ್ವಾಧೀನ ಮಾಡಿಕೊಂಡರು.
- ಅಷ್ಕೆಲೋನ್ ಪಟ್ಟಣವು ಸುಮಾರು ನಾಲ್ಕು ನೂರು ವರ್ಷಗಳ ಕಾಲ ಫಿಲಿಷ್ಟಿಯನರ ಸ್ವಾಧೀನದಲ್ಲಿತ್ತು.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಷ್ದೋದ್, ಕಾನಾನ್, ಎಕ್ರೋನ್, ಗತೂರು, ಗಾಜಾ, ಫಿಲಿಷ್ಟಿಯನರು, ಮೆಡಿಟರೇನಿಯನ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.06:17-18
- ಆಮೋಸ.01:8
- ಯೆರೆ.25:19-21
- ಯೆಹೋ.13:2-3
- ನ್ಯಾಯ.01:18-19
- ಜೆಕರ್ಯ.09:5-7

ಪದ ಡೇಟಾ:

- Strong's: H831

ಅಷ್ದೋದ್, ಅಜೋತ್

ಪದದ ಅರ್ಥವಿವರಣೆ:

ಅಷ್ದೋದ್ ಎನ್ನುವುದು ಫಿಲಿಷ್ಟಿಯರ ಐದು ಪ್ರಾಮುಖ್ಯವಾದ ಪಟ್ಟಣಗಳಲ್ಲಿ ಒಂದಾಗಿರುತ್ತದೆ. ಇದು ಮೆಡಿಟರೇನಿಯನ್ ಸಮುದ್ರಕ್ಕೆ ಹತ್ತಿರದಲ್ಲಿ ಕಾನಾನ್ ಆಗ್ನೇಯ ದಿಕ್ಕಿನಲ್ಲಿರುತ್ತದೆ, ಇದು ಗಾಜಾ ಮತ್ತು ಯೊಪ್ಪ ಪಟ್ಟಣಗಳ ರಹದಾರಿಯ ಮಧ್ಯಭಾಗದಲ್ಲಿರುತ್ತದೆ.

- ಫಿಲಿಷ್ಟಿಯರ ಸುಳ್ಳು ದೇವತೆಯಾದ ದಾಗೋನ್ ದೇವಾಲಯವು ಅಷ್ದೋದ್.ನಲ್ಲಿತ್ತು.
- ಫಿಲಿಷ್ಟಿಯರು ಒಡಂಬಡಿಕೆಯ ಮಂಜೂಷವನ್ನು ಕದ್ದುಕೊಂಡು ಹೋಗಿ, ಅಷ್ದೋದ್.ನಲ್ಲಿರುವ ಅನ್ಯ ದೇವಾಲಯದಲ್ಲಿಟ್ಟಾಗ ದೇವರು ಅಷ್ದೋದ್ ಜನರನ್ನು ತುಂಬಾ ತೀವ್ರವಾಗಿ ಶಿಕ್ಷಿಸಿದರು.
- ಈ ಪಟ್ಟಣಕ್ಕೆ ಗ್ರೀಕ್ ಹೆಸರು ಅಜೋತ್ ಆಗಿರುತ್ತದೆ. ಸುವಾರ್ತಿಕನಾದ ಫಿಲಿಪ್ಪನು ಸುವಾರ್ತೆಯನ್ನು ಸಾರಿದ ಪಟ್ಟಣಗಳಲ್ಲಿ ಇದೂ ಒಂದಾಗಿತ್ತು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಎಕ್ರೋನ್, ಗತೂರು, ಗಾಜಾ, ಯೊಪ್ಪ, ಫಿಲಿಪ್ಪ, ಫಿಲಿಷ್ಟಿಯನರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.05:1-3
- ಅಪೊ.ಕೃತ್ಯ.08:39-40
- ಆಮೋಸ.01:8
- ಯೆಹೋ.15:45-47
- ಜೆಕರ್ಯ.09:5-7

{{tag>publish ktlink}

ಪದ ಡೇಟಾ:

- Strong's: H795, G108

ಅಹಜ್ಯ

ಸತ್ಯಾಂಶಗಳು:

ಅಹಜ್ಯ ಎನ್ನುವ ಹೆಸರಿನ ಮೇಲೆ ಇಬ್ಬರು ಅರಸರಿದ್ದಾರೆ: ಒಬ್ಬರು ಇಸ್ರಾಯೇಲ್ ರಾಜ್ಯವನ್ನು ಆಳಿದವರು, ಮತ್ತೊಬ್ಬರು ಯೆಹೂದ ರಾಜ್ಯವನ್ನು ಆಳಿದವರು.

- ಯೆಹೂದ ಅರಸನು ಅರಸನಾದ ಯೆಹೋರಾಮನ ಮಗನಾಗಿರುತ್ತಾನೆ. ಈತನು ಒಂದು ವರ್ಷ ಕಾಲ (ಕ್ರಿ.ಪೂ.841) ಆಳಿದನು ಮತ್ತು ಯೆಹೂ ಎನ್ನುವವನಿಂದ ಕೊಲ್ಲಲ್ಪಡುತ್ತಾನೆ. ಅಹಜ್ಯ ಚಿಕ್ಕ ಮಗನಾದ ಯೋವಾಷನು ಕೊನೆಗೆ ಅರಸನಾಗಿ ತನ್ನ ತಂದೆಯ ಸ್ಥಾನವನ್ನು ಪಡೆಯುತ್ತಾನೆ.
- ಇಸ್ರಾಯೇಲ್ ಅರಸನಾದ ಅಹಜ್ಯನು ಅರಸನಾದ ಅಹಾಬನ ಮಗನಾಗಿರುತ್ತಾನೆ. ಇವನು ಎರಡು ವರ್ಷಗಳ ಕಾಲ ಆಳಿದನು (ಕ್ರಿ.ಪೂ. 850-49). ಇವನು ತನ್ನ ನಿವಾಸ ಸ್ಥಳದಲ್ಲೇ ಬಿದ್ದು ಅನೇಕವಾದ ಗಾಯಗಳಿಂದ ನರಳಿ ಸತ್ತುಹೋದನು, ಮತ್ತು ತನ್ನ ಸಹೋದರನಾದ ಯೋರಾಮನು ಅರಸನಾದನು.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : /ಯೆಹೂ, /ಅಹಾಬ, /ಯಾರೊಬ್ಬಾಮ, ಯೋವಾಷ)

ಸತ್ಯವೇದದ ಅನುಬಂಧ ವಾಕ್ಯಗಳು :

- /1 ಅರಸ.22:39-40
- /2 ಪೂರ್ವ.22:1-3
- /2 ಪೂರ್ವ.25:23-24
- /2 ಅರಸ.11:1-3

ಪದ ಡೇಟಾ:

- Strong's: H274

ಅಹಷ್ವೇರೋಷ

ಸತ್ಯಾಂಶಗಳು:

ಅಹಷ್ವೇರೋಷನು ಇಪ್ಪತ್ತು ವರ್ಷಗಳ ಪುರಾತನ ಪಾರಸಿಯ ರಾಜ್ಯವನ್ನು ಆಳ್ವಿಕೆ ಮಾಡಿದ ಅರಸನಾಗಿದ್ದನು.

- ಇದು ಯೆಹೂದಿಯರೆಲ್ಲರೂ ಸೆರೆಗೆ ಕರೆದೊಯ್ಯಲ್ಪಟ್ಟು ಬಾಬೆಲೋನಿಯಯದಲ್ಲಿ ನಿವಾಸ ಮಾಡುತ್ತಿರುವ ಸಂದರ್ಭದಲ್ಲಿ ನಡೆದಿತ್ತು, ಅದು ಆಗ ಪಾರಸಿಯ ಪಾಲನೆ ಕೆಳಗೆ ಇರುವದಾಗಿತ್ತು.
- ಈ ಅರಸನಿಗೆ ಇನ್ನೊಂದು ಹೆಸರು ಅರ್ತಷಸ್ತ ಎಂದಾಗಿರಬಹುದು.
- ಕೋಪದಲ್ಲಿ ತನ್ನ ರಾಣಿಯನ್ನು ಹೊರ ಕಳುಹಿಸಿದ ಸ್ವಲ್ಪ ಕಾಲವಾದನಂತರ ಅರಸನಾದ ಅಹಷ್ವೇರೋಷ ಯೆಹೂದ್ಯರ ಸ್ತ್ರೀಯಾದ ಎಸ್ತೇರಳನ್ನು ತನ್ನ ರಾಣಿಯನ್ನಾಗಿ ಮತ್ತು ತನ್ನ ಹೆಂಡತಿಯನ್ನಾಗಿ ಆಯ್ಕೆ ಮಾಡಿಕೊಂಡನು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : /ಬಾಬೆಲೋನ, /ಎಸ್ತೇರಳು, /ಇಥಿಯೋಪ್ಯ, /ಸೆರೆ, /ಪಾರಸಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- /ದಾನಿ.09:1-2
- /ಎಸ್ತೇ.10:1-2
- /ಎಜ್ರಾ.04:7-8

ಪದ ಡೇಟಾ:

- Strong's: H325

ಅಹಾಬ

ಸತ್ಯಾಂಶಗಳು:

ಅಹಾಬನು ಸುಮಾರು ಕ್ರಿ.ಪೂ.875 ರಿಂದ 854 ರವರೆಗೆ ಇಸ್ರಾಯೇಲ್ ಉತ್ತರ ರಾಜ್ಯವನ್ನು ಆಳಿದ ದುಷ್ಟ ರಾಜನಾಗಿದ್ದನು.

- ಅರಸನಾದ ಅಹಾಬನು ಇಸ್ರಾಯೇಲ್ ಜನರನ್ನು ಐದು ದೇವತೆಗಳಿಗೆ ಆರಾಧನೆ ಮಾಡುವಂತೆ ಪ್ರಭಾವಗೊಳಿಸಿದ್ದನು.
- ಪ್ರವಾದಿಯಾದ ಎಲೀಯನು ಅಹಾಬನನ್ನು ಎದುರುಗೊಂಡು, ಇಸ್ರಾಯೇಲ್ಯರು ಪಾಪ ಮಾಡುವಂತೆ ಪ್ರೇರೇಪಿಸಿದ ಅಹಾಬನ ಪಾಪ ಕೃತ್ಯಗಳಿಗಾಗಿ ಶಿಕ್ಷೆಯಾಗಿ ಮೂರುವರೆ ವರ್ಷಗಳ ಕಾಲ ಅತೀ ಭಯಂಕರವಾದ ಬರಗಾಲ ಬರುತ್ತದೆಯೆಂದು ಅವನಿಗೆ ಹೇಳಿದನು.
- ಅಹಾಬ ಮತ್ತು ತನ್ನ ಪತ್ನಿಯಾದ ಈಜೆಬೆಲ್ ಇಬ್ಬರು ಸೇರಿ ಅನೇಕವಾದ ದುಷ್ಟ ಕಾರ್ಯಗಳನ್ನು ಮಾಡಿದರು, ಆ ಪಾಪಗಳಲ್ಲಿ ನೀತಿವಂತರನ್ನು ಸಾಯಿಸುವುದಕ್ಕೆ ತಮ್ಮ ಅಧಿಕಾರವನ್ನು ಬಳಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಳ್, ಎಲೀಯ, ಈಜೆಬೆಲ್, ಇಸ್ರಾಯೇಲ್ ರಾಜ್ಯ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.18:1-2
- 1 ಅರಸ.20:1-3
- 2 ಪೂರ್ವ.21:6-7
- 2 ಅರಸ.09:7-8

ಸತ್ಯವೇದದಿಂದ ಉದಾಹರಣೆಗಳು:

- **19:02** ಇಸ್ರಾಯೇಲ್ ರಾಜ್ಯದ ಮೇಲೆ _ ಅಹಾಬನು _ ಆಳ್ವಿಕೆ ಮಾಡುತ್ತಿರುವಾಗ ಎಲೀಯನು ಪ್ರವಾದಿಯಾಗಿದ್ದನು. _ ಅಹಾಬ _ ಎನ್ನುವವನು ಬಾಳ್ ಎನ್ನುವ ಸುಳ್ಳು ದೇವರನ್ನು ಆರಾಧನೆ ಮಾಡುವಂತೆ ಜನರನ್ನು ಪ್ರೇರೇಪಿಸಿದ ದುಷ್ಟ ಮನುಷ್ಯನಾಗಿದ್ದನು.
- **19:03** ಅಹಾಬನು ಮತ್ತು ತನ್ನ ಸೈನ್ಯವು ಎಲೀಯನಿಗಾಗಿ ಹುಡುಕುತ್ತಿದ್ದರು, ಆದರೆ ಅವರು ಆತನನ್ನು ಹಿಡಿದುಕೊಳ್ಳುವುದಕ್ಕಾಗಲಿಲ್ಲ.
- **19:05** ಮೂರುವರೆ ವರ್ಷಗಳಾದನಂತರ, ಇಸ್ರಾಯೇಲ್ ದೇಶಕ್ಕೆ ಹಿಂದಿರುಗಿ ಬಂದು, _ ಅಹಾಬ _ನೊಂದಿಗೆ ಮಾತನಾಡುವಂತೆ ದೇವರು ಎಲೀಯನಿಗೆ ಹೇಳಿದರು. ಯಾಕಂದರೆ ಆತನು ಮತ್ತೊಮ್ಮೆ ಮಳೆ ಸುರಿಯುವಂತೆ ಮಾಡುವದಕ್ಕಿದ್ದನು.

ಪದ ಡೇಟಾ:

- Strong's: H256

ಅಹೀಯ

ಸತ್ಯಾಂಶಗಳು:

ಹಳೇ ಒಡಂಬಡಿಕೆಯಲ್ಲಿ ಅಹೀಯ ಎನ್ನುವ ಹೆಸರಿನ ಮೇಲೆ ಅನೇಕರಿದ್ದಾರೆ. ಆ ಹೆಸರುಗಳು ಈ ಕೆಳಗಿನಂತಿವೆ :

- ಸೌಲನ ಸಮಯದಲ್ಲಿ ಅಹೀಯ ಹೆಸರಿನ ಮೇಲೆ ಒಬ್ಬ ಯಾಜಕನಿದ್ದನು.
- ಸೊಲೊಮೋನನು ಆಳುತ್ತಿರುವ ಸಮಯದಲ್ಲಿ ಅಹೀಯ ಹೆಸರಿನ ಮೇಲೆ ಒಬ್ಬ ಕಾರ್ಯದರ್ಶಿ ಇದ್ದನು.
- ಇಸ್ರಾಯೇಲ್ ದೇಶವು ಎರಡು ರಾಜ್ಯಗಳಾಗಿ ವಿಭಜನೆ ಹೊಂದುತ್ತದೆಯೆಂದು ಮುಂಚಿತವಾಗಿಯೇ ನುಡಿದ ವ್ಯಕ್ತಿ ಅಹೀಯ ಆಗಿದ್ದರು, ಇವರು ಶಿಲೋವಿನಿಂದ ಬಂದ ಪ್ರವಾದಿಯಾಗಿದ್ದರು.
- ಇಸ್ರಾಯೇಲ್ ಅರಸನಾದ ಬಾಷ ತಂದೆ ಕೂಡ ಅಹೀಯ ಹೆಸರಿನ ಮೇಲೆ ಇದ್ದಿದ್ದನು.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : /ಬಾಷ, /ಶಿಲೋವಿ)

ಸತ್ಯವೇದದ ಅನುಬಂಧ ವಾಕ್ಯಗಳು :

- /1 ಅರಸ.15:27-28
- /1 ಅರಸ.21:21-22
- /1 ಸಮೂ.14:18-19
- /2 ಪೂರ್ವ.10:15

ಪದ ಡೇಟಾ:

- Strong's: H281

ಆದಾಮ

ಸತ್ಯಾಂಶಗಳು:

ಅದಾಮನು ಸೃಷ್ಟಿಸಿರುವ ಮೊಟ್ಟ ಮೊದಲನೇ ವ್ಯಕ್ತಿಯಾಗಿದ್ದಾನೆ. ಈತನು ಮತ್ತು ತನ್ನ ಹೆಂಡತಿಯಾದ ಹವ್ವಳು ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟಿದ್ದಾರೆ.

- ದೇವರು ಆದಾಮನನ್ನು ನೆಲದ ಮಣ್ಣಿನಿಂದ ಸೃಷ್ಟಿಸಿ, ಅವನ ಮೂಗಿನಲ್ಲಿ ಜೀವ ಶ್ವಾಸವನ್ನು ಊದಿದನು.
- ಆದಾಮನ ಹೆಸರು "ಕೆಂಪು ಮಣ್ಣು" ಅಥವಾ "ನೆಲ" ಎಂದು ಇಬ್ರಿ ಪದದಲ್ಲಿ ಕರೆಯಲ್ಪಡುವ ಪದಗಳಿಗೆ ಸಮಾನವಾಗಿರುತ್ತದೆ.
- "ಆದಾಮ" ಎನ್ನುವ ಹೆಸರು ಹಳೇ ಒಡಂಬಡಿಕೆಯಲ್ಲಿರುವ "ಮನುಷ್ಯನು" ಅಥವಾ "ಮಾನವ ಕುಲ" ಎನ್ನುವ ಪದಗಳಿಗೆ ಸಮಾನವಾಗಿರುತ್ತದೆ.
- ಸರ್ವ ಜನರೆಲ್ಲರು ಆದಾಮ ಮತ್ತು ಹವ್ವರಿಂದ ಬಂದಿರುವ ಸಂತಾನದವರೇ.
- ಅದಾಮ ಮತ್ತು ಹವ್ವಳು ದೇವರಿಗೆ ಅವಿಧೇಯರಾದರು. ಇದೇ ಅವರನ್ನು ದೇವರಿಂದ ದೂರ ಮಾಡಿತು ಮತ್ತು ಪಾಪ ಮಾಡುವಂತೆ ಮಾಡಿತು ಮತ್ತು ಲೋಕದೊಳಗೆ ಮರಣ ಬರುವುದಕ್ಕೆ ಕಾರಣವಾಯಿತು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಮರಣ, ಸಂತಾನ, ಹವ್ವ, ದೇವರ ಸ್ವರೂಪ, ಜೀವ)

ಸತ್ಯವೇದದ ಅನುಬಂಧ ವಾಕ್ಯಗಳು:

- 1ತಿಮೋ 02:14
- ಆದಿ 03:17
- ಆದಿ 05:01
- ಆದಿ 11:05
- ಲೂಕ್ 03:38
- ರೋಮಾ 05:15

ಸತ್ಯವೇದದಿಂದ ಉದಾಹರಣೆಗಳು:

- **01:09** "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ" ಎಂದು ದೇವರು ಹೇಳಿದರು.
- **01:10** ಈ ಮನುಷ್ಯನ ಹೆಸರು _ ಆದಾಮ _. _ ಆದಾಮನು _ ತಂಗುವುದಕ್ಕೆ ದೇವರು ಒಂದು ತೋಟವನ್ನುಂಟು ಮಾಡಿದನು ಮತ್ತು ಅದನ್ನು ಕಾಯುವುದಕ್ಕೂ ಅವನನ್ನು ಆ ತೋಟದಲ್ಲಿ ಇರಿಸಿದನು.
- **01:12** "ಮನುಷ್ಯನು ಒಂಟಿಯಾಗಿರುವುದು ಒಳ್ಳೇದಲ್ಲ" ಎಂದು ದೇವರು ಹೇಳಿದನು. ಆದರೆ ಪ್ರಾಣಿಗಳಲ್ಲಿ ಯಾವುದಾದರೂ _ ಆದಾಮನಿಗೆ _ ಸಹಕಾರಿಯಾಗಿರುವುದಕ್ಕಾಗುವುದಿಲ್ಲ.
- **02:11** ದೇವರು ಆದಾಮನಿಗೆ ಮತ್ತು ಹವ್ವಳಿಗೆ ಪ್ರಾಣಿ ಚರ್ಮಗಳಿಗಿಂದ ಬಟ್ಟೆಗಳನ್ನು ಉಡಿಸಿದನು.
- **02:12** ಅದಕ್ಕಾಗಿ ದೇವರು _ ಆದಾಮನನ್ನು _ ಮತ್ತು ಹವ್ವಳನ್ನು ಆ ಸುಂದರವಾದ ತೋಟದಿಂದ ಹೊರ ಕಳುಹಿಸಿದನು.
- **49:08** ಆದಾಮ ಮತ್ತು ಹವ್ವಳು ಪಾಪ ಮಾಡಿದಾಗ, ಅದು ಅವರ ಸಂತಾನದವರೆಲ್ಲರಿಗೆ ವ್ಯಾಪಕವಾಯಿತು.
- **50:16** ಆದಕಾರಣ _ ಆದಾಮನು _ ಮತ್ತು ಹವ್ವಳು ದೇವರಿಗೆ ಅವಿಧೇಯರಾಗಿ, ಈ ಲೋಕದೊಳಗೆ ಪಾಪವನ್ನು ತೆಗೆದುಕೊಂಡುಬಂದರು, ದೇವರು ಅದನ್ನು ಶಪಿಸಿದರು ಮತ್ತು ಅದನ್ನು ನಾಶಗೊಳಿಸಲು ನಿರ್ಣಯಿಸಿಕೊಂಡರು.

ಪದ ಡೇಟಾ:

- Strong's: H120, G76

ಆಮೋಚ

ಸತ್ಯಾಂಶಗಳು:

ಆಮೋಚನು ಪ್ರವಾದಿಯಾದ ಯೆಶಾಯನ ತಂದೆ.

- ಯೇಶಾಯನು “ಆಮೋಚನ ಮಗ” ಎಂದು ಬರೆದಿರುವಾಗ ಮಾತ್ರವೇ ಆತನ ಹೆಸರು ಸತ್ಯವೇದದಲ್ಲಿ ಬರೆಯಲ್ಪಟ್ಟಿರುವಂತೆ ನಾವು ಕಾಣುತ್ತೇವೆ.
- ಪ್ರವಾದಿಯಾದ ಆಮೋಸ ಹೆಸರಿಗೂ ಈ ಹೆಸರಿಗೂ ತುಂಬಾ ವ್ಯತ್ಯಾಸವುಂಟು ಮತ್ತು ಉಚ್ಚರಿಸುವಾಗಲೂ ಸರಿಯಾಗಿ ಉಚ್ಚರಿಸಬೇಕು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಮೋಸ, ಯೇಶಾಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.19:1-2
- ಯೆಶಯಾ.37:1-2
- ಯೆಶಯಾ.37:21-23

ಪದ ಡೇಟಾ:

- Strong's: H531

ಆಮೋಸ

ಸತ್ಯಾಂಶಗಳು:

ಆಮೋಸನು ಇಸ್ರಾಯೇಲ್ ಪ್ರವಾದಿ, ಯೆಹೂದ ರಾಜ್ಯಕ್ಕೆ ಅರಸನಾದ ಉಜ್ಜೀಯನ ಕಾಲದಲ್ಲಿದ್ದ ವ್ಯಕ್ತಿ.

- ಇವರನ್ನು ಪ್ರವಾದಿಯೆಂದು ಕರೆಯುವುದಕ್ಕೆ ಮುಂಚೆ, ಆಮೋಸನು ಯೆಹೂದ ರಾಜ್ಯದಲ್ಲಿ ಅಂಜೂರದ ಹಣ್ಣುಗಳ ರೈತನು ಮತ್ತು ಕುರುಬನೂ ಆಗಿದ್ದನು.
- ಅಮೋಸನು ಅಭಿವೃದ್ಧಿ ಹೊಂದುತ್ತಿರುವ ಉತ್ತರ ರಾಜ್ಯವಾದ ಇಸ್ರಾಯೇಲ್ ವಿರುದ್ಧವಾಗಿ ಪ್ರವಾದಿಸಿದನು, ಯಾಕಂದರೆ ಅವರು ಜನರಲ್ಲಿ ಅನ್ಯಾಯವಾಗಿ ನಡೆದುಕೊಳ್ಳುತ್ತಿದ್ದರು.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಂಜೂರದ ಹಣ್ಣು, ಯೆಹೂದ, ಇಸ್ರಾಯೇಲ್ ರಾಜ್ಯ, ಕುರುಬ, ಉಜ್ಜೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆಮೋಸ.01:1-2

ಪದ ಡೇಟಾ:

- Strong's: H5986

ಆಯಿ

ಸತ್ಯಾಂಶಗಳು:

ಹಳೇ ಒಡಂಬಡಿಕೆ ಕಾಲದಲ್ಲಿ, ಆಯಿ ಎನ್ನುವದು ಕಾನಾನ್ಯ ಪಟ್ಟಣವಾಗಿತ್ತು, ಇದು ದಕ್ಷಿಣ ಬೇತೇಲಿನಲ್ಲಿರುತ್ತದೆ ಮತ್ತು ಯೆರಿಕೋ ವಾಯುವ್ಯ ದಿಕ್ಕಿನಿಂದ 8 ಕಿ.ಮೀ. ದೂರದಲ್ಲಿರುತ್ತದೆ.

- ಯೆರಿಕೋವನ್ನು ಸೋಲಿಸಿದನಂತರ, ಯೆಹೋಶುವನು ಆಯಿ ಪಟ್ಟಣದ ಧಾಳಿ ಮಾಡುವದಕ್ಕೆ ಇಸ್ರಾಯೇಲ್ಯರನ್ನು ನಡೆಸುತ್ತಾನೆ. ಆದರೆ ಅವರು ಸೋತು ಬರುತ್ತಾರೆ ಯಾಕಂದರೆ ದೇವರು ಅವರ ವಿಷಯದಲ್ಲಿ ಸಂತೋಷವಾಗಿದ್ದಿಲ್ಲ.
- ಇಸ್ರಾಯೇಲಿಯನಾದ ಆಕಾನನು ಯೆರಿಕೋವಿನಿಂದ ತೆಗೆದುಕೊಂಡು ಬಂದಿರುವ ಕೆಲವು ವಸ್ತುಗಳನ್ನು ಕದ್ದಿದ್ದರಿಂದ, ದೇವರು ಅವನನ್ನು ಮತ್ತು ಅವನ ಕುಟುಂಬದವರನ್ನು ಸಾಯಿಸಬೇಕೆಂದು ಅಪ್ಪಣೆ ಕೊಟ್ಟನು. ಇದಾದನಂತರ ದೇವರು ಆಯಿ ಪಟ್ಟಣದ ಜನರನ್ನು ಸೋಲಿಸುವದಕ್ಕೆ ಸಹಾಯ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೇತೇಲ, ಯೆರಿಕೋ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಜ್ರಾ.02:27-30
- ಆದಿ.12:8-9
- ಆದಿ.13:3-4
- ಯೆಹೋ.07:2-3
- ಯೆಹೋ.08:10-12

ಪದ ಡೇಟಾ:

- Strong's: H5857

ಆರಾಬಾ

ಸತ್ಯಾಂಶಗಳು:

“ಆರಾಬಾ” ಎನ್ನುವ ಹಳೇ ಒಡಂಬಡಿಕೆಯ ಪದವು ಅತೀ ದೊಡ್ಡ ಮರುಭೂಮಿಯನ್ನು ಮತ್ತು ಯೊರ್ದನ್ ನದಿಯ ಸುತ್ತಮುತ್ತ ಬಯಲು ಸೀಮೆಗಳನ್ನೊಳಗೊಂಡ ತೋಪುಗಳನ್ನು ಮತ್ತು ಕೆಂಪು ಸಮುದ್ರದ ಉತ್ತರದ ಕೊನೆ ಭಾಗದಿಂದ ದಕ್ಷಿಣದ ವರೆಗೆ ವಿಸ್ತರಿಸಿದ ಪ್ರಾಂತ್ಯವನ್ನು ಸೂಚಿಸುತ್ತದೆ.

- ಇಸ್ರಾಯೇಲ್ಯರು ಐಗುಪ್ತದಿಂದ ಕಾನಾನ್ ಭೂಮಿಗೆ ಮಾಡಿದ ತಮ್ಮ ಪ್ರಯಾಣವನ್ನು ಈ ಮರುಭೂಮಿಯ ಸೀಮೆಯಿಂದಲೇ ಮಾಡಿದರು.
- “ಆರಾಬಾ ಸಮುದ್ರ” ಎನ್ನುವದನ್ನು “ಆರಾಬಾ ಮರುಭೂಮಿಯ ಸೀಮೆಯಲ್ಲಿರುವ ಸಮುದ್ರ” ಎಂದೂ ಅನುವಾದ ಮಾಡಬಹುದು. ಈ ಸಮುದ್ರವನ್ನು ಅನೇಕಬಾರಿ “ಉಪ್ಪು ಸಮುದ್ರ” ಎಂದು ಅಥವಾ “ಮೃತ ಸಮುದ್ರ” ಎಂದೂ ಸೂಚಿಸುತ್ತಾರೆ.
- “ಆರಾಬಾ” ಎನ್ನುವ ಪದವನ್ನು ಸಾಧಾರಣವಾಗಿ ಇತರ ಯಾವುದೇ ಮರುಭೂಮಿ ಪ್ರಾಂತ್ಯಕ್ಕೆ ಸೂಚನೆಯಾಗಿ ತೆಗೆದುಕೊಳ್ಳುತ್ತಾರೆ.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಮರುಭೂಮಿ, ಹುಲ್ಲುಗಾವಲುಗಳ ಸಮುದ್ರ, ಯೊರ್ದನ್ ನದಿ, ಕಾನಾನ್, ಉಪ್ಪು ಸಮುದ್ರ, ಐಗುಪ್ತ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.23:24-25
- 2 ಅರಸ.25:4-5
- 2 ಸಮು.02:28-29
- ಯೆರೆ.02:4-6
- ಯೋಬ.24:5-7
- ಜೆಕರ್ಯ.14:9-11

ಪದ ಡೇಟಾ:

- Strong's: H1026, H6160

ಆರಾಮ್, ಅರಾಮ್ಯನು, ಅರಾಮ್ಯರು, ಅರಾಮ್ಯ ಲಿಪಿ (ಭಾಷೆ)

ಪದದ ಅರ್ಥವಿವರಣೆ:

“ಆರಾಮ್” ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಇಬ್ಬರಿದ್ದಾರೆ. ಕಾನಾನ್ ಈಶಾನ್ಯ ಸೀಮೆಯನ್ನೂ ಈ ಹೆಸರಿನಿಂದ ಕರೆಯುತ್ತಾರೆ, ಇದು ಆಧುನಿಕ ದೇಶವಾಗಿರುವ ಸಿರಿಯಾದಲ್ಲಿ ಕಂಡುಬರುತ್ತದೆ.

- ಆರಾಮ್.ನಲ್ಲಿ ಜೀವಿಸುವ ಜನರೆಲ್ಲರೂ “ಅರಾಮ್ಯರು” ಎಂಬುದಾಗಿ ಕರೆಯಲ್ಪಡುತ್ತಾರೆ ಮತ್ತು ಅವರು ಮಾತನಾಡುವ ಭಾಷೆಯು “ಅರಾಮ್ಯ” ಭಾಷೆಯಾಗಿರುತ್ತದೆ. ಯೇಸು ಮತ್ತು ಇತರ ಯೆಹೂದ್ಯರೂ ಅರಾಮ್ಯ ಭಾಷೆಯನ್ನೂ ಮಾತನಾಡಿದ್ದಾರೆ.
- ಶೇಮ್ ಮಕ್ಕಳಲ್ಲಿ ಒಬ್ಬನು ಆರಾಮ್.ನಾಗಿರುತ್ತಾನೆ. ಆರಾಮ್ ಹೆಸರಿನ ಮೇಲೆ ಇರುವ ಇನ್ನೊಬ್ಬರ ಹೆಸರು ರೆಬೆಕ್ಕಳ ಸೋದರ ಸಂಬಂಧಿ. ಆರಾಮ್ ಸೀಮೆಯು ಈ ಹೆಸರು ಇರುವ ಈ ಇಬ್ಬರಲ್ಲಿ ಒಬ್ಬರಿಂದಲೇ ಬಂದಿರಬಹುದು.
- ಆರಾಮ್ ಎನ್ನುವ ಸೀಮೆಯನ್ನು ಸ್ವಲ್ಪ ಕಾಲವಾದನಂತರ ಗ್ರೀಕ್ ಹೆಸರಾದ “ಸಿರಿಯ” ಎನ್ನುವ ಹೆಸರಿನಿಂದ ಕರೆಯುತ್ತಿದ್ದಾರೆ.
- “ಪದ್ದನ್ ಆರಾಮ್” ಎನ್ನುವ ಪದಕ್ಕೆ “ಆರಾಮ್ ಬಯಲು” ಎಂದರ್ಥ ಮತ್ತು ಈ ಬಯಲು ಆರಾಮ್ ಉತ್ತರ ದಿಕ್ಕಿನಲ್ಲಿ ಕಂಡುಬರುತ್ತದೆ.
- ಅಬ್ರಹಾಮನ ಸಂಬಂಧಿಕರಲ್ಲಿ ಕೆಲವರು ಹಾರಾನ್ ಪಟ್ಟಣದಲ್ಲಿ ನಿವಾಸ ಮಾಡಿದರು, ಇದು “ಪದ್ದನ್ ಆರಾಮ್”ನಲ್ಲಿ ಇದ್ದಿತ್ತು.
- ಹಳೇ ಒಡಂಬಡಿಕೆಯಲ್ಲಿ ಕೆಲವೊಂದುಸಲ “ಆರಾಮ್” ಮತ್ತು “ಪದ್ದನ್ ಆರಾಮ್” ಎನ್ನುವ ಪದಗಳು ಬೇರೆ ಸೀಮೆಯನ್ನು (ಅಥವಾ ಪ್ರಾಂತ್ಯವನ್ನು) ಸೂಚಿಸುತ್ತವೆ.

“ಆರಾಮ್ ಸೀಮೆ” ಎನ್ನುವ ಪದಕ್ಕೆ ಬಹುಶಃ “ಎರಡು ನದಿಗಳ ಆರಾಮ್” ಎಂದು ಅರ್ಥವಿರಬಹುದು. ಈ ಸೀಮೆಯು ಮೆಸಪೋತೋಮಿಯಾ ಉತ್ತರ ಭಾಗದಲ್ಲಿಯೂ ಮತ್ತು “ಪದ್ದನ್ ಆರಾಮ್ “ ಪೂರ್ವ ಭಾಗದಲ್ಲಿ ಇದ್ದಿತ್ತು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಮೆಸಪೋತೋಮಿಯಾ, ಪದ್ದನ್ ಆರಾಮ್, ರೆಬೆಕ್ಕ, ಶೇಮ್, ಸೀನಾಯಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:17-19
- 2 ಸಮು.08:5-6
- ಆಮೋಸ.01:5
- ಯೆಹೆ.27:16-18
- ಆದಿ.31:19-21
- ಹೋಶೆಯ.12:11-12
- ಕೀರ್ತನೆ.060:1

ಪದ ಡೇಟಾ:

- Strong's: H758, H763, G689

ಆರೋನ

ಸತ್ಯಾಂಶಗಳು :

ಆರೋನನು ಮೋಶೆಯ ಅಣ್ಣನಾಗಿರುತ್ತಾನೆ. ದೇವರು ಆರೋನನನ್ನು ಇಸ್ರಾಯೇಲ್ ಜನರಿಗೆ ಪ್ರಧಾನ ಯಾಜಕನನ್ನಾಗಿ ನೇಮಿಸಿದ್ದನು.

- ಇಸ್ರಾಯೇಲ್ ಜನರ ಬಿಡುಗಡೆಯ ಕುರಿತಾಗಿ ಫರೋಹನೊಂದಿಗೆ ಮೋಶೆ ಮಾತನಾಡುವಾಗ ಆರೋನನು ಸಹಾಯ ಮಾಡಿದ್ದನು.
- ಇಸ್ರಾಯೇಲ್ಯರು ಮರುಭೂಮಿಯ ಮುಖಾಂತರ ಪ್ರಯಾಣ ಮಾಡಿ ಹಾದು ಹೋಗುತ್ತಿರುವಾಗ, ಜನರೆಲ್ಲರು ಆರಾಧನೆ ಮಾಡುವುದಕ್ಕೆ ಜನರಿಗೋಸ್ಕರ ವಿಗ್ರಹವನ್ನು ಮಾಡುವುದರ ಮುಖಾಂತರ ಆರೋನನು ಪಾಪ ಮಾಡಿದನು.
- ದೇವರು ಆರೋನನನ್ನು ಮತ್ತು ತನ್ನ ಸಂತಾನದವರನ್ನು ಇಸ್ರಾಯೇಲರ ಯಾಜಕರುಗಳಾಗಿ / ಯಾಕನನ್ನಾಗಿ ನೇಮಿಸಿದ್ದನು.

(ಅನುವಾದ ಮಾಡುವುದಕ್ಕೆ ಸಲಹೆಗಳು : /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : /ಯಾಜಕ, /ಮೋಶೆ, /ಇಸ್ರಾಯೇಲ್)

ಸತ್ಯವೇದ ಅನುಬಂಧ ವಾಕ್ಯಗಳು :

- /1 ಪೂರ್ವ.23:12-14
- /ಅಪೊ.ಕೃತ್ಯ.07:38-40
- /ವಿಮೋ.28:1-3
- /ಲೂಕ.01: 5-7
- /ಅರಣ್ಯ.16:44-46

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **09:15** ದೇವರು ಮೋಶೆಯನ್ನು ಎಚ್ಚರಿಸಿದರು ಮತ್ತು _ **ಆರೋನನು** _ ಫರೋಹನ ಹೃದಯವು ಕಠಿಣವಾಗಿತ್ತು.
- **10:05** ಫರೋಹನು ಮೋಶೆಯನ್ನು ಮತ್ತು ಆರೋನನನ್ನು ಕರೆಸಿ ಅವರು ಮಾರಿ ರೋಗವನ್ನು ನಿಲ್ಲಿಸಿದರೆ, ಇಸ್ರಾಯೇಲ್ಯರು ಐಗುಪ್ತ ದೇಶವನ್ನು ಬಿಟ್ಟುಹೋಗಬಹುದು ಎಂದು ಹೇಳಿದನು.
- **13:09** ದೇವರು ಮೋಶೆಯ ಅಣ್ಣನನ್ನು, _ ಆರೋನ _ ಆಯ್ಕೆ ಮಾಡಿಕೊಂಡರು, ಮತ್ತು ಆರೋನನ ಸಂತಾನದವರನ್ನು ಯಾಜಕರನ್ನಾಗಿ ಆಯ್ಕೆ ಮಾಡಿಕೊಂಡನು.
- **13:11** ಅವರು (ಇಸ್ರಾಯೇಲ್ಯರು) ಆರೋನನ ಬಳಿಗೆ ಚಿನ್ನವನ್ನು ತೆಗೆದುಕೊಂಡು ಬಂದರು ಮತ್ತು ಅವರಿಗಾಗಿ ಒಂದು ವಿಗ್ರಹದ ಆಕಾರವನ್ನು ಮಾಡಬೇಕೆಂದು ಕೇಳಿಕೊಂಡರು.
- **14:07** ಅವರು (ಇಸ್ರಾಯೇಲ್ಯರು) ಮೋಶೆಯ ಮೇಲೆ ಮತ್ತು _ **ಆರೋನನ** _ ಮೇಲೆ ಕೊಪಗೊಂಡು, “ಅಯ್ಯೋ, ಯಾಕೆ ನೀವು ಇಂಥಹ ಭಯಂಕರವಾದ ಸ್ಥಳಕ್ಕೆ ಕರೆದುಕೊಂಡು ಬಂದಿದ್ದೀರಿ” ಎಂದು ಕೇಳಿದರು.

ಪದ ಡೇಟಾ:

- Strong's: H175, G2

ಆಶೇರ್

ಸತ್ಯಾಂಶಗಳು:

ಆಶೇರ್ ಯಾಕೋಬಿನ ಎಂಟನೇ ಮಗ. ಈತನ ಸಂತಾನದವರೇ ಇಸ್ರಾಯೇಲ್ಯರ ಹನ್ನೆರಡು ಕುಲಗಳಲ್ಲಿ ಒಬ್ಬರಾಗಿರುತ್ತಾರೆ ಮತ್ತು ಈ ಕುಲದ ಹೆಸರು ಕೂಡ "ಆಶೇರ್" ಎಂದು ಕರೆಯುತ್ತಾರೆ.

- ಆಶೇರ್ ತಾಯಿಯು ಜಿಲ್ಪಾ, ಇವಳು ಲೇಯಾಳಿಗೆ ದಾಸಿಯಾಗಿರುತ್ತಾಳೆ.
- ಈತನ ಹೆಸರಿಗೆ "ಸಂತೋಷ" ಅಥವಾ "ಆಶೀರ್ವಾದ" ಎಂದು ಅರ್ಥವುಂಟು.
- ಇಸ್ರಾಯೇಲ್ಯರು ವಾಗ್ದಾನ ಭೂಮಿಗೆ ಹೋದಾಗ ಆಶೇರ್ ಕುಲದವರಿಗೂ ಭೂಮಿಯನ್ನು ಕೊಡಲಾಗಿದೆ.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲ್, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:1-2
- 1 ಅರಸ.04:15-17
- ಯೆಹೆ.48:1-3
- ಆದಿ.30:12-13
- ಲೂಕ.02:36-38

ಪದ ಡೇಟಾ:

- Strong's: H836

ಆಸ

ಸತ್ಯಾಂಶಗಳು:

ಆಸನು ಸುಮಾರು ಕ್ರಿ.ಪೂ.913 ರಿಂದ ಕ್ರಿ.ಪೂ.873 ರವರೆಗೆ ನಲವತ್ತು ವರ್ಷಗಳ ಕಾಲ ಯೂದಾ ರಾಜ್ಯವನ್ನು ಆಳಿದ ಅರಸ.

- ಅರಸನಾದ ಆಸನು ಸುಳ್ಳು ದೇವತೆಗಳ ಅನೇಕ ವಿಗ್ರಹಗಳನ್ನು ತೆಗೆದುಹಾಕಿದ ಒಳ್ಳೇಯ ಅರಸನಾಗಿದ್ದನು ಮತ್ತು ಇಸ್ರಾಯೇಲ್ಯರೆಲ್ಲರು ತಿರುಗಿ ಯೆಹೋವನನ್ನು ಆರಾಧಿಸುವುದಕ್ಕೆ ಕಾರಣನಾದವನು.
- ಯೆಹೋವನು ಅರಸನಾದ ಆಸನಿಗೆ ಅನೇಕ ದೇಶಗಳಿಗೆ ವಿರುದ್ಧವಾಗಿ ಮಾಡಿದ ತನ್ನ ಹೋರಾಟದಲ್ಲಿ ಯಶಸ್ವಿಯನ್ನು ಕೊಟ್ಟನು.
- ಆದರೆ ಸ್ವಲ್ಪಕಾಲವಾದನಂತರ ಅರಸನಾದ ಆಸನು ಯೆಹೋವನನ್ನು ನಂಬುವುದನ್ನು ನಿಲ್ಲಿಸಿದನು ಮತ್ತು ತನ್ನನ್ನು ಸಾಯಿಸುವಂತಹ ಮಾರಣಾಂತಿಕ ರೋಗವನ್ನು ಹೊಂದಿ ನರಳಿದನು.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.09:14-16
- 1 ಅರಸ.15:7-8
- 2 ಪೂರ್ವ.14:1-4
- ಯೆರೆ.41:8-9
- ಮತ್ತಾಯ.01:7-8

ಪದ ಡೇಟಾ:

- Strong's: H609

ಆಸಾಫ

ಸತ್ಯಾಂಶಗಳು:

ಆಸಾಫ ಲೇವಿಯ ಯಾಜಕನಾಗಿದ್ದನು ಮತ್ತು ಅರಸನಾದ ದಾವೀದನ ಕೀರ್ತನೆಗಳಿಗೆ ಸಂಗೀತವನ್ನು ಸಂಯೋಜಿಸಿದ ವರವನ್ನು ಪಡೆದ ಸಂಗೀತಕಾರನೂ ಆಗಿದ್ದನು. ಈತನು ಕೂಡ ತನ್ನ ಸ್ವಂತ ಕೀರ್ತನೆಗಳನ್ನು ಬರೆದುಕೊಂಡಿದ್ದನು.

- ಆಸಾಫನು ದೇವಾಲಯದಲ್ಲಿ ಆರಾಧನೆಗಾಗಿ ಹಾಡುಗಳನ್ನು ಹಾಡುವ ಬಾಧ್ಯತೆಯನ್ನು ಪಡೆದ ಮೂವರು ಸಂಗೀತಕಾರರಲ್ಲಿ ಒಬ್ಬರಾಗಿರುವುದಕ್ಕೆ ಅರಸನಾದ ದಾವೀದನಿಂದ ಅಭಿಷೇಕವನ್ನು ಪಡೆದಿದ್ದನು. ಈ ಕೀರ್ತನೆಗಳಲ್ಲಿ ಕೆಲವು ಪ್ರವಾದನೆಗಳೂ ಆಗಿದ್ದವು.
- ಆಸಾಫನು ತನ್ನ ಮಕ್ಕಳನ್ನು ತರಬೇತಿ ಮಾಡಿದ್ದನು ಮತ್ತು ಅವರು ತನ್ನ ಬಾಧ್ಯತೆಯನ್ನು, ಹೊಂದಿ, ಸಂಗೀತ ಉಪಕರಣಗಳನ್ನು ಬಾರಿಸುತ್ತಾ ಮತ್ತು ದೇವಾಲಯದಲ್ಲಿ ಪ್ರವಾದನೆಗಳನ್ನು ಹೇಳುತ್ತಾ ಇದ್ದಿದ್ದರು.
- ಈ ಸಂಗೀತ ಉಪಕರಣಗಳಲ್ಲಿ ಸ್ವರಮಂಡಲ, ಕಿನ್ನರಿ, ಕೊಂಬು ಧ್ವನಿ ಮತ್ತು ಝಲ್ಲರಿಗಳು ಇರುತ್ತವೆ.
- ಕೀರ್ತನೆ 50 ಮತ್ತು 73-83 ರವರೆಗೆ ಇರುವ ಕೀರ್ತನೆಗಳು ಆಸಾಫನ ಕೀರ್ತನೆಗಳಾಗಿದ್ದವು. ಈ ಕೀರ್ತನೆಗಳಲ್ಲಿ ಕೆಲವೊಂದು ಕೀರ್ತನೆಗಳು ತನ್ನ ಕುಟುಂಬದವರು ಬರೆದಿರಬಹುದು.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಸಂತಾನ, ಕಿನ್ನರಿ, ಸ್ವರಮಂಡಲ, ಪ್ರವಾದಿ, ಕೀರ್ತನೆ, ಕೊಂಬು ಧ್ವನಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.06:39-43
- 2 ಪೂರ್ವ.35:15
- ನೆಹೆ.02:7-8
- ಕೀರ್ತನೆ.050:1-2

ಪದ ಡೇಟಾ:

- Strong's: H623

ಆಸ್ಯ

ಸತ್ಯಾಂಶಗಳು:

ಬೈಬಲ್ ಕಾಲಗಳಲ್ಲಿ, "ಆಸ್ಯ" ಎನ್ನುವುದು ರೋಮಾ ಸಾಮ್ರಾಜ್ಯದ ಸೀಮೆಯಾಗಿತ್ತು. ಇದು ಈಗಿನ ಟರ್ಕಿ ದೇಶಕ್ಕೆ ಪಶ್ಚಿಮ ದಿಕ್ಕಿನಲ್ಲಿ ಕಂಡುಬರುತ್ತದೆ.

- ಪೌಲನು ಆಸ್ಯಕ್ಕೆ ಪ್ರಯಾಣ ಮಾಡಿದನು ಮತ್ತು ಅನೇಕವಾದ ಪಟ್ಟಣಗಳಲ್ಲಿ ಸುವಾರ್ತೆಯನ್ನು ಸಾರಿದನು. ಆ ಪಟ್ಟಣಗಳಲ್ಲಿ ಎಫೆಸ ಮತ್ತು ಕೊಲಸ್ಸ ಎನ್ನುವ ಪಟ್ಟಣಗಳೂ ಇವೆ.
- ಈ ಆಧುನಿಕ ಆಸ್ಯ ಖಂಡದೊಂದಿಗೆ ಇರುವ ಗೊಂದಲವನ್ನು ತಪ್ಪಿಸಲು, "ಪುರಾತನ ರೋಮಾ ಪ್ರಾಂತ್ಯವನ್ನು ಅಥವಾ ಸೀಮೆಯನ್ನು ಆಸ್ಯ ಎಂದು ಕರೆಯುತ್ತಾರೆ" ಅಥವಾ "ಆಸ್ಯ ಸೀಮೆ" ಎಂದು ಅನುವಾದ ಮಾಡಬೇಕಾದ ಅವಶ್ಯಕತೆಯುಂಟು.
- ಪ್ರಕಟನೆ ಗ್ರಂಥದಲ್ಲಿ ಹೇಳಲ್ಪಟ್ಟಿರುವ ಎಲ್ಲಾ ಸಭೆಗಳು ಆಸ್ಯ ಸೀಮೆಯಲ್ಲಿರುವ ರೋಮಾದಲ್ಲಿವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ರೋಮಾ, ಪೌಲ, ಎಜ್ರಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.16:19-20
- 1 ಪೇತ್ರ.01:1-2
- 2 ತಿಮೊಥೆ.01:15-18
- ಅಪೊ.ಕೃತ್ಯ.06:8-9
- ಅಪೊ.ಕೃತ್ಯ.16:6-8
- ಅಪೊ.ಕೃತ್ಯ.27:1-2
- ಪ್ರಕ.01:4-6
- ರೋಮಾ.16:3-5

ಪದ ಡೇಟಾ:

- Strong's: G773

ಆಹಾಜ

ಪದದ ಅರ್ಥ ವಿವರಣೆ:

ಆಹಾಜನು ಸುಮಾರು ಕ್ರಿ.ಪೂ.732 ರಿಂದ 716 ರವರೆಗೆ ಯೆಹೂದ ರಾಜ್ಯವನ್ನು ಆಳಿದ ದುಷ್ಟ ರಾಜನಾಗಿದ್ದನು. ಇದು ಇಸ್ರಾಯೇಲ್ ಮತ್ತು ಯೆಹೂದದಲ್ಲಿರುವ ಜನರೆಲ್ಲರನ್ನು ಬಾಬೆಲೋನಿಯಕ್ಕೆ ಸೆರೆಗೆ ಕರೆದೊಯ್ಯುವುದಕ್ಕೆ ಮುಂಚಿತವಾಗಿ ಸುಮಾರು 140 ವರ್ಷಗಳ ನಡೆದಿರುವ ಸಂಘಟನೆಯಾಗಿತ್ತು.

- ಇವನು ಯೆಹೂದವನ್ನು ಆಳುತ್ತಿರುವಾಗ, ಆಹಾಜ ಅಶ್ಶೂರ್ ಸುಳ್ಳು ದೇವತೆಗಳನ್ನು ಆರಾಧನೆ ಮಾಡುವುದಕ್ಕೋಸ್ಕರ ಒಂದು ಯಜ್ಞವೇದಿಯನ್ನು ಕಟ್ಟಿದನು. ಇದರಿಂದ ಜನರೆಲ್ಲರು ನಿಜವಾದ ದೇವರಾದ ಯೆಹೋವನಿಂದ ದೂರವಾದರು.
- ಅರಸನಾದ ಆಹಾಜನು ಯೆಹೂದವನ್ನು ಆಳುತ್ತಿರುವಾಗ ತನ್ನ ವಯಸ್ಸು ಕೇವಲ 20 ವರ್ಷಗಳು ಮಾತ್ರ ಇದ್ದಿತ್ತು ಮತ್ತು ಅವನು 16 ವರ್ಷಗಳ ಕಾಲ ಆಳ್ವಿಕೆ ಮಾಡಿದನು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : /ಬಾಬೆಲೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- /1 ಪೂರ್ವ.08:35-37
- /2 ಪೂರ್ವ.28:1-2
- /2 ಅರಸು.16:19-20
- /ಹೋಶೆಯ.01:1-2
- /ಯೆಶಯಾ.01:1
- / ಯೆಶಯಾ.07:3-4
- /ಮತ್ತಾಯ.01:9-11

ಪದ ಡೇಟಾ:

- Strong's: H271

ಇಕೋನ್ಯ

ಸತ್ಯಾಂಶಗಳು:

ಪ್ರಸ್ತುತ ಕಾಲದ ಟರ್ಕಿ ಎಂಬಂತಃ ದೇಶದ ದಕ್ಷಿಣ ಕೇಂದ್ರದಲ್ಲಿದ್ದ ಪಟ್ಟಣದ ಹೆಸರಾಗಿದೆ.

- ಪೌಲನು ಮೊದಲನೆಯ ಸುವಾರ್ತೆ ದಂಡೆಯತ್ರೆಲ್ಲಿ, ಯೆಹೂದಿಯರು ಅಂತಿಯೋಕ್ಯ ಪಟ್ಟಣವನ್ನು ಬಿಟ್ಟು ಹೋಗಬೇಕೆಂದು ಬಲವಂತ ಮಾಡಿದಾಗ ಅವನು ಮತ್ತು ಬಾರ್ನಬ ಇಕೋನ್ಯಕ್ಕೆ ಹೋದರು.
- ಪೌಲನು ಮತ್ತು ಅವನ ಜೊತೆ ಕೆಲಸಗಾರರನ್ನು ಕಲ್ಲೆಸೆದು ಕೊಲ್ಲಬೇಕೆಂದು ಇಕೋನ್ಯದಲ್ಲಿದ್ದ ಅಪನಂಬಿಕಸ್ತರಾದ ಯೆಹೂದಿಯರು ಮತ್ತು ಅನ್ಯರು ಪ್ರಯತ್ನಿಸಿದಾಗ ಅವರು ಅಲ್ಲಿಂದ ತಪ್ಪಿಸಿಕೊಂಡು ಲೂಸ್ತ್ರ ಪಟ್ಟಣಕ್ಕೆ ಹೋದರು.
- ಆ ನಂತರ ಅಂತಿಯೋಕ್ಯ ಹಾಗೂ ಇಕೋನ್ಯ ಪಟ್ಟಣಗಳಲ್ಲಿದ್ದ ಜನರು ಲೂಸ್ತ್ರ ಪಟ್ಟಣಕ್ಕೆ ಬಂದು ಪೌಲನನ್ನು ಕಲ್ಲೆಸೆದು ಕೊಲ್ಲಬೇಕೆಂದು ಪ್ರೇರೇಪಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾರ್ನಬ, ಲೂಸ್ತ್ರ, ಕಲ್ಲೆಸೆದು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.03:10-13
- ಅಪೊ.ಕೃತ್ಯ.14:1-2
- ಅಪೊ.ಕೃತ್ಯ.14:19-20
- ಅಪೊ.ಕೃತ್ಯ.16:1-3

ಪದ ಡೇಟಾ:

- Strong's: G2430

ಇಜ್ರೇಲ್, ಇಜ್ರೇಲ್ಯನು

ಪದದ ಅರ್ಥವಿವರಣೆ:

ಇಜ್ರೇಲ್ ಎನ್ನುವುದು ಇಸ್ಸಾಕಾರ್ ಕುಲದ ಕ್ಷೇತ್ರದಲ್ಲಿ ಮುಖ್ಯವಾದ ಇಸ್ರಾಯೇಲ್ ಪಟ್ಟಣವಾಗಿತ್ತು, ಇದು ಲವಣ ಸಮುದ್ರದ ನೈಋತ್ಯ ಭಾಗದಲ್ಲಿರುತ್ತದೆ.

- ಇಜ್ರೇಲ್ ಪಟ್ಟಣವು ಮೆಗಿದ್ದೋ ಬಯಲಿನಲ್ಲಿ ಪಶ್ಚಿಮದಲ್ಲಿರುವ ಪ್ರಾಮುಖ್ಯವಾದ ಪಟ್ಟಣಗಳಲ್ಲಿ ಒಂದಾಗಿತ್ತು, ಇದನ್ನು "ಇಜ್ರೇಲಿನ ಕಣಿವೆ" ಎಂದೂ ಕರೆಯುತ್ತಾರೆ.
- ಇಸ್ರಾಯೇಲ್ ರಾಜ್ಯದ ಅನೇಕಮಂದಿ ಅರಸರ ಅರಮನೆಗಳು ಇಜ್ರೇಲ್ ಪಟ್ಟಣದಲ್ಲಿಯೇ ಇದ್ದಿದ್ದವು.
- ನಾಬೋತನ ದ್ರಾಕ್ಷಿತೋಟವು ಇಜ್ರೇಲಿನಲ್ಲಿರುವ ಅರಸನಾದ ಆಹಾಬನ ಅರಮನೆಯ ಪಕ್ಕದಲ್ಲಿಯೇ ಇದ್ದಿತ್ತು. ಪ್ರವಾದಿಯಾದ ಎಲೀಯ ಆಹಾಬನಿಗೆ ವಿರುದ್ಧವಾಗಿ ಪ್ರವಾದಿಸಿದನು.
- ಆಹಾಬನ ದುಷ್ಟ ಹೆಂಡತಿಯಾದ ಈಜೆಬೆಲಳು ಇಜ್ರೇಲಿನಲ್ಲಿಯೇ ಕೊಂದು ಹಾಕಲ್ಪಟ್ಟಳು.
- ಅನೇಕವಾದ ಪ್ರಾಮುಖ್ಯವಾದ ಸಂಘಟನೆಗಳೆಲ್ಲವು ಮತ್ತು ಅನೇಕವಾದ ಯುದ್ಧಗಳು ಈ ಪಟ್ಟಣದಲ್ಲಿಯೇ ನಡೆದಿದ್ದವು.

(ಈ ಪದಗಳನ್ನು ಸಹ ನೋಡಿರಿ : ಆಹಾಬ, ಎಲೀಯ, ಇಸ್ಸಾಕಾರ್, ಈಜೆಬೆಲ್, ಅರಮನೆ, ಲವಣ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.04:11-14
- 1 ಸಮು.25:43-44
- 2 ಅರಸ.08:28-29
- 2 ಸಮು.02:1-3
- ನ್ಯಾಯಾ.06:33

ಪದ ಡೇಟಾ:

- Strong's: H3157, H3158, H3159

ಇತ್ರೋ, ರೆಗೂವೇಲ

ಸತ್ಯಾಂಶಗಳು:

“ಇತ್ರೋ” ಮತ್ತು “ರೆಗೂವೇಲ” ಎನ್ನುವ ಹೆಸರುಗಳೆರಡು ಮೋಶೆ ಹೆಂಡತಿಯಾದ ಚಿಪ್ಪೋರಳ ತಂದೆಯನ್ನೇ ಸೂಚಿಸುತ್ತವೆ. “ರೆಗೂವೇಲ” ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಇಬ್ಬರು ಮನುಷ್ಯರು ಇದ್ದಾರೆ.

- ಮಿದ್ಯಾನ್ ಭೂಮಿಯಲ್ಲಿ ಮೋಶೆ ಕುರುಬನಾಗಿರುವಾಗ ಮಿದ್ಯಾನಿಯನಾದ ರೆಗೂವೇಲ ಎನ್ನುವ ಹೆಸರಿನ ವ್ಯಕ್ತಿಯ ಮಗಳನ್ನು ಮದುವೆ ಮಾಡಿಕೊಂಡನು.
- ಆದನಂತರ ರೆಗೂವೇಲನು “ಮಿದ್ಯಾನ್ ಯಾಜಕನಾದ ಇತ್ರೋ” ಎಂಬುದಾಗಿ ಸೂಚಿಸಲ್ಪಟ್ಟನು. ಬಹುಶಃ “ರೆಗೂವೇಲ” ಎನ್ನುವ ಹೆಸರು ಆತನ ವಂಶದ ಹೆಸರಾಗಿರಬಹುದು.

ಧಗಧಗನೆ ಉರಿಯುತ್ತಿರುವ ಪೊದೆಯೊಳಗಿಂದ ದೇವರು ಮೋಶೆಯೊಂದಿಗೆ ಮಾತನಾಡಿದಾಗ, ಮೋಶೆ ಇತ್ರೋ ಕುರಿಗಳನ್ನು ಮೇಯಿಸುತ್ತಿದ್ದನು,

- ಸ್ವಲ್ಪ ಕಾಲವಾದನಂತರ, ದೇವರು ಇಸ್ರಾಯೇಲ್ಯರನ್ನು ಐಗುಪ್ತದಿಂದ ರಕ್ಷಿಸಿದನಂತರ, ಇತ್ರೋ ಅರಣ್ಯದಲ್ಲಿರುವ ಇಸ್ರಾಯೇಲ್ಯರ ಬಳಿಗೆ ಬಂದನು. ಅಲ್ಲಿ ಮೋಶೆಗೆ ಜನರ ಸಮಸ್ಯೆಗಳಿಗೆ ತೀರ್ಪು ಮಾಡುವುದರ ಕುರಿತಾಗಿ ಒಳ್ಳೇಯ ಸಲಹೆಯನ್ನು ಕೊಟ್ಟನು.
- ಐಗುಪ್ತದಲ್ಲಿರುವ ಇಸ್ರಾಯೇಲ್ಯರಿಗಾಗಿ ದೇವರು ಮಾಡಿದ ಎಲ್ಲಾ ಅದ್ಭುತ ಕಾರ್ಯಗಳ ಕುರಿತಾಗಿ ಅವನು ಕೇಳಿದಾಗ ದೇವರಲ್ಲಿ ನಂಬಿಕೆಯಿಟ್ಟಿದ್ದನು.
- ಏಸಾವನ ಗಂಡು ಮಕ್ಕಳಲ್ಲಿ ಒಬ್ಬನ ಹೆಸರು ರೆಗೂವೇಲ ಎಂದಾಗಿತ್ತು.
- ಬಾಬಿಲೋನಿಯದಲ್ಲಿ ಸೆರೆ ಮುಗಿದನಂತರ ಯೂದಾದಲ್ಲಿ ತಿರುಗಿ ಪುನರ್ವಸತಿಗಾಗಿ ಹಿಂದುರಿಗಿ ಬಂದ ಇಸ್ರಾಯೇಲ್ಯರ ವಂಶಾವಳಿಯಲ್ಲಿ ರೆಗೂವೇಲ ಎನ್ನುವ ಇನ್ನೊಬ್ಬ ವ್ಯಕ್ತಿ ದಾಖಲಿಸಲ್ಪಟ್ಟಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಸೆರೆ, ವಂಶ, ಅರಣ್ಯ, ಐಗುಪ್ತ, ಏಸಾವ, ಅದ್ಭುತ, ಮೋಶೆ, ಅರಣ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:34-37
- ವಿಮೋ.02:18-20
- ವಿಮೋ.03:1-3
- ವಿಮೋ.18:1-4
- ಅರಣ್ಯ..10:29-30

ಪದ ಡೇಟಾ:

- Strong's: H3503, H7467

ಇಥಿಯೋಪ್ಯ, ಇಥಿಯೋಪ್ಯದವನು

ಸತ್ಯಾಂಶಗಳು:

ಇಥಿಯೋಪ್ಯ ಎನ್ನುವುದು ಆಫ್ರಿಕಾದಲ್ಲಿರುವ ಒಂದು ದೇಶವಾಗಿರುತ್ತದೆ, ಇದು ದಕ್ಷಿಣ ಐಗುಪ್ತದ ಕಡೆಗೆ ಕಂಡುಬರುತ್ತದೆ. ಕೆಂಪು ಸಮುದ್ರದಿಂದ ಪೂರ್ವ ದಿಕ್ಕಿಗೆ ಮತ್ತು ನೈಲ್ ನದಿಯಿಂದ ಪಶ್ಚಿಮ ದಿಕ್ಕಿಗೆ ಇರುವ ಗಡಿಗಳ ಮಧ್ಯದಲ್ಲಿರುತ್ತದೆ. ಇಥಿಯೋಪ್ಯದಿಂದ ಬಂದ ವ್ಯಕ್ತಿಯನ್ನು "ಇಥಿಯೋಪ್ಯದವನು" ಎಂದು ಕರೆಯುತ್ತಾರೆ.

- ಪುರಾತನ ಇಥಿಯೋಪ್ಯ ಐಗುಪ್ತ ದಕ್ಷಿಣ ಭಾಗದಲ್ಲಿ ಕಂಡುಬರುತ್ತದೆ ಮತ್ತು ಆಧುನಿಕ ಆಫ್ರಿಕಾ ದೇಶಗಳು ಅನೇಕವಾದವುಗಳು ಈಗ ಅದರಲ್ಲಿ ಒಳಗೊಂಡಿರುತ್ತವೆ, ಅವುಯಾವುವೆಂದರೆ ಸುಡಾನ್, ಆಧುನಿಕ ಇಥಿಯೋಪ್ಯ, ಸೊಮಾಲಿಯಾ, ಕೆನ್ಯಾ, ಉಗಾಂಡಾ, ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್, ಮತ್ತು ಚಾದ್.
- ಸತ್ಯವೇದದಲ್ಲಿ ಇಥಿಯೋಪ್ಯವನ್ನು ಕೆಲವೊಂದುಬಾರಿ "ಕೂಷು" ಅಥವಾ "ನುಬಿಯಾ" ಎಂದು ಕರೆದಿರುತ್ತಾರೆ.
- ಇಥಿಯೋಪ್ಯ ("ಕೂಷು") ದೇಶಗಳನ್ನು ಮತ್ತು ಐಗುಪ್ತ ದೇಶವನ್ನು ಸೇರಿಸಿ ಸತ್ಯವೇದದಲ್ಲಿ ದಾಖಲಿಸಿದ್ದಾರೆ, ಬಹುಶಃ ಅವರು ಪಕ್ಕಪಕ್ಕದಲ್ಲಿ ಇರುವದರಿಂದ ಮತ್ತು ಅವರ ಜನರು ಒಂದೇ ಪಿತೃಗಳನ್ನು ಹೊಂದಿರುವದರಿಂದ ಆ ರೀತಿ ದಾಖಲಿಸಿರಬಹುದು.
- ಇಥಿಯೋಪ್ಯದವನಿಗೆ ಯೇಸುವಿನ ಕುರಿತಾಗಿ ಸುವಾರ್ತೆಯನ್ನು ಹಂಚಿಕೊಳ್ಳುವುದಕ್ಕಾಗಿ ಅರಣ್ಯಕ್ಕೆ ಸುವಾರ್ತಿಕನಾದ ಫಿಲಿಪ್ಪನನ್ನು ದೇವರು ಕಳುಹಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕೂಷು, ಐಗುಪ್ತ, ಕಂಚುಕಿ, ಫಿಲಿಪ್ಪ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.08:26-28
- ಅಪೊ.ಕೃತ್ಯ.08:29-31
- ಅಪೊ.ಕೃತ್ಯ.08:32-33
- ಅಪೊ.ಕೃತ್ಯ.08:36-38
- ಯೆಶಯಾ.18:1-2
- ನಹೂ.03:8-9
- ಜೆಕರ್ಯ.03:9-11

ಪದ ಡೇಟಾ:

- Strong's: H3568, H3569, H3571, G128

ಇಷಯ

ಸತ್ಯಾಂಶಗಳು:

ಇಷಯನು ಅರಸನಾದ ದಾವೀದನ ತಂದೆ ಮತ್ತು ರೂತ ಹಾಗೂ ಬೋವಾಜರ ಮೊಮ್ಮಗ .

- ಇಷಯನು ಯೂದಾ ಕುಲದಿಂದ ಬಂದಿದವನಾಗಿರುತ್ತಾನೆ.
- ಇವನು "ಎಫ್ರಾಯಿಮ್ಯನು" ಆಗಿರುತ್ತಾನೆ, ಈ ಹೆಸರಿಗೆ ಎಫ್ರಾತ (ಬೆತ್ಲೆಹೇಮ) ಪಟ್ಟಣದಿಂದ ಬಂದವನು ಎಂದರ್ಥ.
- "ಇಷಯನ ಬೇರಿನಿಂದ" ಬರುವ "ಕೊಂಬೆ" ಅಥವಾ "ಚಿಗುರಿನ" ಕುರಿತಾಗಿ ಪ್ರವಾದಿಯಾದ ಯೆಶಾಯನು ಪ್ರವಾದಿಸಿದ್ದಾನೆ. ಇದು ಇಷಯನ ವಂಶಸ್ಥನಾಗಿರುವ ಯೇಸುವನ್ನು ಸೂಚಿಸುತ್ತದೆ,

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೆತ್ಲೆಹೇಮ್, ಬೋವಜ, ವಂಶಸ್ಥರು, ಫಲ, ಯೇಸು, ಅರಸ, ಪ್ರವಾದಿ, ರೂತಳು, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:9-12
- 1 ಅರಸ.12:16-17
- 1 ಸಮು.16:1
- ಲೂಕ.03:30-32
- ಮತ್ತಾಯ.01:4-6

ಪದ ಡೇಟಾ:

- Strong's: H3448, G2421

ಇಷ್ಮಾಯೇಲ್, ಇಷ್ಮಾಯೇಲನು, ಇಷ್ಮಾಯೇಲರು

ಸತ್ಯಾಂಶಗಳು:

ಇಷ್ಮಾಯೇಲನು ಅಬ್ರಾಹಾಮನಿಗೆ ಮತ್ತು ಐಗುಪ್ತ ದಾಸಿಯಾಗಿರುವ ಹಾಗರಳಿಗೆ ಹುಟ್ಟಿದ ಮಗನಾಗಿದ್ದನು. ಹಳೇ ಒಡಂಬಡಿಕೆಯ ಮೇಲೆ ಇಷ್ಮಾಯೇಲ್ ಎನ್ನುವ ಹೆಸರಿನ ಮೇಲೆ ಅನೇಕ ಜನರಿದ್ದಾರೆ.

- "ಇಷ್ಮಾಯೇಲ್" ಎನ್ನುವ ಹೆಸರಿಗೆ "ದೇವರು ಕೇಳುವನು" ಎಂದರ್ಥ.
- ಅಬ್ರಾಹಾಮನ ಮಗನಾಗಿರುವ ಇಷ್ಮಾಯೇಲನನ್ನು ಆಶೀರ್ವಾದ ಮಾಡುತ್ತೇನೆಂದು ದೇವರು ವಾಗ್ದಾನ ಮಾಡಿದ್ದರು, ಆದರೆ ಇವನು ದೇವರು ತನ್ನ ಒಡಂಬಡಿಕೆಯನ್ನು ಸ್ಥಾಪಿಸುವುದಕ್ಕೆ ವಾಗ್ದಾನ ಮಾಡಿದ ಮಗನಲ್ಲ.
- ಹಾಗರಳನ್ನು ಮತ್ತು ಇಷ್ಮಾಯೇಲನನ್ನು ಅರಣ್ಯದೊಳಗೆ ಕಳುಹಿಸಿದಾಗ ದೇವರು ಅವರನ್ನು ಸಂರಕ್ಷಿಸಿದನು.
- ಇಷ್ಮಾಯೇಲನು ಪಾರಾನಿನ ಅರಣ್ಯದಲ್ಲಿ ನಿವಾಸ ಮಾಡುತ್ತಿರುವಾಗ, ಅವನು ಐಗುಪ್ತ ಸ್ತ್ರೀಯಳನ್ನು ವಿವಾಹ ಮಾಡಿಕೊಂಡನು.
- ನೆತನ್ಯನ ಮಗನಾಗಿರುವ ಇಷ್ಮಾಯೇಲನು ಯೂದಾ ಸೈನ್ಯಾಧಿಕಾರಿಯಾಗಿದ್ದನು, ಬಾಬೆಲೋನಿಯ ಅರಸನಾಗಿರುವ ನೆಬುಕದ್ನೆಚ್ಚರನಿಂದ ನೇಮಿಸಲ್ಪಟ್ಟ ಪಾಲಕನನ್ನು ಕೊಲ್ಲುವುದಕ್ಕೆ ಕೆಲವೊಂದು ಜನರ ಗುಂಪನ್ನು ನಡೆಸಿದ್ದನು.
- ಹಳೇ ಒಡಂಬಡಿಕೆಯಲ್ಲಿ ಇಷ್ಮಾಯೇಲ್ ಎಂಬ ಹೆಸರಿನ ಮೇಲೆ ಇನ್ನೂ ನಾಲ್ಕು ಮಂದಿ ಜನರಿದ್ದಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಬಾಬೆಲೋನಿಯ, ಒಡಂಬಡಿಕೆ, ಅರಣ್ಯ, ಐಗುಪ್ತ, ಹಾಗರು, ಇಸಾಕ, ನೆಬುಕದ್ನೆಚ್ಚರ, ಪಾರಾನ್, ಸಾರಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:28-31
- 2 ಪೂರ್ವ.23:1-3
- ಆದಿ.16:11-12
- ಆದಿ.25:9-11
- ಆದಿ.25:13-16
- ಆದಿ.37:25-26

ಸತ್ಯವೇದದಿಂದ ಉದಾಹರಣೆಗಳು:

- **05:02** ಆದ್ದರಿಂದ ಅಬ್ರಾಮನು ಹಾಗರಳನ್ನು ಮದುವೆ ಮಾಡಿಕೊಂಡನು. ಹಾಗರಳಿಗೆ ಒಂದು ಗಂಡು ಮಗುವಾಯಿತು, ಅಬ್ರಾಮನು ಅವನಿಗೆ _ ಇಷ್ಮಾಯೇಲ್ _ ಎಂದು ಹೆಸರಿಟ್ಟನು.
- **05:04** "ನಾನು _ ಇಷ್ಮಾಯೇಲನನ್ನು _ ಒಂದು ದೊಡ್ಡ ದೇಶವನ್ನಾಗಿ ಮಾಡುವೆನು, ಆದರೆ ನನ್ನ ಒಡಂಬಡಿಕೆಯು ಇಸಾಕನೊಂದಿಗೆ ಮಾತ್ರ ಇರುತ್ತದೆ."

ಪದ ಡೇಟಾ:

- Strong's: H3458, H3459

ಇಸಾಕ

ಸತ್ಯಾಂಶಗಳು:

ಇಸಾಕನು ಅಬ್ರಾಹಾಮ ಮತ್ತು ಸಾರಾಳಿಗೆ ಒಬ್ಬನೇ ಮಗನಾಗಿದ್ದನು. ಅವರು ವೃದ್ಧರಾಗಿದ್ದರೂ ಅವರಿಗೆ ಮಗನನ್ನು ಕೊಡುತ್ತೇನೆಂದು ದೇವರು ವಾಗ್ದಾನ ಮಾಡಿದ್ದರು.

- "ಇಸಾಕ" ಎನ್ನುವ ಪದಕ್ಕೆ "ಅವನು ನಕ್ಕನು" ಎಂದರ್ಥ. ಸಾರಾಳು ಒಬ್ಬ ಗಂಡು ಮಗುವಿಗೆ ಜನ್ಮ ಕೊಡುತ್ತಾಳೆಂದು ದೇವರು ಅಬ್ರಾಹಾಮನಿಗೆ ಹೇಳಿದಾಗ, ಅಬ್ರಾಹಾಮನು ನಕ್ಕನು, ಯಾಕಂದರೆ ಅವರು ತುಂಬಾ ವೃದ್ಧರಾಗಿದ್ದರು. ಸ್ವಲ್ಪ ಕಾಲವಾದನಂತರ, ಸಾರಾಳು ಕೂಡ ಈ ವಾರ್ತೆಯನ್ನು ಕೇಳಿಸಿಕೊಂಡಾಗ ನಕ್ಕಳು.
- ಆದರೆ ದೇವರು ತನ್ನ ವಾಗ್ದಾನವನ್ನು ನೆರವೇರಿಸಿದನು ಮತ್ತು ಇಸಾಕನು ಅಬ್ರಾಹಾಮ ಮತ್ತು ಸಾರಾಳ ವೃದ್ಧಾಪ್ಯದಲ್ಲಿ ಜನಿಸಿದನು.
- ಅಬ್ರಾಹಾಮನೊಂದಿಗೆ ದೇವರು ಮಾಡಿದ ಒಡಂಬಡಿಕೆಯು ಇಸಾಕನಿಗೂ ಮತ್ತು ಅವನ ಸಂತಾನದವರಿಗೂ ನಿರಂತರವಾಗಿರುತ್ತದೆಯೆಂದು ದೇವರು ಅಬ್ರಾಹಾಮನಿಗೆ ಹೇಳಿದನು.
- ಇಸಾಕನಿಗೆ ಯೌವನ ವಯಸ್ಸಿಗೆ ಬಂದಾಗ, ದೇವರು ಇಸಾಕನನ್ನು ಬಲಿ ಕೊಡಬೇಕೆಂದು ಆಜ್ಞಾಪಿಸುವುದರ ಮೂಲಕ ಅಬ್ರಾಹಾಮನ ವಿಶ್ವಾಸವನ್ನು ಪರೀಕ್ಷೆ ಮಾಡಿದನು.
- ಇಸಾಕನ ಮಗನಾಗಿರುವ ಯಾಕೋಬನಿಗೆ ಹನ್ನೆರಡು ಮಂದಿ ಮಕ್ಕಳಿದ್ದರು, ಇವರೇ ಇಸ್ರಾಯೇಲ್ ದೇಶದ ಹನ್ನೆರಡು ಕುಲಗಳಾದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ವಂಶದವರು, ನಿತ್ಯತ್ವ, ನೆರವೇರಿಸು, ಯಾಕೋಬ, ಸಾರಾ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.04:28-29
- ಆದಿ.25:9-11
- ಆದಿ.25:19-20
- ಆದಿ.26:1
- ಆದಿ.26:6-8
- ಆದಿ.28:1-2
- ಆದಿ.31:17-18
- ಮತ್ತಾಯ.08:11-13
- ಮತ್ತಾಯ.22:31-33

ಸತ್ಯವೇದದಿಂದ ಉದಾಹರಣೆಗಳು:

- **05:04** "ನಿನ್ನ ಹೆಂಡತಿಯಾದ ಸಾರಾಯಳು ಒಂದು ಗಂಡು ಮಗುವನ್ನು ಹಡೆಯುವಳು, ಅವನು ನನ್ನ ವಾಗ್ದಾನ ಪುತ್ರನಾಗಿರುವನು. ಅವನಿಗೆ _ **ಇಸಾಕ** _ ಎಂದು ಹೆಸರಿಡಬೇಕು.
- **05:06** _ **ಇಸಾಕನು** ಯೌವನಸ್ಥನಾಗಿರುವಾಗ, "ನಿನ್ನ ಒಬ್ಬನೇ ಮಗನಾಗಿರುವ **ಇಸಾಕನನ್ನು** _ ಕರೆದುಕೊಂಡು, ನನಗೆ ಬಲಿಯಾಗಿ ಅವನನ್ನು ಸಾಯಿಸು" ಎಂದು ಹೇಳುವುದರ ಮೂಲಕ ದೇವರು ಅಬ್ರಾಹಾಮನ ನಂಬಿಕೆಯನ್ನು ಪರೀಕ್ಷೆ ಮಾಡಿದನು.
- **05:09** _ **ಇಸಾಕನ** _ ಬಲಿಗೆ ಬದಲಾಗಿ ದೇವರು ಒಂದು ಕುರಿಯನ್ನು ಅನುಗ್ರಹಿಸಿದರು.
- **06:01** ಅಬ್ರಾಹಾಮನು ವೃದ್ಧಾಪ್ಯದಲ್ಲಿದ್ದಾಗ, ತನ್ನ ಮಗನಾದ _ **ಇಸಾಕನು** ದೊಡ್ಡವನಾಗಿ ಬೆಳೆದು ಬಂದಾಗ, ತನ್ನ ಮಗನು **ಇಸಾಕನಿಗಾಗಿ** _ ಹುಡಿಗಿಯನ್ನು ಕಂಡುಕೊಂಡು ಬರುವುದಕ್ಕೆ ಅಬ್ರಾಹಾಮನು ತನ್ನ ಆಳುಗಳಲ್ಲಿ ಒಬ್ಬರನ್ನು ಕರೆದು ತನ್ನ ಬಂಧುಗಳು ನಿವಾಸವಾಗಿರುವ ಸ್ಥಳಕ್ಕೆ ಕಳುಹಿಸಿದನು.
- **06:05** _ **ಇಸಾಕನು** _ ರೆಬೆಕ್ಕಳಿಗಾಗಿ ಪ್ರಾರ್ಥನೆ ಮಾಡಿದನು, ಮತ್ತು ಆಕೆ ಇಬ್ಬರು ಅವಳಿ ಜವಳಿ ಮಕ್ಕಳಿಗೆ ಗರ್ಭವನ್ನು ಧರಿಸುವುದಕ್ಕೆ ದೇವರು ಅನುಮತಿ ನೀಡಿದರು.
- **07:10** ಆದನಂತರ _ **ಇಸಾಕನು** ಮರಣ ಹೊಂದಿದನು, ಯಾಕೋಬ ಮತ್ತು ಏಸಾವರಿಬ್ಬರು ಅವನನ್ನು ಸಮಾಧಿ ಮಾಡಿದರು. ದೇವರು ಅಬ್ರಾಹಾಮನಿಗೆ ವಾಗ್ದಾನ ಮಾಡಿದ ಒಡಂಬಡಿಕೆಯ ವಾಗ್ದಾನಗಳು **ಇಸಾಕನಿಗೆ** _ ಬಂದವು, ಈಗ ಯಾಕೋಬನಿಗೆ ಬಂದವು.

ಪದ ಡೇಟಾ:

- Strong's: H3327, H3446, G2464

ಇಸ್ಕರಿಯೋತ ಯೂದ

ಸತ್ಯಾಂಶಗಳು:

ಇಸ್ಕರಿಯೋತ ಯೂದ ಯೇಸುವಿನ ಅಪೊಸ್ತಲರಲ್ಲಿ ಒಬ್ಬನಾಗಿರುತ್ತಾನೆ. ಇವನೇ ಯೇಸುವನ್ನು ಯೆಹೂದ್ಯ ನಾಯಕರಿಗೆ ಹಿಡಿಸಿಕೊಟ್ಟಿರುತ್ತಾನೆ.

- "ಇಸ್ಕರಿಯೋತ" ಎನ್ನುವ ಹೆಸರಿಗೆ "ಕೆರಿಯೋತನಿಂದ ಬಂದವನು" ಎಂದರ್ಥ, ಇದು ಯೂದನು ಆ ಪಟ್ಟಣದಲ್ಲಿ ಬೆಳೆದಿರುತ್ತಾನೆಂದು ನಮಗೆ ಸೂಚಿಸುತ್ತಿದೆ.
- ಇಸ್ಕರಿಯೋತ ಯೂದನು ಅಪೊಸ್ತಲರ ಹಣವನ್ನು ತನ್ನ ಹತ್ತಿರ ಇಟ್ಟುಕೊಳ್ಳುತ್ತಿದ್ದನು ಮತ್ತು ಆದರೆ ಆ ಹಣದಲ್ಲಿ ಸ್ವಲ್ಪ ಹಣವನ್ನು ಕದಿಯುತ್ತಾ ತನಗೋಸ್ಕರ ಉಪಯೋಗಿಸಿಕೊಳ್ಳುತ್ತಿದ್ದನು.
- ಯೂದನು ಯೇಸುವನ್ನು ಬಂಧಿಸಲು ಧರ್ಮ ನಾಯಕರಿಗೆ ಆತನಿರುವ ಸ್ಥಳವನ್ನು ಹೇಳುವ ಮೂಲಕ ಯೇಸುವಿಗೆ ದ್ರೋಹ ಮಾಡಿದ್ದಾನೆ,
- ಧರ್ಮ ನಾಯಕರೆಲ್ಲರು ಯೇಸುವಿಗೆ ಮರಣ ದಂಡನೆಯನ್ನು ವಿಧಿಸಿದಾಗ, ಯೇಸುವಿಗೆ ದ್ರೋಹ ಮಾಡಿದ್ದೇನೆಂದು ಯೂದನು ದುಃಖಪಟ್ಟನು, ಆದ್ದರಿಂದ ಅವನು ಮೋಸ ಮಾಡಿದ್ದಕ್ಕೆ ಕೊಟ್ಟ ಹಣವನ್ನು ಯೆಹೂದ್ಯರ ನಾಯಕರಿಗೆ ತಿರುಗಿ ಕೊಟ್ಟು, ನಂತರ ಆತ್ಮಹತ್ಯ ಮಾಡಿಕೊಂಡನು.
- ಇನ್ನೊಬ್ಬ ಅಪೊಸ್ತಲ ಹೆಸರು ಕೂಡ ಯೂದ ಎಂದಿತ್ತು, ಇವನು ಯೇಸುವಿನ ಸಹೋದರರಲ್ಲಿ ಒಬ್ಬನಾಗಿದ್ದನು. ಯೇಸುವಿನ ಸಹೋದರನು ಕೂಡ "ಯೂದ" ಎನ್ನುವ ಹೆಸರಿನವನಿದ್ದಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ದ್ರೋಹ, ಯೆಹೂದ್ಯರ ನಾಯಕರು, ಯಾಕೋಬನ ಮಗನು ಯೂದ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕಾ.06:14-16
- ಲೂಕ.22:47-48
- ಮಾರ್ಕ.03:17-19
- ಮಾರ್ಕ.14:10-11
- ಮತ್ತಾಯ.26:23-25

ಸತ್ಯವೇದದಿಂದ ಉದಾಹರಣೆಗಳು:

- **38:02** ಯೇಸುವಿನ ಶಿಷ್ಯರುಗಳಲ್ಲಿ _ **ಯೂದ** ಎನ್ನುವ ಹೆಸರಿನಲ್ಲಿ ಒಬ್ಬ ಮನುಷ್ಯನಿದ್ದನು. ಯೇಸು ಮತ್ತು ಶಿಷ್ಯರು ಯೆರೂಸಲೇಮಿನೊಳಗೆ ಬಂದಾಗ, **ಯೂದನು** _ ಯೆಹೂದ್ಯರ ನಾಯಕರ ಬಳಿಗೆ ಹೋದನು ಮತ್ತು ಹಣಕ್ಕಾಗಿ ಯೇಸುವನ್ನು ಅವರ ಕೈಗೆ ಒಪ್ಪಿಸಿಕೊಟ್ಟನು.
- **38:03** ಯೆಹೂದ್ಯ ನಾಯಕರೆಲ್ಲರು ಮಹಾ ಯಾಜಕನಿಂದ ನಡೆಸಲ್ಪಟ್ಟರು, ಯೇಸುವನ್ನು ಒಪ್ಪಿಸಿಕೊಟ್ಟಿದ್ದಕ್ಕಾಗಿ _ **ಯೂದನಿಗೆ** _ ಮೂವತ್ತು ಬೆಳ್ಳಿ ನಾಣ್ಯಗಳನ್ನು ಕೊಟ್ಟರು.
- **38:14** _ **ಯೂದನು** ಯೆಹೂದ್ಯ ನಾಯಕರು, ಸೈನಿಕರು ಮತ್ತು ದೊಡ್ಡ ಜನಸಮೂಹದೊಂದಿಗೆ ಬಂದನು. ಅವರೆಲ್ಲರು ಖಡ್ಗ ಗಳನ್ನು ಮತ್ತು ಬೆತ್ತಗಳನ್ನು ಹೊತ್ತಿಕೊಂಡು ಹೋಗುತ್ತಿದ್ದರು. **ಯೂದ** _ ಯೇಸುವಿನ ಬಳಿಗೆ ಬಂದು, "ಬೋಧಕನಿಗೆ ಶುಭಾಷಯಗಳನ್ನು," ಹೇಳಿ, ಆತನನ್ನು ಮುದ್ದಿಟ್ಟುಕೊಂಡನು.
- **39:08** ಆ ಸಮಯದಲ್ಲಿಯೇ, ಯೆಹೂದ್ಯರ ನಾಯಕರು ಯೇಸುವನ್ನು ಮರಣ ಶಿಕ್ಷೆಯನ್ನು ಹಾಕಿದ್ದಾರೆಂದು ದ್ರೋಹಿಯಾದ _ **ಯೂದನು** _ ನೋಡಿದನು. ಆಗ ಅವನು ತುಂಬಾ ದುಃಖಪಟ್ಟನು ಮತ್ತು ಹೊರಗೆ ಹೋಗಿ, ತನ್ನನ್ನು ತಾನು ಸಾಯಿಸಿಕೊಂಡನು.

ಪದ ಡೇಟಾ:

- Strong's: G2455, G2469

ಇಸ್ರಾಯೇಲ್ ರಾಜ್ಯ

ಸತ್ಯಾಂಶಗಳು:

ಸೊಲೊಮೋನನ ಮರಣದನಂತರ ಇಸ್ರಾಯೇಲ್ ಹನ್ನೆರಡು ಕುಲಗಳು ಎರಡು ರಾಜ್ಯಗಳಾಗಿ ವಿಭಜನೆ ಹೊಂದಿದಾಗ ಇಸ್ರಾಯೇಲ್ ದೇಶದ ಉತ್ತರ ಭಾಗವು ಇಸ್ರಾಯೇಲ್ ರಾಜ್ಯವಾಗಿ ಮಾರ್ಪಟ್ಟಿತು.

- ಉತ್ತರ ಭಾಗದಲ್ಲಿ ಇಸ್ರಾಯೇಲ್ ರಾಜ್ಯವು ಹತ್ತು ಕುಲಗಳನ್ನು ಮತ್ತು ದಕ್ಷಿಣ ಭಾಗದಲ್ಲಿ ಯೆಹೂದರಾಜ್ಯವು ಎರಡು ಕುಲಗಳನ್ನು ಹೊಂದಿದವು.
- ಇಸ್ರಾಯೇಲ್ ರಾಜ್ಯದ ರಾಜಧಾನಿ ಸಮಾರ್ಯವಾಗಿತ್ತು. ಇದು ಯೆಹೂದರಾಜ್ಯದ ರಾಜಧಾನಿಯಾಗಿರುವ ಯೆರೂಸಲೇಮಿನಿಂದ ಸುಮಾರು 50 ಕಿಲೋಮೀಟರ್ ದೂರದಲ್ಲಿರುತ್ತದೆ.
- ಇಸ್ರಾಯೇಲ್ ರಾಜ್ಯದ ಎಲ್ಲಾ ಅರಸರು ದುಷ್ಟರಾಗಿದ್ದರು. ಅವರು ಸುಳ್ಳು ದೇವರುಗಳನ್ನು ಮತ್ತು ಆ ವಿಗ್ರಹಗಳಿಗೆ ಸೇವೆ ಮಾಡುವುದಕ್ಕೆ ಎಲ್ಲಾ ಜನರನ್ನು ಪ್ರೇರೇಪಿಸಿದ್ದರು.
- ಇಸ್ರಾಯೇಲ್ ರಾಜ್ಯವನ್ನು ಧಾಳಿ ಮಾಡುವುದಕ್ಕೆ ದೇವರು ಅಶ್ಶೂರರನ್ನು ಕಳುಹಿಸಿದನು. ಅನೇಕಮಂದಿ ಇಸ್ರಾಯೇಲ್ಯರನ್ನು ಸೆರೆ ಹಿಡಿದರು ಮತ್ತು ಅವರನ್ನು ಅಶ್ಶೂರಿನಲ್ಲಿ ನಿವಾಸವಾಗುವಂತೆ ಕರೆದೊಯ್ದರು.
- ಅಶ್ಶೂರಿಯನ್ನರು ಇಸ್ರಾಯೇಲ್ ರಾಜ್ಯದಲ್ಲಿ ಉಳಿದ ಜನರ ಮಧ್ಯೆದೊಳಗೆ ಅನ್ಯರನ್ನು ಕರೆದುಕೊಂಡು ಅಲ್ಲಿ ಬಿಟ್ಟರು. ಮೂವರು ಅನ್ಯರು ಇಸ್ರಾಯೇಲ್ಯರೊಂದಿಗೆ ವಿವಾಹವಾದರು, ಮತ್ತು ಅವರ ಮಕ್ಕಳು ಸಮಾರ್ಯದವರಾಗಿ ಮಾರ್ಪಟ್ಟರು.

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್, ಇಸ್ರಾಯೇಲ್, ಯೂದಾ, ಯೆರೂಸಲೇಮ್, ರಾಜ್ಯ, ಸಮಾರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.35:18-19
- ಯೆರೆ.05:10-13
- ಯೆರೆ.09:25-26

ಸತ್ಯವೇದದಿಂದ ಉದಾಹರಣೆಗಳು:

- **18:08** ರೆಹಬ್ಬಾಮನಿಗೆ ವಿರುದ್ಧವಾಗಿ ತಿರಸ್ಕಾರ ಮಾಡಿ ಇಸ್ರಾಯೇಲ್ ದೇಶದ ಹತ್ತು ಕುಲಗಳು ತಮಗೆ ಅರಸನಾಗಿರುವುದಕ್ಕೆ ಯಾರೊಬ್ಬಾಮನನ್ನು ನೇಮಿಸಿಕೊಂಡರು. ಆ ಭೂಮಿಯ ಉತ್ತರ ಭಾಗದಲ್ಲಿ ತಮ್ಮ ರಾಜ್ಯವನ್ನು ಕಟ್ಟಿಕೊಂಡರು ಮತ್ತು ಅವರು _ ಇಸ್ರಾಯೇಲ್ ರಾಜ್ಯ _ ಎಂಬುದಾಗಿ ಕರೆಯಲ್ಪಟ್ಟರು.
- **18:10** _ ಇಸ್ರಾಯೇಲ್ ಮತ್ತು ಯೆಹೂದ ರಾಜ್ಯಗಳು _ಒಬ್ಬರಿಗೊಬ್ಬರು ಶತ್ರುಗಳಾದರು ಮತ್ತು ಒಬ್ಬರಿಗೊಬ್ಬರ ವಿರುದ್ಧ ಹೋರಾಟಗಳನ್ನು ಮಾಡಿದರು.
- **18:11** ಹೊಸ _ ಇಸ್ರಾಯೇಲ್ ರಾಜ್ಯದಲ್ಲಿ _ ಎಲ್ಲಾ ಅರಸರು ದುಷ್ಟರಾಗಿದ್ದರು.
- **20:01** ಯೆಹೂದ ಮತ್ತು ಇಸ್ರಾಯೇಲ್ ರಾಜ್ಯಗಳೆರಡು ದೇವರಿಗೆ ವಿರುದ್ಧವಾಗಿ ಪಾಪ ಮಾಡಿದರು.
- **20:02** ಶಕ್ತಿಯುತವಾದ, ಕ್ರೂರವುಳ್ಳ ಅಶ್ಶೂರ್ ಸಾಮ್ರಾಜ್ಯದಿಂದ _ ಇಸ್ರಾಯೇಲ್ ರಾಜ್ಯವು _ ನಾಶಗೋಳಿಸಲ್ಪಟ್ಟಿತು. ಅಶ್ಶೂರಿಯನರು _ ಇಸ್ರಾಯೇಲ್ ರಾಜ್ಯದಲ್ಲಿ _ ಅನೇಕ ಜನರನ್ನು ಸಾಯಿಸಿದರು, ಬೆಲೆಯುಳ್ಳ ಪ್ರತಿ ವಸ್ತುವನ್ನು ತೆಗೆದುಕೊಂಡರು ಮತ್ತು ಬಹಳಷ್ಟು ದೇಶವನ್ನು ಸುಟ್ಟು ಹಾಕಿದರು.
- **20:04** ಇದಾದನಂತರ ಅಶ್ಶೂರಿಯರು _ ಇಸ್ರಾಯೇಲ್ ರಾಜ್ಯವು _ ಇರುವ ಭೂಮಿಯಲ್ಲಿ ಅನ್ಯರನ್ನು ಕರೆದುಕೊಂಡು ಬಂದು ಬಿಟ್ಟರು. ಬಿದ್ದುಹೋಗಿರುವ ಪಟ್ಟಣಗಳನ್ನೆಲ್ಲಾ ಆ ಅನ್ಯರು ಕಟ್ಟಿದರು ಮತ್ತು ಅಲ್ಲಿ ಬಿಡಲ್ಪಟ್ಟಿರುವ ಇಸ್ರಾಯೇಲ್ಯರನ್ನು ಮದುವೆ ಮಾಡಿಕೊಂಡರು. ಇಸ್ರಾಯೇಲ್ಯರ ಸಂತಾನದವರನ್ನು ಮದುವೆ ಮಾಡಿಕೊಂಡಿರುವ ಅನ್ಯರನ್ನು ಸಮಾರ್ಯದವರು ಎಂದು ಕರೆಯಲ್ಪಟ್ಟರು.

ಪದ ಡೇಟಾ:

- Strong's: H3478, H4410, H4467, H4468

ಇಸ್ರಾಯೇಲ್, ಇಸ್ರಾಯೇಲನು, ಇಸ್ರಾಯೇಲ್ಯರು, ಯಾಕೋಬ

ಸತ್ಯಾಂಶಗಳು:

ಯಾಕೋಬನು ಇಸಾಕ ಮತ್ತು ರೆಬೆಕ್ಕಳಿಗೆ ಹುಟ್ಟಿದ ಅವಳಿಜವಳಿ ಮಕ್ಕಳಲ್ಲಿ ಚಿಕ್ಕವನಾಗಿದ್ದನು. ದೇವರು ಯಾಕೋಬನಿಗೆ ಇಸ್ರಾಯೇಲ್ ಎಂಬ ಹೆಸರನ್ನು ನೀಡಿದನು. ಆತನ ವಂಶಸ್ಥರು ಇಸ್ರಾಯೇಲ್ ರಾಷ್ಟ್ರದವರಾದರು

- ಯಾಕೋಬ ಎನ್ನುವ ಹೆಸರಿಗೆ "ಅವನು ಹಿಮ್ಮಡಿಯನ್ನು ಎಳೆಯುವನು" ಎಂದರ್ಥ. ಇದು "ಇವನು ಮೋಸಮಾಡುವವನು" ಎನ್ನುವ ಅರ್ಥ ಬರುವ ಮಾತಾಗಿರುತ್ತದೆ ಯಾಕೋಬ ಹುಟ್ಟುತ್ತಿರುವಾಗಲೇ ಅವನು ತನ್ನ ಅಣ್ಣನಾದ ಏಸಾವನ ಹಿಮ್ಮಡಿಯನ್ನು ಹಿಡಿದುಕೊಂಡು ಹುಟ್ಟಿದ್ದನು.
- ಅನೇಕ ವರ್ಷಗಳಾದಮೇಲೆ, ದೇವರು ಯಾಕೋಬನ ಹೆಸರನ್ನು "ಇಸ್ರಾಯೇಲ್" ಎಂಬುವುದಾಗಿ ಮಾರ್ಪಾಟು ಮಾಡಿದ್ದನು, ಇದಕ್ಕೆ "ಇವನು ದೇವರೊಂದಿಗೆ ಹೋರಾಡುವವನು" ಎಂದರ್ಥ.
- ಯಾಕೋಬನು ತುಂಬಾ ಜಾಣನು ಮತ್ತು ಮೋಸಗಾರನೂ ಆಗಿದ್ದನು. ಇವನು ತನ್ನ ಅಣ್ಣನಾದ ಏಸಾವನಿಂದ ಚೊಚ್ಚಲುತನವನ್ನು ಮತ್ತು ಸ್ವಾಸ್ಥ್ಯದ ಹಕ್ಕುಗಳನ್ನು ತೆಗೆದುಕೊಂಡವನಾಗಿ ನಮಗೆ ಕಾಣಿಸಿಕೊಳ್ಳುತ್ತಾನೆ.
- ಯಾಕೋಬನು ಲಾಬಾನನ ಎರಡು ಹೆಣ್ಣು ಮಕ್ಕಳಾದ ಲೇಯಾ, ರಾಹೇಲಳನ್ನು ಮತ್ತು ಅವರ ದಾದಿಗಳಾದ ಜಿಲ್ಪ ಮತ್ತು ಬಿಲ್ಹಾರನ್ನು ಮದುವೆಮಾಡಿಕೊಂಡನು. ಈ ನಾಲ್ಕು ಸ್ತ್ರೀಯರು ಇಸ್ರಾಯೇಲ್ಯರ ಹನ್ನೆರಡು ಕುಲಗಳ ಮೂಲಪಿತೃಗಳ ಜನ್ಮ ನೀಡಿದರು.
- ಯಾಕೋಬನು ಇಸ್ರಾಯೇಲ್ಯರ ಮೂರು ಮೂಲಪಿತೃಗಳಲ್ಲಿ ಕೊನೆಯವನಾಗಿದ್ದನು. ಯಾಕೋಬನಿಗೆ ಹನ್ನೆರಡು ಮಂದಿ ಗಂಡು ಮಕ್ಕಳು. ಅವರ ಸಂತಾನದವರೆಲ್ಲರು ಇಸ್ರಾಯೇಲ್ ಹನ್ನೆರಡು ಕುಲಗಳಾದರು.
- ಹೊಸ ಒಡಂಬಡಿಕೆಯಲ್ಲಿ, ಮತ್ತಾಯ ಸುವಾರ್ತೆಯ ವಂಶಾವಳಿಯಲ್ಲಿ ಯಾಕೋಬನ ಎಂಬ ವಿಭಿನ್ನ ವ್ಯಕ್ತಿಯನ್ನು ಯೋಸೇಫನ ತಂದೆ ಎಂದು ಪಟ್ಟಿಮಾಡಲಾಗಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಮೋಸಗೊಳಿಸು, ಏಸಾವ, ಇಸಾಕ, ಇಸ್ರಾಯೇಲ್, ರೆಬೆಕ್ಕ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:11-13
- ಅಪೊ.ಕೃತ್ಯ.07:44-46
- ಆದಿ.25:24-26
- ಆದಿ.29:1-3
- ಆದಿ.32:1-2
- ಯೋಹಾನ.04:4-5
- ಮತ್ತಾಯ.08:11-13
- ಮತ್ತಾಯ.22:31-33

ಸತ್ಯವೇದದಿಂದ ಉದಾಹರಣೆಗಳು:

- **07:01** ಗಂಡು ಮಕ್ಕಳು ಬೆಳೆದು ಬರುತ್ತಾ ಇರುವಾಗ, ರೆಬೆಕ್ಕಾಳು _ **ಯಾಕೋಬನನ್ನು** ಪ್ರೀತಿಸಿದಳು, ಆದರೆ ಇಸಾಕನು ಏಸಾವನನ್ನು ಪ್ರೀತಿಸಿದನು. _ **ಯಾಕೋಬನು** __ ಮನೆಯಲ್ಲಿರುವುದಕ್ಕೆ ಇಷ್ಟಪಟ್ಟನು, ಆದರೆ ಏಸಾವನು ಭೇಟಿಯಾಡುವುದನ್ನು ಇಷ್ಟಪಟ್ಟನು.
- **07:07** _ **ಯಾಕೋಬನು** _ ಅಲ್ಲಿ ಅನೇಕ ವರ್ಷಗಳು ನಿವಾಸವಾಗಿದ್ದನು, ಮತ್ತು ಆ ಸಮದಲ್ಲಿಯೇ ಅವನು ಅಲ್ಲಿ ಮದುವೆ ಮಾಡಿಕೊಂಡನು ಮತ್ತು ಹನ್ನೆರಡು ಮಂದಿ ಗಂಡು ಮಕ್ಕಳನ್ನು, ಒಂದು ಹೆಣ್ಣು ಮಗುವನ್ನು ಹಡೆದನು. ದೇವರು ಇವನನ್ನು ಉನ್ನತ ಶ್ರೀಮಂತನನ್ನಾಗಿ ಮಾಡಿದನು.
- **07:08** ಕಾನಾನ್.ನಲ್ಲಿರುವ ತನ್ನ ಮನೆಯಿಂದ ದೂರವಿದ್ದು ಸುಮಾರು ಇಪ್ಪತ್ತು ವರ್ಷಗಳು ಆದನಂತರ, _ **ಯಾಕೋಬನು** _ ತನ್ನ ಕುಟುಂಬ, ತನ್ನ ದಾಸರು ಮತ್ತು ತನಗಿರುವ ಎಲ್ಲಾ ಪಶು ಪ್ರಾಣಿಗಳೊಂದಿಗೆ ಹಿಂದುರಿಗಿ ಬಂದನು.
- **07:10** ದೇವರು ಅಬ್ರಾಹಾಮನೊಂದಿಗೆ ವಾಗ್ದಾನ ಮಾಡಿದ ಒಡಂಬಡಿಕೆಯ ವಾಗ್ದಾನಗಳು ಇಸಾಕನ ಬಳಿಗೆ ಹೋದವು ಮತ್ತು ಈಗ _ **ಯಾಕೋಬನ** _ ಬಳಿಗೆ ಹೋದವು.
- **08:01** ಅನೇಕ ವರ್ಷಗಳು ಆದನಂತರ, _ **ಯಾಕೋಬನು** _ ವೃದ್ಧಾಪ್ಯದಲ್ಲಿದ್ದಾಗ, ಯಾರ್ಯಾರು ಸರಿಯಾಗಿ ಹಿಂಡುಗಳನ್ನು ಕಾಯುತ್ತಿದ್ದಾರೋ ಇಲ್ಲವೋ ಎಂದು ತನ್ನ ಸಹೋದರರನ್ನು ನೋಡಿಕೊಂಡು ಬರಲು ಆತನು ತನಗೆ ಇಷ್ಟನಾಗಿರುವ ಮಗನಾದ ಯೋಸೇಫನನ್ನು ಕಳುಹಿಸುತ್ತಾನೆ.

ಪದ ಡೇಟಾ:

- Strong's: H3290, G2384

ಇಸ್ಸಾಕಾರ್

ಸತ್ಯಾಂಶಗಳು:

ಇಸ್ಸಾಕಾರ್ ಯಾಕೋಬನ ಐದನೆಯ ಕುಮಾರನಾಗಿದ್ದನು. ಲೇಯ ಅವನ ತಾಯಿಯಾಗಿದ್ದಳು.

- ಇಸ್ರಯೇಲ್ ಕುಲಗಳಲ್ಲಿ ಇಸ್ಸಾಕಾರ್ ಕುಲ ಒಂದಾಗಿತ್ತು.
- ಇಸ್ಸಾಕಾರ್ ದೇಶದ ಸುತ್ತಲು ನಫ್ತಾಲಿ, ಜೆಬುಲೂನ್, ಮನಸ್ಸೆ ಮತ್ತು ಗಾದ್ ಪ್ರಾಂತ್ಯಗಳಿದ್ದವು.
- ಅದು ಗಲಿಲಯ ಸಮುದ್ರದ ದಕ್ಷಿಣ ಭಾಗದಲ್ಲಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ: ಗಾದ್, ಮನಸ್ಸೆ, ನಫ್ತಾಲಿ, ಇಸ್ರಯೇಲ್ ಹನ್ನೆರಡು ಕುಲಗಳು, ಜೆಬುಲೂನ್)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.01:1-5
- ಯೆಹೆ.48:23-26
- ಆದಿ.30:16-18
- ಯೆಹೋ.17:9-10

ಪದ ಡೇಟಾ:

- Strong's: H3485, G2466

ಈಜೆಬೆಲ್

ಸತ್ಯಾಂಶಗಳು:

ಈಜೆಬೆಲ್ ಇಸ್ರಾಯೇಲ್ ಅರಸನಾಗಿರುವ ಆಹಾಬನ ದುಷ್ಟ ಹೆಂಡತಿಯಾಗಿದ್ದಳು.

- ಈಜೆಬೆಲ್ ಆಹಾಬನನ್ನು ಮತ್ತು ವಿಗ್ರಹಗಳನ್ನು ಆರಾಧನೆ ಮಾಡುವುದಕ್ಕೆ ಉಳಿದ ಎಲ್ಲಾ ಇಸ್ರಾಯೇಲ್ಯರನ್ನು ಪ್ರಭಾವಗೊಳಿಸಿದಳು.
- ಈಕೆಯೂ ದೇವರ ಪ್ರವಾದಿಗಳಾದ ಅನೇಕಮಂದಿಯನ್ನು ಸಾಯಿಸಿದ್ದಳು.
- ಆಹಾಬನು ನಾಬೋತನ ದ್ರಾಕ್ಷಿತೋಟವನ್ನು ಕದ್ದುಕೊಳ್ಳಲು ನಿರ್ದೋಷಿಯಾದ ನಾಬೋತ ಎನ್ನುವ ವ್ಯಕ್ತಿಯನ್ನು ಸಾಯಿಸುತ್ತಾಳೆ.
- ಕೊನೆಗೆ ಈಜೆಬೆಲಳು ತಾನು ಮಾಡಿದ ಎಲ್ಲಾ ದುಷ್ಟ ಕಾರ್ಯಗಳಿಗಾಗಿ ಸಾವನ್ನಪ್ಪುತ್ತಾಳೆ. ಈಕೆ ಹೇಗೆ ಸಾಯುವಳೆಂದು ಎಲೀಯ ಪ್ರವಾದಿಸುತ್ತಾನೆ ಮತ್ತು ಆತನು ಪ್ರವಾದಿಸಿದಂತೆಯೇ ಆಕೆ ಸಾಯುತ್ತಾಳೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಆಹಾಬ, ಎಲೀಯ, ಸುಳ್ಳು ದೇವರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.16:31-33
- 1 ಅರಸ.19:1-3
- 2 ಅರಸ.09:7-8
- 2 ಅರಸ.09:30-32
- ಪ್ರಕ.02:20-21

ಪದ ಡೇಟಾ:

- Strong's: H348, G2403

ಉಜ್ಜೀಯ, ಅಜರ್ಯ

ಸತ್ಯಾಂಶಗಳು:

ಉಜ್ಜೀಯನು ತನ್ನ 16ನೇ ವಯಸ್ಸಿನಲ್ಲಿ ಯೆಹೂದ್ಯ ರಾಜ್ಯಕ್ಕೆ ಅರಸನಾದನು, ಸುಮಾರು 52 ವರ್ಷಗಳ ಕಾಲ ಆಳಿದನು, ಇದು ಅಸಾಧಾರಣವಾದ ದೀರ್ಘ ಆಡಳಿತವಾಗಿದ್ದಿತ್ತು. ಉಜ್ಜೀಯನಿಗೆ "ಅಜರ್ಯ" ಎನ್ನುವ ಹೆಸರೂ ಇದ್ದಿತ್ತು.

- ಅರಸನಾದ ಉಜ್ಜೀಯನು ಸಂಘಟಿತ ಮತ್ತು ನಿಪುಣತೆಯ ಸೈನಿಕನಾಗಿ ಹೆಸರುವಾಸಿಯಾಗಿದ್ದನು. ಪಟ್ಟಣವನ್ನು ಕಾಪಾಡುವುದಕ್ಕೆ ಇವನು ದೊಡ್ಡ ದೊಡ್ಡ ಗೋಡೆಗಳನ್ನು ಕಟ್ಟಿಸಿಕೊಂಡಿದ್ದನು, ಅವುಗಳ ಮೇಲೆ ವಿಶೇಷವಾಗಿ ತಯಾರು ಮಾಡಿಸಿರುವ ದೊಡ್ಡ ದೊಡ್ಡ ಕಲ್ಲುಗಳನ್ನು ಮತ್ತು ಜೋರಾಗಿ ಹೋಗುವ ಬಾಣಗಳೆನ್ನುವ ಯುದ್ಧ ಸಾಮಾಗ್ರಿಗಳನ್ನು ಇಟ್ಟಿರುತ್ತಾರೆ.
- ಉಜ್ಜೀಯನು ಕರ್ತನನ್ನು ಸೇವಿಸಿದ ಕಾಲದವರೆಗೂ ಅಭಿವೃದ್ಧಿ ಹೊಂದಿದ್ದನು. ತನ್ನ ಆಡಳಿತದ ಅಂತ್ಯದಲ್ಲಿ ಅವನು ಅಹಂಕಾರಿಯಾದನು ಮತ್ತು ದೇವಾಲಯದಲ್ಲಿ ಯಾಜಕನೊಬ್ಬನೇ ಧೂಪವನ್ನು ಹಾಕುವುದಕ್ಕೆ ಅನುಮತಿಯಿದ್ದಾಗ, ಅದನ್ನು ಉಲ್ಲಂಘಿಸಿ, ಅವನು ಧೂಪವನ್ನು ಉರಿಸುವುದರ ಮೂಲಕ ಕರ್ತನಿಗೆ ಅವಿಧೇಯನಾದನು.
- ಈ ಪಾಪದ ಮೂಲಕ ಉಜ್ಜೀಯನು ಕುಷ್ಠ ರೋಗಿಯಾದನು ಮತ್ತು ತನ್ನ ಆಳ್ವಿಕೆಯನ್ನು ಮುಗಿಸುವವರೆಗೂ ಜನರ ಮಧ್ಯೆದಲ್ಲಿ ಜೀವಿಸದೇ ಆಚೆ ಜೀವಿಸಬೇಕಾಗಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯೆಹೂದ್ಯ, ಅರಸ, ಕುಷ್ಠ, ಆಳ್ವಿಕೆ, ಬುರುಜು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.14:20-22
- ಆಮೋಸ.01:1-2
- ಹೋಶೆಯ.01:1-2
- ಯೆಶಯಾ.06:1-2
- ಮತ್ತಾಯ.01:7-8

ಪದ ಡೇಟಾ:

- Strong's: H5814, H5818, H5838, H5839

ಊರೀಯ

ಸತ್ಯಾಂಶಗಳು:

ಊರೀಯ ಎನ್ನುವವನು ನೀತಿಯುಳ್ಳ ಮನುಷ್ಯನಾಗಿದ್ದನು ಮತ್ತು ಅರಸನಾದ ದಾವೀದನ ಉತ್ತಮ ಸೈನಿಕರಲ್ಲಿ ಒಬ್ಬನಾಗಿದ್ದನು. ಇವನನ್ನು ಅನೇಕಬಾರಿ "ಹಿತ್ತಿಯನಾದ ಊರೀಯ" ಎಂದೂ ಸೂಚಿಸಲ್ಪಟ್ಟಿರುತ್ತಾನೆ.

- ಊರೀಯನಿಗೆ ಬತ್ಷೆಬೆ ಎನ್ನುವ ಹೆಸರಿನ ಸುಂದರವಾದ ಹೆಂಡತಿಯಿದ್ದಿದ್ದಳು,
- ದಾವೀದನು ಊರೀಯ ಹೆಂಡತಿಯೊಂದಿಗೆ ವ್ಯಭಿಚಾರ ಮಾಡಿದ್ದನು, ಮತ್ತು ಆಕೆ ಗರ್ಭವತಿಯಾಗಿ, ದಾವೀದನಿಗೆ ಮಗನನ್ನು ಹೆತ್ತಳು.
- ಈ ಪಾಪವನ್ನು ಮುಚ್ಚಿಕೊಳ್ಳಲು, ದಾವೀದನು ಯುದ್ಧದಲ್ಲಿರುವ ಊರೀಯನನ್ನು ಕೊಲ್ಲಿಸಿದನು. ಆದನಂತರ ದಾವೀದನು ಊರೀಯಳನ್ನು ಮದುವೆ ಮಾಡಿಕೊಂಡನು.
- ಊರೀಯ ಎನ್ನುವ ಹೆಸರಿನ ಮೇಲೆ ಇನ್ನೊಬ್ಬ ವ್ಯಕ್ತಿ ಯಾಜಕನಾಗಿದ್ದನು, ಇವನು ಅರಸನಾದ ಆಹಾಜ ಕಾಲದಲ್ಲಿ ಕೆಲಸ ಮಾಡಿರುತ್ತಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಹಾಜ, ಬತ್ಷೆಬೆ, ದಾವೀದ, ಹಿತ್ತಿಯನು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.15:4-6
- 2 ಸಮು.11:2-3
- 2 ಸಮು.11:26-27
- ನೆಹೆ.03:3-5

ಸತ್ಯವೇದದಿಂದ ಉದಾಹರಣೆಗಳು:

- **17:12** _ ಊರೀಯ _ ಎನ್ನುವ ವ್ಯಕ್ತಿ ಬತ್ಷೆಬೆಯ ಗಂಡನಾಗಿದ್ದನು, ಇವನು ದಾವೀದನ ಉತ್ತಮ ಸೈನಿಕರಲ್ಲಿ ಒಬ್ಬನಾಗಿದ್ದನು. ದಾವೀದನು _ ಊರೀಯನನ್ನು _ ಯುದ್ಧದಿಂದ ಹಿಂದಕ್ಕೆ ಕರೆಕಳುಹಿಸಿ, ನಿನ್ನ ಹೆಂಡತಿಯೊಂದಿಗೆ ಇರು ಎಂದು ಅವನಿಗೆ ಹೇಳಿದನು. ಆದರೆ ಯುದ್ಧದಲ್ಲಿ ಸೈನಿಕರು ಹೋರಾಟ ಮಾಡುತ್ತಿರುವುದರಿಂದ, _ ಊರೀಯ _ ಮನೆಗೆ ಹೋಗುವುದಕ್ಕೆ ತಿರಸ್ಕರಿಸಿದನು. ಇದರಿಂದ ದಾವೀದನು _ ಊರೀಯನನ್ನು _ ಯುದ್ಧಕ್ಕೆ ಕಳುಹಿಸಿದನು ಮತ್ತು ಇವನನ್ನು ಸಾಯಿಸುವುದಕ್ಕೆ ಶತ್ರುವು ಬಲವಾಗಿರುವ ಸ್ಥಳದಲ್ಲಿ ನಿಲ್ಲಿಸಬೇಕೆಂದು ಸೈನ್ಯಾಧಿಪತಿಗೆ ಹೇಳಿದನು.
- **17:13** _ ಊರೀಯನು _ ಮರಣಿಸಿದನಂತರ, ದಾವೀದನು ಬತ್ಷೆಬೆಯನ್ನು ಮದುವೆ ಮಾಡಿಕೊಂಡನು.

ಪದ ಡೇಟಾ:

- Strong's: H223, G3774

ಊರ್

ಸತ್ಯಾಂಶಗಳು:

ಊರ್ ಎನ್ನುವುದು ಒಂದು ಪ್ರಾಮುಖ್ಯವಾದ ಪಟ್ಟಣವಾಗಿತ್ತು, ಇದು ಮೆಸೊಪೊತಾಮ್ಯದಲ್ಲಿ ಭಾಗವಾಗಿರುವ ಪುರಾತನ ಪ್ರಾಂತ್ಯವಾಗಿರುವ ಕಲ್ದೀಯದಲ್ಲಿನ ಯೂಫ್ರೇಟೀಸ್ ನದಿಯ ಪಕ್ಕದಲ್ಲಿ ಕಂಡುಬರುತ್ತದೆ. ಈ ಪ್ರಾಂತ್ಯವು ಈಗಿನ ಅಧುನಿಕ ದೇಶವಾಗಿರುವ ಇರಾಕಿನಲ್ಲಿ ಕಂಡುಬರುತ್ತದೆ.

- ಅಬ್ರಾಹಾಮನು ಊರ್ ಎನ್ನುವ ಪಟ್ಟಣದವನಾಗಿರುತ್ತಾನೆ ಮತ್ತು ದೇವರು ಈತನನ್ನು ಈ ಊರಿನಿಂದಲೇ ಕಾನಾನ್ ಭೂಮಿಗೆ ಹೋಗಬೇಕೆಂದು ಕರೆದಿದ್ದನು.
- ಅಬ್ರಾಹಾಮ ಸಹೋದರ ಮತ್ತು ಲೋಟನ ತಂದೆಯಾಗಿರುವ ಹಾರಾನನು ಊರ್ ಎನ್ನುವ ಊರಿನಲ್ಲಿಯೇ ಮರಣಹೊಂದಿದನು. ಬಹುಶಃ ಈ ಸಂಬಂಧದಿಂದಲೇ ಲೋಟನು ಅಬ್ರಾಹಾಮನೊಂದಿಗೆ ಊರ್ ಎನ್ನುವ ಪ್ರಾಂತ್ಯವನ್ನು ಬಿಡುವುದಕ್ಕೆ ಪ್ರಭಾವಗೊಳಿಸರಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಕಾನಾನ್, ಕಲ್ದೀಯ, ಯೂಫ್ರೇಟೀಸ್ ನದಿ, ಹಾರಾನ್, ಲೋಟ, ಮೆಸೊಪೊತಾಮ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.11:27-28
- ಆದಿ.11:31-32

ಪದ ಡೇಟಾ:

- Strong's: H218

ಎಕ್ರೋನ್, ಎಕ್ರೋನಿಯರು

ಸತ್ಯಾಂಶಗಳು:

ಫಿಲಿಷ್ಟಿಯಲ್ಲಿ ಎಕ್ರೋನ್ ಮಹಾ ನಗರವಾಗಿದೆ, ಇದು ಮೆಡಿಟರೇನಿಯನ್ ಸಮುದ್ರದಿಂದ ಒಂಬತ್ತು ಮೈಲುಗಳ ದೂರದಲ್ಲಿದೆ.

- ಅನ್ಯ ದೇವತೆಯಾದ ಬಾಳ್ಜೆಬೂಬನ ದೇವಾಲಯ ಎಕ್ರೋನಿನಲ್ಲಿತ್ತು.
- ಫಿಲಿಷ್ಟಿಯರು ಯೆಹೋವನ ಒಡಂಬಡಿಕೆಯ ಮಂಜೂಷವನ್ನು ಸ್ವಾಧೀನಪಡಿಸಿಕೊಂಡಾಗ ಅದನ್ನು ಅಷ್ಡೋದಿಗೆ ತೆಗೆದುಕೊಂಡು ಹೋದರು, ಅಲ್ಲಿಂದ ಗತೂರು ಮತ್ತು ಎಕ್ರೋನಿಗೆ ತೆಗೆದುಕೊಂಡು ಹೋದರು ಯಾಕಂದರೆ ಮಂಜೂಷವಿದ್ದ ಸ್ಥಳದಲ್ಲಿ ಯೆಹೋವ ಜನರಿಗೆ ರೋಗವುಂಟು ಮಾಡಿ ಅವರು ಸಾಯುವಂತೆ ಮಾಡಿದನು. ಕೊನೆಗೆ ಫಿಲಿಷ್ಟಿಯರು ಮಂಜೂಷವನ್ನು ಇಸ್ರಾಯೇಲಿಗೆ ತಿರುಗಿ ಕಳುಹಿಸಿದರು.
- ಅರಸನಾದ ಅಹಜ್ಯನು ತನ್ನ ಮೇಲುಪ್ಪರಿಗೆಯ ಕಿಟಿಕಿಯಿಂದ ಬಿದ್ದು ಅಸ್ವಸ್ಥನಾದಾಗ ಎಕ್ರೋನಿನ ದೇವರಾದ ಬಾಳ್ಜೆಬೂಬನ ಬಳಿ ತಾನು ಈ ಅಸ್ವಸ್ಥತೆಯಿಂದ ವಾಸಿಯಾಗುತ್ತಾನೋ ಇಲ್ಲವೋ ಎಂಬುದನ್ನು ವಿಚಾರಿಸಿ ಯೆಹೋವ ದೃಷ್ಟಿಯಲ್ಲಿ ಪಾಪ ಮಾಡಿದನು. ಆದಕಾರಣ ಯೆಹೋವ ದೇವರು ಅವನು ಮಾಡಿದ ಪಾಪದ ವಿಷಯವಾಗಿ ಸಾಯುವನೆಂದು ಹೇಳಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಹಜ್ಯನು, ಯೆಹೋವನ ಒಡಂಬಡಿಕೆಯ ಮಂಜೂಷ, ಅಷ್ಡೋದ್, ಬಾಳ್ಜೆಬೂಬ, ಅನ್ಯ ದೇವತೆ, ಗತೂರು, ಫಿಲಿಷ್ಟಿಯರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.05:10
- ಯೆಹೋ.13:2-3
- ನ್ಯಾಯ.01:18-19
- ಜೆಕರ್ಯ.09:5-7

ಪದ ಡೇಟಾ:

- Strong's: H6138, H6139

ಎಜ್ರ

ಸತ್ಯಾಂಶಗಳು:

ಎಜ್ರ ಇಸ್ರಾಯೇಲ್ ಯಾಜಕನಾಗಿದ್ದನು ಮತ್ತು ಬಾಬುಲೋನಿಂದ ಯೆರುಸಲೇಮಿಗೆ ಇಸ್ರಾಯೇಲರು ಸೆರೆಯಿಂದ ಹಿಂತಿರುಗಿ ಬಂದ ಚರಿತ್ರೆಯನ್ನು ಬರೆದ ಯೆಹುದಿಯರ ಕಾನೂನು ತಿಳಿದವನಾಗಿದ್ದನು.

ಎಜ್ರ ಎಂಬ ಸತ್ಯವೇದದಲ್ಲಿರುವ ಒಂದು ಪುಸ್ತಕದಲ್ಲಿ ಇಸ್ರಾಯೇಲ್ ಚರಿತ್ರೆಯನ್ನು ಅವನು ಬರೆದಿದ್ದಾನೆ. ಅವನು ನೆಹೆಮೀಯ ಪುಸ್ತಕವನ್ನು ಸಹ ಬರೆದಿರಬಹುದು, ಯಾಕಂದರೆ ಈ ಎರಡು ಪುಸ್ತಕಗಳು ಮೂಲವಾಗಿ ಒಂದೇ ಪುಸ್ತವಗಿದ್ದವು.

- ಇಸ್ರಾಯೇಲರು ಸಬ್ಬತ್ ದಿನ ಆಚರಣೆಗಳನ್ನು ನಿಲ್ಲಿಸಿದ ಕಾರಣ ಮತ್ತು ಅನ್ಯ ದೇವತೆಗಳನ್ನೂ ಪೂಜಿಸುವ ಸ್ತ್ರೀಯರನ್ನು ಅವರು ವಿವಾಹ ಮಾಡಿಕೊಂಡ ಕಾರಣ ಎಜ್ರ ಯೆರುಸಲೇಮಿಗೆ ಹಿಂತಿರುಗಿ ಬಂದಾಗ ಧರ್ಮಶಾಸ್ತ್ರವನ್ನು ಪುನಃ ಸ್ಥಾಪಿಸಿದನು.
- ಬಾಬುಲೋನಿಯರು ಯೆರುಸಲೇಮನ್ನು ಸ್ವಾಧೀನ ಪಡಿಸಿಕೊಂಡಾಗ ಧ್ವಂಸಮಾಡಿದ ದೇವಾಲಯವನ್ನು ಎಜ್ರ ಪುನರ್ನಿರ್ಮಿಸಿದನು.
- ಹಳೆ ಒಡಂಬಡಿಕೆಯಲ್ಲಿ ಇನ್ನಿಬ್ಬರ ಹೆಸರು ಎಂದಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಬಾಬುಲೋನ್, ಸೆರೆ, ಯೆರುಸಲೇಮಿ, ಧರ್ಮಶಾಸ್ತ್ರ, ನೆಹೆಮೀಯ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಜ್ರ.07:6-7
- ನೆಹೆ.08:1-3
- ನೆಹೆ.12:1-3

ಪದ ಡೇಟಾ:

- Strong's: H250, H5830, H5831, H5834

ಎಣ್ಣೆಮರಗಳ ಪರ್ವತ

ಪದದ ಅರ್ಥವಿವರಣೆ:

ಎಣ್ಣೆಮರಗಳ ಪರ್ವತವು ಒಂದು ದೊಡ್ಡ ಬೆಟ್ಟವಾಗಿರುತ್ತದೆ ಅಥವಾ ಯೆರೂಸಲೇಮಿನ ಪಟ್ಟಣದ ಪೂರ್ವದಿಕ್ಕಿಗೆ ದೊಡ್ಡ ಗುಡ್ಡವಾಗಿ ಕಂಡುಬರುತ್ತದೆ. ಇದು ಸುಮಾರು 787 ಮೀಟರುಗಳ ಎತ್ತರವಿರುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಈ ಪರ್ವತವು ಕೆಲವೊಂದುಸಲ “ಯೆರೂಸಲೇಮಿನ ಪೂರ್ವ ದಿಕ್ಕಿನಲ್ಲಿರುವ ಪರ್ವತವನ್ನು” ಸೂಚಿಸುತ್ತದೆ.
- ಹೊಸ ಒಡಂಬಡಿಕೆಯಲ್ಲಿ ಅನೇಕ ಸಂದರ್ಭಗಳಲ್ಲಿ ಯೇಸು ಮತ್ತು ತನ್ನ ಶಿಷ್ಯರು ಎಣ್ಣೆಮರಗಳ ಪರ್ವತಕ್ಕೆ ಹೋಗಿ ಪ್ರಾರ್ಥನೆ ಮಾಡಿ, ವಿಶ್ರಾಂತಿ ತೆಗೆದುಕೊಳ್ಳುವ ಪ್ರತಿಯೊಂದುಬಾರಿ ದಾಖಲು ಮಾಡಲ್ಪಟ್ಟಿರುತ್ತದೆ,
- ಯೇಸು ಗೆತ್ಸೇಮನೆ ತೋಟದಲ್ಲಿ ಬಂಧಿಸಲ್ಪಟ್ಟಿರುತ್ತಾನೆ, ಇದು ಎಣ್ಣೆಮರಗಳ ಪರ್ವತದ ಮೇಲೆ ಕಂಡುಬರುತ್ತದೆ.
- ಇದನ್ನು “ಒಲೀವ ಗುಡ್ಡ” ಅಥವಾ “ಒಲೀವ ಮರಗಳ ಪರ್ವತ” ಎಂದೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಗೆತ್ಸೇಮನೆ, ಒಲೀವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.19:29-31
- ಲೂಕ.19:37-38
- ಮಾರ್ಕ.13: 3-4
- ಮತ್ತಾಯ.21:1-3
- ಮತ್ತಾಯ.24:3-5
- ಮತ್ತಾಯ.26:30-32

ಪದ ಡೇಟಾ:

- Strong's: H2022, H2132, G3735, G1636

ಎದೋಮ್, ಎದೋಮಿ, ಎದೋಮಿಯರು, ಇಡುಮಿಯ

ಸತ್ಯಾಂಶಗಳು:

ಎದೋಮ್ ಎನ್ನುವುದು ಏಸಾವ ಎನ್ನುವ ಹೆಸರಿಗೆ ಇನ್ನೊಂದು ಹೆಸರಾಗಿರುತ್ತದೆ. ಇವನು ಜೀವಿಸಿದ ಪ್ರಾಂತ್ಯವೆಲ್ಲ "ಎದೋಮ್" ಎಂದು ಕರೆಯಲ್ಪಟ್ಟಿದೆ, ಸ್ವಲ್ಪ ಕಾಲವಾದನಂತರ "ಎದೋಮೆ" ಎಂದು ಕರೆಯಲ್ಪಟ್ಟಿದೆ. "ಎದೋಮಿಯರು" ಇವನ ಸಂತತಿಯಾಗಿರುತ್ತಾರೆ.

- ಎದೋಮ್ ಎನ್ನುವ ಪ್ರಾಂತ್ಯವು ಕಾಲಾನುಕ್ರಮದಲ್ಲಿ ಮಾರ್ಪಾಟು ಹೊಂದಿದೆ. ಇದು ಬಹುಶಃ ಇಸ್ರಾಯೇಲ್ ದಕ್ಷಿಣ ಭಾಗದಲ್ಲಿ ಕಂಡುಬರುತ್ತದೆ ಮತ್ತು ಕೊನೆಗೆ ಅದು ದಕ್ಷಿಣ ಯೂದಾವರೆಗೆ ವಿಸ್ತರಿಸಲ್ಪಟ್ಟಿರುತ್ತದೆ.
- ಹೊಸ ಒಡಂಬಡಿಕೆಯ ಕಾಲದಲ್ಲಿ ಎದೋಮ್ ರಾಜ್ಯವು ಯೂದಾ ಪ್ರಾಂತ್ಯದಲ್ಲಿ ಅರ್ಧ ದಕ್ಷಿಣ ಭಾಗವನ್ನು ಆಕ್ರಮಿಸಿಕೊಂಡಿರುತ್ತದೆ. ಗ್ರೀಕರು ಇದನ್ನು "ಇಡುಮಿಯ" ಎಂದು ಕರೆಯುತ್ತಾರೆ.
- "ಎದೋಮ್" ಎನ್ನುವ ಹೆಸರಿಗೆ "ಕೆಂಪು" ಎಂದರ್ಥ, ಏಸಾವನು ಹುಟ್ಟಿದಾಗ ತನ್ನ ಮೈಯೆಲ್ಲಾ ಕೆಂಪು ಕೂದಲುಗಳಿದ್ದದರಿಂದ ಅದನ್ನು ಸೂಚಿಸುವುದಕ್ಕೆ ಈ ಹೆಸರನ್ನು ಇಟ್ಟಿರಬಹುದು. ಅಥವಾ ಕೆಂಪಾದ ರುಚಿ ಪದಾರ್ಥಕ್ಕಾಗಿ ಏಸಾವನು ತನ್ನ ಚೊಚ್ಚಲತನದ ಹಕ್ಕನ್ನು ಮಾರಿದ ವಿಷಯವನ್ನು ಸೂಚಿಸುತ್ತಿರಬಹುದು.
- ಹಳೇ ಒಡಂಬಡಿಕೆಯಲ್ಲಿ ಎದೋಮ್ ದೇಶವು ಅನೇಕಬಾರಿ ಇಸ್ರಾಯೇಲ್ ಶತ್ರು ಎಂಬುದಾಗಿ ದಾಖಲಿಸಲಾಗಿದೆ.
- ಓಬದ್ಯ ಪುಸ್ತಕದಲ್ಲೆಲ್ಲಾ ಎದೋಮ್ ವಿನಾಶನದ ಕುರಿತಾಗಿಯೇ ಹೇಳಲ್ಪಟ್ಟಿದೆ. ಇತರ ಹಳೇ ಒಡಂಬಡಿಕೆಯ ಪ್ರವಾದಿಗಳು ಕೂಡ ಎದೋಮ್.ಗೆ ವಿರುದ್ಧವಾಗಿ ಅನಾನುಕೂಲವಾದ ಪ್ರವಾದನೆಗಳನ್ನು ನುಡಿದಿದ್ದಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ವಿರೋಧಿ, ಜನ್ಮ ಹಕ್ಕು, ಏಸಾವ, ಓಬದ್ಯ, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.25:29-30
- ಆದಿ.32:3-5
- ಆದಿ.36:1-3
- ಯೆಶಯ.11:14-15
- ಯೆಹೋ.11:16-17
- ಓಬದ್ಯ.01:1-2

ಪದ ಡೇಟಾ:

- Strong's: H123, H130, H8165, G2401

ಎಫೆಸ, ಎಫೆಸದವನು

ಸತ್ಯಾಂಶಗಳು:

ಪ್ರಸ್ತುತ ಕಾಲದ ಟರ್ಕಿ ಇರುವ ಸ್ಥಳದಲ್ಲಿ ಪಶ್ಚಿಮ ಕರಾವಳಿಯಲ್ಲಿದ ಎಫೆಸ ಒಂದು ಪ್ರಾಚೀನ ಗ್ರೀಕ್ ಪಟ್ಟಣವಾಗಿತ್ತು.

- ಆದಿ ಕ್ರೈಸ್ತರ ಕಾಲದಲ್ಲಿ, ರೋಮಾ ಸಂಸ್ಥಾನದ ಒಂದು ಚಿಕ್ಕ ಭಾಗವಾಗಿದ್ದ ಎಫೆಸ ಆಸ್ಯಕ್ಕೆ ರಾಜಧಾನಿಯಾಗಿತ್ತು.
- ಅದರ ಸ್ಥಳದ ಕಾರಣ, ಈ ಪಟ್ಟಣವು ವ್ಯಾಪಾರ ಮತ್ತು ಯಾತ್ರೆಗಳಿಗೆ ಮುಖ್ಯ ಕೇಂದ್ರವಾಗಿತ್ತು.
- ಬಹಳ ಚೆನ್ನಾಗಿ ತಿಳಿದಿರುವ ಅನ್ಯ ದೇವತೆ ಅರ್ತೆಮೀ ದೇವಿಯ ದೇವಾಲಯವು ಎಫೆಸದಲ್ಲಿತ್ತು.
- ಪೌಲನು ಎಫೆಸದಲ್ಲಿ ಎರಡು ವರ್ಷಗಳಿಗಿಂತ ಹೆಚ್ಚಾಗಿ ನಿವಾಸ ಮಾಡಿ ಅಲ್ಲಿ ಕೆಲಸ ಮಾಡಿದನು ನಂತರ ಅಲ್ಲಿರುವ ನೂತನ ವಿಶ್ವಾಸಿಗಳನ್ನು ನಡೆಸಲು ತಿಮೊಥೆಯನನ್ನು ನೇಮಿಸಿದನು.
- ಹೊಸ ಒಡಂಬಡಿಕೆಯಲ್ಲಿ ಎಫೆಸದವರಿಗೆ ಬರೆದ ಪತ್ರಿಕೆ ಎಫೆಸದಲ್ಲಿದ್ದ ವಿಶ್ವಾಸಿಗಳಿಗೆ ಪೌಲನು ಬರೆದ ಪತ್ರಿಕೆಯಾಗಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಸ್ಯ, ಪೌಲ್, ತಿಮೊಥೆ)

ಸತ್ಯವೇದದ ವಾಕ್ಯಗಳು:

- 1 ಕೊರಿಂಥ.15:32
- 1 ತಿಮೊಥೆ.01:03
- 2 ತಿಮೊಥೆ.04:11-13
- ಅಪೊ.ಕೃತ್ಯ.19:1
- ಎಫೆಸೆ.01:01

ಪದ ಡೇಟಾ:

- Strong's: G2179, G2180, G2181

ಎಫ್ರಾತ, ಎಫ್ರಾತದವನು, ಎಫ್ರಾತದವರು

ಸತ್ಯಾಂಶಗಳು:

ಎಫ್ರಾತ ಒಂದು ಪಟ್ಟಣದ ಹೆಸರಾಗಿತ್ತು ಅದು ಇಸ್ರಾಯೇಲ್ ದೇಶಕ್ಕೆ ಉತ್ತರ ದಿಕ್ಕಿನಲ್ಲಿತ್ತು. ಎಫ್ರಾತ ಪಟ್ಟಣವನ್ನು ಸ್ವಲ್ಪ ಕಾಲದ ನಂತರ "ಬೇತ್ಲೆಹೇಮ್" ಅಥವಾ "ಎಫ್ರಾತ- ಬೇತ್ಲೆಹೇಮ್" ಕರೆಯಲ್ಪಟ್ಟಿತು.

- ಕಾಲೇಬನ ಕುಮಾರರಲ್ಲಿ ಎಫ್ರಾತ ಒಬ್ಬನಾಗಿದ್ದನು. ಬಹುಶ ಎಫ್ರಾತ ಪಟ್ಟಣಕ್ಕೆ ಆ ಹೆಸರು ಅವನ ಮೂಲಕ ಇಟ್ಟಿರಬಹುದು.
- ಎಫ್ರಾತ ಪಟ್ಟಣದವನನ್ನು "ಎಫ್ರಾತದವನು" ಎಂದು ಕರೆಯುತ್ತಿದ್ದರು.
- ದಾವೀದನ ಮುತ್ತಜ್ಜನಾದ ಬೋವಾಜನು ಎಫ್ರಾತದವನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಬೇತ್ಲೆಹೇಮ್, ಬೋವಾಜ, ಕಾಲೇಬ, ದಾವೀದ, ಇಸ್ರಾಯೇಲ್)

ಸತ್ಯವೇದದ ಅನುಬಂಧ ವಾಕ್ಯಗಳು :

ಪದ ಡೇಟಾ:

- Strong's: H672, H673

ಎಫ್ರಾಯೀಮನು, ಎಫ್ರಾಯೀಮ್ಯರು

ಸತ್ಯಾಂಶಗಳು:

ಎಫ್ರಾಯೀಮನು ಯೋಸೇಫನ ಕಿರಿಯ ಮಗನಾಗಿದ್ದನು. ಇವನ ಸಂತಾನದವರೇ ಎಫ್ರಾಯೀಮ್ಯರು, ಇವರು ಇಸ್ರಾಯೇಲಿನ ಒಂದು ಕುಲವನ್ನು ರಚಿಸಿದರು.

- ಎಫ್ರಾಯೀಮ್ ಎಂಬ ಹೆಸರು ಇಬ್ರಿಯ ಪದದಂತೆ ಧ್ವನಿಸುತ್ತದೆ, ಇದರ ಅರ್ಥ "ಫಲವನ್ನುಂಟುಮಾಡುವುದು."
- ಇಸ್ರಾಯೇಲಿನ ಉತ್ತರ ಭಾಗದಲ್ಲಿ ನೆಲೆಗೊಂಡಿರುವ ಹತ್ತು ಕುಲಗಳಲ್ಲಿ ಎಫ್ರಾಯೀಮ್ ಕುಲವು ಒಂದಾಗಿದೆ.
- ಕೆಲವೊಮ್ಮೆ ಎಫ್ರಾಯೀಮ್ ಎಂಬ ಹೆಸರನ್ನು ಸತ್ಯವೇದದಲ್ಲಿ ಇಸ್ರಾಯೇಲಿನ ಸಂಪೂರ್ಣ ಉತ್ತರ ರಾಜ್ಯವನ್ನು ಸೂಚಿಸಲು ಬಳಸಲಾಗುತ್ತದೆ (ಯೂದಾಯ ಎಂಬ ಹೆಸರನ್ನು ಕೆಲವೊಮ್ಮೆ ಇಸ್ರಾಯೇಲಿನ ಸಂಪೂರ್ಣ ದಕ್ಷಿಣ ರಾಜ್ಯವನ್ನು ಸೂಚಿಸಲು ಹೇಗೆ ಬಳಸಲಾಗುತ್ತದೆ).

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಇವುಗಳನ್ನು ಸಹ ನೋಡಿರಿ : ಯೋಸೇಫ, ಮನಸ್ಸೆ,ಇಸ್ರಾಯೇಲ್ ರಾಜ್ಯ, ಇಸ್ರಾಯೇಲಿನ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.6:66-69
- 2 ಪೂರ್ವ.13:4-5
- ಯೆಹೆ.37:16
- ಆದಿ.41:52
- ಆದಿ.48:1-2
- ಯೋಹಾನ.11:54

ಪದದ ಡೇಟಾ:

- Strong's: H0669, H0673, G21870

ಎಲಿಸಬೇತಳು

ಸತ್ಯಾಂಶಗಳು:

ಎಲಿಸಬೇತಳು ಸ್ನಾನಿಕನಾದ ಯೋಹಾನನ ತಾಯಿಯಾಗಿದ್ದಳು. ಅವಳ ಗಂಡನ ಹೆಸರು ಜಕರೀಯ.

- ಜಕರೀಯ ಮತ್ತು ಎಲಿಸಬೇತಳಿಗೆ ಮಕ್ಕಳಾಗಿರಲಿಲ್ಲ ಆದರೆ ಅವರ ವೃದ್ಧಪ್ಯದಲ್ಲಿ, ಎಲಿಸಬೇತಳು ಅವನಿಗೆ ಮಗನನ್ನು ಹೇರುವಳೆಂದು ದೇವರು ಜಕರೀಯನಿಗೆ ವಾಗ್ದಾನ ಮಾಡಿದನು.
- ದೇವರು ತಾನು ಮಾಡಿದ ವಾಗ್ದಾನವನ್ನು ನೆರವೇರಿಸಿದನು, ಎಲಿಸಬೇತಳು ಗರ್ಭಿಣಿಯಾದಳು ಮತ್ತು ಆಕೆ ಒಬ್ಬ ಗಂಡು ಮಗುವಿಗೆ ಜನ್ಮನೀಡಿದಳು. ಅವರು ಆ ಮಗುವಿಗೆ ಯೋಹಾನ ಎಂದು ಹೆಸರಿಟ್ಟರು.
- ಯೇಸುವಿನ ತಾಯಿಯಾದ ಮರಿಯಳಿಗೆ ಎಲಿಸಬೇತಳು ಸಮೀಪ ಬಂಧುವಗಿದ್ದಳು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಕಲ್ದೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.01:5-7
- ಲೂಕ.01:24-25
- ಲೂಕ.01:39-41

ಪದ ಡೇಟಾ:

- Strong's: G1665

ಎಲೀಯ

ಸತ್ಯಾಂಶಗಳು:

ಎಲೀಯನು ಯೆಹೋವನ ಅತೀ ಪ್ರಾಮುಖ್ಯವಾದ ಪ್ರವಾದಿಗಳಲ್ಲಿ ಒಬ್ಬನಾಗಿರುತ್ತಾನೆ. ಇಸ್ರಾಯೇಲ್ ಮತ್ತು ಯೂದಾ ರಾಜ್ಯಗಳನ್ನು ಅನೇಕಮಂದಿ ಅರಸರು ಆಳುತ್ತಿರುವ ಕಾಲದಲ್ಲಿ ಎಲೀಯನು ಪ್ರವಾದಿಸಿದ್ದನು. ಅವರಲ್ಲಿ ಅರಸನಾದ ಅಹಾಬನು ಕೂಡ ಇದ್ದನು.

- ಸತ್ತ ಹುಡುಗನನ್ನು ಜೀವಕ್ಕೆ ತರುವುದು ಸೇರಿದಂತೆ ದೇವರು ಎಲೀಯ ಮೂಲಕ ಅನೇಕವಾದ ಅದ್ಭುತ ಕಾರ್ಯವನ್ನು ಮಾಡಿದ್ದಾನೆ.
- ಅರಸನಾದ ಅಹಾಬನು ಬಾಳ್ ಎನ್ನುವ ಸುಳ್ಳು ದೇವರನ್ನು ಆರಾಧನೆ ಮಾಡಿದ್ದಕ್ಕಾಗಿ ಎಲೀಯನು ಅವನನ್ನು ಎಚ್ಚರಿಸಿದ್ದನು.
- ಯೆಹೋವನೆ ನಿಜವಾದ ದೇವರು ಎಂದು ನಿರೂಪಣೆ ಮಾಡುವದಕ್ಕಾಗಿ ಎಲೀಯನು ಬಾಳ್ ಪ್ರವಾದಿಗಳಿಗೆ ಸವಾಲನ್ನು ಹಾಕಿದನು.
- ಎಲೀಯ ಜೀವನದ ಅಂತಿಮ ಭಾಗದಲ್ಲಿ ಎಲೀಯನು ಇನ್ನೂ ಜೀವಂತವಾಗಿರುವಾಗಲೇ ದೇವರು ಅವನನ್ನು ಅದ್ಭುತ ರೀತಿಯಲ್ಲಿ ಪರಲೋಕಕ್ಕೆ ತೆಗೆದುಕೊಂಡು ಹೋದರು.
- ನೂರಾರು ವರ್ಷಗಳಾದನಂತರ ಎಲೀಯ ಮತ್ತು ಮೋಶೆ ಪರ್ವತದ ಮೇಲೆ ಯೇಸುವಿನೊಂದಿಗೆ ಕಾಣಿಸಿಕೊಂಡರು, ಯೆರೂಸಲೇಮಿನಲ್ಲಿ ನಡೆಯುವ ಯೇಸುವಿನ ಶ್ರಮೆ ಮತ್ತು ಮರಣಗಳ ಕುರಿತಾಗಿ ಅವರಿಬ್ಬರು ಮಾತನಾಡಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅದ್ಭುತ, ಪ್ರವಾದಿ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.17:1
- 2 ಅರಸ.01:3-4
- ಯಾಕೋಬ.05:16-18
- ಯೋಹಾನ.01:19-21
- ಯೋಹಾನ.01:24-25
- ಮಾರ್ಕ.09:4-6

ಸತ್ಯವೇದದಿಂದ ಉದಾಹರಣೆಗಳು:

- **19:02** ಇಸ್ರಾಯೇಲ್ ರಾಜ್ಯದ ಮೇಲೆ ಅಹಾಬನು ಅರಸನಾಗಿದ್ದಾಗ _ **ಎಲೀಯನು** _ ಪ್ರವಾದಿಯಾಗಿದ್ದನು.
- **19:02** “ನಾನು ಹೇಳುವವರೆಗೂ ಇಸ್ರಾಯೇಲ್ ರಾಜ್ಯದಲ್ಲಿ ಯಾವ ಮಳೆಯೂ ಅಥವಾ ಯಾವ ಇಬ್ಬನಿ ಇರುವುದಿಲ್ಲ” ಎಂದು _ **ಎಲೀಯನು** _ ಅಹಾಬನಿಗೆ ಹೇಳಿದನು.
- **19:03** ನಿನ್ನನ್ನು ಕೊಲ್ಲಬೇಕೆಂದು ಬಯಸುತ್ತಿರುವ ಅಹಾಬನಿಂದ ಮರೆಯಾಗುವುದಕ್ಕೆ ಅರಣ್ಯದಲ್ಲಿರುವ ಒಂದು ತೊರೆಯೊಳಗೆ ಹೋಗು ಎಂದು ದೇವರು _ **ಎಲೀಯನಿಗೆ** _ ಹೇಳಿದನು. ಪ್ರತಿ ಮುಂಜಾನೆ ಮತ್ತು ಪ್ರತಿ ಸಾಯಂಕಾಲ ಪಕ್ಷಿಗಳು ಆತನಿಗೆ ರೊಟ್ಟಿ ಮತ್ತು ಮಾಂಸವನ್ನು ತೆಗೆದುಕೊಂಡು ಬರುತ್ತಿದ್ದವು.
- **19:04** ಆದರೆ ಅವರು _ ಎಲೀಯನನ್ನು _ ಚೆನ್ನಾಗಿ ನೋಡಿಕೊಂಡಿದ್ದರು, ಮತ್ತು ದೇವರು ಅವರಿಗೆ ಚೆನ್ನಾಗಿ ಒದಗಿಸಿಕೊಟ್ಟಿದ್ದನು, ಆದ್ದರಿಂದ ಅವರ ಹಿಟ್ಟಿನ ಪಾತ್ರೆಯು ಮತ್ತು ಅವರ ಎಣ್ಣೆಯ ಪಾತ್ರೆಯು ಕಡಿಮೆಯಾಗಲೇಯಿದ್ದಿಲ್ಲ.
- **19:05** ಮೂರುವರೆ ವರ್ಷಗಳಾದನಂತರ, ಇಸ್ರಾಯೇಲ್ ರಾಜ್ಯಕ್ಕೆ ಹಿಂದುರಿಗಿ ಬರಬೇಕೆಂದು ಮತ್ತು ಆತನು ಮಳೆಯನ್ನು ಕಳುಹಿಸುತ್ತಿದ್ದಾನೆನ್ನುವ ವಿಷಯವನ್ನು ಅಹಾಬನಿಗೆ ತಿಳಿಸ ಬೇಕೆಂದು ದೇವರು _ **ಎಲೀಯನಿಗೆ** _ ಹೇಳಿದನು.
- **19:07** “ಒಂದು ಎತ್ತನ್ನು ಸಾಯಿಸಿ, ಸರ್ವಾಂಗ ಹೋಮವಾಗಿ ಅದನ್ನು ಸಿದ್ಧಗೊಳಿಸಿ, ಅದಕ್ಕೆ ಬೆಂಕಿಯನ್ನು ಹಚ್ಚಬೇಡಿರಿ” ಎಂದು _ **ಎಲೀಯನು** _ ಬಾಳ್ ಪ್ರವಾದಿಗಳಿಗೆ ಹೇಳಿದನು.
- **19:12** “ಬಾಳ್ ಪ್ರವಾದಿಗಳು ಯಾರೂ ತಪ್ಪಿಸಿಕೊಂಡು ಹೋಗಬಾರದೆಂದು” _ **ಎಲೀಯ** _ ಹೇಳಿದನು.
- **36:03** ಮೋಶೆ ಮತ್ತು ಪ್ರವಾದಿಯಾದ _ **ಎಲೀಯ** _ ಕಾಣಿಸಿಕೊಂಡರು. ಈ ಸಂಘಟನೆಗೆ ಮುಂಚಿತವಾಗಿ ಇವರು ನೂರಾರು ವರ್ಷಗಳ ಕಾಲ ಜೀವಿಸಿದ್ದರು. ಯೆರೂಸಲೇಮಿನಲ್ಲಿ ಸಂಭವಿಸುವ ಯೇಸುವಿನ ಮರಣದ ಕುರಿತಾಗಿ ಯೇಸುವಿನೊಂದಿಗೆ ಅವರಿಬ್ಬರು ಮಾತನಾಡಿದ್ದರು.

ಪದ ಡೇಟಾ:

- Strong's: H452, G2243

ಎಲೀಷ

ಸತ್ಯಾಂಶಗಳು:

ಇಸ್ರಾಯೇಲ್ ರಾಜ್ಯವನ್ನು ಆಳಿದ ಹಲವಾರು ಅರಸರ ಕಾಲದಲ್ಲಿ ಎಲೀಷ ಪ್ರವಾದಿಯಾಗಿದ್ದನು: ಅಹಾಬ, ಅಹಜ್ಯ, ಯೆಹೋರಾಮ, ಯೇಹು, ಯೆಹೋವಾಹಾಜನು ಮತ್ತು ಯೋವಾಷ.

- ಎಲೀಷನನ್ನು ಪ್ರವಾದಿಯಾಗಿ ಅಭಿಷೇಕಿಸಬೇಕೆಂದು ದೇವರು ಎಲೀಯನಿಗೆ ಹೇಳಿದನು.
- ಎಲೀಯನನ್ನು ಅಗ್ನಿಮಯವಾದ ರಥಗಳು ಪರಲೋಕಕ್ಕೆ ಎತ್ತಿಕೊಂಡು ಹೋದಾಗ, ಎಲೀಷನು ಇಸ್ರಾಯೇಲ್ ಅರಸರಿಗೆ ದೇವರ ಪ್ರವಾದಿಯಾದನು.
- ಎಲೀಷನು ಸಿರಿಯಾದಿಂದ ಬಂದ ಒಬ್ಬ ಕುಷ್ಠರೋಗಿಯನ್ನು ಸ್ವಸ್ಥಪಡಿಸಿದನು ಮತ್ತು ಶೂನೇಮ್ಯಳ ಸತ್ತ ಮಗನನ್ನು ಎಬ್ಬಿಸಿದನು ಇಂತಹ ಅನೇಕವಾದ ಅದ್ಭುತ ಕಾರ್ಯಗಳನ್ನು ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಎಲೀಯ, ನಾಮಾನ, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.19:15-16
- 2 ಅರಸ.03:15-17
- 2 ಅರಸ.05:8-10
- ಲೂಕ.04:25-27

ಪದ ಡೇಟಾ:

- Strong's: H477

ಎಲ್ಯಾಕೀಮ್

ಸತ್ಯಾಂಶಗಳು:

ಹಳೆ ಒಡಂಬಡಿಕೆಯಲ್ಲಿ ಇಬ್ಬರು ಪುರುಷರಲ್ಲಿ ಒಬ್ಬನ ಹೆಸರು ಎಲ್ಯಾಕೀಮ್ ಆಗಿತ್ತು.

- ಎಲ್ಯಾಕೀಮ್ ಎಂಬ ಒಬ್ಬ ವ್ಯಕ್ತಿ ಅರಸನಾದ ಹಿಜ್ಕೀಯನ ಕೆಳಗೆ ಅರಮನೆಯ ವ್ಯವಸ್ಥಾಪಕನಾಗಿದ್ದನು.
- ಎಲ್ಯಾಕೀಮ್ ಎಂಬ ಇನ್ನೊಬ್ಬ ವ್ಯಕ್ತಿ ಅರಸನಾದ ಯೋಷೀಯನ ಮಗನಾಗಿದ್ದನು. ಐಗುಪ್ತ ದೇಶದ ಫರೋಹ ನೆಹೋನು ಯೂದಯ ಸೀಮೆಗೆ ಅವನನ್ನು ಅರಸನಾಗಿ ನೇಮಿಸಿದನು.
- ನೆಕೋ ಎಲ್ಯಾಕೀಮನಿಗೆ ಯೆಹೋಯಾಕೀಮನೆಂಬ ಹೊಸ ಹೆಸರನ್ನಿಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಹಿಜ್ಕೀಯ, ಯೆಹೋಯಾಕೀಮ, ಯೋಷೀಯ, ಫರೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.18:16-18
- 2 ಅರಸ.18:26-27
- 2 ಅರಸ.18:36-37
- 2 ಅರಸ.23:34-35

ಪದ ಡೇಟಾ:

- Strong's: H471, G1662

ಎಲ್ಲಾಜಾರ್

ಸತ್ಯಾಂಶಗಳು:

ಸತ್ಯವೇದದಲ್ಲಿರುವ ಅನೇಕ ಪುರುಷರಲ್ಲಿ ಎಲ್ಲಾಜಾರ್ ಒಬ್ಬನಾಗಿದ್ದನು.

- ಎಲ್ಲಾಜಾರ್ ಮೋಶೆನ ಸಹೋದರನಾದ ಆರೋನನ ಮಗನಾಗಿದ್ದನು. ಆರೋನನು ಮರಣಿಸಿದ ಮೇಲೆ, ಎಲ್ಲಾಜಾರನು ಇಸ್ರಾಯೇಲರಿಗೆ ಮಹಾ ಯಾಜಕನಾದನು.
- ದಾವೀದನ "ಬಲವಾದ ಪುರುಷರಲ್ಲಿ" ಎಲ್ಲಾಜಾರನು ಒಬ್ಬನಾಗಿದ್ದನು.
- ಇನ್ನೊಬ್ಬ ಎಲ್ಲಾಜಾರನು ಯೇಸುವಿನ ಪೂರ್ವಜನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಆರೋನ, ಮಹಾ ಯಾಜಕ, ದಾವೀದ, ಬಲವಾದ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.24:1-3
- ನ್ಯಾಯ.20:27-28
- ಅರಣ್ಯ.26:1-2
- ಅರಣ್ಯ.34:16-18

ಪದ ಡೇಟಾ:

- Strong's: H499, G1648

ಎಸ್ತೇರಳು

ಸತ್ಯಾಂಶಗಳು:

ಯಹೂದಿಯರು ಬಾಬುಲೋನಿನ ಸೆರೆಯಲ್ಲಿದ್ದ ಕಾಲದಲ್ಲಿ ಎಸ್ತೇರಳು ಪರ್ಷಿಯಾ ರಾಜ್ಯಕ್ಕೆ ಮಹಾರಾಣಿಯಾಗಿ ನೇಮಿಸಲ್ಪಟ್ಟಳು.

- ಎಸ್ತೇರಳು ಹೇಗೆ ಪರ್ಷಿಯ ದೇಶದ ಅರಸನಾದ ಅಹಷ್ವೇರೋಷನ ಹೆಂಡತಿಯಾದಳು ಮತ್ತು ಯೆಹೋವ ಹೇಗೆ ಅವಳ ಜನರನ್ನು ರಕ್ಷಿಸಲು ಆಕೆಯನ್ನು ಉಪಯೋಗಿಸಿಕೊಂಡನೆಂದು ಎಸ್ತೇರಳ ಗ್ರಂಥದಲ್ಲಿ ಬರೆಯಲ್ಪಟ್ಟಿದೆ.
- ಎಸ್ತೇರಳು ಅನಾಥಳಾಗಿದ್ದಳು, ಅವಳ ಚಿಕ್ಕಪ್ಪನಾದ ಮೊರ್ದೆಕೈ ಆಕೆಯನ್ನು ಸಾಕಿದನು.
- ಅವಳು ತನ್ನನ್ನು ಸಾಕಿದ ತಂದೆಗೆ ವಿಧೇಯಳಾದ ಕಾರಣ ಅವಳು ಯೆಹೋವನಿಗೆ ವಿಧೇಯಳಾಗಿರಲು ಸಹಾಯವಾಯಿತು.
- ಎಸ್ತೇರಳು ಯೆಹೋವನಿಗೆ ವಿಧೇಯಳಾಗಿದ್ದಳು ಮತ್ತು ಯಹೂದಿಯರಾದ ಅವಳ ಜನರನ್ನು ರಕ್ಷಿಸಲು ಆಕೆಯ ಪ್ರಾಣವನ್ನು ಲೆಕ್ಕಿಸದೆ ಸಾಹಸ ಮಾಡಿದಳು.
- ಯೆಹೋವನಿಗೆ ವಿಧೇಯರಾಗಿರುವವರ ಮೂಲಕ ತನ್ನ ಜನರನ್ನು ಹೇಗೆ ಕಾಪಾಡುತ್ತಾನೆಂದು ಮತ್ತು ಇತಿಹಾಸದ ಘಟನೆಗಳು ಆತನ ಸರ್ವೋತ್ತಮ ಸ್ವಾಧೀನದಲ್ಲಿದೆ ಎಂದು ಎಸ್ತೇರಳ ಕಥೆ ವಿವರವಾಗಿ ತಿಳುಸುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಹಷ್ವೇರೋಷ, ಬಾಬುಲೋನ್, ಮೊರ್ದೆಕೈ, ಪರ್ಷಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಸ್ತೇರಳು.02:7
- ಎಸ್ತೇರಳು.02:15-16
- ಎಸ್ತೇರಳು.07:1-2
- ಎಸ್ತೇರಳು.08:1-2

ಪದ ಡೇಟಾ:

- Strong's: H635

ಏಂಗೆದೀ

ಪದದ ಅರ್ಥವಿವರಣೆ

ಯೆರುಸಲೇಮಿಗೆ ಆಗ್ನೇಯ ದಿಕ್ಕಿನಲ್ಲಿ ಯೆಹೂದ ಅರಣ್ಯದಲ್ಲಿದ ಒಂದು ಪಟ್ಟಣದ ಹೆಸರು ಏಂಗೆದೀ ಆಗಿತ್ತು.

- ಉಪ್ಪಿನ ಸಮುದ್ರದ ಪಶ್ಚಿಮ ಕರಾವಳಿಯಲ್ಲಿ ಏಂಗೆದೀ ಇತ್ತು.
- ಅದರ ಹೆಸರಿನಲ್ಲಿ ಒಂದು ಭಾಗಕ್ಕೆ “ನೀರುಬುಗ್ಗೆ” ಎಂದರ್ಥ, ಅದು ಪಟ್ಟಣದಲ್ಲಿ ಹುಟ್ಟಿ ಸಮುದ್ರಕ್ಕೆ ಹರಿಯುವ ನೀರಿನ ಒರತೆಯನ್ನು ಸೂಚಿಸುತ್ತದೆ.
- ಏಂಗೆದೀಯಲ್ಲಿ ಸುಂದರವಾದ ದ್ರಾಕ್ಷಿತೋಟಗಳು ಮತ್ತು ಸಾರವಂತವಾದ ನೆಲವಿತ್ತು ಎಂದು ಪ್ರಸಿದ್ಧವಾಗಿತ್ತು, ಅಲ್ಲಿ ಹರಿಯುತ್ತಿದ್ದ ನೀರಿನ ಬುಗ್ಗೆ ಅದಕ್ಕೆ ಕಾರಣವಾಗಿರಬಹುದು.
- ಅರಸನಾದ ಸೌಲನು ದಾವೀದನನ್ನು ಬೆನ್ನಟ್ಟಿದಾಗ ಏಂಗೆದೀಯಲ್ಲಿ ಬಲವಾದ ಗುರಾಣಿಯಿದ್ದ ಕಾರಣವಾಗಿ ಅಲ್ಲಿಗೆ ಓಡಿಹೋದನು.

(ಈ ಪದಗಳನ್ನು ಸಹ ನೋಡಿರಿ : ದಾವೀದ, ಮರ ಭೂಮಿ, ನೀರುಬುಗ್ಗೆ, ಯೆಹೂದ, ವಿಶ್ರಾಂತಿ, ಉಪ್ಪಿನ ಸಮುದ್ರ, ಸೌಲನು, ಬಲವಾದ ಗುರಾಣಿ, ದ್ರಾಕ್ಷಿತೋಟ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.20:1-2
- ಪರಮ.01:12-14

ಪದ ಡೇಟಾ:

- Strong's: H5872

ಏದೆನ್, ಏದೆನ್ ಉದ್ಯಾನವನ

ಸತ್ಯಾಂಶಗಳು:

ಪ್ರಾಚೀನ ಕಾಲದಲ್ಲಿ, ದೇವರು ಮೊದಲನೆಯ ಪುರುಷನನ್ನು ಮತ್ತು ಸ್ತ್ರಿಯನ್ನು ಏದೆನ್ ಸೀಮೆಯಲ್ಲಿದ್ದ ಉದ್ಯಾನವನದಲ್ಲಿ ತಂಗುವಂತೆ ಮಾಡಿದನು.

- ಆದಾಮ ಮತ್ತು ಹವ್ವ ತಂಗಿದ್ದ ಉದ್ಯಾನವನ ಏದೆನ್ ವನದ ಒಂದು ಭಾಗವಾಗಿತ್ತು.
- ಏದೆನ್ ಪ್ರಾಂತ್ಯದ ಖಚಿತವಾದ ಸ್ಥಳ ಎಲ್ಲಿದಿಯೋ ತಿಳಿಯದು, ಆದರೆ ಟೈಗ್ರಿಸ್ ಮತ್ತು ಯೂಫ್ರೇಟೀಸ್ ನದಿಗಳು ಅಲ್ಲಿ ಹರಿಯುತ್ತಿದ್ದವು.
- ಇಬ್ರಿ ಭಾಷೆಯಲ್ಲಿ "ಏದೆನ್" ಎನ್ನುವ ಪದಕ್ಕೆ "ಮಹಾ ಸಂತೋಷ ಹುಟ್ಟಿಸುವ" ಎಂದರ್ಥ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆದಾಮ, ಯೂಫ್ರೇಟೀಸ್ ನದಿ, ಹವ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.28:11-13
- ಆದಿ.02:7-8
- ಆದಿ.02:9-10
- ಆದಿ.02:15-17
- ಆದಿ.04:16-17
- ಯೋವೇಲ.02:3

ಪದ ಡೇಟಾ:

- Strong's: H5729, H5731

ಏಲಾಮ್, ಏಲಾಮೀಯರು

ಸತ್ಯಾಂಶಗಳು:

ಏಲಾಮ್ ಶೇಮನ ಮಗನು ಮತ್ತು ನೋಹನ ಮೊಮ್ಮಗನಾಗಿದ್ದನು.

- ಏಲಾಮ್ ಸಂತತಿಯವರನ್ನು "ಏಲಾಮೀಯರು" ಎಂದು ಕರೆದರು ಮತ್ತು ಅವರು ವಾಸ ಮಾಡುವ ಸ್ಥಳವನ್ನು "ಏಲಾಮ್" ಎಂದು ಕರೆದರು.
- ಏಲಾಮ್ ಪ್ರಾಂತ್ಯವು ಟೈಗ್ರಿಸ್ ನದಿಯ ಆಗ್ನೇಯ ದಿಕ್ಕಿನಲ್ಲಿ ಪ್ರಸ್ತುತ ಕಾಲದ ಪಶ್ಚಿಮ ಇರಾನಲ್ಲಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ನೋಹ, ಶೇಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:17-19
- ಅಪೊ.ಕೃತ್ಯ.02:8-11
- ಎಜ್ರಾ.08:4-7
- ಯೆಶಯ.22:5-7

ಪದ ಡೇಟಾ:

- Strong's: H5867, H5962, G1639

ಏಸಾವ

ಸತ್ಯಾಂಶಗಳು:

ಏಸಾವನು ಇಸಾಕ ಮತ್ತು ರೆಬೆಕ್ಕಳಿಗೆ ಹುಟ್ಟಿದ ಅವಳಿ ಗಂಡುಮಕ್ಕಳಲ್ಲಿ ಒಬ್ಬನಾಗಿದ್ದನು. ಅವರಲ್ಲಿ ಇವನ್ನು ಮೊದಲನೇ ಮಗುವಾಗಿದ್ದನು. ತನ್ನ ಅವಳಿ ಸಹೋದರ ಯಾಕೋಬನಾಗಿದ್ದನು.

- ಏಸಾವನು ಕೆಂಪಾದ ರುಚಿಯಾದ ಪದಾರ್ಥಕ್ಕಾಗಿ ತನ್ನ ತಮ್ಮನಿಗೆ ತನ್ನ ಚೊಚ್ಚಲತನವನ್ನು ಮಾರಿಬಿಟ್ಟನು.
- ಏಸಾವನು ಮೊದಲ ಸಂತಾನವಾಗಿರುವುದರಿಂದ ತನ್ನ ತಂದೆಯಾದ ಇಸಾಕನು ಅವನಿಗೆ ವಿಶೇಷವಾದ ಆಶೀರ್ವಾದವನ್ನು ಕೊಡಬೇಕೆಂದು ಬಯಸಿದ್ದನು. ಆದರೆ ಯಾಕೋಬನು ಆಶೀರ್ವಾದವನ್ನು ಏಸಾವನಿಗೆ ಕೊಡದಂತೆ ಮೋಸ ಮಾಡಿದನು. ಅದಕ್ಕಾಗಿ ಏಸಾವನು ಯಾಕೋಬನನ್ನು ಕೊಲ್ಲಬೇಕೆಂದು ಸಿಟ್ಟುಗೊಂಡಿದ್ದನು, ಆದರೆ ಕೊನೆಗೆ ಅವನು ಯಾಕೋಬನನ್ನು ಕ್ಷಮಿಸಿದನು.
- ಏಸಾವನಿಗೆ ಅನೇಕಮಂದಿ ಮಕ್ಕಳು ಮತ್ತು ಮೊಮ್ಮೊಕ್ಕಳು ಇದ್ದರು, ಈ ಎಲ್ಲ ಸಂತಾನದವರೇ ಕಾನಾನ್ ಭೂಮಿಯಲ್ಲಿ ದೊಡ್ಡ ಗುಂಪಾಗಿ ಮಾರ್ಪಟ್ಟು ಜೀವನ ನೆಡೆಸುತ್ತಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಎದೋಮ್, ಇಸಾಕ, ಯಾಕೋಬ, ರೆಬೆಕ್ಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.25:24-26
- ಆದಿ.25:29-30
- ಆದಿ.26:34-35
- ಆದಿ.27:11-12
- ಆದಿ.32:3-5
- ಇಬ್ರಿ.12:14-17
- ರೋಮಾ.09:10-13

ಸತ್ಯವೇದದಿಂದ ಉದಾಹರಣೆಗಳು:

- **06:07** ರೆಬೆಕ್ಕಳ ಮಕ್ಕಳು ಹುಟ್ಟಿದಾಗ, ದೊಡ್ಡವನು ಕೆಂಪು ಬಣ್ಣದ ಕೂದಲುಗಳಿದ್ದು ಹೊರ ಬಂದನು, ಮತ್ತು ಅವರು ಅವನಿಗೆ _ ಏಸಾವ _ ಎಂದು ಹೆಸರಿಟ್ಟರು.
- **07:02** ಆದ್ದರಿಂದ _ ಏಸಾವನು _ ತನ್ನ ಚೊಚ್ಚಲತಾಣವನ್ನು ಯಾಕೋಬನಿಗೆ ಕೊಟ್ಟನು.
- **07:04** ಇಸಾಕನು ಮೇಕೆಯ ಕೂದಲು ಎಂದು ತಿಳಿದು, ಬಟ್ಟೆಗಳ ವಾಸನೆಯನ್ನು ನೋಡಿದನೋ, ಆಗ ಇವನು _ ಏಸಾವನೇ _ ಎಂದು ತಿಳಿದು, ಅವನನ್ನು ಆಶೀರ್ವಾದ ಮಾಡಿದನು.
- **07:05** _ ಏಸಾವನು _ ಯಾಕೋಬನನ್ನು ದ್ವೇಷಿಸಿದನು ಯಾಕಂದರೆ ಯಾಕೋಬನು ತನ್ನ ಚೊಚ್ಚಲತನವನ್ನು ಮತ್ತು ತನ್ನ ಆಶೀರ್ವಾದವನ್ನು ಕದ್ದುಕೊಂಡಿದ್ದನು.
- **07:10** ಆದರೆ _ ಏಸಾವನು _ ಯಾಕೋಬನನ್ನು ಕ್ಷಮಿಸಿದ್ದನು, ಮತ್ತು ಅವರಿಬ್ಬರು ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾ ತುಂಬಾ ಸಂತೋಷದಿಂದ ಇದ್ದಿದ್ದರು.

ಪದ ಡೇಟಾ:

- Strong's: H6215, G2269

ಐಗುಪ್ತ, ಐಗುಪ್ತ್ಯನು

ಸತ್ಯಾಂಶಗಳು:

ಐಗುಪ್ತ ಎನ್ನುವುದು ಆಫ್ರಿಕಾ ಈಶಾನ್ಯ ಭಾಗದಲ್ಲಿ ಒಂದು ದೇಶವಾಗಿದ್ದು, ಕಾನಾನ್ ದೇಶದ ನೈಋತ್ಯ ಭಾಗಕ್ಕೆ ಹರಡಿರುವ ದೇಶವಾಗಿರುತ್ತದೆ. ಐಗುಪ್ತ್ಯನು ಎನ್ನುವುದು ಐಗುಪ್ತ ದೇಶದಿಂದ ಬಂದಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.

- ಪುರಾತನ ಕಾಲದಲ್ಲಿ, ಐಗುಪ್ತ ಎನ್ನುವುದು ತುಂಬಾ ಶಕ್ತಿಯುತವಾದ, ಶ್ರೀಮಂತ ದೇಶವಾಗಿತ್ತು.
- ಪುರಾತನ ಐಗುಪ್ತ ದೇಶವು ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿತ್ತು, ಅವೇನೆಂದರೆ ಕೆಳಗಿನ ಐಗುಪ್ತ (ನೈಲ್ ನದಿ ಕೆಳಗಡೆಗೆ ಹರಡಿ ಸಮುದ್ರದೊಳಗೆ ಸೇರುವ ಉತ್ತರ ಭಾಗ) ಮತ್ತು ಮೇಲಣ ಐಗುಪ್ತ (ದಕ್ಷಿಣ ಕಡೆಗೆ ಇರುವ ಭಾಗ). ಹಳೇ ಒಡಂಬಡಿಕೆಯಲ್ಲಿ, ಈ ಭಾಗಗಳನ್ನು "ಐಗುಪ್ತ" ಮತ್ತು "ಕೂಷ್" (ಮೂಲ ಭಾಷೆಯಲ್ಲಿ ಪಥ್ರೋಸ್ ಎಂದು ಕರೆಯುತ್ತಾರೆ) ಎಂದು ಸೂಚಿಸಲಾಗಿದೆ.
- ಅನೇಕಸಲ ಕಾನಾನ್ ದೇಶದಲ್ಲಿ ಆಹಾರ ಸ್ವಲ್ಪವಿದ್ದಾಗ, ಇಸ್ರಾಯೇಲ್ ಪಿತೃಗಳು ತಮ್ಮ ಕುಟುಂಬಗಳಿಗಾಗಿ ಆಹಾರವನ್ನು ಕೊಂಡುಕೊಂಡು ಬರುವುದಕ್ಕೆ ಐಗುಪ್ತಕ್ಕೆ ಪ್ರಯಾಣ ಮಾಡಿದ್ದರು.
- ನೂರಾರು ವರ್ಷಗಳು ಇಸ್ರಾಯೇಲ್ಯರು ಐಗುಪ್ತ ದೇಶದಲ್ಲಿ ಗುಲಾಮರಾಗಿದ್ದರು.
- ಯೋಸೇಫನು ಮತ್ತು ಮರಿಯಳು ಮಹಾ ಹೆರೋದನಿಂದ ತಪ್ಪಿಸಿಕೊಳ್ಳುವುದಕ್ಕೆ ಕೂಸಾಗಿದ್ದ ಯೇಸುವನ್ನು ಎತ್ತಿಕೊಂಡು ಐಗುಪ್ತಕ್ಕೆ ತೆರಳಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವ ರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಮಹಾ ಹೆರೋದ, ಯೋಸೇಫ(NT), ನೈಲ್ ನದಿ, ಪಿತೃಗಳು)

ಸತ್ಯವೇದ ವಾಕ್ಯಗಳು:

- 1 ಸಮು 4:7-9
- ಅಪೊ.ಕೃತ್ಯ 7:10
- ವಿಮೋ 3:7
- ಆದಿ 41:29
- ಆದಿ 41:57
- ಮತ್ತಾಯ 2:15

ಸತ್ಯವೇದ ಕಥೆಗಳಿಂದ ಉದಾಹರಣೆಗಳು:

- **08:4** ಗುಲಾಮರನ್ನು ಕೊಂಡುಕೊಳ್ಳುವವರು ಯೋಸೇಫನನ್ನು _ ಐಗುಪ್ತಕ್ಕೆ _ ಕರೆದುಕೊಂಡು ಹೋದರು. _ ಐಗುಪ್ತ _ ದೇಶವು ತುಂಬಾ ವಿಸ್ತಾರವಾದ, ಶಕ್ತಿಯುತವಾದ ದೇಶವಾಗಿತ್ತು, ಇದು ನೈಲ್ ನದಿಯ ಪಕ್ಕದಲ್ಲಿ ಕಂಡುಬರುತ್ತದೆ.
- **8:8** ಫರೋಹನು ಯೋಸೇಫನೆಂದರೆ ತುಂಬಾ ಮೆಚ್ಚುಗೆಯಾಗಿದ್ದನು, ಇದರಿಂದ ಅವನು ಯೋಸೇಫನನ್ನು _ ಐಗುಪ್ತ _ ದೇಶದ ಮೇಲೆ ಅತೀ ಅಧಿಕಾರವುಳ್ಳ ಎರಡನೇ ಮನುಷ್ಯನನ್ನಾಗಿ ನೇಮಿಸಿದನು.
- **8:11** ಆದ್ದರಿಂದ ಆಹಾರವನ್ನು ಕೊಂಡುಕೊಂಡು ಬರುವುದಕ್ಕೆ ಯಾಕೋಬನು ತನ್ನ ಹಿರಿಯ ಮಕ್ಕಳನ್ನು _ ಐಗುಪ್ತಕ್ಕೆ _ ಕಳುಹಿಸಿದನು.
- **8:14** ಯಾಕೋಬನು ವೃದ್ಧನಾಗಿದ್ದರೂ, ಅವನು _ ಐಗುಪ್ತಕ್ಕೆ _ ತನ್ನ ಕುಟುಂಬದವರೊಂದಿಗೆ ತೆರಳಿದನು, ಮತ್ತು ಅವರೆಲ್ಲರು ಅಲ್ಲಿಯೇ ಜೀವನವನ್ನು ಮುಂದೆವರಿಸಿದರು.
- **9:1** ಯೋಸೇಫನು ಸತ್ತನಂತರ, ತನ್ನ ಎಲ್ಲಾ ಬಂಧುಗಳು _ ಐಗುಪ್ತದಲ್ಲೇ _ ನಿವಾಸವಾಗಿದ್ದರು.

ಪದ ಡೇಟಾ:

- Strong's: H4713, H4714, G1240, G1250

ಒಮ್ರಿ

ಸತ್ಯಾಂಶಗಳು:

ಒಮ್ರಿ ಸೈನ್ಯಾಧಿಪತಿಯಾಗಿದ್ದನು ಮತ್ತು ಇಸ್ರಾಯೇಲ್ ಆರನೇಯ ಅರಸನಾಗಿ ಆಳಿದನು.

- ಅರಸನಾದ ಒಮ್ರಿ ತಿರ್ಚಾ ಪಟ್ಟಣದಲ್ಲಿ 12 ವರ್ಷಗಳು ಆಳಿದನು.
- ಇವನ ಮುಂದೆ ಆಳಿದ ಇಸ್ರಾಯೇಲ್ಯರ ಎಲ್ಲಾ ಅರಸುಗಳಂತೆಯೇ ಒಮ್ರಿ ತುಂಬಾ ದುಷ್ಟ ಅರಸನಾಗಿದ್ದನು ಮತ್ತು ಇಸ್ರಾಯೇಲ್ ಜನರನ್ನು ವಿಗ್ರಹಾರಾಧನೆ ಮಾಡುವುದಕ್ಕೆ ನಡೆಸಿದ್ದನು.
- ಒಮ್ರಿ ಅರಸನಾದ ಆಹಾಬನ ತಂದೆಯೂ ಆಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಹಾಬ, ಇಸ್ರಾಯೇಲ್, ಯಾರೊಬ್ಬಾಮ, ತಿರ್ಚಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.22:1-3

ಪದ ಡೇಟಾ:

- Strong's: H6018

ಓಬದ್ಯ

ಸತ್ಯಾಂಶಗಳು:

ಓಬದ್ಯ ಹಳೇ ಒಡಂಬಡಿಕೆಯಲ್ಲಿ ಪ್ರವಾದಿಯಾಗಿದ್ದನು, ಈತನು ಏಸಾವನ ವಂಶಸ್ಥರಾಗಿರುವ ಎದೋಮ್ ಜನರಿಗೆ ವಿರುದ್ಧವಾಗಿ ಪ್ರವಾದಿಸಿದ್ದನು. ಹಳೇ ಒಡಂಬಡಿಕೆಯಲ್ಲಿ ಓಬದ್ಯ ಎನ್ನುವ ಹೆಸರಿನ ಮೇಲೆ ಇತರ ಅನೇಕಮಂದಿ ವ್ಯಕ್ತಿಗಳಿದ್ದಾರೆ.

- ಓಬದ್ಯ ಗ್ರಂಥವು ಹಳೇ ಒಡಂಬಡಿಕೆಯಲ್ಲಿ ಚಿಕ್ಕ ಪುಸ್ತಕವಾಗಿರುತ್ತದೆ ಮತ್ತು ಓಬದ್ಯ ದೇವರಿಂದ ಒಂದು ದರ್ಶನವನ್ನು ಪಡೆದುಕೊಂಡಿರುವ ಪ್ರವಾದನೆಯನ್ನು ಹೇಳುತ್ತದೆ.
- ಓಬದ್ಯನು ಯಾವಾಗ ಜೀವಿಸಿದ್ದನು ಮತ್ತು ಏನು ಪ್ರವಾದಿಸಿದ್ದನು ಎಂದು ನಮಗೆ ಸ್ಪಷ್ಟತೆಯಿಲ್ಲ. ಯೆಹೋರಾಮ, ಆಹಜ್ಯ, ಯೋವಾಷ ಮತ್ತು ಅತಲ್ಯ ಎನ್ನುವವರು ಯೆಹೂದದಲ್ಲಿ ಆಳುತ್ತಿರುವ ಕಾಲಗಳಲ್ಲಿ ಈ ಪ್ರವಾದನೆಯು ಇದ್ದಿರಬಹುದು. ಪ್ರವಾದಿಗಳಾದ ದಾನಿಯೇಲ, ಯೆಹೆಜ್ಕೇಲ ಮತ್ತು ಯೆರೆಮೀಯ ಎನ್ನುವವರು ಕೂಡ ಈ ಕಾಲದಲ್ಲಿ ಪ್ರವಾದಿಸಿದ್ದರು.
- ಓಬದ್ಯನು ಬಹುಶಃ ಬಾಬಿಲೋನಿಯ ಸೆರೆಯ ಸಂದರ್ಭದಲ್ಲಿ ಮತ್ತು ಚಿದ್ಕೀಯ ಆಳುತ್ತಿರುವ ಸಮಯದಲ್ಲಿ ಅಥವಾ ಈ ಸಂಘಟನೆಗಳು ನಡೆದಾದನಂತರ ಕಾಲದಲ್ಲಿ ಜೀವಿಸಿದ ವ್ಯಕ್ತಿಯಾಗಿರಬಹುದು.
- ಓಬದ್ಯ ಎನ್ನುವ ಹೆಸರಿನ ಮೇಲೆ ಇರುವ ಬೇರೆ ವ್ಯಕ್ತಿಗಳಲ್ಲಿ ಸೌಲನ ವಂಶಸ್ಥನು; ದಾವೀದನ ಮನುಷ್ಯರಲ್ಲಿ ಒಬ್ಬನಾಗಿರುವ ಗಾದ್ಯನು, ಅರಸನಾದ ಆಹಾಬನಿಗೆ ಅರಮನೆಯ ನಿರ್ವಾಹಕನು, ಅರಸನಾದ ಯೆಹೋಷಫಾಟನ ಅಧಿಕಾರಿ, ಅರಸನಾದ ಯೋಷೀಯ ಕಾಲದಲ್ಲಿ ದೇವಾಲಯವನ್ನು ರಿಪೇರಿ ಮಾಡುವದರಲ್ಲಿ ಸಹಾಯ ಮಾಡಿದವನು, ಮತ್ತು ನೆಹೆಮೀಯನ ಕಾಲದಲ್ಲಿ ಲೇವಿ ಎನ್ನುವ ದ್ವಾರಪಾಲಕನು ಇದ್ದಿರುತ್ತಾರೆ.
- ಈ ಮನುಷ್ಯರಲ್ಲಿ ಯಾರಾದರೊಬ್ಬರು ಓಬದ್ಯ ಗ್ರಂಥದ ರಚನಾಕಾರನಾಗಿರಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಆಹಾಬ, ಬಾಬೆಲೋನಿಯ, ದಾವೀದ, ಎದೋಮ್, ಏಸಾವ, ಯೆಹೆಜ್ಕೇಲ, ದಾನಿಯೇಲ, ಗಾದ್, ಯೆಹೋಷಫಾಟ, ಯೋಷೀಯ, ಲೇವಿ, ಸೌಲ, ಚಿದ್ಕೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:19-21
- 1 ಪೂರ್ವ.08:38-40
- ಎಜ್ರಾ.08:8-11
- ಓಬದ್ಯ.01:1-2

ಪದ ಡೇಟಾ:

- Strong's: H5662

ಕಪೆರ್ನೌಮ

ಸತ್ಯಾಂಶಗಳು:

ಕಪೆರ್ನೌಮ ಗಲಿಲಾಯ ಸಮುದ್ರದ ವಾಯುವ್ಯ ತೀರದ ಮೇಲಿರುವ ಮೀನುಗಳನ್ನು ಹಿಡಿಯುವ ಗ್ರಾಮ.

- ಗಲಿಲಾಯದಲ್ಲಿ ಯೇಸು ಬೋಧನೆ ಮಾಡುತ್ತಿರುವಾಗ ಅವರು ಕಪೆರ್ನೌಮದಲ್ಲಿ ಅವರು ನಿವಾಸವಾಗುತ್ತಿದ್ದರು.
- ಅನೇಕಮಂದಿ ಆತನ ಶಿಷ್ಯರು ಕಪೆರ್ನೌಮನಿಂದ ಬಂದವರೇ.
- ಯೇಸು ಕೂಡ ಅನೇಕವಾದ ಅದ್ಭುತಗಳನ್ನು ಈ ಪಟ್ಟಣದಲ್ಲಿ ಮಾಡಿದರು, ಇದರಲ್ಲಿ ಸತ್ತಂತ ಒಬ್ಬ ಹುಡುಗಿ ತಿರುಗಿ ಬಂದಿರುವ ಅದ್ಭುತಕಾರ್ಯವು ಒಳಗೊಂಡಿರುತ್ತದೆ.
- ಯೇಸು ಬಹಿರಂಗವಾಗಿ ಗದರಿಸಿದ ಮೂರು ಪಟ್ಟಣಗಳಲ್ಲಿ ಕಪೆರ್ನೌಮ ಒಂದಾಗಿರುತ್ತದೆ. ಯಾಕಂದರೆ ಈ ಪಟ್ಟಣದ ಜನರು ಈತನನ್ನು ತಿರಸ್ಕರಿಸಿದ್ದಾರೆ ಮತ್ತು ಆತನು ಹೇಳಿದ ಸಂದೇಶವನ್ನು ಯಾರೂ ನಂಬಲಿಲ್ಲ. ಅವರ ಅಪನಂಬಿಕೆಯನ್ನು ನೋಡಿ ದೇವರು ಅವರನ್ನು ಶಿಕ್ಷಿಸುತ್ತಾನೆಂದು ಆತನು ಅವರನ್ನು ಎಚ್ಚರಿಸಿದ್ದಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಗಲಿಲಾಯ, ಗಲಿಲಾಯ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.02:12
- ಲೂಕ.04.31-32
- ಲೂಕ.07:1
- ಮಾರ್ಕ.01:21-22
- ಮಾರ್ಕ.02:1-2
- ಮತ್ತಾಯ.04:12-13
- ಮತ್ತಾಯ.17:24-25

ಪದ ಡೇಟಾ:

- Strong's: G2584

ಕರ್ಮೆಲ್, ಕರ್ಮೆಲ್ ಪರ್ವತ

ಸತ್ಯಾಂಶಗಳು:

“ಕರ್ಮೆಲ್ ಪರ್ವತ” ಎನ್ನುವ ಈ ಪದವು ಶಾರೋನ ಉತ್ತರ ಬಯಲು ಪಕ್ಕದಲ್ಲಿರುವ ಮೆಡಿಟರೆನಿಯನ್ ಸಮುದ್ರ ತೀರದ ಬಳಿ ಇರುವ ಪರ್ವತ ಶ್ರೇಣಿಯನ್ನು ಸೂಚಿಸುತ್ತದೆ. ಇದರ ಅತ್ಯುನ್ನತ ಶಿಖರವು 546 ಮೀಟರುಗಳ ಎತ್ತರವಾಗಿರುತ್ತದೆ.

- “ಕರ್ಮೆಲ್” ಎಂದು ಒಂದು ಪಟ್ಟಣವನ್ನೂ ಕರೆಯುತ್ತಾರ, ಇದು ಉಪ್ಪಿನ ಸಮುದ್ರದ ದಕ್ಷಿಣದ ಕಡೆಗೆ ಯೂದಾದಲ್ಲಿ ಕಂಡುಬರುತ್ತದೆ
- ಸ್ವಂತ ಸೊತ್ತು ಹೊಂದಿ ಶ್ರೀಮಂತನಾದ ನಾಬಾಲ್ ಮತ್ತು ತನ್ನ ಹೆಂಡತಿಯಾದ ಅಬೀಗೈಲ್ ಕರ್ಮೆಲ್ ಪಟ್ಟಣದ ಹತ್ತಿರದಲ್ಲೇ ನಿವಾಸ ಮಾಡುತ್ತಿದ್ದರು. ಇಲ್ಲಿಯೇ ದಾವೀದನು ಮತ್ತು ತನ್ನ ಮನುಷ್ಯರು ನಾಬಾಲನ ಕುರಿ ಸುಲಿಗೆಕೋರರಿಗೆ ಸಹಾಯ ಮಾಡಿದರು.
- ಯೆಹೋವ ಮಾತ್ರವೇ ನಿಜವಾದ ದೇವರು ಎಂದು ನಿರೂಪಣೆ ಮಾಡಿದ ಕ್ರಮದಲ್ಲಿ ಬಾಳ್ ಪ್ರವಾದಿಗಳೊಂದಿಗೆ ಎಲೀಯ ಈ ಕರ್ಮೆಲ್ ಪರ್ವತದ ಮೇಲೆಯೇ ಸವಾಲನ್ನು ಬೀಸಿದನು.
- ಇದು ಕೇವಲ ಒಂದೇ ಒಂದು ಪರ್ವತವಲ್ಲ ಎಂಬುವದನ್ನು ಸ್ಪಷ್ಟಪಡಿಸಲು, “ಕರ್ಮೆಲ್ ಪರ್ವತ” ಎನ್ನುವದನ್ನು “ಕರ್ಮೆಲ್ ಪರ್ವತ ಶ್ರೇಣಿಯಲ್ಲಿರುವ ಪರ್ವತ” ಅಥವಾ “ಕರ್ಮೆಲ್ ಪರ್ವತ ಶ್ರೇಣಿ” ಎಂದೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಳ್, ಎಲೀಯ, ಯೂದಾ, ಉಪ್ಪು ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.18:18-19
- 1 ಸಮು.15:12-13
- ಯೆರೆ.46:18-19
- ಮೀಕಾ.07:14-15

ಪದ ಡೇಟಾ:

- Strong's: H3760, H3761, H3762

ಕಲ್ದೀಯ, ಕಲ್ದೀಯನು, ಕಲ್ದೀಯರು

ಸತ್ಯಾಂಶಗಳು:

ಕಲ್ದೀಯ ಎನ್ನುವುದು ಬಾಬೆಲೋನಿಯ ಅಥವಾ ಮೆಸಪೂತೋಮ್ಯದ ದಕ್ಷಿಣ ಭಾಗದಲ್ಲಿರುವ ಸೀಮೆಯಾಗಿರುತ್ತದೆ. ಈ ಸೀಮೆಯಲ್ಲಿ ನಿವಾಸವಾಗಿರುವ ಜನರನ್ನು ಕಲ್ದೀಯರು ಎಂದು ಕರೆಯುತ್ತಾರೆ.

- ಕಲ್ಧೀಯದಲ್ಲಿರುವ ಊರ್ ಎನ್ನುವ ಪಟ್ಟಣದಿಂದಲೇ ಅಬ್ರಹಾಮನು ಬಂದಿದ್ದನು. ಇದನ್ನು ಅನೇಕಬಾರಿ "ಕಲ್ದೀಯರ ಊರ್" ಎಂದು ಸೂಚಿಸಲ್ಪಟ್ಟಿರುತ್ತದೆ.
- ಬಾಬೆಲೋನಿಯ ಮೇಲೆ ಅರಸನಾದ ನೆಬುಕ್ನದೆಚ್ಚರನು ಅನೇಕ ಕಲ್ದೀಯರಲ್ಲಿ ಒಬ್ಬನಾಗಿದ್ದನು.
- ಅನೇಕ ವರ್ಷಗಳಾದನಂತರ, ಸುಮಾರು ಕ್ರಿ.ಪೂ.600 ವರ್ಷದಲ್ಲಿ "ಕಲ್ದೀಯ" ಎನ್ನುವ ಪದವು "ಬಾಬೆಲೋನಿಯ" ಎಂದು ಕರೆಯಲ್ಪಟ್ಟಿದೆ.
- ದಾನಿಯೇಲನ ಗ್ರಂಥದಲ್ಲಿ "ಕಲ್ಧೀಯನು" ಎನ್ನುವ ಪದವು ನಕ್ಷತ್ರಗಳನ್ನು ಅಧ್ಯಯನ ಮಾಡಿದ ಉನ್ನತ ಪಂಡಿತರ ವಿಶೇಷವಾದ ವರ್ಗದವರನ್ನು ಸೂಚಿಸುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಹಾಮ, ಬಾಬೆಲೋನ, ಶಿನಾರ್, ಊರ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:4-5
- ಯೆಹೆ.01:1-3
- ಆದಿ.11:27-28
- ಆದಿ.11:31-32
- ಆದಿ.15:6-8
- ಯೆಶಯಾ.13:19-20

ಪದ ಡೇಟಾ:

- Strong's: H3679, H3778, H3779, G5466

ಕಾದೇಶ್

ಸತ್ಯಾಂಶಗಳು:

ಕಾದೇಶ್ ಎನ್ನುವುದು ಕಾನಾನ್ ಪಟ್ಟಣವಾಗಿತ್ತು, ಇದು ಇಸ್ರಾಯೇಲ್ಯರು ಕಾನಾನ್ ಭೂಮಿಯೊಳಗೆ ಪ್ರವೇಶಿಸಿದಾಗ ಅವರಿಂದ ವಶಪಡಿಸಿಕೊಳ್ಳಲಾಗಿತ್ತು.

- ಈ ಪಟ್ಟಣವು ಇಸ್ರಾಯೇಲ್ ಉತ್ತರ ಭಾಗದಲ್ಲಿ ಕಂಡುಬರುತ್ತದೆ, ಆ ಭೂಮಿಯಲ್ಲಿನ ಭಾಗವನ್ನೇ ನಫ್ತಾಲಿ ಕುಲಕ್ಕೆ ಕೊಡಲ್ಪಟ್ಟಿರುತ್ತದೆ.
- ಕಾದೇಶ್ ಎನ್ನುವುದು ಪಟ್ಟಣಗಳಲ್ಲಿ ಒಂದು ಪಟ್ಟಣವಾಗಿರುತ್ತದೆ, ಇದು ಲೇವಿ ಯಾಜಕರು ನಿವಾಸವಾಗಿರುವ ಸ್ಥಳವಾಗಿದ್ದಿತ್ತು, ಯಾಕಂದರೆ ಅದುವರೆಗೆ ಅವರಿಗೆ ಯಾವ ಸ್ವಂತ ಭೂಮಿಯು ಇದ್ದಿರಲಿಲ್ಲ.
- ಇದನ್ನು "ಆಶ್ರಯ ಪಟ್ಟಣ" ಎಂಬುದಾಗಿಯೂ ಪ್ರತ್ಯೇಕಿಸಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಹೆಬ್ರೋನ್, ಲೇವಿ, ನಫ್ತಾಲಿ, ಯಾಜಕ, ಆಶ್ರಯ, ಶೆಕೆಮ್, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.06:71-73
- ಯೆಹೋ.19:35-37
- ನ್ಯಾಯಾ.04:10

ಪದ ಡೇಟಾ:

ಕಾದೇಶ್, ಕಾದೇಶ್-ಬರ್ನೇಯ, ಕಾದೇಶಿನ ಮೆರೀಬಾ

ಸತ್ಯಾಂಶಗಳು:

ಕಾದೇಶ್, ಕಾದೇಶ್-ಬರ್ನೇಯ ಮತ್ತು ಕಾದೇಶಿನ ಮೆರೀಬಾ ಎನ್ನುವ ಹೆಸರುಗಳೆಲ್ಲವು ಇಸ್ರಾಯೇಲ್ ಚರಿತ್ರೆಯಲ್ಲಿ ತುಂಬಾ ಪ್ರಾಮುಖ್ಯವಾದ ಪಟ್ಟಣವನ್ನು ಸೂಚಿಸುತ್ತಿವೆ, ಇದು ಇಸ್ರಾಯೇಲಿನ ದಕ್ಷಿಣ ಭಾಗದಲ್ಲಿ ಮತ್ತು ಎದೋಮ್ ಸೀಮೆಯ ಹತ್ತಿರದಲ್ಲಿ ಕಂಡುಬರುತ್ತದೆ.

- ಕಾದೇಶ್ ಪಟ್ಟಣವು ಒಂದು ನೀರೊಸರು ಆಗಿತ್ತು, ಇದು ನೀರು ಸಿಗುವ ಸ್ಥಳ ಮತ್ತು ಮರುಭೂಮಿಯ ಮಧ್ಯೆದಲ್ಲಿ ಫಲವತ್ತಾದ ಮಣ್ಣನ್ನು ಹೊಂದಿರುವ ಸ್ಥಳವಾಗಿತ್ತು, ಇದಕ್ಕೆ ಜಿನ್ ಎಂದು ಹೆಸರು.
- ಕಾದೇಶ್-ಬರ್ನೇಯದಿಂದಲೇ ಕಾನಾನ್ ಭೂಮಿಯೊಳಗೆ ಹನ್ನೆರಡು ಗೂಢಚಾರಿಗಳನ್ನು ಮೋಶೆ ಕಳುಹಿಸಿದ್ದನು.
- ಇಸ್ರಾಯೇಲ್ಯರು ಅರಣ್ಯದಲ್ಲಿ ಸಂಚಾರ ಮಾಡುತ್ತಿರುವಾಗ ಅವರು ಕಾದೇಶಿನಲ್ಲಿಯೂ ಇಳಿದುಕೊಂಡಿದ್ದರು.
- ಕಾದೇಶ್-ಬರ್ನೇಯ ಎನ್ನುವುದು ಮಿರ್ಯಾಮಳು ಮರಣಿಸಿದ ಸ್ಥಳವಾಗಿದ್ದಿತ್ತು.
- ಕಾದೇಶಿನ ಮೆರೀಬಾ ಎನ್ನುವ ಸ್ಥಳದಲ್ಲೇ ಮೋಶೆ ದೇವರಿಗೆ ಅವಿಧೇಯತೆ ತೋರಿಸಿದ್ದನು ಮತ್ತು ದೇವರು ಕಲ್ಲಿನೊಂದಿಗೆ ಮಾತನಾಡು ಎಂದು ಹೇಳಿದಾಗ, ಮೋಶೆ ಆ ಕಲ್ಲಿನೊಂದಿಗೆ ಮಾತನಾಡುವುದಕ್ಕೆ ಬದಲಾಗಿ, ಅದನ್ನು ಹೊಡೆಯುತ್ತಾನೆ. ಈ ಘಟನೆ ಈ ಸ್ಥಳದಲ್ಲೇ ನಡೆದಿದೆ.
- "ಕಾದೇಶ್" ಎನ್ನುವ ಹೆಸರು ಇಬ್ರಿಯ ಪದವಾಗಿರುತ್ತದೆ, ಇದಕ್ಕೆ "ಪರಿಶುದ್ಧನು" ಅಥವಾ "ಪ್ರತ್ಯೇಕಿಸಲ್ಪಟ್ಟವನು" ಎಂದರ್ಥ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಮರುಭೂಮಿ, ಎದೋಮ್, ಪರಿಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.48:27-29
- ಆದಿ.14:7-9
- ಆದಿ.16:13-14
- ಆದಿ.20:1-3
- ಯೆಹೋ.10:40-41
- ಅರಣ್ಯ.20:1

ಪದ ಡೇಟಾ:

- Strong's: H4809, H6946, H6947

ಕಾನಾ

ಅರ್ಥವಿವರಣೆ:

ಕಾನಾ ಎನ್ನುವುದು ಒಂದು ಗ್ರಾಮ ಅಥವಾ ಗಲಿಲಾಯ ಸೀಮೆಯಲ್ಲಿನ ಒಂದು ಪಟ್ಟಣವಾಗಿತ್ತು. ಇದು ಉತ್ತರ ನಜರೇತ ಎಂಬ ಊರಿನಿಂದ ಒಂಭತ್ತು ಮೈಲಿಗಳ ದೂರದಲ್ಲಿರುತ್ತದೆ.

- ಹನ್ನೆರಡು ಮಂದಿಯಲ್ಲಿ ಒಬ್ಬನಾಗಿದ್ದ, ನತಾನಯೇಲನ ಸ್ವಂತ ಊರು ಕಾನಾ ಆಗಿತ್ತು, .
- ಯೇಸು ಕಾನಾ ಊರಿನಲ್ಲಿ ನಡೆಯುವ ವಿವಾಹ ಔತಣ ಕೂಟಕ್ಕೆ ಬಂದಿದ್ದನು ಮತ್ತು ಆ ಸ್ಥಳದಲ್ಲಿಯೇ ಆತನು ಮೊಟ್ಟ ಮೊದಲನೇ ಅದ್ಭುತವನ್ನು ಅಂದರೆ ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದನು.
- ಅದು ನಡೆದ ಸ್ವಲ್ಪ ಕಾಲವಾದನಂತರ, ಯೇಸು ಕಾನಾ ಊರಿಗೆ ತಿರುಗಿ ಬಂದನು ಮತ್ತು ಅಲ್ಲಿ ತನ್ನ ಮಗನನ್ನು ಗುಣಪಡಿಸು ಎಂದು ಮನವಿ ಮಾಡಿಕೊಳ್ಳುವುದಕ್ಕೆ ಕಪೆರ್ನೌಮಿನಿಂದ ಬಂದಿದ್ದ ಒಬ್ಬ ಅರಮನೆಯ ಪ್ರಧಾನನನ್ನು ಭೇಟಿಯಾದನು.

(ಇವುಗಳನ್ನು ಸಹ ನೋಡಿರಿ : ಕಪೆರ್ನೌಮ್, ಗಲಿಲಾಯ, ಹನ್ನೆರಡು)

ಸತ್ಯವೇದದ ಅನುಬಂಧ ವಾಕ್ಯಗಳು:

- ಯೋಹಾನ 2:1-2
- ಯೋಹಾನ 4:46-47

ಪದದ ಡೇಟಾ:

- Strong's: G25800

ಕಾನಾನ್, ಕಾನಾನ್ಯ, ಕಾನಾನ್ಯರು

ಸತ್ಯಾಂಶಗಳು:

ಕಾನಾನ್ ಎಂಬುವಾತನು ನೋಹನ ಮೂವರ ಮಕ್ಕಳಲ್ಲಿ ಒಬ್ಬನಾಗಿರುವ ಹಾಮ್ ಮಗನಾಗಿರುತ್ತಾನೆ. ಕಾನಾನ್ಯರು ಕಾನಾನ್ ಸಂತಾನದವರಾಗಿರುತ್ತಾರೆ.

- "ಕಾನಾನ್" ಅಥವಾ "ಕಾನಾನ್ ದೇಶ" ಎನ್ನುವ ಪದಗಳು ಮೆಡಿಟರೇನಿಯನ್ ಸಮುದ್ರಕ್ಕೆ ಮತ್ತು ಯೊರ್ದನ್ ನದಿಗೆ ಮಧ್ಯದಲ್ಲಿರುವ ಭೂಭಾಗವನ್ನು ಕೂಡ ಸೂಚಿಸುತ್ತವೆ. ಇದು ಸಿರಿಯಾ ಉತ್ತರ ಗಡಿವರೆಗೆ ಮತ್ತು ಐಗುಪ್ತ ದಕ್ಷಿಣ ಗಡಿವರೆಗೆ ವ್ಯಾಪಿಸಿರುತ್ತದೆ.
- ಈ ಭೂಮಿಯಲ್ಲಿ ಕಾನಾನ್ಯರು ವಾಸಿಸುತ್ತಾರೆ, ಅದೇರೀತಿಯಾಗಿ ಅನೇಕ ವಿವಿಧ ಜನಾಂಗಗಳ ಗುಂಪಿನವರು ವಾಸಿಸುತ್ತಾರೆ.
- ದೇವರು ಈ ಕಾನಾನ್ ದೇಶವನ್ನು ಅಬ್ರಹಾಮನಿಗೆ ಮತ್ತು ತನ್ನ ಸಂತಾನದವರಾದ ಇಸ್ರಾಯೇಲ್ಯರಿಗೆ ಕೊಡುವನೆಂದು ವಾಗ್ದಾನ ಮಾಡಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಹಾಮ್, ವಾಗ್ದಾನ ಭೂಮಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.13:19-20
- ವಿಮೋ.03:7-8
- ಆದಿ.09:18-19
- ಆದಿ.10:19-20
- ಆದಿ.13:5-7
- ಆದಿ.47:1-2

ಸತ್ಯವೇದದಿಂದ ಉದಾಹರಣೆಗಳು:

- **04:05** ಆತನು (ಅಬ್ರಹಾಮನು) ತನ್ನ ಹೆಂಡತಿಯಾದ ಸಾರಯಳನ್ನು ಮತ್ತು ತನ್ನ ಎಲ್ಲಾ ದಾಸ ದಾಸಿಯರನ್ನು ಕರೆದುಕೊಂಡು, ತನಗೆ ಸಂಬಂಧಪಟ್ಟಿರುವ ಪ್ರತಿಯೊಂದನ್ನು ತೆಗೆದುಕೊಂಡು ದೇವರು ತೋರಿಸಿದ ವಾಗ್ದಾನ ಭೂಮಿಯಾದ _ ಕಾನಾನ್_ ದೇಶಕ್ಕೆ ಹೊರಟನು.
- **04:06** ಅಬ್ರಹಾಮನು _ ಕಾನಾನ್ _ ದೇಶಕ್ಕೆ ಬಂದಾಗ, "ನಿನ್ನ ಸುತ್ತಮುತ್ತಲಿರುವ ಪ್ರತಿಯೊಂದನ್ನು ನೋಡು. ನೀನು ಕಾಣುತ್ತಿರುವ ಅಥವಾ ನೋಡುತ್ತಿರುವ ಈ ಭೂಮಿಯೆಲ್ಲವನ್ನು ಒಂದು ಸ್ವಾಸ್ಥ್ಯವಾಗಿ ನಿನಗೆ ಮತ್ತು ನಿನ್ನ ಸಂತಾನದವೆರೆಗೆ ಕೊಡುತ್ತೇನೆ" ಎಂದು ದೇವರು ಹೇಳಿದರು.
- **04:09** "ನಾನು ನಿನ್ನ ಸಂತಾನದವರಿಗೆ _ ಕಾನಾನ್ _ ದೇಶವನ್ನು ಕೊಡುತ್ತೇನೆ".
- **05:03** "ನಾನು ನಿನಗೂ ಮತ್ತು ನಿನ್ನ ಸಂತಾನದವರಿಗೆ ಆಸ್ತಿಯನ್ನಾಗಿ _ ಕಾನಾನ್ _ ದೇಶವನ್ನು ಅವರ ಆಸ್ತಿಯನ್ನಾಗಿ ಕೊಡುತ್ತೇನೆ ಮತ್ತು ನಾನು ಎಂದೆಂದಿಗೂ ಅವರ ದೇವರಾಗಿರುತ್ತೇನೆ.
- **07:08** ಕಾನಾನ್.ನಲ್ಲಿ ಇರುವ ತನ್ನ ಮನೆಯಿಂದ ಸುಮಾರು ಇಪ್ಪತ್ತು ವರ್ಷಗಳಾದನಂತರ, ಯಾಕೋಬನು ತನ್ನ ಕುಟುಂಬದೊಂದಿಗೆ, ತನ್ನ ದಾಸರೊಂದಿಗೆ ಮತ್ತು ತನ್ನ ಎಲ್ಲಾ ಪಶು ಪ್ರಾಣಿಗಳೊಂದಿಗೆ ತಿರುಗಿ ಬಂದನು.

ಪದ ಡೇಟಾ:

- Strong's: H3667, H3669, G2581, G5478

ಕಾಯಫ

ಸತ್ಯಾಂಶಗಳು:

ಕಾಯಫನು ಯೇಸು ಮತ್ತು ದಿಕ್ಷಾಸ್ನಾನ ಕೊಡುವ ಯೋಹಾನರ ಕಾಲದಲ್ಲಿ ಇಸ್ರಾಯೇಲ್ ಪ್ರಧಾನ ಯಾಜಕನಾಗಿದ್ದನು.

- ಯೇಸು ಕ್ರಿಸ್ತನನ್ನು ಹಿಡಿದು, ತೀರ್ಪಿಗಾಗಿ ನಿಲ್ಲಿಸಿದ ಸಮಯದಲ್ಲಿ ಕಾಯಫ ಪ್ರಮುಖ ಪಾತ್ರವನ್ನು ವಹಿಸಿದನು.
- ಪೇತ್ರ ಮತ್ತು ಯೋಹಾನರು ಒಬ್ಬ ಕುಂಟನನ್ನು ಗುಣಪಡಿಸಿದನಂತರ ಅವರನ್ನು ಬಂಧಿಸಿದಾಗ ಪ್ರಧಾನ ಯಾಜಕರಾದ ಅನ್ನ ಮತ್ತು ಕಾಯಫರವರು ಅಲ್ಲೇ ಇದ್ದರು.
- ಇಡೀ ರಾಷ್ಟ್ರವೇ ನಾಶವಾಗುವುದಕ್ಕಿಂತ ಒಬ್ಬ ಮನುಷ್ಯನು ಜನರಿಗೋಸ್ಕರ ಸಾಯುವುದು ನಿಮಗೆ ಹಿತವೆಂದು ನೀವು ಆಲೋಚಿಸುವುದೂ ಇಲ್ಲ ಎಂಬುದಾಗಿ ಕಾಯಫನೇ ಹೇಳಿದ್ದನು. ಯೇಸು ತನ್ನ ಜನರನ್ನು ರಕ್ಷಿಸಿಕೊಳ್ಳುವುದಕ್ಕೆ ಯಾವರೀತಿ ಮರಣ ಹೊಂದುತ್ತಾನೆನ್ನುವುದರ ಕುರಿತಾಗಿ ಒಂದು ಪ್ರವಾದನೆಯಾಗಿ ಈ ಮಾತುಗಳನ್ನು ಹೇಳುವುದಕ್ಕೆ ದೇವರೇ ಅವನಿಗೆ ಕಾರಣರಾಗಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅನ್ನ, ಪ್ರಧಾನ ಯಾಜಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:5-7
- ಯೋಹಾನ.18:12-14
- ಲೂಕ.03:1-2
- ಮತ್ತಾಯ.26:3-5
- ಮತ್ತಾಯ.26:57-58

ಪದ ಡೇಟಾ:

- Strong's: G2533

ಕಾಯಿನ

ಸತ್ಯಾಂಶಗಳು:

ಕಾಯಿನ ಮತ್ತು ತನ್ನ ತಮ್ಮನಾದ ಹೇಬೆಲರು ಸತ್ಯವೇದದಲ್ಲಿ ಆದಾಮ ಮತ್ತು ಹವ್ವಳಿಗೆ ಹುಟ್ಟಿದ ಮೊಟ್ಟಮೊದಲ ಗಂಡು ಮಕ್ಕಳೆಂದು ಸತ್ಯವೇದದಲ್ಲಿ ದಾಖಲಿಸಲಾಗಿದೆ.

- ಹೇಬೆಲನು ಕುರಿಗಳನ್ನು ಸಾಕುವ ವ್ಯಕ್ತಿಯಾದರೆ, ಕಾಯಿನನು ಬೆಳೆಗಳನ್ನು ಹಾಕುವ ರೈತನಾಗಿದ್ದನು.
- ಕಾಯಿನನು ಅಸೂಯೆಯಿಂದ ತನ್ನ ತಮ್ಮನಾದ ಹೇಬೆಲನನ್ನು ಸಾಯಿಸಿದನು, ಯಾಕಂದರೆ ದೇವರು ಹೇಬೆಲನ ಕಾಣಿಕೆಯನ್ನು ಸ್ವೀಕರಿಸಿದ್ದನು, ಆದರೆ ಕಾಯಿನನ ಕಾಣಿಕೆಯನ್ನು ಸ್ವೀಕರಿಸಲಿಲ್ಲ.
- ದೇವರು ಕಾಯಿನನಿಗೆ ಶಿಕ್ಷೆಯನ್ನು ಕೊಟ್ಟು ಏದೆನ್ ತೋಟದಿಂದ ಹೊರ ಕಳುಹಿಸಿದನು ಮತ್ತು ಭೂಮಿ ಇನ್ನು ಮುಂದೆ ನಿನಗಾಗಿ ಬೆಳೆಗಳನ್ನು ಹುಟ್ಟಿಸುವುದಿಲ್ಲವೆಂದು ಹೇಳಿದನು.
- ಕಾಯಿನನನ್ನು ಇತರ ಜನರು ಕೊಲ್ಲದ ಹಾಗೆ ದೇವರು ಅವನನ್ನು ರಕ್ಷಿಸುವನೆಂದು ಒಂದು ಗುರುತನ್ನು ದೇವರು ಕಾಯಿನನ ಹಣೆಯ ಮೇಲೆ ಹಾಕಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆದಾಮ, ಕಾಣಿಕೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.03:11-12
- ಆದಿ.04:1-2
- ಆದಿ.04:8-9
- ಆದಿ.04:13-15
- ಇಬ್ರಿ.11:4
- ಯೂದ.01:9-11

ಪದ ಡೇಟಾ:

- Strong's: H7014, G2535

ಕಾಲೇಬ್

ಸತ್ಯಾಂಶಗಳು:

ಕಾಲೇಬ್ ಎನ್ನುವವನು ಕಾನಾನ್ ಭೂಮಿಯನ್ನು ನೋಡಿ ಬರುವುದಕ್ಕೆ ಮೋಶೆ ಕಳುಹಿಸಿದ ಹನ್ನೆರಡುಮಂದಿ ಇಸ್ರಾಯೇಲ್ಯರ ಗೂಢಚಾರರಲ್ಲಿ ಒಬ್ಬನಾಗಿದ್ದನು.

- ಕಾನಾನ್ಯರನ್ನು ಸೋಲಿಸುವುದಕ್ಕೆ ನಮಗೆ ಸಹಾಯ ಮಾಡಲು ದೇವರನ್ನು ನಂಬಬೇಕೆಂದು ಈತನು ಮತ್ತು ಯೆಹೋಶುವನು ಜನರಿಗೆ ಹೇಳಿದರು.
- ಯೆಹೋಶುವ ಮತ್ತು ಕಾಲೇಬರು ಮಾತ್ರವೇ ತಮ್ಮ ತಲೆಮಾರಿನವರಲ್ಲಿ ವಾಗ್ದಾನ ಭೂಮಿಯಾದ ಕಾನಾನ್.ನೊಳಗೆ ಪ್ರವೇಶಿಸುವುದಕ್ಕೆ ಅನುಮತಿ ಹೊಂದಿದ್ದರು.
- ಹೆಬ್ರೋನ್ ಭೂಮಿಯನ್ನು ನನಗೆ ಮತ್ತು ನನ್ನ ಸಂತಾನದವರಿಗೆ ಕೊಡಬೇಕೆಂದು ಕಾಲೇಬನು ಕೇಳಿಕೊಂಡನು. ಆ ಭೂಮಿಯ ಮೇಲೆ ನಿವಾಸವಾಗಿರುವ ಜನರನ್ನು ಸೋಲಿಸುವುದರಲ್ಲಿ ದೇವರು ತನಗೆ ಸಹಾಯ ಮಾಡುತ್ತಾನೆಂದು ಆತನು ತಿಳಿದಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಹೆಬ್ರೋನ್, ಯೆಹೋಶುವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.04:13-16
- ಯೆಹೋ.14:6-7
- ನ್ಯಾಯಾ.01:11-13
- ಅರಣ್ಯ.32:10-12

ಸತ್ಯವೇದದಿಂದ ಉದಾಹರಣೆಗಳು:

- **14:04** ಇಸ್ರಾಯೇಲ್ಯರು ಕಾನಾನ್ ಎನ್ನುವ ದೇಶವನ್ನು ಸೇರಿದಾಗ, ಮೋಶೆ ಇಸ್ರಾಯೇಲ್ ಪ್ರತಿಯೊಂದು ಕುಲದಿಂದ ಒಬ್ಬೊಬ್ಬರಾಗಿ ಹನ್ನೆರಡು ಜನರನ್ನು ಆರಿಸಿಕೊಂಡನು. ಈ ದೇಶವು ಹೇಗಿದೆಯೆಂದು ನೋಡಿ ಬರುವುದಕ್ಕೆ ಅವರನ್ನು ಗೂಢಚಾರಿಗಳಾಗಿ ಸೂಚನೆಗಳನ್ನು ಹೇಳಿ ಕಳುಹಿಸಿದನು.
- **14:06** ತಕ್ಷಣವೇ _ ಕಾಲೇಬ್ _ ಮತ್ತು ಯೆಹೋಶುವ ಮತ್ತು ಇತರ ಇಬ್ಬರು ಗೂಢಚಾರಿಗಳು, “ಕಾನಾನ್ ದೇಶದ ಜನರು ಬಹು ಎತ್ತರವಾಗಿದ್ದಾರೆ, ಬಲವುಳ್ಳವರಾಗಿದ್ದಾರೆನ್ನುವುದು ನಿಜ, ಆದರೆ ನಾವು ಅವರನ್ನು ತಪ್ಪದೇ ಸೋಲಿಸುತ್ತೇವೆ” ಎಂದು ಹೇಳಿದರು. ದೇವರು ನಮ್ಮ ಪಕ್ಷವಾಗಿ ಯುದ್ಧ ಮಾಡುತ್ತಾನೆ!”
- **14:08** “ಅಲ್ಲಿ ಯೆಹೋಶುವ ಮತ್ತು _ ಕಾಲೇಬ್ _ ಇಬ್ಬರನ್ನು ಬಿಟ್ಟು ಉಳಿದ ಇಪ್ಪತ್ತು ವರ್ಷದ ವಯಸ್ಸಿನವರು ಅಥವಾ ಅದಕ್ಕೆ ಮೇಲ್ಪಟ್ಟವರು ಸತ್ತು ಹೋಗುತ್ತಾರೆ, ಅವರಿಬ್ಬರನ್ನು ಬಿಟ್ಟು ಇನ್ನು ಯಾರೂ ವಾಗ್ದಾನ ದೇಶದೊಳಗೆ ಪ್ರವೇಶಿಸಲಿಲ್ಲ.

ಆ ಭೂಮಿಯಲ್ಲಿ ಅವರು ಸಮಾಧಾನದಿಂದ ಜೀವಿಸಬಹುದು.

ಪದ ಡೇಟಾ:

- Strong's: H3612, H3614

ಕಿದ್ರೋನ್ ಕಣಿವೆ

ಸತ್ಯಾಂಶಗಳು:

ಕಿದ್ರೋನ್ ಕಣಿವೆಯು ಯೆರೂಸಲೇಮ್ ನಗರದ ಹೊರಭಾಗದಲ್ಲಿ, ಅದರ ಪೂರ್ವ ಗೋಡೆ ಮತ್ತು ಒಲೀವ ಪರ್ವತದ ನಡುವೆ ಇರುವ ಆಳವಾದ ಕಣಿವೆಯಾಗಿದೆ.

- ಕಣಿವೆಯು 1,000 ಮೀಟರ್ ಆಳ ಮತ್ತು ಸುಮಾರು 32 ಕಿಲೋಮೀಟರ್ ಉದ್ದವಾಗಿದೆ.
- ಅರಸನಾದ ದಾವೀದನು ತನ್ನ ಮಗನಾದ ಅಬ್ಷಾಲೋಮನಿಂದ ಓಡಿ ಹೋದಾಗ, ಅವನು ಕಿದ್ರೋನ್ ಕಣಿವೆಯ ಮೂಲಕ ಒಲೀವ ಮರಗಳ ಪರ್ವತಕ್ಕೆ ಹೋದನು.
- ಯೆಹೂದದ ಅರಸನಾದ ಯೋಷೀಯನು ಮತ್ತು ಅರಸನಾದ ಆಸನು ಸುಳ್ಳು ದೇವರುಗಳ ಎತ್ತರದ ಸ್ಥಳಗಳನ್ನು ಮತ್ತು ಯಜ್ಞವೇದಿಗಳನ್ನು ಒಡೆದು ಸುಟ್ಟುಹಾಕಲು ಆದೇಶಿಸಿದರು; ಬೂದಿಯನ್ನು ಕಿದ್ರೋನ್ ಕಣಿವೆಯಲ್ಲಿ ಎಸೆಯಲಾಯಿತು.
- ಅರಸನಾದ ಹಿಜ್ಕೀಯ ಆಳ್ವಿಕೆಯಲ್ಲಿ ಯಾಜಕರು ದೇವಾಲಯದಿಂದ ತೆಗೆಯುವ ಅಪವಿತ್ರವಾದವುಗಳನ್ನು ಕಿದ್ರೋನ್ ಕಣಿವೆಯೊಳಗೆ ಹಾಕುತ್ತಿದ್ದರು.
- ದುಷ್ಟ ರಾಣಿಯಾಗಿರುವ ಅತಲ್ಯಳು ಈ ಕಣಿವೆಯಲ್ಲಿಯೇ ಕೊಂದು ಹಾಕಲ್ಪಟ್ಟಳು, ಯಾಕಂದರೆ ಆಕೆ ದುಷ್ಟ ಕಾರ್ಯಗಳನ್ನು ಮಾಡಿದ್ದಳು .

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಇವುಗಳನ್ನು ಸಹ ನೋಡಿರಿ : ಅಬ್ಷಾಲೋಮನು, ಆಸನು, ಅತಲ್ಯಳು, ದಾವೀದನು, ಸುಳ್ಳು ದೇವರು, ಹಿಜ್ಕೀಯನು, ಉನ್ನತ ಸ್ಥಳಗಳು, ಯೋಷೀಯನು, ಯೆಹೂದ, ಒಲೀವ ಪರ್ವತ)

ಸತ್ಯವೇದದ ಅನುಬಂಧ ವಾಕ್ಯಗಳು:

- ಯೋಹಾನ.18:1

ಪದದ ಡೇಟಾ:

- Strong's: H5674, H6939, G27480, G54930

ಕಿಲಿಕ್ಯ

ಸತ್ಯಾಂಶಗಳು:

ಕಿಲಿಕ್ಯ ಎನ್ನುವುದು ರೋಮಾ ಸೀಮೆಯಲ್ಲಿರುವ ಒಂದು ಚಿಕ್ಕ ಪ್ರಾಂತ್ಯ. ಇದು ಈಗಿನ ಟರ್ಕಿ ದೇಶದ ಆಗ್ನೇಯ ಭಾಗದಲ್ಲಿ ಕಂಡುಬರುತ್ತದೆ. ಇದರ ಗಡಿಗಳು ಏಜಿಯನ್ ಸಮುದ್ರದವರೆಗೂ ಇರುತ್ತವೆ.

- ಅಪೊಸ್ತಲನಾದ ಪೌಲನು ಕಿಲಿಕ್ಯದಲ್ಲಿರುವ ತಾರ್ಸ ನಗರದಿಂದ ಬಂದ ಪೌರನಾಗಿದ್ದನು.
- ಯೇಸು ಪೌಲನನ್ನು ದಮಸ್ಕ ಮಾರ್ಗದಲ್ಲಿ ಸಂದರ್ಶಿಸಿದ ನಂತರ ಅವರು ಕಿಲಿಕ್ಯದಲ್ಲಿ ಅನೇಕ ವರ್ಷಗಳಿದ್ದರು.
- ಕಿಲಿಕ್ಯದಿಂದ ಬಂದಿರುವ ಕೆಲವರು ಯೆಹೂದ್ಯರು ಸ್ತೆಫೆನನನ್ನು ಎದುರಿಸಿ, ಆತನನ್ನು ಕಲ್ಲುಗಳಿಂದ ಹೊಡೆದು ಸಾಯಿಸಬೇಕೆಂದು ಜನರನ್ನು ಪ್ರೇರೇಪಿಸಿದವರಲ್ಲಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಪೌಲ, ಸ್ತೆಫೆನ, ತಾರ್ಸ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.06:8-9
- ಅಪೊ.ಕೃತ್ಯ.15:39-41
- ಅಪೊ.ಕೃತ್ಯ.27:3-6
- ಗಲಾತ್ಯ.01:21-24

ಪದ ಡೇಟಾ:

- Strong's: G2791

ಕುಪ್ರ

ಸತ್ಯಾಂಶಗಳು:

ಪ್ರಸ್ತುತ ಕಾಲದ ಟರ್ಕಿ ಇರುವ ಸ್ಥಳಕ್ಕೆ ದಕ್ಷಿಣ ಭಾಗದಲ್ಲಿ 64 ಕಿಲೋಮೀಟರ್ ದೂರದಲ್ಲಿ, ಕುರ್ಪ, ಮೆಡಿಟರೇನಿಯನ್ ಸಮುದ್ರದಲ್ಲಿರುವ ದ್ವೀಪವಾಗಿದೆ.

- ಬಾರ್ನಬ ಕುಪ್ರದ್ವೀಪದವನಾಗಿದ್ದನು ಆದಕಾರಣ ಅವನ ಸಹೋದರನಾದ ಮಾರ್ಕನೆನಿಸಿಕೊಳ್ಳುವ ಯೋಹನನು ಅಲ್ಲಿಂದ ಬಂದವನಾಗಿರಬಹುದು.
- ಪೌಲನು ಮತ್ತು ಬಾರ್ನಬ ತಮ್ಮ ಮೊದಲನೆಯ ಸುವಾರ್ತೆ ದಂಡೆಯಾತ್ರೆಯ ಪ್ರಾರಂಭದಲ್ಲಿ ಕುಪ್ರ ದ್ವೀಪದಲ್ಲಿ ಸುವಾರ್ತೆಯನ್ನು ಸಾರಿದರು. ಆ ಯಾತ್ರೆಯಲ್ಲಿ ಅವರಿಗೆ ಸಹಾಯಕನಾಗಿರಲು ಮಾರ್ಕನೆನಿಸಿಕೊಳ್ಳುವ ಯೋಹನನು ಬಂದನು.
- ನಂತರ, ಬಾರ್ನಬ ಮತ್ತು ಮಾರ್ಕನು ಕುಪ್ರವನ್ನು ಮತ್ತೆ ಬೇಟಿ ನೀಡಿದರು.
- ಹಳೆ ಒಡಂಬಡಿಕೆಯಲ್ಲಿ, ಶಂಕುಮರಗಳು ಹೆಚ್ಚಾಗಿರುವ ಸ್ಥಳವಾಗಿ ಕುಪ್ರ ದ್ವೀಪದ ಕುರಿತು ಬರೆಯಲ್ಪಟ್ಟಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡುವುದು)

(ಈ ಪದಗಳನ್ನು ಸಹ ನೋಡಿರಿ : ಬಾರ್ನಬ, ಮಾರ್ಕನೆನಿಸಿಕೊಳ್ಳುವ ಯೋಹನನು, ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:36-37
- ಅಪೊ.ಕೃತ್ಯ.13:4-5
- ಅಪೊ.ಕೃತ್ಯ.15:39-41
- ಅಪೊ.ಕೃತ್ಯ.27:3-6
- ಯೆಹೆ.27:6-7
- ಯೆಶಯ.23:10-12

ಪದ ಡೇಟಾ:

- Strong's: G2953, G2954

ಕುರೇನೆ

ಸತ್ಯಾಂಶಗಳು:

ಕುರೇನೆ ಗ್ರೀಕ್ ಪಟ್ಟಣವಾಗಿತ್ತು. ಅದು ಮೆಡಿಟರೇನಿಯನ್ ಸಮುದ್ರದ ಹತ್ತಿರ ಆಫ್ರಿಕಾ ದೇಶದ ಉತ್ತರ ಕರಾವಳಿಯಲ್ಲಿತ್ತು ಮತ್ತು ಕ್ರೇತ್ಯ ದ್ವಿಪಕ್ಕೆ ದಕ್ಷಿಣ ದಿಕ್ಕಿನಲ್ಲಿತ್ತು.

- ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರು ಹಾಗೂ ಯಹೂದಿಯರು ಕುರೇನೆ ಪಟ್ಟಣದಲ್ಲಿ ವಾಸ ಮಾಡಿದರು.
- ಸತ್ಯವೇದದಲ್ಲಿ ಕುರೇನೆ ಪಟ್ಟಣ ಯೇಸುವಿನ ಶಿಲುಬೆಯನ್ನು ಹೊರುವುದಕ್ಕೆ ಸಹಾಯ ಮಾಡಿದ ಸೀಮೋನನ ಸ್ವಸ್ಥಳವಾಗಿದೆ ಎಂದು ಪ್ರಸಿದ್ಧವಾಗಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡುವುದು)

(ಈ ಪದಗಳನ್ನು ಸಹ ನೋಡಿರಿ : ಕ್ರೇತ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.11:19-21
- ಮತ್ತಾಯ.27:32-34

ಪದ ಡೇಟಾ:

- Strong's: G2956, G2957

ಕೂಷ್

ಸತ್ಯಾಂಶಗಳು:

ಕೂಷ್ ನೋಹನ ಮಗನಾದ ಹಾಮನ ಹಿರಿಯ ಮಗನಾಗಿದ್ದನು. ಅವನು ನಿಮ್ರೋದನ ಮೂಲಪುರುಷನಾಗಿದ್ದನು. ಐಗುಪ್ತ (ಮಿಚ್ರಯಿಮ್) ಮತ್ತು ಕಾನಾನ್ ಅವನ ಸಹೋದರರಾಗಿದ್ದರು.

- ಹಳೆ ಒಡಂಬಡಿಕೆಯಲ್ಲಿ, "ಕೂಷ್" ಎನ್ನುವುದು ಇಸ್ರಾಯೇಲ್ ದೇಶಕ್ಕೆ ದಕ್ಷಿಣ ದಿಕ್ಕಿನಲ್ಲಿದ್ದ ದೊಡ್ಡ ಪ್ರದೇಶದ ಹೆಸರಾಗಿತ್ತು. ಹಾಮನ ಮಗನಾದ ಕೂಷ್ ಹೆಸರಿನಲ್ಲಿ ಈ ಪ್ರದೇಶಕ್ಕೆ ಆ ಹೆಸರುಬಂದಿರಬಹುದು.
- ಅಧುನಿಕ ಕಾಲದಲ್ಲಿರುವ ಸೂಡಾನ್, ಈಜಿಪ್ಟ್, ಇಥಿಯೋಪಿಯ ಮತ್ತು ಸೌದಿ ಅರೇಬಿಯಾ ಎಂಬ ದೇಶಗಳಿರುವ ಪ್ರಾಂತ್ಯದಲ್ಲಿ ಪ್ರಾಚೀನ ಕಾಲದಲ್ಲಿದ್ದ ಕೂಷ್ ದೇಶವು ವ್ಯಾಪಕವಾಗಿತ್ತು.
- ಕೀರ್ತನೆಗಳಲ್ಲಿ ಕೂಷ್ ಎಂಬ ಮತ್ತೊಬ್ಬ ವ್ಯಕ್ತಿಯ ಕುರಿತು ಹೇಳಲಾಗಿದೆ. ಅವನು ಬೆನ್ಯಾಮೀನ ಕುಲದವನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡುವುದು)

(ಈ ಪದಗಳನ್ನು ಸಹ ನೋಡಿರಿ : ಅರೇಬಿಯಾ, ಕಾನಾನ್, ಐಗುಪ್ತ, ಇಥಿಯೋಪಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:8-10
- ಯೆಹೆ.29:8-10
- ಆದಿ.02:13-14
- ಆದಿ.10:6-7
- ಯೆರೆ.13:22-24

ಪದ ಡೇಟಾ:

- Strong's: H3568, H3569, H3570

ಕೆರೇತ್ಯರು

ಸತ್ಯಾಂಶಗಳು:

ಕೆರೇತ್ಯರು ಒಂದು ಜನಾಂಗದವರು ಅಥವಾ ಒಂದು ವರ್ಗದವರು, ಇವರು ಫಿಲಿಷ್ಟಿಯನರಲ್ಲಿ ಭಾಗವಾಗಿದ್ದ ಜನರಾಗಿರಬಹುದು. “ಕೆರೇತ್ಯರು” ಎಂಬುದಾಗಿ ಕೆಲವು ಅನುವಾದಗಳು ಬರೆದಿದ್ದಾರೆ.

- “ಕೆರೇತ್ಯರು ಮತ್ತು ಪೆಲೇತ್ಯರು” ಎನ್ನುವವರು ಅರಸನಾದ ದಾವೀದನಿಗೆ ವಿಶೇಷವಾಗಿ ಅಂಗರಕ್ಷಕರಾಗಿರಲು ಸಮರ್ಪಿಸಿಕೊಂಡವರು, ಇವರು ದಾವೀದನ ಸೈನ್ಯದಿಂದ ಒಂದು ವಿಶೇಷವಾದ ಸೈನಿಕ ಗುಂಪಾಗಿದ್ದರು.
- ದಾವೀದನ ಆಡಳಿತಾತ್ಮಕ ಸೈನಿಕರ ಸದಸ್ಯನು, ಯೆಹೋಯಾದಾವನ ಮಗನೂ ಆಗಿರುವ ಬೆನಾಯ ಕೆರೇತ್ಯರು ಮತ್ತು ಪೆಲೇತ್ಯರಿಗೆ ನಾಯಕನಾಗಿದ್ದನು.
- ದಾವೀದನು ಅಬ್ಷಾಲೋಮನ ಪ್ರತಿಭಟನೆ ಕಾರಣದಿಂದ ಯೆರೂಸಲೇಮಿಗೆ ಓಡಿ ಹೋದಾಗ ಕೆರೇತ್ಯರು ದಾವೀದನ ಬಳಿಯೇ ಇದ್ದುಕೊಂಡಿದ್ದರು.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಬ್ಷಾಲೋಮ, ಬೆನಾಯ, ದಾವೀದ, ಫಿಲಿಸ್ಟಿಯನರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಜೆಫನ್ಯಾ.02:4-5

ಪದ ಡೇಟಾ:

- Strong's: H3774

ಕೇದಾರ್

ಸತ್ಯಾಂಶಗಳು:

ಕೇದಾರ್ ಎನ್ನುವವನು ಇಷ್ಮಾಯೇಲನ ಎರಡನೇ ಮಗನಾಗಿದ್ದನು. ಇದು ಕೂಡಾ ತುಂಬಾ ಪ್ರಾಮುಖ್ಯವಾದ ಪಟ್ಟಣ, ಇದಕ್ಕೆ ಈ ವ್ಯಕ್ತಿಯ ಹೆಸರನ್ನೇ ಇಟ್ಟಿರಬಹುದು.

- ಕೇದಾರ್ ಪಟ್ಟಣವು ಪಾಲಸ್ತೀನ ದಕ್ಷಿಣ ಗಡಿಯ ಹತ್ತಿರ ಅರಬಿಯ ಉತ್ತರ ಭಾಗದಲ್ಲಿ ಕಂಡುಬರುತ್ತದೆ. ಸತ್ಯವೇದದಲ್ಲಿ ಇದರ ಮಹತ್ವವನ್ನು ಮತ್ತು ಸೌಂದರ್ಯದ ಕುರಿತಾಗಿ ವಿವರಿಸಲಾಗಿದೆ.
- ಕೇದಾರ್ ಸಂತಾನದವರು ದೊಡ್ಡ ಜನ ಸಮೂಹವಾಗಿ ವಿಸ್ತರಣೆ ಹೊಂದಿದರು, ಇವರನ್ನೂ "ಕೇದಾರ್" ಎಂದು ಕರೆಯುತ್ತಾರೆ.
- "ಕೇದಾರ್ ಕಪ್ಪು ಗುಡಾರಗಳು" ಎನ್ನುವ ಮಾತು ಕೇದಾರ್.ನಲ್ಲಿ ಜೀವಿಸಿದ ಜನರ ಕಪ್ಪು ಮೇಕೆ ಕೂದಲು ಗುಡಾರಅಗಳನ್ನು ಸೂಚಿಸುತ್ತದೆ.
- ಈ ಜನರೆಲ್ಲರು ಕುರಿಗಳನ್ನು ಮತ್ತು ಮೇಕೆಗಳನ್ನು ಸಾಕುತ್ತಾರೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವುದಕ್ಕಾಗಿ ಇವರು ಒಂಟೆಗಳನ್ನು ಉಪಯೋಗಿಸುತ್ತಿದ್ದರು.
- ಸತ್ಯವೇದದಲ್ಲಿ "ಕೇದಾರ್ ಮಹಿಮೆ" ಎನ್ನುವ ಮಾತು ಆ ಪಟ್ಟಣದ ಮಹತ್ವವು ಮತ್ತು ಅದರ ಜನರ ಘನತೆಯನ್ನು ಸೂಚಿಸುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅರಬಿಯ, ಮೇಕೆ, ಇಷ್ಮಾಯೇಲ್, ತ್ಯಾಗ)

ಸತ್ಯವೇದದ ಅನುಬಂಧ ವಾಕ್ಯಗಳು :

- ಪರಮ.01:5-6

ಪದ ಡೇಟಾ:

- Strong's: H6938

ಕೈಸರ

ಸತ್ಯಾಂಶಗಳು:

“ಕೈಸರ” ಎನ್ನುವ ಪದವು ರೋಮಾ ಸಾಮ್ರಾಜ್ಯವನ್ನು ಆಳುವ ಆಡಳಿತಗಾರರಿಗೆ ಉಪಯೋಗಿಸುವ ಹೆಸರು ಅಥವಾ ಬಿರುದು ಆಗಿರುತ್ತದೆ.
ಸತ್ಯವೇದದಲ್ಲಿ ಈ ಹೆಸರು ಮೂವರು ರೋಮಾ ಪಾಲಕರಿಗೆ ಸೂಚಿಸುತ್ತದೆ.

- ಮೊಟ್ಟಮೊದಲು ರೋಮಾ ಪಾಲಕರಾಗಿರುವ ಕೈಸರ ಯಾರೆಂದರೆ “ಕೈಸರ ಅಗಸ್ತ”, ಈ ಚಕ್ರವರ್ತಿ ಯೇಸು ಹುಟ್ಟಿದ ದಿನಗಳಲ್ಲಿ ಆಳುತ್ತಿದ್ದನು.
- ಸುಮಾರು ಮೂವತ್ತು ವರ್ಷಗಳಾದನಂತರ, ದೀಕ್ಷಾಸ್ನಾನ ಮಾಡಿಸುವ ಯೋಹಾನನು ಪ್ರಸಂಗ ಮಾಡುತ್ತಿರುವ ದಿನಗಳಲ್ಲಿ, ರೋಮಾ ಸಾಮ್ರಾಜ್ಯಕ್ಕೆ ಕೈಸರ ತಿಬೇರಿ ಆಳ್ವಿಕೆ ಮಾಡುತ್ತಿದ್ದನು.
- ಕೈಸರನದು ಕೈಸರನಿಗೆ ಕೊಡಿರಿ; ದೇವರದನ್ನು ದೇವರಿಗೆ ಕೊಡಿರಿ ಎಂದು ಯೇಸು ಜನರಿಗೆ ಹೇಳಿದಾಗ ಕೈಸರ ತಿಬೇರಿ ರೋಮಾ ಸಾಮ್ರಾಜ್ಯವನ್ನು ಅಳುತ್ತಿದ್ದರು.
- ಪೌಲನು ಕೈಸರನ ಮುಂದೆ ನಿಂತುಕೊಂಡ ಸಂದರ್ಭವೂ ಕೂಡ “ಕೈಸರ” ಎಂದು ಬಿರುದನ್ನು ಹೊಂದಿರುವ ರೋಮಾ ಚಕ್ರವರ್ತಿಯಾದ ನೀರೋನನ್ನು ಸೂಚಿಸುತ್ತದೆ.
- “ಕೈಸರ” ಎನ್ನುವ ಪದವನ್ನು ಬಿರುದಾಗಿ ಉಪಯೋಗಿಸುವಾಗ, ಇದನ್ನು “ಚಕ್ರವರ್ತಿ” ಅಥವಾ “ರೋಮಾ ಪಾಲಕರು” ಎಂದೂ ಅನುವಾದ ಮಾಡಬಹುದು.
- ಕೈಸರ ಅಗಸ್ತ ಅಥವಾ ಕೈಸರ ತಿಬೇರಿ ಎನ್ನುವ ಹೆಸರುಗಳಲ್ಲಿ, “ಕೈಸರ” ಎನ್ನುವ ಪದವನ್ನು ಜಾತೀಯ ಭಾಷೆಯಲ್ಲಿ ಉಚ್ಚರಿಸುವ ವಿಧಾನದಲ್ಲೇ ಉಚ್ಚರಣೆ ಮಾಡಬಹುದು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅರಸ, ಪೌಲ, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.25:6-8
- ಲೂಕ.02:1-3
- ಲೂಕ.20:23-24
- ಲೂಕ.23:1-2
- ಮಾರ್ಕ.12:13-15
- ಮತ್ತಾಯ.22:15-17
- ಫಿಲಿಪ್ಪ.04:21-23

ಪದ ಡೇಟಾ:

- Strong's: G2541

ಕೈಸರೈ, ಫಿಲಿಪ್ಪನ ಕೈಸರೈ

ಸತ್ಯಾಂಶಗಳು:

ಕೈಸರೈ ಮೆಡಿಟರನಿಯನ್ ಸಮುದ್ರದ ಕರಾವಳಿ ಪ್ರಾಂತ್ಯದಲ್ಲಿರುವ ಒಂದು ಪ್ರಾಮುಖ್ಯವಾದ ನಗರ, ಇದು ಕರ್ಮೆಲ್ ಪರ್ವತದ ದಕ್ಷಿಣ ದಿಕ್ಕಿಗೆ 39 ಕಿ.ಮೀ. ದೂರದಲ್ಲಿರುತ್ತದೆ. ಫಿಲಿಪ್ಪನ ಕೈಸರೈ ಎನ್ನುವ ಈ ನಗರವು ಹೆರ್ಮೋನ್ ಪರ್ವತದ ಬಳಿ, ಇಸ್ರಾಯೇಲ್ ಈಶಾನ್ಯ ಭಾಗದಲ್ಲಿ ಕಂಡುಬರುತ್ತದೆ.

- ಈ ಪಟ್ಟಣಗಳು ರೋಮಾ ಸಾಮ್ರಾಜ್ಯವನ್ನು ಆಳಿದ ಕೈಸರಗಳಿಗೆ ಹೆಸರಾದ ಪಟ್ಟಣಗಳಾಗಿರುತ್ತವೆ.
- ಕರಾವಳಿ ಕೈಸರೈ ಪಟ್ಟಣವು ಯೇಸು ಹುಟ್ಟಿದ ಕಾಲದಲ್ಲಿ ಯೂದಯ ರೋಮಾ ಸೀಮೆಗೆ ರಾಜಧಾನಿ ನಗರವಾಗಿತ್ತು.
- ಅಪೊಸ್ತಲನಾದ ಪೇತ್ರನು ಮೊಟ್ಟಮೊದಲು ಕೈಸರೈನಲ್ಲಿ ಅನ್ಯರಿಗೆ ಸುವಾರ್ತೆಯನ್ನು ಪ್ರಕಟಿಸಿದನು.
- ಪೌಲನು ಕೈಸರೈಯಿಂದ ತಾರ್ಸಗೆ ಪ್ರಯಾಣಿಸಿದನು ಮತ್ತು ತನ್ನ ಎರಡನೇ ಮಿಷನರೀ ಪ್ರಯಾಣದಲ್ಲಿ ಈ ಪಟ್ಟಣದ ಮೂಲಕ ಹಾದು ಹೋಗಿದ್ದನು.
- ಸಿರಿಯಾದಲ್ಲಿರುವ ಫಿಲಿಪ್ಪನ ಕೈಸರೈ ಸುತ್ತಮುತ್ತಲಿರುವ ಸೀಮೆಯಲ್ಲಿ ಯೇಸು ಮತ್ತು ತನ್ನ ಶಿಷ್ಯರು ಪ್ರಯಾಣ ಮಾಡಿದ್ದರು. ಎರಡು ಪಟ್ಟಣಗಳಿಗೆ ಹೆರೋದ ಫಿಲಿಪ್ಪ ಎಂಬ ಹೆಸರಿಡಲಾಗಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕೈಸರ, ಅನ್ಯ, ಸಮುದ್ರ, ಕರ್ಮೆಲ್, ಹೆರ್ಮೋನ್ ಪರ್ವತ, ರೋಮಾ, ತಾರ್ಸ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.09:28-30
- ಅಪೊ.ಕೃತ್ಯ.10:1-2
- ಅಪೊ.ಕೃತ್ಯ.25:1-3
- ಅಪೊ.ಕೃತ್ಯ.25:13-16
- ಮಾರ್ಕ.08:27-28
- ಮತ್ತಾಯ.16:13-16

ಪದ ಡೇಟಾ:

- Strong's: G2542, G5376

ಕೊರಿಂಥ, ಕೊರಿಂಥದವರು

ಸತ್ಯಾಂಶಗಳು:

ಕೊರಿಂಥ ಎನ್ನುವುದು ಗ್ರೀಸ್ ದೇಶದಲ್ಲಿ ಒಂದು ಪಟ್ಟಣವಾಗಿರುತ್ತದೆ, ಇದು ಪಶ್ಚಿಮ ಅಥೆನ್ಸ್‌ಗೆ 50 ಮೈಲಿಗಳ ದೂರದಲ್ಲಿರುತ್ತದೆ. ಕೊರಿಂಥದವರು ಕೊರಿಂಥ ಪಟ್ಟಣದಲ್ಲಿ ನಿವಾಸ ಮಾಡುವ ಜನರಾಗಿರುತ್ತಾರೆ.

- ಆದಿ ಕ್ರೈಸ್ತ ಸಭೆಗಳಿರುವ ಪಟ್ಟಣಗಳಲ್ಲಿ ಕೊರಿಂಥ ಕೂಡ ಒಂದು ಪಟ್ಟಣವಾಗಿರುತ್ತದೆ.
- ಹೊಸ ಒಡಂಬಡಿಕೆ ಪುಸ್ತಕಗಳಾದ 1 ಕೊರಿಂಥ ಮತ್ತು 2 ಕೊರಿಂಥ ಪೌಲ ಮೂಲಕ ಕೊರಿಂಥದಲ್ಲಿ ನಿವಾಸ ಮಾಡುತ್ತಿರುವ ಕ್ರೈಸ್ತರಿಗೆ ಬರೆಯಲ್ಪಟ್ಟಿವೆ.
- ಆತನ ಮೊದಲನೇ ಸುವಾರ್ತೆ ದಂಡಯಾತ್ರೆಯಲ್ಲಿ ಪೌಲನು ಕೊರಿಂಥ ನಗರದಲ್ಲಿ ಸುಮಾರು 18 ತಿಂಗಳು ಕಾಲ ಜೀವಿಸಿದ್ದನು.
- ಪೌಲನು ಕೊರಿಂಥದಲ್ಲಿ ವಿಶ್ವಾಸಿಗಳಾದ ಅಕ್ವಿಲ ಮತ್ತು ಪ್ರಿಸ್ಕಿಲ್ಲರವರನ್ನು ಭೇಟಿಯಾಗಿದ್ದನು.
- ಇತರ ಆದಿ ಸಭೆಯ ನಾಯಕರಿಗೆ ಕೊರಿಂಥದೊಂದಿಗೆ ಸಂಬಂಧಗಳಿದ್ದವು, ಅವರಲ್ಲಿ ತಿಮೊಥೆ, ತೀತ, ಅಪೊಲ್ಲೋಸ ಮತ್ತು ಸೀಲ ಎನ್ನುವವರು ಇದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಲ್ಲೋಸ, ತಿಮೊಥೆ, ತೀತ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.01:1-3
- 2 ಕೊರಿಂಥ.01:23-24
- 2 ತಿಮೊಥೆ.04:19-22
- ಅಪೊ.ಕೃತ್ಯ.18:1-3

ಪದ ಡೇಟಾ:

- Strong's: G2881, G2882

ಕೊರ್ನೇಲ್ಯ

ಸತ್ಯಾಂಶಗಳು:

ಕೊರ್ನೇಲ್ಯನು ಅನ್ಯನಾಗಿರುತ್ತಾನೆ, ಅಥವಾ ಯೆಹೂದ್ಯನಾಗಿರುವುದಿಲ್ಲ, ಈತನು ರೋಮಾ ಸೈನ್ಯದಲ್ಲಿ ಸೈನ್ಯಾಧಿಕಾರಿಯಾಗಿದ್ದನು.

- ಈತನು ಪ್ರತಿದಿನ ದೇವರಿಗೆ ಪ್ರಾರ್ಥಿಸುವವನಾಗಿದ್ದನು ಮತ್ತು ಬಡವರಿಗೆ ಕೊಡುವುದರಲ್ಲಿ ಉದಾರ ಸ್ವಭಾವಿಯಾಗಿದ್ದನು.
- ಅಪೊಸ್ತಲನಾದ ಪೇತ್ರನು ಸುವಾರ್ತೆಯನ್ನು ವಿವರಿಸಿ ಹೇಳಿದಾಗ ಕೊರ್ನೇಲ್ಯನು ಮತ್ತು ತನ್ನ ಕುಟುಂಬದವರು ಕೇಳಿಸಿಕೊಂಡು ಯೇಸುವಿನಲ್ಲಿ ನಂಬಿಕೆಯನ್ನಿಟ್ಟರು.
- ಕೊರ್ನೇಲ್ಯನ ಮನೆಯಲ್ಲಿರುವ ಜನರು ಅಥವಾ ಯೆಹೂದ್ಯರಲ್ಲದ ಜನರು ಮೊಟ್ಟಮೊದಲಾಗಿ ವಿಶ್ವಾಸಿಗಳಾದರು.
- ಯೇಸು ಎಲ್ಲಾ ಜನರನ್ನು ಅಂದರೆ ಅನ್ಯರೆಲ್ಲರನ್ನು ಸೇರಿಸಿ ಪ್ರತಿಯೊಬ್ಬರನ್ನು ರಕ್ಷಿಸುವುದಕ್ಕೆ ಬಂದಿದ್ದಾನೆಂದು ಯೇಸುವಿನ ಹಿಂಬಾಲಕರು ಇದರ ಮೂಲಕ ತೋರಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ನಂಬು, ಅನ್ಯರು, ಸುವಾರ್ತೆ, ಗ್ರೀಕ್, ಶತಾಧಿಪತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.10:1-2
- ಅಪೊ.ಕೃತ್ಯ.10:7-8
- ಅಪೊ.ಕೃತ್ಯ.10:17-18
- ಅಪೊ.ಕೃತ್ಯ.10:22-23
- ಅಪೊ.ಕೃತ್ಯ.10:24
- ಅಪೊ.ಕೃತ್ಯ.10:25-26
- ಅಪೊ.ಕೃತ್ಯ.10:30-33

ಪದ ಡೇಟಾ:

- Strong's: G2883

ಕೊಲೊಸ್ಸೆ, ಕೊಲೊಸ್ಸೆಯದವರು

ಸತ್ಯಾಂಶಗಳು:

ಕೊಲೊಸ್ಸೆ ಎನ್ನುವುದು ಹೊಸ ಒಡಂಬಡಿಕೆಯ ಕಾಲದಲ್ಲಿ ರೋಮಾ ಸೀಮೆಯಾದ ಫ್ರುಗ್ಯದಲ್ಲಿ ಒಂದು ಪಟ್ಟಣವಾಗಿರುತ್ತದೆ. ಈಗ ನೈಋತ್ಯ ಟರ್ಕಿಯಲ್ಲಿರುವ ಭೂಪ್ರದೇಶ. ಕೊಲೊಸ್ಸೆಯರು ಎಂದರೆ ಕೊಲೊಸ್ಸೆಯಲ್ಲಿ ನಿವಾಸ ಮಾಡುವ ಜನರು.

- ಮೆಡಿಟರೇನಿಯನ್ ಸಮುದ್ರದಿಂದ ಸುಮಾರು 100 ಮೈಲಿಗಳ ದೂರದಲ್ಲಿರುತ್ತದೆ, ಕೊಲೊಸ್ಸೆಯು ಎಫೆಸ ಪಟ್ಟಣದ ಮತ್ತು ಯೂಫ್ರೇಟೀಸ್ ನದಿಯ ಮಧ್ಯ ಮಾರ್ಗದಲ್ಲಿ ತುಂಬಾ ಪ್ರಾಮುಖ್ಯವಾದ ವಾಣಿಜ್ಯ ಕೇಂದ್ರವಾಗಿದ್ದಿತ್ತು.
- ಪೌಲನು ರೋಮಾ ಸೆರೆಮನೆಯಲ್ಲಿರುವಾಗ ಆತನು ಕೊಲೊಸ್ಸೆ ವಿಶ್ವಾಸಿಗಳ ಮಧ್ಯೆದಲ್ಲಿ ತಪ್ಪು ಬೋಧನೆಗಳನ್ನು ಖಂಡಿಸಿ ಅವರನ್ನು ಸರಿಪಡಿಸಲು “ಕೊಲೊಸ್ಸೆಯರಿಗೆ” ಒಂದು ಪತ್ರಿಕೆಯನ್ನು ಬರೆದನು.
- ಆತನು ಈ ಪತ್ರವನ್ನು ಬರೆದಾಗ ಪೌಲನು ಕೊಲೊಸ್ಸೆಯಲ್ಲಿರುವ ಸಭೆಯನ್ನು ಸಂದರ್ಶನ ಮಾಡಿರಲಿಲ್ಲ, ಆದರೆ ತನ್ನ ಜೊತೆ ಕೆಲಸಗಾರನಾದ ಎಪಫ್ರನಿಂದ ವಿಶ್ವಾಸಿಗಳ ಕುರಿತಾಗಿ ಸುದ್ಧಿಯನ್ನು ಕೇಳಿಸಿಕೊಂಡಿದ್ದನು.
- ಎಪಫ್ರನು ಬಹುಶಃ ಕೊಲೊಸ್ಸೆಯಲ್ಲಿ ಸಭೆಯನ್ನು ಆರಂಭಿಸಿದ ಸೇವಕನಾಗಿರಬಹುದು.
- ಪೌಲನು ಫಿಲೆಮೋನನಿಗೆ ಬರೆದ ಪುಸ್ತಕವನ್ನು ಅಥವಾ ಪತ್ರಿಕೆಯನ್ನು ಬರೆದಾಗ ಕೊಲೊಸ್ಸೆಯಲ್ಲಿರುವ ಸೆರೆಯಾಳು ಎಂದು ಸೂಚಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವ ರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಎಫೆಸ, ಪೌಲ)

ಸತ್ಯವೇದದ ವಾಕ್ಯಗಳು:

- ಕೊಲೊಸ್ಸ 1:3

ಪದ ಡೇಟಾ:

- Strong's: G28570

ಕೋರಹ, ಕೋರಹಿಯರು

ಪದದ ಅರ್ಥವಿವರಣೆ:

ಕೋರಹ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಮೂವರು ವ್ಯಕ್ತಿಗಳಿದ್ದಾರೆ.

ಕೋರಹನು ಲೇವಿಯವಂಶಸ್ಥನಾಗಿದ್ದನು ಮತ್ತು ಆದ್ದರಿಂದ ಯಾಜಕನಾಗಿ ಗುಡಾರದಲ್ಲಿ ಸೇವೆಯನ್ನು ಮಾಡಿದನು. ಇವನು ಮೋಶೆ ಮತ್ತು ಆರೋನರ ವಿಷಯದಲ್ಲಿ ಅಸೂಯೆಪಟ್ಟಿದ್ದನು, ಇದರಿಂದ ಅವನು ಅವರಿಗೆ ವಿರುದ್ಧವಾಗಿ ಮನುಷ್ಯರ ಗುಂಪನ್ನು ನಡೆಸಿದ್ದನು.
ಏಸಾವನ ಮಕ್ಕಳಲ್ಲಿ ಒಬ್ಬರ ಹೆಸರು ಕೋರಹ ಎಂಬುದಾಗಿರುತ್ತದೆ. ಇವನು ತನ್ನ ಸಮುದಾಯಕ್ಕೆ ನಾಯಕನಾದನು.
ಮೂರನೇ ವ್ಯಕ್ತಿಯಾದ ಕೋರಹನು ಯೂದಾ ಸಂತಾನದವನಾಗಿ ಹೇಳಲ್ಪಟ್ಟಿದ್ದನು.

(ಈ ಪದಗಳನ್ನು ಸಹ ನೋಡಿರಿ : ಆರೋನ, ಅಧಿಕಾರ, ಕಾಲೇಬ, ವಂಶಸ್ಥನು, ಏಸಾವ, ಯೆಹೂದ, ಯಾಜಕ)

ಸತ್ಯವೇದದ ವಾಕ್ಯಗಳು:

- 1 ಪೂರ್ವ.01:34-37
- ಅರಣ್ಯ 16:1-3
- ಅರಣ್ಯ 16:25-27
- ಕೀರ್ತನೆ 42:1-2

ಪದ ಡೇಟಾ:

- Strong's: H7141

ಕೋರೆಷನ್

ಸತ್ಯಾಂಶಗಳು:

ಸುಮಾರು ಕ್ರಿ.ಪು. 550ರಲ್ಲಿ ಪರ್ಷಿಯಾ ಅರಸನಾದ ಕೋರೆಷನ್ ಪರ್ಷಿಯಾ ಸಾಮ್ರಾಜ್ಯವನ್ನು ಯುದ್ದದಲ್ಲಿ ವಿಜಯವನ್ನು ಸಾಧಿಸಿ ಸ್ಥಾಪಿಸಿದರು. ಇತಿಹಾಸದಲ್ಲಿ ಮಹಾ ಕೋರೆಷನ್ ಎಂದು ಅವನು ಕರೆಯಲ್ಪಟ್ಟಿದ್ದಾನೆ.

- ಬಾಬುಲೋನ್ ಪಟ್ಟಣವನ್ನು ಅರಸನಾದ ಕೋರೆಷನ್ ಸ್ವಾಧೀನಪಡಿಸಿಕೊಂಡನು, ಆದಕಾರಣ ಅಲ್ಲಿ ಸೆರೆಯಲ್ಲಿದ್ದ ಇಸ್ರಾಯೇಲ್ ಜನರಿಗೆ ಬಿಡುಗಡೆ ಸಿಕ್ಕಿತು.
- ಅವನು ಸ್ವಾಧೀನಪಡಿಸಿಕೊಂಡ ಪ್ರಾಂತ್ಯದ ಪ್ರಜೆಗಳ ವಿಷಯದಲ್ಲಿ ತಾಳ್ಮೆಯುಳ್ಳವನಾಗಿದ್ದನೆಂದು ಕೋರೆಷನ್ ಬಗ್ಗೆ ತಿಳಿದಿರುತ್ತದೆ. ಯಹೂದಿಯರ ಮೇಲೆ ಆವನು ಕರುಣೆಯನ್ನು ತೋರಿಸಿದ ಕಾರಣವಾಗಿ ಸೆರೆಯಿಂದ ಹಿಂತಿರುಗಿದ ನಂತರ ಯೆರುಸಲೇಮಿನ ದೇವಾಲಯವು ತಿರುಗಿ ಕಟ್ಟಲ್ಪಟ್ಟಿತು.
- ದಾನಿಯೇಲನು, ಎಜ್ರ, ನೆಹೆಮೀಯ ಜೀವಿಸಿದ ಕಾಲದಲ್ಲಿ ಕೋರೆಷನ್ ಆಳ್ವಿಕೆ ಮಾಡುತ್ತಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ದಾನಿಯೇಲನು, ದಾರ್ಯಾವೇಷ, ಎಜ್ರ, ನೆಹೆಮೀಯ, ಪರ್ಷಿಯಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.36:22-23
- ದಾನಿ.01:19-21
- ಎಜ್ರ.05:12-13
- ಯೆಶಯ.44:28

ಪದ ಡೇಟಾ:

- Strong's: H3566

ಕ್ರೇತ, ಕ್ರೇತ್ಯರು

ಸತ್ಯಾಂಶಗಳು:

ಕ್ರೇತ ಎನ್ನುವುದು ಗ್ರೀಸ್ ದೇಶದ ದಕ್ಷಿಣ ಕರಾವಳಿಯಲ್ಲಿ ಇರುವ ದ್ವೀಪದ ಹೆಸರಾಗಿದೆ. ಈ ದ್ವೀಪದಲ್ಲಿ ವಾಸ ಮಾಡುವ ವ್ಯಕ್ತಿಯನ್ನು ಕ್ರೆತ್ಯನು ಎನ್ನುತ್ತಾರೆ.

- ಅಪೊಸ್ತಲನಾದ ಪೌಲನು ತನ್ನ ಸುವಾರ್ತಾ ಪ್ರಾಯಣದ ಭಾಗವಾಗಿ ಕ್ರೇತ ದ್ವಿಪಕ್ಕೆ ಹೋಗಿದ್ದನು.
- ಕ್ರೇತ ಕ್ರೈಸ್ತರಿಗೆ ಬೋಧಿಸಲು ಮತ್ತು ಅಲ್ಲಿದ್ದ ಸಭೆಗೆ ನಾಯಕರನ್ನು ನೇಮಿಸುವದಕ್ಕೆ ಪೌಲನು ತನ್ನ ಸಹ ಕೆಲಸಗಾರನಾದ ತೀತನನ್ನು ಅಲ್ಲಿ ಬಿಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.02:11
- ಅಪೊ.ಕೃತ್ಯ.27:08
- ಆಮೋಸ.09:7-8
- ತೀತನು.01:12

ಪದ ಡೇಟಾ:

- Strong's: G2912, G2914

ಖರಾನ್

ಸತ್ಯಾಂಶಗಳು:

ಖರಾನ್ ಎನ್ನುವ ವ್ಯಕ್ತಿ ಅಬ್ರಾಮನ ಚಿಕ್ಕ ತಮ್ಮನಾಗಿದ್ದನು ಮತ್ತು ಲೋಟನ ತಂದೆಯಾಗಿದ್ದನು.

- ಅಬ್ರಾಮ ಮತ್ತು ತನ್ನ ಕುಟುಂಬವು ಕಾನಾನ್ ಭೂಮಿಗೆ ಊರ್ ಎನ್ನುವ ಪಟ್ಟಣದಿಂದ ಪ್ರಯಾಣ ಮಾಡುವಾಗ ನಿವಾಸ ಮಾಡಿದ ಪಟ್ಟಣದ ಹೆಸರಾಗಿರುವ ಖರಾನ್.ನಲ್ಲಿ ಇಳಿದುಕೊಂಡಿದ್ದರು.
- ಖರಾನ್ ಎನ್ನುವ ಹೆಸರಿನ ಮೇಲೆ ಇರುವ ಇನ್ನೊಬ್ಬ ವ್ಯಕ್ತಿ ಕಾಲೇಬನ ಮಗನಾಗಿದ್ದನು.
- ಖರಾನ್ ಎನ್ನುವ ಹೆಸರಿನ ಮೇಲೆ ಸತ್ಯವೇದದಲ್ಲಿರುವ ಮೂರನೇಯ ವ್ಯಕ್ತಿ ಲೇವಿಯ ಸಂತಾನದವನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಕಾಲೇಬ, ಕಾನಾನ್, ಲೇವಿ, ಲೋಟ, ತೆರಹ, ಊರ್)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.19:12-13
- ಅಪೊ.ಕೃತ್ಯ.07:1-3
- ಆದಿ.11:31-32
- ಆದಿ.27:43-45
- ಆದಿ.28:10-11
- ಆದಿ.29:4-6

ಪದ ಡೇಟಾ:

- Strong's: H2039

ಗತೂರು, ಗತ್ ಊರಿನವನು, ಗತ್ ಊರಿನವರು

ಸತ್ಯಾಂಶಗಳು:

ಫಿಲಿಷ್ಟಿಯ ಮಹಾ ಪಟ್ಟಣಗಳಲ್ಲಿ ಗತೂರು ಒಂದಾಗಿತ್ತು. ಈ ಪಟ್ಟಣ ಎಕ್ರೋನ್ ಉತ್ತರ ದಿಕ್ಕಿನಲ್ಲಿ ಮತ್ತು ಅಷ್ಡೋದ್ ಹಾಗೂ ಅಷ್ಕೆಲೋನ್ ಪೂರ್ವದಿಕ್ಕಿನಲ್ಲಿತ್ತು.

- ಫಿಲಿಷ್ಟಿಯರ ರಣಶೂರನಾಗಿದ್ದ ಗೊಲ್ಯಾತನು ಗತೂರಿನವನಾಗಿದ್ದನು.
- ಸಮುವೇಲನ ಕಾಲದಲ್ಲಿ, ಫಿಲಿಷ್ಟಿಯರು ಇಸ್ರಾಯೇಲ್ಯರಿಂದ ಯೆಹೋವನ ನಿಬಂಧನೆ ಮಂಜೂಷವನ್ನು ಸ್ವಾಧೀನಪಡಿಸಿಕೊಂಡು ಅಷ್ಡೋದ್ ಎನ್ನುವ ಅನ್ಯ ದೇವತೆಯ ದೇವಾಲಯಕ್ಕೆ ತೆಗೆದುಕೊಂಡುಹೋದರು. ಆ ನಂತರ ಅದನ್ನು ಗತೂರಿಗೆ ಮತ್ತು ಎಕ್ರೋನ್ ಪಟ್ಟಣಗಳಿಗೆ ಸ್ಥಳಾಂತರಿಸಿದರು. ಆದರೆ ಆ ಪಟ್ಟಣದಲ್ಲಿದ್ದ ಜನರನ್ನು ಯೆಹೋವನು ರೋಗ ಮತ್ತು ಮರಣದ ಮೂಲಕ ಶಿಕ್ಷಿಸಿದನು, ಆದಕಾರಣ ಅದನ್ನು ಮತ್ತೆ ಇಸ್ರಾಯೇಲಿಗೆ ಕಳುಹಿಸಿದರು.
- ಅರಸನಾದ ಸೌಲನಿಂದ ದಾವೀದನು ತಪ್ಪಿಸಿಕೊಂಡು ಹೋದಾಗ ಅವನು ಗತೂರುಗೆ ಹೋಗಿ ಅಲ್ಲಿ ಅವನ ಇಬ್ಬರು ಹೆಂಡತಿಯರು ಮತ್ತು ಅವನಿಗೆ ನಂಬಿಗಸ್ತರಾಗಿದ್ದ ಆರು ನೂರು ಅನುಚರರೊಂದಿಗೆ ಅಲ್ಲಿ ವಾಸಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಷ್ಡೋದ್, ಅಷ್ಕೆಲೋನ್, ಎಕ್ರೋನ್, ಗಾಜಾ, ಗೊಲ್ಯಾತ, ಫಿಲಿಷ್ಟಿಯರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.02:39-40
- 1 ಸಮು.05:8-9
- 2 ಪೂರ್ವ.26:6-8
- ಯೆಹೋ.11:21-22

ಪದ ಡೇಟಾ:

- Strong's: H1661, H1663

ಗಬ್ರಿಯೇಲ

ಸತ್ಯಾಂಶಗಳು:

ಗಬ್ರಿಯೇಲ ಎನ್ನುವುದು ದೇವರ ದೂತರಗಳಲ್ಲಿ ಒಂದು ದೂತನ ಹೆಸರಾಗಿರುತ್ತದೆ. ಈ ದೂತನ ಹೆಸರು ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿ ಅನೇಕಸಲ ದಾಖಲಿಸಿರುತ್ತದೆ.

- ಪ್ರವಾದಿಯಾದ ದಾನಿಯೇಲನು ಕಂಡ ದರ್ಶನದ ಅರ್ಥವನ್ನು ದಾನಿಯೇಲನಿಗೆ ಹೇಳುವುದಕ್ಕೆ ದೇವರು ಗಬ್ರಿಯೇಲನನ್ನು ಕಳುಹಿಸಿದನು.
- ಇನ್ನೊಂದು ಸಮಯದಲ್ಲಿ ದಾನಿಯೇಲನು ಪ್ರಾರ್ಥನೆ ಮಾಡುತ್ತಿರುವಾಗ, ದೂತನಾದ ಗಬ್ರಿಯೇಲನು ಅವನ ಬಳಿಗೆ ಹಾರಿಹೋಗಿ, ಭವಿಷ್ಯತ್ತಿನಲ್ಲಿ ಸಂಭವಿಸುವುದರ ಕುರಿತಾಗಿ ಪ್ರವಾದಿಸಿದನು. ದಾನಿಯೇಲನು ಆ ದೂತನನ್ನು “ಮನುಷ್ಯ” ಎಂಬುದಾಗಿ ಕರೆದನು.
- ಹೊಸ ಒಡಂಬಡಿಕೆಯಲ್ಲಿ ಗಬ್ರಿಯೇಲನು ಜೆಕರ್ಯನ ಬಳಿಗೆ ಬಂದು, ಯೋಹಾನ ಎಂಬುವ ಒಬ್ಬ ಗಂಡು ಮಗನನ್ನು ನಿನ್ನ ವೃದ್ಧ ಹೆಂಡತಿಯಾದ ಎಲಿಸಬೇತಳು ಹಡೆಯುವಳು ಎಂದು ಪ್ರವಾದಿಸಿರುವ ದಾಖಲಾತಿ ಇದೆ.
- ಆರು ತಿಂಗಳುಗಳಾದ ಮೇಲೆ, “ದೇವರು ಅದ್ಭುತಕರವಾಗಿ “ದೇವರ ಮಗ” ಎನ್ನುವ ಒಬ್ಬ ಕೂಸಿಗೆ ಗರ್ಭ ಧರಿಸುವುದಕ್ಕೆ ಆಕೆಯನ್ನು ಬಲಪಡಿಸಿದನು” ಎಂದು ಮರಿಯಳಿಗೆ ಹೇಳುವುದಕ್ಕೆ ಗಬ್ರಿಯೇಲನು ಆಕೆಯ ಬಳಿಗೆ ಕಳುಹಿಸಲ್ಪಟ್ಟನು, ಆ ಮಗನಿಗೆ “ಯೇಸು” ಎಂದು ಹೆಸರಿಡಬೇಕೆಂದು ದೇವರು ಮರಿಯಳಿಗೆ ಹೇಳಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೂತ, ದಾನಿಯೇಲ, ಎಲಿಸಬೇತ್, ಸ್ನಾನಿಕನಾದ ಯೋಹಾನ, ಮರಿಯ, ಪ್ರವಾದಿ, ದೇವರ ಮಗ, ಜೆಕರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.08:15-17
- ದಾನಿ.09:20-21
- ಲೂಕ.01:18-20
- ಲೂಕ.01:26-29

ಪದ ಡೇಟಾ:

- Strong's: H1403, G1043

ಗಲಾತ್ಯ, ಗಲಾತ್ಯದವರು

ಸತ್ಯಾಂಶಗಳು:

ಹೊಸ ಒಡಂಬಡಿಕೆಯ ಕಾಲಗಳಲ್ಲಿ ಗಲಾತ್ಯ ಎನ್ನುವುದು ರೋಮಾದ ದೊಡ್ಡ ಪ್ರಾಂತ್ಯವಾಗಿತ್ತು, ಇದೀಗ ಈಗಿನ ಟರ್ಕಿ ದೇಶದಲ್ಲಿನ ಮಧ್ಯ ಭಾಗದಲ್ಲಿ ಕಂಡುಬರುತ್ತದೆ.

- ಗಲಾತ್ಯದಲ್ಲಿನ ಸ್ವಲ್ಪ ಭಾಗದ ಗಡಿ ಕಪ್ಪು ಸಮುದ್ರದ ಉತ್ತರ ದಿಕ್ಕಿಗೆ ಸೇರಿರುತ್ತದೆ. ಇದರ ಗಡಿಗಳು ಆಸ್ಯ, ಬಿಥೂನ್ಯ, ಕಪ್ಪದೊಕ್ಯ, ಕಿಲಿಕ್ಯ, ಮತ್ತು ಪಂಫುಲ್ಯ ಸೀಮೆಗಳವರೆಗೂ ಹರಡಿದ್ದವು.
- ಗಲಾತ್ಯ ಸೀಮೆಯಲ್ಲಿ ನಿವಾಸ ಮಾಡುತ್ತಿರುವ ಕ್ರೈಸ್ತರಿಗೆ ಅಪೊಸ್ತಲನಾದ ಪೌಲನು ಪತ್ರವನ್ನು ಬರೆದನು. ಈ ಪತ್ರಿಕೆ ಹೊಸ ಒಡಂಬಡಿಕೆಯಲ್ಲಿರುತ್ತದೆ, ಇದನ್ನು "ಗಲಾತ್ಯದವರಿಗೆ ಬರೆದ ಪತ್ರಿಕೆ" ಎಂದು ಕರೆಯುತ್ತಾರೆ.
- ಪೌಲನು ಗಲಾತ್ಯದವರಿಗೆ ಪತ್ರಿಕೆಯನ್ನು ಬರೆಯುವುದಕ್ಕೆ ಒಂದೇ ಒಂದು ಕಾರಣವೇನೆಂದರೆ ಕೃಪೆಯ ಮೂಲಕವೇ ರಕ್ಷಣೆ ಸುವಾರ್ತೆಯು ಹೊರತು, ಕ್ರಿಯೆಗಳಿಂದಲ್ಲ ಎಂದು ಒತ್ತಿ ಹೇಳುವುದಕ್ಕೆ ಬರೆದಿದ್ದನು.
- ಯೇಸುವನ್ನು ನಂಬಿದ ವಿಶ್ವಾಸಿಗಳು ಯೆಹೂದ್ಯರ ಆಚಾರಗಳನ್ನು ಅನುಸರಿಸಬೇಕಾದ ಅವಶ್ಯಕತೆಯಿದೆಯೆಂದು ಗಲಾತ್ಯದಲ್ಲಿರುವ ಕ್ರೈಸ್ತರಿಗೆ ಯೆಹೂದ್ಯ ಕ್ರೈಸ್ತರು ತಪ್ಪಾಗಿ ಬೋಧನೆ ಮಾಡುತ್ತಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಸ್ಯ, ನಂಬು, ಕಿಲಿಕ್ಯ, ಸುವಾರ್ತೆ, ಪೌಲ, ಕ್ರಿಯೆಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.16:1-2
- 1 ಪೇತ್ರ.01:1-2
- 2 ತಿಮೊಥೆ.04:9-10
- ಅಪೊ.ಕೃತ್ಯ.16:6-8
- ಗಲಾತ್ಯ.01:1-2

ಪದ ಡೇಟಾ:

- Strong's: G1053, G1054

ಗಲಿಲಾಯ ಸಮುದ್ರ, ಕಿನ್ನೆರೆತ್ ಸಮುದ್ರ, ಗೆನೆಜರೇತ್ ಕೆರೆ, ತಿಬೇರಿಯ ಸಮುದ್ರ

ಸತ್ಯಾಂಶಗಳು:

“ಗಲಿಲಾಯ ಸಮುದ್ರ” ಎನ್ನುವುದು ಪೂರ್ವ ಇಸ್ರಾಯೇಲಿನಲ್ಲಿ ಕೆರೆಯಾಗಿದ್ದಿತ್ತು. ಹಳೇ ಒಡಂಬಡಿಕೆಯಲ್ಲಿ ಇದನ್ನು “ಕಿನ್ನೆರೆತ್ ಸಮುದ್ರ” ಎಂಬುದಾಗಿಯೂ ಕರೆಯಲ್ಪಟ್ಟಿತ್ತು.

- ಈ ಕೆರೆಯ ನೀರು ದಕ್ಷಿಣದ ಕಡೆಗೆ ಹರಿಯುತ್ತಾ ಯೊರ್ದನ್ ಹೊಳೆಯಿಂದ ಲವಣ ಸಮುದ್ರದೊಳಗೆ ಸೇರುತ್ತವೆ.
- ಹೊಸ ಒಡಂಬಡಿಕೆಯ ಕಾಲಗಳಲ್ಲಿ ಗಲಿಲಾಯ ಸಮುದ್ರದ ಪಕ್ಕದಲ್ಲಿರುವ ಕೆಲವೊಂದು ಪಟ್ಟಣಗಳಲ್ಲಿ ಕಪೆರ್ನೌಮ, ಬೇತ್ಸಾಯಿದ, ಗೆನೆಜರೇತ್ ಮತ್ತು ತಿಬೇರಿಯ ಪಟ್ಟಣಗಳಿದ್ದವು.
- ಯೇಸುವಿನ ಜೀವನದಲ್ಲಿನ ಅನೇಕ ಸಂದರ್ಭಗಳು ಗಲಿಲಾಯ ಸಮುದ್ರದ ಪಕ್ಕದಲ್ಲಿ ನಡೆದಿರುತ್ತವೆ.
- ಗಲಿಲಾಯ ಸಮುದ್ರವನ್ನು ಕೂಡ “ತಿಬೇರಿಯ ಸಮುದ್ರ” ಮತ್ತು “ಗೆನೆಜರೇತ್ ಕೆರೆ” ಎಂಬುದಾಗಿ ಸೂಚಿಸಲಾಗುತ್ತಿತ್ತು.
- ಈ ಪದವನ್ನು “ಗಲಿಲಾಯ ಪ್ರಾಂತ್ಯದಲ್ಲಿರುವ ಕೆರೆ” ಅಥವಾ “ಗಲಿಲಾಯ ಕೆರೆ” ಅಥವಾ “ತಿಬೇರಿಯ (ಗೆನೆಜರೇತ್) ಹತ್ತಿರದಲ್ಲಿರುವ ಕೆರೆ” ಎಂದೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಪೆರ್ನೌಮ, ಗಲಿಲಾಯ, ಯೊರ್ದನ್ ಹೊಳೆ, ಲವಣ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.06:1-3
- ಲೂಕ.05:1-3
- ಮಾರ್ಕ.01:16-18
- ಮತ್ತಾಯ.04:12-13
- ಮತ್ತಾಯ.04:18-20
- ಮತ್ತಾಯ.08:18-20
- ಮತ್ತಾಯ.13:1-2
- ಮತ್ತಾಯ.15:29-31

ಪದ ಡೇಟಾ:

- Strong's: H3220, H3672, G1056, G1082, G2281, G3041, G5085

ಗಲಿಲಾಯ, ಗಲಿಲಾಯದವನು, ಗಲಿಲಾಯದವರು

ಸತ್ಯಾಂಶಗಳು

ಗಲಿಲಾಯ ಎನ್ನುವುದು ಇಸ್ರಾಯೇಲ್ ಉತ್ತರ ದಿಕ್ಕಿನಲ್ಲಿರುವ ಪ್ರಾಂತ್ಯ, ಉತ್ತರ ಸಮಾರ್ಯ ದಿಕ್ಕಿನಲ್ಲಿರುವ ಪ್ರಾಂತ್ಯವಾಗಿರುತ್ತದೆ. "ಗಲಿಲಾಯದವನು" ಎನ್ನುವ ಪದವು ಗಲಿಲಾಯದಲ್ಲಿ ನಿವಾಸವಾಗಿರುವ ವ್ಯಕ್ತಿಯನ್ನು ಸೂಚಿಸುತ್ತದೆ.

- ಗಲಿಲಾಯ, ಸಮಾರ್ಯ ಮತ್ತು ಯೂದಾಯ ಎನ್ನುವವು ಹೊಸ ಒಡಂಬಡಿಕೆ ಕಾಲಗಳಲ್ಲಿ ಇಸ್ರಾಯೇಲ್.ನಲ್ಲಿ ಮೂರು ಮುಖ್ಯ ಸೀಮೆಗಳಾಗಿದ್ದವು.
- ಗಲಿಲಾಯ ಸೀಮೆಯು "ಗಲಿಲಾಯ ಸಮುದ್ರ" ಎಂದು ಕರೆಯಲ್ಪಡುವ ದೊಡ್ಡ ಸಮುದ್ರದ ಪೂರ್ವ ದಿಕ್ಕುವರೆಗೂ ಹರಡಿತ್ತು.
- ಯೇಸು ಗಲಿಲಾಯದಲ್ಲಿರುವ ನಜರೇತ ಎನ್ನುವ ಪಟ್ಟಣದಲ್ಲಿ ಬೆಳೆದು, ಅಲ್ಲಿ ನಿವಾಸವಾಗಿದ್ದರು.
- ಯೇಸು ಮಾಡಿದ ಬೋಧನೆಗಳು ಮತ್ತು ಅದ್ಭುತಗಳು ಗಲಿಲಾಯ ಸೀಮೆಯಲ್ಲಿಯೇ ನಡೆದಿದ್ದವು.

(ಈ ಪದಗಳನ್ನು ಸಹ ನೋಡಿರಿ : ನಜರೇತ, ಸಮಾರ್ಯ, ಗಲಿಲಾಯ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.09:31-32
- ಅಪೊ.ಕೃತ್ಯ.13:30-31
- ಯೋಹಾನ.02:1-2
- ಯೋಹಾನ.04:1-3
- ಲೂಕ.13:1-3
- ಮಾರ್ಕ.03:7-8
- ಮತ್ತಾಯ.02:22-23
- ಮತ್ತಾಯ.03:13-15

ಸತ್ಯವೇದದಿಂದ ಉದಾಹರಣೆಗಳು:

- **21:10** ಮೆಸ್ಸೀಯ _ **ಗಲಿಲಾಯದಲ್ಲಿ** _ ಜೀವಿಸುವನು, ಮನ ಮುರಿದ ಜನರನ್ನು ಆದರಿಸುವನು, ಮತ್ತು ಬಂಧಿಸಲ್ಪಟ್ಟವರಿಗೆ ಸ್ವಾತಂತ್ರ್ಯವನ್ನು ಪ್ರಕಟಿಸುವನು, ಸೆರೆಯಲ್ಲಿರುವವನ್ನು ಬಿಡುಗಡೆಗೊಳಿಸುವನು ಎಂದು ಪ್ರವಾದಿಯಾದ ಯೆಶಯಾ ಹೇಳಿದರು.
- **26:01** ಸೈತಾನಿನ ಎಲ್ಲಾ ಶೋಧನೆಗಳನ್ನು ಜಯಿಸಿದ ಮೇಲೆ, ಯೇಸು ಪವಿತ್ರಾತ್ಮನ ಶಕ್ತಿಯಿಂದ ಆತನು ನಿವಾಸವಾಗಿರುವ _ ಗಲಿಲಾಯ _ ಸೀಮೆಗೆ ಹಿಂದುರಿಗಿ ಹೋದನು.
- **39:06** ಕೊನೆಗೆ, "ನೀವು ಯೇಸುವಿನೊಂದಿಗೆ ಇರುವವರೆಂದು ನಮಗೆ ಗೊತ್ತು, ಯಾಕಂದರೆ, ನೀವಿಬ್ಬರು _ **ಗಲಿಲಾಯದಿಂದ** _ ಬಂದವರೇ" ಎಂದು ಜನರು ಹೇಳಿದರು.
- **41:06** "'ಯೇಸು ಮರಣದಿಂದ ಎದ್ದು ಬಂದಿದ್ದಾನೆಂದು ಮತ್ತು ನಿಮಗಿಂತ ಮುಂಚಿತವಾಗಿ ಆತನು _ **ಗಲಿಲಾಯಕ್ಕೆ** _ ಹೋಗುತ್ತಾನೆ' ಎಂದು ಹೋಗಿ ಶಿಷ್ಯರಿಗೆ ಹೇಳಿರಿ" ಎಂದು ದೂತ ಆ ಸ್ತ್ರೀಯರಿಗೆ ಹೇಳಿದನು.

ಪದ ಡೇಟಾ:

- Strong's: H1551, G1056, G1057

ಗಾಜಾ

ಸತ್ಯಾಂಶಗಳು:

ಸತ್ಯವೇದ ಕಾಲದಲ್ಲಿ, ಗಾಜಾ ಎನ್ನುವ ಪಟ್ಟಣ ಮೆಡಿಟರೇನಿಯನ್ ಸಮುದ್ರದ ತೀರದಲ್ಲಿ, ಅಷ್ಡೋದಿಂದ ಸುಮಾರು 38 ಕಿಲೋಮೀಟರ್ ದೂರದಲ್ಲಿದ ಸಮೃದ್ಧಿಯಾದ ಫಿಲಿಷ್ಟಿಯ ಪಟ್ಟಣವಾಗಿತ್ತು. ಫಿಲಿಷ್ಟಿಯರ ಐದು ಪ್ರಸಿದ್ಧವಾದ ಪಟ್ಟಣಗಳಲ್ಲಿ ಗಾಜಾ ಒಂದಾಗಿತ್ತು.

- ಇದು ಇದ್ದ ಸ್ಥಳದ ಕಾರಣ, ಜನರ ಮಧ್ಯೆ ಮತ್ತು ದೇಶಗಳ ಮಧ್ಯೆ ನಡೆಯುವ ವ್ಯಾಪಾರ ಕಾರ್ಯಗಳಿಗೆ ಗಾಜಾ ಮೂಲ ರೇವು ಪಟ್ಟಣವಾಗಿತ್ತು.
- ಪ್ರಸ್ತುತ ಕಾಲದಲ್ಲಿಯೂ, ಗಾಜಾ ಪಟ್ಟಣ ಪ್ರಾಮುಖ್ಯವಾದ ರೇವು ಪಟ್ಟಣವಾಗಿದೆ, ಅದು ಮೆಡಿಟರೇನಿಯನ್ ಸಮುದ್ರದ ತೀರದಲ್ಲಿದೆ ಅದಕ್ಕೆ ಉತ್ತರ ಮತ್ತು ಪೂರ್ವ ದಿಕ್ಕಿನಲ್ಲಿ ಇಸ್ರಾಯೇಲ್ ದೇಶ ಮತ್ತು ದಕ್ಷಿಣಕ್ಕೆ ಈಜಿಪ್ಟ್ ಸರಿಹದ್ದುಗಳಾಗಿವೆ.
- ಸಂಸೋನನನ್ನು ಸ್ವಾಧೀನಪಡಿಸಿಕೊಂಡ ನಂತರ ಫಿಲಿಷ್ಟಿಯರು ಅವನನ್ನು ಗಾಜಾ ಪಟ್ಟಣಕ್ಕೆ ಕರೆದುಕೊಂಡು ಹೋದರು.
- ಸೌವರ್ತಿಕನಾದ ಫಿಲಿಪ್ಪ ಇಥಿಯೋಪ್ಯನಾದ ಕಂಚುಕಿಯನನ್ನು ಗಾಜಾಗೆ ಹೋಗುವ ಅರಣ್ಯ ಮಾರ್ಗದಲ್ಲಿ ಬೇಟಿ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಷ್ಡೋದ್, ಫಿಲಿಪ್ಪ, ಫಿಲಿಷ್ಟಿಯರು, ಇಥಿಯೋಪ್ಯ, ಗತೂರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.04:24-25
- ಅಪೊ.ಕೃತ್ಯ.08:26-28
- ಆದಿ.10:19-20
- ಯೆಹೋ.10:40-41
- ನ್ಯಾಯ.06:3-4

ಪದ ಡೇಟಾ:

- Strong's: H5804, H5841, G1048

ಗಾದ್

ಸತ್ಯಾಂಶಗಳು:

ಯಾಕೋಬನ ಮಕ್ಕಳಲ್ಲಿ ಗಾದ್ ಒಬ್ಬನಾಗಿದ್ದನು. ಯಾಕೋಬನಿಗೆ ಮತ್ತೊಂದು ಹೆಸರು ಇಸ್ರಾಯೇಲ್ ಎಂದಿತ್ತು.

- ಇಸ್ರಾಯೇಲರ ಹನ್ನೆರಡು ಗೋತ್ರಗಳಲ್ಲಿ ಗಾದ್ ಕುಟುಂಬ ಒಂದಾಗಿತ್ತು.
- ಸತ್ಯವೇದದಲ್ಲಿ ಬರೆಯಲ್ಪಟ್ಟ ಗಾದ್ ಎನ್ನುವ ಮತ್ತೊಬ್ಬ ವ್ಯಕ್ತಿ ಪ್ರವಾದಿಯಾಗಿದ್ದನು. ಇಸ್ರಾಯೇಲರ ಜನಗಣತಿ ಮಾಡಿದಾಗ ಅರಸನಾದ ದಾವೀದನನ್ನು ಅವನು ವಿರೋಧಿಸಿದನು.
- ಬಾಲ್ಗಾದ್ ಮತ್ತು ಮಿಗ್ದಲ್ಗಾದ್ ಎನ್ನುವಂತ ಪಟ್ಟಣಗಳ ಹೆಸರುಗಳು ಮೂಲ ಭಾಷೆಯಲ್ಲಿ ಎರಡು ಪದಗಳಾಗಿವೆ ಮತ್ತು ಕೆಲವೊಮ್ಮೆ ಅವುಗಳನ್ನು "ಬಾಲ್ ಗಾದ್" ಮತ್ತು "ಮಿಗ್ದಲ್ ಗಾದ್" ಎಂದು ಬರೆಯುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಜನಗಣತಿ, ಪ್ರವಾದಿ, ಇಸ್ರಾಯೇಲರ ಹನ್ನೆರಡು ಗೋತ್ರಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.05:18-19
- ವಿಮೋ.01:1-5
- ಆದಿ.30:9-11
- ಯೆಹೋ.01:12-13
- ಯೆಹೋ.21:36-38

ಪದ ಡೇಟಾ:

- Strong's: H1410, H1425, G1045

ಗಿದ್ಯೋನ

ಸತ್ಯಾಂಶಗಳು:

ಗಿದ್ಯೋನನು ಇಸ್ರಾಯೇಲಿಯನು, ದೇವರು ಇಸ್ರಾಯೇಲ್ಯರನ್ನು ತಮ್ಮ ಶತ್ರುಗಳಿಂದ ಬಿಡಿಸಲು ಇವನನ್ನು ಮೇಲಕ್ಕೆ ಎಬ್ಬಿಸಿದ್ದರು.

- ಗಿದ್ಯೋನನು ಜೀವಿಸುವ ಕಾಲದಲ್ಲಿ ಮಿದ್ಯಾನರೆನ್ನುವ ಒಂದು ಜನರ ಗುಂಪಿನವರು ಇಸ್ರಾಯೇಲ್ಯರ ಮೇಲೆ ಧಾಳಿ ಮಾಡುತ್ತಾ, ಅವರ ಬೆಳೆಗಳನ್ನು ನಾಶಗೊಳಿಸುತ್ತಿದ್ದರು.
- ಗಿದ್ಯೋನನು ಹೆದರಿಕೊಂಡರೂ ಮಿದ್ಯಾನರನ್ನು ಸೋಲಿಸುವುದಕ್ಕೆ ಮತ್ತು ಅವರಿಗೆ ವಿರುದ್ಧವಾಗಿ ಹೋರಾಟ ಮಾಡುವುದಕ್ಕೆ ಇಸ್ರಾಯೇಲ್ಯರನ್ನು ನಡೆಸಲು ದೇವರು ಅವನನ್ನು ಉಪಯೋಗಿಸಿಕೊಂಡರು.
- ಬಾಳ್ ಮತ್ತು ಅಶೇರ ಎನ್ನುವ ಸುಳ್ಳು ದೇವರಗಳ ಬಳಿಗೆ ಯಜ್ಞವೇದಿಗಳನ್ನು ತೆಗೆದುಕೊಂಡು ಹೋಗುವುದರ ಮೂಲಕ ಗಿದ್ಯೋನನು ದೇವರಿಗೆ ವಿಧೇಯನಾದನು.
- ಈತನು ಕೇವಲ ತಮ್ಮ ಶತ್ರುಗಳನ್ನು ಸೋಲಿಸುವುದಕ್ಕೆ ಜನರನ್ನು ನಡೆಸುವುದಲ್ಲದೆ, ಒಬ್ಬನೇ ನಿಜ ದೇವರಾದ ಯೆಹೋವನನ್ನು ಆರಾಧಿಸುವುದಕ್ಕೆ ಮತ್ತು ಆತನಿಗೆ ವಿಧೇಯರಾಗುವುದಕ್ಕೆ ಅವರನ್ನು ಪ್ರೋತ್ಸಾಹ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಳ್, ಅಶೇರ, ಬಿಡುಗಡೆ, ಮಿದ್ಯಾನ್, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಇಬ್ರಿ.11:32-34
- ನ್ಯಾಯಾ.06:11-12
- ನ್ಯಾಯಾ.06:22-24
- ನ್ಯಾಯಾ.08:15-17

ಸತ್ಯವೇದದಿಂದ ಉದಾಹರಣೆಗಳು:

- **16:05** ಯೆಹೋವನ ದೂತ _ ಗಿದ್ಯೋನನ _ ಬಳಿಗೆ ಬಂದು, “ಪರಾಕ್ರಮಶಾಲಿಯೇ, ಯೆಹೋವ ನಿನ್ನ ಸಂಗಡ ಇದ್ದಾನೆ”. ಹೋಗಿ, ಮಿದ್ಯಾನರಿಂದ ಇಸ್ರಾಯೇಲ್ಯರನ್ನು ರಕ್ಷಿಸು” ಎಂದು ಹೇಳಿದನು.
- **16:06** _ ಗಿದ್ಯೋನನ _ ತಂದೆ ವಿಗ್ರಹಕ್ಕೆ ಯಜ್ಞವೇದಿಯನ್ನು ಪ್ರತಿಷ್ಠೆ ಮಾಡಿದನು. ಆ ಯಜ್ಞವೇದಿಯನ್ನು ಮುರಿದು ಹಾಕಬೇಕೆಂದು ದೇವರು _ ಗಿದ್ಯೋನನಿಗೆ _ ಹೇಳಿದನು.
- **16:08** ಅವರು ಲೆಕ್ಕಿಸಲಾರದಷ್ಟು ಜನರಿದ್ದರು (ಮಿದ್ಯಾನರು). ಅವರೊಂದಿಗೆ ಎಲ್ಲರು ಸೇರಿ ಯುದ್ಧ ಮಾಡುವುದಕ್ಕೆ _ ಗಿದ್ಯೋನನು _ ಇಸ್ರಾಯೇಲ್ಯರನ್ನು ಕರೆದನು.
- **16:08** ಅವರೊಂದಿಗೆ ಎಲ್ಲರು ಸೇರಿ ಯುದ್ಧ ಮಾಡುವುದಕ್ಕೆ _ ಗಿದ್ಯೋನನು _ ಇಸ್ರಾಯೇಲ್ಯರನ್ನು ಕರೆದನು. ಇಸ್ರಾಯೇಲ್ಯರನ್ನು ರಕ್ಷಿಸುವುದಕ್ಕೆ ದೇವರು ಗಿದ್ಯೋನನನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆನ್ನುವುದಕ್ಕೆ, _ ಗಿದ್ಯೋನನು _ ಎರಡು ಚಿಹ್ನೆಗಳನ್ನು ತೋರಿಸಬೇಕೆಂದು ದೇವರನ್ನು ಕೇಳಿಕೊಂಡನು.
- **16:10** _ ಗಿದ್ಯೋನನ _ ಬಳಿಗೆ 32,000 ಇಸ್ರಾಯೇಲ್ ಸೈನಿಕರು ಬಂದರು, ಆದರೆ ಸೈನಿಕರು ಹೆಚ್ಚಾಗಿದ್ದಾರೆಂದು ದೇವರು ಅವನಿಗೆ ಹೇಳಿದನು.
- **16:12** ಆದ್ದರಿಂದ _ ಗಿದ್ಯೋನನು _ ತನ್ನ ಸೈನಿಕರನ್ನು ಹಿಂದಕ್ಕೆ ಕಳುಹಿಸಿದನು ಮತ್ತು ಅವರೆಲ್ಲರಿಗೆ ಕೊಂಬನ್ನು, ಉರಿಯುವ ಪಂಜು ಇರುವ ಬರಿಕೊಡವನ್ನೂ ಕೊಟ್ಟನು.
- **16:15** ಜನರೆಲ್ಲರು _ ಗಿದ್ಯೋನನನ್ನು _ ಅವರ ಅರಸನಾಗಿ ಮಾಡಬೇಕೆಂದು ಬಯಸಿದ್ದರು.
- **16:16** ಪ್ರಧಾನ ಯಾಜಕನು ಧರಿಸಿಕೊಳ್ಳುವ ವಸ್ತ್ರದಂತೆ ಒಂದು ವಿಶೇಷವಾದ ವಸ್ತ್ರವನ್ನು ಮಾಡುವುದಕ್ಕೆ _ ಗಿದ್ಯೋನನು _ ಬಂಗಾರವನ್ನು ಉಪಯೋಗಿಸಿದನು. ಆದರೆ ಜನರೆಲ್ಲರು ಅದು ಒಂದು ವಿಗ್ರಹವೆಂದೆಣಿಸಿ ಅದನ್ನು ಆರಾಧಿಸಲು ಆರಂಭಿಸಿದರು.

ಪದ ಡೇಟಾ:

- Strong's: H1439, H1441

ಗಿಬ್ಯೋನ್, ಗಿಬ್ಯೋನ್ಯರು, ಗಿಬ್ಯೋನ್ಯರು

ಸತ್ಯಾಂಶಗಳು:

ಗಿಬ್ಯೋನ್ ಎನ್ನುವುದು ಒಂದು ಪಟ್ಟಣ, ಇದು ಯೆರೂಸಲೇಮ್ ವಾಯುವ್ಯ ದಿಕ್ಕಿಗೆ ಸುಮಾರು 13 ಕಿಲೋಮೀಟರ್ ದೂರದಲ್ಲಿ ಕಂಡುಬರುತ್ತದೆ. ಗಿಬ್ಯೋನಿನಲ್ಲಿ ಜೀವಿಸುವ ಜನರನ್ನು ಗಿಬ್ಯೋನ್ಯರು ಎಂದು ಕರೆಯುತ್ತಾರೆ.

- ಇಸ್ರಾಯೇಲ್ಯರು ಯೆರಿಕೋ ಮತ್ತು ಆಯಿ ಎನ್ನುವ ಪಟ್ಟಣಗಳನ್ನು ಹೇಗೆ ನಾಶಮಾಡಿದರೆಂದು ಗಿಬ್ಯೋನ್ಯರು ಕೇಳಿದಾಗ, ಅವರು ತುಂಬಾ ಹೆದರಿದರು.
- ಇದರಿಂದ ಗಿಲ್ಗಾಲ್.ನಲ್ಲಿರುವ ಇಸ್ರಾಯೇಲ್ ನಾಯಕರ ಬಳಿಗೆ ಗಿಬ್ಯೋನ್ಯರು ಬಂದರು ಮತ್ತು ಅವರು ಎಷ್ಟೋ ದೂರದಲ್ಲಿರುವ ದೇಶದ ಜನರು ಎಂಬುವರಾಗಿ ನಟಿಸಿದರು.
- ಇಸ್ರಾಯೇಲ್ ನಾಯಕರು ಮೋಸಹೋದರು ಮತ್ತು ಅವರು ತಮ್ಮನ್ನು ನಾಶಪಡಿಸದೇ, ರಕ್ಷಿಸುತ್ತೇವೆಂದು ಗಿಬ್ಯೋನ್ಯರೊಂದಿಗೆ ಒಪ್ಪಂದ ಮಾಡಿಕೊಂಡರು.

(ಈ ಪದಗಳನ್ನು ಸಹ ನೋಡಿರಿ : ಗಿಲ್ಗಾಲ್, ಯೆರಿಕೋ, ಯೆರೂಸೇಲಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.08:29-31
- 1 ಅರಸ.03:4-5
- 2 ಸಮು.02:12-13
- ಯೆಹೋ.09:3-5

ಸತ್ಯವೇದದಿಂದ ಉದಾಹರಣೆಗಳು:

- **15:06** ಆದರೆ ಕಾನಾನ್ ಜನರ ಗುಂಪುಗಳಲ್ಲಿ _ ಗಿಬ್ಯೋನ್ಯರು _ ಎಂದು ಕರೆಯಲ್ಪಡುವ ಒಂದು ಜನರ ಗುಂಪು ಯೆಹೋಶುವನೊಂದಿಗೆ ಸುಳ್ಳಾಡಿದರು ಮತ್ತು ಅವರು ಕನಾನ್ ದೇಶದಿಂದ ತುಂಬಾ ದೂರದಲ್ಲಿರುವ ಸ್ಥಳದಿಂದ ಬಂದವರೆಂದು ಹೇಳಿದರು.
- **15:07** ಕೆಲವೊಂದು ಕಾಲದನಂತರ, ಕಾನಾನ್ ದೇಶದಲ್ಲಿರುವ ಇತರ ಜನರ ಗುಂಪುಗಳ ಅರಸರಾಗಿರುವ ಅಮೋರಿಯರು ಇಸ್ರಾಯೇಲ್ಯರೊಂದಿಗೆ _ ಗಿಬ್ಯೋನ್ಯರೊಂದಿಗೆ _ ಸಮಾಧಾನ ಔತಣವನ್ನು ಮಾಡಿಕೊಂಡಿದ್ದಾರೆಂದು ಕೇಳಿಸಿಕೊಂಡರು, ಅದ್ದರಿಂದ ಅವರು ತಮ್ಮ ಸೈನ್ಯಗಳನ್ನು ಒಂದು ದೊಡ್ಡ ಸೈನ್ಯವನ್ನಾಗಿ ಮಾಡಿಕೊಂಡು, _ ಗಿಬ್ಯೋನ್ _ ಮೇಲೆ ಧಾಳಿ ಮಾಡಿದರು.
- **15:08** ಆದ್ದರಿಂದ ಯೆಹೋಶುವ ಇಸ್ರಾಯೇಲ್ ಸೈನ್ಯವನ್ನು ಒಂದುಗೂಡಿಸಿದನು ಮತ್ತು ಅವರೆಲ್ಲರು _ ಗಿಬ್ಯೋನ್ಯರ _ ಬಳಿಗೆ ರಾತ್ರಿಯೆಲ್ಲಾ ನಡೆದುಕೊಂಡು ಹೋದರು.

ಪದ ಡೇಟಾ:

- Strong's: H1391, H1393

ಗಿರ್ಗಾಷಿಯರು

ಸತ್ಯಾಂಶಗಳು:

ಗಿರ್ಗಾಷಿಯರೆಂದರೆ ಗಲಿಲಾಯ ಸಮುದ್ರದ ಹತ್ತಿರ ಕಾನಾನ್ ದೇಶದಲ್ಲಿ ವಾಸಿಸುತ್ತಿದ್ದ ಜನರ ಗುಂಪಾಗಿತ್ತು.

- ಅವರು ಹಾಮನ ಮಗನಾದ ಕಾನಾನಿನ ವಂಶಸ್ಥರಾಗಿದ್ದರು ಮತ್ತು "ಕಾನಾನಿಯರು" ಎಂದು ಕರೆಯಲ್ಪಟ್ಟ ಅನೇಕ ಜನರ ಗುಂಪಿನಲ್ಲಿ ಇವರು ಒಂದು ಗುಂಪಿನವರಾಗಿದ್ದರು.
- ಗಿರ್ಗಾಷಿಯರನ್ನು ಮತ್ತು ಕಾನಾನಿಯರ ಬೇರೆ ಜನರ ಗುಂಪುಗಳನ್ನು ಸೋಲಿಸಲು ಸಹಾಯಮಾಡುತ್ತೇನೆಂದು ಯೆಹೋವ ಇಸ್ರಾಯೇಲ್ಯರಿಗೆ ವಾಗ್ದಾನ ಮಾಡಿದನು.
- ಬೇರೆ ಕಾನಾನಿಯರ ಹಾಗೆ, ಗಿರ್ಗಾಷಿಯರು ಅನ್ಯ ದೇವತೆಗಳನ್ನು ಪೂಜಿಸುತ್ತಿದ್ದರು ಮತ್ತು ಆ ಪೂಜೆಯ ಭಾಗವಾಗಿ ಅನೇಕ ಅನೈತಿಕ ಕೆಲಸಗಳನ್ನು ಮಾಡುತ್ತಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಹಾಮ್, ನೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:13-16
- ಧರ್ಮೋ.07:1
- ಆದಿ.10:15-18
- ಯೆಹೋ.03:9-11
- ಯೆಹೋ.24:11-12

ಪದ ಡೇಟಾ:

- Strong's: H1622

ಗಿಲ್ಗಾಲ್

ಸತ್ಯಾಂಶಗಳು:

ಗಿಲ್ಗಾಲ್ ಎನ್ನುವ ಪಟ್ಟಣ ಯೆರಿಕೋಗೆ ಉತ್ತರ ದಿಕ್ಕಿನಲ್ಲಿತ್ತು ಮತ್ತು ಇಸ್ರಾಯೇಲ್ಯರು ಕಾನಾನ್ ದೇಶಕ್ಕೆ ಹೋಗುತ್ತಿರುವಾಗ ಯೊರ್ದನ್ ನದಿಯನ್ನು ದಾಟಿದ ನಂತರ ಇಳಿದುಕೊಂಡ ಸ್ಥಳವಾಗಿತ್ತು.

- ಗಿಲ್ಗಾಲಿನಲ್ಲಿ, ಅವರು ದಾಟಿದ ನದಿಯಿಂದ ಅಂದರೆ ಒಣಗಿದ್ದ ಯೊರ್ದನ್ ನದಿಯಿಂದ ತೆಗೆದುಕೊಂಡು ಬಂದ ಹನ್ನೆರಡು ಕಲ್ಲುಗಳನ್ನು ನಿಲ್ಲಿಸಿದನು.
- ಎಲೀಷನು ಪರಲೋಕಕ್ಕೆ ಏರಿಹೋದ ಸಮಯದಲ್ಲಿ ಎಲೀಯನು ಮತ್ತು ಎಲೀಷನು ಯೊರ್ದನ್ ನದಿಯನ್ನು ದಾಟುವದಕ್ಕೆ ಮುನ್ನ ಅವರು ಗಿಲ್ಗಾಲ್ ಪಟ್ಟಣವನ್ನು ಬಿಟ್ಟರು.
- ಹಳೆ ಒಡಂಬಡಿಕೆಯಲ್ಲಿ ಅನೇಕ ಪ್ರಾಂತ್ಯಗಳನ್ನು "ಗಿಲ್ಗಾಲ್" ಎಂದು ಕರೆಯುತ್ತಿದ್ದರು.
- "ಗಿಲ್ಗಾಲ್" ಎನ್ನುವ ಪದಕ್ಕೆ "ವೃತ್ತಾಕಾರದಲ್ಲಿದ್ದ ಕಲ್ಲುಗಳು" ಎಂದರ್ಥ, ಅದು ಬಹುಶಃ ವೃತ್ತಾಕಾರದಲ್ಲಿ ಕಟ್ಟಲ್ಪಟ್ಟ ಯಜ್ಞವೇದಿಯನ್ನು ಸೂಚಿಸುತ್ತಿರಬಹುದು.
- ಹಳೆ ಒಡಂಬಡಿಕೆಯಲ್ಲಿ, ಈ ಹೆಸರು ಅನೇಕ ಬಾರಿ "ಗಿಲ್ಗಾಲ್" ಎಂದಿರುತ್ತದೆ. ಇದು ಒಂದು ಪ್ರಾಂತ್ಯದ ಸ್ಥಳವಲ್ಲ ಆದರೆ ಒಂದು ವಿಧವಾದ ಸ್ಥಳದ ವಿವರಣೆಯಾಗಿರಬಹುದು ಎಂದು ಸೂಚಿಸುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಎಲೀಯ, ಎಲೀಷ, ಯೆರಿಕೋ, ಯೊರ್ದನ್ ಹೊಳೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.07:15-17
- 2 ಅರಸ.02:1-2
- ಹೋಶೆಯ.04:15-16
- ನ್ಯಾಯಾ.02:1-2

ಪದ ಡೇಟಾ:

- Strong's: H1537

ಗಿಲ್ಯಾದ್, ಗಿಲ್ಯಾದ್ಯನು, ಗಿಲ್ಯಾದ್ಯರು

ಪದದ ಅರ್ಥವಿವರಣೆ

ಗಿಲ್ಯಾದ್ ಎನ್ನುವುದು ಯೊರ್ದನ್ ನದಿಯ ಪೂರ್ವ ದಿಕ್ಕಿನಲ್ಲಿದ್ದ ಪರ್ವತಮಯವಾದ ಪ್ರಾಂತ್ಯವಾಗಿತ್ತು, ಅಲ್ಲಿ ಇಸ್ರಾಯೇಲ್ ಗೋತ್ರಗಳಾದ ಗಾದ್, ರೂಬೇನ ಮತ್ತು ಮನಸ್ಸೆಯವರು ನಿವಾಸವಿದ್ದರು.

- ಈ ಪ್ರಾಂತ್ಯವನ್ನು "ಗುಟ್ಟ ಸ್ಥಳವಾದ ಗಿಲ್ಯಾದ್" ಅಥವಾ "ಗಿಲ್ಯಾದ್ ಬೆಟ್ಟ" ಎಂದು ಸೂಚಿಸಲಾಗಿತ್ತು.
- ಹಳೆ ಒಡಂಬಡಿಕೆಯಲ್ಲಿದ್ದ ಅನೇಕ ಪುರುಷರ ಹೆಸರು "ಗಿಲ್ಯಾದ್" ಎಂದಿತ್ತು. ಅವರಲ್ಲಿ ಒಬ್ಬನು ಮನಸ್ಸೆಯನ ಮೊಮ್ಮಗನಾಗಿದ್ದನು. ಇನ್ನೊಬ್ಬ ಗಿಲ್ಯಾದ್ ಎಫ್ರಾಹನ ತಂದೆಯಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಗಾದ್, ಎಫ್ರಾಹ, ಮನಸ್ಸೆ, ರೂಬೇನ, ಇಸ್ರಾಯೇಲ್ಯರ ಹನ್ನೆರಡು ಗೋತ್ರಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:21-22
- 1 ಸಮು.11:1-2
- ಆಮೋಸ.01:3-4
- ಧರ್ಮೋ.02:36-37
- ಆದಿ.31:19-21
- ಆದಿ.37:25-26

ಪದ ಡೇಟಾ:

- Strong's: H1568, H1569

ಗೆತ್ಸೇಮನೆ

ಸತ್ಯಾಂಶಗಳು:

ಗೆತ್ಸೇಮನೆ ಎನ್ನುವುದು ಒಲೀವ ಎಣ್ಣೆ ಮರಗಳಿದ್ದ ಉದ್ಯಾನವನವಾಗಿತ್ತು, ಅದು ಯೆರುಸಲೇಮಿಗೆ ಪೂರ್ವದಲ್ಲಿ ಕಿದ್ರೋನ್ ಕಣಿವೆ ಆಚೆ ಮತ್ತು ಒಲೀವ ಎಣ್ಣೆ ಮರಗಳ ಗುಡ್ಡದ ಹತ್ತಿರವಿತ್ತು.

- ಗೆತ್ಸೇಮನೆ ಎನ್ನುವ ಉದ್ಯಾನವನದಲ್ಲಿ ಯೇಸು ಮತ್ತು ಆತನ ಶಿಷ್ಯರು ಜನಸಮೂಹದಿಂದ ದೂರವಾಗಿದ್ದು ಏಕಾಂತವಾದ ಸಮಯ ಕಳೆಯುತ್ತಿದ್ದರು ಮತ್ತು ವಿಶ್ರಮಿಸುತ್ತಿದ್ದರು.
- ಯಹೂದಿಯರ ನಾಯಕರು ಆತನನ್ನು ಬಂಧಿಸುವದಕ್ಕೆ ಬರುವದಕ್ಕೆ ಮುಂಚೆ, ಗೆತ್ಸೇಮನೆನಲ್ಲಿಯೇ ಯೇಸು ತುಂಬಾ ದುಃಖಪಟ್ಟು ಮನಗುಂದಿದವನಾಗಿ ಪ್ರಾರ್ಥಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯೂದ ಇಸ್ಕರಿಯೋತ, ಕಿದ್ರೋನ್ ಕಣಿವೆ, ಆಲಿವ್ ಎಣ್ಣೆ ಮರಗಳ ಗುಡ್ಡ)

ಸತ್ಯವೇದದ ಅನುಬಂಧ ವಾಕ್ಯಗಳು :

- ಮಾರ್ಕ.14:32-34
- ಮತ್ತಾಯ.26:36-38

ಪದ ಡೇಟಾ:

- Strong's: G1068

ಗೆಬೆಯಾ

ಸತ್ಯಾಂಶಗಳು:

ಗೆಬೆಯಾ ಯೆರುಸಲೇಮಿಗೆ ಉತ್ತರ ದಿಕ್ಕಿನಲ್ಲಿ ಮತ್ತು ಬೇತೇಲಿಗೆ ದಕ್ಷಿಣ ದಿಕ್ಕಿನಲ್ಲಿ ಪಟ್ಟಣವಾಗಿತ್ತು.

- ಗೆಬೆಯಾ ಬೆನ್ಯಾಮೀನ ಗೋತ್ರದವರ ಪ್ರಾಂತ್ಯವಾಗಿತ್ತು.
- ಬೆನ್ಯಾಮೀನರು ಮತ್ತು ಇಸ್ರಾಯೇಲ್ಯರ ನಡುವೆ ನಡೆದಂತ ದೊಡ್ಡ ಯುದ್ದ ಇಲ್ಲಿಯೇ ನಡೆಯಿತು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೆನ್ಯಾಮೀನ, ಬೇತೇಲ್, ಯೆರುಸಲೇಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.10:26-27
- 2 ಸಮು.21:5-6
- ಹೋಶೇಯ.09:8-9
- ನ್ಯಾಯಾ.19:12-13

ಪದ ಡೇಟಾ:

- Strong's: H1387, H1389, H1390, H1394

ಗೆರಾರ್

ಸತ್ಯಾಂಶಗಳು:

ಗೆರಾರ್ ಕಾನಾನ್ ದೇಶದಲ್ಲಿ ಇದ್ದ ಒಂದು ಪಟ್ಟಣದ ಹೆಸರಾಗಿತ್ತು, ಅದು ಹೆಬ್ರೋನ್ ದೇಶಕ್ಕೆ ನೈರುತ್ಯಕ್ಕೆ ಮತ್ತು ಬೆರ್ಷೆಬಗೆ ವಾಯುವ್ಯ ದಿಕ್ಕಿನಲ್ಲಿತ್ತು.

- ಅಬ್ರಹಾಮನು ಮತ್ತು ಸಾರಳು ಗೆರಾರಿನಲ್ಲಿ ತಂಗಿದ್ದಾಗ ಅಬೀಮೆಲೆಕನು ಅಲ್ಲಿನ ಅರಸನಾಗಿದ್ದನು.
- ಇಸ್ರಾಯೇಲ್ಯರು ಕಾನಾನಿನಲ್ಲಿ ಜೀವಿಸುತ್ತಿರುವಾಗ ಫಿಲಿಷ್ಟಿಯರು ಗೆರಾರ್ ಪ್ರಾಂತ್ಯವನ್ನು ಅವರ ಅಧೀನದಲ್ಲಿಟ್ಟಿಕೊಂಡಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಹೇಗೆ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬೀಮೆಲೆಕನು, ಬೆರ್ಷೆಬ, ಹೆಬ್ರೋನ್, ಫಿಲಿಷ್ಟಿಯರು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.14:12-13
- ಆದಿ.20:1-3
- ಆದಿ.26:1
- ಆದಿ.26:6-8

ಪದ ಡೇಟಾ:

- Strong's: H1642

ಗೆಷೂರ್ಯ, ಗೆಷೂರ್ಯರು

ಪದದ ಅರ್ಥವಿವರಣೆ

ಅರಸನಾದ ದಾವೀದನ ಕಾಲದಲ್ಲಿ, ಗೆಷೂರ್ಯ ಎಂಬ ಊರು ಗಲಿಲಾಯ ಸಮುದ್ರ ತೀರದ ಪೂರ್ವ ದಿಕ್ಕಿನಲ್ಲಿ ಇಸ್ರಾಯೇಲ್ ಮತ್ತು ಅರಾಮ್ ದೇಶಗಳ ನಡುವೆ ಇದ್ದ ಚಿಕ್ಕ ಸಾಮ್ರಾಜ್ಯವಾಗಿತ್ತು.

- ಅರಸನಾದ ದಾವೀದನು ಗೆಷೂರ್ಯದ ಅರಸನ ಮಗಳಾದ ಮಾಕಳನ್ನು ವಿವಾಹ ಮಾಡಿಕೊಂಡನು ಮತ್ತು ಆಕೆ ಅವನಿಗೆ ಅಬ್ಷಾಲೋಮನನ್ನು ಹೆತ್ತಳು.
- ಅಬ್ಷಾಲೋಮನು ಅವನ ಸಹೋದರನಾದ ಅಮ್ನೋನನ್ನು ಕೊಂದನು, ನಂತರ ಯೆರೂಸಲೇಮಿನಿಂದ ಈಶಾನ್ಯ ದಿಕ್ಕಿನಲ್ಲಿ ಸುಮಾರು 140 ಕಿಲೋಮೀಟರ್ ದೂರದಲ್ಲಿದ್ದ ಗೆಷೂರ್ಯಕ್ಕೆ ತಪ್ಪಿಸಿಕೊಂಡುಹೋದನು. ಅಲ್ಲಿ ಅವನು ಮೂರು ವರ್ಷಗಳ ಕಾಲ ನಿವಾಸ ಮಾಡಿದನು.

(ಈ ಪದಗಳನ್ನು ಸಹ ನೋಡಿರಿ : ಅಬ್ಷಾಲೋಮ, ಅಮ್ನೋನ, ಅರಾಮ್, ಗಲಿಲಾಯ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:23-24
- 2 ಸಮು.03:2-3
- ಧರ್ಮೋ.03:14
- ಯೆಹೋ.12:3-5

ಪದ ಡೇಟಾ:

- Strong's: H1650

ಗೊಮೋರ

ಸತ್ಯಾಂಶಗಳು:

ಸೊದೋಮ್ ಹತ್ತಿರ ಫಲವತ್ತಾದ ಕಣಿವೆಯ ಹತ್ತಿರ ಗೊಮೋರ ಇತ್ತು, ಅಬ್ರಹಾಮನ ಸಹೋದರನಾದ ಲೋಟನು ಅಲ್ಲಿ ವಾಸಿಸುತ್ತೇನೆಂದು ಆಯ್ಕೆ ಮಾಡಿಕೊಂಡನು.

- ಸೊದೋಮ್ ಮತ್ತು ಗೊಮೋರ ಪಟ್ಟಣಗಳು ಎಲ್ಲಿವೆ ಎಂದು ನಿಖರವಾಗಿ ತಿಳಿಯದು, ಆದರೆ ಆ ಪಟ್ಟಣಗಳು ಲವಣಸಮುದ್ರದ ದಕ್ಷಿಣ ಭಾಗದಲ್ಲಿರುವ ಸಿದ್ದೀಮ್ ಹತ್ತಿರವಿರಬಹುದು ಎಂದು ಸೂಚನೆಗಳಿವೆ.
- ಸೊದೋಮ್ ಮತ್ತು ಗೊಮೋರ ಪಟ್ಟಣಗಳು ಇದ್ದ ಸ್ಥಳದಲ್ಲಿ ಅನೇಕ ಅರಸರು ಯುದ್ಧ ಮಾಡುವವರಾಗಿದ್ದರು.
- ಸೊದೋಮ್ ಮತ್ತು ಬೇರೆ ಪಟ್ಟಣಗಳ ಜೊತೆ ಲೋಟನಿಗೆ ಜಗಳವಾದಾಗ ಅಬ್ರಹಾಮನು ಮತ್ತು ಅವನ ಆಳುಗಳು ಲೋಟನನ್ನು ಬಿಡಿಸಿದರು.
- ಇದಾದ ಸ್ವಲ್ಪ ಕಾಲದ ನಂತರ, ಯೆಹೋವನು ಸೊದೋಮ್ ಮತ್ತು ಗೊಮೋರ ಪಟ್ಟಣಗಳಲ್ಲಿ ಜೀವನ ಮಾಡುತ್ತಿದ್ದ ಜನರ ದುಷ್ಟತನವನ್ನು ಕಂಡು ಅವುಗಳನ್ನು ನಾಶಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ: ಅಬ್ರಹಾಮ, ಬಾಬಿಲೋನ್, ಲೋಟ, ಲವಣಸಮುದ್ರ, ಸೊದೋಮ್)

ಸತ್ಯವೇದದ ವಾಕ್ಯಗಳು:

- 2 ಪೇತ್ರನು 2:6
- ಆದಿ 10:19
- ಆದಿ 14:1-2
- ಆದಿ 18:21
- ಯೆಶಯ 1:9
- ಮತ್ತಾಯ 10:15

ಪದ ಡೇಟಾ:

- Strong's: H6017

ಗೊಲ್ಗೊಥಾ

ಸತ್ಯಾಂಶಗಳು:

“ಗೊಲ್ಗೊಥಾ” ಎನ್ನುವುದು ಯೇಸುವನ್ನು ಶಿಲುಬೆಗೆ ಹಾಕಿದ ಸ್ಥಳದ ಹೆಸರಾಗಿದೆ. ಅದರ ಹೆಸರು ಅರಮಾಯ ಭಾಷೆಯಿಂದ ಬಂದಿದೆ, ಅದಕ್ಕೆ “ಕಪಾಲ” ಅಥವಾ “ಕಪಾಲ ಸ್ಥಳ” ಎಂದರ್ಥ.

- ಗೊಲ್ಗೊಥಾವು ಯೆರುಸಲೇಮ್ ನಗರದ ಗೋಡೆಗಳ ಹೊರಗೆ ಎಲ್ಲೋ ಹತ್ತಿರದಲ್ಲಿದೆ. ಇದು ಬಹುಶಃ ಒಲೀವ ಪರ್ವತದ ಇಳಿಜಾರಿನಲ್ಲಿ ನೆಲೆಗೊಂಡಿದೆ.
- ಸತ್ಯವೇದದ ಕೆಲವು ಹಳೆಯ ಆಂಗ್ಲ ಆವೃತ್ತಿಗಳಲ್ಲಿ, ಗೊಲ್ಗೊಥಾವನ್ನು "ಕಲ್ವಾರಿ" ಎಂದು ಅನುವಾದಿಸಲಾಗಿದೆ, ಇದು "ಕಪಾಲ" ಎಂಬ ಲ್ಯಾಟಿನ್ ಪದದಿಂದ ಬಂದಿದೆ.
- ಅನೇಕ ಸತ್ಯವೇದದ ಆವೃತ್ತಿಗಳು "ಗೊಲ್ಗೊಥಾ" ದಂತೆಯೇ ಕಾಣುವ ಅಥವಾ ಧ್ವನಿಸುವ ಪದವನ್ನು ಬಳಸುತ್ತವೆ ಏಕೆಂದರೆ ಅದರ ಅರ್ಥವನ್ನು ಈಗಾಗಲೇ ಸತ್ಯವೇದದ ಪಠ್ಯದಲ್ಲಿ ವಿವರಿಸಲಾಗಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಇವುಗಳನ್ನು ಸಹ ನೋಡಿರಿ : ಆರಾಮ್, ಒಲೀವ ಮರಗಳ ಗುಡ್ಡ)

ಸತ್ಯವೇದದ ಅನುಬಂಧ ವಾಕ್ಯಗಳು:

- ಯೋಹಾನ.19:17
- ಮಾರ್ಕ.15:22
- ಮತ್ತಾಯ.27:33

ಪದದ ಡೇಟಾ:

- Strong's: G11150

ಗೊಲ್ಯಾತನು

ಸತ್ಯಾಂಶಗಳು:

ದಾವೀದನು ಕೊಂದ ಗೊಲ್ಯಾತನು ಫಿಲಿಷ್ಟಿಯರ ಸೈನ್ಯದಲ್ಲಿ ಬಹಳ ಉದ್ದವಾಗಿ ಮತ್ತು ಭಾರಿ ಸೈನಿಕನಾಗಿದ್ದನು.

- ಗೊಲ್ಯಾತನು ಸುಮಾರು ಎರಡು ರಿಂದ ಮೂರೂ ಮೀಟರುಗಳ ಎತ್ತರವಿದ್ದನು. ಅವನ ಭಾರಿ ಶರೀರದ ಕಾರಣ ಗೊಲ್ಯಾತನನ್ನು ಮಹಾಶರೀರಕ ಎಂದು ಕರೆಯುತ್ತಿದ್ದರು.
- ಗೊಲ್ಯಾತನ ಬಳಿ ದಾವೀದನಿಗಿಂತ ಎತ್ತರವಿದ್ದರು ಮತ್ತು ಹೆಚ್ಚು ಆಯುಧಗಳಿದ್ದರು, ಯೆಹೋವನು ದಾವೀದನಿಗೆ ಗೊಲ್ಯಾತನನ್ನು ಸೋಲಿಸಲು ಶಕ್ತಿ ಸಾಮರ್ಥ್ಯವನ್ನು ಕೊಟ್ಟನು.
- ಗೊಲ್ಯಾತನ ಮೇಲೆ ದಾವೀದನು ವಿಜಯಹೊಂದಿದ ಕಾರಣವಾಗಿ ಫಿಲಿಷ್ಟಿಯರ ಮೇಲೆ ಇಸ್ರಾಯೇಲ್ಯರು ವಿಜಯಹೊಂದಿದರೆಂದು ಘೋಷಣೆಯಾಯಿತು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದಾವೀದ, ಫಿಲಿಷ್ಟಿಯರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.20:4-5
- 1 ಸಮು.17:4-5
- 1 ಸಮು.21:8-9
- 1 ಸಮು.22:9-10

ಪದ ಡೇಟಾ:

- Strong's: H1555

ಗೋಷೆನ್

ಪದದ ಅರ್ಥವಿವರಣೆ

ಗೋಷೆನ್ ಎನ್ನುವುದು ಐಗುಪ್ತ್ಯದ ಉತ್ತರ ಭಾಗದಲ್ಲಿ ನೈಲ್ ನದಿಯ ಹತ್ತಿರದಲ್ಲಿದ್ದ ಫಲವತ್ತಾದ ಪ್ರಾಂತ್ಯದ ಹೆಸರಾಗಿತ್ತು.

- ಯೋಸೇಫ್ ಐಗುಪ್ತ ದೇಶಕ್ಕೆ ಅರಸನಾಗಿದ್ದಾಗ, ಅವನ ತಂದೆ, ಸಹೋದರರು ಮತ್ತು ಅವರ ಕುಟುಂಬಗಳು ಕಾನಾನ್ ದೇಶದಲ್ಲಿ ಬರಗಾಲ ಬಂದ ಕಾರಣ ಗೋಷೆನಲ್ಲಿ ನಿವಾಸ ಮಾಡಲು ಬಂದರು.
- ಅವರು ಮತ್ತು ಅವರ ಸಂತತಿಯವರು ಗೋಷೆನಲ್ಲಿ ಸುಮಾರು 400 ವರ್ಷಗಳು ನಿವಾಸಮಾಡಿದರು, ಆದರೆ ಐಗುಪ್ತ ಫರೋಹನು ಅವರನ್ನು ಗುಲಾಮಗಿರಿಗೆ ಬಲವಂತ ಮಾಡಿದನು.
- ಕೊನೆಗೆ ಯೆಹೋವನು ಇಸ್ರಾಯೇಲ್ ಜನರನ್ನು ಗುಲಾಮಗಿರಿಯಿಂದ ಬಿಡಿಸಲು ಮತ್ತು ಗೋಷೆನಿನಿಂದ ಹೊರತರಲು ಮೋಶೆನನ್ನು ಕಳುಹಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ್ಯ, ಬರಗಾಲ, ಮೋಶೆ, ನೈಲ್ ಹೊಳೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.08:22-24
- ಆದಿ.45:9-11
- ಆದಿ.47:1-2
- ಆದಿ.50:7-9
- ಯೆಹೋ.10:40-41

ಪದ ಡೇಟಾ:

- Strong's: H1657

ಗ್ರೀಕ್, ಗ್ರೀಕನು ಗ್ರೀಕ್ ಪಂಡಿತ

ಸತ್ಯಾಂಶಗಳು:

“ಗ್ರೀಕ್” ಎನ್ನುವ ಪದವು ಗ್ರೀಸ್ ದೇಶದಲ್ಲಿ ಮಾತಾಡುವ ಭಾಷೆಯಾಗಿತ್ತು, ಗ್ರೀಕನು ಎಂದು ಗ್ರೀಸ್ ದೇಶದ ವ್ಯಕ್ತಿಯನ್ನು ಕರೆಯುತ್ತಾರೆ. ರೋಮಾ ಸಾಮ್ರಾಜ್ಯದಲ್ಲೆಲ್ಲಾ ಗ್ರೀಕ್ ಭಾಷೆಯನ್ನು ಮಾತಾಡುತ್ತಿದ್ದರು. “ಗ್ರೀಕನು” ಎಂದರೆ “ಗ್ರೀಕ್ ಮಾತಾಡುವವನು” ಎಂದರ್ಥ.

- ರೋಮಾ ಸಾಮ್ರಾಜ್ಯದಲ್ಲಿ ಯೆಹೂದ್ಯರಲ್ಲದ ಅನೇಕರು ಗ್ರೀಕ್ ಭಾಷೆಯನ್ನು ಮಾತಾಡುತ್ತಿದ್ದರು, ಆದಕಾರಣ ಹೊಸ ಒಡಂಬಡಿಕೆಯಲ್ಲಿ ಅನ್ಯರನ್ನು ಸೂಚಿಸಲು ವಿಶೇಷವಾಗಿ ಯೆಹೂದ್ಯರಿಂದ ಬೇರ್ಪಡಿಸಲು “ಗ್ರೀಕರು” ಎಂದು ಉಪಯೋಗಿಸಲ್ಪಟ್ಟಿದೆ.
- “ಯೆಹೂದ್ಯ ಗ್ರೀಕನು” ಅಥವಾ "ಗ್ರೀಕ್ ಪಂಡಿತರು" ಗ್ರೀಕ್ ಭಾಷೆ ಮಾತಾಡುತ್ತಿದ್ದ ಯೆಹೂದಿಯರನ್ನು ಸೂಚಿಸಲು ಉಪಯೋಗಿಸಲ್ಪಟ್ಟಿದೆ ಇವರು “ಇಬ್ರಿಯ ಭಾಷೆಯನ್ನು ಮಾತಾಡುವ ಯೆಹೂದ್ಯ”ರಿಂದ ಅಥವಾ ಅರಾಮಿಕ್ ಮಾತಾಡುವ ಯೆಹೂದಿಯರಿಂದ ಬೇರ್ಪಡಿಸಿ ಹೇಳಲು ಉಪಯೋಗಿಸುತ್ತಿದ್ದರು. "ಹೆಲೆನಿಸ್ಟ್ಸ್" ಎಂಬ ಪದವು ಗ್ರೀಕ್-ಮಾತನಾಡುವವರ ಗ್ರೀಕ್ ಪದದ ಉಚ್ಚಾರಣೆಯಿಂದ ಬಂದಿದೆ.
- “ಗ್ರೀಕರು” ಎನ್ನುವ ಪದವನ್ನು “ಗ್ರೀಕ್ ಮಾತಾಡುವ” ಅಥವಾ “ಗ್ರೀಕ್ ಸಂಪ್ರದಾಯದ” ಅಥವಾ “ಗ್ರೀಕ್” ಎಂದು ಅನುವಾದ ಮಾಡಬಹುದು.
- ಯಹೂದಿಯರಲ್ಲದವರನ್ನು ಸೂಚಿಸಲು “ಗ್ರೀಕ್” ಎನ್ನುವ ಪದವನ್ನು “ಅನ್ಯರು” ಎಂದು ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆರಾಮ್, ಅನ್ಯನು, ಗ್ರೀಸ್, ಇಬ್ರಿಯ, ರೋಮಾ)

ಸತ್ಯವೇದದ ವಾಕ್ಯಗಳು:

- ಅಪೊ.ಕೃತ್ಯ 6:1
- ಅಪೊ.ಕೃತ್ಯ 9:29
- ಅಪೊ.ಕೃತ್ಯ 11:20
- ಅಪೊ.ಕೃತ್ಯ 14:1-2
- ಕೊಲೊಸ್ಸೆ 3:11
- ಗಲಾತ್ಯ 2:3-5
- ಯೋಹಾನ 7:35

ಪದ ಡೇಟಾ:

- Strong's: H3125, G16720, G16730, G16740, G16750, G16760

ಗ್ರೀಸ್, ಗ್ರೀಕರು

ಸತ್ಯಾಂಶಗಳು:

ಹೊಸ ಒಡಂಬಡಿಕೆಯ ಕಾಲದಲ್ಲಿ, ಗ್ರೀಸ್ ರೋಮಾ ಸಾಮ್ರಾಜ್ಯದ ಸಂಸ್ಥಾನವಾಗಿತ್ತು.

- ಪ್ರಸ್ತುತ ಕಾಲದ ಗ್ರೀಸ್‌ಅಂತೆ, ಅದು ಮೆಡಿಟರೇನಿಯನ್ ಸಮುದ್ರ, ಏಜಿಯನ್ ಸಮುದ್ರ ಮತ್ತು ಅಯೋನಿ ಸಮುದ್ರಗಳ ಪರ್ಯಾಯ ದ್ವೀಪವಾಗಿತ್ತು (ಪೆನೆನ್ಸುಲ).
- ಗ್ರೀಸ್ನಲ್ಲಿದ್ದ ಅನೇಕ ಪ್ರಾಂತ್ಯಗಳನ್ನು ಅಪೊಸ್ತಲನಾದ ಪೌಲನು ಸಂದರ್ಶಿಸಿದನು ಮತ್ತು ಕೊರಿಂಥ, ಥೆಸಲೋನಿಕ, ಫಿಲಿಪ್ಪ ಪಟ್ಟಣಗಳಲ್ಲಿ ಹಾಗೂ ಬೇರೆ ಪ್ರಾಂತ್ಯಗಳಲ್ಲಿ ಸಹ ಸಭೆಗಳನ್ನು ಸ್ಥಾಪಿಸಿದನು.
- ಗ್ರೀಸ್ ದೇಶದವರನ್ನು "ಗ್ರೀಕರು" ಎಂದು ಕರೆಯುತ್ತಾರೆ ಮತ್ತು "ಗ್ರೀಕ್" ಅವರು ಮಾತಾಡುವ ಭಾಷೆಯಾಗಿರುತ್ತದೆ. ಅನೇಕವಾದ ರೋಮಾ ಸಂಸ್ಥಾನಗಳಲ್ಲಿ ಗ್ರೀಕ್ ಭಾಷೆ ಮಾತಾಡುತ್ತಿದ್ದರು, ಅವರಲ್ಲಿ ಯಹೂದಿಯರು ಸಹ ಇದ್ದರು.
- ಕೆಲವೊಮ್ಮೆ "ಗ್ರೀಕ್" ಎನ್ನುವ ಪದವನ್ನು ಅನ್ಯರಿಗೆ ಸೂಚಿಸಲು ಉಪಯೋಗಿಸಲಾಗಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕೊರಿಂಥ, ಅನ್ಯರು, ಗ್ರೀಕ್, ಇಬ್ರಿ, ಫಿಲಿಪ್ಪಿ, ಥೆಸಲೋನಿಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.08:20-21
- ದಾನಿ.10:20-21
- ದಾನಿ.11:1-2
- ಜೆಕರ್ಯ.09:11-13

ಪದ ಡೇಟಾ:

- Strong's: H3120, G1671

ಚಿದ್ಕೀಯ

ಸತ್ಯಾಂಶಗಳು:

ಚಿದ್ಕೀಯನು ಯೋಷೀಯ ಮಗನಾಗಿರುತ್ತಾನೆ, ಇವನು ಯೆಹೂದ್ಯ ಕೊನೆಯ ಅರಸನಾಗಿದ್ದನು (ಕ್ರಿ.ಪೂ.597-587). ಹಳೇ ಒಡಂಬಡಿಕೆಯಲ್ಲಿ ಚಿದ್ಕೀಯ ಎನ್ನುವ ಹೆಸರಿನ ಮೇಲೆ ಅನೇಕ ಜನರಿದ್ದಾರೆ.

- ಅರಸನಾದ ನೆಬುಕದ್ನೆಚ್ಚರನು ಅರಸನಾದ ಯೆಹೋಯಾಕೀನನನ್ನು ವಶಪಡಿಸಿಕೊಂಡನಂತರ ಮತ್ತು ಬಾಬೆಲೋನಿಯಾದಿಂದ ಅವನನ್ನು ಹೊರಗೆ ಕರೆದುಕೊಂಡು ಹೋದಾಗ ಯೆಹೂದಕ್ಕೆ ಚಿದ್ಕೀಯನನ್ನು ಅರಸನನ್ನಾಗಿ ಮಾಡಿದನು. ಚಿದ್ಕೀಯನು ಕೊನೆಗೆ ಎದುರುಬಿದ್ದನು, ಇದಕ್ಕೆ ಫಲಿತಾಂಶವಾಗಿ ನೆಬುಕದ್ನೆಚ್ಚರನು ಅವನನ್ನು ವಶಪಡಿಸಿಕೊಂಡು, ಯೆರೂಸಲೇಮೆಲ್ಲವನ್ನು ನಾಶಗೊಳಿಸಿದನು.
- ಚಿದ್ಕೀಯ ಎನ್ನುವ ಹೆಸರಿನ ಇನ್ನೊಬ್ಬ ಕಾನಾನನ ಮಗನಾಗಿದ್ದನು, ಇವನು ಇಸ್ರಾಯೇಲ್ ಅರಸನಾದ ಆಹಾಬನ ಕಾಲದಲ್ಲಿ ಸುಳ್ಳು ಪ್ರವಾದಿಯಾಗಿದ್ದನು.
- ಚಿದ್ಕೀಯ ಎನ್ನುವ ಹೆಸರಿನ ಮನುಷ್ಯನು ನೆಹೆಮೀಯನ ಕಾಲದಲ್ಲಿ ಕರ್ತನೊಂದಿಗೆ ಒಪ್ಪಂದ ಮಾಡಿದವರಲ್ಲಿ ಒಬ್ಬನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಆಹಾಬ, ಬಾಬೆಲೋನಿಯ, ಇಸ್ರಾಯೇಲ್ ರಾಜ್ಯ, ಲವಯೆಹೋಯಾಕೀನ್, ಯೆರೆಮೀಯ, ಯೋಷಿಯ, ಯೆಹೂದ, ನೆಬುಕದ್ನೆಚ್ಚರ, ನೆಹೆಮೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:15-16
- ಯೆರೆ.37:1-2
- ಯೆರೆ.39:1-3

ಪದ ಡೇಟಾ:

- Strong's: H6667

ಚೆಫನ್ಯ

ಸತ್ಯಾಂಶಗಳು:

ಚೆಫನ್ಯನು ಕೂಷಿಯನ ಮಗನಾಗಿದ್ದನು, ಈತನು ಅರಸನಾದ ಯೋಷೀಯನ ಕಾಲದಲ್ಲಿ ಪ್ರವಾದಿಸಿದ್ದನು ಮತ್ತು ಯೆರೂಸಲೇಮಿನಲ್ಲಿ ನಿವಾಸವಾಗಿದ್ದ ಪ್ರವಾದಿ. ಈತನು ಯೆರೆಮೀಯ ಕಾಲದಲ್ಲಿ ಜೀವಿಸಿದ ವ್ಯಕ್ತಿಯಾಗಿದ್ದನು.

- ಈತನು ಯೆಹೂದ್ಯ ಜನರು ಸುಳ್ಳು ದೇವರುಗಳನ್ನು ಆರಾಧನೆ ಮಾಡಿದ್ದಕ್ಕಾಗಿ ಅವರನ್ನು ಎಚ್ಚರಿಸಿದ ವ್ಯಕ್ತಿಯಾಗಿದ್ದನು. ಈತನ ಎಲ್ಲಾ ಪ್ರವಾದನೆಗಳು ಹಳೇ ಒಡಂಬಡಿಕೆಯಲ್ಲಿ ಚೆಫನ್ಯ ಗ್ರಂಥದಲ್ಲಿ ಬರೆಯಲ್ಪಟ್ಟಿವೆ.
- ಚೆಫನ್ಯ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಅನೇಕಮಂದಿ ವ್ಯಕ್ತಿಗಳಿದ್ದಾರೆ, ಅವರಲ್ಲಿ ಯಾಜಕರೇ ಹೆಚ್ಚಿನವರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಯೆರೆಮೀಯ, ಯೋಷೀಯ, ಯಾಜಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.25:18-19
- ಯೆರೆ.52:24-25
- ಜೆಕರ್ಯ.06:9-11
- ಚೆಫನ್ಯ.01:1-3

ಪದ ಡೇಟಾ:

- Strong's: H6846

ಚೋಗರ

ಸತ್ಯಾಂಶಗಳು:

ಚೋಗರ ಎನ್ನುವುದು ಒಂದು ಚಿಕ್ಕ ಪಟ್ಟಣ, ದೇವರು ಸೊದೊಮ್ ಮತ್ತು ಗೊಮೋರಗಳನ್ನು ನಾಶಗೊಳಿಸಿದಾಗ ಲೋಟನು ಹೊರಟು ಹೋಗಿ ನಿವಾಸ ಮಾಡಿದ ಊರಾಗಿತ್ತು.

- ಇದು ಸಂಪ್ರದಾಯಿಕವಾಗಿ ಬೇಲ ಎಂದು ಕರೆಯಲ್ಪಡುತ್ತದೆ, ಆದರೆ ಇದಕ್ಕೆ "ಚೋಗರ' ಎಂದು ಮರು ಹೆಸರು ಇಡಲಾಗಿರುತ್ತದೆ, ದೇವರು ಈ ಚಿಕ್ಕ ಪಟ್ಟಣವನ್ನು ಬಿಟ್ಟುಬಿಡು ಎಂದು ಲೋಟನು ದೇವರಲ್ಲಿ ಕೇಳಿಕೊಂಡಿದ್ದನು.
- ಚೋಗರ ಎನ್ನುವ ಪಟ್ಟಣವು ಯೊರ್ದನ್ ಹೊಳೆಯ ಬಯಲಿನಲ್ಲಿದ್ದಿತ್ತೆಂದು ಹೇಳಿಕೆ ಇದೆ ಅಥವಾ ಮೃತ ಸಮುದ್ರದ ದಕ್ಷಿಣ ಕೊನೆಯ ಭಾಗದಲ್ಲಿ ಕಂಡುಬರುತ್ತಿರಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಲೋಟ, ಸೊದೊಮ್, ಗೊಮೋರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.34:1-3
- ಆದಿ.13:10-11
- ಆದಿ.14:1-2
- ಆದಿ.19:21-22
- ಆದಿ.19:23-25

ಪದ ಡೇಟಾ:

- Strong's: H6820

ಜಕ್ಕಾಯ

ಸತ್ಯಾಂಶಗಳು:

ಜಕ್ಕಾಯ ಎನ್ನುವ ವ್ಯಕ್ತಿ ಅನೇಕ ಸಮೂಹಗಳ ಮಧ್ಯೆದಲ್ಲಿರುವ ಯೇಸುವನ್ನು ನೋಡುವುದಕ್ಕೆ ಮರವನ್ನು ಹತ್ತಿದ ಯೆರಿಕೋ ಪಟ್ಟಣದಿಂದ ಬಂದ ಸುಂಕ ವಸೂಲಿ ಮಾಡುವವನಾಗಿದ್ದನು,

- ಜಕ್ಕಾಯನು ಯೇಸುವಿನ ನಂಬಿದಾಗ ಸಂಪೂರ್ಣವಾಗಿ ಮಾರ್ಪಾಟು ಹೊಂದಿದನು.
- ಇವನು ಜನರನ್ನು ಮೋಸಗೊಳಿಸ ಪಾಪದ ವಿಷಯದಲ್ಲಿ ಪಶ್ಚಾತ್ತಾಪವನ್ನು ಹೊಂದಿ, ಬಡವರಿಗೆ ತನ್ನ ಆಸ್ತಿಪಾಸ್ತಿಗಳಲ್ಲಿ ಅರ್ಧಭಾಗವನ್ನು ಕೊಡುವುದಕ್ಕೆ ವಾಗ್ದಾನ ಮಾಡಿದ್ದನು.
- ಇವನು ಜನರು ಕಟ್ಟಬೇಕಾದ ಸುಂಕಗಳಿಗಿಂತ ಹೆಚ್ಚಾದ ಹಣವನ್ನು ಮಾಡಿದ್ದಕ್ಕಾಗಿ, ಅವರು ಕೊಟ್ಟಿರುವ ಹಣಕ್ಕೆ ನಾಲ್ಕುರಷ್ಟು ಹೆಚ್ಚಾಗಿ ಜನರಿಗೆ ಹಿಂದಿರುಗಿಸುತ್ತೇನೆಂದು ಆತನು ವಾಗ್ದಾನ ಮಾಡಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನಂಬು, ವಾಗ್ದಾನ, ಪಶ್ಚಾತ್ತಾಪಪಡು, ಪಾಪ, ಸುಂಕ, ಸುಂಕ ವಸೂಲಿಗ,)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.19:1-2
- ಲೂಕ.19:5-7

ಪದ ಡೇಟಾ:

- Strong's: G2195

ಜೆಕರ್ಯ (ಹಳೇ ಒಡಂಬಡಿಕೆ)

ಸತ್ಯಾಂಶಗಳು:

ಜೆಕರ್ಯ ಎನ್ನುವ ವ್ಯಕ್ತಿ ಪಾರಸಿಯ ಅರಸನಾಗಿರುವ ದಾರ್ಯಾವೇಷನ ಆಳ್ವಿಕೆಯಲ್ಲಿ ಪ್ರವಾದಿಸಿದ ಪ್ರವಾದಿಯಾಗಿದ್ದನು. ಹಳೇ ಒಡಂಬಡಿಕೆಯಲ್ಲಿರುವ ಜೆಕರ್ಯ ಪುಸ್ತಕದಲ್ಲಿ ಈತನ ಪ್ರವಾದನೆಗಳೆಲ್ಲವು ಒಳಗೊಂಡಿರುತ್ತವೆ, ದೇವಾಲಯವನ್ನು ತಿರುಗಿ ಕಟ್ಟುವುದಕ್ಕೆ ಸೆರೆಯಿಂದ ಬಂದಿರುವವರನ್ನು ಬೇಡುವ ಮಾತುಗಳನ್ನು ಈ ಪುಸ್ತಕದಲ್ಲಿ ನೋಡಬಹುದು.

- ಪ್ರವಾದಿಯಾದ ಜೆಕರ್ಯನು ಎಜ್ರಾ, ನೆಹೆಮೀಯ, ಜೆರುಬ್ಬಾಬೆಲ್ ಮತ್ತು ಹಗ್ಗಾಯರ ಕಾಲದಲ್ಲಿಯೇ ಜೀವಿಸಿದ್ದನು. ಹಳೇ ಒಡಂಬಡಿಕೆಯ ಕಾಲದಲ್ಲಿ ಪ್ರವಾದಿಗಳಲ್ಲಿ ಕೊನೆಯದಾಗಿ ಹತ್ಯೆಗೆ ಗುರಿಯಾದ ಪ್ರವಾದಿಯಾಗಿದ್ದನೆಂದು ಯೇಸು ಹೇಳಿದ್ದನು.
- ದಾವೀದನ ಕಾಲದಲ್ಲಿ ದೇವಾಲಯದ ಪ್ರವೇಶ ದ್ವಾರದ ಬಳಿ ಇರುವ ಕಾವಲುಗಾರನಿಗೂ ಜೆಕರ್ಯ ಎನ್ನುವ ಹೆಸರಿದ್ದಿತ್ತು.
- ಅರಸನಾದ ಯೆಹೋಷಾಫಾಟನ ಮಕ್ಕಳಲ್ಲಿ ಒಬ್ಬನಿಗೆ ಜೆಕರ್ಯ ಎನ್ನುವ ಹೆಸರು ಇದ್ದಿತ್ತು, ಇವನು ತನ್ನ ತಮ್ಮನಾದ ಯೆಹೋರಾಮನಿಂದ ಸಾವಿಗೆ ಗುರಿಯಾಗಿದ್ದನು.
- ಜೆಕರ್ಯ ಎನ್ನುವ ಹೆಸರಿನ ಮೇಲೆ ಯಾಜಕನಿದ್ದನು, ಇವನು ಇಸ್ರಾಯೇಲ್ಯರನ್ನು ತಾವು ಮಾಡುತ್ತಿರುವ ವಿಗ್ರಹಾರಾಧನೆಯ ತಪ್ಪಿಗಾಗಿ ಗದರಿಸಿದ್ದರಿಂದ, ಅವರು ಅವನನ್ನು ಕಲ್ಲುಗಳಿಂದ ಹೊಡೆದು ಸಾಯಿಸಿದ್ದರು.
- ಅರಸನಾದ ಜೆಕರ್ಯ ಯಾರೊಬ್ಬಾಮನ ಮಗನಾಗಿದ್ದನು, ಇವನು ತನ್ನ ಮರಣಿಸುವುದಕ್ಕೆ ಮುಂಚಿತವಾಗಿ ಕೇವಲ ಆರು ತಿಂಗಳು ಇಸ್ರಾಯೇಲ್ಯರನ್ನು ಪಾಲಿಸಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ದಾರ್ಯಾವೇಷ, ಎಜ್ರಾ, ಯೆಹೋಷಾಫಾಟ, ಯಾರೊಬ್ಬಾಮ, ನೆಹೆಮೀಯ, ಜೆರುಬ್ಬಾಬೆಲ್,)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಜ್ರಾ.05:1-2
- ಮತ್ತಾಯ.23:34-36
- ಜೆಕರ್ಯ.01:1-3

ಪದ ಡೇಟಾ:

- Strong's: H2148

ಜೆಕರ್ಯ (ಹೊಸ ಒಡಂಬಡಿಕೆ)

ಸತ್ಯಾಂಶಗಳು:

ಹೊಸ ಒಡಂಬಡಿಕೆಯಲ್ಲಿ ಜೆಕರ್ಯ ಎನ್ನುವ ವ್ಯಕ್ತಿ ಯೆಹೂದ್ಯ ಯಾಜಕನಾಗಿದ್ದನು, ಈತನು ಸ್ನಾನಿಕನಾದ ಯೋಹಾನನಿಗೆ ತಂದೆಯಾಗಿದ್ದನು.

- ಜೆಕರ್ಯ ದೇವರನ್ನು ಪ್ರೀತಿಸಿದ್ದನು ಮತ್ತು ಆತನಿಗೆ ವಿಧೇಯನಾಗಿದ್ದನು.
- ಅನೇಕ ವರ್ಷಗಳ ಕಾಲ ಜೆಕರ್ಯ ಮತ್ತು ತನ್ನ ಹೆಂಡತಿಯಾದ ಎಲೀಸಬೇತಳು ಮಗುವಾಗಿ (ಸಂತಾನಕ್ಕಾಗಿ) ನಿರಂತರವಾಗಿ ಪ್ರಾರ್ಥನೆ ಮಾಡಿದ್ದರು, ಆದರೆ ಅವರಿಗೆ ಸಂತಾನವಾಗಿದ್ದಿಲ್ಲ. ಆದನಂತರ ಅವರು ತುಂಬಾ ವೃದ್ಧಾಪ್ಯ ಸ್ಥಿತಿಗೆ ಬಂದಾಗ, ದೇವರು ಅವರ ಪ್ರಾರ್ಥನೆಗಳನ್ನು ಕೇಳಿಸಿಕೊಂಡು, ಅವರಿಗೆ ಮಗುವನ್ನು ಅನುಗ್ರಹಿಸಿದನು.
- ಜೆಕರ್ಯನು ತನ್ನ ಮಗನು ಮೆಸ್ಸೀಯನಿಗಾಗಿ ಮಾರ್ಗವನ್ನು ಸಿದ್ಧಪಡಿಸುವ ಮತ್ತು ಪ್ರಕಟಿಸುವ ಪ್ರವಾದಿಯಾಗುತ್ತಾನೆಂದು ಪ್ರವಾದಿಸಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ಎಲೀಸಬೆತ್, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.01:5-7
- ಲೂಕ.01:21-23
- ಲೂಕ.01:39-41
- ಲೂಕ.03:1-2

ಸತ್ಯವೇದದಿಂದ ಉದಾಹರಣೆಗಳು:

- **22:01** ಆಕಸ್ಮಿಕವಾಗಿ ದೇವರಿಂದ ಸಂದೇಶವನ್ನು ಪಡೆದುಕೊಂಡು ದೇವದೂತ _ ಜೆಕರ್ಯ _ ಎನ್ನುವ ವೃದ್ಧ ಪ್ರವಾದಿಯ ಬಳಿಗೆ ಬಂದನು. _ ಜೆಕರ್ಯ _ ಮತ್ತು ತನ್ನ ಹೆಂಡತಿ ಎಲೀಸಬೇತಳು ದೈವಿಕ ಜನರಾಗಿದ್ದರು, ಆದರೆ ಆಕೆಗೆ ಮಕ್ಕಳಾಗಿರಲಿಲ್ಲ.
- **22:02** “ನಿನ್ನ ಹೆಂಡತಿ ಗಂಡು ಮಗುವನ್ನು ಹೆತ್ತುವಳು. ನೀನು ಅವನಿಗೆ ಯೋಹಾನ ಎಂದು ಹೆಸರಿಡಬೇಕು” ಎಂದು ದೂತ _ ಜೆಕರ್ಯನಿಗೆ _ ಹೇಳಿದನು.
- **22:03** ಆಕಸ್ಮಿಕವಾಗಿ _ **ಜೆಕರ್ಯನಿಗೆ** _ ಮಾತುಗಳು ನಿಂತುಹೋದವು (ಮೂಕನಾದನು).
- **22:07** _ **ಜೆಕರ್ಯನು** _ ತಿರುಗಿ ಮಾತನಾಡುವುದಕ್ಕೆ ದೇವರು ಅನುಮತಿ ನೀಡಿದನು.

ಪದ ಡೇಟಾ:

- Strong's: G2197

ಜೆಬುಲೋನ

ಸತ್ಯಾಂಶಗಳು:

ಜೆಬುಲೋನ ಎನ್ನುವ ವ್ಯಕ್ತಿ ಯಾಕೋಬನಿಗೆ ಹುಟ್ಟಿದ ಕೊನೆಯ ಮಗನಾಗಿದ್ದನು ಮತ್ತು ಇಸ್ರಾಯೇಲಿನ ಹನ್ನೆರಡು ಕುಲಗಳಲ್ಲಿ ಈ ಹೆಸರು ಒಂದಾಗಿರುತ್ತದೆ.

- ಜೆಬುಲೋನ ಇಸ್ರಾಯೇಲ್ ಕುಲಕ್ಕೆ ಲವಣ ಸಮುದ್ರದ ಪಶ್ಚಿಮ ಭಾಗದಲ್ಲಿರುವ ಭೂಭಾಗವನ್ನು ನೇರವಾಗಿ ಕೊಡಲ್ಪಟ್ಟಿರುತ್ತದೆ.
- ಕೆಲವೊಂದುಬಾರಿ "ಜೆಬುಲೋನ" ಎನ್ನುವ ಹೆಸರು ಈ ಇಸ್ರಾಯೇಲ್ ಕುಲವು ನಿವಾಸವಾಗಿರುವ ಸ್ಥಳವನ್ನು ಅಥವಾ ಭೂಮಿಯನ್ನು ಸೂಚಿಸುವುದಕ್ಕೆ ಕೂಡ ಉಪಯೋಗಿಸಲ್ಪಟ್ಟಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯಾಕೋಬ, ಲೇಯಾ, ಲವಣ ಸಮುದ್ರ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.01:1-5
- ಆದಿ.30:19-21
- ಯೆಶಯಾ.09:1-2
- ನ್ಯಾಯಾ.04:10
- ಮತ್ತಾಯ.04:12-13
- ಮತ್ತಾಯ.04:14-16

ಪದ ಡೇಟಾ:

- Strong's: H2074, H2075, G2194

ಜೆಬೆದಾಯ

ಸತ್ಯಾಂಶಗಳು:

ಜೆಬೆದಾಯ ಎನ್ನುವ ವ್ಯಕ್ತಿ ಗಲಿಲಾಯದ ಬೆಸ್ತನಾಗಿದ್ದನು, ಇವನು ತನ್ನ ಇಬ್ಬರು ಗಂಡು ಮಕ್ಕಳಾಗಿರುವ ಅಂದರೆ ಯೇಸುವಿನ ಶಿಷ್ಯರಾಗಿರುವ ಯಾಕೋಬ ಮತ್ತು ಯೋಹಾನ ಮೂಲಕ ಪರಿಚಿತನಾಗಿರುತ್ತಾನೆ. ಅವರಿಬ್ಬರನ್ನು ಹೊಸ ಒಡಂಬಡಿಕೆಯಲ್ಲಿ "ಜೆಬೆದಾಯನ ಮಕ್ಕಳು" ಎಂಬುದಾಗಿ ಗುರುತಿಸಲ್ಪಟ್ಟಿರುತ್ತಾರೆ.

- ಜೆಬೆದಾಯನ ಮಕ್ಕಳು ಕೂಡ ಬೆಸ್ತರಾಗಿದ್ದರು ಮತ್ತು ಮೀನುಗಳನ್ನು ಹಿಡಿಯುವುದಕ್ಕೆ ತನ್ನೊಂದಿಗೆ ಕೆಲಸ ಮಾಡುತ್ತಿದ್ದರು.
- ಯಾಕೋಬ ಮತ್ತು ಯೋಹಾನರು ತನ್ನ ತಂದೆಯೊಂದಿಗೆ ಮೀನುಗಳನ್ನು ಹಿಡಿಯುವ ಕೆಲಸವನ್ನು ಬಿಟ್ಟು, ಯೇಸುವನ್ನು ಹಿಂಬಾಲಿಸುವುದಕ್ಕೆ ಹೋದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಶಿಷ್ಯ, ಬೆಸ್ತರು ಮೀನುಗಾರರು, ಯಾಕೋಬ ಜೆಬೆದಾಯನ ಮಗ, ಯೋಹಾನ ಅಪೊಸ್ತಲ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.21:1-3
- ಲೂಕ.05:8-11
- ಮಾರ್ಕ.01:19-20
- ಮತ್ತಾಯ.04:21-22
- ಮತ್ತಾಯ.20:20-21
- ಮತ್ತಾಯ.26:36-38

ಪದ ಡೇಟಾ:

- Strong's: G2199

ಜೆರುಬ್ಬಾಬೆಲ್

ಸತ್ಯಾಂಶಗಳು:

ಜೆರುಬ್ಬಾಬೆಲ್ ಎಂಬುವುದು ಹಳೇ ಒಡಂಬಡಿಕೆಯಲ್ಲಿ ಇಬ್ಬರು ಇಸ್ರಾಯೇಲ್ ಪುರುಷರ ಹೆಸರು.

- ಇವರಲ್ಲಿ ಒಬ್ಬರು ಚಿದ್ಕೀಯ ಮತ್ತು ಯೆಹೋಯಾಕಿಮರ ಸಂತಾನದವನು.
- ಇನ್ನೊಬ್ಬ ಜೆರುಬ್ಬಾಬೆಲ್ ಶಯೇಲ್ತೀಯೇಲ್ ಮಗನಾಗಿರುತ್ತಾನೆ, ಇವನು ಪಾರಸಿಯ ಅರಸನಾದ ಕೋರೆಷನು ಇಸ್ರಾಯೇಲ್ಯರನ್ನು ತಮ್ಮ ಬಾಬೆಲೋನಿಯ ಸೆರೆಯಿಂದ ಬಿಡುಗಡೆ ಮಾಡಿದಾಗ, ಎಜ್ರಾ ಮತ್ತು ನೆಹೆಮೀಯ ಕಾಲದಲ್ಲಿ ಯೆಹೂದ್ಯ ಕುಲಕ್ಕೆ ನಾಯಕನಾಗಿದ್ದನು,
- ಜೆರುಬ್ಬಾಬೆಲ್ ಮತ್ತು ಮಹಾ ಯಾಜಕನಾಗಿರುವ ಯೆಹೋಶುವನು ಅವರಲ್ಲಿದ್ದು ದೇವರ ಯಜ್ಞವೇದಿಯನ್ನು ಮತ್ತು ದೇವಾಲಯವನ್ನು ತಿರುಗಿ ನಿರ್ಮಿಸುವುದರಲ್ಲಿ ಸಹಾಯ ಮಾಡಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ಸೆರೆ, ಕೋರೆಷ, ಎಜ್ರಾ, ಮಹಾ ಯಾಜಕ, ಯೆಹೋಯಾಕೀಮ, ಯೆಹೋಶುವ, ಯೆಹೂದ, ನೆಹೆಮೀಯ, ಪಾರಸಿಯ, ಚಿದ್ಕೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:19-21
- ಎಜ್ರಾ.02:1-2
- ಎಜ್ರಾ.03:8-9
- ಲೂಕ.03:27-29
- ಮತ್ತಾಯ.01:12-14

ಪದ ಡೇಟಾ:

- Strong's: H2216, H2217, G2216

ಜೊಂಡುಗಳ ಸಮುದ್ರ, ಕೆಂಪು ಸಮುದ್ರ

ಸತ್ಯಾಂಶಗಳು:

“ಜೊಂಡುಗಳ ಸಮುದ್ರ” ಎನ್ನುವುದು ಐಗುಪ್ತ ಮತ್ತು ಅರೇಬಿಯಾ ಮಧ್ಯೆದಲ್ಲಿರುವ ನೀರಿನ ಭಾಗದ ಹೆಸರಾಗಿರುತ್ತದೆ. ಈಗ ಇದನ್ನು “ಕೆಂಪು ಸಮುದ್ರ” ಎಂದು ಕರೆಯುತ್ತಿದ್ದಾರೆ.

- ಕೆಂಪು ಸಮುದ್ರವು ತುಂಬಾ ಉದ್ದವಾಗಿದ್ದು ಮತ್ತು ಇಕ್ಕಟ್ಟಾಗಿರುತ್ತದೆ. ಇದು ಒಂದು ಕೆರೆಗಿಂತ ಅಥವಾ ನದಿಗಿಂತ ದೊಡ್ಡದಾಗಿರುತ್ತದೆ, ಆದರೆ ಒಂದು ಸಾಗರಕ್ಕಿಂತ ತುಂಬಾ ಚಿಕ್ಕದಾಗಿರುತ್ತದೆ.
- ಇಸ್ರಾಯೇಲ್ಯರು ಐಗುಪ್ತದಿಂದ ಬಿಡುಗಡೆಯಾಗಿ ಬಂದಾಗ ಅವರು ಕೆಂಪು ಸಮುದ್ರವನ್ನು ದಾಟಿದ್ದರು. ದೇವರು ಅದ್ಭುತವನ್ನು ಮಾಡಿದ್ದರು ಮತ್ತು ಆ ಸಮುದ್ರದ ನೀರನ್ನು ಎರಡು ಭಾಗಗಳನ್ನಾಗಿ ಮಾಡಿದರು, ಇದರಿಂದ ಜನರು ಒಣ ನೆಲದ ಮೇಲೆ ನಡೆದು ಆ ಸಮುದ್ರವನ್ನು ದಾಟಿದರು.
- ಕಾನಾನ್ ದೇಶವು ಈ ಸಮುದ್ರದ ಉತ್ತರ ಭಾಗದಲ್ಲಿರುತ್ತದೆ.
- ಇದನ್ನು “ಜೊಂಡು ಸಮುದ್ರ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ: ಅರೇಬಿಯಾ. ಕಾನಾನ್, ಐಗುಪ್ತ)

ಸತ್ಯವೇದದ ವಾಕ್ಯಗಳು:

- ಅಪೊ.ಕೃತ್ಯ 7:35-37
- ವಿಮೋ 13:17-18
- ಯೆಹೋ 4:22-24
- ಅರಣ್ಯ 14:23-25

ಸತ್ಯವೇದದ ಕಥೆಗಳಿಂದ ಉದಾಹರಣೆಗಳು:

- **12:4** ಐಗುಪ್ತ ಸೈನ್ಯವು ಹಿಂದಟ್ಟಿ ಬರುತ್ತಿದೆಯೆಂದು ಇಸ್ರಾಯೇಲ್ಯರು ನೋಡಿದಾಗ, ಅವರು ಫರೋಹನ ಸೈನ್ಯದವರಿಂದಲೂ ಮತ್ತು _ ಕೆಂಪು ಸಮುದ್ರದಲ್ಲಿ _ ಸಿಕ್ಕಿ ಬೀಳುತ್ತೇವೆಂದು ತಿಳಿದಿದ್ದರು.
- _12:5 _ ಕೆಂಪು ಸಮುದ್ರದ _ "ಮೂಲಕ ಹಾದು ಹೋಗಬೇಕೆಂದು ಜನರಿಗೆ ಹೇಳು” _ಎಂದು ದೇವರು ಮೋಶೆಗೆ ಹೇಳಿದನು.
- **13:1** ದೇವರು ಇಸ್ರಾಯೇಲ್ಯರನ್ನು _ ಕೆಂಪು ಸಮುದ್ರದ _ ಮೂಲಕ ನಡೆಸಿದನಂತರ, ಆತನು ಅವರನ್ನು ಸೀನಾಯಿ ಎನ್ನುವ ಪರ್ವತದ ಕಡೆಗೆ ಅರಣ್ಯದ ಮೂಲಕ ನಡೆಸಿದನು.

ಪದ ಡೇಟಾ:

- Strong's: H3220, H5488, G20630, G22810

ತಾಮಾರ

ಸತ್ಯಾಂಶಗಳು:

ತಾಮಾರ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಅನೇಕಮಂದಿ ಸ್ತ್ರೀಯರಿದ್ದಾರೆ. ಈ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಅನೇಕ ಪಟ್ಟಣಗಳಿವೆ ಅಥವಾ ಅನೇಕ ಸ್ಥಳಗಳಿವೆ.

ತಾಮಾರಳು ಯೆಹೂದ ಸೊಸೆಯಾಗಿದ್ದಳು. ಈಕೆ ಯೇಸುವಿನ ಪೂರ್ವಜನಾಗಿರುವ ಪೆರೆಚನಿಗೆ ಜನನವನ್ನು ಕೊಟ್ಟಿದ್ದಳು.

- ಅರಸನಾದ ದಾವೀದನ ಹೆಣ್ಣು ಮಕ್ಕಳಲ್ಲಿ ತಾಮಾರಳೆನ್ನುವವಳು ಇದ್ದಳು; ಈಕೆ ಅಬ್ಷಾಲೋಮನ ಸಹೋದರಿಯಾಗಿದ್ದಳು. ತನ್ನ ಸಹೋದರ ಅಮ್ನೋನನು ಆಕೆಯನ್ನು ಮಾನಭಂಗ ಮಾಡಿದ್ದನು ಮತ್ತು ಆಕೆಯನ್ನು ಒಬ್ಬಂಟಿಯಾಗಿರಲು ಬಿಟ್ಟು ಬಿಟ್ಟಿದ್ದನು.
- ಅಬ್ಷಾಲೋಮನಿಗೆ ತಾಮಾರ ಎನ್ನುವ ಹೆಸರಿನ ಮೇಲೆ ಮಗಳಿದ್ದಿದ್ದಳು.
- “ಹಚಚೋನ್ ತಾಮಾರ್” ಎಂದು ಕರೆಯಲ್ಪಡುವ ಪಟ್ಟಣವು ಲವಣ ಸಮುದ್ರದ ದಡೆಯಲ್ಲಿರುವ ಪಶ್ಚಿಮ ಭಾಗದಲ್ಲಿರುವ ಎಂಗೆದೀ ಪಟ್ಟಣವು ಒಂದೇಯಾಗಿದ್ದಿತ್ತು. “ಬಾಳ್ ತಾಮಾರ್” ಎನ್ನುವುದೂ ಇದೆ, ಮತ್ತು “ತಾಮಾರ್” ಎಂದು ಕರೆಯಲ್ಪಡುವ ಸ್ಥಳಕ್ಕೆ ಸಾಧಾರಣವಾಗಿ ಪಟ್ಟಣಗಳಿಂದ ವಿಭಿನ್ನವಾಗಿ ಕರೆಯುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ಅಬ್ಷಾಲೋಮ, ಪೂರ್ವಜ, ಅಮ್ನೋನ್, ದಾವೀದ, ಪೂರ್ವಜ, ಯೆಹೂದ, ಲವಣ ಸಮುದ್ರ)

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:3-4
- 2 ಸಮು.13:1-2
- 2 ಸಮು.14:25-27
- ಆದಿ.38:6-7
- ಆದಿ.38:24-26
- ಮತ್ತಾಯ.01:1-3

ಪದ ಡೇಟಾ:

- Strong's: H1193, H2688, H8412, H8559

ತಾರ್ಷಿಷ್

ಸತ್ಯಾಂಶಗಳು:

ತಾರ್ಷಿಷ್ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಇಬ್ಬರು ವ್ಯಕ್ತಿಗಳಿದ್ದಾರೆ. ಮತ್ತು ಈ ಹೆಸರಿನ ಮೇಲೆ ಒಂದು ಪಟ್ಟಣವೂ ಇರುತ್ತದೆ.

- ಯೆಫೆತ್ ಮೊಮ್ಮೊಕ್ಕಳಲ್ಲಿ ತಾರ್ಷಿಷ್ ಒಬ್ಬನಾಗಿದ್ದನು.
- ಅರಸನಾದ ಅಹಷ್ವೆರೋಷನ ಬಳಿಯಿರುವ ಜ್ಞಾನಿಗಳಲ್ಲಿ ತಾರ್ಷಿಷನು ಒಬ್ಬನಾಗಿದ್ದನು.
- ತಾರ್ಷಿಷ್ ಪಟ್ಟಣವು ಅತೀ ಹೆಚ್ಚಾಗಿ ಅಭಿವೃದ್ಧಿ ಹೊಂದಿದ ಬಂದರು ಪಟ್ಟಣವಾಗಿದ್ದಿತ್ತು, ಆಲ್ಲಿರುವ ಹಡಗುಗಳು ಬೆಲೆಯುಳ್ಳ ವಸ್ತುಗಳನ್ನು ಕೊಂಡುಕೊಳ್ಳಲು, ಮಾರಲು ಅಥವಾ ವ್ಯಾಪಾರ ಮಾಡಲು ನಡೆಸಲ್ಪಡುತ್ತಿದ್ದವು.
- ತೂರ್ ಪಟ್ಟಣದೊಂದಿಗೆ ಈ ಪಟ್ಟಣವು ಸಹಕಾರದಲ್ಲಿದ್ದಿತ್ತು ಮತ್ತು ಇಸ್ರಾಯೇಲಿನಿಂದ ಸ್ವಲ್ಪ ದೂರದಲ್ಲಿರುವ ಸಮುದ್ರ ದಡೆಯಲ್ಲಿರುವ ಪಟ್ಟಣ ಎಂದು ಆಲೋಚನೆ ಮಾಡುತ್ತಿದ್ದರು, ಬಹುಶಃ ಸ್ಪೇನ್ ದಕ್ಷಿಣ ಕರಾವಳಿ ಪ್ರಾಂತ್ಯ ಎಂದು ಕರೆಯುತ್ತಿರಬಹುದು.
- ಹಳೇ ಒಡಂಬಡಿಕೆ ಪ್ರವಾದಿಯಾದ ಯೋನನು ದೇವರ ಆಜ್ಞೆಯ ಪ್ರಕಾರ ನಿನೆವೆಗೆ ಹೋಗಿ ಸುವಾರ್ತೆಯನ್ನು ಪ್ರಕಟಿಸುವುದಕ್ಕೆ ವಿಧೇಯತೆ ತೋರಿಸುವುದರ ಬದಲಾಗಿ ತಾರ್ಷಿಷ್ ಪಟ್ಟಣಕ್ಕೆ ಹೋಗುತ್ತಿರುವ ಹಡಗಿನ ಮೇಲೆ ಪ್ರಯಾಣ ಮಾಡಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಎಸ್ತೇರಳು, ಯೆಫೆತ್, ಯೋನ, ನಿನೆವೆ, ಪೊಯಿನಿಕೆ, ಜೋಯಿಸರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.10:2-5
- ಯೆಶಯಾ.02:14-16
- ಯೆರೆ.10:8-10
- ಯೋನ.01:1-3
- ಕೀರ್ತನೆ.048:7-8

ಪದ ಡೇಟಾ:

- Strong's: H8659

ತಾರ್ಸ

ಸತ್ಯಾಂಶಗಳು:

ತಾರ್ಸ ಎನ್ನುವುದು ಕಿಲಿಕ್ಯ ರೋಮಾ ಸೀಮೆಯಲ್ಲಿನ ಅಭಿವೃದ್ಧಿ ಹೊಂದಿದ ಪಟ್ಟಣವಾಗಿದ್ದಿತ್ತು, ಇದೀಗ ದಕ್ಷಿಣ ಕೇಂದ್ರ ಟರ್ಕಿಯಾಗಿ ಕರೆಯಲ್ಪಡುತ್ತಿದೆ.

- ತಾರ್ಸ ಎನ್ನುವ ಈ ಪಟ್ಟಣವು ಮೆಡಿಟರೇನಿಯನ್ ಸಮುದ್ರದ ಪಕ್ಕದಲ್ಲಿ ಮತ್ತು ದೊಡ್ಡ ನದಿಯ ಬದಿಯಲ್ಲಿ ಕಂಡುಬರುತ್ತದೆ, ಇದು ಅತೀ ಪ್ರಾಮುಖ್ಯವಾದ ವ್ಯಾಪಾರ ಮಾರ್ಗದಲ್ಲಿ ಭಾಗವಾಗಿರುತ್ತದೆ.
- ಒಂದುಬಾರಿ ಇದು ಕಿಲಿಕ್ಯ ರಾಜಧಾನಿಯ ಭಾಗವಾಗಿದ್ದಿತ್ತು.
- ಹೊಸ ಒಡಂಬಡಿಕೆಯಲ್ಲಿ ತಾರ್ಸ ಎನ್ನುವುದು ಅಪೊಸ್ತಲನಾದ ಪೌಲನ ಊರು ಎಂಬುದಾಗಿ ಪ್ರಸಿದ್ಧವಾಗಿದ್ದಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಿಲಿಕ್ಯ, ಪೌಲ, ಸೀಮೆ, ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.09:10-12
- ಅಪೊ.ಕೃತ್ಯ.09:28-30
- ಅಪೊ.ಕೃತ್ಯ.11:25-26

ಪದ ಡೇಟಾ:

- Strong's: G5018, G5019

ತಿಮೊಥೆ

ಸತ್ಯಾಂಶಗಳು:

ತಿಮೊಥೆ ಎನ್ನುವ ವ್ಯಕ್ತಿ ಲೂಸ್ತ್ರ ಎನ್ನುವ ಪಟ್ಟಣದ ಯೌವನಸ್ಥನಾಗಿದ್ದನು. ಸ್ವಲ್ಪ ಕಾಲವಾದನಂತರ ಪೌಲನ ಸುವಾರ್ತೆ ಪ್ರಯಾಣಗಳಲ್ಲಿ ತನ್ನ ಜೊತೆಯಲ್ಲಿ ಸೇರಿದ್ದನು ಮತ್ತು ವಿಶ್ವಾಸಿಗಳ ಹೊಸ ಸಮುದಾಯಗಳಿಗೆ ಸಭಾಪಾಲಕನಾಗಿ ಕೆಲಸ ಮಾಡಿದನು.

- ತಿಮೊಥೆ ತಂದೆಯು ಗ್ರೀಕನಾಗಿದ್ದನು, ಆದರೆ ತನ್ನ ಅಜ್ಜಿ ಲೋವಿಯಳಾಗಿದ್ದಳು ಮತ್ತು ತನ್ನ ತಾಯಿ ಯೂನೀಕೆಯಳಾಗಿದ್ದಳು, ಇವರೆಲ್ಲರೂ ಯೆಹೂದ್ಯರು ಮತ್ತು ಕ್ರಿಸ್ತನಲ್ಲಿ ನಂಬಿಕೆ ಇಟ್ಟವರು.
- ಪೌಲನು ಮತ್ತು ಹಿರಿಯರು ತಿಮೊಥೆಯನ ತಲೆಯ ಮೇಲೆ ತಮ್ಮ ಕೈಗಳನ್ನಿಟ್ಟು, ಅವನಿಗಾಗಿ ಪ್ರಾರ್ಥನೆ ಮಾಡುವುದರ ಮೂಲಕ ಸೇವೆಗಾಗಿ ನೇಮಿಸಿದರು.
- ಹೊಸ ಒಡಂಬಡಿಕೆಯಲ್ಲಿರುವ ಎರಡು ಪುಸ್ತಕಗಳು (I ತಿಮೊಥೆ ಮತ್ತು 2 ತಿಮೊಥೆ) ಅಥವಾ ಪತ್ರಿಕೆಗಳು ಸ್ಥಳೀಯ ಸಭೆಗಳ ಯೌವ್ವನ ನಾಯಕನಾಗಿ ತಿಮೊಥೆಗೆ ಮಾರ್ಗ ನಿರ್ದೇಶನ ಕೊಡುವುದಕ್ಕೆ ಪೌಲನು ತಿಮೊಥೆಗೆ ಬರೆದಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನೇಮಿಸು, ನಂಬು, ಸಭೆ, ಗ್ರೀಕ್, ಸೇವಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.03:1-3
- 1 ತಿಮೊಥೆ.01:1-2
- ಅಪೊ.ಕೃತ್ಯ.16:1-3
- ಕೊಲೊ.01:1-3
- ಫಿಲೆಮೋ.01:1-3
- ಫಿಲಿಪ್ಪಿ.01:1-2
- ಫಿಲಿಪ್ಪಿ.02:19-21

ಪದ ಡೇಟಾ:

- Strong's: G5095

ತಿರ್ಚಾ

ಸತ್ಯಾಂಶಗಳು:

ತಿರ್ಚಾ ಎನ್ನುವುದು ಇಸ್ರಾಯೇಲ್ಯರಿಂದ ವಶಪಡಿಸಿಕೊಂಡಿರುವ ತುಂಬಾ ಪ್ರಾಮುಖ್ಯವಾದ ಕಾನಾನ್ಯರ ಪಟ್ಟಣವಾಗಿದ್ದಿತ್ತು. ಇದಕ್ಕೆ ಮನಸ್ಸೆ ಸಂತಾನದವನಾಗಿರುವ ಗಿಲ್ಯಾದನ ಮಗಳ ಹೆಸರೂ ಇದ್ದಿತ್ತು.

- ತಿರ್ಚಾ ಪಟ್ಟಣವು ಮನಸ್ಸೆ ಕುಲದವರಿಂದ ವಶಪಡಿಸಿಕೊಂಡಿರುವ ಪ್ರಾಂತ್ಯದಲ್ಲಿ ಕಂಡುಬರುತ್ತದೆ. ಶೆಕೆಮ್ ಪಟ್ಟಣದ ಉತ್ತರ ಭಾಗದಿಂದ ಸುಮಾರು 10 ಮೇಲ್.ಗಳ ದೂರದಲ್ಲಿ ಈ ಪಟ್ಟಣವಿದ್ದಿರಬಹುದು.
- ಅನೇಕ ವರ್ಷಗಳಾದನಂತರ, ಇಸ್ರಾಯೇಲ್ಯರು ನಾಲ್ಕು ಮಂದಿ ಅರಸರು ಆಳುತ್ತಿರುವ ಕಾಲದಲ್ಲಿ ಇಸ್ರಾಯೇಲ್ ಉತ್ತರ ರಾಜ್ಯ ತಾತ್ಕಾಲಿಕ ರಾಜಧಾನಿ ಪಟ್ಟಣವಾಗಿ ತಿರ್ಚಾ ಇದ್ದಿತ್ತು.
- ತಿರ್ಚಾ ಎನ್ನುವ ಹೆಸರು ಮನಸ್ಸೆ ಹೆಣ್ಣು ಮೊಮ್ಮೊಕ್ಕಳ ಒಬ್ಬರ ಹೆಸರಾಗಿದ್ದಿತ್ತು. ಅವರ ತಂದೆ ಸತ್ತು ಹೋಗಿರುವುದರಿಂದ, ಸಾಂಪ್ರದಾಯಿಕವಾಗಿ ಸ್ವಾಸ್ಥ್ಯವನ್ನು ಹೊಂದಿಕೊಳ್ಳುವುದಕ್ಕೆ ಗಂಡು ಮಕ್ಕಳು ಇಲ್ಲದ ಕಾರಣದಿಂದ ಭೂಮಿಯಲ್ಲಿ ಒಂದು ಭಾಗವನ್ನು ತಮಗೆ ಕೊಡಬೇಕೆಂದು ಅವರು ಕೇಳಿಕೊಂಡರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಸ್ವಾಸ್ಥ್ಯ, ಇಸ್ರಾಯೇಲ್ ರಾಜ್ಯ, ಮನಸ್ಸೆ, ಶೆಕೆಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಅರಣ್ಯ..27:1
- ಅರಣ್ಯ..36:10-12
- ಪರಮ.06:4

ಪದ ಡೇಟಾ:

- Strong's: H8656

ತೀತ

ಸತ್ಯಾಂಶಗಳು:

ತೀತನು ಅನ್ಯ ಮತದವನಾಗಿದ್ದನು. ಆದಿ ಸಭೆಗಳಲ್ಲಿ ನಾಯಕನಾಗಿರುವುದಕ್ಕೆ ಪೌಲನಿಂದ ತರಬೇತಿಯನ್ನು ಪಡೆದ ವ್ಯಕ್ತಿಯಾಗಿದ್ದನು.

- ಪೌಲನಿಂದ ತೀತನಿಗೆ ಬರೆಯಲ್ಪಟ್ಟ ಒಂದು ಪತ್ರಿಕೆಯು ಹೊಸ ಒಡಂಬಡಿಕೆಯ ಪುಸ್ತಕಗಳಲ್ಲಿ ಒಂದಾಗಿರುತ್ತದೆ.
- ಈ ಪತ್ರಿಕೆಯಲ್ಲಿ ಕ್ರೇತ ದ್ವೀಪದಲ್ಲಿರುವ ಸಭೆಗಳಿಗಾಗಿ ಹಿರಿಯರನ್ನು ನೇಮಿಸಬೇಕೆಂದು ಪೌಲನು ತೀತನಿಗೆ ಸೂಚನೆ ಕೊಡುತ್ತಿದ್ದಾನೆ.
- ಪೌಲನು ಕ್ರೈಸ್ತರಿಗೆ ಬರೆದ ಇತರ ಪತ್ರಿಕೆಗಳಲ್ಲಿ ತೀತನು ತನ್ನನ್ನು ಪ್ರೋತ್ಸಾಹಗೊಳಿಸಿದ್ದಾನೆಂದು ಮತ್ತು ತನಗೆ ಸಂತೋಷವನ್ನು ತೆಗೆದುಕೊಂಡು ಬಂದಿದ್ದಾನೆಂದು ಪೌಲನು ತೀತನ ಕುರಿತು ಹೇಳಿಕೊಂಡಿದ್ದಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನೇಮಿಸು, ನಂಬು, ಸಭೆ, ಸುನ್ನತಿ, ಕ್ರೇತ, ಹಿರಿಯ, ಪ್ರೋತ್ಸಾಹ, ಸೂಚಿಸು, ಸೇವಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.04:10
- ಗಲಾತ್ಯ.02:1-2
- ಗಲಾತ್ಯ.02:3-5
- ತೀತ.01:04

ಪದ ಡೇಟಾ:

- Strong's: G5103

ತುಖಿಕ

ಸತ್ಯಾಂಶಗಳು:

ತುಖಿಕ ಎನ್ನುವ ವ್ಯಕ್ತಿ ಸುವಾರ್ತೆಯ ಸೇವೆಯಲ್ಲಿ ಪೌಲನ ಜೊತೆಗಾರರಲ್ಲಿ ಒಬ್ಬನಾಗಿದ್ದನು.

- ಆಸ್ಯಕ್ಕೆ ಪೌಲನು ಮಾಡಿದ ಸುವಾರ್ತೆಯ ಪ್ರಯಾಣಗಳಲ್ಲಿ ಕನಿಷ್ಟ ಒಂದರಲ್ಲಾದರೂ ತುಖಿಕನು ಪೌಲನ ಜೊತೆಯಲ್ಲಿದ್ದಿರುತ್ತಾನೆ.
- ಪೌಲನು ಈತನ ಕುರಿತು "ಪ್ರಿಯನೆಂದು" ಮತ್ತು "ನಂಬಿಗಸ್ತನೆಂದು" ವಿವರಿಸಿದ್ದಾನೆ.
- ತುಖಿಕನು ಪೌಲನ ಪತ್ರಿಕೆಗಳನ್ನು ಎಫೆಸ ಮತ್ತು ಕೊಲೊಸ್ಸೆ ಪಟ್ಟಣಗಳಿಗೆ ಹೊತ್ತಿಕೊಂಡು ಹೋಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಸ್ಯ, ಪ್ರಿಯ, ಕೊಲೊಸ್ಸೆ, ಎಫೆಸ, ವಿಶ್ವಾಸಾರ್ಹ, ಶುಭವಾರ್ತೆ, ಸೇವಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.04:11-13
- ಕೊಲೊಸ್ಸೆ.04:09
- ತೀತ.03:12

{{tag>publish ktlink}

ಪದ ಡೇಟಾ:

- Strong's: G5190

ತೂಬಲ್

ಸತ್ಯಾಂಶಗಳು:

“ತೂಬಲ್” ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಅನೇಕಮಂದಿ ವ್ಯಕ್ತಿಗಳಿದ್ದಾರೆ.

- ತೂಬಲ್ ಎನ್ನುವ ಹೆಸರಿನ ಮೇಲಿರುವ ಒಬ್ಬ ವ್ಯಕ್ತಿ ಯೆಫೆತ್ ಮಕ್ಕಳಲ್ಲಿ ಒಬ್ಬನಾಗಿದ್ದನು.
- “ತೂಬಲ್-ಕಾಯಿನ” ಎನ್ನುವ ಹೆಸರನ್ನು ಹೊಂದಿರುವ ವ್ಯಕ್ತಿ ಕಾಯಿನನ ವಂಶಸ್ಥನು ಮತ್ತು ಲೇಮೆಕನ ಮಗನು ಆಗಿರುತ್ತಾನೆ.
- ತೂಬಲ್ ಎನ್ನುವುದು ಯೆಶಯಾ ಮತ್ತು ಯೆಹೆಜ್ಕೇಲರಿಂದ ದಾಖಲಿಸಿದ ಒಂದು ಜನರ ಗುಂಪಿನ ಹೆಸರಾಗಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾಯಿನ, ವಂಶಸ್ಥನು, ಯೆಹೆಜ್ಕೇಲ, ಯೆಶಯಾ, ಯೆಫೆತ್, ಲೇಮೆಕ್, ಜನರ ಗುಂಪು, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:5-7
- ಯೆಹೆ.27:12-13
- ಆದಿ.10:2-5

ಪದ ಡೇಟಾ:

- Strong's: H8422, H8423

ತೂರ್, ತೂರಿನವರು

ಸತ್ಯಾಂಶಗಳು:

ತೂರ್ ಎನ್ನುವುದು ಕಾನಾನಿನ ಪುರಾತನ ಪಟ್ಟಣವಾಗಿರುತ್ತದೆ, ಇದು ಆಧುನಿಕ ದೇಶವಾಗಿರುವ ಲೆಬಾನೋನಿನಲ್ಲಿರುವ ಪ್ರಾಂತ್ಯದಲ್ಲಿ ಮೆಡಿಟರೇನಿಯನ್ ಸಮುದ್ರದ ಕರಾವಳಿಯಲ್ಲಿ ಕಂಡುಬರುತ್ತದೆ. ಇದರಲ್ಲಿ ನಿವಾಸವಾಗಿರುವ ಜನರನ್ನು "ತೂರಿನವರು" ಎಂದು ಕರೆಯುತ್ತಾರೆ.

- ಪಟ್ಟಣ ಸ್ವಲ್ಪ ಭಾಗವು ಸಮುದ್ರದಲ್ಲಿರುವ ದ್ವೀಪದಲ್ಲಿಯೂ ಇರುತ್ತದೆ, ಇದು ಮುಖ್ಯ ನೆಲಭಾಗದಿಂದ ಸುಮಾರು ಒಂದು ಕಿಲೋ ಮೀಟರುವರೆಗೆ ಹರಡಿರುತ್ತದೆ.
- ಇದಿರುವ ಪ್ರದೇಶ ಮತ್ತು ಇದರ ಬೆಲೆಯುಳ್ಳ ಸ್ವಾಭಾವಿಕ ಸಂಪನ್ಮೂಲಗಳ ಕಾರಣದಿಂದ, ಅಂದರೆ ದೇವದಾರು ವೃಕ್ಷಗಳಂತಹ ಬೆಲೆಯುಳ್ಳ ಮರಗಳಿಂದ, ತೂರ್ ಅಭಿವೃದ್ಧಿ ವ್ಯಾಪಾರ ಕೇಂದ್ರವನ್ನು ಹೊಂದಿತ್ತು ಮತ್ತು ಅತೀ ಶ್ರೀಮಂತ ಪ್ರಾಂತ್ಯವಾಗಿದ್ದಿತ್ತು.
- ತೂರ್ ಅರಸನಾಗಿರುವ ಹಿರಾಮನು ಅರಸನಾದ ದಾವೀದನಿಗೆ ಅರಮನೆಯನ್ನು ನಿರ್ಮಿಸುವುದಕ್ಕೆ ಸಹಾಯ ಮಾಡಲು ನಿಪುಣರನ್ನು ಮತ್ತು ದೇವದಾರು ವೃಕ್ಷಗಳ ಕಟ್ಟಿಗೆಗಳನ್ನು ಕಳುಹಿಸಿದ್ದನು.
- ಅನೇಕ ವರ್ಷಗಳಾದನಂತರ, ಹಿರಾಮನು ದೇವಾಲಯವನ್ನು ನಿರ್ಮಿಸುವುದಕ್ಕೆ ಕಟ್ಟಿಗೆಗಳನ್ನು ಮತ್ತು ನಿಪುಣರನ್ನು ಅರಸನಾದ ಸೊಲೊಮೋನನಿಗೆ ಕಳುಹಿಸಿದ್ದನು. ಸೊಲೊಮೋನನು ಎಣ್ಣೆ ಮರಗಳ ಎಣ್ಣೆಯನ್ನು ಮತ್ತು ಗೋಧಿಯನ್ನು ಹೆಚ್ಚಿನ ಮೊತ್ತದಲ್ಲಿ ಅವನಿಗೆ ಕೊಟ್ಟಿದ್ದನು.
- ತೂರ್ ಎನ್ನುವುದು ಅನೇಕಬಾರಿ ಹತ್ತಿರದಲ್ಲಿರುವ ಪುರಾತನ ಪಟ್ಟಣವಾಗಿರುವ ಸೀದೋನ್ ಎನ್ನುವದಕ್ಕೆ ಸಹಕಾರಿಯಾಗಿದ್ದಿತ್ತು. ಕಾನಾನ್ ಪ್ರಾಂತ್ಯದಲ್ಲಿರುವ ಅನೇಕ ಪ್ರಾಮುಖ್ಯವಾದ ಪಟ್ಟಣಗಳನ್ನು ಫೊಯಿನೀಕೆ ಎಂದು ಕರೆಯುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ದೇವದಾರು, ಇಸ್ರಾಯೇಲ್, ಸಮುದ್ರ, ಫೊಯಿನೀಕೆ, ಸೀದೋನ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.12:20-21
- ಮಾರ್ಕ.03:7-8
- ಮತ್ತಾಯ.11:20-22
- ಮತ್ತಾಯ.15:21-23

ಪದ ಡೇಟಾ:

- Strong's: H6865, H6876, G5183, G5184

ತೆರಹ

ಸತ್ಯಾಂಶಗಳು:

ತೆರಹನು ನೋಹನ ಮಗನಾದ ಶೇಮ್ ಸಂತಾನದವನಾಗಿದ್ದನು. ಇವನು ಅಬ್ರಾಹಾಮ, ನೋಹೊರ ಮತ್ತು ಹಾರಾನ್ ರವರಿಗೆ ತಂದೆಯಾಗಿದ್ದನು.

- ತೆರಹನು ತನ್ನ ಮಗನಾದ ಅಬ್ರಾಹಾಮನೊಂದಿಗೆ, ಅಬ್ರಾಹಾಮನ ಹೆಂಡತಿಯಾದ ಸಾರಳೊಂದಿಗೆ ಮತ್ತು ಲೋಟನೊಂದಿಗೆ ಕಾನಾನ್ ಭೂಮಿಯನ್ನು ಪಡೆದುಕೊಳ್ಳಲು ಊರ್.ನಲ್ಲಿರುವ ತನ್ನ ಮನೆಯನ್ನು ಬಿಟ್ಟನು.
- ಕಾನಾನ್ ಹೋಗುತ್ತಿರುವ ಪ್ರಯಾಣದಲ್ಲಿ ತೆರಹ ಮತ್ತು ತನ್ನ ಕುಟುಂಬದವರು ಮೆಸಪೋತೋಮಿಯಾದಲ್ಲಿರುವ ಹಾರಾನ್ ಪಟ್ಟಣದಲ್ಲಿ ಅನೇಕ ವರ್ಷಗಳು ಜೀವನ ಮಾಡಿದ್ದರು. ತೆರಹನು 205 ವಯಸ್ಸಿನಲ್ಲಿ ಹಾರಾನಿನಲ್ಲಿ ಮರಣಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಕಾನಾನ್, ಹಾರಾನ್, ಲೋಟ, ಮೆಸಪೋತೋಮಿಯ, ನಾಹೋರ್, ಸಾರಳು, ಶೇಮ್, ಊರ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.11:31-32
- 1 ಪೂರ್ವ.01:24-27
- ಲೂಕ.03:33-35

ಪದ ಡೇಟಾ:

- Strong's: H8646, G2291

ತೋಮ

ಸತ್ಯಾಂಶಗಳು:

ತೋಮ ಎನ್ನುವ ವ್ಯಕ್ತಿ ಯೇಸು ತನಗೆ ಶಿಷ್ಯರಾಗಿರಲು, ಅಪೊಸ್ತಲರಾಗಿರಲು ಆಯ್ಕೆ ಮಾಡಿಕೊಂಡಿರುವ ಹನ್ನೆರಡು ಮಂದಿಯಲ್ಲಿ ಒಬ್ಬನಾಗಿದ್ದನು. ಈತನನ್ನು "ದಿದುಮ" ಎಂದೂ ಕರೆಯುತ್ತಾರೆ, ಈ ಹೆಸರಿಗೆ "ಅವಳಿಜವಳಿ" ಎಂದರ್ಥ.

- ಯೇಸುವಿನ ಜಿವತ ಅಂತ್ಯದಲ್ಲಿ, ನಾನು ನನ್ನ ತಂದೆಯ ಬಳಿಗೆ ಹೋಗುತ್ತಿದ್ದೇನೆ ಮತ್ತು ಆತನೊಂದಿಗೆ ಇರುವುದಕ್ಕೆ ನಿಮಗೆ ಬಿಡಾರಗಳನ್ನು ಸಿದ್ಧಗೊಳಿಸುತ್ತೇನೆ ಎಂದು ಆತನು ತನ್ನ ಶಿಷ್ಯರಿಗೆ ಹೇಳಿದನು. ನೀನು ಎಲ್ಲಿಗೆ ಹೋಗುತ್ತಿದ್ದೀಯೆಂದು ನಮಗೆ ಗೊತ್ತಾಗದಿದ್ದರೆ ನಾವು ಹೇಗೆ ನೀವಿರುವ ಸ್ಥಳಕ್ಕೆ ಬರಬೇಕು ಎಂದು ತೋಮ ಯೇಸುವನ್ನು ಕೇಳಿದನು.
- ಯೇಸು ಮರಣಿಸಿ ತಿರುಗಿಬಂದನಂತರ, ತೋಮ ಯೇಸುವು ತಿರುಗಿ ಎದ್ದುಬಂದಿದ್ದಾನೆಂದು ನಂಬಲಿಲ್ಲ, ಯಾಕಂದರೆ ಅವನು ಯೇಸುವಿನ ಗಾಯಗೊಂಡ ಕೈಗಳನ್ನು ಮತ್ತು ಕಾಲುಗಳನ್ನು ನೋಡಿ, ನಂಬಬೇಕೆಂದಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ಶಿಷ್ಯ, ತಂದೆಯಾದ ದೇವರು, ಹನ್ನೆರಡು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.01:12-14
- ಯೋಹಾನ.11:15-16
- ಲೂಕ.06:14-16
- ಮಾರ್ಕ.03:17-19
- ಮತ್ತಾಯ.10:2-4

ಪದ ಡೇಟಾ:

- Strong's: G2381

ತ್ರೋವ

ಸತ್ಯಾಂಶಗಳು:

ತ್ರೋವ ಎನ್ನುವ ಪಟ್ಟಣವು ಬಂದರು ಇರುವ ಪಟ್ಟಣವಾಗಿದ್ದಿತ್ತು, ಇದು ಆಸ್ಯದ ಪುರಾತನ ರೋಮಾ ಸೀಮೆಯ ಉತ್ತರ ಕರಾವಳಿಯಲ್ಲಿ ಕಂಡುಬರುತ್ತದೆ.

- ಪೌಲನು ಅನೇಕ ಪ್ರಾಂತ್ಯಗಳಿಗೆ ಸುವಾರ್ತೆಯನ್ನು ಸಾರುವುದಕ್ಕೆ ಹೋದಾಗ ಕನಿಷ್ಟವೆಂದರೆ ಮೂರುಸಲ ತ್ರೋವವನ್ನು ಸಂದರ್ಶನ ಮಾಡಿದ್ದನು.
- ತ್ರೋವದಲ್ಲಿ ನಡೆದ ಒಂದು ಸಂದರ್ಭದಲ್ಲಿ ಪೌಲನು ಸುಧೀರ್ಘವಾಗಿ ಪ್ರಸಂಗವನ್ನು ಮಾಡಿದ್ದನು ಮತ್ತು ಆ ಸಮಯದಲ್ಲಿ ಯೂತಿಖನೆಂಬ ಒಬ್ಬ ಯೌವನಸ್ಥನು ಆ ಪ್ರಸಂಗವನ್ನು ಕೇಳುತ್ತಾ ನಿದ್ದೆ ಮಾಡಿ ಕೆಳಗೆ ಬಿದ್ದುಹೋಗಿದ್ದನು. ಯಾಕಂದರೆ ಅವನು ಕಿಟಿಕಿಯ ಪಕ್ಕದಲ್ಲಿಯೇ ಕುಳಿತುಕೊಂಡಿದ್ದನು, ಯೂತಿಖನು ತುಂಬಾ ಎತ್ತರದಿಂದ ಕೆಳಗೆ ಬಿದ್ದು ಸತ್ತು ಹೋಗಿದ್ದನು. ದೇವರ ಶಕ್ತಿಯಿಂದ ಪೌಲನು ಈ ಯೌವನಸ್ಥನನ್ನು ತಿರುಗಿ ಜೀವಂತ ವ್ಯಕ್ತಿಯನ್ನಾಗಿ ಎಬ್ಬಿಸಿದನು.
- ಪೌಲನು ರೋಮಾದಲ್ಲಿರುವಾಗ ತಾನು ತ್ರೋವದಲ್ಲಿ ಬಿಟ್ಟುಬಂದಿರುವ ತನ್ನ ಲೇಖನ ಸುರುಳಿಗಳನ್ನು ಮತ್ತು ತನ್ನ ಅಂಗಿಯನ್ನು ತೆಗೆದುಕೊಂಡು ಬರಬೇಕೆಂದು ತಿಮೊಥೆಯನನ್ನು ಕೇಳಿಕೊಂಡನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಸ್ಯ, ಪ್ರಸಂಗಿಸು, ಸೀಮೆ, ಎಬ್ಬಿಸು, ರೋಮ್, ಸುರುಳಿ, ತಿಮೊಥೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಕೊರಿಂಥ.02:12-13
- 2 ತಿಮೊಥೆ.04:11-13
- ಅಪೊ.ಕೃತ್ಯ.16:6-8
- ಅಪೊ.ಕೃತ್ಯ.20:4-6

ಪದ ಡೇಟಾ:

- Strong's: G5174

ಥೆಸ್ಸಲೋನಿಕ, ಥೆಸ್ಸಲೋನಿಕದವನು, ಥೆಸ್ಸಲೋನಿಕಾದವರು

ಸತ್ಯಾಂಶಗಳು:

ಹೊಸ ಒಡಂಬಡಿಕೆ ಕಾಲಗಳಲ್ಲಿ ಥೆಸ್ಸಲೋನಿಕ ಎನ್ನುವುದು ಪುರಾತನ ರೋಮಾ ಸಾಮ್ರಾಜ್ಯದಲ್ಲಿ ಮಕೆದೋನ್ಯ ರಾಜಧಾನಿಯ ಪಟ್ಟಣವಾಗಿತ್ತು. ಆ ಪಟ್ಟಣದಲ್ಲಿ ನಿವಾಸ ಮಾಡುವ ಜನರನ್ನು "ಥೆಸ್ಸಲೋನಿಕದವರು" ಎಂದು ಕರೆಯುತ್ತಾರೆ.

- ಥೆಸ್ಸಲೋನಿಕ ಪಟ್ಟಣವು ತುಂಬಾ ಪ್ರಾಮುಖ್ಯವಾದ ಸಮುದ್ರ ತೀರವನ್ನು ಹೊಂದಿರುತ್ತದೆ ಮತ್ತು ರೋಮಾ ಸಾಮ್ರಾಜ್ಯದಲ್ಲಿ ಪೂರ್ವ ದಿಕ್ಕಿನ ಭಾಗಕ್ಕೆ ರೋಮ್ ನಗರವನ್ನು ಸಂಧಿಸುವ ಹೆದ್ದಾರಿಯಲ್ಲಿ ಕಂಡುಬರುತ್ತದೆ.
- ಪೌಲನು ತನ್ನ ಜೊತೆಯಲ್ಲಿರುವ ಸೀಲ ಮತ್ತು ತಿಮೊಥೆಯವರೊಂದಿಗೆ ತನ್ನ ಎರಡನೇ ಸುವಾರ್ತೆ ದಂಡೆಯಾತ್ರೆಯಲ್ಲಿ ಥೆಸ್ಸಲೋನಿಕ ಪಟ್ಟಣವನ್ನು ಸಂದರ್ಶನ ಮಾಡಿದ್ದರು ಮತ್ತು ಆ ಪಟ್ಟಣದಲ್ಲಿ ಸಭೆಯನ್ನು ಸ್ಥಾಪನೆಗೊಳಿಸಿದ್ದರು. ಸ್ವಲ್ಪ ಕಾಲವಾದನಂತರ, ಪೌಲನು ಈ ಪಟ್ಟಣವನ್ನು ತನ್ನ ಮೂರನೇಯ ಸುವಾರ್ತೆಯ ಯಾತ್ರೆಯಲ್ಲಿ ಸಂದರ್ಶಿಸಿದ್ದರು.
- ಪೌಲನು ಥೆಸ್ಸಲೋನಿಕದಲ್ಲಿರುವ ಕ್ರೈಸ್ತರಿಗೆ ಎರಡು ಪತ್ರಿಕೆಗಳನ್ನು ಬರೆದಿದ್ದನು. ಈ ಪತ್ರಿಕೆಗಳು (1 ಥೆಸ್ಸಲೋನಿಕದವರಿಗೆ ಮತ್ತು 2 ಥೆಸ್ಸಲೋನಿಕದವರಿಗೆ) ಹೊಸ ಒಡಂಬಡಿಕೆಯಲ್ಲಿ ಒಳಗೊಂಡಿರುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಮಕೆದೋನ್ಯ, ಪೌಲ, ರೋಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.01:1
- 2 ಥೆಸ್ಸ.01:1-2
- 2 ತಿಮೊಥೆ.04:9-10
- ಅಪೊ.ಕೃತ್ಯ.17:1-2
- ಫಿಲಿಪ್ಪಿ.04:14-17

ಪದ ಡೇಟಾ:

- Strong's: G2331, G2332

ದಕ್ಷಿಣ ಪ್ರಾಂತ್ಯ (ನೆಗೆವ್)

ಸತ್ಯಾಂಶಗಳು:

ದಕ್ಷಿಣ ಪ್ರಾಂತ್ಯ (ನೆಗೆವ್) ಎನ್ನುವುದು ಇಸ್ರಾಯೇಲ್ ದಕ್ಷಿಣ ಭಾಗದಲ್ಲಿ ಮರುಭೂಮಿ ಪ್ರಾಂತ್ಯವಾಗಿರುತ್ತದೆ, ಮತ್ತು ಲವಣ ಸಮುದ್ರದ ನೈಋತ್ಯ ಭಾಗದಲ್ಲಿರುತ್ತದೆ.

- ಈ ಪದಕ್ಕೆ ವಾಸ್ತವಿಕವಾಗಿ “ದಕ್ಷಿಣ” ಎಂದರ್ಥ ಮತ್ತು ಆಂಗ್ಲ ಭಾಷೆಯಲ್ಲಿ ಈ ಪದವನ್ನೇ (ದಕ್ಷಿಣ) ಅನುವಾದ ಮಾಡಿರುತ್ತಾರೆ.
- ಇದು “ದಕ್ಷಿಣ” ಎಂದಾಗಿರಬಹುದು, ಆದರೆ ಇದು ಈ ದಿನದ ನೆಗೆವ್ ಮರುಭೂಮಿಯಿರುವ ಸ್ಥಳದಲ್ಲಿ ಇದು ಕಂಡುಬರುವುದಿಲ್ಲ.
- ಕಾದೇಶ್ ಪಟ್ಟಣದಲ್ಲಿ ಅಬ್ರಾಹಾಮನು ನಿವಾಸಮಾಡಿದಾಗ, ಆತನು ದಕ್ಷಿಣ ಪ್ರಾಂತ್ಯದಲ್ಲಿ ಅಥವಾ ನೆಗೆವ್.ದಲ್ಲಿ ನಿವಾಸ ಮಾಡಿದ್ದನು.
- ರೆಬೆಕ್ಕಳು ಇಸಾಕನನ್ನು ಭೇಟಿ ಮಾಡಿದಾಗ ಮತ್ತು ತನ್ನ ಹೆಂಡತಿಯಾದಾಗ ಇಸಾಕನು ನೆಗೆವ್.ನಲ್ಲಿ ಜೀವಿಸಿದ್ದನು.
- ಯೂದಾ ಯೆಹೂದ್ಯ ಕುಲಗಳು ಮತ್ತು ಸಿಮೆಯೋನ್ ದಕ್ಷಿಣ ಪ್ರಾಂತ್ಯದಲ್ಲಿ ನಿವಾಸವಾಗಿದ್ದರು.
- ನೆಗೆವ್ ಪ್ರಾಂತ್ಯದಲ್ಲಿ ಅತೀ ದೊಡ್ಡ ಪಟ್ಟಣವು ಬೇರ್ಷೆಬ ಆಗಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಬೇರ್ಷೆಬ, ಇಸ್ರಾಯೇಲ್, ಯೂದಾ, ಕಾದೇಶ್, ಲವಣ ಸಮುದ್ರ, ಸಿಮೆಯೋನ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.12:8-9
- ಆದಿ.20:1-3
- ಆದಿ.24:61-62
- ಯೆಹೋ.03:14-16
- ಧರ್ಮೋ.13:17-20

ಪದ ಡೇಟಾ:

- Strong's: H5045, H6160

ದಮಸ್ಕ

ಸತ್ಯಾಂಶಗಳು:

ದಮಸ್ಕ ಎನ್ನುವುದು ಸಿರಿಯಾ ದೇಶದ ರಾಜಧಾನಿಯಾಗಿತ್ತು. ಇದು ಸತ್ಯವೇದ ಕಾಲದಲ್ಲಿರುವ ಸ್ಥಳದಲ್ಲೇ ಈಗಲೂ ಅಲ್ಲೇ ಇದೆ.

- ದಮಸ್ಕ ಎನ್ನುವ ಪಟ್ಟಣ ಪ್ರಪಂಚದಲ್ಲಿಯೇ ಜನರು ನಿರಂತರವಾಗಿ ನಿವಾಸವಾಗಿರುವ ಪಟ್ಟಣಗಳಲ್ಲಿ ಒಂದಾಗಿರುತ್ತದೆ ಮತ್ತು ಇದು ತುಂಬಾ ಹಳೇ ಪಟ್ಟಣವಾಗಿರುತ್ತದೆ.
- ಅಬ್ರಹಾಮನ ಕಾಲದಲ್ಲಿ ದಮಸ್ಕ ಆರಾಮ್ ರಾಜ್ಯದ ರಾಜಧಾನಿಯಾಗಿದ್ದಿತ್ತು (ಈಗ ಸಿರಿಯಾದಲ್ಲಿ ಕಂಡುಬರುತ್ತದೆ).
- ಹಳೇ ಒಡಂಬಡಿಕೆಯಲ್ಲೆಲ್ಲಾ ಇಸ್ರಾಯೇಲ್ ಜನರು ಮತ್ತು ದಮಸ್ಕ ನಿವಾಸಿಗಳ ಮಧ್ಯೆದಲ್ಲಿ ನಡೆದ ಪರಸ್ಪರ ಸಂಬಂಧಗಳಿಗೆ ಅನೇಕ ಅನುಬಂಧ ವಾಕ್ಯಗಳಿವೆ.
- ಸತ್ಯವೇದದಲ್ಲಿರುವ ಅನೇಕ ಪ್ರವಾದನೆಗಳು ದಮಸ್ಕ ವಿನಾಶನದ ಕುರಿತಾಗಿ ಹೇಳಲ್ಪಟ್ಟಿವೆ. ಹಳೇ ಒಡಂಬಡಿಕೆ ಕಾಲದಲ್ಲಿ ಅಶ್ಶೂರ್.ದವರು ಪಟ್ಟಣವನ್ನು ನಾಶಗೊಳಿಸಿದಾಗ ಈ ಪ್ರವಾದನೆಗಳು ನೆರವೇರಿಸಲ್ಪಟ್ಟಿರಬಹುದು ಅಥವಾ ಇವು ಭವಿಷ್ಯತ್ತಿನಲ್ಲಿಯೂ ನೆರವೇರಿಕೆಯಾಗಬಹುದು, ಅಂದರೆ ಈ ಪಟ್ಟಣವು ಸಂಪೂರ್ಣವಾಗಿ ವಿನಾಶವಾಗುವುದನ್ನು ನೋಡಬಹುದು.
- ಹೊಸ ಒಡಂಬಡಿಕೆಯಲ್ಲಿ ಫರಿಸಾಯನಾದ ಸೌಲನು (ಪೌಲನು) ದಮಸ್ಕ ಪಟ್ಟಣದಲ್ಲಿ ಕ್ರೈಸ್ತರನ್ನು ಮುಟ್ಟುಗೋಲು ಹಾಕುವುದಕ್ಕೆ ಹೋದಾಗ, ಯೇಸುವು ಅವನನ್ನು ಸಂದರ್ಶಿಸಿದಾಗ, ಅವನು ವಿಶ್ವಾಸಿಯಾದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆರಾಮ್, ಅಶ್ಶೂರ್, ನಂಬು, ಸಿರಿಯಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.24:23-24
- ಅಪೊ.ಕೃತ್ಯ.09:1-2
- ಅಪೊ.ಕೃತ್ಯ.09:3-4
- ಅಪೊ.ಕೃತ್ಯ.26:12-14
- ಗಲಾತ್ಯ.01:15-17
- ಆದಿ.14:15-16

ಪದ ಡೇಟಾ:

- Strong's: H1833, H1834, G1154

ದಾನಿಯೇಲ

ಸತ್ಯಾಂಶಗಳು:

ದಾನಿಯೇಲ ಇಸ್ರಾಯೇಲ್ ಯೌವ್ವನ ಪ್ರವಾದಿಯಾಗಿದ್ದನು, ಇವನು ಸುಮಾರು ಕ್ರಿ.ಪೂ.600 ವರ್ಷದಲ್ಲಿ ಬಾಬೆಲೋನಿಯ ಅರಸನಾದ ನೆಬೂಕದ್ನೆಚ್ಚರನಿಂದ ಸೆರೆಗೊಯ್ಯಲ್ಪಟ್ಟಿದ್ದನು.

- ಈ ಸಮಯದಲ್ಲಿ ಯೂದಾದಿಂದ ಇತರ ಅನೇಕ ಇಸ್ರಾಯೇಲ್ಯರು ಸುಮಾರು 70 ವರ್ಷಗಳ ಕಾಲ ಬಾಬೆಲೋನಿಯಾದಲ್ಲಿ ಸೆರೆಗೊಯ್ಯಲ್ಪಟ್ಟಿದ್ದರು.
- ದಾನಿಯೇಲನಿಗೆ ಬಾಬೆಲೋನಿಯಾದಲ್ಲಿ ಬೇಲ್ತೆಶೆಚ್ಚರ್ ಎಂದು ಹೆಸರಿಟ್ಟಿದ್ದರು.
- ದಾನಿಯೇಲನಿಗೆ ದೇವರಿಗೆ ವಿಧೇಯನಾಗಿರುವ ನೀತಿವಂತನಾದ ಯೌವನಸ್ಥನು ಮತ್ತು ಸನ್ಮಾನ್ಯ ಯೋಗ್ಯನೂ ಆಗಿದ್ದನು.
- ಬಾಬೆಲೋನಿಯ ಅರಸರಿಗೆ ಬಂದ ಅನೇಕವಾದ ಕನಸುಗಳಿಗೆ ಅಥವಾ ದರ್ಶನಗಳಿಗೆ ಅರ್ಥವನ್ನು ಹೇಳುವುದಕ್ಕೆ ದೇವರು ದಾನಿಯೇಲನನ್ನು ಬಲಪಡಿಸಿದನು.
- ಈ ಸಾಮರ್ಥ್ಯದಿಂದ ಮತ್ತು ಈ ರೀತಿಯ ಸನ್ಮಾನ್ಯ ನಡತೆಯಿಂದ ದಾನಿಯೇಲನಿಗೆ ಬಾಬೆಲೋನಿಯ ಸಾಮ್ರಾಜ್ಯದಲ್ಲಿ ಅತ್ಯುನ್ನತ ನಾಯಕತ್ವ ಸ್ಥಾನವು ಕೊಡಲ್ಪಟ್ಟಿತ್ತು.
- ಅನೇಕ ವರ್ಷಗಳಾದನಂತರ, ದಾನಿಯೇಲನ ಶತ್ರುಗಳು ಅರಸನಾದ ದಾರ್ಯಾವೇಷನನ್ನು ಮೋಸಗೊಳಿಸಿ, ಅರಸನನ್ನು ಬಿಟ್ಟು ಇನ್ನಾರನ್ನಾದರೂ ಆರಾಧನೆ ಮಾಡಬಾರದೆನ್ನುವ ನಿಷೇಧ ಆಜ್ಞೆಯನ್ನು ತರುವಂತೆ ಅರಸನನ್ನು ಪ್ರೇರೇಪಿಸಿದರು. * ದಾನಿಯೇಲನು ದೇವರಿಗೆ ನಿರಂತರವಾಗಿ ಪ್ರಾರ್ಥನೆ ಮಾಡುತ್ತಿದ್ದನು, ಆದ್ದರಿಂದ ಈತನನ್ನು ಬಂಧಿಸಿ, ಸಿಂಹಗಳ ಗುಹೆಯೊಳಗೆ ಹಾಕಲ್ಪಟ್ಟಿದ್ದನು. ಆದರೆ ದೇವರು ಆತನನ್ನು ರಕ್ಷಿಸಿದನು ಮತ್ತು ಆತನಿಗೆ ಯಾವ ಹಾನಿಯೂ ಉಂಟಾಗಲಿಲ್ಲ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ನೆಬೂಕದ್ನೆಚ್ಚರ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.01:6-7
- ದಾನಿ.05:29-31
- ದಾನಿ.07:27-28
- ಯೆಹೆ.14:12-14
- ಮತ್ತಾಯ.24:15-18

ಪದ ಡೇಟಾ:

- Strong's: H1840, H1841, G1158

ದಾನ್

ಸತ್ಯಾಂಶಗಳು:

ದಾನ್ ಯಾಕೋಬನ ಐದನೇ ಮಗನಾಗಿರುತ್ತಾನೆ ಮತ್ತು ಇಸ್ರಾಯೇಲ್ ಹನ್ನೆರಡು ಕುಲಗಳಲ್ಲಿ ಒಂದು ಕುಲವಾಗಿರುತ್ತದೆ. ಕಾನಾನ್ ಉತ್ತರ ಭಾಗದಲ್ಲಿ ದಾನ್ ಕುಲಕ್ಕೆ ಕೊಡಲ್ಪಟ್ಟಿರುವ ಪ್ರಾಂತ್ಯಕ್ಕೂ ಈ ಹೆಸರನ್ನು ಕೊಟ್ಟಿರುತ್ತಾರೆ.

- ಅಬ್ರಾಮನ ಕಾಲದಲ್ಲಿ ಪಶ್ಚಿಮ ಯೆರೂಸಲೇಮಿನಲ್ಲಿ ದಾನ್ ಎನ್ನುವ ಪಟ್ಟಣವು ಇತ್ತು.
- ಅನೇಕ ವರ್ಷಗಳಾದ ಮೇಲೆ, ಇಸ್ರಾಯೇಲ್ ದೇಶವು ವಾಗ್ದಾನ ಭೂಮಿಯಲ್ಲಿ ಪ್ರವೇಶಿಸಿದಾಗ ಉತ್ತರ ಯೆರೂಸಲೇಮಿಗೆ ಸುಮಾರು 60 ಮೈಲಿಗಳ ದೂರದಲ್ಲಿ ದಾನ್ ಎನ್ನುವ ಹೆಸರಿನ ಮೇಲೆ ಒಂದು ಪಟ್ಟಣವಿತ್ತು.
- "ದಾನ್ ಕುಲದವರು" ಎನ್ನುವ ಪದವು ದಾನ್ ಸಂತಾನವನ್ನು ಸೂಚಿಸುತ್ತದೆ. ಇವರು ದಾನ್ ವಂಶದ ಸದಸ್ಯರೂ ಆಗಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಯೆರೂಸಲೇಮ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.12:34-35
- 1 ಅರಸ.04:24-25
- ವಿಮೋ.01:1-5
- ಆದಿ.14:13-14
- ಆದಿ.30:5-6

ಪದ ಡೇಟಾ:

- Strong's: H1835, H1839, H2051

ದಾರ್ಯಾವೇಷ

ಸತ್ಯಾಂಶಗಳು:

ದಾರ್ಯಾವೇಷ ಪರ್ಷಿಯ ಅರಸರಲ್ಲಿ ಒಬ್ಬನಾಗಿದ್ದನು. "ದಾರ್ಯಾವೇಷ" ಎನ್ನುವುದು ಒಂದು ಹೆಸರಿಗಿಂತಲೂ ಇದನ್ನು ಒಂದು ಬಿರುದಾಗಿ ಎಣಿಸಲ್ಪಡುತ್ತಿತ್ತು.

- ಮೇದ್ಯನಾದ ದಾರ್ಯಾವೇಷನು ಅರಸನಾಗಿದ್ದಾಗ ಪ್ರವಾದಿಯಾದ ದಾನಿಯೇಲನು ದೇವರನ್ನು ಆರಾಧನೆ ಮಾಡಿದ್ದಕ್ಕಾಗಿ ಅವನನ್ನು ಸಿಂಹಗಳ ಗವಿಯೊಳಗೆ ಹಾಕುವುದಕ್ಕೆ ಮೋಸದ ಉಪಾಯವನ್ನು ಮಾಡಿದ್ದನು.
- "ಪರ್ಷಿಯಾದ ದಾರ್ಯಾವೇಷ"ನು ಎಜ್ರ ಮತ್ತು ನೆಹೆಮೀಯ ಕಾಲದಲ್ಲಿ ದೇವಾಲಯವನ್ನು ತಿರುಗಿ ಪುನಃರ್ ನಿರ್ಮಿಸಲು ಸಹಾಯ ಮಾಡಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಪರ್ಷಿಯ, ಬಾಬೆಲೋನಿಯ, ದಾನಿಯೇಲ, ಎಜ್ರಾ, ನೆಹೆಮೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಜ್ರ.04:4-6
- ಹಗ್ಗಾಯ.01:1-2
- ನೆಹೆ.12:22-23
- ಜೆಕರ್ಯ.01:1-3

ಪದ ಡೇಟಾ:

- Strong's: H1867, H1868

ದಾವೀದ

ಸತ್ಯಾಂಶಗಳು:

ದಾವೀದ ಇಸ್ರಾಯೇಲ್ ದೇಶಕ್ಕೆ ಎರಡನೇ ಅರಸನಾಗಿ ಆಳಿದನು. ದೇವರಿಂದ ಹೆಚ್ಚಾಗಿ ಪ್ರೀತಿಸಲ್ಪಟ್ಟು, ದೇವರಿಗೆ ಸೇವೆಯನ್ನು ಸಲ್ಲಿಸಿದನು. ಕೀರ್ತನೆಗಳ ಪುಸ್ತಕವನ್ನು ಬರೆದವರಲ್ಲಿ ಈತನೇ ಮುಖ್ಯಸ್ಥನಾಗಿದ್ದನು.

- ದಾವೀದನು ಚಿಕ್ಕ ವಯಸ್ಸಿನಲ್ಲಿರುವಾಗ ತನ್ನ ಕುಟುಂಬದಲ್ಲಿರುವ ಕುರಿಗಳನ್ನು ಕಾಯುತ್ತಿದ್ದನು, ದೇವರು ಇಸ್ರಾಯೇಲ್ ಅರಸನಾಗಿರುವುದಕ್ಕೆ ದಾವೀದನನ್ನು ಆಯ್ಕೆಮಾಡಿಕೊಂಡನು.
- ದಾವೀದನು ಉನ್ನತ ಹೋರಾಟಗಾರನಾಗಿದ್ದನು ಮತ್ತು ಇಸ್ರಾಯೇಲ್ ಜನಾಂಗವನ್ನು ತಮ್ಮ ಶತ್ರುಗಳೊಂದಿಗೆ ಹೋರಾಡಲು ನಡೆಸಿದನು. ಈತನು ಫಿಲಿಷ್ಟಿಯರ ಗೊಲ್ಯಾತನನ್ನು ಸೋಲಿಸಿದ ವಿಷಯವು ಎಲ್ಲರಿಗೆ ಚೆನ್ನಾಗಿ ಗೊತ್ತು.
- ಅರಸನಾದ ಸೌಲನು ದಾವೀದನನ್ನು ಸಾಯಿಸುವುದಕ್ಕೆ ಪ್ರಯತ್ನಪಟ್ಟನು, ಆದರೆ ದೇವರು ಅವನನ್ನು ಸಂರಕ್ಷಿಸಿದನು ಮತ್ತು ಸೌಲನ ಮರಣದನಂತರ ಅವನನ್ನು ಅರಸನನ್ನಾಗಿ ಮಾಡಿದನು.
- ದಾವೀದನು ಒಂದು ಭಯಂಕರವಾದ ಪಾಪವನ್ನು ಮಾಡಿದನು, ಆದರೆ ಅವನು ಅದರ ವಿಷಯದಲ್ಲಿ ಪಶ್ಚಾತ್ತಾಪಪಟ್ಟಿರುವುದರಿಂದ, ದೇವರು ಅವನನ್ನು ಕ್ಷಮಿಸಿದನು.
- ಮೆಸ್ಸೀಯನಾದ ಯೇಸುವು “ದಾವೀದನ ಮಗ” ಎಂದು ಕರೆಯಲ್ಪಟ್ಟಿರುತ್ತಾನೆ, ಯಾಕಂದರೆ ಈತನು ಅರಸನಾದ ದಾವೀದನ ವಂಶದವನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಗೊಲ್ಯಾತ, ಫಿಲಿಷ್ಟಿಯರು, ಸೌಲ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.17:12-13
- 1 ಸಮು.20:32-34
- 2 ಸಮು.05:1-2
- 2 ತಿಮೊಥೆ.02:8-10
- ಅಪೊ.ಕೃತ್ಯ.02:25-26
- ಅಪೊ.ಕೃತ್ಯ.13:21-22
- ಲೂಕ.01:30-33
- ಮಾರ್ಕ.02:25-26

ಸತ್ಯವೇದದಿಂದ ಉದಾಹರಣೆಗಳು

- _**17:02** ಸೌಲನನಂತರ ಅರಸನಾಗಿರುವುದಕ್ಕೆ **ದಾವೀದ** _ ಎನ್ನುವ ಒಬ್ಬ ಇಸ್ರಾಯೇಲ್ ಯೌವನಸ್ಥನನ್ನು ದೇವರು ಆಯ್ಕೆ ಮಾಡಿಕೊಂಡನು. _ **ದಾವೀದನು** ಬೇತ್ಲೇಹೇಮ್ ಎನ್ನುವ ಪಟ್ಟಣದಲ್ಲಿ ಕುರುಬನಾಗಿದ್ದನು. _ ದಾವೀದನು __ ದೇವರನ್ನು ನಂಬಿದ ಮತ್ತು ಆತನಲ್ಲಿ ಭರವಸೆವಿಟ್ಟ ವಿನಯವುಳ್ಳ ನೀತಿವಂತನಾಗಿದ್ದನು.
- _**17:03** _ **ದಾವೀದನು** ಕೂಡ ದೊಡ್ಡ ಸೈನಿಕನು ಮತ್ತು ನಾಯಕನೂ ಆಗಿದ್ದನು. _ ದಾವೀದನು __ ಚಿಕ್ಕ ವಯಸ್ಸಿನಲ್ಲೇ ಇರುವಾಗಲೇ ಇವನು ಗೊಲ್ಯಾತನೆಂಬ ಒಬ್ಬ ರಣಶೂರನೊಂದಿಗೆ ಹೋರಾಟ ಮಾಡಿದವನು.
- _**17:04** _ **ದಾವೀದನನ್ನು** _ **ಜನರು ಹೆಚ್ಚಾಗಿ ಪ್ರೀತಿ ಮಾಡಿದ್ದಕ್ಕಾಗಿ ಸೌಲನು ಅವನ ಮೇಲೆ ಅಸೂಯೆಪಟ್ಟನು. ಸೌಲನು ಅವನನ್ನು ಸಾಯಿಸಬೇಕೆಂದು ಅನೇಕಬಾರಿ ಪ್ರಯತ್ನ ಮಾಡಿದನು, ಆದ್ದರಿಂದ** _ ದಾವೀದನು _ ಸೌಲನಿಗೆ ಸಿಕ್ಕದೆ ಪಾರಾದನು.
- _**17:05** ದೇವರು _ **ದಾವೀದನನ್ನು** _ ಆಶೀರ್ವಾದ ಮಾಡಿದನು ಮತ್ತು ತನ್ನ ಜೀವನದಲ್ಲಿ ಯಶಸ್ವಿಯಾಗುವಂತೆ ಮಾಡಿದನು. _ **ದಾವೀದನು** __ ಅನೇಕ ಯುದ್ಧಗಳನ್ನು ಮಾಡಿದ್ದನು ಮತ್ತು ಇಸ್ರಾಯೇಲ್ ಶತ್ರುಗಳನ್ನು ಸೋಲಿಸಲು ದೇವರು ದಾವೀದನಿಗೆ ಸಹಾಯ ಮಾಡಿದನು.
- _**17:06** ಇಸ್ರಾಯೇಲ್ ಜನರೆಲ್ಲರು ಒಂದು ಕಡೆ ಸೇರಿ ದೇವರನ್ನು ಆರಾಧಿಸುವುದಕ್ಕೆ ಮತ್ತು ಆತನಿಗೆ ಹೋಮಗಳನ್ನು ಸಮರ್ಪಿಸುವುದಕ್ಕೆ ಒಂದು ದೇವಾಲಯವನ್ನು ಕಟ್ಟಬೇಕೆಂದು _ ದಾವೀದನು __ ಬಯಸಿದ್ದನು.
- _**17:09 ದಾವೀದನು** _ ಅನೇಕ ವರ್ಷಗಳಕಾಲ ನ್ಯಾಯದಿಂದ ನಂಬಿಗಸ್ಥನಾಗಿ ಜನರನ್ನು ಆಳಿದನು. ಆದರೆ, ಆತನ ಕೊನೆಯ ದಿನಗಳಲ್ಲಿ ದೇವರಿಗೆ ವಿರುದ್ಧವಾಗಿ ಭಯಂಕರವಾದ ಪಾಪವನ್ನು ಮಾಡಿದನು.
- _**17:13** _ **ದಾವೀದನು** _ ಮಾಡಿದ ಕೆಲಸಕ್ಕೆ ದೇವರು ತುಂಬಾ ಕೋಪದಿಂದ ಇದ್ದನು, _ **ದಾವೀದನು** _ ಮಾಡಿದ ಪಾಪವು ಎಂಥದ್ದೆಂದು ಹೇಳುವುದಕ್ಕೆ ದೇವರು ಪ್ರವಾದಿಯಾದ ನಾತಾನನನ್ನು ಕಳುಹಿಸಿಕೊಟ್ಟನು. _ **ದಾವೀದನು** _ ತನ್ನ ಪಾಪವನ್ನು ತಿಳಿದುಕೊಂಡು ಪಶ್ಚಾತ್ತಾಪಪಟ್ಟನಂತರ ದೇವರು ಅವನನ್ನು ಕ್ಷಮಿಸಿದನು. ತನ್ನ ಉಳಿದ ಜೀವಮಾನವೆಲ್ಲ, _ **ದಾವೀದನು** __ ದೇವರಿಗೆ ವಿಧೇಯನಾಗಿ, ಆತನನ್ನು ಸಂಕಷ್ಟಗಳಲ್ಲಿಯೂ ಅನುಸರಿಸಿದನು.

ಪದ ಡೇಟಾ:

- Strong's: H1732, G1138

ದಾವೀದ ನಗರ

ಸತ್ಯಾಂಶಗಳು:

“ದಾವೀದ ನಗರ” ಎನ್ನುವ ಮಾತು ಯೆರೂಸಲೇಮ ಮತ್ತು ಬೇತ್ಲೆಹೇಮ್ ಎನ್ನುವ ಎರಡು ಊರುಗಳಿಗೆ ಮತ್ತೊಂದು ಹೆಸರಾಗಿರುತ್ತದೆ.

- ಯೆರೂಸಲೇಮ್ ಎನ್ನುವುದು ದಾವೀದನು ಇಸ್ರಾಯೇಲ್ ದೇಶವನ್ನು ಆಳುತ್ತಿರುವಾಗ ನಿವಾಸ ಮಾಡಿದ ಸ್ಥಳವಾಗಿದ್ದಿತ್ತು.
- ಬೇತ್ಲೆಹೇಮ್ ದಾವೀದನು ಹುಟ್ಟಿದ ಸ್ಥಳವಾಗಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದಾವೀದ, ಬೇತ್ಲೆಹೇಮ್. ಯೆರೂಸಲೇಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.08:1-2
- 2 ಸಮು.05:6-7
- ಯೆಶಯಾ.22:8-9
- ಲೂಕ.02:4-5
- ನೆಹೆ.03:14-15

ಪದ ಡೇಟಾ:

- Strong's: H1732, H5892, G1138, G4172

ದಾವೀದನ ಮನೆ

ಸತ್ಯಾಂಶಗಳು:

“ದಾವೀದನ ಮನೆ” ಎನ್ನುವ ಮಾತು ಅರಸನಾದ ದಾವೀದನ ಕುಟುಂಬವನ್ನು ಅಥವಾ ವಂಶಸ್ಥರನ್ನು ಸೂಚಿಸುತ್ತದೆ.

- ಇದನ್ನು “ದಾವೀದನ ವಂಶಸ್ಥರು” ಅಥವಾ “ದಾವೀದನ ಕುಟುಂಬ” ಅಥವಾ “ಅರಸನಾದ ದಾವೀದನ ಕುಲ” ಎಂದೂ ಅನುವಾದ ಮಾಡಬಹುದು.
- ಯಾಕಂದರೆ ಯೇಸು ದಾವೀದನ ವಂಶಸ್ಥನಾಗಿದ್ದನು, ಈತನು “ದಾವೀದನ ಮನೆಯಲ್ಲಿ” ಭಾಗವಾಗಿರುತ್ತಾನೆ.
- ಕೆಲವೊಂದುಸಲ “ದಾವೀದನ ಮನೆ” ಅಥವಾ “ದಾವೀದನ ಮನೆಯವರು” ಎನ್ನುವ ಮಾತು ಇನ್ನೂ ದಾವೀದನ ಕುಟುಂಬದಲ್ಲಿ ಜೀವಿಸುತ್ತಿರುವ ಜನರನ್ನು ಸೂಚಿಸುತ್ತದೆ.
- ಬೇರೊಂದು ಸಮಯಗಳಲ್ಲಿ ಈ ಪದವು ತುಂಬಾ ಸಾಧಾರಣ ಪದವಾಗಿರುತ್ತದೆ ಮತ್ತು ಆತನ ಎಲ್ಲಾ ವಂಶಸ್ಥರನ್ನು, ಅವರಿಗೆ ಸಂಬಂಧಪಟ್ಟು ಸತ್ತಂತವರನ್ನು ಕೂಡ ಸೂಚಿಸುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದಾವೀದ, ವಂಶಸ್ಥರು, ಮನೆ, ಯೇಸು, ಅರಸ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.10:17-19
- 2 ಸಮು.03:6-7
- ಲೂಕ.01:69-71
- ಕೀರ್ತನೆ.122:4-5
- ಜೆಕರ್ಯ.12:7-9

ಪದ ಡೇಟಾ:

- Strong's: H1004, H1732, G1138, G3624

ದೆಲೀಲಾ

ಸತ್ಯಾಂಶಗಳು:

ದೆಲೀಲಾ ಸಂಸೋನನಿಂದ ಪ್ರೀತಿಸಲ್ಪಟ್ಟ ಫಿಲಿಷ್ಟಿಯನ್ನರ ಸ್ತ್ರೀಯಳು, ಆದರೆ ಇವಳು ಸಂಸೋನನ ಹೆಂಡತಿಯಾಗಿರುವುದಿಲ್ಲ.

- ದೆಲೀಲಾ ಸಂಸೋನನನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ಆಕೆ ಹಣವನ್ನು ಪ್ರೀತಿ ಮಾಡಿದ್ದಳು.
- ಸಂಸೋನನನ್ನು ಯಾವರೀತಿ ಬಲಹೀನ ಪಡಿಸಬೇಕನ್ನುವ ರಹಸ್ಯವನ್ನು ಸಂಸೋನನಿಂದ ತಿಳಿದುಕೊಳ್ಳಬೇಕೆಂದು ಫಿಲಿಷ್ಟಿಯನ್ನರು ದೆಲೀಲಾಗೆ ಲಂಚವನ್ನು ಕೊಟ್ಟಿದ್ದರು. ಯಾವಾಗ ಸಂಸೋನನು ತನ್ನ ಬಲವನ್ನು ಕಳೆದುಕೊಂಡನೋ ಆಗ ಫಿಲಿಷ್ಟಿಯನ್ನರು ಅವನನ್ನು ಹಿಡಿದುಕೊಂಡರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಲಂಚ, ಫಿಲಿಷ್ಟಿಯನರು, ಸಂಸೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- ನ್ಯಾಯಾ.16:4-5
- ನ್ಯಾಯಾ.16:6-7
- ನ್ಯಾಯಾ.16:10-12
- ನ್ಯಾಯಾ.16:18-19

ಪದ ಡೇಟಾ:

- Strong's: H1807

ದೇವ ಮನುಷ್ಯ

ಸತ್ಯಾಂಶಗಳು:

'ದೇವ ಮನುಷ್ಯ" ಎನ್ನುವ ಮಾತು ಯೆಹೋವನ ಪ್ರವಾದಿಯನ್ನು ಸೂಚಿಸಲು ಗೌರವಪೂರ್ವಕವಾದ ವಿಧಾನವಾಗಿರುತ್ತದೆ. ಈ ಪದವನ್ನು ಯೆಹೋವನ ದೂತನನ್ನು ಕೂಡ ಸೂಚಿಸುತ್ತದೆ.

- ಈ ಪದವು ಪ್ರವಾದಿಯನ್ನು ಸೂಚಿಸಿದಾಗ, ಈ ಪದವನ್ನು "ದೇವರಿಗೆ ಸಂಬಂಧಪಟ್ಟ ಮನುಷ್ಯ" ಅಥವಾ "ದೇವರು ಆದುಕೊಂಡ ಮನುಷ್ಯ" ಅಥವಾ "ದೇವರನ್ನು ಸೇವಿಸುವ ಮನುಷ್ಯ" ಎಂದೂ ಅನುವಾದ ಮಾಡಬಹುದು.
- ದೂತನನ್ನು ಸೂಚಿಸಿದಾಗ, ಈ ಪದವನ್ನು "ದೇವರ ಸಂದೇಶಕ" ಅಥವಾ "ನಿನ್ನ ದೂತ" ಅಥವಾ "ಮನುಷ್ಯನಂತೆ ಕಾಣಿಸುವ ದೇವರಿಂದ ಬಂದ ಪರಲೋಕಕ್ಕೆ ಸಂಬಂಧಪಟ್ಟವನು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದೂತ, ಘನಪಡಿಸು, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.23:12-14
- 1 ಅರಸ.12:22-24
- 1 ಸಮು.09:9-11

ಪದ ಡೇಟಾ:

- Strong's: H376, H430, G444, G2316

ನಜರೇತ, ನಜರೇತಿನವನು

ಸತ್ಯಾಂಶಗಳು:

ನಜರೇತ್ ಎನ್ನುವುದು ಉತ್ತರ ಇಸ್ರಾಯೇಲಿನಲ್ಲಿರುವ ಗಲಿಲಾಯ ಸೀಮೆಯಲ್ಲಿನ ಪಟ್ಟಣವಾಗಿರುತ್ತದೆ. ಇದು ಉತ್ತರ ಯೆರೂಸಲೇಮಿನಿಂದ ಸುಮಾರು 100 ಕಿಲೋ ಮೀಟರ್ ದೂರದಲ್ಲಿರುತ್ತದೆ, ಮತ್ತು ನಡೆದುಕೊಂಡು ಪ್ರಯಾಣ ಮಾಡಬೇಕೆಂದರೆ ಸುಮಾರು ಮೂರರಿಂದ ಐದು ದಿನಗಳ ಕಾಲ ಬೇಕಾಗಿರುತ್ತದೆ.

- ಯೋಸೇಫನು ಮತ್ತು ಮರಿಯಳು ನಜರೇತಿನಿಂದ ಬಂದವರು ಮತ್ತು ಇಲ್ಲಿ ಅವರು ಯೇಸುವನ್ನು ಬೆಳೆಸಿದರು. ಆದ್ದರಿಂದಲೇ ಯೇಸುವನ್ನು "ನಜರೇಯನು" ಎಂದು ಕರೆಯುತ್ತಾರೆ.
- ನಜರೇತಿನಲ್ಲಿ ಜೀವಿಸುತ್ತಿರುವ ಯೆಹೂದ್ಯರಲ್ಲಿ ಅನೇಕರು ಯೇಸುವಿನ ಬೋಧನೆಯನ್ನು ಗೌರವಿಸಲಿಲ್ಲ ಯಾಕಂದರೆ ಆತನು ಅವರ ಮಧ್ಯದಲ್ಲಿಯೇ ಬೆಳೆದಿದ್ದನು, ಮತ್ತು ಅವರು ಆತನನ್ನು ಒಬ್ಬ ಸಾಧಾರಣ ಮನುಷ್ಯನೆಂದು ತಿಳಿದುಕೊಂಡಿದ್ದರು.
- ಒಂದುಬಾರಿ ನಜರೇತಿನವರ ಸಮಾಜ ಮಂದಿರದಲ್ಲಿ ಯೇಸು ಬೋಧನೆ ಮಾಡುತ್ತಿರುವಾಗ, ಯೆಹೂದ್ಯರು ಆತನನ್ನು ಕೊಲ್ಲಬೇಕೆಂದು ಯತ್ನಿಸಿದರು, ಯಾಕಂದರೆ ಆತನು ಮೆಸ್ಸೀಯನೆಂದು ಹೇಳಿಕೊಂಡಿದ್ದನು ಮತ್ತು ಆತನನ್ನು ತಿರಸ್ಕಾರ ಮಾಡಿದ್ದಕ್ಕಾಗಿ ಅವರನ್ನು ಗದರಿಸಿದ್ದನು.
- ಯೇಸು ನಜರೇತಿನಿಂದ ಬಂದವನೆಂದು ನತಾನಯೇಲನು ಕೇಳಿಸಿಕೊಂಡಾಗ, ಈ ಪಟ್ಟಣವು ಅಷ್ಟು ದೊಡ್ಡ ಪಟ್ಟಣವಲ್ಲ ಎಂದು ಅಂದುಕೊಂಡಿದ್ದನು.

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ಗಲಿಲಾಯ, ಯೋಸೇಫ, ಮರಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.26:9-11
- ಯೋಹಾನ.01:43-45
- ಲೂಕ.01:26-29
- ಮಾರ್ಕ.16:5-7
- ಮತ್ತಾಯ.02:22-23
- ಮತ್ತಾಯ.21:9-11
- ಮತ್ತಾಯ.26:71-72

ಸತ್ಯವೇದದಿಂದ ಉದಾಹರಣೆಗಳು:

- **23:04** ಯೋಸೇಫ ಮತ್ತು ಮರಿಯಳು ನಿವಾಸವಾಗಿದ್ದ _ **ನಜರೇತಿನಿಂದ** _ ಬೆತ್ಲೆಹೇಮಿಗೆ ಹೋಗುವುದಕ್ಕೆ ತುಂಬಾ ದೂರ ಪ್ರಯಾಣ ಮಾಡಿದ್ದರು, ಯಾಕಂದರೆ ಅವರ ಪೂರ್ವಜರು ಬೆತ್ಲೆಹೇಮಿನ ಸ್ವಂತ ಊರಿನವನಾಗಿದ್ದ ದಾವೀದನಾಗಿದ್ದನು.
- **26:02** ಯೇಸು _ **ನಜರೇತ್** _ ಎನ್ನುವ ಪಟ್ಟಣಕ್ಕೆ ಹೋದನು, ಅಲ್ಲಿಯೇ ತನ್ನ ಬಾಲ್ಯದಿನಗಳನ್ನು ಕಳೆದಿದ್ದನು.
- **26:07** _ **ನಜರೇತಿನ** _ ಜನರು ಆರಾಧನೆ ಸ್ಥಳದಿಂದ ಹೊರಗಡೆ ಎಳೆದಿದ್ದರು ಮತ್ತು ಆತನನ್ನು ಕೊಲ್ಲುವ ಯತ್ನದಲ್ಲಿ ಆತನನ್ನು ಬಂಡೆಯ ತುದಿಬದಿಗೆ ಕರೆದುಕೊಂಡು ಬಂದಿದ್ದರು.

ಪದ ಡೇಟಾ:

- Strong's: G3478, G3479, G3480

ನಫ್ತಾಲಿ

ಸತ್ಯಾಂಶಗಳು:

ನಫ್ತಾಲಿ ಎನ್ನುವವನು ಯಾಕೋಬನ ಆರನೇಯ ಮಗನಾಗಿರುತ್ತಾನೆ. ಇವನ ಸಂತಾನದವರೆಲ್ಲಾ ನಫ್ತಾಲಿ ಕುಲವನ್ನಾಗಿ ಮಾರ್ಪಟ್ಟರು, ಇದು ಇಸ್ರಾಯೇಲ್ ಹನ್ನೆರಡು ಕುಲಗಳಲ್ಲಿ ಒಂದಾಗಿರುತ್ತದೆ.

- ಕೆಲವೊಂದುಸಲ ನಫ್ತಾಲಿ ಎನ್ನುವ ಹೆಸರು ಈ ಹೆಸರಿನ ಕುಲದವರು ನಿವಾಸವಾಗಿರುವ ದೇಶವನ್ನು ಸೂಚಿಸುತ್ತದೆ. (ನೋಡಿರಿ: ಅಲಂಕಾರ ರೂಪ)
- ನಫ್ತಾಲಿ ದೇಶವು (ಅಥವಾ ಭೂಮಿ) ಇಸ್ರಾಯೇಲ್ ಉತ್ತರ ಭಾಗದಲ್ಲಿ ಕಂಡುಬರುತ್ತದೆ, ಇದು ದಾನ್ ಮತ್ತು ಅಶೇರ್ ಕುಲಗಳಿಗೆ ತುಂಬಾ ಸಮೀಪವಾಗಿರುತ್ತದೆ. ಇದರ ಪೂರ್ವ ದಿಕ್ಕಿನ ಗಡಿಯು ಕಿನ್ನೆರೆತ್ ಸಮುದ್ರದ ಪಶ್ಚಿಮ ತೀರ ಪ್ರದೇಶದಲ್ಲಿ ಕಂಡುಬರುತ್ತದೆ.
- ಈ ಕುಲವನ್ನು ಸತ್ಯವೇದದಲ್ಲಿರುವ ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿ ದಾಖಲುಯಾಗಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಶೇರ್, ದಾನ್, ಯಾಕೋಬ, ಗಲಿಲಾಯ ಸಮುದ್ರ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.04:15-17
- ಧರ್ಮೋ.27:13-14
- ಯೆಹೆ.48:1-3
- ಆದಿ.30:7-8
- ನ್ಯಾಯಾ.01:33
- ಮತ್ತಾಯ.04:12-13

ಪದ ಡೇಟಾ:

- Strong's: H5321, G3508

ನಹೂಮ

ಸತ್ಯಾಂಶಗಳು:

ದುಷ್ಟನಾಗಿರುವ ಅರಸ ಮನಸ್ಸೆ ಯೆಹೂದ ರಾಜ್ಯವನ್ನು ಆಳುತ್ತಿರುವ ಕಾಲದಲ್ಲಿ ನಹೂಮನು ಪ್ರವಾದಿಯಾಗಿದ್ದನು.

- ನಹೂಮನು ಎಲ್ಕೋಷ ಪಟ್ಟಣದಿಂದ ಬಂದವನಾಗಿದ್ದನು, ಇದು ಯೆರೂಸಲೇಮಿಗೆ 20 ಮೈಲಿಗಳಷ್ಟು ದೂರದಲ್ಲಿರುತ್ತದೆ.
- ಹಳೇ ಒಡಂಬಡಿಕೆಯಲ್ಲಿರುವ ನಹೂಮನ ಗ್ರಂಥದಲ್ಲಿ ಅಶ್ಶೂರ್ ಪಟ್ಟಣವಾಗಿರುವ ನಿನವೆಯ ನಾಶನದ ಕುರಿತಾಗಿ ಹೇಳಿರುವ ತನ್ನ ಪ್ರವಾದನೆಗಳೆಲ್ಲವು ದಾಖಲು ಮಾಡಲಾಗಿರುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್, ಮನಸ್ಸೆ, ಪ್ರವಾದಿ, ನಿನವೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ನಹೂ.01:1

ಪದ ಡೇಟಾ:

- Strong's: H5151, G3486

ನಾತಾನ್

ಸತ್ಯಾಂಶಗಳು:

ನಾತಾನ್ ದೇವರ ನಂಬಿಗಸ್ತನಾದ ಪ್ರವಾದಿಯಾಗಿರುತ್ತಾನೆ, ದಾವೀದನು ಇಸ್ರಾಯೇಲ್ ಮೇಲೆ ಅರಸನಾಗಿರುವ ಕಾಲದಲ್ಲಿ ಈತನು ಜೀವಿಸಿದ್ದನು.

- ದಾವೀದನು ಊರೀಯನಿಗೆ ವಿರುದ್ಧವಾಗಿ ಪಾಪವನ್ನು ಮಾಡಿದನಂತರ ದಾವೀದನನ್ನು ಎದುರುಗೊಳ್ಳಲು ದೇವರು ನಾತಾನನನ್ನು ಕಳುಹಿಸಿದನು.
- ದಾವೀದನು ಅರಸನಾಗಿರುವ ಸಮಯದಲ್ಲೂ ನಾತಾನನು ದಾವೀದನನ್ನು ಗದರಿಸಿದನು.
- ನಾತಾನನು ದಾವೀದನನ್ನು ಎದುರ್ಗೊಂಡನಂತರ, ದಾವೀದನು ತನ್ನ ಪಾಪದ ವಿಷಯದಲ್ಲಿ ಪಶ್ಚಾತ್ತಾಪಪಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದಾವೀದ, ನಂಬಿಗಸ್ತ, ಪ್ರವಾದಿ, ಊರೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.17:1-2
- 2 ಪೂರ್ವ.09:29-31
- 2 ಸಮು.12:1-3
- ಕೀರ್ತನೆ.051:1-2

ಸತ್ಯವೇದದಿಂದ ಉದಾಹರಣೆಗಳು:

- **17:07** “ನೀನು ಯುದ್ಧ ಮಾಡುವ ಮನುಷ್ಯನಾಗಿರುವದರಿಂದ, ನೀನು ನನಗಾಗಿ ದೇವಾಲಯವನ್ನು ಕಟ್ಟಬಾರದು” ಎನ್ನುವ ಸಂದೇಶದೊಂದಿಗೆ ದಾವೀದನ ಬಳಿಗೆ ದೇವರು ತನ್ನ ಪ್ರವಾದಿಯಾದ _ **ನಾತಾನನ್ನು** _ ಕಳುಹಿಸಿದನು..
- **17:13**ದಾವೀದನು ಮಾಡಿದ ಕೆಲಸದ ಕುರಿತಾಗಿ ದೇವರು ತುಂಬಾ ಕೋಪದಲ್ಲಿದ್ದನು, ಇದರಿಂದ ಇದು ಎಷ್ಟು ಭಯಂಕರವಾದ ಪಾಪವೆಂದು ದಾವೀದನಿಗೆ ತಿಳಿಸಿಕೊಡಲು ಆತನು ಪ್ರವಾದಿಯಾದ **ನಾತಾನನನ್ನು** __ ಕಳುಹಿಸಿದನು.

ಪದ ಡೇಟಾ:

- Strong's: H5416, G3481

ನಾಮಾನ್

ಸತ್ಯಾಂಶಗಳು:

ಹಳೇ ಒಡಂಬಡಿಕೆಯಲ್ಲಿ ನಾಮಾನನು ಆರಾಮ್ ರಾಜ್ಯದ ಸೈನ್ಯಕ್ಕೆ ಸೈನ್ಯಾಧಿಪತಿಯಾಗಿದ್ದನು.

- ನಾಮಾನನಿಗೆ ಎಂದಿಗೂ ವಾಸಿಯಾಗದ ಕುಷ್ಠ ರೋಗ ಎನ್ನುವ ಭಯಂಕರವಾದ ಚರ್ಮದ ರೋಗವು ಬಂದಿತ್ತು.
- ನಾಮಾನನ ಮನೆಯಲ್ಲಿರುವ ಯೆಹೂದ್ಯ ದಾಸಿ ಪ್ರವಾದಿಯಾದ ಎಲೀಷನ ಬಳಿಗೆ ಹೋಗಿ ನಿನ್ನ ರೋಗವನ್ನು ವಾಸಿ ಮಾಡಬೇಕೆಂದು ಕೇಳಿಕೊಳ್ಳಿರಿ ಎಂದು ಅವನಿಗೆ ಹೇಳಿದಳು.
- ಎಲೀಷನು ನಾಮಾನನಿಗೆ ಯೊರ್ದನ್ ನದಿಯೊಳಗೆ ಏಳು ಬಾರಿ ಮುಳುಗಿ ಎದ್ದೇಳಬೇಕೆಂದು ಹೇಳಿದನು. ನಾಮಾನನು ವಿಧೇಯನಾದಾಗ, ದೇವರು ಅವನ ರೋಗವನ್ನು ವಾಸಿ ಮಾಡಿದನು.

ಇದಕ್ಕೆ ಫಲಿತಾಂಶವು ನಾಮಾನನು ನಿಜವಾದ ಒಬ್ಬರೇ ದೇವರಾಗಿರುವ ಯೆಹೋವನಲ್ಲಿ ನಂಬಿಕೆಯಿಟ್ಟನು.

- ನಾಮಾನನ ಮೇಲಿರುವ ಇನ್ನೂ ಇಬ್ಬರು ಯಾಕೋಬನ ಮಗನಾಗಿರುವ ಬೆನ್ಯಾಮೀನನ ಸಂತಾನದವರಾಗಿರುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆರಾಮ್, ಯೊರ್ದನ್ ಹೊಳೆ, ಕುಷ್ಠ ರೋಗ, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.08:6-7
- 2 ಅರಸ.05:1-2
- ಲೂಕ.04:25-27

ಸತ್ಯವೇದದಿಂದ ಉದಾಹರಣೆಗಳು:

- **19:14** ಅತೀ ಭಯಾನಕವಾದ ಚರ್ಮ ರೋಗವನ್ನು ಹೊಂದಿದ ಶತ್ರು ಸೈನ್ಯಾಧಿಪತಿಯಾಗಿರುವ _ **ನಾಮಾನನಿಗೆ** _ ಅನೇಕ ಅದ್ಭುತ ಕಾರ್ಯಗಳಲ್ಲಿ ಒಂದು ನಡೆದಿದೆ.
- **19:15** ಮೊದಲಬಾರಿಗೆ _ **ನಾಮಾನನು** _ ಸಿಟ್ಟುಗೊಂಡಿದ್ದನು, ಯಾಕಂದರೆ ಅದು ತುಂಬಾ ಮೂರ್ಖತನವೆಂದು ಭಾವಿಸಿ ಅದನ್ನು ಮಾಡುವುದಕ್ಕೆ ಇಷ್ಟಪಟ್ಟಿರಲಿಲ್ಲ. ಆದರೆ ಸ್ವಲ್ಪ ಸಮಯದನಂತರ ತನ್ನ ಮನಸ್ಸನ್ನು ಮಾರ್ಪಾಟು ಮಾಡಿಕೊಂಡು, ಯೊರ್ದನ್ ಹೊಳೆಯಲ್ಲಿ ಏಳು ಬಾರಿ ಮುಳುಗಿ ಎದ್ದಿದ್ದನು.
- **26:06** “ಇಸ್ರಾಯೇಲ್ ಶತ್ರುಗಳ ಸೈನ್ಯಾಧಿಪತಿಯಾದ _ **ನಾಮಾನನ** _ ಚರ್ಮ ರೋಗವನ್ನು ಮಾತ್ರವೇ ಆತನು (ಎಲೀಷನು) ವಾಸಿ ಮಾಡಿದ್ದನು.”

ಪದ ಡೇಟಾ:

- Strong's: H5283, G3497

ನಾಹೋರ್

ಸತ್ಯಾಂಶಗಳು:

ನಾಹೋರ್ ಎನ್ನುವ ಹೆಸರು ಅಬ್ರಾಹಾಮನ ಇಬ್ಬರ ಬಂಧುಗಳ ಹೆಸರಾಗಿರುತ್ತದೆ, ಅಂದರೆ ಅಬ್ರಾಹಾಮನ ತಾತ ಮತ್ತು ತನ್ನ ಸಹೋದರನ ಹೆಸರಾಗಿರುತ್ತದೆ.

- ಅಬ್ರಾಹಾಮನ ಸಹೋದರನಾದ ನಾಹೋರನು ಇಸಾಕನ ಹೆಂಡತಿಯಾದ ರೆಬೆಕ್ಕಳ ತಾತನಾಗಿರುತ್ತಾನೆ.
- "ನಾಹೋರ್ ಪಟ್ಟಣ" ಎನ್ನುವ ಮಾತಿಗೆ "ನಾಹೋರ್ ಹೆಸರಿನ ಪಟ್ಟಣ" ಅಥವಾ "ನಾಹೋರನು ನಿವಾಸವಾಗಿರುವ ಪಟ್ಟಣ" ಅಥವಾ "ನಾಹೋರನ ಪಟ್ಟಣ" ಎನ್ನುವ ಅರ್ಥಗಳಿರುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ರೆಬೆಕ್ಕಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:24-27
- ಆದಿ.31:51-53
- ಯೆಹೋ.24:1-2
- ಲೂಕ.03:33-35

ಪದ ಡೇಟಾ:

- Strong's: H5152, G3493

ನಿನೆವೆ, ನಿನೆವೆಯನು

ಸತ್ಯಾಂಶಗಳು:

ನಿನೆವೆ ಅಶ್ಶೂರಿನ ರಾಜಧಾನಿ ಪಟ್ಟಣವಾಗಿತ್ತು. “ನಿನೆವೆಯನು” ಎನ್ನುವ ಪದವು ನಿನೆವೆಯಲ್ಲಿ ಜೀವಿಸುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.

- ನಿನೆವೆಯರು ತಮ್ಮ ದುಷ್ಟ ಮಾರ್ಗಗಳಿಂದ ತಿರುಗಿಕೊಳ್ಳಬೇಕೆಂದು ಎಚ್ಚರಿಸಲು ದೇವರು ಪ್ರವಾದಿಯಾದ ಯೋನನನ್ನು ನಿನೆವೆಗೆ ಕಳುಹಿಸಿದನು. ಜನರೆಲ್ಲರೂ ಮಾನಸಾಂತರ ಹೊಂದಿದರು ಮತ್ತು ದೇವರು ಅವರನ್ನು ನಾಶಗೊಳಿಸಲಿಲ್ಲ.
- ಅಶ್ಶೂರಿಯರು ಸ್ವಲ್ಪ ಕಾಲವಾದನಂತರ ದೇವರನ್ನು ಸೇವಿಸುವುದನ್ನು ನಿಲ್ಲಿಸಿಬಿಟ್ಟರು. ಅವರು ಇಸ್ರಾಯೇಲ್ ರಾಜ್ಯವನ್ನು ಜಯಿಸಿದರು ಮತ್ತು ಜನರೆಲ್ಲರನ್ನು ನಿನೆವೆಗೆ ಕರೆದೊಯ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್, ಯೋನ, ಪಶ್ಚಾತ್ತಾಪ ಹೊಂದು, ತಿರುಗಿಕೋ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.10:11-14
- ಯೋನ.01:1-3
- ಯೋನ.03:1-3
- ಲೂಕ.11:32
- ಮತ್ತಾಯ.12:41

ಪದ ಡೇಟಾ:

- Strong's: H5210, G3535, G3536

ನೆಬುಕದ್ನೆಚರ

ಸತ್ಯಾಂಶಗಳು:

ನೆಬುಕದ್ನೆಚರ ಬಾಬೆಲೋನಿಯ ಸಾಮ್ರಾಜ್ಯದ ಅರಸನಾಗಿದ್ದನು, ಈ ಸಾಮ್ರಾಜ್ಯವು ಅನೇಕ ಜನರ ಗುಂಪುಗಳನ್ನು ಮತ್ತು ದೇಶಗಳನ್ನು ಜಯಿಸಿದ ಶಕ್ತಿಯುತವಾದ ಸೈನ್ಯವಾಗಿದ್ದಿತ್ತು.

- ನೆಬುಕದ್ನೆಚರ ನಾಯಕತ್ವದ ಕೆಳಗೆ, ಬಾಬೆಲೋನಿಯ ಸೈನ್ಯವು ಯೆಹೂದ ರಾಜ್ಯದ ಮೇಲೆ ಧಾಳಿ ಮಾಡಿ ಜಯಿಸಿದರು, ಮತ್ತು ಯೆಹೂದ ಜನರಲ್ಲಿ ಅನೇಕರನ್ನು ಸೆರೆ ಹಿಡಿದು ಬಾಬೆಲೋನಿಯಾಗೆ ತೆಗೆದುಕೊಂಡು ಹೋದರು. ಸೆರೆ ಹಿಡಿದು ಜನರನ್ನು ಸುಮಾರು 70 ವರ್ಷಗಳ ಕಾಲ ಜೀವಿಸುವಂತೆ ಬಲವಂತಿಕೆ ಮಾಡಿದ್ದರು, ಇದನ್ನೇ ಬಾಬೆಲೋನಿಯ ಸೆರೆ ಎಂದು ಕರೆಯುತ್ತಾರೆ.
- ಒಂದು ಸೆರೆಯಲ್ಲಿ ದಾನಿಯೇಲನು ಅರಸನಾಗಿರುವ ನೆಬುಕದ್ನೆಚರನ ಕನಸುಗಳಿಗೆ ಅರ್ಥವಿವರಣೆಯನ್ನು ಹೇಳಿದನು.
- ಸೆರೆಗೊಯ್ದ ಮೂವರ ಇಸ್ರಾಯೇಲ್ಯರಾದ ಹನನ್ಯ, ಮೀಶಾಯೇಲ, ಮತ್ತು ಅಜರ್ಯ ಎನ್ನುವವರನ್ನು ಧಗಧಗನೆ ಉರಿಯುವ ಬೆಂಕಿಯೊಳಗೆ ಹಾಕಿದ್ದರು, ಯಾಕಂದರೆ ಅವರು ನೆಬುಕದ್ನೆಚರನು ಮಾಡಿಸಿದ ಬಂಗಾರದ ಪ್ರತಿಮೆಗೆ ಮುಗಿದಿರಲಿಲ್ಲ.
- ಅರಸನಾದ ನೆಬುಕದ್ನೆಚರನು ತುಂಬಾ ಅಹಂಕಾರಿಯಾಗಿದ್ದನು ಮತ್ತು ಸುಳ್ಳು ದೇವರುಗಳನ್ನು ಆರಾಧಿಸುತ್ತಿದ್ದನು. ಅವನು ಯೆಹೂದ್ಯವನ್ನು ಜಯಿಸಿದನಂತರ, ಅವನು ಯೆರೂಸಲೇಮಿನಲ್ಲಿ ದೇವಾಲಯದಿಂದ ಬೆಳ್ಳಿ ಬಂಗಾರ ವಸ್ತುಗಳನ್ನು ಕದ್ದಿದ್ದನು.
- ಸುಳ್ಳು ದೇವರುಗಳನ್ನು ಆರಾಧನೆ ಮಾಡುವುದರಿಂದ ತಿರುಗಿಕೊಳ್ಳುವುದಕ್ಕೆ ನೆಬುಕದ್ನೆಚರನು ತುಂಬಾ ಗರ್ವದಿಂದಿದ್ದು, ತಿರಸ್ಕಾರ ಮಾಡಿರುವದರಿಂದ ಅವನು ಒಂದು ಪ್ರಾಣಿಯಂತೆ ಸುಮಾರು ಏಳು ವರ್ಷಗಳ ವರೆಗೆ ದಿಕ್ಕಿಲ್ಲದಂತೆ ಜೀವನ ಮಾಡಿದ್ದನು. ಏಳು ವರ್ಷಗಳಾದನಂತರ ನೆಬುಕದ್ನೆಚರನು ನಿಜವಾದ ದೇವರಾಗಿರುವ ಒಬ್ಬರೇ ದೇವರಾದ ಯೆಹೋವಾನನ್ನು ಸ್ತುತಿಸಿ, ತನ್ನನ್ನು ತಗ್ಗಿಸಿಕೊಂಡಿದ್ದ ಕಾರಣದಿಂದ ದೇವರು ಅವನನ್ನು ವಾಸಿ ಮಾಡಿದನು,

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಹಂಕಾರಿ, ಅಜರ್ಯ, ಬಾಬೆಲೋನಿಯ, ಹನನ್ಯ, ಮೀಶಾಯೇಲ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.06:13-15
- 2 ಅರಸ.25:1-3
- ದಾನಿ.01:1-2
- ದಾನಿ.04:4-6
- ಯೆಹೆ.26:7-8

ಸತ್ಯವೇದದಿಂದ ಉದಾಹರಣೆಗಳು:

- **20:06** ಇಸ್ರಾಯೇಲ್ ರಾಜ್ಯವನ್ನು ಅಶ್ಶೂರಿಯರು ನಾಶಗೊಳಿಸಿದನಂತರ ಸುಮಾರು 100 ವರ್ಷಗಳಾದ ಮೇಲೆ, ಯೆಹೂದ ರಾಜ್ಯದ ಮೇಲೆ ಧಾಳಿ ಮಾಡುವುದಕ್ಕೆ ಬಾಬೆಲೋನಿಯ ಅರಸನಾಗಿರುವ _ ನೆಬುಕದ್ನೆಚರನನ್ನು _ ದೇವರು ಕಳುಹಿಸಿದರು.
- **20:06** ಯೆಹೂದ ಅರಸನು _ ನೆಬುಕದ್ನೆಚರನ _ ದಾಸನಾಗಿರುವುದಕ್ಕೆ ಮತ್ತು ಪ್ರತಿ ವರ್ಷವು ಹೆಚ್ಚಿನ ಹಣವನ್ನು ಕೊಡುವುದಕ್ಕೆ ಒಪ್ಪಿಕೊಂಡಿರುತ್ತಾನೆ.
- **20:08** ತಿರಸ್ಕಾರ ಮಾಡಿದ್ದಕ್ಕಾಗಿ ಯೆಹೂದ ಅರಸನನ್ನು ಶಿಕ್ಷಿಸುವುದಕ್ಕೆ, _ ನೆಬುಕದ್ನೆಚರನ _ ಸೈನಿಕರು ಅರಸನ ಗಂಡು ಮಕ್ಕಳನ್ನು ಅವನ ಮುಂದೆಯೇ ಸಾಯಿಸಿದರು ಮತ್ತು ಅವನನ್ನು ಕುರುಡನನ್ನಾಗಿ ಮಾಡಿದರು.
- **20:09** _ ನೆಬುಕದ್ನೆಚರನು _ ಮತ್ತು ತನ್ನ ಸೈನ್ಯವು ಯೆಹೂದ ರಾಜ್ಯದಲ್ಲಿರುವ ಅನೇಕ ಜನರನ್ನು ಬಾಬೆಲೋನಿಯಗೆ ಕರೆದೊಯ್ದರು, ಆದರೆ ಹೊಲಗದ್ದೆಗಳಲ್ಲಿ ಬಡ ಜನರನ್ನು ಬಿಟ್ಟು ಹೋದರು.

ಪದ ಡೇಟಾ:

- Strong's: H5019, H5020

ನೆಹೆಮೀಯ

ಸತ್ಯಾಂಶಗಳು:

ನೆಹೆಮೀಯನು ಇಸ್ರಾಯೇಲಿಯನಾಗಿರುತ್ತಾನೆ, ಯೆಹೂದ ಮತ್ತು ಇಸ್ರಾಯೇಲ್ ಜನರನ್ನು ಬಾಬೆಲೋನಿಯರಿಂದ ಸೆರೆಗೊಯ್ಯಲ್ಪಟ್ಟ ಸಮಯದಲ್ಲಿ ಬಲವಂತಿಕೆಯಿಂದ ಕರೆದೊಯ್ಯಲ್ಪಟ್ಟಿದ್ದನು.

- ಈತನು ಪಾರಸೀಯ ಅರಸನಾದ ಅಹಷ್ವೆರೋಷನಿಗೆ ಪಾನದಾಯಕನಾಗಿರುವಾಗ, ನೆಹೆಮೀಯನು ಅರಸನ ಬಳಿಗೆ ಹೋಗಿ ಯೆರೂಸಲೇಮಿಗೆ ಹಿಂದಿರುಗಿ ಹೋಗುವುದಕ್ಕೆ ಅನುಮತಿಗಾಗಿ ಕೇಳಿದನು.
- ಯೆರೂಸಲೇಮಿನ ಗೋಡೆಗಳನ್ನು ಬಾಬೆಲೋನಿಯರಿಂದ ನಾಶಗೊಂಡಾಗ, ಅವುಗಳನ್ನು ತಿರುಗಿ ಕಟ್ಟುವುದರಲ್ಲಿ ನೆಹೆಮೀಯನು ಇಸ್ರಾಯೇಲ್ಯರನ್ನು ನಡೆಸಿದನು.
- ಸುಮಾರು ಹನ್ನೆರಡು ವರ್ಷಗಳ ಕಾಲ ನೆಹೆಮೀಯನು ಅರಸನ ಮನೆಗೆ ಹೋಗುವುದಕ್ಕೆ ಮುಂಚಿತವಾಗಿ ಯೆರೂಸಲೇಮಿನ ಪಾಲಕನಾಗಿದ್ದನು.
- ಹಳೇ ಒಡಂಬಡಿಕೆಯಲ್ಲಿ ನೆಹೆಮೀಯ ಪುಸ್ತಕವು ಯೆರೂಸಲೇಮಿನಲ್ಲಿರುವ ಜನರ ಆತನ ಪಾಲನೆಯ ಕುರಿತಾಗಿ ಮತ್ತು ಗೋಡೆಗಳನ್ನು ತಿರುಗಿ ಕಟ್ಟುವುದರಲ್ಲಿ ನೆಹೆಮೀಯ ಕೆಲಸದ ಕಾರ್ಯಗಳನ್ನು ವಿವರಿಸುತ್ತದೆ.
- ಹಳೇ ಒಡಂಬಡಿಕೆಯಲ್ಲಿ ನೆಹೆಮೀಯ ಎನ್ನುವ ಹೆಸರಿನ ಮೇಲೆ ಅನೇಕರಿದ್ದಾರೆ. ಯಾವ ನೆಹೆಮೀಯನ ಕುರಿತಾಗಿ ಮಾತನಾಡುತ್ತಿದ್ದಾರೆಂದು ವಿವರಿಸುವುದಕ್ಕೆ ಹೇಳಲು ಆ ಹೆಸರುಗಳ ಮುಂದೆ ಅವರ ತಂದೆಯ ಹೆಸರನ್ನು ಸಹಜವಾಗಿ ಬರೆಯುತ್ತಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಹಷ್ವೆರೋಷ, ಬಾಬೆಲೋನಿಯ, ಯೆರೂಸಲೇಮ್, ಮಗ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಜ್ರಾ.02:1-2
- ನೆಹೆ.01:1-2
- ನೆಹೆ.10:1-3
- ನೆಹೆ.12:46-47

ಪದ ಡೇಟಾ:

- Strong's: H5166

ನೈಲ್ ನದಿ, ಐಗುಪ್ತ ನದಿ, ನೈಲ್

ಸತ್ಯಾಂಶಗಳು:

ನೈಲ್ ಎನ್ನುವುದು ಈಶಾನ್ಯ ಆಫ್ರಿಕಾದಲ್ಲಿರುವ ಉದ್ದವಾದ ಮತ್ತು ಅಗಲವಾದ ನದಿಯಾಗಿರುತ್ತದೆ. ಇದು ವಿಶೇಷವಾಗಿ ಐಗುಪ್ತ ದೇಶದ ಮುಖ್ಯ ನದಿಯಾಗಿ ಪ್ರಸಿದ್ಧಿ ಹೊಂದಿರುತ್ತದೆ..

- ನೈಲ್ ನದಿ ಉತ್ತರ ಐಗುಪ್ತದಿಂದ ಮೆಡಿಟರೇನಿಯನ್ ಸಮುದ್ರದೊಳಗೆ ಹರಡುತ್ತದೆ.
- ನೈಲ್ ನದಿಯ ಎರಡು ಬದಿಗೆ ಇರುವ ಫಲವತ್ತಾದ ಭೂಮಿಯಲ್ಲಿ ಬೆಳೆಗಳು ಚೆನ್ನಾಗಿ ಬೆಳೆಯುತ್ತವೆ.
- ಇದು ಬೆಳೆಗಳಿಗೆ ಬೇಕಾದ ನೀರಿನ ಮುಖ್ಯ ಆಧಾರವಾಗಿರುವದರಿಂದ ನೈಲ್ ನದಿಯ ಪಕ್ಕದಲ್ಲಿಯೇ ಐಗುಪ್ತರಲ್ಲಿ ಹೆಚ್ಚಾಗಿ ಜೀವಿಸುತ್ತಾರೆ.
- ಇಸ್ರಾಯೇಲ್ಯರು ಗೋಷೆನ್ ಸೀಮೆಯಲ್ಲಿ ನಿವಾಸವಾಗಿದ್ದರೂ, ಇದು ನೈಲ್ ನದಿ ಪಕ್ಕದಲ್ಲಿಯೇ ಇದ್ದಿತ್ತು ಮತ್ತು ತುಂಬಾ ಫಲವತ್ತಾದ ಭೂಮಿಯಾಗಿದ್ದಿತ್ತು.
- ಮೋಶೆ ಶಿಶುವಾಗಿದ್ದಾಗ ತನ್ನನ್ನು ಫರೋಹನ ಮನುಷ್ಯರಿಂದ ಬಚ್ಚಿಡುವುದಕ್ಕೆ ತನ್ನ ತಂದೆತಾಯಿಗಳು ನೈಲ್ ಜೊಂಡುಗಳ ಮಧ್ಯೆಯಲ್ಲಿ ಒಂದು ಬುಟ್ಟಿಯಲ್ಲಿ ಹಾಕಿ ಬಿಟ್ಟಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ಗೋಷೆನ್, ಮೋಶೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆಮೋಸ.08:7-8
- ಆದಿ.41:1-3
- ಯೆರೆ.46:7-9

ಸತ್ಯವೇದದಿಂದ ಉದಾಹರಣೆಗಳು:

- **08:04** ಐಗುಪ್ತ ದೇಶವು ಶಕ್ತಿಯುತವಾದ ದೊಡ್ಡ ದೇಶವಾಗಿರುತ್ತದೆ, ಇದು _ ನೈಲ್ ನದಿಯ _ ಪಕ್ಕದಲ್ಲಿ ಕಂಡುಬರುತ್ತದೆ.
- **09:04** ಇಸ್ರಾಯೇಲ್ಯರು ಅನೇಕಮಂದಿ ಶಿಶುಗಳನ್ನು ಹೊಂದುತ್ತಿದ್ದಾರೆಂದು ಫರೋಹನು ಕಂಡನು, ಆದ್ದರಿಂದ ಇಸ್ರಾಯೇಲ್ಯರ ಎಲ್ಲಾ ಶಿಶುಗಳನ್ನು ಕೊಂದು _ ನೈಲ್ ನದಿಯಲ್ಲಿ _ ಬಿಸಾಡಿರಿ ಎಂದು ತನ್ನ ಜನರಿಗೆ ಅಪ್ಪಣೆ ಕೊಟ್ಟನು.
- **09:06** ತನ್ನ ತಂದೆತಾಯಿಯರು ಶಿಶುವನ್ನು ಹೆಚ್ಚಿನ ಕಾಲ ಬಚ್ಚಿಡುವುದಕ್ಕಾಗದ ಕಾರಣದಿಂದ, ಆ ಶಿಶುವು ಸಾಯದಂತೆ ತನ್ನ ರಕ್ಷಿಸುವುದಕ್ಕೆ _ ನೈಲ್ ನದಿಯ _ ತುದಿ ಭಾಗದಲ್ಲಿ ಜೊಂಡುಗಳ ಮಧ್ಯೆಯಲ್ಲಿ ತೇಲಾಡುವ ಬುಟ್ಟಿಯಲ್ಲಿ ಅವನನ್ನು ಇಟ್ಟು ನೀರಿನ ಮೇಲೆ ಬಿಟ್ಟರು.
- **10:03** ದೇವರು _ ನೈಲ್ ನದಿಯನ್ನು _ ರಕ್ತವನ್ನಾಗಿ ಮಾರ್ಪಡಿಸಿದರು, ಆದರೂ ಫರೋಹನು ಇಸ್ರಾಯೇಲ್ಯರನ್ನು ಬಿಡಲಿಲ್ಲ.

ಪದ ಡೇಟಾ:

- Strong's: H2975, H4714, H5104

ನೋಹ

ಸತ್ಯಾಂಶಗಳು:

ನೋಹನು 4,000 ಸಾವಿರ ವರ್ಷಗಳ ಹಿಂದೆ ಜೀವಿಸಿದವನಾಗಿದ್ದನು, ದೇವರು ಪ್ರಪಂಚವ್ಯಾಪ್ತವಾಗಿ ಲೋಕದಲ್ಲಿರುವ ದುಷ್ಟ ಜನರೆಲ್ಲರನ್ನು ನಾಶ ಮಾಡುವುದಕ್ಕೆ ಪ್ರಳಯವನ್ನು ಕಳುಹಿಸಿದ ಸಮಯದಲ್ಲಿ ಜೀವಿಸಿದವನಾಗಿದ್ದನು. ದೇವರು ನೋಹನಿಗೆ ಅತಿ ದೊಡ್ಡ ನಾವೆಯನ್ನು ಕಟ್ಟಬೇಕೆಂದು ಹೇಳಿದನು ಮತ್ತು ಭೂಮಿಯ ಮೇಲೆ ಪ್ರಳಯವು ಆವರಿಸುವಾಗ ಅವನು ಮತ್ತು ಅವನ ಕುಟುಂಬದವರು ನಾವೆಯಲ್ಲಿ ಜೀವಿಸಬಹುದು.

- ನೋಹನು ಎಲ್ಲಾ ವಿಷಯಗಳಲ್ಲಿ ದೇವರಿಗೆ ವಿಧೇಯನಾಗಿರುವ ನೀತಿವಂತನಾದ ಮನುಷ್ಯನಾಗಿದ್ದನು.
- ಅತೀ ದೊಡ್ಡ ನಾವೆಯನ್ನು ಯಾವರೀತಿ ನಿರ್ಮಿಸಬೇಕೆಂದು ದೇವರು ನೋಹನಿಗೆ ಹೇಳಿದಾಗ, ನೋಹನು ದೇವರು ಹೇಳಿದ ಪ್ರಕಾರವೇ ಅದನ್ನು ನಿರ್ಮಿಸಿದನು.
- ನಾವೆಯಲ್ಲಿ ನೋಹನು ಮತ್ತು ತನ್ನ ಕುಟುಂಬದವರು ಸುರಕ್ಷಿತವಾಗಿದ್ದರು, ಮತ್ತು ತನ್ನ ಮಕ್ಕಳು, ಮೊಮ್ಮೊಕ್ಕಳು ಜನರನ್ನು ಹುಟ್ಟಿಸಿ ಭೂಮಿಯೆಲ್ಲಾ ತುಂಬಿಸಿದರು.
- ಪ್ರಳಯವಾದನಂತರ ಹುಟ್ಟಿದ ಪ್ರತಿಯೊಬ್ಬರೂ ನೋಹನ ಸಂತಾನದವರಾಗಿರುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ವಂಶಸ್ಥರು, ನಾವೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.05:30-31
- ಆದಿ.05:32
- ಆದಿ.06:7-8
- ಆದಿ.08:1-3
- ಇಬ್ರಿ.11:7
- ಮತ್ತಾಯ.24:37-39

ಸತ್ಯವೇದದಿಂದ ಉದಾಹರಣೆಗಳು:

- _**03:02** ಆದರೆ **ನೋಹನು** _ ದೇವರ ದಯೆಯನ್ನು ಹೊಂದಿದನು.
- _**03:04 ನೋಹನು** _ ದೇವರಿಗೆ ವಿಧೇಯನಾದನು. ಆತನು ಮತ್ತು ತನ್ನ ಮೂವರು ಮಕ್ಕಳು ದೇವರು ತಮಗೆ ಹೇಳಿದ ಪ್ರಕಾರ ನಾವೆಯನ್ನು ನಿರ್ಮಿಸಿದರು.
- _**03:13** ಎರಡು ತಿಂಗಳುಗಳಾದ ಮೇಲೆ, “ನೀನು ಮತ್ತು ನಿನ್ನ ಕುಟುಂಬ ಮತ್ತು ಎಲ್ಲಾ ಪ್ರಾಣಿಗಳು ನಾವೆಯೊಳಗಿಂದ ಹೊರ ಹೋಗಬಹುದು, ಅನೇಕಮಂದಿ ಮಕ್ಕಳನ್ನು, ಮೊಮ್ಮೊಕ್ಕಳನ್ನು ಹುಟ್ಟಿಸಿ, ಭೂಮಿಯನ್ನು ತುಂಬಿಸಿರಿ” ಎಂದು ದೇವರು **ನೋಹನಿಗೆ** ಹೇಳಿದನು. ಆದ್ದರಿಂದ **ನೋಹನು** _ ಮತ್ತು ತನ್ನ ಕುಟುಂಬವು ನಾವೆಯೊಳಗಿಂದ ಹೊರ ಬಂದರು.

ಪದ ಡೇಟಾ:

- Strong's: H5146, G3575

ಪದ್ದನ್ ಅರಾಮ್

ಸತ್ಯಾಂಶಗಳು:

ಪದ್ದನ್ ಆರಾಮ್ ಎನ್ನುವುದು ಅಬ್ರಾಹಾಮನು ಕಾನಾನ್ ಭೂಮಿಗೆ ಹೋಗುವುದಕ್ಕೆ ಮುಂಚಿತವಾಗಿ ತನ್ನ ಕುಟುಂಬವೆಲ್ಲ ನಿವಾಸವಾಗಿರುವ ಪ್ರಾಂತ್ಯದ ಹೆಸರಾಗಿರುತ್ತದೆ. ಈ ಮಾತಿಗೆ "ಆರಾಮ್ ಬಯಲು" ಎಂದರ್ಥ.

- ಅಬ್ರಾಹಾಮನು ಪದ್ದನ್ ಅರಾಮಿನಲ್ಲಿರುವ ಹಾರಾನ್ ಬಿಟ್ಟು ಕಾನಾನ್ ಭೂಮಿಗೆ ಪ್ರಯಾಣ ಮಾಡಿದಾಗ, ಉಳಿದ ತನ್ನ ಕುಟುಂಬದಲ್ಲಿರುವ ಪ್ರತಿಯೊಬ್ಬರೂ ಹಾರಾನಿನಲ್ಲಿಯೇ ಜೀವಿಸಿದ್ದರು.
- ಅನೇಕ ವರ್ಷಗಳಾದನಂತರ ಅಬ್ರಾಹಾಮನ ಬಂಧುಗಳಲ್ಲಿ ಇಸಾಕನಿಗೆ ಹೆಂಡತಿಯನ್ನು ಕಂಡುಕೊಳ್ಳಲು ಅಬ್ರಾಹಾಮನ ದಾಸನು ಪದ್ದನ್ ಅರಾಮಿಗೆ ಹೋದನು, ಅಲ್ಲಿ ಬೆತೂವೇಲನ ಮೊಮ್ಮೊಗಳಾದ ರೆಬೆಕ್ಕಳನ್ನು ಕಂಡುಕೊಂಡನು.
- ಇಸಾಕ ಮತ್ತು ರೆಬೆಕ್ಕರವರ ಮಗನಾದ ಯಾಕೋಬನು ಕೂಡ ಪದ್ದನ್ ಅರಾಮಿಗೆ ಪ್ರಯಾಣ ಮಾಡಿದನು ಮತ್ತು ಹಾರಾನಿನಲ್ಲಿ ಜೀವಿಸುತ್ತಿರುವ ರೆಬೆಕ್ಕಳ ಅಣ್ಣನಾಗಿರುವ ಲಾಬಾನನ ಇಬ್ಬರು ಹೆಣ್ಣು ಮಕ್ಕಳನ್ನು ಮದುವೆಮಾಡಿಕೊಂಡನು.
- ಆರಾಮ್, ಪದ್ದನ್-ಆರಾಮ್ ಮತ್ತು ಆರಾಮ್ ಸೀಮೆ ಎನ್ನುವವುಗಳು ಈಗಿನ ಸಿರಿಯಾ ದೇಶವಿರುವ ಸ್ಥಳದ ಒಂದೇ ಪ್ರಾಂತ್ಯಕ್ಕೆ ಸಂಬಂಧಪಟ್ಟವುಗಳಾಗಿರುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಆರಾಮ್, ಬೆತೂವೇಲ, ಕಾನಾನ್, ಹಾರಾನ್, ಯಾಕೋಬ, ಲಾಬಾನ್, ರೆಬೆಕ್ಕ, ಸಿರಿಯಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.28:1-2
- ಆದಿ.35:9-10
- ಆದಿ.46:12-15

ಪದ ಡೇಟಾ:

- Strong's: H6307

ಪಾರಸಿ, ಪಾರಸಿಯರು

ಪದದ ಅರ್ಥವಿವರಣೆ:

ಪಾರಸಿ ಎನ್ನುವುದು ಒಂದು ದೇಶವಾಗಿತ್ತು, ಇದು ಸುಮಾರು ಕ್ರಿ.ಪೂ.550 ರಲ್ಲಿ ಮಹಾ ಕೋರೆಷನಿಂದ ಸ್ಥಾಪಿಸಲ್ಪಟ್ಟ ಶಕ್ತಿಯುತವಾದ ಸಾಮ್ರಾಜ್ಯವಾಗಿ ಮಾರ್ಪಟ್ಟಿತ್ತು. ಪಾರಸಿಯ ದೇಶವು ಈಗಿನ ಆಧುನಿಕ ಇರಾನ್ ದೇಶದ ಪ್ರಾಂತ್ಯದಲ್ಲಿರುವ ಬಾಬೆಲೋನಿಯ ಮತ್ತು ಆಶ್ಶೂರ್ ಆಗ್ನೇಯ ಭಾಗದಲ್ಲಿ ಕಂಡುಬರುತ್ತದೆ.

- ಪಾರಸಿಯ ಜನರನ್ನು “ಪಾರಸಿಯರು” ಎಂದು ಕರೆಯುತ್ತಿದ್ದರು.
- ಅರಸನಾದ ಕೋರೆಷನ ಆಳ್ವಿಕೆಯಲ್ಲಿ ಯೆಹೂದ್ಯರೆಲ್ಲರು ಬಾಬೆಲೋನಿಯದಲ್ಲಿರುವ ತಮ್ಮ ಸೆರೆಯಿಂದ ಬಿಡುಗಡೆ ಹೊಂದಿ, ತಮ್ಮ ಮನೆಗೆ ಹೋಗುವುದಕ್ಕೆ ಅನುಮತಿಸಲ್ಪಟ್ಟಿದ್ದರು, ಮತ್ತು ಯೆರೂಸಲೇಮಿನಲ್ಲಿರುವ ದೇವಾಲಯವನ್ನು ಪಾರಸಿಯ ಸಾಮ್ರಾಜ್ಯದಿಂದ ಕೊಡಲ್ಪಟ್ಟಿರುವ ನಿಧಿಗಳಿಂದ ಪುನರ್ ನಿರ್ಮಾಣ ಮಾಡಲ್ಪಟ್ಟಿತ್ತು,
- ಎಜ್ರಾ ಮತ್ತು ನೆಹೆಮೀಯರು ಯೆರೂಸಲೇಮಿನಲ್ಲಿರುವ ಗೋಡೆಗಳನ್ನು ಪುನರ್ ನಿರ್ಮಾಣ ಮಾಡುವುದಕ್ಕೆ ಹಿಂದುರಿಗಿ ಹೋದಾಗ ಅರಸನಾದ ಅಹಷ್ವೆರೋಷನು ಪಾರಸಿಯ ಸಾಮ್ರಾಜ್ಯಕ್ಕೆ ಪಾಲಕನಾಗಿದ್ದನು.
- ಎಸ್ತೇರಳು ಅರಸನಾದ ಅಹಷ್ವೇರೋಷನನ್ನು ವಿವಾಹ ಮಾಡಿಕೊಂಡಾಗ ಆಕೆ ಪಾರಸಿಯ ಸಾಮ್ರಾಜ್ಯದ ರಾಣಿಯಾದಳು.

(ಈ ಪದಗಳನ್ನು ಸಹ ನೋಡಿರಿ : ಅಹಷ್ವೆರೋಷ, ಅರ್ತಷಸ್ತ, ಅಶ್ಶೂರ್, ಬಾಬೆಲೋನಿಯ, ಕೊರೇಷ, ಎಸ್ತೇರ್, ಎಜ್ರಾ, ನೆಹೆಮೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.36:20-21
- ದಾನಿ.10:12-13
- ಎಸ್ತೇ.01:3-4
- ಯೆಹೆ.27:10-11

ಪದ ಡೇಟಾ:

- Strong's: H6539, H6540, H6542, H6543

ಪಾರಾನ್

ಸತ್ಯಾಂಶಗಳು:

ಪಾರಾನ್ ಎನ್ನುವುದು ಕಾನಾನ್ ಭೂಮಿಯ ದಕ್ಷಿಣ ಭಾಗ ಮತ್ತು ಐಗುಪ್ತ ಪೂರ್ವ ಭಾಗದ ಮರುಭೂಮಿ ಅಥವಾ ಅರಣ್ಯ ಪ್ರಾಂತ್ಯವಾಗಿರುತ್ತದೆ. ಪಾರಾನ್ ಪರ್ವತವೂ ಇದೆ, ಇದು ಚೀಯೋನ್ ಪರ್ವತಕ್ಕೆ ಮತ್ತೊಂದು ಹೆಸರಾಗಿರಬಹುದು.

- ದಾಸಿಯಾದ ಹಾಗರಳನ್ನು ಮತ್ತು ತನ್ನ ಮಗನಾದ ಇಷ್ಮಾಯೇಲನನ್ನು ಹೊರಗೆ ಕಳುಹಿಸು ಎಂದು ಸಾರಳು ಅಬ್ರಾಹಾಮನನ್ನು ಆಜ್ಞಾಪಿಸಿದನಂತರ, ಅವರು ಜೀವಿಸುವುದಕ್ಕೆ ಪಾರಾನ್ ಅರಣ್ಯಕ್ಕೆ ಹೊರಟು ಹೋದರು.
- ಮೋಶೆ ಇಸ್ರಾಯೇಲ್ಯರನ್ನು ಐಗುಪ್ತದೊಳಗಿಂದ ನಡೆಸಿದನಂತರ, ಅವರು ಪಾರಾನ್ ಅರಣ್ಯದ ಮೂಲಕ ಹಾದು ಹೋಗಿದ್ದರು.
- ಮೋಶೆ ಹನ್ನೆರಡುಮಂದಿ ಗೂಢಚಾರಿಗಳನ್ನು ಕಾನಾನ್ ಭೂಮಿಗೆ ಕಳುಹಿಸಿ, ಮಾಹಿತಿಯನ್ನು ತೆಗೆದುಕೊಂಡು ಬನ್ನಿರಿ ಎಂದು ಹೇಳಿದ್ದು ಪಾರಾನ್ ಅರಣ್ಯದಲ್ಲಿರುವ ಕಾದೇಶ್ ಬರ್ನೇಯ ಪ್ರಾಂತ್ಯವಾಗಿದ್ದಿತ್ತು.
- ಚಿನ್ ಅರಣ್ಯವು ಪಾರಾನ್ ಉತ್ತರ ಭಾಗವಿತ್ತು ಮತ್ತು ಸೀನ್ ಮರುಭೂಮಿಯು ಪಾರಾನ್ ದಕ್ಷಿಣ ಭಾಗವಾಗಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಮರುಭೂಮಿ, ಐಗುಪ್ತ, ಕಾದೇಶ್, ಸೀನಾಯಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.11:18-19
- 1 ಸಮು.25:1
- ಆದಿ.21:19-21
- ಅರಣ್ಯ.10:11-13
- ಅರಣ್ಯ.13:3-4

ಪದ ಡೇಟಾ:

- Strong's: H364, H6290

ಪಿಲಾತ

ಸತ್ಯಾಂಶಗಳು:

ಪಿಲಾತ ಎನ್ನುವವನು ಯೇಸುವಿಗೆ ಮರಣದಂಡನೆಯನ್ನು ವಿಧಿಸಿದ ಯೆಹೂದದ ರೋಮಾ ಸೀಮೆಯ ಪಾಲಕನಾಗಿದ್ದನು.

- ಯಾಕಂದರೆ ಪಿಲಾತನು ಪಾಲಕನಾಗಿರುತ್ತಾನೆ, ಅಪರಾಧಿಗಳಿಗೆ ಮರಣದಂಡನೆಯನ್ನು ವಿಧಿಸುವುದಕ್ಕೆ ಅಧಿಕಾರವನ್ನು ಹೊಂದಿರುವ ವ್ಯಕ್ತಿಯಾಗಿರುತ್ತಾನೆ.
- ಪಿಲಾತನು ಯೇಸುವನ್ನು ಶಿಲುಬೆಗೆ ಏರಿಸಬೇಕೆಂದು ಯೆಹೂದ್ಯರ ಧರ್ಮದ ನಾಯಕರು ಬಯಸಿದ್ದರು, ಆದಕಾರಣ ಅವರು ಸುಳ್ಳಾಡಿದರು ಮತ್ತು ಯೇಸು ಅಪರಾಧಿಯೆಂದು ಎಲ್ಲರು ಕೂಗಿ ಹೇಳಿದರು.
- ಯೇಸು ಅಪರಾಧಿಯಲ್ಲವೆಂದು ಪಿಲಾತನು ತಿಳಿದುಕೊಂಡನು, ಆದರೆ ಅವನು ಜನಸಮೂಹಗಳನ್ನು ನೋಡಿ ಹೆದರಿದನು ಮತ್ತು ಅವರೆಲ್ಲರನ್ನು ಮೆಚ್ಚಿಸಬೇಕೆಂದು ಬಯಸಿದನು, ಇದರಿಂದ ಯೇಸುವನ್ನು ಶಿಲುಬೆಗೆ ಏರಿಸಬೇಕೆಂದು ಅವನು ತನ್ನ ಸೈನಿಕರಿಗೆ ಅಪ್ಪಣೆ ಕೊಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಶಿಲುಬೆಗೆ ಏರಿಸು, ಪಾಲಕ, ಅಪರಾಧಿ, ಯೂದಾ, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:27-28
- ಅಪೊ.ಕೃತ್ಯ.13:28-29
- ಲೂಕ.23:1-2
- ಮಾರ್ಕ.15:1-3
- ಮತ್ತಾಯ.27:11-14
- ಮತ್ತಾಯ.27:57-58

ಸತ್ಯವೇದದಿಂದ ಉದಾಹರಣೆಗಳು:

- **39:09** ಆ ಮರುದಿನದ ಬೆಳಗಿನ ಜಾವದಲ್ಲಿ, ಯೆಹೂದ್ಯ ನಾಯಕರು ಯೇಸುವನ್ನು ರೋಮಾ ಪಾಲಕನಾಗಿರುವ _ **ಪಿಲಾತನ** ಬಳಿಗೆ ಕರೆದುಕೊಂಡು ಬಂದರು. **ಪಿಲಾತನು** ಯೇಸುವನ್ನು ಅಪರಾಧಿಯೆಂದು ನಿರ್ಣಯಿಸಿ, ಅವನನ್ನು ಸಾಯಿಸುತ್ತಾನೆಂದು ಅವರು ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು. “ನೀನು ಯೆಹೂದ್ಯರ ಅರಸನೋ?” ಎಂದು **ಪಿಲಾತನು** _ ಯೇಸುವನ್ನು ಕೇಳಿದನು.
- **39:10** “ಸತ್ಯವೇನು?” ಎಂದು _ **ಪಿಲಾತನು** _ ಹೇಳಿದನು.
- **39:11** ಯೇಸುವಿನೊಂದಿಗೆ ಮಾತನಾಡಿದನಂತರ, _ **ಪಿಲಾತನು** ಜನಸಮೂಹಗಳ ಬಳಿಗೆ ಹೋಗಿ, “ಈ ಮನುಷ್ಯನಲ್ಲಿ ಯಾವ ಅಪರಾಧವನ್ನೂ” ನಾನು ಕಂಡುಕೊಳ್ಳಲಿಲ್ಲ ಎಂದು ಹೇಳಿದನು. ಆದರೆ “ಅವನನ್ನು ಶಿಲುಬೆಗೇರಿಸಿರಿ!” ಎಂದು ಯೆಹೂದ್ಯರ ನಾಯಕರು ಮತ್ತು ಜನಸಮೂಹಗಳು ಕೂಗಿ ಹೇಳಿದರು, “ಇವನು ಅಪರಾಧಿಯಲ್ಲ” ಎಂದು **ಪಿಲಾತನು** ಉತ್ತರಿಸಿದನು. ಆದರೆ ಅವರು ಇನ್ನೂ ಹೆಚ್ಚಾಗಿ ಕೂಗಿದರು. ಆದರೂ **ಪಿಲಾತನು** _ ಮೂರನೆಯಸಲ “ಇವನು ಅಪರಾಧಿಯಲ್ಲ!” ಎಂದು ಹೇಳಿದನು.
- **39:12** ಜನಸಮೂಹಗಳು ಗಲಬೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆಂದು _ **ಪಿಲಾತನು** _ ಹೆದರಿ, ಯೇಸುವನ್ನು ಶಿಲುಬೆಗೇರಿಸುವುದಕ್ಕೆ ತನ್ನ ಸೈನಿಕರಿಗೆ ಅಪ್ಪಣೆ ಕೊಟ್ಟನು.
- **40:02** ಯೇಸುವಿನ ತಲೆಯ ಮೇಲೆ ಅಂದರೆ ಶಿಲುಬೆಯ ಮೇಲ್ಭಾಗದಲ್ಲಿ “ಯೆಹೂದ್ಯರ ಅರಸನು” ಎಂದು ಒಂದು ಗುರುತನ್ನು ಬರೆಯಬೇಕೆಂದು _ **ಪಿಲಾತನು** _ ಆಜ್ಞಾಪಿಸಿದನು.
- **41:02** “ಕೆಲವರು ಸೈನಿಕರನ್ನು ತೆಗೆದುಕೊಂಡು, ನಿಮಗೆ ಸಾಧ್ಯವಾದಷ್ಟು ರೀತಿಯಲ್ಲಿ ಸಮಾಧಿಯನ್ನು ಭದ್ರಪಡಿಸಿರಿ” ಎಂದು _ **ಪಿಲಾತನು** _ ಹೇಳಿದನು.

ಪದ ಡೇಟಾ:

- Strong's: G4091, G4194

ಪೆಗೋರ್, ಪೆಗೋರ್ ಪರ್ವತ, ಬಾಳ್ ಪೆಗೋರ್

ಪದದ ಅರ್ಥವಿವರಣೆ:

“ಪೆಗೋರ್” ಮತ್ತು “ಪೆಗೋರ್ ಪರ್ವತ” ಎನ್ನುವ ಪದಗಳು ಮೋವಾಬ್ ಪ್ರಾಂತ್ಯದಲ್ಲಿ ಲವಣ ಸಮುದ್ರದ ಈಶಾನ್ಯ ಭಾಗದಲ್ಲಿ ಈ ಪರ್ವತವು ಕಂಡು ಬರುತ್ತದೆ.

- “ಬೆತ್ ಪೆಗೋರ್” ಎನ್ನುವ ಹೆಸರು ಒಂದು ಪಟ್ಟಣದ ಹೆಸರಾಗಿರುತ್ತದೆ, ಬಹುಶಃ ಈ ಪಟ್ಟಣ ಆ ಪರ್ವತದ ಪಕ್ಕದಲ್ಲಿಯೇ ಅಥವಾ ಹತ್ತಿರದಲ್ಲಿಯೇ ಕಂಡುಬರುತ್ತಿರಬಹುದು. ಇದು ದೇವರು ಮೋಶೆ ವಾಗ್ದಾನ ಭೂಮಿಯನ್ನು ತೋರಿಸಿದನಂತರ, ಮೋಶೆ ಸತ್ತಂತ ಸ್ಥಳವಾಗಿರುತ್ತದೆ.
- “ಬಾಳ್ ಪೆಗೋರ್” ಎನ್ನುವುದು ಮೋವಾಬ್ಯರ ಸುಳ್ಳು ದೇವರಾಗಿರುತ್ತಾರೆ, ಇವರು ಪೆಗೋರ್ ಪರ್ವತದ ಮೇಲೆ ಈ ದೇವರನ್ನು ಆರಾಧನೆ ಮಾಡುತ್ತಿದ್ದರು. ಇಸ್ರಾಯೇಲ್ಯರು ಕೂಡ ಈ ವಿಗ್ರಹವನ್ನು ಆರಾಧನೆ ಮಾಡುವುದಕ್ಕೆ ಆರಂಭಿಸಿದ್ದರು, ಈ ಕಾರಣದಿಂದ ದೇವರು ಅವರನ್ನು ಶಿಕ್ಷಿಸಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಳ್, ಸುಳ್ಳು ದೇವರು, ಮೋವಾಬ್, ಲವಣ ಸಮುದ್ರ, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅರಣ್ಯ.23:28-30
- ಅರಣ್ಯ.31:16-17
- ಕೀರ್ತನೆ.106:28-29

ಪದ ಡೇಟಾ:

- Strong's: H1047, H1187, H6465

ಪೆರೆಜೀಯರು

ಸತ್ಯಾಂಶಗಳು:

ಪೆರೆಜೀಯರು ಕಾನಾನ್ ಭೂಮಿಯಲ್ಲಿ (ಅಥವಾ ದೇಶದಲ್ಲಿ) ಅನೇಕ ಜನರ ಗುಂಪುಗಳಲ್ಲಿ (ಅಥವಾ ಜನಾಂಗಗಳಲ್ಲಿ) ಒಂದು ಜನಾಂಗದವರಾಗಿದ್ದರು. ಈ ಗುಂಪಿನವರ ಕುರಿತಾಗಿ ತಿಳಿದುಕೊಳ್ಳಬೇಕಾದ ಒಂದು ಚಿಕ್ಕ ವಿಷಯವೇನೆಂದರೆ ಅವರ ಪೂರ್ವಜರು ನಿವಾಸವಾಗಿದ್ದ ಕಾನಾನ್ ಭಾಗದಲ್ಲಿ ಭಾಗಸ್ಥರಾಗಿದ್ದರು.

- ಪೆರೆಜೀಯರು ಎನ್ನುವ ಪದವನ್ನು ಹಳೇ ಒಡಂಬಡಿಕೆಯ ಪುಸ್ತಕವಾಗಿರುವ ನ್ಯಾಯಾಧೀಶರು ಎನ್ನುವ ಪುಸ್ತಕದಲ್ಲಿ ಹೆಚ್ಚಿನ ಮಟ್ಟಿಗೆ ದಾಖಲು ಮಾಡಿರುತ್ತಾರೆ, ಪೆರೆಜೀಯರು ಇಸ್ರಾಯೇಲ್ಯರೊಂದಿಗೆ ವಿವಾಹ ಮಾಡಿಕೊಂಡಿದ್ದರು ಮತ್ತು ಸುಳ್ಳು ದೇವರುಗಳನ್ನು ಆರಾಧನೆ ಮಾಡುವುದಕ್ಕೆ ಅವರನ್ನು ಪ್ರಭಾವಗೊಳಿಸಿದ್ದರು ಎನ್ನುವ ವಿಷಯವನ್ನು ದಾಖಲು ಮಾಡಿದ್ದನ್ನು ನೋಡಬಹುದು.
- ಪೆರೆಚ್ಯರು ಎಂದು ಕರೆಯಲ್ಪಡುವ ಪೆರೆಹನ ವಂಶದವರು ಪೆರೆಜೀಯರಿಂದ ಬಂದಿರುವ ಗುಂಪಿನ ಜನರು ಬೇರೆ ಬೇರೆ ಜನಾಂಗದವರಾಗಿರುತ್ತಾರೆ. ಇದನ್ನು ಸ್ಪಷ್ಟಗೊಳಿಸುವುದಕ್ಕೆ ಈ ಹೆಸರುಗಳನ್ನು ವಿಭಿನ್ನವಾಗಿ ಉಚ್ಚರಿಸುವುದು ತುಂಬಾ ಪ್ರಾಮುಖ್ಯವಾದ ವಿಷಯವೆಂದು ತಿಳಿಯುವುದು ಅತ್ಯಗತ್ಯ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಸುಳ್ಳು ದೇವರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸು.09:20-21
- 2 ಪೂರ್ವ.08:7-8
- ವಿಮೋ.03:16-18
- ಆದಿ.13:5-7
- ಯೆಹೋ.03:9-11

ಪದ ಡೇಟಾ:

- Strong's: H6522

ಪೇತ್ರ, ಸೀಮೋನ ಪೇತ್ರ, ಕೇಫ

ಸತ್ಯಾಂಶಗಳು:

ಪೇತ್ರನು ಯೇಸುವಿನ ಹನ್ನೆರಡು ಅಪೊಸ್ತಲರಲ್ಲಿ ಒಬ್ಬನಾಗಿದ್ದನು. ಈತನು ಆದಿ ಸಭೆಯಲ್ಲಿ ತುಂಬಾ ಪ್ರಾಮುಖ್ಯವಾದ ನಾಯಕನಾಗಿದ್ದನು.

- ಯೇಸು ತನ್ನ ಶಿಷ್ಯನಾಗುವುದಕ್ಕೆ ಪೇತ್ರನನ್ನು ಕರೆಯುವುದಕ್ಕೆ ಮುಂಚಿತವಾಗಿ, ಪೇತ್ರನ ಹೆಸರು ಸೀಮೋನ ಎಂಬುದಾಗಿತ್ತು.
- ಸ್ವಲ್ಪ ಕಾಲವಾದನಂತರ, ಯೇಸು ಕೂಡ ತನಗೆ "ಕೇಫ" ಎನ್ನುವ ಹೆಸರಿನಿಂದ ಕರೆದಿದ್ದನು, ಇದಕ್ಕೆ ಅರಾಮಿಕ್ ಭಾಷೆಯಲ್ಲಿ "ಕಲ್ಲು" ಅಥವಾ "ಬಂಡೆ" ಎನ್ನುವ ಅರ್ಥಗಳಿರುತ್ತವೆ. ಪೇತ್ರ ಎನ್ನುವ ಹೆಸರಿಗೆ ಗ್ರೀಕ್ ಭಾಷೆಯಲ್ಲಿ "ಕಲ್ಲು" ಅಥವಾ "ಬಂಡೆ" ಎನ್ನುವ ಅರ್ಥಗಳಿವೆ.
- ಯೇಸುವಿನ ಕುರಿತಾದ ಶುಭವಾರ್ತೆಯನ್ನು ಪ್ರಕಟಿಸಲು ಮತ್ತು ಅನೇಕ ಜನರನ್ನು ವಾಸಿ ಮಾಡಲು ದೇವರು ಪೇತ್ರನ ಮೂಲಕ ಕೆಲಸ ಮಾಡಿದನು.
- ಅನೇಕಮಂದಿ ವಿಶ್ವಾಸಿಗಳಿಗೆ ಬೋಧಿಸುವುದಕ್ಕೆ ಮತ್ತು ಅವರನ್ನು ಪ್ರೋತ್ಸಾಹ ಮಾಡುವುದಕ್ಕೆ ಹೊಸ ಒಡಂಬಡಿಕೆಯಲ್ಲಿ ಎರಡು ಪುಸ್ತಕಗಳಾಗಿರುವ ಪತ್ರಿಕೆಗಳನ್ನು ಪೇತ್ರನು ಬರೆದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಶಿಷ್ಯ, ಅಪೊಸ್ತಲ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.08:25
- ಗಲಾತ್ಯ.02:6-8
- ಗಲಾತ್ಯ.02:11-12
- ಲೂಕ.22:56-58
- ಮಾರ್ಕ.03:13-16
- ಮತ್ತಾಯ.04:18-20
- ಮತ್ತಾಯ.08:14-15
- ಮತ್ತಾಯ.14:28-30
- ಮತ್ತಾಯ.26:33-35

ಸತ್ಯವೇದದಿಂದ ಉದಾಹರಣೆಗಳು:

- **_28:09** "ನಾವು ಎಲ್ಲವನ್ನು ಬಿಟ್ಟು, ನಿಮ್ಮನ್ನು ಹಿಂಬಾಲಿಸುತ್ತಿದ್ದೇವೆ. ಇದರಿಂದ ನಮಗೆ ಸಿಕ್ಕುವ ಫಲವೇನು?" ಎಂದು **ಪೇತ್ರನು** _ ಯೇಸುವನ್ನು ಕೇಳಿದನು.
- **_29:01** "ಬೋಧಕನೇ, ಒಬ್ಬನು ನನಗೆ ವಿರುದ್ಧವಾಗಿ ಪಾಪ ಮಾಡಿದಾಗ, ಆ ನನ್ನ ಸಹೋದರನನ್ನು ಎಷ್ಟುಸಲ ಕ್ಷಮಿಸಬೇಕು?" ಏಳು ಬಾರಿ ಮಟ್ಟಿಗೆ ಕ್ಷಮಿಸಬೇಕಾ? ಎಂದು ಒಂದು ದಿನ **ಪೇತ್ರನು** _ ಯೇಸುವನ್ನು ಕೇಳಿದನು.
- **_31:05** "ಬೋಧಕನೇ, ನಿನೇಯಾಗಿದ್ದಾರೆ, ನೀರಿನ ಮೇಲೆ ನಡೆದುಕೊಂಡು ಬರುವುದಕ್ಕೆ ನನ್ನನ್ನು ಅಜ್ಞಾಪಿಸು" ಎಂದು **ಪೇತ್ರನು** _ ಯೇಸುವನ್ನು ಕೇಳಿದನು. "ಬಾ!" ಎಂದು ಯೇಸು ಪೇತ್ರನಿಗೆ ಹೇಳಿದನು.
- **_36:01** ಒಂದು ದಿನ ಯೇಸು ತನ್ನ ಮೂವರು ಶಿಷ್ಯರಾಗಿರುವ **ಪೇತ್ರ** _, ಯಾಕೋಬ, ಮತ್ತು ಯೋಹಾನರನ್ನು ಆತನೊಂದಿಗೆ ಕರೆದುಕೊಂಡು ಹೋದನು.
- **_38:09** "ಎಲ್ಲರೂ ನಿನ್ನನ್ನು ಕೈ ಬಿಟ್ಟರೂ, ನಾನು ಎಂದಿಗೂ ಕೈಬಿಡುವುಡಿಲ್ಲ!" ಎಂದು **ಪೇತ್ರನು** ಉತ್ತರಿಸಿದನು. "ಸೈತಾನನು ನೀವೇಲ್ಲರು ತನಗೆ ಬೇಕೆಂದು ಬಯಸುತ್ತಿದ್ದಾನೆ, ಆದರೆ **ಪೇತ್ರನೇ** ನಿನ್ನ ವಿಶ್ವಾಸ ವಿಫಲವಾಗಬಾರದೆಂದು ನಾನು ನಿನಗಾಗಿ ಪ್ರಾರ್ಥನೆ ಮಾಡುತ್ತಿದ್ದೇನೆ. ಆದರೂ ಈ ರಾತ್ರಿ ಕೋಳಿ ಕೂಗುವುದಕ್ಕೆ ಮುಂಚಿತವಾಗಿ, ನನ್ನ ಕುರಿತಾಗಿ ನಿನಗೆ ಗೊತ್ತಿದ್ದರೂ ಮೂರುಸಲ ನನ್ನನ್ನು ತಿರಸ್ಕರಿಸುವಿ" ಎಂದು ಯೇಸು __ ಪೇತ್ರನಿಗೆ __ ಹೇಳಿದನು.
- **_38:15** ಸೈನಿಕರು ಯೇಸುವನ್ನು ಬಂಧಿಸಿದಾಗ, **ಪೇತ್ರನು** _ ತನ್ನ ಕತ್ತಿಯನ್ನು ಹೊರ ತೆಗೆದು, ಮಹಾ ಯಾಜಕನ ದಾಸನ ಕಿವಿಯನ್ನು ಕತ್ತರಿಸುತ್ತಾನೆ.
- **_43:11** "ನಿಮ್ಮಲ್ಲಿ ಪ್ರತಿಯೊಬ್ಬರೂ ಮಾನಸಾಂತರ ಹೊಂದಿ, ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೋದಬೇಕು, ಹೀಗೆ ಮಾಡುವುದರ ಮೂಲಕ ದೇವರು ನಿಮ್ಮ ಪಾಪಗಳನ್ನು ಕ್ಷಮಿಸುವನು" ಎಂದು **ಪೇತ್ರನು** _ ಅವರಿಗೆ ಉತ್ತರಿಸಿದನು.
- **_44:08** "ನಿಮ್ಮ ಮುಂದೆ ನಿಂತಿರುವ ಈ ಮನುಷ್ಯನು ಮೆಸ್ಸೀಯನಾಗಿರುವ ಯೇಸುವಿನ ಶಕ್ತಿಯಿಂದ ವಾಸಿಯಾಗಿದ್ದಾನೆ" ಎಂದು __ ಪೇತ್ರನು __ ಅವರಿಗೆ ಉತ್ತರಿಸಿದನು.

ಪದ ಡೇಟಾ:

- Strong's: G2786, G4074, G4613

ಪೊಂತ

ಸತ್ಯಾಂಶಗಳು:

ಪೊಂತ ಎನ್ನುವುದು ಆದಿ ಸಭೆಯ ಕಾಲದಲ್ಲಿ ಮತ್ತು ರೋಮ್ ಸಾಮ್ರಾಜ್ಯದ ಕಾಲದಲ್ಲಿ ರೋಮ್ ಪ್ರಾಂತ್ಯವಾಗಿತ್ತು. ಇದು ಕಪ್ಪು ಸಮುದ್ರದ ದಕ್ಷಿಣ ಕರಾವಳಿಯಲ್ಲಿ ನೆಲೆಗೊಂಡಿರುತ್ತದೆ, ಈಗಿನ ಟರ್ಕಿ ದೇಶದ ಉತ್ತರ ಭಾಗದಲ್ಲಿರುತ್ತದೆ.

- ಅಪೊಸ್ತಲರ ಪುಸ್ತಕದಲ್ಲಿ ದಾಖಲಾಗಿರುವಂತೆಯೇ, ಪಂಚಾಶತ್ತಮ ದಿನದಂದು ಅಪೊಸ್ತಲರ ಮೇಲೆ ಮೊಟ್ಟ ಮೊದಲಿಗೆ ಪವಿತ್ರಾತ್ಮನು ಇಳಿದು ಬಂದಾಗ ಪೊಂತ ಸೀಮೆಯಿಂದ ಬಂದಿರುವ ಜನರೆಲ್ಲರು ಯೆರೂಸಲೇಮಿನಲ್ಲಿಯೇ ಇದ್ದರು.
- ಅಕ್ವಿಲ ಎಂಬ ಹೆಸರಿನ ವಿಶ್ವಾಸಿಯು ಪೊಂತಯಿಂದ ಬಂದಿದ್ದನು.
- ಅನೇಕ ಪ್ರಾಂತ್ಯಗಳಿಗೆ ಚದುರಿ ಹೋಗಿರುವ ಕ್ರೈಸ್ತರಿಗೆ ಪೇತ್ರನು ಪತ್ರಗಳನ್ನು ಬರೆಯುತ್ತಿರುವಾಗ, ಪೊಂತ ಎನ್ನುವ ಪ್ರಾಂತ್ಯವನ್ನು ಅವನು ಸೂಚಿಸಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಇವುಗಳನ್ನು ನೋಡಿರಿ : ಅಕ್ವಿಲ, ಪಂಚಾಶತ್ತಮ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೇತ್ರ. 1:1-2
- ಅಪೊ.ಕೃತ್ಯ. 2:9

ಪದದ ಡೇಟಾ:

- Strong's: G41930, G41950

ಪೋಟೀಫರ

ಸತ್ಯಾಂಶಗಳು:

ಪೋಟೀಫರ ಎನ್ನುವುದು ಕೆಲವೊಂದು ಇಷ್ಮಾಯೇಲ್ಯರಿಗೆ ಗುಲಾಮನಾಗಿ ಯೋಸೇಫನನ್ನು ಮಾರಿದ ಸಂದರ್ಭದಲ್ಲಿ ಐಗುಪ್ತ ಫರೋಹನಿಗೆ ಪ್ರಾಮುಖ್ಯವಾದ ಅಧಿಕಾರಿಯಾಗಿದ್ದನು.

- ಪೋಟೀಫರನು ಇಷ್ಮಾಯೇಲ್ಯರಿಂದ ಯೋಸೇಫನನ್ನು ಕರೆದುಕೊಂಡು ಬಂದು, ಆತನ ಮನೆತನದ ಮೇಲೆ ಅಧಿಕಾರಿಯನ್ನಾಗಿ ನೇಮಿಸಿದನು.
- ತಪ್ಪನ್ನು ಮಾಡಿದ್ದಾನೆಂದು ಯೋಸೇಫನ ಮೇಲೆ ಆರೋಪ ಮಾಡಿದಾಗ, ಪೋಟೀಫರನು ಯೋಸೇಫನನ್ನು ಸೆರೆಯಲ್ಲಿ ಹಾಕಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ಯೋಸೇಫ, ಫರೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.37:34-36
- ಆದಿ.39:1-2
- ಆದಿ.39:13-15

ಪದ ಡೇಟಾ:

- Strong's: H6318

ಪೌಲ, ಸೌಲ

ಸತ್ಯಾಂಶಗಳು:

ಪೌಲನು ಆದಿ ಸಭೆಗೆ ನಾಯಕನಾಗಿದ್ದನು, ಇತರ ಎಲ್ಲಾ ಜನರ ಗುಂಪುಗಳಿಗೆ ಶುಭವಾರ್ತೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಯೇಸುವಿನಿಂದ ಕಳುಹಿಸಲ್ಪಟ್ಟ ವ್ಯಕ್ತಿಯಾಗಿದ್ದನು.

- ಪೌಲನು ತಾರ್ಸ ಎನ್ನುವ ರೋಮಾ ಪಟ್ಟಣದಲ್ಲಿ ಹುಟ್ಟಿದ ಯೆಹೂದ್ಯನಾಗಿದ್ದನು, ಮತ್ತು ರೋಮಾ ಪೌರನೂ ಆಗಿದ್ದನು.
- ಪೌಲನು ತನ್ನ ಯೆಹೂದ್ಯ ಹೆಸರಾಗಿರುವ ಸೌಲ ಎನ್ನುವ ಹೆಸರಿನಿಂದ ಕರೆಯಲ್ಪಟ್ಟಿದ್ದನು.
- ಸೌಲನು ಯೆಹೂದ್ಯ ಧರ್ಮದ ನಾಯಕನಾದನು ಮತ್ತು ಕ್ರೈಸ್ತರಾಗಿರುವ ಯೆಹೂದ್ಯರನ್ನು ಬಂಧಿಸಿದ್ದನು, ಯಾಕಂದರೆ ಅವರು ಯೇಸುವಿನಲ್ಲಿ ನಂಬಿಕೆಯಿಡುವುದರ ಮೂಲಕ ದೇವರನ್ನು ಅಗೌರವ ಮಾಡುತ್ತಿದ್ದಾರೆಂದು ಆತನು ಯೋಚನೆ ಮಾಡಿದ್ದನು.
- ಯೇಸು ತನ್ನನ್ನು ತಾನು ಸೌಲನಿಗೆ ಪ್ರಕಾಶಮಾನವಾದ ಬೆಳಕಿನಲ್ಲಿ ಕಾಣಿಸಿಕೊಂಡಿದ್ದನು ಮತ್ತು ಕ್ರೈಸ್ತರನ್ನು ಹಿಂಸೆ ಪಡಿಸುವುದನ್ನು ನಿಲ್ಲಿಸು ಎಂದು ಅವನಿಗೆ ಹೇಳಿದನು.
- ಸೌಲನು ಯೇಸುವಿನಲ್ಲಿ ನಂಬಿಕೆಯಿಟ್ಟನು ಮತ್ತು ಆತನ ಕುರಿತಾಗಿ ತನ್ನ ಸಹ ಯೆಹೂದ್ಯರಿಗೆ ಬೋಧನೆ ಮಾಡುವುದನ್ನು ಆರಂಭಿಸಿದನು.
- ಸ್ವಲ್ಪ ಕಾಲವಾದನಂತರ, ಯೇಸುವಿನ ಕುರಿತಾಗಿ ಯೆಹೂದ್ಯರಲ್ಲದ ಜನರಿಗೆ ಬೋಧನೆ ಮಾಡುವುದಕ್ಕೆ ದೇವರು ಸೌಲನನ್ನು ಕಳುಹಿಸಿದನು ಮತ್ತು ರೋಮಾ ಸೀಮೆಯಲ್ಲಿ ಅನೇಕ ಪ್ರಾಂತ್ಯಗಳಲ್ಲಿ, ಅನೇಕ ಪಟ್ಟಣಗಳಲ್ಲಿ ಸಭೆಗಳನ್ನು ಸ್ಥಾಪನೆಗೊಳಿಸಿದನು. ಈ ಸಮಯದಲ್ಲಿ ತನ್ನನ್ನು "ಪೌಲ" ಎನ್ನುವ ರೋಮಾ ಹೆಸರಿನಿಂದ ಕರೆಯುತ್ತಿದ್ದರು.
- ಈ ಪಟ್ಟಣಗಳಲ್ಲಿರುವ ಸಭೆಗಳಲ್ಲಿನ ಕ್ರೈಸ್ತರಿಗೆ ಬೋಧಿಸುವುದಕ್ಕೆ ಮತ್ತು ಪ್ರೋತ್ಸಾಹ ಮಾಡುವುದಕ್ಕೆ ಪೌಲನು ಕೂಡ ಅನೇಕ ಪತ್ರಿಕೆಗಳನ್ನು ಬರೆದನು. ಈ ಪತ್ರಿಕೆಗಳಲ್ಲಿ ಅನೇಕ ಪತ್ರಿಕೆಗಳು ಹೊಸ ಒಡಂಬಡಿಕೆಯಲ್ಲಿವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕ್ರೈಸ್ತ, ಯೆಹೂದ್ಯ ನಾಯಕರು, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:03
- ಅಪೊ.ಕೃತ್ಯ.08:03
- ಅಪೊ.ಕೃತ್ಯ.09:26
- ಅಪೊ.ಕೃತ್ಯ.13:10
- ಗಲಾತ್ಯ.01:01
- ಫಿಲೇ.01:08

ಸತ್ಯವೇದದಿಂದ ಉದಾಹರಣೆಗಳು:

- **45:06** ಸೌಲ ಎನ್ನುವ ಹೆಸರಿನ ಯೌವನಸ್ಥನು ಸ್ತೆಫೆನನನ್ನು ಸಾಯಿಸಿದ ಜನರೊಂದಿಗೆ ಇದ್ದುಕೊಂಡಿದ್ದನು ಮತ್ತು ಅವರು ಸ್ತೆಫೆನನ ಮೇಲೆ ಕಲ್ಲುಗಳನ್ನು ಎಸೆಯುತ್ತಿರುವಾಗ ಅವರ ಬಟ್ಟೆಗಳಿಗೆ ಕಾವಲುಗಾರನಾಗಿದ್ದನು.
- **46:01** ಸ್ತೆಫೆನನನ್ನು ಸಾಯಿಸಿದ ಮನುಷ್ಯರ ಬಟ್ಟೆಗಳಿಗೆ ಕಾವಲು _ ಸೌಲ _ ಎನ್ನುವ ಮನುಷ್ಯನಿದ್ದನು. ಅವನು ಯೇಸುವಿನಲ್ಲಿ ನಂಬಿಕೆಯಿಟ್ಟಿರಲಿಲ್ಲ, ಆದ್ದರಿಂದ ಅವನು ವಿಶ್ವಾಸಿಗಳನ್ನು ಹಿಂಸೆಗೆ ಒಳಪಡಿಸಿದ್ದನು.
- **46:02** ಸೌಲನು ದಮಸ್ಕ ಎನ್ನುವ ಮಾರ್ಗದಲ್ಲಿ ಹೋಗುತ್ತಿರುವಾಗ, ಪರಲೋಕದಿಂದ ಬಂದಿರುವ ಪ್ರಕಾಶಮಾನವುಳ್ಳ ಬೆಳಕು ಅವನ ಸುತ್ತಲು ಆವರಿಸಿತ್ತು, ಆಗ ಅವನು ನೆಲದ ಮೇಲೆ ಬಿದ್ದನು. "_ ಸೌಲಾ _ ! _ ಸೌಲಾ _ ! ಯಾಕೆ ನನ್ನು ಹಿಂಸಿಸುತ್ತಿದ್ದೀಯಾ?" ಎಂದು ಹೇಳುತ್ತಿರುವ ಸ್ವರವನ್ನು ಕೇಳಿದನು.
- **46:05** ಆದ್ದರಿಂದ ಅನನೀಯನು _ ಸೌಲನ _ ಬಳಿಗೆ ಹೋಗಿ, ತನ್ನ ಕೈಗಳನ್ನು ಅವನ ಮೇಲೆ ಇಟ್ಟು, "ನಿನ್ನ ಮಾರ್ಗದಲ್ಲಿ ನಿನಗೆ ಕಾಣಿಸಿಕೊಂಡ ಯೇಸು, ನಿನ್ನ ಬಳಿಗೆ ನನ್ನನ್ನು ಕಳುಹಿಸಿದ್ದಾರೆ; ಆದ್ದರಿಂದ ನಿನ್ನ ದೃಷ್ಟಿಯನ್ನು ನೀನು ತಿರುಗಿ ಹೊಂದಿಕೊಳ್ಳುವಿ ಮತ್ತು ಪವಿತ್ರಾತ್ಮನಿಂದ ತುಂಬಿಸಲ್ಪಡುವಿ" ಎಂದು ಹೇಳಿದನು. ತಕ್ಷಣವೇ _ ಸೌಲನು _ ತಿರುಗಿ ದೃಷ್ಟಿಯನ್ನು ಪಡೆದುಕೊಂಡನು ಮತ್ತು ಅನನೀಯನು ಅವನಿಗೆ ದೀಕ್ಷಾಸ್ನಾನವನ್ನು ಮಾಡಿಸಿದನು.
- **46:06** ಆ ಕ್ಷಣದಿಂದ ಆತನು "ಯೇಸು ದೇವರ ಮಗ" ಎಂದು ಹೇಳುತ್ತಾ ದಮಸ್ಕದಲ್ಲಿರುವ ಯೆಹೂದ್ಯರಿಗೆ ಬೋಧಿಸಲು ಆರಂಭಿಸಿದನು!
- **46:09** ಬರ್ನಾಬ ಮತ್ತು _ ಸೌಲನು _ ಯೇಸುವಿನ ಕುರಿತಾಗಿ ಇನ್ನೂ ಹೆಚ್ಚಾಗಿ ಈ ಹೊಸ ವಿಶ್ವಾಸಿಗಳಿಗೆ ಬೋಧನೆ ಮಾಡಲು ಅಲ್ಲಿಗೆ (ಅಂತಿಯೋಕ್ಯ) ಹೋದರು.
- **47:01** ರೋಮಾ ಸೀಮೆಯಲ್ಲೆಲ್ಲಾ _ ಸೌಲನು _ ಪ್ರಯಾಣ ಮಾಡುತ್ತಿರುವಾಗ, ಆತನು ತನ್ನ ರೋಮಾ ಹೆಸರಾಗಿರುವ "ಪೌಲ" ಎನ್ನುವ ಹೆಸರನ್ನು ಉಪಯೋಗಿಸಲು ಆರಂಭಿಸಿದನು.
- **47:14** _ ಪೌಲನು _ ಮತ್ತು ಇತರ ಕ್ರೈಸ್ತ ನಾಯಕರು ಅನೇಕ ಪಟ್ಟಣಗಳಿಗೆ ಪ್ರಯಾಣ ಮಾಡಿದರು, ಯೇಸುವಿನ ಕುರಿತಾದ ಶುಭವಾರ್ತೆಯನ್ನು ಜನರಿಗೆ ಬೋಧಿಸುತ್ತಾ ಮತ್ತು ಪ್ರಸಂಗ ಮಾಡುತ್ತಾ ಇದ್ದರು.

ಪದ ಡೇಟಾ:

- Strong's: G3972, G4569

ಪ್ರಿಸ್ಕಿಲ್ಲ

ಸತ್ಯಾಂಶಗಳು:

ಪ್ರಿಸ್ಕಿಲ್ಲ ಮತ್ತು ತನ್ನ ಗಂಡನಾದ ಅಕ್ವಿಲನು ಯೆಹೂದ್ಯ ಕ್ರೈಸ್ತರಾಗಿದ್ದರು, ಇವರು ಅಪೊಸ್ತಲನಾದ ಪೌಲನ ಸುವಾರ್ತೆಯ ದಂಡೆಯಾತ್ರೆಯಲ್ಲಿ ಕೆಲಸ ಮಾಡಿದ್ದಳು.

- ಪ್ರಿಸ್ಕಿಲ್ಲ ಮತ್ತು ಅಕ್ವಿಲರು ರೋಮಾವನ್ನು ಬಿಟ್ಟು ಹೋದರು, ಯಾಕಂದರೆ ಕ್ರೈಸ್ತರೆಲ್ಲರು ರೋಮಾವನ್ನು ಬಿಟ್ಟುಹೋಗಬೇಕೆಂದು ಚಕ್ರವರ್ತಿಯಿಂದ ಬಲವಂತ ಮಾಡಲ್ಪಟ್ಟಿದ್ದರು.
- ಪೌಲನು ಕೊರಿಂಥದಲ್ಲಿ ಅಕ್ವಿಲ ಮತ್ತು ಪ್ರಿಸ್ಕಿಲ್ಲರನ್ನು ಭೇಟಿಯಾದನು. ಅವರು ಗುಡಾರಗಳನ್ನು ತಯಾರು ಮಾಡುತ್ತಿದ್ದರು ಮತ್ತು ಪೌಲನು ಈ ಕೆಲಸವನ್ನು ಮಾಡಲು ಅವರೊಂದಿಗೆ ಸೇರಿಕೊಂಡಿದ್ದನು.
- ಪೌಲನು ಕೊರಿಂಥದಿಂದ ಸಿರಿಯಾಗೆ ಹೊರಟಾಗ, ಪ್ರಿಸ್ಕಿಲ್ಲ ಮತ್ತು ಅಕ್ವಿಲರು ಆತನೊಂದಿಗೆ ಹೊರಟು ಹೋಗಿದ್ದರು.
- ಸಿರಿಯಾದಿಂದ ಅವರು ಮೂವರು ಎಫೆಸಕ್ಕೆ ಹೋದರು. ಪೌಲನು ಎಫೆಸವನ್ನು ಬಿಟ್ಟು ಹೋದನಂತರ, ಪ್ರಿಸ್ಕಿಲ್ಲ ಮತ್ತು ಅಕ್ವಿಲರು ಅಲ್ಲಿಯೇ ಉಳಿದುಕೊಂಡಿದ್ದರು, ಮತ್ತು ಸುವಾರ್ತೆಯನ್ನು ಪ್ರಕಟಿಸುವ ಕೆಲಸದಲ್ಲಿ ಅವರು ಮುಂದುವರೆದಿದ್ದರು.
- ಯೇಸುವಿನಲ್ಲಿ ನಂಬಿಕೆ ಇಟ್ಟಿರುವ ಅಪೊಲ್ಲೋ ಎನ್ನುವ ವ್ಯಕ್ತಿಯನ್ನು ಅವರು ಎಫೆಸದಲ್ಲಿ ವಿಶೇಷವಾಗಿ ವಾಕ್ಯದಿಂದ ಬಲಪಡಿಸಿದ್ದರು ಮತ್ತು ಆ ವ್ಯಕ್ತಿ ವರವನ್ನು ಪಡೆದ ಪ್ರಸಂಗೀಕನು ಮತ್ತು ಬೋಧಕನೂ ಆಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನಂಬು, ಕ್ರೈಸ್ತ, ಕೊರಿಂಥ, ಎಫೆಸ, ಪೌಲ, ರೋಮಾ, ಸಿರಿಯಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.16:19-20
- 2 ತಿಮೊಥೆ.04:19-22
- ಅಪೊ.ಕೃತ್ಯ.18:1-3
- ಅಪೊ.ಕೃತ್ಯ.18:24-26

ಪದ ಡೇಟಾ:

ಫರೋಹ, ಐಗುಪ್ತ ಅರಸ

ಸತ್ಯಾಂಶಗಳು:

ಪುರಾತನ ಕಾಲಗಳಲ್ಲಿ ಐಗುಪ್ತ ದೇಶವನ್ನು ಆಳಿದ ಅರಸರನ್ನು ಫರೋಹರು ಎಂದು ಕರೆಯುತ್ತಿದ್ದರು.

- ಎಲ್ಲರು ಸೇರಿ ಸುಮಾರು 300 ಮಂದಿ ಫರೋಹರು ಸುಮಾರು 2,000 ವರ್ಷಗಳಿಗಿಂತ ಹೆಚ್ಚಾಗಿ ಐಗುಪ್ತವನ್ನು ಆಳಿದರು.
- ಈ ಐಗುಪ್ತ ಅರಸರೆಲ್ಲರು ತುಂಬಾ ಶಕ್ತಿಯುಳ್ಳವರಾಗಿದ್ದರು ಮತ್ತು ಶ್ರೀಮಂತರೂ ಆಗಿದ್ದರು.
- ಈ ಫರೋಹಗಳಲ್ಲಿ ಅನೇಕರ ಕುರಿತಾಗಿ ಸತ್ಯವೇದದಲ್ಲಿ ದಾಖಲಿಸಲಾಗಿರುತ್ತದೆ.
- ಅನೇಕಬಾರಿ ಈ ಬಿರುದನ್ನೂ ಬಿರುದಾಗಿ ಉಪಯೋಗಿಸಲ್ಪಡದೇ ಒಂದು ಹೆಸರಾಗಿ ಉಪಯೋಗಿಸಲಾಗಿರುತ್ತದೆ. ಈ ಕೆಲವೊಂದು ವಿಷಯಗಳಲ್ಲಿ "ಫರೋಹ" ಎಂದು ಬರೆಯಲಾಗಿರುತ್ತದೆ ಮತ್ತು ಇದು ದೊಡ್ಡ ಅಕ್ಷರಗಳಲ್ಲಿ ಬರೆಯಲ್ಪಟ್ಟಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ಅರಸ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:9-10
- ಅಪೊ.ಕೃತ್ಯ.07:11-13
- ಅಪೊ.ಕೃತ್ಯ.07:20-21
- ಆದಿ.12:14-16
- ಆದಿ.40:6-8
- ಆದಿ.41:25-26

ಸತ್ಯವೇದದಿಂದ ಉದಾಹರಣೆಗಳು:

- **08:06** ಐಗುಪ್ತರೆಲ್ಲರು ತಮ್ಮ ಅರಸರೆಂದು ಕರೆಯುವ _ ಫರೋಹನು _ ಒಂದು ರಾತ್ರಿ ತನ್ನನ್ನು ಕಳವಳಗೊಳಿಸುವ ಎರಡು ಕನಸುಗಳನ್ನು ಕಂಡನು.
- **08:08** _ ಫರೋಹನು _ ಯೋಸೇಫನ ವಿಷಯದಲ್ಲಿ ತುಂಬಾ ಸಂತೋಷಪಟ್ಟಿದ್ದನು, ಇದರಿಂದ ಅವನು ಯೋಸೇಫನನ್ನು ಐಗುಪ್ತದಲ್ಲೇ ಎರಡನೇ ಅತ್ಯಂತ ಶಕ್ತಿಯುಳ್ಳ ಮನುಷ್ಯನನ್ನಾಗಿ ನೇಮಿಸಿದನು.
- **09:02** ಇಸ್ರಾಯೇಲ್ಯರು ಐಗುಪ್ತರಿಗೆ ಗುಲಾಮ ಗಿರಿಯಲ್ಲಿದ್ದಾಗ _ ಫರೋಹನು _ ಐಗುಪ್ತದ ಮೇಲೆ ಆಳ್ವಿಕೆ ಮಾಡುತ್ತಿದ್ದನು.
- **09:13** "ನಾನು _ ಫರೋಹನ _ ಬಳಿಗೆ ನಿನ್ನನ್ನು ಕಳುಹಿಸುತ್ತೇನೆ, ಇದರಿಂದ ನೀನು ಐಗುಪ್ತದಲ್ಲಿರುವ ಇಸ್ರಾಯೇಲ್ಯರ ಗುಲಾಮ ಗಿರಿಯಿಂದ ಬಿಡುಗಡೆ ಮಾಡುತ್ತೀ."
- **10:02** ಈ ಎಲ್ಲಾ ಮಾರಿರೋಗಗಳ ಮೂಲಕ _ ಫರೋಹನಿಗಿಂತ _ ಮತ್ತು ಐಗುಪ್ತ ದೇಶದ ಎಲ್ಲಾ ದೇವರುಗಳಿಗಿಂತ ಯೆಹೋವನು ತುಂಬಾ ಶಕ್ತಿಶಾಲಿಯಾಗಿರುತ್ತಾನೆಂದು ದೇವರು _ ಫರೋಹನಿಗೆ _ ಆತನು ತೋರಿಸಿಕೊಂಡನು.

ಪದ ಡೇಟಾ:

- Strong's: H4428, H4714, H6547, G5328

ಫಿನೇಹಾಸ

ಸತ್ಯಾಂಶಗಳು:

ಫಿನೇಹಾಸ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಇಬ್ಬರು ವ್ಯಕ್ತಿಗಳಿದ್ದಾರೆ.

- ಆರೋನನ ಮೊಮ್ಮೊಕ್ಕಳಲ್ಲಿ ಯಾಜಕನಾಗಿರುವ ಒಬ್ಬ ವ್ಯಕ್ತಿಯ ಹೆಸರು ಫಿನೇಹಾಸನಾಗಿದ್ದನು, ಇವನು ಇಸ್ರಾಯೇಲಿನಲ್ಲಿ ಸುಳ್ಳು ದೇವರುಗಳನ್ನು ಆರಾಧಿಸುವುದನ್ನು ಬಲವಾಗಿ ವಿರೋಧಿಸಿದ್ದನು.
- ಇಸ್ರಾಯೇಲ್ಯರು ಮಿದ್ಯಾನ್ ಸ್ತ್ರೀಯರನ್ನು ವಿವಾಹ ಮಾಡಿಕೊಂದಿದ್ದಕ್ಕಾಗಿ ಮತ್ತು ಸುಳ್ಳು ದೇವರುಗಳನ್ನು ಆರಾಧನೆ ಮಾಡಿದ್ದಕ್ಕಾಗಿ ಯೆಹೋವನು ಅವರನ್ನು ಶಿಕ್ಷಿಸುವುದಕ್ಕಾಗಿ ಕಳುಹಿಸಿದ ಮಾರಿರೋಗದಿಂದ ಇಸ್ರಾಯೇಲ್ಯರನ್ನು ಫಿನೇಹಾಸನನ್ನು ಕಾಪಾಡಿದನು.
- ಅನೇಕ ಸಂದರ್ಭಗಳಲ್ಲಿ ಮಿದ್ಯಾನ್ಯರನ್ನು ನಾಶಗೊಳಿಸುವುದಕ್ಕೆ ಫಿನೇಹಾಸನು ಇಸ್ರಾಯೇಲ್ಯರೊಂದಿಗೆ ಹೊರಟು ಹೋದನು.
- ಹಳೇ ಒಡಂಬಡಿಕೆಯಲ್ಲಿ ದಾಖಲು ಮಾಡಿದ ಇತರ ಫಿನೇಹಾಸನು ಪ್ರವಾದಿಯಾದ ಸಮುವೇಲನ ಕಾಲದಲ್ಲಿ ಯಾಜಕನಾಗಿರುವ ಏಲಿಯನ ದುಷ್ಟ ಮಕ್ಕಳಲ್ಲಿ ಒಬ್ಬನಾಗಿದ್ದನು.
- ಫಿಲಿಷ್ಟಿಯನರು ಇಸ್ರಾಯೇಲ್ಯರ ಮೇಲೆ ಧಾಳಿ ಮಾಡಿದಾಗ ಫಿನೇಹಾಸನು ಮತ್ತು ತನ್ನ ಸಹೋದರನಾದ ಹೊಫ್ನಿ ಇಬ್ಬರು ಸತ್ತುಹೋದರು ಮತ್ತು ಒಡಂಬಡಿಕೆಯ ಮಂಜೂಷವನ್ನು ಕದ್ದುಕೊಂಡು ಹೋದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಒಡಂಬಡಿಕೆಯ ಮಂಜೂಷ, ಯೊರ್ದನ್ ಹೊಳೆ, ಮಿದ್ಯಾನ್, ಫಿಲಿಷ್ಟಿಯನರು, ಸಮುವೇಲ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.04:3-4
- ಎಜ್ರಾ.08:1-3
- ಯೆಹೋ.22:13-14
- ಅರಣ್ಯ..25:6-7

ಪದ ಡೇಟಾ:

- Strong's: H6372

ಫಿಲಿಪ್ಪ, ಅಪೊಸ್ತಲ

ಸತ್ಯಾಂಶಗಳು:

ಅಪೊಸ್ತಲನಾದ ಫಿಲಿಪ್ಪನು ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾಗಿದ್ದನು. ಈತನು ಬೇತ್ಸಾಯಿದ ಪಟ್ಟಣದಿಂದ ಬಂದವನಾಗಿದ್ದನು.

- ಯೇಸುವನ್ನು ಭೇಟಿ ಮಾಡುವುದಕ್ಕೆ ಫಿಲಿಪ್ಪನು ನತಾನಯೇಲನನ್ನು ಕರೆದುಕೊಂಡು ಬಂದಿದ್ದನು.
- 5,000 ಜನರಿಗಿಂತ ಹೆಚ್ಚಿಗೆ ಇರುವ ಈ ಜನಸಮೂಹಕ್ಕೆ ಆಹಾರವನ್ನು ಹೇಗೆ ಒದಗಿಸಿಕೊಡುವುದು ಎಂದು ಯೇಸು ಫಿಲಿಪ್ಪನಿಗೆ ಪ್ರಶ್ನೆ ಕೇಳಿದನು.
- ಯೇಸು ತನ್ನ ಶಿಷ್ಯರೊಂದಿಗೆ ಊಟ ಮಾಡಿದ ಕೊನೆಯ ರಾತ್ರಿ ಭೋಜನದ ಕೂಟದಲ್ಲಿ ತನ್ನ ತಂದೆಯಾದ ದೇವರ ಕುರಿತಾಗಿ ಆತನು ಅವರೊಂದಿಗೆ ಮಾತನಾಡಿದನು. ತಂದೆಯನ್ನು ತೋರಿಸಬೇಕೆಂದು ಫಿಲಿಪ್ಪನು ಯೇಸುವಿಗೆ ಕೇಳಿದನು.
- ಕೆಲವೊಂದು ಭಾಷೆಗಳಲ್ಲಿ ಗಲಿಬಿಲಿಯಾಗದಂತಿರುವುದಕ್ಕೆ ಶಿಷ್ಯನಾಗಿರುವ ಫಿಲಿಪ್ಪನ ಹೆಸರನ್ನು ಮತ್ತು ಸುವಾರ್ತಿಕನಾದ ಫಿಲಿಪ್ಪನ ಹೆಸರನ್ನು ಬೇರೆ ಬೇರೆಯಾಗಿ ಉಚ್ಚಾರಣೆ ಮಾಡುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಫಿಲಿಪ್ಪ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.01:12-14
- ಯೋಹಾನ.01:43-45
- ಯೋಹಾನ.06:4-6
- ಲೂಕ.06:14-16
- ಮಾರ್ಕ.03:17-19

ಪದ ಡೇಟಾ:

- Strong's: G5376

ಫಿಲಿಪ್ಪ, ಸುವಾರ್ತಿಕನು

ಸತ್ಯಾಂಶಗಳು:

ಯೆರೂಸಲೇಮಿನಲ್ಲಿರುವ ಆದಿ ಕ್ರೈಸ್ತ ಸಭೆಯಲ್ಲಿ ಬಡವರನ್ನು, ಅಗತ್ಯದಲ್ಲಿರುವ ಕ್ರೈಸ್ತರನ್ನು ಮತ್ತು ವಿಶೇಷವಾಗಿ ವಿಧವೆಯರನ್ನು ಚೆನ್ನಾಗಿ ನೋಡಿಕೊಳ್ಳುವುದಕ್ಕೆ ಆಯ್ಕೆ ಮಾಡಿಕೊಂಡಿರುವ ಏಳು ಮಂದಿ ನಾಯಕರುಗಳಲ್ಲಿ ಫಿಲಿಪ್ಪನು ಒಬ್ಬನಾಗಿದ್ದನು.

- ದೇವರು ಫಿಲಿಪ್ಪನನ್ನು ಯೂದಾಯ ಮತ್ತು ಗಲಿಲಾಯ ಸೀಮೆಗಳಲ್ಲಿರುವ ಅನೇಕ ಪಟ್ಟಣಗಳಲ್ಲಿ ಜನರೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳಲು ಉಪಯೋಗಿಸಿಕೊಂಡಿದ್ದರು, ಇದರಲ್ಲಿ ಯೆರೂಸಲೇಮಿನಿಂದ ಗಾಜಾಗೆ ಹೋಗುವ ಅರಣ್ಯ ಮಾರ್ಗದಲ್ಲಿ ಇಥಿಯೋಪ್ಯನನ್ನು ಭೇಟಿ ಮಾಡಿರುವುದು ಒಳಗೊಂಡಿರುತ್ತದೆ.
- ಅನೇಕ ವರ್ಷಗಳಾದನಂತರ ಫಿಲಿಪ್ಪನು ಕೈಸರೈದಲ್ಲಿ ನಿವಾಸವಾಗಿದ್ದನು, ಪೌಲನು ಮತ್ತು ತನ್ನ ಜೊತೆಗಾರರು ಯೆರೂಸಲೇಮಿಗೆ ಹಿಂದುರಿಗೆ ಹೋಗುತ್ತಿರುವಾಗ ತನ್ನ ಮನೆಯಲ್ಲಿಯೇ ಎಲ್ಲರು ಇಳಿದುಕೊಂಡಿದ್ದರು.
- ಸುವಾರ್ತಿಕನಾದ ಫಿಲಿಪ್ಪನು ಮತ್ತು ಆ ಹೆಸರಿನ ಮೇಲೆ ಇರುವ ಯೇಸುವಿನ ಶಿಷ್ಯನು ಒಬ್ಬರಲ್ಲ ಎಂದು ಅನೇಕಮಂದಿ ಸತ್ಯವೇದ ಪಂಡಿತರು ಆಲೋಚನೆ ಮಾಡಿದ್ದಾರೆ. ಇವರಿಬ್ಬರು ಬೇರೆ ಬೇರೆ ಎಂಬುದಾಗಿ ನಿರೂಪಿಸುವುದಕ್ಕೆ ಈ ಇಬ್ಬರ ಹೆಸರುಗಳ ಅಕ್ಷರಗಳನ್ನು ವಿಭಿನ್ನವಾಗಿ ಉಪಯೋಗಿಸುವುದಕ್ಕೆ ಅನೇಕ ಭಾಷೆಗಳು ಪ್ರಾಧಾನ್ಯತೆ ಕೊಡುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಫಿಲಿಪ್ಪ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.06:5-6
- ಅಪೊ.ಕೃತ್ಯ.08:6-8
- ಅಪೊ.ಕೃತ್ಯ.08:12-13
- ಅಪೊ.ಕೃತ್ಯ.08:29-31
- ಅಪೊ.ಕೃತ್ಯ.08:36-38
- ಅಪೊ.ಕೃತ್ಯ.08:39-40

ಪದ ಡೇಟಾ:

- Strong's: G5376

ಫಿಲಿಪ್ಪಿ, ಫಿಲಿಪ್ಪಿಯದವರು

ಸತ್ಯಾಂಶಗಳು:

ಫಿಲಿಪ್ಪಿ ಎನ್ನುವುದು ದೊಡ್ಡ ಪಟ್ಟಣ ಮತ್ತು ರೋಮಾ ಬಡಾವಣೆಯಾಗಿರುತ್ತದೆ, ಇದು ಪುರಾತನ ಗ್ರೀಸಿನ ಉತ್ತರ ಭಾಗದಲ್ಲಿರುವ ಮಕೆದೋನ್ಯದಲ್ಲಿ ಕಂಡುಬರುತ್ತದೆ. ಫಿಲಿಪ್ಪಿಯದಲ್ಲಿರುವ ಜನರನ್ನು ಫಿಲಿಪ್ಪಿಯನ್ನರು ಎಂದು ಕರೆಯುತ್ತಾರೆ.

- ಅಲ್ಲಿರುವ ಜನರಿಗೆಲ್ಲರಿಗೆ ಯೇಸುವಿನ ಕುರಿತಾಗಿ ಸಂದೇಶವನ್ನು ಹೇಳುವುದಕ್ಕೆ ಪೌಲ ಮತ್ತು ಸೀಲರು ಫಿಲಿಪ್ಪಿಗೆ ಪ್ರಯಾಣ ಮಾಡಿದರು.
- ಫಿಲಿಪ್ಪಿದಲ್ಲಿರುವಾಗ ಪೌಲ ಮತ್ತು ಸೀಲರು ಬಂಧಿತರಾದರು, ಆದರೆ ದೇವರು ಅದ್ಭುತ ರೀತಿಯಿಂದ ಅವರನ್ನು ಬಿಡಿಸಿದರು.
- ಹೊಸ ಒಡಂಬಡಿಕೆಯಲ್ಲಿರುವ ಫಿಲಿಪ್ಪಿದವರಿಗೆ ಬರೆದ ಪುಸ್ತಕವು ಅಪೊಸ್ತಲನಾದ ಪೌಲನು ಫಿಲಿಪ್ಪಿದಲ್ಲಿನ ಸಭೆಯಲ್ಲಿರುವ ಕ್ರೈಸ್ತರಿಗೆ ಬರೆದ ಪತ್ರಿಕೆಯಾಗಿತ್ತು.
- ಹೆರ್ಮೋನ್ ಪರ್ವತದ ಬಳಿ ಇರುವ ಈಶಾನ್ಯ ಇಸ್ರಾಯೇಲಿನಲ್ಲಿ ಕಂಡುಬರುವ ಕೈಸರೈ ಫಿಲಿಪ್ಪಿಯು ಈ ಪಟ್ಟಣವು ಬೇರೆ ಬೇರೆಯಾಗಿರುತ್ತದೆಯೆಂದು ತಿಳಿದುಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಕೈಸರೈ, ಕ್ರೈಸ್ತ, ಸಭೆ, ಮೆಕದೋನ್ಯ, ಪೌಲ, ಸೀಲ)

ಸತ್ಯವೇದದ ವಾಕ್ಯಗಳು :

- 1 ಥೆಸ್ಸ 2:1-2
- ಅಪೊ.ಕೃತ್ಯ 16:11
- ಮತ್ತಾಯ 16:13-16
- ಫಿಲಿಪ್ಪಿ 1:1

ಸತ್ಯವೇದದ ಕಥೆಗಳಿಂದ ಉದಾಹರಣೆಗಳು:

- **47:01** ಒಂದು ದಿನ, ಪೌಲ ಮತ್ತು ತನ್ನ ಸ್ನೇಹಿತನಾದ ಸೀಲನು ಯೇಸುವಿನ ಕುರಿತಾದ ಶುಭವಾರ್ತೆಯನ್ನು ಪ್ರಕಟಿಸುವುದಕ್ಕೆ _ ಫಿಲಿಪ್ಪಿ _ ಪಟ್ಟಣಕ್ಕೆ ಹೊರಟರು.
- **47:13** ಆ ಮರುದಿನದಂದು, ಆ ಪಟ್ಟಣದ ನಾಯಕರು ಪೌಲ ಮತ್ತು ಸೀಲರನ್ನು ಸೆರೆಯಿಂದ ಬಿಡಿಸಿದರು ಮತ್ತು _ ಫಿಲಿಪ್ಪಿ _ ಪಟ್ಟಣವನ್ನು ಬಿಟ್ಟು ಹೋಗಬೇಕೆಂದು ಅವರಿಗೆ ಕೇಳಿಕೊಂಡರು.

ಪದ ಡೇಟಾ:

- Strong's: G53740, G53750

ಫಿಲಿಷ್ಟಿಯ

ಪದದ ಅರ್ಥವಿವರಣೆ:

ಫಿಲಿಷ್ಟಿಯ ಎನ್ನುವುದು ಕಾನಾನ್ ಭೂಮಿಯಲ್ಲಿ ದೊಡ್ಡ ಪ್ರಾಂತ್ಯದ ಹೆಸರಾಗಿತ್ತು, ಇದು ಮೆಡಿಟರೇನಿಯನ್ ಸಮುದ್ರದ ಕರಾವಳಿ ಪ್ರಾಂತ್ಯದ ಬಳಿಯಲ್ಲಿ ಕಂಡುಬರುತ್ತದೆ.

- ದಕ್ಷಿಣ ಭಾಗದಲ್ಲಿರುವ ಗಾಜಾಗೆ ಹೋಗುವ ಉತ್ತರ ಭಾಗದಲ್ಲಿರುವ ಯೊಪ್ಪದಿಂದ ಇರುವ ಫಲವತ್ತಾದ ಕರಾವಳಿ ಬಯಲುನಲ್ಲಿ ಕಂಡುಬರುತ್ತದೆ. ಇದು ಸುಮಾರು 64 ಕಿಲೋಮೀಟರ್ ಉದ್ದ ಮತ್ತು 16 ಕಿಲೋಮೀಟರ್ ಅಗಲ ಇರಬಹುದು.
- ಫಿಲಿಷ್ಟಿಯ ಎನ್ನುವ ಈ ಪಟ್ಟಣವು ಫಿಲಿಷ್ಟಿಯನ್ನರಿಂದ ವಶಪಡಿಸಿಕೊಳ್ಳಲಾಗಿರುತ್ತದೆ, ಇವರು ಇಸ್ರಾಯೇಲ್ಯರಿಗೆ ಯಾವಾಗಲೂ ಶತ್ರುಗಳಾಗಿರುವ ಶಕ್ತಿಯುಳ್ಳ ಜನರ ಗುಂಪಾಗಿರುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಫಿಲಿಷ್ಟಿಯನರು, ಗಾಜಾ, ಯೊಪ್ಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.10:9-10
- ಯೋವೇಲ.03:4-6
- ಕೀರ್ತನೆ.060:8-9

ಪದ ಡೇಟಾ:

- Strong's: H776 H6429 H06430

ಫಿಲಿಷ್ಟಿಯನರು

ಸತ್ಯಾಂಶಗಳು:

ಫಿಲಿಷ್ಟಿಯನರು ಒಂದು ಜನಾಂಗದವರಾಗಿರುತ್ತಾರೆ, ಇವರು ಮೆಡಿಟರೇನಿಯನ್ ಸಮುದ್ರದ ಕರಾವಳಿ ಪ್ರಾಂತ್ಯದ ಬಳಿಗೆ ಇರುವ ಫಿಲಿಷ್ಟಿಯ ಎನ್ನುವ ಪ್ರಾಂತ್ಯವನ್ನು ವಶಪಡಿಸಿಕೊಂಡಿರುತ್ತಾರೆ. ಅವರ ಹೆಸರಿಗೆ "ಸಮುದ್ರದ ಜನರು" ಎಂದರ್ಥವಾಗಿರುತ್ತದೆ.

- ಐದು ಮುಖ್ಯ ಫಿಲಿಷ್ಟಿಯ ಪಟ್ಟಣಗಳಿರುತ್ತವೆ : ಅಷ್ದೋದ್, ಅಷ್ಕೆಲೋನ್, ಎಕ್ರೋನ್, ಗತೂರ್ ಮತ್ತು ಗಾಜಾ.
- ಅಷ್ದೋದ್ ಎನ್ನುವ ಪಟ್ಟಣವು ಫಿಲಿಷ್ಟಿಯ ಉತ್ತರ ಭಾಗವಾಗಿರುತ್ತದೆ, ಮತ್ತು ಗಾಜಾ ಪಟ್ಟಣವು ದಕ್ಷಿಣ ಭಾಗದಲ್ಲಿರುತ್ತದೆ.
- ಫಿಲಿಷ್ಟಿಯನ್ನರು ಬಹುಶಃ ಅನೇಕ ವರ್ಷಗಳು ಇಸ್ರಾಯೇಲ್ಯರ ವಿರುದ್ಧ ಯುದ್ಧ ಮಾಡಿದ ಜನರೆಂದು ಹೆಸರನ್ನು ಪಡೆದ ಜನರಾಗಿರಬಹುದು.
- ನ್ಯಾಯಾಧಿಪತಿಯಾದ ಸಂಸೋನನು ಫಿಲಿಷ್ಟಿಯನ್ನರ ವಿರುದ್ಧ ಹೋರಾಡುವ ಪ್ರಸಿದ್ಧ ಯೋಧನಾಗಿದ್ದನು, ಇವನು ದೇವರಿಂದ ಪಡೆದ ಪ್ರಕೃತಾತೀವಾದ ಶಕ್ತಿಯನ್ನು ಪಡೆದು ಹೋರಾಟ ಮಾಡುತ್ತಿದ್ದನು.
- ಅರಸನಾದ ದಾವೀದನು ಅನೇಕಬಾರಿ ಫಿಲಿಷ್ಟಿಯನ್ನರಿಗೆ ವಿರುದ್ಧವಾಗಿ ಯುದ್ಧಗಳನ್ನು ನಡೆಸಿದ್ದನು, ಅದರಲ್ಲಿ ಆತನು ಯೌವ್ವನದಲ್ಲಿರುವಾಗ ಫಿಲಿಷ್ಟಿಯನ್ನರ ಯೋಧನಾದ ಗೊಲ್ಯಾತನನ್ನು ಸೋಲಿಸಿರುವ ಸಂಘಟನೆಯು ಒಳಗೊಂಡಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಷ್ದೋದ್, ಅಷ್ಕೆಲೋನ್, ದಾವೀದ, ಎಕ್ರೋನ್, ಗತೂರ್, ಗಾಜಾ, ಗೊಲ್ಯಾತ್, ಲವಣ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.18:9-11
- 1 ಸಮು.13:3-4
- 2 ಪೂರ್ವ.09:25-26
- ಆದಿ.10:11-14
- ಕೀರ್ತನೆ.056:1-2

ಪದ ಡೇಟಾ:

- Strong's: H6429, H6430

ಫೊಯಿನೀಕೆ

ಸತ್ಯಾಂಶಗಳು:

ಪುರಾತನ ಕಾಲಗಳಲ್ಲಿ ಫೊಯಿನೀಕೆ ಎನ್ನುವುದು ಶ್ರೀಮಂತ ದೇಶವಾಗಿರುತ್ತದೆ, ಇದು ಇಸ್ರಾಯೇಲ್ ಉತ್ತರ ಭಾಗದಲ್ಲಿರುವ ಮೆಡಿಟರೇನಿಯನ್ ಸಮುದ್ರದ ಕರಾವಳಿಯ ಬದಿಗೆ ಕಾನಾನ್.ನಲ್ಲಿ ಕಂಡುಬರುತ್ತದೆ.

- ಈಗಿನ ಲೆಬನೋನ್ ದೇಶವಾಗಿರುವ ಪಶ್ಚಿಮ ಭಾಗದಲ್ಲಿ ಫೊಯಿನೀಕೆಯು ಭೂಮಿಯನ್ನು ವಶಪಡಿಸಿಕೊಂಡಿರುತ್ತದೆ.
- ಹೊಸ ಒಡಂಬಡಿಕೆಯ ಕಾಲಗಳಲ್ಲಿ ಫೊಯಿನೀಕೆಯ ರಾಜಧಾನಿ ತೂರ್ ಆಗಿತ್ತು. ಇತರ ಪ್ರಾಮುಖ್ಯವಾದ ಫೊಯಿನೀಕೆಯು ಪಟ್ಟಣವು ಸೀದೋನ್ ಆಗಿತ್ತು.
- ಫೊಯಿನೀಕೆಯರು ತಮ್ಮ ದೇಶದ ದೇವದಾರು ವೃಕ್ಷಗಳನ್ನು ಉಪಯೋಗಿಸಿ ತಮ್ಮ ಮರಗೆಲಸದ ಕೌಶಲ್ಯಗಳಿಗೆ ಪ್ರಸಿದ್ದಿ ಹೊಂದಿರುತ್ತಾರೆ, ತುಂಬಾ ಬೆಲೆಯುಳ್ಳ ಕೆನ್ನರಳೆ ಬಣ್ಣ ಉತ್ಪಾದಕರಾಗಿದ್ದರು ಮತ್ತು ಸಮುದ್ರದ ಮೂಲಕ ಪ್ರಯಾಣಗಳನ್ನು ಮಾಡಿ, ವ್ಯಾಪಾರ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಅವರು ಹಡಗುಗಳನ್ನು ನಿರ್ಮಿಸುವುದರಲ್ಲಿ ಉನ್ನತವಾದ ನಿಪುಣತೆಯನ್ನು ಹೊಂದಿರುತ್ತಾರೆ.
- ಆದಿಮ ವರ್ಣಮಾಲೆಯಲ್ಲಿ ಒಂದನ್ನು ಫೊಯಿನೀಕೆಯ ಜನರಿಂದ ಸೃಷ್ಟಿಸಲ್ಪಟ್ಟಿರುತ್ತದೆ. ಅವರ ಅಕ್ಷರವು ತುಂಬಾ ಹೆಚ್ಚಾಗಿ ವಿಸ್ತರಿಸಲ್ಪಟ್ಟಿರುತ್ತದೆ,ಯಾಕಂದರೆ ಅವರು ಮಾಡುವ ವ್ಯಾಪಾರದ ಮೂಲಕ ಅನೇಕ ಜನರ ಗುಂಪಿಗಳೊಂದಿಗೆ ಹೆಚ್ಚಿನ ಸಂಬಂಧಗಳನ್ನು ಇಟ್ಟುಕೊಂಡಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕೇದಾರ್, ನೇರಳೆ ಬಣ್ಣ, ಸೀದೋನ್, ತೂರ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.11:19-21
- ಅಪೊ.ಕೃತ್ಯ.15:3-4
- ಅಪೊ.ಕೃತ್ಯ.21:1-2
- ಯೆಶಯಾ.23:10-12

ಪದ ಡೇಟಾ:

- Strong's: H3667, G4949, G5403

ಬತ್ಷೆಬೆ

ಸತ್ಯಾಂಶಗಳು:

ಬತ್ಷೆಬೆ ಅರಸನಾದ ದಾವೀದನ ಸೈನ್ಯದಲ್ಲಿ ಸೈನಿಕನಾದ ಊರೀಯನ ಹೆಂಡತಿಯಾಗಿದ್ದಳು. ಊರೀಯನ ಮರಣದ ನಂತರ, ಆಕೆ ದಾವೀದನ ಹೆಂಡತಿಯೂ ಮತ್ತು ಸೊಲೊಮೋನಿನ ತಾಯಿಯೂ ಆದಳು.

- ಬತ್ಷೆಬೆ ಊರೀಯನ ಹೆಂಡತಿಯಾಗಿದ್ದಾಗ ದಾವೀದನು ಆಕೆಯೊಂದಿಗೆ ವ್ಯಭಿಚಾರ ಮಾಡಿದನು.
- ಬತ್ಷೆಬೆ ದಾವೀದನ ಮೂಲಕ ಗರ್ಭ ದರಿಸಿದಾಗ, ದಾವೀದನು ಊರೀಯನನ್ನು ಯುದ್ದದಲ್ಲಿ ಕೊಲ್ಲಿಸಿದನು.
- ಆ ನಂತರ ದಾವೀದನು ಬತ್ಷೆಬೆಯನ್ನು ವಿವಾಹ ಮಾಡಿಕೊಂಡನು ಮತ್ತು ಆಕೆ ಅವರ ಮಗುವಿಗೆ ಜನನ ನೀಡಿದಳು.
- ದಾವೀದನು ಮಾಡಿದ ಪಾಪದ ನಿಮಿತ್ತವಾಗಿ ಯೆಹೋವನು ಅವನ ಮಗು ಜನಿಸಿದ ಕೆಲವು ದಿನಗಳ ನಂತರ ಮರಣಿಸುವಂತೆ ಮಾಡಿದನು.
- ನಂತರ, ಬತ್ಷೆಬೆ ಮತ್ತೊಬ್ಬ ಕುಮಾರನಿಗೆ ಜನ್ಮ ನೀಡಿದಳು, ಅವನ ಹೆಸರು ಸೊಲೊಮೋನ್, ದಾವೀದನ ನಂತರ ಅವನು ಅರಸನಾದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ದಾವೀದ, ಸೊಲೊಮೋನ್, ಊರೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:4-5
- 1 ಅರಸ.01:11-12
- 2 ಸಮು.11:2-3
- ಕೀರ್ತನೆ.051:1-2

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **17:10** ಒಂದು ದಿನ, ದಾವೀದನ ಸೈನಿಕರೆಲ್ಲರೂ ಯುದ್ಧ ಮಾಡಲು ಮನೆಯಿಂದ ದೂರವಾಗಿರುವಾಗ, ಅವನು ಮಧ್ಯಾಹ್ನದ ನಿದ್ದೆಯಿಂದೆದ್ದು, ಸ್ನಾನ ಮಾಡುತ್ತಿರುವ ಒಬ್ಬ ಸುಂದರವಾದ ಸ್ತ್ರಿಯನ್ನು ಕಂಡನು. ಆಕೆಯ ಹೆಸರು **ಬತ್ಷೆಬೆ**.
- **17:11** ಸ್ವಲ್ಪ ಕಾಲದ ನಂತರ **ಬತ್ಷೆಬೆ** ಗರ್ಭಿಣಿಯಾಗಿದ್ದಳೆಂದು ದಾವೀದನಿಗೆ ಸಂದೇಶವನ್ನು ಕಳುಹಿಸಿದಳು
- **17:12 ಬತ್ಷೆಬೆ**ನ ಗಂಡನಾದ, ಊರೀಯನು, ದಾವೀದನ ಅತ್ಯುತ್ತಮ ಸೈನಿಕರಲ್ಲಿ ಒಬ್ಬನಾಗಿದ್ದನು.
- **17:13** ಊರೀಯನನ್ನು ಕೊಲ್ಲಿಸಿದ ನಂತರ, ದಾವೀದನು **ಬತ್ಷೆಬೆ**ಯನ್ನು ವಿವಾಹ ಮಾಡಿಕೊಂಡನು.
- **17:14** ನಂತರ, ದಾವೀದನಿಗೆ ಮತ್ತು **ಬತ್ಷೆಬೆಗೆ** ಮೊತ್ತೊಬ್ಬ ಮಗ ಹುಟ್ಟಿದನು, ಮತ್ತು ಅವನಿಗೆ ಸೊಲೊಮೋನ್ ಎಂದು ಹೆಸರಿಟ್ಟರು.

ಪದ ಡೇಟಾ:

- Strong's: H1339

ಬರಬ್ಬ

ಸತ್ಯಾಂಶಗಳು:

ಯೇಸು ಹಿಡಿಯಲ್ಪಟ್ಟಿರುವಾಗ ಬರಬ್ಬನು ಯೆರೂಸಲೇಮಿನಲ್ಲಿ ಬಂದಿಯಾಗಿದ್ದನು.

- ಬರಬ್ಬನು ನರಹತ್ಯೆ ಮಾಡಿದ ಅಪರಾದಿಯಾಗಿದ್ದನು ಮತ್ತು ರೋಮಾ ಪ್ರಭುತ್ವಕ್ಕೆ ವಿರುದ್ಧವಾಗಿದ್ದನು.
- ಬರಬ್ಬನನ್ನು ನಿಮಗೆ ಬಿಟ್ಟುಕೊಡಬೇಕೋ ಅಥವಾ ಯೇಸುವನ್ನೋ ಎಂದು ಪೋನಥ್ಯ ಪಿಲಾತನು ಕೇಳಿದಾಗ, ಜನರು ಬರಬ್ಬನನ್ನು ಎಂದು ಹೇಳಿದರು.
- ಆದಕಾರಣ ಪಿಲಾತನು ಬರಬ್ಬನನ್ನು ಬಿಡುಗಡೆ ಮಾಡಿದನು, ಆದರೆ ಯೇಸುವನ್ನು ಕೊಲ್ಲಿಸಲು ಒಪ್ಪಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಪಿಲಾತ, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.18:38-40
- ಲೂಕ.23:18-19
- ಮಾರ್ಕ.15:6-8
- ಮತ್ತಾಯ.27:15-16

ಪದ ಡೇಟಾ:

- Strong's: G912

ಬಾಬೆಲ್

ಸತ್ಯಾಂಶಗಳು:

ಮೆಸಪೋತಾಮ್ಯದ ದಕ್ಷಿಣ ದಿಕ್ಕಿನಲ್ಲಿದ್ದ ಶಿನಾರ್ ಎಂಬ ಪ್ರಾಂತ್ಯಕ್ಕೆ ಬಾಬೆಲ್ ಮುಖ್ಯ ನಗರವಾಗಿತ್ತು. ಸ್ವಲ್ಪ ಕಾಲದ ನಂತರ ಶಿನಾರ್ ಪ್ರದೇಶವನ್ನು ಬಾಬೆಲೋನ್ ಎಂದು ಕರೆಯಲ್ಪಟ್ಟಿತ್ತು.

- ಬಾಬೆಲ್ ನಗರವನ್ನು ಶಿನಾರ್ ಪ್ರಾಂತವನ್ನು ಆಳುತ್ತಿದ್ದ, ಹಾಮನ ಮರಿ ಮೊಮ್ಮಗನಾದ, ನಿಮ್ರೋದನು ಸ್ಥಾಪಿಸಿದನು.
- ಶಿನಾರ್ ಪ್ರಾಂತದ ಜನರು ದುರಹಂಕಾರರಾಗಿದ್ದು ಆಕಾಶವನ್ನು ಮುಟ್ಟುವ ಗೋಪುರವನ್ನು ಕಟ್ಟಬೇಕೆಂದು ನಿರ್ದರಿಸಿದರು. ಇದು ಸ್ವಲ್ಪ ಕಾಲದ ನಂತರ "ಬಾಬೆಲಿನ ಗೋಪುರ"ವೆಂದು ಕರೆಯಲ್ಪಟ್ಟಿತ್ತು.
- ಯಾಕಂದರೆ ದೇವರು ಆಜ್ಞಾಪಿಸಿದ ಪ್ರಕಾರವಾಗಿ ಜನರು ಹರಡಿ ಹೋಗಲು ಗೋಪುರವನ್ನು ಕಟ್ಟುತ್ತಿರುವ ಜನರು ನಿರಾಕರಿಸಿ, ಆದಕಾರಣ ಒಬ್ಬರ ಮಾತು ಒಬ್ಬರಿಗೆ ತಿಳಿಯದಂತೆ ಆತನು ಅವರ ಭಾಷೆಗಳನ್ನು ಗಲಿಬಿಲಿ ಮಾಡಿದನು. ಅವರು ಭೂಲೋಕದ ಅನೇಕ ಪ್ರಾಂತಗಳಲ್ಲಿ ವಾಸಿಸುವಂತೆ ಇದು ಅವರನ್ನು ಒತ್ತಾಯಪಡಿಸಿತು.
- "ಬಾಬೆಲ್" ಎನ್ನುವ ಪದಕ್ಕೆ "ಗಲಿಬಿಲಿ" ಎಂದು ಮೂಲ ಅರ್ಥವಾಗಿದೆ, ದೇವರು ಜನರ ಭಾಷೆಯನ್ನು ಗಲಿಬಿಲಿ ಮಾಡಿದ ಕಾರಣ ಆ ಹೆಸರು ಇಟ್ಟರು.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : /ಬಾಬೆಲೋನ್, /ಹಾಮ್, / ಮೆಸಪೋತಾಮ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.10:8-10
- ಆದಿ.11:8-9

ಪದ ಡೇಟಾ:

- Strong's: H894

ಬಾಬೆಲ್, ಬಾಬೆಲು, ಬಾಬೆಲಿನವರು

ಸತ್ಯಾಂಶಗಳು:

ಪ್ರಾಚೀನ ಬಾಬೆಲ್ ಪ್ರಾಂತ್ಯಕ್ಕೆ ಬಾಬೆಲು ನಗರವು ರಾಜಧಾನಿಯಾಗಿತ್ತು, ಅದು ಬಾಬೆಲ್ ಸಾಮ್ರಾಜ್ಯದ ಒಂದು ಭಾಗವಾಗಿತ್ತು.

- ನೂರಾರು ವರ್ಷಗಳ ಹಿಂದೆ ಬಾಬೆಲ್ ಗೋಪುರ ಕಟ್ಟಲ್ಪಟ್ಟ ಅದೇ ಪ್ರದೇಶದಲ್ಲಿ, ಬಾಬೆಲು ಯೂಫ್ರೇಟೀಸ್ ನದಿಯ ಉದ್ದಕ್ಕೂ ನೆಲೆಗೊಂಡಿದೆ.
- ಕೆಲವೊಮ್ಮೆ "ಬಾಬೆಲ್" ಎನ್ನುವ ಪದವು ಸಮಸ್ತ ಬಾಬೆಲ್ ಸಾಮ್ರಾಜ್ಯವನ್ನು ಸೂಚಿಸುತ್ತದೆ. ಉದಾಹರಣೆಗೆ, "ಬಾಬೆಲಿನ ಅರಸನು" ಒಂದು ನಗರವನ್ನು ಮಾತ್ರವಲ್ಲದೆ, ಸಮಸ್ತ ಸಾಮ್ರಾಜ್ಯವನ್ನು ಆಳಿದನು.
- ಬಾಬೆಲಿನಿವರು ಯೂದಾಯ ಸಾಮ್ರಾಜ್ಯದ ಮೇಲೆ ದಾಳಿ ಮಾಡಿ ಅದರಲ್ಲಿನ ಜನರನ್ನು ಬಾಬೆಲಿನಲ್ಲಿ 70 ವರ್ಷಗಳ ಕಾಲ ಬಾಬೆಲಿನಲ್ಲಿ ಸೆರೆಹಿಡಿದ ಪ್ರಬಲ ಜನರ ಗುಂಪಾಗಿ ಇದ್ದರು.
- ಈ ಪ್ರಾಂತ್ಯದ ಒಂದು ಭಾಗವನ್ನು "ಕಸ್ದೀಯ" ಎಂದು ಮತ್ತು ಅಲ್ಲಿ ವಾಸಿಸುತ್ತಿದ್ದ ಜನರನ್ನು "ಕಸ್ದೀಯರು" ಎಂದು ಕರೆಯುತ್ತಿದ್ದರು. ಅದರ ಪರಿಣಾಮವಾಗಿ, "ಕಸ್ದೀಯ" ಎಂಬ ಪದವು ಅನೇಕಬಾರಿ ಬಾಬೆಲಿನವರನ್ನು ಸೂಚಿಸಲು ಉಪಯೋಗಿಸಲಾಗುತ್ತಿತ್ತು. (ನೋಡಿರಿ: ಲಾಕ್ಷಣಿಕ ಪ್ರಯೋಗವನ್ನು)

(ಇವುಗಳನ್ನು ಸಹ ನೋಡಿರಿ : ಬಾಬೆಲ್, ಕಸ್ದೀಯ, ಯೂದಾಯ, ನೆಬೂಕದ್ನೆಚ್ಚರ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ. 9:1
- 2 ಅರಸ. 17:24-26
- ಅಪೊ.ಕೃತ್ಯ. 7:43
- ದಾನಿ. 1:1-2
- ಯೆಹೆ. 12:13
- ಮತ್ತಾಯ. 1:11
- ಮತ್ತಾಯ. 1:17

ಸತ್ಯವೇದದಿಂದ ಕೆಲವು ಉದಾಹರಣೆಗಳು:

- **20:6** ಅಶ್ಶೂರರು ಇಸ್ರಾಯೆಲ್ ರಾಜ್ಯವನ್ನು ನಾಶ ಮಾಡಿದ ಸುಮಾರು 100 ವರ್ಷಗಳ ನಂತರ, ಯೂದಯ ರಾಜ್ಯದ ಮೇಲೆ ದಾಳಿಮಾಡಲು **ಬಾಬೆಲಿನವರ** ಅರಸನಾದ ನೆಬೂಕದ್ನೆಚ್ಚರನನ್ನು ದೇವರು ಕಳುಹಿಸಿದನು. **ಬಾಬೆಲು** ಪ್ರಬಲವಾದ ಸಾಮ್ರಾಜ್ಯವಾಗಿತ್ತು.
- **20:7** ಆದರೆ ಕೆಲವು ವರ್ಷಗಳ ನಂತರ, ಯೂದಾಯದ ಅರಸನು **ಬಾಬೆಲಿಗೆ** ವಿರುದ್ಧವಾಗಿ ತಿರುಗಿಬಿದ್ದನು. ಆದುದರಿಂದ, **ಬಾಬೆಲಿನವರು** ಹಿಂತಿರುಗಿ ಯೂದಾಯ ರಾಜ್ಯವನ್ನು ಆಕ್ರಮಿಸಿದರು. ಅವರು ಯೆರೂಸಲೇಮಿನ ಪಟ್ಟಣವನ್ನು ಆಕ್ರಮಿಸಿ, ದೇವಾಲಯವನ್ನು ನಾಶಮಾಡಿದರು, ಮತ್ತು ಆ ಪಟ್ಟಣದ ಹಾಗೂ ದೇವಾಲಯದ ಎಲ್ಲಾ ಸಂಪತ್ತನ್ನು ತೆಗೆದುಕೊಂಡರು.
- **20:09** ನೆಬೂಕದ್ನೆಚ್ಚನು ಮತ್ತು ಅವನ ಸೇನೆಯು ಯೂದಾಯ ರಾಜ್ಯದಲ್ಲಿದ್ದ ಬಹುತೇಕ ಎಲ್ಲಾ ಜನರನ್ನು **ಬಾಬೆಲಿಗೆ** ಕರೆದೊಯ್ದರು, ಅವರಲ್ಲಿ ಬಡವರಾಗಿರುವವರನ್ನು ಹೊಲದಲ್ಲಿ ವ್ಯವಸಾಯ ಮಾಡಲು ಬಿಟ್ಟು ಬಿಟ್ಟರು.
- **20:11**ಸುಮಾರು ಎಪ್ಪತ್ತು ವರ್ಷಗಳ ನಂತರ, ಪಾರಸಿಯ ಅರಸನಾದ, ಕೋರೆಷನು, **ಬಾಬೆಲನ್ನು** ಸೋಲಿಸಿದನು.

ಪದದ ಡೇಟಾ:

- Strong's: H3778, H3779, H8152, H0894, H0895, H0896, G08970

ಬಾರೂಕ

ಸತ್ಯಾಂಶಗಳು:

ಹಳೆಯ ಒಡಂಬಡಿಕೆಯಲ್ಲಿ ಹಲವಾರು ಪುರುಷರ ಹೆಸರುಗಳಲ್ಲಿ ಬಾರೂಕ ಒಂದು ಹೆಸರು.

- (ಜಕ್ಕೈಯ ಮಗನಾದ) ಒಬ್ಬ ಬಾರೂಕ ಯೆರೂಸಲೇಮಿನ ಗೋಡೆಗಳನ್ನು ಕಟ್ಟಲು ನೆಹೆಮೀಯನೊಂದಿಗೆ ಕೆಲಸ ಮಾಡಿದನು.
- ನೆಹೆಮೀಯನ ಕಾಲದಲ್ಲಿ, ಯೆರೂಸಲೇಮಿನ ಗೋಡೆಗಳನ್ನು ತಿರುಗಿ ಕಟ್ಟಿದ ನಂತರ (ಕೊಲ್ಹೋಜೆಯ ಮಗನಾದ) ಮತ್ತೊಬ್ಬ ಬಾರೂಕ ನಾಯಕರಲ್ಲಿ ಒಬ್ಬನಾಗಿದ್ದನು.
- ದೇವರು ಯೆರೆಮೀಯನಿಗೆ ಬಯಲು ಮಾಡಿದ ಸಂದೇಶಗಳನ್ನು ಬರೆಯುತ್ತಾ ಮತ್ತು ಅವುಗಳನ್ನು ಜನರಿಗಾಗಿ ಓದುತ್ತ (ನೇರೀಯನ ಮಗನಾದ) ಮತ್ತೊಬ್ಬ ಬಾರೂಕನು ಪ್ರವಾದಿಯಾದ ಯೆರೆಮೀಯನ ಸೇವಕನಗಿದ್ದು ಅವನಿಗೆ ಅನೇಕ ವಿಧವಾಗಿ ಸಹಾಯ ಮಾಡುತ್ತಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಶಿಷ್ಯನು, ಯೆರೆಮೀಯ, ಯೆರೂಸಲೇಮ್, ನೆಹೆಮೀಯ, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆರೆ.32:10-12
- ಯೆರೆ.36:4-6
- ಯೆರೆ.43:1-3

ಪದ ಡೇಟಾ:

- Strong's: G1263

ಬಾರ್ತೊಲೊಮಾಯ

ಸತ್ಯಾಂಶಗಳು:

ಬಾರ್ತೊಲೊಮಾಯ ಯೇಸುವಿನ ಹನ್ನೆರಡು ಶಿಷ್ಯರಲ್ಲಿ ಒಬ್ಬನಾಗಿದ್ದನು.

- ಯೇಸುವಿನ ಹೆಸರಿನಲ್ಲಿ ಅದ್ಭುತ ಕಾರ್ಯಗಳನ್ನು ಮಾಡಲು ಮತ್ತು ಸುವಾರ್ತೆಯನ್ನು ಸಾರಲು ಬೇರೆ ಅಪೊಸ್ತಲರ ಜೊತೆಯಲ್ಲಿ ಬಾರ್ತೊಲೊಮಾಯ ಸಹ ಕಳುಹಿಸಲ್ಪಟ್ಟಿದ್ದನು.
- ಯೇಸು ಪರಲೋಕಕ್ಕೆ ಆರೋಹಣವಾಗಿ ಹೋಗುವುದನ್ನು ನೋಡಿದವರಲ್ಲಿ ಅವನು ಒಬ್ಬನಾಗಿದ್ದನು.
- ಅದಾದ ಕೆಲವು ವಾರಗಳ ನಂತರ, ಪವಿತ್ರಾತ್ಮನು ಇಳಿದು ಬಂದಾಗ ಇವನು ಬೇರೆ ಅಪೊಸ್ತಲರೊಂದಿಗೆ ಯೆರೂಸಲೇಮಿನಲ್ಲಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲನು, ಶುಭವಾರ್ತೆ, ಪವಿತ್ರಾತ್ಮ, ಅದ್ಭುತ, ಪಂಚಾಶತ್ತಮ ದಿನ, ಹನ್ನೆರಡು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.01:12-14
- ಲೂಕ.06:14-16
- ಮಾರ್ಕ.03:17-19

ಪದ ಡೇಟಾ:

- Strong's: G918

ಬಾರ್ನಬ

ಸತ್ಯಾಂಶಗಳು:

ಬಾರ್ನಬನು ಅಪೊಸ್ತಲರ ಕಾಲದಲ್ಲಿ ಜೀವಿಸಿದ ಆದಿ ಕ್ರೈಸ್ತವನಾಗಿದ್ದನು.

- ಬಾರ್ನಬನು ಕುಪ್ರ ದ್ವೀಪದ ವಾಸಿಯು, ಇಸ್ರಯೇಲ್ ಗೋತ್ರದ ಲೇವಿಯನಾಗಿದ್ದನು.
- ಸೌಲನು (ಪೌಲನು) ಕ್ರೈಸ್ತನಾದಾಗ, ಇತರ ವಿಶ್ವಾಸಿಗಳು ಅವನನ್ನು ಸಹ ವಿಶ್ವಾಸಿ ಎಂದು ಭಾವಿಸಬೇಕಾಗಿ ಬಾರ್ನಬನು ಅವರಲ್ಲಿ ಪ್ರೇರೇಪಿಸಿದನು.
- ಅನೇಕ ಪಟ್ಟಣಗಳಲ್ಲಿ ಯೇಸು ಕುರಿತಾಗಿ ಸುವಾರ್ತೆಯನ್ನು ಸಾರಲು ಬಾರ್ನಬ ಮತ್ತು ಪೌಲನು ಜೊತೆಯಲ್ಲಿ ಪ್ರಯಾಣಿಸಿದರು.
- ಅವನ ಹೆಸರು ಯೋಸೇಫ, ಆದರೆ ಅವನನ್ನು "ಬಾರ್ನಬ" ಎಂದು ಕರೆದರು, ಅದಕ್ಕೆ "ಪ್ರೋತ್ಸಾಹ ನೀಡುವ ಮಗನು" ಎಂದು ಅರ್ಥ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(See also: ಕ್ರೈಸ್ತರು, ಕುಪ್ರ, ಶುಭ ಸಮಾಚಾರ, ಲೇವಿ, ಪೌಲ)

ಸತ್ಯವೇದದ ವಾಕ್ಯಗಳು :

- ಅಪೊ.ಕೃತ್ಯ 4:36
- ಅಪೊ.ಕೃತ್ಯ 11:26
- ಅಪೊ.ಕೃತ್ಯ 13:3
- ಅಪೊ.ಕೃತ್ಯ 15:33
- ಕೊಲೊಸ್ಸೆ 4:10-11
- ಗಲಾತ್ಯ 2:9-10
- ಗಲಾತ್ಯ 2:13

ಸತ್ಯವೇದದ ಕಥೆಗಳಿಂದ ಉದಾಹರಣೆಗಳು :

- **46:8** ಆಗ **ಬಾರ್ನಬ** ಎಂಬ ವಿಶ್ವಾಸಿ ಸೌಲನ ಕೈಹಿಡಿದು, ಅಪೊಸ್ತಲರ ಬಳಿಗೆ ಕರೆದುಕೊಂಡುಹೋಗಿ, ದಮಸ್ಕದೊಳಗೆ ಯೇಸುವಿನ ಹೆಸರಿನಲ್ಲಿ ಧೈರ್ಯದಿಂದ ಪ್ರಚಾರ ಮಾಡಿದ್ದನ್ನು ಅವರಿಗೆ ವಿವರವಾಗಿ ಹೇಳಿದನು.
- **46:9** ಈ ಹೊಸ ವಿಶ್ವಾಸಿಗಳಿಗೆ ಯೇಸುವಿನ ಕುರಿತಾಗಿ ಇನ್ನು ಹೆಚ್ಚಾಗಿ ಬೋದಿಸಲು ಮತ್ತು ಸಭೆಯನ್ನು ಬಲಪಡಿಸಲು **ಬಾರ್ನಬ** ಮತ್ತು ಸೌಲನು ಜೊತೆಯಾಗಿ ಹೋದರು. I
- **46:10** ಒಂದು ದಿನ, ಅಂತಿಯೋಕ್ಯದಲ್ಲಿರುವ ಕ್ರೈಸ್ತರು ಉಪವಾಸ ಮಾಡಿ ಪ್ರಾರ್ಥಿಸುತ್ತಿರುವಾಗ, "ನಾನು ಅವರಿಗೆ ನೇಮಿಸಿದ ಕೆಲಸವನ್ನು ಮಾಡುವಂತೆ **ಬಾರ್ನಬನನ್ನು** ಮತ್ತು ಸೌಲನನ್ನು ಪ್ರತ್ಯೇಕಪಡಿಸಿರಿ" ಎಂದು ಪವಿತ್ರಾತ್ಮನು ಅವರಿಗೆ ಹೇಳಿದನು. ಆದುದರಿಂದ ಅಂತಿಯೋಕ್ಯದಲ್ಲಿದ್ದ ಸಭೆ **ಬಾರ್ನಬ** ಮತ್ತು ಸೌಲನ ಮೇಲೆ ಕೈಯಿಟ್ಟು ಅವರಿಗಾಗಿ ಪಾರ್ಥಿಸಿದರು.

ಪದ ಡೇಟಾ:

- Strong's: G9210

ಬಾಳ್

ಸತ್ಯಾಂಶಗಳು:

"ಬಾಳ್" ಎಂದರೆ "ಕರ್ತನು" ಅಥವಾ "ಯಜಮಾನನು" ಎಂದು ಅರ್ಥ ಮತ್ತು ಕಾನಾನ್ಯರು ಪೂಜಿಸುತ್ತಿದ್ದ ಪ್ರಾಥಮಿಕ ಅನ್ಯ ದೇವತೆಯ ಹೆಸರಾಗಿದೆ.

- "ಬಾಳ್" ಎಂದು ಅವರ ಹೆಸರಿನಲ್ಲಿ ಒಂದು ಭಾಗವಾಗಿದ್ದ ಅನೇಕ ಸ್ಥಾನಿಕ ಅನ್ಯ ದೇವತೆಗಳಿದ್ದವು, ಅಂತಹ ದೇವತೆಗಳಲ್ಲಿ "ಪೆಗೋರದ ಬಾಳ್" ಒಂದು ಆಗಿದೆ. ಈ ಎಲ್ಲಾ ದೇವತೆಗಳನ್ನು ಒಟ್ಟಾಗಿ "ಬಾಳ್ ದೇವತೆಗಳೆಂದು" ಕರೆಯುತ್ತಿದ್ದರು.
- ಜನರಲ್ಲಿ ಕೆಲವರು ಅವರ ಹೆಸರಲ್ಲಿ "ಬಾಳ್" ಎಂದು ಸೇರಿಸಿಕೊಳ್ಳುತ್ತಿದ್ದರು.
- ಬಾಳ್ ದೇವತೆಯ ಆರಾಧನೆಯಲ್ಲಿ ಮಕ್ಕಳನ್ನು ಬಲಿಕೊಡುವುದು ಮತ್ತು ವೇಶ್ಯೆಯರನ್ನು ಉಪಯೋಗಿಸಿಕೊಳ್ಳುವ ದುಷ್ಟ ಆಚಾರಗಳು ಒಳಗೊಂಡಿದ್ದವು.

ಅವರ ಚರಿತ್ರೆಯ ವಿವಿದ ಸಂಧರ್ಭಗಳಲ್ಲಿ, ಅವರ ಸುತ್ತಲು ಇದ್ದ ಅನ್ಯ ರಾಜ್ಯಗಳನ್ನು ನಿದರ್ಶನವಾಗಿ ತೆಗೆದುಕೊಂಡು, ಇಸ್ರಾಯೇಲರು ಸಹ ಬಾಳ್ ಆರಾಧನೆಯಲ್ಲಿ ಗಂಭೀರವಾಗಿ ನಿರತರಾಗಿದ್ದರು.

- ಅರಸನಾದ ಆಹಾಬ ಆಳ್ವಿಕೆಯ ಸಮಯದಲ್ಲಿ, ಬಾಳ್ ದೇವತೆ ಇಲ್ಲವೆಂದು ಮತ್ತು ಯೆಹೋವನು ಒಬ್ಬನೇ ದೇವರೆಂದು ಧೃಡಪಡಿಸಲು ಒಂದು ಪರೀಕ್ಷೆಯನ್ನು ದೇವರ ಪ್ರವಾದಿಯಾಗಿದ್ದ ಎಲೀಯನು ಎನ್ನಿಸಿಕೊಂಡನು. ಆದಕಾರಣ, ಬಾಳ್ ದೇವತೆಯ ಪ್ರವಾದಿಯರು ನಶಿಸಿ ಹೋದರು ಮತ್ತು ಜನರು ಯೆಹೋವನನ್ನು ಆರಾಧಿಸಲು ಪ್ರಾರಂಭಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಆಹಾಬ, ಆಶೇರ, ಎಲೀಯನು, ಅನ್ಯ ದೇವತೆ,ವೇಶ್ಯೆ, ಯೆಹೋವನು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.16:31-33
- 1 ಸಮು.07:3-4
- ಯೆರೆ.02:7-8
- ನ್ಯಾಯ.02:11-13
- ಅರಣ್ಯ..22:41

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **19:02** ಜನರೆಲ್ಲರೂ **ಬಾಳ್** ಎಂಬ ಅನ್ಯ ದೇವತೆಯನ್ನು ಆರಾಧಿಸಲು ಪ್ರೋತ್ಸಾಹಿಸಿದ ದುಷ್ಟ ಮನುಷ್ಯನಾಗಿದ್ದಾನೆ.
- **19:06** ಇಸ್ರಾಯೇಲ್ ರಾಜ್ಯದ ಎಲ್ಲಾ ಜನರೂ, **ಬಾಳ್** ದೇವತೆಯ 450 ಪ್ರವಾದಿಯರನ್ನು ಸೇರಿ, ಕರ್ಮೆಲ್ ಬೆಟ್ಟಕ್ಕೆ ಬಂದರು. "ನಿಮ್ಮ ಮನಸ್ಸುಗಳನ್ನು ಎಷ್ಟು ಬಾರಿ ಮಾರ್ಪಡಿಸಿಕೊಳ್ಳುತ್ತೇರೆ?" ಎಂದು ಎಲೀಯನು ಜನರಿಗೆ ಹೇಳಿದನು. ಯೆಹೋವನು ದೇವರಾದರೆ, ಆತನನ್ನು ಸೇವಿಸಿರಿ! **ಬಾಳ್** ದೇವರಾದರೆ, ಅವನನ್ನು ಸೇವಿಸಿರಿ!"
- **19:07 ಬಾಳ್** ದೇವತೆಯ ಪ್ರವಾದಿಯರನ್ನು ನೋಡಿ, "ನೀವು ಒಂದು ಹೋರಿಯನ್ನು ಆರಿಸಿಕೊಂಡು ಅದನ್ನು ಸಿದ್ದಪಡಿಸಿ, ನಿಮ್ಮ ದೇವರ ಹೆಸರು ಹೇಳಿ ಪ್ರಾರ್ಥಿಸಿರಿ. ಆದರೆ ಬೆಂಕಿಯನ್ನು ಹೊತ್ತಿಸಬಾರದು.
- **19:08** ಆಗ **ಬಾಳ್** ದೇವತೆಯ ಪ್ರವಾದಿಯರು _ಬಾಳ್ _ ದೇವತೆಗೆ, "ಬಾಳನೇ ನಮಗೆ ಕಿವಿಗೊಡು!" ಎಂದು ಪ್ರಾರ್ಥಿಸಿದರು.
- **19:12** ಆದ ಕಾರಣ ಜನರು **ಬಾಳ್** ದೇವತೆಯ ಪ್ರವಾದಿಯರನ್ನು ಸೆರೆಹಿಡಿದರು. ನಂತರ ಎಲೀಯನು ಅವರನ್ನು ಕರೆದುಕೊಂಡು ಹೋಗಿ ಅವರನ್ನು ಕೊಲ್ಲಿಸಿದನು.

ಪದ ಡೇಟಾ:

- Strong's: H1120, G896

ಬಾಷ

ಸತ್ಯಾಂಶಗಳು:

ಇಸ್ರಯೇಲರು ವಿಗ್ರಹವನ್ನು ಆರಾಧಿಸಲು ಪ್ರೋತ್ಸಾಹ ಮಾಡಿದ ದುಷ್ಟ ಅರಸರಲ್ಲಿ ಬಾಷ ಒಬ್ಬನಾಗಿದ್ದಾನೆ.

- ಆಸ ಯೆಹೂದದ ಅರಸನಾಗಿದ್ದಾಗ, ಬಾಷ ಇಸ್ರಯೇಲರ ಮೂರನೆಯ ಅರಸನಾಗಿದ್ದನು ಮತ್ತು ಇಪತ್ತು ನಾಲ್ಕು ವರ್ಷಗಳು ಆಳ್ವಿಕೆ ಮಾಡಿದನು,
- ಅವನು ಸೈನ್ಯಾಧಿಪತಿಯಾಗಿರುವಾಗ ಹಿಂದಿನ ಅರಸನಾದ ನಾದಾಬನನ್ನು ಕೊಂದು ಅವನೇ ಅರಸನಾದನು.
- ಬಾಷನ ಆಳ್ವಿಕೆಯಲ್ಲಿ ಇಸ್ರಯೇಲರು ಮತ್ತು ಯೆಹೂದರ ನಡುವೆ, ಪ್ರತ್ಯೇಕವಾಗಿ ಯೆಹೂದರ ಅರಸನಾದ ಆಸನೊಂದಿಗೆ ಅನೇಕ ಯುದ್ಧಗಳು ನಡೆದವು.
- ಬಾಷನ ಮಾಡಿದ ಅನೇಕ ಪಾಪಗಳ ಕಾರಣವಾಗಿ ದೇವರು ಅವನ ಮರಣದ ಮೂಲಕ ಅವನನ್ನು ತನ್ನ ವಿಧಿಗಳಿಂದ ತೊಲಗಿಸಿದನು.

(ಅನುವಾದ ಸಲಹೆಗಳು: /ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : /ಆಸ, /ಅನ್ಯ ದೇವತೆಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.15:16-17
- 2 ಅರಸ.09:9-10
- ಯೆರೆ.41:8-9

ಪದ ಡೇಟಾ:

- Strong's: H1201

ಬಾಷಾನ್

ಸತ್ಯಾಂಶಗಳು:

ಗಲಿಲಾಯ ಸಮುದ್ರದ ಪೂರ್ವ ದಿಕ್ಕಿನಲ್ಲಿರುವ ಪ್ರಾಂತ್ಯವು ಬಾಷಾನ್ ಆಗಿದೆ. ಪ್ರಸ್ತುತ ಕಾಲದಲ್ಲಿ ಸಿರಿಯಾ ಮತ್ತು ಗೋಲಾನ್ ಹೈಟ್ಸ್ ಎಂಬ ಸ್ಥಳದಲ್ಲಿ ಅದು ಇತ್ತು.

- ಹಳೆಯ ಒಡಂಬಡಿಕೆಯಲ್ಲಿ ಆಶ್ರಯ ಪುರವಗಿದ್ದ "ಗೋಲಾನ್" ಪಟ್ಟಣವು ಬಾಷಾನ್ ಪ್ರಾಂತ್ಯದಲ್ಲಿತ್ತು.
- ಬಾಷಾನ್ ಪ್ರಾಂತ್ಯವು ಏಲಾ ಮರಗಳಿಗೆ ಮತ್ತು ಪ್ರಾಣಿಗಳ ಹುಲ್ಲುಗಾವಲುಗಳಿಗೆ ಪ್ರಸಿದ್ಧವಾಗಿದ್ದು ತುಂಬ ಫಲವತ್ತಾದ ಪ್ರಾಂತ್ಯವಾಗಿತ್ತು.
- ಅನೇಕ ಅರಸರು ಮತ್ತು ಅವರ ದೇಶಗಳ ನಡುವೆ ನಡೆದ ಯುದ್ಧಗಳಿಗೆ ಬಾಷಾನ್ ಯುದ್ಧ ಭೂಮಿಯಾಗಿತ್ತೆಂದು ಆದಿ. 14ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿದೆ.
- ಐಗುಪ್ತ ದೇಶದಿಂದ ಇಸ್ರಾಯೆಲಿಯರು ಸ್ವತಂತ್ರರಾಗಿ ಅರಣ್ಯದಲ್ಲಿ ಸಂಚರಿಸುತ್ತಿರುವಾಗ, ಅವರು ಬಾಷಾನ್ ಪ್ರಾಂತ್ಯದ ಒಂದು ಭಾಗವನ್ನು ಸ್ವಾಧೀನಪಡಿಸಿಕೊಂಡರು.
- ಹಲವಾರು ವರ್ಷಗಳ ನಂತರ, ಅರಸನಾದ ಸೊಲೊಮೋನ್ ಅಲ್ಲಿಂದ ವಸ್ತುಗಳನ್ನು ಸಂಗ್ರಹಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ಏಲಾ, ಗಲಿಲಾಯ ಸಮುದ್ರ, ಸಿರಿಯಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.04:11-14
- ಆಮೋಸ.04:1-2
- ಯೆರೆ.22:20-21
- ಯೆಹೋ.09:9-10

ಪದ ಡೇಟಾ:

- Strong's: H1316

ಬಿಳಾಮ

ಸತ್ಯಾಂಶಗಳು:

ಇಸ್ರಯೇಲ್ಯರು ಕಾನಾನ್ ದೇಶವನ್ನು ಸೇರಲು ಯೊರ್ದನ್ ನದಿಯ ತೀರದಲ್ಲಿ ಮೋವಾಬ್ಯರ ಬಯಲಿನಲ್ಲಿ ಇಳಿದುಕೊಂಡಿರುವಾಗ, ಅರಸನಾದ ಬಾಲಾಕನು ಇಸ್ರಯೇಲ್ಯರನ್ನು ಶಪಿಸಲು ಅನ್ಯ ಪ್ರವಾದಿಯಾದ ಬಿಳಾಮನನ್ನು ನೇಮಕ ಮಾಡಿದನು.

- ಬಿಳಾಮನು ಪೆತೋರ್ ಎಂಬ ಊರಿನವನಾಗಿದ್ದನು, ಅದು ಯೂಫ್ರೆಟೀಸ್ ನದಿಯ ತೀರದಲ್ಲಿರುವ ಮೋವಾಬ್ಯರ ದೇಶದಿಂದ 400 ಮೈಲುಗಳ ದೂರದಲ್ಲಿತ್ತು.
- ಇಸ್ರಾಯೇಲರು ಬಹಳ ಜನವಾಗಿರುವುದರಿಂದ ಮಿದ್ಯಾನಿನ ಅರಸನಾದ ಬಾಲಾಕನು, ಬಹಳ ಭಯಪಟ್ಟು ಹೆದರಿ, ಅವರನ್ನು ಶಪಿಸಲು ಬಿಳಾಮನನ್ನು ಆರಿಸಿಕೊಂಡನು.
- ಬಿಳಾಮನು ಇಸ್ರಾಯೇಲ್ ದೇಶಕ್ಕೆ ಹೋಗುತ್ತಿರುವಾಗ, ಯೆಹೋವನ ದೂತನು ಅವನಿಗೆ ಎದುರಾಳಿಯಾಗಿ ದಾರಿಯಲ್ಲಿ ನಿಂತುಕೊಂಡನು, ಆದಕಾರಣ ಬಿಳಾಮನ ಕತ್ತೆಯು ನಿಂತುಕೊಂಡಿತು. ಬಿಳಾಮನೊಂದಿಗೆ ಮಾತನಾಡಲು ಯೆಹೋವನು ಕತ್ತೆಗೆ ಶಕ್ತಿಕೊಟ್ಟನು.
- ಬಿಳಾಮನು ಇಸ್ರಾಯೇಲರನ್ನು ಶಪಿಸಲು ಅಪ್ಪಣೆ ಕೊಡಲಿಲ್ಲ ಬದಲಿಗೆ ಅವರನ್ನು ಆಶಿರ್ವಾದಿಸಲು ಆಜ್ಞಾಪಿಸಿದನು.
- ಆದರೂ ಸಹ ಕೊನೆಯಲ್ಲಿ, ಅನ್ಯದೇವತೆಯಾದ ಪೆಗೋರದ ಬಾಳನನ್ನು ಆರಾಧಿಸಲು ಇಸ್ರಾಯೇಲರನ್ನು ಪ್ರೋತ್ಸಾಹಿಸುವ ಮೂಲಕ ಬಿಳಾಮನು ಅವರ ಮೇಲೆ ದುಷ್ಟತನವನ್ನು ತಂದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದಿಸಿರಿ)

(ಈ ಪದಗಳನ್ನು ಸಹ ನೋಡಿರಿ : ಆಶಿರ್ವಾದ, ಕಾನಾನ್, ಶಾಪ, ಕತ್ತೆ, ಯೂಫ್ರೆಟೀಸ್ ನದಿ, ಯೊರ್ದನ್ ನದಿ, ಮಿದ್ಯಾನ್, ಮೋವಾಬ್, ಪೆಗೋರ)

ಸತ್ಯವೇದದ ವಾಕ್ಯಗಳು:

- 2 ಪೇತ್ರ 2:16
- ಧರ್ಮ 23:3-4
- ಯೆಹೋ 13:22-23
- ಅರಣ್ಯ 22:5
- ಪ್ರಕ2:14

ಪದ ಡೇಟಾ:

- Strong's: H1109, G9030

ಬೆತೂವೇಲ್

ಸತ್ಯಾಂಶಗಳು:

ಬೆತೂವೇಲನು ಅಬ್ರಹಾಮನ ಸಹೋದರನಾದ ನಾಹೋರಿನ ಮಗನಾಗಿದ್ದನು.

- ಬೆತೂವೇಲ್ ರೆಬೆಕ್ಕ ಮತ್ತು ಲಾಬಾನಿನ ತಂದೆಯಾಗಿದ್ದನು.
- ಬೆರ್ಷೆಬ ಪಟ್ಟಣದಿಂದ ಸ್ವಲ್ಪ ದೂರದಲ್ಲಿ, ಪಶ್ಚಿಮ ಯೂದಯ ಪ್ರಾಂತ್ಯದಲ್ಲಿ ಬೆತೂವೇಲ್ ಎಂಬ ಊರು ಇತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಬೆರ್ಷೆಬ, ಲಾಬಾನ್, ನಾಹೋರ್, ರೆಬೆಕ್ಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.04:29-31
- ಆದಿ.28:1-2

ಪದ ಡೇಟಾ:

- Strong's: H1328

ಬೆನಾಯ

ಪದದ ಅರ್ಥವಿವರಣೆ

ಹಳೆಯ ಒಡಂಬಡಿಕೆಯಲ್ಲಿದ್ದ ಅನೇಕ ಪುರುಷರಲ್ಲಿ ಬೆನಾಯ ಒಬ್ಬನು.

- ದಾವವೀದನ ಶಕ್ತಿಯುತ ಮನುಷ್ಯರಲ್ಲಿ ಯೆಹೋಯಾದಾವನ ಮಗನಾದ ಬೆನಾಯ ಒಬ್ಬನಾಗಿದ್ದನು. ಅವನು ನೈಪುಣ್ಯತೆ ಹೊಂದಿದ್ದ ಯೋಧನು ಮತ್ತು ದಾವೀದನ ಸಂರಕ್ಷರ ಮೇಲ್ವಿಚಾರಕನಾಗಿದ್ದನು.
- ಸೊಲೊಮೋನನು ಅರಸನಾದಾಗ, ಅವನ ಶತ್ರುಗಳನ್ನು ಜಯಿಸಲು ಬೆನಾಯ ಸಹಾಯ ಮಾಡಿದನು. ಸ್ವಲ್ಪ ಕಾಲಕ್ಕೆ ಅವನು ಇಸ್ರಾಯೇಲ್ ಸೈನ್ಯಾಧಿಪತಿಯಾದನು.
- ಹಳೆಯ ಒಡಂಬಡಿಕೆಯಲ್ಲಿ ಕಾಣಿಸುವ ಬೇರೆ ಬೆನಾಯ ಮುವ್ವರು ಲೇವೀಯಾರಾಗಿದ್ದರು: ಒಬ್ಬನು ಯಾಜಕನು, ಮತೊಬ್ಬನು ಸಂಗೀತಕಾರನು ಮತ್ತು ಇನ್ನೊಬ್ಬನು ಆಸಾಫನ ಮಗನಾಗಿದ್ದನು.

(ಈ ಪದಗಳನ್ನು ಸಹ ನೋಡಿರಿ : ಆಸಾಫ, ಯೆಹೋಯಾದ, ಲೇವಿಯ, ಸೊಲೊಮೋನ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.04:34-38
- 1 ಅರಸ.01:7-8
- 2 ಸಮು.23:20-21

ಪದ ಡೇಟಾ:

- Strong's: H1141

ಬೆನ್ಯಾಮೀನ, ಬೆನ್ಯಾಮೀನ್ಯರು

ಸತ್ಯಾಂಶಗಳು:

ಬೆನ್ಯಾಮೀನನು ಯಾಕೋಬನ ಹನ್ನೆರಡನೇಯ ಮಗನು. ಅವನ ರಾಹೇಲಳಿನ ಎರಡನೇಯ ಮಗನು. ಇಸ್ರಾಯೇಲಿನ ಹನ್ನೆರಡು ಗೋತ್ರಗಳಲ್ಲಿ ಬೆನ್ಯಾಮಿನನ ಸಂತತಿಯವರು ಒಂದು ಗೋತ್ರದವರಾಗಿದ್ದರು.

- ಅವನಿಂದ ಬಂದ ಜನಾಂಗವನ್ನು "ಬೆನ್ಯಾಮೀನನ ಗೋತ್ರ" ಅಥವಾ "ಬೆನ್ಯಾಮೀನ" ಅಥವಾ "ಬೆನ್ಯಾಮೀನ್ಯರು" ಎಂದು ಕರೆಯಲಾಗುತ್ತಿತ್ತು.
- ಎಬ್ರೀಯ ಭಾಷೆಯಲ್ಲಿ, ಬೆನ್ಯಾಮೀನ್ ಎಂಬ ಹೆಸರಿನ ಅರ್ಥ "ನನ್ನ ಬಲಗೈಯ ಮಗ".
- ಬೆನ್ಯಾಮೀನ್ ಗೋತ್ರ ಯೆರೂಸಲೇಮಿನ ಉತ್ತರಕ್ಕೆ ಲವಣ ಸಮುದ್ರದ ವಾಯುವ್ಯಕ್ಕೆ ನೆಲೆಸಿದರು.
- ರಾಜ ಸೌಲನು ಬೆನ್ಯಾಮೀನ್ ಕುಲದವನು.
- ಅಪೊಸ್ತಲನಾದ ಪೌಲನು ಸಹ ಬೆನ್ಯಾಮೀನ ಗೋತ್ರಕ್ಕೆ ಸೇರಿದವನಾಗಿದ್ದಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡುವುದು)

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲಿನ ಹನ್ನೆರಡು ಗೋತ್ರಗಳು, ಯಾಕೋಬ,ರಾಹೇಲ್)

ಸತ್ಯವೇದದ ವಾಕ್ಯಗಳು:

- 1 ಪೂರ್ವ 2:1-2
- 1 ಅರಸ 2:8
- ಅಪೊ.ಕೃತ್ಯ 13:21-22
- ಆದಿ 35:18
- ಆದಿ 42:4
- ಆದಿ 42:35-36
- ಫಿಲಿಪ್ಪ 3:4-5

ಪದ ಡೇಟಾ:

- Strong's: H1144, G9580

ಬೆರೋಯ

ಸತ್ಯಾಂಶಗಳು:

ಹೊಸ ಒಡಂಬಡಿಕೆಯಲ್ಲಿ, ಸಮೃದ್ಧಿಯಾದ ಗ್ರೀಕ್ ಪಟ್ಟಣವಾದ ಬೆರೋಯ, ಮಕೆದೋನ್ಯ ಪ್ರಾಂತ್ಯದ ಆಗ್ನೇಯಕ್ಕೆ ಇತ್ತು, ಅದು ಥೆಸಲೋನೀಕ ಪಟ್ಟಣದ ದಕ್ಷಿಣಕ್ಕೆ ಸುಮಾರು 80 ಕಿಲೋಮೀಟರ್ ದೂರದಲ್ಲಿತ್ತು.

- ಥೆಸಲೋನೀಕ ಪಟ್ಟಣದಲ್ಲಿ ಯೆಹೋದ್ಯರಲ್ಲಿ ಕೆಲವರು ಪೌಲನು ಮತ್ತು ಸೀಲನನ್ನು ತೊಂದರೆ ಮಾಡಿದಾಗ, ಅವರ ಸಹ ಕ್ರೈಸ್ತರ ಸಹಾಯದಿಂದ ಅವರು ಬೆರೋಯ ಪಟ್ಟಣಕ್ಕೆ ತಪ್ಪಿಸಿಕೊಂಡು ಹೋದರು.
- ಬೆರೋಯ ಪಟ್ಟಣದಲ್ಲಿ ಪೌಲನ ಬೋಧನೆಯನ್ನು ಕೇಳಿದಾಗ, ಅವನು ಹೇಳುವುದು ಸತ್ಯವೋ ಅಲ್ಲವೋ ಎಂದು ಶಾಸ್ತ್ರಗ್ರಂಥಗಳನ್ನು ಶೋಧಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಪೌಲನು, ಸೀಲನು, ಥೆಸಲೋನೀಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.17:10-12
- ಅಪೊ.ಕೃತ್ಯ.17:13-15
- ಅಪೊ.ಕೃತ್ಯ.20:4-6

ಪದ ಡೇಟಾ:

- Strong's: G960

ಬೆಲ್ಜೆಬೂಲನು

ಸತ್ಯಾಂಶಗಳು:

ಸೈತಾನನಿಗೆ ಅಥವಾ ದೆವ್ವಕ್ಕೆ ಮತ್ತೊಂದು ಹೆಸರು ಬೆಲ್ಜೆಬೂಲನು. ಅದನ್ನು ಕೆಲವೊಮ್ಮೆ "ಬೆಲ್ಜೆಬೂಲನು" ಎಂದು ಬರೆಯಲ್ಪಟ್ಟಿದೆ.

- ಈ ಹೆಸರಿನ ಅಕ್ಷರಾರ್ಥ "ನೊಣಗಳ ಕರ್ತನು" ಅಂದರೆ "ದೆವ್ವಗಳನ್ನು ಆಳುವವನು" ಎಂದು ಅರ್ಥ. ಆದರೆ ಈ ಪದವನ್ನು ಅದರ ಅರ್ಥ ಅನುಸಾರವಾಗಿ ಅಲ್ಲದೆ ಮೂಲ ಉಚ್ಚಾರ ಪ್ರಕಾರವಾಗಿ ಅನುವಾದ ಮಾಡುವುದು ಉತ್ತಮ.
- ಅದು ಯಾರನ್ನು ಸೂಚಿಸುತ್ತದೆಂದು ಸ್ಪಷ್ಟಪಡಿಸಲು "ದೆವ್ವ ಆದ ಬೆಲ್ಜೆಬೂಲನು" ಎಂದು ಅನುವಾದ ಮಾಡಬಹುದು.
- ಈ ಹೆಸರು ಎಕ್ರೋನಿನ ಅನ್ಯ ದೇವತೆಯಾದ "ಬೆಲ್ಜೆಬೂಲನು" ಎನ್ನುವ ಹೆಸರೊಂದಿಗೆ ಸಂಬಂಧವನ್ನು ಹೊಂದಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ದೆವ್ವ, ಎಕ್ರೋನ್, ಸೈತಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.11:14-15
- ಮಾರ್ಕ.03:20-22
- ಮತ್ತಾಯ.10:24-25
- ಮತ್ತಾಯ.12:24-25

ಪದ ಡೇಟಾ:

- Strong's: G954

ಬೇತೇಲ್

ಸತ್ಯಾಂಶಗಳು:

ಕಾನಾನು ದೇಶದಲ್ಲಿ ಯೆರೂಸಲೇಮಿನ ಉತ್ತರ ದಿಕ್ಕಿನಲ್ಲಿ ಬೇತೇಲ್ ಪಟ್ಟಣವು ಇದೇ. ಅದನ್ನು ಮೊದಲು "ಲೂಜ್" ಎಂದು ಕರೆಯುತ್ತಿದ್ದರು.

- ದೇವರ ವಾಗ್ದಾನವನ್ನು ಮೊದಲನೆಯ ಬಾರಿ ಸ್ವೀಕರಿಸಿದಾಗ, ಬೇತೇಲಿನಲ್ಲಿ ಅಬ್ರಾಮ (ಅಬ್ರಹಾಮನು) ಯೆಹೋವನಿಗೆ ಒಂದು ಯಜ್ಞವೇದಿಯನ್ನು ಕಟ್ಟಿದನು. ಆ ಕಾಲದಲ್ಲಿ ಆ ಪಟ್ಟಣದ ಹೆಸರು ಬೇತೇಲ್ ಅಲ್ಲ, ಆದರೆ ಅದು ಬೇತೇಲ್ ಎಂದು ಪ್ರಸಿದ್ಧವಾಗಿದ್ದರಿಂದ ಎಲ್ಲರು ಅದನ್ನು ಬೇತೇಲ್ ಎಂದು ಕರೆಯುತ್ತಿದ್ದರು.
- ತನ ಅಣ್ಣನಾದ ಏಸಾವನಿಂದ ತಪ್ಪಿಸಿಕೊಂಡು ಹೋಗುತ್ತಿರುವಾಗ, ಯಾಕೋಬನು ಈ ಪಟ್ಟಣದಲ್ಲಿ ಉಳಿದುಕೊಂಡನು ಮತ್ತು ಹೊರಗೆ ನೆಲದ ಮೇಲೆ ಮಲಗಿದನು. ಅವನು ಮಲಗಿಕೊಂಡಾಗ, ಆಕಾಶವನ್ನು ಮುಟ್ಟುವ ಒಂದು ಏಣಿಯು ಭೂಮಿಯ ಮೇಲೆ ನಿಂತಿತು ಮತ್ತು ಅದರ ಮೇಲೆ ದೇವ ದೂತರು ಏರುತ್ತಾ ಇಳಿಯುತ್ತಾ ಇದ್ದರು.
- ಯಾಕೋಬನು ಈ ಪಟ್ಟಣಕ್ಕೆ "ಬೇತೇಲ್" ಎಂದು ಹೆಸರಿಡುವ ತನಕ ಅದಕ್ಕೆ ಆ ಹೆಸರು ಇರಲಿಲ್ಲ. ಇದನ್ನು ಸ್ಪಷ್ಟಪಡಿಸಲು, ಅಬ್ರಹಾಮನ ಕುರಿತಾದ ವಾಕ್ಯ ಭಾಗಗಳಲ್ಲಿ "ಲೂಜ್ (ನಂತರ ಬೇತೇಲ್ ಎಂದು ಕರೆಯಲ್ಪಟ್ಟಿತು)" ಎಂದು ಅದೇರೀತಿಯಲ್ಲಿ ಅಲ್ಲಿಗೆ ಯಾಕೋಬ ಮೊದಲು ಬಂದಾಗ (ಅದಕ್ಕೆ ಹಳೆಯ ಹೆಸರು) ಎಂದು ಕೆಲವು ಅನುವಾದಗಳು ಅನುವಾದ ಮಾಡಬಹುದು,
- ಹಳೆಯ ಒಡಂಬಡಿಕೆಯಲ್ಲಿ ಹಲವಾರು ಬಾರಿ ಬೇತೇಲ್ ಕುರಿತಾಗಿ ಹೇಳಲ್ಪಟ್ಟಿದೆ ಮತ್ತು ಅನೇಕ ಪ್ರಾಮುಖ್ಯವಾದ ಸಂಗತಿಗಳು ಇಲ್ಲಿ ನಡೆದಿವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಹಾಮ, ಯಜ್ಞವೇದಿ, ಯಾಕೋಬ, ಯೆರೂಸಲೇಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.12:8-9
- ಆದಿ.35:1-3
- ಹೋಶೇಯ.10:14-15
- ನ್ಯಾಯ.01:22-24

ಪದ ಡೇಟಾ:

- Strong's: H1008

ಬೇತ್ ಷೆಮೆಷ್

ಸತ್ಯಾಂಶಗಳು:

ಬೇತ್ ಷೆಮೆಷ್ ಎಂಬ ಊರು ಯೆರೂಸಲೇಮಿನ ಪಶ್ಚಿಮಕ್ಕೆ ಸುಮಾರು 30 ಕಿಲೋಮೀಟರ್ ದೂರದಲ್ಲಿರುವ ಕಾನಾನಿನ ಊರಾಗಿದೆ.

- ಯೆಹೋಶುವನ ನಾಯಕತ್ವದಲ್ಲಿ ಇಸ್ರಾಯೇಲರು ಬೇತ್ ಷೆಮೆಷ್ ಊರನ್ನು ಸ್ವಾಧೀನಪಡಿಸಿಕೊಂಡರು.
- ಲೇವಿಯ ಯಾಜಕರು ವಾಸ ಮಾಡುವದಕ್ಕಾಗಿ ಬೇತ್ ಷೆಮೆಷ್ ಊರನ್ನು ಪ್ರತ್ಯೇಕವಾಗಿ ನೇಮಿಸಿದರು.
- ಫಿಲಿಸ್ತೀಯರು ಯೆಹೋವನ ಒಡಂಬಡಿಕೆಯ ಮಂಜೂಷವನ್ನು ಸ್ವಾಧೀನಪಡಿಸಿಕೊಂಡು ಯೆರೂಸಲೇಮಿಗೆ ತೆಗೆದುಕೊಂಡು ಹೋಗುತ್ತಿರುವಾಗ, ಅದನ್ನು ಮೊದಲನೆಯ ಬಾರಿ ಬೇತ್ ಷೆಮೆಷಿನಲ್ಲಿ ನಿಲ್ಲಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಯೆರೂಸಲೇಮ್, ಯೆಹೋಶುವ, ಲೇವಿಯರು, ಫಿಲಿಸ್ತೀಯರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.04:7-10
- 1 ಸಮು.06:7-9
- ಯೆಹೋ.19:20-22
- ನ್ಯಾಯ.01:33

ಪದ ಡೇಟಾ:

- Strong's: H1053

ಬೇತ್ಲೆಹೇಮ್, ಎಫ್ರಾತ

ಸತ್ಯಾಂಶಗಳು:

ಇಸ್ರಾಯೇಲ್ ದೇಶದಲ್ಲಿ, ಯೆರೂಸಲೇಮಿನ ಸಮೀಪವಾಗಿ ಬೇತ್ಲೆಹೇಮ್ ಎಂಬ ಚಿಕ್ಕ ಪಟ್ಟಣವಿತ್ತು. ಅದನ್ನು "ಎಫ್ರಾತ" ಎಂದು ಸಹ ಕರೆಯುತ್ತಿದ್ದರು, ಬಹುಶಃ ಅದು ಅದರ ಮೂಲ ಹೆಸರಾಗಿರ ಬಹುದು.

- ಅರಸನಾದ ದಾವೀದನು ಬೇತ್ಲೆಹೇಮಲ್ಲಿ ಜನಿಸಿದ ಕಾರಣ, ಅದನ್ನು "ದಾವೀದ ನಗರ" ಎಂದು ಕರೆಯಲ್ಪಟ್ಟಿದೆ.
- "ಎಫ್ರಾತ ಬೇತ್ಲೆಹೇಮಿನಿಂದ" ಮೆಸ್ಸಿಯ ಹುಟ್ಟಿಬರುವನೆಂದು ಪ್ರವಾದಿಯಾದ ಮೀಕನು ಬರೆದಿದ್ದಾನೆ.
- ಆ ಪ್ರವಾದನೆಯನ್ನು ನೆರವೇರಿಸುತ್ತ, ಅನೇಕ ವರ್ಷಗಳ ನಂತರ, ಬೇತ್ಲೆಹೇಮಿನಲ್ಲಿ ಯೇಸು ಹುಟ್ಟಿದನು.
- "ಬೇತ್ಲೆಹೇಮ್" ಎನ್ನುವ ಹೆಸರಿಗೆ "ರೊಟ್ಟಿಯ ಮನೆ" ಅಥವಾ "ಆಹಾರದ ಮನೆ" ಎಂದು ಅರ್ಥ.

(ಈ ಪದಗಳನ್ನು ಸಹ ನೋಡಿರಿ : ಕಾಲೇಬ್, ದಾವೀದ, ಮೀಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.35:16-20
- ಯೋಹಾನ.07:40-42
- ಮತ್ತಾಯ.02:4-6
- ಮತ್ತಾಯ.02:16
- ರೂತಳು.01:1-2
- ರೂತಳು.01:19-21

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **17:02** ಕುರುಬನಾದ ದಾವೀದನು _ ಬೇತ್ಲೆಹೇಮ್_ ಪುರದವನಾಗಿದ್ದನು.
- **21:09** ಕನ್ಯಕೆಯ ಗರ್ಭದಿಂದ ಮೆಸ್ಸೆಯ ಹುಟ್ಟಿಬರುವನೆಂದು ಪ್ರವಾದಿಯಾದ ಯೆಶಾಯ ಪ್ರವಾದಿಸಿದರು. ಆತನು _ ಬೇತ್ಲೆಹೇಮ್_ ಪುರದಲ್ಲಿ ಹುಟ್ಟುವನೆಂದು ಪ್ರವಾದಿಯಾದ ಮೀಕನು ಪ್ರವಾದಿಸಿದರು.
- **23:04** ಯೋಸೇಫನು ಮತ್ತು ಮರಿಯಳು ನಜರೇತ್ ಎಂಬ ಊರಿನಿಂದ ಹೊರಟು **ಬೇತ್ಲೆಹೇಮೆಂಬ** ಊರಿಗೆ ಹೋದರು ಯಾಕಂದರೆ ಅವರ ಪುರ್ವಿಕನಾದ ದಾವೀದನು _ ಬೇತ್ಲೆಹೇಮ್_ ಪುರದವನಾಗಿದ್ದನು.
- **23:06** "ನಮ್ಮ ಮೆಸ್ಸಿಯ, ನಮ್ಮ ಒಡೆಯನು _ ಬೇತ್ಲೆಹೇಮಲ್ಲಿ_ ಹುಟ್ಟಿದನು.

ಪದ ಡೇಟಾ:

- Strong's: H376, H672, H1035, G965

ಬೇಥಾನ್ಯ

ಸತ್ಯಾಂಶಗಳು:

ಆಲೀವ್ ಎಣ್ಣೆಯ ಮರಗಳ ಗುಡ್ಡದ ಪೂರ್ವ ಗಟ್ಟ ಇಳಿಕೆಯಲ್ಲಿ ಬೇಥಾನ್ಯ ಪಟ್ಟಣವಿತ್ತು, ಅದು ಯೆರೂಸಲೇಮಿನಿಂದ ಪೂರ್ವಕ್ಕೆ ಸುಮಾರು 2 ಮೈಲುಗಳ ದೂರದಲ್ಲಿತ್ತು.

- ಯೆರೂಸಲೇಮ್ ಮತ್ತು ಯೆರಿಕೋ ಪಟ್ಟಣಗಳ ನಡುವೆ ಇದ್ದ ಮಾರ್ಗದ ಹತ್ತಿರ ಬೇಥಾನ್ಯ ಪಟ್ಟಣವಿತ್ತು.
- ಆತನ ಸನ್ನಿಹಿತ ಸ್ನೇಹಿತರಾದ ಲಾಜರ, ಮಾರ್ಥಳು ಮತ್ತು ಮರಿಯಳ ಜೀವಿಸುತ್ತಿದ ಬೇಥಾನ್ಯ ಪಟ್ಟಣವನ್ನು ಯೇಸು ಆಗಾಗ ಬೇಟಿನೀಡುತ್ತಿದ್ದರು.
- ಸತ್ತವರಿಂದ ಲಾಜರನನ್ನು ಯೇಸು ಎಬ್ಬಿಸಿದ ಸ್ಥಳವೆಂದು ಬೇಥಾನ್ಯ ಪ್ರಸಿದ್ಧಿ ಹೊಂದಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಯೆರಿಕೋ, ಯೆರೂಸಲೇಮ್, ಲಾಜರ, ಮಾರ್ಥಳು, ಮರಿಯ (ಮಾರ್ಥಳ ಸಹೋದರಿ), ಆಲೀವ್ ಎಣ್ಣೆಯ ಮರಗಳ ಗುಡ್ಡ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.01:26-28
- ಲೂಕ.24:50-51
- ಮಾರ್ಕ.11:1-3
- ಮತ್ತಾಯ.21:15-17

ಪದ ಡೇಟಾ:

- Strong's: G963

ಬೇರ್ಷೆಬ

ಸತ್ಯಾಂಶಗಳು:

ಹಳೆಯ ಒಡಂಬಡಿಕೆಯ ಕಾಲದಲ್ಲಿ, ನೆಗೆವ್ ಎಂದು ಈಗ ಕರೆಯಲ್ಪಡುವ ಮರುಭೂಮಿ ಇರುವ ಕ್ಷೇತ್ರದಲ್ಲಿ ಯೆರೂಸಲೇಮಿನಿಂದ 45ಮೈಲುಗಳ ದೂರದಲ್ಲಿ, ನೈಋತ್ಯ ದಿಶೆಯಲ್ಲಿ ಬೇರ್ಷೆಬ ಎಂಬ ಪಟ್ಟಣ ಇತ್ತು.

- ಅಬ್ರಹಾಮನು ಹಾಗರಳು ಮತ್ತು ಇಷ್ಮಾಯೇಲನನ್ನು ತನ್ನ ಗುಡಾರಗಳಿಂದ ಹೊರಗೆ ಕಳುಹಿಸಿದಾಗ ಅವರು ಸುತ್ತಿದ ಪ್ರಾಂತ್ಯವು ಬೇರ್ಷೆಬ ಸುತ್ತಲು ಇದ್ದ ಮರುಭೂಮಿ ಅರಣ್ಯ ಪ್ರಾಂತ್ಯವಾಗಿತ್ತು.
- ಈ ಪಟ್ಟಣದ ಹೆಸರಿಗೆ “ಒಪ್ಪಂದದ ಬಾವಿ” ಎಂದರ್ಥ. ಅಬೀಮೆಲೆಕನ ಮನುಷ್ಯರು ಅಬ್ರಹಾಮನ ಬಾವಿ ಒಂದನ್ನು ಸ್ವಾಧೀನಪಡಿಸಿಕೊಂಡರು ಆದಕಾರಣ ಅಬ್ರಹಾಮನು ಅವರನ್ನು ಶಿಕ್ಷಿಸುವದಿಲ್ಲವೆಂದು ಪ್ರಮಾಣ ಮಾಡಿದ ಕಾರಣ ಅದಕ್ಕೆ ಆ ಹೆಸರು ಕೊಡಲ್ಪಟ್ಟಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಬೀಮೆಲೆಕ, ಅಬ್ರಹಾಮ, ಹಾಗರಳು, ಇಷ್ಮಾಯೇಲನು, ಯೆರೂಸಲೇಮ್, ಪ್ರಮಾಣ)

===== ಸತ್ಯವೇದದ ಅನುಬಂಧ ವಾಕ್ಯಗಳು: =====

- 1 ಸಮು.03:19-21
- 2 ಸಮು.17:11-12
- ಆದಿ.21:14-16
- ಆದಿ.21:31-32
- ಆದಿ.46:1-4
- ನೆಹೆ.11:28-30

ಪದ ಡೇಟಾ:

- Strong's: H884

ಬೋವಜ

ಸತ್ಯಾಂಶಗಳು:

ಬೋವಜ ಇಸ್ರಾಯೇಲ್ ವ್ಯಕ್ತಿ. ಇವನು ರೂತಳ ಗಂಡ, ಅರಸನಾದ ದಾವೀದನ ಮುತ್ತಾತ, ಮತ್ತು ಯೇಸು ಕ್ರಿಸ್ತನ ಪೂರ್ವಜನೂ ಆಗಿದ್ದನು.

- ಇಸ್ರಾಯೇಲ್.ನಲ್ಲಿ ನ್ಯಾಯಾಧೀಶರು ಇರುವ ಕಾಲದಲ್ಲಿ ಬೋವಜನು ಜೀವಿಸಿದ್ದನು.
- ಈತನು ಇಸ್ರಾಯೇಲ್ ಸ್ತ್ರೀಯಳಾದ ನೊವೊಮಿಗೆ ನಂಟನಾಗಿದ್ದನು. ಈಕೆ ಮೋವಾಬ್ಯದಲ್ಲಿ ತನ್ನ ಗಂಡ ಮತ್ತು ಇಬ್ಬರು ಗಂಡು ಮಕ್ಕಳು ಸತ್ತುಹೋದನಂತರ ಇಸ್ರಾಯೇಲ್.ಗೆ ತಿರುಗಿ ಬಂದಿದ್ದಳು.
- ಬೋವಜನು ನೊವೊಮಿಯ ವಿಧವೆಯಾದ ಸೊಸೆ ರೂತಳನ್ನು ಮದುವೆ ಮಾಡಿಕೊಳ್ಳುವದರ ಮೂಲಕ ಆಕೆಗೆ "ವಿಮೋಚನೆ" ಕೊಟ್ಟನು. ಮತ್ತು ಆಕೆಗೆ ಗಂಡ, ಮಕ್ಕಳೊಂದಿಗೆ ಭವಿಷ್ಯತ್ತನ್ನು ಅನುಗ್ರಹಿಸಿದನು.
- ಪಾಪದಿಂದ ನಮ್ಮನ್ನು ಯೇಸು ಹೇಗೆ ಬಿಡಿಸುವನು ಮತ್ತು ಹೇಗೆ ರಕ್ಷಿಸುವನು ಎನ್ನುವದಕ್ಕೆ ಈತನು ಒಂದು ಸಾದೃಶ್ಯವಾಗಿರುತ್ತಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಮೋವಾಬ್ಯ, ವಿಮೋಚಿಸು, ರೂತಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:9-12
- 2 ಪೂರ್ವ.03:15-17
- ಲೂಕ.03:30-32
- ಮತ್ತಾಯ.01:4-6
- ರೂತಳು.02:3-4

ಪದ ಡೇಟಾ:

- Strong's: H1162

ಮಕೆದೋನ್ಯ

ಸತ್ಯಾಂಶಗಳು:

ಹೊಸ ಒಡಂಬಡಿಕೆಯ ಕಾಲದಲ್ಲಿ, ಮಕೆದೋನ್ಯ ಎನ್ನುವುದು ರೋಮಾ ಸೀಮೆಯಾಗಿತ್ತು, ಇದು ಪುರಾತನ ಗ್ರೀಸ್ ಉತ್ತರಭಾಗದಲ್ಲಿ ಕಂಡುಬರುತ್ತದೆ.

- ಸತ್ಯವೇದದಲ್ಲಿ ದಾಖಲಿಸಿದ ಕೆಲವೊಂದು ಪ್ರಾಮುಖ್ಯವಾದ ಮಕದೋನ್ಯ ಪಟ್ಟಣಗಳು - ಬೆರೋಯ, ಫಿಲಿಪ್ಪಿ, ಮತ್ತು ಥೆಸಲೋನಿಕ.
- ದರ್ಶನದ ಮೂಲಕ ಮಕದೋನ್ಯದಲ್ಲಿರುವ ಜನರಿಗೆ ಸುವಾರ್ತೆಯನ್ನು ಸಾರಬೇಕೆಂದು ದೇವರು ಪೌಲನಿಗೆ ಹೇಳಿದನು.
- ಪೌಲನು ಮತ್ತು ತನ್ನ ಜೊತೆ ಕೆಲಸಗಾರರು ಮಕದೋನ್ಯಕ್ಕೆ ಹೋದರು ಮತ್ತು ಅಲ್ಲಿರುವ ಜನರಿಗೆ ಯೇಸುವಿನ ಕುರಿತಾಗಿ ಹೇಳಿದರು ಮತ್ತು ಹೊಸ ವಿಶ್ವಾಸಿಗಳು ತಮ್ಮ ನಂಬಿಕೆಯಲ್ಲಿ ಅಥವಾ ವಿಶ್ವಾಸದಲ್ಲಿ ಬೆಳೆಯುವುದಕ್ಕೆ ಸಹಾಯ ಮಾಡಿದರು.
- ಸತ್ಯವೇದದಲ್ಲಿ ಮಕದೋನ್ಯ ಪಟ್ಟಣಗಳಾಗಿರುವ ಫಿಲಿಪ್ಪಿ ಮತ್ತು ಥೆಸಲೋನಿಕದಲ್ಲಿರುವ ವಿಶ್ವಾಸಿಗಳಿಗೆ ಪೌಲನು ಪತ್ರಿಕೆಗಳನ್ನು ಬರೆದಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನಂಬು, ಬೆರೋಯ, ವಿಶ್ವಾಸ, ಶುಭ ವಾರ್ತೆ, ಗ್ರೀಸ್, ಫಿಲಿಪ್ಪಿ, ಥೆಸಲೋನಿಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ.01:6-7
- 1 ಥೆಸ.04:9-12
- 1 ತಿಮೊಥೆ.01:3-4
- ಅಪೊ.ಕೃತ್ಯ.16:9-10
- ಅಪೊ.ಕೃತ್ಯ.20:1-3
- ಫಿಲಿಪ್ಪಿ.04:14-17

ಪದ ಡೇಟಾ:

- Strong's: G3109, G3110

ಮಗ್ದಲದ ಮರಿಯ

ಸತ್ಯಾಂಶಗಳು:

ಮಗ್ದಲದ ಮರಿಯಳು ಯೇಸುವಿನ ಸೇವೆಯಲ್ಲಿ ಆತನನ್ನು ಹಿಂಬಾಲಿಸಿದ ಮತ್ತು ಯೇಸುವಿನಲ್ಲಿ ನಂಬಿಕೆಯಿಟ್ಟಿರುವ ಅನೇಕಮಂದಿ ಸ್ತ್ರೀಯರಲ್ಲಿ ಒಬ್ಬಳಾಗಿದ್ದಳು. ಈಕೆಯಲ್ಲಿರುವ ಏಳು ದೆವ್ವಗಳನ್ನು ಯೇಸು ಹೋಗಲಾಡಿಸಿ ಆಕೆಗೆ ಬಿಡುಗಡೆಯನ್ನು ಕೊಟ್ಟಿದ್ದನು, ಹೀಗೆ ಆಕೆ ಪ್ರಸಿದ್ಧಿಯಾಗಿದ್ದಳು.

- ಮಗ್ದಲದ ಮರಿಯಳು ಮತ್ತು ಇತರ ಬೇರೆ ಸ್ತ್ರೀಯರು ಯೇಸುವಿಗೆ ಮತ್ತು ಆತನ ಶಿಷ್ಯರಿಗೆ ಕೊಡುವುದರ ಮೂಲಕ ಹೆಚ್ಚಾಗಿ ಸಹಾಯ ಮಾಡಿದ್ದರು.
- ಯೇಸುವು ಮರಣದಿಂದ ಎಬ್ಬಿಸಲ್ಪಟ್ಟಾಗ ಆತನನ್ನು ಮೊಟ್ಟ ಮೊದಲಾಗಿ ನೋಡಿದ ಸ್ತ್ರೀಯರಲ್ಲಿ ಈಕೆಯು ಒಬ್ಬಳೆಂದು ದಾಖಲಿಸಿದ್ದಾರೆ.
- ಮಗ್ದಲದ ಮರಿಯಳು ಸಮಾಧಿಯ ಹೊರಗಡೆ ನಿಂತುಕೊಂಡಿರುವಾಗಲೇ ಆಕೆ ಯೇಸು ನಿಂತಿರುವುದನ್ನು ನೋಡಿದಳು ಮತ್ತು ಆತನು ಆಕೆಗೆ ನೀನು ಇತರ ಶಿಷ್ಯರ ಹತ್ತಿರ ಹೋಗಿ ಆತನು ಎದ್ದಿದ್ದಾನೆಂದು ಪ್ರಕಟಿಸು ಎಂದು ಹೇಳಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೆವ್ವ, ದೆವ್ವ-ಹಿಡಿಯಲ್ಪಟ್ಟವರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.08:1-3
- ಲೂಕ.24:8-10
- ಮಾರ್ಕ.15:39-41
- ಮತ್ತಾಯ.27:54-56

ಪದ ಡೇಟಾ:

- Strong's: G3094, G3137

ಮತಾಭಿಮಾನಿ ಎಂದು ಹೆಸರುಗೊಂಡ ಸೀಮೋನ

ಸತ್ಯಾಂಶಗಳು:

ಮತಾಭಿಮಾನಿ ಎಂದು ಹೆಸರುಗೊಂಡ ಸೀಮೋನನು ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾಗಿದ್ದನು.

- ಸೀಮೋನನ ಹೆಸರು ಯೇಸುವಿನ ಹನ್ನೆರಡು ಮಂದಿ ಶಿಷ್ಯರ ಪಟ್ಟಿಗಳಲ್ಲಿ ಮೂರು ಬಾರಿ ದಾಖಲು ಮಾಡಲಾಗಿರುತ್ತದೆ, ಆದರೆ ತನ್ನ ಕುರಿತಾಗಿ ಸ್ವಲ್ಪ ಮಾಹಿತಿ ಮಾತ್ರವೇ ಇರುತ್ತದೆ.
- ಯೇಸುವು ಪರಲೋಕಕ್ಕೆ ಹಿಂದಿರುಗಿ ಹೋದಾಗ ಯೆರೂಸಲೇಮಿನಲ್ಲಿ ಪ್ರಾರ್ಥನೆ ಮಾಡುವುದಕ್ಕೆ ಭೇಟಿಯಾಗಿರುವ ಹನ್ನೊಂದು ಮಂದಿಯಲ್ಲಿ ಸೀಮೋನನು ಒಬ್ಬನಾಗಿದ್ದನು.
- “ಜೆಲೋತೆ” ಎನ್ನುವ ಪದವು ಸೀಮೋನನು “ಜೆಲೋತೆಯರಲ್ಲಿ” ಸದಸ್ಯನಾಗಿರಬಹುದು, ಯೆಹೂದ್ಯರ ಮತಾಭಿಮಾನಿಗಳ ಪಕ್ಷವು ಮೋಶೆಯ ಧರ್ಮಶಾಸ್ತ್ರವನ್ನು ಎತ್ತಿ ಹಿಡಿಯುವುದರಲ್ಲಿ ತುಂಬಾ ರೋಷವುಳ್ಳವರಾಗಿದ್ದರು, ಇವರು ರೋಮಾ ಸರ್ಕಾರವನ್ನು ಹೆಚ್ಚಾಗಿ ವಿರೋಧಿಸುತ್ತಿದ್ದರು.
- ಅಥವಾ, “ಜೆಲೋತೆ” ಎನ್ನುವ ಪದಕ್ಕೆ “ರೋಷವುಳ್ಳ ವ್ಯಕ್ತಿ” ಎಂದರ್ಥವಾಗಿರುತ್ತದೆ, ಇದು ಸೀಮೋನನ ಮತಾಭಿಮಾನವನ್ನು ಸೂಚಿಸುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲರ, ಶಿಷ್ಯ, ಹನ್ನೆರಡು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.01:12-14
- ಲೂಕ.06:14-16
- ಮಾರ್ಕ.03:17-19

ಪದ ಡೇಟಾ:

- Strong's: G2208, G2581, G4613

ಮತ್ತಾಯ, ಲೇವಿ

ಸತ್ಯಾಂಶಗಳು:

ಮತ್ತಾಯ ಎನ್ನುವ ವ್ಯಕ್ತಿ ಯೇಸು ತನ್ನ ಶಿಷ್ಯರನ್ನಾಗಿ ಆಯ್ಕೆ ಮಾಡಿಕೊಂಡಿರುವ ಹನ್ನೆರಡು ಮಂದಿಯಲ್ಲಿ ಒಬ್ಬನಾಗಿದ್ದನು. ಈತನನ್ನು ಅಲ್ಫಾಯ ಮಗನಾದ ಲೇವಿ ಎಂದೂ ಕರೆಯುತ್ತಿದ್ದರು.

- ಲೇವಿ (ಮತ್ತಾಯ) ಯೇಸುವನ್ನು ಭೇಟಿ ಮಾಡುವುದಕ್ಕೆ ಮುಂಚಿತವಾಗಿ ಕಪೆರ್ನೌಮದಲ್ಲಿ ಸುಂಕದವನಾಗಿದ್ದನು.
- ಮತ್ತಾಯನು ತನ್ನ ಹೆಸರನ್ನು ಹೊಂದಿರುವ ಸುವಾರ್ತೆಯನ್ನು ಬರೆದನು.
- ಸತ್ಯವೇದದಲ್ಲಿ ಲೇವಿ ಎನ್ನುವ ಹೆಸರಿನ ಮೇಲೆ ಅನೇಕಮಂದಿ ವ್ಯಕ್ತಿಗಳಿದ್ದಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ಲೇವಿ, ಸುಂಕದವನು)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.05:27-28
- ಲೂಕ.06:14-16
- ಮಾರ್ಕ.02:13-14
- ಮಾರ್ಕ.03:17-19
- ಮತ್ತಾಯ.09:7-9
- ಮತ್ತಾಯ.10:2-4

ಪದ ಡೇಟಾ:

- Strong's: G3017, G3156

ಮನಸ್ಸೆ

ಸತ್ಯಾಂಶಗಳು:

ಮನಸ್ಸೆ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಐದು ಮಂದಿ ಪುರುಷರು ಇದ್ದಾರೆ.

- ಮನಸ್ಸೆ ಎನ್ನುವವನು ಯೋಸೇಫನ ಚೊಚ್ಚಲ ಮಗನ ಹೆಸರಾಗಿರುತ್ತದೆ.
- ಮನಸ್ಸೆ ಮತ್ತು ತನ್ನ ಚಿಕ್ಕ ತಮ್ಮನಾದ ಎಫ್ರಾಯಿಮರಿಬ್ಬರನ್ನು ಯೋಸೇಫನ ತಂದೆ ದತ್ತು ತೆಗೆದುಕೊಂಡಿರುತ್ತಾನೆ, ಯಾಕೋಬನು ಇಸ್ರಾಯೇಲ್ ಹನ್ನೆರಡು ಕುಲಗಳಲ್ಲಿರುವದಕ್ಕೆ ಅವರ ಸಂತಾನದವರಿಗೆ ಧನ್ಯತೆಯನ್ನು ಕೊಟ್ಟಿದ್ದನು.
- ಮನಸ್ಸೆ ಸಂತಾನದವರು ಇಸ್ರಾಯೇಲ್ ಕುಲಗಳಲ್ಲಿ ಒಂದು ಕುಲವಾಗಿ ಮಾರ್ಪಟ್ಟರು.
- ಮನಸ್ಸೆ ಕುಲವನ್ನು “ಮನಸ್ಸೆ ಅರ್ಧ ಕುಲ” ಎಂಬುದಾಗಿ ಕರೆಯಲ್ಪಟ್ಟರು, ಯಾಕಂದರೆ ಕುಲದ ಅರ್ಧ ಭಾಗವು ಯೊರ್ಧನ್ ನದಿಯ ಪಶ್ಚಿಮ ಭಾಗದಲ್ಲಿರುವ ಕಾನಾನ್ ಭೂಮಿಯಲ್ಲಿ ಸ್ಥಿರಪಟ್ಟರು. ಕುಲದಲ್ಲಿರುವ ಇನ್ನೊಂದು ಭಾಗವು ಯೊರ್ಧನ್ ಪೂರ್ವ ಕಡೆಗೆ ಸ್ಥಿರಪಟ್ಟರು.
- ಯೆಹೂದ ಅರಸರಲ್ಲಿ ಒಬ್ಬನು ಮನಷ್ಷೆ ಎನ್ನುವ ಹೆಸರಿನ ಮೇಲೆ ಇದ್ದಾನೆ.
- ಅರಸನಾದ ಮನಸ್ಸೆ ದುಷ್ಟ ಅರಸನಾಗಿದ್ದನು, ಇವನು ಸುಳ್ಳು ದೇವರುಗಳಿಗೆ ದಹನ ಬಲಿ ಅರ್ಪಣೆಗಳಾಗಿ ತನ್ನ ಸ್ವಂತ ಮಕ್ಕಳನ್ನು ಸರ್ವಾಂಗಹೋಮವನ್ನಾಗಿ ಅರ್ಪಿಸಿದನು.
- ಶತ್ರುವಿನ ಸೈನ್ಯದಿಂದ ಮನಸ್ಸೆಯ ಮೇಲೆ ಧಾಳಿ ಮಾಡುವುದಕ್ಕೆ ಅನುಸರಿಸುವುದರಿಂದ ದೇವರು ಅರಸನಾದ ಮನಸ್ಸೆಯನ್ನು ಶಿಕ್ಷಿಸಿದನು. ಮನಸ್ಸೆ ದೇವರ ಕಡೆಗೆ ತಿರುಗಿಕೊಂಡನು ಮತ್ತು ಆರಾಧಿಸಲ್ಪಡುವ ವಿಗ್ರಹಗಳಿರುವ ಸ್ಥಳಗಳನ್ನೆಲ್ಲಾ ನಾಶಗೊಳಿಸಿದನು.
- ಮನಸ್ಸೆ ಇರುವ ಇಬ್ಬರು ವ್ಯಕ್ತಿಗಳು ಎಜ್ರಾನ ಕಾಲದಲ್ಲಿ ಜೀವಿಸುತ್ತಿದ್ದರು. ಈ ಮನುಷ್ಯರೆಲ್ಲರು ಸುಳ್ಳು ದೇವರಗಳನ್ನು ಆರಾಧನೆ ಮಾಡುವುದಕ್ಕೆ ಪ್ರೇರೇಪಿಸಿದ ತಮ್ಮ ಅನ್ಯ ಹೆಂಡತಿಯರೊಂದಿಗೆ ವಿಚ್ಛೇದನ ಪತ್ರಗಳನ್ನು ಕೊಡಬೇಕಾದ ಅವಶ್ಯಕತೆವಿರುತ್ತದೆ.
- ಮನಸ್ಸೆ ಎನ್ನುವ ಇನ್ನೊಬ್ಬ ವ್ಯಕ್ತಿ ಸುಳ್ಳು ದೇವರುಗಳಿಗೆ ಯಾಜಕರಾಗಿರುವ ಕೆಲವುಮಂದಿ ದಾನೀಯರ ತಾತನಾಗಿರುತ್ತಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯಜ್ಞವೇದಿ, ದಾನ್, ಎಫ್ರಾಯೀಮ್, ಎಜ್ರಾ, ಸುಳ್ಳು ದೇವರು, ಯಾಕೋಬ, ಯೆಹೂದ, ಅನ್ಯ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.15:8-9
- ಧರ್ಮೋ.03:12-13
- ಆದಿ.41:50-52
- ಆದಿ.48:1-2
- ನ್ಯಾಯಾ.01:27-28

ಪದ ಡೇಟಾ:

- Strong's: H4519, H4520, G3128

ಮರಿಯ (ಮಾರ್ಥಳ ಸಹೋದರಿ)

ಸತ್ಯಾಂಶಗಳು:

ಮರಿಯಳು ಯೇಸುವನ್ನು ಹಿಂಬಾಲಿಸಿದ ಬೇಥಾನ್ಯದ ಸ್ತ್ರೀಯಳಾಗಿದ್ದಳು.

- ಮರಿಯಳಿಗೆ ಮಾರ್ಥ ಎನ್ನುವ ಸಹೋದರಿ ಮತ್ತು ಲಾಜರನೆಂಬ ಸಹೋದರನಿದ್ದನು, ಇವರು ಕೂಡ ಯೇಸುವಿನ ಹಿಂಬಾಲಕರಾಗಿದ್ದರು.
- ಮಾರ್ಥಳಂತೆ ಅಡಿಗೆ ಸಿದ್ಧಗೊಳಿಸಬೇಕೆನ್ನುವದರ ಕುರಿತಾದ ಆಸಕ್ತಿಗಿಂತಲೂ ಯೇಸುವಿನ ಬೋಧನೆಯನ್ನು ಕೇಳುವುದಕ್ಕೆ ಮರಿಯಳು ಆಯ್ಕೆ ಮಾಡಿಕೊಂಡದ್ದು ತುಂಬಾ ಉತ್ತಮವಾದ ಆಯ್ಕೆ ಎಂಬುದಾಗಿ ಯೇಸು ಮರಿಯಳ ಕುರಿತಾಗಿ ಒಂದುಸಲ ಸಾಕ್ಷಿ ಹೇಳಿದ್ದನು.
- ಯೇಸು ಮರಿಯಳ ಸಹೋದರನಾದ ಲಾಜರನನ್ನು ತಿರುಗಿ ಬದುಕಿಸಿದನು.
- ಇದಾದ ಸ್ವಲ್ಪ ಸಮಯದನಂತರ, ಬೇಥಾನ್ಯದಲ್ಲಿ ಬೇರೊಬ್ಬರ ಮನೆಯಲ್ಲಿ ಯೇಸು ಊಟ ಮಾಡುತ್ತಿರುವಾಗ, ಮರಿಯಳು ಆತನನ್ನು ಆರಾಧನೆ ಮಾಡುವ ಕ್ರಮದಲ್ಲಿ ಆತನ ಪಾದಗಳ ಮೇಲೆ ತುಂಬಾ ಬೆಲೆಯುಳ್ಳ ಸುಗಂಧ ದ್ರವ್ಯವನ್ನು ಸುರಿಸಿದಳು.
- ಆಕೆ ಮಾಡಿದ ಈ ಕಾರ್ಯಕ್ಕಾಗಿ ಯೇಸು ಸ್ತುತಿಸಿದನು ಮತ್ತು ಆಕೆ ತನ್ನ ಶರೀರವನ್ನು ಸಮಾಧಿಗೆ ಸಿದ್ಧ ಮಾಡುತ್ತಿದ್ದಾಳೆಂದು ಹೇಳಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೇಥಾನ್ಯ, ಸಾಂಬ್ರಾಣಿ, ಲಾಜರ, ಮಾರ್ಥ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.11:1-2
- ಯೋಹಾನ.12:1-3
- ಲೂಕ.10:38-39

ಪದ ಡೇಟಾ:

- Strong's: G3137

ಮರಿಯಳು, ಯೇಸುವಿನ ತಾಯಿ

ಸತ್ಯಾಂಶಗಳು:

ಮರಿಯಳು ಯೋಸೇಫ ಎನ್ನುವ ವ್ಯಕ್ತಿಯನ್ನು ವಿವಾಹ ಮಾಡಿಕೊಳ್ಳುವುದಕ್ಕೆ ನಿಶ್ಚಿತಾರ್ಥ ಮಾಡಿಕೊಂಡು ನಜರೆತ್ ಪಟ್ಟಣದಲ್ಲಿ ಜೀವಿಸುತ್ತಿರುವ ಒಬ್ಬ ಯೌವ್ವನ ಸ್ತ್ರೀಯಳಾಗಿದ್ದಳು. ದೇವರ ಮಗನಾಗಿರುವ, ಮೆಸ್ಸೀಯನಾಗಿರುವ ಯೇಸುವಿನ ತಾಯಿಯಾಗಿರುವುದಕ್ಕೆ ದೇವರು ಮರಿಯಳನ್ನು ಆಯ್ಕೆ ಮಾಡಿಕೊಂಡಿದ್ದರು.

- ಮರಿಯಳು ಕನ್ಯೆಯಾಗಿದ್ದಾಗ ಗರ್ಭಿಣಿಯಾಗುವುದಕ್ಕೆ ಪವಿತ್ರಾತ್ಮನು ಅದ್ಭುತವಾಗಿ ಕೆಲಸ ಮಾಡಿದನು.
- ದೇವರ ಮಗನಾಗಿರುವ ಒಬ್ಬ ಗಂಡು ಮಗು ಆಕೆಗೆ ಹುಟ್ಟುತ್ತಾನೆ ಮತ್ತು ಆಕೆ ಆತನಿಗೆ ಯೇಸು ಎಂದು ಹೆಸರಿಡ ಬೇಕೆಂದು ದೂತನು ಮರಿಯಳಿಗೆ ಹೇಳಿದನು.
- ಮರಿಯಳು ದೇವರನ್ನು ಪ್ರೀತಿಸಿದಳು ಮತ್ತು ಆಕೆಯ ಮೇಲೆ ಕೃಪೆಯನ್ನು ತೋರಿಸಿದ್ದಕ್ಕಾಗಿ ಆತನನ್ನು ಘನಪಡಿಸಿದಳು.
- ಯೋಸೇಫನು ಮರಿಯಳನ್ನು ವಿವಾಹ ಮಾಡಿಕೊಂಡನು, ಆದರೆ ಆಕೆ ಮಗುವಿಗೆ ಜನನವನ್ನು ಕೊಡುವವರೆಗೂ ಕನ್ಯೆಕೆಯಾಗಿ ಇದ್ದುಕೊಂಡಿದ್ದಳು.
- ಕುರುಬರು ಮತ್ತು ಜೋಯಿಸರು ಶಿಶುವಾಗಿರುವ ಯೇಸುವಿನ ಕುರಿತಾಗಿ ಹೇಳಿರುವ ಅನೇಕ ಅದ್ಭುತ ವಿಷಯಗಳ ಕುರಿತಾಗಿ ಮರಿಯಳು ಆಳವಾಗಿ ಆಲೋಚನೆ ಮಾಡಿದಳು.
- ಮರಿಯಳು ಮತ್ತು ಯೋಸೇಫನು ಶಿಶುವಾಗಿರುವ ಯೇಸುವನ್ನು ಎತ್ತಿಕೊಂಡು ಪ್ರತಿಷ್ಠೆ ಮಾಡುವುದಕ್ಕೆ ದೇವಾಲಯಕ್ಕೆ ಹೋದರು. ಇದಾದನಂತರ ಆ ಶಿಶುವನ್ನು ಸಾಯಿಸಬೇಕೆನ್ನುವ ಅರಸನಾದ ಹೆರೋದನ ಪ್ರಣಾಳಿಕೆಯಿಂದ ತಪ್ಪಿಸಿಕೊಳ್ಳಲು ಆತನನ್ನು ಎತ್ತಿಕೊಂಡು ಐಗುಪ್ತಕ್ಕೆ ಹೋದರು. ಕೊನೆಗೆ ಅವರು ತಿರುಗಿ ನಜರೇತಿಗೆ ಹಿಂದುರಿಗೆ ಹೋದರು.
- ಯೇಸು ದೊಡ್ಡವನಾಗಿರುವಾಗ ಕಾನಾ ಎನ್ನುವ ಊರಿನಲ್ಲಿ ನಡೆದ ವಿವಾಹದಲ್ಲಿ ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದಾಗ ಮರಿಯಳು ಆತನೊಂದಿಗೆ ಇದ್ದುಕೊಂಡಿದ್ದಳು.
- ಯೇಸು ಶಿಲುಬೆಯಲ್ಲಿ ಮರಣಿಸುತ್ತಿರುವ ಸಮಯದಲ್ಲಿ ಮರಿಯಳು ಆ ಶಿಲುಬೆಯ ಹತ್ತಿರವೇ ಇದ್ದುಕೊಂಡಿದ್ದಳೆಂದು ಸುವಾರ್ತೆಗಳು ಕೂಡ ದಾಖಲಿಸಿವೆ. ಯೇಸು ತನ್ನ ಶಿಷ್ಯನಾದ ಯೋಹಾನನಿಗೆ ಮರಿಯಳನ್ನು ತನ್ನ ಸ್ವಂತ ತಾಯಿಯಂತೆ ನೋಡಿಕೊಳ್ಳಬೇಕೆಂದು ಹೇಳಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾ, ಐಗುಪ್ತ, ಮಹಾ ಹೆರೋದ, ಯೇಸು, ಯೋಸೇಫ, ದೇವರ ಮಗ, ಕನ್ಯೆಕೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.02:3-5
- ಯೋಹಾನ.02:12
- ಲೂಕ.01:26-29
- ಲೂಕ.01:34-35
- ಮಾರ್ಕ.06:1-3
- ಮತ್ತಾಯ.01:15-17
- ಮತ್ತಾಯ.01:18-19

ಸತ್ಯವೇದದಿಂದ ಉದಾಹರಣೆಗಳು:

- **22:04** ಎಲಿಸಬೇತಳು ಆರು ತಿಂಗಳು ಗರ್ಭಿಣಿಯಾಗಿದ್ದಾಗ, ಅದೇ ದೂತನು ಎಲಿಸಬೇತಳ ಬಂಧುವಾಗಿರುವ _ **ಮರಿಯ** _ ಎನ್ನುವ ಆಕೆಯನ್ನು ಸಂದರ್ಶಿಸಿದ್ದನು. ಆಕೆ ಕನ್ಯೆಕೆಯಾಗಿದ್ದಳು ಮತ್ತು ಯೋಸೇಫ ಎನ್ನುವ ವ್ಯಕ್ತಿಯೊಂದಿಗೆ ವಿವಾಹಕ್ಕಾಗಿ ನಿಶ್ಚಿತಾರ್ಥ ಮಾಡಿಕೊಂಡಿದ್ದಳು. “ನೀನು ಗರ್ಭಿಣಿಯಾಗುವಿ ಮತ್ತು ಒಬ್ಬ ಗಂಡು ಶಿಶುವಿಗೆ ಜನನವನ್ನು ಕೊಡುವಿ, ನೀನು ಆ ಶಿಶುವಿಗೆ ಯೇಸು ಎಂದು ಹೆಸರಿಡಬೇಕು ಮತ್ತು ಆತನು ಮೆಸ್ಸೀಯನಾಗಿರುವನು” ಎಂದು ದೂತ ಹೇಳಿದನು.
- **22:05** “ಪವಿತ್ರಾತ್ಮನು ನಿನ್ನ ಮೇಲಕ್ಕೆ ಬರುವನು, ಮತ್ತು ದೇವರ ಶಕ್ತಿಯು ನಿನ್ನನ್ನು ಆವರಿಸುವುದು” ಎಂದು ದೂತನು ಹೇಳಿದನು. ಆದ್ದರಿಂದ ಶಿಶುವು ಪರಿಶುದ್ಧನಾಗಿರುವನು, ದೇವರ ಮಗನಾಗಿರುವನು.” ಎಂದು ದೂತನು ವಿವರಿಸಿದನು, ಆಗ _ **ಮರಿಯಳು** _ ಆ ಮಾತುಗಳನ್ನು ನಂಬಿ, ದೂತನು ಹೇಳಿದ ಪ್ರತಿಯೊಂದು ಮಾತನ್ನು ಸ್ವೀಕರಿಸಿದಳು.
- **22:06** ದೂತನು _ ಮರಿಯಳೊಂದಿಗೆ _ ಮಾತನಾಡಿದ ತಕ್ಷಣವೇ, ಆಕೆ ಹೊರಟು ಹೋಗಿ ಎಲಿಸಬೇತಳನ್ನು ಸಂದರ್ಶಿಸಿದಳು. _ **ಮರಿಯಳ** _ ಶುಭವಚನವನ್ನು ಎಲಿಸಬೇತಳು ಕೇಳಿಸಿಕೊಂಡ ತಕ್ಷಣವೇ, ಎಲಿಸಬೇತಳ ಗರ್ಭದಲ್ಲಿರುವ ಶಿಶುವು ಜಿಗಿಯುವುದಕ್ಕೆ ಆರಂಭಿಸಿತು.
- **23:02** “ಯೋಸೇಫನೇ, _ **ಮರಿಯಳನ್ನು** _ ನಿನ್ನ ಹೆಂಡತಿಯನ್ನಾಗಿ ಸ್ವೀಕರಿಸುವುದಕ್ಕೆ ಹೆದರಬೇಡ, ತನ್ನ ದೇಹದಲ್ಲಿರುವ ಶಿಶುವು ಪವಿತ್ರಾತ್ಮನಿಂದ ಬಂದಿದವನಾಗಿರುತ್ತಾನೆ” ಎಂದು ದೂತನು ಹೇಳಿದನು.
- **23:04** ಯೋಸೇಫನು ಮತ್ತು _ **ಮರಿಯಳು** _ ಅವರು ನಿವಾಸವಾಗಿರುವ ನಜರೇತಿನಿಂದ ಬೆತ್ಲೆಹೇಮಿಗೆ ದೂರ ಪ್ರಯಾಣ ಮಾಡಿದ್ದರು, ಯಾಕಂದರೆ ಅವರ ಪೂರ್ವಿಕರಾದ ದಾವೀದನ ಊರು ಬೆತ್ಲೆಹೇಮ್ ಆಗಿತ್ತು.

- **49:01** _ **ಮರಿಯಳು** _ ದೇವರ ಮಗನಿಗೆ ಜನನ ಕೊಡುತ್ತಾಳೆಂದು ಆ ದೂತನು ಕನ್ಯೆಯಾದ ಅವಳಿಗೆ ಹೇಳಿದನು. ಆದ್ದರಿಂದ ಆಕೆ ಇನ್ನೂ ಕನ್ಯೆಕೆಯಾಗಿದ್ದಾಗಲೇ, ಆಕೆ ಒಬ್ಬ ಗಂಡು ಮಗನಿಗೆ ಜನನವನ್ನು ಕೊಟ್ಟಳು ಮತ್ತು ಆ ಶಿಶುವಿಗೆ ಯೇಸು ಎಂದು ಹೆಸರಿಟ್ಟರು.

ಪದ ಡೇಟಾ:

- Strong's: G3137

ಮಲಾಕಿ

ಸತ್ಯಾಂಶಗಳು:

ಮಲಾಕಿ ಎನ್ನುವ ವ್ಯಕ್ತಿ ಯೆಹೂದ ರಾಜ್ಯಕ್ಕೆ ಬಂದ ದೇವರ ಪ್ರವಾದಿಗಳಲ್ಲಿ ಒಬ್ಬನಾಗಿರುತ್ತಾನೆ. ಈತನು ಕ್ರಿಸ್ತನು ಈ ಭೂಮಿ ಮೇಲಕ್ಕೆ ಬರುವುದಕ್ಕೆ ಮುಂಚಿತ 500 ವರ್ಷಗಳ ಹಿಂದೆ ಜೀವಿಸುವವನಾಗಿರುತ್ತಾನೆ.

- ಬಾಬೆಲೋನಿಯ ಸೆರೆಯಿಂದ ತಿರುಗಿಬಂದನಂತರ ಇಸ್ರಾಯೇಲಿನ ದೇವಾಲಯವನ್ನು ತಿರುಗಿ ನಿರ್ಮಿಸಿದ ಕಾಲದಲ್ಲಿ ಮಲಾಕಿ ಪ್ರವಾದಿಸಿದ್ದನು.
- ಎಜ್ರಾ ಮತ್ತು ನೆಹೆಮೀಯರು ಜೀವಿಸಿದ ಕಾಲದಲ್ಲಿ ಮಲಾಕಿಯ ಕಾಲದಲ್ಲಿ ಜೀವಿಸುವವನಾಗಿದ್ದನು.
- ಮಲಾಕಿಯ ಗ್ರಂಥವು ಹಳೇ ಒಡಂಬಡಿಕೆಯ ಕೊನೆಯ ಪುಸ್ತಕವಾಗಿರುತ್ತದೆ.
- ಇನ್ನಿತರ ಹಳೇ ಒಡಂಬಡಿಕೆಯ ಪ್ರವಾದಿಗಳಂತೆಯೇ ಮಲಾಕಿಯು ಕೂಡ ಯೆಹೋವನನ್ನು ಆರಾಧಿಸುವುದಕ್ಕೆ ಹಿಂದಿರುಗಿ ಬರಲು ತಮ್ಮ ಪಾಪಗಳ ವಿಷಯದಲ್ಲಿ ಪಶ್ಚಾತಾಪ ಹೊಂದುವುದಕ್ಕೆ ಜನರನ್ನು ಎಚ್ಚರಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ಸೆರೆ, ಎಜ್ರಾ, ಯೆಹೂದ, ನೆಹೆಮೀಯ, ಪ್ರವಾದಿ, ಪಶ್ಚಾತ್ತಾಪ, ತಿರುಗಿಕೋ)

ಸತ್ಯವೇದದ ಅನುಬಂಧ ವಾಕ್ಯಗಳು :

- ಮಲಾಕಿ.01:1-3

ಪದ ಡೇಟಾ:

- Strong's: H4401

ಮಹಾ ಹೆರೋದ್

ಸತ್ಯಾಂಶಗಳು:

ಮಹಾ ಹೆರೋದ್ ಯೇಸು ಹುಟ್ಟಿದ ಸಮಯದಲ್ಲಿ ಯೂದಾಯವನ್ನು ಆಳುತ್ತಿದ್ದನು. ಇವನೇ ಅನೇಕಮಂದಿ ಎದೋಮಿಯರ ಪಾಲಕರಲ್ಲಿ ಮೊಟ್ಟಮೊದಲನೇಯವನಾಗಿದ್ದನು, ಹೆರೋದ್ ಎನ್ನುವ ಹೆಸರಿನ ಮೇಲೆ ರೋಮಾ ಸಾಮ್ರಾಜ್ಯದ ಎಲ್ಲಾ ಭಾಗಗಳನ್ನು ಆಳ್ವಿಕೆ ಮಾಡಿದ್ದನು.

- ಇವನ ಪೂರ್ವಿಕರು ಯೆಹೂದ್ಯ ಮತದಲ್ಲಿ ಸೇರಿದ್ದರು ಮತ್ತು ಇವನು ಯೆಹೂದ್ಯನಾಗಿಯೇ ಬೆಳೆದಿದ್ದನು.
- ಇವನು ಅರಸನಾಗದಿದ್ದರೂ ಚಕ್ರವರ್ತಿಯಾದ ಅಗಸ್ತನು ಇವನಿಗೆ “ಅರಸನಾದ ಹೆರೋದ್” ಎಂದು ಹೆಸರಿಟ್ಟನು. ಇವನು ಯೂದಾಯದಲ್ಲಿ ಸುಮಾರು 33 ವರ್ಷಗಳ ಕಾಲ ಯೆಹೂದ್ಯರ ಮೇಲೆ ಆಳ್ವಿಕೆ ಮಾಡಿದನು.
- ಮಹಾ ಹೆರೋದನು ತಾನು ನಿರ್ಮಿಸಬೇಕೆಂದು ಆಜ್ಞಾಪಿಸಿದ ಅನೇಕವಾದ ಸುಂದರ ಭವನಗಳಿಗೆ ಹೆಸರುವಾಸಿಯಾಗಿದ್ದನು ಮತ್ತು ಯೆರೂಸಲೇಮಿನಲ್ಲಿರುವ ಯೆಹೂದ್ಯರ ಆಲಯವನ್ನು ತಿರುಗಿ ನಿರ್ಮಿಸಿದ್ದನು.
- ಈ ಹೆರೋದ್ ತುಂಬಾ ಕ್ರೂರಿಯಾಗಿದ್ದನು ಮತ್ತು ಅನೇಕ ಜನರನ್ನು ಸಾಯಿಸಿದ್ದನು. “ಯೆಹೂದ್ಯರ ಅರಸನು” ಬೆತ್ಲೆಹೇಮಿನಲ್ಲಿ ಜನಿಸಿದ್ದಾನೆಂದು ಇವನು ಕೇಳಿಸಿಕೊಂಡಾಗ, ಆ ಪಟ್ಟಣದಲ್ಲಿರುವ ಎಲ್ಲಾ ಗಂಡು ಶಿಶುಗಳನ್ನು ಕೊಂದುಹಾಕಿಸಿದನು.
- ತನ್ನ ಗಂಡು ಮಕ್ಕಳಾದ ಹೆರೋದ್ ಅಂತಿಪ ಮತ್ತು ಹೆರೋದ್ ಫಿಲಿಪ್ ಮತ್ತು ತನ್ನ ಮೊಮ್ಮೊಗನಾದ ಹೆರೋದ್ ಅಗ್ರಿಪ್ಪನು ಕೂಡ ರೋಮಾ ಪಾಲಕರಾಗಿದ್ದರು. ತನ್ನ ಮರಿ ಮೊಮ್ಮೊಗ ಹೆರೋದ್ ಅಗ್ರಿಪ್ಪ II (“ಅರಸನಾದ ಅಗ್ರಿಪ್ಪ” ಎಂದು ಕರೆಯಲ್ಪಡುವ ವ್ಯಕ್ತಿ) ಯೂದಾಯದ ಎಲ್ಲಾ ಭಾಗಗಳನ್ನು ಆಳಿದನು.

(ನೋಡಿರಿ: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ: ಹೆರೋದ್ ಅಂತಿಪ, ಯೂದಾಯ, ಅರಸ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು:

- ಮತ್ತಾಯ.02:1-3
- ಮತ್ತಾಯ.02:11-12
- ಮತ್ತಾಯ.02:16
- ಮತ್ತಾಯ.02:19-21
- ಮತ್ತಾಯ.02:22-23

ಪದ ಡೇಟಾ:

- Strong's: G2264

ಮಾಕಾ

ಸತ್ಯಾಂಶಗಳು:

ಮಾಕಾ (ಅಥವಾ ಮಾಖ) ಅಬ್ರಾಹಾಮನ ಸಹೋದರನಾದ ನಾಹೋರನ ಮಕ್ಕಳಲ್ಲಿ ಒಬ್ಬನಾಗಿದ್ದನು. ಹಳೇ ಒಡಂಬಡಿಕೆಯಲ್ಲಿ ಈ ಹೆಸರಿನ ಮೇಲೆ ಅನೇಕರಿದ್ದಾರೆ.

- ಮಾಕಾ ಪಟ್ಟಣ ಅಥವಾ ಬೆತ್ ಮಾಕಾ ಎನ್ನುವುದು ನಫ್ತಾಲಿ ಕುಲದಿಂದ ವಶಪಡಿಸಿಕೊಂಡಿರುವ ಸೀಮೆಯಲ್ಲಿ, ಅಂದರೆ ಇಸ್ರಾಯೇಲ್ ಉತ್ತರ ಭಾಗದಲ್ಲಿ ಕಂಡುಬರುತ್ತದೆ,
- ಇದು ತುಂಬಾ ಪ್ರಾಮುಖ್ಯವಾದ ಪಟ್ಟಣವಾಗಿರುತ್ತದೆ ಮತ್ತು ಅನೇಕ ಸಂದರ್ಭಗಳಲ್ಲಿ ಶತ್ರುಗಳಿಂದ ಧಾಳಿಗೆ ಗುರಿಯಾಗಿರುತ್ತದೆ.
- ಮಾಕಾ ಎನ್ನುವ ಹೆಸರು ಅನೇಕಮಂದಿ ಸ್ತ್ರೀಯರು ಹೊಂದಿರುತ್ತಾರೆ, ಇವರಲ್ಲಿ ದಾವೀದನ ಮಗನಾದ ಅಬ್ಷಾಲೋಮನ ತಾಯಿಯೂ ಇರುತ್ತಾಳೆ.
- ಅರಸನಾದ ಆಸಾ ತನ್ನ ಅಜ್ಜಿಯಾದ ಮಾಕಾಳನ್ನು ರಾಣಿಯ ಸ್ಥಾನದಿಂದ ತೆಗೆದು ಹಾಕಿದನು, ಯಾಕಂದರೆ ಆಕೆ ಆಶೇರ ಆರಾಧನೆಗೆ ಪ್ರೋತ್ಸಾಹ ಮಾಡಿದ್ದಳು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಸ, ಅಶೇರ, ನಾಹೋರ, ನಫ್ತಾಲಿ, ಇಸ್ರಾಯೇಲ್ ಹನ್ನೆರಡು ಕುಲದವರು)

ಸತ್ಯವೇದದ ಅನುಬಂಧ ವಾಕ್ಯಗಳು :

ಪದ ಡೇಟಾ:

- Strong's: H4601

ಮಾರ್ಥಳು

ಸತ್ಯಾಂಶಗಳು:

ಮಾರ್ಥಳು ಯೇಸುವನನ್ನು ಅನುಸರಿಸಿದ ಬೇಥಾನ್ಯ ಗ್ರಾಮದ ಸ್ತ್ರೀಯಳಾಗಿದ್ದಳು.

- ಮಾರ್ಥಳಿಗೆ ಮರಿಯಳು ಎಂಬ ಸಹೋದರಿ ಮತ್ತು ಲಾಜರನು ಎಂಬ ಸಹೋದರನಿದ್ದನು, ಇವರೂ ಯೇಸುವನ್ನು ಹಿಂಬಾಲಿಸಿದವರಾಗಿದ್ದರು.
- ಒಂದುಸಲ ಯೇಸು ಅವರ ಮನೆಯಲ್ಲಿ ಅವರನ್ನು ಸಂದರ್ಶಿಸಿದಾಗ, ಮರಿಯಳು ಯೇಸುವಿನ ಬೋಧನೆಯನ್ನು ಕೇಳುತ್ತಾ, ಆತನ ಬಳಿ ಕುಳಿತುಕೊಂಡಿರುವಾಗ ಮಾರ್ಥಳು ಅಡಿಗೆಯನ್ನು ಸಿದ್ಧ ಮಾಡುವುದರ ಮೂಲಕ ಅತ್ತಿತ್ತ ಹೋಗುತ್ತಿದ್ದಳು.
- ಲಾಜರನು ಮರಣಹೊಂದಿದಾಗ, ಯೇಸು ಕ್ರಿಸ್ತನು ದೇವರ ಮಗನೆಂದು ನಂಬಿದ್ದೇನೆ ಎಂದು ಮಾರ್ಥಳು ಯೇಸುವಿಗೆ ಹೇಳಿದಳು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಲಾಜರ, ಮರಿಯ (ಮಾರ್ಥಳ ಸಹೋದರಿ))

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.11:1-2
- ಯೋಹಾನ.12:1-3
- ಲೂಕ.10:38-39

ಪದ ಡೇಟಾ:

- Strong's: G3136

ಮಿಚ್ಪೆ

ಸತ್ಯಾಂಶಗಳು:

ಮಿಚ್ಪೆ ಎನ್ನುವುದು ಹಳೇ ಒಡಂಬಡಿಕೆಯಲ್ಲಿ ದಾಖಲಿಸಿದ ಅನೇಕ ಪಟ್ಟಣಗಳ ಹೆಸರಾಗಿರುತ್ತದೆ. ಈ ಪದಕ್ಕೆ "ಹೊರ ನೋಡುವ ಕೇಂದ್ರ" ಅಥವಾ "ಕಾವಲಿ ಕೋಟೆ" ಎಂದರ್ಥ.

- ಸೌಲನು ದಾವೀದನನ್ನು ಓಡಿಸುತ್ತಾ ಹೋಗಿರುವಾಗ, ದಾವೀದನು ತನ್ನ ತಂದೆತಾಯಿಗಳನ್ನು ಮೋವಾಬ್ ಅರಸನ ಸಂರಕ್ಷಣೆಯಲ್ಲಿ ಮಿಚ್ಪೆಯಲ್ಲಿ ಬಿಟ್ಟು ಹೋಗಿದ್ದನು.
- ಮಿಚ್ಪೆ ಎಂದು ಕರೆಯಲ್ಪಡುವ ಒಂದು ಪಟ್ಟಣವು ಯೆಹೂದ್ಯ ಮತ್ತು ಇಸ್ರಾಯೇಲ್ ರಾಜ್ಯಗಳ ಮಧ್ಯೆದಲ್ಲಿರುವ ಗಡಿಗಳಲ್ಲಿ ಕಂಡುಬರುತ್ತದೆ. ಇದು ಸೈನಿಕರಿಗೆ ದೊಡ್ಡ ಕೇಂದ್ರವಾಗಿದ್ದಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ದಾವೀದ, ಯೆಹೂದ್ಯ, ಇಸ್ರಾಯೇಲ್ ರಾಜ್ಯ, ಮೋವಾಬ್, ಸೌಲ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.15:20-22
- 1 ಸಮು.07:5-6
- 1 ಸಮು.07:10-11
- ಯೆರೆ.40:5-6
- ನ್ಯಾಯಾ.10:17-18

ಪದ ಡೇಟಾ:

- Strong's: H4708, H4709

ಮಿದ್ಯಾನ್, ಮಿದ್ಯಾನನು, ಮಿದ್ಯಾನರು

ಸತ್ಯಾಂಶಗಳು:

ಮಿದ್ಯಾನ್ ಎನ್ನುವವನು ಅಬ್ರಾಹಾಮ ಮತ್ತು ತನ್ನ ಹೆಂಡತಿಯಾದ ಕೆಟೂರಳ ಮಗನಾಗಿರುತ್ತಾನೆ. ಈ ಪದವು ಜನರ ಗುಂಪಿನವರಿಗೂ ಇಟ್ಟಿರುತ್ತಾರೆ ಮತ್ತು ಇದು ಕಾನಾನ್ ಭೂಮಿಯ ದಕ್ಷಿಣ ಭಾಗಕ್ಕೆ ಇರುವ ಉತ್ತರ ಅರಬೇಯಿನ್ ಮರುಭೂಮಿಯಲ್ಲಿ ಕಂಡುಬರುತ್ತದೆ. ಆ ಗುಂಪಿನ ಜನರೆಲ್ಲರು "ಮಿದ್ಯಾನರು" ಎಂದು ಕರೆಯಲ್ಪಡುತ್ತಿದ್ದರು.

- ಮೋಶೆ ಮೊಟ್ಟ ಮೊದಲಬಾರಿಗೆ ಐಗುಪ್ತ ದೇಶವನ್ನು ಬಿಟ್ಟುಹೋದಾಗ, ಅವನು ಮಿದ್ಯಾನ್ ಸೀಮೆಗೆ ಹೊರಟು ಹೋದನು, ಅಲ್ಲಿ ಇತ್ರೋ ಹೆಣ್ಣು ಮಕ್ಕಳನ್ನು ಭೇಟಿಯಾದನು, ಅಲ್ಲಿ ಅವರ ಹಿಂಡುಗಳಿಗೆ ನೀರನ್ನು ಕುಡಿಸಲು ಸಹಾಯ ಮಾಡಿದನು. ಇದಾದನಂತರ ಮೋಶೆ ಇತ್ರೋ ಹೆಣ್ಣು ಮಕ್ಕಳಲ್ಲಿ ಒಬ್ಬಳನ್ನು ಮದುವೆ ಮಾಡಿಕೊಂಡನು.
- ಯೋಸೇಫನನ್ನು ಕೂಡ ಗುಲಾಮರನ್ನು ಕೊಂಡುಕೊಳ್ಳುವ ವ್ಯಾಪಾರಿಗಳಾದ ಮಿದ್ಯಾನರ ಗುಂಪಿನಿಂದಲೇ ಐಗುಪ್ತಕ್ಕೆ ಕರೆದೊಯ್ಯಲ್ಪಟ್ಟನು.

ಅನೇಕ ವರ್ಷಗಳಾದ ಮೇಲೆ ಮಿದ್ಯಾನರು ಕಾನಾನ್ ಭೂಮಿಯಲ್ಲಿರುವ ಇಸ್ರಾಯೇಲ್ಯರ ಮೇಲೆ ಧಾಳಿ ಮಾಡಿದರು. ಗಿದ್ಯೋನನು ಅವರನ್ನು ಸೋಲಿಸಲು ಇಸ್ರಾಯೇಲ್ಯರನ್ನು ನಡೆಸಿದನು.

- ಆಧುನಿಕ ಅರೇಬಿಯ ಜಾತಿಗಳಲ್ಲಿ ಅನೇಕವು ಈ ಗುಂಪಿನಿಂದಲೇ ಬಂದ ಸಂತಾನದವರಾಗಿರುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಅರೇಬಿಯ, ಐಗುಪ್ತ, ಹಿಂಡು, ಗಿದ್ಯೋನ್, ಇತ್ರೋ, ಮೋಶೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:29-30
- ವಿಮೋ.02:15-17
- ಆದಿ.25:1-4
- ಆದಿ.36:34-36
- ಆದಿ.37:27-28
- ನ್ಯಾಯಾ.07:1

ಸತ್ಯವೇದದಿಂದ ಉದಾಹರಣೆಗಳು:

- **16:03** ಆದರೆ ಜನರು ದೇವರನ್ನು ಮರೆತುಹೋಗಿ, ತಿರುಗಿ ವಿಗ್ರಹಾರಾಧನೆ ಮಾಡಲು ಪ್ರಾರಂಭಿಸಿದರು. ಆದ್ದರಿಂದ ದೇವರು ಅವರನ್ನು ಸೋಲಿಸುವುದಕ್ಕೆ ಶತ್ರು ಗುಂಪಿನವರಾಗಿರುವ _ ಮಿದ್ಯಾನರನ್ನು _ ಅನುಮತಿಸಿದರು,
- **16:04** ಇಸ್ರಾಯೇಲ್ಯರು ತುಂಬಾ ಹೆಚ್ಚಾಗಿ ಹೆದರಿದ್ದರು, ಅವರು ಅನೇಕ ಗುಹೆಗಳಲ್ಲಿ ಬಚ್ಚಿಟ್ಟುಕೊಂಡಿದ್ದರು, ಇದರಿಂದ _ ಮಿದ್ಯಾನರು _ ಅವರನ್ನು ಕಂಡುಕೊಳ್ಳಲಿಲ್ಲ.
- **16:11** "ಗಿದ್ಯೋನ್ ಸೈನ್ಯವು _ ಮಿದ್ಯಾನರ _ ಸೈನ್ಯವನ್ನು ಸೋಲಿಸುತ್ತದೆಯೆಂದು ಈ ಕನಸಿಗೆ ಅರ್ಥವಾಗಿರುತ್ತದೆ!" ಎಂದು ಒಬ್ಬ ಮನುಷ್ಯನ ಸ್ನೇಹಿತನು ಹೇಳಿದನು.
- **16:14** ದೇವರು _ ಮಿದ್ಯಾನರನ್ನು _ ಗೊಂದಲಪಡಿಸಿದನು, ಇದರಿಂದ ಅವರು ತಮ್ಮಲ್ಲೇ ಒಬ್ಬರಿಗೊಬ್ಬರನ್ನು ಧಾಳಿ ಮಾಡಿಕೊಂಡು, ಸಾಯಿಸಿಕೊಂಡರು.

ಪದ ಡೇಟಾ:

- Strong's: H4080, H4084, H4092

ಮಿರ್ಯಾಮಳು

ಸತ್ಯಾಂಶಗಳು:

ಮಿರ್ಯಾಮಳು ಆರೋನ ಮತ್ತು ಮೋಶೆಯವರಿಗೆ ಅಕ್ಕಳಾಗಿರುತ್ತಾಳೆ.

- ಆಕೆ ಯೌವನದಲ್ಲಿರುವಾಗ, ನೈಲ್ ನದಿಯ ನಳಿಕೆಗಳ ಮಧ್ಯೆದಲ್ಲಿರುವ ಬಿಡಲ್ಪಟ್ಟ ಬುಟ್ಟಿಯಲ್ಲಿರುವ ಶಿಶುವಾಗಿರುವ ತನ್ನ ಸಹೋದರ ಮೋಶೆಯನ್ನು ನೋಡಿಕೊಳ್ಳುತ್ತಾ ಇರಬೇಕೆಂದು ಆಕೆಗೆ ತನ್ನ ತಾಯಿ ಬಾಧ್ಯತೆ ಕೊಟ್ಟಿದ್ದಳು. ಫರೋಹನ ಮಗಳು ಆ ಶಿಶುವನ್ನು ಕಂಡುಕೊಂಡಾಗ, ಆ ಶಿಶುವನ್ನು ನೋಡಿಕೊಳ್ಳುವವರು ಯಾರಾದರೊಬ್ಬರು ಬೇಕಾಗಿದ್ದಿತ್ತು, ಮಿರ್ಯಾಮಳು ಆ ಶಿಶುವನ್ನು ನೋಡಿಕೊಳ್ಳುವುದಕ್ಕೆ ತನ್ನ ತಾಯಿಯನ್ನು ಕರೆದುಕೊಂಡು ಬಂದಿದ್ದಳು.
- ಇಸ್ರಾಯೇಲ್ಯರು ಕೆಂಪು ಸಮುದ್ರವನ್ನು ದಾಟುವುದರ ಮೂಲಕ ಐಗುಪ್ತರಿಂದ ರಕ್ಷಣೆ ಹೊಂದಿಕೊಂಡ ಮೇಲೆ ಕೃತಜ್ಞತೆಗಳನ್ನು ಹೇಳುವುದಕ್ಕೆ ಮತ್ತು ಆನಂದ ನೃತ್ಯವನ್ನು ಮಾಡುವುದಕ್ಕೆ ಮಿರ್ಯಾಮಳು ಅವರನ್ನು ನಡೆಸಿದಳು.
- ಇಸ್ರಾಯೇಲ್ಯರು ಅರಣ್ಯದಲ್ಲಿ ಸಂಚಾರ ಮಾಡುತ್ತಿರುವಾಗ ಅನೇಕ ವರ್ಷಗಳಾದ ಮೇಲೆ, ಮಿರ್ಯಾಮ ಮತ್ತು ಆರೋನರು ಮೋಶೆಯ ಕುರಿತಾಗಿ ತುಂಬಾ ಕೆಟ್ಟದಾಗಿ ಮಾತನಾಡುವುದಕ್ಕೆ ಆರಂಭಿಸಿದರು, ಯಾಕಂದರೆ ಅವನು ಕೂಷ್ ದೇಶದ ಸ್ತ್ರೀಯಳನ್ನು ವಿವಾಹ ಮಾಡಿಕೊಂಡಿದ್ದನು.
- ಮೋಶೆಗೆ ವಿರುದ್ಧವಾಗಿ ಮಾತನಾಡುವುದರಲ್ಲಿ ಆಕೆಯ ತಿರಸ್ಕಾರದಿಂದ ಮಿರ್ಯಾಮಳು ಕುಷ್ಠ ರೋಗದಿಂದ ನರಳುವಂತೆ ದೇವರು ಮಾಡಿದರು. ಆದರೆ ಮೋಶೆಯು ಆಕೆಯ ಕುರಿತು ಪ್ರಾರ್ಥನೆ ಮಾಡಿದಾಗ ದೇವರು ಆಕೆಯನ್ನು ಗುಣಪಡಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಆರೋನ, ಕೂಷ್, ವಿಜ್ಞಾಪನೆ ಮಾಡು, ಮೋಶೆ, ನೈಲ್ ನದಿ, ಫರೋಹ, ತಿರಸ್ಕಾರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.06:1-3
- ಧರ್ಮೋ.24:8-9
- ಮೀಕ.06:3-5
- ಅರಣ್ಯ.12:1-3
- ಅರಣ್ಯ.20:1

ಪದ ಡೇಟಾ:

- Strong's: H4813

ಮೀಕ

ಸತ್ಯಾಂಶಗಳು:

ಮೀಕ ಯೆಹೂದ ರಾಜ್ಯದ ಪ್ರವಾದಿಯಾಗಿದ್ದನು, ಈತನು ಯೆಹೂದ ರಾಜ್ಯಕ್ಕೆ ಯೆಶಯಾ ಪ್ರವಾದಿ ಸೇವೆ ಮಾಡುತ್ತಿರುವ ಸಮಯದಲ್ಲಿದ್ದವನು, ಮತ್ತು ಕ್ರಿಸ್ತನು ಈ ಲೋಕದೊಳಗೆ ಬರುವುದಕ್ಕೆ ಮುಂಚಿತವಾಗಿ ಸುಮಾರು 700 ವರ್ಷಗಳ ಕೆಳಗೆ ಪ್ರವಾದಿಯಾಗಿದ್ದನು. ನ್ಯಾಯಾಧೀಶರ ಕಾಲದಲ್ಲಿ ಮೀಕ ಎನ್ನುವ ಹೆಸರಿನ ಮೇಲೆ ಇನ್ನೊಬ್ಬ ವ್ಯಕ್ತಿ ಜೀವಿಸುತ್ತಿದ್ದನು.

- ಮೀಕನ ಗ್ರಂಥವು ಹಳೇ ಒಡಂಬಡಿಕೆಯ ಕೊನೆಯ ಪುಸ್ತಕಗಳಲ್ಲಿ ಒಂದಾಗಿತ್ತು.
- ಅಶ್ಶೂರಿನವರಿಂದ ಸಮಾರ್ಯ ನಾಶನವಾಗುತ್ತದೆ ಎನ್ನುವುದರ ಕುರಿತಾಗಿ ಮೀಕ ಪ್ರವಾದಿಸಿದನು.
- ಯೆಹೂದದ ಜನರು ದೇವರಿಗೆ ಅವಿಧೇಯತೆಯನ್ನು ತೋರಿಸಿದ್ದಕ್ಕಾಗಿ ಮೀಕನು ಅವರನ್ನು ಗದರಿಸಿದನು ಮತ್ತು ಅವರ ಶತ್ರುಗಳು ಅವರ ಮೇಲೆ ಧಾಳಿ ಮಾಡುತ್ತಾರೆಂದು ಎಚ್ಚರಿಸಿದನು.
- ನಂಬಿಗಸ್ತನಾಗಿರುವ, ತನ್ನ ಜನರನ್ನು ರಕ್ಷಿಸುವ ದೇವರಲ್ಲಿ ನಿರೀಕ್ಷೆಯ ಸಂದೇಶದೊಂದಿಗೆ ಈತನ ಪ್ರವಾದನೆಯು ಮುಕ್ತಾಯಗೊಳ್ಳುತ್ತದೆ.
- ನ್ಯಾಯಾಧೀಶರ ಪುಸ್ತಕದಲ್ಲಿ ಬೆಳ್ಳಿಯಿಂದ ವಿಗ್ರಹಗಳನ್ನು ತಯಾರಿಸುವ ಎಫ್ರಾಯೀಮಿನಲ್ಲಿ ಜೀವಿಸುವ ಮೀಕ ಎನ್ನುವ ಹೆಸರಿನ ಒಬ್ಬ ಮನುಷ್ಯನ ಕುರಿತಾದ ವಿಷಯವನ್ನು ಬರೆಯಲ್ಪಟ್ಟಿರುತ್ತದೆ. ಇತರ ವಸ್ತುಗಳನ್ನು ಮತ್ತು ವಿಗ್ರಹವನ್ನು ಕದಿಯುವುದಕ್ಕೆ ತನ್ನೊಂದಿಗೆ ಜೀವಿಸುವುದಕ್ಕೆ ಬಂದಿರುವ ಲೇವಿಯನಾದ ಯೌವ್ವನ ಯಾಜಕನು ಬಂದಿದ್ದನು, ಮತ್ತು ದಾನೀಯರ ಗುಂಪುನೊಂದಿಗೆ ಹೊರಟರು. ಕೊನೆಗೆ ದಾನಿಯರು ಮತ್ತು ಯಾಜಕನು ಲಯಿಷ ಪಟ್ಟಣದಲ್ಲಿ ಇಳಿದುಕೊಂಡರು, ಮತ್ತು ಅವರು ಆರಾಧನೆ ಮಾಡುವುದಕ್ಕೆ ಅದೇ ಬೆಳ್ಳಿಯ ವಿಗ್ರಹವನ್ನು ಇಟ್ಟುಕೊಂಡರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್, ದಾನ್, ಎಫ್ರಾಯೀಮ್, ಸುಳ್ಳು ದೇವರು, ಯೆಶಯಾ, ಯೂದಾ, ನ್ಯಾಯಾಧೀಶ, ಲೇವಿ, ಯಾಜಕ, ಪ್ರವಾದಿ, ಸಮಾರ್ಯ, ಬೆಳ್ಳಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆರೆ.26:18-19
- ಮೀಕ.01:1
- ಮೀಕ.06:1-2

{{tag>publish ktlink}

ಪದ ಡೇಟಾ:

- Strong's: H4316, H4318

ಮೀಕಾಯೇಲ

ಸತ್ಯಾಂಶಗಳು:

ಮೀಕಾಯೇಲನು ದೇವರ ಪರಿಶುದ್ಧವಾದ ವಿಧೇಯತೆಯುಳ್ಳ ದೂತರುಗಳಲ್ಲಿ ಮುಖ್ಯ ದೂತನಾಗಿರುತ್ತಾನೆ. ಈ ದೂತನನ್ನು ಮಾತ್ರವೇ ವಿಶೇಷವಾಗಿ ದೇವರ "ಪ್ರಧಾನ ದೂತ" ಎಂದು ಹೇಳಲಾಗಿರುತ್ತದೆ.

- "ಪ್ರಧಾನ ದೂತ" ಎನ್ನುವ ಪದಕ್ಕೆ "ಮುಖ್ಯ ದೂತ" ಅಥವಾ "ಪಾಲಿಸುವ ದೂತ" ಎನ್ನುವ ಅಕ್ಷರಾರ್ಥಗಳಿವೆ.
- ಮೀಕಾಯೇಲನು ದೇವರ ಶತ್ರುಗಳಿಗೆ ವಿರುದ್ಧವಾಗಿ ಹೋರಾಡುವ ಯುದ್ಧವೀರನಾಗಿದ್ದನು ಮತ್ತು ದೇವರ ಜನರನ್ನು ಸಂರಕ್ಷಿಸುವನಾಗಿದ್ದನು.
- ಈ ದೂತನು ಪಾರಸಿಯರ ಸೈನ್ಯಕ್ಕೆ ವಿರುದ್ಧವಾಗಿ ಹೋರಾಟ ಮಾಡುವುದರಲ್ಲಿ ಇಸ್ರಾಯೇಲ್ಯರನ್ನು ನಡೆಸಿದ್ದನು. ಅಂತ್ಯಕಾಲಗಳಲ್ಲಿ, ದಾನಿಯೇಲನ ಗ್ರಂಥದಲ್ಲಿ ಮುಂಚಿತವಾಗಿ ಹೇಳಲ್ಪಟ್ಟಿರುವಂತೆ ದುಷ್ಟ ಶಕ್ತಿಗಳ ವಿರುದ್ಧವಾಗಿ ಕೊನೆಯ ಯುದ್ಧದಲ್ಲಿ ಇಸ್ರಾಯೇಲ್ ಸೈನ್ಯಗಳನ್ನು ನಡೆಸುವನು .
- ಮೀಕಾಯೇಲ ಎನ್ನುವ ಹೆಸರಿನ ಮೇಲೆ ಸತ್ಯವೇದದಲ್ಲಿ ಅನೇಕಮಂದಿ ವ್ಯಕ್ತಿಗಳಿದ್ದಾರೆ. ಅನೇಕಮಂದಿ ಮನುಷ್ಯರು "ಮೀಕಾಯೇಲ ಮಗ" ಎಂದು ಗುರುತಿಸಲ್ಪಟ್ಟಿದ್ದಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೂತ, ದಾನಿಯೇಲ, ಸಂದೇಶವಾಹಕ, ಪಾರಸಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.10:12-13
- ದಾನಿ.10:20-21
- ಎಜ್ರಾ.08:8-11
- ಪ್ರಕ.12:7-9

ಪದ ಡೇಟಾ:

- Strong's: H4317, G3413

ಮೀಶಾಯೇಲ

ಸತ್ಯಾಂಶಗಳು:

ಮೀಶಾಯೇಲ ಎನ್ನುವ ಹೆಸರುಗಳು ಹಳೇ ಒಡಂಬಡಿಕೆಯಲ್ಲಿ ಮೂವರು ವ್ಯಕ್ತಿಗಳಿದ್ದಾರೆ.

- ಮೀಶಾಯೇಲನ ಹೆಸರಿನ ಮೇಲೆ ಇರುವ ಒಬ್ಬ ವ್ಯಕ್ತಿ ಆರೋನನ ಸೋದರ ಸಂಬಂಧಿಯಾಗಿರುತ್ತಾನೆ. ದೇವರು ಅವರಿಗೆ ಹೇಳಿದಂತೆ ಅಲ್ಲದೇ ಬೇರೆ ಇತರ ಧೂಪವನ್ನು ಆರೋನನ ಮಕ್ಕಳಲ್ಲಿ ಇಬ್ಬರು ಮಕ್ಕಳು ಅರ್ಪಿಸಿದ್ದಕ್ಕೆ, ದೇವರು ಅವರನ್ನು ಸಾಯಿಸಿದರು, ಆ ಸಮಯದಲ್ಲಿ ಮೀಶಾಯೇಲನು ಮತ್ತು ತನ್ನ ಸಹೋದರನು ಸತ್ತಂತ ತಮ್ಮ ಸಹೋದರರ ಶವಗಳನ್ನು ಇಸ್ರಾಯೇಲ್ ಅಂಗಳದಿಂದ ಹೊರ ತೆಗೆದುಕೊಂಡು ಬರುವುದಕ್ಕೆ ಜವಬ್ದಾರಿಕೆಯನ್ನು ಹೊಂದಿದ್ದರು.
- ಎಜ್ರನು ಬಹಿರಂಗವಾಗಿ ಧರ್ಮಶಾಸ್ತ್ರವನ್ನು ಓದಿ ಎಲ್ಲರಿಗೆ ಕೇಳಿಸುತ್ತಿರುವಾಗ ಮೀಶಾಯೇಲನ ಹೆಸರಿನ ಮೇಲೆ ಇರುವ ಇನ್ನೊಬ್ಬ ವ್ಯಕ್ತಿ ಆತನ ಪಕ್ಕದಲ್ಲಿಯೇ ನಿಂತುಕೊಂಡಿದ್ದನು.
- ಇಸ್ರಾಯೇಲ್ ಜನರು ಬಾಬಿಲೋನಿಗೆ ಸೆರೆಗೆ ಹೋದಾಗ, ಮೀಶಾಯೇಲನ ಹೆಸರಿನಲ್ಲಿರುವ ಒಬ್ಬ ಯೌವನಸ್ಥನು ಕೂಡ ಸೆರೆಗೆ ಹೊಯ್ಯಲ್ಪಟ್ಟಿದ್ದನು ಮತ್ತು ಬಾಬೆಲೋನಿನಲ್ಲಿ ಜೀವಿಸುವುದಕ್ಕೆ ಬಲವಂತಿಕೆ ಮಾಡಲ್ಪಟ್ಟಿದ್ದನು. ಬಾಬೆಲೋನಿನಲ್ಲಿ ತನಗೆ “ಮೇಶೆಕ್” ಎನ್ನುವ ಹೆಸರನ್ನು ಇಟ್ಟಿದ್ದರು. ಈತನು ಮತ್ತು ತನ್ನ ಜೊತೆಯಲ್ಲಿರುವ ಅಜರ್ಯ (ಅಬೇದ್ನೆಗೋ), ಮತ್ತು ಹನನ್ಯ (ಶದ್ರಕ್) ಎನ್ನುವವರು ಅರಸನ ವಿಗ್ರಹಕ್ಕೆ ಆರಾಧನೆ ಮಾಡುವುದನ್ನು ತಿರಸ್ಕರಿಸಿದರು, ಮತ್ತು ಅವರನ್ನು ಧಗಧಗನೆ ಉರಿಯುವ ಬೆಂಕಿಯ ಕೆರೆಯೊಳಗೆ ಎಸೆದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಆರೋನ, ಅಜರ್ಯ, ಬಾಬೆಲೋನಿಯ, ದಾನಿಯೇಲ, ಹನನ್ಯ)

ಸತ್ಯವೇದದ ವಾಕ್ಯಗಳು:

- ದಾನಿ 1:6-7
- ದಾನಿ 2:17-18

ಪದ ಡೇಟಾ:

- Strong's: H4332, H4333

ಮೆಲ್ಕೀಚೆದೆಕ

ಸತ್ಯಾಂಶಗಳು:

ಅಬ್ರಾಮನು ಜೀವಿಸಿದ ಸಮಯದಲ್ಲಿ ಮೆಲ್ಕೀಚೆದೆಕ ಸಾಲೇಮಿನ (“ಯೆರೂಸಲೇಮ್”) ಅರಸನಾಗಿದ್ದನು.

- ಮೆಲ್ಕೀಚೆದೆಕ ಎನ್ನುವ ಹೆಸರಿಗೆ “ನೀತಿಗೆ ಅರಸ” ಎಂದರ್ಥ ಮತ್ತು ಆತನಿಗೆ ಕೊಟ್ಟ “ಸಾಲೇಮಿನ ಅರಸ” ಎನ್ನುವ ಬಿರುದಿಗೆ “ಸಮಾಧಾನ ಅರಸ” ಎಂದರ್ಥ.
- ಈತನನ್ನು “ಮಹೋನ್ನತನಾದ ದೇವರ ಯಾಜಕ” ಎಂದೂ ಕರೆಯಲ್ಪಟ್ಟಿದ್ದನು.
- ಅಬ್ರಾಮ ತನ್ನ ಸೋದರ ಸಂಬಂಧಿಯಾದ ಲೋಟನನ್ನು ಶಕ್ತಿಯುತವಾದ ಅರಸರಿಂದ ರಕ್ಷಿಸಿದಾಗ ಅಬ್ರಾಮನು ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಆತನಿಗೆ ಅರ್ಪಿಸಿದಾಗ ಸತ್ಯವೇದದಲ್ಲಿ ಮೊಟ್ಟ ಮೊದಲಿಗೆ ಮೆಲ್ಕೀಚೆದೆಕ ಎನ್ನುವ ಹೆಸರನ್ನು ದಾಖಲಿಸಲಾಗಿರುತ್ತದೆ. ಅಬ್ರಾಮನು ತನ್ನ ಜಯದೊಳಗಿಂದ ಬಂದ ವಸ್ತುಗಳಲ್ಲಿ ದಶಮ ಭಾಗವನ್ನು ಮೆಲ್ಕೀಚೆದೆಕನಿಗೆ ಕೊಟ್ಟನು.
- ಹೊಸ ಒಡಂಬಡಿಕೆಯಲ್ಲಿ ಮೆಲ್ಕೀಚೆದೆಕನು ತಂದೆತಾಯಿಗಳಿಲ್ಲದ ವ್ಯಕ್ತಿಯಾಗಿ ವಿವರಿಸಲ್ಪಟ್ಟಿದ್ದನು. ಈತನು ಯಾಜಕನಾಗಿ ಮತ್ತು ಸದಾಕಾಲವೂ ಆಳ್ವಿಕೆ ಮಾಡುವ ಅರಸನಾಗಿ ಕರೆಯಲ್ಪಟ್ಟಿದ್ದನು.
- ಹೊಸ ಒಡಂಬಡಿಕೆಯು ಕೂಡ “ಮೆಲ್ಕೀಚೆದೆಕನ ಕ್ರಮದ” ಯಾಜಕನ ಪ್ರಕಾರ ಯೇಸು ಯಾಜಕನಾಗಿದ್ದಾನೆಂದು ಹೇಳುತ್ತಿದೆ. ಇಸ್ರಾಯೇಲ್ ಯಾಜಕರಾಗಿರುವಂತೆ ಯೇಸು ಲೇವಿ ವಂಶಸ್ಥನಾಗಿರುವುದಿಲ್ಲ. ಈತನ ಯಾಜಕತ್ವವು ಮೆಲ್ಕೀಚೆದೆಕನಂತೆಯೇ ನೇರವಾಗಿ ದೇವರಿಂದ ಬಂದಿದ್ದಾಗಿರುತ್ತದೆ.
- ಸತ್ಯವೇದದಲ್ಲಿರುವ ಈತನ ಕುರಿತಾದ ಈ ವಿವರಣೆಗಳ ಆಧಾರದಮೇಲೆ, ಮೆಲ್ಕೀಚೆದೆಕನು ನಮ್ಮ ಮಹಾ ದೊಡ್ಡ ಯಾಜಕನಾದ, ನೀತಿ ಸಮಾಧಾನಗಳಿಗೆ ನಿತ್ಯ ಅರಸನಾದ ಯೇಸುವಿನ ಕಡೆಗೆ ನಡೆಸುವ ಅಥವಾ ಆತನನ್ನು ಪ್ರತಿನಿಧಿಸುವ ದೇವರಿಂದ ಆಯ್ಕೆ ಮಾಡಲ್ಪಟ್ಟಿರುವ ಮನುಷ್ಯ ಯಾಜಕನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ್, ನಿತ್ಯತ್ವ, ಮಹಾ ಯಾಜಕ, ಯೆರೂಸಲೇಮ್, ಲೇವಿ, ಯಾಜಕ, ನೀತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.14:17-18
- ಇಬ್ರಿ.06:19-20
- ಇಬ್ರಿ.07:15-17
- ಕೀರ್ತನೆ.110:4

ಪದ ಡೇಟಾ:

- Strong's: H4442, G3198

ಮೆಸಪೋತಾಮ್ಯ, ಆರಾಮ್ ನಹರೆಮ್

ಸತ್ಯಾಂಶಗಳು:

ಮೆಸಪೋತಾಮ್ಯ ಎನ್ನುವುದು ಟೈಗ್ರಿಸ್ ಮತ್ತು ಯೂಫ್ರೇಟೀಸ್ ನದಿಗಳ ಮಧ್ಯೆದಲ್ಲಿರುವ ಭೂಪ್ರದೇಶವಾಗಿರುತ್ತದೆ. ಈ ಭೂಪ್ರದೇಶವು ಈಗಿನ ಆಧುನಿಕ ದೇಶವಾಗಿರುವ ಇರಾಕ್ ಪ್ರಾಂತ್ಯದಲ್ಲಿ ಕಂಡುಬರುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಈ ಪ್ರಾಂತ್ಯವನ್ನು "ಆರಾಮ್ ಸೀಮೆ" ಎಂದು ಕರೆದಿದ್ದಾರೆ.
- ಮೆಸಪೋತಾಮ್ಯ ಎನ್ನುವ ಪದಕ್ಕೆ "ನದಿಗಳ ಮಧ್ಯೆದಲ್ಲಿ" ಎಂದರ್ಥ. "ಆರಾಮ್ ನಹರೆಮ್" ಎನ್ನುವ ಮಾತಿಗೆ "ಎರಡು ನದಿಗಳ ಆರಾಮ್" ಎಂದರ್ಥ.
- ಅಬ್ರಾಹಾಮನು ಕಾನಾನ್ ದೇಶಕ್ಕೆ ಹೋಗುವುದಕ್ಕೆ ಮುಂಚಿತವಾಗಿ ಊರ್ ದೇಶದ ಮೆಸಪೋತಾಮ್ಯ ಪಟ್ಟಣಗಳಲ್ಲಿ ನಿವಾಸವಾಗಿದ್ದನು.
- ಮೆಸಪೋತಾಮ್ಯದಲ್ಲಿ ಇನ್ನೊಂದು ಪ್ರಾಮುಖ್ಯವಾದ ಪಟ್ಟಣ ಬಾಬೆಲೋನಿಯವಾಗಿತ್ತು.
- "ಕಲ್ದೀಯ" ಎನ್ನುವ ಪ್ರಾಂತ್ಯವು ಕೂಡ ಮೆಸಪೋತಾಮ್ಯದಲ್ಲಿ ಭಾಗವಾಗಿದ್ದಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆರಾಮ್, ಬಾಬೆಲೋನಿಯ, ಕಲ್ದೀಯ, ಯೂಫ್ರೇಟೀಸ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.02:8-11
- ಅಪೊ.ಕೃತ್ಯ.07:1-3
- ಆದಿ.24:10-11

ಪದ ಡೇಟಾ:

- Strong's: H763, G3318

ಮೇದ್ಯರು, ಮೇದ್ಯ

ಸತ್ಯಾಂಶಗಳು:

ಮೇದ್ಯ ಎನ್ನುವುದು ಪುರಾತನ ಸಾಮ್ರಾಜ್ಯವಾಗಿತ್ತು, ಇದು ಬಾಬೆಲೋನಿಯ ಮತ್ತು ಅಶ್ಶೂರ್ ಪೂರ್ವ ಭಾಗದಲ್ಲಿ, ಎಲಾಂ ಮತ್ತು ಪಾರಸಿಯ ಉತ್ತರ ಭಾಗದಲ್ಲಿ ಕಂಡುಬರುತ್ತದೆ. ಮೇದ್ಯ ಸಾಮ್ರಾಜ್ಯದಲ್ಲಿ ಜೀವಿಸಿದ ಜನರನ್ನು "ಮೇದ್ಯರು" ಎಂದು ಕರೆಯುತ್ತಾರೆ.

- ಮೇದ್ಯ ಸಾಮ್ರಾಜ್ಯವು ಈಗಿನ ಟರ್ಕಿ, ಇರಾನ್, ಸಿರಿಯಾ, ಇರಾಕ್ ಮತ್ತು ಅಫ್ಘಾನಿಸ್ತಾನದ ಭಾಗಗಳನ್ನು ಆವರಿಸಿರುತ್ತದೆ.
- ಮೇದ್ಯ ಪಾರಸಿಯರಿಗೆ ತುಂಬಾ ಹತ್ತಿರವಾಗಿ ಸಹಕಾರ ಮಾಡಿರುತ್ತದೆ, ಈ ಎರಡು ಸಾಮ್ರಾಜ್ಯಗಳು ಸೇರಿ ಬಾಬೆಲೋನಿಯ ಸಾಮ್ರಾಜ್ಯವನ್ನು ಜಯಿಸಬೇಕೆಂದು ಹೋರಾಟ ಮಾಡಿದರು.
- ಪ್ರವಾದಿಯಾದ ದಾನಿಯೇಲನು ಜೀವಿಸುತ್ತಿರುವ ಕಾಲದಲ್ಲೇ ಮೇದ್ಯನಾದ ದಾರ್ಯಾವೆಷನಿಂದ ಬಾಬೆಲೋನಿಯ ಸಾಮ್ರಾಜ್ಯವು ಧಾಳಿಗೆ ಗುರಿಯಾಗಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್, ಬಾಬೆಲೋನಿಯ, ಕೋರೆಷ, ದಾನಿಯೇಲ, ದಾರ್ಯಾವೆಷ, ಏಲಾಮ್, ಪಾರಸಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.17:4-6
- ಅಪೊ.ಕೃತ್ಯ.02:8-11
- ದಾನಿ.05:25-28
- ಎಸ್ತೇ.01:3-4
- ಎಜ್ರಾ.06:1-2

ಪದ ಡೇಟಾ:

- Strong's: H4074, H4075, H4076, H4077, G3370

ಮೇಶೆಕ್

ಸತ್ಯಾಂಶಗಳು:

ಹಳೇ ಒಡಂಬಡಿಕೆಯಲ್ಲಿ ಮೇಶೆಕ್ ಎನ್ನುವ ಹೆಸರಿನ ಮೇಲೆ ಇಬ್ಬರು ಮನುಷ್ಯರಿದ್ದಾರೆ.

- ಒಬ್ಬ ಮೇಶೆಕ್ ಯೆಫೆತ್ ಮಗನಾಗಿರುತ್ತಾನೆ.
- ಇನ್ನೊಬ್ಬ ಮೇಶೆಕ್ ಶೇಮನ ಮೊಮ್ಮೊಗನಾಗಿರುತ್ತಾನೆ.
- ಮೇಶೆಕ್ ಎನ್ನುವುದು ಒಂದು ದೇಶದ ಸೀಮೆಯ ಹೆಸರೂ ಆಗಿರುತ್ತದೆ, ಇದು ಬಹುಶಃ ಈ ಮನುಷ್ಯರಲ್ಲಿ ಒಬ್ಬರ ಹೆಸರಾಗಿರಬಹುದು.
- ಮೇಶೆಕ್ ಎನ್ನುವ ಸೀಮೆಯು ಈಗಿನ ಟರ್ಕೀ ದೇಶದಲ್ಲಿನ ಒಂದು ಭಾಗದಲ್ಲಿ ಕಂಡುಬರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯೆಫೆತ್, ನೋಹ, ಶೇಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:5-7
- ಯೆಹೆ.27:12-13
- ಆದಿ.10:2-5
- ಕೀರ್ತನೆ.120:5-7

ಪದ ಡೇಟಾ:

- Strong's: H4851, H4902

ಮೊರ್ದೆಕೈ

ಸತ್ಯಾಂಶಗಳು:

ಮೊರ್ದೆಕೈ ಪಾರಸಿಯ ದೇಶದಲ್ಲಿ ಜೀವಿಸುತ್ತಿರುವ ಒಬ್ಬ ಯೆಹೂದ್ಯ ಮನುಷ್ಯನಾಗಿರುತ್ತಾನೆ. ಈ ವ್ಯಕ್ತಿ ಪಾರಸೀಯ ಅರಸನಾಗಿರುವ ಅಹಷ್ವೆರೋಷನಿಗೆ ಹೆಂಡತಿಯಾಗಿರುವ ತನ್ನ ಸೋದರಸಂಬಂಧಿಯಾದ ಎಸ್ತೇರಳಿಗೆ ರಕ್ಷಕನಾಗಿದ್ದನು,

- ರಾಜ ಭವನದಲ್ಲಿ ಕೆಲಸ ಮಾಡುತ್ತಿರುವಾಗ, ಅರಸ ಅಹಷ್ವೆರೋಷನನ್ನು ಸಾಯಿಸುವುದಕ್ಕೆ ಪ್ರಣಾಳಿಕೆ ಹಾಕುತ್ತಿರುವ ಮನುಷ್ಯರ ಮಾತುಗಳನ್ನು ಮೊರ್ದೆಕೈ ಕೇಳಿಸಿಕೊಂಡಿದ್ದನು. ಇವನು ಈ ವಿಷಯವನ್ನು ಹೇಳಿ, ಅರಸನ ಪ್ರಾಣವನ್ನು ಕಾಪಾಡಿದನು.
- ಸ್ವಲ್ಪ ಕಾಲವಾದನಂತರ, ಪಾರಸಿಯ ರಾಜ್ಯದಲ್ಲಿ ಜೀವನ ಮಾಡುತ್ತಿರುವ ಯೆಹೂದ್ಯರನ್ನು ಕೂಡ ಸಾಯಿಸಬೇಕೆಂದು ಪ್ರಣಾಳಿಕೆ ಹಾಕುತ್ತಿರುವುದರ ಕುರಿತಾಗಿ ಮೊರ್ದಕೈ ಕೇಳಿಸಿಕೊಂಡನು. ಇದಕ್ಕಾಗಿ ಇವನು ಎಸ್ತೇರಳಿಗೆ ತನ್ನ ಜನರನ್ನು ರಕ್ಷಿಸಿಕೊಳ್ಳಲು ಅರಸನಿಗೆ ಮನವಿ ಮಾಡಬೇಕೆಂದು ಸಲಹೆ ಕೊಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಹಷ್ವೆರೋಷ, ಬಾಬೆಲೋನಿಯ, ಎಸ್ತೇರಳು, ಪಾರಸಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಸ್ತೇ.02:5-6
- ಎಸ್ತೇ.03:5-6
- ಎಸ್ತೇ.08:1-2
- ಎಸ್ತೇ.10:1-2

ಪದ ಡೇಟಾ:

- Strong's: H4782

ಮೋಫ್

ಪದದ ಅರ್ಥವಿವರಣೆ:

ಮೋಫ್ ಎನ್ನುವುದು ಐಗುಪ್ತದಲ್ಲಿರುವ ಪುರಾತನ ರಾಜಧಾನಿ ಪಟ್ಟಣವಾಗಿರುತ್ತದೆ, ಇದು ನೈಲ್ ನದಿಯ ಪಕ್ಕದಲ್ಲಿ ಕಂಡುಬರುತ್ತದೆ.

- ಮೋಫ್ ಪಟ್ಟಣವು ಐಗುಪ್ತ ಕೆಳಭಾಗದಲ್ಲಿ ಕಂಡುಬರುತ್ತದೆ, ಇದು ಮಣ್ಣು ಫಲವತ್ತಾಗಿರುವ ಮತ್ತು ಬೆಳೆಗಳು ಹೇರಳವಾಗಿ ಬೆಳೆಯುವ ನೈಲ್ ನದಿಯ ಡೆಲ್ಟಾ ದಕ್ಷಿಣ ಭಾಗದಲ್ಲಿ ಕಂಡುಬರುತ್ತದೆ.
- ಇದು ಫಲವತ್ತಾದ ಮಣ್ಣು ಇರುವ ಪ್ರದೇಶ ಮತ್ತು ಐಗುಪ್ತ ಕೆಳ ಮೇಲ್ಭಾಗದ ಮಧ್ಯೆದಲ್ಲಿರುವ ಪ್ರಾಮುಖ್ಯವಾದ ಸ್ಥಳವಾಗಿರುತ್ತದೆ, ಇದರಿಂದ ಮೋಫ್ ಎನ್ನುವ ಈ ಪಟ್ಟಣವು ವ್ಯಾಪಾರ ಮತ್ತು ವಾಣಿಜ್ಯಗಳಿಗೆ ದೊಡ್ಡ ಪಟ್ಟಣವಾಗಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ನೈಲ್ ನದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಹೋಶೆಯ.09:5-6

ಪದ ಡೇಟಾ:

- Strong's: H4644, H5297

ಮೋಲೆಕ್

ಸತ್ಯಾಂಶಗಳು:

ಮೋಲೆಕ್ ಎನ್ನುವುದು ಕಾನಾನ್ಯರು ಆರಾಧನೆ ಮಾಡುವ ಸುಳ್ಳು ದೇವರುಗಳಲ್ಲಿ ಒಂದು ಸುಳ್ಳು ದೇವರ ಹೆಸರಾಗಿರುತ್ತದೆ. ಈ ಪದಕ್ಕೆ "ಮೊಲೋಕ್" ಮತ್ತು "ಮೊಲೇಕ" ಎನ್ನುವ ಪದಗಳನ್ನು ಬಳಸುತ್ತಾರೆ.

- ಮೋಲೆಕ್.ನನ್ನು ಆರಾಧಿಸುವ ಜನರು ಅವನಿಗೆ ತಮ್ಮ ಮಕ್ಕಳನ್ನು ಅಗ್ನಿಯಿಂದ ಬಲಿ ಮಾಡುತ್ತಿದ್ದರು.
- ಇಸ್ರಾಯೇಲ್ಯರಲ್ಲಿ ಕೆಲವರು ನಿಜವಾದ ಒಬ್ಬನೇ ದೇವರನ್ನು ಆರಾಧಿಸುವುದರ ಬದಲಾಗಿ ಮೋಲೆಕ್ ಸುಳ್ಳು ದೇವರನ್ನು ಆರಾಧನೆ ಮಾಡಿದರು. ಅವರು ಮೋಲೆಕ್ ಆರಾಧಿಕರು ಆಚರಿಸುವ ದುಷ್ಟ ಆಚಾರಗಳನ್ನು ಆಚರಿಸಿದರು, ಅದರಲ್ಲಿ ತಮ್ಮ ಮಕ್ಕಳನ್ನು ಬಲಿ ಕೊಡುವುದೂ ಒಳಗೊಂಡಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ದುಷ್ಟ, ಸುಳ್ಳು ದೇವರು, ದೇವರು, ಸುಳ್ಳು ದೇವರು, ಸರ್ವಾಂಗ ಹೋಮ, ನಿಜ, ಆರಾಧನೆ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.11:7-8
- 2 ಅರಸ.23:10-11
- ಅಪೊ.ಕೃತ್ಯ.07:43
- ಯೆರೆ.32:33-35
- ಯಾಜಕ.18:21

ಪದ ಡೇಟಾ:

- Strong's: H4428, H4432, G3434

ಮೋವಾಬ್, ಮೋವಾಬ್ಯನು, ಮೋವಾಬ್ಯರು

ಸತ್ಯಾಂಶಗಳು:

ಮೋವಾಬ್ ಎನ್ನುವವನು ಲೋಟನ ಹಿರಿಯ ಮಗಳ ಮಗನಾಗಿರುತ್ತಾನೆ. ಇವನು ಮತ್ತು ಇವನ ಕುಟುಂಬವು ಜೀವಿಸಿದ ದೇಶದ ಹೆಸರಾಗಿತ್ತು. "ಮೋವಾಬ್ಯನು" ಎನ್ನುವ ಪದವು ಮೋವಾಬ್ ಸಂತಾನದ ವ್ಯಕ್ತಿಯನ್ನು ಸೂಚಿಸುತ್ತದೆ ಅಥವಾ ಮೋವಾಬ್ ದೇಶದಲ್ಲಿ ಜೀವಿಸುವ ವ್ಯಕ್ತಿಯನ್ನು ಸೂಚಿಸುತ್ತದೆ.

- ಮೋವಾಬ್ ದೇಶವು ಲವಣ ಸಮುದ್ರದ ಪೂರ್ವ ದಿಕ್ಕಿನಲ್ಲಿ ಕಂಡುಬರುತ್ತದೆ.
- ಮೋವಾಬ್ ಎನ್ನುವುದು ಬೆತ್ಲೆಹೇಮ್ ಪಟ್ಟಣದಿಂದ ಆಗ್ನೇಯ ಭಾಗದಲ್ಲಿತ್ತು, ಈ ಸ್ಥಳದಲ್ಲಿಯೇ ನೋವೊಮಿ ಕುಟುಂಬ ನಿವಾಸವಾಗಿತ್ತು.
- ಬೆತ್ಲೆಹೇಮಿನಲ್ಲಿರುವ ಜನರು "ಮೋವಾಬ್ಯಳ' ರೂತಳು ಕರೆಯಲ್ಪಟ್ಟರು, ಯಾಕಂದರೆ ಈಕೆ ಮೋವಾಬ್ ದೇಶದಿಂದ ಬಂದ ಸ್ತ್ರೀಯಳಾಗಿದ್ದಳು. ಈ ಪದವನ್ನು "ಮೋವಾಬ್ಯಳಾದ ಸ್ತ್ರೀ" ಅಥವಾ "ಮೋವಾಬ್ ದೇಶದಿಂದ ಬಂದಿರುವ ಸ್ತ್ರೀ" ಎಂದೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೆತ್ಲೆಹೇಮ್, ಯೂದಾ, ಲೋಟ, ರೂತಳು, ಲವಣ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.19:36-38
- ಆದಿ.36:34-36
- ರೂತಳು.01:1-2
- ರೂತಳು.01:22

ಪದ ಡೇಟಾ:

- Strong's: H4124, H4125

ಮೋಶೆ

ಸತ್ಯಾಂಶಗಳು:

ಮೋಶೆ ಸುಮಾರು 40 ವರ್ಷಗಳ ಕಾಲ ಇಸ್ರಾಯೇಲ್ ಜನರಿಗೆ ನಾಯಕನೂ ಮತ್ತು ಪ್ರವಾದಿಯೂ ಆಗಿದ್ದನು.

- ಮೋಶೆ ಶಿಶುವಾಗಿದ್ದಾಗ, ಮೋಶೆ ತಂದೆತಾಯಿಗಳು ತನ್ನನ್ನು ಐಗುಪ್ತ ಫರೋಹನಿಗೆ ಕಾಣಿಸದಂತೆ ಬಚ್ಚಿಡಬೇಕೆಂದು ಒಂದು ಬುಟ್ಟಿಯಲ್ಲಿಟ್ಟು ನೈಲ್ ನದಿಯಲ್ಲಿ ಬಿಟ್ಟಿದ್ದರು. ಮೋಶೆಯ ಅಕ್ಕ ಆ ನದಿಯಲ್ಲಿ ಹೋಗುತ್ತಿರುವ ಆ ಬುಟ್ಟಿಗೆ ಕಾವಲುಗಾರಳಾಗಿದ್ದಳು. ಆಗ ಫರೋಹನ ಮಗಳು ಆ ಬುಟ್ಟಿಯನ್ನು ಕಂಡುಕೊಂಡಾಗ ಮೋಶೆ ಪ್ರಾಣವು ಕಾಪಾಡಲ್ಪಟ್ಟಿತ್ತು ಮತ್ತು ಅವನನ್ನು ತನ್ನ ಮಗನನ್ನಾಗಿ ಬೆಳೆಸಿಕೊಳ್ಳಲು ಅರಮನೆಗೆ ಕರೆದುಕೊಂಡು ಹೋದಳು.
- ಐಗುಪ್ತ ದೇಶದಲ್ಲಿ ಗುಲಾಮಗಿರಿಯಲ್ಲಿರುವ ಇಸ್ರಾಯೇಲ್ಯರನ್ನು ಬಿಡಿಸುವುದಕ್ಕೆ ಮತ್ತು ಅವರನ್ನು ವಾಗ್ದಾನ ದೇಶದೊಳಗೆ ಸೇರಲು ನಡೆಸುವುದಕ್ಕೆ ದೇವರು ಮೋಶೆಯನ್ನು ಆದುಕೊಂಡರು.
- ಐಗುಪ್ತದಿಂದ ಇಸ್ರಾಯೇಲ್ಯರು ಬಿಡಿಸಲ್ಪಟ್ಟನಂತರ, ಅವರು ಅರಣ್ಯದಲ್ಲಿ ಹಾದು ಹೋಗುತ್ತಿರುವಾಗ, ದೇವರು ಮೋಶೆಗೆ ಹತ್ತು ಆಜ್ಞೆಗಳನ್ನು ಬರೆದಿರುವ ಎರಡು ಶಿಲಾಶಾಸನಗಳನ್ನು ಕೊಟ್ಟನು.
- ಆತನ ಕೊನೆಯ ಜೀವನದಲ್ಲಿ, ಮೋಶೆ ವಾಗ್ದಾನ ದೇಶವನ್ನು ನೋಡಿದನು, ಆದರೆ ಆ ದೇಶದೊಳಗೆ ಪ್ರವೇಶವಾಗಲಿಲ್ಲ, ಯಾಕಂದರೆ ಆತನು ದೇವರಿಗೆ ಅವಿಧೇಯನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಮಿರ್ಯಾಮ, ವಾಗ್ದಾನ ದೇಶ, ಹತ್ತು ಆಜ್ಞೆಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:20-21
- ಅಪೊ.ಕೃತ್ಯ.07:29-30
- ವಿಮೋ.02:9-10
- ವಿಮೋ.09:1-4
- ಮತ್ತಾಯ.17:3-4
- ರೋಮಾ.05:14-15

ಸತ್ಯವೇದದಿಂದ ಉದಾಹರಣೆಗಳು:

- _**09:12** ಒಂದು ದಿನ **ಮೋಶೆ** _ ಕುರಿಗಳನ್ನು ಮೇಯಿಸುತ್ತಿರುವಾಗ, ಅವನು ಉರಿಯುತ್ತಿರುವ ಪೊದೆಯನ್ನು ನೋಡಿದನು.
- _**12:05** “ಹೆದರುವುದನ್ನು ನಿಲ್ಲಿಸಿರಿ, ಈ ದಿನದಂದು ದೇವರು ನಿಮಗಾಗಿ ಯುದ್ಧ ಮಾಡುವನು ಮತ್ತು ನಿಮ್ಮನ್ನು ರಕ್ಷಿಸುವನು” ಎಂದು **ಮೋಶೆ** _ ಇಸ್ರಾಯೇಲ್ಯರಿಗೆ ಹೇಳಿದನು.
- _**12:07** ಸಮುದ್ರದ ಮೇಲೆ ನಿನ್ನ ಕೈಯನ್ನು ಚಾಚಿ, ನೀರು ವಿಭಾಗಿಸುವಂತೆ ಮಾಡಬೇಕೆಂದು ದೇವರು **ಮೋಶೆಗೆ** _ ಹೇಳಿದನು.
- _**12:12**_ ಐಗುಪ್ತದವರೆಲ್ಲರು ಸತ್ತು ಹೋಗಿರುವುದನ್ನು ಇಸ್ರಾಯೇಲ್ಯರು ನೋಡಿದಾಗ, ಅವರು ದೇವರಲ್ಲಿ ಭರವಸೆವಿಟ್ಟರು ಮತ್ತು ಮೋಶೆ ದೇವರ ಪ್ರವಾದಿಯೆಂದು ನಂಬಿದರು.
- _**13:07** ಇದಾದನಂತರ, ದೇವರು ಈ ಎರಡು ಶಿಲಾಶಾಸನಗಳ ಮೇಲೆ ಈ ಹತ್ತು ಆಜ್ಞೆಗಳನ್ನು ಬರೆದು, ಅವುಗಳನ್ನು **ಮೋಶೆಗೆ** _ ಕೊಟ್ಟನು.

ಪದ ಡೇಟಾ:

- Strong's: H4872, H4873, G3475

ಯಾಕೋಬ (ಅಲ್ಫಾಯ ಮಗ)

ಸತ್ಯಾಂಶಗಳು:

ಅಲ್ಫಾಯ ಮಗನಾದ ಯಾಕೋಬನು ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾಗಿದ್ದನು.

- ಇವನ ಹೆಸರನ್ನು ಮತ್ತಾಯ, ಮಾರ್ಕ ಮತ್ತು ಲೂಕ ಸುವಾರ್ತೆಗಳಲ್ಲಿ ದಾಖಲಿಸಿದ ಯೇಸುವಿನ ಶಿಷ್ಯರುಗಳ ಪಟ್ಟಿಯಲ್ಲಿ ಕೊಡಲ್ಪಟ್ಟಿದೆ.
- ಯೇಸು ಪರಲೋಕಕ್ಕೆ ಹಿಂದುರಿಗೆ ಹೋದನಂತರ ಯೆರೂಸಲೇಮಿನಲ್ಲಿ ಒಂದು ಸ್ಥಳದಲ್ಲಿ ಸೇರಿ ಪ್ರಾರ್ಥಿಸುತ್ತಿರುವ ಹನ್ನೊಂದುಮಂದಿ ಶಿಷ್ಯರಲ್ಲಿ ಒಬ್ಬನಾಗಿ ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಇವನ ಹೆಸರನ್ನು ದಾಖಳಿಸಲಾಗಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ಶಿಷ್ಯ, ಯಾಕೋಬ (ಯೇಸುವಿನ ಸಹೋದರ), ಯಾಕೋಬ (ಜೆಬೆದಾಯನ ಮಗ), ಹನ್ನೆರಡು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.01:12-14
- ಲೂಕ.06:14-16
- ಮಾರ್ಕ.03:17-19
- ಮಾರ್ಕ.14:32-34
- ಮತ್ತಾಯ.10:2-4

ಪದ ಡೇಟಾ:

- Strong's: G2385

ಯಾಕೋಬ (ಜೆಬೆದಾಯನ ಮಗ)

ಸತ್ಯಾಂಶಗಳು:

ಯಾಕೋಬ, ಜೆಬೆದಾಯನ ಮಗ, ಯೇಸು ಕ್ರಿಸ್ತನ ಹನ್ನೆರಡು ಮಂದಿ ಅಪೊಸ್ತಲರಲ್ಲಿ ಒಬ್ಬನಾಗಿದ್ದನು. ಇವನಿಗೆ ಯೋಹಾನನೆಂಬ ಚಿಕ್ಕ ತಮ್ಮನಿದ್ದನು, ಇವನು ಕೂಡ ಯೇಸುವಿನ ಅಪೊಸ್ತಲರಲ್ಲಿ ಒಬ್ಬನಾಗಿದ್ದನು.

- ಯಾಕೋಬನು ಮತ್ತು ತನ್ನ ತಮ್ಮನಾದ ಯೋಹಾನನ್ನು ತನ್ನ ತಂದೆಯಾದ ಜೆಬೆದಾಯನೊಂದಿಗೆ ಮೀನುಗಳನ್ನು ಹಿಡಿಯುವ ಕೆಲಸ ಮಾಡುತ್ತಿದ್ದನು.
- ಯಾಕೋಬ ಮತ್ತು ಯೋಹಾನರಿಗೆ "ಸಿಡಿಲ ಮರಿಗಳು" ಎಂದು ಮುದ್ದಿನ ಹೆಸರಿತ್ತು, ಬಹುಶಃ ಅವರು ಅತಿ ಬೇಗನೆ ಕೋಪಗೊಳ್ಳುತ್ತಿರಬಹುದು.
- ಪೇತ್ರ, ಯಾಕೋಬ ಮತ್ತು ಯೋಹಾನರು ಯೇಸುವಿನ ಅತೀ ಹತ್ತಿರವಾದ ಶಿಷ್ಯರು, ಇವರು ಆತನೊಂದಿಗೆ ಮೋಶೆ ಮತ್ತು ಎಲೀಯರು ಪರ್ವತದ ಮೇಲೆ ಕಾಣಿಸಿಕೊಂಡಾಗ ಇದ್ದಿದ್ದರು, ಯೇಸು ಸತ್ತಂತ ಹುಡಿಗಿಯನ್ನು ತಿರುಗಿ ಎಬ್ಬಿಸಿದಾಗ ಅಲ್ಲಿಯೇ ಇದ್ದಿದ್ದರು. ಹೀಗೆ ಅವರು ಅದ್ಭುತವಾದ ಕಾರ್ಯಗಳು ನಡೆದ ಅನೇಕ ಸಂಘಟನೆಗಳಲ್ಲಿ ಇದ್ದುಕೊಂಡಿದ್ದರು.
- ಈ ಯಾಕೋಬನು ಮತ್ತು ಸತ್ಯವೇದದಲ್ಲಿ ಒಂದು ಪುಸ್ತಕವನ್ನು ಬರೆದ ಯಾಕೋಬನು ಬೇರೆ ಬೇರೆಯಾಗಿರುತ್ತಾರೆ. * ಕೆಲವೊಂದು ಭಾಷೆಗಳಲ್ಲಿ ಇವರಿಬ್ಬರ ವಿಷಯದಲ್ಲಿ ಇವರಿಬ್ಬರು ವಿಭಿನ್ನವಾದ ವ್ಯಕ್ತಿಗಳೆಂದು ಸ್ಪಷ್ಟತೆ ಬರುವುದಕ್ಕೆ ಅವರ ಹೆಸರುಗಳನ್ನು ಬೇರೆ ಬೇರೆಯಾಗಿ ಬರೆಯುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ಎಲೀಯ, ಯಾಕೋಬ (ಯೇಸುವಿನ ತಮ್ಮ), ಯಾಕೋಬ (ಅಲ್ಫಾಯ ಮಗ), ಮೋಶೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.09:28-29
- ಮಾರ್ಕ.01:19-20
- ಮಾರ್ಕ.01:29-31
- ಮಾರ್ಕ.03:17-19
- ಮತ್ತಾಯ.04:21-22
- ಮತ್ತಾಯ.17:1-2

ಪದ ಡೇಟಾ:

- Strong's: G2385

ಯಾಕೋಬ (ಯೇಸು ಸಹೋದರ)

ಸತ್ಯಾಂಶಗಳು:

ಯಾಕೋಬನು ಯೋಸೇಫ ಮತ್ತು ಮರಿಯಳ ಮಗನಾಗಿದ್ದನು. ಇವನು ಯೇಸುವಿನ ಸಹೋದರರಲ್ಲಿ ಒಬ್ಬನಾಗಿದ್ದನು.

- ಯೇಸುವಿನ ತಮ್ಮಂದಿರ ಹೆಸರುಗಳು ಯೋಸೇಫ, ಯೂದ ಮತ್ತು ಸೀಮೋನ.
- ಯೇಸು ಜೀವಿಸಿದ ದಿನಗಳಲ್ಲಿ ಯಾಕೋಬ ಮತ್ತು ತನ್ನ ಸಹೋದರರು ಯೇಸು ಮೆಸ್ಸೀಯಯೆಂದು ನಂಬಲಿಲ್ಲ.
- ಸ್ವಲ್ಪಕಾಲವಾದನಂತರ, ಯೇಸು ಮರಣದಿಂದ ಎಬ್ಬಿಸಲ್ಪಟ್ಟನಂತರ, ಯಾಕೋಬನು ಈತನಲ್ಲಿ ನಂಬಿದನು ಮತ್ತು ಯೆರೂಸಲೇಮಿನಲ್ಲಿರುವ ಸಭೆಗೆ ನಾಯಕನಾದನು.

ಹೊಸ ಒಡಂಬಡಿಕೆ ಪುಸ್ತಕವಾಗಿರುವ ಯಾಕೋಬ ಪತ್ರಿಕೆಯನ್ನು ಯಾಕೋಬನು ಹಿಂಸೆಗಳನ್ನು ಸಹಿಸಿಕೊಳ್ಳದೆ ಅನೇಕ ಪ್ರಾಂತ್ಯಗಳಿಗೆ ಚೆದರಿ ಹೋಗಿರುವ ಕ್ರೈಸ್ತರಿಗೆ ಬರೆದಿದ್ದಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ಕ್ರಿಸ್ತ, ಸಭೆ, ಯಾಕೋಬನ ಮಗ ಯೂದ, ಹಿಂಸೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.01:18-20
- ಗಲಾತ್ಯ.02:9-10
- ಯಾಕೋಬ.01:1-3
- ಯೂದ.01:1-2
- ಮಾರ್ಕ.09:1-3
- ಮತ್ತಾಯ.13:54-56

ಪದ ಡೇಟಾ:

- Strong's: G2385

ಯಾಕೋಬನ ಮಗನಾದ ಯೂದ

ಸತ್ಯಾಂಶಗಳು:

ಯಾಕೋಬನ ಮಗನಾದ ಯೂದನು ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾಗಿದ್ದನು. ಈ ಯೂದನು ಮತ್ತು ಇಸ್ಕರಿಯೋತ ಯೂದನು ಬೇರೆಯಾಗಿರುತ್ತಾರೆ ಎಂದು ಗಮನಿಸಬೇಕು.

- ಸತ್ಯವೇದದಲ್ಲಿ ಅನೇಕಸಲ ಪುರುಷರಿಗೆ ಒಂದೇ ಹೆಸರು ಇರುವಾಗ, ಅವರನ್ನು ತಮ್ಮ ತಂದೆಯ ಹೆಸರುಗಳನ್ನು ಜೋಡಿಸಿ ಕರೆಯುತ್ತಿದ್ದರು. ಇಲ್ಲಿ ಯೂದ ನು "ಯಾಕೋಬನ ಮಗ" ಎಂಬುದಾಗಿ ಗುರುತಿಸಲ್ಪಟ್ಟಿದ್ದಾನೆ.
- ಇನ್ನೊಬ್ಬ ವ್ಯಕ್ತಿ ಹೆಸರು ಕೂಡ ಯೂದ ಆಗಿದ್ದನು, ಆದರೆ ಇವನು ಯೇಸುವಿನ ತಮ್ಮನಾಗಿದ್ದನು. ಇವನನ್ನು "ಯೂದಾ" ಎಂದೂ ಕರೆಯುತ್ತಾರೆ.
- ಹೊಸ ಒಡಂಬಡಿಕೆಯಲ್ಲಿ "ಯೂದಾ" ಎಂದು ಕರೆಯಲ್ಪಡುವ ಪುಸ್ತಕವನ್ನು ಬಹುಶಃ ಯೇಸುವಿನ ಸಹೋದರನಾದ ಈ ಯುದಾನೇ ಬರೆದಿರಬಹುದು. ಯಾಕಂದರೆ ಈ ಪುಸ್ತಕದಲ್ಲಿ ರಚನಾಕಾರರು "ಯಾಕೋಬನ ಸಹೋದರ" ಎಂಬುದಾಗಿ ತನ್ನನ್ನು ವ್ಯಕ್ತಪಡಿಸಿಕೊಂಡಿದ್ದಾರೆ. ಯಾಕೋಬನು ಯೇಸುವಿನ ಮತ್ತೊಬ್ಬ ಸಹೋದರನಾಗಿದ್ದನು.
- ಯೂದಾ ಪುಸ್ತಕವು ಯಾಕೋಬನ ಮಗನು, ಯೇಸುವಿನ ಶಿಷ್ಯನಾದ ಯೂದಾನು ಬರೆದಿರುವುದಕ್ಕೆ ಸಾಧ್ಯತೆಗಳಿವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಯಾಕೋಬ (ಜೆಬೆದಾಯನ ಮಗ), ಯೂದಾ ಇಸ್ಕರಿಯೋತ, ಮಗ, ಹನ್ನೆರಡು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.01:12-14
- ಲೂಕ.06:14-16

ಪದ ಡೇಟಾ:

- Strong's: G2455

ಯಾರೊಬ್ಬಾಮ

ಸತ್ಯಾಂಶಗಳು:

ನೆಬಾಟನ ಮಗನಾದ ಯಾರೊಬ್ಬಾಮನು ಸುಮಾರು ಕ್ರಿ.ಪೂ.900-910 ರವರೆಗೆ ಆಳಿದ ಇಸ್ರಾಯೇಲ್ ಉತ್ತರ ರಾಜ್ಯದ ಮೊಟ್ಟ ಮೊದಲನೇ ಅರಸನಾಗಿದ್ದನು. ಇನ್ನೊಬ್ಬ ಯಾರೊಬ್ಬಾಮನು ಅರಸನಾದ ಯೋವಾಷನ ಮಗನಾಗಿರುತ್ತಾನೆ, ಇವನು ಸುಮಾರು 120 ವರ್ಷಗಳಿಗಿಂತ ಹೆಚ್ಚಾಗಿ ಇಸ್ರಾಯೇಲ್ ದೇಶವನ್ನು ಆಳಿರಬಹುದು.

- ಸೊಲೊಮೋನನ ನಂತರ ಅರಸನಾಗುವಿಯೆಂದು ಮತ್ತು ನೀನು ಇಸ್ರಾಯೇಲ್ ಹತ್ತು ಕುಲಗಳನ್ನು ಆಳುವಿಯೆಂದು ನೆಬಾಟನ ಮಗನಾದ ಯಾರೊಬ್ಬಾಮನಿಗೆ ಯೆಹೋವನು ಒಂದು ಪ್ರವಾದನೆಯನ್ನು ಕೊಟ್ಟನು,
- ಸೊಲೊಮೋನನು ಸತ್ತನಂತರ, ಇಸ್ರಾಯೇಲ್ ಉತ್ತರ ರಾಜ್ಯದ ಹತ್ತು ಕುಲಗಳು ಸೊಲೊಮೋನನ ಮಗನಾದ ರೆಹಬ್ಬಾಮನಿಗ ವಿರೋಧವಾಗಿ ತಿರಸ್ಕಾರ ಮಾಡಿದರು ಮತ್ತು ಅವರ ಅರಸನಾಗಿ ಯಾರೊಬ್ಬಾಮನನ್ನು ಮಾಡಿಕೊಳ್ಳುವುದಕ್ಕೆ ಬದಲಾಗಿ, ದಕ್ಷಿಣ ರಾಜ್ಯದಲ್ಲಿರುವ ಯೂದಾ ಮತ್ತು ಬೆನ್ಯಾಮೀನ ಎನ್ನುವ ಎರಡು ಕುಲಗಳಿಗೆ ಅರಸನಾಗುವಂತೆ ರೆಹಬ್ಬಾಮನಿಗೆ ಅವಕಾಶ ಕೊಟ್ಟರು.
- ಯಾರೊಬ್ಬಾಮ ದುಷ್ಟ ಅರಸನಾಗಿ ಮಾರ್ಪಟ್ಟನು, ಅಷ್ಟೇಅಲ್ಲದೆ ಜನರು ಯೆಹೋವನನ್ನು ಆರಾಧಿಸದಂತೆ ಮಾಡಿ, ಅವರೆಲ್ಲರು ಆರಾಧನೆ ಮಾಡುವುದಕ್ಕೆ ಕೆಲವೊಂದು ವಿಗ್ರಹಗಳನ್ನು ಸ್ಥಾಪಿಸಿದನು. ಉಳಿದ ಇಸ್ರಾಯೇಲ್ ಅರಸರೆಲ್ಲರು ಯಾರೊಬ್ಬಾಮನ ಮಾದರಿಯನ್ನು ಅನುಸರಿಸಿದರು ಮತ್ತು ಅವನು ಇದ್ದಂತೆಯೇ ಅವರೆಲ್ಲರು ದುಷ್ಟರಾದರು.
- ಸುಮಾರು 120 ವರ್ಷಗಳಾದನಂತರ, ಯಾರೊಬ್ಬಾಮ ಹೆಸರಿನ ಮೇಲೆ ಇನ್ನೊಬ್ಬ ಅರಸನು ಇಸ್ರಾಯೇಲ್ ಉತ್ತರ ರಾಜ್ಯವನ್ನು ಆಳುವುದಕ್ಕೆ ಆರಂಭಿಸಿದನು. ಈ ಯಾರೊಬ್ಬಾಮನು ಅರಸನಾದ ಯೋವಾಷನ ಮಗನಾಗಿರುತ್ತಾನೆ ಮತ್ತು ಮುಂದಿದ್ದ ಇಸ್ರಾಯೇಲ್ ಅರಸರ ಹಾಗೆಯೇ ಇವನು ದುಷ್ಟನಾಗಿದ್ದನು.
- ಇಸ್ರಾಯೇಲ್ಯರ ಈ ದುಷ್ಟತನವನ್ನು ಹೊರತುಪಡಿಸಿ, ದೇವರು ಅವರ ಮೇಲೆ ಕರುಣೆ ತೋರಿಸಿದನು ಮತ್ತು ಯಾರೊಬ್ಬಾಮ ಎನ್ನುವ ಈ ಅರಸನು ಭೂಮಿ ಗಳಿಸುವುದಕ್ಕೆ ಅಂಟ್ಟು ತಮ್ಮ ಕ್ಷೇತ್ರಕ್ಕೆ ಗಡಿಗಳನ್ನು ಹಾಕುವುದಕ್ಕೆ ಸಹಾಯ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ಇಸ್ರಾಯೇಲ್ ರಾಜ್ಯ, ಯೂದಾ, ಸೊಲೊಮೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.05:16-17
- 1 ಅರಸ.12:1-2
- 2 ಪೂರ್ವ.09:29-31
- 2 ಅರಸ.03:1-3
- ಆಮೋಸ.01:1-2

ಸತ್ಯವೇದದಿಂದ ಉದಾಹರಣೆಗಳು:

- **18:08** ರೆಹಬ್ಬಾಮನಿಗೆ ವಿರುದ್ಧವಾಗಿ ತಿರಸ್ಕಾರ ಮಾಡಿದ ಇಸ್ರಾಯೇಲ್ ದೇಶದ ಹತ್ತು ಕುಲಗಳು ತಮಗೆ ಅರಸನನ್ನಾಗಿ _ ಯಾರೊಬ್ಬಾಮ _ ಎಂದು ಹೆಸರಿರುವ ಒಬ್ಬ ಮನುಷ್ಯನನ್ನು ನೇಮಿಸಿಕೊಂಡರು.
- **18:09** _ ಯಾರೊಬ್ಬಾಮನು _ ದೇವರಿಗೆ ವಿರುದ್ಧವಾಗಿ ತಿರಸ್ಕಾರ ಮಾಡಿದನು ಮತ್ತು ಜನರೆಲ್ಲರು ಪಾಪ ಮಾಡುವುದಕ್ಕೆ ಕಾರಣನಾದನು. ಯೂದಾ ರಾಜ್ಯದಲ್ಲಿರುವ ದೇವಾಲಯದಲ್ಲಿ ದೇವರನ್ನು ಆರಾಧಿಸುವುದರ ಬದಲಾಗಿ ಆರಾಧನೆ ಮಾಡುವುದಕ್ಕೆ ಇವನು ತನ್ನ ಜನರಿಗೋಸ್ಕರ ಎರಡು ವಿಗ್ರಹಗಳನ್ನು ಕಟ್ಟಿಸಿದನು.

ಪದ ಡೇಟಾ:

- Strong's: H3379

ಯೂದಯ ಸೀಮೆ

ಸತ್ಯಾಂಶಗಳು:

“ಯೂದಯ ಸೀಮೆ” ಎನ್ನುವ ಪದವು ಪುರಾತನ ಇಸ್ರಾಯೇಲಿನಲ್ಲಿರುವ ಒಂದು ಸೀಮೆಯ ಹೆಸರು. ಇದನ್ನು ಕೆಲವೊಂದುಬಾರಿ ಇಕ್ಕಟ್ಟಿನ ಭಾವನೆಯಲ್ಲಿ ಉಪಯೋಗಿಸುತ್ತಾರೆ ಮತ್ತು ಇನ್ನೂ ಕೆಲವೊಂದುಬಾರಿ ವಿಶಾಲವಾದ ಭಾವಾನೆಯಲ್ಲಿ ಉಪಯೋಗಿಸುತ್ತಾರೆ.

- ಕೆಲವೊಂದುಬಾರಿ “ಯೂದಯ ಸೀಮೆ” ಎನ್ನುವ ಪದವನ್ನು ಮೃತ ಸಮುದ್ರಕ್ಕೆ ಪಶ್ಚಿಮ ದಿಕ್ಕಿನಲ್ಲಿರುವ ಪುರಾತನ ಇಸ್ರಾಯೇಲ್ ದಕ್ಷಿಣ ಭಾಗದಲ್ಲಿರುವ ಸೀಮೆಯನ್ನು ಮಾತ್ರವೇ ಸೂಚಿಸುತ್ತದೆ. ಕೆಲವೊಂದು ಭಾಷಾಂತರಗಳಲ್ಲಿ ಇದನ್ನು “ಯೂದಾ” ಸೀಮೆ ಎಂದು ಕರೆಯುತ್ತಾರೆ.
- ಇನ್ನೂ ಕೆಲವೊಂದು ಸಮಯಗಳಲ್ಲಿ “ಯೂದಯ ಸೀಮೆ” ಎನ್ನುವದನ್ನು ವಿಶಾಲವಾದ ಭಾವನೆಯಲ್ಲಿ ಉಪಯೋಗಿಸುತ್ತಾರೆ, ಇದನ್ನು ಪುರಾತನ ಇಸ್ರಾಯೇಲ್ ಸೀಮೆಯನ್ನೆಲ್ಲಾ ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ. ಅದರಲ್ಲಿ ಗಲಿಲಾಯ, ಸಮಾರ್ಯ, ಪೆರೆಯ, ಇದುಮಾಯ ಮತ್ತು ಯೂದಯ (ಯೂದಾ) ಎನ್ನುವ ಪ್ರಾಂತಗಳನ್ನೂ ಸೂಚಿಸುತ್ತದೆ.
- ಒಂದುವೇಳೆ ಅನುವಾದಕರು ಇನ್ನೂ ಸ್ಪಷ್ಟಪಡಿಸಬೇಕೆಂದರೆ, ಯೂದಯ ವಿಶಾಲವಾದ ಭಾವನೆಯನ್ನು “ಯೂದಯ ದೇಶ” ಎಂದೂ ಅನುವಾದ ಮಾಡಬಹುದು ಮತ್ತು ಇಕ್ಕಟ್ಟಾದ ಭಾವನೆಯನ್ನು ಸೂಚಿಸುವುದನ್ನು “ಯೂದಯ ಸೀಮೆ” ಅಥವಾ “ಯೂದಾ ಸೀಮೆ” ಎಂದೂ ಅನುವಾದ ಮಾಡಬಹುದು, ಇದು ಪುರಾತನ ಇಸ್ರಾಯೇಲ್ ದೇಶದಲ್ಲಿ ಭಾಗವಾಗಿರುವದರಿಂದ ಮತ್ತು ಯೂದಾ ಕುಲದ ಜನರೆಲ್ಲರು ಅಲ್ಲಿಯೇ ನಿವಾಸ ಮಾಡಿರುವದರಿಂದ ಆ ರೀತಿ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಗಲಿಲಾಯ, ಎದೋಮ್, ಯೂದಾ, ಯೂದಾ, ಸಮಾರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.02:14-16
- ಅಪೊ.ಕೃತ್ಯ.02:8-11
- ಅಪೊ.ಕೃತ್ಯ.09:31-32
- ಅಪೊ.ಕೃತ್ಯ.12:18-19
- ಯೋಹಾನ.03:22-24
- ಲೂಕ.01:5-7
- ಲೂಕ.04:42-44
- ಲೂಕ.05:17
- ಮಾರ್ಕ.10:1-4
- ಮತ್ತಾಯ.02:1-3
- ಮತ್ತಾಯ.02:4-6
- ಮತ್ತಾಯ.02:22-23
- ಮತ್ತಾಯ.03:1-3
- ಮತ್ತಾಯ.19:1-2

ಪದ ಡೇಟಾ:

- Strong's: H3061, G2453

ಯೂದಾ

ಸತ್ಯಾಂಶಗಳು:

ಯೂದಾ ಯಾಕೋಬನ ಹಿರಿಯ ಗಂಡು ಮಕ್ಕಳಲ್ಲಿ ಒಬ್ಬನಾಗಿದ್ದನು. ತನ್ನ ತಾಯಿಯ ಹೆಸರು ಲೇಯಾ ಇವನ ಸಂತಾನದವರೆಲ್ಲರನ್ನು “ಯೂದಾ ಕುಲ” ಎಂದು ಕರೆಯುತ್ತಾರೆ.

- ಯೋಸೇಫನನ್ನು ಆಳವಾದ ಬಾವಿಯೊಳಗೆ ಸಾಯುವುದಕ್ಕೆ ಬಿಡುವುದಕ್ಕೆ ಬದಲಾಗಿ, ಅವನ ಚಿಕ್ಕ ತಮ್ಮನಾದ ಯೋಸೇಫನನ್ನು ಗುಲಾಮನನ್ನಾಗಿ ಮಾರುವುದಕ್ಕೆ ತನ್ನ ಸಹೋದರರಿಗೆ ಯೂದಾ ಸಲಹೆಯನ್ನು ಕೊಟ್ಟಿದ್ದರು.
- ಆತನ ಹೆಸರು "ಸ್ತುತಿ" ಎಂಬ ಅರ್ಥವನ್ನು ನೀಡುವ ಇಬ್ರಿಯ ಪದವನ್ನು ಹೋಲುತ್ತದೆ.
- ಅರಸನಾದ ದಾವೀದನು ಮತ್ತು ಅವನನಂತರ ಬಂದ ಎಲ್ಲಾ ಅರಸರು ಯೂದಾ ವಂಶದವರಾಗಿದ್ದರು. ಯೇಸು ಕೂಡ ಯೂದಾ ವಂಶಸ್ಥನಾಗಿದ್ದನು.
- ಸೊಲೊಮೋನನ ಆಳ್ವಿಕೆ ಮುಗಿದನಂತರ, ಇಸ್ರಾಯೇಲ್ ದೇಶವು ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿತು, ಯೂದಾ ರಾಜ್ಯವು ದಕ್ಷಿಣ ರಾಜ್ಯವಾಗಿತ್ತು.
- ಹಳೇ ಒಡಂಬಡಿಕೆಯಲ್ಲಿ, ಯೂದ ಹೆಸರನ್ನು ಕೆಲವೊಮ್ಮೆ ಇಸ್ರಾಯೇಲಿನ ಸಂಪೂರ್ಣ ದಕ್ಷಿಣ ಸಾಮ್ರಾಜ್ಯವನ್ನು ಉಲ್ಲೇಖಿಸಲು ಬಳಸಲಾಗುತ್ತದೆ.
- ಹೊಸ ಒಡಂಬಡಿಕೆಯ ಪುಸ್ತಕವಾಗಿರುವ ಪ್ರಕಟನೆ ಗ್ರಂಥದಲ್ಲಿ ಯೇಸುವನ್ನು “ಯೂದಾ ಸಿಂಹ” ಎಂದು ಕರೆಯಲ್ಪಟ್ಟಿದ್ದಾನೆ.
- “ಯೆಹೂದ್ಯ” ಮತ್ತು “ಯೆಹೂದ ಸೀಮೆ” ಎನ್ನುವ ಪದಗಳು “ಯೂದಾ” ಎನ್ನುವ ಹೆಸರಿನಿಂದ ಬಂದಿರುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯಾಕೋಬ, ಯೆಹೂದ್ಯ, ಯೂದಾ, ಯೆಹೂದ ಸೀಮೆ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:1-2
- 1 ಅರಸ.01:9-10
- ಆದಿ.29:35
- ಆದಿ.38:1-2
- ಲೂಕ.03:33-35
- ರೂತ.01:1-2

ಪದ ಡೇಟಾ:

- Strong's: H3063

ಯೂಫ್ರೇಟೀಸ್ ನದಿ, ಮಹಾ ನದಿ

ಸತ್ಯಾಂಶಗಳು:

ಏದೆನ್ ಉದ್ಯಾನವನದಲ್ಲಿ ಹರಿಯುತ್ತಿದ್ದ ನಾಲ್ಕು ನದಿಗಳಲ್ಲಿ ಒಂದು ನದಿಯ ಹೆಸರು ಯೂಫ್ರೇಟೀಸ್ ಆಗಿತ್ತು. ಈ ನದಿಯನ್ನು ಕುರಿತಾಗಿ ಸತ್ಯವೇದದಲ್ಲಿ ಹಲವಾರು ಬಾರಿ ಹೇಳಲ್ಪಟ್ಟಿದ್ದೆ.

- ಪ್ರಸ್ತುತ ಕಾಲದ ಯೂಫ್ರೇಟೀಸ್ ನದಿ ಮಿಡ್ಲ್ ಈಸ್ಟಿನಲ್ಲಿದ್ದೆ ಮತ್ತು ಅದು ಆಸ್ಯದಲ್ಲಿ ಅತಿ ಉದ್ದವಾದ ಹಾಗೂ ಬಹಳ ಪ್ರಾಮುಖ್ಯವಾದ ನದಿಯಾಗಿದೆ.
- ಯೂಫ್ರೇಟೀಸ್ ಮತ್ತು ಟೈಗ್ರೀಸ್ ನದಿಗಳು ಮೇಸಪೋತಮ್ಯ ಎಂಬ ಪ್ರಾಂತ್ಯಕ್ಕೆ ಸರಿಹದ್ದುಗಳಾಗಿರುತ್ತವೆ.
- ಅಬ್ರಾಮನು ನಿವಾಸ ಮಾಡಿದ ಪ್ರಾಚೀನ ಪಟ್ಟಣವಾದ ಉರ್ ಯೂಫ್ರೇಟೀಸ್ ನದಿಯ ತೀರದಲ್ಲಿತ್ತು.
- ಯೆಹೋವ ಅಬ್ರಾಮನ ಸಂಗಡ ಒಡಂಬಡಿಕೆ ಮಾಡಿದ ದೇಶದಲ್ಲಿ ಈ ನದಿಯ ತೀರವು ಸರಿಹದ್ದು ಆಗಿತ್ತು. (Genesis 15:18).
- ಯೂಫ್ರೇಟೀಸ್ ನದಿಯನ್ನು “ಮಹಾ ನದಿ” ಎಂದು ಕರೆಯುತ್ತಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.05:7-9
- 2 ಪೂರ್ವ.09:25-26
- ವಿಮೋ.23:30-33
- ಆದಿ.02:13-14
- ಯೆಶಯ.07:20-22

ಪದ ಡೇಟಾ:

- Strong's: H5104, H6578, G2166

ಯೆಫೆತ್

ಸತ್ಯಾಂಶಗಳು:

ಯೆಫೆತ್ ನೋಹನ ಮೂರು ಗಂಡು ಮಕ್ಕಳಲ್ಲಿ ಒಬ್ಬನಾಗಿರುತ್ತಾನೆ.

- ಭೂಮಿಯನ್ನೆಲ್ಲಾ ಪ್ರಪಂಚದಾದ್ಯಂತ ಬಂದಿರುವ ಪ್ರಳಯದೊಂದಿಗೆ ತುಂಬಿದ ಸಮಯದಲ್ಲಿ ಯೆಫೆತ್ ಮತ್ತು ತನ್ನ ಇಬ್ಬರು ಸಹೋದರರು ತಮ್ಮ ಹೆಂಡತಿಗಳ ಜೊತೆಯಲ್ಲಿ ನೋಹನೊಂದಿಗೆ ಇದ್ದಿದ್ದರು.
- ನೋಹನ ಗಂಡು ಮಕ್ಕಳನ್ನು ಸಹಜವಾಗಿ "ಶೇಮ್, ಹಾಮ್ ಮತ್ತು ಯೆಫೆತ್" ಎಂದು ದಾಖಲಿಸಲಾಗಿದೆ. ಇದರಿಂದ ಯೆಫೆತನು ಕೊನೆಯವನಾಗಿ ಅಂದರೆ ಅವರ ಚಿಕ್ಕ ತಮ್ಮನಾಗಿ ಕಾಣಿಸಿಕೊಳ್ಳುತ್ತಿದ್ದಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನಾವೆ, ಪ್ರಳಯ, ಹಾಮ್, ನೋಹ, ಶೇಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:1-4
- ಆದಿ.05:32
- ಆದಿ.06:9-10
- ಆದಿ.07:13-14
- ಆದಿ.10:1

ಪದ ಡೇಟಾ:

- Strong's: H3315

ಯೆಫ್ತಾಹ

ಸತ್ಯಾಂಶಗಳು:

ಯೆಫ್ತಾಹ ಎನ್ನುವ ವ್ಯಕ್ತಿ ಇಸ್ರಾಯೇಲ್ ರಾಜ್ಯದ ಮೇಲೆ ನ್ಯಾಯಾಧೀಶನಾಗಿ ಸೇವೆ ಮಾಡಿದ ಗಿಲ್ಯಾದ್,ನಿಂದ ಬಂದ ಯುದ್ಧವೀರನಾಗಿದ್ದನು.

- ಇಬ್ರಿ 11:32 ವಚನದಲ್ಲಿ ಯೆಫ್ತಾಹನು ತನ್ನ ಜನರ ಶತ್ರುಗಳಿಂದ ತನ್ನ ಜನರನ್ನು ಬಿಡುಗಡೆಗೊಳಿಸಿದ ಪ್ರಾಮುಖ್ಯವಾದ ನಾಯಕನಾಗಿ ಎಣಿಸಲ್ಪಟ್ಟನು.
- ಇವನು ಇಸ್ರಾಯೇಲ್ಯರನ್ನು ಅಮ್ಮೋನಿಯರಿಂದ ರಕ್ಷಿಸಿದನು ಮತ್ತು ಎಫ್ರಾಯೀಮರನ್ನು ಸೋಲಿಸುವುದಕ್ಕೆ ತನ್ನ ಜನರನ್ನು ನಡೆಸಿದನು.
- ಏನೇಯಾದರೂ ಯೆಫ್ತಾಹನು ದೇವರೊಂದಿಗೆ ಒಂದು ಮೂರ್ಖತನದ ಪ್ರತಿಜ್ಞೆಯನ್ನು ಮಾಡಿದನು, ಕೊನೆಗೆ ಅದು ತನ್ನ ಮಗಳನ್ನು ಬಲಿ ಕೊಡಬೇಕಾದ ಪರಿಸ್ಥಿತಿ ಬಂದಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಮ್ಮೋನ್, ಬಿಡುಗಡೆಗೊಳಿಸು, ಎಫ್ರಾಯೀಮ್, ತೀರ್ಪು ಮಾಡು, ಪ್ರತಿಜ್ಞೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಇಬ್ರಿ.11:32-34
- ನ್ಯಾಯಾ.11:1-3
- ನ್ಯಾಯಾ.11:34-35
- ನ್ಯಾಯಾ.12:1-2

ಪದ ಡೇಟಾ:

- Strong's: H3316

ಯೆಬೂಸ್, ಯೆಬೂಸಿ, ಯೆಬೂಸಿಯರು

ಸತ್ಯಾಂಶಗಳು:

ಯೆಬೂಸಿಯರು ಒಂದು ಜನಾಂಗದವರು, ಇವರು ಕಾನಾನ್ ಭೂಮಿಯಲ್ಲಿ ನೆಲೆಗೊಂಡಿದ್ದರು. ಇವರು ಹಾಮ್ ಮಗನಾದ ಕನಾನ್.ಯಿಂದ ಬಂದ ಸಂತಾನದವರಾಗಿದ್ದರು.

- ಯೆಬೂಸಿಯರು ಯೆಬೂಸ್ ಎನ್ನುವ ಪಟ್ಟಣದಲ್ಲಿ ನಿವಾಸವಾಗಿದ್ದರು, ಮತ್ತು ಈ ಪಟ್ಟಣವನ್ನು ಅರಸನಾದ ದಾವೀದನು ವಶಪಡಿಸಿಕೊಂಡಾಗ ಇದಕ್ಕೆ ಯೆರೂಸಲೇಮ್ ಎನ್ನುವ ಹೆಸರು ಇಟ್ಟನು.
- ಶಾಲೆಮ್ ಅರಸನಾಗಿರುವ ಮೆಲ್ಕಿಚೆದಕನು ಬಹುಶಃ ಯೆಬೂಸಿಯರ ಮೂಲವಾಗಿರಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ: ಕನಾನ್, ಹಾಮ್, ಯೆರೂಸಲೇಮ್, ಮೆಲ್ಕಿಚೆದಕ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.01:13-16
- 1 ಅರಸ.09:20-21
- ವಿಮೋ.03:7-8
- ಆದಿ.10:15-18
- ಯೆಹೋ.03:9-11
- ನ್ಯಾಯಾ.01:20-21

ಪದ ಡೇಟಾ:

- Strong's: H2982, H2983

ಯೆರಿಕೋ

ಸತ್ಯಾಂಶಗಳು:

ಯೆರಿಕೋ ಎನ್ನುವುದು ಕಾನಾನ್ ಭೂಮಿಯಲ್ಲಿ ತುಂಬಾ ಶಕ್ತಿಯುತವಾದ ಪಟ್ಟಣವಾಗಿದ್ದಿತ್ತು. ಇದು ಯೋರ್ದನ್ ನದಿ ಪಶ್ಚಿಮ ಭಾಗದಲ್ಲಿ ಮತ್ತು ಉಪ್ಪು ಸಮುದ್ರದ ಉತ್ತರ ಭಾಗದಲ್ಲಿ ಕಂಡುಬರುತ್ತದೆ.

- ಎಲ್ಲಾ ಕಾನಾನ್ಯರು ಮಾಡಿದಂತೆ, ಯೆರಿಕೋದಲ್ಲಿರುವ ಜನರು ಕೂಡ ಸುಳ್ಳು ದೇವರುಗಳನ್ನು ಆರಾಧನೆ ಮಾಡಿದ್ದರು.
- ಇಸ್ರಾಯೇಲ್ಯರು ಜಯಿಸುವುದಕ್ಕೆ ದೇವರು ಹೇಳಿದ ಮೊಟ್ಟ ಮೊದಲನೇ ಪಟ್ಟಣ ಕಾನಾನ್ ಭೂಮಿಯಲ್ಲಿರುವ ಯೆರಿಕೋ ಆಗಿತ್ತು.
- ಯೆರಿಕೋಗೆ ವಿರುದ್ಧವಾಗಿ ಯೆಹೋಶುವನು ಇಸ್ರಾಯೇಲ್ಯರನ್ನು ನಡಿಸಿದಾಗ, ಆ ಪಟ್ಟಣವನ್ನು ಸೋಲಿಸುವುದಕ್ಕೆ ಸಹಾಯ ಮಾಡಲು ದೇವರು ದೊಡ್ಡ ಅದ್ಭುತ ಕಾರ್ಯವನ್ನು ಮಾಡಿದರು.

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಯೋರ್ದನ್ ನದಿ, ಯೆಹೋಶುವ, ಅದ್ಭುತ, ಉಪ್ಪು ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.06:77-79
- ಯೆಹೋ.02:1-3
- ಯೆಹೋ.07:2-3
- ಲೂಕ.18:35-37
- ಮಾರ್ಕ.10:46-48
- ಮತ್ತಾಯ.20:29-31
- ಅರಣ್ಯ.22:1

ಸತ್ಯವೇದದಿಂದ ಉದಾಹರಣೆಗಳು:

- _**15:01** ಯೆಹೋಶುವ ಕಾನಾನ್ ಪಟ್ಟಣವಾಗಿರುವ **ಯೆರಿಕೋಗೆ** _ ಇಬ್ಬರು ಗೂಢಚಾರಿಗಳನ್ನು ಕಳುಹಿಸಿದನು.
- _**15:03** ಜನರೆಲ್ಲರು ಯೋರ್ದನ್ ನದಿಯನ್ನು ದಾಟಿದನಂತರ, ಮಹಾ ಶಕ್ತಿಯುಳ್ಳ **ಯೆರಿಕೋ** _ ಪಟ್ಟಣವನ್ನು ಹೇಗೆ ಧಾಳಿ ಮಾಡಬೇಕೆಂದು ದೇವರು ಯೆಹೋಶುವನಿಗೆ ಹೇಳಿದನು.
- _**15:05** ಅದಾದನಂತರ **ಯೆರಿಕೋ** _ ಸುತ್ತಲು ಇರುವ ಗೋಡೆಗಳು ಬಿದ್ದುಹೋದವು! ದೇವರು ಆಜ್ಞಾಪಿಸಿದ ಪ್ರಕಾರವೇ ಪಟ್ಟಣದಲ್ಲಿರುವ ಪ್ರತಿಯೊಂದನ್ನು ಇಸ್ರಾಯೇಲ್ಯರು ನಾಶ ಮಾಡಿದರು.

ಪದ ಡೇಟಾ:

- Strong's: H3405, G2410

ಯೆರೂಸಲೇಮ್

ಸತ್ಯಾಂಶಗಳು:

ಯೆರೂಸಲೇಮ್ ಮೂಲತಃ ಪ್ರಾಚೀನ ಕಾನಾನ್ಯರ ಪಟ್ಟಣವಾಗಿದ್ದು ಅದು ನಂತರ ಇಸ್ರಾಯೇಲ್ ನ ಪ್ರಮುಖ ಪಟ್ಟಣವಾಯಿತು. ಇದು ಬೆತ್ಲೆಹೇಮ್ ಊರಿನ ಉತ್ತರ ದಿಕ್ಕಿಗೆ ಮತ್ತು ಮೃತ ಸಮುದ್ರ ಪಶ್ಚಿಮದ ಕಡೆಗೆ 34 ಕಿಲೋಮೀಟರ್ ದೂರದಲ್ಲಿರುತ್ತದೆ. ಇದು ಇವತ್ತಿಗೂ ಇಸ್ರಾಯೇಲ್ ದೇಶಕ್ಕೆ ರಾಜಧಾನಿಯಾಗಿರುತ್ತದೆ.

- "ಯೆರೂಸಲೇಮ್" ಎನ್ನುವ ಹೆಸರು ಮೊಟ್ಟ ಮೊದಲು ಯೆಹೋಶುವ ಗ್ರಂಥದಲ್ಲಿ ದಾಖಲಿಸಲಾಗಿರುತ್ತದೆ. ಈ ಪಟ್ಟಣಕ್ಕೆ ಹಳೇ ಒಡಂಬಡಿಕೆಯಲ್ಲಿ "ಸಾಲೇಮ್" "ಯೆಬೂಸಿಯರ ಪಟ್ಟಣ" ಮತ್ತು "ಚೀಯೋನ್" ಎನ್ನುವ ಪದಗಳನ್ನೂ ಉಪಯೋಗಿಸಿದ್ದಾರೆ. "ಯೆರೂಸಲೇಮ್" ಮತ್ತು "ಸಾಲೇಮ್" ಎನ್ನುವ ಎರಡು ಪದಗಳಿಗೆ "ಸಮಾಧಾನ" ಎನ್ನುವ ಮೂಲಾರ್ಥವಿದೆ.
- ಯೆರೂಸೇಲಮ್ ಎನ್ನುವುದು ವಾಸ್ತವಿಕವಾಗಿ "ಚೀಯೋನ್" ಎನ್ನುವ ಹೆಸರಿನ ಮೇಲೆ ಯೆಬೂಸಿಯರ ಕೋಟೆಯಾಗಿತ್ತು, ಇದನ್ನು ದಾವೀದನು ವಶಪಡಿಸಿಕೊಂಡು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.

ದಾವೀದನ ಮಗನಾಗಿರುವ ಸೊಲೊಮೋನನು ಯೆರೂಸಲೇಮಿನಲ್ಲಿಯೇ ಮೊಟ್ಟ ಮೊದಲು ಮೊರಿಯಾ ಪರ್ವತದ ಮೇಲೆ ದೇವಾಲಯವನ್ನು ನಿರ್ಮಿಸಿದನು, ಈ ಪರ್ವತದ ಮೇಲೆಯೇ ಅಬ್ರಾಹಾಮನು ಇಸಾಕನನ್ನು ದೇವರಿಗೆ ಸರ್ವಾಂಗ ಹೋಮವನ್ನಾಗಿ ಅರ್ಪಿಸಿದನು. ಅಲ್ಲಿರುವ ದೇವಾಲಯವು ಬಾಬೆಲೋನಿಯರಿಂದ ನಾಶಕ್ಕೊಳಗಾದನಂತರ ಅಲ್ಲಿ ಮತ್ತೊಮ್ಮೆ ದೇವಾಲಯವನ್ನು ತಿರುಗಿ ನಿರ್ಮಿಸಿದರು.

- ಯೆರೂಸಲೇಮಿನಲ್ಲಿ ದೇವಾಲಯ ಇರುವುದರಿಂದ, ಯೆಹೂದ್ಯರ ದೊಡ್ಡ ಹಬ್ಬಗಳು ಅಲ್ಲೇ ಆಚರಿಸುತ್ತಿದ್ದರು.
- ಸಾಮಾನ್ಯವಾಗಿ ಜನರು ಯೆರೂಸಲೇಮಿಗೆ "ಏರಿ" ಹೋಗುತ್ತಿದ್ದರು, ಯಾಕಂದರೆ ಇದು ಬೆಟ್ಟಗುಡ್ಡಗಳ ಮಧ್ಯೆ ಇದೆ.

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನ, ಕ್ರಿಸ್ತ, ದಾವೀದ, ಜೆಬೂಸಿಯರು, ಯೇಸು, ಸೊಲೊಮೋನ, ದೇವಾಲಯ, ಚೀಯೋನ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.04:26-27
- ಯೋಹಾನ.02:13-14
- ಲೂಕ.04:9-11
- ಲೂಕ.13:4-5
- ಮಾರ್ಕ.03:7-8
- ಮಾರ್ಕ.03:20-22
- ಮತ್ತಾಯ.03:4-6
- ಮತ್ತಾಯ.04:23-25
- ಮತ್ತಾಯ.20:17-19

ಸತ್ಯವೇದದಿಂದ ಉದಾಹರಣೆಗಳು:

- **17:05** ದಾವೀದನು _ **ಯೆರೂಸೇಲಮನ್ನು** _ ಜಯಿಸಿದನು ಮತ್ತು ಅದನ್ನು ತನ್ನ ಮುಖ್ಯ ಪಟ್ಟಣವನ್ನಾಗಿ ಮಾಡಿಕೊಂಡನು.
- **18:02** ಸೊಲೊಮೋನನು _ **ಯೆರೂಸಲೇಮಿನಲ್ಲಿ** _ ದೇವಾಲಯವನ್ನು ಕಟ್ಟಿದನು, ಯಾಕಂದರೆ ತನ್ನ ತಂದೆಯಾದ ದಾವೀದನು ಪ್ರಣಾಳಿಕೆ ಮಾಡಿದ್ದನು ಮತ್ತು ಎಲ್ಲಾ ವಸ್ತುಗಳನ್ನು ಸಂಗ್ರಹಿಸಿದ್ದನು.
- **20:07** ಅವರು (ಬಾಬೆಲೋನಿಯರು)_ **ಯೆರೂಸಲೇಮ್** _ ಸ್ವಾಧೀನ ಮಾಡಿಕೊಂಡರು, ದೇವಾಲಯವನ್ನು ಕೆಡಿಸಿದರು ಮತ್ತು ದೇವಾಲಯದಲ್ಲಿರುವ, ಪಟ್ಟಣದಲ್ಲಿರುವ ನಿಧಿಗಳೆಲ್ಲವುಗಳನ್ನು ತೆಗೆದುಕೊಂಡು ಹೋದರು.
- **20:12** ಸುಮಾರು ಎಪ್ಪತ್ತು ವರ್ಷಗಳು ಸೆರೆಯಲ್ಲಿದ್ದನಂತರ, ಯೆಹೂದ್ಯರ ಚಿಕ್ಕ ಗುಂಪು ಯೂದಾದಲ್ಲಿರುವ _ ಯೆರೂಸಲೇಮ್ _ ಪಟ್ಟಣಕ್ಕೆ ಹಿಂದುರಿಗಿದರು.
- **38:01** ಮೂವತ್ತು ವರ್ಷಗಳಾದನಂತರ ಯೇಸು ಬಹಿರಂಗವಾಗಿ ಬೋಧಿಸುವುದಕ್ಕೂ ಮತ್ತು ಪ್ರಸಂಗ ಮಾಡುವುದಕ್ಕೂ ಆರಂಭಿಸಿದರು, ಯೇಸು _ **ಯೆರೂಸಲೇಮಿನಲ್ಲಿ** _ ತನ್ನ ಶಿಷ್ಯರೊಂದಿಗೆ ಈ ಪಸ್ಕಾವನ್ನು ಆಚರಿಸಬೇಕೆಂದು ಬಯಸಿ ಆತನು ತನ್ನ ಶಿಷ್ಯರಿಗೆ ಹೇಳಿದನು ಮತ್ತು ಆತನು ಅಲ್ಲಿಯೇ ಮರಣ ಹೊಂದಬೇಕಾಗಿತ್ತು.
- **38:02** _ ಯೆರೂಸಲೇಮಿನೊಳಗೆ _ ಯೇಸು ಮತ್ತು ತನ್ನ ಶಿಷ್ಯರು ಬಂದನಂತರ, ಯೂದಾನು ಯೆಹೂದ್ಯರ ನಾಯಕರ ಬಳಿಗೆ ಹೋದನು ಮತ್ತು ಹಣಕ್ಕಾಗಿ ಯೇಸುವಿಗೆ ದ್ರೋಹ ಮಾಡಲು ಅವರೊಂದಿಗೆ ಒಪ್ಪಂದ ಮಾಡಿಕೊಂಡನು.
- **42:08** "ಎಲ್ಲಾ ಜನರು ತಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಹೊಂದಿಕೊಳ್ಳಬೇಕೆನ್ನುವ ಕ್ರಮದಲ್ಲಿ ಪ್ರತಿಯೊಬ್ಬರೂ ಮಾನಸಾಂತರ ಹೊಂದಬೇಕೆಂದು ನನ್ನ ಶಿಷ್ಯರು ಪ್ರಕಟಿಸುತ್ತಾರೆಂದು ವಾಕ್ಯಗಳಲ್ಲಿಯೂ ಬರೆಯಲ್ಪಟ್ಟಿದೆ. ಅವರು ಇದನ್ನು _ **ಯೆರೂಸಲೇಮಿನಲ್ಲಿ** _ ಆರಂಭ ಮಾಡಿ, ಪ್ರತಿಯೊಂದು ಸ್ಥಳದಲ್ಲಿ ನಿವಾಸವಾಗಿರುವ ಜನರ ಗುಂಪುಗಳ ಬಳಿಗೆ ಹೋಗುವರು."
- **42:11** ಯೇಸು ಮರಣದಿಂದ ಎದ್ದುಬಂದನಂತರ, "ಮೇಲಣ ಲೋಕದಿಂದ ಪವಿತ್ರಾತ್ಮನು ನಿಮ್ಮ ಮೇಲಕ್ಕೆ ಇಳಿದು ಬಂದಾಗ ನೀವು ಶಕ್ತಿಯನ್ನು ಹೊಂದುವವರೆಗೂ _ **ಯೆರೂಸಲೇಮಿನಲ್ಲಿಯೇ** _ ನಿಂತಿರಿ" ಎಂದು ಆತನು ತನ್ನ ಶಿಷ್ಯರಿಗೆ ಹೇಳಿದನು.

ಪದ ಡೇಟಾ:

- Strong's: H3389, H3390, G2414, G2415, G2419

ಯೆರೆಮೀಯ

ಸತ್ಯಾಂಶಗಳು:

ಯೆರೆಮೀಯ ಎನ್ನುವ ವ್ಯಕ್ತಿ ಯೂದಾ ರಾಜ್ಯದಲ್ಲಿ ದೇವರ ಪ್ರವಾದಿಯಾಗಿರುತ್ತಾನೆ. ಹಳೇ ಒಡಂಬಡಿಕೆಯಲ್ಲಿರುವ ಯೆರೆಮೀಯ ಗ್ರಂಥದಲ್ಲಿ ಆತನ ಪ್ರವಾದನೆಗಳು ಇರುತ್ತವೆ.

- ಅನೇಕ ಪ್ರವಾದಿಗಳಂತೆ, ಇಸ್ರಾಯೇಲ್ ಜನರ ಪಾಪ ಕೃತ್ಯಗಳಿಗಾಗಿ ದೇವರು ಅವರನ್ನು ಶಿಕ್ಷಿಸುತ್ತಾನೆಂದು ಯೆರೆಮೀಯ ಅವರನ್ನು ಎಚ್ಚರಿಸಿದನು.
- ಯೂದಾ ಜನರಲ್ಲಿ ಕೆಲವರನ್ನು ಸಿಟ್ಟಿಗೆಬ್ಬಿಸುತ್ತಾ, ಬಾಬೆಲೋನಿಯರು ಯೆರೂಸಲೇಮನ್ನು ವಶಪಡಿಸಿಕೊಳ್ಳುತ್ತಾರೆಂದು ಪ್ರವಾದಿಸಿದನು. ಅದಕ್ಕಾಗಿ ಆ ಜನರು ಅವನನ್ನು ಒಂದು ಆಳವಾದ ಒಣ ಬಾವಿಯಲ್ಲಿ ಹಾಕಿ, ಸಾಯುವುದಕ್ಕೆ ಆಲ್ಲೇ ಬಿಟ್ಟುಬಿಟ್ಟರು. ಆದರೆ ಆ ಬಾವಿಯಿಂದ ಯೆರೆಮೀಯಾನನ್ನು ರಕ್ಷಿಸುವುದಕ್ಕೆ ಯೂದಾ ಅರಸನು ತನ್ನ ಆಳುಗಳಿಗೆ ಆಜ್ಞಾಪಿಸಿದನು.
- ಯೆರೆಮೀಯಾ ತನ್ನ ಜನರ ಶ್ರಮೆಗಳ ಮತ್ತು ತಿರಸ್ಕಾರಗಳ ಮಧ್ಯೆದಲ್ಲಿದ್ದು ಆಳವಾದ ಬಾಧೆಯನ್ನು ಅಥವಾ ನೋವನ್ನು ಅನುಭವಿಸಿದ್ದನ್ನು ವ್ಯಕ್ತಗೊಳಿಸಲು, ನನ್ನ ನೇತ್ರಗಳು "ಕಣ್ಣೀರಿನ ಬುಗ್ಗೆಯಾಗಿದ್ದರೆ" ಎಷ್ಟೋ ಲೇಸು ಎಂದು ತನ್ನ ಗ್ರಂಥದಲ್ಲಿ ಬರೆದಿದ್ದಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಬಿಲೋನಿಯ, ಯೂದಾ, ಪ್ರವಾದಿ, ತಿರಸ್ಕಾರ, ಶ್ರಮಿಸು, ಬಾವಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.35:25
- ಯೆರೆ.01:1-3
- ಯೆರೆ.11:1-2
- ಮತ್ತಾಯ.02:17-18
- ಮತ್ತಾಯ.16:13-16
- ಮತ್ತಾಯ.27:9-10

ಸತ್ಯವೇದದಿಂದ ಉದಾಹರಣೆಗಳು:

- **19:17** ಪ್ರವಾದಿಯಾದ _ ಯೆರೆಮೀಯಾನನ್ನು _ ಒಣಗಿದ ಬಾವಿಯಲ್ಲಿ ಹಾಕಿ, ಅಲ್ಲೇ ಅವನು ಸಾಯುವುದಕ್ಕೆ ಬಿಟ್ಟುಬಿಟ್ಟರು. ಅವನು ಬಾವಿಯ ಕೆಳಭಾಗದಲ್ಲಿರುವ ಕೆಸರಿನಲ್ಲಿ ಸಿಳುಕಿಕೊಂಡನು, ಆದರೆ ಅರಸನು ಅವನ ಮೇಲೆ ದಯೆ ತೋರಿಸಿದ್ದನು ಮತ್ತು ಆ ಬಾವಿಯಲ್ಲಿ _ ಯೆರೆಮೀಯಾ _ ಸಾಯುವುದಕ್ಕೆ ಮುಂಚಿತವಾಗಿ, ಅವನನ್ನು ಮೇಲಕ್ಕೆ ಎಳೆಯಿರಿ ಎಂದು ತನ್ನ ದಾಸರಿಗೆ ಆಜ್ಞಾಪಿಸಿದನು.
- **21:05** ಪ್ರವಾದಿಯಾದ _ಯೆರೆಮೀಯಾ _ ಮೂಲಕ, ದೇವರು ಒಂದು ಹೊಸ ಒಡಂಬಡಿಕೆಯನ್ನು ಮಾಡುತ್ತೇನೆಂದು ವಾಗ್ದಾನ ಮಾಡಿದರು, ಆದರೆ ಸೀನಾಯಿ ಮೇಲೆ ಇಸ್ರಾಯೇಲ್.ನೊಂದಿಗೆ ಮಾಡಿದ ಒಡಂಬಡಿಕೆಯಂಥದ್ದಲ್ಲ.

ಪದ ಡೇಟಾ:

- Strong's: H3414, G2408

ಯೆಶಯಾ

ಸತ್ಯಾಂಶಗಳು:

ಯೆಶಯಾ ದೇವರ ಪ್ರವಾದಿಯಾಗಿದ್ದನು, ಇವರು ಯೂದಾ ರಾಜ್ಯವನ್ನು ನಾಲ್ಕು ಮಂದಿ ಆಳುತ್ತಿರುವ ಸಮಯದಲ್ಲಿ ಪ್ರವಾದಿಯಾಗಿದ್ದನು : ಉಜ್ಜೀಯ, ಯೋತಾಮ, ಆಹಾಜ ಮತ್ತು ಹಿಜ್ಕೀಯ.

- ಈತನು ಹಿಜ್ಕೀಯ ಆಳುವ ಕಾಲದಲ್ಲಿ ಪಟ್ಟಣವನ್ನು ಅಶ್ಶೂರಿಯರು ಧಾಳಿ ಮಾಡಿದ ಸಂದರ್ಭದಲ್ಲಿ ಯೆರೂಸಲೇಮಿನಲ್ಲಿ ಜೀವಿಸುತ್ತಿದ್ದನು.
- ಹಳೇ ಒಡಂಬಡಿಕೆಯ ಪುಸ್ತಕವಾಗಿರುವ ಯೆಶಯಾ ಗ್ರಂಥ ಸತ್ಯವೇದದ ದೊಡ್ಡ ಪುಸ್ತಕಗಳಲ್ಲಿ ಒಂದಾಗಿರುತ್ತದೆ.
- ಯೆಶಯನು ಅನೇಕ ಪ್ರವಾದನೆಗಳನ್ನು ಬರೆದಿದ್ದಾನೆ, ಆತನು ಜೀವಂತವಾಗಿರುವಾಗಲೇ ಅವುಗಳಲ್ಲಿ ಕೆಲವು ನಡೆದಿದ್ದವು.
- ಯೆಶಯಾನು ವಿಶೇಷವಾಗಿ ಪ್ರವಾದಿಸುವುದರಲ್ಲಿ ಪ್ರಸಿದ್ಧನಾಗಿದ್ದನು, ಮೆಸ್ಸೀಯಾನ ಕುರಿತಾಗ ಪ್ರವಾದನೆಯು ಸುಮಾರು 700 ವರ್ಷಗಳಾದನಂತರ ಅಂದರೆ ಯೇಸುವು ಈ ಭೂಮಿಯ ಮೇಲೆ ಬರುವ ಸಮಯದಲ್ಲಿ ನೇರವೆರಿಸಲ್ಪಟ್ಟಿತ್ತು.
- ಯೇಸು ಮತ್ತು ತನ್ನ ಶಿಷ್ಯರು ಮೆಸ್ಸೀಯನ ಕುರಿತಾಗಿ ಜನರಿಗೆ ಬೋಧನೆ ಮಾಡುವುದಕ್ಕೆ ಯೆಶಯಾನ ಪ್ರವಾದನೆಗಳನ್ನು ಕ್ರೋಡೀಕರಿಸಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಹಾಜ, ಅಶ್ಶೂರ, ಕ್ರಿಸ್ತ, ಹಿಜ್ಕೀಯ, ಯೋತಾಮ, ಪ್ರವಾದಿ, ಉಜ್ಜೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.20:1-3
- ಅಪೊ.ಕೃತ್ಯ.28:25-26
- ಯೆಶಯಾ.01:1
- ಲೂಕ.03:4
- ಮಾರ್ಕ.01:1-3
- ಮಾರ್ಕ.07:6-7
- ಮತ್ತಾಯ.03:1-3
- ಮತ್ತಾಯ.04:14-16

ಸತ್ಯವೇದದಿಂದ ಉದಾಹರಣೆಗಳು:

- **21:09** ಮೆಸ್ಸೀಯ ಒಬ್ಬ ಕನ್ಯೆಯ ಮೂಲಕ ಜನಿಸುವನೆಂದು ಪ್ರವಾದಿಯಾದ _ **ಯೆಶಯಾ** _ ಪ್ರವಾದಿಸಿದನು.
- **21:10** ಮೆಸ್ಸೀಯ ಗಲಿಲಾಯದಲ್ಲಿ ನಿವಾಸವಾಗಿರುವನು, ಮನ ಮುರಿದ ಜನರನ್ನು ಆದರಿಸುವನು, ಮತ್ತು ಸೆರೆಯಲ್ಲಿರುವವರಿಗೆ ಬಿಡುಗಡೆಯನ್ನು ಪ್ರಕಟಿಸುವನು ಮತ್ತು ಬಂಧಿತರನ್ನು ಬಿಡುಗಡೆಗೊಳಿಸುವನು ಎಂದು ಪ್ರವಾದಿಯಾದ _ **ಯೆಶಯಾ** _ ನುಡಿದನು.
- **21:11** ಮೆಸ್ಸೀಯನು ಯಾವ ಕಾರಣವಿಲ್ಲದೆ ದ್ವೇಷಿಸಲ್ಪಡುವನು ಮತ್ತು ತಿರಸ್ಕರಿಸಲ್ಪಡುವನು ಎಂದೂ ಪ್ರವಾದಿಯಾದ _ **ಯೆಶಯಾ** _ ಪ್ರವಾದಿಸಿದನು.
- **21:12** ಜನರು ಮೆಸ್ಸೀಯನನ್ನು ಉಗಿಯುವರು, ಹಿಯಾಳಿಸುವರು ಮತ್ತು ಹೊಡೆಯುವರು ಎಂದು _ **ಯೆಶಯಾ** _ ಪ್ರವಾದಿಸಿದನು.
- **26:02** ಅವರು ಪ್ರವಾದಿಯಾದ _ **ಯೆಶಾಯನ** _ ಸುರುಳಿಯನ್ನು ಓದಬೇಕೆಂದು ಆತನಿಗೆ (ಯೇಸುವಿಗೆ) ಕೊಟ್ಟರು. ಆಗ ಯೇಸು ಅದನ್ನು ತೆರೆದು, ಜನರೆಲ್ಲರಿಗೆ ಅದರ ಭಾಗವನ್ನು ಓದಿದನು.
- **45:08** ಫಿಲಿಪ್ಪನು ರಥವನ್ನು ಸಮೀಪಿಸಿದನಂತರ, ಪ್ರವಾದಿಯಾದ _ **ಯೆಶಯಾನು** _ ಬರೆದಿರುವ ಪುಸ್ತಕದಿಂದ ಇಥಿಯೋಪ್ಯನು ಓದುತ್ತಿರುವುದನ್ನು ಕೇಳಿಸಿಕೊಂಡನು.
- **45:10** _ **ಯೆಶಯಾನು** _ ಯೇಸುವಿನ ಕುರಿತಾಗಿ ಬರೆದಿದ್ದಾನೆಂದು ಫಿಲಿಪ್ಪನು ಇಥಿಯೋಪ್ಯದವನಿಗೆ ವಿವರಿಸಿ ಹೇಳಿದನು.

ಪದ ಡೇಟಾ:

- Strong's: H3470, G2268

ಯೆಹೂದ, ಯೆಹೂದ ರಾಜ್ಯ

ಸತ್ಯಾಂಶಗಳು:

ಯೆಹೂದ ಕುಲ ಎನ್ನುವುದು ಇಸ್ರಾಯೇಲ್ ಹನ್ನೆರಡು ಕುಲಗಳಲ್ಲಿ ಅತಿ ದೊಡ್ಡದಾದ ಕುಲ. ಯೆಹೂದ ಕುಲವು ಯೆಹೂದ ಮತ್ತು ಬೆನ್ಯಾಮೀನ ಕುಲಗಳಿಂದ ಉಂಟಾಗಿರುತ್ತದೆ.

- ಅರಸನಾದ ಸೊಲೊಮೋನನು ಸತ್ತುಹೋದನಂತರ, ಇಸ್ರಾಯೇಲ್ ರಾಜ್ಯವು ಎರಡು ರಾಜ್ಯಗಳಾಗಿ ವಿಂಗಡನೆಯಾಯಿತು: ಇಸ್ರಾಯೇಲ್ ಮತ್ತು ಯೆಹೂದ. ಯೆಹೂದ ರಾಜ್ಯವು ದಕ್ಷಿಣ ರಾಜ್ಯವಾಗಿರುತ್ತದೆ, ಇದು ಲವಣ ಸಮುದ್ರದ ಪಶ್ಚಿಮ ಭಾಗದಲ್ಲಿ ಕಂಡುಬರುತ್ತದೆ.
- ಯೆಹೂದ ರಾಜ್ಯದ ರಾಜಧಾನಿ ಪಟ್ಟಣವು ಯೆರೂಸಲೇಮ್ ಆಗಿತ್ತು.
- ಯೆಹೂದ ರಾಜ್ಯದ ಎಂಟು ಮಂದಿ ಅರಸರು ಯೆಹೋವನಿಗೆ ವಿಧೇಯರಾದರು ಮತ್ತು ಆತನನ್ನೇ ಜನರು ಆರಾಧನೆ ಮಾಡುವಂತೆ ಮಾಡಿದರು. ಯೆಹೂದದಲ್ಲಿರುವ ಇತರ ಅರಸರೆಲ್ಲರೂ ದುಷ್ಟರಾಗಿದ್ದರು ಮತ್ತು ಎಲ್ಲಾ ಜನರು ವಿಗ್ರಹಗಳಿಗೆ ಆರಾಧನೆ ಮಾಡುವಂತೆ ನಡೆಸಿದರು.
- ಅಶ್ಶೂರಿಯರು ಇಸ್ರಾಯೇಲ್ (ಉತ್ತರ ರಾಜ್ಯ) ರಾಜ್ಯವನ್ನು ಸೋಲಿಸಿ 120 ವರ್ಷಗಳಾದನಂತರ, ಯೆಹೂದ ರಾಜ್ಯವನ್ನು ಬಾಬೆಲೋನಿಯ ದೇಶದವರು ವಶಪಡಿಸಿಕೊಂಡರು. ಬಾಬೆಲೋನಿಯನ್ನರು ಪಟ್ಟಣವನ್ನು ಮತ್ತು ದೇವಾಲಯವನ್ನು ನಾಶಗೊಳಿಸಿದರು, ಮತ್ತು ಅನೇಕಮಂದಿ ಯೆಹೂದ್ಯರನ್ನು ಸೆರೆ ಹಿಡಿದು ಬಾಬೆಲೋನಿಯಾಗೆ ಕರೆದೊಯ್ದರು.

(ಈ ಪದಗಳನ್ನು ಸಹ ನೋಡಿರಿ : ಯೆಹೂದ, ಲವಣ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.30:26-28
- 2 ಸಮು.12:7-8
- ಹೋಶೆಯ.05:14-15
- ಯೆರೆ.07:33-34
- ನ್ಯಾಯಾ.01:16-17

ಸತ್ಯವೇದದಿಂದ ಉದಾಹರಣೆಗಳು:

- **18:07** ಅವನಿಗೆ (ರೆಹೊಬ್ಬಾಮನಿಗೆ) ಕೇವಲ ಎರಡು ಕುಲದವರು ಮಾತ್ರ ನಂಬಿಕೆಯಿಂದ ಇದ್ದರು. ಈ ಎರಡು ಕುಲಗಳು _ ಯೆಹೂದ ರಾಜ್ಯವಾಗಿ _ ಮಾರ್ಪಟ್ಟಿದವು.\
- **18:10** _ ಯೆಹೂದ ರಾಜ್ಯವು _ ಮತ್ತು ಇಸ್ರಾಯೇಲ್ ರಾಜ್ಯವು ಶತ್ರುಗಳಾದರು, ಮತ್ತು ಅವರು ಒಬ್ಬರಿಗೊಬ್ಬರ ವಿರುದ್ಧ ಹೋರಾಟ ಮಾಡಿಕೊಂಡರು. \
- **18:13** _ ಯೆಹೂದ ಅರಸರು _ ದಾವೀದನ ವಂಶಸ್ಥರಾಗಿದ್ದರು. ಈ ಅರಸರಲ್ಲಿ ಕೆಲವರು ಒಳ್ಳೆಯ ವ್ಯಕ್ತಿಗಳು, ನ್ಯಾಯವಾಗಿ ಪಾಲನೆ ಮಾಡಿದರು ಮತ್ತು ದೇವರನ್ನು ಆರಾಧಿಸಿದರು. ಆದರೆ _ ಯೆಹೂದದ _ ಅರಸರಲ್ಲಿ ಹೆಚ್ಚಿನ ಜನರು ದುಷ್ಟರು, ಭ್ರಷ್ಟರು ಮತ್ತು ಅವರು ವಿಗ್ರಹಗಳನ್ನು ಆರಾಧನೆ ಮಾಡಿದರು. \
- **20:01** _ ಯೆಹೂದ ಮತ್ತು ಇಸ್ರಾಯೇಲ್ ರಾಜ್ಯಗಳೆರಡು _ ದೇವರಿಗೆ ವಿರುದ್ಧವಾಗಿ ಪಾಪಮಾಡಿದರು.\
- **20:05** ದೇವರಿಗೆ ಅವಿಧೇಯರಾಗಿದ್ದಕ್ಕಾಗಿ ಮತ್ತು ಆತನಲ್ಲಿ ನಂಬಿಕೆ ಇಡದಿದ್ದಕ್ಕಾಗಿ ಇಸ್ರಯೇಲ್ ರಾಜ್ಯದ ಜನರನ್ನು ದೇವರು ಯಾವರೀತಿ ಶಿಕ್ಷಿಸಿದ್ದಾನೆಂದು _ ಯೆಹೂದ ರಾಜ್ಯದಲ್ಲಿರುವ _ ಜನರು ಚೆನ್ನಾಗಿ ನೋಡಿದ್ದಾರೆ. ಆದರೂ ಅವರು ವಿಗ್ರಹಗಳಿಗೆ ಆರಾಧನೆ ಮಾಡಿದರು, ಆ ವಿಗ್ರಹಗಳಲ್ಲಿ ಕಾನಾನ್ಯರ ಸುಳ್ಳು ದೇವರುಗಳೂ ಒಳಗೊಂಡಿದ್ದವು.
- **20:06** ಇಸ್ರಾಯೇಲ್ ರಾಜ್ಯವನ್ನು ಅಶ್ಶೂರಿಯನ್ನರು ನಾಶಗೊಳಿಸಿ ಸುಮಾರು 100 ವರ್ಷಗಳು ಆದನಂತರ, _ ಯೆಹೂದ ರಾಜ್ಯದ ಮೇಲೆ _ ಧಾಳಿ ಮಾಡುವುದಕ್ಕಾಗಿ ದೇವರು ಬಾಬೆಲೋನಿಯ ಅರಸನಾಗಿರುವ ನೆಬೂಕದ್ನೆಚ್ಚರನನ್ನು ಕಳುಹಿಸಿಕೊಟ್ಟರು. \
- **20:09** ನೆಬೂಕದ್ನೆಚ್ಚರ ಮತ್ತು ತನ್ನ ಸೈನ್ಯವು _ ಯೆಹೂದ ರಾಜ್ಯದಲ್ಲಿರುವ _ ಜನರೆಲ್ಲರನ್ನು ಬಾಬೆಲೋನಿಗೆ ಸೆರೆಗೊಯ್ದರು, ಆದರೆ ಹೊಲಗಳಲ್ಲಿ ಮತ್ತು ಮರಗಳ ಕೆಳಗೆ ಇರುವ ಬಡ ಜನರನ್ನು ಮಾತ್ರ ಅಲ್ಲಿಯೇ ಬಿಟ್ಟುಬಿಟ್ಟರು.

ಪದ ಡೇಟಾ:

- Strong's: H4438, H3063

ಯೆಹೆಜ್ಕೇಲನು

ಸತ್ಯಾಂಶಗಳು:

ಯಹೂದಿಯರು ಬಾಬುಲೋನಿಗೆ ಸೆರೆಯಾಗಿ ಹಿಡಿದಿದ್ದಾಗ ಯೆಹೆಜ್ಕೇಲನು ಯೆಹೋವನ ಪ್ರವಾದಿಯಾಗಿದ್ದನು.

- ಯೆಹೆಜ್ಕೇಲನು ಯೆಹೂದಿಯ ರಾಜ್ಯದಲ್ಲಿ ನಿವಾಸ ಮಾಡುತ್ತಿದ್ದಾಗ ಅವನನ್ನು ಮತ್ತು ಅನೇಕ ಯಹೂದಿಯರನ್ನು ಬಾಬುಲೋನಿನ ಸೈನ್ಯವು ಸ್ವಾಧೀನಪಡಿಸಿಕೊಂಡರು.
- ಸುಮಾರು ಇಪತ್ತು ವರ್ಷಗಳ ಕಾಲ, ಅವನು ಮತ್ತು ಅವನ ಹೆಂಡತಿ ಬಾಬುಲೋನ್ ನದಿಯ ಬಳಿ ಜೀವಿಸಿದರು ಮತ್ತು ಯೆಹೋವನ ಸಂದೇಶಗಳನ್ನು ಕೇಳಲು ಯೆಹೂದ್ಯರು ಅವನ ಬಳಿಗೆ ಬರುತ್ತಿದ್ದರು.
- ಬೇರೆ ವಿಷಯಗಳಲ್ಲಿ, ಯೆರುಸಲೇಮ್ ಪಟ್ಟಣ ಮತ್ತು ದೇವಾಲಯದ ನಾಶವು ಮತ್ತು ಪುನರ್ನಿರ್ಮಾಣವನ್ನು ಕುರಿತು ಯೆಹೆಜ್ಕೇಲನು ಪ್ರವಾದಿಸಿದನು.
- ಬರುವಂತಹ ಮೆಸ್ಸಯನ ರಾಜ್ಯವನ್ನು ಕುರಿತಾಗಿ ಯೆಹೆಜ್ಕೇಲನು ಪ್ರವಾದಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಬುಲೋನ್, ಕ್ರಿಸ್ತನು, ಸೆರೆ, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.01:1-3
- ಯೆಹೆ.24:22-24

ಪದ ಡೇಟಾ:

- Strong's: H3168

ಯೆಹೋಯಾಕೀಮ

ಸತ್ಯಾಂಶಗಳು:

ಯೆಹೋಯಾಕೀಮನು ಯೂದಾ ರಾಜ್ಯವನ್ನು ಆಳಿದ ದುಷ್ಟ ಅರಸನಾಗಿದ್ದನು, ಇವನು ಕ್ರಿ.ಪೂ.608 ಆರಂಭದಲ್ಲಿ ಆಳ್ವಿಕೆಯನ್ನು ಆರಂಭಿಸಿದ್ದನು. ಇವನು ಅರಸನಾದ ಯೋಷೀಯ ಮಗನಾಗಿದ್ದನು. ಇವನ ಹೆಸರು ನಿಜವಾಗಿ ಎಲ್ಯಾಕೀಮ್ ಎಂದಾಗಿತ್ತು.

- ಐಗುಪ್ತ ಫರೋಹನಾಗಿರುವ ನೆಕೋನನು ಎಲ್ಯಾಕೀಮ್ ಹೆಸರನ್ನು ಯೆಹೋಯಾಕೀಮ್ ಎಂದಾಗಿ ಮಾರ್ಪದಿಸಿದನು ಮತ್ತು ಇವನನ್ನು ಯೂದಾ ಅರಸನನ್ನಾಗಿ ಮಾಡಿದನು.
- ನೆಕೋ ಯೆಹೋಯಾಕೀಮನನ್ನು ಐಗುಪ್ತಕ್ಕೆ ತೆರಿಗೆಗಳನ್ನು ಕಟ್ಟಬೇಕೆಂದು ಬಲವಂತ ಮಾಡಿದನು.
- ಅರಸನಾದ ನೆಬುಕದ್ನೆಚ್ಚರನಿಂದ ಯೂದಾ ದಾಳಿಗೆ ಗುರಿಯಾದಾಗ, ಸೆರೆಗೆ ಸಿಕ್ಕಿದವರಲ್ಲಿ ಯೆಹೋಯಾಕೀಮನು ಇದ್ದಿದ್ದನು ಮತ್ತು ಅವರನ್ನು ಬಾಬೆಲೋನಿಯಕ್ಕೆ ಕರೆದೊಯ್ಯಲ್ಪಟ್ಟನು.
- ಯೆಹೋವನಿಂದ ಯೂದಾವನ್ನು ಪಕ್ಕಕ್ಕೆ ನಡೆಸಿದ ದುಷ್ಟ ಅರಸ ಯೆಹೋಯಾಕೀಮನಾಗಿದ್ದನು. ಪ್ರವಾದಿಯಾದ ಯೆರೆಮೀಯ ಅವನಿಗೆ ವಿರುದ್ಧವಾಗಿ ಪ್ರವಾದಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ಎಲ್ಯಾಕೀಮ, ಯೆರೆಮೀಯ, ಯೂದಾ, ನೆಬುಕದ್ನೆಚ್ಚರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:15-16
- 2 ಅರಸ.23:34-35
- 2 ಅರಸ.24:1-2
- ದಾನಿ.01:1-2
- ಯೆರೆ.01:1-3

ಪದ ಡೇಟಾ:

- Strong's: H3079

ಯೆಹೋಯಾಖೀನ

ಸತ್ಯಾಂಶಗಳು:

ಯೆಹೋಯಾಖೀನನು ಯೂದಾ ರಾಜ್ಯವನ್ನು ಆಳಿದ ಅರಸನಾಗಿದ್ದನು.

- ಯೆಹೋಯಾಖೀನನು ತನ್ನ 18ನೇ ವಯಸ್ಸಿನಲ್ಲಿಯೇ ಅರಸನಾಗಿದ್ದನು. ಇವನು ಕೇವಲ ಮೂರು ತಿಂಗಳು ಮಾತ್ರ ಆಳಿದನು, ಮತ್ತು ಇವನನ್ನು ಬಾಬೆಲೋನಿಯ ಸೈನ್ಯವು ಹಿಡಿದು, ಬಾಬೆಲೋನಿಯಗೆ ಕರೆದೊಯ್ದರು.
- ತನ್ನ ಚಿಕ್ಕ ಆಳ್ವಿಕೆಯಲ್ಲಿ, ಯೆಹೋಯಾಖೀನನು ತನ್ನ ತಾತನಾಗಿರುವ ಅರಸನಾದ ಮನಸ್ಸೆ ಮತ್ತು ತನ್ನ ತಂದೆಯಾದ ಯೆಹೋಯಾಕೀಮರು ಮಾಡಿದಂತೆ ಅನೇಕ ಕೆಟ್ಟ ಕಾರ್ಯಗಳನ್ನು ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ಯೆಹೋಯಾಕೀಮ, ಯೂದಾ, ಮನಸ್ಸೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.36:8
- 2 ಅರಸ.24:15-17
- ಎಸ್ತೇ.02:5-6
- ಯೆಹೆ.01:1-3
- ಯೆಹೆ.22:24-26
- ಯೆರೆ.37:1-2

ಪದ ಡೇಟಾ:

- Strong's: H3078, H3112, H3204, H3659

ಯೆಹೋಯಾದ

ಸತ್ಯಾಂಶಗಳು:

ಯೊಹೋಯಾದನು ಒಬ್ಬ ಯಾಜಕನಾಗಿದ್ದನು, ಇವನು ಅರಸನಾದ ಅಹಜ್ಯನ ಮಗ ಯೋವಾಷನು ದೊಡ್ಡವನಾಗಿ ಅರಸನೆಂದು ಪ್ರಕಟಿಸುವವರೆಗೂ ಯೋವಾಷನನ್ನು ಬಚ್ಚಿಡುವುದರಲ್ಲಿ ಸಹಾಯಮಾಡಿ ಸಂರಕ್ಷಿಸಿದನು.

- ದೇವಾಲಯದಲ್ಲಿ ಜನರಿಂದ ಯೋವಾಷನನ್ನು ಅರಸನೆಂದು ಪ್ರಕಟನೆ ಮಾಡುವವರೆಗೂ ಚಿಕ್ಕವನಾಗಿರುವ ಯೋವಾಷನನ್ನು ಸಂರಕ್ಷಿಸುವುದಕ್ಕೆ ನೂರಾರುಮಂದಿ ರಕ್ಷಕ ಭಟರನ್ನು ಯೆಹೋಯಾದ ಸಿದ್ಧಪಡಿಸಿದ್ದನು.
- ಯೆಹೋಯಾದನು ಸುಳ್ಳು ದೇವರಾದ ಬಾಳ್ ಯಜ್ಞವೇದಿಗಳೆಲ್ಲವುಗಳಿಂದ ಬಿಡುಗಡೆಯಾಗುವುದಕ್ಕೆ ಜನರೆಲ್ಲರನ್ನು ನಡೆಸಿದನು.
- ಉಳಿದ ತನ್ನ ಜೀವಮಾನವೆಲ್ಲಾ, ಅರಸನಾದ ಯೋವಾಷನು ದೇವರಿಗೆ ವಿಧೇಯರಾಗವುದಕ್ಕೆ ಮತ್ತು ಜ್ಞಾನದಿಂದ ಜನರನ್ನು ಆಳುವುದಕ್ಕೆ ಯಾಜಕನಾದ ಯೆಹೋಯಾದನು ಸಲಹೆ ಕೊಡುವುದರಲ್ಲಿ ಸಹಾಯ ಮಾಡಿದನು.
- ಯೆಹೋಯಾದ ಎನ್ನುವ ಹೆಸರಿನ ಮೇಲೆ ಬೆನಯಾನ ತಂದೆಯಾಗಿರುವ ಇನ್ನೊಬ್ಬ ವ್ಯಕ್ತಿಯು ಇದ್ದಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಹಜ್ಯ, ಬಾಳ್, ಬೆನಯಾನ, ಯೋವಾಷ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.11:4-6
- 2 ಕೊಲೊಸ್ಸ.12:1-3

ಪದ ಡೇಟಾ:

- Strong's: H3077, H3111

ಯೆಹೋರಾಮ, ಯೋರಾಮ

ಸತ್ಯಾಂಶಗಳು:

“ಯೆಹೋರಾಮ” ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಇಬ್ಬರು ಅರಸರು ಇದ್ದಾರೆ. ಆ ಇಬ್ಬರ ಅರಸರು “ಯೋರಾಮ” ಎನ್ನುವ ಹೆಸರಿನಿಂದ ಕರೆಯಲ್ಪಟ್ಟಿದ್ದಾರೆ.

- ಯೆಹೋರಾಮ ಎನ್ನುವ ಒಬ್ಬ ಅರಸ ಎಂಟು ವರ್ಷಗಳು ಯೂದಾ ರಾಜ್ಯವನ್ನು ಆಳಿದನು. ಇವನು ಯೆಹೋಷಾಫಾಟನ ಮಗನಾಗಿರುತ್ತಾನೆ. ಈ ಅರಸನೇ ಯೆಹೋರಾಮ ಎಂದು ಹೆಚ್ಚಾಗಿ ಹೆಸರುವಾಸಿಯಾಗಿರುತ್ತಾನೆ.
- ಯೆಹೋರಾಮ ಹೆಸರಿನ ಮೇಲೆ ಇರುವ ಇನ್ನೊಬ್ಬ ಅರಸನು ಹನ್ನೆರಡು ವರ್ಷಗಳ ಕಾಲ ಇಸ್ರಾಯೇಲ್ ರಾಜ್ಯವನ್ನು ಆಳಿದನು. ಇವನು ಅರಸನಾದ ಆಹಾಬನ ಮಗನಾಗಿದ್ದನು.
- ಯೂದಾ ಅರಸನಾಗಿರುವ ಯೆಹೋರಾಮನು ಯೆರೆಮೀಯ, ದಾನಿಯೇಲ, ಓಬದ್ಯ, ಮತ್ತು ಯೆಹೆಜ್ಕೇಲರು ಯೂದಾ ರಾಜ್ಯದಲ್ಲಿ ಪ್ರವಾದಿಸುವ ಕಾಲದಲ್ಲಿ ಆಳಿದನು.
- ಯೂದಾ ರಾಜ್ಯದ ಮೇಲೆ ಅರಸನಾದ ಯೆಹೋರಾಮನ ತಂದೆ ಅರಸನಾದ ಯೆಹೋಷಾಫಾಟನು ಅಳುತ್ತಿರುವಾಗ ಅವನೂ ಪಾಲನೆ ಮಾಡಿದ್ದನು.
- ಕೆಲವೊಂದು ಅನುವಾದಗಳಲ್ಲಿ “ಯೆಹೋರಾಮ” ಎನ್ನುವ ಹೆಸರನ್ನು ಇಸ್ರಾಯೇಲ್ ಅರಸನಿಗೆ ಉಪಯೋಗಿಸಿದಾಗ, “ಯೋರಾಮ” ಎನ್ನುವ ಹೆಸರನ್ನು ಯೂದಾ ಅರಸನಿಗೆ ಉಪಯೋಗಿಸುವುದಕ್ಕೆ ಆಯ್ಕೆ ಮಾಡಿಕೊಳ್ಳುತ್ತಾರೆ.
- ಇಬ್ಬರನ್ನು ಚೆನ್ನಾಗಿ ಗುರುತಿಸುವ ಬೇರೊಂದು ವಿಧಾನದಲ್ಲಿ ಅವರ ಹೆಸರುಗಳ ಪಕ್ಕಕ್ಕೆ ಅವರ ತಂದೆಗಳ ಹೆಸರುಗಳನ್ನು ಬಳಸುವುದು ಉತ್ತಮ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಹಾಬ, ಯೆಹೋಷಾಫಾಟ, ಯೋರಾಮ, ಯೂದಾ, ಇಸ್ರಾಯೇಲ್ ರಾಜ್ಯ, ಓಬದ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.22:48-50
- 2 ಪೂರ್ವ.21:1-3
- 2 ಅರಸ.11:1-3
- 2 ಅರಸ.12:17-18

ಪದ ಡೇಟಾ:

- Strong's: H3088, H3141, G2496

ಯೆಹೋಶುವ

ಸತ್ಯಾಂಶಗಳು:

ಸತ್ಯವೇದದಲ್ಲಿ ಯೆಹೋಶುವ ಎನ್ನುವ ಹೆಸರಿನಲ್ಲಿ ಅನೇಕಮಂದಿ ಇಸ್ರಾಯೇಲ್ ಜನರಿದ್ದಾರೆ. ಚೆನ್ನಾಗಿ ಗೊತ್ತಿರುವ ಯೆಹೋಶುವ ಮೋಶೆ ಸಹಾಯಕನಾಗಿರುವ ನೂನನ ಮಗನಾಗಿರುತ್ತಾನೆ ಮತ್ತು ಈ ನೂನನು ದೇವರ ಜನರಿಗೆ ಮುಖ್ಯ ನಾಯಕನಾದನು.

- ವಾಗ್ದಾನ ಭೂಮಿಯನ್ನು ನೋಡಿ ಬರುವುದಕ್ಕೆ ಮೋಶೆ ಕಳುಹಿಸಿದ ಹನ್ನೆರಡು ಮಂದಿ ಗೂಢಚಾರಿಗಳಲ್ಲಿ ಒಬ್ಬನಾಗಿರುತ್ತಾನೆ.
- ಕಾನಾನ್ ಭೂಮಿಯೊಳಗೆ ಪ್ರವೇಶಿಸಲು ಮತ್ತು ಕಾನಾನ್ಯರನ್ನು ಸೋಲಿಸುವುದಕ್ಕೆ ದೇವರ ಆಜ್ಞೆಗೆ ವಿಧೇಯರಾಗಬೇಕೆಂದು ಇಸ್ರಾಯೇಲ್ ಜನರನ್ನು ಕೇಳಿಕೊಂಡವರಲ್ಲಿ ಕಾಲೇಬ್ ಜೊತೆಯಲ್ಲಿ ಯೆಹೋಶುವನಿದ್ದನು.
- ಅನೇಕ ವರ್ಷಗಳಾದನಂತರ ಮೋಶೆ ಮರಣಿಸಿನಂತರ, ವಾಗ್ದಾನ ಭೂಮಿಯೊಳಗೆ ಪ್ರವೇಶಿಸಾಲು ಇಸ್ರಯೇಲ್ ಜನರನ್ನು ನಡೆಸುವುದಕ್ಕೆ ದೇವರು ಯೆಹೋಶುವನನ್ನು ನೇಮಿಸಿದನು.
- ಕಾನಾನ್ಯರಿಗೆ ವಿರುದ್ಧವಾಗಿ ಮೊಟ್ಟ ಮೊದಲು ಮಾಡಿದ ಅತ್ಯಂತ ಪ್ರಸಿದ್ಧವಾದ ಯುದ್ಧದಲ್ಲಿ, ಯೆರಿಕೋ ಪಟ್ಟಣವನ್ನು ಸೋಲಿಸುವುದರಲ್ಲಿ ಯೆಹೋಶುವನು ಇಸ್ರಾಯೇಲ್ಯರನ್ನು ನಡೆಸಿದನು.
- ವಾಗ್ದಾನ ಭೂಮಿಯನ್ನು ನಿಯಂತ್ರಣದಲ್ಲಿ ತೆಗೆದುಕೊಳ್ಳುವುದಕ್ಕೆ ಯೆಹೋಶುವನು ಹೇಗೆ ಇಸ್ರಾಯೇಲ್ಯರನ್ನು ನಡೆಸಿದ್ದಾನೆಂದು ಮತ್ತು ಆ ದೇಶದಲ್ಲಿ ಜೀವಿಸುವುದಕ್ಕೆ ಭೂಮಿಯ ಭಾಗಗಳನ್ನು ಇಸ್ರಾಯೇಲ್ ಹನ್ನೆರಡು ಕುಲಗಳಲ್ಲಿ ಪ್ರತಿಯೊಬ್ಬರಿಗೆ ಯಾವರೀತಿ ಹಂಚಿದ್ದಾನೆಂದು ಹಳೇ ಒಡಂಬಡಿಕೆಯ ಪುಸ್ತಕವಾಗಿರುವ ಯೆಹೋಶುವ ಗ್ರಂಥವು ಚೆನ್ನಾಗಿ ತಿಳಿಸುತ್ತದೆ.
- ಹಗ್ಗಯಿ ಮತ್ತು ಜೆಕರ್ಯ ಗ್ರಂಥಗಳಲ್ಲಿ ಯೆಹೋಚಾದಾಕ ಮಗನಾದ ಯೆಹೋಶುವನನ್ನು ದಾಖಲಿಸಲಾಗಿದೆ; ಇವನು ಯೆರೂಸಲೇಮಿನ ಗೋಡೆಗಳನ್ನು ತಿರುಗಿ ಕಟ್ಟುವುದಕ್ಕೆ ಸಹಾಯ ಮಾಡಿದ ಮಹಾ ಯಾಜಕನಾಗಿದ್ದನು.

ಸತ್ಯವೇದದಲ್ಲಿ ದಾಖಲಿಸಿದ ವಂಶಾವಳಿಗಳಲ್ಲಿ ಮತ್ತು ಬೇರೊಂದು ಸ್ಥಳಗಳಲ್ಲಿ ಯೆಹೋಶುವ ಎನ್ನುವ ಹೆಸರಿನ ಮೇಲೆ ಅನೇಕ ಜನರಿದ್ದಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಹಗ್ಗಾಯ, ಯೆರಿಕೋ, ಮೋಶೆ, ವಾಗ್ದಾನ ಭೂಮಿ, ಜೆಕರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.07:25-27
- ಧರ್ಮೋ.03:21-22
- ವಿಮೋ.17:8-10
- ಯೆಹೋ.01:1-3
- ಅರಣ್ಯ.27:18-19

ಸತ್ಯವೇದದಿಂದ ಉದಾಹರಣೆಗಳು:

- **14:04** ಇಸ್ರಾಯೇಲ್ಯರು ಕಾನಾನ್ ಎನ್ನುವ ದೇಶವನ್ನು ಸೇರಿದಾಗ, ಮೋಶೆ ಇಸ್ರಾಯೇಲ್ ಪ್ರತಿಯೊಂದು ಕುಲದಿಂದ ಒಬ್ಬೊಬ್ಬರಾಗಿ ಹನ್ನೆರಡು ಜನರನ್ನು ಆರಿಸಿಕೊಂಡನು. ಆ ದೇಶವು ಹೇಗಿದೆಯೆಂದು ನೋಡಿಕೊಂಡು ಬರುವುದಕ್ಕೆ ಆತನು ಆ ಮನುಷ್ಯರಿಗೆ ಸೂಚನೆಗಳನ್ನು ಕೊಟ್ಟು ಕಳುಹಿಸಿದನು.
- **14:06** "ಕಾನಾನ್ ಜನರು ತುಂಬಾ ಎತ್ತರವಾಗಿಯೂ ಮತ್ತು ತುಂಬ ಬಲವುಳ್ಳವರಾಗಿಯೂ ಇದ್ದಾರೆನ್ನುವುದು ನಿಜಾನೇ, ಆದರೆ ನಾವು ಖಂಡಿತವಾಗಿ ಅವರನ್ನು ಸೋಲಿಸಬಹುದು" ಎಂದು ತಕ್ಷಣವೇ ಕಾಲೇಬ್ ಮತ್ತು _ ಯೆಹೋಶುವ _, ಬೇರೆ ಇಬ್ಬರು ಗೂಢಚಾರರು ಹೇಳಿದರು.
- **14:08** _ ಯೆಹೋಶುವ _ ಮತ್ತು ಕಾಲೇಬರಿಬ್ಬರು ಬಿಟ್ಟು, ಇಪ್ಪತ್ತು ವರ್ಷಗಳ ವಯಸ್ಸಿನವರು ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರು ಅಲ್ಲಿಯೇ ಸತ್ತುಹೋದರು, ಅಷ್ಟೇಅಲ್ಲದೆ ಅವರೆಲ್ಲರು ವಾಗ್ದಾನ ದೇಶದೊಳಗೆ ಪ್ರವೇಶಿಸಲೇಯಿಲ್ಲ.
- **14:14** ಮೋಶೆ ತುಂಬಾ ವೃದ್ಧಾಪ್ಯದಲ್ಲಿದ್ದಾಗಲೇ, ಜನರನ್ನು ನಡೆಸುವುದಕ್ಕೆ ಆತನಿಗೆ ಸಹಾಯವಾಗಲು ದೇವರು _ ಯೆಹೋಶುವನನ್ನು _ ಆರಿಸಿಕೊಂಡರು.
- **14:15** _ ಯೆಹೋಶುವನು _ ಒಳ್ಳೇಯ ನಾಯಕನಾಗಿದ್ದನು ಯಾಕಂದರೆ ಆತನು ದೇವರನ್ನು ನಂಬಿ, ಆತನಿಗೆ ವಿಧೇಯನಾಗಿದ್ದನು.
- **15:03** ಜನರೆಲ್ಲರು ಯೊರ್ದನ್ ಹೊಳೆಯನ್ನು ದಾಟಿದನಂತರ, ಶಕ್ತಿಯುತ ಯೆರಿಕೋ ಪಟ್ಟಣವನ್ನು ಹೇಗೆ ಧಾಳಿ ಮಾಡಬೇಕೆಂದು ದೇವರು _ ಯೆಹೋಶುವನಿಗೆ _ ಹೇಳಿದನು.

ಪದ ಡೇಟಾ:

- Strong's: H3091, G2424

ಯೆಹೋಷಾಫಾಟ @

ಸತ್ಯಾಂಶಗಳು:

ಯೆಹೋಷಾಫಾಟ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಕನಿಷ್ಟವೆಂದರೆ ಇಬ್ಬರು ವ್ಯಕ್ತಿಗಳು ಇದ್ದಾರೆ.

- ಈ ಹೆಸರಿನ ಮೇಲೆ ಚೆನ್ನಾಗಿ ಗೊತ್ತಿರುವ ಒಬ್ಬ ವ್ಯಕ್ತಿ ಅರಸನಾದ ಯೆಹೋಷಾಫಾಟ ಆಗಿರುತ್ತಾನೆ, ಇವನು ಯೂದಾ ರಾಜ್ಯದ ಮೇಲೆ ನಾಲ್ಕನೇಯ ಅರಸನಾಗಿ ಆಳ್ವಿಕೆ ಮಾಡಿರುತ್ತಾನೆ.
- ಈ ವ್ಯಕ್ತಿ ಯೂದಾ ಮತ್ತು ಇಸ್ರಾಯೇಲ್ ನಡುವೆ ಸಮಾಧಾನವನ್ನು ಸ್ಥಿರಪಡಿಸಿರುತ್ತಾನೆ, ಮತ್ತು ಸುಳ್ಳು ದೇವರ ಎಲ್ಲಾ ವಿಗ್ರಹಗಳನ್ನು ಕೆಡಿಸಿಟ್ಟಿರುತ್ತಾನೆ.
- ಇನ್ನೊಬ್ಬ ಯೆಹೋಷಾಫಾಟನು ದಾವೀದ ಮತ್ತು ಸೊಲೊಮೋನನಿಗೆ “ದಾಖಲಾತಿ” ಮಾಡುವವನಾಗಿರುತ್ತಾನೆ. ಇವನ ಕೆಲಸವೇನಂದರೆ ಅರಸನು ಸಹಿ ಮಾಡುವುದಕ್ಕೆ ಪತ್ರಗಳನ್ನು ಬರೆದು ಸಿದ್ಧಗೊಳಿಸುವುದು ಮತ್ತು ರಾಜ್ಯದಲ್ಲಿ ಏನಾದರು ಪ್ರಾಮುಖ್ಯವಾದ ಸಂಘಟನೆಗಳು ನಡೆದಿದ್ದರೆ ಅದರ ಚರಿತ್ರೆಯನ್ನು ಬರೆಯುವುದೂ ಆಗಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯಜ್ಞವೇದಿ, ದಾವೀದ, ಸುಳ್ಳು ದೇವರು, ಇಸ್ರಾಯೇಲ್, ಯೂದಾ, ಯಾಜಕ, ಸೊಲೊಮೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:10-12
- 1 ಅರಸ.04:15-17
- 2 ಪೂರ್ವ.17:1-2
- 2 ಅರಸ.01:17-18
- 2 ಸಮು.08:15-18
- ಮತ್ತಾಯ.01:7-8

ಪದ ಡೇಟಾ:

- Strong's: H3092, H3146, G2498

ಯೇಹು

ಸತ್ಯಾಂಶಗಳು:

ಯೇಹು ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಇಬ್ಬರು ವ್ಯಕ್ತಿಗಳಿದ್ದಾರೆ.

- ಹನಾನಿಯ ಮಗನಾದ ಯೇಹು ಇಸ್ರಾಯೇಲ್ ಅರಸನಾದ ಆಹಾಬನು ಮತ್ತು ಯೂದಾ ಅರಸನಾದ ಯೆಹೋಷಾಫಾಟನು ಆಳುತ್ತಿರುವ ದಿನಗಳಲ್ಲಿ ಪ್ರವಾದಿಯಾಗಿದ್ದನು.
- ಯೆಹೋಷಾಫಾಟನ ಮಗನಾದ (ವಂಶಸ್ಥನಾದ) ಯೇಹು ಇಸ್ರಾಯೇಲ್ ಸೈನ್ಯದಲ್ಲಿ ಸೇನಾಧಿಪತಿಯಾಗಿದ್ದನು, ಇವನು ಪ್ರವಾದಿಯಾದ ಎಲೀಷನ ಆಜ್ಞೆಯಿಂದ ಅರಸನಾಗಿ ಅಭಿಷೇಕಿಸಲ್ಪಟ್ಟನು.
- ಅರಸನಾದ ಯೇಹು ಇಸ್ರಾಯೇಲ್ ಅರಸನಾದ ಯೋರಾಮ ಮತ್ತು ಯೂದಾ ಅರಸನಾಗಿರುವ ಅಹಜ್ಯ ಎನ್ನುವ ಈ ದುಷ್ಟ ಅರಸರನ್ನು ಕೊಂದು ಹಾಕಿದನು,
- ಅರಸನಾದ ಯೇಹು ಬಂಧುಗಳಾಗಿರುವ ಎಲ್ಲರನ್ನು ಅರಸನಾಗಿರುವ ಆಹಾಬನನ್ನು ಮತ್ತು ದುಷ್ಟ ರಾಣಿಯಾಗಿರುವ ಈಜೆಬೆಲ್.ನನ್ನು ಸಾಯಿಸಿದನು.
- ಅರಸನಾದ ಯೇಹು ಸಮಾರ್ಯದಲ್ಲಿರುವ ಬಾಳ್ ಆರಾಧನೆಯ ಸ್ಥಳಗಳನ್ನೆಲ್ಲಾ ನಾಶಗೊಳಿಸಿದನು ಮತ್ತು ಬಾಳ್ ಪ್ರವಾದಿಗಳೆಲ್ಲರನ್ನು ಸಾಯಿಸಿದನು.
- ಅರಸನಾದ ಯೇಹು ನಿಜವಾದ ದೇವರಾಗಿರುವ ಯೆಹೋವನನ್ನು ಮಾತ್ರ ಸೇವಿಸಿದನು, ಮತ್ತು ಸುಮಾರು ಇಪ್ಪತ್ತು ವರ್ಷಗಳ ಕಾಲ ಇಸ್ರಾಯೇಲ್ ರಾಜ್ಯವನ್ನು ಆಳಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಹಾಬ, ಅಹಜ್ಯ, ಬಾಳ್, ಎಲೀಷ, ಯೆಹೋಷಾಫಾಟ, ಯೇಹು, ಈಜೆಬೆಲ್, ಯೋರಾಮ, ಯೂದಾ, ಸಮಾರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.04:34-38
- 1 ಅರಸ.16:1-2
- 2 ಪೂರ್ವ.19:1-3
- 2 ಅರಸ.10:8-9
- ಹೋಶೆಯ.01:3-5

ಪದ ಡೇಟಾ:

- Strong's: H3058

ಯೊಪ್ಪ

ಸತ್ಯಾಂಶಗಳು:

ಸತ್ಯವೇದ ಕಾಲಗಳಲ್ಲಿ ಯೊಪ್ಪ ಎನ್ನುವ ಪಟ್ಟಣವು ತುಂಬ ಪ್ರಾಮುಖ್ಯವಾದ ವಾಣಿಜ್ಯ ಬಂದರಾಗಿತ್ತು, ಇದು ಶಾರೋನಿನ ದಕ್ಷಿಣ ಬಯಲುನಲ್ಲಿ ಮೆಡಿಟರೇನಿಯನ್ ಸಮುದ್ರದ ಬಳಿ ಕಂಡುಬರುತ್ತದೆ.

- ಯೊಪ್ಪ ಎನ್ನುವ ಪುರಾತನ ಸ್ಥಳವು ಈಗಿನ ಜಫ್ಫಾ ಎನ್ನುವ ಸ್ಥಳವಾಗಿರುತ್ತದೆ, ಇದೀಗ ಟೆಲ್-ಅವೀವ್ ಪಟ್ಟಣದ ಭಾಗವಾಗಿರುತ್ತದೆ.
- ಹಳೇ ಒಡಂಬಡಿಕೆಯಲ್ಲಿ ಯೊಪ್ಪ ಪಟ್ಟಣವು ಯೋನನು ತಾರ್ಷೀಷಿಗೆ ಹೋಗುವ ಹಡಗು ಏರಿದ ಸ್ಥಳವಾಗಿದ್ದಿತ್ತು.
- ಹೊಸ ಒಡಂಬಡಿಕೆಯಲ್ಲಿ ತಬಿಥಾ ಎನ್ನುವ ಕ್ರೈಸ್ತ ಮಹಿಳೆ ಯೊಪ್ಪ ಪಟ್ಟಣದಲ್ಲಿಯೇ ಮರಣ ಹೊಂದಿದ್ದಳು, ಮತ್ತು ಪೇತ್ರನು ಆ ಸ್ಥಳದಲ್ಲಿಯೇ ಆಕೆಯನ್ನು ಜೀವಂತವನ್ನಾಗಿ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಸಮುದ್ರ, ಯೆರೂಸಲೇಮ್, ಶಾರೋನ್, ತಾರ್ಷೀಷ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.09:36-37
- ಅಪೊ.ಕೃತ್ಯ.10:7-8
- ಅಪೊ.ಕೃತ್ಯ.11:4-6
- ಅಪೊ.ಕೃತ್ಯ.11:11-14
- ಯೋನ.01:1-3

ಪದ ಡೇಟಾ:

- Strong's: H3305, G2445

ಯೊರ್ದನ್ ಹೊಳೆ, ಯೊರ್ದನ್

ಸತ್ಯಾಂಶಗಳು:

ಯೊರ್ದನ್ ಹೊಳೆ ಎನ್ನುವುದು ಉತ್ತರದಿಂದ ದಕ್ಷಿಣಕ್ಕೆ ಹರಿಯುವ ಹೊಳೆಯಾಗಿರುತ್ತದೆ, ಮತ್ತು ಕಾನಾನ್ ಎಂದು ಕರೆಯಲ್ಪಡುವ ದೇಶದ ಪೂರ್ವ ದಿಕ್ಕಿನ ಗಡಿಗಳವರೆಗೂ ವಿಸ್ತರಿಸಲ್ಪಟ್ಟಿರುತ್ತದೆ.

- ಈ ದಿನದಂದು ಯೊರ್ದನ್ ಹೊಳೆ ಅದರ ಪಶ್ಚಿಮ ದಿಕ್ಕಿನಲ್ಲಿ ಇಸ್ರಾಯೇಲ್ ದೇಶವಿರುವಂತೆ ಮತ್ತು ಪೂರ್ವ ದಿಕ್ಕಿನಲ್ಲಿ ಯೊರ್ದನ್ ಇರುವಂತೆ ಬೇರ್ಪಡಿಸುತ್ತದೆ.
- ಯೊರ್ದನ್ ಹೊಳೆ ಎನ್ನುವುದು ಗಲಿಲಾಯ ಸಮುದ್ರದ ಮೂಲಕ ಹರಿದು, ಮೃತ ಸಮುದ್ರದಲ್ಲಿ ಸೇರುತ್ತದೆ.
- ಯೆಹೋಶುವನು ಇಸ್ರಾಯೇಲ್ಯರನ್ನು ಕಾನಾನ್ ದೇಶಕ್ಕೆ ನಡೆಸಿದಾಗ, ಅವರು ಯೊರ್ದನ್ ಹೊಳೆಯನ್ನು ದಾಟಿದ್ದರು. ಸಾಧಾರಣವಾಗಿ ದಾಟುವುದಕ್ಕೆ ಅದು ತುಂಬಾ ಆಳವಾಗಿದ್ದಿತ್ತು, ಆದರೆ ದೇವರು ಅದ್ಭುತ ರೀತಿಯಲ್ಲಿ ಹೊಳೆಯು ಹರಿಯದಂತೆ ನಿಲ್ಲಿಸಿದರು, ಇದರಿಂದ ಅವರು ತುಂಬಾ ಸುಲಭವಾಗಿ ಆ ಹೊಳೆಯನ್ನು ದಾಟಿದರು.
- ಸತ್ಯವೇದದಲ್ಲಿ ಅನೇಕಸಲ ಯೊರ್ದನ್ ಹೊಳೆಯನ್ನು "ಯೊರ್ದನ್" ಎಂದು ಸೂಚಿಸಿದ್ದಾರೆ.

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಲವಣ ಸಮುದ್ರ, ಗಲಿಲಾಯ ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.32:9-10
- ಯೋಹಾನ.01:26-28
- ಯೋಹಾನ.03:25-26
- ಲೂಕ.03:3
- ಮತ್ತಾಯ.03:4-6
- ಮತ್ತಾಯ.03:13-15
- ಮತ್ತಾಯ.04:14-16
- ಮತ್ತಾಯ.19:1-2

ಸತ್ಯವೇದದಿಂದ ಉದಾಹರಣೆಗಳು:

- **15:02** ಇಸ್ರಾಯೇಲ್ಯರು ವಾಗ್ದಾನ ಭೂಮಿಯೊಳಗೆ ಸೇರಬೇಕಾದರೆ ಅವರು _ **ಯೊರ್ದನ್ ಹೊಳೆಯನ್ನು** _ ದಾಟಬೇಕಾಗಿದ್ದರು.
- **15:03** ಜನರೆಲ್ಲರು _ **ಯೊರ್ದನ್ ಹೊಳೆಯನ್ನು** _ ದಾಟಿದನಂತರ, ಶಕ್ತಿಯುತವಾದ ಯೆರಿಕೋ ಪಟ್ಟಣವನ್ನು ಯಾವರೀತಿ ಧಾಳಿ ಮಾಡಬೇಕೆಂದು ದೇವರು ಯೆಹೋಶುವನಿಗೆ ಹೇಳಿದರು.
- **19:14** ಎಲೀಷ ಅವನಿಗೆ (ನಾಮಾನನಿಗೆ)_ **ಯೊರ್ದನ್ ಹೊಳೆಯಲ್ಲಿ** _ ಏಳುಬಾರಿ ಮುಳುಗಬೇಕೆಂದು ಹೇಳಿದನು.

ಪದ ಡೇಟಾ:

- Strong's: H3383, G2446

ಯೋತಾಮ

ಪದದ ಅರ್ಥವಿವರಣೆ:

ಹಳೇ ಒಡಂಬಡಿಕೆಯಲ್ಲಿ ಯೋತಾಮ ಎನ್ನುವ ಹೆಸರಿನ ಮೇಲೆ ಮೂವರು ವ್ಯಕ್ತಿಗಳಿದ್ದಾರೆ.

- ಯೋತಾಮ ಎನ್ನುವ ಹೆಸರಿನ ಮೇಲೆ ಒಬ್ಬ ವ್ಯಕ್ತಿ ಗಿದ್ಯೋನನ ಚಿಕ್ಕ ಮಗನಾಗಿರುತ್ತಾನೆ. ಯೋತಾಮನು ತನ್ನ ಹಿರಿಯ ಅಣ್ಣನಾದ ಅಬೀಮೆಲೆಕನನ್ನು ಸೋಲಿಸುವುದರಲ್ಲಿ ಸಹಾಯ ಮಾಡಿದನು, ಯಾಕಂದರೆ ಅಬೀಮೆಲೆಕನು ಉಳಿದ ಎಲ್ಲಾ ಸಹೊದರರನ್ನು ಕೊಂದು ಹಾಕಿದ್ದನು.
- ಯೋತಾಮ ಹೆಸರಿನ ಮೇಲಿರುವ ಇನ್ನೊಬ್ಬ ವ್ಯಕ್ತಿ ಸುಮಾರು ಹದಿನಾರು ವರ್ಷಗಳ ಕಾಲ ಯೂದಾ ರಾಜ್ಯವನ್ನು ತನ್ನ ತಂದೆಯಾದ ಉಜ್ಜೀಯ (ಅಜರ್ಯ) ಮರಣಿಸಿದನಂತರ ಆಳಿದನು.

ಅವನ ತಂದೆಯಂತೆಯೇ, ಅರಸನಾದ ಯೋತಾಮನು ದೇವರಿಗೆ ವಿಧೇಯನಾಡನು ಮತ್ತು ಒಳ್ಳೆಯ ಅರಸನಾಗಿ ಪ್ರಸಿದ್ಧಿ ಹೊಂದಿದನು.

- ಏನೇಯಾದರೂ, ವಿಗ್ರಹ ಆರಾಧನೆ ಮಾಡುವ ಸ್ಥಳಗಳನ್ನು ತೆಗೆದುಹಾಕದೇ, ದೇವರಿಂದ ಯೂದಾ ರಾಜ್ಯದ ಜನರೆಲ್ಲರು ದೂರವಾಗುವುದಕ್ಕೆ ಕಾರಣನಾದನು.
- ಯೋತಾಮನು ಮತ್ತಾಯ ಬರೆದ ಸುವಾರ್ತೆಯಲ್ಲಿ ಯೇಸುಕ್ರಿಸ್ತನ ವಂಶಾವಳಿಯಲ್ಲಿ ದಾಖಲಿಸಲ್ಪಟ್ಟ ಪೂರ್ವಜನಾಗಿದ್ದನು.

(ಈ ಪದಗಳನ್ನು ಸಹ ನೋಡಿರಿ : ಅಬೀಮೆಲೆಕ, ಆಹಾಜ, ಗಿದ್ಯೋನ್, ಉಜ್ಜೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.26:21
- 2 ಅರಸ.15:4-5
- ಯೆಶಾಯ.01:1
- ನ್ಯಾಯಾ.09:5-6

ಪದ ಡೇಟಾ:

- Strong's: H3147

ಯೋನ

ಪದದ ಅರ್ಥವಿವರಣೆ:

ಯೋನನು ಹಳೇ ಒಡಂಬಡಿಕೆಯಲ್ಲಿ ಇಬ್ರಿ ಪ್ರವಾದಿಯಾಗಿದ್ದನು.

- ಯೋನನ ಗ್ರಂಥವು ನಿನೆವೆ ಜನರಿಗೆ ಸಂದೇಶವನ್ನು ಹೇಳುವುದಕ್ಕೆ ದೇವರು ಯೋನನನ್ನು ಕಳುಹಿಸಿದಾಗ ಏನು ನಡೆದಿದೆಯೆನ್ನುವ ಕಥೆಯನ್ನು ಚೆನ್ನಾಗಿ ವಿವರಿಸುತ್ತದೆ.
- ಯೋನನು ನಿನೆವೆಗೆ ಹೋಗುವುದಕ್ಕೆ ನಿರಾಕರಿಸಿದನು ಮತ್ತು ತಾರ್ಷೀಷಿಗೆ ಹೋಗುವ ಹಡಗನ್ನು ಹಿಡಿದು ಅದರಲ್ಲಿ ಪ್ರಯಾಣಿಸಿದನು.
- ಆ ಹಡಗು ತುಂಬಿ ಮುಳುಗುವಷ್ಟು ದೊಡ್ಡ ಬಿರುಗಾಳಿಯನ್ನು ದೇವರುಂಟು ಮಾಡಿದರು.
- ಅವನು ದೇವರಿಂದ ಓಡಿ ಬಂದಿದ್ದೇನೆಂದು, ತನ್ನನ್ನು ಸಮುದ್ರದೊಳಗೆ ಎಸೆದು ಹಾಕಬೇಕೆನ್ನುವ ಸಲಹೆಯನ್ನು ಆ ಹಡಗನ್ನು ನಡೆಸುತ್ತಿರುವ ಮನುಷ್ಯರಿಗೆ ಯೋನನು ಹೇಳಿದನು. ಅವರು ಅವನು ಹೇಳಿದಂತೆ ಮಾಡಿದಾಗ ಆ ಬಿರುಗಾಳಿಯು ನಿಂತುಹೋಯಿತು.
- ಯೋನನನ್ನು ಒಂದು ದೊಡ್ಡ ಮೀನು ನುಂಗಿಬಿಟ್ಟಿತು, ಮತ್ತು ಅವನು ಆ ಮೀನಿನೊಳಗೆ ಮೂರು ದಿನ ಹಗಲು ರಾತ್ರಿಗಳ ಕಾಲ ಇದ್ದನು.
- ಆದಾದನಂತರ, ಯೋನನು ನಿನೆವೆಗೆ ಹೋದನು ಮತ್ತು ಅಲ್ಲಿರುವ ಜನರಿಗೆ ಸಂದೇಶವನ್ನು ಪ್ರಕಟಿಸಿದನು, ಮತ್ತು ಅವರು ತಮ್ಮ ಪಾಪಗಳಿಂದ ತಿರುಗಿಕೊಂಡರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅವಿಧೇಯತೆ, ನಿನೆವೆ, ತಿರುಗಿಕೋ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋನಾ.01:1-3
- ಲೂಕ.11:29-30
- ಮತ್ತಾಯ.12:38-40
- ಮತ್ತಾಯ.16:3-4

ಪದ ಡೇಟಾ:

- Strong's: H3124, G2495

ಯೋನಾತಾನ

ಸತ್ಯಾಂಶಗಳು:

ಯೋನಾತಾನ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಸುಮಾರು ಹತ್ತು ಮಂದಿ ವ್ಯಕ್ತಿಗಳಿದ್ದಾರೆ. ಈ ಹೆಸರಿಗೆ "ಯೆಹೋವ ನೀಡಿದ್ದಾನೆ" ಎಂದರ್ಥ.

- ದಾವೀದನ ಒಳ್ಳೇಯ ಸ್ನೇಹಿತನಾಗಿರುವ ಯೋನಾತಾನನೇ ಸತ್ಯವೇದದಲ್ಲಿ ಪ್ರಸಿದ್ಧಿ ಹೊಂದಿದ ವ್ಯಕ್ತಿಯಾಗಿರುತ್ತಾನೆ. ಈ ಯೋನಾತಾನನು ಅರಸನಾಗಿರುವ ಸೌಲನ ಹಿರಿಯ ಮಗನಾಗಿರುತ್ತಾನೆ.
- ಹಳೇ ಒಡಂಬಡಿಕೆಯಲ್ಲಿ ದಾಖಲಿಸಿದ ಇತರ ಯೋನಾತಾನರಲ್ಲಿ ಮೋಶೆ ಸಂತಾನದವರು ಸೇರಿರುತ್ತಾರೆ; ಅರಸನಾದ ದಾವೀದ ಸೋದರಳಿಯ; ಅನೇಕಮಂದಿ ಯಾಜಕರು, ಅವರಲ್ಲಿ ಎಬ್ಯಾತಾರ ಮಗನೂ ಸೇರಿರುತ್ತಾನೆ; ಮತ್ತು ಪ್ರವಾದಿಯಾದ ಯೆರೆಮೀಯನನ್ನು ಸೆರೆಗೆ ಹಾಕಿದ ಮನೆಯ ಯಜಮಾನನಾಗಿರುವ ಹಳೇ ಒಡಂಬಡಿಕೆಯ ಶಾಸ್ತ್ರಿಯಾಗಿರುತ್ತಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಎಬ್ಯಾತಾರ, ದಾವೀದ, ಮೋಶೆ, ಯೆರೆಮೀಯ, ಯಾಜಕ, ಸೌಲ, ಶಾಸ್ತ್ರಿ,)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.01:41-42
- 1 ಸಮು.14:1
- 1 ಸಮು.20:1-2
- 2 ಸಮು.01:3-5

ಪದ ಡೇಟಾ:

- Strong's: H3083, H3129

ಯೋಬ

ಸತ್ಯಾಂಶಗಳು:

ಯೋಬನು ದೇವರ ಮುಂದೆ ನೀತಿವಂತನು ಮತ್ತು ದೋಷವಿಲ್ಲದವನು ಎಂಬುದಾಗಿ ಸತ್ಯವೇದದಲ್ಲಿ ವಿವರಿಸಲ್ಪಟ್ಟ ವ್ಯಕ್ತಿಯಾಗಿರುತ್ತಾನೆ. ಈತನು ಭಯಂಕರವಾದ ಶ್ರಮೆಗಳ ಮೂಲಕ ದೇವರಲ್ಲಿಟ್ಟ ಆತನ ನಂಬಿಕೆಯನ್ನು ಕಾಪಾಡಿಕೊಂಡ ಭಕ್ತನಾಗಿ ಪ್ರಸಿದ್ಧಿ ಹೊಂದಿದವನು.

- ಯೋಬನು ಊಚ್ ದೇಶದಲ್ಲಿ ಜೀವಿಸಿದ್ದನು, ಇದು ಕಾನಾನ್ ಪೂರ್ವ ದಿಕ್ಕಿನಲ್ಲಿ ಕಂಡುಬರುತ್ತದೆ, ಬಹುಶಃ ಇದು ಎದೋಮ್ಯರ ಸೀಮೆಗೆ ತುಂಬಾ ಹತ್ತಿರವಾಗಿತ್ತು.
- ಈತನು ಏಸಾವ ಮತ್ತು ಯಾಕೋಬರ ಕಾಲದಲ್ಲಿ ಜೀವಿಸಿದವನಾಗಿದ್ದನೆಂದು ಒಂದು ವಿವರಣೆಯಿದೆ, ಯಾಕಂದರೆ ಯೋಬನ ಸ್ನೇಹಿತರಲ್ಲಿ ಒಬ್ಬ ಸ್ನೇಹಿತನಾಗಿರುವ "ತೇಮಾನೀಯನಿದ್ದನು", ಇದು ಏಸಾವನ ಮೊಮ್ಮೊಗನಾದ ಮೇಲೆ ಜನರ ಗುಂಪಿಗೆ ಹೆಸರಾಗಿದ್ದಿತ್ತು.
- ಹಳೇ ಒಡಂಬಡಿಕೆಯಲ್ಲಿರುವ ಯೋಬನ ಗ್ರಂಥವು ಯೋಬನ ಶ್ರಮೆಗಳಲ್ಲಿ ಯೋಬನು ಮತ್ತು ತನ್ನ ಸ್ನೇಹಿತರು ಹೇಗೆ ಸ್ಪಂದಿಸಿದ್ದಾರೆನ್ನುವುದರ ಕುರಿತಾಗಿ ಹೇಳುತ್ತದೆ. ಸಾರ್ವಭೌಮಾಧಿಕಾರ ಸೃಷ್ಟಿಕರ್ತನನ್ನಾಗಿ ಮತ್ತು ಸರ್ವಸೃಷ್ಟಿಯನ್ನು ಆಳುವವನಾಗಿದ್ದ ದೇವರ ದೃಷ್ಟಿಕೋನವನ್ನು ಕೂಡ ಈ ಪುಸ್ತಕವು ನಮಗೆ ಕೊಡುತ್ತದೆ.
- ಎಲ್ಲಾ ಶ್ರಮೆಗಳಾದನಂತರ ದೇವರು ಕೊನೆಗೆ ಯೋಬನನ್ನು ಸ್ವಸ್ಥಪಡಿಸಿದನು ಮತ್ತು ಆತನಿಗೆ ಅನೇಕಮಂದಿ ಮಕ್ಕಳನ್ನು ಮತ್ತು ಸಂಪತ್ತನ್ನು ಕೊಟ್ಟನು.
- ಮರಣ ಸಮಯದಲ್ಲಿ ಯೋಬನು ತುಂಬಾ ವೃದ್ಧಾಪ್ಯದಲ್ಲಿದ್ದನೆಂದು ಯೋಬನ ಗ್ರಂಥವು ಹೇಳುತ್ತಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಏಸಾವ, ಪ್ರಳಯ, ಯಾಕೋಬ, ಜನರ ಗುಂಪು)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.14:12-14
- ಯಾಕೋಬ.05:9-11
- ಯೋಬ.01:1-3
- ಯೋಬ.03:4-5

ಪದ ಡೇಟಾ:

- Strong's: H347, H3102, G2492

ಯೋರಾಮ

ಸತ್ಯಾಂಶಗಳು:

ಯೋರಾಮನು ಇಸ್ರಾಯೇಲ್ ಅರಸನಾಗಿರುವ ಆಹಾಬನ ಮಗನಾಗಿರುತ್ತಾನೆ. ಕೆಲವೊಂದುಸಲ ಇವನ ಹೆಸರು "ಯೆಹೋರಾಮ" ಎಂಬುದಾಗಿ ಸೂಚಿಸಲ್ಪಟ್ಟನು.

- ಯೂದಾ ಅರಸನಾಗಿ ಯೆಹೋರಾಮನು ಆಳುವ ಸಮಯದಲ್ಲಿಯೇ ಇಸ್ರಾಯೇಲ್ ಅರಸನಾಗಿ ಯೋರಾಮನು ಆಳುತ್ತಿದ್ದನು.
- ಯೋರಾಮನು ಸುಳ್ಳು ದೇವರುಗಳನ್ನು ಆಳಿದ ದುಷ್ಟ ಅರಸನಾಗಿದ್ದನು ಮತ್ತು ಇಸ್ರಾಯೇಲ್ಯರು ಪಾಪ ಮಾಡುವುದಕ್ಕೆ ಕಾರಣನಾದನು.
- ಎಲೀಯ ಮತ್ತು ಓಬದ್ಯ ಪ್ರವಾದಿಗಳಿರುವ ಕಾಲದಲ್ಲಿ ಇಸ್ರಾಯೇಲ್ ಅರಸನಾದ ಯೋರಾಮನು ಆಳಿದನು.
- ಯೋರಾಮ ಎನ್ನುವ ಹೆಸರಿನ ಮೇಲಿರುವ ಇನ್ನೊಬ್ಬ ವ್ಯಕ್ತಿ ದಾವೀದನು ಅರಸನಾಗಿ ಆಳಿದ ಕಾಲದಲ್ಲಿ ಹಾಮಾತಿನ ಅರಸನಾದ ಟೋ ಮಗನಾಗಿರುತ್ತಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಆಹಾಬ, ದಾವೀದ, ಎಲೀಯ, ಹಾಮಾತ್, ಯೆಹೋರಾಮ, ಇಸ್ರಾಯೇಲ್ ರಾಜ್ಯ, ಯೂದಾ, ಓಬದ್ಯ, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:10-12
- 2 ಪೂರ್ವ.22:4-5
- 2 ಅರಸ.01:17-18
- 2 ಅರಸ.08:16-17

ಪದ ಡೇಟಾ:

- Strong's: H3088, H3141, G2496

ಯೋವಾಬ

ಪದದ ಅರ್ಥವಿವರಣೆ:

ಯೋವಾಬನು ದಾವೀದನ ಸಂಪೂರ್ಣ ಆಳ್ವಿಕೆಯಲ್ಲಿ ಅರಸನಾದ ದಾವೀದನಿಗಾಗಿ ನೇಮಿಸಲ್ಪಟ್ಟಿರುವ ಪ್ರಮುಖ ಸೈನ್ಯಾಧಿಪತಿಯಾಗಿರುತ್ತಾನೆ.

- ದಾವೀದನು ಅರಸನಾಗುವುದಕ್ಕೆ ಮುಂಚಿತವಾಗಿ ಯೋವಾಬನು ದಾವೀದನ ನಂಬಿಗಸ್ತ ಹಿಂಬಾಲಕರಲ್ಲಿ ಒಬ್ಬನಾಗಿದ್ದಿದ್ದನು.
- ಸ್ವಲ್ಪಕಾಲವಾದನಂತರ, ದಾವೀದನು ಅರಸನಾಗಿ ಇಸ್ರಾಯೇಲ್ ದೇಶವನ್ನು ಆಳಿದನು, ಆಗ ಯೋವಾಬನು ಅರಸನಾದ ದಾವೀದನ ಸೈನ್ಯಕ್ಕೆ ಸೈನ್ಯಾಧಿಪತಿಯಾದನು.
- ಯೋವಾಬನು ಅರಸನಾದ ದಾವೀದನ ಸೋದರಳಿಯನಾಗಿದ್ದನು, ಇವನ ತಾಯಿ ದಾವೀದನ ಅಕ್ಕಂದಿರಲ್ಲಿ ಒಬ್ಬಳಾಗಿದ್ದಳು.
- ಅರಸನ ಸ್ಥಾನವನ್ನು ಹೊಂದಿಕೊಳ್ಳುವುದಕ್ಕಾಗಿ ದಾವೀದ ಮಗನಾದ ಅಬ್ಷಾಲೋಮನು ತನ್ನನ್ನು ಮೋಸ ಮಾಡಿದಾಗ, ಅರಸನನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿ ಯೋವಾಬನು ಅಬ್ಷಾಲೋಮನನ್ನು ಸಾಯಿಸಿದನು.
- ಯೋವಾಬನು ತುಂಬಾ ರೋಷವುಳ್ಳ ಹೋರಾಟಗಾರನಾಗಿದ್ದನು ಮತ್ತು ಇಸ್ರಾಯೇಲ್ ಶತ್ರುಗಳಾಗಿರುವ ಅನೇಕ ಜನರನ್ನು ಕೊಂದು ಹಾಕಿದನು.

(ಈ ಪದಗಳನ್ನು ಸಹ ನೋಡಿರಿ : ಅಬ್ಷಾಲೋಮ, ದಾವೀದ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:16-17
- 1 ಅರಸ.01:7-8
- 1 ಸಮು.26:6-8
- 2 ಸಮು.02:18-19
- ನೆಹೆ.07:11-14

ಪದ ಡೇಟಾ:

- Strong's: H3097

ಯೋವಾಷ

ಸತ್ಯಾಂಶಗಳು:

ಯೋವಾಷ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಅನೇಕ ಜನರಿದ್ದಾರೆ.

- ಯೋವಾಷ ಎನ್ನುವ ಹೆಸರಲ್ಲಿ ಒಬ್ಬನು ಇಸ್ರಾಯೇಲ್ಯರನ್ನು ಬಿಡಿಸಿದ ಗಿದ್ಯೋನನ ತಂದೆಯಾಗಿರುತ್ತಾರೆ.
- ಇನ್ನೊಬ್ಬ ಯೋವಾಷ ಯಾಕೋಬನ ಚಿಕ್ಕ ಮಗನಾಗಿರುವ ಬೆನ್ಯಾಮೀನ ಸಂತತಿಯಲ್ಲಿರುವ ವ್ಯಕ್ತಿ.
- ಹೆಚ್ಚಾಗಿ ಎಲ್ಲರಿಗೂ ಪ್ರಸಿದ್ಧಿಯಾದ ಯೋವಾಷನು ತನ್ನ ಏಳನೇ ವಯಸ್ಸಿನಲ್ಲಿಯೇ ಯೂದಾ ಅರಸನಾಗಿದ್ದನು. ಇವನು ಯೂದಾ ಅರಸನಾಗಿರುವ ಅಹಜ್ಯನ ಮಗನಾಗಿರುತ್ತಾನೆ, ಇವನು ಕೊಲೆಯಾಗಿರುತ್ತಾನೆ.
- ಯೋವಾಷನು ಅತೀ ಚಿಕ್ಕ ವಯಸ್ಸಿನಲ್ಲಿರುವಾಗ ಅವನು ಅರಸನ ಕಿರೀಟವನ್ನು ಹೊಂದುವಷ್ಟು ದೊಡ್ಡವನಾಗುವವರೆಗೂ ಅವನನ್ನು ಬಚ್ಚಿಡುವುದರ ಮೂಲಕ ತನ್ನ ಚಿಕ್ಕಮ್ಮ ತನ್ನನ್ನು ಕೊಲ್ಲಲ್ಪಡದಂತೆ ರಕ್ಷಿಸಿದ್ದಳು.
- ಅರಸನಾದ ಯೋವಾಷನು ದೇವರಿಗೆ ಮೊಟ್ಟ ಮೊದಲು ವಿಧೇಯನಾಗಿರುವ ಒಳ್ಳೇಯ ಅರಸನಾಗಿದ್ದನು. ಆದರೆ ಇವನು ಉನ್ನತ ಸ್ಥಳಗಳನ್ನು ತೆಗೆದುಹಾಕಲಿಲ್ಲ, ಮತ್ತು ಇಸ್ರಾಯೇಲ್ಯರು ವಿಗ್ರಹಗಳಿಗೆ ಆರಾಧನೆ ಮಾಡುವುದನ್ನು ಪುನಃ ಆರಂಭಿಸಿದರು.
- ಅರಸನಾದ ಯೆಹೋವಾಷನು ಇಸ್ರಾಯೇಲ್ ರಾಜ್ಯವನ್ನು ಆಳುತ್ತಿರುವ ವರ್ಷಗಳಲ್ಲಿ ಅರಸನಾದ ಯೋವಾಷನು ಯೂದಾ ರಾಜ್ಯವನ್ನು ಆಳುತ್ತಿದ್ದನು. ಅವರಿಬ್ಬರು ವಿಶಿಷ್ಟವಾದ ಅರಸರಾಗಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಹಜ್ಯ, ಯಜ್ಞವೇದಿ, ಬೆನ್ಯಾಮೀನ, ಸುಳ್ಳು ದೇವರು, ಗಿದ್ಯೋನ್, ಉನ್ನತ ಸ್ಥಳಗಳು, ಸುಳ್ಳು ದೇವರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:10-12
- 2 ಪೂರ್ವ.18:25-27
- 2 ಅರಸ.11:1-3
- ಆಮೋಸ.01:1-2
- ಕೊಲೊಸ್ಸ.06:11-12

ಪದ ಡೇಟಾ:

- Strong's: H3101, H3135

ಯೋವೇಲ

ಸತ್ಯಾಂಶಗಳು:

ಯೋವೇಲ ಪ್ರವಾದಿಯಾಗಿದ್ದನು, ಇವರು ಯೂದಾ ಅರಸನಾಗಿರುವ ಯೋವಾಷನ ಕಾಲದಲ್ಲಿ ಜೀವಿಸಿರಬಹುದು. ಹಳೇ ಒಡಂಬಡಿಕೆಯಲ್ಲಿ ಯೋವೇಲ ಎನ್ನುವ ಹೆಸರಿನ ಮೇಲೆ ಅನೇಕಮಂದಿ ಜನರಿದ್ದಾರೆ.

- ಹಳೇ ಒಡಂಬಡಿಕೆಯಲ್ಲಿ ಕೊನೆಯ ಭಾಗವಾಗಿರುವ ಪ್ರವಾದಿಗಳ ಚಿಕ್ಕ ಹನ್ನೆರಡು ಪುಸ್ತಕಗಳಲ್ಲಿ ಯೋವೇಲನ ಪುಸ್ತಕವಾಗಿರುತ್ತದೆ.
- ಪ್ರವಾದಿಯಾದ ಯೋವೇಲನ ಕುರಿತಾಗಿ ನಮಗೆ ಸಿಕ್ಕ ಒಂದೇ ಒಂದು ವೈಯುಕ್ತಿಕ ಮಾಹಿತಿ ಏನೆಂದರೆ ಆತನ ತಂದೆ ಪೆತೂವೇಲ.
- ಅಪೊಸ್ತಲನಾದ ಪೇತ್ರನು ಪಂಚಶತ್ತಮ ದಿನದಂದು ಮಾಡಿದ ತನ್ನ ಪ್ರಸಂಗದಲ್ಲಿ ಯೋವೇಲನ ಗ್ರಂಥದಿಂದ ವಾಕ್ಯವನ್ನು ಕ್ರೋಡೀಕರಿಸಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯೋವಾಷ, ಯೂದಾ, ಪಂಚಶತ್ತಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.06:33-35
- 1 ಸಮು.08:1-3
- ಅಪೂ.ಕೃತ್ಯ.02:16-17
- ಎಜ್ರಾ.10:41-44
- ಯೋವೇಲ.01:1-3

ಪದ ಡೇಟಾ:

- Strong's: H3100, G2493

ಯೋಷೀಯ

ಸತ್ಯಾಂಶಗಳು:

ಯೋಷೀಯ ದೈವಿಕ ಅರಸನಾಗಿದ್ದನು, ಈತನು ಸುಮಾರು ಮುವತ್ತೊಂದು ವರ್ಷಗಳ ಕಾಲ ಯೂದಾ ರಾಜ್ಯವನ್ನು ಆಳಿದನು. ಈತನು ಯೂದಾ ಜನರು ಪಶ್ಚಾತ್ತಾಪ ಹೊಂದುವುದಕ್ಕೆ ಮತ್ತು ಯೆಹೋವನನ್ನು ಆರಾಧಿಸುವುದಕ್ಕೆ ನಡೆಸಿದನು.

- ತನ್ನ ತಂದೆಯಾದ ಅರಸ ಅಮ್ಮೋನನನ್ನು ಕೊಂದನಂತರ, ಯೋಷೀಯ ತನ್ನ ಎಂಟನೇ ವಯಸ್ಸಿನಲ್ಲಿ ಯೂದಾ ರಾಜ್ಯದ ಮೇಲೆ ಅರಸನಾದನು.
- ತನ್ನ ಆಳ್ವಿಕೆಯಲ್ಲಿ ಹದಿನೆಂಟನೇ ವರ್ಷದಲ್ಲಿ, ಕರ್ತನ ದೇವಾಲಯವನ್ನು ಪುನಃರ್ ನಿರ್ಮಿಸಲು ಮಹಾ ಯಾಜಕನಾದ ಹಿಲ್ಕೀಯನನ್ನು ನೇಮಿಸಿದನು. ಇದೆಲ್ಲಾ ನಿರ್ಮಿಸಿದನಂತರ, ಧರ್ಮಶಾಸ್ತ್ರವು ದೊರಕಿತು.
- ಧರ್ಮಶಾಸ್ತ್ರದ ಪುಸ್ತಕಗಳನ್ನು ಯೋಷೀಯನಿಗೆ ಓದಿ ತಿಳಿಸಿದನಂತರ, ಆತನ ಜನರು ಯಾವರೀತಿ ದೇವರಿಗೆ ಅವಿಧೇಯತೆಯನ್ನು ತೋರಿಸುತ್ತಿದ್ದಾರೆಂದು ತಿಳಿದು, ತುಂಬಾ ದುಃಖಪಟ್ಟನು. ಆತನು ವಿಗ್ರಹಾರಾಧನೆ ನಡೆಯುವ ಸ್ಥಳಗಳನ್ನೆಲ್ಲಾ ನಾಶ ಮಾಡಬೇಕೆಂದು ಮತ್ತು ಸುಳ್ಳು ದೇವರುಗಳ ಯಾಜಕರನ್ನು ಕೊಂದು ಹಾಕಬೇಕೆಂದು ಆಜ್ಞಾಪಿಸಿದನು.
- ಪಸ್ಕ ಹಬ್ಬವನ್ನು ತಿರುಗಿ ಆಚರಿಸಬೇಕೆಂದೂ ಆತನು ಜನರೆಲ್ಲರಿಗೆ ಆಜ್ಞಾಪಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ಯೂದಾ, ಧರ್ಮಶಾಸ್ತ್ರ, ಪಸ್ಕ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:13-14
- 2 ಪೂರ್ವ.33:24-25
- 2 ಪೂರ್ವ.34:1-3
- ಯೆರೆ.01:1-3
- ಮತ್ತಾಯ.01:9-11

ಪದ ಡೇಟಾ:

- Strong's: H2977, G2502

ಯೋಸೇಫ (ಹಳೇ ಒಡಂಬಡಿಕೆ)

ಸತ್ಯಾಂಶಗಳು:

ಯೋಸೇಫನು ಯಾಕೋಬನ ಹನ್ನೊಂದನೆಯ ಮಗ. ಅವನು ರಾಹೇಲಳ ಮೊದಲ ಮಗ. ಅವನ ಇಬ್ಬರು ಮಕ್ಕಳಾದ ಎಫ್ರಾಯೀಮ್ ಮತ್ತು ಮನಸ್ಸೆಯ ವಂಶಸ್ಥರು ಇಸ್ರಾಯೇಲ್ಯರ ಎರಡು ಕುಲಗಳಾದರು.

- ಯೋಸೇಫ ಎಂಬ ಇಬ್ರಿಯ ಹೆಸರು ಇಬ್ರಿಯ ಪದದ ಅರ್ಥ "ಸೇರಿಸುವುದು, ಹೆಚ್ಚಿಸುವುದು" ಮತ್ತು ಇಬ್ರಿಯ ಪದದ ಅರ್ಥ "ಕೂಡುವುದು, ತೆಗೆಯುವುದು" ಎಂಬ ಎರಡಕ್ಕೂ ಹೋಲುತ್ತದೆ.
- ಆದಿಕಾಂಡ ಪುಸ್ತಕದ ಹೆಚ್ಚಿನ ಭಾಗವನ್ನು ಯೋಸೇಫನ ಕಥೆಗೆ ಸಮರ್ಪಿಸಲಾಗಿದೆ, ಅವನು ತನ್ನ ಅನೇಕ ಕಷ್ಟಗಳ ಮಧ್ಯದಲ್ಲೂ ದೇವರಿಗೆ ಹೇಗೆ ನಂಬಿಗಸ್ತನಾಗಿ ಇದ್ದನು ಮತ್ತು ಅವನನ್ನು ಐಗುಪ್ತಕ್ಕೆ ಗುಲಾಮನನ್ನಾಗಿ ಮಾರಾಟ ಮಾಡಿದ ತನ್ನ ಸಹೋದರರನ್ನು ಹೇಗೆ ಕ್ಷಮಿಸಿದನು.
- ಅಂತಿಮವಾಗಿ ದೇವರು ಯೋಸೇಫನನ್ನು ಐಗುಪ್ತದಲ್ಲಿ ಎರಡನೇ ಅತ್ಯುನ್ನತ ಸ್ಥಾನಕ್ಕೆ ಏರಿಸಿದನು ಮತ್ತು ಸ್ವಲ್ಪ ಆಹಾರವಿದ್ದ ಸಮಯದಲ್ಲಿ ಐಗುಪ್ತದ ಜನರನ್ನು ಮತ್ತು ಸುತ್ತಮುತ್ತಲಿನ ರಾಷ್ಟ್ರಗಳನ್ನು ರಕ್ಷಿಸಲು ಅವನನ್ನು ಉಪಯೋಗಿಸಿದನು. ಯೋಸೇಫನು ತನ್ನ ಕುಟುಂಬವನ್ನು ಹಸಿವಿನಿಂದ ರಕ್ಷಿಸಲು ಸಹಾಯ ಮಾಡಿದನು ಮತ್ತು ಅವರನ್ನು ಐಗುಪ್ತದಲ್ಲಿ ತನ್ನೊಂದಿಗೆ ವಾಸಿಸಲು ಕರೆತಂದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಇವುಗಳನ್ನು ಸಹ ನೋಡಿರಿ : ಇಸ್ರಾಯೇಲಿನ ಹನ್ನೆರಡುಕುಲಗಳು, ಎಫ್ರಾಯೀಮ್, ಮನಸ್ಸೆ, ಯಾಕೋಬ, ರಾಹೇಲಳು)

ಸತ್ಯವೇದದ ಅನುಬಂಧ ವಾಕ್ಯಗಳು:

- ಆದಿ.30:22-24
- ಆದಿ.33:1-3
- ಆದಿ.37:1-2
- ಆದಿ.37:23-24
- ಆದಿ.41:55-57
- ಯೋಹಾನ 4:4-5

ಸತ್ಯವೇದ ಕಥೆಗಳಿಂದ ಉದಾಹರಣೆಗಳು:

- **8:02** _ ಯೋಸೇಫನನ್ನು __ ತನ್ನ ತಂದೆ ಹೆಚ್ಚಾಗಿ ಪ್ರೀತಿಸಿದ್ದರಿಂದ ಮತ್ತು ಇವನು ಅವರಿಗೆ ನಾಯಕನಾಗುತ್ತಾನೆನ್ನುವ ಕನಸು ಯೋಸೇಫನಿಗೆ ಬಂದಿರುವುದರಿಂದ ತನ್ನ ಸಹೋದರರು ಆವನನ್ನು ದ್ವೇಷಿಸಿದರು.
- **8:04** ಗುಲಾಮರನ್ನು ಕೊಂಡುಕೊಳ್ಳುವವರು _ ಯೋಸೇಫನನ್ನು __ ಐಗುಪ್ತಕ್ಕೆ ಕರೆದುಕೊಂಡು ಹೋದರು.
- **8:05** ಸೆರೆಮನೆಯಲ್ಲಿಯೂ _ **ಯೋಸೇಫನು** _ ದೇವರಿಗೆ ನಂಬಿಗಸ್ತನಾಗಿದ್ದನು, ಮತ್ತು ದೇವರು ಆತನನ್ನು ಆಶೀರ್ವಾದ ಮಾಡಿದನು.
- **8:07** ಕನಸುಗಳಿಗೆ ಅರ್ಥವಿವರಣೆಯನ್ನು ಹೇಳುವ ಸಾಮರ್ಥ್ಯವನ್ನು ದೇವರು _ ಯೋಸೇಫನಿಗೆ __ ಕೊಟ್ಟಿದ್ದನು, ಆದ್ದರಿಂದ ಫರೋಹನು ಯೋಸೇಫನನ್ನು ಸೆರೆಮನೆಯಿಂದ ತನ್ನ ಬಳಿಗೆ ಕರೆಸಿಕೊಂಡಿದ್ದನು.
- **8:09** ಚೆನ್ನಾಗಿ ಬೆಳೆಗಳು ಬೆಳೆಯುವ ಏಳು ವರ್ಷಗಳ ಕಾಲದಲ್ಲಿಯೇ ಹೆಚ್ಚಾಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸಬೇಕೆಂದು _ ಯೋಸೇಫನು __ ಜನರಿಗೆ ಹೇಳಿದನು.
- **9:02** ಐಗುಪ್ತರು _ **ಯೋಸೇಫನನ್ನು** _ ಮತ್ತು ಅವನು ಅವರಿಗೆ ಮಾಡಿದ ಎಲ್ಲಾ ಕಾರ್ಯಗಳನ್ನು ಹೆಚ್ಚಿನ ಕಾಲ ನೆನಪಿನಲ್ಲಿಟ್ಟುಕೊಳ್ಳಲಿಲ್ಲ.

ಪದದ ಡೇಟಾ:

- Strong's: H3084, H3130, G25000, G25010

ಯೋಸೇಫ (ಹೊಸ ಒಡಂಬಡಿಕೆ)

ಸತ್ಯಾಂಶಗಳು:

ಯೋಸೇಫನು ಯೇಸುವಿನ ಭೂಲೋಕದ ತಂದೆಯಾಗಿದ್ದನು ಮತ್ತು ತನ್ನ ಮಗನನ್ನಾಗಿ ಸಾಕಿದನು. ಇವನು ನೀತಿವಂತನಾಗಿದ್ದನು ಮತ್ತು ಬಡಿಗಿ ಕೆಲಸ ಮಾಡುವವನಾಗಿದ್ದನು.

- ಯೋಸೇಫನು ಯೆಹೂದ್ಯರ ಹುಡಿಗಿಯಾದ ಮರಿಯಳೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದನು, ಅವರು ಪ್ರಧಾನ ಮಾಡಿಕೊಂಡಿರುವ ಸಮಯದಲ್ಲಿಯೇ, ದೇವರು ಮೆಸ್ಸೀಯನಾದ ಯೇಸುಕ್ರಿಸ್ತನಿಗೆ ಮರಿಯಳನ್ನು ತಾಯಿಯನ್ನಾಗಿ ಮಾಡಿದನು.
- ಪವಿತ್ರಾತ್ಮನು ಅದ್ಭುತವಾದ ರೀತಿಯಲ್ಲಿ ಮರಿಯಳು ಗರ್ಭ ಧರಿಸುವಂತೆ ಮಾಡಿದನೆಂದು ಮತ್ತು ಮರಿಯಳ ಶಿಶುವು ದೇವರ ಮಗನೆಂದು ದೂತನು ಯೋಸೇಫನಿಗೆ ಹೇಳಿದನು.
- ಯೇಸು ಹುಟ್ಟಿದನಂತರ, ಹೆರೋದನಿಂದ ಯೇಸುವನ್ನು ತಪ್ಪಿಸಲು ಶಿಶುವನ್ನು ಮತ್ತು ಮರಿಯಳನ್ನು ಐಗುಪ್ತಕ್ಕೆ ಕರೆದುಕೊಂಡು ಹೋಗಬೇಕೆಂದು ದೂತನು ಯೋಸೇಫನಿಗೆ ತಿಳಿಸಿದನು.
- ಸ್ವಲ್ಪ ಕಾಲವಾದನಂತರ ಯೋಸೇಫ ಮತ್ತು ತನ್ನ ಕುಟುಂಬವು ಗಲಿಲಾಯದಲ್ಲಿರುವ ನಜರೇತನಲ್ಲಿ ಜೀವಿಸಿದರು, ಅಲ್ಲಿಯೇ ಅವನು ಬಡಿಗೆ ಕೆಲಸವನ್ನು ಮಾಡಿಕೊಳ್ಳುತ್ತಾ ಜೀವನವನ್ನು ಮುಂದೆವರಿಸಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ಗಲಿಲಾಯ, ಯೇಸು, ನಜರೇತ, ದೇವರ ಮಗ, ಕನ್ನಿಕೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.01:43-45
- ಲೂಕ.01:26-29
- ಲೂಕ.02:4-5
- ಲೂಕ.02:15-16
- ಮತ್ತಾಯ.01:18-19
- ಮತ್ತಾಯ.01:24-25
- ಮತ್ತಾಯ.02:19-21
- ಮತ್ತಾಯ.13:54-56

ಸತ್ಯವೇದದಿಂದ ಉದಾಹರಣೆಗಳು:

- **22:04** ಈಕೆ (ಮರಿಯ) ಕನ್ನಿಕೆಯಾಗಿದ್ದಳು ಮತ್ತು _ **ಯೋಸೇಫ** _- ಎನ್ನುವ ಹೆಸರಿನವನನ್ನು ವಿವಾಹ ಮಾಡಿಕೊಳ್ಳುವುದಕ್ಕೆ ಅವನೊಂದಿಗೆ ನಿಶ್ಚಿತಾರ್ಥವಾಗಿತ್ತು.
- **23:01** ನೀತಿವಂತನಾಗಿರುವ _ -ಯೋಸೇಫ _ ಎನ್ನುವ ವ್ಯಕ್ತಿಗೆ ಮತ್ತು ಮರಿಯಳಿಗೆ ನಿಶ್ಚಿತಾರ್ಥವಾಗಿತ್ತು. ಮರಿಯಳು ಗರ್ಭವನ್ನು ಧರಿಸಿದ್ದಾಳೆಂದು ಅವನು ಕೇಳಿದಾಗ, ಆ ಶಿಶುವು ನನ್ನದಲ್ಲ ಎಂದು ಮನದಲ್ಲಿ ತಿಳಿದನು. ಅವನು ಆಕೆಯನ್ನು ಅವಮಾನ ಮಾಡಬೇಕೆಂದು ಬಯಸಲಿಲ್ಲ, ಇದರಿಂದ ಅವನು ಆಕೆಯನ್ನು ಬಿಟ್ಟುಬಿಡಬೇಕೆಂದು ಆಲೋಚನೆ ಮಾಡಿದ್ದನು.
- **23:02** "_ ಯೋಸೇಫನೇ _ , ನಿನ್ನ ಹೆಂಡತಿಯಾದ ಮರಿಯಳನ್ನು ಕರೆದುಕೊಂಡು ಹೋಗುವುದಕ್ಕೆ ಹೆದರಬೇಡ" ಎಂದು ದೂತ ಹೇಳಿದನು. ಆಕೆಯ ಗರ್ಭದಲ್ಲಿರುವ ಶಿಶುವು ಪವಿತ್ರಾತ್ಮನಿಂದ ಬಂದಿರುವ ಶಿಶುವಾಗಿರುತ್ತದೆ. ಆಕೆ ಒಬ್ಬ ಮಗನಿಗೆ ಜನ್ಮವನ್ನು ಕೊಡುತ್ತಾಳೆ. ಆತನಿಗೆ ಯೇಸು ಹೆಸರಿಡಬೇಕು (ಈ ಹೆಸರಿಗೆ "ಯೆಹೋವನು ರಕ್ಷಿಸುವನು" ಎಂದರ್ಥ), ಯಾಕಂದರೆ ಆತನು ಜನರ ಪಾಪಗಳಿಂದ ಅವರನ್ನು ರಕ್ಷಿಸುವನು.
- **23:03** ಆದ್ದರಿಂದ _ **ಯೋಸೇಫನು** _ ಮರಿಯಳನ್ನು ಮದುವೆ ಮಾಡಿಕೊಂಡನು ಮತ್ತು ಆತನು ಆಕೆಯನ್ನು ತನ್ನ ಹೆಂಡತಿಯಾಗಿ ಕರೆದುಕೊಂಡು ಹೋದನು, ಆದರೆ ಆಕೆ ಹೆರೆಗೆ ಆಗುವವರೆಗೂ ಅವನು ಆಕೆಯೊಂದಿಗೆ ಕೂಡಿರಲಿಲ್ಲ.
- **23:04** _ **ಯೋಸೇಫನು** _ ಮತ್ತು ಮರಿಯಳು ನಿವಾಸವಾಗಿದ್ದ ನಜರೇತಿನಿಂದ ಬೆತ್ಲೆಹೇಮಿಗೆ ಸೇರಲು ತುಂಬಾ ದೂರ ಪ್ರಯಾಣ ಮಾಡಬೇಕಾಗಿದ್ದಿತ್ತು. ಯಾಕಂದರೆ ಅವರ ಪೂರ್ವಜನಾಗಿರುವ ದಾವೀದನ ಊರು ಬೆತ್ಲೆಹೇಮ್ ಆಗಿತ್ತು.
- **26:04** "ನಿಮ್ಮೊಂದಿಗೆ ನಾನು ಹೇಳುತ್ತಿರುವ ಈ ಮಾತುಗಳೆಲ್ಲವೂ ಈ ಕ್ಷಣದಲ್ಲಿಯೇ ನೆರವೇರಿಸಲ್ಪಡುತ್ತಿವೆಯೆಂದು" ಯೇಸು ಹೇಳಿದನು. ಅಲ್ಲಿರುವ ಎಲ್ಲಾ ಜನರು ಬೆರಗಾದರು. ಅವರೆಲ್ಲರು "ಇವನು _ **ಯೋಸೇಫನ** _ ಮಗನಲ್ಲವೋ?" ಎಂದು ಹೇಳಿಕೊಂಡರು.

ಪದ ಡೇಟಾ:

- Strong's: G2501

ಯೋಹಾನ (ಅಪೊಸ್ತಲನು)

ಸತ್ಯಾಂಶಗಳು:

ಯೋಹಾನನು ಯೇಸುವಿನ ಹನ್ನೆರಡು ಮಂದಿ ಅಪೋಸ್ತಲರಲ್ಲಿ ಒಬ್ಬನಾಗಿರುತ್ತಾನೆ ಮತ್ತು ಯೇಸುವಿಗೆ ತುಂಬಾ ಪ್ರಿಯ ಸ್ನೇಹಿತರಲ್ಲಿ ಒಬ್ಬನಾಗಿದ್ದನು.

- ಯೋಹಾನ ಮತ್ತು ತನ್ನ ಸಹೋದರನಾದ ಯಾಕೋಬನು ಮೀನುಗಾರನಾದ ಜೆಬೆದಾಯನ ಪುತ್ರರಾಗಿದ್ದರು.
- ಈತನು ಬರೆದ ಸುವಾರ್ತೆಯಲ್ಲಿ ಯೇಸುವಿನ ಜೀವನದ ಕುರಿತಾಗಿ ಬರೆದಿದ್ದನು, “ಯೇಸು ಹೆಚ್ಚಾಗಿ ಪ್ರೀತಿಸಿದ ಶಿಷ್ಯ” ಎಂಬುದಾಗಿ ಯೋಹಾನನು ತನಗೋಸ್ಕರ ತಾನೇ ಹೇಳಿಕೊಂಡಿದ್ದನು. ಇದರಿಂದ ಯೋಹಾನನು ಯೇಸುವಿಗೆ ತುಂಬಾ ವಿಶೇಷವಾದ ಆತ್ಮೀಯ ಗೆಳೆಯನಾಗಿರುತ್ತಾನೆಂದು ಪರೋಕ್ಷವಾಗಿ ತಿಳಿದುಬರುತ್ತಿದೆ.
- ಅಪೊಸ್ತಲನಾದ ಯೋಹಾನನು ಹೊಸ ಒಡಂಬಡಿಕೆಯಲ್ಲಿ ಐದು ಪುಸ್ತಕಗಳನ್ನು ಬರೆದಿರುತ್ತಾನೆ: ಯೋಹಾನನ ಸುವಾರ್ತೆ, ಯೇಸು ಕ್ರಿಸ್ತನ ಪ್ರಕಟನೆ, ಮತ್ತು ಇತರ ವಿಶ್ವಾಸಿಗಳಿಗೆ ಬರೆದ ಮೂರು ಪತ್ರಿಕೆಗಳು.
- ಅಪೊಸ್ತಲನಾದ ಯೋಹಾನನು ಸ್ನಾನೀಕನಾದ ಯೋಹಾನನು ಬೇರೆ ಬೇರೆಯಾಗಿರುತ್ತಾರೆಂದು ಸ್ಪಷ್ಟಪಡಿಸಿರಿ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ಬಹಿರಂಗಪಡಿಸು, ಯಾಕೋಬ (ಜೆಬೆದಾಯನ ಮಗ), ಯೋಹಾನ (ಸ್ನಾನಿಕನು), ಜೆಬೆದಾಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.02:9-10
- ಯೋಹಾನ.01:19-21
- ಮಾರ್ಕ.03:17-19
- ಮತ್ತಾಯ.04:21-22
- ಪ್ರಕ.01:1-3

ಸತ್ಯವೇದದಿಂದ ಉದಾಹರಣೆಗಳು:

- **36:01** ಒಂದು ದಿನ ಯೇಸು ತನ್ನ ಶಿಷ್ಯರಾದ ಪೇತ್ರ, ಯಾಕೋಬ ಮತ್ತು _ **ಯೋಹಾನರನ್ನು** ಆತನೊಂದಿಗೆ ಇದ್ದುಕೊಂಡು ಕರೆದುಕೊಂಡು ಹೋದನು. (**ಯೋಹಾನ** _ ಎನ್ನುವ ಹೆಸರಿರುವ ಶಿಷ್ಯನು ಯೇಸುವಿಗೆ ದೀಕ್ಷಾಸ್ನಾನ ಕೊಟ್ಟ ವ್ಯಕ್ತಿಯಾದ ಯೋಹಾನನು ಒಂದೇ ಅಲ್ಲ.) ಅವರು ತಮ್ಮಷ್ಟಕ್ಕೆ ತಾವು ಎತ್ತರವಾದ ಬೆಟ್ಟದ ಮೇಲಕ್ಕೆ ಏರಿ ಹೋದರು.
- **44:01** ಒಂದು ದಿನ ಪೇತ್ರ ಮತ್ತು _ **ಯೋಹಾನರು** _ ದೇವಾಲಯಕ್ಕೆ ಹೋಗಿದ್ದರು. ಅವರು ದೇವಾಲಯ ಬಾಗಿಲವರೆಗೆ ಹೋದಾಗ, ಅಲ್ಲಿ ಒಬ್ಬ ಹುಟ್ಟು ಕುಂಟನು ದುಡ್ಡಿಗಾಗಿ ಬೇಡಿಕೊಳ್ಳುವುದನ್ನು ನೋಡಿದರು.
- **44:06** ದೇವಾಲಯದ ನಾಯಕರು ಪೇತ್ರನು ಮತ್ತು _ **ಯೋಹಾನರು** _ ಹೇಳುತ್ತಿರ ಮಾತುಗಳನ್ನು ಕೇಳಿಸಿಕೊಂಡು ತುಂಬಾ ನಿರಾಸೆಗೊಂಡಿದ್ದರು. ಆದ್ದರಿಂದ ಅವರು ಅವರನ್ನು ಬಂಧಿಸಿ, ಅವರನ್ನು ಸೆರೆಯೊಳಗೆ ಹಾಕಿದರು.
- **44:07** ಆ ಮರುದಿನ, ಯೆಹೂದ್ಯರ ನಾಯಕರು ಪೇತ್ರನನ್ನು ಮತ್ತು _ **ಯೋಹಾನನನ್ನು** ಮಹಾ ಯಾಜಕನ ಬಳಿಗೆ ಮತ್ತು ಇತರ ಧರ್ಮದ ನಾಯಕರ ಬಳಿಗೆ ಕರೆದುಕೊಂಡು ಹೋದರು. “ನೀವು ಯಾವ ಶಕ್ತಿಯಿಂದ ಈ ಕುಂಟನನ್ನು ವಾಸಿ ಮಾಡಿದರು?” ಎಂದು ಅವರು ಪೇತ್ರ ಮತ್ತು **ಯೋಹಾನರನ್ನು** _ ಕೇಳಿದರು.
- **44:09** ಪೇತ್ರ ಮತ್ತು _ **ಯೋಹಾನರು** ಧೈರ್ಯವಾಗಿ ಮಾತನಾಡಿದ್ದನ್ನು ನೋಡಿ ನಾಯಕರು ಬೆರಗಾದರು, ಯಾಕಂದರೆ ಅವರು ಈ ಮನುಷ್ಯರು ಅವಿದ್ಯಾವಂತರು ಸಾಧಾರಣ ವ್ಯಕ್ತಿಗಳೆಂದು ಅವರು ತಿಳಿದಿದ್ದರು. ಈ ಮನುಷ್ಯರು ಯೇಸುವಿನೊಂದಿಗೆ ಇದ್ದವರೆಂದು ಅವರು ಜ್ಞಾಪಕ ಮಾಡಿಕೊಂಡಿದ್ದರು. ಅವರು ಪೇತ್ರ ಮತ್ತು **ಯೋಹಾನರನ್ನು** _ ಬೆದರಿಸಿದನಂತರ, ಅವರನ್ನು ಕಳುಹಿಸಿಬಿಟ್ಟರು.

ಪದ ಡೇಟಾ:

- Strong's: G2491

ಯೋಹಾನ (ಸ್ನಾನಿಕನು)

ಸತ್ಯಾಂಶಗಳು:

ಯೋಹಾನನು ಜೆಕರ್ಯ ಮತ್ತು ಎಲೀಸಬೆತಳಿಗೆ ಹುಟ್ಟಿದ ಮಗನಾಗಿದ್ದನು. "ಯೋಹಾನ" ಎನ್ನುವ ಹೆಸರು ಸಾಧಾರಣವಾಗಿದ್ದರಿಂದ, ಯೋಹಾನ ಮತ್ತು ಅಪೊಸ್ತಲನಾದ ಯೋಹಾನ ಎನ್ನುವ ಹೆಸರುಗಳಿರುವವರಿಂದ ಬೇರ್ಪಡಿಸಿ ಹೇಳಲು ಈತನನನ್ನು "ಸ್ನಾನಿಕನಾದ ಯೋಹಾನ" ಎಂದು ಕರೆಯುತ್ತಾರೆ.

- ಜನರು ಮೆಸ್ಸೀಯಾನನ್ನು ಅನುಸರಿಸುವುದಕ್ಕೆ ಮತ್ತು ಆತನನ್ನು ನಂಬುವುದಕ್ಕೆ ಯೋಹಾನನು ಜನರನ್ನು ಸಿದ್ಧಗೊಳಿಸಲು ಕಳುಹಿಸಲ್ಪಟ್ಟ ದೇವರ ಪ್ರವಾದಿಯಾಗಿದ್ದನು.
- ಜನರೆಲ್ಲರು ಪಾಪಗಳನ್ನು ಒಪ್ಪಿಕೊಳ್ಳಬೇಕೆಂದು, ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು, ಮತ್ತು ಪಾಪ ಮಾಡದಿರಬೇಕೆಂದು ಯೋಹಾನನು ಜನರಿಗೆ ಪ್ರಕಟಿಸಿದನು, ಇದರಿಂದ ಅವರು ಮೆಸ್ಸೀಯನನ್ನು ಸ್ವೀಕರಿಸುವುದಕ್ಕೆ ಸಿದ್ಧರಾಗಿರುತ್ತಾರೆ.
- ಜನರೆಲ್ಲರು ತಮ್ಮ ಪಾಪಗಳಿಗೆ ಕ್ಷಮೆಯನ್ನು ಹೊಂದುವ ಸೂಚನೆಯಾಗಿ ಮತ್ತು ಆ ಪಾಪಗಳಿಂದ ತಿರುಗಿಕೊಂಡಿದ್ದಾರೆನ್ನುವುದಕ್ಕೆ ಸೂಚನೆಯಾಗಿ ಯೋಹಾನನು ಅನೇಕ ಜನರಿಗೆ ನೀರಿನಲ್ಲಿ ದೀಕ್ಷಾಸ್ನಾನ ಕೊಟ್ಟನು.
- ಯೋಹಾನನು ಅನೇಕರಿಗೆ ದೀಕ್ಷಾಸ್ನಾನ ಕೊಟ್ಟಿದ್ದರಿಂದ ಆತನನ್ನು "ಸ್ನಾನಿಕನಾದ ಯೋಹಾನ" ಎಂದು ಕರೆಯಲ್ಪಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೀಕ್ಷಾಸ್ನಾನ, ಜೆಕರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.03:22-24
- ಲೂಕ.01:11-13
- ಲೂಕ.01:62-63
- ಲೂಕ.03:7
- ಲೂಕ.03:15-16
- ಲೂಕ.07:27-28
- ಮತ್ತಾಯ.03:13-15
- ಮತ್ತಾಯ.11:13-15

ಸತ್ಯವೇದದಿಂದ ಉದಾಹರಣೆಗಳು:

- **22:02** "ನಿನ್ನ ಹೆಂಡತಿ ನಿನಗೆ ಒಬ್ಬ ಗಂಡು ಮಗನನ್ನು ಹೆರುವಳು. ನೀನು ಅವನಿಗೆ _ ಯೋಹಾನ _ ಎಂದು ಹೆಸರಿಡಬೇಕು. ಅವನು ಪವಿತ್ರಾತ್ಮಭರಿತನಾಗಿರುವನು ಮತ್ತು ಮೆಸ್ಸೀಯಾನಿಗಾಗಿ ಜನರನ್ನು ಸಿದ್ಧಗೊಳಿಸುವನು!" ಎಂದು ದೂತ ಜೆಕರ್ಯನಿಗೆ ಹೇಳಿದನು.
- **22:07** ಎಲಿಸಬೇತಳು ಗಂಡು ಮಗನನ್ನು ಹೆತ್ತನಂತರ, ದೂತನು ಹೇಳಿದಂತೆಯೇ ಜೆಕರ್ಯ ಮತ್ತು ಎಲಿಸಬೇತಳು ಆ ಮಗುವಿಗೆ _ ಯೋಹಾನ _ ಎಂದು ಹೆಸರಿಟ್ಟರು.
- **24:01** ಜೆಕರ್ಯ ಮತ್ತು ಎಲಿಸಬೇತಳ ಮಗನಾದ _ ಯೋಹಾನ _ ದೊಡ್ಡವನಾಗಿ, ಪ್ರವಾದಿಯಾದನು. ಇವನು ಕಾಡು ಜೇನು ಮತ್ತು ಮಿಡತೆಗಳನ್ನು ತಿನ್ನುತ್ತಾ, ಒಂಟೆಯ ಕೂದಲುಗಳಿಂದ ಮಾಡಿದ ವಸ್ತ್ರಗಳನ್ನು ಧರಿಸಿಕೊಳ್ಳುತ್ತಾ ಅರಣ್ಯದಲ್ಲಿ ಜೀವಿಸುತ್ತಿದ್ದನು.
- **24:02** _ ಯೋಹಾನನ _ ವಾಕ್ಯವನ್ನು ಕೇಳಲು ಅನೇಕರು ಆ ಅರಣ್ಯದೊಳಗೆ ಬರುತ್ತಿದ್ದರು. "ದೇವರ ರಾಜ್ಯವು ಸಮೀಪವಾಯಿತು, ಪಶ್ಚಾತ್ತಾಪ ಹೊಂದಿರಿ" ಎಂದು ಅವನು ಅವರಿಗೆ ಪ್ರಕಟಿಸಿದನು!
- **24:06** ಮರುದಿನ, ಯೇಸು _ ಯೋಹಾನನಿಂದ _ ದೀಕ್ಷಾಸ್ನಾನ ತೆಗೆದುಕೊಳ್ಳುವುದಕ್ಕೆ ಅವನ ಬಳಿಗೆ ಬಂದನು. _ ಯೋಹಾನನು _ ಆತನನ್ನು ನೋಡಿದಾಗ, "ಅಗೋ! ಲೋಕದ ಪಾಪವನ್ನು ನಿವಾರಣೆ ಮಾಡಲು ದೇವರು ನೇಮಿಸಿದ ಯಜ್ಞದ ಕುರಿಮರಿ" ಎಂದು ಹೇಳಿದನು

ಪದ ಡೇಟಾ:

- Strong's: G910 G2491

ಯೋಹಾನ ಮಾರ್ಕ

ಸತ್ಯಾಂಶಗಳು:

ಯೋಹಾನ ಮಾರ್ಕನು “ಮಾರ್ಕ” ಎಂದು ಹೆಸರಿನ ಮೇಲೆ ಕರೆಯಲ್ಪಡುತ್ತಿದ್ದನು, ಇವನು ಪೌಲನ ಸುವಾರ್ತೆ ದಂಡೆಯಾತ್ರೆಯ ಪ್ರಯಾಣಗಳಲ್ಲಿ ಪೌಲನೊಂದಿಗೆ ಪ್ರಯಾಣ ಮಾಡಿದವರಲ್ಲಿ ಒಬ್ಬನಾಗಿದ್ದನು. ಈತನು ಮಾರ್ಕನ ಸುವಾರ್ತೆ ಎನ್ನುವ ಪುಸ್ತಕಕ್ಕೆ ಲೇಖಕನಾಗಿದ್ದನು.

- ಯೋಹಾನ ಮಾರ್ಕನು ತನ್ನ ಸೋದರ ಸಂಬಂಧಿಯಾದ ಬಾರ್ನಬ ಮತ್ತು ಪೌಲರ ಜೊತೆಯಲ್ಲಿ ತಮ್ಮ ಮೊದಲನೇ ಸುವಾರ್ತೆಯ ಪ್ರಯಾಣದಲ್ಲಿ ಹೋಗಿದ್ದನು.
- ಪೇತ್ರನನ್ನು ಯೆರೂಸಲೇಮಿನಲ್ಲಿರುವ ಸೆರೆಯೊಳಗೆ ಹಾಕಿದಾಗ, ವಿಶ್ವಾಸಿಗಳೆಲ್ಲರು ಯೋಹಾನ ಮಾರ್ಕನ ಮನೆಯಲ್ಲಿ ಪೇತ್ರನಿಗಾಗಿ ಪ್ರಾರ್ಥನೆ ಮಾಡುತ್ತಿದ್ದರು.
- ಮಾರ್ಕ ಅಪೊಸ್ತಲನಲ್ಲ, ಆದರೆ ಪೌಲ ಮತ್ತು ಪೇತ್ರರಿಂದ ಬೋಧನೆಯನ್ನು ಹೊಂದಿ, ಸೇವೆಯಲ್ಲಿ ಅವರೊಂದಿಗೆ ಸೇರಿ ಕೆಲಸ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ಯೂದಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.04:11-13
- ಅಪೊ.ಕೃತ್ಯ.12:24-25
- ಅಪೊ.ಕೃತ್ಯ.13:4-5
- ಅಪೊ.ಕೃತ್ಯ.13:13-15
- ಅಪೊ.ಕೃತ್ಯ.15:36-38
- ಅಪೊ.ಕೃತ್ಯ.15:39-41
- ಕೊಲೊಸ್ಸ.04:10-11

ಪದ ಡೇಟಾ:

- Strong's: G2491, G3138

ರಬ್ಬ

ಪದದ ಅರ್ಥವಿವರಣೆ:

ರಬ್ಬ ಎನ್ನುವುದು ಅಮ್ಮೋನಿಯ ಜನರ ಪ್ರಾಮುಖ್ಯವಾದ ಪಟ್ಟಣವಾಗಿತ್ತು.

- ಅಮ್ಮೋನಿಯರಿಗೆ ವಿರುದ್ಧವಾಗಿ ನಡೆದ ಯುದ್ಧದಲ್ಲಿ ಇಸ್ರಾಯೇಲ್ಯರು ಅನೇಕಬಾರಿ ರಬ್ಬವನ್ನು ಧಾಳಿ ಮಾಡಿದ್ದರು.
- ಇಸ್ರಾಯೇಲಿಯರ ಅರಸನಾಗಿರುವ ದಾವೀದನು ತನ್ನ ಕೊನೆಯ ಜಯವು ರಬ್ಬವನ್ನು ವಶಪಡಿಸಿಕೊಂಡಾಗ ಹೊಂದಿದ್ದನು.
- ಈಗಿನ ಆಧುನಿಕ ಅಮ್ಮಾನ್ ಯೊರ್ದನ್ ಪಟ್ಟಣವು ಆಗಿನ ರಬ್ಬ ಇರುವ ಪ್ರಾಂತ್ಯವಾಗಿದ್ದಿತ್ತು.

(ಈ ಪದಗಳನ್ನು ಸಹ ನೋಡಿರಿ : ಅಮ್ಮೋನ್, ದಾವೀದ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.20:1
- 2 ಸಮು.12:26-28
- ಧರ್ಮೋ.03:11
- ಯೆಹೆ.25:3-5
- ಯೆರೆ.49:1-2

ಪದ ಡೇಟಾ:

- Strong's: H7237

ರಾಮಾ

ಸತ್ಯಾಂಶಗಳು:

ರಾಮಾ ಎನ್ನುವುದು ಇಸ್ರಾಯೇಲ್ ಪುರಾತನ ಪಟ್ಟಣವಾಗಿರುತ್ತದೆ, ಇದು ಯೆರೂಸಲೇಮಿನಿಂದ ಸುಮಾರು 8 ಕಿ.ಮೀ. ದೂರದಲ್ಲಿ ಕಂಡುಬರುತ್ತದೆ. ಇದು ಬೆನ್ಯಾಮಿನ್ ಕುಲದವರು ನಿವಾಸವಾಗಿರುವ ಪ್ರಾಂತ್ಯದಲ್ಲಿತ್ತು.

- ರಾಮಾ ಎನ್ನುವುದು ರಾಹೇಲಳು ಬೆನ್ಯಾಮೀನನಿಗೆ ಜನನ ಕೊಟ್ಟನಂತರ ಮರಣ ಹೊಂದಿದ ಸ್ಥಳವಾಗಿರುತ್ತದೆ.
- ಬಾಬೆಲೋನಿಯ ಸೆರೆಯಲ್ಲಿ ಇಸ್ರಾಯೇಲ್ಯರನ್ನು ಹಿಡಿದುಕೊಂಡು ಹೋದಾಗ, ಅವರು ಬಾಬೇಲೋನಿಗೆ ಹೋಗುವುದಕ್ಕೆ ಮುಂಚಿತವಾಗಿ ಅವರನ್ನು ರಾಮಾಗೆ ಕರೆದುಕೊಂಡು ಬಂದಿದ್ದರು.
- ರಾಮಾ ಎನ್ನುವುದು ಸಮುವೇಲನ ತಂದೆತಾಯಿಗಳ ಊರಾಗಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೆನ್ಯಾಮೀನ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.27:25-27
- 1 ಸಮು.02:11
- 2 ಪೂರ್ವ.16:1
- ಯೆರೆ.31:15
- ಯೆಹೋ.18:25-28
- ಮತ್ತಾಯ.02:17-18

ಪದ ಡೇಟಾ:

- Strong's: H7414, G4471

ರಾಮೋತ್

ಸತ್ಯಾಂಶಗಳು:

ರಾಮೋತ್ ಎನ್ನುವುದು ಯೊರ್ದನ್ ಹೊಳೆಯ ಹತ್ತಿರ ಗಿಲ್ಯಾದಿನ ಪರ್ವತಗಳಲ್ಲಿ ಒಂದು ಪ್ರಾಮುಖ್ಯ ಪಟ್ಟಣವಾಗಿದ್ದಿತ್ತು. ಇದನ್ನು ರಾಮೋತ್ ಗಿಲ್ಯಾದ್ ಎಂದೂ ಕರೆಯುತ್ತಾರೆ.

- ರಾಮೋತ್ ಎನ್ನುವುದು ಇಸ್ರಾಯೇಲ್ ಕುಲವಾಗಿರುವ ಗಾದಿಗೆ ಸಂಬಂಧಪಟ್ಟಿರುತ್ತದೆ ಮತ್ತು ಇದನ್ನು ಆಶ್ರಯ ನಗರ ಎಂಬುದಾಗಿ ಗುರುತಿಸಲಾಗಿರುತ್ತದೆ.
- ಇಸ್ರಾಯೇಲ್ ಅರಸನಾದ ಆಹಾಬ ಮತ್ತು ಯೆಹೂದ ಅರಸನಾಗಿರುವ ಯೆಹೋಷಫಾಟರು ರಾಮೋತ್ .ನಲ್ಲಿ ಆರಾಮ್ ಅರಸನಿಗೆ ವಿರುದ್ಧವಾಗಿ ಯುದ್ಧ ಮಾಡಿದ್ದರು. ಆಹಾಬನು ಆ ಯುದ್ಧದಲ್ಲಿ ಸಾಯಿಸಲ್ಪಟ್ಟನು.
- ಸ್ವಲ್ಪ ಕಾಲವಾದನಂತರ, ಅರಸನಾದ ಅಹಜ್ಯ ಮತ್ತು ಅರಸನಾದ ಯೋರಾಮರು ಅರಸನಾದ ಆರಾಮನ ಕೈಯಿಂದ ರಾಮೋತ್ ಪಟ್ಟಣವನ್ನು ವಶಪಡಿಸಿಕೊಳ್ಳಲು ಪ್ರಯತ್ನಪಟ್ಟರು.
- ರಾಮೋತ್ ಗಿಲ್ಯಾದ್ ಎನ್ನುವುದು ಇಸ್ರಾಯೇಲ್ ಜನರಿಗೆ ಅರಸನಾಗಿ ಯೇಹು ಅಭಿಷೇಕಿಸಲ್ಪಟ್ಟ ಸ್ಥಳವಾಗಿದ್ದಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆಹಾಬ, ಅಹಜ್ಯ, ಆರಾಮ್, ಗಾದ್, ಯೆಹೋಷಫಾಟ, ಯೇಹು, ಯೋರಾಮ, ಯೊರ್ದನ್ ಹೊಳೆ, ಯೆಹೂದ, ಆಶ್ರಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.06:71-73
- 1 ಅರಸ.22:3-4
- 2 ಪೂರ್ವ.18:1-3
- 2 ಅರಸ.08:28-29

ಪದ ಡೇಟಾ:

- Strong's: H7216, H7418, H7433

ರಾಹಾಬಳು

ಸತ್ಯಾಂಶಗಳು:

ರಾಹಾಬಳು ಇಸ್ರಾಯೇಲ್ಯರು ಯೆರಿಕೋವನ್ನು ದಾಳಿ ಮಾಡಿದಾಗ ಆ ಪಟ್ಟಣದಲ್ಲಿಯೇ ನಿವಾಸವಾಗಿರುವ ಒಬ್ಬ ಸ್ತ್ರೀಯಾಗಿದ್ದಳು. ಈಕೆ ಸೂಳೆಯಾಗಿದ್ದಳು.

- ಇಸ್ರಾಯೇಲ್ಯರು ಯೆರಿಕೋವನ್ನು ದಾಳಿ ಮಾಡುವುದಕ್ಕೆ ಮುಂಚಿತವಾಗಿ ಯೆರಿಕೋವನ್ನು ಗೂಢಚಾರ ಮಾಡಲು ಬಂದಿರುವ ಇಬ್ಬರು ಇಸ್ರಾಯೇಲ್ಯರನ್ನು ರಾಹಾಬಳು ಬಚ್ಚಿಟ್ಟಿದ್ದಳು. ಗೂಢಚಾರಿಗಳು ತಿರುಗಿ ಇಸ್ರಾಯೇಲ್ ಬಿಡಾರಕ್ಕೆ ತಿರುಗಿ ಹೋಗುವುದಕ್ಕೆ ಈಕೆ ಸಹಾಯ ಮಾಡಿದ್ದಳು.
- ರಾಹಾಬಳು ಯೆಹೋವನಲ್ಲಿ ನಂಬಿಕೆಯಿಟ್ಟಳು.
- ಯೆರಿಕೋವನ್ನು ನಾಶಗೊಳಿಸಿದನಂತರ ಆಕೆ ಮತ್ತು ಆಕೆಯ ಕುಟುಂಬವು ರಕ್ಷಿಸಲ್ಪಟ್ಟರು, ಮತ್ತು ಅವರು ಇಸ್ರಾಯೇಲ್ಯರ ಜೊತೆಯಲ್ಲಿ ನಿವಾಸ ಮಾಡುವುದಕ್ಕೆ ಬಂದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲ್, ಯೆರಿಕೋ, ವ್ಯಭಿಚಾರಿಣಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಇಬ್ರಿ.11:29-31
- ಯಾಕೋಬ.02:25-26
- ಯೆಹೋ.02:20-21
- ಯೆಹೋ.06:17-19
- ಮತ್ತಾಯ.01:4-6

ಸತ್ಯವೇದದಿಂದ ಉದಾಹರಣೆಗಳು:

- **15:01** ಗೂಢಚಾರಿಗಳನ್ನು ಬಚ್ಚಿಟ್ಟು, ಅವರು ತಪ್ಪಿಸಿಕೊಂಡು ಹೋಗುವುದಕ್ಕೆ ಸಹಾಯ ಮಾಡಿದ _ **ರಾಹಬಳು** ಎನ್ನುವ ಹೆಸರಿನ ವೇಶ್ಯಯು ಆ ಪಟ್ಟಣದಲ್ಲಿಯೇ ನಿವಾಸವಾಗಿದ್ದಳು. ಆಕೆ ದೇವರಲ್ಲಿ ನಂಬಿಕೆಯಿಟ್ಟಿದ್ದ ಕಾರಣದಿಂದ ಆಕೆ ಈ ರೀತಿ ಅವರಿಗೆ ಸಹಾಯ ಮಾಡಿದ್ದಳು. ಇಸ್ರಾಯೇಲ್ಯರು ಯೆರಿಕೋವನ್ನು ನಾಶಗೊಳಿಸಿದಾಗ, ಅವರು **ರಾಹಾಬಳನ್ನು** _ ಮತ್ತು ತನ್ನ ಕುಟುಂಬವನ್ನು ರಕ್ಷಿಸುತ್ತೇವೆಂದು ವಾಗ್ದಾನ ಮಾಡಿದರು.
- **15:05** ದೇವರು ಆಜ್ಞಾಪಿಸಿದಂತೆ ಪಟ್ಟಣದಲ್ಲಿರುವ ಪ್ರತಿಯೊಂದನ್ನು ಇಸ್ರಾಯೇಲ್ಯರು ನಾಶಗೊಳಿಸಿದರು. _ **ರಾಹಾಬಳನ್ನು** _ ಮತ್ತು ಆಕೆಯ ಕುಟುಂಬವನ್ನು ಮಾತ್ರ ಅವರು ಆ ಪಟ್ಟಣದಲ್ಲಿ ಸಾಯಿಸಿದೇ ಬಿಟ್ಟುಬಿಟ್ಟರು. ಅವರು ಇಸ್ರಾಯೇಲ್ಯರಲ್ಲಿ ಒಬ್ಬರಾಗಿ ಬೆರೆತು ಹೋದರು.

ಪದ ಡೇಟಾ:

- Strong's: H7343, G4460

ರಾಹೇಲ

ಸತ್ಯಾಂಶಗಳು:

ರಾಹೇಲಳು ಯಾಕೋಬನ ಹೆಂಡತಿಯರಲ್ಲಿ ಒಬ್ಬಳಾಗಿದ್ದಳು. ಆಕೆ ಮತ್ತು ತನ್ನ ಅಕ್ಕ ಲೇಯಳು ಯಾಕೋಬನ ಸೋದರ ಮಾವನಾಗಿರುವ ಲಾಬಾನನ ಹೆಣ್ಣು ಮಕ್ಕಳಾಗಿದ್ದರು,

- ರಾಹೇಲಳು ಯೋಸೇಫ ಮತ್ತು ಬೆನ್ಯಾಮೀನರ ತಾಯಿಯಾಗಿದ್ದಳು, ಇವರ ಸಂತಾನದವರೇ ಇಸ್ರಾಯೇಲ್ ಕುಲಗಳಲ್ಲಿ ಎರಡು ಕುಲಗಳಾದರು.
- ಅನೇಕ ವರ್ಷಗಳ ಕಾಲ ರಾಹೇಲಳಿಗೆ ಮಕ್ಕಳಾಗಿರಲಿಲ್ಲ. ತದನಂತರ ಆಕೆ ಯೋಸೇಫನಿಗೆ ಜನನವನ್ನು ಕೊಡುವುದಕ್ಕೆ ದೇವರು ಬಲಗೊಳಿಸಿದರು.
- ಅನೇಕವರ್ಷಗಳಾದನಂತರ, ಆಕೆ ಬೆನ್ಯಾಮೀನನಿಗೆ ಜನನವನ್ನು ಕೊಟ್ಟನಂತರ, ರಾಹೇಲಳು ಸತ್ತುಹೋದಳು ಮತ್ತು ಯಾಕೋಬನು ಆಕೆಯನ್ನು ಬೆತ್ಲೆಹೇಮಿನಲ್ಲಿ ಹೂಣಿಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೆತ್ಲೆಹೇಮ್, ಯಾಕೋಬ, ಲಾಬಾನ್, ಲೇಯಾ, ಯೋಸೇಫ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.29:4-6
- ಆದಿ.29:19-20
- ಆದಿ.29:28-30
- ಆದಿ.31:4-6
- ಆದಿ.33:1-3
- ಮತ್ತಾಯ.02:17-18

ಪದ ಡೇಟಾ:

- Strong's: H7354, G4478

ರಿಮ್ಮೋನ್

ಸತ್ಯಾಂಶಗಳು:

ರಿಮ್ಮೋನ್ ಎನ್ನುವುದು ಒಬ್ಬ ಮನುಷ್ಯನ ಹೆಸರಾಗಿರುತ್ತದೆ ಮತ್ತು ಸತ್ಯವೇದದಲ್ಲಿ ದಾಖಲು ಮಾಡಿರುವ ಅನೇಕ ಸ್ಥಳಗಳ ಹೆಸರಾಗಿರುತ್ತದೆ. ಇದು ಒಂದು ಸುಳ್ಳು ದೇವರ ಹೆಸರೂ ಆಗಿರುತ್ತದೆ.

- ರಿಮ್ಮೋನ್ ಎನ್ನುವ ಹೆಸರಿನ ವ್ಯಕ್ತಿ ಜೆಬೂಲೂನ್.ನಲ್ಲಿರುವ ಬೇರೋತ್ ಪಟ್ಟಣದಿಂದ ಬೆನ್ಯಾಮೀನ ಕುಲದವನಾಗಿದ್ದನು. ಈ ವ್ಯಕ್ತಿಯ ಮಕ್ಕಳು ಯೋನಾತಾನನ ದುರ್ಬಲ ಮಗನಾಗಿರುವ ಈಷ್ಬೋಶೇತನನ್ನು ಕೊಂದು ಹಾಕಿದರು.
- ಬೆನ್ಯಾಮೀನ ಕುಲದವರಿಂದ ವಶಪಡಿಸಿಕೊಂಡಿರುವ ಪ್ರಾಂತ್ಯದಲ್ಲಿರುವ ಯೆಹೂದ ದಕ್ಷಿಣ ಭಾಗದಲ್ಲಿ ರಿಮ್ಮೋನ್ ಎನ್ನುವ ಪಟ್ಟಣವಿದ್ದಿತ್ತು.
- "ರಿಮ್ಮೋನ್ ಬಂಡೆ" ಎನ್ನುವುದು ಸುರಕ್ಷಿತವಾದ ಸ್ಥಳವಾಗಿದ್ದಿತ್ತು, ಇಲ್ಲಿಯೇ ಬೆನ್ಯಾಮೀನ ಕುಲದವರು ಯುದ್ಧದಲ್ಲಿ ಸಾವನ್ನು ತಪ್ಪಿಸಿಕೊಂಡು ಈ ಸ್ಥಳಕ್ಕೆ ಬಂದಿದ್ದರು.
- ರಿಮ್ಮೋನ್ ಪೆರೆಜ್ ಎನ್ನುವುದು ಯೂದಾ ಅರಣ್ಯದಲ್ಲಿ ಗೊತ್ತಿಲ್ಲದ ಸ್ಥಳವಾಗಿತ್ತು.
- ಸಿರಿಯಾ ಸೈನ್ಯಾಧಿಪತಿಯಾದ ನಾಮಾನನು ಸಿರಿಯಾ ಅರಸನು ಆರಾಧಿಸಲ್ಪಡುತ್ತಿರುವ ಸ್ಥಳದಲ್ಲಿ ಸುಳ್ಳು ದೇವರಾದ ರಿಮ್ಮೋನ್ ದೇವಾಲಯದ ಕುರಿತು ಮಾತನಾಡಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಬೆನ್ಯಾಮೀನ, ಯೂದಾ, ನಾಮಾನ, ಸಿರಿಯಾ, ಜೆಬೂಲೂನ್)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.05:17-19
- 2 ಸಮು.04:5-7
- ನ್ಯಾಯಾ.20:45-46
- ನ್ಯಾಯಾ.21:13-15

ಪದ ಡೇಟಾ:

- Strong's: H7417

ರೂತಳು

ಸತ್ಯಾಂಶಗಳು:

ರೂತಳು ಮೋವಾಬ್ಯ ಸ್ತ್ರೀಯಾಗಿರುತ್ತಾಳೆ, ಈಕೆ ನ್ಯಾಯಾಧೀಶರು ಇಸ್ರಾಯೇಲ್ಯರನ್ನು ನಡೆಸುತ್ತಿರುವ ಕಾಲದಲ್ಲಿ ಜೀವನ ಮಾಡಿದ್ದಳು. ನ್ಯಾಯಾಧೀಶರು ಇಸ್ರಾಯೇಲ್ಯರನ್ನು ನಡೆಸುತ್ತಿರುವ ಕಾಲದಲ್ಲಿ ಬರಗಾಲ ಬಂದ ಕಾರಣದಿಂದ ಈಕೆ ತನ್ನ ಕುಟುಂಬದೊಂದಿಗೆ ಮೋವಾಬ್ಯಿಗೆ ಹೋದಾಗ ಅಲ್ಲಿ ಒಬ್ಬ ಇಸ್ರಾಯೇಲ್ ವ್ಯಕ್ತಿಯನ್ನು ಮದುವೆ ಮಾಡಿಕೊಂಡಳು.

- ರೂತಳ ಗಂಡನು ಸತ್ತುಹೋದನು, ಮತ್ತು ಸ್ವಲ್ಪ ಕಾಲವಾದನಂತರ ಈಕೆ ಮೋವಾಬ್ಯ ದೇಶವನ್ನು ಬಿಟ್ಟು ತನ್ನ ಅತ್ತೆಯಾದ ನೊವೊಮಿಯಳೊಂದಿಗೆ ಪ್ರಯಾಣಿಸಿದಳು, ತನ್ನ ಆತ್ತೆಯು ಆ ಸಮಯದಲ್ಲಿ ಇಸ್ರಾಯೇಲಿನಲ್ಲಿರುವ ತನ್ನ ಸ್ವಂತ ಊರು ಬೆತ್ಲೆಹೇಮಿಗೆ ಬರುತ್ತಿದ್ದಳು.
- ರೂತಳು ನೊವೊಮಿಗೆ ತುಂಬಾ ನಂಬಿಗಸ್ತಳಾಗಿದ್ದಳು ಮತ್ತು ಆಕೆಗೆ ಆಹಾರವನ್ನು ಒದಗಿಸಿ ಕೊಡುವುದಕ್ಕೆ ತುಂಬಾ ಹೆಚ್ಚಿನ ಕಷ್ಟವನ್ನು ಮಾಡಿದ್ದಳು.
- ಈಕೆ ಕೂಡ ಇಸ್ರಾಯೇಲ್ ನಿಜವಾದ ದೇವರನ್ನು ಸೇವಿಸುವುದಕ್ಕೆ ತನ್ನನ್ನು ತಾನು ಸಮರ್ಪಣೆ ಮಾಡಿಕೊಂಡಿದ್ದಳು.
- ರೂತಳು ಬೋವಜ ಎನ್ನುವ ಇಸ್ರಾಯೇಲ್ ವ್ಯಕ್ತಿಯನ್ನು ವಿವಾಹ ಮಾಡಿಕೊಂಡಳು ಮತ್ತು ಅಲ್ಲಿ ಒಂದು ಗಂಡು ಮಗುವಿಗೆ ಜನ್ಮವನ್ನು ತಾಳಿದಳು, ಇವನು ಅರಸನಾದ ದಾವೀದನ ತಾತನಾಗಿದ್ದನು. ಯೇಸುಕ್ರಿಸ್ತನ ಪೂರ್ವಜನಾಗಿರುವ ಅರಸನಾದ ದಾವೀದನು ರೂತಳಿಂದ ಬಂದಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೇತ್ಲೆಹೇಮ್, ಬೋವಜ, ದಾವೀದ, ನ್ಯಾಯಾಧೀಶ)

ಸತ್ಯವೇದದ ಅನುಬಂಧ ವಾಕ್ಯಗಳು :

- ಮತ್ತಾಯ.01:4-6
- ರೂತಳು.01:3-5
- ರೂತಳು.03:8-9
- ರೂತಳು.04:5-6

ಪದ ಡೇಟಾ:

- Strong's: H7327, G4503

ರೂಬೇನ್

ಸತ್ಯಾಂಶಗಳು:

ರೂಬೇನ್ ಯಾಕೋಬನಿಗೆ ಹುಟ್ಟಿದ ಮೊದಲ ಸಂತಾನವಾಗಿದ್ದನು. ತನ್ನ ತಾಯಿ ಲೇಯಳಾಗಿದ್ದಳು.

- ತನ್ನ ಸಹೋದರರು ತನ್ನ ಚಿಕ್ಕ ತಮ್ಮನಾದ ಯೋಸೇಫನನ್ನು ಸಾಯಿಸುವುದಕ್ಕೆ ಪ್ರಣಾಳಿಕೆ ಮಾಡಿದಾಗ, ರೂಬೇನ್ ತನ್ನ ತಮ್ಮನನ್ನು ಒಂದು ಗುಂಡಿಯೊಳಗೆ ಹಾಕೋಣ ಎಂದು ಎಲ್ಲರಿಗೆ ಹೇಳುವುದರ ಮೂಲಕ ತನ್ನ ತಮ್ಮನ ಪ್ರಾಣವನ್ನು ಕಾಪಾಡಿದ್ದನು.
- ರೂಬೇನ್ ಸ್ವಲ್ಪ ಸಮಯವಾದನಂತರ ಯೋಸೇಫನನ್ನು ರಕ್ಷಿಸುವುದಕ್ಕೆ ಹಿಂತಿರುಗಿ ಬಂದನು, ಆದರೆ ಇತರ ಅಣ್ಣಂದಿಯರು ಆ ದಾರಿಯಲ್ಲಿ ಹೋಗುತ್ತಿರುವ ವ್ಯಾಪಾರಿಗಳಿಗೆ ಗುಲಾಮನನ್ನಾಗಿ ತನ್ನನ್ನು ಮಾರಿ ಬಿಟ್ಟರು.
- ರೂಬೇನ್ ಸಂತಾನದವರು ಇಸ್ರಾಯೇಲ್ ಹನ್ನೆರಡು ಕುಲಗಳಲ್ಲಿ ಒಂದು ಕುಲವಾಗಿ ಮಾರ್ಪಟ್ಟರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯಾಕೋಬ, ಯೋಸೇಫ, ಲೇಯಾ, ಇಸ್ರಾಯೇಲ್ ಹನ್ನೆರಡು ಕುಲದವರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.29:31-32
- ಆದಿ.35:21-22
- ಆದಿ.42:21-22
- ಆದಿ.42:37-38

ಪದ ಡೇಟಾ:

- Strong's: H7205, H7206, G4502

ರೆಬೆಕ್ಕ

ಸತ್ಯಾಂಶಗಳು:

ರೆಬೆಕ್ಕಳು ಅಬ್ರಾಹಾಮನ ಸಹೋದರನಾದ ನಾಹೋರನ ಮೊಮ್ಮೊಗಳಾಗಿದ್ದಳು.

- ರೆಬೆಕ್ಕಳು ಅಬ್ರಾಹಾಮನ ಮಗನಾದ ಇಸಾಕನ ಹೆಂಡತಿಯಾಗಿರುವುದಕ್ಕೆ ದೇವರು ಆಯ್ಕೆ ಮಾಡಿದರು.
- ರೆಬೆಕ್ಕಳು ತಾನು ನಿವಾಸವಾಗಿದ್ದ ಆರಾಮ್ ನಹರೆಮ್ ಪ್ರಾಂತ್ಯವನ್ನು ಬಿಟ್ಟು, ಇಸಾಕನು ಜೀವಿಸುತ್ತಿರುವ ನೆಗೆವ್ ಪ್ರಾಂತ್ಯಕ್ಕೆ ಅಬ್ರಾಹಾಮನ ದಾಸನೊಂದಿಗೆ ಹೊರಟು ಹೋದಳು.
- ತುಂಬಾ ವರ್ಷಗಳ ಕಾಲ ರೆಬೆಕ್ಕಳಿಗೆ ಮಕ್ಕಳಾಗಲಿಲ್ಲ, ಆದರೆ ಕೊನೆಗೆ ದೇವರು ಆಕೆಯನ್ನು ಏಸಾವ ಮತ್ತು ಯಾಕೋಬ ಎನ್ನುವ ಇಬ್ಬರು ಗಂಡು ಮಕ್ಕಳೊಂದಿಗೆ ಆಶೀರ್ವಾದ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಆರಾಮ್, ಏಸಾವ, ಇಸಾಕ, ಯಾಕೋಬ, ನಾಹೋರ, ನೆಗೆವ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.24:15-16
- ಆದಿ.24:45-46
- ಆದಿ.24:56-58
- ಆದಿ.24:63-65
- ಆದಿ.25:27-28
- ಆದಿ.26:6-8

ಸತ್ಯವೇದದಿಂದ ಉದಾಹರಣೆಗಳು:

- **06:02** ಅಬ್ರಾಹಾಮನ ಬಂಧುಗಳು ನಿವಾಸವಾಗಿರುವ ಭೂಮಿಗೆ ಮಾಡಿದ ಅತೀ ದೂರ ಪ್ರಯಾಣದನಂತರ, ದೇವರು ಆ ದಾಸನನ್ನು _ ರೆಬೆಕ್ಕಳ _ ಬಳಿಗೆ ನಡೆಸಿಕೊಟ್ಟನು. ಈಕೆ ಅಬ್ರಾಹಾಮನ ಸಹೋದರ ಮೊಮ್ಮೊಗಳಾಗಿದ್ದಳು.
- **06:06** “ನಿನ್ನಲ್ಲಿ ಎರಡು ದೇಶಗಳು ಒಳಗೊಂಡಿವೆ” ಎಂದು ದೇವರು _ ರೆಬಕ್ಕಳಿಗೆ _ ಹೇಳಿದನು.
- **07:01** ಮಕ್ಕಳು ಬೆಳೆಯುತ್ತಿರುವಾಗ, _ ರೆಬೆಕ್ಕ _ ಯಾಕೋಬನನ್ನು ಪ್ರೀತಿಸಿದಳು, ಆದರೆ ಇಸಾಕನು ಏಸಾವನನ್ನು ಪ್ರೀತಿಸಿದನು.
- **07:03** ಇಸಾಕನು ತನ್ನ ಆಶೀರ್ವಾದವನ್ನು ಏಸಾವನಿಗೆ ಕೊಡಬೇಕೆಂದು ಬಯಸಿದನು. ಆದರೆ ಆವನು ಅದನ್ನು ಮಾಡುವುದಕ್ಕೆ ಮುಂಚಿತವಾಗಿ, ಏಸಾವನಂತೆ ಯಾಕೋಬನು ನಟಿಸುವುದರ ಮೂಲಕ _ ರೆಬೆಕ್ಕಳು _ ಮತ್ತು ಯಾಕೋಬನು ಅವನನ್ನು ಮೋಸಗೊಳಿಸಿದರು.
- **07:06** ಆದರೆ _ ರೆಬೆಕ್ಕಳು _ ಏಸಾವನ ಪ್ರಣಾಳಿಕೆಯನ್ನು ಕೇಳಿಸಿಕೊಂಡಿದ್ದಳು. ಆದ್ದರಿಂದ ಆಕೆ ಯಾಕೋಬನನ್ನು ತನ್ನ ಬಂಧುಗಳೊಂದಿಗೆ ಜೀವಿಸುವುದಕ್ಕೆ ಪ್ರೇರೇಪಿಸಿ ದೂರ ಪ್ರಾಂತ್ಯಕ್ಕೆ ಕಳುಹಿಸಿಬಿಟ್ಟಳು.

ಪದ ಡೇಟಾ:

- Strong's: H7259

ರೆಹಬ್ಬಾಮ

ಸತ್ಯಾಂಶಗಳು:

ರೆಹಬ್ಬಾಮನು ಅರಸನಾದ ಸೊಲೊಮೋನನ ಇಬ್ಬರ ಮಕ್ಕಳಲ್ಲಿ ಒಬ್ಬನಾಗಿರುತ್ತಾನೆ, ಮತ್ತು ಸೊಲೊಮೋನನ ಮರಣದನಂತರ ಇವನು ಇಸ್ರಾಯೇಲ್ ದೇಶದ ಅರಸನಾದನು.

- ತನ್ನ ಆಳ್ವಿಕೆಯ ಆರಂಭದಲ್ಲಿ, ರೆಹಬ್ಬಾಮನು ತನ್ನ ಜನರೊಂದಿಗೆ ಗಂಭೀರವಾಗಿದ್ದನು, ಇದರಿಂದ ಇವನಿಗೆ ವಿರುದ್ಧವಾಗಿ ಇಸ್ರಾಯೇಲ್ ಹತ್ತು ಕುಲದವರು ತಿರಸ್ಕಾರ ಮಾಡಿದರು ಮತ್ತು ಉತ್ತರದಲ್ಲಿ "ಇಸ್ರಾಯೇಲ್ ರಾಜ್ಯ" ರೂಪಗೊಂಡಿತು.
- ರೆಹಬ್ಬಾಮನು ಯೆಹೂದ ದಕ್ಷಿಣ ರಾಜ್ಯಕ್ಕೆ ಅರಸನಾಗಿ ಮುಂದುವರಿದನು, ಈ ರಾಜ್ಯದಲ್ಲಿ ಯೆಹೂದ ಮತ್ತು ಬೆನ್ಯಾಮೀನ ಎರಡು ಕುಲಗಳು ಮಾತ್ರ ಉಳಿದುಕೊಂಡಿದ್ದವು.
- ರೆಹಬ್ಬಾಮನು ಯೆಹೋವನಿಗೆ ವಿಧೇಯನಾಗದ ದುಷ್ಟ ಅರಸನಾಗಿದ್ದನು, ಆದರೆ ಅವನು ಸುಳ್ಳು ದೇವರುಗಳನ್ನು ಆರಾಧನೆ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಇಸ್ರಯೇಲ್ ರಾಜ್ಯ, ಯೆಹೂದ, ಸೊಲೊಮೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:10-12
- 1 ಅರಸ.11:41-43
- 1 ಅರಸ.14:21-22
- ಮತ್ತಾಯ.01:7-8

ಸತ್ಯವೇದದಿಂದ ಉದಾಹರಣೆಗಳು:

- **18:05** ಸೊಲೊಮೋನನ ಮರಣದನಂತರ, ತನ್ನ ಮಗನಾಗಿರುವ _ ರೆಹಬ್ಬಾಮನು _ ಅರಸನಾದನು. _ ರೆಹಬ್ಬಾಮನು _ ಮೂರ್ಖನಾಗಿದ್ದನು.
- **18:06** _ ರೆಹಬ್ಬಾಮನು _ ಮೂರ್ಖವಾಗಿ ಉತ್ತರಿಸುತ್ತಿದ್ದನು ಮತ್ತು "ನನ್ನ ತಂದೆಯಾದ ಸೊಲೊಮೋನನು ನೀವು ಹೆಚ್ಚಾಗಿ ಕಷ್ಟಪಡುವಂತೆ ಮಾಡಿದನು ಎಂದು ನೀವು ಆಲೋಚನೆ ಮಾಡುತ್ತಿದ್ದೀರಿ, ಆದರೆ ನಾನು ಆತನು ಮಾಡಿದ್ದಕ್ಕಿಂತ ಹೆಚ್ಚಾಗಿ ನೀವು ಕಷ್ಟಪಡುವಂತೆ ಮಾಡುತ್ತೇನೆ, ಮತ್ತು ಆತನು ನಿಮ್ಮನ್ನು ಶಿಕ್ಷಿಸಿದ್ದಕ್ಕಿಂತ ಹೆಚ್ಚಾಗಿ ನಿಮ್ಮನ್ನು ಕಠಿಣವಾಗಿ ಶಿಕ್ಷಿಸುತ್ತೇನೆ" ಎಂದು ಅವರಿಗೆ ಹೇಳಿದನು.
- **18:07** _ ರೆಹಬ್ಬಾಮನಿಗೆ _ ವಿರುದ್ಧವಾಗಿ ಇಸ್ರಾಯೇಲ್ ಹತ್ತು ದೇಶದ ಕುಲಗಳು ತಿರುಗಿಬಿದ್ದವು. ಕೇವಲ ಎರಡು ಕುಲಗಳು ಮಾತ್ರ ಅವನಿಗೆ ನಂಬಿಗಸ್ತರಾಗಿದ್ದವು.

ಪದ ಡೇಟಾ:

- Strong's: H7346, G4497

ರೋಮ್, ರೋಮಾ

ಸತ್ಯಾಂಶಗಳು:

ಹೊಸ ಒಡಂಬಡಿಕೆಯ ಕಾಲಗಳಲ್ಲಿ ರೋಮ್ ಪಟ್ಟಣವು ರೋಮಾ ಸಾಮ್ರಾಜ್ಯಕ್ಕೆ ಕೇಂದ್ರವಾಗಿದ್ದಿತ್ತು. ಇದೀಗ ಆಧುನಿಕ ದಿನಗಳಲ್ಲಿನ ಇಟಲಿ ದೇಶಕ್ಕೆ ರಾಜಧಾನಿ ಪಟ್ಟಣವಾಗಿದೆ.

- ರೋಮಾ ಸಾಮ್ರಾಜ್ಯವು ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲಿರುವ ಎಲ್ಲಾ ಪ್ರಾಂತ್ಯಗಳ ಮೇಲೆ ಆಡಳಿತವನ್ನು ಮಾಡಿದೆ, ಅದರಲ್ಲಿ ಇಸ್ರಾಯೇಲ್ ಕೂಡ ಒಳಗೊಂಡಿರುತ್ತದೆ.
- "ರೋಮಾ" ಎನ್ನುವ ಪದವು ರೋಮ್ ನಿಯಂತ್ರಣದಲ್ಲಿರುವ ಪ್ರಭುತ್ವದ ಪ್ರಾಂತ್ಯಗಳಿಗೆ ಸಂಬಂಧಪಟ್ಟ ಪ್ರತಿಯೊಂದನ್ನು ಸೂಚಿಸುತ್ತದೆ, ಅವುಗಳಲ್ಲಿ ರೋಮಾ ಪೌರರು ಮತ್ತು ರೋಮಾ ಅಧಿಕಾರಿಗಳೂ ಬರುತ್ತಾರೆ.
- ಅಪೊಸ್ತಲನಾದ ಪೌಲನನ್ನು ಒಬ್ಬ ಖೈದಿಯನ್ನಾಗಿ ರೋಮಾ ಪಟ್ಟಣಕ್ಕೆ ಕರೆದುಕೊಂಡು ಹೋದರು, ಯಾಕಂದರೆ ಆತನು ಯೇಸುವಿನ ಕುರಿತಾದ ಶುಭವಾರ್ತೆಯನ್ನು ಪ್ರಕಟಿಸಿದ್ದನು.
- ಹೊಸ ಒಡಂಬಡಿಯ ಪುಸ್ತಕವಾಗಿರುವ "ರೋಮಾಪುರದವರಿಗೆ" ಬರೆದ ಪತ್ರಿಕೆಯನ್ನು ಪೌಲನು ರೋಮಾ ಪಟ್ಟಣದಲ್ಲಿರುವ ಕ್ರೈಸ್ತರಿಗೆ ಬರೆದನು.

(ಈ ಪದಗಳನ್ನು ಸಹ ನೋಡಿರಿ : ಶುಭವಾರ್ತೆ, ಸಮುದ್ರ, ಪಿಲಾತ, ಪೌಲ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.01:15-18
- ಅಪೊ.ಕೃತ್ಯ.22:25-26
- ಅಪೊ.ಕೃತ್ಯ.28:13-15
- ಯೋಹಾನ.11:47-48

ಸತ್ಯವೇದದಿಂದ ಉದಾಹರಣೆಗಳು:

- **23:04** ಮರಿಯಳು ಶಿಶುವಿಗೆ ಜನನ ಕೊಡುವ ಸಮಯವು ಹತ್ತಿರಕ್ಕೆ ಬಂದಾಗ, ಪ್ರತಿಯೊಬ್ಬರು ತಮ್ಮ ಪೂರ್ವಜರು ನಿವಾಸವಾಗಿರುವ ಪಟ್ಟಣಗಳಿಗೆ (ಅಥವಾ ಊರುಗಳಿಗೆ) ಹೋಗಿ ಜನಸಂಖ್ಯೆಯಲ್ಲಿ ಸೇರಿರಿ ಎಂದು _ **ರೋಮಾ** _ ಸರ್ಕಾರ ಪ್ರಕಟಣೆ ಮಾಡಿದ್ದಿತ್ತು.
- **32:06** "ನಿನ್ನ ಹೆಸರು ಏನು?" ಎಂದು ಯೇಸು ಆ ದೆವ್ವಕ್ಕೆ ಕೇಳಿದರು. "ನನ್ನ ಹೆಸರು ಸೈನ್ಯದಳ, ಯಾಕಂದರೆ ನಮ್ಮ ಸಂಖ್ಯೆ ಹೆಚ್ಚಾಗಿರುತ್ತದೆ" ಎಂದು ಆತನು ಉತ್ತರಿಸಿದನು. ("ಸೈನ್ಯದಳ" ಎಂದರೆ _ **ರೋಮಾ** _ ಸೈನ್ಯದಲ್ಲಿ ಸಾವಿರಾರು ಸೈನಿಕರಿರುವ ಗುಂಪಾಗಿರುತ್ತದೆ.)
- **39:09** ಆ ಮರುದಿನ ಬೆಳಿಗ್ಗೆ, ಯೆಹೂದ್ಯ ನಾಯಕರು ಯೇಸುವನ್ನು ಮರಣದ ಶಿಕ್ಷೆಯನ್ನು ಹಾಕುವುದಕ್ಕೆ _ **ರೋಮಾ** _ ಪಾಲಕನಾಗಿರುವ ಪಿಲಾತನ ಬಳಿಗೆ ಯೇಸುವನ್ನು ಕರೆದುಕೊಂಡು ಬಂದರು.
- **39:12** _ **ರೋಮಾ** _ ಸೈನಿಕರು ಯೇಸುವನ್ನು ಬೆತ್ತದಿಂದ ಹೊಡೆದರು ಮತ್ತು ಆತನ ಮೇಲೆ ದೊರೆತನದ ನಿಲುವಂಗಿಯನ್ನು ತೊಡಸಿ, ಆತನ ತಲೆಯ ಮೇಲೆ ಮುಳ್ಳುಗಳ ಕಿರೀಟವನ್ನು ಇಟ್ಟರು. "ನೋಡಿರಿ, ಯೆಹೂದ್ಯರ ಅರಸನು!" ಎಂದು ಹೇಳುತ್ತಾ ಅವರು ಆತನನ್ನು ಹೀಯಾಳಿಸಿದರು.

ಪದ ಡೇಟಾ:

- Strong's: G4514, G4516

ಲವಣ ಸಮುದ್ರ, ಮೃತ ಸಮುದ್ರ

ಸತ್ಯಾಂಶಗಳು:

ಲವಣ ಸಮುದ್ರವು (ಇದನ್ನು ಮೃತ ಸಮುದ್ರವೆಂದೂ ಕರೆಯುತ್ತಾರೆ) ದಕ್ಷಿಣ ಇಸ್ರಾಯೇಲಿನ ಪಶ್ಚಿಮ ಭಾಗ ಮತ್ತು ಮೋವಾಬ್ಯಿನ ಪೂರ್ವ ಭಾಗದ ಮಧ್ಯೆದಲ್ಲಿ ಕಂಡುಬರುತ್ತದೆ.

- ಯೊರ್ದನ್ ಹೊಳೆಯು ಲವಣ ಸಮುದ್ರದೊಳಗೆ ಹರಡುತ್ತದೆ.
- ಯಾಕಂದರೆ ಇದು ಎಲ್ಲಾ ಸಮುದ್ರಗಳಿಗಿಂತ ತುಂಬಾ ಚಿಕ್ಕದಾಗಿರುತ್ತದೆ, ಇದನ್ನು "ಲವಣ ಕೆರೆ" ಎಂದೂ ಕರೆಯುತ್ತಾರೆ.
- ಈ ಸಮುದ್ರದಲ್ಲಿರುವ ನೀರು ಜೀವವುಳ್ಳದ್ದಾಗಿರದಂತಹ ಹೆಚ್ಚಿನ ಪ್ರಮಾಣದಲ್ಲಿ ಖನಿಜಗಳನ್ನು (ಅಥವಾ "ಉಪ್ಪನ್ನು") ಹೊಂದಿರುತ್ತದೆ. ಅಲ್ಲಿ ಮರಗಳು ಮತ್ತು ಪ್ರಾಣಿಗಳ ಕೊರತೆ ಇರುವುದರಿಂದ, ಅದಕ್ಕೆ "ಮೃತ ಸಮುದ್ರ" ಎನ್ನುವ ಹೆಸರು ಬಂದಿದೆ.
- ಹಳೇ ಒಡಂಬಡಿಕೆಯಲ್ಲಿ ಈ ಸಮುದ್ರವನ್ನು "ಅರಾಭ ಸಮುದ್ರ" ಮತ್ತು "ನೆಗೆವೆ ಸಮುದ್ರ" ಎಂದೂ ಕರೆಯುತ್ತಾರೆ, ಯಾಕಂದರೆ ಈ ಸಮುದ್ರವು ಅರಾಭ ಮತ್ತು ನೆಗೆವೆ ಎನ್ನುವ ಪ್ರಾಂತ್ಯಗಳಿಗೆ ಅತೀ ಸಮೀಪವಾಗಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಮ್ಮೋನ್, ಅರಾಭ, ಯೊರ್ದನ್ ಹೊಳೆ, ಮೋವಾಬ್, ನೆಗೆವ್)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.20:1-2
- ಧರ್ಮೋ.03:17
- ಯೆಹೋ.03:14-16
- ಅರಣ್ಯ.34:1-3

ಪದ ಡೇಟಾ:

- Strong's: H3220, H4417

ಲಾಜರನು

ಸತ್ಯಾಂಶಗಳು:

ಲಾಜರನು ಮತ್ತು ಅವನ ಇಬ್ಬರ ಅಕ್ಕಂದಿಯರಾದ ಮರಿಯಳು ಮತ್ತು ಮಾರ್ಥಳು ಯೇಸುವಿಗೆ ವಿಶೇಷವಾದ ಸ್ನೇಹಿತರಾಗಿದ್ದರು. ಬೆಥಾನ್ಯದಲ್ಲಿರುವ ಅವರ ಮನೆಯಲ್ಲಿ ಯೇಸು ಆಗಾಗ್ಗೆ ಅವರೊಂದಿಗೆಇರುತ್ತಿದ್ದನು.

- ಲಾಜರನು ಸತ್ತನಂತರ ಸುಮಾರು ದಿನಗಳ ಕಾಲ ಸಮಾಧಿಯಲ್ಲಿದ್ದ ನಂತರ ಯೇಸು ಅವನನ್ನು ಸತ್ತವರೊಳಗಿಂದ ಎಬ್ಬಿಸಿದನೆಂಬ ಅಂಶಕ್ಕೆ ಲಾಜರನು ಹೆಚ್ಚು ಹೆಸರುವಾಸಿಯಾಗಿದ್ದಾನೆ.
- ಯಹೂದ್ಯ ನಾಯಕರು ಯೇಸುವಿನ ಮೇಲೆ ಕೋಪಗೊಂಡರು ಮತ್ತು ಆತನು ಈ ಅದ್ಭುತವನ್ನು ಮಾಡಿದ್ದಕ್ಕಾಗಿ ಅಸೂಯೆಪಟ್ಟರು ಮತ್ತು ಅವರು ಯೇಸುವನ್ನು ಮತ್ತು ಲಾಜರನನ್ನು ಕೊಲ್ಲಲು ಒಂದು ಮಾರ್ಗವನ್ನು ಹುಡುಕಲು ಪ್ರಯತ್ನಿಸಿದರು.
- ಒಬ್ಬ ಬಡ ಭಿಕ್ಷುಕ ಮತ್ತು ಶ್ರೀಮಂತ ವ್ಯಕ್ತಿಯ ಕುರಿತಾದ ಒಂದು ದೃಷ್ಟಾಂತವನ್ನು ಸಹ ಯೇಸು ಹೇಳಿದನು, ಅದರಲ್ಲಿ “ಲಾಜರ” ಎಂಬ ಹೆಸರಿನ ಭಿಕ್ಷುಕನು ಬೇರೆ ವ್ಯಕ್ತಿಯಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಇವುಗಳನ್ನು ಸಹ ನೋಡಿರಿ : ಬಿಕ್ಷೆಬೇಡು, ಯೆಹೂದ್ಯ ನಾಯಕರು, ಮಾರ್ಥಳು, ಮರಿಯಳು, ಎಬ್ಬಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- ಯೋಹಾನ.11:11
- ಯೋಹಾನ.12:1-3
- ಲೂಕ.16:21

ಸತ್ಯವೇದದಿಂದ ಉದಾಹರಣೆಗಳು:

- **37:1** ಒಂದು ದಿನ ಯೇಸುವು _ **ಲಾಜರನು** ಅನಾರೋಗ್ಯದಿಂದ ಇದ್ದಾನೆನ್ನುವ ಸಂದೇಶವನ್ನು ಕೇಳಿಸಿಕೊಂಡನು. **ಲಾಜರನು** _ ಮತ್ತು ತನ್ನ ಇಬ್ಬರು ಅಕ್ಕಂದಿಯರಾದ ಮರಿಯಳು ಮತ್ತು ಮಾರ್ಥಳು ಯೇಸುವಿಗೆ ತುಂಬಾ ಹತ್ತಿರ ಸ್ನೇಹಿತರಾಗಿದ್ದರು.
- **37:2** “ನಮ್ಮ ಸ್ನೇಹಿತನಾದ _ **ಲಾಜರನು** _ ನಿದ್ರಿಸುತ್ತಾನೆ, ಮತ್ತು ನಾನು ಅವನನ್ನು ಮೇಲಕ್ಕೆ ಎಬ್ಬಿಸಬೇಕು” ಎಂದು ಯೇಸು ಹೇಳಿದನು.
- **37:3** “ಬೋಧಕನೇ, _ **ಲಾಜರನು** ನಿದ್ರಿಸುತ್ತಿದ್ದರೆ, ಅವನು ಚೆನ್ನಾಗಿ ಆಗುತ್ತಾನಲ್ಲ” ಎಂದು ಯೇಸುವಿನ ಶಿಷ್ಯರು ಉತ್ತರಿಸಿದರು. “ **ಲಾಜರನು** _ ಮರಣಿಸಿದ್ದಾನೆ” ಎಂದು ಯೇಸು ಅವರಿಗೆ ಸ್ಪಷ್ಟವಾಗಿ ಹೇಳಿದನು.
- **37:4** ಯೇಸು _ **ಲಾಜರನ** _ **ಊರಿಗೆ ಹೋದಾಗ, ಅಲ್ಲಿ** _ **ಲಾಜರನು** _ ಸತ್ತು ಸುಮಾರು ನಾಲ್ಕು ದಿವಸ ಆಗಿತ್ತು.
- **37:6** “_ **ಲಾಜರನನ್ನು** _ ಎಲ್ಲಿಟ್ಟಿದ್ದೀರಿ?” ಎಂದು ಯೇಸು ಅವರನ್ನು ಕೇಳಿದನು.
- **37:9** ಆಗ ಯೇಸು “_ **ಲಾಜರನೇ** _ ಹೊರಗೆ ಬಾ!” ಎಂದು ಕೂಗಿದನು.
- **37:10** ಆಗ _ **ಲಾಜರನು** _ ಹೊರ ಬಂದನು! ಅವನನ್ನು ಬಟ್ಟೆಗಳಿಂದ ಸುತ್ತಿ ಸಮಾಧಿಯಲ್ಲಿಟ್ಟಿದ್ದರು.
- **37:11** ಆದರೆ ಯೆಹೂದ್ಯರ ನಾಯಕರು ತುಂಬಾ ಅಸೂಯೆದಿಂದ ಇದ್ದರು, ಇದರಿಂದ ಅವರು ಯೇಸುವನ್ನು ಮತ್ತು _ **ಲಾಜರನನ್ನು** _ ಹೇಗೆ ಸಾಯಿಸಬೇಕೆಂದು ಯೋಜನೆ ಮಾಡುವುದಕ್ಕಾಗಿ ಎಲ್ಲರು ಒಟ್ಟು ಸೇರಿದರು.

ಪದದ ಡೇಟಾ:

- Strong's: G29760

ಲಾಬಾನ

ಸತ್ಯಾಂಶಗಳು:

ಹಳೇ ಒಡಂಬಡಿಕೆಯಲ್ಲಿ ಲಾಬನನು ಯಾಕೋಬನ ಸೋದರಮಾವನಾಗಿದ್ದನು.

- ಯಾಕೋಬನು ಪದ್ದನ್ ಅರಾಮಿನಲ್ಲಿ ಲಾಬಾನನ ಮನೆಯಲ್ಲಿದ್ದನು ಮತ್ತು ಅಲ್ಲಿ ಲಾಬಾನಿನ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಳ್ಳುವ ಷರತ್ತಿನಲ್ಲಿ ಅವನು ಕುರಿಗಳನ್ನು ಮತ್ತು ಮೇಕೆಗಳನ್ನು ಮೇಯಿಸುತ್ತಿದ್ದನು.
- ಯಾಕೋಬನು ಲಾಬಾನಿನ ಮಗಳಾದ ರಾಹೇಲಳನ್ನು ಮದುವೆ ಮಾಡಿಕೊಳ್ಳಬೇಕೆಂದಿದ್ದನು.
- ಲಾಬಾನನು ಯಾಕೋಬನನ್ನು ಮೋಸಮಾಡಿದನು ಮತ್ತು ಅವನಿಗೆ ತನ್ನ ಚಿಕ್ಕ ಮಗಳನ್ನು ಕೊಡುವುದಕ್ಕೆ ಮುಂಚಿತವಾಗಿ ತನ್ನ ದೊಡ್ಡ ಮಗಳಾದ ಲೇಯಾಳನ್ನು ಯಾಕೋಬನು ಮದುವೆ ಮಾಡಿಕೊಳ್ಳುವಂತೆ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯಾಕೋಬ, ನಾಹೋರ, ಲೇಯಾ, ರಾಹೇಲ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.24:28-30
- ಆದಿ.24:50-51
- ಆದಿ.27:43-45
- ಆದಿ.28:1-2
- ಆದಿ.29:4-6
- ಆದಿ.29:13-14
- ಆದಿ.30:25-26
- ಆದಿ.46:16-18

ಪದ ಡೇಟಾ:

- Strong's: H3837

ಲಿವ್ಯಾತಾನ್

ಸತ್ಯಾಂಶಗಳು:

“ಲಿವ್ಯಾತಾನ್” ಎನ್ನುವ ಪದವು ಹಳೇ ಒಡಂಬಡಿಕೆಯ ಆದಿಮ ಬರವಣಿಗಳಾಗಿರುವ ಯೋಬ, ಕೀರ್ತನೆ ಮತ್ತು ಯೆಶಯಾ ಪುಸ್ತಕಗಳಲ್ಲಿ ದಾಖಲು ಮಾಡಿದ ದೊಡ್ಡದಾದ ನಂದಿಹೋದ ಪ್ರಾಣಿಯನ್ನು ಸೂಚಿಸುತ್ತದೆ.

- ಲಿವ್ಯಾತಾನ್ ಎನ್ನುವ ಪದವು ಹಾವಿನಂತೆ ಇರುವ ದೊಡ್ಡದಾದ ಜೀವಿಯನ್ನು, ಬಲವಾದ ಮತ್ತು ಕ್ರೂರವಾದ ಪ್ರಾಣಿಯನ್ನು ವಿವರಿಸುತ್ತದೆ, ಈ ಪ್ರಾಣಿ ಇರುವ ನೀರೆಲ್ಲಾ “ಬಿಸಿಯಾಗುತ್ತವೆ”. ಇದರ ಕುರಿತಾಗಿರುವ ವಿವರಣೆಗಳು ಅಥವಾ ಲಕ್ಷಣಗಳು ಡೈನೋಸರ್ ಪ್ರಾಣಿಯ ಲಕ್ಷಣಗಳು ಒಂದೇಯಾಗಿರುತ್ತವೆ.
- ಲಿವ್ಯಾತಾನ್ ಎನ್ನುವ ಪ್ರಾಣಿಯು “ಜಾರಿಹೋಗುವ ಸರ್ಪ” ಎನ್ನುವಂತೆ ಪ್ರವಾದಿಯಾದ ಯೆಶಯಾನು ಸೂಚಿಸಿದ್ದಾನೆ.
- ಲಿವ್ಯಾತಾನ್ ಕುರಿತಾದ ಮೊದಲ ಜ್ಞಾನದಿಂದ ಯೋಬನು ಬರೆದಿದ್ದಾನೆ, ಇದರಿಂದ ಪ್ರಾಣಿ ಯೋಬನ ಜೀವಮಾನದಲ್ಲೆಲ್ಲಾ ಹೆಚ್ಚಾಗಿ ಜೀವಿಸಿರುವ ಪ್ರಾಣಿ ಎಂಬುದಾಗಿ ಸೂಚಿಸಲ್ಪಟ್ಟಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯೇಶಾಯ, ಯೋಬ, ಸರ್ಪ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಬ.03:8-10
- ಕೀರ್ತನೆ.104:25-26

ಪದ ಡೇಟಾ:

- Strong's: H3882

ಲೂಕ

ಸತ್ಯಾಂಶಗಳು:

ಲೂಕ ರವರು ಹೊಸ ಒಡಂಬಡಿಕೆಯಲ್ಲಿ ಎರಡು ಪುಸ್ತಕಗಳನ್ನು ಬರೆದಿರುತ್ತಾನೆ: ಲೂಕನ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳ ಪುಸ್ತಕ.

- ಪೌಲನು ಕೊಲೊಸ್ಸದವರಿಗೆ ಬರೆದ ಪತ್ರಿಕೆಯಲ್ಲಿ ಲೂಕನು ವೈದ್ಯನೆಂದು ಸೂಚಿಸಿದ್ದಾನೆ. ಪೌಲನು ಬರೆದ ಇತರ ಪತ್ರಿಕೆಗಳಲ್ಲಿ ಲೂಕನನ್ನು ದಾಖಲಿಸಿದ್ದಾನೆ.
- ಲೂಕನು ಗ್ರೀಕನೆಂದು ಮತ್ತು ಅನ್ಯನಾಗಿರುವಾಗ ಕ್ರಿಸ್ತನನ್ನು ತಿಳಿದುಕೊಂಡಿದ್ದಾನೆಂದು ಹೇಳಲ್ಪಟ್ಟಿದೆ. ಲೂಕನು ಬರೆದ ಸುವಾರ್ತೆಯಲ್ಲಿ ಜನರೆಲ್ಲರಿಗೆ, ಯೆಹೂದ್ಯರಿಗೆ ಮತ್ತು ಅನ್ಯರಿಗೆಲ್ಲರಿಗೆ ತೋರಿಸಲ್ಪಟ್ಟ ಯೇಸುವಿನ ಪ್ರೀತಿಯ ಹಲವಾರು ಸಂಘಟನೆಗಳು ಒಳಗೊಂಡಿರುತ್ತವೆ.
- ಲೂಕನು ಪೌಲನು ಮಾಡಿದ ಎರಡು ಸುವಾರ್ತೆ ದಂಡೆಯಾತ್ರೆಯಲ್ಲಿ ಜೊತೆಯಲ್ಲಿದ್ದು, ಆತನ ಸೇವೆಯಲ್ಲಿ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡಿದ್ದನು.
- ಕೆಲವೊಂದು ಆದಿ ಸಭೆಯ ಬರವಣಿಗೆಗಳಲ್ಲಿ ಲೂಕನು ಸಿರಿಯಾದಲ್ಲಿರುವ ಅಂತಿಯೋಕ್ಯ ಪಟ್ಟಣದಲ್ಲಿ ಜನಿಸಿರುತ್ತಾನೆಂದು ಹೇಳಲ್ಪಟ್ಟಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಂತಿಯೋಕ್ಯ, ಪೌಲ, ಸಿರಿಯಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.04:11-13
- ಕೊಲೊಸ್ಸ.04:12-14
- ಫಿಲೇ.01:23-25

ಪದ ಡೇಟಾ:

ಲೂಸ್ತ್ರ

ಸತ್ಯಾಂಶಗಳು:

ಲೂಸ್ತ್ರ ಎನ್ನುವುದು ಪುರಾತನ ಚಿಕ್ಕ ಆಸ್ಯದಲ್ಲಿ ಒಂದು ಪಟ್ಟಣವಾಗಿತ್ತು, ಪೌಲನು ಮಾಡಿದ ಸುವಾರ್ತೆ ಪ್ರಯಾಣಗಳಲ್ಲಿ ಈ ಪಟ್ಟಣವನ್ನು ಸಂದರ್ಶಿಸಿದ್ದನು. ಲುಕವೋನ್ಯ ಸೀಮೆಯಲ್ಲಿ ಇದು ಕಂಡುಬರುತ್ತದೆ, ಇದು ಈಗಿನ ಆಧುನಿಕ ದಿನದ ಟರ್ಕಿ ದೇಶದಲ್ಲಿರುತ್ತದೆ.

- ಪೌಲನು ಮತ್ತು ತನ್ನ ಜೊತೆಯಲ್ಲಿರುವವರು ಇಕೋನ್ಯದಲ್ಲಿ ಯೆಹೂದ್ಯರಿಂದ ಬೆದರಿಸಲ್ಪಟ್ಟಾಗ ದೆರ್ಬೆ ಮತ್ತು ಲೂಸ್ತ್ರಗಳಿಗೆ ಹೋದರು.
- ಲೂಸ್ತ್ರದಲ್ಲಿ ಪೌಲನು ತಿಮೊಥೆಯನ್ನು ಭೇಟಿಯಾದನು, ಈ ತಿಮೊಥೆಯನು ಸಹ ಸುವಾರ್ತೀಕನಾಗಿ ಮತ್ತು ಸಭೆಯ ಸ್ಥಾಪಕನಾಗಿ ಮಾರ್ಪಟ್ಟನು.
- ಪೌಲನು ಲೂಸ್ತ್ರದಲ್ಲಿ ಹುಟ್ಟು ಕುಂಟನನ್ನು ಗುಣಪಡಿಸಿದನಂತರ, ಅಲ್ಲಿರುವ ಜನರು ಪೌಲನನ್ನು ಮತ್ತು ಬಾರ್ನಬನನ್ನು ದೇವರುಗಳಾಗಿ ಎನಿಸಿ, ಅವರನ್ನು ಆರಾಧಿಸುವುದಕ್ಕೆ ಯತ್ನಿಸಿದರು, ಆದರೆ ಅಪೊಸ್ತಲರು ಅವರನ್ನು ಗದರಿಸಿದರು ಮತ್ತು ಅದನ್ನು ಮಾಡದಂತೆ ಅವರನ್ನು ನಿಲ್ಲಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಸುವಾರ್ತಿಕ, ಇಕೋನ್ಯ, ತಿಮೊಥೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.03:10-13
- ಅಪೊ.ಕೃತ್ಯ.14:5-7
- ಅಪೊ.ಕೃತ್ಯ.14:8-10
- ಅಪೊ.ಕೃತ್ಯ.14:21-22

ಪದ ಡೇಟಾ:

- Strong's: G3082

ಲೆಬನೋನ್

ಸತ್ಯಾಂಶಗಳು:

ಲೆಬನೋನ್ ಎನ್ನುವುದು ತುಂಬಾ ಸುಂದರವಾದ ಪ್ರಾಂತ್ಯವಾಗಿರುತ್ತದೆ, ಇದು ಇಸ್ರಾಯೇಲ್ ಉತ್ತರ ಭಾಗದಲ್ಲಿರುವ ಮೆಡಿಟರೇನಿಯನ್ ಸಮುದ್ರದ ಕರಾವಳಿ ಜೊತೆಯಲ್ಲಿ ಕಂಡುಬರುತ್ತದೆ. ಸತ್ಯವೇದದ ಕಾಲದಲ್ಲಿ ಈ ಸೀಮೆಯು ದಟ್ಟವಾದ ದೇವದಾರು ವೃಕ್ಷಗಳಿಂದ ತುಂಬಿರುತ್ತದೆ, ತುರಾಯಿ ಮರಗಳು ಮತ್ತು ಶಂಕುಮರಗಳಂತೆ (ಸೈಪ್ರಿಸ್ ಮರಗಳು) ದಟ್ಟವಾಗಿರುತ್ತದೆ.

- ದೇವರ ಆಲಯವನ್ನು ನಿರ್ಮಿಸುವುದರಲ್ಲಿ ಉಪಯೋಗಿಸುವುದಕ್ಕೆ ತುರಾಯಿ ಮರಗಳನ್ನು ಕೊಯ್ಯಲು ಅರಸನಾದ ಸೊಲೊಮೋನನು ಲೇಬನೋನ್ ಪ್ರಾಂತ್ಯಕ್ಕೆ ತನ್ನ ಆಳುಗಳನ್ನು ಕಳುಹಿಸುತ್ತಿದ್ದನು.
- ಪುರಾತನ ಲೆಬನೋನ್.ನಲ್ಲಿ ಪೊಯಿನಿಕ್ಯದ ಜನರು ನಿವಾಸಿಗಳಾಗಿದ್ದರು, ಇವರು ದೊಡ್ಡ ದೊಡ್ಡ ಹಡಗುಗಳನ್ನು ನಿರ್ಮಿಸುವುದರಲ್ಲಿ ನಿಪುಣರಾಗಿದ್ದರು, ಇವರು ನಿರ್ಮಿಸಿದ ಹಡಗುಗಳನ್ನು ಯಶಸ್ವಿಯಾದ ವ್ಯಾಪಾರ ಸಂಸ್ಥೆಗೆ ಉಪಯೋಗಿಸುತ್ತಿದ್ದರು.
- ತೂರ್ ಮತ್ತು ಸೀದೋನ್ ಪಟ್ಟಣಗಳು ಲೆಬನೋನ್.ನಲ್ಲಿಯೇ ಕಂಡುಬರುತ್ತವೆ. ಈ ಪಟ್ಟಣಗಳಲ್ಲಿ ತುಂಬಾ ಬೆಲೆಯುಳ್ಳ ನೇರಳೆ ಬಣ್ಣವನ್ನು ತಲೆಗೆ ಹಚ್ಚಿಕೊಳ್ಳುವುದನ್ನು ಮೊಟ್ಟ ಮೊದಲು ಉಪಯೋಗಿಸಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ತುರಾಯಿ, ಶಂಕು ಮರ (ಸೈಪ್ರಿಸ್), ದೇವದಾರು, ಪೊಯಿನಿಕ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.04:32-34
- 2 ಪೂರ್ವ.02:8-10
- ಧರ್ಮೋ.01:7-8
- ಕೀರ್ತನೆ.029:3-5
- ಜೆಕರ್ಯ.10:8-10

ಪದ ಡೇಟಾ:

- Strong's: H3844

ಲೆಮೆಕ

ಸತ್ಯಾಂಶಗಳು:

ಆದಿಕಾಂಡ ಪುಸ್ತಕದಲ್ಲಿ ಉಲ್ಲೇಖಿಸಿದ ಇಬ್ಬರು ವ್ಯಕ್ತಿಗಳ ಹೆಸರು ಲೆಮೆಕ.

- ಮೊದಲನೆ ಲೆಮೆಕನು ಕಾಯಿನನ ಸಂತಾನದವನಾಗಿ ದಾಖಲಿಸಲಾಗಿದೆ. ತನಗೆ ಗಾಯ ಮಾಡಿದ್ದಕ್ಕಾಗಿ ಅವನು ಒಬ್ಬ ಮನುಷ್ಯನನ್ನು ಸಾಯಿಸಿದ್ದಾನೆಂದು ತನ್ನ ಇಬ್ಬರ ಹೆಂಡತಿಗಳ ಕುರಿತಾಗಿ ಹೇಳಿಕೊಂಡಿದ್ದಾನೆ.
- ಎರಡನೇ ಲೆಮೆಕನು ಸೇತನ ಸಂತಾನದವನಾಗಿರುತ್ತಾನೆ. ಇವನು ನೋಹನಿಗೆ ತಂದೆಯಾಗಿರುತ್ತಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾಯಿನ, ನೋಹ, ಸೇತ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.04:18-19
- ಆದಿ.04:23-24
- ಆದಿ.05:25-27
- ಆದಿ.05:28-29
- ಆದಿ.05:30-31
- ಲೂಕ.03:36-38

ಪದ ಡೇಟಾ:

- Strong's: H3929, G2984

ಲೇಯಾ

ಸತ್ಯಾಂಶಗಳು:

ಲೇಯಾಳು ಯಾಕೋಬಿನ ಹೆಂಡತಿಯರಲ್ಲಿ ಒಬ್ಬಳಾಗಿದ್ದಳು. ಈಕೆ ಯಾಕೋಬಿನ ಹತ್ತು ಮಂದಿ ಗಂಡು ಮಕ್ಕಳಿಗೆ ತಾಯಿಯಾಗಿದ್ದಳು ಮತ್ತು ಅವರ ಸಂತಾನದವರೇ ಇಸ್ರಾಯೇಲ್ ಹನ್ನೆರಡು ಕುಲಗಳಲ್ಲಿ ಹತ್ತು ಕುಲದವರಾಗಿದ್ದರು.

- ಲೇಯಾಳ ತಂದೆ ಲಾಬಾನನಾಗಿದ್ದನು, ಇವನು ಯಾಕೋಬಿನ ತಾಯಿ ರೆಬೆಕ್ಕಳ ಅಣ್ಣನಾಗಿದ್ದನು.
- ಯಾಕೋಬನು ರಾಹೇಲಳನ್ನು ಪ್ರೀತಿಸಿದಂತೆ ಹೆಚ್ಚಾಗಿ ಲೇಯಾಳನ್ನು ಪ್ರೀತಿ ಮಾಡಲಿಲ್ಲ, ಆದರೆ ದೇವರು ಆಕೆಯನ್ನು ಅನೇಕಮಂದಿ ಮಕ್ಕಳನ್ನು ಕೊಡುವುದರ ಮೂಲಕ ಹೆಚ್ಚಾಗಿ ಆಶೀರ್ವಾದ ಮಾಡಿದ್ದನು.
- ಲೇಯಾ ಮಗನಾದ ಯೆಹೂದನು ಅರಸನಾದ ದಾವೀದ ಮತ್ತು ಯೇಸುವಿನ ಪೂರ್ವಜನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯಾಕೋಬ, ಯೆಹೂದ, ಲಾಬಾನ, ರಾಹೇಲ, ರೆಬೆಕ್ಕ, ಇಸ್ರಾಯೇಲ್ ಹನ್ನೆರಡು ಮಂದಿ ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.29:15-18
- ಆದಿ.29:28-30
- ಆದಿ.31:4-6
- ರೂತಳು.04:11-12

ಪದ ಡೇಟಾ:

- Strong's: H3812

ಲೇವಿ, ಲೇವಿಯನು, ಲೇವಿಯರು, ಲೇವಿಯರ

ಪದದ ಅರ್ಥವಿವರಣೆ:

ಲೇವಿ ಎನ್ನುವವನು ಯಾಕೋಬಿನ ಅಥವಾ ಇಸ್ರಾಯೇಲ್ ಹನ್ನೆರಡು ಮಂದಿ ಗಂಡು ಮಕ್ಕಳಲ್ಲಿ ಒಬ್ಬನಾಗಿರುತ್ತಾನೆ. “ಲೇವಿಯನು” ಎನ್ನುವ ಪದವು ಲೇವಿ ಪೂರ್ವಜನಾಗಿರುವ ಇಸ್ರಾಯೇಲ್ ಕುಲದ ಸದಸ್ಯನಾಗಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.

- ಲೇವಿಯರು ದೇವಾಲಯವನ್ನು ನೋಡಿಕೊಳ್ಳುವುದಕ್ಕೆ ಮತ್ತು ಧರ್ಮ ಸಂಬಂಧವಾದ ಆಚಾರಗಳನ್ನು ನೋಡಿಕೊಳ್ಳುವುದರಲ್ಲಿ ಬಾಧ್ಯರಾಗಿದ್ದರು, ಅದರಲ್ಲಿ ಸರ್ವಾಂಗ ಹೋಮಗಳ ಅರ್ಪಣೆ ಮತ್ತು ಪ್ರಾರ್ಥನೆಗಳು ಇರುತ್ತವೆ.
- ಯೆಹೂದ್ಯ ಯಾಜಕರೆಲ್ಲರು ಲೇವಿಯರಾಗಿರುತ್ತಾರೆ, ಲೇವಿ ಸಂತಾನದವರಾಗಿರುತ್ತಾರೆ ಮತ್ತು ಲೇವಿ ಕುಲದ ಭಾಗವಾಗಿರುತ್ತಾರೆ. (ಆದರೆ, ಲೇವಿಯರೆಲ್ಲರೂ ಯಾಜಕರಲ್ಲ.)
- ಲೇವಿ ಯಾಜಕರು ಪ್ರತ್ಯೇಕಿಸಲ್ಪಟ್ಟವರು ಮತ್ತು ದೇವಾಲಯದಲ್ಲಿ ದೇವರ ಸೇವೆಯನ್ನು ಮಾಡಲು ವಿಶೇಷವಾದ ಕೆಲಸಕ್ಕಾಗಿ ಪ್ರತಿಷ್ಠೆ ಮಾಡಿಕೊಂಡವರು.
- “ಲೇವಿ” ಎನ್ನುವ ಹೆಸರಿನ ಮೇಲಿರುವ ಇಬ್ಬರು ವ್ಯಕ್ತಿಗಳು ಕೂಡ ಯೇಸುವಿನ ಪೂರ್ವಜರಾಗಿರುತ್ತಾರೆ, ಮತ್ತು ಅವರ ಹೆಸರುಗಳು ಲೂಕನ ಸುವಾರ್ತೆಯಲ್ಲಿರುವ ವಂಶಾವಳಿಯಲ್ಲಿ ದಾಖಲಿಸಲಾಗಿರುತ್ತದೆ.
- ಯೇಸುವಿನ ಶಿಷ್ಯನಾಗಿರುವ ಮತ್ತಾಯನನ್ನು ಲೇವಿ ಎಂದೂ ಕರೆಯಲ್ಪಟ್ಟಿದ್ದಾನೆ.

(ಈ ಪದಗಳನ್ನು ಸಹ ನೋಡಿರಿ : ಮತ್ತಾಯ, ಯಾಜಕ, ತ್ಯಾಗ, ದೇವಾಲಯ, ಇಸ್ರಾಯೇಲ್ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:1-2
- 1 ಅರಸ.08:3-5
- ಅಪೊ.ಕೃತ್ಯ.04:36-37
- ಆದಿ.29:33-34
- ಯೋಹಾನ.01:19-21
- ಲೂಕ.10:31-32

ಪದ ಡೇಟಾ:

- Strong's: H3878, H3879, H3881, G3017, G3018, G3019, G3020

ಲೋಟ

ಸತ್ಯಾಂಶಗಳು:

ಲೋಟನು ಅಬ್ರಾಹಾಮನ ಸಹೋದರನ ಮಗನಾಗಿದ್ದನು.

- ಇವನು ಅಬ್ರಾಹಾಮನ ಸಹೋದರನಾದ ಹಾರಾನನ ಮಗನಾಗಿದ್ದನು.
- ಲೋಟನು ಅಬ್ರಾಹಾಮನೊಂದಿಗೆ ಕಾನಾನ್ ಭೂಮಿಗೆ ಪ್ರಯಾಣ ಮಾಡಿದ್ದನು ಮತ್ತು ಸೊದೋಮ್ ಪಟ್ಟಣದಲ್ಲಿ ನಿವಾಸವಾಗಿದ್ದನು.
- ಲೋಟನು ಮೋವಾಬ್ಯರಿಗೆ ಮತ್ತು ಅಮ್ಮೋನಿಯರಿಗೆ ಪೂರ್ವಜನಾಗಿರುತ್ತಾನೆ.
- ಅರಸರು ಸೊದೋಮ ಪಟ್ಟಣದ ಮೇಲೆ ಧಾಳಿ ಮಾಡಿದಾಗ, ಲೋಟನನ್ನು ಹಿಡಿದುಕೊಂಡಿದ್ದರು, ಲೋಟನು ಮತ್ತು ತನಗೆ ಸಂಬಂಧಪಟ್ಟವರನ್ನು ರಕ್ಷಿಸಲು ಅಬ್ರಾಹಾಮನು ಸುಮಾರು ನೂರು ಮಂದಿ ಮನುಷ್ಯರೊಂದಿಗೆ ಬಂದಿದ್ದನು.
- ಸೊದೋಮ ಪಟ್ಟಣದಲ್ಲಿ ನಿವಾಸವಾಗಿದ್ದ ಜನರೆಲ್ಲರೂ ದುಷ್ಟ ಜನರಾಗಿದ್ದರು, ಆದ್ದರಿಂದ ದೇವರು ಆ ಪಟ್ಟಣವನ್ನು ನಾಶಗೊಳಿಸಿದನು. ಆದರೆ ಈತನು ಮೊಟ್ಟ ಮೊದಲು ಆ ಪಟ್ಟಣವನ್ನು ಬಿಡಬೇಕೆಂದು ಲೋಟನಿಗೆ ಮತ್ತು ತನ್ನ ಕುಟುಂಬಕ್ಕೆ ಹೇಳಿದನು, ಇದರಿಂದ ಅವರು ತಪ್ಪಿಸಿಕೊಳ್ಳಬಹುದಾಗಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮನು, ಅಮ್ಮೋನ್, ಹಾರಾನ್, ಮೋವಾಬ್, ಸೊದೋಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೇತ್ರ.02:7-9
- ಆದಿ.11:27-28
- ಆದಿ.12:4-5

ಪದ ಡೇಟಾ:

- Strong's: H3876, G3091

ವಷ್ಟಿ

ಸತ್ಯಾಂಶಗಳು:

ಹಳೇ ಒಡಂಬಡಿಕೆಯ ಪುಸ್ತಕವಾಗಿರುವ ಎಸ್ತೇರಳ ಗ್ರಂಥದಲ್ಲಿ ವಷ್ಟಿ ಪಾರಸಿಯ ಅರಸನಾಗಿರುವ ಅಹಷ್ವೆರೋಷನ ಹೆಂಡತಿಯಾಗಿದ್ದಳು.

- ಈಕೆ ಅರಸನ ಔತಣ ಕೂಟಕ್ಕೆ ಬಂದು, ತನ್ನ ಸೌಂದರ್ಯವನ್ನು ಕುಡುಕರಾದ ಅತಿಥಿಗಳಿಗೆ ತೋರಿಸುವುದಕ್ಕೆ ವಿಧೇಯಳಾಗಲಿಲ್ಲದ ಕಾರಣದಿಂದ ಅರಸನಾದ ಅಹಷ್ವೆರೋಷನು ರಾಣಿಯಾದ ವಷ್ಟಿಯನ್ನು ಹೊರ ಕಳುಹಿಸಿದನು.
- ಇದರ ಫಲವಾಗಿಯೇ, ಹೊಸ ರಾಣಿಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಆರಂಭವಾಯಿತು, ಕೊನೆಗೆ ಎಸ್ತೇರಲು ಅರಸನ ಹೆಂಡತಿಯಾಗಿರುವುದಕ್ಕೆ ಆಯ್ಕೆಯಾದಳು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಹಷ್ವೆರೋಷ, ಎಸ್ತೇರಳು, ಪಾರಸಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಸ್ತೇ.01:9-11
- ಎಸ್ತೇ.02:1-2
- ಎಸ್ತೇ.02:17-18

ಪದ ಡೇಟಾ:

- Strong's: H2060

ಶಾರೋನ್, ಶಾರೋನ್ ಬಯಲು

ಸತ್ಯಾಂಶಗಳು:

ಶಾರೋನ್ ಎನ್ನುವುದು ಒಂದು ಭೂಮಿಯ ಹೆಸರಾಗಿರುತ್ತದೆ, ಕರ್ಮೆಲ್ ಬೆಟ್ಟದ ದಕ್ಷಿಣ ಭಾಗದಲ್ಲಿರುವ ಮೆಡಿಟರೇನಿಯನ್ ಸಮುದ್ರದ ಕರಾವಳಿ ಜೊತೆಯಲ್ಲಿರುವ ಫಲವತ್ತಾದ ಭೂಭಾಗವಾಗಿರುತ್ತದೆ. ಇದನ್ನು "ಶಾರೋನ್ ಬಯಲು" ಎಂದಾಗಿಯೂ ಕರೆಯುತ್ತಾರೆ.

- ಸತ್ಯವೇದದಲ್ಲಿ ದಾಖಲು ಮಾಡಿದ ಅನೇಕ ಪಟ್ಟಣಗಳು ಶಾರೋನ್ ಬಯಲುನಲ್ಲಿ ಕಂಡುಬರುತ್ತವೆ, ಅವುಗಳಲ್ಲಿ ಯೊಪ್ಪ, ಲುದ್ಯ ಮತ್ತು ಕೈಸರೈಗಳೂ ಇರುತ್ತವೆ.
- ಇದನ್ನು "ಶಾರೋನ್ ಎಂದು ಕರೆಯುವ ಬಯಲು" ಅಥವಾ "ಶಾರೋನ್ ಬಯಲು" ಎಂದೂ ಅನುವಾದ ಮಾಡಬಹುದು.
- ಶಾರೋನ್ ಸೀಮೆಯಲ್ಲಿ ನಿವಾಸವಾಗಿರುವ ಜನರನ್ನು "ಶಾರೋನಿಯರು" ಎಂದು ಕರೆಯುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕೈಸರೈ, ಕರ್ಮೆಲ್, ಯೊಪ್ಪ, ಸಮುದ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.05:16-17
- ಅಪೊ.ಕೃತ್ಯ.09:33-35
- ಯೆಶಯಾ.33:9

ಪದ ಡೇಟಾ:

- Strong's: H8289, H8290

ಶಿನಾರ್

ಸತ್ಯಾಂಶಗಳು:

ಶಿನಾರ್ ಎನ್ನುವ ಪದಕ್ಕೆ "ಎರಡು ನದಿಗಳ ದೇಶ" ಎಂದರ್ಥ ಮತ್ತು ದಕ್ಷಿಣ ಮೆಸಪೋತಾಮ್ಯದಲ್ಲಿರುವ ಪ್ರಾಂತ್ಯದ ಅಥವಾ ಬಯಲಿನ ಹೆಸರಾಗಿರುತ್ತದೆ.

- ಸ್ವಲ್ಪಕಾಲವಾದನಂತರ ಶೀನಾರ್ ಎನ್ನುವುದು "ಕಲ್ದೀಯ" ಎಂದಾಗಿ ಮಾರ್ಪಟ್ಟಿತು, ಇನ್ನೂ ಸ್ವಲ್ಪ ಕಾಲವಾದನಂತರ "ಬಾಬೆಲೋನಿಯ" ಎಂದಾಗಿ ಮಾರ್ಪಟ್ಟಿತು.
- ಶೀನಾರ್ ಬಯಲಿನಲ್ಲಿ ಬಾಬೇಲ್ ಪಟ್ಟಣದಲ್ಲಿ ನಿವಾಸವಾಗಿರುವ ಪುರಾತನ ಜನರು ತಮ್ಮನು ತಾವು ಪ್ರಸಿದ್ಧಿ ಮಾಡಿಕೊಳ್ಳಲು ಒಂದು ದೊಡ್ಡ ಗೋಪುರವನ್ನು ಕಟ್ಟುವುದಕ್ಕೆ ಪ್ರಯತ್ನಿಸಿದರು.
- ಆ ತದನಂತರ ಬಂದಿರುವ ತಲೆಮಾರಿಗಳು ಈ ಪ್ರಾಂತ್ಯದಲ್ಲಿ ಊರ್ ಪಟ್ಟಣದಲ್ಲಿ ಯೆಹೂದ್ಯರ ಪಿತೃವಾಗಿರುವ ಅಬ್ರಾಹಾಮನು ಜೀವಿಸಿದ್ದನು, ಆ ಕಾಲದಲ್ಲಿ ಇದನ್ನು "ಕಲ್ದೀಯ" ಎಂದು ಕರೆಯುತ್ತಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಬಾಬೇಲ್, ಬಾಬೆಲೋನಿಯ, ಕಲ್ದೀಯ, ಮೆಸಪೋತಾಮಿಯ, ಪೂರ್ವಿಕರು, ಊರ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.10:8-10
- ಆದಿ.14:1-2
- ಆದಿ.14:7-9
- ಯೆಶಯಾ.11:10-11
- ಜೆಕರ್ಯ.05:10-11

ಪದ ಡೇಟಾ:

- Strong's: H8152

ಶಿಮ್ಮೀ

ಪದದ ಅರ್ಥವಿವರಣೆ:

ಶಿಮ್ಮೀ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಅನೇಕಮಂದಿ ವ್ಯಕ್ತಿಗಳಿದ್ದಾರೆ.

- ಗೆರಾ ಮಗನಾಗಿರುವ ಶಿಮ್ಮೀ ಅರಸನಾಗಿರುವ ದಾವೀದನನ್ನು ಶಪಿಸಿದ ಬೆನ್ಯಾಮೀನಿಯನಾಗಿದ್ದನು ಮತ್ತು ದಾವೀದನು ತನ್ನ ಮಗನಾಗಿರುವ ಅಬ್ಷಾಲೋಮನಿಂದ ಸಾವನ್ನು ತಪ್ಪಿಸಿಕೊಳ್ಳುವುದಕ್ಕೆ ಯೆರೂಸಲೇಮಿನಿಂದ ಪಾರಾಗುತ್ತಿರುವಾಗ ಅವನ ಮೇಲೆ ಕಲ್ಲುಗಳನ್ನು ಎಸೆದಿದ್ದರು.
- ಶಿಮ್ಮೀ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಅನೇಕಮಂದಿ ಲೇವಿ ಯಾಜಕರು ಕೂಡ ಇದ್ದಾರೆ.

(ಈ ಪದಗಳನ್ನು ಸಹ ನೋಡಿರಿ : ಅಬ್ಷಾಲೋಮ, ಬೆನ್ಯಾಮೀನ, ಲೇವಿ, ಯಾಜಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.06:16-18
- 1 ಅರಸ.01:7-8
- 2 ಸಮು.16:13-14
- ಜೆಕರ್ಯ.12:12-14

ಪದ ಡೇಟಾ:

- Strong's: H8096, H8097

ಶಿಲೋವ

ಸತ್ಯಾಂಶಗಳು:

ಶಿಲೋವ ಎನ್ನುವುದು ಗೋಡೆಗಳ ಕಾನಾನ್ ಪಟ್ಟಣವಾಗಿತ್ತು, ಇದನ್ನು ಯೆಹೋಶುವನ ನಾಯಕತ್ವದಲ್ಲಿ ಇಸ್ರಾಯೇಲ್ಯರ ಮೂಲಕ ಜಯಸಲ್ಪಟ್ಟಿತ್ತು.

- ಶಿಲೋವ ಪಟ್ಟಣವು ಬೇತೆಲ್ ಪಟ್ಟಣದ ಈಶಾನ್ಯ ಭಾಗದಲ್ಲಿ ಮತ್ತು ಯೊರ್ದನ್ ಹೊಳೆಯ ಪಶ್ಚಿಮ ಭಾಗದಲ್ಲಿ ಕಂಡುಬರುತ್ತದೆ.
- ಯೆಹೋಶುವನು ಇಸ್ರಾಯೇಲ್ ಜನರನ್ನು ನಡೆಸುತ್ತಿರುವ ಸಂದರ್ಭದಲ್ಲಿ ಶಿಲೋವ ಪಟ್ಟಣವು ಇಸ್ರಾಯೇಲ್ ಜನರೆಲ್ಲರು ಭೇಟಿಯಾಗುವ ಸ್ಥಳವಾಗಿದ್ದಿತ್ತು.
- ಇಸ್ರಾಯೇಲ್ ಹನ್ನೆರಡು ಕುಲಗಳಿಗೆ ಕಾನಾನ್ ಭೂಮಿಯನ್ನು ಯಾರ್ಯಾರಿಗೆ ಯಾವ ಭಾಗವನ್ನು ಕೊಡಬೇಕೆಂದು ಹೇಳುವ ಯೆಹೋಶುವನ ಮಾತುಗಳನ್ನು ಕೇಳುವುದಕ್ಕೆ ಅವರೆಲ್ಲರು ಶಿಲೋವಿನಲ್ಲಿ ಭೇಟಿಯಾಗುತ್ತಿದ್ದರು.
- ಯೆರೂಸಲೇಮಿನಲ್ಲಿ ದೇವಾಲಯವನ್ನು ಕಟ್ಟುವುದಕ್ಕೆ ಮುಂಚಿತವಾಗಿ, ಇಸ್ರಾಯೇಲ್ಯರು ದೇವರಿಗೆ ಸರ್ವಾಂಗ ಹೋಮಗಳನ್ನು ಮಾಡುವುದಕ್ಕೆ ಶಿಲೋವಿಗೆ ಬರುತ್ತಿದ್ದರು.
- ಸಮುವೇಲನು ಚಿಕ್ಕ ವಯಸ್ಸಿನಲ್ಲಿರುವಾಗ ತನ್ನ ತಾಯಿ ಹನ್ನಳು ತನ್ನ ಮಗನು ಯೆಹೋವನನ್ನು ಸೇವಿಸುವುದಕ್ಕೆ ಯಾಜಕನಾದ ಏಲಿಯಿಂದ ತರಬೇತಿಯನ್ನು ಹೊಂದುವುದಕ್ಕೆ ಶಿಲೋವಿನಲ್ಲಿರಲು ಅವನನ್ನು ಕರೆದುಕೊಂಡುಬಂದಿದ್ದಳು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೆತೇಲ್, ಪ್ರತಿಷ್ಠಾಪಿಸು, ಹನ್ನಳು, ಯೆರೂಸಲೇಮ್, ಯೊರ್ದನ್ ಹೊಳೆ, ಯಾಜಕ, ಹೋಮ, ಸಮುವೇಲ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.02:26-27
- 1 ಸಮು.01:9-10
- ಯೆಹೋ.18:1-2
- ನ್ಯಾಯಾ.18:30-31

ಪದ ಡೇಟಾ:

- Strong's: H7886, H7887

ಶೆಕೆಮ್

ಸತ್ಯಾಂಶಗಳು:

ಶೆಕೆಮ್ ಎನ್ನುವುದು ಕಾನಾನಿನಲ್ಲಿ ಒಂದು ಪಟ್ಟಣವಾಗಿದ್ದಿತ್ತು, ಇದು ಉತ್ತರ ಯೆರೂಸಲೇಮಿಗೆ ಸುಮಾರು 40 ಮೈಲಿಗಳ ದೂರದಲ್ಲಿ ಕಂಡುಬರುತ್ತದೆ. ಶೆಕೆಮ್ ಎನ್ನುವುದು ಹಳೇ ಒಡಂಬಡಿಕೆಯಲ್ಲಿ ಒಬ್ಬ ವ್ಯಕ್ತಿಯ ಹೆಸರಾಗಿತ್ತು.

- ಶೆಕೆಮ್ ಪಟ್ಟಣವು ಯಾಕೋಬನು ತನ್ನ ಅಣ್ಣನಾಗಿರುವ ಏಸಾವನೊಂದಿಗೆ ಸಮಾಧಾನ ಹೊಂದಿದನಂತರ ಸ್ಥಿರಪಟ್ಟ ಸ್ಥಳವಾಗಿತ್ತು.
- ಯಾಕೋಬನು ಶೆಕೆಮಿನಲ್ಲಿರುವ ಹಿವ್ವಿಯನಾದ ಹಾಮೋರನ ಮಕ್ಕಳಿಂದ ಭೂಮಿಯನ್ನು ಕೊಂಡುಕೊಂಡಿದ್ದನು. ಸ್ವಲ್ಪ ಕಾಲವಾದನಂತರ ಈ ಭೂಮಿಯು ತನ್ನ ಕುಟುಂಬದವರಿಗೆ ಸಮಾಧಿ ತೋಟವಾಗಿ ಮಾರಲ್ಪಟ್ಟಿತು ಮತ್ತು ಯಾಕೋಬನನ್ನು ತನ್ನ ಮಕ್ಕಳು ಸಮಾಧಿ ಮಾಡಿದ ಸ್ಥಳವಾಗಿತ್ತು.
- ಹಾಮೋರನ ಮಗನಾಗಿರುವ ಶೆಕೆಮನು ಯಾಕೋಬನ ಮಗಳಾಗಿರುವ ದೀನಳನ್ನು ಮಾನಭಂಗ ಮಾಡಿದ್ದನು, ಇದಕ್ಕೆ ಫಲವಾಗಿ ಯಾಕೋಬನ ಮಕ್ಕಳು ಶೆಕೆಮ್ ಪಟ್ಟಣದಲ್ಲಿರುವ ಮನುಷ್ಯರೆಲ್ಲರನ್ನು ಸಾಯಿಸಿದರು.

(ಅನುವಾದ ಸಲಹೆಗಳು: ಹಾಮೋರ್)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಏಸಾವ, ಹಾಮೋರ್, ಹಿವ್ವಿಯನು, ಯಾಕೋಬ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:14-16
- ಆದಿ.12:6-7
- ಆದಿ.33:18-20
- ಆದಿ.37:12-14

ಪದ ಡೇಟಾ:

- Strong's: H7928, H7930

ಶೇಮ್

ಸತ್ಯಾಂಶಗಳು:

ಶೇಮ್ ಎನ್ನುವವನು ಆದಿಕಾಂಡ ಗ್ರಂಥದಲ್ಲಿ ಹೇಳಲ್ಪಟ್ಟಿರುವ ಲೋಕದಾದ್ಯಂತ ಬಂದಿರುವ ಪ್ರಳಯದ ಸಂದರ್ಭದಲ್ಲಿ ನಾವೆಯೊಳಗೆ ನೋಹನೊಂದಿಗೆ ಹೋಗಿರುವ ನೋಹನ ಮೂವರ ಮಕ್ಕಳಲ್ಲಿ ಒಬ್ಬನಾಗಿದ್ದನು,

- ಶೇಮ್ ಎನ್ನುವಾತನು ಅಬ್ರಾಹಾಮನಿಗೆ ಮತ್ತು ತನ್ನ ಸಂತಾನದವರಿಗೆ ಪೂರ್ವಜನಾಗಿದ್ದನು.
- ಶೇಮ್ ಸಂತಾನದವರನ್ನು "ಶೇಮಿಯರು" ಎಂದು ಕರೆಯಲ್ಪಡುತ್ತಿದ್ದರು; ಅವರು ಇಬ್ರಿ ಮತ್ತು ಆರಾಬಿಕ್ ಭಾಷೆಗಳಂತಹ "ಶೇಮಿಯನ್ನು" ಮಾತನಾಡುತ್ತಾರೆ.
- ಶೇಮ್ ಸುಮಾರು 600 ವರ್ಷಗಳ ಕಾಲ ಜೀವಿಸಿರುತ್ತಾನೆಂದು ಸತ್ಯವೇದವು ತಿಳಿಯಪಡಿಸುತ್ತಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಅರೇಬಿಯಾ, ನಾವೆ, ಪ್ರಳಯ, ನೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.05:32
- ಆದಿ.06:9-10
- ಆದಿ.07:13-14
- ಆದಿ.10:1
- ಆದಿ.10:30-31
- ಆದಿ.11:10-11
- ಲೂಕ.03:36-38

ಪದ ಡೇಟಾ:

- Strong's: H8035, G4590

ಸಂಸೋನ

ಸತ್ಯಾಂಶಗಳು:

ಸಂಸೋನನು ಇಸ್ರಾಯೇಲ್ ನ್ಯಾಯಾಧೀಶರಲ್ಲಿ ಅಥವಾ ವಿಮೋಚಕರಲ್ಲಿ ಒಬ್ಬನಾಗಿದ್ದನು. ಇವನು ದಾನ್ ಕುಲದಿಂದ ಬಂದವನಾಗಿದ್ದನು.

- ದೇವರು ಸಂಸೋನನಿಗೆ ಪ್ರಕೃತಾತೀತವಾದ ಬಲವನ್ನು ಕೊಟ್ಟಿದ್ದನು, ಇದರಿಂದ ಅವನು ಇಸ್ರಾಯೇಲ್ ಶತ್ರುಗಳಾಗಿರುವ ಫಿಲಿಷ್ಟಿಯನ್ನರ ವಿರುದ್ಧ ಹೋರಾಟವನ್ನು ಮಾಡುತ್ತಿದ್ದನು.
- ಸಂಸೋನನು ತನ್ನ ಕೂದಲನ್ನು ಕತ್ತರಿಸಿಕೊಳ್ಳುವುದಿಲ್ಲವೆಂದು ಮತ್ತು ದ್ರಾಕ್ಷಾರಸವನ್ನು ಕುಡಿಯುವುದಿಲ್ಲವೆಂದು ಅಥವಾ ಇತರ ಯಾವುದೇ ಹುದುಗಿಸಿದ ಪಾನೀಯವನ್ನು ಕುಡಿಯುವುದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿದ್ದನು. ಅವನು ಪ್ರತಿಜ್ಞೆ ಅನುಸರಿಸಿದ ದಿನಗಳೆಲ್ಲಾ ದೇವರು ಅವನಿಗೆ ಬಲವನ್ನು ಕೊಡುತ್ತಾ ಬಂದನು.
- ಅವನು ಕೊನೆಗೆ ಮಾಡಿಕೊಂಡಿರುವ ಪ್ರತಿಜ್ಞೆಯನ್ನು ಮೀರಿದನು ಮತ್ತು ತನ್ನ ಕೂದಲನ್ನು ಕತ್ತರಿಸುವುದಕ್ಕೆ ಅನುಮತಿಸಿದನು, ಫಿಲಿಷ್ಟಿಯರು ತನ್ನನ್ನು ಬಂಧಿಸುವುದಕ್ಕೆ ಅವಕಾಶವನ್ನು ಕೊಟ್ಟನು.
- ಸಂಸೋನನು ಸೆರೆಯಲ್ಲಿರುವಾಗ ದೇವರು ಅವನಿಗೆ ತನ್ನ ಬಲವನ್ನು ತಿರುಗಿ ಹೊಂದಿಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟನು ಮತ್ತು ಫಿಲಿಷ್ಟಿಯನ್ನರ ಜೊತೆಗೆ, ದಾಗೋನ್ ಸುಳ್ಳು ದೇವರ ದೇವಾಲಯವನ್ನು ನಾಶಗೊಳಿಸುವ ಅವಕಾಶವನ್ನು ಕೊಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ವಿಮೋಚಿಸು, ಫಿಲಿಷ್ಟಿಯನ್ನರು, ಇಸ್ರಾಯೇಲ್ ಹನ್ನೆರಡು ಕುಲದವರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಇಬ್ರಿ.11:32-34
- ನ್ಯಾಯಾ.13:24-25
- ನ್ಯಾಯಾ.16:1-2
- ನ್ಯಾಯಾ.16:30-31

ಪದ ಡೇಟಾ:

- Strong's: H8123, G4546

ಸದೋಕ

ಸತ್ಯಾಂಶಗಳು:

ಸದೋಕ ಎನ್ನುವ ವ್ಯಕ್ತಿ ಅರಸನಾದ ದಾವೀದ ಆಳ್ವಿಕೆಯಲ್ಲಿ ಇಸ್ರಾಯೇಲಿನಲ್ಲಿ ತುಂಬಾ ಪ್ರಾಮುಖ್ಯವಾದ ಮಹಾ ಯಾಜಕನಾಗಿದ್ದನು.

- ಅಬ್ಷಾಲೋಮನು ಅರಸನಾದ ದಾವೀದನಿಗೆ ವಿರುದ್ಧವಾಗಿ ನಡೆದುಕೊಂಡಾಗ, ಸದೋಕನು ದಾವೀದನಿಗೆ ಬೆಂಬಲ ಕೊಟ್ಟನು ಮತ್ತು ಯೆರೂಸಲೇಮಿಗೆ ಒಡಂಬಡಿಕೆಯ ಮಂಜೂಷವನ್ನು ಹಿಂದಕ್ಕೆ ತೆಗೆದುಕೊಂಡುಬರಲು ಸಹಾಯ ಮಾಡಿದನು.
- ಅನೇಕ ವರ್ಷಗಳಾದನಂತರ, ದಾವೀದನ ಮಗನಾಗಿರುವ ಸೊಲೊಮೋನನನ್ನು ಅರಸನಾಗಿ ಅಭಿಷೇಕಿಸುವ ಕಾರ್ಯಕ್ರಮದಲ್ಲಿ ಇವನು ಕೂಡ ಪಾಲ್ಗೊಂಡಿದ್ದನು.
- ನೆಹೆಮೀಯನ ಕಾಲದಲ್ಲಿ ಯೆರೂಸಲೇಮಿನ ಗೋಡೆಗಳನ್ನು ಕಟ್ಟುವುದಕ್ಕೆ ಸದೋಕ ಎನ್ನುವ ಹೆಸರಿನ ಇಬ್ಬರು ವ್ಯಕ್ತಿಗಳು ಸಹಾಯ ಮಾಡಿದ್ದರು.
- ಸದೋಕ ಎನ್ನುವ ಹೆಸರು ಅರಸನಾದ ಯೋತಾಮನ ತಾತನಿಗೆ ಕೂಡ ಇದ್ದಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಒಡಂಬಡಿಕೆಯ ಮಂಜೂಷ, ದಾವೀದ, ಯೋತಾಮ, ನೆಹೆಮೀಯ, ಪಾಲನೆ, ಸೊಲೊಮೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.24:1-3
- 1 ಅರಸ.01:26-27
- 2 ಸಮು.15:24-26
- ಮತ್ತಾಯ.01:12-14

ಪದ ಡೇಟಾ:

- Strong's: H6659, G4524

ಸಮಾರ್ಯ, ಸಮಾರ್ಯದವನು

ಸತ್ಯಾಂಶಗಳು:

ಸಮಾರ್ಯ ಎನ್ನುವುದು ಒಂದು ಪಟ್ಟಣವಾಗಿರುತ್ತದೆ ಮತ್ತು ಇದರ ಸುತ್ತಮುತ್ತ ಪ್ರಾಂತ್ಯವು ಇಸ್ರಾಯೇಲಿನ ಉತ್ತರ ಭಾಗದಲ್ಲಿರುತ್ತದೆ. ಈ ಪ್ರಾಂತ್ಯವು ಶಾರೋನ್ ಬಯಲಿನ ಪಶ್ಚಿಮ ಭಾಗ ಮತ್ತು ಯೊರ್ದನ್ ಹೊಳೆಯ ಪೂರ್ವ ಭಾಗದ ಮಧ್ಯೆದಲ್ಲಿರುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಸಮಾರ್ಯ ಎನ್ನುವುದು ಇಸ್ರಾಯೇಲ್ ಉತ್ತರ ರಾಜ್ಯದ ರಾಜಧಾನಿಯಾಗಿದ್ದಿತ್ತು. ಆದನಂತರ ಇದರ ಸುತ್ತಮುತ್ತಲಿರುವ ಪ್ರಾಂತ್ಯವನ್ನು ಕೂಡ ಸಮಾರ್ಯ ಎಂದು ಕರೆದರು.
- ಅಶ್ಶೂರಿಯರು ಇಸ್ರಾಯೇಲ್ ಉತ್ತರ ರಾಜ್ಯವನ್ನು ಜಯಿಸಿದಾಗ, ಅವರು ಸಮಾರ್ಯ ಪಟ್ಟಣವನ್ನು ವಶಪಡಿಸಿಕೊಂಡಿದ್ದರು ಮತ್ತು ಆ ಪ್ರಾಂತ್ಯವನ್ನು ಬಿಟ್ಟು ಹೋಗಬೇಕೆಂದು ಉತ್ತರ ಭಾಗದಲ್ಲಿರುವ ಇಸ್ರಾಯೇಲ್ಯರಲ್ಲಿ ಅನೇಕರನ್ನು ಬಲವಂತಿಕೆ ಮಾಡಿದರು, ಅವರನ್ನು ಅಶ್ಶೂರ್.ನಲ್ಲಿರುವ ವಿವಿಧ ಪಟ್ಟಣಗಳಿಗೆ ಹೋಗುವಂತೆ ದೂರ ಮಾಡಿದರು.
- ಕರೆದೊಯ್ಯಲ್ಪಟ್ಟ ಇಸ್ರಾಯೇಲ್ಯರ ಸ್ಥಾನವನ್ನು ತುಂಬಿಸುವುದಕ್ಕೆ ಸಮಾರ್ಯ ಪ್ರಾಂತ್ಯದೊಳಗೆ ಅಶ್ಶೂರೀಯರು ಅನೇಕ ಅನ್ಯರನ್ನು ಕರೆದುಕೊಂಡುಬಂದು ಅಲ್ಲಿ ಬಿಟ್ಟರು.
- ಆ ಪ್ರಾಂತ್ಯದಲ್ಲಿ ಉಳಿದ ಇಸ್ರಾಯೇಲ್ಯರಲ್ಲಿ ಕೆಲವರು ಆಲ್ಲಿಗೆ ಬಂದಿರುವ ಅನ್ಯರನ್ನು ಮದುವೆ ಮಾಡಿಕೊಂಡರು, ಮತ್ತು ಅವರ ಸಂತಾನದವರೇ ಸಮಾರ್ಯದವರಾಗಿದ್ದರು.
- ಯೆಹೂದ್ಯರು ಸಮಾರ್ಯದವರನ್ನು ಕಡೆಗಣಿಸಿದ್ದರು, ಯಾಕಂದರೆ ಅವರು ಕೇವಲ ಒಂದು ಕಡೆಗೆ ಮಾತ್ರ ಯೆಹೂದ್ಯರಾಗಿದ್ದರು ಮತ್ತು ಅವರ ಪೂರ್ವಜರು ಅನ್ಯ ದೇವರುಗಳನ್ನು ಆರಾಧನೆ ಮಾಡಿದವರಾಗಿದ್ದರು.
- ಹೊಸ ಒಡಂಬಡಿಕೆಯ ಕಾಲಗಳಲ್ಲಿ, ಸಮಾರ್ಯ ಪ್ರಾಂತ್ಯವು ಗಲಿಲಾಯ ಉತ್ತರ ಪ್ರಾಂತ್ಯ ಮತ್ತು ಯೂದಾಯ ದಕ್ಷಿಣ ಪ್ರಾಂತ್ಯಗಳ ಗಡಿಗಳಲ್ಲಿದ್ದಿತ್ತು.

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್, ಗಲಿಲಾಯ, ಯೂದಾಯ, ಶಾರೋನ್, ಇಸ್ರಾಯೇಲ್ ರಾಜ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.08:1-3
- ಅಪೊ.ಕೃತ್ಯ.08:4-5
- ಯೋಹಾನ.04:4-5
- ಲೂಕ.09:51-53
- ಲೂಕ.10:33-35

ಸತ್ಯವೇದದಿಂದ ಉದಾಹರಣೆಗಳು:

- **20:04** ಇಸ್ರಾಯೇಲ್ ರಾಜ್ಯವು ಇದ್ದ ಪ್ರಾಂತ್ಯದಲ್ಲಿ ಜೀವನ ಮಾಡುವುದಕ್ಕೆ ಅಶ್ಶೂರಿಯರು ಅನ್ಯರನ್ನು ಕರೆದುಕೊಂಡುಬಂದು ಅಲ್ಲಿ ಬಿಟ್ಟರು. ಅನ್ಯರು ಕೆಡಿಸಲ್ಪಟ್ಟ ಪಟ್ಟಣಗಳನ್ನು ತಿರುಗಿ ನಿರ್ಮಿಸಿದರು ಮತ್ತು ಅಲ್ಲಿ ಉಳಿದ ಇಸ್ರಾಯೇಲ್ಯರನ್ನು ವಿವಾಹ ಮಾಡಿಕೊಂಡರು. ಅನ್ಯರನ್ನು ವಿವಾಹ ಮಾಡಿಕೊಂಡಿರುವ ಇಸ್ರಾಯೇಲ್ ಸಂತತಿಯವರನ್ನು _ **ಸಮಾರ್ಯದವರು** _ ಎಂದು ಕರೆಯುತ್ತಾರೆ.
- **27:08** "ಒಬ್ಬ _ **ಸಮಾರ್ಯದವನು** _ ಆ ಮಾರ್ಗದಲ್ಲಿ ಇಳಿದು ಹೋಗುತ್ತಾ ಇದ್ದನು. (_ **ಸಮಾರ್ಯದವರು** ಇತರ ದೇಶಗಳಿಂದ ಬಂದಿರುವ ಜನರನ್ನು ವಿವಾಹ ಮಾಡಿಕೊಂಡಿರುವ ಯೆಹೂದ್ಯರ ಸಂತಾನದವರಾಗಿದ್ದರು. **ಸಮಾರ್ಯದವರು** _ ಮತ್ತು ಯೆಹೂದ್ಯರು ಒಬ್ಬರನ್ನೊಬ್ಬರು ದ್ವೇಷಿಸಿಕೊಳ್ಳುತ್ತಿದ್ದರು.)"
- **27:09** "_ **ಸಮಾರ್ಯದವನು** _ ತನ್ನ ಸ್ವಂತ ಕತ್ತೆಯ ಮೇಲೆ ಆ ಮನುಷ್ಯನನ್ನು ಏರಿಸಿಕೊಂಡು, ಅವನನ್ನು ಚೆನ್ನಾಗಿ ನೋಡಿಕೊಳ್ಳುವುದಕ್ಕೆ ಮಾರ್ಗ ಪಕ್ಕದಲ್ಲಿರುವ ಛತ್ರಕ್ಕೆ ಕರೆದುಕೊಂಡು ಹೋದನು.
- **45:07** ಯೇಸುವಿನ ಕುರಿತಾಗಿ ಬೋಧನೆ ಮಾಡಿದ ಮತ್ತು ಅನೇಕರು ರಕ್ಷಿಸಲ್ಪಟ್ಟ ಸ್ಥಳವಾಗಿರುವ _ **ಸಮಾರ್ಯಗೆ** _ ಈತನು (ಫಿಲಿಪ್ಪ) ಹೋದನು.

ಪದ ಡೇಟಾ:

- Strong's: H8111, H8115, H8118, G4540, G4541, G4542

ಸಮುದ್ರ, ಮಹಾ ಸಮುದ್ರ, ಪಶ್ಚಿಮ ಸಮುದ್ರ, ಮೆಡಿಟರೇನಿಯನ್ ಸಮುದ್ರ

ಸತ್ಯಾಂಶಗಳು:

ಸತ್ಯವೇದದಲ್ಲಿ "ಮಹಾ ಸಮುದ್ರ" ಅಥವಾ "ಪಶ್ಚಿಮ ಸಮುದ್ರ" ಎನ್ನುವ ಪದಗಳು ಈಗಿನ ಕಾಲದಲ್ಲಿ "ಮೆಡಿಟರೇನಿಯನ್ ಸಮುದ್ರ" ಎಂದು ಕರೆಯುತ್ತಾರೆ, ಸತ್ಯವೇದ ಕಾಲದಲ್ಲಿ ಇದು ಹೆಚ್ಚಿನ ನೀರನ್ನು ಹೊಂದಿರುವ ಸಮುದ್ರ ಎಂಬುದಾಗಿ ಹೆಸರುವಾಸಿಯಾಗಿತ್ತು.

- ಮೆಡಿಟರೇನಿಯನ್ ಸಮುದ್ರವು ಈ ಕೆಳಗಿನ ಪ್ರಾಂತ್ಯಗಳ ಗಡಿಗಳನ್ನು ಹೊಂದಿರುತ್ತದೆ : ಇಸ್ರಾಯೇಲ್ (ಪೂರ್ವ), ಯುರೋಪ್ (ಉತ್ತರ ಮತ್ತು ಪಶ್ಚಿಮ), ಮತ್ತು ಆಫ್ರಿಕಾ (ದಕ್ಷಿಣ).
- ಈ ಸಮುದ್ರವು ಅನೇಕ ದೇಶಗಳ ಗಡಿಗಳನ್ನು ಹೊಂದಿರುವುದರಿಂದ ಪುರಾತನ ಕಾಲಗಳಲ್ಲಿ ವ್ಯಾಪಾರ ವ್ಯವಹಾರಗಳಿಗೆ ಮತ್ತು ಸಾರಿಗೆಗೆ ತುಂಬಾ ಪ್ರಾಮುಖ್ಯವಾಗಿತ್ತು. ಈ ಸಮುದ್ರ ಕರಾವಳಿಯಲ್ಲಿ ಕಂಡುಬರುವ ಪಟ್ಟಣಗಳು ಮತ್ತು ಜನರ ಗುಂಪುಗಳು ತುಂಬಾ ಅಭಿವೃದ್ಧಿ ಹೊಂದಿದವುಗಳಾಗಿದ್ದವು ಅಥವಾ ಹೊಂದಿದವರಾಗಿದ್ದರು, ಯಾಕಂದರೆ ಹಡಗಿನ ಮೂಲಕ ಇತರ ದೇಶಗಳಿಂದ ವಸ್ತುಗಳನ್ನು ತುಂಬಾ ಸುಲಭವಾಗಿ ವರ್ಗಾಯಿಸುತ್ತಿದ್ದರು.
- ಮಹಾ ಸಮುದ್ರ ಎನ್ನುವುದು ಇಸ್ರಾಯೇಲ್ ಪಶ್ಚಿಮ ದಿಕ್ಕಿನಲ್ಲಿ ಕಂಡುಬರುತ್ತದೆ, ಇದನ್ನು ಕೆಲವೊಂದುಸಲ "ಪಶ್ಚಿಮ ಸಮುದ್ರ" ಎಂದೂ ಸೂಚಿಸುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲ್, ಜನರ ಗುಂಪು, ಅಭಿವೃದ್ಧಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.47:15-17
- ಯೆಹೆ.47:18-20
- ಯೆಹೋ.15:3-4
- ಅರಣ್ಯ..13:27-29

ಪದ ಡೇಟಾ:

- Strong's: H314, H1419, H3220

ಸಮುವೇಲ

ಸತ್ಯಾಂಶಗಳು:

ಸಮುವೇಲ ಪ್ರವಾದಿಯಾಗಿದ್ದನು ಮತ್ತು ಇಸ್ರಾಯೇಲ್ ಕೊನೆಯ ನ್ಯಾಯಾಧೀಶನಾಗಿದ್ದನು. ಈತನು ಸೌಲ ಮತ್ತು ದಾವೀದರಿಬ್ಬರನ್ನು ಇಸ್ರಾಯೇಲ್ ಮೇಲೆ ಅರಸರನ್ನಾಗಿ ಅಭಿಷೇಕ ಮಾಡಿದ್ದನು.

- ಸಮುವೇಲನು ಎಲ್ಕಾನ ಮತ್ತು ಹನ್ನಳಿಗೆ ರಾಮದಲ್ಲಿ ಜನಿಸಿದ್ದನು.
- ಹನ್ನಳು ಬಂಜೆಯಾಗಿದ್ದಳು, ಆದ್ದರಿಂದ ದೇವರು ತನಗೆ ಒಂದು ಮಗುವನ್ನು ಕೊಡಬೇಕೆನ್ನುವ ಪ್ರಾರ್ಥನೆಯನ್ನು ಆಕೆ ಮಾಡಿದ್ದಳು. ಆ ಪ್ರಾರ್ಥನೆಗೆ ಸಮುವೇಲನೇ ಉತ್ತರವಾಗಿದ್ದನು.
- ತನ್ನ ಪ್ರಾರ್ಥನೆಗೆ ದೇವರು ಉತ್ತರ ಕೊಟ್ಟು ಒಂದು ಗಂಡು ಮಗುವನ್ನು ಕೊಟ್ಟರೆ, ಹನ್ನಳು ಆ ಮಗುವನ್ನು ಯೆಹೋವನಿಗೆ ಸಮರ್ಪಿಸುತ್ತೇನೆಂದು ವಾಗ್ದಾನ ಮಾಡಿದ್ದಳು, ಹಾಗೆಯೇ ಆಕೆಯ ಪ್ರಾರ್ಥನೆಗೆ ಉತ್ತರವನ್ನು ಪಡೆದುಕೊಂಡಳು.
- ಆ ಪ್ರತಿಜ್ಞೆಯನ್ನು ನೆರವೇರಿಸುವುದಕ್ಕೆ ಸಮುವೇಲನು ಚಿಕ್ಕವನಾಗಿದ್ದಾಗಲೇ, ಹನ್ನಳು ಅವನನ್ನು ದೇವಾಲಯದಲ್ಲಿ ಯಾಜಕನಾಗಿರುವ ಏಲಿಗೆ ಸಹಾಯ ಮಾಡಲು ಮತ್ತು ಆತನೊಂದಿಗೆ ಜೀವಿಸುವುದಕ್ಕೆ ಕಳುಹಿಸಿದಳು.
- ದೇವರು ಸಮುವೇಲನನ್ನು ದೊಡ್ಡ ಪ್ರವಾದಿಯನ್ನಾಗಿ ಮಾಡಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಹನ್ನಳು, ತೀರ್ಪು ಮಾಡು, ಪ್ರವಾದಿ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.01:19-20
- 1 ಸಮು.09:23-24
- 1 ಸಮು.12:16-18
- ಅಪೊ.ಕೃತ್ಯ.03:24-26
- ಅಪೊ.ಕೃತ್ಯ.13:19-20
- ಇಬ್ರಿ.11:32-34

ಪದ ಡೇಟಾ:

- Strong's: H8050, G4545

ಸಾರಳು, ಸಾರಯಳು

ಸತ್ಯಾಂಶಗಳು:

- ಸಾರಳು ಅಬ್ರಾಹಾಮನ ಹೆಂಡತಿಯಾಗಿದ್ದಳು.
- ವಾಸ್ತವಿಕವಾಗಿ ಆಕೆಯ ಹೆಸರು “ಸಾರಯಳು” ಆಗಿತ್ತು, ಆದರೆ ದೇವರು “ಸಾರಾ” ಎಂದು ಬದಲಾಯಿಸಿದನು.
- ಸಾರಳು ಇಸಾಕನಿಗೆ ಜನನವನ್ನು ಕೊಟ್ಟಳು, ಇವನು ಆಕೆಗೆ ಮತ್ತು ಅಬ್ರಾಹಾಮನಿಗೆ ದೇವರು ವಾಗ್ದಾನ ಮಾಡಿದ್ದ ಮಗನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಇವುಗಳನ್ನು ಸಹ ನೋಡಿರಿ : ಅಬ್ರಾಹಾಮ, ಇಸಾಕ)

ಸತ್ಯವೇದದ ಅನುಬಂಧ ವಾಕ್ಯಗಳು:

- ಆದಿಕಾಂಡ 11:30
- ಆದಿಕಾಂಡ 11:31
- ಆದಿಕಾಂಡ 17:15
- ಆದಿಕಾಂಡ 25:9-11

ಸತ್ಯವೇದದಿಂದ ಉದಾಹರಣೆಗಳು:

- **5:1**ಅಬ್ರಾಹಾಮನ ಹೆಂಡತಿಯಾದ _ ಸಾರಯಳು _ ಅವನಿಗೆ, “ನಾನೀಗ ಮಕ್ಕಳನ್ನು ಹಡೆಯುವುದಕ್ಕೆ ವೃದ್ಧಳಾಗಿರುವುದರಿಂದ ಮತ್ತು ನಾನು ಮಕ್ಕಳನ್ನು ಹೊಂದುವುದಕ್ಕೆ ದೇವರು ಅನುಮತಿ ಕೊಡದ ಕಾರಣದಿಂದ, ಇಲ್ಲಿ ನನ್ನ ದಾಸಿ ಹಾಗರಳಿದ್ದಾಳೆ. ಆಕೆಯನ್ನು ಮದುವೆ ಮಾಡಿಕೋ ಆಕೆಯು ನನಗಾಗಿ ಮಗುವನ್ನು ಹಡೆಯುವಳು” ಎಂದು ಹೇಳಿದಳು.
- **5:4** “ನಿನ್ನ ಹೆಂಡತಿ _ ಸಾರಯಳು _ ಮಗನನ್ನು ಹೇರುವಳು, ಅವನು ವಾಗ್ದಾನದ ಮಗನಾಗಿರುವನು.”
- **5:4** “ದೇವರು _ ಸಾರಯಳ _ ಹೆಸರನ್ನು _ ಸಾರಾ_ ಎಂದು ಬದಲಾಯಿಸಿದನು, ಈ ಹೆಸರಿಗೆ “ರಾಜಕುಮಾರಿ” ಎಂದರ್ಥ.”
- **5:5** “ಒಂದು ವರ್ಷದನಂತರ, ಅಬ್ರಾಹಾಮನು 100 ವರ್ಷಗಳವನಾದಾಗ, _ ಸಾರಳಿಗೆ _ 90 ವರ್ಷಗಳಾಗಿತ್ತು, _ ಸಾರಳು _ ಅಬ್ರಾಹಾಮನ ಮಗನಿಗೆ ಜನನವನ್ನು ಕೊಟ್ಟಳು. ದೇವರು ಅವರಿಗೆ ಹೇಳಿದ ಪ್ರಕಾರವೇ ಅವರು ಅವನಿಗೆ ಇಸಾಕ ಎಂದು ಹೆಸರಿಟ್ಟರು.

ಪದದ ಡೇಟಾ:

- Strong's: H8283, H8297, G45640

ಸಿಮೆಯೋನ್

ಸತ್ಯಾಂಶಗಳು:

ಸಿಮೆಯೋನ್ ಯಾಕೋಬನ ಎರಡನೇಯ ಮಗ. ಆತನು ಲೇಯಳ ಎರಡನೇಯ ಮಗ. ಅವನ ವಂಶಸ್ಥರು ಇಸ್ರಾಯೇಲಿನ ಕುಲಗಳಲ್ಲಿ ಒಂದಾಗಿದೆ.

- ಅವನ ಕುಲದವರನ್ನು "ಸಿಮೆಯೋನನ ಕುಲ" ಎಂದು ಕರೆಯಲ್ಪಟ್ಟಿದೆ.
- ಸಿಮೆಯೋನ್ ಎಂಬ ಹೆಸರು "ಕೇಳಲು" ಎಂಬ ಇಬ್ರಿಯ ಪದಕ್ಕೆ ಹೋಲುತ್ತದೆ.
- ಸಿಮೆಯೋನ್ ಕುಲವು ಕಾನಾನ್ ಎನ್ನುವ ವಾಗ್ದಾನ ಭೂಮಿಯಲ್ಲಿ ದಕ್ಷಿಣ ಪ್ರದೇಶದಲ್ಲಿ ಒಂದು ಭಾಗವನ್ನು ವಶಪಡಿಸಿಕೊಂಡಿದ್ದರು. ಇವರ ಭೂಭಾಗವು ಯೆಹೂದ್ಯಕ್ಕೆ ಸಂಬಂಧಪಟ್ಟಿರುವ ಭೂಭಾಗದಿಂದ ಆವರಿಸಲ್ಪಟ್ಟಿತ್ತು.
- ಮರಿಯ ಮತ್ತು ಯೋಸೇಫರು ಶಿಶುವಾದ ಯೇಸುವನ್ನು ದೇವರಿಗೆ ಪ್ರತಿಷ್ಠಾಪನೆ ಮಾಡುವುದಕ್ಕೆ ಯೆರೂಸಲೇಮಿನಲ್ಲಿರುವ ದೇವಾಲಯಕ್ಕೆ ಕರೆದುಕೊಂಡು ಬಂದಾಗ, ಅಲ್ಲಿ ಹಿರಿಯನಾದ ಸಿಮೆಯೋನ್ ಎನ್ನುವ ಹೆಸರಿನ ವ್ಯಕ್ತಿ ಮೆಸ್ಸೀಯನನ್ನು ನೋಡುವುದಕ್ಕೆ ಆತನನ್ನು ಅನುಮತಿಸಲು ದೇವರನ್ನು ಸ್ತುತಿಸಿದನು.
- ಲೂಕನ ಸುವಾರ್ತೆಯಲ್ಲಿ ಯೇಸುವಿನ ವಂಶಾವಳಿಯಲ್ಲಿ ಸಿಮೆಯೋನ್ ಎಂಬ ಇನ್ನೊಬ್ಬ ವ್ಯಕ್ತಿಯನ್ನು ಉಲ್ಲೇಖಿಸಲಾಗಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಕ್ರಿಸ್ತ, ಪ್ರತಿಷ್ಠಾಪಿಸು, ಯಾಕೋಬ, ಯೆಹೂದ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.29:33-34
- ಆದಿ.34:24-26
- ಆದಿ.42:35-36
- ಆದಿ.43:21-23
- ಲೂಕ.02:25-26

ಪದ ಡೇಟಾ:

- Strong's: H8095, H8099, G4826

ಸಿರಿಯಾ

ಸತ್ಯಾಂಶಗಳು:

ಸಿರಿಯಾ ಎನ್ನುವುದು ಒಂದು ದೇಶವಾಗಿರುತ್ತದೆ, ಇದು ಇಸ್ರಾಯೇಲ್ ಈಶಾನ್ಯ ಭಾಗದಲ್ಲಿ ಕಂಡುಬರುತ್ತದೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಈ ದೇಶವು ರೋಮಾ ಸಾಮ್ರಾಜ್ಯದ ಆಡಳಿತದಲ್ಲಿರುವ ಸೀಮೆಯಾಗಿದ್ದಿತ್ತು.

- ಹಳೇ ಒಡಂಬಡಿಕೆಯ ಕಾಲದಲ್ಲಿ ಸಿರಿಯನ್ನರು ಇಸ್ರಾಯೇಲ್ಯರಿಗೆ ಬಲವಾದ ಸೈನ್ಯವಾದ ಶತ್ರುಗಳಾಗಿದ್ದರು.
- ನಾಮಾನನು ಸಿರಿಯಾ ಸೈನ್ಯಕ್ಕೆ ಅಧಿಪತಿಯಾಗಿದ್ದನು, ಇವನ ಕುಷ್ಠ ರೋಗವು ಪ್ರವಾದಿಯಾದ ಎಲೀಷನಿಂದ ಗುಣವಾಗಿದ್ದಿತ್ತು.
- ಸಿರಿಯಾ ನಿವಾಸಿಗಳಲ್ಲಿ ಅನೇಕರು ಆರಾಮನ ಸಂತತಿಯಾಗಿದ್ದರು, ಈ ಆರಾಮನು ನೋಹನ ಮಗನಾದ ಶೇಮ್ ಸಂತಾನದವನಾಗಿದ್ದನು.
- ಸಿರಿಯಾ ರಾಜಧಾನಿಯಾದ ದಮಸ್ಕ ಪಟ್ಟಣದ ಕುರಿತು ಸತ್ಯವೇದದಲ್ಲಿ ಅನೇಕಬಾರಿ ದಾಖಲು ಮಾಡಲ್ಪಟ್ಟಿರುತ್ತದೆ.
- ಸೌಲನು ಕ್ರೈಸ್ತರನ್ನು ಹಿಂಸಿಸುವುದಕ್ಕೆ ಒಂದು ಪ್ರಣಾಳಿಕೆಯನ್ನು ಹಾಕಿಕೊಂಡು ದಮಸ್ಕ ಪಟ್ಟಣಕ್ಕೆ ಹೊರಟು ಹೋದನು, ಆದರೆ ಯೇಸು ಅವನನ್ನು ನಿಲ್ಲಿಸಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆರಾಮ, ಸೈನ್ಯಾಧಿಪತಿ, ದಮಸ್ಕ, ವಂಶಸ್ಥರು, ಎಲೀಷ, ಕುಷ್ಠ, ನಾಮಾನ, ಹಿಂಸೆ, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.15:22-23
- ಅಪೊ.ಕೃತ್ಯ.15:39-41
- ಅಪೊ.ಕೃತ್ಯ.20:1-3
- ಗಲಾತ್ಯ.01:21-24
- ಮತ್ತಾಯ.04:23-25

ಪದ ಡೇಟಾ:

- Strong's: H130, H726, H758, H761, H762, H804, H1834, H4601, H7421, G4947, G4948

ಸೀದೋನ್

ಸತ್ಯಾಂಶಗಳು:

ಸೀದೋನ್ ಎನ್ನುವವನು ಕಾನಾನ್ ಹಿರಿಯ ಮಗನಾಗಿದ್ದನು. ಸೀದೋನ್ ಎನ್ನುವ ಹೆಸರಿನ ಮೇಲೆ ಕಾನಾನಿಯ ಪಟ್ಟಣವೂ ಇದೆ, ಬಹುಶಃ ಕಾನಾನ್ ಮಗನ ಹೆಸರೇ ಇದಕ್ಕೆ ಇಟ್ಟಿರಬಹುದು.

- ಸೀದೋನ್ ಪಟ್ಟಣವು ಆಧುನಿಕ ದೇಶವಾಗಿರುವ ಲೆಬಾನೋನ್ ಪ್ರಾಂತ್ಯದಲ್ಲಿ ಮೆಡಿಟರೇನಿಯನ್ ಕರಾವಳಿಯಲ್ಲಿ ಇಸ್ರಾಯೇಲ್ ಈಶಾನ್ಯ ಭಾಗದಲ್ಲಿ ಕಂಡುಬರುತ್ತದೆ.
- "ಸೀದೋನಿಯರು" ಪುರಾತನ ಸೀದೋನ್ ಮತ್ತು ಅದರ ಸುತ್ತಮುತ್ತಲಿರುವ ಪ್ರಾಂತ್ಯಗಳಲ್ಲಿ ನಿವಾಸ ಮಾಡುತ್ತಿದ್ದ ಪೊಯಿನಿಕ್ಯ ಜನರ ಗುಂಪಿನವರಾಗಿದ್ದರು.
- ಸತ್ಯವೇದದಲ್ಲಿ ಸೀದೋನ್ ತೂರ್ ಎನ್ನುವ ಪಟ್ಟಣದೊಂದಿಗೆ ತುಂಬಾ ಹತ್ತಿರವಾಗಿ ಸಹಕಾರವನ್ನು ಮಾಡಿರುತ್ತದೆ, ಇದರಿಂದ ಈ ಎರಡು ಪಟ್ಟಣಗಳು ಶ್ರೀಮಂತಕ್ಕೆ ಮತ್ತು ಆ ಪಟ್ಟಣಗಳಲ್ಲಿ ನಿವಾಸವಾಗಿರುವ ಜನರು ಅನೈತಿಕ ನಡತೆಗಳಿಗೆ ಪ್ರಸಿದ್ಧಿಯನ್ನು ಹೊಂದಿರುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ನೋಹ, ಪೊಯಿನಿಕ್ಯ, ಸಮುದ್ರ, ತೂರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.12:20-21
- ಅಪೊ.ಕೃತ್ಯ.27:3-6
- ಆದಿ.10:15-18
- ಆದಿ.10:19-20
- ಮಾರ್ಕ.03:7-8
- ಮತ್ತಾಯ.11:20-22
- ಮತ್ತಾಯ.15:21-23

ಪದ ಡೇಟಾ:

- Strong's: H6721, H6722, G4605, G4606

ಸೀನಾಯಿ

ಸತ್ಯಾಂಶಗಳು:

ಸೀನಾಯಿ ಬೆಟ್ಟ ಎನ್ನುವುದು ಒಂದು ಪರ್ವತವಾಗಿರುತ್ತದೆ, ಇದು ಬಹುಶಃ ಈಗಿನ ಸೀನಾಯಿ ಪೆನಿನ್ಸುಲ ಎಂದು ಕರೆಯಲ್ಪಡುವ ದಕ್ಷಿಣ ಭಾಗದಲ್ಲಿ ಕಂಡುಬರುತ್ತದೆ. ಇದನ್ನು "ಹೋರೆಬ್ ಬೆಟ್ಟ" ಎಂದೂ ಕರೆಯುತ್ತಾರೆ.

- ಸೀನಾಯಿ ಬೆಟ್ಟ ಎನ್ನುವುದು ಬಂಡೆಗಳು ಇರುವ ಅಡವಿಯಲ್ಲಿ ದೊಡ್ಡ ಭಾಗವಾಗಿರುತ್ತದೆ.
- ಇಸ್ರಾಯೇಲ್ಯರು ಐಗುಪ್ತದಿಂದ ವಾಗ್ದಾನ ಭೂಮಿಗೆ ಪ್ರಯಾಣ ಮಾಡುತ್ತಿರುವಾಗ ಅವರು ಸೀನಾಯಿ ಬೆಟ್ಟಕ್ಕೆ ಬಂದಿದ್ದರು.
- ದೇವರು ಸೀನಾಯಿ ಬೆಟ್ಟದ ಮೇಲೆ ಮೋಶೆಗೆ ಹತ್ತು ಆಜ್ಞೆಗಳನ್ನು ಕೊಟ್ಟನು.

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ಹೋರೆಬ್, ವಾಗ್ದಾನ ಭೂಮಿ, ಹತ್ತು ಆಜ್ಞೆಗಳು,)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:29-30
- ವಿಮೋ.16:1-3
- ಗಲಾತ್ಯ.04:24-25
- ಯಾಜಕ.27:34
- ಅರಣ್ಯ.01:17-19

ಸತ್ಯವೇದದಿಂದ ಉದಾಹರಣೆಗಳು:

- **13:01** ದೇವರು ಇಸ್ರಾಯೇಲ್ಯರನ್ನು ಕೆಂಪು ಸಮುದ್ರದಿಂದ ನಡೆಸಿದನಂತರ, ಆತನು ಅವರನ್ನು _ ಸೀನಾಯಿ _ ಎನ್ನುವ ಬೆಟ್ಟದ ಕಡೆಗೆ ಅರಣ್ಯದ ಮೂಲಕ ನಡೆಸಿದನು.
- **13:03** ಮೂರು ದಿನಗಳಾದನಂತರ, ಜನರು ತಮ್ಮನ್ನು ತಾವು ಆತ್ಮೀಕವಾಗಿ ಸಿದ್ಧಗೊಳಿಸಿಕೊಂಡನಂತರ, ದೇವರು ತುತೂರಿ ಧ್ವನಿಯಿಂದ, ಗುಡುಗು, ಮಿಂಚು, ಮತ್ತು ಹೊಗೆಯೊಳಗಿಂದ _ ಸೀನಾಯಿ ಬೆಟ್ಟದ _ ಮೇಲಕ್ಕೆ ಇಳಿದು ಬಂದರು.
- **13:11** ಅನೇಕ ದಿನಗಳವರೆಗೆ, ಮೋಶೆಯು _ ಸೀನಾಯಿ ಬೆಟ್ಟದ _ ಮೇಲೆ ದೇವರೊಂದಿಗೆ ಮಾತನಾಡುತ್ತಾ ಇದ್ದರು.
- **15:13** _ ಸೀನಾಯಿ _ ಮೇಲೆ ದೇವರು ಇಸ್ರಾಯೇಲ್ಯರೊಂದಿಗೆ ಮಾಡಿದ ಒಡಂಬಡಿಕೆಗೆ ವಿಧೇಯರಾಗುವುದಕ್ಕೆ ಯೆಹೋಶುವ ಜನರಿಗೆ ತಮ್ಮ ಕರ್ತವ್ಯವನ್ನು ನೆನಪು ಮಾಡಿದನು.

ಪದ ಡೇಟಾ:

- Strong's: H2022, H5514, G3735, G4614

ಸೀಲ, ಸಿಲ್ವಾನ

ಸತ್ಯಾಂಶಗಳು:

ಸೀಲನು ಯೆರೂಸಲೇಮಿನಲ್ಲಿರುವ ವಿಶ್ವಾಸಿಗಳ ಮಧ್ಯದಲ್ಲಿ ನಾಯಕನಾಗಿದ್ದನು.

- ಅಂತಿಯೋಕ್ಯ ಪಟ್ಟಣಕ್ಕೆ ಪತ್ರವನ್ನು ತೆಗೆದುಕೊಳ್ಳುವುದಕ್ಕೆ ಪೌಲ ಮತ್ತು ಬಾರ್ನಬರವರೊಂದಿಗೆ ಹೋಗಲು ಯೆರೂಸಲೇಮಿನಲ್ಲಿರುವ ಸಭೆಯ ಹಿರಿಯರು ಸೀಲನನ್ನು ನೇಮಿಸಿದರು.
- ಸೀಲನು ಸ್ವಲ್ಪಕಾಲವಾದನಂತರ ಯೇಸುವಿನ ಕುರಿತಾಗಿ ಜನರಿಗೆ ಬೋಧನೆ ಮಾಡುವುದಕ್ಕೆ ಅನೇಕ ಪಟ್ಟಣಗಳಿಗೆ ಪೌಲನ ಜೊತೆಯಲ್ಲಿ ಪ್ರಯಾಣ ಮಾಡಿದನು.
- ಪೌಲ ಮತ್ತು ಸೀಲನನ್ನು ಫಿಲಿಪ್ಪಿ ಪಟ್ಟಣದಲ್ಲಿನ ಸೆರೆಗೆ ಹಾಕಿದ್ದರು. ಅವರು ಆ ಸೆರೆಯಲ್ಲಿರುವಾಗಲೇ ದೇವರಿಗೆ ಹಾಡುಗಳನ್ನು ಹಾಡುತ್ತಿದ್ದರು, ಆಗ ದೇವರು ಅವರನ್ನು ಸೆರೆಯಿಂದ ಅವರನ್ನು ಬಿಡಿಸಿದರು. ಈ ಸಾಕ್ಷಿಯ ಫಲವಾಗಿ ಜೈಲಾಧಿಕಾರಿ ಕ್ರೈಸ್ತನಾಗಿ ಮಾರ್ಪಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವ ರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಂತಿಯೋಕ್ಯ, ಬರ್ನಬ, ಯೆರೂಸಲೇಮ್, ಪೌಲ, ಫಿಲಿಪ್ಪಿ, ಸೆರೆ, ಸಾಕ್ಷಿ)

ಸತ್ಯವೇದದ ವಾಕ್ಯಗಳು:

- 1 ಪೇತ್ರ 5:12
- 1 ಥೆಸ್ಸ 1:1
- 2 ಥೆಸ್ಸ 1:1
- ಅಪೊ.ಕೃತ್ಯ 15:22

ಸತ್ಯವೇದದ ಕಥೆಗಳಿಂದ ಉದಾಹರಣೆಗಳು:

- **47:1** ಒಂದು ದಿನ ಪೌಲ ಮತ್ತು ತನ್ನ ಸ್ನೇಹಿತನಾದ _ ಸೀಲನು _ ಯೇಸು ಕ್ರಿಸ್ತನ ಕುರಿತಾದ ಸುವಾರ್ತೆಯನ್ನು ಪ್ರಕಟಿಸುವುದಕ್ಕೆ ಫಿಲಿಪ್ಪಿ ಪಟ್ಟಣಕ್ಕೆ ಹೋದರು.
- **47:2** ಆಕೆ (ಲುದ್ಯಳು) ತನ್ನ ಮನೆಯಲ್ಲಿಯೇ ಇಳಿದುಕೊಳ್ಳುವುದಕ್ಕೆ ಪೌಲ ಮತ್ತು _ ಸೀಲ _ ರನ್ನು ಆಹ್ವಾನಿಸಿದಳು, ಅದಕ್ಕಾಗಿ ಅವರು ಆಕೆ ಮತ್ತು ಆಕೆಯ ಕುಟುಂಬದೊಂದಿಗೆ ಇದ್ದರು.
- **47:3** ಪೌಲ ಮತ್ತು _ ಸೀಲರು _ ಅನೇಕಬಾರಿ ಪ್ರಾರ್ಥನೆಯ ಸ್ಥಳದಲ್ಲಿ ಜನರೊಂದಿಗೆ ಭೇಟಿಯಾದರು.
- **47:7** ಅದ್ದರಿಂದ ದಾಸಿಯಾದ ಯಜಮಾನರು ಪೌಲ ಮತ್ತು _ ಸೀಲರನ್ನು _ ರೋಮಾ ಅಧಿಕಾರಿಗಳ ಬಳಿಗೆ ಕರೆದುಕೊಂಡು ಹೋದರು, ಅಲ್ಲಿ ಇವರು ಅವರನ್ನು ಹೊಡೆದು, ಜೈಲಿಗೆ ಹಾಕಿದರು.
- **47:8** ಅವರು ಪೌಲ ಮತ್ತು ಸೀಲರನ್ನು ಸೆರೆಮನೆಯಲ್ಲಿ ಅತೀ ಭದ್ರವಾಗಿರುವ ಸ್ಥಳದಲ್ಲಿ ಬಂಧಿಸಿದ್ದರು ಮತ್ತು ಅವರ ಪಾದಗಳನ್ನು ಕಟ್ಟಿ ಹಾಕಿದ್ದರು.
- **47:11** ಜೈಲಾಧಿಕಾರಿ ಪೌಲ ಮತ್ತು _ ಸೀಲರ _ ಬಳಿಗೆ ನಡಗುತ್ತಾ ಬಂದು, “ರಕ್ಷಣೆ ಹೊಂದುವುದಕ್ಕೆ ನಾನೇನು ಮಾಡಬೇಕು?” ಎಂದು ಕೇಳಿದನು.
- **47:13** ಆ ಮರುದಿನದಂದು ಪಟ್ಟಣದ ನಾಯಕರು ಸೆರೆಯಿಂದ ಪೌಲ ಮತ್ತು _ ಸೀಲರನ್ನು _ ಬಿಡಿಸಿದರು ಮತ್ತು ಅವರನ್ನು ಫಿಲಿಪ್ಪಿಯನ್ನು ಬಿಟ್ಟು ಹೋಗಬೇಕೆಂದು ಹೇಳಿದರು. ಪೌಲ ಮತ್ತು _ ಸೀಲರು _ ಲುದ್ಯಳನ್ನು ಮತ್ತು ಇತರ ಸ್ನೇಹಿತರನ್ನು ಸಂದರ್ಶಿಸಿ, ಪಟ್ಟಣವನ್ನು ಬಿಟ್ಟು ಹೋದರು.

ಪದ ಡೇಟಾ:

- Strong's: G46090 , G46100

ಸುಕ್ಕೋತ್

ಪದದ ಅರ್ಥವಿವರಣೆ:

ಸುಕ್ಕೋತ್ ಎನ್ನುವುದು ಹಳೇ ಒಡಂಬಡಿಕೆಯಲ್ಲಿರುವ ಅನೇಕ ಪಟ್ಟಣಗಳಲ್ಲಿ ಒಂದಾಗಿರುತ್ತದೆ. “ಸುಕ್ಕೋತ್” ಎನ್ನುವ ಪದಕ್ಕೆ “ಆಶ್ರಯಗಳು” ಎಂದರ್ಥ.

- ಮೊಟ್ಟ ಮೊದಲಿಗೆ ಕರೆಯಲ್ಪಟ್ಟ ಸುಕ್ಕೋತ್ ಎನ್ನುವುದು ಯೊರ್ದನ್ ಹೊಳೆಯ ಪೂರ್ವ ದಿಕ್ಕಿನಲ್ಲಿ ಕಂಡುಬರುತ್ತದೆ.
- ಯಾಕೋಬನು ತನ್ನ ಕುಟುಂಬದೊಂದಿಗೆ ಮತ್ತು ಹಿಂಡುಗಳೊಂದಿಗೆ ಸುಕ್ಕೋತಿನಲ್ಲಿ ತಮಗೆ ಆಶ್ರಯಗಳನ್ನು ಕಟ್ಟಿಕೊಳ್ಳುತ್ತಾ ನಿವಾಸವಾಗಿದ್ದನು.
- ನೂರು ವರ್ಷಗಳಾದನಂತರ, ಗಿದ್ಯೋನನು ಮತ್ತು ತನ್ನ ಬಳಿಯಿರುವ ಮನುಷ್ಯರು ಮಿದ್ಯಾನ್ಯರನ್ನು ಬೆನ್ನಟ್ಟಿದಾಗ ಸುಕ್ಕೋತಿನಲ್ಲಿ ವಿಶ್ರಾಂತಿಯನ್ನು ತೆಗೆದುಕೊಂಡರು, ಆದರೆ ಅಲ್ಲಿರುವ ಜನರು ಅವರಿಗೆ ಆಹಾರವನ್ನು ಕೊಡುವುದಕ್ಕೆ ತಿರಸ್ಕಾರ ಮಾಡಿದರು.
- ಎರಡನೇ ಸುಕ್ಕೋತ್ ಐಗುಪ್ತದ ಉತ್ತರ ಗಡಿಯಲ್ಲಿ ಕಂಡುಬರುತ್ತದೆ, ಇಲ್ಲಿಯೇ ಇಸ್ರಾಯೇಲ್ಯರು ಐಗುಪ್ತದಲ್ಲಿರುವ ಗುಲಾಮಗಿರಿಯಿಂದ ತಪ್ಪಿಸಿಕೊಂಡಿರುವಾಗ ಕೆಂಪು ಸಮುದ್ರವನ್ನು ದಾಟಿದನಂತರ ಇಲ್ಲಿಯೇ ಇಳಿದುಕೊಂಡಿದ್ದರು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.07:46-47
- ವಿಮೋ.12:37-40
- ಯೆಹೋ.13:27-28
- ನ್ಯಾಯಾ.08:4-5

ಪದ ಡೇಟಾ:

- Strong's: H5523, H5524

ಸೃಷ್ಟಿಸುವಾತನು

ಸತ್ಯಾಂಶಗಳು:

ಸಾಧಾರಣವಾಗಿ "ಸೃಷ್ಟಿಸುವಾತನು" ಎನ್ನುವ ಪದವು ವಸ್ತುಗಳನ್ನು ಮಾಡುವವನನ್ನು ಅಥವಾ ಸೃಷ್ಟಿಸುವವನನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ "ಸೃಷ್ಟಿಸುವಾತನು" ಎನ್ನುವ ಪದವು ಕೆಲವೊಂದುಸಲ ಯೆಹೋವನಿಗೆ ಬಿರುದಾಗಿಯೂ ಅಥವಾ ಆತನ ಹೆಸರಾಗಿಯೂ ಉಪಯೋಗಿಸಲ್ಪಟ್ಟಿರುತ್ತದೆ, ಯಾಕಂದರೆ ಆತನು ಸರ್ವವನ್ನು ಸೃಷ್ಟಿಸಿದ್ದಾನೆ.
- ಸಾಧಾರಣವಾಗಿ ಈ ಪದವು "ಆತನ" ಅಥವಾ "ನನ್ನ" ಅಥವಾ "ನಿನ್ನ" ಎನ್ನುವ ಪದಗಳೊಂದಿಗೆ ಬೆರೆತುಗೊಂಡಿರುತ್ತದೆ.

ಅನುವಾದ ಸಲಹೆಗಳು:

- "ಸೃಷ್ಟಿಸುವಾತನು" ಎನ್ನುವ ಪದವು "ಸೃಷ್ಟಿಕರ್ತ" ಅಥವಾ "ಸೃಷ್ಟಿಸುವ ದೇವರು" ಅಥವಾ "ಸರ್ವವನ್ನುಂಟು ಮಾಡಿದ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.
- "ಆತನನ್ನು ಸೃಷ್ಟಿಸುವಾತನು" ಎನ್ನುವ ಮಾತು "ಆತನನ್ನು ಸೃಷ್ಟಿಸಿದ ವ್ಯಕ್ತಿ" ಅಥವಾ "ಆತನನ್ನು ಸೃಷ್ಟಿಸಿದ ದೇವರು" ಎಂದೂ ಅನುವಾದ ಮಾಡಬಹುದು.
- "ನಿನ್ನ ಸೃಷ್ಟಿಕರ್ತ" ಮತ್ತು "ನನ್ನ ಸೃಷ್ಟಿಕರ್ತ" ಎನ್ನುವ ಮಾತುಗಳನ್ನು ಒಂದೇ ವಿಧಾನದಲ್ಲಿ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಸೃಷ್ಟಿಸು, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಹೋಶೆಯ.08:13-14

ಪದ ಡೇಟಾ:

- Strong's: H2796, H3335, H6213, H6466, H6467, G1217

ಸೆನ್ನೆರೀಬ

ಸತ್ಯಾಂಶಗಳು:

ಸೆನ್ನೆರೀಬನು ಅಶ್ಶೂರಿನ ಶಕ್ತಿಯುತವಾದ ಅರಸನಾಗಿರುತ್ತಾನೆ, ಇವನು ನಿನೆವೆ ಪಟ್ಟಣವನ್ನು ಪ್ರಾಮುಖ್ಯವಾದ ಶ್ರೀಮಂತ ಪಟ್ಟಣವನ್ನಾಗಿ ಮಾರ್ಪಡಿಸಿದನು.

- ಅರಸನಾದ ಸೆನ್ನೆರೀಬನು ಯೆಹೂದ ರಾಜ್ಯ ಮತ್ತು ಬಾಬೆಲೋನಿಯಗೆ ವಿರುದ್ಧವಾಗಿ ಯುದ್ಧಗಳನ್ನು ಮಾಡಿದ್ದರಲ್ಲಿ ಪ್ರಸಿದ್ಧನಾಗಿದ್ದನು.
- ಇವನು ತುಂಬಾ ಅಹಂಕಾರಿಯುಳ್ಳ ಅರಸನಾಗಿರುತ್ತಾನೆ ಮತ್ತು ಇವನು ಯೆಹೋವನನ್ನು ಹಿಯಾಳಿಸಿದ್ದನು.
- ಅರಸನಾದ ಹಿಜ್ಕೀಯ ಕಾಲದಲ್ಲಿ ಸೆನ್ನೆರೀಬನು ಯೆರೂಸಲೇಮಿನ ಮೇಲೆ ಧಾಳಿ ಮಾಡಿರುತ್ತಾನೆ.
- ಯೆಹೋವನು ಸೆನ್ನೆರೀಬನ ಸೈನ್ಯವು ನಾಶವಾಗುವಂತೆ ಮಾಡಿದನು.
- ಹಳೇ ಒಡಂಬಡಿಕೆಯ ಪುಸ್ತಕಗಳಾಗಿರುವ ಅರಸಗಳು ಮತ್ತು ಪೂರ್ವಕಾಲ ವೃತ್ತಾಂತಗಳಲ್ಲಿ ಸೆನ್ನೆರೀಬನ ಪಾಲನೆಯ ಸಂಘಟನೆಗಳನ್ನು ದಾಖಲು ಮಾಡಲ್ಪಟ್ಟಿರುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್, ಬಾಬೆಲೋನಿಯ, ಹಿಜ್ಕೀಯ, ಯೆಹೂದ, ಹಿಯಾಳಿಸು, ನಿನೆವೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.32:1
- 2 ಪೂರ್ವ.32:16-17
- 2 ಅರಸ.18:13-15

ಪದ ಡೇಟಾ:

ಸೇಥ

ಸತ್ಯಾಂಶಗಳು:

ಆದಿಕಾಂಡ ಪುಸ್ತಕದಲ್ಲಿ ಸೇಥ ಎನ್ನುವವನು ಆದಾಮ ಮತ್ತು ಹವ್ವಳಿಗೆ ಮೂರನೇಯ ಮಗನಾಗಿದ್ದನು.

- ಸೇಥನು ಕಾಯಿನನ ಕೈಯಲ್ಲಿ ಕೊಲ್ಲಲ್ಪಟ್ಟ ಹೇಬೆಲನ ಸ್ಥಾನದಲ್ಲಿ ಹವ್ವಳಿಗೆ ಕೊಡಲ್ಪಟ್ಟ ಮಗನಾಗಿದ್ದನು,
- ನೋಹನು ಸೇಥನ ಸಂತಾನದವರಲ್ಲಿ ಒಬ್ಬನಾಗಿದ್ದನು, ಪ್ರಳಯ ಬಂದ ಸಮಯದಿಂದ ನಿವಾಸವಾಗಿರುವ ಪ್ರತಿಯೊಬ್ಬರೂ ಸೇಥನ ವಂಶಸ್ಥರಾಗಿದ್ದರು.
- ಸೇಥನು ಮತ್ತು ತನ್ನ ಕುಟುಂಬವು ಕರ್ತನ ನಾಮದಲ್ಲಿ ಪ್ರಾರ್ಥನೆ ಮಾಡಿದ ಜನರಾಗಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಹೇಬೆಲ, ಕರೆ, ವಂಶಸ್ಥರು, ಪೂರ್ವಜ, ಪ್ರಳಯ, ನೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:1-4
- ಲೂಕ.03:36-38
- ಅರಣ್ಯ.24:17

ಪದ ಡೇಟಾ:

- Strong's: H8352, G4589

ಸೇಬ

ಸತ್ಯಾಂಶಗಳು:

ಪುರಾತನ ಕಾಲಗಳಲ್ಲಿ ಸೇಬ ಎನ್ನುವುದು ಪುರಾತನ ನಾಗರಿಕತೆಯಾಗಿದ್ದಿತ್ತು ಅಥವಾ ದಕ್ಷಿಣ ಅರೇಬಿಯಾದಲ್ಲಿ ಕಂಡುಬರುವ ಭೂಮಿಯ ದೇಶವಾಗಿದ್ದಿತ್ತು.

- ಸೇಬ ದೇಶವು ಅಥವಾ ಪ್ರಾಂತ್ಯವು ಈಗಿನ ದೇಶಗಳಾಗಿರುವ ಯೆಮೆನ್ ಮತ್ತು ಇಥಿಯೋಪ್ಯಗಳ ಪಕ್ಕದಲ್ಲಿ ಬಹುಶಃ ಕಂಡುಬರುತ್ತಿರಬಹುದು.
- ಈ ಸೀಮೆಯ ನಿವಾಸಿಗಳು ಬಹುಶಃ ಹಾಮ್ ಸಂತತಿಯಾಗಿರಬಹುದು.
- ಸೇಬ ದೇಶದ ರಾಣಿ ಅರಸನಾದ ಸೊಲೊಮೋನನ ಜ್ಞಾನದ ಕುರಿತಾಗಿ ಮತ್ತು ವೈಭವದ ಕುರಿತಾಗಿ ಕೇಳಿಸಿಕೊಂಡಾಗ, ಆಕೆ ಆತನನ್ನು ಸಂದರ್ಶಿಸುವುದಕ್ಕೆ ಬಂದಿದ್ದಳು,
- ಹಳೇ ಒಡಂಬಡಿಕೆ ವಂಶಾವಳಿಗಳಲ್ಲಿ “ಸೇಬ” ಎನ್ನುವ ಹೆಸರಿನ ಮೇಲೆ ಅನೇಕಮಂದಿಯನ್ನು ಪಟ್ಟಿ ಮಾಡಲಾಗಿರುತ್ತದೆ. ಸೇಬ ಎನ್ನುವ ಪ್ರಾಂತ್ಯವು ಬಹುಶಃ ಈ ಮನುಷ್ಯರಿಂದಲೇ ಬಂದಿದೆ ಎನ್ನುವುದಕ್ಕೆ ಸಾಧ್ಯತೆಗಳಿವೆ.
- ಹಳೇ ಒಡಂಬಡಿಕೆಯಲ್ಲಿ ಬೇರ್ಷೆಬ ಎನ್ನುವ ಪಟ್ಟಣವನ್ನು ಸೇಬಗೆ ಹೋಲಿಸಿ ಒಂದುಸಲ ಹೇಳಲ್ಪಟ್ಟಿತ್ತು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅರೇಬಿಯಾ, ಬೇರ್ಷೆಬ, ಇಥಿಯೋಪ್ಯ, ಸೊಲೊಮೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:8-10
- 1 ಅರಸ.10:1-2
- ಯೆಶಯ.60:6-7
- ಕೀರ್ತನೆ.072:8-10

ಪದ ಡೇಟಾ:

- Strong's: H5434, H7614

ಸೊದೋಮ್

ಪದದ ಅರ್ಥವಿವರಣೆ:

ಸೊದೋಮ್ ಎನ್ನುವುದು ಕಾನಾನಿನಲ್ಲಿ ದಕ್ಷಿಣ ಭಾಗದಲ್ಲಿ ಒಂದು ಪಟ್ಟಣವಾಗಿರುತ್ತದೆ, ಇಲ್ಲಿಯೇ ಅಬ್ರಾಹಾಮನ ಸಹೋದರನ ಮಗ ಲೋಟನು ತನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ಜೀವನ ಮಾಡುತ್ತಿದ್ದನು.

- ಸೊದೋಮ್ ಸುತ್ತಮುತ್ತಲಿರುವ ಪ್ರಾಂತ್ಯದ ಭೂಮಿಯು ಹೆಚ್ಚಿನ ನೀರನ್ನು ಮತ್ತು ಫಲವತ್ತಾದ ಮಣ್ಣನ್ನು ಹೊಂದಿರುವ ಪ್ರದೇಶವಾಗಿರುತ್ತದೆ, ಇದರಿಂದ ಕಾನಾನಿನಲ್ಲಿ ಮೊಟ್ಟ ಮೊದಲು ನಿವಾಸವಾಗಿರುವಾಗ ಲೋಟನು ಆ ಸ್ಥಳದಲ್ಲೇ ಜೀವಿಸುವುದಕ್ಕೆ ಆಯ್ಕೆ ಮಾಡಿಕೊಂಡನು.
- ಈ ಪಟ್ಟಣದ ಖಂಡಿತವಾದ ಸ್ಥಳವು ಯಾರಿಗೂ ಗೊತ್ತಿರುವುದಿಲ್ಲ, ಯಾಕಂದರೆ ಸೊದೋಮ್ ಮತ್ತು ಆ ಪಟ್ಟಣದ ಹತ್ತಿರದಲ್ಲಿರುವ ಗೊಮೋರಗಳು ಸಂಪೂರ್ಣವಾಗಿ ದೇವರಿಂದ ನಾಶಕ್ಕೆ ಗುರಿಯಾಗಿರುತ್ತವೆ, ಯಾಕಂದರೆ ಆ ಪಟ್ಟಣಗಳಲ್ಲಿರುವ ಜನರು ದುಷ್ಟ ಕಾರ್ಯಗಳನ್ನು ಮಾಡಿದ್ದರು.
- ಸೊದೋಮ್ ಮತ್ತು ಗೊಮೋರ ಜನರ ಅತೀ ಪ್ರಾಮುಖ್ಯವಾದ ಪಾಪವು ಏನೆಂದರೆ ಸ್ವಲಿಂಗ ಸಂಪರ್ಕವನ್ನು ಅಭ್ಯಾಸ ಮಾಡುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಗೊಮೋರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.10:19-20
- ಆದಿ.13:12-13
- ಮತ್ತಾಯ.10:14-15
- ಮತ್ತಾಯ.11:23-24

ಪದ ಡೇಟಾ:

- Strong's: H5467, G4670

ಸೊಲೊಮೋನ

ಸತ್ಯಾಂಶಗಳು:

ಸೊಲೊಮೋನನು ಅರಸನಾದ ದಾವೀದನ ಮಕ್ಕಳಲ್ಲಿ ಒಬ್ಬನಾಗಿರುತ್ತಾನೆ. ಇವನ ತಾಯಿ ಬತ್ಷೆಬಳಾಗಿದ್ದಳು.

- ಸೊಲೊಮೋನನು ಅರಸನಾದಾಗ, ನಿನಗೆ ಏನು ಬೇಕಾದರೂ ಬೇಡಿಕೋ ಎಂದು ದೇವರು ಅವನಿಗೆ ಹೇಳಿದನು. ಇದರಿಂದ ಜನರನ್ನು ನ್ಯಾಯವಾಗಿಯೂ ಮತ್ತು ಚೆನ್ನಾಗಿಯೂ ಆಳುವುದಕ್ಕೆ ಜ್ಞಾನ ಬೇಕೆಂದು ಸೊಲೊಮೋನನು ಕೇಳಿದನು. ದೇವರು ಸೊಲೊಮೋನನ ಮನವಿಯನ್ನು ಕೇಳಿ ಸಂತೋಷಪಟ್ಟನು, ಮತ್ತು ಆತನು ಅವನಿಗೆ ಜ್ಞಾನವನ್ನು, ಸಂಪತ್ತನ್ನು ಕೊಟ್ಟನು.
- ಯೆರೂಸಲೇಮಿನಲ್ಲಿ ಕಟ್ಟಲ್ಪಟ್ಟಿರುವ ವೈಭವವುಳ್ಳ ದೇವಾಲಯಕ್ಕೆ ಸೊಲೊಮೋನನು ನಿರ್ಮಾಣಕನಾಗಿ ಪ್ರಸಿದ್ಧನಾಗಿದ್ದನು.
- ಸೊಲೊಮೋನನು ತನ್ನ ಆಳ್ವಿಕೆಯ ಮೊದಲ ವರ್ಷಗಳಲ್ಲಿ ಜ್ಞಾನಪೂರ್ವಕವಾಗಿ ಜನರನ್ನು ಆಳಿದರೂ ಕೆಲವು ವರ್ಷಗಳನಂತರ ಇವನು ಮೂರ್ಖತನದಿಂದ ಬಹುಮಂದಿ ಅನ್ಯ ಸ್ತ್ರೀಯರನ್ನು ವಿವಾಹ ಮಾಡಿಕೊಂಡನು ಮತ್ತು ಅವರ ದೇವರುಗಳಾಗಿರುವ ವಿಗ್ರಹಗಳಿಗೆ ಆರಾಧನೆ ಮಾಡುವುದನ್ನು ಪ್ರಾರಂಭಿಸಿದನು.
- ಸೊಲೊಮೋನನ ಅಪನಂಬಿಕೆಯ ಕಾರಣದಿಂದ ಇವನ ಮರಣವಾದನಂತರ, ದೇವರು ಇಸ್ರಾಯೇಲ್ಯರನ್ನು ಯೆಹೂದ್ಯ ಮತ್ತು ಇಸ್ರಾಯೇಲ್ ಎನ್ನುವ ಎರಡು ರಾಜ್ಯಗಳನ್ನಾಗಿ ವಿಭಾಗಿಸಿದರು. ಈ ರಾಜ್ಯಗಳು ಅನೇಕಬಾರಿ ಒಂದಕ್ಕೊಂದು ವಿರುದ್ಧವಾಗಿ ಯುದ್ಧಗಳನ್ನು ಮಾಡುತ್ತಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬತ್ಷೆಬ, ದಾವೀದ, ಇಸ್ರಾಯೇಲ್, ಯೆಹೂದ್ಯ, ಇಸ್ರಾಯೇಲ್ ರಾಜ್ಯ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:47-50
- ಲೂಕ.12:27-28
- ಮತ್ತಾಯ.01:7-8
- ಮತ್ತಾಯ.06:27-29
- ಮತ್ತಾಯ.12:42

ಸತ್ಯವೇದದಿಂದ ಉದಾಹರಣೆಗಳು:

- **17:14** ಆದನಂತರ ದಾವೀದ ಮತ್ತು ಬತ್ಷೆಬರು ಇನ್ನೊಬ್ಬ ಮಗನನ್ನು ಪಡೆದರು, ಅವರು ಆ ಶಿಶುವಿಗೆ _ **ಸೊಲೊಮೋನ** _ ಎಂದು ಹೆಸರಿಟ್ಟರು.
- **18:01** ಅನೇಕ ವರ್ಷಗಳಾದನಂತರ, ದಾವೀದನು ಮರಣಿಸಿದನು, ಮತ್ತು ತನ್ನ ಮಗ _ **ಸೊಲೊಮೋನನು** ಆಳುವುದಕ್ಕೆ ಆರಂಭಿಸಿದನು. ದೇವರು _ ಸೊಲೊಮೋನನೊಂದಿಗೆ _ ಮಾತನಾಡಿದರು ಮತ್ತು ನಿನಗೆ ಏನು ಬೇಕಾದರೂ ಅದನ್ನು ಬೇಡಿಕೋ ಎಂದು ದೇವರು ಅವನಿಗೆ ಹೇಳಿದನು. _ ಸೊಲೊಮೋನನು _ ಜ್ಞಾನಕ್ಕಾಗಿ ಬೇಡಿಕೊಂಡಾಗ, ದೇವರು ತುಂಬಾ ಸಂತೋಷಪಟ್ಟನು ಮತ್ತು ಆತನು ಅವನನ್ನು ಲೋಕದಲ್ಲಿ ಜ್ಞಾನವುಳ್ಳ ಮನುಷ್ಯನನ್ನಾಗಿ ಮಾಡಿದನು. _ ಸೊಲೊಮೋನನು __ ಅನೇಕ ವಿಷಯಗಳನ್ನು ಕಲಿತುಕೊಂಡನು ಮತ್ತು ಮಹಾ ನ್ಯಾಯಾಧೀಶನಾಗಿದ್ದನು. ದೇವರು ಅವನನ್ನು ಶ್ರೀಮಂತನನ್ನಾಗಿ ಮಾಡಿದನು.
- **18:02** ದಾವೀದನು ದೇವಾಲಯವನ್ನು ಕಟ್ಟುವುದಕ್ಕೆ ಪ್ರಣಾಳಿಕೆ ಮಾಡಿ, ಅದಕ್ಕೆ ಸಂಬಂಧಪಟ್ಟ ವಸ್ತುಗಳನ್ನು ತರಿಸಿಟ್ಟನಂತರ ಯೆರೂಸಲೇಮಿನಲ್ಲಿ _ **ಸೊಲೊಮೋನನು** _ ದೇವಾಲಯವನ್ನು ನಿರ್ಮಿಸಿದನು.
- **18:03** ಆದರೆ _ **ಸೊಲೊಮೋನನು** ಇತರ ದೇಶಗಳಿಂದ ಬಂದಿರುವ ಸ್ತ್ರೀಯರನ್ನು ಪ್ರೀತಿಸಿದನು. **ಸೊಲೊಮೋನನು** _ ವೃದ್ಧಾಪ್ಯದಲ್ಲಿದ್ದಾಗ ಅವನು ಅವರ ದೇವರುಗಳನ್ನು ಆರಾಧನೆ ಮಾಡಿದನು.
- **18:04** ದೇವರು _ ಸೊಲೊಮೋನನ _ ಮೇಲೆ ಕೋಪಗೊಂಡನು, _ ಸೊಲೊಮೋನನ _ ಅಪನಂಬಿಕೆಗೆ _ **ಶಿಕ್ಷೆಯನ್ನಾಗಿ,** _ ಸೊಲೊಮೋನನ ಮರಣದನಂತರ ಇಸ್ರಾಯೇಲ್ ದೇಶವನ್ನು ಎರಡು ರಾಜ್ಯಗಳನ್ನಾಗಿ ವಿಂಗಡಿಸುತ್ತೇನೆಂದು ಆತನು ವಾಗ್ದಾನ ಮಾಡಿದರು.

ಪದ ಡೇಟಾ:

- Strong's: H8010, G4672

ಸೌಲ (ಹಳೇ ಒಡಂಬಡಿಕೆ)

ಸತ್ಯಾಂಶಗಳು:

ಸೌಲನು ಇಸ್ರಾಯೇಲ್ಯರಿಗೆ ಮೊಟ್ಟ ಮೊದಲು ಅರಸನಾಗಿರಲು ದೇವರು ಆದುಕೊಂಡ ಇಸ್ರಾಯೇಲಿಯನಾಗಿದ್ದನು.

- ಸೌಲನು ಎತ್ತರವಾಗಿದ್ದನು ಮತ್ತು ಸುಂದರವಾಗಿದ್ದನು, ಮತ್ತು ಶಕ್ತಿಯುತವಾದ ಸೈನಿಕನಾಗಿದ್ದನು. ಇವನು ಇಸ್ರಾಯೆಲ್ಯರು ತಮ್ಮ ಅರಸನಾಗಿರಲು ಬಯಸಿದ ಒಂದು ವಿಧವಾದ ಮನುಷ್ಯನಾಗಿದ್ದನು.
- ಇವನು ಮೊಟ್ಟ ಮೊದಲಿಗೆ ದೇವರಿಗೆ ಸೇವೆ ಮಾಡಿದ್ದನು, ಸ್ವಲ್ಪ ಕಾಲವಾದನಂತರ ಸೌಲನು ಗರ್ವಪಟ್ಟು, ದೇವರಿಗೆ ಅವಿಧೇಯನಾದನು. ಇದಕ್ಕೆ ಫಲವಾಗಿ ಅರಸನಾಗಿರುವುದಕ್ಕೆ ಸೌಲನ ಸ್ಥಾನದಲ್ಲಿ ದೇವರು ದಾವೀದನನ್ನು ನೇಮಿಸಿದನು ಮತ್ತು ಸೌಲನು ಯುದ್ಧದಲ್ಲಿ ಸಾಯುವಂತೆ ಅನುಮತಿಸಿದನು.
- ಹೊಸ ಒಡಂಬಡಿಕೆಯಲ್ಲಿ ಸೌಲ ಎನ್ನುವ ಯೆಹೂದ್ಯ ಹೆಸರಿನ ಮೇಲೆ ಪೌಲನಿದ್ದನು, ಈತನು ಯೇಸು ಕ್ರಿಸ್ತನಿಗೆ ಅಪೊಸ್ತಲನಾದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅರಸ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.10:1-3
- 1 ಸಮು.09:1-2
- 2 ಸಮು.01:1-2
- ಅಪೊ.ಕೃತ್ಯ.13:21-22
- ಕೀರ್ತನೆ.018:1

ಸತ್ಯವೇದದಿಂದ ಉದಾಹರಣೆಗಳು:

- **17:01** _ ಸೌಲನು _ ಇಸ್ರಾಯೇಲ್.ಗೆ ಮೊದಲ ಅರಸನಾಗಿದ್ದನು. ಇವನು ಎತ್ತರವಾಗಿದ್ದು, ಬಹು ಸುಂದರವಾಗಿದ್ದನು, ಜನರಿಗೆ ಬೇಕಾದ ರೀತಿಯಲ್ಲಿ ಇದ್ದನು. _ ಸೌಲನು _ ಇಸ್ರಾಯೇಲ್ಯರನ್ನು ಆಳಿದ ಮೊದಲ ಕೆಲವು ವರ್ಷಗಳವರೆಗೂ ಒಳ್ಳೇಯವನಾಗಿದ್ದನು. ಆದರೆ ಸ್ವಲ್ಪಕಾಲವಾದನಂತರ ದೇವರಿಗೆ ವಿಧೇಯನಾಗದ ದುಷ್ಟ ಮನುಷ್ಯನಾಗಿದ್ದನು, ಆದರೆ ದೇವರು ಇವನ ಸ್ಥಾನದಲ್ಲಿ ಅರಸನಾಗಿರುವುದಕ್ಕೆ ಒಂದು ದಿನ ಬೇರೊಬ್ಬರನ್ನು ಆಯ್ಕೆ ಮಾಡಿಕೊಂಡಿದ್ದನು.
- **17:04** ಜನರೆಲ್ಲರು ದಾವೀದನನ್ನು ಪ್ರೀತಿ ಮಾಡಿದ್ದಕ್ಕೆ _ ಸೌಲನು _ ಅವನ ಮೇಲೆ ಅಸೂಯೆಪಟ್ಟಿದ್ದನು. _ ಸೌಲನು _ ದಾವೀದನನ್ನು ಸಾಯಿಸಲು ಅನೇಕಸಲ ಪ್ರಯತ್ನಿಸಿದನು, ಇದರಿಂದ ದಾವೀದನು _ ಸೌಲನಿಂದ _ ಪಾರಾಗಿ ಮರೆಯಾದನು.
- **17:05** ಕೊನೆಗೆ, _ ಸೌಲನು _ ಯುದ್ಧದಲ್ಲಿ ಸತ್ತನು, ಮತ್ತು ದಾವೀದನು ಇಸ್ರಾಯೇಲ್ ಅರಸನಾದನು.

ಪದ ಡೇಟಾ:

- Strong's: H7586, G4549

ಸ್ತೆಫನ್

ಸತ್ಯಾಂಶಗಳು:

ಸ್ತೆಫೆನ್ ಎನ್ನುವ ವ್ಯಕ್ತಿ ಮೊಟ್ಟ ಮೊದಲಾಗಿ ಕೊಲ್ಲಲ್ಪಟ್ಟ ಮೊದಲ ಕ್ರೈಸ್ತ ಹುತಾತ್ಮನಾಗಿ ನೆನಪಿಸಿಕೊಳ್ಳುತ್ತೇವೆ, ಯಾಕಂದರೆ ಈತನು ಯೇಸುವಿನಲ್ಲಿ ನಂಬಿಕೆ ಇಟ್ಟಿದ್ದನು. ಈತನ ಜೀವನ ಮತ್ತು ಮರಣದ ಕುರಿತಾದ ಸತ್ಯಾಂಶಗಳೆಲ್ಲವೂ ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ದಾಖಲಿಸಲ್ಪಟ್ಟಿವೆ.

- ಸ್ತೆಫೆನ್ ಎನ್ನುವ ಈ ವ್ಯಕ್ತಿ ಅಗತ್ಯತೆಯಲ್ಲಿರುವ ಇತರ ಕ್ರೈಸ್ತರಿಗೆ ಮತ್ತು ವಿಧವೆರಿಗೆ ಆಹಾರವನ್ನು ಬಡಿಸುವುದಕ್ಕೆ ಪರಿಚಾರಕನಾಗಿ ಕ್ರೈಸ್ತರಿಗೆ ಸೇವೆ ಮಾಡುವುದಕ್ಕೆ ಯೆರೂಸಲೇಮಿನಲ್ಲಿ ಆದಿ ಸಭೆಯಿಂದ ನೇಮಿಸಲ್ಪಟ್ಟಿರುತ್ತಾನೆ.
- ಮೋಶೆಯ ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ಮತ್ತು ದೇವರಿಗೆ ವಿರುದ್ಧವಾಗಿ ಸ್ತೆಫೆನನು ಮಾತನಾಡುತ್ತಿದ್ದಾನೆಂದು ಕೆಲವರು ಯೆಹೂದ್ಯರು ಸ್ತೆಫೆನನ ಮೇಲೆ ಆರೋಪ ಮಾಡಿರುತ್ತಾರೆ.

ಸ್ತೆಫೆನನು ಮೆಸ್ಸೀಯ ಯೇಸುವಿನ ಕುರಿತಾದ ಸತ್ಯವನ್ನು ಧೈರ್ಯವಾಗಿ ಪ್ರಕಟಿಸಿದ್ದಾನೆ, ಈ ಪ್ರಕಟನೆಯು ಇಸ್ರಾಯೇಲ್ ಜನರೊಂದಿಗೆ ದೇವರು ನಡೆದುಕೊಂಡಿರುವ ಚರಿತ್ರೆಯೊಂದಿಗೆ ಆರಂಭವಾಗಿರುತ್ತದೆ. ಯೆಹೂದ್ಯರ ನಾಯಕರು ಪಟ್ಟಣದ ಆಚೆ ಸ್ತೆಫೆನ್ ಕಲ್ಲುಗಳಿಂದ ಹೊಡೆದು ಅತೀ ಕ್ರೂರವಾಗಿ ಮರಣದಂಡನೆಯನ್ನು ವಿಧಿಸಿದರು.

- ತನ್ನ ಈ ಮರಣವನ್ನು ತಾರ್ಸಿನ ಸೌಲನು ಸಾಕ್ಷಿಯಾಗಿದ್ದನು, ಈ ಸೌಲನು ಸ್ವಲ್ಪ ಕಾಲವಾದನಂತರ ಅಪೊಸ್ತಲನಾದ ಪೌಲನಾಗಿ ಮಾರ್ಪಟ್ಟನು.
- ಸ್ತೆಫೆನನು ತಾನು ಸಾಯುವುದಕ್ಕೆ ಮುಂಚಿತವಾಗಿ ಹೇಳಿರುವ ಮಾತುಗಳು ಕೂಡ ತುಂಬಾ ಪ್ರಸಿದ್ಧವಾದವು, ಅವು ಯಾವುವೆಂದರೆ “ಕರ್ತನೆ, ದಯವಿಟ್ಟು ಅವರಿಗೆ ವಿರುದ್ಧವಾಗಿ ಈ ಪಾಪವನ್ನು ಅವರ ಮೇಲೆ ಆಪಾದನೆ ಮಾಡಬೇಡ” ಎಂದು ಹೇಳಿದ್ದನು, ಈ ಮಾತುಗಳು ಇತರರ ವಿಷಯದಲ್ಲಿ ಆತನಿಗಿರುವ ಪ್ರೀತಿಯನ್ನು ತೋರಿಸುತ್ತಿವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನೇಮಿಸು, ಪರಿಚಾರಕನು, ಯೆರೂಸಲೇಮ್, ಪೌಲ, ಕಲ್ಲು, ನಿಜ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.06:5-6
- ಅಪೊ.ಕೃತ್ಯ.06:8-9
- ಅಪೊ.ಕೃತ್ಯ.06:10-11
- ಅಪೊ.ಕೃತ್ಯ.06:12-15
- ಅಪೊ.ಕೃತ್ಯ.07:59-60
- ಅಪೊ.ಕೃತ್ಯ.11:19-21
- ಅಪೊ.ಕೃತ್ಯ.22:19-21

ಪದ ಡೇಟಾ:

- Strong's: G4736

ಹಗ್ಗಾಯ

ಸತ್ಯಾಂಶಗಳು:

ಯೆಹೂದಿಯರು ಬಾಬುಲೋನ್ ಸೆರೆಯಿಂದ ಬಿಡಿಸಲ್ಪಟ್ಟು ಹಿಂತಿರುಗಿ ಬಂದಾಗ ಹಗ್ಗಾಯ ಯೂದಯ ದೇಶದಲ್ಲಿ ಪ್ರವಾದಿಯಾಗಿದ್ದನು.

- ಹಗ್ಗಾಯ ಪ್ರವಾದಿಸುತ್ತಿರುವ ಕಾಲದಲ್ಲಿ, ಯೂದಯ ಸೀಮೆಯಲ್ಲಿ ಉಜ್ಜೀಯನು ಆಳ್ವಿಕೆ ಮಾಡುತ್ತಿದ್ದನು.
- ಇದೇ ಕಾಲದಲ್ಲಿ ಪ್ರವಾದಿಯಾದ ಜೆಕರ್ಯನು ಪ್ರವಾದಿಸುತ್ತಿದ್ದನು.
- ಅರಸನಾದ ನೆಬೂಕದ್ನೆಚ್ಚರನ ಕೆಳಗೆ ಬಾಬುಲೋನಿಯರು ಧ್ವಂಸಮಾಡಿದ ದೇವಾಲಯವನ್ನು ಮತ್ತೆ ಕಟ್ಟಬೇಕೆಂದು ಹಗ್ಗಾಯನು ಮತ್ತು ಜೆಕರ್ಯನು ಯೆಹೂದಿಯರನ್ನು ಎಚ್ಚರಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಬಾಬುಲೋನ್, ಯೂದಯ, ನೆಬೂಕದ್ನೆಚ್ಚರ, ಉಜ್ಜೀಯ, ಜೆಕರ್ಯನು)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಜ್ರ.05:1-2
- ಎಜ್ರ.06:13-15

ಪದ ಡೇಟಾ:

- Strong's: H2292

ಹನನ್ಯ

ಸತ್ಯಾಂಶಗಳು:

ಹನನ್ಯ ಎನ್ನುವ ಹೆಸರಿನ ಮೇಲೆ ಹಳೇ ಒಡಂಬಡಿಕೆಯಲ್ಲಿ ಅನೇಕಮಂದಿ ವ್ಯಕ್ತಿಗಳಿದ್ದಾರೆ.

- ಒಬ್ಬ ಹನನ್ಯನು ಬಾಬೆಲೋನಿಯ ಸೆರೆಗೆ ಕರೆದೊಯ್ಯಲ್ಪಟ್ಟಿದ್ದನು, ಅಲ್ಲಿ ಇವನ ಹೆಸರನ್ನು "ಶದ್ರಕ್" ಎಂಬುದಾಗಿ ಮಾರ್ಪಾಟು ಮಾಡಿದರು.
- ಈತನಿಗೆ ಇರುವ ಅದ್ಭುತವಾದ ನಡೆತೆಗೆ ಮತ್ತು ಸಾಮರ್ಥ್ಯಗಳಿಗೆ ರಾಜ ಸೇವಕನಾಗಿರುವ ಸ್ಥಾನವನ್ನು ಕೊಡಲ್ಪಟ್ಟಿತ್ತು.
- ಒಂದುಸಲ ಹನನ್ಯ (ಶದ್ರಕ್) ಮತ್ತು ಇನ್ನೂ ಇಬ್ಬರ ಇಸ್ರಾಯೇಲ್ ಯೌವನಸ್ಥರನ್ನು ಬೆಂಕಿಯ ಕೆರೆಯೊಳಗೆ ಹಾಕಿದ್ದರು, ಯಾಕಂದರೆ ಅವರು ಬಾಬೆಲೋನಿಯ ಅರಸನನ್ನು ಆರಾಧನೆ ಮಾಡುವುದಕ್ಕೆ ತಿರಸ್ಕಾರ ಮಾಡಿದ್ದರು. ಆದರೆ ಅವರಿಗೆ ಯಾವ ಹಾನಿಯು ನಡೆಯದೇ ದೇವರು ಅವರನ್ನು ರಕ್ಷಿಸುವುದರ ಮೂಲಕ ತನ್ನ ಶಕ್ತಿಯನ್ನು ತೋರಿಸಿಕೊಂಡಿದ್ದರು.
- ಹನನ್ಯ ಹೆಸರಿನ ಮೇಲೆ ಇನ್ನೊಬ್ಬ ವ್ಯಕ್ತಿ ಅರಸನಾದ ಸೊಲೊಮೋನನ ವಂಶಸ್ಥರ ಪಟ್ಟಿಯಲ್ಲಿ ದಾಖಲಿಸಾಲಾಗಿದೆ.
- ಇನ್ನೊಬ್ಬ ಹನನ್ಯ ಪ್ರವಾದಿಯಾದ ಯೆರೆಮೀಯ ಕಾಲದಲ್ಲಿ ಸುಳ್ಳು ಪ್ರವಾದಿಯಾಗಿದ್ದನು.
- ಇನ್ನೊಬ್ಬ ಹನನ್ಯ ನೆಹೆಮೀಯ ಕಾಲದಲ್ಲಿ ಆಚರಣೆಯನ್ನು ನಡೆಸುವುದಕ್ಕೆ ಸಹಾಯ ಮಾಡಿದ ಯಾಜಕನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಅಜರ್ಯ, ಬಾಬೆಲೋನಿಯ, ದಾನಿಯೇಲ, ಸುಳ್ಳು ಪ್ರವಾದಿ, ಯೆರೆಮೀಯ, ಮೀಶಾಯೇಲ್)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.01:6-7
- ದಾನಿ.02:17-18
- ಯೆರೆ.28:1-2
- ಯೆರೆ.28:5-7
- ಯೆರೆ.28:15-17

ಪದ ಡೇಟಾ:

- Strong's: H2608

ಹನೋಕ, ಎನೋಷ

ಸತ್ಯಾಂಶಗಳು:

ಹಳೆ ಒಡಂಬಡಿಕೆಯಲ್ಲಿ ಇಬ್ಬರು ಪುರುಷರ ಹೆಸರು ಹನೋಕ ಆಗಿತ್ತು.

- ಹನೋಕ ಎಂಬಂತ ಒಬ್ಬ ವ್ಯಕ್ತಿ ಸೇತನ ವಂಶಸ್ಥನಾಗಿದ್ದನು. ಅವನು ನೋಹನ ಮುತ್ತಜ್ಜನಾಗಿದ್ದನು.
- ಈ ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ಇರುವಾಗ, ಅವನ 365 ವರ್ಷದಲ್ಲಿ ದೇವರು ಅವನನ್ನು ಕರೆದುಕೊಂಡ ಕಾರಣ ಕಣ್ಮರೆಯಾಗಿ ಕಾಣದೆ ಹೋದನು.
- ಇನ್ನೊಬ್ಬ ಹನೋಕ ಕಾಯಿನ ಮಗನಾಗಿದ್ದನು. ಇವನ ಹೆಸರು ಕನ್ನಡ ಭಾಷೆಯಲ್ಲಿ ಎನೋಷ ಎಂದು ಅನುವಾದ ಮಾಡಲ್ಪಟ್ಟಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡುವುದು)

(ಈ ಪದಗಳನ್ನು ಸಹ ನೋಡಿರಿ : ಕಾಯಿನ, ಸೇತ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.01:1-4
- ಆದಿ.05:18-20
- ಆದಿ.05:21-24
- ಯೂದ.01:14-16
- ಲೂಕ.03:36-38

ಪದ ಡೇಟಾ:

- Strong's: H2585, G1802

ಹನ್ನ

ಸತ್ಯಾಂಶಗಳು:

ಹನ್ನಳು ಪ್ರವಾದಿಯಾದ ಸಮುವೇಲನ ತಾಯಿಯಾಗಿರುತ್ತಾಳೆ. ಇವಳು ಎಲ್ಕಾನನ ಇಬ್ಬರ ಹೆಂಡತಿಯರಲ್ಲಿ ಒಬ್ಬಳಾಗಿರುತ್ತಾಳೆ.

- ಹನ್ನಳು ಗರ್ಭಿಣಿಯಾಗಿದ್ದಿಲ್ಲ, ಇದರಿಂದ ಆಕೆ ಬಹಳ ಹೆಚ್ಚಾಗಿ ಪ್ರಲಾಪಿಸಿದ್ದಳು.
- ಹನ್ನಳು ಗಂಡು ಮಗುವಿಗಾಗಿ ದೇವಾಲಯದಲ್ಲಿ ದೇವರ ಬಳಿ ಅಳುತ್ತಾ ಪ್ರಾರ್ಥನೆ ಮಾಡಿದ್ದಳು, ಮತ್ತು ಒಂದುವೇಳೆ ಗಂಡುಮಗು ಹುಟ್ಟಿದರೆ ದೇವರ ಸೇವೆ ಸಮರ್ಪಿಸುತ್ತೇನೆಂದು ವಾಗ್ದಾನ ಮಾಡಿದಳು.
- ದೇವರು ಆಕೆಯ ಮನವಿಯನ್ನು ಅಂಗೀಕರಿಸಿದನು ಮತ್ತು ಸಮುವೇಲನು ದೊಡ್ಡವನಾದ ಮೇಲೆ, ಅವನನ್ನು ದೇವಾಲಯಕ್ಕೆ ಕರೆದುಕೊಂಡುಬಂದು ಅಲ್ಲಿಯೇ ಸೇವೆಗಾಗಿ ಬಿಟ್ಟಳು.
- ದೇವರು ಹನ್ನಳಿಗೆ ಸಮುವೇಲನನಂತರ ಮಕ್ಕಳನ್ನು ಕೊಟ್ಟನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಗರ್ಭ ಧರಿಸುವುದು, ಸಮುವೇಲ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.01:1-2
- 1 ಸಮು.02:1

ಪದ ಡೇಟಾ:

- Strong's: H2584

ಹಬಕ್ಕೂಕ

ಸತ್ಯಾಂಶಗಳು:

ಹಳೆ ಒಡಂಬಡಿಕೆಯಲ್ಲಿ ಅರಸನಾದ ಯೆಹೋಯಾಕೀಮ ಯೂದಯ ಸೇಮೆಯಲ್ಲಿ ಆಳ್ವಿಕೆ ಮಾಡುತ್ತಿರುವ ಕಾಲದಲ್ಲಿ ಪ್ರವಾದಿಯಾದ ಹಬಕ್ಕೂಕನು ಜೀವಿಸಿದನು. ಇದೇ ಕಾಲದಲ್ಲಿ ಪ್ರವಾದಿಯಾದ ಯೆರೆಮೀಯನು ಜೀವಿಸುತ್ತಿದ್ದನು.

- ಸುಮಾರು ಕ್ರಿ.ಪು. 600ರಲ್ಲಿ ಬಾಬುಲೋನಿನವರು ಯೆರುಸಲೇಮನ್ನು ಸ್ವಾಧೀನಪಡಿಸಿಕೊಂಡು ಯೂದಯ ಸೀಮೆಯಲ್ಲಿ ಜೀವಿಸುತ್ತಿದ್ದ ಅನೇಕ ಜನರನ್ನು ಸೆರೆಯಾಗಿ ತೆಗೆದುಕೊಂಡುಹೋದಾಗ ಈ ಪ್ರವಾದಿ ಹಬಕ್ಕೂಕನು ಎನ್ನುವ ಗ್ರಂಥವನ್ನು ಬರೆದನು.
- ಯೆಹೂದಿಯರನ್ನು "ಕಲ್ದೀಯರು" (ಬಾಬುಲೋನಿಯರು) ಹೇಗೆ ಸ್ವಾಧೀನಪಡಿಸಿಕೊಳ್ಳುತ್ತಾರೆ ಎಂದು ಯೆಹೋವನು ಹಬಕ್ಕೂಕನಿಗೆ ಮುಂಚೆಯೇ ತಿಳಿಸಿದನು.
- "ನೀತಿವಂತನು ತನ್ನ ನಂಬಿಕೆಯಿಂದಲೇ ಬದುಕುವನು" ಎನ್ನುವುದು ಹಬಕ್ಕೂಕನ ಮೆಚ್ಚಿಗೆಯಾದ ಹೇಳಿಕೆಯಾಗಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬಾಬುಲೋನ್, ಯೆಹೋಯಾಕೀಮ, ಯೆರೆಮೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಹಬ.01:1-2

ಪದ ಡೇಟಾ:

- Strong's: H2265

ಹಮಾತ್, ಹಮಾತಿಯರು, ಲೆಬೋ ಹಮಾತ್

ಸತ್ಯಾಂಶಗಳು:

ಕಾನಾನ್ ದೇಶಕ್ಕೆ ಉತ್ತರ ದಿಕ್ಕಿನಲ್ಲಿ, ಸಿರಿಯ ದೇಶಕ್ಕೆ ಉತ್ತರದಿಕ್ಕಿನಲ್ಲಿದ್ದ ಹಮಾತ್ ಪ್ರಸಿದ್ಧವಾದ ಪಟ್ಟಣವಾಗಿತ್ತು. ಹಮಾತಿಯರು ನೋಹನ ಮಗನಾದ ಕಾನಾನಿಯರ ಸಂತತಿಯವರಾಗಿದ್ದರು.

- "ಲೆಬೋ ಹಮಾತ್" ಎನ್ನುವ ಹೆಸರು ಹಮಾತ್ ಪಟ್ಟಣದ ಹತ್ತಿರವಿದ್ದ ಗುಡ್ಡದ ಬದಿಯನ್ನು ಸೂಚಿಸುತ್ತಿರಬಹುದು.
- ಕೆಲವೊಂದು ಭಾಷಾಂತರಗಳಲ್ಲಿ "ಲೆಬೋ ಹಮಾತ್" ಎನ್ನುವುದನ್ನು "ಹಮಾತ್ ಮುಖದ್ವಾರ" ಎಂದು ಅನುವಾದ ಮಾಡಲಾಗಿದೆ.
- ಹಮಾತಿನ ಅರಸನಾದ ತೋವಿನ ಶತ್ರುಗಳನ್ನು ಅರಸನಾದ ದಾವೀದನು ಸೋಲಿಸಿ ಅವರು ಒಳ್ಳೆಯ ನಿಯಮಗಳಲ್ಲಿ ಇರುವಂತೆ ಮಾಡಿದನು.
- ಸಾಮಾನುಗಳನ್ನು ಇಡುವ ಸೊಲೊಮೋನನ ಉಗ್ರಾಣದ ನಗರಗಳಲ್ಲಿ ಹಮಾತ್ ಒಂದಾಗಿತ್ತು.
- ಹಮಾತ್ ಎನ್ನುವ ಪ್ರದೇಶವು ಅರಸನಾದ ಚಿದ್ಕೀಯನನ್ನು ಅರಸನಾದ ನೆಬೂಕದ್ನೆಚರು ಕೊಂದ ಸ್ಥಳವಾಗಿದೆ ಮತ್ತು ಐಗುಪ್ತ ಫರೋಹನು ಅರಸನಾದ ಯೆಹೋವಾಹಾಜನನ್ನು ಸ್ವಾಧೀನಪಡಿಸಿಕೊಂಡ ಸ್ಥಳವಾಗಿದೆ.
- "ಹಮಾತಿಯನು" ಎನ್ನುವ ಪದವನ್ನು "ಹಮಾತಿನಿಂದ ಬಂದ ವ್ಯಕ್ತಿ" ಎಂದು ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಬಾಬುಲೋನ್, ಕಾನಾನ್, ನೆಬೂಕದ್ನೆಚ, ಸಿರಿಯ, ಚಿದ್ಕೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.18:3-4
- 2 ಸಮು.08:9-10
- ಆಮೋಸ.06:1-2
- ಯೆಹೆ.47:15-17

ಪದ ಡೇಟಾ:

- Strong's: H2574, H2577

ಹಮೋರ

ಸತ್ಯಾಂಶಗಳು:

ಯಾಕೋಬನು ಮತ್ತು ಅವನ ಕುಟುಂಬದವರು ಸುಕ್ಕೋತ್ ಹತ್ತಿರ ನಿವಾಸಮಾಡುತ್ತಿದ್ದಾಗ, ಕಾನಾನಿಯನಾದ ಹಮೋರನು ಶೆಕೆಮ್ ಪಟ್ಟಣದಲ್ಲಿ ನಿವಾಸಮಾಡುತ್ತಿದ್ದನು. ಅವನು ಹಿವ್ವಿಯವನಾಗಿದ್ದನು.

- ತನ್ನ ಕುಟುಂಬಸ್ತರಿಗಾಗಿ ಶ್ಮಶಾನ ಭೂಮಿಯನ್ನು ಹಮೋರನ ಮಕ್ಕಳಿಂದ ಯಾಕೋಬನು ಕೊಂಡುಕೊಂಡನು.
- ಅವರು ಅಲ್ಲಿ ವಾಸ ಮಾಡುತ್ತಿದ್ದಾಗ ಹಮೋರನ ಮಗನಾದ ಶೆಕೆಮನು ಯಾಕೋಬನ ಮಗಳಾದ ದೀನಳನ್ನು ಮಾನಭಂಗ ಮಾಡಿದನು.
- ದೀನಳ ಸಹೋದರರು ಹಮೋರನ ಕುಟುಂಬದ ಮೇಲೆ ಸೇಡುತೀರಿಸಿಕೊಂಡರು ಮತ್ತು ಶೆಕೆಮ್ ಪಟ್ಟಣದಲ್ಲಿದ್ದ ಗಂಡಸರನೆಲ್ಲಾ ಕೊಂಡು ಹಾಕಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಹಿವ್ವಿಯವನು, ಯಾಕೋಬ, ಶೆಕೆಮ್, ಸುಕ್ಕೋತ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:14-16
- ಆದಿ.34:1-3
- ಆದಿ.34:20-21
- ಯೆಹೋ.24:32-33
- ನ್ಯಾಯ.09:28-29

ಪದ ಡೇಟಾ:

- Strong's: H2544

ಹವ್ವ

ಸತ್ಯಾಂಶಗಳು:

ಇದು ಮೊಟ್ಟಮೊದಲ ಸ್ತ್ರೀ ಹೆಸರಾಗಿರುತ್ತದೆ. ಈಕೆಯ ಹೆಸರಿಗೆ "ಜೀವ" ಅಥವಾ "ಜೀವಿಸುವ" ಎಂದರ್ಥ.

- ದೇವರು ಹವ್ವಳನ್ನು ಆದಾಮನ ಪಕ್ಕೆಲುಬುನಿಂದ ನಿರ್ಮಿಸಿದ್ದನು.
- ಹವ್ವಳು ಆದಾಮನ "ಸಹಾಯಕಳಾಗಿ" ಸೃಷ್ಟಿಸಲ್ಪಟ್ಟಿದ್ದಳು. ದೇವರು ಅವರಿಗೆ ಕೊಟ್ಟ ಕೆಲಸವನ್ನು ಮಾಡುವುದರಲ್ಲಿ ಆದಾಮನಿಗೆ ಸಹಾಯ ಮಾಡುವುದಕ್ಕೆ ಆಕೆ ಅವನ ಬಳಿಗೆ ಬಂದಳು.
- ಹವ್ವಳು ಸೈತಾನನಿಂದ (ಹಾವಿನ ರೂಪದಲ್ಲಿ ಬಂದಿರುವ) ಶೋಧನೆಗೆ ಗುರಿಯಾಗಿದ್ದಳು ಮತ್ತು ದೇವರು ತಿನ್ನಬಾರದೆಂದು ಹೇಳಿದ ಫಲವನ್ನು ತಿನ್ನುವುದರ ಮೂಲಕ ಮೊಟ್ಟಮೊದಲು ಪಾಪವನ್ನು ಮಾಡಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಆದಾಮ, ಜೀವ, ಸೈತಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.02:13-15
- 2 ಕೊರಿಂಥ.11:3-4
- ಆದಿ.03:20-21
- ಆದಿ.04:1-2

ಸತ್ಯವೇದದಿಂದ ಉದಾಹರಣೆಗಳು:

- **01:13** ಆದನಂತರ ದೇವರು ಆದಾಮನ ಪಕ್ಕೆಲುಬು ತೆಗೆದುಕೊಂಡು, ಅದರಿಂದ ಸ್ತ್ರಿಯಳನ್ನು ಸೃಷ್ಟಿಸಿದನು ಮತ್ತು ಆಕೆಯನ್ನು ಅವನ ಬಳಿಗೆ ಕರೆದುಕೊಂಡುಬಂದನು.
- **02:02** ಆದರೆ ಆ ತೋಟದಲ್ಲಿ ವಂಚಿಸುವ ಹಾವು ಇದ್ದಿತ್ತು. "ಈ ತೋಟದಲ್ಲಿರುವ ಯಾವ ಮರದ ಹಣ್ಣಾಗಲಿ ತಿನ್ನಬಾರದೆಂದು ದೇವರು ನಿಜವಾಗಿ ಹೇಳಿದ್ದಾರೋ? ಎಂದು ಅವನು ಆಕೆಯನ್ನು ಕೇಳಿದನು.
- **02:11** ಆ ಮನುಷ್ಯನು ತನ್ನ ಹೆಂಡತಿಗೆ _ ಹವ್ವ _ ಎಂದು ಹೆಸರಿಟ್ಟನು, ಇದಕ್ಕೆ "ಜೀವ ಕೊಡುವವಳು" ಎಂದು ಅರ್ಥ. ಯಾಕೆಂದರೆ ಆಕೆ ಎಲ್ಲಾ ಜನರಿಗೆ ತಾಯಿಯಾಗುವಳು.
- **21:01** _ ಹವ್ವಳ _ ಸಂತಾನದಿಂದ ಹಾವಿನ ತಲೆಯನ್ನು ಜಜ್ಜುವವನು ಹುಟ್ಟುವನು ಎಂದು ದೇವರು ವಾಗ್ದಾನ ಮಾಡಿದ್ದರು.
- **48:02** _ ಹವ್ವಳನ್ನು _ ಮೋಸ ಮಾಡುವ ಕ್ರಮದಲ್ಲಿ ಆ ತೋಟದಲ್ಲಿರುವ ಹಾವಿನ ಮೂಲಕ ಸೈತಾನನು ಮಾತನಾಡಿದನು.
- **49:08** ಆದಾಮ ಮತ್ತು _ ಹವ್ವಳು _ ಪಾಪ ಮಾಡಿದಾಗ, ಅದು ಅವರ ಸಂತಾನದವರೆಲ್ಲರ ಮೇಲೆ ಪ್ರಭಾವಬೀರಿತ್ತು.
- **50:16** ಆದಾಮನು ಮತ್ತು _ ಹವ್ವಳು _ ದೇವರಿಗೆ ಅವಿಧೇಯತೆ ತೋರಿಸಿರುವದರಿಂದಲೇ ಈ ಲೋಕದೊಳಗೆ ಪಾಪ ಎನ್ನುವುದು ಪ್ರವೇಶವಾದಿತು, ದೇವರು ಅದನ್ನು ಶಪಿಸಿದನು ಮತ್ತು ಅದನ್ನು ನಾಶ ಮಾಡಬೇಕೆಂದು ನಿರ್ಣಯಿಸಿದನು.

ಪದ ಡೇಟಾ:

- Strong's: H2332, G2096

ಹಾಗರಳು

ಸತ್ಯಾಂಶಗಳು:

ಹಾಗರಳು ಐಗುಪ್ತ ದೇಶದವಳು ಮತ್ತು ಸಾರಯಳ ದಾಸಿಯಾಗಿದ್ದಳು.

- ಸಾರಯಳಿಗೆ ಸಂತಾನವಾಗದಕಾರಣ ಆಕೆ ತನ್ನ ಗಂಡನಾದ ಅಬ್ರಾಮನಿಗೆ ಸಂತಾನವುಂಟು ಮಾಡುವಂತೆ ತನ್ನ ದಾಸಿಯಾದ ಹಾಗರಳನ್ನು ಒಪ್ಪಿಸಿದಳು.
- ಹಾಗರಳು ಬಸುರಾದಳು ಮತ್ತು ಅಬ್ರಾಮನಿಗೆ ಮಗನಾದ ಇಷ್ಮಾಯೇಲನಿಗೆ ಜನ್ಮ ನೀಡಿದಳು.
- ಮರಳುಗಾಡಿನಲ್ಲಿ ಹಾಗರಳು ಯಾತನೆಯಲ್ಲಿದ್ದಾಗ ಯೆಹೋವನು ಆಕೆಯನ್ನು ನೋಡಿದನು ಮತ್ತು ಆಕೆಯ ಸಂತಾನವನ್ನು ಆಶಿರ್ವಾದಿಸುತ್ತೇನೆಂದು ಹೇಳಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಮ, ಸಂತತಿ, ಇಷ್ಮಾಯೇಲ್, ಸಾರಯಳು, ದಾಸಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.04:24-25
- ಆದಿ.16:1-4
- ಆದಿ.21:8-9
- ಆದಿ.25:12

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **05:01** ಆದಕಾರಣ, ಅಬ್ರಾಮನ ಹೆಂಡತಿಯಾದ ಸಾರಯಳು “ಯೆಹೋವನು ನನಗೆ ಮಕ್ಕಳನ್ನು ಕೊಡಲಿಲ್ಲವಲ್ಲಾ; ನೀನು ನನ್ನ ದಾಸಿಯಾದ **ಹಾಗರಳ** ಬಳಿಗೆ ಹೋಗಬೇಕು; ಒಂದು ವೇಳೆ ಅವಳ ಮೂಲಕ ನನಗೆ ಸಂತಾನವಾದೀತು” ಎಂದು ಹೇಳಿದಳು.
- **05:02 ಹಾಗರಳಿಗೆ** ಗಂಡು ಮಗು ಹುಟ್ಟಿದನು ಮತ್ತು ಅಬ್ರಾಮನು ಅವನಿಗೆ ಇಸ್ಮಾಯೇಲ್ ಎಂದು ಹೆಸರಿಟ್ಟನು.

ಪದ ಡೇಟಾ:

- Strong's: H1904

ಹಾಮ್

ಸತ್ಯಾಂಶಗಳು:

ನೋಹನ ಮುವ್ವರು ಮಕ್ಕಳಲ್ಲಿ ಹಾಮ್ ಎರಡನೇ ಮಗನಾಗಿದ್ದನು.

- ವಿಶ್ವಾದ್ಯಂತ ಪ್ರವಾಹವು ಇಡೀ ಭೂಮಿಯನ್ನು ಸಂಪೂರ್ಣವಾಗಿ ಆವರಿಸಿದಾಗ, ಹಾಮ್ ಮತ್ತು ಅವನ ಸಹೋದರರು ನೋಹನ ಜೊತೆಯಲ್ಲಿ ನಾವೆಯಲ್ಲಿ ತಮ್ಮ ತಮ್ಮ ಹೆಂಡತಿಯರೊಂದಿಗೆ ಇದ್ದರು.
- ಪ್ರವಾಹದ ನಂತರ, ಹಾಮನು ಅವನ ತಂದೆಯಾದ ನೋಹನನ್ನು ಅವಮಾನಿಸಿದ ಒಂದು ಸಂದರ್ಭವಿತ್ತು. ಆದಕಾರಣ, ನೋಹನು ಅವನನ್ನು ಕಾನಾನ್ ಎಂದು ಶಪಿಸಿದನು ಮತ್ತು ಅವನ ಸಂತತಿಯವರು ಕಾನಾನಿಯರು ಎಂದು ಕರೆಯಲ್ಪಟ್ಟರು.

(ಅನುವಾದ ಸಲಹೆಗಳು: ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನಾವೆ, ಕಾನಾನ್, ಅವಮಾನಿಸು, ನೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.05:32
- ಆದಿ.06:9-10
- ಆದಿ.07:13-14
- ಆದಿ.10:1
- ಆದಿ.10:19-20

ಪದ ಡೇಟಾ:

- Strong's: H2526

ಹಿಜ್ಕೀಯ

ಪದದ ಅರ್ಥವಿವರಣೆ:

ಹಿಜ್ಕೀಯ ಯೆಹೂದ ರಾಜ್ಯದ ಮೇಲೆ 13ನೇ ಅರಸನಾಗಿದ್ದನು. ದೇವರಲ್ಲಿ ಭರವಸೆ ಇಟ್ಟು, ಆತನಿಗೆ ವಿಧೇಯತೆ ತೋರಿಸಿದ ಅರಸನಾಗಿದ್ದನು.

- ದುಷ್ಟ ಅರಸನಾಗಿದ್ದ ತನ್ನ ತಂದೆಯಾಗಿರುವ ಆಹಾಜನಂತಿರದೇ, ಅರಸನಾದ ಹಿಜ್ಕೀಯ ಯೆಹೂದದಲ್ಲಿ ವಿಗ್ರಹ ಆರಾಧನೆಯ ಸ್ಥಳಗಳೆಲ್ಲವನ್ನು ನಾಶಗೊಳಿಸಿದ ಒಳ್ಳೆಯ ಅರಸನಾಗಿದ್ದನು.
- ಒಂದುಸಲ ಹಿಜ್ಕೀಯ ತುಂಬಾ ರೋಗಿಯಾಗಿ ಸಾಯುವ ಸ್ಥಿತಿಗೆ ಬಂದಿದ್ದನು, ದೇವರು ತನ್ನನ್ನು ರಕ್ಷಿಸಬೇಕೆಂದು ಮನಃಪೂರ್ವಕವಾಗಿ ಪ್ರಾರ್ಥನೆ ಮಾಡಿದ್ದನು. ದೇವರು ಅವನನ್ನು ಸ್ವಸ್ಥಪಡಿಸಿದರು ಮತ್ತು ಅವನಿಗೆ 15 ವರ್ಷಗಳ ಕಾಲ ಬದುಕುವುದಕ್ಕೆ ಅವಕಾಶ ಮಾಡಿಕೊಟ್ಟರು.
- ಇದು ನಡೆಯುತ್ತದೆಯೆಂದು ಹಿಜ್ಕೀಯನಿಗೆ ಒಂದು ಸೂಚನೆಯಾಗಿ, ದೇವರು ಒಂದು ಅದ್ಭುತವನ್ನು ಮಾಡಿದರು ಮತ್ತು ಆಕಾಶದಲ್ಲಿ ಸೂರ್ಯನು ಹಿಂದಕ್ಕೆ ಕದಲುವಂತೆ ಮಾಡಿದರು.
- ಹಿಜ್ಕೀಯನು ತನ್ನ ಜನರನ್ನು ಅಶ್ಶೂರದ ಅರಸನಾದ ಸೆನ್ಹೇರೀಬ ಧಾಳಿಯಿಂದ ರಕ್ಷಿಸಬೇಕೆಂದು ಮಾಡಿದ ಪ್ರಾರ್ಥನೆಗೆ ದೇವರು ಉತ್ತರ ಕೊಟ್ಟರು.

(ಈ ಪದಗಳನ್ನು ಸಹ ನೋಡಿರಿ : ಆಹಾಜ, ಅಶ್ಶೂರ, ಸುಳ್ಳು ದೇವರು, ಯೆಹೂದ, ಸೆನ್ಹೇರೀಬ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.03:13-14
- 2 ಅರಸ.16:19-20
- ಹೋಶೆಯ.01:1-2
- ಮತ್ತಾಯ.01:9-11
- ಜ್ಞಾನೋ.25:1-3

ಪದ ಡೇಟಾ:

- Strong's: H2396, H3169, G1478

ಹಿತ್ತೀಯ, ಹಿತ್ತೀಯರು

ಪದದ ಅರ್ಥವಿವರಣೆ:

ಹಿತ್ತೀಯರು ಹಾಮನ ಮಗನಾದ ಕಾನಾನನ ವಂಶಸ್ಥರಾಗಿರುತ್ತಾರೆ. ಅವರು ಒಂದು ದೊಡ್ಡ ಸಾಮ್ರಾಜ್ಯವಾಗಿ ಮಾರ್ಪಟ್ಟರು, ಇದೀಗ ಉತ್ತರ ಪಾಲಸ್ತೀನ ಮತ್ತು ಟರ್ಕಿಗಳಲ್ಲಿ ಕಂಡುಬರುತ್ತದೆ.

- ಹಿತ್ತೀಯನಾದ ಎಫ್ರೋನನಿಂದ ಅಬ್ರಾಹಾಮನು ಭೂಮಿಯ ಭಾಗವನ್ನು ಕೊಂಡುಕೊಂಡಿದ್ದನು, ಇದರಿಂದ ತನ್ನ ಮೃತ ಹೆಂಡತಿಯಾದ ಸಾರಳನ್ನು ಆ ಗುಹೆಯೊಳಗೆ ಸಮಾಧಿ ಮಾಡಿದನು. ಕೊನೆಗೆ ಅಬ್ರಾಹಾಮನನ್ನು ಮತ್ತು ಅನೇಕ ತನ್ನ ವಂಶಸ್ಥರನ್ನು ಆ ಗುಹೆಯೊಳಗೆ ಸಮಾಧಿ ಮಾಡಿದ್ದರು.
- ಏಸಾವನು ಹಿತ್ತೀಯರ ಸ್ತ್ರೀಯರನ್ನು ಮದುವೆ ಮಾಡಿಕೊಂಡಿದ್ದಕ್ಕೆ ಅವನ ತಂದೆತಾಯಿಗಳು ತುಂಬಾ ಹೆಚ್ಚಾಗಿ ಪ್ರಲಾಪಪಟ್ಟರು.
- ದಾವೀದನ ಪರಾಕ್ರಮ ಮನುಷ್ಯರಲ್ಲಿ ಒಬ್ಬನು ಊರೀಯನು ಹಿತ್ತೀಯನಾಗಿದ್ದನು.
- ಸೊಲೊಮೋನನು ಮದುವೆ ಮಾಡಿಕೊಂಡಿರುವ ಅನೇಕಮಂದಿ ಅನ್ಯ ಸ್ತ್ರೀಯರಲ್ಲಿ ಹಿತ್ತೀಯರಾಗಿದ್ದರು. ಈ ಅನ್ಯ ಸ್ತ್ರೀಯರೆಲ್ಲರು ಸೊಲೊಮೋನನ ಹೃದಯವನ್ನು ದೇವರ ಕಡೆಯಿಂದ ತಿರುಗಿಸಿದರು, ಯಾಕಂದರೆ ಅವರು ಸುಳ್ಳು ದೇವರುಗಳನ್ನು ಆರಾಧನೆ ಮಾಡುತ್ತಿದ್ದರು.
- ಹಿತ್ತೀಯರು ಯಾವಾಗಲೂ ಇಸ್ರಾಯೇಲ್ಯರಿಗೆ ಭೌತಿಕವಾಗಿ ಮತ್ತು ಆತ್ಮೀಯಕವಾಗಿ ಅಪಾಯಕರವಾಗಿದ್ದರು.

(ಈ ಪದಗಳನ್ನು ಸಹ ನೋಡಿರಿ : ವಂಶಸ್ಥರು, ಏಸಾವ, ಅನ್ಯರು, ಹಾಮ್, ಶಕ್ತಿಯುಳ್ಳ, ಸೊಲೊಮೋನ, ಊರೀಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.09:20-21
- ವಿಮೋ.03:7-8
- ಆದಿ.23:10-11
- ಆದಿ.25:9-11
- ಯೆಹೋ.01:4-5
- ನೆಹೆ.09:7-8
- ಅರಣ್ಯ.13:27-29

ಪದ ಡೇಟಾ:

- Strong's: H2850

ಹಿಲ್ಕೀಯ

ಸತ್ಯಾಂಶಗಳು:

ಹಿಲ್ಕೀಯ ಅರಸನಾದ ಯೋಷೀಯನ ಕಾಲದಲ್ಲಿ ಮಹಾ ಯಾಜಕನಾಗಿದ್ದನು.

- ದೇವಾಲಯವನ್ನು ತಿರುಗಿ ನಿರ್ಮಿಸುತ್ತಿರುವಾಗ, ಮಹಾ ಯಾಜಕನಾದ ಹಿಲ್ಕೀಯನು ಧರ್ಮಶಾಸ್ತ್ರವನ್ನು ಕಂಡುಕೊಳ್ಳುತ್ತಾನೆ ಮತ್ತು ಅರಸನಾದ ಯೋಷೀಯನ ಬಳಿಗೆ ತೆಗೆದುಕೊಂಡು ಬರಬೇಕೆಂದು ಆಜ್ಞಾಪಿಸಲ್ಪಟ್ಟನು.
- ಧರ್ಮಶಾಸ್ತ್ರವನ್ನು ಅವನಿಗೆ ಓದಿ ಕೇಳಿಸಿದನಂತರ, ಯೋಷೀಯನು ಪ್ರಲಾಪಿಸುತ್ತಾನೆ ಮತ್ತು ಯೆಹೂದ ಜನರೆಲ್ಲರು ತಿರುಗಿ ಯೆಹೋವನನ್ನೇ ಆರಾಧನೆ ಮಾಡಬೇಕೆಂದು ಮತ್ತು ಆತನ ಧರ್ಮಶಾಸ್ತ್ರಕ್ಕೆ ವಿಧೇಯನಾಗಬೇಕೆಂದು ಆಜ್ಞಾಪಿಸುತ್ತಾನೆ.
- ಹಿಲ್ಕೀಯ ಹೆಸರಿನ ಮೇಲೆ ಇನ್ನೊಬ್ಬ ವ್ಯಕ್ತಿ ಎಲ್ಯಾಕೀಮನ ಮಗನಾಗಿದ್ದನು ಮತ್ತು ಅರಸನಾದ ಹಿಜ್ಕೀಯನ ಕಾಲದಲ್ಲಿ ಅವರ ಅರಮನೆಯಲ್ಲಿ ಕೆಲಸ ಮಾಡಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಎಲ್ಯಾಕೀಮ್, ಹಿಜ್ಕೀಯ, ಮಹಾ ಯಾಜಕ, ಯೋಷೀಯ, ಯೆಹೂದ, ಧರ್ಮಶಾಸ್ತ್ರ, ಆರಾಧನೆ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.18:16-18

ಪದ ಡೇಟಾ:

- Strong's: H2518

ಹಿವ್ವಿಯನು, ಹಿವ್ವಿಯರು

ಸತ್ಯಾಂಶಗಳು:

ಹಿವ್ವಿಯರು ಕಾನಾನ್ ಭೂಮಿಯಲ್ಲಿ ನಿವಾಸ ಮಾಡಿದ ಏಳು ದೊಡ್ಡ ಜನರ ಗುಂಪುಗಳಲ್ಲಿ ಒಂದು ಗುಂಪಾಗಿದ್ದರು.

- ಹಿವ್ವಿಯರೊಂದಿಗೆ ಸೇರಿಸಿ ಈ ಎಲ್ಲಾ ಗುಂಪುಗಳು ಕಾನಾನ್ ವಂಶಸ್ಥರಾಗಿದ್ದರು, ಇವನು ನೋಹನ ಮೊಮ್ಮೊಗನಾಗಿದ್ದನು.
- ಹಿವ್ವಿಯನಾದ ಶೆಕೆಮ್ ಯಾಕೋಬಿನ ಮಗಳನಾದ ದೀನಳನ್ನು ಮಾನಭಂಗ ಮಾಡಿದ್ದನು ಮತ್ತು ತನ್ನ ಸಹೋದರರು ಸೇಡು ತೀರಿಸಿಕೊಳ್ಳುವುದಕ್ಕೆ ಅನೇಕಮಂದಿ ಹಿವ್ವಿಯರನ್ನು ಕೊಂದು ಹಾಕಿದರು.
- ಕಾನಾನ್ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಇಸ್ರಾಯೇಲ್ಯರನ್ನು ಯೆಹೋಶುವನು ನಡೆಸಿದಾಗ, ಇಸ್ರಾಯೇಲ್ಯರು ಹಿವ್ವಿಯರನ್ನು ಜಯಿಸುವುದಕ್ಕೆ ಬದಲಾಗಿ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳುವುದರಲ್ಲಿ ಮೋಸಗೊಳಿಸಿದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಹಮೋರ, ನೋಹ, ಶೆಕೆಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.08:7-8
- ವಿಮೋ.03:7-8
- ಆದಿ.34:1-3
- ಯೆಹೋ.09:1-2
- ನ್ಯಾಯಾ.03:1-3

ಪದ ಡೇಟಾ:

- Strong's: H2340

ಹೆಬ್ರೋನ್

ಸತ್ಯಾಂಶಗಳು:

ಹೆಬ್ರೋನ್ ಎನ್ನುವುದು ಯೆರೂಸಲೇಮಿಗೆ ಸುಮಾರು 20 ಮೈಲಿಗಳಷ್ಟು ದೂರದಲ್ಲಿ ಬಂಡೆಗಳ ಬೆಟ್ಟಗಳ ಉನ್ನತ ಸ್ಥಾನದಲ್ಲಿ ಕಂಡುಬರುವ ಪಟ್ಟಣವಾಗಿರುತ್ತದೆ.

- ಈ ಪಟ್ಟಣವು ಅಬ್ರಾಮನ ಕಾಲದಲ್ಲಿ ಸುಮಾರು ಕ್ರಿ.ಪೂ.2000 ವರ್ಷದಲ್ಲಿ ನಿರ್ಮಿಸಿರುತ್ತಾರೆ. ಈ ಪಟ್ಟಣದ ಕುರಿತಾಗಿ ಹಳೇ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಇತಿಹಾಸದ ದಾಖಲಾತಿಗಳಲ್ಲಿ ಅನೇಕಸಲ ಉಪಯೋಗಿಸಲ್ಪಟ್ಟಿರುತ್ತದೆ.
- ಅರಸನಾದ ದಾವೀದನ ಜೀವನದಲ್ಲಿ ಹೆಬ್ರೋನ್ ತುಂಬಾ ಪ್ರಾಮುಖ್ಯವಾದ ಪಾತ್ರೆಯನ್ನು ಹೊಂದಿರುತ್ತದೆ. ಆತನ ಅನೇಕಮಂದಿ ಗಂಡು ಮಕ್ಕಳು, ಅಬ್ಷಾಲೋಮನು ಅಲ್ಲಿಯೇ ಜನಿಸಿರುತ್ತಾರೆ.
- ಈ ಪಟ್ಟಣವು ರೋಮಾದವರಿಂದ ಕ್ರಿ.ಶ.70ರಲ್ಲಿ ನಾಶಗೊಳಿಸಲ್ಪಟ್ಟಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಅಬ್ಷಾಲೋಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.02:10-11
- ಆದಿ.13:16-18
- ಆದಿ.23:1-2
- ಆದಿ.35:26-27
- ಆದಿ.37:12-14
- ನ್ಯಾಯಾ.01:8-10
- ಅರಣ್ಯ.13:21-22

ಪದ ಡೇಟಾ:

- Strong's: H2275, H2276, H5683

ಹೆರೋದ, ಹೆರೋದ ಅಂತಿಪ

ಸತ್ಯಾಂಶಗಳು:

ಯೇಸುವಿನ ಜೀವಿತ ಕಾಲದಲ್ಲಿ ಹೆರೋದ ಅಂತಿಪ ಗಲಿಲಾಯ ಸೀಮೆಯು ಸೇರಿಸಿ ರೋಮಾ ಸಾಮ್ರಾಜ್ಯದ ಒಂದು ಭಾಗಕ್ಕೆ ಪಾಲಕನಾಗಿದ್ದನು.

- ತನ್ನ ತಂದೆಯಾದ ಮಹಾ ಹೆರೋದನಂತೆ ಅಂತಿಪನು ನಿಜವಾಗಿ ಅರಸನಾಗದಿದ್ದರೂ ಅವನನ್ನು ಕೆಲವೊಂದುಸಲ "ಅರಸ ಹೆರೋದ" ಎಂದೂ ಸೂಚಿಸಲ್ಪಟ್ಟಿರುತ್ತದೆ,
- ಹೆರೋದ ಅಂತಿಪ ರೋಮಾ ಸೀಮೆಯಲ್ಲಿರುವ ನಾಲ್ಕರಲ್ಲಿ ಒಂದು ಭಾಗವನ್ನು ಆಳಿದನು ಮತ್ತು ಇವನನ್ನು "ಹೆರೋದ ಪಾಳೆಯಗಾರ" ಎಂದೂ ಕರೆಯುತ್ತಿದ್ದರು.
- ಹೆರೋದನಾಗಿರುವ ಅಂತಿಪನೇ ಸ್ನಾನೀಕನಾದ ಯೋಹಾನನನ್ನು ಶಿರಚ್ಛೇದನ ಮಾಡಬೇಕೆಂದು ಆಜ್ಞಾಪಿಸಿದ್ದನು.
- ಯೇಸುವಿನ ಶಿಲುಬೆಯ ಮರಣದ ಮುಂಚಿತವಾಗಿ ಯೇಸುವನ್ನು ಪ್ರಶ್ನಿಸಿದ್ದು ಹೆರೋದ ಅಂತಿಪನಾಗಿದ್ದನು.
- ಹೊಸ ಒಡಂಬಡಿಕೆಯಲ್ಲಿರುವ ಇತರ ಹೆರೋದಿಯರು ಅಂತಿಪನ ಮಗ (ಅಗ್ರಿಪ್ಪ) ಮತ್ತು ಅವನ ಮೊಮ್ಮೊಗ (ಅಗ್ರಿಪ್ಪ 2) ಆಗಿದ್ದರು, ಇವರು ಅಪೊಸ್ತಲರ ಕಾಲದಲ್ಲಿ ಆಳಿದವರಾಗಿದ್ದರು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಶಿಲುಬೆಗೆ ಹಾಕು, ಮಹಾ ಹೆರೋದ, ಯೋಹಾನ (ಸ್ನಾನಿಕನು), ಅರಸ, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.03:1-2
- ಲೂಕ.03:18-20
- ಲೂಕ.09:7-9
- ಲೂಕ.13:31-33
- ಲೂಕ.23:8-10
- ಮಾರ್ಕ.06:18-20
- ಮತ್ತಾಯ.14:1-2

ಪದ ಡೇಟಾ:

- Strong's: G2264, G2265, G2267

ಹೆರೋದ್ಯಳು

ಸತ್ಯಾಂಶಗಳು:

ಹೆರೋದ್ಯಳು ಸ್ನಾನೀಕನಾದ ಯೋಹಾನನ ಕಾಲದಲ್ಲಿ ಯೂದಾಯದಲ್ಲಿರುವ ಹೆರೋದ್ ಅಂತಿಪನ ಹೆಂಡತಿಯಾಗಿದ್ದಳು.

- ಹೆರೋದ್ಯಳು ವಾಸ್ತವಿಕವಾಗಿ ಹೆರೋದ್ ಅಂತಿಪನ ಸಹೋದರನಾದ ಫಿಲಿಪ್ಪನ ಹೆಂಡತಿಯಾಗಿದ್ದಳು, ಆದರೆ ಸ್ವಲ್ಪಕಾಲವಾದನಂತರ ಈಕೆ ಕಾನೂನುರಹಿತವಾಗಿ ಹೆರೋದ್ ಅಂತಿಪನನ್ನು ವಿವಾಹ ಮಾಡಿಕೊಂಡಿದ್ದಳು.
- ಸ್ನಾನೀಕನಾದ ಯೋಹಾನನು ಹೆರೋದನು ಮತ್ತು ಹೆರೋದ್ಯಳು ಮಾಡಿದ ಕಾನೂನುರಹಿತವಾದ ವಿವಾಹದ ಕುರಿತು ಎಚ್ಚರಿಸಿದನು. ಈ ಕಾರಣದಿಂದಲೇ, ಹೆರೋದ್ ಯೋಹಾನನನ್ನು ಸೆರೆಯಲ್ಲಿ ಹಾಕಿಸಿದ್ದನು ಮತ್ತು ಹೆರೋದ್ಯಳ ಕಾರಣದಿಂದ ಕೊನೆಗೆ ಯೋಹಾನನ ತಲೆಯನ್ನು ಶಿರಚ್ಛೇದನ ಮಾಡಿದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ: ಹೆರೋದ್ ಅಂತಿಪ, ಯೋಹಾನ (ಸ್ನಾನೀಕನು))

ಸತ್ಯವೇದದಿಂದ ಅನುಬಂಧ ವಾಕ್ಯಗಳು:

- ಲೂಕ.03:18-20
- ಮಾರ್ಕ.06:16-17
- ಮಾರ್ಕ.06:21-22
- ಮತ್ತಾಯ.14:3-5

ಪದ ಡೇಟಾ:

- Strong's: G2266

ಹೆರ್ಮೋನ್ ಪರ್ವತ

ಸತ್ಯಾಂಶಗಳು:

ಹೆರ್ಮೋನ್ ಪರ್ವತ ಎನ್ನುವುದು ಲೆಬನೋನ್ ಪರ್ವತ ಶ್ರೇಣಿಯ ದಕ್ಷಿಣ ತುದಿ ಭಾಗದಲ್ಲಿರುವ ಇಸ್ರಾಯೇಲಿನಲ್ಲಿ ಅತೀ ಎತ್ತರವಾದ ಪರ್ವತದ ಹೆಸರಾಗಿರುತ್ತದೆ.

- ಇದು ಗಲಿಲಾಯ ಸಮುದ್ರ ಉತ್ತರ ಭಾಗದಲ್ಲಿ ಕಂಡುಬರುತ್ತದೆ ಮತ್ತು ಇಸ್ರಾಯೇಲ್, ಸಿರಿಯಾ ದೇಶಗಳ ನಡುವೆ ಉತ್ತರ ಗಡಿಗಳಲ್ಲಿ ಕಂಡುಬರುತ್ತದೆ.
- ಇತರ ಗುಂಪುಗಳಿಂದ ಹೆರ್ಮೋನ್ ಪರ್ವತಕ್ಕೆ ಕೊಟ್ಟಿರುವ ಇತರ ಹೆಸರುಗಳು “ಸಿರಿಯನ್ ಪರ್ವತ” ಮತ್ತು “ಸೇನಿರ್ ಪರ್ವತ” ಎಂದಾಗಿರುತ್ತವೆ.
- ಹೆರ್ಮೋನ್ ಪರ್ವತವು ಮೂರು ಪ್ರಮುಖ ಶಿಖರಗಳನ್ನು ಹೊಂದಿರುತ್ತದೆ. ಅತೀ ಎತ್ತರವಾದ ಶಿಖರವು ಸುಮಾರು 2,800 ಮೀಟರುಗಳು ಇರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲ್, ಗಲಿಲಾಯ ಸಮುದ್ರ, ಸಿರಿಯಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.05:23-24
- ಯೆಹೆ.27:4-5
- ಯೆಹೋ.11:16-17
- ಕೀರ್ತನೆ.042:5-6
- ಪರಮ.04:8

ಪದ ಡೇಟಾ:

- Strong's: H2022, H2768, H2769, H8149

ಹೇಬೆಲ

ಸತ್ಯಾಂಶಗಳು:

ಹೇಬೆಲನು ಆದಾಮ ಮತ್ತು ಹವ್ವಳ ಎರಡನೇಯ ಮಗ. ಈತನು ಕಾಯಿನನ ತಮ್ಮನಾಗಿದ್ದನು.

- ಹೇಬೆಲ ಕುರುಬನಾಗಿದ್ದನು.
- ಹೇಬೆಲನು ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ದೇವರಿಗೆ ಕಾಣಿಕೆಯಾಗಿ ಕೊಟ್ಟು, ಅವುಗಳನ್ನು ದೇವರಿಗೆ ಹೋಮ ಮಾಡಿದನು.
- ದೇವರು ಹೇಬೆಲನನ್ನು ಮತ್ತು ಅವನು ಕೊಟ್ಟ ಕಾಣಿಕೆಗಳನ್ನು ಮೆಚ್ಚಿದನು.
- ಆದಾಮ ಮತ್ತು ಹವ್ವಳ ಮೊದಲ ಮಗನಾದ ಕಾಯಿನನು ಹೇಬೆಲನನ್ನು ಕೊಂದನು.

(ಅನುವಾದ ಮಾಡುವುದಕ್ಕೆ ಸಲಹೆಗಳು : /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : /ಕಾಯಿನ, /ಹೋಮ, /ಕುರುಬ)

ಸತ್ಯವೇದ ಅನುಬಂಧ ವಾಕ್ಯಗಳು :

- / ಆದಿ.04: 1-2
- / ಆದಿ.04;8-9
- / ಇಬ್ರಿ.12:22-24
- / ಲೂಕ.11:49-51
- / ಮತ್ತಾಯ.23:34-36

ಪದ ಡೇಟಾ:

- Strong's: H01893, G6

ಹೋರೇಬ್

ಪದದ ಅರ್ಥವಿವರಣೆ:

ಹೋರೇಬ್ ಪರ್ವತ ಎನ್ನುವುದು ದೇವರು ಮೋಶೆಗೆ ಹತ್ತು ಆಜ್ಞೆಗಳ ಶಿಲಾಶಾಸನಗಳನ್ನು ಕೊಟ್ಟ ಸೀನಾಯ್ ಪರ್ವತಕ್ಕೆ ಮತ್ತೊಂದು ಹೆಸರಾಗಿರುತ್ತದೆ,

- ಹೋರೇಬ್ ಪರ್ವತವನ್ನು "ದೇವರ ಪರ್ವತ" ಎಂದೂ ಕರೆಯುತ್ತಾರೆ.
- ಹೋರೇಬ್ ಎನ್ನುವ ಸ್ಥಳದಲ್ಲೇ ಮೋಶೆಯು ಉರಿಯುತ್ತಿರುವ ಪೊದೆಯನ್ನು ನೋಡಿದ್ದನು ಮತ್ತು ಅಲ್ಲಿಯೇ ಕುರಿಗಳನ್ನು ಮೇಯಿಸುತ್ತಿದ್ದನು.
- ಹೋರೇಬ್ ಪರ್ವತದ ಮೇಲೆಯೇ ದೇವರು ತನ್ನ ಇಸ್ರಾಯೇಲ್ಯರಿಗೆ ಹತ್ತು ಆಜ್ಞೆಗಳ ಶಿಲಾಶಾಸನಗಳನ್ನು ಬರೆದು ಅವರೊಂದಿಗೆ ನಿಬಂಧನೆಯನ್ನು ಮಾಡಿಕೊಂಡಿದ್ದಾರೆ.
- ಈ ಸ್ಥಳದಲ್ಲಿಯೇ ಅಡವಿಯಲ್ಲಿ ಇಸ್ರಾಯೇಲ್ಯರು ಸಂಚಾರ ಮಾಡುತ್ತಿರುವಾಗ ಅವರಿಗೆ ನೀರನ್ನು ಕೊಡುವುದಕ್ಕೆ ಕಲ್ಲಿನ ಮೇಲೆ ಹೊಡೆಯಬೇಕೆಂದು ದೇವರು ಮೋಶೆಗೆ ಹೇಳಿದ್ದನು.
- ಈ ಪರ್ವತದ ಖಚಿತವಾದ ಸ್ಥಳವು ಗೊತ್ತಿಲ್ಲ, ಆದರೆ ಈಗಿನ ಸೀನಾಯ್ ಪೆನಿನ್ಸುಲಾದ ದಕ್ಷಿಣ ಭಾಗದಲ್ಲಿ ಇದು ಕಂಡುಬರಬಹುದು.
- "ಹೋರೇಬ್" ಎನ್ನುವುದು ಪರ್ವತದ ಖಚಿತವಾದ ಹೆಸರಾಗಿರುತ್ತದೆ ಮತ್ತು "ಪರ್ವತ ಸೀನಾಯ್" ಎನ್ನುವುದಕೆಕ್ "ಸೀನಾಯ್ ಪರ್ವತ" ಎಂದರ್ಥ, ಪರ್ವತ ಹೋರೇಬ್ ಎನ್ನುವುದು ಸೀನಾಯ್ ಅಡವಿಯಲ್ಲಿ ಕಂಡುಬರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಒಡಂಬಡಿಕೆ, ಇಸ್ರಾಯೇಲ್, ಮೋಶೆ, ಸೀನಾಯ್, ಹತ್ತು ಆಜ್ಞೆಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.08:9-11
- 2 ಪೂರ್ವ.05:9-10
- ಧರ್ಮೋ.01:1-2
- ವಿಮೋ.03:1-3
- ಕೀರ್ತನೆ.106:19-21

ಪದ ಡೇಟಾ:

- Strong's: H2722

ಹೋಶೇಯ

ಸತ್ಯಾಂಶಗಳು:

ಹೋಶೇಯ ಎನ್ನುವ ಹೆಸರು ಇಸ್ರಾಯೇಲ್ ಅರಸನ ಹೆಸರಾಗಿರುತ್ತದೆ ಮತ್ತು ಹಳೇ ಒಡಂಬಡಿಕೆಯಲ್ಲಿ ಅನೇಕಮಂದಿ ಪುರುಷರು ಈ ಹೆಸರಿನ ಮೇಲೆ ಇದ್ದಾರೆ.

- ಅಲಾ ಮಗನಾದ ಹೋಶೇಯ ಇಸ್ರಾಯೇಲ್ ಅರಸನಾಗಿದ್ದನು, ಇವನು ಯೆಹೂದ್ಯ ಅರಸರಾಗಿರುವ ಆಹಾಜ ಮತ್ತು ಹಿಜ್ಕೀಯ ಪಾಲನೆಗಳು ನಡೆಯುತ್ತಿರುವ ಸಮಯದಲ್ಲಿ ಸುಮಾರು ಒಂಭತ್ತು ವರ್ಷಗಳ ಆಳಿದನು.
- ನೂನನ ಮಗನಾದ ಯೆಹೋಶುವನಿಗೆ ಮತ್ತೊಂದು ಹೆಸರು ಹೋಶೇಯ ಆಗಿತ್ತು. ಮೋಶೆ ಕಾನಾನ್ಯರ ಭೂಮಿಯೊಳಗೆ ಗೂಢಚಾರಿಗಳನ್ನಾಗಿ ಕಳುಹಿಸಿದ ಹನ್ನೆರಡು ಮಂದಿಯಲ್ಲಿ ಒಬ್ಬನಾಗಿರುವ ಹೋಶೇಯನ ಹೆಸರನ್ನು ಯೊಹೋಶುವ ಎಂಬುದಾಗ ಮಾರ್ಪಡಿಸಿದನು.
- ಮೋಶೆ ಮರಣಿಸಿದನಂತರ ಯೆಹೋಶುವನು ಕಾನಾನ್ ಭೂಮಿಯನ್ನು ವಶಪಡಿಸಿಕೊಳ್ಳಲು ಇಸ್ರಾಯೇಲ್ ಜನರನ್ನು ನಡೆಸಿದ್ದನು.
- ಹೋಶೆಯ ಎನ್ನುವ ಹೆಸರಿನ ಮೇಲೆ ಇನ್ನೊಬ್ಬ ವ್ಯಕ್ತಿ ಆಹಾಜನ ಮಗನಾಗಿದ್ದನು, ಇವನು ಎಫ್ರಾಯಿಮ್ಯರ ನಾಯಕರಲ್ಲಿ ಒಬ್ಬನಾಗಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಆಹಾಜ, ಕಾನಾನ್, ಎಫ್ರಾಯಿಮ್, ಹಿಜ್ಕೀಯ, ಯೆಹೋಶುವ, ಮೋಶೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.27:19-22
- 2 ಅರಸ.15:29-31
- 2 ಅರಸ.17:1-3
- 2 ಅರಸ.18:1-3
- 2 ಅರಸ.18:9-10

ಪದ ಡೇಟಾ:

- Strong's: H1954

translationWords

Other

forsake, forsaken, leave

Definition:

The term “forsake” means to abandon someone or to give up something. Someone who has been “forsaken” has been deserted or abandoned by someone else.

- When people “forsake” God, they are being unfaithful to him by disobeying him.
- When God “forsakes” people, he has stopped helping them and allowed them to experience suffering in order to cause them to turn back to him.
- This term can also mean to forsake things, such as forsaking, or not following, God’s teachings.
- The term “forsaken” can be used in the past tense, as in “he has forsaken you” or as in referring to someone who has “been forsaken.”

Translation Suggestions:

- Other ways to translate this term could include “abandon” or “neglect” or “give up” or “go away from” or “leave behind,” depending on the context.
- To “forsake” God’s law could be translated “disobey God’s law.” This could also be translated as “abandon” or “give up on” or “stop obeying” his teachings or his laws.
- The phrase “be forsaken” can be translated as “be abandoned” or “be deserted.”
- It more clearer to use different words to translate this term, depending on whether the text describes forsaking a thing or a person.

Bible References:

- 1 Kings 6:11-13
- Daniel 11:29-30
- Genesis 24:27
- Joshua 24:16-18
- Matthew 27:45-47
- Proverbs 27:9-10
- Psalms 71:18

Word Data:

- Strong’s: H0488, H2308, H5203, H5428, H5800, H5805, H7503, G06460, G06570, G08630, G14590, G26410

ಅಂಗಳ, ಅಂಗಳಗಳು, ಅಂಗಳದ ಆವರಣ, ಅಂಗಳದ ಆವರಣಗಳು

ಪದದ ಅರ್ಥವಿವರಣೆ:

“ಅಂಗಳ” ಮತ್ತು “ಅಂಗಳದ ಆವರಣ” ಎನ್ನುವ ಪದಗಳು ಸುತ್ತಲು ಗೋಡೆಗಳಿದ್ದು ಅವುಗಳ ಮೇಲೆ ಮೇಲ್ಛಾವಣಿಯಿಲ್ಲದೆ ಖಾಳಿ ಸ್ಥಳವಿರುವ ಜಾಗವನ್ನು ಅಥವಾ ಸ್ಥಳವನ್ನು ಸೂಚಿಸುತ್ತವೆ. “ಅಂಗಳ” ಎನ್ನುವ ಪದವೂ ನ್ಯಾಯಾಧೀಶರು ಕಾನೂನುಬದ್ಧವಾದ ಮತ್ತು ಅಪರಾಧಕ್ಕೆ ಸಂಬಂಧವಾದ ವಿಷಯಗಳನ್ನು ನಿರ್ಣಯಿಸುವ ಸ್ಥಳವನ್ನು ಸೂಚಿಸುತ್ತದೆ.

- ಗುಡಾರದ ಸುತ್ತಲು ಅಂಗಳದ ಆವರಣವು ಇರುತ್ತದೆ, ಇದು ತುಂಬಾ ದಪ್ಪದಾಗಿರುವ ಬಟ್ಟೆಗಳ ತೆರೆಗಳಿಂದ ಮಾಡಲ್ಪಟ್ಟ ಗೋಡೆಗಳಿಂದ ಮುಚ್ಚಲ್ಪಟ್ಟಿರುತ್ತದೆ.
- ದೇವಾಲಯ ಸಂಕೀರ್ಣವು ಮೂರು ಅಂಗಳದ ಆವರಣವನ್ನು ಹೊಂದಿರುತ್ತದೆ: ಒಂದು ಯಾಜಕರಿಗೆ, ಮತ್ತೊಂದು ಯೆಹೂದ್ಯರಿಗೆ ಮತ್ತು ಇನ್ನೊಂದು ಯೆಹೂದ್ಯ ಸ್ತ್ರೀಯರಿಗೆ.
- ಈ ಎಲ್ಲಾ ಒಳ ಅಂಗಳದ ಆವರಣಗಳು ಅತೀ ಚಿಕ್ಕ ಕಲ್ಲುಗಳಿಂದ ಕಟ್ಟಿರುತ್ತಾರೆ, ಇವು ಆರಾಧನೆ ಮಾಡಿಕೊಳ್ಳುವುದಕ್ಕೆ ಅನ್ಯರಿಗೆ ಅನುಮತಿ ಕೊಟ್ಟ ಹೊರ ಅಂಗಳದ ಆವರಣದಿಂದ ಬೇರ್ಪಡಿಸಲಾಗಿರುತ್ತವೆ.
- ಮನೆಯ ಅಂಗಳದ ಆವರಣವು ಮನೆಯು ಮಧ್ಯೆದಲ್ಲಿದ್ದು ಸುತ್ತ ಗೋಡೆಗಳಿರುವ ಬಹಿರಂಗ ಸ್ಥಳವಾಗಿರುತ್ತದೆ.
- “ಅರಸನ ಆವರಣ” ಎನ್ನುವ ಮಾತು ಆತನ ಅರಮನೆಗೆ ಅಥವಾ ತನ್ನ ಅರಮನೆಯಲ್ಲಿ ಆತನು ತೀರ್ಪುಗಳನ್ನು ಮಾಡುವ ಸ್ಥಳವನ್ನು ಸೂಚಿಸಬಹುದು.
- “ಯೆಹೋವನ ಆವರಣಗಳು” ಎನ್ನುವ ಮಾತು ಯೆಹೋವನು ನಿವಾಸ ಮಾಡುವ ಸ್ಥಳ ಅಥವಾ ಯೆಹೋವನನ್ನು ಆರಾಧಿಸುವುದಕ್ಕೆ ಜನರು ಹೋಗುವ ಸ್ಥಳ ಎಂದು ಸೂಚಿಸುವ ಅಲಂಕಾರಿಕವಾದ ಮಾತಾಗಿರುತ್ತದೆ.

ಅನುವಾದ ಸಲಹೆಗಳು:

- “ಅಂಗಳದ ಆವರಣ” ಎನ್ನುವ ಪದವನ್ನೂ “ಬಹಿರಂಗ ಸ್ಥಳ” ಅಥವಾ “ಸುತ್ತಲು ಗೋಡೆಗಳಿರುವ ಸ್ಥಳ” ಅಥವಾ “ದೇವಾಲಾಯದ ಆವರಣ” ಅಥವಾ “ದೇವಾಲಯದ ಸುತ್ತಳತೆ” ಎಂದೂ ಅನುವಾದ ಮಾಡಬಹುದು.
- “ದೇವಾಲಯ” ಎನ್ನುವ ಪದವನ್ನು ಕೆಲವೊಂದುಬಾರಿ “ದೇವಾಲಯ ಆವರಣಗಳು” ಅಥವಾ “ದೇವಾಲಯದ ಸಂಕೀರ್ಣ” ಎಂದು ಹೇಳಬೇಕಾದ ಅವಶ್ಯಕತೆಯಿರುತ್ತದೆ. ಆದ್ದರಿಂದ ಇದು ಅಂಗಳದ ಆವರಣಗಳು ಸೂಚಿಸುತ್ತದೆ ಹೊರತಾಗಿ ದೇವಾಯಲದ ಕಟ್ಟಡವಲ್ಲ ಎಂದು ಸ್ಪಷ್ಟಪಡಿಸುತ್ತದೆ.
- “ಯೆಹೊವಾ ಆವರಣಗಳು” ಎನ್ನುವ ಮಾತಿಗೆ “ಯೆಹೋವನು ನಿವಾಸವಾಗುವ ಸ್ಥಳ” ಅಥವಾ “ಯೆಹೋವಾನನ್ನು ಆರಾಧಿಸುವ ಸ್ಥಳ” ಎಂದೂ ಅನುವಾದ ಮಾಡಬಹುದು.
- ಅರಸನ ಆವರಣ ಎಂದು ಉಪಯೋಗಿಸಲ್ಪಟ್ಟ ಪದವು ಯೆಹೋವನ ಆವರಣ ಎಂದು ಸೂಚಿಸುವುದಕ್ಕೆ ಕೂಡ ಉಪಯೋಗಿಸಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಅನ್ಯನು, ನ್ಯಾಯಾಧೀಶರು, ಅರಸ, ಗುಡಾರ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.20:4-5
- ವಿಮೋ.27:9-10
- ಯೆರೆ.19:14-15
- ಲೂಕ.22:54-55
- ಮತ್ತಾಯ.26:69-70
- ಅರಣ್ಯ.03:24-26
- ಕೀರ್ತನೆ.065:4

ಪದ ಡೇಟಾ:

- Strong's: H1004, H1508, H2691, H5835, H6503, H7339, H8651, G833, G933, G2681, G4259

ಅಂಜೂರದ ಹಣ್ಣು, ಅಂಜೂರದ ಹಣ್ಣುಗಳು

ಪದದ ಅರ್ಥವಿವರಣೆ

ಅಂಜೂರದ ಹಣ್ಣು ಎಂದರೆ ಮರಗಳ ಮೇಲೆ ಬೆಳೆಯುವ ಸಣ್ಣ ಸಿಹಿ ಮತ್ತು ಮೃಧುವಾದ ಹಣ್ಣು. ಈ ಹಣ್ಣು ಹಣ್ಣಾದಾಗ ವಿಭಿನ್ನ ಬಣ್ಣಗಳನ್ನು ಹೊಂದಿರುತ್ತದೆ ಅದರಲ್ಲಿ ಕಂದು, ಹಳದಿ ಅಥವಾ ನೇರಳೆ ಬಣ್ಣಗಳು ಇರಬಹುದು.

- ಅಂಜೂರದ ಮರಗಳು 6 ಮೀಟರ್ ಗಳ ಎತ್ತರ ಬೆಳೆಯಬಹುದು ಮತ್ತು ಅದರ ದೊಡ್ಡ ಎಲೆಗಳು ತಂಪಾದ ನೆರಳುಕೊಡುತ್ತದೆ. ಈ ಹಣ್ಣು ಸುಮಾರು 3-5 ಸೆಂಟಿಮೀಟರ್ ಉದ್ದವಿರುತ್ತದೆ.
- ಆದಾಮ ಮತ್ತು ಹವ್ವಳು ಪಾಪ ಮಾಡಿದ ಮೇಲೆ ಈ ಅಂಜೂರದ ಎಲೆಗಳನ್ನು ಒಲಿದು ಉಟ್ಟುಕೊಂಡರು.
- ಅಂಜೂರದ ಹಣ್ಣನ್ನು ಕಚ್ಚಿ ತಿನ್ನಬಹುದು, ಬೇಯಿಸಿ ತಿನ್ನಬಹುದು ಅಥವಾ ಒಣಗಿಸಿ ತಿನ್ನಬಹುದು. ಜನರು ಅದನ್ನು ಸಣ್ಣ ಸಣ್ಣ ತುಂಡುಗಳನ್ನು ಮಾಡಿ ಕೇಕ್ ಗಳಾಗಿ ಒತ್ತಿ ಅವುಗಳನ್ನು ಬೇಕಾದಾಗ ತಿನ್ನಲು ಎತ್ತಿಡುತ್ತಾರೆ.
- ಸತ್ಯವೇದದ ಕಾಲದಲ್ಲಿ, ಅಂಜೂರದ ಹಣ್ಣುಗಳು ಆಹಾರ ಮತ್ತು ಆದಾಯಕ್ಕೆ ಮೂಲ ವಸ್ತುವಾಗಿತ್ತು.
- ಸತ್ಯವೇದದಲ್ಲಿ ಫಲಭರಿತ ಅಂಜೂರದ ಮರವನ್ನು ಸಮೃದ್ಧಿಯ ಸಂಕೇತವಾಗಿ ಉಲ್ಲೇಖಿಸಲ್ಪಟ್ಟಿದೆ..
- ಆತ್ಮಿಯ ಸತ್ಯಗಳನ್ನು ತನ್ನ ಶಿಷ್ಯರಿಗೆ ಬೋಧಿಸಲು ಯೇಸು ಹಲವಾರು ಬಾರಿ ಅಂಜೂರದ ಮರಗಳ ದೃಷ್ಟಾಂತವನ್ನು ಹೇಳಿದನು.

ಸತ್ಯವೇದದ ಅನುಬಂಧ ವಾಕ್ಯಗಳು :

- ಹಬ.03:17
- ಯಾಕೋಬ.03:11-12
- ಲೂಕ.13:6-7
- ಮಾರ್ಕ.11:13-14
- ಮತ್ತಾಯ.07:15-17
- ಮತ್ತಾಯ.21:18-19

ಪದ ಡೇಟಾ:

- Strong's: H1061, H1690, H6291, H8384, G3653, G4808, G4810

ಅಚ್ಚು, ಅಚ್ಚುಗಳನ್ನು, ಅಚ್ಚು ಹಾಕಲಾಗಿದೆ, ಅಚ್ಚು ಹಾಕುವುದು, ಅಚ್ಚು ಹಾಕುವವನು, ಅಚ್ಚಾಗಿ

ಪದದ ಅರ್ಥವಿವರಣೆ:

ಅಚ್ಚು ಎನ್ನುವುದು ಬಂಗಾರ, ಬೆಳ್ಳಿ, ಅಥವಾ ಇತರ ಲೋಹಗಳನ್ನು ಕರಗಿಸಿ ವಸ್ತುಗಳನ್ನು ರೂಪಿಸುವುದಕ್ಕೆ ಉಪಯೋಗಿಸುವ ಮಣ್ಣು, ಲೋಹ ಅಥವಾ ಕಟ್ಟಿಗೆ ತುಂಡುಗಳಿಂದ ಮಾಡಿದ ಅಚ್ಚಾಗಿರುತ್ತದೆ ಮತ್ತು ಇದರಿಂದಲೇ ಆಕಾರಗಳನ್ನು ತಯಾರಿಸುತ್ತಾರೆ.

- ಆಭರಣಗಳನ್ನು, ಪಾತ್ರೆಗಳನ್ನು ಮತ್ತು ತಿನ್ನುವುದಕ್ಕೆ ಉಪಯೋಗಿಸುವ ಬಾಂಡ್ಲಿ ಸಾಮಾನುಗಳನ್ನು ತಯಾರಿಸುವುದಕ್ಕೆ ಅಚ್ಚುಗಳನ್ನು ಉಪಯೋಗಿಸಲಾಗುತ್ತದೆ.
- ಸತ್ಯವೇದದಲ್ಲಿ ಅಚ್ಚುಗಳನ್ನು ವಿಗ್ರಹಗಳಾಗಿ ಉಪಯೋಗಿಸುವುದಕ್ಕೆ ಆಕಾರ ಪ್ರತಿಮೆಗಳೊಂದಿಗಿರುವ ಸಂಬಂಧದಲ್ಲಿ ಮುಖ್ಯವಾಗಿ ದಾಖಲಿಸಲಾಗಿರುತ್ತದೆ.
- ಲೋಹಗಳನ್ನು ತುಂಬಾ ಹೆಚ್ಚಿನ ತಾಪಮಾನದಿಂದ ಕರಗಿಸಬೇಕಾಗಿರುತ್ತದೆ, ಇದರಿಂದ ಅವರು ಆ ದ್ರವವನ್ನು ಅಚ್ಚುನೊಳಗೆ ಸುರಿಸಬಹುದು.
- ಯಾವುದಾದರೊಂದನ್ನು ಅಚ್ಚು ಮಾಡಬೇಕೆಂದರೆ ಒಂದು ನಿರ್ದಿಷ್ಟವಾದ ಆಕಾರವನ್ನು ರೂಪಿಸಲು ಕೈಗಳನ್ನು ಅಥವಾ ಆಚ್ಚುಗಳನ್ನು ಉಪಯೋಗಿಸುವುದರ ಮೂಲಕ ಒಂದು ನಿರ್ದಿಷ್ಟವಾದ ಆಕಾರದೊಳಗೆ ಅಥವಾ ರೂಪದೊಳಗೆ ಒಂದು ವಸ್ತುವನ್ನು ರೂಪಿಸುವುದು ಎಂದರ್ಥ.

ಅನುವಾದ ಸಲಹೆಗಳನ್ನು:

- ಈ ಪದವನ್ನು “ರೂಪಿಸು” ಅಥವಾ “ಆಕಾರ ಮಾಡು” ಅಥವಾ “ಮಾಡುವುದು” ಎಂದೂ ಅನುವಾದ ಮಾಡಬಹುದು.
- “ಅಚ್ಚು ಮಾಡಲಾಗಿದೆ” ಎನ್ನುವ ಮಾತನ್ನು “ಆಕಾರವನ್ನು ತಯಾರಿಸಲಾಗಿದೆ” ಅಥವಾ “ರೂಪಿಸಲಾಗಿದೆ” ಎಂದೂ ಅನುವಾದ ಮಾಡಬಹುದು.
- “ಅಚ್ಚು” ಎನ್ನುವ ವಸ್ತುವನ್ನು “ಆಕಾರವನ್ನು ಮಾಡುವ ಪಾತ್ರೆ” ಅಥವಾ “ಕೆತ್ತಲ್ಪಟ್ಟ ಪಾತ್ರೆ” ಎನ್ನುವ ಅರ್ಥಗಳು ಬರುವ ಮಾತಿನೊಂದಿಗೆ ಅಥವಾ ಪದದೊಂದಿಗೆ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ಬಂಗಾರ, ಸುಳ್ಳು ದೇವರು, ಬೆಳ್ಳಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.32:3-4

ಪದ ಡೇಟಾ:

- Strong's: H4541, H4165, G4110, G4111

ಅದ್ಭುತ, ವಿಸ್ಮಯ, ಆಶ್ಚರ್ಯ, ಮಹಾದ್ಭುತ, ಮಹಾದ್ಭುತವಾದದ್ದು, ಅಚ್ಚರಿ, ಅಚ್ಚರಿಗಳು

ಪದದ ಅರ್ಥವಿವರಣೆ:

ಈ ಎಲ್ಲಾ ಪದಗಳು ಅತೀ ಆಶ್ಚರ್ಯವಾಗುವುದನ್ನು ಸೂಚಿಸುತ್ತವೆ, ಯಾಕಂದರೆ ನಡೆದ ಸಂಘಟನೆಗಳು ಅತೀ ಅಸಾಧಾರಣವಾದ ಕಾರ್ಯಗಳಾಗಿರುತ್ತವೆ.

- ಈ ಎಲ್ಲಾ ಪದಗಳಲ್ಲಿ ಕೆಲವು ಪದಗಳು "ವಿಸ್ಮಯವಾಗುವುದು" ಅಥವಾ "ಮೈಮರೆತು ನಿಶ್ಚಲವಾಗಿ ನಿಲ್ಲುವುದು" ಎನ್ನುವ ಅರ್ಥವನ್ನು ತೋರಿಸುವ ಗ್ರೀಕ್ ಭಾವ ವ್ಯಕ್ತೀಕರಣದ ಅನುವಾದಗಳಾಗಿರುತ್ತವೆ. ಈ ಎಲ್ಲಾ ಮಾತುಗಳು ಒಬ್ಬ ವ್ಯಕ್ತಿ ಯಾವರೀತಿ ಅಚ್ಚರಿಗೊಂಡು ಅಥವಾ ಬೆರಗಾಗಿ ನಿಂತಿದ್ದಾನೋ ಎನ್ನುವ ಭಾವವನ್ನು ತೋರಿಸುತ್ತದೆ. ಇದನ್ನು ವ್ಯಕ್ತಪಡಿಸುವುದಕ್ಕೆ ಇತರ ಭಾಷೆಗಳು ಬಹುಶಃ ಕೆಲವೊಂದು ವಿಧಾನಗಳನ್ನು ಹೊಂದಿರಬಹುದು.
- ಅಚ್ಚರಿ ಮತ್ತು ವಿಸ್ಮಯವನ್ನುಂಟು ಮಾಡಿದ ಕಾರ್ಯಗಳೇ ಅದ್ಭುತ ಎಂದು ಹೇಳಬಹುದು, ಇದನ್ನು ಕೇವಲ ದೇವರು ಮಾತ್ರ ಮಾದಬಲ್ಲನು.
- ಈ ಪದಗಳಿಗೆ ಅರ್ಥವು ಕೆಲವೊಂದುಸಲ ಗೊಂದಲದ ಭಾವನೆಗಳನ್ನು ಕೂಡ ಒಳಗೊಂಡಿರುತ್ತದೆ ಯಾಕಂದರೆ ನಡೆದಿರುವುದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದ ಪರಿಸ್ಥಿತಿ.
- ಈ ಪದಗಳನ್ನು "ಅತೀ ಹೆಚ್ಚಾಗಿ ಬೆರಗಾಗುವುದು" ಅಥವಾ "ಅತೀ ಹೆಚ್ಚಾಗಿ ಆಘಾತಗೊಳ್ಳುವುದು" ಎಂಬುದಾಗಿಯೂ ಅನುವಾದ ಮಾಡಬಹುದು.
- "ಮಹಾದ್ಭುತವಾದದ್ದು" (ಅಚ್ಚರಿ, ಅದ್ಭುತ), "ವಿಸ್ಮಯ", ಮತ್ತು "ಆಶ್ಚರ್ಯ".ಎನ್ನುವ ಪದಗಳು ಕೂಡ ಅವುಗಳಿಗೆ ಸಂಬಂಧಪಟ್ಟಿರುತ್ತವೆ.
- ಸಾಧಾರಣವಾಗಿ, ಈ ಪದಗಳೆಲ್ಲವೂ ಧನಾತ್ಮಕ ಆಲೋಚನೆಗಳಿಂದ ಕೂಡಿದವುಗಳಾಗಿರುತ್ತವೆ ಮತ್ತು ನಡೆದ ವಿಷಯಗಳ ಕುರಿತಾಗಿ ಜನರು ತುಂಬಾ ಸಂತೋಷದಿಂದಿರುವ ಭಾವವ್ಯಕ್ತೀಕರಣಗಳು.

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಇಸಾಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.08:9-11
- ಅಪೊ.ಕೃತ್ಯ.09:20-22
- ಗಲಾತ್ಯ.01:6-7
- ಮಾರ್ಕ.02:10-12
- ಮತ್ತಾಯ.07:28-29
- ಮತ್ತಾಯ.15:29-31
- ಮತ್ತಾಯ.19:25-27

ಪದ ಡೇಟಾ:

- Strong's: H926, H2865, H3820, H4159, H4923, H5953, H6313, H6381, H6382, H6383, H6395, H7583, H8047, H8074, H8078, H8429, H8539, H8540, H8541, H8653, G639, G1568, G1569, G1605, G1611, G1839, G2284, G2285, G2296, G2297, G2298, G3167, G4023, G4423, G4592, G5059

ಅಧಿಕಾರಿ, ಅಧಿಕಾರಿಗಳು

ಪದದ ಅರ್ಥವಿವರಣೆ;

ಅಧಿಕಾರ ಎನ್ನುವ ಪದವು ಕಾನೂನುಬದ್ಧವಾದ ವಿಷಯಗಳನ್ನು ನಿರ್ಣಯಿಸುವುದಕ್ಕೆ ಮತ್ತು ತೀರ್ಪು ಮಾಡುವುದಕ್ಕೆ ನೇಮಿಸಲ್ಪಟ್ಟ ನೌಕರನನ್ನು ಸೂಚಿಸುತ್ತದೆ.

- ಸತ್ಯವೇದ ಕಾಲದಲ್ಲಿಯೂ ಅಧಿಕಾರಿಯು ಜನರ ಮಧ್ಯೆದಲ್ಲಿರುವ ಅನೇಕ ವ್ಯಾಜ್ಯಗಳನ್ನು ಬಗೆಹರಿಸುವವನಾಗಿರುತ್ತಾನೆ.
- ಸಂದರ್ಭಾನುಸಾರವಾಗಿ ಈ ಪದವನ್ನು ಅನುವಾದ ಮಾಡುವ ವಿಧಾನದಲ್ಲಿ "ಪಾಲಿಸುವ ನ್ಯಾಯಾಧಿಪತಿ" ಅಥವಾ "ಕಾನೂನುಬದ್ಧವಾದ ಅಧಿಕಾರಿ" ಅಥವಾ "ಪಟ್ಟಣ ನಾಯಕನು" ಎನ್ನುವ ಮಾತುಗಳು ಒಳಗೊಂಡಿರಬಹುದು.

(ಈ ಪದಗಳನ್ನು ಸಹ ನೋಡಿರಿ : ತೀರ್ಪು ಮಾಡು, ಕಾನೂನು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.16:19-21
- ಅಪೊ.ಕೃತ್ಯ.16:35-36
- ದಾನಿ.03:1-2
- ಲೂಕ.12:57-59

ಪದ ಡೇಟಾ:

- Strong's: H6114, H8200, H8614, G758, G3980, G4755

ಅಧೀನವಾಗು, ಅಧೀನಪಡಿಸುವುದು, ಅಧೀನ ಮಾಡಿದೆ, ಅಧೀನ ಮಾಡುವುದು, ಅಧೀನತೆ, ಅಧೀನತೆಯಲ್ಲಿ

ಪದದ ಅರ್ಥವಿವರಣೆ:

"ಅಧೀನವಾಗು" ಎನ್ನುವ ಪದವು ಸಾಧಾರಣವಾಗಿ ಒಬ್ಬ ವ್ಯಕ್ತಿಯ ಅಥವಾ ಪ್ರಭುತ್ವದ ಅಧಿಕಾರದ ಕೆಳಗೆ ಒಬ್ಬ ವ್ಯಕ್ತಿ ತನ್ನನ್ನು ತಾನು ಇಷ್ಟಪೂರ್ವಕವಾಗಿ ಒಳಗಾಗಿಸಿಕೊಳ್ಳುವುದನ್ನು ಸೂಚಿಸುತ್ತದೆ.

- ಯೇಸುವಿನ ವಿಶ್ವಾಸಿಗಳು ದೇವರಿಗೆ ಮತ್ತು ಇತರ ಅಧಿಕಾರಿಗಳಿಗೆ ತಮ್ಮ ಜೀವನಗಳಲ್ಲಿ ಅಧೀನರಾಗಿರಬೇಕೆಂದು ಸತ್ಯವೇದವು ಹೇಳುತ್ತದೆ.
- "ಒಬ್ಬರಿಗೊಬ್ಬರು ಅಧೀನರಾಗಿರಿ" ಎನ್ನುವ ಆಜ್ಞೆಯ ಅರ್ಥವೇನೆಂದರೆ ನಮ್ಮ ಸ್ವಂತ ಕಾರ್ಯಗಳಿಗಿಂತಲೂ ಇನ್ನೊಬ್ಬರ ಅಗತ್ಯತೆಗಳ ಮೇಲೆ ಕೇಂದ್ರೀಕರಿಸುವುದು ಮತ್ತು ವಿನಯವುಳ್ಳವರಾಗಿ ತಿದ್ದುಪಡಿಯನ್ನು ಅಂಗೀಕರಿಸುವುದು ಎಂದರ್ಥವಾಗಿರುತ್ತದೆ.
- "ಅಧೀನತೆಯಲ್ಲಿ ಜೀವಿಸುವುದು" ಎನ್ನುವ ಮಾತಿಗೆ ಯಾರಾದರೊಬ್ಬರ ಅಥವಾ ಯಾವುದಾದರೊಂದರ ಅಧಿಕಾರದ ಕೆಳಗೆ ಒಬ್ಬರು ಒಳಪಡುವುದು ಎಂದರ್ಥ.

ಅನುವಾದ ಸಲಹೆಗಳು:

- "ಅಧೀನವಾಗು" ಎನ್ನುವ ಆಜ್ಞೆಯನ್ನು "ಅಧಿಕಾರದ ಕೆಳಗೆ ನಿನ್ನನ್ನು ನೀನು ಒಳಪಡಿಸು" ಅಥವಾ "ನಾಯಕತ್ವವನ್ನು ಹಿಂಬಾಲಿಸು" ಅಥವಾ "ವಿನಯವುಳ್ಳವರಾಗಿ ಗೌರವಿಸು ಮತ್ತು ಘನಪಡಿಸು" ಎಂದೂ ಅನುವಾದ ಮಾಡಬಹುದು.
- "ಅಧೀನತೆ" ಎನ್ನುವ ಪದವನ್ನು "ವಿಧೇಯತೆ" ಅಥವಾ "ಅಧಿಕಾರವನ್ನು ಹಿಂಬಾಲಿಸುವುದು" ಎಂದೂ ಅನುವಾದ ಮಾಡಬಹುದು.
- "ಅಧೀನತೆಯಲ್ಲಿ ಜೀವಿಸು" ಎನ್ನುವ ಮಾತನ್ನು "ವಿಧೇಯತೆಯಲ್ಲಿರು" ಅಥವಾ "ಅಧಿಕಾರದಲ್ಲಿ ತನ್ನನ್ನು ತಾನು ಒಳಪಡಿಸಿಕೊಳ್ಳುವುದು" ಎಂದೂ ಅನುವಾದ ಮಾಡಬಹುದು.
- "ಅಧೀನತೆಯಲ್ಲಿರುವುದು" ಎನ್ನುವ ಮಾತನ್ನು "ವಿನಯದಿಂದ ಅಧಿಕಾರವನ್ನು ಅಂಗೀಕರಿಸುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಒಳಗಾಗು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.14:34-36
- 1 ಪೇತ್ರ.03:1-2
- ಇಬ್ರಿ.13:15-17
- ಲೂಕ.10:17-20

ಪದ ಡೇಟಾ:

- Strong's: H3584, H7511, G5226, G5293

ಅನುಕರಿಸು, ಅನುಕರಿಸುವವನು

ಪದದ ಅರ್ಥವಿವರಣೆ

ಬೇರೆಯವರ ಹಾಗೆ ಮಾಡುವುದು ಅಥವಾ ಅವರಂತೆ ನಡೆಯುವದನ್ನು "ಅನುಕರಿಸು" ಅಥವಾ "ಅನುಕರಿಸುವವನು" ಎನ್ನುವ ಪದಗಳು ಸೂಚಿಸುತ್ತದೆ.

- ಕ್ರಿಸ್ತನಂತೆ ಯೆಹೋವನಿಗೆ ವಿಧೇಯರಾಗಿದ್ದು ಮತ್ತು ಬೇರೆಯವರನ್ನು ಪ್ರೀತಿಸುವದರ ಮೂಲಕ ಯೇಸು ಕ್ರಿಸ್ತನನ್ನು ಅನುಕರಿಸಬೇಕೆಂದು ಕ್ರೈಸ್ತರಿಗೆ ಬೋಧಿಸಲಾಗಿದೆ.
- ಅವನು ಕ್ರಿಸ್ತನನ್ನು ಅನುಕರಿಸಿದಂತೆ, ಆದಿಮ ಸಭೆಯಲ್ಲಿದ್ದವರು ಸಹ ಪೌಲನನ್ನು ಅನುಕರಿಸಬೇಕೆಂದು ಹೇಳಿದನು.

ಅನುವಾದ ಸಲಹೆಗಳು:

- "ಅನುಕರಿಸು" ಎನ್ನುವ ಪದವನ್ನು "ಒಂದೇ ಕೆಲಸವನ್ನು ಮಾಡುವುದು" ಅಥವಾ "ಒಬ್ಬರ ಆದರ್ಶಗಳನ್ನು ಹಿಂಬಾಲಿಸುವುದು" ಎಂದು ಅನುವಾದ ಮಾಡಬಹುದು.
- "ದೇವರನ್ನು ಅನುಕರಿಸುವವರು" ಎನ್ನುವ ಮಾತನ್ನು "ದೇವರಂತೆ ವರ್ತಿಸುವ ಜನರು" ಅಥವಾ "ದೇವರು ಮಾಡುವ ಕಾರ್ಯಗಳನ್ನೇ ಮಾಡುವ ಜನರು" ಎಂದು ಅನುವಾದ ಮಾಡಬಹುದು.
- "ನೀವು ನಮ್ಮನ್ನು ಅನುಕರಿಸುವವರಾಗಿದ್ದೀರಿ" ಎನ್ನುವ ಮಾತನ್ನು "ನಮ್ಮ ಆದರ್ಶಗಳನ್ನು ನೀವು ಹಿಂಬಾಲಿಸಿದ್ದೀರಿ" ಅಥವಾ "ದೇವರಿಗೆ ಮೆಚ್ಚಿಗೆಯಾದ ಕಾರ್ಯಗಳನ್ನು ನಾವು ಮಾಡಿದಂತೆ ನೀವು ಮಾಡಿದ್ದೀರಿ" ಎಂದು ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು:

- 3 ಯೋಹಾನ.01:11
- ಮತ್ತಾಯ.23:1-3

ಪದ ಡೇಟಾ:

- Strong's: H310, H6213, G1096, G2596, G3401, G3402, G4160

ಅನ್ಯ

ಪದದ ಅರ್ಥವಿವರಣೆ:

ಸತ್ಯವೇದ ಕಾಲಗಳಲ್ಲಿ “ಅನ್ಯ” ಎನ್ನುವ ಪದವು ಯೆಹೋವನನ್ನು ಬಿಟ್ಟು ಸುಳ್ಳು ದೇವರನ್ನು ಆರಾಧಿಸುವ ಜನರನ್ನು ವಿವರಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

- ಈ ಜನರೊಂದಿಗೆ ಸಹವಾಸ ಮಾಡುವ ಯಾವುದಾದರೊಂದೂ, ಅಂದರೆ ಅವರು ಆರಾಧಿಸುವ ಸ್ಥಳದಲ್ಲಿರುವ ಯಜ್ಞವೇದಿಗಳು ಅವರು ಪ್ರದರ್ಶಿಸುವ ಧರ್ಮಸಂಬಂಧವಾದ ಆಚಾರಗಳಾಗಿರುತ್ತವೆ, ಮತ್ತು ಅವರ ನಂಬಿಕೆಗಳು ಎಲ್ಲವು “ಅನ್ಯ” ಎಂದು ಕರೆಯಲಾಗುತ್ತದೆ.
- ಅನ್ಯ ನಂಬಿಕೆ ವಿಧಾನಗಳಲ್ಲಿ ಅನೇಕಬಾರಿ ಪ್ರಕೃತಿ ಆರಾಧನೆಯು ಮತ್ತು ಸುಳ್ಳು ದೇವರುಗಳ ಆರಾಧನೆಯು ಒಳಗೊಂಡಿರುತ್ತದೆ.
- ಕೆಲವೊಂದು ಅನ್ಯ ಧರ್ಮಗಳಲ್ಲಿ ಲೈಂಗಿಕವಾಗಿ ಅನೈತಿಕ ಆಚರಣೆಗಳು ಅಥವಾ ಅವರ ಆರಾಧನೆಯ ಭಾಗವಾಗಿ ಮನುಷ್ಯರನ್ನು ಸಾಯುಸುವುದು ಒಳಗೊಂಡಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ: ಯಜ್ಞವೇದಿ, ಸುಳ್ಳು ದೇವರು, ಸರ್ವಾಂಗ ಹೋಮ, ಆರಾಧನೆ, ಯೆಹೋವ)

ಸತ್ಯವೇದದ ವಾಕ್ಯಗಳು:

- 1 ಕೊರಿಂಥ 10:20-22
- 1 ಕೊರಿಂಥ 12:1-3
- 2 ಅರಸ 17:14-15
- 2 ಅರಸ 21:4-6

ಪದ ಡೇಟಾ:

- Strong's: H1471, G14840

ಅಪರಾದ ಪರಿಹಾರಾರ್ಥ ಬಲಿ, ಅಪರಾದ ಪರಿಹಾರಾರ್ಥ ಬಲಿಗಳು

ಪದದ ಅರ್ಥವಿವರಣೆ

ಅಕಸ್ಮಾತಾಗಿ ಇಸ್ರಾಯೇಲ್ಯರು ಯೆಹೋವ ವಿರೋಧವಾಗಿ ಮಾಡಿದ ತಪ್ಪುಗಳು ಅಥವಾ ಬೇರೆಯವರ ಸ್ವತ್ತನ್ನು ಹಾಳುಮಾಡಿದ್ದರೆ ಅವರು ಯೆಹೋವನಿಗೆ ಅಪರಾದ ಪರಿಹಾರಾರ್ಥ ಬಲಿಯನ್ನು ಅರ್ಪಿಸಬೇಕಾಗಿತ್ತು.

- ಈ ನೈವೇದ್ಯದಲ್ಲಿ ಒಂದು ಪಶುವಿನ ಬಲಿ ಒಳಗೊಂಡಿತ್ತು ಮತ್ತು ಬೆಳ್ಳಿ ಅಥವಾ ಬಂಗಾರದ ಹಣವನ್ನು ದಂಡವಾಗಿ ಕಟ್ಟಬೇಕಾಗಿತ್ತು.
- ಅದಲ್ಲದೆ, ಹಾಳುಮಾಡಿದವನು ಹಾಳುಮಾಡಿದ ವಸ್ತುವಿನ ಮೌಲ್ಯವನ್ನು ಕಟ್ಟಬೇಕಾಗಿತ್ತು.

(ಈ ಪದಗಳನ್ನು ಸಹ ನೋಡಿರಿ : ದಹನ ಬಲಿ, ಧಾನ್ಯ ನೈವೇದ್ಯ, ಬಲಿ, ಪಾಪ ಪರಿಹಾರರ್ಥಕ ಬಲಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.06:3-4
- 2 ಅರಸ.12:15-16
- ಯಾಜಕ.05:5-6
- ಅರಣ್ಯ.06:12

ಪದ ಡೇಟಾ:

- Strong's: H817

ಅಪರಾಧ, ಅಪರಾಧಗಳು, ಅಪರಾಧಿ, ಅಪರಾಧಿಗಳು

ಪದದ ಅರ್ಥವಿವರಣೆ

“ಅಪರಾಧ” ಎನ್ನುವ ಪದವು ಒಂದು ದೇಶದ ಅಥವಾ ರಾಷ್ಟ್ರದ ಕಾನೂನನ್ನು ಉಲ್ಲಂಘಿಸುವ ಪಾಪವನ್ನು ಸೂಚಿಸುತ್ತದೆ. “ಅಪರಾಧಿ” ಎನ್ನುವ ಪದವು ಅಪರಾಧ ಮಾಡಿದ ವ್ಯಕ್ತಿಯನ್ನು ಸೂಚಿಸುತ್ತದೆ.

- ವ್ಯಕ್ತಿಯನ್ನು ಸಾಯಿಸುವುದು ಅಥವಾ ಇನ್ನೊಬ್ಬರ ವಸ್ತುಗಳನ್ನು ಕದಿಯುವುದು ಎನ್ನುವ ಕ್ರಿಯೆಗಳು ಅನೇಕ ವಿಧವಾದ ಅಪರಾಧಗಳಿಗೆ ಉದಾಹರಣೆಗಳಾಗಿರುತ್ತವೆ.
- ಸಹಜವಾಗಿ ಅಪರಾಧಿಯನ್ನು ಒಂದು ವಿಧವಾದ ಸೆರೆಯಲ್ಲಿಟ್ಟಿರುತ್ತಾರೆ, ಉದಾಹರಣೆಗೆ ಸೆರೆಮನೆ.
- ಸತ್ಯವೇದದ ಕಾಲದಲ್ಲಿ, ಅಪರಾಧಿಗಳಲ್ಲಿ ಕೆಲವರು ದೇಶಭ್ರಷ್ಟರಾಗಿದ್ದರು, ಅವರು ಮಾಡಿದ ಅಪರಾಧಕ್ಕೆ ಪ್ರತಿಕಾರ ತೆಗೆದುಕೊಳ್ಳುವ ಜನರಿಂದ ತಪ್ಪಿಸಿಕೊಳ್ಳಲು ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ತಿರುಗಾಡುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ಕಳ್ಳ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೋಥಿ.02:8-10
- ಹೋಶೇಯ.06:8-9
- ಯೋಬ.31:26-28
- ಲೂಕ.23:32
- ಮತ್ತಾಯ.27:23-24

ಪದ ಡೇಟಾ:

- Strong's: H2154, H2400, H4639, H5771, H7563, H7564, G156, G1462, G2556, G2557, G4467

ಅಪವಿತ್ರ, ಅಪವಿತ್ರವಾಗಿದೆ, ಅಪವಿತ್ರಗೊಳಿಸುವುದು

ಪದದ ಅರ್ಥವಿವರಣೆ:

ಯಾವುದಾದರೊಂದನ್ನು ಅಪವಿತ್ರಗೊಳಿಸುವುದು ಎಂದರೆ ಪವಿತ್ರವಾದದ್ದನ್ನು ಅಗೌರವಪಡಿಸುವ, ಮಾಲಿನ್ಯಗೊಳಿಸುವ ಅಥವಾ ಅಶುದ್ಧಗೊಳಿಸುವ ವಿಧಾನದಲ್ಲಿ ನಡೆದುಕೊಳ್ಳುವುದು ಎಂದರ್ಥ.

- ಅಪವಿತ್ರವಾದ ವ್ಯಕ್ತಿ ದೇವರನ್ನು ಅಗೌರವಪಡಿಸುವ ಅಥವಾ ಅಪವಿತ್ರಗೊಳಿಸುವ ವಿಧಾನದಲ್ಲಿ ನಡೆದುಕೊಳ್ಳುವ ವ್ಯಕ್ತಿಯಾಗಿರುತ್ತಾನೆ.
- "ಅಪವಿತ್ರ" ಎನ್ನುವ ಕ್ರಿಯಾಪದವನ್ನು "ಅಪವಿತ್ರವಾಗಿ ನಡೆದುಕೋ" ಅಥವಾ "ಯಾರಾದರೊಬ್ಬರ ವಿಷಯದಲ್ಲಿ ಅಗೌರವದಿಂದ ನಡೆದುಕೋ" ಅಥವಾ "ಘನಹೀನ ಮಾಡು" ಎಂದೂ ಅನುವಾದ ಮಾಡಬಹುದು.
- ಇಸ್ರಾಯೇಲ್ಯರು ತಮ್ಮಷ್ಟಕ್ಕೆ ತಾವು ವಿಗ್ರಹಗಳೊಂದಿಗೆ "ಅಪವಿತ್ರಗೊಳಿಸಿಕೊಂಡರು" ಎಂದು ದೇವರು ಅವರೊಂದಿಗೆ ಹೇಳಿದನು, ಜನರು ಈ ಪಾಪ ಮಾಡುವುದರಿಂದ ತಮ್ಮನ್ನು ತಾವು "ಅಶುದ್ಧಗೊಳಿಸಿಕೊಂಡರು" ಅಥವಾ "ಅಗೌರವಪಡಿಸಿಕೊಂಡರು" ಎಂದು ಇದರ ಅರ್ಥವಾಗಿರುತ್ತದೆ. ಅವರು ದೇವರನ್ನೂ ಅಗೌರವಪಡಿಸಿದರು.
- ಸಂದರ್ಭಾನುಗುಣವಾಗಿ, "ಅಪವಿತ್ರ" ಎನ್ನುವ ವಿಶೇಷಣ ಪದವನ್ನು "ಅಗೌರವಪಡಿಸು" ಅಥವಾ "ಅದೈವಿಕ" ಅಥವಾ "ಅಪರಿಶುದ್ಧ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಶುದ್ಧಗೊಳಿಸು, ಪರಿಶುದ್ಧ, ಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.02:16-18
- ಯೆಹೆ.20:8-9
- ಮಲಾಕಿ.01:10-12
- ಮತ್ತಾಯ.12:5-6
- ಅರಣ್ಯ.18:30-32

ಪದ ಡೇಟಾ:

- Strong's: H2455, H2490, H2491, H2610, H2613, H5234, H8610, G952, G953

ಅಭಿವೃದ್ಧಿ ಹೊಂದು, ಅಭಿವೃದ್ಧಿ ಹೊಂದಿದೆ, ಅಭಿವೃದ್ಧಿಯಾಗುವುದು

ಪದದ ಅರ್ಥವಿವರಣೆ:

"ಅಭಿವೃದ್ಧಿ ಹೊಂದು" ಎನ್ನುವ ಪದವು ಚೆನ್ನಾಗಿ ಜೀವಿಸುವುದನ್ನು ಮತ್ತು ಭೌತಿಕವಾಗಿ ಅಥವಾ ಆತ್ಮೀಯಕವಾಗಿ ಅಭಿವೃದ್ಧಿಯಾಗುತ್ತಿರುವುದನ್ನು ಸಾಧಾರಣವಾಗಿ ಸೂಚಿಸುತ್ತದೆ. ಜನರು ಅಥವಾ ಒಂದು ದೇಶವು "ಸಮೃದ್ಧಿ" ಆಗುತ್ತಿರುವಾಗ, ಅವರು ಶ್ರೀಮಂತರೆಂದು ಮತ್ತು ಅವರೆಲ್ಲರು ಯಶಸ್ವಿಯಾಗಿರಬೇಕೆಂದು ಅದರ ಅರ್ಥವಾಗಿರುತ್ತದೆ. ಅವರು "ಅಭಿವೃದ್ಧಿ"ಯನ್ನು ಅನುಭವಿಸುತ್ತಿದ್ದಾರೆ ಎಂದರ್ಥವಾಗಿರುತ್ತದೆ.

- "ಸಮೃದ್ಧಿ" ಎನ್ನುವ ಪದವು ಅನೇಕ ಬಾರಿ ಆಸ್ತಿಪಾಸ್ತಿಗಳನ್ನು ಮತ್ತು ಹಣವನ್ನು ಗಳಿಸುವುದರಲ್ಲಿ ಯಶಸ್ವಿಯನ್ನು ಅಥವಾ ಜನರು ಚೆನ್ನಾಗಿ ಜೀವಿಸುವುದಕ್ಕೆ ಅವರಿಗೆ ಬೇಕಾದ ಪ್ರತಿಯೊಂದನ್ನು ಒದಗಿಸಿಕೊಡುವುದರಲ್ಲಿ ಯಶಸ್ವಿಯನ್ನು ಸೂಚಿಸುತ್ತದೆ.
- ಸತ್ಯವೇದದಲ್ಲಿ "ಸಮೃದ್ಧಿ" ಎನ್ನುವ ಪದವು ಒಳ್ಳೆಯ ಆರೋಗ್ಯವನ್ನು ಮತ್ತು ಮಕ್ಕಳೊಂದಿಗೆ ಆಶೀರ್ವಾದ ಹೊಂದುವುದನ್ನು ಕೂಡ ಸೂಚಿಸುತ್ತದೆ.
- "ಸಮೃದ್ಧಿ" ಹೊಂದಿದ ಪಟ್ಟಣ ಅಥವಾ ದೇಶ ಎಂದರೆ ಅನೇಕ ಜನರನ್ನು ಹೊಂದಿದ, ಒಳ್ಳೆಯ ಆಹಾರ ಉತ್ಪಾದನೆ ಮಾಡುವ, ಮತ್ತು ಹಣವನ್ನು ಹೆಚ್ಚಾಗಿ ಗಳಿಸುವ ವ್ಯಾಪಾರವನ್ನು ಹೊಂದಿರುವ ಪಟ್ಟಣ ಅಥವಾ ದೇಶ ಎಂದರ್ಥ.
- ಒಬ್ಬ ವ್ಯಕ್ತಿ ದೇವರ ಬೋಧನೆಗಳಿಗೆ ವಿಧೇಯತೆಯನ್ನು ತೋರಿಸಿದಾಗ ಆ ವ್ಯಕ್ತಿ ಆತ್ಮೀಯಕವಾದ ಸಮೃದ್ಧಿಯನ್ನು ಹೊಂದುವನೆಂದು ಸತ್ಯವೇದವು ಬೋಧನೆ ಮಾಡುತ್ತಿದೆ. ಅವನು ಸಂತೋಷ ಮತ್ತು ಸಮಾಧಾನಗಳ ಆಶೀರ್ವಾದಗಳನ್ನು ಅನುಭವಿಸುವನು. ದೇವರು ಯಾವಾಗಲೂ ಜನರಿಗೆ ಸಂಪತ್ತನ್ನೇ ಕೊಡುವುದಿಲ್ಲ, ಆದರೆ ಜನರು ದೇವರ ಮಾರ್ಗಗಳನ್ನು ಅನುಸರಿಸಿ ನಡೆದುಕೊಂಡಾಗ ಆತನು ಯಾವಾಗಲೂ ಅವರನ್ನು ಆತ್ಮೀಯಕವಾಗಿ ಸಮೃದ್ಧಿಗೊಳಿಸುವನು.
- ಸಂದರ್ಭಾನುಸಾರವಾಗಿ, "ಅಭಿವೃದ್ಧಿ ಹೊಂದು" ಎನ್ನುವ ಪದವನ್ನು "ಯಶಸ್ವಿಯಾದ ಆತ್ಮೀಯತೆ" ಅಥವಾ "ದೇವರಿಂದ ಆಶೀರ್ವಾದ ಹೊಂದುವುದು" ಅಥವಾ "ಒಳ್ಳೆಯ ಕಾರ್ಯಗಳನ್ನು ಅನುಭವಿಸುವುದು" ಅಥವಾ "ಚೆನ್ನಾಗಿ ಜೀವಿಸುವುದು" ಎಂದೂ ಅನುವಾದ ಮಾಡಬಹುದು.
- "ಸಮೃದ್ಧಿ" ಎನ್ನುವ ಪದವನ್ನು "ಯಶಸ್ವಿ" ಅಥವಾ "ಸಂಪತ್ತಿನ" ಅಥವಾ "ಆತ್ಮೀಯ ಫಲ" ಎಂದೂ ಅನುವಾದ ಮಾಡಬಹುದು.
- "ಅಭಿವೃದ್ಧಿ" ಎನ್ನುವ ಪದವನ್ನು "ಚೆನ್ನಾಗಿರುವುದು" ಅಥವಾ "ಸಂಪತ್ತು" ಅಥವಾ "ಯಶಸ್ವಿ" ಅಥವಾ "ಹೆಚ್ಚಾದ ಆಶೀರ್ವಾದಗಳು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆಶೀರ್ವದಿಸು, ಫಲ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.29:22-23
- ಧರ್ಮೋ.23:06
- ಯೋಬ.36:11
- ಯಾಜಕ.25:26-28
- ಕೀರ್ತನೆ.001:3

ಪದ ಡೇಟಾ:

- Strong's: H1129, H1767, H1878, H1879, H2428, H2896, H2898, H3027, H3190, H3444, H3498, H3787, H4195, H5381, H6500, H6509, H6555, H6743, H6744, H7230, H7487, H7919, H7951, H7961, H7963, H7965,

ಅಭಿವೃದ್ಧಿ ಹೊಂದು, ಅಭಿವೃದ್ಧಿಯಾಗು, ಅಭಿವೃದ್ಧಿ ಮಾಡಲ್ಪಟ್ಟಿರುತ್ತದೆ

ಪದದ ಅರ್ಥವಿವರಣೆ:

“ಅಭಿವೃದ್ಧಿ ಹೊಂದು” ಎನ್ನುವ ಪದಕ್ಕೆ ಸಂಖ್ಯೆಯಲ್ಲಿ ಬಹಳವಾಗಿ ಹೆಚ್ಚುತ್ತಿರುವುದು. ಯಾವುದಾದರೊಂದು ಮೊತ್ತದಲ್ಲಿ ಹೆಚ್ಚುತ್ತಿರುವುದನ್ನು ಕೂಡ ಸೂಚಿಸುತ್ತದೆ, ಅಭಿವೃದ್ಧಿ ಹೊಂದುವುದಕ್ಕೆ ನೋವನ್ನುಂಟು ಮಾಡುವುದನ್ನು ಸೂಚಿಸುತ್ತದೆ.

- ದೇವರು ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ “ಅಭಿವೃದ್ಧಿ” ಹೊಂದಿ, ಭೂಮಿಯನ್ನು ತುಂಬಿಸಬೇಕೆಂದು ಹೇಳಿದನು. ಇದು ತಮ್ಮ ತಮ್ಮ ಜಾತಿಗಳನ್ನು ಹೆಚ್ಚಾಗಿ ಅಭಿವೃದ್ಧಿಗೊಳಿಸಬೇಕೆನ್ನುವುದರ ಕುರಿತಾಗಿರುವ ಆಜ್ಞೆಯಾಗಿದ್ದಿತ್ತು.
- ಯೇಸು 5,000 ಜನರಿಗೆ ಆಹಾರವನ್ನು ಕೊಡುವುದರ ಕ್ರಮದಲ್ಲಿ ರೊಟ್ಟಿಯನ್ನು ಮತ್ತು ಮೀನನ್ನು ಅಭಿವೃದ್ಧಿಗೊಳಿಸಿದನು. ಆಹಾರವು ಹೆಚ್ಚುತ್ತಾ ಇದ್ದಿತ್ತು, ಇದರಿಂದ ಆ ಜನರಿಗೆ ಬೇಕಾಗಿರುವ ಸಾಕಷ್ಟು ಆಹಾರಕ್ಕಿಂತ ಹೆಚ್ಚಿನ ಆಹಾರವಿದ್ದಿತ್ತು.
- ಸಂದರ್ಭಾನುಸಾರವಾಗಿ, ಈ ಪದವನ್ನು “ಹೆಚ್ಚಳ” ಅಥವಾ “ಹೆಚ್ಚಿಸುವುದಕ್ಕೆ ಕಾರಣವಾಗು” ಅಥವಾ “ಸಂಖ್ಯೆಯಲ್ಲಿ ಬಹಳವಾಗಿ ಹೆಚ್ಚುತ್ತಿರುವುದು” ಅಥವಾ “ಸಂಖ್ಯೆಯಲ್ಲಿ ಬಹಳವಾಗಿ ಏರುತ್ತಾ ಇರುವುದು” ಅಥವಾ “ಅಸಂಖ್ಯಾಕವಾಗಿ ಮಾರ್ಪಡುವುದು” ಎಂದೂ ಅನುವಾದ ಮಾಡಬಹುದು.
- “ನಿನ್ನ ಕಷ್ಟವು ಬಹಳವಾಗಿ ಹೆಚ್ಚುತ್ತಾ ಇರುವುದು” ಎನ್ನುವ ಮಾತು “ನಿನ್ನ ನೋವನ್ನು ಅತೀ ಹೆಚ್ಚಾಗಿ ಆಗುವಂತೆ ಮಾಡುವುದು” ಅಥವಾ “ಹೆಚ್ಚಾದ ನೋವನ್ನು ಅನುಭವಿಸುವಂತೆ ಮಾಡುವುದು” ಎಂದೂ ಅನುವಾದ ಮಾಡಬಹುದು.
- “ಕುದುರೆಗಳನ್ನು ಅಭಿವೃದ್ಧಿಗೊಳಿಸುವುದು” ಎನ್ನುವುದಕ್ಕೆ “ದುರಾಸೆಯಿಂದ ಹೆಚ್ಚಿನ ಕುದುರೆಗಳನ್ನು ವಶಪಡಿಸಿಕೊಳ್ಳುವುದು” ಅಥವಾ “ಕುದುರೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡೆದುಕೊಳ್ಳುವುದು” ಎಂದರ್ಥ."

ಸತ್ಯವೇದದ ಅನುಬಂಧ ವಾಕ್ಯಗಳು:

- ಧರ್ಮೋ.08:01
- ಆದಿ.09:07
- ಆದಿ.22:17
- ಹೋಶೆಯ.04:6-7

ಪದ ಡೇಟಾ:

- Strong's: H3254, H3527, H6280, H7231, H7233, H7235, H7680, G4052, G4129

ಅಭಿಷೆಕಿಸು, ಅಭಿಷೇಕಿಸಿದೆ, ಪಟ್ಟಾಭಿಷೇಕ, ಹಿಂದೆಯೇ ಯೋಜಿಸಲಾಗಿದೆ, ಸ್ಥಾಪಿಸಲಾಗಿದೆ, ಸಿದ್ಧಪಡಿಸಲಾಗಿದೆ

ಪದದ ಅರ್ಥವಿವರಣೆ:

ಅಭಿಷೇಕಿಸು ಎನ್ನುವ ಪದಕ್ಕೆ ಒಂದು ವಿಶೇಷವಾದ ಕೆಲಸಕ್ಕೆ ಅಥವಾ ಪಾತ್ರೆಗೆ ಒಬ್ಬ ವ್ಯಕ್ತಿಯನ್ನು ಸಾಂಪ್ರದಾಯಿಕವಾಗಿ ಆಯ್ಕೆಮಾಡಿಕೊಳ್ಳುವುದು ಎಂದರ್ಥ. ಸಾಂಪ್ರದಾಯಿಕವಾಗಿ ನಿಯಮವನ್ನುಂಟುಮಾಡು ಅಥವಾ ಆಜ್ಞೆಯನ್ನುಂಟು ಮಾಡು ಎಂದೆನ್ನುವ ಅರ್ಥವೂ ಇದರಿಂದ ಬರುತ್ತದೆ.

- “ಅಭಿಷೇಕಿಸು” ಎನ್ನುವ ಪದಕ್ಕೆ ಅನೇಕಬಾರಿ ಯಾಜಕನಾಗಿ, ಸೇವಕನಾಗಿ ಅಥವಾ ಬೋಧಕನಾಗಿ (ರಬ್ಬೀ) ಇರುವುದಕ್ಕೆ ಯಾರಾದರೊಬ್ಬರನ್ನು ಸಾಂಪ್ರದಾಯಿಕವಾಗಿ ಆಯ್ಕೆ ಮಾಡಿಕೊಳ್ಳುವುದನ್ನು ಸೂಚಿಸುತ್ತದೆ.
- ಉದಾಹರಣೆಗೆ, ದೇವರು ಆರೋನನನ್ನು ಮತ್ತು ತನ್ನ ಸಂತಾನದವರನ್ನೂ ಯಾಜಕರಾಗಿರಲು ಅಭಿಷೇಕಿಸಿದನು.
- ಇದಕ್ಕೆ ಯಾವುದಾದರೊಂದನ್ನು ಸ್ಥಾಪನೆ ಮಾಡುವುದು ಅಥವಾ ವ್ಯವಸ್ಥಾಪಿಸುವುದು ಎನ್ನುವ ಅರ್ಥವನ್ನೂ ಕೊಡುತ್ತದೆ, ಉದಾಹರಣೆಗೆ ಭಕ್ತಿ ಸಂಬಂಧವಾದ ಹಬ್ಬ ಅಥವಾ ಒಡಂಬಡಿಕೆಯನ್ನು ಸ್ಥಾಪಿಸುವುದು.
- ಸಂದರ್ಭಾನುಸಾರವಾಗಿ, “ಅಭಿಷೇಕ” ಎನ್ನುವ ಪದಕ್ಕೆ “ನಿಯೋಜಿಸು” ಅಥವಾ “ನೇಮಿಸು” ಅಥವಾ “ಆದೇಶಿಸು” ಅಥವಾ “ನಿಯಮವನ್ನುಂಟು ಮಾಡು” ಅಥವಾ “ಸ್ಥಾಪಿಸು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆಜ್ಞೆ, ಒಡಂಬಡಿಕೆ, ಶಾಸನ, ಕಾನೂನು, ಧರ್ಮಶಾಸ್ತ್ರ, ಯಾಜಕನು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.12:31-32
- 2 ಸಮು.17:13-14
- ವಿಮೋ.28:40-41
- ಅರಣ್ಯ.03:3
- ಕೀರ್ತನೆ.111:7-9

ಪದ ಡೇಟಾ:

- Strong's: H3245, H4390, H6186, H6213, H6680, H7760, H8239, G1299, G2525, G4270, G4282,

ಅಮಾವಾಸ್ಯೆ

ಪದದ ಅರ್ಥವಿವರಣೆ:

“ಅಮಾವಾಸ್ಯೆ” ಎನ್ನುವ ಪದವು ಅರ್ಧಚಂದ್ರಾಕೃತಿಯ ಬೆಳ್ಳಿಯ ಬೆಳಕಾಗಿರುವ ಚಿಕ್ಕದಾಗಿರುವ ಚಂದ್ರನನ್ನು ಸೂಚಿಸುತ್ತದೆ, ಸೂರ್ಯನು ಮುಳುಗುವ ಸಮಯದಲ್ಲಿ ಭೂ ಗ್ರಹದ ಸುತ್ತಲೂ ತಿರುಗುವ ತನ್ನ ಕಕ್ಷೆಯಲ್ಲಿ ಚಲಿಸುತ್ತಿರುವಂತೆಯೇ ಇದು ಚಂದ್ರನ ಮೊದಲ ಹಂತದ ಆರಂಭವಾಗಿರುತ್ತದೆ, ಇದು ಅಮಾವಾಸ್ಯದ ಮೊದಲನೇ ದಿನವನ್ನೂ ಸೂಚಿಸುತ್ತದೆ, ಇದು ಕೆಲವು ದಿನಗಳ ವರೆಗೆ ಚಂದ್ರನು ಕಪ್ಪಾದನಂತರ ಕಾಣಿಸಿಕೊಳ್ಳುತ್ತದೆ

- ಪುರಾತನ ಕಾಲಗಳಲ್ಲಿ ಅಮಾವಾಸ್ಯೆಗಳನ್ನು ತಿಂಗಳುಗಳೆನ್ನುವ ಕೆಲವೊಂದು ನಿರ್ದಿಷ್ಟವಾದ ಕಾಲಗಳ ವ್ಯವಧಿಯ ಆರಂಭಗಳಲ್ಲಿ ಮಾತ್ರ ಗುರುತಿಸುತ್ತಿದ್ದರು.
- ಇಸ್ರಾಯೇಲ್ಯರು ಟಗರಿನ ಕೊಂಬನ್ನು ಊದುತ್ತಾ ಅಮಾವಾಸ್ಯೆಯ ಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದರು.
- ಈ ಸಮಯವನ್ನು “ತಿಂಗಳಿನ ಆರಂಭ” ಎಂಬುದಾಗಿ ಸತ್ಯವೇದವೂ ಸೂಚಿಸುತ್ತದೆ.

(ಈ ಪದಗಳನ್ನು ಸಹ ನೋಡಿರಿ : ತಿಂಗಳು, ಭೂಮಿ, ಹಬ್ಬ, ಕೊಂಬು, ಕುರಿ)

ಸತ್ಯವೇದದ ವಾಕ್ಯಗಳು:

- 1 ಪೂರ್ವ 23:31
- 1 ಸಮು 20:5
- 2 ಅರಸ 4:23-24
- ಯೆಹೆ 45:16-17
- ಯೆಶಯಾ 1:12-13

ಪದ ಡೇಟಾ:

- Strong's: H2320, G33760, G35610

ಅಮೂಲ್ಯ

ಸತ್ಯಾಂಶಗಳು:

“ಅಮೂಲ್ಯ” ಎನ್ನುವ ಪದವು ತುಂಬಾ ಬೆಲೆಯುಳ್ಳದ್ದಾಗಿ ಪರಿಗಣಿಸುವ ವಸ್ತುಗಳನ್ನು ಅಥವಾ ಜನರನ್ನು ವಿವರಿಸುತ್ತದೆ.

- “ಅಮೂಲ್ಯವಾದ ಕಲ್ಲುಗಳು” ಅಥವಾ “ಅಮೂಲ್ಯವಾದ ಆಭರಣಗಳು” ಎನ್ನುವ ಪದವು ಬಣ್ಣ ಬಣ್ಣವಾದ ಖನಿಜಗಳು ಮತ್ತು ಕಲ್ಲುಗಳನ್ನು ಸೂಚಿಸುತ್ತದೆ ಅಥವಾ ಸುಂದರವಾದ, ಪ್ರಯೋಜನಕರವಾದ ಇತರ ಗುಣಲಕ್ಷಣಗಳನ್ನು ಹೊಂದಿರುವ ಕಲ್ಲುಗಳನ್ನು ಅಥವಾ ಖನಿಜಗಳನ್ನು ಸೂಚಿಸುತ್ತದೆ.
- ಅಮೂಲ್ಯವಾದ ಕಲ್ಲುಗಳಿಗೆ ಉದಾಹರಣೆಗಳು ಎಂದರೆ ವಜ್ರಗಳು, ಮಾಣಿಕ್ಯಗಳು ಮತ್ತು ಪಚ್ಚೆಗಳು.
- ಬಂಗಾರ ಮತ್ತು ಬೆಳ್ಳಿಗಳು “ಅಮೂಲ್ಯವಾದ ಲೋಹಗಳು” ಎಂದು ಕರೆಯುತ್ತಾರೆ.
- ದೇವ ಜನರು ಆತನ ದೃಷ್ಟಿಯಲ್ಲಿ “ಅಮೂಲ್ಯ” ಎಂದು ಯೆಹೋವನು ಹೇಳುತ್ತಿದ್ದಾನೆ (ಯೆಶಯಾ.43:4).
- ದೇವರ ದೃಷ್ಟಿಯಲ್ಲಿ ಒಳ್ಳೇಯ ಮತ್ತು ನೆಮ್ಮದಿಯ ಆತ್ಮವು ಅಮೂಲ್ಯವಾಗಿದೆಯೆಂದು ಪೇತ್ರನು ಬರೆದಿದ್ದಾನೆ (1 ಪೇತ್ರ.3:4).
- ಈ ಪದವನ್ನು ‘ಬೆಲೆಯುಳ್ಳದ್ದು” ಅಥವಾ “ತುಂಬಾ ಇಷ್ಟವಾಗಿರುವುದು” ಅಥವಾ “ಪಾಲಿಸಬೇಕಾದದ್ದು” ಅಥವಾ “ಉನ್ನತ ಬೆಲೆಯುಳ್ಳದ್ದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಬಂಗಾರ, ಬೆಳ್ಳಿ)

ಸತ್ಯವೇದದ ವಾಕ್ಯಗಳು:

- 2 ಪೇತ್ರ 1:1
- ಅಪೊ.ಕೃತ್ಯ 20:22-24
- ದಾನಿ 11:38-39
- ಪ್ರಲಾಪ 1:7
- ಲೂಕ 7:2-5
- ಕೀರ್ತನೆ 36:8

ಪದ ಡೇಟಾ:

- Strong's: H0068, H1431, H2532, H2667, H2896, H3357, H3365, H3366, H3368, H4022, H4030, H4261, H4262, H5238, H8443, G9270, G17840, G24720, G41850, G41860, G50920, G50930

ಅರಮನೆ, ಅರಮನೆಗಳು

ಪದದ ಅರ್ಥವಿವರಣೆ:

“ಅರಮನೆ” ಎನ್ನುವ ಪದವು ಅರಸನು ತನ್ನ ಕುಟುಂಬ ಸದಸ್ಯರು ಮತ್ತು ಸೇವಕರೊಂದಿಗೆ ವಾಸಿಸುತ್ತಿದ್ದ ಮನೆಯನ್ನು ಅಥವಾ ಭವನವನ್ನು ಸೂಚಿಸುತ್ತದೆ.

- ಹೊಸ ಒಡಂಬಡಿಕೆಯಲ್ಲಿ ದಾಖಲು ಮಾಡಿದ ಮಹಾ ಯಾಜಕನು ಕೂಡ ಅರಮನೆಯ ಸಂಕೀರ್ಣದಲ್ಲಿ ಜೀವಿಸಿದ್ದನು.
- ಸ್ಥಳಗಳನ್ನು ಸುಂದರವಾದ ವಾಸ್ತುಶಿಲ್ಪಿಗಳಿಂದ ಮತ್ತು ಪೀಟೋಪಕರಣಗಳೊಂದಿಗೆ ಹೆಚ್ಚಾಗಿ ಅಲಂಕೃತವಾಗಿದ್ದವು.
- ಅರಮನೆಯ ಭವನಗಳು ಮತ್ತು ಪೀಟೋಪಕರಣಗಳು ಮರದ ಕಟ್ಟಿಗೆಯಿಂದ ಅಥವಾ ಕಲ್ಲಿನಿಂದ ಕಟ್ಟಲ್ಪಟ್ಟಿರುತ್ತವೆ, ಮತ್ತು ಅನೇಕಬಾರಿ ಭವನಗಳನ್ನು ಬೆಲೆಯುಳ್ಳ ಕಟ್ಟಿಗೆ, ಬಂಗಾರ ಅಥವಾ ದಂತಗಳಿಂದ ಹೊದಿಸಿರುತ್ತಾರೆ.
- ಅನೇಕ ಇತರ ಜನರು ಕೂಡ ಆ ಅರಮನೆಯ ಸಂಕೀರ್ಣದಲ್ಲಿ ಜೀವಿಸಿದ್ದಾರೆ ಮತ್ತು ಕೆಲಸ ಮಾಡಿದ್ದಾರೆ, ಸಹಜವಾಗಿ ಈ ಅರಮನೆಯಲ್ಲಿ ಅನೇಕ ವಿಧವಾದ ಭವನಗಳು ಮತ್ತು ಅಂಗಳಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಅಂಗಳ, ಮಹಾ ಯಾಜಕ, ಅರಸ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.28:7-8
- 2 ಸಮು.11:2-3
- ದಾನಿ.05:5-6
- ಮತ್ತಾಯ.26:3-5
- ಕೀರ್ತನೆ.045:8-9

ಪದ ಡೇಟಾ:

- Strong's: H643, H759, H1001, H1002, H1004, H1055, H1406, H1964, H1965, H2038, H2918, G833, G933, G4232

ಅರಸ, ಅರಸರು, ರಾಜ್ಯ, ರಾಜ್ಯಗಳು, ರಾಜ್ಯಾಧಿಕಾರ, ರಾಜಪ್ರಭುತ್ವ

ಪದದ ಅರ್ಥವಿವರಣೆ:

"ಅರಸ" ಎನ್ನುವ ಪದವು ಒಬ್ಬ ವ್ಯಕ್ತಿ ಒಂದು ಪಟ್ಟಣವನ್ನಾಗಲಿ, ರಾಜ್ಯವನ್ನಾಗಲಿ ಅಥವಾ ದೇಶವನ್ನಾಗಲಿ ಸರ್ವೋಚ್ಚ ಆಡಳಿತಗಾರನನ್ನು ಸೂಚಿಸುತ್ತದೆ.

- ಅರಸನನ್ನು ಸಹಜವಾಗಿ ಆಳುವುದಕ್ಕೆ ಆಯ್ದುಕೊಳ್ಳುತ್ತಾರೆ, ಯಾಕಂದರೆ ತನ್ನ ಕುಟುಂಬವು ಮುಂಚೆ ಇರುವ ಅರಸರಿಗೆ ಸಂಬಂಧಪಟ್ಟಿರುತ್ತದೆ.
- ಅರಸನು ಮರಣಿಸಿದಾಗ, ಆ ಅರಸನ ಹಿರಿಯ ಮಗನು ತದನಂತರ ಅರಸನಾಗುತ್ತಾನೆ.
- ಪುರಾತನ ಕಾಲಗಳಲ್ಲಿ ಅರಸನಿಗೆ ತನ್ನ ರಾಜ್ಯದಲ್ಲಿನ ಎಲ್ಲಾ ಜನರ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿದ್ದನು.
- ಯಾವಾಗಲೋ ಒಂದುಸಲ "ಅರಸ" ಎನ್ನುವ ಪದವನ್ನು ನಿಜವಾದ ಅರಸನಲ್ಲದ ಒಬ್ಬ ವ್ಯಕ್ತಿಯನ್ನು ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ, ಉದಾಹರಣೆಗೆ, ಹೊಸ ಒಡಂಬಡಿಕೆಯಲ್ಲಿ "ಅರಸ ಹೆರೋದ".
- ಸತ್ಯವೇದದಲ್ಲಿ ದೇವರನ್ನು ಅನೇಕಸಲ ತನ್ನ ಜನರನ್ನು ಆಳುವ ಅರಸನನ್ನಾಗಿ ಸೂಚಿಸಿದ್ದಾರೆ.
- "ದೇವರ ರಾಜ್ಯ" ಎನ್ನುವ ಮಾತು ದೇವರು ತನ್ನ ಜನರನ್ನು ಆಳುವದನ್ನು ಸೂಚಿಸುತ್ತದೆ.
- ಯೇಸುವನ್ನು "ಯೆಹೂದ್ಯರ ಅರಸ", "ಇಸ್ರಾಯೇಲ್ ಅರಸ", ಮತ್ತು "ಅರಸರಿಗೆ ಅರಸ" ಎಂಬುದಾಗಿ ಕರೆಯಲ್ಪಟ್ಟಿದ್ದಾನೆ,
- ಯೇಸು ಹಿಂದಿರುಗಿ ಬರುವಾಗ, ಅರಸನಾಗಿ ಆತನು ಈ ಲೋಕವನ್ನೆಲ್ಲಾ ಆಳುತ್ತಾನೆ.
- ಈ ಪದವನ್ನು "ಸರ್ವೋಚ್ಚ ಮುಖ್ಯಸ್ಥ" ಅಥವಾ "ಪರಿಪೂರ್ಣವಾದ ನಾಯಕ" ಅಥವಾ "ಸಾರ್ವಭೌಮ ಆಳ್ವಿಕೆ" ಎಂದೂ ಅನುವಾದ ಮಾಡಬಹುದು.
- "ಅರಸರಿಗೆ ಅರಸ" ಎನ್ನುವ ಮಾತನ್ನು "ಇತರ ಎಲ್ಲಾ ಅರಸರನ್ನು ಆಳುವ ಅರಸ" ಅಥವಾ "ಇತರ ಪಾಲಕರ ಮೇಲೆ ಅಧಿಕಾರವನ್ನು ಹೊಂದಿದ ಸರ್ವೋಚ್ಚ ಆಡಳಿತಗಾರ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅರಬಿಯ, ಮೇಕೆ, ಇಷ್ಮಾಯೇಲ್, ತ್ಯಾಗ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.06:15-16
- 2 ಅರಸ.05:17-19
- 2 ಸಮು.05:3-5
- ಅಪೊ.ಕೃತ್ಯ.07:9-10
- ಅಪೊ.ಕೃತ್ಯ.13:21-22
- ಯೋಹಾನ.01:49-51
- ಲೂಕ.01:5-7
- ಲೂಕ.22:24-25
- ಮತ್ತಾಯ.05:33-35
- ಮತ್ತಾಯ.14:8-9

ಸತ್ಯವೇದದಿಂದ ಉದಾಹರಣೆಗಳು:

- **08:06** ಐಗುಪ್ತರು ತಮ್ಮ ಅರಸರನ್ನು ಕರೆಯುವ ಫರೋಹನು ಒಂದು ರಾತ್ರಿ ತನ್ನನ್ನು ತುಂಬಾ ಹೆಚ್ಚಾಗಿ ಕಳವಳಗೊಳಿಸುವ ಎರಡು ಕನಸುಗಳನ್ನು ಕಂಡಿದ್ದನು.
- **16:01** ಇಸ್ರಾಯೇಲ್ಯರಿಗೆ _**ಅರಸನಿಲ್ಲ** _, ಆದ್ದರಿಂದ ಪ್ರತಿಯೊಬ್ಬರು ತಮಗಾಗಿ ಆಲೋಚನೆ ಮಾಡಿಕೊಂಡಿದ್ದನ್ನು ಮಾಡಿದರು.
- **16:18** ಕೊನೆಗೆ, ಇತರ ಎಲ್ಲಾ ದೇಶದ ಜನರಿಗೆ ಅರಸನು ಇದ್ದಂತೆಯೇ, ಜನರು ತಮಗಾಗಿ _ ಅರಸ __ ಬೇಕೆಂದು ದೇವರನ್ನು ಕೇಳಿಕೊಂಡರು.
- **17:05** ಕೊನೆಗೆ, ಸೌಲನು ಯುದ್ಧದಲ್ಲಿ ಮರಣ ಹೊಂದಿದನು, ಮತ್ತು ದಾವೀದನು ಇಸ್ರಾಯೇಲ್ಯರಿಗೆ _ **ಅರಸನಾದನು** . ಇವನು ಒಳ್ಳೆಯ **ಅರಸನಾಗಿದ್ದನು** _ , ಮತ್ತು ಜನರು ಅವನನ್ನು ತುಂಬಾ ಹೆಚ್ಚಾಗಿ ಪ್ರೀತಿಸುತ್ತಿದ್ದರು.
- **21:06** ಮೆಸ್ಸೀಯ ಪ್ರವಾದಿಯಾಗಿ, ಯಾಜಕನಾಗಿ ಮತ್ತು _ **ಅರಸನಾಗಿ** _ ಇರುತ್ತಾನೆಂದು ದೇವರ ಪ್ರವಾದಿಗಳು ಕೂಡ ಹೇಳಿದ್ದರು.
- **48:14** ದಾವೀದನು ಇಸ್ರಾಯೇಲಿಯರಿಗೆ **ಅರಸನಾಗಿದ್ದನು** , ಆದರೆ ಯೇಸು ಸರ್ವ ವಿಶ್ವಕ್ಕೆ (ಅಥವಾ ಸರ್ವ ಸೃಷ್ಟಿಗೆ)_ ಅರಸನಾಗಿದ್ದಾನೆ __!

ಪದ ಡೇಟಾ:

- Strong's: H4427, H4428, H4430, G935, G936

ಅರ್ಥಮಾಡಿಕೊಳ್ಳಿ, ಅರ್ಥಮಾಡಿಸುವುದು, ಆಲೋಚಿಸು

ಪದದ ಅರ್ಥವಿವರಣೆ:

“ಅರ್ಥಮಾಡಿಕೊಳ್ಳಿ” ಎನ್ನುವ ಪದಕ್ಕೆ ಒಂದು ಮಾಹಿತಿಯನ್ನು ಕೇಳುವುದು ಅಥವಾ ಪಡೆದುಕೊಳ್ಳುವುದು ಮತ್ತು ಅದರ ಅರ್ಥ ಅಥವಾ ಭಾವವೇನೆಂದು ತಿಳಿದುಕೊಳ್ಳುವುದಾಗಿರುತ್ತದೆ.

- “ಅರ್ಥಮಾಡಿಕೊಳ್ಳುತ್ತಿರುವುದು” ಎನ್ನುವ ಮಾತು “ಅರಿವು” ಅಥವಾ “ಜ್ಞಾನ” ಅಥವಾ ಎನಾದರೊಂದನ್ನು ಹೇಗೆ ಮಾಡಬೇಕೆಂದು ಅರಿತುಕೊಳ್ಳುವುದನ್ನು ಸೂಚಿಸುತ್ತದೆ.
- ಯಾರಾದರೊಬ್ಬರನ್ನು ಅರ್ಥಮಾಡಿಕೊಳ್ಳುವುದೆನ್ನುವುದೂ ಆ ವ್ಯಕ್ತಿ ಹೇಗೆ ಭಾವಿಸುತ್ತಿದ್ದಾನೆಂದು ತಿಳಿದುಕೊಳ್ಳುವುದು ಎಂದರ್ಥ.
- ಎಮ್ಮಾಹು ಎನ್ನುವ ಊರಿನ ರಸ್ತೆಯಲ್ಲಿ ಹೋಗುತ್ತಿರುವಾಗ ಯೇಸು ತನ್ನ ಶಿಷ್ಯರು ಮೆಸ್ಸೀಯನ ಕುರಿತಾದ ಲೇಖನಗಳ ಅರ್ಥವನ್ನು ತಿಳಿದುಕೊಳ್ಳುವಂತೆ ಮಾಡಿದನು.
- ಸಂದರ್ಭಾನುಸಾರವಾಗಿ, “ಅರ್ಥಮಾಡಿಕೊಳ್ಳಿ” ಎನ್ನುವ ಮಾತು “ತಿಳಿ” ಅಥವಾ “ನಂಬು” ಅಥವಾ “ಗ್ರಹಿಸು” ಅಥವಾ “(ಯಾವುದಾದರೊಂದರ) ಅರ್ಥ ಏನೆಂಬುವುದನ್ನು ತಿಳಿದುಕೋ” ಎಂದೂ ಅನುವಾದ ಮಾಡಿದನು.
- ಅನೇಕಬಾರಿ “ಅರ್ಥಮಾಡಿಕೊಳ್ಳಿ” ಎನ್ನುವ ಮಾತು “ಅರಿವು” ಅಥವಾ “ಜ್ಞಾನ” ಅಥವಾ “ಒಳದೃಷ್ಟಿ” ಎಂದೂ ಅನುವಾದ ಮಾಡಬಹುದು."

(ಈ ಪದಗಳನ್ನು ಸಹ ನೋಡಿರಿ : ನಂಬು, ತಿಳಿ, ಜ್ಞಾನ)

ಸತ್ಯವೇದದ ಅನುಬಂಧ ವಾಕ್ಯಗಳು:

- ಯೋಬ.34:16-17
- ಲೂಕ.02:47
- ಲೂಕ.08:10
- ಮತ್ತಾಯ.13:12
- ಮತ್ತಾಯ.13:14
- ಮತ್ತಾಯ.03:05

ಪದ ಡೇಟಾ:

- Strong's: H995, H998, H999, H1847, H2940, H3045, H3820, H3824, H4486, H7200, H7919, H7922, H7924, H8085, H8394, G50, G145, G191, G801, G1097, G1107, G1108, G1271, G1922, G1987, G1990, G2657, G3539, G3563,G4907, G4908, G4920, G5424, G5428, G5429,

ಅರ್ಥವಿವರಣೆ ಹೇಳು, ಅರ್ಥವಿವರಣೆ ಹೇಳುವುದು, ಅರ್ಥವಿವರಣೆ ಹೇಳಲಾಗಿದೆ, ಅರ್ಥವಿವರಣೆ ಹೇಳುತ್ತಾ ಇರುವುದು, ಅರ್ಥವಿವರಣೆ, ಅರ್ಥವಿವರಣೆಗಳು, ಅರ್ಥವಿವರಣೆ ಹೇಳುವಾತನು

ಸತ್ಯಾಂಶಗಳು:

"ಅರ್ಥವಿವರಣೆ ಹೇಳು" ಮತ್ತು "ಅರ್ಥವಿವರಣೆ" ಎನ್ನುವ ಪದಗಳು ಅಸ್ಪಷ್ಟವಾಗಿರುವ ಯಾವುದೇ ಒಂದು ವಿಷಯದ ಅರ್ಥವನ್ನು ವಿವರಿಸುವುದನ್ನು ಮತ್ತು ಅರ್ಥಮಾಡಿಕೊಳ್ಳುವುದನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ ಈ ಪದಗಳು ಅನೇಕಸಲ ದರ್ಶನಗಳ ಅಥವಾ ಕನಸುಗಳ ಅರ್ಥವನ್ನು ವಿವರಿಸುವ ಸಂದರ್ಭದಲ್ಲಿ ಉಪಯೋಗಿಸಲಾಗಿರುತ್ತದೆ.
- ಬಾಬೆಲೋನಿಯ ಅರಸನಿಗೆ ಅಸ್ಪಷ್ಟವಾದ ಕನಸುಗಳು ಬಂದಾಗ, ಆ ಕನಸುಗಳಿಗೆ ಅರ್ಥಗಳನ್ನು ಹೇಳುವುದಕ್ಕೆ ಮತ್ತು ಅವುಗಳನ್ನು ವಿವರಿಸುವುದಕ್ಕೆ ದೇವರು ದಾನಿಯೇಲನಿಗೆ ಸಹಾಯ ಮಾಡಿದರು.
- ಒಂದು ಕನಸಿನ "ಅರ್ಥವಿವರಣೆ" ಎಂದರೆ ಕನಸಿನ ಅರ್ಥದ "ವಿವರಣೆ" ಎಂದರ್ಥ.
- ಹಳೇ ಒಡಂಬಡಿಕೆಯಲ್ಲಿ ದೇವರು ಕೆಲವೊಂದುಸಲ ಭವಿಷ್ಯತ್ತಿನಲ್ಲಿ ನಡೆಯುವ ಕೆಲವು ಸಂಗತಿಗಳನ್ನು ಹೇಳುವುದಕ್ಕೆ ಕನಸುಗಳನ್ನು ಉಪಯೋಗಿಸಿಕೊಂಡರು. ಆದ್ದರಿಂದ ಆ ಕನಸುಗಳ ಅರ್ಥವಿವರಣೆಗಳೆಲ್ಲವು ಪ್ರವಾದನೆಗಳಾಗಿದ್ದವು.
- "ಅರ್ಥವಿವರಣೆ ಹೇಳು" ಎನ್ನುವ ಮಾತು ಕೂಡ ಇತರರ ವಿಷಯಗಳ ಅರ್ಥವನ್ನು ಹೊರ ತೆಗೆಯುವುದನ್ನು ಕೂಡ ಸೂಚಿಸುತ್ತದೆ, ಉದಾಹರಣೆಗೆ, ಆಕಾಶವು ಹೇಗೆ ಕಾಣಿಸುತ್ತಿದೆ, ಗಾಳಿಯು ಹೇಗೆ ಬೀಸುತ್ತಿದೆ, ಈಗ ವಾತಾವರಣ ತಣ್ಣಗಿದೆಯಾ ಅಥವಾ ಬಿಸಿಯಾಗಿದೆಯಾ ಎನ್ನುವದರ ಆಧಾರದ ಮೇಲೆ ವಾತಾವರಣದ ಅರ್ಥವನ್ನು ಹೇಳಲಾಗುತ್ತದೆ.
- "ಅರ್ಥವಿವರಣೆ ಹೇಳು" ಎನ್ನುವ ಮಾತನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಅರ್ಥವನ್ನು ಹೊರ ತೆಗೆ" ಅಥವಾ "ವಿವರಿಸು" ಅಥವಾ "ಅದರ ಅರ್ಥವನ್ನು ಕೊಡು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಅರ್ಥವಿವರಣೆ" ಎನ್ನುವ ಮಾತನ್ನು "ವಿವರಣೆ" ಅಥವಾ "ಅರ್ಥವನ್ನು ಹೇಳುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ದಾನಿಯೇಲ, ಕನಸು, ಪ್ರವಾದಿ, ದರ್ಶನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.12:9-11
- ದಾನಿಯೇಲ.04:4-6
- ಆದಿ.40:4-5
- ನ್ಯಾಯಾ.07:15-16
- ಲೂಕ.12:54-56

ಪದ ಡೇಟಾ:

- Strong's: H995, H3887, H6591, H6622, H6623, H7667, H7760, H7922, G1252, G1328, G1329, G1381, G1955, G2058, G3177, G4793

ಅರ್ಹತೆಯನ್ನು ಹೊಂದು, ಅರ್ಹತೆ ಹೊಂದಿದೆ, ಅನರ್ಹತೆಯುಳ್ಳದ್ದು

ಪದದ ಅರ್ಥವಿವರಣೆ:

“ಅರ್ಹತೆಯನ್ನು ಹೊಂದು” ಎನ್ನುವ ಮಾತು ಕೆಲವೊಂದು ನಿರ್ದಿಷ್ಟವಾದ ಕೌಶಲ್ಯಗಳನ್ನು ಹೊಂದಿದ್ದಾನೆಂದು ಗುರುತಿಸಲ್ಪಡುವುದು ಅಥವಾ ನಿರ್ದಿಷ್ಟವಾದ ಪ್ರಯೋಜನಗಳನ್ನು ಪಡೆದುಕೊಳ್ಳುವುದಕ್ಕೆ ಹಕ್ಕನ್ನು ಸಂಪಾದಿಸುವುದನ್ನು ಸೂಚಿಸುತ್ತದೆ.

- ಒಂದು ನಿರ್ದಿಷ್ಟವಾದ ಹುದ್ದೆಗೆ “ಅರ್ಹತೆಯನ್ನು “ ಪಡೆದ ಒಬ್ಬ ವ್ಯಕ್ತಿ ಆ ಉದ್ಯೋಗಕ್ಕೆ ಬೇಕಾದ ಕೌಶಲ್ಯಗಳನ್ನು ಮತ್ತು ತರಬೇತಿಯನ್ನು ಹೊಂದಿರಬೇಕು.
- ಅಪೊಸ್ತಲನಾದ ಪೌಲನು ಕೊಲೊಸ್ಸದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ತಂದೆಯಾದ ದೇವರು ವಿಶ್ವಾಸಿಗಳನ್ನು “ಅರ್ಹರನ್ನಾಗಿ” ಮಾಡಿದ್ದಾನೆ, ಅವರೆಲ್ಲರು ತನ್ನ ಬೆಳಕಿನ ರಾಜ್ಯದಲ್ಲಿ ಪಾಲ್ಗೊಳ್ಳಬಹುದು ಎಂದು ಬರೆದಿದ್ದಾನೆ. ಅವರೆಲ್ಲರು ದೈವಿಕವಾದ ಜೀವನಗಳನ್ನು ಮಾಡುವುದಕ್ಕೆ ಬೇಕಾದ ಪ್ರತಿಯೊಂದನ್ನು ದೇವರು ಅವರಿಗೆ ಕೊಟ್ಟಿದ್ದಾನೆಂದು ಈ ಮಾತಿಗೆ ಅರ್ಥವಾಗಿರುತ್ತದೆ.
- ವಿಶ್ವಾಸಿ ದೇವರ ರಾಜ್ಯದಲ್ಲಿರುವುದಕ್ಕೆ ಹಕ್ಕನ್ನು ಸಂಪಾದಿಸಲು ಸಾಧ್ಯವಾಗುವುದಿಲ್ಲ. ದೇವರು ಯೇಸುವಿನ ರಕ್ತದಿಂದ ತನ್ನನ್ನು ವಿಮೋಚನೆ ಮಾಡುವುದರಿಂದಲೇ ಇದು ಅರ್ಹವಾಗಿರುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಅರ್ಹವನ್ನು ಹೊಂದಿದೆ” ಎನ್ನುವ ಮಾತನ್ನು “ಸಿದ್ಧಮಾಡಲ್ಪಟ್ಟಿದೆ” ಅಥವಾ “ಕೌಶಲ್ಯವನ್ನು ಹೊಂದಿದೆ” ಅಥವಾ “ಅಧಿಕಾರ ಕೊಡಲಾಗಿದೆ” ಎಂದೂ ಅನುವಾದ ಮಾಡಬಹುದು.
- ಯಾರಾದರೊಬ್ಬರನ್ನು “ಅರ್ಹಗೊಳಿಸಲು” ಎನ್ನುವ ಮಾತನ್ನು “ಸಿದ್ಧ ಮಾಡುವುದು” ಅಥವಾ “ಬಲಗೊಳಿಸುವುದು” ಅಥವಾ “ಅಧಿಕಾರ ಕೊಡುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕೊಲೊಸ್ಸ, ದೈವಿಕವಾಗಿ, ರಾಜ್ಯ, ಬೆಳಕು, ಪೌಲ, ವಿಮೋಚಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.01:3-5

ಪದ ಡೇಟಾ:

- Strong's: H3581

ಅಳಿಸಿ ಹಾಕು, ಅಳಿದುಹೋಗು, ಅಳಿದುಹೋಗಿದೆ, ವರೆಸು, ವರೆಸುಹಾಕು, ವರೆಸಿದೆ

ಪದದ ಅರ್ಥವಿವರಣೆ:

“ಅಳಿಸು ಹಾಕು” ಮತ್ತು “ವರೆಸು” ಎನ್ನುವ ಪದಗಳಿಗೆ ಸಂಪೂರ್ಣವಾಗಿ ತೆಗೆದುಹಾಕು, ಏನಾದರೊಂದನ್ನು ಅಥವಾ ಯಾರಾದರೊಬ್ಬರನ್ನು ನಾಶಗೊಳಿಸು ಎಂದರ್ಥ.

- ದೇವರು ಅವರನ್ನು ಕ್ಷಮಿಸುವುದರ ಮೂಲಕ ಆತನು ಅವರ ಪಾಪಗಳನ್ನು “ಅಳಿಸಿ ಹಾಕಿದ್ದಾನೆ” ಎನ್ನುವ ಮಾತಿನಂತೆ, ಈ ಎಲ್ಲಾ ಮಾತುಗಳನ್ನು ಧನಾತ್ಮಕ ಭಾವನೆಯಲ್ಲಿ ಉಪಯೋಗಿಸಬಹುದು,
- ದೇವರು ಜನರ ಪಾಪಗಳ ಕಾರಣದಿಂದ ಅವರನ್ನು ನಾಶಗೊಳಿಸಿದ್ದಾರೆ, ಆತನು ಜನರ ಗುಂಪನ್ನು “ವರೆಸಿ ಬಿಟ್ಟಿದ್ದಾರೆ” ಅಥವಾ “ಅಳಿಸಿ ಬಿಟ್ಟಿದ್ದಾರೆ” ಎನ್ನುವ ಮಾತಿನಂತೆ, ಈ ಪದಗಳು ಅನೇಕಬಾರಿ ಋಣಾತ್ಮಕ ಭಾವನೆಯಲ್ಲಿಯೂ ಉಪಯೋಗಿಸಲ್ಪಟ್ಟಿವೆ.
- ದೇವರ ಜೀವ ಗ್ರಂಥದಲ್ಲಿ ಒಬ್ಬ ವ್ಯಕ್ತಿಯ ಹೆಸರು “ಅಳಿಸಲ್ಪಡುವುದು” ಅಥವಾ “ವರೆಸಲ್ಪಡುವುದು” ಎನ್ನುವದರ ಕುರಿತಾಗಿ ಸತ್ಯವೇದ ಮಾತನಾಡುತ್ತದೆ, ಈ ಮಾತಿಗೆ ಆ ವ್ಯಕ್ತಿ ನಿತ್ಯ ಜೀವವನ್ನು ಹೊಂದಿಕೊಳ್ಳುವುದಿಲ್ಲ ಎಂದರ್ಥ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, ಈ ಮಾತನ್ನು “ತೊಲಗಿಸುವುದು” ಅಥವಾ “ತೆಗೆದುಹಾಕುವುದು” ಅಥವಾ “ಸಂಪೂರ್ಣವಾಗಿ ನಾಶಗೊಳಿಸುವುದು” ಅಥವಾ “ಸಂಪೂರ್ಣವಾಗಿ ತೆಗೆದುಹಾಕುವುದು” ಎಂದೂ ಅನುವಾದ ಮಾಡಬಹುದು.
- ಜೀವಗ್ರಂಥದಿಂದ ಒಬ್ಬರ ಹೆಸರನ್ನು ಅಳಿಸಲಾಗುವುದು ಎಂದು ಸೂಚಿಸುವಾಗ, “ಅದರಿಂದ ತೆಗೆದುಹಾಕಲ್ಪಡುವುದು” ಅಥವಾ “ಅದರಿಂದ ತೊಲಗಿಸಲ್ಪಡುತ್ತದೆ” ಎಂದರ್ಥ.

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.29:20-21
- ವಿಮೋ.32:30-32
- ಆದಿ.07:23-24
- ಕೀರ್ತನೆ.051:1-2

ಪದ ಡೇಟಾ:

- Strong's: H3971, H4229, G631, G1591, G1813

ಅವಮಾನ, ಅವಮಾನವನ್ನುಂಟು ಮಾಡುತ್ತದೆ, ಅವಮಾನ ಮಾಡಿದೆ, ಅವಮಾನಕರ

ಪದದ ಅರ್ಥವಿವರಣೆ:

“ಅವಮಾನ” ಎನ್ನುವ ಪದಕ್ಕೆ ಒಬ್ಬರನ್ನು ಅವಮಾನಿಸುವ ಕಾರ್ಯವೊಂದನ್ನು ಮಾಡು ಎಂದರ್ಥ. ಇದು ಕೂಡ ಒಬ್ಬ ವ್ಯಕ್ತಿಯ ನಾಚಿಕೆಗೇಡುತನವನ್ನು ಅಥವಾ ಅಗೌರವವನು ಸೂಚಿಸುತ್ತದೆ.

- “ಅವಮಾನಕರ” ಎನ್ನುವ ಪದವು ಒಬ್ಬ ವ್ಯಕ್ತಿಯನ್ನು ಅಗೌರವಪಡಿಸುವ ಕ್ರಿಯೆಗಳನ್ನು ಅಥವಾ ನಾಚಿಕೆಗೆ ಗುರಿಮಾಡುವ ಕ್ರಿಯೆಗಳನ್ನು ವಿವರಿಸುತ್ತದೆ.
- “ಅವಮಾನಕರ” ಎನ್ನುವ ಪದವನ್ನು ಕೆಲವೊಂದುಬಾರಿ ಪ್ರಾಮುಖ್ಯವಾದ ವಿಷಯಗಳಿಗೆ ಉಪಯೋಗಿಸಲಾಗದ ವಸ್ತುಗಳನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.
- ಮಕ್ಕಳು ತಮ್ಮ ತಂದೆತಾಯಿಗಳನ್ನು ಗೌರವಿಸುವುದಕ್ಕೆ ಮತ್ತು ಅವರಿಗೆ ವಿಧೇಯರಾಗುವುದಕ್ಕೆ ಆಜ್ಞಾಪಿಸಲ್ಪಟ್ಟಿದ್ದಾರೆ. ಯಾರ್ಯಾರು ತಮ್ಮ ತಂದೆತಾಯಿಗಳಿಗೆ ಅವಿಧೇಯರಾಗುತ್ತಾರೋ, ಅವರು ತಮ್ಮ ತಂದೆತಾಯಿಗಳನ್ನು ಅವಮಾನಿಸುತ್ತಿದ್ದಾರೆಂದರ್ಥ. ಅವರು ತಮ್ಮ ತಂದೆತಾಯಿಗಳನ್ನು ಗೌರವಿಸದ ವಿಧಾನದಲ್ಲಿ ಅವರು ನಡೆದುಕೊಳ್ಳುತ್ತಿದ್ದಾರೆ.
- ಇಸ್ರಾಯೇಲ್ಯರು ಸುಳ್ಳು ದೇವರುಗಳನ್ನು ಆರಾಧನೆ ಮಾಡಿ, ಅನೈತಿಕವಾದ ನಡತೆಯನ್ನು ಅಭ್ಯಾಸ ಮಾಡಿದಾಗ, ಅವರು ಯೆಹೋವಾ ದೇವರನ್ನು ಅವಮಾನಿಸಿದ್ದಾರೆ.
- ಯೇಸುವಿಗೆ ದೆವ್ವ ಹಿಡಿದಿದೆಯೆಂದು ಹೇಳುವುದರ ಮೂಲಕ ಯೆಹೂದ್ಯರು ಆತನನ್ನು ಅವಮಾನಿಸಿದರು.
- ಈ ಪದವನ್ನು “ಅಗೌರವ” ಅಥವಾ “ಅಗೌರವದಿಂದ ನಡೆದುಕೊಳ್ಳುವುದು” ಎಂದೂ ಅನುವಾದ ಮಾಡಬಹುದು.
- “ಅವಮಾನ” ಎನ್ನುವ ಪದವನ್ನು “ಅಗೌರವ” ಅಥವಾ “ಗೌರವವಿಲ್ಲದಿರುವುದು” ಎಂದೂ ಅನುವಾದ ಮಾಡಬಹುದು.
- ಸಂದರ್ಭಕ್ಕೆ ತಕ್ಕಂತೆ, “ಅವಮಾನಕರ” ಎನ್ನುವದನ್ನು “ಗೌರವವಿಲ್ಲದಿರುವುದು” ಅಥವಾ “ನಾಚಿಕೆತನ” ಅಥವಾ “ಉಪಯುಕ್ತವಲ್ಲ” ಅಥವಾ “ಅಷ್ಟು ಬೆಲೆಯುಳ್ಳದ್ದಲ್ಲ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಾಚಿಕೆಗೇಡು, ಗೌರವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.04:10-11
- 1 ಸಮು.20:32-34
- 2 ಕೊರಿಂಥ.06:8-10
- ಯೆಹೆ.22:6-9
- ಯೋಹಾನ.08:48-49
- ಯಾಜಕ.18:6-8

ಪದ ಡೇಟಾ:

- Strong's: H1540, H2490, H2781, H3637, H3639, H5006, H5034, H6172, H6173, H7034, H7036, H7043, G818, G819, G820, G2617

ಅವಮಾನ, ನಾಚಿದ, ನಾಚಿಕೆಪಡು,ಅವಮಾನಿಸು, ನಿಂದೆ

ಪದದ ಅರ್ಥವಿವರಣೆ:

“ಅವಮಾನ” ಎನ್ನುವ ಪದವು ಒಬ್ಬ ವ್ಯಕ್ತಿ ಹೊಂದಿರುವ ಅವಮಾನಕರವಾದ ತುಂಬಾ ನೋವಿನ ಭಾವನೆಯನ್ನು ಸೂಚಿಸುತ್ತದೆ, ಯಾಕಂದರೆ ಒಬ್ಬನು ಅಥವಾ ಆ ವ್ಯಕ್ತಿ ಮಾಡಿದ ತಪ್ಪನ್ನು ಅಥವಾ ಅವಮಾನಕರವಾದ ವಿಷಯದ ಕುರಿತಾಗಿ ಪಡೆಯುವ ಭಾವನೆಯಾಗಿರುತ್ತದೆ.

- “ಅವಮಾನಕರ” ಎಂದರೆ “ಅನುಚಿತ” ಅಥವಾ “ಅಪ್ರಾಮಾಣಿಕ”.
- “ನಾಚಿದ” ಎಂಬ ಪದವು ವ್ಯಕ್ತಿಯು ಅನುಚಿತ ಅಥವಾ ಅಪ್ರಾಮಾಣಿಕವಾದದ್ದನ್ನು ಮಾಡಿದಾಗ ಹೇಗೆ ಭಾವಿಸುತ್ತಾನೆ ಎಂಬುದನ್ನು ವಿವರಿಸುತ್ತದೆ.
- “ಅವಮಾನಿಸು” ಎಂಬ ಪದವು ಸಾಮಾನ್ಯವಾಗಿ ಸಾರ್ವಜನಿಕವಾಗಿ ಯಾರನ್ನಾದರೂ ನಾಚಿಕೆ ಅಥವಾ ನಾಚಿಕೆಗೇಡು ಎಂದು ಭಾವಿಸುತ್ತದೆ. ಯಾರನ್ನಾದರೂ ನಾಚಿಕೆಪಡಿಸುವ ಕ್ರಿಯೆಯನ್ನು "ಅವಮಾನ" ಎಂದು ಕರೆಯಲಾಗುತ್ತದೆ.
- ಯಾರನ್ನಾದರೂ "ನಿಂದಿಸುವುದು" ಎಂದರೆ ಆ ವ್ಯಕ್ತಿಯ ಪಾತ್ರ ಅಥವಾ ನಡವಳಿಕೆಯನ್ನು ಟೀಕಿಸುವುದು ಅಥವಾ ನಿರಾಕರಿಸುವುದು.
- “ಅವಮಾನಿಸು” ಎಂಬ ಪದವು ಜನರನ್ನು ಸೋಲಿಸುವುದು ಅಥವಾ ಅವರ ಕಾರ್ಯಗಳನ್ನು ಬಹಿರಂಗಪಡಿಸುವುದು ಎಂದರೆ ಅವರು ತಮ್ಮನ್ನು ನಾಚಿಕೆಪಡುತ್ತಾರೆ. ವಿಗ್ರಹಗಳನ್ನು ಮಾಡಿ ಪೂಜಿಸುವವರು ನಾಚಿಕೆಪಡುತ್ತಾರೆ ಎಂದು ಪ್ರವಾದಿ ಯೆಶಾಯ ಹೇಳಿದರು.
- “ನಾಚಿಕೆಗೇಡು” ಎಂಬ ಪದವನ್ನು ಪಾಪ ಕೃತ್ಯ ಅಥವಾ ಅದನ್ನು ಮಾಡಿದ ವ್ಯಕ್ತಿಯನ್ನು ವಿವರಿಸಲು ಬಳಸಬಹುದು. ಒಬ್ಬ ವ್ಯಕ್ತಿಯು ಪಾಪಪೂರ್ಣವಾದದ್ದನ್ನು ಮಾಡಿದಾಗ, ಅದು ಅವನನ್ನು ನಾಚಿಕೆಗೇಡು ಅಥವಾ ಅವಮಾನಕರ ಸ್ಥಿತಿಯಲ್ಲಿರಲು ಕಾರಣವಾಗಬಹುದು.
- ಕೆಲವೊಮ್ಮೆ ಒಳ್ಳೆಯ ಕೆಲಸಗಳನ್ನು ಮಾಡುವ ವ್ಯಕ್ತಿಯನ್ನು ನಾಚಿಕೆ ಅಥವಾ ಅವಮಾನಕ್ಕೆ ಕಾರಣವಾಗುವ ರೀತಿಯಲ್ಲಿ ಪರಿಗಣಿಸಲಾಗುತ್ತದೆ. ಉದಾಹರಣೆಗೆ, ಯೇಸುವನ್ನು ಶಿಲುಬೆಯಲ್ಲಿ ಕೊಲ್ಲಲ್ಪಟ್ಟಾಗ, ಇದು ಸಾಯುವ ನಾಚಿಕೆಗೇಡಿನ ಮಾರ್ಗವಾಗಿತ್ತು. ಈ ನಾಚಿಕೆಗೇಡಿನ ಅರ್ಹತೆಗೆ ಯೇಸು ಯಾವುದೇ ತಪ್ಪು ಮಾಡಿರಲಿಲ್ಲ.
- ದೇವರು ಯಾರನ್ನಾದರೂ ವಿನಮ್ರಗೊಳಿಸಿದಾಗ, ಅವನು ಹೆಮ್ಮೆಯ ವ್ಯಕ್ತಿಯನ್ನು ತನ್ನ ಹೆಮ್ಮೆಯನ್ನು ಹೋಗಲಾಡಿಸಲು ಸಹಾಯ ಮಾಡುವಲ್ಲಿ ವೈಫಲ್ಯವನ್ನು ಅನುಭವಿಸುತ್ತಿದ್ದಾನೆ ಎಂದರ್ಥ. ಇದು ಯಾರನ್ನಾದರೂ ಅವಮಾನಿಸುವುದಕ್ಕಿಂತ ಭಿನ್ನವಾಗಿದೆ, ಆ ವ್ಯಕ್ತಿಯನ್ನು ನೋಯಿಸುವ ಸಲುವಾಗಿ ಇದನ್ನು ಹೆಚ್ಚಾಗಿ ಮಾಡಲಾಗುತ್ತದೆ.
- ಒಬ್ಬ ವ್ಯಕ್ತಿಯು “ನಿಂದೆಗಿಂತ ಮೇಲ್ಪಟ್ಟವನು” ಅಥವಾ “ನಿಂದೆ ಮೀರಿ” ಅಥವಾ “ನಿಂದೆ ಮಾಡದೆ” ಎಂದು ಹೇಳುವುದು ಎಂದರೆ ಈ ವ್ಯಕ್ತಿಯು ದೇವರನ್ನು ಗೌರವಿಸುವ ರೀತಿಯಲ್ಲಿ ವರ್ತಿಸುತ್ತಾನೆ ಮತ್ತು ಅವನ ಬಗ್ಗೆ ಟೀಕಿಸುವುದರಲ್ಲಿ ಸ್ವಲ್ಪ ಅಥವಾ ಏನೂ ಹೇಳಲಾಗುವುದಿಲ್ಲ.

ಅನುವಾದ ಸಲಹೆಗಳು

- “ನಾಚಿಕೆಗೇಡು” ಎಂದು ಭಾಷಾಂತರಿಸುವ ಮಾರ್ಗಗಳು “ಅವಮಾನ” ಅಥವಾ “ಅವಮಾನ” ವನ್ನು ಒಳಗೊಂಡಿರಬಹುದು.
- “ನಾಚಿಕೆಗೇಡು” ಎಂದು ಭಾಷಾಂತರಿಸುವ ಮಾರ್ಗಗಳು “ನಾಚಿಕೆಗೇಡು” ಅಥವಾ ಅವಮಾನಕರವಾದವುಗಳನ್ನು ಒಳಗೊಂಡಿರಬಹುದು.
- “ಅವಮಾನಿಸು” ವನ್ನು “ಅವಮಾನ” ಅಥವಾ “ಅವಮಾನವನ್ನು ಅನುಭವಿಸಲು” ಅಥವಾ “ಮುಜುಗರ” ಎಂದೂ ಅನುವಾದಿಸಬಹುದು.
- ಸಂದರ್ಭಕ್ಕೆ ಅನುಗುಣವಾಗಿ, “ಅವಮಾನ” ಎಂದು ಭಾಷಾಂತರಿಸುವ ವಿಧಾನಗಳು “ಅವಮಾನ” ಅಥವಾ “ಅವಮಾನಕರ” ಅಥವಾ “ನಾಚಿಕೆಗೇಡು” ಅನ್ನು ಒಳಗೊಂಡಿರಬಹುದು.
- “ನಿಂದೆ” ಎಂಬ ಪದವನ್ನು “ಆರೋಪ” ಅಥವಾ “ಅವಮಾನ” ಅಥವಾ “ನಾಚಿಕೆಗೇಡು” ಎಂದೂ ಅನುವಾದಿಸಬಹುದು.
- “ನಿಂದೆ” ಯನ್ನು ಸಂದರ್ಭಕ್ಕೆ ಅನುಗುಣವಾಗಿ “ನಿಂದಿಸು” ಅಥವಾ “ಆರೋಪ” ಅಥವಾ “ಟೀಕಿಸುವುದು” ಎಂದೂ ಅನುವಾದಿಸಬಹುದು.

ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ತಗ್ಗಿಸಿಕೋ, ಯೆಶಯಾ, ಪಶ್ಚಾತ್ತಾಪ ಹೊಂದು, ಪಾಪ, ಆರಾಧನೆ

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ 03:15-17
- 2 ಅರಸು 02:17
- 2 ಸಾಮು 13:13
- ಲೂಕ 20:11
- ಮಾರ್ಕ 08:38
- ಮಾರ್ಕ 12:4-5
- 1 ತಿಮೋ 03:07
- ಆದಿ 34:07
- ಇಬ್ರಿಯ 11:26
- ಪ್ರಲಾಪ 02:1-2
- ಕೀರ್ತನೆ 022:06
- ಧರ್ಮೋ 21:14
- ಎಜ್ರ 09:05
- ಜ್ಞಾನೋ 25:7-8

- ಕೀರ್ತನೆ 006:8-10
- ಕೀರ್ತನೆ 123:03
- 1 ತಿಮೋತಿ 05:7-8
- 1 ತಿಮೋತಿ 06:13-14
- ಯೆರೆ 15:15-16
- ಯೋಬ 16:9-10
- ಜ್ಞಾನೋ 18:03

ಪದ ಡಾಟಾ:

- Strong's: H937, H954, H955, H1317, H1322, H1421, H1442, H1984, H2490, H2616, H2617, H2659, H2778, H2781, H2865, H3001, H3637, H3639, H3640, H3971, H5007, H5034, H5039, H6030, H6031, H6172, H6256, H7022, H7034, H7036, H7043, H7511, H7817, H8103, H8213, H8216, H8217, H8589, G149, G152, G153, G410, G422, G423, G808, G818, G819, G821, G1788, G1791, G1870, G2617, G3059, G3679, G3680, G3681, G3856, G5014, G5195, G5196, G5484

ಅವಮಾನಿಸು, ಅವಮಾನಿಸಲ್ಪಟ್ಟಿದೆ, ಅವಮಾನ

ಸತ್ಯಾಂಶಗಳು:

“ಅವಮಾನಿಸು” ಎನ್ನುವ ಪದಕ್ಕೆ ಯಾರಾದರೊಬ್ಬರನ್ನು ನಾಚಿಕೆಗೊಳಿಸುವುದು ಅಥವಾ ಅಪಕೀರ್ತಿಗೊಳಿಸುವುದು. ಇದು ಸಹಜವಾಗಿ ಬಹಿರಂಗ ಸ್ಥಳಗಳಲ್ಲಿ ಮಾಡುತ್ತಾರೆ. ಒಬ್ಬರನ್ನು ನಾಚಿಕೆಗೊಳಿಸುವ ಕ್ರಿಯೆಯನ್ನು “ಅವಮಾನಿಸುವುದು” ಎಂದು ಕರೆಯುತ್ತಾರೆ.

- ದೇವರು ಒಬ್ಬರನ್ನು ತಗ್ಗಿಸಿಕೊಳ್ಳುವಂತೆ ಮಾಡುತ್ತಿದ್ದಾರೆಂದರೆ ಆತನು ಅಹಂಭಾವಿಯಾದ ಒಬ್ಬ ವ್ಯಕ್ತಿಯಲ್ಲಿರುವ ಗರ್ವವನ್ನು ಅಧಿಗಮಿಸಲು ಅವನಿಗೆ ಸಹಾಯ ಮಾಡುವುದಕ್ಕೆ ಅಪಜಯ ಅನುಭವಿಸುವುದಕ್ಕೆ ಕಾರಣವಾಗುತ್ತಿದ್ದಾನೆ ಎಂದರ್ಥ. ಇದು ಒಬ್ಬರನ್ನು ನಾಚಿಕೆಗೊಳಿಸುವುದಕ್ಕೆ ತುಂಬಾ ವ್ಯತ್ಯಾಸವಿರುತ್ತದೆ, ಇದು ಅನೇಕಬಾರಿ ಆ ವ್ಯಕ್ತಿಯನ್ನು ನೋಯಿಸುವುದರ ಕ್ರಮದಲ್ಲಿಯೇ ನಡೆಯುತ್ತದೆ.
- “ಅವಮಾನಿಸು” ಎನ್ನುವ ಪದವನ್ನು “ನಾಚಿಕೆ” ಅಥವಾ “ನಾಚಿಕೆಪಡುವಂತೆ ಮಾಡು” ಅಥವಾ “ತಬ್ಬಿಬ್ಬುಗೊಳಿಸು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, “ಅವಮಾನಿಸು” ಎನ್ನುವ ಪದವನ್ನು ಅನುವಾದ ಮಾಡುವುದರಲ್ಲಿ “ನಾಚಿಕೆ” ಅಥವಾ “ಕೀಳು ಮಾಡು” ಅಥವಾ “ಅಪಕೀರ್ತಿ ಉಂಟು ಮಾಡು” ಎಂದೆನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ನಾಚಿಕೆಗೇಡು . ದೀನತ್ವ . ನಾಚಿಕೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.21:13-14
- ಎಜ್ರಾ.09:5-6
- ಜ್ಞಾನೋ.25:7-8
- ಕೀರ್ತನೆ.006:8-10
- ಕೀರ್ತನೆ.123:3-4

ಪದ ಡೇಟಾ:

- Strong's: H937, H954, H1421, H2778, H2781, H3001, H3637, H3639, H6030, H6031, H6256, H7034, H7043, H7511, H7817, H8216, H8213, H8217, H8589, G2617, G5014

ಅವಿಧೇಯತೆ, ಅವಿಧೇಯನಾಗುವಂತೆ ಮಾಡುವುದು, ಅವಿಧೇಯತೆ ತೋರಿಸಿದೆ, ದಂಗೆ ಏಳು

ಪದದ ಅರ್ಥವಿವರಣೆ:

“ಅವಿಧೇಯನಾಗು” ಎನ್ನುವದಕ್ಕೆ ಆಧಿಕಾರದಲ್ಲಿದ್ದ ವ್ಯಕ್ತಿ ಆಜ್ಞಾಪಿಸಿದ ಅಥವಾ ಅದೇಶಿಸಿದ ವಿಷಯಗಳಿಗೆ ವಿಧೇಯತೆಯತೆಯನ್ನು ತೋರಿಸದಿರುವುದು ಎಂದರ್ಥ. ಈ ರೀತಿ ನಡೆದುಕೊಳ್ಳುವ ವ್ಯಕ್ತಿಯನ್ನು “ಅವಿಧೇಯನು” ಎಂದು ಕರೆಯುತ್ತಾರೆ.

- ಅದನ್ನು ಮಾಡಬೇಡವೆಂದು ಹೇಳಿದ ವಿಷಯಗಳನ್ನು ಮಾಡುವವನು ಕೂಡ ಅವಿಧೇಯನಾಗುತ್ತಿದ್ದಾನೆ ಎಂದರ್ಥ.
- ಅವಿಧೇಯನಾಗು ಎನ್ನುವುದಕ್ಕೆ ಕೂಡ ಆಜ್ಞಾಪಿಸಲ್ಪಟ್ಟ ವಿಷಯಗಳನ್ನು ಮಾಡದೇ ತಿರಸ್ಕರಿಸು ಎಂದರ್ಥ.
- “ಅವಿಧೇಯನು” ಎನ್ನುವ ಪದವನ್ನು ಸಹಜವಾಗಿ ಅವಿಧೇಯನಾಗುವ ಅಥವಾ ತಿರಸ್ಕಾರ ಮಾಡುವ ಒಬ್ಬ ವ್ಯಕ್ತಿಯ ಗುಣಲಕ್ಷಣವನ್ನು ವಿವರಿಸುವುದಕ್ಕೆ ಕೂಡ ಉಪಯೋಗಿಸುತ್ತಾರೆ. ಈ ಮಾತಿಗೆ ಅವರು ಪಾಪಾತ್ಮರು ಅಥವಾ ದುಷ್ಟರು ಎಂದರ್ಥ.
- “ಅವಿಧೇಯತೆ” ಎನ್ನುವ ಪದಕ್ಕೆ “ವಿಧೇಯತೆ ತೋರಿಸಿದ ಕ್ರಿಯೆ” ಅಥವಾ “ದೇವರು ಬಯಸುವ ಕಾರ್ಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು” ಎಂದರ್ಥ.
- “ಅವಿಧೇಯ ಜನರು” ಎನ್ನುವ ಮಾತನ್ನು “ಯಾವಾಗಲೂ ಅವಿಧೇಯತೆಯನ್ನು ತೋರಿಸುವ ಜನರು” ಅಥವಾ “ದೇವರ ಆಜ್ಞೆಗಳ ಪ್ರಕಾರ ನಡೆದುಕೊಳ್ಳದ ಜನರು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ದುಷ್ಟತನ, ಪಾಪ, ವಿಧೇಯನಾಗು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.13:21
- ಅಪೊ.ಕೃತ್ಯ.26:19
- ಕೊಲೊಸ್ಸೆ.03:07
- ಲೂಕ.01:17
- ಲೂಕ.06:49
- ಕೀರ್ತನೆ.089:30-32

ಸತ್ಯವೇದದಿಂದ ಉದಾಹರಣೆಗಳು:

- **02:11** “ನೀನು ನಿನ್ನ ಹೆಂಡತಿಯ ಮಾತನ್ನು ಕೇಳಿ, ನನಗೆ _ ಅವಿಧೇಯನಾದೆ _” ಎಂದು ದೇವರು ಆ ಮನುಷ್ಯನೊಂದಿಗೆ ಮಾತನಾಡಿದರು.
- **13:07**

_ ಈ ಆಜ್ಞೆಗಳಿಗೆ ಜನರು _ ವಿಧೇಯರಾದರೆ, ದೇವರು ಅವರನ್ನು ಆಶೀರ್ವಾದ ಮಾಡುವನೆಂದು ಮತ್ತು ಅವರನ್ನು ಸಂರಕ್ಷಿಸುವನೆಂದು ದೇವರು ವಾಗ್ದಾನ ಮಾಡಿದ್ದಾರೆ. ಅವರು ಆ ಆಜ್ಞೆಗಳಿಗೆ _ ಅವಿಧೇಯರಾದರೆ _, ದೇವರು ಅವರನ್ನು ಶಿಕ್ಷಿಸುವನು.

- **16:02** ಇಸ್ರಾಯೇಲ್ಯರು ದೇವರಿಗೆ _ಅವಿಧೇಯತೆಯನ್ನು _ ತೋರಿಸಿರುವದರಿಂದ, ಅವರನ್ನು ಸೋಲಿಸುವುದಕ್ಕೆ ತಮ್ಮ ಶತ್ರುಗಳನ್ನು ಅನುಮತಿಸುವುದರ ಮೂಲಕ ಆತನು ಅವರನ್ನು ಶಿಕ್ಷಿಸಿದನು.
- **35:12** “ಈ ಎಲ್ಲಾ ವರ್ಷಗಳು ನಾನು ನಿಮಗೆ ತುಂಬಾ ನಂಬಿಕೆಯಿಂದ ಕೆಲಸಮಾಡಿದ್ದೇನೆ” ಎಂದು ದೊಡ್ಡ ಮಗ ತನ್ನ ತಂದೆಗೆ ಹೇಳಿದನು. ನಿಮಗೆ ನಾನು ಎಂದಿಗೂ _ ಅವಿಧೇಯನಾಗಲಿಲ್ಲ _, ನೀನು ನನಗೆ ಒಂದು ಚಿಕ್ಕ ಮೇಕೆಯನ್ನು ಕೊಡದಿದ್ದರೂ, ನಾನು ನನ್ನ ಸ್ನೇಹಿತರೊಂದಿಗೆ ಸಂತೋಷವನ್ನು ಹಂಚಿಕೊಳ್ಳುತ್ತೇನೆ.'''

ಪದ ಡೇಟಾ:

- Strong's: H4784, H5674, G506, G543, G544, G545, G3847, G3876

ಅಸಹ್ಯ, ಅಸಹ್ಯಿಸಿಕೊಳ್ಳಲಾಗಿದೆ, ಅಸಹ್ಯ ಹುಟ್ಟಿಸುವ

ಸತ್ಯಾಂಶಗಳು:

“ಅಸಹ್ಯ ಹುಟ್ಟಿಸುವ” ಎನ್ನುವ ಪದವು ಏನಾದರೊಂದನ್ನು ಇಷ್ಟಪಡದಿರುವುದನ್ನು ಮತ್ತು ತಿರಸ್ಕರಿಸುವುದನ್ನು ವಿವರಿಸುತ್ತದೆ. ಏನಾದರೊಂದನ್ನು “ಅಸಹ್ಯ” ಮಾಡಿಕೊಳ್ಳುವುದು ಎನ್ನುವುದಕ್ಕೆ ಅದನ್ನು ಬಲವಾಗಿ ಇಷ್ಟಪಡದಿರುವುವುದನ್ನು ಸೂಚಿಸುತ್ತದೆ.

- ಅನೇಕಬಾರಿ ಸತ್ಯವೇದವು ಅಸಹ್ಯಿಸಿಕೊಳ್ಳುವ ದುಷ್ಟತನದ ಕುರಿತಾಗಿ ಮಾತನಾಡುತ್ತದೆ. ಇದಕ್ಕೆ ದುಷ್ಟತನವನ್ನು ದ್ವೇಷಿಸು ಮತ್ತು ಅದನ್ನು ತಿರಸ್ಕಾರ ಮಾಡು ಎಂದರ್ಥ.
- ಸುಳ್ಳು ದೇವರನ್ನು ಆರಾಧನೆ ಮಾಡುವವರ ದುಷ್ಟ ಕ್ರಿಯೆಗಳನ್ನು ವಿವರಿಸುವುದಕ್ಕೆ ದೇವರು “ಅಸಹ್ಯ ಹುಟ್ಟಿಸುವ” ಎನ್ನುವ ಪದವನ್ನು ಉಪಯೋಗಿಸಿದ್ದಾರೆ.
- ಅನ್ಯರಾದ ಇತರ ಜನಾಂಗದವರು ಅಭ್ಯಾಸ ಮಾಡುವ ಪಾಪವುಳ್ಳ, ಅನೈತಿಕವಾದ ಕ್ರಿಯೆಗಳನ್ನು “ಅಸಹ್ಯಿಸಿಕೊಳ್ಳಬೇಕೆಂದು” ಇಸ್ರಾಯೇಲ್ಯರು ಆಜ್ಞಾಪಿಸಲ್ಪಟ್ಟಿದ್ದರು.
- ತಪ್ಪುದಾರಿಯಲ್ಲಿ ನಡೆಯುವ ಎಲ್ಲಾ ಲೈಂಗಿಕ ಕಾರ್ಯಗಳನ್ನು “ಅಸಹ್ಯವನ್ನುಂಟು ಮಾಡುವ ಕಾರ್ಯಗಳು” ಎಂದು ದೇವರು ಕರೆದರು.
- ಕಣಿ ಹೇಳುವುದು, ಮಾಟಗಾತಿ ಮತ್ತು ಚಿಕ್ಕಮಕ್ಕಳನ್ನು ಬಲಿ ಕೊಡುವುದು ಎನ್ನುವ ಇತ್ಯಾದಿ ಕ್ರಿಯೆಗಳೆಲ್ಲವೂ ದೇವರಿಗೆ “ಅಸಹ್ಯ ಹುಟ್ಟಿಸುವ” ಕ್ರಿಯೆಗಳಾಗಿರುತ್ತವೆ.
- “ಅಸಹ್ಯ” ಎನ್ನುವ ಪದವನ್ನು “ಬಲವಾಗಿ ತಿರಸ್ಕರಿಸು” ಅಥವಾ “ದ್ವೇಷಿಸು” ಅಥವಾ “ದುಷ್ಟತ್ವವನ್ನು ಸೂಚಿಸುವುದು” ಎಂದೂ ಅನುವಾದ ಮಾಡಬಹುದು.
- “ಅಸಹ್ಯ ಹುಟ್ಟಿಸುವ” ಎನ್ನುವ ಪದವನ್ನು “ಭಯಂಕರವಾದ ದುಷ್ಟತ್ವ” ಅಥವಾ “ಅಸಹ್ಯಕರ” ಅಥವಾ “ತಿರಸ್ಕರಿಸುವುದಕ್ಕೆ ಯೋಗ್ಯ” ಎಂದೂ ಅನುವಾದ ಮಾಡಬಹುದು.
- ದುಷ್ಟುರಿಗೆ “ಅಸಹ್ಯ ಹುಟ್ಟಿಸುವುದು” ನೀತಿವಂತರಿದ್ದಾರೆಂದು ಅನ್ವಯಿಸಿದಾಗ, ಇದನ್ನು “ಅತೀ ಅಹಿತಕರವಾಗಿ ಏಣಿಸಲ್ಪಡುವುದು” ಅಥವಾ “ಅಸಹ್ಯವನ್ನುಂಟು ಮಾಡುವ” ಅಥವಾ “ಅದರಿಂದ ತಿರಸ್ಕರಿಸಲ್ಪಟ್ಟಿದೆ” ಎಂದೂ ಅನುವಾದ ಮಾಡಬಹುದು.
- ಊಟಕ್ಕೆ ಸರಿಯಾಗಿರದ ಮತ್ತು “ಅಶುದ್ಧ” ಎಂದು ದೇವರು ತೀರ್ಮಾನಿಸಿದ ಕೆಲವೊಂದು ಪ್ರಾಣಿಗಳನ್ನು “ಅಸಹ್ಯಿಸಿಕೊಳ್ಳಬೇಕೆಂದು” ದೇವರು ಇಸ್ರಾಯೇಲ್ಯರಿಗೆ ಹೇಳಿದನು. ಇದನ್ನು “ಬಲವಾಗಿ ಇಷ್ಟಪಡದೇ ಇರುವುದು” ಅಥವಾ “ತಿರಸ್ಕರಿಸುವುದು” ಅಥವಾ “ಅಂಗೀಕಾರ ಮಾಡದಂತೆ ಇರುವವುಗಳು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕಣಿ ಹೇಳುವುದು, ಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು:

- ಆದಿ.43:32
- ಯೆರೆ.07:30
- ಯಾಜಕ.11:10
- ಲೂಕ.16:15
- ಪ್ರಕ.17:3-5

ಪದ ಡೇಟಾ:

- Strong's: H1602, H6973, H8130, H8251, H8262, H8263, H8441, H8581, G946, G947, G948, G4767, G3404

ಅಹಂಕಾರ, ಜಂಬ, ದುರಹಂಕಾರ

ಪದದ ಅರ್ಥವಿವರಣೆ:

“ಅಹಂಕಾರ” ಎನ್ನುವ ಪದಕ್ಕೆ ಗರ್ವ ಎಂದರ್ಥ, ಸಹಜವಾಗಿ ಬಾಹ್ಯ ವಿಧಾನವನ್ನು ಸೂಚಿಸುತ್ತದೆ.

- ಅಹಂಕಾರವುಳ್ಳ ವ್ಯಕ್ತಿ ಯಾವಾಗಲೂ ತನ್ನ ಕುರಿತಾಗಿ ಹೆಗ್ಗಳಿಕೆ ಹೇಳಿಕೊಳ್ಳುತ್ತಿರುತ್ತಾನೆ.
- ಅಹಂಕಾರದಿಂದ ಇರುವುದೆಂದರೆ ಸಹಜವಾಗಿ ನನಗಿಂತ ಇತರರು ಅಷ್ಟು ಪ್ರಾಮುಖ್ಯವಲ್ಲ ಅಥವಾ ಅಷ್ಟು ಪ್ರತಿಭಾವಂತರಲ್ಲ ಎಂದು ಆಲೋಚನೆ ಮಾಡುವ ಸ್ವಭಾವವನ್ನು ಹೊಂದಿರುತ್ತಾರೆ.
- ದೇವರನ್ನು ಗೌರವಿಸದ ಜನರು ಮತ್ತು ಆತನಿಗೆ ವಿರುದ್ಧವಾಗಿ ನಡೆದುಕೊಳ್ಳುವ ಜನರು ಅಹಂಕಾರವುಳ್ಳವರು, ಯಾಕಂದರೆ ಅವರಿಗೆ ದೇವರು ಎಷ್ಟು ದೊಡ್ಡವನೆಂದು ಅವರಿಗೆ ಗೊತ್ತಿರುವುದಿಲ್ಲ.

(ಈ ಪದಗಳನ್ನು ಸಹ ನೋಡಿರಿ : ತಿಳುವಳಿಕೆ, ಹೆಗ್ಗಳಿಕೆ, ಗರ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.04:17-18
- 2 ಪೇತ್ರ.02:17-19
- ಯೆಹೆ.16:49-50
- ಜ್ಞಾನೋ.16:5-6
- ಕೀರ್ತನೆ.056:1-2

ಪದ ಡೇಟಾ:

- Strong's: H1346, H1347, H6277

ಆಕಳು, ಆಕಳುಗಳು, ದನ, ದನಗಳು, ಕರು, ಕರುಗಳು, ಜಾನುವಾರು, ಪಡ್ಡೆ, ಎತ್ತು, ಎತ್ತುಗಳು

ಪದದ ಅರ್ಥವಿವರಣೆ

“ಆಕಳು”, “ದನ”, “ಪಡ್ಡೆ”, “ಎತ್ತು” ಮತ್ತು “ಜಾನುವಾರು” ಎನ್ನುವ ಪದಗಳು ನಾಲ್ಕು ಕಾಲುಗಳು ಇರುವ, ಹುಲ್ಲು ತಿನುವ ಗೋಜಾತಿಗೆ ಸೇರಿದ ಪ್ರಾಣಿಗಳನ್ನು ಸೂಚಿಸುತ್ತದೆ.

- ಈ ವಿಧವಾದ ಪ್ರಾಣಿಗಳಲ್ಲಿ ಸ್ತ್ರೀ ಪ್ರಾಣಿಯನ್ನು “ಆಕಳು” ಎಂದು, ಗಂಡು ಪ್ರಾಣಿಯನ್ನು “ದನ” ಎಂದು ಮತ್ತು ಅವುಗಳಿಗೆ ಹುಟ್ಟುವ ಪ್ರಾಣಿಯನ್ನು “ಕರು” ಎಂದು ಕರೆಯುತ್ತಾರೆ.
- ಸತ್ಯವೇದದಲ್ಲಿ, ಜನರು ಭುಜಿಸುವದಕ್ಕೆ ಮತ್ತು ಬಲಿ ಅರ್ಪಿಸುವದಕ್ಕೆ ಜಾನುವಾರು “ಪವಿತ್ರವಾದ” ಪ್ರಾಣಿಗಳಲ್ಲಿ ಒಂದಾಗಿದ್ದವು. ಪ್ರಾರ್ಥಮಿಕವಾಗಿ ಮಾಂಸ ಮತ್ತು ಹಾಲಿಗಾಗಿ ಅವುಗಳನ್ನು ಸಾಕುತ್ತಿದ್ದರು.

ಕರುಗೆ ಇನ್ನೂ ಜನ್ಮ ನೀಡದೆ ಇರುವ ಆಕಳನ್ನು “ಪಡ್ಡೆ” ಎಂದು ಕರೆಯುತ್ತಾರೆ.

ವ್ಯವಸಾಯ ಕೆಲಸ ಮಾಡುವಂತೆ ಪ್ರತ್ಯೇಕವಾಗಿ ತರಬೇತಿ ನೀಡಿರುವ ಜಾನುವಾರಕ್ಕೆ “ಎತ್ತು” ಎನ್ನುತ್ತಾರೆ. “ಎತ್ತುಗಳು” ಇದಕ್ಕೆ ಬಹುವಚನ ರೂಪವಾಗಿರುತ್ತದೆ. ಸಹಜವಾಗಿ ಎತ್ತುಗಳು ಪುಲ್ಲಿಂಗವಾಗಿರುತ್ತವೆ ಮತ್ತು ಹಿಡುಕಲ್ಪಡುತ್ತವೆ.

- ಸತ್ಯವೇದಲ್ಲೆಲ್ಲ ಎತ್ತುಗಳನ್ನು ಗಾಡಿ ಅಥವಾ ನೇಗಿಲು ಎಳೆಯುವುದಕ್ಕೆ ನೊಗದ ಮೂಲಕ ಜೊತೆಯಲ್ಲಿ ಕಟ್ಟಲ್ಪಟ್ಟಿರುವ ಪ್ರಾಣಿಗಳೆಂದು ತೋರಿಸುತ್ತಿದೆ.
- ನೊಗದ ಕೆಳಗೆ ಎತ್ತುಗಳು ಜೊತೆಯಾಗಿ ಕೆಲಸಮಾಡುತ್ತಿರುವುದು ಸತ್ಯವೇದದಲ್ಲಿ ಎಷ್ಟು ಸಾಮಾನ್ಯವಾಗಿ ಕಾಣಿಸುವ ದೃಶ್ಯವಾಗಿತ್ತೆಂದರೆ “ನೊಗದ ಕೆಳಗೆ” ಎನ್ನುವ ಪದವನ್ನು ರೂಪಕಾಲಂಕಾರದಲ್ಲಿ ಕಷ್ಟಕರವಾದ ಕೆಲಸ ಮತ್ತು ಶ್ರಮಕ್ಕೆ ಸೂಚಿಸುತ್ತಿದ್ದರು.
- ಜಾನವಾರದಲ್ಲಿ ದನ ಒಂದು ವಿಧವಾದ ಪುಲ್ಲಿಂಗ ಪ್ರಾಣಿಯಾಗಿತ್ತು, ಆದರೆ ಅದನ್ನು ಹಿಡುಕಲ್ಪಡುವುದಿಲ್ಲ ಮತ್ತು ಕೆಲಸ ಮಾಡುವ ಪ್ರಾಣಿಯಾಗಿ ತರಬೇತಿಹೊಂದುವುದಿಲ್ಲ.

(ಇದನ್ನು ನೋಡಿರಿ: ಗೊತ್ತಿಲ್ಲದ ಸಂಗತಿಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನೊಗ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.15:9-11
- ವಿಮೋ.24:5-6
- ಅರಣ್ಯ.19:1-2
- ಧರ್ಮೋ.21:3-4
- 1 ಸಮು.01:24-25
- 1 ಸಮು.15:1-3
- 1 ಸಮು.16:2-3
- 1 ಅರಸ.01:9-10
- 2 ಪೂರ್ವ.11:13-15
- 2 ಪೂರ್ವ.15:10-11
- ಮತ್ತಾಯ.22:4
- ಲೂಕ.13:15-16
- ಲೂಕ.14:4-6
- ಇಬ್ರಿ.09:13-15

ಪದ ಡೇಟಾ:

- Strong's: H47, H441, H504, H929, H1165, H1241, H1241, H1241, H4399, H4735, H4806, H5695, H5697, H5697, H6499, H6499, H6510, H6510, H6629, H7214, H7716, H7794, H7794, H7921, H8377, H8377, H8450, H8450, G1016, G1151, G2353, G2934, G3447, G3448, G4165, G5022, G5022

ಆಕ್ಷೇಪಣೆ, ಆಕ್ಷೇಪಣೆಗಳು, ಆಕ್ಷೇಪಿಸಿದೆ, ಆಕ್ಷೇಪಿಸುವುದು, ಆಕ್ಷೇಪಭರಿತವಾಗಿ

ಪದದ ಅರ್ಥವಿವರಣೆ:

ಇನ್ನೊಬ್ಬರನ್ನು ಆಕ್ಷೇಪಿಸುವುದು ಎಂದರೆ ಒಬ್ಬ ವ್ಯಕ್ತಿಯ ನಡತೆಯನ್ನು ಅಥವಾ ಗುಣಗಳನ್ನು ವಿಮರ್ಶೆ ಮಾಡುವುದು ಅಥವಾ ನಿರಾಕರಿಸುವುದು ಎಂದರ್ಥ. ಆಕ್ಷೇಪಣೆ ಎಂದರೆ ಒಬ್ಬ ವ್ಯಕ್ತಿಯ ಕುರಿತಾಗಿ ನಕಾರಾತ್ಮಕವಾಗಿ ವ್ಯಾಖ್ಯೆ ಮಾಡುವುದು ಎಂದರ್ಥ.

- ಒಬ್ಬ ವ್ಯಕ್ತಿ "ಆಕ್ಷೇಪಣೆ ಮೇಲಿದ್ದಾನೆ" ಅಥವಾ "ಆಕ್ಷೇಪಣೆಗೆ ಅತೀತವಾಗಿದ್ದಾನೆ" ಅಥವಾ "ಆಕ್ಷೇಪಣೆಗಳಿಲ್ಲದೇ ಇದ್ದಾನೆ" ಎನ್ನುವ ಮಾತುಗಳಿಗೆ ಆ ವ್ಯಕ್ತಿಯ ನಡತೆಯು ದೇವರನ್ನು ಘನಪಡಿಸುವ ವಿಧಾನದಲ್ಲಿದೆ ಮತ್ತು ಅವನ ಕುರಿತಾಗಿ ಹೇಳುವುದಕ್ಕೆ ಒಂದು ಚಿಕ್ಕ ವಿಮರ್ಶೆಯು ಇಲ್ಲ ಎಂದು ಹೇಳುವದಾಗಿರುತ್ತದೆ.
- "ಆಕ್ಷೇಪಣೆ" ಎನ್ನುವ ಪದವನ್ನು "ಆರೋಪ" ಅಥವಾ "ಅವಮಾನ" ಅಥವಾ "ನಾಚಿಕೆಗೇಡು" ಎಂದೂ ಅನುವಾದ ಮಾಡಬಹುದು.
- "ಆಕ್ಷೇಪಣೆ" ಎನ್ನುವ ಪದವನ್ನು "ಗದರಿಸು" ಅಥವಾ "ಆರೋಪಿಸು" ಅಥವಾ "ವಿಮರ್ಶಿಸು" ಎಂದು ಸಂದರ್ಭಾನುಗುಣವಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆರೋಪಿಸು, ಗದರಿಸು, ನಾಚಿಕೆಗೇಡು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.05:7-8
- 1 ತಿಮೊಥೆ.06:13-14
- ಯೆರೆ.15:15-16
- ಯೋಬ.16:9-10
- ಜ್ಞಾನೋ.18:3-4

ಪದ ಡೇಟಾ:

- Strong's: H1421, H1442, H2617, H2659, H2778, H2781, H3637, H3639, H7036, G410, G423, G819, G3059, G3679, G3680, G3681, G5195, G5196, G5484

ಆಜ್ಞಾವಿಧಿ, ನಿಯಮಗಳು, ಅವಶ್ಯಕತೆಗಳು, ಕಠಿಣ ಕಾನೂನು, ಪದ್ಧತಿಗಳು

ಪದದ ಅರ್ಥವಿವರಣೆ:

ಆಜ್ಞಾವಿಧಿ ಎನ್ನುವುದು ಅನುಸರಿಸುವುದಕ್ಕೆ ಜನರಿಗೆ ಕೊಡುವ ಸೂಚನೆಗಳು ಅಥವಾ ನಿಯಮಗಳ ಕಾನೂನು, ಅಥವಾ ಸಾರ್ವಜನಿಕ ಕಾಯಿದೆಯಾಗಿರುತ್ತದೆ. ಈ ಪದವು "ಅಭಿಷೇಕ" ಅಥವಾ "ನೇಮಿಸು" ಎನ್ನುವ ಪದಕ್ಕೆ ತುಂಬಾ ಹತ್ತಿರವಾಗಿರುತ್ತದೆ.

- ಕೆಲವೊಂದುಬಾರಿ ಆಜ್ಞಾವಿಧಿ ಎನ್ನುವುದು ಅನೇಕ ವರ್ಷಗಳು ಅಭ್ಯಾಸ ಮಾಡುವುದರ ಮೂಲಕ ಸ್ಥಿರವಾಗಿರುವ ಒಂದು ಪದ್ಧತಿಯಾಗಿರುತ್ತದೆ.
- ಸತ್ಯವೇದದಲ್ಲಿ ಆಜ್ಞಾವಿಧಿ ಎನ್ನುವುದು ಇಸ್ರಾಯೇಲ್ಯರು ಮಾಡಬೇಕೆಂದು ದೇವರು ಆಜ್ಞಾಪಿಸಿದ ವಿಷಯಗಳಾಗಿರುತ್ತವೆ. ಕೆಲವೊಂದುಬಾರಿ ಆತನು ಇದನ್ನು ಶಾಶ್ವತವಾಗಿ ಯಾವಾಗಲೂ ಮಾಡಬೇಕೆಂದು ಆಜ್ಞಾಪಿಸಿರುತ್ತಾನೆ.
- "ಆಜ್ಞಾವಿಧಿ" ಎನ್ನುವ ಪದವನ್ನು "ಬಹಿರಂಗ ಶಾಸನ" ಅಥವಾ "ಕಾಯಿದೆ" ಅಥವಾ "ಕಾನೂನು" ಎಂದು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆಜ್ಞೆ, ಕಾಯಿದೆ, ಕಾನೂನು, ಅಭಿಷೇಕಿಸು, ಶಾಸನ)

ಸತ್ಯವೇದದ ಅನುಬಂಧ ವಾಕ್ಯಗಳು:

- ಧರ್ಮೋ.04:13-14
- ವಿಮೋ.27:20-21
- ಯಾಜಕ.08:31-33
- ಮಲಾಕಿ.03:6-7

ಪದ ಡೇಟಾ:

- Strong's: H2706, H4687, H4931, H4941,

ಆಡಳಿತ, ಆಡಳಿತಗಾರ, ಪ್ರಾಧ್ಯಾಪಕ, ಅಧಿಕೃತ, ನಾಯಕ

ಪದದ ಅರ್ಥವಿವರಣೆ:

“ಆಡಳಿತಗಾರ” ಎನ್ನುವ ಪದವು ಸಾಧಾರಣವಾಗಿ ಇತರ ಜನರ ಮೇಲೆ ಅಧಿಕಾರವನ್ನು ನಡೆಸುವ ವ್ಯಕ್ತಿಯನ್ನು ಸೂಚಿಸುತ್ತದೆ, ಉದಾಹರಣೆಗೆ, ದೇಶದ, ರಾಜ್ಯದ ಅಥವಾ ಭಕ್ತಿಯ ಗುಂಪಿನ ನಾಯಕನನ್ನು ಸೂಚಿಸುತ್ತದೆ. ಆಡಳಿತಗಾರ ಎಂದರೆ “ಆಡಳಿತ ಮಾಡುವ” ವ್ಯಕ್ತಿಯಾಗಿರುತ್ತಾನೆ, ಮತ್ತು ತನ್ನ ಅಧಿಕಾರವು ತನ್ನ “ಆಡಳಿತ”ವಾಗಿರುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಅರಸನು ಕೆಲವೊಮ್ಮೆ “ಆಡಳಿತಗಾರನಾಗಿ” ಸೂಚಿಸಲ್ಪಟ್ಟಿರುತ್ತಾನೆ, ಉದಾಹರಣೆಗೆ, “ಇಸ್ರಾಯೇಲಿನ ಮೇಲೆ ಇವನನ್ನು ಆಳುವವನಾಗಿ ನೇಮಿಸುತ್ತಿದ್ದೇನೆ” ಎನ್ನುವ ಮಾತಿನಲ್ಲಿರುವುದನ್ನು ನೋಡಬಹುದು.
- ದೇವರು ಅಂತಿಮ ಪಾಲಕನೆಂದು ಸೂಚಿಸಲ್ಪಟ್ಟಿದ್ದಾನೆ, ಈತನು ಪಾಲಕರಾಗಿರುವ ಎಲ್ಲರನ್ನು ಪಾಲಿಸುವವನಾಗಿರುತ್ತಾನೆ.
- ಹೊಸ ಒಡಂಬಡಿಕೆಯಲ್ಲಿ ಸಮಾಜ ಮಂದಿರದ ನಾಯಕನನ್ನು “ಪಾಲಕ” ಎಂದು ಕರೆಯುತ್ತಿದ್ದರು.
- ಹೊಸ ಒಡಂಬಡಿಕೆಯಲ್ಲಿ ಇನ್ನೊಬ್ಬ ರೀತಿಯ ಪಾಲಕನು “ರಾಜ್ಯಪಾಲರು” ಆಗಿರುತ್ತಾರೆ.
- ಸಂದರ್ಭಾನುಸಾರವಾಗಿ, “ಪಾಲಕ” ಎನ್ನುವ ಪದವನ್ನು “ನಾಯಕ” ಅಥವಾ “ಎಲ್ಲದರ ಮೇಲೆ ಅಧಿಕಾರವನ್ನು ಪಡೆದ ವ್ಯಕ್ತಿ” ಎಂದೂ ಅನುವಾದ ಮಾಡಬಹುದು.
- “ಆಡಳಿತಕ್ಕೆ” ಕ್ರಿಯೆ ಏನೆಂದರೆ “ಎಲ್ಲದರ ಮೇಲೆ ಅಧಿಕಾರವನ್ನು ಪಡೆಯುವುದಕ್ಕೆ” “ನಡಿಸು” ಎಂದರ್ಥ. ಅರಸನ ಪಾಲನೆಯನ್ನು ಸೂಚಿಸುವ “ಆಳ್ವಿಕೆ”ಯನ್ನು ಸೂಚಿಸುವ ಅರ್ಥವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ರಾಜ್ಯಪಾಲರು, ಅರಸ, ಸಮಾಜ ಮಂದಿರ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.03:17-18
- ಅಪೊ.ಕೃತ್ಯ.07:35-37
- ಲೂಕ.12:11-12
- ಲೂಕ.23:35
- ಮಾರ್ಕ.10:42
- ಮತ್ತಾಯ.09:32-34
- ಮತ್ತಾಯ.20:25
- ತೀತ.03:01

ಪದ ಡೇಟಾ:

- Strong's: H995, H1166, H1167, H1404, H2708, H2710, H3027, H3548, H3920, H4043, H4410, H4427, H4428, H4438, H4467, H4474, H4475, H4623, H4910, H4941, H5057, H5065, H5387, H5401, H5461, H5715, H6113, H6213, H6485, H6957, H7101, H7218, H7287, H7300, H7336, H7786, H7860, H7980, H7981, H7985, H7989, H7990, H8199, H8269, H8323, H8451, G746, G752, G755, G757, G758, G932, G936, G1018, G1203, G1299, G1778, G1785, G1849, G2232, G2233, G2525, G2583, G2888, G2961, G3545, G3841, G4165, G4173, G4291

ಆಣೆ, ಆಣೆಗಳು, ಪ್ರಮಾಣ, ಪ್ರಮಾಣಗಳು, ಆಣೆ ಇಡುವುದು, ಅದರ ಮೂಲಕ ಅಣೆಯನ್ನಿಡು, ಅದರ ಮೂಲಕ ಆಣೆಗಳನ್ನು ಮಾಡುವುದು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ ಪ್ರಮಾಣ ಎನ್ನುವುದು ಏನಾದರೊಂದನ್ನು ಮಾಡುವುದಕ್ಕೆ ಒಂದು ಸಂಪ್ರದಾಯಿಕವಾದ ಭರವಸೆ ಕೊಡುವುದಾಗಿರುತ್ತದೆ. ಪ್ರಮಾಣ ಮಾಡಿದ ಒಬ್ಬ ವ್ಯಕ್ತಿ ಆ ಪ್ರಮಾಣವನ್ನು ತಪ್ಪದೇ ನೆರವೇರಿಸಿಕೊಳ್ಳಬೇಕಾದ ಅವಶ್ಯಕತೆಯುಂಟು. ಪ್ರಮಾಣ ಮಾಡುವುದರಲ್ಲಿ ನಂಬಿಕೆಯು ಮತ್ತು ನಿಜತತ್ವದಿಂದ ಇರುವ ಬಾಧ್ಯತೆಯನ್ನು ಒಳಗೊಂಡಿರುತ್ತದೆ.

- ಕಾನೂನು ನ್ಯಾಯಾಲಯದಲ್ಲಿ ಸಾಕ್ಷಿಗಳು ಅನೇಕಬಾರಿ ಅವರು ಹೇಳುವುದೆಲ್ಲಾ ನಿಜವು ಮತ್ತು ನಡೆದದ್ದೂ ಆಗಿರುತ್ತದೆಯೆಂದು ಪ್ರಮಾಣ ಮಾಡುವುದಕ್ಕೆ ಆಣೆ ಇಡುತ್ತಾರೆ.
- ಸತ್ಯವೇದದಲ್ಲಿ "ಆಣೆ" ಎನ್ನುವ ಪದಕ್ಕೆ ಪ್ರಮಾಣವನ್ನು ಮಾತನಾಡುವುದು ಎಂದರ್ಥ.
- "ಅದರ ಮೂಲಕ ಆಣೆ ಇಡುವುದು" ಎನ್ನುವ ಮಾತಿಗೆ ಯಾರಾದರೊಬ್ಬರ ಅಥವಾ ಯಾವುದಾದರೊಂದರ ಹೆಸರನ್ನು ಉಪಯೋಗಿಸಿಕೊಂಡು ಅದರ ಆಧಾರದ ಮೇಲೆ ಅಥವಾ ಅದರ ಶಕ್ತಿಯ ಮೇಲೆ ಪ್ರಮಾಣವನ್ನು ಮಾಡುವುದು ಎಂದರ್ಥ.
- "ಪ್ರಮಾಣವನ್ನು ಆಣೆಪೂರ್ವಕವಾಗಿ" ಎನ್ನುವ ಮಾತಿನಲ್ಲಿರುವಂತೆ ಕೆಲವೊಂದುಬಾರಿ ಈ ಪದಗಳನ್ನು ಸೇರಿಸಿ ಉಪಯೋಗಿಸುತ್ತಾರೆ.
- ಅಬ್ರಾಹಾಮನು ಮತ್ತು ಅಬೀಮೆಲೆಕನು ಬಾವಿಯನ್ನು ಉಪಯೋಗಿಸುಕೊಳ್ಳುವ ವಿಷಯದಲ್ಲಿ ಇಬ್ಬರು ಸೇರಿ ಒಂದು ಒಪ್ಪಂದವನ್ನು ಮಾಡಿಕೊಂಡಾಗ ಪ್ರಮಾಣ ವಚನವನ್ನು ಹೇಳಿದ್ದರು.
- ಅಬ್ರಾಹಾಮನು ತನ್ನ ದಾಸನಿಗೆ ಅವನು ಇಸಾಕನಿಗಾಗಿ ಅಬ್ರಾಹಾಮನ ಬಂಧುಗಳಲ್ಲಿ ಹೆಂಡತಿಯನ್ನು ಕಂಡುಕೊಳ್ಳಬೇಕೆಂದು ಆಣೆಯನ್ನಿಡಬೇಕೆಂದು (ಸಾಂಪ್ರದಾಯಿಕವಾಗಿ ಮಾಡುವ ಪ್ರಮಾಣ) ಹೇಳಿದನು.
- ದೇವರು ಕೂಡ ಅಣೆಗಳನ್ನು ಇಟ್ಟುಕೊಂಡಿದ್ದಾನೆ, ಅವುಗಳಲ್ಲಿ ಆತನು ತನ್ನ ಜನರೊಂದಿಗೆ ಪ್ರಮಾಣಗಳನ್ನು ಮಾಡಿದ್ದನು.
- ಈ ಆಧುನಿಕ ದಿನಗಳಲ್ಲಿ "ಆಣೆ" ಎನ್ನುವ ಪದಕ್ಕೆ "ಹೊಲಸು ಭಾಷೆಯನ್ನು ಉಪಯೋಗಿಸು" ಎಂದರ್ಥ. ಸತ್ಯವೇದದಲ್ಲಿ ಈ ಪದಕ್ಕೆ ಅರ್ಥ ಇದಾಗಿರುವುದಿಲ್ಲ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, "ಆಣೆ" ಎನ್ನುವ ಪದವನ್ನು "ಪ್ರತಿಜ್ಞೆ" ಅಥವಾ "ಒಂದು ಗಂಭೀರ ಪ್ರಮಾಣ" ಎಂದೂ ಅನುವಾದ ಮಾಡಬಹುದು.
- "ಆಣೆ" ಎನ್ನುವ ಪದವನ್ನು "ಸಾಂಪ್ರದಾಯಿಕವಾದ ಪ್ರಮಾಣ" ಅಥವಾ "ಪ್ರತಿಜ್ಞೆ" ಅಥವಾ "ಏನಾದರೊಂದನ್ನು ಮಾಡುವುದಕ್ಕೆ ಬಾಧ್ಯತೆ ವಹಿಸುವುದು" ಎಂದೂ ಅನುವಾದ ಮಾಡಬಹುದು.
- "ನನ್ನ ಹೆಸರಿನಿಂದ ಆಣೆ ಇಡುವುದು" ಎನ್ನುವ ಮಾತನ್ನು ಅನುವಾದ ಮಾಡುವ ಅನೇಕ ವಿಧಾನಗಳಲ್ಲಿ, "ಅದನ್ನು ನಿಶ್ಚಯಪಡಿಸುವುದಕ್ಕೆ ನನ್ನ ಹೆಸರನ್ನು ಉಪಯೋಗಿಸಿ ಪ್ರಮಾಣ ಮಾಡುವುದು" ಎನ್ನುವ ಮಾತೂ ಒಳಗೊಂಡಿರುತ್ತದೆ.
- "ಪರಲೋಕ ಮತ್ತು ಭೂಮಿ ಹೆಸರುಗಳ ಮೇಲೆ ಆಣೆ ಇಡುವುದು" ಎನ್ನುವ ಮಾತನ್ನು "ಏನಾದರೊಂದು ಮಾಡುವುದಕ್ಕೆ ಪ್ರಮಾಣ ಮಾಡುವುದು, ಭೂಮಿ ಮತ್ತು ಆಕಾಶಗಳೇ ಅದನ್ನು ನಿಶ್ಚಯಗೊಳಿಸುತ್ತವೆ ಎಂದು ಹೇಳುವುದು" ಎಂದೂ ಅನುವಾದ ಮಾಡಬಹುದು.
- "ಆಣೆ" ಅಥವಾ "ಪ್ರಮಾಣ" ಎನ್ನುವ ಪದಗಳ ಬಳಕೆಯು ಶಾಪವನ್ನು ಕೊಡುವ ಅರ್ಥದಲ್ಲಿ ಬಾರದಂತೆ ನೋಡಿಕೊಳ್ಳಿರಿ. ಯಾಕಂದರೆ ಸತ್ಯವೇದದಲ್ಲಿ ಆ ಅರ್ಥವು ಬರುವುದಿಲ್ಲ.

(ಈ ಪದಗಳನ್ನು ಸಹ ನೋಡಿರಿ : ಯಾಕೋಬ, ನಾಹೋರ, ಲೇಯಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.21:22-24
- ಆದಿ.24:1-4
- ಆದಿ.31:51-53
- ಆದಿ.47:29-31
- ಲೂಕ.01:72-75
- ಮಾರ್ಕ.06:26-29
- ಮತ್ತಾಯ.05:36-37
- ಮತ್ತಾಯ.14:6-7
- ಮತ್ತಾಯ.26:71-72

ಪದ ಡೇಟಾ:

- Strong's: H422, H423, H3027, H5375, H7621, H7650, G332, G3660, G3727, G3728

ಆದರಣೆ, ಆದರಿಸುತ್ತದೆ, ಆದರಿಸಲ್ಪಟ್ಟಿದೆ, ಆದರಿಸುವುದು, ಆದರಿಸುವಾತನು, ಆದರಿಸುವವರು, ಆದರಣೆ ಹೊಂದದವರು

ಪದದ ಅರ್ಥವಿವರಣೆ:

"ಆದರಣೆ" ಮತ್ತು "ಆದರಿಸುವವರು" ಎನ್ನುವ ಪದಗಳು ಮಾನಸಿಕವಾಗಿಯೂ ಅಥವಾ ಭೌತಿಕವಾಗಿಯೂ ಬಾಧೆಯನ್ನು ಮತ್ತು ನೋವನ್ನು ಅನುಭವಿಸುತ್ತಿರುವವರಿಗೆ ಸಹಾಯ ಮಾಡುವುದನ್ನು ಸೂಚಿಸುತ್ತವೆ.

- ಒಬ್ಬ ವ್ಯಕ್ತಿ ಯಾರಾದರೊಬ್ಬರನ್ನು ಆದರಿಸಿದಾಗ ಆ ವ್ಯಕ್ತಿಯನ್ನು "ಆದರಿಸುವಾತನು" ಎಂದು ಕರೆಯುತ್ತಾರೆ.
- ಹಳೇ ಒಡಂಬಡಿಕೆಯಲ್ಲಿ "ಆದರಣೆ" ಎನ್ನುವ ಪದವನ್ನು ದೇವರು ತನ್ನ ಜನರನ್ನು ಹೇಗೆ ಪ್ರೀತಿಸುತ್ತಿದ್ದನು ಮತ್ತು ಅವರ ಮೇಲೆ ಹೇಗೆ ದಯೆ ತೋರಿಸುತ್ತಿದ್ದನು ಮತ್ತು ಅವರು ಶ್ರಮೆಗಳಲ್ಲಿರುವಾಗ ಅವರಿಗೆ ಹೇಗೆ ಸಹಾಯ ಮಾಡುತ್ತಿದ್ದನು ಎನ್ನುವುದನ್ನು ವಿವರಿಸುವುದಕ್ಕೆ ಉಪಯೋಗಿಸುತ್ತಿದ್ದರು.
- ಹೊಸ ಒಡಂಬಡಿಕೆಯಲ್ಲಿ ದೇವರು ಪವಿತ್ರಾತ್ಮನ ಮೂಲಕ ತನ್ನ ಜನರನ್ನು ಆದರಿಸುತ್ತಾನೆಂದು ಹೇಳಲ್ಪಟ್ಟಿದೆ. ಆದರಣೆ ಹೊಂದಿದ ಪ್ರತಿಯೊಬ್ಬರೂ ಶ್ರಮೆಗಳಲ್ಲಿರುವ ಜನರಿಗೂ ಅದೇ ರೀತಿಯ ಆದರಣೆಯನ್ನು ತೋರಿಸುವುದಕ್ಕೆ ಬಲವನ್ನು ಹೊಂದಿರುತ್ತಾರೆ.
- "ಇಸ್ರಾಯೇಲನ್ನು ಆದರಿಸುವಾತನು" ಅನ್ನುವ ಮಾತು ತನ್ನ ಜನರನ್ನು ರಕ್ಷಿಸಿಕೊಳ್ಳುವುದಕ್ಕೆ ಬರುವ ಮೆಸ್ಸೀಯಾನನ್ನು ತೋರಿಸುತ್ತದೆ.
- ಯೇಸುವಿನಲ್ಲಿ ನಂಬಿದ ಪ್ರತಿಯೊಬ್ಬರಿಗೆ ಸಹಾಯ ಮಾಡುವುದಕ್ಕೆ ಪವಿತ್ರಾತ್ಮನು "ಆದರಿಸುವಾತನನ್ನಾಗಿ" ಅಥವಾ "ಸಹಾಯಕನನ್ನಾಗಿ" ಯೇಸು ಸೂಚಿಸಿದ್ದಾರೆ.

ಅನುವಾದ ಸಲಹೆಗಳು:

- ಸಂದರ್ಭಕ್ಕೆ ತಕ್ಕಂತೆ, "ಆದರಣೆ" ಎನ್ನುವ ಪದವನ್ನು "ಬಾಧೆಯನ್ನು ಅಥವಾ ನೋವನ್ನು ಕಡಿಮೆ ಮಾಡು" ಅಥವಾ "ಪ್ರಲಾಪಿಸುವವರಿಗೆ ಸಹಾಯ ಮಾಡು" ಅಥವಾ "ಪ್ರೋತ್ಸಾಹ" ಅಥವಾ "ಸಾಂತ್ವನಪಡಿಸು" ಎಂದೂ ಅನುವಾದ ಮಾಡಬಹುದು.
- "ನಮ್ಮ ಆದರಣೆ" ಎನ್ನುವ ಮಾತನ್ನು "ನಮ್ಮ ಪ್ರೋತ್ಸಾಹ" ಅಥವಾ "ಒಬ್ಬರಿಗೆ ನಮ್ಮ ಸಾಂತ್ವನ" ಅಥವಾ "ಪ್ರಲಾಪಿಸುವ ಸಮಯದಲ್ಲಿ ನಮ್ಮ ಸಹಾಯ" ಎಂದೂ ಅನುವಾದ ಮಾಡಬಹುದು.
- "ಆದರಿಸುವಾತನು" ಎನ್ನುವ ಮಾತಿಗೆ "ಆದರಿಸುವ ವ್ಯಕ್ತಿ" ಅಥವಾ "ಬಾಧೆಯನ್ನು ಕಡಿಮ ಮಾಡುವುದಕ್ಕೆ ಸಹಾಯ ಮಾಡುವ ಒಬ್ಬ ವ್ಯಕ್ತಿ" ಅಥವಾ "ಪ್ರೋತ್ಸಾಹ ಮಾಡುವ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.
- ಪವಿತ್ರಾತ್ಮನು "ಆದರಿಸುವವನೆಂದು" ಕರೆಯಲ್ಪಟ್ಟಿರುವ ಪದವನ್ನೂ "ಪ್ರೋತ್ಸಾಹಕನು" ಅಥವಾ "ಸಹಾಯ ಮಾಡುವವನು" ಅಥವಾ "ಸಹಾಯ ಮಾಡುವ ಮತ್ತು ಮಾರ್ಗದರ್ಶನ ಕೊಡುವ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.
- "ಇಸ್ರಾಯೇಲ್ ಆದರಿಸುವಾತನು" ಎನ್ನುವ ಮಾತನ್ನು "ಇಸ್ರಾಯೇಲ್ ಜನಾಂಗವನ್ನು ಆದರಿಸುವ ಮೆಸ್ಸೀಯ" ಎಂದೂ ಅನುವಾದ ಮಾಡಬಹುದು.
- "ಅವರಿಗೆ ಯಾವ ಸಹಾಯಕನೂ ಇಲ್ಲ ಅಥವಾ ಆದರಿಸುವವರು ಯಾರೂ ಇಲ್ಲ" ಎನ್ನುವ ಮಾತನ್ನು "ಅವರನ್ನು ಯಾರೂ ಆದರಿಸಿಲ್ಲ ಅಥವಾ ಅವರಿಗೆ ಯಾರೂ ಸಹಾಯ ಮಾಡಲಿಲ್ಲ" ಅಥವಾ "ಅವರಿಗೆ ಸಹಾಯ ಮಾಡುವುದಕ್ಕೆ ಯಾರೂ ಇಲ್ಲ ಅಥವಾ ಅವರನ್ನು ಪ್ರೋತ್ಸಾಹ ಮಾಡುವುದಕ್ಕೆ ಯಾರೂ ಇಲ್ಲ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪ್ರೋತ್ಸಾಹ, ಪವಿತ್ರಾತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.05:8-11
- 2 ಕೊರಿಂಥ.01:3-4
- 2 ಸಮು.10:1-3
- ಅಪೊ.ಕೃತ್ಯ.20:11-12

ಪದ ಡೇಟಾ:

- Strong's: H2505, H5150, H5162, H5165, H5564, H8575, G302, G2174, G3870, G3874, G3875, G3888, G3890, G3931

ಆದೇಶ, ಆದೇಶಿಸು, ಆದೇಶಿಸಲಾಗಿದೆ, ಆದೇಶಿಸುವುದು, ಸೂಚನೆ, ಸೂಚನೆಗಳು, ಭೋದಕರು

ಸತ್ಯಾಂಶಗಳು:

ಏನು ಮಾಡಬೇಕೆನ್ನುವದರ ಕುರಿತಾಗಿ ನಿರ್ದೇಶಿಸುವುದನ್ನು "ಆದೇಶ" ಮತ್ತು "ಸೂಚನೆ" ಎನ್ನುವ ಪದಗಳು ಸೂಚಿಸುತ್ತಿವೆ.

- "ಸೂಚನೆಗಳನ್ನು ಕೊಡುವುದು" ಎಂದರೆ ಯಾರಾದರು ಒಬ್ಬರು ಏನು ಮಾಡಬೇಕೆಂದು ಸ್ಪಷ್ಟವಾಗಿ ತಿಳಿಸುವುದು ಎಂದರ್ಥ.
- ಜನರಿಗೆ ಮೀನು ಮತ್ತು ರೊಟ್ಟಿಯನ್ನು ಹಂಚಲು ಯೇಸು ತನ್ನ ಶಿಷ್ಯರಿಗೆ ಕೊಟ್ಟಾಗ ಆತನು ಅವರಿಗೆ ಸ್ಪಷ್ಟವಾಗಿ ಸೂಚನೆಗಳನ್ನು ನೀಡಿದನು.
- ಸಂದರ್ಭಾನುಸರವಾಗಿ "ಆದೇಶ" ಎನ್ನುವ ಪದವನ್ನು "ಹೇಳುವುದು" ಅಥವಾ "ನಿರ್ದೇಶನ" ಅಥವಾ "ಭೋಧನೆ" ಅಥವಾ "ಸೂಚನೆಗಳನ್ನು ನೀಡುವುದು" ಎಂದು ಅನುವಾದ ಮಾಡಬಹುದು.
- "ಸೂಚನೆಗಳು" ಎನ್ನುವ ಪದವನ್ನು "ನಿರ್ದೇಶನಗಳು" ಅಥವಾ "ವಿವರಣೆಗಳು" ಅಥವಾ "ಅವನು ನಿನಗೆ ಏನು ಹೇಳಿದನು" ಎಂದು ಅನುವಾದ ಮಾಡಬಹುದು.
- ದೇವರು ಸೂಚನೆಗಳನ್ನು ಕೊಟ್ಟಾಗ, ಈ ಪದವನ್ನು "ಆಜ್ಞೆಗಳು" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆಜ್ಞೆ, ಗುಣಲಕ್ಷಣಗಳು, ಬೋಧನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.14:4-5
- ಆದಿ.26:4-5
- ಇಬ್ರಿ.11:20-22
- ಮತ್ತಾಯ.10:5-7
- ಮತ್ತಾಯ.11:1-3
- ಜ್ಞಾನೋ.01:28-30

ಪದ ಡೇಟಾ:

- Strong's: H241, H376, H559, H631, H1004, H1696, H1697, H3256, H3289, H3384, H4148, H4156, H4687, H4931, H4941, H5657, H6098, H6310, H6490, H6680, H7919, H8451, H8738, G1256, G1299, G1319, G1321, G1378, G1781, G1785, G2322, G2727, G2753, G3559, G3560, G3614, G3615, G3624, G3811, G3852, G3853, G4264, G4367, G4822

ಆನಂದ, ಆನಂದಭರಿತ, ಆನಂದದಾಯಕತೆ, ಆನಂದಿಸು

ಪದದ ಅರ್ಥವಿವರಣೆ:

ಆನಂದ

"ಆನಂದ" ಎನ್ನುವುದು ದೇವರಿಂದ ಬರುವ ಆಳವಾದ ತೃಪ್ತಿ ಅಥವಾ ಸಂತೋಷದ ಭಾವನೆಯಾಗಿರುತ್ತದೆ. “ಆನಂದಭರಿತ” ಎನ್ನುವ ಅನುಬಂಧ ಪದವು ಒಬ್ಬ ವ್ಯಕ್ತಿ ತುಂಬಾ ಸಂತೋಷವಾಗಿರುವುದನ್ನು ಮತ್ತು ಆಳವಾದ ಸಂತೋಷದಿಂದ ತುಂಬಿ ತುಳುಕುತ್ತಿರುವುದನ್ನು ವಿವರಿಸುತ್ತದೆ.

- ಒಬ್ಬ ವ್ಯಕ್ತಿ ಒಳ್ಳೆಯ ಅನುಭವಗಳನ್ನು ಹೊಂದುತ್ತಿರುವಾಗ ಪಡೆಯುವ ಆಳವಾದ ಭಾವನೆಯಲ್ಲಿ ಆನಂದವನ್ನು ಅನುಭವಿಸುತ್ತಾನೆ.
- ದೇವರೊಬ್ಬರೇ ತನ್ನ ಜನರಿಗೆ ನಿಜವಾದ ಆನಂದವನ್ನು ಕೊಡುವವರು.
- ಆನಂದವನ್ನು ಹೊಂದಿಕೊಂಡಿರುವುದು ಸಂತೋಷಕರವಾದ ಪರಿಸ್ಥಿತಿಗಳ ಮೇಲೆ ಆಧಾರಪಟ್ಟಿರುವುದಿಲ್ಲ. ಜನರು ತಮ್ಮ ಜೀವನಗಳಲ್ಲಿ ಅನೇಕ ಭಯಂಕರವಾದ ಸಂಕಷ್ಟಗಳಲ್ಲಿ ಹಾದು ಹೋಗುತ್ತಿರುವಾಗಲೂ ದೇವರು ಅವರಿಗೆ ಆನಂದವನ್ನು ಕೊಡುತ್ತಾನೆ.
- ಕೆಲವೊಂದುಬಾರಿ ಸ್ಥಳಗಳನ್ನು ಆನಂದಭರಿತ ಎಂದು ವಿವರಿಸುತ್ತಾ ಬರೆದಿರುತ್ತಾರೆ, ಮನೆಗಳಿಗೆ ಅಥವಾ ಪಟ್ಟಣಗಳಿಗೆ ಈ ರೀತಿ ಬರೆದಿರುತ್ತಾರೆ. ಈ ಮಾತುಗಳಿಗೆ ಅರ್ಥವೇನಂದರೆ ಆ ಸ್ಥಳಗಳಲ್ಲಿ ನಿವಾಸವಾಗುತ್ತಿರುವ ಜನರು ತುಂಬಾ ಆನಂದಭರಿತರಾಗಿದ್ದಾರೆಂದು ಅದರ ಅರ್ಥ.

ಆನಂದದಾಯಕ

“ಆನಂದದಾಯಕ” ಎನ್ನುವ ಪದಕ್ಕೆ ಸಂತೋಷ ಮತ್ತು ಆನಂದಗಳಿಂದ ತುಂಬಿರುವುದು ಎಂದರ್ಥ.

- ಈ ಮಾತು ಅನೇಕಬಾರಿ ದೇವರು ಮಾಡಿದ ಒಳ್ಳೆಯ ಕಾರ್ಯಗಳ ಕುರಿತಾಗಿ ಅತೀ ಹೆಚ್ಚಾಗಿ ಸಂತೋಷಪಡುವದನ್ನು ಸೂಚಿಸುತ್ತದೆ.
- ಇದನ್ನು “ತುಂಬಾ ಹೆಚ್ಚಿನ ಸಂತೋಷದಿಂದಿರು” ಅಥವಾ “ತುಂಬಾ ಹೆಚ್ಚಿನ ಹರ್ಷದಾಯಕನಾಗಿರು” ಅಥವಾ “ತುಂಬಾ ಹೆಚ್ಚಿನ ಆನಂದ ಹೊಂದು” ಎಂದೂ ಅನುವಾದ ಮಾಡಬಹುದು.
- “ನನ್ನ ಪ್ರಾಣವು ನನ್ನ ರಕ್ಷಕನಾದ ದೇವರಲ್ಲಿ ಆನಂದ ಹೊಂದುತ್ತಿದೆ” ಎಂದು ಮರಿಯಳು ಹೇಳಿದಾಗ, ಅದಕೆಕ್ “ರಕ್ಷಕನಾಗಿರುವ ನನ್ನ ದೇವರು ನನ್ನ ಅತೀ ಹೆಚ್ಚಾದ ಸಂತೋಷದಿಂದ ತುಂಬಿಸಿದರು” ಅಥವಾ “ರಕ್ಷಕನಾದ ದೇವರು ನನಗೆ ಮಾಡಿದ ಕಾರ್ಯಗಳಿಂದ ನಾನು ತುಂಬಾ ಆನಂದವಾಗಿದ್ದೇನೆ” ಎಂದು ಆಕೆ ಹೇಳುತ್ತಿದ್ದಾಳೆ.

ಅನುವಾದ ಸಲಹೆಗಳು:

- “ಆನಂದ” ಎನ್ನುವ ಪದವನ್ನು “ಆನಂದಿಸುವುದು” ಅಥವಾ “ಸಂತೋಷ” ಅಥವಾ “ಮಹಾ ಸಂತೋಷಕರ” ಎಂದೂ ಅನುವಾದ ಮಾಡಬಹುದು.
- “ಆನಂದಭರಿತವಾಗಿರು” ಎನ್ನುವ ಮಾತನ್ನು “ಆನಂದಗೊಳಿಸು” ಅಥವಾ “ಅತೀ ಹೆಚ್ಚಾಗಿ ಸಂತೋಷಪಡು” ಎಂದೂ ಅನುವಾದ ಮಾಡಬಹುದು, ಅಥವಾ ಇದನ್ನು “ದೇವರ ಒಳ್ಳೇಯತನದಲ್ಲಿ ತುಂಬಾ ಸಂತೋಷವಾಗಿರು” ಎಂದೂ ಅನುವಾದ ಮಾಡಬಹುದು.
- ಆನಂದಭರಿತನಾಗಿರುವ ಒಬ್ಬ ವ್ಯಕ್ತಿಯನ್ನು “ಹೆಚ್ಚಿನ ಸಂತೋಷ” ಅಥವಾ “ಹೆಚ್ಚಿನ ಸಂತೋಷದಿಂದ ಇರುವುದು” ಅಥವಾ “ಆಳವಾದ ಸಂತೋಷ” ಎಂದೂ ವಿವರಿಸಬಹುದು.
- “ಆನಂದಭರಿತವಾದ ಕೂಗನ್ನು ಕೇಳಿಸು” ಎನ್ನುವ ಮಾತನ್ನು “ನೀನು ಅತೀ ಹೆಚ್ಚಾದ ಆನಂದದಿಂದ ಇದ್ದೀಯೆನ್ನುವ ವಿಧಾನದಲ್ಲಿ ಜೋರಾಗಿ ಕೂಗು” ಎಂದೂ ಅನುವಾದ ಮಾಡಬಹುದು.
- “ಆನಂದಭರಿತವಾದ ಪಟ್ಟಣ” ಅಥವಾ “ಆನಂದಭರಿತವಾದ ಮನೆ” ಎನ್ನುವ ಪದವನ್ನು “ಆನಂದಭರಿತರಾದ ಜನರು ನಿವಾಸ ಮಾಡುವ ಪಟ್ಟಣ” ಅಥವಾ “ಆನಂದಭರಿತರಾದ ಜನರೆಲ್ಲರು ಇರುವ ಮನೆ” ಅಥವಾ “ಜನರು

(See: metonymy)

ಸತ್ಯವೇದದ ಅನುಬಂಧ ವಾಕ್ಯಗಳು :

- ನೆಹೆ.08:10
- ಕೀರ್ತನೆ.048:02
- ಯೆಶಯಾ.56:6-7
- ಯೆರೆ.15:15-16
- ಮತ್ತಾಯ.02:9-10
- ಲೂಕ.15:07
- ಲೂಕ.19:37-38
- ಯೋಹಾನ.03:29
- ಅಪೊ.ಕೃತ್ಯ.16:32-34

- ರೋಮಾ.05:1-2
- ರೋಮಾ.15:30-32
- ಗಲಾತ್ಯ.05:23
- ಫಿಲಿಪ್ಪ.04:10-13
- 1 ಥೆಸ್ಸ.01:6-7
- 1 ಥೆಸ್ಸ.05:16
- ಫಿಲೆಮೋನ.01:4-7
- ಯಾಕೋಬ.01:02
- 3 ಯೋಹಾನ.01:1-4

ಸತ್ಯವೇದ ಕಥೆಗಳಿಂದ ಉದಾಹರಣೆಗಳು:

- **33:07** “ಕಲ್ಲಿನ ನೆಲವು ದೇವರ ಮಾತನ್ನು ಕೇಳುವ ಮತ್ತು ಅದನ್ನು ಸಂತೋಷದಿಂದ ಸ್ವೀಕರಿಸುವ ವ್ಯಕ್ತಿ.”
- _34:04 _ “ದೇವರ ರಾಜ್ಯವು ಯಾರೋ ಒಬ್ಬರು ಹೊಲದಲ್ಲಿ ಅಡಗಿಸಿಟ್ಟಿರುವ ಗುಪ್ತ ನಿಧಿಯಂತಿದೆ .. ಇನ್ನೊಬ್ಬ ವ್ಯಕ್ತಿ ನಿಧಿಯನ್ನು ಕಂಡುಕೊಂಡನು ಅದನ್ನು ಮತ್ತೆ ಸಮಾಧಿ ಮಾಡಲಾಯಿತು. ಅವನು ಸಂತೋಷದಿಂದ ತುಂಬಿದ್ದನು, ಅವನು ಹೋಗಿ ತನ್ನಲ್ಲಿದ್ದ ಎಲ್ಲವನ್ನೂ ಮಾರಿ ಆ ಹಣವನ್ನು ಆ ಜಾಗವನ್ನು ಖರೀದಿಸಲು ಬಳಸಿದನು. ”
- **41:07** ಮಹಿಳೆಯರು ಭಯದಿಂದ ತುಂಬಿದ್ದರು ಮತ್ತು ದೊಡ್ಡ _ ಸಂತೋಷ_. ಅವರು ಶಿಷ್ಯರಿಗೆ ಸುವಾರ್ತೆ ಹೇಳಲು ಓಡಿಹೋದರು.

ಪದ ಡೇಟಾ:

- Strong’s: H1523, H1524, H1525, H2302, H2304, H2305, H2654, H2898, H4885, H5937, H5947, H5965, H5970, H6342, H6670, H7440, H7442, H7444, H7445, H7797, H7832, H8055, H8056, H8057, H8342, H8643, G20, G21, G2165, G2167, G2744, G4640, G4796, G4913, G5463, G5479

ಆನಂದ, ಆನಂದಿಸು, ಉಲ್ಲಾಸ, ಹರ್ಷ

ಪದದ ಅರ್ಥವಿವರಣೆ

“ಆನಂದ” ಮತ್ತು “ಹರ್ಷ” ಎನ್ನುವ ಪದಗಳು ಏನಾದರು ಸಾಧಿಸಿದಾಗ ಅಥವಾ ವಿಶೇಷವಾದ ಆಶಿರ್ವಾದವನ್ನು ಹೊಂದಿದಾಗ ಸಿಗುವ ಸಂತೋಷವನ್ನು ಸೂಚಿಸುತ್ತವೆ.

- “ಆನಂದಿಸುವುದು” ಅಂದರೆ ಏನಾದರು ಅಧ್ಭುತಕರವಾಗಿದ್ದರೆ ಅದನ್ನು ಕೊಂಡಾಡುವುದನ್ನು ಸೂಚಿಸುತ್ತದೆ.
- ಒಬ್ಬ ವ್ಯಕ್ತಿ ದೇವರ ಒಳ್ಳೆಯತನವನ್ನು ಕುರಿತು ಆನಂದಿಸಬಹುದು.
- “ಹರ್ಷ” ಎನ್ನುವ ಪದವು ಯಶಸ್ಸು ಅಥವಾ ವಿಜಯದ ಸಂತೋಷದಲ್ಲಿ ಒಬ್ಬನ ಅಹಂಕಾರದ ಸ್ವಭಾವವು ಸಹ ಈ ಪದದಲ್ಲಿ ಸೇರಿಸಲ್ಪಟ್ಟಿದೆ.
- “ಆನಂದ” ಎನ್ನುವ ಪದವನ್ನು “ಸಂತೋಷದಿಂದ ಆಚರಿಸು” ಅಥವಾ “ಅತ್ಯಾನಂದದಿಂದ ಪ್ರಶಂಸಿಸುವುದು” ಎಂದು ಅನುವಾದ ಮಾಡಬಹುದು.
- ಸಂಧರ್ಭನುಸರವಾಗಿ, “ಹರ್ಷ” ಎನ್ನುವ ಪದವನ್ನು “ವಿಜಯವಂತವಾಗಿ ಪ್ರಶಂಸಿಸುವುದು” ಅಥವಾ “ಸ್ವಯಂ ಪ್ರಶಂಸೆಯನ್ನು ಆಚರಿಸುವುದು” ಅಥವಾ “ಅಹಂಕಾರ” ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಹಂಕಾರ, ಸಂತೋಷ, ಪ್ರಶಂಸೆ, ಸಂತಸ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.02:1
- ಯೆಶಯ.13:1-3
- ಯೋಬ.06:10-11
- ಕೀರ್ತನೆ.068:1-3
- ಚೆಫನ್ಯ.02:15

ಪದ ಡೇಟಾ:

- Strong's: H5539, H5947, H5970

ಆನಂದಗೊಳಿಸು, ಆನಂದಗೊಳಿಸುವುದು, ಆನಂದ ಹೊಂದಿದೆ, ಆನಂದಕರ

ಪದದ ಅರ್ಥವಿವರಣೆ:

“ಆನಂದಗೊಳಿಸು” ಎಂದರೆ ಯಾರಾದರೊಬ್ಬರನ್ನು ಅತೀ ಹೆಚ್ಚಾಗಿ ಸಂತೋಷಕ್ಕೆ ಗುರಿಮಾಡುವುದು ಅಥವಾ ಮೆಚ್ಚುಗೆಯಾಗುವಂತೆ ಮಾಡುವುದು ಎಂದರ್ಥ.

- “ಆನಂದಕರ” ಎನ್ನುವ ಮಾತಿಗೆ “ಸಂತೋಷ ಹೊಂದು” ಅಥವಾ “ಅದರ ಕುರಿತಾಗಿ ಸಂತೋಷವಾಗಿರು” ಎಂದರ್ಥ.
- ಯಾವುದಾದರೊಂದು ತುಂಬಾ ಹೆಚ್ಚಾಗಿ ಒಪ್ಪಿಕೊಳ್ಳುವಂತಿರುವಾಗ ಅಥವಾ ಅದು ತುಂಬಾ ಇಷ್ಟವಾದಾಗ ಅದನ್ನು “ಆನಂದಕರ” ಎಂದು ಕರೆಯುತ್ತಾರೆ.
- ಯಾವುದಾದರೊಂದರಲ್ಲಿ ಒಬ್ಬ ವ್ಯಕ್ತಿ ಆನಂದ ಹೊಂದುತ್ತಿದ್ದಾನೆಂದರೆ ಅದರಲ್ಲಿ ಆ ವ್ಯಕ್ತಿ ತುಂಬಾ ಸಂತೋಷಪಡುತ್ತಿದ್ದಾನೆ ಎಂದು ಅದರ ಅರ್ಥವಾಗಿರುತ್ತದೆ.
- “ಯೆಹೋವನ ನ್ಯಾಯಶಾಸನಗಳಲ್ಲಿ ನಾನು ಆನಂದಪಡುತ್ತೇನೆ” ಎನ್ನುವ ಮಾತನ್ನು “ಯೆಹೋವನ ನ್ಯಾಯ ಶಾಸನಗಳು ನನಗೆ ಎಷ್ಟೋ ಆನಂದವನ್ನು ಕೊಡುತ್ತವೆ” ಅಥವಾ “ಯೆಹೋವನ ನ್ಯಾಯಶಾಸನಗಳಿಗೆ ವಿಧೇಯನಾಗಲು ನನಗೆ ಎಷ್ಟೋ ಪ್ರೀತಿ” ಎಂದೂ ಅನುವಾದ ಮಾಡಬಹುದು.
- “ಅದರಲ್ಲಿ ಆನಂದಪಡಬೇಡ” ಮತ್ತು “ಅದರಲ್ಲಿ ಆನಂದವಿಲ್ಲ” ಎನ್ನುವ ಮಾತುಗಳನ್ನು “ಅದರಿಂದ ಯಾವ ಸಂತೋಷವೂ ಇಲ್ಲ” ಅಥವಾ “ಅದರ ಕುರಿತಾಗಿ ನನಗೆ ಸಂತೋಷವಿಲ್ಲ” ಎಂದೂ ಅನುವಾದ ಮಾಡಬಹುದು.
- “ತನ್ನಲ್ಲಿ ತಾನು ಆನಂದಪಡುವುದು” ಎನ್ನುವ ಮಾತಿಗೆ “ಅವನು ಅದನ್ನು ಮಾಡುವುದರಲ್ಲಿ ತುಂಬಾ ಆನಂದಪಡುತ್ತಿದ್ದಾನೆ” ಅಥವಾ “ಅವನು ಅದರ ಕುರಿತಾಗಿ ಅಥವಾ ಯಾರಾದರೊಬ್ಬರ ಕುರಿತಾಗಿ ತುಂಬಾ ಸಂತೋಷವಾಗಿದ್ದಾನೆ” ಎಂದರ್ಥ.
- “ಆನಂದಗೊಳಿಸುವಿಕೆ” ಎನ್ನುವ ಪದವು ಒಬ್ಬ ವ್ಯಕ್ತಿ ಸಂತೋಷಪಡುವ ವಿಷಯಗಳನ್ನು ಸೂಚಿಸುತ್ತದೆ. ಇದನ್ನು “ಸಂತೋಷಗಳು” ಅಥವಾ “ಸಂತೋಷವನ್ನು ಕೊಡುವ ವಿಷಯಗಳು” ಎಂದು ಅನುವಾದ ಮಾಡಬಹುದು.
- “ನಿನ್ನ ಇಷ್ಟವನ್ನು ಮಾಡುವುದಕ್ಕೆ ನನಗೆ ತುಂಬಾ ಸಂತೋಷ” ಎನ್ನುವಂಥಹ ಮಾತನ್ನು “ನಿಮ್ಮ ಚಿತ್ತವನ್ನು ನೆರವೇರಿಸಲು ನನಗೆ ತುಂಬಾ ಸಂತೋಷ” ಅಥವಾ “ನಾನು ನಿಮಗೆ ವಿಧೆಯನಾಗುವಾಗ ನಾನು ತುಂಬಾ ಸಂತೋಷಿಸುತ್ತೇನೆ” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಜ್ಞಾನೋ.08:30-31
- ಕೀರ್ತನೆ.001:1-2
- ಕೀರ್ತನೆ.119:69-70
- ಪರಮ.01:1-4

ಪದ ಡೇಟಾ:

- Strong's: H1523, H2530, H2531, H2532, H2654, H2655, H2656, H2836, H4574, H5276, H5727, H5730, H6026, H6027, H7306, H7381, H7521, H7522, H8057, H8173, H8191, H8588, H8597

ಆನೆಕಲ್ಲು, ಆನೆಕಲ್ಲುಗಳು, ಆಲಿಕಲ್ಲು, ಆಲಿಕಲ್ಲುಗಳು, ಆಲಿಕಲ್ಲಿನ ಮಳೆ

ಸತ್ಯಾಂಶಗಳು:

ಈ ಪದವನ್ನು ಸಹಜವಾಗಿ ಮಂಜುಗಡ್ಡೆ ಕಟ್ಟಿ ಆಕಾಶದಿಂದ ಬೀಳುವ ಗಡ್ಡೆಗಳನ್ನು ಸೂಚಿಸಲು ಉಪಯೋಗಿಸುತ್ತಾರೆ. ಯಾರಿಗಾದರೂ ಶುಭ ಹೇಳಲು ಅಂದರೆ “ಹಲೋ” ಅಥವಾ “ನಿಮಗೆ ಶುಭವಾಗಲಿ” ಎಂದು ಅರ್ಥ ನೀಡುವಂತೆ ಆಂಗ್ಲ ಭಾಷೆಯಲ್ಲಿ “ಹೈಲ್” ಎನ್ನುವ ಪದವನ್ನು ಉಪಯೋಗಿಸುತ್ತಾರೆ.

- ಆಕಾಶದಿಂದ ಬೀಳುವ ನೀರ್ಗಲ್ಲನ್ನು ಅಥವಾ ಮಂಜುಗಡ್ಡೆಗಳನ್ನು “ಆಲಿಕಲ್ಲು” ಎಂದು ಕರೆಯುತ್ತಾರೆ.
- ಸಾಮಾನ್ಯವಾಗಿ ಆನೆಕಲ್ಲುಗಳು ಬಹಳ ಚಿಕ್ಕವಾಗಿರುತ್ತವೆ (ಕೆಲವು ಸೆಂಟಿಮೀಟರ್ ಅಗಲ) ಆದರೆ ಕೆಲವೊಮ್ಮೆ ಆನೆಕಲ್ಲುಗಳು 20 ಸೆಂಟಿಮೀಟರ್ಗಳಷ್ಟು ದೊಡ್ಡವಾಗಿ ಮತ್ತು ಸುಮಾರು ಒಂದು ಕೇಜಿ ಅಷ್ಟು ಭಾರವಾಗಿರುತ್ತವೆ.
- ಅಂತ್ಯಕಾಲದಲ್ಲಿ ದೇವರು ಜನರ ದುಷ್ಟತನ ವಿಷಯದಲ್ಲಿ ತೀರ್ಪು ಮಾಡುವಾಗ ಭೂಮಿಯ ಮೇಲೆ ಸುಮಾರು 50 ಕೇಜಿಗಳಷ್ಟು ಭಾರವಿರುವ ಅಸಂಖ್ಯಾತವಾದ ಆನೆಕಲ್ಲುಗಳು ಬಿಳುವಂತೆ ಮಾಡುತ್ತಾನೆ ಎನ್ನುವದನ್ನು ಹೊಸ ಒಡಂಬಡಿಕೆಯಲ್ಲಿರುವ ಪ್ರಕಟನೆ ಗ್ರಂಥವು ವಿವರಿಸುತ್ತದೆ.
- “ಹೈಲ್” ಎನ್ನುವ ಆಂಗ್ಲ ಭಾಷೆಯಲ್ಲಿನ ಪದಕ್ಕೆ “ಸಂತೋಷಿಸು” ಎಂದರ್ಥ ಮತ್ತು ಇದನ್ನು “ಶುಭಾಶಯಗಳು” ಅಥವಾ “ನಮಸ್ಕಾರ” ಎಂದು ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಮತ್ತಾಯ.27:27-29
- ಮತ್ತಾಯ.28:8-10
- ಕೀರ್ತನೆ.078:47-49
- ಕೀರ್ತನೆ.148:7-8
- ಪ್ರಕಟನೆ.08:6-7

ಪದ ಡೇಟಾ:

- Strong's: H68, H417, H1258, H1259, G5463, G5464

ಆಲೀವ್ (ಎಣ್ಣೆ ಮರದ ಹಣ್ಣು), ಆಲೀವ್.ಗಳು (ಎಣ್ಣೆ ಮರದ ಹಣ್ಣುಗಳು)

ಪದದ ಅರ್ಥವಿವರಣೆ:

ಆಲೀವ್ (ಎಣ್ಣೆ ಮರದ ಹಣ್ಣು) ಎನ್ನುವುದು ಚಿಕ್ಕದಾಗಿದ್ದು ಅಂಡಾಕಾರದ ಆಕಾರದಲ್ಲಿರುವ ಆಲೀವ್ ಮರದ ಹಣ್ಣಾಗಿರುತ್ತದೆ, ಇದು ಹೆಚ್ಚಾಗಿ ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ.

- ಆಲೀವ್ ಮರಗಳು (ಎಣ್ಣೆ ಮರಗಳು) ಯಾವಾಗಲೂ ಹಚ್ಚ ಹಸುರಾಗಿದ್ದು ತೆಳುವಾದ ಬಿಳಿಯ ಹೂಗಳನ್ನು ಹೊಂದಿರುವ ಒಂದು ವಿಧವಾದ ಚಿಕ್ಕ ಪೊದೆಯ ಗಿಡವಾಗಿರುತ್ತದೆ. ಅವು ಬಿಸಿ ವಾತಾವರಣದಲ್ಲಿ ಚೆನ್ನಾಗಿ ಬೆಳೆಯುತ್ತವೆ ಮತ್ತು ನೀರು ಕಡಿಮೆಯಾಗಿದ್ದರೂ ಚೆನ್ನಾಗಿ ಬದುಕುತ್ತವೆ.
- ಆಲೀವ್ ಮರದ ಹಣ್ಣು ಪ್ರಾರಂಭದಲ್ಲಿ ಹಚ್ಚು ಹಸುರಾಗಿರುತ್ತದೆ ಮತ್ತು ಅವುಗಳು ಹಣ್ಣುಗಳಾಗುತ್ತಿರುವಾಗ ಕಪ್ಪಾಗಿ ಮಾರ್ಪಾಟು ಹೊಂದುತ್ತವೆ. ಆಲೀವ್ ಹಣ್ಣುಗಳು ಆಹಾರಕ್ಕೆ ಪ್ರಯೋಜನವಾಗಿರುತ್ತವೆ ಮತ್ತು ಅವುಗಳಿಂದ ತೆಗೆಯುವ ಎಣ್ಣೆಯು ಪ್ರಯೋಜನಕರವಾಗಿರುತ್ತವೆ.
- ಆಲೀವ್ ಎಣ್ಣೆಯನ್ನು ಬುಡ್ಡಿಗಳಲ್ಲಿ ಹಾಕಿಕೊಂಡು ಅಡಿಗೆಗೆ ಬಳಸುತ್ತಾರೆ ಮತ್ತು ಧಾರ್ಮಿಕ ಸಂಬಂಧವಾದ ಸಮಾರಂಭಗಳಿಗೆ ಉಪಯೋಗಿಸುತ್ತಾರೆ.
- ಸತ್ಯವೇದದಲ್ಲಿ ಆಲೀವ್ ಮರಗಳು ಮತ್ತು ಕೊಂಬೆಗಳು ಕೆಲವೊಂದುಬಾರಿ ಜನರನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ದೀಪ, ಸಮುದ್ರ, ಎಣ್ಣೆ ಮರಗಳ ಬೆಟ್ಟ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.27:28-29
- ಧರ್ಮೋ.06:10-12
- ವಿಮೋ.23:10-11
- ಆದಿ.08:10-12
- ಯಾಕೋ.03:11-12
- ಲೂಕ.16:5-7
- ಕೀರ್ತನೆ.052:8-9

ಪದ ಡೇಟಾ:

- Strong's: H2132, H3323, H8081, G65, G1636, G1637, G2565

ಆಳ್ವಿಕೆ, ಆಳುವುದು, ಆಳ್ವಿಕೆ ಮಾಡಿದೆ, ಆಳ್ವಿಕೆ ಮಾಡುತ್ತಿರುವುದು

ಪದದ ಅರ್ಥವಿವರಣೆ:

“ಆಳ್ವಿಕೆ” ಎನ್ನುವ ಪದಕ್ಕೆ ಒಂದು ನಿರ್ದಿಷ್ಟವಾದ ದೇಶದ ಅಥವಾ ರಾಜ್ಯದ ಜನರ ಮೇಲೆ ಆಡಳಿತ ಮಾಡುವುದು ಎಂದರ್ಥ. ಅರಸನ ಆಳ್ವಿಕೆ ಎಂದರೆ ಆತನು ಆಳುತ್ತಿರುವ ಕಾಲಾವಧಿ ಎಂದರ್ಥ.

- “ಆಳ್ವಿಕೆ” ಎನ್ನುವ ಪದವನ್ನು ಸರ್ವ ಲೋಕದ ಮೇಲೆ ದೇವರು ಅರಸನಾಗಿ ಆಳುತ್ತಿದ್ದಾರೆನ್ನುವ ವಿಷಯವನ್ನು ಸೂಚಿಸುತ್ತದೆ.
- ದೇವರನ್ನು ಇಸ್ರಾಯೇಲ್ಯರು ತಮ್ಮ ಅರಸನನ್ನಾಗಿ ತಿರಸ್ಕಾರ ಮಾಡಿದನಂತರ ಇಸ್ರಾಯೇಲಿರನ್ನು ಆಳುವುದಕ್ಕೆ ಅನೇಕಮಂದಿ ಮನುಷ್ಯ ಅರಸರನ್ನು ದೇವರು ಅನುಮತಿಸಿದರು.
- ಯೇಸು ಕ್ರಿಸ್ತ ಹಿಂದುರಿಗಿ ಬರುವಾಗ, ಆತನು ಬಹಿರಂಗವಾಗಿ ಇಡೀ ಲೋಕದ ಮೇಲೆ ಅರಸನಾಗಿ ಆಳುತ್ತಾನೆ ಮತ್ತು ಕ್ರೈಸ್ತರು ಕೂಡ ಆತನೊಂದಿಗೆ ಆಳುವರು.
- ಈ ಪದವನ್ನು “ಸಂಪೂರ್ಣವಾಗಿ ಆಳುವುದು” ಅಥವಾ “ಅರಸನಾಗಿ ಆಳುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ರಾಜ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.02:11-13
- ಆದಿ.36:34-36
- ಲೂಕ.01:30-33
- ಲೂಕ.19:26-27
- ಮತ್ತಾಯ.02:22-23

ಪದ ಡೇಟಾ:

- Strong's: H3427, H4427, H4437, H4438, H4467, H4468, H4475, H4791, H4910, H6113, H7287, H7786, G757, G936, G2231, G4821

ಆಶ್ರಯ, ನಿರಾಶ್ರಿತ, ನಿರಾಶ್ರಿತರು, ತಂಗುದಾಣ, ತಂಗುದಾಣಗಳು, ಆಶ್ರಯ ಕೊಟ್ಟಿದೆ, ಆಶ್ರಯ ಕೊಡುವುದು

ಪದದ ಅರ್ಥವಿವರಣೆ:

"ಆಶ್ರಯ" ಎನ್ನುವ ಪದವು ಸಂರಕ್ಷಣೆ ಮತ್ತು ಭದ್ರತೆ ಇರುವ ಸ್ಥಿತಿ ಅಥವಾ ಸ್ಥಳವನ್ನು ಸೂಚಿಸುತ್ತದೆ. "ನಿರಾಶ್ರಿತ" ಎಂದರೆ ಸಂರಕ್ಷಣೆಯ ಸ್ಥಳವನ್ನು ಹುಡುಕುತ್ತಿರುವ ವ್ಯಕ್ತಿ ಎಂದರ್ಥ. "ತಂಗುದಾಣ" ಎನ್ನುವುದು ಅಪಾಯಕರವಾದ ಸ್ಥಿತಿಯಿಂದ ಸಂರಕ್ಷಿಸುವ ಸ್ಥಳವನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ ದೇವರ ಜನರು ಸಂರಕ್ಷಣೆಯಿಂದ ಇರುವ ಸ್ಥಳವನ್ನಾಗಿ ದೇವರು ಒಂದು ಆಶ್ರಯ ಸ್ಥಾನವನ್ನಾಗಿ ಸೂಚಿಸಲ್ಪಟ್ಟಿರುತ್ತದೆ.
- ಹಳೇ ಒಡಂಬಡಿಕೆಯಲ್ಲಿ "ಆಶ್ರಯ ಪಟ್ಟಣ" ಎನ್ನುವ ಪದವು ಅನೇಕ ಪಟ್ಟಣಗಳಲ್ಲಿ ಒಂದು ಪಟ್ಟಣವನ್ನು ಸೂಚಿಸುತ್ತದೆ, ಇದು ಒಬ್ಬ ವ್ಯಕ್ತಿ ಆಕಸ್ಮಿಕವಾಗಿ ಒಬ್ಬ ವ್ಯಕ್ತಿಯನ್ನು ಸಾಯಿಸಿದಾಗ, ಸತ್ತಂತ ವ್ಯಕ್ತಿಯ ಜನರ ಸೇಡಿನಿಂದ ತಪ್ಪಿಸಿಕೊಂಡು ಸಂರಕ್ಷಣೆಗಾಗಿ ಹೋಗುವ ಪಟ್ಟಣವನ್ನು ಸೂಚಿಸುತ್ತದೆ.
- "ತಂಗುದಾಣ" ಎನ್ನುವ ಪದವು ಅನೇಕಬಾರಿ ಜನರಿಗೆ ಅಥವಾ ಪ್ರಾಣಿಗಳಿಗೆ ಸಂರಕ್ಷಣೆಯನ್ನು ಕೊಡುವ ಭವನವನ್ನಾಗಿ ಅಥವಾ ಮೇಲ್ಛಾವಣಿಯನ್ನಾಗಿ ನಿರ್ಮಿಸಿರುವ ಭೌತಿಕ ಕಟ್ಟಡವನ್ನು ಸೂಚಿಸುತ್ತದೆ.
- ಕೆಲವೊಂದುಬಾರಿ "ತಂಗುದಾಣ" ಎನ್ನುವ ಪದಕ್ಕೆ "ಸಂರಕ್ಷಣೆ" ಎಂದರ್ಥ, ಲೋಟನು ತನ್ನ ಅತಿಥಿಗಳಿಗೆ ತನ್ನ ಮನೆಯಲ್ಲಿ "ತಂಗುದಾಣವಾಗಬೇಕೆಂದು" ಹೇಳಿದ ಮಾತಿನಂತಿರುತ್ತದೆ. ಅವರು ಸುರಕ್ಷಿತವಾಗಿರುತ್ತಾರೆಂದು ಅವನು ಹೇಳುತ್ತಿದ್ದಾನೆ, ಯಾಕಂದರೆ ತನ್ನ ಕುಟುಂಬದವರಂತೆ ಅವರನ್ನು ಸಂರಕ್ಷಿಸಲು ಅವನು ಬಾಧ್ಯತೆಯನ್ನು ತೆಗೆದುಕೊಳ್ಳುತ್ತಿದ್ದಾನೆ.

ಅನುವಾದ ಸಲಹೆಗಳು:

- "ಆಶ್ರಯ" ಎನ್ನುವ ಪದವನ್ನು "ಸುರಕ್ಷಿತವಾದ ಸ್ಥಳ" ಅಥವಾ "ಸಂರಕ್ಷಣೆಯ ಸ್ಥಳ" ಎಂದೂ ಅನುವಾದ ಮಾಡಬಹುದು.
- "ನಿರಾಶ್ರಿತರು" ಆಗಿರುವ ಜನರು ಅಪಾಯಕರವಾದ ಪರಿಸ್ಥಿತಿಯನ್ನು ತಪ್ಪಿಸಿಕೊಳ್ಳುವುದಕ್ಕೆ ತಮ್ಮ ಮನೆಗಳನ್ನು ಬಿಟ್ಟು ಬರುತ್ತಾರೆ, ಈ ಮಾತನ್ನು "ಅನ್ಯರು," "ಮನೆಗಳಿಲ್ಲದ ಜನರು", ಅಥವಾ "ದೇಶಭ್ರಷ್ಟರು" ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, "ತಂಗುದಾಣ" ಎನ್ನುವ ಪದವನ್ನು "ಸಂರಕ್ಷಿಸುವುದು" ಅಥವಾ "ಸಂರಕ್ಷಣೆ" ಅಥವಾ "ಸಂರಕ್ಷಿತವಾದ ಸ್ಥಳ" ಎಂದೂ ಅನುವಾದ ಮಾಡಬಹುದು.
- ಇದು ಭೌತಿಕವಾದ ನಿರ್ಮಾಣವನ್ನು ಸೂಚಿಸಿದರೆ, "ತಂಗುದಾಣ" ಎನ್ನುವ ಪದವನ್ನು "ಸಂರಕ್ಷಿಸುವ ಭವನ" ಅಥವಾ "ಸುರಕ್ಷಿತವಾದ ಮನೆ" ಎಂದೂ ಅನುವಾದ ಮಾಡಬಹುದು.
- "ಸುರಕ್ಷಿತವಾದ ತಂಗುದಾಣದೊಳಗೆ" ಎನ್ನುವ ಮಾತನ್ನು "ಸುರಕ್ಷಿತವಾದ ಸ್ಥಳದೊಳಗೆ" ಅಥವಾ "ಸಂರಕ್ಷಿಸುವ ಸ್ಥಳದೊಳಗೆ" ಎಂದೂ ಅನುವಾದ ಮಾಡಬಹುದು.
- "ತಂಗುದಾಣವನ್ನು ಹುಡುಕು" ಅಥವಾ "ಆಶ್ರಯವನ್ನು ಪಡೆದುಕೋ" ಅಥವಾ "ಆಶ್ರಯವನ್ನು ಹೊಂದು" ಎನ್ನುವ ಪದಗಳನ್ನೂ "ಸುರಕ್ಷಿತವಾದ ಸ್ಥಳವನ್ನು ಪಡೆದುಕೋ" ಅಥವಾ "ಸುರಕ್ಷಿತವಾದ ಸ್ಥಳದೊಳಗೆ ಒಬ್ಬರನ್ನು ಸೇರಿಸು" ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.22:3-4
- ಧರ್ಮೋ.32:37-38
- ಯೆಶಯಾ.23:13-14
- ಯೆರೆ.16:19-21
- ಅರಣ್ಯ..35:24-25
- ಕೀರ್ತನೆ.046:1-3
- ಕೀರ್ತನೆ.028:6-8

ಪದ ಡೇಟಾ:

- Strong's: H2620, H4268, H4498, H4585, H4733, H4869

ಇಷ್ಟ, ಒಂದೇರೀತಿಯಾದ ಮನಸ್ಸು, ಹೋಲಿಸು, ಹೋಲಿಕೆ, ಹೋಲುತ್ತದೆ, ಅದರಂತೆಯೇ, ಸಮಾನವಾಗಿ, ಭಿನ್ನವಾಗಿ

ಪದದ ಅರ್ಥವಿವರಣೆ:

"ಇಷ್ಟ" ಮತ್ತು "ಹೋಲಿಸು" ಎನ್ನುವ ಪದಗಳು ಯಾವುದಾದರೊಂದಕ್ಕೆ ಇನ್ನೊಂದು ಒಂದೇ ರೀತಿಯಾಗಿದೆ ಅಥವಾ ಅದರಂತೆಯೇ ಇದೆ ಎನ್ನುವದನ್ನು ಸೂಚಿಸುತ್ತದೆ.

- "ಇಷ್ಟ" ಎನ್ನುವ ಪದವು "ಹಾಗೆ" ಎಂದು ಕರೆಯಲ್ಪಡುವ ಅಲಂಕಾರಿಕ ಮಾತುಗಳಲ್ಲಿ ಅನೇಕ ಸಲ ಉಪಯೋಗಿಸಲ್ಪಟ್ಟಿರುತ್ತದೆ, ಇದರಲ್ಲಿ ಯಾವುದಾದರೊಂದನ್ನು ಇನ್ನೊಂದಕ್ಕೆ ಹೊಲಿಸಲಾಗಿರುತ್ತದೆ, ಸಹಜವಾಗಿ ಹಂಚಲ್ಪಟ್ಟಿರುವ ಗುಣಲಕ್ಷಣವನ್ನು ಎತ್ತಿ ತೋರಿಸುತ್ತದೆ. ಉದಾಹರಣೆಗೆ, "ತನ್ನ ವಸ್ತ್ರಗಳು ಸೂರ್ಯನಂತೆ ಪ್ರಕಾಶಿಸುತ್ತಿವೆ" ಮತ್ತು "ಸ್ವರವು ಗುಡುಗಿನಂತೆ ಉತ್ಕರ್ಷಗೊಂಡಿದೆ." (ನೋಡಿರಿ: ಹಾಗೆಯೇ)
- ಇನ್ನೊಬ್ಬರಂತೆ ಅಥವಾ ಯಾವುದಾದರೊಂದರಂತೆ "ಇರುವುದು" ಅಥವಾ "ಚೆನ್ನಾಗಿರುವುದು" ಅಥವಾ "ಹಾಗೆಯೇ ಇರುವುದು" ಎನ್ನುವದಕ್ಕೆ ಹೋಲಿಸಿಕೊಳ್ಳುತ್ತಿರುವ ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವಿನ ಹಾಗೆಯೇ ಗುಣಲಕ್ಷಣಗಳನ್ನು ಹೊಂದಿರುವುದು ಎಂದರ್ಥ.
- ಜನರೆಲ್ಲರೂ ದೇವರ "ಹೋಲಿಕೆಯಲ್ಲಿಯೇ" ಸೃಷ್ಟಿಸಲ್ಪಟ್ಟಿದ್ದಾರೆ, ಅಂದರೆ ಆತನ "ಸ್ವರೂಪ"ದಲ್ಲಿಯೇ ಮಾಡಲ್ಪಟ್ಟಿದ್ದಾರೆ. ಅಂದರೆ ಅವರು ದೇವರು ಹೊಂದಿರುವ ಗುಣಲಕ್ಷಣಗಳನ್ನೇ "ಹಾಗೆಯೇ" ಅಥವಾ "ಹೋಲಿಕೆಯಾದ" ಗುಣಲಕ್ಷಣಗಳನ್ನೇ ಅಥವಾ ಗುಣಗಳನ್ನೇ ಹೊಂದಿರುತ್ತಾರೆಂದು ಅದರ ಅರ್ಥವಾಗಿರುತ್ತದೆ.
- ಯಾರಾದರೊಬ್ಬರ ಅಥವಾ ಯಾವುದಾದರೊಬ್ಬರ "ಹೋಲಿಕೆಯಲ್ಲಿಯೇ" ಎನ್ನುವದಕ್ಕೆ ಒಬ್ಬ ವ್ಯಕ್ತಿಯ ಅಥವಾ ವಸ್ತುವಿನ ಹಾಗೆಯೇ ಗುಣಗಳನ್ನು ಹೊಂದಿರುವುದು ಎಂದರ್ಥ.

ಅನುವಾದ ಸಲಹೆಗಳು:

- ಕೆಲವೊಂದು ಸಂದರ್ಭಗಳಲ್ಲಿ "ಹೋಲಿಕೆಯಲ್ಲಿಯೇ" ಎನ್ನುವ ಮಾತನ್ನು "ಅದರಂತೆಯೇ ಕಾಣಿಸಿಕೊಳ್ಳುವುದು" ಅಥವಾ "ಅದರಂತೆಯೇ ತೋರಿಸಿಕೊಳ್ಳುವುದು" ಎಂದೂ ಅನುವಾದ ಮಾಡಬಹುದು.
- "ಆತನ ಮರಣದ ಹೋಲಿಕೆಯಲ್ಲಿಯೇ" ಎನ್ನುವ ಮಾತನ್ನು "ಆತನ ಮರಣದ ಅನುಭವದಲ್ಲಿ ಹಂಚಿಕೊಳ್ಳುವುದು" ಅಥವಾ "ಆತನೊಂದಿಗೆ ಆತನ ಮರಣವನ್ನು ಅನುಭವಿಸುವುದು" ಎಂದೂ ಅನುವಾದ ಮಾಡಬಹುದು.
- "ಪಾಪ ಸ್ವಭಾವದ ಶರೀರದ ಹಾಗೆಯೇ" ಎನ್ನುವ ಮಾತನ್ನು "ಪಾಪ ಸ್ವಭಾವದ ಮನುಷ್ಯನ ಹಾಗೆಯೇ ಇರುವುದು" ಅಥವಾ "ಮನುಷ್ಯನಾಗಿರುವುದು" ಎಂದೂ ಅನುವಾದ ಮಾಡಬಹುದು. ಈ ಮಾತಿಗೆ ಮಾಡುವ ಅನುವಾದವು ಯೇಸು ಪಾಪ ಸ್ವಭಾವಿಯೆಂದು ಅರ್ಥ ಬರದಂತೆ ನೋಡಿಕೊಳ್ಳಿರಿ.
- "ಆತನ ಸ್ವರೂಪದಲ್ಲಿಯೇ" ಎನ್ನುವ ಮಾತನ್ನು "ಆತನಂತೆಯೇ" ಅಥವಾ "ಆತನು ಹೊಂದಿರುವ ಗುಣಗಳನ್ನೇ ಹೊಂದಿರುವುದು" ಎಂದೂ ಅನುವಾದ ಮಾಡಬಹುದು.
- "ನಾಶಕ್ಕೊಳಗಾದ ಮನುಷ್ಯನ, ಪಕ್ಷಿಗಳ, ನಾಲ್ಕು ಕಾಲುಗಳಿರುವ ಜಂತುಗಳು ಮತ್ತು ತೆವಳುವ ಪ್ರಾಣಿಗಳ ರೂಪದಂತೆಯೇ" ಎನ್ನುವ ಮಾತನ್ನು "ನಾಶಕ್ಕೊಳಗಾದ ಮನುಷ್ಯರಂತೆ, ಅಥವಾ ಪ್ರಾಣಿಗಳು, ಪಕ್ಷಿಗಳು, ಜಂತುಗಳು ಮತ್ತು ಚಿಕ್ಕ ಚಿಕ್ಕ ತೆವಳುತ್ತಾ ಹೋಗುವ ಹುಳಗಳಂತೆ ವಿಗ್ರಹಗಳನ್ನು ಮಾಡಿದ್ದಾರೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪಶು, ಶರೀರ, ದೇವರ ಸ್ವರೂಪ, ನಾಶ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆಜ್ಕೆ 01:05
- ಮಾರ್ಕ 08:24
- ಮತ್ತಾಯ17:02
- ಮತ್ತಾಯ 18:03
- ಕೀರ್ತನೆ 073:05
- ಪ್ರಕಟಣೆ 01:12-13

ಪದ ಡೇಟಾ:

- Strong's: H1823, H8403, H8544, G1503, G1504, G2509, G2531, G2596, G3664, G3665, G3666, G3667, G3668, G3669, G3697, G4833, G5108, G5613, G5615, G5616, G5618, G5619

ಇಸ್ರಾಯೇಲ್ಯರ ಹನ್ನೆರಡು ಕುಲಗಳು, ಇಸ್ರಾಯೇಲನ ಮಕ್ಕಳಾದ ಹನ್ನೆರಡು ಕುಲಗಳು, ಹನ್ನೆರಡು ಕುಲಗಳು

ನಿರ್ವಚನ:

“ಇಸ್ರಾಯೇಲ್ಯರ ಹನ್ನೆರಡು ಕುಲಗಳು” ಎನ್ನುವ ಮಾತು ಯಾಕೋಬನ ಹನ್ನೆರಡು ಮಕ್ಕಳಿಗೆ ಮತ್ತು ಅವರ ಸಂತಾನಕ್ಕೆ ಸೂಚನೆಯಾಗಿರುತ್ತದೆ.

- ಯಾಕೋಬನು ಅಬ್ರಹಾಮನ ಮೊಮ್ಮಗನಾಗಿರುತ್ತಾನೆ. ಸ್ವಲ್ಪಕಾಲವಾದನಂತರ ದೇವರು ಯಾಕೋಬನ ಹೆಸರನ್ನು ಇಸ್ರಾಯೇಲ ಎಂಬ ಹೆಸರಾಗಿ ಮಾರ್ಪಡಿಸಿದರು.
- ಕುಲಗಳ ಹೆಸರುಗಳು ಈ ಕೆಳಕಂಡಂತಿವೆ: ರೂಬೇನ್, ಸಿಮೆಯೋನ್, ಲೇವಿ, ಯೂದ, ದಾನ್, ನಫ್ತಾಲಿ, ಗಾದ್, ಆಶೇರ್, ಇಸ್ಸಾಕಾರ್, ಜೆಬೂಲೂನ್, ಯೋಸೇಫ ಮತ್ತು ಬೆನ್ಯಾಮೀನ್.
- ಕಾನಾನ್ ದೇಶದಲ್ಲಿ ಯಾವ ಭೂಭಾಗವನ್ನಾಗಲಿ ಲೇವಿ ವಂಶದವರು ಪಡೆಯಲಿಲ್ಲ ಯಾಕಂದರೆ ಅವರು ದೇವರನ್ನು ಸೇವಿಸಲು ಮತ್ತು ದೇವರ ಪ್ರಜೆಗಳಿಗೆ ಸೇವೆ ಮಾಡಲು ಪ್ರತ್ಯೇಕಿಸಲ್ಪಟ್ಟ ಯಾಜಕರಾಗಿದ್ದರು.
- ಯೋಸೇಫನು ವಾಗ್ದಾನ ಭೂಮಿಯ ಸ್ವಾಸ್ಥ್ಯವನ್ನು ಎರಡರಷ್ಟು ಹೊಂದಿಕೊಂಡನು, ಯಾಕಂದರೆ ತನ್ನ ಇಬ್ಬರು ಗಂಡು ಮಕ್ಕಳಾದ ಎಫ್ರಾಯಿಂ ಮತ್ತು ಮನಸ್ಸೆ ಬಂದಿರುವ ಪಾಲಾಗಿತ್ತು.
- ಸ್ವಲ್ಪ ವ್ಯತ್ಯಾಸವನ್ನು ಹೊರತುಪಡಿಸಿ ಹನ್ನೆರಡು ಕುಲಗಳ ಪಟ್ಟಿಕೆಯು ಸತ್ಯವೇದದಲ್ಲಿ ಅನೇಕ ಭಾಗಗಳಲ್ಲಿ ಬರೆಯಲ್ಪಟ್ಟಿರುವುದನ್ನು ನಾವು ಕಾಣಬಹುದು. ಕೆಲವೊಂದುಬಾರಿ ಲೇವಿ, ಯೋಸೇಫ, ಅಥವಾ ದಾನ್ ಎನ್ನುವವರನ್ನು ಪಟ್ಟಿಯಿಂದ ಹೊರಪಡಿಸಿದ್ದಾರೆ ಮತ್ತು ಕೆಲವೊಂದು ಸ್ಥಳಗಳಲ್ಲಿ, ಯೋಸೇಫನ ಇಬ್ಬರು ಗಂಡು ಮಕ್ಕಳಾದ ಎಫ್ರಾಯಿಂ ಮತ್ತು ಮನಸ್ಸೆರವರನ್ನು ಪಟ್ಟಿಯಲ್ಲಿ ಒಳಪಡಿಸಿದ್ದಾರೆ.

(ಈ ಪದಗಳನ್ನು ಸಹ ನೋಡಿರಿ : ಸ್ವಾಸ್ಥ್ಯ, ಇಸ್ರಾಯೇಲ್, ಯಾಕೋಬ, ಯಾಜಕ, ಕುಲ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.26:6 8
- ಆದಿ.49:28-30
- ಲೂಕಾ.22:28-30
- ಮತ್ತಾಯ.19;28

ಪದ ಡೇಟಾ:

- Strong's: H3478, H7626, H8147, G1427, G2474, G5443

ಉನ್ನತ ಸ್ಥಳ, ಉನ್ನತ ಸ್ಥಳಗಳು

ಪದದ ಅರ್ಥವಿವರಣೆ:

“ಉನ್ನತ ಸ್ಥಳಗಳು” ಎನ್ನುವ ಮಾತು ವಿಗ್ರಹಗಳನ್ನು ಆರಾಧನೆ ಮಾಡುವುದಕ್ಕಾಗಿ ಉಪಯೋಗಿಸಿರುವ ಯಜ್ಞವೇದಿಗಳನ್ನು ಮತ್ತು ಗೋಪುರಗಳನ್ನು ಸೂಚಿಸುತ್ತದೆ. ಅವುಗಳನ್ನು ಸಾಧಾರಣವಾಗಿ ಉನ್ನತ ನೆಲದ ಮೇಲೆ ಕಟ್ಟುತ್ತಾರೆ, ಅಂದರೆ ಬೆಟ್ಟದ ಮೇಲೆ ಅಥವಾ ಪರ್ವತ ಪಕ್ಕದಲ್ಲಿ ಕಟ್ಟುತ್ತಾರೆ.

- ಈ ರೀತಿಯ ಉನ್ನತ ಸ್ಥಳಗಳಲ್ಲಿ ಸುಳ್ಳು ದೇವರುಗಳಿಗೆ ಯಜ್ಞವೇದಿಗಳನ್ನು ಕಟ್ಟುವುದರ ಮೂಲಕ ಇಸ್ರಾಯೇಲ್ಯರ ಅರಸರು ದೇವರಿಗೆ ವಿರುದ್ಧವಾಗಿ ಪಾಪ ಮಾಡಿದರು. ಈ ರೀತಿ ಮಾಡುವುದರಿಂದ ಜನರು ವಿಗ್ರಹಗಳನ್ನು ಇನ್ನೂ ಹೆಚ್ಚಾಗಿ ಆರಾಧನೆ ಮಾಡುವುದರಲ್ಲಿ ಮುಳುಗುವುದಕ್ಕೆ ನಡೆಸಿತ್ತು.
- ಇಸ್ರಾಯೇಲಿನಲ್ಲಿ ಅಥವಾ ಯೆಹೂದದಲ್ಲಿ ದೇವರಿಗೆ ಭಯಪಡುವ ಅರಸರು ಬಂದಾಗ, ಅವರು ಈ ವಿಗ್ರಹಗಳಿಗೆ ಆರಾಧನೆ ಮಾಡುವುದನ್ನು ನಿಲ್ಲಿಸುವ ಕ್ರಮದಲ್ಲಿ ಯಜ್ಞವೇದಿಗಳನ್ನು ಅಥವಾ ಉನ್ನತ ಸ್ಥಳಗಳನ್ನು ನಾಶಗೊಳಿಸುವುದೆನ್ನುವುದು ಅನೇಕಸಲ ನಡೆಯುತ್ತಿತ್ತು.
- ಏನೇಯಾಗಲಿ, ಈ ಒಳ್ಳೇಯ ಅರಸರಲ್ಲಿ ಕೆಲವರು ತುಂಬಾ ನಿರ್ಲಕ್ಷ್ಯತೆಯಿಂದ ಇರುತ್ತಿದ್ದರು ಮತ್ತು ಈ ಉನ್ನತ ಸ್ಥಳಗಳನ್ನು ತೆಗೆದುಹಾಕುತ್ತಿರಲಿಲ್ಲ, ಇದರಿಂದ ಇಡೀ ಇಸ್ರಾಯೇಲ್ ದೇಶವು ವಿಗ್ರಹಗಳನ್ನು ಆರಾಧನೆ ಮಾಡುವುದರಲ್ಲಿ ಮುಂದುವರಿಯುತ್ತಿದ್ದರು.

ಅನುವಾದ ಸಲಹೆಗಳು:

- ಈ ಮಾತನ್ನು ಅನುವಾದ ಮಾಡುವ ಇನ್ನೊಂದು ವಿಧಾನದಲ್ಲಿ, “ವಿಗ್ರಹ ಆರಾಧನೆಗಾಗಿ ಎತ್ತರದಲ್ಲಿರುವ ಸ್ಥಳಗಳು” ಅಥವಾ “ಬೆಟ್ಟದ ಮೇಲೆ ವಿಗ್ರಹ ಗೋಪುರಗಳು” ಅಥವಾ “ವಿಗ್ರಹ ಯಜ್ಞವೇದಿಯ ದಿಬ್ಬಗಳು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಈ ಮಾತು ಕೇವಲ ಯಜ್ಞವೇದಿಗಳಿರುವ ಉನ್ನತ ಸ್ಥಳಗಳನ್ನು ಮಾತ್ರವೇ ಸೂಚಿಸದೇ, ವಿಗ್ರಹ ಯಜ್ಞವೇದಿಗಳನ್ನು ಸೂಚಿಸುವಂತೆ ನೋಡಿಕೊಳ್ಳಿರಿ,

(ಈ ಪದಗಳನ್ನು ಸಹ ನೋಡಿರಿ : ಯಜ್ಞವೇದಿ, ಸುಳ್ಳು ದೇವರು, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.09:12-13
- 2 ಅರಸ.16:3-4
- ಆಮೋಸ.04:12-13
- ಧರ್ಮೋ.33:29
- ಯೆಹೆ.06:1-3
- ಹಬ.03:18-19

ಪದ ಡೇಟಾ:

- Strong's: H1116, H1181, H1354, H2073, H4791, H7311, H7413

ಉಪದೇಶ ಉಪದೇಶಿಸುವುದು, ಉಪದೇಶಕ, ಸಾರು, ಸಾರುವುದು, ಸಾರಲ್ಪಡು,

ಪದದ ಅರ್ಥವಿವರಣೆ:

"ಉಪದೇಶಿಸು" ಎನ್ನುವ ಪದಕ್ಕೆ ಜನರ ಗುಂಪಿನೊಂದಿಗೆ ಮಾತನಾಡು, ದೇವರ ಕುರಿತಾಗಿ ಅವರಿಗೆ ಬೋಧನೆ ಮಾಡು ಮತ್ತು ದೇವರಿಗೆ ವಿಧೇಯತೆ ತೋರಿಸಬೇಕೆಂದು ಅವರನ್ನು ಬೇಡಿಕೊಳ್ಳು ಎಂದರ್ಥ. "ಸಾರಲ್ಪದಡು" ಎನ್ನುವ ಪದಕ್ಕೆ ಧೈರ್ಯವಾಗಿ ಬಹಿರಂಗವಾಗಿ ಯಾವುದಾದರೊಂದನ್ನು ಘೋಷಿಸುವುದು ಅಥವಾ ಸಾರುವುದು ಎಂದರ್ಥ.

- ಸಾಮಾನ್ಯವಾಗಿ ಉಪದೇಶವನ್ನು ಒಬ್ಬ ವ್ಯಕ್ತಿಯಿಂದ ದೊಡ್ಡ ಗುಂಪಿನ ಜನರಿಗೆ ಮಾಡಲಾಗುತ್ತದೆ. ಇದನ್ನು ಸಾಮಾನ್ಯವಾಗಿ ಮಾತನಾಡಲಾಗುತ್ತದೆ, ಬರೆಯಲಾಗುವುದಿಲ್ಲ.
- "ಉಪದೇಶ" ಮತ್ತು "ಬೋಧನೆ" ಹೋಲುತ್ತದೆ, ಆದರೆ ನಿಖರವಾಗಿ ಒಂದೇ ಆಗಿರುವುದಿಲ್ಲ.
- "ಉಪದೇಶಿಸುವುದು" ಮುಖ್ಯವಾಗಿ ಆಧ್ಯಾತ್ಮಿಕ ಅಥವಾ ನೈತಿಕ ಸತ್ಯವನ್ನು ಸಾರ್ವಜನಿಕವಾಗಿ ಘೋಷಿಸುವುದನ್ನು ಸೂಚಿಸುತ್ತದೆ ಮತ್ತು ಪ್ರತಿಕ್ರಿಯಿಸಲು ಪ್ರೇಕ್ಷಕರನ್ನು ಒತ್ತಾಯಿಸುತ್ತದೆ. "ಬೋಧನೆ" ಎನ್ನುವುದು ಸೂಚನೆಗೆ ಒತ್ತು ನೀಡುವ ಪದವಾಗಿದೆ, ಅಂದರೆ ಜನರಿಗೆ ಮಾಹಿತಿ ನೀಡುವುದು ಅಥವಾ ಏನನ್ನಾದರೂ ಹೇಗೆ ಮಾಡಬೇಕೆಂದು ಅವರಿಗೆ ಕಲಿಸುವುದು.
- "ಉಪದೇಶ" ಎಂಬ ಪದವನ್ನು ಸಾಮಾನ್ಯವಾಗಿ "ಸುವಾರ್ತೆ" ಎಂಬ ಪದದೊಂದಿಗೆ ಬಳಸಲಾಗುತ್ತದೆ.
- ಒಬ್ಬ ವ್ಯಕ್ತಿಯು ಇತರರಿಗೆ ಬೋಧಿಸಿದ್ದನ್ನು ಸಾಮಾನ್ಯವಾಗಿ ಅವನ "ಬೋಧನೆಗಳು" ಎಂದೂ ಕರೆಯಬಹುದು.
- ಸಾಮಾನ್ಯವಾಗಿ ಸತ್ಯವೇದದಲ್ಲಿ, "ಸಾರು" ಎಂದರೆ ದೇವರು ಆಜ್ಞಾಪಿಸಿದ ಯಾವುದನ್ನಾದರೂ ಸಾರ್ವಜನಿಕವಾಗಿ ಘೋಷಿಸುವುದು, ಅಥವಾ ದೇವರ ಬಗ್ಗೆ ಇತರರಿಗೆ ಹೇಳುವುದು ಮತ್ತು ಅವನು ಎಷ್ಟು ಶ್ರೇಷ್ಠನೆಂದು.
- ಹೊಸ ಒಡಂಬಡಿಕೆಯಲ್ಲಿ, ಅಪೊಸ್ತಲರು ಯೇಸುವಿನ ಬಗ್ಗೆ ಸುವಾರ್ತೆಯನ್ನು ವಿವಿಧ ನಗರಗಳು ಮತ್ತು ಪ್ರದೇಶಗಳಲ್ಲಿ ಅನೇಕ ಜನರಿಗೆ ಸಾರಿದರು.
- "ಸಾರು" ಎಂಬ ಪದವನ್ನು ರಾಜರು ಮಾಡಿದ ತೀರ್ಪುಗಳಿಗೆ ಅಥವಾ ಸಾರ್ವಜನಿಕ ರೀತಿಯಲ್ಲಿ ಕೆಟ್ಟದ್ದನ್ನು ಖಂಡಿಸಲು ಸಹ ಬಳಸಬಹುದು.
- "ಸಾರು" ಅನ್ನು ಭಾಷಾಂತರಿಸುವ ಇತರ ಮಾರ್ಗಗಳಲ್ಲಿ "ಸಾರುವದು" ಅಥವಾ "ಬಹಿರಂಗವಾಗಿ ಬೋಧಿಸು" ಅಥವಾ "ಸಾರ್ವಜನಿಕವಾಗಿ ಘೋಷಿಸು" ಒಳಗೊಂಡಿರಬಹುದು.
- "ಸಾರು" ಎಂಬ ಪದವನ್ನು "ಪ್ರಕಟಣೆ" ಅಥವಾ "ಸಾರ್ವಜನಿಕ ಉಪದೇಶ" ಎಂದೂ ಅನುವಾದಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ಶುಭವಾರ್ತೆ, ಯೇಸು, ದೇವರ ರಾಜ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.04:1-2
- ಅಪೊ.ಕೃತ್ಯ.08:4-5
- ಅಪೊ.ಕೃತ್ಯ.10:42-43
- ಅಪೊ.ಕೃತ್ಯ.14:21-22
- ಅಪೊ.ಕೃತ್ಯ.20:25
- ಲೂಕ.04:42
- ಮತ್ತಾಯ.03:1-3
- ಮತ್ತಾಯ.04:17
- ಮತ್ತಾಯ.12:41
- ಮತ್ತಾಯ.24:14
- ಅಪೊ.ಕೃತ್ಯ.09:20-22
- ಅಪೊ.ಕೃತ್ಯ.13:38-39
- ಯೋನ.03:1-3
- ಲೂಕ.04:18-19
- ಮಾರ್ಕ.01:14-15
- ಮತ್ತಾಯ.10:26

ಸತ್ಯವೇದದಿಂದ ಉದಾಹರಣೆಗಳು:

- **24:02** "ಮಾನಸಾಂತರ ಹೊಂದಿರಿ, ದೇವರ ರಾಜ್ಯವು ಸಮೀಪವಾಗಿದೆ" ಎಂದು ಅವನು (ಯೋಹಾನು) ಅವರಿಗೆ _ ಪ್ರಸಂಗ ಮಾಡಿದನು _ .
- **30:01** ಅನೇಕ ಗ್ರಾಮಗಳಲ್ಲಿ ಬೋಧನೆ ಮಾಡುವುದಕ್ಕೆ ಮತ್ತು _ ಉಪದೇಶಿಸಲು _ ಯೇಸು ತನ್ನ ಶಿಷ್ಯರನ್ನು ಕಳುಹಿಸಿದನು.
- **38:01** ಮೂವತ್ತು ಮೂರು ವರ್ಷಗಳಾದ ಮೇಲೆ ಯೇಸು ಬಹಿರಂಗವಾಗಿ ಬೋಧಿಸುವುದಕ್ಕೆ ಮತ್ತು _ ಉಪದೇಶ ಮಾಡುವುದಕ್ಕೂ _ ಆರಂಭಿಸಿದನು, ಯೆರೂಸಲೇಮಿನಲ್ಲಿ ಶಿಷ್ಯರೊಂದಿಗೆ ಪಸ್ಕವನ್ನು ಆಚರಿಸುವುದಕ್ಕೆ ತಾನು ಬಯಸುತಿದ್ದೇನೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು, ಮತ್ತು ಅಲ್ಲಿ ಆತನನ್ನು ಮರಣಕ್ಕೆ ಗುರಿ ಮಾಡಲಾಗುತ್ತದೆ.
- **45:06** ಈ ಎಲ್ಲಾ ಸಂದರ್ಭಗಳಲ್ಲಿ ಇದ್ದಾಗಲೂ ಅವರು ಹೋದ ಪ್ರತಿಯೊಂದು ಸ್ಥಳದಲ್ಲೂ ಯೇಸುವಿನ ಕುರಿತಾಗಿ ಅವರು_ ಭೋದಿಸಿದರು _.

- **45:07** ಅವನು (ಫಿಲಿಪ್ಪನ) ಸಮಾರ್ಯಕ್ಕೆ ಹೋಗಿ, ಯೇಸುವಿನ ಕುರಿತಾಗಿ ಆತನು ಬೋಧಿಸಲು, ಆ ಊರಿನಲ್ಲಿ ಅನೇಕಮಂದಿ ರಕ್ಷಣೆ ಹೊಂದಿದರು.
- **46:06** ಆ ಕ್ಷಣದಲ್ಲಿಯೇ, ಸೌಲನು ದಮಸ್ಕದಲ್ಲಿರುವ ಯೆಹೂದ್ಯರಿಗೆ _ ಉಪದೇಶ ಮಾಡುವುದಕ್ಕೆ _ ಆರಂಭಿಸಿದನು.
- **46:10** ಅನೇಕ ಸ್ಥಳಗಳಲ್ಲಿ ಯೇಸುವಿನ ಶುಭವಾರ್ತೆಯನ್ನು _ ಬೋದಿಸಲು _ ಅವರು ಅವರನ್ನು ಕಳುಹಿಸಿದರು.
- **47:14** ಪೌಲನು ಮತ್ತು ಇತರ ಕ್ರೈಸ್ತ ನಾಯಕರು ಅನೇಕ ಪಟ್ಟಣಗಳಿಗೆ ಪ್ರಯಾಣ ಮಾಡಿ, ಯೇಸುವಿನ ಕುರಿತಾಗಿ ಶುಭವಾರ್ತೆಯನ್ನು ಜನರಿಗೆ ಬೋಧಿಸಿದರು ಮತ್ತು _ ಉಪದೇಶಿಸಿದರು _.
- **50:02** "ಸರ್ವಲೋಕದಲ್ಲಿರುವ ಜನರಿಗೆ ಮತ್ತು ಭೂಮಿಯ ಕಟ್ಟಕಡೆಯವರೆಗೂ ದೇವರ ರಾಜ್ಯದ ಕುರಿತಾಗಿ ಶುಭವಾರ್ತೆಯನ್ನು ನನ್ನ ಶಿಷ್ಯರು ಪ್ರಕಟಿಸುವರು" ಎಂದು ಈ ಭೂಮಿಯ ಮೇಲೆ ಯೇಸು ಜೀವಿಸಿದಾಗ ಹೇಳಿದರು.

ಪದ ಡೇಟಾ:

- Strong's:
  - preach: H1319, H7121, H7150, G1229, G2097, G2605, G2782, G2783, G2784, G2980, G4283
- (for proclaim): H1319, H1696, H1697, H2199, H3045, H3745, H4161, H5046, H5608, H6963, H7121, H7440, H8085, G518, G591, G1229, G1861, G2097, G2605, G2782, G2784, G2980, G3142, G4135

ಉಪಪತ್ನಿ, ಉಪಪತ್ನಿಗೆಳು

ಪದದ ಅರ್ಥವಿವರಣೆ:

ಉಪಪತ್ನಿ ಎಂದರೆ ಒಬ್ಬ ವ್ಯಕ್ತಿಗೆ ಮೊದಲೇ ಹೆಂಡತಿ ಇದ್ದೂ, ಎರಡನೇ ಹೆಂಡತಿಯಾಗಿ ಇಟ್ಟುಕೊಂಡರೆ ಅವರನ್ನು ಈ ಪದವು ಸೂಚಿಸುತ್ತದೆ. ಸಹಜವಾಗಿ ಉಪಪತ್ನಿಯನ್ನು ಒಬ್ಬ ವ್ಯಕ್ತಿ ಕಾನೂನುಬದ್ಧವಾಗಿ ಮದುವೆ ಮಾಡಿಕೊಳ್ಳುವುದಿಲ್ಲ.

- ಹಳೇ ಒಡಂಬಡಿಕೆಯಲ್ಲಿ ಉಪಪತ್ನಿಗಳಾದವರು ದಾಸಿಗಳಾಗಿದ್ದರು.
- ಕೊಂಡುಕೊಳ್ಳುವುದರ ಮೂಲಕ ಉಪಪತ್ನಿಯನ್ನು ಸ್ವಾಧೀನ ಮಾಡಿಕೊಳ್ಳಬಹುದಾಗಿತ್ತು. ಅದು ಸೈನ್ಯದ ವಿಜಯದಿಂದಾಗಲಿ ಅಥವಾ ಹಣವನ್ನು ಕೊಟ್ಟು ಕೊಂಡುಕೊಳ್ಳುವದರಿಂದಾಗಲಿ ನಡೆಯುತ್ತಿತ್ತು.
- ಅರಸನಿಗಾದರೋ ಅವನಿಗೆ ಇರುವ ಶಕ್ತಿಗೆ ಚಿಹ್ನೆಯಾಗಿ ಅನೇಕಮಂದಿ ಉಪಪತ್ನಿಗಳಿದ್ದಿದ್ದರು.
- ಹೊಸ ಒಡಂಬಡಿಕೆಯು ಉಪಪತ್ನಿಗಳನ್ನಿಟ್ಟುಕೊಳ್ಳುವುದು ದೇವರ ಚಿತ್ತಕ್ಕೆ ವಿರುದ್ಧವೆಂದು ಬೋಧಿಸುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.03:6-7
- ಆದಿ.22:23-24
- ಆದಿ.25:5-6
- ಆದಿ.35:21-22
- ಆದಿ.36:9-12
- ನ್ಯಾಯಾ.19:1-2

ಪದ ಡೇಟಾ:

- Strong's: H3904, H6370

ಉಪವಾಸ, ನಿರಾಹಾರ, ಉಪವಾಸವಿದ್ದೆ, ಉಪವಾಸವಿರುವುದು, ಉಪವಾಸಗಳು

ಪದದ ಅರ್ಥವಿವರಣೆ:

“ಉಪವಾಸ” ಎಂಬ ಪದವು ಒಂದು ದಿನ ಅಥವಾ ಹೆಚ್ಚಿನ ಸಮಯದವರೆಗೆ ಆಹಾರವನ್ನು ಸೇವಿಸುವುದನ್ನು ನಿಲ್ಲಿಸುವುದು ಎಂದು ಅರ್ಥೈಸುತ್ತದೆ. ಕೆಲವೊಂದುಸಲ ಇದರಲ್ಲಿ ಯಾವ ಪಾನೀಯವನ್ನು ಕುಡಿಯದಿರುವುದನ್ನು ಒಳಗೊಂಡಿರುತ್ತದೆ.

- ಉಪವಾಸವು ದೇವರ ಮೇಲೆ ಕೇಂದ್ರೀಕರಿಸುವುದಕ್ಕೆ ಮತ್ತು ಸಿದ್ಧಪಡಿಸಿದ ಆಹಾರದಿಂದ ಯಾವ ಅಡಚಣೆಯಿಲ್ಲದೆ ಪ್ರಾರ್ಥನೆ ಮಾಡುವುದಕ್ಕೆ ಜನರಿಗೆ ಸಹಾಯ ಮಾಡುತ್ತದೆ.
- ಕೆಲವೊಂದು ತಪ್ಪು ಕಾರಣಗಳಿಗೋಸ್ಕರ ಉಪವಾಸದ ವಿಷಯದಲ್ಲಿ ಯೇಸು ಯೆಹೂದ್ಯರ ಧರ್ಮ ನಾಯಕರನ್ನು ಖಂಡಿಸಿದ್ದಾನೆ. ಅವರು ಉಪವಾಸವಿದ್ದರಿಂದ ಇತರರು ಅವರನ್ನು ನೀತಿವಂತರೆಂದು ಆಲೋಚನೆ ಮಾಡಬೇಕೆಂದು ಬಯಸುತ್ತಾರೆ.
- ಕೆಲವೊಂದುಬಾರಿ ಜನರು ಉಪವಾಸವಿರುತ್ತಾರೆ ಯಾಕಂದರೆ ಅವರು ಯಾವುದಾದರೊಂದರ ಕುರಿತಾಗಿ ತುಂಬಾ ಬಾಧೆಗೆ ಒಳಗಾಗಿರುತ್ತಾರೆ ಅಥವಾ ದುಃಖಿತರಾಗಿರುತ್ತಾರೆ.
- “ಉಪವಾಸ” ಎನ್ನುವ ಪದವು ಕ್ರಿಯಾಪದವಾದರೆ, “ಊಟ ಮಾಡದೆ ತಡೆಹಿಡಿದುಕೊಳ್ಳುವುದು” ಅಥವಾ “ಊಟ ಮಾಡದಿರುವುದು” ಎಂದೂ ಅನುವಾದ ಮಾಡುತ್ತಾರೆ.
- “ಉಪವಾಸ” ಎನ್ನುವ ಪದವು ನಾಮಪದವಾದರೆ, “ಊಟ ತಿನ್ನದ ಸಮಯ” ಅಥವಾ "ಆಹಾರದಿಂದ ದೂರವಿರುವ ಸಮಯ” ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಯೆಹೂದ್ಯರ ನಾಯಕರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.21:8-10
- 2 ಪೂರ್ವ.20:3-4
- ಅಪೊ.ಕೃತ್ಯ.13:1-3
- ಯೋನಾ.03:4-5
- ಲೂಕ.05:33-35
- ಮಾರ್ಕ.02:18-19
- ಮತ್ತಾಯ.06:16-18
- ಮತ್ತಾಯ.09:14-15

ಸತ್ಯವೇದದಿಂದ ಉದಾಹರಣೆಗಳು:

- _**25:01** ಯೇಸು ದೀಕ್ಷಾಸ್ನಾನ ತೆಗೆದುಕೊಂಡನಂತರ, ಪವಿತ್ರಾತ್ಮನು ಆತನನ್ನು ಅರಣ್ಯದೊಳಗೆ ಕರೆದುಕೊಂಡು ಹೋಯಿತು, ಆಲ್ಲಿ ಆತನು ನಲವತ್ತು ಹಗಲು ರಾತ್ರಿಗಳು **ಉಪವಾಸ** _ ಇದ್ದನು.
- _**34:08** “ಉದಾಹರಣೆಗೆ, ನಾನು ವಾರಕ್ಕೆ ಎರಡು ಬಾರಿ **ಉಪವಾಸ** _ ಮಾಡುತ್ತೇನೆ ಮತ್ತು ನಾನು ಪಡೆದ ಹಣದಲ್ಲಿ ಮತ್ತು ವಸ್ತುಗಳಲ್ಲಿ ದಶಮ ಭಾಗವನ್ನು ಕೊಡುತ್ತೇನೆ”.
- _**46:10** ಒಂದು ದಿನ ಅಂತಿಯೋಕ್ಯದಲ್ಲಿರುವ ಕ್ರೈಸ್ತರೆಲ್ಲರು _ **ಉಪವಾಸವಿದ್ದು** __ ಪ್ರಾರ್ಥನೆ ಮಾಡಿದರು, ಆಗ ಪವಿತ್ರಾತ್ಮನು ಅವರಿಗೆ “ನಾನು ಅವರಿಗೆ ಕೊಟ್ಟ ಕೆಲಸವನ್ನು ಮಾಡುವುದಕ್ಕೆ ಬಾರ್ನಬಾನನ್ನು ಮತ್ತು ಸೌಲನನ್ನು ನನಗಾಗಿ ಪ್ರತ್ಯೇಕಿಸಿರಿ” ಎಂದು ಹೇಳಿದನು.

ಪದ ಡೇಟಾ:

- Strong's: H2908, H5144, H6684, H6685, G777, G3521, G3522, G3523

ಉಬ್ಬಿಕೊಂಡಿದೆ

ಪದದ ಅರ್ಥವಿವರಣೆ:

“ಉಬ್ಬಿಕೊಂಡಿದೆ” ಎನ್ನುವ ಪದವು ಅಲಂಕಾರಿಕ ಮಾತಾಗಿರುತ್ತದೆ, ಇದು ಗರ್ವಿಸುವವರನ್ನು ಅಥವಾ ಅಹಂಕಾರಿಯನ್ನು ಸೂಚಿಸುತ್ತದೆ. (ನೋಡಿರಿ: ನಾಣ್ಣುಡಿ)

- ಉಬ್ಬಿಕೊಂಡಿರುವ ವ್ಯಕ್ತಿಯು ಭಾವನೆಯ ಮನೋಭಾವಗಳನ್ನು ಇತರರ ಮುಂದೆ ಹೆಚ್ಚಾಗಿಟ್ಟುಕೊಂಡಿರುತ್ತಾನೆ.
- ಹೆಚ್ಚಿನ ಮಾಹಿತಿಯ ಅರಿವು ಪಡೆದಾಗ ಅಥವಾ ಭಕ್ತಿ ಅನುಭವಗಳನ್ನು ಹೆಚ್ಚು ಪಡೆದಾಗ, ಅದು ಗರ್ವ ಪಡುವಂತೆ ಅಥವಾ “ಉಬ್ಬಿಕೊಳ್ಳುವಂತೆ” ಮಾಡುತ್ತದೆಯೆಂದು ಪೌಲನು ಹೇಳಿದ್ದಾನೆ.
- “ದೊಡ್ಡ ತಲೆಯನ್ನು ಹೊಂದಿರುವುದು” ಎನ್ನುವ ಮಾತಿನಂತೆ ಈ ಅರ್ಥವನ್ನು ವ್ಯಕ್ತಪಡಿಸುವ ವಿಭಿನ್ನವಾದದ್ದನ್ನು ಅಥವಾ ಒಂದೇ ರೀತಿಯ ನಾಣ್ಣುಡಿಯನ್ನು ಕೆಲವೊಂದು ಭಾಷೆಗಳನ್ನು ಹೊಂದಿರಬಹುದು.
- ಇದನ್ನು “ಹೆಚ್ಚಿನ ಹೆಮ್ಮೆ” ಅಥವಾ “ಇತರರನ್ನು ಅಸಹ್ಯಿಸಿಕೊಳ್ಳುವುದು” ಅಥವಾ “ಜಂಬ” ಅಥವಾ “ಇತರರಿಗಿಂತ ನಾನೇ ಉತ್ತಮವೆಂದು ಆಲೋಚನೆ ಮಾಡಿಕೊಳ್ಳುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಹಂಕಾರಿ, ಹೆಮ್ಮೆ)

ಸತ್ಯವೇದದ ವಾಕ್ಯಗಳು:

- 1 ಕೊರಿಂಥ 4:6-7
- 1 ಕೊರಿಂಥ 8:1
- 2 ಕೊರಿಂಥ 12:6-7
- ಹಬ. 2:4

ಪದ ಡೇಟಾ:

- Strong's: H6075, G5448

ಉರುಲು, ಉರುಲುಗಳು, ದೊರಕಿಸಿಕೋ, ದೊರಕಿಸಿಕೊಳ್ಳುವುದು, ದೊರಕಿಸಕೊಳ್ಳಲಾಗಿದೆ, ಬೋನಿಗೆ ಸಿಕ್ಕಿ ಬೀಳುವುದು, ಬೋನು, ಬೋನಲ್ಲಿ ಸಿಕ್ಕಿಸುವುದು, ಸಿಕ್ಕಿಸಲಾಗಿದೆ

ಪದದ ಅರ್ಥವಿವರಣೆ:

“ಉರುಲು” ಮತ್ತು “ಬೋನು” ಎನ್ನುವ ಪದಗಳು ಪ್ರಾಣಿಗಳು ತಪ್ಪಿಸಿಕೊಂಡು ಹೋಗದಂತೆ ಅವುಗಳನ್ನು ಕಟ್ಟಿ ಹಾಕುವುದಕ್ಕೆ ಮತ್ತು ಪ್ರಾಣಿಗಳನ್ನು ಹಿಡಿಯುವುದಕ್ಕೆ ಉಪಯೋಗಿಸುವ ಸಾಧನೆಗಳನ್ನು ಸೂಚಿಸುತ್ತದೆ. “ಬೋನು” ಅಥವಾ “ದೊರಕಿಸಿಕೊ” ಎನ್ನುವ ಪದಗಳು ಉರುಲಿನಿಂದ ಹಿಡಿದುಕೊಳ್ಳುವುದು ಎಂದರ್ಥ, ಮತ್ತು “ಸಿಕ್ಕಿಸಿಕೋ” ಅಥವಾ “ಬಲೆ” ಎನ್ನುವ ಪದಗಳು ಬಲೆಗೆ ಸಿಕ್ಕಿಸಿಕೊಳ್ಳುವ ಉಪಾಯದೊಂದಿಗೆ ಹಿಡಿದುಕೊಳ್ಳುವುದು ಎಂದರ್ಥವಾಗಿರುತ್ತದೆ. ಜನರನ್ನು ಹಿಡಿದುಕೊಳ್ಳುವುದಕ್ಕೆ ಮತ್ತು ಅವರಿಗೆ ಹಾನಿ ಮಾಡುವುದಕ್ಕೆ ಮರೆಯಾಗಿರುವ ಬಲೆಗಳಂತೆಯೇ ಪಾಪ ಮತ್ತು ಶೋಧನೆ ಹೇಗೆ ಇರುತ್ತವೆ ಎನ್ನುವುದರ ಕುರಿತಾಗಿ ಮಾತನಾಡುವುದಕ್ಕೆ ಸತ್ಯವೇದದಲ್ಲಿ ಈ ಪದಗಳನ್ನು ಉಪಯೋಗಿಸಲಾಗಿರುತ್ತದೆ.

- “ಉರುಲು” ಎನ್ನುವುದು ಆಕಸ್ಮಿಕವಾಗಿ ಗಟ್ಟಿಯಾಗಿ ಹಿಂದಕ್ಕೆ ಎಳೆಯುವ ಹಗ್ಗ ಅಥವಾ ಒಂದು ತಂತಿಯ ರಂಧ್ರವಾಗಿರುತ್ತದೆ, ಇದರಲ್ಲಿ ಒಂದು ಪ್ರಾಣಿ ಬಿದ್ದಾಗ, ಅದರ ಕಾಲನ್ನು ಸಿಕ್ಕಿಸಿಕೊಳ್ಳುತ್ತದೆ.
- “ಬೋನು” ಎನ್ನುವುದನ್ನು ಸಾಧಾರಣವಾಗಿ ಲೋಹದಿಂದಲೂ ಅಥವಾ ಕಟ್ಟಿಗೆಯಿಂದಲೂ ಮಾಡಿರುತ್ತಾರೆ, ಇದಕ್ಕೆ ಎರಡು ಭಾಗಗಳಿರುತ್ತವೆ, ಇದಕ್ಕೆ ಎರಡು ಬದಿಗೆ ಇರುವ ಭಾಗಗಳು ಆಕಸ್ಮಿಕವಾಗಿ, ಶಕ್ತಿಯುತವಾಗಿ ಒಂದಕ್ಕೊಂದು ಮುಚ್ಚಿಕೊಳ್ಳುತ್ತವೆ, ಇದರಲ್ಲಿ ಪ್ರಾಣಿ ಸಿಕ್ಕಿಸಿಕೊಂಡರೆ ಅದು ಹೊರಗಡೆ ಹೋಗುವುದಕ್ಕೆ ಸಾಧ್ಯವಿರುವುದಿಲ್ಲ. ಕೆಲವೊಂದುಬಾರಿ ಯಾವುದಾದರೊಂದನ್ನು ಹಿಡಿದುಕೊಳ್ಳುವುದಕ್ಕೆ ಅಥವಾ ಬೀಳುವಂತೆ ಮಾಡುವುದಕ್ಕೆ ಈ ಬೋನು ಎನ್ನುವದನ್ನು ನೆಲವನ್ನು ತುಂಬಾ ಆಳವಾಗಿ ಅಗೆದು ತಯಾರಿಸುತ್ತಾರೆ.
- ಸಹಜವಾಗಿ ಉರುಲುಯಾಗಲಿ ಅಥವಾ ಬೋನಾಗಲಿ ಮರೆಯಾಗಿಡುತ್ತಾರೆ, ಇದರಿಂದ ಅವರು ಮಾಡುವ ಬೇಟೆಯು ತುಂಬಾ ವಿಸ್ಮಯವಾಗಿ ನಡೆಯುತ್ತದೆ.
- “ಬೋನನ್ನು ಸಿದ್ಧಗೊಳಿಸು” ಎನ್ನುವ ಮಾತಿಗೆ ಯಾವುದಾದರೊಂದನ್ನು ಹಿಡಿದುಕೊಳ್ಳುವುದಕ್ಕೆ ಬೋನನ್ನು ಸಿದ್ಧಗೊಳಿಸಿರಿ.
- “ಬೋನಿನಲ್ಲಿ ಬೀಳುವುದು” ಎನ್ನುವ ಮಾತು ಪ್ರಾಣಿಯನ್ನು ಹಿಡಿದುಕೊಳ್ಳುವ ಕ್ರಮದಲ್ಲಿ ನೆಲವನ್ನು ಅಗೆದು ಗುಂಡಿಯಾಗಿಟ್ಟಿರುವದರಲ್ಲಿ ಅಥವಾ ಆಳವಾದ ರಂಧ್ರ ಅಲ್ಲಿ ಬೀಳುವುದನ್ನು ಸೂಚಿಸುತ್ತದೆ.
- ಒಂದು ಪ್ರಾಣಿಯು ಯಾವರೀತಿ ಉರುಲಿನಲ್ಲಿ ಬಿದ್ದು, ತಪ್ಪಿಸುಕೊಳ್ಳುವುದಕ್ಕೆ ಆಗುವುದಿಲ್ಲವೋ ಹಾಗೆಯೇ ಅಲಂಕಾರಿಕ ಅರ್ಥದಲ್ಲಿ “ಪಾಪದಿಂದ ಉರುಲಿನಲ್ಲಿ ಬಿದ್ದಿದ್ದಾನೆ” ಎನ್ನುವ ಮಾತಿನಲ್ಲಿರುವಂತೆಯೇ ಒಬ್ಬ ಮನುಷ್ಯನು ಪಾಪವನ್ನು ಮಾಡುವುದಕ್ಕೆ ಆರಂಭಿಸಿದಾಗ, ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ.
- ಬೋನಿಗೆ ಸಿಕ್ಕಿ ಬೀಳುವುದರ ಮೂಲಕ ಪ್ರಾಣಿಗೆ ಎಷ್ಟು ಅಪಾಯಕರವಾಗಿರುತ್ತದೋ ಅದೇ ರೀತಿ ಒಬ್ಬ ವ್ಯಕ್ತಿ ಪಾಪದಿಂದ ಸಿಕ್ಕಿಬಿದ್ದರೆ ಆ ಪಾಪದಿಂದಲೇ ಹಾನಿಯನ್ನು ಅನುಭವಿಸುತ್ತಾನೆ, ಮತ್ತು ಅದರಿಂದ ಅವನು ಬಿಡುಗಡೆ ಹೊಂದಬೇಕಾದ ಅವಶ್ಯಕತೆ ಇರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಬಿಡುಗಡೆಗೊಳಿಸು, ಬೇಟೆ, ಸೈತಾನ್, ಶೋಧಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಪ್ರಸಂಗಿ.07:26
- ಲೂಕ.21:34-35
- ಮಾರ್ಕ.12:13-15
- ಕೀರ್ತನೆ.018:4-5

ಪದ ಡೇಟಾ:

- Strong's: H2256, H3353, H3369, H3920, H3921, H4170, H4204, H4434, H4685, H4686, H4889, H5367, H5914, H6315, H6341, H6351, H6354, H6679, H6983, H7639, H7845, H8610, G64, G1029, G2339, G2340, G3802, G3803, G3985, G4625

ಉಸಿರಾಟ, ಉಸಿರಾಡು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಉಸಿರಾಟ" ಮತ್ತು "ಉಸಿರಾಡು" ಎನ್ನುವ ಪದಗಳು ಜೀವವನ್ನು ಹೊಂದಿರುವುದು ಅಥವಾ ಜೀವವನ್ನು ಕೊಡುವುದು ಎನ್ನುವ ಮಾತುಗಳಿಗೆ ಅಲಂಕಾರ ರೂಪದಲ್ಲಿ ಅನೇಕಬಾರಿ ಉಪಯೋಗಿಸಲ್ಪಟ್ಟಿರುತ್ತವೆ.

- ದೇವರು ಜೀವಶ್ವಾಸವನ್ನು ಆದಾಮನೊಳಗೆ "ಊದಿದನು" ಎಂದು ಸತ್ಯವೇದವು ಬೋಧಿಸುತ್ತದೆ. ಆ ಸಮಯದಲ್ಲಿಯೇ ಆದಾಮನು ಬದುಕುವ ಪ್ರಾಣಿಯಾದನು.
- ಯೇಸು ತನ್ನ ಶಿಷ್ಯರ ಮೇಲೆ ಊದಿದಾಗ, "ಪವಿತ್ರಾತ್ಮನನ್ನು ಹೊಂದಿಕೊಳ್ಳಿರಿ" ಎಂದು ಹೇಳಿದನು, ಪವಿತ್ರಾತ್ಮನು ಅವರ ಮೇಲೆ ಬಂದು ಇಳಿಯುವುದಕ್ಕೆ ಗುರುತಾಗಿರಲು ಆತನು ನಿಜವಾಗಿ ಅವರ ಮೇಲೆ ಗಾಳಿಯನ್ನು ಊದಿರಬಹುದು.
- "ಉಸಿರು" ಮತ್ತು "ಉಸಿರು ಬಿಡು" ಎನ್ನುವ ಪದಗಳು ಕೆಲವೊಂದುಬಾರಿ ಮಾತನಾಡುವದನ್ನು ಸೂಚಿಸುವುದಕ್ಕೆ ಉಪಯೋಗಿಸಲಾಗಿರುತ್ತದೆ.
- "ದೇವರ ಉಸಿರು" ಅಥವಾ "ಯೆಹೋವನ ಉಸಿರು" ಎನ್ನುವ ಅಲಂಕಾರ ರೂಪದ ಮಾತುಗಳು ಅನೇಕಬಾರಿ ದೈವತ್ವವಿಲ್ಲದ ದೇಶಗಳ ಮೇಲೆ ಅಥವಾ ತಿರಸ್ಕಾರ ಮಾಡಿದವುಗಳ ಮೇಲೆ ಸುರಿಸುವ ದೇವರ ಕೋಪಾಗ್ನಿಯನ್ನು ಸೂಚಿಸಲಾಗಿದೆ. ಇದು ಆತನ ಶಕ್ತಿಯನ್ನು ತಿಳಿಸುತ್ತದೆ.

ಅನುವಾದ ಸಲಹೆಗಳು

- "ಅವನು ಸತ್ತನು" ಎಂದು ಹೇಳುವುದಕ್ಕೆ "ಅವನು ತನ್ನ ಕೊನೆಯ ಉಸಿರನ್ನು ಬಿಟ್ಟನು" ಎನ್ನುವ ಮಾತನ್ನು ಅಲಂಕಾರ ರೂಪದಲ್ಲಿ ಹೇಳುತ್ತಾರೆ. "ಅವನು ತನ್ನ ಕೊನೆಯ ಉಸಿರನ್ನು ತೆಗೆದುಕೊಂಡನು" ಅಥವಾ "ಅವನು ಉಸಿರಾಡುವುದನ್ನು ನಿಲ್ಲಿಸಿದನು" ಅಥವಾ "ಒಂದೇ ಒಂದುಬಾರಿ ಅವನು ಉಸಿರನ್ನು ತೆಗೆದುಕೊಂಡನು" ಎಂದೂ ಈ ಪದವನ್ನು ಅನುವಾದ ಮಾಡಬಹುದು.
- "ದೇವರು ಊದಿದ್ದಾನೆ" ಎನ್ನುವ ಮಾತುಗಳಿಗೆ ದೇವರು ಮಾತನಾಡಿದ್ದಾನೆ ಅಥವಾ ಮಾನವ ಲೇಖಕರು ಬರೆದಿರುವ ಪ್ರತಿಯೊಂದು ಮಾತು ಅಥವಾ ಲೇಖನಗಳು ದೇವರಿಂದ ಪ್ರೇರೇಪಿಸಲ್ಪಟ್ಟಿವೆ ಎಂದರ್ಥ. ಸಾಧ್ಯವಾದರೆ "ದೇವರು ಊದಿದ್ದಾನೆ" ಎನ್ನುವದನ್ನು ಅಕ್ಷರಾರ್ಥವಾಗಿ ಇಟ್ಟರೆ ಅದು ತುಂಬಾ ಉತ್ತಮವಾದ ಕೆಲಸ, ಆದರೂ ಇದರ ಖಚಿತವಾದ ಅರ್ಥವನ್ನು ಮಾತನಾಡಿಕೊಳ್ಳುವುದು ಕಷ್ಟ.
- "ದೇವರು ಊದಿದ್ದಾನೆ" ಎನ್ನುವ ಪದವನ್ನು ವಾಸ್ತವಿಕವಾಗಿ ಅಂಗೀಕರಿಸುವುದಿಲ್ಲ., ಇದನ್ನು ಇನ್ನೊಂದು ರೀತಿಯಲ್ಲಿ ಅನುವಾದ ಮಾಡುವ ವಿಧಾನದಲ್ಲಿ "ದೈವ ಪ್ರೇರಿತ" ಅಥವಾ "ದೇವರ ಅಧೀಕೃತ" ಅಥವಾ "ದೇವರು ಮಾತನಾಡಿದ ಮಾತುಗಳು" ಎಂದು ಅನುವಾದ ಮಾಡುಬಹುದು. "ಲೇಖನಗಳಲ್ಲಿರುವ ಪ್ರತಿಯೊಂದು ಮಾತನ್ನು ದೇವರು ಊದಿದ್ದಾರೆ" ಎಂದೂ ಹೇಳಬಹುದು.
- "ಉಸಿರನ್ನು ಒಳಕ್ಕೆ ತೆಗೆದುಕೋ" ಅಥವಾ "ಜೀವವನ್ನು ಊದು" ಅಥವಾ "ಉಸಿರನ್ನು ಕೊಡುತ್ತದೆ" ಎನ್ನುವ ಮಾತುಗಳನ್ನು "ಉಸಿರಾಡುವುದಕ್ಕೆ ಕಾರಣವಾಗು" ಅಥವಾ "ಪುನಃ ಜೀವಂತವನ್ನಾಗಿ ಮಾಡು" ಅಥವಾ "ಅವುಗಳು ಉಸಿರಾಡುವಂತೆ ಮತ್ತು ಜೀವಿಸುವಂತೆ ಮಾಡು" ಎಂದೂ ಅನುವಾದ ಮಾಡಬಹುದು.
- ಸಾಧ್ಯವಾದರೆ ನಮ್ಮ ಭಾಷೆಯಲ್ಲಿ "ದೇವರ ಉಸಿರು" ಎಂದು ಅನುವಾದ ಮಾಡುವುದು ಒಳ್ಳೇಯದು. "ಉಸಿರಾಡು" ಎಂದು ಒಂದುವೇಳೆ ದೇವರು ಹೇಳದಿದ್ದರೆ, ಇದನ್ನು "ದೇವರ ಶಕ್ತಿ" ಅಥವಾ "ದೇವರ ಪ್ರಸಂಗ" ಎಂದೂ ಅನುವಾದ ಮಾಡಬಹುದಾಗಿತ್ತು.
- "ನನ್ನ ಉಸಿರನ್ನು ಹಿಡಿ" ಅಥವಾ "ನನ್ನ ಉಸಿರನ್ನು ಹೊಂದು" ಎನ್ನುವ ಮಾತುಗಳು "ಮೆಲ್ಲಗೆ ಉಸಿರಾಡುವ ಕ್ರಮದಲ್ಲಿ ಶಮನವನ್ನು ಹೊಂದು" ಅಥವಾ "ಮಾಮೂಲಿಯಾಗಿ ಉಸಿರನ್ನು ತೆಗೆದುಕೊಳ್ಳುವ ಕ್ರಮದಲ್ಲಿ ಓಡುವುದನ್ನು ನಿಲ್ಲಿಸು" ಎಂಬುದಾಗಿ ಅನುವಾದ ಮಾಡಬಹುದು.
- "ಇದು ಉಸಿರಾಟ ಮಾತ್ರವೇ" ಎನ್ನುವ ಮಾತಿಗೆ "ಇನ್ನು ತುಂಬಾ ಸ್ವಲ್ಪ ಸಮಯ ಮಾತ್ರವೇ" ಎಂದರ್ಥ.
- "ಮನುಷ್ಯನು ಕೇವಲ ಉಸಿರಾಡುತ್ತಿದ್ದಾನೆ" ಎನ್ನುವ ಮಾತಿಗೆ "ಜನರು ತುಂಬಾ ಸ್ವಲ್ಪ ಸಮಯ ಮಾತ್ರವೇ ಜೀವಿಸುತ್ತಾರೆ" ಅಥವಾ "ಮನುಷ್ಯರ ಜೀವನಗಳು ತುಂಬಾ ಸ್ವಲ್ಪ ಕಾಲ ಮಾತ್ರವೇ ಇರುತ್ತವೆ" ಅಥವಾ "ದೇವರ ಮಾತಿನ ಪ್ರಕಾರ, ಒಬ್ಬ ವ್ಯಕ್ತಿಯ ಜೀವನವು ಒಂದುಸಲ ನಾವು ಉಸಿರನ್ನು ಒಳಕ್ಕೆ ತೆಗೆದುಕೊಳ್ಳುವ ಸಮಯದಷ್ಟು ಕಡಿಮೆಯಾಗಿರುತ್ತದೆ."

(ಈ ಪದಗಳನ್ನು ಸಹ ನೋಡಿರಿ: ಆದಾಮ, ಪೌಲ, ದೇವರ ವಾಕ್ಯ, ಜೀವ)

ಸತ್ಯವೇದದ ವಾಕ್ಯಗಳು:

- 1 ಅರಸ 17:17
- ಪ್ರಸಂಗಿ 8:8
- ಯೋಬ 4:9
- ಪ್ರಕ 11:11
- ಪ್ರಕ 13:15

ಪದ ಡೇಟಾ:

- Strong's: H3307, H5301, H5396, H5397, H7307, G17200, G41570

ಎಚ್ಚರಿಕೆ ಧ್ವನಿ, ತುತೂರಿ ಶಬ್ದ ಮಾಡುವುದು, ಹೆದರಿಕೆಯಾಗುವುದು

ಸತ್ಯಾಂಶಗಳು:

ಎಚ್ಚರಿಕೆ ಧ್ವನಿ ಎನ್ನುವುದು ಜನರನ್ನು ಹಾನಿ ಮಾಡುವ ಯಾವುದಾದರೊಂದರ ಕುರಿತಾಗಿ ಅವರನ್ನು ಎಚ್ಚರಿಕೆ ಮಾಡುವ ಶಬ್ದವಾಗಿರುತ್ತದೆ. "ಎಚ್ಚರಿಕೆ ಹೊಂದುವುದು" ಎಂದರೆ ಏನಾದರೊಂದು ಅಪಾಯದ ಕುರಿತು ಅಥವಾ ಹೆದರಿಕೆ ಹೊಂದುವದರ ಕುರಿತು ಕಳವಳಗೊಳ್ಳುವುದು ಮತ್ತು ಭಯಗೊಳ್ಳುವುದು.

- ಯೆಹೂದ್ಯರ ರಾಜ್ಯದ ಮೇಲಕ್ಕೆ ಧಾಳಿ ಮಾಡಲು ಮೋವಾಬ್ಯರು ಬರುತ್ತಿದ್ದಾರೆಂದು ಅರಸನಾದ ಯೆಹೋಷಫಾಟನು ಕೇಳಿಸಿಕೊಂಡಾಗ ತುಂಬಾ ಹೆಚ್ಚಾಗಿ ಹೆದರಿದ್ದನು.
- ಅಂತ್ಯಕಾಲದಲ್ಲಿ ಅನೇಕವಾದ ವಿಪತ್ತುಗಳು ಮತ್ತು ಯುದ್ಧಗಳು ನಡೆಯುವುದನ್ನು ಕೇಳಿಸಿಕೊಂಡಾಗ ಕಳವಳಗೊಳ್ಳಬೇಡಿರಿ ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದರು.
- "ಎಚ್ಚರಿಕೆ ಧ್ವನಿ" ಎನ್ನುವ ಮಾತಿಗೆ ಭಾವಾರ್ಥವು ಬೆದರಿಸುವುದು ಎಂದರ್ಥ. ಪುರಾತನ ಕಾಲದಲ್ಲಿ ಒಬ್ಬ ವ್ಯಕ್ತಿ ದೊಡ್ಡ ಶಬ್ದವನ್ನು ಮಾಡುವುದರ ಮೂಲಕ ಎಚ್ಚರಿಕೆ ಕೊಡುತ್ತಿದ್ದರು.

ಅನುವಾದ ಸಲಹೆಗಳು:

"ಒಬ್ಬರನ್ನು ಹೆದರಿಸುವುದು" ಎಂದರೆ "ಒಬ್ಬರನ್ನು ಕಳವಳಗೊಳ್ಳುವಂತೆ ಮಾಡುವುದು" ಅಥವಾ "ಒಬ್ಬರನ್ನು ಚಿಂತಿಸುವಂತೆ ಮಾಡುವುದು" ಎಂದರ್ಥ.

- "ಹೆದರಿಕೆ ಹೊಂದಿರುವುದು" ಎಂದರೆ "ಚಿಂತಿಸುತ್ತಾ ಇರುವುದು" ಅಥವಾ "ಭಯಗೊಳ್ಳುತ್ತಾ ಇರುವುದು" ಅಥವಾ "ತುಂಬಾ ಹೆಚ್ಚಾಗಿ ಆಲೋಚನೆ ಮಾಡುವುದು".
- "ಎಚ್ಚರಿಕೆಯ ಧ್ವನಿ" ಎನ್ನುವ ಮಾತನ್ನು "ಬಹಿರಂಗವಾಗಿ ಬೆದರಿಸುವುದು" ಅಥವಾ "ಅಪಾಯ ಬರುತ್ತಿದೆಯೆಂದು ಪ್ರಕಟನೆ ಮಾಡುವುದು" ಅಥವಾ "ಅಪಾಯದ ಕುರಿತಾಗಿ ತುತೂರಿ ಶಬ್ದವನ್ನು ಮಾಡುವುದು" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : /ಯೆಹೋಷಫಾಟ, /ಮೋವಾಬ್)

ಸತ್ಯವೇದದ ಅನುಬಂಧ ವಾಕ್ಯಗಳು :

- /ದಾನಿ.11:44-45
- /ಯೆರೆಮೀಯಾ.04:19-20
- /ಅರಣ್ಯ.10:9

ಪದ ಡೇಟಾ:

- Strong's: H7321, H8643

ಎಚ್ಚರಿಸುವದು, ಎಚ್ಚರಿಕೆ, ಅರಿವು

ನಿರ್ವಚನೆ:

“ಎಚ್ಚರಿಸುವುದು” ಎನ್ನುವ ಪದಕ್ಕೆ ಒಬ್ಬರಿಗೆ ಸರಿಯಾಗಿ ಬುದ್ಧಿ ಹೇಳುವುದು ಅಥವಾ ಸರಿಯಾಗಿ ಸಲಹೆಯನ್ನು ಕೊಡುವುದು.

- “ಎಚ್ಚರಿಸುವುದು” ಎನ್ನುವ ಪದಕ್ಕೆ ಸಹಜವಾಗಿ ಏನೂ ಮಾಡದಿರು ಎಂದು ಒಬ್ಬರಿಗೆ ಸಲಹೆ ಕೊಡುವ ಅರ್ಥವನ್ನು ತಿಳಿಸುತ್ತಿದೆ.
- ಕ್ರಿಸ್ತನ ದೇಹದಲ್ಲಿರುವ ವಿಶ್ವಾಸಿಗಳೆಲ್ಲರೂ ಪರಿಶುದ್ಧವಾದ ಜೀವನಗಳನ್ನು ಹೊಂದಿರಲು ಮತ್ತು ಪಾಪವನ್ನು ಮಾಡದಂತೆ ಇರುವುದಕ್ಕೆ ಒಬ್ಬರಿಗೊಬ್ಬರು ಎಚ್ಚರಿಸಿಕೊಳ್ಳಿರಿ ಎಂದು ಅಪ್ಪಣೆ ಹೊಂದಿದ್ದಾರೆ.
- “ಎಚ್ಚರಿಸುವುದು” ಎನ್ನುವ ಪದವನ್ನು “ಪಾಪ ಮಾಡದಂತೆ ಪ್ರೋತ್ಸಾಹಿಸುವುದು” ಅಥವಾ “ಪಾಪ ಮಾಡದಂತೆ ಒಬ್ಬರನ್ನು ಪ್ರೇರಣೆಗೊಳಿಸುವುದು” ಎನ್ನುವ ಮಾತುಗಳಲ್ಲಿಯೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು:

- ನೆಹೆ.09:32-34

ಪದ ಡೇಟಾ:

- Strong's: H2094, H5749, G3560, G3867, G5537

ಎಡವಿ ಬೀಳುವುದು, ಎಡವಿ ಬೀಳಿಸುವುದು, ಎಡವಿ ಬಿದ್ದಿದೆ, ಎಡವಿ ಬೀಳುತ್ತಿರುವುದು

ಪದದ ಅರ್ಥವಿವರಣೆ:

“ಎಡವಿ ಬೀಳುವುದು” ಎನ್ನುವ ಮಾತಿಗೆ ಒಬ್ಬರು ನಡೆಯುತ್ತಿರುವಾಗ ಅಥವಾ ಓಡುತ್ತಿರುವಾಗ “ಸಂಪೂರ್ಣವಾಗಿ ಬಿದ್ದುಹೋಗುತ್ತಿರುವುದು” ಎಂದರ್ಥ. ಸಾಧಾರಣವಾಗಿ ಇದು ಏನಾದರೊಂದರ ಮೇಲೆ ತಟಕ್ಕನೆ ಬಿಚ್ಚಿಕೊಳ್ಳುವುದು ಒಳಗೊಂಡಿರುತ್ತದೆ.

- ಅಲಂಕಾರಿಕವಾಗಿ, “ಎಡವಿ ಬೀಳುವುದು” ಎನ್ನುವ ಮಾತಿಗೆ “ಪಾಪ” ಮಾಡುವುದು ಅಥವಾ ನಂಬಿಕೆಯಲ್ಲಿ “ಹಿಂಜರಿಯುವುದು” ಎಂದರ್ಥವಾಗಿರುತ್ತದೆ.
- ಈ ಪದವು ಅಥವಾ ಮಾತು ಶಿಕ್ಷೆಯನ್ನು ಹೊಂದುತ್ತಿರುವಾಗ ಅಥವಾ ಹಿಂಸೆಗೊಳಗಾದ ಅಥವಾ ಯುದ್ಧದಲ್ಲಿ ಹೋರಾಟ ಮಾಡುತ್ತಿರುವಾಗ ಬಲಹೀನತೆಯನ್ನು ತೋರಿಸುವುದಕ್ಕೂ, ಅಥವಾ ತಪ್ಪುಗಳನ್ನು ಸೂಚಿಸುವುದಕ್ಕೂ ಉಪಯೋಗಿಸಲ್ಪಟ್ಟಿರುತ್ತದೆ.

ಅನುವಾದ ಸಲಹೆಗಳು:

- ಕೆಲವು ಸಂದರ್ಭಗಳಲ್ಲಿ “ಎಡವಿ ಬೀಳುವುದು” ಎನ್ನುವ ಮಾತಿಗೆ ಭೌತಿಕವಾಗಿ ಯಾವುದಾದರೊಂದರ ಮೇಲೆ ಬೀಳುವುದು ಎಂದರ್ಥವಾಗಿರುತ್ತದೆ, ಇದನ್ನು “ಸಂಪೂರ್ಣವಾಗಿ ಬಿದ್ದುಹೋಗುತ್ತಿರುವುದು” ಅಥವಾ “ಒಂದರ ಮೇಲೆ ಬಿಚ್ಚಿ ಬೀಳುವುದು” ಎಂದರ್ಥ ಬರುವ ಮಾತುಗಳೊಂದಿಗೆ ಅನುವಾದ ಮಾಡಬೇಕು.
- ಸಂದರ್ಭದಲ್ಲಿ ಸರಿಯಾದ ಅರ್ಥವನ್ನು ಈ ಮಾತು ತಿಳಿಯಪಡಿಸುತ್ತಿದ್ದರೆ, ಇದರ ಅಕ್ಷರಾರ್ಥವನ್ನು ಅಲಂಕಾರಿಕ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಬಹುದು.
- ಅನುವಾದ ಭಾಷೆಯಲ್ಲಿ ಅಕ್ಷರಾರ್ಥವಾದ ಅರ್ಥವನ್ನು ಕೊಡದ ಅಲಂಕಾರಿಕ ಉಪಯೋಗಗಳಲ್ಲಿ, “ಎಡವಿ ಬೀಳುವುದು” ಎನ್ನುವ ಮಾತನ್ನು “ಪಾಪ” ಮಾಡುವುದು ಅಥವಾ “ತಪ್ಪು ಮಾಡುವುದು” ಅಥವಾ “ನಂಬುವುದನ್ನು ನಿಲ್ಲಿಸುವುದು” ಅಥವಾ “ಬಲಹೀನವಾಗುವುದು” ಎಂದು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.
- ಈ ಮಾತನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಪಾಪ ಮಾಡುವುದರ ಮೂಲಕ ಎಡವಿ ಬೀಳುವುದು” ಅಥವಾ “ನಂಬದಿರುವದರಿಂದ ಎಡವಿ ಬೀಳುವುದು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಎಡವಿ ಬೀಳುವಂತೆ ಮಾಡುವುದು” ಎನ್ನುವ ಮಾತನ್ನು “ಬಲಹೀನವಾಗುವಂತೆ ಮಾಡುವುದು” ಅಥವಾ “ತಪ್ಪು ಮಾಡುವಂತೆ ಮಾಡುವುದು” ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬು, ಹಿಂಸಿಸು, ಪಾಪ, ವಿಘ್ನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.02:7-8
- ಹೋಶೆಯ.04:4-5
- ಯೆಶಯಾ.31:3
- ಮತ್ತಾಯ.11:4-6
- ಮತ್ತಾಯ.18:7-8

ಪದ ಡೇಟಾ:

- Strong's: H1762, H3782, H4383, H4384, H5062, H5063, H5307, H6328, H6761, H8058, G679, G4348, G4350, G4417, G4624, G4625

ಎಣ್ಣೆ

ಪದದ ಅರ್ಥವಿವರಣೆ:

ಎಣ್ಣೆ ಎನ್ನುವುದು ಒಂದು ನಿರ್ದಿಷ್ಟವಾದ ಸಸ್ಯಗಳಿಂದ ಅಥವಾ ಮರಗಳಿಂದ ತೆಗೆದುಕೊಳ್ಳುವ ಸ್ಪಷ್ಟವಾದ ದ್ರವ ಪದಾರ್ಥವಾಗಿರುತ್ತದೆ. ಸತ್ಯವೇದ ಕಾಲಗಳಲ್ಲಿ ಎಣ್ಣೆ ಸಾಧಾರಣವಾಗಿ ಎಣ್ಣೆಮರಗಳಿಂದ (ಆಲಿವ್ ಮರಗಳಿಂದ) ತೆಗೆಯುತ್ತಿದ್ದರು.

- ಎಣ್ಣೆಯ ಮರಗಳ ಎಣ್ಣೆಯನ್ನು (ಅಲೀವ್ ಎಣ್ಣೆಯನ್ನು) ಅಡಿಗೆಗೆ, ಅಭಿಷೇಕಕ್ಕೆ, ಬಲಿಗೆ, ದೀಪಗಳಿಗೆ ಮತ್ತು ಔಷಧಕ್ಕೆ ಉಪಯೋಗಿಸುತ್ತಾರೆ.
- ಪುರಾತನ ಕಾಲಗಳಲ್ಲಿ ಎಣ್ಣೆಯ ಮರಗಳ ಎಣ್ಣೆಯು ತುಂಬಾ ಹೆಚ್ಚಿನ ಬೆಲೆಯುಳ್ಳದ್ದು ಮತ್ತು ಎಷ್ಟು ಹೆಚ್ಚಾಗಿ ಎಣ್ಣೆಯಿದ್ದರೆ ಅಷ್ಟು ಹೆಚ್ಚಾಗಿ ಶ್ರೀಮಂತರೆಂದು ಅಳತೆ ಮಾಡುತ್ತಿದ್ದರು.
- ಈ ರೀತಿಯ ಪದವನ್ನು ಅನುವಾದ ಮಾಡುತ್ತಿರುವಾಗ ಈ ರೀತಿಯಾದ ಎಣ್ಣೆಯನ್ನು ಅಡಿಗೆಗೆ ಮಾತ್ರ ಉಪಯೋಗಿಸುತ್ತಾರೇ ಹೊರತು, ಇದು ಗಾಡಿಗಳಿಗೆ ಉಪಯೋಗಿಸುವ ಎಣ್ಣೆಯಲ್ಲ ಎಂಬುವುದನ್ನು ನಿಶ್ಚಯಿಸಿಕೊಳ್ಳಿರಿ. ಈ ರೀತಿಯ ಅನೇಕವಾದ ಎಣ್ಣೆಗಳಿಗೆ ವಿವಿಧವಾದ ಪದಗಳನ್ನು ಕೆಲವೊಂದು ಭಾಷೆಗಳಲ್ಲಿ ಉಪಯೋಗಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಆಲೀವ್ (ಎಣ್ಣೆಮರಗಳ ಎಣ್ಣೆ), ಸರ್ವಾಂಗಹೋಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.01:21-22
- ವಿಮೋ.29:1-2
- ಯಾಜಕ.05:11
- ಯಾಜಕ.08:1-3
- ಮಾರ್ಕ.06:12-13
- ಮತ್ತಾಯ.25:7-9

ಪದ ಡೇಟಾ:

- Strong's: H1880, H2091, H3323, H4887, H6671, H7246, H8081, G1637, G3464

ಎತ್ತಲ್ಪಡುವುದು

ಪದದ ಅರ್ಥವಿವರಣೆ:

“ಎತ್ತಲ್ಪಡುವರು” ಎನ್ನುವ ಪದವು ಅನೇಕ ಬಾರಿ ದೇವರು ಒಬ್ಬ ವ್ಯಕ್ತಿಯನ್ನು ಆಕಸ್ಮಿಕವಾಗಿ, ಅದ್ಭುತ ರೀತಿಯಾಗಿ ಪರಲೋಕಕ್ಕೆ ಕರೆದೊಯ್ಯುವುದನ್ನು ಸೂಚಿಸುತ್ತದೆ.

- “ಸಿಕ್ಕುತ್ತಾರೆ” ಎನ್ನುವ ಮಾತು ಒಬ್ಬರನ್ನು ಸೇರುವುದಕ್ಕೆ ಅವಸರಿಸಿದನಂತರ ಒಬ್ಬರ ಬಳಿಗೆ ಬರುವುದನ್ನು ಸೂಚಿಸುತ್ತದೆ. ಇದೇ ಅರ್ಥ ಬರುವ ಇನ್ನೊಂದು ಪದವು ಏನಂದರೆ “ಅಧಿಗಮಿಸು”
- ಮೂರನೇ ಆಕಾಶಕ್ಕೆ “ಕರೆದೊಯ್ಯಲ್ಪಟ್ಟ” ವಿಷಯದ ಕುರಿತಾಗಿ ಅಪೊಸ್ತಲನಾದ ಪೌಲನು ಮಾತನಾಡುತ್ತಿದ್ದಾನೆ. ಇದನ್ನು “ತೆಗೆದುಕೊಂಡಾಗಿದೆ” ಎಂದೂ ಅನುವಾದ ಮಾಡಬಹುದು.
- ಕ್ರಿಸ್ತನು ಹಿಂದಿರುಗಿ ಬರುವ ಸಮಯದಲ್ಲಿ ಆಕಾಶದಲ್ಲಿ ಆತನನ್ನು ಸೇರಲು ಕ್ರೈಸ್ತರೆಲ್ಲರು “ಮೇಲಕ್ಕೆ ಎತ್ತಲ್ಪಡುತ್ತಾರೆ” ಎಂದು ಅಪೊಸ್ತಲನಾದ ಪೌಲನು ಹೇಳಿದ್ದಾನೆ.
- ಅಲಂಕಾರ ಭಾವವ್ಯಕ್ತೀಕರಣದಲ್ಲಿ “ನನ್ನ ಪಾಪಗಳು ನನ್ನೊಂದಿಗೆ ಎತ್ತಿ ಹಿಡಿಯಲ್ಪಟ್ಟಿವೆ” ಎನ್ನುವ ಮಾತು, “ನಾನು ಮಾಡಿರುವ ಪಾಪಕ್ಕೆ ನಾನು ಪರಿಣಾಮಗಳನ್ನು ಎದುರುಗೊಂಡಿದ್ದೇನೆ” ಅಥವಾ “ನನ್ನ ಪಾಪದ ಕಾರಣದಿಂದ ನಾನು ಹಿಂಸೆಯನ್ನು ಅನುಭವಿಸುತ್ತಿದ್ದೇನೆ” ಅಥವಾ “ನನ್ನ ಪಾಪವೇ ನನ್ನ ಸಂಕಷ್ಟಕ್ಕೆ ಕಾರಣ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅದ್ಭುತ, ಅಧಿಗಮಿಸು, ಶ್ರಮೆ, ಸಂಕಷ್ಟ)

ಸತ್ಯವೇದದ ವಾಕ್ಯಗಳು :

- 2 ಕೊರಿಂಥ 12:1-2
- ಅಪೊ.ಕೃತ್ಯ 8:39-40

ಪದ ಡೇಟಾ:

- Strong's: H1692, G7260

ಎದೆಕವಚ, ಎದೆಯತುಂಡು

ಪದದ ಅರ್ಥವಿವರಣೆ:

“ಎದೆಕವಚ” ಎನ್ನುವುದು ಯುದ್ಧದಲ್ಲಿ ಸೈನಿಕನನ್ನು ಸಂರಕ್ಷಿಸಲು ಎದೆಯ ಮುಂಭಾಗದಲ್ಲಿ ಕಟ್ಟಿಕೊಳ್ಳುವ ಯುದ್ಧ ಕವಚದ ಉಪಕರಣವನ್ನು ಸೂಚಿಸುತ್ತದೆ. “ಎದೆತುಂಡು” ಎನ್ನುವ ಪದವು ಇಸ್ರಾಯೇಲ್ ಮಹಾ ಯಾಜಕನು ತನ್ನ ಎದೆಯ ಮುಂಭಾಗದಲ್ಲಿ ಧರಿಸುವ ಬಟ್ಟೆಯಿಂದ ಮಾಡಿದ ವಿಶೇಷವಾದ ತುಂಡನ್ನು ಸೂಚಿಸುತ್ತದೆ.

- “ಎದೆಕವಚ” ಎನ್ನುವದನ್ನು ಸೈನಿಕನು ಉಪಯೋಗಿಸುವ ಉಪಕರಣ, ಇದನ್ನು ಪ್ರಾಣಿಯ ಚರ್ಮದಿಂದ, ಲೋಹದಿಂದ ಅಥವಾ ಕಟ್ಟಿಗೆಯಿಂದ ಮಾಡುತ್ತಾರೆ. ಸೈನಿಕನ ಎದೆಯನ್ನು ಖಡ್ಗಗಳಾಗಲಿ, ಬಾಣಗಳಾಗಲಿ ಅಥವಾ ಭರ್ಜಿಗಳಾಗಲಿ ತಿವಿಯದೆ ಕಾಪಾಡಿಕೊಳ್ಳುವುದಕ್ಕೆ ಇದನ್ನು ಮಾಡಿರುತ್ತಾರೆ.
- “ಎದೆತುಂಡು” ಎನ್ನುವದನ್ನು ಇಸ್ರಾಯೇಲ್ಯರ ಮಹಾ ಯಾಜಕನು ಧರಿಸುತ್ತಾನೆ, ಇದನ್ನು ಬಟ್ಟೆಯಿಂದ ಮಾಡಿ, ಅದಕ್ಕೆ ಅತೀ ಬೆಲೆಯುಳ್ಳ ರತ್ನಗಳನ್ನು ಅಂಟಿಸುತ್ತಾರೆ. ದೇವಾಲಯದಲ್ಲಿ ದೇವರಿಗೆ ಮಾಡುವ ಸೇವೆಗಳನ್ನು ಮಾಡುವ ಸಮಯದಲ್ಲಿ ಇದನ್ನು ಯಾಜಕನು ಧರಿಸುತ್ತಾನೆ.
- “ಎದೆಕವಚ” ಎನ್ನುವ ಪದವನ್ನು ಅನುವಾದಿಸುವ ಬೇರೊಂದು ವಿಧಾನಗಳಲ್ಲಿ, “ಎದೆಯನ್ನು ಮುಚ್ಚುವ ಅಥವಾ ಕಾಪಾಡುವ ಲೋಹದ ಉಪಕರಣ” ಅಥವಾ “ಎದೆಯನ್ನು ಸಂರಕ್ಷಿಸುವ ಕವಚದ ತುಂಡು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಎದೆತುಂಡು” ಎನ್ನುವ ಪದವನ್ನು “ಎದೆಯನ್ನು ಮುಚ್ಚುವುದಕ್ಕೆ ಯಾಜಕನ ಬಟ್ಟೆ” ಅಥವಾ “ಯಾಜಕನ ವಸ್ತ್ರದ ತುಂಡು” ಅಥವಾ “ಯಾಜಕನ ಬಟ್ಟೆಯ ಮುಂಭಾಗದ ತುಂಡು” ಎಂದು ಅರ್ಥ ಬರುವ ಪದಗಳೊಂದಿಗೆ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕವಚ, ಮಹಾ ಯಾಜಕ, ತಿವಿಯುವುದು, ಯಾಜಕ, ದೇವಾಲಯ, ಯೋಧ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಥೆಸ್ಸ.05:08
- ವಿಮೋ.39:14-16
- ಯೆಶಯ.59:17
- ಪ್ರಕ.09:7-9

ಪದ ಡೇಟಾ:

- Strong's: H2833 , H8302, G2382

ಎಬ್ಬಿಸು,ಎದ್ದೇಳು, ಎಬ್ಬಿಸುವುದು, ಎದ್ದೇಳು, ಎದ್ದಿದೆ

ಪದದ ಅರ್ಥವಿವರಣೆ:

ಎಬ್ಬಿಸು, ಮೇಲಕ್ಕೆ ಎಬ್ಬಿಸು

ಸಾಧಾರಣವಾಗಿ "ಎಬ್ಬಿಸು" ಎನ್ನುವ ಪದಕ್ಕೆ "ಮೇಲಕ್ಕೆ ಎಬ್ಬಿಸುವುದು" ಅಥವಾ "ಉನ್ನತವಾಗಿ ಮಾಡು" ಎಂದರ್ಥ.

- "ಮೇಲಕ್ಕೆ ಎದ್ದೇಳು" ಎನ್ನುವ ಅಲಂಕಾರಿಕ ಮಾತಿಗೆ ಯಾವುದಾದರೊಂದನ್ನು ಕಾಣಿಸಿಕೊಳ್ಳುವಂತೆ ಅಥವಾ ಅಸ್ತಿತ್ವದಲ್ಲಿರಲು ಮಾಡುವುದು ಎಂದರ್ಥ. ಯಾವುದಾದರೊಂದನ್ನು ಮಾಡುವುದಕ್ಕೆ ಯಾರಾದರೊಬ್ಬರನ್ನು ನೇಮಿಸುವುದು ಎಂದರ್ಥವೂ ಈ ಪದಕ್ಕೆ ಇರುತ್ತದೆ.
- ಕೆಲವೊಂದುಬಾರಿ "ಮೇಲಕ್ಕೆ ಎದ್ದೆಳು" ಎನ್ನುವ ಮಾತಿಗೆ "ಪುನರ್ ಸ್ಥಾಪಿಸು" ಅಥವಾ "ಪುನರ್ ನಿರ್ಮಿಸು" ಎಂದರ್ಥವಾಗಿರುತ್ತದೆ.
- "ಎಬ್ಬಿಸು" ಎನ್ನುವ ಪದಕ್ಕೆ "ಮರಣದಿಂದ ಎಬ್ಬಿಸು" ಎನ್ನುವ ಮಾತಿನಲ್ಲಿರುವ ವಿಶೇಷವಾದ ಅರ್ಥವು ಇರುತ್ತದೆ. ಸತ್ತಿರುವ ವ್ಯಕ್ತಿಯನ್ನು ಜೀವಂತವನ್ನಾಗಿ ಮಾಡುವುದು ಎಂದು ಈ ಮಾತಿಗೆ ಅರ್ಥವಾಗಿರುತ್ತದೆ.
- ಕೆಲವೊಂದುಬಾರಿ "ಮೇಲಕ್ಕೆ ಎಬ್ಬಿಸು" ಎನ್ನುವ ಪದಕ್ಕೆ ಯಾರಾದರೊಬ್ಬರನ್ನು ಅಥವಾ ಯಾವುದಾದರೊಂದನ್ನು "ಮಹಿಮೆಪಡಿಸು ಅಥವಾ ಹೊಗಳು" ಎಂದರ್ಥವಾಗಿರುತ್ತದೆ.

ಎಬ್ಬಿಸು, ಎದ್ದೇಳು

"ಎಬ್ಬಿಸು" ಅಥವಾ "ಎದ್ದೇಳು" ಎನ್ನುವ ಪದಕ್ಕೆ "ಮೇಲಕ್ಕೆ ಹೋಗು" ಅಥವಾ "ಎದ್ದು ಬಾ" ಎಂದರ್ಥ. "ಏರಿದೆ," "ಬೆಳೆದಿದೆ", ಮತ್ತು "ಎದ್ದಿದೆ" ಎನ್ನುವ ಪದಗಳು ಭೂತ ಕಾಲದ ಕ್ರಿಯೆಯನ್ನು ವ್ಯಕ್ತಪಡಿಸುತ್ತಿವೆ.

- ಒಬ್ಬ ವ್ಯಕ್ತಿ ಎಲ್ಲಿಗಾದರು ಹೋಗುವುದಕ್ಕೆ ಮೇಲಕ್ಕೆ ಎದ್ದಾಗ, ಇದು ಕೆಲವೊಂದುಬಾರಿ "ಅವನು ಎದ್ದು, ಹೊರಟನು" ಅಥವಾ "ಅವನು ಮೇಲಕ್ಕೆ ಎದ್ದು, ಹೊರಟುಹೋದನು" ಎಂದೂ ವ್ಯಕ್ತಗೊಳಿಸಲಾಗುತ್ತದೆ.
- ಯಾವುದಾದರೊಂದು "ಎದ್ದು ಬರುತ್ತಿರುವಾಗ", ಇದಕ್ಕೆ ಇದು "ನಡೆದಿದೆ" ಅಥವಾ "ನಡೆಯುವುದಕ್ಕೆ ಆರಂಭವಾಗುತ್ತಿದೆ" ಎಂದರ್ಥ.
- ಯೇಸು "ಮರಣದಿಂದ ಎಬ್ಬಿಸಲ್ಪಡುವನು" ಎಂದು ಆತನು ಮುಂಚಿತವಾಗಿಯೇ ಹೇಳಿದ್ದನು. ಯೇಸು ಮರಣಿಸಿದ ಮೂರು ದಿನಗಳಾದನಂತರ, "ಆತನು ಎದ್ದು ಬಂದನು" ಎಂದು ದೂತ ಹೇಳಿದನು.

ಅನುವಾದ ಸಲಹೆಗಳು:

- "ಎಬ್ಬಿಸು" ಅಥವಾ "ಎದ್ದೇಳು" ಎನ್ನುವ ಪದವನ್ನು "ಮೇಲಕ್ಕೆತ್ತು" ಅಥವಾ "ಉನ್ನತವಾಗಿ ಮಾಡು" ಎಂದೂ ಅನುವಾದ ಮಾಡಬಹುದು.
- "ಮೇಲಕ್ಕೆ ಎಬ್ಬಿಸು" ಎನ್ನುವ ಪದವನ್ನು "ಕಾಣಿಸಿಕೊಳ್ಳುವಂತೆ ಮಾಡು" ಅಥವಾ "ನೇಮಿಸು" ಅಥವಾ "ಅಸ್ತಿತ್ವದಲ್ಲಿರಿಸು" ಎಂದೂ ಅನುವಾದ ಮಾಡಬಹುದು.
- "ನಿಮ್ಮ ಶತ್ರುಗಳ ಬಲವನ್ನು ಮೇಲಕ್ಕೆ ಎಬ್ಬಿಸು" ಎನ್ನುವ ಮಾತನ್ನು "ನಿಮ್ಮ ಶತ್ರುಗಳನ್ನು ತುಂಬಾ ಬಲವುಳ್ಳವರನ್ನಾಗಿ ಮಾಡು" ಎಂದೂ ಅನುವಾದ ಮಾಡಬಹುದು.
- "ಮರಣದಿಂದ ಯಾರಾದರೊಬ್ಬರನ್ನು ಎಬ್ಬಿಸು" ಎನ್ನುವ ಮಾತನ್ನು "ಸತ್ತಂತ ಯಾರಾದರೊಬ್ಬರನ್ನು ಮರಣದಿಂದ ಜೀವಂತನನ್ನಾಗಿ ಮಾಡು" ಅಥವಾ "ಒಬ್ಬ ವ್ಯಕ್ತಿ ತಿರುಗಿ ಜೀವಂತವಾಗುವಂತೆ ಮಾಡು" ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಗುಣವಾಗಿ, "ಮೇಲಕ್ಕೆತ್ತು" ಎನ್ನುವ ಪದವನ್ನು "ಒದಗಿಸು" ಅಥವಾ "ನೇಮಿಸು" ಅಥವಾ "ಹೊಂದಿಕೊಳ್ಳು" ಅಥವಾ "ನಿರ್ಮಿಸು" ಅಥವಾ "ಪುನರ್ ನಿರ್ಮಿಸು" ಅಥವಾ "ಸರಿಪಡಿಸು" ಎಂದೂ ಅನುವಾದ ಮಾಡಬಹುದು.
- "ಎದ್ದು, ಹೊರಟನು" ಎನ್ನುವ ಮಾತನ್ನು "ಮೇಲಕ್ಕೆ ಎದ್ದು, ಹೊರಟನು" ಅಥವಾ "ಹೋದನು" ಎಂದು ಅನುವಾದ ಮಾಡಬಹುದು.
- ಸಂದರ್ಭಾನುಗುಣವಾಗಿ, "ಎದ್ದಿದೆ" ಎನ್ನುವ ಪದವನ್ನು "ಆರಂಭಿಸಿದೆ" ಅಥವಾ "ಆರಂಭ ಮಾಡಲಾಗಿದೆ" ಅಥವಾ "ಮೇಲಕ್ಕೆ ಎದ್ದಿದೆ" ಅಥವಾ "ನಿಂತಿದೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪುನರುತ್ಥಾನ, ನೇಮಿಸು, ಘನಪಡಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಪೂರ್ವ.06:41
- 2 ಸಮು.07:12
- ಅಪೊ.ಕೃತ್ಯ.10:40
- ಕೊಲೊಸ್ಸ.03:01
- ಧರ್ಮೋ.13:1-3
- ಯೆರೆ.06:01
- ನ್ಯಾಯಾ.02:18

- ಲೂಕ.07:22
- ಮತ್ತಾಯ.20:19

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **21:14** ಮೆಸ್ಸೀಯ ಮರಣಿಸುತ್ತಾನೆ ಮತ್ತು ದೇವರು ಆತನನ್ನು ಮರಣದಿಂದ _ ಎಬ್ಬಿಸುತ್ತಾನೆ _ ಎಂದು ಪ್ರವಾದಿಗಳು ಮುಂಚಿತವಾಗಿ ಹೇಳಿದ್ದರು.
- **41:05** "ಯೇಸು ಇಲ್ಲಿ ಇಲ್ಲ. ಆತನು ಹೇಳಿದ ಪ್ರಕಾರವೇ, ಆತನು ಮರಣದಿಂದ _ ಎಬ್ಬಿಸಲ್ಪಟ್ಟಿದ್ದಾನೆ _!"
- **43:07** "ಯೇಸು ಮರಣ ಹೊಂದಿದರೂ, ದೇವರು ಆತನನ್ನು ಮರಣದಿಂದ _ ಎಬ್ಬಿಸಲ್ಪಟ್ಟಿದ್ದಾನೆ _. "ನಿನ್ನ ಪರಿಶುದ್ಧನನ್ನು ಸಮಾಧಿಯಲ್ಲಿರುವಂತೆ ಬಿಡುವುದಿಲ್ಲ" ಎನ್ನುವ ಪ್ರವಾದನೆಯು ಈ ರೀತಿಯಲ್ಲಿ ನೆರವೇರಿಸಲ್ಪಟ್ಟಿತು. ಯೇಸು ತಿರುಗಿ ಜೀವಂತವಾಗಿರುವಕ್ಕೆ ದೇವರು ಯೇಸುವನ್ನು _ ಎಬ್ಬಿಸಿದ್ದಾನೆ _ ಎನ್ನುವ ಸತ್ಯ ಸಂಘಟನೆಗೆ ನಾವೆಲ್ಲರು ಸಾಕ್ಷಿಗಳಾಗಿದ್ದೇವೆ.
- **44:05** "ನೀವು ಜೀವಾಧಿಪತಿಯನ್ನು ಸಾಯಿಸಿದ್ದೀರಿ, ಆದರೆ ದೇವರು ಆತನನ್ನು ಮರಣದಿಂದ _ ಎಬ್ಬಿಸಿದನು _.
- **44:08** "ನಿಮ್ಮ ಮುಂದೆ ನಿಂತಿರುವ ಈ ಮನುಷ್ಯನು ಮೆಸ್ಸೀಯನಾದ ಯೇಸುವಿನ ಶಕ್ತಿಯಿಂದ ಸ್ವಸ್ಥತೆಯನ್ನು ಪಡೆದುಕೊಂಡಿದ್ದಾನೆ. ನೀವು ಯೇಸುವನ್ನು ಶಿಲುಬೆಗೆ ಹಾಕಿದ್ದೀರಿ, ಆದರೆ ದೇವರು ಆತನು ತಿರುಗಿ ಜೀವಿಸುವಂತೆ _ ಎಬ್ಬಿಸಿದನು _!"
- **48:04** ಸೈತಾನನು ಮೆಸ್ಸೀಯನನ್ನು ಕೊಂದನು ಎಂದು ಇದರ ಅರ್ಥವಾಗಿರುತ್ತದೆ, ಆದರೆ ಆತನು ತಿರುಗಿ ಜೀವಂತವಾಗಿರುವುದಕ್ಕೆ ದೇವರು ಆತನನ್ನು _ ಎಬ್ಬಿಸಿದನು _, ಮತ್ತು ಮೆಸ್ಸೀಯ ಶಾಶ್ವತವಾಗಿ ಸೈತಾನನ ಶಕ್ತಿಯನ್ನು ಜಜ್ಜುವನು.
- **49:02** ಆತನು (ಯೇಸು) ನೀರಿನ ಮೇಲೆ ನಡೆದನು, ಬಿರುಗಾಳಿಯನ್ನು ಶಾಂತಗೊಳಿಸಿದನು, ಅನೇಕ ರೋಗಿಗಳನ್ನು ಗುಣಪಡಿಸಿದನು, ದೆವ್ವಗಳನ್ನು ಹೋಗಲಾಡಿಸಿದನು, ಸತ್ತಂತವರನ್ನು ಜೀವಂತವಾಗಿರುವುದಕ್ಕೆ ತಿರುಗಿ _ ಎಬ್ಬಿಸಿದನು _, ಮತ್ತು ಐದು ರೊಟ್ಟಿ ಎರಡು ಮೀನುಗಳನ್ನು ಸುಮಾರು 5,000 ಜನರಿಗೆ ಹಂಚಿದನು.
- **49:12** ಯೇಸು ದೇವರ ಮಗನೆಂದು, ನಿನಗೆ ಬದಲಾಗಿ ಆತನು ಶಿಲುಬೆಯಲ್ಲಿ ಮರಣಿಸಿದ್ದಾನೆಂದು, ಮತ್ತು ದೇವರು ಆತನನ್ನು ತಿರುಗಿ _ ಎಬ್ಬಿಸಿದ್ದಾನೆಂದು _ ನೀನು ತಪ್ಪದೇ ನಂಬಬೇಕು.

ಪದ ಡೇಟಾ:

- Strong's: H2210, H2224, H5549, H5782, H5927, H5975, H6965, H6966, H6974, H7613 G305, G386, G393, G450, G1096, G1326, G1453, G1525, G1817, G1825, G1892, G1999, G4891

ಏಲಾ, ಏಲಾಗಳು

ಪದದ ಅರ್ಥವಿವರಣೆ:

ಏಲಾ, ಅಥವಾ ಏಲಾ ಮರ ಎನ್ನುವುದು ದೊಡ್ಡ ಕಾಂಡವಿರುವ ಎತ್ತರವುಳ್ಳ ಮರ ಮತ್ತು ಅಗಲವಾಗಿ ವಿಸ್ತರಿಸಿದ ಕೊಂಬೆಗಳನ್ನು ಒಳಗೊಂಡಿರುತ್ತದೆ.

- ಏಲಾ ಮರಗಳು ಬಲವಾದ ಗಟ್ಟಿಯಾದ ಮರವಾಗಿರುತ್ತದೆ, ಇದನ್ನು ದೊಡ್ಡ ದೊಡ್ಡ ಹಡಗುಗಳನ್ನು ನಿರ್ಮಿಸುವುದಕ್ಕೆ, ನೇಗಿಲುಗಳನ್ನು, ಎತ್ತುಗಳನ್ನು ನೊಗಗಳನ್ನು ಮತ್ತು ನಡೆಸುವ ಬಡಿಗೆಗಳನ್ನು ತಯಾರು ಮಾಡುವುದಕ್ಕೆ ಉಪಯೋಗಿಸುತ್ತಾರೆ.
- ಏಲಾ ಮರದ ಬೀಜವನ್ನು ಸಿಂಧೂ ವೃಕ್ಷದ ಹಣ್ಣು ಎಂದೂ ಕರೆಯುತ್ತಾರೆ.
- ನಿರ್ದಿಷ್ಟವಾದ ಏಲಾ ಮರಗಳ ಕಾಂಡಗಳನ್ನು 6 ಮೀಟರುಗಳ ಉದ್ದದವರೆಗೂ ಅಳತೆ ಮಾಡಿ ಇಟ್ಟಿರುತ್ತಾರೆ.
- ಏಲಾ ಮರಗಳು ಬಹು ಬಾಳಿಕೆ ಬರುವ ಜೀವನಕ್ಕೆ ಗುರುತಾಗಿರುತ್ತದೆ ಮತ್ತು ಇತರ ಆತ್ಮೀಯ ಅರ್ಥಗಳನ್ನು ಹೊಂದಿರುತ್ತದೆ. ಸತ್ಯವೇದದಲ್ಲಿ ಅವುಗಳು ಅನೇಕಬಾರಿ ಪರಿಶುದ್ಧ ಸ್ಥಳಗಳೊಂದಿಗೆ ಹೆಚ್ಚಾಗಿ ಸಂಬಂಧಗಳನ್ನು ಹೊಂದಿರುತ್ತದೆ.

ಅನುವಾದ ಸಲಹೆಗಳು:

- ಅನೇಕ ಅನುವಾದಗಳಲ್ಲಿ “ಏಲಾ” ಎನ್ನುವ ಪದವನ್ನು ಬಳಸುವುದಕ್ಕೆ ಬದಲಾಗಿ “ಏಲಾ ಮರ” ಎನ್ನುವ ಪದವನ್ನು ಉಪಯೋಗಿಸುವುದು ತುಂಬಾ ಪ್ರಾಮುಖ್ಯವೆಂದು ಕಂಡುಕೊಂಡಿದ್ದಾರೆ.
- ಓದುಗಾರರ ಸ್ಥಳದಲ್ಲಿ ಈ ಏಲಾ ಮರಗಳು ಇಲ್ಲದಿದ್ದರೆ, “ಏಲಾ”ವನ್ನು “ದೊಡ್ಡದಾಗಿಯೂ ಎತ್ತರವಾಗಿಯೂ ಇರುವ ಏಲಾ ಮರ” ಎಂದೂ ಅನುವಾದ ಮಾಡಬಹುದು, ಈ ಮರದ ಗುಣಲಕ್ಷಣಗಳನ್ನು ಹೊಂದಿರುವ ಬೇರೆ ಇತರ ಮರಗಳನ್ನು ಹೋಲಿಸಿ ಆ ಮರದ ಹೆಸರನ್ನು ಹೇಳಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಪರಿಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.10:3-4
- ಆದಿ.13:16-18
- ಆದಿ.14:13-14
- ಆದಿ.35:4-5
- ಆದಿ.06:11-12

ಪದ ಡೇಟಾ:

- Strong's: H352, H424, H427, H436, H437, H438

ಒಂಟೆ, ಒಂಟೆಗಳು

ಪದದ ಅರ್ಥವಿವರಣೆ:

ಒಂಟೆ ಎಂದರೆ ನಾಲ್ಕು ಕಾಲುಗಳು ಇರುವ ದೊಡ್ಡ ಪ್ರಾಣಿ, ಇದರ ಹಿಂದೆ ಒಂದು ಅಥವಾ ಎರಡು ದಿಣ್ಣೆಗಳು ಇರುತ್ತವೆ. (ಇದನ್ನು ಸಹ ನೋಡಿರಿ : ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

- ಸತ್ಯವೇದ ಕಾಲದಲ್ಲಿ ಒಂಟೆ ಎನ್ನುವುದು ಇಸ್ರಾಯೇಲ್.ನಲ್ಲಿ ಮತ್ತು ಅದರ ಸುತ್ತಮುತ್ತ ಪ್ರಾಂತ್ಯಗಳಲ್ಲಿ ದೊಡ್ಡ ಪ್ರಾಣಿಯೆಂದು ಗುರುತಿಸಲಾಗಿದೆ.
- ಒಂಟೆಯನ್ನು ಮುಖ್ಯವಾಗಿ ಜನರನ್ನು ಮತ್ತು ಭಾರ ವಸ್ತುಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಉಪಯೋಗಿಸುತ್ತಿದ್ದರು.
- ಕೆಲವೊಂದು ಜನಾಂಗಗಳು ಊಟಕ್ಕಾಗಿ ಒಂಟೆಗಳನ್ನು ಬಳಸುತ್ತಿದ್ದರು, ಇಸ್ರಾಯೇಲ್ ಜನರು ಮಾತ್ರ ತಿನ್ನುತ್ತಿರಲಿಲ್ಲ, ಯಾಕಂದರೆ ಒಂಟೆಗಳು ಅಪವಿತ್ರವಾದವುಗಳು ಮತ್ತು ಅವುಗಳನ್ನು ತಿನ್ನಬಾರದು ಎಂದು ದೇವರು ಹೇಳಿದ್ದರು.
- ಒಂಟೆಗಳು ತುಂಬಾ ಬೆಲೆಯುಳ್ಳ ಪ್ರಾಣಿಗಳು ಯಾಕಂದರೆ ಅವು ಮರಳುಗಾಡಿಯಲ್ಲಿ ತುಂಬಾ ಸುಲಭವಾಗಿ ಪ್ರಯಾಣ ಮಾಡುತ್ತವೆ ಮತ್ತು ಒಂದೊಂದುಸಲ ಅವು ಕೆಲವೊಂದು ವಾರಗಳ ವರೆಗೂ ನೀರು, ಆಹಾರ ಯಾವುದೂ ಇಲ್ಲದಿದ್ದರೂ ಜೀವಿಸುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಭಾರ, ಪವಿತ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.05:20-22
- 2 ಪೂರ್ವ.09:1-2
- ವಿಮೋ.09:1-4
- ಮಾರ್ಕ.10:23-25
- ಮತ್ತಾಯ.03:4-6
- ಮತ್ತಾಯ.19:23-24

ಪದ ಡೇಟಾ:

- Strong's: H327, H1581, G2574

ಒಪ್ಪಿಸು, ಒಪ್ಪಿಸಲಾಗಿದೆ, ನಿಯಮಿತ ಕಾರ್ಯಗಳು, ತಿರುಗಿ ಒಪ್ಪಿಸು

ಸತ್ಯಾಂಶಗಳು:

“ಒಪ್ಪಿಸು” ಅಥವಾ “ಒಪ್ಪಿಸಲಾಗಿದೆ” ಎನ್ನುವ ಪದವು ಒಂದು ಪ್ರತ್ಯೇಕವಾದ ಕೆಲಸಕ್ಕಾಗಿ ಯಾರದರೊಬ್ಬರನ್ನು ನಿಯಮಿಸುವುದನ್ನು ಸೂಚಿಸುತ್ತದೆ ಅಥವಾ ಒಬ್ಬರು ಅಥವಾ ಅನೇಕರಿಗೆ ಒಂದು ಕೆಲಸವನ್ನು ಒಪ್ಪಿಸಿಕೊಡುವುದು.

- ಸೈನ್ಯದಲ್ಲಿ ಸೇವೆ ಮಾಡುವುದಕ್ಕೆ ಇಸ್ರಾಯೇಲ್ ಮನುಷ್ಯರಲ್ಲಿ ಒಬ್ಬ ಉತ್ತಮ ಯೌವನಸ್ಥನನ್ನು “ಒಪ್ಪಿಸುತ್ತಾನೆ” ಎಂದು ಪ್ರವಾದಿಯಾದ ಸಮುವೇಲನು ಅರಸನಾದ ಸೌಲನಿಗೆ ಮುಂಚಿತವಾಗಿಯೇ ಹೇಳಿರುತ್ತಾನೆ.
- ಮೋಶೆ ಇಸ್ರಾಯೇಲ್ಯರ ಹನ್ನೆರಡು ಕುಲಗಳು ನಿವಾಸಮಾಡುವುದಕ್ಕೆ ಕಾನಾನ್ ಭೂಮಿಯನ್ನು ಪ್ರತಿಯೊಬ್ಬರಿಗೆ “ಒಪ್ಪಿಸಿಕೊಟ್ಟನು”.
- ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದಲ್ಲಿ, ಕೆಲವೊಂದು ಇಸ್ರಾಯೇಲ್ ಕುಲಗಳು ಯಾಜಕರಾಗಿ, ಕಲಾವಿಧರಾಗಿ, ಗಾಯಕರಾಗಿ ಮತ್ತು ಕಟ್ಟುವವರಾಗಿ ಕೆಲಸವನ್ನು ಹೊಂದಿ ನೇಮಿಸಲ್ಪಟ್ಟಿದ್ದರು.
- ಸಂದರ್ಭಕ್ಕೆ ತಕ್ಕಂತೆ, “ಒಪ್ಪಿಸು” ಎನ್ನುವದನ್ನು “ಕೊಡುವುದು” ಅಥವಾ “ನೇಮಿಸುವುದು” ಅಥವಾ “ಒಂದು ವಿಶೇಷವಾದ ಕೆಲಸಕ್ಕಾಗಿ ಆಯ್ಕೆ ಮಾಡಲ್ಪಡುವುದು” ಎಂಬುದಾಗಿಯೂ ಅನುವಾದ ಮಾಡಬಹುದು.
- “ಒಪ್ಪಿಸಲಾಗಿದೆ” ಎನ್ನುವ ಪದವನ್ನು “ನೇಮಿಸಲಾಗಿದೆ” ಅಥವಾ “ಕೆಲಸವನ್ನು ಕೊಟ್ಟಿದ್ದೇವೆ” ಎಂಬುದಾಗಿಯೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ: ನೇಮಿಸು, ಸಮುವೇಲ)

ಸತ್ಯವೇದದ ವಾಕ್ಯಗಳು:

- 1 ಪೂರ್ವ 6:48
- ದಾನಿ 12:13
- ಯೆರೆ 43:11
- ಯೆಹೋ 18:2
- ಅರಣ್ಯ 4:27-28
- ಕೀರ್ತನೆ 78:55

ಪದ ಡೇಟಾ:

- Strong's: H2506, H3335, H4487, H4941, H5157, H5307, H5414, H5596, H5975, H6485, H7760, G33070

ಒಳ ಅಂಗಿ, ಒಳ ಅಂಗಿಗಳು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಒಳ ಅಂಗಿ" ಎನ್ನುವ ಪದವು ಬಟ್ಟೆಗಳ ಕೆಳಗೆ ಚರ್ಮದ ಮೇಲೆ ಹಾಕುವ ಒಳ ಉಡುಪನ್ನು ಸೂಚಿಸುತ್ತದೆ.

- ಒಳ ಅಂಗಿಯು ಭುಜಗಳಿಂದ ಸೊಂಟದವರೆಗೂ ಅಥವಾ ಮೊಣಕಾಲುಗಳವರೆಗೂ ಇಳಿಯಹಾಕಿಕೊಂಡಿರುತ್ತಾರೆ ಮತ್ತು ಇದನ್ನು ಧರಿಸಿದನಂತರ ದಟ್ಟಿಯಿಂದ ಕಟ್ಟಿಕೊಳ್ಳುತ್ತಾರೆ. ಈ ಒಳ ಉಡುಪುಗಳನ್ನು ಶ್ರೀಮಂತರು ಧರಿಸಿಕೊಳ್ಳುತ್ತಾರೆ, ಇವುಗಳಿಗೆ ಕೆಲವೊಂದುಬಾರಿ ತೋಳುಗಳಿರುತ್ತವೆ ಮತ್ತು ಇದು ಕಣಕಾಲುಗಳವರೆಗಿರುವ ಉದ್ದವನ್ನು ಹೊಂದಿರುತ್ತದೆ.
- ಒಳ ಅಂಗಿಗಳನ್ನು ಚರ್ಮ, ಕೂದಲಿನ ಬಟ್ಟೆ, ಉಣ್ಣೆ ಅಥವಾ ನಾರಿನಿಂದ ತಯಾರಿಸುತ್ತಾರೆ, ಮತ್ತು ಇವುಗಳನ್ನು ಸ್ತ್ರೀ ಪುರುಷರು ಧರಿಸಿಕೊಳ್ಳುತ್ತಾರೆ.
- ಒಳ ಅಂಗಿಯು ಸಾಧಾರಣವಾಗಿ ನಿಲುವೆಂಗಿಯ ಕೆಳಗೆ ಧರಿಸಿಕೊಳ್ಳುತ್ತಾರೆ, ಉದಾಹರಣೆಗೆ ಟೋಗಾ ಅಥವಾ ಹೊರಗಿನ ಗೌನು ಬಿಸಿ ವಾತಾವರಣದಲ್ಲಿ ಹೊರ ಅಂಗಿಗಳನ್ನು ಹಾಕಿಕೊಳ್ಳದೇ ಒಳ ಅಂಗಿಯನ್ನು ಮಾತ್ರವೇ ಕೆಲವೊಂದುಬಾರಿ ಧರಿಸುತ್ತಾರೆ.
- ಈ ಪದವನ್ನು "ಉದ್ದವಾದ ಅಂಗಿ" ಅಥವಾ "ಉದ್ದವಾದ ಒಳ ಉಡುಪು" ಅಥವಾ "ಅಂಗಿಯಂತಿರುವ ಉಡುಪು" ಎಂದೂ ಅನುವಾದ ಮಾಡಬಹುದು. "ಒಳ ಅಂಗಿ" ಎನ್ನುವದಕ್ಕೆ ಹೇಳಿರುವ ಅರ್ಥದಲ್ಲಿಯೇ ಇದು ಎಂತಹ ಅಂಗಿ ಎಂದು ವಿವರಿಸುವುದಕ್ಕೆ ಒಂದು ಸೂಚನೆ ಕೂಡ ಬರೆಯಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ನಿಲುವಂಗಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.03:21-23
- ಯೆಶಯಾ.22:20-22
- ಯಾಜಕ.08:12-13
- ಲೂಕ.03:10-11
- ಮಾರ್ಕ.06:7-9
- ಮತ್ತಾಯ.10:8-10

ಪದ ಡೇಟಾ:

- Strong's: H2243, H3801, H6361, G5509

ಒಳಗಾಗು, ಒಳಪಡಿಸುವುದು, ಅಧೀನವಾಗಿವೆ,

ಸತ್ಯಾಂಶಗಳು:

ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿ "ಒಳಗಾದಾಗ", ಆ ಎರಡನೇ ವ್ಯಕ್ತಿ ಒಳಗಾಗಿರುವ ವ್ಯಕ್ತಿಯನ್ನು ಆಳುವನು. "ಒಳಗಾಗಿರುವುದು" ಎಂದರೆ "ವಿಧೇಯತೆಯಿಂದಿರುವುದು" ಅಥವಾ "ಅಧಿಕಾರದಲ್ಲಿರುವವರಿಗೆ ಒಳಗಾಗಿರುವುದು" ಎಂದರ್ಥ.

- "ಅಧೀನದಲ್ಲಿಡುವುದು" ಎನ್ನುವ ಮಾತನ್ನು ಪಾಲಕನ ಅಥವಾ ನಾಯಕನ ಅಧಿಕಾರದ ಕೆಳಗೆ ಜನರೆಲ್ಲರು ಇರುವುದನ್ನು ಸೂಚಿಸುತ್ತದೆ.
- "ಯಾವುದಾದರೊಂದಕ್ಕೆ ಯಾರಾದರೊಬ್ಬರನ್ನು ಒಳಪಡಿಸುವುದು" ಎನ್ನುವ ಮಾತಿಗೆ ಆ ವ್ಯಕ್ತಿ ಶಿಕ್ಷೆಯನ್ನಾಗಿ ಯಾವುದಾದರೊಂದನ್ನು ನಕಾರಾತ್ಮಕವಾದ ಅನುಭವನ್ನು ಹೊಂದುವಂತೆ ಮಾಡುವುದು ಎಂದರ್ಥ.
- ಕೆಲವೊಂದುಬಾರಿ "ಒಳಪಡಿಸು" ಎನ್ನುವ ಪದವನ್ನು ಯಾವುದಾದರೊಂದನ್ನು ಕೇಂದ್ರೀಕರಿಸುವುದಕ್ಕೆ ಅಥವಾ ವಿಷಯವನ್ನು ಪರಿಶೀಲನೆ ಮಾಡುವುದಕ್ಕೂ ಉಪಯೋಗಿಸುತ್ತಾರೆ, ಉದಾಹರಣೆಗೆ, "ನೀವು ಹಾಸ್ಯಾಸ್ಪದ ವಿಷಯವಾಗಿರುತ್ತೀರಿ" ಎನ್ನುವ ಮಾತಿನಂತಿರುತ್ತದೆ.
- "ಒಳಪಟ್ಟಿರುವುದು" ಎನ್ನುವ ಮಾತಿಗೆ "ವಿನಯವುಳ್ಳವನಾಗಿರು" ಅಥವಾ "ಅಧೀನವಾಗು" ಎನ್ನುವ ಪದಗಳ ಅರ್ಥವನ್ನೇ ಹೊಂದಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಅಧೀನವಾಗು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.02:14-16
- 1 ಅರಸ.04:06
- 1 ಪೇತ್ರ.02:18-20
- ಇಬ್ರಿ.02:05
- ಜ್ಞಾನೋ.12:23-24

ಪದ ಡೇಟಾ:

- Strong's: H1697, H3533, H3665, H4522, H5647, H5927, G350, G1379, G1396, G1777, G3663, G5292, G5293

ಓಡು, ಓಡಿಸುವುದು, ಓಡುವವರು, ಓಡುತ್ತಾ ಇರುವುದು

ಪದದ ಅರ್ಥವಿವರಣೆ:

“ಓಡು” ಎನ್ನುವ ಪದಕ್ಕೆ ಅಕ್ಷರಾರ್ಥವೇನಂದರೆ “ಪಾದಗಳ ಮೇಲೆ ತುಂಬಾ ವೇಗವಾಗಿ ನಡೆ” ಎಂದರ್ಥ, ಸಾಧಾರಣವಾಗಿ ನಡೆಯುವುದರ ಮೂಲಕ ಸೇರುವ ದಾರಿಗಿಂತಲೂ ಇನ್ನೂ ಹೆಚ್ಚಾದ ವೇಗದಲ್ಲಿ ಹೋಗುವುದು ಎಂದರ್ಥವಾಗಿರುತ್ತದೆ.

“ಓಡು” ಎನ್ನುವ ಪದದ ಮುಖ್ಯ ಅರ್ಥವನ್ನು ಈ ಕೆಳಗೆ ಹೇಳಲ್ಪಟ್ಟಿರುವ ಅಲಂಕಾರಿಕ ಮಾತುಗಳಲ್ಲಿಯೂ ಉಪಯೋಗಿಸಲ್ಪಟ್ಟಿರುತ್ತದೆ

- ಬಹುಮಾನವನ್ನು ಪಡೆದುಕೊಳ್ಳುವ ಮಾರ್ಗದಲ್ಲಿ "ಓಡು” ಎನ್ನುವ ಮಾತು ಗೆಲ್ಲುವ ಕ್ರಮದಲ್ಲಿ ಪಂದ್ಯದಲ್ಲಿ ಓಡುವಂತೆಯೇ ಅದೇ ರೀತಿಯಾಗಿ ದೇವರ ಚಿತ್ತದಲ್ಲಿ ಮಾಡುತ್ತಿರುವ ಕಾರ್ಯಗಳನ್ನು ಸೂಚಿಸುತ್ತದೆ.
- “ನಿನ್ನ ಆಜ್ಞೆಗಳ ಮಾರ್ಗದಲ್ಲಿ ಓಡುವುದು” ಎನ್ನುವ ಮಾತಿಗೆ ದೇವರ ಆಜ್ಞೆಗಳಿಗೆ ತಕ್ಷಣವೆ ವಿಧೇಯರಾಗುವುದು ಮತ್ತು ಸಂತೋಷಕರವಾಗಿ ಸ್ವೀಕರಿಸುವುದನ್ನು ಸೂಚಿಸುತ್ತದೆ.
- “ಇತರರ ದೇವರಗಳ ಬಳಿಗೆ ಓಡಿ ಹೋಗಬೇಡ” ಎನ್ನುವ ಮಾತಿಗೆ ಇತರ ದೇವರುಗಳ ವಿಗ್ರಹಾರಾಧನೆಯಲ್ಲಿ ಮುಂದುವರಿಯಬೇಡ ಎಂದರ್ಥ.
- “ನನ್ನ ಮರೆಮಾಡುವುದಕ್ಕೆ ನಾನು ನಿನ್ನ ಬಳಿಗೆ ಓಡಿ ಬರುವೆನು” ಎನ್ನುವ ಮಾತಿಗೆ ಅನೇಕ ಕಷ್ಟಗಳನ್ನು ಎದುರುಗೊಳ್ಳುವಾಗ ರಕ್ಷಣೆ ಮತ್ತು ಆಶ್ರಯ ಸಿಗುವ ದೇವರ ಬಳಿಗೆ ತಕ್ಷಣವೇ ತಿರುಗುಕೋ ಎಂದರ್ಥ.
- ಕಣ್ಣೀರು, ರಕ್ತ, ಬೆವರು ಮತ್ತು ನದಿಗಳು ಎನ್ನುವಂತಹ ನೀರು ಮತ್ತು ಇತರ ದ್ರವಗಳೆಲ್ಲವು ಓಡುತ್ತವೆಯೆಂದು ಅವುಗಳ ಕುರಿತಾಗಿ ಹೇಳಲಾಗಿರುತ್ತದೆ. ಇದನ್ನು “ಹರಡುವಿಕೆ” ಎಂದೂ ಅನುವಾದ ಮಾಡುತ್ತಾರೆ.

ಒಂದು ದೇಶದ ಅಥವಾ ಒಂದು ಪ್ರಾಂತ್ಯದ ಗಡಿಯನ್ನು ನದಿಯ ಜೊತೆಗೆ “ಓಡು” ಅಥವಾ ಬೇರೆ ದೇಶದ ಗಡಿಯೊಂದಿಗೆ ಓಡು ಎಂದು ಹೇಳಲ್ಪಟ್ಟಿರುತ್ತದೆ. ದೇಶದ ಗಡಿ ಅಥವಾ ಇತರ ದೇಶದ ಗಡಿ ನದಿಯ “ಪಕ್ಕದಲ್ಲಿರುತ್ತದೆ” ಎಂದು ಹೇಳುವುದರ ಮೂಲಕ; ಅಥವಾ ದೇಶದ “ಗಡಿಗಳು” ಇತರ ದೇಶದ ಅಥವಾ ನದಿಯ ಪಕ್ಕದಲ್ಲಿದಿರುತ್ತದೆ ಎಂದು ಹೇಳುವುದರ ಮೂಲಕ ಇದನ್ನು ಅನುವಾದ ಮಾಡಬಹುದು.

- ನದಿಗಳು ಮತ್ತು ಹರಿಝರಿಗಳು “ಒಣಗುತ್ತವೆ”, ಇದಕ್ಕೆ ಅವು ಎಂದಿಗೂ ನೀರನ್ನು ಹೊಂದಿರುವುದಿಲ್ಲ ಎಂದರ್ಥವಾಗಿರುತ್ತದೆ. ಇದನ್ನು “ಒಣಗಿದೆ” ಅಥವಾ “ಒಣಗಿಸಲ್ಪಟ್ಟಿವೆ” ಎಂದೂ ಅನುವಾದ ಮಾಡಬಹುದು.
- ಔತಣ ದಿನಗಳು “ತಮ್ಮ ಕೆಲಸವನ್ನು ತಾವು ಮಾಡಿಕೊಂಡು ಹೋಗುತ್ತಿರುತ್ತವೆ”, ಇದಕ್ಕೆ ಅವು “ಹಾದು ಹೋಗಿವೆ” ಅಥವಾ “ಅವು ಮುಗಿದುಹೋಗಿವೆ” ಅಥವಾ “ಅವು ಸಂಪೂರ್ತಿಯಾಗಿರುತ್ತವೆ” ಎಂದರ್ಥವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ಸಾಧಿಸುವವನು, ಆಶ್ರಿತರು, ತಿರುಗಿಕೊ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.06:18
- ಗಲಾತ್ಯ.02:1-2
- ಗಲಾತ್ಯ.05:5-8
- ಫಿಲಿಪ್ಪಿ.02:14-16
- ಜ್ಞಾನೋ.01:15-17

ಪದ ಡೇಟಾ:

- Strong's: H213, H386, H1065, H1272, H1518, H1556, H1980, H2100, H2416, H3001, H3212, H3332, H3381, H3920, H3988, H4422, H4754, H4794, H4944, H5074, H5127, H5140, H5472, H5756, H6437, H6440, H6544, H6805, H7272, H7291, H7310, H7323, H7325, H7519, H7751, H8264, H8308, H8444, G413, G1377, G1601, G1530, G1532, G1632, G1998, G2027, G2701, G3729, G4063, G4370, G4390, G4890, G4936, G5143, G5240, G5295, G5302, G5343

ಔತಣ

ಪದದ ಅರ್ಥವಿವರಣೆ

ಸಹಜವಾಗಿ ಅನೇಕ ರೀತಿಯ ಆಹಾರ ಪದಾರ್ಥಗಳನ್ನು ಒಳಗೊಂಡಿರುವ ಸಂಪ್ರದಾಯಕವಾದ ಅತಿ ದೊಡ್ಡ ಊಟ ಬಡಿಸುವುದನ್ನು ಔತಣ ಎಂದು ಕರೆಯುತ್ತಾರೆ.

- ಪ್ರಾಚೀನ ಕಾಲದಲ್ಲಿ, ರಾಜಕೀಯ ನಾಯಕರಿಗೆ ಮತ್ತು ಇನ್ನಿತರ ಪ್ರಾಮುಖ್ಯವಾದ ಅತಿಥಿಗಳಿಗೆ ಅರಸರು ಆಗಾಗ ಔತಣವನ್ನು ಏರ್ಪಡಿಸುತ್ತಿದ್ದರು.
- ಇದನ್ನು "ವಿಸ್ತಾರವಾದ ಊಟ" ಅಥವಾ "ಪ್ರಾಮುಖ್ಯವಾದ ಸವಿಯೂಟ" ಅಥವಾ "ವಿವಿಧ್ಧವಾದ ಆಹಾರ ಪದಾರ್ಥಗಳಿರುವ ಊಟ" ಎಂದು ಭಾಷಾಂತರ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.05:10
- ಯೆಶಾಯ.05:11-12
- ಯೆರೆ.16:7-9
- ಲೂಕ.05:29-32
- ಪರಮ.02:3-4

ಪದ ಡೇಟಾ:

- Strong's: H3739, H4797, H4960, H4961, H8354, G1173, G1403

ಔತಣ, ಔತಣ ಕೂಟಗಳು, ಔತಣ ಕೊಡುವುದು

ಪದದ ಅರ್ಥವಿವರಣೆ:

“ಔತಣ” ಎನ್ನುವ ಪದವು ಜನರೆಲ್ಲರು ಒಂದು ಗುಂಪಾಗಿ ಒಂದು ಸ್ಥಳದಲ್ಲಿ ಸೇರಿ ಒಟ್ಟಾಗಿ ಊಟ ಮಾಡುವುದನ್ನು, ಅನೇಕಬಾರಿ ಎಲ್ಲರು ಸೇರಿ ಆಚರಿಸುವ ಹಬ್ಬವನ್ನು ಸೂಚಿಸುತ್ತದೆ. “ಔತಣ” ಕೂಟಕ್ಕೆ ಸಿದ್ಧವಾಗು ಎನ್ನುವುದಕ್ಕೆ ಅನೇಕ ವಿಧವಾದ ರುಚಿಕರವಾದ ಅಡುಗೆಗಳನ್ನು ತಿನ್ನುವುದಕ್ಕೆ ಅಥವಾ ಎಲ್ಲರು ಸೇರಿ ಔತಣದಲ್ಲಿ ಊಟ ಮಾಡುವುದಕ್ಕೆ ಭಾಗವಹಿಸುವುದು ಎಂದರ್ಥ.

- ಔತಣ ಕೂಟದಲ್ಲಿ ತಿನ್ನುವಂತಹ ವಿಶೇಷವಾದ ಆಹಾರ ಪದಾರ್ಥಗಳು ಅನೇಕವಿರುತ್ತವೆ.
- ದೇವರು ಆಚರಿಸಬೇಕೆಂದು ಆಜ್ಞಾಪಿಸಿದ ಭಕ್ತಿಯಿಂದ ಕೂಡಿದ ಹಬ್ಬಗಳು ಸಹಜವಾಗಿ ಎಲ್ಲರು ಸೇರಿ ಔತಣದಲ್ಲಿ ಪಾಲ್ಗೊಳ್ಳುವುದು ಇರುತ್ತದೆ. ಈ ಕಾರಣದಿಂದ ಹಬ್ಬಗಳನ್ನು ಅನೇಕಬಾರಿ “ಔತಣ ಕೂಟಗಳು” ಎಂದು ಕರೆಯುತ್ತಾರೆ.
- ಸತ್ಯವೇದ ಕಾಲಗಳಲ್ಲಿ ಅರಸರು, ಇತರ ಶ್ರೀಮಂತರು ಮತ್ತು ಶಕ್ತಿಯುಳ್ಳ ಜನರು ತಮ್ಮ ಕುಟುಂಬವನ್ನು ಅಥವಾ ಸ್ನೇಹಿತರನ್ನು ಮನೋರಂಜನೆ ಮಾಡಲು ಅನೇಕಸಲ ಅವರಿಗೆ ಔತಣ ಕೂಟಗಳನ್ನು ನಿರ್ವಹಿಸುತ್ತಿದ್ದರು.
- ತಪ್ಪಿಹೋದ ಮಗನ ಕುರಿತಾದ ಸಾಮ್ಯದಲ್ಲಿ ತಂದೆ ತನ್ನ ಮಗನು ಹಿಂದಿರುಗಿ ಬಂದನಂತರ ಆಚರಿಸುವುದಕ್ಕೆ ಒಂದು ವಿಶೇಷವಾದ ಔತಣವನ್ನು ಸಿದ್ಧಪಡಿಸಿದನು.
- ಔತಣ ಎನ್ನುವುದು ಕೆಲವೊಂದುಬಾರಿ ಅನೇಕ ದಿನಗಳ ಕಾಲಕ್ಕಿಂತ ಹೆಚ್ಚು ದಿನಗಳು ಆಚರಿಸುತ್ತಿದ್ದರು.
- “ಔತಣ” ಎನ್ನುವ ಪದವನ್ನು “ಸಮೃದ್ಧಿಯಾಗಿ ತಿನ್ನು” ಅಥವಾ “ಅನೇಕ ರೀತಿಯ ರುಚಿಕರವಾದ ಅಡುಗೆಗಳನ್ನು ತಿನ್ನುವುದರ ಮೂಲಕ ಆಚರಿಸಿಕೊಳ್ಳಿರಿ” ಅಥವಾ “ವಿಶೇಷವಾದ ಹೆಚ್ಚಾದ ಊಟವನ್ನು ತಿನ್ನಿರಿ” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ಔತಣ” ಎನ್ನುವ ಪದವನ್ನು “ಅನೇಕ ರುಚಿಕರವಾದ ಅಡುಗೆಗಳೊಂದಿಗೆ ಎಲ್ಲರು ಸೇರಿ ಆಚರಿಸಿಕೊಳ್ಳುವುದು” ಅಥವಾ “ಹೆಚ್ಚಿನ ಆಹಾರ ಪದಾರ್ಥಗಳೊಂದಿಗೆ ಊಟ” ಅಥವಾ “ಊಟವನ್ನು ಆಚರಿಸಿಕೊಳ್ಳುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಹಬ್ಬ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೇತ್ರ.02:12-14
- ಆದಿ.26:30-31
- ಆದಿ.29:21-22
- ಆದಿ.40:20-23
- ಯೂದಾ.01:12-13
- ಲೂಕ.02:41-44
- ಲೂಕಾ.14:7-9
- ಮತ್ತಾಯ.22:1-3

ಪದ ಡೇಟಾ:

- Strong's: H398, H2077, H2282, H2287, H3899, H3900, H4150, H4580, H4797, H4960, H7646, H8057, H8354, G26, G755, G1062, G1173, G1403, G1456, G1858, G1859, G2165, G3521, G4910

ಕಂಚು

ಪದದ ಅರ್ಥವಿವರಣೆ:

“ಕಂಚು” ಎನ್ನುವುದು ತಾಮ್ರ ಮತ್ತು ತವರ ಲೋಹಗಳನ್ನು ಕರಗಿಸಿದಾಗ ಬರುವ ಒಂದು ವಿಧವಾದ ಮಿಶ್ರಲೋಹವನ್ನು ಸೂಚಿಸುತ್ತದೆ. ಇದು ಗಾಢ ಕಂದು ಬಣ್ಣವಾಗಿದ್ದು, ಸ್ವಲ್ಪ ಕೆಂಪು ಬಣ್ಣದಲ್ಲಿರುತ್ತದೆ.

- ಕಂಚು ನೀರಿನ ಸವೆತವನ್ನು ನಿರೋಧಿಸುತ್ತದೆ ಮತ್ತು ಇದು ಶಾಖವನ್ನು ತಗ್ಗಿಸುವುದರಲ್ಲಿ ಚೆನ್ನಾಗಿ ಕೆಲಸ ಮಾಡುತ್ತದೆ.
- ಪುರಾತನ ಕಾಲದಲ್ಲಿ, ಕಂಚು ಲೋಹವನ್ನು ಅನೇಕ ಉಪಕರಣಗಳನ್ನು, ಯುದ್ಧ ಸಾಧನೆಗಳನ್ನು, ಅಡುಗೆ ಪಾತ್ರೆಗಳನ್ನು, ಯಜ್ಞವೇದಿಗಳನ್ನು, ಕಲಾಕೃತಿಗಳನ್ನು, ಸೈನಿಕರ ಕವಚಗಳನ್ನು ಮತ್ತು ಇತರ ವಸ್ತುಗಳನ್ನು ಮಾಡುವುದಕ್ಕೆ ಉಪಯೋಗಿಸುತ್ತಿದ್ದರು.
- ಗುಡಾರ ಮತ್ತು ದೇವಾಲಯ ನಿರ್ಮಾಣಕ್ಕಾಗಿ ಉಪಯೋಗಿಸುವ ಅನೇಕ ಸಾಧನೆಗಳು ಕಂಚಿನಿಂದಲೇ ತಯಾರಾಗಿರುತ್ತವೆ.
- ಸುಳ್ಳು ದೇವರ ವಿಗ್ರಹಗಳು ಕಂಚಿನ ಲೋಹದಿಂದಲೇ ತಯಾರಾಗಿರುತ್ತವೆ.
- ಕಂಚಿನ ವಸ್ತುಗಳೆಲ್ಲವೂ ಕಂಚು ಲೋಹವನ್ನು ಮೊದಲಿಗೆ ಕರಗಿಸಿ, ಅದನ್ನು ಅಚ್ಚುಗಳಲ್ಲಿ ಸುರಿಯುವುದರ ಮೂಲಕ ತಯಾರಾಗುತ್ತವೆ. ಈ ಪದ್ಧತಿಯನ್ನು “ಎರಕಹೊಯ್ಯುವುದು” ಎಂದು ಕರೆಯುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕವಚ, ಗುಡಾರ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.07:15-17
- 1 ಸಮು.17:37-38
- ದಾನಿ.02:44-45
- ವಿಮೋ.25:3-7
- ಪ್ರಕ.01:14-16

ಪದ ಡೇಟಾ:

- Strong's: H5153, H5154, H5174, H5178, G5470, G5474, G5475

ಕಠಿಣ, ಕಠಿಣವಾದ, ಕಠಿಣಪಡಿಸುತ್ತದೆ,

ಪದದ ಅರ್ಥವಿವರಣೆ:

“ಕಠಿಣ” ಎನ್ನುವ ಪದಕ್ಕೆ ಸಂದರ್ಭಾನುಸಾರವಾಗಿ ಅನೇಕ ವಿವಿಧವಾದ ಅರ್ಥಗಳನ್ನು ಒಳಗೊಂಡಿರುತ್ತದೆ. ಈ ಪದವು ಸಹಜವಾಗಿ ಕಷ್ಟವಾದವುಗಳನ್ನು, ಹಠ ಸ್ವಭಾವವನ್ನು ಅಥವಾ ಬಗ್ಗದಿರುವುದನ್ನು ವಿವರಿಸುತ್ತದೆ.

- “ಹೃದಯ” ದಲ್ಲಿ ಕಠಿಣ (ವಿವಿಧ ರೂಪಗಳಲ್ಲಿ) ಬಳಕೆಯು ದೇವರಿಗೆ ಮೊಂಡುತನದಿಂದ ಪಶ್ಚಾತ್ತಾಪಪಡದ ಅಥವಾ ಅವಿಧೇಯರಾಗಿರುವ ಜನರನ್ನು ಸೂಚಿಸುತ್ತದೆ. ಇರುವ ಜನರನ್ನು ಸೂಚಿಸುತ್ತದೆ. ದೇವರಿಗೆ ಅವಿಧೇಯತೆಯಲ್ಲಿರುವ ಜನರನ್ನು ವಿವರಿಸುತ್ತದೆ.
- “ಹೃದಯದ ಕಠಿಣತೆ” ಮತ್ತು “ಅವರ ಹೃದಯಗಳ ಕಠಿಣತೆ” ಎನ್ನುವ ಅಲಂಕಾರಿಕ ಮಾತುಗಳು ಕೂಡ ಅವಿಧೇಯತೆಯಿಂದ ಇರುವ ಮೊಂಡುತನವನ್ನು ಸೂಚಿಸುತ್ತವೆ.
- ಒಬ್ಬ ವ್ಯಕ್ತಿಯ ಹೃದಯವು “ಕಠಿಣವಾದರೆ”, ಆ ವ್ಯಕ್ತಿ ವಿಧೇಯನಾಗುವುದಕ್ಕೆ ತಿರಸ್ಕರಿಸುತ್ತಿದ್ದಾನೆ ಮತ್ತು ಪಶ್ಚಾತ್ತಾಪ ಹೊಂದದೇ ಮೊಂಡುತನದಲ್ಲಿದ್ದಾನೆ ಎಂದರ್ಥ.
- “ಹೆಚ್ಚಾಗಿ ಶ್ರಮಿಸು” ಅಥವಾ “ಹೆಚ್ಚಾಗಿ ಪ್ರಯತ್ನಿಸು” ಎನ್ನುವ ಕ್ರಿಯಾವಿಶೇಷಣಗಳನ್ನು ಉಪಯೋಗಿಸಿದಾಗ, ಮಾಡುವ ಕೆಲಸವನ್ನು ತುಂಬಾ ಬಲವಾಗಿಯೂ ಮತ್ತು ದೃಢಪ್ರಯತ್ನದಿಂದಲೂ ಮಾಡು ಎಂದರ್ಥ, ಮಾಡುವ ಕೆಲಸದಲ್ಲಿ ಇನ್ನೂ ಹೆಚ್ಚಾಗಿ ಶ್ರಮಿಸು ಎಂದರ್ಥ.

ಅನುವಾದ ಸಲಹೆಗಳು

- “ಕಠಿಣ” ಎನ್ನುವ ಪದವನ್ನು “ಕಷ್ಟ” ಅಥವಾ “ಮೊಂಡುತನ” ಅಥವಾ “ಸವಾಲು ಬೀಸುವುದು” ಎನ್ನುವ ಪದಗಳನ್ನು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.
- “ಕಠಿಣತೆ” ಅಥವಾ “ಹೃದಯ ಕಾಠಿಣ್ಯ” ಅಥವಾ “ಕಠಿಣ ಹೃದಯ” ಎನ್ನುವ ಪದಗಳನ್ನು “ಮೊಂಡುತನ” ಅಥವಾ “ಹಠ ಸ್ವಭಾವದ ವ್ಯಕ್ತಿ” ಅಥವಾ “ತಿರಸ್ಕಾರ ಮಾಡುವ ಬುದ್ಧಿ” ಅಥವಾ “ಮೊಂಡುತನದ ಅವಿಧೇಯತೆ” ಅಥವಾ “ಪಶ್ಚಾತ್ತಾಪ ಹೊಂದದ ಮೊಂಡುತನ” ಎಂದೂ ಅನುವಾದ ಮಾಡಬಹುದು.
- “ಕಠಿಣ ಪಡಿಸಲಾಗಿದೆ” ಎನ್ನುವ ಪದವನ್ನು “ಪಶ್ಚಾತ್ತಾಪ ಹೊಂದದ ಮೊಂಡುತನ” ಅಥವಾ “ವಿಧೇಯತೆ ತೋರಿಸುವುದಕ್ಕೆ ತಿರಸ್ಕಾರ ಮಾಡುವುದು” ಎಂದೂ ಅನುವಾದ ಮಾಡಬಹುದು.
- “ನಿನ್ನ ಹೃದಯವನ್ನು ಕಠಿಣಪಡಿಸಿಕೊಳ್ಳಬೇಡ” ಎನ್ನುವ ಮಾತನ್ನು “ಪಶ್ಚಾತ್ತಾಪಪಡುವುದಕ್ಕೆ ತಿರಸ್ಕರಿಸಬೇಡ” ಅಥವಾ “ಅವಿಧೇಯತೆಯಿಂದ ಇರುವುದಕ್ಕೆ ಮೊಂಡುತನವನ್ನು ತೋರಿಸಬೇಡ” ಎಂದೂ ಅನುವಾದ ಮಾಡಬಹುದು.
- “ಕಠಿಣ-ತಲೆಯುಳ್ಳ” ಅಥವಾ “ಕಠಿಣ-ಹೃದಯವುಳ್ಳ” ಎನ್ನುವ ಮಾತುಗಳನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಪಟ್ಟುಬಿಡದೇ ಅವಿಧೇಯನಾಗಿರುವುದು” ಅಥವಾ “ಅವಿಧೇಯತೆಯಲ್ಲಿ ಮುಂದುವರೆಯುವುದು” ಅಥವಾ “ಪಶ್ಚಾತ್ತಾಪಪಡುವುದಕ್ಕೆ ತಿರಸ್ಕರಿಸುವುದು” ಅಥವಾ “ಯಾವಾಗಲೂ ತಿರಸ್ಕರಿಸುವುದು” ಎನ್ನುವ ಮಾತುಗಳು ಸೇರಿಬರುತ್ತವೆ.
- “ಹೆಚ್ಚಾಗಿ ಶ್ರಮಿಸು” ಅಥವಾ “ಹೆಚ್ಚಾಗಿ ಪ್ರಯತ್ನಿಸು” ಎನ್ನುವ ಮಾತುಗಳನ್ನು “ದೃಢ ಮತ್ತು ಅವಿರತ ಯತ್ನದೊಂದಿಗೆ” ಅಥವಾ “ಶ್ರದ್ಧೆಯಿಂದ” ಎಂದೂ ಅನುವಾದ ಮಾಡಬಹುದು.
- “ವಿರುದ್ಧವಾಗಿ ಹೋರಾಟ ಮಾಡು” ಎನ್ನುವ ಮಾತನ್ನು “ಬಲವಾಗಿ ದೂಡು” ಅಥವಾ “ವಿರುದ್ಧವಾಗಿ ಬಲದಿಂದ ತಳ್ಳು” ಎಂದೂ ಅನುವಾದ ಮಾಡಬಹುದು.
- “ಕಠಿಣವಾದ ಕೆಲಸಗಳಿಂದ ಜನರನ್ನು ಹಿಂಸಿಸು” ಎನ್ನುವ ಮಾತನ್ನು “ಜನರು ಹಿಂಸೆ ಹೊಂದುವಷ್ಟು ಹೆಚ್ಚಾಗಿ ಕೆಲಸ ಮಾಡುವುದಕ್ಕೆ ಜನರನ್ನು ಬಲವಂತಿಕೆ ಮಾಡು” ಅಥವಾ “ಅತೀ ಕಠಿಣವಾದ ಕೆಲಸವನ್ನು ಮಾಡುವುದಕ್ಕೆ ಜನರನ್ನು ಬಲವಂತಿಕೆಯಿಂದ ಹಿಂಸಿಸಲು ಅವರನ್ನು ತ್ವರೆಪಡಿಸು” ಎಂದೂ ಅನುವಾದ ಮಾಡಬಹುದು.
- ಒಂದು ವಿಧವಾದ “ಕಠಿಣವಾದ ಶ್ರಮೆಯು” ಒಬ್ಬ ಮಗುವಿಗೆ ಜನ್ಮ ಕೊಡುವ ಒಬ್ಬ ಸ್ತ್ರೀಯಳು ಅನುಭವಿಸುತ್ತಾಳೆ.

(ಈ ಪದಗಳನ್ನು ಸಹ ನೋಡಿರಿ : ಅವಿಧೇಯತೆ, ಕೆಟ್ಟ, ಹೃದಯ, ಹೆರಿಗೆ ನೋವು, ಗಟ್ಟಿಯಾದ ಕುತ್ತಿಗೆ)

ಸತ್ಯವೇದದ ಅನುಬಂಧ ವಾಕ್ಯಗಳ:

- 2 ಕೊರಿಂಥ.11:23
- ಧರ್ಮೋ.15:07
- ವಿಮೋ.14:04
- ಇಬ್ರಿ.04:07
- ಯೋಹಾನ.12:40
- ಮತ್ತಾಯ.19:08

ಪದ ಡೇಟಾ:

- Strong's: H553, H1692, H2388, H2389, H2420, H2864, H3021, H3332, H3513, H3515, H3966, H4165, H4522, H5450, H5647, H5797, H5810, H5980, H5999, H6089, H6381, H6635, H7185, H7186, H7188, H7280, H8068, H8307, H8631, G917, G1419, G1421, G1422, G1423, G2205, G2532, G2553, G2872, G2873, G3425, G3433, G4053, G4183, G4456, G4457, G4641, G4642, G4643, G4645, G4912

ಕಣಜ, ಕಣಜಗಳು

ಪದದ ಅರ್ಥವಿವರಣೆ:

"ಕಣಜ" ಎನ್ನುವುದು ಹೆಚ್ಚಿನ ಕಾಲದವರೆಗೂ ವಸ್ತುಗಳನ್ನು ಅಥವಾ ಆಹಾರವನ್ನು ಸಂಗ್ರಹಿಸಿ ಇಡುವುದಕ್ಕೆ ಉಪಯೋಗಿಸಲ್ಪಡುವ ದೊಡ್ಡ ಕಟ್ಟಡವಾಗಿರುತ್ತದೆ.

- ಸತ್ಯವೇದದಲ್ಲಿ "ಕಣಜ" ಎನ್ನುವ ಪದವನ್ನು ಜನರು ತಮಗೆ ಬರಗಾಲ ಬರುವಾಗ ಉಪಯೋಗಿಸಿಕೊಳ್ಳುವುದಕ್ಕೆ ಬೇಕಾದ ಆಹಾರವನ್ನು ಮತ್ತು ಧಾನ್ಯಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದಕ್ಕೆ ಉಪಯೋಗಿಸಲ್ಪಟ್ಟಿದ್ದಾಗಿರುತ್ತದೆ.
- ದೇವರು ತನ್ನ ಜನರಿಗೆ ಕೊಡುವ ಎಲ್ಲಾ ಒಳ್ಳೆಯ ವಿಷಯಗಳನ್ನು ಸೂಚಿಸುವುದಕ್ಕೆ ಈ ಪದವನ್ನು ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.
- ದೇವಾಲಯದ ಕಣಜಗಳಲ್ಲಿ ಯೆಹೋವನಿಗೆ ಪ್ರತಿಷ್ಠಾಪನೆ ಮಾಡಿದ ಬೆಲೆಯುಳ್ಳ ಬೆಳ್ಳಿ ಬಂಗಾರಗಳನ್ನು ಇಡುತ್ತಿದ್ದರು. ಈ ವಸ್ತುಗಳಲ್ಲಿ ಕೆಲವೊಂದು ದೇವಾಲಯವನ್ನು ನಿರ್ವಹಿಸಲು ಮತ್ತು ದುರಸ್ತಿ ಮಾಡುವದಕ್ಕೆ ಉಪಯೋಗಿಸುವವುಗಳು ಅಲ್ಲಿಯೇ ಇರುತ್ತಿದ್ದವು.
- "ಕಣಜ" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಧಾನ್ಯಗಳನ್ನು ಸಂಗ್ರಹಿಸಿಡಲು ನಿರ್ಮಿಸಿಕೊಂಡಿರುವ ಕಟ್ಟಡ" ಅಥವಾ "ಆಹಾರವನ್ನು ಇಡುವ ಸ್ಥಳ" ಅಥವಾ "ಬೆಲೆಯುಳ್ಳ ವಸ್ತುಗಳು ಸುರಕ್ಷಿತವಾಗಿರುವುದಕ್ಕೆ ಕಟ್ಟಿಕೊಂಡಿರುವ ಕೊಠಡಿ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಪ್ರತಿಷ್ಠಾಪಿಸು, ಅರ್ಪಿಸು, ಬರಗಾಲ, ಬಂಗಾರ, ಧಾನ್ಯ, ಬೆಳ್ಳಿ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.16:2-3
- ಲೂಕ.03:17
- ಮತ್ತಾಯ.03:10-12
- ಕೀರ್ತನೆ.033:7-9

ಪದ ಡೇಟಾ:

- Strong's: H214, H618, H624, H4035, H4200, H4543, G596

ಕತ್ತಲು

ಪದದ ಅರ್ಥವಿವರಣೆ:

"ಕತ್ತಲು" ಎಂಬ ಪದವು ಅಕ್ಷರಶಃ ಬೆಳಕಿನ ಉಪಸ್ಥಿತಿಯನ್ನು ಎಂದು ಅರ್ಥೈಸುತ್ತದೆ. ಈ ಪದಕ್ಕೆ ಅನೇಕವಾದ ಅಲಂಕಾರಿಕ ಅರ್ಥಗಳಿರುತ್ತವೆ.

- ಅಲಂಕಾರಿಕ ಭಾಷೆಯಲ್ಲಿ "ಕತ್ತಲು" ಎನ್ನುವ ಪದಕ್ಕೆ "ಅಪವಿತ್ರತೆ" ಅಥವಾ "ದುಷ್ಟ" ಅಥವಾ "ಆತ್ಮಿಕವಾದ ಕುರುಡುತನ" ಎಂದರ್ಥ.
- ಈ ಪದವು ನೈತಿಕ ಭ್ರಷ್ಟತ್ವ ಮತ್ತು ಪಾಪಕ್ಕೆ ಸಂಬಂಧಪಟ್ಟ ವಿಷಯಗಳನ್ನು ಸೂಚಿಸುತ್ತದೆ.
- "ಕತ್ತಲಿನ ರಾಜ್ಯ" ಎನ್ನುವ ಮಾತು ಸೈತಾನಿನ ಆಳ್ವಿಕೆಯನ್ನು ಮತ್ತು ದುಷ್ಟತನಕ್ಕೆ ಸಂಬಂಧಪಟ್ಟ ಪ್ರತಿಯೊಂದನ್ನು ಸೂಚಿಸುತ್ತದೆ.
- "ಕತ್ತಲು" ಎನ್ನುವ ಪದವನ್ನು ಅಲಂಕಾರಿಕ ಭಾಷೆಯಲ್ಲಿ ಮರಣಕ್ಕೂ ಉಪಯೋಗಿಸುತ್ತಾರೆ. (ನೋಡಿರಿ: ಅಲಂಕಾರ ರೂಪ)
- ದೇವರನ್ನು ಅರಿಯದ ಜನರು "ಅಂಧಕಾರದಲ್ಲಿ ಜೀವಿಸುತ್ತಿದ್ದಾರೆ" ಎಂದು ಅವರ ಕುರಿತು ಹೇಳುತ್ತಾರೆ, ಇದಕ್ಕೆ ಅವರಿಗೆ ನೀತಿ ಅಂದರೇನು ಅಥವಾ ಅದನ್ನು ಯಾವರೀತಿ ಅಭ್ಯಾಸ ಮಾಡಬೇಕೆಂದು ತಿಳಿದಿರುವುದಿಲ್ಲ ಎಂದರ್ಥ.
- ದೇವರು ಬೆಳಕಾಗಿದ್ದಾನೆ (ನೀತಿ) ಮತ್ತು ಕತ್ತಲು (ದುಷ್ಟತನ) ಎಂದಿಗೂ ಬೆಳಕನ್ನು ಜಯಿಸದು.
- ದೇವರನ್ನು ತಿರಸ್ಕಾರ ಮಾಡಿದವರಿಗೆ ವಿಧಿಸುವ ಶಿಕ್ಷೆ ಸ್ಥಳವು ಕೆಲವೊಂದುಬಾರಿ "ಹೊರಗಿನ ಕತ್ತಲು" ಎಂದು ಸೂಚಿಸಲಾಗಿದೆ.

ಅನುವಾದ ಸಲಹೆಗಳು:

- ಈ ಪದವನ್ನು ಅಕ್ಷರಾರ್ಥವಾಗಿ ಅನುವಾದ ಮಾಡುವುದು ಉತ್ತಮ, ಯೋಜನೆಯ ಭಾಷೆಯಲ್ಲಿ ಒಂದು ಪದದೊಂದಿಗೆ ಬೆಳಕಿಲ್ಲದ ಪದವನ್ನು ಸೂಚಿಸುವುದಾಗಿರಬೇಕು. ಈ ಪದವು ಕೋಣೆಯಲ್ಲಿ ಬೆಳಕು ಇಲ್ಲದಿರುವಾಗ ಉಂಟಾಗುವ ಕತ್ತಲನ್ನು ಸೂಚಿಸುತ್ತದೆ ಅಥವಾ ಹಗಲಿನ ಸಮಯದಲ್ಲಿ ಬೆಳಕು ಇಲ್ಲದಾಗ ಬರುವ ಮೊಬ್ಬನ್ನು ಸೂಚಿಸುತ್ತದೆ.
- ಅಲಂಕಾರಿಕ ಉಪಯೋಗಗಳಲ್ಲಿ ಒಳ್ಳೆತನ ಮತ್ತು ಸತ್ಯ ಎನ್ನುವವುಗಳಿಗೆ ವಿರುದ್ಧವಾಗಿ ಮೋಸವನ್ನು ಮತ್ತು ದುಷ್ಟತನವನ್ನು ವಿವರಿಸುವ ವಿಧಾನದಲ್ಲಿ ಬೆಳಕಿಗೆ ವಿರುದ್ಧಾತ್ಮಕ ಪದವನ್ನಾಗಿ ಕತ್ತಲಿನ ಸ್ವರೂಪವನ್ನು ಇಡುವುದು ತುಂಬಾ ಪ್ರಾಮುಖ್ಯವಾದ ವಿಷಯ.
- ಸಂದರ್ಭಾನುಗುಣವಾಗಿ ಈ ಪದವನ್ನು ಉಪಯೋಗಿಸುವ ವಿಧಾನಗಳಲ್ಲಿ "ರಾತ್ರಿಯ ಕತ್ತಲು" (ಹಗಲಿನ ಬೆಳಕಿಗೆ ವಿರುದ್ಧವಾಗಿ) ಅಥವಾ "ರಾತ್ರಿ ಸಮಯದಲ್ಲಿ ಏನೂ ಕಾಣದೇ ಇರುವುದು" ಅಥವಾ "ಕತ್ತಲಿನ ಹಾಗೆಯೇ ದುಷ್ಟತ್ವ" ಎನ್ನುವ ಮಾತುಗಳು ಇರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಭ್ರಷ್ಟ, ಅಧಿಕಾರ, ರಾಜ್ಯ, ಬೆಳಕು, ವಿಮೋಚನೆ, ನೀತಿ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.01:06
- 1 ಯೋಹಾನ.02:08
- 1 ಥೆಸ್ಸ.05:05
- 2 ಸಮು.22:12
- ಕೊಲೊಸ್ಸೆ.01:13
- ಯೆಶಯಾ.05:30
- ಯೆರೆ.13:16
- ಯೆಹೋ.24:7
- ಮತ್ತಾಯ..08:12

ಪದ ಡೇಟಾ:

- Strong's: H652, H653, H2816, H2821, H2822, H2825, H3990, H3991, H4285, H5890, H6205, G2217, G4652, G4653, G4655, G4656

ಕತ್ತೆ, ಹೆಸರುಗತ್ತೆ

ಪದದ ಅರ್ಥವಿವರಣೆ:

ಕತ್ತೆ ಎನ್ನುವುದು ನಾಲ್ಕು ಕಾಲುಗಳ ಪ್ರಾಣಿ, ಇದು ಕೆಲಸ ಮಾಡುವ ಪ್ರಾಣಿಯಾಗಿರುತ್ತದೆ. ಇದು ಕುದುರೆಯಂತೆ ಇರುತ್ತದೆ, ಆದರೆ ತುಂಬಾ ಚಿಕ್ಕದಾಗಿಯೂ ಮತ್ತು ಉದ್ದವಾದ ಕಿವಿಗಳನ್ನೊಳಗೊಂಡಿರುತ್ತದೆ.

- ಹೆಸರುಗತ್ತೆ ಗಂಡು ಕತ್ತೆ ಮತ್ತು ಹೆಣ್ಣು ಕುದುರೆಗೆ ಹುಟ್ಟಿದ ಬರಡಾದ ಸಂತತಿ.
- ಹೆಸರುಗತ್ತೆಗಳು ತುಂಬಾ ಬಲವಾದ ಪ್ರಾಣಿಗಳು ಮತ್ತು ಅವು ತುಂಬಾ ಬೆಲೆಯುಳ್ಳ ಕೆಲಸ ಮಾಡುವ ಪ್ರಾಣಿಗಳು.
- ಜನರು ಪ್ರಯಾಣ ಮಾಡುತ್ತಿರುವಾಗ ಭಾರವಾದ ವಸ್ತುಗಳನ್ನು ಹೊತ್ತಿಕೊಂಡು ಹೋಗುವುದಕ್ಕೆ ಕತ್ತೆಗಳನ್ನು ಮತ್ತು ಹೆಸರುಗತ್ತೆಗಳನ್ನು ಉಪಯೋಗಿಸುತ್ತಿದ್ದರು.
- ಸತ್ಯವೇದದ ಕಾಲದಲ್ಲಿ ಸಮಾಧಾನ ಸಮಯದಲ್ಲಿ ಅರಸರು ಯುದ್ಧದ ಸಮಯದಲ್ಲಿ ಉಪಯೋಗಿಸುವ ಕುದುರೆಯ ಮೇಲೆ ಏರುವುದರ ಬದಲಾಗಿ ಕತ್ತೆಯ ಮೇಲೆ ಕುಳಿತು ಸವಾರಿ ಮಾಡುತ್ತಿದ್ದರು.
- ಯೇಸುವು ಶಿಲುಬೆಗೆ ಏರಿಸಲ್ಪಡುವ ಒಂದು ವಾರದ ಮುಂಚಿತವಾಗಿ ಒಂದು ಕತ್ತೆಯ ಮೇಲೆ ಕುಳಿತು ಯೆರೂಸಲೇಮಿನೊಳಗೆ ಬರುತ್ತಾನೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.01:32-34
- 1 ಸಮು.09:3-4
- 2 ಅರಸ.04:21-22
- ಧರ್ಮೋ.05:12-14
- ಲೂಕ.13:15-16
- ಮತ್ತಾಯ.21:1-3

ಪದ ಡೇಟಾ:

- Strong's: H860, H2543, H3222, H5895, H6167, H6501, H6505, H6506, H7409, G3678, G3688, G5268

ಕನಸು

ಪದದ ಅರ್ಥವಿವರಣೆ:

ಕನಸು ಎನ್ನುವುದು ಜನರು ನಿದ್ದೆ ಮಾಡುತ್ತಿರುವಾಗ ತಮ್ಮ ಮನಸ್ಸುಗಳಲ್ಲಿ ನೋಡುವ ಅಥವಾ ಅನುಭವಿಸುವ ವಿಷಯಗಳು ಎಂದರ್ಥ.

- ಕನಸುಗಳು ಅನೇಕಬಾರಿ ಅವು ನಿಜವಾಗಿ ನಡೆಯುತ್ತಿವೆ ಎನ್ನುವಂತಿರುತ್ತವೆ, ಆದರೆ ಅವು ನಿಜವಾದ ಸಂಘಟನೆಗಳಲ್ಲ.
- ಕೆಲವೊಂದುಬಾರಿ ದೇವರೇ ಏನಾದರೊಂದು ವಿಷಯದ ಕುರಿತಾಗಿ ಜನರಿಗೆ ಕನಸುಗಳು ಕಾಣುವಂತೆ ಕೊಡುತ್ತಾನೆ, ಇದರಿಂದ ಅವರು ಅವುಗಳಿಂದ ಕಲಿತುಕೊಳ್ಳುತ್ತಾರೆ. ಆತನು ಅವರಿಗೆ ಬರುವ ಕನಸುಗಳ ಮೂಲಕ ಜನರೊಂದಿಗೆ ನೇರವಾಗಿ ಮಾತನಾಡುತ್ತಾನೆ.
- ಸತ್ಯವೇದದಲ್ಲಿ, ದೇವರು ಜನರಿಗೆ ಒಂದು ಸಂದೇಶವನ್ನು ಕೊಡುವುದಕ್ಕೆ ಅವರಿಗೆ ವಿಶೇಷವಾದ ಕನಸುಗಳನ್ನು ಕೊಟ್ಟಿದ್ದಾನೆ, ಅನೇಕಬಾರಿ ಭವಿಷ್ಯತ್ತಿನಲ್ಲಿ ನಡೆಯುವ ವಿಷಯಗಳ ಕುರಿತಾಗಿ ಕನಸುಗಳನ್ನು ಕೊಟ್ಟಿರುತ್ತಾನೆ.
- ಕನಸಿಗೂ ದರ್ಶನಕ್ಕೂ ತುಂಬಾ ವ್ಯತ್ಯಾಸವಿರುತ್ತದೆ, ಅವುಗಳಿಗೆ ಬೇರೆ ಬೇರೆ ಅರ್ಥಗಳಿರುತ್ತವೆ. ಒಬ್ಬ ವ್ಯಕ್ತಿ ನಿದ್ದೆ ಮಾಡುತ್ತಿರುವಾಗ ಕನಸುಗಳು ಬರುತ್ತವೆ, ಆದರೆ ದರ್ಶನಗಳು ಸಹಜವಾಗಿ ಒಬ್ಬ ವ್ಯಕ್ತಿ ಎದ್ದಿರುವಾಗಲೇ ಬರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ದರ್ಶನ)

ಸತ್ಯವೇದದ ವಾಕ್ಯಗಳು:

- ಅಪೊ.ಕೃತ್ಯ 2:16-17
- ದಾನಿ 1:17-18
- ದಾನಿ 2:1
- ಆದಿ 37:6
- ಆದಿ 40:4-5
- ಮತ್ತಾಯ 2:13
- ಮತ್ತಾಯ 2:19-21

ಸತ್ಯವೇದದ ಕಥೆಗಳಿಂದ ಉದಾಹರಣೆಗಳು:

- **8:2** ಯೋಸೇಫನನ್ನು ತನ್ನ ತಂದೆ ಹೆಚ್ಚಾಗಿ ಪ್ರೀತಿಸಿರುವದರಿಂದ ಯೋಸೇಫನ ಅಣ್ಣಂದಿಯರು ಅವನನ್ನು ದ್ವೇಷಿಸಿದರು ಮತ್ತು ಯೋಸೇಫನು _ ಕನಸುಗಳನ್ನು _ ಕಂಡಿದ್ದರಿಂದಲೇ, ಅವನು ಅವರನ್ನು ಆಳುವ ವ್ಯಕ್ತಿಯಾದನು.
- **8:6** ಐಗುಪ್ತರೆಲ್ಲರೂ ತಮ್ಮ ಅರಸನು ಎಂದು ಕರೆಯುವ ಫರೋಹನಿಗೆ ಒಂದು ರಾತ್ರಿ ಎರಡು _ ಕನಸು _ ಬಂದಿದ್ದವು, ಅವು ಅವನನ್ನು ತುಂಬಾ ಕಳವಳಕ್ಕೆ ಗುರಿ ಮಾಡಿದ್ದವು. ತನ್ನ ಬಳಿಯಿರುವ ಯಾವ ಸಲಹೆಗಾರನು ಕೂಡ ಆ _ ಕನಸುಗಳಿಗೆ _ ಅರ್ಥಗಳನ್ನು ಹೇಳಲಿಲ್ಲ.
- **8:7** ಆ ಕನಸುಗಳಿಗೆ ಅರ್ಥವಿವರಣೆ ಹೇಳುವ ಸಾಮರ್ಥ್ಯವನ್ನು ದೇವರು ಯೋಸೇಫನಿಗೆ ಕೊಟ್ಟಿದ್ದನು, ಅದರಿಂದ ಫರೋಹನನ್ನು ಸೆರೆಮನೆಯಿಂದ ಯೋಸೇಫನನ್ನು ಕರೆಕಳುಹಿಸಿದನು. ಯೋಸೇಫನು ಅವನಿಗೆ _ ಕನಸುಗಳನ್ನು _ ವ್ಯಾಖ್ಯಾನಿಸಿ ಹೇಳಿದನು, ಅದೇನೆಂದರೆ, “ದೇವರು ಏಳು ವರ್ಷಗಳ ಕಾಲ ಸಮೃದ್ಧಿಯಾದ ಬೆಳೆಗಳನ್ನು ಕೊಡುತ್ತಾನೆ, ಅದಾದನಂತರ ಏಳು ವರ್ಷಗಳ ಕಾಲ ಬರಗಾಲ ಬರುತ್ತದೆ” ಎಂದು ಹೇಳಿದನು.
- **16:11** ಅದೇ ರಾತ್ರಿಯಲ್ಲಿ, ಗಿದ್ಯೋನನು ಪಾಳೆಯದೊಳಗೆ ಹೋದನು ಮತ್ತು ಮಿದ್ಯಾನರ ಸೈನಿಕನು ತನಗೆ ಬಂದಿರುವ _ ಕನಸನ್ನು _ ತನ್ನ ಸ್ನೇಹಿತನಿಗೆ ಹೇಳುತ್ತಿರುವುದನ್ನು ಕೇಳಿಸಿಕೊಂಡನು. “ಗಿದ್ಯೋನನ ಸೈನ್ಯವು ಮಿದ್ಯಾನರ ಸೈನ್ಯವನ್ನು ಸೋಲಿಸುತ್ತದೆಯೆಂದು ಈ _ ಕನಿಸಿಗೆ _ ಅರ್ಥವಲ್ಲವೊ!” ಎಂದು ಆ ಮನುಷ್ಯನ ಸ್ನೇಹಿತ ಹೇಳುತ್ತಾನೆ.
- **23:1** ಅವನು (ಯೋಸೇಫ) ಆಕೆಗೆ (ಮರಿಯಳಿಗೆ) ಅವಮಾನ ತರುವುದು ಇಷ್ಟವಿರಲಿಲ್ಲ, ಆದ್ದರಿಂದ ಅವನು ಆಕೆಗೆ ಸದ್ದಿಲ್ಲದೆ ವಿಚ್ಛೇದನ ಪತ್ರವನ್ನು ಕೊಡಬೇಕೆಂದಿದ್ದನು. ಅವನು ಅದನ್ನು ಮಾಡುವುದಕ್ಕೆ ಮುಂಚಿತವಾಗಿ, ದೂತನು ಬಂದು ಅವನೊಂದಿಗೆ _ ಕನಸಿನಲ್ಲಿ _ ಮಾತನಾಡಿದನು.

ಪದ ಡೇಟಾ:

- Strong's: H1957, H2472, H2492, H2493, G17970, G17980, G36770

ಕನ್ನಿಕೆ, ಕನ್ನಿಕೆಗಳು, ಕನ್ಯತ್ವ

ಪದದ ಅರ್ಥವಿವರಣೆ:

ಕನ್ನಿಕೆ ಎನ್ನುವ ಪದವು ಎಂದಿಗೂ ಲೈಂಗಿಕ ಸಂಬಂಧಗಳನ್ನು ಹೊಂದಿರದ ಸ್ತ್ರೀಯಳನ್ನು ಸೂಚಿಸುತ್ತದೆ.

- ಮೆಸ್ಸೀಯನು ಕನ್ನಿಕೆಯಿಂದ ಬರುವನೆಂದು ಪ್ರವಾದಿಯಾದ ಯೆಶಯಾನು ಹೇಳಿದನು.
- ಮರಿಯಳು ಯೇಸುವಿಗೆ ಗರ್ಭವನ್ನು ಧರಿಸಿದಾಗ ಆಕೆ ಕನ್ನಿಕೆಯಾಗಿದ್ದಳು. ಆತನಿಗೆ ಮಾನವ ತಂದೆ ಯಾರೂ ಇದ್ದಿಲ್ಲ.
- ಕೆಲಪೊಂದು ಭಾಷೆಗಳು ಕನ್ನಿಕೆಯನ್ನು ಸೂಚಿಸುವ ಸಭ್ಯ ವಿಧಾನವಾಗಿರುವ ಪದವನ್ನು ಹೊಂದಿರಬಹುದು. (ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ಯೆಶಯಾ, ಯೇಸು, ಮರಿಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.24:15-16
- ಲೂಕ.01:26-29
- ಲೂಕ.01:34-35
- ಮತ್ತಾಯ.01:22-23
- ಮತ್ತಾಯ.25:1-4

ಸತ್ಯವೇದದಿಂದ ಉದಾಹರಣೆಗಳು:

- **21:09** ಮೆಸ್ಸೀಯ _ **ಕನ್ನಿಕೆಯಿಂದ** _ ಹುಟ್ಟಿ ಬರುವನೆಂದು ಪ್ರವಾದಿಯಾದ ಯೆಶಯಾನು ಪ್ರವಾದಿಸಿದನು.
- **22:04** ಆಕೆ (ಮರಿಯಳು)_ **ಕನ್ನಿಕೆಯಾಗಿದ್ದಳು** _ ಮತ್ತು ಯೋಸೇಫ ಎನ್ನುವ ಹೆಸರಿನ ವ್ಯಕ್ತಿಯನ್ನು ವಿವಾಹ ಮಾಡಿಕೊಳ್ಳುವುದಕ್ಕೆ ಪಧಾನ ಮಾಡಲ್ಪಟ್ಟಿದ್ದಳು.
- **22:05** “ನಾನು _ **ಕನ್ನಿಕೆಯಾಗಿದ್ದೆನೇ** _, ಇದು ಹೇಗೆ ನನನಗೆ ಸಂಭವಿಸುತ್ತದೆ?” ಎಂದು ಮರಿಯಳು ಉತ್ತರಿಸಿದ್ದಾಳೆ.
- **49:01** ಮರಿಯ ಎನ್ನುವ ಹೆಸರಿನ _ **ಕನ್ನಿಕೆ** ಬಳಿಗೆ ದೂತ ಬಂದು, “ನೀನು ತಂದೆಯ ಮಗನಿಗೆ ಜನನವನ್ನು ಕೊಡುತ್ತೀ” ಎಂದು ಮರಿಯಳಿಗೆ ಹೇಳಿದನು. ಇದರಿಂದ ಆಕೆ **ಕನ್ನಿಕೆಯಾಗಿಯೇ** _ ಇದ್ದಿದ್ದಳು, ಈಕೆ ಗಂಡು ಮಗುವಿಗೆ ಜನನವನ್ನು ಕೊಟ್ಟನು ಮತ್ತು ಆ ಶಿಶುವಿಗೆ ಯೇಸು ಎಂದು ಹೆಸರಿಟ್ಟಳು.

ಪದ ಡೇಟಾ:

- Strong's: H1330, H1331, H5959, G3932, G3933

ಕಪಾಲ

ಪದದ ಅರ್ಥವಿವರಣೆ:

“ಕಪಾಲ” ಎನ್ನುವ ಪದವು ಒಂದು ಪ್ರಾಣಿಯ ಅಥವಾ ಒಬ್ಬ ಮನುಷ್ಯನ ತಲೆಯ ಅಸ್ಥಿಪಂಜರ ನಿರ್ಮಾಣವಾಗಿರುವ ಎಲುಬುಗಳನ್ನು ಸೂಚಿಸುತ್ತದೆ.

“ಕಪಾಲ” ಎನ್ನುವ ಪದಕ್ಕೆ ಕೆಲವೊಂದುಬಾರಿ “ತಲೆ” ಎಂದರ್ಥ, “ನಿನ್ನ ತಲೆ ಬುರುಡೆಗೆ” ಕ್ಷೌರ ಮಾಡಿ ಎನ್ನುವ ಮಾತಿನಲ್ಲಿರುವಂತೆ ತಲೆಯನ್ನು ಸೂಚಿಸುವುದಾಗಿರುತ್ತದೆ.

- “ಕಪಾಲ ಎನ್ನುವ ಸ್ಥಳ” ಎನ್ನುವ ಮಾತನ್ನು ಯೇಸುವನ್ನು ಶಿಲುಬೆಗೆ ಹಾಕಿದ ಗೊಲ್ಗೊತಾ ಎನ್ನುವ ಸ್ಥಳಕ್ಕೆ ಮತ್ತೊಂದು ಹೆಸರಾಗಿರುತ್ತದೆ.
- ಈ ಪದವನ್ನು “ತಲೆ” ಅಥವಾ “ತಲೆಯ ಎಲುಬು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಶಿಲುಬೆಗೆ ಹಾಕು, ಗೊಲ್ಗೊತಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.09:35-37
- ಯೆರೆ.02:14-17
- ಯೋಹಾನ.19:17-18
- ಮತ್ತಾಯ.27:32-34

ಪದ ಡೇಟಾ:

- Strong's: H1538, H2026, H2076, H2490, H2491, H2717, H2763, H2873, H2874, H4191, H4194, H5221, H6936, H6991, H6992, H7523, H7819, G337, G615, G1315, G2380, G2695, G4968, G4969, G5407

ಕಪ್ಪ

ಪದದ ಅರ್ಥವಿವರಣೆ:

“ಕಪ್ಪ” ಎನ್ನುವ ಪದವು ಎರಡು ದೇಶಗಳ ನಡುವೆ ಒಳ್ಳೆಯ ಸಂಬಂಧಗಳನ್ನು ಮತ್ತು ಸಂರಕ್ಷಣೆಯನ್ನು ಹೊಂದಿರುವ ಉದ್ದೇಶಕ್ಕಾಗಿ ಒಬ್ಬ ಪಾಲಕನಿಂದ ಇನ್ನೊಬ್ಬ ಪಾಲಕನಿಗೆ ಕೊಡುವ ಬಹುಮಾನವನ್ನು ಸೂಚಿಸುತ್ತದೆ.

- ಕಪ್ಪ ಎನ್ನುವುದು ಹಣವನ್ನು ಪಾವತಿಸುವುದೂ ಆಗಿರಬಹುದು, ಸರ್ಕಾರ ಅಥವಾ ಪಾಲಕನು ಜನರಿಂದ ತೆರಿಗೆ ಅಥವಾ ಸುಂಕವನ್ನು ಪಡೆಯುವುದನ್ನು ಸೂಚಿಸುತ್ತದೆ.
- ಸತ್ಯವೇದ ಕಾಲದಲ್ಲಿ ಪ್ರಯಾಣ ಮಾಡುವ ಅರಸರು ಅಥವಾ ಪಾಲಕರು ಕೆಲವೊಂದುಬಾರಿ ಅವರು ಸಂರಕ್ಷಣೆಯಾಗಿರುವುದಕ್ಕೆ ಮತ್ತು ಸುರಕ್ಷಿತವಾಗಿರುವುದಕ್ಕೆ ನಿಶ್ಚಯತೆಯನ್ನು ಹೊಂದಿಕೊಳ್ಳಲು ಅವರು ಪ್ರಯಾಣ ಮಾಡುವ ಪ್ರಾಂತ್ಯಗಳ ಅರಸರಿಗೆ ಕಪ್ಪವನ್ನು ಕೊಡುತ್ತಿದ್ದರು.
- ಅನೇಕಸಲ ಕಪ್ಪದಲ್ಲಿ ಹಣದ ಪಕ್ಕದಲ್ಲಿ ಆಹಾರ ಪದಾರ್ಥಗಳು, ಪರಿಮಳ ದ್ರವ್ಯಗಳು, ಶ್ರೀಮಂತ ಬಟ್ಟೆಗಳು, ಮತ್ತು ಬಂಗಾರದಂತಹ ಬೆಲೆಯುಳ್ಳ ಲೋಹಗಳು ಇಟ್ಟಿರುತ್ತಾರೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ “ಕಪ್ಪ” ಎನ್ನುವ ಪದವನ್ನು “ಅಧಿಕಾರಿಕ ಬಹುಮಾನಗಳು” ಅಥವಾ “ವಿಶೇಷವಾದ ತೆರಿಗೆ” ಅಥವಾ “ಪಾವತಿ ಮಾಡಬೇಕಾದ ಹಣ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಬಂಗಾರ, ಅರಸ, ಪಾಲಕ, ತೆರಿಗೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.18:1-2
- 2 ಪೂರ್ವ.09:22-24
- 2 ಅರಸ.17:1-3
- ಲೂಕ.23:1-2

ಪದ ಡೇಟಾ:

- Strong's: H1093, H4060, H4061, H4371, H4503, H4522, H4530, H4853, H6066, H7862, G1323, G2778, G5411

ಕರಗಿ, ಕರಗಿದೆ, ಕರಗುತ್ತಾಯಿದೆ, ಕರಗಿಸುವುದು, ಕರಗಿದ

ಸತ್ಯಾಂಶಗಳು:

“ಕರಗಿ” ಎನ್ನುವ ಪದವು ಯಾವುದಾದರೊಂದನ್ನು ಬಿಸಿ ಮಾಡಿದಾಗ ಅದು ದ್ರವ ಸ್ಥಿತಿಯಲ್ಲಿ ಬರುವುದನ್ನು ಸೂಚಿಸುತ್ತದೆ. ಈ ಪದವನ್ನು ಅಲಂಕಾರಿಕ ವಿಧಾನಗಳಲ್ಲಿಯೂ ಉಪಯೋಗಿಸಲ್ಪಟ್ಟಿರುತ್ತದೆ : ಯಾವುದಾದರೊಂದು ಕರಗುವುದೆಂದರೆ “ಕರಗಿದ” ಸ್ಥಿತಿಯನ್ನು ವಿವರಿಸುತ್ತದೆ.

- ಅನೇಕವಿಧವಾದ ಲೋಹಗಳು ಕರಗುವವರೆಗೆ ಅವುಗಳನ್ನು ಬಿಸಿ ಮಾಡುತ್ತಾ ಇರುತ್ತಾರೆ ಮತ್ತು ವಿಗ್ರಹಗಳನ್ನು ಅಥವಾ ಉಪಕರಣಗಳನ್ನು ಮಾಡುವುದಕ್ಕೆ ಕರಗಿದ ದ್ರವವನ್ನು ಅಚ್ಚುನೊಳಗೆ ಸುರಿಯುತ್ತಾರೆ. “ಕರಗಿದ ಲೋಹ” ಎನ್ನುವ ಮಾತು ಕರಗಿಸಲ್ಪಟ್ಟ ಲೋಹವನ್ನು ಸೂಚಿಸುತ್ತದೆ.
- ಮೊಂಬತ್ತಿ ಉರಿಯುತ್ತಿರುವಾಗ, ಇದರ ಮೇಣವು ಕರಗುತ್ತಾ ಇರುತ್ತದೆ ಮತ್ತು ಹನಿ ಹನಿಯಾಗಿ ಕೆಳಗೆ ಬೀಳುತ್ತಾ ಇರುತ್ತದೆ. ಪುರಾತನ ಕಾಲಗಳಲ್ಲಿ ಪತ್ರಗಳನ್ನು ಮೊಹರು ಮಾಡುವುದಕ್ಕೆ ಅನೇಕಬಾರಿ ಕರಗಿದ ಮೇಣವನ್ನು ಪತ್ರದ ಮೂಲೆಗಳಲ್ಲಿ ಸುರಿಸುತ್ತಿದ್ದರು.
- “ಕರಗಿ” ಎನ್ನುವ ಪದದ ಅಲಂಕಾರಿಕ ಉಪಯೋಗಕ್ಕೆ ಮೇಣವು ಕರಗಿದಂತೆಯೇ ಮೃದುವಾಗಿಯೂ ಮತ್ತು ಬಲಹೀನವಾಗಿಯೂ ಆಗುವುದು ಎಂದರ್ಥ.
- “ಅವರ ಹೃದಯಗಳು ಕರಗಿವೆ” ಎನ್ನುವ ಮಾತಿಗೆ ಅವರು ಭಯದ ಕಾರಣದಿಂದ ತುಂಬಾ ಬಲಹೀನವಾದರು ಎಂದರ್ಥ.
- “ಅವರು ಕರಗಿ ಪಕ್ಕಕ್ಕೆ ಹೋದರು” ಎನ್ನುವ ಇನ್ನೊಂದು ಅಲಂಕಾರಿಕ ಮಾತಿಗೆ ಅವರು ಹೊರ ಹೋಗುವುದಕ್ಕೆ ಬಲವಂತಿಕೆ ಮಾಡಲ್ಪಟ್ಟರು ಅಥವಾ ಅವರು ಬಲಹೀನವಾಗಿ ಕಾಣಿಸಿಕೊಂಡರು ಮತ್ತು ಸೋತು ಪಕ್ಕಕೆ ಹೋದರು ಎಂದರ್ಥ.
- “ಕರಗಿ” ಎನ್ನುವ ಪದಕ್ಕೆ ಅಕ್ಷರಾರ್ಥವು “ದ್ರವವಾಗಿ ಮಾರ್ಪಡುವುದು” ಅಥವಾ “ದ್ರವೀಕರಿಸುವುದು” ಅಥವಾ “ದ್ರವವಾಗುವುದಕ್ಕೆ ಕಾರಣವಾಗುವುದು” ಎಂದೂ ಅನುವಾದ ಮಾಡಬಹುದು.
- “ಕರಗಿ” ಎನ್ನುವ ಅಲಂಕಾರ ಅರ್ಥಗಳನ್ನು ಅನುವಾದ ಮಾಡುವ ಇನ್ನೊಂದು ವಿಧಾನಗಳಲ್ಲಿ “ಮೃದುವಾಗುವುದು” ಅಥವಾ “ಬಲಹೀನವಾಗುವುದು” ಅಥವಾ “ಸೋತು ಹೋಗುವುದು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಹೃದಯ, ಸುಳ್ಳು ದೇವರು, ರೂಪ, ಮೊಹರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಕೀರ್ತನೆ.112:10

ಪದ ಡೇಟಾ:

- Strong's: H1811, H2003, H2046, H3988, H4127, H4529, H4541, H4549, H5140, H5258, H5413, H6884, H8557, G3089, G5080

ಕರಡಿ, ಕರಡಿಗಳು

ಪದದ ಅರ್ಥವಿವರಣೆ

ಕರಡಿ ನಾಲ್ಕು ಕಾಲುಗಳುಳ್ಳ ಭಯಾನಕವಾದ ಪ್ರಾಣಿ, ಅದು ಕಪ್ಪು ಅಥವಾ ಕಡು ಕಂದು ಬಣ್ಣದಲ್ಲಿರುತ್ತದೆ ಮತ್ತು ಚೂಪಾದ ಹಲ್ಲುಗಳು ಹಾಗೂ ಉಗುರುಗಳನ್ನು ಹೊಂದಿರುತ್ತದೆ. ಸತ್ಯವೇದದ ಕಾಲದಲ್ಲಿ ಕರಡಿಗಳು ಇಸ್ರಾಯೆಲ್ ದೇಶದಲ್ಲಿ ಸಹಜವಾಗಿ ವಾಸ ಮಾಡುತ್ತಿದ್ದವು.

- ಈ ಪ್ರಾಣಿಗಳು ಕಾಡಿನಲ್ಲಿ ಮತ್ತು ಬೆಟ್ಟ ಪ್ರಾಂತ್ಯಗಳಲ್ಲಿ ವಾಸ ಮಾಡುತ್ತವೆ; ಅವು ಮೀನುಗಳನ್ನು, ಕೀಟಗಳನ್ನು ಮತ್ತು ಸಸ್ಯಗಳನ್ನು ತಿನ್ನುತ್ತವೆ.
- ಹಳೆಯ ಒಡಂಬಡಿಕೆಯ ಕಾಲದಲ್ಲಿ, ಕರಡಿಯನ್ನು ಬಲದ ಸೂಚನೆಯಾಗಿ ಉಪಯೋಗಿಸುತ್ತಿದ್ದರು.
- ಕುರಿಗಳನ್ನು ಕಾಯುತ್ತಿರುವಾಗ, ಕುರುಬನಾದ ದಾವೀದನು ಕರಡಿಯೊಂದಿಗೆ ಹೋರಾಡಿ, ಅದನ್ನು ಸೋಲಿಸಿದನು.
- ಪ್ರವಾದಿಯಾದ ಎಲೀಷನನ್ನು ಯೌವ್ವನಸ್ತರು ಅಪಹಾಸ್ಯ ಮಾಡಿದಾಗ, ಕಾಡಿನಿಂದ ಎರಡು ಕರಡಿಗಳು ಬಂದು ಅವರ ಮೇಲೆ ದಾಳಿ ಮಾಡಿದವು.

(ಈ ಪದಗಳನ್ನು ಸಹ ನೋಡಿರಿ : ದಾವಿದ, ಎಲೀಷ)

ಸತ್ಯವೇದದ ಅನುಬಂಧ ವಾಕ್ಯಗಳು :

ಪದ ಡೇಟಾ:

- Strong's: H1677, G715

ಕಲಹ ವಿವಾದಗಳು, ಜಗಳ, ವಾದ, ಸಂಘರ್ಷ

ಪದದ ಅರ್ಥವಿವರಣೆ:

“ಕಲಹ” ಎನ್ನುವ ಪದವು ಜನರ ಮಧ್ಯೆದಲ್ಲಿ ಉಂಟಾಗುವ ಭೌತಿಕವಾದ ಅಥವಾ ಭಾವೋದ್ರೇಕವಾದ ಸಂಘರ್ಷಗಳನ್ನು ಸೂಚಿಸುತ್ತದೆ.

- ಕಲಹವನ್ನು ಉಂಟುಮಾಡುವ ವ್ಯಕ್ತಿ ಜನರ ಮಧ್ಯೆದಲ್ಲಿ ಬಲವಾದ ಭಿನ್ನಾಭಿಪ್ರಾಯಗಳನ್ನು ಮತ್ತು ನೋವನ್ನುಂಟು ಮಾಡುವ ಭಾವನೆಗಳನ್ನು ಉಂಟುಮಾಡುತ್ತಾನೆ.
- ಕೆಲವೊಂದು ಬಾರಿ “ಕಲಹ” ಎನ್ನುವ ಪದದ ಉಪಯೋಗವು ಬಲವಾದ ಭಾವೋದ್ರೇಕಗಳನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, ಕೋಪ ಅಥವಾ ಕಹಿತನ.
- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಅಸಮ್ಮತಿ” ಅಥವಾ “ವಿವಾದ” ಅಥವಾ “ಸಂಘರ್ಷ” ಎನ್ನುವ ಪದಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಕೋಪ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.03:3-5
- ಹಬ.01:03
- ಫಿಲಿಪ್ಪಿ.01:17
- ಜ್ಞಾನೋ.17:01
- ಕೀರ್ತನೆ.055:8-9
- ರೋಮಾ.13:13

ಪದ ಡೇಟಾ:

- Strong's: H1777, H1779, H4066, H4090, H4683, H4808, H7379, H7701, G485, G2052, G2054, G3055, G3163, G5379

ಕಳಂಕ, ಕಳಂಕವಿಲ್ಲದ್ದು, ದೋಷ

ಸತ್ಯಾಂಶಗಳು:

“ಕಳಂಕ” ಎನ್ನುವ ಪದವು ಒಬ್ಬ ವ್ಯಕ್ತಿಯಲ್ಲಿರುವ ಅಥವಾ ಪ್ರಾಣಿಯಲ್ಲಿರುವ ಶರೀರಕ ದೋಷ ಅಥವಾ ಅಪೂರ್ಣತೆಯನ್ನು ಸೂಚಿಸುತ್ತದೆ. ಅದು ಜನರಲ್ಲಿನ ಆತ್ಮೀಕವಾದ ಕುಂದುಕೊರತೆಗಳನ್ನು ಮತ್ತು ದೋಷಗಳನ್ನು ಸಹ ಸೂಚಿಸಬಹುದು.

- ಕೆಲವೊಂದು ಯಜ್ಞಗಳಿಗೆ, ಯಾವುದೇ ಕಳಂಕವಿಲ್ಲದ ಅಥವಾ ದೋಷವಿಲ್ಲದ ಪ್ರಾಣಿಯನ್ನು ಯಜ್ಞವಾಗಿ ಅರ್ಪಿಸಬೇಕೆಂದು ದೇವರು ಇಸ್ರಾಯೇಲರಿಗೆ ಸೂಚಿಸಿದನು.
- ಯೇಸು ಕ್ರಿಸ್ತನು ಯಾವ ಪಾಪವಿಲ್ಲದ ಒಂದು ಪರಿಪೂರ್ಣವಾದ ಬಲಿಯೆಂಬುದರ ಚಿತ್ರಣ ಇದಾಗಿದೆ.
- ಕ್ರಿಸ್ತನಲ್ಲಿ ವಿಶ್ವಾಸಿಗಳು ಆತನ ರಕ್ತದಿಂದ ತೊಳೆಯಲ್ಪಟ್ಟಿದ್ದಾರೆ ಮತ್ತು ಅವರು ಯಾವ ಕಳಂಕ ಇಲ್ಲದವರೆಂದು ಪರಿಗಣಿಸಲ್ಪಟ್ಟಿದ್ದಾರೆ.
- ಸಂದರ್ಭಕ್ಕೆ ಅನುಸಾರವಾಗಿ, ಈ ಪದವನ್ನು “ದೋಷ” ಅಥವಾ “ಪಾಪ” ಅಥವಾ “ಅಪೂರ್ಣತೆ” ಎಂದು ಅನುವಾದ ಮಾಡಬಹುದು.

(ಇವುಗಳನ್ನು ನೋಡಿರಿ : ನಂಬಿಕೆ, ಶುದ್ಧ, ಯಜ್ಞ, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೇತ್ರನು 1:19
- 2 ಪೇತ್ರನು 2:13
- ಧರ್ಮೋ. 15:19-21
- ಅರಣ್ಯ. 6:13-15
- ಪರಮ. 4:7

ಪದದ ಡೇಟಾ:

- Strong's: H3971, H8400, H8549, G34700

ಕಳುಹಿಸು, ಕಳುಹಿಸುವುದು, ಹೊರಗೆ ಕಳುಹಿಸು,

ಪದದ ಅರ್ಥವಿವರಣೆ:

“ಕಳುಹಿಸುವು” ಎಂದರೆ ಯಾವುದಾದರೊಂದು ಸ್ಥಳಕ್ಕೆ ಹೋಗುವುದಕ್ಕೆ ಯಾವುದಾದರೊಂದನ್ನು ಅಥವಾ ಯಾರಾದರೊಬ್ಬರನ್ನು ಪ್ರೇರೇಪಿಸು ಎಂದರ್ಥ. ಯಾರಾದರೊಬ್ಬರನ್ನು “ಹೊರಗೆ ಕಳುಹಿಸು” ಎಂದರೆ ಒಬ್ಬ ವ್ಯಕ್ತಿ ಒಂದು ದಂಡಯಾತ್ರೆಯಲ್ಲಿ ಅಥವಾ ಒಂದು ಯಂತ್ರದಲ್ಲಿ ಹೋಗುವುದಕ್ಕೆ ಹೇಳುವುದು ಎಂದರ್ಥ.

- ಅನೇಕಬಾರಿ “ಹೊರಗೆ ಕಳುಹಿಸಲ್ಪಟ್ಟ” ಒಬ್ಬ ವ್ಯಕ್ತಿ ಒಂದು ವಿಶೇಷವಾದ ಕೆಲಸವನ್ನು ಮಾಡುವುದಕ್ಕೆ ನೇಮಿಸಲ್ಪಟ್ಟಿರುತ್ತಾನೆ.
- “ಮಳೆಯನ್ನು ಕಳುಹಿಸು” ಅಥವಾ “ವಿಪತ್ತನ್ನು ಕಳುಹಿಸು” ಎನ್ನುವ ಮಾತುಗಳಿಗೆ “ಬರುವಂತೆ ಮಾಡು” ಎಂದರ್ಥವಾಗಿರುತ್ತದೆ. ಈ ರೀತಿಯ ಮಾತುಗಳನ್ನು ಈ ಕಾರ್ಯಗಳೆಲ್ಲಾ ನಡೆಯುವುದಕ್ಕೆ ದೇವರೇ ಕಾರಣವಾಗಿರುತ್ತರೆಂದು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತವೆ.
- “ಕಳುಹಿಸು” ಎನ್ನುವ ಪದವನ್ನು “ವಾಕ್ಯವನ್ನು ಕಳುಹಿಸು” ಅಥವಾ “ಸಂದೇಶವನ್ನು ಕಳುಹಿಸು” ಎನ್ನುವ ಮಾತುಗಳಲ್ಲಿ ಉಪಯೋಗಿಸಲ್ಪಟ್ಟಿರುತ್ತದೇ, ಈ ಮಾತಿಗೆ ಇನ್ನೊಬ್ಬರಿಗೆ ಹೇಳುವುದಕ್ಕೆ ಯಾರಿಗಾದರೋಬ್ಬರಿಗೆ ಒಂದು ಸಂದೇಶವನ್ನು ಹೇಳುವುದು ಎಂದರ್ಥವಾಗಿರುತ್ತದೆ.
- “ಯಾವುದಾದರೊಂದಿಗೆ ಯಾರಾದರೊಬ್ಬರನ್ನು “ಕಳುಹಿಸುವುದು” ಎಂದರೆ ಯಾರಿಗಾದರೊಬ್ಬರಿಗೆ ಆ ವಸ್ತುವನ್ನು “ಕೊಡುವುದು” ಎಂದರ್ಥವಾಗಿರುತ್ತದೆ, ಯಾರಾದರೊಬ್ಬರು ಇದನ್ನು ಹೊಂದಿಕೊಳ್ಳುವದಕ್ಕೋಸ್ಕರ ಸ್ವಲ್ಪ ದೂರಕ್ಕೆ ಕಳುಹಿಸುವುದಾಗಿರುತ್ತದೆ.
- ಯೇಸುವನ್ನು ತಂದೆಯಾದ ದೇವರು ತನ್ನ ಜನರನ್ನು ರಕ್ಷಿಸುವುದಕ್ಕೆ ಮತ್ತು ವಿಮೋಚಿಸುವುದಕ್ಕೆ ಈ ಭೂಲೋಕಕ್ಕೆ ಕಳುಹಿಸಿದ್ದಾನೆಂದು ಸೂಚಿಸುವುದಕ್ಕೆ ಆತನು “ನನ್ನನ್ನು ಕಳುಹಿಸಿದ” ಎನ್ನುವ ಪದವನ್ನು ಹೆಚ್ಚಾಗಿ ಉಪಯೋಗಿಸಿದ್ದರು. ಇದನ್ನು “ಆಳಾಗಿರುವ ವ್ಯಕ್ತಿ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನೇಮಿಸು, ವಿಮೋಚಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.07:33-34
- ಅಪೊ.ಕೃತ್ಯ.08:14-17
- ಯೋಹಾನ.20:21-23
- ಮತ್ತಾಯ.09:37-38
- ಮತ್ತಾಯ.10:05
- ಮತ್ತಾಯ.10:40
- ಮತ್ತಾಯ.21:1-3

ಪದ ಡೇಟಾ:

- Strong's: H935, H1540, H1980, H2199, H2904, H3318, H3474, H3947, H4916, H4917, H5042, H5130, H5375, H5414, H5674, H6963, H7368, H7725, H7964, H7971, H7972, H7993, H8421, H8446, G782, G375, G630, G649, G652, G657, G1026, G1032, G1544, G1599, G1821, G3333, G3343, G3936, G3992, G4311, G4341, G4369, G4842, G4882

ಕಳ್ಳ, ಕಳ್ಳರು, ಕದಿ, ಕದಿಯುವುದು, ಕದ್ದಿದೆ, ದರೋಡೆಕಾರ, ದರೋಡೆಕಾರರು, ಕಳ್ಳತನ, ಕಳ್ಳತನ ಮಾಡುವುದು

ಸತ್ಯಾಂಶಗಳು:

"ಕಳ್ಳ" ಎನ್ನುವ ಪದವು ಇತರ ಜನರಿಂದ ಅಸ್ತಿಯನ್ನು ಅಥವಾ ಹಣವನ್ನು ಕದಿಯುವ ವ್ಯಕ್ತಿಯನ್ನು ಸೂಚಿಸುತ್ತದೆ. "ಕಳ್ಳ" ಎನ್ನುವ ಪದಕ್ಕೆ "ಕಳ್ಳರು" ಎನ್ನುವ ಪದವು ಬಹುವಚನವಾಗಿರುತ್ತದೆ. "ದರೋಡೆಕಾರ" ಎನ್ನುವ ಪದವು ಅನೇಕಬಾರಿ ಒಬ್ಬ ವ್ಯಕ್ತಿ ಕದಿಯುವ ಜನರನ್ನು ಬೆದರಿಸುವ ವ್ಯಕ್ತಿಯನ್ನು ಅಥವಾ ಭೌತಿಕವಾಗಿ ಹಾನಿಯನ್ನುಂಟು ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ.

- ದರೋಡೆಕಾರರಿಂದ ಧಾಳಿಗೆ ಗುರಿಯಾಗಿರುವ ಯೆಹೂದ್ಯ ಮನುಷ್ಯನ ಮೇಲೆ ಪ್ರೀತಿ ತೋರಿಸಿರುವ ಸಮಾರ್ಯ ಮನುಷ್ಯನ ಕುರಿತಾಗಿ ಯೇಸು ಒಂದು ಸಾಮ್ಯವನ್ನು ಹೇಳಿದನು. ದರೋಡೆಕಾರರು ಯೆಹೂದ್ಯ ಮನುಷ್ಯನನ್ನು ಹೊಡೆದು, ತನ್ನ ಬಳಿ ಇರುವ ಹಣವನ್ನು ಮತ್ತು ಬಟ್ಟೆಗಳನ್ನು ಕದಿಯುವುದಕ್ಕೆ ಮುಂಚಿತವಾಗಿ ಅವನನ್ನು ಹೊಡೆದು, ಗಾಯಪಡಿಸಿ ಹೋಗಿದ್ದರು.
- ಕಳ್ಳಲು ಮತ್ತು ದರೋಡೆಕಾರರು ಕದಿಯುವುದಕ್ಕೆ ಜನರಿಗೆ ಗೊತ್ತಿಲ್ಲದಂತೆ ಆಕಸ್ಮಿಕವಾಗಿ ಬರುತ್ತಾರೆ, ಅನೇಕಬಾರಿ ಅವರು ಮಾಡುವ ಕ್ರಿಯೆಗಳನ್ನು ಮರೆಯಾಗಿಡುವುದಕ್ಕೆ ಕತ್ತಲೆಯಲ್ಲಿಯೇ ಮಾಡುತ್ತಾರೆ.
- ಅಲಂಕಾರಿಕ ಭಾವನೆಯಲ್ಲಿ ಹೊಸ ಒಡಂಬಡಿಕೆಯಲ್ಲಿ ಸೈತಾನನನ್ನು ಕದಿಯಲು, ಕೊಲ್ಲಲು ಮತ್ತು ನಾಶನ ಮಾಡುವ ಕಳ್ಳನಾಗಿ ವಿವರಿಸುತ್ತದೆ. ಇದಕ್ಕೆ ಅರ್ಥವೇನೆಂದರೆ ಸೈತಾನನ ಮುಂದಾಲೋಚನೆ ಏನೆಂದರೆ ದೇವರ ಜನರನ್ನು ದೇವರಿಗೆ ವಿಧೇಯತೆ ತೋರಿಸುವುದನ್ನು ನಿಲ್ಲಿಸುವ ಯತ್ನವಾಗಿರುತ್ತದೆ. ಒಂದುವೇಳೆ ಈ ಕಾರ್ಯವನ್ನು ಮಾಡುವುದರಲ್ಲಿ ಅವನು ಯಶಸ್ವಿಯಾದರೆ, ದೇವರು ತನ್ನ ಜನರಿಗಾಗಿ ಇಟ್ಟಿರುವ ಒಳ್ಳೆಯ ವಿಷಯಗಳನ್ನು ಸೈತಾನನು ಕದಿಯುತ್ತಾನೆ.
- ಆಕಸ್ಮಿಕವಾಗಿ ಜನರಿಂದ ಕದಿಯುವುದಕ್ಕೆ ಬರುವ ಕಳ್ಳನ ಹಾಗೆಯೇ ಯೇಸುವು ತನ್ನ ಎರಡನೇ ಬರೋಣದಲ್ಲಿ ಆಕಸ್ಮಿಕವಾಗಿ ಬರುವನೆಂದು ಕಳ್ಳನಿಗೆ ಹೋಲಿಸಿದ್ದಾನೆ. ಜನರು ಎದುರುನೋಡದ ಸಮಯದಲ್ಲಿ ಕಳ್ಳನು ಯಾವರೀತಿ ಬರುತ್ತಾನೋ, ಹಾಗೆಯೇ ಜನರು ಎದುರುನೋಡದ ಸಮಯದಲ್ಲಿ ಯೇಸುವು ಹಿಂದಿರುಗಿ ಬರುತ್ತಾನೆ.

(ಈ ಪದಗಳನ್ನು ಸಹ ನೋಡಿರಿ : ಆಶೀರ್ವದಿಸು, ಅಪರಾಧ, ಶಿಲುಬೆಗೆ ಹಾಕುವುದು, ಕತ್ತಲು, ನಾಶಕ, ಶಕ್ತಿ, ಸಮಾರ್ಯ, ಸೈತಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೇತ್ರ.03:10
- ಲೂಕ.12:33-34
- ಮಾರ್ಕ.14:47-50
- ಜ್ಞಾನೋ.06:30-31
- ಪ್ರಕ.03:3-4

ಪದ ಡೇಟಾ:

- Strong's: H1214, H1215, H1416, H1589, H1590, H1980, H6530, H6782, H7703, G727, G1888, G2417, G2812, G3027

ಕವಚ, ಶಸ್ತ್ರಾಸ್ತ್ರ

ಪದದ ಅರ್ಥವಿವರಣೆ:

“ಕವಚ” ಎನ್ನುವ ಪದವು ಯುದ್ಧದಲ್ಲಿ ಹೋರಾಟ ಮಾಡುವುದಕ್ಕೆ ಸೈನಿಕನು ಉಪಯೋಗಿಸುವ ಮತ್ತು ಶತ್ರು ಧಾಳಿಯಿಂದ ತನ್ನನ್ನು ತಾನು ಸಂರಕ್ಷಿಸಿಕೊಳ್ಳುವುದಕ್ಕೆ ಉಪಯೋಗಿಸುವ ಉಪಕರಣವನ್ನು ಸೂಚಿಸುತ್ತದೆ. ಇದು ಆತ್ಮೀಯಕವಾದ ಕವಚವನ್ನು ಸೂಚಿಸುವುದಕ್ಕೆ ಅಲಂಕಾರ ಪದ್ಧತಿಯಲ್ಲಿಯೂ ಉಪಯೊಗಿಸುತ್ತಾರೆ.

- ಸೈನಿಕನ ಕವಚದ ಉಪಕರಣಗಳಲ್ಲಿ ಶಿರಸ್ತ್ರಾಣ, ಗುರಾಣಿ, ಎದೆಕವಚ, ಕಾಲು ಹೊದಿಕೆಗಳು, ಮತ್ತು ಖಡ್ಗ ಎನ್ನುವವುಗಳು ಇರುತ್ತವೆ.
- ಈ ಪದವನ್ನು ಅಲಂಕಾರವಾಗಿ ಉಪಯೋಗಿಸುತ್ತಾ, ಅಪೊಸ್ತಲನಾದ ಪೌಲನು ಭೌತಿಕವಾದ ಕವಚವನ್ನು ಅತ್ಮೀಕವಾಗಿ ಯುದ್ಧಗಳನ್ನು ಮಾಡುವುದಕ್ಕೆ ಒಬ್ಬ ವಿಶ್ವಾಸಿಗೆ ಸಹಾಯಕವಾಗುವುದಕ್ಕೆ ದೇವರು ಕೊಡುವ ಆತ್ಮೀಯಕವಾದ ಕವಚಕ್ಕೆ ಹೋಲಿಸುತ್ತಾ ಹೇಳಿದ್ದಾರೆ.
- ಸೈತಾನನಿಗೆ ಮತ್ತು ಪಾಪಕ್ಕೆ ವಿರುದ್ಧವಾಗಿ ಹೋರಾಟ ಮಾಡುವುದಕ್ಕೆ ದೇವರು ತನ್ನ ಜನರಿಗೆ ಕೊಡುವ ಆತ್ಮೀಯಕವಾದ ಕವಚದಲ್ಲಿ ಸತ್ಯವು, ನೀತಿ, ಸಮಾಧಾನ ಸುವಾರ್ತೆ, ನಂಬಿಕೆ, ರಕ್ಷಣೆ ಒಳಗೊಂಡಿರುತ್ತವೆ ಮತ್ತು ಪವಿತ್ರಾತ್ಮನು ಒಳಗೊಂಡಿರುತ್ತಾನೆ.
- ಈ ಪದವನ್ನು “ಸೈನಿಕನ ತಡೆಸಾಧನ” ಅಥವಾ “ಸಂರಕ್ಷಿಸುವ ಯುದ್ಧ ಬಟ್ಟೆಗಳು” ಅಥವಾ “ಸಂರಕ್ಷಣಾ ಕವಚ” ಅಥವಾ “ಯುದ್ಧ ಸಾಮಾಗ್ರಿಗಳು” ಎಂದು ಅರ್ಥಕೊಡುವ ಪದಗಳೊಂದಿಗೆ ಕೂಡ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬಿಕೆ, ಪವಿತ್ರಾತ್ಮ, ಸಮಾಧಾನ, ರಕ್ಷಿಸು, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಸಮು.31:9-10
- 2 ಸಮು.20:8
- ಎಫೆಸ.06:11
- ಯೆರೆ.51:3-4
- ಲೂಕ.11:22
- ನೆಹೆ.04:15-16

ಪದ ಡೇಟಾ:

- Strong's: H2290, H2488, H3627, H4055, H5402, G3696, G3833

ಕಷ್ಟ, ಕಷ್ಟಗಳು, ಕಷ್ಟಪಟ್ಟಿದೆ, ಕಷ್ಟಪಡುವುದು, ಕಷ್ಟಗಳು

ಪದದ ಅರ್ಥವಿವರಣೆ:

"ಕಷ್ಟ" ಮತ್ತು "ಕಷ್ಟಪಡುವುದು" ಎನ್ನುವ ಪದಗಳು ರೋಗ, ಬಾಧೆ, ಅಥವಾ ಇತರ ಕಠಿಣ ಪರಿಸ್ಥಿತಿಗಳಂತೆ ಯಾವುದಾದರೊಂದು ಅಹಿತಕರವಾದದ್ದನ್ನು ಅನುಭವಿಸಿದ್ದನ್ನು ಸೂಚಿಸುತ್ತದೆ.

- ಜನರು ಹಿಂಸೆಗಳನ್ನು ಅನುಭವಿಸುತ್ತಿರುವಾಗ ಅಥವಾ ಅವರು ರೋಗಗಳಲ್ಲಿರುವಾಗ, ಅವರು ಕಷ್ಟಪಡುತ್ತಿದ್ದಾರೆ.
- ಕೆಲವೊಂದುಬಾರಿ ಜನರು ತಾವು ಮಾಡಿರುವ ತಪ್ಪು ಕಾರ್ಯಗಳಿಂದ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ; ಇನ್ನೂ ಕೆಲವೊಂದುಬಾರಿ ಅವರು ಮಾಡಿರುವ ಪಾಪಗಳಿಂದ ಮತ್ತು ಲೋಕದಲ್ಲಿರುವ ರೋಗಗಳಿಂದ ನರಳುತ್ತಾಯಿರುತ್ತಾರೆ.
- ಕಷ್ಟಪಡುವಂತದ್ದು ಭೌತಿಕವಾಗಿರಬಹುದು, ಉದಾಹರಣೆಗೆ, ಬಾಧೆ ಅಥವಾ ರೋಗ. ಇದು ಭಾವೋದ್ರೇಕವಾಗಿರಬಹುದು , ಉದಾಹರಣೆಗೆ, ಭಯ, ದುಃಖ, ಅಥವಾ ಒಂಟಿತನ ಭಾವನೆಗಳು.
- "ನನ್ನ ಕಷ್ಟ" ಎನ್ನುವ ಮಾತಿಗೆ "ನನ್ನನ್ನು ಸಹಿಸು" ಅಥವಾ "ನನ್ನ ಮಾತುಗಳು ಕೇಳು" ಅಥವಾ "ಸಹನೆಯಿಂದ ನನ್ನ ಮಾತುಗಳನ್ನು ಕೇಳು" ಎಂದರ್ಥ.

ಅನುವಾದ ಸಲಹೆಗಳು:

- "ಕಷ್ಟ" ಎನ್ನುವ ಪದವನ್ನು "ಬಾಧೆಯನ್ನು ಅನುಭವಿಸು" ಅಥವಾ "ಕಷ್ಟವನ್ನು ತಾಳಿಕೋ" ಅಥವಾ "ಕಠಿಣ ಪರಿಸ್ಥಿತಿಗಳನ್ನು ಅನುಭವಿಸು" ಅಥವಾ "ಕಠಿಣವಾದ ಮತ್ತು ಬಾಧೆಗಳ ಅನುಭವಗಳ ಮೂಲಕ ಹಾದು ಹೋಗು" ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, "ಕಷ್ಟಪಡುವುದು" ಎನ್ನುವ ಪದವನ್ನು "ಅತೀ ಗಂಭೀರವಾದ ಕಠಿಣವಾದ ಪರಿಸ್ಥಿತಿಗಳು" ಅಥವಾ "ತೀವ್ರವಾದ ಕಠಿಣ ಪರಿಸ್ಥಿತಿಗಳು" ಅಥವಾ "ಕಠಿಣತೆಯನ್ನು ಅನುಭವಿಸುವುದು" ಅಥವಾ "ಬಾಧೆಪಡುವ ಅನುಭವಗಳು" ಎಂದೂ ಅನುವಾದ ಮಾಡಬಹುದು.
- "ದಾಹಕ್ಕಾಗಿ ಕಷ್ಟಪಡು" ಎನ್ನುವ ಮಾತನ್ನು "ದಾಹವನ್ನು ಅನುಭವಿಸು" ಅಥವಾ "ದಾಹದೊಂದಿಗೆ ಕಷ್ಟಪಡುವುದು" ಎಂದೂ ಅನುವಾದ ಮಾಡಬಹುದು.
- "ಹಿಂಸೆಯಿಂದ ಕಷ್ಟಪಡುವುದು" ಎನ್ನುವ ಮಾತನ್ನು "ಹಿಂಸೆಯ ಮೂಲಕ ಹಾದುಹೋಗು" ಅಥವಾ "ಹಿಂಸೆಯ ಕೃತ್ಯಗಳಿಂದ ಹಾನಿಯನ್ನು ಅನುಭವಿಸುವುದು" ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.02:14-16
- 2 ಥೆಸ್ಸ.01:3-5
- 2 ತಿಮೊಥೆ.01:8-11
- ಅಪೊ.ಕೃತ್ಯ.07:11-13
- ಯೆಶಯಾ.53:10-11
- ಯೆರೆ.06:6-8
- ಮತ್ತಾಯ.16:21-23
- ಕೀರ್ತನೆ.022:24-25
- ಪ್ರಕ.01:9-11
- ರೋಮಾ.05:3-5

ಸತ್ಯವೇದದಿಂದ ಉದಾಹರಣೆಗಳು:

- **09:13** "ನಾನು ನನ್ನ ಜನರು _ ಕಷ್ಟ ಪಡುತ್ತಿರುವುದನ್ನು _ ನೋಡಿದ್ದೇನೆ" ಎಂದು ದೇವರು ಹೇಳಿದರು.
- **38:12** "ನನ್ನ ತಂದೆಯೇ, ಸಾಧ್ಯವಾದರೆ, ಈ _ **ಕಷ್ಟದ** _ ಬಟ್ಟಲನ್ನು ಕುಡಿಯದಂತೆ ಮಾಡು" ಎಂದು ಯೇಸು ಮೂರುಬಾರಿ ಪ್ರಾರ್ಥಿಸಿದನು.
- **42:03** ಮೆಸ್ಸೀಯನು _ **ಕಷ್ಟಪಡುವನು** _ ಮತ್ತು ಕೊಲ್ಲಲ್ಪಡುವನು, ಆದರೆ ಮೂರನೇ ದಿನದಂದು ಎದ್ದು ಬರುವನೆಂದು ಪ್ರವಾದಿಗಳು ಹೇಳಿರುವದನ್ನು ಆತನು (ಯೇಸು) ಜ್ಞಾಪಿಸಿಕೊಂಡನು.
- **42:07** "ಮೆಸ್ಸೀಯನು _ **ಕಷ್ಟಪಡುವನು** _ ಸಾಯುವನು ಮತ್ತು ಮೂರನೇ ದಿನದಂದು ಎದ್ದು ಬರುವನೆಂದು ಬರೆಯಲ್ಪಟ್ಟಿದೆ" ಎಂದು ಆತನು (ಯೇಸು) ಹೇಳಿದನು.
- **44:05** "ನೀವು ಮಾಡುತ್ತಿರುವುದನ್ನು ನೀವು ಅರ್ಥಮಾಡಿಕೊಳ್ಳದಿದ್ದರೂ, ಮೆಸ್ಸೀಯನು _ **ಕಷ್ಟಪಡುವನು** _ ಮತ್ತು ಸಾಯುವನೆಂದು ಪ್ರವಾದನೆಗಳನ್ನು ನೆರವೇರಿಸುವುದಕ್ಕೆ ನಿಮ್ಮ ಕ್ರಿಯೆಗಳನ್ನು ದೇವರು ಉಪಯೋಗಿಸಿಕೊಂಡಿದ್ದಾರೆ."
- **46:04** "ರಕ್ಷಣೆ ಹೊಂದದಿರುವವರಿಗೆ ನನ್ನ ಹೆಸರನ್ನು ಪ್ರಕಟಿಸುವುದಕ್ಕೆ ನಾನು ಇವನನ್ನು (ಸೌಲ) ಆಯ್ಕೆಮಾಡಿಕೊಂಡಿದ್ದೇನೆ. ನನ್ನ ಕುರಿತಾಗಿ ಇವನು ಎಷ್ಟು _ **ಕಷ್ಟಪಡಬೇಕೆಂದು** _ ನಾನು ತೋರಿಸುತ್ತೇನೆ" ಎಂದು ದೇವರು ಹೇಳಿದರು.
- **50:17** ಈತನು (ಯೇಸು) ಪ್ರತಿಯೊಬ್ಬರ ಕಣ್ಣೀರನ್ನು ಹೊರೆಸುವನು ಮತ್ತು ಆಲ್ಲಿ ಯಾವ _ **ಕಷ್ಟ** _, ದುಃಖ, ಅಳು, ಕೆಟ್ಟದ್ದು, ಬಾಧೆ, ಅಥವಾ ಮರಣವು ಇರುವುದಿಲ್ಲ.

ಪದ ಡೇಟಾ:

- Strong's: H943, H1741, H1934, H4342, H4531, H4912, H5142, H5254, H5375, H5999, H6031, H6040, H6041, H6064, H6090, H6770, H6869, H6887, H7661, G91, G941, G971, G2210, G2346, G2347, G3804, G3958, G4310, G4778, G4841, G5004, G5723

ಕಾನೂನು, ಕಾನೂನುಗಳು, ಕಾನೂನು ಮಾಡಲಾಗಿದೆ

ಪದದ ಅರ್ಥವಿವರಣೆ:

ಕಾನೂನು ಅಂದರೆ ಜಾಹೀರನಾಮೆ ಅಥವಾ ಜನರೆಲ್ಲರಿಗೆ ಬಹಿರಂಗವಾಗಿ ಪ್ರಕಟಿಸುವ ನ್ಯಾಯಶಾಸನ.

- ದೇವರ ನ್ಯಾಯಶಾಸನಗಳು ಕೂಡ ಕಾನೂನುಗಳೇ, ಕಟ್ಟಳೆಗಳು, ಅಥವಾ ಆಜ್ಞೆಗಳು.
- ನ್ಯಾಯಶಾಸನಗಳಿಗೆ ಮತ್ತು ಆಜ್ಞೆಗಳಿಗೆ ಒಳಗಾಗುವಂತೆಯೇ, ಕಾನೂನುಗಳಿಗೆ ತಪ್ಪದೇ ವಿಧೇಯತೆ ತೋರಿಸಬೇಕು.
- ಮನುಷ್ಯ ಆಡಳಿತಗಾರನಿಂದ ಉಂಟಾದ ಕಾನೂನಿಗೆ ಉದಾಹರಣೆ ಅಗಸ್ತನಿಂದ ಉಂಟಾದ ಪ್ರಕಟನೆ ಎಂದು ಹೇಳಬಹುದು. ಅದೇನಂದರೆ ರೋಮಾ ಸಾಮ್ರಾಜ್ಯದಲ್ಲಿ ನಿವಾಸವಾಗಿರುವ ಪ್ರತಿಯೊಬ್ಬರು ತಮ್ಮ ಸ್ವಂತ ಊರುಗಳಿಗೆ ಹೋಗಿ ಜನಗಣತಿಯಲ್ಲಿ ತಮ್ಮ ಹೆಸರುಗಳನ್ನು ಬರೆಸಬೇಕೆಂದು ಆಜ್ಞಾಪಿಸಿದ್ದನು.
- ಎನಾದರೊಂದು ಕಾನೂನಿಗೆ ಒಳಪಡಬೇಕು ಎನ್ನುವುದಕ್ಕೆ ಕೊಡಲ್ಪಟ್ಟ ಆಜ್ಞೆಗೆ ತಪ್ಪದೇ ವಿಧೇಯತೆ ತೋರಿಸಬೇಕು ಎಂದರ್ಥ. ಇದನ್ನು “ಆದೇಶ” ಅಥವಾ “ಆಜ್ಞೆ” ಅಥವಾ “ಔಪಚಾರಿಕವಾದ ಅಗತ್ಯ” ಅಥವಾ “ಬಹಿರಂಗವಾಗಿ ನ್ಯಾಯಶಾಸನ ಮಾಡು” ಎಂದೂ ಅನುವಾದ ಮಾಡಬಹುದು.
- ನಡೆಯಬೇಕೆಂದು “ಕಾನೂನು ಮಾಡಲಾಗಿದೆ” ಎನ್ನುವುದಕ್ಕೆ “ಇದು ಖಂಡಿತವಾಗಿ ನಡೆಯುತ್ತದೆ” ಅಥವಾ “ಇದು ನಿರ್ಣಯಿಸಲ್ಪಟ್ಟಿದೆ ಮತ್ತು ಇದನ್ನು ಯಾರೂ ಮಾರ್ಪಡಿಸುವುದಕ್ಕಾಗುವುದಿಲ್ಲ” ಅಥವಾ “ಇದು ನಡೆಯಬೇಕೆಂದು ನಿರ್ಬಂಧವಿಲ್ಲದೆ ಪ್ರಕಟಿಸಲಾಗಿದೆ” ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ಆಜ್ಞೆ, ಪ್ರಕಟಿಸು, ಧರ್ಮಶಾಸ್ತ್ರ, ಸಾರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.15:13-15
- 1 ಅರಸ.08:57-58
- ಅಪೊ.ಕೃತ್ಯ.17:5-7
- ದಾನಿ.02:12-13
- ಎಸ್ತೇರಳು.01:21-22
- ಲೂಕ.02:1-3

ಪದ ಡೇಟಾ:

- Strong's: H559, H633, H1697, H5715, H1504, H1510, H1881, H1882, H1696, H2706, H2708, H2710, H2711, H2782, H2852, H2940, H2941, H2942, H3791, H3982, H4055, H4406, H4941, H5407, H5713, H6599, H6680, H7010, H8421, G1378

ಕಾನೂನು, ನಿಯಮ

ಪದದ ಅರ್ಥವಿವರಣೆ:

“ಕಾನೂನು” ಎನ್ನುವುದು ನ್ಯಾಯವಾದ ನಿಯಮವಾಗಿರುತ್ತದೆ, ಇದು ಸಹಜವಾಗಿ ಅಧಿಕಾರದಲ್ಲಿರುವ ಒಬ್ಬ ವ್ಯಕ್ತಿಯಿಂದ ಬರೆಯಲ್ಪಟ್ಟಿರುತ್ತದೆ ಮತ್ತು ಜಾರಿಗೆ ಮಾಡಲಾಗಿರುತ್ತದೆ. “ಕಾನೂನು” ಎನ್ನುವುದು ಒಂದು ನಡತೆಗೆ ಮತ್ತು ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಮಾರ್ಗದರ್ಶನವಾಗಿರುತ್ತದೆ.

- “ಕಾನೂನು” ಮತ್ತು “ನಿಯಮ” ಎನ್ನುವ ಎರಡು ಪದಗಳು ಒಬ್ಬ ವ್ಯಕ್ತಿಯ ನಡತೆಗೆ ಮಾರ್ಗದರ್ಶನ ಮಾಡುವ ಒಂದು ಸಾಧಾರಣವಾದ ನಿಬಂಧನೆ ಅಥವಾ ನಂಬಿಕೆಯನ್ನು ಸೂಚಿಸುತ್ತವೆ.
- “ಕಾನೂನು” ಎನ್ನುವ ಪದದ ಅರ್ಥಕ್ಕು ಮತ್ತು “ಮೋಶೆ ಧರ್ಮಶಾಸ್ತ್ರ” ಎನ್ನುವುದಕ್ಕೂ ತುಂಬಾ ವ್ಯತ್ಯಾಸವಿರುತ್ತದೆ, ಮೋಶೆ ಧರ್ಮಶಾಸ್ತ್ರವು ದೇವರು ಇಸ್ರಾಯೇಲ್ಯರಿಗೆ ಕೊಟ್ಟ ಆಜ್ಞೆಗಳನ್ನು ಮತ್ತು ಕಟ್ಟಳೆಗಳನ್ನು ಸೂಚಿಸುತ್ತದೆ.
- ಸಾಧಾರಣವಾದ ಕಾನೂನನ್ನು ಸೂಚಿಸಿದಾಗ, “ಕಾನೂನು” ಎನ್ನುವ ಪದವನ್ನು “ನಿಯಮ” ಅಥವಾ “ಸಾಧಾರಣವಾದ ನಿಬಂಧನೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕಾನೂನು, ಕಾನೂನು)

ಸತ್ಯವೇದದ ಅನುಬಂಧ ವಾಕ್ಯಗಳು:

- ಧರ್ಮೋ.04:೦೨
- ಎಸ್ತೇ.03:8-9
- ವಿಮೋ.12:12-14
- ಆದಿ.26:05
- ಯೋಹಾನ.18:31
- ರೋಮಾ.07:1

ಪದ ಡೇಟಾ:

- Strong's: H1285, H1881, H1882, H2706, H2708, H2710, H4687, H4941, H6310, H7560, H8451, G1785, G3548, G3551, G4747

ಕಾನೂನುಬದ್ಧ, ಕಾನೂನುಬದ್ಧವಲ್ಲದ, ಕಾನೂನುಬದ್ಧ ಅಲ್ಲ , ಕಾನೂನು ಬಾಹಿರ, ಅಧರ್ಮ

ಪದದ ಅರ್ಥವಿವರಣೆ:

“ಕಾನೂನುಬದ್ಧ” ಎನ್ನುವ ಪದವು ಕಾನಾನು ಪ್ರಕಾರವಾಗಿ ಅಥವಾ ಇತರ ಅಗತ್ಯತೆಯ ಪ್ರಕಾರವಾಗಿ ಅನುಮತಿ ಹೊಂದುವ ಯಾವುದಾದರೊಂದನ್ನು ಸೂಚಿಸುತ್ತದೆ. ಈ ಪದಕ್ಕೆ “ಕಾನೂನುರಹಿತ” ಎಂದು ವಿರುದ್ಧಾತ್ಮಕ ಪದವಾಗಿರುತ್ತದೆ, ಇದಕ್ಕೆ “ಕಾನೂನುಬದ್ಧವಲ್ಲದ” ಎಂದರ್ಥ.

- ಸತ್ಯವೇದದಲ್ಲಿ ದೇವರ ನೈತಿಕತೆಯ ಆಜ್ಞೆಯಿಂದ ಅಥವಾ ಮೋಶೆಯ ಧರ್ಮಶಾಸ್ತ್ರದಿಂದ ಮತ್ತು ಇತರ ಯೆಹೂದ್ಯ ಕಾನೂನುಗಳಿಂದ ಅನುಮತಿ ಕೊಡಲ್ಪಟ್ಟಿರುವುದೇ “ಕಾನೂನುಬದ್ಧ”ವಾಗಿರುತ್ತದೆ, “ಕಾನೂನುರಹಿತವಾದದ್ದು” ಯಾವುದಾದರೂ ಆ ಕಾನೂನುಗಳಿಂದ “ಅನುಮತಿ ಹೊಂದಿರುವುದಿಲ್ಲ”.
- “ಕಾನೂನುಬದ್ಧವಾಗಿ” ಯಾವುದಾದರೊಂದನ್ನು ಮಾಡುವುದು ಎಂದರೆ ಅದನ್ನು “ಸರಿಯಾದ ವಿಧಾನದಲ್ಲಿ” ಮಾಡುವುದು ಎಂದರ್ಥ ಅಥವಾ “ಸರಿಯಾದ ಪದ್ಧತಿಯಲ್ಲಿ ಮಾಡುವುದು” ಎಂದರ್ಥ.
- ಯೆಹೂದ್ಯ ಕಾನೂನುಗಳಲ್ಲಿ ಕಾನೂನುಬದ್ಧವಾಗಿರುವುದು ಅಥವಾ ಕಾನೂನುರಹಿತವಲ್ಲದ್ದು ಎಂದು ಪರಿಗಣಿಸಿದ ಅನೇಕ ವಿಷಯಗಳು ಒಬ್ಬರಿಗೊಬ್ಬರು ಪ್ರೀತಿಸುವುದರ ಕುರಿತಾಗಿ ದೇವರ ನ್ಯಾಯಶಾಸನಗಳೊಂದಿಗಿರುವ ಒಪ್ಪಂದದಲ್ಲಿಲ್ಲ.
- ಸಂದರ್ಭಾನುಸಾರವಾಗಿ, “ಕಾನೂನುಬದ್ಧ” ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನದಲ್ಲಿ “ಅನುಮತಿಸಿದೆ” ಅಥವಾ “ದೇವರ ಧರ್ಮಶಾಸ್ತ್ರದ ಪ್ರಕಾರ” ಅಥವಾ “ನಮ್ಮ ಕಾನೂನುಗಳನ್ನು ಅನುಸರಿಸುವುದರ ಮೂಲಕ” ಅಥವಾ “ಸರಿಯಾಗಿ” ಅಥವಾ "ಯೋಗ್ಯವಾಗಿ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಇದು ಕಾನೂನುಬದ್ಧವೊ?” ಎನ್ನುವ ಮಾತನ್ನು “ನಮ್ಮ ಕಾನೂನುಗಳು ಅನುಮತಿ ಕೊಡುತ್ತಿದ್ದವೋ?” ಅಥವಾ “ಯಾವುದಾದರೊಂದರ ವಿಷಯವನ್ನು ನಮ್ಮ ಕಾನೂನುಗಳು ಅನುಮತಿಸುತ್ತವೋ?” ಎಂದೂ ಅನುವಾದ ಮಾಡಬಹುದು.

“ಕಾನೂನುರಹಿತ” ಮತ್ತು “ಕಾನೂನುವಲ್ಲದ” ಎನ್ನುವ ಪದಗಳು ಕಾನೂನು ಉಲ್ಲಂಘಿಸಿ ಮಾಡುವ ಕ್ರಿಯೆಗಳನ್ನು ವಿವರಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತವೆ.

- ಹೊಸ ಒಡಂಬಡಿಕೆಯಲ್ಲಿ “ಕಾನೂನಲ್ಲದ” ಎನ್ನುವ ಪದವು ದೇವರ ಆಜ್ಞೆಗಳನ್ನು ಉಲ್ಲಂಘಿಸುವುದನ್ನು ಮಾತ್ರವೇ ಸೂಚಿಸುವುದಕ್ಕೆ ಉಪಯೋಗಿಸದೇ, ಯೆಹೂದ್ಯರು ಮಾಡಿದ ನಿಯಮಗಳನ್ನು ಅಥವಾ ಕಾನೂನುಗಳನ್ನು ಉಲ್ಲಂಘಿಸುವುದನ್ನೂ ಸೂಚಿಸುತ್ತವೆ.
- ಅನೇಕ ವರ್ಷಗಳಾದ ಮೇಲೆ, ಯೆಹೂದ್ಯರು ತಮಗೆ ದೇವರು ಕೊಟ್ಟ ಕಾನೂನುಗಳನ್ನು ಸೇರಿಸಿರುತ್ತಾರೆ. ಯೆಹೂದ್ಯರ ನಾಯಕರು ತಾವು ಮಾಡಿದ ಕಾನೂನುಗಳಿಗೆ ನಿಶ್ಚಯಪಡಿಸದಿದ್ದರೆ ಅವರು ಅದನ್ನು “ಕಾನೂನುರಹಿತ” ಎಂದು ಕರೆಯುತ್ತಾರೆ.
- ಯೇಸು ಮತ್ತು ತನ್ನ ಶಿಷ್ಯರು ಸಬ್ಬತ್ ದಿನದಂದು ಕಾಳುಗಳನ್ನು ಕಿತ್ತುಕೊಳ್ಳುವಾಗ, ಫರಿಸಾಯರು ಆವರು ಮಾಡುತ್ತಿರುವದನ್ನು ‘ಕಾನೂನುರಹಿತವೆಂದು” ಆರೋಪಿಸಿದರು, ಯಾಕಂದರೆ ಆ ದಿನದಂದು ಅದನ್ನು ಮಾಡುವುದು ಯೆಹೂದ್ಯರ ಕಾನೂನುಗಳನ್ನು ಉಲ್ಲಂಘನೆ ಮಾದುವುದಾಗಿರುತ್ತದೆ.
- ಅಪವಿತ್ರವಾದ ಆಹಾರ ಪದಾರ್ಥಗಳನ್ನು ತಿನ್ನುವುದು “ಕಾನೂನುರಹಿತವಾದದ್ದು” ಎಂದು ಪೇತ್ರನು ಹೇಳಿದಾಗ, ಆತನ ಅರ್ಥವೇನೆಂದರೆ ಆತನು ಆಹಾರ ಪದಾರ್ಥಗಳನ್ನು ತಿಂದಾಗ, ದೇವರು ಇಸ್ರಾಯೇಲ್ಯರಿಗೆ ಕೆಲವೊಂದು ಆಹಾರ ಪದಾರ್ಥಗಳನ್ನು ತಿನ್ನಬಾರದೆಂದು ಹೇಳಿದವುಗಳ ಕುರಿತಾಗಿ ಕೊಟ್ಟ ಕಾನೂನುಗಳನ್ನು ಆತನು ಉಲ್ಲಂಘನೆ ಮಾಡುತ್ತಿದ್ದಾನೆಂದು ಅದರ ಅರ್ಥವಾಗಿರುತ್ತದೆ.

“ಕಾನೂನುರಹಿತ” ಎನ್ನುವ ಪದವು ಒಬ್ಬ ವ್ಯಕ್ತಿ ಧರ್ಮಶಾಸ್ತ್ರಕ್ಕೆ ಅಥವಾ ನಿಯಮಗಳಿಗೆ ವಿಧೇಯನಾಗದ ವ್ಯಕ್ತಿಯನ್ನು ವಿವರಿಸುತ್ತದೆ. ಒಂದು ದೇಶವು ಅಥವಾ ಜನರ ಗುಂಪು “ಕಾನೂನುರಹಿತವಾದ” ಸ್ಥಿತಿಯಲ್ಲಿದ್ದಾಗ, ಆ ದೇಶದಲ್ಲಿ ಅವಿಧೇಯತೆಯು, ತಿರಸ್ಕಾರವು, ಅನೈತಿಕತೆಯು ವ್ಯಾಪಕವಾಗಿರುತ್ತದೆ.

- ಕಾನೂನುರಹಿತವಾದ ಒಬ್ಬ ವ್ಯಕ್ತಿ ತಿರಸ್ಕಾರ ಮಾಡುವವನಾಗಿ, ದೇವರ ಧರ್ಮಶಾಸ್ತ್ರಕ್ಕೆ (ಅಥವಾ ಆಜ್ಞೆಗಳಿಗೆ) ಅವಿಧೇಯನಾಗಿರುತ್ತಾನೆ.
- ಅಂತ್ಯ ದಿನಗಳಲ್ಲಿ “ಅಧರ್ಮ ಪುರುಷನು” ಅಥವಾ “ಕಾನೂನುರಹಿತವಾದ ವ್ಯಕ್ತಿ” ಬರುತ್ತಾನೆಂದು ಅಪೊಸ್ತಲನಾದ ಪೌಲನು ಬರೆದಿದ್ದಾನೆ, ಇವನು ಅನೇಕ ದುಷ್ಟ ಕಾರ್ಯಗಳನ್ನು ಮಾಡುವುದಕ್ಕೆ ಸೈತಾನನಿಂದ ಪ್ರಭಾವಿಸಲ್ಪಡುತ್ತಾನೆ.

ಅನುವಾದ ಸಲಹೆಗಳು:

- “ಕಾನೂನಲ್ಲದ” ಎನ್ನುವ ಮಾತನ್ನು “ಕಾನೂನುರಹಿತವಾದ” ಅಥವಾ “ಕಾನೂನು ಉಲ್ಲಂಘಿಸುವ” ಎನ್ನುವ ಅರ್ಥಗಳು ಬರುವ ಮಾತುಗಳನ್ನು ಉಪಯೋಗಿಸಿ ಅನುವಾದ ಮಾಡಬಹುದು.
- “ಕಾನೂನುರಹಿತ” ಎನ್ನುವ ಮಾತನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ, “ಅನುಮತಿ ಹೊಂದಿರುವುದಿಲ್ಲ” ಅಥವಾ “ದೇವರ ಧರ್ಮಶಾಸ್ತ್ರಾನುಸಾರವಲ್ಲದ” ಅಥವಾ “ನಮ್ಮ ಕಾನೂನುಗಳಿಗೆ ಸರಿಹೊಂದದ” ಎನ್ನುವ ಪದಗಳನ್ನು ಸೇರಿಸಬಹುದು.
- “ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ” ಎನ್ನುವ ಮಾತಿಗೆ “ಕಾನೂನುರಹಿತ” ಎನ್ನುವ ಒಂದೇ ಅರ್ಥವನ್ನು ಹೊಂದಿರುತ್ತದೆ.
- “ಧರ್ಮರಹಿತ” ಎನ್ನುವ ಮಾತನ್ನು “ತಿರಸ್ಕಾರ ಮಾಡುವುದು” ಅಥವಾ “ಅವಿಧೇಯನು” ಅಥವಾ “ಧರ್ಮವನ್ನು ಉಲ್ಲಂಘಿಸುವವನು” ಎಂದೂ ಅನುವಾದ ಮಾಡಬಹುದು.
- “ಅಧರ್ಮ” ಎನ್ನುವ ಮಾತನ್ನು “ಯಾವ ಕಾನೂನುಗೆ ವಿಧೇಯತೆ ತೋರಿಸಿದ” ಅಥವಾ “(ದೇವರ ಧರ್ಮಶಾಸ್ತ್ರ ವಿರುದ್ಧವಾಗಿ) ತಿರಸ್ಕಾರ ಮಾಡುವುದು” ಎಂದೂ ಅನುವಾದ ಮಾಡಬಹುದು.
- “ಅಧರ್ಮ ಪುರುಷ” ಎನ್ನುವ ಮಾತನ್ನು “ಧರ್ಮಶಾಸ್ತ್ರದಲ್ಲಿರುವ ಯಾವುದಕ್ಕೂ ವಿಧೇಯನಾಗದ ಪುರುಷ” ಅಥವಾ “ದೇವರ ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ತಿರಸ್ಕಾರ ಮಾಡುವ ವ್ಯಕ್ತಿ” ಎಂದೂ ಅನುವಾದ ಮಾಡಬಹುದು.
- ಒಂದುವೇಳೆ ಸಾಧ್ಯವಾದರೆ ಈ ಮಾತಿನಲ್ಲಿರುವ “ಧರ್ಮ” ಎನ್ನುವ ಪರಿಕಲ್ಪನೆಯನ್ನು ಇಟ್ಟುಕೊಂಡಿರುವುದು ಪ್ರಾಮುಖ್ಯ.

- “ಕಾನೂನಲ್ಲದ” ಎನ್ನುವ ಪದಕ್ಕಿರುವ ಅರ್ಥವು ಈ ಪದದಲ್ಲಿರುವ ಅರ್ಥಕ್ಕೂ ತುಂಬಾ ವ್ಯತ್ಯಾಸವಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಧರ್ಮ, ಕಾನೂನು, ಮೋಶೆ, ಸಬ್ಬತ್)

ಸತ್ಯವೇದದ ಅನುಬಂಧ ವಾಕ್ಯಗಳು:

- ಮತ್ತಾಯ.07:21-23
- ಮತ್ತಾಯ.12:02
- ಮತ್ತಾಯ.12:04
- ಮತ್ತಾಯ.12:10
- ಮಾರ್ಕ.03:04
- ಲೂಕ.06:02
- ಅಪೊ.ಕೃತ್ಯ.23
- ಅಪೊ.ಕೃತ್ಯ.10:28
- ಅಪೊ.ಕೃತ್ಯ.22:25
- 2 ಥೆಸ್ಸ.02:03
- ತೀತ.02:14
- 1 ಯೋಹಾನ.03:4-6

ಪದ ಡೇಟಾ:

- Strong's: H6530, G111, G113, G266, G458, G459, G1832, G3545

ಕಾಮ, ಕಾಮಾಸಕ್ತಿ, ಕಾಮಗೊಂಡಿದೆ, ಕಾಮುಕ, ಕಾಮಾಶಕ್ತಿ

ಪದದ ಅರ್ಥವಿವರಣೆ:

ಕಾಮ ಎನ್ನುವುದು ಅತೀ ಬಲವಾದ ಬಯಕೆಯಾಗಿರುತ್ತದೆ, ಸಹಜವಾಗಿ ಯಾವುದಾದರೊಂದು ಪಾಪಪೂರ್ಣವಾಗಿ ಅಥವಾ ಅನೈತಿಕವಾಗಿರುವುದಕ್ಕೆ ಬಯಸುವ ಸಂದರ್ಭವಾಗಿರುತ್ತದೆ. ಕಾಮ ಎಂದರೆ ಕಾಮವನ್ನು ಹೊಂದಿರುವುದು ಎಂದರ್ಥ.

- ಸತ್ಯವೇದದಲ್ಲಿ "ಕಾಮ" ಎನ್ನುವ ಪದವು ಸಹಜವಾಗಿ ಒಬ್ಬರು ತನ್ನ ಹೆಂಡತಿಯನ್ನಾಗಲಿ ಅಥವಾ ಗಂಡನನ್ನಾಗಲಿ ಬಿಟ್ಟು ಬೇರೆಯವರೊಂದಿಗೆ ಲೈಂಗಿಕವಾಗಿ ಕೂಡಬೇಕೆನ್ನುವ ಆಸೆಯನ್ನು ಸೂಚಿಸುತ್ತದೆ.
- ವಿಗ್ರಹಗಳ ಆರಾಧನೆಯನ್ನು ಸೂಚಿಸುವುದಕ್ಕೆ ಅಲಂಕಾರಿಕ ಭಾವನೆಯಲ್ಲಿ ಈ ಪದವನ್ನು ಕೆಲವೊಂದುಬಾರಿ ಉಪಯೋಗಿಸಲಾಗಿದೆ.
- ಸಂದರ್ಭಾನುಸಾರವಾಗಿ "ಕಾಮ" ಎನ್ನುವ ಪದವನ್ನು "ತಪ್ಪಾದ ಆಸೆ" ಅಥವಾ "ಬಲವಾದ ಅಸೆ" ಅಥವಾ "ತಪ್ಪಾದ ಲೈಂಗಿಕವಾದ ಆಸೆ" ಅಥವಾ "ಬಲವಾದ ಅನೈತಿಕಯುಳ್ಳ ಅಸೆ" ಅಥವಾ "ಪಾಪ ಮಾಡುವುದಕ್ಕೆ ಬಲವಾದ ಆಸೆ" ಎಂದೂ ಅನುವಾದ ಮಾಡಬಹುದು.

"ಕಾಮತುರತೆಯಿಂದಿರುವುದು" ಎನ್ನುವ ಮಾತನ್ನು "ತಪ್ಪಾದ ಆಸೆ" ಅಥವಾ "ಯಾವುದಾದರೊಂದರ ಕುರಿತಾಗಿ ಅನೈತಿಕವಾಗಿ ಆಲೋಚನೆ ಮಾಡುವುದು" ಅಥವಾ "ಅನೈತಿಕವಾದ ಆಲೋಚನೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ವ್ಯಭಿಚಾರ, ಸುಳ್ಳು ದೇವರು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.02:16
- 2 ತಿಮೊಥೆ.02:22
- ಗಲಾತ್ಯ.05:16
- ಗಲಾತ್ಯ.05:19-21
- ಆದಿ.39:7-9
- ಮತ್ತಾಯ.05:28

ಪದ ಡೇಟಾ:

- Strong's: H183, H185, H310, H1730, H2181, H2183, H2530, H5178, H5375, H5689, H5691, H5869, H7843, G766, G1937, G1939, G2237, G3715, G3806

ಕಾವಲು ಗೋಪುರ, ಕಾವಲು ಗೋಪುರಗಳು, ಗೋಪುರ

ಪದದ ಅರ್ಥವಿವರಣೆ:

"ಕಾವಲು ಗೋಪುರ" ಎನ್ನುವ ಈ ಮಾತು ಅಪಾಯವು ಸಂಭವಿಸುತ್ತದೆಯೆಂದು ಕಾವಲುಗಾರರು ನೋಡುವುದಕ್ಕೆ ಕಟ್ಟಿಕೊಂಡಿರುವ ಒಂದು ದೊಡ್ಡ ಎತ್ತರವಾದ ನಿರ್ಮಾಣವನ್ನು ಸೂಚಿಸುತ್ತದೆ. ಈ ಗೋಪುರಗಳು ಅನೇಕಬಾರಿ ಕಲ್ಲುಗಳಿಂದ ನಿರ್ಮಿಸಲ್ಪಡುತ್ತವೆ.

- ಭೂಮಾಲೀಕರು ಕೆಲವೊಂದುಸಲ ತಮ್ಮ ಹೊಲಗಳನ್ನು ಕಾಯುವುದಕ್ಕೆ ಮತ್ತು ತಮ್ಮ ಹೊಲಗಳಲ್ಲಿ ಬೆಳೆಯುವ ಬೆಳೆಗಳನ್ನು ಯಾರೂ ಕದಿಯದಂತೆ ಕಾಪಾಡಿಕೊಳ್ಳುವುದಕ್ಕೆ ಕಾವಲು ಗೋಪುರಗಳನ್ನು ನಿರ್ಮಿಸಿಕೊಳ್ಳುತ್ತಾರೆ.
- ಗೋಪುರಗಳಲ್ಲಿ ಅನೇಕಬಾರಿ ಕೊಠಡಿಗಳನ್ನು ನಿರ್ಮಿಸುತ್ತಾರೆ, ಯಾಕಂದರೆ ಕಾವಲುಗಾರರು ಅಥವಾ ಕುಟುಂಬದವರು ಆ ಕೊಠಡಿಗಳಲ್ಲಿ ನಿವಾಸ ಮಾಡುತ್ತಿದ್ದರು, ಇದರಿಂದ ಅವರು ರಾತ್ರಿ ಹಗಲು ಬೆಳೆಗಳಿಗೆ ಕಾವಲು ಇರುತ್ತಿದ್ದರು.
- ಪಟ್ಟಣಗಳಿಗಾಗಿ ನಿರ್ಮಿಸಿರುವ ಕಾವಲು ಗೋಪುರಗಳನ್ನು ಪಟ್ಟಣದ ಗೋಡೆಗಳಿಗಿಂತ ಇನ್ನೂ ಎತ್ತರವಾಗಿ ನಿರ್ಮಿಸಿರುತ್ತಾರೆ, ಇದರಿಂದ ಕಾವಲುಗಾರರು ಪಟ್ಟಣವನ್ನು ಧಾಳಿ ಮಾಡುವುದಕ್ಕೆ ಬರುತ್ತಿರುವ ಶತ್ರುಗಳನ್ನು ನೋಡುವುದಕ್ಕೆ ಸಾಧ್ಯವಾಗುತ್ತದೆ.
- "ಕಾವಲು ಗೋಪುರ" ಎನ್ನುವ ಮಾತನ್ನು ಶತ್ರುಗಳಿಂದ ರಕ್ಷಿಸಿಕೊಳ್ಳುವ ಚಿಹ್ನೆಯಾಗಿಯೂ ಉಪಯೋಗಿಸಲ್ಪಟ್ಟಿರುತ್ತದೆ. (ನೋಡಿರಿ: ರೂಪಕಾಲಂಕಾರ)

(ಈ ಪದಗಳನ್ನು ಸಹ ನೋಡಿರಿ : ವಿರೋಧಿ, ವೀಕ್ಷಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.27:25-27
- ಯೆಹೆ.26:3-4
- ಮಾರ್ಕ.12:1-3
- ಮತ್ತಾಯ.21:33-34
- ಕೀರ್ತನೆ.062:1-2

ಪದ ಡೇಟಾ:

- Strong's: H803, H969, H971, H975, H1785, H2918, H4024, H4026, H4029, H4692, H4707, H4869, H6076, H6438, H6836, H6844, G4444

ಕಿರೀಟ, ಕಿರೀಟಗಳು, ಕಿರೀಟ ಧರಿಸಲ್ಪಟ್ಟಿದೆ

ಪದದ ಅರ್ಥವಿವರಣೆ

ಅರಸರು ಮತ್ತು ರಾಣಿಯರು ತಮ್ಮ ತಲೆಯ ಮೇಲೆ ಧರಿಸುತ್ತಿದ್ದ ಅಲಂಕಾರಿಸಲ್ಪಟ್ಟ ವೃತ್ತಾಕಾರದ ಆಭರಣವನ್ನು ಕಿರೀಟ ಎನ್ನುತ್ತಾರೆ. "ಕಿರೀಟ ಇಡುವುದು" ಎನ್ನುವ ಪದಕ್ಕೆ ಪಟ್ಟಾಭಿಷೇಕ ಮಾಡುವುದು ಎಂದರ್ಥ; ಇದನ್ನು ಅಲಂಕಾರಿಕ ರೂಪದಲ್ಲಿ "ಗೌರವಿಸುವುದು" ಎಂದರ್ಥ.

- ಸಹಜವಾಗಿ ಕಿರೀಟಗಳನ್ನು ಬೆಳ್ಳಿ ಅಥವಾ ಬಂಗಾರದಲ್ಲಿ ಮಾಡುತ್ತಾರೆ ಮತ್ತು ಅದಕ್ಕೆ ಪಚ್ಚೆಗಳು ಮತ್ತು ಪದ್ಮರಾಗ ಎಂತಹ ಅಮೂಲ್ಯವಾದ ರತ್ನಗಳಿಂದ ಅಲಂಕರಿಸಲ್ಪಟ್ಟಿರುತ್ತದೆ.
- ಅರಸನ ಅಧಿಕಾರ ಮತ್ತು ಸಂಪತ್ತನ್ನು ಸೂಚಿಸಲು ಕಿರೀಟ ಒಂದು ಚಿಹ್ನೆಯಾಗಿತ್ತು.
- ಆದರೆ ಇದಕ್ಕೆ ವಿರುದ್ಧವಾಗಿ ರೋಮಾ ಸೈನಿಕರು ಯೇಸುವಿನ ತಲೆಯ ಮೇಲೆ ಮುಳ್ಳಿನ ಮುಕುಟವನ್ನು ಇಟ್ಟರು. ಇದು ಆತನನ್ನು ಅಪಹಾಸ್ಯ ಮಾಡಲು ಮತ್ತು ಆತನನ್ನು ನೋಯಿಸಲು ಮಾಡಿದರು.
- ಪ್ರಾಚೀನ ಕಾಲದಲ್ಲಿ, ಕ್ರೀಡಾಕಾರರು ಜಯವನ್ನು ಹೊಂದಿದಾಗ ಅವರಿಗೆ ಆಲಿವ್ ಕೊಂಬೆಗಳಿಂದ ಮಾಡಿರುವ ಕಿರೀಟವನ್ನು ಬಹುಕರಿಸುತ್ತಿದ್ದರು. ತಿಮೊಥೆಯನಿಗೆ ಬರೆದ ಎರಡನೆಯ ಪತ್ರಿಕೆಯಲ್ಲಿ ಅಪೊಸ್ತಲನಾದ ಪೌಲನು ಈ ಕಿರೀಟವನ್ನು ಕುರಿತಾಗಿ ಹೇಳುತ್ತಿದ್ದಾನೆ.
- "ಕಿರೀಟ ಇಡುವುದು" ಎನ್ನುವ ಪದವನ್ನು ಅಲಂಕಾರಿಕ ರೂಪದಲ್ಲಿ ಯಾರನ್ನಾದರೂ ಗೌರವಿಸಲು ಎಂದರ್ಥ. ನಾವು ದೇವರನ್ನು ಗೌರವಿಸಬೇಕಾದರೆ ಆತನಿಗೆ ವಿಧೇಯರಾಗಿರಬೇಕು ಮತ್ತು ಬೇರೆಯವರ ಮುಂದೆ ಆತನನ್ನು ಕೊಂಡಡಬೇಕು. ಇದು ಆತನಿಗೆ ಕಿರೀಟವನ್ನಿಟ್ಟು ಮತ್ತು ಆತನು ಅರಸನೆಂದು ನಾವು ಒಪ್ಪಿಕೊಂಡಿದ್ದೇವೆಂದುತೋರಿಸುತ್ತದೆ.
- ಪೌಲನು ತನ್ನ ಸಹ ವಿಶ್ವಾಸಿಗಳನ್ನು ತನ್ನ "ಆನಂದ ಮತ್ತು ಕಿರೀಟ" ಎಂದು ಸಂಬೋಧಿಸಿದ್ದಾರೆ. ಈ ವಿಶ್ವಾಸಿಗಳು ಹೇಗೆ ದೇವರಿಗೆ ನಂಬಿಗಸ್ತರಾಗಿದ್ದು ಆತನಿಗೆ ಸೇವೆ ಮಾಡುತ್ತಿದ್ದರೆಂದು, ಮತ್ತು ಅದು ಪೌಲನಿಗೆ ದೊಡ್ಡ ಆಶೀರ್ವಾದ ಮತ್ತು ಗೌರವವೆಂದು ಹೇಳಲು ಈ ಮಾತಿನಲ್ಲಿ "ಕಿರೀಟ" ಎನ್ನುವ ಪದವನ್ನು ಅಲಂಕಾರಿಕ ರೂಪದಲ್ಲಿ ಉಪಯೋಗಿಸಿದ್ದಾರೆ.
- "ಕಿರೀಟ" ಎನ್ನುವ ಪದವನ್ನು ಅಲಂಕಾರಿಕ ರೂಪದಲ್ಲಿ ಉಪಯೋಗಿಸಲ್ಪಟ್ಟಿದ್ದರೆ ಅದನ್ನು "ಬಹುಮಾನ" ಅಥವಾ "ಗೌರವ" ಅಥವಾ "ಪುರಸ್ಕಾರ" ಎಂದು ಅನುವಾದ ಮಾಡಬಹುದು.
- "ಕಿರೀಟ ಇಡುವುದು" ಎನ್ನುವ ಪದಗಳನ್ನು "ಗೌರವಿಸಲು" ಅಥವಾ "ಅಲಂಕರಿಸಲು" ಎಂದು ಅನುವಾದ ಮಾಡಬಹುದು.
- ಒಂದು ವ್ಯಕ್ತಿಗೆ "ಕಿರೀಟವನ್ನು ಧರಿಸಲ್ಪಟ್ಟಿದೆ" ಎಂದು ಹೇಳಲು "ಅವನ ತಲೆಯ ಮೇಲೆ ಕಿರೀಟವನ್ನು ಇಟ್ಟಿದರು" ಎಂದು ಅನುವಾದ ಮಾಡಬಹುದು.
- "ಮಹಿಮೆ ಮತ್ತು ಮಹತ್ವವನ್ನು ಆತನಿಗೆ ಕಿರೀಟವನ್ನಾಗಿ ಧರಿಸಲು ಮಾಡಿದರು" ಎಂದು ಹೇಳಲು "ಆತನ ಮೇಲೆ ಮಹಿಮೆ ಮತ್ತು ಮಹತ್ವವು ನೆಲಗೊಂಡಿತ್ತು" ಅಥವಾ "ಆತನಿಗೆ ಮಹಿಮೆ ಮತ್ತು ಮಹತ್ವ ಸಲ್ಲಿಸಿದರು" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಮಹಿಮೆ, ಅರಸ, ಆಲಿವ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.19:1-3
- ಪ್ರಲಾಪ.05:15-16
- ಮತ್ತಾಯ.27:27-29
- ಫಿಲಿಪ್ಪಿ.04:1-3
- ಕೀರ್ತನೆ.021:3-4
- ಪ್ರಕಟನೆ.03:9-11

ಪದ ಡೇಟಾ:

- Strong's: H2213, H3803, H3804, H4502, H5145, H5849, H5850, H6936, G1238, G4735, G4737

ಕುಟುಂಬ, ಕುಟುಂಬದವರು

ಪದದ ಅರ್ಥವಿವರಣೆ

“ಕುಟುಂಬ” ಎನ್ನುವ ಪದವು ರಕ್ತ ಸಂಬಂಧ ಹೊಂದಿರುವ ಒಂದು ಗುಂಪಿನ ಜನರಿಗೆ ಸೂಚಿಸುತ್ತದೆ, ಅವರಲ್ಲಿ ತಂದೆ, ತಾಯಿ, ಮತ್ತು ತಮ್ಮ ಮಕ್ಕಳು ಇರಬಹುದು. ಕೆಲವೊಮ್ಮೆ ಅದರಲ್ಲಿ ಅಜ್ಜ, ಅಜ್ಜಿ, ಮೊಮ್ಮಕ್ಕಳು, ಚಿಕ್ಕಪ್ಪ, ಚಿಕ್ಕಮ್ಮ ಎಂಬುವ ಬೇರೆ ಸಂಬಂಧಿಕರು ಇರುತ್ತಾರೆ.

- ಸತ್ಯವೇದ ಕಾಲದಲ್ಲಿ, ಸಾಮಾನ್ಯವಾಗಿ ಹಳೆಯ ಮನುಷ್ಯನು ಕುಟುಂಬದ ಪ್ರಮುಖ ಅಧಿಕಾರವನ್ನು ಹೊಂದಿದ್ದನು.
- ಕುಟುಂಬದಲ್ಲಿ ಕೆಲವೊಮ್ಮೆ ಸೇವಕರು, ಉಪಪತ್ನಿಯರು ಮತ್ತು ಪರದೇಶೀಯರು ಸಹ ಇರುತ್ತಿದ್ದರು.
- ತಂದೆತಾಯಿ ಮತ್ತು ಮಕ್ಕಳನ್ನು ಮಾತ್ರವೇ ಅಲ್ಲದೆ ಬೇರೆಯವರನ್ನು ಸಹ ಸೂಚಿಸಲು ಕೆಲವು ಭಾಷೆಗಳಲ್ಲಿ “ಕುಲ” ಅಥವಾ “ಮನೆತನ” ಎಂಬ ವಿಶಾಲ ಅರ್ಥವುಳ್ಳ ಪದಗಳನ್ನು ಹೊಂದಿರುತ್ತದೆ.
- ಹೊಸ ಒಡಂಬಡಿಕೆಯು ಸಭೆಯನ್ನು ಉಲ್ಲೇಖಿಸಲು "ಕುಟುಂಬ" ಎಂಬ ಪರಿಕಲ್ಪನೆಗೆ ಸಂಬಂಧಿಸಿದ ಪದಗಳನ್ನು ಹೆಚ್ಚಾಗಿ ಬಳಸುತ್ತದೆ, ಅಂದರೆ ಯೇಸುವನ್ನು ನಂಬುವ ಜನರು.

(ಈ ಪದಗಳನ್ನು ಸಹ ನೋಡಿರಿ : ಕುಲ, ಪೂರ್ವಜರು, ಮನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.08:1-2
- 1 ಸಮು.18:18
- ವಿಮೋ.01:21
- ಯೆಹೋ.02:12-13
- ಲೂಕ.02:04

ಪದ ಡೇಟಾ:

- Strong's: H1, H251, H272, H504, H1004, H1121, H2233, H2859, H2945, H3187, H4138, H4940, H5387, H5712, G1085, G3614, G3624, G3965

ಕುಡಿಯುವದು, ಕುಡುಕ

ಸತ್ಯಾಂಶಗಳು:

“ಕುಡಿಯುವುದು” ಎನ್ನುವ ಪದಕ್ಕೆ ಮದ್ಯಪಾನವನ್ನು ಹೆಚ್ಚಾಗಿ ಕುಡಿಯುವದರಿಂದ ಮಾದಕವಾಗುವುದನ್ನು ಸೂಚಿಸುತ್ತದೆ.

“ಕುಡುಕ” ಎನ್ನುವ ಪದವು ಪದೇ ಪದೇ ಹೆಚ್ಚಾಗಿ ಕುಡಿಯುವ ವ್ಯಕ್ತಿಯನ್ನು ಸೂಚಿಸುತ್ತದೆ. ಈ ರೀತಿಯ ವ್ಯಕ್ತಿಯನ್ನು “ಮದ್ಯಪಾನಿ” ಎಂದು ಸೂಚಿಸುತ್ತಾರೆ.

- ಮದ್ಯಪಾನಿಯಗಳನ್ನು ಕುಡಿಯಬಾರದೆಂದು ಸತ್ಯವೇದವು ವಿಶ್ವಾಸಿಗಳಿಗೆ ಹೇಳುತ್ತದೆ, ಆದರೆ ದೇವರ ಪವಿತ್ರಾತ್ಮನಿಂದ ನಿಯಂತ್ರಿಸಲ್ಪಡಬೇಕೆಂದು ಹೇಳುತ್ತದೆ.
- ಮದ್ಯಪಾನ ಸೇವನೆ ಮೂರ್ಖತನವೆಂದು ಮತ್ತು ಅದು ಇತರ ವಿಧಾನಗಳಲ್ಲಿ ಪಾಪ ಮಾಡುವುದಕ್ಕೆ ಒಬ್ಬ ವ್ಯಕ್ತಿಯನ್ನು ಪ್ರಭಾವಗೊಳಿಸುತ್ತದೆಯೆಂದು ಸತ್ಯವೇದವು ಬೋಧಿಸುತ್ತದೆ.
- “ಕುಡಿದ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಅಜಾಗರೂಕ” ಅಥವಾ “ಮಾದಕ ವ್ಯಕ್ತಿ” ಅಥವಾ “ಮದ್ಯಪಾನವನ್ನು ಹೆಚ್ಚಾಗಿ ಕುಡಿಯುವುದು” ಅಥವಾ “ಹುದುಗಿಸಿದ ಪಾನೀಯದೊಂದಿಗೆ ತುಂಬಿರುವುದು” ಎನ್ನುವ ಮಾತುಗಳನ್ನು ಉಪಯೋಗಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ದ್ರಾಕ್ಷಾರಸ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.05:11-13
- 1 ಸಮು.25:36
- ಯೆರೆ.13:12-13
- ಲೂಕ.07:34
- ಲೂಕ.21:34
- ಜ್ಞಾನೋ.23:19-21

ಪದ ಡೇಟಾ:

- Strong's: H5433, H7301, H7910, H7937, H7941, H7943, H8354, H8358, G3178, G3182, G3183, G3184, G3630, G3632

ಕುದುರೆ ಸವಾರ, ಅಶ್ವಾರೋಹಿಗಳು

ಪದದ ಅರ್ಥವಿವರಣೆ:

ಸತ್ಯವೇದ ಕಾಲಗಳಲ್ಲಿ “ಅಶ್ವಾರೋಹಿಗಳು: ಎನ್ನುವ ಪದವನ್ನು ಯುದ್ಧದಲ್ಲಿ ಕುದುರೆಗಳನ್ನು ಸವಾರಿ ಮಾಡುವ ವ್ಯಕ್ತಿಗಳನ್ನು ಸೂಚಿಸುತ್ತದೆ.

- ಈ ಪದವು ಕುದುರೆಗಳ ಮೇಲೆ ಏರಿ ಸವಾರಿ ಮಾಡುವ ಪುರುಷರನ್ನೇ ಸೂಚಿಸುತ್ತಿದ್ದರೂ, ಕುದುರೆಗಳು ಎಳೆಯುವ ರಥಗಳಲ್ಲಿ ಕುಳಿತು ನಡೆಸುವ ಯುದ್ಧ ವೀರರನ್ನು ಕೂಡ “ಅಶ್ವಾರೋಹಿಗಳು” ಎಂದು ಕರೆಯುತ್ತಾರೆ,
- ಇಸ್ರಾಯೇಲ್ಯರು ಯೆಹೋವನ ಮೇಲೆ ಆಧಾರಪಡುವುದಕ್ಕಿಂತ ತಮ್ಮ ಸ್ವಂತ ಬಲದ ಮೇಲೆ ಹೆಚ್ಚಾಗಿ ಅಧಾರ ಪಡುತ್ತಾ ಯುದ್ಧದಲ್ಲಿ ಬಳಸುವ ಕುದುರೆಗಳಲ್ಲಿ ನಂಬಿಕೆಯನ್ನಿಡುತ್ತಿದ್ದರು.
- ಈ ಪದವನ್ನು “ಕುದುರೆ ಸವಾರುಗಾರರು” ಅಥವಾ “ಕುದುರೆಗಳ ಮೇಲೆ ಮನುಷ್ಯರು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ರಥ, ಕುದುರೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.01:5-6
- ದಾನಿ.11:40-41
- ವಿಮೋ.14:23-25
- ಆದಿ.50:7-9

ಪದ ಡೇಟಾ:

- Strong's: H6571, H7395, G2460

ಕುದುರೆ, ಕುದುರೆಗಳು, ಯುದ್ಧ ಕುದುರೆ, ಯುದ್ಧ ಕುದುರೆಗಳು, ಕುದುರೆಯ ಹಿಂಭಾಗ

ಪದದ ಅರ್ಥವಿವರಣೆ:

ಕುದುರೆ ಎನ್ನುವುದು ಸತ್ಯವೇದದಲ್ಲಿ ಹೇಳಲ್ಪಟ್ಟಿರುವ ನಾಲ್ಕು ಕಾಲುಗಳಿರುವ ದೊಡ್ಡದಾದ ಪ್ರಾಣಿಯನ್ನು ಬಹುಶಃ ಜನರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವುದಕ್ಕೆ ಸಾರಿಗೆಯಾಗಿ ಮತ್ತು ಹೊಲ ಕೆಲಸಗಳಿಗೆ ಉಪಯೋಗಿಸುತ್ತಿದ್ದರು.

- ಕೆಲವೊಂದು ಕುದುರೆಗಳನ್ನು ಎತ್ತಿನ ಗಾಡಿಗಳಿಗೆ ಕಟ್ಟುತ್ತಾರೆ, ಉಳಿದ ಕುದುರೆಗಳು ಒಬ್ಬೊಬ್ಬರು ಪ್ರಯಾಣ ಮಾಡುವುದಕ್ಕೆ ಉಪಯೋಗಿಸಲ್ಪಡುತ್ತಿದ್ದವು.
- ಕುದುರೆಗಳಿಗೆ ಯಾವಾಗಲೂ ಲಗಾಮುಗಳನ್ನು ಹಾಕಿರುತ್ತಾರೆ, ಇದರಿಂದ ಅವು ಚೆನ್ನಾಗಿ ಮಾರ್ಗದರ್ಶನವನ್ನು ಹೊಂದುತ್ತವೆ.
- ಸತ್ಯವೇದದಲ್ಲಿ ಕುದುರೆಗಳು ತುಂಬಾ ಬೆಲೆಯುಳ್ಳ ಆಸ್ತಿಯನ್ನಾಗಿ ಮತ್ತು ಸಂಪತ್ತನ್ನಾಗಿ ಪರಿಗಣಿಸುತ್ತಿದ್ದರು, ಪ್ರಾಮುಖ್ಯವಾಗಿ ಯುದ್ಧದಲ್ಲಿ ಅವುಗಳನ್ನು ಉಪಯೋಗಿಸುತ್ತಿದ್ದರು. ಉದಾಹರಣೆಗೆ, ಅರಸನಾದ ಸೊಲೊಮೋನನ ಹೆಚ್ಚಿನ ಸಂಪತ್ತು ಏನೆಂದರೆ ಅವನು ಹೊಂದಿರುವ ಸಾವಿರಾರು ಕುದುರೆಗಳು ಮತ್ತು ರಥಗಳಾಗಿದ್ದವು.
- ಕುದುರೆಗೆ ಸಮಾನವಾದ ಹೋಲಿಕೆಯಲ್ಲಿರುವ ಪ್ರಾಣಿಗಳು ಕತ್ತೆಗಳು ಮತ್ತು ಹೆಸರುಗತ್ತೆಯೂ ಆಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ರಥ, ಕತ್ತೆ, ಸೊಲೊಮೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.18:3-4
- 2 ಅರಸ.02:11-12
- ವಿಮೋ.14:23-25
- ಯೆಹೆ.23:5-7
- ಜೆಕರ್ಯ.06:7-8

ಪದ ಡೇಟಾ:

- Strong's: H47, H5483, H5484, H6571, H7409, G2462

ಕುರಿದನಗಳು

ಸತ್ಯಾಂಶಗಳು:

“ಕುರಿದನಗಳು” ಎನ್ನುವ ಪದವು ಆಹಾರವನ್ನು ಕೊಡುವುದಕ್ಕೆ ಮತ್ತು ಇತರ ಉಪಯೋಗಕರವಾದ ಪದಾರ್ಥಗಳನ್ನು ಕೊಡುವುದಕ್ಕೆ ಬೆಳೆಸಲ್ಪಡುವ ಪ್ರಾಣಿಗಳನ್ನು ಸೂಚಿಸುತ್ತದೆ. ಕೆಲವೊಂದು ವಿಧವಾದ ಕುರಿದನಗಳಿಗೆ ಕೂಡ ಕೆಲಸ ಮಾಡುವ ಪ್ರಾಣಿಗಳನ್ನಾಗಿ ತರಬೇತಿ ಮಾಡುತ್ತಾರೆ.

- ಅನೇಕ ವಿಧವಾದ ಕುರಿದನಗಳಲ್ಲಿ ಕುರಿಗಳು, ಜಾನುವಾರುಗಳು, ಮೇಕೆಗಳು, ಕುದುರೆಗಳು ಮತ್ತು ಕತ್ತೆಗಳು ಒಳಗೊಂಡಿರುತ್ತವೆ.
- ಸತ್ಯವೇದ ಸಮಯಗಳಲ್ಲಿ ಸಂಪತ್ತನ್ನು ಒಬ್ಬ ವ್ಯಕ್ತಿಗೆ ಎಷ್ಟು ಕುರಿದನಗಲಿದ್ದಾವೆನ್ನುವದರ ಮೇಲೆ ಲೆಕ್ಕ ಮಾಡುತ್ತಿದ್ದರು.
- ಕುರಿದನಗಳನ್ನು ಉಣ್ಣೆ, ಹಾಲು, ಚೀಜ್, ಮನೆಯ ಸಾಧನೆಗಳನ್ನು ಮತ್ತು ವಸ್ತ್ರಗಳನ್ನು ಇನ್ನೂ ಇತ್ಯಾದಿಗಳನ್ನು ಉತ್ಪಾದಿಸುವುದಕ್ಕೆ ಉಪಯೋಗಿಸುತ್ತಿದ್ದರು.
- ಈ ಪದವನ್ನು “ಕೃಷಿ ಪ್ರಾಣಿಗಳು” ಎಂದೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಹಸು, ಎತ್ತು, ಕತ್ತೆ, ಮೇಕೆ, ಕುದುರೆ, ಕುರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.03:15-17
- ಆದಿ.30:29-30
- ಯೆಹೋ.01:14-15
- ನೆಹೆ.09:36-37
- ಅರಣ್ಯ.03:40-41

ಪದ ಡೇಟಾ:

- Strong's: H929, H4399, H4735

ಕುರುಬ, ಕುರುಬರು, ಕಾಯುಕೊಂಡಿದ್ದೇನೆ, ಕಾಯುತ್ತಿರುವುದು

ಪದದ ಅರ್ಥವಿವರಣೆ:

ಕುರುಬ ಎಂದರೆ ಕುರಿಗಳ ಕಾಳಜಿವಹಿಸುವಂತ ವ್ಯಕ್ತಿ ಎಂದರ್ಥ. ಹಳೇ ಒಡಂಬಡಿಕೆಯಲ್ಲಿ, ಈ ಪದವು ಮೇಕೆ ಮತ್ತು ದನದಂತಹ ಇತರ ರೀತಿಯ ಸಾಕುಪ್ರಾಣಿಗಳನ್ನು ನೋಡಿಕೊಳ್ಳುವ "ಪಶುಪಾಲಕ" ಎಂದು ಉಲ್ಲೇಖಿಸಬಹುದು

- “ಕುರುಬ” ಎನ್ನುವ ಪದಕ್ಕೆ ಕ್ರಿಯಾಪದವು ಕುರಿಗಳನ್ನು ಸಂರಕ್ಷಿಸುವುದು ಮತ್ತು ಅವುಗಳಿಗೆ ನೀರು ಆಹಾರಗಳನ್ನು ಒದಗಿಸಿಕೊಡುವುದು ಎಂದರ್ಥವಾಗಿರುತ್ತದೆ. ಕುರುಬರು ಕುರಿಗಳು ತಪ್ಪಿಹೋಗದಂತೆ ನೋಡಿಕೊಳ್ಳಬೇಕು ಮತ್ತು ಅವುಗಳನ್ನು ಅಡವಿ ಪ್ರಾಣಿಗಳಿಂದ ಸಂರಕ್ಷಿಸಬೇಕು.
    - ಜನರ ಆತ್ಮೀಕವಾದ ಅಗತ್ಯತೆಗಳನ್ನು ಪೂರೈಸುವುದಕ್ಕೆ ಸೂಚಿಸಲು ಈ ಪದವನ್ನು ಸತ್ಯವೇದದಲ್ಲಿ ಅನೇಕಬಾರಿ ರೂಪಕಾಲಂಕಾರವಾಗಿ ಉಪಯೋಗಿಸಿರುತ್ತಾರೆ. ಸತ್ಯವೇದದಲ್ಲಿ ದೇವರು ಜನರಿಗೆ ಹೇಳಿದ ವಿಷಯಗಳೆಲ್ಲವುಗಳನ್ನು ಬೋಧಿಸುವುದು ಮತ್ತು ಅವರು ನಡೆಯಬೇಕಾದ ಮಾರ್ಗದಲ್ಲಿ ಅವರನ್ನು ನಡೆಸುವುದು ಇದರಲ್ಲಿ ಒಳಗೊಂಡಿರುತ್ತದೆ.
- ಹಳೇ ಒಡಂಬಡಿಕೆಯಲ್ಲಿ ದೇವರನ್ನು ತನ್ನ ಜನರ “ಕುರುಬ” ಎಂಬುದಾಗಿ ಕರೆಯಲ್ಪಟ್ಟಿದ್ದಾನೆ, ಯಾಕಂದರೆ ಆತನು ಅವರ ಎಲ್ಲಾ ಅಗತ್ಯತೆಗಳನ್ನು ಪೂರೈಸಿ, ಅವರನ್ನು ಸಂರಕ್ಷಿಸುತ್ತಿದ್ದನು. ಆತನು ಅವರನ್ನು ನಡೆಸಿ, ಅವರಿಗೆ ಮಾರ್ಗದರ್ಶನವನ್ನು ನೀಡಿದ್ದನು. (ನೋಡಿರಿ: ರೂಪಕಾಲಂಕಾರ)
- ಮೋಶೆ ಇಸ್ರಾಯೇಲ್ಯರಿಗೆ ಕುರುಬನಾಗಿದ್ದನು, ಆತನು ಅವರನ್ನು ಯೆಹೋವವನ್ನು ಆರಾಧಿಸುವದರಲ್ಲಿ ಆತ್ಮೀಯಕವಾಗಿ ನಡೆಸಿದ್ದನು ಮತ್ತು ಕಾನಾನ್ ಭೂಮಿಗೆ ತಮ್ಮ ಪ್ರಯಾಣದಲ್ಲಿ ಭೌತಿಕವಾಗಿಯೂ ನಡೆಸಿದ್ದನು.
- ಹೊಸ ಒಡಂಬಡಿಕೆಯಲ್ಲಿ ಯೇಸು ತನ್ನನ್ನು ತಾನು “ಒಳ್ಳೇಯ ಕುರುಬ” ಎಂದು ಹೇಳಿಕೊಂಡಿದ್ದಾನೆ. ಸಭೆಯ ಮೇಲೆ “ಉನ್ನತ ಕುರುಬ” ಎಂಬುದಾಗಿ ಅಪೊಸ್ತಲನಾದ ಪೌಲನು ಕೂಡ ತನ್ನನ್ನು ತಾನು ಸೂಚಿಸಿಕೊಂಡಿದ್ದಾನೆ
- ಹೊಸ ಒಡಂಬಡಿಕೆಯಲ್ಲಿ “ಕುರುಬ” ಎನ್ನುವ ಪದವನ್ನು ವಿಶ್ವಾಸಿಗಳ ಮೇಲೆ ಆತ್ಮೀಯಕವಾದ ನಾಯಕನಾಗಿರುವ ವ್ಯಕ್ತಿಯನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ. “ಪಾಸ್ಟರ್ (ಅಥವಾ ಸಭಾಪಾಲಕ)” ಎಂಬುದಾಗಿ ಅನುವಾದ ಮಾಡಲ್ಪಟ್ಟ ಪದವೂ “ಕುರುಬ” ಎಂಬುದಾಗಿ ಅನುವಾದ ಮಾಡಿದ ಈ ಪದವೂ ಒಂದೇಯಾಗಿರುತ್ತವೆ. ಹಿರಿಯರು ಮತ್ತು ಮೇಲ್ವೀಚಾರಕರು ಕೂಡ ಕುರುಬರು ಎಂದು ಕರೆಯಲ್ಪಟ್ಟಿರುತ್ತಾರೆ.

ಅನುವಾದ ಸಲಹೆಗಳು:

- ಇದನ್ನು ಅಕ್ಷರಾರ್ಥವಾಗಿ ಉಪಯೋಗಿಸಿದಾಗ, “ಕುರುಬ” ಎನ್ನುವ ಕ್ರಿಯಾ ಪದವನ್ನು “ಕುರಿಗಳನ್ನು ಕಾಯುವವನು” ಅಥವಾ “ಕುರಿಗಳ ಮೇಲೆ ಮೇಲ್ವೀಚಾರಕನು” ಎಂದೂ ಅನುವಾದ ಮಾಡಬಹುದು.
- “ಕುರುಬ” ಎನ್ನುವ ವ್ಯಕ್ತಿಯನ್ನು “ಕುರಿಗಳನ್ನು ನೋಡಿಕೊಳ್ಳುವ ವ್ಯಕ್ತಿ” ಅಥವಾ “ಕುರಿಗಳ ವ್ಯಾಪಾರಿ” ಅಥವಾ “ಕುರಿಗಳ ಸಾಕುವಾತನು” ಎಂದೂ ಅನುವಾದ ಮಾಡಬಹುದು.
- ರೂಪಕಾಲಂಕಾರವಾಗಿ ಈ ಪದವನ್ನು ಉಪಯೋಗಿಸಿದಾಗ, ಈ ಪದವನ್ನು ಅನುವಾದ ಮಾಡುವ ಅನೇಕವಾದ ವಿಧಾನಗಳಲ್ಲಿ “ಆತ್ಮೀಯಕವಾದ ಕುರುಬ” ಅಥವಾ “ಆತ್ಮೀಯಕವಾದ ನಾಯಕ” ಅಥವಾ “ಕುರುಬನ ಹಾಗೆ ಇರುವ ವ್ಯಕ್ತಿ” ಅಥವಾ “ಕುರುಬನು ತನ್ನ ಕುರಿಗಳನ್ನು ನೋಡಿಕೊಳ್ಳುವ ಹಾಗೆ ತನ್ನ ಜನರನ್ನು ನಡೆಸುವ ವ್ಯಕ್ತಿ” ಅಥವಾ “ದೇವರ ಕುರಿಗಳನ್ನು ನೋಡಿಕೊಳ್ಳುವ ವ್ಯಕ್ತಿ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಕೆಲವೊಂದು ಸಂದರ್ಭಗಳಲ್ಲಿ “ಕುರುಬ” ಎನ್ನುವ ಪದವನ್ನು “ನಾಯಕ” ಅಥವಾ “ಮಾರ್ಗದರ್ಶಿ” ಅಥವಾ “ಪಾಲನೆದಾರ” ಎಂದೂ ಅನುವಾದ ಮಾಡಬಹುದು.
- “ಕುರುಬ” ಎನ್ನುವ ಪದಕ್ಕೆ ಆತ್ಮೀಯಕವಾದ ಮಾತನ್ನು “ಚೆನ್ನಾಗಿ ನೋಡಿಕೊಳ್ಳುವ” ಅಥವಾ “ಆತ್ಮೀಯಕವಾಗಿ ಪೋಷಿಸುವ” ಅಥವಾ “ಮಾರ್ಗದರ್ಶನ ಕೊಡುವ ಮತ್ತು ಬೋಧಿಸುವ” ಅಥವಾ “ನಡೆಸುವ ಮತ್ತು (ಕುರುಬನು ಕುರಿಯನ್ನು ನೋಡಿಕೊಳ್ಳುವ ಹಾಗೆಯೇ) ನೋಡಿಕೊಳ್ಳುವ” ವ್ಯಕ್ತಿ ಎಂದೂ ಅನುವಾದ ಮಾಡಬಹುದು.
- ಅಲಂಕಾರಿಕ ಭಾಷೆಯಲ್ಲಿ ಉಪಯೋಗಿಸುವಾಗ, ಈ ಪದವನ್ನು ಅನುವಾದ ಮಾಡುವುದರಲ್ಲಿ “ಕುರುಬ” ಎನ್ನುವ ಪದಕ್ಕೆ ಅಕ್ಷರಾರ್ಥವಾದ ಪದವನ್ನು ಒಳಪಡಿಸುವುದು ಅಥವಾ ಉಪಯೋಗಿಸುವುದು ಉತ್ತಮ.

(ಈ ಪದಗಳನ್ನು ಸಹ ನೋಡಿರಿ : ನಂಬು, ಕಾನಾನ್, ಸಭೆ, ಮೋಶೆ, ಸಭಾಪಾಲಕ, ಕುರಿ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.49:24
- ಲೂಕ.02:8-9
- ಮಾರ್ಕ.06:33-34
- ಮಾರ್ಕ.14:26-27
- ಮತ್ತಾಯ.02:4-6
- ಮತ್ತಾಯ.09:35-36
- ಮತ್ತಾಯ.25:31-33
- ಮತ್ತಾಯ.26:30-32

ಸತ್ಯವೇದದಿಂದ ಉದಾಹರಣೆಗಳು:

- _**09:11** ಐಗುಪ್ತದಿಂದ ದೂರ ಪ್ರದೇಶದಲ್ಲಿರುವ ಅರಣ್ಯದಲ್ಲಿ ಮೋಶೆ **ಕುರುಬನಾಗಿದ್ದನು** _.
- **17:02** ಬೆತ್ಲೆಹೇಮಿನಲ್ಲಿ ದಾವೀದನು ಕುರುಬನಾಗಿದ್ದನು. ಅನೇಕ ಸಂದರ್ಭಗಳಲ್ಲಿ ತನ್ನ ತಂದೆ _ **ಕುರಿಗಳನ್ನು** ಕಾಯುತ್ತಿರುವಾಗ, ತನ್ನ **ಕುರಿಗಳ** _ ಮೇಲೆ ಧಾಳಿ ಮಾಡಿದ ಸಿಂಹವನ್ನು ಮತ್ತು ಕರಡಿಯನ್ನು ಕೊಂದು ಹಾಕಿದನು.
- _**23:06** ಆ ರಾತ್ರಿಯಲ್ಲಿ ಅವರು ತಮ್ಮ ಹಿಂಡುಗಳನ್ನು ಕಾಯುತ್ತಿರುವಾಗ ಆಲ್ಲಿ ಕೆಲವುಮಂದಿ **ಕುರುಬರಿದ್ದರು** _.
- _**23:08** ದೂತರು ಅವರಿಗೆ ಹೇಳಿದ ಪ್ರಕಾರವೇ, ಅವರು ಶಿಶುವಾದ ಯೇಸು ಇರುವ ಸ್ಥಳಕ್ಕೆ **ಕುರುಬರು** _ ಬೇಗನೆ ಬಂದರು, ಅವರು ಅಲ್ಲಿಗೆ ಬಂದು ಆಹಾರದ ತೊಟ್ಟಿಯಲ್ಲಿ ಆತನನ್ನು ಮಲಗಿಸಿರುವುದನ್ನು ಕಂಡುಕೊಂಡರು.
- **30:03**ಈ ಜನರೆಲ್ಲರು ಕುರುಬನಿಲ್ಲದ _ **ಕುರಿಗಳಾಗಿದ್ದಾರೆ** _ ಎಂದು ಯೇಸು ಹೇಳಿದನು.

ಪದ ಡೇಟಾ:

- Strong's: H6629, H7462, H7469, H7473, G750, G4165, G4166

ಕುಲ, ಕುಲಗಳು, ಬುಡಕಟ್ಟು, ಬುಡಕಟ್ಟಿನವರು

ಪದದ ಅರ್ಥವಿವರಣೆ:

ಕುಲ ಎಂದರೆ ಒಬ್ಬರೇ ಪೂರ್ವಜರಿಂದ ಬಂದಿರುವ ಸಂತಾನದವರಾಗಿರುವ ಜನರ ಗುಂಪಾಗಿರುತ್ತದೆ.

- ಒಂದೇ ಕುಲದಿಂದ ಬಂದಿರುವ ಜನರು ಸಾಧಾರಣವಾಗಿ ಒಂದೇ ಭಾಷೆಯನ್ನು ಮತ್ತು ಸಂಸ್ಕೃತಿಯನ್ನು ಹಂಚಿಕೊಳ್ಳುತ್ತಾರೆ.
- ಹಳೇ ಒಡಂಬಡಿಕೆಯಲ್ಲಿ ದೇವರು ಇಸ್ರಾಯೇಲ್ ಜನರನ್ನು ಹನ್ನೆರಡು ಕುಲಗಳಾಗಿ ವಿಭಾಗಿಸಿದ್ದರು. ಪ್ರತಿಯೊಂದು ಕುಲವು ಯಾಕೋಬನ ಗಂಡು ಮಕ್ಕಳಿಂದ ಅಥವಾ ಮೊಮ್ಮೊಕ್ಕಳಿಂದ ಬಂದ ಸಂತಾನದವರಾಗಿರುತ್ತಾರೆ.
- ಕುಲ ಎನ್ನುವುದು ಒಂದು ದೇಶಕ್ಕಿಂತ ಚಿಕ್ಕದಾಗಿರುತ್ತದೆ, ಆದರೆ ಒಂದು ವಂಶಕ್ಕಿಂತ ದೊಡ್ಡದಾಗಿರುವುದು.

(ಈ ಪದಗಳನ್ನು ಸಹ ನೋಡಿರಿ : ವಂಶ, ದೇಶ, ಜನರ ಗುಂಪು, ಇಸ್ರಾಯೇಲಿನ ಹನ್ನೆರಡು ಕುಲಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.10:17-19
- 2 ಅರಸ.17:16-18
- ಆದಿ.25:13-16
- ಆದಿ.49:16-18
- ಲೂಕ.02:36-38

ಪದ ಡೇಟಾ:

- Strong's: H523, H4294, H7625, H7626, G1429, G5443

ಕುಲುಮೆ (ಧಗಧಗನೆ ಉರಿಯುವ ಬೆಂಕಿ)

ಸತ್ಯಾಂಶಗಳು:

ಕುಲುಮೆ ಎಂದರೆ ವಸ್ತುಗಳನ್ನು ಹೆಚ್ಚಿನ ತಾಪದಲ್ಲಿ ಬಿಸಿ ಮಾಡಲು ಉಪಯೋಗಿಸುವ ದೊಡ್ಡ ಒಲೆ (ಓವೆನ್) ಯಾಗಿದೆ.

- ಪ್ರಾಚೀನ ಕಾಲದಲ್ಲಿ, ಅಡುಗೆ ಮಾಡುವ ಪಾತ್ರೆಗಳನ್ನು, ಒಡವೆಗಳನ್ನು, ಆಯುಧಗಳನ್ನು ಮತ್ತು ವಿಗ್ರಹಗಳನ್ನು ಮಾಡಲು ಲೋಕವನ್ನು ಕರಗಿಸಲು ಕುಲುಮೆಯನ್ನು ಉಪಯೋಗಿಸುತ್ತಿದ್ದರು.
- ಮಣ್ಣಿನ ಮಡಿಕೆಯನ್ನು ಮಾಡಲು ಸಹ ಕುಲುಮೆಯನ್ನು ಉಪಯೋಗಿಸುತ್ತಿದ್ದರು.
- ಕೆಲವೊಮ್ಮೆ ಹೆಚ್ಚಿನ ತಾಪವನ್ನು ಸೂಚಿಸಲು ಅಲಂಕಾರಿಕ ರೂಪದಲ್ಲಿ ಈ ಪದವನ್ನು ಉಪಯೋಗಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಅನ್ಯದೇವತೆ, ಪ್ರತಿಮೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.08:51-53
- ಆದಿ.19:26-28
- ಜ್ಞಾನೋ.17:3-4
- ಕೀರ್ತನೆ.021:9-10
- ಪ್ರಕಟನೆ.09:1-2

ಪದ ಡೇಟಾ:

- Strong's: H861, H3536, H3564, H5948, H8574, G2575

ಕುಷ್ಠರೋಗಿ, ಕುಷ್ಠರೋಗಿಗಳು, ಕುಷ್ಠರೋಗ, ಕುಷ್ಠರೋಗದ

ಪದದ ಅರ್ಥವಿವರಣೆ:

“ಕುಷ್ಠರೋಗ” ಎನ್ನುವ ಪದವನ್ನು ಅನೇಕ ವಿಧವಾದ ಚರ್ಮರೋಗಗಳನ್ನು ಸೂಚಿಸುವುದಕ್ಕೆ ಸತ್ಯವೇದದಲ್ಲಿ ಉಪಯೋಗಿಸಿದ್ದಾರೆ. “ಕುಷ್ಠರೋಗಿ” ಎನ್ನುವ ಪದವು ಕುಷ್ಠರೋಗವನ್ನು ಹೊಂದಿರುವ ವ್ಯಕ್ತಿಯನ್ನು ಸೂಚಿಸುತ್ತದೆ. “ಕುಷ್ಠರೋಗದ” ಎನ್ನುವ ಪದವು ಒಬ್ಬ ವ್ಯಕ್ತಿ ಅಥವಾ ಒಂದು ದೇಹದ ಭಾಗವು ಕುಷ್ಠರೋಗದಿಂದ ನರಳುತ್ತಿರುವದನ್ನು ವಿವರಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

- ಕೆಲವೊಂದು ವಿಧವಾದ ಕುಷ್ಠರೋಗಗಳು ಚರ್ಮವನ್ನು ಬಿಳಿ ತೇಪೆಗಳ ಚರ್ಮವನ್ನಾಗಿ ಮಾಡುತ್ತವೆ, ಹೇಗೆಂದರೆ ಮಿರ್ಯಾಮಳು ಮತ್ತು ನಾಮಾನನು ಕುಷ್ಠರೋಗವನ್ನು ಹೊಂದಿದ್ದರು.
- ಆಧುನಿಕ ಕಾಲಗಳಲ್ಲಿ ಕುಷ್ಠರೋಗವು ಅನೇಕಸಲ ಕಾಲುಗಳಿಗೆ, ಕೈಗಳಿಗೆ ಮತ್ತು ದೇಹದಲ್ಲಿನ ಇತರ ಭಾಗಗಳಿಗೆ ಹರಡಿ, ಕೆಟ್ಟುಹೋಗುತ್ತಿವೆ.
- ದೇವರು ಇಸ್ರಾಯೇಲ್ಯರಿಗೆ ಕೊಟ್ಟ ಆಜ್ಞೆಗಳ ಪ್ರಕಾರ, ಒಬ್ಬ ವ್ಯಕ್ತಿ ಕುಷ್ಠರೋಗವನ್ನು ಹೊಂದಿದ್ದರೆ, ಅವನು “ಅಶುದ್ಧನು” ಎಂದು ಪರಿಗಣಿಸಬೇಕು ಮತ್ತು ಎಲ್ಲಾ ಜನರಿಗೂ ಬೇರೆಯಾಗಿ ಜೀವನ ಮಾಡಬೇಕು, ಇದರಿಂದ ಆ ರೋಗದ ಕಾರಣ ಬೇರೆಯವರು ಯಾರೂ ಕುಷ್ಠವನ್ನು ಹೊಂದದಿರುತ್ತಾರೆ.
- ಕುಷ್ಠರೋಗಿಯನ್ನು ಅನೇಕಬಾರಿ “ಅಶುದ್ಧನು” ಎಂದು ಕರೆಯಲ್ಪಡುತ್ತಾನೆ, ಇದರಿಂದ ಇತರರು ಹತ್ತಿರಕ್ಕೆ ಬರಬೇಡವೆಂದು ಎಚ್ಚರಿಸುತ್ತಾರೆ.
- ಯೇಸು ಅನೇಕಮಂದಿ ಕುಷ್ಠರೋಗಿಗಳನ್ನು ವಾಸಿ ಮಾಡಿದ್ದಾನೆ, ಮತ್ತು ಇತರ ಬೇರೆ ರೀತಿಯ ಬೇನೆಗಳಿಂದ ನರಳುತ್ತಿರುವ ಜನರನ್ನು ಕೂಡ ಗುಣಪಡಿಸಿದ್ದಾನೆ.

ಅನುವಾದ ಸಲಹೆಗಳು:

ಸತ್ಯವೇದದಲ್ಲಿರುವ “ಕುಷ್ಠರೋಗ” ಎನ್ನುವ ಪದವನ್ನು “ಚರ್ಮ ರೋಗ” ಅಥವಾ “ಭೀತಿ ಉಂಟು ಮಾಡುವ ಚರ್ಮ ರೋಗ” ಎಂದೂ ಅನುವಾದ ಮಾಡಬಹುದು.

- “ಕುಷ್ಠರೋಗದ” ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನದಲ್ಲಿ “ಕುಷ್ಠರೋಗದಿಂದ ಸಂಪೂರ್ಣವಾಗಿ” ಅಥವಾ “ಚರ್ಮ ರೋಗದಿಂದ ಸೋಂಕಿತವಾದ” ಅಥವಾ “ಚರ್ಮ ಹುಣ್ಣುಗಳಿಂದ ತುಂಬಿದ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಮಿರ್ಯಾಮಳು, ನಾಮಾನ, ಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.05:12-13
- ಲೂಕ.17:11-13
- ಮಾರ್ಕ.01:40-42
- ಮಾರ್ಕ.14:3-5
- ಮತ್ತಾಯ.08:1-3
- ಮತ್ತಾಯ.10:8-10
- ಮತ್ತಾಯ.11:4-6

ಪದ ಡೇಟಾ:

- Strong's: H6879, H6883, G3014, G3015

ಕೂಗು, ಕೂಗುವುದು, ಕೂಗಿದರು, ಕೂಗುತ್ತಿದ್ದರು, ಮೊರೆ, ಮೊರೆಯಿಡುವುದು, ಮೊರೆಯಿಟ್ಟರು, ಪ್ರತಿಭಟಿಸು, ಪ್ರತಿಭಟನೆ, ಅಳು

ಪದದ ಅರ್ಥವಿವರಣೆ

“ಕೂಗು” ಅಥವಾ “ಮೊರೆ” ಎನ್ನುವ ಪದಗಳನ್ನು ಜೋರಾಗಿ ಹೇಳುವುದು ಮತ್ತು ಬೇಗ ಹೇಳುವುದು ಎಂದು ಅರ್ಥಕೊಡುವಂತೆ ಸಹಜವಾಗಿ ಉಪಯೋಗಿಸುತ್ತಾರೆ. ಯಾರಾದರು ನೋವಿನಲ್ಲಿದ್ದರೆ ಅಥವಾ ಸಂತೋಷದಲ್ಲಿದ್ದರೆ ಅಥವಾ ಕೋಪವಾಗಿದ್ದರೆ “ಕೂಗುತ್ತಾರೆ”.

- “ಕೂಗು” ಎನ್ನುವ ಪದಕ್ಕೆ ಸಹಾಯ ಪಡೆಯಬೇಕೆನ್ನುವ ಉದ್ದೇಶದಿಂದ ಜೋರಾಗಿ ಹೇಳುವುದು ಎಂದರ್ಥ.
- ಸಂದರ್ಭನುಸಾರವಾಗಿ “ಜೋರಾಗಿ ಹೇಳುವುದು” ಅಥವಾ “ಸಹಾಯಕ್ಕಾಗಿ ಅವಸರವಾಗಿ ಕೇಳುವುದು” ಎಂದು ಅನುವಾದ ಮಾಡಬಹುದು.
- “ನಾನು ನಿನಗೆ ಮೊರೆಯಿಡುತ್ತೇನೆ” ಎನ್ನುವ ವಾಕ್ಯವನ್ನು “ನಾನು ಸಹಾಯಕ್ಕಾಗಿ ನಿಮ್ಮನ್ನು ಕರೆಯುತ್ತೇನೆ" ಅಥವಾ "ನಾನು ನಿಮ್ಮನ್ನು ತುರ್ತಾಗಿ ಸಹಾಯಕ್ಕಾಗಿ ಮೊರೆಯಿಡುತ್ತಿದ್ದೇನೆ” ಅಥವಾ “ನಾನು ಅವಸರವಾಗಿ ನಿನ್ನ ಸಹಾಯ ಕೇಳುತ್ತಿದ್ದೇನೆ” ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕರೆ, ಬೇಡುವುದು)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಬ.27:8-10
- ಮಾರ್ಕ.05:5-6
- ಮಾರ್ಕ.06:48-50
- ಕೀರ್ತನೆ.022:1-2

ಪದ ಡೇಟಾ:

- Strong's: H603, H1058, H2199, H2201, H6030, H6463, H6670, H6682, H6817, H6818, H6873, H6963, H7121, H7123, H7321, H7440, H7442, H7723, H7737, H7768, H7769, H7771, H7773, H7775, H8173, H8663, G310, G349, G863, G994, G995, G1916, G2019, G2799, G2805, G2896, G2905, G2906, G2929, G4377, G5455

ಕೆಡುಕನು, ಕೆಡುಕು ಮಾಡುವವನು

ಅರ್ಥವಿವರಣೆ

“ಕೆಡುಕನು” ಎನ್ನುವ ಪದವು ಸಾಮಾನ್ಯವಾಗಿ ಪಾಪ ಮಾಡುವವರನ್ನು ಮತ್ತು ದುಷ್ಟ ಕಾರ್ಯಗಳನ್ನು ಮಾಡುವವರನ್ನು ಸೂಚಿಸುತ್ತದೆ.

- ದೇವರಿಗೆ ಅವಿಧೇಯರಾಗಿರುವ ಜನರಿಗೆ ಈ ಪದವು ಸಾಮಾನ್ಯವಾಗಿರಬಹುದು.
- ಈ ಪದವನ್ನು “ಕೇಡು” ಅಥವಾ “ದುಷ್ಟತನ” ಎನ್ನುವ ಪದಗಳೊಂದಿಗೆ “ಮಾಡುವುದು” ಅಥವಾ “ಮಾಡುವವನು” ಎನ್ನುವ ಪದಗಳನ್ನು ಜೋಡಿಸಿ ಅನುವಾದ ಮಾಡಬಹುದು.

(ಇವುಗಳನ್ನು ಸಹ ನೋಡಿರಿ : ಕೇಡು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೇತ್ರನು 2:13-17
- ಯೆಶಾಯ 9:16-17
- ಲೂಕ 13:25-27
- ಮಲಾಕಿ 3:13-15
- ಮತ್ತಾಯ 7:21-23

ಪದದ ಡೇಟಾ:

- Strong's: H0205, H6213, H6466, H7451, H7489, G00930, G04580, G20380, G20400 , G25550

ಕೆರ, ಕೆರಗಳು

ಪದದ ಅರ್ಥವಿವರಣೆ:

ಕೆರ ಎಂದರೆ ಕಾಲಿಗೆ ಅಥವಾ ಪಾದದ ಕೀಲು ಸುತ್ತಾ ಪಟ್ಟಿಗಳಿಂದ ಪಾದಕ್ಕೆ ಕಟ್ಟಿರುವ ಸರಳವಾದ ಚಪ್ಪಲಿಯನ್ನು ಸೂಚಿಸುತ್ತದೆ. ಕೆರಗಳನ್ನು ಸ್ತ್ರೀ ಪುರುಷರು ಹಾಕಿಕೊಳ್ಳುತ್ತಾರೆ.

- ಕೆರವನ್ನು ಕೆಲವೊಂದುಬಾರಿ ಕಾನೂನು ವ್ಯವಹಾರವನ್ನು ನಿಶ್ಚಯಗೊಳಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ, ಉದಾಹರಣೆಗೆ, ಅಸ್ತಿಯನ್ನು ಮಾರುವುದು: ಒಬ್ಬ ಮನುಷ್ಯ ಕೆರವನ್ನು ತೆಗೆದುಕೊಂಡು, ಇತರರಿಗೆ ಅದನ್ನು ಕೊಡುವುದು.
- ಒಬ್ಬರ ಕೆರಗಳನ್ನು ಅಥವಾ ಚಪ್ಪಲಿಗಳನ್ನು ತೆಗೆಯುವುದೆನ್ನುವುದು ಗೌರವಕ್ಕೆ ಮತ್ತು ಭಕ್ತಿಗೆ ಸೂಚನೆಯಾಗಿರುತ್ತದೆ, ವಿಶೇಷವಾಗಿ ದೇವರ ಸಾನ್ನಿಧ್ಯದಲ್ಲಿ ಚಪ್ಪಲಿಗಳನ್ನು ಹಾಕಿಕೊಳ್ಳುವುದಿಲ್ಲ.
- ಯೇಸುವಿನ ಕೆರಗಳನ್ನು ಬಿಚ್ಚುವುದಕ್ಕೂ ಯೋಗ್ಯನಲ್ಲವೆಂದು ಯೋಹಾನನು ಹೇಳಿದನು, ಇದು ಗುಲಾಮನ ಅಥವಾ ದೀನ ಸೇವಕನ ಕೆಲಸವಾಗಿರುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:33-34
- ಧರ್ಮೋ.25:9-10
- ಯೋಹಾನ.01:26-28
- ಯೆಹೋ.05:14-15
- ಮಾರ್ಕ.06:7-9

ಪದ ಡೇಟಾ:

- Strong's: H5274, H5275, H8288, G4547, G5266

ಕೆರೂಬಿ, ಕೆರೂಬಿಗಳು, ಕೆರೂಬಿಯರು

ಪದದ ಅರ್ಥವಿವರಣೆ:

“ಕೆರೂಬಿ” ಎನ್ನುವ ಪದವು ಮತ್ತು ಇದರ ಬಹುವಚನ ಪದವಾದ “ಕೆರೂಬಿಗಳು” ಎನ್ನುವವು ದೇವರು ಉಂಟು ಮಾಡಿದ ಒಂದು ವಿಶೇಷವಾದ ಪರಲೋಕದ ಜೀವಿಗಳಾಗಿರುತ್ತವೆ. ಕೆರೂಬಿಗಳು ರೆಕ್ಕೆಗಳನ್ನು ಮತ್ತು ಬೆಂಕಿ ಜ್ವಾಲೆಗಳನ್ನು ಹೊಂದಿರುತ್ತವೆಯೆಂದು ಸತ್ಯವೇದವು ವಿವರಿಸುತ್ತಿದೆ.

- ಕೆರೂಬಿಗಳು ದೇವರು ಶಕ್ತಿಯನ್ನು ಮತ್ತು ಆತನ ಮಹಿಮೆಯನ್ನು ತೋರಿಸುತ್ತವೆ, ಪರಿಶುದ್ಧವಾದ ವಿಷಯಗಳಿಗೆ ಅಥವಾ ಜನರಿಗೆ ಅಂಗರಕ್ಷಕರಾಗಿದ್ದಂತೆ ಕಾಣಿಸಿಕೊಳ್ಳುತ್ತವೆ.
- ಆದಾಮ ಮತ್ತು ಹವ್ವಳು ಪಾಪ ಮಾಡಿದನಂತರ, ಏದೆನ್ ವನದ ಪೂರ್ವದಿಕ್ಕಿನಲ್ಲಿ ಕೆರೂಬಿಯರನ್ನು ಎಲ್ಲಾ ಕಡೆ ಧಗಿಧಗಿಸುತ್ತಾ ಉರಿಯುವ ಜ್ವಾಲೆಯ ಕತ್ತಿಯನ್ನು ಇರಿಸಿದನು. ಇದರಿಂದ ಜನರು ಯಾರೂ ಒಳಗಡೆಗೆ ಹೋಗಿ ಜೀವವೃಕ್ಷವನ್ನು ತಿನ್ನದಂತೆ ಮಾಡಿದನು.
- ಎದುರುಬದುರಾಗಿರುವ ಕೆರೂಬಿಯರನ್ನು ಕೆತ್ತಬೇಕೆಂದು, ಅವುಗಳ ರೆಕ್ಕೆಗಳು ಒಡಂಬಡಿಕೆಯ ಮಂಜೂಷದ ಕೃಪಾಸನದ ಮುಚ್ಚಳದ ಮೇಲೆ ಅಂಟಿಕೊಂಡು ಇರುವಂತೆ ಮಾಡಬೇಕೆಂದು ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದನು.
- ಗುಡಾರದ ತೆರೆಗಳ ಒಳಗೆ ಕೆರೂಬಿಗಳ ಚಿತ್ರಗಳನ್ನು ನೇಯಬೇಕೆಂದು ಕೂಡ ಆತನು ಅವರಿಗೆ ಹೇಳಿದನು.
- ಕೆಲವೊಂದು ವಾಕ್ಯಭಾಗಗಳಲ್ಲಿ ಈ ಜೀವಿಗಳು ನಾಲ್ಕು ಮುಖಗಳನ್ನು ಹೊಂದಿಕೊಂಡಿದ ಹಾಗೆ ವಿವರಿಸಲ್ಪಟ್ಟಿದೆ: ಆ ಮುಖಗಳು ಯಾವುವೆಂದರೆ, ಮನುಷ್ಯ, ಸಿಂಹ, ಎತ್ತು ಮತ್ತು ಹದ್ದು.
- ಕೆರೂಬಿಗಳು ಕೆಲವೊಂದುಬಾರಿ ದೂತರೆಂದು ತಿಳಿದುಕೊಳ್ಳುತ್ತೇವೆ, ಆದರೆ ಸತ್ಯವೇದದಲ್ಲಿ ಅದಕ್ಕೆ ಸ್ಪಷ್ಟವಾದ ಆಧಾರಗಳಿಲ್ಲ.

ಅನುವಾದ ಸಲಹೆಗಳು:

- “ಕೆರೂಬಿಗಳು” ಎನ್ನುವ ಪದವನ್ನು “ರೆಕ್ಕೆಗಳಿರುವ ಜೀವಿಗಳು” ಅಥವಾ “ರೆಕ್ಕೆಗಳೊಂದಿಗಿರುವ ಅಂಗರಕ್ಷಕರು” ಅಥವಾ “ರೆಕ್ಕೆಗಳಿರುವ ಆತ್ಮೀಯಕ ಅಂಗರಕ್ಷಕರು” ಅಥವಾ “ರಕ್ಕೆಗಳಿರುವ ಪರಿಶುದ್ಧ ಅಂಗರಕ್ಷಕರು” ಎಂದೂ ಅನುವಾದ ಮಾಡಬಹುದು.
- “ಕೆರೂಬಿ” ಎನ್ನುವ ಪದವು ಕೆರೂಬಿಗಳು ಎನ್ನುವ ಬಹುವಚನ ಪದಕ್ಕೆ ಏಕವಚನವಾಗಿರುತ್ತದೆ, “ರೆಕ್ಕೆಗಳಿರುವ ಜೀವಿ” ಅಥವಾ “ರೆಕ್ಕೆಗಳಿರುವ ಆತ್ಮೀಯಕ ಅಂಗರಕ್ಷಕ” ಎಂದು ಉದಾಹರಣೆಗೆ ಹೇಳಿಕೊಳ್ಳಬಹುದು.
- ಈ ಪದಕ್ಕೆ ಅನುವಾದವು “ದೂತ” ಎನ್ನುವ ಪದಕ್ಕೆ ಹೇಳುವ ಅನುವಾದಕ್ಕೆ ಬೇರೆಯಾಗಿರುತ್ತದೆಯೆಂದು ತಿಳಿದುಕೊಂಡಿರಿ.
- ಜಾತೀಯ ಭಾಷೆಯಲ್ಲಿ ಅಥವಾ ಸ್ಥಳೀಯ ಭಾಷೆಯಲ್ಲಿರುವ ಸತ್ಯವೇದದಲ್ಲಿ ಈ ಪದವನ್ನು ಯಾವರೀತಿ ಬರೆದಿದ್ದಾರೋ ಅಥವಾ ಅನುವಾದ ಮಾಡಿದ್ದಾರೋ ಎಂದು ನೋಡಿಕೊಳ್ಳಿರಿ. (ಅನುವಾದ ಸಲಹೆಗಳು: /ತಿಳಿಯದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೂತ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.13:5-6
- 1 ಅರಸ .06:23-26
- ವಿಮೋ.25:15-18
- ವಿಮೋ.09:3-4
- ಆದಿ.03:22-24

ಪದ ಡೇಟಾ:

- Strong's: H3742, G5502

ಕೇಡು, ಪ್ರತಿದಂಡನೆ, ಪ್ರತಿದಂಡನೆಯಾಗಿದೆ, ಪ್ರತಿದಂಡನೆಯಾಗುವುದು, ಮುಯ್ಯಿತೀರಿಸುವವನು, ಸೇಡು, ಪ್ರತೀಕಾರ

ಪದದ ಅರ್ಥವಿವರಣೆ:

"ಕೇಡು" ಅಥವಾ "ಸೇಡು ತೀರಿಸಿಕೋ" ಅಥವಾ "ಪ್ರತೀಕಾರ ಮಾಡು" ಎನ್ನುವ ಪದಗಳಿಗೆ ಒಬ್ಬನು ಹಾನಿ ಮಾಡಿದ ಕಾರ್ಯಕ್ಕಾಗಿ ತಾನು ತಿರುಗಿ ಹೊಂದುವ ಶಿಕ್ಷೆ ಎಂಬುದಾಗಿ ಅರ್ಥವುಂಟು. ಪ್ರತಿದಂಡನೆ ಮಾಡುವ ಕಾರ್ಯ ಅಥವಾ ಸೇಡು ತೀರಿಸಿಕೊಳ್ಳುವುದು ಅಂದರೆ "ಪ್ರತೀಕಾರ ಮಾಡುವುದೇ".

- ಸಾಧಾರಣವಾಗಿ "ಕೇಡು" ತಪ್ಪಾಗಿರುವದನ್ನು ಸರಿಪಡಿಸುವುದಕ್ಕೆ ಅಥವಾ ಅದಕ್ಕೆ ನ್ಯಾಯ ಮಾಡಬೇಕೆಂದು ನೋಡುವುದಕ್ಕೆ ಉದ್ದೇಶಿಸಲ್ಪಟ್ಟಿರುತ್ತದೆ.
- ಜನರನ್ನು ಸೂಚಿಸುವಾಗ, "ಸೇಡು ತೀರಿಸಿಕೋ" ಅಥವಾ "ಸೇಡು ತೆಗೆದುಕೋ" ಎನ್ನುವ ಭಾವವ್ಯಕ್ತೀಕರಣಗಳು ಸಹಜವಾಗಿ ಹಾನಿ ಮಾಡಿದ ವ್ಯಕ್ತಿಯ ಬಳಿ ಹೋಗಿ ಮುಯ್ಯಿ ತೀರಿಸಬೇಕೆನ್ನುವ ಆಸೆ ಒಳಗೊಂಡಿರುತ್ತದೆ.
- ದೇವರು "ಪ್ರತೀಕಾರವನ್ನು ತೆಗೆದುಕೊಳ್ಳುವಾಗ" ಅಥವಾ "ಪ್ರತೀಕಾರ ಮಾಡುವಾಗ", ಆತನು ನೀತಿಯುತವಾಗಿಯೇ ನಡೆದುಕೊಳ್ಳುತ್ತಾನೆ ಯಾಕಂದರೆ ಆತನು ಪಾಪವನ್ನು ಮತ್ತು ತಿರಸ್ಕಾರವನ್ನು ಶಿಕ್ಷಿಸುತ್ತಾನೆ.

ಅನುವಾದ ಸಲಹೆಗಳು:

"ಕೇಡು" ಎನ್ನುವ ಪದದ ಭಾವವ್ಯಕ್ತೀಕರಣವು "ತಪ್ಪಾಗಿದ್ದನ್ನು ಸರಿಪಡಿಸು" ಅಥವಾ "ನ್ಯಾಯವನ್ನು ಹೊಂದು" ಎಂದೂ ಅನುವಾದ ಮಾಡಬಹುದು.

- ಮನುಷ್ಯರನ್ನು ಸೂಚಿಸುವಾಗ, "ಸೇಡು ತೀರಿಸಿಕೊ" ಎನ್ನುವದನ್ನು "ತಿರಿಗಿ ಸಲ್ಲಿಸು" ಅಥವಾ "ಶಿಕ್ಷಿಸುವುದಕ್ಕೆ ನೋಯಿಸು" ಅಥವಾ "ಅಲ್ಲಿಗೆ ತಿರುಗಿ ಹೋಗು" ಎಂದೂ ಅನುವಾದ ಮಾಡಬಹುದು.
- ಸಂದರ್ಭಕ್ಕೆ ತಕ್ಕಂತೆ, "ಪ್ರತೀಕಾರ" ಎನ್ನುವುದು "ಶಿಕ್ಷೆ" ಅಥವಾ "ಪಾಪಕ್ಕೆ ಶಿಕ್ಷೆ" ಅಥವಾ "ತಪ್ಪು ಮಾಡಿದ್ದಕ್ಕಾಗಿ ಶಿಕ್ಷಿಸುವುದು" ಎಂದೂ ಅನುವಾದ ಮಾಡಬಹುದು. "ಪ್ರತೀಕಾರ " ಎನ್ನುವ ಈ ಪದವನ್ನು ಉಪಯೋಗಿಸಿದ್ದರೆ, ಇದು ಕೇವಲ ಮನುಷ್ಯರಿಗೆ ಮಾತ್ರವೇ ಅನ್ವಯವಾಗುತ್ತದೆ.
- "ನನ್ನ ಪ್ರತೀಕಾರವನ್ನು ತೆಗೆದುಕೋ" ಎಂದು ದೇವರು ಹೇಳಿದಾಗ, "ನನಗೆ ವಿರುದ್ಧವಾಗಿ ಪಾಪ ಮಾಡಿದವರನ್ನು ಶಿಕ್ಷಿಸು" ಎಂದಾಗಲಿ ಅಥವಾ "ನನಗೆ ವಿರುದ್ಧವಾಗಿ ಅವರು ಪಾಪ ಮಾಡಿದ್ದರಿಂದ ಅವರಿಗೆ ಕಠಿಣವಾದ ಶಿಕ್ಷೆಗಳನ್ನುಂಟು ಮಾಡು" ಎಂದೂ ಅನುವಾದ ಮಾಡಬಹುದು.
- ದೇವರ ಪ್ರತೀಕಾರವನ್ನು ಸೂಚಿಸುವಾಗ, ದೇವರು ಪಾಪ ಮಾಡಿದ್ದಕ್ಕೆ ಆತನು ಶಿಕ್ಷೆಯನ್ನು ಕೊಡುತ್ತಾನೆಂದು ಸ್ಪಷ್ಟಪಡಿಸಿರಿ.

(ಈ ಪದಗಳನ್ನು ಸಹ ನೋಡಿರಿ : ಶಿಕ್ಷೆ, ನ್ಯಾಯ, ನೀತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.24:12-13
- ಯೆಹೆ.25:15-17
- ಯೆಶಯಾ.47:3-5
- ಯಾಜಕ.19:17-18
- ಕೀರ್ತನೆ.018:46-47
- ರೋಮಾ.12:19-21

ಪದ ಡೇಟಾ:

- Strong's: H1350, H3467, H5358, H5359, H5360, H6544, H6546, H8199, G1349, G1556, G1557, G1558, G2917, G3709

ಕೊಂಬು, ಕೊಂಬುಗಳು, ಕೊಂಬುಗಳುಳ್ಳ

ಸತ್ಯಾಂಶಗಳು:

ಕೊಂಬುಗಳು ದನಗಳು, ಕುರಿಗಳು, ಮೇಕೆಗಳು ಒಳಗೊಂಡಂತೆ ಅನೇಕ ರೀತಿಯ ಪ್ರಾಣಿಗಳ ತಲೆಯ ಮೇಲೆ ಶಾಶ್ವತವಾದ, ಗಟ್ಟಿಯಾದ, ಮೊನಚಾದ ಬೆಳವಣಿಗೆಯಾಗಿದೆ.

- ಟಗರು ಕೊಂಬುಗಳನ್ನು "ರಾಮ್ಸ್ ಹಾರ್ನ್" ಅಥವಾ "ಸೋಫಾರ್" ಎನ್ನುವ ಸಂಗೀತ ಉಪಕರಣಗಳನ್ನು ಮಾಡುವುದಕ್ಕೆ ಬಳಸುತ್ತಾರೆ, ಇವುಗಳನ್ನು ಧರ್ಮ ಸಂಬಂಧವಾದ ವಿಶೇಷವಾದ ಹಬ್ಬಗಳಲ್ಲಿ ಊದುವುದಕ್ಕೆ ಉಪಯೋಗಿಸುತ್ತಾರೆ.
- ತಾಮ್ರದ ಯಜ್ಞವೇದಿಗಳು ಮತ್ತು ಬೂದಿಯ ನಾಲ್ಕು ಮೂಲೆಗಳಿಂದ ಕೊಂಬುಗಳ ಆಕಾರವು ಚಾಚಿಕೊಂಡು ಬಂದಿರುವಂತೆ ತಯಾರು ಮಾಡಬೇಕೆಂದು ದೇವರು ಇಸ್ರಾಯೇಲ್ಯರಿಗೆ ಹೇಳಿದರು. ಚಾಚಿಕೊಂಡು ಬಂದಿರುವಂತಹ ಇವುಗಳನ್ನು "ಕೊಂಬುಗಳೆಂದು" ಕರೆದರೂ, ಅವು ಪ್ರಾಣಿಗಳ ಕೊಂಬುಗಳಲ್ಲ.
- "ಕೊಂಬು" ಎನ್ನುವ ಪದವು ಕೆಲವೊಂದುಬಾರಿ ನೀರನ್ನು ಅಥವಾ ಎಣ್ಣೆಯನ್ನು ಸಂಗ್ರಹಿಸಿ ಇಡುವುದಕ್ಕೆ ಕೊಂಬಿನಂತಿರುವ ಆಕಾರದಲ್ಲಿರುವ "ಬುದ್ದಲಿ"ಯನ್ನು ಸೂಚಿಸುತ್ತದೆ. ಎಣ್ಣೆಯ ಬುದ್ದಲಿಯು ಅರಸನನ್ನು ಅಭಿಷೇಕ ಮಾಡುವುದಕ್ಕೆ ಉಪಯೋಗಿಸುತ್ತಿದ್ದರು, ಸಮುವೇಲನು ದಾವೀದನಿಗೆ ಎಣ್ಣೆಯ ಬುದ್ದಲಿಯಿಂದಲೇ ಅಭಿಷೇಕ ಮಾಡಿದ್ದನು.
- ಈ ಪದವನ್ನು ಕಹಳೆಯನ್ನು ಸೂಚಿಸುವ ಪದಕ್ಕೆ ವ್ಯತ್ಯಾಸವಾಗಿರುವಂತೆ ಅನುವಾದ ಮಾಡಬೇಕಾಗಿರುತ್ತದೆ, ಯಾಕಂದರೆ ಈ ಎರಡು ಪದಗಳು ಬೇರೆ ಬೇರೆಯಾಗಿರುತ್ತವೆ.
- "ಕೊಂಬು" ಎನ್ನುವ ಪದವನ್ನು ಬಲ, ಶಕ್ತಿ, ಅಧಿಕಾರ ಮತ್ತು ರಾಜತ್ವಗಳಿಗೆ ಗುರುತಾಗಿ ಅಲಂಕಾರಿಕವಾಗಿ ಉಪಯೋಗಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ಹಸು, ಜಿಂಕೆ, ಮೇಕೆ, ಶಕ್ತಿ, ರಾಜಯೋಗ್ಯ, ಕುರಿ, ಕಹಳೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.15:27-28
- 1 ಅರಸ.01:38-40
- 2 ಸಮು.22:3-4
- ಯೆರೆ.17:1-2
- ಆದಿ.022:20-21

ಪದ ಡೇಟಾ:

- Strong's:H3104, H7160, H7161, H7162, H7782, G2768

ಕೊಡಲಿ, ಕೊಡಲಿಗಳು

ಪದದ ಅರ್ಥವಿವರಣೆ:

ಕೊಡಲಿ ಕಟ್ಟಿಗೆಗಳನ್ನು ಅಥವಾ ಮರಗಳನ್ನು ಕಡಿಯುವುದಕ್ಕೆ ಉಪಯೋಗಿಸುವ ಸಾಧನವಾಗಿರುತ್ತದೆ.

- ಕೊಡಲಿ ಸಹಜವಾಗಿ ಉದ್ದವಾದ ಕಟ್ಟಿಗೆಯ ಕಾವಿಗೆ ಕೊನೆಯ ಭಾಗದಲ್ಲಿ ದೊಡ್ಡ ಕಬ್ಬಿಣದ ಕತ್ತಿಯನ್ನು ಏರಿಸಿರುತ್ತಾರೆ.
- ಕೊಡಲಿಯಂಥೆ ನಿಮ್ಮ ಸಂಸ್ಕೃತಿಯಲ್ಲಿಯೂ ಸಾಧನವನ್ನು ಬಳಸುವುದಾದರೆ, ಆ ಸಾಧನೆಯ ಹೆಸರನ್ನು ನೀವು "ಕೊಡಲಿ" ಎಂದು ಅನುವಾದ ಮಾಡಿಕೊಳ್ಳಬಹುದು.
- ಈ ಪದವನ್ನು ಅನುವಾದ ಮಾಡುವ ಇನ್ನೊಂದು ವಿಧಾನದಲ್ಲಿ, "ಮರಗಳನ್ನು ಕಡಿಯುವ ಸಾಧನ" ಅಥವಾ "ಕತ್ತಿ ಇರುವ ಕಟ್ಟಿಗೆಯ ಸಾಧನ" ಅಥವಾ "ಉದ್ದವಾದ ಕಟ್ಟಿಗೆ ಇರುವ-ಕಡಿಯುವ ಸಾಧನ" ಎನ್ನುವ ಮಾತುಗಳು ಒಳಗೊಂಡಿರಬಹುದು.
- ಹಳೇ ಒಡಂಬಡಿಕೆಯಲ್ಲಿ ನಡೆದ ಒಂದು ಸಂಘಟನೆಯಲ್ಲಿ, ಕೊಡಲಿಯು ನದಿಯೊಳಗೆ ಬೀಳುತ್ತದೆ, ಅದಕ್ಕಾಗಿ ಇದನ್ನು ಕಟ್ಟಿಗೆಯ ಕಾವಿಯಿಂದ ಜಾರಿ ಬಂದ ಕತ್ತಿ ಎಂದು ಆ ಸಾಧನವನ್ನು ವಿವರಿಸಿ ಹೇಳುವುದು ಉತ್ತಮ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.06:7-8
- 2 ಅರಸ.06:4-5
- ನ್ಯಾಯಾ.09:48-49
- ಲೂಕ.03:9
- ಮತ್ತಾಯ.03:10-12
- ಕೀರ್ತನೆ.035:1-3

ಪದ ಡೇಟಾ:

- Strong's: H1631, H4621, H7134, G513

ಕೊಯ್ಯು, ಕೊಯ್ಯುತ್ತದೆ, ಕೊಯ್ದಿದೆ, ಕೊಯ್ಯುವವನು, ಕೊಯ್ಯುವವರು, ಕೊಯ್ಯುತ್ತಿರುವುದು

ಪದದ ಅರ್ಥವಿವರಣೆ:

“ಕೊಯ್ಯು” ಎನ್ನುವ ಪದಕ್ಕೆ ಧಾನ್ಯಗಳೆನ್ನುವ ಬೆಳೆಗಳನ್ನು ಕೊಯ್ಯುವುದು ಎಂದರ್ಥ. “ಕೊಯ್ಯುವವನು” ಎಂದರೆ ಬೆಳೆಯನ್ನು ಕೊಯ್ಯುವ ಅಥವಾ ಸಂಗ್ರಹಿಸುವ ವ್ಯಕ್ತಿ ಎಂದರ್ಥ.

- ಸಾಧಾರಣವಾಗಿ ಕೊಯ್ಯುವವರು ಕೈಗಳ ಮೂಲಕ ಬೆಳೆಗಳನ್ನು ಸಂಗ್ರಹಿಸುತ್ತಾರೆ, ಸಸಿಗಳನ್ನು ಮೇಲಕ್ಕೆ ಕೀಳುವದರ ಮೂಲಕ ಅಥವಾ ಕತ್ತರಿಸುವ ಚೂಪಾದ ಉಪಕರಣದಿಂದ ಅವುಗಳನ್ನು ಕತ್ತರಿಸುವುದರ ಮೂಲಕ ಬೆಲೆಯನ್ನು ಸಂಗ್ರಹಿಸುತ್ತಾರೆ.
- ಬೆಳೆಯನ್ನು ಕೊಯ್ಯುವ ಆಲೋಚನೆ ಎಂದರೆ ಅನೇಕಬಾರಿ ಯೇಸುವಿನ ಕುರಿತಾದ ಸುವಾರ್ತೆಯನ್ನು ಜನರಿಗೆ ಹೇಳುವುದಕ್ಕೆ ಮತ್ತು ದೇವರ ಕುಟುಂಬದೊಳಗೆ ಅವರನ್ನು ಕರೆದುಕೊಂಡು ಬರುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಡುತ್ತಿತ್ತು.
- ಒಬ್ಬ ವ್ಯಕ್ತಿಯ ಕ್ರಿಯೆಗಳಿಂದ ಬರುವ ಪರಿಣಾಮಗಳನ್ನು ಸೂಚಿಸುವುದಕ್ಕೆ ಈ ಪದವನ್ನು ಅಲಂಕಾರಿಕವಾಗಿ ಉಪಯೋಗಿಸುತ್ತಾರೆ, ಉದಾಹರಣೆ “ಮನುಷ್ಯನು ಬಿತ್ತುವುದನ್ನು ಅವನು ಕೊಯ್ಯುವನು” ಎಂದು ಮಾತಿನಂತೆ ಇರುತ್ತದೆ. (ನೋಡಿರಿ: ರೂಪಕಾಲಂಕಾರ)
- “ಕೊಯ್ಯು” ಮತ್ತು “ಕೊಯ್ಯುವವನು” ಎನ್ನುವ ಪದಗಳನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಕೊಯ್ಲು” ಮತ್ತು “ಕೊಯ್ಲುಗಾರ” ಎನ್ನುವ ಪದಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಶುಭ ವಾರ್ತೆ, ಕೊಯ್ಲು)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.06:9-10
- ಮತ್ತಾಯ.06:25-26
- ಮತ್ತಾಯ.13:29-30
- ಮತ್ತಾಯ.13:36-39
- ಮತ್ತಾಯ.25:24-25

ಪದ ಡೇಟಾ:

- Strong's: H4672, H7114, H7938, G270, G2325, G2327

ಕೊಯ್ಲು, ಸುಗ್ಗಿ, ಕೊಯ್ಲು ಮಾಡಲ್ಪಟ್ಟಿದೆ, ಕೊಯ್ಲು ಮಾಡಲ್ಪಡುತ್ತಿದೆ, ಕೊಯ್ಲುಗಾರ, ಕೊಯ್ಲುಗಾರರು

ಪದದ ಅರ್ಥವಿವರಣೆ:

"ಕೊಯ್ಲು" ಎನ್ನುವ ಪದವು ಬೆಳೆಯಲ್ಪಟ್ಟಿರುವ ಸಸ್ಯಗಳಿಂದ ತರಕಾರಿಗಳನ್ನಾಗಲಿ ಅಥವಾ ಹಣ್ಣುಗಳನ್ನಾಗಲಿ ಕೊಯ್ದು ಅವುಗಳನ್ನು ಒಂಗೂಡಿಸುವುದನ್ನು ಸೂಚಿಸುತ್ತದೆ.

- ಬೆಳೆಯುವ ಕಾಲದ ಅಂತ್ಯದಲ್ಲಿ ಕೊಯ್ಲು ಸಮಯವು ಸಹಜವಾಗಿ ಉಂಟಾಗುತ್ತದೆ.
- ಇಸ್ರಾಯೇಲ್ಯರು "ಕೊಯ್ಲಿನ ಹಬ್ಬ" ಅಥವಾ "ಸುಗ್ಗಿಯ ಹಬ್ಬ"ಗಳನ್ನು ಆಹಾರ ಬೆಳೆಗಳನ್ನು ಕೊಯ್ಯಲು ಆಚರಿಸುತ್ತಿದ್ದರು. ಆತನಿಗೆ ಹೋಮವನ್ನಾಗಿ ಅವರು ಬೆಳೆಸುವ ಬೆಳೆಗಳಲ್ಲಿ ಪ್ರಥಮ ಫಲಗಳನ್ನು ಆರ್ಪಿಸಬೇಕೆಂದು ದೇವರು ಆಜ್ಞಾಪಿಸಿದ್ದರು.
- ಯೇಸುವಿನಲ್ಲಿ ನಂಬುವುದಕ್ಕೆ ಬರುವ ಜನರನ್ನು ಅಥವಾ ಒಬ್ಬ ವ್ಯಕ್ತಿಯ ಆತ್ಮೀಯಕ ಬೆಳವಣಿಗೆಯನ್ನು ಸೂಚಿಸುವುದಕ್ಕೆ "ಕೊಯ್ಲು" ಎನ್ನುವ ಪದವನ್ನು ಅಲಂಕಾರಿಕ ಅರ್ಥದಲ್ಲಿ ಸೂಚಿಸುತ್ತದೆ.
- ಆತ್ಮಿಕವಾದ ಬೆಳೆಗಳ ಕೊಯ್ಲಿನ ಆಲೋಚನೆಯು ದೈವಿಕವಾದ ನಡತೆಯ ಗುಣಗಳ ಹೊಂದಿರುವ ಫಲಗಳ ಅಲಂಕಾರಿಕ ರೂಪದೊಂದಿಗೆ ಹಿಡಿಯುವುದು.

ಅನುವಾದ ಸಲಹೆಗಳು:

- ಸಾಧಾರಣವಾಗಿ ಬೆಳೆಗಳನ್ನು ಕೊಯ್ಯುವುದಕ್ಕೆ ಸಾಧಾರಣವಾಗಿ ಭಾಷೆಯಲ್ಲಿ ಉಪಯೋಗಿಸುವ ಪದದೊಂದಿ ಈ ಪದವನ್ನು ಅನುವಾದ ಮಾಡುವುದು ಉತ್ತಮ.
- ಕೊಯ್ಲಿನ ಸಂದರ್ಭವನ್ನು "ಸಂಗ್ರಹಿಸುವ ಸಮಯ" ಅಥವಾ "ಬೆಳೆಗಳನ್ನು ಸಂಗ್ರಹಿಸುವ ಸಮಯ" ಅಥವಾ "ಫಲಗಳನ್ನು ಪಡೆಯುವ ಸಮಯ" ಎಂದೂ ಅನುವಾದ ಮಾಡಬಹುದು.
- "ಕೊಯ್ಲು" ಎನ್ನುವ ಕ್ರಿಯಾಪದವನ್ನು "ಸಂಗ್ರಹಿಸುವುದು" ಅಥವಾ "ಎತ್ತಿಕೊಳ್ಳುವುದು"" ಅಥವಾ "ಒಟ್ಟು ಗೂಡಿಸುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪ್ರಥಮ ಫಲಗಳು, ಹಬ್ಬ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.09:9-11
- 2 ಸಮು.21:7-9
- ಗಲಾತ್ಯ.06:9-10
- ಯೆಶಯಾ.17:10-11
- ಯಾಕೋಬ.05:7-8
- ಯಾಜಕ.19:9-10
- ಮತ್ತಾಯ.09:37-38
- ರೂತಳು.01:22

ಪದ ಡೇಟಾ:

- Strong's: H2758, H7105, G2326, G6013

ಕೊಲ್ಲು, ಹತ್ಯೆ

ಪದದ ಅರ್ಥವಿವರಣೆ:

ಒಬ್ಬ ವ್ಯಕ್ತಿಯನ್ನು ಅಥವಾ ಒಂದು ಪ್ರಾಣಿಯನ್ನು "ಕಡಿದು ಹಾಕು" ಎಂದರೆ ಕೊಂದು ಹಾಕು ಎಂದರ್ಥ. ಅನೇಕಬಾರಿ ಈ ಪದಕ್ಕೆ ಬಲವಂತಿಕೆಯ ಅಥವಾ ಹಿಂಸಾತ್ಮಕ ವಿಧಾನದಲ್ಲಿ ಇದನ್ನು ಕೊಂದು ಎನ್ನುವ ಅರ್ಥವೂ ಇದೆ. ಒಬ್ಬ ಮನುಷ್ಯನು ಒಂದು ಪ್ರಾಣಿಯನ್ನು ಕೊಂದು ಹಾಕಿದರೆ, ಅವನು ಅದನ್ನು "ಹತ್ಯೆ" ಮಾಡಿದ್ದಾನೆ ಎಂದರ್ಥ.

- ಒಂದು ಪ್ರಾಣಿಯನ್ನು ಅಥವಾ ಒಂದು ದೊಡ್ಡ ಜನರ ಗುಂಪನ್ನು ಸೂಚಿಸಿದಾಗ, ಅನೇಕಬಾರಿ ಈ ಸಂದರ್ಭಕ್ಕೆ ಉಪಯೋಗಿಸುವ ಪದವು "ವಧೆ" ಎಂದಾಗಿರುತ್ತದೆ.
- ಕೊಲ್ಲುವ ಕ್ರಿಯೆಯನ್ನು "ವಧೆ" ಎಂದೂ ಕರೆಯುತ್ತಾರೆ.
- "ಹತ್ಯೆ" ಎನ್ನುವ ಪದವನ್ನು "ಹತ್ಯೆ ಮಾಡಲ್ಪಟ್ಟ ಜನರು" ಅಥವಾ "ಕೊಲ್ಲಲ್ಪಟ್ಟ ಜನರು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ವಧೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.28:23-24
- ಯೆಶಯಾ.26:20-21

ಪದ ಡೇಟಾ:

- Strong's: H2026, H2076, H2490, H2491, H2717, H2763, H2873, H2874, H4191, H4194, H5221, H6991, H6992, H7523, H7819, G337, G615, G1315, G2380, G2695, G4968, G4969, G5407

ಕೊಳಲು, ಕೊಳವೆ

ಪದದ ಅರ್ಥವಿವರಣೆ

ಸತ್ಯವೇದ ಕಾಲದಲ್ಲಿ, ಎಲುಬು ಅಥವಾ ಕಟ್ಟಿಗೆಯಲ್ಲಿ ಶಬ್ದ ಹೊರಕ್ಕೆ ಬರುವಂತೆ ರಂದ್ರಗಳನ್ನು ಮಾಡಿರುವ ಸಂಗೀತ ವಾದ್ಯಗಳನ್ನ ಕೊಳವೆಗಳು ಎನ್ನುತ್ತಿದ್ದರು. ಕೊಳಲು ಒಂದು ವಿಧವಾದ ಕೊಳವೆಯಾಗಿತ್ತು.

- ಅನೇಕ ಕೊಳವೆಗಳು ದಪ್ಪ ಹುಲ್ಲಿನಿಂದ ಮಾಡಲ್ಪಟ್ಟ ಜೊಂಡುಗಳನ್ನು ಒಳಗೊಂಡಿರುತ್ತವೆ, ಕೊಳವೆಯನ್ನು ಊದಿದಾಗ ಆ ಜೊಂಡುಗಳು ಅಲುಗಾಡಿ ಶಬ್ದವನ್ನುಂಟು ಮಾಡುತ್ತದೆ.
- ಜೊಂಡು ಇಲ್ಲದ ಕೊಳವೆಯನ್ನು "ಕೊಳಲು" ಎಂದು ಕರೆಯುತ್ತಿದ್ದರು.
- ಕುರುಬ ತನ್ನ ಕುರಿಗಳ ಹಿಂಡು ನೆಮ್ಮದಿಯಾಗಿರಲು ಕೊಳಲು ಊದುತ್ತಿದ್ದನು.
- ಸಂತೋಷ ಅಥವಾ ದುಃಖದ ಸಂಗೀತವನ್ನು ನುಡಿಸಲು ಕೊಳಲು ಮತ್ತು ಕೊಳವೆಗಳನ್ನು ಉಪಯೋಗಿಸುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ: ಹಿಂಡು, ಕುರುಬ)

ಸತ್ಯವೇದದ ವಾಕ್ಯಗಳು:

- 1 ಕೊರಿಂಥ 14:7
- 1 ಅರಸ 1:38-40
- ದಾನಿ 3:3-5
- ಲೂಕ 7:31:32
- ಮತ್ತಾಯ 9:23
- ಮತ್ತಾಯ 11:17

ಪದ ಡೇಟಾ:

- Strong's: H4953, H5748, H2485, H2490, G08320, G08340, G08360

ಕೋಪ, ಕೋಪಗೊಳ್ಳುವಿಕೆ, ಸಿಟ್ಟು

ಪದದ ಅರ್ಥವಿವರಣೆ:

“ಕೋಪಗೊಳ್ಳುವುದು” ಅಥವಾ “ಕೋಪಗೊಂಡಿರುವುದು” ಎಂದರೆ ಇಷ್ಟವಿಲ್ಲದಿರುವುದು, ಕೆರಳುಗೊಳ್ಳುವುದುಮತ್ತು ಯಾರೋದರೊಬ್ಬರಿಗೆ ವಿರುದ್ಧವಾಗಿರುವುದು ಅಥವಾ ಯಾವುದೊಂದರ ಕುರಿತಾಗಿ ಅಸಮಾಧಾನದಿಂದ ಇರುವುದು.

- ಜನರು ಕೋಪಗೊಂಡಾಗ, ಅವರು ಅನೇಕಸಲ ಪಾಪದಿಂದಲೂ ಮತ್ತು ಸ್ವಾರ್ಥದಿಂದಲೂ ಇರುತ್ತಾರೆ, ಆದರೆ ಕೆಲವೊಂದುಸಲ ಒತ್ತಡಕ್ಕೆ ಅಥವಾ ಅನ್ಯಾಯಕ್ಕೆ ವಿರುದ್ಧವಾಗಿ ನೀತಿಯುಳ್ಳ ಕೋಪವನ್ನು ಹೊಂದಿರುತ್ತಾರೆ.
- ದೇವರ ಕೋಪ (“ಕೋಪಾಗ್ನಿ” ಎಂದೂ ಕರೆಯುತ್ತಾರೆ) ಪಾಪಕ್ಕೆ ಸಂಬಂಧಪಟ್ಟು ಆತನು ಅತಿ ಹೆಚ್ಚಾದ ಅಹಿಷ್ಟತೆಯನ್ನು ತೋರಿಸುತ್ತದೆ.
- “ಕೋಪ ಬರುವಂತೆ ರೇಗಿಸು” ಎನ್ನುವ ಮಾತಿಗೆ “ಕೋಪಗೊಳ್ಳುವುದಕ್ಕೆ ಕಾರಣವಾಗು” ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ಕೋಪಾಗ್ನಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಎಫೆಸ.04:25-27
- ವಿಮೋ.32:9-11
- ಯೆಶಯಾ.57:16-17
- ಯೋಹಾನ.06:52-53
- ಮಾರ್ಕ.10:13-14
- ಮತ್ತಾಯ.26:6-9
- ಕೀರ್ತನೆ.018:7-8

ಪದ ಡೇಟಾ:

- Strong's: H599, H639, H1149, H2152, H2194, H2195, H2198, H2534, H2734, H2787, H3179, H3707, H3708, H3824, H4751, H4843, H5674, H5678, H6225, H7107, H7110, H7266, H7307, G23, G1758, G2371, G2372, G3164, G3709, G3710, G3711, G3947, G3949, G5520

ಕೋಲು

ಪದದ ಅರ್ಥವಿವರಣೆ:

"ಕೋಲು" ಎನ್ನುವ ಪದವು ಅನೇಕ ವಿಧಾನಗಳಲ್ಲಿ ಉಪಯೋಗಿಸಲ್ಪಡುವ ಚಿಕ್ಕಾದಾದ ಬಲವಾದ ಕೋಲಿನಂತಿರುವ ಉಪಕರಣವನ್ನು ಸೂಚಿಸುತ್ತದೆ. ಇದು ಬಹುಶಃ ಕನಿಷ್ಟಪಕ್ಷ ಉದ್ದದಲ್ಲಿ ಒಂದು ಮೀಟರು ಇರುತ್ತದೆ.

- ಕಟ್ಟಿಗೆಯ ಕೋಲು ಎನ್ನುವುದು ಇತರ ಪ್ರಾಣಿಗಳಿಂದ ಕುರಿಗಳನ್ನು ರಕ್ಷಿಸುವುದಕ್ಕೆ ಕುರುಬನಿಂದ ಉಪಯೋಗಿಸಲ್ಪಡುವದಾಗಿರುತ್ತದೆ. ಇದನ್ನು ತಪ್ಪಿ ಹೋಗುತ್ತಿರುವ ಕುರಿಯ ಮೇಲೆ ಎಸೆದು, ಅದನ್ನು ಹಿಂಡಿಗೆ ಹಿಂತಿರುಗಿ ತೆಗೆದುಕೊಂಡು ಬರುವುದಕ್ಕೆ ಉಪಯೋಗಿಸುತ್ತಿದ್ದರು.
- ಕೀರ್ತನೆ 23ರಲ್ಲಿ ಅರಸನಾದ ದಾವೀದನು ತನ್ನ ಜನರಿಗಾಗಿ ದೇವರ ಮಾರ್ಗದರ್ಶನವನ್ನು ಮತ್ತು ಕ್ರಮಶಿಕ್ಷಣಯನ್ನು ಸೂಚಿಸುವುದಕ್ಕೆ "ದೊಣ್ಣೆಯೂ" ಮತ್ತು "ಕೋಲು" ಎನ್ನುವ ಪದಗಳನ್ನು ಅಲಂಕಾರಿಕವಾಗಿ ಉಪಯೋಗಿಸಿರುತ್ತಾನೆ.
- ಕುರುಬನ ಕೋಲು ಎನ್ನುವುದನ್ನು ಇದರ ಕೆಳಗೆ ಕುರಿಗಳು ಹಾದು ಹೋಗುತ್ತಿರುವಾಗ ಎಣಿಸುವುದಕ್ಕೆ ಉಪಯೋಗಿಸುತ್ತಿದ್ದರು.
- "ಕಬ್ಬಿಣದ ಕೋಲು" ಎನ್ನುವ ಇನ್ನೊಂದು ರೂಪಕಾಲಂಕಾರದ ಮಾತು ದೇವರನ್ನು ತಿರಸ್ಕರಿಸಿ, ದುಷ್ಟ ಕಾರ್ಯಗಳನ್ನು ಮಾಡುತ್ತಿರುವ ಜನರಿಗಾಗಿ ಕೊಡಲ್ಪಡುವ ದೇವರ ಶಿಕ್ಷೆಯನ್ನು ಸೂಚಿಸುತ್ತದೆ.
- ಪುರಾತನ ಕಾಲಗಳಲ್ಲಿ, ಅಳತೆ ಮಾಡುವ ಕೋಲುಗಳನ್ನು ಲೋಹ, ಕಟ್ಟಿಗೆ, ಅಥವಾ ಕಲ್ಲಿನಿಂದ ತಯಾರು ಮಾಡುತ್ತಿದ್ದರು, ಇವುಗಳನ್ನು ವಸ್ತು ಅಥವಾ ಭವನಗಳ ಉದ್ದವನ್ನು ಅಳತೆ ಮಾಡುವುದಕ್ಕೆ ಉಪಯೋಗಿಸುತ್ತಿದ್ದರು.
- ಸತ್ಯವೇದದಲ್ಲಿ, ಕಟ್ಟಿಗೆಯ ಕೋಲು ಮಕ್ಕಳನ್ನು ಕ್ರಮಶಿಕ್ಷಣದಲ್ಲಿಡುವುದಕ್ಕೆ ಒಂದು ಉಪಕರಣವನ್ನಾಗಿಯೂ ಸೂಚಿಸಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ: ದೊಣ್ಣೆ, ಕುರಿಗಳು, ಕುರುಬ)

ಸತ್ಯವೇದದ ವಾಕ್ಯಗಳು:

- 1 ಕೊರಿಂಥ 4:21
- 1 ಸಮು 14:43-44
- ಅಪೊ.ಕೃತ್ಯ 16:23
- ವಿಮೋ 27:9-10
- ಪ್ರಕ 11:1

ಪದ ಡೇಟಾ:

- Strong's: H2415, H4294, H4731, H7626, G25630, G44630, G44640

ಕೋಲು, ಕೋಲುಗಳು

ಪದದ ಅರ್ಥವಿವರಣೆ:

ಕೋಲು ಎನ್ನುವುದು ಉದ್ದವಾದ ಕಟ್ಟಿಗೆ ಅಥವಾ ಕಡ್ಡಿ ಆಗಿರುತ್ತದೆ, ಅನೇಕಬಾರಿ ಇದನ್ನು ಕೈಕೋಲು ಎಂಬುದಾಗಿ ಉಪಯೋಗಿಸಲ್ಪಟ್ಟಿರುತ್ತದೆ.

- ಯಾಕೋಬನು ವೃದ್ಧಾಪ್ಯದಲ್ಲಿದ್ದಾಗ, ಆತನು ನಡೆಯುವುದಕ್ಕೆ ಕೋಲನ್ನು ಉಪಯೋಗಿಸಿದ್ದನು.
- ದೇವರು ತನ್ನ ಶಕ್ತಿಯನ್ನು ಫರೋಹನಿಗೆ ತೋರಿಸುವುದಕ್ಕೆ ಮೋಶೆಯ ಕೋಲನ್ನು ಹಾವನ್ನಾಗಿ ಮಾಡಿದನು.
- ಕುರುಬರು ತಮ್ಮ ಕುರಿಗಳಿಗೆ ಮಾರ್ಗ ನಿರ್ದೇಶನ ಸಹಾಯ ಮಾಡುವುದಕ್ಕೆ ಕೋಲನ್ನು ಉಪಯೋಗಿಸುತ್ತಿದ್ದರು, ಅಥವಾ ಆ ಕುರಿಗಳು ಮಾರ್ಗವನ್ನು ತಪ್ಪಿಹೋಗುತ್ತಿರುವಾಗ ಅಥವಾ ಚೆದರಿ ಹೋಗುತ್ತಿರುವಾಗ ಅವುಗಳನು ರಕ್ಷಿಸುವುದಕ್ಕೆ ಉಪಯೋಗಿಸುತ್ತಿದ್ದರು.
- ಕುರುಬನ ಕೋಲಿಗೆ ತುದಿ ಭಾಗದಲ್ಲಿ ಒಂದು ಕೊಕ್ಕೆಯನ್ನು ಹೊಂದಿರುತ್ತದೆ, ಇದು ಉದ್ದವಾಗಿ ನೇರವಾಗಿ ಇರುವ ಕುರುಬನ ಕಡ್ಡಿಗೆ ಬೇರೆಯಾಗಿರುತ್ತದೆ ಮತ್ತು ಕುರಿಗಳ ಮೇಲೆ ಧಾಳಿ ಮಾಡುವವುಗಳಿಂದ ಅಡವಿ ಪ್ರಾಣಿಗಳನ್ನು ಕೊಲ್ಲುವುದಕ್ಕೆ ಉಪಯೋಗಿಸುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ಫರೋಹ, ಶಕ್ತಿ, ಕುರಿಗಳು, ಕುರುಬ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.04:1-3
- ವಿಮೋ.07:8-10
- ಲೂಕ.09:3-4
- ಮಾರ್ಕ.06:7-9
- ಮತ್ತಾಯ.10 :8-10
- ಮತ್ತಾಯ.27:27-29

ಪದ ಡೇಟಾ:

- Strong's: H4132, H4294, H4731, H4938, H6086, H6418, H7626, G2563, G3586, G4464

ಕ್ರೋಧ, ಕ್ರೋಧಕ್ಕೆ ಗುರಿಮಾಡುತ್ತದೆ, ಕ್ರೋಧದಲ್ಲಿರುವುದು

ಸತ್ಯಾಂಶಗಳು:

ಕ್ರೋಧ ಎಂದರೆ ನಿಯಂತ್ರಿಸಿಕೊಳ್ಳುವುದಕ್ಕಾಗದ ಅಧಿಕವಾದ ಕೋಪ ಎಂದರ್ಥ. ಯಾರಾದರೊಬ್ಬರು ಕ್ರೋಧಕ್ಕೆ ಗುರಿಯಾದಾಗ, ಆ ವ್ಯಕ್ತಿ ತನ್ನ ಅಧಿಕವಾದ ಕೋಪವನ್ನು ನಾಶವನ್ನುಂಟು ಮಾಡುವ ವಿಧಾನದಲ್ಲಿ ವ್ಯಕ್ತಗೊಳಿಸುತ್ತಿದ್ದಾನೆಂದು ಅದರ ಅರ್ಥವಾಗಿರುತ್ತದೆ.

- ಒಬ್ಬ ವ್ಯಕ್ತಿ ಕೋಪದ ಭಾವನೆಯಿಂದ ತನ್ನ ಸ್ವಯಂ ನಿಯಂತ್ರಣವನ್ನು ಕಳೆದುಕೊಂಡಾಗ ಕ್ರೋಧವು ಉಂಟಾಗುತ್ತದೆ.
- ಕ್ರೋಧದಿಂದ ನಿಯಂತ್ರಿಸಲ್ಪಡುತ್ತಿರುವಾಗ ಮನುಷ್ಯರು ನಾಶಗೊಳಿಸುವ ಕ್ರಿಯೆಗಳನ್ನು ಮಾಡುತ್ತಾರೆ ಮತ್ತು ನಾಶಗೊಳಿಸುವ ಮಾತುಗಳನ್ನು ನುಡಿಯುತ್ತಾರೆ.
- “ಕ್ರೋಧ” ಎನ್ನುವ ಪದಕ್ಕೆ ಶಕ್ತಿಯುತವಾಗಿ ನಡೆ ಎನ್ನುವ ಅರ್ಥವನ್ನೂ ಕೊಡುತ್ತದೆ, “ಕ್ರೋಧದಲ್ಲಿರುವ” ಅಲೆ ಅಥವಾ ಸಮುದ್ರದ ತರಂಗಗಳು “ಕ್ರೋಧಗೊಂಡಿವೆ” ಎನ್ನುವ ಮಾತುಗಳಲ್ಲಿ ನೋಡಬಹುದು.
- “ದೇಶಗಳು ಕ್ರೋಧ”ಗೊಂಡಾಗ, ಅದೈವಿಕವಾದ ಜನರೆಲ್ಲರು ದೇವರಿಗೆ ಅವಿಧೇಯತೆಯನ್ನು ತೋರಿಸುವರು ಮತ್ತು ಆತನಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ.
- “ಕ್ರೋಧದಿಂದ ತುಂಬಿರುವುದು” ಎನ್ನುವ ಮಾತಿಗೆ ಅತ್ಯಧಿಕವಾದ ಕೋಪದ ಭಾವನೆಯೊಂದಿಗೆ ತುಂಬಿಸಲ್ಪಡುವುದು ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ಕೋಪ, ಶಮೆದಮೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:23-25
- ದಾನಿ.03:13-14
- ಲೂಕ.04:28-30
- ಅರಣ್ಯ.25:10-11
- ಜ್ಞಾನೋ.19:3-4

ಪದ ಡೇಟಾ:

- Strong's: H398, H1348, H1984, H1993, H2121, H2195, H2196, H2197, H2534, H2734, H2740, H3491, H3820, H5590, H5678, H7264, H7265, H7266, H7267, H7283, H7857, G1693, G2830, G3710, G5433

ಖಡ್ಗ, ಖಡ್ಗಗಳು, ಖಡ್ಗಗಳನ್ನು ಹಿಡಿಯುವವರು

ಪದದ ಅರ್ಥವಿವರಣೆ:

ಖಡ್ಗ ಎನ್ನುವುದು ತಿವಿಯುವುದಕ್ಕೆ ಅಥವಾ ಕತ್ತರಿಸುವುದಕ್ಕೆ ಉಪಯೋಗಿಸುವ ಸಪಟವಾದ ಕತ್ತಿಯನ್ನು ಹೊಂದಿರುವ ಲೋಹದ ಸಾಧನೆಯಾಗಿರುತ್ತದೆ. ಇದಕ್ಕೆ ದೊಡ್ಡದಾದ ಒಂದು ಕೈಪಿಡಿ ಇರುತ್ತದೆ, ಕತ್ತರಿಸುವುದಕ್ಕೆ ಚೂಪಾದ ತುದಿಯನ್ನು ಹೊಂದಿರುವ ಕತ್ತಿಯನ್ನು ಹೊಂದಿರುತ್ತದೆ.

- ಪುರಾತನ ಕಾಲಗಳಲ್ಲಿ ಖಡ್ಗದ ಉದ್ದವು 60 ರಿಂದ 91 ಸೆಂಟಿಮೀಟರುಗಳಿರುತ್ತಿತ್ತು.
- ಕೆಲವೊಂದು ಖಡ್ಗಗಳಿಗೆ ಎರಡು ಕಡೆಗೆ ಚೂಪಾದ ತುದಿಗಳು ಇರುತ್ತಿದ್ದವು, ಇದನ್ನು "ಇಬ್ಬಾಯಿ ಕತ್ತಿ" ಅಥವಾ "ಎರಡು ತುದಿಗಳಿರುವ ಕತ್ತಿ" ಎಂದು ಕರೆಯುತ್ತಾರೆ.
- ಯೇಸು ಶಿಷ್ಯರು ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಕತ್ತಿಗಳನ್ನು ಇಟ್ಟುಕೊಂಡಿದ್ದರು. ಪೇತ್ರನು ತನ್ನ ಬಳಿ ಇರುವ ಕತ್ತಿಯಿಂದ ಮಹಾ ಯಾಜಕನ ಸೇವಕನ ಕಿವಿಯನ್ನು ಕತ್ತರಿಸಿದನು.
- ಸ್ನಾನಿಕನಾದ ಯೋಹಾನ ಮತ್ತು ಅಪೊಸ್ತಲನಾದ ಯಾಕೋಬರು ಖಡ್ಗಗಳಿಂದ ಶಿರಚ್ಛೇದನ ಮಾಡಲ್ಪಟ್ಟರು.

ಅನುವಾದ ಸಲಹೆಗಳು:

- ಖಡ್ಗ ಎನ್ನುವ ಪದವನ್ನು ದೇವರ ವಾಕ್ಯಕ್ಕೆ ಅಲಂಕಾರಿಕವಾಗಿ ಉಪಯೋಗಿಸಿದ್ದಾರೆ. ಸತ್ಯವೇದದಲ್ಲಿರುವ ದೇವರ ಬೋಧನೆಗಳು ಜನರ ಅಂತರಂಗದ ಆಲೋಚನೆಗಳನ್ನು ಮತ್ತು ಅವರು ಮಾಡಿದ ಪಾಪಗಳನ್ನು ಒಪ್ಪಿಕೊಳ್ಳುವುದನ್ನು ಹೊರಕ್ಕೆ ವ್ಯಕ್ತಗೊಳಿಸುತ್ತದೆ. ಅದೇ ರೀತಿಯಲ್ಲಿ ಖಡ್ಗ ಎನ್ನುವುದು ತುಂಬಾ ಆಳವಾಗಿ ಕತ್ತರಿಸುವುದು ಮತ್ತು ನೋವನ್ನು ಉಂಟುಮಾಡುತ್ತದೆ. (ನೋಡಿರಿ: ರೂಪಕಾಲಂಕಾರ)
- ಈ ಪದವನ್ನು ಅಲಂಕಾರಿಕವಾಗಿ ಉಪಯೋಗಿಸಿದಾಗ, "ದೇವರ ವಾಕ್ಯವು ಖಡ್ಗದಂತಿದೆ, ಇದು ಆಳವಾಗಿ ಕತ್ತರಿಸಿ, ಪಾಪವನ್ನು ತೋರಿಸುತ್ತದೆ" ಎಂದೂ ಅನುವಾದ ಮಾಡಬಹುದು.
- ಈ ರೀತಿಯ ಅಲಂಕಾರಿಕ ಉಪಯೋಗವು ಕೀರ್ತನೆಗಳ ಪುಸ್ತಕದಲ್ಲಿ ಕಾಣಿಸಿಕೊಳ್ಳುತ್ತದೆ, ಒಬ್ಬ ವ್ಯಕ್ತಿಯ ನಾಲಗೆಯು ಅಥವಾ ಮಾತು ಖಡ್ಗಕ್ಕೆ ಹೋಲಿಸಲಾಗಿರುತ್ತದೆ, ಇದು ಜನರಿಗೆ ಹಾನಿ ಮಾಡುತ್ತದೆ. ಇದನ್ನು "ನಾಲಗೆಯು ಖಡ್ಗದಂತಿದೆ, ಇದು ಮನುಷ್ಯರಿಗೆ ಅತೀ ಭಯಂಕರವಾಗಿ ಹಾನಿಯನ್ನುಂಟು ಮಾಡುತ್ತದೆ" ಎಂದೂ ಅನುವಾದ ಮಾಡಬಹುದು.
- ನಿಮ್ಮ ಸಂಸ್ಕೃತಿಯಲ್ಲಿ ಖಡ್ಗಗಳನ್ನು ಉಪಯೋಗಿಸದಿದ್ದರೆ, ಈ ಪದವನ್ನು ತಿವಿಯುವುದಕ್ಕೆ ಅಥವಾ ಕತ್ತರಿಸುವುದಕ್ಕೆ ಉಪಯೋಗಿಸುವ ಉದ್ದವಾದ ಕತ್ತಿಯ ಹೆಸರಿನೊಂದಿಗೆ ಅನುವಾದ ಮಾಡಬಹುದು.
- ಖಡ್ಗವನ್ನು "ಚೂಪಾದ ಆಯುಧ" ಅಥವಾ "ಉದ್ದವಾದ ಕತ್ತಿ" ಎಂದು ವಿವರಿಸುವುದಕ್ಕೆ ಉಪಯೋಗಿಸುತ್ತಾರೆ. ಕೆಲವೊಂದು ಅನುವಾದಗಳಲ್ಲಿ ಖಡ್ಗದ ಚಿತ್ರಣವನ್ನು ಇಟ್ಟಿರುತ್ತಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಯಾಕೋಬ (ಯೇಸುವಿನ ಸಹೋದರ), ಯೋಹಾನ (ಸ್ನಾನಿಕನು), ನಾಲಗೆ, ದೇವರ ವಾಕ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.12:1-2
- ಆದಿ.27:39-40
- ಆದಿ.34:24-26
- ಲೂಕ.02:33-35
- ಲೂಕ.21:23-24
- ಮತ್ತಾಯ.10:34-36
- ಮತ್ತಾಯ.26:55-56
- ಪ್ರಕ.01:14-16

ಪದ ಡೇಟಾ:

- Strong's: H19, H1300, H2719, H4380, H6609, H7524, H7973, G3162, G4501

ಖರ್ಜೂರ ವೃಕ್ಷ

ಅರ್ಥವಿವರಣೆ:

“ಖರ್ಜೂರ ವೃಕ್ಷ” ಎನ್ನುವ ಪದವು ಪಂಕ ಯಂತ್ರದ ನಮೂನೆಯಲ್ಲಿರುವಂತೆ ಮೇಲ್ಭಾಗದಿಂದ ವಿಸ್ತರಿಸಲ್ಪಟ್ಟ ಉದ್ದವಾದ, ಹೊಂದಿಕೊಳ್ಳುವ ಎಲೆಗಳ ಕೊಂಬೆಗಳ ಒಂದು ರೀತಿಯ ಎತ್ತರವಾದ ಮರವನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿರುವ ಖರ್ಜೂರ ವೃಕ್ಷ ಸಾಧಾರಣವಾಗಿ “ಖರ್ಜೂರ ಹಣ್ಣು” ಎಂದು ಕರೆಯುವ ಹಣ್ಣುಗಳನ್ನು ಹೊಂದಿರುವ ಖರ್ಜೂರದ ಮರವನ್ನು ಸೂಚಿಸುತ್ತದೆ. ಎಲೆಗಳು ಗರಿಗಳ ನಮೂನೆಯನ್ನು ಹೊಂದಿರುತ್ತವೆ.
- ಖರ್ಜೂರದ ಮರಗಳು ವಿಶಿಷ್ಟವಾಗಿ ಬಿಸಿಯಾದ, ತೇವವುಳ್ಳ ಹವಾಮಾನವನ್ನು ಹೊಂದಿರುವ ಸ್ಥಳಗಳಲ್ಲಿ ಬೆಳೆಯುತ್ತವೆ. ಅವುಗಳ ಎಲೆಗಳು ವರ್ಷ ಪೂರ್ತಿ ತುಂಬಾ ಹಚ್ಚು ಹಸಿರಾಗಿರುತ್ತವೆ.
- ಯೇಸು ಕತ್ತೆಯ ಮೇಲೆ ಕುಳಿತು ಯೆರೂಸಲೇಮ್ ಪಟ್ಟಣದೊಳಗೆ ಪ್ರವೇಶಿಸುತ್ತಿರುವಾಗ, ಜನರು ಆತನು ಬರುತ್ತಿರುವಾಗ ಆತನ ಮುಂದೆ ನೆಲದ ಮೇಲೆ ಖರ್ಜೂರದ ಕೊಂಬೆಗಳನ್ನು ಇಡುತ್ತಿದ್ದರು.
- ಖರ್ಜೂರದ ಕೊಂಬೆಗಳು ಜಯದ ಆಚರಣೆಗೆ ಮತ್ತು ಸಮಾಧಾನಕ್ಕೆ ಗುರುತಾಗಿರುತ್ತವೆ.

(ಇವುಗಳನ್ನು ಸಹ ನೋಡಿರಿ : ಕತ್ತೆ, ಯೆರೂಸಲೇಮ್, ಸಮಾಧಾನ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.6:29-30
- ಯೆಹೆ.40:14-16
- ಯೋಹಾನ.12:12-13
- ಅರಣ್ಯ.33:9

ಪದದ ಡೇಟಾ:

- Strong's: H3712, H8558, H8560, H8561, G54040

ಗಂಟೆ, ಗಂಟೆಗಳು

ಪದದ ಅರ್ಥವಿವರಣೆ:

ಯಾವಾಗ ಅಥವಾ ಎಷ್ಟು ಹೊತ್ತು ತೆಗೆದುಕೊಳ್ಳುತ್ತದೆ ಎಂದು ಸೂಚಿಸುವುದಕ್ಕೆ ಉಪಯೋಗಿಸುವುದರ ಜೊತೆಗೆ, "ಗಂಟೆ" ಎನ್ನುವ ಪದವನ್ನು ಅನೇಕ ವಿಧವಾದ ಅಲಂಕಾರಿಕ ವಿಧಾನಗಳಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ:

- ಕೆಲವೊಂದು ಸಲ "ಗಂಟೆ" ಎನ್ನುವುದು ಎನಾದರೊಂದನ್ನು ಮಾಡುವುದಕ್ಕೆ ಅಂದರೆ "ಪ್ರಾರ್ಥನೆಯ ಗಂಟೆ" ಎಂದು ಪ್ರಣಾಳಿಕೆಯ ಸಮಯವನ್ನು ಸೂಚಿಸುತ್ತದೆ.
- ಯೇಸು ಶ್ರಮೆ ಹೊಂದುವ ಮತ್ತು ಮರಣಿಸುವ "ಗಳಿಗೆ ಬಂದಿದೆ" ಎಂದು ವಾಕ್ಯ ಹೇಳಿದಾಗ, ಇದಕ್ಕೆ ದೇವರು ಎಷ್ಟೋ ಕಾಲದ ಕೆಳಗೆ ಆಯ್ಕೆ ಮಾಡಿರುವ ಸಮಯವು-ನಡೆಯುವುದಕ್ಕೆ ನೇಮಿಸಲ್ಪಟ್ಟಿರುವ ಸಮಯವು ಬಂದಿದೆಯೆಂದು ಇದರ ಅರ್ಥವಾಗಿರುತ್ತದೆ.
- "ಗಂಟೆ" ಎನ್ನುವುದು "ಆ ಕ್ಷಣವನ್ನೇ" ಅಥವಾ "ಈಗಿನ ಸಮಯದಲ್ಲೇ" ಎನ್ನುವ ಅರ್ಥವನ್ನು ಕೊಡುತ್ತದೆ.
- "ಗಂಟೆ" ಆಲಸ್ಯವಾಗುತ್ತಿರುವದರ ಕುರಿತಾಗಿ ವಾಕ್ಯ ಮಾತನಾಡಿದಾಗ, ಸೂರ್ಯನು ತುಂಬಾ ಶೀಘ್ರವಾಗಿ ಮುಳುಗುತ್ತಿದ್ದಾನೆ, ದಿನದಲ್ಲಿ ಅದು ತುಂಬಾ ತಡವಾಗಿರುತ್ತದೆ ಎಂದರ್ಥ.

ಅನುವಾದ ಸಲಹೆಗಳು:

- ಇದನ್ನು ಅಲಂಕಾರಿಕವಾಗಿ ಉಪಯೋಗಿಸಿದಾಗ, "ಗಂಟೆ" ಎನ್ನುವ ಪದವನ್ನು "ಸಮಯ" ಅಥವಾ "ಕ್ಷಣ" ಅಥವಾ "ನೇಮಿಸಲ್ಪಟ್ಟ ಸಮಯ" ಎಂದೂ ಅನುವಾದ ಮಾಡಬಹುದು.
- "ಆ ಗಳಿಗೆಯಲ್ಲಿ" ಅಥವಾ "ಅದೇ ಸಮಯದಲ್ಲಿ" ಎನ್ನುವ ಮಾತನ್ನು "ಆ ಕ್ಷಣದಲ್ಲೇ" ಅಥವಾ "ಆ ಸಮಯದಲ್ಲೇ" ಅಥವಾ "ತಕ್ಷಣವೇ" ಅಥವಾ "ಅವಾಗಲೇ" ಎಂದೂ ಅನುವಾದ ಮಾಡಬಹುದು.
- "ಈ ಗಂಟೆ ಆಲಸ್ಯವಾಯಿತು" ಎನ್ನುವ ಮಾತನ್ನು "ದಿನದಲ್ಲಿ ಅದು ತಡವಾಗಿತ್ತು" ಅಥವಾ "ಅತೀ ಶೀಘ್ರವಾಗಿ ಕತ್ತಲಾಗುತ್ತಿದೆ" ಅಥವಾ "ಅದು ಮಧ್ಯಾಹ್ನವಾಗಿತ್ತು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಗಂಟೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.15:29-30
- ಅಪೊ.ಕೃತ್ಯ.10:30-33
- ಮಾರ್ಕ.14:35-36

ಪದ ಡೇಟಾ:

- Strong's: H8160, G5610

ಗಂಧಕ, ಗಂಧಕದ

ಪದದ ಅರ್ಥವಿವರಣೆ:

ಗಂಧಕ ಎನ್ನುವುದು ಇದನ್ನು ಬೆಂಕಿಯ ಮೇಲೆ ಇಟ್ಟಾಗ ಉರಿಯುವ ದ್ರವವಾಗಿ ಹಳದಿ ಬಣ್ಣದಲ್ಲಿ ಮಾರ್ಪಡುವ ಪದಾರ್ಥವಾಗಿರುತ್ತದೆ.

- ಕೊಳೆತ ಮೊಟ್ಟೆಗಳ ವಾಸನೆಯಂತೆಯೇ ಗಂಧಕವು ತುಂಬಾ ಬಲವಾದ ವಾಸನೆಯನ್ನು ಹೊಂದಿರುತ್ತದೆ.
- ಸತ್ಯವೇದದಲ್ಲಿ ಉರಿಯುವ ಗಂಧಕಾವು ಅದೈವಿಕ ಮತ್ತು ತಿರಸ್ಕಾರ ಮಾಡುವ ಜನರ ಮೇಲೆ ದೇವರು ತೋರಿಸುವ ತೀರ್ಪಿಗೆ ಗುರುತಾಗಿರುತ್ತದೆ.
- ಲೋಟನ ಕಾಲದಲ್ಲಿ ದೇವರು ಸೊದೊಮ್ ಮತ್ತು ಗೊಮೋರ ಎನ್ನುವ ದುಷ್ಟ ಪಟ್ಟಣಗಳ ಮೇಲೆ ಬೆಂಕಿಯನ್ನು ಮತ್ತು ಗಂಧಕವನ್ನು ಸುರಿಸಿದನು.
- ಕೆಲವೊಂದು ಬೈಬಲ್ ಅನುವಾದಗಳಲ್ಲಿ ಗಂಧಕವು “ಗಂಡುಬೀರಿಯಾಗಿ” ಸೂಚಿಸಲ್ಪಟ್ಟಿರುತ್ತದೆ, ಈ ಪದಕ್ಕೆ “ಉರಿಯುವ ಕಲ್ಲು” ಎನ್ನುವ ಅಕ್ಷರಾರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ವಿಧಾನದಲ್ಲಿ “ಉರಿಯುವ ಹಳದಿ ಕಲ್ಲು” ಅಥವಾ “ಉರಿಯುವ ಹಳದಿ ಬಣ್ಣದಲ್ಲಿರುವ ಬಂಡೆ” ಎನ್ನುವ ಮಾತುಗಳನ್ನು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಗೊಮೋರ, ನ್ಯಾಯಾಧೀಶ, ಲೋಟ, ತಿರಸ್ಕಾರ, ಸೊದೋಮ, ದೈವಿಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.19:23-25
- ಯೆಶಯಾ.34:8-10
- ಲೂಕ.17:28-29
- ಪ್ರಕ.20:9-10

ಪದ ಡೇಟಾ:

- Strong's: H1614, G2303

ಗಟ್ಟಿಯಾದ ಕುತ್ತಿಗೆ, ಮೊಂಡು, ಮೊಂಡುತನದಿಂದ, ಮೊಂಡುತನ

ಪದದ ಅರ್ಥವಿವರಣೆ:

“ಗಟ್ಟಿಯಾದ ಕುತ್ತಿಗೆ” ಎನ್ನುವ ಮಾತು ಪಶ್ಚಾತ್ತಾಪವನ್ನು ತಿರಸ್ಕರಿಸುತ್ತಾ, ದೇವರಿಗೆ ಅವಿಧೇಯತೆಯನ್ನು ತೋರಿಸುವ ಜನರನ್ನು ಸೂಚಿಸುವುದಕ್ಕೆ ಸತ್ಯವೇದದಲ್ಲಿ ಉಪಯೋಗಿಸಲ್ಪಟ್ಟ ಒಂದು ನಾಣ್ಣುಡಿಯಾಗಿರುತ್ತದೆ. ಅಂತಹ ಜನರು ತುಂಬಾ ಅಹಂಕಾರಿಗಳಾಗಿರುತ್ತಾರೆ ಮತ್ತು ಅವರು ದೇವರ ಅಧಿಕಾರಕ್ಕೆ ತಮ್ಮನ್ನು ತಾವು ಒಳಪಡಿಸಿಕೊಳ್ಳುವುದಿಲ್ಲ.

- ಹಾಗೆಯೇ, “ಮೊಂಡು” ಎನ್ನುವ ಪದವು ಒಬ್ಬ ವ್ಯಕ್ತಿ ತನ್ನ ನಡತೆಯನ್ನು ಮಾರ್ಪಾಟು ಮಾಡಿಕೊಳ್ಳಬೇಕಾದ ಅವಶ್ಯಕತೆ ಇದ್ದರೂ, ತನ್ನ ಮನಸ್ಸನ್ನು ಅಥವಾ ಕ್ರಿಯೆಗಳನ್ನು ಮಾರ್ಪಾಟು ಮಾಡಿಕೊಳ್ಳುವುದಕ್ಕೆ ತಿರಸ್ಕಾರ ಮಾಡುವ ವ್ಯಕ್ತಿಯನ್ನು ವಿವರಿಸುತ್ತದೆ. ಮೊಂಡುತನದ ಜನರು ಇತರ ವ್ಯಕ್ತಿಗಳು ಹೇಳುವ ಒಳ್ಳೆಯ ಸಲಹೆಗಳನ್ನು ಅಥವಾ ಎಚ್ಚರಿಕೆಗಳನ್ನು ಕೇಳುವುದಕ್ಕೆ ಇಷ್ಟಪಡುವುದಿಲ್ಲ.
- ಇಸ್ರಾಯೇಲ್ಯರು “ಗಟ್ಟಿಯಾದ ಕುತ್ತಿಗೆ” ಇರುವವರು ಎಂದು ಹಳೇ ಒಡಂಬಡಿಕೆಯಲ್ಲಿ ಹೇಳಲ್ಪಟ್ಟಿರತ್ತದೆ, ಯಾಕಂದರೆ ಇವರು ಪಶ್ಚಾತ್ತಾಪ ಹೊಂದಿ, ಯೆಹೋವನ ಕಡೆಗೆ ತಿರುಗಿಕೊಳ್ಳಿರಿ ಎಂದು ಬೇಡುವ ದೇವರ ಪ್ರವಾದಿಗಳಿಂದ ಬರುವ ಅನೇಕ ಸಂದೇಶಗಳನ್ನು ಕೇಳುವುದಕ್ಕೆ ಅವರು ಇಷ್ಟಪಡುವುದಿಲ್ಲ.
- ಕುತ್ತಿಗೆ “ಬಿರುಸಾಗಿದ್ದರೆ”, ಅದು ಸುಲಭವಾಗಿ ಬಾಗುವುದಿಲ್ಲ. ಒಬ್ಬ ವ್ಯಕ್ತಿ ತನ್ನ ಮಾರ್ಗಗಳನ್ನು ಮಾರ್ಪಡಿಸಿಕೊಳ್ಳುವುದಕ್ಕೆ ತಿರಸ್ಕರಿಸುವ ಅಥವಾ “ಬಾಗದಿರುವ” ವ್ಯಕ್ತಿಯನ್ನು ಸೂಚಿಸುವುದಕ್ಕೆ ಅನುವಾದ ಭಾಷೆಯಲ್ಲಿ ಬೇರೊಂದು ನಾಣ್ಣುಡಿಯನ್ನು ಹೊಂದಿರಬಹುದು.
- ಈ ಪದವನ್ನು ಅಥವಾ ಈ ಮಾತನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಗರ್ವದಿಂದ ಮೊಂಡುತನವಿರುವ” ಅಥವಾ “ಅಹಂಕಾರಿ ಮತ್ತು ಬಗ್ಗದ” ಅಥವಾ “ಮಾರ್ಪಡುವುದಕ್ಕೆ ತಿರಸ್ಕರಿಸುವ” ಎನ್ನುವ ಮಾತುಗಳನ್ನು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಅಹಂಕಾರಿ, ಗರ್ವ, ಪಶ್ಚಾತ್ತಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:51-53
- ಧರ್ಮೋ.09:13-14
- ವಿಮೋ.13:14-16
- ಯೆರೆ.03:17-18

ಪದ ಡೇಟಾ:

- Strong's: H47, H3513, H5637, H6203, H6484, H7185, H7186, H7190, H8307, G483, G4644, G4645

ಗದರಿಸು, ಖಂಡಿಸು

ಪದದ ಅರ್ಥವಿವರಣೆ:

"ಗದರಿಸುವುದು" ಎಂದರೆ ಯಾರನ್ನಾದರೂ ಮೌಖಿಕವಾಗಿ ಸರಿಪಡಿಸುವುದನ್ನು ಸೂಚಿಸುತ್ತದೆ, ಸಾಮಾನ್ಯವಾಗಿ ಅದು ಬಲದಿಂದ ಅಥವಾ ಕಠಿಣತೆಯಿಂದ ಆಗಿರಬಹುದು.

- ವಿಶ್ವಾಸಿಗಳು ದೇವರಿಗೆ ಸ್ಪಷ್ಟವಾಗಿ ಅವಿಧೇಯತೆಯನ್ನು ತೋರಿಸುವಾಗ ಅವರನ್ನು ಗದರಿಸಬೇಕೆಂದು ಹೊಸ ಒಡಂಬಡಿಕೆಯು ಕ್ರೈಸ್ತರಿಗೆ ಅಜ್ಞಾಪಿಸುತ್ತಿದೆ.
- ಮಕ್ಕಳು ತಂದೆತಾಯಿಗಳಿಗೆ ಅವಿಧೇಯತೆಯನ್ನು ತೋರಿಸುವಾಗ ತಮ್ಮ ಮಕ್ಕಳನ್ನು ಗದರಿಸಬೇಕೆಂದು ಜ್ಞಾನೋಕ್ತಿಗಳ ಪುಸ್ತಕವು ಸೂಚನೆಗಳನ್ನು ಕೊಟ್ಟಿರುತ್ತದೆ.
- ಪಾಪದಲ್ಲಿ ತಮ್ಮನ್ನು ತಾವು ಮುಳುಗಿಸಿಕೊಳ್ಳುವವರ ಮೂಲಕ ಪಾಪವನ್ನು ಮಾಡಿದ ಪ್ರತಿಯೊಬ್ಬರನ್ನು ತಡೆಗಟ್ಟುವುದಕ್ಕೆ ಗದರಿಸುವುದೆನ್ನುವುದು ವಿಶಿಷ್ಟವಾಗಿ ಕೊಡಲ್ಪಟ್ಟಿರುತ್ತದೆ.
- ಇದನ್ನು “ತೀವ್ರವಾಗಿ ಸರಿಪಡಿಸು” ಅಥವಾ “ಎಚ್ಚರಿಸು” ಎನ್ನುವ ಮಾತುಗಳ ಮೂಲಕ ಅನುವಾದ ಮಾಡಬಹುದು.
- “ಗದರಿಸು” ಎನ್ನುವ ಪದವನ್ನು “ಗಂಭೀರವಾಗಿ ಸರಿಪಡಿಸು” ಅಥವಾ “ಬಲವಾದ ವಿಮರ್ಶೆ” ಎಂದೂ ಅನುವಾದ ಮಾಡಬಹುದು.
- “ಗದರಿಸದಿರುವುದು” ಎನ್ನುವ ಮಾತನ್ನು “ಎಚ್ಚರಿಸದಿರುವುದು” ಅಥವಾ “ವಿಮರ್ಶೆ ಮಾಡದಿರುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಎಚ್ಚರಿಸು, ಅವಿಧೇಯತೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ21:25
- ಮಾರ್ಕ.01:23-26
- ಮಾರ್ಕ.16:14
- ಮತ್ತಾಯ.08:26-27
- ಮತ್ತಾಯ.17:17-18

ಪದ ಡೇಟಾ:

- Strong's: H1605, H1606, H2778, H2781, H3198, H4045, H4148, H8156, H8433, G1649, G1651, G1969, G2008, G3679

ಗರ್ಭ, ಗರ್ಭಗಳು

ಪದದ ಅರ್ಥವಿವರಣೆ:

"ಗರ್ಭ" ಎನ್ನುವ ಪದವು ತಾಯಿ ಹೊಟ್ಟೆಯಲ್ಲಿ ಶಿಶುವು ಬೆಳೆಯುವ ಸ್ಥಳವನ್ನು ಸೂಚಿಸುತ್ತದೆ.

- ಕೆಲವೊಂದುಬಾರಿ ಸಭ್ಯ ಮತ್ತು ಕಡಿಮೆ ನೇರವಾಗಿರುವದರಲ್ಲಿ ಉಪಯೋಗಿಸಲ್ಪಟ್ಟಿರುವ ಹಳೇ ಪದವಾಗಿರುತ್ತದೆ. (ನೋಡಿರಿ: ಸೌಮ್ಯೋಕ್ತಿ)
- ಗರ್ಭ ಎನ್ನುವ ಪದಕ್ಕೆ ಉಪಯೋಗಿಸುತ್ತಿರುವ ಆಧುನಿಕ ಪದವು "ಗರ್ಭಾಶಯ (ಯುಟೆರಸ್)" ಎಂದಾಗಿರುತ್ತದೆ.
- ಕೆಲವೊಂದು ಭಾಷೆಗಳಲ್ಲಿ ಸ್ತ್ರೀಯರ ಗರ್ಭವನ್ನು ಅಥವಾ ಗರ್ಭಾಶಯವನ್ನು ಸೂಚಿಸುವುದಕ್ಕೆ "ಹೊಟ್ಟೆ" ಎನ್ನುವ ಪದವನ್ನೇ ಉಪಯೋಗಿಸುತ್ತಾರೆ.
- ಅನುವಾದ ಮಾಡುವ ಭಾಷೆಯಲ್ಲಿ ಸ್ವಾಭಾವಿಕವಾಗಿ, ಅಂಗೀಕೃತವಾಗಿ, ಚೆನ್ನಾಗಿ ಗೊತ್ತಿರುವ ಪದವನ್ನು ಉಪಯೋಗಿಸಿರಿ.

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.25:23
- ಆದಿ.25:24-26
- ಆದಿ.38:27-28
- ಆದಿ.49:25
- ಲೂಕ.02:21
- ಲೂಕ.11:27-28
- ಲೂಕ.23:29-31
- ಮತ್ತಾಯ.19:10-12

ಪದ ಡೇಟಾ:

- Strong's: H990, H4578, H7356, H7358, G1064, G2836, G3388

ಗರ್ಭತಾಳು, ಗರ್ಭತಾಳುವಳು, ಗರ್ಭತಾಳಿದಳು, ಗರ್ಭಧಾರಣೆ

ಪದದ ಅರ್ಥವಿವರಣೆ:

"ಗರ್ಭತಾಳು" ಅಥವಾ "ಗರ್ಭಧಾರಣೆ" ಎನ್ನುವ ಪದಗಳು ಸಹಜವಾಗಿ ಒಬ್ಬ ಮಗುವನ್ನು ಗರ್ಭಧರಿಸಿದ ಗರ್ಭಿಣಿಗೆ ಸೂಚಿಸುತ್ತದೆ. ಪ್ರಾಣಿಗಳು ಗರ್ಭಧರಿಸುವಿಕೆಗೆ ಕೂಡ ಈ ಪದವು ಅನ್ವಯಿಸಲ್ಪಡುತ್ತದೆ.

- "ಒಬ್ಬ ಮಗುವಿಗೆ ಗರ್ಭತಾಳುವುದು" ಮಾತನ್ನು "ಗರ್ಭಿಣಿಯಾಗಿದ್ದಾಳೆ" ಎಂದೂ ಅಥವಾ ಈ ಪದಕ್ಕೆ ಅರ್ಥಬರುವ ಅಂಗೀಕರಿಸುವ ಪದದೊಂದಿಗೆ ಕೂಡ ಅನುವಾದ ಮಾಡಬಹುದು.
- "ಗರ್ಭಧಾರಣೆ" ಎನ್ನುವ ಸಂಬಂಧಿತ ಪದವನ್ನೂ "ಗರ್ಭಧರಿಸಿದ ಆರಂಭ ಸಮಯ" ಅಥವಾ "ಗರ್ಭಿಣಿಯಾಗುವ ಕ್ಷಣ" ಎಂದೂ ಅನುವಾದ ಮಾಡಬಹುದು.
- ಈ ಪದಗಳು ಯಾವುದಾದರೊಂದನ್ನು ತಯಾರು ಮಾಡುವುದನ್ನು ಅಥವಾ ಎನಾದರೊಂದನ್ನು ಆಲೋಚನೆ ಮಾಡುವುದನ್ನು ಸೂಚಿಸುತ್ತವೆ, ಉದಾಹರಣೆಗೆ, ಆಲೋಚನೆ, ಪ್ರಣಾಳಿಕೆ, ಅಥವಾ ಕೆಲಸ. ಈ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ ಸಂದರ್ಭಾನುಸಾರವಾಗಿ "ಯಾವುದಾದರೊಂದರ ಕುರಿತಾಗಿ ಆಲೋಚನೆ ಮಾಡು" ಅಥವಾ "ಪ್ರಣಾಳಿಕೆ ಮಾಡು" ಅಥವಾ "ತಯಾರು ಮಾಡು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಪಾಪ ಗರ್ಭಧಾರಣೆಯಾದಾಗ" ಎಂದು ಕೆಲವೊಂದುಸಲ ಈ ಪದವನ್ನು ಅಲಂಕಾರಿಕ ಭಾಷೆಯಲ್ಲಿಯೂ ಬಳಸುತ್ತಾರೆ, ಇದಕ್ಕೆ "ಪಾಪ ಮಾಡಬೇಕೆಂದು ಆಲೋಚನೆ ಬಂದಾಗ" ಅಥವಾ "ಪಾಪ ಮಾಡುವ ಆರಂಭ ಸಮಯ" ಅಥವಾ "ಪಾಪ ಮೊಟ್ಟ ಮೊದಲು ಆರಂಭವಾಗುವಾಗ" ಎನ್ನುವ ಅರ್ಥಗಳಿವೆ.

(ಈ ಪದಗಳನ್ನು ಸಹ ನೋಡಿರಿ : ತಯಾರಿಸು, ಗರ್ಭ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.21:1-4
- ಹೋಶೆಯ.02:4-5
- ಯೋಬ.15:34-35
- ಲೂಕ.01:24-25
- ಲೂಕ.02:21

ಪದ ಡೇಟಾ:

- Strong's: H2029, H2030, H2032, H2232, H2254, H2803, H3179, G1080, G1722, G2602, G2845, G4815

ಗಾದೆನುಡಿ, ಗಾದೆನುಡಿಗಳು

ಪದದ ಅರ್ಥವಿವರಣೆ:

ಗಾದೆನುಡಿ ಎನ್ನುವುದು ಜ್ಞಾನವನ್ನು ಅಥವಾ ಸತ್ಯವನ್ನು ವ್ಯಕ್ತಪಡಿಸುವ ಚಿಕ್ಕ ವ್ಯಾಖ್ಯೆಯಾಗಿರುತ್ತವೆ.

- ಗಾದೆನುಡಿಗಳು ಶಕ್ತಿಯುತವಾಗಿರುತ್ತವೆ ಯಾಕಂದರೆ ಅವುಗಳನ್ನು ತುಂಬಾ ಸುಲಭವಾಗಿ ನೆನಪಿಟ್ಟುಕೊಳ್ಳಬಹುದು ಮತ್ತು ಅವುಗಳನ್ನು ಪುನರಾವರ್ತಿಸಬಹುದು.
- ಅನೇಕಸಲ ಗಾದೆನುಡಿಯಲ್ಲಿ ಪ್ರತಿದಿನ ದೈನಂದಿನ ಜೀವನದಿಂದ ಪ್ರಯೋಗಾತ್ಮಕ ಉದಾಹರಣೆಗಳು ಒಳಗೊಂಡಿರುತ್ತವೆ.
- ಕೆಲವೊಂದು ಗಾದೆಮಾತುಗಳು ತುಂಬಾ ಸ್ಪಷ್ಟವಾಗಿರುತ್ತವೆ ಮತ್ತು ಚೆನ್ನಾಗಿ ನಿರ್ದೇಶನ ಮಾಡುತ್ತವೆ, ಆದರೆ ಕೆಲವೊಂದು ಗಾದೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ತುಂಬಾ ಕಷ್ಟಕರವಾಗಿರುತ್ತವೆ.
- ಅರಸನಾದ ಸೊಲೊಮೋನನು ಜ್ಞಾನವುಳ್ಳವನೆಂದು ಪ್ರಸಿದ್ಧಿ ಹೊಂದಿದನು ಮತ್ತು ಸುಮಾರು 1,000 ಗಾದೆಮಾತುಗಳನ್ನು ಬರೆದನು.
- ಯೇಸು ಅನೇಕಬಾರಿ ಬೋಧನೆ ಮಾಡುತ್ತಿರುವಾಗ ಜ್ಞಾನೋಕ್ತಿಗಳನ್ನು ಅಥವಾ ಸಾಮ್ಯಗಳನ್ನು ಉಪಯೋಗಿಸಿದ್ದರು.
- “ಗಾದೆನುಡಿ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಜ್ಞಾನೋಕ್ತಿ” ಅಥವಾ “ಸತ್ಯವಾದ ಮಾತು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಸೊಲೊಮೋನನು, ನಿಜ, ಜ್ಞಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.04:32-34
- 1 ಸಮು.24:12-13
- 2 ಪೇತ್ರ.02:20-22
- ಲೂಕ.04:23-24
- ಜ್ಞಾನೋ.01:1-3

ಪದ ಡೇಟಾ:

- Strong's: H2420, H4911, H4912, G3850, G3942

ಗುಂಡಿ, ಗುಂಡಿಗಳು, ಮುಚ್ಚಿದ ಗುಂಡಿ

ಪದದ ಅರ್ಥವಿವರಣೆ:

ಗುಂಡಿ ಎನ್ನುವುದು ನೆಲದ ಮೇಲೆ ಅಗೆದ ಒಂದು ದೊಡ್ಡ ಆಳವಾದ ರಂಧ್ರವನ್ನು ಸೂಚಿಸುತ್ತದೆ.

- ಪ್ರಾಣಿಗಳನ್ನು ಹಿಡಿಯುವುದಕ್ಕೆ ಅಥವಾ ನೀರನ್ನು ಪಡೆಯುವುದಕ್ಕೆ ಜನರು ಗುಂಡಿಗಳನ್ನು ಅಗಿಯುತ್ತಿದ್ದರು.
- ಖೈದಿಗಳನ್ನು ತಾತ್ಕಾಲಿಕವಾಗಿ ಇರಿಸುವ ಒಂದು ಸ್ಥಳವನ್ನಾಗಿಯೂ ಗುಂಡಿಯನ್ನು ಉಪಯೋಗಿಸುತ್ತಿದ್ದರು.
- "ಗುಂಡಿ" ಎನ್ನುವ ಪದವು ಕೆಲವೊಂದುಬಾರಿ ನರಕವನ್ನು ಅಥವಾ ಸಮಾಧಿಯನ್ನು ಸೂಚಿಸುತ್ತದೆ. ಇನ್ನೂ ಕೆಲವೊಂದು ಸಮಯಗಳಲ್ಲಿ "ಪಾತಾಳವನ್ನು" ಸೂಚಿಸುತ್ತದೆ.
- ತುಂಬಾ ಆಳವಾಗಿರುವ ಗುಂಡಿಯನ್ನು "ನೀರು ತೊಟ್ಟಿ" ಎಂದೂ ಕರೆಯುತ್ತಾರೆ.
- "ಗುಂಡಿ" ಎನ್ನುವ ಪದವನ್ನು ನಾಶನದ ಪರಿಸ್ಥಿತಿಯಲ್ಲಿ ಸಿಕ್ಕಿಬೀಳಿಸುವುದನ್ನು ವಿವರಿಸುವುದಕ್ಕೆ ಅಥವಾ ನಾಶವನ್ನುಂಟು ಮಾಡುವ ಅಭ್ಯಾಸಗಳಲ್ಲಿ, ಪಾಪದಲ್ಲಿ ಆಳವಾಗಿ ತೊಡಗಿರುವ ಪರಿಸ್ಥಿತಿಯನ್ನು ವಿವರಿಸುವುದಕ್ಕೆ "ನಾಶನದ ಗುಂಡಿ" ಎಂದು ಬಳಸುವ ಮಾತುಗಳಲ್ಲಿ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಪಾತಾಳ, ನರಕ, ಸೆರೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.37:21-22
- ಯೋಬ.33:16-18
- ಲೂಕ.06:39-40
- ಜ್ಞಾನೋ.01:12-14

ಪದ ಡೇಟಾ:

- Strong's: H875, H953, H1356, H1360, H1475, H2352, H4087, H4113, H4379, H6354, H7585, H7745, H7816, H7825, H7845, H7882, G12, G999, G5421

ಗುಡಿಸು, ಗುಡಿಸುವುದು, ಗುಡಿಸಿದೆ, ಗುಡಿಸುತ್ತಿರುವುದು

ಸತ್ಯಾಂಶಗಳು:

"ಗುಡಿಸು" ಎನ್ನುವ ಪದಕ್ಕೆ ಸಾಧಾರಣವಾಗಿ ಪೊರಕೆಯನ್ನು ಅಥವಾ ಬ್ರಶ್ ನಿಂದ ವಿಶಾಲವಾದ, ತ್ವರಿತ ಚಲನೆಯನ್ನು ಮಾಡುವ ಮೂಲಕ ಕೊಳೆಯನ್ನು ತೆಗೆಯುವುದು ಎಂದು ಅರ್ಥೈಸುತ್ತದೆ. "ಗುಡಿಸಿದೆ" ಎಂದರೆ "ಗುಡಿಸು" ಎನ್ನುವ ಭೂತಕಾಲ ಪದವಾಗಿರುತ್ತದೆ. ಈ ಪದಗಳನ್ನು ಅಲಂಕಾರಿಕವಾಗಿ ಉಪಯೋಗಿಸುತ್ತಾರೆ.

- "ಗುಡಿಸು" ಎನ್ನುವ ಪದವನ್ನು ಅತೀ ಶೀಘ್ರವಾಗಿ, ಖಚಿತವಾಗಿ, ವ್ಯಾಪಕವಾಗಿ ಚಲಿಸುವುದರ ಮೂಲಕ ಸೈನ್ಯವು ದಾಳಿಯನ್ನು ಹೇಗೆ ಮಾಡುತ್ತಾರೆಂದು ವಿವರಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸುತ್ತಾರೆ.
- ಉದಾಹರಣೆಗೆ, ಅಶ್ಶೂರಿಯರು ಯೆಹೂದ್ಯ ರಾಜ್ಯವನ್ನು "ಗುಡಿಸುತ್ತಾರೆ" ಎಂದು ಯೇಶಾಯನು ಪ್ರವಾದಿಸಿದನು. ಈ ಮಾತಿಗೆ ಅವರು ಯೆಹೂದವನ್ನು ನಾಶಗೊಳಿಸಿ, ಅದರಲ್ಲಿರುವ ಜನರನ್ನು ಸೆರೆಗೊಯ್ಯುತ್ತಾರೆ ಎಂದರ್ಥವಾಗಿರುತ್ತದೆ.
- ಜನರನ್ನು ಮತ್ತು ಕೆಲವೊಂದು ವಸ್ತುಗಳನ್ನು ನೀರಿನ ಬಲಪ್ರಯೋಗದಿಂದ ಹೆಚ್ಚಾಗಿ ಪಕ್ಕಕ್ಕೆ ತೊಲಗಿಸುವ ಕ್ರಿಯೆಯನ್ನು ವಿವರಿಸುವುದಕ್ಕೆ ಕೂಡ "ಗುಡಿಸು" ಎನ್ನುವ ಪದವನ್ನು ಉಪಯೋಗಿಸುತ್ತಾರೆ.
- ಒಬ್ಬ ವ್ಯಕ್ತಿಗೆ ತಡೆಯಲಾರದಷ್ಟು ಕಷ್ಟಗಳು ಸುತ್ತಿಕೊಂಡಾಗ, ಆ ವ್ಯಕ್ತಿಯ ಪರಿಸ್ಥಿತಿಯನ್ನು "ಅವು ಅವನನ್ನು "ಗುಡಿಸುತ್ತಿವೆ" ಎಂದು ಹೇಳಲಾಗುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್, ಯೆಶಯಾ, ಯೆಹೂದ, ಪ್ರವಾದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.16:3-4
- ದಾನಿ.11:40-41
- ಆದಿ.18:24-26
- ಜ್ಞಾನೋ.21:7-8
- ಕೀರ್ತನೆ.090:5-6

ಪದ ಡೇಟಾ:

- Strong's: H622, H857, H1640, H2498, H2894, H3261, H5500, H5502, H5595, H7857, H8804, G4216, G4563, G4951

ಗುಣಪಡಿಸು, ಗುಣವಾಗಿದೆ, ಸ್ವಸ್ಥಪಡಿಸು, ಸ್ವಸ್ಥಪಡಿಸುವುದು, ಸ್ವಸ್ಥತೆ, ಸ್ವಸ್ಥತೆಗಳು, ಗುಣಪಡಿಸುವಾತನು, ಆರೋಗ್ಯ, ಅರೋಗ್ಯಕರವಾದ, ಅನಾರೋಗ್ಯ

ಪದದ ಅರ್ಥವಿವರಣೆ:

"ಸ್ವಸ್ಥಪಡಿಸು" ಮತ್ತು "ಗುಣಪಡಿಸು" ಎನ್ನುವ ಪದಗಳೆರಡು ರೋಗ, ಗಾಯ, ಅಥವಾ ಅಂಗವಿಕಲತೆಗಳಿಂದ ನರಳುತ್ತಿರುವ ಒಬ್ಬ ವ್ಯಕ್ತಿ ತಿರುಗಿ ಆರೋಗ್ಯವನ್ನು ಪಡೆಯುವುದನ್ನು ಸೂಚಿಸುತ್ತವೆ.

- "ಗುಣವನ್ನು" ಅಥವಾ "ಸ್ವಸ್ಥತೆಯನ್ನು" ಪಡೆದ ವ್ಯಕ್ತಿ "ಚೆನ್ನಾಗಿ ಮಾಡಲ್ಪಟ್ಟಿದ್ದಾನೆ" ಅಥವಾ "ಆರೋಗ್ಯವನ್ನು ಹೊಂದಿಕೊಂಡಿದ್ದಾನೆ".
- ಸ್ವಸ್ಥತೆ ಎನ್ನುವುದು ಸ್ವಾಭಾವಿಕವಾಗಿ ನಡೆಯುತ್ತದೆ, ಯಾಕಂದರೆ ದೇವರು ನಮ್ಮ ಶರೀರಗಳಿಗೆ ಅನೇಕವಾದ ಗಾಯಗಳಿಂದ ಮತ್ತು ರೋಗಗಳಿಂದ ತಿರುಗಿ ಗುಣವಾಗುವ ಸಾಮರ್ಥ್ಯವನ್ನು ಕೊಟ್ಟಿದ್ದಾನೆ. ಈ ರೀತಿಯ ಸ್ವಸ್ಥತೆ ಸಹಜವಾಗಿ ನಿದಾನವಾಗಿ ನಡೆಯುತ್ತದೆ.
- ಆದರೆ ಕೆಲವೊಂದು ಪರಿಸ್ಥಿತಿಗಳಾಗಿರುವ ಕುರುಡುತನ ಅಥವಾ ಪಾರ್ಶ್ವವಾಯು ಮತ್ತು ಕೆಲವೊಂದು ತೀವ್ರ ರೋಗಗಳಾಗಿರುವ ಕುಷ್ಟುತನ ಎನ್ನುವವುಗಳು ತಮ್ಮಷ್ಟಕ್ಕೆ ಅವೇ ಗುಣವಾಗುವುದಿಲ್ಲ. ಒಂದು ವೇಳೆ ಜನರು ಇಂಥಹ ರೋಗಗಳಿಂದ ಗುಣವಾದರೆ, ಅದು ಸಹಜವಾಗಿ ಆಕಸ್ಮಿಕವಾದ ರೀತಿಯಲ್ಲಿ ಉಂಟಾಗುವ ಅದ್ಭುತವೆಂದು ಹೇಳಬಹುದು.
- ಉದಾಹರಣೆಗೆ, ಯೇಸು ಅನೇಕಮಂದಿ ಕುರುಡರನ್ನು ಅಥವಾ ಕುಂಟರನ್ನು ಅಥವಾ ರೋಗಿಗಳನ್ನು ಗುಣಪಡಿಸಿದರು ಮತ್ತು ಅವರು ಚೆನ್ನಾಗಿ ಸ್ವಸ್ಥತೆಯನ್ನು ಪಡೆದುಕೊಂಡವರಾದರು.
- ಅಪೊಸ್ತಲರು ಕೂಡ ಅದ್ಭುತ ರೀತಿಯಾಗಿ ಜನರನ್ನು ಗುಣಪಡಿಸಿದರು, ಪೇತ್ರನು ಹುಟ್ಟು ಕುಂಟನನ್ನು ಇದ್ದಕ್ಕಿದ್ದಂತೆ ಚೆನ್ನಾಗಿ ನಡೆಯುವವನಾಗಿ ಮಾಡಿದನು.

(ಈ ಪದಗಳನ್ನು ಸಹ ನೋಡಿರಿ : ಅದ್ಭುತ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.05:16
- ಅಪೊ.ಕೃತ್ಯ.08:06
- ಲೂಕ.05:13
- ಲೂಕ.06:19
- ಲೂಕ.08:43
- ಮತ್ತಾಯ.04:23-25
- ಮತ್ತಾಯ.09:35
- ಮತ್ತಾಯ.13:15

ಸತ್ಯವೇದದಿಂದ ಉದಾಹರಣೆಗಳು:

- **19:14** ಭಯಂಕರವಾದ ಚರ್ಮ ರೋಗವನ್ನು ಹೊಂದಿಕೊಂಡ ಶತ್ರುವಿನ ಸೈನ್ಯಾಧಿಕಾರಿಯಾದ ನಾಮಾನನಿಗೆ ಅದ್ಭುತಗಳಲ್ಲಿ ಒಂದು ಅದ್ಭುತ ನಡೆಯಿತು. ಇವನು ಎಲೀಷನ ಕುರಿತಾಗಿ ಕೇಳಿಸಿಕೊಂಡಿದ್ದನು, ಅದ್ದರಿಂದ ಇವನು ಎಲೀಷನ ಬಳಿಗೆ ಹೋಗಿ ನನ್ನನ್ನು _ ಗುಣಪಡಿಸು _ ಎಂದು ಕೇಳಿಕೊಂಡನು.
- **21:10** ಮೆಸ್ಸೀಯನು ಕಿವುಡರನ್ನು, ಕುರುಡರನ್ನು, ಮೂಕರನ್ನು ಅಥವಾ ಕುಂಟರನ್ನು ಮತ್ತು ರೋಗಿಗಳನ್ನು _ ಗುಣಪಡಿಸುವನೆಂದು _ ಇವನೂ (ಯೆಶಯಾ) ಪ್ರವಾದಿಸಿದ್ದನು.
- **26:06** "ಪ್ರವಾದಿಯಾದ ಎಲೀಷನ ಕಾಲದಲ್ಲಿ ಇಸ್ರಾಯೇಲಲ್ಲಿ ಅನೇಕಮಂದಿ ಚರ್ಮ ರೋಗಿಗಳು ಇದ್ದಿದ್ದರು. ಆದರೆ ಎಲೀಷನು ಅವರಲ್ಲಿ ಯಾರನ್ನೂ _ ಗುಣಪಡಿಸಲಿಲ್ಲ _. ಇವನು ಕೇವಲ ಇಸ್ರಾಯೇಲ್ ಶತ್ರುಗಳ ಸೈನ್ಯಾಧಿಪತಿಯಾದ ನಾಮಾನನ ಚರ್ಮ ರೋಗವನ್ನು ಮಾತ್ರ _ ಗುಣಪಡಿಸಿದ್ದನು _ .
- **26:08** ಅವರು ರೋಗಿಗಲನ್ನು ಅಥವಾ ಅಂಗವಿಕಲರನ್ನು, ಕುರುಡರನ್ನು, ಕುಂಟರನ್ನು, ಕಿವುಡರನ್ನು, ಮೂಕರನ್ನು ತೆಗೆದುಕೊಂಡು ಬಂದಿದ್ದರು, ಆಗ ಯೇಸು ಅವೆರಲ್ಲರನ್ನು _ ಗುಣಪಡಿಸಿದನು _ .
- **32:14** ಯೇಸು ಅನೇಕಮಂದಿ ರೋಗಿಗಳನ್ನು _ ಸ್ವಸ್ಥಪಡಿಸಿದ್ದನೆಂದು _ ಆಕೆ ಕೇಳಿದ್ದಳು, ಇದರಿಂದ "ಯೇಸುವಿನ ವಸ್ತ್ರಗಳನ್ನು ಮುಟ್ಟಿದರೆ ಸಾಕು, ನಾನು _ ಸ್ವಸ್ಥತೆಯನ್ನು _ ಹೊಂದುತ್ತೇನೆಂದು ಆಕೆ ಯೋಚನೆ ಮಾಡಿದ್ದಳು!"
- **44:03** ಆಕಸ್ಮಿಕವಾಗಿ, ದೇವರು ಕುಂಟ ಮನುಷ್ಯನನ್ನು _ಗುಣಪಡಿಸಿದನು _ . ಆಗ ಅವನು ನಡೆಯುವುದಕ್ಕೆ ಮತ್ತು ಜಿಗಿಯುವುದಕ್ಕೆ ಆರಂಭಿಸಿ, ದೇವರನ್ನು ಮಹಿಮೆಪಡಿಸಿದನು
- **44:08** "ನಿಮ್ಮ ಮುಂದೆ ನಿಂತಿರುವ ಈ ಮನುಷ್ಯನು ಮೆಸ್ಸೀಯನಾದ ಯೇಸುವಿನ ಶಕ್ತಿಯಿಂದ _ ಸ್ವಸ್ಥತೆ _ ಹೊಂದಿಕೊಂಡಿದ್ದಾನೆ" ಎಂದು ಪೇತ್ರನು ಅವರಿಗೆ ಉತ್ತರವನ್ನು ಕೊಟ್ಟನು.
- **49:02** ಯೇಸು ದೇವರೆಂದು ನಿರೂಪಿಸಿಕೊಳ್ಳಲು ಅನೇಕ ಅದ್ಭುತಗಳನ್ನು ಮಾಡಿದನು. ಆತನು ನೀರಿನ ಮೇಲೆ ನಡೆದನು, ಬಿರುಗಾಳಿಗಳನ್ನು ಶಾಂತಗೊಳಿಸಿದನು, ಅನೇಕ ರೋಗಿಗಳನ್ನು _ ಗುಣಪಡಿಸಿದನು _, ದೆವ್ವಗಳನ್ನು ಹೋಗಲಾಡಿಸಿದನು, ಸತ್ತವರನ್ನು ಎಬ್ಬಿಸಿದನು, ಮತ್ತು ಐದು ರೊಟ್ಟಿಗಳನ್ನು, ಎರಡು ಚಿಕ್ಕ ಮೀನುಗಳನ್ನು 5,000 ಜನರಿಗೆ ಬೇಕಾದಷ್ಟು ಆಹಾರವನ್ನು ಹಂಚಿದನು.

ಪದ ಡೇಟಾ:

- Strong's: H724, H1369, H1455, H2280, H2421, H2896, H3545, H4832, H4974, H7495, H7499, H7500, H7725, H7965, H8549, H8585, H8644, H622, G1295, G1743, G2322, G2323, G2386, G2390, G2392, G2511, G3647, G4982, G5198, G5199

ಗುರಾಣಿ

ಪದದ ಅರ್ಥವಿವರಣೆ:

ಗುರಾಣಿ ಎನ್ನುವುದು ಒಬ್ಬ ಸೈನಿಕನು ತನ್ನನ್ನು ಶತ್ರುಗಳ ಆಯುಧಗಳಿಂದ ಸಂರಕ್ಷಿಸಿಕೊಳ್ಳುವುದಕ್ಕೆ ಯುದ್ಧದಲ್ಲಿ ಉಪಯೋಗಿಸುವ ವಸ್ತುವಾಗಿರುತ್ತದೆ. ಯಾರಾದರೊಬ್ಬರಿಗೆ "ಗುರಾಣಿ" ಕೊಡುವುದೆಂದರೆ ಅಪಾಯದಿಂದ ಆ ವ್ಯಕ್ತಿಯನ್ನು ಸಂರಕ್ಷಿಸುವುದು ಎಂದರ್ಥವಾಗಿರುತ್ತದೆ.

- ಗುರಾಣಿಗಳು ವೃತ್ತಾಕಾರದಲ್ಲಿರುತ್ತವೆ ಅಥವಾ ಅಂಡಾಕಾರದಲ್ಲಿರುತ್ತವೆ, ಇವುಗಳನ್ನು ಚರ್ಮ, ಕಟ್ಟಿಗೆ ಅಥವಾ ಲೋಹಗಳಿಂದ ಮಾಡುತ್ತಾರೆ, ಸೈನಿಕರ ಮೇಲೆ ಎಸೆಯಲ್ಪಟ್ಟಿರುವ ಕತ್ತಿಯನ್ನಾಗಲಿ ಅಥವಾ ಬಾಣವನ್ನಾಗಲಿ ತಡೆಯುವುದಕ್ಕೆ ಅಥವಾ ಅವುಗಳಿಂದ ಸಂರಕ್ಷಿಸಿಕೊಳ್ಳುವುದಕ್ಕೆ ಬಲವಾಗಿಯು ಮತ್ತು ಗಟ್ಟಿಯಾಗಿಯೂ ಇರುತ್ತವೆ.
- ಈ ಪದವನ್ನು ರೂಪಕಾಲಂಕಾರವಾಗಿ ಉಪಯೋಗಿಸಿದಾಗ, ದೇವರು ತನ್ನ ಜನರನ್ನು ಸಂರಕ್ಷಿಸುವ ಗುರಾಣಿಯಾಗಿದ್ದಾರೆಂದು ಸತ್ಯವೇದವು ಸೂಚಿಸುತ್ತದೆ. (ನೋಡಿರಿ: ರೂಪಕಾಲಂಕಾರ)
- ಪೌಲನು "ವಿಶ್ವಾಸದ ಗುರಾಣಿ" ಕುರಿತಾಗಿ ಮಾತನಾಡಿದ್ದಾರೆ, ಸೈತಾನಿನ ಆತ್ಮೀಯಕವಾದ ಧಾಳಿಗಳಿಂದ ದೇವರು ವಿಶ್ವಾಸಿಗಳನ್ನು ಸಂರಕ್ಷಿಸುವ ವಿಧೇಯತೆಯಲ್ಲಿ ವಿಶ್ವಾಸ ಜೀವನವನ್ನು ಮಾಡುವ ಮತ್ತು ಯೇಸುವಿನಲ್ಲಿ ನಂಬಿಕೆ ಇಡುವ ಮಾತುಗಳ ಅಲಂಕಾರಿಕವಾದ ವಿಧಾನದಲ್ಲಿ ಈ ಮಾತನ್ನು ಹೇಳಲಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ನಂಬಿಕೆ, ವಿಧೇಯನಾಗು, ಸೈತಾನ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.14:26
- 2 ಪೂರ್ವ.23:8-9
- 2 ಸಮು.22:36
- ಧರ್ಮೋ.33:29
- ಕೀರ್ತನೆ.018:35

ಪದ ಡೇಟಾ:

- Strong's: H2653, H3591, H4043, H5437, H5526, H6793, H7982, G2375

ಗುರಿ ಮಾಡು, ಗುರಿ ಮಾಡಲ್ಪಟ್ಟಿದ್ದೀರಿ, ಗಮ್ಯ, ಗಮ್ಯ ಸ್ಥಾನಕ್ಕೆ ಮುನ್ಸೂಚಿಸಲ್ಪಟ್ಟಿದ್ದಾರೆ

ಪದದ ಅರ್ಥವಿವರಣೆ:

"ಗಮ್ಯ" ಎನ್ನುವುದು ಭವಿಷ್ಯತ್ತಿನಲ್ಲಿ ಜನರಿಗೆ ಏನು ನಡೆಯುತ್ತದೆ ಎಂಬುವುದನ್ನು ಸೂಚಿಸುತ್ತದೆ. ಏನಾದರೊಂದು ಕಾರ್ಯವನ್ನು ಮಾಡುವುದಕ್ಕೆ ಒಬ್ಬ ವ್ಯಕ್ತಿಯನ್ನು "ಮುನ್ಸೂಚಿಸಲಾಗಿದ್ದರೆ", ಆ ವ್ಯಕ್ತಿ ಭವಿಷ್ಯತ್ತಿನಲ್ಲಿ ಏನು ಮಾಡಬೇಕೆಂದಿದ್ದಾನೋ ಅದನ್ನು ಮಾಡುವುದಕ್ಕೆ ದೇವರಿಂದ ಮುನ್ಸೂಚಿಸಲ್ಪಟ್ಟಿದ್ದಾನೆ ಎಂದರ್ಥ.

- ದೇವರು ತನ್ನ ಕೋಪಾಗ್ನಿಯನ್ನು ಸುರಿಸುವುದಕ್ಕೆ ಒಂದು ದೇಶವನ್ನು "ಗುರಿ ಮಾಡಿದಾಗ", ಆ ದೇಶದ ಜನರು ಪಾಪಗಳಿಗಾಗಿ ಆ ದೇಶವನ್ನು ಶಿಕ್ಷಿಸಲು ಆತನು ಮುಂಚಿತವಾಗಿ ಆ ದೇಶವನ್ನು ಆರಿಸಿಕೊಂಡಿದ್ದಾನೆ ಅಥವಾ ನಿರ್ಣಯಿಸಿದ್ದಾನೆ.
- ಯೂದನು ನಾಶವಾಗುವುದಕ್ಕೆ "ಮುನ್ಸೂಚಿಸಲ್ಪಟ್ಟಿದ್ದನು", ಅದಕ್ಕೆ ಯೂದನು ಮಾಡುವ ತಿರಸ್ಕಾರ ಕಾರಣದಿಂದ ನಾಶವಾಗುತ್ತಾನೆಂದು ದೇವರು ನಿರ್ಣಯಿಸಿದ್ದಾರೆ ಎಂದರ್ಥ.
- ಪ್ರತಿಯೊಬ್ಬರಿಗೆ ಕೊನೆ ಎನ್ನುವುದು ಇರುತ್ತದೆ, ಅದು ನಿತ್ಯತ್ವ ಗಮ್ಯಸ್ಥಾನವಾಗಿರುತ್ತದೆ, ಅದು ಪರಲೋಕವಾಗಲಿ ಅಥವಾ ನರಕವಾಗಲಿ ಇರುತ್ತದೆ.
- ಪ್ರತಿಯೊಬ್ಬರ ಗಮ್ಯಸ್ಥಾನವು ಒಂದೇ ಎಂದು ಪ್ರಸಂಗಿ ರಚನಾಕಾರನು ಬರೆಯುತ್ತಿರುವಾಗ, ಪ್ರತಿಯೊಬ್ಬರೂ ಕೊನೆಗೆ ಸಾಯುತ್ತಾರೆ ಎಂದು ಅದರ ಅರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- "ಕೋಪಾಗ್ನಿಗೆ ನೀನು ಮುನ್ಸೂಚಿಸಲ್ಪಟ್ಟಿದ್ದೀಯಾ" ಎನ್ನುವ ಮಾತನ್ನು "ನೀನು ನಾಶವಾಗುತ್ತೀಯೆಂದು ನಿರ್ಣಯಿಸಲ್ಪಟ್ಟಿದ್ದೀ" ಅಥವಾ "ನನ್ನ ಕೋಪಾಗ್ನಿಯನ್ನು ನೀನು ಅನುಭವಿಸುತ್ತೀ ಎಂದು ನಿರ್ಧರಿಸಲ್ಪಟ್ಟಿದೆ" ಎಂದೂ ಅನುವಾದ ಮಾಡಬಹುದು.
- "ಅವರು ಖಡ್ಗ ಬೀಳುವರು" ಎನ್ನುವ ಮಾತನ್ನು "ಖಡ್ಗಗಳಿಂದ ಅವರನ್ನು ಸಾಯಿಸುವ ಶತ್ರುಗಳ ಮೂಲಕ ಅವರು ನಾಶವಾಗುತ್ತಾರೆಂದು ದೇವರು ನಿರ್ಣಯಿಸಿದ್ದಾನೆ" ಅಥವಾ "ಅವರ ಶತ್ರುಗಳು ಅವರನ್ನು ಖಡ್ಗಗಳಿಂದ ಸಾಯಿಸುತ್ತಾರೆಂದು ದೇವರು ನಿರ್ಣಯಿಸಿದ್ದಾರೆ" ಎಂದೂ ಅನುವಾದ ಮಾಡಬಹುದು.
- "ನೀನು ಮುನ್ಸೂಚಿಸಲ್ಪಟ್ಟಿದ್ದೀ" ಎನ್ನುವ ಮಾತನ್ನು "ನೀನು ಹಾಗೆ ಇರುವೀ ಎಂದು ದೇವರು ನಿರ್ಣಯಿಸಿದ್ದಾರೆ" ಎನ್ನುವ ಮಾತಿನಂತೆ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, "ಗಮ್ಯ ಸ್ಥಾನ" ಎನ್ನುವ ಪದವನ್ನು "ಅಂತಿಮ ಗುರಿ" ಅಥವಾ "ಅಂತಿಮ ಭಾಗದಲ್ಲಿ ನಡೆಯುವ ವಿಷಯಗಳು" ಅಥವಾ "ದೇವರು ನಿರ್ಣಯ ಮಾಡಿದವುಗಳೇ ನಡೆಯುತ್ತವೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸೆರೆ ಸಿಕ್ಕುವುದು, ನಿತ್ಯತ್ವ, ಪರಲೋಕ, ನರಕ, ದೀಕ್ಷಾಸ್ನಾನ ಕೊಡುವ ಯೋಹಾನ, ಪಶ್ಚಾತ್ತಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.05:8-11
- ಪ್ರಸಂಗಿ.02:13-14
- ಇಬ್ರಿ.09:27-28
- ಫಿಲಿಪ್ಪ.03:17-19
- ಕೀರ್ತನೆ.009:17-18

ಪದ ಡೇಟಾ:

- Strong's: H2506, H4150, H4487, H4745, H6256, H4507, G5056, G5087

ಗುಲಾಮರನ್ನಾಗಿ ಮಾಡು, ಗುಲಾಮ, ಬಂಧಿತ ಗುಲಾಮ, ಬಂಧಿತ

ಪದದ ಅರ್ಥವಿವರಣೆ:

ಯಾರಾದರೊಬ್ಬರನ್ನು "ಅಧೀನಪಡಿಸು" ಎನ್ನುವ ಮಾತಿಗೆ ಯಜಮಾನನಿಗೆ ಸೇವೆ ಮಾಡುವುದಕ್ಕೆ ಅಥವಾ ದೇಶವನ್ನು ಆಳುವುದಕ್ಕೆ ಒಬ್ಬ ವ್ಯಕ್ತಿಯನ್ನು ಬಲವಂತಿಕೆ ಮಾಡು ಎಂದರ್ಥ. "ಆಧೀನಪಡಿಸು" ಅಥವಾ "ಬಂಧನದಲ್ಲಿ" ಎನ್ನುವ ಪದಕ್ಕೆ ಯಾರಾದರೊಬ್ಬರ ಅಥವಾ ಯಾವುದಾದರೊಂದರ ನಿಯಂತ್ರಣದ ಕೆಳಗೆ ಇರುವುದು ಎಂದರ್ಥ.

- ಬಂಧನದಲ್ಲಿರುವ ಅಥವ ಗುಲಾಮಗಿರಿಯಲ್ಲಿರುವ ಒಬ್ಬ ವ್ಯಕ್ತಿ ಯಾವ ಸಂಬಳವಿಲ್ಲದೆ ಇತರರಿಗೆ ಸೇವೆ ಮಾಡಬೇಕಾಗಿರುತ್ತದೆ; ಅವನು ಬಯಸಿದ ಕಾರ್ಯಗಳು ಮಾಡುವುದಕ್ಕೆ ಅವನಿಗೆ ಸ್ವಾತಂತ್ರ್ಯವಿರುವುದಿಲ್ಲ.
- "ಅಧೀನಪಡಿಸು" ಎನ್ನುವ ಪದಕ್ಕೆ ಕೂಡ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯವನ್ನು ತೆಗೆದುಕೋ ಎನ್ನುವ ಅರ್ಥವೂ ಇದೆ.
- "ಬಂಧನ" ಎನ್ನುವ ಪದಕ್ಕೆ ಇನ್ನೊಂದು ಪದ "ಗುಲಾಮಗಿರಿ".
- ಹೊಸ ಒಡಂಬಡಿಕೆ ಹೇಳುತ್ತದೆ ಮನುಷ್ಯರೆಲ್ಲರೂ ಪಾಪಕ್ಕೆ "ಅಧೀನರಾಗಿರುತ್ತಾರೆ", ಯೇಸು ಅವರನ್ನು ಆ ಪಾಪದ ಶಕ್ತಿಯಿಂದ ಮತ್ತು ನಿಯಂತ್ರಣದಿಂದ ಬಿಡಿಸುವವರೆಗೂ ಅವರು ಅಧೀನರಾಗಿರುತ್ತಾರೆ.
- ಒಬ್ಬ ವ್ಯಕ್ತಿ ಯೇಸುವಿನಲ್ಲಿ ಹೊಸ ಜೀವನವನ್ನು ಹೊಂದಿಕೊಂಡಾಗ, ಅವನು ಪಾಪಕ್ಕೆ ಗುಲಾಮನಾಗಿರುವುದನ್ನು ನಿಲ್ಲಿಸುವನು ಮತ್ತು ನೀತಿಗೆ ದಾಸನಾಗುತ್ತಾನೆ.

ಅನುವಾದ ಸಲಹೆಗಳು:

- "ಅಧೀನಪಡಿಸು" ಎನ್ನುವ ಪದಕ್ಕೆ "ಸ್ವಾತಂತ್ರ್ಯನಾಗುವುದಕ್ಕೆ ಬಿಡಬೇಡ" ಅಥವಾ "ಇತರರಿಗೆ ಸೇವೆ ಮಾಡುವುದಕ್ಕೆ ಬಲವಂತಿಕೆ ಮಾಡು" ಅಥವಾ "ಇತರರ ನಿಯಂತ್ರಣದಲ್ಲಿರಿಸು" ಎಂದೂ ಅನುವಾದ ಮಾಡುತ್ತಾರೆ.
- "ಅಧೀನಪಡಿಸು" ಅಥವಾ "ಬಂಧನದಲ್ಲಿರಿಸು" ಎನ್ನುವ ಮಾತನ್ನು "ಗುಲಾಮನಾಗುವುದಕ್ಕೆ ಬಲವಂತಿಕೆ ಮಾಡು" ಅಥವಾ "ಸೇವೆ ಮಾಡುವುದಕ್ಕೆ ಬಲವಂತಿಕೆ ಮಾಡು" ಅಥವಾ "ನಿಯಂತ್ರಣದಲ್ಲಿರಿಸು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸ್ವಾತಂತ್ರ್ಯ, ನೀತಿ, ದಾಸನು)

ಸತ್ಯವೇದದ ಅನುಬಂಧ ವಾಕ್ಯಗಳು:

- ಗಲಾತ್ಯ.04:03
- ಗಲಾತ್ಯ.04:24-25
- ಆದಿ.15:13
- ಯೆರೆ.30:8-9

ಪದ ಡೇಟಾ:

- Strong's: H3533, H5647, G1398, G1402, G2615

ಗೊರಸ, ಗೊರಸಗಳು, ಕಾಲ್ಗೊರಸು

ಸತ್ಯಾಂಶಗಳು:

ಈ ಪದವು ಒಂಟೆಗಳು, ಜಾನುವಾರುಗಳು, ಜಿಂಕೆಗಳು, ಕುದುರೆಗಳು, ಕತ್ತೆಗಳು, ಹಂದಿಗಳು, ಎತ್ತುಗಳು, ಕುರಿಗಳು ಮತ್ತು ಮೇಕೆಗಳು ಇನ್ನೂ ಇತ್ಯಾದಿ ಪ್ರಾಣಿಗಳ ಪಾದದ ಅಡಿಯಲ್ಲಿ ತುಂಬಾ ಬಲವಾದ ಕಬ್ಬಿಣದ ವಸ್ತುವನ್ನು ಹೊದಿಸುವಿಕೆಯನ್ನು ಸೂಚಿಸುತ್ತದೆ.

- ಪ್ರಾಣಿಯ ಕಾಲ್ಗೊರಸುಗಳು ಪ್ರಾಣಿಗಳು ನಡೆಯುತ್ತಿರುವಾಗ ಅವುಗಳ ಪಾದಗಳನ್ನು ಸಂರಕ್ಷಿಸುತ್ತವೆ.
- ಕೆಲವೊಂದು ಪ್ರಾಣಿಗಳ ಕಾಲ್ಗೊರಸುಗಳು ಎರಡು ಭಾಗಗಳಾಗಿ ಸೀಳಿಕೆಯಾಗಿರುತ್ತವೆ, ಕೆಲವೊಂದು ಪ್ರಾಣಿಗಳಿಗೆ ಒಂದೇ ಭಾಗವಾಗಿರುತ್ತವೆ.
- ಎರಡು ಭಾಗಗಳಾಗಿ ಸೀಳಿಕೆಯಾಗಿರುವ ಗೊರಸುಗಳ ಮತ್ತು ಮೆಲಕುಹಾಕುವಂಥಹ ಪ್ರಾಣಿಗಳನ್ನು ತಿನ್ನಬಹುದೆಂದು ದೇವರು ಇಸ್ರಾಯೇಲ್ಯರಿಗೆ ಹೇಳಿದರು. ಇದರಲ್ಲಿ ಜಾನುವಾರುಗಳು, ಕುರಿಗಳು, ಜಿಂಕೆಗಳು ಮತ್ತು ಎತ್ತುಗಳಿರುತ್ತವೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಒಂಟೆ, ಹಸು, ಎತ್ತು, ಕತ್ತೆ, ಮೇಕೆ, ಹಂದಿ, ಕುರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.14:6-7
- ಯೆಹೆ.26:9-11
- ಯಾಜಕ.11:3-4
- ಕೀರ್ತನೆ.069:30-31

ಪದ ಡೇಟಾ:

- Strong's: H6119, H6471, H6536, H6541, H7272

ಗೋಣಿ

ಪದದ ಅರ್ಥವಿವರಣೆ:

ಗೋಣಿ ಎನ್ನುವ ಬಟ್ಟೆಯು ಒಂಟೆಯ ಅಥವಾ ಮೇಕೆಯ ಕೂದಲುಗಳಿಂದ ಮಾಡಲ್ಪಟ್ಟಿರುವ ಒಂದು ವಿಧವಾದ ಒರಟಾದ, ನಯನಾಜೂಕಿಲ್ಲದ ಬಟ್ಟೆಯಾಗಿರುತ್ತದೆ.

- ಈ ರೀತಿಯಾಗಿ ಮಾಡಲ್ಪಟ್ಟಿರುವ ಬಟ್ಟೆಯನ್ನು ಧರಿಸಿದ ವ್ಯಕ್ತಿ ಅಸುಖಕರವಾಗಿರುತ್ತಾನೆ. ಗೋಣಿಯನ್ನು ತಗ್ಗಿಸಿಕೊಂಡಿದ್ದು ಪಶ್ಚಾತ್ತಾಪವನ್ನು, ಪ್ರಲಾಪವನ್ನು ಅಥವಾ ಶೋಕಾಚರಣೆಯನ್ನು ತೋರಿಸುವುದಕ್ಕೆ ಧರಿಸಿಕೊಳ್ಳುತ್ತಾರೆ.
- "ಗೋಣಿ ಮತ್ತು ಬೂದಿ" ಎನ್ನುವ ಮಾತು ಪಶ್ಚಾತ್ತಾಪ ಮತ್ತು ಪ್ರಲಾಪಗಳನ್ನು ಸಾಂಪ್ರದಾಯಿಕವಾಗಿ ತೋರಿಸುವುದಕ್ಕೆ ಸೂಚಿಸುವ ಸಾಮಾನ್ಯ ಪದವಾಗಿರುತ್ತದೆ.

ಅನುವಾದ ಸಲಹೆಗಳು:

- ಈ ಪದವನ್ನು "ಪ್ರಾಣಿಯ ಕೂದಲುಗಳಿಂದ ಮಾಡಲ್ಪಟ್ಟಿರುವ ಕಳಪೆಯ ಬಟ್ಟೆ" ಅಥವಾ "ಮೇಕೆಯ ಕೂದುಲುಗಳಿಂದ ಮಾಡಲ್ಪಟ್ಟಿರುವ ಬಟ್ಟೆಗಳು" ಅಥವಾ "ಒರಟಾದ, ಕರಕರವಾಗಿರುವ ಬಟ್ಟೆ" ಎಂದೂ ಅನುವಾದ ಮಾಡಬಹುದು.
- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಒರಟಾದ, ಕರಕರವಾಗಿರುವ ಪ್ರಲಾಪ ವಸ್ತ್ರಗಳು" ಎನ್ನುವ ಮಾತು ಒಳಗೊಂಡಿರುತ್ತದೆ.
- "ಗೋಣಿ ಕಟ್ಟಿಕೊಂಡು ಮತ್ತು ಬೂದಿಯಲ್ಲಿ ಕೂತು" ಎನ್ನುವ ಮಾತನ್ನು "ಬೂದಿಯಲ್ಲಿ ಕುಳಿತುಕೊಂಡು, ಹರಿದುಹೋಗಿರುವ ಗೋಣಿ ಬಟ್ಟೆಯನ್ನು ಕಟ್ಟಿಕೊಳ್ಳುವುದರ ಮೂಲಕ ತಗ್ಗಿಸಿಕೊಂಡಿರುವುದನ್ನು ಮತ್ತು ಪ್ರಲಾಪವನ್ನು ತೋರಿಸು" ಎಂದೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಬೂದಿ, ಒಂಟೆ, ಮೇಕೆ, ತಗ್ಗಿಸಿಕೊ, ಪ್ರಲಾಪ, ಪಶ್ಚಾತ್ತಾಪ, ಸೂಚನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.03:31-32
- ಆದಿ.37:34-36
- ಯೋವೇಲ.01:8-10
- ಯೋನ.03:4-5
- ಲೂಕ.10:13-15
- ಮತ್ತಾಯ.11:20-22

ಪದ ಡೇಟಾ:

- Strong's: H8242, G4526

ಗೋಧಿ

ಪದದ ಅರ್ಥವಿವರಣೆ:

ಗೋಧಿ ಎನ್ನುವುದು ಆಹಾರಕ್ಕಾಗಿ ಜನರು ಬೆಳೆಸಿಕೊಳ್ಳುವ ಒಂದು ರೀತಿಯಾದ ಧಾನ್ಯವಾಗಿರುತ್ತದೆ. “ಧಾನ್ಯಗಳು” ಅಥವಾ “ಬೀಜಗಳು” ಎಂದು ಸತ್ಯವೇದವು ದಾಖಲಿಸಿದಾಗ, ಇದು ಅನೇಕಬಾರಿ ಗೋಧಿ ಧಾನ್ಯಗಳ ಅಥವಾ ಕಾಳುಗಳ ಕುರಿತಾಗಿ ಮಾತನಾಡುತ್ತಿದೆ ಎಂದರ್ಥ.

- ಗೋಧಿ ಕಾಳುಗಳು ಅಥವಾ ಧಾನ್ಯಗಳು ಗೋಧಿ ಗಿಡದ ಮೇಲ್ಭಾಗದಲ್ಲಿ ಬೆಳೆಯುತ್ತವೆ.
- ಗೋಧಿ ಬೆಳೆ ಬಂದ ನಂತರ, ಇದನ್ನು ತುಳಿಸಿದನಂತರ ಸೊಪ್ಪಿನಿಂದ ಧಾನ್ಯವನ್ನು ಬೇರ್ಪಡಿಸುತ್ತಾರೆ. ಗೋಧಿ ಸೊಪ್ಪನ್ನು “ಹುಲ್ಲು” ಎಂದೂ ಕರೆಯುತ್ತಾರೆ ಮತ್ತು ಇದನ್ನು ಪ್ರಾಣಿಗಳು ಮಲಗುವುದಕ್ಕೆ ನೆಲದ ಮೇಲೆ ಸಂಗ್ರಹಿಸಿ ಇಡುತ್ತಿರುತ್ತಾರೆ.
- ತುಳಿಸಿದನಂತರ, ತೂರುವುದರ ಮೂಲಕ ಧಾನ್ಯದ ಕಾಳಿನ ಸುತ್ತಲಿರುವ ಸೊಪ್ಪನ್ನು ಧಾನ್ಯದಿಂದ ಬೇರ್ಪಡಿಸಿ, ಹೊರಕ್ಕೆ ಎಸೆಯುತ್ತಾರೆ.
- ಜನರು ಗೋಧಿಯನ್ನು ಹಿಟ್ಟಾಗಿ ಮಾಡಿಕೊಂಡು, ಅದರಿಂದ ರೊಟ್ಟಿಗಳನ್ನು ತಯಾರಿಸಿಕೊಳ್ಳುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಜವೆಗೋಧಿ, ಸೊಪ್ಪು, ಧಾನ್ಯ, ಬೀಜ, ತುಳಿಸಿಬಿಡು, ತೂರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.27:36-38
- ವಿಮೋ.34:21-22
- ಯೋಹಾನ.12:23-24
- ಲೂಕ.03:17
- ಮತ್ತಾಯ.03:10-12
- ಮತ್ತಾಯ.13:24-26

ಪದ ಡೇಟಾ:

- Strong's: H1250, H2406, G4621

ಗ್ರಹಿಸುವಿಕೆ, ಒಪ್ಪಿಕೊಳ್ಳುವುದು, ಒಪ್ಪಿಕೊಳ್ಳಲಾಗಿದೆ

ಸತ್ಯಾಂಶಗಳು:

“ಗ್ರಹಿಕೆ” ಎನ್ನುವ ಪದಕ್ಕೆ ಯಾವುದೇ ಒಂದು ವಸ್ತುವನ್ನಾಗಲಿ ಅಥವಾ ವ್ಯಕ್ತಿಯನ್ನಾಗಲಿ ಸರಿಯಾಗಿ ಗುರುತಿಸುವುದು ಎಂದರ್ಥ.

- ದೇವರನ್ನು ಗುರುತಿಸಬೇಕಾದರೂ ಆತನು ಹೇಳುವ ಪ್ರತಿಯೊಂದು ಮಾತು ಕೂಡ ಸರಿಯಾದದ್ದೇ ಎಂದು ತೋರಿಸುವ ವಿಧಾನದಲ್ಲಿ ಅದು ಒಳಗೊಂಡಿರುತ್ತದೆ.
- ದೇವರನ್ನು ಗ್ರಹಿಸುವ ಜನರು ಆತನಿಗೆ ವಿಧೇಯರಾಗುವುದರ ಮೂಲಕ ತೋರಿಬರುತ್ತಾರೆ, ಅದರಿಂದ ಆತನಿಗೆ ಮಹಿಮೆ ಉಂಟಾಗುತ್ತದೆ.
- ಯಾವುದಾದರೊಂದನ್ನು ನಾವು ಗುರುತಿಸುವುದೆಂದರೆ ಅದು ಸರಿಯಾಗಿದೆಯೆಂದು ಕ್ರಿಯೆಗಳಲ್ಲಿಯೂ ಮತ್ತು ಅದನ್ನು ನಿಶ್ಚಯಗೊಳಿಸುವ ಮಾತುಗಳಲ್ಲಿ ನಾವು ಅದನ್ನು ನಂಬುವುದು ಎಂದರ್ಥ.

ಭಾಷಾಂತರ ಸಲಹೆಗಳು:

- ಯಾವುದೇಯಾಗಲಿ ಸರಿಯಾಗಿದೆಯೆಂದು ಗುರುತಿಸುವ ಸಂದರ್ಭದಲ್ಲಿ, “ಗುರುತಿಸುವುದು” ಎನ್ನುವ ಪದವನ್ನು “ಒಪ್ಪಿಕೊಳ್ಳುವಿಕೆ” ಅಥವಾ “ಸ್ಪಷ್ಟಪಡಿಸುವಿಕೆ” ಅಥವಾ “ಸತ್ಯವೆಂದು ಒಪ್ಪಿಕೊಳ್ಳುವಿಕೆ” ಅಥವಾ “ನಂಬುವಿಕೆ” ಎನ್ನುವ ಪದಗಳನ್ನಿಟ್ಟು ಅನುವಾದ ಮಾಡಬಹುದು.
- ಒಬ್ಬ ವ್ಯಕ್ತಿಯನ್ನು ಒಪ್ಪಿಕೊಂಡಿದ್ದೇವೆ ಎಂದು ಸೂಚಿಸುವಾಗ, ಈ ಪದವನ್ನು “ಅಂಗೀಕರಿಸುವಿಕೆ” ಅಥವಾ “ಆ ಬೆಲೆಯನ್ನು ಗುರುತಿಸುವಿಕೆ” ಅಥವಾ (ಆ ವ್ಯಕ್ತಿ) ನಂಬಿಗಸ್ತನೆಂದು ಇತರರಿಗೆ ಹೇಳುವುದು” ಎಂಬುವುದಾಗಿಯೂ ಅನುವಾದ ಮಾಡಬಹುದು.
- ದೇವರನ್ನು ಗ್ರಹಿಸುವುದು ಎನ್ನುವ ಸಂದರ್ಭದಲ್ಲಿ, ಇದನ್ನು “ದೇವರನ್ನು ನಂಬುವುದು ಮತ್ತು ವಿಧೇಯರಾಗಿರುವುದು” ಅಥವಾ “ದೇವರು ಯಾರೆಂದು ಪ್ರಕಟಿಸುವುದು” ಅಥವಾ “ದೇವರು ಎಷ್ಟು ದೊಡ್ಡವರೆನ್ನುವದರ ಕುರಿತಾಗಿ ಇತರ ಜನರಿಗೆ ಹೇಳುವುದು” ಅಥವಾ “ದೇವರು ಹೇಳುವುದು ಮತ್ತು ಆತನು ಮಾಡುವುದು ಸರಿಯೆಂದು ಒಪ್ಪಿಕೊಳ್ಳುವುದು” ಎಂಬುದಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ: ವಿಧೇಯತೆ, ಮಹಿಮೆ, , ರಕ್ಷಿಸು)

ಸತ್ಯವೇದದ ವಾಕ್ಯಗಳು:

- ದಾನಿ 11:38-39
- ಯೆರೆಮೀಯಾ 9:4-6
- ಯೋಬ 34:26-28
- ಯಾಜಕ 22:32
- ಕೀರ್ತನೆ 29:1-2

ಪದ ಡೇಟಾ:

- Strong's: H3045, H3046, H5046, H5234, H6942, G14920, G19210, G36700

ಚದುರು, ಚದರಿಕೆ

ಪದದ ಅರ್ಥವಿವರಣೆ:

“ಚದುರು” ಮತ್ತು “ಚದರಿಕೆ” ಎನ್ನುವ ಪದಗಳು ಜನರು ಚದುರುವಿಕೆಯನ್ನು ಅಥವಾ ವಸ್ತುಗಳು ವಿವಿಧವಾದ ದಿಕ್ಕುಗಳಲ್ಲಿ ಚದರಿಹೋಗುವುದನ್ನು ಸೂಚಿಸುತ್ತವೆ.

- ಹಳೇ ಒಡಂಬಡಿಕೆಯಲ್ಲಿ ಜನರನ್ನು “ಚದರಿಸುವುದರ” ಕುರಿತಾಗಿ ದೇವರು ಮಾತನಾಡಿದ್ದಾರೆ, ಇದರಿಂದ ಒಬ್ಬರಿಗೊಬ್ಬರು ದೂರವಿರಲು ವಿವಿಧ ಸ್ಥಳಗಳಲ್ಲಿ ಜೀವಿಸುವಂತೆ ಮತ್ತು ಪ್ರತ್ಯೇಕವಾಗಿರುವಂತೆ ಕಾರಣವಾಯಿತು. ಅವರು ಮಾಡಿದ ಪಾಪಗಳಿಗಾಗಿ ಅವರನ್ನು ಶಿಕ್ಷಿಸುವುದಕ್ಕೆ ಆತನು ಈ ರೀತಿ ಮಾಡಿದ್ದಾನೆ. ಬಹುಶಃ ಅವರು ಚದುರಿ ಹೋಗುವುದರಿಂದ ಅವರು ಪಶ್ಚಾತ್ತಾಪ ಹೊಂದಿ, ದೇವರನ್ನು ತಿರುಗಿ ಆರಾಧನೆ ಮಾಡಿದರು.
- “ಚದುರುವಿಕೆ” ಎನ್ನುವ ಪದವನ್ನು ಹೊಸ ಒಡಂಬಡಿಕೆಯಲ್ಲಿ ಶ್ರಮೆಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಅನೇಕ ವಿವಿಧ ಸ್ಥಳಗಳಿಗೆ ವರ್ಗಾವಣೆಯಾಗಲು ಮತ್ತು ಅವರ ಮನೆಗಳನ್ನು ಬಿಟ್ಟುಹೋಗಲು ಸಿದ್ಧವಾಗಿರುವ ಕ್ರೈಸ್ತರಿಗೆ ಸೂಚಿಸಲ್ಪಟ್ಟಿರುತ್ತದೆ.
- “ಚದುರುವಿಕೆ” ಎನ್ನುವ ಮಾತನ್ನು “ವಿವಿಧ ಸ್ಥಳಗಳಲ್ಲಿ ವಿಶ್ವಾಸಿಗಳು” ಅಥವಾ “ವಿವಿಧವಾದ ದೇಶಗಳಲ್ಲಿ ಜೀವಿಸುವುದಕ್ಕೆ ಹೋಗಿರುವ ಜನರು” ಎಂದೂ ಅನುವಾದ ಮಾಡಬಹುದು.
- “ಚದುರು” ಎನ್ನುವ ಪದವನ್ನು “ಅನೇಕ ವಿವಿಧವಾದ ಸ್ಥಳಗಳಿಗೆ ಕಳುಹಿಸು” ಅಥವಾ “ವಿದೇಶಿಗಳಿಗೆ ಚೆದರಿ ಹೋಗು” ಅಥವಾ “ಬದುಕುವುದಕ್ಕೆ ವಿವಿಧ ದೇಶಗಳಿಗೆ ಹೋಗುವಂತೆ ಮಾಡು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬು, ಹಿಂಸೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.01:1-2
- ಯೆಹೆ.12:14-16
- ಯೆಹೆ.30:22-24
- ಕೀರ್ತನೆ.018:13-14

ಪದ ಡೇಟಾ:

- Strong's: H2219, H4127, H5310, H6327, H6340, H6504, H8600, G1287, G1290, G4650

ಚಾಡಿ, ಚಾಡಿಗಳು, ಚಾಡಿಕೋರ, ಮೂರ್ಖವಾಗಿ ಮಾತಾಡುವುದು

ಪದದ ಅರ್ಥವಿವರಣೆ

“ಚಾಡಿ” ಎನ್ನುವ ಪದವು ಬೇರೆಯವರ ವ್ಯಕ್ತಿಗತ ವಿಷಯಗಳನ್ನು ಕುರಿತು ಇನ್ನೊಬ್ಬರಬಳಿ ಮಾತಾಡುವುದು, ಸಮಾನ್ಯವಾಗಿ ಅದು ನಕಾರಾತ್ಮಕವಾದ ಮತ್ತು ಪ್ರಯೋಜನವಿಲ್ಲದ ಸಂಗತಿಗಳನ್ನು ಸೂಚಿಸುತ್ತದೆ. ಮಾತಾಡಿರುವ ಸಂಗತಿಗಳಲ್ಲಿ ಯಾವುದು ಸತ್ಯವೆಂದು ನಿಶ್ಚಯವಾಗಿರುವದಿಲ್ಲ.

- ಒಬ್ಬ ವ್ಯಕ್ತಿಯನ್ನು ಕುರಿತು ನಕಾರಾತ್ಮಕವಾದ ವಿಷಯಗಳನ್ನು ಹಬ್ಬಿಸುವುದು ತಪ್ಪು ಎಂದು ಸತ್ಯವೇದ ಹೇಳುತ್ತಿದೆ. ಈ ವಿಧವಾದ ನಕಾರಾತ್ಮಕವಾದ ಮಾತುಗಳಿಗೆ ಚಾಡಿ ಮತ್ತು ದೂಷಣೆ ಉದಾಹರಣೆಗಳಾಗಿವೆ.
- ಯಾರನ್ನು ಕುರಿತು ಚಾಡಿ ಹೇಳಲಾಗಿದೆಯೋ ಅವರಿಗೆ ಕೇಡು ಯಾಕಂದರೆ ಅದು ಆ ವ್ಯಕ್ತಿ ಬೇರೆಯವರ ಜೊತೆ ಇರುವ ಸಂಬಂಧವನ್ನು ನೋಯಿಸುತ್ತದೆ.

(ಈ ಪದಗಳನ್ನು ಸಹ ನೋಡಿರಿ : ದೂಷಣೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.05:11-13
- 2 ಕೊರಿಂಥ.12:20-21
- ಯಾಜಕ.19:15-16
- ಜ್ಞಾನೋ.16:27-28
- ರೋಮಾ.01:29-31

ಪದ ಡೇಟಾ:

- Strong's: H5372, G2636, G5397

ಚಿತ್ರ, ಚಿತ್ರಗಳು, ಕೆತ್ತಿರುವ ಚಿತ್ರ, ಕೆತ್ತಿರುವ ಚಿತ್ರಗಳು, ಎರಕುಹೊಯ್ದ ಲೋಹದ ಚಿತ್ರಗಳು, ಗೊಂಬೆ, ಗೊಂಬೆಗಳು, ಕೆತ್ತಿದ ಗೊಂಬೆ, ಕೆತ್ತಿದ ಗೊಂಬೆಗಳು, ಎರಕುಹೊಯ್ದ ಲೋಹದ ಗೊಂಬೆ, ಎರಕುಹೊಯ್ದ ಲೋಹದ ಗೊಂಬೆಗಳು

ಪದದ ಅರ್ಥವಿವರಣೆ:

ಈ ಎಲ್ಲಾ ಪದಗಳು ಸುಳ್ಳು ದೇವರನ್ನು ಆರಾಧನೆ ಮಾಡುವುದಕ್ಕೆ ತಯಾರು ಮಾಡಲ್ಪಟ್ಟಿರುವ ವಿಗ್ರಹಗಳನ್ನು ಸೂಚಿಸುತ್ತವೆ. ವಿಗ್ರಹಗಳನ್ನು ಆರಾಧನೆ ಮಾಡುವ ಸಂದರ್ಭದಲ್ಲಿ, "ಚಿತ್ರ" ಎನ್ನುವುದು "ಕೆತ್ತಿರುವ ಚಿತ್ರ" ಎನ್ನುವುದಕ್ಕೆ ಸುಲಭವಾಗಿ ಬಳಸುವ ಪದವಾಗಿರುತ್ತದೆ.

- "ಕೆತ್ತಿರುವ ಚಿತ್ರ" ಅಥವಾ "ಕೆತ್ತಿದ ಗೊಂಬೆ" ಎನ್ನುವ ಪದವು ಒಂದು ಪ್ರಾಣಿಯಂತೆ, ವ್ಯಕ್ತಿಯಂತೆ ಅಥವಾ ಒಂದು ವಸ್ತುವಿನಂತೆ ಕಾಣಿಸುವುದಕ್ಕೆ ತಯಾರು ಮಾಡಲ್ಪಟ್ಟಿರುವ ಮರದ ವಸ್ತುವಾಗಿರುತ್ತದೆ.
- "ಎರಕುಹೊಯ್ದ ಲೋಹದ ಗೊಂಬೆ" ಎನ್ನುವುದು ಲೋಹವನ್ನು ಕರಗಿಸಿ, ಅದನ್ನು ಒಂದು ವಸ್ತು, ಪ್ರಾಣಿ ಅಥವಾ ಒಬ್ಬ ವ್ಯಕ್ತಿಯ ಆಕಾರದಲ್ಲಿರುವ ಅಚ್ಚುನೊಳಗೆ ಸುರಿಯುವುದರ ಮೂಲಕ ಒಂದು ವಸ್ತುವನ್ನು ಅಥವಾ ಒಂದು ಪ್ರತಿಮೆಯನ್ನು ತಯಾರಿಸುವುದು ಎಂದರ್ಥ.
- ಈ ಮರದ ಮತ್ತು ಲೋಹದ ವಸ್ತುಗಳು ಸುಳ್ಳು ದೇವರುಗಳನ್ನು ಆರಾಧನೆ ಮಾಡುವುದರಲ್ಲಿ ಉಪಯೋಗಿಸಲ್ಪಟ್ಟಿರುತ್ತವೆ.
- "ಚಿತ್ರ" ಎನ್ನುವ ಪದವು ವಿಗ್ರಹವನ್ನು ಸೂಚಿಸಿದಾಗ, ಅದು ಕಟ್ಟಿಗೆಯಿಂದಾಗಲಿ ಅಥವಾ ಲೋಹದಿಂದಾಗಲಿ ಮಾಡಿದ ವಿಗ್ರಹವನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ವಿಗ್ರಹಕ್ಕೆ ಸೂಚಿಸಿದಾಗ, "ಚಿತ್ರ" ಎನ್ನುವ ಪದವನ್ನು "ಪ್ರತಿಮೆ" ಅಥವಾ "ಕೆತ್ತಲ್ಪಟ್ಟ ವಿಗ್ರಹ" ಅಥವಾ "ಕೆತ್ತಲ್ಪಟ್ಟ ಭಕ್ತಿಸಂಬಂಧವಾದ ವಸ್ತು" ಎಂಬುದಾಗಿ ಅನುವಾದ ಮಾಡಬಹುದು.
- ಈ ಪದದೊಂದಿಗೆ ವಿವರಣಾತ್ಮಕವಾದ ಪದವನ್ನು ಯಾವಾಗಲೂ ಉಪಯೋಗಿಸುವುದಕ್ಕೆ ಕೆಲವೊಂದು ಭಾಷೆಗಳಲ್ಲಿ ಇದು ತುಂಬಾ ಸ್ಪಷ್ಟವಾಗಿರಬಹುದು, ಹೇಗೆಂದರೆ "ಕೆತ್ತಿರುವ ಚಿತ್ರ" ಅಥವಾ "ಎರಕುಹೊಯ್ದ ಲೋಹದ ಗೊಂಬೆ" ಎಂಬುದಾಗಿ ಉಪಯೋಗಿಸುತ್ತಾರೆ. "ಚಿತ್ರ" ಅಥವಾ "ಗೊಂಬೆ" ಪದವನ್ನು ಮಾತ್ರವೇ ಉಪಯೋಗಿಸಿದ ಸ್ಥಳಗಳಲ್ಲಿಯೂ ಮೂಲ ಭಾಷೆಯಲ್ಲಿಯೇ ಇರುತ್ತದೆ.
- ಈ ಪದವು ದೇವರ ಸ್ವರೂಪದಲ್ಲಿರುವ ರೂಪ ಎನ್ನುವ ಪದಕ್ಕೆ ವ್ಯತ್ಯಾಸವಿರುವಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ದೇವರು, ಸುಳ್ಳು ದೇವರು, ದೇವರ ಸ್ವರೂಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.14:9-10
- ಅಪೊ.ಕೃತ್ಯ.07:43
- ಯೆಶಯಾ.21:8-9
- ಮತ್ತಾಯ.22:20-22
- ರೋಮಾ.01:22-23

ಪದ ಡೇಟಾ:

- Strong's: H457, H1544, H2553, H4541, H4676, H4853, H4906, H5257, H5262, H5566, H6091, H6456, H6459, H6754, H6755, H6816, H8403, H8544, H8655, G1504, G5179, G5481

ಚಿರತೆ, ಚಿರತೆಗಳು

ಸತ್ಯಾಂಶಗಳು:

ಚಿರತೆ ಎನ್ನುವುದು ಬೆಕ್ಕಿನಂತೆ ಇರುವ ದೊಡ್ಡ ಪ್ರಾಣಿಯಾಗಿರುತ್ತದೆ, ಅದು ಕಂದು ಬಣ್ಣದ ಕಪ್ಪು ಕಲೆಗಳನ್ನು ಹೊಂದಿರುತ್ತದೆ.

- ಚಿರತೆ ಎನ್ನುವುದು ಒಂದು ವಿಧವಾದ ಪ್ರಾಣಿಯಾಗಿರುತ್ತದೆ, ಇದು ಇತರ ಪ್ರಾಣಿಗಳನ್ನು ಬೇಟೆ ಮಾಡಿ ಹಿಡಿದು ಅವುಗಳನ್ನು ತಿನ್ನುತ್ತದೆ.
- ಸತ್ಯವೇದದಲ್ಲಿ ಆಕಸ್ಮಿಕವಾಗಿ ನಡೆದ ವಿಪತ್ತನ್ನು ಚಿರತೆಗೆ ಹೋಲಿಸಿದ್ದಾರೆ, ಇದು ಬೇಟೆಗೆ ಹೋಗುವಾಗ ಥಟ್ಟನೆ ಮೇಲೆರಗಿ ಹಿಡಿಯುತ್ತದೆ.
- ಪ್ರವಾದಿ ದಾನಿಯೇಲನು ಮತ್ತು ಅಪೊಸ್ತಲನಾದ ಯೋಹಾನನು ದರ್ಶನಗಳ ಕುರಿತಾಗಿ ಹೇಳಿದ್ದಾರೆ, ಅವುಗಳಲ್ಲಿ ಅವರು ಚಿರತೆಯಂತಿರುವ ಒಂದು ಮೃಗವನ್ನು ನೋಡಿದ್ದಾರೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಪಶು, ದಾನಿಯೇಲ, ಬೇಟೆ, ದರ್ಶನ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.07:6-7
- ಹೋಶೆಯ.13:7-8
- ಪ್ರಕ.13:1-2
- ಪರಮ.04:8

ಪದ ಡೇಟಾ:

- Strong's: H5245, H5246

ಚೀಟು, ಚೀಟುಗಳು ಹಾಕುವುದು

ಪದದ ಅರ್ಥವಿವರಣೆ:

"ಚೀಟು" ಎನ್ನುವುದು ಒಂದು ವಿಷಯವನ್ನು ನಿರ್ಣಯಿಸುವುದಕ್ಕಾಗಿ ಒಂದೇ ರೀತಿಯ ವಸ್ತುಗಳ ಮಧ್ಯೆದಲ್ಲಿ ಆಯ್ಕೆ ಮಾಡುವ ಗುರುತಿಸಲಾಗಿದ ಚೀಟು ಆಗಿರುತ್ತದೆ. * ಚೀಟು ಹಾಕುವುದು" ಎನ್ನುವುದು ಗುರುತುಗಳಿರುವ ವಸ್ತುಗಳನ್ನು ಮೇಲಕ್ಕೆ ಎಸೆದು ನೆಲದ ಮೇಲೆ ಹಾಕುವದನ್ನು ಅಥವಾ ಬೇರೊಂದು ಸ್ಥಳದ ಮೇಲೆ ಹಾಕುವುದನ್ನು ಸೂಚಿಸುತ್ತದೆ.

- ಕೆಲವೊಂದು ಸಂಸ್ಕೃತಿಗಳಲ್ಲಿ ಚಿಕ್ಕ ಚಿಕ್ಕ ಕೊಳವೆಗಳನ್ನು ಉಪಯೋಗಿಸಿ ಚೀಟುಗಳನ್ನು ಹಾಕುವುದಕ್ಕೆ "ಎಳೆಯುತ್ತಾರೆ" ಅಥವಾ "ಹೊರಗೆಳೆಯುತ್ತಾರೆ". ಒಬ್ಬ ವ್ಯಕ್ತಿ ಚಿಕ್ಕ ಚಿಕ್ಕ ಕೊಳವೆಗಳನ್ನು ಹಿಡಿದುಕೊಳ್ಳುತ್ತಾನೆ, ಇದರಿಂದ ಎಷ್ಟೊತ್ತು ಅವು ಇರುತ್ತವೆಯೆಂದು ಯಾರೂ ನೋಡುವುದಿಲ್ಲ. ಪ್ರತಿಯೊಬ್ಬರೂ ಒಂದೊಂದು ಕೊಳವೆಯನ್ನು ಹೊರ ತೆಗೆಯುತ್ತಾರೆ ಮತ್ತು ದೊಡ್ಡದಾದ (ಅಥವಾ ಚಿಕ್ಕದಾದ) ಕೊಳವೆಯನ್ನು ಹೊರ ತೆಗೆಯುವರೇ ಆಯ್ಕೆ ಮಾಡುತ್ತಾರೆ.
- ಚೀಟುಗಳನ್ನು ಹಾಕುವ ಅಭ್ಯಾಸವು ಇಸ್ರಾಯೇಲ್ಯರು ಮಾಡುತ್ತಿದ್ದರು, ಇದನ್ನು ಹಾಕುವುದರ ಮೂಲಕ ದೇವರು ಅವರನ್ನು ಏನು ಮಾಡಬೇಕೆಂದು ತಿಳಿದುಕೊಳ್ಳುತ್ತಿದ್ದರು.
- ಜೆಕರ್ಯ ಮತ್ತು ಎಲಿಸಬೇತಳ ಕಾಲದಲ್ಲಿಯೂ ವಿಶೇಷವಾದ ಸಮಯ ಬಂದಾಗ ದೇವಾಲಯದಲ್ಲಿ ವಿಶೇಷವಾದ ಕರ್ತವ್ಯವನ್ನು ಯಾವ ಯಾಜಕನು ಮಾಡಬೇಕೆಂದು ಆಯ್ಕೆ ಮಾಡಿಕೊಳ್ಳುವುದಕ್ಕೆ ಇದನ್ನು ಉಪಯೋಗಿಸಿದ್ದರು.
- ಯೇಸುವನ್ನು ಶಿಲುಬೆಗೆ ಏರಿಸಿದ ಸೈನಿಕರು ಯೇಸುವಿನ ವಸ್ತ್ರಗಳನ್ನು ಯಾರ್ಯಾರು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡುವುದಕ್ಕೆ ಚೀಟುಗಳನ್ನು ಹಾಕಿದರು.
- "ಚೀಟುಗಳನ್ನು ಹಾಕುವುದು" ಎನ್ನುವ ಮಾತನ್ನು "ಚೀಟುಗಳನ್ನು ಮೇಲಕ್ಕೆ ಎಸೆಯುವುದು" ಅಥವಾ "ಚೀಟುಗಳನ್ನು ಹೊರ ತೆಗೆಯುವುದು" ಅಥವಾ "ಚೀಟುಗಳನ್ನು ನೆಲದ ಮೇಲೆ ಉರುಳಿಸುವುದು ಎಂದೂ ಅನುವಾದ ಮಾಡಬಹುದು. "ಹಾಕುವುದು" ಎನ್ನುವ ಪದಕ್ಕೆ ಚೀಟುಗಳನ್ನು ತುಂಬಾ ದೂರದಲ್ಲಿ ಬೀಳುವಂತೆ ಎಸೆಯುವುದು ಎಂದರ್ಥವು ಬರದಂತೆ ನೋಡಿಕೊಳ್ಳಿರಿ.
- ಸಂದರ್ಭಾನುಸಾರವಾಗಿ, "ಚೀಟು" ಎನ್ನುವ ಪದವನ್ನು "ಗುರುತು ಹಾಕಿರುವ ಕಲ್ಲು" ಅಥವಾ "ಕುಂಬಾರಿಕೆಯ ತುಣುಕು" ಅಥವಾ "ಕೋಲು" ಅಥವಾ "ಕೊಳವೆಯ ತುಂಡು" ಎಂದೂ ಅನುವಾದ ಮಾಡಬಹುದು.
- "ಚೀಟಿನ" ಮೂಲಕ ನಿರ್ಣಯ ತೆಗೆದುಕೊಳ್ಳುವುದಾದರೆ, ಅದನ್ನು "ಚೀಟುಗಳನ್ನು ಹೊರ ತೆಗೆಯುವುದರ ಮೂಲಕ (ಅಥವಾ ಮೇಲಕ್ಕೆ ಎಸೆಯುವುದರ ಮೂಲಕ)" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಎಲಿಸಬೇತಳು, ಯಾಜಕ, ಜೆಕರ್ಯ, ಜೆಕರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋನಾ.01:6-7
- ಲೂಕ.01:8-10
- ಲೂಕ.23:33-34
- ಮಾರ್ಕ.15:22-24
- ಮತ್ತಾಯ.27:35-37
- ಕೀರ್ತನೆ.022:18-19

ಪದ ಡೇಟಾ:

- Strong's: H1486, H2256, H5307, G2624, G2819, G2975, G3091

ಚೊಚ್ಚಲು

ಪದದ ಅರ್ಥವಿವರಣೆ:

“ಚೊಚ್ಚಲು” ಎನ್ನುವ ಪದವು ಜನರಿಗೆ ಅಥವಾ ಪ್ರಾಣಿಗಳಿಗೆ ಹುಟ್ಟಿದ ಮೊಟ್ಟ ಮೊದಲ ಸಂತತಿಯನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ “ಚೊಚ್ಚಲು” ಎನ್ನುವ ಪದವು ಸಹಜವಾಗಿ ಮೊಟ್ಟ ಮೊದಲು ಹುಟ್ಟಿದ ಗಂಡು ಮಗುವನ್ನು ಸೂಚಿಸುತ್ತದೆ.
- ಸತ್ಯವೇದದ ಕಾಲಗಳಲ್ಲಿ ಚೊಚ್ಚಲು ಮಗನಿಗೆ ಒಂದು ವಿಶೇಷವಾದ ಪ್ರಾಮುಖ್ಯತೆಯನ್ನು ಕೊಟ್ಟಿರುತ್ತಾರೆ ಮತ್ತು ಇತರ ಗಂಡು ಮಕ್ಕಳಿಗಿಂತ ತನ್ನ ಕುಟುಂಬಕ್ಕೆ ಎರಡುಪಟ್ಟು ಕೊಟ್ಟಿರುತ್ತಾರೆ.
- ಅನೇಕಬಾರಿ ದೇವರಿಗೆ ಸರ್ವಾಂಗ ಹೋಮ ಮಾಡುವುದು ಪ್ರಾಣಿಗಳ ಹುಟ್ಟಿದ ಪ್ರಥಮ ಗರ್ಭಫಲವಾದ ಗಂಡು ಪ್ರಾಣಿಯನ್ನು ಕೊಡುತ್ತಿದ್ದರು.
- ಈ ಆಲೋಚನೆಯನ್ನು ಅಲಂಕಾರಿಕ ಭಾಷೆಯಲ್ಲಿಯೂ ಉಪಯೋಗಿಸುತ್ತಾರೆ. ಉದಾಹರಣೆಗೆ, ಇಸ್ರಾಯೇಲ್ ದೇಶವನ್ನು ದೇವರ ಮೊದಲ ಸಂತಾನದ ಗಂಡು ಮಗ ಎಂದು ಕರೆಯುತ್ತಾರೆ, ಯಾಕಂದರೆ ದೇವರು ಇಸ್ರಾಯೇಲ್ ದೇಶಕ್ಕೆ ಇತರ ದೇಶಗಳ ಮೇಲೆ ವಿಶೇಷವಾದ ಸವಲತ್ತುಗಳನ್ನು ಕೊಟ್ಟಿದ್ದರು.
- ದೇವರ ಮಗ ಆಗಿರುವ ಯೇಸು ದೇವರ ಮೊದಲ ಸಂತಾನವೆಂದು ಕರೆಯಲ್ಪಟ್ಟಿದ್ದನು, ಯಾಕಂದರೆ ಆತನಿಗೆ ಪ್ರತಿಯೊಬ್ಬರ ಮೇಲೆ ಅಧಿಕಾರವು ಮತ್ತು ಎಲ್ಲರಿಗಿಂತ ಹೆಚ್ಚಾದ ಪ್ರಾಮುಖ್ಯತೆಯು ಕೊಡಲ್ಪಟ್ಟಿತ್ತು.

ಅನುವಾದ ಸಲಹೆಗಳು:

- ವಾಕ್ಯಭಾಗದಲ್ಲಿ “ಚೊಚ್ಚಲು” ಎಂದು ಮಾತ್ರವೇ ಕಂಡಾಗ, ಇದನ್ನು “ಚೊಚ್ಚಲ ಪುರುಷ” ಅಥವಾ “ಚೊಚ್ಚಲ ಮಗ” ಎಂದೂ ಅನುವಾದ ಮಾಡಬಹುದು, ಯಾಕಂದರೆ ಆ ಅರ್ಥವೇ ಬರುತ್ತದೆ. (ನೋಡಿರಿ: ಊಹಿಸಿಕೊಂಡ ಜ್ಞಾನ ಮತ್ತು ಸೂಚ್ಯ ಸಮಾಚಾರ)
- ಈ ಪದವನ್ನು ಅನುವಾದ ಮಾಡುವ ಇನ್ನೊಂದು ವಿಧಾನಗಳಲ್ಲಿ “ಮೊಟ್ಟ ಮೊದಲು ಹುಟ್ಟಿದ ಗಂಡು ಮಗ” ಅಥವಾ “ಹಿರಿಯ ಮಗ” ಅಥವಾ “ಒಬ್ಬನೇ ಮಗ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಯೇಸುವಿಗೆ ಅಲಂಕಾರಿಕವಾಗಿ ಉಪಯೋಗಿಸಿದಾಗ, “ಎಲ್ಲಾವುದರ ಮೇಲೆ ಅಧಿಕಾರವನ್ನು ಪಡೆದ ಮಗ” ಅಥವಾ “ಗೌರವಿಸಲ್ಪಟ್ಟ ಮೊಟ್ಟ ಮೊದಲನೇ ಮಗ” ಎಂದು ಅರ್ಥ ಬರುವ ಮಾತುಗಳೊಂದಿಗೆ ಅನುವಾದ ಮಾಡಬಹುದು.
- ಎಚ್ಚರಿಕೆ : ಈ ಪದವನ್ನು ಯೇಸುವಿಗೆ ಸೂಚಿಸುವ ಪದವನ್ನು ಅನುವಾದ ಮಾಡುವಾಗ, ಆತನು ಸೃಷ್ಟಿಸಲ್ಪಟ್ಟಿದ್ದಾನೆನೆನ್ನುವ ಅರ್ಥವು ಬರದಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಸ್ವಾಸ್ಥ್ಯ, ಬಲಿ, ಮಗ)

ಸತ್ಯವೇದದ ಅನುಬಂಧ ವಾಕ್ಯಗಳು :

- ಕೊಲೊಸ್ಸೆ.01:15-17
- ಆದಿ.04:3-5
- ಆದಿ.29:26-27
- ಆದಿ.43:32-34
- ಲೂಕ.02:6-7
- ಪ್ರಕ.01:4-6

ಪದ ಡೇಟಾ:

- Strong's: H1060, H1062, H1067, H1069, G4416, G5207

ಜಂಡು, ಜಂಡುಗಳು

ಸತ್ಯಾಂಶಗಳು:

“ಜಂಡು” ಎನ್ನುವ ಪದವು ನೀರಿನಲ್ಲಿ ಬೆಳೆಯುವ ಉದ್ದವಾದ ಕಾಂಡದೊಂದಿಗಿರುವ ಸಸ್ಯವನ್ನು ಸೂಚಿಸುತ್ತದೆ, ಸಾಧಾರಣವಾಗಿ ಇದು ನದಿ ಅಥವಾ ಹೊಳೆಯ ತುದಿ ಭಾಗದಲ್ಲಿ ಕಂಡುಬರುತ್ತದೆ.

- ನೈಲ್ ನದಿಯಲ್ಲಿರುವ ಜಂಡುಗಳಲ್ಲಿಯೇ ಮೋಶೆ ಶಿಶುವಾಗಿದ್ದಾಗ ಬಚ್ಚಿಡಲ್ಪಟ್ಟಿದ್ದನು, ಇದನ್ನೇ “ಬಲ್.ರಷಸ್” ಎಂದು ಕರೆಯುತ್ತಾರೆ. ಅವು ಉದ್ದವಾಗಿರುತ್ತವೆ, ಅವು ನದಿಯ ನೀರಿನಲ್ಲಿ ದಟ್ಟವಾದ ಪೊದೆಗಳಲ್ಲಿ ಟೊಳ್ಳಾದ ತೊಟ್ಟುಗಳಾಗಿ ಬೆಳೆಯುತ್ತಾ ಇರುತ್ತವೆ.
- ಈ ನಾರಿನಿಂದ ತುಂಬಿದ ಸಸ್ಯಗಳನ್ನು ಪುರಾತನ ಐಗುಪ್ತದಲ್ಲಿ ಕಾಗದವನ್ನು, ಬುಟ್ಟಿಗಳನ್ನು ಮಾಡುವುದಕ್ಕೆ ಉಪಯೋಗಿಸಿಸುತ್ತಿದ್ದರು.
- ಜಂಡು ಸಸ್ಯದ ಟೊಳ್ಳು ಅಥವಾ ಕಾಂಡವು ತುಂಬಾ ಮೆದುವಾಗಿರುತ್ತದೆ ಮತ್ತು ಇದು ಗಾಳಿ ಬೀಸುವಾಗ ತುಂಬಾ ಸುಲಭವಾಗಿ ಬಾಗುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ಮೋಶೆ, ನೈಲ್ ಹೊಳೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.14:14-16
- ಲೂಕ.07:24-26
- ಮತ್ತಾಯ.11:7-8
- ಮತ್ತಾಯ.12:19-21
- ಕೀರ್ತನೆ.068:30-31

ಪದ ಡೇಟಾ:

- Strong's: H98, H100, H260, H5488, H6169, H7070, G2063, G2563

ಜಂಬದ

ಪದದ ಅರ್ಥವಿವರಣೆ:

“ಜಂಬದ” ಎನ್ನುವ ಪದಕ್ಕೆ ಗರ್ವದಿಂದರುವುದು ಅಥವಾ ಅಹಂಭಾವಿಗಳಾಗಿರುವುದು ಎಂದರ್ಥ. “ಜಂಬದಿಂದ” ಇರುವ ಒಬ್ಬ ವ್ಯಕ್ತಿ ತನ್ನ ಕುರಿತಾಗಿ ಅತೀ ಹೆಚ್ಚಾಗಿ ಉನ್ನತವಾಗಿ ಆಲೋಚನೆ ಮಾಡಿಕೊಳ್ಳುತ್ತಾನೆ.

- ಈ ಪದವು ಅನೇಕಬಾರಿ ದೇವರಿಗೆ ವಿರುದ್ಧವಾಗಿ ಪಾಪ ಮಾಡುವುದರಲ್ಲಿ ಮುಂದುವರಿಯುವ ಒಬ್ಬ ಅಹಂಕಾರಿ ವ್ಯಕ್ತಿಯನ್ನು ವಿವರಿಸುತ್ತದೆ.
- ಜಂಬದ ವ್ಯಕ್ತಿಯಾಗಿರುವ ಒಬ್ಬ ವ್ಯಕ್ತಿ ತನ್ನ ಕುರಿತಾಗಿ ಹೊಗಳಿಕೊಳ್ಳುತ್ತಾನೆ.
- ಜಂಬದ ವ್ಯಕ್ತಿ ಮೂರ್ಖನಾಗಿರುತ್ತಾನೆ ಹೊರತು ಜ್ಞಾನಿಯಾಗಿರುವುದಿಲ್ಲ.
- ಈ ಪದವನ್ನು “ಗರ್ವ” ಅಥವಾ “ಅಹಂಕಾರ” ಅಥವಾ “ಸ್ವಯಂ-ಕೇಂದ್ರಿತ” ಎಂದೂ ಅನುವಾದ ಮಾಡಬಹುದು.
- “ಜಂಬದ ಕಣ್ಣುಗಳು” ಎನ್ನುವ ಅಲಂಕಾರಿಕ ಮಾತನ್ನು “ಗರ್ವದಿಂದ ನೋಡುವುದು” ಅಥವಾ “ಇತರರನ್ನು ಕೀಳಾಗಿ ನೋಡುವುದು” ಅಥವಾ “ಇತರರನ್ನು ಅತೀ ಕೆಳಮಟ್ಟದಲ್ಲಿ ನೋಡುವ ಜಂಬದ ವ್ಯಕ್ತಿ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಹೊಗಳಿಕೆ, ಗರ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.03:1-4
- ಯೆಶಯಾ.02:17-19
- ಜ್ಞಾನೋ.16:17-18
- ಜ್ಞಾನೋ.21:23-24
- ಕೀರ್ತನೆ.131:1

ಪದ ಡೇಟಾ:

- Strong's: H1361, H1363, H1364, H3093, H4791, H7312

ಜನಗಣತಿ

ಪದದ ಅರ್ಥವಿವರಣೆ:

“ಜನಗಣತಿ” ಎನ್ನುವ ಪದವು ಒಂದು ಸಾಮ್ರಾಜ್ಯದಲ್ಲಿ ಅಥವಾ ಒಂದು ದೇಶದಲ್ಲಿ ಜನರನ್ನು ಸಾಂಪ್ರದಾಯಿಕ ಎಣಿಕೆಯನ್ನು ಸೂಚಿಸುತ್ತದೆ.

- ಇಸ್ರಾಯೇಲ್ ಜನರನ್ನು ಎಣಿಸಬೇಕೆಂದು ದೇವರು ಅಪ್ಪಣೆ ಮಾಡಿದ ಅನೇಕ ವಿಧವಾದ ಸಂದರ್ಭಗಳನ್ನು ಹಳೇ ಒಡಂಬಡಿಕೆಯಲ್ಲಿ ದಾಖಲಿಸಲಾಗಿದೆ, ಅದು ಇಸ್ರಾಯೇಲ್ಯರು ಐಗುಪ್ತ ದೇಶವನ್ನು ಬಿಟ್ಟು ಹೋಗುತ್ತಿರುವಾಗ ಮತ್ತು ಕಾನಾನ್ ದೇಶದಲ್ಲಿ ಪ್ರವೇಶಿಸಿದಾಗ ಜನರನ್ನು ಎಣಿಸಿದ್ದಾರೆ.
- ಎಷ್ಟು ಜನ ಸುಂಕವನ್ನು ಕಟ್ಟುವವರಿದ್ದಾರೆಂದು ತಿಳಿದುಕೊಳ್ಳುವುದಕ್ಕೆಯೇ ಜನಗಣತಿಯ ಮುಖ್ಯ ಉದ್ದೇಶವಾಗಿದ್ದಿತ್ತು.
- ಉದಾಹರಣೆಗೆ, ಒಂದುಸಲ ವಿಮೋಚನಾ ಕಾಂಡದಲ್ಲಿ ಇಸ್ರಾಯೇಲ್ ಪುರುಷರನ್ನು ಎಣಿಸಿದಾಗ, ದೇವಾಲಯವನ್ನು ನೋಡಿಕೊಳ್ಳುವುದಕ್ಕಾಗಿ ಎಣಿಸಲ್ಪಟ್ಟ ಪ್ರತಿಯೊಬ್ಬರೂ ಅರ್ಧ ಶೆಕೆಲ್ ಕಟ್ಟ ಬೇಕಾಗಿತ್ತು.
- ಯೇಸು ಮಗುವಾಗಿದ್ದಾಗ ರೋಮಾ ಸಾಮ್ರಾಜ್ಯದಲ್ಲೆಲ್ಲಾ ಎಷ್ಟು ಮಂದಿ ಜನರು ಇದ್ದಾರೆಂದು ತಿಳಿದುಕೊಳ್ಳುವುದಕ್ಕೆ ಮತ್ತು ಎಲ್ಲರು ಸುಂಕವನ್ನು ಕಟ್ಟುವುದಕ್ಕೆ ಜನಗಣತಿಯನ್ನು ರೋಮಾ ಪ್ರಭುತ್ವವು ನಿರ್ವಹಿಸಿತ್ತು.

ಅನುವಾದ ಸಲಹೆಗಳು

- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಹೆಸರುಗಳನ್ನು ಎಣಿಕೆ ಮಾಡುವುದು” ಅಥವಾ “ಹೆಸರುಗಳ ಪಟ್ಟಿ” ಅಥವಾ “ದಾಖಲಾತಿ” ಎನ್ನುವ ಪದಗಳೂ ಒಳಗೊಂಡಿರುತ್ತವೆ.
- “ಜನಗಣತಿ ತೆಗೆದುಕೊಳ್ಳಿರಿ” ಎನ್ನುವ ಮಾತನ್ನು “ಜನರ ಹೆಸರುಗಳನ್ನು ದಾಖಲಿಸಿ” ಅಥವಾ “ಜನರನ್ನು ದಾಖಲಿಸಿ” ಅಥವಾ “ಜನರ ಹೆಸರುಗಳನ್ನು ಬರೆಯಿರಿ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದೇಶ, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.05:35-37
- ವಿಮೋ.30:11-14
- ವಿಮೋ.38:24-26
- ಲೂಕ.02:1-3
- ಅರಣ್ಯ.04:1-4

ಪದ ಡೇಟಾ:

- Strong's: H3789, H5674, H5921, H6485, H7218, G582, G583

ಜನರ ಗುಂಪು, ಜನಾಂಗಗಳು, ನಿರ್ದಿಷ್ಟ ಜನರು, ಜನರು

ಪದದ ಅರ್ಥವಿವರಣೆ:

"ಜನರು" ಅಥವಾ "ಜನರ ಗುಂಪುಗಳು" ಎನ್ನುವ ಪದವು ಒಂದೇ ಭಾಷೆಯನ್ನೂ ಮತ್ತು ಸಂಸ್ಕೃತಿಯನ್ನು ಹಂಚಿಕೊಳ್ಳುವ ಜನರ ಗುಂಪನ್ನು ಸೂಚಿಸುತ್ತದೆ. "ನಿರ್ದಿಷ್ಟ ಜನರು' ಎನ್ನುವ ಮಾತು ಅನೇಕಬಾರಿ ವಿಶೇಷವಾದ ಸಂದರ್ಭದಲ್ಲಿ ಅಥವಾ ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಸೇರಿಬರುವ ಜನರನ್ನು ಸೂಚಿಸುತ್ತದೆ.

- ದೇವರು ತನಗಾಗಿ "ಜನರನ್ನು" ಪ್ರತ್ಯೇಕಿಸಿಕೊಂಡಾಗ, ಇದಕ್ಕೆ ಆತನಿಗೆ ಸೇವೆ ಮಾಡುವುದಕ್ಕೆ ಮತ್ತು ಆತನ ಜನರಾಗಿ ಇರುವುದಕ್ಕೆ ಕೆಲವೊಂದು ನಿರ್ದಿಷ್ಟ ಜನರನ್ನು ಆತನು ಆಯ್ಕೆ ಮಾಡಿಕೊಂಡಿರುತ್ತಾರೆ ಎಂದರ್ಥ.
- ಸತ್ಯವೇದ ಕಾಲಗಳಲ್ಲಿ ಜನರ ಗುಂಪಿನ ಸದಸ್ಯರು ಸಾಧಾರಣವಾಗಿ ಒಂದೇ ಪೂರ್ವಜರನ್ನು ಹೊಂದಿರುತ್ತಾರೆ ಮತ್ತು ನಿರ್ದಿಷ್ಟವಾದ ದೇಶದಲ್ಲಿ ಅಥವಾ ಭೂಮಿಯ ಪ್ರಾಂತ್ಯದಲ್ಲಿ ಎಲ್ಲರು ಸೇರಿ ನಿವಾಸ ಮಾಡಿರುತ್ತಾರೆ.
- ಸಂದರ್ಭಾನುಸಾರವಾಗಿ "ನಿಮ್ಮ ಜನರು" ಎನ್ನುವ ಮಾತಿಗೆ "ನಿಮ್ಮ ಜನರ ಗುಂಪು" ಅಥವಾ "ನಿಮ್ಮ ಕುಟುಂಬ " ಅಥವಾ "ನಿಮ್ಮ ಬಂಧುಗಳು" ಎಂದರ್ಥವಾಗಿರುತ್ತದೆ.
- "ಜನಾಂಗಗಳು" ಎನ್ನುವ ಪದವು ಅನೇಕಬಾರಿ ಭೂಮಿಯ ಮೇಲಿರುವ ಎಲ್ಲಾ ಜನರ ಗುಂಪುಗಳನ್ನು ಸೂಚಿಸುವದಾಗಿರುತ್ತದೆ. ಕೆಲವೊಂದುಬಾರಿ ಈ ಪದವು ವಿಶೇಷವಾಗಿ ಇಸ್ರಾಯೇಲ್ಯರಲ್ಲದ ಜನರನ್ನು ಅಥವಾ ಯೆಹೋವನನ್ನು ಸೇವಿಸದ ಜನರನ್ನು ಹೆಚ್ಚಾಗಿ ಸೂಚಿಸುತ್ತದೆ. ಕೆಲವೊಂದು ಆಂಗ್ಲ ಬೈಬಲ್ ಅನುವಾದಗಳಲ್ಲಿ "ದೇಶಗಳು" ಎಂದು ಉಪಯೋಗಿಸಿರುತ್ತಾರೆ.

ಅನುವಾದ ಸಲಹೆಗಳು:

- "ಜನರ ಗುಂಪು" ಎನ್ನುವ ಪದವನ್ನು "ದೊಡ್ಡ ಕುಟುಂಬದ ಗುಂಪು" ಅಥವಾ "ವಂಶ" ಅಥವಾ "ಜನಾಂಗ ಗುಂಪು" ಎಂದು ಅರ್ಥಬರುವ ಪದದೊಂದಿಗೆ ಅಥವಾ ಮಾತಿನೊಂದಿಗೆ ಅನುವಾದ ಮಾಡಬಹುದು.
- "ನನ್ನ ಜನರು" ಎನ್ನುವಂತಹ ಮಾತುಗಳನ್ನು "ನನ್ನ ಬಂಧುಗಳು" ಅಥವಾ "ನನ್ನ ಜೊತೆಯ ಇಸ್ರಾಯೇಲ್ಯರು" ಅಥವಾ "ನನ್ನ ಕುಟುಂಬ" ಅಥವಾ "ನನ್ನ ಜನರ ಗುಂಪು" ಎಂದು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.
- "ಜನರ ಮಧ್ಯೆದೊಳಗೆ ನಿಮ್ಮನ್ನು ಚೆದರಿಸುತ್ತಿದ್ದೇನೆ" ಎನ್ನುವ ಮಾತನ್ನು "ಅನೇಕ ವಿಧವಾದ ಜನರೊಂದಿಗೆ ನೀವು ನಿವಾಸ ಮಾಡುವಂತೆ ಮಾಡುತ್ತೇನೆ" ಅಥವಾ "ನಿಮ್ಮನ್ನು ಒಬ್ಬರಿಂದ ಒಬ್ಬರನ್ನು ದೂರ ಮಾಡಿ, ಲೋಕದಲ್ಲಿರುವ ಅನೇಕ ಪ್ರಾಂತ್ಯಗಳಲ್ಲಿ ಜೀವಿಸುವಂತೆ ಮಾಡುವುದು" ಎಂದೂ ಅನುವಾದ ಮಾಡಬಹುದು.
- "ನಿರ್ದಿಷ್ಟ ಜನಾಂಗಗಳು" ಅಥವಾ "ನಿರ್ದಿಷ್ಟ ಜನರು" ಎನ್ನುವ ಪದವನ್ನು "ಲೋಕದಲ್ಲಿರುವ ಜನರು" ಅಥವಾ "ಜನರ ಗುಂಪುಗಳು" ಎಂದು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.
- "ನಿರ್ದಿಷ್ಟ ಜನರು" ಎನ್ನುವ ಮಾತನ್ನು "ಒಂದು ಪ್ರಾಂತ್ಯದಲ್ಲಿ ನಿವಾಸ ಮಾಡುವ ಜನರು" ಅಥವಾ "ಒಬ್ಬರಿಂದ ಬಂದಿರುವ ವಂಶಸ್ಥರಾದ ಜಾಣರು" ಅಥವಾ "ಒಬ್ಬರ ಕುಟುಂಬ" ಎಂದೂ ಅನುವಾದ ಮಾಡಬಹುದು, ಮತ್ತು ಅದು ಒಬ್ಬ ವ್ಯಕ್ತಿಯ ಅಥವಾ ಒಂದು ಸ್ಥಳದ ಹೆಸರಿನಿಂದ ಅನುಸರಿಸುವ ಯಾವುದೇ ಗುಂಪನ್ನು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.
- ಭೂಮಿಯ ಎಲ್ಲಾ ಜನರು" ಎನ್ನುವ ಮಾತನ್ನು "ಭೂಮಿಯ ನಿವಾಸವಾಗಿರುವ ಪ್ರತಿಯೊಬ್ಬರು" ಅಥವಾ "ಲೋಕದಲ್ಲಿರುವ ಪ್ರತಿಯೊಬ್ಬರೂ" ಅಥವಾ "ಎಲ್ಲಾ ಜನರು" ಎಂದೂ ಅನುವಾದ ಮಾಡಬಹುದು.
- "ಜನರು" ಎನ್ನುವ ಪದವನ್ನು "ಜನರ ಗುಂಪು" ಅಥವಾ "ನಿರ್ದಿಷ್ಟ ಜನರು" ಅಥವಾ "ಜನರ ಸಮುದಾಯ" ಅಥವಾ "ಜನರ ಕುಟುಂಬ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ವಂಶಸ್ಥ, ದೇಶ, ಕುಲ, ಲೋಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.08:51-53
- 1 ಸಮು.08:6-7
- ಧರ್ಮೋ.28:9-10
- ಆದಿ.49:16-18
- ರೂತಳು.01:16-18

ಸತ್ಯವೇದದಿಂದ ಉದಾಹರಣೆಗಳು:

- _**14:02** ಅಬ್ರಾಹಾಮ, ಇಸಾಕ, ಯಾಕೋಬರ ಸಂತಾನದವರಿಗೆ ವಾಗ್ದಾನ ಭೂಮಿಯನ್ನು ಕೊಡುತ್ತೇನೆಂದು ದೇವರು ಅವರೊಂದಿಗೆ ವಾಗ್ದಾನ ಮಾಡಿದ್ದರು, ಆದರೆ ಈಗ ಅಲ್ಲಿ ಅನೇಕ ಸಂಸ್ಕೃತಿಗಳನ್ನು ಅನುಸರಿಸುವ ಅನೇಕ **ಜನರ ಗುಂಪುಗಳು** _ ಜೀವಿಸುತ್ತಿವೆ,

- _**21:02** ಅಬ್ರಾಹಾಮನ ಮೂಲಕ ಈ ಲೋಕದ ಎಲ್ಲಾ **ಜನರ ಗುಂಪುಗಳು** ಆಶೀರ್ವಾದಗಳನ್ನು ಹೊಂದುತ್ತವೆಯೆಂದು ದೇವರು ಆತನೊಂದಿಗೆ ವಾಗ್ದಾನ ಮಾಡಿದರು. ಈ ಆಶೀರ್ವಾದವು ಲೋಕದಲ್ಲಿರುವ ಎಲ್ಲಾ **ಗುಂಪಿನ ಜನಗಳಿಂದ** _ ಬರುವ ಜನರಿಗೆ ರಕ್ಷಣೆ ಮಾರ್ಗವನ್ನು ಒದಗಿಸಿಕೊಡುವುದು ಮತ್ತು ಭವಿಷ್ಯತ್ತಿನಲ್ಲಿ ಒಂದು ಸಮಯದಲ್ಲಿ ಮೆಸ್ಸೀಯಾ ಬರುವನೆಂದೆನ್ನುವುದು ಆಗಿರಬಹುದು.
- _**42:08** "ಜನರ ಪಾಪಗಳಿಗಾಗಿ ಕ್ಷಮಾಪಣೆಯನ್ನು ಪಡೆದುಕೊಳ್ಳುವುದಕ್ಕೆ ಪ್ರತಿಯೊಬ್ಬರು ಪಶ್ಚಾತ್ತಾಪವನ್ನು ಹೊಂದಬೇಕೆಂದು ನನ್ನ ಶಿಷ್ಯರು ಪ್ರಕಟಿಸುವರೆಂದು ಲೇಖನಗಳಲ್ಲಿ ಬರೆಯಲ್ಪಟ್ಟಿರುತ್ತದೆ. ಅವರು ಈ ಸೇವೆಯನ್ನು ಯೆರೂಸಲೇಮಿನಲ್ಲಿ ಆರಂಭಿಸಿ, ಪ್ರತಿಯೊಂದು ಸ್ಥಳದಲ್ಲಿರುವ ಎಲ್ಲಾ **ಜನರ ಗುಂಪುಗಳ** _ ವರೆಗೂ ಹೋಗುವರು."
- _**42:10** "ಆದ್ದರಿಂದ, ತಂದೆ, ಮಗ, ಮತ್ತು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಕೊಡುವುದರ ಮೂಲಕ, ನಾನು ನಿಮಗೆ ಆದೇಶಿಸಿದ ಪ್ರತಿಯೊಂದು ಆಜ್ಞೆಗೆ ವಿಧೇಯತೆ ತೋರಿಸಬೇಕೆಂದು ಬೋಧನೆ ಮಾಡುವುದರ ಮೂಲಕ ಎಲ್ಲಾ **ಜನರ ಗುಂಪುಗಳನ್ನು** _ ಶಿಷ್ಯರನ್ನಾಗಿ ಮಾಡಿರಿ."
- _**48:11** ಈ ಹೊಸ ಒಡಂಬಡಿಕೆಯ ಮೂಲಕ, ಯಾವುದೇ **ಗುಂಪಿನ ಜನರಿಂದ** _ ಯಾರೇ ಒಬ್ಬರು ಯೇಸುವಿನಲ್ಲಿ ನಂಬುವುದರ ಮೂಲಕ ದೇವರ ಜನರಲ್ಲಿ ಭಾಗವಾಗಿರಬಹುದು.
- _**50:03** "ಹೋಗಿ, ಎಲ್ಲಾ **ಜನರ ಗುಂಪುಗಳನ್ನು** _ ನನ್ನ ಶಿಷ್ಯರನ್ನಾಗಿ ಮಾಡಿರಿ! ಮತ್ತು "ಬೆಳೆಗಳು ಕೊಯ್ಲಿಗೆ ಬಂದಿವೆ!" ಎಂದು ಆತನು (ಯೇಸು) ಹೇಳಿದರು.

ಪದ ಡೇಟಾ:

- Strong's: H249, H523, H524, H776, H1121, H1471, H3816, H5712, H5971, H5972, H6153, G246, G1074, G1085, G1218, G1484, G2560, G2992, G3793

ಜವೆಗೋದಿ

ಪದದ ಅರ್ಥವಿವರಣೆ

“ಜವೆಗೋದಿ” ಎನ್ನುವುದು ರೊಟ್ಟಿ ಮಾಡುವದರಲ್ಲಿ ಉಪಯೋಗಿಸಲ್ಪಡುವ ಒಂದು ವಿಧವಾದ ದಾನ್ಯವಾಗಿದೆ.

- ಜವೆಗೋದಿಯ ಗಿಡವು ಉದ್ದವಾದ ಕಾಂಡವನ್ನು ಹೊಂದಿರುತ್ತದೆ, ಅದರ ಮೇಲಿನ ಭಾಗದಲ್ಲಿ ತಲೆಯಿರುವುದು, ಅಲ್ಲಿ ಬೀಜವು ಅಥವಾ ದಾನ್ಯವು ಬೆಳೆಯುತ್ತದೆ.
- ಜವೆಗೋದಿ ಉಷ್ಣಾಂಶವಿರುವ ಕಾಲದಲ್ಲಿ ಚನ್ನಾಗಿ ಬೆಳೆಯುತ್ತದೆ ಆದುದರಿಂದ ವಸಂತ ಕಾಲದಲ್ಲಿ ಅಥವಾ ಬೇಸಿಗೆ ಕಾಲದಲ್ಲಿ ಕೋಯಲ್ಪಡುವುದು.
- ಜವೆಗೋದಿಯನ್ನು ಬಡಿದಾಗ, ತಿನ್ನಲು ಯೋಗ್ಯವಾದ ದಾನ್ಯವು ನಿಷ್ಪ್ರಯೋಜಕವಾದ ಒಣಗಿದ ಹುಲ್ಲಿಂದ ಬೇರೆಯಾಗುವುದು,
- ಜವೆಗೋದಿಯನ್ನು ಹಿಟ್ಟಾಡಿಸಿ, ಅದಕ್ಕೆ ನೀರನ್ನು ಅಥವಾ ಎಣ್ಣೆಯನ್ನು ಸೇರಿಸಿ ರೊಟ್ಟಿಯನ್ನು ಮಾಡುತ್ತಾರೆ.
- ಒಂದು ವೇಳೆ ಜವೆಗೋದಿ ಗೊತ್ತಿಲ್ಲದಿದ್ದರೆ, ಇದನ್ನು “ಜವೆಗೋದಿ ಎನ್ನುವ ದಾನ್ಯ” ಅಥವಾ “ಜವೆಗೋದಿ ದಾನ್ಯ” ಎಂದು ಅನುವಾದ ಮಾಡಬಹುದು.

(ಇದನ್ನು ಸಹ ನೋಡಿರಿ: ಗೊತ್ತಿಲ್ಲದ ವಿಷಯಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದಾನ್ಯ, ಬಡಿಯುವುದು, ಗೋದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.11:12-14
- ಯೋಬ.31:38-40
- ನ್ಯಾಯ.07:13-14
- ಅರಣ್ಯ.05:15
- ಪ್ರಕಟನೆ.06:5-6

ಪದ ಡೇಟಾ:

- Strong's: H8184, G2915, G2916

ಜಾಗರೂಕತೆ, ಜಾಗರೂಕ, ಜಾಗರೂಕತೆಯಿಂದ

ಸತ್ಯಾಂಶಗಳು:

“ಜಾಗರೂಕ” ಎನ್ನುವ ಪದವು ಒಬ್ಬ ವ್ಯಕ್ತಿ ತನ್ನ ಕ್ರಿಯೆಗಳ ಕುರಿತಾಗಿ ಆಲೋಚನೆ ಮಾಡುವನನ್ನು ಮತ್ತು ಜ್ಞಾನವುಳ್ಳ ನಿರ್ಣಯಗಳನ್ನು ತೆಗೆದುಕೊಳ್ಳುವವನನ್ನು ವಿವರಿಸುತ್ತದೆ.

- “ಜಾಗರೂಕತೆ” ಎನ್ನುವ ಅನೇಕಬಾರಿ ಭೌತಿಕವಾದ ವಿಷಯಗಳ ಕುರಿತಾಗಿ, ಪ್ರಾಯೋಗಿಕವಾದ ಕ್ರಿಯೆಗಳ ಕುರಿತಾಗಿ ನಿರ್ಣಯಗಳನ್ನು ಜ್ಞಾನದಿಂದ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಸೂಚಿಸುತ್ತದೆ, ಉದಾಹರಣೆಗೆ, ಆಸ್ತಿಪಾಸ್ತಿಗಳನ್ನು ಅಥವಾ ಹಣವನ್ನು ನಿರ್ವಹಿಸುವುದು.
- “ಜಾಗರೂಕತೆ” ಮತ್ತು “ಜ್ಞಾನ” ಎನ್ನುವ ಪದಗಳು ಒಂದೇ ಅರ್ಥವನ್ನು ಕೊಟ್ಟರೂ, “ಜ್ಞಾನ” ಎನ್ನುವುದು ಅನೇಕಬಾರಿ ಅತೀ ಸಾಧಾರಣವಾದ ಪದವಾಗಿರುತ್ತದೆ ಮತ್ತು ನೈತಿಕವಾದ ವಿಷಯಗಳು ಅಥವಾ ಆತ್ಮೀಯಕವಾದ ವಿಷಯಗಳ ಮೇಲೆ ಕೇಂದ್ರೀಕರಿಸುತ್ತದೆ.
- ಸಂದರ್ಭಾನುಸಾರವಾಗಿ “ಜಾಗರೂಕ” ಎನ್ನುವ ಪದವನ್ನು “ಚುರುಕು ಬುದ್ಧಿಯುಳ್ಳ” ಅಥವಾ “ಎಚರಿಕೆಯ” ಅಥವಾ “ಜ್ಞಾನ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಚುರುಕು ಬುದ್ಧಿಯುಳ್ಳ, ಆತ್ಮ, ಜ್ಞಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- ಜ್ಞಾನೋ.08:4-5
- ಜ್ಞಾನೋ.12:23-24
- ಜ್ಞಾನೋ.27:11-12

ಪದ ಡೇಟಾ:

- Strong's: H995, H5843, H6175, H6191, H6195, H7080, H7919, H7922, G4908, G5428

ಜಾಲೀಮರ

ನಿರ್ವಚನ :

“ಜಾಲೀಮರ” ಎನ್ನುವ ಪದವು ಒಂದು ಸಾಮಾನ್ಯವಾದ ಪೊದರು ಅಥವಾ ಪುರಾತನ ಕಾಲಗಳಲ್ಲಿ ಕಾನಾನ್ ದೇಶದಲ್ಲಿ ಎಲ್ಲಾ ಕಡೆಗಳಲ್ಲಿ ಸಾಮಾನ್ಯವಾಗಿ ಬೆಳೆಯುವ ಮರವಾಗಿರುತ್ತದೆ; ಅದು ಈಗಲೂ ಕೂಡ ಆ ಪ್ರಾಂತ್ಯದಲ್ಲಿ ಅತೀ ಹೆಚ್ಚಾಗಿ ಬೆಳೆಯುತ್ತಿರುವ ಮರವಾಗಿರುತ್ತದೆ.

- ಜಾಲೀಮರದ ಕಿತ್ತಳೆ ಕಂದು ಬಣ್ಣದಲ್ಲಿರುವ ಕಟ್ಟಿಗೆ ತುಂಬಾ ಗಟ್ಟಿಯಾಗಿರುತ್ತದೆ ಮತ್ತು ಅದು ಹೆಚ್ಚಿನ ಕಾಲ ಬಾಳಿಕೆ ಬರುವ ಕಟ್ಟಿಗೆಯಾಗಿರುತ್ತದೆ, ನಿರ್ಮಾಣಕ್ಕಾಗಿ ಈ ಮರದ ಕಟ್ಟಿಗೆ ಉಪಯೋಗಕರವಾಗಿರುತ್ತದೆ.
- ಈ ಕಟ್ಟಿಗೆ ಅಷ್ಟು ಸುಲಭವಾಗಿ ಸವೆದು ಹೋಗುವುದಿಲ್ಲ ಯಾಕಂದರೆ ಇದು ನೀರನ್ನು ಹೊರ ಇರಿಸುವ ಸಾಂದ್ರತೆಯನ್ನು ಹೊಂದಿರುತ್ತದೆ ಮತ್ತು ಇದು ನಾಶವಾಗದಂತೆ ನಾಶಪಡಿಸುವ ಕ್ರಿಮಿ ಕೀಟಕಗಳನ್ನು ಹೊರ ಇರಿಸುತ್ತದೆ ಮತ್ತು ಇದು ಸ್ವಾಭಾವಿಕವಾಗಿ ಸ್ವಯಂ ಸಂರಕ್ಷಣೆಯ ಗುಣವನ್ನು ಹೊಂದಿರುತ್ತದೆ.
- ಸತ್ಯವೇದದಲ್ಲಿ ಜಾಲೀಮರವನ್ನು ಗುಡಾರವನ್ನು ನಿರ್ಮಿಸುವುದಕ್ಕಾಗಿ ಮತ್ತು ಒಡಂಬಡಿಕೆಯ ಮಂಜೂಷವನ್ನು ಮಾಡುವುದಕ್ಕಾಗಿ ಉಪಯೋಗಿಸಿದರು.

(ಅನುವಾದ ಸಲಹೆಗಳು : /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : /ಒಡಂಬಡಿಕೆಯ ಮಂಜೂಷ, /ಗುಡಾರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.10:3-4
- ವಿಮೋ.25:3-7
- ವಿಮೋ.38:6-7
- ಯೆಶಯಾ.41:19-20

ಪದ ಡೇಟಾ:

- Strong's: H7848

ಜಾವೆ (ಸತ್ಯವೇದದ ಸಮಯ), ಜಾವೆಗಳು

ಪದದ ಅರ್ಥವಿವರಣೆ

ಸತ್ಯವೇದ ಕಾಲದಲ್ಲಿ, "ಜಾವೆ" ಎಂದರೆ ರಾತ್ರಿಯ ಸಮಯದಲ್ಲಿ ಕಾವಲುಗಾರನು ಪಟ್ಟಣವನ್ನು ಶತ್ರುಗಳಿಂದ ಯಾವ ಅಪಾಯವು ಬರದಂತೆ ಕಾಯುವುದನ್ನು ಸೂಚಿಸುತ್ತದೆ.

- ಹಳೆಯ ಒಡಂಬಡಿಕೆಯಲ್ಲಿ, ಇಸ್ರಾಯೇಲರಿಗೆ ಮೂರು ಜಾವೆಗಳಿದ್ದವು, ಅವುಗಳನ್ನು "ಪ್ರಾರಂಭ ಜಾವೆ" (ಸೂರ್ಯಾಸ್ತದಿಂದ ರಾತ್ರಿ 10ರ ವರೆಗೆ), "ಮಧ್ಯ ಜಾವೆ" (ರಾತ್ರಿ 10 ರಿಂದ 2ರ ವರೆಗೆ) ಮತ್ತು "ಬೆಳಗಿನ ಜಾವೆ" (ಬೆಳಗ್ಗೆ 2 ರಿಂದ ಸೂರ್ಯೋದಯದ ವರೆಗೆ).
- ಹೊಸ ಒಡಂಬಡಿಕೆಯಲ್ಲಿ, ಯಹೂದಿಯರು ರೋಮಾ ಪದ್ಧತಿಯನ್ನು ಅನುಸರಿಸಿದರು ಮತ್ತು ಅವರಿಗೆ ನಾಲ್ಕು ಜಾವೆಗಳಿದ್ದವು, ಅವುಗಳ ಹೆಸರುಗಳು "ಮೊದಲನೆಯ ಜಾವೆ" (ಸೂರ್ಯಾಸ್ತದಿಂದ ರಾತ್ರಿ 9ರ ವರೆಗೆ), "ಎರಡನೇಯ ಜಾವೆ" (ರಾತ್ರಿ 9 ರಿಂದ 12 ರ ವರೆಗೆ), "ಮೂರನೇಯ ಜಾವೆ" (ಮಧ್ಯರಾತ್ರಿ 12 ರಿಂದ ಬೆಳಗ್ಗೆ 3 ರ ವರೆಗೆ) ಮತ್ತು "ನಾಲ್ಕನೆಯ ಜಾವೆ" (ಬೆಳಗ್ಗೆ 3 ರಿಂದ ಸೂರ್ಯೋದಯದ ವರೆಗೆ).
- ಇಲ್ಲಿ ಯಾವ ಜಾವೆಯನ್ನು ಸೂಚಿಸುತ್ತಿದ್ದರೋ ಎಂದು ಹೇಳಲು "ಸಂಜೆಯ ಸಮಯ" ಅಥವಾ "ಮಧ್ಯರಾತ್ರಿ" ಅಥವಾ "ಬೆಳಗ್ಗೆ" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಗಡಿಯಾರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.12:37-38
- ಆದಿ.06:48-50
- ಆದಿ14:25-27
- ಆದಿ.090:3-4

ಪದ ಡೇಟಾ:

- Strong's: H821, G5438

ಜಿಂಕೆ, ಹೆಣ್ಣು ಜಿಂಕೆ, ಹೆಣ್ಣು ಜಿಂಕೆಗಳು, ಜಿಂಕೆ ಮರಿಗಳು, ಗಂಡು ಜಿಂಕೆ, ಗಂಡು ಜಿಂಕೆಗಳು

ಪದದ ಅರ್ಥವಿವರಣೆ:

ಜಿಂಕೆ ಎನ್ನುವುದು ಪರ್ವತಗಳ ಮೇಲೆ ಅಥವಾ ಅಡವಿಗಳಲ್ಲಿ ಜೀವಿಸುವ ದೊಡ್ಡದಾದ, ಸುಂದರವಾದ ನಾಲ್ಕು ಕಾಲುಗಳುಳ್ಳ ಪ್ರಾಣಿ. ಗಂಡು ಜಿಂಕೆಯ ತಲೆಯ ಮೇಲೆ ದೊಡ್ಡ ಕೊಂಬುಗಳು ಅಥವಾ ಉದುರುಗೊಂಬುಗಳು ಇರುತ್ತವೆ.

- ಆಂಗ್ಲದಲ್ಲಿ "doe" (ಡೋ) ಎನ್ನುವ ಪದವು “ಹೆಣ್ಣು ಜಿಂಕೆ”ಯನ್ನು ಸೂಚಿಸುತ್ತದೆ ಮತ್ತು "fawn" (ಫಾನ್) ಎನ್ನುವ ಆಂಗ್ಲ ಪದವು ಜಿಂಕೆಯ ಮರಿಯನ್ನು ಸೂಚಿಸುತ್ತದೆ.
- ಆಂಗ್ಲ ಭಾಷೆಯಲ್ಲಿರುವ "buck" (ಬಕ್) ಎನ್ನುವ ಪದವು ಗಂಡು ಜಿಂಕೆಯನ್ನು ಸೂಚಿಸುತ್ತದೆ.
- "roebuck" (ರೋಬಕ್) ಎನ್ನುವ ಆಂಗ್ಲ ಪದವು "roedeer" (ರೋಡೀರ್) ಎಂದು ಕರೆಯಲ್ಪಡುವ ಗಂಡು ಜಿಂಕೆಯನ್ನು ಸೂಚಿಸುತ್ತದೆ.
- ಜಿಂಕೆಗೆ ಬಲವುಳ್ಳ ತೆಳುವಾದ ಕಾಲುಗಳು ಇರುತ್ತವೆ, ಈ ಬಲವಾದ ಕಾಲುಗಳ ಸಹಾಯದಿಂದಲೇ ಅವು ತುಂಬಾ ವೇಗವಾಗಿ ಓಡುತ್ತವೆ ಮತ್ತು ಜಿಗಿಯುತ್ತವೆ.
- ಅವುಗಳ ಪಾದಗಳು ಒಡೆದುಹೋಗಿರುವಂತೆ ಇರುತ್ತವೆ, ಇದರಿಂದಲೇ ಅವು ಅತೀ ಎತ್ತರವಾದ ಸ್ಥಳಗಳಿಗೆ ಕೂಡ ಏರುತ್ತವೆ ಅಥವಾ ನಡೆಯುತ್ತವೆ.

(ಅನುವಾದ ಸಲಹೆಗಳು: ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.22:34-35
- ಆದಿ.49:19-21
- ಯೋಬ.39:1-2
- ಕೀರ್ತನೆ.018:33-34
- ಪರಮ.02:7

ಪದ ಡೇಟಾ:

- Strong's: H354, H355, H365, H3180, H3280, H6643, H6646

ಜೀವ ಬಾಧ್ಯರ ಪುಸ್ತಕ

ಪದದ ಅರ್ಥವಿವರಣೆ:

“ಜೀವ ಬಾಧ್ಯರ ಪುಸ್ತಕ” ಎನ್ನುವ ಮಾತು ದೇವರು ವಿಮೋಚಿಸಿದ ಮತ್ತು ನಿತ್ಯಜೀವವನ್ನು ಕೊಟ್ಟ ಜನರ ಹೆಸರುಗಳನ್ನು ಆತನು ಬರೆದಿರುವ ಪುಸ್ತಕವನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

- ಪ್ರಕಟನೆ ಗ್ರಂಥವು ಈ ಪುಸ್ತಕವನ್ನು “ಕುರಿಮರಿಯಾದಾತನ ಬಳಿಯಲ್ಲಿರುವ ಜೀವ ಬಾಧ್ಯರ ಪುಸ್ತಕ” ಎಂದು ಸೂಚಿಸುತ್ತದೆ. ಇದನ್ನು “ದೇವರ ಕುರಿಮರಿಯಾದ ಯೇಸುವಿಗೆ ಸಂಬಂಧಪಟ್ಟ ಜೀವ ಬಾಧ್ಯರ ಪುಸ್ತಕ” ಎಂದೂ ಅನುವಾದ ಮಾಡಬಹುದು. ಜನರ ಪಾಪಗಳಿಗೋಸ್ಕರ ಶಿಲುಬೆಯಲ್ಲಿ ಯೇಸುವಿನ ಬಲಿದಾನವು ದಂಡನೆಯನ್ನು ಸಲ್ಲಿಸಿದೆ. ಆದ್ದರಿಂದ ಯಾರೇ ಆಗಲಿ ಆತನಲ್ಲಿ ನಂಬಿಕೆಯನ್ನಿಡುವುದರ ಮೂಲಕ ನಿತ್ಯಜೀವವನ್ನು ಹೊಂದಿಕೊಳ್ಳಬಹುದು.
- “ಪುಸ್ತಕ” ಎನ್ನುವ ಪದವು “ಸುರುಳಿ” ಅಥವಾ “ಪತ್ರ” ಅಥವಾ “ಬರವಣಿಗೆ” ಅಥವಾ “ಕಾನೂನು ದಾಖಲೆ” ಎಂದೂ ಅರ್ಥವನ್ನು ಕೊಡುತ್ತದೆ. ಇದು ಅಕ್ಷರಾರ್ಥವಾಗಿರಬಹುದು ಅಥವಾ ಅಲಂಕಾರ ರೂಪದಲ್ಲಿರಬಹುದು.

(ಈ ಪದಗಳನ್ನು ಸಹ ನೋಡಿರಿ : ನಿತ್ಯಜೀವ, ಕುರಿಮರಿ, ಜೀವ, ಬಲಿ, ಸುರುಳಿ)

ಸತ್ಯವೇದದ ವಾಕ್ಯಗಳು :

- ಫಿಲಿಪ್ಪ 4:3
- ಕೀರ್ತನೆ 69:28-29
- ಪ್ರಕ 3:5-6
- ಪ್ರಕ 20:11-12

ಪದ ಡೇಟಾ:

- Strong's: H2416, H5612, G9760, G22220

ಜೀವಿ, ಸೃಷ್ಟಿ

ಪದದ ಅರ್ಥವಿವರಣೆ:

“ಜೀವಿ” ಎನ್ನುವ ಪದ ದೇವರು ಸೃಷ್ಟಿಸಿದ ಜೀವಂತವಾಗಿರುವ ಪ್ರತಿಯೊಂದನ್ನು ಸೂಚಿಸುತ್ತದೆ, ಅದರಲ್ಲಿ ಮನುಷ್ಯರು ಇರುತ್ತಾರೆ ಮತ್ತು ಪ್ರಾಣಿಗಳು ಇರುತ್ತವೆ.

- ದೇವರ ಮಹಿಮೆಯಲ್ಲಿ “ಜೀವಂತವಾದ ಜೀವಿಗಳನ್ನು,” ತನ್ನ ದರ್ಶನದಲ್ಲಿ ನೋಡಿದ್ದಾನೆಂದು ಪ್ರವಾದಿಯಾದ ಯೆಹೆಜ್ಕೇಲನು ವಿವರಿಸುತ್ತಿದ್ದಾನೆ. ಅವುಗಳು ಏನೆಂದು ಅವನಿಗೆ ತಿಳಿದಿರಲಿಲ್ಲ, ಆದಕಾರಣ ಅವುಗಳಿಗೆ ಅವನು ಈ ಸಾಮಾನ್ಯವಾದ ಹೆಸರು ಕೊಟ್ಟನು.
- “ಸೃಷ್ಟಿ” ಎನ್ನುವ ಪದಕ್ಕೆ ಬೇರೊಂದು ಅರ್ಥವಿದೆ, ಯಾಕಂದರೆ ಅದರಲ್ಲಿ ದೇವರು ಸೃಷ್ಟಿಸಿದ ಜೀವಂತವಾಗಿರುವ ಮತ್ತು ನಿರ್ಜಿವವಾಗಿರುವ ಎಲ್ಲವು (ಉದಾಹರಣೆಗೆ ಭೂಮಿ, ನೀರು ಮತ್ತು ನಕ್ಷತ್ರಗಳು) ಒಳಗೊಂಡಿವೆ ಎಂದು ಗಮನಿಸಿರಿ. “ಜೀವಿ” ಎನ್ನುವ ಪದವು ಕೇವಲ ಜೀವಂತವಾಗಿರುವವುಗಳನ್ನು ಮಾತ್ರವೇ ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಸಂಧರ್ಭಾನುಸಾರವಾಗಿ, “ಜೀವಿ” ಎನ್ನುವ ಪದವನ್ನು “ಜೀವಿಸುವ” ಅಥವಾ “ಜೀವಂತವಾಗಿರುವ” ಅಥವಾ “ಸೃಷ್ಟಿಸಲ್ಪಟ್ಟ ಜೀವಿ” ಎಂದು ಅನುವಾದ ಮಾಡಬಹುದು.
- “ಜೀವಿಗಳು” ಎನ್ನುವ ಪದವನ್ನು “ಜೀವಿಸುವ ಎಲ್ಲಾ ಪ್ರಾಣಿಗಳು” ಅಥವಾ “ಜನರು ಮತ್ತು ಪ್ರಾಣಿಗಳು” ಅಥವಾ “ಪ್ರಾಣಿಗಳು” ಅಥವಾ “ಮನುಷ್ಯರು” ಎಂದು ಅನುವಾದ ಮಾಡಬಹುದು.

(ಈ ಪದಗವನ್ನು ಸಹ ನೋಡಿರಿ : ಸೃಷ್ಟಿಸು)

ಸತ್ಯವೇದದ ವಾಕ್ಯಗಳು:

- ದಾನಿ 4:10-12
- ಯೆಹೆ 1:9
- ಯೆಹೋ 10:28
- ಯಾಜಕ 11:46-47
- ಪ್ರಕ 19:4

ಪದ ಡೇಟಾ:

- Strong's: H1320, H1321, H1870, H2119, H2416, H4639, H5315, H5971, H7430, H8318, G22260, G29370, G29380

ಜುಡಾಯಿಸಮ್, ಯೆಹೂದ್ಯ ಧರ್ಮ

ಪದದ ಅರ್ಥವಿವರಣೆ:

“ಜುಡಾಯಿಸಮ್” ಎನ್ನುವ ಪದವು ಯೆಹೂದ್ಯರು ಅನುಸರಿಸುವ ಧರ್ಮವನ್ನು ಸೂಚಿಸುತ್ತದೆ. ಇದು “ಯೆಹೂದ್ಯ ಧರ್ಮ” ಎಂಬುದಾಗಿಯೂ ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ “ಯೆಹೂದ್ಯ ಧರ್ಮ” ಎಂದು ಉಪಯೋಗಿಸಲ್ಪಟ್ಟಿದೆ, ಆದರೆ ಹೊಸ ಒಡಂಬಡಿಕೆಯಲ್ಲಿ “ಜುಡಾಯಿಸಮ್” ಎನ್ನುವ ಪದವು ಉಪಯೋಗಿಸಲ್ಪಟ್ಟಿದೆ.
- ಜುಡಾಯಿಸಮಿನಲ್ಲಿ ದೇವರು ಇಸ್ರಾಯೇಲ್ಯರಿಗೆ ವಿಧೇಯರಾಗುವುದಕ್ಕೆ ಕೊಟ್ಟ ಎಲ್ಲಾ ಹಳೇ ಒಡಂಬಡಿಕೆಯ ಧರ್ಮಶಾಸ್ತ್ರ ಮತ್ತು ನಿಯಮಗಳು ಒಳಗೊಂಡಿರುತ್ತವೆ. ಸ್ವಲ್ಪಕಾಲವಾದನನಂತರ ಯೆಹೂದ್ಯ ಧರ್ಮದಲ್ಲಿ ಅನೇಕ ಆಚಾರಗಳು ಮತ್ತು ಸಂಪ್ರದಾಯಗಳು ಕೂಡ ಸೇರಿಕೆಯಾಗಿರುತ್ತವೆ.
- ಅನುವಾದ ಮಾಡುವಾಗ, “ಯೆಹೂದ್ಯ ಧರ್ಮ” ಅಥವಾ “ಯೆಹೂದ್ಯರ ಮತ” ಎನ್ನುವ ಪದವು ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿ ಉಪಯೋಗಿಸಬಹುದು.
- “ಜುಡಾಯಿಸಮ್” ಎನ್ನುವ ಪದವು ಕೇವಲ ಹೊಸ ಒಡಂಬಡಿಕೆಯಲ್ಲಿ ಮಾತ್ರವೇ ಉಪಯೋಗಿಸಬೇಕು, ಯಾಕಂದರೆ ಅದು ಅದಕ್ಕೆ ಮುಂಚಿತವಾಗಿ ಅಸ್ತಿತ್ವದಲ್ಲಿದ್ದಿಲ್ಲ.

(ಈ ಪದಗಳನ್ನು ಸಹ ನೋಡಿರಿ : ಯೆಹೂದ್ಯ, ಧರ್ಮಶಾಸ್ತ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.01:13-14

ಪದ ಡೇಟಾ:

- Strong's: G2454

ಜೇನು, ಜೇನು ಗೂಡು

ಪದದ ಅರ್ಥವಿವರಣೆ:

“ಜೇನು” ಎನ್ನುವುದು ಜೇನು ಹುಳಗಳು ಹೂವಿನ ಮಕರಂದದಿಂದ ತೆಗೆಯುವ ಜಿಗುಟಾದ ತಿನ್ನಲು ಯೋಗ್ಯವಾದ ಸಿಹಿ ಪದಾರ್ಥವಾಗಿರುತ್ತದೆ. ಜೇನು ಗೂಡು ಎನ್ನುವುದು ಜೇನು ಹುಳಗಳು ಜೇನನ್ನು ಸಂಗ್ರಹಿಸುವ ಮೇಣದಂಥಹ ಗುಡಾಗಿರುತ್ತದೆ.

- ಜೇನು ಅನೇಕ ವಿಧಗಳಲ್ಲಿ ಕಾಣಿಸಿಕೊಳ್ಳುತ್ತದೆ, ಅದರಲ್ಲಿ ಹಳದಿ ಅಥವಾ ಕಂದು ಬಣ್ಣದಲ್ಲಿರುತ್ತದೆ.
- ಜೇನು ಅಡವಿಯಲ್ಲಿ ಹೆಚ್ಚಾಗಿ ಸಿಗುತ್ತದೆ, ಜೇನು ನೊಣಗಳು ಗೂಡು ಕಟ್ಟಿರುವ ಸ್ಥಳಗಳಲ್ಲಿ ಅಥವಾ ಮರದ ಟೊಳ್ಳುಗಳಲ್ಲಿ ಸಿಗುತ್ತದೆ. ಜೇನನ್ನು ತಿನ್ನುವುದಕ್ಕೆ ಅಥವಾ ಮಾರುವುದಕ್ಕೆ ಜನರು ಜೇನು ಗೂಡುಗಳಲ್ಲಿ ಜೇನು ನೊಣಗಳನ್ನು ಸಾಕುತ್ತಾರೆ, ಆದರೆ ಸತ್ಯವೇದದಲ್ಲಿ ದಾಖಲಿಸಿದ ಜೇನು ಬಹುಶಃ ಅಡವಿ ಜೇನಾಗಿರಬಹುದು.
- ಅಡವಿ ಜೇನನ್ನು ತಿನ್ನುವ ವಾಕ್ಯಭಾಗಗಳನ್ನು ಸತ್ಯವೇದದಲ್ಲಿ ವಿಶೇಷವಾಗಿ ಮೂವರ ಕುರಿತಾಗಿ ಹೇಳಲ್ಪಟ್ಟಿದೆ, ಅವರು ಯಾರೆಂದರೆ ಯೋನಾತಾನ, ಸಂಸೋನ ಮತ್ತು ಸ್ನಾನೀಕನಾದ ಯೋಹಾನ.
- ಸಿಹಿಯಾಗಿರುವ ಅಥವಾ ತುಂಬಾ ಸಂತೋಷಕರವಾಗಿರುವ ಯಾವುದಾದರೊಂದನ್ನು ವಿವರಿಸುವುದಕ್ಕೆ ಆಲಂಕಾರಿಕವಾಗಿ ಈ ಪದವು ಉಪಯೋಗಿಸಲ್ಪಟ್ಟಿರುತ್ತದೆ. ಉದಾಹರಣೆಗೆ, ದೇವರ ವಾಕ್ಯಗಳು ಮತ್ತು ಆತನ ಗುಣಲಕ್ಷಣಗಳು “ಜೇನಿಗಿಂತ ಸಿಹಿಯಾದದ್ದವು” ಎಂದು ಹೇಳಲ್ಪಟ್ಟಿವೆ. (ಇವುಗಳನ್ನೂ ನೋಡಿರಿ: ಒಂದೇರೀತಿಯ, ರೂಪಕಲಂಕಾರ)
- ಕೆಲವೊಂದುಸಲ್ ಒಬ್ಬ ವ್ಯಕ್ತಿಯ ಮಾತುಗಳು ಜೇನಿನಂತೆ ತುಂಬಾ ಸಿಹಿಯಾಗಿರುತ್ತವೆಯೆಂದು ವಿವರಿಸುತ್ತಾರೆ, ಆದರೆ ಆ ಮಾತುಗಳ ಫಲಿತಾಂಶವು ಮೋಸ ಮಾಡುವುದು ಮತ್ತು ಇತರರಿಗೆ ಹಾನಿ ಮಾಡುವುದು ಆಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಯೋಹಾನ (ಸ್ನಾನೀಕನು), ಯೋನಾತಾನ, ಫಿಲಿಷ್ಟಿಯನರು, ಸಂಸೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.14:1-3
- ಧರ್ಮೋ.06:3
- ವಿಮೋ.13:3-5
- ಯೆಹೋ.05:6-7
- ಜ್ಞಾನೋ.05:3-4

ಪದ ಡೇಟಾ:

- Strong's: H1706, H3293, H3295, H5317, H6688, G2781, G3192, G3193

ಜೊತೆಗಾರ, ಜೊತೆಕೆಲಸದವನು, ಸ್ನೇಹಿತ

ಸತ್ಯಾಂಶಗಳು:

"ಜೊತೆಗಾರ" ಎನ್ನುವ ಪದವು ಬೇರೊಬ್ಬರೊಂದಿಗೆ ಒಬ್ಬ ವ್ಯಕ್ತಿಯ ಸಂಗಡ ಹೋಗುವುದನ್ನು ಸೂಚಿಸುತ್ತದೆ ಅಥವಾ ಒಂದು ವಿವಾಹದದಲ್ಲಿ ಮತ್ತು ಸ್ನೇಹದಲ್ಲಿ ಯಾರಾದರೊಂದಿಗೆ ಸಹವಾಸ ಮಾಡುವುದನ್ನು ಸೂಚಿಸುತ್ತದೆ. "ಜೊತೆಕೆಲಸದವನು" ಎನ್ನುವ ಪದವು ಇತರ ವ್ಯಕ್ತಿಯೊಂದಿಗೆ ಕೆಲಸ ಮಾಡುವ ಯಾರನ್ನಾದರೂ ಸೂಚಿಸುತ್ತದೆ.

- ಜೊತೆಗಾರರು ಅನುಭವಗಳ ಮೂಲಕ ಹಾದು ಹೋಗುತ್ತಾರೆ, ಊಟವನ್ನು ಹಂಚಿಕೊಳ್ಳುತ್ತಾರೆ, ಮತ್ತು ಒಬ್ಬರನ್ನೊಬ್ಬರು ಬಲಪಡಿಸಿಕೊಂಡು ಸಹಾಯ ಮಾಡಿಕೊಳ್ಳುತ್ತಾರೆ.
- ಸಂದರ್ಭಾನುಸಾರವಾಗಿ, ಈ ಪದವನ್ನು "ಸ್ನೇಹಿತ" ಮತ್ತು "ಜೊತೆ ಪ್ರಯಾಣಿಕನು" ಅಥವಾ "ಬಲಪಡಿಸುತ್ತಾ ಇರುವ ಒಬ್ಬ ವ್ಯಕ್ತಿ" ಅಥವಾ "ಜೊತೆಯಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿ" ಎಂದು ಅರ್ಥ ಬರುವ ಪದಗಳೊಂದಿಗೆ ಅಥವಾ ಮಾತುಗಳೊಂದಿಗೆ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು:

- ಯೆಹೆ.37:16
- ಇಬ್ರಿ.01:09
- ಜ್ಞಾನೋ.02:17
- ಕೀರ್ತನೆ.038:11-12

ಪದ ಡೇಟಾ:

- Strong's: H251, H441, H2269, H2270, H2273, H2278, H3674, H3675, H4828, H7453, H7462, H7464, G2844, G3353, G4898, G4904

ಜೋಯಿಸರು

ಸತ್ಯಾಂಶಗಳು:

ಸತ್ಯವೇದದಲ್ಲಿ "ಜೋಯಿಸರು" ಎನ್ನುವ ಮಾತು ಅನೇಕಬಾರಿ ದೇವರನ್ನು ಸೇವಿಸುವ ಜನರನ್ನು ಮತ್ತು ಮೂರ್ಖತನದಿಂದಲ್ಲದೇ ಜ್ಞಾನದಿಂದ ನಡೆದುಕೊಳ್ಳುವ ಜನರನ್ನು ಸೂಚಿಸುತ್ತದೆ. ಅರಸನ ಪ್ರಾಂಗಣದಲ್ಲಿ ಭಾಗವಾಗಿ ಸೇವೆ ಮಾಡುವ ಅಸಹಜವಾದ ಜ್ಞಾನವನ್ನು ಮತ್ತು ಸಾಮರ್ಥ್ಯಗಳನ್ನು ಹೊಂದಿರುವ ಮನುಷ್ಯರನ್ನು ಸೂಚಿಸುವ ವಿಶೇಷವಾದ ಪದವಾಗಿರುತ್ತದೆ.

- ಕೆಲವೊಂದುಬಾರಿ "ಜೋಯಿಸರು" ಎನ್ನುವ ಪದವನ್ನು "ವಿವೇಕಯುತ ಮನುಷ್ಯರು" ಅಥವಾ "ತಿಳುವಳಿಕೆ ಇರುವ ಮನುಷ್ಯರು" ಎಂಬುದಾಗಿ ವಾಕ್ಯದಲ್ಲಿ ವಿವರಿಸಲ್ಪಟ್ಟಿದ್ದಾರೆ. ಈ ಪದವು ಜ್ಞಾನವುಳ್ಳವರಾಗಿ ನಡೆದುಕೊಳ್ಳುವ ಮತ್ತು ನೀತಿಯುತವಾಗಿ ಜೀವಿಸುವ ಮನುಷ್ಯರನ್ನು ಸೂಚಿಸುತ್ತದೆ, ಯಾಕಂದರೆ ಅವರು ದೇವರಿಗೆ ವಿಧೇಯರಾಗಿದ್ದರು.
- ಫರೋಹನಿಗೆ ಮತ್ತು ಇತರ ಅರಸರಿಗೆ ಸೇವೆ ಮಾಡಿದ "ಜೋಯಿಸರು" ನಕ್ಷತ್ರಗಳ ಕುರಿತಾಗಿ ಚೆನ್ನಾಗಿ ಅಧ್ಯಯನ ಮಾಡಿದ ಪಂಡಿತರಾಗಿದ್ದರು, ವಿಶೇಷವಾಗಿ ಆಕಾಶದಲ್ಲಿ ನಕ್ಷತ್ರಗಳ ಸ್ಥಾನಗಳ ನಮೂನೆಗಳಿಗಾಗಿ ವಿಶೇಷವಾದ ಅರ್ಥಗಳನ್ನು ಹುಡುಕುತ್ತಿದ್ದರು.
- ಇತರ ಜೋಯಿಸರು ಕನಸುಗಳ ಅರ್ಥಗಳನ್ನು ವಿವರಿಸುವುದಕ್ಕೆ ಇರುತ್ತಿದ್ದರು. ಉದಾಹರಣೆಗೆ, ಅರಸನಾದ ನೆಬುಕದ್ನೆಚ್ಚರನು ತನ್ನ ಬಳಿಯಿರುವ ಜೋಯಿಸರನ್ನು ಕರೆಸಿ, ತನಗೆ ಬಂದಿರುವ ಕನಸುಗಳನ್ನು ವಿವರಿಸಿ, ಅವುಗಳ ಅರ್ಥಗಳನ್ನು ಹೇಳಬೇಕೆಂದು ಆದೇಶ ಮಾಡಿದನು, ಆದರೆ ಅವರಲ್ಲಿ ಯಾರೂ ಹೇಳುವುದಕ್ಕಾಗಲಿಲ್ಲ, ದಾನಿಯೇಲನು ಮಾತ್ರವೇ ದೇವರಿಂದ ಆ ಜ್ಞಾನವನ್ನು ಪಡೆದುಕೊಂಡಿದ್ದನು.
- ಕೆಲವೊಂದುಬಾರಿ ಜೋಯಿಸರು ಕೂಡ ಮಾಯಾ ಮಂತ್ರಗಳನ್ನು ಪ್ರದರ್ಶಿಸಿದ್ದರು, ದುರಾತ್ಮಗಳ ಶಕ್ತಿಯ ಮೂಲಕ ಕಣಿ ಹೇಳಿರುತ್ತಾರೆ ಅಥವಾ ಆಶ್ಚರ್ಯ ಕಾರ್ಯಗಳನ್ನು ಮಾಡಿರುತ್ತಾರೆ.
- ಹೊಸ ಒಡಂಬಡಿಕೆಯಲ್ಲಿ ಯೇಸುವನ್ನು ಆರಾಧಿಸುವುದಕ್ಕೆ ಪೂರ್ವ ದಿಕ್ಕಿನಿಂದ ಬಂದಿರುವ ಜೋಯಿಸರು "ಜ್ಞಾನಿಗಳು" ಎಂದು ಕರೆಯಲ್ಪಟ್ಟರು, ಬಹುಶಃ ಪೂರ್ವ ದಿಕ್ಕಿನಲ್ಲಿರುವ ದೇಶದ ನಾಯಕನಿಕೆ ಸೇವೆ ಮಾಡುತ್ತಿರುವ ಪಂಡಿತರಾಗಿರಬಹುದು.
- ಇವರು ಖಂಡಿತವಾಗಿ ನಕ್ಷತ್ರಗಳನ್ನು ಅಧ್ಯಯನ ಮಾಡಿದ ಜ್ಯೋತಿಷ್ಯರಾಗಿರಬಹುದು. ಅವರು ದಾನಿಯೇಲನು ಬಾಬೆಲೋನಿಯದಲ್ಲಿರುವಾಗ ಹೇಳಿದ ಜ್ಞಾನಿಗಳ ಸಂತಾನದವರಾಗಿರಬಹುದೆಂದು ಕೆಲವುಮಂದಿ ಆಲೋಚನೆ ಮಾಡುತ್ತಿದ್ದಾರೆ.
- ಸಂದರ್ಭಾನುಸಾರವಾಗಿ, "ಜ್ಞಾನಿಗಳು" ಎನ್ನುವ ಪದವನ್ನು ""ಜ್ಞಾನಿ" ಎನ್ನುವ ಪದವನ್ನು ಉಪಯೋಗಿಸಿ ಅನುವಾದ ಮಾಡಬಹುದು ಅಥವಾ "ವರವನ್ನು ಪಡೆದ ಜನರು" ಅಥವಾ "ವಿದ್ಯಾವಂತರು" ಅಥವಾ "ಪಾಲಕನಿಗಾಗಿ ಪ್ರಾಮುಖ್ಯವಾದ ಉದ್ಯೋಗವನ್ನು ಮಾಡುತ್ತಿರುವ ಮನುಷ್ಯರನ್ನು ಸೂಚಿಸುವುದಕ್ಕೆ ಉಪಯೋಗಿಸುವ ಮಾತುಗಳನ್ನು ಉಪಯೋಗಿಸಿ ಅನುವಾದ ಮಾಡಬಹುದು.
- "ಜ್ಞಾನಿಗಳು" ಎನ್ನುವುದು ನಾಮಪದವಾಗಿರುತ್ತದೆ, "ಜ್ಞಾನಿ" ಎನ್ನುವ ಪದವನ್ನು ಸತ್ಯವೇದದಲ್ಲಿ ಯಾವರೀತಿ ಅನುವಾದ ಮಾಡಿರುತ್ತಾರೋ ಅದೇ ವಿಧಾನದಲ್ಲಿ ಅನುವಾದ ಮಾಡಬೇಕಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ದಾನಿಯೇಲ, ಕಣಿ ಹೇಳುವುದು, ಮಾಯಮಂತ್ರ, ನೆಬುಕದ್ನೆಚ್ಚರ, ಪಾಲಕ, ಜ್ಞಾನಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.27:32-34
- ದಾನಿ.02:1-2
- ದಾನಿ.02:10-11

ಪದ ಡೇಟಾ:

- Strong's: H2445, H2450, H3778, H3779, G4680

ಜ್ಞಾಪಕಾರ್ಥಕವಾಗಿ, ಜ್ಞಾಪಕಾರ್ಥವಾದ ಅರ್ಪಣೆ (ಧಾನ್ಯ ನೈವೇದ್ಯ)

ಪದದ ಅರ್ಥವಿವರಣೆ:

“ಜ್ಞಾಪಕಾರ್ಥಕವಾಗಿ” ಎನ್ನುವ ಪದವು ಯಾರಾದರೊಬ್ಬರನ್ನು ಅಥವಾ ಯಾವುದಾದರೊಂದನ್ನು ನೆನಪು ಮಾಡಿಕೊಳ್ಳುವ ಕ್ರಿಯೆಯನ್ನು ಸೂಚಿಸುತ್ತದೆ.

- ಯಾವುದಾದರೊಂದರ ಕುರಿತಾಗಿ ಅವರಿಗೆ ನೆನೆಪಿಸುವ ಯಾವುದಾದರೊಂದನ್ನು ವಿವರಿಸುವುದಕ್ಕೆ ವಿಶೇಷವಾಗಿಯೂ ಈ ಪದವನ್ನು ಉಪಯೋಗಿಸಿದ್ದಾರೆ, “ಜ್ಞಾಪಕಾರ್ಥವಾದ ಅರ್ಪಣೆ (ಧಾನ್ಯದ ನೈವೇದ್ಯ), ಸರ್ವಾಂಗಹೋಮದ “ಜ್ಞಾಪಕಾರ್ಥವಾದ ಭಾಗ” ಅಥವಾ “ಜ್ಞಾಪಕಾರ್ಥವಾದ ಕಲ್ಲುಗಳು” ಎಂದೂ ಹೇಳಲ್ಪಡುತ್ತದೆ.
- ಹಳೇ ಒಡಂಬಡಿಕೆಯಲ್ಲಿ ಜ್ಞಾಪಕಾರ್ಥವಾದ ಅರ್ಪಣೆಗಳು ಮಾಡುತ್ತಿದ್ದರು, ಇದರಿಂದ ಇಸ್ರಾಯೇಲ್ಯರೆಲ್ಲರೂ ದೇವರು ತಮಗೆ ಯಾವ ಕಾರ್ಯಗಳನ್ನು ಮಾಡಿದ್ದಾರೆಂದು ನೆನಪಿಸಿಕೊಳ್ಳುತ್ತಿದ್ದರು.
- ಜ್ಞಾಪಕಾರ್ಥವಾದ ಕಲ್ಲುಗಳನ್ನು ಹೊಂದಿರುವಂತೆ ವಿಶೇಷವಾದ ಬಟ್ಟೆಗಳನ್ನು ಧರಿಸಿಕೊಳ್ಳಬೇಕೆಂದು ದೇವರು ಇಸ್ರಾಯೇಲ್ಯರಿಗೆ ಹೇಳಿದನು. ಈ ಕಲ್ಲುಗಳ ಮೇಲೆ ಇಸ್ರಾಯೇಲ್ ಹನ್ನೆರಡು ಕುಲಗಳ ಹೆಸರುಗಳನ್ನು ಕೆತ್ತಿರುತ್ತಾರೆ. ಇವೆಲ್ಲವುಗಳೂ ಅವರ ವಿಷಯದಲ್ಲಿ ದೇವರು ಹೊಂದಿರುವ ನಂಬಿಕತ್ವವನ್ನು ನೆನಪು ಮಾಡುತ್ತವೆ.
- ಹೊಸ ಒಡಂಬಡಿಕೆಯಲ್ಲಿ ಕೊರ್ನೇಲ್ಯ ಎಂಬ ಮನುಷ್ಯನನ್ನು ದೇವರು ಘನಪಡಿಸಿದ್ದರು, ಯಾಕಂದರೆ ಈತನು ಬಡವರಿಗೆ ದಾನ ಧರ್ಮ ಕಾರ್ಯಗಳನ್ನು ಮಾಡಿದ್ದನು. ಈ ಎಲ್ಲಾ ಕಾರ್ಯಗಳನ್ನು ದೇವರ ಮುಂದೆ “ಜ್ಞಾಪಕಾರ್ಥವಾಗಿದ್ದಾವೆಂದು” ಹೇಳಲ್ಪಟ್ಟಿರುತ್ತವೆ.

ಅನುವದಾ ಸಲಹೆಗಳು:

- ಈ ಪದವನ್ನು “ಚಿರಕಾಲ ಜ್ಞಾಪನೆ” ಎಂಬುದಾಗಿಯೂ ಅನುವಾದ ಮಾಡಬಹುದು.
- “ಜ್ಞಾಪಕಾರ್ಥವಾದ ಕಲ್ಲು” ಎನ್ನುವ ಮಾತನ್ನು “(ಯಾವುದಾದರೊಂದರ) ವಿಷಯದಲ್ಲಿ ಅವರಿಗೆ ಜ್ಞಾಪಕ ಮಾಡುವ ಕಲ್ಲು” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.10:3-6
- ವಿಮೋ.12:12-14
- ಯೆಶಯಾ.66:3
- ಯೆಹೋ.04:6-7
- ಆದಿ.23:23-25

ಪದ ಡೇಟಾ:

- Strong's: H2142, H2146, G3422

ಡೇರೆ, ಡೇರೆಗಳು, ಗುಡಾರ ಮಾಡುವವರು

ಪದದ ಅರ್ಥವಿವರಣೆ:

ಡೇರೆ ಎನ್ನುವುದನ್ನು ಕಂಬಗಳ ನಿರ್ಮಾಣದ ಮೇಲೆ ಗಟ್ಟಿಯಾದ ವಸ್ತ್ರವನ್ನು ಹಾಕುವದರ ಮೂಲಕ ತಯಾರಿಸುವ ಸಾಗಿಸಲು ಸಾಧ್ಯವಾಗುವ ಗುಡಾರ ಎಂದರ್ಥ.

- ಡೇರೆಗಳು ಚಿಕ್ಕದಾಗಿರಬಹುದು, ಅದರಲ್ಲಿ ಜನರು ಮಲಗುವುದಕ್ಕೆ ಬೇಕಾದ ಸ್ಥಳವು ಇರುತ್ತದೆ, ಅಥವಾ ಅವು ದೊಡ್ಡವೂ ಆಗಿರಬಹುದು, ಇದರಲ್ಲಿ ಕುಟುಂಬವೆಲ್ಲಾ ಮಲಗುವುದಕ್ಕೆ, ಅಡುಗೆ ಮಾಡಿಕೊಳ್ಳುವುದಕ್ಕೆ, ಮತ್ತು ನಿವಾಸವಾಗಿರುವುದಕ್ಕೆ ಬೇಕಾದ ಸ್ಥಳವೂ ಇರುತ್ತದೆ.
- ಅನೇಕಮಂದಿ ಜನರಿಗೋಸ್ಕರ ಡೇರೆಗಳನ್ನು ತಮ್ಮ ನಿವಾಸ ಸ್ಥಾನಗಳನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ. ಉದಾಹರಣೆಗೆ, ಅಬ್ರಾಹಾಮನ ಕುಟುಂಬವು ಕಾನಾನ್ ಭೂಮಿಯಲ್ಲಿ ನಿವಾಸ ಮಾಡಿದ ಸಮಯವೆಲ್ಲಾ, ಅವರು ಮೇಕೆಗಳ ಕುದುಳುಗಳಿಂದ ಗಟ್ಟಿಯಾದ ಬಟ್ಟೆಗಳನ್ನು ಮಾಡಿಕೊಂಡು, ಅವುಗಳಿಂದ ದೊಡ್ಡ ದೊಡ್ಡ ಗುಡಾರಗಳನ್ನು ನಿರ್ಮಿಸಿಕೊಂಡು ನಿವಾಸವಾಗಿದ್ದರು.
- ಇಸ್ರಾಯೇಲ್ಯರು ಕೂಡ ತಾವು ಸೀನಾಯಿ ಅರಣ್ಯದಲ್ಲಿ ನಲವತ್ತು ವರ್ಷಗಳ ಕಾಲ ಸಂಚಾರ ಮಾಡುವ ಕಾಲದಲ್ಲಿ ಅವರು ಗುಡಾರಗಳಲ್ಲಿ ನಿವಾಸವಾಗಿದ್ದರು.
- ಗುಡಾರವನ್ನು ಕಟ್ಟಿರುವುದು ಕೂಡ ಒಂದು ವಿಧವಾದ ದೊಡ್ಡ ಡೇರೆಗಳಿಂದಲೇ ನಿರ್ಮಿಸಿದ್ದರು, ಇದರ ಸುತ್ತಮುತ್ತ ವಸ್ತ್ರಗಳ ತೆರೆಗಳಿಂದ ಗೋಡೆಗಳನ್ನು ಕಟ್ಟಿದ್ದರು.
- ಅಪೊಸ್ತಲನಾದ ಪೌಲನು ಸುವಾರ್ತೆಯನ್ನು ಸಾರುವುದಕ್ಕೆ ಅನೇಕ ಪಟ್ಟಣಗಳಿಗೆ ಪ್ರಯಾಣ ಮಾಡುತ್ತಿರುವಾಗ, ಆತನು ತನ್ನ ಪೋಷಣೆಗಾಗಿ ಡೇರೆಗಳನ್ನು ಒಲಿಯುವ ಕೆಲಸ ಮಾಡುತ್ತಿದ್ದನು.
- “ಡೇರೆಗಳು” ಎನ್ನುವ ಪದವು ಕೆಲವೊಂದುಬಾರಿ ಜನರು ನಿವಾಸ ಮಾಡುವ ಸ್ಥಳವನ್ನು ಸೂಚಿಸುವುದಕ್ಕೆ ಸಾಧಾರಣವಾಗಿ ಅಲಂಕಾರಿಕವಾಗಿ ಉಪಯೋಗಿಸುತ್ತಿದ್ದರು. ಇದನ್ನು “ಮನೆಗಳು” ಅಥವಾ “ನಿವಾಸಗಳು” ಅಥವಾ “ಗೃಹಗಳು” ಅಥವಾ “ದೇಹಗಳು” ಎಂದೂ ಅನುವಾದ ಮಾಡಬಹುದು. (ನೋಡಿರಿ: ಲಾಕ್ಷಣಿಕ ಪ್ರಯೋಗ)

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಕಾನಾನ್, ತೆರೆ, ಪೌಲ, ಸೀನಾಯಿ, ಗುಡಾರ, ಭೇಟಿ ಮಾಡುವ ಗುಡಾರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.05:10
- ದಾನಿ.11:44-45
- ವಿಮೋ.16:16-18
- ಆದಿ.12:8-9

ಪದ ಡೇಟಾ:

- Strong's: H167, H168, H2583, H3407, H6898

ತಂತಿವಾದ್ಯ, ತಂತಿವಾದ್ಯಕಾರ

ಪದದ ಅರ್ಥವಿವರಣೆ:

ತಂತಿವಾದ್ಯ ತಂತಿಗಳನ್ನು ಒಳಗೊಂಡಿರುವ ಉಪಕರಣವಾಗಿರುತ್ತದೆ, ಇದು ಸಹಜವಾಗಿ ಒಂದು ದೊಡ್ಡ ಚೌಕಟ್ಟಿನ ಕಟ್ಟಿಗೆಗೆ ಅನೇಕ ವಿಧವಾದ ತಂತಿಗಳನ್ನು ಒಳಗೊಂಡಿರುತ್ತದೆ.

- ಸತ್ಯವೇದ ಕಾಲಗಳಲ್ಲಿ, ತಂತಿವಾದ್ಯವನ್ನು ಮತ್ತು ಇತರ ಸಂಗೀತ ಉಪಕರಣಗಳನ್ನು ತಯಾರು ಮಾಡುವುದಕ್ಕೆ ತುರಾಯಿ ಮರದ ಕಟ್ಟಿಗೆಯನ್ನು ಉಪಯೋಗಿಸುತ್ತಿದ್ದರು.
- ತಂತಿವಾದ್ಯಗಳನ್ನು ಕೈಗಳಲ್ಲಿ ಇಟ್ಟುಕೊಂಡು, ನಡೆಯುತ್ತಾ ಬಾರಿಸುವರು.
- ಸತ್ಯವೇದದಲ್ಲಿ ಅನೇಕ ಸ್ಥಳಗಳಲ್ಲಿ ತಂತಿವಾದ್ಯಗಳು ದೇವರನ್ನು ಸ್ತುತಿಸಿ, ಆರಾಧನೆ ಮಾಡುವುದಕ್ಕೆ ಉಪಯೋಗಿಸುವ ಉಪಕರಣಗಳನ್ನಾಗಿ ದಾಖಲಿಸಿರುವರು.
- ದಾವೀದನು ತಂತಿವಾದ್ಯ ಸಂಗೀತಕ್ಕೆ ಅನುಗುಣವಾಗಿ ಅನೇಕವಾದ ಕೀರ್ತನೆಗಳನ್ನು ರಚನೆ ಮಾಡಿರುತ್ತಾನೆ.
- ಈತನು ಅರಸನಾದ ಸೌಲನಿಗೆ ತೊಂದರೆ ಕೊಡುವ ದುರಾತ್ಮನಿಂದ ಬಿಡುಗಡೆಗೊಳಿಸಿ ಸಮಾಧಾನವನ್ನುಂಟು ಮಾಡಲು ತಂತಿವಾದ್ಯದ ಸಂಗೀತವನ್ನು ಬಾರಿಸಿರುತ್ತಾನೆ,

(ಈ ಪದಗಳನ್ನು ಸಹ ನೋಡಿರಿ: ದಾವೀದ, ತುರಾಯಿ ಮರ, ಕೀರ್ತನೆ, ಸೌಲ)

ಸತ್ಯವೇದದ ವಾಕ್ಯಗಳು:

- 1 ಪೂರ್ವ 15:16-18
- ಆಮೋಸ 5:23-24
- ದಾನಿ 3:5
- ಕೀರ್ತನೆ 33:1-3
- ಪ್ರಕ 5:8

ಪದ ಡೇಟಾ:

- Strong's: H3658, H5035, H5059, H7030, G27880, G27890, G27900

ತಗ್ಗಿಸಿಕೊಂಡಿರುವುದು, ಅತಿ ಕಡಿಮೆ, ಕೆಳಮಟ್ಟ

ಪದದ ಅರ್ಥವಿವರಣೆ:

“ದೀನ ಸ್ಥಿತಿ” ಮತ್ತು “ನಮ್ರತೆ” ಎನ್ನುವ ಪದಗಳು ಬಡವರಾಗಿರುವುದನ್ನು ಅಥವಾ ಅತೀ ಕಡಿಮೆ ಸ್ಥಾನದಲ್ಲಿರುವುದನ್ನು ಸೂಚಿಸುತ್ತದೆ.
ತಗ್ಗಿಸಿಕೊಂಡಿರುವುದೆನ್ನುವುದು ದೀನ ಸ್ಥಿತಿಯನ್ನು ಹೊಂದಿರುವ ಅರ್ಥವನ್ನು ಕೊಡುತ್ತದೆ.

- ಯೇಸುವು ಕೂಡ ಇತರರಿಗೆ ಸೇವೆ ಮಾಡುವುದಕ್ಕೆ ಮತ್ತು ಮನುಷ್ಯನಾಗಿ ಬರುವುದಕ್ಕೆ ತನ್ನನ್ನು ತಾನು ಕೆಳಮಟ್ಟಕ್ಕೆ ತಗ್ಗಿಸಿಕೊಂಡಿದ್ದಾರೆ.
- ಆತನ ಜನನವು ಸಾಧಾರಣವಾಗಿದ್ದಿತ್ತು, ಆತನು ಪ್ರಾಣಿಗಳನ್ನು ಕಟ್ಟಿ ಹಾಕುವ ಸ್ಥಳದಲ್ಲಿ ಜನಿಸಿದ್ದನೇ ಹೊರತು ಅರಮನೆಯಲ್ಲಲ್ಲ.
- ತಗ್ಗಿಸಿಕೊಂಡಿರುವ ಸ್ವಭಾವವನ್ನು ಹೊಂದಿರುವುದೆಂದರೆ, ಅಹಂಭಾವಿಗಳಾಗಿ ಇರದಿರುವುದು ಎಂದರ್ಥ.
- “ತಗ್ಗಿಸಿಕೊಂಡಿರುವುದು” ಎನ್ನುವ ಮಾತನ್ನು ಅನುವಾದ ಮಾಡುವುದರಲ್ಲಿ “ದೀನತ್ವ” ಅಥವಾ “ಕೆಳಮಟ್ಟ” ಅಥವಾ “ಅಪ್ರಾಮುಖ್ಯ” ಎನ್ನುವ ಪದಗಳು ಒಳಗೊಂಡಿರುತ್ತವೆ.
- “ಕೆಳಮಟ್ಟ” ಎನ್ನುವ ಪದವನ್ನು “ದೀನತ್ವ” ಅಥವಾ “ಕಡಿಮೆ ಪ್ರಾಮುಖ್ಯತೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದೀನತೆ, ಗರ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.20:17-21
- ಯೆಹೆ.17:13-14
- ಲೂಕ.01:48-49
- ರೋಮಾ.12:14-16

ಪದ ಡೇಟಾ:

- Strong's: H6041, H6819, H8217, G5011, G5012, G5014

ತಪ್ಪಿಸು, ಬಿಡುಗಡೆ ಮಾಡುವುದು, ಬಿಡುಗಡೆ ಮಾಡಲ್ಪಟ್ಟಿದೆ, ಬಿಡುಗಡೆ ಮಾಡಲ್ಪಡುತ್ತಿದೆ, ವಿಮೋಚಕನು, ವಿಮೋಚನೆ

ಪದದ ಅರ್ಥವಿವರಣೆ:

ಒಬ್ಬರನ್ನು "ತಪ್ಪಿಸು" ಎನ್ನುವದಕ್ಕೆ ಒಬ್ಬ ವ್ಯಕ್ತಿಯನ್ನು ರಕ್ಷಿಸುವುದು ಎಂದರ್ಥ. "ವಿಮೋಚಕ" ಎನ್ನುವ ಪದವು ದಾಸತ್ವದಿಂದ, ಒತ್ತಡದಿಂದ, ಅಥವಾ ಇತರ ಅಪಾಯಕರ ಸಂಘಟನೆಗಳಿಂದ ಜನರನ್ನು ಬಿಡುಗಡೆಗೊಳಿಸುವ ಅಥವಾ ಸಂರಕ್ಷಿಸುವ ವ್ಯಕ್ತಿಯನ್ನು ಸೂಚಿಸುತ್ತದೆ. "ವಿಮೋಚನೆ" ಎನ್ನುವ ಪದವು ದಾಸತ್ವದಿಂದ, ಒತ್ತಡದಿಂದ, ಅಥವಾ ಇತರ ಅಪಾಯಕರ ಸಂಘಟನೆಗಳಿಂದ ಜನರನ್ನು ರಕ್ಷಿಸಿದಾಗ ಅಥವಾ ಬಿಡುಗಡೆಗೊಳಿಸಿದಾಗ ನಡೆಯುವ ಕಾರ್ಯವನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರ ಮೇಲೆ ಧಾಳಿ ಮಾಡುವದಕ್ಕೆ ಬಂದಿರುವ ಅನೇಕ ಜನರ ಗುಂಪುಗಳಿಗೆ ವಿರುದ್ಧವಾಗಿ ಯುದ್ದದಲ್ಲಿ ಇಸ್ರಾಯೇಲ್ಯರನ್ನು ನಡೆಸುವುದರಿಂದ ಅವರನ್ನು ಸಂರಕ್ಷಿಸುವುದಕ್ಕೆ ದೇವರು ವಿಮೋಚಕರನ್ನು ನೇಮಿಸಿದ್ದನು.
- ಈ ವಿಮೋಚಕರೆಲ್ಲರನ್ನು "ನ್ಯಾಯಾಧೀಶರು" ಎಂದು ಕರೆಯುತ್ತಿದ್ದರು ಮತ್ತು ನ್ಯಾಯಾಧೀಶರು ಎನ್ನುವ ಹಳೇ ಒಡಂಬಡಿಕೆಯ ಪುಸ್ತಕದಲ್ಲಿ ನ್ಯಾಯಾಧೀಶರು ಇಸ್ರಾಯೇಲ್ಯರನ್ನು ಆಳಿದ ಚರಿತ್ರೆಯೆಲ್ಲವನ್ನು ದಾಖಲಿಸಿದ್ದಾರೆ.
- ದೇವರು ಕೂಡ "ವಿಮೋಚಕನು" ಎಂದು ಕರೆಯಲ್ಪಟ್ಟಿದ್ದಾನೆ." ಇಸ್ರಾಯೇಲ್ ಚರಿತ್ರೆಯಲ್ಲೆಲ್ಲಾ ಆತನು ಶತ್ರುಗಳಿಂದ ತನ್ನ ಜನರನ್ನು ಸಂರಕ್ಷಿಸಿದನು ಅಥವಾ ವಿಮೋಚಿಸಿದನು.
- "ಬಿಡುಗಡೆಗೊಳಿಸು" ಅಥವಾ "ತಲುಪಿಸು" ಎನ್ನುವ ಮಾತು ಶತ್ರುವಿಗೆ ಯಾರಾದರೊಬ್ಬರನ್ನು ಒಪ್ಪಿಸಿಕೊಡುವುದೆನ್ನುವ ವಿಭಿನ್ನ ಅರ್ಥವು ಇರುತ್ತದೆ, ಉದಾಹರಣೆಗೆ, ಯೂದನು ಯೇಸುವನ್ನು ಯೆಹೂದ್ಯರ ನಾಯಕರಿಗೆ ಒಪ್ಪಿಸಿಕೊಟ್ಟನು.

ಅನುವಾದ ಸಲಹೆಗಳು:

ಜನರನ್ನು ತಮ್ಮ ಶತ್ರುಗಳಿಂದ ತಪ್ಪಿಸುವುದು ಎನ್ನುವ ಸಂದರ್ಭದಲ್ಲಿ, "ತಪ್ಪಿಸು" ಎನ್ನುವ ಪದವನ್ನು "ರಕ್ಷಿಸು" ಅಥವಾ "ಸ್ವಾತಂತ್ರ್ಯಗೊಳಿಸು" ಅಥವಾ "ಸಂರಕ್ಷಿಸು" ಎಂದೂ ಅನುವಾದ ಮಾಡಬಹುದು.

- ಶತ್ರುಗಳಿಗೆ ಯಾರಾದರೊಬ್ಬರನ್ನು ಬಿಡುಗಡೆಗೊಳಿಸು ಎನ್ನುವ ಅರ್ಥದಲ್ಲಿ "ತಲುಪಿಸು" ಎನ್ನುವ ಪದಕ್ಕೆ "ದ್ರೋಹ ಮಾಡು" ಅಥವಾ "ಕೈಗೆ ಒಪ್ಪಿಸು" ಅಥವಾ "ಕೊಡು" ಎಂದೂ ಅನುವಾದ ಮಾಡಬಹುದು.
- "ವಿಮೋಚಕನು" ಎನ್ನುವ ಪದವನ್ನು "ಸಂರಕ್ಷಿಸುವಾತನು" ಅಥವಾ "ಸ್ವಾತಂತ್ರ್ಯಗೊಳಿಸುವಾತನು" ಎಂದೂ ಅನುವಾದ ಮಾಡಬಹುದು.
- "ವಿಮೋಚಕನು" ಎನ್ನುವ ಪದವು ಇಸ್ರಾಯೇಲ್ಯರನ್ನು ನಡೆಸುವ ನ್ಯಾಯಾಧೀಶರನ್ನು ಸೂಚಿಸಿದಾಗ, ಈ ಪದವನ್ನು "ಪಾಲಕರು" ಅಥವಾ "ನ್ಯಾಯಾಧೀಶರು" ಅಥವಾ "ನಾಯಕನು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನ್ಯಾಯಾಧೀಶರು, ರಕ್ಷಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಕೊರಿಂಥ.01:8-10
- ಅಪೊ.ಕೃತ್ಯ.07:35-37
- ಗಲಾತ್ಯ.01:3-5
- ನ್ಯಾಯಾ.10:10-12

ಸತ್ಯವೇದದಿಂದ ಉದಾಹರಣೆಗಳು:

- **16:03** ದೇವರು ತಮ್ಮ ಶತ್ರುಗಳಿಂದ ರಕ್ಷಿಸುವುದಕ್ಕೆ _ **ವಿಮೋಚಕನನ್ನು** _ ಅನುಗ್ರಹಿಸಿದನು ಮತ್ತು ಅವರನ್ನು ಸಮಾಧಾನ ಭೂಮಿಗೆ ಕರೆದುಕೊಂಡುಬಂದನು.
- **16:16** ಅವರು (ಇಸ್ರಾಯೇಲ್ಯರು) ಕೊನೆಗೆ ಸಹಾಯಕ್ಕಾಗಿ ದೇವರನ್ನು ಬೇಡಿಕೊಂಡರು, ಮತ್ತು ದೇವರು ಅವರಿಗೋಸ್ಕರ ಇನ್ನೊಬ್ಬ _ **ವಿಮೋಚಕನನ್ನು** _ ಕಳುಹಿಸಿದರು.
- **16:17** ಅನೇಕ ವರ್ಷಗಳಾದನಂತರ, ದೇವರು ಶತ್ರುಗಳಿಂದ ಇಸ್ರಾಯೇಲ್ಯರನ್ನು ಬಿಡುಗಡೆಗೊಳಿಸಲು ಅನೇಕ _ **ವಿಮೋಚಕರನ್ನು** _ ಕಳುಹಿಸಿದರು.

ಪದ ಡೇಟಾ:

- Strong's: H579, H1350, H2020, H2502, H3052, H3205, H3444, H3467, H4042, H4422, H4560, H4672, H5337, H5338, H5414, H5462, H6299, H6308, H6403, H6405, H6413, H6475, H6487, H6561, H7725, H7804, H8000,

H8199, H8668, G325, G525, G629, G859, G1080, G1325, G1560, G1659, G1807, G1929, G2673, G3086, G3860, G4506, G4991, G5088, G5483

ತಪ್ಪು, ತಪ್ಪುಗಳು, ತಪ್ಪು ಮಾಡಿದೆ, ತಪ್ಪಾಗಿ, ತಪ್ಪಿನಿಂದ, ತಪ್ಪು ಮಾಡುವವನು, ತಪ್ಪು ಮಾಡುವುದು, ದುಷ್ಕೃತ್ಯ, ದುಷ್ಕೃತ್ಯ ಮಾಡಲಾಗಿದೆ, ನೋಯಿಸು, ನೋಯಿಸುವುದು, ನೋಯಿಸುತ್ತಿರುವುದು, ಹಾನಿಕರ

ಪದದ ಅರ್ಥವಿವರಣೆ:

ಯಾರಾದರೊಬ್ಬರೊಂದಿಗೆ "ತಪ್ಪು" ಮಾಡುವುದೆನ್ನುವುದು ಎಂದರೆ ಆ ವ್ಯಕ್ತಿಯೊಂದಿಗೆ ಅನ್ಯಾಯವಾಗಿ ಮತ್ತು ವಂಚನೆಯಿಂದ ನಡೆದುಕೊಳ್ಳುವುದು ಎಂದರ್ಥ.

- "ದುಷ್ಕೃತ್ಯ" ಎನ್ನುವ ಪದಕ್ಕೆ ಯಾರಾದರೊಬ್ಬರೊಂದಿಗೆ ಕೆಟ್ಟದ್ದಾಗಿ ನಡೆದುಕೊಳ್ಳುವುದು ಅಥವಾ ಒರಟಾಗಿ ನಡೆದುಕೊಳ್ಳುವುದು ಎಂದರ್ಥ, ಆ ವ್ಯಕ್ತಿಗೆ ಮಾನಸಿಕವಾಗಿ ಅಥವಾ ಭೌತಿಕವಾಗಿ ಹಾನಿಯನ್ನುಂಟು ಮಾಡುವುದು ಎಂದರ್ಥ.
- "ನೋಯಿಸು" ಎನ್ನುವ ಪದವು ಸರ್ವಸಾಧಾರಣವಾದ ಪದವಾಗಿರುತ್ತದೆ ಮತ್ತು "ಯಾವುದಾದರೊಂದರ ರೂಪದಲ್ಲಿ ಆ ವ್ಯಕ್ತಿಯನ್ನು ನೋಯಿಸುವುದು" ಎಂದರ್ಥವಾಗಿರುತ್ತದೆ. ಈ ಮಾತಿಗೆ ಅನೇಕಬಾರಿ "ಭೌತಿಕವಾಗಿ ಗಾಯವನ್ನುಂಟು" ಮಾಡುವುದು ಎಂದರ್ಥ.
- ಸಂದರ್ಭಾನುಸಾರವಾಗಿ ಈ ಮಾತುಗಳನ್ನು "ತಪ್ಪನ್ನು ಮಾಡು" ಅಥವಾ "ಅನ್ಯಾಯವಾಗಿ ನಡೆದುಕೋ" ಅಥವಾ "ಹಾನಿಯನ್ನುಂಟು ಮಾಡು" ಅಥವಾ "ಹಾನಿಯನ್ನುಂಟು ಮಾಡುವ ವಿಧಾನದಲ್ಲಿ ನಡೆದುಕೊಳ್ಳುವುದು" ಅಥವಾ "ಗಾಯವನ್ನುಂಟು ಮಾಡುವುದು" ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:26-28
- ವಿಮೋ.22:20-21
- ಆದಿ.16:5-6
- ಲೂಕ.06:27-28
- ಮತ್ತಾಯ.20:13-14
- ಕೀರ್ತನೆ.071:12-13

ಪದ ಡೇಟಾ:

- Strong's: H205, H816, H2248, H2250, H2255, H2257, H2398, H2554, H2555, H3238, H3637, H4834, H5062, H5142, H5230, H5627, H5753, H5766, H5791, H5792, H5916, H6031, H6087, H6127, H6231, H6485, H6565, H6586, H7451, H7489, H7563, H7665, H7667, H7686, H8133, H8267, H8295, G91, G92, G93, G95, G264, G824, G983, G984, G1536, G1626, G1651, G1727, G1908, G2556, G2558, G2559, G2607, G3076, G3077, G3762, G4122, G5195, G5196

ತಲೆ

ಪದದ ಅರ್ಥವಿವರಣೆ:

“ತಲೆ” ಎಂಬ ಪದವು ಕುತ್ತಿಗೆಯ ಮೇಲಿರುವ ಮಾನವ ದೇಹದ ಮೇಲ್ಭಾಗದ ದೇಹದ ಭಾಗವನ್ನು ಸೂಚಿಸುತ್ತದೆ. ಈ ಪದವನ್ನು "ಉನ್ನತ," "ಮೊದಲ," "ಪ್ರಾರಂಭ," "ಮೂಲ" ಮತ್ತು ಇತರ ಪರಿಕಲ್ಪನೆಗಳು ಸೇರಿದಂತೆ ಅನೇಕ ವಿಭಿನ್ನ ವಿಷಯಗಳನ್ನು ಅರ್ಥೈಸಲು ಸಾಂಕೇತಿಕವಾಗಿ ಬಳಸಲಾಗುತ್ತದೆ.

"ತಲೆ" ಎಂಬ ಪದದ ವಿವಿಧ ಬಳಕೆಯ ಕೆಲವು ಉದಾಹರಣೆಗಳೆಂದರೆ:

- “ಯಾವುದೇ ನಾಜೀರನು ಎಂದಿಗೂ ಅವನ ತಲೆಯನ್ನು ಮುಟ್ಟುವುದಿಲ್ಲ” ಎಂಬ ಅಭಿವ್ಯಕ್ತಿಯ ಅರ್ಥ ಅವನು ಎಂದಿಗೂ ತನ್ನ ಕೂದಲನ್ನು ಕತ್ತರಿಸಬಾರದು ಅಥವಾ ಕ್ಷೌರ ಮಾಡಬಾರದು.
- “ಅವರ ರಕ್ತವು ಅವನ ತಲೆಯ ಮೇಲೆ ಇರಲಿ” ಎಂಬ ಅಭಿವ್ಯಕ್ತಿಯ ಅರ್ಥವೇನೆಂದರೆ, ಅವರ ಸಾವಿಗೆ ಮನುಷ್ಯನು ಜವಾಬ್ದಾರನಾಗಿರುತ್ತಾನೆ ಮತ್ತು ಅದಕ್ಕಾಗಿ ಶಿಕ್ಷೆಯನ್ನು ಪಡೆಯುತ್ತಾನೆ.
- “ಧಾನ್ಯದ ಮುಖ್ಯಸ್ಥರು” ಎಂಬ ಅಭಿವ್ಯಕ್ತಿ ಬೀಜಗಳನ್ನು ಒಳಗೊಂಡಿರುವ ಗೋಧಿ ಅಥವಾ ಬಾರ್ಲಿ ಸಸ್ಯಗಳ ಮೇಲಿನ ಭಾಗವನ್ನು ಸೂಚಿಸುತ್ತದೆ. ಅಂತೆಯೇ, "ಪರ್ವತದ ತಲೆ" ಎಂಬ ಅಭಿವ್ಯಕ್ತಿ ಪರ್ವತದ ಮೇಲಿನ ಭಾಗವನ್ನು ಸೂಚಿಸುತ್ತದೆ.
- “ತಲೆ” ಎಂಬ ಪದವು ಯಾವುದನ್ನಾದರೂ ಪ್ರಾರಂಭ ಅಥವಾ ಮೂಲವನ್ನು ಸಹ ಸೂಚಿಸುತ್ತದೆ, ಅಥವಾ ವಸ್ತುಗಳ ಸರಣಿಯಲ್ಲಿ ಮೊದಲನೆಯದು (ವಸ್ತುಗಳು ಅಥವಾ ಜನರು ಆಗಿರಬಹುದು).
- ಸಾಮಾನ್ಯವಾಗಿ "ತಲೆ" ಎಂಬ ಪದವು ಒಂದು ಗುಂಪಿನ ಪ್ರಮುಖ ವ್ಯಕ್ತಿ ಅಥವಾ ಇತರರ ಮೇಲೆ ಅಧಿಕಾರ ಹೊಂದಿರುವ ವ್ಯಕ್ತಿಯನ್ನು ಸೂಚಿಸುತ್ತದೆ. ಉದಾಹರಣೆಗೆ, “ನೀವು ನನ್ನನ್ನು ರಾಷ್ಟ್ರಗಳ ಮುಖ್ಯಸ್ಥರನ್ನಾಗಿ ಮಾಡಿದ್ದೀರಿ” ಎಂಬ ಪದದ ಅರ್ಥ “ನೀವು ನನ್ನನ್ನು ಆಡಳಿತಗಾರನನ್ನಾಗಿ ಮಾಡಿದ್ದೀರಿ...” ಅಥವಾ “ನೀವು ನನಗೆ ಅಧಿಕಾರ ನೀಡಿದ್ದೀರಿ....”

ಅನುವಾದ ಸಲಹೆಗಳು:

- ಸಂದರ್ಭಾನುಗುಣವಾಗಿ “ತಲೆ” ಎನ್ನುವ ಪದವನ್ನು “ಅಧಿಕಾರ” ಅಥವಾ “ನಿರ್ದೇಶಿಸುವ ಮತ್ತು ಮಾರ್ಗದರ್ಶನ ಮಾಡುವ ವ್ಯಕ್ತಿ” ಅಥವಾ “ಜವಾಬ್ದಾರಿ ವಹಿಸುವ ವ್ಯಕ್ತಿ” ಎಂದೂ ಅನುವಾದ ಮಾಡಬಹುದು.
- “ತನ್ನ ಸ್ವಂತ ತಲೆಯ ಮೇಲೆ ಇರಲಿ” ಎನ್ನುವ ಮಾತನ್ನು “ಆತನ ಮೇಲೆ ಇರಲಿ” ಅಥವಾ “ಅವನು ಮಾಡಿದ್ದಕ್ಕಾಗಿ ಅವನೇ ಶಿಕ್ಷೆ ಹೊಂದಲಿ” ಅಥವಾ “ಅವನು ಅದಕ್ಕೆ ಜವಾಬ್ದಾರಿಯನ್ನು ಹೊಂದಲಿ” ಅಥವಾ “ಅವನು ಅಪರಾಧಿಯೆಂದು ಪರಿಗಣಿಸಲಾಗಿದೆ” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಗುಣವಾಗಿ ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಆರಂಭ” ಅಥವಾ “ಆಧಾರ” ಅಥವಾ “ಪಾಲಕ” ಅಥವಾ “ನಾಯಕ” ಅಥವಾ “ಮೇಲೆ” ಎನ್ನುವ ಪದಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ: ಧಾನ್ಯ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.01:51-54
- 1 ಅರಸ.08:1-2
- 1 ಸಮು.09:22
- ಕೊಲೊಸ್ಸೆ.02:10
- ಕೊಲೊಸ್ಸೆ.02:19
- ಅರಣ್ಯ.01:04

ಪದ ಡೇಟಾ:

- Strong's: H441, H1270, H1538, H3852, H4425, H4761, H4763, H5110, H5324, H6285, H6287, H6797, H6915, H6936, H7139, H7144, H7146, H7217, H7226, H7218, H7541, H7636, H7641, H7872, G346, G755, G2775, G2776, G4719

ತಿಂಗಳು, ತಿಂಗಳುಗಳು, ಮಾಸಿಕ

ಪದದ ಅರ್ಥವಿವರಣೆ

“ತಿಂಗಳು” ಎನ್ನುವ ಪದವು ನಾಲ್ಕು ವಾರಗಳ ಕಾಲವನ್ನು ಸೂಚಿಸುತ್ತದೆ. ಚಂದ್ರಮಾನ ದಿನಾಂಕ ಪಟ್ಟಿ ಅಥವಾ ಸೂರ್ಯನ ದಿನಾಂಕ ಪಟ್ಟಿ ಎನ್ನುವ ದಿನಾಂಕ ಪಟ್ಟಿಯಲ್ಲಿ ಯಾವುದನ್ನು ಉಪಯೋಗಿಸುತ್ತಿರುವರೋ ಅದರ ಪ್ರಕಾರ ಪ್ರತಿ ತಿಂಗಳಲ್ಲಿ ಇರುವ ದಿನಗಳು ನಿರ್ಣಯಿಸಲ್ಪಡುತ್ತವೆ.

- ಚಂದ್ರಮಾನ ದಿನಾಂಕ ಪಟ್ಟಿಯಲ್ಲಿ, ಭೂಮಿಯನ್ನು ಸುತ್ತುವದಕ್ಕೆ ಚಂದ್ರನು ತೆಗೆದುಕೊಳ್ಳುವ ಸಮಯದ ಅನುಸಾರವಾಗಿ ಪ್ರತಿ ತಿಂಗಳ ಕಾಲವನ್ನು ನಿರ್ಣಯಿಸುತ್ತಾರೆ, ಅದರಲ್ಲಿ ಸುಮಾರು 29 ದಿನಗಳಿರುತ್ತವೆ. ಈ ಪದ್ಧತಿಯಲ್ಲಿ ಒಂದು ವರ್ಷಕ್ಕೆ 12 ಅಥವಾ 13 ತಿಂಗಳುಗಳಿರುತ್ತವೆ. ಒಂದು ವರ್ಷದಲ್ಲಿ 12 ಅಥವಾ 13 ತಿಂಗಳುಗಳಿದ್ದರು, ಅದು ಯಾವ ಕಾಲವೆಂದು ಸಂಬಂಧವಿಲ್ಲದೆ ಮೊದಲನೆಯ ತಿಂಗಳನ್ನು ಅದೇ ಹೆಸರಲ್ಲಿ ಕರೆಯುತ್ತಾರೆ.
- “ಅಮಾವಾಸ್ಯೆ” , ಅಥವಾ ಚಂದ್ರನ ಪ್ರಾರಂಭದ ಕಾಲದಲ್ಲಿ ಕಾಣುವ ಬೆಳ್ಳಿಯ ಗೆರೆಯ ಅನುಸಾರವಾಗಿ, ಚಾಂದ್ರಮಾನ ದಿನಾಂಕ ಪಟ್ಟಿಯಲ್ಲಿ ಪ್ರತಿ ತಿಂಗಳು ಪ್ರಾರಂಭವಾಗುತ್ತದೆ.
- ಸತ್ಯವೇದದಲ್ಲಿ ಹೇಳಲ್ಪಟ್ಟಿರುವ ತಿಂಗಳುಗಳು ಚಂದ್ರಮಾನ ದಿನಾಂಕ ಪಟ್ಟಿಯ ಅನುಸಾರವಾಗಿ ಇರುತ್ತವೆ, ಯಾಕಂದರೆ ಇಸ್ರಾಯೇಲರು ಆ ಪದ್ಧತಿಯನ್ನು ಉಪಯೋಗಿಸುತ್ತಿದ್ದರು. ಪ್ರಸ್ತುತ ಕಾಲದ ಯಹೂದಿಯರು ತಮ್ಮ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲು ಈ ದಿನಾಂಕ ಪಟ್ಟಿಯನ್ನು ಉಪಯೋಗಿಸುತ್ತಿದ್ದಾರೆ.
- ಅಧುನಿಕ ದಿನದ ಸೂರ್ಯನ ದಿನಾಂಕ ಪಟ್ಟಿ ಸೂರ್ಯನ ಸುತ್ತಲು ಭೂಮಿ ಸುತ್ತುವ ಕಾಲದ ಅನುಸಾರವಾಗಿರುತ್ತದೆ (ಸುಮಾರು 365 ದಿನಗಳು). ಈ ಪದ್ಧತಿಯಲ್ಲಿ, ಒಂದು ವರ್ಷವನ್ನು 12 ತಿಂಗಳಂತೆ ವಿಭಜಿಸುತ್ತಾರೆ, ಪ್ರತಿ ತಿಂಗಳಲ್ಲಿ 28 ರಿಂದ 31 ದಿನಗಳು ಇರುತ್ತವೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.20:32-34
- ಅಪೊ.ಕೃತ್ಯ.18:9-11
- ಇಬ್ರಿ.11:23-26
- ಅರಣ್ಯ.10:10

ಪದ ಡೇಟಾ:

- Strong's: H2320, H3391, H3393, G3376

ತಿರಸ್ಕರಿಸು, ತಿರಸ್ಕರಿಸುವುದು, ತಿರಸ್ಕರಿಸಲಾಗಿದೆ,

ಪದದ ಅರ್ಥವಿವರಣೆ:

ಯಾರಾದರೊಬ್ಬರನ್ನು ಅಥವಾ ಯಾವುದಾದರೊಂದನ್ನು "ತಿರಸ್ಕರಿಸುವುದು" ಎಂದರೆ ಆ ವಸ್ತುವನ್ನು ಅಥವಾ ಆ ವ್ಯಕ್ತಿಯನ್ನು ಅಂಗೀಕರಿಸದೇ ನಿರಾಕರಿಸು ಎಂದರ್ಥವಾಗಿರುತ್ತದೆ.

- "ತಿರಸ್ಕರಿಸು" ಎನ್ನುವ ಪದಕ್ಕೆ ಯಾವುದಾದರೊಂದನ್ನು "ನಂಬಲು ನಿರಾಕರಿಸು" ಎಂದು ಅರ್ಥೈಸುತ್ತದೆ..
- ದೇವರನ್ನು ತಿರಸ್ಕರಿಸು ಎನ್ನುವುದಕ್ಕೂ ಆತನಿಗೆ ವಿಧೇಯತೆ ತೋರಿಸಲು ನಿರಾಕರಿಸು ಎಂದು ಅರ್ಥೈಸುತ್ತದೆ..
- ಇಸ್ರಾಯೇಲ್ಯರು ಮೋಶೆಯ ನಾಯಕತ್ವವನ್ನು ತಿರಸ್ಕರಿಸಿದಾಗ, ಇದಕ್ಕೆ ಆತನ ಅಧಿಕಾರಕ್ಕೆ ವಿರುದ್ಧವಾಗಿ ಅವರೆಲ್ಲರು ತಿರುಗಿಬಿದ್ದರು ಎಂದರ್ಥ. ಅವರು ಆತನಿಗೆ ವಿಧೇಯತೆ ತೋರಿಸುವುದಕ್ಕೆ ಇಷ್ಟವಾಗುವುದಿಲ್ಲ.
- ಇಸ್ರಾಯೇಲ್ಯರು ಸುಳ್ಳು ದೇವರುಗಳನ್ನು ಆರಾಧನೆ ಮಾಡುವಾಗ ಅವರು ದೇವರನ್ನು ತಿರಸ್ಕರಿಸಿದ್ದರೆಂದು ಅವರು ಚೆನ್ನಾಗಿ ತೋರಿಸಿದ್ದಾರೆ.
- ಈ ಪದಕ್ಕೆ "ಪಕ್ಕಕ್ಕೆ ನೂಕು" ಎನ್ನುವ ಅಕ್ಷರಾರ್ಥವಾಗಿರುತ್ತದೆ. ಇತರ ಭಾಷೆಗಳಲ್ಲಿ ಯಾವುದಾದರೊಂದನ್ನು ಅಥವಾ ಯಾರಾದರೊಬ್ಬರನ್ನು ನಂಬುವುದಕ್ಕೆ ತಿರಸ್ಕರಿಸುವುದು ಅಥವಾ ನಿರಾಕರಿಸುವುದು ಎನ್ನುವ ಅರ್ಥಗಳನ್ನು ಒಂದೇ ಮಾತಿನಲ್ಲಿ ಹೇಳುತ್ತಿರುತ್ತಾರೆ.

ಅನುವಾದ ಸಲಹೆಗಳು:

- ಸಂದರ್ಭಾನುಗುಣವಾಗಿ, "ತಿರಸ್ಕರಿಸು" ಎನ್ನುವ ಪದವನ್ನು "ಅಂಗೀಕರಿಸಬೇಡ" ಅಥವಾ "ಸಹಾಯ ಮಾಡುವುದನ್ನು ನಿಲ್ಲಿಸು" ಅಥವಾ "ವಿಧೇಯತೆ ತೋರಿಸಲು ನಿರಾಕರಿಸು" ಅಥವಾ "ವಿಧೇಯತೆ ತೋರಿಸುವುದನ್ನು ನಿಲ್ಲಿಸು" ಎಂದೂ ಅನುವಾದ ಮಾಡಬಹುದು.
- "ಕಟ್ಟುವವರು ನಿರಾಕರಿಸಿದ ಕಲ್ಲು" ಎನ್ನುವ ಮಾತಿನಲ್ಲಿರುವಂತೆ, "ನಿರಾಕರಿಸಿದ" ಎನ್ನುವ ಮಾತನ್ನು "ಉಪಯೋಗಿಸುವುದಕ್ಕೆ ನಿರಾಕರಿಸಲ್ಪಟ್ಟಿದೆ" ಅಥವಾ "ಅಂಗೀಕರಿಸಿರುವುದಿಲ್ಲ" ಅಥವಾ "ಹೊರಕ್ಕೆ ಬಿಸಾಡು" ಅಥವಾ "ಬೆಲೆರಹಿತವೆಂದು ಪಕ್ಕಕ್ಕೆ ಹಾಕು" ಎಂದೂ ಅನುವಾದ ಮಾಡಬಹುದು.
- ದೇವರ ಆಜ್ಞೆಗಳನ್ನು ತಿರಸ್ಕಾರ ಮಾಡಿದ ಜನರ ಸಂದರ್ಭದಲ್ಲಿ, ತಿರಸ್ಕರಿಸಲ್ಪಟ್ಟಿರುವ ಎನ್ನುವ ಮಾತನ್ನು ಆತನ ಆಜ್ಞೆಗಳಿಗೆ "ವಿಧೇಯತೆ ತೋರಿಸುವುದಕ್ಕೆ ನಿರಾಕರಿಸುವುದು" ಅಥವಾ ದೇವರ ಆಜ್ಞೆಗಳನ್ನು "ಹಠವಾಗಿ ಅಂಗೀಕಾರ ಮಾಡದಿರುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆಜ್ಞೆ, ಅವಿಧೇಯತೆ, ವಿಧೇಯತೆ, ಹಠಮಾರಿ)

ಸತ್ಯವೇದದ ಅನುಬಂಧ ವಾಕ್ಯಗಳು:

- ಗಲಾತ್ಯ.04:12-14
- ಹೋಶೆಯ.04:6-7
- ಯೆಶಯಾ.41:09
- ಯೋಹಾನ.12:48-50
- ಮಾರ್ಕ.07:09

ಪದ ಡೇಟಾ:

- Strong's: H947, H959, H2186, H2310, H3988, H5006, H5034, H5186, H5203, H5307, H5541, H5800, G114, G483, G550, G579, G580, G593, G683, G720, G1609, G3868

ತಿರಸ್ಕಾರ, ತಿರಸ್ಕಾರಾರ್ಹ ಅಥವಾ ಹೇಯ

ಸತ್ಯಾಂಶಗಳು:

“ತಿರಸ್ಕಾರ” ಎನ್ನುವ ಪದವು ಒಬ್ಬರ ವಿಷಯದಲ್ಲಿ ಅಥವಾ ಯಾವುದಾದರೊಂದರ ವಿಷಯದಲ್ಲಿ ತೋರಿಸುವ ಅಗೌರವವನ್ನು ಮತ್ತು ಅವಮಾನವನ್ನು ಸೂಚಿಸುತ್ತದೆ. ಯಾವುದಾದರೊಂದನ್ನು ಅತೀ ಹೆಚ್ಚಾಗಿ ಅವಮಾನಕ್ಕೆ ಗುರಿಮಾಡಿದರೆ ಅದನ್ನು “ತಿರಸ್ಕಾರಾರ್ಹ” ಅಥವಾ ಹೇಯ ಎಂದು ಕರೆಯುತ್ತಾರೆ.

- ದೇವರ ವಿಷಯದಲ್ಲಿ ಮನುಷ್ಯನು ಅಥವಾ ನಡತೆ ತೋರಿಸುವ ಅಗೌರವವನ್ನು ಕೂಡ “ತಿರಸ್ಕಾರಾರ್ಹ” ಎಂದು ಕರೆಯುತ್ತಾರೆ ಮತ್ತು ಇದನ್ನು “ಅತೀ ಹೆಚ್ಚಾದ ಅಗೌರವ” ಅಥವಾ “ಸಂಪೂರ್ಣವಾಗಿ ಅವಮಾನಿಸು” ಅಥವಾ “ಅರ್ಹವಾದ ತಿರಸ್ಕಾರ” ಎಂದೂ ಅನುವಾದ ಮಾಡಬಹುದು.
- “ತಿರಸ್ಕಾರದಲ್ಲಿರಿಸುವುದು” ಎನ್ನುವದಕ್ಕೆ ಒಬ್ಬರಿಗೆ ಅತೀ ಕಡಿಮೆ ಬೆಲೆಯನ್ನು ಕೊಡುವುದು ಅಥವಾ ಒಬ್ಬರಿಗಿಂತ ಇನ್ನೊಬ್ಬರನ್ನು ಅತೀ ಕೀಳಾದ ವ್ಯಕ್ತಿಯೆಂದು ತೀರ್ಪು ಮಾಡುವುದು ಎಂದರ್ಥ.
- ಇಲ್ಲಿ ಕೊಡಲ್ಪಟ್ಟಿರುವ ಮಾತುಗಳು ಕೂಡ ಒಂದೇ ಅರ್ಥವನ್ನು ಹೊಂದಿರುತ್ತವೆ: “ತಿರಸ್ಕಾರ ಮಾಡು” ಅಥವಾ “ತಿರಸ್ಕಾರವನ್ನು ತೋರಿಸು” ಅಥವಾ “ಬೇರೊಂದು ವಿಷಯದಲ್ಲಿ ತಿರಸ್ಕಾರವನ್ನು ಹೊಂದಿರು” ಅಥವಾ “ತಿರಸ್ಕಾರದಿಂದ ನಡೆದುಕೋ”. ಈ ಎಲ್ಲಾ ಮಾತುಗಳ ಅರ್ಥವೇನೆಂದರೆ ಯಾರಾದರೊಬ್ಬರ ಅಥವಾ ಯಾವುದಾದರೊಂದರ ವಿಷಯದಲ್ಲಿ ಹೇಳುವುದರ ಮೂಲಕ ಮತ್ತು ಕ್ರಿಯೆಗಳನ್ನು ತೋರಿಸುವುದರ ಮೂಲಕ “ಬಲವಾಗಿ ಅಗೌರವಿಸುವುದು” ಅಥವಾ “ಬಲವಾಗಿ ಅವಮಾನ ಮಾಡುವುದು”..
- ಅರಸನಾದ ದಾವೀದನು ವ್ಯಭಿಚಾರ ಮಾಡಿದಾಗ ಮತ್ತು ನರಹತ್ಯೆ ಮಾಡಿದಾಗ, ದೇವರ ವಿಷಯದಲ್ಲಿ ದಾವೀದನು “ತಿರಸ್ಕಾರವನ್ನು ತೋರಿಸಿದನು” ಎಂದು ದೇವರು ಹೇಳಿದ್ದಾರೆ. ಈ ಕೆಟ್ಟ ಕೆಲಸವನ್ನು ಮಾಡುವುದರ ಮೂಲಕ ದಾವೀದನು ದೇವರನ್ನು ಅತೀ ಹೆಚ್ಚಾಗಿ ಅಗೌರವಿಸಿದನು ಮತ್ತು ಅತೀ ಹೆಚ್ಚಾಗಿ ಅವಮಾನಕ್ಕೆ ಗುರಿ ಮಾಡಿದನು ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ಅವಮಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.12:1-2
- ಜ್ಞಾನೋ.15:5-6
- ಕೀರ್ತನೆ.031:17-18

ಪದ ಡೇಟಾ:

- Strong's: H936, H937, H959, H963, H1860, H7043, H7589, H5006, G1848

ತಿರುಗು, ದೂರಕ್ಕೆ ಸರಿ, ಹಿಂದಕ್ಕೆ ತಿರುಗು, ಹಿಂತಿರುಗು

ಪದದ ಅರ್ಥವಿವರಣೆ:

"ತಿರುಗು" ಎನ್ನುವ ಪದಕ್ಕೆ ಯಾವುದಾದರೊಂದು ತನ್ನ ದಿಕ್ಕನ್ನು ಮಾರ್ಪಡಿಸಿಕೊಳ್ಳುವುದಕ್ಕೆ ಕಾರಣವಾಗು ಅಥವಾ ಭೌತಿಕವಾಗಿ ದಿಶೆಯನ್ನು ಮಾರ್ಪಡಿಸಿಕೊಳ್ಳುವುದು ಎಂದರ್ಥವಾಗಿರುತ್ತದೆ.

- "ತಿರುಗು" ಎನ್ನುವ ಪದಕ್ಕೆ ಹಿಂದೆ ನೋಡುವುದಕ್ಕೆ "ಸುತ್ತಲು ತಿರುಗು" ಅಥವಾ ಬೇರೊಂದು ದಿಕ್ಕನ್ನು ನೋಡುವುದಕ್ಕೆ ಮುಖ ಮಾಡು ಎಂದರ್ಥವಾಗಿರುತ್ತದೆ.
- "ಹಿಂದಕ್ಕೆ ತಿರುಗು"ಅಥವಾ "ಆಚೆ ತಿರುಗು" ಎನ್ನುವ ಮಾತಿಗೆ "ಹಿಂದಕ್ಕೆ ಹೋಗು" ಅಥವಾ "ಆಚೆ ಹೋಗು" ಅಥವಾ "ಆಚೆ ಹೋಗುವುದಕ್ಕೆ ಕಾರಣವಾಗು" ಎಂದರ್ಥವಾಗಿರುತ್ತದೆ.
- "ಅದರಿಂದ ದೂರಕ್ಕೆ ಸರಿ" ಎನ್ನುವ ಮಾತಿಗೆ ಯಾರಾದರೊಬ್ಬರನ್ನು ತಿರಸ್ಕರಿಸುವುದು ಅಥವಾ ಯಾವುದಾದರೊಂದು ಮಾಡುವದನ್ನು "ನಿಲ್ಲಿಸು" ಎಂದರ್ಥ.
- ಯಾರಾದರೊಬ್ಬರ "ಮುಂದಕ್ಕೆ ತಿರುಗು" ಎನ್ನುವ ಮಾತಿಗೆ ಆ ವ್ಯಕ್ತಿಯನ್ನು ನೇರವಾಗಿ ನೋಡುವುದು ಎಂದರ್ಥ.
- "ತಿರುಗು ಮತ್ತು ಬಿಡು" ಅಥವಾ "ಬಿಡುವುದಕ್ಕೆ ತನ್ನ ಹಿಂದಕ್ಕೆ ತಿರುಗು" ಎನ್ನುವ ಮಾತಿಗೆ "ಆಚೆ ಹೋಗು' ಎಂದರ್ಥವಾಗಿರುತ್ತದೆ.
- "ದೂರ ತಿರುಗು" ಎನ್ನುವ ಮಾತಿಗೆ "ಮತ್ತೊಮ್ಮೆ ಏನಾದರೊಂದು ಮಾಡುವುದನ್ನು ಆರಂಭಿಸು" ಎಂದರ್ಥ.
- "ಅದರಿಂದ ತಿರುಗು" ಎಂದರೆ "ಏನಾದರೊಂದು ಮಾಡುವುದನ್ನು ನಿಲ್ಲಿಸು" ಎಂದರ್ಥ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ "ತಿರುಗು" ಎನ್ನುವ ಪದವನ್ನು 'ದಿಕ್ಕನ್ನು ಮಾರ್ಪಡಿಸು" ಅಥವಾ "ಹೋಗು" ಅಥವಾ "ಚಲಿಸು" ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಸಂದರ್ಭಗಳಲ್ಲಿ "ತಿರುಗು" ಎನ್ನುವ ಪದವನ್ನು ಯಾವುದಾದರೊಂದು ಮಾಡುವುದಕ್ಕೆ (ಒಬ್ಬರಿಗೆ) "ಕಾರಣವಾಗು" ಎಂದೂ ಅನುವಾದ ಮಾಡಬಹುದು. "ಯಾವುದಾದರೊಂದರಿಂದ ಆಚೆಗೆ (ಒಬ್ಬರನ್ನು) ತಿರುಗಿಸು" ಎನ್ನುವ ಮಾತನ್ನು "ಆಚೆ ಹೋಗುವುದಕ್ಕೆ (ಯಾರಾದರೊಬ್ಬರಿಗೆ) ಕಾರಣವಾಗು" ಅಥವಾ "ನಿಲ್ಲಿಸಲು (ಯಾರಾದರೊಬ್ಬರಿಗೆ) ಕಾರಣವಾಗು" ಎಂದೂ ಅನುವಾದ ಮಾಡಬಹುದು.
- "ದೇವರಿಂದ ತಿರುಗಿಕೋ" ಎನ್ನುವ ಮಾತನ್ನು "ದೇವರನ್ನು ಆರಾಧಿಸುವುದನ್ನು ನಿಲ್ಲಿಸು" ಎಂದೂ ಅನುವಾದ ಮಾಡಬಹುದು.
- "ದೇವರ ಕಡೆಗೆ ತಿರುಗಿಕೋ" ಎನ್ನುವ ಮಾತನ್ನು "ಮತ್ತೊಮ್ಮೆ ದೇವರನ್ನು ಆರಾಧಿಸಲು ಪ್ರಾರಂಭಿಸು" ಎಂದೂ ಅನುವಾದ ಮಾಡಬಹುದು.
- ಶತ್ರುಗಳು "ಹಿಂತಿರುಗಿದಾಗ", ಇದಕ್ಕೆ ಅವರು "ಹಿಮ್ಮೆಟ್ಟುತ್ತಾರೆ" ಎಂದರ್ಥವಾಗಿರುತ್ತದೆ. "ಶತ್ರುವನ್ನು ಹಿಂದಿರುಗಿಸು" ಎನ್ನುವ ಮಾತಿಗೆ "ಹಿಮ್ಮೆಟ್ಟುವುದಕ್ಕೆ ಶತ್ರುವಿಗೆ ಕಾರಣವಾಗು" ಎಂದರ್ಥ.
- ಅಲಂಕಾರಿಕವಾಗಿ ಉಪಯೋಗಿಸಿದಾಗ, ಇಸ್ರಾಯೇಲ್ಯರು ಸುಳ್ಳು ದೇವರುಗಳ ಕಡೆಗೆ "ತಿರುಗಿಕೊಂಡಾಗ", ಅವರು ಅವುಗಳನ್ನು "ಆರಾಧಿಸುವುದನ್ನು ಆರಂಭಿಸಿದರು". ಅವರು ವಿಗ್ರಹಗಳಿಂದ "ಹಿಂದಿರುಗಿದಾಗ", ಅವರು ಅವುಗಳನ್ನು "ಆರಾಧಿಸುವುದನ್ನು ನಿಲ್ಲಿಸಿದರು".
- ದೇವರು ತಿರಸ್ಕಾರ ಮಾಡುವ ಜನರಿಂದ "ಹಿಂದಿರುಗಿದಾಗ", ಆತನು ಅವರನ್ನು "ಸಂರಕ್ಷಿಸುವುದನ್ನು ನಿಲ್ಲಿಸಿದನು" ಅಥವಾ ಅವರಿಗೆ "ಸಹಾಯ ಮಾಡುವುದನ್ನು ನಿಲ್ಲಿಸಿದನು" ಎಂದರ್ಥ.
- "ತಂದೆಗಳ ಹೃದಯಗಳನ್ನು ತಮ್ಮ ಮಕ್ಕಳ ಕಡೆಗೆ ತಿರುಗಿಸು" ಎನ್ನುವ ಮಾತನ್ನು "ಮತ್ತೊಮ್ಮೆ ತಂದೆಗಳು ತಮ್ಮ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಮಾಡು" ಎಂದೂ ಅನುವಾದ ಮಾಡಬಹುದು.
- "ನನ್ನ ಘನತೆಯನ್ನು ಅವಮಾನವಾಗುವಂತೆ ಮಾಡು" ಎನ್ನುವ ಮಾತನ್ನು "ನನ್ನ ಘನತೆಯನ್ನು ನಾಚಿಕೆಪಡುವಂತೆ ಮಾಡು" ಅಥವಾ "ನಾನು ನಾಚಿಕೆಪಡುವಷ್ಟು ನನ್ನನ್ನು ಅವಮಾನಿಸು" ಅಥವಾ "(ಏನಾದರೊಂದು ಕೆಟ್ಟ ಕಾರ್ಯವನ್ನು ಮಾಡುವುದರ ಮೂಲಕ) ನನ್ನನ್ನು ನಾಚಿಕೆಪಡಿಸು, ಇದರಿಂದ ಜನರು ನನ್ನನ್ನು ಎಂದಿಗೂ ಘನಪಡಿಸುವುದಿಲ್ಲ" ಎಂದೂ ಅನುವಾದ ಮಾಡಬಹುದು .
- "ನಾನು ನಿಮ್ಮ ಪಟ್ಟಣಗಳನ್ನು ನಾಶವಾಗುವಂತೆ ಮಾಡುವೆನು" ಎನ್ನುವ ಮಾತನ್ನು "ನಿಮ್ಮ ಪಟ್ಟಣಗಳು ನಾಶವಾಗುವುದಕ್ಕೆ ನಾನು ಕಾರಣವಾಗುವೆನು" ಅಥವಾ "ನಿಮ್ಮ ಪಟ್ಟಣಗಳನ್ನು ನಾಶಪಡಿಸಲು ನಾನು ಶತ್ರುಗಳಿಗೆ ಸಹಾಯ ಮಾಡುವೆನು" ಎಂದೂ ಅನುವಾದ ಮಾಡಬಹುದು.
- "ತಿರುಗಿಕೋ" ಎನ್ನುವ ಮಾತನ್ನು "ಮಾರ್ಪಡು" ಎಂದೂ ಅನುವಾದ ಮಾಡಬಹುದು. ಮೋಶೆ ಕೋಲನ್ನು ಹಾವನ್ನಾಗಿ "ಮಾರ್ಪಡಿಸಿದಾಗ", ಅದು ಹಾವಾಗಿ "ಮಾರ್ಪಟ್ಟಿತು." ಇದನ್ನು "ಅದರಂತೆ ಮಾರ್ಪಡಿಸಿದನು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ಕುಷ್ಠ ರೋಗ, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.11:02
- ಅಪೊ.ಕೃತ್ಯ.07:42
- ಅಪೊ.ಕೃತ್ಯ. 11:21
- ಯೆರೆ.36:1-3
- ಲೂಕ.01:17
- ಮಲಾಕಿ.04:06

- ಪ್ರಕ.11:06

ಪದ ಡೇಟಾ:

- Strong's: H541, H2015, H2017, H2186, H2559, H3943, H4672, H4740, H4878, H5186, H5253, H5414, H5437, H5472, H5493, H5528, H5627, H5753, H6437, H7227, H7725, H7734, H7750, H7760, H7847, H8159, H8447, G344, G387, G402, G654, G665, G868, G1294, G1578, G1612, G1624, G1994, G3179, G3313, G3329, G3344, G3346, G4762, G5157, G5290

ತಿಳಿಯಿರಿ, ಜ್ಞಾನ, ಅಜ್ಞಾತ, ಪ್ರತ್ಯೇಕಿಸು

ಪದದ ಅರ್ಥವಿವರಣೆ:

“ತಿಳಿಯಿರಿ” ಎನ್ನುವ ಪದಕ್ಕೆ ಏನಾದರೊಂದು ವಿಷಯವನ್ನು ಅರ್ಥ ಮಾಡಿಕೊಳ್ಳುವುದು ಅಥವಾ ಸತ್ಯದ ಕುರಿತಾದ ತಿಳಿದುಕೊಂಡಿರುವುದು ಎಂದರ್ಥ. “ತಿಳಿಯುವಂತೆ ಮಾಡು” ಎನ್ನುವ ಮಾತು ಮಾಹಿತಿ ಹೇಳುವುದೆನ್ನುವ ಅರ್ಥ ಬರುವ ಮಾತಾಗಿರುತ್ತದೆ.

- “ಜ್ಞಾನ” ಎನ್ನುವ ಪದವು ಜನರಿಗೆ ಗೊತ್ತಿರುವ ಮಾಹಿತಿಯನ್ನು ಸೂಚಿಸುತ್ತದೆ. ಇದು ಭೌತಿಕವಾದ ಮತ್ತು ಆತ್ಮೀಯಕವಾದ ಪ್ರಪಂಚದಲ್ಲಿನ ಸಂಗತಿಗಳನ್ನು ತಿಳಿದುಕೊಳ್ಳುವುದನ್ನು ಸೂಚಿಸುತ್ತದೆ.
- ದೇವರ “ಕುರಿತಾಗಿ ತಿಳಿದುಕೋ” ಎನ್ನುವುದಕ್ಕೆ ದೇವರು ನಮಗೆ ತೋರಿಸಿಕೊಂಡಿರುವವುಗಳಿಂದ ಆತನ ಕುರಿತಾಗಿ ಸತ್ಯಾಂಶಗಳನ್ನು ತಿಳಿದುಕೊಳ್ಳುವುದು ಎಂದರ್ಥ.
- ದೇವರನ್ನು “ತಿಳಿಯಿರಿ’ ಎನ್ನುವುದಕ್ಕೆ ಆತನೊಂದಿಗೆ ಸಂಬಂಧವನ್ನು ಹೊಂದಿರು ಎಂದರ್ಥ. ಇದು ಜನರ ಕುರಿತಾಗಿ ತಿಳಿದುಕೊಳ್ಳುವುದರ ವಿಷಯವಾಗಿ ಅನ್ವಯಿಸಲ್ಪಡುತ್ತದೆ.
- ದೇವರ ಚಿತ್ತವನ್ನು ತಿಳಿದುಕೊಳ್ಳುವುದು ಎಂದರೆ ಆತನು ಆಜ್ಞಾಪಿಸಿದವುಗಳ ವಿಷಯದಲ್ಲಿ ಎಚ್ಚರವಾಗಿರುವುದು ಎಂದರ್ಥ, ಅಥವಾ ಒಬ್ಬ ವ್ಯಕ್ತಿ ಏನು ಮಾಡಬೇಕೆಂದು ಆತನು ಬಯಸಿರುತ್ತಾನೆನ್ನುವುದನ್ನು ಅರ್ಥಮಾಡಿಕೊಳ್ಳುವುದು ಎಂದರ್ಥ.
- “ಧರ್ಮಶಾಸ್ತ್ರವನ್ನು ತಿಳಿಯಿರಿ” ಎಂದರೆ ದೇವರು ಆಜ್ಞಾಪಿಸಿದವುಗಳಲ್ಲಿ ಎಚ್ಚರವಾಗಿರುವುದು ಅಥವಾ ಆತನು ಮೋಶೆಗೆ ಕೊಟ್ಟ ಧರ್ಮಶಾಸ್ತ್ರದಲ್ಲಿ ಏನೇನು ಆಜ್ಞಾಪಿಸಿದ್ದಾನೋ ಎಂದು ಅರ್ಥಮಾಡಿಕೊಳ್ಳುವುದು ಎಂದರ್ಥ.
- ಕೆಲವೊಂದುಬಾರಿ “ಜ್ಞಾನ" ಎನ್ನುವ ಪದಕ್ಕೆ ಪರ್ಯಾಯ ಪದವನ್ನಾಗಿ “ಜ್ಞಾನ” ಎಂದು ಉಪಯೋಗಿಸಲಾಗಿರುತ್ತದೆ, ಇದರಲ್ಲಿ ದೇವರಿಗೆ ಮೆಚ್ಚಿಗೆಯಾದ ವಿಧಾನದಲ್ಲಿ ಜೀವಿಸುವುದು ಎಂದೂ ಒಳಗೊಂಡಿರುತ್ತದೆ.
- “ದೇವರ ಜ್ಞಾನ” ಎನ್ನುವ ಮಾತು ಕೆಲವೊಂದುಬಾರಿ ಅದಕ್ಕೆ ಪರ್ಯಾಯ ಮಾತಾಗಿ “ಯೆಹೋವನ ಭಯ” ಎಂದು ಹೇಳಲ್ಪಟ್ಟಿದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ತಿಳಿಯಿರಿ" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನದಲ್ಲಿ “ಅರ್ಥಮಾಡಿಕೋ” ಅಥವಾ “ಅದರೊಂದಿಗೆ ಪರಿಚಿತವಾಗು” ಅಥವಾ “ಎಚ್ಚರವಾಗಿರು” ಅಥವಾ “ಅದರೊಂದಿಗೆ ಗುರುತನ್ನು ಹೊಂದು” ಅಥವಾ “ಅದರೊಂದಿಗೆ ಸಂಬಂಧದಲ್ಲಿರು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಕೆಲವೊಂದು ಭಾಷೆಗಳಲ್ಲಿ “ತಿಳಿ” ಎನ್ನುವ ಪದಕ್ಕೆ ಎರಡೆರಡು ಪದಗಳಿರುತ್ತವೆ, ಅದರಲ್ಲೊಂದು ಪದವು ಸತ್ಯಾಂಶಗಳನ್ನು ತಿಳಿದುಕೊಳ್ಳುವುದಕ್ಕೆ ಮತ್ತು ಇನ್ನೊಂದು ಮನುಷ್ಯರ ಕುರಿತಾಗಿ ತಿಳಿದುಕೊಳ್ಳುವುದಕ್ಕೆ ಮತ್ತು ಅವರೊಂದಿಗೆ ಸಹವಾಸ ಮಾಡುವುದಕ್ಕೆ ಇರುತ್ತವೆ.
- “ತಿಳಿದುಕೊಳ್ಳುವಂತೆ ಮಾಡು” ಎನ್ನುವ ಮಾತು “ಜನರು ತಿಳಿದುಕೊಳ್ಳುವಂತೆ ಮಾಡುವದು” ಅಥವಾ “ಬಹಿರಂಗಪಡಿಸು” ಅಥವಾ “ಅದರ ಕುರಿತಾಗಿ ಹೇಳು” ಅಥವಾ “ವಿವರಿಸು” ಎಂದೂ ಅನುವಾದ ಮಾಡಬಹುದು.
- ಏನಾದರೊಂದರ “ಕುರಿತಾಗಿ ತಿಳಿದುಕೊಳ್ಳುವುದು” ಎನ್ನುವ ಮಾತನ್ನು “ಎಚ್ಚರವಾಗಿರು” ಅಥವಾ “ಅದರೊಂದಿಗೆ ಪರಿಚತವಾಗು” ಎಂದೂ ಅನುವಾದ ಮಾಡಬಹುದು.
- “ಹೇಗೆಂದು ತಿಳಿಯಿರಿ” ಎನ್ನುವ ಮಾತಿಗೆ ಏನಾದರೊಂದು ಕೆಲಸವನ್ನು ಮಾಡಿ ಮುಗಿಸುವುದಕ್ಕೆ ಅದರ ವಿಧಾನವನ್ನು ಅಥವಾ ಪದ್ಧತಿಯನ್ನು ಅರ್ಥಮಾಡಿಕೊಳ್ಳುವುದು ಎಂದರ್ಥ. ಇದನ್ನು “ಸಾಮರ್ಥ್ಯವನ್ನು ಹೊಂದು” ಅಥವಾ “ಅದಕ್ಕೆ ನಿಪುಣತೆಯನ್ನು ಪಡೆ” ಎಂಬುದಾಗಿಯೂ ಅನುವಾದ ಮಾಡಬಹುದು.
- “ಜ್ಞಾನ" ಎನ್ನುವ ಪದವನ್ನು “ತಿಳಿದುಕೊಂಡಿರುವುದು” ಅಥವಾ “ಜ್ಞಾನ” ಅಥವಾ “ಅರ್ಥಮಾಡಿಕೊಳ್ಳುವುದು” ಎಂದೂ ಸಂದರ್ಭಾನುಗುಣವಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಧರ್ಮಶಾಸ್ತ್ರ, ಬಹಿರಂಗಪಡಿಸು, ಅರ್ಥಮಾಡಿಕೊ, ಜ್ಞಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.02:12-13
- 1 ಸಮು.17:46
- 2 ಕೊರಿಂಥ.02:15
- 2 ಪೇತ್ರ.01:3-4
- ಧರ್ಮೋ.04:39-40
- ಆದಿ.19:05
- ಲೂಕ.01:77

ಪದ ಡೇಟಾ:

- Strong's: H1843, H1844, H1847, H1875, H3045, H3046, H4093, H4486, H5046, H5234, H5475, H5869, G50, G56, G1097, G1107, G1108, G1492, G1921, G1922, G1987, G2467, G2589, G4267, G4894

ತಿವಿ, ತಿವಿಯುವುದು, ತಿವಿಯಲ್ಪಟ್ಟಿರುತ್ತದೆ, ತಿವಿಯುತ್ತಾ ಇರುವುದು

ಪದದ ಅರ್ಥವಿವರಣೆ:

“ತಿವಿ” ಎನ್ನುವ ಪದಕ್ಕೆ ತೀಕ್ಷ್ಣವಾದ, ಚೂಪಾದ ವಸ್ತುವಿನೊಂದಿಗೆ ಯಾವುದಾದರೊಂದನ್ನು ಚುಚ್ಚುವುದು ಎಂದರ್ಥ. ಯಾರಾದರೊಬ್ಬರನ್ನು ಮಾನಸಿಕವಾಗಿ ಆಳವಾದ ನೋವನ್ನುಂಟು ಮಾಡುವುದನ್ನು ಸೂಚಿಸುವುದಕ್ಕೆ ಕೂಡ ಅಲಂಕಾರಿಕವಾಗಿ ಈ ಪದವನ್ನು ಉಪಯೋಗಿಸಲಾಗುತ್ತದೆ.

- ಯೇಸುವನ್ನು ಶಿಲುಬೆಯ ಮೇಲೆ ತೂಗುಹಾಕಲ್ಪಟ್ಟ ಸಮಯದಲ್ಲಿ ಸೈನಿಕನು ಯೇಸುವಿನ ಪಕ್ಕದಲ್ಲಿ ತಿವಿಯುತ್ತಾನೆ.
- ಸತ್ಯವೇದ ಕಾಲಗಳಲ್ಲಿ ಬಿಡುಗಡೆ ಹೊಂದಿದ ಒಬ್ಬ ದಾಸನು ತನ್ನ ಯಜಮಾನನಿಗೆ ನಿರಂತರವಾಗಿ ಕೆಲಸ ಮಾಡುವುದರಲ್ಲಿ ಮುಂದೆವರಿಯುವುದಕ್ಕೆ ತಾನು ಆಯ್ಕೆಯಾಗಿದ್ದಾನೆಂದು ಗುರುತಾಗಿರಲು ತನ್ನ ಕಿವಿಯನ್ನು ತಿವಿದುಕೊಳ್ಳುತ್ತಿದ್ದರು.
- ಖಡ್ಗವು ಮರಿಯಳ ಹೃದಯವನ್ನು ತಿವಿಯುತ್ತದೆಯೆಂದು ಸಿಮೆಯೋನನು ಆಕೆಗೆ ಹೇಳಿದಾಗ ಅವನು ಆಕೆಯೊಂದಿಗೆ ಅಲಂಕಾರಿಕವಾಗಿ ಮಾತನಾಡಿದ್ದನು, ಈ ಮಾತಿಗೆ ಆಕೆ ತುಂಬಾ ಆಳವಾದ ಪ್ರಲಾಪವನ್ನು ಅನುಭವಿಸುತ್ತಾಳೆಂದು ಇದರ ಅರ್ಥವಾಗಿರುತ್ತದೆ, ಯಾಕಂದರೆ ತನ್ನ ಶಿಶುವಾಗಿರುವ ಯೇಸುವಿಗೆ ಜನನ ಕೊಡುವುದರ ಕಾರಣದಿಂದ ಹೀಗೆ ನಡೆಯುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಶಿಲುಬೆ, ಯೇಸು, ದಾಸನು, ಸಿಮೆಯೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಬ.16:13-14
- ಯೋಬ.20:23-25
- ಯೋಹಾನ.19:36-37
- ಕೀರ್ತನೆ.022:16-17

ಪದ ಡೇಟಾ:

- Strong's: H935, H1856, H2342, H2490, H2491, H2944, H3738, H4272, H5181, H5344, H5365, H6398, G1330, G1338, G1574, G2660, G3572, G4044, G4138

ತುತ್ತೂರಿ, ತುತೂರಿಯನ್ನು ಊದುವವರು

ಪದದ ಅರ್ಥವಿವರಣೆ:

“ತುತ್ತೂರಿ” ಎನ್ನುವ ಪದವು ಪ್ರಕಟನೆಯನ್ನು ಕೇಳುವುದಕ್ಕೆ ಅಥವಾ ಭೇಟಿಯಾಗುವುದಕ್ಕೆ ಜನರೆಲ್ಲರು ಒಂದು ಸ್ಥಳಕ್ಕೆ ಸೇರಿ ಬರಬೇಕೆಂದು ಅವರನ್ನು ಕರೆಯುವುದಕ್ಕೋಸ್ಕರ ಅಥವಾ ಸಂಗೀತವನ್ನು ಉಂಟುಮಾಡುವುದಕ್ಕೆ ಉಪಯೋಗಿಸುವ ಉಪಕರಣವನ್ನು ಸೂಚಿಸುತ್ತದೆ.

- ತುತ್ತೂರಿಯನ್ನು ಸಹಜವಾಗಿ ಲೋಹ, ಸಮುದ್ರ ಚಿಪ್ಪು ಅಥವಾ ಪ್ರಾಣಿಯ ಕೊಂಬೆಗಳಿಂದ ತಯಾರಿಸುತ್ತಿದ್ದರು.
- ತುತ್ತೂರಿಗಳನ್ನು ಯುದ್ಧಕ್ಕೆ ಜನರೆಲ್ಲರನ್ನು ಕರೆಯುವುದಕ್ಕೆ ಊಡುತ್ತಿದ್ದರು, ಮತ್ತು ಇಸ್ರಾಯೇಲ್ಯರು ಬಹಿರಂಗವಾಗಿ ಎಲ್ಲರು ಸೇರಿ ಬರುವುದಕ್ಕೆ ಊದುತ್ತಿದ್ದರು.
- ಪ್ರಕಟನೆ ಗ್ರಂಥವು ಅಂತ್ಯಕಾಲದಲ್ಲಿ ಭೂಮಿಯ ಮೇಲೆ ದೇವರ ಕ್ರೋಧವನ್ನು ಸುರಿಸುತ್ತಿದ್ದಾರೆಂದು ಸೂಚನೆ ಕೊಡುವುದಕ್ಕೆ ದೂತರು ತಮ್ಮ ತುತ್ತೂರಿಗಳನ್ನು ಊದುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ದೂತ, ಸಭೆ, ಭೂಮಿ, ಕೊಂಬೆ, ಇಸ್ರಾಯೇಲ್, ಕ್ರೋಧ)

ಸತ್ಯವೇದದ ವಾಕ್ಯಗಳು:

- 1 ಪೂರ್ವ 13:7-8
- 2 ಅರಸ 9:13
- ವಿಮೋ 19:12-13
- ಇಬ್ರಿ 12:19
- ಮತ್ತಾಯ 6:2
- ಮತ್ತಾಯ 24:31

ಪದ ಡೇಟಾ:

- Strong's: H2689, H2690, H3104, H7782, H8619, H8643, G45360, G45370, G45380

ತುರಾಯಿ

ಪದದ ಅರ್ಥವಿವರಣೆ

ಶಂಕುವಿನ ಆಕರದಲ್ಲಿರುವ ಕಾಯಿಗಳಲ್ಲಿ ಬೀಜಗಳಿದ್ದು ವರ್ಷ ಪೂರ್ತಿ ಹಸಿರಾಗಿರುವ ಮರವನ್ನು ತುರಾಯಿ ಮರ ಎನ್ನುತ್ತಾರೆ.

- ತುರಾಯಿ ಮರಗಳನ್ನು "ನಿತ್ಯಹರಿದ್ವರ್ಣ" ಮರಗಳೆಂದು ಸೂಚಿಸುತ್ತಾರೆ.
- ಪ್ರಾಚೀನ ಕಾಲದಲ್ಲಿ, ಸಂಗೀತ ವಾದ್ಯಗಳನ್ನು ಮಾಡಲು ಮತ್ತು ನಾವೇ, ಮನೆ ಹಾಗೂ ದೇವಾಲಯ ಎಂಬಂತಃ ಕಟ್ಟಡಗಳನ್ನು ನಿರ್ಮಿಸಲು ತುರಾಯಿ ಮರವನ್ನು ಉಪಯೋಗಿಸುತ್ತಿದ್ದರು.
- ಸತ್ಯವೇದದಲ್ಲಿ ಹೇಳಲ್ಪಟ್ಟ ಅನೇಕ ತುರಾಯಿ ಮರಗಳಲ್ಲಿ ಕೆಲವು ಯಾವುವೆಂದರೆ ಸವೆಯು ಮರ, ದೇವದಾರು ಮರ, ಶಂಕುಮರ ಮತ್ತು ಜಾಲಿ ಮರ.

(ಈ ಪದಗಳನ್ನು ಸಹ ನೋಡಿರಿ : ಹೆಸರುಗಳನ್ನು ಹೇಗೆ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೇವದಾರು ಮರ, ಶಂಕುಮರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.27:4-5
- ಯೆಶಯ.37:24-25
- ಯೆಶಯ.41:19-20
- ಯೆಶಯ.44:14
- ಯೆಶಯ.60:12-13
- ಕೀರ್ತನೆ.104:16-18

ಪದ ಡೇಟಾ:

- Strong's: H766, H1265, H1266

ತುಳಿದುಬಿಡು, ತುಳಿದುಬಿಡುವುದು, ತುಳಿದುಬಿಟ್ಟಿದೆ, ತುಳಿದುಬಿಡುತ್ತಾ ಇರುವುದು

ಪದದ ಅರ್ಥವಿವರಣೆ:

“ತುಳಿದುಬಿಡು” ಎನ್ನುವ ಪದಕ್ಕೆ ಯಾವುದಾದರೊಂದರ ಮೇಲೆ ಕಾಲಿಟ್ಟು ತುಳಿಯುವುದು ಮತ್ತು ಕಾಲಿನಿಂದ ಪುಡಿಪುಡಿ ಮಾಡುವುದು ಎಂದರ್ಥ. ಈ ಪದಕ್ಕೆ “ನಾಶಗೊಳಿಸು” ಅಥವಾ “ಸೋಲಿಸು” ಅಥವಾ “ಅವಮಾನಪಡಿಸು” ಎನ್ನುವ ಅರ್ಥಗಳನ್ನು ಕೊಡುವುದಕ್ಕೆ ಸತ್ಯವೇದದಲ್ಲಿ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.

- “ತುಳಿದುಬಿಡುವುದು” ಎನ್ನುವ ಪದಕ್ಕೆ ಹೊಲದಲ್ಲಿ ಓಡುತ್ತಿರುವ ಜನರ ಪಾದಗಳ ಮೂಲಕ ಹುಲ್ಲನ್ನು ತುಳಿದು ಹಾಕುವುದು ಎಂದು ಉದಾಹರಣೆಯಾಗಿ ಹೇಳಬಹುದು.
- ಪುರಾತನ ಕಾಲಗಳಲ್ಲಿ ದ್ರಾಕ್ಷಾರಸವನ್ನು ಕೆಲವೊಂದುಬಾರಿ ದ್ರಾಕ್ಷಿಗಳಿಂದ ರಸವನ್ನು ತೆಗೆಯುವುದಕ್ಕೆ ಅವುಗಳನ್ನು ತುಳಿಯುವುದರ ಮೂಲಕ ತಯಾರು ಮಾಡುತ್ತಿದ್ದರು.
- “ತುಳಿದುಬಿಡು” ಎನ್ನುವ ಪದಕ್ಕೆ ಕೆಲವೊಂದುಬಾರಿ “ಕೀಳಾಗಿ ನೋಡುವುದರ ಮೂಲಕ ಶಿಕ್ಷಿಸು” ಎನ್ನುವ ಅಲಂಕಾರಿಕವಾದ ಅರ್ಥವನ್ನು ಹೊಂದಿರುತ್ತದೆ.
- “ತುಳಿದುಬಿಡು” ಎನ್ನುವ ಪದವನ್ನು ಇಸ್ರಾಯೇಲ್ಯರ ಗರ್ವವನ್ನು ಮತ್ತು ತಿರಸ್ಕಾರಗಳ ಕಾರಣದಿಂದ ಯೆಹೋವನು ಹೇಗೆ ತನ್ನ ಜನರನ್ನು ಶಿಕ್ಷಿಸುತ್ತಾನೆಂದು ವ್ಯಕ್ತಪಡಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.
- “ತುಳಿದುಬಿಡು” ಎನ್ನುವ ಪದವನ್ನು “ಪಾದಗಳಿಂದ ಜಜ್ಜುವುದು” ಅಥವಾ “ಪಾದಗಳಿಂದ ಪುಡಿಪುಡಿ ಮಾಡು” ಅಥವಾ “ನಡೆ ಮತ್ತು ಜಜ್ಜು” ಅಥವಾ “ನೆಲದ ಮೇಲೆ ಜಜ್ಜು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ ಈ ಪದವನ್ನು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದ್ರಾಕ್ಷಿ, ಕೀಳಾಗಿ ನೋಡುವುದು, ಶಿಕ್ಷಿಸು, ತಿರಸ್ಕರಿಸು, ಒಕ್ಕು, ದ್ರಾಕ್ಷಾರಸ)

ಸತ್ಯವೇದದ ಅನುಬಂಧ ವಾಕ್ಯಗಳು :

- ಇಬ್ರಿ.10:28-29
- ಕೀರ್ತನೆ.007:5

ಪದ ಡೇಟಾ:

- Strong's: H947, H1758, H1869, H4001, H4823, H7429, H7512, G2662, G3961

ತುಳಿಸು, ತುಳಿಸುವುದು, ತುಳಿಸಿದೆ, ತುಳಿಸುತ್ತಿರುವುದು

ಪದದ ಅರ್ಥವಿವರಣೆ:

“ತುಳಿಸು” ಮತ್ತು “ತುಳಿಸುತ್ತಿರುವುದು” ಎನ್ನುವ ಪದಗಳನ್ನು ಗೋಧಿ ಗಿಡಗಳಿಂದ ಮೊಟ್ಟ ಮೊದಲಾಗಿ ಗೋಧಿಯನ್ನು ಬೇರ್ಪಡಿಸುವ ವಿಧಾನವನ್ನು ಸೂಚಿಸುತ್ತವೆ.

- ಗೋಧಿ ಗಿಡಗಳನ್ನು ತುಳಿಸುವುದರ ಮೂಲಕ ಗೋಧಿ ಹುಲ್ಲು ಮತ್ತು ಕೊಯ್ಲಿನಿಂದ ಧಾನ್ಯವು ಬೇರೆಯಾಗುತ್ತದೆ. ಇದಾದನಂತರ, ಧಾನ್ಯವನ್ನು ಸಂಪೂರ್ಣವಾಗಿ ಕಡ್ಡಿ ಕಸದಿಂದ ಬೇರ್ಪಡಿಸುವುದಕ್ಕೆ “ತೂರುತ್ತಾರೆ”, ಕೇವಲ ತಿನ್ನುವದಕ್ಕೆ ಯೋಗ್ಯವಾಗುವ ಧಾನ್ಯದ ಭಾಗವನ್ನು ಮಾತ್ರ ಉಳಿಸಿಕೊಳ್ಳುತ್ತಾರೆ.
- ಸತ್ಯವೇದ ಕಾಲಗಳಲ್ಲಿ “ತುಳಿಸುವ ನೆಲ” ಎನ್ನುವುದು ಚಪಟವಾದ ಕಲ್ಲುಗಳಿರುವ ದೊಡ್ಡ ಸ್ಥಳ ಅಥವಾ ದುಮ್ಮು ಧೂಳಿಯ ಧಾನ್ಯವನ್ನು ಇರಿಸುವ ಗಟ್ಟಿಯಾದ ಸ್ಥಳ, ಧಾನ್ಯವನ್ನು ಬೇರ್ಪಡಿಸಿ ಅದರ ಸೊಪ್ಪನ್ನು ತುಳಿಸುವ ಮಟ್ಟದ ಸ್ಥಳವಾಗಿರುತ್ತದೆ.
- “ತುಳಿಸುವ ಬಂಡಿ” ಅಥವಾ “ತುಳಿಸುವ ಚಕ್ರ” ಎನ್ನುವುದು ಕೆಲವೊಂದುಬಾರಿ ಧಾನ್ಯವನ್ನು ತಿಳಿಸುವುದಕ್ಕೆ ಮತ್ತು ಅದರ ಸೊಪ್ಪನ್ನು ಬೇರ್ಪಡಿಸುವುದಕ್ಕೆ ಸಹಾಯಕವಾಗುವುದಕ್ಕೆ ಉಪಯೋಗಿಸಲಾಗುತ್ತದೆ.
- “ತುಳಿಸುವ ಜಾರುಬಂಡಿ” ಅಥವಾ “ತುಳಿಸುವ ಹಲಗೆ” ಎನ್ನುವುದು ಧಾನ್ಯವನ್ನು ಬೇರ್ಪಡಿಸುವುದಕ್ಕೆ ಉಪಯೋಗಿಸುವ ಉಪಕರಣವಾಗಿರುತ್ತದೆ. ಇದನ್ನು ಮರದ ಹಲಗೆಗಳಿಂದ ತಯಾರಿಸಿರುತ್ತಾರೆ, ಇವುಗಳ ತುದಿ ಭಾಗಗಳಿಗೆ ಚೂಪಾದ ಕಂಬಿಗಳನ್ನು ಜೋಡಿಸಿರುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಹೊಟ್ಟು, ಧಾನ್ಯ, ತೂರು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.03:1-3
- 2 ಅರಸ.13:6-7
- 2 ಸಮು.24:15-16
- ದಾನಿ.02:34-35
- ಲೂಕ.03:17
- ಮತ್ತಾಯ.03:10-12
- ರೂತ .03:1-2

ಪದ ಡೇಟಾ:

- Strong's: H212, H4173, H1637, H1758, H1786, H1869, H2251, G248

ತೂಗುಹಾಕು, ತೂಗು ಹಾಕಲಾಗಿದೆ, ಗಲ್ಲಿಗೇರಿಸಲಾಗಿದೆ, ತೂಗು ಹಾಕುವುದು, ನೇತಾಡುವುದು, ನೇಣು ಹಾಕಲ್ಪಟ್ಟಿದೆ

ಪದದ ಅರ್ಥವಿವರಣೆ:

“ತೂಗುಹಾಕು” ಎನ್ನುವ ಪದಕ್ಕೆ ನೆಲದಿಂದ ಮೇಲಕ್ಕೆ ಯಾವುದಾದರೊಂದನ್ನು ಅಥವಾ ಯಾರಾದರೊಬ್ಬರನ್ನು ಸ್ವಲ್ಪಕಾಲ ತಡೆಹಿಡಿಯುವುದು ಎಂದರ್ಥ.

- ಒಬ್ಬ ವ್ಯಕ್ತಿಯ ಕುತ್ತಿಗೆಯ ಸುತ್ತಲು ಹಗ್ಗವನ್ನು ಕಟ್ಟಿ ಮರದ ತುಂಡಿನಂತೆ ಒಂದು ಎತ್ತರದಲ್ಲಿರುವ ವಸ್ತುವಿನಿಂದ ತನ್ನನ್ನು ತೂಗುಹಾಕುವದರಿಂದ ಸಾಧಾರಣವಾಗಿ ನೇಣು ಹಾಕಿಕೊಂಡು ಸಾಯುವುದು ನಡೆಯುತ್ತದೆ. ಯೂದಾ ತನ್ನನ್ನು ತಾನು ನೇಣು ಹಾಕಿಕೊಳ್ಳುವುದರ ಮೂಲಕ ಸತ್ತಿದ್ದಾನೆ.
- ಯೇಸುವನ್ನು ಮರದ ಶಿಲುಬೆಯ ಮೇಲೆ ತೂಗುಹಾಕುವುದರ ಮೂಲಕ ಮರಣ ಹೊಂದಿದ್ದರೂ, ಆತನ ಕುತ್ತಿಗೆಯ ಸುತ್ತ ಏನೂ ಹಾಕಿರಲಿಲ್ಲ: ಸೈನಿಕರು ಆತನನ್ನು ಶಿಲುಬೆಯ ಮೇಲೆ ಮಲಗಿಸಿ ಆತನ ಕೈ (ಅಥವಾ ಮಣಿಕಟ್ಟುಗಳಲ್ಲಿ), ಕಾಲುಗಳಲ್ಲಿ ಮೊಳೆಗಳನ್ನು ಹೊಡೆಯುವುದ ಮೂಲಕ ನೇತಾಡಿಗೊಳಿಸಿದ್ದರು.
- ಯಾರಾದರೊಬ್ಬರನ್ನು ತೂಗುಹಾಕುವುದೆನ್ನುವುದು ಯಾರೋದರೊಬ್ಬರ ಕುತ್ತಿಗೆಗೆ ಒಂದು ಹಗ್ಗವನ್ನು ಕಟ್ಟಿ ತೂಗುಹಾಕುವುದರ ಮೂಲಕ ಸಾಯಿಸುವುದರ ವಿಧಾನವನ್ನು ಸೂಚಿಸುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.17:23
- ಅಪೊ.ಕೃತ್ಯ.10:39-41
- ಗಲಾತ್ಯ.03:13-14
- ಆದಿ.40:20-23
- ಮತ್ತಾಯ.27:3-5

ಪದ ಡೇಟಾ:

- Strong's: H2614, H3363, H8518, G519

ತೂರು, ತೂರುವುದು, ತೂರಲ್ಪಟ್ಟಿದೆ, ತೂರುತ್ತಾಯಿರುವುದು, ಸೋಸು, ಸೋಸುವುದು

ಪದದ ಅರ್ಥವಿವರಣೆ:

“ತೂರು” ಮತ್ತು “ಸೋಸು” ಎನ್ನುವ ಪದಗಳು ಕೆಲಸಕ್ಕೆಬಾರದವುಗಳಿಂದ ಧಾನ್ಯವನ್ನು ಬೇರ್ಪಡಿಸುವುದು ಎಂದರ್ಥ. ಸತ್ಯವೇದದಲ್ಲಿ ಈ ಎರಡು ಪದಗಳು ಕೂಡ ಜನರನ್ನು ವಿಭಜಿಸುವುದನ್ನು ಅಥವಾ ಬೇರ್ಪಡಿಸುವುದನ್ನು ಸೂಚಿಸುವುದಕ್ಕೆ ಅಲಂಕಾರಿಕ ಭಾಷೆಯಲ್ಲಿ ಉಪಯೋಗಿಸಲ್ಪಟ್ಟಿರುತ್ತವೆ.

- “ತೂರು” ಎನ್ನುವ ಪದಕ್ಕೆ ಗಾಳಿಯಲ್ಲಿ ಹೊಟ್ಟು ಮತ್ತು ಧಾನ್ಯಗಳೆರಡನ್ನು ಹಾರಿಸುವುದರ ಮೂಲಕ ಸಸ್ಯಗಳಿಂದ ಬೇಕಾಗಿರದವುಗಳಿಂದ ಧಾನ್ಯವನ್ನು ಬೇರ್ಪಡಿಸುವುದು ಎಂದರ್ಥ.
- “ಸೋಸು” ಎನ್ನುವ ಪದವು ಧೂಳು ಅಥವಾ ಕಲ್ಲುಗಳನ್ನು ಬೇರ್ಪಡಿಸುವುದಕ್ಕೆ ಜರಡಿಯಲ್ಲಿ ತೂರು ಹಾಕಿದ ಧಾನ್ಯವನ್ನು ಅಲುಗಾಡಿಸುವುದನ್ನು ಸೂಚಿಸುತ್ತದೆ.
- ಹಳೇ ಒಡಂಬಡಿಕೆಯಲ್ಲಿ “ತೂರು” ಅಥವಾ “ಸೋಸು” ಎನ್ನುವ ಪದಗಳನ್ನು ಅನೀತಿವಂತ ಜನರಿಂದ ನೀತಿವಂತರಾಗಿರುವ ಜನರನ್ನು ಬೇರ್ಪಡಿಸುವ ಕಠಿಣ ಕಾರ್ಯವನ್ನು ವಿವರಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತವೆ.
- ಯೇಸು ಮತ್ತು ತನ್ನ ಶಿಷ್ಯರು ತಮ್ಮ ನಂಬಿಕೆಯಲ್ಲಿ ಪರೀಕ್ಷಿಸಲ್ಪಡುವುದರ ಕುರಿತಾಗಿ ಯೇಸು ಸೀಮೋನ ಪೇತ್ರನಿಗೆ ಹೇಳುತ್ತಿರುವಾಗ “ಸೋಸು” ಎನ್ನುವ ಪದವನ್ನು ಉಪಯೋಗಿಸಿರುತ್ತಾನೆ.
- ಈ ಪದಗಳನ್ನು ಅನುವಾದ ಮಾಡುವುದಕ್ಕೆ ಈ ಚಟುವಟಿಕೆಗಳನ್ನು ಸೂಚಿಸುವ ಪದಗಳು ಅನುವಾದ ಮಾಡುವ ಭಾಷೆಯಲ್ಲಿದ್ದರೆ ಉಪಯೋಗಿಸಿರಿ; ಬಹುಶಃ ಅನುವಾದಗಳು “ಅಲುಗಾಡಿಸುವುದು” ಅಥವಾ “ಗಾಳಿ ಹಾಕು” ಎಂದಾಗಿರಬಹುದು. ತೂರುವುದು ಅಥವಾ ಸೋಸುವುದು ಗೊತ್ತಿಲ್ಲದಿದ್ದರೆ, ಈ ಪದಗಳನ್ನು ಧೂಳಿ, ಹೊಟ್ಟು ಎನ್ನುವವುಗಳಿಂದ ಧಾನ್ಯವನನ್ನು ಬೇರ್ಪಡಿಸುವ ವಿಧಾನವನ್ನು ಸೂಚಿಸುವುದರ ಮೂಲಕ ಅಥವಾ ಈ ಪದ್ಧತಿಯನ್ನು ವಿವರಿಸುವುದರ ಮೂಲಕ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಹೊಟ್ಟು, ಧಾನ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಶಯಾ.21:10
- ಲೂಕ.22:31-32
- ಮತ್ತಾಯ.03:10-12
- ಜ್ಞಾನೋ.20:7-8
- ರೂತಳು.03:1-2

ಪದ ಡೇಟಾ:

- Strong's: H2219, H5128, H5130, G4425, G4617

ತೆಲೆಮಾರು

ಪದದ ಅರ್ಥವಿವರಣೆ:

“ತಲೆಮಾರು” ಎನ್ನುವ ಪದವು ಒಂದೇ ಕಾಲದಲ್ಲಿ ಹುಟ್ಟಿ ಬೆಳೆದ ಜನರ ಗುಂಪನ್ನು ಸೂಚಿಸುತ್ತದ ಅವರೆಲ್ಲರೂ ಒಂದೇ ಸಾಮಾನ್ಯ ಅವಧಿಯಲ್ಲಿ ಜನಿಸುತ್ತಾರೆ ಮತ್ತು ಆದ್ದರಿಂದ ಒಂದೇ ವಯಸ್ಸಿನವರು.

- ತಲೆಮಾರು ಎನ್ನುವ ಪದವು ಕಾಲಾವಧಿಯನ್ನು ಸೂಚಿಸುತ್ತದೆ. ಸತ್ಯವೇದ ಕಾಲಗಳಲ್ಲಿ ತಲೆಮಾರು ಎನ್ನುವದನ್ನು ಸಹಜವಾಗಿ 40 ವರ್ಷಗಳ ಕಾಲವನ್ನು ಪರಿಗಣಿಸಲಾಗಿರುತ್ತದೆ.
- ತಂದೆತಾಯಿಗಳು ಮತ್ತು ಅವರ ಮಕ್ಕಳು ಎರಡು ವಿಭಿನ್ನ ತಲೆಮಾರುಗಳಿಂದ ಬಂದಿರುವವರಾಗಿರುತ್ತಾರೆ.
- ಸತ್ಯವೇದದಲ್ಲಿ “ತಲೆಮಾರು” ಎನ್ನುವ ಪದವನ್ನು ಒಂದೇ ರೀತಿಯ ಗುಣಲಕ್ಷಣಗಳನ್ನು ಹೊಂದಿರುವ ಜನರನ್ನು ಸೂಚಿಸುವುದಕ್ಕೆ ಅಲಂಕಾರಿಕ ಭಾಷೆಯಲ್ಲಿ ಉಪಯೋಗಿಸಿರುತ್ತಾರೆ.

ಅನುವಾದ ಸಲಹೆಗಳು

- “ಈ ತಲೆಮಾರು” ಅಥವಾ “ಈ ತಲೆಮಾರಿನ ಜನರು” ಎನ್ನುವ ಮಾತನ್ನು “ಈಗ ಜೀವಿಸುತ್ತಿರುವ ಜನರು” ಅಥವಾ “ಈಗಿನ ಜನರು” ಎಂದೂ ಅನುವಾದ ಮಾಡಬಹುದು.
- “ಈ ದುಷ್ಟ ತಲೆಮಾರಿನವರು” ಎನ್ನುವ ಮಾತನ್ನು “ಈಗ ಜೀವಿಸುತ್ತಿರುವ ದುಷ್ಟ ಜನರು” ಎಂದೂ ಅನುವಾದ ಮಾಡಬಹುದು.
- “ತಲೆಮಾರಿನಿಂದ ಇನ್ನೊಂದು ತಲೆಮಾರುವರೆಗೆ” ಅಥವಾ “ಒಂದು ತಲೆಮಾರಿನಿಂದ ಬರುವಂತಹ ಇನ್ನೊಂದು ತಲೆಮಾರುವರೆಗೆ” ಎನ್ನುವ ಮಾತನ್ನು “ಈಗ ಜೀವಿಸುತ್ತಿರುವ ಜನರು, ಅದೇರೀತಿಯಾಗಿ ಅವರ ಮಕ್ಕಳು ಮತ್ತು ಅವರ ಮೊಮ್ಮೊಕ್ಕಳು” ಅಥವಾ “ಪ್ರತಿಯೊಂದು ಕಾಲಾವಧಿಯಲ್ಲಿ ಜನರು” ಅಥವಾ “ಈ ಕಾಲಾವಧಿಯಲ್ಲಿರುವ ಜನರು ಮತ್ತು ಭವಿಷ್ಯತ್ತು ಕಾಲದಲ್ಲಿರುವ ಜನರು” ಅಥವಾ “ಎಲ್ಲಾ ಜನರು ಮತ್ತು ಅವರ ವಂಶದವರು” ಎಂದೂ ಅನುವಾದ ಮಾಡಬಹುದು.
- “ಬರುವಂತಹ ತಲೆಮಾರುಗಳು ಆತನನ್ನು ಸೇವಿಸುತ್ತಾರೆ; ಅವರು ಯೆಹೋವನ ಕುರಿತಾಗಿ ಬರುವ ತಲೆಮಾರಿನವರಿಗೆ ಹೇಳುತ್ತಾರೆ” ಎನ್ನುವ ಮಾತನ್ನು “ಭವಿಷ್ಯತ್ತಿನಲ್ಲಿ ಬರುವ ಅನೇಕ ಜನರು ಯೆಹೋವನನ್ನು ಸೇವಿಸುತ್ತಾರೆ ಮತ್ತು ಆತನ ಕುರಿತಾಗಿ ಅವರ ಮಕ್ಕಳು ಮತ್ತು ಮೊಮ್ಮೊಕ್ಕಳು ಹೇಳುತ್ತಾರೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ವಂಶದವರು, ದುಷ್ಟ, ಪೂರ್ವಜ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.15:19-21
- ವಿಮೋ.03:13-15
- ಆದಿ.15:16
- ಆದಿ.17:07
- ಮಾರ್ಕ.08:12
- ಮತ್ತಾಯ.11:16
- ಮತ್ತಾಯ.23:34-36
- ಮತ್ತಾಯ.24:34

ಪದ ಡೇಟಾ:

Strong’s: H1755, H1859, H8435, G1074

ತೊಂದರೆ, ಪೀಡಿತ, ದುಃಖ, ನೋವು, ಸಂಕಷ್ಟಗಳು

ಪದದ ಅರ್ಥ ವಿವರಣೆ:

“ತೊಂದರೆ” ಎನ್ನುವ ಪದಕ್ಕೆ ಒಬ್ಬರಿಗೆ ತೊಂದರೆ ಕೊಡುವುದು ಅಥವಾ ಅವರಿಗೆ ದುಃಖವನ್ನುಂಟು ಮಾಡುವುದು ಎಂದರ್ಥ. “ದುಃಖ” ಎನ್ನುವುದು ಒಂದು ರೋಗ, ಭಾವೋದ್ವೇಗದ ದುಃಖ, ಅಥವಾ ಇವರಿಂದ ಉಂಟಾಗುವ ಇತರ ದುರಂತ.

- ದೇವರು ತನ್ನ ಜನರನ್ನು ರೋಗಗಳಿಂದ ನೋಯಿಸಿದನು ಅಥವಾ ಅವರೆಲ್ಲರು ಆತನ ಬಳಿಗೆ ಹಿಂದಿರುಗಿ ಬರಲು ಮತ್ತು ಅವರ ಪಾಪಗಳನ್ನು ಒಪ್ಪಿಕೊಳ್ಳಲು ಅವರಿಗೆ ಇತರ ಎಲ್ಲಾ ಸಂಕಷ್ಟಗಳನ್ನು ಕೊಟ್ಟಿದ್ದನು.
- ಐಗುಪ್ತ ಅರಸನು ದೇವರಿಗೆ ಅವಿಧೇಯತೆಯನ್ನು ತೋರಿಸಿದ್ದರಿಂದ ದೇವರು ಐಗುಪ್ತ ಜನರಿಗೆ ತೊಂದರೆಯನ್ನುಂಟು ಮಾಡಿದನು ಅಥವಾ ಮಾರಿರೋಗಗಳು ಬರುವಂತೆ ಮಾಡಿದನು.
- “ತೊಂದರೆಯಲ್ಲಿರುವುದು” ಎಂದರೆ ಒಂದು ವಿಧವಾದ ಬಾಧೆಯನ್ನು ಅನುಭವಿಸುವುದು ಎಂದರ್ಥ, ಅದು ರೋಗ, ಹಿಂಸೆ, ಅಥವಾ ಭಾವೋದ್ವೇಗದ ದುಃಖವಾಗಿರಬಹುದು.

ಅನುವಾದ ಸಲಹೆಗಳು:

- ಇನ್ನೊಬ್ಬರಿಗೆ ತೊಂದರೆ ಕೊಡುವುದೆನ್ನುವುದನ್ನು “ಇನ್ನೊಬ್ಬರು ತೊಂದರೆಗಳನ್ನು ಅನುಭವಿಸುವಂತೆ ಮಾಡುವುದು” ಅಥವಾ “ಇನ್ನೊಬ್ಬರು ಹಿಂಸೆಯನ್ನು ಹೊಂದುವಂತೆ ಮಾಡುವುದು” ಅಥವಾ “ತೊಂದರೆಯಾಗುವಂತೆ ಮಾಡುವುದು” ಎಂದು ಅನುವಾದ ಮಾಡಬಹುದು.
- “ತೊಂದರೆ” ಎನ್ನುವ ಪದವನ್ನು ಕೆಲವೊಂದು ಸಂದರ್ಭಗಳಲ್ಲಿ “ನಡೆಯುವಂತೆ ಮಾಡುವುದು” ಅಥವಾ “ಬರುವಂತೆ ಮಾಡುವುದು” ಅಥವಾ “ಹಿಂಸೆಯನ್ನು ತರುವುದು” ಎಂದು ಅನುವಾದ ಮಾಡಬಹುದು.
- “ಕುಷ್ಠ ರೋಗದಿಂದ ಇನ್ನೊಬ್ಬರಿಗೆ ತೊಂದರೆಯನ್ನು ಕೊಡು” ಎನ್ನುವ ಮಾತನ್ನು “ಕುಷ್ಠ ರೋಗದಿಂದ ನರಳುವಂತೆ ಇನ್ನೊಬ್ಬರಿಗೆ ತೊಂದರೆ ಕೊಡು” ಎಂದು ಅನುವಾದ ಮಾಡಬಹುದು.
- ಜನರನ್ನು ಅಥವಾ ಪ್ರಾಣಿಗಳನ್ನು “ತೊಂದರೆಗೊಳಿಸುವುದಕ್ಕೆ,” ಒಂದು ಮಾರಿರೋಗವನ್ನು ಅಥವಾ ವಿಪತ್ತನ್ನು ಕಳುಹಿಸಿದಾಗ, ಇದನ್ನು “ಹಿಂಸೆ ಹೊಂದುವಂತೆ ಮಾಡು” ಎಂದು ಅನುವಾದ ಮಾಡಬಹುದು.
- ಸಂದರ್ಭ ಅನುಸಾರವಾಗಿ, “ತೊಂದರೆ” ಎನ್ನುವ ಪದವನ್ನು “ವಿಪತ್ತು” ಅಥವಾ “ರೋಗ” ಅಥವಾ “ಹಿಂಸೆ” ಅಥವಾ “ಮಹಾ ಯಾತನೆ” ಎಂಬುದಾಗಿಯೂ ಅನುವಾದ ಮಾಡಬಹುದು.
- “ಇನ್ನೊಂದರಿಂದ ಪೀಡಿಸಲ್ಪಡುವದು” ಎನ್ನುವ ಮಾತನ್ನು “ಇನ್ನೊಂದರಿಂದ ಹಿಂಸಿಸಲ್ಪಡುವುದು” ಅಥವಾ “ರೋಗವನ್ನು ಅನುಭವಿಸುವುದು” ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕುಷ್ಟು ರೋಗ, ಮಾರಿ ರೋಗ, ಶ್ರಮೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಥೆಸ್ಸ.01:6-8
- ಆಮೋಸ.05:12-13
- ಕೊಲೊಸ್ಸ.01:24-27
- ವಿಮೋ.22:22-24
- ಆದಿ.12:17-20
- ಆದಿ.15:12-13
- ಆದಿ.29:31-32

ಪದ ಡೇಟಾ:

- Strong's: H205, H1790, H3013, H3905, H3906, H4157, H4523, H6031, H6039, H6040, H6041, H6862, H6869, H6887, H7451, H7489, H7667, G2346, G2347, G2552, G2553, G2561, G3804, G4777, G4778, G5003

ತೊಟ್ಟಿ, ತೊಟ್ಟಿಗಳು, ಬಾವಿ, ಬಾವಿಗಳು

ಪದದ ಅರ್ಥವಿವರಣೆ:

“ಬಾವಿ” ಮತ್ತು “ತೊಟ್ಟಿ” ಎನ್ನುವ ಪದಗಳು ಸತ್ಯವೇದ ಕಾಲದಲ್ಲಿ ನೀರಿಗೋಸ್ಕರ ಉಪಯೋಗಿಸಿರುವ ಎರಡು ವಿಧವಾದ ಆಧಾರಗಳನ್ನು ಸೂಚಿಸುತ್ತವೆ.

- ಬಾವಿ ಎಂದರೆ ನೆಲವನ್ನು ತುಂಬಾ ಆಳವಾಗಿ ಅಗೆದು ಮಾಡುವ ಒಂದು ಗುಂಡಿಯಾಗಿರುತ್ತದೆ, ಈ ರೀತಿ ಮಾಡುವುದರ ಮೂಲಕ ಅದರೊಳಗಿಂದ ನೀರು ಹರಡಿಬರುತ್ತವೆ.
- ತೊಟ್ಟಿ ಎನ್ನುವುದು ಬಂಡೆಯ ಮೇಲೆ ಅಗೆದು ಮಾಡಿದ ಆಳವಾದ ಗುಂಡಿ, ಇದನ್ನು ಮಳೆ ಬಂದಾಗ ನೀರನ್ನು ಸಂಗ್ರಹಿಸುವುದಕ್ಕೆ ಅಥವಾ ಕೊಳವಾಗಿ ಉಪಯೋಗಿಸುತ್ತಿದ್ದರು.
- ತೊಟ್ಟಿಗಳು ಸಾಧಾರಣವಾಗಿ ಬಂಡೆಯ ಮೇಲೆ ಅಗೆದು ತಯಾರಿಸುತ್ತಾರೆ, ಮತ್ತು ಅದರಲ್ಲಿ ನೀರು ಉಳಿದಿರುವಂತೆ ಮಾಡಲು ಅದರ ಮೇಲೆ ಪ್ಲಾಸ್ಟರ್ ಹಾಕಿರುತ್ತಾರೆ. ಪ್ಲಾಸ್ಟರ್ ಸೀಳಿ ಹೋದಾಗ “ಮುರಿಯಲ್ಪಟ್ಟ ತೊಟ್ಟಿಯಾಗಿ” ಮಾರ್ಪಡುತ್ತದೆ, ಈಗ ಈ ತೊಟ್ಟಿಯಲ್ಲಿರುವ ನೀರೆಲ್ಲವೂ ಸೋರುತ್ತವೆ.
- ತೊಟ್ಟಿಗಳು ಅನೇಕಬಾರಿ ಜನರ ಮನೆಗಳ ಮೇಲ್ಚಾವಣಿಯ ಮೇಲಿ ಮಳೆ ನೀರು ಬಿದ್ದಾಗ, ಅವುಗಳನ್ನು ಸಂಗ್ರಹಿಸಿ ಇಡುವುದಕ್ಕೆ ಅವರ ಮನೆಗಳ ಪ್ರಾಂಗಣದಲ್ಲಿ ಕಂಡುಬರುತ್ತಿರುತ್ತವೆ.
- ಬಾವಿಗಳು ಅನೇಕಬಾರಿ ಕುಟುಂಬಗಳು ಅಥವಾ ಸಮುದಾಯವೆಲ್ಲಾ ಬಂದು ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಸುಲಭವಾಗುವ ಸ್ಥಳದಲ್ಲಿ ಕಂಡುಬರುತ್ತವೆ.
- ಜನರಿಗೂ ಮತ್ತು ಪಶು ಪ್ರಾಣಿಗಳಿಗೂ ನೀರು ತುಂಬಾ ಪ್ರಾಮುಖ್ಯವಾದದ್ದರಿಂದ, ಬಾವಿಯನ್ನು ಉಪಯೋಗಿಸುವ ಹಕ್ಕು ಅನೇಕಬಾರಿ ಸಂಘರ್ಷಗಳಿಗೆ ಮತ್ತು ಜಗಳಗಳಿಗೆ ಕಾರಣವಾಗುತ್ತಿತ್ತು.
- ಬಾವಿಗಳು ಮತ್ತು ತೊಟ್ಟಿಗಳಲ್ಲಿ ಯಾವುದೂ ಬೀಳದಂತೆ ಅವುಗಳ ಮೇಲೆ ಒಂದು ದೊಡ್ಡ ಬಂಡೆಯನ್ನು ಹಾಕಿ ಮುಚ್ಚುತ್ತಿದ್ದರು. ಅನೇಕಬಾರಿ ಬಾದಲಿಗೆ ಅಥವಾ ಕೊಡಕ್ಕೆ ಹಗ್ಗವನ್ನು ಕಟ್ಟಿ, ಕೆಳ ಭಾಗದಿಂದ ನೀರನ್ನು ಮೇಲಕ್ಕೆ ತರುತ್ತಿದ್ದರು.
- ಕೆಲವೊಂದುಬಾರಿ ಒಣ ತೊಟ್ಟಿಯನ್ನು ಯಾರಾದರೊಬ್ಬರನ್ನು ಬಂಧಿಸುವುದಕ್ಕೆ ಉಪಯೋಗಿಸುತ್ತಿದ್ದರು, ಹೀಗೆ ಯೋಸೇಫ ಮತ್ತು ಯೆರೆಮಿಯಾರವರಿಗೆ ನಡೆದಿದೆ.

ಅನುವಾದ ಸಲಹೆಗಳು:

- “ಬಾವಿ” ಎನ್ನುವ ಪದವನ್ನು ಅನುವಾದ ಮಾಡುವುದರಲ್ಲಿ “ನೀರಿರುವ ಆಳವಾದ ಗುಂಡಿ” ಅಥವಾ “ನೀರಿನ ಬುಗ್ಗೆಗಾಗಿ ಅಗೆದಿರುವ ಆಳವಾದ ಗುಂಡಿ” ಅಥವಾ “ನೀರನ್ನು ತೆಗೆಯುವುದಕ್ಕಿರುವ ಆಳವಾದ ಗುಂಡಿ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ತೊಟ್ಟಿ” ಎನ್ನುವ ಪದವನ್ನು “ಕಲ್ಲಿನ ನೀರಿನ ಹೊಂಡ” ಅಥವಾ “ನೀರಿಗಾಗಿ ಮಾಡಿರುವ ಆಳವಾದ ಮತ್ತು ಕಿರಿದಾದ ಕುಳಿ” ಅಥವಾ “ನೀರನ್ನು ಸಂಗ್ರಹಿಸುವುದಕ್ಕೆ ಒಳಚರಂಡಿ” ಎಂದೂ ಅನುವಾದ ಮಾಡಬಹುದು.
- ಈ ಎಲ್ಲಾ ಮಾತುಗಳು ಒಂದೇ ರೀತಿಯ ಅರ್ಥವನ್ನು ಕೊಡುತ್ತವೆ. ಈ ಪದಗಳ ಮಧ್ಯೆದಲ್ಲಿರುವ ಮುಖ್ಯ ವ್ಯತ್ಯಾಸವೇನೆಂದರೆ ಬಾವಿಯಿಂದ ನಿರಂತರವಾಗಿ ನೀರನ್ನು ಪಡೆದುಕೊಳ್ಳಬಹುದು, ಆದರೆ ತೊಟ್ಟಿಗಳಿಂದ ಮಳೆ ನೀರನ್ನು ಮಾತ್ರವೇ ಪಡೆದುಕೊಳ್ಳುವುದಕ್ಕೆ ಅವಕಾಶ.

(ಈ ಪದಗಳನ್ನು ಸಹ ನೋಡಿರಿ : ಯೆರೆಮಿಯಾ, ಸೆರೆ, ಕಲಹ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.11:15-17
- 2 ಸಮು.17:17-18
- ಆದಿ.16:13-14
- ಲೂಕ.14:4-6
- ಅರಣ್ಯ.20:17

ಪದ ಡೇಟಾ:

- Strong's: H875, H883, H953, H1360, H3653, H4599, H4726, H4841, G4077, G5421

ತೋಳ, ತೋಳಗಳು, ಅಡಗಿ ನಾಯಿಗಳು

ಪದದ ಅರ್ಥವಿವರಣೆ:

ತೋಳ ಎನ್ನುವುದು ಅಡವಿ ನಾಯಿಗೆ ಸಮಾನವಾಗಿರುವ ಅತೀ ಕ್ರೂರವಾಗಿ ಮಾಂಸ ತಿನ್ನುವ ಒಂದು ಪ್ರಾಣಿಯಾಗಿರುತ್ತದೆ.

- ತೋಳಗಳು ಸಹಜವಾಗಿ ಗುಂಪು ಗುಂಪುಗಳಾಗಿ ಹೋಗಿ ಬೇಟೆ ಮಾಡುತ್ತವೆ ಮತ್ತು ಅತೀ ಜಾಣತನದಿಂದ ರಹಸ್ಯವಾಗಿ ತಮ್ಮ ಬೇಟೆಯನ್ನು ಕೊಂಬೆಗಳಿಂದ ಮಾಡುತ್ತವೆ.
- ಸತ್ಯವೇದದಲ್ಲಿ "ತೋಳಗಳು" ಎನ್ನುವ ಪದವನ್ನು ಕುರಿಗಳಿಗೆ ಹೋಲಿಸಲ್ಪಟ್ಟ ವಿಶ್ವಾಸಿಗಳನ್ನು ನಾಶ ಮಾಡುವ ಸುಳ್ಳು ಪ್ರವಾದಿಗಳನ್ನು ಅಥವಾ ಸುಳ್ಳು ಬೋಧಕರನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ. ಸುಳ್ಳು ಬೋಧನೆಯು ಜನರಿಗೆ ಹಾನಿಯನ್ನು ಮಾಡುವ ತಪ್ಪು ಕಾರ್ಯಗಳನ್ನು ನಂಬುವಂತೆ ಮಾಡುತ್ತದೆ.
- ಈ ಹೋಲಿಕೆಯು ಕುರಿಗಳು ವಿಶೇಷವಾಗಿ ತೋಳಗಳಿಂದ ದುರ್ಬಲವಾದ ರೀತಿಯಲ್ಲಿ ಧಾಳಿ ಮಾಡಿ, ಅವುಗಳನ್ನು ತಿನ್ನುತ್ತವೆಯೆನ್ನುವ ಸತ್ಯಾಂಶ ಮೇಲೆ ಆಧಾರವಾಗಿರುತ್ತದೆ, ಯಾಕಂದರೆ ಅವು ಬಲಹೀನ ಪ್ರಾಣಿಗಳು ಮತ್ತು ತಮ್ಮನ್ನು ತಾವು ಸಂರಕ್ಷಿಸಿಕೊಳ್ಳುವುದಿಲ್ಲ.

ಅನುವಾದ ಸಲಹೆಗಳು:

- ಈ ಪದವನ್ನು 'ಅಡವಿ ನಾಯಿ" ಅಥವಾ "ಅಡವಿ ಪ್ರಾಣಿ" ಎಂದೂ ಅನುವಾದ ಮಾಡಬಹುದು.
- ಅಡವಿ ನಾಯಿಗಳಿಗೆ "ನರಿ" ಅಥವಾ "ಉತ್ತರ ಅಮೇರಿಕಾದ ತೋಳ" ಎಂದೆನ್ನುವ ಬೇರೆ ಹೆಸರುಗಳಾಗಿರುತ್ತವೆ.
- ಜನರನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಿದಾಗ, ಇದನ್ನು "ಕುರಿಗಳ ಮೇಲೆ ಧಾಳಿ ಮಾಡುವ ಪ್ರಾಣಿಗಳಂತೆ ಜನರನ್ನು ಹಾನಿ ಮಾಡುವ ದುಷ್ಟ ಜನರು" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದುಷ್ಟ, ಸುಳ್ಳು ಪ್ರವಾದಿ, ಕುರಿಗಳು, ಬೋಧಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.20:28-30
- ಯೆಶಯಾ.11:6-7
- ಯೋಹಾನ.10:11-13
- ಲೂಕ.10:3-4
- ಮತ್ತಾಯ.07:15-17
- ಜೆಫನ್ಯ.03:3-4

ಪದ ಡೇಟಾ:

- Strong's: H2061, H3611, G3074

ದಂಗೆ,ತಿರುಗಿ ಬೀಳು, ದಂಗೆ ಏಳು, ತಿರುಗಿ ಬೀಳುವವರು

ಪದದ ಅರ್ಥವಿವರಣೆ:

“ದಂಗೆ” ಎನ್ನುವ ಪದಕ್ಕೆ ಒಬ್ಬರ ಅಧಿಕಾರಕ್ಕೆ ಒಳಗಾಗದಂತೆ ತಿರಸ್ಕಾರ ಮಾಡುವುದು ಎಂದರ್ಥ. “ದಂಗೆ ಏಳು” ಒಬ್ಬ ವ್ಯಕ್ತಿ ಅನೇಕ ಬಾರಿ ಅವಿಧೇಯತೆಯನ್ನು ತೋರಿಸಿ, ಅನೇಕ ಕೆಟ್ಟ ಕಾರ್ಯಗಳನ್ನು ಮಾಡುತ್ತಾ ಇರುವನು. ಈ ರೀತಿಯ ವ್ಯಕ್ತಿಯನ್ನು “ತಿರುಗಿ ಬೀಳುವವನು” ಎಂದು ಕರೆಯುತ್ತಾರೆ.

- ಒಬ್ಬ ವ್ಯಕ್ತಿಗೆ ತನ್ನ ಅಧಿಕಾರಿಗಳು ಇದನ್ನು ಮಾಡಬೇಡ ಎಂದು ಹೇಳಿದಾಗ ಆ ವ್ಯಕ್ತಿ ತಿರುಗಿಬೀಳುವನು ಅಥವಾ ಮೀರುವನು.
- ಅಧಿಕಾರಿಗಳು ಮಾಡಲು ಹೇಳಿದ ಕಾರ್ಯಗಳನ್ನು ಮಾಡದೇ ತಿರಸ್ಕಾರ ಮಾಡುವುದರ ಮೂಲಕ ಕೂಡ ಆ ವ್ಯಕ್ತಿಯು ತಿರುಗಿ ಬೀಳುವ ಅವಕಾಶವಿದೆ.
- ಕೆಲವೊಂದು ಬಾರಿ ಜನರು ತಮ್ಮ ಸರ್ಕಾರಕ್ಕೆ ಅಥವಾ ತಮ್ಮನ್ನು ಆಳುವ ನಾಯಕನಿಗೆ ವಿರುದ್ಧ ತಿರುಗಿಬೀಳುವರು.
- “ದಂಗೆ” ಎನ್ನುವ ಪದವನ್ನು “ಅವಿಧೇಯತೆ ತೋರಿಸು” ಅಥವಾ “ಪ್ರತಿಭಟಿಸು” ಎಂದು ಸಂದರ್ಭಾನುಗುಣವಾಗಿ ಅನುವಾದ ಮಾಡಬಹುದು.
- “ದಂಗೆ ಏಳು” ಎನ್ನುವ ಪದವನ್ನು “ನಿರಂತರವಾಗಿ ಅವಿಧೇಯತೆ ತೋರಿಸು” ಅಥವಾ “ವಿಧೇಯತೆ ತೋರಿಸದೆ ತಿರಸ್ಕಾರ ಮಾಡು” ಎಂದೂ ಅನುವಾದ ಮಾಡಬಹುದು.
- "ತಿರುಗಿ ಬೀಳುವವನು” ಎನ್ನುವ ಪದಕ್ಕೆ “ವಿಧೇಯತೆ ತೋರಿಸುವುದಕ್ಕೆ ತಿರಸ್ಕಾರ ಮಾಡುವುದು” ಅಥವಾ “ಅವಿಧೇಯತೆ” ಅಥವಾ “ನಿಯಮವನ್ನು ಉಲ್ಲಂಘನೆ ಮಾಡುವುದು” ಎಂದರ್ಥ.
- “ತಿರುಗಿ ಬೀಳುವವನು” ಅಥವಾ “ತಿರುಗಿಬೀಳುವವನು” ಎನ್ನುವ ಮಾತು ನಿಯಮಗಳನ್ನು ಉಲ್ಲಂಘನೆ ಮಾಡುವುದರ ಮೂಲಕ, ನಾಯಕರನ್ನು ಮತ್ತು ಇತರರನ್ನು ದಾಳಿ ಮಾಡುವುದರ ಮೂಲಕ ಆಳುತ್ತಿರುವ ಅಧಿಕಾರಿಗಳ ವಿರುದ್ಧ ಬಹಿರಂಗವಾಗಿ ತಿರುಗಿಬೀಳುವ ಜನರ ಗುಂಪಿನ ಸಂಸ್ಥೆಯನ್ನೂ ಸೂಚಿಸುತ್ತದೆ. ಅನೇಕಬಾರಿ ತಿರುಗಿಬೀಳುವುದರಲ್ಲಿ ಅನೇಕರನ್ನು ಸೇರಿಸಿಕೊಳ್ಳುವುದಕ್ಕೆ ಅವರು ಪ್ರಯತ್ನಪಡುತ್ತಿರುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ಪಾಲಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.12:18-19
- 1 ಸಮು.12:14
- 1 ತಿಮೊಥೆ.01:9-11
- 2 ಪೂರ್ವ.10:17-19
- ಅಪೊ.ಕೃತ್ಯ.21:38
- ಲೂಕ.23:19

ಸತ್ಯವೇದದಿಂದ ಉದಾಹರಣೆಗಳು:

- **14:14** ಇಸ್ರಾಯೇಲ್ಯರು ಸುಮಾರು ನಲವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಸಂಚಾರ ಮಾಡಿದನಂತರ, ದೇವರಿಗೆ ವಿರುದ್ಧವಾಗಿ _ ಮೀರಿದ _ ಪ್ರತಿಯೊಬ್ಬರೂ ಸತ್ತುಹೋದರು.
- **18:07** ಇಸ್ರಾಯೇಲ್ ದೇಶದ ಹತ್ತು ಕುಲಗಳು ರೆಹೋಬ್ಬಾಮನಿಗೆ ವಿರುದ್ಧವಾಗಿ **ತಿರುಗಿಬಿದ್ದರು**.
- **18:09** ಯಾರೋಬ್ಬಾಮನು ದೇವರಿಗೆ ವಿರುದ್ಧವಾಗಿ _ ತಿರುಗಿಬಿದ್ದನು _ ಮತ್ತು ಜನರೆಲ್ಲರು ಪಾಪ ಮಾಡುವುದಕ್ಕೆ ಕಾರಣನಾದನು.
- **18:13** ಯೆಹೂದ್ಯರಲ್ಲಿ ಅನೇಕ ಜನರು ದೇವರಿಗೆ ವಿರುದ್ಧವಾಗಿ _ ಮೀರಿದರು _ ಮತ್ತು ಇತರ ದೇವತೆಗಳನ್ನು ಆರಾಧಿಸಿದರು.
- **20:07** ಆದರೆ ಕೆಲವು ವರ್ಷಗಳಾದನಂತರ, ಯೆಹೂದ್ಯ ಅರಸನು ಬಾಬೆಲೋನಿಯಗೆ ವಿರುದ್ಧವಾಗಿ _ ಮೀರಿದನು _ .
- **45:03** “ಹಠಮಾರಿಗಳೇ, ಮನಶುದ್ಧಿಯೂ, ಕರ್ಣಶುದ್ಧಿಯೂ ಇಲ್ಲದವರೇ, ನಿಮ್ಮ ಪಿತೃಗಳು ಹೇಗೋ ಹಾಗೆಯೇ ನೀವೂ ಯಾವಾಗಲೂ ಪವಿತ್ರಾತ್ಮನಿಗೆ _ ಎದುರಾಗಿ _ ನಡೆಯುವವರಾಗಿದ್ದೀರಿ. ಎಂದು ಅವನು (ಸ್ತೆಫೆನ) ಹೇಳಿದನು.

ಪದ ಡೇಟಾ:

- Strong's: H4775, H4776, H4777, H4779, H4780, H4784, H4805, H5327, H5627, H5637, H6586, H6588, H7846, G3893, G4955

ದರ್ಶನ ಗುಡಾರ

ಸತ್ಯಾಂಶಗಳು:

"ದರ್ಶನ ಗುಡಾರ" ಎನ್ನುವ ಮಾತು ಗುಡಾರವನ್ನು ನಿರ್ಮಿಸುವುದಕ್ಕೆ ಮುಂಚಿತವಾಗಿ ದೇವರು ಮೋಶೆಯೊಂದಿಗೆ ಭೇಟಿಯಾಗಿರುವ ತಾತ್ಕಾಲಿಕವಾದ ಗುಡಾರವನ್ನು ಸೂಚಿಸುತ್ತದೆ.

- ದರ್ಶನ ಗುಡಾರವು ಇಸ್ರಾಯೆಲ್ಯರು ಇಳುಕೊಳ್ಳುವ ಶಿಬಿರಕ್ಕೆ ಆಚೆಯಲ್ಲಿರುತ್ತಿತ್ತು.
- ಮೋಶೆ ದೇವರೊಂದಿಗೆ ಭೇಟಿಯಾಗುವುದಕ್ಕೆ ದರ್ಶನ ಗುಡಾರಕ್ಕೆ ಹೊರಟು ಹೋದಾಗ, ದೇವರ ಪ್ರಸನ್ನತೆಯು ಅಲ್ಲಿದೆಯೆಂದು ಸೂಚಿಸುವುದಕ್ಕೆ ಗುಡಾರದ ಪ್ರವೇಶ ದ್ವಾರದಲ್ಲಿ ಮೇಘ ಸ್ತಂಭವು ನಿಲ್ಲುತ್ತಿತ್ತು.
- ಇಸ್ರಾಯೇಲ್ಯರು ಗುಡಾರವನ್ನು ಕಟ್ಟಿದನಂತರ, ತಾತ್ಕಾಲಿಕವಾದ ಗುಡಾರದ ಅಗತ್ಯತೆ ಇನ್ನು ಮೇಲೆ ಎಂದಿಗೂ ಇದ್ದಿಲ್ಲ ಮತ್ತು "ದರ್ಶನ ಗುಡಾರ" ಎನ್ನುವ ಮಾತು ಕೆಲವೊಂದುಬಾರಿ ಗುಡಾರವನ್ನು ಸೂಚಿಸುವುದಕ್ಕೂ ಉಪಯೋಗಿಸಿದ್ದಾರೆ.

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲ್, ಮೋಶೆ, ಸ್ತಂಭ, ಗುಡಾರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.02:28-29
- ಯೆಹೋ.19:51
- ಯಾಜಕ.01:1-2
- ಅರಣ್ಯ.04:31-32

ಸತ್ಯವೇದದಿಂದ ಉದಾಹರಣೆಗಳು:

- **13:08** ಇಸ್ರಾಯೇಲ್ಯರು ಗುಡಾರವನ್ನು ಹೇಗೆ ನಿರ್ಮಿಸಬೇಕೆನ್ನುವ ಮಾಹಿತಿಯೆಲ್ಲವನ್ನು ದೇವರು ಅವರಿಗೆ ಕೊಟ್ಟಿದ್ದರು. ಇದನ್ನು _ ದರ್ಶನ ಗುಡಾರ _ ಎಂದು ಕರೆಯುತ್ತಿದ್ದರು, ಮತ್ತು ಇದರಲ್ಲಿ ಎರಡು ಕೊಠಡಿಗಳಿರುತ್ತಿದ್ದವು, ಇವುಗಳನ್ನು ಬೇರ್ಪಡಿಸುವುದಕ್ಕೆ ಮಧ್ಯೆದಲ್ಲಿ ದೊಡ್ಡ ತೆರೆಯನ್ನು ಹಾಕಿಟ್ಟಿರುತ್ತಿದ್ದರು.
- **13:09** ದೇವರ ಧರ್ಮಶಾಸ್ತ್ರಕ್ಕೆ ಅವಿಧೇಯತೆ ತೋರಿಸುವವನು ದೇವರಿಗೆ ಹೋಮವನ್ನಾಗಿ _ ದರ್ಶನ ಗುಡಾರ _ ಮುಂದೆಯಿರುವ ಯಜ್ಞವೇದಿಯ ಬಳಿಗೆ ಒಂದು ಪ್ರಾಣಿಯನ್ನು ತೆಗೆದುಕೊಂಡುಬರಬೇಕು.
- **14:08** ದೇವರು ತುಂಬಾ ಕೋಪಗೊಂಡಿದ್ದನು ಮತ್ತು _ ದರ್ಶನದ ಗುಡಾರದ _ ಬಳಿಗೆ ಬರುತ್ತಿದ್ದನು.
- **18:02** _ ದರ್ಶನ ಗುಡಾರಕ್ಕೆ _ ಬದಲಾಗಿ, ಜನರು ಈಗ ದೇವರನ್ನು ದೇವಾಲಯದ ಬಳಿ ಆತನಿಗೆ ಹೋಮಗಳನ್ನು ಅರ್ಪಿಸಿದ್ದಾರೆ ಮತ್ತು ಆತನನ್ನು ಆರಾಧಿಸಿದ್ದಾರೆ.

ಪದ ಡೇಟಾ:

- Strong's: H168, H4150

ದರ್ಶನ, ದರ್ಶನಗಳು, ಕಲ್ಪನೆ

ಸತ್ಯಾಂಶಗಳು:

“ದರ್ಶನ” ಎನ್ನುವ ಪದವು ಒಬ್ಬ ವ್ಯಕ್ತಿ ಯಾವುದಾದರೊಂದನ್ನು ನೋಡುವುದನ್ನು ಸೂಚಿಸುತ್ತದೆ. ದೇವರು ಜನರಿಗೆ ಸಂದೇಶವನ್ನು ಕೊಡುವುದಕ್ಕೆ ತೋರಿಸುವ ಅಸಾಧಾರಣವಾದ ಅಥವಾ ಪ್ರಕೃತಾತೀತವಾದ ವಿಷಯವನ್ನು ಇದು ವಿಶೇಷವಾಗಿ ಸೂಚಿಸುತ್ತದೆ.

- ಸಾಧಾರಣವಾಗಿ ದರ್ಶನಗಳನ್ನು ಒಬ್ಬ ವ್ಯಕ್ತಿ ಎಚ್ಚರವಾಗಿದ್ದಾಗಲೇ ಕಾಣಿಸಿಕೊಳ್ಳುತ್ತವೆ. ಏನೇಯಾದರೂ, ಕೆಲವೊಂದುಬಾರಿ ದರ್ಶನ ಎನ್ನುವುದು ಒಬ್ಬ ವ್ಯಕ್ತಿ ಮಲಗಿರುವಾಗ ಬಂದ ಕನಸಿನಲ್ಲಿ ನೋಡುವ ಯಾವುದಾದರೊಂದನ್ನು ಸೂಚಿಸುತ್ತದೆ.
- ದೇವರು ಜನರಿಗೆ ಅತೀ ಪ್ರಾಮುಖ್ಯವಾದದ್ದನ್ನು ಹೇಳುವುದಕ್ಕೆ ದರ್ಶನಗಳನ್ನು ಕಳುಹಿಸುತ್ತಾನೆ. ಉದಾಹರಣೆಗೆ, ಅನ್ಯರನ್ನು ಆಹ್ವಾನಿಸಬೇಕೆಂದು ದೇವರು ಬಯಸಿದ್ದಾನೆಂದು ಪೇತ್ರನಿಗೆ ತಿಳಿಸುವುದಕ್ಕೆ, ಆತನು ಅವನಿಗೆ ಒಂದು ದರ್ಶನವನ್ನು ತೋರಿಸಿದ್ದನು.

ಅನುವಾದ ಸಲಹೆಗಳು:

- “ದರ್ಶನವನ್ನು ನೋಡಿದೆ” ಎನ್ನುವ ಮಾತನ್ನು “ದೇವರಿಂದ ಬಂದ ಅಸಹಜವಾದದ್ದನ್ನು ನೋಡಿದೆ” ಅಥವಾ “ದೇವರು ಅವನಿಗೆ ಒಂದು ವಿಶೇಷವಾದದ್ದನ್ನು ತೋರಿಸಿದನು” ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಭಾಷೆಗಳಲ್ಲಿ “ದರ್ಶನ” ಮತ್ತು “ಕನಸು” ಎನ್ನುವ ಪದಗಳಿಗೆ ಬೇರೊಂದು ವಿಭಿನ್ನ ಪದಗಳನ್ನು ಒಳಗೊಂಡಿರದಿರಬಹುದು. “ದಾನಿಯೇಲನು ತನ್ನ ಮನಸ್ಸಿನಲ್ಲಿ ಕನಸುಗಳನ್ನು ಮತ್ತು ದರ್ಶನಗಳನ್ನು ಹೊಂದಿಕೊಂಡಿದ್ದನು” ಎನ್ನುವಂಥಹ ವಾಕ್ಯವನ್ನು “ದಾನಿಯೇಲನು ಮಲಗಿದಾಗ ಕನಸನ್ನು ಕಂಡಿದ್ದನು ಮತ್ತು ಅವನು ಅಸಹಜವಾದ ವಿಷಯಗಳನ್ನು ನೋಡುವುದಕ್ಕೆ ದೇವರು ಕಾರಣವಾಗಿದ್ದನು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕನಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.09:10-12
- ಅಪೊ.ಕೃತ್ಯ.10:3-6
- ಅಪೊ.ಕೃತ್ಯ.10:9-12
- ಅಪೊ.ಕೃತ್ಯ.12:9-10
- ಲೂಕ.01:21-23
- ಲೂಕ.24:22-24
- ಮತ್ತಾಯ.17:9-10

ಪದ ಡೇಟಾ:

- Strong's: H2376, H2377, H2378, H2380, H2384, H4236, H4758, H4759, H7203, H7723, H8602, G3701, G3705, G3706

ದಹನ ಬಲಿ, ದಹನ ಬಲಿಗಳು, ಅಗ್ನಿಯಿಂದ ಹೋಮ

ಪದದ ಅರ್ಥವಿವರಣೆ:

“ದಹನ ಬಲಿ” ಎನ್ನುವುದು ದೇವರಿಗೆ ಮಾಡುವ ಒಂದು ವಿಧವಾದ ಹೋಮ, ಇದನ್ನು ಯಜ್ಞವೇದಿಯ ಮೇಲೆ ದೇವರಿಗೆ ಸಮರ್ಪಿಸುವುದನ್ನು ಇಟ್ಟು ಬೆಂಕಿಯಿಂದ ಸುಟ್ಟುತ್ತಾರೆ. ಜನರ ಪಾಪಗಳಿಗೆ ಪ್ರಾಯಶ್ಚಿತ್ತವನ್ನು ಮಾಡುವುದಕ್ಕೆ ಇದು ಕೊಡಲ್ಪಟ್ಟಿರುತ್ತದೆ. ಇದನ್ನು “ಸುಗಂಧ ಹೋಮ” ಎಂದೂ ಕರೆಯುತ್ತಾರೆ.

- ಈ ಹೋಮವನ್ನು ಮಾಡುವುದಕ್ಕೆ ಸಹಜವಾಗಿ ಕುರಿ ಅಥವಾ ಟಗರುಗಳಂತಹ ಪ್ರಾಣಿಗಳನ್ನು ಉಪಯೋಗಿಸುತ್ತಾರೆ, ಆದರೆ ಎತ್ತುಗಳನ್ನು, ಪಕ್ಷಿಗಳನ್ನೂ ಉಪಯೋಗಿಸುತ್ತಾರೆ.
- ಈ ದಹನ ಬಲಿಯಲ್ಲಿ ಪ್ರಾಣಿ ಚರ್ಮವನ್ನು ಬಿಟ್ಟು ಉಳಿದ ಮಾಂಸವನ್ನೆಲ್ಲಾ ಸುಡಬೇಕಾಗಿರುತ್ತದೆ. ಚರ್ಮವನ್ನು ಯಾಜಕನಿಗೆ ಕೊಡುತ್ತಾರೆ ಅಥವಾ ಅದನ್ನು ಬಚ್ಚಿಡುತ್ತಾರೆ.
- ಪ್ರತಿದಿನ ಎರಡುಸಲ ದಹನ ಬಲಿಗಳನ್ನು ಅರ್ಪಿಸಬೇಕೆಂದು ಯೆಹೂದ್ಯರಿಗೆ ದೇವರು ಆಜ್ಞಾಪಿಸಿದ್ದರು.

(ಈ ಪದಗಳನ್ನು ಸಹ ನೋಡಿರಿ : ಯಜ್ಞವೇದಿ, ಪ್ರಾಯಶ್ಚಿತ್ತ, ಎತ್ತು, ಯಾಜಕ, ತ್ಯಾಗ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.40:5-7
- ಆದಿ.08:20-22
- ಆದಿ.22:1-3
- ಯಾಜಕ.03:3-5
- ಮಾರ್ಕ.12:32-34

ಪದ ಡೇಟಾ:

- Strong's: H801, H5930, H7133, H8548, G3646

ದಾನ ಧರ್ಮ

ಪದದ ಅರ್ಥ ವಿವರಣೆ:

“ದಾನ ಧರ್ಮ” ಎನ್ನುವ ಈ ಪದವು ಹಣವನ್ನು, ಆಹಾರವನ್ನು, ಅಥವಾ ಬಡ ಜನಕ್ಕೆ ಸಹಾಯ ಮಾಡುವುದಕ್ಕೆ ಕೊಡುವ ಇತರ ವಸ್ತುಗಳನ್ನು ಸೂಚಿಸುತ್ತದೆ.

- ದಾನಧರ್ಮಗಳನ್ನು ಕೊಡುವುದೆನ್ನುವುದು ಅನೇಕಬಾರಿ ಕೆಲವೊಂದು ಜನರು ತಮ್ಮ ಧರ್ಮದ ಪ್ರಕಾರ ನೀತಿವಂತರಾಗುವುದಕ್ಕೆ ಮಾಡುವ ಕಾರ್ಯಗಳಾಗಿ ಕಾಣಿಸಿಕೊಳ್ಳುತ್ತವೆ.
- ದಾನಧರ್ಮವನ್ನು ಜನರೆಲ್ಲರು ನೋಡುವಂತೆ ಬಹಿರಂಗ ಸ್ಥಳಗಳಲ್ಲಿ ಮಾಡಬಾರದೆಂದು ಯೇಸು ಹೇಳಿದ್ದಾರೆ.
- ಈ ಪದವನ್ನು “ಹಣ” ಅಥವಾ “ಬಡ ಜನರಿಗೆ ಉಡುಗೊರೆಗಳು” ಅಥವಾ “ಬಡ ಜನರಿಗೆ ಸಹಾಯ” ಎಂದು ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- /ಅಪೊ.ಕೃತ್ಯ.03:1-3
- /ಮತ್ತಾಯ.06:1-2
- /ಮತ್ತಾಯ.06:3-4

ಪದ ಡೇಟಾ:

- Strong's: G1654

ದಾರಿತಪ್ಪುವುದು, ದಾರಿ ತಪ್ಪಿಹೋಗುವುದು, ದಾರಿ ತಪ್ಪಿಹೋದ, ದಾರಿ ತಪ್ಪುವಂತೆ ನಡೆಸು, ತಪ್ಪಿಸಿಕೊಳ್ಳು,

ಪದದ ಅರ್ಥವಿವರಣೆ:

"ದಾರಿತಪ್ಪುವುದು" ಮತ್ತು "ದಾರಿ ತಪ್ಪಿಹೋಗುವುದು" ಎನ್ನುವ ಪದಗಳಿಗೆ ದೇವರ ಚಿತ್ತಕ್ಕೆ ಅವಿಧೇಯರಾಗುವುದು ಎಂದರ್ಥ. "ತಪ್ಪಿಹೋದ" ಜನರು ತಾವು ದೇವರಿಗೆ ಅವಿಧೇಯತೆಯನ್ನು ತೋರಿಸುವುದಕ್ಕೆ ಇತರ ಜನರನ್ನು ಅಥವಾ ಇತರ ಪರಿಸ್ಥಿತಿಗಳನ್ನು ಅನುಮತಿಸಿಕೊಂಡಿರುತ್ತಾರೆ.

- "ದಾರಿತಪ್ಪುವುದು" ಎನ್ನುವ ಪದವು ಸ್ಪಷ್ಟವಾಗಿ ಒಂದು ಮಾರ್ಗವನ್ನು ಅಥವಾ ಒಂದು ಸುರಕ್ಷಿತವಾದ ಸ್ಥಳವನ್ನು ಬಿಟ್ಟು ತಪ್ಪಾದ ಮತ್ತು ಅತೀ ಅಪಾಯಕರವಾದ ಮಾರ್ಗಕ್ಕೆ ಹೋಗುವ ದೃಶ್ಯವನ್ನು ನಮಗೆ ಕೊಡುತ್ತಿದೆ.
- ತನ್ನ ಕುರುಬನ ಹಸಿರು ಹುಲ್ಲುಗಾವಲನ್ನು ಬಿಟ್ಟು ತಪ್ಪಿಹೋದ ಕುರಿಯನ್ನು "ದಾರಿ ತಪ್ಪಿಹೋಗಿದೆ" ಎಂದು ಕರೆಯುತ್ತಾರೆ. ದೇವರು ಪಾಪ ಸ್ವಭಾವದಿಂದ ಇರುವ ಜನರನ್ನು "ತಪ್ಪಿಹೋಗಿರುವ" ಮತ್ತು ತನ್ನ ಕುರುಬನನ್ನು ಬಿಟ್ಟು ಹೋಗಿರುವ ಕುರಿಗೆ ಹೋಲಿಸುತ್ತಿದ್ದಾರೆ.

ಅನುವಾದ ಸಲಹೆಗಳು:

- "ದಾರಿ ತಪ್ಪಿಹೋಗುವುದು" ಎನ್ನುವ ಮಾತನ್ನು "ದೇವರಿಂದ ದೂರ ಆಗುವುದು" ಅಥವಾ "ದೇವರ ಚಿತ್ತದಿಂದ ದೂರಾಗಿ ಕೆಟ್ಟ ಮಾರ್ಗವನ್ನು ಹಿಡಿಯುವುದು " ಅಥವಾ "ದೇವರಿಗೆ ವಿಧೇಯತೆ ತೋರಿಸುವುದನ್ನು ನಿಲ್ಲಿಸು" ಅಥವಾ "ದೇವರಿಂದ ದೂರಾಗುವ ಮಾರ್ಗದಲ್ಲಿ ಜೀವಿಸು" ಎಂದೂ ಅನುವಾದ ಮಾಡಬಹುದು.
- "ದಾರಿ ತಪ್ಪಿಹೋಗುವಂತೆ ಒಬ್ಬರನ್ನು ನಡೆಸುವುದು" ಎನ್ನುವ ಮಾತನ್ನು "ಯಾರಾದರೊಬ್ಬರು ದೇವರಿಗೆ ಅವಿಧೇಯತೆಯನ್ನು ತೋರಿಸುವುದಕ್ಕೆ ಕಾರಣವಾಗು" ಅಥವಾ "ಇನ್ನೊಬ್ಬರು ದೇವರಿಗೆ ವಿಧೇಯತೆಯನ್ನು ತೋರಿಸುವುದನ್ನು ನಿಲ್ಲಿಸುವುದಕ್ಕೆ ಪ್ರಭಾವಗೊಳಿಸು" ಅಥವಾ "ಕೆಟ್ಟ ಮಾರ್ಗದಲ್ಲಿ ಹೋಗುತ್ತಿರುವ ನಿಮ್ಮನ್ನು ಅನುಸರಿಸುವುದಕ್ಕೆ ಇನ್ನೊಬ್ಬರನ್ನು ಪ್ರೇರೇಪಿಸು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅವಿಧೇಯತೆ, ಕುರುಬ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.03:07
- 2 ತಿಮೊಥೆ.03:10-13
- ವಿಮೋ.23:4-5
- ಯೆಹೆ.48:10-12
- ಮತ್ತಾಯ.18:13
- ಮತ್ತಾಯ.24:05
- ಕೀರ್ತನೆ.058:03
- ಕೀರ್ತನೆ.119:110

ಪದ ಡೇಟಾ:

- Strong's: H5080, H7683, H7686, H8582, G4105, G5351

ದಾಳಿಂಬೆ ಹಣ್ಣು, ದಾಳಿಂಬೆ ಹಣ್ಣುಗಳು

ಸತ್ಯಾಂಶಗಳು:

ದಾಳಿಂಬೆ ಹಣ್ಣು ಎನ್ನುವುದು ಅನೇಕ ಬೀಜಗಳಿದ್ದು ಅವುಗಳ ಸುತ್ತ ತಿನ್ನಬಹುದಾದ ಕೆಂಪು ತಿರುಳು ಇರುವ ದಪ್ಪವಾಗಿರುವ ಒಂದು ವಿಧವಾದ ಹಣ್ಣಾಗಿರುತ್ತದೆ.

- ಹಣ್ಣಿನ ಮೇಲ್ಭಾಗವೆಲ್ಲಾ ಬಣ್ಣದಲ್ಲಿ ಕೆಂಪಾಗಿರುತ್ತದೆ ಮತ್ತು ಬೀಜಗಳ ಸುತ್ತಲು ಇರುವ ತಿರುಳು ಹೊಳೆಯುತ್ತಾ ಕೆಂಪಾಗಿರುತ್ತದೆ.
- ದಾಳಿಂಬೆ ಹಣ್ಣುಗಳು ಸರ್ವ ಸಾಧಾರಣವಾಗಿ ಬಿಸಿ ಹೆಚ್ಚಾಗಿದ್ದು, ಒಣ ವಾತಾವರಣವು ಇರುವ ದೇಶಗಳಲ್ಲಿ ಹೇರಳವಾಗಿ ಬೆಳೆಯುತ್ತವೆ, ಐಗುಪ್ತ ಮತ್ತು ಇಸ್ರಾಯೇಲ್ ದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತವೆ.
- ಕಾನಾನ್ ನೀರಾವರಿ ಇರುವ ಮತ್ತು ಫಲವತ್ತಾದ ಮಣ್ಣು ಇರುವ ದೇಶವೆಂದು ಯೆಹೋವ ಇಸ್ರಾಯೇಲ್ಯರಿಗೆ ವಾಗ್ದಾನ ಮಾಡಿದ್ದನು, ಇದರಿಂದ ಆಹಾರವು ಅಲ್ಲಿ ಸಾಕಷ್ಟು ಇರುತ್ತಿತ್ತು, ಆ ಆಹಾರಗಳಲ್ಲಿ ದಾಳಿಂಬೆಹಣ್ಣುಗಳೂ ಇದ್ದವು.
- ಸೊಲೊಮೋನನ ದೇವಾಲಯ ನಿರ್ಮಾಣದಲ್ಲಿ ದಾಳಿಂಬೆ ಹಣ್ಣಿನ ಆಕಾರದಲ್ಲಿ ಕಂಚು ಅಲಂಕಾರಗಳೂ ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಕಂಚು, ಕಾನಾನ್, ಐಗುಪ್ತ, ಸೊಲೊಮೋನ್, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.25:16-17
- ಧರ್ಮೋ.08:7-8
- ಯೆರೆ.52:22-23
- ಅರಣ್ಯ..13:23-24
- ಐಗುಪ್ತ

ಪದ ಡೇಟಾ:

- Strong's: H7416

ದಿನ

ಪದದ ಅರ್ಥವಿವರಣೆ

“ದಿನ” ಎನ್ನುವ ಪದ ಸೂರ್ಯೋದಯದಿಂದ 24 ಗಂಟೆಗಳ ಕಾಲವನ್ನು ಅಕ್ಷರಾರ್ಥವಾಗಿ ಸೂಚಿಸುತ್ತಿದೆ. ಈ ಪದವನ್ನು ಅಲಂಕಾರ ರೂಪದಲ್ಲಿ ಸಹ ಉಪಯೋಗಿಸುತ್ತಾರೆ.

- ಇಸ್ರಾಯೇಲ್ಯರಿಗೆ ಮತ್ತು ಯಹೂದಿಯರಿಗೆ, ಒಂದು ದಿನ ಸೂರ್ಯ ಮುಳುಗುವ ಸಮಯದಿಂದ ಮತ್ತೊಂದು ದಿನ ಸೂರ್ಯ ಮುಳುಗುವವರೆಗೂ ಒಂದು ದಿನವಾಗಿರುತ್ತದೆ.
- “ದಿನ” ಎನ್ನುವ ಪದವನ್ನು ಹೆಚ್ಚು ಸಮಯವನ್ನು ಸೂಚಿಸಲು ಅಲಂಕಾರ ರೂಪದಲ್ಲಿ ಉಪಯೋಗಿಸುತ್ತಾರೆ, ಉದಾಹರಣೆಗೆ “ಯೆಹೋವನ ದಿನ” ಅಥವಾ “ಅಂತ್ಯ ದಿನ”.
- ಈ ಅಲಂಕಾರ ಪದಗಳನ್ನು ಅನುವಾದಿಸಲು ಕೆಲವೊಂದು ಭಾಷೆಗಳಲ್ಲಿ ಬೇರೆ ಪದಗಳನ್ನು ಉಪಯೋಗಿಸುತ್ತಾರೆ ಅಥವಾ “ದಿನ” ಎನ್ನುವ ಪದಕ್ಕೆ ಅಲಂಕಾರ ರೂಪವನ್ನು ಬಳಸುವದಿಲ್ಲ.
- “ದಿನ” ಎನ್ನುವ ಪದಕ್ಕೆ “ಸಮಯ” ಅಥವಾ “ಕಾಲ” ಅಥವಾ “ಸಂಧರ್ಭ” ಅಥವಾ “ಕಾರ್ಯಕ್ರಮ” ಎನ್ನುವಂತೆ ಸಂಧರ್ಭಾನುಸಾರವಾಗಿ ಬೇರೆ ಅನುವಾದಗಳುಂಟು.

ಅನುವಾದ ಸಲಹೆಗಳು:

- ಬೆಳಕು ಇದ್ದಾಗ ದಿನದ ಭಾಗವನ್ನು ಸೂಚಿಸುವ ನಿಮ್ಮ ಭಾಷೆಯಲ್ಲಿರುವ ಪದವನ್ನು ಬಳಸಿಕೊಂಡು ಈ ಪದವನ್ನು ಅಕ್ಷರಶಃ “ದಿನ” ಅಥವಾ “ಹಗಲಿನ ಸಮಯ” ಎಂದು ಭಾಷಾಂತರಿಸುವುದು ಉತ್ತಮ.
- “ದಿನ” ದ ಇತರ ಅನುವಾದಗಳು ಸಂದರ್ಭಕ್ಕೆ ಅನುಗುಣವಾಗಿ “ಹಗಲಿನ ಸಮಯ,” “ಸಮಯ,” “ಸಂದರ್ಭ” ಅಥವಾ “ಘಟನೆ” ಅನ್ನು ಒಳಗೊಂಡಿರಬಹುದು.

(ಈ ಪದಗಳನ್ನು ಸಹ ನೋಡಿರಿ : ನ್ಯಾಯ ತೀರ್ಪಿನ ದಿನ, ಅಂತ್ಯ ದಿನ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.20:06
- ದಾನಿ.10:04
- ಎಜ್ರಾ.06:15
- ಎಜ್ರಾ.06:19
- ಮತ್ತಾಯ.09:15

ಪದ ಡೇಟಾ:

- Strong's: H3117, H3118, H6242, G2250

ದೀಪ, ದೀಪಗಳು

ಪದದ ಅರ್ಥವಿವರಣೆ:

“ದೀಪ” ಎನ್ನುವ ಪದವು ಸಾಧಾರಣವಾಗಿ ಬೆಳಕನ್ನು ಕೊಡುವ ಯಾವುದಾದರೊಂದನ್ನು ಸೂಚಿಸುತ್ತದೆ. ಸತ್ಯವೇದ ಕಾಲಗಳಲ್ಲಿ ಉಪಯೋಗಿಸಿದ ದೀಪಗಳು ಸಹಜವಾಗಿ ಎಣ್ಣೆಯ ದೀಪಗಳಾಗಿದ್ದವು.

ಸತ್ಯವೇದ ಕಾಲಗಳಲ್ಲಿ ಬಳಸಿದ ದೀಪದ ಪ್ರಕಾರವು ಇಂಧನ ಮೂಲವನ್ನು ಹೊಂದಿರುವ ಸಣ್ಣ ಪಾತ್ರೆಯಾಗಿದೆ, ಸಾಮಾನ್ಯವಾಗಿ ಎಣ್ಣೆಯು ಉರಿಯುವಾಗ ಬೆಳಕನ್ನು ನೀಡುತ್ತದೆ.

- ಸಾಧಾರಣವಾದ ಎಣ್ಣೆಯ ದೀಪಗಳು ಸಹಜವಾಗಿ ಮಣ್ಣಿನ ಬಟ್ಟಲುಗಳಾಗಿರುತ್ತವೆ ಮತ್ತು ಅದರಲ್ಲಿ ಆಲಿವ್ ಎಣ್ಣೆಯನ್ನು ಹಾಕಿರುತ್ತಾರೆ, ಬೆಳಕು ಕೊಡಲು ಉರಿಯುವುದಕ್ಕೆ ಆ ಎಣ್ಣೆಯಲ್ಲಿ ಬತ್ತಿಯನ್ನು ಇಟ್ಟಿರುತ್ತಾರೆ.
- ಕೆಲವೊಂದು ದೀಪಗಳಿಗೆ, ಬಟ್ಟಲು ಅಥವಾ ಜಾರ್ ಎನ್ನುವುದು ಅಂಡಾಕಾರದಲ್ಲಿರುತ್ತದೆ, ಬತ್ತಿಯನ್ನು ಹಿಡಿದಿರಲು ಒಂದು ಕಡೆಗೆ ಹತ್ತಿರವಾಗಿರುತ್ತದೆ.
- ಎಣ್ಣೆಯ ದೀಪವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆಗೆದುಕೊಂಡು ಹೋಗುವರು ಅಥವಾ ಒಂದು ಸ್ತಂಭದ ಮೇಲೆ ಇಟ್ಟಿರುವರು, ಇದರಿಂದ ಅದರ ಬೆಳಕು ಕೋಣೆ ಅಥವಾ ಮನೆಯನ್ನು ತುಂಬುತ್ತದೆ.
- ವಾಕ್ಯದಲ್ಲಿ ಬೆಳಕಿಗೆ ಮತ್ತು ಜೀವನಕ್ಕೆ ಗುರುತುಗಳಾಗಿ ಅನೇಕವಾದ ಅಲಂಕಾರಿಕ ವಿಧಾನಗಳಲ್ಲಿ ದೀಪಗಳು ಉಪಯೋಗಿಸಲ್ಪಟ್ಟಿವೆ.

(ಈ ಪದಗಳನ್ನು ಸಹ ನೋಡಿರಿ : ದೀಪಸ್ತಂಭ, ಜೀವನ, ಬೆಳಕು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.11:34-36
- ವಿಮೋ.25:3-7
- ಲೂಕ.08:16-18
- ಮತ್ತಾಯ.05:15-16
- ಮತ್ತಾಯ.06:22-24
- ಮತ್ತಾಯ.25:1-4

ಪದ ಡೇಟಾ:

- Strong's: H3940, H3974, H4501, H5215, H5216, G2985, G3088

ದೀಪಸ್ತಂಭ, ದೀಪಸ್ತಂಭಗಳು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ದೀಪಸ್ತಂಭ" ಸಾಧಾರಣವಾಗಿ ಕೊಠಡಿಗೆ ಬೆಳಕನ್ನು ಕೊಡುವುದಕ್ಕೆ ಒಂದು ಚಿಕ್ಕ ಕಟ್ಟು ಮೇಲೆ ಇಟ್ಟಿರುವ ದೀಪವನ್ನು ಸೂಚಿಸುತ್ತದೆ.

- ಒಂದು ಸಾಧಾರಣವಾದ ದೀಪಸ್ತಂಭವು ಸಹಜವಾಗಿ ಒಂದು ದೀಪವನ್ನು ಮಾತ್ರ ಹೊಂದಿರುತ್ತದೆ ಮತ್ತು ಅದನ್ನು ಮಣ್ಣಿನಿಂದ, ಕಟ್ಟಿಗೆಯಿಂದ ಅಥವಾ ಲೋಹದಿಂದ (ಅಂದರೆ ತಾಮ್ರ, ಬೆಳ್ಳಿ ಅಥವಾ ಬಂಗಾರದಿಂದ ಮಾಡಿರುತ್ತಾರೆ) ಮಾಡಿರುತ್ತಾರೆ.
- ಯೆರೂಸಲೇಮಿನ ಆಲಯದಲ್ಲಿ ಒಂದು ವಿಶೇಷವಾದ ಬಂಗಾರದ ದೀಪಸ್ತಂಭವಿದ್ದಿತ್ತು, ಇದು ಏಳು ಕೊಂಬೆಗಳನ್ನು ಹೊಂದಿ, ಅದರ ಮೇಲೆ ಏಳು ದೀಪಗಳನ್ನು ಒಳಗೊಂಡಿತ್ತು.

ಅನುವಾದ ಸಲಹೆಗಳು:

- ಈ ಪದವನ್ನು "ದೀಪ ಪೀಠ" ಅಥವಾ "ದೀಪವನ್ನು ಇಡುವುದಕ್ಕೆ ಒಂದು ಚಿಕ್ಕ ಕಟ್ಟೆ" ಅಥವಾ "ದೀಪವನ್ನು ಇಡುವ ಸ್ಥಳ" ಎಂದೂ ಅನುವಾದ ಮಾಡಬಹುದು.
- ಆಲಯ ದೀಪಸ್ತಂಭಕ್ಕಾಗಿ, ಇದನ್ನು "ಏಳು ದೀಪಗಳ ಸ್ತಂಭ" ಅಥವಾ "ಏಳು ದೀಪಗಳೊಂದಿಗಿರುವ ಬಂಗಾರದ ಪೀಠ" ಎಂದೂ ಅನುವಾದ ಮಾಡಬಹುದು.
- ಸತ್ಯವೇದ ವಾಕ್ಯಗಳಿಗೆ ಸಂಬಂಧಪಟ್ಟಂತೆ ಏಳು ಕೊಂಬೆಗಳಿರುವ ದೀಪಸ್ತಂಭ ಮತ್ತು ಸಾಧಾರಣವಾದ ದೀಪಸ್ತಂಭಗಳ ಚಿತ್ರಗಳನ್ನು ಒಳಪಡಿಸಿದರೆ ಅನುವಾದದಲ್ಲಿ ತುಂಬಾ ಸಹಾಯಕರವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಕಂಚು, ಬಂಗಾರ, ದೀಪ, ಬೆಳಕು, ಬೆಳ್ಳಿ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.05:5-6
- ವಿಮೋ.37:17-19
- ಮಾರ್ಕ.04:21-23
- ಮತ್ತಾಯ.05:15-16
- ಪ್ರಕ.01:12-13
- ಪ್ರಕ.01:19-20

ಪದ ಡೇಟಾ:

- Strong's: H4501, G3087

ದೀರ್ಘಶಾಂತಿ, ದೀರ್ಘಶಾಂತಿಯಿಂದ, ಅಸಹನೆ

ಪದದ ಅರ್ಥವಿವರಣೆ:

“ದೀರ್ಘಶಾಂತಿ” ಮತ್ತು “ದಿರ್ಘಶಾಂತಿಯಿಂದ” ಎನ್ನುವ ಪದಗಳು ಕಷ್ಟದ ಸಂದರ್ಭಗಳಲ್ಲಿ ಸಂರ್ಕ್ಷಿಸುವುದನ್ನು ಸೂಚಿಸುತ್ತವೆ. ಅನೇಕಬಾರಿ ಸಹನೆ ಎನ್ನುವುದು ಕಾಯುವುದನ್ನು ಒಳಗೊಂಡಿರುತ್ತದೆ.

- ಜನರು ಯಾರಾದರೊಬ್ಬರೊಂದಿಗೆ ದೀರ್ಘಶಾಂತಿಯಿಂದ ಇದ್ದಾರೆಂದರೆ ಒಬ್ಬ ವ್ಯಕ್ತಿ ಏನೇ ತಪ್ಪು ಮಾಡಿದರೂ ಆ ವ್ಯಕ್ತಿಯನ್ನು ಕ್ಷಮಿಸಿ, ಪ್ರೀತಿಸುವುದು ಎಂದರ್ಥ.
- ದೇವರ ಜನರು ಕಷ್ಟಗಳನ್ನು ಎದುರುಗೊಳ್ಳುವಾಗ ದೀರ್ಘಶಾಂತಿಯಿಂದ ಇರಬೇಕೆಂದು ಮತ್ತು ಒಬ್ಬರೊಂದಿಗೆ ಒಬ್ಬರು ಸಹನೆಯಿಂದ

ಇರಬೇಕೆಂದು ಸತ್ಯವೇದವು ಬೋಧಿಸುತ್ತದೆ.

- ಈ ಕರುಣೆಯ ಕಾರಣದಿಂದಲೇ ಅವರು ಶಿಕ್ಷೆಯನ್ನು ಹೊಂದಿಕೊಳ್ಳುವುದಕ್ಕೆ ಅರ್ಹರಾದ ಪಾಪಿಗಳಾಗಿದ್ದರೂ ದೇವರು ತನ್ನ ಜನರೊಂದಿಗೆ ದೀರ್ಘಶಾಂತಿಯಿಂದ ಇದ್ದಾನೆ,

(ಈ ಪದಗಳನ್ನು ಸಹ ನೋಡಿರಿ : ಸಹಿಸು, ಕ್ಷಮಿಸು, ಪಟ್ಟು ಹಿಡಿದಿರುವುದು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೇತ್ರ.03:20
- 2 ಪೇತ್ರ.03:8-9
- ಇಬ್ರಿ.06:11-12
- ಮತ್ತಾಯ.18:28-29
- ಕೀರ್ತನೆ.037:7
- ಪ್ರಕ.02:02

ಪದ ಡೇಟಾ:

- Strong's: H750, H753, H2342, H3811, H6960, H7114, G420, G463, G1933, G3114, G3115, G3116, G5278, G5281

ದುರ್ಗ, ದುರ್ಗಗಳು, ಕೋಟೆ ನಿರ್ಮಾಣಗಳು, ಬಲವಾದ, ಕೋಟೆ, ಕೋಟೆಗಳು

ಪದದ ಅರ್ಥವಿವರಣೆ:

"ದುರ್ಗ" ಮತ್ತು "ಕೋಟೆ" ಎನ್ನುವ ಪದಗಳೆರಡು ಶತ್ರು ಸೈನಿಕರ ಧಾಳಿಗೆ ವಿರುದ್ಧವಾಗಿ ತಮ್ಮನ್ನು ತಾವು ಸಂರಕ್ಷಿಸಿಕೊಳ್ಳುವ ಸುರಕ್ಷಿತವಾದ ಸ್ಥಳಗಳನ್ನು ಸೂಚಿಸುತ್ತದೆ. "ಕೋಟೆಯ" ಎನ್ನುವ ಪದವು ಧಾಳಿಯಿಂದ ಸುರಕ್ಷಿತವಾಗಿರುವುದಕ್ಕೆ ತಂಗುವ ಸ್ಥಳವನ್ನು ಅಥವಾ ಪಟ್ಟಣವನ್ನು ವಿವರಿಸುತ್ತದೆ.

- ಅನೇಕಬಾರಿ, ದುರ್ಗಗಳು ಮತ್ತು ಕೋಟೆಗಳು ಮನುಷ್ಯರು ನಿರ್ಮಿಸಿದ ಸಂರಕ್ಷಣೆಯ ಗೋಡೆಗಳಾಗಿರುತ್ತವೆ. ಅವರು ಸ್ವಾಭಾವಿಕವಾದ ಸಂರಕ್ಷಿತವಾದ ಅಡೆತಡೆಗಳ ಸ್ಥಳಗಳನ್ನು ಹೊಂದಿರುತ್ತಾರೆ, ಉದಾಹರಣೆಗೆ, ಬಂಡೆಯ ಕಮರಿಗಳು ಅಥವಾ ಎತ್ತರವಾದ ಪರ್ವತಗಳು.
- ಜನರು ದೊಡ್ಡ ದೊಡ್ಡ ಗೋಡೆಗಳನ್ನು ಅಥವಾ ಶತ್ರುವು ಬಂದು ಕೆಡಿಸುವುದಕ್ಕಾಗದ ಇತರ ಕಟ್ಟಡಗಳನ್ನು ಕಟ್ಟುವುದರ ಮೂಲಕ ಬಲವಾದ ದುರ್ಗಗಳನ್ನು ಕಟ್ಟುತ್ತಾರೆ.
- "ದುರ್ಗ" ಅಥವಾ "ಕೋಟೆ" ಎನ್ನುವ ಪದಗಳನ್ನು "ಭದ್ರವಾಗಿರುವ ಸುರಕ್ಷಿತ ಸ್ಥಳ" ಅಥವಾ "ಬಲವಾದ ಸಂರಕ್ಷಣೆಯ ಸ್ಥಳ" ಎಂದೂ ಅನುವಾದ ಮಾಡಬಹುದು.
- "ಬಲವಾದ ಪಟ್ಟಣ" ಎನ್ನುವ ಮಾತನ್ನು "ಸುರಕ್ಷಿತವಾಗಿ ಸಂರಕ್ಷಿಸುವ ಪಟ್ಟಣ" ಅಥವಾ "ಬಲವಾಗಿ ಕಟ್ಟಲ್ಪಟ್ಟಿರುವ ಪಟ್ಟಣ" ಎಂದೂ ಅನುವಾದ ಮಾಡಬಹುದು.
- ದೇವರನ್ನು ನಂಬುವ ಪ್ರತಿಯೊಬ್ಬರಿಗೆ ಆತನೇ ದುರ್ಗವು ಅಥವಾ ಕೋಟೆಯು ಆಗಿದ್ದಾನೆಂದು ಸೂಚಿಸುವುದಕ್ಕೂ ಈ ಪದವನ್ನು ಅಲಂಕಾರಿಕವಾಗಿ ಉಪಯೋಗಿಸಲಾಗಿರುತ್ತದೆ. (ನೋಡಿರಿ: ರೂಪಕಾಲಂಕಾರ)
- "ದುರ್ಗ" ಎನ್ನುವ ಪದಕ್ಕೆ ಇತರ ಅಲಂಕಾರಿಕ ಅರ್ಥವು ಭದ್ರತೆಯಲ್ಲಿ ತಪ್ಪಾಗಿ ಭರವಸೆಯನ್ನಿಟ್ಟುಕೊಂಡಿರುವ ವ್ಯಕ್ತಿಯನ್ನು ಸೂಚಿಸುತ್ತದೆ, ಉದಾಹರಣೆ, ಸುಳ್ಳು ದೇವರು ಅಥವಾ ಯೆಹೋವನಿಗೆ ಬದಲಾಗಿ ಬೇರೆ ಇನ್ನೊಂದನ್ನು ಪೂಜಿಸುವುದು. ಇದನ್ನು "ಸುಳ್ಳು ದುರ್ಗಗಳು" ಎಂದೂ ಅನುವಾದ ಮಾಡಬಹುದು.
- ಈ ಪದವನ್ನು ಅನುವಾದ ಮಾಡುವಾಗ ಕೋಟೆಯ ಪರಿಕಲ್ಪನೆಗಿಂತ ಹೆಚ್ಚಾಗಿ ಸುರಕ್ಷಿತಯನ್ನು ಸೂಚಿಸುವ "ಆಶ್ರಯ" ಎನ್ನುವ ಪದಕ್ಕಿರುವ ಅರ್ಥಕ್ಕೆ ಬೇರೆಯಾಗಿರುವಂತೆ ನೋಡಿಕೊಳ್ಳಬೇಕು.

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ಸುಳ್ಳು ದೇವರು, ಆಶ್ರಯ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಕೊರಿಂಥ.10:3-4
- 2 ಅರಸ.08:10-12
- 2 ಸಮು.05:8-10
- ಅಪೊ.ಕೃತ್ಯ.21:34-36
- ಹಬ.01:10-11

ಪದ ಡೇಟಾ:

- Strong's: H490, H553, H759, H1001, H1002, H1003, H1219, H1225, H2388, H4013, H4026, H4581, H4526, H4679, H4685, H4686, H4692, H4693, H4694, H4869, H5794, H5797, H5800, H6438, H6696, H6877, H7682, G3794, G3925

ದುರ್ಗತಿ

ಪದದ ಅರ್ಥವಿವರಣೆ:

“ದುರ್ಗತಿ” ಎನ್ನುವ ಪದವು ತಪ್ಪಿಸಿಕೊಳ್ಳುವುದಕ್ಕಾಗಲಾರದ ಅಥವಾ ಬೇಡಿಕೊಳ್ಳುವುದಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಕೊಡುವ ಶಿಕ್ಷೆಯ ತೀರ್ಪನ್ನು ಸೂಚಿಸುತ್ತದೆ.

- ಇಸ್ರಾಯೇಲ್ ದೇಶವನ್ನು ಬಾಬೆಲೋನಿಯ ದೇಶಕ್ಕೆ ಸೆರೆಗೆ ಹೊಯ್ದಾಗ, “ನಿನ್ನ ಗತಿ ಮುಗಿಯಿತು” ಎಂದು ಪ್ರವಾದಿಯಾದ ಯೆಹೆಜ್ಕೇಲನು ಹೇಳಿದನು.
- ಸಂದರ್ಭಾನುಸಾರವಾಗಿ ಈ ಪದವನ್ನು “ದುರಂತ” ಅಥವಾ “ಶಿಕ್ಷೆ” ಅಥವಾ “ನಿರೀಕ್ಷೆಯಿಲ್ಲದ ನಾಶ” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.07:5-7
- ಯೆಹೆ.30:8-9
- ಯೆಶಯ.06:4-5
- ಕೀರ್ತನೆ.092:6-7

ಪದ ಡೇಟಾ:

- Strong's: H1820, H3117, H6256, H6843, H8045

ದೂರು, ದೂರುಗಳು, ದೂರುಗಾರ, ಆರೋಪಗಳು

ನಿರ್ವಚನ:

“ದೂರು ಅಥವಾ ಆರೋಪ” ಮತ್ತು “ಅಪಾದನೆ” ಎನ್ನುವ ಪದಗಳು ಯಾರೇ ಒಬ್ಬರು ತಪ್ಪಾದ ಕಾರ್ಯಗಳನ್ನು ಮಾಡುತ್ತಿದ್ದರೆ, ಅವರ ಮೇಲೆ ನಿಂದೆಯನ್ನು ಹಾಕುವುದಕ್ಕೆ ಉಪಯೋಗಿಸುವ ಪದಗಳಾಗಿರುತ್ತವೆ. ಒಬ್ಬ ವ್ಯಕ್ತಿ ಇನ್ನೊಬ್ಬರ ಮೇಲೆ ಆರೋಪ ಮಾಡಿದರೆ ಅಥವಾ ದೂರು ಹೇಳಿದರೆ, ಆ ವ್ಯಕ್ತಿಯನ್ನು “ಆರೋಪಿ”ಯಾಗಿ ಕರೆಯುತ್ತಾರೆ.

- ತಪ್ಪು ಮಾಡದಿರುವ ವ್ಯಕ್ತಿಯನ್ನು ಶಿಕ್ಷಿಸಿದರೆ, ಅದು ತಪ್ಪು ಆರೋಪ ಎಂಬುದಾಗಿ ಹೇಳುತ್ತಾರೆ, ಯೆಹೂದ್ಯರ ನಾಯಕರಿಂದ ಯೇಸುವಿನ ಮೇಲೆ ತಪ್ಪಾದ ಆರೋಪಗಳನ್ನು ಮಾಡಿದ್ದಾರೆ.
- ಹೊಸ ಒಡಂಬಡಿಕೆಯ ಪ್ರಕಟನೆ ಗ್ರಂಥದಲ್ಲಿ, ಸೈತಾನನನ್ನು “ದೂರುಗಾರ” ಎಂದು ಕರೆಯಲ್ಪಟ್ಟಿದ್ದಾನೆ.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.19:40
- ಹೋಶೆಯ.04:04
- ಯೆರೆಮೀಯಾ.02:9-11
- ಲೂಕ.06:6-8
- ರೋಮಾ.08:33

ಪದ ಡೇಟಾ:

- Strong's: H3198, H8799, G1458, G2147, G2596, G2724

ದೃಢನಿಷ್ಠೆ

ಪದದ ಅರ್ಥವಿವರಣೆ:

“ದೃಢನಿಷ್ಠೆ” ಎನ್ನುವ ಪದವು ಬಲವಾದ ನೈತಿಕ ಸೂತ್ರಗಳಿಂದ ಮತ್ತು ನಡತೆಯಿಂದ ಯಥಾರ್ಥವಾಗಿರುವುದನ್ನು ದೃಢನಿಷ್ಠೆಯನ್ನು ಹೊಂದಿದ್ದಾನೆಂದು ಹೇಳಲ್ಪಡುತ್ತದನ್ನು ಸೂಚಿಸುತ್ತದೆ.

- ದೃಢನಿಷ್ಠೆಯನ್ನು ಹೊಂದಿರುವುದು ಎನ್ನುವುದಕ್ಕೆ ಯಾರೂ ನೋಡದಿದ್ದರೂ ಸರಿಯಾದದ್ದನ್ನೇ ಮತ್ತು ಯಥಾರ್ಥವಾಗಿರುವುದನ್ನೇ ಮಾಡುವುದಕ್ಕೆ ಆಯ್ಕೆ ಮಾಡಿಕೊಳ್ಳುವುದು ಎಂದರ್ಥವೂ ಇದೆ.
- ಸತ್ಯವೇದದಲ್ಲಿ ಯೋಸೇಫ ಮತ್ತು ದಾನಿಯೇಲ ಎನ್ನುವ ಕೆಲವೊಂದು ಪಾತ್ರೆಗಳು ದುಷ್ಟತನವನ್ನು ಮಾಡುವುದಕ್ಕೆ ತಿರಸ್ಕರಿಸಿ, ದೇವರಿಗೆ ವಿಧೇಯತೆ ತೋರಿಸುವುದನ್ನು ಆಯ್ಕೆಮಾಡಿಕೊಂಡಿರುವುದು ದೃಢನಿಷ್ಠೆಯನ್ನು ತೋರಿಸುತ್ತದೆ.
- ಶ್ರೀಮಂತನಾಗಿ ಕೆಟ್ಟುಹೋಗಿ, ಯಥಾರ್ಥರಹಿತನಾಗಿರುವುದಕ್ಕಿಂತ ದೃಢನಿಷ್ಠೆಯಿಂದ ಬಡವನಾಗಿರುವುದೇ ಉತ್ತಮವೆಂದು ಜ್ಞಾನೋಕ್ತಿಗಳ ಪುಸ್ತಕವು ಹೇಳುತ್ತಿದೆ.

ಅನುವಾದ ಸಲಹೆಗಳು:

- ದೃಢನಿಷ್ಠೆ” ಎನ್ನುವ ಪದವನ್ನು “ಯಥಾರ್ಥ” ಅಥವಾ “ನೈತಿಕವಾದ ನೀತಿ” ಅಥವ “ಸತ್ಯವಾಗಿ ನಡೆದುಕೊಳ್ಳುವುದು” ಅಥವಾ “ನಂಬಿಗಸ್ತನಾಗಿ, ಯಥಾರ್ಥಚಿತ್ತನಾಗಿ, ಮರ್ಯಾದೆಯಿಂದ ನಡೆದುಕೊಳ್ಳುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದಾನಿಯೇಲ, ಯೋಸೇಫ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.09:4-5
- ಯೋಬ.02:3
- ಯೋಬ.04:4-6
- ಜ್ಞಾನೋ.10:8-9
- ಜ್ಞಾನೋ.026:1-3

ಪದ ಡೇಟಾ:

- Strong's: H3476, H6664, H6666, H8535, H8537, H8538, H8549, G4587

ದೃಢೀಕರಿಸು, ದೃಢೀಕರಿಸುವುದು, ದೃಢೀಕರಿಸಿದೆ, ದೃಢೀಕರಣ

ಪದದ ಅರ್ಥವಿವರಣೆ:

“ದೃಢೀಕರಿಸು” ಮತ್ತು “ದೃಢೀಕರಣ” ಎನ್ನುವ ಪದಗಳು ಸತ್ಯವಾದದ್ದನ್ನು ಅಥವಾ ವಿಶ್ವಾಸಾರ್ಹತೆಯನ್ನು ಖಚಿತಪಡಿಸುವುದನ್ನು ಅಥವಾ ವ್ಯಾಖ್ಯಾನಿಸುವುದನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ದೇವರು ತನ್ನ ಜನರೊಂದಿಗೆ ಮಾಡಿದ ತನ್ನ ಒಡಂಬಡಿಕೆಯನ್ನು “ದೃಢೀಕರಿಸುತ್ತೇನೆಂದು” ತನ್ನ ಜನರಿಗೆ ಹೇಳಿದನು. ಇದಕ್ಕೆ ಅರ್ಥವೇನೆಂದರೆ ಒಡಂಬಡಿಕೆಯಲ್ಲಿ ಆತನು ಮಾಡಿದ ವಾಗ್ದಾನಗಳೆಲ್ಲವನ್ನು ಆತನು ನೆರವೇರಿಸುವನೆಂದು ಹೇಳುತ್ತಿದ್ದಾನೆ.
- ಅರಸನು “ದೃಢೀಕರಿಸಲ್ಪಟ್ಟಿದ್ದಾನೆ” ಎನ್ನುವ ಈ ಮಾತಿಗೆ ಇವನು ಅರಸನಾಗಿರುವುದಕ್ಕೆ ತೆಗೆದುಕೊಂಡ ನಿರ್ಣಯವು ಜನರಿಂದ ಅಂಗೀಕರಿಸಲ್ಪಟ್ಟಿದೆ ಅಥವಾ ಬೆಂಬಲ ಕೊಡಲಾಗಿದೆ ಎಂದರ್ಥ.
- ಇತರರು ಬರೆದಿರುವುದನ್ನು ದೃಢೀಕರಿಸುವುದೆಂದರೆ ಬರೆದಿರುವ ಆ ಬರವಣಿಗೆ ಸತ್ಯವೆಂದು ಹೇಳುವುದು ಎಂದರ್ಥ.
- ಸುವಾರ್ತೆಯನ್ನು “ದೃಢೀಕರಿಸುವುದು” ಎಂದರೆ ಸತ್ಯವಾದ ಯೇಸುಕ್ರಿಸ್ತನ ಸುವಾರ್ತೆಯನ್ನು ಜನರಿಗೆ ಬೋಧಿಸುವುದು ಎಂದರ್ಥ.
- “ದೃಢೀಕರಣ”ವಾಗಿ ಆಣೆಯನ್ನಿಡುವುದು ಎನ್ನುವುದಕ್ಕೆ ಸತ್ಯವೆಂದು ಅಥವಾ ವಿಶ್ವಾಸಾರ್ಹವೆಂದು ಪ್ರತಿಜ್ಞೆ ಮಾಡುವುದು ಅಥವಾ ವ್ಯಾಖ್ಯಾನಿಸುವುದು ಎಂದರ್ಥ.
- “ನಿಶ್ಚಯತೆ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ಸತ್ಯವೆಂದು ವ್ಯಾಖ್ಯಾನಿಸು” ಅಥವಾ “ವಿಶ್ವಾಸಾರ್ಹವೆಂದು ನಿರೂಪಿಸು” ಅಥವಾ “ಅಂಗೀಕರಿಸು” ಅಥವಾ “ಖಚಿತಪಡಿಸು” ಅಥವಾ “ವಾಗ್ದಾನ ಮಾಡು” ಎಂದು ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ಒಡಂಬಡಿಕೆ, ಆಣೆ, ಭರವಸೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.16:15-18
- 2 ಪೂರ್ವ.01:21-22
- 2 ಪೂರ್ವ.23:3
- ಇಬ್ರಿ.06:16-18

ಪದ ಡೇಟಾ:

- Strong's: H553, H559, H1396, H3045, H3559, H4390, H4672, H5414, H5975, H6213, H6965, G950, G951, G1991, G2964, G3315, G4300, G4972

ದೇವದಾರು, ದೇವದಾರು ವೃಕ್ಷಗಳು, ದೇವದಾರು ಕಟ್ಟಿಗೆ

ಪದದ ಅರ್ಥವಿವರಣೆ:

“ದೇವದಾರು” ಎನ್ನುವ ಪದವು ಸಹಜವಾಗಿ ಕೆಂಪು-ಕಂದು ಮರದ ಕಟ್ಟಿಗೆಯಾದ ದೊಡ್ಡ ಭದ್ರದಾರು ಮರವನ್ನು ಸೂಚಿಸುತ್ತದೆ. ಇತರ ಭದ್ರದಾರುಗಳಂತೆ ಇದಕ್ಕೆ ಕೋನಾಕಾರದಲ್ಲಿರುವ ಸೂಜಿ ತರಹದ ಎಲೆಗಳು ಇರುತ್ತವೆ.

- ಹಳೇ ಒಡಂಬಡಿಕೆಯಲ್ಲಿ ಅನೇಕಬಾರಿ ದೇವದಾರು ವೃಕ್ಷಗಳನ್ನು ಲೆಬನೋನ್.ದೊಂದಿಗೆ ಜೋಡಿಸಿ ಹೇಳಲ್ಪಟ್ಟಿರುತ್ತವೆ.
- ದೇವದಾರು ಕಟ್ಟಿಗೆಯು ಯೆರೂಸಲೇಮಿನ ದೇವಾಲಯವನ್ನು ನಿರ್ಮಿಸುವದರಲ್ಲಿ ಉಪಯೋಗಿಸಲಾಗಿದೆ.
- ಇದು ಹೋಮಕ್ಕೆ ಮತ್ತು ಶುದ್ಧೀಕರಣ ಮಾಡುವ ಕಾಣಿಕೆಗಳಿಗೆ ಕೂಡ ಉಪಯೋಗಿಸಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಭದ್ರದಾರು, ಪವಿತ್ರ, ಹೋಮ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.14:1-2
- 1 ಅರಸ.07:1-2
- ಯೆಶಯಾ.02:12-13
- ಜೆಕರ್ಯ.11:1-3

ಪದ ಡೇಟಾ:

- Strong's: H730

ದೇಶ, ದೇಶಗಳು

ಪದದ ಅರ್ಥವಿವರಣೆ:

ದೇಶ ಎನ್ನುವುದು ರೂಪಿಸಲ್ಪಟ್ಟ ಯಾವುದೇ ಪ್ರಭುತ್ವದಿಂದ ಆಳ್ವಿಕೆ ಮಾಡಲ್ಪಡುವ ದೊಡ್ಡ ಜನರ ಗುಂಪು ಎಂದರ್ಥ. ದೇಶದ ಜನರು ಅನೇಕಸಲ ಒಂದೇ ಪೂರ್ವಜರರನ್ನು ಹೊಂದಿರುತ್ತದೆ ಮತ್ತು ಒಂದೇ ರೀತಿಯ ಜನಾಂಗೀಯತೆಯನ್ನು ಹಂಚಿಕೊಳ್ಳುವುದಾಗಿರುತ್ತದೆ.

- "ದೇಶ" ಎನ್ನುವುದಕ್ಕೆ ಸಹಜವಾಗಿ ಚೆನ್ನಾಗಿ ವ್ಯಾಖ್ಯಾನಿಸಲ್ಪಟ್ಟ ಸಂಸ್ಕೃತಿಯನ್ನು ಮತ್ತು ಪ್ರಾದೇಶಿಕ ಗಡಿಗಳನ್ನು ಹೊಂದಿರುತ್ತದೆ.
- ಸತ್ಯವೇದದಲ್ಲಿ "ದೇಶ" ಎನ್ನುವುದು ಒಂದು ನಿರ್ದಿಷ್ಟವಾದ ದೇಶವನ್ನು ಸೂಚಿಸುತ್ತದೆ (ಉದಾಹರಣೆಗೆ, ಐಗುಪ್ತ ಅಥವಾ ಇಥಿಯೋಪ್ಯ), ಆದರೆ ಇದು ಅತೀ ಸಾಧಾರಣವಾಗಿ ಜನರ ಗುಂಪನ್ನು ಸೂಚಿಸುತ್ತದೆ ಮತ್ತು ವಿಶೇಷವಾಗಿ ಇದನ್ನು ಬಹುವಚನ ಪದವನ್ನಾಗಿ ಉಪಯೋಗಿಸಿದಾಗ ಜನರ ಗುಂಪನ್ನು ಸೂಚಿಸುತ್ತದೆ. ಸಂದರ್ಭವನ್ನು ಪರಿಶೀಲನೆ ಮಾಡುವುದು ತುಂಬಾ ಪ್ರಾಮುಖ್ಯ.
- ಸತ್ಯವೇದದಲ್ಲಿರುವ ದೇಶಗಳಲ್ಲಿ (ಜನಾಂಗಗಳಲ್ಲಿ) ಇಸ್ರಾಯೇಲ್ಯರು, ಫಿಲಿಷ್ಟಿಯನರು, ಅಶ್ಶೂರಿಯರು, ಬಾಬೆಲೋನಿಯರು, ಕಾನಾನ್ಯರು, ರೋಮಾದವರು, ಗ್ರೀಕರು ಮತ್ತು ಅನೇಕ ದೇಶದವರೂ ಇದ್ದಿರುತ್ತಾರೆ.
- ರೆಬೆಕ್ಕಳಿಗೆ ಹುಟ್ಟಿದ ಗಂಡು ಮಕ್ಕಳು "ಜನಾಂಗಗಳಾಗುವರು" ಮತ್ತು ಅವರು ಒಬ್ಬರಿಗೊಬ್ಬರು ಹೋರಾಟ ಮಾಡಿಕೊಳ್ಳುವರು ಎಂದು ದೇವರು ರೆಬೆಕ್ಕಳಿಗೆ ಹೇಳಿದಂತೆಯೇ ಕೆಲವೊಂದುಬಾರಿ "ದೇಶ" ಎನ್ನುವ ಪದವನ್ನು ಒಂದು ನಿರ್ದಿಷ್ಟವಾದ ಜನರ ಗುಂಪಿನ ಪೂರ್ವಜನನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸುತ್ತಾರೆ, ಇದನ್ನು "ಎರಡು ದೇಶದ (ಜನಾಂಗಗಳ) ವ್ಯವಸ್ಥಾಪಕರು" ಅಥವಾ "ಎರಡು ಜನರ ಗುಂಪುಗಳ ಪೂರ್ವಜರು" ಎಂದೂ ಅನುವಾದ ಮಾಡಬಹುದು.
- "ದೇಶ" ಎನ್ನುವ ಪದಕ್ಕೆ ಅನುವಾದವು ಕೆಲವೊಂದುಬಾರಿ "ಅನ್ಯರು" ಅಥವಾ ಯೆಹೋವನನ್ನು ಆರಾಧನೆ ಮಾಡದ ಜನರು ಎಂಬುದಾಗಿ ಉಪಯೋಗಿಸಲ್ಪಟ್ಟಿರುತ್ತದೆ. ಸಹಜವಾಗಿ ಸಂದರ್ಭವು ಸ್ಪಷ್ಟವಾದ ಅರ್ಥವನ್ನು ಕೊಡುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, "ದೇಶ" ಎನ್ನುವ ಪದವನ್ನು "ಜನರ ಗುಂಪು" ಅಥವಾ "ಜನರು" ಅಥವಾ "ಪ್ರದೇಶ" ಎಂದೂ ಅನುವಾದ ಮಾಡಬಹುದು.
- ಇಲ್ಲಿ ಕೊಟ್ಟಿರುವ ಪದಗಳಿಗೆ ವಿಭಿನ್ನವಾಗಿ ಅನುವಾದ ಮಾಡುವ ಭಾಷೆಯಲ್ಲಿ "ದೇಶ" ಎನ್ನುವದಕ್ಕೆ ಪದವಿದ್ದಲ್ಲಿ, ಆ ಪದವನ್ನೇ ಸತ್ಯವೇದದಲ್ಲಿ ಕಾಣಿಸಿಕೊಳ್ಳುವ ಪ್ರತಿಯೊಂದು ಸ್ಥಳದಲ್ಲಿ ಆ ಅಸಂದರ್ಭಕ್ಕೆ ತಕ್ಕಂತೆ ಸ್ವಾಭಾವಿಕವಾಗಿ ಖಚಿತವಾಗಿ ಇರುವವರೆಗೂ ಇದನ್ನು ಬಳಕೆ ಮಾಡಬಹುದು,
- "ದೇಶಗಳು" ಎನ್ನುವ ಬಹುವಚನ ಪದವನ್ನು "ಜನರ ಗುಂಪುಗಳು" ಎಂದೂ ಅನುವಾದ ಮಾಡಬಹುದು.
- ಕೆಲವೊಂದು ನಿರ್ದಿಷ್ಟವಾದ ಸಂದರ್ಭಗಳಲ್ಲಿ ಈ ಪದವನ್ನು "ಅನ್ಯರು" ಅಥವಾ "ಯೆಹೂದ್ಯರಲ್ಲದವರು" ಎಂದೂ ಅನುವಾದ ಮಾಡಬಹುದು

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್, ಬಾಬೆಲೋನಿಯ, ಕಾನಾನ್, ಅನ್ಯ, ಗ್ರೀಕ್, ಜನರ ಗುಂಪು, ಫಿಲಿಷ್ಟಿಯನ್ನರು, ರೋಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.14:15-17
- 2 ಪೂರ್ವ.15:6-7
- 2 ಅರಸ.17:11-12
- ಅಪೊ.ಕೃತ್ಯ.02:5-7
- ಅಪೊ.ಕೃತ್ಯ.13:19-20
- ಅಪೊ.ಕೃತ್ಯ.17:26-27
- ಅಪೊ.ಕೃತ್ಯ.26:4-5
- ದಾನಿ.03:3-5
- ಆದಿ.10:2-5
- ಆದಿ.27:29
- ಆದಿ.35:11-13
- ಆದಿ.49:10
- ಲೂಕ.07:2-5
- ಮಾರ್ಕ.13:7-8
- ಮತ್ತಾಯ.21:43-44
- ರೋಮಾ.04:16-17

ಪದ ಡೇಟಾ:

- Strong's: H249, H523, H524, H776, H1471, H3816, H4940, H5971, G246, G1074, G1085, G1484

ದ್ರಾಕ್ಷರಸ, ಬುದ್ದಲಿ, ಹೊಸ ದ್ರಾಕ್ಷಾರಸ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ “ದ್ರಾಕ್ಷಾರಸ” ಎನ್ನುವ ಪದವನ್ನು ದ್ರಾಕ್ಷಿಗಳು ಎಂದು ಕರೆಯಲ್ಪಡುವ ಹಣ್ಣುಗಳ ರಸದಿಂದ ಮಾಡಿದ ಹುದುಗಿದ ಪಾನೀಯವನ್ನು ಸೂಚಿಸುತ್ತದೆ. ಮದ್ಯಪಾನೀಯವನ್ನು “ದ್ರಾಕ್ಷರಸ ಬುದ್ದಲಿಗಳಲ್ಲಿ” ಸೇಕರಿಸಿ ಇಡುತ್ತಿದ್ದರು, ಈ ಬುದ್ದಲಿಗಳನ್ನು ಪ್ರಾಣಿಯ ಚರ್ಮಗಳಿಂದ ತಯಾರುಸಿದ್ದರು.

- “ಹೊಸ ದ್ರಾಕ್ಷಾರಸ” ಎನ್ನುವ ಮಾತನ್ನು ದ್ರಾಕ್ಷೆಗಳಿಂದ ಮಾಡಿದ ದ್ರಾಕ್ಷರಸವನ್ನು ಮತ್ತು ಹುದುಗಿಸದ ರಸವನ್ನು ಸೂಚಿಸುತ್ತದೆ. ಕೆಲವೊಂದು ಬಾರಿ “ದ್ರಾಕ್ಷಾರಸ” ಎನ್ನುವ ಪದವನ್ನು ಹುದುಗಿಸದ ದ್ರಾಕ್ಷರಸವನ್ನೂ ಸೂಚಿಸುತ್ತದೆ.
- ದ್ರಾಕ್ಷಾರಸವನ್ನು ತಯಾರಿಸುವುದಕ್ಕೆ ದ್ರಾಕ್ಷಿಗಳನ್ನು ದ್ರಾಕ್ಷಾರಸ ಗಾಣದಲ್ಲಿ ತುಳಿಸಿ, ಅದರಿಂದ ರಸವನ್ನು ಹೊರ ತೆಗೆಯುತ್ತಾರೆ. ಕೊನೆಗೆ ರಸವನ್ನು ಹುದುಗಿಸಿ, ಅದರಲ್ಲಿ ಮದ್ಯವನ್ನುಂಟು ಮಾಡುತ್ತಾರೆ.
- ಸತ್ಯವೇದ ಕಾಲದಲ್ಲಿ ದ್ರಾಕ್ಷಾರಸವು ಊಟ ಮಾಡುವ ಸಮಯದಲ್ಲಿ ಸಾಧಾರಣವಾದ ಪಾನೀಯವಾಗಿರುತ್ತದೆ. ಈಗಿನ ಕಾಲದಲ್ಲಿರುವ ಮದ್ಯಪಾನೀಯದಂತೆ ಹೆಚ್ಚಾದ ಮದ್ಯವನ್ನು ಆ ಕಾಲದಲ್ಲಿ ಇರುತ್ತಿಲ್ಲ.
- ಊಟ ಮಾಡುವುದಕ್ಕೆ ದ್ರಾಕ್ಷರಸವನ್ನು ಇಡುವುದಕ್ಕೆ ಮುಂಚಿತವಾಗಿ, ಅದರಲ್ಲಿ ನೀರನ್ನು ಮಿಶ್ರಣ ಮಾಡುತ್ತಿದ್ದರು.
- ಹಳೇ ದ್ರಾಕ್ಷಾರಸ ಬುದ್ದಲಿಯೋಳಗೆ ಒಡೆದು ಹೋಗುತ್ತದೆ, ಇದರಿಂದ ಅದರಲ್ಲಿರುವ ದ್ರಾಕ್ಷಾರಸವು ಸೋರು ಹೋಗುತ್ತದೆ. ಹೊಸ ದ್ರಾಕ್ಷಾರಸ ಬುದ್ದಲಿಗಳು ಮೃದುವಾಗಿ ಮತ್ತು ಮೆದುವಾಗಿ ಇರುತ್ತವೆ,
- ನಿಮ್ಮ ಸಂಸ್ಕೃತಿಯಲ್ಲಿ ದ್ರಾಕ್ಷರಸವು ಗೊತ್ತಿಲ್ಲದಿದ್ದರೆ, “ಹುದುಗಿದ ದ್ರಾಕ್ಷ ರಸ” ಅಥವಾ “ದ್ರಾಕ್ಷಿಗಳೆಂದು ಕರೆಯಲ್ಪಡುವ ಹಣ್ಣಿನಿಂದ ಮಾಡಲ್ಪಟ್ಟಿರುವ ಹುದುಗಿದ ಪಾನೀಯವಾಗಿರುತ್ತದೆ” ಅಥವಾ “ಹುದುಗಿದ ಹಣ್ಣಿನ ರಸ” ಎಂದೂ ಅನುವಾದ ಮಾಡಬಹುದು. (ನೋಡಿರಿ: ಗೊತ್ತಿಲ್ಲದವುಗಳನ್ನು ಹೇಗೆ ಅನುವಾದ ಮಾಡಬೇಕು)
- “ದ್ರಾಕ್ಷಾರಸ ಬುದ್ದಲಿ” ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನದಲ್ಲಿ “ದ್ರಾಕ್ಷಾರಸಕ್ಕಾಗಿ ಮಾಡಿರುವ ಚೀಲ” ಅಥವಾ “ಪ್ರಾಣಿಯ ಚರ್ಮದ ದ್ರಾಕ್ಷಾರಸ ಚೀಲ” ಅಥವಾ “ದ್ರಾಕ್ಷಾರಸವನ್ನು ಸೇಕರಣೆ ಮಾಡುವುದಕ್ಕೆ ತಯಾರಿಸಿದ ಪ್ರಾಣಿಯ ಚರ್ಮದ ಚೀಲ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ದ್ರಾಕ್ಷಿ, ದ್ರಾಕ್ಷಿಬಳ್ಳಿ, ದ್ರಾಕ್ಷಿತೋಟ, ದ್ರಾಕ್ಷಾರಸ ಗಾಣ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.05:23
- ಆದಿ.09:21
- ಆದಿ.49:12
- ಯೋಹಾನ.02:3-5
- ಯೋಹಾನ.02:10
- ಮತ್ತಾಯ.09:17
- ಮತ್ತಾಯ.11:18

ಜಜ್ಜಲ್ಪಟ್ಟಿದೆ

ಪದ ಡೇಟಾ:

- Strong's: H2561, H2562, H3196, H4469, H4997, H5435, H6025, H6071, H8492, G1098, G3631, G3820, G3943

ದ್ರಾಕ್ಷಾರಸ ಗಾಣ

ಪದದ ಅರ್ಥವಿವರಣೆ:

ಸತ್ಯವೇದದ ಕಾಲದಲ್ಲಿ "ದ್ರಾಕ್ಷಾರಸ ಗಾಣ" ಎನ್ನುವ ಮಾತು ಒಂದು ದೊಡ್ಡ ಪಾತ್ರೆಯನ್ನು ಸೂಚಿಸುತ್ತದೆ ಅಥವಾ ದ್ರಾಕ್ಷಾರಸವನ್ನು ಮಾಡುವುದಕ್ಕೆ ದ್ರಾಕ್ಷಿಗಳಿಂದ ರಸವನ್ನು ಹೊರ ತೆಗೆಯುವ ಸ್ಥಳವನ್ನು ಸೂಚಿಸುತ್ತದೆ.

- ಇಸ್ರಾಯೇಲಿನಲ್ಲಿ ದ್ರಾಕ್ಷಾರಸ ಗಾಣಗಳು ಸಾಧಾರಣವಾಗಿ ದೊಡ್ಡದಾಗಿರುತ್ತವೆ, ಬಲವಾದ ಬಂಡೆಗಳನ್ನು ಅಗೆದು ದೊಡ್ಡ ವಿಸ್ತಾರವಾದ ಬೋಗುಣಿಗಳಾಗಿರುತ್ತವೆ. ದ್ರಾಕ್ಷಿಗಳ ಗೊಂಚಲುಗಳನ್ನು ಆ ಗುಂಡಿಯ ಕೆಳಭಾಗದಲ್ಲಿ ಇಟ್ಟಿರುತ್ತಾರೆ ಮತ್ತು ಜನರು ದ್ರಾಕ್ಷಾರಸವನ್ನು ತೆಗೆಯುವುದಕ್ಕೆ ತಮ್ಮ ಕಾಲುಗಳ ಮೂಲಕ ಅವುಗಳನ್ನು ತುಳಿಯುತ್ತಾರೆ.
- ಸಾಧಾರಣವಾಗಿ ದ್ರಾಕ್ಷಾರಸ ಗಾಣವು ಎರಡು ಮಟ್ಟಗಳು ಹೊಂದಿರುತ್ತವೆ, ಮೇಲ್ಮಟ್ಟದಲ್ಲಿ ದ್ರಾಕ್ಷಿಗಳನ್ನು ತುಳಿಯುವುದರ ಮೂಲಕ ರಸವು ಕೆಳಮಟ್ಟಕ್ಕೆ ಇಳಿದು ಹೋಗಿ ಅಲ್ಲಿ ಸಂಗ್ರಹವಾಗಿರುತ್ತದೆ.
- "ದ್ರಾಕ್ಷಾರಸ ಗಾಣ" ಎನ್ನುವ ಮಾತು ದುಷ್ಟ ಜನರ ಮೇಲೆ ದೇವರ ಕ್ರೋಧವು ಸುರಿಸಲ್ಪಡುವ ಸನ್ನಿವೇಶವನ್ನು ಸೂಚಿಸುವುದಕ್ಕೆ ಸತ್ಯವೇದದಲ್ಲಿ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ. (ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದ್ರಾಕ್ಷಿ, ಕ್ರೋಧ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಶಯಾ.63:1-2
- ಮಾರ್ಕ.12:1-3
- ಮತ್ತಾಯ.21:33-34
- ಪ್ರಕ.14:19-20

ಪದ ಡೇಟಾ:

- Strong's: H1660, H3342, H6333, G3025, G5276

ದ್ರಾಕ್ಷಿ, ದ್ರಾಕ್ಷಿಗಳು, ದ್ರಾಕ್ಷಿಬಳ್ಳಿ

ಪದದ ಅರ್ಥವಿವರಣೆ:

ದ್ರಾಕ್ಷಿ ಎನ್ನುವುದು ಚಿಕ್ಕದಾಗಿದ್ದು, ವೃತ್ತಾಕಾರದಲ್ಲಿ ನುಣುಪಾದ ತೊಗಲಿರುವ ಫಲ, ಇದು ಬಳ್ಳಿಗಳಿಗೆ ಗೊನೆಗಳಾಗಿ ಬೆಳೆಯುತ್ತದೆ. ದ್ರಾಕ್ಷಿಗಳ ರಸವನ್ನು ಮದ್ಯಪಾನವನ್ನು ಮಾಡುವದರಲ್ಲಿ ಉಪಯೋಗಿಸುತ್ತಾರೆ.

- ಅನೇಕ ವಿವಿಧವಾದ ಬಣ್ಣಗಳಿರುವ ದ್ರಾಕ್ಷಿಗಳು ಇರುತ್ತವೆ, ಅದರಲ್ಲಿ ಹಸಿರು, ನೇರಳೆ ಬಣ್ಣ, ಅಥವಾ ಕೆಂಪು ದ್ರಾಕ್ಷಿಗಳು.
- ಒಂದೊಂದು ದ್ರಾಕ್ಷಿ ಅಳತೆಯಲ್ಲಿ ಸುಮಾರು ಒಂದರಿಂದ ಮೂರು ಸೆಂಟಿಮೀಟರ್ ಉದ್ದ ಇರುತ್ತವೆ.
- ಜನರು ಈ ದ್ರಾಕ್ಷಿಗಳನ್ನು ಬೆಳೆಸುವ ತೋಟಗಳನ್ನು ದ್ರಾಕ್ಷಿತೋಟಗಳು ಎಂದು ಕರೆಯುತ್ತಾರೆ. ಈ ತೋಟಗಳು ಅತೀ ಉದ್ದವಾದ ಬಳ್ಳಿಗಳನ್ನು ಒಳಗೊಂಡಿರುತ್ತವೆ.
- ಸತ್ಯವೇದದ ಕಾಲಗಳಲ್ಲಿ ದ್ರಾಕ್ಷಿಗಳು ತುಂಬಾ ಮುಖ್ಯವಾದ ಆಹಾರವಾಗಿದ್ದವು ಮತ್ತು ದ್ರಾಕ್ಷಿತೋಟಗಳಿದ್ದರೆ ಅವು ಶ್ರೀಮಂತಿಕೆಗೆ ಗುರುತಾಗಿದ್ದಿದ್ದವು.
- ದ್ರಾಕ್ಷಿಗಳು ಕೊಳೆತು ಹೋಗದಂತೆ ಅವುಗಳನ್ನು ಒಣಗಿಸುತ್ತಿದ್ದರು. ಒಣ ದ್ರಾಕ್ಷಿಯನ್ನು ಆಂಗ್ಲ ಭಾಷೆಯಲ್ಲಿ “ರೈಜಿನ್ಸ್” ಎಂದು ಕರೆಯುತ್ತಾರೆ, ಅವುಗಳನ್ನು ರೈಜಿನ ಕೇಕ್.ಗಳನ್ನು ಮಾಡುವುದಕ್ಕೆ ಬಳಸುತ್ತಾರೆ.
- ದೇವರ ರಾಜ್ಯದ ಕುರಿತಾಗಿ ತನ್ನ ಶಿಷ್ಯರಿಗೆ ಬೋಧಿಸಲು ಯೇಸು ದ್ರಾಕ್ಷಿ ತೋಟದ ಬಗ್ಗೆ ಒಂದು ಸಾಮ್ಯವನ್ನು ಹೇಳಿದರು.

(ಈ ಪದಗಳನ್ನು ಸಹ ನೋಡಿರಿ : ಬಳ್ಳಿ, ದ್ರಾಕ್ಷಿಬಳ್ಳಿ, ಮದ್ಯಪಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.23:24-25
- ಹೋಶೆಯ.09:10
- ಯೋಬ.15:31-33
- ಲೂಕ.06:43-44
- ಮತ್ತಾಯ.07:15-17
- ಮತ್ತಾಯ.21:33-34

ಪದ ಡೇಟಾ:

- Strong's: H811, H891, H1154, H1155, H1210, H2490, H3196, H5563, H5955, H6025, H6528, G288, G4718

ದ್ರಾಕ್ಷಿತೋಟ, ದ್ರಾಕ್ಷಿತೋಟಗಳು

ಪದದ ಅರ್ಥವಿವರಣೆ:

ದ್ರಾಕ್ಷಿತೋಟ ಎನ್ನುವುದು ದ್ರಾಕ್ಷಿಬಳ್ಳಿಗಳನ್ನು ಬೆಳೆಸುವ ಮತ್ತು ದ್ರಾಕ್ಷಿಗಳನ್ನು ಬೆಳೆಸುವ ದೊಡ್ಡ ತೋಟ ಎಂದರ್ಥ.

- ದ್ರಾಕ್ಷಿತೋಟಕ್ಕೆ ಹೆಚ್ಚಿನ ಮಟ್ಟಕ್ಕೆ ಅದರ ಸುತ್ತಲು ಗೋಡೆಯನ್ನು ಕಟ್ಟಿರುತ್ತಾರೆ, ಯಾಕಂದರೆ ಆ ತೋಟದಲ್ಲಿ ಬೆಳೆಯುವ ಫಲಗಳನ್ನು ಪ್ರಾಣಿಗಳಿಂದ ಮತ್ತು ಕಳ್ಳರಿಂದ ಕಾಪಾಡುವುದಕ್ಕೆ ಕಟ್ಟುತ್ತಿದ್ದರು.
- ದೇವರು ಇಸ್ರಾಯೇಲ್ಯರನ್ನು ಒಳ್ಳೆಯ ಫಲಗಳನ್ನು ಕೊಡದ ದ್ರಾಕ್ಷಿತೋಟಕ್ಕೆ ಹೋಲಿಸಿ ಹೇಳಿದ್ದಾರೆ. (ನೋಡಿರಿ: ರೂಪಕಾಲಂಕಾರ)
- ದ್ರಾಕ್ಷಿತೋಟ ಎನ್ನುವ ಪದವನ್ನು "ದ್ರಾಕ್ಷಿಬಳ್ಳಿಯ ತೋಟ" ಅಥವಾ "ದ್ರಾಕ್ಷಿ ಮರಗಳ ತೋಪು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದ್ರಾಕ್ಷಿ, ಇಸ್ರಾಯೇಲ್, ಬಳ್ಳಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.09:20-21
- ಲೂಕ.13:6-7
- ಲೂಕ.20:15-16
- ಮತ್ತಾಯ.20:1-2
- ಮತ್ತಾಯ.21:40-41

ಪದ ಡೇಟಾ:

- Strong's: H64, H1612, H3657, H3661, H3754, H3755, H8284, G289, G290

ದ್ರೋಹ, ದ್ರೋಹ ಮಾಡು, ದ್ರೋಹ ಮಾಡಿದನು, ದ್ರೋಹ ಮಾಡುತ್ತಿದ್ದಾನೆ, ದ್ರೋಹಿ, ದ್ರೋಹಿಗಳು

ಪದದ ಅರ್ಥವಿವರಣೆ

ಯಾರನ್ನಾದರು ಮೋಸಮಾಡಿ ಮತ್ತು ನೋಯಿಸಿದರೆ ಅದು "ದ್ರೋಹ" ಎಂದು ಅರ್ಥವಾಗಿದೆ. ತನ್ನನ್ನು ನಂಬಿದ್ದ ತನ್ನ ಸ್ನೇಹಿತನನ್ನು ಮೋಸ ಮಾಡುವವನು "ದ್ರೋಹಿ" ಎಂದು ಕರೆಯಲ್ಪಡುತ್ತಾನೆ.

- ಯೂದ ಎಂಬವನು "ದ್ರೋಹಿ" ಯಾಕಂದರೆ ಯೇಸುವನ್ನು ಹೇಗೆ ಹಿಡುದುಕೊಳ್ಳಬಹುದೆಂದು ಯಹೂದಿಯ ನಾಯಕರಿಗೆ ಹೇಳಿದನು.
- ಯೂದನು ಮಾಡಿದ ದ್ರೋಹ ಬಹಳ ದುಷ್ಟ ಕಾರ್ಯವಾಗಿದೆ ಯಾಕಂದರೆ ಅವನು ಯೇಸುವಿನ ಶಿಷ್ಯನಾಗಿದ್ದು, ಯೇಸುವನ್ನು ಅನ್ಯಾಯವಾದ ಮರಣಕ್ಕೆ ಒಪ್ಪಿಸುವಂತೆ ಯಹೂದಿಯ ನಾಯಕರಿಗೆ ಮಾಹಿತಿಯನ್ನು ನೀಡಿದನು.

ಅನುವಾದ ಸಲಹೆಗಳು:

- ಸಂಧರ್ಭಾನುಸಾರವಾಗಿ, "ದ್ರೋಹ" ಎನ್ನುವ ಪದವನ್ನು "ಮೋಸ ಮಾಡುವುದು ಮತ್ತು ಹಾನಿಕಾರಕವಾಗಿರುವುದು" ಅಥವಾ "ಶತ್ರುಗಳೊಂದಿಗೆ ಕೈ ಜೋಡಿಸುವುದು" ಅಥವಾ "ವಿಶ್ವಾಸಘಾತುಕವಾಗಿ ನೋಡುವುದು" ಎಂದು ಅನುವಾದ ಮಾಡಬಹುದು.
- "ದ್ರೋಹಿ" ಎನ್ನುವ ಪದವನ್ನು "ದ್ರೋಹ ಮಾಡುವ ವ್ಯಕ್ತಿ" ಅಥವಾ "ಹೇಳೋದೊಂದು ಮಾಡೋದೊಂದು ಎನ್ನುವಂತೆ ಇರುವ ವ್ಯಕ್ತಿ" ಅಥವಾ "ವಂಚಕ" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಇಸ್ಕರಿಯೋತ ಯೂದ, ಯಹೂದಿಯ ನಾಯಕರು, ಅಪೊಸ್ತಲರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:51-53
- ಯೋಹಾನ.06:64-65
- ಯೋಹಾನ.13:21-22
- ಮತ್ತಾಯ.10:2-4
- ಮತ್ತಾಯ.26:20-22

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **21:11** ಮೆಸ್ಸಿಯನನ್ನು ಕೊಲ್ಲುವವರು ಅವನ ಬಟ್ಟೆಗಳಿಗಾಗಿ ಚೀಟಿಗಳನ್ನು ಹಾಕುವರೆಂದು ತನ್ನ ಸ್ನೇಹಿತನೇ ಆತನಿಗೆ **ದ್ರೋಹ** ಮಾಡುವನೆಂದು ಬೇರೆ ಪ್ರವಾದಿಗಳು ಪ್ರವಾದಿಸಿದರು. ಮೆಸ್ಸಿಯನಿಗೆ **ದ್ರೋಹ** ಮಾಡಲು ಆತನ ಸ್ನೇಹಿತನು ಮೂವತ್ತು ಬೆಳ್ಳಿ ನಾಣ್ಯಗಳನ್ನು ಸ್ವೀಕರಿಸುವನೆಂದು ಪ್ರವಾದಿಯಾದ ಜೆಕರ್ಯ ಮುಂಚಿತವಾಗಿಯೇ ಹೇಳಿದನು.
- **38:02** ಯೇಸು ಮತ್ತು ತನ್ನ ಶಿಷ್ಯರು ಯೆರೂಸಲೇಮಿಗೆ ಬಂದಾಗ,ಯಹೂದಿಯ ನಾಯಕರಿಗೆ ಆತನನ್ನು ಒಪ್ಪಿಸಲು ಯೂದ ಹಣವನ್ನು ಸ್ವಿಕರಿಸಿ ಯೇಸುವಿಗೆ **ದ್ರೋಹ** ಮಾಡಿದನು.
- **38:03** ಮಹಾ ಯಾಜಕನ ನಾಯಕತ್ವದಲ್ಲಿ, ಯೇಸುವಿಗೆ **ದ್ರೋಹ** ಮಾಡಲು ಮೂವತ್ತು ಬೆಳ್ಳಿ ನಾಣ್ಯಗಳನ್ನು ಯಹೂದಿ ನಾಯಕರು ಯೂದನಿಗೆ ಕೊಟ್ಟರು.
- **38:06** ಆಗ "ನಿಮ್ಮಲ್ಲಿ ಒಬ್ಬನು ನನಗೆ **ದ್ರೋಹ** ಮಾಡುವನು" ಎಂದು ಯೇಸು ತನ್ನ ಶಿಷ್ಯರೊಂದಿಗೆ ಹೇಳಿದನು. â€¦ "ನಾನು ಈ ರೊಟ್ಟಿಯನ್ನು ಯಾರಿಗೆ ಕೊಡುವೇನೋ ಅವನೇ ನನಗೆ **ದ್ರೋಹ** ಮಾಡುವನೆಂದು" ಯೇಸು ಹೇಳಿದನು.
- **38:13** ಮೂರನೇ ಬಾರಿ ಆತನು ಹಿಂತುರುಗಿ ಬಂದಾಗ, "ಎಚ್ಚರವಾಗಿ! ನನಗೆ **ದ್ರೋಹ** ಮಾಡುವವನು ಇಲ್ಲಿದ್ದಾನೆ" ಎಂದು ಯೇಸು ಹೇಳಿದನು.
- **38:14** ಆಗ ಯೇಸು "ಯೂದ, ನಿನ್ನ ಮುದ್ದಿನಿಂದ ನನಗೆ **ದ್ರೋಹ** ಮಾಡುವೆಯಾ?" ಎಂದು ಯೇಸು ಹೇಳಿದನು.
- **39:08** ಸ್ವಲ್ಪ ಸಮಯದಲ್ಲೇ, ಯಹೂದಿಯ ನಾಯಕರು ಯೇಸುವಿಗೆ ಮರಣ ಶಿಕ್ಷೆಯನ್ನು ನಿರ್ಣಯಿಸಿದ್ದಾರೆಂದು, **ದ್ರೋಹಿಯಾದ** ಯೂದ ತಿಳಿದುಕೊಂಡನು. ಅವನು ತುಂಬ ದುಃಖ ಕ್ರಾಂತನಾಗಿ ದೂರ ಹೋಗಿ ತನ್ನನ್ನು ತಾನೇ ಕೊಂದುಕೊಂಡನು.

ಪದ ಡೇಟಾ:

- Strong's: H7411, G3860, G4273

ಧಾನ್ಯ ನೈವೇದ್ಯ, ಧಾನ್ಯ ನೈವೇದ್ಯಗಳು

ಪದದ ಅರ್ಥವಿವರಣೆ

ಯೆಹೋವನಿಗೆ ಗೋದಿ ಅಥವಾ ಜವೆಗೋದಿಯ ಹಿಟ್ಟನ್ನು ಅರ್ಪಿಸುವ ನೈವೇದ್ಯಯನ್ನು ಧಾನ್ಯ ನೈವೇದ್ಯ ಎನ್ನುತ್ತಾರೆ, ಅನೇಕಸಲ ಇದನ್ನು ದಹನ ಬಲಿಯ ನಂತರ ಕೊಡುತ್ತಿದ್ದರು.

- ಧಾನ್ಯ ನೈವೇದ್ಯದಲ್ಲಿ ಕೊಡುವ ಧಾನ್ಯವನ್ನು ನುಣ್ಣಗೆ ಹಿಟ್ಟಾಡಿಸ ಬೇಕು. ಕೆಲವೊಮ್ಮೆ ಅದನ್ನು ಬೇಯಿಸಿ ಅರ್ಪಿಸುತ್ತಿದ್ದರು, ಆದರೆ ಬೇರೆ ಸಮಯಗಳಲ್ಲಿ ಅದನ್ನು ಹಾಗೆ ಬಿಡುತ್ತಿದ್ದರು.
- ಧಾನ್ಯದ ಹಿಟ್ಟಿಗೆ ಎಣ್ಣೆ ಮತ್ತು ಉಪ್ಪು ಸೇರಿಸುತ್ತಿದ್ದರು, ಆದರೆ ಅದರಲ್ಲಿ ಹುಳಿಪದಾರ್ಥವನ್ನು ಅಥವಾ ಜೇನುತುಪ್ಪವನ್ನು ಸೇರಿಸಬಾರದು.
- ಧಾನ್ಯ ನೈವೇದ್ಯದ ಒಂದು ಭಾಗವನ್ನು ಸುಡುತ್ತಿದ್ದರು ಮತ್ತು ಇನ್ನೊಂದು ಭಾಗವನ್ನು ತಿನ್ನುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ದಹನ ಬಲಿ, ಅಪರಾದ ಪರಿಹಾರಾರ್ಥ ಬಲಿ, ಬಲಿ, ಪಾಪ ಪರಿಹಾರರ್ಥಕ ಬಲಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.23:27-29
- ವಿಮೋ.29:41-42
- ನ್ಯಾಯಾ.13:19-20
- ಯಾಜಕ.02:1-3

ಪದ ಡೇಟಾ:

- Strong's: H4503, H8641

ಧಾನ್ಯ, ಧಾನ್ಯಗಳು, ಹೊಲಗಳು

ಪದದ ಅರ್ಥವಿವರಣೆ

“ಧಾನ್ಯ” ಎನ್ನುವ ಪದವು ಗೋದಿ, ಜವೆಗೋದಿ, ಕಾಳು, ನವಣೆ ಅಥವಾ ಅಕ್ಕಿ ಎಂಬಂತ ಆಹಾರ ಪದಾರ್ಥಗಳನ್ನು ಸೂಚಿಸುತ್ತದೆ. ಅದು ಗಿಡವನ್ನು ಸಹ ಸುಚಿಸಬಹುದು.

- ಸತ್ಯವೇದದಲ್ಲಿ, ಗೋದಿ ಮತ್ತು ಜವೆಗೋದಿ ಪ್ರಾಮುಖ್ಯವಾದ ಧಾನ್ಯಗಳೆಂದು ಹೇಳುತ್ತಿದೆ.
- ಧಾನ್ಯದ ತಲೆಯು ಧಾನ್ಯವನ್ನು ಹಿಡಿದಿಟ್ಟುಕೊಳ್ಳುವ ಸಸ್ಯದ ಭಾಗವಾಗಿದೆ.
- ಕೆಲವೊಂದು ಆಂಗ್ಲ ಹಳೆ ಸತ್ಯವೇದ ಆವೃತ್ತಿಗಳಲ್ಲಿ “ಕಾರ್ನ್” ಎನ್ನುವ ಪದವು ಎಲ್ಲಾ ಧಾನ್ಯಗಳನ್ನು ಸೂಚಿಸುತ್ತಿತ್ತು. ಹೇಗಿದ್ದರೂ ಆಧುನಿಕ ಅಂಗ್ಲ ಭಾಷೆಯಲ್ಲಿ “ಕಾರ್ನ್” ಎನ್ನುವ ಪದವು ಒಂದೇ ವಿಧವಾದ ಕಾಳನ್ನು ಸೂಚಿಸುತ್ತಿದೆ.

(ಈ ಪದಗಳನ್ನು ಸಹ ನೋಡಿರಿ : ತೆಲೆ, ಗೋದಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.42:1-4
- ಆದಿ.42:26-28
- ಆದಿ.43:1-2
- ಲೂಕ.06:1-2
- ಮಾರ್ಕ.02:23-24
- ಮತ್ತಾಯ.13:7-9
- ರೂತಳು.01:22

ಪದ ಡೇಟಾ:

- Strong's: H1250, H1430, H1715, H2233, H2591, H3759, H3899, H7054, H7383, H7641, H7668, G248, G2590, G3450, G4621, G4719

ಧೂಪ ದ್ರವ್ಯ, ಧೂಪ ದ್ರವ್ಯಗಳು

ಪದದ ಅರ್ಥವಿವರಣೆ:

“ಧೂಪದ್ರವ್ಯ” ಎನ್ನುವ ಪದವು ಒಂದು ಸುವಾಸನೆ ಬರುವ ಧೂಪವನ್ನುಂಟು ಮಾಡುವುದಕ್ಕೆ ಉರಿಸುವ ಪರಿಮಳ ದ್ರವ್ಯಗಳ ಮಿಶ್ರಣವನ್ನು ಸೂಚಿಸುತ್ತದೆ.

- ದೇವರಿಗೆ ಅರ್ಪಣೆಯನ್ನಾಗಿ ಧೂಪವನ್ನು ಹಾಕಬೇಕೆಂದು ಆತನು ಇಸ್ರಾಯೇಲ್ಯರಿಗೆ ಹೇಳಿದನು.
- ದೇವರು ಹೇಳಿದ ಪ್ರಕಾರವೇ ಐದು ವಿಶೇಷವಾದ ಧೂಪ ದ್ರವ್ಯಗಳನ್ನು ಒಂದೇ ಅಳತೆಯಲ್ಲಿ ತೆಗೆದುಕೊಂಡು, ಅವುಗಳ ಮಿಶ್ರಣದಿಂದ ಧೂಪದ್ರವ್ಯವನು ಮಾಡಬೇಕಾಗಿರುತ್ತದೆ. ಇದು ಪರಿಶುದ್ಧವಾದ ಧೂಪದ್ರವ್ಯವಾಗಿರುತ್ತದೆ, ಅದ್ದರಿಂದ ಅವರು ಇದನ್ನು ಬೇರೆ ಯಾವುದೇ ಉದ್ದೇಶಕ್ಕೆ ಉಪಯೋಗಿಸುವುದಕ್ಕೆ ಅನುಮತಿ ಹೊಂದಿರುವುದಿಲ್ಲ.
- “ಧೂಪದ್ರವ್ಯದ ಯಜ್ಞವೇದಿ” ಎನ್ನುವುದು ಒಂದು ವಿಶೇಷವಾದ ಯಜ್ಞವೇದಿಯಾಗಿರುತ್ತದೆ, ಇದನ್ನು ಕೇವಲ ಧೂಪವನ್ನು ಹಾಕುವುದಕ್ಕೆ ಮಾತ್ರ ಉಪಯೋಗಿಸಲಾಗಿರುತ್ತದೆ.
- ಈ ಧೂಪವನ್ನು ಒಂದು ದಿನಕ್ಕೆ ನಾಲ್ಕುಸಲ ಅರ್ಪಿಸುತ್ತಿದ್ದರು, ಅದೂ ಪ್ರಾರ್ಥನೆ ಗಳಿಗೆಯಲ್ಲಿ ಮಾತ್ರ ಮಾಡುತ್ತಿದ್ದರು. ದಹನ ಬಲಿಯನ್ನು ಅರ್ಪಿಸುವ ಪ್ರತಿ ಸಂದರ್ಭದಲ್ಲಿಯೂ ಇದನ್ನು ಅರ್ಪಿಸುತ್ತಿದ್ದರು.
- ಧೂಪದ್ರವ್ಯವನ್ನು ಉರಿಸುವುದೆನ್ನುವುದು ಪ್ರಾರ್ಥನೆಗೆ ಸೂಚನೆಯಾಗಿರುತ್ತದೆ ಮತ್ತು ಆತನ ಜನರಿಂದ ದೇವರಿಗೆ ಮಾಡುವ ಆರಾಧನೆಯನ್ನೂ ಸೂಚಿಸುತ್ತದೆ.
- “ಧೂಪದ್ರವ್ಯ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಪರಿಮಳ ದ್ರವ್ಯಗಳು” ಅಥವಾ “ಒಳ್ಳೇಯ-ವಾಸನೆಯ ಸಸಿಗಳು” ಎನ್ನುವ ಪದಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಧೂಪದ್ರವ್ಯದ ಯಜ್ಞವೇದಿ, ದಹನ ಬಲಿ ಅರ್ಪಣೆ, ಸಾಂಬ್ರಾಣಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.03:1-3
- 2 ಪೂರ್ವ.13:10-11
- 2 ಅರಸ.14:4-5
- ವಿಮೋ.25:3-7
- ಲೂಕ.01:8-10

ಪದ ಡೇಟಾ:

- Strong's: H2553, H3828, H4196, H4289, H5208, H6988, H6999, H7002, H7004, H7381, G2368, G2369, G2370, G2379, G3031

ಧೂಪದ್ರವ್ಯ

ಪದದ ಅರ್ಥವಿವರಣೆ

ಬದೋಲಖ ಮರದಿಂದ ಮಾಡಲ್ಪಡುವ ಪರಿಮಳಯುಳ್ಳ ದ್ರವ್ಯವನ್ನು ಧೂಪದ್ರವ್ಯ ಎನ್ನುತ್ತಾರೆ. ಸುಗಂಧದ್ರವ್ಯ ಮತ್ತು ಸಾಂಬ್ರಾಣಿಯನ್ನು ಮಾಡಲು ಇದನ್ನು ಉಪಯೋಗಿಸುತ್ತಾರೆ.

- ಸತ್ಯವೇದ ಕಾಲದಲ್ಲಿ, ಹೆಣವನ್ನು ಸಮಾಧಿಗೆ ಸಿದ್ದ ಮಾಡಲು ಉಪಯೋಗಿಸುವ ವಸ್ತುಗಳಲ್ಲಿ ಧೂಪದ್ರವ್ಯ ಪ್ರಾಮುಖ್ಯವಾದ ವಸ್ತುವಾಗಿತ್ತು.
- ಈ ಧೂಪದ್ರವ್ಯ ಅದರಲ್ಲಿರುವ ಸ್ವಸ್ಥಪಡಿಸುವ ಗುಣ ಮತ್ತು ಶಾಂತಗೊಳಿಸುವ ಗುಣಗಳಿಗೆ ಪ್ರಸಿದ್ದಿಹೊಂದಿದೆ.

ಜ್ಞಾನಿಗಳು ಪೂರ್ವ ದಿಕ್ಕಿನಿಂದ ಯೇಸುವನ್ನು ನೋಡಲು ಬೇತ್ಲೆಹೇಮಿಗೆ ಬಂದಾಗ, ಅವರು ತಂದ ಮೂರು ಕಾಣಿಕೆಗಳಲ್ಲಿ ಧೂಪದ್ರವ್ಯ ಒಂದಾಗಿತ್ತು.

(ಈ ಪದಗಳನ್ನು ಸಹ ನೋಡಿರಿ : ಬೇತ್ಲೆಹೇಮ್, ಜ್ಞಾನಿಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.09:28-29
- ವಿಮೋ.30:34-36
- ಮತ್ತಾಯ.02:11-12
- ಅರಣ್ಯ.05:15

ಪದ ಡೇಟಾ:

- Strong's: H3828, G3030

ಧೂಪವೇದಿ, ಧೂಪದ ವೇದಿಕೆ

ಸತ್ಯಾಂಶಗಳು:

ಧೂಪವೇದಿ ಎನ್ನುವುದು ಒಂದು ಉಪಕರಣವಾಗಿದ್ದು, ಅದರ ಮೇಲೆ ಯಾಜಕನು ದೇವರಿಗೆ ಹೋಮವಾಗಿ ಧೂಪವನ್ನು ಹಾಕುತ್ತಾನೆ. ಇದನ್ನು ಬಂಗಾರದ ವೇದಿಕೆ ಎಂದೂ ಕರೆಯುತ್ತಾರೆ.

- ಧೂಪವೇದಿಯು ಕಟ್ಟಿಗೆಯಿಂದ ಮಾಡಿರುತ್ತಾರೆ, ಅದರ ಮೇಲ್ಭಾಗ, ಎರಡು ಬದಿಗೆ ಇರುವ ಹಲಗೆಗಳ ಮೇಲೆ ಬಂಗಾರದಿಂದ ಹೊದಿಸಿರುತ್ತಾರೆ. ಅದು ಸುಮಾರು ಅರ್ಧ ಮೀಟರ್ ಉದ್ದ, ಅರ್ಧ ಮೀಟರ್ ಅಗಲ, ಮತ್ತು ಒಂದು ಮೀಟರ್ ಎತ್ತರವಿರುತ್ತದೆ.
- ಇದನ್ನು ಮೊಟ್ಟ ಮೊದಲು ಗುಡಾರದಲ್ಲಿಟ್ಟಿದ್ದರು. ಆದನಂತರ ಅದನ್ನು ದೇವಾಲಯದಲ್ಲಿಟ್ಟರು.
- ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಯಾಜಕನು ಧೂಪವನ್ನು ಹಾಕುತ್ತಿದ್ದನು.
- ಇದನ್ನು “ಧೂಪವನ್ನು ಉರಿಸುವ ವೇದಿಕೆ” ಅಥವಾ “ಬಂಗಾರದ ವೇದಿಕೆ” ಅಥವಾ “ಧೂಪವನ್ನು ಉರಿಸುವದು” ಎಂದು “ಧೂಪದ ಮೇಜು” ಎಂತಲೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಧೂಪ)

ಸತ್ಯವೇದದ ಅನುಬಂಧ ವಾಕ್ಯಗಳು :

- /ಲೂಕ.01:11-13

ಪದ ಡೇಟಾ:

- Strong's: H4196, H7004, G2368, G2379

ಧೈರ್ಯ, ಧೈರ್ಯಮಯ, ಪ್ರೋತ್ಸಾಹ, ಪ್ರೋತ್ಸಾಹಿಸು, ನಿರುತ್ಸಾಹ, ನಿರುತ್ಸಾಹಗೊಳಿಸು

ಸತ್ಯಾಂಶಗಳು:

"ಧೈರ್ಯ" ಎನ್ನುವ ಪದವು ತುಂಬಾ ಕಷ್ಟಕರವಾದ, ಅಪಾಯಕರವಾದ ಅಥವಾ ಭಯಾನಕವಾದ ಕಾರ್ಯವನ್ನು ಮಾಡುವುದನ್ನು ಮತ್ತು ಅದನ್ನು ಧೈರ್ಯದಿಂದ ಎದುರುಗೊಳ್ಳುವುದನ್ನು ಸೂಚಿಸುತ್ತದೆ.

- "ಧೈರ್ಯಮಯ" ಎನ್ನುವ ಪದವು ಒಬ್ಬ ಭಯಪಡುವ ಸಮಯದಲ್ಲಿ ಅಥವಾ ಮಾಡುವ ಕೆಲಸವನ್ನು ಬಿಟ್ಟುಬಿಡುವ ಸಮಯದಲ್ಲಿ ಸರಿಯಾದ ಕಾರ್ಯವನ್ನು ಮಾಡುತ್ತಾ, ತನ್ನ ಧೈರ್ಯವನ್ನು ಪ್ರದರ್ಶಿಸುವ ವ್ಯಕ್ತಿಯನ್ನು ತೋರಿಸುತ್ತದೆ.
- ಒಬ್ಬ ವ್ಯಕ್ತಿ ತನ್ನ ಬಲ ಮತ್ತು ಅವಿರತ ಯತ್ನದೊಂದಿಗೆ ಮಾನಸಿಕವಾದ ಅಥವಾ ಭೌತಿಕವಾದ ನೋವನ್ನು ಹೊಂದುತ್ತಿರುವಾಗ ತನ್ನೊಳಗಿರುವ ಧೈರ್ಯವನ್ನು ತೋರಿಸುತ್ತಾನೆ.
- "ಧೈರ್ಯವನ್ನು ಹೊಂದು" ಎನ್ನುವ ಮಾತಿಗೆ "ಹೆದರಬೇಡ" ಅಥವಾ "ಎಲ್ಲಾ ಕಾರ್ಯಗಳು ಚೆನ್ನಾಗಿ ನಡೆಯುತ್ತವೆಯೆಂದು ಖಚಿತವಾಗಿರುವುದು" ಎಂದರ್ಥ.
- ಯೆಹೋಶುವ ಕಾನಾನ್ ಎನ್ನುವ ಭಯಾನಕವಾದ ಭೂಮಿಗೆ ಹೋಗುವುದಕ್ಕೆ ಸಿದ್ಧಗೊಳಿಸುತ್ತಿರುವಾಗ, "ಬಲದಿಂದಿರು ಮತ್ತು ಧೈರ್ಯದಿಂದಿರು" ಎಂದು ಮೋಶೆ ಯೆಹೋಶುವನಿಗೆ ಎಚ್ಚರಿಕೆ ನೀಡಿದನು.
- "ಧೈರ್ಯಮಯ" ಎನ್ನುವ ಪದವನ್ನು "ಧೈರ್ಯಶಾಲಿ" ಅಥವಾ "ಹೆದರಿಕೆಯಿಲ್ಲದೇ" ಅಥವಾ "ದಿಟ್ಟ" ಎನ್ನುವ ಪರ್ಯಾಯ ಪದಗಳಿಂದಲೂ ಹೇಳಬಹುದು.
- ಸಂದರ್ಭಾನುಸಾರವಾಗಿ "ಧೈರ್ಯವನ್ನು ಹೊಂದು" ಎನ್ನುವ ಪದವನ್ನು "ಮಾನಸಿಕವಾಗಿ ಬಲದಿಂದಿರು" ಅಥವಾ "ನಿಶ್ಚಯತೆಯಿಂದಿರು" ಅಥವಾ "ಸ್ಥಿರವಾಗಿ ನಿಲ್ಲು" ಎಂದೂ ಅನುವಾದ ಮಾಡಬಹುದು.
- "ಧೈರ್ಯದಿಂದ ಮಾತನಾಡು" ಎನ್ನುವ ಮಾತಿಗೆ "ನಿರ್ಭಯದಿಂದ ಮಾತನಾಡು" ಅಥವಾ "ಹೆದರದೆ ಮಾತನಾಡು" ಅಥವಾ "ನಿಶ್ಚಯತೆಯಿಂದ ಮಾತನಾಡು" ಎಂದೂ ಹೇಳಬಹುದು ಅಥವಾ ಅನುವಾದ ಮಾಡಬಹುದು.

"ಪ್ರೋತ್ಸಾಹಿಸು" ಅಥವಾ "ಪ್ರೋತ್ಸಾಹ" ಎನ್ನುವ ಪದಗಳು ಒಬ್ಬರಿಗೆ ಆದರಣೆಯನ್ನುಂಟು ಮಾಡಲು, ನಿರೀಕ್ಷೆ ಕೊಡಲು, ನಿಶ್ಚಯತೆ ಮತ್ತು ಧೈರ್ಯವನ್ನುಂಟು ಮಾಡಲು ಹೇಳುವ ಮಾತುಗಳು ಅಥವಾ ಕಾರ್ಯಗಳನ್ನು ಸೂಚಿಸುತ್ತದೆ.

- "ಎಚ್ಚರಿಕೆ" ಎನ್ನುವ ಪರ್ಯಾಯ ಪದವು ಕೂಡ ಯಾರಾದರೊಬ್ಬರು ತಪ್ಪಾದ ಕಾರ್ಯವನ್ನು ಮಾಡುತ್ತಿದ್ದರೆ, ಅದನ್ನು ಮಾಡಬೇಡಿ ಎಂದು ಹೇಳುವುದು ಮತ್ತು ತಪ್ಪಾದ ಕಾರ್ಯಗಳಿಗೆ ಬದಲಾಗಿ ಸರಿಯಾದ ಮತ್ತು ಒಳ್ಳೇಯ ಕಾರ್ಯಗಳನ್ನು ಮಾಡಲು ಪ್ರೋತ್ಸಾಹಗೊಳಿಸುವುದು ಎಂದೆನ್ನುವ ಅರ್ಥವನ್ನು ಹೊಂದಿರುತ್ತದೆ.
- ಅಪೊಸ್ತಲನಾದ ಪೌಲನು ಮತ್ತು ಇತರ ಹೊಸ ಒಡಂಬಡಿಕೆಯ ರಚನಾಕಾರರು ಒಬ್ಬರನ್ನೊಬ್ಬರು ಪ್ರೀತಿಸಿಕೊಳ್ಳಬೇಕೆಂದು ಮತ್ತು ಸೇವೆ ಮಾಡಿಕೊಳ್ಳಬೇಕೆಂದು ಕ್ರೈಸ್ತರಿಗೆ ಬೋಧನೆ ಮಾಡಿದರು.
- "ನಿರುತ್ಸಾಹಗೊಳಿಸು" ಎನ್ನುವ ಪದವು ಜನರು ತಮ್ಮಲ್ಲಿ ಇಟ್ಟುಕೊಂಡಿರುವ ನಿರೀಕ್ಷೆ, ನಿಶ್ಚಯತೆ, ಮತ್ತು ಧೈರ್ಯ ಎನ್ನುವವುಗಳನ್ನು ಕಳೆದುಕೊಳ್ಳುವಂತೆ ಹೇಳುವ ಮಾತುಗಳನ್ನು ಮತ್ತು ಕ್ರಿಯೆಗಳನ್ನು ಸೂಚಿಸುತ್ತದೆ. ಇದರಿಂದ ಜನರು ಮಾಡಲೇ ಬೇಕಾದ ಕಾರ್ಯಗಳನ್ನು ಕಷ್ಟಪಟ್ಟು ಮಾಡುವುದಕ್ಕೆ ತಮ್ಮಲ್ಲಿರುವ ಆಸೆಯನ್ನು ಕಡಿಮೆ ಮಾಡುತ್ತವೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ "ಪ್ರೋತ್ಸಾಹಗೊಳಿಸು" ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ "ಪ್ರೇರೇಪಿಸು" ಅಥವಾ "ಆದರಿಸು" ಅಥವಾ "ದಯೆಯುಳ್ಳ ಪದಗಳನ್ನು ಹೇಳು" ಅಥವಾ "ಸಹಾಯ ಮಾಡು ಮತ್ತು ಬೆಂಬಲ ಕೊಡು" ಎನ್ನುವ ಪದಗಳೂ ಒಳಗೊಂಡಿರುತ್ತವೆ.
- "ಪ್ರೋತ್ಸಾಹಗೊಳಿಸುವ ಮಾತುಗಳನ್ನು ಕೊಡು" ಎನ್ನುವ ಮಾತಿಗೆ "ಇತರ ಜನರು ಪ್ರೀತಿಸಲ್ಪದುತ್ತಿದ್ದಾರೆಂದು, ಅಂಗೀಕರಿಸಲ್ಪಡುತ್ತಿದ್ದಾರೆಂದು ಮತ್ತು ಬಲವನ್ನು ಹೊಂದುತ್ತಿದ್ದಾರೆಂದು ತಿಳಿಯುವಂತೆ ಮಾಡುವ ವಿಷಯಗಳನ್ನು ಹೇಳು" ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ನಿಶ್ಚಯತೆ, ಎಚ್ಚರಿಕೆ, ಭಯ, ಬಲ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.01:37-38
- 2 ಅರಸ.18:19-21
- 1 ಪೂರ್ವ.17:25
- ಮತ್ತಾಯ.09:20-22
- 1 ಕೊರಿಂಥ.14:1-4
- 2 ಕೊರಿಂಥ.07:13
- ಅಪೊ.ಕೃತ್ಯ.05:12-13
- ಅಪೊ.ಕೃತ್ಯ.16:40
- ಇಬ್ರಿ.03:12-13

- ಇಬ್ರಿ.13:5-6

ಪದ ಡೇಟಾ:

- Strong's: H533, H553, H1368, H2388, H2388, H2428, H3820, H3824, H7307, G2114, G2115, G2174, G2292, G2293, G2294, G3870, G3874, G3954, G4389, G4837, G5111

ಧೈರ್ಯ, ಧೈರ್ಯವಾಗಿ, ಧೈರ್ಯಶಾಲಿ

ಪದದ ಅರ್ಥವಿವರಣೆ:

ಈ ಪದವು ಕಷ್ಟ ಮ್ಮತ್ತು ಅಪಾಯಕರ ಸಂದರ್ಭದಲ್ಲಿಯೂ ಸರಿಯಾದದ್ದನ್ನು ಮಾಡುವುದಕ್ಕೆ ಮತ್ತು ಸತ್ಯವನ್ನೇ ಮಾತಾಡುವುದಕ್ಕೆ ಧೈರ್ಯವನ್ನು ಮತ್ತು ಆತ್ಮವಿಶ್ವಾಸವನ್ನು ಹೊಂದಿರುವದನ್ನು ಸೂಚಿಸುತ್ತದೆ.

- “ಧೈರ್ಯವುಳ್ಳ” ಒಬ್ಬ ವ್ಯಕ್ತಿ ಸರಿಯಾದದ್ದನ್ನು, ಒಳ್ಳೆಯದನ್ನು ಮಾಡುವುದಕ್ಕೆ ಮತ್ತು ಹೇಳುವುದಕ್ಕೆ ಭಯಪಡುವುದಿಲ್ಲ, ದುಷ್ಕೃತ್ಯಕ್ಕೆ ಒಳಗಾದ ಜನರನ್ನು ರಕ್ಷಿಸುವುದಕ್ಕೆ ಹಿಂಜರಿಯುವುದಿಲ್ಲ. ಈ ಪದವನ್ನು “ಪರಾಕ್ರಮ” ಅಥವಾ “ಭಯವಿಲ್ಲದವನು” ಎಂದೂ ಅನುವಾದ ಮಾಡಬಹುದು.
- ಹೊಸ ಒಡಂಬಡಿಕೆಯಲ್ಲಿ ಶಿಷ್ಯರು ಸೆರೆಮನೆಗೆ ಹಾಕುವ ಅಥವಾ ಕೊಲ್ಲುವ ಅಪಾಯದ ಹೊರತಾಗಿಯೂ ಬಹಿರಂಗ ಪ್ರದೇಶಗಳಲ್ಲಿ ಕ್ರಿಸ್ತನ ಬಗ್ಗೆ "ಧೈರ್ಯದಿಂದ" ಬೋಧಿಸುವುದನ್ನು ಮುಂದುವರಿಸಿದನು. ಇದನ್ನು “ಆತ್ಮವಿಶ್ವಾಸದಿಂದ” ಅಥವಾ “ಬಲವಾದ ಧೈರ್ಯದಿಂದ” ಅಥವಾ “ಪರಾಕ್ರಮದಿಂದ” ಎಂದು ಅನುವಾದ ಮಾಡಬಹುದು.
- ಶಿಲುಬೆಯ ಮೇಲೆ ಕ್ರಿಸ್ತನು ಮರಣವನ್ನು ಸೋಲಿಸಿದ ಸುವಾರ್ತೆಯನ್ನು ಮಾತನಾಡುವುದರಲ್ಲಿ ಈ ಆದಿ ಶಿಷ್ಯರ “ಧೈರ್ಯವು” ಇಸ್ರಾಯೇಲ್ ದೇಶದಲ್ಲೆಲ್ಲಾ ಮತ್ತು ಇತರ ಸುತ್ತಮುತ್ತಲಿರುವ ದೇಶದಲ್ಲೆಲ್ಲಾ ಸುವಾರ್ತೆಯು ಹರಡುವಂತೆ ಮಾಡಿತು ಮತ್ತು ಕೊನೆಗೆ, ಭೂಮಿಯ ಕಟ್ಟಕಡೆಯವರೆಗೆ ಈ ಸುವಾರ್ತೆಯು ತಲುಪುವಂತೆ ಮಾಡಿತು. “ಸಾಹಸ” ಎನ್ನುವ ಪದವನ್ನು “ನಿಶ್ಚಯತೆಯಿಂದಿರುವ ಧೈರ್ಯ” ಎಂಬುದಾಗಿಯೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಿಶ್ಚಯತೆ, ಸುವಾರ್ತೆ, ವಿಮೋಚನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.02:28
- 1 ಥೆಸ್ಸ.02:1-2
- 2 ಕೊರಿಂಥ.03:12-13
- ಅಪೊ.ಕೃತ್ಯ.04:13

ಪದ ಡೇಟಾ:

- Strong's: H982, H5797, G662, G2292, G3618, G3954, G3955, G5111, G5112

ಧ್ಯಾನಿಸು, ಧ್ಯಾನಮಾಡು, ಧ್ಯಾನ

ಪದದ ಅರ್ಥವಿವರಣೆ:

“ಧ್ಯಾನಿಸು” ಎನ್ನುವ ಪದಕ್ಕೆ ಯಾವುದಾದರೊಂದರ ಕುರಿತಾಗಿ ತುಂಬಾ ಜಾಗೃತಿಯಾಗಿ ಮತ್ತು ಆಳವಾಗಿ ಆಲೋಚನೆ ಮಾಡುವುದಕ್ಕೆ ಸಮಯವನ್ನು ಕಳೆಯುವುದು ಎಂದರ್ಥ.

- ಈ ಪದವನ್ನು ದೇವರ ಕುರಿತಾಗಿ ಮತ್ತು ಆತನ ಬೋಧನೆಗಳ ಕುರಿತಾಗಿ ಆಲೋಚನೆ ಮಾಡುವುದನ್ನು ಸೂಚಿಸುವುದಕ್ಕೆ ಸತ್ಯವೇದದಲ್ಲಿ ಉಪಯೋಗಿಸಲಾಗಿರುತ್ತದೆ.
- “ಹಗಲು ರಾತ್ರಿ” ಕರ್ತನ ಧರ್ಮಶಾಸ್ತ್ರವನ್ನು ಧ್ಯಾನ ಮಾಡುವ ವ್ಯಕ್ತಿ ಹೆಚ್ಚಾಗಿ ಆಶೀರ್ವಾದ ಹೊಂದಿರುತ್ತಾನೆಂದು ಕೀರ್ತನೆ 1 ಹೇಳುತ್ತಿದೆ.

ಅನುವಾದ ಸಲಹೆಗಳು:

- “ಧ್ಯಾನಿಸು” ಎನ್ನುವ ಪದವನ್ನು “ಜಾಗೃತಿಯಾಗಿ ಮತ್ತು ಆಳವಾಗಿ ಮಾಡುವುದು” ಅಥವಾ “ಆಲೋಚನಾತ್ಮಕವಾಗಿ ಪರಿಗಣಿಸುವುದು” ಅಥವಾ “ಅನೇಕಬಾರಿ ಆಲೋಚನೆ ಮಾಡುವುದು” ಎಂದೂ ಅನುವಾದ ಮಾಡಬಹುದು.
- “ಧ್ಯಾನ” ಎನ್ನುವ ನಾಮಪದ ರೂಪವನ್ನು “ಆಳವಾದ ಆಲೋಚನೆಗಳು” ಎಂದೂ ಅನುವಾದ ಮಾಡಬಹುದು. * “ನನ್ನ ಹೃದಯ ಧ್ಯಾನ” ಎನ್ನುವಂಥಹ ಮಾತನ್ನು “ಯಾವುದಾದರೊಂದರ ಕುರಿತಾಗಿ ನಾನು ಆಳವಾಗಿ ಆಲೋಚನೆ ಮಾಡುವುದು” ಅಥವಾ “ಯಾವುದಾದರೊಂದರ ಕುರಿತಾಗಿ ನಾನು ಹೆಚ್ಚಾಗಿ ಆಲೋಚನೆ ಮಾಡುವುದು” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.24:63-65
- ಯೆಹೋ.01:8-9
- ಕೀರ್ತನೆ.001:1-2
- ಕೀರ್ತನೆ.119:15-16

ಪದ ಡೇಟಾ:

- Strong's: H1897, H1900, H1901, H1902, H7742, H7878, H7879, H7881, G3191, G4304

ಧ್ವಂಸ ಮಾಡು, ಧ್ವಂಸ ಮಾಡಿದೆ, ಧ್ವಂಸ ಮಾಡುತ್ತಿದೆ, ಧ್ವಂಸ, ಧ್ವಂಸಗಳು

ಪದದ ಅರ್ಥವಿವರಣೆ:

“ಧ್ವಂಸ ಮಾಡಲಾಗಿದೆ” ಅಥವಾ “ಧ್ವಂಸ” ಎನ್ನುವ ಪದಗಳು ಒಬ್ಬರ ಆಸ್ತಿಪಾಸ್ತಿಗಳು ನಾಶವಾಗಿರುವುದನ್ನು ಅಥವಾ ಅವಶೇಷಗಳನ್ನಾಗಿ ಮಾಡಿದ ಸಂದರ್ಭವನ್ನು ಸೂಚಿಸುತ್ತದೆ. ಆ ಭೂಮಿಯಲ್ಲಿ ಅಥವಾ ಆ ದೇಶದಲ್ಲಿ ನಿವಾಸವಾಗಿರುವ ಜನರನ್ನು ಸೆರೆಗೊಯ್ಯುವುದನ್ನು ಅಥವಾ ನಾಶಗೊಳಿಸುವುದನ್ನು ಇದರಲ್ಲಿ ಅನೇಕಬಾರಿ ಒಳಗೊಂಡಿರುತ್ತವೆ.

- ಸಂಪೂರ್ಣವಾದ ನಾಶನವನ್ನು ಮತ್ತು ಅತೀ ತೀವ್ರವಾದ ಸಂದರ್ಭವನ್ನು ಸೂಚಿಸುತ್ತದೆ.
- ಉದಾಹರಣೆಗೆ, ಸೊದೋಮ್ ಪಟ್ಟಣದಲ್ಲಿರುವ ಜನರು ಮಾಡಿದ ಪಾಪಗಳಿಗಾಗಿ ಶಿಕ್ಷೆಯನ್ನು ಕೊಡಬೇಕೆಂದು ದೇವರು ಆ ಪಟ್ಟಣವನ್ನೇ ಧ್ವಂಸ ಮಾಡಿದರು.
- “ಧ್ವಂಸ” ಎನ್ನುವ ಪದವು ಶಿಕ್ಷೆ ಅಥವಾ ನಾಶನದಿಂದ ಉಂಟಾಗುವ ಮಾನಸಿಕವಾಗಿ ಅತೀ ಹೆಚ್ಚಾಗಿ ಪ್ರಲಾಪವನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

“ಧ್ವಂಸ ಮಾಡು” ಎನ್ನುವ ಪದವನ್ನು “ಸಂಪೂರ್ಣವಾಗಿ ನಾಶಗೊಳಿಸು” ಅಥವಾ “ಸಂಪೂರ್ಣವಾಗಿ ನಾಶಕ್ಕೊಳಗಾಗಿಸು” ಎಂದೂ ಅನುವಾದ ಮಾಡಬಹುದು.

- ಸಂದರ್ಭಕ್ಕೆ ತಕ್ಕಂತೆ, “ಧ್ವಂಸ ಮಾಡು” ಎನ್ನುವ ಪದವನ್ನು “ಸಂಪೂರ್ಣವಾಗಿ ನಾಶಗೊಳಿಸು” ಅಥವಾ “ಒಟ್ಟು ಹಾಳು ಮಾಡು” ಅಥವಾ “ತಡೆಯಲಾರದ ಪ್ರಲಾಪ” ಅಥವಾ “ಧ್ವಂಸಮಾಡುವವನು” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.08:24-25
- ಯೆರೆ.04:13-15
- ಅರಣ್ಯ..21:29-30
- ಜೆಫ.01:12-13

ಪದ ಡೇಟಾ:

- Strong's: H1110, H1238, H2721, H1826, H3615, H3772, H7701, H7703, H7722, H7843, H8074, H8077

ನಂದಿಸು, ನಂದಿಸಿದೆ, ನಂದಿಸುವುದಕ್ಕಾಗದ

ಪದದ ಅರ್ಥವಿವರಣೆ:

“ನಂದಿಸು” ಎನ್ನುವ ಪದಕ್ಕೆ ತೃಪ್ತಿ ಹೊಂದಬೇಕೆನ್ನುವ ಬಯಕೆಯನ್ನು ತಡೆಯುವುದು ಅಥವಾ ಪಕ್ಕಕ್ಕೆ ಇಡುವುದು ಎಂದರ್ಥ.

- ಈ ಪದವು ಸಾಧಾರಣವಾಗಿ ದಾಹವನ್ನು ನಂದಿಸುವ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ ಮತ್ತು ಯಾವುದಾದರೊಂದನ್ನು ಕುಡಿಯುವುದರ ಮೂಲಕ ದಾಹವನ್ನು ನಿಲ್ಲಿಸುವುದು ಎಂದರ್ಥ.
- ಬೆಂಕಿಯನ್ನು ಆರಿಸುವುದಕ್ಕೂ ಈ ಪದವನ್ನು ಉಪಯೋಗಿಸಿರುತ್ತಾರೆ.
- ದಾಹ ಮತ್ತು ಬೆಂಕಿ ಎನ್ನುವವುಗಳನ್ನು ನೀರಿನೊಂದಿಗೆ ನಂದಿಸುತ್ತಾರೆ.
- “ಪವಿತ್ರಾತ್ಮನನ್ನು ನಂದಿಸಬಾರದೆಂದು” ಪೌಲನು ವಿಶ್ವಾಸಿಗಳಿಗೆ ಎಚ್ಚರಿಕೆಗಳನ್ನು ಕೊಡುವಾಗ ಆತನು “ನಂದಿಸು” ಎನ್ನುವ ಪದವನ್ನು ಅಲಂಕಾರಿಕ ಆಗಿ ಉಪಯೋಗಿಸಿದ್ದರು. ಪವಿತ್ರಾತ್ಮ ದೇವರು ಜನರಲ್ಲಿ ಆತನ ಫಲಗಳು ಮತ್ತು ವರಗಳು ಉಂಟು ಮಾಡುತ್ತಿರುವಾಗ ಜನರನ್ನು ನಿರುತ್ಸಾಹಗೊಳಿಸಬಾರದೆಂದು ಇದರ ಅರ್ಥವಾಗಿರುತ್ತದೆ. ಪವಿತ್ರಾತ್ಮನನ್ನು ನಂದಿಸುವುದು ಎಂದರೆ ಜನರಲ್ಲಿ ಪವಿತ್ರಾತ್ಮನು ತನ್ನ ಶಕ್ತಿಯನ್ನು ಮತ್ತು ಕೆಲಸವನ್ನು ಮಾಡದಂತೆ ಆತನನ್ನು ಅಡ್ಡಿಪಡಿಸುವುದು ಎಂದರ್ಥವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಫಲ, ವರ, ಪವಿತ್ರಾತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಥೆಸ್ಸ.05:19
- ಯೆಹೆ.20:47
- ಯೆಶಯಾ.01:31
- ಯೆರೆ.21:12

ಪದ ಡೇಟಾ:

- Strong's: H1846, H3518, H7665, G762, G4570

ನಡಗು, ನಡಗುತ್ತಿರುವುದು

ಪದದ ಅರ್ಥವಿವರಣೆ:

“ನಡಗು” ಎನ್ನುವ ಪದಕ್ಕೆ ಅತೀ ಹೆಚ್ಚಾಗಿ ಯಾತನೆಯಿಂದ ಅಥವಾ ಭಯದಿಂದ ಬರುವ ಅಲುಗಾಡುವುದು ಅಥವಾ ಕಂಪಿಸುತ್ತಿರುವುದು ಎಂದರ್ಥ.

- ಈ ಪದವು “ಹೆಚ್ಚಾದ ಹೆದರಿಕೆಯಲ್ಲಿರುವುದು” ಎನ್ನುವ ಅರ್ಥವನ್ನು ಕೊಡುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಡುತ್ತದೆ.
- ಕೆಲವೊಂದುಬಾರಿ ನೆಲವು ಕಂಪಿಸಿದಾಗ, ಇದನ್ನು “ನಡುಗು” ಎಂದು ಹೇಳಲ್ಪಡುತ್ತದೆ. ಇದು ಭೂಕಂಪ ಬಂದಾಗ ಅಥವಾ ಹೆಚ್ಚಾದ ಗಲಬೆಯಾದಾಗ ಕೊಡುವ ಸ್ಪಂದನೆಯಲ್ಲಿ ಉಂಟಾಗುತ್ತದೆ.
- ಕರ್ತನ ಸಾನ್ನಿಧ್ಯದಲ್ಲಿ ಭೂಮಿಯು ನಡಗುಟ್ಟಿದೆಯೆಂದು ಸತ್ಯವೇದ ಹೇಳುತ್ತಿದೆ. ಭೂಮಿಯ ಮೇಲೆ ಇರುವ ಜನರು ದೇವರ ಭಯದಿಂದ ಅಲುಗಾಡುತ್ತಾರೆ ಅಥವಾ ಭೂಮಿಯೇ ಕಂಪಿಸುತ್ತದೆ ಎಂದು ಇದರ ಅರ್ಥವಾಗಿರುತ್ತದೆ.
- ಈ ಪದವನ್ನು “ಹೆದರಿಕೆಯಿಂದಿರುವುದು” ಅಥವಾ “ದೇವರಿಗೆ ಭಯಪಡು” ಅಥವಾ “ಅಲುಗಾಡುವುದು” ಎಂದು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಭೂಮಿ, ಭಯ, ಕರ್ತನು)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಕೊರಿಂಥ.07:15
- 2 ಸಮು.22:44-46
- ಅಪೊ.ಕೃತ್ಯ.16:29-31
- ಯೆರೆ.05:22
- ಲೂಕ.08:47-48

ಪದ ಡೇಟಾ:

- Strong’s: H1674, H2111, H2112, H2151, H2342, H2648, H2729, H2730, H2731, H5128, H5568, H6342, H6426, H6427, H7264, H7268, H7269, H7322, H7460, H7461, H7481, H7493, H7578, H8078, H8653, G1790, G5141, G5156, G5425

ನಡುಪಟ್ಟಿ, ಸುತ್ತು, ಸುತ್ತಲೂ ಸುತ್ತಿ, ಕಟ್ಟಿಹಾಕಿರುವ, ಪಟ್ಟಿ, ಪಟ್ಟಿಯಲ್ಲಿ ಸಿಕ್ಕಿಸಿ, ಸುತ್ತಲೂ ಪಟ್ಟಿ ಹಾಕಿ

ಅರ್ಥವಿವರಣೆ:

“ನಡುಪಟ್ಟಿ” ಎನ್ನುವ ಪದಕ್ಕೆ ಏನಾದರು ಒಂದರ ಸುತ್ತಲು ಯಾವುದಾದರು ಒಂದನ್ನು ಕಟ್ಟುವುದು ಎಂದರ್ಥ. ಅದು ಸಹಜವಾಗಿ ನಿಲುವಂಗಿ ಅಥವಾ ವಸ್ತ್ರವನ್ನು ಅದರ ಸ್ಥಾನದಲ್ಲಿ ಇರಿಸಲು ನಡುಕಟ್ಟನ್ನು ಅಥವಾ ಚೌಕಟ್ಟನ್ನು ಸೊಂಟದ ಸುತ್ತಲು ಕಟ್ಟಿಕೊಳ್ಳುವುದನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ ಸಹಜವಾಗಿ ಉಪಯೋಗಿಸಲ್ಪಟ್ಟಿರುವ “ನಡುವನ್ನು ಕಟ್ಟಿಕೋ” ಎನ್ನುವ ಮಾತು ಒಬ್ಬ ವ್ಯಕ್ತಿ ಯಾವ ಅಡಚಣೆಗಳಿಲ್ಲದೆ ನಡೆಯುವದಕ್ಕೆ ಅಥವಾ ಕೆಲಸ ಮಾಡಲು ತಮ್ಮ ವಸ್ತ್ರಗಳನ್ನು ನಡುಕಟ್ಟಿನಲ್ಲಿ ಸಿಕ್ಕಿಸಿಕೊಳ್ಳುವುದನ್ನು ಸೂಚಿಸುತ್ತದೆ.
- “ಕೆಲಸ ಮಾಡಲು ಸಿದ್ಧನಾಗು” ಅಥವಾ ಕಷ್ಟಕರವಾದ ಕೆಲಸ ಮಾಡಲು ಸಿದ್ಧವಾಗು ಎಂಬುದನ್ನು ಸಹ ಈ ನುಡಿಗಟ್ಟು ಸೂಚಿಸುತ್ತದೆ.
- “ನಡುವನ್ನು ಕಟ್ಟಿಕೋ” ಎನ್ನುವ ವಾಕ್ಯವನ್ನು ಅದೇ ಅರ್ಥವುಳ್ಳ ಪದಗಳನ್ನು ಉಪಯೋಗಿಸಿ ಗುರಿ ಭಾಷೆಯಲ್ಲಿ ಅನುವಾದ ಮಾಡಬಹುದು. ಅಥವಾ “ಕ್ರಿಯೆಗೆ ನಿನ್ನನ್ನು ನೀನು ತಯಾರುಮಾಡಿಕೋ” ಅಥವಾ “ನಿನ್ನನ್ನು ನೀನು ಸಿದ್ಧಪಡಿಸಿಕೋ” ಎಂದು ಅಲಂಕಾರಿಕ ರೂಪದಲ್ಲಿ ಅನುವಾದ ಮಾಡಬಹುದು.
- “ಕಟ್ಟಿಕೋ” ಎನ್ನುವ ಪದವನ್ನು “ಸುತ್ತುವರಿದ” ಅಥವಾ “ಸುತ್ತಿದ” ಅಥವಾ “ನಡುಕಟ್ಟಿನಿಂದ” ಎಂದು ಅನುವಾದ ಮಾಡಬಹುದು.

(ಇವುಗಳನ್ನು ಸಹ ನೋಡಿರಿ : ನಡು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೇತ್ರ.1:13-14
- ಯೋಬ.38:3

ಪದದ ಡೇಟಾ:

- Strong's: H0640, H0247, H2290, H2296, H8151, G03280, G12410, G40240

ನಡುವು (ಅಥವಾ ಸೊಂಟ)

ಪದದ ಅರ್ಥವಿವರಣೆ:

“ನಡುವು (ಅಥವಾ ಸೊಂಟ)” ಎನ್ನುವ ಪದವು ಒಬ್ಬ ವ್ಯಕ್ತಿಯ ಅಥವಾ ಒಂದು ಪ್ರಾಣಿಯ ದೇಹದ ಭಾಗವಾಗಿರುತ್ತದೆ, ಇದು ಪಕ್ಕೆಲುಬುಗಳ ಕೆಳಗೆ ಮತ್ತು ಸೊಂಟದ ಎಲುಬುಗಳ ಮಧ್ಯೆದಲ್ಲಿರುವ ಭಾಗವನ್ನು ಸೂಚಿಸುತ್ತದೆ, ಇದನ್ನು ಕೆಳ ಹೊಟ್ಟೆ ಎಂಬುದಾಗಿಯೂ ಕರೆಯುತ್ತಾರೆ.

- “ಸೊಂಟವನ್ನು ಕಟ್ಟಿಕೊಳ್ಳಿ” ಎನ್ನುವ ಮಾತು ಕೆಲಸವನ್ನು ಹೆಚ್ಚಾಗಿ ಮಾಡುವುದಕ್ಕೆ ಸಿದ್ಧತೆಯನ್ನು ಸೂಚಿಸುತ್ತದೆ. ಯಾವ ಅಡ್ಡಿ ಇಲ್ಲದೇ ಚೆನ್ನಾಗಿ ನಡೆಯುವುದಕ್ಕೆ ಸೊಂಟದ ಸುತ್ತಲು ಒಂದು ನಡುಕಟ್ಟುನೊಳಗೆ ಒಬ್ಬನ ನಿಲುವಂಗಿಯ ಕೆಳಭಾಗವನ್ನು ಒಳಕ್ಕೆ ಹಾಕಿಕೊಳ್ಳುವ ಪದ್ಧತಿಯಿಂದ ಈ ಪದವು ಬಂದಿರುತ್ತದೆ.
- “ನಡುವು (ಅಥವಾ ಸೊಂಟ)” ಎನ್ನುವ ಪದವನ್ನು ಸತ್ಯವೇದದಲ್ಲಿ ಅನೇಕಸಲ ಸರ್ವಾಂಗಹೋಮ ಮಾಡುವ ಪ್ರಾಣಿಯ ಹಿಂಭಾಗದ ಕೆಳ ಭಾಗವನ್ನು ಸೂಚಿಸುವುದಕ್ಕೆ ಉಪಯೋಗಿಸಿದ್ದಾರೆ.
- ಸತ್ಯವೇದದಲ್ಲಿ “ನಡುವು (ಅಥವಾ ಸೊಂಟ)” ಎನ್ನುವ ಪದವು ಅನೇಕಸಲ ಒಬ್ಬ ಮನುಷ್ಯನ ಸಂತಾನೋತ್ಪತ್ತಿಗೊಳಿಸುವ ಅಂಗವನ್ನು ಸಂತಾನದವರ ಆಧಾರವನ್ನಾಗಿ ಸೂಚಿಸುವುದಕ್ಕೆ ಅಲಂಕಾರಿಕವಾಗಿ ಮತ್ತು ಸೌಮ್ಯೋಕ್ತಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ. (ನೋಡಿರಿ: ಸೌಮ್ಯೋಕ್ತಿಕ)
- “ನಿನ್ನ ನಡುವಿನಿಂದ ಬರುವ” ಎನ್ನುವ ಮಾತನ್ನು “ನಿನ್ನ ಸಂತತಿಯಾಗಿರಲು” ಅಥವಾ “ನಿನ್ನ ಬೀಜದಿಂದ ಹುಟ್ಟುವ” ಅಥವಾ “ನಿನ್ನಿಂದ ಬರುವುದಕ್ಕೆ ದೇವರೇ ಕಾರಣವಾಗಿರುತ್ತಾರೆ” ಎಂದೂ ಅನುವಾದ ಮಾಡಬಹುದು. (ನೋಡಿರಿ: ಸೌಮ್ಯೋಕ್ತಿಕ)
- ದೇಹದ ಒಂದು ಅಂಗವನ್ನು ಸೂಚಿಸಿದಾಗ, ಇದನ್ನು “ಕೆಳ ಹೊಟ್ಟೆ” ಅಥವಾ “ಚಪ್ಪೆಗಳು” ಅಥವಾ “ನಡು” ಎಂದು ಸಂದರ್ಭಾನುಗುಣವಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸಂತಾನದವರು, ಸುತ್ತುವರಿ, ಸಂತತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.01:13-14
- 2 ಪೂರ್ವ.06:7-9
- ಧರ್ಮೋ.33:11
- ಆದಿ.37:34-36
- ಯೋಬ.15:27-28

ಪದ ಡೇಟಾ:

- Strong's: H2504, H2783, H3409, H3689, H4975, G3751

ನಡೆ, ನಡೆಯುತ್ತಿರುವುದು

ಪದದ ಅರ್ಥವಿವರಣೆ:

“ನಡೆ” ಎನ್ನುವ ಪದವು ಅನೇಕ ಬಾರಿ “ಜೀವಿಸು” ಎನ್ನುವ ಅರ್ಥವನ್ನು ಕೊಡುವುದಕ್ಕೆ ಅಲಂಕಾರಿಕ ಭಾವನೆಯಲ್ಲಿ ಉಪಯೋಗಿಸಿರುತ್ತಾರೆ.

- “ಹನೋಕನು ದೇವರೊಂದಿಗೆ ನಡೆದನು” ಎನ್ನುವ ಮಾತಿಗೆ ಹನೋಕನು ದೇವರೊಂದಿಗೆ ತುಂಬಾ ಹತ್ತಿರ ಸಂಬಂಧದಲ್ಲಿ ಜೀವಿಸಿದ್ದನು ಎಂದರ್ಥವಾಗಿರುತ್ತದೆ.
- “ಆತ್ಮದಿಂದ ನಡೆ” ಎನ್ನುವ ಮಾತಿಗೆ ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ಹೋಗು, ಇದರಿಂದ ನಾವು ದೇವರನ್ನು ಘನಪಡಿಸುವ ಮತ್ತು ದೇವರಿಗೆ ಮೆಚ್ಚಿಕೆಯಾಗುವ ಕೆಲಸಗಳನ್ನು ಮಾಡುತ್ತೇವೆ.
- ದೇವರ ಆಜ್ಞೆಗಳಲ್ಲಿ ಅಥವಾ ದೇವರ ಮಾರ್ಗಗಳಲ್ಲಿ “ನಡೆ” ಎಂದರೆ ಆತನ ಆಜ್ಞೆಗಳಿಗೆ “ವಿಧೇಯತೆ ತೋರಿಸುವುದರಲ್ಲಿ ಜೀವಿಸು” ಅಂದರೆ “ಆತನ ಆಜ್ಞೆಗಳಿಗೆ ವಿಧೇಯನಾಗು” ಅಥವಾ “ಆತನ ಚಿತ್ತವನ್ನು ನೆರವೇರಿಸು” ಎಂದರ್ಥವಾಗಿರುತ್ತದೆ.
- ನಾನು ನನ್ನ ಜನರ “ಮಧ್ಯೆದಲ್ಲಿ ನಡೆಯುತ್ತೇನೆ” ಎಂದು ದೇವರು ಹೇಳಿದಾಗ, ಈ ಮಾತಿಗೆ ಆತನು ಅವರ ಮಧ್ಯೆದಲ್ಲಿ ನಿವಾಸವಾಗಿರುತ್ತಾನೆ ಅಥವಾ ಅವರೊಂದಿಗೆ ತುಂಬಾ ಹತ್ತಿರವಾಗಿ ಸಹವಾಸ ಮಾಡುತ್ತಾನೆ ಎಂದರ್ಥವಾಗಿರುತ್ತದೆ.
- “ವಿರುದ್ಧವಾಗಿ ನಡೆ” ಎನ್ನುವ ಮಾತಿಗೆ ಯಾರಾದರೊಬ್ಬರಿಗೆ ಅಥವಾ ಯಾವುದಾದರೊಂದಕ್ಕೆ ವಿರುದ್ಧವಾದ ವಿಧಾನದಲ್ಲಿ ನಡೆದುಕೊಳ್ಳುವುದು ಅಥವಾ “ಜೀವಿಸುವುದು” ಎಂದರ್ಥವಾಗಿರುತ್ತದೆ.
- “ಅದರ ಹಿಂದೆ ನಡೆ” ಎನ್ನುವ ಮಾತಿಗೆ ಯಾವುದಾದರೊಂದನ್ನು ಅಥವಾ ಯಾರಾದರೊಬ್ಬರನ್ನು ಹಿಂಬಾಲಿಸು ಅಥವಾ ಹುಡುಕು ಎಂದರ್ಥವಾಗಿರುತ್ತದೆ. ಬೇರೊಬ್ಬರು ನಡೆದುಕೊಳ್ಳುವ ಒಂದೇ ವಿಧಾನದಲ್ಲಿ ನಡೆದುಕೊಳ್ಳುವುದು ಎಂದು ಇದರ ಅರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- “ನಡೆ” ಎನ್ನುವ ಪದಕ್ಕೆ ಅಕ್ಷರಾರ್ಥವಾಗಿ ಅನುವಾದ ಮಾಡುವುದು ಉತ್ತಮವಾದ ವಿಷಯ. ಆದರೆ ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ಸರಿಯಾದ ಅರ್ಥವನ್ನು ಕೊಡುವವರೆಗೂ ಈ ರೀತಿ ಅನುವಾದ ಮಾಡಬಹುದು.
- ಇಲ್ಲದಿದ್ದರೆ, “ನಡೆ” ಎನ್ನುವ ಪದಕ್ಕೆ ಅಲಂಕಾರಿಕ ಉಪಯೋಗಗಳಲ್ಲಿ “ಜೀವಿಸು” ಅಥವಾ “ನಡೆದುಕೋ” ಅಥವಾ “ನಡತೆ” ಎಂದೂ ಅನುವಾದ ಮಾಡಬಹುದು.
- “ಆತ್ಮದಿಂದ ನಡೆ” ಎನ್ನುವ ಮಾತನ್ನು “ಪವಿತ್ರಾತ್ಮನಿಗೆ ವಿಧೇಯತೆ ತೋರಿಸುವುದರಲ್ಲಿ ಜೀವಿಸು” ಅಥವಾ “ಪವಿತ್ರಾತ್ಮನನ್ನು ಮೆಚ್ಚಿಸುವ ವಿಧಾನದಲ್ಲಿ ನಡೆದುಕೋ” ಅಥವಾ “ಪವಿತ್ರಾತ್ಮನು ನಿನ್ನನ್ನು ನಡೆಸುವ ಪ್ರಕಾರ ದೇವರನ್ನು ಮೆಚ್ಚಿಸುವ ಕಾರ್ಯಗಳನ್ನು ಮಾಡು” ಎಂದೂ ಅನುವಾದ ಮಾಡಬಹುದು.
- “ದೇವರ ಆಜ್ಞೆಗಳಲ್ಲಿ ನಡೆ” ಎನ್ನುವ ಮಾತನ್ನು “ದೇವರ ಆಜ್ಞೆಗಳ ಪ್ರಕಾರ ಜೀವಿಸು” ಅಥವಾ “ದೇವರ ಆಜ್ಞೆಗಳಿಗೆ ವಿಧೇಯನಾಗು” ಎಂದೂ ಅನುವಾದ ಮಾಡಬಹುದು.
- “ದೇವರೊಂದಿಗೆ ನಡೆದಿದ್ದೇನೆ” ಎನ್ನುವ ಮಾತನ್ನು “ದೇವರನ್ನು ಘನಪಡಿಸುವುದರ ಮೂಲಕ ಮತ್ತು ಆತನಿಗೆ ವಿಧೇಯತೆ ತೋರಿಸುವುದರ ಮೂಲಕ ಇನ್ನೂ ಹತ್ತಿರ ಸಂಬಂಧದಲ್ಲಿ ಜೀವಿಸಿದೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪವಿತ್ರಾತ್ಮ, ಘನಪಡಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.01:07
- 1 ಅರಸ.02:04
- ಕೊಲೊ.02:07
- ಗಲಾತ್ಯ.05:25
- ಆದಿ.17:01
- ಯೆಶಯಾ.02:05
- ಯೆರೆ.13:10
- ಮೀಕ.04:02

ಪದ ಡೇಟಾ:

- Strong's: H1869, H1980, H1981, H3212, H4108, G1704, G4043, G4198, G4748

ನಡೆಸುವವನು, ಗೃಹನಿರ್ವಾಹಕ, ಗೃಹನಿರ್ವಾಹಕತ್ವ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ನಡೆಸುವವನು" ಅಥವಾ "ಗೃಹನಿರ್ವಾಹಕನು" ಎನ್ನುವ ಪದಗಳು ಯಜಮಾನನ ಆಸ್ತಿಯನ್ನು ಮತ್ತು ವ್ಯಾಪಾರ ವ್ಯವಹಾರಗಳನ್ನು ಚೆನ್ನಾಗಿ ನೋಡಿಕೊಳ್ಳುವುದಕ್ಕೆ ಭರವಸೆಯುಳ್ಳ ಒಬ್ಬ ದಾಸನನ್ನು ಸೂಚಿಸುತ್ತದೆ.

- ಗೃಹನಿರ್ವಾಹಕನಿಗೆ ಹೆಚ್ಚಾದ ಬಾಧ್ಯತೆಯನ್ನು ಕೊಡಲ್ಪಟ್ಟಿದೆ, ಇದರಲ್ಲಿ ಇತರ ದಾಸರರ ಕೆಲಸದ ಮೇಲೆ ಮೇಲ್ವೀಚಾರಕನಾಗಿರುವುದನ್ನು ಒಳಗೊಂಡಿರುತ್ತದೆ.
- "ನಡೆಸುವವನು " ಎನ್ನುವ ಪದವು ಗೃಹನಿರ್ವಾಹಕನಿಗಾಗಿ ಉಪಯೋಗಿಸುವ ಅತ್ಯಾಧುನಿಕ ಪದವಾಗಿರುತ್ತದೆ. ಈ ಎರಡು ಪದಗಳೂ ಯಾರಾದರೊಬ್ಬರಿಗಾಗಿ ಪ್ರಾಯೋಗಾತ್ಮಕ ಸಂಬಂಧಗಳನ್ನು ನಡೆಸುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಈ ಪದವನ್ನು "ಮೇಲ್ವೀಚಾರಕ" ಅಥವಾ "ಮನೆಯನ್ನು ನಿರ್ವಹಿಸುವವನು" ಅಥವಾ "ಎಲ್ಲವನ್ನು ನಡೆಸುವ ದಾಸನು" ಅಥವಾ "ನಿರ್ವಹಿಸುವ ವ್ಯಕ್ತಿ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದಾಸನು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.03:4-5
- ಆದಿ.39:04
- ಆದಿ.43:16
- ಯೆಶಯಾ.55:10-11
- ಲೂಕ.08:03
- ಲೂಕ.16:02
- ಮತ್ತಾಯ.20:8-10
- ತೀತ.01:07

ಪದ ಡೇಟಾ:

- Strong's: H376, H4453, H5057, H6485, G2012, G3621, G3623

ನಮಸ್ಕರಿಸು, ಅಡ್ಡಬೀಳು, ಕಾಲೂರಿ ಅಡ್ಡ ಬಿದ್ದು, ಮೊಣಕಾಲೂರಿ

ಪದದ ಅರ್ಥವಿವರಣೆ:

ನಮಸ್ಕರಿಸು ಎಂದರೆ ಯಾರಾದರೊಬ್ಬರ ವಿಷಯದಲ್ಲಿ ಗೌರವವನ್ನು ವ್ಯಕ್ತಪಡಿಸುವುದಕ್ಕೆ ಮತ್ತು ಮರ್ಯಾದೆಯನ್ನು ಕೊಡುವುದಕ್ಕೆ ತಗ್ಗಿಸಿಕೊಂಡು ಬಾಗುವುದು ಎಂದರ್ಥ. "ಅಡ್ಡಬೀಳು" ಎನ್ನುವ ಪದಕ್ಕೆ ನೆಲದ ಮೇಲೆ ಮೊಣಕಾಲೂರಿ ತಲೆಯನ್ನು ಮತ್ತು ಕೈಗಳನ್ನಿಟ್ಟು ಬಾಗುವುದು ಎಂದರ್ಥ.

- "ಮೊಣಕಾಲೂರಿ" (ಮೊಣಕಾಲೂರು) ಮತ್ತು "ತಲೆಯನ್ನು ಬಾಗಿಸು" ಎನ್ನುವ ಮಾತುಗಳು ಇದರಲ್ಲಿ ಒಳಗೊಂಡಿರುತ್ತವೆ (ತುಂಬಾ ದುಃಖದಲ್ಲಿ ಅಥವಾ ತಗ್ಗಿಸಿಕೊಂಡು ಗೌರವ ಕೊಡುವುದರಲ್ಲಿ ತಲೆಯನ್ನು ಬಾಗಿಸು ಎಂದರ್ಥವನ್ನು ಕೊಡುತ್ತದೆ).
- ಅಡ್ಡಬೀಳುವುದೆನ್ನುವುದು ಕೆಲವೊಂದುಬಾರಿ ಪ್ರಲಾಪಿಸುವುದಕ್ಕೆ ಅಥವಾ ಯಾತನೆ ಅನುಭವಿಸುವುದಕ್ಕೆ ಗುರುತಾಗಿರುತ್ತದೆ. "ಕೆಳಗೆ ಅಡ್ಡಬಿದ್ದ" ವ್ಯಕ್ತಿ ದೀನತೆಯ ಅತೀ ಕಡಿಮೆ ಸ್ಥಾನಕ್ಕೆ ತೆಗೆದುಕೊಂಡುಬಂದಿರುತ್ತಾನೆ.
- ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ರಾಜರು ಅಥವಾ ಉನ್ನತ ಸ್ಥಾನಮಾನದಲ್ಲಿನ ಆಡಳಿತಗಾರರೂ ಅಥವಾ ಪ್ರಾಮುಖ್ಯತ್ಯೆಯನ್ನು ಹೊಂದಿರುವ ಯಾರೊಬ್ಬರ ಸಮ್ಮುಖದಲ್ಲಿ ನಮಸ್ಕರಿಸುತ್ತಾನೆ.
- ದೇವರ ಮುಂದೆ ನಮಸ್ಕರಿಸಿ ಬಾಗುವುದೆನ್ನುವುದು ಆತನನ್ನು ಆರಾಧಿಸುತ್ತಿದ್ದೇವೆನ್ನುವ ಭಾವವ್ಯಕ್ತೀಕರಣವಾಗಿರುತ್ತದೆ.
- ಸತ್ಯವೇದದಲ್ಲಿ ಅನೇಕ ಜನರು ಯೇಸು ದೇವರ ಕಡೆಯಿಂದ ಬಂದ ವ್ಯಕ್ತಿಯೆಂದು ಆತನ ಬೋಧನೆ ಮತ್ತು ಅದ್ಭುತಗಳನ್ನು ನೋಡಿ ತಿಳಿದುಕೊಂಡಾಗ ಅವರೆಲ್ಲರು ಯೇಸುವಿಗೆ ನಮಸ್ಕರಿಸಿದ್ದಾರೆ.
- ಒಂದಾನೊಂದು ದಿನ ಯೇಸು ಹಿಂದಿರುಗಿ ಬರುವಾಗ, ಪ್ರತಿಯೊಬ್ಬರೂ ಆತನನ್ನು ಆರಾಧಿಸುವುದಕ್ಕೆ ಮೊಣಕಾಲೂರುತ್ತಾನೆಂದು ಸತ್ಯವೇದವು ಹೇಳುತ್ತಿದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ ಈ ಪದವನ್ನು "ಮುಂದಕ್ಕೆ ಅಡ್ಡಬೀಳು" ಅಥವಾ "ತಲೆಯನ್ನು ಬಾಗಿಸು" ಅಥವಾ "ಮೊಣಕಾಲೂರು" ಎನ್ನುವ ಪದಗಳು ಅಥವಾ ಮಾತುಗಳೊಂದಿಗೆ ಅನುವಾದ ಮಾಡಬಹುದು.
- "ಅಡ್ಡಬೀಳು" ಎನ್ನುವ ಪದವನ್ನು "ಕೆಳಗೆ ಮೊಣಕಾಲೂರು" ಅಥವಾ "ಸಾಷ್ಟಾಂಗ ನಮಸ್ಕರಿಸು" ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ ಈ ಪದವನ್ನು ಅನುವಾದಿಸುವ ಒಂದು ವಿಧಾನಕ್ಕಿಂತ ಹೆಚ್ಚಾದ ವಿಧಾನಗಳನ್ನು ಕೆಲವೊಂದು ಭಾಷೆಗಳು ಹೊಂದಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ತಗ್ಗಿಸಿಕೊ, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಅರಸ.05:18
- ವಿಮೋ.20:05
- ಆದಿ.24:26
- ಆದಿ.44:14
- ಯೆಶಾಯ.44:19
- ಲೂಕ.24:05
- ಮತ್ತಾಯ.02:11
- ಪ್ರಕ.03:09

ಪದ ಡೇಟಾ:

- Strong's: H86, H3721, H3766, H5753, H5791, H6915, H7743, H7812, H7817, G1120, G2578, G2827, G4098

ನರಳು, ನರಳುವುದು, ನರಳಿದ, ನರಳುತ್ತಿದ್ದ,

ಪದದ ಅರ್ಥವಿವರಣೆ

“ನರಳು” ಎನ್ನುವ ಪದ ಶಾರೀರಕ ಅಥವಾ ಮಾನಸಿಕ ಯಾತನೆಯಿಂದಾಗುವ ಆಳವಾದ, ಅತಿ ಸಣ್ಣ ಶಬ್ದದ ಅಳುವನ್ನು ಸೂಚಿಸುತ್ತದೆ. ಮಾತುಗಳನ್ನು ಉಚ್ಚರಿಸದೆ ಮಾಡುವ ಶಬ್ದವನ್ನು ಸಹ ಅದು ಸೂಚಿಸಬಹುದು.

- ಬಹಳ ದುಃಖದ ಕಾರಣವಾಗಿ ಒಬ್ಬ ವ್ಯಕ್ತಿ ನರಳಬಹುದು.
- ವಿಪರೀತ ಸಂಕಟವನ್ನು ಅನುಭವಿಸುವುದು ನರಳುವುದಕ್ಕೆ ಕಾರಣವಾಗಿರಬಹುದು.
- “ನರಳು” ಎನ್ನುವ ಪದವನ್ನು “ನೋವಿನಿಂದ ಉಂಟಾಗುವ ಸಣ್ಣ ಅಳು” ಅಥವಾ “ಆಳವಾದ ದುಃಖ” ಎಂದು ಅನುವಾದ ಮಾಡಬಹುದು.
- ನಾಮವಾಚಕವಾಗಿ ಉಪಯೋಗಿಸಿದರೆ, ಅದನ್ನು “ಯಾತನೆಯ ಸಣ್ಣ ಅಳು” ಅಥವಾ “ನೋವಿನ ಆಳವಾದ ಗೊಣಗು” ಎಂದು ಅನುವಾದ ಮಾಡಬಹುದು

(ಈ ಪದಗಳನ್ನು ಸಹ ನೋಡಿರಿ : ಅಳುವುದು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಕೊರಿಂಥ.05:1-3
- ಇಬ್ರಿ.13:15-17
- ಯೋಬ.23:1-2
- ಕೀರ್ತನೆ.032:3-4
- ಕೀರ್ತನೆ.102:5-6

ಪದ ಡೇಟಾ:

- Strong's: H584, H585, H602, H603, H1901, H1993, H5008, H5009, H5098, H5594, H7581, G1690, G4726, G4727, G4959

ನಾಚಿಕೆಗೇಡು, ನಾಚಿಕೆಗೇಡನ್ನುಂಟು ಮಾಡುತ್ತದೆ, ನಾಚಿಕೆಗೇಡು ಉಂಟಾಯಿತು, ಅಪಮಾನಕರ

ಸತ್ಯಾಂಶಗಳು:

“ನಾಚಿಕೆಗೇಡು” ಎನ್ನುವ ಪದವು ಗೌರವವನ್ನು ಮತ್ತು ಮಾನವನ್ನು ಕಳಕೊಂಡಿರುವ ಸ್ಥಿತಿಯನ್ನು ಸೂಚಿಸುತ್ತದೆ.

- ಒಬ್ಬ ವ್ಯಕ್ತಿ ಪಾಪವನ್ನು ಮಾಡಿದರೆ, ಅದು ಅವನನ್ನು ನಾಚಿಕೆಗೇಡುತನಕ್ಕೆ ಅಥವಾ ಅವಮಾನಕ್ಕೆ ಗುರಿ ಮಾಡುತ್ತದೆ.
- “ಅಪಮಾನಕರ” ಎನ್ನುವ ಪದವು ಪಾಪ ಕಾರ್ಯವನ್ನು ಮಾಡಿದ ಒಬ್ಬ ವ್ಯಕ್ತಿಯನ್ನು ವಿವರಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.
- ಕೆಲವೊಂದುಬಾರಿ ಒಳ್ಳೇಯ ವಿಷಯಗಳನ್ನು ಮಾಡುತ್ತಿರುವ ಒಬ್ಬ ವ್ಯಕ್ತಿಯನ್ನು ಅವಮಾನಿಸುವ ರೀತಿಯಲ್ಲಿ ಅಥವಾ ನಾಚಿಕೆಗೇಡು ಎನ್ನುವ ರೀತಿಯಲ್ಲಿ ಜನರು ನೋಡುತ್ತಿರುತ್ತಾರೆ.
- ಉದಾಹರಣೆಗೆ, ಯೇಸುವನ್ನು ಶಿಲುಬೆಗೆ ಏರಿಸಿ ಸಾಯಿಸಿದಾಗ, ಈ ರೀತಿ ಮರಣ ಹೊಂದುವುದು ತುಂಬಾ ನಾಚಿಕೆಗೇಡುತನವೆಂದು ಭಾವಿಸುತ್ತಾರೆ. ಈ ನಾಚಿಕೆಗೇಡನ್ನು ಅನುಭವಿಸಲು ಯೇಸು ಯಾವ ತಪ್ಪನ್ನು ಅಥವಾ ಪಾಪವನ್ನು ಮಾಡಲಿಲ್ಲ.
- “ನಾಚಿಕೆಗೇಡು” ಎನ್ನುವ ಪದವನ್ನು ಉಪಯೋಗಿಸುವುದರಲ್ಲಿ “ನಾಚಿಕೆ” ಅಥವಾ “ಅವಮಾನ” ಎನ್ನುವ ಪದಗಳು ಒಳಗೊಂಡಿರುತ್ತವೆ.
- “ಅಪಮಾನಕರ” ಎನ್ನುವ ಪದವನ್ನು ಉಪಯೋಗಿಸುವುದರಲ್ಲಿ “ಮರ್ಯಾದೆ ಹೋಗುವ” ಅಥವಾ “ಅವಮಾನವನ್ನುಂಟು ಮಾಡುವ” ವಿಷಯಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಅವಮಾನ, ಗೌರವ, ನಾಚಿಕೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.03:6-7
- ಆದಿ.34:6-7
- ಇಬ್ರಿ.11:23-26
- ಪ್ರಲಾಪ.02:1-2
- ಕೀರ್ತನೆ.022:6-8

ಪದ ಡೇಟಾ:

- Strong's: H954, H1984, H2490, H2617, H2659, H2781, H2865, H3637, H3971, H5007, H5034, H5039, H6031, H7036, G149, G819, G3680, G3856

ನಾಲಿಗೆ, ನಾಲಿಗೆಗಳು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿರುವ "ನಾಲಿಗೆ" ಎನ್ನುವ ಪದಕ್ಕೆ ಅನೇಕವಾದ ಅಲಂಕಾರಿಕ ಅರ್ಥಗಳಿವೆ.

- ಸತ್ಯವೇದದಲ್ಲಿ ಈ ಪದಕ್ಕೆ ಅತೀ ಸಾಧಾರಣವಾದ ಅಲಂಕಾರಿಕ ಅರ್ಥವು ಏನಂದರೆ "ಭಾಷೆ" ಅಥವಾ "ಮಾತುಗಳು" ಎಂದರ್ಥ.
- ಕೆಲವೊಂದುಬಾರಿ "ನಾಲಿಗೆ" ಎನ್ನುವುದು ನಿರ್ದಿಷ್ಟವಾದ ಜನರ ಗುಂಪಿನಿಂದ ಮಾತನಾಡುವ ಮಾನವ ಭಾಷೆಯನ್ನು ಸೂಚಿಸುತ್ತದೆ.
- ಬೇರೊಂದು ಸಮಯಗಳಲ್ಲಿ ಇದು "ಪವಿತ್ರಾತ್ಮ ವರಗಳಲ್ಲಿ" ಒಂದಾಗಿ ಕ್ರಿಸ್ತನ ವಿಶ್ವಾಸಿಗಳಿಗೆ ಪವಿತ್ರಾತ್ಮನು ಕೊಡುವ ಪ್ರಕೃತಾತೀತವಾದ ಭಾಷೆಯನ್ನೂ ಸೂಚಿಸುತ್ತದೆ.
- ಬೆಂಕಿ "ನಾಲಿಗೆಗಳು" ಎನ್ನುವ ಮಾತು ಬೆಂಕಿ "ಜ್ವಾಲೆಗಳನ್ನು" ಸೂಚಿಸುತ್ತದೆ.
- "ನನ್ನ ನಾಲಿಗೆ ಆನಂದಪಡುತ್ತಿದೆ" ಎನ್ನುವ ಮಾತಿನಲ್ಲಿರುವ "ನಾಲಿಗೆ" ಎನ್ನುವ ಪದವಿಲ್ಲಿ ಪೂರ್ತಿಯಾಗಿ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ. (ನೋಡಿರಿ: ಲಾಕ್ಷಣಿಕ ಪ್ರಯೋಗ)
- "ಸುಳ್ಳಿನ ನಾಲಿಗೆ" ಎನ್ನುವ ಮಾತು ಒಬ್ಬ ವ್ಯಕ್ತಿಯ ಸ್ವರವನ್ನು ಅಥವಾ ಮಾತುಗಳನ್ನು ಸೂಚಿಸುತ್ತದೆ. (ನೋಡಿರಿ: ಗೌಣೀ ಲಕ್ಷಣ)

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ "ನಾಲಿಗೆ" ಎನ್ನುವ ಪದವನ್ನು "ಭಾಷೆ" ಅಥವಾ "ಅತ್ಮಿಕವಾದ ಭಾಷೆ" ಎಂದೂ ಅನುವಾದ ಮಾಡಬಹುದು. ಸೂಚಿಸುವ ಪದವು ಸ್ಪಷ್ಟವಾಗಿಲ್ಲದಿದ್ದರೆ, "ಭಾಷೆ" ಎಂದು ಅನುವಾದ ಮಾಡುವುದು ಉತ್ತಮ.
- ಬೆಂಕಿಯನ್ನು ಸೂಚಿಸಿದಾಗ, ಈ ಪದವು "ಜ್ವಾಲೆಗಳು" ಎಂದು ಅನುವಾದ ಮಾಡಬಹುದು.
- "ನನ್ನ ನಾಲಿಗೆ ಆನಂದಪಡುತ್ತಿದೆ" ಎನ್ನುವ ಮಾತನ್ನು "ನಾನು ಆನಂದಪಟ್ಟು, ದೇವರನ್ನು ಸ್ತುತಿಸುವೆನು" ಅಥವಾ "ನಾನು ಆನಂದಕರವಾಗಿ ದೇವರನ್ನು ಸ್ತುತಿಸುತ್ತೇನೆ" ಎಂದೂ ಅನುವಾದ ಮಾಡಬಹುದು.
- "ಸುಳ್ಳಾಡುವ ನಾಲಿಗೆ" ಎನ್ನುವ ಮಾತು "ಸುಳ್ಳಾಡುವ ವ್ಯಕ್ತಿ" ಅಥವಾ "ಸುಳ್ಳಾಡುವ ಜನರು" ಎಂದೂ ಅನುವಾದ ಮಾಡಬಹುದು.
- "ಅವರ ನಾಲಿಗೆಗಳೊಂದಿಗೆ" ಎನ್ನುವಂಥ ಮಾತುಗಳನ್ನು "ಅವರು ಹೇಳುವ ವಿಷಯಗಳೊಂದಿಗೆ" ಅಥವಾ "ಅವರ ಮಾತುಗಳಿಂದ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ವರ, ಪವಿತ್ರಾತ್ಮ, ಸಂತೋಷ, ಸ್ತುತಿ, ಆನಂದಿಸು, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.12:9-11
- 1 ಯೋಹಾನ.03:16-18
- 2 ಸಮು.23:1-2
- ಅಪೊ.ಕೃತ್ಯ.02:25-26
- ಯೆಹೆ.36:1-3
- ಫಿಲಿಪ್ಪಿ.02:9-11

ಪದ ಡೇಟಾ:

- Strong's: H762, H2013, H2790, H3956, G1100, G1258, G1447, G2084

ನಾಶಗೊಳಿಸು, ನಾಶಗೊಳಿಸುವುದು, ನಾಶಗೊಳಿಸಿದೆ

ಪದದ ಅರ್ಥವಿವರಣೆ:

ಯಾವುದಾದರೊಂದನ್ನು "ನಾಶಗೊಳಿಸುವುದು" ಎಂದರೆ ಉಪಯೋಗಕ್ಕೆ ಬಾರದಂತೆ ಮಾಡು ಅಥವಾ ಕೆಡಿಸು, ಧ್ವಂಸಮಾಡು ಎಂದರ್ಥ.
"ನಾಶಗೊಳಿಸು" ಅಥವಾ "ನಾಶಗೊಳಿಸುವುದು" ಎನ್ನುವ ಪದಗಳು ನಾಶಗೊಳಿಸಲ್ಪಟ್ಟಿರುವ ಯಾವುದಾದರೊಂದರ ಹಾಳಾದ ಅವಶೇಷಗಳನ್ನು ಮತ್ತು ಕಲ್ಲುಮಣ್ಣುಗಳನ್ನು ಸೂಚಿಸುತ್ತದೆ.

- ಲೋಕದ ತೀರ್ಪು ನಡೆದಾಗ ಮತ್ತು ಶಿಕ್ಷಿಸಲ್ಪಡುವಾಗ "ನಾಶದ ದಿನ"ವಾಗಿ ದೇವರ ಕೋಪಾಗ್ನಿಯ ದಿನದ ಕುರಿತಾಗಿ ಪ್ರವಾದಿಯಾದ ಜೆಫನ್ಯನು ಮಾತನಾಡುತ್ತಾನೆ.
- ಅದೈವಿಕವಾಗಿರುವ ಜನರಿಗೆ ನಾಶವು ಮತ್ತು ಕೇಡು ಉಂಟಾಗುತ್ತದೆಯೆಂದು ಜ್ಞಾನೋಕ್ತಿಗಳ ಪುಸ್ತಕವು ಹೇಳುತ್ತಿದೆ.
- ಸಂದರ್ಭಾನುಸಾರವಾಗಿ, "ನಾಶಗೊಳಿಸು" ಎನ್ನುವ ಪದವನ್ನು "ಧ್ವಂಸಮಾಡು" ಅಥವಾ "ಕೆಡಿಸು" ಅಥವಾ "ನಿರುಪಯೋಗವನ್ನಾಗಿ ಮಾಡು" ಅಥವಾ "ಮುರಿ" ಎಂದೂ ಅನುವಾದ ಮಾಡಬಹುದು.
- "ನಾಶಗೊಳಿಸು" ಅಥವಾ "ನಾಶಗೊಳಿಸುವುದು" ಎನ್ನುವ ಪದಗಳನ್ನು "ಅವಶೇಷ" ಅಥವಾ "ಮುರಿದುಹೋಗಿರುವ ಭವನಗಳು" ಅಥವಾ "ನಾಶಮಾಡಲ್ಪಟ್ಟ ಪಟ್ಟಣ" ಅಥವಾ "ವಿನಾಶ" ಅಥವಾ "ಮುರಿಯಲ್ಪಡುವಿಕೆ" ಅಥವ "ನಾಶ" ಎಂದೂ ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.12:7-8
- 2 ಅರಸ.19:25-26
- ಅಪೊ.ಕೃತ್ಯ.15:15-18
- ಯೆಶಯಾ.23:13-14

ಪದ ಡೇಟಾ:

- Strong's: H6, H1197, H1530, H1820, H1942, H2034, H2040, H2717, H2719, H2720, H2723, H2930, H3510, H3765, H3782, H3832, H4072, H4288, H4383, H4384, H4654, H4658, H4876, H4889, H5221, H5557, H5754, H5856, H6365, H7451, H7489, H7582, H7591, H7612, H7701, H7703, H7843, H8047, H8074, H8077, H8414, H8510, G2679, G2692, G3639, G4485

ನಿದ್ರಿಸು, ನಿದ್ರೆಯಲ್ಲಿ ಬೀಳುವುದು, ನಿದ್ದೆ ಮಾಡಿತು, ನಿದ್ದೆ ಮಾಡುವವನು, ನಿದ್ದೆಯಿಲ್ಲದಿರುವುದು

ಪದದ ಅರ್ಥವಿವರಣೆ:

ಈ ಎಲ್ಲಾ ಪದಗಳು ಮರಣಕ್ಕೆ ಸಂಬಂಧಿತವಾಗಿ ಅಲಂಕಾರಿಕ ಅರ್ಥಗಳನ್ನು ಹೊಂದಿರುತ್ತದೆ.

- "ನಿದ್ದೆ" ಅಥವಾ "ನಿದ್ದೆಯಲ್ಲಿರುವುದು" ಎನ್ನುವ ಪದಗಳಿಗೆ ರೂಪಕಾಲಂಕಾರ ಅರ್ಥವು "ಮರಣ ಹೊಂದಿರುವ" ಎಂದಾಗಿರುತ್ತದೆ. (ನೋಡಿರಿ: ರೂಪಕಾಲಂಕಾರ)
- "ನಿದ್ರೆಯಲ್ಲಿ ಬೀಳುವುದು" ಎನ್ನುವ ಮಾತಿಗೆ ನಿದ್ದೆ ಮಾಡುವುದಕ್ಕೆ ಆರಂಭಿಸುವುದು ಎಂದರ್ಥ, ಅಥವಾ ಅಲಂಕಾರಿಕವಾಗಿ ಸಾಯುವದು ಎಂದರ್ಥ.
- "ಒಬ್ಬರ ಪಿತೃಗಳೊಂದಿಗೆ ನಿದ್ರಿಸು" ಎನ್ನುವ ಮಾತಿಗೆ ಒಬ್ಬರ ಪೂರ್ವಜರು ಸತ್ತಿರುವ ರೀತಿಯಲ್ಲಿ ಸಾಯುವುದು ಎಂದರ್ಥ, ಅಥವಾ ಒಬ್ಬರ ಪಿತೃಗಳು ಮರಣಿಸಿದ ಹಾಗೆಯೇ ಮರಣಿಸುವುದು ಎಂದರ್ಥ.

ಅನುವಾದ ಸಲಹೆಗಳು:

- "ನಿದ್ರೆಯಲ್ಲಿ ಬೀಳುವುದು" ಎನ್ನುವ ಮಾತನ್ನು "ಆಕಸ್ಮಿಕವಾಗಿ ನಿದ್ದೆಯಲ್ಲಿ ಜಾರಿಹೋಗುವುದು" ಅಥವಾ "ನಿದ್ದೆಯನ್ನು ಆರಂಭಿಸುವುದು" ಅಥವಾ "ಸಾಯುವುದು" ಎಂದು ಸಂದರ್ಭಾನುಸಾರವಾಗಿ ಈ ಮಾತುಗಳನ್ನು ಅನುವಾದ ಮಾಡಬಹುದು.
- ಸೂಚನೆ: ಓದುಗಾರರು ಇದರ ಅರ್ಥವನ್ನು ಮಾಡಿಕೊಳ್ಳದ ಕೆಲವು ಸಂದರ್ಭದಲ್ಲಿ ರೂಪಕಾಲಂಕಾರವಾದ ಮಾತನ್ನು ಇಟ್ಟಿರುವುದೇ ತುಂಬಾ ಪ್ರಾಮುಖ್ಯ. ಉದಾಹರಣೆಗೆ, ಲಾಜರನು "ನಿದ್ದೆ ಮಾಡುತ್ತಿದ್ದಾನೆ" ಎಂದು ಯೇಸುವು ತನ್ನ ಶಿಷ್ಯರಿಗೆ ಹೇಳಿದಾಗ, ಅವರೆಲ್ಲರು ಲಾಜರನು ಸ್ವಾಭಾವಿಕವಾಗಿ ನಿದ್ದೆ ಮಾಡುತ್ತಿದ್ದಾನೆಂದು ಆಲೋಚನೆ ಮಾಡಿದ್ದರು. ಈ ಸಂದರ್ಭದಲ್ಲಿ ಈ ಮಾತನ್ನು "ಅವನು ಸತ್ತಿದ್ದಾನೆ" ಎಂದು ಅನುವಾದ ಮಾಡಿದರೆ ಅದಕ್ಕೆ ಯಾವ ಅರ್ಥವೂ ಇರುವುದಿಲ್ಲ.
- ಕೆಲವೊಂದುಬಾರಿ "ನಿದ್ರಿಸು" ಮತ್ತು "ನಿದ್ದೆಯಲ್ಲಿರುವುದು" ಎನ್ನುವ ಪದಗಳು ಮರಣ ಅಥವಾ ಸಾಯುವುದು ಎನ್ನುವ ಅರ್ಥಗಳನ್ನು ಕೊಡದಿರುವಾಗ ಕೆಲವೊಂದು ಭಾಷೆಗಳಲ್ಲಿ ವಿಭಿನ್ನವಾದ ಪದಗಳನ್ನು ಉಪಯೋಗಿಸುತ್ತಾರೆ.

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.18:27-29
- 1 ಥೆಸ್ಸ.04:14
- ಅಪೊ.ಕೃತ್ಯ.07:60
- ದಾನಿ.12:02
- ಕೀರ್ತನೆ.044:23
- ರೋಮಾ.13:11

ಪದ ಡೇಟಾ:

- Strong's: H1957, H3462, H3463, H7290, H7901, H8139, H8142, H8153, H8639, G879, G1852, G1853, G2518, G2837, G5258

ನಿರ್ದೋಷಿ, ನಿರ್ದೋಷಗಳು, ನಿರಪರಾಧಿಯಾಗಿರುವುದು

ನಿರ್ವಚನ:

“ನಿರ್ದೋಷ” ಎನ್ನುವ ಪದಕ್ಕೆ ಅರ್ಥವೇನಂದರೆ ಕಾನೂನುರಹಿತವಾಗಿ ಒಬ್ಬರನ್ನು ನಿರ್ದೋಷಿ ಎಂಬುವುದಾಗಿ ಪ್ರಕಟನೆ ಮಾಡುವುದು ಅಥವಾ ಒಬ್ಬರ ಮೇಲೆ ಆರೋಪ ಮಾಡಿದಾಗ ಮಾಡುವ ಅನೈತಿಕ ನಡತೆಯನ್ನು ತಿಳಿಸುತ್ತದೆ.

- ಈ ಪದವು ಕೆಲವೊಂದುಸಲ ಸತ್ಯವೇದದಲ್ಲಿ ಪಾಪಿಗಳನ್ನು ಕ್ಷಮಿಸುವುದರ ಕುರಿತಾಗಿ ಮಾತನಾಡುತ್ತದೆ.
- ದೇವರಿಗೆ ವಿರುದ್ಧವಾಗಿ ತಿರಸ್ಕರಿಸುವ ಮತ್ತು ದುಷ್ಟ ಕಾರ್ಯಗಳನ್ನು ಮಾಡುವ ಜನರನ್ನು ತಪ್ಪಾಗಿ ನಿರ್ದೋಷಿಗಳೆಂದು ಹೇಳುವುದರ ಕುರಿತಾದ ಸಂದರ್ಭದ ಬಗ್ಗೆ ಅನೇಕಸಲ ಮಾತನಾಡುತ್ತದೆ.
- ಇದನ್ನು “ನಿರ್ದೋಷಿಯೆಂದು ಪ್ರಕಟನೆ ಮಾಡುವುದು” ಅಥವಾ “ದೋಷಿಯಾಗಿರುವವರಿಗೆ ತೀರ್ಪು ಮಾಡಬೇಡ” ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : /ಕ್ಷಮಿಸು, /ಅಪರಾಧ, /ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- /ಧರ್ಮೋ.25:1-2
- /ವಿಮೋ.21:28-30
- /ವಿಮೋ.23:6-9
- /ಯೆಶಯಾ.05:22-23
- /ಯೋಬ.10:12-14

ಪದ ಡೇಟಾ:

- Strong's: H3444, H5352, H5355, H6403, H6663

ನಿರ್ವಹಣೆ, ಕಾರ್ಯನಿರ್ವಾಹಕ, ಆಡಳಿತ ಮಾಡುವವರು, ಅಧಿಕಾರಿ, ಅಧಿಕೃತವಾದ, ನಾಯಕ

ಸತ್ಯಾಂಶಗಳು:

"ನಿರ್ವಹಣೆ" ಮತ್ತು "ಕಾರ್ಯನಿರ್ವಾಹಕ" ಎನ್ನುವ ಪದಗಳನ್ನು ಒಂದು ಕ್ರಮಬದ್ಧವಾದ ರೀತಿಯಲ್ಲಿ ನಡೆಯಲು ಸಹಾಯ ಮಾಡುವುದಕ್ಕೆ ಒಂದು ದೇಶದ ಜನರನ್ನು ಆಡಳಿತ ಮಾಡುವುದಕ್ಕೆ ಅಥವಾ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಉಪಯೋಗಿಸಲಾಗುತ್ತದೆ.

- ದಾನಿಯೇಲನು ಮತ್ತು ಇತರ ಯೆಹೂದ್ಯರ ಮೂವರು ಯೌವನಸ್ಥರು ಕಾರ್ಯನಿರ್ವಹಿಸುವವರಾಗಿ ಆಯ್ಕೆ ಮಾಡಲ್ಪಟ್ಟಿದ್ದಾರೆ. ಅಥವಾ ಆ ಬಾಬೆಲೋನಿನ ಕೆಲವೊಂದು ಪ್ರಾಂತ್ಯಗಳ ಮೇಲೆ ಪ್ರಭುತ್ವದ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ.
- ಹೊಸ ಒಡಂಬಡಿಕೆಯಲ್ಲಿ, ನಿರ್ವಹಿಸುವದೆನ್ನುವದು ಪವಿತ್ರಾತ್ಮನ ವರಗಳಲ್ಲಿ ಒಂದಾಗಿರುತ್ತದೆ.
- ಕಟ್ಟಡಗಳ ಮತ್ತು ಆಸ್ಥಿಯ ನೋಡಿಕೊಳ್ಳುವ ಮೇಲ್ವೀಚಾರಕನಂತೆ, ನಿರ್ವಹಿಸುವದೆನ್ನುವ ಆತ್ಮೀಕ ವರವನ್ನು ಹೊಂದಿದ ಒಬ್ಬ ವ್ಯಕ್ತಿ ಜನರನ್ನು ನಡೆಸುವುದಕ್ಕೆ ಮತ್ತು ಆಳುವುದಕ್ಕೆ ಸಾಮರ್ಥ್ಯವನ್ನು ಹೊಂದಿರುತ್ತಾನೆ.

ಅನುವಾದ ಸಲಹೆಗಳು

- ಸಂದರ್ಭಕ್ಕೆ ತಕ್ಕಂತೆ, "ಕಾರ್ಯ ನಿರ್ವಾಹಕರು" ಎನ್ನುವ ಪದವನ್ನು ಬೇರೊಂದು ರೀತಿಯಲ್ಲಿ ಅನುವಾದ ಮಾಡುತ್ತಾರೆ, ಅದರಲ್ಲಿ "ರಾಜ್ಯಪಾಲ" ಅಥವಾ "ಸಂಯೋಜಕರು" ಅಥವಾ "ವ್ಯವಸ್ಥಾಪಕ" ಅಥವಾ "ಪಾಲಕರು" ಅಥವಾ "ಸರ್ಕಾರ ಅಧಿಕಾರಿಗಳು" ಎನ್ನುವ ಪದಗಳು ಒಳಗೊಂಡಿರುತ್ತವೆ.
- "ನಿರ್ವಹಣೆ" ಎನ್ನುವ ಪದವನ್ನು "ಪಾಲಿಸುವುದು" ಅಥವಾ "ಆಡಳಿತ" ಅಥವಾ "ನಾಯಕತ್ವ" ಅಥವಾ "ಸಂಯೋಜನೆ" ಎಂಬುವುದಾಗಿಯೂ ಅನುವಾದ ಮಾಡಬಹುದು.
- ಈ ಎಲ್ಲಾ ಪದಗಳ ಅನುವಾದನೆಯಲ್ಲಿ "ಉಸ್ತುವಾರಿ" ಅಥವಾ "ಆರೈಕೆಯನ್ನು ತೆಗೆದುಕೊಳ್ಳುವವರು" ಅಥವಾ "ಕ್ರಮ ವಹಿಸುವದು" ಎಂದು ಭಾವ ವ್ಯಕ್ತಗೊಳಿಸುವಂಥಹ ಪದಗಳು ಕೂಡ ಅದರಲ್ಲಿ ಭಾಗವಾಗಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ: /ಬಾಬೆಲ್, /ದಾನಿಯೇಲ, /ವರ, /ರಾಜ್ಯಪಾಲರು, /ಹನನ್ಯಾ, /ಮೀಶಾಯೇಲ)

ಸತ್ಯವೇದದ ವಾಕ್ಯಗಳು:

- 1 ಪೂರ್ವ 18:14
- ದಾನಿ 6:1-3
- ಎಸ್ತೇರಳು 9:3-5

ಪದ ಡೇಟಾ:

- Strong's: H5532, H5608, H5632, H6213, H7860, G29410

ನಿಲುವಂಗಿ, ನಿಲುವಂಗಿಗಳು, ನಿಲುವಂಗಿ ಧರಿಸಲಾಗಿದೆ

ಪದದ ಅರ್ಥವಿವರಣೆ:

ನಿಲುವಂಗಿ ಎನ್ನುವುದು ಸ್ತ್ರೀ ಪುರುಷರು ಧರಿಸಬಹುದಾದ ಉದ್ದವಾದ ತೋಳುಗಳಿರುವ ಹೊರ ಉಡುಪಾಗಿರುತ್ತದೆ. ಇದು ಧರಿಸುವ ಕೋಟಿಗೆ ಸಮಾನವಾಗಿರುತ್ತದೆ.

- ನಿಲುವಂಗಿಗಳು ಮುಂಭಾಗದಲ್ಲಿ ತೆರೆದುಕೊಂಡಿರುತ್ತವೆ ಮತ್ತು ಅದರ ಸುತ್ತ ಕಟ್ಟಿಕೊಳ್ಳುವುದಕ್ಕೆ ಒಂದು ನಡುಕಟ್ಟು ಇರುತ್ತದೆ.
- ಅವು ಉದ್ದವಾಗಿಯೂ ಅಥವಾ ಚಿಕ್ಕದಾಗಿಯೂ ಇರುತ್ತವೆ.
- ನೇರಳೆ ಬಣ್ಣದ ನಿಲುವಂಗಿಗಳನ್ನು ದೊರೆತನಕ್ಕೆ, ಸಂಪತ್ತಿಗೆ ಮತ್ತು ಘನತೆಗೆ ಗುರುತಾಗಿರಲು ಅರಸರು ಧರಿಸುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ದೊರೆತನ, ಉದ್ದನೆಯ ಕೋಟು)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.28:4-5
- ಆದಿ.49:11-12
- ಲೂಕ.15:22-24
- ಲೂಕ.20:45-47
- ಮತ್ತಾಯ.27:27-29

ಪದ ಡೇಟಾ:

- Strong's: H145, H155, H899, H1545, H2436, H2684, H3671, H3801, H3830, H3847, H4060, H4254, H4598, H5497, H5622, H6614, H7640, H7757, H7897, H8071, G1746, G2066, G2067, G2440, G4749, G4016, G5511

ನಿಶ್ಚಯತೆ, ನಿಶ್ಚಯ

ಪದದ ಅರ್ಥವಿವರಣೆ:

“ನಿಶ್ಚಯತೆ” ಎನ್ನುವ ಪದವು ಸತ್ಯವಾದ ವಿಷಯದಲ್ಲಿ ಅಥವಾ ನಡೆಯುವ ವಿಷಯಗಳಲ್ಲಿ ಖಚಿತವಾಗಿ ಇರುವುದನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ “ನಿರೀಕ್ಷೆ” ಎನ್ನುವ ಪದಕ್ಕೆ ಏನಾದರೊಂದು ವಿಷಯವು ಖಚಿತವಾಗಿ ನಡೆಯಬೇಕೆಂದು ಎದುರು ನೋಡುತ್ತಾ ತಾಳಿಕೊಳ್ಳುವುದು ಎಂದರ್ಥ. ವಿಶೇಷವಾಗಿ ಇದನ್ನು ಯೇಸುವಿನಲ್ಲಿ ನಂಬಿಕೆಯಿಟ್ಟ ವಿಶ್ವಾಸಿಗಳಿಗೆ ದೇವರು ವಾಗ್ದಾನ ಮಾಡಿದ್ದನ್ನು ಖಚಿತವಾಗಿ ಪಡೆದುಕೊಳ್ಳುವ ವಿಷಯದಲ್ಲಿ ಯು ಎಲ್ ಟಿ “ನಿಶ್ಚಯತೆ” ಅಥವಾ “ಭವಿಷ್ಯತ್ತಿಗಾಗಿ ನಿಶ್ಚಯತೆ” ಅಥವಾ “ಭವಿಷ್ಯತ್ತಿನ ನಿಶ್ಚಯತೆ” ಎಂದು ಅನೇಕಬಾರಿ ಅನುವಾದ ಮಾಡಿದ್ದಾರೆ.
- “ನಿಶ್ಚಯತೆ” ಎನ್ನುವ ಪದವನ್ನು ಅನೇಕಬಾರಿ ಯೇಸುವಿನಲ್ಲಿ ನಂಬಿಕೆಯಿಟ್ಟ ವಿಶ್ವಾಸಿಗಳು ಒಂದಾನೊಂದು ದಿನ ಪರಲೋಕದಲ್ಲಿ ದೇವರೊಂದಿಗೆ ಶಾಶ್ವತವಾಗಿ ಇರುತ್ತಾರೆ ಎನ್ನುವ ಅರ್ಥಕ್ಕೆ ಸೂಚಿಸುತ್ತದೆ.
- “ದೇವರಲ್ಲಿ ವಿಶ್ವಾಸದಿಂದಿರು” ಎನ್ನುವ ಮಾತಿಗೆ ದೇವರು ಮಾಡಿದ ವಾಗ್ದಾನವನ್ನು ಸ್ವೀಕರಿಸಲು ಮತ್ತು ಅನುಭವಿಸಲು ಸಂಪೂರ್ಣವಾಗಿ ನಿರೀಕ್ಷಿಸುವುದನ್ನು ಸೂಚಿಸುತ್ತದೆ.
- “ನಿಶ್ಚಯತೆಯಿಂದಿರುವುದು” ಎನ್ನುವ ಮಾತಿಗೆ ದೇವರ ವಾಗ್ದಾನದಲ್ಲಿ ನಂಬಿಕೆಯಿಡುವುದು ಮತ್ತು ದೇವರು ಹೇಳಿದ ಮಾತನ್ನು ನೆರವೇರಿಸುತ್ತಾರೆನ್ನುವ ಭರವಸೆಯಿಂದ ಜೀವಿಸುವುದು ಎಂದರ್ಥ. ಈ ಪದಕ್ಕೆ ಧೈರ್ಯದಿಂದಿರುವುದು ಮತ್ತು ಖಚಿತವಾಗಿರುವುದು ಎಂಬ ಅರ್ಥವನ್ನು ಸಹ ಹೊಂದಿದೆ.

ಅನುವಾದ ಸಲಹೆಗಳು:

- “ನಿಶ್ಚಯ” ಎನ್ನುವ ಪದವನ್ನು “ಖಚಿತವಾಗಿ” ಅಥವಾ “ಖಂಡಿತವಾಗಿ” ಎಂದೂ ಅನುವಾದ ಮಾಡಬಹುದು.
- “ನಿಶ್ಚಯದಿಂದಿರು” ಎನ್ನುವ ಪದವನ್ನು “ಸಂಪೂರ್ಣವಾಗಿ ಭರವಸೆವಿಡು” ಅಥವಾ “ಅದರ ಕುರಿತಾಗಿ ಸಂಪೂರ್ಣ ಖಚಿತವನ್ನು ಹೊಂದಿಕೊ” ಅಥವಾ “ನಿಶ್ಚಯವಾಗಿ ತಿಳಿದುಕೊಳ್ಳಿರಿ” ಎಂದೂ ಅನುವಾದ ಮಾಡಬಹುದು.
- “ಆತ್ಮವಿಶ್ವಾಸ” ಎಂಬ ಪದವನ್ನು “ಧೈರ್ಯವಾಗಿ” ಅಥವಾ “ಖಂಡಿತವಾಗಿ” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ನಿಶ್ಚಯತೆ” ಎನ್ನುವ ಪದವನ್ನು ಅನುವಾದ ಮಾಡುವುದರಲ್ಲಿ, “ಸಂಪೂರ್ಣವಾದ ಭರವಸೆ” ಅಥವಾ “ಖಂಡಿತವಾದ ನಿರೀಕ್ಷೆ” ಅಥವಾ “ಖಂಡಿತ” ಎನ್ನುವ ಪದಗಳೂ ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ನಂಬು, ನಂಬು, ಧೈರ್ಯ, ನಂಬಿಕೆ, ನಿರೀಕ್ಷೆ, ಭರವಸೆ)

ಸತ್ಯವೇದದ ಅನುಬಂಧ ವಾಕ್ಯಗಳು:

ಪದ ಡೇಟಾ:

- Strong's: H982, H983, H986, H3689, H3690, H4009, G2292, G3954, G3982, G4006, G5287

ನೀಚ ಸಾಕ್ಷಿ, ಸುಳ್ಳು ವರದಿ, ಸುಳ್ಳು ಸಾಕ್ಷಿ, ಸುಳ್ಳು ಸಾಕ್ಷಿಗಳು

ಪದದ ಅರ್ಥವಿವರಣೆ

“ಸುಳ್ಳು ಸಾಕ್ಷಿ” ಅಥವಾ “ನೀಚ ಸಾಕ್ಷಿ” ಎನ್ನುವ ಪದಗಳು ಒಬ್ಬ ವ್ಯಕ್ತಿ ಅಥವಾ ಸಂದರ್ಭವನ್ನು ಕುರಿತಾಗಿ ನ್ಯಾಯಾಲಯ ಎಂತ ಸ್ಥಳದಲ್ಲಿ ಸುಳ್ಳು ಹೇಳುವ ವ್ಯಕ್ತಿಯನ್ನು ಸೂಚಿಸುತ್ತದೆ.

- “ಸುಳ್ಳು ವರದಿ” ಎನ್ನುವುದು ಅವರು ಹೇಳಿರುವ ಸುಳ್ಳು ಸಂಗತಿಯಾಗಿದೆ.
- “ಸುಳ್ಳು ಸಾಕ್ಷಿ ಹೇಳುವುದು” ಎಂದರೆ ಯಾವುದಾದರು ವಿಷಯವನ್ನು ಸುಳ್ಳು ವರದಿ ಕೊಡುವುದೆಂದು ಅರ್ಥ.
- ಒಬ್ಬ ವ್ಯಕ್ತಿಗೆ ಶಿಕ್ಷೆ ಹಾಕಬೇಕೆಂದು ಅಥವಾ ಕೊಲ್ಲಿಸಬೇಕೆಂದು ಸುಳ್ಳು ಸಾಕ್ಷಿ ಹೇಳಿದ ಅನೇಕರನ್ನು ಕುರಿತಾಗಿ ಸತ್ಯವೇದದಲ್ಲಿ ಬರೆಯಲ್ಪಟ್ಟಿದೆ.

ಅನುವಾದ ಸಲಹೆಗಳು:

- “ಸುಳ್ಳು ಸಾಕ್ಷಿ ಹೇಳುವುದು” ಎನ್ನುವದನ್ನು “ಬೇರೆಯವರ ಕುರಿತಾಗಿ ಸುಳ್ಳು ವರದಿ ಕೊಡುವುದು” ಅಥವಾ “ಯಾರೋ ಕುರಿತಾಗಿ ಸುಳ್ಳು ಹೇಳುವುದು” ಅಥವಾ “ಸುಳ್ಳು” ಎಂದು ಅನುವಾದ ಮಾಡಬಹುದು.
- “ಸುಳ್ಳು ಸಾಕ್ಷಿ” ಒಬ್ಬ ವ್ಯಕ್ತಿಯನ್ನು ಸೂಚಿಸುತ್ತಿದ್ದರೆ, ಅದನ್ನು “ಸುಳ್ಳು ಹೇಳುವ ವ್ಯಕ್ತಿ” ಅಥವಾ “ಸುಳ್ಳು ಹೇಳುವ ವ್ಯಕ್ತಿ” ಅಥವ “ಸತ್ಯವಲ್ಲದ ವಿಷಯಗಳನ್ನು ಹೇಳುವ ವ್ಯಕ್ತಿ” ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸಾಕ್ಷಿ, ಸತ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.19:17-19
- ವಿಮೋ.20:15-17
- ಮತ್ತಾಯ.15:18-20
- ಮತ್ತಾಯ.19:18-19
- ಜ್ಞಾನೋ.14:5-6
- ಕೀರ್ತನೆ.027:11-12

ಪದ ಡೇಟಾ:

- Strong's: H5707, H6030, H7650, H8267, G1965, G3144, G5571, G5575, G5576, G5577

ನೀರಿನಬುಗ್ಗೆ, ನೀರಿನಬುಗ್ಗೆಗಳು, ಬುಗ್ಗೆ, ಬುಗ್ಗೆಗಳು

ಪದದ ಅರ್ಥವಿವರಣೆ

“ನೀರಿನ ಬುಗ್ಗೆ” ಮತ್ತು “ಬುಗ್ಗೆ” ಎನ್ನುವ ಪದಗಳು ನೆಲದಿಂದ ನೈಸರ್ಗಿಕವಾಗಿ ಉಕ್ಕಿಬರುವ ನೀರನ್ನು ಸೂಚಿಸುತ್ತದೆ.

- ಯೆಹೋವನಿಂದ ಬರುವ ಆಶೀರ್ವಾದಗಳಿಗೆ ಅಥವಾ ಶುದ್ಧಿಕರಿಸುವ ಹಾಗೂ ಪರಿಶುದ್ಧಗೊಳಿಸುವ ವಸ್ತುವುಗಳನ್ನು ಸೂಚಿಸಲು ಈ ಪದಗಳನ್ನು ಸತ್ಯವೇದದಲ್ಲಿ ಅಲಂಕಾರಿಕ ರೂಪದಲ್ಲಿ ಉಪಯೋಗಿಸಿದ್ದಾರೆ.
- ಪ್ರಸ್ತುತ ಕಾಲದಲ್ಲಿ, ಮನುಷ್ಯನು ಮಾಡಿದ ಒಂದು ವಸ್ತುವಿನಿಂದ ನೀರು ಹರಿಯುವುದನ್ನು ಬುಗ್ಗೆ ಎನ್ನುತ್ತಾರೆ, ಉದಾಹರಣೆಗೆ ಕುಡಿಯುವ ನೀರಿನ ಬುಗ್ಗೆ. ಈ ಪದವನ್ನು ಅನುವಾದ ಮಾಡುವಾಗ ಅದು ನೈಸರ್ಗಿಕವಾಗಿ ಹುಕ್ಕಿಹರಿಯುವ ನೀರನ್ನು ಸೂಚಿಸುವಂತೆ ಗಮನವಹಿಸಿರಿ.
- ಈ ಪದವನ್ನು ಮತ್ತು “ಪ್ರಳಯ” ಎನ್ನುವ ಪದಗಳ ಅನುವಾದವನ್ನು ಹೋಲಿಸಿ ನೋಡಿರಿ.

(ಈ ಪದಗಳನ್ನು ಸಹ ನೋಡಿರಿ : ಪ್ರಳಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೇತ್ರನು.02:17-19
- ಆದಿ.07:11-12
- ಆದಿ.08:1-3
- ಆದಿ.24:12-14
- ಆದಿ.24:42-44
- ಯಾಕೋಬ.03:11-12

ಪದ ಡೇಟಾ:

- Strong's: H794, H953, H1530, H1543, H1876, H3222, H4002, H4161, H4456, H4599, H4726, H5033, H5869, H5927, H6524, H6779, H6780, H7823, H8444, H8666, G242, G305, G393, G985, G1530, G1816, G4077, G4855, G5453

ನೀರು, ಆಳವಾದ

ಪದದ ಅರ್ಥವಿವರಣೆ:

ಇದರ ಪ್ರಾಥಮಿಕ ಅರ್ಥದಲ್ಲಿ "ನೀರು" ಎನ್ನವುದು ಸಾಗರ, ಸಮುದ್ರ, ಕೆರೆ ಅಥವಾ ನದಿ ಎನ್ನುವಂತಹ ನೀರಿರುವ ಭಾಗವನ್ನು ಕೂಡ ಅನೇಕಬಾರಿ ಸೂಚಿಸುತ್ತದೆ.

- "ನೀರುಣಿಸುವುದು" ಎನ್ನುವ ಪದವು ನೀರು ಬರುವುದಕ್ಕೆ ಅನೇಕ ಆಧಾರಗಳನ್ನು ಅಥವಾ ನೀರಿನ ಭಾಗಗಳನ್ನು ಸೂಚಿಸುತ್ತದೆ. ಇದು ಬಹು ಹೆಚ್ಚಾದ ನೀರಿರುವುದನ್ನು ಸೂಚಿಸುವ ಸಾಧಾರಣ ಪದವಾಗಿರುತ್ತದೆ.
- "ನೀರುಣಿಸುವುದು" ಎನ್ನುವ ಅಲಂಕಾರಿಕ ಉಪಯೋಗವು ಮಹಾ ಯಾತನೆಯನ್ನು, ಸಂಕಷ್ಟಗಳನ್ನು ಮತ್ತು ಹಿಂಸೆಗಳನ್ನು ಸೂಚಿಸುತ್ತದೆ. ಉದಾಹರಣೆಗೆ, ನಾವು "ಜಲಗಳ ಮೂಲಕ ಹಾದು ಹೋಗುತ್ತಿರುವಾಗ", ಆತನು ನಮ್ಮೊಂದಿಗೆ ಇರುತ್ತಾನೆಂದು ದೇವರು ವಾಗ್ದಾನ ಮಾಡಿದ್ದನು.
- "ಅನೇಕವಾದ ಜಲಗಳು" ಎನ್ನುವ ಮಾತು ಸಂಕಷ್ಟಗಳನ್ನು ಎಷ್ಟು ಬಹುಭಯಂಕರವಾಗಿವೆ ಎನ್ನುವುದನ್ನು ಒತ್ತಿ ಹೇಳುತ್ತದೆ.
- ಪಶುಪ್ರಾಣಿಗಳಿಗೆ ಮತ್ತು ಇತರ ಪ್ರಾಣಿಗಳಿಗೆ "ನೀರು" ಹಾಕುವುದು ಎಂದರೆ ಅವುಗಳಿಗೆ "ನೀರನ್ನು ಒದಗಿಸಿ ಕೊಡುವುದು" ಎಂದರ್ಥ. ಸತ್ಯವೇದ ಕಾಲಗಳಲ್ಲಿ ಇದು ಬಾದಲಿಯನ್ನು ತೆಗೆದುಕೊಂಡು ಬಾವಿಯೊಳಗೆ ಹಾಕಿ ನೀರನ್ನು ಎಳೆದು, ಬೇರೊಂದು ಪಾತ್ರೆಗಳಿಂದ ಪ್ರಾಣಿಗಳು ನೀರು ಕುಡಿಯುವುದಕ್ಕೆ ತೊಟ್ಟಿಯೊಳಗೆ ಹಾಕುವುದನ್ನು ಒಳಗೊಂಡಿರುತ್ತದೆ.
- ಹಳೇ ಒಡಂಬಡಿಕೆಯಲ್ಲಿ ದೇವರು ತನ್ನ ಜನರಿಗಾಗಿ "ಜೀವಜಲ" ಹುಟ್ಟುವ ಕಾರಂಜಿಯಾಗಿ ಸೂಚಿಸಲ್ಪಟ್ಟಿದ್ದಾನೆ. ಇದಕ್ಕೆ ಅರ್ಥವೇನೆಂದರೆ ಆತನು ಆತ್ಮೀಯ ಶಕ್ತಿಗೆ ಮತ್ತು ಆನಂದಕ್ಕೂ ಆಧಾರವಾಗಿದ್ದಾನೆ.
- ಹೊಸ ಒಡಂಬಡಿಕೆಯಲ್ಲಿ ಯೇಸು "ಜೀವಜಲ" ಎನ್ನುವ ಮಾತನ್ನು ಉಪಯೋಗಿಸಿದ್ದಾರೆ, ಈ ಮಾತು ಒಬ್ಬ ವ್ಯಕ್ತಿಯಲ್ಲಿ ಹೊಸ ಜೀವವನ್ನು ತರುವುದಕ್ಕೆ ಮತ್ತು ರೂಪಾಂತರಗೊಳಿಸುವುದಕ್ಕೆ ಪವಿತ್ರಾತ್ಮನನ್ನು ಸೂಚಿಸುತ್ತಿದ್ದಾನೆ.

ಅನುವಾದ ಸಲಹೆಗಳು:

- "ನೀರನ್ನು ಎಳೆ" ಎನ್ನುವ ಮಾತನ್ನು "ಬಾದಲಿಯನ್ನು ತೆಗೆದುಕೊಂಡು ಬಾವಿಯೊಳಗಿಂದ ನೀರನ್ನು ಮೇಲಕ್ಕೆ ತರುವುದು" ಎಂದೂ ಅನುವಾದ ಮಾಡಬಹುದು.
- "ಜೀವಜಲದ ಹರಿಗಳು ಅವರಿಂದ ಹರಡುತ್ತವೆ" ಎನ್ನುವ ಮಾತನ್ನು "ಪರಿಶುದ್ಧಾತ್ಮನಿಂದ ಉಂಟಾಗುವ ಶಕ್ತಿ ಮತ್ತು ಆಶೀರ್ವಾದಗಳು ನೀರಿನ ಹರಿಗಳ ಹಾಗೆಯೇ ಅವರೊಳಗಿಂದ ಹರಡಿಬರುವವು" ಎಂದೂ ಅನುವಾದ ಮಾಡಬಹುದು. "ಆಶೀರ್ವಾದಗಳಿಗೆ" ಬದಲಾಗಿ "ವರಗಳು" ಅಥವಾ "ಫಲಗಳು" ಅಥವಾ "ದೈವಿಕ ಗುಣಲಕ್ಷಣಗಳು" ಎನ್ನುವ ಮಾತುಗಳನ್ನು ಉಪಯೋಗಿಸಬಹುದು.
- ಯೇಸು ಬಾವಿಯ ಬಳಿ ಸಮಾರ್ಯ ಸ್ತ್ರೀಯೊಂದಿಗೆ ಮಾತನಾಡುತ್ತಿರುವಾಗ ಉಪಯೋಗಿಸಿದ "ಜೀವಜಲ" ಎನ್ನುವ ಪದವನ್ನು "ಜೀವವನ್ನು ಕೊಡುವ ನೀರು" ಅಥವಾ "ಜೀವವನ್ನು ಅನುಗ್ರಹಿಸುವ ನೀರು" ಎಂದೂ ಅನುವಾದ ಮಾಡಬಹುದು. ಈ ಸಂದರ್ಭದಲ್ಲಿ ನೀರಿನ ಚಿತ್ರಣವನ್ನು ಅನುವಾದದಲ್ಲಿ ಇಡಲೇಬೇಕಾಗಿರುತ್ತದೆ.
- ಸಂದರ್ಭಾನುಸಾರವಾಗಿ, "ನೀರುಣಿಸುವುದು" ಅಥವಾ "ಅನೇಕ ಜಲಗಳು" ಎನ್ನುವ ಮಾತುಗಳನ್ನು "ಮಹಾ ಶ್ರಮೆ (ನೀರಿನಂತೆ ನಿನ್ನನ್ನು ಸುತ್ತಿರುವ ಪರಿಸ್ಥಿತಿಗಳು)" ಅಥವಾ "ಹರಿದುಬರುತ್ತಿರುವ ಸಂಕಷ್ಟಗಳು (ನೀರಿನ ಪ್ರಳಯದಂತೆ) ಅಥವಾ "ಹೆಚ್ಚಾಗಿ ನೀರಿರುವ ಭಾಗಗಳು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಜೀವನ, ಆತ್ಮ, ಪವಿತ್ರಾತ್ಮ, ಶಕ್ತಿ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.08:36-38
- ವಿಮೋ.14:21
- ಯೋಹಾನ.04:10
- ಯೋಹಾನ.04:14
- ಯೋಹಾನ.04:15
- ಮತ್ತಾಯ.14:28-30

ಪದ ಡೇಟಾ:

- Strong's: H2222, H4325, H4529, H4857, H7301, H7783, H8248, H8415, G504, G4215, G4222, G5202, G5204

ನುಂಗು, ನುಂಗುತ್ತದೆ, ನುಂಗಿದೆ, ನುಂಗುತ್ತಾಯಿದೆ

ಪದದ ಅರ್ಥವಿವರಣೆ:

“ನುಂಗು” ಎನ್ನುವ ಪದವು ಅಕ್ರಮಣಕಾರಿ ರೀತಿಯಲ್ಲಿ ತಿನ್ನುವುದು ಅಥವಾ ಸೇವಿಸುವುದು ಎಂದು ಅರ್ಥೈಸುತ್ತದೆ.

- ಈ ಪದವನ್ನು ಅಲಂಕಾರಿಕ ಭಾವನೆಯಲ್ಲಿ ಉಪಯೋಗಿಸಿದರೆ, ನೀವು ಒಬ್ಬರನ್ನೊಬ್ಬರು ಕಚ್ಚಾಡಿ, ಹರಕೊಂಡು ತಿನ್ನುವುದಾದರೆ ಒಬ್ಬರಿಂದೊಬ್ಬರು ನಾಶವಾದೀರಿ ಎಂದು ಪೌಲನು ವಿಶ್ವಾಸಿಗಳನ್ನು ಎಚ್ಚರಿಸಿದ್ದಾನೆ, ಇದಕ್ಕೆ ಮಾತುಗಳೊಂದಿಗೆ ಅಥವಾ ಕ್ರಿಯೆಗಳೊಂದಿಗೆ ಒಬ್ಬರನ್ನೊಬ್ಬರು ಧಾಳಿ ಮಾಡಿಕೊಳ್ಳಬೇಡಿರಿ ಅಥವಾ ನಾಶಗೊಳಿಸಿಕೊಳ್ಳಬೇಡಿರಿ ಎಂದರ್ಥ. (ಗಲಾತ್ಯ.5:15).
- ಅಲಂಕಾರಿಕ ಭಾಷೆಯಲ್ಲಿ ಕೂಡ, “ನುಂಗು” ಎನ್ನುವ ಪದವನ್ನು ಅನೇಕಬಾರಿ “ಸಂಪೂರ್ಣವಾಗಿ ನಾಶಗೊಳಿಸು” ಎಂದು ಅರ್ಥಬರುವ ಪದವನ್ನಾಗಿ ಉಪಯೋಗಿಸಿದ್ದಾರೆ. ಉದಾಹರಣೆಗೆ, ದೇಶಗಳು ಒಂದಕ್ಕೊಂದು ನುಂಗುತ್ತಾ ಇವೆ ಅಥವಾ ಬೆಂಕಿ ಭವನಗಳನ್ನು ಮತ್ತು ಜನರನ್ನು ನುಂಗುತ್ತಾಯಿದೆ.
- ಈ ಪದವನ್ನು “ಸಂಪೂರ್ಣವಾಗಿ ನಾಶಮಾಡು” ಅಥವಾ “ಒಟ್ಟಾಗಿ ಕೆಡಿಸಿಬಿಡು” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.05:8-9
- ಆಮೋಸ.01:9-10
- ವಿಮೋ.24:16-18
- ಯೆಹೆ.16:20-22
- ಲೂಕ.15:28-30
- ಮತ್ತಾಯ.23:13-15
- ಕೀರ್ತನೆ.021:9-10

ಪದ ಡೇಟಾ:

- Strong's: H398, H399, H400, H402, H1104, H1105, H3216, H3615, H3857, H3898, H7462, H7602, G2068, G2666, G2719, G5315

ನೂಕು, ನೂಕಿದೆ, ನೂಕುವುದು

ಪದದ ಅರ್ಥವಿವರಣೆ:

“ನೂಕು” ಎನ್ನುವ ಪದವು ಅಕ್ಷರಾರ್ಥವಾಗಿ ಬಲವನ್ನು ಉಪಯೋಗಿಸಿ ಯಾವುದಾದರೊಂದನ್ನು ಭೌತಿಕವಾಗಿ ಮುಂದೂಡುವುದು ಎಂದರ್ಥ. ಈ ಪ್ದವಕ್ಕೆ ಅನೇಕವಾದ ಅಲಂಕಾರಿಕ ಅರ್ಥಗಳಿವೆ.

- “ಪಕ್ಕಕ್ಕೆ ನೂಕು” ಎನ್ನುವ ಮಾತಿಗೆ “ತಿರಸ್ಕರಿಸು” ಅಥವಾ “ಸಹಾಯ ಮಾಡುವುದಕ್ಕೆ ನಿರಾಕರಿಸು” ಎನ್ನುವ ಅರ್ಥಗಳನ್ನೂ ಕೊಡುತ್ತದೆ.
- “ಕೆಳಕ್ಕೆ ನೂಕು” ಎನ್ನುವ ಮಾತಿಗೆ “ಹತ್ತಿಕ್ಕು” ಅಥವಾ “ಹಿಂಸಿಸು” ಅಥವಾ “ಸೋಲಿಸು” ಎನ್ನುವ ಅರ್ಥಗಳು ಬರುತ್ತವೆ. ಯಾರಾದರೊಬ್ಬರನ್ನು ಅಕ್ಷರಾರ್ಥವಾಗಿ ನೆಲಕ್ಕೆ ಹತ್ತಿಕ್ಕಿಡುವುದು ಎನ್ನುವ ಅರ್ಥವನ್ನೂ ಕೊಡುತ್ತದೆ.
- “ಯಾರಾದರೊಬ್ಬರನ್ನು ಹೊರಕ್ಕೆ ನೂಕು” ಎನ್ನುವ ಮಾತಿಗೆ ಆ ವ್ಯಕ್ತಿಯನ್ನು “ಹೊರದೂಡು” ಅಥವಾ “ಪಕ್ಕಕ್ಕೆ ಕಳುಹಿಸು” ಎಂದರ್ಥ.
- “ಮುಂದಕ್ಕೆ ನೂಕು” ಎನ್ನುವ ಮಾತಿಗೆ ಇದು ಸರಿಯಾದದ್ದು ಅಥವಾ ಸಂರಕ್ಷಿಸುವುದು ಎಂದು ಏನೂ ಆಲೋಚನೆ ಮಾಡದೇ ಯಾವುದಾದರೊಂದನ್ನು ಮಾಡುವುದನ್ನು ಮುಂದೆವರಿಸುವುದು ಅಥವಾ ಪಟ್ಟು ಹಿಡಿದು ಮಾಡುವುದು ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ಪೀಡಿಸು, ಹಿಂಸಿಸು, ತಿರಸ್ಕರಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

ಪದ ಡೇಟಾ:

- Strong's: H1556, H1760, H3276, H3423, H5055, H5056, H5186, H8804, G683, G4261

ನೆರಳು, ನೆರಳು ಕೊಡುವುದು, ಮಬ್ಬುಗವಿಸು, ಮಬ್ಬುಗವಿಸಿದೆ

ಪದದ ಅರ್ಥವಿವರಣೆ:

“ನೆರಳು” ಎನ್ನುವ ಪದವು ಅಕ್ಷರಾರ್ಥವಾಗಿ ಒಂದು ವಸ್ತುವನ್ನು ಅಡ್ಡಿ ಇಟ್ಟು ಬೆಳಕು ಬರದಂತೆ ಮಾಡುವ ಕತ್ತಲನ್ನು ಸೂಚಿಸುತ್ತದೆ. ಇದಕ್ಕೆ ಅನೇಕ ಅಲಂಕಾರಿಕ ಅರ್ಥಗಳಿರುತ್ತವೆ.

- “ಮರಣದ ನೆರಳು” ಎನ್ನುವ ಮಾತಿಗೆ ಮರಣವು ಪ್ರಸ್ತುತವಾಗಿದೆ ಅಥವಾ ತುಂಬಾ ಹತ್ತಿರವಾಗಿದೆ ಎಂದರ್ಥ, ನೆರಳು ಬರುವುದಕ್ಕೆ ತನ್ನ ವಸ್ತುವನ್ನು ಸೂಚಿಸುವಂತೆಯೇ ಇದು ಮರಣವನ್ನು ಸೂಚಿಸುತ್ತದೆ.
- ಸತ್ಯವೇದದಲ್ಲಿ ಅನೇಕಬಾರಿ ಮನುಷ್ಯರ ಜೀವನವು ನೆರಳಿಗೆ ಹೋಲಿಸಲಾಗಿರುತ್ತದೆ, ಯಾಕಂದರೆ ಇದು ತುಂಬಾ ಹೆಚ್ಚಿನ ಸಮಯದವರೆಗೂ ಇರುವುದಿಲ್ಲ ಮತ್ತು ಇದು ಯಾವ ಪದಾರ್ಥವೂ ಆಗಿರುವುದಿಲ್ಲ.
- ಕೆಲವೊಂದುಬಾರಿ “ನೆರಳು” ಎನ್ನುವ ಪದವನ್ನು “ಕತ್ತಲು” ಎನ್ನುವ ಪದಕ್ಕೆ ಪರ್ಯಾಯ ಪದವನ್ನಾಗಿ ಉಪಯೋಗಿಸಲಾಗಿರುತ್ತದೆ.
- ದೇವರ ರೆಕ್ಕೆಗಳ ಅಥವಾ ಕೈಗಳ ನೆರಳಿನಲ್ಲಿ ಸಂರಕ್ಷಿಸಲ್ಪಡುವುದರ ಕುರಿತಾಗಿ ಅಥವಾ ಮರೆಯಾಗಿರುವುದರ ಕುರಿತಾಗಿ ಸತ್ಯವೇದವು ಮಾತನಾಡುತ್ತದೆ. ಇದು ಅಪಾಯಕರವಾದ ಸ್ಥಿತಿಯಿಂದ ಸಂರಕ್ಷಿಸಲ್ಪಡುವ ಮತ್ತು ಮರೆಯಾಗಿರುವ ಚಿತ್ರಣವಾಗಿರುತ್ತದೆ. ಈ ಸಂದರ್ಭಗಳಲ್ಲಿ “ನೆರಳು” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ, “ಛಾಯೆ” ಅಥವಾ “ಸಂರಕ್ಷಣೆ” ಅಥವಾ “ಸಂರಕ್ಷಣೆ” ಎನ್ನುವ ಪದಗಳು ಒಳಗೊಂಡಿರುತ್ತವೆ.
- “ನೆರಳು” ಎನ್ನುವ ಪದವನ್ನು ನಿಜವಾದ ನೆರಳನ್ನು ಸೂಚಿಸುವುದಕ್ಕೆ ಉಪಯೋಗಿಸುವ ಸ್ಥಳೀಯ ಪದವನ್ನು ಉಪಯೋಗಿಸಿ ಅನುವಾದ ಮಾಡುವ ಉತ್ತಮವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಕತ್ತಲು, ಬೆಳಕು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.20:8-9
- ಆದಿ.19:6-8
- ಯೆಶಯ.30:1-2
- ಯೆರೆ.06:4-5
- ಕೀರ್ತನೆ.017:8-10

ಪದ ಡೇಟಾ:

- Strong's: H2927, H6738, H6751, H6752, H6754, H6757, H6767, G644, G1982, G2683, G4639

ನೆರೆಹೊರೆಯವನು, ನೆರೆಹೊರೆಯವರು, ನೆರೆಹೊರೆತನ

ಪದದ ಅರ್ಥವಿವರಣೆ:

“ನೆರೆಹೊರೆ” ಎನ್ನುವ ಪದವು ಸಹಜವಾಗಿ ತುಂಬಾ ಹತ್ತಿರದಲ್ಲಿ ನಿವಾಸವಾಗಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ. ಈ ಪದವು ಒಂದೇ ಸಮುದಾಯದಲ್ಲಿ ಅಥವಾ ಒಂದೇ ಜನರ ಗುಂಪಿನಲ್ಲಿ ಜೀವಿಸುವ ಒಬ್ಬರನ್ನು ಸಾಧಾರಣವಾಗಿ ಸೂಚಿಸುತ್ತದೆ.

- “ನೆರೆಹೊರೆಯವನು” ಎನ್ನುವುದು ಒಬ್ಬರು ಒಂದೇ ಸಮುದಾಯಕ್ಕೆ ಭಾಗವಾಗಿರುವುದರಿಂದ ಆ ವ್ಯಕ್ತಿಯನ್ನು ಸಂರಕ್ಷಿಸಲ್ಪಟ್ಟವನನ್ನು ಮತ್ತು ಗೌರವವನ್ನು ಪಡೆಯುವನನ್ನು ಸೂಚಿಸುತ್ತದೆ.
- ಹೊಸ ಒಡಂಬಡಿಕೆಯಲ್ಲಿ ಹೇಳಲ್ಪಟ್ಟಿರುವ ಒಳ್ಳೆಯ ಸಮಾರ್ಯದವನ ಸಾಮ್ಯದಲ್ಲಿ ಯೇಸು “ನೆರೆಹೊರೆಯವನು” ಎನ್ನುವ ಪದವನ್ನು ಅಲಂಕಾರಿಕವಾಗಿ ಉಪಯೋಗಿಸಿದ್ದಾರೆ, ಇದರ ಅರ್ಥದಲ್ಲಿ ಶತ್ರುವಾಗಿರುವನನ್ನು ಸೇರಿಸಿ, ಎಲ್ಲಾ ಮನುಷ್ಯರು ಒಳಗೊಂಡಿರುತ್ತಾರೆ.
- ಸಾಧ್ಯವಾದರೆ, “ತುಂಬಾ ಹತ್ತಿರದಲ್ಲಿ ನಿವಾಸವಾಗಿರುವ ವ್ಯಕ್ತಿ” ಎಂದು ಅರ್ಥ ಬರುವ ಪದದೊಂದಿಗೆ ಅಥವಾ ಮಾತಿನೊಂದಿಗೆ ಅಕ್ಷರಾರ್ಥವಾಗಿ ಈ ಪದವನ್ನು ಅನುವಾದ ಮಾಡುವುದು ಉತ್ತಮ.

(ಈ ಪದಗಳನ್ನು ಸಹ ನೋಡಿರಿ : ವಿರೋಧಿ, ಸಾಮ್ಯ, ಜನರ ಗುಂಪು, ಸಮಾರ್ಯ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.07:26-28
- ಎಫೆಸ.04:25-27
- ಗಲಾತ್ಯ.05:14
- ಯಾಕೋಬ.02:08
- ಯೋಹಾನ.09:8-9
- ಲೂಕ.01:58
- ಮತ್ತಾಯ.05:43
- ಮತ್ತಾಯ.19:19
- ಮತ್ತಾಯ.22:39

ಪದ ಡೇಟಾ:

- Strong's: H5997, H7138, H7453, H7468, H7934, G1069, G2087, G4040, G4139

ನೇಗಿಲು, ಉಳುತ್ತದೆ, ಉಳಲ್ಪಟ್ಟಿದೆ, ಉಳುತ್ತಾಯಿರುವುದು, ಉಳುವವರು, ಉಳುವವನು, ಉಳುವ ಉಪಕರಣಗಳು, ಉಳದಿರುವುದು

ಪದದ ಅರ್ಥವಿವರಣೆ:

“ನೇಗಿಲು” ಎನ್ನುವ ಪದವು ಒಂದು ಕೃಷಿ ಉಪಕರಣವಾಗಿರುತ್ತದೆ, ಇದನ್ನು ಸಸಿ ಹಚ್ಚುವುದಕ್ಕಾಗಿ ನೆಲವನ್ನು ಸಿದ್ಧಗೊಳಿಸಲು ಭೂಮಿಯನ್ನು ಉಳುವುದಕ್ಕಾಗಿ ಬಳಸುತ್ತಾರೆ.

- ನೇಗಿಲುಗಳಿಗೆ ಮಣ್ಣನ್ನು ಅಗಿಯುವದಕ್ಕೆ ಚೂಪಾದ ಶಿಖೆಗಳನ್ನು ಹೊಂದಿರುತ್ತವೆ. ನೇಗಿಲನ್ನು ನಿರ್ದೇಶಿಸಲು ರೈತನು ಉಪಯೋಗಿಸುವುದಕ್ಕೆ ಅವುಗಳಿಗೆ ಸಾಧಾರಣವಾಗಿ ಹಿಡಿಕೆಗಳಿರುತ್ತವೆ.
- ಸತ್ಯವೇದ ಕಾಲಗಳಲ್ಲಿ ನೇಗಿಲುಗಳು ಸಾಧಾರಣವಾಗಿ ಎತ್ತುಗಳಿಂದ ಅಥವಾ ಇತರ ಕೆಲಸ ಮಾಡುವ ಪ್ರಾಣಿಗಳಿಂದ ಉಳುತ್ತಿದ್ದರು.
- ನೇಗಿಲುಗಳು ಹೆಚ್ಚಾಗಿ ಗಟ್ಟಿಯಾದ ಕಟ್ಟಿಗೆಯಿಂದ ಮಾಡಲ್ಪಡುತ್ತವೆ, ಆದರೆ ಚೂಪಾಗಿರುವ ಆ ಉಪಕರಣವನ್ನು ಕಂಚಿನ ಅಥವಾ ಕಬ್ಬಿಣ ಎನ್ನುವ ಲೋಹಗಳಿಂದ ಮಾಡಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಕಂಚು, ಎತ್ತು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.08:10-12
- ಧರ್ಮೋ.21:3-4
- ಲೂಕ.09:61-62
- ಲೂಕ.17:7-8
- ಕೀರ್ತನೆ.141:5-7

ಪದ ಡೇಟಾ:

- Strong's: H406, H855, H2758, H2790, H5215, H5647, H5656, H5674, H6213, H6398, G722, G723

ನೇರಳೆ ಬಣ್ಣ

ಸತ್ಯಾಂಶಗಳು:

“ನೇರಳೆ ಬಣ್ಣ” ಎನ್ನುವ ಪದವು ಒಂದು ಬಣ್ಣದ ಹೆಸರಾಗಿರುತ್ತದೆ, ಇದು ನೀಲಿ ಮತ್ತು ಕೆಂಪು ಬಣ್ಣಗಳ ಮಿಶ್ರಣವಾಗಿರುತ್ತದೆ.

- ಪುರಾತನ ಕಾಲಗಳಲ್ಲಿ ನೇರಳೆ ಬಣ್ಣವನ್ನು ಅರಸರ ಮತ್ತು ಇತರ ಉನ್ನತ ಅಧಿಕಾರಗಳ ಬಟ್ಟೆಗಳಿಗೆ ಬಣ್ಣ ಹಾಕುವುದಕ್ಕೆ ಉಪಯೋಗಿಸುವ ಅತೀ ಹೆಚ್ಚಾದ ಬೆಲೆಯುಳ್ಳ ಅಪರೂಪವಾದ ಬಣ್ಣವಾಗಿರುತ್ತದೆ.
- ಇದು ತುಂಬಾ ಬೆಲೆಯುಳ್ಳದ್ದಾಗಿರುವದರಿಂದ ಮತ್ತು ಈ ಬಣ್ಣವನ್ನು ಉತ್ಪಾದಿಸುವುದಕ್ಕೆ ಹೆಚ್ಚಿನ ಸಮಯವನ್ನು ಕಳೆಯ ಬೇಕಾದದ್ದರಿಂದ, ನೇರಳೆ ಬಣ್ಣದ ಬಟ್ಟೆಗಳು ಸಂಪತ್ತಿಗೆ, ವಿಶಿಷ್ಟತೆಗೆ ಮತ್ತು ದೊರೆತನಕ್ಕೆ ಗುರುತಾಗಿರುತ್ತವೆ.
- ಗುಡಾರದಲ್ಲಿ ಮತ್ತು ದೇವಾಲಯದಲ್ಲಿ ಪರದೆಗಳಿಗೆ ಮತ್ತು ಯಾಜಕರು ಧರಿಸುತ್ತಿರುವ ಎಫೋದಕ್ಕೆ ಉಪಯೋಗಿಸಿರುವ ಬಣ್ಣಗಳಲ್ಲಿ ನೇರಳೆ ಬಣ್ಣ ಒಂದಾಗಿರುತ್ತದೆ,
- ನೇರಳೆ ಬಣ್ಣವನ್ನು ಒಂದು ವಿಧವಾದ ಸಮುದ್ರ ಬಸವನ ಹುಳಗಳನ್ನು ಕುದಿಯುವುದರ ಮೂಲಕವಾಗಲಿ ಅಥವಾ ಅವುಗಳನ್ನು ಒತ್ತಿಡುವುದರ ಮೂಲಕವಾಗಲಿ ಅಥವಾ ಅವುಗಳ ಜೀವಂತವಾಗಿರುವಾಗಲೇ ಬಣ್ಣವನ್ನು ಬಿಡುಗಡೆ ಮಾಡುವಂತೆ ಮಾಡುವದಿಂದಾಗಲಿ ಉತ್ಪಾದನೆ ಮಾಡುವರು. ಇದು ತುಂಬಾ ಹೆಚ್ಚು ಖರ್ಚು ಆಗುವ ವಿಧಾನವಾಗಿರುತ್ತದೆ.
- ರೋಮಾ ಸೈನಿಕರು ಯೇಸುವನ್ನು ಶಿಲುಬೆಗೆ ಏರಿಸುವುದಕ್ಕೆ ಮುಂಚಿತವಾಗಿ ಆತನ ಮೇಲೆ ನೇರಳೆ ಬಣ್ಣದ ದೊರೆತನದ ನಿಲುವಂಗಿಯನ್ನು ಹಾಕಿದ್ದರು, ಯಾಕಂದರೆ ಯೆಹೂದ್ಯರ ಅರಸನೆಂದು ತನ್ನ ಪ್ರಕಟನೆಯನ್ನು ಹಿಯಾಳಿಸುವುದಕ್ಕೆ ಹೀಗೆ ಮಾಡಿದ್ದರು.
- ಫಿಲಿಪ್ಪಿ ಪಟ್ಟಣದ ಲುದ್ಯಳು ನೇರಳೆ ಬಣ್ಣದ ಬಟ್ಟೆಯನ್ನು ಮಾರುವುದರ ಮೂಲಕ ಜೀವನವನ್ನು ಮಾಡುತ್ತಿದ್ದಳು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಎಫೋದ್, ಫಿಲಿಪ್ಪಿ, ರಾಜಯೋಗ್ಯ, ಗುಡಾರ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.02:13-14
- ದಾನಿ.05:7
- ದಾನಿ.05:29-31
- ಜ್ಞಾನೋ.31:22-23

ಪದ ಡೇಟಾ:

- Strong's: H710, H711, H713, G4209, G4210, G4211

ನೊಗ, ನೊಗಗಳು, ನೊಗ ಹೂಡಿದೆ

ಪದದ ಅರ್ಥವಿವರಣೆ:

ನೊಗ ಎನ್ನುವುದು ಒಂದು ಕಟ್ಟಿಯ ತುಂಡು ಅಥವಾ ಲೋಹವಾಗಿರುತ್ತದೆ, ಇದನ್ನು ಒಂದು ಎತ್ತಿನ ಬಂಡಿಯನ್ನು ಅಥವಾ ಒಂದು ನೇಗಿಲನ್ನು ಎಳೆಯುವ ಉದ್ದೇಶಕ್ಕಾಗಿ ಒಂದು ಅಥವಾ ಎರಡು ಪ್ರಾಣಿಗಳನ್ನು ಅವುಗಳಿಗೆ ಕಟ್ಟುವುದಕ್ಕೆ ಉಪಯೋಗಿಸುತ್ತಾರೆ. ಈ ಪದಕ್ಕೆ ಅನೇಕ ವಿಧವಾದ ಅಲಂಕಾರಿಕ ಅರ್ಥಗಳನ್ನು ಹೊಂದಿರುತ್ತದೆ.

- "ನೊಗ" ಎನ್ನುವ ಪದವು ಜನರೆಲ್ಲರು ಸೇರಿ ಕೆಲಸ ಮಾಡುವ ಉದ್ದೇಶಕ್ಕಾಗಿ ಜನರನ್ನು ಒಂಗೂಡಿಸುವ ಯಾವುದಾದರೊಂದನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ, ಉದಾಹರಣೆಗೆ, ಯೇಸುವಿಗೆ ಸೇವೆ ಮಾಡುವುದನ್ನು ಸೂಚಿಸುತ್ತದೆ.
- ಪೌಲನು "ನೊಗಸೇವಕ" ಎನ್ನುವ ಪದವನ್ನು ತನ್ನ ಜೊತೆಯಲ್ಲಿ ತನ್ನ ಹಾಗೆಯೇ ಕ್ರಿಸ್ತನಿಗೆ ಸೇವೆ ಮಾಡುವ ವ್ಯಕ್ತಿಯನ್ನು ಸೂಚಿಸುವುದಕ್ಕೆ ಉಪಯೋಗಿಸಿರುತ್ತಾನೆ. ಇದನ್ನು "ಜೊತೆ ಕೆಲಸದವನು" ಅಥವಾ "ಜೊತೆ ಸೇವಕ" ಅಥವಾ "ಸಹೋದ್ಯೋಗಿ" ಎಂದೂ ಅನುವಾದ ಮಾಡಬಹುದು.
- "ನೊಗ" ಎನ್ನುವ ಪದವು ಒಬ್ಬ ವ್ಯಕ್ತಿ ಹೆಚ್ಚಿನ ಭಾರವನ್ನು ಹೊತ್ತಿಕೊಂಡು ಹೋಗುತ್ತಿರುವುದನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿಯೂ ಉಪಯೋಗಿಸಲ್ಪಟ್ಟಿರುತ್ತದೆ, ಉದಾಹರಣೆಗೆ, ಗುಲಾಮಗಿರಿಯಿಂದ ಅಥವಾ ಹಿಂಸೆಯಿಂದ ಒತ್ತಡಯಾಗಿರುತ್ತಿರುವುದನ್ನೂ ಸೂಚಿಸುತ್ತದೆ.
- ಅನೇಕ ಸಂದರ್ಭಗಳಲ್ಲಿ ಈ ಪದವನ್ನು ಅಕ್ಷರಾರ್ಥವಾಗಿ ಅನುವಾದ ಮಾಡುವುದು ಉತ್ತಮ, ಕೃಷಿ ಮಾಡುವುದಕ್ಕೆ ಉಪಯೋಗಿಸುವ ನೊಗವಿಗೆ ಸ್ಥಳೀಯ ಪದವನ್ನು ಉಪಯೋಗಿಸುವುದು ಒಳ್ಳೇಯದು.
- ಈ ಪದದ ಅಲಂಕಾರಿಕ ಉಪಯೋಗದ ಅನುವಾದದ ಅನೇಕ ವಿಧಾನಗಳಲ್ಲಿ, "ಒತ್ತಡದ ಭಾರ" ಅಥವಾ "ಭಾರವಾದ ಹೊರೆ" ಅಥವಾ "ಬಂಧನ" ಎಂದೂ ಸಂದರ್ಭಾನುಸಾರವಾಗಿ ಉಪಯೋಗಿಸಿಕೊಳ್ಳಬಹುದು.

(ಈ ಪದಗಳನ್ನು ಸಹ ನೋಡಿರಿ : ಬಂಧಿಸು, ಭಾರ, ಒತ್ತಡ, ಹಿಂಸಿಸು, ಸೇವಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.15:10-11
- ಗಲಾತ್ಯ.05:1-2
- ಆದಿ.27:39-40
- ಯೆಶಯಾ.09:4-5
- ಯೆರೆ.27:1-4
- ಮತ್ತಾಯ.11:28-30
- ಫಿಲಿಪ್ಪಿ.04:1-3

ಪದ ಡೇಟಾ:

- Strong's: H3627, H4132, H4133, H5674, H5923, H6776, G2086, G2201, G2218, G4805

ನೋವು

ಪದದ ಅರ್ಥವಿವರಣೆ:

“ನೋವು” ಎನ್ನುವ ಪದವು ಬಹು ಹೆಚ್ಚಾದ ವೇದನೆಯನ್ನು ಅಥವಾ ಯಾತನೆಯನ್ನು ಸೂಚಿಸುತ್ತದೆ.

- ನೋವು ಎನ್ನುವುದು ಭೌತಿಕವಾದದ್ದು ಅಥವಾ ಭಾವೋದ್ರೇಕವಾದ ನೋವು ಅಥವಾ ಯಾತನೆಯಾಗಿರುತ್ತದೆ.
- ಅತೀ ಹೆಚ್ಚಾದ ನೋವುನಲ್ಲಿರುವ ಜನರು ಅನೇಕಸಲ ತಮ್ಮ ಮುಖದಲ್ಲಿ ಮತ್ತು ನಡತೆಗಳಲ್ಲಿ ತೋರಿಸಿಕೊಳ್ಳುತ್ತಾರೆ.
- ಉದಾಹರಣೆಗೆ, ಬಹು ಹೆಚ್ಚಾದ ನೋವಿನಲ್ಲಿದ್ದ ಒಬ್ಬ ವ್ಯಕ್ತಿ ಬಹುಶಃ ಹೆಚ್ಚಾಗಿ ಅಳಬಹುದು ಅಥವಾ ತನ್ನ ಹಲ್ಲುಗಳನ್ನು ಕಡಿಯುತ್ತಿರಬಹುದು.
- “ನೋವು” ಎನ್ನುವ ಪದವನ್ನು “ಭಾವೋದ್ರೇಕವಾದ ಯಾತನೆ” ಅಥವಾ “ಆಳವಾದ ದುಃಖ” ಅಥವಾ “ಬಹು ಹೆಚ್ಚಾದ ಬಾಧೆ” ಎಂಬುದಾಗಿಯೂ ಅನುವಾದನೆ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆರೆ.06:23-24
- ಯೆರೆ.19:6-9
- ಯೋಬ.15:22-24
- ಲೂಕ.16:24
- ಕೀರ್ತನೆ.116:3-4

ಪದ ಡೇಟಾ:

- Strong's: H2342, H2479, H3708, H4164, H4689, H4691, H5100, H6695, H6862, H6869, H7267, H7581, G928, G3600, G4928

ನ್ಯಾಯಾಧೀಶ, ನ್ಯಾಯಾಧೀಶರು

ಪದದ ಅರ್ಥವಿವರಣೆ:

ನ್ಯಾಯಾಧೀಶ ಎನ್ನುವ ವ್ಯಕ್ತಿ ಜನರ ಮಧ್ಯೆದಲ್ಲಿ ಗೊಡವೆಗಳು ಇರುವಾಗ ಯಾವುದು ಸರಿಯೋ ಅಥವಾ ಯಾವುದು ತಪ್ಪೋ ಎಂದು ನಿರ್ಣಯ ಮಾಡುವ ವ್ಯಕ್ತಿಯಾಗಿರುತ್ತಾನೆ, ಸಾಧಾರಣವಾಗಿ ಕಾನೂನಿನ ಪ್ರಕಾರ ನಡೆಯುವ ವಿಷಯಗಳು.

- ಸತ್ಯವೇದದಲ್ಲಿ ದೇವರನ್ನು ನ್ಯಾಯಾಧೀಶ ಎಂಬುದಾಗಿ ಸೂಚಿಸಲ್ಪಟ್ಟಿದೆ, ಯಾಕಂದರೆ ಯಾವುದು ಸರಿಯೋ ಅಥವಾ ಯಾವುದು ತಪ್ಪೋ ಎನ್ನುವುದರ ಕುರಿತಾಗಿ ಅಂತಿಮ ನಿರ್ಣಯಗಳನ್ನು ತೆಗೆದುಕೊಳ್ಳುವ ಪರಿಪೂರ್ಣ ನ್ಯಾಯಾಧೀಶ ದೇವರಾಗಿರುತ್ತಾರೆ.
- ಕಾನಾನ್ ಎನ್ನುವ ಭೂಮಿಯೊಳಗೆ ಇಸ್ರಾಯೇಲ್ಯರು ಸೇರಿದಾದನಂತರ ಮತ್ತು ಅರಸನು ಅವರನ್ನು ಆಳುವುದಕ್ಕೆ ಮುಂಚಿತವಾಗಿ, ಆ ಜನರ ಕಷ್ಟ ಸಮಯಗಳಲ್ಲಿ ನಡೆಸಲು ದೇವರು "ನ್ಯಾಯಾಧೀಶರು" ಎನ್ನುವವರನ್ನು ನೇಮಿಸಿದ್ದರು. ಅನೇಕಬಾರಿ ಇಸ್ರಾಯೇಲ್ಯರ ಶತ್ರುಗಳಿಂದ ಅವರನ್ನು ರಕ್ಷಿಸಿದ ಸೈನ್ಯದ ನಾಯಕರಾಗಿ ಈ ನ್ಯಾಯಾಧೀಶರು ಇದ್ದಿದ್ದರು.
- "ನ್ಯಾಯಾಧೀಶ" ಎನ್ನುವ ಪದವು "ನಿರ್ಣಯ ತೆಗೆದುಕೊಳ್ಳುವವನು" ಅಥವಾ "ನಾಯಕ" ಅಥವಾ "ವಿಮೋಚಕ" ಅಥವಾ "ಪಾಲಕ" ಎಂದು ಸಂದರ್ಭಕ್ಕೆ ತಕ್ಕಂತೆ ಕರೆಯಲ್ಪಡುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಪಾಲಕ, ನ್ಯಾಯಾಧೀಶ, ಧರ್ಮಶಾಸ್ತ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.04:6-8
- ಅಪೊ.ಕೃತ್ಯ.07:26-28
- ಲೂಕ.11:18-20
- ಲೂಕ.12:13-15
- ಲೂಕ.18:1-2
- ಮತ್ತಾಯ.05:25-26
- ರೂತ.01:1-2

ಪದ ಡೇಟಾ:

- Strong's: H148, H430, H1777, H1778, H1779, H1780, H1781, H1782, H2940, H4055, H6414, H6415, H6416, H6417, H6419, H8196, H8199, H8201, G350, G1252, G1348, G2919, G2922, G2923

ಪತ್ರಿಕೆ, ಪತ್ರ

ಪದದ ಅರ್ಥವಿವರಣೆ:

ಪತ್ರ ಎನ್ನುವುದು ಪತ್ರ ಬರೆಯುತ್ತಿರುವ ರಚನಾಕಾರರಿಂದ ತುಂಬಾ ದೂರದಲ್ಲಿರುವ ಒಂದು ಜನರ ಗುಂಪಿಗೆ ಅಥವಾ ಒಬ್ಬ ವ್ಯಕ್ತಿಗೆ ಬರೆದಿರುವ ಸಂದೇಶವನ್ನು ಕಳುಹಿಸುವುದನ್ನು ಸೂಚಿಸುತ್ತದೆ. ಪತ್ರಿಕೆ ಎನ್ನುವುದು ಒಂದು ವಿಶೇಷವಾದ ಪತ್ರವಾಗಿರುತ್ತದೆ, ಅನೇಕಸಲ ಒಂದು ವಿಶೇಷವಾದ ಉದ್ದೇಶಕ್ಕಾಗಿ ಬೋಧನೆಯನ್ನು ಮಾಡಲು ಒಂದು ಔಪಚಾರಿಕ ಶೈಲಿಯಲ್ಲಿ ಬರೆದಿರುವ ಪತ್ರವಾಗಿರುತ್ತದೆ.

- ಹೊಸ ಒಡಂಬಡಿಕೆ ಕಾಲಗಳಲ್ಲಿ, ಪತ್ರಿಕೆಗಳು ಮತ್ತು ಇತರ ವಿಧವಾದ ಪತ್ರಗಳು ಪ್ರಾಣಿಗಳ ಚರ್ಮಗಳಿಂದ ಮಾಡಿದ ಚರ್ಮ ಕಾಗದದ ಮೇಲೆ ಬರೆಯುತ್ತಿದ್ದರು ಅಥವಾ ಮರದ ತೊಗಟೆಯಿಂದ ತೆಗೆದ ಒಂದು ತರಹದ ತೆಳುವಾದ ತೊಗಟೆಯಾಗಿರುವ ಪ್ಯಾಪಿರಸ್ ಎನ್ನುವವುಗಳ ಮೇಲೆ ಬರೆಯುತ್ತಿದ್ದರು.
- ಪೌಲ, ಯೋಹಾನ, ಯಾಕೋಬ, ಯೂದಾ ಮತ್ತು ಪೇತ್ರರಿಂದ ಬರೆಯಲ್ಪಟ್ಟ ಹೊಸ ಒಡಂಬಡಿಕೆಯ ಪತ್ರಿಕೆಗಳೆಲ್ಲವು ಎಚ್ಚರಿಸುವ ಪತ್ರಿಕೆಗಳಾಗಿರುತ್ತವೆ, ಅವರು ಈ ಪತ್ರಿಕೆಗಳನ್ನು ರೋಮಾ ಸಾಮ್ರಾಜ್ಯದಲ್ಲೆಲ್ಲಾ ಇರುವ ಅನೇಕ ಪಟ್ಟಣಗಳಲ್ಲಿ ಆದಿ ಕ್ರೈಸ್ತರೆಲ್ಲರನ್ನು ಪ್ರೋತ್ಸಾಹ ಮಾಡುವುದಕ್ಕೆ, ಎಚ್ಚರಿಸುವುದಕ್ಕೆ ಮತ್ತು ಬೋಧನೆ ಮಾಡುವದಕ್ಕೆ ಬರೆದಿರುತ್ತಾರೆ.
- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಬರೆದಿರುವ ಸಂದೇಶ” ಅಥವಾ “ಬರೆದಿರುವ ಮಾತುಗಳು” ಅಥವಾ “ಬರವಣಿಗೆ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಪ್ರೋತ್ಸಾಹ, ಎಚ್ಚರಿಕೆ, ಬೋಧನೆ)

ಸತ್ಯವೇದದ ವಾಕ್ಯಗಳು:

- 1 ಥೆಸ್ಸ 5:27
- 2 ಥೆಸ್ಸ 2:15
- ಅಪೊ.ಕೃತ್ಯ 9:1-2
- ಅಪೊ.ಕೃತ್ಯ 28:21-22

ಪದ ಡೇಟಾ:

- Strong's: H0104, H0107, H3791, H4385, H5406, H5407, H5612, G11210, G19920

ಪರದೆ, ಪರದೆಗಳು

ಪದದ ಅರ್ಥವಿವರಣೆ

ಸತ್ಯವೇದದಲ್ಲಿ, "ಪರದೆ" ಎನ್ನುವ ಪದವು ಗುಡಾರವನ್ನು ಮಾಡಲು ಮತ್ತು ದೇವಾಲಯವನ್ನು ನಿರ್ಮಿಸಲು ಉಪಯೋಗಿಸಿದ ಒಂದು ದಪ್ಪವಾದ, ಭಾರವಾದ ವಸ್ತುವನ್ನು ಸೂಚಿಸುತ್ತದೆ.

- ಗುಡಾರದ ಮೇಲಿನ ಭಾಗ ಹಾಗೂ ಸುತ್ತಲಿರುವ ಭಾಗವನ್ನು ನಿರ್ಮಿಸಲು ನಾಲ್ಕು ಪದರ ಪರದೆಗಳನ್ನು ಉಪಯೋಗಿಸಿದರು. ಈ ಪರೆದಗಳು ಬಟ್ಟೆ ಅಥವಾ ಪ್ರಾಣಿಗಳ ಚರ್ಮದಿಂದ ಮಾಡಲ್ಪಟ್ಟಿದ್ದವು.
- ಗುಡಾರದ ಅಂಗಳ ಸುತ್ತು ಇರುವ ಗೋಡೆಯನ್ನು ನಿರ್ಮಿಸಲು ಬಟ್ಟೆಯ ಪರದೆಗಳನ್ನು ಉಪಯೋಗಿಸಿದರು. ಈ ಪರದೆಗಳು ಅಗಸೆ ಗಿಡದಿಂದ ಮಾಡಲ್ಪಟ್ಟ "ನಾರು" ಎಂಬ ಒಂದು ವಿಧವಾದ ಬಟ್ಟೆಯಿಂದ ಮಾಡಲ್ಪಟ್ಟಿದ್ದವು.
- ಗುಡಾರದಲ್ಲಿ ಮತ್ತು ದೇವಾಲಯದಲ್ಲಿ ಈ ಎರಡು ಪ್ರಾಂತಗಳಲ್ಲಿ, ಪರಿಶುದ್ಧ ಸ್ಥಳವನ್ನು ಅತಿಪರಿಶುದ್ಧ ಸ್ಥಳದಿಂದ ಬೇರ್ಪಡೆಸಲು ಒಂದು ದಪ್ಪವಾದ ಬಟ್ಟೆಯ ಪರದೆಯನ್ನು ತೂಗುಹಾಕ್ಕಿದ್ದರು. ಯೇಸು ಮರಣಿಸಿದಾಗ ಈ ಪರದೆಯು ಎರಡು ಭಾಗಗಳಾಗಿ ಅದ್ಭುತವಾದ ರೀತಿಯಲ್ಲಿ ಹರಿದುಹೋಯಿತು.

ಅನುವಾದ ಸಲಹೆಗಳು:

- ಅಧುನಿಕ ಪ್ರಪಂಚದಲ್ಲಿ ಉಪಯೋಗಿಸುತ್ತಿರುವ ಪರದೆಗಳು ಸತ್ಯವೇದ ಕಾಲದ ಪರದೆಗಳಿಗೆ ವಿಭಿನ್ನವಾಗಿರುವ ಕಾರಣ, ಪರದೆಗಳನ್ನು ವಿವರಿಸಲು ಸೂಕ್ತ ಪದಗಳನ್ನು ಉಪಯೋಗಿಸಿ ಅದರ ಅರ್ಥವನ್ನು ಸ್ಪಷ್ಟಪಡಿಸಬೇಕು.
- ಸಂಧರ್ಭಾನುಸಾರವಾಗಿ, "ಪರದೆಯ ಹೊದಿಕೆ" ಅಥವಾ "ಹೊದಿಕೆ" ಅಥವಾ "ದಪ್ಪವಾದ ಬಟ್ಟೆ" ಅಥವಾ "ಪ್ರಾಣಿಗಳ ಚರ್ಮದ ಹೊದಿಕೆ" ಅಥವಾ "ತೂಗುಹಕಲ್ಪಟ್ಟಿರುವ ಬಟ್ಟೆಯ ತುಂಡು" ಎಂದು ಅನೇಕ ವಿಧವಾಗಿ ಈ ಪದವನ್ನು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪರಿಶುದ್ಧ ಸ್ಥಳ, ಗುಡಾರ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಇಬ್ರಿ.10:19-22
- ಯಾಜ.04:16-17
- ಲೂಕ.23:44-45
- ಮತ್ತಾಯ.27:51-53
- ಅರಣ್ಯ.04:5-6

ಪದ ಡೇಟಾ:

- Strong's: H1852, H3407, H4539, H6532, H7050, G2665

ಪರದೇಶಿ, ಪರದೇಶಿಗಳು, ಅನ್ಯಲೋಕದ, ವಿದೇಶಿ, ವಿದೇಶೀಯ, ವಿದೇಶಿಯರು

ಪದದ ಅರ್ಥವಿವರಣೆ

“ವಿದೇಶಿ” ಎನ್ನುವ ಪದವು ತನ್ನ ಸ್ವಂತ ದೇಶವಾಗದ ಬೇರೆ ದೇಶದಲ್ಲಿ ನಿವಾಸ ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ. “ವಿದೇಶಿ” ಎನ್ನುವ ಪದವು ಪರದೇಶಿ ಎನ್ನುವ ಪದಕ್ಕೆ ಮತ್ತೊಂದು ಪದವಾಗಿರುತ್ತದೆ.

- ಹಳೆ ಒಡಂಬಡಿಕೆಯಲ್ಲಿ, ಅವರೊಂದಿಗೆ ನಿವಾಸ ಮಾಡದೇ ಬೇರೆ ಜನರ ಗುಂಪಿನಿಂದ ಬಂದ ವ್ಯಕ್ತಿಯನ್ನು ಸೂಚಿಸಲು ಈ ಪದವನ್ನು ವಿಶೇಷವಾಗಿ ಉಪಯೋಗಿಸುತ್ತಿದ್ದರು.
- ಒಂದು ಪ್ರದೇಶದ ಜನರಿಗಿಂತ ಬೇರೆ ಭಾಷೆ ಮತ್ತು ಸಂಪ್ರದಾಯಗಳನ್ನು ಹೊಂದಿರುವ ವ್ಯಕ್ತಿಯನ್ನು ವಿದೇಶೀಯನೆಂದು ಕರೆಯುತ್ತಾರೆ.
- ಉದಾಹರಣೆಗೆ, ನೊವೊಮಿ ಮತ್ತು ಅವಳ ಕುಟುಂಬದವರು ಮೋವಾಬ್ ದೇಶಕ್ಕೆ ಹೋದಾಗ, ಅವರಲ್ಲಿ ಪರದೇಶಿಗಳಾಗಿದ್ದರು. ನೊವೊಮಿ ಮತ್ತು ಅವಳ ಸೊಸೆಯಾದ ರೂತಳು ಇಸ್ರಾಯೇಲ್ ದೇಶಕ್ಕೆ ಹಿಂತಿರುಗಿ ಬಂದಾಗ, ರೂತಳು “ಪರದೇಶಿ”ಯಾಗಿದ್ದಳು ಯಾಕಂದರೆ ಅವಳು ಇಸ್ರಾಯೇಲ್ ದೇಶದವಳು ಆಗಿರಲಿಲ್ಲ.
- ಎಫೆಸದವರು ಕ್ರಿಸ್ತನನ್ನು ಅರಿಯದ ಮುನ್ನ ಅವರು ದೇವರ ಒಡಂಬಡಿಕೆಗೆ “ವಿದೇಶಿಯರು” ಆಗಿದ್ದರೆಂದು ಅಪೊಸ್ತಲನಾದ ಪೌಲನು ಹೇಳಿದನು.
- ಕೆಲವೊಮ್ಮೆ “ವಿದೇಶಿಯರು” ಎನ್ನುವ ಪದವನ್ನು “ಅಪರಿಚಿತನು” ಎಂದು ಅನುವಾದ ಮಾಡಬಹುದು, ಆದರೆ ಗೊತ್ತಿಲ್ಲದವನ ಕುರಿತು ಅಥವಾ ಪರಿಚಯವಿಲ್ಲದ ವ್ಯಕ್ತಿ ಕುರಿತು ಮಾತ್ರವೇ ಈ ಪದವನ್ನು ಉಪಯೋಗಿಸಬೇಕು.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.02:17-18
- ಅಪೊ.ಕೃತ್ಯ.07:29-30
- ಧರ್ಮೋ.01:15-16
- ಆದಿ.15:12-13
- ಆದಿ.17:24-27
- ಲೂಕ.17:17-19
- ಮತ್ತಾಯ.17:24-25

ಪದ ಡೇಟಾ:

- Strong's: H312, H628, H776, H1471, H1481, H1616, H2114, H3363, H3937, H4033, H5236, H5237, H5361, H6154, H8453, G241, G245, G526, G915, G1854, G3581, G3927, G3941

ಪರಿಪೂರ್ಣ, ಪರಿಪೂರ್ಣತೆಯುಳ್ಳ, ಪರಿಪೂರ್ಣತೆ, ಪೂರ್ಣತೆ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಪರಿಪೂರ್ಣ" ಎನ್ನುವ ಪದಕ್ಕೆ ನಮ್ಮ ಕ್ರೈಸ್ತ ಜೀವನದಲ್ಲಿ ಪ್ರಬುದ್ಧರಾಗಿರುವುದು ಎಂದರ್ಥ. ಯಾವುದಾದರೊಂದು ಪರಿಪೂರ್ಣವಾಗಿರುವುದು ಎಂದರೆ ಯಾವುದೇ ಲೋಪಗಳಿಲ್ಲದೇ ಅದು ಅದ್ಭುತವಾಗಿ ರೂಪಿಸಲ್ಪಡುವವರೆಗೂ ಅದರಲ್ಲಿ ಕೆಲಸ ಮಾಡುವುದು ಎಂದರ್ಥ.

- ಪರಿಪೂರ್ಣನಾಗಿರುವುದು ಮತ್ತು ಪಕ್ವವಾಗಿರುವುದು ಎಂದರೆ ಪಾಪ ಮಾಡದಂತೆ ಕ್ರೈಸ್ತನು ವಿಧೇಯನಾಗಿರುವುದು ಎಂದರ್ಥ.
- "ಪರಿಪೂರ್ಣ" ಎನ್ನುವ ಪದವು ಕೂಡ "ಸಂಪೂರ್ಣ" ಅಥವಾ "ಪೂರ್ತಿ"ಯಾಗಿರುವ ಎನ್ನುವ ಅರ್ಥವನ್ನು ಹೊಂದಿರುತ್ತದೆ.
- ಹೊಸ ಒಡಂಬಡಿಕೆಯ ಯಾಕೋಬ ಪುಸ್ತಕವು ಹಿಂಸೆಗಳ ಮೂಲಕ ಹಾದು ಹೋಗುತ್ತಿರುವುದೆನ್ನುವುದು ಒಬ್ಬ ವಿಶ್ವಾಸಿಯಲ್ಲಿ ಪಕ್ವವನ್ನು ಮತ್ತು ಪರಿಪೂರ್ಣತೆಯನ್ನುಂಟು ಮಾಡುತ್ತದೆ.
- ಕ್ರೈಸ್ತರು ಸತ್ಯವೇದವನ್ನು ಅಧ್ಯಯನ ಮಾಡಿ, ಅದಕ್ಕೆ ವಿಧೇಯತೆ ತೋರಿಸುವಾಗ ಅವರು ಇನ್ನೂ ಹೆಚ್ಚಾಗಿ ಆತ್ಮೀಯತೆಯಲ್ಲಿ ಪರಿಪೂರ್ಣತೆಯಾಗುವರು ಮತ್ತು ಪಕ್ವವುಳ್ಳ ವ್ಯಕ್ತಿಗಳಾಗುವರು, ಯಾಕಂದರೆ ಅವರು ತಮ್ಮ ನಡತೆಯಲ್ಲಿ ಕ್ರಿಸ್ತನಂತೆ ಇನ್ನೂ ಹೆಚ್ಚಾಗಿ ಬೆಳೆಯುತ್ತಾರೆ.

ಅನುವಾದ ಸಲಹೆಗಳು:

- ಈ ಪದವನ್ನು "ಯಾವ ದೋಷವಿಲ್ಲದೆ" ಅಥವಾ "ಯಾವ ತಪ್ಪಿಲ್ಲದೆ" ಅಥವಾ "ಯಾವ ಲೋಪಗಳಿಲ್ಲದೆ" ಅಥವಾ "ಯಾವ ನ್ಯೂನತೆಯಿಲ್ಲದೆ" ಅಥವಾ "ಯಾವುದೇ ತಪ್ಪುಗಳನ್ನು ಒಳಗೊಳ್ಳದೆ" ಎನ್ನುವ ಮಾತುಗಳಿಂದ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು:

- ಇಬ್ರಿ.12:02
- ಯಾಕೋಬ.03:02
- ಮತ್ತಾಯ.05:46-48
- ಕೀರ್ತನೆ.019:7-8

ಪದ ಡೇಟಾ:

- Strong's: H3632, H3634, H4359, H8003, H8503, H8537, H8549, H8552, G199, G2675, G2676, G3647, G5046, G5047, G5048, G5050

ಪರಿಶುದ್ಧ ಪಟ್ಟಣ, ಪರಿಶುದ್ಧ ಪಟ್ಟಣಗಳು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ ಉಪಯೋಗಿಸಲ್ಪಟ್ಟಿರುವ “ಪರಿಶುದ್ಧ ಪಟ್ಟಣ” ಎನ್ನುವುದು ಯೆರೂಸಲೇಮ್ ಪಟ್ಟಣವನ್ನು ಸೂಚಿಸುತ್ತದೆ.

- ಈ ಪದವನ್ನು ಪುರಾತನ ಯೆರೂಸಲೇಮ್ ಪಟ್ಟಣವನ್ನು, ಹೊಸ ಯೆರೂಸಲೇಮ್ ಪಟ್ಟಣವನ್ನು ಮತ್ತು ದೇವರು ನಿವಾಸವಾಗಿ ತನ್ನ ಜನರ ಮಧ್ಯೆದಲ್ಲಿದ್ದು ಆಳುವ ಪರಲೋಕ ಯೆರೂಸಲೇಮ್ ಪಟ್ಟಣವನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ,
- ಬೇರೆ ಅನುವಾದದಲ್ಲಿ ಉಪಯೋಗಿಸಿರುವ “ಪರಿಶುದ್ಧ” ಮತ್ತು “ಪಟ್ಟಣ” ಎನ್ನುವ ಪದಗಳನ್ನು ಜೋಡಿಸಿ ಈ ಪದವನ್ನು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪರಲೋಕ, ಪರಿಶುದ್ಧ, ಯೆರೂಸಲೇಮ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಮತ್ತಾಯ.04:5-6
- ಮತ್ತಾಯ.27:51-53
- ಪ್ರಕ.21:1-2
- ಪ್ರಕ.21:9-10
- ಪ್ರಕ.22:18-19

ಪದ ಡೇಟಾ:

- Strong's: H5892, H6944, G40, G4172

ಪರಿಹಾಸ್ಯ, ಗೇಲಿ, ಗೇಲಿ ಮಾಡಿದರು, ಪರಿಹಾಸ್ಯ ಮಾಡುತ್ತಿರುವುದು, ಅಪಹಾಸ್ಯ ಮಾಡುವವನು, ಅಪಹಾಸ್ಯ ಮಾಡುವವರು, ಹಾಸ್ಯಾಸ್ಪದ, ಹೀಯಾಳಿಸುವುದು, ಹೀಯಾಳಿಸಲಾಗಿರುತ್ತದೆ

ಪದದ ಅರ್ಥವಿವರಣೆ:

"ಪರಿಹಾಸ್ಯ", ಹಾಸ್ಯಾಸ್ಪದ", ಮತ್ತು "ಹೀಯಾಳಿಸುವುದು" ಎನ್ನುವ ಪದಗಳೆಲ್ಲವೂ ಒಬ್ಬರ ವಿಷಯದಲ್ಲಿ ತಮಾಷೆ ಮಾಡುವುದನ್ನು ಸೂಚಿಸುತ್ತದೆ ಆದರೆ ಇದನ್ನು ಕ್ರೂರವಾದ ವಿಧಾನದಲ್ಲಿ ಮಾಡುವುದನ್ನು ಮಾತ್ರ ಸೂಚಿಸುತ್ತದೆ.

- ಪರಿಹಾಸ್ಯ ಮಾಡುವುದೆನ್ನುವುದು ಅನೇಕಬಾರಿ ಜನರಿಗೆ ತಿರಸ್ಕಾರ ತೋರಿಸುವುದಕ್ಕೆ ಅಥವಾ ಅವರನ್ನು ಮುಜುಗರ ಮಾಡುವ ಉದ್ದೇಶದಿಂದ ಜನರ ಮಾತುಗಳನ್ನು ಅಥವಾ ಕ್ರಿಯೆಗಳನ್ನು ಅನುಸರಿಸುವುದಾಗಿರುತ್ತದೆ.
- ರೋಮಾ ಸೈನಿಕರು ಯೇಸುವಿನ ಮೇಲೆ ನಿಲುವಂಗಿಯನ್ನು ಹಾಕಿದಾಗ, ಅರಸನಾಗಿ ಆತನನ್ನು ಗೌರವಿಸಲು ನಟಿಸುತ್ತಿರುವಾಗ ಆತನನ್ನು ಹೀಯಾಳಿಸಿದರು ಅಥವಾ ಅಪಹಾಸ್ಯ ಮಾಡಿದರು.
- ಯೌವನಸ್ಥರಾದ ಒಂದು ಗುಂಪಿನ ಜನರು ಎಲೀಷನ ಬೋಳು ತಲೆಯನ್ನು ನೋಡಿ, ಬೋಳು ತಲೆಯವನು ಎಂದು ಎಲೀಷನನ್ನು ಹೀಯಾಳಿಸದರು ಅಥವಾ ಅಪಹಾಸ್ಯ ಮಾಡಿದರು.
- "ಹೀಯಾಳಿಸುವುದು" ಎನ್ನುವ ಮಾತು ಪ್ರಾಮುಖ್ಯವಲ್ಲದ ಅಥವಾ ನಂಬುವುದಕ್ಕೆ ಪರಿಗಣಿಸಲಾಗದ ಅಪಹಾಸ್ಯದ ಆಲೋಚನೆಯನ್ನು ಸೂಚಿಸುತ್ತದೆ.
- "ಅಪಹಾಸ್ಯ ಮಾಡುವವನು" ಎನ್ನುವುದು ಯಾವಾಗಲೂ ಗೇಲಿ ಮಾಡುವ ಮತ್ತು ಹೀಯಾಳಿಸುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೇತ್ರ.03:3-4
- ಅಪೊ.ಕೃತ್ಯ.02:12-13
- ಗಲಾತ್ಯ.06:6-8
- ಆದಿ.39:13-15
- ಲೂಕ.22:63-65
- ಮಾರ್ಕ.10:32-34
- ಮತ್ತಾಯ.09:23-24
- ಮತ್ತಾಯ.20:17-19
- ಮತ್ತಾಯ.27:27-29

ಸತ್ಯವೇದದಿಂದ ಉದಾಹರಣೆಗಳು:

- **21:12** ಜನರು ಮೆಸ್ಸೀಯನನ್ನು ಉಗುಳುತ್ತಾರೆ, _ ಹೀಯಾಳಿಸುತ್ತಾರೆ _ ಮತ್ತು ಹೊಡೆಯುತ್ತಾರೆ ಎಂದು ಯೆಶಯಾ ಪ್ರವಾದಿಸಿದನು.
- **39:05** "ಇವನು ಸಾಯುವುದಕ್ಕೆ ಅರ್ಹನಾಗಿದ್ದಾನೆ" ಎಂದು ಯೆಹೂದ್ಯ ನಾಯಕರೆಲ್ಲರೂ ಮಹಾ ಯಾಜಕನಿಗೆ ಉತ್ತರ ಕೊಟ್ಟರು. ಆದನಂತರ ಅವರು ಯೇಸುವಿನ ಕಣ್ಣುಗಳಿಗೆ ಬಟ್ಟೆಯನ್ನು ಕಟ್ಟಿ, ಆತನ ಮೇಲೆ ಉಗುಳಿ, ಆತನನ್ನು ಬಡಿದು, _ ಹೀಯಾಳಿಸಿದರು _ .
- **39:12** ಸೈನಿಕರು ಯೇಸುವನ್ನು ಕೋಲಿನಿಂದ ಹೊಡೆದರು ಮತ್ತು ಆತನ ಮೇಲೆ ರಾಜ ವಸ್ತ್ರ ನಿಲುವಂಗಿಯನ್ನು ಹಾಕಿ, ಆತನ ತಲೆಯ ಮೇಲೆ ಮುಳ್ಳಿನ ಕಿರೀಟವನ್ನು ಧರಿಸಿದರು. ಆದನಂತರ, ಅವರು "ನೋಡು, ಯೆಹೂದ್ಯರ ಅರಸನೇ" ಎಂದು ಹೇಳುವುದರ ಮೂಲಕ ಆತನನ್ನು _ ಹೀಯಾಳಿಸಿದರು _ .
- **40:04** ಯೇಸುವನ್ನು ಇಬ್ಬರ ಕಳ್ಳರ ಮಧ್ಯೆದಲ್ಲಿ ಶಿಲುಬೆಗೆ ಹಾಕಿದರು. ಅವರಲ್ಲಿ ಒಬ್ಬನು ಯೇಸುವನ್ನು _ ಹೀಯಾಳಿಸಿದನು _, ಇನ್ನೊಬ್ಬನು "ನಿಮಗೆ ದೇವರ ಭಯವಿದೆಯಾ?" ಎಂದು ಹೇಳಿದನು.
- **40:05** ಯೆಹೂದ್ಯ ನಾಯಕರು ಮತ್ತು ಜನಸಮೂಹದಲ್ಲಿರುವ ಅನೇಕ ಜನರು ಯೇಸುವನ್ನು _ ಹೀಯಾಳಿಸಿದರು _ . "ನೀನು ದೇವರ ಮಗನಾಗಿದ್ದರೆ, ಶಿಲುಬೆ ಮೇಲಿಂದ ಕೆಳಗೆ ಇಳಿದು ಬಾ ಮತ್ತು ನಿನ್ನನ್ನು ರಕ್ಷಿಸಿಕೋ, ಅವಾಗ ನಾವು ನಿನ್ನನ್ನು ನಂಬುತ್ತೇವೆ" ಎಂದು ಹೇಳಿದರು.

ಪದ ಡೇಟಾ:

- Strong's: H1422, H2048, H2049, H2778, H2781, H3213, H3887, H3931, H3932, H3933, H3934, H3944, H3945, H4167, H4485, H4912, H5058, H5607, H5953, H6026, H6711, H7046, H7048, H7814, H7832, H8103, H8148, H8437, H8595, G1592, G1701, G1702, G1703, G2301, G2606, G3456, G5512

ಪಾಕ್ಷಿಕವಾಗಿ , ಪಕ್ಷಪಾತ

ಪದದ ಅರ್ಥವಿವರಣೆ:

“ಪಾಕ್ಷಿಕವಾಗಿ” ಮತ್ತು “ಪಕ್ಷಪಾತ ತೋರಿಸುವುದು” ಎನ್ನುವ ಪದಗಳು ಇತರ ಜನರಿಗಿಂತಲೂ ನಿರ್ದಿಷ್ಟವಾದ ಜನರಿಗೆ ಹೆಚ್ಚಾದ ಪ್ರಾಮುಖ್ಯತೆಯನ್ನು ತೋರಿಸುವುದಕ್ಕೆ ಮಾಡುವ ಆಯ್ಕೆಯನ್ನು ಸೂಚಿಸುತ್ತದೆ.

- ಇದು ಅಭಿಮಾನ ತೋರಿಸುವುದಕ್ಕೆ ಸಮಾನವಾಗಿರುತ್ತದೆ, ಇದಕ್ಕೆ ಕೆಲವೊಂದು ಜನರನ್ನು ಇತರರಿಗಿಂತ ಹೆಚ್ಚಾದ ಪ್ರೀತಿಯನ್ನು ತೋರಿಸುವುದು ಎಂದರ್ಥ.
- ಪಕ್ಷಪಾತ ಅಥವಾ ಅಭಿಮಾನ ಎನ್ನುವುದು ಸಹಜವಾಗಿ ಜನರಿಗೆ ತೋರಿಸುವುದಾಗಿರುತ್ತದೆ, ಯಾಕಂದರೆ ಅವರು ಇತರ ಜನರಿಗಿಂತ ಹೆಚ್ಚಾದ ಖ್ಯಾತಿಯನ್ನು ಹೊಂದಿರುತ್ತಾರೆ ಅಥವಾ ದೊಡ್ಡ ಶ್ರೀಮಂತರಾಗಿರುತ್ತಾರೆ.
- ಉನ್ನತ ಸ್ಥಾನವನ್ನು ಪಡೆದಿರುವ ಅಥವಾ ಶ್ರೀಮಂತರಾಗಿರುವ ಜನರಿಗೆ ಪಕ್ಷಪಾತವನ್ನು ಅಥವಾ ಅಭಿಮಾನವನ್ನು ತೋರಿಸಬಾರದೆಂದು ಸತ್ಯವೇದವು ತನ್ನ ಜನರಿಗೆ ಸೂಚನೆ ನೀಡಿದೆ.
- ಪೌಲನು ರೋಮಾಪುರದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ದೇವರು ಜನರಿಗೆ ಯಾವ ಪಕ್ಷಪಾತವಿಲ್ಲದೆ ತೀರ್ಪು ಮಾಡುತ್ತಾರೆಂದು ಆತನು ಬೋಧಿಸಿದ್ದಾನೆ.
- ಜನರು ಶ್ರೀಮಂತರಾಗಿರುವುದರಿಂದ ಅವರಿಗೆ ಮರ್ಯಾದೆ ಕೊಡುವುದು ಅಥವಾ ಅವರಿಗೆ ಆಸನಗಳನ್ನು ಕೊಡುವುದು ತಪ್ಪು ಎಂದು ಯಾಕೋಬನ ಪುಸ್ತಕವು ಬೋಧನೆ ಮಾಡುತ್ತಿದೆ.

(ಈ ಪದಗಳನ್ನು ಸಹ ನೋಡಿರಿ : ದಯೆ)

ಸತ್ಯವೇದದ ಅನುಬಂಧ ವಾಕ್ಯಗಳು:

- ಧರ್ಮೋ.01:17
- ಮಲಾಕಿ.02:09
- ಮಾರ್ಕ.12:13-15
- ಮತ್ತಾಯ.22:16
- ರೋಮಾ.02:10-12

ಪದ ಡೇಟಾ:

- Strong's: H5234, H6440, G991, G1519, G2983, G4299, G4383

ಪಾತಾಳ, ಅಧೋಲೋಕದ ಕೂಪ

ನಿರ್ವಚನ:

“ಪಾತಾಳ” ಎನ್ನುವ ಪದವು ಅತೀ ದೊಡ್ಡ, ಆಳವಾದ ಕೂಪವನ್ನು ಅಥವಾ ಅಡಿಭಾಗವಿಲ್ಲದ ಕಂದಕವನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ, “ಪಾತಾಳ” ಎನ್ನುವುದು ಶಿಕ್ಷೆ ಪಡೆಯುವ ಸ್ಥಳವಾಗಿರುತ್ತದೆ.
- ಉದಾಹರಣೆಗೆ, ಯೇಸು ಒಬ್ಬ ಮನುಷ್ಯನಿಂದ ದುಷ್ಟಾತ್ಮಗಳನ್ನು ಹೊರ ಬರಬೇಕೆಂದು ಅಪ್ಪಣೆ ಕೊಟ್ಟಾಗ, ಅವು ನಮ್ಮನ್ನು ಪಾತಾಳಕ್ಕೆ ಕಳುಹಿಸಬೇಡ ಎಂದು ಆತನಲ್ಲಿ ಕೇಳಿಕೊಂಡರು.
- “ಪಾತಾಳ” ಎನ್ನುವ ಪದವು “ಅಧೋಲೋಕದ ಕೂಪ” ಎಂದು ಅಥವಾ “ಅಡಿಭಾಗವಿಲ್ಲದ ಆಳವಾದ ಕಂದಕ” ಎಂಬುದಾಗಿಯೂ ಅನುವಾದ ಮಾಡಲ್ಪಟ್ಟಿದೆ.
- ಈ ಪದವನ್ನು ಇನ್ನೂ ಬೇರೆ ವಿಧವಾದ ಪದಗಳಿಂದಲೂ ಅನುವಾದ ಮಾಡಿ ಕರೆಯುತ್ತಾರೆ, ಅವು ಯಾವುವೆಂದರೆ, “ಹೇದೆಸ್”, “’ಷಿಯೋಲ್,” ಅಥವಾ “ನರಕ”.

(ಈ ಪದಗಳನ್ನು ಸಹ ನೋಡಿರಿ : /ಹೇದೆಸ್, /ನರಕ, , /ಶಿಕ್ಷೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.08:30-31
- ರೋಮಾ.10:6-7

ಪದ ಡೇಟಾ:

- Strong's: G12, G5421

ಪಾದಗಳ ಪೀಠ

ಪದದ ಅರ್ಥವಿವರಣೆ:

“ಪಾದಗಳ ಪೀಠ” ಎನ್ನುವ ಪದವು ಒಬ್ಬ ವ್ಯಕ್ತಿ ಆಸನದಲ್ಲಿ ಕುಳಿತುಕೊಂಡಾಗ ತನ್ನ ಪಾದಗಳನ್ನಿಟ್ಟು ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ ಉಪಯೋಗಿಸುವ ಒಂದು ವಸ್ತುವನ್ನು ಸೂಚಿಸುತ್ತದೆ, ಈ ಪದವು ಅಧೀನವಾಗುವುದನ್ನು ಮತ್ತು ಕೀಳಾದ ಸ್ಥಿತಿಯನ್ನು ಅಲಂಕಾರಿಕ ಅರ್ಥದಲ್ಲಿ ತೋರಿಸುತ್ತದೆ.

- ಸತ್ಯವೇದ ಕಾಲದಲ್ಲಿ ಜನರು ಇಡೀ ಶರೀರದಲ್ಲಿ ಪಾದಗಳು ಅತೀ ಕಡಿಮೆ ಗೌರವವನ್ನು ಹೊಂದಿರುವ ಅಂಗಗಳೆಂದು ಭಾವಿಸುತ್ತಿದ್ದರು. ಆದ್ದರಿಂದ “ಪಾದಗಳ ಪೀಠ” ಎನ್ನುವುದು ಅದಕ್ಕಿಂತ ಇನ್ನೂ ಕಡಿಮೆ ಗೌರವವನ್ನು ಹೊಂದಿರುತ್ತದೆ, ಯಾಕಂದರೆ ಅದರ ಮೇಲೆ ಕಾಲುಗಳನ್ನಿಟ್ಟು ವಿಶ್ರಾಂತಿ ತೆಗೆದುಕೊಳ್ಳುತ್ತಾರ.
- “ನಾನು ನನ್ನ ಶತ್ರುಗಳನ್ನು ನನ್ನ ಪಾದಗಳ ಕೆಳಗೆ ಇಡುತ್ತೇನೆ” ಎಂದು ದೇವರು ಹೇಳಿದಾಗ, ಆತನು ತನಗೆ ವಿರುದ್ಧವಾಗಿ ತಿರಸ್ಕಾರ ಮಾಡುತ್ತಿರುವ ಜನರ ಮೇಲೆ ಶಕ್ತಿ, ನಿಯಂತ್ರಣ, ಮತ್ತು ಜಯವನ್ನು ಪ್ರಕಟಿಸುತ್ತಿದ್ದಾನೆ. ದೇವರ ಚಿತ್ತಕ್ಕೆ ವಿಧೇಯರಾಗುವುದಕ್ಕೆ ಅವರು ತಪ್ಪದೇ ತಗ್ಗಿಸಲ್ಪಡುವರು ಮತ್ತು ಸೋಲಿಸಲ್ಪಡುವರು.
- “ದೇವರ ಪಾದಗಳ ಪೀಠದ ಹತ್ತಿರ ಆರಾಧನೆ ಮಾಡುವುದು” ಎನ್ನುವ ಮಾತಿಗೆ ಆತನು ಸಿಂಹಾಸನದ ಮೇಲೆ ಕುಳಿತಿದ್ದಾನೆಂದು ತಿಳಿದು ಆತನ ಮುಂದೆ ಆರಾಧನೆಯಲ್ಲಿ ತಲೆಯನ್ನು ಭಾಗಿಸು ಎಂದರ್ಥ. ಇದು ದೇವರಿಗೆ ವಿಧೇಯರಾಗುವುದನ್ನು ಮತ್ತು ಆತನ ಮುಂದೆ ತಗ್ಗಿಸಿಕೊಳ್ಳುವುದನ್ನು ವ್ಯಕ್ತಪಡಿಸುತ್ತದೆ.
- ದಾವೀದನು ದೇವಾಲಯವನ್ನು ದೇವರ “ಪಾದಗಳ ಪೀಠ” ಎಂಬುದಾಗಿ ಸೂಚಿಸುತ್ತಿದ್ದಾನೆ. ಇದು ತನ್ನ ಜನರ ಮೇಲೆ ಆತನಿಗಿರುವ ಅಧಿಕಾರವನ್ನು ಸೂಚಿಸುತ್ತದೆ. ಇದು ಅರಸನಾದ ದೇವರು ತನ್ನ ಸಿಂಹಾಸನದ ಮೇಲೆ ಇದ್ದಾನೆಂದು, ಆತನ ಪಾದಗಳು ತನ್ನ ಪಾದಗಳ ಪೀಠದ ಮೇಲೆ ಇಟ್ಟುಕೊಂಡಿದ್ದಾನೆನ್ನುವ ಚಿತ್ರವನ್ನು ತೋರಿಸುತ್ತದೆ, ಇದರಿಂದ ಎಲ್ಲರು ಆತನಿಗೆ ಒಳಗಾಗಿದ್ದಾರೆಂದೆನ್ನುವ ವಿಷಯವನ್ನು ಸೂಚಿಸುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:47-50
- ಯೆಶಯಾ.66:1
- ಲೂಕ.20:41-44
- ಮತ್ತಾಯ.05:33-35
- ಮತ್ತಾಯ.22:43-44
- ಕೀರ್ತನೆ.110:1

ಪದ ಡೇಟಾ:

- Strong's: H1916, H3534, H7272, G4228, G5286

ಪಾನ ದ್ರವ್ಯಗಳು

ಪದದ ಅರ್ಥವಿವರಣೆ:

ಪಾನ ದ್ರವ್ಯಗಳು ದೇವರಿಗೆ ಅರ್ಪಿಸುವ ಪದಾರ್ಥವಾಗಿರುತ್ತದೆ, ಇದರಲ್ಲಿ ಯಜ್ಞವೇದಿಯ ಮೇಲೆ ಸುರಿಯುವ ಎಣ್ಣೆಯು ಇರುತ್ತದೆ. ಇದನ್ನು ಅನೇಕಬಾರಿ ದಹನ ಬಲಿ ಅರ್ಪಣೆಯೊಂದಿಗೆ ಮತ್ತು ಧಾನ್ಯಗಳ ಅರ್ಪಣೆಯೊಂದಿಗೆ ಬೆರೆತು ದೇವರಿಗೆ ಅರ್ಪಿಸುತ್ತಾರೆ.

- ಪಾನಾರ್ಪಣೆಯಂತೆ ತನ್ನ ಜೀವನವು ಸುರಿಯಲ್ಪಟ್ಟಿದೆಯೆಂದು ಪೌಲನು ತನ್ನ ಜೀವನದ ಕುರಿತಾಗಿ ಹೇಳಿಕೊಳ್ಳುತ್ತಿದ್ದಾನೆ. ಇದಕ್ಕೆ ಯೇಸುವಿನ ಕುರಿತಾಗಿ ಜನರಿಗೆ ಹೇಳುವುದಕ್ಕೆ ಮತ್ತು ದೇವರ ಸೇವೆ ಮಾಡುವುದಕ್ಕೆ ತನ್ನನ್ನು ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡಿದ್ದಾನೆಂದು ಅರ್ಥವಾಗಿರುತ್ತದೆ, ಇದರಿಂದ ಆತನಿಗೆ ಶ್ರಮೆ ಮತ್ತು ಮರಣ ಬರುತ್ತದೆಯೆಂದು ತಿಳಿದಿದ್ದರೂ ತನ್ನ ಜೀವನವನ್ನು ಅರ್ಪಿಸಿಕೊಂಡಿದ್ದನು.
- ಶಿಲುಬೆಯಲ್ಲಿ ಯೇಸುವಿನ ಮರಣವು ಅಂತಿಮ ಪಾನಾರ್ಪಣೆಯಾಗಿರುತ್ತದೆ, ನಮ್ಮ ಪಾಪಗಳಿಗೆ ಆತನ ರಕ್ತವು ಸುರಿಸಲ್ಪಟ್ಟಿರುತ್ತದೆ.

ಅನುವಾದ ಸಲಹೆಗಳು:

- ಈ ಪದಕ್ಕೆ ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ದ್ರಾಕ್ಷಾರಸದ ಅರ್ಪಣೆ” ಎಂದೂ ಅನುವಾದ ಮಾಡುತ್ತಾರೆ.
- “ಅರ್ಪಣೆಯಂತೆ ತನ್ನ ಜೀವನವು ಸುರಿಸಲ್ಪಟ್ಟಿದ್ದಾನೆ” ಎಂದು ಪೌಲನು ಹೇಳಿದಾಗ, ಇದನ್ನು ಯಜ್ಞವೇದಿಯ ಮೇಲೆ ಸಂಪೂರ್ಣವಾಗಿ ಎಣ್ಣೆಯನ್ನು ಸುರಿಸಲ್ಪಡುವ ಅರ್ಪಣೆಯಂತೆ “ಜನರಿಗೆ ದೇವರ ಸಂದೇಶವನ್ನು ಬೋಧಿಸುವುದಕ್ಕೆ ನಾನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದೇನೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸರ್ವಾಂಗ ಹೋಮ, ಧಾನ್ಯಗಳ ಅರ್ಪಣೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.25:28-30
- ಯೆಹೆ.45:16-17
- ಆದಿ.35:14-15
- ಯೆರೆ.07:16-18
- ಅರಣ್ಯ.05:15

ಪದ ಡೇಟಾ:

- Strong's: H5257, H5261, H5262

ಪಾನಸೇವಕ, ಪಾನಸೇವಕರು

ಪದದ ಅರ್ಥವಿವರಣೆ

ಹಳೆ ಒಡಂಬಡಿಕೆಯ ಕಾಲದಲ್ಲಿ, ಅರಸನಿಗೆ ತನ್ನ ದ್ರಾಕ್ಷಾರಸದಲ್ಲಿ ವಿಷವಿಲ್ಲವೆಂದು ನೋಡಲು ಮೊದಲು ತಾನು ಕುಡಿದು, ನಂತರ ಅರಸನಿಗೆ ತನ್ನ ಪಾನವನ್ನು ಕೊಡುವ ಸೇವಕನನ್ನು "ಪಾನಸೇವಕ" ಎಂದು ಕರೆಯುತ್ತಿದ್ದರು.

- "ಪಾನವನ್ನು ತರುವವನು" ಅಥವಾ "ಯಾರು ಪಾನವನ್ನು ತರುವರೋ" ಎಂದು ಈ ಪದದ ಅಕ್ಷರಾರ್ಥವಾಗಿದೆ.
- ಪಾನಸೇವಕ ತನ್ನ ಅರಸನಿಗೆ ಬಹು ನಂಬಿಗಸ್ತನು ಮತ್ತು ನೀತಿವಂತನಾಗಿರುತ್ತಾನೆ.
- ನಂಬಿಗಸ್ತವಾದ ಸ್ಥಾನದಲ್ಲಿದ್ದ ಕಾರಣವಾಗಿ, ಅರಸನು ಮಾಡುವ ಅನೇಕ ತೀರ್ಮಾನ ವಿಷಯಗಳಲ ಮೇಲೆ ಅವನ ಪ್ರಭಾವವಿರುತ್ತದೆ.
- ಬಾಬೆಲೋನಿಯಲ್ಲಿ ಇಸ್ರಾಯೇಲ್ ಜನರು ಸೆರೆಹಿಡಿಯಲ್ಪಟ್ಟಿದ್ದ ಕಾಲದಲ್ಲಿ ನೆಹೆಮೀಯ ಪರ್ಷಿಯ ಅರಸನಾದ ಅರ್ತಷಸ್ತನ ಪಾನಸೇವಕನಾಗಿದ್ದನು.

(ಈ ಪದಗಳನ್ನು ಸಹ ನೋಡಿರಿ : ಅರ್ತಷಸ್ತನ, ಬಾಬೆಲೋನಿ, ಸೆರೆ, ಪರ್ಷಿಯ, ಫರೋಹನು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.10:3-5
- ನೆಹೆ.01:10-11

ಪದ ಡೇಟಾ:

- Strong's: H8248

ಪಾಪ ಪರಿಹಾರಿಕ ಯಜ್ಞ, ಪಾಪ ಪರಿಹಾರಿಕ ಯಜ್ಞಗಳು

ಪದದ ಅರ್ಥವಿವರಣೆ:

“ಪಾಪ ಪರಿಹಾರಿಕ ಯಜ್ಞ” ಎನ್ನುವುದು ಇಸ್ರಾಯೇಲ್ಯರು ಅರ್ಪಿಸಬೇಕೆಂದು ದೇವರು ಬಯಸಿದ ಅನೇಕ ಯಜ್ಞಗಳಲ್ಲಿ ಇದೂ ಒಂದಾಗಿರುತ್ತದೆ.

- ಈ ಯಜ್ಞದಲ್ಲಿ ಎತ್ತನ್ನು ಬಲಿ ಕೊಟ್ಟು, ಅದರ ರಕ್ತವನ್ನು ಮತ್ತು ಕೊಬ್ಬನ್ನು ಯಜ್ಞವೇದಿಯ ಮೇಲಿಟ್ಟು ಸುಡುತ್ತಾರೆ ಮತ್ತು ಉಳಿದ ಪ್ರಾಣಿಯ ದೇಹವನ್ನು ತೆಗೆದುಕೊಂಡು, ಅದನ್ನು ಇಸ್ರಾಯೇಲ್ಯರ ಗುಡಾರಗಳ ಆಚೆ ನೆಲದ ಮೇಲೆ ಸುಡುತ್ತಾರೆ.
- ಈ ಪ್ರಾಣಿಯ ಯಜ್ಞದಲ್ಲಿ ಇದನ್ನು ಸಂಪೂರ್ಣವಾಗಿ ಸುಡುವುದೆನ್ನುವುದು ದೇವರು ಎಷ್ಟು ಪರಿಶುದ್ಧನೋ ಮತ್ತು ಆ ಪಾಪವು ಎಷ್ಟು ಭಯಂಕರವಾದದ್ದೋ ಎಂದು ತೋರಿಸುತ್ತದೆ.
- ಪಾಪವನ್ನು ತೊಳೆಯುವ ಕ್ರಮದಲ್ಲಿ ಮಾಡಲ್ಪಟ್ಟಿರುವ ಪಾಪಕ್ಕೆ ಬೆಲೆಯನ್ನು ಸಲ್ಲಿಸುವುದಕ್ಕೆ ರಕ್ತವು ಸುರಿಸಲ್ಪಡಬೇಕೆಂದು ಸತ್ಯವೇದವು ಬೋಧಿಸುತ್ತದೆ.
- ಪ್ರಾಣಿಯ ಯಜ್ಞಗಳು ಪಾಪಕ್ಕೆ ಕ್ಷಮಾಪಣೆಯನ್ನು ಶಾಶ್ವತವಾಗಿ ತರುವುದಿಲ್ಲ.
- ಶಾಶ್ವತವಾಗಿ ಪಾಪಗಳಿಗೆ ಕ್ರಯಧನವನ್ನು ಯೇಸುವು ಶಿಲುಬೆಯ ಮರಣದಿಂದ ಸಲ್ಲಿಸಿದ್ದಾರೆ. ಆತನು ಪಾಪ ಪರಿಹಾರ ಮಾಡುವ ಯಜ್ಞವಾಗಿದ್ದಾನೆ.

(ಈ ಪದಗಳನ್ನು ಸಹ ನೋಡಿರಿ : ಯಜ್ಞವೇದಿ, ಹಸು, ಕ್ಷಮಿಸು, ಹೋಮ, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.29:20-21
- ವಿಮೋ.29:35-37
- ಯೆಹೆ.44:25-27
- ಯಾಜಕ.05:11
- ಅರಣ್ಯ.07:15-17

ಪದ ಡೇಟಾ:

- Strong's: H2401, H2402, H2398, H2403

ಪಾರಿವಾಳ, ಕಪೋತ

ಪದದ ಅರ್ಥವಿವರಣೆ:

ಪಾರಿವಾಳಗಳು ಮತ್ತು ಕಪೋತಗಳು ಎರಡು ವಿಧವಾದ ಪಕ್ಷಿಗಳು, ಇವು ಒಂದೇ ರೀತಿಯಾಗಿದ್ದು ಬೂದು ಮತ್ತು ಕಂದು ಬಣ್ಣದಲ್ಲಿರುತ್ತವೆ. ಪಾರಿವಾಳ ಎನ್ನುವುದು ತಿಳಿ ಬಣ್ಣ, ಬಹುತೇಕ ಬಿಳಿ ಬಣ್ಣವನ್ನು ಹೊಂದಿರುತ್ತದೆ.

- ಕೆಲವೊಂದು ಭಾಷೆಗಳಲ್ಲಿ ಅವುಗಳಿಗೆ ಎರಡು ವಿಧವಾದ ಹೆಸರುಗಳಿರುತ್ತವೆ, ಇನ್ನೂ ಕೆಲವೊಂದು ಭಾಷೆಗಳಲ್ಲಿ ಎರಡಕ್ಕೂ ಒಂದೇ ಹೆಸರನ್ನಿಟ್ಟು ಕರೆಯುತ್ತಾರೆ.
- ಪಾರಿವಾಳಗಳು ಮತ್ತು ಕಪೋತಗಳು ದೇವರಿಗೆ ಬಲಿ ಕೊಡುವುದಕ್ಕೆ ಉಪಯೋಗಿಸುತ್ತಿದ್ದರು, ವಿಶೇಷವಾಗಿ ದೊಡ್ಡ ಹಸುಗಳನ್ನು ಕೊಂಡುಕೊಳ್ಳುವುದಕ್ಕಾಗದ ಜನರಿಗೆ ಈ ರೀತಿಯ ಕ್ರಮವು ಇದ್ದಿತ್ತು.
- ನೋಹನ ಕಾಲದಲ್ಲಿ ಬಂದ ಪ್ರಳಯದ ನೀರೆಲ್ಲಾ ಕಡಿಮೆಯಾದ ಮೇಲೆ ಪಾರಿವಾಳವು ಎಣ್ಣೆ ಮರದ ಹೊಸ ಚಿಗುರನ್ನು ತೆಗೆದುಕೊಂಡು ಬಂದಿತ್ತು.
- ಪಾರಿವಾಳಗಳು ಕೆಲವೊಂದುಬಾರಿ ಪವಿತ್ರತೆಗೆ, ನಿರ್ದೋಷಕ್ಕೆ ಅಥವಾ ಸಮಾಧಾನಕ್ಕೆ ಚಿಹ್ನೆಯಾಗಿರುತ್ತವೆ.
- ಅನುವಾದ ಮಾಡುವ ಸ್ಥಳೀಯ ಭಾಷೆಯಲ್ಲಿ ಪಾರಿವಾಳ ಅಥವಾ ಕಪೋತಗಳು ಗೊತ್ತಿಲ್ಲದಿದ್ದರೆ, ಈ ಪದವನ್ನು “ಪಾರಿವಾಳ ಎಂದು ಕರೆಯಲ್ಪಡುವ ಬೂದು ಬಣ್ಣದ ಚಿಕ್ಕ ಪಕ್ಷಿ” ಎಂದೂ ಅಥವಾ “ಚಿಕ್ಕ ಬೂದು ಅಥವಾ ಕಂದು ಬಣ್ಣದ ಪಕ್ಷಿ, ಇದು ಸ್ಥಳೀಯ ಪಕ್ಷಿಗೆ ಸಮಾಂತರ ಪಕ್ಷಿ” ಎಂದೂ ಅನುವಾದ ಮಾಡಬಹುದು.
- ಪಾರಿವಾಳ ಮತ್ತು ಕಪೋತಗಳೆರಡು ಒಂದೇ ವಚನದಲ್ಲಿ ಹೇಳಲ್ಪಟ್ಟಿವೆ, ಅವುಗಳಿಗೆ ಎರಡು ಹೆಸರುಗಳನ್ನು ಉಪಯೋಗಿಸುವುದು ಒಳ್ಳೆಯದು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಎಣ್ಣೆ ಮರ, ನಿರ್ದೋಷ, ಪವಿತ್ರತೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.08:8-9
- ಲೂಕ.02:22-24
- ಮಾರ್ಕ.01:9-11
- ಮತ್ತಾಯ.03:16-17
- ಮತ್ತಾಯ.21:12-14

ಪದ ಡೇಟಾ:

- Strong's: H1469, H1686, H3123, H8449, G4058

ಪಾಲಿಸು, ಪ್ರಭುತ್ವ, ಪ್ರಭುತ್ವಗಳು, ರಾಜ್ಯಪಾಲ, ರಾಜ್ಯಪಾಲಕರು, ಆಡಳಿತಾಧಿಕಾರಿ, ಆಡಳಿತಾಧಿಕಾರಿಗಳು

ಪದದ ಅರ್ಥವಿವರಣೆ:

“ರಾಜ್ಯಪಾಲ” ಎನ್ನುವ ಪದವು ಒಂದು ರಾಜ್ಯವನ್ನು, ಒಂದು ಪ್ರಾಂತ್ಯವನ್ನು ಅಥವಾ ಒಂದು ಕ್ಷೇತ್ರವನ್ನು ಪಾಲಿಸುತ್ತಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ. “ಪಾಲಿಸು” ಎನ್ನುವದಕ್ಕೆ ನಡೆಸು, ಸಲಹೆಕೊಡು, ಅಥವಾ ಅವರನ್ನು ನಿರ್ವಹಿಸು ಎಂದರ್ಥ.

- ಹೊಸ ಒಡಂಬಡಿಕೆಯಲ್ಲಿ, “ರಾಜ್ಯಪಾಲಕರು” (ಪ್ರೊಕನ್ಸಲ್) ಎನ್ನುವ ಪದವು ರೋಮಾ ಸೀಮೆಯನ್ನು ಆಳುತ್ತಿರುವ ಒಬ್ಬ ಪಾಲಕನಿಗೆ ಕೊಡುವ ಒಂದು ವಿಶೇಷವಾದ ಬಿರುದಾಗಿರುತ್ತದೆ.
- ಹಳೆ ಒದಾಂಬಡಿಕೆಯಲ್ಲಿ, "ಆಡಳಿತಾಧಿಕಾರಿ" ಎನ್ನುವ ಪದವು ಪರಾಸಿಯ ರಾಜ್ಯಪಾಲರಿಗೆ ನಿರ್ದಿಷ್ಟವಾದ ಶೀರ್ಷಿಕೆಯಾಗಿದೆ..
- “ಪ್ರಭುತ್ವ” ಎನ್ನುವುದು ಒಂದು ದೇಶವನ್ನು ಅಥವಾ ಒಂದು ಸಾಮ್ರಾಜ್ಯವನ್ನು ಆಳುವ ಪಾಲಕರನ್ನು ಸೂಚಿಸುತ್ತದೆ. ಪಾಲಕರು ತಾವು ಪಾಲಿಸುವ ಜನರ ನಡತೆಯನ್ನು ನಿರ್ದೇಶಿಸಲು ಕಾನೂನುಗಳನ್ನು ಮಾಡುತ್ತಾರೆ, ಇದರಿಂದ ದೇಶದಲ್ಲಿರುವ್ ಎಲ್ಲಾ ಜನರಿಗೆ ಸಮಾಧಾನ, ಭದ್ರತೆ ಮತ್ತು ಸಂರಕ್ಷಣೆ ಇರುತ್ತದೆ.

ಅನುವಾದ ಸಲಹೆಗಳು:

- “ರಾಜ್ಯಪಾಲ” ಎನ್ನುವ ಪದವನ್ನು “ಪಾಲಕ” ಅಥವಾ “ಮೇಲ್ವಿಚಾರಕ” ಅಥವಾ “ಪ್ರಾಂತ್ಯದ ನಾಯಕ” ಅಥವಾ “ಒಂದು ಚಿಕ್ಕ ಕ್ಷೇತ್ರವನ್ನು ಪಾಲಿಸುವಾತನು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ಪಾಲಿಸು” ಎನ್ನುವ ಪದವನ್ನು “ಆಳು” ಅಥವಾ “ನಡೆಸು” ಅಥವಾ “ನಿರ್ವಹಿಸು” ಅಥವಾ “ಮೇಲ್ವಿಚಾರಣೆ ಮಾಡು” ಎಂದೂ ಅನುವಾದ ಮಾಡಬಹುದು.
- “ರಾಜ್ಯಪಾಲ” ಪದವು “ಅರಸ” ಅಥವಾ “ಚಕ್ರವರ್ತಿ” ಎನ್ನುವ ಪದಗಳಿಗೆ ಭಿನ್ನವಾಗಿ ಇರುವಂತೆ ನೋಡಿಕೊಳ್ಳಬೇಕು, ಯಾಕಂದರೆ ರಾಜ್ಯಪಾಲರು ಆವರ ಅಧಿಕಾರದ ಕೆಳಗೆ ಇರುವ ಅತೀ ಕಡಿಮೆ ಶಕ್ತಿಯ ಹೊಂದಿದ ಪಾಲಕರಾಗಿರುತ್ತಾರೆ.
- “ಆಡಳಿತಾಧಿಕಾರಿ” ಎನ್ನುವ ಪದವನ್ನು “ರೋಮಾ ಚಕ್ರವರ್ತಿ” ಅಥವಾ “ರೋಮಾ ಸೀಮೆಯ ಪಾಲಕ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ಅರಸ, ಶಕ್ತಿ, ಸೀಮೆ, ರೋಮಾ, ಪಾಲಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:9-10
- ಅಪೊ.ಕೃತ್ಯ.23:22-24
- ಅಪೊ.ಕೃತ್ಯ.26:30-32
- ಮಾರ್ಕ.13:9-10
- ಮತ್ತಾಯ.10:16-18
- ಮತ್ತಾಯ.27:1-2

ಪದ ಡೇಟಾ:

- Strong's: H324, H1777, H2280, H4951, H5148, H5460, H6346, H6347, H6486, H7989, H8269, H8660, G445, G446, G746, G1481, G2232, G2233, G2230, G4232

ಪೀಡಿಸು, ಪೀಡಿಸುವುದು, ಪೀಡಿಸಲಾಗಿದೆ, ಪೀಡಿಸುತ್ತಾ ಇರುವುದು, ದಬ್ಬಾಳಿಕೆ, ದುರ್ಭರ, ಪೀಡಕ, ಪೀಡಕರು

ಪದದ ಅರ್ಥವಿವರಣೆ:

"ಪೀಡಿಸು" ಮತ್ತು "ದಬ್ಬಾಳಿಕೆ" ಎನ್ನುವ ಪದಗಳು ಜನರಲ್ಲಿ ಕಠಿಣವಾಗಿ ನಡೆದುಕೊಳ್ಳುವುದನ್ನು ಸೂಚಿಸುತ್ತದೆ. "ಪೀಡಕ" ಎಂದರೆ ಜನರನ್ನು ಪೀಡಿಸುವ ವ್ಯಕ್ತಿ ಎಂದರ್ಥ.

- "ದಬ್ಬಾಳಿಕೆ" ಎನ್ನುವ ಪದವು ವಿಶೇಷವಾಗಿ ಹೆಚ್ಚಿನ ಜನರನ್ನು ತಪ್ಪಾಗಿ ನಡೆಸುವ ಪರಿಸ್ಥಿತಿಯನ್ನು ಅಥವಾ ಜನರ ತಮ್ಮ ಅಧಿಕಾರದ ಕೆಳಗೆ ಅಥವಾ ತಮ್ಮ ಪಾಲನೆಯ ಕೆಳಗೆ ಅವರನ್ನು ಗುಲಾಮರನ್ನಾಗಿ ಮಾಡುವುದನ್ನು ಸೂಚಿಸುತ್ತದೆ.
- "ಪೀಡಿಸಲಾಗಿದೆ" ಎನ್ನುವ ಮಾತು ತುಂಬಾ ಕಠಿಣವಾದ ಪರಿಸ್ಥಿತಿಗಳಿಗೆ ಗುರಿಯಾದ ಜನರನ್ನು ವಿವರಿಸುತ್ತದೆ.
- ಅನೇಕಬಾರಿ ಶತ್ರು ದೇಶಗಳು ಮತ್ತು ಅವರ ಪಾಲಕರು ಇಸ್ರಾಯೇಲ್ ಜನರಿಗೆ ಪೀಡಕರಾಗಿದ್ದರು.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, "ಪೀಡಿಸು" ಎನ್ನುವ ಪದವನ್ನು "ಗಂಭೀರವಾಗಿ ಕೆಟ್ಟದಾಗಿ ನಡೆದುಕೋ" ಅಥವಾ "ಅತೀ ಹೆಚ್ಚಾದ ಭಾರವನ್ನು ಹೊತ್ತಿಕೊಳ್ಳುವುದಕ್ಕೆ ಕಾರಣವಾಗು" ಅಥವಾ "ಶೋಚನೀಯವಾದ ಬಂಧನದ ಕೆಳಗಿಡು" ಅಥವಾ "ಕಠಿಣವಾಗಿ ಪಾಲಿಸು" ಎಂದೂ ಅನುವಾದ ಮಾಡಬಹುದು.
- "ದಬ್ಬಾಳಿಕೆ" ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನಗಳಲ್ಲಿ "ಭಾರೀ ಒತ್ತಡ ಮತ್ತು ಬಂಧನ" ಅಥವಾ "ಭಾರವಾದ ನಿಯಂತ್ರಣ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಪೀಡಿಸಲಾಗಿದೆ" ಎನ್ನುವ ಮಾತು "ಪೀಡಿಸಲ್ಪಟ್ಟ ಜನರು" ಅಥವಾ "ಗಂಭೀರವಾದ ಬಂಧನದಲ್ಲಿರುವ ಜನರು" ಅಥವಾ "ಕಠಿಣವಾದ ಕೆಟ್ಟತನದ ದಬ್ಬಾಳಿಕೆಗೆ ಗುರಿಯಾದವರು" ಎಂದೂ ಅನುವಾದ ಮಾಡಬಹುದು.
- "ಪೀಡಕ" ಎನ್ನುವ ಪದವನ್ನು "ಪೀಡಿಸುವ ವ್ಯಕ್ತಿ" ಅಥವಾ "ಕಠಿಣವಾಗಿ ಪಾಲಿಸುವ ಮತ್ತು ನಿಯಂತ್ರಿಸುವ ದೇಶ" ಅಥವಾ "ಹಿಂಸಕನು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಬಂಧಿಸು, ಗುಲಾಮಗಿರಿ, ಹಿಂಸಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.10:17-19
- ಧರ್ಮೋ.26:6-7
- ಪ್ರಸಂಗಿ.04:1
- ಯೋಬ.10:1-3
- ನ್ಯಾಯಾ.02:18-19
- ನೆಹೆ.05:14-15
- ಕೀರ್ತನೆ.119:133-134

ಪದ ಡೇಟಾ:

- Strong's: H1790, H1792, H2541, H2555, H3238, H3905, H3906, H4642, H4939, H5065, H6115, H6125, H6184, H6206, H6216, H6217, H6231, H6233, H6234, H6693, H7429, H7533, H7701, G2616, G2669

ಪುಟ್ಟಿ, ಪುಟ್ಟಿಗಳು, ಪುಟ್ಟಿಗಳ ತುಂಬ

ಪದದ ಅರ್ಥವಿವರಣೆ

“ಪುಟ್ಟಿ” ಎನ್ನುವ ಪದಕ್ಕೆ ನೇಯ್ದ ವಸ್ತುವಿನ ಪಾತ್ರೆಯನ್ನು ಸೂಚಿಸುತ್ತದೆ.

- ಸತ್ಯವೇದದ ಕಾಲದಲ್ಲಿ, ಬುಟ್ಟಿಗಳನ್ನು ಬಹುಶಃ ಸುಲಿದ ಮರದ ಕೊಂಬೆಗಳು ಅಥವಾ ಕೊಂಬೆಗಳಿಂದ ಮರದಂತಹ ಬಲವಾದ ಸಸ್ಯ ಸಾಮಗ್ರಿಗಳಿಂದ ನೇಯಲಾಗುತ್ತದೆ.
- ಪುಟ್ಟಿ ನೀರಿನಲ್ಲಿ ತೇಲಾಡುವಂತೆ ಅದಕ್ಕೆ ಜಲನಿರೋಧಕ ಪದಾರ್ಥವನ್ನು ಹಚ್ಚಿರಬಹುದು.
- ಮೋಶೆ ಮಗುವಾಗಿದ್ದಾಗ, ಅವನ ತಾಯಿ ಒಂದು ಜಲನಿರೋಧಕ ಪುಟ್ಟಿಯನ್ನು ಮಾಡಿ ಅದರಲ್ಲಿ ಅವನನ್ನು ಮಲಗಿಸಿ ನೈಲ್ ನದಿಯ ಕೊಳಲುಗಳಲ್ಲಿ ತೇಲಾಡಲು ಬಿಟ್ಟಳು.
- ಆ ಕಥೆಯಲ್ಲಿ ಉಪಯೋಗಿಸಲ್ಪಟ್ಟಿರುವ “ಪುಟ್ಟಿ” ಎನ್ನುವ ಪದವನ್ನು ನೋಹನು ನಿರ್ಮಿಸಿದ “ನಾವೆ”ಯನ್ನು ಸೂಚಿಸುವಂತೆ ಅನುವಾದ ಮಾಡಲಾಗಿದೆ. ಈ ಎರಡು ಸಂದರ್ಭಗಳಲ್ಲಿ “ತೇಲಾಡುವ ಪಾತ್ರೆ” ಎಂದು ಅದರ ಅರ್ಥ ನೀಡುತ್ತಿದೆ.

(ಈ ಪದಗಳನ್ನು ಸಹ ನೋಡಿರಿ : ನಾವೆ, ಮೋಶೆ, ನೈಲ್ ನದಿ, ನೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಕೊರಿಂಥ.11:32-33
- ಅಪೊ. ಕೃತ್ಯ.09:23-25
- ಆಮೋಸ.08:1-3
- ಯೋಹಾನ.06:13-15
- ನ್ಯಾಯ.06:19-20
- ಮತ್ತಾಯ.14:19-21

ಪದ ಡೇಟಾ:

- Strong's: H374, H1731, H1736, H2935, H3619, H5536, H7991, G2894, G3426, G4553, G4711

ಪೂರ್ವಕಾಲ ವೃತ್ತಾಂತಗಳು

ಪದದ ಅರ್ಥವಿವರಣೆ:

"ವೃತ್ತಾಂತ" ಎನ್ನುವ ಪದವು ಒಂದು ಕಾಲಾವಧಿಯಲ್ಲಿ ನಡೆದಿರುವ ಸಂಘಟನೆಗಳ ದಾಖಲಾತಿಯನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ "ಪೂರ್ವಕಾಲ ವೃತ್ತಾಂತ ಪ್ರಥಮ ಭಾಗ" ಮತ್ತು "ಪೂರ್ವಕಾಲ ವೃತ್ತಾಂತ ದ್ವಿತೀಯ ಭಾಗ" ಎಂದು ಎರಡು ಪುಸ್ತಕಗಳನ್ನು ಕರೆಯುತ್ತಾರೆ.
- "ಪೂರ್ವಕಾಲ ವೃತ್ತಾಂತಗಳು" ಎಂದು ಕರೆಯಲ್ಪಡುವ ಪುಸ್ತಕಗಳು ಇಸ್ರಾಯೇಲ್ ಜನರ ಚರಿತ್ರೆಯ ಭಾಗವನ್ನು ದಾಖಲಿಸುತ್ತವೆ. ಇದರಲ್ಲಿ ಆದಾಮನಿಂದ ಹಿಡಿದು ಪ್ರತಿಯೊಬ್ಬರ ವಂಶಾವಳಿಯಲ್ಲಿರುವ ಜನರ ಪಟ್ಟಿಯೊಂದಿಗೆ ಆರಂಭವಾಗುತ್ತದೆ.
- "ಪೂರ್ವಕಾಲ ವೃತ್ತಾಂತ ಪ್ರಥಮ ಭಾಗ" ಗ್ರಂಥದಲ್ಲಿ ಅರಸನಾದ ಸೌಲನ ಅಂತಿಮ ಜೀವನ ಮತ್ತು ಅರಸನಾದ ದಾವೀದನ ಆಳ್ವಿಕೆಯ ಸಂಘಟನೆಗಳನ್ನು ಬರೆದಿರುತ್ತಾರೆ.
- "ಪೂರ್ವಕಾಲ ವೃತ್ತಾಂತ ದ್ವಿತೀಯ ಭಾಗ" ಗ್ರಂಥದಲ್ಲಿ ಆರಸನಾದ ಸೊಲೊಮೋನ ಮತ್ತು ಇತರ ಅನೇಕ ಅರಸರ ಆಳ್ವಿಕೆಯ ಚರಿತ್ರೆಯನ್ನು ಬರೆದಿರುತ್ತಾರೆ, ಇದರಲ್ಲಿ ದೇವಾಲಯವನ್ನು ನಿರ್ಮಿಸುವುದು, ದಕ್ಷಿಣ ರಾಜ್ಯವಾದ ಯೂದಾದಿಂದ ಉತ್ತರ ರಾಜ್ಯವಾದ ಇಸ್ರಾಯೇಲನ್ನು ಬೇರ್ಪಡಿಸುವ ವಿಷಯಗಳು ಒಳಗೊಂಡಿರುತ್ತವೆ.
- 2 ಪೂರ್ವಕಾಲ ವೃತ್ತಾಂತಗಳ ಅಂತಿಮ ಸಂಘಟನೆಗಳು ಬಾಬೆಲೋನಿಯ ಸೆರೆಯ ಪ್ರಾರಂಭದ ವಿಷಯಗಳನ್ನು ವಿವರಿಸುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ದಾವೀದ, ಹೊರದೂಡು, ಇಸ್ರಾಯೇಲ್ ರಾಜ್ಯ, ಯೂದಾ, ಸೊಲೊಮೋನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.27:23-24
- 2 ಪೂರ್ವ.33:18-20
- ಎಸ್ತೇರಳು.10:1-2

ಪದ ಡೇಟಾ:

- Strong's: H1697

ಪೂರ್ವಜ, ತಂದೆ, ತಂದೆಯರು, ಅನುವಂಶಿಕ ತಂದೆ, ತಾತ

ಪದದ ಅರ್ಥವಿವರಣೆ:

"ತಂದೆ" ಎನ್ನುವ ಪದವು ಒಬ್ಬ ವ್ಯಕ್ತಿಯ ಪುರುಷ ಪೋಷಕರನ್ನು ಸೂಚಿಸುತ್ತದೆ.

- "ತಂದೆ" ಮತ್ತು "ಅನುವಂಶಿಕ ತಂದೆ" ಎನ್ನುವ ಪದಗಳು ಒಬ್ಬ ವ್ಯಕ್ತಿಯ ಅಥವಾ ಒಂದು ಜನರ ಗುಂಪಿನ ಪುರುಷ ಪೂರ್ವಜರನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ. ಇದನ್ನು "ಪೂರ್ವಜ" ಅಥವಾ "ಅನುವಂಶಿಕ ತಂದೆ" ಎಂದೂ ಅನುವಾದ ಮಾಡಬಹುದು.
- "ಪಿತ" ಎನ್ನುವ ಮಾತು ಎನಾದರೊಂದಕ್ಕೆ ಆಧಾರವಾಗಿರುವ ಅಥವಾ ಒಂದು ವರ್ಗದ ಜನರಿಗೆ ನಾಯಕನಾಗಿರುವ ಒಬ್ಬ ವ್ಯಕ್ತಿಯನ್ನು ಅಲಂಕಾರಿಕವಾಗಿಯೂ ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ. ಉದಾಹರಣೆಗೆ, ಆದಿಕಾಂಡ 4ನೇ ಅಧ್ಯಾಯದಲ್ಲಿ "ಗುಡಾರಗಳಲ್ಲಿ ವಾಸಿಸುವರ ಮೂಲ ಪುರುಷನು" ಎಂದು ಹೇಳಲಾಗಿದೆ, ಇದಕ್ಕೆ "ಗುಡಾರಗಳಲ್ಲಿ ಮೊಟ್ಟಮೊದಲು ನಿವಾಸ ಮಾಡಿದ ಜನರಿಗೆ ಮೊಟ್ಟ ಮೊದಲ ಕುಲದ ನಾಯಕನು" ಎಂದರ್ಥ.
- ಅಪೊಸ್ತಲನಾದ ಪೌಲನು ಸುವಾರ್ತೆ ಸಾರುವುದರ ಮೂಲಕ ಕ್ರೈಸ್ತರಾಗುವುದಕ್ಕೆ ಸಹಾಯ ಮಾಡಿದ ಜನರಿಗೆಲ್ಲರಿಗೆ ಅಲಂಕಾರಿಕ ಭಾಷೆಯಲ್ಲಿ ತನ್ನನ್ನು "ತಂದೆ" ಎಂದು ಕರೆದುಕೊಂಡನು.

ಅನುವಾದ ಸಲಹೆಗಳು

- ತಂದೆ ಮತ್ತು ತನ್ನ ಸ್ವಂತ ಮಗನ ಕುರಿತಾಗಿ ಮಾತನಾಡುವಾಗ, ಅನುವಾದ ಭಾಷೆಯಲ್ಲಿ ತಂದೆಯನ್ನು ಸೂಚಿಸುವ ಬೇರೊಂದು ಪದವನ್ನು ಉಪಯೋಗಿಸಿ ಅನುವಾದ ಮಾಡಬಹುದು.
- "ತಂದೆಯಾದ ದೇವರು" ಎನ್ನುವ ಮಾತನ್ನು "ತಂದೆ"ಗೆ ಉಪಯೋಗಿಸುವ ಸಹಜವಾದ, ಸಾಧಾರಣವಾದ ಪದವನ್ನು ಉಪಯೋಗಿಸಿ ಅನುವಾದ ಮಾಡಬಹುದು.
- ಪಿತೃಗಳನ್ನು ಸೂಚಿಸಿದಾಗ, ಈ ಪದವನ್ನು "ಪೂರ್ವಜರು" ಅಥವಾ "ಅನುವಂಶಿಕ ತಂದೆಗಳು" ಎಂದು ಅನುವಾದ ಮಾಡಬಹುದು.
- ಕ್ರಿಸ್ತನಲ್ಲಿರುವ ವಿಶ್ವಾಸಿಗಳೆಲ್ಲರಿಗೆ ತಂದೆಯನ್ನಾಗಿ ಪೌಲನು ತನ್ನನ್ನು ತಾನು ಸೂಚಿಸಿಕೊಂಡಾಗ, ಇದನ್ನು "ಆತ್ಮೀಯಕವಾದ ತಂದೆ" ಅಥವಾ "ಕ್ರಿಸ್ತನಲ್ಲಿ ತಂದೆ" ಎಂದೂ ಅನುವಾದ ಮಾಡಬಹುದು.
- "ತಂದೆ" ಎನ್ನುವ ಪದವು ಕೆಲವೊಂದುಬಾರಿ "ಕುಲದ ನಾಯಕ" ಎಂದೂ ಅನುವಾದ ಮಾಡಬಹುದು.
- "ಸುಳ್ಳಿನ ತಂದೆ" ಎನ್ನುವ ಮಾತಿಗೆ "ಎಲ್ಲಾ ಸುಳ್ಳುಗಳಿಗೆ ಅವನೇ ಆಧಾರ" ಅಥವಾ "ಅವನಿಂದಲೇ ಎಲ್ಲಾ ಸುಳ್ಳುಗಳು ಬರುತ್ತವೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ತಂದೆಯಾದ ದೇವರು, ಮಗ, ದೇವರ ಮಗ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.07:02
- ಅಪೊ.ಕೃತ್ಯ.07:32
- ಅಪೊ.ಕೃತ್ಯ.07:45
- ಅಪೊ.ಕೃತ್ಯ.22:03
- ಆದಿ.31:29-30
- ಆದಿ.31:42
- ಆದಿ.31:53
- ಇಬ್ರಿ.07:4-6
- ಯೋಹಾನ.04:11-12
- ಯೆಹೋ.24:3-4
- ಮಲಾಕಿ.03:07
- ಮಾರ್ಕ.10:7-9
- ಮತ್ತಾಯ.01:07
- ಮತ್ತಾಯ.03:09
- ಮತ್ತಾಯ.10:21
- ಮತ್ತಾಯ.18:14
- ರೋಮಾ.04:12

ಪದ ಡೇಟಾ:

- Strong's: H1, H2, H25, H369, H539, H1121, H1730, H1733, H2524, H3205, H3490, H4940, H5971, H7223, G540, G1080, G3737, G3962, G3964, G3966, G3967, G3970, G3971, G3995, G4245, G4269, G4613

ಪೌರ, ಪೌರತ್ವ

ಪದದ ಅರ್ಥವಿವರಣೆ:

ಪೌರ ಎಂದರೆ ಒಂದು ಪಟ್ಟಣದಲ್ಲಿ, ದೇಶದಲ್ಲಿ ಅಥವಾ ರಾಜ್ಯದಲ್ಲಿ ನಿವಾಸ ಮಾಡುವ ವ್ಯಕ್ತಿಯಾಗಿರುತ್ತಾನೆ. ಆ ಸ್ಥಳದಲ್ಲಿ ಕಾನೂನುಬದ್ಧವಾಗಿ ನಿವಾಸವಾಗಿರುವ ಅಧಿಕಾರಿಕವಾಗಿ ಗುರುತಿಸಲ್ಪಟ್ಟಿರುವ ಒಬ್ಬ ವ್ಯಕ್ತಿಯನ್ನು ವಿಶೇಷವಾಗಿ ಸೂಚಿಸುತ್ತದೆ.

- ಸಂದರ್ಭಾನುಸಾರವಾಗಿ, ಈ ಪದವನ್ನು "ನಾಗರೀಕರು" ಅಥವಾ "ಅಧಿಕೃತ ನಿವಾಸಿ" ಎಂದೂ ಅನುವಾದ ಮಾಡಬಹುದು
- ಅರಸನಿಂದಾಗಲಿ, ಚಕ್ರವರ್ತಿಯಿಂದಾಗಲಿ ಅಥವಾ ಇತರ ಪಾಲಕರಿಂದಾಗಲಿ ಆಳಲ್ಪಡುತ್ತಿರುವ ಸಾಮ್ರಾಜ್ಯದಲ್ಲಿ ಅಥವಾ ದೊಡ್ಡ ರಾಜ್ಯದಲ್ಲಿ ಭಾಗವಾಗಿರುವ ಒಂದು ಸೀಮೆಯಲ್ಲಿ ಒಬ್ಬ ಪೌರನು ನಿವಾಸವಾಗಿರಬಹುದು. ಉದಾಹರಣೆಗೆ, ಪೌಲನು ಅನೇಕ ಸೀಮೆಗಳನ್ನೊಳಗೊಂಡಿರುವ ರೋಮಾ ಸಾಮ್ರಾಜ್ಯದ ಪೌರನಾಗಿದ್ದನು; ಆ ಸೀಮೆಗಳಲ್ಲಿರುವ ಒಂದು ಪ್ರಾಂತ್ಯದಲ್ಲಿ ಪೌಲನು ನಿವಾಸವಾಗಿದ್ದನು.
- ಕ್ರಿಸ್ತನನ್ನು ನಂಬಿದ ವಿಶ್ವಾಸಿಗಳೆಲ್ಲರು ಪರಲೋಕದ "ಪೌರರು" ಎಂದು ಕರೆಯಲ್ಪಟ್ಟಿದ್ದಾರೆ, ಒಂದಾನೊಂದು ದಿನ ಈ ಸ್ಥಳದಲ್ಲಿ ಅವರೆಲ್ಲರು ನಿವಾಸವಾಗುವರು. ದೇಶದ ಪೌರನ ಹಾಗೆಯೇ ಕ್ರೈಸ್ತನು ದೇವರ ರಾಜ್ಯಕ್ಕೆ ಸಂಬಂಧಪಟ್ಟವನಾಗಿರುತ್ತಾನೆ.

(ಈ ಪದಗಳನ್ನು ಸಹ ನೋಡಿರಿ : ರಾಜ್ಯ, ಪೌಲ, ಸೀಮೆ, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.21:39-40
- ಯೆಶಯಾ.03:03
- ಲೂಕ.15:15
- ಲೂಕ.19:14

ಪದ ಡೇಟಾ:

- Strong's: H6440, G4175, G4177, G4847

ಪ್ರಕಟಿಸು, ಪ್ರಕಟಿಸುವುದು, ಪ್ರಕಟಿಸಲಾಗಿದೆ, ಪ್ರಕಟಿಸಲಾಗುತ್ತಿದೆ, ಪ್ರಕಟನೆ, ಪ್ರಕಟನೆಗಳು

ಪದದ ಅರ್ಥವಿವರಣೆ:

“ಪ್ರಕಟಿಸು” ಮತ್ತು “ಪ್ರಕಟಿಸಲ್ಪಟ್ಟ” ಎನ್ನುವ ಪದಗಳು ಏನಾದರೊಂದು ವಿಷಯವನ್ನು ಅನೇಕಬಾರಿ ಒತ್ತಿ ಹೇಳುವುದಕ್ಕೆ ಬಹಿರಂಗವಾಗಿ ಅಥವಾ ಸಾಂಪ್ರದಾಯಿಕವಾಗಿ ಮಾಡುವ ವ್ಯಾಖ್ಯೆಯನ್ನು ಸೂಚಿಸುತ್ತದೆ.

- “ಪ್ರಕಟನೆ” ಎನ್ನುವುದು ಪ್ರಕಟಿಸಲ್ಪಟ್ಟಿರುವ ವಿಷಯದ ಪ್ರಾಮುಖ್ಯತೆಯನ್ನು ಒತ್ತಿ ಹೇಳುವುದು ಮಾತ್ರವಲ್ಲದೇ, ಪ್ರಕಟನೆ ಮಾಡುವ ವ್ಯಕ್ತಿಯನ್ನೂ ಸೂಚಿಸುತ್ತದೆ.
- ಉದಾಹರಣೆಗೆ, ಹಳೇ ಒಡಂಬಡಿಕೆಯಲ್ಲಿ ದೇವರಿಂದ ಬರುವ ಸಂದೇಶವು ಅನೇಕಬಾರಿ ಆ ಸಂದೇಶವು “ಯೆಹೋವನು ಇಂತೆನ್ನುತ್ತಾನೆ (ಅಥವಾ ಯೆಹೋವನು ನುಡಿದನು ಅಥವಾ ಯೆಹೋವನ ಪ್ರಕಟನೆ)” ಅಥವಾ “ಯೆಹೋವನು ಹೀಗೆ ಹೇಳುತ್ತಾನೆ” ಎನ್ನುವ ಮಾತುಗಳಿಂದ ಮುಂದುವರಿಯುತ್ತದೆ. ಯೆಹೋವನೇ ಈ ಮಾತನ್ನು ಹೇಳುತ್ತಿದ್ದಾನೆಂದು ಆತನನ್ನೇ ಈ ಮಾತುಗಳೆಲ್ಲವು ಸೂಚಿಸುತ್ತವೆ. ಯೆಹೋವನಿಂದ ಬರುವ ಸಂದೇಶವು ಎಷ್ಟು ಪ್ರಾಮುಖ್ಯವಾದದ್ದೆಂದು ತೋರಿಸುವುದೇ ಇಲ್ಲಿರುವ ಸತ್ಯಾಂಶ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ “ಪ್ರಕಟಿಸು” ಎನ್ನುವ ಪದವನ್ನು “ಸಾರಿ ಹೇಳು” ಅಥವಾ “ಬಹಿರಂಗ ತಿಳಿಸು” ಅಥವಾ “ಬಲವಾಗಿ ಹೇಳು” ಅಥವಾ “ದೃಢವಾಗಿ ತಿಳಿಸು” ಎಂದೂ ಅನುವಾದ ಮಾಡಲಾಗುತ್ತದೆ.
- “ಪ್ರಕಟನೆ” ಎನ್ನುವ ಪದವನ್ನು “ಹೇಳಿಕೆ” ಅಥವಾ “ಘೋಷಣೆ” ಎಂದೂ ಅನುವಾದ ಮಾಡಬಹುದು.
- “ಇದು ಯೆಹೋವನ ಮಾತು (ಅಥವಾ ನುಡಿ)” ಎನ್ನುವ ಮಾತನ್ನು “ಇದನ್ನೇ ಯೆಹೋವನು ಪ್ರಕಟಿಸುತ್ತಿದ್ದಾನೆ” ಅಥವಾ “ಇದೇ ಯೆಹೋವನು ಹೇಳುವ ಮಾತಾಗಿರುತ್ತದೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸಾರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.16:23-24
- 1 ಪೂರ್ವ.15:31-32
- 1 ಸಮು.24:17-18
- ಆಮೋಸ.02:15-16
- ಯೆಹೆ.05:11-12
- ಮತ್ತಾಯ.07:21-23

ಪದ ಡೇಟಾ:

- Strong's: H262, H559, H560, H816, H874, H952, H1696, H3045, H4853, H5002, H5042, H5046, H5608, H6567, H6575, H7121, H7561, H7878, H8085, G312, G394, G518, G669, G1107, G1213, G1229, G1335, G1344, G1555, G1718, G1732, G1834, G2097, G2511, G2605, G2607, G3140, G3670, G3724, G3822, G3853, G3870, G3955, G5319, G5419

ಪ್ರಚೋದಿಸು, ಪ್ರಚೋದಿಸುವುದು, ಪ್ರಚೋದಿಸಲಾಗಿದೆ

ಸತ್ಯಾಂಶಗಳು:

“ಪ್ರಚೋದಿಸು” ಎನ್ನುವ ಪದವು ನಕಾರಾತ್ಮಕವಾದ ಭಾವನೆಯನ್ನು ಅನುಭವಿಸುವುದಕ್ಕೆ ಯಾರಾದರೊಬ್ಬರನ್ನು ರೇಗಿಸುವುದು ಎಂದರ್ಥ.

- ಯಾರಾದರೊಬ್ಬರು ಕೋಪಪಡುವುದಕ್ಕೆ ಕೆಣಕುವುದು ಎಂದರೆ ಒಬ್ಬ ವ್ಯಕ್ತಿ ಕೋಪಪಡುವುದಕ್ಕೆ ಕಾರಣವಾಗುವ ವಿಷಯಗಳನ್ನು ಮಾಡುವುದು ಎಂದರ್ಥ. ಇದನ್ನು “ಕೋಪಪಡುವುದಕ್ಕೆ ಕಾರಣವಾಗುವುದು” ಅಥವಾ “ಕೋಪ ತರುವುದಕ್ಕೆ ಕಾರಣವಾಗುವುದು” ಎಂದೂ ಅನುವಾದ ಮಾಡಬಹುದು.
- “ಅವನನ್ನು ರೇಗಿಸಬೇಡ” ಎನ್ನುವ ಮಾತನ್ನು ಉಪಯೋಗಿಸಿದಾಗ, ಇದನ್ನು “ಅವನಿಗೆ ಕೋಪವನ್ನು ತರಿಸಬೇಡ” ಅಥವಾ “ಅವನು ಕೋಪಪಡುವಂತೆ ಮಾಡಬೇಡ” ಅಥವಾ “ನಿನ್ನ ವಿಷಯದಲ್ಲಿ ಅವನು ಕೋಪಪಡುವಂತೆ ಮಾಡಬೇಡ” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು:

- ಯೆಹೆ.20:27-29

ಪದ ಡೇಟಾ:

- Strong’s: H3707, H3708, H4784, H4843, H5006, H7065, H7069, H7107, H7264, G2042, G3863, G3947, G3949, G4292

ಪ್ರತಿಜ್ಞೆ, ಪ್ರತಿಜ್ಞೆ ಮಾಡಲಾಗಿದೆ

ಪದದ ಅರ್ಥವಿವರಣೆ:

“ಪ್ರತಿಜ್ಞೆ” ಎನ್ನುವ ಪದವು ಯಾವುದಾದರೊಂದನ್ನು ಕೊಡುವುದಕ್ಕೆ ಅಥವಾ ಏನಾದರೊಂದು ಮಾಡುವುದಕ್ಕೆ ಸಾಂಪ್ರದಾಯಿಕವಾಗಿ ಮತ್ತು ಗಂಭೀರವಾಗಿ ಭರವಸೆ ಕೊಡುವುದನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಇಸ್ರಾಯೇಲಿನ ಅಧಿಕಾರಿಗಳು ಅರಸನಾದ ದಾವೀದನಿಗೆ ನಂಬಿಗಸ್ತರಾಗಿರುತ್ತಾರೆಂದು ಪ್ರತಿಜ್ಞೆ ಮಾಡಿದರು.
- ಪ್ರತಿಜ್ಞೆಯಾಗಿ ಒಂದು ವಸ್ತುವು ಕೊಡಲಾಗುತ್ತಿತ್ತು, ತನ್ನ ವಾಗ್ದಾನವನ್ನು ನೆರವೇರಿಸಿದಾಗ ಆ ವಸ್ತುವನ್ನು ಹಿಂದುರಿಗಿ ಕೊಡಲಾಗುತ್ತಿತ್ತು.
- “ಪ್ರತಿಜ್ಞೆ” ಎನ್ನುವ ಪದವನ್ನು “ಸಾಂಪ್ರದಾಯಿಕವಾಗಿ ಬದ್ಧರಾಗಿರುವುದು” ಅಥವಾ “ಬಲವಾಗಿ ವಾಗ್ದಾನ ಮಾಡುವುದು” ಎಂದೂ ಅನುವಾದ ಮಾಡಬಹುದು.
- “ಪ್ರತಿಜ್ಞೆ” ಎನ್ನುವ ಪದವು ಸಾಲವನ್ನು ತೀರಿಸುವ ವಾಗ್ದಾನವಾಗಿ ಅಥವಾ ಖಾತಿರಿಯಾಗಿ ವಸ್ತುವನ್ನು ಕೊಡುವುದನ್ನು ಸೂಚಿಸುತ್ತದೆ.
- “ಪ್ರತಿಜ್ಞೆ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ, “ಗಂಭೀರವಾದ ವಾಗ್ದಾನ” ಅಥವಾ “ಸಾಂಪ್ರದಾಯಿಕವಾದ ಬದ್ಧತೆ” ಅಥವಾ “ಖಾತರಿ” ಅಥವಾ “ಔಪಚಾರಿಕವಾದ ಭರವಸೆ” ಎನ್ನುವ ಮಾತುಗಳನ್ನು ಸಂದರ್ಭಾನುಸಾರವಾಗಿ ಬಳಸಬಹುದು.

(ಈ ಪದಗಳನ್ನು ಸಹ ನೋಡಿರಿ : ವಾಗ್ದಾನ, ಪ್ರಮಾಣ ವಚನ, ಆಣೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಕೊರಿಂಥ.05:4-5
- ವಿಮೋ.22:27
- ಆದಿ.38:17-18
- ನೆಹೆ.10:28-29

ಪದ ಡೇಟಾ:

- Strong's: H781, H2254, H2258, H5667, H5671, H6148, H6161, H6162

ಪ್ರತಿಷ್ಠಿಸು, ಪ್ರತಿಷ್ಠೆ ಮಾಡುವುದು, ಪ್ರತಿಷ್ಠಿಸಲಾಗಿದೆ, ಪ್ರತಿಷ್ಠೆ

ಪದದ ಅರ್ಥವಿವರಣೆ:

ಪ್ರತಿಷ್ಠಿಸು ಎಂದರೆ ಒಂದು ವಿಶೇಷವಾದ ಕಾರ್ಯಕ್ಕಾಗಿ ಅಥವಾ ಉದ್ದೇಶಕ್ಕಾಗಿ ಪ್ರತ್ಯೇಕಪಡಿಸು ಎಂದರ್ಥ ಅಥವಾ ಸಮರ್ಪಿಸಿಕೊಳ್ಳುವುದು ಎಂದರ್ಥ.

- ದಾವೀದನು ಕರ್ತನಿಗೆ ಬೆಳ್ಳಿ ಬಂಗಾರಗಳನ್ನು ಸಮರ್ಪಿಸಿದನು.
- “ಪ್ರತಿಷ್ಠೆ” ಎನ್ನುವ ಪದವು ಅನೇಕಬಾರಿ ಒಂದು ವಿಶೇಷವಾದ ಉದ್ದೇಶಕ್ಕಾಗಿ ಏನಾದರೊಂದನ್ನು ಪ್ರತ್ಯೇಕಿಸುವ ಸಾಂಪ್ರದಾಯಿಕ ಸಮಾರಂಭವನ್ನು ಅಥವಾ ಘಟನೆಯನ್ನು ಸೂಚಿಸುತ್ತದೆ.
- ಯಜ್ಞವೇದಿ ಪ್ರತಿಷ್ಠೆಯಲ್ಲಿ ದೇವರಿಗೆ ಬಲಿಯನ್ನು ಅರ್ಪಿಸುವುದು ಒಳಗೊಂಡಿರುತ್ತದೆ.
- ಯೆಹೋವನನ್ನು ಮಾತ್ರ ಸೇವಿಸುವುದಕ್ಕೆ ಮತ್ತು ಆತನ ಪಟ್ಟಣವನ್ನು ಸಂರಕ್ಷಿಸುವುದಕ್ಕೆ ಒಂದು ವಿನೂತನವಾದ ವಾಗ್ದಾನದೊಂದಿಗೆ ಯೆರೂಸಲೇಮಿನ ಗೋಡೆಗಳನ್ನು ಪುನರ್ ನಿರ್ಮಾಣ ಮಾಡಿದನಂತರ, ಅವುಗಳನ್ನು ಪ್ರತಿಷ್ಠೆ ಮಾಡುವುದರಲ್ಲಿ ನೆಹೆಮೀಯ ಇಸ್ರಾಯೇಲ್ಯರನ್ನು ನಡೆಸಿದನು. ಈ ಸಮಾರಂಭದಲ್ಲಿ ಹಾಡುಗಳು ಹಾಡುವುದರ ಮೂಲಕ ಸಂಗೀತ ವಾದ್ಯಗಳನ್ನು ಬಾರಿಸುವುದರ ಮೂಲಕ ದೇವರಿಗೆ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುವುದು ಒಳಗೊಂಡಿರುತ್ತದೆ.
- “ಪ್ರತಿಷ್ಠಿಸು” ಎನ್ನುವ ಪದಕ್ಕೆ “ಒಂದು ವಿಶೇಷವಾದ ಉದ್ದೇಶಕ್ಕಾಗಿ ಸಮರ್ಪಿಸುವುದು” ಅಥವಾ “ವಿಶೇಷವಾದ ರೀತಿಯಲ್ಲಿ ಉಪಯೋಗಿಸಲ್ಪಡುವುದಕ್ಕೆ ಸಮರ್ಪಿಸಿಕೊಳ್ಳುವುದು” ಅಥವಾ “ಒಂದು ವಿಶೇಷವಾದ ಕೆಲಸವನ್ನು ಮಾಡುವುದಕ್ಕೆ ಯಾರಾದರೊಬ್ಬರನ್ನು ಸಮರ್ಪಿಸುವುದು” ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ಬದ್ಧನಾಗು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.15:11-12
- 1 ಪೂರ್ವ.06:9-11
- 1 ಅರಸ.07:51
- 1 ತಿಮೊಥೆ.04:3-5
- 2 ಪೂರ್ವ.02:4-5
- ಯೋಹಾನ.17:18-19
- ಲೂಕ.02:22-24

ಪದ ಡೇಟಾ:

- Strong's: H2596, H2597, H2598, H2764, H4394, H6942, H6944, G1456, G1457

ಪ್ರಥಮ ಫಲಗಳು

ಪದದ ಅರ್ಥವಿವರಣೆ:

“ಪ್ರಥಮ ಫಲಗಳು” ಎನ್ನುವ ಪದವು ಪ್ರತಿಯೊಂದು ಕೊಯ್ಲಿನ ಸಮಯದಲ್ಲಿ ಕೊಯ್ಯುವ ತರಕಾರಿ ಮತ್ತು ಮೊದಲ ಬೆಳೆಯ ಮೊದಲ ಭಾಗವನ್ನು ಸೂಚಿಸುತ್ತದೆ.

- ಇಸ್ರಾಯೇಲ್ಯರು ಈ ಪ್ರಥಮ ಫಲಗಳನ್ನು ದೇವರಿಗೆ ಸಮಾಧಾನ ಯಜ್ಞವನ್ನಾಗಿ ಅರ್ಪಿಸುತ್ತಿದ್ದರು.
- ಕುಟುಂಬದಲ್ಲಿ ಪ್ರಥಮ ಫಲವಾಗಿ ಹುಟ್ಟುವ ಚೊಚ್ಚಲ ಮಗನನ್ನು ಸೂಚಿಸುವುದಕ್ಕೆ ಈ ಪದವನ್ನು ಅಲಂಕಾರಿಕವಾಗಿಯೂ ಸತ್ಯವೇದದಲ್ಲಿ ಉಪಯೋಗಿಸಿದ್ದಾರೆ. ಆ ಕಾರಣದಿಂದ ಇವನು ಕುಟುಂಬದಲ್ಲಿ ಹುಟ್ಟುವ ಮೊದಲ ಮಗನಾಗಿರುತ್ತಾನೆ, ಇವನೇ ಕುಟುಂಬದ ಹೆಸರನ್ನು ಮತ್ತು ಗೌರವವನ್ನು ಕಾಪಾಡಬೇಕು.
- ಆದ್ದರಿಂದ ಯೇಸು ಮರಣದಿಂದ ಎದ್ದು ಬಂದನು, ಆತನಲ್ಲಿ ನಂಬಿಕೆಯಿಟ್ಟ ವಿಶ್ವಾಸಗಳೆಲ್ಲರಲ್ಲಿ “ಪ್ರಥಮ ಫಲ” ಎಂದು ಆತನು ಕರೆಯಲ್ಪಟ್ಟಿದ್ದನು, ಮರಣ ಹೊಂದಿದ ವಿಶ್ವಾಸಿಗಳೆಲ್ಲರು ಒಂದಾನೊಂದು ದಿನ ಜೀವಂತವಾಗಿ ಎಬ್ಬಿಸಲ್ಪಡುತ್ತಾರೆ.
- ಯೇಸುವಿನಲ್ಲಿರುವ ವಿಶ್ವಾಸಿಗಳು ಕೂಡ ಸೃಷ್ಟಿಯಲ್ಲೆಲ್ಲಾ “ಪ್ರಥಮ ಫಲಗಳು” ಎಂದು ಕರೆಯಲ್ಪಟ್ಟಿದ್ದಾರೆ, ಯೇಸು ವಿಮೋಚಿಸಿದವರ ಸ್ಥಾನವು ಮತ್ತು ವಿಶೇಷವಾದ ಹಕ್ಕನ್ನು ಸೂಚಿಸುತ್ತದೆ, ಅಷ್ಟೇ ಅಲ್ಲದೆ ಅವರೆಲ್ಲರು ಆತನ ಪ್ರಜೆಯಾಗಿ ಕರೆಯಲ್ಪಟ್ಟರು.

ಅನುವಾದ ಸಲಹೆಗಳು:

- ಈ ಪದಕ್ಕೆ ಅಕ್ಷರಾರ್ಥವಾದ ಅನುವಾದವು “(ಬೆಳೆಗಳ) ಪ್ರಥಮ ಭಾಗ” ಅಥವಾ “ಕೊಯ್ಲಿನಲ್ಲಿ ಮೊದಲ ಭಾಗ” ಎಂದು ಮಾಡಬಹುದು.
- ಸಾಧ್ಯವಾದರೆ, ಅಲಂಕಾರಿಕ ವಿಧಾನದಲ್ಲಿ ಉಪಯೋಗಿಸುವಾಗ ಈ ಪದವನ್ನು ವಿವಿಧವಾದ ಸಂದರ್ಭಗಳಲ್ಲಿ ವಿವಿಧವಾದ ಅರ್ಥಗಳು ಬರುವಂತೆ ಅಕ್ಷರಾರ್ಥವಾಗಿ ಅನುವಾದ ಮಾಡಬಹುದು. ಈ ಪದವು ಅಕ್ಷರಾರ್ಥ ಅರ್ಥಕ್ಕೂ ಮತ್ತು ಅಲಂಕಾರಿಕ ಉಪಯೋಗಗಳಿಗೂ ಪರಸ್ಪರ ಸಂಬಂಧವನ್ನು ಕೂಡ ತೋರಿಸುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಚೊಚ್ಚಲು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.31:4-5
- 2 ಥೆಸ್ಸ.02:13-15
- ವಿಮೋ.23:16-17
- ಯಾಕೋಬ.01:17-18
- ಯೆರೆ.02:1-3
- ಕೀರ್ತನೆ.105:34-36

ಪದ ಡೇಟಾ:

- Strong's: H1061, H6529, H7225, G536

ಪ್ರಧಾನ ಯಾಜಕರು

ಪದದ ಅರ್ಥವಿವರಣೆ:

ಯೇಸು ಈ ಭೂಮಿಯ ಮೇಲೆ ಜೀವಿಸುವ ದಿನಗಳಲ್ಲಿ ಪ್ರಧಾನ ಯಾಜಕರು ತುಂಬಾ ಪ್ರಾಮುಖ್ಯವಾದ ಯೆಹೂದ್ಯ ಧರ್ಮದ ನಾಯಕರಾಗಿರುತ್ತಾರೆ.

- ಪ್ರಧಾನ ಯಾಜಕರು ದೇವಾಲಯದಲ್ಲಿ ನಡೆಯುವ ಪ್ರತಿಯೊಂದು ಆರಾಧನೆ ಸೇವೆಗಾಗಿ ಬೇಕಾಗುವ ಪ್ರತಿಯೊಂದಕ್ಕೂ ಬಾಧ್ಯರಾಗಿರುತ್ತಾರೆ. ದೇವಾಲಯದಲ್ಲಿ ಕೊಡುವ ಹಣಕ್ಕೂ ಅವರೇ ಬಾಧ್ಯರಾಗಿರುತ್ತಾರೆ.
- ಅವರು ಸಾಧಾರಣ ಯಾಜಕರಿಗಿಂತ ಹೆಚ್ಚಾದ ಶಕ್ತಿಯನ್ನು ಮತ್ತು ದರ್ಜೆಯನ್ನು ಹೊಂದಿರುತ್ತಾರೆ. ಪ್ರಧಾನ ಯಾಜಕರು ಮಾತ್ರವೇ ಹೆಚ್ಚಾದ ಅಧಿಕಾರವನ್ನು ಹೊಂದಿರುತ್ತಾರೆ.
- ಪ್ರಧಾನ ಯಾಜಕರಲ್ಲಿ ಕೆಲವರು ಯೇಸುವಿನ ಮುಖ್ಯ ಶತ್ರುಗಳಾಗಿದ್ದರು ಮತ್ತು ಅವರು ಆತನನ್ನು ಬಂಧಿಸಿ, ಕೊಂದು ಹಾಕುವುದಕ್ಕೆ ರೋಮಾ ನಾಯಕರನ್ನು ತುಂಬಾ ಹೆಚ್ಚಾಗಿ ಪ್ರಭಾವಕ್ಕೊಳಗಾಗಿಸಿದ್ದರು.

ಅನುವಾದ ಸಲಹೆಗಳು:

- “ಪ್ರಧಾನ ಯಾಜಕರು” ಎನ್ನುವ ಪದವುನ್ನು “ಮುಖ್ಯ ಯಾಜಕರು” ಅಥವಾ “ಪ್ರಮುಖ ಯಾಜಕರು” ಅಥವಾ “ಪಾಲಿಸುವ ಯಾಜಕರು” ಎಂದೂ ಅನುವಾದ ಮಾಡಬಹುದು.
- ಈ ಪದವನ್ನು “ಮಹಾ ಯಾಜಕ” ಎನ್ನುವ ಪದಕ್ಕೆ ಭಿನ್ನದಾಗಿರುವಂತೆ ಅಥವಾ ಅನುವಾದ ಮಾಡುವಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಮುಖ್ಯಸ್ಥ, ಮಹಾ ಯಾಜಕ, ಯೆಹೂದ್ಯ ನಾಯಕರು, ಯಾಜಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.09:13-16
- ಅಪೊ.ಕೃತ್ಯ.22:30
- ಅಪೊ.ಕೃತ್ಯ.26:12-14
- ಲೂಕ.20:1-2
- ಮಾರ್ಕ.08:31-32
- ಮತ್ತಾಯ.16:21-23
- ಮತ್ತಾಯ.26:3-5
- ಮತ್ತಾಯ.26:59-61
- ಮತ್ತಾಯ.27:41-42

ಪದ ಡೇಟಾ:

- Strong's: H3548, H7218, G749

ಪ್ರಳಯ, ಪ್ರಳಯಗಳು, ಪ್ರಳಯ ಬಂದಿದೆ, ಪ್ರಳಯವಾಗುತ್ತಿದೆ, ಪ್ರಳಯದ ನಿರು

ಪದದ ಅರ್ಥವಿವರಣೆ:

"ಪ್ರಳಯ" ಎನ್ನುವ ಪದವು ಅಕ್ಷರಾರ್ಥವಾಗಿ ಭೂಮಿಯಲ್ಲೆಲ್ಲಾ ಸಂಪೂರ್ಣವಾಗಿ ಹರಡಿರುವ ಅತೀ ಹೆಚ್ಚಾದ ನೀರನ್ನು ಸೂಚಿಸುತ್ತದೆ.

- ಈ ಪದವನ್ನು ಎನಾದರೊಂದರ ಕುರಿತಾಗಿ ತಡೆಯಲಾರದ ಸ್ಥಿತಿಯನ್ನು ಸೂಚಿಸುತ್ತದೆ, ವಿಶೇಷವಾಗಿ ಏನಾದರೂ ಆಕಸ್ಮಿಕವಾಗಿ ನಡೆಯುವುದನ್ನು ಸೂಚಿಸುತ್ತದೆ.
- ನೋಹನ ಸಮಯದಲ್ಲಿ ಜನರೆಲ್ಲರೂ ದುಷ್ಟರಾದರು, ಇದರಿಂದ ದೇವರು ಭೂಮಿಯಲ್ಲೆಲ್ಲಾ ಮತ್ತು ಪರ್ವತಗಳನ್ನು ಮುಚ್ಚಿ ಹೋಗುವಷ್ಟು ನೀರು ಬರುವಂತೆ ಮಾಡಿದರು. ನೋಹನೊಂದಿಗೆ ನಾವೆಯಲ್ಲಿರದ ಪ್ರತಿಯೊಬ್ಬರು ಆ ನೀರಿನೊಳಗೆ ಮುಳುಗಿ ಸತ್ತರು. ಬೇರೆ ಪ್ರಳಯಗಳು ಕೇವಲ ಒಂದು ಚಿಕ್ಕ ಪ್ರಾಂತ್ಯವನ್ನು ಮಾತ್ರ ಮುಚ್ಚುತ್ತವೆ.
- ಈ ಪದಕ್ಕೆ ಕ್ರಿಯೆಯು ಇದೆ, "ನದಿಯ ನೀರಿನಿಂದ ಭೂಮಿಯೆಲ್ಲಾ ಪ್ರವಾಹಕ್ಕೆ ಒಳಗಾಯಿತು" ಎಂದು ಗಮನಿಸಬಹುದು.

ಅನುವಾದ ಸಲಹೆಗಳು:

- "ಪ್ರಳಯ" ಎನ್ನುವ ಈ ಪದವನ್ನು ಅಕ್ಷರಾರ್ಥವಾಗಿ ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ತಡೆಯಲಾರದ ನೀರು" ಅಥವಾ "ಹೆಚ್ಚಿನ ಪ್ರಮಾಣದಲ್ಲಿರುವ ನೀರು" ಎನ್ನುವ ಮಾತುಗಳನ್ನು ಉಪಯೋಗಿಸಬಹುದು.
- "ಪ್ರಳಯದಂತೆ" ಎನ್ನುವ ಅಲಂಕಾರಿಕ ಹೋಲಿಕೆಗೆ ಬಂದಾಗ ಆ ಪದವನ್ನು ಹಾಗೆಯೇ ಇರಿಸಿರಿ, ಅಥವಾ ನದಿಯಂತೆ ಪ್ರವಾಹ ಎನ್ನುವ ಅಂಶವನ್ನು ಸೂಚಿಸುವ ಪದಗಳನ್ನು ಆ ಪದಕ್ಕೆ ಬದಲಾಗಿ ಉಪಯೋಗಿಸಬಹುದು.
- "ಪ್ರಳಯದ ನೀರಿನಂತೆ" ಎನ್ನುವ ಮಾತಿಗೆ ಅಂದರೆ ಈ ಮಾತಿನಲ್ಲಿ ನೀರು ಎನ್ನುವ ಪದವನ್ನು ಉಪಯೋಗಿಸಿದ ಮಾತಿಗಾಗಿ, "ಪ್ರಳಯ" ಎನ್ನುವ ಪದವನ್ನು "ಪ್ರಬಲವಾಗಿರುವ" ಅಥವಾ "ತಡೆಯಲಾರದ" ಎಂದೂ ಅನುವಾದ ಮಾಡಬಹುದು.
- "ನನ್ನ ಮೇಲೆ ಪ್ರಳಯದ ಹಾಗೆ ಹೊಡೆದುಕೊಂಡು ಹೋಗಬೇಡ" ಎಂದು ಈ ಪದವನ್ನು ರೂಪಕಲಂಕಾರ ಪದವನ್ನಾಗಿಯೂ ಉಪಯೋಗಿಸಬಹುದು, ಇದಕ್ಕೆ "ಈ ತಡೆಯಲಾರದ ವಿಪತ್ತು ನನಗೆ ಸಂಭವಿಸುವಂತೆ ಮಾಡಬೇಡ" ಅಥವಾ "ವಿಪತ್ತುಗಳಿಂದ ನನ್ನನ್ನು ನಾಶಗೊಳಿಸಬೇಡ" ಅಥವಾ "ನಿನ್ನ ಕೋಪದಿಂದ ನನ್ನನ್ನು ಕೆಡಿಸಬೇಡ" ಎಂದರ್ಥ. (ನೋಡಿರಿ: ರೂಪಕಲಂಕಾರ)
- "ನನ್ನ ಮಂಚವು ಕಣ್ಣೀರಿನಿಂದ ತೇಲಾಡುಟ್ಟಿದೆ" ಎನ್ನುವ ಅಲಂಕಾರಿಕ ಮಾತನ್ನು "ಪ್ರಳಯದಂತೆ ನನ್ನ ಕಣ್ಣೀರಿನಿಂದ ನನ್ನ ಮಂಚವು ತೇಲುತ್ತಿದೆ" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಾವೆ, ನೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.11:10
- ಆದಿ.07:6-7
- ಲೂಕ.06:46-48
- ಮತ್ತಾಯ.07:24-25
- ಮತ್ತಾಯ.07:26-27
- ಮತ್ತಾಯ.24:37-39

ಪದ ಡೇಟಾ:

- Strong's: H216, H2229, H2230, H2975, H3999, H5104, H5140, H5158, H5674, H6556, H7641, H7857, H7858, H8241, G2627, G4132, G4215, G4216

ಪ್ರಸವ ವೇದನೆ, ಪ್ರಸವ ವೇದನೆಯಲ್ಲಿ, ಪ್ರಸವ ವೇದನೆಗಳು

ಪದದ ಅರ್ಥವಿವರಣೆ:

“ಪ್ರಸವ ವೇದನೆಯಲ್ಲಿರುವ” ಒಬ್ಬ ಸ್ತ್ರೀಯಳು ತನ್ನ ಮಗುವಿಗೆ ಜನನವನ್ನು ಕೊಡುವುದಕ್ಕೆ ಅನುಭವಿಸುವ ನೋವುಗಳನ್ನು ಅನುಭವಿಸುವಳು. ಅವುಗಳನ್ನೇ “ಪ್ರಸವ ವೇದನೆಗಳು” ಎಂದು ಕರೆಯುತ್ತಾರೆ.

- ಅಪೊಸ್ತಲನಾದ ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಈ ಪದವನ್ನು ಅಲಂಕಾರಿಕವಾಗಿ ಉಪಯೋಗಿಸಿದ್ದಾರೆ, ಇದನ್ನು ತನ್ನ ಸಹ ವಿಶ್ವಾಸಿಗಳೆಲ್ಲರು ಇನ್ನೂ ಹೆಚ್ಚಚ್ಚಾಗಿ ಕ್ರಿಸ್ತನಲ್ಲಿ ಸ್ವಾರೂಪ್ಯದಲ್ಲಿ ಬರಲು ಸಹಾಯ ಮಾಡುವುದಕ್ಕೆ ತನ್ನ ತವಕದ ಉದ್ದೇಶವನ್ನು ವಿವರಿಸುತ್ತದೆ.
- ಅಂತ್ಯ ದಿನಗಳಲ್ಲಿ ವಿಪತ್ತುಗಳು ಯಾವರೀತಿ ಪರಿಸ್ಥಿತಿಗಳನ್ನು ಹೆಚ್ಚು ಮಾಡುತ್ತಾ ಹೋಗುತ್ತವೆ ಎನ್ನುವದನ್ನು ವಿವರಿಸುವುದಕ್ಕೆ ಸತ್ಯವೇದದಲ್ಲಿ ಪ್ರಸವ ವೇದನೆಯ ಪದ್ಧತಿಯನ್ನು ಉಪಯೋಗಿಸಲಾಗಿದೆ.

(ಈ ಪದಗಳನ್ನು ಸಹ ನೋಡಿರಿ : ಶ್ರಮೆ, ಅಂತ್ಯ ದಿನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.04:19-20
- ಗಲಾತ್ಯ.04:19-20
- ಯೆಶಯಾ.13:6-8
- ಯೆರೆ.13:20-21
- ಕೀರ್ತನೆ.048:4-6
- ರೋಮಾ.08:20-22

ಪದ ಡೇಟಾ:

- Strong's: H2342, H2470, H3018, H3205, H5999, H6045, H6887, H8513, G3449, G4944, G5088, G5604, G5605

ಪ್ರಸಿದ್ಧ, ಪ್ರಸಿದ್ಧಗೊಳಿಸುವುದು, ಪ್ರಸಿದ್ಧನಾದವನು, ಪ್ರಸಿದ್ಧ ಹೊಂದಿದವರು

ಪದದ ಅರ್ಥವಿವರಣೆ:

“ಪ್ರಸಿದ್ಧ” ಎನ್ನುವ ಪದವು ಅತ್ಯುತ್ತಮ ಮತ್ತು ಉತ್ತಮ ಉನ್ನತ ಗುಣಮಟ್ಟವನ್ನು ಹೊಂದಿದ ಯಾವುದಾದರೊಂದನ್ನು ಸೂಚಿಸುತ್ತದೆ.
“ಪ್ರಸಿದ್ಧನಾದವನು” ಎನ್ನುವುದು ಉನ್ನತವಾದ ರಾಜಕೀಯ ಅಥವಾ ಸಾಮಾಜಿಕ ತರಗತಿಗೆ ಸಂಬಂಧಪಟ್ಟ ವ್ಯಕ್ತಿಯಾಗಿರುತ್ತಾನೆ. “ಪ್ರಸಿದ್ಧ ಜನನದ” ಮನುಷ್ಯ ಎನ್ನುವ ಮಾತು ಪ್ರಸಿದ್ಧನಾಗಿರುವ ವ್ಯಕ್ತಿಗೆ ಹುಟ್ಟಿದವನನ್ನು ಸೂಚಿಸುತ್ತದೆ.

- ಪ್ರಸಿದ್ಧನಾಗಿರುವ ವ್ಯಕ್ತಿ ಅನೇಕಬಾರಿ ರಾಜ್ಯದ ಅಧಿಕಾರಿಯಾಗಿರುತ್ತಾನೆ, ಅರಸನಿಗೆ ತುಂಬಾ ಹತ್ತಿರವಾದ ದಾಸನಾಗಿರುತ್ತಾನೆ.
- “ಪ್ರಸಿದ್ಧನಾಗಿರುವವನು” ಎನ್ನುವ ಮಾತನ್ನು “ಅರಸನ ಅಧಿಕಾರಿ” ಅಥವಾ “ಸರ್ಕಾರದ ಅಧಿಕಾರಿ” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.23:20-21
- ದಾನಿ.04:36-37
- ಪ್ರಸಂಗಿ.10:16-17
- ಲೂಕ.19:11-12
- ಕೀರ್ತನೆ.016:1-3

ಪದ ಡೇಟಾ:

- Strong's: H117, H678, H1281, H1419, H2715, H3358, H3513, H5057, H5081, H6440, H6579, H7336, H7261, H8282, H8269, H8321, G937, G2104, G2903

ಪ್ರಸಿದ್ಧ, ಪ್ರಸಿದ್ಧರಾಗಿರುವ

ಪದದ ಅರ್ಥವಿವರಣೆ:

“ಪ್ರಸಿದ್ಧ” ಎನ್ನುವ ಪದವು ಖ್ಯಾತಿ ಹೊಂದಿದ ಶ್ರೇಷ್ಠತೆಯು ಮತ್ತು ಪ್ರಶಂಶ ಅರ್ಹ ಖ್ಯಾತಿಯನ್ನು ಸೂಚಿಸುತ್ತದೆ. ಯಾವುದೇ ಅಥವಾ ಯಾರೇ ಪ್ರಸಿದ್ಧವನ್ನು ಹೊಂದಿದ್ದರೆ, ಅದನ್ನು ಅಥವಾ ಅವರನ್ನು “ಪ್ರಸಿದ್ಧರಾಗಿರುವ” ಎಂದೂ ಕರೆಯುತ್ತಾರ.

- ಒಬ್ಬ ವ್ಯಕ್ತಿ “ಪ್ರಸಿದ್ಧನಾಗಿದ್ದಾನೆ” ಎಂದರೆ ಖ್ಯಾತಿಯನ್ನು ಮತ್ತು ಉನ್ನತ ಗೌರವವನ್ನು ಪಡೆದ ವ್ಯಕ್ತಿಯನ್ನು ಸೂಚಿಸುತ್ತದೆ.
- “ಪ್ರಸಿದ್ಧ” ಎನ್ನುವುದು ವಿಶೇಷವಾಗಿ ದೀರ್ಘ ಕಾಲದವರೆಗೂ ತಿಳಿದಿರುವ ಒಳ್ಳೇಯ ಹೆಸರುವಾಸಿಯನ್ನು ಸೂಚಿಸುತ್ತದೆ.
- “ಪ್ರಸಿದ್ಧ ಹೊಂದಿದ” ಪಟ್ಟಣ ಎನ್ನವುದು ಅನೇಕಬಾರಿ ಅದರ ಸಂಪತ್ತಿಗೂ ಮತ್ತು ಅಭಿವೃದ್ಧಿಗೂ ಹೆಸರುವಾಸಿಯಾಗಿರುತ್ತದೆ.

ಅನುವಾದ ಸಲಹೆಗಳು:

- “ಪ್ರಸಿದ್ಧ” ಎನ್ನುವ ಪದವನ್ನು “ಖ್ಯಾತಿ” ಅಥವಾ “ಗೌರವವುಳ್ಳ ಖ್ಯಾತಿ” ಅಥವಾ “ಅನೇಕ ಜನರ ಮೂಲಕ ಚೆನ್ನಾಗಿ ಗೊತ್ತಿರುವ ಶ್ರೇಷ್ಠತೆ” ಎಂದೂ ಅನುವಾದ ಮಾಡಬಹುದು.
- “ಪ್ರಸಿದ್ಧ ಹೊಂದಿದ” ಎನ್ನುವ ಮಾತನ್ನು “ಚೆನ್ನಾಗಿ ಗೊತ್ತಿರುವ ಮತ್ತು ಉನ್ನತವಾದ ಗೌರವ ಹೊಂದಿರುವ” ಅಥವಾ “ಅತ್ಯುತ್ತಮ ಖ್ಯಾತಿ” ಎಂದೂ ಅನುವಾದ ಮಾಡಬಹುದು.
- “ಕರ್ತನ ಹೆಸರು ಇಸ್ರಾಯೇಲಿನಲ್ಲಿ ಪ್ರಸಿದ್ಧವಾಗಬೇಕು” ಎನ್ನುವ ಮಾತನ್ನು “ಕರ್ತನ ನಾಮವು ಎಲ್ಲರಿಗೆ ಚೆನ್ನಾಗಿ ಗೊತ್ತಿರಬೇಕು ಮತ್ತು ಇಸ್ರಾಯೇಲ್ ಜನರಿಂದ ಗೌರವಿಸಲ್ಪಡಬೇಕು” ಎಂದೂ ಅನುವಾದ ಮಾಡಬಹುದು.
- “ಪ್ರಸಿದ್ಧ ಹೊಂದಿದ ಮನುಷ್ಯರು” ಎನ್ನುವ ಮಾತನ್ನು “ಮನುಷ್ಯರ ಧೈರ್ಯವು ಎಲ್ಲರಿಗೆ ಚೆನ್ನಾಗಿ ಗೊತ್ತಿರುತ್ತದೆ” ಅಥವಾ “ಪ್ರಖ್ಯಾತಿ ಹೊಂದಿದ ಯೋಧರು” ಅಥವಾ “ಬಹು ಉನ್ನತವಾದ ಗೌರವವನ್ನು ಪಡೆದ ಮನುಷ್ಯರು” ಎಂದೂ ಅನುವಾದ ಮಾಡಬಹುದು.

“ನಿನ್ನ ಪ್ರಸಿದ್ಧವು ಎಲ್ಲಾ ತಲೆಮಾರಿನವರೆಗೂ ಇರುತ್ತದೆ” ಎನ್ನುವ ಮಾತನ್ನು “ವರ್ಷಗಳ ಪೂರ್ತಿ ಜನರು ನಿನ್ನ ಶ್ರೇಷ್ಠತೆಯ ಕುರಿತಾಗಿಯೇ ಕೇಳುತ್ತಾ ಇರುವರು” ಅಥವಾ “ನಿನ್ನ ಶ್ರೇಷ್ಠತೆಯು ಕಾಣಿಸಿಕೊಂಡಿದೆ ಮಾತು ಪ್ರತಿಯೊಂದು ತಲೆಮಾರಿನವರಲ್ಲಿರುವ ಜನರಿಂದ ಕೇಳಿಸಲ್ಪಡುತ್ತದೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಘನಪಡಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.06:4
- ಕೀರ್ತನೆ.135:12-14

ಪದ ಡೇಟಾ:

- Strong's: H1984, H7121, H8034

ಪ್ರಿಯ, ಪ್ರಿಯರು

ಪದದ ಅರ್ಥವಿವರಣೆ:

“ಪ್ರಿಯ” ಎನ್ನುವ ಪದವು ಅಕ್ಷರಾರ್ಥವಾಗಿ “ಪ್ರೀತಿಸುವ ಒಬ್ಬ ವ್ಯಕ್ತಿ” ಎಂದು ವಿವರಿಸಲ್ಪಡುತ್ತದೆ. ಸಾಧಾರಣವಾಗಿ ಈ ಪದವು ಇಬ್ಬರು ವ್ಯಕ್ತಿಗಳು ಒಬ್ಬರಿಗೊಬ್ಬರು ಲೈಂಗಿಕವಾದ ಸಂಬಂಧದಲ್ಲಿರುವುದನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ ಉಪಯೋಗಿಸಲ್ಪಟ್ಟಿರುವ “ಪ್ರಿಯ” ಎನ್ನುವ ಪದವು ಸಾಧಾರಣವಾಗಿ ವಿವಾಹ ಮಾಡಿಕೊಳ್ಳದ ಒಬ್ಬ ಪುರುಷನು ಅಥವಾ ಒಬ್ಬ ಸ್ತ್ರೀಯಳೊಂದಿಗೆ ಲೈಂಗಿಕವಾದ ಸಂಬಂಧದಲ್ಲಿರುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.
- ಇಸ್ರಾಯೇಲ್ಯರು ವಿಗ್ರಹಗಳನ್ನು ಆರಾಧಿಸಿ, ದೇವರಿಗೆ ಅವಿಧೇಯರಾಗಿರುವ ಸ್ಥಿತಿಯನ್ನು ಸೂಚಿಸುವುದಕ್ಕೆ ಸತ್ಯವೇದದಲ್ಲಿ ಅನೇಕಬಾರಿ ಈ ತಪ್ಪು ಲೈಂಗಿಕ ಸಂಬಂಧವು ಉಪಯೋಗಿಸಲ್ಪಟ್ಟಿರುತ್ತದೆ. ಇಸ್ರಾಯೇಲ್ ಜನರು ಆರಾಧನೆ ಮಾಡಿದ ವಿಗ್ರಹಗಳನ್ನು ಸೂಚಿಸುವುದಕ್ಕೆ ಅಲಂಕಾರಿಕ ವಿಧಾನದಲ್ಲಿ “ಪ್ರಿಯರು” ಎನ್ನುವ ಬಹುವಚನ ಪದವು ಕೂಡ ಉಪಯೋಗಿಸಲ್ಪಟ್ಟಿರುತ್ತದೆ. ಈ ಎಲ್ಲಾ ಸಂದರ್ಭಗಳಲ್ಲಿ ಈ ಪದವನ್ನು “ಅನೈತಿಕವಾದ ಪಾಲುದಾರರು” ಅಥವಾ “ವ್ಯಭಿಚಾರದಲ್ಲಿ ಪಾಲುದಾರರು” ಅಥವಾ “ವಿಗ್ರಹಗಳು” ಎನ್ನುವ ಮಾತುಗಳ ಮೂಲಕ ಅನುವಾದ ಮಾಡಬಹುದು. (ನೋಡಿರಿ ಅಲಂಕಾರಿಕ ಮಾತುಗಳು).
- ಹಣದ “ಪ್ರಿಯ” ಎನ್ನುವ ಮಾತು ಹಣವನ್ನು ಸಂಪಾದನೆ ಮಾಡುವುದಕ್ಕೆ ಹೆಚ್ಚಾದ ಪ್ರಾಮುಖ್ಯತೆಯನ್ನು ಕೊಟ್ಟು, ಶ್ರೀಮಂತನಾಗುವುದಕ್ಕೆ ಬಯಸುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.
- ಹಳೇ ಒಡಂಬಡಿಕೆಯ ಪುಸ್ತಕವಾಗಿರುವ ಪರಮಗೀತೆಯಲ್ಲಿ ಉಪಯೋಗಿಸಲ್ಪಟ್ಟಿರುವ “ಪ್ರಿಯ” ಎನ್ನುವ ಪದವು ಒಳ್ಳೇಯ ಅರ್ಥ ಬರುವ ವಿಧಾನದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ವ್ಯಭಿಚಾರ, ಸುಳ್ಳು ದೇವರು, ಸುಳ್ಳು ದೇವರು, ಪ್ರೀತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಹೋಶೆಯ.02:4-5
- ಯೆರೆ.03:1-2
- ವಿಲಾಪ.01:1-2
- ಲೂಕ.16:14-15

ಪದ ಡೇಟಾ:

- Strong's: H157, H158, H868, H5689, H7453, H8566, G865, G866, G5358, G5366, G5367, G5369, G5377, G5381, G5382

ಫಲ, ಫಲಭರಿತ, ನಿಷ್ಫಲ

ಪದದ ಅರ್ಥವಿವರಣೆ:

"ಫಲ" ಎನ್ನುವ ಪದಕ್ಕೆ ತಿನ್ನುವುದಕ್ಕಾಗುವ ರೀತಿಯಲ್ಲಿರುವ ಮರದಲ್ಲಿ ಒಂದು ಭಾಗವನ್ನು ಸೂಚಿಸುತ್ತದೆ. "ಫಲಭರಿತ" ವಾಗಿರುವುದು ಅನೇಕ ಫಲಗಳನ್ನು ಒಳಗೊಂಡಿರುತ್ತದೆ. ಈ ಪದಗಳನ್ನು ಕೂಡ ಸತ್ಯವೇದದಲ್ಲಿ ಅಲಂಕಾರಿಕ ಭಾಷೆಯಲ್ಲಿ ಉಪಯೋಗಿಸಲ್ಪಟ್ಟಿರುತ್ತವೆ.

- "ಫಲ" ಎನ್ನುವ ಪದವನ್ನು ಒಬ್ಬ ವ್ಯಕ್ತಿಯ ಕ್ರಿಯೆಗಳನ್ನು ಸೂಚಿಸುವುದಕ್ಕೆ ಸತ್ಯವೇದದಲ್ಲಿ ಅನೇಕಸಲ ಉಪಯೋಗಿಸಲಾಗಿರುತ್ತದೆ. ಮರದ ಮೇಲಿರುವ ಫಲವು ಆ ಮರ ಯಾವುದೆಂದು ತೋರಿಸುವ ಹಾಗೆಯೇ ಒಬ್ಬ ವ್ಯಕ್ತಿಯ ಮಾತುಗಳು ಮತ್ತು ಕ್ರಿಯೆಗಳು ತನ್ನ ನಡೆತೆಯನ್ನು ತೋರಿಸುತ್ತವೆ.
- ಒಬ್ಬ ವ್ಯಕ್ತಿ ಒಳ್ಳೇಯ ಅಥವಾ ಕೆಟ್ಟ ಆತ್ಮೀಯ ಫಲವನ್ನುಂಟು ಮಾಡಬಹುದು, ಆದರೆ "ಫಲಭರಿತ" ಎನ್ನುವ ಪದವು ಯಾವಾಗಲೂ ಒಳ್ಳೇಯದಾಗಿ ಫಲಿಸುವ ಹೆಚ್ಚಿನ ಫಲವನ್ನು ಕೊಡುವ ಅನುಕೂಲವಾದ ಅರ್ಥವನ್ನೇ ಹೊಂದಿರುತ್ತದೆ.
- "ಫಲಭರಿತ" ಎನ್ನುವ ಪದವು "ಸಮೃದ್ಧಿ" ಎನ್ನುವ ಅರ್ಥವನ್ನು ಕೊಡಲು ಅಲಂಕಾರಿಕ ಭಾಷೆಯಲ್ಲಿ ಉಪಯೋಗಿಸಿರುತ್ತಾರೆ. ಇದು ಅನೇಕ ಸಲ ಅನೇಕ ಮಂದಿ ಮಕ್ಕಳಿರುವುದನ್ನು ಮತ್ತು ಸಂತಾನವಿರುವುದನ್ನು ಸೂಚಿಸುತ್ತದೆ, ಅದೇ ರೀತಿಯಾಗಿ ಅಧಿಕ ಸಂಪತ್ತು ಮತ್ತು ಸಾಕಷ್ಟು ಆಹಾರ ಇರುವುದನ್ನೂ ಸೂಚಿಸುತ್ತದೆ.
- ಸಾಧಾರಣವಾಗಿ "ಇದರ ಫಲ" ಎನ್ನುವ ಮಾತು ಬೇರೆ ಕಡೆಯಿಂದ ಬರುವ ಯಾವುದಾದರೊಂದನ್ನು ಅಥವಾ ಬೇರೆ ಯಾವುದಾದರಿಂದ ಉತ್ಪತ್ತಿಯಾಗುವುದನ್ನು ಸೂಚಿಸುತ್ತದೆ. ಉದಾಹರಣೆಗೆ, "ಜ್ಞಾನದ ಫಲ" ಎನ್ನುವ ಮಾತು ಜ್ಞಾನ ಹೊಂದಿರುವುದರಿಂದ ಬರುವ ಒಳ್ಳೇಯ ವಿಷಯಗಳನ್ನು ಸೂಚಿಸುತ್ತದೆ.
- '"ಭೂಮಿಯ ಫಲ" ಎನ್ನುವ ಮಾತು ಸಾಧಾರಣವಾಗಿ ತಿನ್ನುವದಕ್ಕೆ ಜನರಿಗೆ ಆಹಾರವನ್ನು ಕೊಡುವ ಪ್ರತಿಯೊಂದು ಭೂಮಿಯನ್ನು ಸೂಚಿಸುತ್ತದೆ. ಇದರಲ್ಲಿ ದ್ರಾಕ್ಷಿ ಅಥವಾ ಖರ್ಜೂರ ಹಣ್ಣುಗಳು ಮಾತ್ರವಲ್ಲದೆ, ತರಕಾರಿ, ಬೀಜಗಳು ಮತ್ತು ಧಾನ್ಯಗಳು ಕೂಡ ಒಳಗೊಂಡಿರುತ್ತವೆ.
- "ಆತ್ಮ ಫಲ" ಎನ್ನುವ ಅಲಂಕಾರಿಕ ಮಾತು ಪವಿತ್ರಾತ್ಮನಿಗೆ ವಿಧೇಯತೆ ತೋರಿಸುವ ಜನರಲ್ಲಿ ಆತನು ಹುಟ್ಟಿಸುವ ದೈವಿಕವಾದ ಗುಣಲಕ್ಷಣಗಳನ್ನು ಸೂಚಿಸುತ್ತದೆ.
- "ಗರ್ಭ ಫಲ" ಎನ್ನುವ ಮಾತು "ಗರ್ಭ ಹುಟ್ಟಿಸುವುದನ್ನು" ಅಂದರೆ ಮಕ್ಕಳನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಹಣ್ಣಿನ ಮರದಿಂದ ತಿನ್ನುವುದಕ್ಕಾಗುವ ಹಣ್ಣುಗಳನ್ನು ಸೂಚಿಸುವುದಕ್ಕೆ ಅನುವಾದ ಭಾಷೆಯಲ್ಲಿ ಉಪಯೋಗಿಸುವ ಸಹಜವಾದ ಪದವನ್ನು "ಫಲ" ಎನ್ನುವ ಪದಕ್ಕೆ ಉಪಯೋಗಿಸಿ ಅನುವಾದಿಸುವುದು ಉತ್ತಮ. ಅನೇಕ ಭಾಷೆಗಳಲ್ಲಿ ಈ ಪದಕ್ಕೆ ತುಂಬಾ ಸ್ವಾಭಾವಿಕವಾಗಿ ಬಹುವಚನದ ಪದವನ್ನು ಉಪಯೋಗಿಸುತ್ತಾರೆ, "ಫಲಗಳು" ಎಂದು ಸೂಚಿಸಿದಾಗ ಇದು ಒಂದಕ್ಕಿಂತ ಹೆಚ್ಚು ಫಲಗಳನ್ನು ಸೂಚಿಸುತ್ತಿದೆ ಎಂದರ್ಥ.
- ಸಂದರ್ಭಾನುಸಾರವಾಗಿ "ಫಲಭರಿತ" ಎನ್ನುವ ಪದವನ್ನು "ಹೆಚ್ಚು ಆತ್ಮೀಯಕ ಫಲವನ್ನು ಕೊಡುವುದು" ಅಥವಾ "ಹೆಚ್ಚು ಮಕ್ಕಳನ್ನು ಹೊಂದಿರುವುದು" ಅಥವಾ "ಸಮೃದ್ಧಿ" ಎಂದೂ ಅನುವಾದಿಸಬಹುದು.
- "ಭೂಮಿಯ ಫಲ" ಎನ್ನುವ ಮಾತನ್ನು "ಭೂಮಿಯಿಂದ ಬೆಳೆಸುವ ಫಲ" ಅಥವಾ "ಪ್ರಾಂತ್ಯದಲ್ಲಿ ಬೆಳೆಯುವ ಆಹಾರ ಬೆಳೆಗಳು" ಎಂದೂ ಅನುವಾದ ಮಾಡಬಹುದು.
- ದೇವರು ಪ್ರಾಣಿಗಳನ್ನು ಮತ್ತು ಜನರನ್ನು ಸೃಷ್ಟಿಸಿದಾಗ, ಆತನು ಅವರಿಗೆ "ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ, ಭೂಮಿಯನ್ನು ತುಂಬಿಕೊಳ್ಳಿರಿ" ಎಂದು ಆಜ್ಞಾಪಿಸಿದನು, ಇದು ಅನೇಕಮಂದಿ ಸಂತಾನವನ್ನು ಹೊಂದಿರುವುದನ್ನು ಸೂಚಿಸುತ್ತದೆ. ಈ ಪದವನ್ನು "ಅಧಿಕ ಸಂತಾನ ಹೊಂದಿರುವುದು" ಅಥವಾ "ಅನೇಕಮಂದಿ ಮಕ್ಕಳನ್ನು ಮತ್ತು ವಂಶದವರನ್ನು ಹೊಂದಿರುವುದು" ಅಥವಾ "ಅನೇಕಮಂದಿ ಮಕ್ಕಳನ್ನು ಹೊಂದಿರು, ಇದರಿಂದ ನೀನು ಅನೇಕಮಂದಿ ವಂಶಸ್ಥರನ್ನು ಹೊಂದಿರುವಿ" ಎಂದೂ ಅನುವಾದ ಮಾಡಬಹುದು.
- "ಗರ್ಭ ಫಲ" ಎನ್ನುವ ಮಾತನ್ನು "ಗರ್ಭ ಹುಟ್ಟಿಸುವುದು" ಅಥವಾ "ಸ್ತ್ರೀ ಮಕ್ಕಳಿಗೆ ಜನ್ಮ ಕೊಡುವಳು" ಅಥವಾ "ಮಕ್ಕಳು" ಎಂದೂ ಅನುವಾದ ಮಾಡಬಹುದು. ಮರಿಯಳಿಗೆ ಎಲಿಸಬೇತಳಿಗೆ "ನಿನ್ನ ಗರ್ಭಫಲವು ಆಶೀರ್ವಾದ ಹೊಂದಲಿ" ಎಂದು ಹೇಳಿದಳು, ಆಕೆ ಮಾತಿಗೆ "ನೀನು ಜನ್ಮ ಕೊಡುವ ಮಗು ಆಶೀರ್ವಾದ ಹೊಂದುವನು" ಎಂದರ್ಥ. ಈ ಮಾತಿಗೆ ಅನುವಾದ ಮಾಡುವ ಭಾಷೆಯಲ್ಲಿ ಬೇರೊಂದು ಪದಗಳು ಅಥವಾ ಮಾತುಗಳು ಇರಬಹುದು.
- "ದ್ರಾಕ್ಷಿ ಬಳ್ಳಿಯ ಫಲ" ಎನ್ನುವ ಇನ್ನೊಂದು ಮಾತನ್ನು "ದಾಕ್ಷಿ ಬಳ್ಳಿಯ ಹಣ್ಣು" ಅಥವಾ "ದ್ರಾಕ್ಷಿಗಳು" ಎಂದೂ ಅನುವಾದ ಮಾಡಬಹುದು.
- ಸಂದರ್ಭಕ್ಕೆ ತಕ್ಕಂತೆ "ಹೆಚ್ಚಾದ ಫಲಭರಿತವಾಗಿರುತ್ತದೆ" ಎನ್ನುವ ಮಾತನ್ನು "ಹೆಚ್ಚು ಫಲವನ್ನು ಕೊಡುತ್ತದೆ" ಅಥವಾ "ಹೆಚ್ಚು ಮಕ್ಕಳನ್ನು ಹೊಂದುತ್ತಾರೆ" ಅಥವಾ "ಸಮೃದ್ಧಿಯನ್ನು ಪಡೆಯುವಿರಿ" ಎಂದೂ ಅನುವಾದ ಮಾಡಬಹುದು.
- ಅಪೊಸ್ತಲನಾದ ಪೌಲನು ನುಡಿದ "ಫಲಭರಿತವಾದ ಕೆಲಸ" ಎನ್ನುವ ಮಾತನ್ನು "ಒಳ್ಳೇಯ ಫಲಗಳನ್ನು ಕೊಡುವ ಕೆಲಸ" ಅಥವಾ "ಯೇಸುವಿನಲ್ಲಿ ನಂಬುವ ಅನೇಕರಲ್ಲಿ ಪ್ರಯತ್ನಗಳು ಪರಿಣಾಮಕಾರಿಯಾಗಿರುತ್ತವೆ" ಎಂದೂ ಅನುವಾದ ಮಾಡಬಹುದು.
- "ಆತ್ಮ ಫಲ" ಎನ್ನುವ ಮಾತನ್ನು "ಪವಿತ್ರಾತ್ಮನು ಉಂಟುಮಾಡುವ ಕೆಲಸಗಳು" ಅಥವಾ "ಒಬ್ಬರಲ್ಲಿ ಪವಿತ್ರಾತ್ಮನು ಕೆಲಸ ಮಾಡುತ್ತಿದ್ದಾನೆ ಎನ್ನುವುದಕ್ಕೆ ಅವರ ಕ್ರಿಯೆಗಳು ಮತ್ತು ಮಾತುಗಳು ನಮಗೆ ತೋರಿಸುತ್ತವೆ".

(ಈ ಪದಗಳನ್ನು ಸಹ ನೋಡಿರಿ : ವಂಶಸ್ಥರು, ಧಾನ್ಯ, ದ್ರಾಕ್ಷಿ, ಪವಿತ್ರಾತ್ಮ, ದ್ರಾಕ್ಷಿ ಬಳ್ಳಿ, ಗರ್ಭ)

ಸತ್ಯವೇದದ ಅನುಬಂಧ ವಾಕ್ಯಗಳು:

- ಗಲಾತ್ಯ.05:23
- ಆದಿ.01:11
- ಲೂಕ.08:15
- ಮತ್ತಾಯ.03:08
- ಮತ್ತಾಯ.07:17

ಪದ ಡೇಟಾ:

- Strong's: H4, H1061, H1063, H1069, H2233, H2981, H3581, H3759, H3899, H3978, H4022, H5108, H6509, H6529, H7019, H8393, H8570, G1081, G2590, G2592, G2593, G3703, G5052, G5352

ಬಂಗಾರ, ಬಂಗಾರದ

ಪದದ ಅರ್ಥವಿವರಣೆ:

ಬಂಗಾರ ಹಳದಿ ಬಣ್ಣದಲ್ಲಿರುವ ಒಂದು ಹೆಚ್ಚಿನ ಗುಣಮಟ್ಟದ ಲೋಹ, ಇದನ್ನು ಧರ್ಮ ಸಂಬಂಧವಾದ ವಸ್ತುಗಳನ್ನು ಮತ್ತು ಆಭರಣಗಳನ್ನು ತಯಾರಿಸುವುದಕ್ಕೆ ಉಪಯೋಗಿಸುತ್ತಾರೆ. ಇದು ಪುರಾತನ ಕಾಲಗಳಲ್ಲಿ ಅತ್ಯಂತ ಬೆಲೆಯುಳ್ಳ ಲೋಹವಾಗಿರುತ್ತದೆ.

- ಸತ್ಯವೇದದ ಕಾಲಗಳಲ್ಲಿ ಅನೇಕ ವಿಧವಾದ ವಸ್ತುಗಳು ಗಟ್ಟಿ ಚಿನ್ನದಿಂದ ಮಾಡಲ್ಪಟ್ಟಿರುತ್ತವೆ ಅಥವಾ ಅವುಗಳ ಮೇಲೆ ಬಂಗಾರದ ತೆಳುವಾದ ಪದರದೊಂದಿಗೆ ಹೊದಿಸಿರುತ್ತಾರೆ.
- ಈ ಎಲ್ಲಾ ವಸ್ತುಗಳಲ್ಲಿ ಕಿವಿಯೋಲೆಗಳು ಮತ್ತು ಇತರ ಆಭರಣಗಳು, ವಿಗ್ರಹಗಳು, ಯಜ್ಞವೇದಿಗಳು ಮತ್ತು ಗುಡಾರದಲ್ಲಿಯು ಅಥವಾ ದೇವಾಲಯದಲ್ಲಿ ಉಪಯೋಗಿಸುವ ಇತರ ವಸ್ತುಗಳನ್ನು ಅಂದರೆ ಒಡಂಬಡಿಕೆಯ ಮಂಜೂಷವು ಒಳಗೊಂಡಿರುತ್ತವೆ.
- ಹಳೇ ಒಡಂಬಡಿಕೆಯ ಕಾಲಗಳಲ್ಲಿ ಬಂಗಾರವನ್ನು ಕೊಂಡುಕೊಳ್ಳುವುದರಲ್ಲಿ ಮತ್ತು ಮಾರುವುದರಲ್ಲಿ ವಿನಿಮಯ ಸಾಧನೆಯನ್ನಾಗಿ ಉಪಯೋಗಿಸುತ್ತಿದ್ದರು. ಇದರ ಬೆಲೆಯನ್ನು ನಿರ್ಧರಿಸಲು ಇದನ್ನು ಒಂದು ಪ್ರಮಾಣದಲ್ಲಿ ತೂಕ ಮಾಡುತ್ತಿದ್ದರು.
- ಸ್ವಲ್ಪಕಾಲವಾದನಂತರ ಬಂಗಾರ ಮತ್ತು ಬೆಳ್ಳಿಯಂತಹ ಇತರ ಲೋಹಗಳನ್ನು ಕೊಂಡುಕೊಳ್ಳುವುದರಲ್ಲಿ ಮತ್ತು ಮಾರುವುದರಲ್ಲಿ ನಾಣ್ಯಗಳನ್ನಾಗಿ ಮಾಡಿಕೊಳ್ಳುವುದಕ್ಕೆ ಉಪಯೋಗಿಸುತ್ತಿದ್ದರು.
- ಗಟ್ಟಿ ಬಂಗಾರವಲ್ಲದ್ದನ್ನು ಸೂಚಿಸಿದಾಗ ಕೇವಲ ಅದರ ಮೇಲೆ ಹೊದಿಸಿದ ಬಂಗಾರವನ್ನು ಮಾತ್ರ ಪರಿಗಣಿಸುತ್ತಿದ್ದರು, “ಬಂಗಾರದ” ಅಥವಾ “ಬಂಗಾರ ಹೊದಿಕೆಯಿರುವ” ಅಥವಾ “ಬಂಗಾರ ಪದರು” ಕೂಡ ಉಪಯೋಗಿಸುತ್ತಿದ್ದರು.
- ಕೆಲವೊಂದುಬಾರಿ ಒಂದು ವಸ್ತುವನ್ನು “ಬಂಗಾರದ ಬಣ್ಣದಿಂದ” ವಿವರಿಸುತ್ತಿದ್ದರು, ಇದಕ್ಕೆ ಬಂಗಾರದ ಹಳದಿ ಬಣ್ಣವಿದೆ ಎಂದರ್ಥ, ಆದರೆ ನಿಜವಾದ ಬಂಗಾರದಿಂದ ಮಾಡಲ್ಪಟ್ಟಿರುವುದಲ್ಲ.

(ಈ ಪದಗಳನ್ನು ಸಹ ನೋಡಿರಿ : ಯಜ್ಞವೇದಿ, ಒಡಂಬಡಿಕೆಯ ಮಂಜೂಷ, ಸುಳ್ಳು ದೇವರು, ಬೆಳ್ಳಿ, ಗುಡಾರ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.01:6-7
- 1 ತಿಮೊಥೆ.02:8-10
- 2 ಪೂರ್ವ.01:14-15
- ಅಪೊ.ಕೃತ್ಯ.03:4-6
- ದಾನಿ.02:31-33

ಪದ ಡೇಟಾ:

- Strong's: H1220, H1222, H1722, H2091, H2742, H3800, H4062, H5458, H6884, H6885, G5552, G5553, G5554, G5557

ಬಂಜೆ

ಪದದ ಅರ್ಥವಿವರಣೆ

“ಬಂಜೆ”ಯಾಗಿರುವುದು ಎಂದರೆ ಫಲವನ್ನು ಕೊಡದೆಯಿರುವುದು ಅಥವಾ ಸಂತಾನವಿಲ್ಲದ್ದಿರುವ ಸ್ಥಿತಿಯಾಗಿರುತ್ತದೆ.

- ಬಂಜೆಯಾಗಿರುವ ಭೂಮಿಯಲ್ಲಿ ಯಾವ ವಿಧವಾದ ಗಿಡಗಳು ಬೆಳೆಯುವದಿಲ್ಲ.
- ಶರೀರಕವಾಗಿ ಮಕ್ಕಳನ್ನು ಹೇರದೆ ಇರುವ ಸ್ತ್ರಿಯನ್ನು ಬಂಜೆ ಎನ್ನುತ್ತಾರೆ.

ಅನುವಾದ ಸಲಹೆಗಳು:

- ಭೂಮಿಯನ್ನು ಸೂಚಿಸಲು “ಬಂಜೆ” ಎಂದು ಉಪಯೋಗಿಸಿದರೆ, ಅದು “ಸಾರವಿಲ್ಲ” ಅಥವಾ “ಫಲಕೊಡದ” ಅಥವಾ “ಗಿಡಗಳು ಇಲ್ಲದ ಸ್ಥಳ” ಎಂದು ಅನುವಾದ ಮಾಡಬಹುದು.
- ಬಂಜೆಯಾಗಿರುವ ಸ್ತ್ರಿಯನ್ನು ಸೂಚಿಸಿದರೆ, ಅದನ್ನು “ಮಕ್ಕಳು ಇಲ್ಲದ” ಅಥವಾ “ಸಂತಾನ ಇಲ್ಲದ” ಅಥವಾ “ಗರ್ಭಿಣಿಯಾಗದೆ ಇರುವುದು” ಎಂದು ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.02:5
- ಗಲಾತ್ಯ.04:26-27
- ಆದಿ.11:29-30
- ಯೋಬ.03:6-7

ಪದ ಡೇಟಾ:

- Strong's: H4420, H6115, H6135, H6723, H7909, H7921, G692, G4723

ಬಂಧಿಸು, ಬಂಧಿಸುವುದು, ಬಂಧಿಸಲಾಗಿದೆ, ಸ್ವಾಧೀನ

ಪದದ ಅರ್ಥವಿವರಣೆ:

“ಬಂಧಿಸು” ಎನ್ನುವ ಪದಕ್ಕೆ ಬಲಾತ್ಕಾರದಿಂದ ಯಾವುದಾದರೊಂದನ್ನು ಅಥವಾ ಯಾರಾದರೊಬ್ಬರನ್ನು ಹಿಡಿದುಕೊಳ್ಳುವುದು ಅಥವಾ ತೆಗೆದುಕೊಳ್ಳುವುದು. ಯಾರಾದರೊಬ್ಬರ ಮೇಲೆ ನಿಯಂತ್ರಣ ಹೊಂದಿರುವುದು ಮತ್ತು ಅವರನ್ನು ಮೀರುವುದು ಎಂದರ್ಥವೂ ಬರುತ್ತದೆ.

- ಒಂದು ಪಟ್ಟಣವು ಸೈನಿಕರ ಬಲತ್ಕಾರದಿಂದ ವಶಪಡಿಸಿಕೊಂಡಿದ್ದರೆ, ಸೈನಿಕರು ಜಯಿಸಿದ ಜನರ ಬೆಲೆಯುಳ್ಳ ಅಸ್ತಿಪಾಸ್ತಿಗಳನ್ನು ಬಂಧಿಸುತ್ತಾರೆ.
- ಈ ಪದವನ್ನು ಅಲಂಕಾರಿಕವಾಗಿ ಉಪಯೋಗಿಸಿದಾಗ, ಒಬ್ಬ ವ್ಯಕ್ತಿ “ಭಯದಿಂದ ಬಂಧಿಸಲ್ಪಟ್ಟವನಾಗಿ” ವಿವರಿಸಲ್ಪಡುತ್ತಾನೆ. ಈ ಮಾತಿಗೆ ಆ ವ್ಯಕ್ತಿ ಆಕಸ್ಮಿಕವಾಗಿ “ಭಯದಿಂದ ಜಯಿಸಲ್ಪಟ್ಟಿರುತ್ತಾನೆ” ಎಂದರ್ಥವಾಗಿರುತ್ತದೆ. ಒಬ್ಬ ವ್ಯಕ್ತಿ “ಭಯದಿಂದ ಬಂಧಿಸಲ್ಪಟ್ಟಿದ್ದರೆ”, ಆ ವ್ಯಕ್ತಿ “ಆಕಸ್ಮಿಕವಾಗಿ ತುಂಬಾ ಹೆಚ್ಚಾಗಿ ಹೆದರಿಕೆ ಹೊಂದಿದ್ದಾನೆ” ಎಂದೂ ಹೇಳಲಾಗುತ್ತದೆ.
- ಒಬ್ಬ ಸ್ತ್ರೀಯನ್ನು “ಬಂಧಿಸುವ” ಹೆರಿಗೆ ನೋವುಗಳ ಸಂದರ್ಭದಲ್ಲಿ, ನೋವುಗಳು ಆಕಸ್ಮಿಕವಾಗಿ ಬಂದಿವೆ ಮತ್ತು ಮೀರಿವೆ ಎನ್ನುವ ಅರ್ಥವನ್ನು ಕೊಡುತ್ತದೆ. ಆ ಸ್ತ್ರೀಯಳ ಮೇಲೆ ನೋವುಗಳು “ಮೀರಿ ಬಂದಿವೆ” ಅಥವಾ “ಇದ್ದಕ್ಕಿದ್ದಂತೆ ಆಕೆಗೆ ಬಂದಿವೆ” ಎಂದೂ ಹೇಳುವುದರ ಮೂಲಕ ಈ ಪದವನ್ನು ಅನುವಾದ ಮಾಡಬಹುದು.
- ಈ ಪದವನ್ನು “ನಿಯಂತ್ರಿಸು” ಅಥವಾ “ಆಕಸ್ಮಿಕವಾಗಿ ಹೊಂದು” ಅಥವಾ “ಹಿಡಿ” ಎಂದೂ ಅನುವಾದ ಮಾಡಬಹುದು.
- “ಆಕೆಯೊಂದಿಗೆ ಮಲಗಿದನು ಮತ್ತು ಬಂಧಿಸಲ್ಪಟ್ಟನು” ಎನ್ನುವ ಮಾತನ್ನು “ಆಕೆಯ ಮೇಲೆ ತನ್ನನ್ನು ತಾನು ಬಲವಂತಿಕೆ ಮಾಡಿಕೊಂಡನು” ಅಥವಾ “ಆಕೆಯನ್ನು ಭಂಗಪಡಿಸಿದನು” ಅಥವಾ “ಆಕೆಯನ್ನು ಮಾನಭಂಗ ಮಾಡಿದನು” ಎಂದೂ ಅನುವಾದ ಮಾಡಬಹುದು. ಈ ಉದ್ದೇಶದ ಅನುವಾದವು ಅಂಗೀಕರವಾಗಿರುವಂತೆ ನೋಡಿಕೊಳ್ಳಿರಿ.

(ನೋಡಿರಿ : ಸೌಮ್ಯೋಕ್ತಿಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.16:19-21
- ವಿಮೋ.15:14-15
- ಯೋಹಾನ.10:37-39
- ಲೂಕ.08:28-29
- ಮತ್ತಾಯ.26:47-48

ಪದ ಡೇಟಾ:

- Strong's: H270, H1497, H2388, H3027, H3920, H3947, H4672, H5377, H5860, H6031, H7760, H8610, G724, G1949, G2638, G2902, G2983, G4815, G4884

ಬಟ್ಟೆ, ತೊಡಿಸಲ್ಪಟ್ಟಿದೆ, ಬಟ್ಟೆಗಳು, ಉಡುಪುಗಳು, ಬಟ್ಟೆಗಳಿಲ್ಲದ, ವಸ್ತ್ರಗಳು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ ಅಲಂಕಾರಿಕ ಭಾಷೆಯನ್ನೂ ಉಪಯೋಗಿಸಿದಾಗ, "ಇವುಗಳೊಂದಿಗೆ ತೊಡಿಸಲ್ಪಟ್ಟಿದೆ" ಎನ್ನುವ ಮಾತಿಗೆ ಯಾವುದಾದರೊಂದಿಗೆ ಸಜ್ಜುಗೊಳಿಸಲಾಗಿದೆ ಅಥವಾ ಅನುಗ್ರಹಿಸಲ್ಪಟ್ಟಿದೆ ಎಂದರ್ಥ. " ಯಾವುದಾದರೊಂದಿಗೆ "ತೊಡಿಸಿ" ಕೊಳ್ಳುವುದು ಎಂದರೆ ಒಂದು ಸರಿಯಾದ ಗುಣಲಕ್ಷಣದ ಬೆಲೆಯನ್ನು ಹೊಂದಿಕೊಳ್ಳುವುದಕ್ಕೆ ಎದುರುನೋಡುವುದು.

- ನಿಮ್ಮ ದೇಹಕ್ಕೆ ಬಹಿರಂಗವಾಗಿ ಉಡುಪುಗಳನ್ನು ಧರಿಸಿಕೊಳ್ಳುವುದೆನ್ನುವುದು ಎಲ್ಲರಿಗೆ ಕಾಣಿಸಿಕೊಳ್ಳುವ ವಿಧಾನದಲ್ಲೇ, ನೀವು ಒಂದು ನಿರ್ದಿಷ್ಟವಾದ ಗುಣಲಕ್ಷಣದೊಂದಿಗೆ "ತೊಡಿಸಲ್ಪಟ್ಟಾಗ", ಇತರರು ಅದನ್ನು ಸುಲಭವಾಗಿ ನೋಡುತ್ತಾರೆ. "ದಯೆಯೊಂದಿಗೆ ನಿಮ್ಮನ್ನು ನೀವೇ ತೊಡಿಸಿಕೊಳ್ಳುವುದು" ಎನ್ನುವ ಮಾತಿಗೆ ಎಲ್ಲರೂ ಅತೀ ಸುಲಭವಾಗಿ ನಿಮ್ಮನ್ನು ನೋಡುವಂತೆ ದಯೆಯಿಂದ ನಿಮ್ಮ ಕ್ರಿಯೆಗಳು ಪರಿವರ್ತನೆಯಾಗಬೇಕು ಎಂದರ್ಥ.
- "ಮೇಲಣದಿಂದ ಬರುವ ಶಕ್ತಿಯೊಂದಿಗೆ ತೊಡಿಸಲ್ಪಡಿರಿ" ಎನ್ನುವ ಮಾತಿಗೆ ಶಕ್ತಿಯನ್ನು ಹೊಂದುವುದಕ್ಕೆ ನಿಮಗೆ ಕೊಡಲ್ಪಟ್ಟಿದೆ ಎಂದರ್ಥ.
- ಈ ಪದವು ಋಣಾತ್ಮಕವಾದ ಅನುಭವಗಳನ್ನು ವ್ಯಕ್ತಪಡಿಸುವುದಕ್ಕೂ ಉಪಯೋಗಿಸಲ್ಪಟ್ಟಿದೆ, ಉದಾಹರಣೆಗೆ,"ನಾಚಿಕೆಯಿಂದ ತೊಡಿಸಲ್ಪಟ್ಟಿದ್ದೀಯಾ" ಅಥವಾ "ಭಯಾನಕದೊಂದಿಗೆ ತೊಡಿಸಲ್ಪಟ್ಟಿದ್ದೀ".

ಅನುವಾದ ಸಲಹೆಗಳು:

- ಸಾಧ್ಯವಾದರೆ, "ಯಾವುದಾದರೊಂದಿಗೆ ತೊಡಿಸಿಕೋ" ಎಂದು ಅಕ್ಷರಾರ್ಥ ಶಬ್ದಾಲಂಕಾರವನ್ನು ಹೊಂದಿರುವುದು ಒಳ್ಳೆಯದು. ಈ ಪದವನ್ನು ಅನುವಾದ ಮಾಡುವ ಇನ್ನೊಂದು ವಿಧಾನದಲ್ಲಿ "ಧರಿಸು" ಎಂದೂ ಅನುವಾದ ಮಾಡಬಹುದು, ವಸ್ತ್ರಗಳನ್ನು ಧರಿಸು ಎನ್ನುವ ಮಾತಿನ ಸಂದರ್ಭಕ್ಕೆ ಇದನ್ನು ಉಪಯೋಗಿಸಬಹುದು.
- ಅದು ಒಂದುವೇಳೆ ಸರಿಯಾದ ಅರ್ಥವನ್ನು ಕೊಡದಿದ್ದರೆ, "ಯಾವುದಾದದೊಂದಿಗೆ" ತೊಡಿಸಲ್ಪಡು" ಎನ್ನುವದನ್ನು "ತೋರಿಸು" ಅಥವಾ "ಸ್ವರೂಪ ಪಡೆ" ಅಥವಾ "ತುಂಬಿಸಲ್ಪಡು" ಅಥವಾ "ಗುಣವನ್ನು ಹೊಂದು" ಎಂದೂ ಇನ್ನೊಂದು ರೀತಿಯಲ್ಲಿ ಅನುವಾದ ಮಾಡಬಹುದು.
- "ನಿಮ್ಮನ್ನು ನೀವೇ ತೊಡಿಸಿಕೊಳ್ಳಿರಿ" ಎನ್ನುವ ಪದಕ್ಕೆ "ನಿಮ್ಮನ್ನು ನೀವು ಮುಚ್ಚಿಕೊಳ್ಳಿರಿ" ಅಥವಾ "ಕಾಣಿಸುವ ರೀತಿಯಲ್ಲಿ ನಡೆದುಕೊಳ್ಳಿರಿ" ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು:

- ಲೂಕ.24:48-49

ಪದ ಡೇಟಾ:

- Strong's: H899, H3680, H3736, H3830, H3847, H3848, H4055, H4374, H5497, H8008, H8071, H8516, G294, G1463, G1562, G1737, G1742, G1746, G1902, G2066, G2224, G2439, G2440, G4016, G4749, G5509

ಬದ್ಧನಾಗು, ಬದ್ಧನಾಗುವಂತೆ ಮಾಡು, ಬದ್ಧನಾದೆ, ಪ್ರತಿಜ್ಞೆ ಮಾಡು, ಜವಾಬ್ದಾರಿ

ಪದದ ಅರ್ಥವಿವರಣೆ:

"ಬದ್ಧನಾಗು" ಅಥವಾ "ಜವಾಬ್ದಾರಿ" ಎನ್ನುವ ಪದಗಳು ನಿರ್ಣಯ ತೆಗೆದುಕೊಳ್ಳುವುದನ್ನು ಅಥವಾ ಏನಾದರೊಂದನ್ನು ಮಾಡುವುದಕ್ಕೆ ಪ್ರತಿಜ್ಞೆ ಮಾಡುವುದನ್ನು ಸೂಚಿಸುತ್ತದೆ.

- ಏನಾದರೊಂದನ್ನು ಮಾಡುವುದಕ್ಕೆ ಪ್ರತಿಜ್ಞೆಗಳನ್ನು ಮಾಡಿದ ಒಬ್ಬ ವ್ಯಕ್ತಿಯನ್ನು ಕೂಡ ಅದನ್ನು ಮಾಡುವುದಕ್ಕೆ "ಬದ್ಧನಾಗಿದ್ದಾನೆ" ಎಂದು ವಿವರಿಸುತ್ತದೆ.
- ಒಬ್ಬರನ್ನು ಒಂದು ಕೆಲಸಕ್ಕೆ "ಬದ್ಧನಾಗುವಂತೆ" ಮಾಡು ಎನ್ನುವುದಕ್ಕೆ ಒಬ್ಬ ವ್ಯಕ್ತಿಗೆ ಆ ಕೆಲಸವನ್ನು ಒಪ್ಪಿಸು ಎಂದರ್ಥ. ಉದಾಹರಣೆಗೆ, ಜನರು ದೇವರೊಂದಿಗೆ ಸಮಾಧಾನ ಹೊಂದುವುದಕ್ಕೆ ಅವರಿಗೆ ಸಹಾಯ ಮಾಡುವ ಸೇವೆಯನ್ನು ದೇವರು ನಮಗೆ "ಒಪ್ಪಿಸಿಕೊಟ್ಟಿದ್ದಾರೆ" ಅಥವಾ "ಕೊಟ್ಟಿದ್ದಾರೆ" ಎಂದು ಪೌಲನು 2 ಕೊರಿಂಥದಲ್ಲಿ ಹೇಳಿದ್ದಾರೆ.
- "ಬದ್ಧನಾಗು" ಮತ್ತು "ಬದ್ಧನಾದೆ" ಎನ್ನುವ ಪದಗಳು ಕೂಡ ಒಂದು ನಿರ್ದಿಷ್ಟವಾದ ತಪ್ಪು ಕ್ರಿಯೆ ಮಾಡುವುದನ್ನು ಸೂಚಿಸುತ್ತದೆ. ಉದಾಹರಣೆಗೆ, "ಮಾಪ ಮಾಡುವುದನ್ನು" ಅಥವಾ "ವ್ಯಭಿಚಾರ ಮಾಡುವುದನ್ನು" ಅಥವಾ "ನರಹತ್ಯೆ ಮಾಡುವುದನ್ನು" ಸೂಚಿಸುತ್ತದೆ.
- "ಅವನು ಆ ಕೆಲಸಕ್ಕೆ ಬದ್ಧನಾಗುವಂತೆ ಮಾಡು" ಎನ್ನುವ ಮಾತನ್ನು "ಅವನಿಗೆ ಕೆಲಸವನ್ನು ಕೊಡು" ಅಥವಾ "ಆ ಕೆಲಸಕ್ಕೆ ಜವಾಬ್ದಾರಿಯನ್ನು ಕೊಡು" ಅಥವಾ "ಅವನಿಗೆ ಆ ಕೆಲಸವನ್ನು ಒಪ್ಪಿಸಿಕೊಡು" ಎಂದೂ ಅನುವಾದ ಮಾಡಬಹುದು.
- "ಜವಾಬ್ದಾರಿ" ಎನ್ನುವ ಪದವನ್ನು "ಕೆಲಸ ಕೊಡಲ್ಪಟ್ಟಿದೆ" ಅಥವಾ "ಪ್ರತಿಜ್ಞೆ ಮಾಡಲ್ಪಟ್ಟಿದೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ವ್ಯಭಿಚಾರ, ನಂಬಿಗಸ್ಥ, ಪ್ರತಿಜ್ಞೆ, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.28:6-7
- 1 ಪೇತ್ರ.02:21-23
- ಯೆರೆ.02:12-13
- ಮತ್ತಾಯ.13:40-43
- ಕೀರ್ತನೆ.058:1-2

ಪದ ಡೇಟಾ:

- Strong's: H539, H817, H1361, H1497, H1500, H1540, H1556, H2181, H2388, H2398, H2399, H2403, H4560, H4603, H5003, H5753, H5766, H5771, H6213, H6466, H7683, H7760, H7847, G264, G2038, G2716, G3429, G3431, G3860, G3872, G3908, G4102, G4160, G4203

ಬರಗಾಲ, ಕ್ಷಾಮಗಳು

ಪದದ ಅರ್ಥವಿವರಣೆ

“ಬರಗಾಲ” ಎನ್ನುವ ಪದವು ದೇಶದಲ್ಲಿ ಅಥವಾ ಒಂದು ಪ್ರಾಂತ್ಯದಲ್ಲಿ ಮಳೆಯಿಲ್ಲದ ಕಾರಣವಾಗಿ ಆಹಾರ ಸಿಕ್ಕದೆ ಇರುವ ಘೋರವಾದ ಕಾಲವನ್ನು ಸೂಚಿಸುತ್ತದೆ.

- ಮಳೆಯಿಲ್ಲದೆ ಇರುವುದು, ಬೆಳೆಗೆ ರೋಗ ಅಥವಾ ಕೀಟಗಳು ಎಂಬತ ನೈಸರ್ಗಿಕ ವಿಪತ್ತುಗಳ ಕಾರಣವಾಗಿ ಆಹಾರ ಬೆಳೆ ನಾಶವಾಗುತ್ತವೆ.
- ಶತ್ರುಗಳು ಬೆಳೆಯನ್ನು ನಾಶ ಮಾಡುವಂತಹ ಮಾನವ ಕಾರಣಗಳಿಂದ ಆಹಾರ ಕೊರತೆ ಬರಬಹುದು.
- ಸತ್ಯವೇದದಲ್ಲಿ, ಆತನ ವಿರೋಧವಾಗಿ ಜನರು ಪಾಪ ಮಾಡಿದಾಗ ಅವರನ್ನು ಶಿಕ್ಷಿಸುವ ಪ್ರಕ್ರಿಯೆಯಲ್ಲಿ ಯೆಹೋವ ಬರಗಾಲ ದೇಶಗಳ ಮೇಲೆ ಕಳುಹಿಸುತ್ತಿದ್ದನು.
- ಅಮೋಸ.8:11ನೇ ವಾಕ್ಯದಲ್ಲಿ ಯೆಹೋವ ತನ್ನ ಜನರೊಂದಿಗೆ ಮಾತನಾಡದೆ ಇರುವ ಕಾಲವನ್ನು ಸೂಚಿಸಲು “ಬರಗಾಲ” ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ನಿಮ್ಮ ಭಾಷೆಯಲ್ಲಿ “ಬರಗಾಲ” ಎನ್ನುವ ಪದಕ್ಕೆ ತಕ್ಕ ಹಾಗೆ ಉಪಯೋಗಿಸಿ, ಅಥವಾ “ತೀವ್ರ ಕೊರತೆ” ಅಥವಾ “ತೀವ್ರ ಅಭಾವ” ಎಂದು ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.21:11-12
- ಅಪೊ.ಕೃತ್ಯ.07:11-13
- ಆದಿ.12:10-13
- ಆದಿ.45:4-6
- ಯೆರೆ.11:21-23
- ಲೂಕ.04:25-27
- ಮತ್ತಾಯ.24:6-8

ಪದ ಡೇಟಾ:

- Strong's: H3720, H7458, H7459, G3042

ಬರೆದಿದೆ

ಪದದ ಅರ್ಥವಿವರಣೆ:

“ಬರೆದಿದೆ” ಅಥವಾ “ಬರೆಯಲ್ಪಟ್ಟಿರುವುದು” ಎನ್ನುವ ಮಾತು ಹೊಸ ಒಡಂಬಡಿಕೆಯಲ್ಲಿ ಅನೇಕಸಲ ಕಂಡುಬರುತ್ತದೆ ಮತ್ತು ಈ ಮಾತು ಸಾಧಾರಣವಾಗಿ ಇಬ್ರಿ ಲೇಖನಗಳಲ್ಲಿ ಬರೆಯಲ್ಪಟ್ಟಿರುವ ಆಜ್ಞೆಗಳನ್ನು ಅಥವಾ ಪ್ರವಾದನೆಗಳನ್ನು ಸೂಚಿಸುತ್ತವೆ.

- “ಬರೆದಂತೆ” ಎನ್ನುವ ಮಾತು ಕೆಲವೊಂದುಬಾರಿ ಮೋಶೆ ಧರ್ಮಶಾಸ್ತ್ರದಲ್ಲಿ ಬರೆಯಲ್ಪಟ್ಟಿರುವದನ್ನು ಸೂಚಿಸುತ್ತದೆ.
- ಇನ್ನೂ ಕೆಲವೊಂದುಬಾರಿ ಹಳೇ ಒಡಂಬಡಿಕೆಯಲ್ಲಿ ಪ್ರವಾದಿಗಳು ಬರೆದಿರುವವುಗಳಲ್ಲಿ ಒಂದನ್ನು ತೆಗೆದುಕೊಂಡು ಬರೆಯುವ ಉಲ್ಲೇಖವಾಗಿರುತ್ತದೆ.
- ಈ ಮಾತನ್ನು “ಮೋಶೆ ಧರ್ಮಶಾಸ್ತ್ರದಲ್ಲಿ ಬರೆಯಲ್ಪಟ್ಟಿರುವಂತೆ” ಅಥವಾ “ಬಹು ಹಿಂದಿನ ಕಾಲದಲ್ಲಿ ಪ್ರವಾದಿಗಳು ಬರೆದಿರುವಂತೆ” ಅಥವಾ “ಬಹು ಹಿಂದಿನ ಕಾಲದಲ್ಲಿ ಮೋಶೆ ಬರೆದಿರುವ ದೇವರ ಧರ್ಮಶಾಸ್ತ್ರದಲ್ಲಿ ಹೇಳಿರುವಂತೆಯೇ” ಎಂದು ಅನುವಾದ ಮಾಡಬಹುದು.
- “ಬರೆದಿದೆ” ಎನ್ನುವ ಮಾತನ್ನು ಇಡುವುದಕ್ಕೆ ಬೇರೊಂದು ಮಾರ್ಗವೇನೆಂದರೆ, ಇದರ ಅರ್ಥವೇನೆಂಬುವದನ್ನು ಕೆಳಭಾಗದಲ್ಲಿ ಬರೆಯಿರಿ.

(ಈ ಪದಗಳನ್ನು ಸಹ ನೋಡಿರಿ : ಆಜ್ಞೆ, ಧರ್ಮಶಾಸ್ತ್ರ, ಪ್ರವಾದಿ, ದೇವರ ವಾಕ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.05:13-15
- ಅಪೊ.ಕೃತ್ಯ.13:28-29
- ವಿಮೋ.32:15-16
- ಯೋಹಾನ.21:24-25
- ಲೂಕ.03:4
- ಮಾರ್ಕ.09:11-13
- ಮತ್ತಾಯ.04:5-6
- ಪ್ರಕ.01:1-3

ಪದ ಡೇಟಾ:

- Strong's: H3789, H7559, G1125

ಬಲ, ಬಲಪಡಿಸು, ಬಲವಾಗಿ

ಸತ್ಯಾಂಶಗಳು:

“ಬಲ” ಎನ್ನುವ ಪದವು ಭೌತಿಕವಾದ, ಮಾನಸಿಕವಾದ ಅಥವಾ ಆತ್ಮೀಕವಾದ ಶಕ್ತಿಯನ್ನು ಸೂಚಿಸುತ್ತದೆ. ಯಾವುದಾದರೊಂದನ್ನು ಅಥವಾ ಒಬ್ಬರನ್ನು “ಬಲಪಡಿಸು’ ಎಂದರೆ ಆ ವ್ಯಕ್ತಿಯನ್ನು ಅಥವಾ ಆ ವಸ್ತುವನ್ನು ಬಲ ಹೊಂದುವಂತೆ ಮಾಡುವುದು ಎಂದರ್ಥ.

- “ಬಲ” ಎನ್ನುವ ಪದವು ವಿರುದ್ಧವಾಗಿ ಬರುವ ಬಲ ಪ್ರಯೋಗವನ್ನು ತಡೆದಿರುವ ಶಕ್ತಿಯನ್ನು ಸೂಚಿಸುತ್ತದೆ.
- ಒಬ್ಬ ವ್ಯಕ್ತಿ “ಇಚ್ಛೆಯ ಬಲ” ಹೊಂದಿಕೊಂಡಿದ್ದಾನೆಂದರೆ ಆ ವ್ಯಕ್ತಿ ಶೋಧನೆಗೆ ಗುರಿಯಾದಾಗ ಪಾಪ ಮಾಡದಂತೆ ಸಾಮರ್ಥ್ಯವನ್ನು ಹೊಂದಿಕೊಂಡಿರುತ್ತಾನೆ ಎಂದರ್ಥವಾಗಿರುತ್ತದೆ.
- ಕೀರ್ತನೆಗಳನ್ನು ಬರೆದ ಒಬ್ಬ ಲೇಖಕರು ಯೆಹೋವನೇ ತನ್ನ “ಬಲ” ಎಂಬುದಾಗಿ ಹೇಳಿಕೊಂಡಿದ್ದಾರೆ, ಯಾಕಂದರೆ ದೇವರು ಆತನನ್ನು ಬಲವುಳ್ಳವನಾಗುವುದಕ್ಕೆ ಸಹಾಯ ಮಾಡಿದನು.
- ಒಂದು ಗೋಡೆ ಅಥವಾ ಭವನದಂತಿರುವ ಭೌತಿಕ ನಿರ್ಮಾಣವು “ಬಲದಿಂದ” ಇರುತ್ತದೆ, ಜನರು ಕಟ್ಟಡವನ್ನು ಪುನಹ ನಿರ್ಮಿಸಿಕೊಳ್ಳುವರು, ಇದನ್ನು ಇನ್ನೂ ಹೆಚ್ಚಾದ ಕಲ್ಲುಗಳಿಂದ ಅಥವಾ ಇಟ್ಟಿಗೆಗಳಿಂದ ತಿರುಗಿ ಇನ್ನೂ ಹೆಚ್ಚಾಗಿ ಬಲಪಡಿಸುವರು, ಇದರಿಂದ ಯಾವುದೇ ಧಾಳಿಯನ್ನು ಈ ಕಟ್ಟಡವು ತಡೆಯುತ್ತದೆ.

ಅನುವಾದ ಸಲಹೆಗಳು:

- ಸಾಧಾರಣವಾಗಿ “ಬಲಪಡಿಸು” ಎನ್ನುವ ಪದವನ್ನು “ಬಲವಾಗಿರುವುದಕ್ಕೆ ಕಾರಣವಾಗು” ಅಥವಾ “ಇನ್ನೂ ಹೆಚ್ಚಾಗಿ ಶಕ್ತಿಯುತವಾಗಿರಲು ಮಾಡು” ಎಂದೂ ಅನುವಾದ ಮಾಡಬಹುದು.
- ಆತ್ಮೀಯಕವಾದ ಅರ್ಥದಲ್ಲಿ ಬರುವಾಗ, “ನಿಮ್ಮ ಸಹೋದರರನ್ನು ಬಲಪಡಿಸು” ಎನ್ನುವ ಮಾತನ್ನು “ನಿಮ್ಮ ಸಹೋದರರನ್ನು ಪ್ರೋತ್ಸಾಹಗೊಳಿಸು” ಅಥವಾ “ಸತತವಾಗಿ ನಿಷ್ಠನಾಗಿರುವುದಕ್ಕೆ ನಿಮ್ಮ ಸಹೋದರರಿಗೆ ಸಹಾಯ ಮಾಡು” ಎಂದೂ ಅನುವಾದ ಮಾಡಬಹುದು.
- ಈ ಪದಗಳಿಗೆ ಈ ಕೆಳಗೆ ಕೊಟ್ಟಿರುವ ಉದಾಹರಣೆಗಳು ಅರ್ಥವನ್ನು ಮತ್ತು ಇದರಿಂದ ಉದ್ದವಾದ ಮಾತುಗಳಲ್ಲಿ ಅವುಗಳು ಒಳಪಟ್ಟಿರುವಾಗ, ಅವುಗಳನ್ನು ಹೇಗೆ ಅನುವಾದ ಮಾಡಬಹುದು ಎನ್ನುವುದನ್ನು ತೋರಿಸುತ್ತವೆ,
- “ನಡುಕಟ್ಟಿನಂತೆ ನನ್ನ ಮೇಲೆ ಬಲವನ್ನು ಇಡಲಾಗಿದೆ” ಎನ್ನುವ ಮಾತಿಗೆ “ನನ್ನ ನಡುವನ್ನು ಸುತ್ತುವರಿದಿರುವ ನಡುಕಟ್ಟಿನಂತೆಯೇ, ಸಂಪೂರ್ಣ ಬಲವನ್ನು ಹೊಂದಿಕೊಳ್ಳುವುದಕ್ಕೆ ನನಗೆ ಕಾರಣವಾಗಿದೆ” ಎಂದರ್ಥವಾಗಿರುತ್ತದೆ.
- “ಶಾಂತತೆ ಮತ್ತು ನಂಬಿಕೆಯಲ್ಲಿಯೇ ನಿನ್ನ ಬಲವಿದೆ” ಎನ್ನುವ ಮಾತಿಗೆ “ಮೌನವಾಗಿ ನಡೆದುಕೊಳ್ಳುತ್ತಾ, ದೇವರಲ್ಲಿ ಭರವಸೆ ಇಡುವುದು ನಿನ್ನನ್ನು ಆತ್ಮೀಯಕವಾಗಿ ಬಳಗೊಲಿಸುತ್ತದೆ” ಎಂದರ್ಥವಾಗಿರುತ್ತದೆ.
- “ಅವರ ಬಲವನ್ನು ಪುನರುಜ್ಜೀವನಗೊಳಿಸುತ್ತದೆ” ಎನ್ನುವ ಮಾತಿಗೆ “ಮತ್ತೊಮ್ಮೆ ಇನ್ನೂ ಹೆಚ್ಚಾದ ಬಲವನ್ನು ಹೊಂದಿಕೊಳ್ಳುತ್ತದೆ” ಎಂದರ್ಥವಾಗಿರುತ್ತದೆ.
- “ನನ್ನ ಬಲದಿಂದ ಮತ್ತು ನನ್ನ ಜ್ಞಾನದಿಂದ ನಾನು ನಡೆದುಕೊಂಡಿದ್ದೇನೆ” ಎನ್ನುವ ಮಾತಿಗೆ “ನಾನು ಹೆಚ್ಚಿನ ಬಲವನ್ನು ಮತ್ತು ಜ್ಞಾನವನ್ನು ಹೊಂದಿಕೊಂಡಿರುವುದರಿಂದ ನಾನು ಈ ಎಲ್ಲಾ ಕಾರ್ಯಗಳನ್ನು ಮಾಡಿದ್ದೇನೆ” ಎಂದರ್ಥವಾಗಿರುತ್ತದೆ.
- “ಗೋಡೆಯನ್ನು ಬಲಗೊಳಿಸು” ಎನ್ನುವ ಮಾತಿಗೆ “ಗೋಡೆಯನ್ನು ಪುನರ್ ಬಲಗೊಳಿಸುವುದು” ಅಥವಾ “ಗೋಡೆಯನ್ನು ತಿರುಗಿ ಕಟ್ಟುವುದು” ಎಂದರ್ಥವಾಗಿರುತ್ತದೆ.
- “ನಾನು ನಿನ್ನನ್ನು ಬಲಪಡಿಸುತ್ತೇನೆ” ಎನ್ನುವ ಮಾತಿಗೆ “ನೀನು ಬಲವಾಗಿರುವಂತೆ ನಾನು ಮಾಡುವೆನು” ಎಂದರ್ಥವಾಗಿರುತ್ತದೆ.
- “ಯೆಹೋವನಲ್ಲಿಯೇ ರಕ್ಷಣೆಯು ಮತ್ತು ಬಲವು ಇದೆ” ಎನ್ನುವ ಮಾತಿಗೆ “ಯೆಹೋವನು ಮಾತ್ರವೇ ನಮ್ಮನ್ನು ರಕ್ಷಿಸುವನು ಮತ್ತು ನಮ್ಮನ್ನು ಬಲಪಡಿಸುವನು” ಎಂದರ್ಥವಾಗಿರುತ್ತದೆ.
- “ನಿನ್ನ ಬಲದ ಬಂಡೆ” ಎನ್ನುವ ಮಾತಿಗೆ “ನಿನ್ನನ್ನು ಬಲಪಡಿಸುವ ನಂಬಿಗಸ್ತನಾಗಿರುವ ವ್ಯಕ್ತಿ” ಎಂದರ್ಥವಾಗಿರುತ್ತದೆ.
- “ರಕ್ಷಿಸುವ ತನ್ನ ಬಲಗೈ ಬಳದಿಂದ” ಎನ್ನುವ ಮಾತಿಗೆ “ಯಾರಾದರೊಬ್ಬರು ತನ್ನ ಕೈಯಿಂದ ನಿನ್ನ ಕೈಯನ್ನು ಗಟ್ಟಿಯಾಗಿ ಅಥವಾ ಸುರಕ್ಷಿತವಾಗಿ ಹಿಡಿದುಕೊಳ್ಳುವ ರೀತಿಯಲ್ಲಿಯೇ ಸಮಸ್ಯೆಯಿಂದ ಆತನು ನಿನ್ನನ್ನು ರಕ್ಷಿಸುವವನಾಗಿದ್ದಾನೆ” ಎಂದರ್ಥವಾಗಿರುತ್ತದೆ.
- “ಸ್ವಲ್ಪ ಬಲ” ಎನ್ನುವ ಮಾತಿಗೆ “ಹೆಚ್ಚಿನ ಬಲವಿಲ್ಲದಿರುವುದು” ಅಥವಾ ‘ಬಲಹೀನ” ಎಂದರ್ಥವಾಗಿರುತ್ತದೆ.
- “ನನ್ನ ಪೂರ್ಣ ಬಲದಿಂದ” ಎನ್ನುವ ಮಾತಿಗೆ “ನನ್ನ ಎಲ್ಲಾ ಪ್ರಯತ್ನಗಳನ್ನು ಉಪಯೋಗಿಸುವುದು” ಅಥವಾ “ಬಲವಾಗಿ ಮತ್ತು ಸಂಪೂರ್ಣವಾಗಿ” ಎಂದರ್ಥವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ನಂಬಿಗಸ್ತ, ಸಾಧಿಸು, ಬಲಗೈ, ರಕ್ಷಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಅರಸ.18:19-21
- 2 ಪೇತ್ರ.02:11
- ಲೂಕ.10:27
- ಕೀರ್ತನೆ.021:01

ಪದ ಡೇಟಾ:

- Strong's: H193, H202, H353, H360, H386, H410, H553, H556, H1369, H1396, H2220, H2388, H2391, H2392, H2393, H2428, H3027, H3028, H3559, H3581, H3811, H3955, H4581, H5326, H5331, H5582, H5797, H5807, H5810, H5934, H5975, H6106, H6109, H6697, H6965, H7292, H7307, H8003, H8443, H8632, H8633, G461, G950, G1411, G1412, G1743, G1765, G1840, G1991, G2479, G2480, G2901, G2904, G3619, G3756, G4599, G4732, G4733, G4741

ಬಲವಾದ ಪಾನೀಯ, ಬಲವಾದ ಪಾನೀಯಗಳು

ಪದದ ಅರ್ಥವಿವರಣೆ:

“ಬಲವಾದ ಪಾನೀಯ” ಎನ್ನುವ ಮಾತು ಹುದುಗಿಸಿದ ಪಾನೀಯಗಳನ್ನು ಮತ್ತು ಅವುಗಳಲ್ಲಿ ಮದ್ಯಪಾನವನ್ನು ಹೊಂದಿರುವ ಪಾನೀಯಗಳನ್ನು ಸೂಚಿಸುತ್ತದೆ.

- ಮದ್ಯಪಾನೀಯಗಳನ್ನು ಧಾನ್ಯಗಳಿಂದಾಗಲಿ ಅಥವಾ ಹಣ್ಣುಗಳಿಂದಾಗಲಿ ತಯಾರು ಮಾಡುತ್ತಾರೆ ಮತ್ತು ಅವುಗಳನ್ನು ಹುದುಗಿಸುತ್ತಾರೆ.
- “ಬಲವಾದ ಪಾನೀಯ” ಅನೇಕ ವಿಧಗಳಲ್ಲಿ ದ್ರಾಕ್ಷಾರಸ, ತಾಳೆಮರ ರಸ, ಬೀರ್ ಮತ್ತು ಸೇಬಿನ ರಸಗಳು ಇರುತ್ತವೆ. ಸತ್ಯವೇದದಲ್ಲಿ ದ್ರಾಕ್ಷಾರಸವು ಅನೇಕಬಾರಿ ದಾಖಲಿಸಿದ ಬಲವಾದ ಪಾನೀಯವಾಗಿರುತ್ತದೆ.
- “ನಾಜಿರು ಪ್ರತಿಜ್ಞೆ” ಎನ್ನುವಂತಹ ಒಂದು ವಿಶೇಷವಾದ ಪ್ರತಿಜ್ಞೆಯನ್ನು ತೆಗೆದುಕೊಂಡಿರುವ ಯಾಜಕರು ಮತ್ತು ಯಾರೇಯಾಗಲಿ ಹುದುಗಿಸಿದ ಪಾನೀಯಗಳನ್ನು ಕುಡಿಯುವುದಕ್ಕೆ ಅನುಮತಿ ಹೊಂದಿರುವುದಿಲ್ಲ.
- ಈ ಪದವನ್ನು “ಹುದುಗಿಸಿದ ಪಾನೀಯ” ಅಥವಾ “ಮದ್ಯಪಾನೀಯ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದ್ರಾಕ್ಷಿ, ನಾಜಿರು, ಆಣೆ, ದ್ರಾಕ್ಷಾರಸ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಶಯಾ.05:11-12
- ಯಾಜಕ.10:8-11
- ಲೂಕ.01:14-15
- ಅರಣ್ಯ.06:1-4

ಪದ ಡೇಟಾ:

- Strong's: H5435, H7941, G4608

ಬಲಿಯಾಗುವುದು, ಬಲಿಯಾಗುತ್ತಿರುವುದು

ಪದದ ಅರ್ಥವಿವರಣೆ:

“ಬಲಿಯಾಗುವುದು” ಎನ್ನುವ ಪದವು ಯಾವುದಾದರೊಂದನ್ನು ಬೇಟೆಯಾಡುವುದನ್ನು ಸೂಚಿಸುತ್ತದೆ, ಸಾಧಾರಣವಾಗಿ ಆಹಾರಕ್ಕಾಗಿ ಉಪಯೋಗಿಸುವ ಪ್ರಾಣಿಯನ್ನು ಸೂಚಿಸುತ್ತದೆ.

- ಅಲಂಕಾರಿಕ ಭಾವನೆಯಲ್ಲಿ “ಬಲಿಯಾಗುವುದು” ಎನ್ನುವ ಪದವು ಒಬ್ಬ ವ್ಯಕ್ತಿಯನ್ನು ಪ್ರಯೋಜನಕರವಾಗಿ ಉಪಯೋಗಿಸಿಕೊಳ್ಳುವುದನ್ನು, ದುರುಪಯೋಗ ಮಾಡುವುದನ್ನು ಸೂಚಿಸುತ್ತದೆ, ಅಥವಾ ಅತೀ ಶಕ್ತಿಯುಳ್ಳ ವ್ಯಕ್ತಿಯಿಂದ ಒತ್ತಡಕ್ಕೆ ಗುರಿಯಾಗುವುದನ್ನು ಸೂಚಿಸುತ್ತದೆ.
- ಜನರು “ಬಲಿಯಾಗುತ್ತಿರುವುದು” ಎನ್ನುವ ಮಾತಿಗೆ ಅವರಿಂದ ಯಾವುದಾದರೊಂದನ್ನು ಕದಿಯುವುದು ಅಥವಾ ಅವರನ್ನು ಒತ್ತಡಕ್ಕೆ ಗುರಿಮಾಡುವುದರಿಂದ ಅವರನ್ನು ದುರುಪಯೋಗ ಮಾಡುವುದು ಎಂದರ್ಥವಾಗಿರುತ್ತದೆ.
- “ಬಲಿಯಾಗುವುದು” ಎನ್ನುವ ಪದವನ್ನು “ಬೇಟೆ ಮಾಡಿದ ಪ್ರಾಣಿ” ಅಥವಾ “ಬೇಟೆಗೆ ಗುರಿಯಾದ ಪ್ರಾಣಿ” ಅಥವಾ “ಬಲಿಪಶು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಒತ್ತಡ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆರೆ.12:7-9
- ಕೀರ್ತನೆ.104:21-22

ಪದ ಡೇಟಾ:

- Strong's: H400, H957, H961, H962, H2863, H2963, H2964, H4455, H5706, H5861, H7997, H7998

ಬಳ್ಳಿ, ಬಳ್ಳಿಗಳು

ಪದದ ಅರ್ಥವಿವರಣೆ:

“ದ್ರಾಕ್ಷಬಳ್ಳಿ” ಎನ್ನುವ ಪದವು ನೆಲದ ಮೇಲೆ ಜಾಡುಗಳನ್ನು ಹಾಕುವುದರ ಮೂಲಕ ಬೆಳೆಯುವ ಮರವನ್ನು ಸೂಚಿಸುತ್ತದೆ ಅಥವಾ ಮರಗಳನ್ನು ಮೇಲಕ್ಕೆ ಏರಿಸುವುದರ ಮೂಲಕ ಮತ್ತು ಇತರ ಪದ್ಧತಿಗಳ ಮೂಲಕ ಬೆಳೆಯುವ ತೋಟವನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ “ದ್ರಾಕ್ಷಬಳ್ಳಿ” ಎನ್ನುವ ಪದವು ಫಲಗಳನ್ನು ಕೊಡುವ ದ್ರಾಕ್ಷಿ ಗಿಡಗಳನ್ನು ಮತ್ತು ದ್ರಾಕ್ಷಿ ಬಳ್ಳಿಗಳನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

- ಸತ್ಯವೇದದಲ್ಲಿ “ಬಳ್ಳಿ” ಎನ್ನುವ ಪದವು ಅತೀ ಹೆಚ್ಚಾಗಿ ಯಾವಾಗಲೂ “ದ್ರಾಕ್ಷಿಬಳ್ಳಿ” ಎಂದರ್ಥದಲ್ಲಿಯೇ ಉಪಯೋಗಿಸಲ್ಪಟ್ಟಿರುತ್ತದೆ.
- ದ್ರಾಕ್ಷಿಬಳ್ಳಿಯ ಕೊಂಬೆಗಳು ಮುಖ್ಯ ಕಾಂಡಕ್ಕೆ ಅಂಟಿಕೊಂಡಿರುತ್ತವೆ, ಯಾಕಂದರೆ ಆ ಕಾಂಡದಿಂದಲೇ ನೀರು ಮತ್ತು ಇತರ ಪೋಷಕಗಳು ಬಳ್ಳಿಗಳಿಗೆ ಹೋಗುತ್ತಿರುತ್ತವೆ, ಇದರಿಂದ ಅವು ಬೆಳೆಯುತ್ತವೆ.
- ಯೇಸು ತನ್ನ ಕುರಿತು “ದ್ರಾಕ್ಷಿಬಳ್ಳಿ” ಎಂದು ಮತ್ತು ತನ್ನ ಜನರ ಕುರಿತಾಗಿ “ಕೊಂಬೆಗಳು” ಎಂದು ಹೇಳಿಕೊಂಡಿದ್ದಾರೆ. ಈ ಸಂದರ್ಭದಲ್ಲಿ “ಬಳ್ಳಿ” ಎನ್ನುವ ಪದವನ್ನು “ದ್ರಾಕ್ಷಿಬಳ್ಳಿ ಕಾಂಡ” ಅಥವಾ “ದ್ರಾಕ್ಷಿ ಗಿಡದ ಕಾಂಡ” ಎಂದೂ ಅನುವಾದ ಮಾಡಬಹುದು. (ನೋಡಿರಿ: ರೂಪಕಾಲಂಕಾರ)

(ಈ ಪದಗಳನ್ನು ಸಹ ನೋಡಿರಿ : ದ್ರಾಕ್ಷಿ, ದ್ರಾಕ್ಷಿತೋಟ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.40:9-11
- ಆದಿ.49:11-12
- ಯೋಹಾನ.15:1-2
- ಲೂಕ.22:17-18
- ಮಾರ್ಕ.12:1-3
- ಮತ್ತಾಯ.21:35-37

ಪದ ಡೇಟಾ:

- Strong's: H5139, H1612, H8321, G288, G290, G1009, G1092

ಬಹಿಷ್ಕಾರ, ಬಹಿಷ್ಕರಿಸುವುದು, ಬಹಿಷ್ಕರಿಸಲ್ಪಡುವುದು

ಪದದ ಅರ್ಥವಿವರಣೆ

"ಬಹಿಷ್ಕಾರ" ಎನ್ನುವ ಪದಕ್ಕೆ ಬೇರ್ಪಡಿಸು, ತೊಲಗಿಸು ಅಥವಾ ಮುಖ್ಯ ಗುಂಪಿನಿಂದ ಒಂಟಿಯಾಗಿ ತೆಗೆದುಹಾಕುವುದು ಎಂದರ್ಥ. ಅದು ಪಾಪದ ಶಿಕ್ಷೆಯಾಗಿ ಪರಿಶುದ್ಧವಾದ ತೀರ್ಪಿನಲ್ಲಿ ಕೊಳ್ಳುವ ಕ್ರಿಯೆಯನ್ನು ಸಹ ಸೂಚಿಸುತ್ತದೆ.

- ಹಳೆ ಒಡಂಬಡಿಕೆಯ ಕಾಲದಲ್ಲಿ, ದೇವರ ಆಜ್ಞೆಗಳಿಗೆ ಅವಿಧೇಯರಾಗಿರುವ ಜನರನ್ನು ದೇವಜನರಿಂದ ಮತ್ತು ಆತನ ಸನ್ನಿಧಾನದಿಂದ ಬಹಿಷ್ಕರಿಸಲ್ಪಡುತ್ತಾರೆ ಅಥವಾ ಬೇರ್ಪಡಿಸುತ್ತಾರೆ.
- ದೇವರನ್ನು ಆರಾಧಿಸದೆ ಅಥವಾ ಆತನಿಗೆ ಅವಿಧೇಯರಾಗಿದ್ದ ಕಾರಣ ಮತ್ತು ಅವರು ಇಸ್ರಾಯೇಲರಿಗೆ ಶತ್ರುಗಳಾದ ಕಾರಣ, ದೇವರು ಇಸ್ರಾಯೇಲ್ ಅಲ್ಲದ ದೇಶಗಳನ್ನು "ಬಹಿಷ್ಕಾರುಸುತ್ತೇನೆ" ಎಂದು ಹೇಳಿದನು.
- "ಬಹಿಷ್ಕಾರ" ಎನ್ನುವ ಪದವು ದೇವರು ಒಂದು ನದಿಯ ಪ್ರವಾಹವನ್ನು ನಿಲ್ಲಿಸಿದಕ್ಕೆ ಸಹ ಸೂಚಿಸುತ್ತಿದೆ.

ಅನುವಾದ ಸಲಹೆಗಳು:

- "ಬಹಿಷ್ಕಾರಿಸುವುದು" ಎನ್ನುವ ಪದವನ್ನು "ತೊಲಗಿಸಲ್ಪಡು" ಅಥವಾ "ದೂರವಾಗಿ ಕಳುಹಿಸುವುದು" ಅಥವಾ "ಬೇರ್ಪಡಿಸು" ಅಥವಾ "ನಾಶ ಮಾಡುವುದು" ಎಂದು ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, "ಬಹಿಷ್ಕಾರ" ಎನ್ನುವ ಪದವನ್ನು "ನಾಶಮಾಡಿ" ಅಥವಾ "ಕಳುಹಿಸು" ಅಥವಾ "ಬೇರ್ಪಡಿಸು" ಅಥವಾ "ನಾಶ ಮಾಡು" ಎಂದು ಅನುವಾದ ಮಾಡಬಹುದು.
- ಹರಿಯುವ ನೀರನ್ನು ನಿಲ್ಲಿಸಿದ ಸಂಧರ್ಭದಲ್ಲಿ ಇದನ್ನು "ನಿಲ್ಲಿಸಿವುದು" ಅಥವಾ "ಹರಿಯುವದನ್ನು ನಿಲ್ಲಿಸುವುದು" ಅಥವಾ "ವಿಭಾಜಿಸಲ್ಪಡುವುದು" ಎಂದು ಅನುವಾದ ಮಾಡಬಹುದು.
- ಈ ಪದವನ್ನು ಚಾಕುವಿನಿಂದ ಏನಾದರು ಕತ್ತರಿಸುವುದು ಎನ್ನುವ ಅಕ್ಷರಾರ್ಥವನ್ನು ಮತ್ತು ಈ ಪದದ ಅಲಂಕಾರಿಕ ರೂಪವನ್ನು ವಿಭೇದಿಸುವ ಹಾಗೆ ನೋಡಿಕೊಳ್ಳಬೇಕು.

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.17:12-14
- ನ್ಯಾಯ.21:6-7
- ಜ್ಞಾನೋ.23:17-18

ಪದ ಡೇಟಾ:

- Strong's: H1214, H1219, H1438, H1468, H1494, H1504, H1629, H1820, H1824, H1826, H2498, H2686, H3582, H3772, H5243, H5352, H6202, H6789, H6990, H7082, H7088, H7096, H7112, H7113, G609, G851, G1581, G2407, G5257

ಬಹುಮಾನ, ಬಹುಮಾನಗಳು, ಬಹುಮಾನ ಕೊಡಲಾಗಿದೆ, ಬಹುಮಾನ ಕೊಡುವುದು, ಬಹುಮಾನ ಕೊಡುವವನು

ಪದದ ಅರ್ಥವಿವರಣೆ:

"ಬಹುಮಾನ" ಎನ್ನುವ ಪದವು ಒಬ್ಬ ವ್ಯಕ್ತಿ ಮಾಡಿದ ಕೆಟ್ಟ ಕಾರ್ಯಕ್ಕಾಗಲಿ ಅಥವಾ ಒಳ್ಳೇಯ ಕಾರ್ಯಕ್ಕಾಗಲಿ ಪಡೆದುಕೊಳ್ಳುವ ಯಾವುದನ್ನಾಗಲಿ ಸೂಚಿಸುತ್ತವೆ. ಒಬ್ಬರಿಗೆ "ಬಹುಮಾನ" ಕೊಡುವುದು ಎಂದರೆ ಆ ವ್ಯಕ್ತಿಗೆ ಅರ್ಹವಾಗಿರುವ ಯಾವುದಾದರೊಂದನ್ನು ಕೊಡುವುದು ಎಂದರ್ಥ.

- ಒಬ್ಬ ವ್ಯಕ್ತಿ ಪಡೆದುಕೊಳ್ಳುವ ಬಹುಮಾನವು ಒಳ್ಳೇಯದಾಗಿರುತ್ತದೆ ಅಥವಾ ಸಕಾರಾತ್ಮಕವಾದ ವಿಷಯವಾಗಿರುತ್ತದೆ, ಯಾಕಂದರೆ ಆ ವ್ಯಕ್ತಿ ಒಳ್ಳೇಯದನ್ನು ಮಾಡಿರುತ್ತಾನೆ ಅಥವಾ ಆ ವ್ಯಕ್ತಿ ದೇವರಿಗೆ ವಿಧೇಯನಾಗಿರುತ್ತಾನೆ.
- ಕೆಲವೊಂದುಬಾರಿ ಬಹುಮಾನವು ಕೆಟ್ಟ ನಡತೆಯ ಕಾರಣದಿಂದ ಅದಕ್ಕೆ ತಕ್ಕ ಫಲವಾಗಿ ನಕಾರಾತ್ಮಕವಾದ ವಿಷಯಗಳನ್ನೂ ಸೂಚಿಸುತ್ತದೆ, ಉದಾಹರಣೆಗೆ "ದುಷ್ಟತ್ವದ ಬಹುಮಾನ" ಎನ್ನುವ ಮಾತಿನಂತೆ ಕೊಡಲಾಗುತ್ತದೆ. ಈ ಸಂದರ್ಭದಲ್ಲಿ "ಬಹುಮಾನ" ಎನ್ನುವ ಪದವು ಜನರ ಪಾಪ ಸ್ವಭಾವದ ಕ್ರಿಯೆಗಳ ಕಾರಣದಿಂದ ಅವರು ಪಡೆದುಕೊಳ್ಳುವ ನಕಾರಾತ್ಮಕವಾದ ಪರಿಣಾಮಗಳನ್ನು ಅಥವಾ ಶಿಕ್ಷೆಯನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, "ಬಹುಮಾನ" ಎನ್ನುವ ಪದವನ್ನು "ಪಾವತಿಸು" ಅಥವಾ "ಅರ್ಹತೆ ಹೊಂದಿರುವ ಯಾವುದೇ ಒಂದು" ಅಥವಾ "ಶಿಕ್ಷೆ" ಎಂದೂ ಅನುವಾದ ಮಾಡಬಹುದು.
- ಯಾರಾದರೊಬ್ಬರಿಗೆ "ಬಹುಮಾನ" ಕೊಡುವುದು" ಎನ್ನುವ ಮಾತನ್ನು "ತಿರುಗಿ ಪಾವತಿಸು" ಅಥವಾ "ಶಿಕ್ಷಿಸು" ಅಥವಾ "ಅರ್ಹತೆ ಇರುವುದನ್ನು ಕೊಡುವುದು" ಎಂದೂ ಅನುವಾದ ಮಾಡಬಹುದು.
- ಈ ಪದಕ್ಕೆ ಮಾಡುವ ಅನುವಾದ ಪದವು ಪ್ರತಿದಿನ ಸಂಪಾದಿಸಿಕೊಳ್ಳುವ ಕೂಲಿಯನ್ನು ಸೂಚಿಸದಂತೆ ನೋಡಿಕೊಳ್ಳಿರಿ. ಬಹುಮಾನ ಎನ್ನುವುದು ಉದ್ಯೋಗದಲ್ಲಿ ಭಾಗವಾಗಿ ಸಂಪಾದನೆ ಮಾಡುವ ಹಣವಲ್ಲವೆಂದು ವಿಶೇಷವಾಗಿ ತಿಳಿದುಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಶಿಕ್ಷಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.32:5-6
- ಯೆಶಯಾ.40:9-10
- ಲೂಕ.06:35-36
- ಮಾರ್ಕ.09:40-41
- ಮತ್ತಾಯ.05:11-12
- ಮತ್ತಾಯ.06:3-4
- ಕೀರ್ತನೆ.127:3-5
- ಪ್ರಕ.11:18

ಪದ ಡೇಟಾ:

- Strong's: H319, H866, H868, H1576, H1578, H1580, H4864, H4909, H4991, H5023, H6118, H6468, H6529, H7809, H7810, H7936, H7938, H7939, H7966, H7999, H8011, H8021, G469, G514, G591, G2603, G3405, G3406, G3408

ಬಾಗಿಲಿನ ನಿಲುವು ಪಟ್ಟಿಗಳು

ಪದದ ಅರ್ಥವಿವರಣೆ:

"ಬಾಗಿಲಿನ ನಿಲುವು ಪಟ್ಟಿಗಳು" ಎನ್ನುವುದು ಬಾಗಿಲಿಗೆ ಎರುಡು ಕಡೆಗೆ ಲಂಬವಾಗಿ ನಿಲ್ಲಿಸಿರುವ ಸ್ತಂಭಗಳು, ಇವು ಬಾಗಿಲಿನ ಚೌಕಟ್ಟು ಮೇಲ್ಭಾಗವನ್ನು ಬೆಂಬಲವಾಗಿರುತ್ತವೆ.

- ದೇವರು ಇಸ್ರಾಯೇಲ್ಯರಿಗೆ ಐಗುಪ್ತ ದೇಶದಿಂದ ತಪ್ಪಿಸುವುದಕ್ಕೆ ಸಹಾಯ ಮಾಡುವುದಕ್ಕೆ ಮುಂಚಿತವಾಗಿ, ಒಂದು ಕುರಿಯನ್ನು ಬಲಿ ಕೊಟ್ಟು, ಅದರ ರಕ್ತವನ್ನು ಬಾಗಿಲಿನ ನಿಲುವು ಪಟ್ಟಿಗಳ ಮೇಲೆ ಹಚ್ಚಬೇಕು ಎಂದು ಆತನು ಆಜ್ಞಾಪಿಸಿದ್ದನು.
- ಹಳೇ ಒಡಂಬಡಿಕೆಯಲ್ಲಿ ತನ್ನ ಜೀವಮಾನವೆಲ್ಲಾ ತನ್ನ ಯಜಮಾನನಿಗೆ ಸೇವೆ ಮಾಡಲು ಇಷ್ಟಪಟ್ಟ ಒಬ್ಬ ದಾಸನು ತನ್ನ ಯಜಮಾನನ ಮನೆಯ ಬಾಗಿಲಿನ ನಿಲುವು ಪಟ್ಟಿಗಳ ಮೇಲೆ ತನ್ನ ಕಿವಿಯನ್ನು ದಬ್ಬಲದಿಂದ ಚುಚ್ಚಿ ಕಡಕ್ಕೆ ಸಿಕ್ಕಿಸಬೇಕಾಗಿತ್ತು.
- ಇದನ್ನು "ಬಾಗಿಲಿಗೆ ಎರಡು ಕಡೆ ಇರುವ ಕಟ್ಟಿಗೆ ಸ್ತಂಭಗಳು" ಅಥವಾ "ಎರಡು ಕಡೆ ಇರುವ ಚೌಕಟ್ಟಿನ ಸ್ತಂಭಗಳು" ಅಥವಾ "ಬಾಗಿಲಿಗೆ ಎರಡು ಕಡೆಗೆ ಇರುವ ನಿಲುವು ಪಟ್ಟಿಗಳು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ಪಸ್ಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.06:31-32
- ಧರ್ಮೋ.11:20-21
- ವಿಮೋ.12:5-8
- ಯೆಶಾಯ.57:7-8

ಪದ ಡೇಟಾ:

- Strong's: H352, H4201

ಬಾಗಿಲು, ಬಾಗಿಲುಗಳು, ಬಾಗಿಲು ಪ್ರತಿಬಂಧಗಳು, ದ್ವಾರಪಾಲಕ, ದ್ವಾರಪಾಲಕರು, ಬಾಗಿಲು ಕಂಬಗಳು, ಮಹಾದ್ವಾರ, ಮಹಾದ್ವಾರಗಳು

ಪದದ ಅರ್ಥವಿವರಣೆ:

"ಬಾಗಿಲು (ಅಥವಾ ಆಂಗ್ಲದಲ್ಲಿ ಗೇಟ್)" ಎನ್ನುವುದು ಒಂದು ಮನೆಯ ಅಥವಾ ಪಟ್ಟಣದ ಸುತ್ತಲು ಗೋಡೆಗಳಿದ್ದು ಅಥವಾ ಬೇಲಿಗಳಿದ್ದು ಕೇವಲ ಒಂದು ಸ್ಥಳದಲ್ಲಿ ಮಾತ್ರ ಒಳಗೆ ಪ್ರವೇಶಿಸಲು ಇಟ್ಟುಕೊಳ್ಳುವ ಕೀಲುಗಳುಳ್ಳ ತಡೆಗೋಡೆಯನ್ನು ಸೂಚಿಸುತ್ತದೆ. "ಬಾಗಿಲು ಪ್ರತಿಬಂಧ" ಎನ್ನುವುದು ಬಾಗಿಲನ್ನು ಹಾಕುವುದಕ್ಕೆ ಉಪಯೋಗಿಸುವ ಮರದದಿಂದ ಮಾಡಿದ ಅಥವಾ ಲೋಹದಿಂದ ಮಾಡಿದ ಅಡ್ಡಮರವನ್ನು ಸೂಚಿಸುತ್ತದೆ.

- ಪಟ್ಟಣದ ಬಾಗಿಲು ಜನರನ್ನು, ಪ್ರಾಣಿಗಳನ್ನು ಮತ್ತು ಬೇರೆ ಪಟ್ಟಣದಿಂದ ಬಂದಿರುವ ಸರಕುಗಳನ್ನು ತೆಗೆದುಕೊಳ್ಳಲು ಅಥವಾ ಈ ಪಟ್ಟಣದಿಂದ ಬೇರೊಂದು ಪಟ್ಟಣಕ್ಕೆ ಕಳುಹಿಸುವ ಸರಕುಗಳನ್ನು ತೆಗೆದುಕೊಂಡು ಹೋಗಲು ಅನುಮತಿಸುವುದಕ್ಕೆ ತೆರೆಯುತ್ತಿರಬಹುದು.
- ಪಟ್ಟಣವನ್ನು ಕಾಪಾಡುವುದಕ್ಕೆ ಪಟ್ಟಣದ ಗೋಡೆಗಳು ಮತ್ತು ಬಾಗಿಲುಗಳು ದಪ್ಪವಾಗಿಯೂ ಮತ್ತು ಅತ್ಯಂತ ಬಲವಾಗಿಯು ಇರುತ್ತಿದ್ದವು. ಪಟ್ಟಣದೊಳಗೆ ಯಾವ ಶತ್ರುವಿನ ಸೈನಿಕರು ಪ್ರವೇಶಿಸದ ಹಾಗೆ ಬಾಗಿಲುಗಳನ್ನು ಮುಚ್ಚುತ್ತಿದ್ದರು ಮತ್ತು ಅವುಗಳನ್ನು ಮರದ ಕಟ್ಟಿಗೆಯಿಂದ ಅಥವಾ ಲೋಹದಿಂದ ಮಾಡಿರುವ ದೊಡ್ಡ ಅಡ್ಡಿಮರವನ್ನು ಇಡುತ್ತಿದ್ದರು.
- ಪಟ್ಟಣದ ಬಾಗಿಲು ಅನೇಕಬಾರಿ ಗ್ರಾಮದ ಸಾಮಾಜಿಕ ಕೇಂದ್ರವು ಮತ್ತು ವಾರ್ತೆಗಳಿಗೂ ಕೇಂದ್ರವಾಗಿರುತ್ತಿತ್ತು. ಇದು ವಾಣಿಜ್ಯ ವ್ಯಾಪಾರಗಳು ನಡೆಯುವ ಸ್ಥಳವೂ ಮತ್ತು ತೀರ್ಪುಗಳು ಮಾಡುವ ಸ್ಥಳವೂ ಆಗಿಯೂ ಇದ್ದಿತ್ತು. ಯಾಕಂದರೆ ಪಟ್ಟಣದ ಗೋಡೆಗಳು ತುಂಬಾ ದಪ್ಪವಾಗಿದ್ದವು, ಸೂರ್ಯನಿಂದ ಬರುವ ಬಿಸಿ ಪಟ್ಟಣದೊಳಗೆ ಬೀಳದಂತೆ ತಣ್ಣನೆಯ ನೆರಳು ಬೀಳುವುದಕ್ಕೆ ಬಾಗಿಲುಗಳಿದ್ದವು. ಪಟ್ಟಣದವರು ಈ ಬಾಗಿಲುಗಳ ನೆರಳಿನಲ್ಲಿ ತಮ್ಮ ವಾಣಿಜ್ಯ ವ್ಯಾಪಾರಗಳನ್ನು ನಡೆಸಿಕೊಳ್ಳುವುದಕ್ಕೆ ಮತ್ತು ಕೆಲವೊಂದು ಕಾನೂನು ಪ್ರಕರಣಗಳನ್ನು ತೀರ್ಪು ಮಾಡುವುದಕ್ಕೆ ಚೆನ್ನಾಗಿರುತ್ತದೆಯೆಂದು ತಿಳಿದು ಅಲ್ಲಿ ಕೂಡುತ್ತಿದ್ದರು.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ "ಬಾಗಿಲು" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ದ್ವಾರ" ಅಥವಾ "ತೆರೆಯಲ್ಪಟ್ಟಿರುವ ಗೋಡೆ" ಅಥವಾ "ತಡೆಗೋಡೆ" ಅಥವಾ "ಪ್ರವೇಶದ್ವಾರ" ಎಂದೂ ಅನುವಾದ ಮಾಡಬಹುದು.
- "ಬಾಗಿಲಿನ ಪ್ರತಿಬಂಧಗಳು" ಎನ್ನುವ ಮಾತನ್ನು "ಬಾಗಿಲಿನ ಅಗಣಿಗಳು" ಅಥವಾ "ಬಾಗಿಲನ್ನು ಮುಚ್ಚುವುದಕ್ಕೆ ದೊಡ್ಡ ತೊಲೆಗಳು" ಅಥವಾ "ಬಾಗಿಲನ್ನು ಮುಚ್ಚುವುದಕ್ಕೆ ಲೋಹದ ಕಡ್ಡೀಗಳು" ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.09:23-25
- ಅಪೊ.ಕೃತ್ಯ.10:17-18
- ಧರ್ಮೋ.21:18-19
- ಆದಿ.19:1-3
- ಆದಿ.24:59-60
- ಮತ್ತಾಯ.07:13-14

ಪದ ಡೇಟಾ:

- Strong's: H1817, H5592, H6607, H8179, H8651, G2374, G4439, G4440

ಬಿಡುಗಡೆ, ಬಿಡುಗಡೆಯಾಗುತ್ತದೆ, ಸ್ವಾತಂತ್ಯ್ರ, ಬಿಡುಗಡೆ ಆದವನು, ಸ್ವಚಿತ್ತ, ಸ್ವತಂತ್ರ

ಪದದ ಅರ್ಥವಿವರಣೆ:

“ಬಿಡುಗಡೆ” ಅಥವಾ “ಸ್ವಾತಂತ್ಯ್ರ," ಎನ್ನುವ ಪದಗಳು ಗುಲಾಮಗಿರಿಯಲ್ಲಿ ಇಲ್ಲದವರು ಅಥವಾ ಬೇರೆ ಯಾವ ವಿಧವಾದ ಬಂಧನಯಲ್ಲಿ ಇಲ್ಲದವರು ಎಂದರ್ಥ. “ಸ್ವಾತಂತ್ಯ್ರ” ಎನ್ನುವ ಪದಕ್ಕೆ “ಸ್ವತಂತ್ರ” ಎನ್ನುವುದು ಸಮಾನಾರ್ಥಕ ಪದವಾಗಿದೆ.

- “ಯಾರನ್ನಾದರೂ ಬಿಡುಗಡೆ ಮಾಡುವುದು” ಅಥವಾ “ಯಾರನ್ನಾದರೂ ಸ್ವತಂತ್ರನಾಗಿ ಮಾಡುವುದು” ಎನ್ನುವ ಭಾವನೆಗಳಿಗೆ ಬಂಧನದಿಂದ ಅಥವಾ ಗುಲಾಮಗಿರಿಯಿಂದ ಯಾರನ್ನಾದರೂ ಬಿಡಿಸುವುದು ಎಂದರ್ಥ.
- ಸತ್ಯವೇದದಲ್ಲಿ, ಯೇಸುವಿನಲ್ಲಿ ನಂಬಿಕೆಯಿಟ್ಟವರು ಪಾಪದ ಶಕ್ತಿಗೆ ಗುಲಾಮರಾಗಿರುವದಿಲ್ಲ ಎಂದು ಹೇಳಲು ಈ ಭಾವನೆಗಳನ್ನು ಅಲಂಕಾರಿಕ ರೂಪದಲ್ಲಿ ಉಪಯೋಗಿಸಿದ್ದಾರೆ.
- “ಸ್ವಾತಂತ್ಯ್ರ” ಎನ್ನುವ ಪದಕ್ಕೆ ಮೋಶೆ ಧರ್ಮಶಾಸ್ತ್ರಕ್ಕೆ ವಿಧೇಯರಾಗಿರಲು ಇನ್ನು ಅವಶ್ಯಕತೆಯಿಲ್ಲವೆಂದು ಸೂಚಿಸುತ್ತದೆ, ಆದರೆ ಪವಿತ್ರಾತ್ಮನ ನಾಯಕತ್ವದಲ್ಲಿ ಮತ್ತು ಆತನ ಬೋಧನೆಗಳಲ್ಲಿ ಸ್ವತಂತ್ರರಾಗಿ ಜೀವಿಸಬೇಕು.

ಅನುವಾದ ಸಲಹೆಗಳು:

- “ಬಿಡುಗಡೆ” ಎನ್ನುವ ಪದವನ್ನು “ಬಂದಿಯಾಗಿಲ್ಲ” ಅಥವಾ “ಗುಲಾಮನಲ್ಲ” ಅಥವಾ “ಗುಲಾಮಗಿರಿಯಲ್ಲಿ ಇಲ್ಲ” ಅಥವಾ “ಬಂಧನೆಯಲ್ಲಿ ಇಲ್ಲ” ಎಂದು ಅರ್ಥಕೊಂಡುವಂತೆ ಅನುವಾದ ಮಾಡಬಹುದು.
- “ಸ್ವಾತಂತ್ಯ್ರ” ಅಥವಾ “ಸ್ವತಂತ್ರ” ಎನ್ನುವ ಪದಗಳನ್ನು “ಬಿಡುಗಡೆ ಹೊಂದಿದವನು” ಅಥವಾ “ಗುಲಾಮಗಿರಿಯಿಲ್ಲದವನು” ಅಥವಾ “ಬಂಧನೆದಲ್ಲಿ ಇಲ್ಲದವನು” ಎಂದು ಅನುವಾದ ಮಾಡಬಹುದು.
- “ಸ್ವಾತಂತ್ಯ್ರ ಕೊಡು” ಎನ್ನುವ ಪದವನ್ನು “ಬಿಡುಗಡೆಗೆ ಕಾರಣ” ಅಥವಾ “ಗುಲಾಮಗಿರಿಯಿಂದ ಬಿಡಿಸುವುದು” ಅಥವಾ “ಬಂಧನೆಯಿಂದ ಬಿಡಿಸುವುದು” ಎಂದು ಅನುವಾದ ಮಾಡಬಹುದು.
- ಒಬ್ಬ ವ್ಯಕ್ತಿ “ಸ್ವಾತಂತ್ಯ್ರಹೊಂದಿದ್ದರೆ” ಅವನು “ಬಿಡುಗಡೆಹೊಂದಿದ್ದಾನೆ” ಅಥವಾ ಬಂಧನೆ ಅಥವಾ ಗುಲಾಮಗಿರಿಯಿಂದ “ಹೊರಗೆ ಕಳುಹಿಸಲ್ಪಟ್ಟಿದ್ದಾನೆ” ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ಬಂಧಿಸು, ಅಧೀನಪಡಿಸು, ಗುಲಾಮ)

ಸತ್ಯವೇದದ ಅನುಬಂಧ ವಾಕ್ಯಗಳು:

- ಗಲಾತ್ಯ.04:26
- ಗಲಾತ್ಯ.05:01
- ಯೆಶಯ.61:1
- ಯಾಜಕ.25:10
- ರೋಮ.06:18

ಪದ ಡೇಟಾ:

- Strong’s: H1865, H2600, H2666, H2668, H2670, H3318, H4800, H5068, H5069, H5071, H5337, H5352, H5355, H5425, H5674, H5800, H6299, H6362, H7342, H7971, G425, G525, G558, G629, G630, G859, G1344, G1432, G1657, G1658, G1659, G1849, G3089, G3955, G4506, G5483

ಬಿಲ್ಲು ಮತ್ತು ಬಾಣ, ಬಿಲ್ಲುಗಳು ಮತ್ತು ಬಾಣಗಳು

ಪದದ ಅರ್ಥವಿವರಣೆ:

ಈ ವಿಧವಾದ ಸಾಧನೆಯನ್ನು ತಂತಿ ಬಿಲ್ಲಿನಿಂದ ಪ್ರಯೋಗಿಸುವ ಬಾಣಗಳನ್ನು ಒಳಗೊಂಡಿರುತ್ತದೆ. ಸತ್ಯವೇದ ಕಾಲದಲ್ಲಿ ಇದನ್ನು ಶತ್ರುಗಳ ವಿರುದ್ಧ ಹೋರಾಡುವುದಕ್ಕೆ, ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

- ಬಿಲ್ಲು ಎನ್ನುವ ಸಾಧನವನ್ನು ಲೋಹ, ಎಲುಬು, ಕಟ್ಟಿಗೆ ಅಥವಾ ಜಿಂಕೆಯ ಕವಲ್ಗೊಂಬಿನಂಥಹ ಇತರ ಗಟ್ಟಿಯಾದ ವಸ್ತುವಿನಿಂದ ತಯಾರಿಸುತ್ತಾರೆ. ಇದು ಬಾಗಿದ ಆಕಾರವನ್ನು ಹೊಂದಿರುತ್ತದೆ ಮತ್ತು ಇದನ್ನು ತಂತಿ, ಹುರಿ, ಅಥವಾ ಬಳ್ಳಿ ಎನ್ನುವದರಲ್ಲಿ ಯಾವುದಾದರೊಂದಿಗೆ ತುಂಬಾ ಬಿಗಿಯಾಗಿ ಕಟ್ಟಿರುತ್ತಾರೆ.
- ಒಂದು ಬಾಣವು ತೀಕ್ಷ್ಣವಾಗಿದ್ದು ತೆಳುವಾಗಿ ಈಟಿಯ ಕೊನೆಯ ಭಾಗದಂಥೆ ಬಾಣಕ್ಕೆ ಒಂದು ಕಡೆಗೆ ಇಟ್ಟಿರುತ್ತಾರೆ. ಪುರಾತನ ಕಾಲದಲ್ಲಿ ಬಾಣಗಳನ್ನು ಕಟ್ಟಿಗೆ, ಎಲುಬು, ಕಲ್ಲು, ಅಥವಾ ಲೋಹಗಳಿಂದ ತಂಬಾ ವಿಚಿತ್ರವಾಗಿ ಮಾಡುತ್ತಿದ್ದರು.
- ಬಿಲ್ಲುಗಳು ಮತ್ತು ಬಾಣಗಳು ಸಹಜವಾಗಿ ಬೇಟೆಗಾರರಿಂದ ಮತ್ತು ಯೋಧರಿಂದ ಉಪಯೋಗಿಸಲ್ಪಡುತ್ತಿದ್ದವು.
- “ಬಾಣ” ಎನ್ನುವ ಪದವು ಕೆಲವೊಂದುಬಾರಿ ಶತ್ರುವಿನ ಧಾಳಿ ಅಥವಾ ದೈವಿಕ ತೀರ್ಪನ್ನು ಸೂಚಿಸುವುದಕ್ಕೆ ಸತ್ಯವೇದದಲ್ಲಿ ಅಲಂಕಾರ ರೂಪದಲ್ಲಿ ಉಪಯೋಗಿಸಿರುತ್ತಾರೆ.

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.21:14-16
- ಹಬ.03:9-10
- ಯೋಬ.29:20-22
- ಪ್ರಲಾಪ.02:3-4
- ಕೀರ್ತನೆ.058:6-8

ಪದ ಡೇಟಾ:

- Strong's: H2671, H7198, G5115

ಬಿಲ್ಲುಗಾರ, ಬಿಲ್ಲುಗಾರರು

ಪದದ ಅರ್ಥವಿವರಣೆ:

“ಬಿಲ್ಲುಗಾರ” ಎನ್ನುವ ಪದವು ಬಾಣಗಳನ್ನು ಆಯುಧಗಳನ್ನಾಗಿ ಉಪಯೋಗಿಸುವ ಚಾತುರ್ಯವನ್ನು ಪಡೆದ ವ್ಯಕ್ತಿಯನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ ಬಿಲ್ಲುಗಾರನನ್ನು ಸಹಜವಾಗಿ ಸೈನ್ಯದಲ್ಲಿ ಯುದ್ಧ ಮಾಡುವುದಕ್ಕೆ ಬಾಣಗಳನ್ನು ಉಪಯೋಗಿಸುವ ಒಬ್ಬ ಸೈನಿಕನನ್ನು ಸೂಚಿಸುತ್ತದೆ.
- ಬಿಲ್ಲುಗಾರರು ಅಶ್ಶೂರ್ ಸೈನ್ಯ ದಳದಲ್ಲಿ ತುಂಬಾ ಪ್ರಾಮುಖ್ಯವಾದ ಜನರಾಗಿರುತ್ತಾರೆ.
- ಕೆಲವೊಂದು ಭಾಷೆಗಳಲ್ಲಿ ಅಥವಾ ಈ ಕನ್ನಡ ಭಾಷೆಯಲ್ಲಿ ಈ ಪದಕ್ಕೆ “ಧನುರ್ಧಾರಿ” ಎಂದೂ ಕರೆಯುತ್ತಾರೆ

(ಈ ಪದಗಳನ್ನು ಸಹ ನೋಡಿರಿ : ಅಶ್ಶೂರ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.31:1-3
- 2 ಪೂರ್ವ.35:23-24
- ಆದಿ.21:19-21
- ಯೆಶಯಾ.21:16-17
- ಯೋಬ.16:13-14
- ಜ್ಞಾನೋ.26:9-10

ಪದ ಡೇಟಾ:

- Strong's: H1167, H1869, H2671, H2686, H3384, H7198, H7199, H7228

ಬೀಜ, ವೀರ್ಯ

ಪದದ ಅರ್ಥವಿವರಣೆ:

"ಬೀಜ" ಎನ್ನುವುದು ಒಂದು ಸಸ್ಯದ ಭಾಗವಾಗಿದ್ದು, ಅದೇ ರೀತಿಯ ಹೆಚ್ಚಿನ ಸಸ್ಯಗಳನ್ನು ಸಂತಾನೋತ್ಪತ್ತಿ ಮಾಡಲು ನೆಲದಲ್ಲಿ ನೆಡಲಾಗುತ್ತದೆ. ಅದಾಗ್ಯೂ, ಸತ್ಯವೇದದಲ್ಲಿ "ಬೀಜ" ಎಂಬ ಪದವನ್ನು ಹಲವಾರು ವಿಭಿನ್ನ ವಿಷಯಗಳನ್ನು ಅರ್ಥೈಸಲು ಸಾಂಕೇತಿಕವಾಗಿ ಬಳಸಲಾಗುತ್ತದೆ.

- “ಬೀಜ” ಎನ್ನುವ ಪದವು ಒಬ್ಬ ಸ್ತ್ರೀಯಲ್ಲಿ ಶಿಶುವು ಉಂಟಾಗಿ ಬೆಳೆಯುವುದಕ್ಕೆ ಆ ಸ್ತ್ರೀಯ ಕಣಗಳೊಂದಿಗೆ ಬೆರೆತುಗೊಳ್ಳುವ ಮನುಷ್ಯನಲ್ಲಿರುವ ಚಿಕ್ಕ ಕಣವನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಮತ್ತು ಸವ್ಯೋಕ್ತಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ. ಈ ಕಣಗಳ ಸಂಗ್ರಹವನ್ನು ವೀರ್ಯ ಎಂದು ಕರೆಯುತ್ತಾರೆ.
- ಇದಕ್ಕೆ ಸಂಬಂಧಪಟ್ಟು “ಬೀಜ” ಎನ್ನುವ ಪದವನ್ನು ಒಬ್ಬ ವ್ಯಕ್ತಿಯ ಸಂತಾನವನ್ನು ಅಥವಾ ಪೀಳಿಗೆಯನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.
- ಈ ಪದಕ್ಕೆ ಅನೇಕಬಾರಿ ಬಹುವಚನದ ಅರ್ಥವನ್ನು ಹೊಂದಿರುತ್ತದೆ, ಒಂದು ಬೀಜದ ಕಾಳಿಗಿಂತ ಹೆಚ್ಚು ಕಾಳುಗಳನ್ನು ಅಥವಾ ಒಂದು ಸಂತಾನಕ್ಕಿಂತ ಹೆಚ್ಚಿನ ಸಂತಾನವನ್ನು ಸೂಚಿಸುತ್ತದೆ.
- ರೈತನು ಬೀಜಗಳನ್ನು ಬಿತ್ತುವ ಸಾಮ್ಯದಲ್ಲಿ, ಯೇಸು ಹೇಳಿದ ಸಾಮ್ಯದಲ್ಲಿನ ಬೀಜಗಳನ್ನು ದೇವರ ವಾಕ್ಯಕ್ಕೆ ಹೋಲಿಸಿದ್ದಾನೆ, ಒಳ್ಳೆಯ ಆತ್ಮೀಯಕವಾದ ಫಲವನ್ನು ಉತ್ಪಾದಿಸುವ ಕ್ರಮದಲ್ಲಿ ಜನರ ಹೃದಯಗಳಲ್ಲಿ ಬಿತ್ತಲ್ಪಟ್ಟಿರುತ್ತದೆ.
- “ಬೀಜ” ಎನ್ನುವ ಪದವನ್ನು ದೇವರ ವಾಕ್ಯವನ್ನು ಸೂಚಿಸುತ್ತಾ ಅಪೊಸ್ತಲನಾದ ಪೌಲನು ಉಪಯೋಗಿಸಿದ್ದಾನೆ.

ಅನುವಾದ ಸಲಹೆಗಳು:

- ನಿಜವಾದ ಬೀಜವನ್ನು ಸೂಚಿಸಿದಾಗ, ರೈತರು ತಮ್ಮ ಹೊಲ ಗದ್ದೆಗಳಲ್ಲಿ ಬಿತ್ತುವುದಕ್ಕೆ ಅನುವಾದ ಭಾಷೆಯಲ್ಲಿ ಉಪಯೋಗಿಸುವ “ಬೀಜ ಅಥವಾ ಕಾಳು” ಎನ್ನುವ ಪದವನ್ನು ಉಪಯೋಗಿಸುವುದು ಉತ್ತಮವಾದ ವಿಷಯ.
- ದೇವರ ವಾಕ್ಯವನ್ನು ಅಲಂಕಾರಿಕವಾಗಿ ಸೂಚಿಸುವ ಸಂದರ್ಭಗಳಲ್ಲಿ ಅಕ್ಷರಾರ್ಥವಾದ ಈ ಪದವನ್ನು ಉಪಯೋಗಿಸಬಹುದು.
- ಅಲಂಕಾರಿಕ ಉಪಯೋಗದಲ್ಲಿ ಈ ಪದವು ಒಂದೇ ಕುಟುಂಬದ ಸಂತಾನವಾಗಿರುವ ಜನರನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ., ಈ ಸಂದರ್ಭಕ್ಕೆ ಬೀಜ ಎನ್ನುವ ಪದವನ್ನು ಉಪಯೋಗಿಸುವುದಕ್ಕೆ ಬದಲಾಗಿ “ವಂಶಸ್ಥರು” ಅಥವಾ “ಸಂತಾನದವರು” ಎನ್ನುವ ಪದಗಳನ್ನು ಉಪಯೋಗಿಸುವುದು ತುಂಬಾ ಸ್ಪಷ್ಟವಾಗಿರುತ್ತದೆ. ಕೆಲವೊಂದು ಭಾಷೆಗಳಲ್ಲಿ “ಮಕ್ಕಳು ಮತ್ತು ಮೊಮ್ಮೊಕ್ಕಳು” ಎಂದು ಅರ್ಥ ಬರುವ ಪದಗಳನ್ನು ಉಪಯೋಗಿಸುತ್ತಿರಬಹುದು.
- ಪುರುಷ ಅಥವಾ ಸ್ತ್ರೀಯಳ “ಬೀಜ” ಎಂದು ಹೇಳುವಾಗ, ಜನರನ್ನು ಮುಜುಗರ ಮಾಡದ ಅಥವಾ ಸಮರ್ಥಿಸಿಕೊಳ್ಳದ ವಿಧಾನದಲ್ಲಿ ಇದನ್ನು ಯಾವರೀತಿ ವ್ಯಕ್ತಪಡಿಸಲಾಗುತ್ತಿದೆ ಎಂದು ಪರಿಗಣಿಸಿರಿ. (ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ವಂಶಸ್ಥರು, ಸಂತತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.18:30-32
- ಆದಿ.01:11-13
- ಯೆರೆ.02:20-22
- ಮತ್ತಾಯ.13:7-9

ಪದ ಡೇಟಾ:

- Strong's: H2232, H2233, H2234, H3610, H6507, G4615, G4687, G4690, G4701, G4703

ಬೂದಿ, ಭಸ್ಮ, ಧೂಳಿ

ಸತ್ಯಾಂಶಗಳು:

“ಬೂದಿ” ಅಥವಾ “ಭಸ್ಮ” ಎನ್ನುವ ಪದಗಳು ಕಟ್ಟಿಗೆಯನ್ನು ಉರಿದಾದನಂತರ ಕೆಳಗೆ ಬೀಳುವ ಪುಡಿ ಪದಾರ್ಥವನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ ಕೆಲವೊಂದುಸಲ “ಧೂಳಿ” ಎನ್ನುವ ಪದವು ಭಸ್ಮದ ಕುರಿತಾಗಿ ಮಾತನಾಡಲು ಉಪಯೋಗಿಸಿದ್ದಾರೆ. ಇದನ್ನು ಒಣ ನೆಲದ ಮೇಲೆ ಬರುವ ನುಣುಪಾದ ಮಣ್ಣಿಗೆ ಮತ್ತು ದೂಳಿಗೆ ಕೂಡ ಸೂಚಿಸುತ್ತಾರೆ.
- “ಬೂದಿ ಕುಪ್ಪೆ” ಎನ್ನುವುದು ಭಸ್ಮದ ರಾಶಿಯಾಗಿರುತ್ತದೆ.
- ಪುರಾತನ ಕಾಲದಲ್ಲಿ ಬೂದಿಯಲ್ಲಿ ಕುಳಿತುಕೊಳ್ಳುವುದೆನ್ನುವುದು ಪ್ರಲಾಪಕ್ಕೆ ಅಥವಾ ಅತೀ ದುಃಖಕ್ಕೆ ಸೂಚನೆಯಾಗಿದ್ದಿತ್ತು.
- ಪ್ರಲಾಪಿಸುವಾಗ ಹರಿದು ಹೋಗಿರುವ ಗೋಣಿ ಚೀಲಗಳನ್ನು ಧರಿಸುವುದು ಮತ್ತು ಭಸ್ಮದಲ್ಲಿ ಕುಳಿತುಕೊಳ್ಳುವುದು ಅಥವಾ ತಲೆಯ ಮೇಲೆ ಬೂದಿಯನ್ನು ಹಾಕಿಕೊಳ್ಳುವುದು ಸಂಪ್ರದಾಯವಾಗಿತ್ತು.
- ತಲೆಯ ಮೇಲೆ ಭಸ್ಮವನ್ನು ಹಾಕಿಕೊಳ್ಳುವುದು ಕೂಡ ಅವಮಾನಕ್ಕೆ ಅಥವಾ ಮಜುಗರಕ್ಕೆ ಚಿಹ್ನೆಯಾಗಿತ್ತು.
- ವರ್ಥ್ಯವಾದವುಗಳಿಗೋಸ್ಕರ ಶ್ರಮಿಸುವುದೆನ್ನುವುದು “ಭಸ್ಮಕ್ಕೆ ಊಟ ಉಣಿಸಿದ ಹಾಗೆ” ಎಂದು ಹೇಳುತ್ತಾರೆ.
- “ಭಸ್ಮ” ಎನ್ನುವ ಪದವನ್ನು ಅನುವಾದ ಮಾಡುವಾಗ, ಕಟ್ಟಿಗೆಯನ್ನು ಉರಿಸಿದ ಮೇಲೆ ಕೆಳಗೆ ಬೀಳುವ ಪುಡಿ ಪದಾರ್ಥವನ್ನು ಸೂಚಿಸುವ ಭಾಷೆಯ ಪದವನ್ನೇ ಉಪಯೋಗಿಸಿರಿ.
- “ಬೂದಿ ಮರ” ಎನ್ನುವುದು ಸಂಪೂರ್ಣವಾಗಿ ಬೇರೆ ಪದವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಅಗ್ನಿ, ಗೋಣಿ ಚೀಲದ ಬಟ್ಟೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.20:9-10
- ಯೆರೆ.06:25-26
- ಕೀರ್ತನೆ.102:9-10
- ಕೀರ್ತನೆ.113:7-8

ಪದ ಡೇಟಾ:

- Strong's: H80, H665, H666, H766, H1854, H6083, H6368, H7834, G2868, G4700, G5077, G5522

ಬೆಂಕಿ, ಉದ್ರೇಕಕಾರಿ, ಧೂಪಾರತಿ, ಅಗ್ನಿಷ್ಟಿಕೆ, ಕುಲುಮೆ, ಕುಳುಮೆಗಳು

ಪದದ ಅರ್ಥವಿವರಣೆ

ಏನಾದರೂ ಸುಡುವುದರ ಮೂಲಕ ಬರುವ ಬಿಸಿ, ಬೆಳಕು ಮತ್ತು ಜ್ವಾಲೆಗಳನ್ನು ಬೆಂಕಿ ಎನ್ನುತ್ತಾರೆ.

- ಬೆಂಕಿಯಿಂದ ಕಟ್ಟಿಗೆಯನ್ನು ಸುಟ್ಟಿದರೆ ಅದು ಭಸ್ಮವಾಗುತ್ತದೆ.
- ಬೆಂಕಿಯು ಬಿರುಗಾಳಿಯ ಸಮಯದಲ್ಲಿ ಸ್ವರ್ಗದಿಂದ ಬರುವ ಬೆಳಕನ್ನಾಗಿಯೂ ಉಲ್ಲೇಖಿಸಬಹುದು.
- ನ್ಯಾಯತೀರ್ಪು ಅಥವಾ ಶುದ್ಧಿಕರಣವನ್ನು ಸೂಚಿಸಲು ಅಲಂಕಾರಿಕ ಭಾಷೆಯಲ್ಲಿ "ಬೆಂಕಿ" ಎನ್ನುವ ಪದವನ್ನು ಉಪಯೋಗಿಸುತ್ತಾರೆ.
- ಎಲ್ಲಾ ಅವಿಶ್ವಾಸಿಗಳ ಅಂತ್ಯ ತೀರ್ಪು ನರಕದ ಬೆಂಕಿಯಲ್ಲಿರುತ್ತದೆ.
- ಬಂಗಾರ ಮತ್ತು ಇನ್ನಿತರ ಲೋಹಗಳನ್ನು ಶುಚಿಮಾಡಲು ಬೆಂಕಿಯನ್ನು ಉಪಯೋಗಿಸುತ್ತಾರೆ. ದೇವರು ತನ್ನ ಜನರಿಗೆ ಅವರ ಜೀವನದಲ್ಲಿ ಎದುರಾಗುವ ಕಷ್ಟಗಳ ಮೂಲಕ ಪರಿಶುದ್ಧಗೊಳಿಸಲು ಈ ಪದ್ಧತಿಯನ್ನು ಉಪಯೋಗಿಸುತ್ತಾನೆಂದು ಸತ್ಯವೇದದಲ್ಲಿ ಹೇಳಲ್ಪಟ್ಟಿದೆ.
- "ಬೆಂಕಿಯ ಮೂಲಕ ದಿಕ್ಷಾಸ್ನಾನ" ಹೊಂದುವುದು ಎನ್ನುವ ಪದವನ್ನು ಅನುವಾದ ಮಾಡಲು "ಪರಿಶುದ್ಧವಾಗಲು ಶ್ರಮಗಳನ್ನು ಅನುಭವಿಸಬೇಕೆಂದು" ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.16:18-20
- 2 ಅರಸ.01:9-10
- 2 ಥೆಸ.01:6-8
- ಅಪೊ.ಕೃತ್ಯ.07:29-30
- ಯೋಹಾನ.15:5-7
- ಲೂಕ.03:15-16
- ಮತ್ತಾಯ.03:10-12
- ನೆಹೆ.01:3

ಪದ ಡೇಟಾ:

- Strong's: H215, H217, H398, H784, H800, H801, H1197, H1200, H1513, H2734, H3341, H3857, H4071, H4168, H5135, H6315, H8316, G439, G440, G1067, G2741, G4442, G4443, G4447, G4448, G4451, G5394, G5457

ಬೆಳಕು, ಪ್ರಕಾಶಿಸು, ಕಾಂತಿ, ಜ್ಞಾನೋದಯ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಬೆಳಕು" ಎನ್ನುವ ಪದವನ್ನು ಅನೇಕವಾದ ಅಲಂಕಾರಿಕ ಭಾಷೆಯಲ್ಲಿ ಉಪಯೋಗಿಸಲಾಗಿದೆ. ಈ ಪದವನ್ನು ಅಲಂಕಾರಿಕವಾಗಿ ನೀತಿ, ಪರಿಶುದ್ಧತೆ ಮತ್ತು ಸತ್ಯಕ್ಕೆ ಉಪಯೋಗಿಸಲಾಗಿರುತ್ತದೆ.

- ಯೇಸು ದೇವರ ನಿಜವಾದ ಸಂದೇಶವನ್ನು ಈ ಲೋಕ ತರುತ್ತೇನೆಂದು ಮತ್ತು ಸಮಸ್ತ ಜನರ ಪಾಪಗಳ ಕತ್ತಲೆಯಿಂದ ಜನರನ್ನು ರಕ್ಷಿಸುವನೆಂದು ಹೇಳುವುದಕ್ಕೆ ಆತನು "ನಾನು ಲೋಕಕ್ಕೆ ಬೆಳಕಾಗಿದ್ದೇನೆ" ಎಂದು ಹೇಳಿದರು.
- "ಬೆಳಕಿನಲ್ಲಿ ನಡೆಯಬೇಕೆಂಬುದಾಗಿ" ಕ್ರೈಸ್ತರು ಆಜ್ಞಾಪಿಸಲ್ಪಟ್ಟಿದ್ದಾರೆ, ಅಂದರೆ ಅವರು ಯಾವ ದುಷ್ಟತನವನ್ನು ಮಾಡದೇ ಅವರು ಯಾವರೀತಿ ಇರಬೇಕೆಂದು ದೇವರು ಬಯಸಿದ ರೀತಿಯಲ್ಲಿ ಅವರು ಜೀವಿಸಬೇಕಾಗಿರುತ್ತದೆ.
- "ದೇವರು ಬೆಳಕಾಗಿದ್ದಾರೆ" ಮತ್ತು ಆತನಲ್ಲಿ ಯಾವ ಕತ್ತಲೆಯೂ ಇಲ್ಲ ಎಂದು ಅಪೊಸ್ತಲನಾದ ಯೋಹಾನನು ಹೇಳಿದ್ದಾನೆ.
- ಬೆಳಕು ಮತ್ತು ಕತ್ತಲು ಎರಡೂ ಒಂದಕ್ಕೊಂದು ವಿರುದ್ಧವಾಗಿರುತ್ತವೆ. ಕತ್ತಲು ಎನ್ನುವುದು ಬೆಳಕಿಲ್ಲದ ಸ್ಥಿತಿಯಾಗಿರುತ್ತದೆ.
- ಯೇಸು "ಲೋಕಕ್ಕೆ ಬೆಳಕಾಗಿದ್ದೇನೆ" ಎಂದು ಹೇಳಿದ್ದಾರೆ ಮತ್ತು ತನ್ನ ಶಿಷ್ಯರು ದೇವರು ಎಷ್ಟು ದೊಡ್ಡವರೋ ಎಂದು ತೋರಿಸುವ ಸ್ಪಷ್ಟವಾದ ವಿಧಾನದಲ್ಲಿ ಜೀವಿಸುವುದರ ಮೂಲಕ ಪ್ರಪಂಚದಲ್ಲಿ ದೀಪಗಳಂತೆ ಪ್ರಕಾಶಿಸಬೇಕಾಗಿರುತ್ತದೆ.
- "ಬೆಳಕಿನಲ್ಲಿ ನಡೆಯುವುದು" ಎನ್ನುವ ಮಾತು ದೇವರನ್ನು ಮೆಚ್ಚಿಸುವ ವಿಧಾನದಲ್ಲಿ ಜೀವಿಸುವುದನ್ನು, ಸರಿಯಾದದ್ದನ್ನೇ ಮಾಡುವುದನ್ನು ಸೂಚಿಸುತ್ತದೆ. ಕತ್ತಲೆಯಲ್ಲಿ ನಡೆಯುವುದೆನ್ನುವುದು ದೇವರಿಗೆ ವಿರುದ್ಧವಾಗಿ ತಿರಸ್ಕಾರ ಮಾಡಿ ಜೀವಿಸುವುದನ್ನು, ಎಲ್ಲಾ ಕೆಟ್ಟ ಕಾರ್ಯಗಳನ್ನು ಮಾಡುತ್ತಾ ಜೀವಿಸುವುದನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಅನುವಾದ ಮಾಡುವಾಗ, ಈ ಪದಗಳನ್ನು ಅಲಂಕಾರಿಕ ಪದ್ಧತಿಯಲ್ಲಿ ಉಪಯೋಗಿಸಿದ್ದರೂ, "ಬೆಳಕು" ಮತ್ತು "ಕತ್ತಲು" ಎನ್ನುವ ಪದಗಳನ್ನು ಹಾಗೆಯೇ ಇಡುವುದು ತುಂಬಾ ಪ್ರಾಮುಖ್ಯ.
- ವಾಕ್ಯದಲ್ಲಿ ಹೋಲಿಕೆಯನ್ನು ವಿವರಿಸುವುದು ತುಂಬ ಅತ್ಯಗತ್ಯ. ಉದಾಹರಣೆಗೆ, "ಬೆಳಕಿನ ಮಕ್ಕಳಾಗಿ ನಡೆಯಿರಿ" ಎನ್ನುವ ಮಾತನ್ನು "ನೀತಿಯುತವಾದ ಜೀವನಗಳನ್ನು ಬಹಿರಂಗವಾಗಿ ಜೀವಿಸಿರಿ, ಪ್ರಕಾಶವಾದ ಸೂರ್ಯನ ಬೆಳಕಿನಲ್ಲಿ ಒಬ್ಬರು ಜೀವಿಸುವ ರೀತಿಯಲ್ಲಿ ಜೀವಿಸಿರಿ".
- "ಬೆಳಕು" ಎನ್ನುವ ಪದವನ್ನು ಉಪಯೋಗಿಸುವಾಗ, ಇದು ಸಹಜವಾಗಿ ಬೆಳಕು ಕೊಡುವ ಒಂದು ದೀಪವನ್ನು ಮಾತ್ರ ಸೂಚಿಸದಂತೆ ನೋಡಿಕೊಳ್ಳಿರಿ. ಈ ಪದದ ಅನುವಾದವು ಕೇವಲ ಬೆಳಕನ್ನು ಮಾತ್ರವೇ ಸೂಚಿಸಬೇಕು.

(ಈ ಪದಗಳನ್ನು ಸಹ ನೋಡಿರಿ : ಕತ್ತಲು, ಪರಿಶುದ್ಧತೆ, ನೀತಿ, ನಿಜ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.01:07
- 1 ಯೋಹಾನ.02:08
- 2 ಕೊರಿಂಥ.04:06
- ಅಪೊ.ಕೃತ್ಯ.26:18
- ಯೆಶಯಾ.02:05
- ಯೋಹಾನ.01:05
- ಮತ್ತಾಯ.05:16
- ಮತ್ತಾಯ.06:23
- ನೆಹೆ.09:12-13
- ಪ್ರಕ.18:23-24

ಪದ ಡೇಟಾ:

- Strong's: H216, H217, H3313, H3974, H5051, H5094, H5105, H5216, H7837, G681, G796, G1645, G2985, G3088, G5338, G5457, G5458, G5460, G5462

ಬೆಳ್ಳಿ

ಪದದ ಅರ್ಥವಿವರಣೆ:

ಬೆಳ್ಳಿ ಎನ್ನುವುದು ನಾಣ್ಯಗಳನ್ನು, ರತ್ನಾಭರಣಗಳನ್ನು, ಪಾತ್ರೆಗಳನ್ನು ಮತ್ತು ಆಭರಣಗಳನ್ನು ಮಾಡುವುದಕ್ಕೆ ಹೊಳೆಯುತ್ತಿರುವ, ಬೂದು ಬಣ್ಣದಲ್ಲಿರುವ ಅಮೂಲ್ಯವಾದ ಲೋಹವಾಗಿರುತ್ತದೆ.

- ಅನೇಕ ವಿಧವಾದ ಪಾತ್ರೆಗಳಲ್ಲಿ ಬೆಳ್ಳಿ ಬಟ್ಟಲುಗಳು ಒಳಗೊಂಡಿರುತ್ತವೆ, ಮತ್ತು ಅಡುಗೆ ಮಾಡುವುದಕ್ಕೆ, ತಿನ್ನುವುದಕ್ಕೆ ಮತ್ತು ಬಡಿಸುವುದಕ್ಕೆ ಈ ವಸ್ತುಗಳನ್ನು ಉಪಯೋಗಿಸುತ್ತಾರೆ.
- ಬೆಳ್ಳಿ ಮತ್ತು ಬಂಗಾರಗಳನ್ನು ದೇವಾಲಯವನ್ನು ಮತ್ತು ಗುಡಾರವನ್ನು ನಿರ್ಮಿಸುವುದರಲ್ಲಿ ಉಪಯೋಗಿಸಿದ್ದಾರೆ. ಯೆರೂಸಲೇಮಿನಲ್ಲಿರುವ ದೇವಾಲಯದಲ್ಲಿ ಬೆಳ್ಳಿಯಿಂದ ಮಾಡಲ್ಪಟ್ಟ ಪಾತ್ರೆಗಳು ಇರುತ್ತವೆ.
- ಸತ್ಯವೇದದಲ್ಲಿ ಶೆಕೆಲ್ ಎನ್ನುವುದು ತೂಕದ ಒಂದು ಘಟಕವಾಗಿರುತ್ತದೆ, ಮತ್ತು ಕೊಂಡುಕೊಳ್ಳುವುದೆನ್ನುವುದು ಅನೇಕಬಾರಿ ಖರೀದಿಸಬೇಕಾದಾಗ ಬೆಳ್ಳಿಯಿಂದ ಮಾಡಲ್ಪಟ್ಟಿರುವ ಶೆಕೆಲುಗಳ ಸಂಖ್ಯೆಯು ಇರುತ್ತಿತ್ತು. ಹೊಸ ಒಡಂಬಡಿಕೆಯ ಕಾಲದ ಪ್ರಕಾರ ಶೆಕೆಲುಗಳಲ್ಲಿ ಅಳತೆ ಮಾಡುವ ಅನೇಕ ವಿಧವಾದ ತೂಕಗಳಲ್ಲಿ ಬೆಳ್ಳಿಯ ನಾಣ್ಯಗಳನ್ನು ತಯಾರು ಮಾಡುತ್ತಿದ್ದರು.
- ಯೋಸೇಫನ ಸಹೋದರರು ಆತನನ್ನು ಬೆಳ್ಳಿಯ ಇಪ್ಪತ್ತು ಶೆಕೆಲುಗಳಿಗೆ ಗುಲಾಮನನ್ನಾಗಿ ಮಾರಿದರು.
- ಯೇಸುವಿಗೆ ದ್ರೋಹ ಬಗೆದಿದ್ದಕ್ಕಾಗಿ ಯೂದನಿಗೆ ಮೂವತ್ತು ಬೆಳ್ಳಿ ನಾಣ್ಯಗಳನ್ನು ನೀಡಲಾಯಿತು.

(ಈ ಪದಗಳನ್ನು ಸಹ ನೋಡಿರಿ : ಗುಡಾರ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.18:9-11
- 1 ಸಮು.02:36
- 2 ಅರಸ.25:13-15
- ಅಪೊ.ಕೃತ್ಯ.03:4-6
- ಮತ್ತಾಯ.26:14-16

ಪದ ಡೇಟಾ:

- Strong's: H3701, H3702, H7192, G693, G694, G695, G696, G1406

ಬೆಸ್ತರು, ಮೀನುಗಾರ

ಪದದ ಅರ್ಥವಿವರಣೆ

ಹಣ ಸಂಪಾದಿಸಿಕೊಳ್ಳಲು ಮೀನು ಹಿಡಿಯುವವರನ್ನ ಬೆಸ್ತರು ಎನ್ನುತ್ತಾರೆ. ಹೊಸ ಒಡಂಬಡಿಕೆಯಲ್ಲಿ, ಮೀನು ಹಿಡಿಯಲು ದೊಡ್ಡ ಬಲೆಯನ್ನು ಉಪಯೋಗಿಸುತ್ತಿದ್ದರು. ಬೆಸ್ತರು ಎನ್ನುವ ಪದಕ್ಕೆ "ಮೀನುಗಾರರು" ಎನ್ನುವುದು ಇನ್ನೊಂದು ಹೆಸರಾಗಿದೆ.

- ಯೇಸು ಕರೆಯುವುದಕ್ಕೆ ಮುನ್ನ ಪೇತ್ರನು ಮತ್ತು ಇತರ ಅಪೊಸ್ತಲರು ಬೆಸ್ತರಾಗಿದ್ದರು.
- ಇಸ್ರಾಯೇಲ್ ದೇಶ ನೀರಿನ ಬಳಿ ಇದ್ದಕಾರಣ, ಮೀನು ಮತ್ತು ಬೆಸ್ತರು ಕುರಿತಾಗಿ ಸತ್ಯವೇದ ಬಹಳ ಹೇಳುತ್ತಿದೆ.
- ಈ ಪದವನ್ನು "ಮೀನು ಹಿಡಿಯುವ ಜನರು" ಅಥವಾ "ಮೀನು ಹಿಡಿಯುವದರ ಮೂಲಕ ಹಣ ಸಂಪಾದಿಸುವವರು" ಎಂದು ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.47:9-10
- ಯೆಶಯ.19:7-8
- ಲೂಕ.05:1-3
- ಮತ್ತಾಯ.04:18-20
- ಮತ್ತಾಯ.13:47-48

ಪದ ಡೇಟಾ:

- Strong's: H1728, H1771, H2271, G231, G1903

ಬೇಡು, ಮನವಿ ಮಾಡು, ಬೇಡಿಕೋ, ಬೇಡುವುದು, ಬೇಡಿದೆ, ಬೇಡುತ್ತಾ ಇರುವುದು, ಬೇಡಿಕೆಗಳು

ಸತ್ಯಾಂಶಗಳು:

"ಬೇಡಿಕೋ" ಮತ್ತು "ಬೇಡುವುದು" ಎನ್ನುವ ಪದಗಳು ಯಾವುದಾದರೊಂದನ್ನು ಮಾಡುವುದಕ್ಕೆ ಯಾರಾದರೊಬ್ಬರನ್ನು ತುರ್ತಾಗಿ ಕೇಳಿಕೊಳ್ಳುವುದು. "ಬೇಡು" ಎನ್ನುವುದು ಒಂದು ತುರ್ತು ಮನವಿಯಾಗಿರುತ್ತದೆ.

- ಬೇಡಿಕೊಳ್ಳುವುದು ಅನೇಕಬಾರಿ ಒಬ್ಬ ವ್ಯಕ್ತಿ ಹೆಚ್ಚಾದ ಅತ್ಯಗತ್ಯೆಯಲ್ಲಿರುವ ಭಾವನೆಯನ್ನು ಅಥವಾ ಸಹಾಯಕ್ಕಾಗಿ ಬಲವಾದ ಆಶೆಯನ್ನು ಸೂಚಿಸುವುದಕ್ಕೆ ಅನ್ವಯವಾಗುತ್ತದೆ.
- ಕರುಣೆಗಾಗಿ ಜನರು ದೇವರ ಬಳಿ ಬೇಡಿಕೊಳ್ಳಬಹುದು ಅಥವಾ ತುರ್ತು ಮನವಿಯನ್ನು ಮಾಡಬಹುದು ಅಥವಾ ತಮಗಾಗಿಯೋ ಇನ್ನೊಬ್ಬರಿಗಾಗಿಯೋ ಏನಾದರೊಂದನ್ನು ಮಾಡಬೇಕೆಂದು ಆತನಲ್ಲಿ ಕೇಳಿಕೊಳ್ಳಬಹುದು.
- ಇದನ್ನು ಬೇರೊಂದು ವಿಧಾನಗಳಲ್ಲಿ ಅನುವಾದ ಮಾಡುವುದಾದರೆ, "ಯಾಚಿಸು" ಅಥವಾ "ಮೊರೆಯಿಡು" ಅಥವಾ "ತುರ್ತಾಗಿ ಕೇಳಿಕೊಳ್ಳು" ಎನ್ನುವ ಪದಗಳು ಒಳಗೊಂಡಿರುತ್ತವೆ.
- "ಬೇಡು" ಎನ್ನುವ ಪದವನ್ನು "ತುರ್ತು ಮನವಿ" ಅಥವಾ "ಬಲವಾಗಿ ಒತ್ತಾಯಿಸುವುದು" ಎಂದೂ ಅನುವಾದ ಮಾಡಬಹುದು.
- ಈ ಸಂದರ್ಭದಲ್ಲಿ ಈ ಪದಕ್ಕೆ ಹಣಕ್ಕಾಗಿ ಬೇಡಿಕೊಳ್ಳುವುದು ಎನ್ನುವ ಅರ್ಥವು ಬರದಂತೆ ನೋಡಿಕೊಳ್ಳಿರಿ.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಕೊರಿಂಥ.08:3-5
- ನ್ಯಾಯಾ.06:31-32
- ಲೂಕ.04:38-39
- ಜ್ಞಾನೋ.18:17-18

ಪದ ಡೇಟಾ:

- Strong's: H1777, H2603, H3198, H4941, H4994, H6279, H6293, H6664, H6419, H7378, H7379, H7775, H8199, H8467, H8469, G1189, G1793, G2065, G3870

ಬೇಡುವುದು, ಬೇಡಿಕೊಂಡರು, ಬೇಡಿಕೊಳ್ಳುವ, ಭಿಕ್ಷುಕ

ಪದದ ಅರ್ಥವಿವರಣೆ

"ಬೇಡುವುದು" ಎನ್ನುವ ಪದಕ್ಕೆ ಯಾರನ್ನಾದರೂ ಏನನ್ನಾದರೂ ಕೇಳಿಕೊಳ್ಳುವುದು ಎಂದರ್ಥ. ಇದು ಸಹಜವಾಗಿ ಹಣವನ್ನು ಕೇಳುವುದಕ್ಕೆ ಸೂಚಿಸುತ್ತದೆ, ಆದರೆ ಯಾರರಿಗಾದರು ಮನವಿ ಮಾಡುವುದಕ್ಕೆ ಸಹ ಉಪಯೋಗಿಸುತ್ತಾರೆ.

- ಸಾಮಾನ್ಯವಾಗಿ ಜನರಿಗೆ ಏನಾದರು ತುಂಬ ಅಗತ್ಯವಿರುವಾಗ ಅವರು ಮನವಿ ಮಾಡುತ್ತಾರೆ ಅಥವಾ ಬೇಡಿಕೊಳ್ಳುತ್ತಾರೆ, ಆದರೆ ಅವರು ಕೇಳಿದವರು ಅವರಿಗೆ ಕೊಡುತ್ತಾರೋ ಇಲ್ಲವೋ ಎಂದು ಅವರು ಅರಿಯರು.
- "ಭಿಕ್ಷುಕ" ಎನ್ನುವವನು ಸಾರ್ವಜನಿಕ ಸ್ಥಳದಲ್ಲಿ ಪ್ರತಿ ದಿನ ಕೂತುಕೊಂಡು ಅಥವಾ ನಿಂತುಕೊಂಡು ಜನರನ್ನು ಹಣ ಕೇಳಿಕೊಳ್ಳುವನು.
- ಈ ಪದವನ್ನು "ಮನವಿ" ಅಥವಾ "ತುರ್ತಾಗಿ ಕೇಳುವುದು" ಅಥವಾ "ಹಣ ಬೇಡುವುದು" ಅಥವಾ "ಯಾವಾಗಲು ಹಣ ಕೇಳುವುದು" ಎಂದು ಸಂದರ್ಭಕ್ಕೆ ಅನುಸಾರವಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಮನವಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.16:19-21
- ಮಾರ್ಕ.06:56
- ಮತ್ತಾಯ.14:34-36
- ಕೀರ್ತನೆ.045:12-13

ಸತ್ಯವೇದದಿಂದ ಕೆಲವು ಉದಾಹರಣೆಗಳು :

- **10:04** ಐಗುಪ್ತ ದೇಶದ ಮೇಲೆ ಯೆಹೋವನು ಕಪ್ಪೆಗಳನ್ನು ಕಳುಹಿಸಿದನು. ಈ ಕಪ್ಪೆಗಳನ್ನು ತೆಗೆದು ಹಾಕು ಎಂದು ಫರೋಹನು ಮೋಶೆಯೊಂದಿಗೆ **ಬೇಡಿಕೊಂಡನು**.
- **29:08** ಒಡೆಯನುತನ್ನ ಸೇವಕನನ್ನು ಕರಸಿ, "ಓ, ದುಷ್ಟ ಸೇವಕನೇ, ನೀನು ನನ್ನನ್ನು **ಬೇಡಿಕೊಂಡದ್ದರಿಂದ** ನಿನ್ನ ಸಾಲವನ್ನೆಲ್ಲಾ ನಾನು ಮನ್ನಿಸಿಬಿಟ್ಟೆನಲ್ಲವೇ?
- **32:07** ಆ ದೆವ್ವಗಳು "ನಮ್ಮನ್ನು ಈ ಪ್ರಾಂತದಿಂದ ಹೊರಡಿಸಬೇಡ" ಎಂದು ಯೇಸುವಿನೊಂದಿಗೆ **ಬೇಡಿಕೊಂಡವು**. ಅಲ್ಲಿಯ ಗುಡ್ಡದಲ್ಲಿ ಹಂದಿಗಳ ದೊಡ್ಡ ಹಿಂಡು ಮೇಯುತ್ತಿತ್ತು. ಅದಕ್ಕೆ, ಆ ಅಶುದ್ಧಾತ್ಮಗಳು, "ಆ ಹಂದಿಗಳೊಳಗೆ ಸೇರಿಕೊಳ್ಳುವುದಕ್ಕೆ ನಮ್ಮನ್ನು ಕಳುಹಿಸಿಕೊಡು" ಎಂದು ಯೇಸುವನ್ನು **ಬೇಡಿಕೊಂಡವು**.
- **32:10** ಆ ದೆವ್ವಗಳ ಬಂಧನದಿಂದ ಬಿಡುಗಡೆ ಹೊಂದಿದವನು, ನಾನು ನಿನ್ನ ಬಳಿಯಲ್ಲಿಯೇ ಇರುತ್ತೇನೆಂದು ಆತನನ್ನು **ಬೇಡಿದನು**.
- **35:11** ಅವನ ತಂದೆ ಹೊರಗೆ ಬಂದು, ನಮ್ಮೊಂದಿಗೆ ನೀನು ಸಹ ಕೊಂಡಾಡು ಎಂದು **ಬೇಡಿಕೊಂಡನು** ಆದರೆ ಅವನು ನಿರಾಕರಿಸಿದನು.
- **44:01** ಒಂದು ದಿನ ಪೇತ್ರ ಮತ್ತು ಯೋಹಾನನು ದೇವಾಲಯಕ್ಕೆ ಹೋದರು. ಅವರು ದೇವಾಲಯದ ಬಾಗಿಲ ಬಳಿ ಹೋಗುತ್ತಿರುವಾಗ, ಕುಂಟನಾಗಿದ್ದ ಒಬ್ಬ ಮನುಷ್ಯನು ಭಿಕ್ಷೆ **ಬೇಡುವದನ್ನು** ದೃಷ್ಟಿಸಿ ನೋಡಿದರು.

ಪದ ಡೇಟಾ:

- Strong's: H34, H7592, G154, G1871, G4319, G4434, G6075

ಬೋಧಕ, ಬೋಧಕರು

ಪದದ ಅರ್ಥವಿವರಣೆ:

ಬೋಧಕ ಎನ್ನುವ ಪದಕ್ಕೆ ಇತರ ಜನರಿಗೆ ಹೊಸ ಮಾಹಿತಿಯನ್ನು ಕೊಡುವ ವ್ಯಕ್ತಿ ಎಂದರ್ಥ. ಬೋಧಕರು ಇತರರಿಗೆ ಕೌಶಲ್ಯಗಳನ್ನು ಮತ್ತು ಜ್ಞಾನವನ್ನು ಪಡೆದುಕೊಂಡು, ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತಾರೆ.

- ಸತ್ಯವೇದದಲ್ಲಿ "ಬೋಧಕ" ಎನ್ನುವ ಪದವು ದೇವರ ಕುರಿತಾಗಿ ಬೋಧನೆ ಮಾಡುವ ವ್ಯಕ್ತಿಯನ್ನು ಸೂಚಿಸುವುದಕ್ಕೆ ವಿಶೇಷವಾದ ಭಾವನೆಯಲ್ಲಿ ಉಪಯೋಗಿಸಿರುತ್ತಾರೆ.
- ಬೋಧಕನಿಂದ ಕಲಿತುಕೊಳ್ಳುವ ಜನರನ್ನು "ವಿದ್ಯಾರ್ಥಿಗಳು" ಅಥವಾ "ಶಿಷ್ಯರು" ಎಂದು ಕರೆಯುತ್ತಾರೆ.
- ಕೆಲವೊಂದು ಸತ್ಯವೇದ ಅನುವಾದಗಳಲ್ಲಿ ಈ ಪದವನ್ನು (ಬೋಧಕ) ಯೇಸುವಿಗೆ ಬಿರುದಾಗಿ ಉಪಯೋಗಿಸುತ್ತಿರುವಾಗ ಆ ಪದದ ಮೊದಲನೇ ಅಕ್ಷರವನ್ನು ದೊಡ್ಡದಾಗಿ ಮಾಡುತ್ತಾರೆ.

ಅನುವಾದ ಸಲಹೆಗಳು:

- ಬೋಧಕ ಎನ್ನುವ ಪದವನ್ನು ಅನುವಾದ ಮಾಡುವುದಕ್ಕೆ ಸಾಧಾರಣವಾಗಿ ಉಪಯೋಗಿಸುವ ಪದವನ್ನಿಟ್ಟು ಅನುವಾದ ಮಾಡಬಹುದು, ಆದರೆ ಇದನ್ನು ಶಾಲೆಯ ಉಪಾಧ್ಯಾಯನಿಗೆ ಮಾತ್ರವೇ ಸೂಚಿಸದಂತೆ ಇರಬಾರದು.
- ಕೆಲವೊಂದು ಸಂಸ್ಕೃತಿಗಳಲ್ಲಿ ಧರ್ಮ ಸಂಬಂಧವಾದ ಬೋಧಕರಿಗೆ ವಿಶೇಷವಾದ ಬಿರುದುಗಳನ್ನು ಹೊಂದಿರಬಹುದು, ಉದಾಹರಣೆಗೆ, "ಅಯ್ಯಾ" ಅಥವಾ "ರಬ್ಬೀ" ಅಥವಾ "ಪ್ರಸಂಗೀಕ".

(ಈ ಪದಗಳನ್ನು ಸಹ ನೋಡಿರಿ : ಶಿಷ್ಯ, ಪ್ರಸಂಗಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- ಪ್ರಸಂಗಿ.01:12-15
- ಎಫೆಸ.04:11-13
- ಗಲಾತ್ಯ.06:6-8
- ಹಬ.02:18
- ಯಾಕೋಬ.03:02
- ಯೋಹಾನ.01:37-39
- ಲೂಕ.06:40
- ಮತ್ತಾಯ.12:38-40

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **27:01** ಒಂದು ದಿನ ಯೆಹೂದ್ಯರ ಧರ್ಮಶಾಸ್ತ್ರದಲ್ಲಿ ನಿಪುಣನು ಯೇಸುವನ್ನು ಪರೀಕ್ಷೆ ಮಾಡಲು ಆತನ ಬಳಿಗೆ ಬಂದು, "**ಬೋಧಕನೆ**, ನಿತ್ಯಜೀವವನ್ನು ಹೊಂದಿಕೊಳ್ಳುವುದಕ್ಕೆ ನಾನೇನು ಮಾಡಬೇಕು?" ಎಂದು ಕೇಳಿದನು
- **28:01** ಒಂದು ದಿನ ಒಬ್ಬ ಯೌವ್ವನ ಪಾಲಕನು ಯೇಸುವಿನ ಬಳಿಗೆ ಬಂದು, "ಒಳ್ಳೇಯ _ ಬೋಧಕನೆ _ ನಾನು ನಿತ್ಯಜೀವವನ್ನು ಪಡೆಯುವುದಕ್ಕೆ ಏನು ಮಾಡಬೇಕು?" ಎಂದು ಕೇಳಿದನು.
- **37:02** ಎರಡು ದಿನಗಳು ಕಳೆದು ಹೋದನಂತರ, ಯೇಸು ತನ್ನ ಶಿಷ್ಯರೊಂದಿಗೆ, "ನಾವು ಯೂದಾಗೆ ಹಿಂದಿರುಗಿ ಹೋಗೋಣ" ಎಂದು ಹೇಳಿದನು. "ಆದರೆ _ ಬೋಧಕನೆ _ " "ಸ್ವಲ್ಪ ಸಮಯದ ಮುಂಚಿತವಾಗಿ ಅಲ್ಲಿರುವ ಜನರು ನಿಮ್ಮನ್ನು ಸಾಯಿಸಬೇಕೆಂದು ಬಯಸಿದ್ದರು" ಎಂದು ಶಿಷ್ಯರು ಹೇಳಿದರು.
- **38:14** ಯೂದಾನು ಯೇಸುವಿನ ಬಳಿಗೆ ಬಂದು, "_ ಬೋಧಕನಿಗೆ _ ಶುಭಗಳು" ಎಂದು ಹೇಳಿ, ಆತನಿಗೆ ಮುದ್ದಿಟ್ಟನು
- **49:03** ಯೇಸು ಕೂಡ ಉತ್ತಮ ಉನ್ನತ _ ಬೋಧಕನಾಗಿದ್ದನು _, ಆತನು ದೇವರ ಮಗನಾಗಿರುವದರಿಂದ ಅಧಿಕಾರದಿಂದ ಮಾತನಾಡಿದ್ದನು.

ಪದ ಡೇಟಾ:

- Strong's: H3384, H3925, G1320, G2567, G3547, G5572

ಬೋಧಿಸು, ಬೋಧಿಸುವುದು,ಕಲಿಸದಿರುವುದು

ಪದದ ಅರ್ಥವಿವರಣೆ:

ಯಾರಿಗಾದರು “ಬೊಧಿಸು” ಎನ್ನುವುದಕ್ಕೆ ಆ ವ್ಯಕ್ತಿಗೆ ತಿಳಿಯದಿರುವ ವಿಷಯಗಳನ್ನು ತಿಳಿಸುವುದು ಎಂದರ್ಥ. ಇದಕ್ಕೆ ಸಾಧಾರಣವಾಗಿ ಕಲಿತುಕೊಳ್ಳುತ್ತಿರುವ ವ್ಯಕ್ತಿಗೆ ಯಾವ ಸಂಬಂಧವಿಲ್ಲದೆ “ಮಾಹಿತಿಯನ್ನು ಕೊಡುವುದು” ಎಂದರ್ಥವಾಗಿರುತ್ತದೆ, ಸಾಧಾರಣವಾಗಿ ಮಾಹಿತಿ ಕೊಡುವುದೆನ್ನುವುದು ಪದ್ಧತಿ ಪ್ರಕಾರ ಕೊಡುವುದಾಗಿರುತ್ತದೆ. ಒಬ್ಬ ವ್ಯಕ್ತಿಯ “ಬೋಧನೆಯು” ಅಥವಾ ಆ ವ್ಯಕ್ತಿಯ “ಬೋಧನೆಗಳು” ಆತನು ಹೇಳುವ ಮಾತುಗಳಾಗಿರುತ್ತವೆ.

- “ಬೋಧಕ” ಎಂದರೆ ಬೋಧಿಸುವ ವ್ಯಕ್ತಿ ಎಂದರ್ಥ. “ಬೋಧಿಸು” ಎನ್ನುವ ಪದಕ್ಕೆ ಭೂತ ಕಾಲ ಪದವು “ಕಲಿಸಿದೆ” ಎಂದಾಗಿರುತ್ತದೆ.
- ಯೇಸು ಬೋಧನೆ ಮಾಡುತ್ತಿರುವಾಗ, ಆತನು ದೇವರ ಕುರಿತಾಗಿ ಮತ್ತು ಆತನ ರಾಜ್ಯದ ಕುರಿತಾಗಿ ವಿವರಿಸುತ್ತಿದ್ದಾನೆ.
- ಯೇಸುವಿನ ಶಿಷ್ಯರೆಲ್ಲರು ಆತನನ್ನು ದೇವರ ಕುರಿತಾಗಿ ಜನರಿಗೆ ಹೇಳುವ ವ್ಯಕ್ತಿಯನ್ನು ಗೌರವಿಸುವ ವಿಧಾನದಲ್ಲಿ “ಬೋಧಕನು” ಎಂದು ಕರೆದರು.
- ಕಲಿಸಲ್ಪಟ್ಟಿರುವ ಮಾಹಿತಿಯು ತೋರಿಸಲಾಗುತ್ತದೆ ಅಥವಾ ಬಾಯಿ ಮಾತಿನಿಂದ ಹೇಳಲಾಗುತ್ತದೆ.
- “ಸಿದ್ಧಾಂತ” ಎನ್ನುವ ಪದವು ದೇವರ ಕುರಿತು ದೇವರಿಂದ ಹೊಂದಿರುವ ಬೋಧನೆಗಳನ್ನು, ಅದೇ ರೀತಿಯಾಗಿ ಹೇಗೆ ಜೀವಿಸಬೇಕೆಂದು ಹೇಳುವ ದೇವರ ಆಜ್ಞೆಗಳನ್ನು ಸೂಚಿಸುತ್ತದೆ. ಇದನ್ನು “ದೇವರಿಂದ ಹೊಂದಿರುವ ಬೋಧನೆಗಳು” ಅಥವಾ “ದೇವರು ನಮಗೆ ಬೋಧಿಸುವ ವಿಷಯಗಳು” ಎಂದೂ ಅನುವಾದ ಮಾಡಬಹುದು.
- “ನಿಮಗೆ ಕಲಿಸಿದ ವಿಷಯಗಳು” ಎನ್ನುವ ಮಾತನ್ನು “ಈ ಜನರು ನಿಮಗೆ ಕಲಿಸಿದ ವಿಷಯಗಳು” ಅಥವಾ “ದೇವರು ನಿಮಗೆ ಕಲಿಸಿದ ವಿಷಯಗಳು” ಎಂದು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.
- “ಬೋಧಿಸು” ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಹೇಳು” ಅಥವಾ “ವಿವರಿಸು” ಅಥವಾ “ಸೂಚಿಸು” ಎನ್ನುವ ಪದಗಳು ಒಳಗೊಂಡಿರುತ್ತವೆ.
- ಅನೇಕಬಾರಿ ಈ ಪದವನ್ನು “ದೇವರ ಕುರಿತಾಗಿ ಜನರಿಗೆ ಬೋಧನೆ ಮಾಡುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸೂಚಿಸು, ಬೋಧಕ, ದೇವರ ವಾಕ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.01:03
- ಅಪೊ.ಕೃತ್ಯ.02:40-42
- ಯೋಹಾನ.07:14
- ಲೂಕ.04:31
- ಮತ್ತಾಯ.04:23
- ಕೀರ್ತನೆ.032:08

ಪದ ಡೇಟಾ:

- Strong's: H502, H2094, H2449, H3045, H3046, H3256, H3384, H3925, H3948, H7919, H8150, G1317, G1321, G1322, G2085, G2605, G2727, G3100, G2312, G2567, G3811, G4994

ಭಯಭಕ್ತಿ ತೋರು, ಭಯಭಕ್ತಿ ತೋರಿಸಲಾಗಿದೆ, ಪೂಜ್ಯಭಾವ, ಭಯಭಕ್ತಿಗಳು,

ಪದದ ಅರ್ಥವಿವರಣೆ:

“ಪೂಜ್ಯಭಾವ” ಎನ್ನುವ ಪದವು ಯಾವುದಾದರೊಂದರ ಕುರಿತಾಗಿ ಅಥವಾ ಯಾರಾದರೊಬ್ಬರ ಕುರಿತಾಗಿ ಹೆಚ್ಚಿನ ಗೌರವದ, ಘನವಾದ ಭಾವನೆಗಳನ್ನು ಸೂಚಿಸುವುದು. * ಯಾವುದಾದರೊಂದಕ್ಕೆ ಅಥವಾ ಯಾರಾದರೊಬ್ಬರಿಗೆ “ಭಯಭಕ್ತಿ ತೋರು” ಎಂದರೆ ಆ ವ್ಯಕ್ತಿಗೆ ಅಥವಾ ಆ ವಸ್ತುವಿಗೆ ಪೂಜ್ಯಭಾವವನ್ನು ತೋರಿಸುವುದು ಎಂದರ್ಥ.

- ಪೂಜ್ಯಕ್ಕೆ ಅರ್ಹವಾದ ವ್ಯಕ್ತಿಯನ್ನು ಘನಪಡಿಸುವ ಭಯಭಕ್ತಿಯ ಭಾವನೆಗಳು ಕ್ರಿಯೆಗಳಲ್ಲಿ ಕಾಣಿಸಿಕೊಳ್ಳುತ್ತವೆ.
- ಕರ್ತನಲ್ಲಿ ಭಯಭಕ್ತಿ ಎಂದರೆ ದೇವರ ಆಜ್ಞೆಗಳಿಗೆ ವಿಧೇಯತೆ ತೋರಿಸುವುದರಲ್ಲಿ ಅಂತಃಹ ಪೂಜ್ಯಭಾವನೆಯು ತನ್ನಷ್ಟಕ್ಕೆ ಅದೇ ತೋರಿಕೆಯಾಗಿರುತ್ತದೆ.
- ಈ ಪದವನ್ನು “ಭಯ ಮತ್ತು ಘನಪಡಿಸುವುದು” ಅಥವಾ “ಪ್ರಾಮಾಣಿಕ ಗೌರವ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಭಯ, ಘನಪಡಿಸು, ವಿಧೇಯತೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೇತ್ರ.01:15-17
- ಇಬ್ರಿ.11:7
- ಯೆಶಯಾ.44:17
- ಕೀರ್ತನೆ.005:7-8

ಪದ ಡೇಟಾ:

- Strong's: H3372, H3373, H3374, H4172, H6342, H7812, G127, G1788, G2125, G2412, G5399, G5401

ಭಯಾನಕ, ಭಯಂಕರ, ಭೀಕರ, ಭೀಕರವಾಗಿ, ಗಾಬರಿಗೊಂಡಿದೆ, ಗಾಬರಿಗೊಳಿಸುತ್ತದೆ

ಪದದ ಅರ್ಥವಿವರಣೆ:

“ಭಯಾನಕ” ಎನ್ನುವ ಪದವು ಭಯ ಅಥವಾ ಭಯೋತ್ಪಾದನೇಯ ಬಹಳ ತೀವ್ರ ಭಾವನೆಯನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿ ಭಯಾನಕವಾದ ಭಾವನೆಯನ್ನು ಹೊಂದಿದ್ದರೆ, ಅದನ್ನು “ಗಾಬರಿ ಹೊಂದುತ್ತಿದ್ದಾನೆ” ಎಂದರ್ಥ.

- ಭಯಾನಕ ಎನ್ನುವುದು ಸಾಧಾರಣವಾದ ಭಯಕ್ಕಿಂತ ತುಂಬಾ ತೀವ್ರವಾದ ರೀತಿಯಲ್ಲಿ ನರಳುವ ಸ್ಥಿತಿಯನ್ನು ಹೊಂದಿರುತ್ತದೆ.
- ಸಾಧಾರಣವಾಗಿ ಒಬ್ಬರು ಗಾಬರಿಗೊಂಡಾಗ, ಅವರು ಆಘಾತದಲ್ಲಿರುತ್ತಾರೆ ಅಥವಾ ದಿಗ್ಭ್ರಾಂತಿಗೆ ಒಳಗಾಗಿರುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಭಯ, ಭಯೋತ್ಪಾದನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.28:36-37
- ಯೆಹೆ.23:33-34
- ಯೆರೆ.02:12-13
- ಯೋಬ.21:4-6
- ಕೀರ್ತನೆ.055:4-5

ಪದ ಡೇಟಾ:

- Strong's: H367, H1091, H1763, H2152, H2189, H4032, H4923, H5892, H6343, H6427, H7588, H8047, H8074, H8175, H8178, H8186

ಭರ್ಜಿ, ಭಲ್ಲೆಯಗಾರ

ಅರ್ಥವಿವರಣೆ:

ಭರ್ಜಿ ಎನ್ನುವುದು ಉದ್ದವಾದ ಕಟ್ಟಿಗೆಯ ತುದಿ ಭಾಗದಲ್ಲಿ ಚೂಪಾದ ಲೋಹದ ಕತ್ತಿಯನ್ನು ಹೊಂದಿರುವ ಸಾಧನವಾಗಿರುತ್ತದೆ, ಇದನ್ನು ದೂರಕ್ಕೆ ಎಸೆಯುವುದಕ್ಕೆ ಉಪಯೋಗಿಸುತ್ತಾರೆ.

- ಸತ್ಯವೇದದ ಕಾಲಗಳಲ್ಲಿ ಭರ್ಜಿಗಳನ್ನು ಯುದ್ಧದಲ್ಲಿ ಉಪಯೋಗಿಸುತ್ತಿದ್ದರು. ನಿರ್ದಿಷ್ಟವಾದ ಜನರ ಗುಂಪುಗಳ ಮಧ್ಯೆದಲ್ಲಿಯೂ ಈಗಿನ ಕಾಲದಲ್ಲಿ ಇನ್ನೂ ಅವುಗಳನ್ನು ಉಪಯೋಗಿಸುತ್ತಿದ್ದಾರೆ.
- ಯೇಸುವನ್ನು ಶಿಲುಬೆಗೆ ಏರಿಸಿದನಂತರ ಯೇಸುವಿನ ಪಕ್ಕೆಯಲ್ಲಿ ತಿವಿಯುವುದಕ್ಕೆ ರೋಮದ ಸೈನಿಕನು ಭರ್ಜಿಯನ್ನು ಉಪಯೋಗಿಸಿರುತ್ತಾನೆ.
- ಕೆಲವೊಂದುಬಾರಿ ಜನರು ಭರ್ಜಿಗಳನ್ನು ಮೀನುಗಳನ್ನು ಹಿಡಿಯುವದಕ್ಕೆ ಎಸೆಯಲು ಅಥವಾ ಬೇರೊಂದು ಬೇಟೆಯಲ್ಲಿ ಆಹಾರಕ್ಕಾಗಿ ಎಸೆಯಲು ಉಪಯೋಗಿಸಿರುತ್ತಾರೆ.
- ಇದಕ್ಕೆ ಸಮಾನವಾಗಿ “ಹಗುರಾದ ಈಟಿ” ಅಥವಾ “ಶೂಲ” ಎನ್ನುವ ಆಯುಧಗಳು ಇರುತ್ತವೆ.
- "ಭರ್ಜಿ" ಎನ್ನುವ ಅನುವಾದವು "ಖಡ್ಗ" ಎನ್ನುವ ಅನುವಾದಕ್ಕಿಂತ ಭಿನ್ನವಾಗಿದೆ ಎಂದು ಖಚಿತಪಡಿಸಿಕೊಳ್ಳಿ. ಇದನ್ನು ಎಸೆಯಲು ಅಲ್ಲ, ತಳ್ಳಲು ಅಥವಾ ತಿವಿಯುವುದಕ್ಕೆ ಉಪಯೋಗಿಸುವ ಆಯುಧವಾಗಿದೆ. ಅಲ್ಲದೇ, ಖಡ್ಗವು ಹಿಡಿಕೆಯೊಂದಿಗೆ ಉದ್ದವಾದ ಕತ್ತಿಯನ್ನು ಹೊಂದಿರುತ್ತದೆ, ಆದರೆ ಭರ್ಜಿಯು ಉದ್ದವಾದ ಬಾಣದ ತುದಿಯಲ್ಲಿ ಸಣ್ಣ ಕತ್ತಿಯನ್ನು ಹೊಂದಿರುತ್ತದೆ.

(ಇವುಗಳನ್ನು ಸಹ ನೋಡಿರಿ : ಬೇಟೆ, ರೋಮ್, ಖಡ್ಗ, ಸೈನಿಕ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಸಮು.13:19-21
- 2 ಸಮು.21:19
- ನೆಹೆ.4:12-14
- ಕೀರ್ತನೆ.35:3

ಪದದ ಡೇಟಾ:

- Strong's: H1265, H2595, H3591, H6767, H7013, H7420, G30570

ಭವಿಷ್ಯಜ್ಞಾನ, ಮಾಂತ್ರಿಕ, ಕಣಿ ಹೇಳುವುದು, ಕಣಿ ಹೇಳುವವರು

ಪದದ ಅರ್ಥವಿವರಣೆ:

"ಭವಿಷ್ಯಜ್ಞಾನ" ಮತ್ತು "ಕಣಿ ಹೇಳುವುದು" ಎನ್ನುವ ಪದಗಳು ಪ್ರಕೃತಾತೀತವಾದ ಪ್ರಪಂಚದಲ್ಲಿ ಆತ್ಮಗಳಿಂದ ಸಮಾಚಾರವನ್ನು ಹೊಂದಿಕೊಳ್ಳುವುದಕ್ಕೆ ಪ್ರಯತ್ನಪಡುವುದನ್ನು ಸೂಚಿಸುತ್ತದೆ. ಕೆಲವೊಂದು ಈ ಅಭ್ಯಾಸವನ್ನು ಮಾಡುವ ವ್ಯಕ್ತಿಯನ್ನು "ಮಾಂತ್ರಿಕ" ಅಥವಾ "ಕಣಿ ಹೇಳುವವನು" ಎಂದು ಕರೆಯುತ್ತಾರೆ.

- ಹಳೇ ಒಡಂಬಡಿಕೆಯಲ್ಲಿ ಭವಿಷ್ಯ ಹೇಳಿಸಿಕೊಳ್ಳುವುದನ್ನು ಅಥವಾ ಕಣಿ ಹೇಳುವುದನ್ನು ಅಭ್ಯಾಸ ಮಾಡಬಾರದೆಂದು ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದ್ದರು.
- ಊರೀಮ್ ಮತ್ತು ತುಮ್ಮೀಮ್.ಗಳನ್ನು ಉಪಯೋಗಿಸುವುದರ ಮೂಲಕ ದೇವರಿಂದ ಸಮಾಚಾರ ಹೊಂದುವುದಕ್ಕೆ ಎದುರುನೋಡಬೇಕೆಂದು ದೇವರು ತನ್ನ ಜನರಿಗೆ ಅನುಮತಿಯನ್ನು ಕೊಟ್ಟಿದ್ದರು, ಆ ಉದ್ದೇಶಕ್ಕಾಗಿಯೇ ಮಹಾ ಯಾಜಕನ ಮೂಲಕ ಉಪಯೋಗಿಸುವುದಕ್ಕೆ ದೇವರು ತಯಾರು ಮಾಡಿಕೊಟ್ಟಿರುವ ಕಲ್ಲುಗಳಾಗಿದ್ದವು. ಆದರೆ ಆತನು ತನ್ನ ಜನರಿಗೆ ದುರಾತ್ಮಗಳಿಂದ ಸಮಾಚಾರವನ್ನು ಹೊಂದುವುದಕ್ಕೆ ಅನುಮತಿ ನೀಡಲಿಲ್ಲ.
- ಅನ್ಯ ಮಾಂತ್ರಿಕರು ಆತ್ಮ ಪ್ರಪಂಚದಿಂದ ಸಮಾಚಾರವನ್ನು ಕಂಡುಕೊಳ್ಳಲು ಪ್ರಯತ್ನಿಸುವ ವಿವಿಧ ವಿಧಾನಗಳನ್ನು ಉಪಯೋಗಿಸುತ್ತಿದ್ದರು. ಕೆಲವೊಂದುಬಾರಿ ಅವರು ಭೂಮಿಯ ಮೇಲೆ ಪ್ರಾಣಿಯ ಎಲುಬುಗಳಿಂದ ಅಥವಾ ಸತ್ತಂತ ಪ್ರಾಣಿಯ ಒಳಭಾಗಗಳಿಂದ ಪರೀಕ್ಷೆ ಮಾಡುತ್ತಾರೆ, ಅವರ ಸುಳ್ಳು ದೇವರುಗಳಿಂದ ಬಂದ ಸಂದೇಶಗಳಂತೆ ಅವರು ಅರ್ಥವಿವರಣೆ ಹೇಳುವುದಕ್ಕೆ ನಮೂನೆಗಳಿಗಾಗಿ ಎದುರುನೋಡುತ್ತಾರೆ.
- ಹೊಸ ಒಡಂಬಡಿಕೆಯಲ್ಲಿ ಯೇಸು ಮಾತು ಅಪೊಸ್ತಲರು ಕೂಡ ಭವಿಷ್ಯಜ್ಞಾನ ತಿಳಿದುಕೊಳ್ಳುವುದನ್ನು, ಮಾಟಗಾತಿಯನ್ನು, ಮಾಟಮಂತ್ರವನ್ನು ಮತ್ತು ಮಾಯಾಜಾಲವನ್ನು ತಿರಸ್ಕಾರ ಮಾಡಿದ್ದರು. ಈ ಎಲ್ಲಾ ಅಭ್ಯಾಸಗಳಲ್ಲಿ ದುರಾತ್ಮಗಳ ಶಕ್ತಿಯನ್ನು ಉಪಯೋಗಿಸುತ್ತಿದ್ದರು ಮತ್ತು ಇವೆಲ್ಲವೂ ದೇವರಿಂದ ಖಂಡಿಸಲ್ಪಟ್ಟಿದ್ದವು.

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ಸುಳ್ಳು ದೇವರು, ಮಾಯ, ಮಾಟಮಂತ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.06:1-2
- ಅಪೊ.ಕೃತ್ಯ.16:16-18
- ಯೆಹೆ.12:24-25
- ಆದಿ.44:3-5
- ಯೆರೆ.27:9-11

ಪದ ಡೇಟಾ:

- Strong's: H1870, H4738, H5172, H6049, H7080, H7081, G4436

ಭೂಮಿ, ನೆಲ

ಪದದ ಅರ್ಥವಿವರಣೆ:

"ಭೂಮಿ" ಎಂಬ ಪದವು ಮಾನವರು ಮತ್ತು ಇತರ ಜೀವಿಗಳು ವಾಸಿಸುವ ಜಗತ್ತನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ, ಈ ಪದವನ್ನು ಕೆಲವೊಮ್ಮೆ ನೆಲ ಅಥವಾ ಮಣ್ಣನ್ನು ಉಲ್ಲೇಖಿಸಲು ಸಾಮಾನ್ಯ ರೀತಿಯಲ್ಲಿ ಬಳಸಿದಾಗ ಅಥವಾ ನಿರ್ದಿಷ್ಟ ಭೌಗೋಳಿಕ ಪ್ರದೇಶವನ್ನು ಉಲ್ಲೇಖಿಸಲು ನಿರ್ದಿಷ್ಟ ರೀತಿಯಲ್ಲಿ ಬಳಸಿದಾಗ "ಭೂಮಿ" ಎಂದು ಅನುವಾದಿಸಲಾಗುತ್ತದೆ, ಸಾಮಾನ್ಯವಾಗಿ ಒಂದು ದೇಶ ಅಥವಾ ರಾಷ್ಟ್ರ.

- ಸತ್ಯವೇದದಲ್ಲಿ, "ಭೂಮಿ" ಎಂಬ ಪದವನ್ನು "ಸ್ವರ್ಗ" ಎಂಬ ಪದದೊಂದಿಗೆ ಹೆಚ್ಚಾಗಿ ಜೋಡಿಸಲಾಗುತ್ತದೆ, ಇದು ಸ್ವರ್ಗದಲ್ಲಿ ದೇವರ ವಾಸಸ್ಥಾನಕ್ಕೆ ವ್ಯತಿರಿಕ್ತವಾಗಿ ಭೂಮಿಯ ಮೇಲೆ ಮಾನವಕುಲದ ವಾಸಸ್ಥಾನವನ್ನು ಸೂಚಿಸುತ್ತದೆ.
- ಈ ಪದವನ್ನು ಸಾಮಾನ್ಯವಾಗಿ "ಕಾನಾನ್ ಭೂಮಿ" ಯಂತಹ ಜನರಿಗೆ ಸೇರಿದ ಪ್ರದೇಶವನ್ನು ಸೂಚಿಸಲು ಜನರ ಗುಂಪಿನ ಹೆಸರಿನೊಂದಿಗೆ ಜೋಡಿಸಿದಾಗ "ಭೂಮಿ" ಎಂದು ಅನುವಾದಿಸಲಾಗುತ್ತದೆ.
- ಭೌತಿಕವಲ್ಲದ ಅಥವಾ ಅಗೋಚರವಾಗಿರುವ ವಿಷಯಗಳಿಗೆ ವಿರುದ್ಧವಾಗಿ ಭೌತಿಕ ಅಥವಾ ಗೋಚರಿಸುವ ವಿಷಯಗಳನ್ನು ಉಲ್ಲೇಖಿಸಲು “ಐಹಿಕ” ಎಂಬ ಪದವನ್ನು ಕೆಲವೊಮ್ಮೆ ಬಳಸಲಾಗುತ್ತದೆ.
- ಈ ಪದವನ್ನು ಸಾಂಕೇತಿಕವಾಗಿ ಭೂಮಿಯ ಮೇಲೆ ವಾಸಿಸುವ ಜನರನ್ನು ಅಥವಾ ಭೂಮಿಯು ಏನಿದೆ ಎಂಬುದನ್ನು ಉಲ್ಲೇಖಿಸಲು ಬಳಸಬಹುದು, ಉದಾಹರಣೆಗೆ “ಭೂಮಿಯು ಸಂತೋಷವಾಗಲಿ” ಮತ್ತು “ಅವನು ಭೂಮಿಯನ್ನು ನಿರ್ಣಯಿಸುವನು.”

ಅನುವಾದ ಸಲಹೆಗಳು:

- ಈ ಪದವನ್ನು ಅಥವಾ ಈ ಮಾತನ್ನು ನಾವು ನಿವಾಸವಾಗಿರುವ ಈ ಭೂ ಗ್ರಹವನ್ನು ಸೂಚಿಸುವದಕ್ಕೆ ಸ್ಥಳೀಯ ಅಥವಾ ಜಾತೀಯ ಭಾಷೆಗಳಲ್ಲಿ ಉಪಯೋಗಿಸುವ ಪದದಿಂದ ಅಥವಾ ಮಾತಿನಿಂದ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, “ಭೂಮಿ” ಎನ್ನುವ ಪದವನ್ನು “ಲೋಕ” ಅಥವಾ “ನೆಲ” ಅಥವಾ “ಧೂಳಿ” ಅಥವಾ “ಮಣ್ಣು” ಎಂದೂ ಅನುವಾದ ಮಾಡಬಹುದು.
- ಈ ಪದವನ್ನು ಅಲಂಕಾರಿಕ ರೂಪದಲ್ಲಿ ಉಪಯೋಗಿಸಿದಾಗ, “ಭೂಮಿ” ಎನ್ನುವದನ್ನು “ಭೂಮಿಯ ಮೇಲಿರುವ ಜನರು” ಅಥವಾ “ಭೂಮಿಯ ಮೇಲೆ ನಿವಾಸವಾಗಿರುವ ಜನರು” ಅಥವಾ “ಭೂಮಿಯ ಮೇಲಿರುವ ಸಮಸ್ತವು” ಎಂದೂ ಅನುವಾದ ಮಾಡಬಹುದು.
- “ಲೋಕ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ಭೌತಿಕತೆ” ಅಥವ “ಭೂಮಿಯ ಮೇಲಿರುವ ವಸ್ತುಗಳು” ಅಥವಾ “ದೃಶ್ಯವಾಗಿರುವ ವಿಷಯಗಳು” ಎನ್ನುವ ಮಾತುಗಳನ್ನು ಉಪಯೋಗಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಆತ್ಮ, ಲೋಕ)

ಸತ್ಯವೇದದ ಅನುಬಂಧ ವಾಕ್ಯಗಳ:

- 1 ಅರಸ.01:38-40
- 2 ಪೂರ್ವ.02:11-12
- ದಾನಿ.04:35
- ಲೂಕ.12:51
- ಮತ್ತಾಯ.06:10
- ಮತ್ತಾಯ.11:25
- ಜೆಕರ್ಯ.06:05

ಪದ ಡೇಟಾ:

- Strong's: H127, H772, H776, H778, H2789, H3007, H3335, H6083, H7494, G1093, G1919, G2709, G2886, G3625, G4578, G5517

ಭೋಜನ ದ್ರವ್ಯ, ಭೋಜನ ದ್ರವ್ಯಗಳು, ಭೋಜನ ನೈವೇದ್ಯಗಳು

ಪದದ ಅರ್ಥವಿವರಣೆ:

“ಭೋಜನ ನೈವೇದ್ಯ” ಅಥವಾ “ಭೋಜನ ದ್ರವ್ಯ” ಎನ್ನುವ ಮಾತು ಧಾನ್ಯಗಳ ಹಿಟ್ಟಿನಿಂದ ಮಾಡಿದ ರೊಟ್ಟಿ ಅಥವಾ ಧಾನ್ಯಗಳ ರೂಪದಲ್ಲಿ ದೇವರಿಗೆ ಮಾಡುವ ಅರ್ಪಣೆಯಾಗಿರುತ್ತದೆ.

- “ಭೋಜನ” ಎನ್ನುವ ಪದವು ಹಿಟ್ಟಾಗಿ ಮಾಡಿದ ಭೋಜನ ದ್ರವ್ಯವನ್ನು ಸೂಚಿಸುತ್ತದೆ.
- ಈ ಹಿಟ್ಟಿನಲ್ಲಿ ನೀರನ್ನು ಹಾಕಿ ಬೆರೆಸುತ್ತಾರೆ ಅಥವಾ ಚಪಾತಿಗಳನ್ನು ಮಾಡುವುದಕ್ಕೆ ಹಿಟ್ಟಿಗೆ ಎಣ್ಣೆಯನ್ನು ಹಾಕುತ್ತಾರೆ. ಕೆಲವೊಂದುಬಾರಿ ರೊಟ್ಟಿಯ ಮೇಲ್ಭಾಗದಲ್ಲಿ ಎಣ್ಣೆಯನ್ನು ಹಚ್ಚುತ್ತಾರೆ.
- ಈ ರೀತಿಯಾದ ಅರ್ಪಣೆಯನ್ನು ಸಾಧಾರಣವಾಗಿ ದಹನ ಬಲಿ ಮಾಡುವಾಗ ಅರ್ಪಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ದಹನ ಬಲಿ, ಧಾನ್ಯ, ಸರ್ವಾಂಗಹೋಮ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.44:30-31
- ಯೋವೇಲ.02:14

ಪದ ಡೇಟಾ:

- Strong's: H4503, H8641

ಭ್ರಷ್ಟ, ಭ್ರಷ್ಟರಾದರು, ಭ್ರಷ್ಟಾಚಾರ, ಅವ್ಯವಹಾರ, ವಂಚಿತರ, ಅಪ್ರಾಮಾಣಿಕತೆ,

ಪದದ ಅರ್ಥವಿವರಣೆ:

"ಭ್ರಷ್ಟ" ಮತ್ತು "ಭ್ರಷ್ಟಾಚಾರ" ಎನ್ನುವ ಪದಗಳು ವ್ಯವಹಾರಗಳ ಸ್ಥಿತಿಯನ್ನು ಸೂಚಿಸುತ್ತದೆ, ಇದರಲ್ಲಿ ಜನರು ಕೆಟ್ಟುಹೋಗಿರುತ್ತಾರೆ, ಅನೈತಿಕವಾಗಿ ನಡೆದುಕೊಳ್ಳುತ್ತಾರೆ ಅಥವಾ ಅಪ್ರಾಮಾಣಿಕರಾಗಿ ನಡೆದುಕೊಳ್ಳುತ್ತಾರೆ.

- "ಭ್ರಷ್ಟ" ಎನ್ನುವ ಪದಕ್ಕೆ ಅಕ್ಷರಾರ್ಥವೇನೆಂದರೆ ನೈತಿಕವಾಗಿ "ಕೆಟ್ಟುಹೋಗುವುದು" ಅಥವಾ "ಬಾಗುವುದು" ಎಂದರ್ಥ.
- ಭ್ರಷ್ಟನಾದ ಒಬ್ಬ ವ್ಯಕ್ತಿ ಸತ್ಯದಿಂದ ತೊಲಗಿಹೋಗಿದ್ದಾನೆ ಮತ್ತು ಅವನು ಅನೈತಿಕವಾದ ಕ್ರಿಯೆಗಳನ್ನು ಅಥವಾ ಕೆಟ್ಟ ಕಾರ್ಯಗಳನ್ನು ಮಾಡುತ್ತಾ ಇರುತ್ತಾನೆ.
- ಇನ್ನೊಬ್ಬರನ್ನು ಭ್ರಷ್ಟನಾಗುವಂತೆ ಮಾಡುವುದು ಎಂದರೆ ಒಬ್ಬ ವ್ಯಕ್ತಿಯನ್ನು ಕೆಟ್ಟ ಕಾರ್ಯಗಳನ್ನು ಮತ್ತು ಅನೈತಿಕ ಕಾರ್ಯಗಳನ್ನು ಮಾಡುವುದಕ್ಕೆ ಪ್ರಭಾವಗೊಳಿಸು ಎಂದರ್ಥ.

ಅನುವಾದ ಸಲಹೆಗಳು:

- "ಭ್ರಷ್ಟ" ಎನ್ನುವ ಪದವನ್ನು "ದುಷ್ಟ ಕಾರ್ಯವನ್ನು ಮಾಡಲು ಪ್ರಭಾವಗೊಳಿಸು" ಅಥವಾ "ಅನೈತಿಕತೆಯಿಂದ ನಡೆದುಕೊಳ್ಳುವುದಕ್ಕೆ ಕಾರಣವಾಗು" ಎಂದರ್ಥ.
- ಭ್ರಷ್ಟನಾದ ಒಬ್ಬ ವ್ಯಕ್ತಿಯನ್ನು "ಅನೈತಿಕವಾದ ವ್ಯಕ್ತಿ" ಅಥವಾ "ದುಷ್ಟ ಕಾರ್ಯಗಳನ್ನು ಮಾಡುವ ವ್ಯಕ್ತಿ" ಎಂದು ವಿವರಸಲಾಗುತ್ತದೆ.
- ಈ ಪದವನ್ನು "ಕೆಟ್ಟ" ಅಥವಾ "ಅನೈತಿಕತೆ" ಅಥವಾ "ದುಷ್ಟತ್ವ" ಎಂದೂ ಅನುವಾದ ಮಾಡುತ್ತಾರೆ.
- "ಭ್ರಷ್ಟಾಚಾರ" ಎನ್ನುವ ಪದವನ್ನು "ದುಷ್ಟ ಕಾರ್ಯಗಳನ್ನು ಮಾಡುವುದು" ಅಥವಾ "ದುಷ್ಟ" ಅಥವಾ "ಅನೈತಿಕತೆ" ಎಂದೂ ಅನುವಾದ ಮಾಡುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ದುಷ್ಟ)

ಸತ್ಯವೇದದ ಅನುಬಂಧ ವಾಕ್ಯಗಳು:

- ಯೆಹೆ.20:42-44
- ಗಲಾತ್ಯ.06:6-8
- ಆದಿ.06:12
- ಮತ್ತಾಯ.12:33-35
- ಕೀರ್ತನೆ.014:1

ಪದ ಡೇಟಾ:

- Strong's: H2610, H3891, H4889, H7843, H7844, G861, G1311, G2704, G5351, G5356

ಮಂತ್ರ, ಮಂತ್ರವಾಗಿರುವ, ಮಾಂತ್ರಿಕ, ಜೋಯಿಸರು

ಪದದ ಅರ್ಥವಿವರಣೆ:

“ಮಂತ್ರ” ಎನ್ನುವ ಪದವು ದೇವರಿಂದ ಬರದಂತಹ ಪ್ರಕೃತಾತೀತವಾದ ಶಕ್ತಿಯನ್ನು ಉಪಯೋಗಿಸುವ ಅಭ್ಯಾಸ ಮಾಡುವುದನ್ನು ಸೂಚಿಸುತ್ತದೆ. “ಮಾಂತ್ರಿಕನು” ಎಂದರೆ ಮಂತ್ರ ವಿದ್ಯೆಯನ್ನು ಅಭ್ಯಾಸ ಮಾಡುವವನನ್ನು ಸೂಚಿಸುತ್ತದೆ.

- ಐಗುಪ್ತದಲ್ಲಿ ಮೋಶೆಯನ ಮೂಲಕ ದೇವರು ಅನೇಕ ಅದ್ಭುತಗಳನ್ನು ಮಾಡುವುದರ ಮೂಲಕ, ಐಗುಪ್ತ ಫರೋಹನ ಜೋಯಿಸರು ದೇವರು ಮಾಡಿದ ಕೆಲವೊಂದು ಕಾರ್ಯಗಳನ್ನು ಮಾಡಿದರು, ಆದರೆ ಅವರ ಶಕ್ತಿ ದೇವರಿಂದ ಬಂದಿರುವುದಿಲ್ಲ.
- ಮಂತ್ರವು ಅನೇಕಸಲ ಪ್ರಕೃತಾತೀತವಾದ ಕಾರ್ಯವನ್ನು ಮಾಡುವುದಕ್ಕೆ ನುಡಿಯುವುದು ಅಥವಾ ಕೆಲವೊಂದು ಪದಗಳನ್ನು ಪದೇಪದೇ ಹೇಳುವುದೂ ಆಗಿರುತ್ತದೆ.
- ಈ ರೀತಿಯ ಮಂತ್ರ ವಿದ್ಯೆಗಳನ್ನು ಅಥವಾ ಕಣಿ ಹೇಳುವುದನ್ನು ಅಭ್ಯಾಸ ಮಾಡಬಾರದೆಂದು ದೇವರು ತನ್ನ ಜನರಿಗೆ ಆಜ್ಞಾಪಿಸಿದರು.
- ಮಾಂತ್ರಿಕನು ಜೋಯಿಸರಲ್ಲಿ ಒಬ್ಬನಾಗಿರುತ್ತಾನೆ, ಇತರರಿಗೆ ಹಾನಿ ಮಾಡುವುದಕ್ಕೆ ಮಂತ್ರವನ್ನು ಉಪಯೋಗಿಸುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಕಣಿ ಹೇಳುವುದು, ಐಗುಪ್ತ, ಫರೋಹ, ಶಕ್ತಿ, ಮಾಂತ್ರಿಕ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.41:7-8
- ಆದಿ.41:22-24
- ಆದಿ.44:3-5
- ಆದಿ.44:14-15

ಪದ ಡೇಟಾ:

- Strong's: H2748, H2749, H3049, G3097

ಮಧ್ಯಸ್ಥ

ಪದದ ಅರ್ಥವಿವರಣೆ:

ಮಧ್ಯಸ್ಥ ಎನ್ನುವುದು ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳ ಮಧ್ಯೆದಲ್ಲಿ ಬಂದಿರುವ ಭಿನ್ನಭಿಪ್ರಾಯಗಳು ಅಥವಾ ಘರ್ಷಣೆಗಳನ್ನು ಪರಿಷ್ಕಾರ ಮಾಡುವುದಕ್ಕೆ ಸಹಾಯ ಮಾಡುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ. ಅವರೆಲ್ಲರು ಸಮಾಧಾನ ಹೊಂದುವಂತೆ ಅವನು ಅವರಿಗೆ ಸಹಾಯ ಮಾಡುತ್ತಾನೆ.

- ಜನರು ಪಾಪ ಮಾಡಿದ್ದದಿಂದ, ಅವರು ದೇವರ ಶತ್ರುಗಳಾಗಿ, ಆತನ ಕ್ರೋಧಕ್ಕೆ ಮತ್ತು ಶಿಕ್ಷೆಗೆ ಗುರಿಯಾಗಿರುತ್ತಾರೆ. ಪಾಪದ ಕಾರಣದಿಂದ ದೇವರು ಮತ್ತು ತನ್ನ ಜನರ ಮಧ್ಯೆದಲ್ಲಿರುವ ಸಂಬಂಧವು ಮುರಿದು ಹೋಗಿದೆ.
- ತಂದೆಯಾದ ದೇವರಿಗೆ ಮತ್ತು ತನ್ನ ಜನರಿಗೆ ಮಧ್ಯೆದಲ್ಲಿ ಯೇಸುಕ್ರಿಸ್ತ ಮಧ್ಯಸ್ಥನಾಗಿದ್ದನು, ಜನರು ಮಾಡಿದ ಪಾಪಗಳಿಗೋಸ್ಕರ ಕ್ರಯಧನವಾಗಿ ತನ್ನ ಮರಣದ ಮೂಲಕ ಮುರಿದು ಹೋಗಿರುವ ಸಂಬಂಧವನ್ನು ತಿರುಗಿ ಪುನರ್ ಸ್ಥಾಪಿಸುವುದು.

ಅನುವಾದ ಸಲಹೆಗಳು:

- “ಮಧ್ಯಸ್ಥ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ, ‘ಇಬ್ಬರ ನಡುವೆ ಹೋಗುವುದು” ಅಥವಾ “ಸಮಾಧಾನಪಡಿಸುವಾತನು” ಅಥವಾ “ಸಮಾಧಾನವನ್ನು ತೆಗೆದುಕೊಂಡು ಬರುವ ವ್ಯಕ್ತಿ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಈ ಪದವನ್ನು “ಯಾಜಕ” ಎನ್ನುವ ಪದಕ್ಕೆ ಹೋಲಿಸಿ ನೋಡಿರಿ. “ಮಧ್ಯಸ್ಥ” ಎನ್ನುವ ಪದವನ್ನು ಹೀಗೆಯೇ ಅನುವಾದ ಮಾಡುವುದು ಒಳ್ಳೇಯದು.

(ಈ ಪದಗಳನ್ನು ಸಹ ನೋಡಿರಿ : ಯಾಜಕ, ಸಮಾಧಾನಪಡಿಸುವುದು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.02:5-7
- ಗಲಾತ್ಯ.03:19-20
- ಇಬ್ರಿ.08:6-7
- ಇಬ್ರಿ.12:22-24
- ಲೂಕ.12:13-15

ಪದ ಡೇಟಾ:

- Strong's: H3887, G3312, G3316

ಮನಃಪೂರ್ವಕವಾಗಿ ಕೊಡುವ ಕಾಣಿಕೆ

ಪದದ ಅರ್ಥವಿವರಣೆ

ಮನಃಪೂರ್ವಕವಾಗಿ ಕೊಡುವ ಕಾಣಿಕೆ ಅಂದರೆ ಯೆಹೋವನಿಗೆ ಕೊಡುವ ಒಂದು ರೀತಿಯದ ಕಾಣಿಕೆಯಾಗಿತ್ತು ಅದು ಮೋಶೆಯ ಧರ್ಮಶಾಸ್ತ್ರದಲ್ಲಿ ಅವಶ್ಯಕತೆಯಿದ್ದಲ್ಲ. ಅದು ಒಬ್ಬ ವ್ಯಕ್ತಿಯ ವೈಯಕ್ತಿಕ ಇಚ್ಛೆಯಿಂದ ಕೊಡುವ ಅರ್ಪಣೆಯಾಗಿತ್ತು.

- ಮನಃಪೂರ್ವಕವಾಗಿ ಕೊಡುವ ಕಾಣಿಕೆಯಲ್ಲಿ ಒಂದು ಪ್ರಾಣಿಯನ್ನು ಕೊಡಬೇಕೆಂದು ಬಯಸಿ ಅದರಲ್ಲಿ ಸ್ವಲ್ಪ ಕೊರತೆಗಳಿದ್ದರು ಅದು ವೈಯಕ್ತಿಕ ಇಚ್ಛೆಯಿಂದ ಕೊಡುವ ಕಾಣಿಕೆಯಾದಕಾರಣ ಅದು ಅಂಗೀಕರಿಸಲ್ಪಟ್ಟಿತು.
- ಇಸ್ರಾಯೇಲ್ ಜನರು ಕೊಂಡಾಟದ ಔತಣವಾಗಿ ಬಲಿಯರ್ಪಿಸಿದ ಪ್ರಾಣಿಯ ಮಾಂಸವನ್ನು ತಿನ್ನುತ್ತಿದ್ದರು.
- ಮನಃಪೂರ್ವಕವಾಗಿ ಕಾಣಿಕೆ ಕೊಟ್ಟಾಗ ಅದು ಇಸ್ರಾಯೇಲ್ ಜನರಿಗೆ ಸಂಬ್ರಮದ ಕಾರಣವಾಗಿತ್ತು ಯಾಕಂದರೆ ಕೊಯ್ಲು ಅಧಿಕವಾಗಿದ್ದು ಅವರಿಗೆ ಬೇಕಾದಷ್ಟು ಆಹಾರ ಬೆಳೆಯಿತೆಂದು ತೋರಿಸುತ್ತದೆ.
- ಎಜ್ರನು ಬರೆದ ಪುಸ್ತಕದಲ್ಲಿ ದೇವಾಲಯವನ್ನು ಪುನಃ ನಿರ್ಮಿಸಲು ಮನಃಪೂರ್ವಕವಾಗಿ ಕೊಡುವ ಕಾಣಿಕೆಯ ಬೇರೊಂದು ರೂಪವನ್ನು ಕುರಿತು ಬರೆಯಲ್ಪಟ್ಟಿದೆ. ಈ ಕಾಣಿಕೆಯಲ್ಲಿ ಬೆಳ್ಳಿ, ಬಂಗಾರದ ಕಾಸುಗಳು, ಬಟ್ಟಲುಗಳು ಮತ್ತು ಬೆಳ್ಳಿ ಬಂಗಾರದಿಂದ ಮಾಡಲ್ಪಟ್ಟ ಅನೇಕ ವಸ್ತುಗಳನ್ನು ಕಾಣಿಕೆಗಳಾಗಿ ಕೊಟ್ಟರು.

(ಈ ಪದಗಳನ್ನು ಸಹ ನೋಡಿರಿ : ದಹನ ಬಲಿ, ಎಜ್ರ, ಔತಣ, ದಾನ್ಯಾರ್ಪಣೆ, ಅಪರಾದ ಪರಿಹಾರಾರ್ಥ ಬಲಿ, ಧರ್ಮಶಾಸ್ತ್ರ, ದೋಷಪರಿಹಾರಕ ಬಲಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.29:6-7
- 2 ಪೂರ್ವ.35:7-9
- ಧರ್ಮೋ.12:17
- ವಿಮೋ.36:2-4
- ಯಾಜಕ.07:15-16

ಪದ ಡೇಟಾ:

- Strong's: H5068, H5071

ಮನಸ್ಸು, ಮನಪೂರ್ವಕ, ಜ್ಞಾಪಿಸು, ಜ್ಞಾಪಕ ಮಾಡಲಾಗಿದೆ, ಒಂದೇ ಮನಸ್ಸುಳ್ಳವರು

ಪದದ ಅರ್ಥವಿವರಣೆ:

“ಮನಸ್ಸು” ಎನ್ನುವ ಪದವು ಆಲೋಚಿಸುವ ಮತ್ತು ನಿರ್ಧಾರವನ್ನು ತೆಗೆದುಕೊಳ್ಳುವ ವ್ಯಕ್ತಿಯ ಭಾಗವನ್ನು ಸೂಚಿಸುತ್ತದೆ.

- ಪ್ರತಿಯೊಬ್ಬರ ಮನಸ್ಸು ಎನ್ನುವುದು ಅವನ ಅಥವಾ ಆಕೆಯ ಸಂಪೂರ್ಣವಾದ ಆಲೋಚನೆಗಳು ಮತ್ತು ತಾರ್ಕಿಕವನ್ನು ಒಳಗೊಂಡಿರುತ್ತದೆ.
- “ಕ್ರಿಸ್ತನ ಮನಸ್ಸನ್ನು ಹೊಂದಿರುವುದು” ಎಂದರೆ ಯೇಸುಕ್ರಿಸ್ತ ಯಾವ ರೀತಿ ಆಲೋಚನೆ ಮಾಡುತ್ತಾನೋ ಮತ್ತು ಯಾವ ರೀತಿ ನಡೆದುಕೊಳ್ಳುತ್ತಾನೋ ಅದೇ ರೀತಿ ಆಲೋಚನೆ ಮಾಡಿ, ನಡೆದುಕೊಳ್ಳುವುದು ಎಂದರ್ಥ. ಈ ಮಾತಿಗೆ ಪವಿತ್ರಾತ್ಮನ ಶಕ್ತಿಯ ಮೂಲಕ ಈ ರೀತಿ ಜೀವನ ಮಾಡುವುದಕ್ಕೆ ಬಲವನ್ನು ಹೊಂದಿರಲು ಕ್ರಿಸ್ತನ ಬೋಧನೆಗಳಿಗೆ ವಿಧೇಯತೆ ತೋರಿಸುವುದು, ತಂದೆಯಾದ ದೇವರಿಗೆ ವಿಧೇಯತೆ ತೋರಿಸುವುದು ಎಂದರ್ಥ.
- “ತನ್ನ ಮನಸ್ಸನ್ನು ಮಾರ್ಪಾಟು ಮಾಡಿಕೊಳ್ಳುವುದು” ಎಂದರೆ ಒಬ್ಬ ವ್ಯಕ್ತಿ ವಿಭಿನ್ನವಾದ ನಿರ್ಣಯವನ್ನು ಮಾಡುವುದು ಅಥವಾ ಆ ವ್ಯಕ್ತಿ ಮುಂದಿನ ನಿರ್ಣಯಗಿಂತಲೂ ಈಗ ಬೇರೊಂದು ನಿರ್ಣಯವನ್ನು ಮಾಡಿಕೊಳ್ಳುವುದು ಎಂದರ್ಥ.

ಅನುವಾದ ಸಲಹೆಗಳು:

- “ಮನಸ್ಸು” ಎನ್ನುವ ಪದವನ್ನು “ಆಲೋಚನೆಗಳು” ಅಥವಾ “ಕಾರಣ ಹೇಳುವುದು” ಅಥವಾ “ಚಿಂತನೆ” ಅಥವಾ “ಅರ್ಥಮಾಡಿಕೊಳ್ಳುವುದು” ಎಂದೂ ಅನುವಾದ ಮಾಡಬಹುದು.
- “ಮನಸ್ಸಿನಲ್ಲಿಡು” ಎನ್ನುವ ಮಾತನ್ನು “ನೆನಪಿಡು” ಅಥವಾ “ಇದಕ್ಕೆ ಆಸಕ್ತಿಯನ್ನು ತೋರಿಸು” ಅಥವಾ “ಇದನ್ನು ಖಚಿತವಾಗಿ ತಿಳಿದುಕೋ” ಎಂದೂ ಅನುವಾದ ಮಾಡಬಹುದು.
- “ಹೃದಯ, ಪ್ರಾಣ ಮತ್ತು ಮನಸ್ಸು” ಎನ್ನುವ ಮಾತನ್ನು “ನೀನು ಏನು ಭಾವಿಸುತ್ತಿದ್ದೀಯ, ಏನು ನಂಬುತ್ತಿದ್ದೀಯ ಮತ್ತು ನೀನು ಏನು ಆಲೋಚನೆ ಮಾಡುತ್ತಿದ್ದೀಯ” ಎಂದು ಅನುವಾದ ಮಾಡಬಹುದು.
- “ಮನಸ್ಸಿನಲ್ಲಿಡಲು ಕರೆ” ಎನ್ನುವ ಮಾತನ್ನು “ಜ್ಞಾಪಿಸಿಕೋ” ಅಥವಾ “ಅದರ ಕುರಿತಾಗಿ ಆಲೋಚನೆ ಮಾಡು” ಎಂದೂ ಅನುವಾದ ಮಾಡಬಹುದು.
- “ತನ್ನ ಮನಸ್ಸು ಮಾರ್ಪಾಟು ಮಾಡಿಕೊಂಡು, ಹೋದನು” ಎನ್ನುವ ಮಾತನ್ನು “ವಿಭಿನ್ನವಾಗಿ ನಿರ್ಣಯಿಸಿಕೊಂಡು, ಹೋದನು” ಅಥವಾ “ಎಲ್ಲಾ ಆದನಂತರ ಹೋಗುವುದಕ್ಕೆ ನಿರ್ಣಯಿಸಿಕೊಂಡನು” ಅಥವಾ “ತನ್ನ ಅಭಿಪ್ರಾಯವನ್ನು ಮಾರ್ಪಡಿಸಿಕೊಂಡು, ಹೋದನು” ಎಂದು ಅನುವಾದ ಮಾಡಬಹುದು.
- “ದ್ವಂದ್ವ-ಮನಸ್ಸು” ಎನ್ನುವ ಮಾತನ್ನು “ಅನುಮಾನಪಡುವುದು” ಅಥವಾ “ನಿರ್ಣಯ ತೆಗೆದುಕೊಳ್ಳದಿರುವುದು” ಅಥವಾ “ಸಂಘರ್ಷದ ಆಲೋಚನೆಗಳೊಂದಿಗೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬು, ಹೃದಯ, ಪ್ರಾಣ)

ಸತ್ಯವೇದದ ಅನುಬಂಧ ವಾಕ್ಯಗಳು:

- ಲೂಕ.10:27
- ಮಾರ್ಕ.06:51-52
- ಮತ್ತಾಯ.21:29
- ಮತ್ತಾಯ.22:37
- ಯಾಕೋಬ.04:08

ಪದ ಡೇಟಾ:

- Strong's: H3629, H3820, H3824, H5162, H7725, G1271, G1374, G3328, G3525, G3540, G3563, G4993, G5590

ಮನೆ, ಮನೆಗಳು, ಮೇಲ್ಛಾವಣಿ, ಮನೆಮೆಟ್ಟಿಲುಗಳು, ಕಣಜ, ಕಣಜಗಳು, ಮನೆಯಾಳುಗಳು

ಪದದ ಅರ್ಥವಿವರಣೆ:

“ಮನೆ” ಎನ್ನುವ ಪದವನ್ನು ಅನೇಕಬಾರಿ ಸತ್ಯವೇದದಲ್ಲಿ ಅಲಂಕಾರಿಕವಾಗಿ ಉಪಯೋಗಿಸಿದ್ದಾರೆ.

- ಕೆಲವೊಂದುಬಾರಿ ಇದಕ್ಕೆ “ಮನೆಯಾಳುಗಳು” ಎಂದರ್ಥ, ಅಂದರೆ ಒಂದು ಮನೆಯಲ್ಲಿ ವಾಸಿಸುವ ಜನರನ್ನು ಸೂಚಿಸುತ್ತದೆ.
- “ಮನೆ” ಎನ್ನುವ ಪದವು ಅನೇಕಬಾರಿ ಒಬ್ಬ ವ್ಯಕ್ತಿಯ ವಂಶಸ್ಥರನ್ನು ಅಥವಾ ಇತರ ಬಂಧುಮಿತ್ರರನ್ನು ಸೂಚಿಸುತ್ತದೆ. ಉದಾಹರಣೆಗೆ, “ದಾವೀದನ ಮನೆ” ಎನ್ನುವ ಮಾತು ಅರಸನಾದ ದಾವೀದನ ಎಲ್ಲಾ ವಂಶಸ್ಥರನ್ನು ಸೂಚಿಸುತ್ತದೆ.
- “ದೇವರ ಮನೆ” ಮತ್ತು “ಯೆಹೋವನ ಮನೆ” ಎನ್ನುವ ಪದಗಳು ಗುಡಾರವನ್ನಾಗಲಿ ಅಥವಾ ದೇವಾಲಯವನ್ನಾಗಲಿ ಸೂಚಿಸುತ್ತದೆ. ಈ ಮಾತುಗಳು ಸಾಧಾರಣವಾಗಿ ದೇವರು ನಿವಾಸವಾಗಿರುವ ಅಥವ ದೇವರು ಇರುವ ಸ್ಥಳವನ್ನು ಕೂಡ ಸೂಚಿಸುತ್ತವೆ.
- ಇಬ್ರಿ 3ನೇ ಅಧ್ಯಾಯದಲ್ಲಿ “ದೇವರ ಮನೆ” ಎಂದು ಉಪಗೋಗಿಸಿರುವ ಅಲಂಕಾರಿಕ ಪದವು ದೇವರ ಜನರನ್ನು ಅಥವಾ ದೇವರಿಗೆ ಸಂಬಂಧಪಟ್ಟ ಪ್ರತಿಯೊಂದನ್ನು ಸೂಚಿಸುತ್ತದೆ.
- “ಇಸ್ರಾಯೇಲ್ ಮನೆ” ಎನ್ನುವ ಮಾತು ಸಾಧಾರಣವಾಗಿ ಇಸ್ರಾಯೇಲ್ ದೇಶವನ್ನೆಲ್ಲಾ ಅಥವಾ ವಿಶೇಷವಾಗಿ ಇಸ್ರಾಯೇಲ್ ಉತ್ತರ ರಾಜ್ಯದಲ್ಲಿರುವ ಎಲ್ಲಾ ಕುಲಗಳನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಮನೆ” ಎನ್ನುವದನ್ನು “ಮನೆಯಾಳುಗಳು” ಅಥವಾ “ಜನರು” ಅಥವಾ “ಕುಟುಂಬ” ಅಥವಾ “ಸಂತಾನದವರು” ಅಥವಾ “ದೇವಾಲಯ” ಅಥವಾ “ನಿವಾಸವಾಗಿರುವ ಸ್ಥಳ” ಎಂದೂ ಅನುವಾದ ಮಾಡಬಹುದು.
- “ದಾವೀದನ ಮನೆ” ಎನ್ನುವ ಮಾತನ್ನು “ದಾವೀದನ ವಂಶದವರು” ಅಥವಾ “ದಾವೀದನ ಕುಟುಂಬ” ಅಥವಾ “ದಾವೀದನ ವಂಶದವರು” ಎಂದೂ ಅನುವಾದ ಮಾಡಬಹುದು. ಸಂಬಂಧಪಟ್ಟ ಮಾತುಗಳು ಇದೇ ಮಾತುಗಳ ವಿಧಾನದಲ್ಲಿ ಅನುವಾದ ಮಾಡಬಹುದು.
- “ಇಸ್ರಾಯೇಲ್ ಮನೆ” ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನಗಳಲ್ಲಿ “ಇಸ್ರಾಯೇಲ್ ಜನರು” ಅಥವಾ “ಇಸ್ರಾಯೇಲ್ ವಂಶದವರು” ಅಥವಾ “ಇಸ್ರಾಯೇಲ್ಯರು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ಯೆಹೋವನ ಮನೆ” ಎನ್ನುವ ಪದವನ್ನು “ಯೆಹೋವಾನ ದೇವಾಲಯ” ಅಥವಾ “ಯೆಹೋವನನ್ನು ಆರಾಧಿಸುವ ಸ್ಥಳ” ಅಥವಾ “ಯೆಹೋವ ದೇವರು ತನ್ನ ಜನರೊಂದಿಗೆ ಭೇಟಿಯಾಗುವ ಸ್ಥಳ” ಅಥವಾ “ಯೆಹೋವ ನಿವಾಸವಾಗಿರುವ ಸ್ಥಳ” ಎಂದೂ ಅನುವಾದ ಮಾಡಬಹುದು.
- “ದೇವರ ಮನೆ” ಎನ್ನುವದನ್ನು ಈ ರೀತಿಯ ಮಾತುಗಳಿಂದ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದಾವೀದ, ಸಂತಾನದವರು, ದೇವರ ಮನೆ, ಕುಟುಂಬ ಸದಸ್ಯರು, ಇಸ್ರಾಯೇಲ್ ರಾಜ್ಯ, ಗುಡಾರ, ದೇವಾಲಯ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:41-42
- ಅಪೊ.ಕೃತ್ಯ.07:47-50
- ಆದಿ.39:3-4
- ಆದಿ.41:39-41
- ಲೂಕ.08:38-39
- ಮತ್ತಾಯ.10:5-7
- ಮತ್ತಾಯ.15:24-26

ಪದ ಡೇಟಾ:

- Strong's: H1004, H1005, G3609, G3613, G3614, G3624

ಮನೆಯ ಸದಸ್ಯರು,

ಪದದ ಅರ್ಥವಿವರಣೆ:

“ಮನೆಯ ಸದಸ್ಯರು” ಎನ್ನುವ ಪದವು ಒಂದು ಮನೆಯಲ್ಲಿ ಎಲ್ಲರು ಒಟ್ಟಾಗಿ ಸೇರಿ ಜೀವಿಸುವ ಜನರನ್ನು, ಕುಟುಂಬ ಸದಸ್ಯರನ್ನು ಮತ್ತು ಅವರ ಎಲ್ಲಾ ದಾಸರನ್ನು ಸೂಚಿಸುತ್ತದೆ,

- ಮನೆಯ ಸದಸ್ಯರನ್ನು ನಡೆಸುವುದರಲ್ಲಿ ದಾಸರನ್ನು ನಿರ್ದೇಶಿಸುವುದು ಮತ್ತು ಅಸ್ತಿಪಾಸ್ತಿಗಳ ಸಂರಕ್ಷಣೆಯನ್ನು ನೋಡಿಕೊಳ್ಳುವುದು ಒಳಗೊಂಡಿರುತ್ತದೆ.
- ಕೆಲವೊಂದುಬಾರಿ “ಮನೆಯ ಸದಸ್ಯರು” ಎನ್ನುವ ಪದವು ಒಬ್ಬರಿಂದ ಬಂದಿರುವ ಇಡೀ ಕುಟುಂಬವನ್ನು, ವಿಶೇಷವಾಗಿ ಅವನ ವಂಶಸ್ಥರನ್ನು ಅಲಂಕಾರಿಕವಾಗಿ ಸೂಚಿಸುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಮನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.07:10
- ಗಲಾತ್ಯ.06:10
- ಆದಿ.07:01
- ಆದಿ.34:19
- ಯೋಹಾನ.04:53
- ಮತ್ತಾಯ.10:25
- ಮತ್ತಾಯ.10:36
- ಫಿಲಿಪ್ಪಿ.04:22

ಪದ ಡೇಟಾ:

- Strong's: H1004, H5657, G2322, G3609, G3614, G3615, G3616, G3623, G3624

ಮರಣಿಸು, ಮರಣಿಸುತ್ತಾನೆ, ಮರಣಕರವಾದ, ಮರಣ,

ಪದದ ಅರ್ಥವಿವರಣೆ:

ಈ ಪದವು ಭೌತಿಕವಾದ ಮರಣವನ್ನು ಮತ್ತು ಆತ್ಮೀಯಕವಾದ ಮರಣವನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

1. ಭೌತಿಕವಾದ ಮರಣ

- "ಮರಣಿಸು" ಎನ್ನುವದಕ್ಕೆ ಬದುಕುವುದನ್ನು ನಿಲ್ಲಿಸು ಎಂದರ್ಥ. ಮರಣವು ಭೌತಿಕ ಜೀವನಕ್ಕೆ ಅಂತ್ಯವಾಗಿರುತ್ತದೆ.
- "ಮರಣದಂಡನೆ" ಎಂಬ ಅಭಿವ್ಯಕ್ತಿ ಯಾರನ್ನಾದರೂ ಕೊಲ್ಲುವುದು ಅಥವಾ ಕೊಲ್ಲುವುದನ್ನು ಸೂಚಿಸುತ್ತದೆ, ವಿಶೇಷವಾಗಿ ಒಬ್ಬ ರಾಜ ಅಥವಾ ಇತರ ಆಡಳಿತಗಾರ ಯಾರನ್ನಾದರೂ ಕೊಲ್ಲಲು ಆದೇಶ ನೀಡಿದಾಗ.

2. ಆತ್ಮೀಕವಾದ ಮರಣ

- ಆತ್ಮೀಕವಾದ ಮರಣ ಎನ್ನುವುದು ದೇವರಿಂದ ಒಬ್ಬ ವ್ಯಕ್ತಿ ದೂರಾಗುವುದನ್ನು ಸೂಚಿಸುತ್ತದೆ.
- ಆದಾಮನು ದೇವರಿಗೆ ಅವಿಧೇಯತೆಯನ್ನು ತೋರಿಸಿದಾಗ ಆತನು ಆತ್ಮೀಯಕವಾಗಿ ಸತ್ತುಹೋದನು. ದೇವರೊಂದಿಗೆ ಆತನಿಗಿರುವ ಸಂಬಂಧವು ಕಳೆದುಕೊಂಡಿದ್ದಾನೆ. ಅವನು ನಾಚಿಕೆಗೊಂಡು, ದೇವರಿಗೆ ಕಾಣದಂತೆ ಮರೆಯಾಗುವುದಕ್ಕೆ ಪ್ರಯತ್ನಿಸಿದನು.
- ಆದಾಮನಿಂದ ಬಂದಿರುವ ಪ್ರತಿಯೊಬ್ಬ ವ್ಯಕ್ತಿ ಪಾಪಿಯಾಗಿರುತ್ತಾನೆ, ಮತ್ತು ಆತ್ಮೀಯಕವಾಗಿ ಸತ್ತವನಾಗಿರುತ್ತಾನೆ. ನಾವೆಲ್ಲರು ಯೇಸುವಿನಲ್ಲಿ ನಂಬಿಕೆ ಇಟ್ಟಾಗ ದೇವರು ನಮ್ಮೆಲ್ಲರನ್ನೂ ಮತ್ತೊಮ್ಮೆ ಆತ್ಮೀಯಕವಾಗಿ ಜೀವಿಸುವವರನ್ನಾಗಿ ಮಾಡಿದ್ದಾನೆ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವುದಕ್ಕೆ ಮರಣವನ್ನು ಸೂಚಿಸುವ ಯಾವುದೇ ಸ್ವಾಭಾವಿಕ ಪದವು ಅಥವಾ ಮಾತು ಅನುವಾದ ಮಾಡುವ ಭಾಷೆಯಲ್ಲಿದ್ದರೆ ಅದನ್ನೇ ಪ್ರತಿದಿನ ಉಪಯೋಗಿಸುವುದು ಒಳ್ಳೇಯದು.
- ಇತರ ಬೇರೆ ಭಾಷೆಗಳಲ್ಲಿ "ಮರಣಿಸು" ಎನ್ನುವ ಮಾತನ್ನು "ಜೀವಿಸಬೇಡ" ಎಂದು ವ್ಯಕ್ತೀಕರಿಸುತ್ತಾರೆ. "ಮೃತ" ಎನ್ನುವ ಪದವನ್ನು "ಜೀವಂತವಾಗಿಲ್ಲ" ಅಥವಾ "ಪ್ರಾಣವಿಲ್ಲ" ಅಥವಾ "ಜೀವಿಸುತ್ತಿಲ್ಲ" ಎಂದೂ ಅನುವಾದ ಮಾಡಬಹುದು.
- ಮರಣವನ್ನು ವಿವರಿಸುವುದಕ್ಕೆ ಅನೇಕ ಭಾಷೆಗಳಲ್ಲಿ ಅಲಂಕಾರಿಕ ಮಾತುಗಳನ್ನು ಉಪಯೋಗಿಸುತ್ತಾರೆ, "ಸತ್ತು ಹೋದನು" ಎಂದು ಹೇಳುತ್ತಾರೆ. ಆದರೆ, ಸತ್ಯವೇದದಲ್ಲಿ ಮರಣ ಎನ್ನುವ ಪದಕ್ಕೆ ದೈನಂದಿನ ಭಾಷೆಯಲ್ಲಿ ಉಪಯೋಗಿಸುವ ಪದವನ್ನೇ ನೇರವಾಗಿ ಉಪಯೋಗಿಸುವುದು ಒಳ್ಳೇಯದು.
- ಸತ್ಯವೇದದಲ್ಲಿ ಭೌತಿಕ ಜೀವನ ಮತ್ತು ಮರಣಗಳು ಅನೇಕಬಾರಿ ಆತ್ಮೀಕ ಜೀವನ ಮತ್ತು ಮರಣಗಳಿಗೆ ಹೋಲಿಸಲ್ಪಟ್ಟಿದೆ. ಭೌತಿಕ ಮರಣಕ್ಕೂ ಮತ್ತು ಆತ್ಮೀಕವಾದ ಮರಣಕ್ಕೂ ಒಂದೇ ಪದವನ್ನು ಅಥವಾ ಒಂದೇ ಮಾತನ್ನು ಉಪಯೋಗಿಸುವುದು ಉತ್ತಮ.
- ಕೆಲವೊಂದು ಭಾಷೆಗಳಲ್ಲಿ "ಆತ್ಮೀಕವಾದ ಮರಣ" ಎಂದು ಸ್ಪಷ್ಟವಾಗಿ ಹೇಳುತ್ತಾರೆ, ಇದು ಆ ಸಂದರ್ಭ ಬಂದಾಗ ಮಾತ್ರವೇ ಆ ಪದವನ್ನು ಉಪಯೋಗಿಸುತ್ತಾರೆ. ಆತ್ಮೀಯಕವಾದ ಮರಣಕ್ಕೆ ವಿರುದ್ಧವಾಗಿ ಹೇಳುವ ಸಂದರ್ಭಗಳಲ್ಲಿ "ಭೌತಿಕ ಮರಣ" ಎಂದು ಹೇಳುವುದು ಉತ್ತಮವೆಂದು ಅನುವಾದಕರಲ್ಲಿ ಕೆಲವರು ಆಲೋಚನೆ ಮಾಡುತ್ತಾರೆ.
- "ಮೃತ" ಎನ್ನುವ ಮಾತು ಸತ್ತುಹೋದಂತ ಮನುಷ್ಯರನ್ನು ಸೂಚಿಸುವ ನಾಮಾಂಕಿತ ವಿಶೇಷಣವಾಗಿರುತ್ತದೆ. ಕೆಲವೊಂದು ಭಾಷೆಗಳಲ್ಲಿ ಈ ಪದವನ್ನು "ಮೃತಪಟ್ಟವರು" ಎಂದೂ ಅಥವಾ "ಸತ್ತುಹೋದ ಜನರು" ಎಂದೂ ಅನುವಾದ ಮಾಡುತ್ತಾರೆ. (ನೋಡಿರಿ: ನಾಮಾಂಕಿತ ವಿಶೇಷಣ)
- "ಸಾಯಿಸು" ಎನ್ನುವ ಪದವನ್ನು "ಕೊಲ್ಲು" ಅಥವಾ "ನರಹತ್ಯೆಮಾಡು" ಅಥವಾ "ಗಲ್ಲಿಗೇರಿಸು" ಎಂದೂ ಅನುವಾದ ಮಾಡುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ನಂಬು, ನಂಬಿಕೆ, ಜೀವನ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.15:21
- 1 ಥೆಸ್ಸ.04:17
- ಅಪೊ.ಕೃತ್ಯ.10:42
- ಅಪೊ.ಕೃತ್ಯ..14:19
- ಕೊಲೊಸ್ಸೆ.02:15
- ಕೊಲೊಸ್ಸೆ.02:20
- ಆದಿ.02:15
- ಆದಿ.34:27
- ಮತ್ತಾಯ.16:28
- ರೋಮಾ.05:10

- ರೋಮಾ.05:12
- ರೋಮಾ.06:10

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **01:11** ಒಳ್ಳೇದರ ಕೆಟ್ಟದರ ಅರಿವನ್ನು ಹುಟ್ಟಿಸುವ ಈ ಮರದ ಹಣ್ಣನ್ನು ಮಾತ್ರ ತಿನ್ನಬಾರದು. ತಿಂದ ದಿನವೇ ಸತ್ತು ಹೋಗುವೆ ಎಂದು ದೇವರು ಆದಾಮನಿಗೆ ಆಜ್ಞಾಪಿಸಿದನು. ಈ ಮರದ ಹಣ್ಣನ್ನು ಅವನು ತಿಂದರೆ, ಅವನು _ ಸತ್ತು _ ಹೋಗುತ್ತಾನೆ.
- **02:11** “ನೀನು _ ಸಾಯುವಿ _ ಮತ್ತು ನಿನ್ನ ದೇಹವು ಮಣ್ಣಿಗೆ ಹಿಂದುರಿಗೆ ಹೋಗುವುದು.”
- **07:10** ಇಸಾಕನು _ ಮರಣ ಹೊಂದಿದನು _, ಯಾಕೋಬ ಮತ್ತು ಏಸಾವರಿಬ್ಬರು ಅವನನ್ನು ಸಮಾಧಿ ಮಾಡಿದರು.
- **37:05** “ನಾನೇ ಪುನರುತ್ಥಾನವು ಜೀವವೂ ಆಗಿದ್ದೇನೆ ನನ್ನಲ್ಲಿ ನಂಬಿಕೆ ಇಡುವವನು _ ಸತ್ತರೂ _ ಬದುಕುವನು. ಜೀವಿಸುವ ಪ್ರತಿಯೊಬ್ಬನು ನನ್ನಲ್ಲಿ ನಂಬಿಕೆಯಿಟ್ಟರೆ, ಅವನು ಎಂದಿಗೂ _ ಸಾಯುವುದಿಲ್ಲ _” ಎಂದು ಯೇಸು ಉತ್ತರಕೊಟ್ಟನು.
- **40:08** ಆತನ _ ಮರಣದ _ ಮೂಲಕ ಜನರೆಲ್ಲರೂ ದೇವರ ಬಳಿಗೆ ಬರುವುದಕ್ಕೆ ಆತನು ಮಾರ್ಗವನ್ನು ತೆರೆದನು.
- **43:07** “ಯೇಸು _ ಸತ್ತರೂ _, ದೇವರು ಆತನನ್ನು ಮರಣ ವೇದನೆಗಳಿಂದ ಬಿಡಿಸಿ ಎಬ್ಬಿಸಿದನು.
- **48:02** ಅವರು ಪಾಪಮಾಡಿರುವುದರಿಂದ ಭೂಮಿಯ ಮೇಲಿರುವ ಪ್ರತಿಯೊಬ್ಬರೂ ರೋಗಗ್ರಸ್ತರಾಗಿ, ಪ್ರತಿಯೊಬ್ಬರೂ _ ಸಾಯುತ್ತಿದ್ದಾರೆ _.
- **50:17** ಆತನು (ಯೇಸು) ಪ್ರತಿಯೊಬ್ಬರ ಕಣ್ಣೀರನ್ನು ಹೊರೆಸುವನು ಮತ್ತು ಅಲ್ಲಿ ಶ್ರಮೆ, ಬಾಧೆ, ಅಳು, ದುಷ್ಟ, ನೋವು, ಅಥವಾ _ ಮರಣ _ ಎನ್ನುವವುಗಳು ಯಾವುವು ಇರುವುದಿಲ್ಲ.

ಪದ ಡೇಟಾ:

- Strong's: H6, H1478, H1826, H1934, H2491, H4191, H4192, H4193, H4194, H4463, H5038, H5315, H6297, H6757, H7496, H7523, H8045, H8546, H8552, G336, G337, G520, G599, G615, G622, G1634, G1935, G2079, G2253, G2286, G2287, G2288, G2289, G2348, G2837, G2966, G3498, G3499, G3500, G4430, G4880, G4881, G5053, G5054

ಮರುಭೂಮಿ, ಮರುಭೂಮಿಗಳು, ಬಂಜರಿ, ಬಂಜರಿ ಭೂಮಿಗಳು

ಪದದ ಅರ್ಥವಿವರಣೆ:

ಮರುಭೂಮಿ ಅಥವಾ ಬಂಜರಿ ಎನ್ನುವುದು ಒಣಗಿದ ನೆಲ, ಕೇವಲ ಕೆಲವು ಮರಗಳು ಮಾತ್ರ ಬೆಳೆಯುವ ಬಂಜೆ ಭೂಮಿಯಾಗಿರುತ್ತದೆ.

- ಮರುಭೂಮಿ ಎನ್ನುವುದು ಒಣ ವಾತಾವರಣವನ್ನು ಹೊಂದಿರುವ ಪ್ರಾಂತ್ಯ ಮತ್ತು ಕೇವಲ ಕೆಲವು ಮರಗಳು ಅಥವಾ ಪ್ರಾಣಿಗಳು ಇರುವ ಸ್ಥಳವಾಗಿರುತ್ತದೆ.
- ಕಠಿಣವಾದ ಪರಿಸ್ಥಿತಿಗಳ ಕಾರಣದಿಂದ ಕೇವಲ ಕೆಲವರು ಜನರು ಮಾತ್ರವೇ ಮರುಭೂಮಿಯಲ್ಲಿ ನಿವಸಿಸುತ್ತಾರೆ, ಆದ್ದರಿಂದ ಇದನ್ನು "ಬಂಜರಿ ಭೂಮಿ" ಎಂದೂ ಕರೆಯುತ್ತಾರೆ.
- "ಬಂಜರಿ ಭೂಮಿ" ಎನ್ನುವ ಪದವು ದೂರಸ್ಥ ಪ್ರಾಂತ್ಯ, ನಿರ್ಜನ ಮತ್ತು ಜನರನ್ನು ನಿಷೇಧಿಸಲ್ಪಟ್ಟ ಪ್ರಾಂತ್ಯ ವೆನ್ನುವ ಅರ್ಥ ಕೊಡುತ್ತದೆ,
- ಈ ಪದವನ್ನು "ಮರಳುಭೂಮಿಯ ಪ್ರದೇಶ" ಅಥವಾ "ದೂರಸ್ಥ್ಯ" ಅಥವಾ "ಜನರು ನಿವಾಸವಿರದ ಸ್ಥಳ" ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.13:16-18
- ಅಪೊ.ಕೃತ್ಯ.21:37-38
- ವಿಮೋ.04:27-28
- ಆದಿ.37:21-22
- ಯೋಹಾನ.03:14-15
- ಲೂಕ.01:80
- ಲೂಕ.09:12-14
- ಮಾರ್ಕ.01:1-3
- ಮತ್ತಾಯ.04:1-4
- ಮತ್ತಾಯ.11:7-8

ಪದ ಡೇಟಾ:

- Strong's: H776, H2723, H3293, H3452, H4057, H6160, H6723, H6728, H6921, H8047, H8414, G2047, G2048

ಮರ್ಮ, ಮರೆಯಾದ ಸತ್ಯ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಮರ್ಮ" ಎನ್ನುವ ಪದವು ತಿಳಿಯದ ಅಥವಾ ದೇವರು ಈಗ ವಿವರಿಸುತ್ತಿರುವುದನ್ನು ಅರ್ಥಮಾಡಿಕೊಳ್ಳಲು ಕಷ್ಟಕರವಾದದನ್ನು ಸೂಚಿಸುತ್ತದೆ.

- ಕ್ರಿಸ್ತನ ಸುವಾರ್ತೆಯು ಹಿಂದಿನ ಯುಗಗಳಲ್ಲಿ ತಿಳಿದಿಲ್ಲದ ರಹಸ್ಯವಾಗಿತ್ತು.
- ಮರ್ಮವಾಗಿ ಹೇಳಲ್ಪಟ್ಟ ಅನೇಕ ವಿಶೇಷವಾದ ಅಂಶಗಳಲ್ಲಿ ಯೆಹೂದ್ಯರು ಮತ್ತು ಅನ್ಯರು ಕ್ರಿಸ್ತನಲ್ಲಿ ಸಮಾನವಾಗಿದ್ದಾರೆ ಎನ್ನುವುದು ಒಂದಾಗಿರುತ್ತದೆ.
- ಈ ಪದವನ್ನು "ರಹಸ್ಯ" ಅಥವಾ "ಮರೆಯಾಗಿರುವ ವಿಷಯಗಳು" ಅಥವಾ "ತಿಳಿಯದ ವಿಷಯ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕ್ರಿಸ್ತ, ಅನ್ಯನು, ಶುಭವಾರ್ತೆ, ಯೆಹೂದ್ಯ, ನಿಜ)

ಸತ್ಯವೇದದ ಅನುಬಂಧ ವಾಕ್ಯಗಳು:

- ಕೊಲೊಸ್ಸ.04:2-4
- ಎಫೆಸ.06:19-20
- ಲೂಕ.08:9-10
- ಮಾರ್ಕ.04:10-12
- ಮತ್ತಾಯ.13:11

ಪದ ಡೇಟಾ:

- Strong's: H1219, H7328, G3466

ಮಲ, ಸಗಣಿ

ಪದದ ಅರ್ಥವಿವರಣೆ:

“ಮಲ” ಎನ್ನುವ ಪದವು ಮನುಷ್ಯರಿಂದ ಅಥವಾ ಪ್ರಾಣಿಗಳಿಂದ ಹೊರ ಬರುವ ವ್ಯರ್ಥ ಪದಾರ್ಥವನ್ನು ಸೂಚಿಸುತ್ತದೆ ಮತ್ತು ಇದನ್ನು ಮಲ ವಿಸರ್ಜನೆ ಎಂದೂ ಕರೆಯುತ್ತಾರೆ. ಫಲವತ್ತಾದ ಮಣ್ಣನ್ನು ತಯಾರಿಸುವುದಕ್ಕೆ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿದಾಗ, ಅದನ್ನು “ಗೊಬ್ಬರ ಅಥವಾ ಸಗಣಿ” ಎಂದು ಕರೆಯುತ್ತಾರೆ.

- ಅಪ್ರಾಮುಖ್ಯ ಅಥವಾ ಬೆಲೆಯಿಲ್ಲದವುಗಳು ಎಂದು ಯಾವುದಾದರೊಂದನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಈ ಪದಗಳನ್ನು ಉಪಯೋಗಿಸುತ್ತಾರೆ.
- ಪ್ರಾಣಿಯ ಒಣಗಿದ ಸಗಣಿಯನ್ನು ಅನೇಕಬಾರಿ ಇಂಧನಕ್ಕಾಗಿ ಬಳಸುತ್ತಾರೆ.
- “ಭೂಮಿಯ ಮೇಲೆ ಮಲದಂತಿರು” ಎನ್ನುವ ಮಾತನ್ನು “ಭೂಮಿಯ ಮೇಲೆ ಕೆಲಸಕ್ಕೆಬಾರದ ಮಲದಂತೆ ಚೆದುರಿ ಹೋಗಿರಿ” ಎಂದೂ ಅನುವಾದ ಮಾಡಬಹುದು.
- ಯೆರೂಸಲೇಮಿನ ದಕ್ಷಿಣ ಗೋಡೆಯಲ್ಲಿರುವ “ತಿಪ್ಪೆ ಬಾಗಿಲು” ಬಹುಶಃ ಪಟ್ಟಣದಿಂದ ಹೊರ ತೆಗೆದುಕೊಂಡು ಬರುವ ಕಸ ಮತ್ತು ಕಚಡವನ್ನು ಹಾಕುವ ಬಾಗಿಲಾಗಿರಬಹುದು.

(ಈ ಪದಗಳನ್ನು ಸಹ ನೋಡಿರಿ : ಬಾಗಿಲು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.14:9-10
- 2 ಅರಸ.06:24-26
- ಯೆಶಯಾ.25:9-10
- ಯೆರೆ.08:1-3

ಪದ ಡೇಟಾ:

- Strong's: H830, H1119, H1557, H1561, H1686, H1828, H6569, H6675, G906, G4657

ಮಹಾ ಭೀತಿ, ಭಯೋತ್ಪಾದಿಸು, ಭಯೋತ್ಪಾದಿಸಲಾಗಿದೆ, ಮಹಾ ಭೀತಿಗಳು, ಭಯಭೀತಿಯಿಂದ, ಭಯಭೀತಿಯನ್ನುಂಟು ಮಾಡಿದೆ, ಭಯಭೀತಿಯಿಂದ

ಪದದ ಅರ್ಥವಿವರಣೆ:

"ಮಹಾ ಭೀತಿ" ಎನ್ನುವ ಪದವು ತೀವ್ರ ಭಯದ ಭಾವನೆಯನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿಯನ್ನು "ಭಯಭೀತಿಗೊಳಿಸು" ಎನ್ನುವ ಮಾತಿಗೆ ಒಬ್ಬ ವ್ಯಕ್ತಿ ತುಂಬಾ ಹೆಚ್ಚಾಗಿ ಹೆದರಿಕೆಗೊಳ್ಳುವಂತೆ ಮಾಡು ಎಂದರ್ಥವಾಗಿರುತ್ತದೆ.

- "ಮಹಾ ಭಯ" ಎಂದರೆ ಯಾವುದಾದರೊಂದು ಅಥವಾ ಯಾರಾದರೊಬ್ಬರು ಮಹಾ ಭಯವನ್ನುಉಂಟು ಮಾಡುವುದು ಅಥವಾ ಹೆದರಿಕೆಯನ್ನುಂಟು ಮಾಡುವುದು ಎಂದರ್ಥ. ಮಹಾ ಭೀತಿಗೆ ಉದಾಹರಣೆ ಹೇಳಬೇಕೆಂದರೆ, ಶತ್ರುವಿನ ಧಾಳಿ ಮಾಡುವುದು ಅಥವಾ ಮಾರಿರೋಗ ಅಥವಾ ಅತೀ ವಿಸ್ತಾರವಾಗಿ ವ್ಯಾಪಕವಾಗಿರುವ ವ್ಯಾಧಿ, ಅನೇಕ ಜನರನ್ನು ಸಾಯಿಸುವುದು ಎಂದೂ ಹೇಳಬಹುದು.
- ಈ ಎಲ್ಲಾ ಮಹಾ ಭೀತಿಗಳು "ಭಯಭೀತಿಗಳನ್ನು," ಹುಟ್ಟಿಸುವವುಗಳಾಗಿರುತ್ತವೆ. ಈ ಪದವನ್ನು ಅಥವಾ ಮಾತನ್ನು "ಭಯಕ್ಕೆ ಕಾರಣವಾಗಿರುವುದು" ಅಥವಾ "ಭಯಭೀತಿಯನ್ನುಂಟು ಮಾಡುವುದು" ಎಂದೂ ಅನುವಾದ ಮಾಡಬಹುದು.
- ದೇವರ ತೀರ್ಪು ಒಂದಾನೊಂದು ದಿನ ಆತನ ಕೃಪೆಯನ್ನು ತಿರಸ್ಕಾರ ಮಾಡಿದ ಜನರಲ್ಲಿ ಭಯಭೀತಿಯನ್ನು ಹುಟ್ಟಿಸುತ್ತದೆ.
- "ಯೆಹೋವನ ಭಯಭೀತಿ" ಎನ್ನುವ ಮಾತನ್ನು "ಯೆಹೋವನ ಮಹಾ ಭೀತಿಯ ಸಾನ್ನಿಧ್ಯವು" ಅಥವಾ "ಯೆಹೋವನ ಭಯಾನಕವಾದ ತೀರ್ಪು" ಅಥವಾ "ಮಹಾ ಭಯವನ್ನು ಯೆಹೋವನು ಉಂಟು ಮಾಡಿದಾಗ" ಎಂದೂ ಅನುವಾದ ಮಾಡಬಹುದು.
- "ಮಹಾ ಭೀತಿ" ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನಗಳಲ್ಲಿ "ಅತೀ ತೀವ್ರವಾದ ಭಯ" ಅಥವಾ "ಆಳವಾದ ಹೆದರಿಕೆ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ವಿರೋಧಿ, ಭಯ, ತೀರ್ಪು ಮಾಡು, ಮಾರಿರೋಗ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.02:24-25
- ವಿಮೋ.14:10-12
- ಲೂಕ.21:7-9
- ಮಾರ್ಕ.06:48-50
- ಮತ್ತಾಯ.28:5-7

ಪದ ಡೇಟಾ:

- Strong's: H367, H926, H928, H1091, H1161, H1204, H1763, H2111, H2189, H2283, H2731, H2847, H2851, H2865, H3372, H3707, H4032, H4048, H4172, H4288, H4637, H6184, H6206, H6343, H6973, H8541, G1629, G1630, G2258, G4422, G4426, G5401

ಮಹಾಶರೀರಕ, ಮಹಾಶರೀರಕರು

ಪದದ ಅರ್ಥವಿವರಣೆ

“ಮಹಾಶರೀರಕ” ಎನ್ನುವ ಪದವು ಬಹಳ ಉದ್ದ ಮತ್ತು ಬಲವಂತನಾದ ವ್ಯಕ್ತಿಯನ್ನು ಸೂಚಿಸುತ್ತದೆ.

- ದಾವೀದನು ಯುದ್ಧ ಮಾಡಿದ ಫಿಲಿಷ್ಟಿಯರ ಸೈನಿಕನಾದ ಗೊಲ್ಯಾತನು ಬಹಳ ಉದ್ದವಾಗಿ, ಬಲಶಾಲಿಯಾಗಿದ್ದಕಾರಣ ಅವನನ್ನು ಮಹಾಶರೀರಕ ಎಂದು ಕರೆಯುತ್ತಿದ್ದರು.
- ಇಸ್ರಾಯೇಲ್ ಗೂಡಾಚಾರಿಗಳು ಕಾನಾನ್ ದೇಶವನ್ನು ಪರಿಶೀಲಿಸಿದಾಗ ಅಲ್ಲಿನ ಜನರು ಮಹಾಶರೀರಕರಾಗಿದ್ದಾರೆಂದು ಅವರು ಹೇಳಿದರು.

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಗೊಲ್ಯಾತನು, ಫಿಲಿಷ್ಟಿಯರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.06:4
- ಅರಣ್ಯ..13:32-33

ಪದ ಡೇಟಾ:

- Strong's: H1368, H5303, H7497

ಮಾಂತ್ರಿಕ, ಮಾಂತ್ರಿಕರು, ಮಾಟಗಾರ್ತಿ, ಮಾಟಗಾರಿಕೆ, ಮಾಟ ಮಂತ್ರಗಳು, ಮಂತ್ರ ವಿದ್ಯೆ

ಪದದ ಅರ್ಥವಿವರಣೆ:

"ಮಾಟಗಾರಿಕೆ" ಅಥವಾ "ಮಂತ್ರ ವಿದ್ಯೆ" ಎನ್ನುವ ಪದಗಳು ಮಾಯ ಮಾಟ ಉಪಯೋಗಿಸುವುದನ್ನು ಸೂಚಿಸುತ್ತದೆ, ಇದರಲ್ಲಿ ದುರಾತ್ಮಗಳ ಸಹಾಯದಿಂದ ಶಕ್ತಿಯುತವಾದ ಕಾರ್ಯಗಳು ಮಾಡುವುದು ಒಳಗೊಂಡಿರುತ್ತದೆ. "ಮಾಂತ್ರಿಕ" ಎನ್ನುವುದು ಇಂಥಹ ಶಕ್ತಿಯುತವಾದ ಮಾಯ ಮಾಟಗಳನ್ನು ಮಾಡುವ ವ್ಯಕ್ತಿ ಎಂದರ್ಥ.

- ಮಾಯ ಮಾಟ ಮತ್ತು ಮಾಟ ಮಂತ್ರಗಳ ಉಪಯೋಗದಲ್ಲಿ ಪ್ರಯೋಜನಕರವಾದ ವಿಷಯಗಳು (ಬೇರೊಬ್ಬರನ್ನು ಗುಣಪಡಿಸುವುದು) ಮತ್ತು ಹಾನಿಕರವಾದ ವಿಷಯಗಳು (ಒಬ್ಬರನ್ನು ಶಪಿಸುವುದು) ಒಳಗೊಂಡಿರುತ್ತವೆ. ಆದರೆ ಎಲ್ಲಾ ವಿಧವಾದ ಮಾಟಗಾರಿಕೆಗಳು ತಪ್ಪಾಗಿರುತ್ತವೆ, ಯಾಕಂದರೆ ಅವರು ದುರಾತ್ಮಗಳ ಶಕ್ತಿಯನ್ನು ಬಳಸುತ್ತಾರೆ.
- ಸತ್ಯವೇದದಲ್ಲಿ ಮಾಟಗಾರಿಕೆಯನ್ನು ಉಪಯೋಗಿಸುವುದು ಇತರ ಅನೇಕ ಭಯಂಕರವಾದ ಪಾಪಗಳಂತೆಯೇ (ವ್ಯಭಿಚಾರ, ವಿಗ್ರಹಗಳನ್ನು ಆರಾಧಿಸುವುದು, ಮತ್ತು ಮಕ್ಕಳನ್ನು ಬಲಿ ಕೊಡುವುದು) ದುಷ್ಟ ಕಾರ್ಯವಾಗಿರುತ್ತದೆ.
- "ಮಾಟಗಾರಿಕೆ" ಮತ್ತು "ಮಾಟ ಮಂತ್ರ" ಎನ್ನುವ ಪದಗಳನ್ನು "ದುರಾತ್ಮ ಶಕ್ತಿ" ಅಥವಾ "ಎರಕಹೊಯ್ದ ಮಂತ್ರಗಳು" ಎಂದೂ ಅನುವಾದ ಮಾಡಬಹುದು.
- "ಮಾಂತ್ರಿಕ" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಮಾಯ ಮಂತ್ರವನ್ನು ಮಾಡುವವನು" ಅಥವಾ "ಎರಕಹೊಯ್ದ ಮಂತ್ರಗಳನ್ನು ನುಡಿಯುವ ವ್ಯಕ್ತಿ" ಅಥವಾ "ದುರಾತ್ಮ ಶಕ್ತಿಯನ್ನು ಉಪಯೋಗಿಸುವುದರ ಮೂಲಕ ಅದ್ಭುತಗಳನ್ನು ಮಾಡುವ ವ್ಯಕ್ತಿ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಆತ್ಮ ಪ್ರಪಂಚವನ್ನು ಸಂಪರ್ಕಿಸುವ ಪ್ರಯತ್ನವನ್ನು ಸೂಚಿಸುವ "ಕಣಿ ಹೇಳುವುದು" ಎನ್ನುವ ಪದಕ್ಕಿರುವ ಅರ್ಥಕ್ಕಿಂತ "ಮಾಟಗಾರಿಕೆ" ಎನ್ನುವ ಪದಕ್ಕೆ ವಿಭಿನ್ನವಾದ ಅರ್ಥವನ್ನು ಹೊಂದಿರುತ್ತದೆ,

(ಈ ಪದಗಳನ್ನು ಸಹ ನೋಡಿರಿ : ವ್ಯಭಿಚಾರ, ದೆವ್ವ, ಕಣಿ ಹೇಳುವುದು, ಸುಳ್ಳು ದೇವರು, ಮಾಯ ಮಂತ್ರ, ಹೋಮ, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.08:9-11
- ವಿಮೋ.07:11-13
- ಗಲಾತ್ಯ.05:19-21
- ಪ್ರಕ.09:20-21

ಪದ ಡೇಟಾ:

- Strong's: H3784, H3785, H3786, H6049, G3095, G3096, G3097, G5331, G5332, G5333

ಮಾರಿರೋಗ, ಮಾರಿರೋಗಗಳು

ಪದದ ಅರ್ಥವಿವರಣೆ:

ಮಾರಿರೋಗಗಳು ಅನೇಕಮಂದಿ ಜನರು ದೊಡ್ಡ ಸಂಖ್ಯೆಯಲ್ಲಿ ಸಾಯುವಂತೆ ಮಾಡುವ ಅಥವಾ ನರಳುವಂತೆ ಮಾಡುವ ಕೆಲವು ಸಂದರ್ಭಗಳಾಗಿರುತ್ತವೆ. ಅನೇಕಸಲ ಮಾರಿರೋಗವು ಒಂದು ವ್ಯಾಧಿಯಾಗಿರುತ್ತದೆ, ಇದನ್ನು ಹರಡದಂತೆ ಮಾಡುವ ಮುಂಚಿತವಾಗಿಯೇ ಅತೀ ಶೀಘ್ರದಲ್ಲಿ ಜನರು ಸಾಯುವಂತೆ ಮಾಡುವ ರೋಗವಾಗಿರುತ್ತದೆ.

- ಅನೇಕ ಮಾರಿರೋಗಗಳು ಸ್ವಾಭಾವಿಕ ಹುಟ್ಟಿ ಬರುತ್ತವೆ, ಆದರೆ ಜನರು ಪಾಪ ಮಾಡಿದ್ದಕ್ಕಾಗಿ ಅವರನ್ನು ಶಿಕ್ಷಿಸುವುದಕ್ಕೆ ದೇವರಿಂದ ಕೆಲವು ಮಾರಿ ರೋಗಗಳು ಕಳುಹಿಸಲ್ಪಡುತ್ತವೆ.
- ಮೋಶೆಯ ಕಾಲದಲ್ಲಿ ಇಸ್ರಾಯೇಲ್ಯರು ಐಗುಪ್ತವನ್ನು ಬಿಡುವುದಕ್ಕೆ ಫರೋಹನನ್ನು ಬಲವಂತ ಮಾಡಲು ಐಗುಪ್ತಕ್ಕೆ ವಿರುದ್ಧವಾಗಿ ದೇವರು ಹತ್ತು ಮಾರಿರೋಗಗಳನ್ನು ಕಳುಹಿಸಿದನು. ಈ ಮಾರಿರೋಗಗಳಲ್ಲಿ ನೀರು ರಕ್ತವಾಗಿ ಮಾರ್ಪಡುವುದು, ಭೌತಿಕವಾದ ರೋಗಗಳು ಬರುವುದು, ಅನೆಕಲ್ಲುಗಳಿಂದ ಮತ್ತು ಕೀಟಕಗಳಿಂದ ಬೆಳೆಗಳನ್ನು ನಾಶಗೊಳಿಸುವುದು, ಮೂರು ದಿನಗಳ ಕಾಲ ಸಂಪೂರ್ಣವಾಗಿ ಕತ್ತಲಾಗಿ ಮಾಡುವುದು ಮತ್ತು ಚೊಚ್ಚಲ ಗಂಡು ಮಕ್ಕಳನ್ನು ಸಾಯಿಸುವುದು ಒಳಗೊಂಡಿರುತ್ತವೆ.
- ಇದನ್ನು "ಬಹು ವಿಸ್ತಾರವಾದ ವಿಪತ್ತುಗಳು" ಅಥವಾ "ಬಹು ವಿಸ್ತಾರವಾದ ರೋಗ" ಎಂದು ಸಂದರ್ಭಾನುಗುಣವಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆನೆಕಲ್ಲು, ಇಸ್ರಾಯೇಲ್, ಮೋಶೆ, ಫರೋಹ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.24:13-14
- ವಿಮೋ.09:13-14
- ಆದಿ.12:17-20
- ಲೂಕ.21:10-11
- ಪ್ರಕ.09:18-19

ಪದ ಡೇಟಾ:

- Strong's: H1698, H4046, H4194, H4347, H5061, H5062, H5063, G3061, G3148, G4127

ಮಿಡತೆ, ಮಿಡತೆಗಳು

ಸತ್ಯಾಂಶಗಳು:

“ಮಿಡತೆ” ಎನ್ನುವ ಪದವು ಕುಪ್ಪಳಿಸಿ ಮೇಲಕ್ಕೆ ಹಾರುವ ಕೀಟವನ್ನು ಸೂಚಿಸುತ್ತದೆ, ಇದು ಕೆಲವೊಂದುಬಾರಿ ಹೊಲಗಳಲ್ಲಿ ಹಾಕಿರುವ ತರಕಾರಿಯನ್ನು ನಾಶಮಾಡುವುದಕ್ಕೆ ಒಂದೇ ಜಾತಿಯ ಇತರ ಎಲ್ಲಾ ಮಿಡತೆಗಳೊಂದಿಗೆ ಹಾರಿ ಹೋಗುತ್ತಾ ಇರುತ್ತವೆ.

- ಮಿಡತೆಗಳು ಮತ್ತು ಇತರ ಒಂದೇ ಜಾತಿಯ ಮಿಡತೆಗಳು ದೊಡ್ಡದಾಗಿದ್ದು ನೇರವಾದ ಉದ್ದಕ್ಕಿರುವ ರೆಕ್ಕೆಗಳನ್ನು ಒಳಗೊಂಡಿರುವ ಕೀಟಗಳಾಗಿರುತ್ತವೆ, ತುಂಬಾ ದೂರಕ್ಕೆ ಹಾರುವುದಕ್ಕೆ ಅಥವಾ ಜಿಗಿಯುವುದಕ್ಕೆ ಬೇಕಾದ ಸಾಮರ್ಥ್ಯವನ್ನು ಹೊಂದಿರುವ ಎರಡು ಕಾಲುಗಳನ್ನು ಹೊಂದಿರುತ್ತವೆ.

ಹಳೇ ಒಡಂಬಡಿಕೆಯಲ್ಲಿ ಹಾನಿಮಾಡುವ ಮಿಡತೆಗಳನ್ನು ಇಸ್ರಾಯೇಲ್ಯರ ಅವಿಧೇಯತೆಗೆ ಫಲಿತಾಂಶವಾಗಿ ಬರುವ ವಿನಾಶದ ಚಿತ್ರವನ್ನಾಗಿ ಅಥವಾ ಒಂದು ಗುರುತನ್ನಾಗಿ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.

- ಐಗುಪ್ತರಿಗೆ ವಿರುದ್ಧವಾಗಿ ದೇವರು ಕಳುಹಿಸಿದ ಹತ್ತು ಮಾರಿರೋಗಗಳಲ್ಲಿ ಮಿಡತೆಗಳು ಒಂದಾಗಿತ್ತು.
- ಸ್ನಾನಿಕನಾದ ಯೋಹಾನನು ಅರಣ್ಯದಲ್ಲಿದ್ದಾಗ, ಈತನು ಆಹಾರವನ್ನಾಗಿ ಮಿಡತೆಗಳನ್ನೇ ತೆಗೆದುಕೊಳ್ಳುತ್ತಿದ್ದನೆಂದು ಹೊಸ ಒಡಂಬಡಿಕೆ ಹೇಳುತ್ತಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಸೆರೆ, ಐಗುಪ್ತ, ಇಸ್ರಾಯೇಲ್, ಯೋಹಾನ (ಸ್ನಾನಿಕನು), [ಮಾರಿರೋಗ]**ಯೋಹಾನ (ಸ್ನಾನಿಕನು) (p.575)**)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.06:28-31
- ಧರ್ಮೋ.28:38-39
- ವಿಮೋ.10:3-4
- ಮಾರ್ಕ.01:4-6
- ಜ್ಞಾನೋ.30:27-28

ಪದ ಡೇಟಾ:

- Strong's: H697, H1357, H1462, H1501, H2284, H3218, H5556, H6767, G200

ಮೀರು

ಪದದ ಅರ್ಥವಿವರಣೆ:

"ಮೀರು" ಮತ್ತು "ಮೀರಿದೆ" ಎನ್ನುವ ಪದಗಳು ಯಾರಾದರೊಬ್ಬರ ಅಥವಾ ಯಾವುದಾದರೊಂದರ ಮೇಲೆ ನಿಯಂತ್ರಣ ತೆಗೆದುಕೊಳ್ಳುವುದನ್ನು ಸೂಚಿಸುತ್ತದೆ. ಇದು ಸಾಧಾರಣವಾಗಿ ಯಾವುದಾದರೊಂದನ್ನು ಹಿಂಬಾಲಿಸಿದ ಮೇಲೆ ಅದನ್ನು ಹಿಡಿದುಕೊಳ್ಳುವ ಆಲೋಚನೆಯನ್ನೂ ಒಳಗೊಂಡಿರುತ್ತದೆ.

- ಮಿಲಟರಿ ಪಡೆಗಳು ಶತ್ರುವನ್ನು "ಮೀರಿದಾಗ", ಈ ಮಾತಿಗೆ ಅವರು ಯುದ್ಧದಲ್ಲಿ ಶತ್ರುವನ್ನು ಸೋಲಿಸಿದ್ದಾರೆ ಎಂದರ್ಥ.
- ಬೇಟೆಗಾರನು ತನ ಬೇಟೆಯನ್ನು ಮೀರಿದಾಗ ಎನ್ನುವ ಮಾತಿಗೆ ತನ್ನ ಬೇಟೆಯಲ್ಲಿ ಹಿಂಬಾಲಿಸಿದ್ದಾನೆ ಮತ್ತು ಹಿಡಿದಿದ್ದಾನೆ ಎಂದರ್ಥ.
- ಶಾಪವು ಯಾರಾದರೊಬ್ಬರನ್ನು "ಮೀರಿದರೆ", ಇದಕ್ಕೆ ಆ ಶಾಪದಲ್ಲಿ ಹೇಳಲ್ಪಟ್ಟ ಪ್ರತಿಯೊಂದು ಮಾತು ಆ ವ್ಯಕ್ತಿಯ ಜೀವನದಲ್ಲಿ ನಡೆಯುತ್ತದೆ ಎಂದರ್ಥ.
- ಆಶೀರ್ವಾದಗಳು ಜನರನ್ನು "ಮೀರಿದರೆ" ಎನ್ನುವ ಈ ಮಾತಿಗೆ ಆ ಆಶೀರ್ವಾದಗಳನ್ನು ಆ ಜನರು ಅನುಭವಿಸುವರು ಎಂದರ್ಥವಾಗಿರುತ್ತದೆ.
- ಸಂದರ್ಭಾನುಸಾರವಾಗಿ "ಮೀರು" ಎನ್ನುವ ಪದವನ್ನು "ಜಯಿಸು" ಅಥವಾ "ಹಿಡಿದುಕೋ" ಅಥವಾ "ಸೋಲಿಸು" ಅಥವಾ "ಹಿಡಿ" ಅಥವಾ "ಸಂಪೂರ್ಣವಾಗಿ ಪ್ರಭಾವಗೊಳಿಸು" ಎಂದೂ ಅನುವಾದ ಮಾಡಬಹುದು.
- ಭೂತ ಕಾಲ ಕ್ರಿಯೆಯಾಗಿರುವ "ಮೀರಿದೆ" ಎನ್ನುವ ಪದವನ್ನು "ಹಿಡಿಯಲ್ಪಟ್ಟಿದೆ" ಅಥವಾ "ಅದರ ಜೊತೆಯಲ್ಲಿ ಬಂದಿದೆ" ಅಥವಾ "ಜಯಿಸಲ್ಪಟ್ಟಿದೆ" ಅಥವಾ "ಸೋಲಿಸಲಾಗಿದೆ" ಅಥವಾ "ಹಾನಿಯನ್ನುಂಟು ಮಾಡಲಾಗಿದೆ" ಎಂದೂ ಅನುವಾದ ಮಾಡಬಹುದು.
- ಅವರ ಪಾಪದ ಕಾರಣದಿಂದ ಕತ್ತಲೆ ಅಥವಾ ಶಿಕ್ಷೆ ಅಥವಾ ಭಯಗಳು ಜನರನ್ನು ಮೀರಿವೆ ಎಂದು ಎಚ್ಚರಿಕೆ ಕೊಡುವುದರಲ್ಲಿ ಉಪಯೋಗಿಸಿದಾಗ, ಈ ಜನರು ಪಶ್ಚಾತ್ತಾಪ ಹೊಂದದಿದ್ದರೆ ಈ ಎಲ್ಲಾ ಶಾಪಗಳನ್ನು ಅನುಭವಿಸುತ್ತಾರೆಂದು ಇದರ ಅರ್ಥವಾಗಿರುತ್ತದೆ.
- "ನನ್ನ ಮಾತುಗಳನ್ನು ನಿಮ್ಮ ತಂದೆಗಳನ್ನು ಮೀರಿ ಹೋಗಿವೆ" ಎನ್ನುವ ಮಾತಿಗೆ ಯೆಹೋವನು ಅವರ ಪೂರ್ವಜರಿಗೆ ಕೊಟ್ಟ ಬೋಧನೆಗಳೀಗ ಪೂರ್ವಜರಿಗೆ ಶಿಕ್ಷೆಯನ್ನು ಹೊಂದುವಂತೆ ಮಾಡಿವೆ, ಯಾಕಂದರೆ ಅವರು ಆ ಬೋಧನೆಗಳಿಗೆ ವಿಧೇಯತೆಯನ್ನು ತೋರಿಸಿರಲಿಲ್ಲ.

(ಈ ಪದಗಳನ್ನು ಸಹ ನೋಡಿರಿ : ಆಶೀರ್ವದಿಸು, ಶಪಿಸು, ಬೇಟೆ, ಶಿಕ್ಷಿಸು)

ಸತ್ಯವೇದದ ವಾಕ್ಯಗಳು:

- 2 ಅರಸ 25:4-5
- ಯೋಹಾನ 12:35

ಪದ ಡೇಟಾ:

- Strong's: H0579, H0935, H1692, H4672, H5066, H5381, G26380, G29830

ಮುಂತಿಳಿದಿರುವುದು, ಮುನ್ನರಿವು

ಪದದ ಅರ್ಥವಿವರಣೆ:

“ಮುಂತಿಳಿದಿರುವುದು” ಮತ್ತು “ಮುನ್ನರಿವು” ಎನ್ನುವ ಪದಗಳು “ಮುಂತಿಳಿ” ಎನ್ನುವ ಕ್ರಿಯಾ ಪದದಿಂದ ಬಂದಿವೆ, ಇದಕ್ಕೆ ಯಾವುದಾದರೊಂದು ನಡೆಯುವುದಕ್ಕೆ ಮುಂಚಿತವಾಗಿ ಅದರ ಕುರಿತಾಗಿ ಏನಾದರೊಂದು ತಿಳಿದುಕೊಳ್ಳುವುದು ಎಂದರ್ಥ.

- ದೇವರು ಕಾಲಕ್ಕೆ ಪರಿಮಿತರಾಗಿರುವುದಿಲ್ಲ. ಆತನಿಗೆ ಭೂತ, ವರ್ತಮಾನ ಮತ್ತು ಭವಿಷ್ಯತ್ತಿನಲ್ಲಿ ನಡೆಯುವ ಪ್ರತಿಯೊಂದರ ಕುರಿತಾಗಿ ತಿಳಿದಿರುತ್ತದೆ.
- ಯೇಸುವನ್ನು ತಮ್ಮ ರಕ್ಷಕನನ್ನಾಗಿ ಸ್ವೀಕರಿಸುವುದರ ಮೂಲಕ ರಕ್ಷಣೆ ಹೊಂದಿಕೊಳ್ಳುವವರ ಕುರಿತಾಗಿ ದೇವರಿಗೆ ಮುಂಚಿತವಾಗಿಯೇ ಗೊತ್ತಿದೆಯೆನ್ನುವ ಸಂದರ್ಭದಲ್ಲಿ ಈ ಪದವು ಹೆಚ್ಚಾಗಿ ಉಪಯೋಗಿಸಲ್ಪಟ್ಟಿರುತ್ತದೆ.

ಅನುವಾದ ಸಲಹೆಗಳು:

- “ಮುಂತಿಳಿದಿರುವುದು” ಎನ್ನುವ ಪದವನ್ನು “ಮುಂಚಿತವಾಗಿ ತಿಳಿದುಕೊಂಡಿರುವುದು” ಅಥವಾ “ಮುಂಬರುವ ಸಮಯದ ಕುರಿತಾಗಿ ತಿಳಿದುಕೊಂಡಿರುವುದು” ಅಥವಾ “ಮುಂಚಿತವಾಗಿ ತಿಳಿದುಕೊಂಡಿರುವುದು” ಅಥವಾ “ಈಗಾಗಲೇ ತಿಳಿದುಕೊಂಡಿರುವುದು” ಎಂದೂ ಅನುವಾದ ಮಾಡಬಹುದು.
- “ಮುನ್ನರಿವು” ಎನ್ನುವ ಪದವನ್ನು “ಮುಂದೇ ಅರಿತಿರುವುದು” ಅಥವಾ “ಮುಂದೆ ಬರುವ ಸಮಯದ ಕುರಿತಾಗಿ ಅರಿತುಕೊಂಡಿರುವುದು” ಅಥವಾ “ಈಗಾಗಲೇ ಅರಿತಿರುವುದು” ಅಥವಾ “ಮುಂಚಿತವಾಗಿಯೇ ಅರಿತಿರುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ತಿಳಿ, ಪೂರ್ವ ನಿರ್ಣಯಿತ)

ಸತ್ಯವೇದದ ವಾಕ್ಯಗಳು:

- ರೋಮಾ 8:29
- ರೋಮಾ 11:2

ಪದ ಡೇಟಾ:

- Strong's: G42670, G42680

ಮುಖ, ಮುಖಗಳು, ಅಭಿಮುಖವಾಗಿರು, ಮುಖದ, ಕೆಳಮುಖವಾಗಿ

ಪದದ ಅರ್ಥವಿವರಣೆ:

"ಮುಖ" ಎನ್ನುವ ಪದವು ಅಕ್ಷರಾರ್ಥವಾಗಿ ಒಬ್ಬ ವ್ಯಕ್ತಿ ತಲೆ ಮುಂಭಾಗವನ್ನು ಸೂಚಿಸುತ್ತದೆ. ಈ ಪದಕ್ಕೆ ಅನೇಕವಾದ ಅಲಂಕಾರಿಕ ಅರ್ಥಗಳು ಇರುತ್ತವೆ.

- "ನಿನ್ನ ಮುಖ" ಎನ್ನುವ ಮಾತಿಗೆ ಅನೇಕಬಾರಿ ಅಲಂಕಾರಿಕ ವಿಧಾನದಲ್ಲಿ "ನೀನು" ಎಂದು ಹೇಳುವುದಾಗಿರುತ್ತದೆ. ಅದೇ ರೀತಿಯಾಗಿ, "ನನ್ನ ಮುಖ" ಎನ್ನುವ ಮಾತಿಗೆ ಅನೇಕಬಾರಿ "ನಾನು" ಅಥವಾ "ನನಗೆ" ಎಂದರ್ಥ.
- ಭೌತಿಕ ಭಾವನೆಯಲ್ಲಿ ಅವರ ಕಡೆಗೆ ಅಥವಾ ಅದರ ಕಡೆಗೆ "ಮುಖವನ್ನು" ತಿರುಗಿಸು ಎನ್ನುವ ಮಾತಿಗೆ ಆ ವಸ್ತುವು ಅಥವಾ ಆ ವ್ಯಕ್ತಿ ಇರುವ ಕಡೆಗೆ ನೋಡು ಎಂದರ್ಥ.
- "ಪರಸ್ಪರ ಮುಖಾಮುಖಿಯಾಗಿ" ಎನ್ನುವ ಮಾತಿಗೆ "ಒಬ್ಬರಲ್ಲೊಬ್ಬರು ನೇರವಾಗಿ ನೋಡಿಕೊಳ್ಳಿರಿ" ಎಂದರ್ಥ.
- "ಮುಖಾಮುಖಿಯಾಗಿ" ಇರುವುದು ಎಂದರೆ ಇಬ್ಬರು ವ್ಯಕ್ತಿಗಳು ಬಹಳ ಹತ್ತಿರವಾಗಿದ್ದು ಒಬ್ಬರಲ್ಲೊಬ್ಬರು ನೋಡಿಕೊಳ್ಳುವುದು ಎಂದರ್ಥ.
- ಯೇಸು "ಯೆರೂಸಲೇಮಿಗೆ ಹೋಗುವುದಕ್ಕೆ ಮನಸ್ಸನ್ನು ದೃಢ ಮಾಡಿಕೊಂಡಾಗ " ಎನ್ನುವ ಮಾತಿಗೆ ಆತನು ಹೋಗುವುದಕ್ಕೆ ನಿರ್ಧರಿಸಿಕೊಂಡಿದ್ದಾನೆ ಎಂದರ್ಥ.
- ಜನರಿಗೆ ಅಥವಾ ಪಟ್ಟಣಕ್ಕೆ "ವಿರುದ್ಧವಾಗಿ ಒಬ್ಬರ ಮುಖವನ್ನು ಇರಿಸು ಎನ್ನುವ ಮಾತಿಗೆ ಆ ವ್ಯಕ್ತಿಯನ್ನು ಅಥವಾ ಆ ಪಟ್ಟಣವನ್ನು ತಿರಿಸ್ಕರಿಸು ಅಥವಾ ಎಂದಿಗೂ ಬೆಂಬಲ ಕೊಡದಂತೆ ನಿರ್ಧರಿಸಿಕೋ ಎಂದರ್ಥ.
- "ಭೂಮಿಯ ಮುಖ" ಎನ್ನುವ ಮಾತು ಭೂಮಿಯ ಮೇಲ್ಮೈಯನ್ನು ಮತ್ತು ಅನೇಕಬಾರಿ ಈ ಮಾತು ಇಡೀ ಭೂ ಲೋಕವನ್ನು ಸೂಚಿಸುತ್ತದೆ. ಉದಾಹರಣೆಗೆ, "ಭೂಮಿಯ ಮೇಲೆ ಬರಗಾಲವು ಆವರಿಸಲ್ಪಟ್ಟಿದೆ" ಎನ್ನುವ ಈ ಮಾತು ಭೂಮಿಯ ಮೇಲೆ ನಿವಾಸವಾಗಿರುವ ಎಲ್ಲಾ ಜನರಿಗೆ ಪ್ರಭಾವವನ್ನು ಬಿರುತ್ತದೆ.
- "ನಿನ್ನ ಜನರಿಂದ ನಿನ್ನ ಮುಖವನ್ನು ಮರೆಮಾಚಬೇಡ" ಎನ್ನುವ ಅಲಂಕಾರಿಕ ಮಾತಿಗೆ "ನಿನ್ನ ಜನರನ್ನು ತಿರಸ್ಕರಿಸಬೇಡ" ಅಥವಾ "ನಿನ್ನ ಜನರನ್ನು ಕೈಬಿಡಬೇಡ" ಅಥವಾ "ನಿನ್ನ ಜನರ ಸಂಕ್ಷೇಮವು ನೋಡಿಕೊಳ್ಳುವುದನ್ನು ನಿಲ್ಲಿಸಬೇಡ" ಎಂದರ್ಥ.

ಅನುವಾದ ಸಲಹೆಗಳು:

- ಸಾಧ್ಯವಾದರೆ ಒಂದೇ ಅರ್ಥ ಬರುವಂಥಹ ಪದವನ್ನು ಅಥವಾ ಮಾತನ್ನು ಅನುವಾದ ಮಾಡುವ ಭಾಷೆಯಲ್ಲಿರುವುದು ಉತ್ತಮ.
- "ಮುಖ" ಎನ್ನುವ ಪದವನ್ನು "ತಿರುಗು" ಅಥವಾ "ನೇರವಾಗಿ ನೋಡು" ಅಥವಾ "ಮುಖವನ್ನೇ ನೋಡು" ಎಂದೂ ಅನುವಾದ ಮಾಡಬಹುದು.
- "ಮುಖಾಮುಖಿ" ಎನ್ನುವ ಮಾತಿಗೆ "ತುಂಬಾ ಹತ್ತಿರವಾಗಿ" ಅಥವಾ "ಒಬ್ಬರ ಮುಂದೆ ಒಬ್ಬರು" ಅಥವಾ "ಸಮಕ್ಷಮದಲ್ಲಿ" ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ "ಆತನ ಮುಖದ ಮುಂದೆ" ಎನ್ನುವ ಮಾತನ್ನು "ಆತನ ಮುಂದೆ" ಅಥವಾ "ಆತನ ಎದುರಿನಲ್ಲಿ" ಅಥವಾ "ಆತನು ನಿಂತಿರುವ ಎದುರಿನಲ್ಲೇ" ಅಥವಾ "ಆತನ ಸಮಕ್ಷದಲ್ಲಿ" ಎಂದೂ ಅನುವಾದ ಮಾಡಬಹುದು.
- "ಆ ದಿಕ್ಕಿಗೆ ತನ್ನ ಮುಖವನ್ನಿರಿಸು" ಎನ್ನುವ ಮಾತಿಗೆ "ಆ ದಿಕ್ಕಿಗೆ ಪ್ರಯಾಣ ಆರಂಭಿಸಿದೆ" ಅಥವಾ "ಹೋಗುವುದಕ್ಕೆ ತನ್ನ ಮನಸ್ಸನ್ನು ಸಿದ್ಧಗೊಳಿಸು" ಎಂದೂ ಅನುವಾದ ಮಾಡಬಹುದು.
- "ಅವನಿಂದ ಮುಖವನ್ನು ಮರೆಮಾಚು" ಎನ್ನುವ ಮಾತಿಗೆ "ಅವನಿಂದ ತಿರುಗಿಕೋ" ಅಥವಾ "ರಕ್ಷಿಸುವುದನ್ನು ಅಥವಾ ಸಹಾಯ ಮಾಡುವುದನ್ನು ನಿಲ್ಲಿಸು" ಅಥವಾ "ತಿರಸ್ಕರಿಸು" ಎಂದೂ ಅನುವಾದ ಮಾಡಬಹುದು.
- ಜನರಿಗೆ ಅಥವಾ ಪಟ್ಟಣಕ್ಕೆ "ವಿರುದ್ಧವಾಗಿ ತನ್ನ ಮುಖವನ್ನು ಇರಿಸು" ಎನ್ನುವ ಮಾತಿಗೆ "ಕೋಪದಿಂದಲೂ ಮತ್ತು ಶಿಕ್ಷಿಸುವ ದೃಷ್ಟಿಯಿಂದಲೂ ನೋಡು" ಅಥವಾ "ಅಂಗೀಕಾರ ಮಾಡುವುದಕ್ಕೆ ತಿರಸ್ಕರಿಸು" ಅಥವಾ "ತಿರಸ್ಕಾರ ಮಾಡುವುದಕ್ಕೆ ನಿರ್ಣಯಿಸು" ಅಥವಾ "ಶಿಕ್ಷಿಸು ಮತ್ತು ತಿರಸ್ಕರಿಸು" ಅಥವಾ "ತೀರ್ಪು ಮಾಡು" ಎಂದೂ ಅನುವಾದ ಮಾಡಬಹುದು.
- "ಅವರ ಮುಖದ ಮೇಲೆ ಹೇಳು" ಎನ್ನುವ ಮಾತನ್ನು "ನೇರವಾಗಿ ಅವರಿಗೆ ಹೇಳು" ಅಥವಾ "ಅವರು ಇರುವಾಗಲೇ ಅವರಿಗೆ ಹೇಳು" ಅಥವಾ "ಅವರಲ್ಲಿ ಒಬ್ಬೊಬ್ಬರಿಗೆ ಹೇಳು" ಎಂದೂ ಅನುವಾದ ಮಾಡಬಹುದು.
- "ಭೂಮಿಯ ಮುಖದ ಮೇಲೆ" ಎನ್ನುವ ಮಾತಿಗೆ "ಭೂಮಿಯಲ್ಲೆಲ್ಲಾ" ಅಥವಾ "ಸರ್ವ ಭೂಮಿಯ ಮೇಲೆ" ಅಥವಾ "ಭೂಲೋಕದಲ್ಲೆಲ್ಲಾ ಜೀವಿಸುವುದು" ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.05:4-6
- ಆದಿ.33:9-11

ಪದ ಡೇಟಾ:

- Strong's: H600, H639, H5869, H6440, H8389, G3799, G4383, G4750

ಮುಖ್ಯಸ್ಥ, ಮುಖ್ಯಸ್ಥರು

ಪದದ ಅರ್ಥವಿವರಣೆ:

“ಮುಖ್ಯಸ್ಥ” ಎನ್ನುವ ಪದವು ಒಂದು ನಿರ್ದಿಷ್ಟವಾದ ಗುಂಪಿಗೆ ಇರುವ ಅತೀ ಮುಖ್ಯವಾದ ನಾಯಕನನ್ನು ಅಥವಾ ಅತೀ ಶಕ್ತಿಯುಳ್ಳ ನಾಯಕನನ್ನು ಸೂಚಿಸುತ್ತದೆ.

- ಇಲ್ಲಿ ಕೆಲವೊಂದು ಉದಾಹರಣೆಗಳಿವೆ ನೋಡಿರಿ, “ಮುಖ್ಯ ಸಂಗೀತಗಾರ”, “ಮುಖ್ಯ ಯಾಜಕ” ಮತ್ತು “ಮುಖ್ಯ ತೆರಿಗೆ ಸಂಗ್ರಾಹಕ” ಮತ್ತು “ಮುಖ್ಯ ಪಾಲಕರು” .
- ಈ ಪದವನ್ನು ಒಂದು ವಿಶೇಷವಾದ ಕುಟುಂಬದ ಯಜಮಾನನನ್ನು ಸೂಚಿಸುತ್ತದೆ, ಆದಿಕಾಂಡದಲ್ಲಿ 36 ಮಂದಿ ಪುರುಷರ ಹೆಸರುಗಳನ್ನು ತಮ್ಮ ಕುಟುಂಬಗಳ “ಮುಖ್ಯಸ್ಥರನ್ನಾಗಿ” ಬರೆಯಲ್ಪಟ್ಟಿದೆ. ಈ ಸಂದರ್ಭದಲ್ಲಿ, “ಮುಖ್ಯಸ್ಥರು” ಎನ್ನುವ ಪದವನ್ನು “ನಾಯಕ” ಅಥವಾ “ತಲೆ ತಂದೆ” ಎಂದೂ ಅನುವಾದ ಮಾಡಬಹುದು.
- ಒಂದು ನಾಮಪದವನ್ನು ವಿವರಿಸುವುದಕ್ಕೆ ಉಪಯೋಗಿಸಿದಾಗ, ಈ ಪದವನ್ನು “ಪ್ರಮುಖ ಸಂಗೀತಗಾರ” ಅಥವಾ “ಪಾಲಿಸುತ್ತಿರುವ ಯಾಜಕ” ಎಂದು ಈ ಪದಗಳಲ್ಲಿರುವಂತೆ “ಪ್ರಮುಖ” ಅಥವಾ “ಪಾಲಕ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಮುಖ್ಯ ಯಾಜಕರು, ಯಾಜಕ, ತೆರಿಗೆ ಸಂಗ್ರಾಹಕರು)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.01:11-13
- ಯೆಹೆ.26:15-16
- ಲೂಕ.19:1-2
- ಕೀರ್ತನೆ.004:1

ಪದ ಡೇಟಾ:

- Strong's: H47, H441, H5057, H5387, H5632, H6496, H7218, H7225, H7227, H7229, H7262, H8269, H8334, G749, G750, G754, G4410, G4413, G5506

ಮುತ್ತಿಗೆ ಹಾಕು, ಮುತ್ತಿಗೆ ಹಾಕಲ್ಪಟ್ಟಿರುವುದು, ಮುತ್ತಿಗೆ ಹಾಕಲ್ಪಟ್ಟಿದೆ, ಮುತ್ತಿಗೆದಾರರು, ಮುತ್ತಿಗೆ ಹಾಕುತ್ತಿರುವುದು, ಮುತ್ತಿಗೆ ಹಾಕುವ ಕೆಲಸಗಳು

ಪದದ ಅರ್ಥವಿವರಣೆ:

"ಮುತ್ತಿಗೆ ಹಾಕು" ಎನ್ನುವುದು ಧಾಳಿ ಮಾಡುವ ಸೈನ್ಯವು ಪಟ್ಟಣದ ಸುತ್ತಲೂ ಆವರಿಸಿಕೊಂಡಾಗ ಉಪಯೋಗಿಸಲಾಗುತ್ತದೆ ಮತ್ತು ಯಾವುದೇ ಆಹಾರ ಪಾನೀಯಗಳನ್ನು ಪಡೆಯದೇ ತಡೆಯುವುದನ್ನು ಸೂಚಿಸುತ್ತದೆ. ಪಟ್ಟಣವನ್ನು "ಮುತ್ತಿಗೆ ಹಾಕಲ್ಪಟ್ಟಿರುವುದು" ಅಥವಾ ಅದನ್ನು "ಮುತ್ತಿಗೆಯ ಕೆಳಗೆ ಇರುವುದು" ಎನ್ನುವ ಮಾತುಗಳಿಗೆ ಮುತ್ತಿಗೆ ಹಾಕುವದರಿಂದ ಇದನ್ನು ಧಾಳಿ ಮಾಡುವುದು ಎಂದರ್ಥ.

- ಬಾಬೆಲೋನಿಯರು ಇಸ್ರಾಯೇಲ್ಯರನ್ನು ಧಾಳಿ ಮಾಡುವುದಕ್ಕೆ ಬಂದಾಗ, ಪಟ್ಟಣದಲ್ಲಿರುವ ಜನರನ್ನು ಬಲಹೀನಪಡಿಸುವುದಕ್ಕೆ ಯೆರೂಸಲೇಮಿಗೆ ವಿರುದ್ಧವಾಗಿ ಮುತ್ತಿಗೆ ಹಾಕುವ ಪದ್ಧತಿಯನ್ನು ಉಪಯೋಗಿಸುವುದು.
- ಮುತ್ತಿಗೆ ಹಾಕುವ ಸಮಯದಲ್ಲಿ ನಗರವನ್ನು ಆಕ್ರಮಿಸಿ ಮತ್ತು ಪಟ್ಟಣದ ಗೋಡೆಗಳನ್ನು ದಾಟಿ ಹೋಗುವುದಕ್ಕೆ ಧಾಳಿ ಮಾಡುವ ಸೈನ್ಯವನ್ನು ಬಲಪಡಿಸುವುದಕ್ಕೆ ಕೊಳಕು ಇಳಿಜಾರುಗಳನ್ನು ಕ್ರಮೇಣವಾಗಿ ನಿರ್ಮಿಸಲಾಗುತ್ತದೆ.
- ಪಟ್ಟಣವನ್ನು "ಮುತ್ತಿಗೆ ಹಾಕುತ್ತಿರುವುದು" ಎನ್ನುವ ಮಾತನ್ನು "ಮುತ್ತಿಗೆ ಹಾಕು" ಅಥವಾ ಇದರ ಮೇಲೆ "ಮುತ್ತಿಗೆ ಹಾಕುವ ಕ್ರಿಯೆಯನ್ನು" ಮಾಡಿರಿ ಎಂದಾಗಿಯು ವ್ಯಕ್ತಗೊಳಿಸಬಹುದು.
- "ಮುತ್ತಿಗೆ ಹಾಕುತ್ತಿರುವುದು" ಎನ್ನುವ ಮಾತಿಗಿರುವ ಅರ್ಥವೇ "ಮುತ್ತಿಗೆ ಹಾಕುವದರ ಕೆಳಗೆ" ಎನ್ನುವ ಮಾತಿಗಿರುವ ಅರ್ಥವು ಒಂದೇಯಾಗಿರುತ್ತೆದೆ. ಈ ಎರಡು ಮಾತುಗಳು ಶತ್ರು ಸೈನ್ಯವು ಸುತ್ತಮುತ್ತಿದೆ ಮತ್ತು ಅವರು ಮುತ್ತಿಗೆ ಹಾಕುವರೆನ್ನುವ ಸಂದೇಶವನ್ನು ವಿವರಿಸುತ್ತೆದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.20:1
- 1 ಅರಸ.20:1-3
- 1 ಸಮು.11:1-2
- ಯೆರೆ.33:4-5

ಪದ ಡೇಟಾ:

- Strong's: H4692, H4693, H5341, H5437, H5564, H6693, H6696, H6887

ಮುದ್ದು, ಮುದ್ದುಗಳು, ಮುದ್ದಿಡಲಾಗಿದೆ, ಮುದ್ದು ಕೊಡುವುದು

ಪದದ ಅರ್ಥವಿವರಣೆ:

ಮುದ್ದು ಎನ್ನುವುದು ಒಬ್ಬ ವ್ಯಕ್ತಿ ತನ್ನ ತುಟಿಗಳನ್ನು ಇನ್ನೊಬ್ಬ ವ್ಯಕ್ತಿಯ ತುಟಿಗಳ ಮೇಲೆ ಅಥವಾ ಮುಖದ ಮೇಲೆ ಇಡುವುದಾಗಿರುತ್ತದೆ. ಈ ಪದವನ್ನು ಅಲಂಕಾರಿಕವಾಗಿಯೂ ಉಪಯೋಗಿಸಬಹುದು.

- ಕೆಲವೊಂದು ಸಂಸ್ಕೃತಿಗಳಲ್ಲಿ ಶುಭಾಷಯಗಳನ್ನು ಹೇಳುವುದಕ್ಕೆ ಅಥವಾ ಗುಡ್ ಬೈ ಹೇಳಬೇಕೆಂದರೆ ಒಬ್ಬರಿಗೊಬ್ಬರು ಮುದ್ದನ್ನು ತಮ್ಮ ಕೆನ್ನೆಗಳ ಮೇಲೆ ಇಡುತ್ತಾರೆ.
- ಮುದ್ದು ಎನ್ನುವುದು ಇಬ್ಬರು ವ್ಯಕ್ತಿಗಳ ಮಧ್ಯೆದಲ್ಲಿ ಆಳವಾದ ಪ್ರೀತಿಯನ್ನು ತೋರಿಸುತ್ತದೆ, ಉದಾಹರಣೆಗೆ, ಗಂಡ ಮತ್ತು ಹೆಂಡತಿ.
- "ಚೆನ್ನಾಗಿ ಒಬ್ಬರಿಗೆ ಮುದ್ದಿಡು" ಎನ್ನುವ ಮಾತಿಗೆ ಮುದ್ದು ಕೊಟ್ಟು ಬಿಳ್ಕೊಡುಗೆ ಹೇಳುವುದು ಎಂದರ್ಥ.
- ಕೆಲವೊಂದುಬಾರಿ "ಮುದ್ದು" ಎನ್ನುವ ಪದವು ಉಪಯೋಗಿಸಲ್ಪಟ್ಟಿದೆಯೆಂದರೆ "ವಿದಾಯ ಹೇಳುವುದಕ್ಕೆ" ಎಂದರ್ಥ. "ಮೊದಲು ನಾನು ನನ್ನ ತಂದೆಗೆ ಮತ್ತು ತಾಯಿಗೆ ಮುದ್ದಿಡುತ್ತೇನೆ" ಎಂದು ಎಲೀಷನು ಎಲೀಯನಿಗೆ ಹೇಳಿದಾಗ, ಅದಕ್ಕೆ ಆತನು ಎಲೀಯನನ್ನು ಅನುಸರಿಸಲು ಹೋಗುವುದಕ್ಕೆ ಮುಂಚಿತವಾಗಿ ತನ್ನ ತಂದೆತಾಯಿಗೆ ವಿದಾಯವನ್ನು (ಗುಡ್ ಬೈ) ಹೇಳಲು ಬಯಸುತ್ತಿದ್ದಾನೆ ಎಂದರ್ಥ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.05:25-28
- ಆದಿ.27:26-27
- ಆದಿ.29:11-12
- ಆದಿ.31:26-28
- ಆದಿ.45:14-15
- ಆದಿ.48:8-10
- ಲೂಕ.22:47-48
- ಮಾರ್ಕ.14:43-46
- ಮತ್ತಾಯ.26:47-48

ಪದ ಡೇಟಾ:

- Strong's: H5390, H5401, G2705, G5368, G5370

ಮುದ್ರೆ, ಮುದ್ರಿಸಲ್ಪಟ್ಟಿದೆ, ಮುದ್ರೆ ಹಾಕದಿರುವ

ಪದದ ಅರ್ಥವಿವರಣೆ:

"ಸೀಲ್"(ಮುದ್ರೆ) ಎಂಬ ಪದದ ಅರ್ಥವೇನೆಂದರೆ ವಸ್ತುವನ್ನು ಯಾವುದನ್ನಾದರೂ ಉಪಯೋಗಿಸಿ ಮುಚ್ಚುವುದು (ಸಾಮಾನ್ಯವಾಗಿ ಇದನ್ನು "ಸೀಲ್" ಎಂದು ಕರೆಯಲಾಗುತ್ತದೆ) ಅದು ಮುದ್ರೆಯನ್ನು ಮುರಿಯದೆ ವಸ್ತುವನ್ನು ತೆರೆಯಲು ಅಸಾಧ್ಯವಾಗುತ್ತದೆ.

- ಅನೇಕಬಾರಿ ಈ ಮುದ್ರೆಯೂ ಯಾರಿಗೆ ಸಂಬಂಧಪಟ್ಟಿರುತ್ತದೆಯೆಂದು ಅದರ ಮೇಲೆ ತಮ್ಮದೇಯಾದ ಅಲಂಕಾರವನ್ನು ಮುದ್ರಿಸಿರುತ್ತಾರೆ.
- ಭದ್ರವಾಗಿರುವುದಕ್ಕೆ ಪತ್ರಗಳನ್ನು ಅಥವಾ ಇತರ ಕಾಗದಗಳನ್ನು ಮುದ್ರಿಸುವುದಕ್ಕೆ ಕರಗಿದ ಮೇಣವನ್ನು ಉಪಯೋಗಿಸುತ್ತಿದ್ದರು. ಮೇಣವು ತಣ್ಣಗಾಗಿ, ಗಟ್ಟಿಯಾದ ಮೇಲೆ ಆ ಪತ್ರದ ಮುದ್ರೆಯನ್ನು ಮುರಿಯುವುತನಕ ಅದನ್ನು ತೆರೆಯುವುದಕ್ಕೆ ಸಾಧ್ಯವಾಗುವುದಿಲ್ಲ.
- ಯೇಸುವಿನ ಸಮಾಧಿಗೆ ಇಟ್ಟಿರುವ ಕಲ್ಲನ್ನು ಯಾರೂ ಪಕ್ಕಕ್ಕೆ ತೊಲಗಿಸದೇ ಇರುವುದಕ್ಕೆ ಆ ಕಲ್ಲಿನ ಮೇಲೆ ಮುದ್ರೆಯನ್ನು ಹಾಕಿದ್ದರು.
- ನಮ್ಮ ರಕ್ಷಣೆಯು ಭದ್ರವಾಗಿದೆಯೆಂದು ತೋರಿಸುವುದಕ್ಕೆ "ಮುದ್ರೆ"ಯನ್ನಾಗಿ ಪವಿತ್ರಾತ್ಮನನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಪೌಲನು ಈ ಪದವನ್ನು ಉಪಯೋಗಿಸಿದ್ದನು.

(ಈ ಪದಗಳನ್ನು ಸಹ ನೋಡಿರಿ : ಪವಿತ್ರಾತ್ಮ, ಸಮಾಧಿ)

ಸತ್ಯವೇದದ ಅನುಬಂಧ ವಾಕ್ಯಗಳು:

- ವಿಮೋ.02:03
- ಯೆಶಯಾ.29:11
- ಯೋಹಾನ.06:27
- ಮತ್ತಾಯ.27:66
- ಪ್ರಕ.05:02

ಪದ ಡೇಟಾ:

- Strong's: H2368, H2560, H2856, H2857, H2858, H5640, G2696, G4972, G4973

ಮುಳ್ಳು, ಮುಳ್ಳಿನ ಪೊದೆ, ಮುಳ್ಳಿನ ಪೊದೆಗಳು, ಮುಳ್ಳುಗಳು, ಮುಳ್ಳುಗಿಡ, ಮುಳ್ಳುಗಿಡಗಳು

ಸತ್ಯಾಂಶಗಳು:

ಮುಳ್ಳು ಪೊದೆಗಳು ಮತ್ತು ಮುಳ್ಳಿನ ಗಿಡಗಳು ಮುಳ್ಳು ಕೊಂಬೆಗಳನ್ನು ಅಥವಾ ಹೂವುಗಳನ್ನು ಹೊಂದಿರುವ ಗಿಡಗಳಾಗಿರುತ್ತವೆ. ಈ ಗಿಡಗಳು ಉಪಯೋಗಕರವಾದದ್ದನ್ನು ಅಥವಾ ಹಣ್ಣುಗಳನ್ನು ಹುಟ್ಟಿಸುವುದಿಲ್ಲ.

- “ಮುಳ್ಳು” ಎನ್ನುವುದು ಗಿಡದ ಕಾಂಡದ ಮೇಲಾಗಲಿ ಅಥವಾ ಕೊಂಬೆಯ ಮೇಲಾಗಲಿ ಚುಪಾಗಿ ಗಟ್ಟಿಯಾಗಿ ಬೆಳೆಯುವುದಾಗಿರುತ್ತದೆ. “ಮುಳ್ಳಿನಪೊದೆ” ಎನ್ನುವುದು ಒಂದು ವಿಧವಾದ ಚಿಕ್ಕ ಮರವಾಗಿರುತ್ತದೆ ಅಥವಾ ಅದರ ಕೊಂಬೆಗಳಲ್ಲಿ ಹೆಚ್ಚಿನ ಮುಳ್ಳುಗಳನ್ನು ಒಳಗೊಂಡಿರುವ ಪೊದರಾಗಿರುತ್ತದೆ.
- “ಮುಳ್ಳುಗಿಡ” ಎನ್ನುವುದು ಮುಳ್ಳುಗಳಿರುವ ಕಾಂಡವನ್ನು ಮತ್ತು ಎಲೆಗಳನ್ನು ಹೊಂದಿರುವ ಸಸಿಯಾಗಿರುತ್ತದೆ. ಅನೇಕಬಾರಿ ಹೂವುಗಳು ನೇರಳೆ ಬಣ್ಣದಲ್ಲಿರುತ್ತವೆ.
- ಮುಳ್ಳು ಮತ್ತು ಮುಳ್ಳು ಗಿಡಗಳು ತುಂಬಾ ಶೀಘ್ರವಾಗಿ ಹೆಚ್ಚಾಗಿ ಬೆಳೆಯುತ್ತಿರುತ್ತವೆ ಮತ್ತು ಪಕ್ಕದಲ್ಲಿ ಇತರ ಗಿಡಗಳು ಅಥವಾ ಬೆಳೆಗಳು ಸರಿಯಾಗಿ ಬೆಳೆಯದಂತೆ ಮಾಡುತ್ತವೆ. ಒಬ್ಬ ವ್ಯಕ್ತಿ ತನ್ನ ಪಾಪದಿಂದ ಹೇಗೆ ಒಳ್ಳೇಯ ಆತ್ಮೀಯ ಫಲವನ್ನು ಕೊಡದಂತಾಗುತ್ತಾನೆನ್ನುವದನ್ನು ಈ ಚಿತ್ರಣವು ಚೆನ್ನಾಗಿ ತೋರಿಸುತ್ತದೆ.
- ಮುಳ್ಳುಗಳಿರುವ ಕೊಂಬೆಗಳನ್ನು ಬಾಗಿಸಿ, ಅವುಗಳಿಂದ ಕಿರೀಟವನ್ನು ಮಾಡಿ ಯೇಸುವನ್ನು ಶಿಲುಬೆಗೇರಿಸುವುದಕ್ಕೆ ಮುಂಚಿತವಾಗಿ ಆತನ ತಲೆಯ ಮೇಲೆ ಇಟ್ಟರು.
- ಸಾಧ್ಯವಾದರೆ, ಈ ಪದಗಳನ್ನು ಅನುವಾದ ಭಾಷೆಯಲ್ಲಿ ಗೊತ್ತಿರುವ ಗಿಡಗಳ ಅಥವಾ ಪೊದರುಗಳ ಹೆಸರುಗಳನ್ನು ಉಪಯೋಗಿಸಿ ಅನುವಾದ ಮಾಡಬೇಕಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಕಿರೀಟ, ಫಲ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು :

- ಇಬ್ರಿ.06:7-8
- ಮತ್ತಾಯ.13:7-9
- ಮತ್ತಾಯ.13:22-23
- ಅರಣ್ಯ.33:55-56

ಪದ ಡೇಟಾ:

- Strong's: H329, H1863, H2312, H2336, H4534, H5285, H5518, H5544, H6791, H6796, H6975, H7063, H7898, G173, G174, G4647, G5146

ಮುಸುಕು, ಮುಸುಕುಗಳು, ಮುಸುಕು ಹಾಕಲಾಗಿದೆ, ಮುಸುಕು ತೆರೆಯುವುದು

ಪದದ ಅರ್ಥವಿವರಣೆ:

"ಮುಸುಕು" ಎನ್ನುವ ಪವವು ಸಾಧಾರಣವಾಗಿ ತಲೆಯ ಮೇಲೆ ಹಾಕಿಕೊಳ್ಳುವುದಕ್ಕೆ ಉಪಯೋಗಿಸುವ ತೆಳುವಾದ ಬಟ್ಟೆಯನ್ನು ಮತ್ತು ಇದನ್ನು ಮುಖವನ್ನು ಅಥವಾ ತಲೆಯನ್ನು ಕಾಣಿಸಿದಂತೆ ಮುಚ್ಚುಕೊಳ್ಳುವುದಕ್ಕೆ ಉಪಯೋಗಿಸುವುದನ್ನು ಸೂಚಿಸುತ್ತದೆ.

- ಮೋಶೆಯು ಯೆಹೋವನ ಸನ್ನಿಧಿಯಲ್ಲಿದ್ದು ಬಂದನಂತರ ಆತನು ತನ್ನ ಮುಖಕ್ಕೆ ಮುಸುಕನ್ನು ಹಾಕಿಕೊಂಡಿದ್ದನು, ಇದರಿಂದ ತನ್ನ ಮುಖದ ಮೇಲಿರುವ ಪ್ರಕಾಶಮಾನವಾದ ಮುಖವು ಜನರು ನೋಡದಂತೆ ಬಟ್ಟೆಯಿಂದ ಮುಚ್ಚಿಕೊಂಡಿದ್ದನು.
- ಸತ್ಯವೇದದಲ್ಲಿ ಸ್ತ್ರೀಯರು ತಮ್ಮ ತಲೆಗಳ ಮೇಲೆ ಮುಸುಕುಗಳನ್ನು ಹಾಕಿಕೊಂಡಿರುತ್ತಾರೆ, ಮತ್ತು ಅವರು ಬಹಿರಂಗ ಸ್ಥಳದಲ್ಲಿ ಬರುವಾಗ ಅಥವಾ ಪುರುಷರಿರುವ ಸ್ಥಳಕ್ಕೆ ಬಂದಾಗ ತಮ್ಮ ಮುಖಕ್ಕೆ ಮುಸುಕನ್ನು ಹಾಕಿಕೊಂಡಿರಬೇಕು.
- "ಮುಸುಕು" ಎನ್ನುವ ಪದಕ್ಕೆ ಕ್ರಿಯಪದವು ಏನೆಂದರೆ ಮುಸುಕಿನಿಂದ ಯಾವುದಾದರೊಂದನ್ನು ಹೊದಿಸುವುದು ಎಂದರ್ಥ.
- ಕೆಲವೊಂದು ಆಂಗ್ಲ ಅನುವಾದಗಳಲ್ಲಿ, "ಮುಸುಕು" ಎನ್ನುವ ಪದವನ್ನು ಅತಿ ಪರಿಶುದ್ಧ ಸ್ಥಳಕ್ಕೆ ಹೋಗುವ ಪ್ರವೇಶದ್ವಾರಕ್ಕೆ ದಪ್ಪವಾದ ತೆರೆಯನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ. ಆದರೆ "ತೆರೆ" ಎನ್ನುವುದು ಈ ಸಂದರ್ಭದಲ್ಲಿ ಉತ್ತಮ ಪದವಾಗಿರುತ್ತದೆ, ಯಾಕಂದರೆ ಇದು ತುಂಬಾ ದಪ್ಪವಾಗಿರುವ ಬಟ್ಟೆಯಾಗಿರುತ್ತದೆ.

ಅನುವಾದ ಸಲಹೆಗಳು:

- "ಮುಸುಕು" ಎನ್ನುವ ಪದವನ್ನು "ತೆಳುವಾದ ಬಟ್ಟೆಯ ಮುಸುಕು" ಅಥವಾ "ಬಟ್ಟೆಯಿಂದ ಹೊದಿಸುವುದು" ಅಥವಾ "ತಲೆಯನ್ನು ಮುಚ್ಚಿಕೊಳ್ಳುವುದು" ಎಂದೂ ಅನುವಾದ ಮಾಡಬಹುದು.
- ಕೆಲವೊಂದು ಸಂಸ್ಕೃತಿಗಳಲ್ಲಿ ಸ್ತ್ರೀಯರಿಗೆ ಹಾಕುವ ಮುಸುಕುಗೆ ಒಂದು ವಿಭಿನ್ನವಾದ ಪದವನ್ನು ಹೊಂದಿರಬಹುದು. ಈ ಪದವನ್ನು ಮೋಶೆಗೆ ಉಪಯೋಗಿಸುವಾಗ ಒಂದು ವಿಭಿನ್ನವಾದ ಪದವನ್ನು ಕಂಡುಕೊಂಡುಕೊಳ್ಳುವುದು ಅತ್ಯಗತ್ಯವಾಗಿರಬಹುದು.

(ಈ ಪದಗಳನ್ನು ಸಹ ನೋಡಿರಿ : ಮೋಶೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಕೊರಿಂಥ.03:12-13
- 2 ಕೊರಿಂಥ.03:14-16
- ಯೆಹೆ.13:17-18
- ಯೆಶಯಾ.47:1-2
- ಪರಮ.04:3

ಪದ ಡೇಟಾ:

- Strong's: H7289, G2665

ಮೂಲಪಿತೃ, ಮೂಲಪಿತೃಗಳು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿರುವ "ಮೂಲಪಿತೃ" ಎನ್ನುವ ಪದವು ಯೆಹೂದ್ಯ ಜನರಿಗೆ ಸ್ಥಾಪಕನಾಗಿರುವ ಪೂರ್ವಜನಾಗಿರುವ ವ್ಯಕ್ತಿಯನ್ನು ಸೂಚಿಸುತ್ತದೆ, ಅಂದರೆ ಅಬ್ರಾಹಾಮ, ಇಸಾಕ, ಅಥವಾ ಯಾಕೋಬ ಎನ್ನುವ ವ್ಯಕ್ತಿಗಳನ್ನು ಸೂಚಿಸುತ್ತದೆ.

- ಇದು ಇಸ್ರಾಯೇಲ್ 12 ಕುಲಗಳಿಗೆ 12 ಪಿತೃಗಳಾಗಿರುವ ಯಾಕೋಬನ ಹನ್ನೆರಡು ಮಕ್ಕಳನ್ನು ಕೂಡ ಸೂಚಿಸುತ್ತದೆ.
- "ಮೂಲಪಿತೃ" ಎನ್ನುವ ಪದದ ಅರ್ಥವನ್ನೇ "ಮೂಲಪುರುಷ" ಎನ್ನುವ ಪದಕ್ಕೆ ಇರುತ್ತದೆ, ಆದರೆ ವಿಶೇಷವಾಗಿ ಹೆಚ್ಚಿನ ಜನರ ಗುಂಪಿನ ಹೆಚ್ಚಿನ ಪ್ರಸಿದ್ಧಿ ಹೊಂದಿರುವ ಪುರುಷ ಪೂರ್ವಜ ನಾಯಕರನ್ನು ಸೂಚಿಸುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಪೂರ್ವಜ, ತಂದೆ, ಮೂಲಪುರುಷ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.02:29-31
- ಅಪೊ.ಕೃತ್ಯ.07:6-8
- ಅಪೊ.ಕೃತ್ಯ.07:9-10
- ಎಜ್ರಾ.03:12-13

ಪದ ಡೇಟಾ:

- Strong's: H1, H7218, G3966

ಮೃಗ

ಸತ್ಯಾಂಶಗಳು:

ಸತ್ಯವೇದದಲ್ಲಿ, "ಪಶು" ಎನ್ನುವ ಪದವನ್ನು "ಮೃಗ" ಎನ್ನುವ ಪದದ ಮತ್ತೊಂದು ರೀತಿಯಾದ ಹೇಳಿಕೆಯಾಗಿದೆ.

- ಕಾಡಿನಲ್ಲಿ ಅಥವಾ ಹೊಲದಲ್ಲಿ ಸ್ವಾತಂತ್ರವಾಗಿ ಜೀವಿಸುವ ಮೃಗವನ್ನು ಮತ್ತು ಮನುಷ್ಯರಿಂದ ತರಬೇತಿ ಹೊಂದದಿರುವ ಮೃಗವನ್ನು

ಕಾಡು ಪ್ರಾಣಿ ಎನ್ನುತ್ತಾರೆ.

- ಸಾದು ಮೃಗ ಎನ್ನುವ ಪಶು ಜನರ ಜೊತೆಯಲ್ಲಿ ಜೀವಿಸುತ್ತದೆ ಮತ್ತು ಆಹಾರಕ್ಕಾಗಿ ಅಥವಾ ಹೊಲ ಉಳುಮೆ ಆ ರೀತಿಯಾದ ಕೆಲಸ ಕಾರ್ಯಗಳನ್ನು ಮಾಡಲು ಇಟ್ಟುಕೊಳ್ಳುತ್ತಾರೆ. ಈ ರೀತಿಯದ ಪಶುವನ್ನು ಸಂಭೋದಿಸಲು "ಪಶುಸಂಪತ್ತು" ಅಥವಾ "ಜಾನುವಾರು" ಎಂದು ಕರೆಯುತ್ತಾರೆ.
- ಹಳೆಯ ಒಡಂಬಡಿಕೆಯಲ್ಲಿ ದಾನಿಯೇಲನ ಗ್ರಂಥ ಮತ್ತು ಹೊಸ ಒಡಂಬಡಿಕೆಯಲ್ಲಿ ಪ್ರಕಟನೆ ಗ್ರಂಥದಲ್ಲಿ ದೇವರನ್ನು ಎದುರಿಸುವ ದುಷ್ಟ ಶಕ್ತಿಗಳನ್ನು ಮತ್ತು ಅಧಿಕಾರಗಳನ್ನು ಸೂಚಿಸಲು ಮೃಗವನ್ನು ಹೋಲಿಸಿದ ದರ್ಶನಗಳನ್ನು ಕುರಿತಾಗಿ ಬರೆಯಲ್ಪಟ್ಟಿದೆ. (ಇದನ್ನು ನೋಡಿರಿ: ರೂಪಕಾಲಂಕಾರ)
- ಈ ಪ್ರಕಾರವಾದ ಪಶುಗಳು ಹಲವಾರು ತಲೆಗಳು ಮತ್ತು ಅನೇಕ ಕೊಂಬುಗಳನ್ನು ಹೊಂದಿರುವಂತೆ ಅನೇಕವಾದ ವಿಚಿತ್ರ ವೈಶಿಷ್ಟ್ಯಗಳನ್ನು ಹೊಂದಿದ್ದವು. ಅವು ಅನೇಕಬಾರಿ ಅಧಿಕಾರ ಮತ್ತು ಶಕ್ತಿ ಹೊಂದಿರುತ್ತವೆ, ಅವು ರಾಜ್ಯಗಳನ್ನು, ದೇಶಗಳನ್ನು ಅಥವಾ ರಾಜಕೀಯ ಅಧಿಕಾರಗಳನ್ನು ಸೂಚಿಸಬಹುದು.
- "ಪ್ರಾಣಿ" ಅಥವಾ "ಸೃಷ್ಟಿಸಲ್ಪಟ್ಟ ವಸ್ತು" ಅಥವಾ "ಪಶು" ಅಥವಾ "ಕಾಡು ಪ್ರಾಣಿ," ಎಂದು ಅನೇಕ ವಿಧಗಳಾಗಿ ಸಂದರ್ಭಕ್ಕೆ ತಕ್ಕಹಾಗೆ ಅನುವಾದಿಸಬಹುದು.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ದಾನಿಯೇಲ್, ಜಾನುವಾರು, ಪ್ರಜೆ, ಅಧಿಕಾರ, ಪ್ರತ್ಯಕ್ಷ, ಬೆಲ್ಜೆಬೂಲ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.15:32
- 1 ಸಮು.17:44
- 2 ಪೂರ್ವ.25:18
- ಯೆರೆ.16:1-4
- ಗಲಾತ್ಯ.07:21
- ಆದಿ.049:12-13

ಪದ ಡೇಟಾ:

- Strong's: H338, H929, H1165, H2123, H2416, H2423, H2874, H3753, H4806, H7409, G2226, G2341, G2342, G2934, G4968, G5074

ಮೇಕೆ, ಮೇಕೆಗಳು, ಮೇಕೆಯ ಚರ್ಮ, ಹೋತ, ಮರಿಗಳು

ಪದದ ಅರ್ಥವಿವರಣೆ:

ಮೇಕೆ ಎಂದರೆ ಮಧ್ಯಮ ಗಾತ್ರದ ನಾಲ್ಕು ಕಾಲುಗಳಿರುವ ಪ್ರಾಣಿ, ಇದು ಕುರಿ ಹೋಲಿಕೆಯಲ್ಲಿರುತ್ತದೆ ಮತ್ತು ಇದನ್ನು ಪ್ರಾಥಮಿಕವಾಗಿ ಹಾಲಿಗಾಗಿ ಮತ್ತು ಮಾಂಸಕ್ಕಾಗಿ ಸಾಕುತ್ತಾರೆ. ಚಿಕ್ಕ ಮೇಕೆಯನ್ನು "ಮರಿ" ಎಂದು ಕರೆಯುತ್ತಾರೆ.

- ಕುರಿಗಳು, ಮೇಕೆಗಳು ಸರ್ವಾಂಗ ಹೋಮ ಮಾಡುವುದಕ್ಕೆ ತುಂಬಾ ಪ್ರಾಮುಖ್ಯವಾದ ಪ್ರಾಣಿಗಳಾಗಿರುತ್ತವೆ, ವಿಶೇಷವಾಗಿ ಪಸ್ಕ ಹಬ್ಬದಲ್ಲಿ ತುಂಬಾ ಪ್ರಾಮುಖ್ಯ.
- ಕುರಿಗಳು ಮತ್ತು ಮೇಕೆಗಳು ಒಂದೇ ಹೋಲಿಕೆಯಲ್ಲಿದ್ದರೂ, ಅವು ವಿಭಿನ್ನವಾದ ಪ್ರಾಣಿಗಳಾಗಿರುತ್ತವೆ:
- ಮೇಕೆಗಳಿಗೆ ಒರಟಾದ ಕೂದಲು ಇರುತ್ತವೆ; ಕುರಿಗಳಿಗೆ ಉಣ್ಣೆ ಇರುತ್ತದೆ.
- ಮೇಕೆಯ ಬಾಲ ನಿಂತಿರುತ್ತದೆ; ಕುರಿಯ ಬಾಲ ಇಳಿದಿರುತ್ತದೆ.
- ಕುರಿಗಳು ಸಹಜವಾಗಿ ಹಿಂಡಿನೊಂದಿಗೆ ಇರಲು ಇಷ್ಟಪಡುತ್ತವೆ, ಆದರೆ ಮೇಕೆಗಳು ಹೆಚ್ಚಾದ ಸ್ವಾತಂತ್ರ್ಯವನ್ನು ಬಯಸುತ್ತವೆ ಮತ್ತು ಅವು ತಮ್ಮ ಹಿಂಡಿನಿಂದ ದೂರವಿರುವುದಕ್ಕೆ ಇಷ್ಟಪಡುತ್ತವೆ.
- ಸತ್ಯವೇದದ ಕಾಲಗಳಲ್ಲಿ ಇಸ್ರಾಯೇಲಿನಲ್ಲಿ ಹಾಲಿಗೆ ಮೇಕೆಗಳೇ ಪ್ರಮುಖ ಆಧಾರವಾಗಿದ್ದವು.
- ಮೇಕೆಯ ಚರ್ಮಗಳನ್ನು ಗುಡಾರಗಳಿಗೆ ಮತ್ತು ದ್ರಾಕ್ಷಾರಸವನ್ನು ಇಟ್ಟುಕೊಳ್ಳುವುದಕ್ಕೆ ಚೀಲಗಳನ್ನು ತಯಾರು ಮಾಡುವುದಕ್ಕೆ ಉಪಯೋಗಿಸುತ್ತಿದ್ದರು.
- ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿ ಮೇಕೆ ಅನೀತಿವಂತರಾದ ಜನರನ್ನು ಸೂಚಿಸುವುದಕ್ಕೆ ಉಪಯೋಗಿಸಿದ್ದರು, ಬಹುಶಃ ಅದನ್ನು ಕಾಯುವವನಿಗೆ ದೂರವಿರುವುದಕ್ಕೆ ಇಷ್ಟಪಡುವ ಗುಣಲಕ್ಷಣ ಅದರಲ್ಲಿ ಇದ್ದ ಕಾರಣದಿಂದ ಈ ರೀತಿಯಾಗಿ ಉಪಯೋಗಿಸಿರಬಹುದು.
- ಇಸ್ರಾಯೇಲ್ಯರು ಕೂಡ ಪಾಪ ಧಾರಕರನ್ನು ಸೂಚಿಸುವುದಕ್ಕೆ ಮೇಕೆಗಳನ್ನು ಉಪಯೋಗಿಸುತ್ತಿದ್ದರು. ಒಂದು ಮೇಕೆಯನ್ನು ಬಲಿ ಕೊಟ್ಟಾಗ, ಯಾಜಕನು ತನ್ನ ಹಸ್ತಗಳನ್ನು ಜೀವಂತವಾಗಿರುವ ಎರಡನೇ ಮೇಕೆಯ ಮೇಲೆ ಇಟ್ಟು ಅದನ್ನು ಅರಣ್ಯದೊಳಗೆ ಕಳುಹಿಸಬೇಕು. ಇದೀಗ ಜನರ ಪಾಪಗಳನ್ನು ಹೊತ್ತಿಕೊಂಡು ಹೋಗುವ ಪ್ರಾಣಿ ಎಂದು ಅದನ್ನು ಸೂಚಿಸುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ಹಿಂಡು, ಬಲಿ, ಕುರಿ, ನೀತಿ, ದ್ರಾಕ್ಷಾರಸ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.12:3-4
- ಆದಿ.30:31-32
- ಆದಿ.31:10-11
- ಆದಿ.37:31-33
- ಯಾಜಕ.03:12-14
- ಮತ್ತಾಯ.25:31-33

ಪದ ಡೇಟಾ:

- Strong's: H689, H1423, H1429, H1601, H3277, H3629, H5795, H5796, H6260, H6629, H6842, H6939, H7716, H8163, H8166, H8495, G122, G2055, G2056, G5131

ಮೇಲಣ, ಅತ್ಯುನ್ನತದಲ್ಲಿ

ಪದದ ಅರ್ಥವಿವರಣೆ:

“ಮೇಲಣ” ಮತ್ತು “ಅತ್ಯುನ್ನತದಲ್ಲಿ” ಎನ್ನುವ ಪದಗಳು “ಪರಲೋಕದಲ್ಲಿ” ಎನ್ನುವ ಅರ್ಥವನ್ನು ತಿಳಿಸುವ ಪದಗಳಾಗಿರುತ್ತವೆ.

- “ಅತ್ಯುನ್ನತದಲ್ಲಿ” ಎನ್ನುವ ಮಾತಿಗೆ ಇನ್ನೊಂದು ಅರ್ಥವು “ಅತ್ಯಂತ ಗೌರವ” ಎಂಬುದಾಗಿರುತ್ತದೆ.
- ಈ ಮಾತನ್ನು ಅಕ್ಷರಾರ್ಥವಾಗಿಯೂ ಉಪಯೋಗಿಸುತ್ತಾರೆ, ಉದಾಹರಣೆಗೆ “ಅತ್ಯುನ್ನತವಾದ ಮರದಲ್ಲಿ”, ಇದಕ್ಕೆ “ಎತ್ತರವಾದ ಮರದಲ್ಲಿ” ಎಂದರ್ಥ.
- “ಮೇಲಣ” ಎನ್ನುವ ಮಾತು ಆಕಾಶದಲ್ಲಿರುವ ಉನ್ನತ ಸ್ಥಾನವನ್ನು ಸೂಚಿಸುತ್ತದೆ, ಉದಾಹರಣೆಗೆ, ಮೇಲಣದಲ್ಲಿ ಪಕ್ಷಿಗೂಡು ಇರುತ್ತದೆ. ಸಂದರ್ಭದಲ್ಲಿ ಇದನ್ನು “ಆಕಾಶದಲ್ಲಿರುವ ಮೇಲಣ” ಅಥವಾ “ಎತ್ತರವಾದ ಮರದ ಮೇಲಿನ ತುದಿ ಭಾಗ” ಎಂದೂ ಅನುವಾದ ಮಾಡಬಹುದು.
- “ಮೇಲಣ” ಎನ್ನುವ ಪದವು ಒಬ್ಬ ವ್ಯಕ್ತಿಯ ಅಥವಾ ಒಂದು ವಸ್ತುವಿನ ಪ್ರಾಮುಖ್ಯತೆ, ಅಥವಾ ಉನ್ನತವಾದ ಸ್ಥಳವನ್ನೂ ಸೂಚಿಸುತ್ತದೆ.
- “ಮೇಲಣದಿಂದ” ಎನ್ನುವ ಮಾತನ್ನು “ಪರಲೋಕದಿಂದ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪರಲೋಕ, ಘನಪಡಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- ಪ್ರಲಾಪ.01:13
- ಕೀರ್ತನೆ.069:29

ಪದ ಡೇಟಾ:

- Strong's: H1361, H4605, H4791, H7682, G1722, G5308, G5310, G5311

ಮೇಲ್ವೀಚಾರಣೆ ಮಾಡು, ಮೇಲ್ವೀಚಾರಕ, ಮೇಲ್ವೀಚಾರಕರು

ಪದದ ಅರ್ಥವಿವರಣೆ:

“ಮೇಲ್ವೀಚಾರಕ” ಎನ್ನುವ ಪದವು ಜನರ ಸಂರಕ್ಷಣೆಯಲ್ಲಿ ಮತ್ತು ಕೆಲಸದಲ್ಲಿ ಬಾಧ್ಯತೆ ವಹಿಸಿದ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಮೇಲ್ವೀಚಾರಕನ ಕೆಳಗೆ ಇರುವ ಕೆಲಸಗಾರರೆಲ್ಲರೂ ಕೆಲಸವನ್ನು ಚೆನ್ನಾಗಿ ಮಾಡುತ್ತಿದ್ದಾರೋ ಇಲ್ಲವೋ ಎಂದು ನೋಡಿಕೊಳ್ಳುವ ಹುದ್ದೆಯನ್ನು ಪಡೆದಿರುತ್ತಾನೆ.
- ಹೊಸ ಒಡಂಬಡಿಕೆಯಲ್ಲಿ ಈ ಪದವನ್ನು ಆದಿ ಕ್ರೈಸ್ತ ಸಭೆಯ ನಾಯಕರನ್ನು ವಿವರಿಸಿ ಹೇಳುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ. ಅವರು ಸಭೆಗೆ ಬೇಕಾದ ಆತ್ಮೀಯಕವಾದ ಅಗತ್ಯತೆಗಳನ್ನು ಪೂರೈಸುವ ಕೆಲಸವನ್ನು ಹೊಂದಿರುತ್ತಾರೆ, ಮತ್ತು ವಿಶ್ವಾಸಿಗಳು ಸರಿಯಾದ ವಾಕ್ಯ ಬೋಧನೆಯನ್ನು ಹೊಂದುತ್ತಿದ್ದಾರೋ ಇಲ್ಲವೋ ಎಂದು ನಿಶ್ಚಯಗೊಳಿಸುತ್ತಾರೆ.
- ಸ್ಥಳೀಯ ಸಭೆಯಲ್ಲಿರುವ ವಿಶ್ವಾಸಿಗಳನ್ನು ಅಂದರೆ ತನ್ನ “ಹಿಂಡನ್ನು” ಚೆನ್ನಾಗಿ ನೋಡಿಕೊಳ್ಳುವ ಕುರುಬನನ್ನಾಗಿ ಮೇಲ್ವೀಚಾರಕನನ್ನು ಪೌಲನು ಸೂಚಿಸುತ್ತಿದ್ದಾನೆ.
- ಕುರುಬನಂತೆಯೇ ಮೇಲ್ವೀಚಾರಕನು ಹಿಂಡನ್ನು ನೋಡುತ್ತಾ ಇರುತ್ತಾನೆ. * ಈತನು ವಿಶ್ವಾಸಿಗಳನ್ನು ಸುಳ್ಳು ಆತ್ಮೀಯಕ ಬೋಧನೆಯಿಂದ ಮತ್ತು ಇತರ ದುಷ್ಟ ಪ್ರಭಾವಗಳಿಂದ ಸಂರಕ್ಷಿಸಿ ಕಾಪಾಡುತ್ತಾ ಇರುತ್ತಾನೆ.
- ಹೊಸ ಒಡಂಬಡಿಕೆಯಲ್ಲಿ ದಾಖಲಿಸಿದ “ಮೇಲ್ವೀಚಾರಕರು”, “ಹಿರಿಯರು”, ಮತ್ತು “ಕುರುಬರು/ಪಾಸ್ಟರುಗಳು” ಎನ್ನುವವರು ಒಂದೇ ರೀತಿಯ ಆತ್ಮೀಯಕ ನಾಯಕರನ್ನು ಸೂಚಿಸುವ ವಿವಿಧ ವಿಧಾನಗಳಾಗಿರುತ್ತವೆ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಮೇಲಸ್ತುವಾರಿಗಾರ” ಅಥವಾ “ರಕ್ಷಕ” ಅಥವಾ “ನಿರ್ವಾಹಕ” ಎನ್ನುವ ಪದಗಳನ್ನು ಸೇರಿರುತ್ತವೆ.
- ದೇವ ಜನರ ಸ್ಥಳೀಯ ಗುಂಪಿನ ನಾಯಕನನ್ನು ಸೂಚಿಸುವಾಗ, ಈ ಪದವನ್ನು “ಆತ್ಮೀಯಕ ಮೇಲಸ್ತುವಾರಿಗಾರ” ಅಥವಾ “ವಿಶ್ವಾಸಿಗಳ ಗುಂಪಿನ ಆತ್ಮೀಯಕವಾದ ಅಗತ್ಯತೆಗಳನ್ನು ಪೂರೈಸುವ ವ್ಯಕ್ತಿ” ಅಥವಾ “ಸಭೆಯ ಆತ್ಮೀಯಕವಾದ ಅಗತ್ಯತೆಗಳ ಮೇಲ್ವೀಚಾರಣೆ ಮಾಡುವ ವ್ಯಕ್ತಿ” ಎಂದು ಅರ್ಥ ಕೊಡುವ ಮಾತುಗಳೊಂದಿಗೆ ಅಥವಾ ಪದಗಳೊಂದಿಗೆ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸಭೆ, ಹಿರಿಯ, ಸಭಾಪಾಲಕ, ಕುರುಬ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.26:31-32
- 1 ತಿಮೊಥೆ.03:02
- ಅಪೊ.ಕೃತ್ಯ.20:28
- ಆದಿ.41:33-34
- ಫಿಲಿಪ್ಪಿ.01:1

ಪದ ಡೇಟಾ:

- Strong's: H5329, H6485, H6496, H7860, H8104, G1983, G1984, G1985

ಮೈಲಿಗೆ, ಮೈಲಿಗೆ ಮಾಡುತ್ತದೆ, ಅಶುದ್ಧ, ಮೈಲಿಗೆ ಮಾಡು, ಅಪವಿತ್ರಗೊಳಿಸು, ಅಪವಿತ್ರಗೊಳಿಸಲ್ಪಟ್ಟಿದ್ದಾರೆ

ಪದದ ಅರ್ಥವಿವರಣೆ:

"ಮೈಲಿಗೆ" ಮತ್ತು "ಮೈಲಿಗೆ ಮಾಡು" ಎನ್ನುವ ಪದಗಳು ಕೊಳಕಾಗಿರುವವುಗಳನ್ನು ಅಥವಾ ಮಾಲಿನ್ಯವಾಗಿರುವವುಗಳನ್ನು ಸೂಚಿಸುತ್ತದೆ. ಎನಾದರೊಂದು ಭೌತಿಕವಾಗಿ, ನೈತಿಕವಾಗಿ ಅಥವಾ ಆಧ್ಯಾತ್ಮಿಕವಾಗಿ ಕೆಟ್ಟುಹೋಗಬಹುದು ಅಥವಾ ಮೈಲಿಗೆ ಆಗಬಹುದು.

- ದೇವರು "ಅಶುದ್ಧ" ಮತ್ತು "ಅಪವಿತ್ರ" ಎಂದು ಪ್ರಕಟಿಸಿದವುಗಳನ್ನು ತಿನ್ನುವುದರಿಂದ ಅಥವಾ ಮುಟ್ಟುವದರಿಂದ ತಮ್ಮನ್ನು ಮೈಲಿಗೆ ಮಾಡಿಕೊಳ್ಳಬಾರದೆಂದು ದೇವರು ಇಸ್ರಾಯೇಲ್ಯರನ್ನು ಎಚ್ಚರಿಸಿದನು.
- ಮೃತ ದೇಹಗಳು ಮತ್ತು ಅಂಟು ರೋಗಗಳು ಎನ್ನುವ ಕೆಲವೊಂದು ವಿಷಯಗಳನ್ನು ದೇವರು ಅಶುದ್ಧ ವೆಂದು ತೀರ್ಮಾನ ಮಾಡಿದ್ದಾರೆ ಮತ್ತು ಅವುಗಳನ್ನು ಮುಟ್ಟಿದ ಮನುಷ್ಯರು ಮೈಲಿಗೆಯಾಗುತ್ತಾರೆ.
- ಲೈಂಗಿಕವಾದ ಪಾಪಗಳನ್ನು ಮಾಡಬಾರದೆಂದು ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದನು. ಇವೆಲ್ಲವು ಅವರನ್ನು ಮೈಲಿಗೆ ಮಾಡಿ, ಅವರನ್ನು ದೇವರು ಅಂಗೀಕಾರ ಮಾಡದ ಹಾಗೆ ಮಾಡುತ್ತವೆ.
- ಕೆಲವೊಂದು ದೈಹಿಕ ಪ್ರಕ್ರಿಯೆಗಳು ಕೂಡ ಇರುತ್ತವೆ, ಇವು ಒಬ್ಬ ವ್ಯಕ್ತಿಯನ್ನು ತಾತ್ಕಾಲಿಕವಾಗಿ ಮೈಲಿಗೆ ಮಾಡುತ್ತವೆ. ಆ ವ್ಯಕ್ತಿ ತಿರುಗಿ ಆತ್ಮಿಕವಾಗಿ ಪವಿತ್ರನಾಗುವವರೆಗೂ ಮೈಲಿಗೆಯಾಗಿರುತ್ತಾನೆ.
- ಹೊಸ ಒಡಂಬಡಿಕೆಯಲ್ಲಿ ಪಾಪದ ಆಲೋಚನೆಗಳು ಮತ್ತು ಕ್ರಿಯೆಗಳು ಒಬ್ಬ ಮನುಷ್ಯನನ್ನು ಕೆಡಿಸುತ್ತವೆಯೆಂದು ಯೇಸು ಹೇಳಿದ್ದಾರೆ.

ಅನುವಾದ ಸಲಹೆಗಳು:

- "ಮೈಲಿಗೆ ಮಾಡು" ಎನ್ನುವ ಪದವನ್ನು "ಅಶುದ್ಧ ವಾಗುವುದಕ್ಕೆ ಕಾರಣವಾಗು" ಅಥವಾ "ಅನೀತಿವಂತನಾಗುವುದಕ್ಕೆ ಕಾರಣವಾಗು" ಅಥವಾ "ಆತ್ಮಿಕವಾಗಿ ಸ್ವೀಕರಿಸಲ್ಪಡದಂತೆ ಮಾಡು" ಎಂದೂ ಅನುವಾದ ಮಾಡಬಹುದು.
- "ಅಪವಿತ್ರಗೊಳಿಸಲ್ಪಡು" ಎನ್ನುವ ಪದಕ್ಕೆ "ಅಶುದ್ಧವಾಗು" ಅಥವಾ "ನೈತಿಕವಾಗಿ (ದೇವರಿಗೆ) ಸ್ವೀಕರಿಸಲ್ಪಡದಂತೆ ಮಾಡು" ಅಥವಾ "ಆತ್ಮಿಕವಾಗಿ ಸ್ವೀಕರಿಸಲ್ಪಡದಂತೆ ಮಾರ್ಪಡುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಶುದ್ಧ, ಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.23:8-9
- ವಿಮೋ.20:24-26
- ಆದಿ.34:27-29
- ಆದಿ.49:3-4
- ಯೆಶಯಾ.43:27-28
- ಯಾಜಕ.11:43-45
- ಮಾರ್ಕ.07:14-16
- ಮತ್ತಾಯ.15:10-11

ಪದ ಡೇಟಾ:

- Strong's: H1351, H1352, H1602, H2490, H2491, H2610, H2930, H2931, H2933, H2936, H5953, G733, G2839, G2840, G3392, G3435, G4696, G5351

ಯಜ್ಞ, ಯಜ್ಞ ಅರ್ಪಣೆಗಳು, ಕಾಣಿಕೆ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಅರ್ಪಿಸು" ಮತ್ತು "ಕಾಣಿಕೆ" ಎನ್ನುವ ಪದಗಳು ದೇವರನ್ನು ಆರಾಧಿಸುವ ಕಾರ್ಯವನ್ನಾಗಿ ಆತನಿಗೆ ಕೊಡುವ ವಿಶೇಷವಾದ ಬಹುಮಾನಗಳನ್ನು ಕೊಡುವುದನ್ನು ಸೂಚಿಸುತ್ತದೆ. ಜನರು ಸುಳ್ಳು ದೇವರುಗಳಿಗೂ ಸಹ ಅರ್ಪಣೆಗಳನ್ನು ಕೊಡುತ್ತಾರೆ.

ಯಜ್ಞ

- ದೇವರಿಗೆ ಕೊಡುವ ಅರ್ಪಣೆಗಳಲ್ಲಿ ಅನೇಕಬಾರಿ ಪ್ರಾಣಿಯನ್ನು ಸಾಯಿಸುವುದೂ ಒಳಗೊಂಡಿರುತ್ತದೆ.
- ದೇವರ ಪರಿಪೂರ್ಣನಾದ ಪಾಪರಹಿತನಾಗಿರುವ ಆತನ ಮಗನಾಗಿರುವ ಯೇಸುವಿನ ಯಜ್ಞವು ಮಾತ್ರವೇ ಪಾಪಗಳಿಂದ ಮನುಷ್ಯರನ್ನು ಸಂಪೂರ್ಣವಾಗಿ ತೊಳೆಯುತ್ತದೆ, ಪ್ರಾಣಿಗಳ ಯಜ್ಞಗಳು ಪಾಪಗಳನ್ನು ತೊಳೆಯುವುದಕ್ಕೆ ಸಾಧ್ಯವಿಲ್ಲ.

ಕಾಣಿಕೆ

- "ಕಾಣಿಕೆ" ಎನ್ನುವ ಪದವನ್ನು ಸಾಧಾರಣವಾಗಿ ಕೊಡಲ್ಪಟ್ಟಿರುವ ಅಥವಾ ಅರ್ಪಿಸಲ್ಪಟ್ಟಿರುವ ಯಾವುದಾದರೊಂದನ್ನು ಸೂಚಿಸುತ್ತದೆ.

"ಯಜ್ಞ" ಎನ್ನುವ ಪದವು ಎಲ್ಲವನ್ನು ಒದಗಿಸಿಕೊಡುವವನಿಗೆ ಬೆಲೆಯುಳ್ಳದ್ದನ್ನು ಮಾಡಿದ ಅಥವಾ ಕೊಡಲ್ಪಟ್ಟ ಯಾವುದಾದರೊಂದನ್ನು ಸೂಚಿಸುತ್ತದೆ.

- ದೇವರಿಗೆ ಕೊಡಲ್ಪಟ್ಟಿರುವ ಅರ್ಪಣೆಗಳು ವಿಶೇಷವಾದವುಗಳು, ಅವು ದೇವರಿಗೆ ವಿಧೇಯತೆ ಮತ್ತು ಭಕ್ತಿ ಭಾವನೆಯನ್ನು ವ್ಯಕ್ತಪಡಿಸುವ ಕ್ರಮದಲ್ಲಿ ಕೊಡುವುದಕ್ಕೆ ಆತನು ಇಸ್ರಾಯೇಲ್ಯರಿಗೆ ಆಜ್ಞಾಪಿಸಿರುತ್ತಾನೆ.
- ವಿವಿಧವಾದ ಅರ್ಪಣೆಗಳ ಹೆಸರುಗಳಿವೆ, "ದಹನ ಬಲಿಯರ್ಪಣೆ" ಮತ್ತು ಸಮಾಧಾನ ಅರ್ಪಣೆ" ಎನ್ನುವವುಗಳು ಉದಾಹರಣೆಗೆ ಹೇಳಬಹುದು, ಇವು ಯಾವ ವಿಧವಾದ ಅರ್ಪಣೆಯನ್ನು ಕೊಡುತ್ತಿದ್ದರೆನ್ನುವುದನ್ನು ಸೂಚಿಸುತ್ತವೆ.

ಅನುವಾದ ಸಲಹೆಗಳು:

- "ಕಾಣಿಕೆ" ಎನ್ನುವ ಪದವನ್ನು "ದೇವರಿಗೆ ಉಡುಗೊರೆ" ಅಥವಾ "ದೇವರಿಗೆ ಏನಾದರೂ ಕೊಡುವುದು" ಅಥವಾ "ದೇವರಿಗೆ ಕೊಡಲ್ಪಟ್ಟ ಬೆಲೆಯುಳ್ಳ ವಸ್ತುವು" ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ, "ಯಜ್ಞ" ಎನ್ನುವ ಪದವನ್ನು "ಆರಾಧನೆಯಲ್ಲಿ ಕೊಡಲ್ಪಟ್ಟ ಬೆಲೆಯುಳ್ಳದ್ದು" ಅಥವಾ "ದೇವರಿ ಅರ್ಪಿಸಲ್ಪಟ್ಟ ಬಲಿಮಾಡಿದ ವಿಶೇಷವಾದ ಪ್ರಾಣಿ" ಎಂದೂ ಅನುವಾದ ಮಾಡಬಹುದು.
- "ಯಜ್ಞ" ಎನ್ನುವ ಪದಕ್ಕೆ ಕ್ರಿಯೆಯನ್ನು "ಬೆಲೆಯುಳ್ಳದ್ದನ್ನು ಬಿಟ್ಟುಕೊಡು" ಅಥವಾ "ಪ್ರಾಣಿಯನ್ನು ಕೊಂದು, ದೇವರಿಗೆ ಅರ್ಪಿಸು" ಎಂದೂ ಅನುವಾದ ಮಾಡಬಹುದು.
- "ಸಜೀವ ಯಜ್ಞವಾಗಿ ನಿನ್ನನ್ನು ನೀನು ಸಮರ್ಪಿಸಿಕೋ" ಎನ್ನುವ ಮಾತನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ನೀನು ನಿನ್ನ ಜೀವನವನ್ನು ಜೀವಿಸುತ್ತಿರುವಾಗ, ಯಜ್ಞವೇದಿ ಮೇಲೆ ಪ್ರಾಣಿಯನ್ನು ದಹಿಸುವ ರೀತಿಯಲ್ಲಿ ಸಂಪೂರ್ಣವಾಗಿ ನಿನ್ನನ್ನು ನೀನು ದೇವರಿಗೆ ಸಮರ್ಪಿಸಿಕೊ" ಎನ್ನುವ ಮಾತು ಒಳಗೊಂಡಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಯಜ್ಞವೇದಿ, ಪಾನೀಯ ಅರ್ಪಣೆ, ಸುಳ್ಳು ದೇವರು, ಸಹವಾಸ ಅರ್ಪಣೆ, ಇಷ್ಟಾಪೂರ್ವಕವಾದ ಅರ್ಪಣೆ, ಸಮಾಧಾನ ಅರ್ಪಣೆ, ಯಾಜಕ, ಯಜ್ಞವೇದಿ, ಪಾಪದ ಅರ್ಪಣೆ, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ತಿಮೊಥೆ.04:06
- ಅಪೊ.ಕೃತ್ಯ.07:42
- ಅಪೊ.ಕೃತ್ಯ.21:25
- ಆದಿ.04:3-5
- ಯಾಕೋಬ.02:21-24
- ಮಾರ್ಕ.01:43-44
- ಮಾರ್ಕ.14:12-14
- ಮತ್ತಾಯ.05:23-24

ಸತ್ಯವೇದ ಕತೆಗಳಿಂದ ಉದಾಹರಣೆಗಳು:

- **03:14** ನೋಹನು ಹಡಗಿನಿಂದ ಇಳಿದು ಬಂದನಂತರ, ಆತನು ಒಂದು ಯಜ್ಞವೇದಿಯನ್ನು ಕಟ್ಟಿದನು ಮತ್ತು _ ಯಜ್ಞಕ್ಕೆ _ ಉಪಯೋಗಿಸಲ್ಪಡುವ ಪ್ರಾಣಿಗಳಲ್ಲಿ ಪ್ರತಿಯೊಂದನ್ನು _ ಅರ್ಪಿಸಿಸಿದನು _. ದೇವರು ಆ _ ಯಜ್ಞದೊಂದಿಗೆ _ ತುಂಬಾ ಸಂತೋಷದಿಂದ ಇದ್ದಿದ್ದರು, ನೋಹನನ್ನು ಮತ್ತು ಆತನ ಕುಟುಂಬವನ್ನು ಆಶೀರ್ವಾದ ಮಾಡಿದನು.
- **05:06** "ನಿನ್ನ ಒಬ್ಬನೇ ಮಗನಾಗಿರುವ ಇಸಾಕನನ್ನು ಕರೆದುಕೊಂಡು ಹೋಗಿ, ನನಗೆ _ ಹೋಮವನ್ನಾಗಿ _ ಅವನನ್ನು ಅರ್ಪಿಸು." ಮತ್ತೊಮ್ಮೆ ಅಬ್ರಾಹಾಮನು ದೇವರಿಗೆ ವಿಧೇಯನಾದನು ಮತ್ತು ತನ್ನ ಮಗನನ್ನು _ ಹೋಮಕ್ಕೆ _ ಸಿದ್ಧಗೊಳಿಸಿದನು.
- **05:09** ಇಸಾಕನಿಗೆ ಬದಲಾಗಿ _ ಹೋಮವನ್ನು _ ಮಾಡಲು ದೇವರು ಕುರಿಯನ್ನು ಅನುಗ್ರಹಿಸಿದರು.
- **13:09** ದೇವರ ಧರ್ಮಶಾಸ್ತ್ರಕ್ಕೆ ವಿಧೇಯರಾಗುವ ಪ್ರತಿಯೊಬ್ಬರು ದೇವರಿಗೆ _ ಹೋಮವನ್ನು _ ಮಾಡುವುದಕ್ಕೆ ಗುಡಾರದ ಬಳಿಗೆ ಒಂದು ಪ್ರಾಣಿಯನ್ನು ತೆಗೆದುಕೊಂಡು ಬರಬೇಕು. ಅಲ್ಲಿರುವ ಯಾಜಕರು ಆ ಪ್ರಾಣಿಯನ್ನು ಕೊಂದು, ಯಜ್ಞದ ಮೇಲೆ ಇಟ್ಟು ದಹಿಸುವರು. ಆ ಪ್ರಾಣಿಯ ರಕ್ತವು ವ್ಯಕ್ತಿಯ ಪಾಪವನ್ನು ಮುಚ್ಚುವುದು ಮತ್ತು ಆ ವ್ಯಕ್ತಿಯ ಪಾಪಕ್ಕಾಗಿ _ ಹೋಮ _ ಮಾಡಲ್ಪಟ್ಟಿರುವುದು ಮತ್ತು ಆ ವ್ಯಕ್ತಿಯನ್ನು ದೇವರ ದೃಷ್ಟಿಯಲ್ಲಿ ಶುದ್ಧನಾಗುವಂತೆ ಮಾಡುತ್ತದೆ.
- **17:06** ಇಸ್ರಾಯೇಲ್ಯರು ದೇವರನ್ನು ಆರಾಧಿಸಿ, ಆತನಿಗೆ _ ಹೋಮಗಳನ್ನು _ ಅರ್ಪಿಸುವ ಸ್ಥಳದಲ್ಲಿ ಒಂದು ದೇವಾಲಯವನ್ನು ನಿರ್ಮಿಸಬೇಕೆಂದು ದಾವೀದನು ಬಯಸಿದ್ದನು.
- **48:06** ಯೇಸು ಮಹೋನ್ನತ ಯಾಜಕನಾಗಿದ್ದನು. ಇತರ ಯಾಜಕರಂತಲ್ಲದೆ, ಲೋಕದಲ್ಲಿರುವ ಎಲ್ಲಾ ಜನರ ಪಾಪಗಳನ್ನು ತೆಗೆದುಹಾಕುವುದಕ್ಕೆ ಆತನು ತನ್ನನ್ನು ತಾನೇ _ ಹೋಮವನ್ನಾಗಿ _ ಅರ್ಪಿಸಿಕೊಂಡನು.
- **48:08** ಆದರೆ ನಮ್ಮ ಸ್ಥಾನದಲ್ಲಿ ಮರಣಿಸುವುದಕ್ಕೆ _ ಹೋಮವನ್ನಾಗಿ _, ದೇವರು ಯೇಸುವನ್ನು ದೇವರ ಕುರಿಮರಿಯನ್ನಾಗಿ ಅನುಗ್ರಹಿಸಿದನು.
- **49:11** ಯಾಕಂದರೆ ಯೇಸು ತನ್ನನ್ನು ತಾನು _ ಅರ್ಪಿಸಿಕೊಂಡನು _, ದೇವರು ಎಂಥಹ ಪಾಪವನ್ನಾದರೂ ಕ್ಷಮಿಸುವನು ಮತ್ತು ಅನೇಕ ಭಯಂಕರ ಪಾಪಗಳನ್ನೂ ಕ್ಷಮಿಸುವನು.

ಪದ ಡೇಟಾ:

- Strong's: H801, H817, H819, H1685, H1890, H1974, H2076, H2077, H2281, H2282, H2398, H2401, H2402, H2403, H2409, H3632, H4394, H4503, H4504, H5066, H5068, H5071, H5257, H5258, H5261, H5262, H5927, H5928, H5930, H6453, H6944, H6999, H7133, H7311, H8002, H8426, H8548, H8573, H8641, G266, G334, G1049, G1435, G1494, G2378, G2380, G3646, G4376, G5485

ಯಾತನೆ, ಯಾತನೆಪಟ್ಟಿದೆ, ಯಾತನೆಪಡುತ್ತಿರುವುದು, ಯಾತನೆ ಕೊಡುವವರು

ಸತ್ಯಾಂಶಗಳು:

“ಯಾತನೆ” ಎನ್ನುವ ಮಾತು ಭಯಾನಕವಾದ ಶ್ರಮೆಯನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿಗೆ ಚಿತ್ರಹಿಂಸೆ ಕೊಡುವುದು ಎಂದರೆ ಆ ವ್ಯಕ್ತಿ ಭಯಾನಕವಾದ ರೀತಿಯಲ್ಲಿ ಶ್ರಮೆಯನ್ನು ಅನುಭವಿಸುವಂತೆ ಮಾಡು ಎಂದರ್ಥವಾಗಿರುತ್ತದೆ.

- ಕೆಲವೊಂದುಬಾರಿ “ಯಾತನೆ” ಎನ್ನುವ ಪದವು ಭೌತಿಕ ಬಾಧೆಯನ್ನು ಮತ್ತು ಶ್ರಮೆಯನ್ನು ಸೂಚಿಸುತ್ತದೆ. ಉದಾಹರಣೆಗೆ, ಪ್ರಕಟನೆ ಗ್ರಂಥವು “ಮೃಗವನ್ನು” ಆರಾಧಿಸುವವರು ಅಂತ್ಯಕಾಲದಲ್ಲಿ ಶ್ರಮಿಸುತ್ತಾರೆಂದು ಭೌತಿಕ ಚಿತ್ರಹಿಂಸೆಗಳ ಕುರಿತಾಗಿ ವಿವರಿಸುತ್ತದೆ.
- ಶ್ರಮೆ ಎನ್ನುವುದು ಯೋಬನು ಅನುಭವಿಸಿದಂತೆಯೇ ಭಾವೋದ್ರೇಕವಾದ ಮತ್ತು ಆತ್ಮೀಕವಾದ ನೋವನ್ನು ತೆಗೆದುಕೊಳ್ಳುದನ್ನೂ ಸೂಚಿಸುತ್ತದೆ.
- ಅಪೊಸ್ತಲನಾದ ಯೋಹಾನನು ಪ್ರಕಟನೆ ಗ್ರಂಥದಲ್ಲಿ ಯೇಸುವನ್ನು ತಮ್ಮ ರಕ್ಷಕನಾಗಿ ನಂಬದ ಜನರು ಬೆಂಕಿಯ ಕೆರೆಯಲ್ಲಿ ನಿತ್ಯ ಯಾತನೆಯನ್ನು ಅನುಭವಿಸುವರು ಎಂದು ಬರೆದಿದ್ದಾನೆ.
- ಈ ಪದವನ್ನು “ಭಯಾನಕವಾದ ಶ್ರಮೆ” ಅಥವಾ “ಒಬ್ಬರು ಹೆಚ್ಚಾಗಿ ಶ್ರಮೆಯನ್ನು ಅನುಭವಿಸುವಂತೆ ಮಾಡು” ಅಥವಾ “ಸಂಕಟ” ಎಂದೂ ಅನುವಾದ ಮಾಡಬಹುದು. ಕೆಲವೊಂದು ಅನುವಾದಕರು ಈ ಪದವು ಇನ್ನೂ ಸ್ಪಷ್ಟವಾಗಿರುವುದಕ್ಕೆ “ಭೌತಿಕ” ಅಥವಾ “ಅತ್ಮೀಯಕ” ಎಂದು ಆ ಪದಕ್ಕೆ ಜೋಡಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಮೃಗ, ನಿತ್ಯತ್ವ, ಯೋಬ, ರಕ್ಷಕ, ಆತ್ಮ, ಶ್ರಮೆ, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೇತ್ರ.02:7-9
- ಯೆರೆ.30:20-22
- ಪ್ರಲಾಪ.01:11-12
- ಲೂಕ.08:28-29
- ಪ್ರಕ.11:10-12

ಪದ ಡೇಟಾ:

- Strong's: H3013, G928, G929, G930, G931, G2558, G2851, G3600

ಯುಕ್ತಿ, ಯುಕ್ತಿಯುಳ್ಳದ್ದಾಗಿ

ಪದದ ಅರ್ಥವಿವರಣೆ:

“ಯುಕ್ತಿ” ಎನ್ನುವ ಪದವು ಜಾಣತನವನ್ನು ಮತ್ತು ನಿಪುಣತೆಯನ್ನು ಹೊಂದಿರುವ ವ್ಯಕ್ತಿಯನ್ನು ಸೂಚಿಸುತ್ತದೆ, ವಿಶೇಷವಾಗಿ ಪ್ರಾಯೋಗಾತ್ಮಕವಾದ ವಿಷಯಗಳಲ್ಲಿ ಬುದ್ಧಿವಂತಿಕೆಯನ್ನು ಹೊಂದಿರುವ ವ್ಯಕ್ತಿಯನ್ನು ಸೂಚಿಸುತ್ತದೆ.

- “ಯುಕ್ತಿ” ಎನ್ನುವ ಪದಕ್ಕೆ ಅನೇಕಬಾರಿ ನಕಾರಾತ್ಮಕವಾದ ಭಾವನೆಯ ಅರ್ಥವನ್ನು ಹೊಂದಿರುತ್ತದೆ, ಯಾಕಂದರೆ ಇದು ಸ್ವಾರ್ಥಚಿಂತನೆಯ ಕ್ರಿಯೆಗಳಲ್ಲಿ ಒಳಗೊಂಡಿರುತ್ತದೆ.
- ಯುಕ್ತಿಯುಳ್ಳ ವ್ಯಕ್ತಿ ತನಗೆ ಸಹಾಯ ಮಾಡಿಕೊಳ್ಳುವುದರಲ್ಲಿ ಮಾತ್ರವೇ ದೃಷ್ಟಿ ಸಾರುತ್ತಾನೋ ಹೊರತು ಇತರರ ವಿಷಯಗಳಲ್ಲಿ ದೃಷ್ಟಿ ಸಾರುವುದಿಲ್ಲ.
- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಕುಯುಕ್ತಿ” ಅಥವಾ “ವಂಚನೆ” ಅಥವಾ “ಚತುರ” ಅಥವಾ “ಕುಶಲ” ಎನ್ನುವ ಪದಗಳು ಸಂದರ್ಭಾನುಗುಣವಾಗಿ ಒಳಗೊಂಡಿರುತ್ತವೆ.

ಸತ್ಯವೇದದ ಅನುಬಂಧ ವಾಕ್ಯಗಳು :

ಪದ ಡೇಟಾ:

- Strong's: H2450, H6175, G5429

ಯೆಹೂದ್ಯರ ಅಧಿಕಾರಿಗಳು, ಯೆಹೂದ್ಯರ ನಾಯಕ

ಸತ್ಯಾಂಶಗಳು:

"ಯೆಹೂದ್ಯರ ನಾಯಕ" ಅಥವಾ "ಯೆಹೂದ್ಯ ಅಧಿಕಾರ" ಎನ್ನುವ ಪದವು ದೇವರ ಧರ್ಮಶಾಸ್ತ್ರದ ಬೋಧಕರಾಗಿರುವ ಮತ್ತು ಯಾಜಕರಾಗಿರುವ ಧರ್ಮದ ನಾಯಕರನ್ನುಸೂಚಿಸುತ್ತದೆ. ಭಕ್ತಿಗೆ ಅಥವಾ ಧರ್ಮಕ್ಕೆ ಸಂಬಂಧವಿಲ್ಲದ ವಿಷಯಗಳ ಕುರಿತಾಗಿಯೂ ಅವರು ತೀರ್ಪುಗಳನ್ನು ಮಾಡುವ ಅಧಿಕಾರವನ್ನು ಅವರು ಹೊಂದಿರುತ್ತಾರೆ.

- ಯೆಹೂದ್ಯರ ನಾಯಕರು ಮಹಾ ಯಾಜಕರು, ಪ್ರಧಾನ ಯಾಜಕರು ಮತ್ತು ಶಾಸ್ತ್ರಿಗಳು (ದೇವರ ಧರ್ಮಶಾಸ್ತ್ರದ ಬೋಧಕರು) ಆಗಿದ್ದರು.
- ಯೆಹೂದ್ಯರ ನಾಯಕರ ಎರಡು ಮುಖ್ಯ ಗುಂಪುಗಳು ಫರಿಸಾಯರು ಮತ್ತು ಸದ್ದುಕಾಯರು ಆಗಿರುತ್ತಾರೆ.
- ಧರ್ಮಶಾಸ್ತ್ರದ ವಿಷಯಗಳ ಕುರಿತಾಗಿ ತೀರ್ಪುಗಳನ್ನು ಮಾಡುವುದಕ್ಕೆ ಯೆರೂಸಲೇಮಿನಲ್ಲಿ ಯೆಹೂದ್ಯ ಕೌನ್ಸಿಲ್.ನಲ್ಲಿ ಎಪ್ಪತ್ತು ಮಂದಿ ಯೆಹೂದ್ಯ ನಾಯರು ಭೇಟಿಯಾಗಿದ್ದರು.
- ಅನೇಕಮಂದಿ ಯೆಹೂದ್ಯ ನಾಯಕರು ತಾವು ನೀತಿವಂತರೆಂದು ಆಲೋಚನೆ ಮಾಡುತ್ತಾರೆ ಮತ್ತು ಅಹಂಕಾರಿಗಳಾಗಿರುತ್ತಾರೆ. ಅವರಿಗೆ ಯೇಸು ಅಂದರೆ ಅಸೂಯೆ ಮತ್ತು ಆತನನ್ನು ಸಾಯಿಸಬೇಕೆಂದಿದ್ದರು. ಅವರಿಗೆ ದೇವರಿಗೆ ಗೊತ್ತೆಂದು ಹೇಳಿಕೊಳ್ಳುತ್ತಾರೆ, ಆದರೆ ಆತನಿಗೆ ವಿಧೇಯತೆ ತೋರಿಸುವುದಿಲ್ಲ.
- "ಯೆಹೂದ್ಯರು" ಎನ್ನುವ ಮಾತು ಅನೇಕಬಾರಿ ಯೆಹೂದ್ಯರ ನಾಯಕರನ್ನು ಸೂಚಿಸುತ್ತದೆ, ವಿಶೇಷವಾಗಿ ಅವರು ಯೇಸುವಿನ ವಿಷಯದಲ್ಲಿ ಕೋಪದಲ್ಲಿದ್ದು, ಆತನಿಗೆ ಹಾನಿಯನ್ನುಂಟು ಮಾಡಬೇಕೆಂದು ಯತ್ನಿಸುವ ಸಂದರ್ಭಗಳಲ್ಲಿ ಸೂಚಿಸಲ್ಪಟ್ಟಿರುತ್ತದೆ.
- ಈ ಪದಗಳನ್ನು "ಯೆಹೂದ್ಯರ ಪಾಲಕರು" ಅಥವಾ "ಯೆಹೂದ್ಯ ಜನರ ಮೇಲೆ ಆಳುವ ವ್ಯಕ್ತಿಗಳು" ಅಥವಾ "ಯೆಹೂದ್ಯ ಧರ್ಮದ ನಾಯಕರು" ಎಂಬುದಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಯೆಹೂದ್ಯ, ಪ್ರಧಾನ ಯಾಜಕರು, ಕೌನ್ಸಿಲ್, ಮಹಾ ಯಾಜಕ, ಫರಿಸಾಯ, ಯಾಜಕ, ಸದ್ದುಕಾಯ, ಶಾಸ್ತ್ರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.16:22-23
- ಯೋಹಾನ.02:17-19
- ಯೋಹಾನ.05:10-11
- ಯೋಹಾನ.05:16-18
- ಲೂಕ.19:47-48

ಸತ್ಯವೇದದಿಂದ ಉದಾಹರಣೆಗಳು:

- **24:03** ಅನೇಕಮಂದಿ _ ಧರ್ಮದ ನಾಯಕರು _ ಯೋಹಾನನಿಂದ ದೀಕ್ಷಾಸ್ನಾನ ಪಡೆದುಕೊಳ್ಳುವುದಕ್ಕೆ ಬಂದಿದ್ದರು, ಆದರೆ ಆವರು ತಮ್ಮ ಪಾಪಗಳನ್ನು ಒಪ್ಪಿಕೊಂಡಿರಲಿಲ್ಲ ಅಥವಾ ಪಾಪಗಳಿಗೆ ಪಶ್ಚಾತ್ತಾಪ ಹೊಂದಿರಲಿಲ್ಲ.
- **37:11** ಆದರೆ _ ಯೆಹೂದ್ಯರ ಧರ್ಮದ ನಾಯಕರು _ ಅಸೂಯೆಪಟ್ಟಿದ್ದರು, ಆದ್ದರಿಂದ ಅವರು ಯೇಸುವನ್ನು ಮತ್ತು ಲಾಜರನನ್ನು ಹೇಗೆ ಕೊಲ್ಲಬೇಕೆಂದು ಪ್ರಣಾಳಿಕೆ ಮಾಡುವುದಕ್ಕೆ ಭೇಟಿಯಾಗಿದ್ದರು.
- **38:02** ಯೇಸು ಮೆಸ್ಸೀಯನೆಂದು _ ಯೆಹೂದ್ಯರ ನಾಯಕರು _ ತಿರಸ್ಕರಿಸುತ್ತಿದ್ದಾರೆಂದು ಮತ್ತು ಅವರು ಆತನನ್ನು ಸಾಯಿಸುವುದಕ್ಕೆ ಆಲೋಚನೆ ಮಾಡುತ್ತಿದ್ದರೆಂದು ಮಾಡುತ್ತಿದ್ದಾರೆಂದು ಅವನಿಗೆ (ಯೂದಾನಿಗೆ) ಗೊತ್ತಿತ್ತು.
- **38:03** ಮಹಾ ಯಾಜಕನಿಂದ _ ಯೆಹೂದ್ಯ ನಾಯಕರು _ ನಡೆಸಲ್ಪಟ್ಟಿದ್ದರು, ಯೇಸುವನ್ನು ಹಿಡಿಸಿಕೊಡುವುದಕ್ಕೆ ಯೂದಾನಿಗೆ ಮೂವತ್ತು ಬೆಳ್ಳಿ ನಾಣ್ಯಗಳನ್ನು ಕೊಟ್ಟಿದ್ದರು.
- **39:05** "ಆತನು (ಯೇಸು) ಸಾಯುವುದಕ್ಕೆ ಯೋಗ್ಯನು" ಎಂದು ಹೇಳುವುದಕ್ಕೆ _ ಯೆಹೂದ್ಯರ ನಾಯಕರು _ ಮಹಾ ಯಾಜಕನಿಗೆ ಎಲ್ಲಾ ಉತ್ತರಗಳನ್ನು ಹೇಳಿದ್ದರು,
- **39:09** ಆ ಮರುದಿನ ಬೆಳಿಗ್ಗೆ, _ ಯೆಹೂದ್ಯರ ನಾಯಕರು _ ರೋಮಾ ಪಾಲಕನಾದ ಪಿಲಾತನ ಬಳಿಗೆ ಯೇಸುವನ್ನು ಕರೆದುಕೊಂಡು ಬಂದರು.
- **39:11** ಆದರೆ _ ಯೆಹೂದ್ಯ ನಾಯಕರು _ ಮತ್ತು ಜನ ಸಮೂಹವು "ಅವನ್ನು ಶಿಲುಬೆಗೇರಿಸಿ" ಎಂದು ಜೋರಾಗಿ ಕೂಗಿದರು.
- **40:09** ಯೇಸು ಮೆಸ್ಸೀಯನೆಂದು ನಂಬಿದ ಇಬ್ಬರು _ ಯೆಹೂದ್ಯರ ನಾಯಕರಾದ _ ಯೋಸೇಫ ಮತ್ತು ನಿಕೊದೇಮರು ಯೇಸುವಿನ ದೇಹಕ್ಕಾಗಿ ಪಿಲಾತನನ್ನು ಕೇಳಿಕೊಂಡರು.
- **44:07** ಆ ದಿನವಾದನಂತರ, _ ಯೆಹೂದ್ಯ ನಾಯಕರು _ ಮಹಾ ಯಾಜಕ ಮತ್ತು ಇತರ _ ಧರ್ಮ ನಾಯಕರ _ ಬಳಿಗೆ ಪೇತ್ರನನ್ನು ಮತ್ತು ಯೋಹಾನನನ್ನು ಕರೆದುಕೊಂಡು ಬಂದರು.

ಪದ ಡೇಟಾ:

- Strong's: G2453

ರಕ್ತಪಾತ

ಪದದ ಅರ್ಥವಿವರಣೆ:

“ರಕ್ತಪಾತ” ಎನ್ನುವ ಮಾತು ಕೊಲೆ, ಯುದ್ಧ ಅಥವಾ ಇತರ ಬೇರೆ ಹಿಂಸಾತ್ಮಕ ಕ್ರಿಯೆಗಳು ನಡೆದಾಗ ಮನುಷ್ಯರ ಮರಣವನ್ನು ಸೂಚಿಸುತ್ತದೆ.

- ಈ ಪದಕ್ಕೆ “ರಕ್ತವನ್ನು ಸುರಿಸುವುದು” ಎನ್ನುವುದೇ ಅಕ್ಷರಾರ್ಥ. ಇದು ಒಂದು ಗಾಯದಿಂದ ಒಬ್ಬ ವ್ಯಕ್ತಿಯ ದೇಹದೊಳಗಿನಿಂದ ಬರುವ ರಕ್ತವನ್ನು ಸೂಚಿಸುತ್ತದೆ.
- ಅನೇಕಬಾರಿ “ರಕ್ತಪಾತ” ಎನ್ನುವ ಪದವನ್ನು ಅತೀ ಹೆಚ್ಚಾಗಿ ಜನರನ್ನು ಸಾಯಿಸುವುದನ್ನು ಸೂಚಿಸುತ್ತದೆ.
- ಇದು ಕೊಲೆಯೆನ್ನುವ ಪಾಪವನ್ನೂ ಸೂಚಿಸುತ್ತದೆ.

ಅನುವಾದ ಸಲಹೆಗಳು:

- “ರಕ್ತಪಾತ” ಎನ್ನುವದನ್ನು “ಜನರನ್ನು ಸಾಯಿಸುವುದು” ಅಥವಾ “ಕೊಲೆ ಮಾಡಲ್ಪಟ್ಟ ಅನೇಕರು” ಎಂದೂ ಅನುವಾದ ಮಾಡಬಹುದು.
- “ರಕ್ತಪಾತದಿಂದ” ಎನ್ನುವ ಪದವನ್ನು “ಜನರನ್ನು ಸಾಯಿಸುವುದರ ಮೂಲಕ” ಎಂದೂ ಅನುವಾದ ಮಾಡಬಹುದು.
- “ದೋಷವಿಲ್ಲದ ರಕ್ತಪಾತ” ಎನ್ನುವ ಮಾತನ್ನು “ದೋಷವಿಲ್ಲದ ಜನರನ್ನು ಸಾಯಿಸುವುದು” ಎಂದೂ ಅನುವಾದ ಮಾಡಬಹುದು.
- “ರಕ್ತಪಾತವು ರಕ್ತಪಾತವನ್ನೇ ಅನುಸರಿಸುವುದು” ಎನ್ನುವ ಮಾತನ್ನು “ಅವರು ಜನರನ್ನು ಸಾಯಿಸುತ್ತಾ ಇರುತ್ತಾರೆ” ಅಥವಾ “ಜನರನ್ನು ಸಾಯಿಸುವುದು ಮುಂದೆವರಿಯುತ್ತಾ ಇರುತ್ತದೆ” ಅಥವಾ “ಅವರು ಅನೇಕ ಜನರನ್ನು ಸಾಯಿಸಿದ್ದಾರೆ ಮತ್ತು ಸಾಯಿಸುವುದನ್ನು ಮುಂದೆವರಿಸುತ್ತಾ ಇರುತ್ತಾರೆ” ಅಥವಾ “ಜನರ ಇತರ ಜನರನ್ನು ಸಾಯಿಸುತ್ತಾ ಇರುತ್ತಾರೆ” ಎಂದೂ ಅನುವಾದ ಮಾಡಬಹುದು.
- “ರಕ್ತಪಾತವು ನಿನ್ನನ್ನು ಹಿಂಬಾಲಿಸುತ್ತದೆ” ಎನ್ನುವ ಇನ್ನೊಂದು ರೀತಿಯ ಅಲಂಕಾರ ರೂಪದ ಮಾತನ್ನು “ನಿನ್ನ ಜನರು ರಕ್ತಪಾತವನ್ನು ಅನುಭವಿಸುತ್ತಾ ಇರುತ್ತಾರೆ” ಅಥವಾ “ನಿನ್ನ ಜನರು ಸಾಯುತ್ತಾ ಇರುತ್ತಾರೆ” ಅಥವಾ “ನಿನ್ನ ಜನರು ಇತರ ದೇಶಗಳೊಂದಿಗೆ ಹೋರಾಡುತ್ತಾ ಯುದ್ಧದಲ್ಲಿರುತ್ತಾರೆ ಮತ್ತು ಅವರು ಸಾಯುತ್ತಾ ಇರುತ್ತಾರೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ರಕ್ತ, ವಧೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.22:6-8
- ಆದಿ.09:5-7
- ಇಬ್ರಿ.09:21-22
- ಯೆಶಯಾ.26:20-21
- ಮತ್ತಾಯ.23:29-31

ಪದ ಡೇಟಾ:

- Strong's: H1818, G2210

ರಕ್ತಸಂಬಂಧಿ, ನಂಟರು, ಬಂಧುಬಾಂಧವರು, ರಕ್ತಸಂಬಂಧಿಗಳು, ಸೋದರ ಸಂಬಂಧಿಗಳು

ಪದದ ಅರ್ಥವಿವರಣೆ:

“ರಕ್ತಸಂಬಂಧಿ” ಎನ್ನುವ ಪದವು ಒಬ್ಬ ವ್ಯಕ್ತಿಯ ರಕ್ತ ಸಂಬಂಧಿಗಳನ್ನು, ಒಂದು ಗುಂಪಾಗಿರುವವರನ್ನು ಸೂಚಿಸುತ್ತದೆ. “ಸೋದರ ಸಂಬಂಧಿ” ಎನ್ನುವ ಪದವು ವಿಶೇಷವಾಗಿ ಪುರುಷ ಬಂಧುವನ್ನು ಸೂಚಿಸುತ್ತದೆ.

- “ರಕ್ತಸಂಬಂಧಿ” ಎನ್ನುವ ಪದವು ಒಬ್ಬ ವ್ಯಕ್ತಿಯ ತುಂಬಾ ಹತ್ತಿರ ಬಂಧುಗಳನ್ನು ಸೂಚಿಸುತ್ತೆದೆ, ಅಂದರೆ ತಂದೆತಾಯಿಗಳನ್ನು ಮತ್ತು ಒಡಹುಟ್ಟಿದವರನ್ನು ಸೂಚಿಸುತ್ತದೆ ಅಥವಾ ಇದರಲ್ಲಿ ತುಂಬಾ ದೂರದಲ್ಲಿರುವ ಸಂಬಂಧಿಕರನ್ನು ಕೂಡ ಸೂಚಿಸುತ್ತದೆ, ಅಂದರೆ ಚಿಕ್ಕಮ್ಮ, ಚಿಕ್ಕಪ್ಪ ಅಥವಾ ಅಣ್ಣತಮ್ಮಂದಿರನ್ನು ಸೂಚಿಸುತ್ತದೆ.

ಪುರಾತನ ಇಸ್ರಾಯೇಲಿನಲ್ಲಿ ಒಬ್ಬ ಪುರುಷನು ಸತ್ತು ಹೋದರೆ, ಅವನಿಗೆ ತುಂಬಾ ಹತ್ತಿರ ಸಂಬಂಧಿಕನು ವಿಧವೆಯಾದ ತನ್ನ ಹೆಂಡತಿಯನ್ನು ಮದುವೆ ಮಾಡಿಕೊಳ್ಳಬೇಕೆಂದು, ತನ್ನ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಮತ್ತು ತನ್ನ ಕುಟುಂಬದ ಹೆಸರನ್ನು ಮುಂದುವರಿಸುವುದಕ್ಕೆಸಹಾಯ ಮಾಡಲು ಎದುರುನೋಡುತ್ತಿದ್ದನು, ಇಂಥಹ ಸಂಬಂಧಿಕನನ್ನು “ಸೋದರ ಸಂಬಂಧ ವಿಮೋಚಕನು” ಎಂದು ಕರೆಯುತ್ತಿದ್ದರು.

- “ರಕ್ತಸಂಬಂಧಿ” ಎನ್ನುವ ಈ ಪದವನ್ನು “ಬಂಧು” ಅಥವಾ “ಕುಟುಂಬ ಸದಸ್ಯ” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ರೋಮಾ.16:9-11
- ರೂತ.02:19-20
- ರೂತ.03:8-9

ಪದ ಡೇಟಾ:

- Strong's: H251, H1350, H4129, H4130, H7138, H7607, G4773

ರಥ, ರಥಗಳು, ಸಾರಥಿಗಳು

ಪದದ ಅರ್ಥವಿವರಣೆ:

ಪುರಾತನ ಕಾಲದಲ್ಲಿ ರಥಗಳು ತೆಳುವಾಗಿದ್ದವು, ಎರಡು ಚಕ್ರಗಳ ಬಂಡಿಗಳನ್ನು ಕುದುರೆಗಳಿಂದ ಓಡಿಸುತ್ತಿದ್ದರು.

- ಜನರು ರಥಗಳನ್ನು ಕುಳಿತುಕೊಳ್ಳುತ್ತಿದ್ದರು ಅಥವಾ ನಿಂತುಕೊಳ್ಳುತ್ತಿದ್ದರು, ಅವುಗಳನ್ನು ಪ್ರಯಾಣಕ್ಕಾಗಿ ಅಥವಾ ಯುದ್ಧಕ್ಕಾಗಿ ಉಪಯೋಗಿಸುತ್ತಿದ್ದರು.
- ಯುದ್ಧದಲ್ಲಿ ರಥಗಳನ್ನು ಹೊಂದಿರುವ ಸೈನ್ಯಕ್ಕೆ ಒಂದು ದೊಡ್ಡ ಪ್ರಯೋಜನವಿರುತ್ತಿತ್ತು, ಅವು ತುಂಬಾ ವೇಗವಾಗಿ ಚಲಿಸುತ್ತಿದ್ದವು ಮತ್ತು ರಥಗಳಿಲ್ಲದ ಸೈನ್ಯದ ಮೇಲೆ ಚಲನಶೀಲತೆಯಾಗಿರುತ್ತಿದ್ದವು.
- ಪುರಾತನ ಐಗುಪ್ತರು ಮತ್ತು ರೋಮಾದವರು ಕುದುರೆಗಳನ್ನು, ರಥಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.09:22
- 2 ಪೂರ್ವ.18:28-30
- ಅಪೊ.ಕೃತ್ಯ.08:29-31
- ಅಪೊ.ಕೃತ್ಯ.08:36-38
- ದಾನಿ.11:40-41
- ವಿಮೋ.14:23-25
- ಆದಿ.41:42-43

ಸತ್ಯವೇದದಿಂದ ಉದಾಹರಣೆಗಳು:

- **12:10** ಅವರು ಇಸ್ರಾಯೇಲ್ಯರನ್ನು ಸಮುದ್ರ ಮಾರ್ಗದ ಮೂಲಕ ಅನುಸರಿಸಿದ್ದರು, ಆದರೆ ದೇವರು ಐಗುಪ್ತರನ್ನು ಭಯಪಡುವಂತೆ ಮತ್ತು ಅವರ _ ರಥಗಳ _ ಚಕ್ರದ ಕೀಲುಗಳಲ್ಲಿ ವ್ಯತ್ಯಾಸ ಮಾಡಿ ನಡೆಯದಂತೆ ಮಾಡಿದರು.

ಪದ ಡೇಟಾ:

- Strong's: H668, H2021, H4817, H4818, H5699, H7393, H7395, H7396, H7398, G716, G4480

ರಾಜಕುಮಾರ, ರಾಜಕುಮಾರರು, ರಾಜಕುಮಾರಿ, ರಾಜಕುಮಾರಿಗಳು

ಪದದ ಅರ್ಥವಿವರಣೆ:

“ರಾಜಕುಮಾರ” ಎಂದರೆ ಅರಸನ ಮಗನಾಗಿರುತ್ತಾನೆ. “ರಾಜಕುಮಾರಿ” ಎಂದರೆ ಅರಸನ ಮಗಳಾಗಿರುತ್ತಾಳೆ.

- “ರಾಜಕುಮಾರ” ಎನ್ನುವ ಪದವು ಅನೇಕಬಾರಿ ನಾಯಕ, ಪಾಲಕ ಅಥವಾ ಇತರ ಶಕ್ತಿಯುತವಾದ ವ್ಯಕ್ತಿಯನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.
- ಅಬ್ರಹಾಮನ ಸಂಪತ್ತು ಮತ್ತು ಪ್ರಸಿದ್ಧಿಯ ಕಾರಣದಿಂದ ಆತನು ಹಿತ್ತಿಯರ ಮಧ್ಯದಲ್ಲಿ ನಿವಾಸವಾಗಿದ್ದಾಗ “ರಾಜಕುಮಾರ” ಎಂಬುದಾಗಿ ಕರೆಯಲ್ಪಡುತ್ತಿದ್ದನು.
- ದಾನಿಯೇಲ ಗ್ರಂಥದಲ್ಲಿ “ರಾಜಕುಮಾರ” ಎನ್ನುವ ಪದವು “ಪಾರಸಿಯ ರಾಜಕುಮಾರ” ಮತ್ತು “ಗ್ರೀಸ್ ರಾಜಕುಮಾರ” ಎನ್ನುವ ಮಾತುಗಳಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ, ಆ ಸಂದರ್ಭಗಳಲ್ಲಿ ಬಹುಶಃ ಆ ಪ್ರಾಂತ್ಯಗಳ ಮೇಲೆ ಅಧಿಕಾರವನ್ನು ಹೊಂದಿದ ಶಕ್ತಿಯುತವಾದ ದುಷ್ಟ ಆತ್ಮಗಳನ್ನು ಸೂಚಿಸುತ್ತದೆ.
- ಪ್ರಧಾನ ದೂತನಾಗಿರುವ ಮಿಕಾಯೇಲನನ್ನು ಕೂಡ ದಾನಿಯೇಲ ಗ್ರಂಥದಲ್ಲಿ “ರಾಜಕುಮಾರ” ಎಂಬುದಾಗಿ ಸೂಚಿಸಲ್ಪಟ್ಟಿದೆ.
- ಸತ್ಯವೇದದಲ್ಲಿ ಕೆಲವೊಂದುಸಲ ಸೈತಾನನನ್ನು “ಈ ಲೋಕದ ರಾಜಕುಮಾರ” ಎಂಬುದಾಗಿ ಸೂಚಿಸಲ್ಪಟ್ಟಿದೆ.
- ಯೇಸುವನ್ನು “ಸಮಾಧಾನ ಪ್ರಭು” ಮತ್ತು “ಜೀವಾಧಿಪತಿ” ಎಂದು ಕರೆಯಲಾಗಿದೆ.
- ಅಪೊ.ಕೃತ್ಯ.2:36 ವಾಕ್ಯದಲ್ಲಿ ಯೇಸುವನ್ನು “ಒಡೆಯ ಮತ್ತು ಕ್ರಿಸ್ತ” ಎಂಬುದಾಗಿ ಕರೆಯಲ್ಪಟ್ಟಿದ್ದಾನೆ, ಮತ್ತು ಅಪೊ.ಕೃತ್ಯ.5:31 ವಾಕ್ಯದಲ್ಲಿ ಈತನನ್ನು “ರಾಜಕುಮಾರ ಮತ್ತು ರಕ್ಷಕ” ಎಂಬುದಾಗಿ ಕರೆಯಲ್ಪಟ್ಟಿದ್ದನು, ಈ ಪದವು “ಒಡೆಯ” ಮತ್ತು “ರಾಜಕುಮಾರ” ಎನ್ನುವ ಪದಗಳ ಅರ್ಥಕ್ಕೆ ಸಮಾನವಾಗಿ ತೋರಿಸಲ್ಪಟ್ಟಿರುತ್ತದೆ.

ಅನುವಾದ ಸಲಹೆಗಳು:

- “ರಾಜಕುಮಾರ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಅರಸನ ಮಗ” ಅಥವಾ “ಪಾಲಕ” ಅಥವಾ “ನಾಯಕ” ಅಥವಾ “ಮುಖ್ಯಸ್ಥ” ಅಥವಾ “ಕ್ಯಾಪ್ಟನ್ (ನಾಯಕ)” ಎನ್ನುವ ಪದಗಳು ಒಳಗೊಂಡಿರುತ್ತವೆ.
- ದೂತರನ್ನು ಸೂಚಿಸಿದಾಗ, ಈ ಪದಕ್ಕೆ “ಆತ್ಮ ನಾಯಕ” ಅಥವಾ “ನಡೆಸುವ ದೂತ” ಎಂದೂ ಅನುವಾದ ಮಾಡಬಹುದು.
- ಸೈತಾನನನ್ನು ಅಥವಾ ಇತರ ದುಷ್ಟ ಆತ್ಮಗಳನ್ನು ಸೂಚಿಸಿದಾಗ, ಈ ಪದವನ್ನು “ದುಷ್ಟ ಆತ್ಮ ಪಾಲಕ” ಅಥವಾ “ಶಕ್ತಿಯುತವಾದ ಆತ್ಮ ನಾಯಕ” ಅಥವಾ “ಪಾಲಿಸುವ ಆತ್ಮ” ಎಂದು ಸಂದರ್ಭಾನುಗುಣವಾಗಿ ಸಂದರ್ಭದಲ್ಲಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದೂತ, ಅಧಿಕಾರ, ಕ್ರಿಸ್ತ, ದೆವ್ವ, ಒಡೆಯ, ಶಕ್ತಿ, ಪಾಲಕ, ಸೈತಾನ್, ರಕ್ಷಕ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.05:29-32
- ಆದಿ.12:14-16
- ಆದಿ.49:26
- ಲೂಕ.01:52-53

ಪದ ಡೇಟಾ:

- Strong's: H1, H117, H324, H2831, H3548, H4502, H5057, H5081, H5139, H5257, H5387, H5633, H5993, H6579, H7101, H7261, H7333, H7336, H7786, H7991, H8269, H8282, H8323, G747, G758, G1413, G2232, G3175

ರಾಜದಂಡ, ರಾಜದಂಡಗಳು

ಪದದ ಅರ್ಥವಿವರಣೆ:

“ರಾಜದಂಡ” ಎನ್ನುವ ಪದವು ಅರಸನಂತಿರವ ಪಾಲಕರಿಂದ ಹಿಡಿಯಲ್ಪಟ್ಟಿರುವ ಆಭರಣದ ಕೋಲು ಅಥವಾ ಗದೆಯನ್ನು ಸೂಚಿಸುತ್ತದೆ.

- ರಾಜದಂಡಗಳು ಪ್ರಾಥಮಿಕವಾಗಿ ಕೆತ್ತಲ್ಪಟ್ಟಿರುವ ಅಲಂಕಾರಗಳ ಮರದ ಕೊಂಬುಗಳಾಗಿರುತ್ತಿದ್ದವು. ಸ್ವಲ್ಪ ಕಾಲವಾದನಂತರ ರಾಜದಂಡಗಳನ್ನು ಬಂಗಾರದಂತಹ ಬೆಲೆಯುಳ್ಳ ಲೋಹಗಳಿಂದ ಮಾಡುವುದಕ್ಕೆ ಆರಂಭಿಸಿದರು.
- ರಾಜದಂಡವು ದೊರೆತನಕ್ಕೆ ಮತ್ತು ಅಧಿಕಾರಕ್ಕೆ ಗುರುತಾಗಿರುತ್ತದೆ, ಅರಸನಿಗೆ ಕೊಡುವ ಘನತೆಗೆ ಮತ್ತು ಹಿರಿಮೆಗೆ ಕೂಡ ಗುರುತಾಗಿರುತ್ತದೆ.
- ಹಳೇ ಒಡಂಬಡಿಕೆಯಲ್ಲಿ ದೇವರನ್ನು ನೀತಿಯ ದಂಡವನ್ನಾಗಿ ವಿವರಿಸಲ್ಪಟ್ಟಿದ್ದರು, ಯಾಕಂದರೆ ದೇವರು ಅರಸನಾಗಿ ತನ್ನ ಜನರನ್ನು ಆಳುವನು.
- ಎಲ್ಲಾ ದೇಶಗಳನ್ನು ಆಳುವುದಕ್ಕೆ ಇಸ್ರಾಯೇಲಿನಿಂದ ರಾಜದಂಡಕ್ಕೆ ಗುರುತಾಗಿ ಮೆಸ್ಸಿಯಾನನ್ನು ಸೂಚಿಸುವ ಹಳೇ ಒಡಂಬಡಿಕೆಯ ಪ್ರವಾದನೆಯುಂಟು.
- ಇದನ್ನು “ಪಾಲಿಸುವ ಕೋಲು” ಅಥವಾ “ಅರಸನ ಕೋಲು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ಕ್ರಿಸ್ತ, ಅರಸ, ನೀತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆಮೋಸ.01:5
- ಎಸ್ತೇ.04:9-12
- ಆದಿ.49:10
- ಇಬ್ರಿ.01:8-9
- ಅರಣ್ಯ.21:17-18
- ಕೀರ್ತನೆ.045:5-7

ಪದ ಡೇಟಾ:

- Strong's: H2710, H4294, H7626, H8275, G4464

ರಾಜಯೋಗ್ಯ, ದೊರೆತನ

ಪದದ ಅರ್ಥವಿವರಣೆ:

“ರಾಜಯೋಗ್ಯ” ಎನ್ನುವ ಪದವು ಅರಸ ಅಥವಾ ರಾಣಿಯೊಂದಿಗೆ ಸಹಕಾರವಾಗಿರುವ ವಸ್ತುಗಳನ್ನು ಮತ್ತು ಜನರನ್ನು ವಿವರಿಸುತ್ತದೆ.

- “ರಾಜಯೋಗ್ಯ” ಎಂದು ಕರೆಯಲ್ಪಡುವ ಅನೇಕ ವಿಷಯಗಳ ಉದಾಹರಣೆಗಳಲ್ಲಿ ಅರಸನ ವಸ್ತ್ರಗಳು, ಅರಮನೆ, ಸಿಂಹಾಸನ ಮತ್ತು ಕಿರೀಟ ಎನ್ನುವವುಗಳು ಒಳಗೊಂಡಿರುತ್ತವೆ.
- ಅರಸ ಅಥವಾ ರಾಣಿ ಸಹಜವಾಗಿ ರಾಜಯೋಗ್ಯ ಭವನದಲ್ಲಿ ಅಥವಾ ಅರಮನೆಯಲ್ಲಿ ನಿವಾಸವಾಗಿರುತ್ತಾರೆ.
- ಅರಸನು ವಿಶೇಷವಾದ ಉಡುಪುಗಳನ್ನು ಧರಿಸಿರುತ್ತಾನೆ, ಕೆಲವೊಂದುಬಾರಿ ಇವುಗಳನ್ನು “ರಾಜಯೋಗ್ಯ ನಿಲುವಂಗಿಗಳು” ಎಂದೂ ಕರೆಯುತ್ತಾರೆ. ಅನೇಕಬಾರಿ ಅರಸನ ನಿಲುವಂಗಿಗಳು ನೇರಳೆ ಬಣ್ಣದಲ್ಲಿರುತ್ತವೆ, ಈ ಬಣ್ಣವು ಅಪರೂಪವಾಗಿ ತಯಾರಿಸುತ್ತಾರೆ ಮತ್ತು ಇದು ತುಂಬಾ ಬೆಲೆಯುಳ್ಳದ್ದಾಗಿರುತ್ತದೆ.
- ಹೊಸ ಒಡಂಬಡಿಕೆಯಲ್ಲಿ ಯೇಸುವಿನಲ್ಲಿ ನಂಬಿಕೆಯಿಟ್ಟಿರುವ ಪ್ರತಿಯೊಬ್ಬರನ್ನು “ರಾಜವಂಶಸ್ಥರಾದ ಯಾಜಕರು” ಎಂದು ಕರೆಯಲ್ಪಟ್ಟರು. ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಅರಸನಾದ ದೇವರನ್ನು ಸೇವಿಸುವ ಯಾಜಕರು” ಅಥವಾ “ಅರಸನಾದ ದೇವರಿಗಾಗಿ ಕರೆಯಲ್ಪಟ್ಟ ಯಾಜಕರು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- “ರಾಜಯೋಗ್ಯ” ಎನ್ನುವ ಪದವನ್ನು “ಅರಸನ” ಅಥವಾ “ಅರಸನಿಗೆ ಸಂಬಂಧಪಟ್ಟಿರುವ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅರಸ, ಅರಮನೆ, ಯಾಜಕ, ನೇರಳೆ ಬಣ್ಣ, ರಾಣಿ, ನಿಲುವಂಗಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.10:13
- 2 ಪೂರ್ವ.18:28-30
- ಆಮೋಸ.07:12-13
- ಆದಿ.49:19-21

ಪದ ಡೇಟಾ:

- Strong's: H643, H1921, H1935, H4410, H4428, H4430, H4437, H4438, H4467, H4468, H7985, H8237, G933, G934, G937

ರಾಜ್ಯ, ರಾಜ್ಯಗಳು

ಪದದ ಅರ್ಥವಿವರಣೆ:

ರಾಜ್ಯ ಎನ್ನುವುದು ಅರಸನಿಂದ ಒಂದು ಜನರ ಗುಂಪನ್ನು ಆಳ್ವಿಕೆ ಮಾಡುವುದು ಎಂದರ್ಥ. ಇದು ಒಬ್ಬ ಅರಸನಾಗಲಿ ಅಥವಾ ಇನ್ನೊಬ್ಬ ಪಾಲಕನಾಗಲಿ ಒಂದು ಕ್ಷೇತ್ರದ ಮೇಲೆ ಅಥವಾ ರಾಜಕೀಯ ಸೀಮೆಗಳ ಮೇಲೆ ನಿಯಂತ್ರಣವನ್ನು ಮತ್ತು ಅಧಿಕಾರವನ್ನು ಹೊಂದಿರುವುದನ್ನು ಕೂಡಾ ಸೂಚಿಸುತ್ತದೆ.

- ರಾಜ್ಯ ಎನ್ನುವುದು ಯಾವುದೇ ಭೌಗೋಳಿಕವಾದ ಗಾತ್ರವನ್ನು ಹೊಂದಿರಬಹುದು. ಅರಸನು ಒಂದು ದೇಶವನ್ನು ಅಥವಾ ಒಂದು ಜನರ ಗುಂಪನ್ನು ಅಥವಾ ಒಂದೇ ಒಂದು ಪಟ್ಟಣವನ್ನು ಪಾಲಿಸುವವನಾಗಿರುತ್ತಾನೆ.
- "ದೇವರ ರಾಜ್ಯ" ಎನ್ನುವ ಮಾತಿನಲ್ಲಿರುವಂತೆ, "ರಾಜ್ಯ" ಎನ್ನುವ ಪದವು ಆಕವಾದ ಆಡಳಿತವನ್ನು ಅಥವಾ ಅಧಿಕಾರವನ್ನು ಸೂಚಿಸುತ್ತದೆ,
- ಎಲ್ಲಾ ಸೃಷ್ಟಿಯನ್ನು ಪಾಲಿಸುವಾತನು ದೇವರೊಬ್ಬರೇ, ಆದರೆ "ದೇವರ ರಾಜ್ಯ" ಎನ್ನುವ ಮಾತು ವಿಶೇಷವಾಗಿ ಯೇಸುವಿನಲ್ಲಿ ನಂಬಿದ ಪ್ರತಿಯೊಬ್ಬರ ಮೇಲೆ ಮತ್ತು ಆತನ ಅಧಿಕಾರಕ್ಕೆ ಒಪ್ಪಿಸಿಕೊಟ್ಟ ಪ್ರತಿಯೊಬ್ಬರ ಮೇಲೆ ಆತನ ಆಳ್ವಿಕೆ ಮತ್ತು ಅಧಿಕಾರವನ್ನು ಸೂಚಿಸುತ್ತದೆ.
- ಸೈತಾನನು ಕೂಡ "ರಾಜ್ಯವನ್ನು" ಹೊಂದಿದ್ದಾನೆನ್ನುವುದರ ಕುರಿತಾಗಿ ಸತ್ಯವೇದವು ಮಾತನಾಡುತ್ತಿದೆ, ಅದರಲ್ಲಿ ಈ ಭೂಮಿಯ ಮೇಲಿರುವ ಅನೇಕ ವಿಷಯಗಳ ಮೇಲೆ ಅವನು ತಾತ್ಕಾಲಿಕವಾಗಿ ಆಳುವವನಾಗಿದ್ದಾನೆ. ಇವನ ರಾಜ್ಯವು ದುಷ್ಟ ರಾಜ್ಯವು ಆಗಿರುತ್ತದೆ ಮತ್ತು ಇದು "ಕತ್ತಲೆಯ ರಾಜ್ಯವನ್ನಾಗಿ" ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಒಬ್ಬ ಅರಸನಿಂದ ಆಳ್ವಿಕೆ ಮಾಡಲ್ಪಡುವ ಭೌತಿಕ ಪಾಲನೆಯನ್ನು ಸೂಚಿಸಿದಾಗ, "ರಾಜ್ಯ" ಎನ್ನುವ ಪದವನ್ನು "ದೇಶ (ಅರಸನಿಂದ ಆಡಳಿತವಾಗುವ)" ಅಥವಾ "ಅರಸನ ಕ್ಷೇತ್ರ" ಅಥವಾ "ಅರಸನಿಂದ ಆಳ್ವಿಕೆ ಮಾಡಲ್ಪಡುತ್ತಿರುವ ಸೀಮೆ" ಎಂದೂ ಅನುವಾದ ಮಾಡಬಹುದು.
- ಆತ್ಮೀಕವಾದ ಅರ್ಥದಲ್ಲಿ, "ರಾಜ್ಯ" ಎನ್ನುವ ಪದವನ್ನು "ಪಾಲನೆ" ಅಥವಾ "ಆಳ್ವಿಕೆ" ಅಥವಾ "ನಿಯಂತ್ರಿಸುವುದು" ಅಥವಾ "ಪ್ರಭುತ್ವ ಮಾಡುವುದು" ಎಂದು ಅನುವಾದ ಮಾಡಬಹುದು.
- "ಯಾಜಕರ ರಾಜ್ಯ" ಎನ್ನುವ ಮಾತನ್ನು ಅನುವಾದ ಮಾಡುವ ಇನ್ನೊಂದು ವಿಧಾನದಲ್ಲಿ "ದೇವರಿಂದ ಆಳ್ವಿಕೆ ಮಾಡಲ್ಪಡುವ ಆತ್ಮಿಕವಾದ ಯಾಜಕರು" ಎಂದೂ ಅನುವಾದ ಮಾಡಬಹುದು.
- "ಬೆಳಕಿನ ರಾಜ್ಯ" ಎನ್ನುವ ಮಾತನ್ನು "ಬೆಳಕಿನಂತೆ ದೇವರ ಆಳ್ವಿಕೆಯು ಒಳ್ಳೇಯದಾಗಿದೆ" ಅಥವಾ "ಬೆಳಕಾಗಿರುವ ದೇವರು ಜನರನ್ನು ಪಾಲಿಸುತ್ತಿದ್ದಾನೆ" ಅಥವಾ "ದೇವರ ರಾಜ್ಯದ ಒಳ್ಳೆತನ ಮತ್ತು ಬೆಳಕು" ಎಂದೂ ಅನುವಾದ ಮಾಡಬಹುದು. ಈ ಮಾತಿನಲ್ಲಿ "ಬೆಳಕು" ಎನ್ನುವ ಪದವನ್ನು ಇಟ್ಟಿರುವುದು ಒಳ್ಳೇಯದು, ಯಾಕಂದರೆ ಆ ಪದವು ಸತ್ಯವೇದದಲ್ಲಿ ತುಂಬಾ ಪ್ರಾಮುಖ್ಯವಾದ ಪದವಾಗಿರುತ್ತದೆ.
- "ರಾಜ್ಯ" ಎನ್ನುವ ಪದವು ಮತ್ತು ಸಾಮ್ರಾಜ್ಯ ಎನ್ನುವ ಪದವು ಬೇರೆ ಬೇರೆಯಾಗಿರುತ್ತದೆ, ಯಾಕಂದರೆ ಸಾಮ್ರಾಜ್ಯದಲ್ಲಿ ಚಕ್ರವರ್ತಿ ಅನೇಕ ದೇಶಗಳನ್ನು ಆಳುವವನಾಗಿರುತ್ತಾನೆ.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ಅರಸ, ದೇವರ ರಾಜ್ಯ, ಇಸ್ರಾಯೇಲ್ ರಾಜ್ಯ, ಯೂದಾ, ಯಾಜಕ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.02:10-12
- 2 ತಿಮೊಥೆ.04:17-18
- ಕೊಲೊಸ್ಸ.01:13-14
- ಯೋಹಾನ.18:36-37
- ಮಾರ್ಕ.03:23-25
- ಮತ್ತಾಯ.04:7-9
- ಮತ್ತಾಯ.13:18-19
- ಮತ್ತಾಯ.16:27-28
- ಪ್ರಕ.01:9-11

ಸತ್ಯವೇದದಿಂದ ಉದಾಹರಣೆಗಳು:

- **13:02** " ನೀವು ನನ್ನ ಮಾತುಗಳನ್ನು ಶ್ರದ್ಧೆಯಿಂದ ಕೇಳಿ, ನನ್ನ ಒಡಂಬಡಿಕೆಯನ್ನು ಕಾಪಾಡಿಕೊಂಡರೆ, ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗಿರುವಿರಿ, ನೀವು ನನಗೆ ಶ್ರೇಷ್ಠಯಾಜಕರ _ **ರಾಜ್ಯವಾಗಿರುವಿರಿ** _ ಮತ್ತು ಪರಿಶುದ್ಧ ಜನರೂ ಆಗಿರುವಿರಿ" ಎಂದು ದೇವರು ಮೋಶೆಗೆ ಮತ್ತು ಇಸ್ರಾಯೇಲ್ ಜನರಿಗೆ ಹೇಳಿದನು.
- **18:04** ದೇವರು ಸೊಲೊಮೋನನ ವಿಷಯದಲ್ಲಿ ಕೋಪಗೊಂಡಿದ್ದಾನೆ, ಸೊಲೊಮೋನನ ಅಪನಂಬಿಕೆಗೆ ಶಿಕ್ಷೆಯನ್ನಾಗಿ, ಸೊಲೊಮೋನನ ಮರಣದನಂತರ ಆತನು ಇಸ್ರಾಯೇಲ್ ದೇಶವನ್ನು ಎರಡು _ **ರಾಜ್ಯಗಳಾಗಿ** _ ವಿಂಗಡಿಸುತ್ತೇನೆಂದು ವಾಗ್ದಾನ ಮಾಡಿದನು.
- **18:07** ಇಸ್ರಾಯೇಲ್ ದೇಶದ ಹತ್ತು ಕುಲಗಳು ರೆಹಬ್ಬಾಮನಿಗೆ ವಿರುದ್ಧವಾಗಿ ತಿರಸ್ಕಾರ ಮಾಡಿದರು. ಕೇವಲ ಎರಡು ಕುಲಗಳು ಮಾತ್ರ ಆತನಿಗೆ ನಂಬಿಗಸ್ಥರಾಗಿದ್ದರು. ಈ ಎರಡು ಕುಲಗಳು ಯೂದಾ _ ರಾಜ್ಯವಾಗಿ __ ಮಾರ್ಪಟ್ಟಿತು.

- **18:08** ಇತರ ಇಸ್ರಾಯೇಲ್ ದೇಶದ ಹತ್ತು ಕುಲಗಳು ರೆಹಬ್ಬಾಮನಿಗೆ ವಿರುದ್ಧವಾಗಿ ತಿರಸ್ಕಾರ ಮಾಡಿ, ತಮಗೆ ಅರಸನನ್ನಾಗಿ ಯಾರೊಬ್ಬಾಮನನ್ನು ನೇಮಿಸಿಕೊಂಡರು. ಅವರು ವಾಗ್ದಾನ ದೇಶದ ಉತ್ತರ ಭಾಗದಲ್ಲಿ ತಮ್ಮ _ **ರಾಜ್ಯವನ್ನು** ಮಾಡಿಕೊಂಡರು ಮತ್ತು ಅದನ್ನು ಇಸ್ರಾಯೇಲ್ **ರಾಜ್ಯ** _ ಎಂಬುದಾಗಿ ಕರೆಯಲ್ಪಟ್ಟರು.
- **21:08** ಅರಸ ಎಂದರೆ _ ರಾಜ್ಯವನ್ನು __ ಆಳುವ ವ್ಯಕ್ತಿ ಮತ್ತು ಜನರಿಗೆ ತೀರ್ಪು ಮಾಡುವ ವ್ಯಕ್ತಿಯಾಗಿರುತ್ತಾನೆ.

ಪದ ಡೇಟಾ:

- Strong's: H4410, H4437, H4438, H4467, H4468, H4474, H4475, G932

ರಾಣಿ, ರಾಣಿಗಳು

ಪದದ ಅರ್ಥವಿವರಣೆ:

ರಾಣಿ ಎಂದರೆ ದೇಶಕ್ಕೆ ಸ್ತ್ರೀ ಆಡಳಿತಗಾರ್ತಿ ಅಥವಾ ಅರಸನ ಹೆಂಡತಿಯು ಆಗಿರುತ್ತಾರೆ.

- ಎಸ್ತೇರಳು ಅರಸನಾದ ಅಹಷ್ವೆರೋಷನನ್ನು ವಿವಾಹ ಮಾಡಿಕೊಂಡಾಗ ಆಕೆ ಪಾರಸಿಯ ಸಾಮ್ರಾಜ್ಯಕ್ಕೆ ರಾಣಿಯಾದಳು.
- ರಾಣಿ ಈಜೆಬೆಲಳು ಅರಸನಾದ ಆಹಾಬನಿಗೆ ದುಷ್ಟ ಹೆಂಡತಿಯಾಗಿದ್ದಳು.
- ಶೆಬ ರಾಣಿ ಪ್ರಸಿದ್ಧಿ ಹೊಂದಿದ ಪಾಲಕರಾಗಿದ್ದರು, ಈಕೆ ಅರಸನಾದ ಸೊಲೊಮೋನನನ್ನು ಸಂದರ್ಶಿಸುವುದಕ್ಕೆ ಬಂದಿದ್ದಳು.
- "ರಾಣಿ ತಾಯಿ" ಎನ್ನುವ ಮಾತನ್ನು ಸಾಧಾರಣವಾಗಿ ಪಾಲಿಸುತ್ತಿರುವ ಅರಸನ ಅಜ್ಜಿಯನ್ನು ಅಥವಾ ತಾಯಿಯನ್ನು, ಅಥವಾ ಮುಂಚಿನ ಅರಸನ ವಿಧವೆಯನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ. ರಾಣಿ ತಾಯಿಯು ಹೆಚ್ಚಿನ ಪ್ರಭಾವವನ್ನು ಹೊಂದಿರುತ್ತಾಳೆ; ಉದಾಹರಣೆಗೆ, ಅತಲ್ಯಳು ವಿಗ್ರಹ ಆರಾಧನೆ ಮಾಡುವುದಕ್ಕೆ ಜನರನ್ನು ಪ್ರಭಾವಗೋಳಿಸಿದ್ದಳು.

(ಈ ಪದಗಳನ್ನು ಸಹ ನೋಡಿರಿ : ಅಹಷ್ವೆರೋಷ, ಅತಲ್ಯ, ಎಸ್ತೇರಳು, ಅರಸ, ಪಾರಸಿಯ, ಪಾಲಕ, ಸೆಬಾ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.10:10
- 1 ಅರಸ.11:18-19
- 2 ಅರಸ.10:12-14
- ಅಪೊ.ಕೃತ್ಯ.08:26-28
- ಎಸ್ತೇ.01:16-18
- ಲೂಕ.11:31
- ಮತ್ತಾಯ.12:42

ಪದ ಡೇಟಾ:

- Strong's: H1404, H1377, H4410, H4427, H4433, H4436, H4438, H4446, H7694, H8282, G938

ರಾಯಭಾರಿ, ಪ್ರತಿನಿಧಿ

ಪದದ ಅರ್ಥವಿವರಣೆ:

ರಾಯಭಾರಿ ಎನ್ನುವವರು ವಿದೇಶಿಗಳಿಗೆ ಸಂಬಂಧವನ್ನುಂಟು ಮಾಡುವುದರಲ್ಲಿ ತಮ್ಮ ದೇಶದ ಪಕ್ಷವಾಗಿ ಪ್ರತಿನಿಧಿ ವಹಿಸುವುದಕ್ಕೆ ಅಧಿಕಾರಿಗಳಾಗಿ ನಿಯಮಿಸಲ್ಪಟ್ಟವರು, ಈ ಪದವು ಅಲಂಕಾರ ರೂಪದಲ್ಲಿಯೂ ಉಪಯೋಗಿಸಲ್ಪಟ್ಟಿದೆ ಮತ್ತು ಇದನ್ನು ಅತೀ ಹೆಚ್ಚಾಗಿ ಸಾಧಾರಣವಾಗಿ "ಪ್ರತಿನಿಧಿ" ಎಂದೂ ಅನುವಾದ ಮಾಡುತ್ತಾರೆ.

- ರಾಯಭಾರಿ ಅಥವಾ ಪ್ರತಿನಿಧಿ ಎನ್ನುವವರು ತಮ್ಮನ್ನು ಕಳುಹಿಸಿದ ಪಭುತ್ವದಿಂದ ಅಥವಾ ಒಬ್ಬ ವ್ಯಕ್ತಿಯಿಂದ ಕೊಟ್ಟ ಸಂದೇಶವನ್ನು ಜನರಿಗೆ ತಿಳಿಸುತ್ತಾರೆ.
- "ಪ್ರತಿನಿಧಿ" ಅತೀ ಸಾಧಾರಣವಾದ ಪದವು ಒಬ್ಬ ವ್ಯಕ್ತಿ ಯಾರ ಪಕ್ಷವಾಗಿ ಪ್ರತಿನಿಧಿಯಾಗಿದ್ದಾರೋ, ಅವರ ಪಕ್ಷವಾಗಿ ಮಾತನಾಡುವುದಕ್ಕೆ ಮತ್ತು ನಡೆದುಕೊಳ್ಳುವುದಕ್ಕೆ ಅಧಿಕಾರ ಹೊಂದಿದವರನ್ನು ಸೂಚಿಸುತ್ತದೆ.
- ಕ್ರೈಸ್ತರೆಲ್ಲರೂ ಕ್ರಿಸ್ತನ "ರಾಯಭಾರಿಗಳು" ಅಥವಾ "ಪ್ರತಿನಿಧಿಗಳು" ಎಂದು ಅಪೊಸ್ತಲನಾದ ಪೌಲನು ತಿಳಿಸಿದ್ದಾನೆ. ಅವರು ಈ ಲೋಕದಲ್ಲಿ ಕ್ರಿಸ್ತನಿಗೆ ಪ್ರತಿನಿಧಿಗಳಾಗಿರುವುದರಿಂದ, ಅವರು ಇತರರಿಗೆ ಆತನ ಸಂದೇಶವನ್ನು ಹಂಚುವವರಾಗಿರುತ್ತಾರೆ.
- ಸಂದರ್ಭಕ್ಕೆ ತಕ್ಕಂತೆ, "ಅಧಿಕೃತ ಪ್ರತಿನಿಧಿ" ಅಥವಾ "ನೇಮಿಸಿಲ್ಪಟ್ಟ ದೂತ" ಅಥವಾ "ಆಯ್ಕೆಮಾಡಿಕೊಂಡ ಪ್ರತಿನಿಧಿ" ಅಥವಾ "ದೇವರಿಂದ ಆಯ್ಕೆ ಮಾಡಲ್ಪಟ್ಟ ಪ್ರತಿನಿಧಿ" ಎಂದೂ ಈ ಪದವನ್ನು ಅನುವಾದ ಮಾಡಬಹುದು.
- "ರಾಯಭಾರಿಗಳ ನಿಯೋಗ" ಎನ್ನುವ ಮಾತನ್ನು "ಕೆಲವೊಂದು ಅಧೀಕೃತ ಸಂದೇಶಕರು" ಅಥವಾ "ನೇಮಿಸಲ್ಪಟ್ಟ ಪ್ರತಿನಿಧಿಗಳ ಗುಂಪು" ಅಥವಾ "ಎಲ್ಲಾ ಜನರಿಗೋಸ್ಕರ ಮಾತನಾಡುವುದಕ್ಕೆ ಜನರ ಅಧೀಕೃತ ಪಕ್ಷ" ಎಂಬುದಾಗಿಯೂ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: /ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದೂತ ಅಥವಾ ಸಂದೇಶವಾಹಕ)

ಸತ್ಯವೇದದ ಅನುಬಂಧ ವಾಕ್ಯಗಳು:

- ಎಫೆಸ.06:20
- ಲೂಕ.14:31-33
- ಲೂಕ.19:13-15

ಪದ ಡೇಟಾ:

- Strong's: H3887, H4135, H4136, H4397, H6735, H6737, G4243

ರೊಟ್ಟಿ

ಪದದ ಅರ್ಥವಿವರಣೆ:

ಹಿಟ್ಟಿಗೆ ನೀರು ಮತ್ತು ಎಣ್ಣೆ ಬೆರಸಿ, ನಾದಿದ ಹಿಟ್ಟಾಗಿ ಮಾಡಿಕೊಂಡು, ಅದನ್ನು ವೃತ್ತಾಕಾರದಲ್ಲಿ ಮಾಡಿ, ಅದನ್ನು ಬೇಯಿಸಿ ರೊಟ್ಟಿಯನ್ನು ಮಾಡಲಾಗುತ್ತದೆ.

- ಆಂಗ್ಲದಲ್ಲಿ "ಲೋಫ್" ಎನ್ನುವ ಪದಕ್ಕೆ "ವೃತ್ತಾಕಾರದ ರೊಟ್ಟಿ" ಎಂದರ್ಥ.
- ರೊಟ್ಟಿಯ ನಾದಿದ ಹಿಟ್ಟನ್ನು ಸಹಜವಾಗಿ ಮೇಲಕ್ಕೆ ಉಬ್ಬಲು ಹುಳಿಯನ್ನು ಉಪಯೋಗಿಸುತ್ತಾರೆ.
- ರೊಟ್ಟಿಯನ್ನು ಹುಳಿಯಿಲ್ಲದಂತೆ ಕೂಡ ಮಾಡಬಹುದು, ಇದರಿಂದ ಅದು ಮೇಲಕ್ಕೆ ಉಬ್ಬುವುದಿಲ್ಲ. ಸತ್ಯವೇದದಲ್ಲಿ ಇದನ್ನು "ಹುಳಿಯಿಲ್ಲದ ರೊಟ್ಟಿ" ಎಂದು ಕರೆಯಲಾಗಿದೆ ಮತ್ತು ಇದು ಯೆಹೂದ್ಯರ ಪಸ್ಕ ಭೋಜನಕ್ಕಾಗಿ ಉಪಯೋಗಿಸುತ್ತಿದ್ದರು.
- ಸತ್ಯವೇದದ ಕಾಲಗಳಲ್ಲಿ ಅನೇಕಮಂದಿ ಜನರಿಗೆ ರೊಟ್ಟಿಯೇ ಮುಖ್ಯ ಆಹಾರವಾಗಿತ್ತು, ಈ ಪದವನ್ನು ಸತ್ಯವೇದದಲ್ಲಿ ಊಟವನ್ನು ಸೂಚಿಸುವಂತೆ ತುಂಬಾ ಸಹಜವಾಗಿ ಉಪಯೋಗಿಸುತ್ತಿದ್ದರು. (ಇದನ್ನು ನೋಡಿರಿ: ಲಾಕ್ಷಣಿಕ ಪ್ರಯೋಗ)
- "ಸಮುಖದ ರೊಟ್ಟಿ" ಎನ್ನುವ ಮಾತು ದೇವರಿಗೆ ನೈವೇದ್ಯವಾಗಿ ಅರ್ಪಿಸುವುದಕ್ಕೆ ದೇವಾಲಯ ಭವನದಲ್ಲಿ ಅಥವಾ ಗುಡಾರದಲ್ಲಿ ಬಂಗಾರದ ಮೇಜಿನ ಮೇಲೆ ಇಟ್ಟಿರುವ ಹನ್ನೆರಡು ರೊಟ್ಟಿಗಳನ್ನು ಸೂಚಿಸುತ್ತದೆ. ಈ ರೊಟ್ಟಿಗಳು ಇಸ್ರಾಯೇಲ್ಯರ ಹನ್ನೆರಡು ಕುಲಗಳನ್ನು ಪ್ರತಿನಿಧಿಸುತ್ತವೆ ಮತ್ತು ಇವುಗಳನ್ನು ಕೇವಲ ಯಾಜಕರು ಮಾತ್ರವೇ ತಿನ್ನಬೇಕು. ಈ ಪದವನ್ನು "ದೇವರು ಅವರ ಮಧ್ಯೆದಲ್ಲಿ ನಿವಾಸ ಮಾಡುತ್ತಿದ್ದಾರೆಂದು ರೊಟ್ಟಿ ತೋರಿಸುತ್ತದೆ" ಎಂದೂ ಅನುವಾದ ಮಾಡಬೇಕು.
- "ಪರಲೋಕದಿಂದ ಬಂದ ರೊಟ್ಟಿ" ಎನ್ನುವ ಅಲಂಕಾರ ರೂಪದ ಮಾತು ಇಸ್ರಾಯೇಲ್ಯರು ಅರಣ್ಯದಲ್ಲಿ ಅಲೆದಾಡುತ್ತಿರುವಾಗ ಅವರಿಗಾಗಿ ದೇವರು ಕೊಟ್ಟ ಒಂದು ವಿಶೇಷವಾದ ಬಿಳಿ ಆಹಾರವಾದ "ಮನ್ನ"ವನ್ನು ಸೂಚಿಸುತ್ತದೆ.
- "ಪರಲೋಕದಿಂದ ಇಳಿದು ಬಂದ ರೊಟ್ಟಿ ನಾನೇ" ಎಂದು ಮತ್ತು "ನಾನೇ ಜೀವದ ರೊಟ್ಟಿ" ಎಂದು ಯೇಸು ಕೂಡ ಹೇಳಿದ್ದರು.
- ಯೇಸುವಿನ ಮರಣಕ್ಕೆ ಮುಂಚಿತವಾಗಿ ಯೇಸು ಮತ್ತು ತನ್ನ ಶಿಷ್ಯರು ಪಸ್ಕ ಭೋಜನವನ್ನು ತಿನ್ನುತ್ತಿರುವಾಗ, ಶಿಲುಬೆಯಲ್ಲಿ ಜಜ್ಜಲ್ಪಡುವ ತನ್ನ ದೇಹಕ್ಕೆ ಆ ಹುಳಿಯಿಲ್ಲದಿರುವ ಪಸ್ಕ ರೊಟ್ಟಿಯನ್ನು ಹೋಲಿಸಿ ಹೇಳಿದ್ದರು.
- "ರೊಟ್ಟಿ" ಎನ್ನುವ ಪದವನ್ನು ಸಹಜವಾಗಿ ಅನೇಕಬಾರಿ "ಆಹಾರ" ಎಂದು ಅನುವಾದ ಮಾಡಲಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಪಸ್ಕ, ಗುಡಾರ, ದೇವಾಲಯ, ಹುಳಿಯಿಲ್ಲದ ರೊಟ್ಟಿ, ಹುಳಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.02:46-47
- ಅಪೊ.ಕೃತ್ಯ..27:33-35
- ವಿಮೋ.16:13-15
- ಲೂಕ.09:12-14
- ಮಾರ್ಕ.06:37-38
- ಮತ್ತಾಯ.04:1-4
- ಮತ್ತಾಯ.11:18-19

ಪದ ಡೇಟಾ:

- Strong's: H2557, H3899, H4635, H4682, G106, G740, G4286

ಲಂಚ, ಲಂಚಗಳು, ಲಂಚ ತೆಗೆದುಕೊಂಡಿದೆ, ಲಂಚಗಾರಿಕೆ

ಪದದ ಅರ್ಥವಿವರಣೆ:

“ಲಂಚ” ಎನ್ನುವ ಪದಕ್ಕೆ ಯಾರಾದರೊಬ್ಬರಿಗೆ ಬೆಳೆಯುಳ್ಳದ್ದು ಯಾವುದಾದರೊಂದನ್ನು ಕೊಡುವುದು ಎಂದರ್ಥ. ನೀಚವಾದ ಕಾರ್ಯಗಳನ್ನು ಮಾಡುವುದಕ್ಕೆ ಆ ವ್ಯಕ್ತಿಯನ್ನು ಪ್ರಭಾವಿತಗೊಳಿಸುವುದಕ್ಕೆ ಹಣವನ್ನು ಕೊಡುವುದು ಎಂದರ್ಥ.

- ಯೇಸುವಿನ ಖಾಲಿ ಸಮಾಧಿಯನ್ನು ಕಾಚಿದ ಕಾವಲುಗಾರರು ನಡೆದಿರುವ ಸಂಘಟನೆಯನ್ನು ಹೇಳದಂತೆ ಸುಳ್ಳು ಹೇಳುವುದಕ್ಕೆ ಲಂಚವನ್ನು ತೆಗೆದುಕೊಂಡಿದ್ದರು.
- ಕೆಲವೊಂದುಸಲ ಸರ್ಕಾರ ಅಧಿಕಾರಿಗಳು ಅಪರಾಧವನ್ನು ಹೊರಬಾರದಂತೆ ಲಂಚವನ್ನು ತೆಗೆದುಕೊಳ್ಳುತ್ತಾರೆ ಅಥವಾ ಮತದಾನ ಹಾಕಲು ಲಂಚವನ್ನು ಕೊಡುತ್ತಾರೆ.
- ಲಂಚವನ್ನು ತೆಗೆದುಕೊಳ್ಳುವುದನ್ನು ಅಥವಾ ಲಂಚವನ್ನು ಕೊಡುವುದನ್ನು ಸತ್ಯವೇದವು ನಿಷೇಧಿಸಲಾಗಿದೆ.
- “ಲಂಚ” ಎನ್ನುವ ಪದವನ್ನು “ನೀಚವಾದ ವೇತನ” ಅಥವಾ “ಸುಳ್ಳು ಹೇಳುವದಕ್ಕಾಗಿ ದುಡ್ಡು” ಅಥವಾ “ನಿಯಮಗಳನ್ನು ಉಲ್ಲಂಘನೆ ಮಾಡುವುದಕ್ಕೆ ಹಣ” ಎಂದೂ ಅನುವಾದ ಮಾಡಬಹುದು.
- “ಲಂಚ” ಎನ್ನುವ ಪದವನ್ನು “(ಯಾರಾದರೊಬ್ಬರನ್ನು) ಪ್ರಭಾವಿತಗೊಳಿಸುವುದಕ್ಕೆ ಹಣ ಕೊಡು” “ನೀಚವಾದ ಮೆಚ್ಚುಗೆಯನ್ನು ಹೊಂದುವುದಕ್ಕೆ ದುಡ್ಡು ಕೊಡು” ಅಥವಾ “ದಯೆಯನ್ನು ಹೊಂದಿಕೊಳ್ಳುವುದಕ್ಕೆ ಹಣ ಕೊಡು” ಎನ್ನುವ ಅರ್ಥಗಳು ಬರುವ ಪದಗಳೊಂದಿಗೆ ಅಥವಾ ಮಾತುಗಳೊಂದಿಗೆ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.08:1-3
- ಪ್ರಸಂಗಿ.07:7
- ಯೆಶಯ.01:23
- ಮೀಕಾ.03:9-11
- ಜ್ಞಾನೋ.15:27-28

ಪದ ಡೇಟಾ:

- Strong's: H3724, H4979, H7809, H7810, H7936, H7966, H8641, G5260

ಲಾಭ, ಪ್ರಯೋಜನಕರ, ಅಪ್ರಯೋಜನಕರ

ಪದದ ಅರ್ಥವಿವರಣೆ:

ಸಾಧಾರಣವಾಗಿ "ಪ್ರಯೋಜನ" ಮತ್ತು "ಪ್ರಯೋಜನಕರ" ಎನ್ನುವ ಪದಗಳು ಕೆಲವೊಂದು ನಿರ್ದಿಷ್ಟ ಕ್ರಿಯೆಗಳು ಮಾಡುವುದರ ಮೂಲಕ ಯಾವುದಾದರೊಂದರ ಒಳ್ಳೆಯದನ್ನು ಸಂಪಾದಿಸಿಕೊಳ್ಳುವುದನ್ನು ಸೂಚಿಸುತ್ತದೆ.

ಇತರ ಜನರಿಗಾಗಿ ಒಳ್ಳೇಯ ಕಾರ್ಯಗಳ ಕುರಿತಾಗಿ ಸಹಾಯವಾಗುವುದಾದರೆ ಅಥವಾ ಅವರಿಗೆ ಒಳ್ಳೇಯ ಕೆಲಸಗಳು ನಡೆದರೆ ಒಬ್ಬರಿಗೆ "ಪ್ರಯೋಜನಕರವಾದದ್ದು" ನಡೆದಿದೆಯೆಂದರ್ಥ.

- ಹೆಚ್ಚಿನ ವಿಶೇಷವಾಗಿ "ಲಾಭ" ಎನ್ನುವ ಪದವು ಅನೇಕಬಾರಿ ವ್ಯಾಪಾರ ಮಾಡುವುದರ ಮೂಲಕ ಪಡೆದಿರುವ ಮೊತ್ತದ ಹಣವನ್ನು ಸೂಚಿಸುತ್ತದೆ. ಬಂಡವಾಳ ಹಾಕುವುದಕ್ಕಿಂತ ಹೆಚ್ಚಾದ ಹಣವನ್ನು ಗಳಿಸಿದರೆ ಆ ವ್ಯಾಪಾರವು "ಪ್ರಯೋಜನಕರವಾಗಿರುತ್ತದೆ".
- ಜನರಿಗೆ ಒಳ್ಳೇಯ ಕಾರ್ಯಗಳನ್ನು ಮಾಡಿದರೆ ಕ್ರಿಯೆಗಳು ಪ್ರಯೋಜನಕರವಾಗಿರುತ್ತವೆ.
- ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವೂ ಉಪದೇಶಕ್ಕೂ, ಖಂಡನೆಗೂ, ತಿದ್ದುಪಡಿಗೂ, ನೀತಿಶಿಕ್ಷೆಗೂ "ಪ್ರಯೋಜನಕರವಾಗಿರುತ್ತವೆ" ಎಂದು 2 ತಿಮೊಥೆ.3:16 ವಚನವು ಹೇಳುತ್ತಿದೆ. ದೇವರ ಚಿತ್ತಾನುಸಾರವಾಗಿ ಜೀವಿಸುವುದಕ್ಕೆ ಜನರಿಗೆ ಬೋಧನೆ ಮಾಡಲು ಸತ್ಯವೇದದ ಬೋಧನೆಗಳು ಸಹಾಯಕರವಾಗಿರುತ್ತವೆ ಮತ್ತು ಉಪಯುಕ್ತವಾಗಿರುತ್ತವೆ ಎಂದು ಈ ಮಾತಿಗೆ ಅರ್ಥವಾಗಿರುತ್ತದೆ.

"ಅಪ್ರಯೋಜನಕರ" ಎನ್ನುವ ಪದಕ್ಕೆ ಉಪಯುಕ್ತವಾಗಿರುವುದಿಲ್ಲವೆಂದರ್ಥ.

- ಯಾವುದಾದರೊಂದನ್ನು ಪಡೆದುಕೊಳ್ಳುವುದಕ್ಕೆ ಒಬ್ಬ ವ್ಯಕ್ತಿಗೆ ಸಹಾಯಕವಾಗಿರುವುದಿಲ್ಲ ಅಥವಾ ಯಾವ ಲಾಭವೂ ಇರುವುದಿಲ್ಲ ಎಂದು ಈ ಮಾತಿಗೆ ಅಕ್ಷರಾರ್ಥವಾಗಿರುತ್ತದೆ.
- ಅಪ್ರಯೋಜನಕರವಾದದ್ದು ಯಾವುದೇಯಾಗಿರಲಿ ಅದು ಮಾಡುವುದಕ್ಕೆ ಯೋಗ್ಯವಾಗಿರುವುದಿಲ್ಲ, ಯಾಕಂದರೆ ಅದು ಯಾವ ಪ್ರಯೋಜನವನ್ನೂ ಕೊಡುವುದಿಲ್ಲ.
- ಈ ಪದವನ್ನು "ಉಪಯೋಗಕರವಲ್ಲದ್ದು" ಅಥವಾ "ಯೋಗ್ಯವಲ್ಲ" ಅಥವಾ "ಉಪಯೋಗಕರವಲ್ಲ" ಅಥವಾ "ಅಯೋಗ್ಯಕರ" ಅಥವಾ "ಪ್ರಯೋಜನವಿಲ್ಲದ್ದು" ಅಥವಾ "ಪ್ರಯೋಜನ ಕೊಡದಿರುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಯೋಗ್ಯ)

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, "ಲಾಭ" ಎನ್ನುವ ಪದವನ್ನು "ಉಪಯುಕ್ತ" ಅಥವಾ "ಸಹಾಯ" ಅಥವಾ "ಪಡೆದುಕೊಳ್ಳುವುದು" ಎಂದೂ ಅನುವಾದ ಮಾಡಬಹುದು.
- "ಪ್ರಯೋಜನಕರ" ಎನ್ನುವ ಪದವನ್ನು "ಉಪಯೋಗಕರ" ಅಥವಾ "ಪ್ರಯೋಜನಕರ" ಅಥವಾ "ಸಹಾಯಕರ" ಎಂದೂ ಅನುವಾದ ಮಾಡಬಹುದು.
- ಯಾವುದಾದರೊಂದರಿಂದ "ಲಾಭ ಹೊಂದು" ಎನ್ನುವ ಮಾತನ್ನು "ಲಾಭ ಹೊಂದು" ಅಥವಾ "ಹಣವನ್ನು ಗಳಿಸು" ಅಥವಾ "ಸಹಾಯವನ್ನು ಪಡೆದುಕೋ" ಎಂದೂ ಅನುವಾದ ಮಾಡಬಹುದು.
- ವ್ಯಾಪಾರ ಸಂದರ್ಭಗಳಲ್ಲಿ "ಲಾಭ" ಎನ್ನುವ ಪದವನ್ನು "ಹಣವನ್ನು ಗಳಿಸಿದೆ" ಅಥವಾ "ಉಳಿತಾಯ ಹಣ" ಅಥವಾ "ಹೆಚ್ಚುವರಿ ಹಣ" ಎಂದು ಅರ್ಥಬರುವ ಮಾತಿನೊಂದಿಗೆ ಅಥವಾ ಪದದೊಂದಿಗೆ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು:

- ಯೋಬ.15:03
- ಜ್ಞಾನೋ.10:16
- ಯೆರೆ.02:08
- ಯೆಹೆ.18:12-13
- ಯೋಹಾನ.06:63
- ಮಾರ್ಕ.08:36
- ಮತ್ತಾಯ.16:26
- 2 ಪೇತ್ರ.02:1-3

ಪದ ಡೇಟಾ:

- Strong's: H1215, H3148, H3276, H3504, H4195, H4768, H5532, H7737, H7939, G147, G255, G512, G888, G889, G890, G1281, G2585, G2770, G2771, G3408, G4297, G4298, G4851, G5539, G5622, G5623, G5624

ಲೈಂಗಿಕ ಅನೈತಿಕತೆ, ಅನೈತಿಕತೆ, ಅನೈತಿಕ, ಜಾರತ್ವ

ಪದದ ಅರ್ಥವಿವರಣೆ:

"ಲೈಂಗಿಕ ಅನೈತಿಕತೆ" ಎನ್ನುವ ಪದವು ಒಬ್ಬ ಸ್ತ್ರೀ ಪುರುಷನು ವಿವಾಹ ಮಾಡಿಕೊಳ್ಳದೆ ಅಥವಾ ವಿವಾಹ ಮಾಡಿಕೊಂಡೂ ಹೊರಗಡೆ ಬೇರೆಯವರೊಂದಿಗೆ ಲೈಂಗಿಕ ಸಂಬಂಧಗಳನ್ನಿಟ್ಟುಕೊಳ್ಳುವುದನ್ನು ಸೂಚಿಸುತ್ತದೆ. ಇದು ದೇವರ ಪ್ರಣಾಳಿಕೆಗೆ ವಿರುದ್ಧವಾಗಿರುತ್ತದೆ. ಹಳೇ ಆಂಗ್ಲ ಸತ್ಯವೇದಗಳಲ್ಲಿ ಇದನ್ನು "ಸಂಭೋಗ" ಎಂದು ಕರೆಯುತ್ತಾರೆ.

- ದೇವರಿಗೆ ವಿರುದ್ಧವಾಗಿರುವ ಯಾವುದೇ ರೀತಿಯ ಲೈಂಗಿಕ ಕ್ರಿಯೆಯನ್ನು ಇದು ಸೂಚಿಸುತ್ತದೆ, ಅಷ್ಟೇಅಲ್ಲದೆ ಇದರಲ್ಲಿ ಸ್ವಲಿಂಗ ಸಂಪರ್ಕ ಕ್ರಿಯೆಗಳು ಮತ್ತು ಅಶ್ಲೀಲತೆಯು ಒಳಗೊಂಡಿರುತ್ತದೆ.
- ಒಂದು ವಿಧವಾದ ಲೈಂಗಿಕ ಅನೈತಿಕತೆ ಎನ್ನುವುದು ವ್ಯಭಿಚಾರ, ಇದು ಪ್ರತ್ಯೇಕವಾಗಿ ವಿವಾಹ ಮಾಡಿಕೊಂಡ ವ್ಯಕ್ತಿಗೆ ಮತ್ತು ಬೇರೆಯವರ ಹೆಂಡತಿಯೊಂದಿಗೆ ಅಥವಾ ಗಂಡನೊಂದಿಗೆ ಮಧ್ಯೆದಲ್ಲಿ ನಡೆಯುವ ಲೈಂಗಿಕ ಕಾರ್ಯ.
- ಇನ್ನೊಂದು ರೀತಿಯ ಲೈಂಗಿಕ ಅನೈತಿಕತೆ ಎನ್ನವುದು "ಸೂಳೆಗಾರಿಕೆ", ಇದು ಬೇರೆಯವರಿಗೆ ಹಣ ಕೊಟ್ಟು ಮಾಡುವ ಲೈಂಗಿಕ ಕಾರ್ಯ.
- ಇಸ್ರಾಯೇಲ್ಯರು ಸುಳ್ಳು ದೇವರುಗಳನ್ನು ಆರಾಧನೆ ಮಾಡಿದಾಗ, ಅವರು ದೇವರಿಗೆ ತೋರಿಸಿದ ವಿಶ್ವಾಸದ್ರೋಹವನ್ನು ಸೂಚಿಸುವುದಕ್ಕೂ ಈ ಪದವನ್ನು ಅಲಂಕಾರಿಕ ರೂಪದಲ್ಲಿ ಉಪಯೋಗಿಸಿದ್ದಾರೆ.

ಅನುವಾದ ಸಲಹೆಗಳು:

- "ಲೈಂಗಿಕ ಅನೈತಿಕತೆ" ಎನ್ನುವ ಪದವನ್ನು "ಅನೈತಿಕತೆ" ಎಂದೂ ಅನುವಾದ ಮಾಡಬಹುದು, ಈ ಪದದ ಅರ್ಥವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಷ್ಟು ಕಾಲ ಇದನ್ನು ಉಪಯೋಗಿಸಬಹುದು.
- ಈ ಪದಕ್ಕೆ ಉಪಯೋಗಿಸುವ ಬೇರೊಂದು ಪದಗಳಲ್ಲಿ "ತಪ್ಪಾಗಿ ಮಾಡುವ ಲೈಂಗಿಕ ಕ್ರಿಯೆಗಳು" ಅಥವಾ "ವಿವಾಹದ ಹೊರಗೆ ಮಾಡುವ ಲೈಂಗಿಕ ಕಾರ್ಯಗಳು" ಎಂದೂ ಸೇರಿಸಬಹುದು.
- ಈ ಪದವನ್ನು "ವ್ಯಭಿಚಾರ" ಎನ್ನುವ ಪದಕ್ಕೆ ಬೇರೆಯಾಗಿ ಅನುವಾದ ಮಾಡಬೇಕಾಗುತ್ತದೆ.
- ದೇವರಿಗೆ ತೋರಿಸುವ ವಿಶ್ವಾಸ ದ್ರೋಹಕ್ಕೂ ಮತ್ತು ಲೈಂಗಿಕ ಸಂಬಂಧಗಳಲ್ಲಿ ವಿಶ್ವಾಸ ದ್ರೋಹಕ್ಕೂ ಮಧ್ಯೆ ಸತ್ಯವೇದದಲ್ಲಿ ಸಾಮಾನ್ಯ ಹೋಲಿಕೆ ಇರುವುದರಿಂದ ಅನುವಾದಿಸಿದ ಈ ಪದವನ್ನು ಅಲಂಕಾರಿಕ ಭಾಷೆಯ ಪದವನ್ನಾಗಿ ಉಪಯೋಗಿಸುವಾಗ ಸಾಧ್ಯವಾದರೆ ಅಕ್ಷರಾರ್ಥ ಪದವನ್ನೇ ಇರಿಸಬೇಕು.

(ಈ ಪದಗಳನ್ನು ಸಹ ನೋಡಿರಿ : ವ್ಯಭಿಚಾರ, ಸುಳ್ಳು ದೇವರು, ಸೂಳೆಗಾರಿಕೆ, ವಿಶ್ವಾಸ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.15:20
- ಅಪೊ.ಕೃತ್ಯ.21:25-26
- ಕೊಲೊಸ್ಸೆ.03:5-8
- ಎಫೆಸ.05:03
- ಆದಿ.38:24-26
- ಹೋಶೆಯ.04:13-14
- ಮತ್ತಾಯ.05:31-32
- ಮತ್ತಾಯ.19:7-9

ಪದ ಡೇಟಾ:

- Strong's: H2181, H8457, G1608, G4202, G4203

ವಂಚಿಸು, ಮೋಸ, ಮೋಸಗಾರ, ಮೋಸದಿಂದ, ವಂಚನೆ, ಭ್ರಮೆಗಳು

ಪದದ ಅರ್ಥವಿವರಣೆ:

“ವಂಚಿಸು” ಎನ್ನುವ ಪದಕ್ಕೆ ಸತ್ಯವಲ್ಲದ ಏನಾದರೊಂದು ವಿಷಯವನ್ನು ಒಬ್ಬರು ನಂಬುವಂತೆ ಮಾಡುವುದು ಎಂದರ್ಥ. ಒಬ್ಬರನ್ನು ಮೋಸಗೊಳಿಸುವ ಕ್ರಿಯೆಯನ್ನು “ವಂಚನೆ” ಎಂದು ಕರೆಯುತ್ತಾರೆ.

- “ವಂಚನೆ” ಎನ್ನುವ ಇನ್ನೊಂದು ಪದವೂ ಸತ್ಯವಲ್ಲದ ಏನಾದರೊಂದು ವಿಷಯವನ್ನು ಒಬ್ಬರು ನಂಬುವಂತೆ ಮಾಡುವ ಕ್ರಿಯೆಯನ್ನು ಸೂಚಿಸುತ್ತದೆ.
- ತಪ್ಪಾಗಿರುವ ಸಂಗತಿಗಳನ್ನು ಇತರರು ನಂಬುವಂತೆ ಮಾಡುವ ವ್ಯಕ್ತಿಯನ್ನು “ಮೋಸಗಾರ” ಎನ್ನುತ್ತಾರೆ. ಉದಾಹರಣೆಗೆ, ಸೈತಾನನು “ಮೋಸಗಾರ” ಎಂದು ಕರೆಯಲ್ಪಟ್ಟಿದ್ದಾನೆ. ಇವನು ನಿಯಂತ್ರಿಸುವ ದುರಾತ್ಮಗಳನ್ನು ಕೂಡ ಮೋಸಗಾರರೆಂದು ಕರೆಯುತ್ತಾರೆ.
- ಒಬ್ಬ ವ್ಯಕ್ತಿಯ ಸಂದೇಶವು ಅಥವಾ ಕ್ರಿಯೆಯು ಸತ್ಯವಾಗದಿದ್ದರೆ ಅದನ್ನು “ಮೋಸಗೊಳಿಸುವಿಕೆ” ಎಂದು ಹೇಳಲಾಗುತ್ತದೆ.
- “ಮೋಸ ಮಾಡು” ಮತ್ತು “ಮೋಸಗೊಳಿಸು” ಎನ್ನುವ ಪದಗಳಿಗೆ ಒಂದೇ ಅರ್ಥವು ಇರುತ್ತದೆ, ಆದರೆ ಅವರು ಉಪಯೋಗಿಸುವ ವಿಧಾನದಲ್ಲಿ ಕೆಲವೊಂದು ಚಿಕ್ಕ ಚಿಕ್ಕ ವ್ಯತ್ಯಾಸಗಳು ಇರುತ್ತವೆ.
- “ಮೋಸದಿಂದ” ಮತ್ತು “ಮೋಸ ಹೋಗುವ” ಎನ್ನುವ ವಿವರಣಾತ್ಮಕವಾದ ಪದಗಳು ಒಂದೇ ಅರ್ಥವನ್ನು ಹೊಂದಿರುತ್ತವೆ ಮತ್ತು ಅವು ಒಂದೇ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿರುತ್ತವೆ.

ಅನುವಾದ ಸಲಹೆಗಳು:

- “ವಂಚಿಸು” ಎನ್ನುವ ಪದಕ್ಕೆ ಇತರ ಪರ್ಯಾಯ ಪದಗಳಾಗಿ “ಸುಳ್ಳು ಹೇಳು” ಅಥವಾ “ತಪ್ಪು ಹೊಂದುವುದಕ್ಕೆ ಕಾರಣನಾಗು” ಅಥವಾ “ನಿಜವಲ್ಲದ ವಿಷಯಗಳನ್ನು ಆಲೋಚನೆ ಮಾಡುವುದಕ್ಕೆ ಇನ್ನೊಬ್ಬರನ್ನು ಪ್ರೇರೇಪಿಸು” ಎನ್ನುವ ಮಾತುಗಳನ್ನು ಹೇಳಬಹುದು.
- “ವಂಚನೆ” ಎನ್ನುವ ಪದಕ್ಕೆ ಪರ್ಯಾಯ ಪದಗಳಾಗಿ “ತಪ್ಪಾದ ವಿಷಯಗಳನ್ನು ಆಲೋಚನೆ ಮಾಡುವುದಕ್ಕೆ ಕಾರಣವಾಗುವುದು” ಅಥವಾ “ಸುಳ್ಳು ಹೇಳಿರುವುದು” ಅಥವಾ “ತಂತ್ರ ಹೂಡಲಾಗಿದೆ” ಅಥವಾ “ಅವಿವೇಕತನಕ್ಕೆ ಗುರಿಮಾಡು” ಅಥವಾ “ದಾರಿತಪ್ಪಿಸಿದೆ” ಎಂದೂ ಹೇಳಬಹುದು.
- “ಮೋಸಗಾರ” ಎನ್ನುವ ಪದವನ್ನು “ಸುಳ್ಳುಗಾರ” ಅಥವಾ “ದಾರಿ ತಪ್ಪಿಸುವವನು” ಅಥವಾ “ಮೋಸ ಮಾಡುವ ವ್ಯಕ್ತಿ” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ಮೋಸಗೊಳಿಸು” ಅಥವಾ “ವಂಚನೆ” ಎನುವ ಪದಗಳನ್ನು “ಅಸತ್ಯ” ಅಥವಾ “ಸುಳ್ಳಾಡುವುದು” ಅಥವಾ “ತಂತ್ರ ಮಾಡುವುದು” ಅಥವಾ “ಕುಟಿಲತೆ” ಎಂದೂ ಅರ್ಥಬರುವ ಪದಗಳೊಂದಿಗೆ ಅನುವಾದ ಮಾಡಬಹುದು.
- “ಮೋಸಗೊಳಿಸು” ಅಥವಾ “ಮೋಸಹೋಗುವ” ಎನ್ನುವ ಪದಗಳನ್ನು ಸತ್ಯವಾಗದ ವಿಷಯಗಳನ್ನು ನಂಬುವುದಕ್ಕೆ ಇತರ ಜನರನ್ನು ಪ್ರೇರೇಪಿಸುವ ವಿಧಾನದಲ್ಲಿ ಮಾತನಾಡುವ ವ್ಯಕ್ತಿಯನ್ನು “ಸತ್ಯವಲ್ಲದ” ಅಥವಾ “ದಾರಿ ತಪ್ಪಿಸುವ” ಅಥವಾ “ಸುಳ್ಳಾಡುವ” ಎನ್ನುವ ಪದಗಳೊಂದಿಗೆ ಅನುವಾದ ಮಾಡಬಹುದು,

(ಈ ಪದಗಳನ್ನು ಸಹ ನೋಡಿರಿ : ನಿಜ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.01:8
- 1 ತಿಮೊಥೆ.02:14
- 2 ಥೆಸ್ಸ.02:3-4
- ಆದಿ.03:12-13
- ಆದಿ.31:26-28
- ಯಾಜಕ.19:11-12
- ಮತ್ತಾಯ.27:64
- ಮೀಕಾ.06:11-12

ಪದ ಡೇಟಾ:

- Strong’s: H898, H2048, H3577, H3584, H3868, H4123, H4820, H4860, H5230, H5377, H5558, H6121, H6231, H6601, H7411, H7423, H7683, H7686, H7952, H8267, H8496, H8582, H8591, H8649, G538, G539, G1386, G1387, G1388, G1818, G3884, G4105, G4106, G4108, G5422, G5423

ವಂಶ, ವಂಶದವರು

ಪದದ ಅರ್ಥವಿವರಣೆ:

“ವಂಶ” ಎನ್ನುವ ಪದವು ಒಂದೇ ಪೂರ್ವಿಕರಿಂದ ವಿಸ್ತರಿಸಿದ ಕುಟುಂಬ ಸದಸ್ಯರ ಗುಂಪನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರು ಅವರ ವಂಶಸ್ಥರ ಪ್ರಕಾರ ಅಥವಾ ಅವರ ಕುಟುಂಬ ಗುಂಪುಗಳ ಪ್ರಕಾರ ಎಣಿಸಲ್ಪಟ್ಟಿದ್ದರು.
- ವಂಶದವರು ಎಂದು ಅವರಿಗೆ ಚೆನ್ನಾಗಿ ಗೊತ್ತಿರುವ ಪೂರ್ವಿಜರ ಹೆಸರಿಂದ ಬರುತ್ತದೆ.
- ಕುಟುಂಬದಲ್ಲಿ ವ್ಯಕ್ತಿಗತವಾಗಿ ಒಬ್ಬೊಬ್ಬರನ್ನು ಕೆಲವೊಂದುಸಲ ಅವರ ವಂಶದ ಹೆಸರಿನಿಂದಲೇ ಕರೆಯುತ್ತಾರೆ. ಉದಾಹರಣೆಗೆ, ಮೋಶೆ ಮಾವನಾದ ಇತ್ರೋನನನ್ನು ಕೆಲವೊಮ್ಮೆ ತನ್ನ ವಂಶದ ಹೆಸರಾದ ರೆಗೂವೇಲ ಎಂದು ಕರೆಯಲ್ಪಟ್ಟಿದ್ದಾನೆ.
- ವಂಶ ಎನ್ನುವ ಪದವನ್ನು “ಕುಟುಂಬ ಗುಂಪು” ಅಥವಾ “ವಿಸ್ತರಿಸಿದ ಕುಟುಂಬ” ಅಥವಾ “ಬಂಧುಗಳು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕುಟುಂಬ, ಇತ್ರೋ, ಕುಲ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.06:33-35
- ಆದಿ.10:2-5
- ಆದಿ.36:15-16
- ಆದಿ.36:29-30
- ಆದಿ.36:40-43
- ಯೆಹೋ.15:20
- ಅರಣ್ಯ.03:38-39

ಪದ ಡೇಟಾ:

- Strong's: H1, H441, H1004, H4940

ವಂಶಾನುಗತವಾಗು, ಸಂತಾನದವರು, ಸಂತಾನದರಾಗಿದ್ದರು, ಸಂತಾನವು, ವಂಶಸ್ಥ, ವಂಶಸ್ಥರು

ಪದದ ಅರ್ಥವಿವರಣೆ:

“ವಂಶಸ್ಥ” ಎಂದರೆ ಚರಿತ್ರೆಯಲ್ಲಿ ಯಾರಾದರೊಬ್ಬರ ರಕ್ತ ಸಂಬಂಧಿಯಾದ ವ್ಯಕ್ತಿಯನ್ನು ಸೂಚಿಸುತ್ತದೆ.

- ಉದಾಹರಣೆಗೆ, ಅಬ್ರಹಾಮನು ನೋಹನ ವಂಶಸ್ಥ.
- ಒಬ್ಬ ವ್ಯಕ್ತಿಯ ವಂಶಸ್ಥರು ಆತನ ಮಕ್ಕಳು, ಮೊಮ್ಮೊಕ್ಕಳು, ಮರಿ ಮೊಮ್ಮೊಕ್ಕಳು ಆಗಿರುತ್ತಾರೆ. ಯಾಕೋಬಿನ ವಂಶಸ್ಥರು ಇಸ್ರಾಯೇಲ್ ಹನ್ನೆರಡು ಕುಲದವರು.
- “ಇವರ ವಂಶಸ್ಥನು” ಎನ್ನುವ ಮಾತನ್ನು ಇನ್ನೊಂದು ವಿಧಾನದಲ್ಲಿ ಹೇಳಬೇಕೆಂದರೆ ಅಬ್ರಹಾಮನು ನೋಹನ ವಂಶಸ್ಥ ಎಂದು ಹೇಳುವ ಹಾಗೆ “ಅವರಿಂದ ಬಂದ ವಂಶಸ್ಥ” ಎಂದು ಹೇಳಬಹುದು. ಇದನ್ನು “ಕುಟುಂಬದ ಸಾಲಿನಿಂದ” ಬಂದವನು ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಬ್ರಾಹಾಮ, ಪೂರ್ವಿಕರು, ಯಾಕೋಬ, ನೋಹ, ಇಸ್ರಾಯೇಲ್ ಹನ್ನೆರಡು ಕುಲದವರು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.09:4-5
- ಅಪೊ.ಕೃತ್ಯ.13:23-25
- ಧರ್ಮೋ.02:20-22
- ಆದಿ.10:1
- ಆದಿ.28:12-13

ಸತ್ಯವೇದದಿಂದ ಉದಾಹರಣೆಗಳು:

- **02:09** “ಸ್ತ್ರೀಯ _ **ಸಂತಾನವು** _ ನಿನ್ನ ತಲೆಯನ್ನು ಜಜ್ಜುವುದು, ನೀನು ಅವನ ಹಿಮ್ಮಡಿಯನ್ನು ಕಚ್ಚುವಿ.”
- **04:09** ನಾನು ನಿನ್ನ _ **ಸಂತಾನದವರಿಗೆ** _ ಕಾನಾನ್ ದೇಶವನ್ನು ಕೊಡುವೆನು.
- **05:10** “ಆಕಾಶದಲ್ಲಿ ನಕ್ಷತ್ರಗಳಿಗಿಂತ ಹೆಚ್ಚಾಗಿ ನಿನ್ನ _ ಸಂತಾನದವರು _ ಇರುತ್ತಾರೆ.”
- **17:07** ನಿನ್ನ ಕುಟುಂಬದೊಳಗಿಂದ ಬರುವ ಒಬ್ಬರು ಯಾವಾಗಲೂ ಇಸ್ರಾಯೇಲ್ ರಾಜ್ಯವನ್ನು ಆಳುತ್ತಾರೆ, ಮತ್ತು ನಿನ್ನ _ **ಸಂತಾನದವರಲ್ಲಿ** _ ಒಬ್ಬರು ಮೆಸ್ಸೀಯನಾಗಿ ಬರುತ್ತಾನೆ!”
- **18:13** ಯೂದಾ ಅರಸರೆಲ್ಲರೂ ದಾವೀದನ _ ಸಂತಾನದವರಾಗಿರುತ್ತಾರೆ _.
- **21:04** ಮೆಸ್ಸೀಯನು ದಾವೀದನ ಸ್ವಂತ _ **ಸಂತಾನದಲ್ಲಿ** _ ಒಬ್ಬನಾಗಿರುತ್ತಾನೆಂದು ದೇವರು ಅರಸನಾದ ದಾವೀದನಿಗೆ ವಾಗ್ದಾನ ಮಾಡಿರುತ್ತಾನೆ.
- **48:13** ಮೆಸ್ಸೀಯನು ದಾವೀದನ ಸ್ವಂತ _ **ಸಂತಾನದಲ್ಲಿ** ಒಬ್ಬನಾಗಿರುತ್ತಾನೆಂದು ದೇವರು ದಾವೀದನಿಗೆ ವಾಗ್ದಾನ ಮಾಡಿರುತ್ತಾನೆ. ಮೆಸ್ಸೀಯನಾದ ಯೇಸುವು ದಾವೀದನ **‘ಸಂತಾನದಲ್ಲಿ** _ ವಿಶೇಷತೆಯನ್ನು ಹೊಂದಿರುತ್ತಾನೆ.

ಪದ ಡೇಟಾ:

- Strong's: H319, H1004, H1121, H1323, H1755, H2232, H2233, H3205, H3211, H3318, H3409, H4294, H5220, H6849, H7611, H8435, G1074, G1085, G4690

ವಧು, ವಧುವಿನ

ಅರ್ಥವಿವರಣೆ:

ವಧು ಎಂದರೆ ವಿವಾಹ ಸಮಾರಂಭದಲ್ಲಿ ವರನನ್ನು, ಎಂದರೆ ತನ್ನ ಗಂಡನನ್ನು ಮಧುವೆ ಮಾಡಿಕೊಳ್ಳುವ ಒಬ್ಬ ಮಹಿಳೆ.

- "ವಧು" ಎನ್ನುವ ಪದವನ್ನು ಯೇಸುವಿನಲ್ಲಿ ನಂಬಿಕೆಯಿಟ್ಟಿರುವ ವಿಶ್ವಾಸಿಗಳಿಗೆ ಅಂದರೆ ಸಭೆಗೆ ರೂಪಕಲಂಕಾರವಾಗಿ ಉಪಯೋಗಿಸಲಾಗಿದೆ.
- ಯೇಸುವು ಸಭೆಗೆ "ವರ" ಎಂಬುದಾಗಿ ರೂಪಕಲಂಕಾರದಲ್ಲಿ ಕರೆಯಲ್ಪಟ್ಟಿದ್ದಾನೆ. (ನೋಡಿರಿ: ರೂಪಕಲಂಕಾರ)

(ಇವುಗಳನ್ನು ಸಹ ನೋಡಿರಿ : ವರ, ಸಭೆ)

ಸತ್ಯವೇದದ ಅನುಬಂಧ ವಾಕ್ಯಗಳು:

- ವಿಮೋಚನಕಾಂಡ 22:16
- ಯೆಶಾಯ.62:5
- ಯೋವೇಲ.2:16

ಪದದ ಡೇಟಾ:

- Strong's: H3618, G35650

ವಧೆ, ವಧೆಗಳು, ವಧೆ ಮಾಡಲ್ಪಟ್ಟಿದೆ, ವಧೆಯಾಗುತ್ತಿರುವುದು

ಪದದ ಅರ್ಥವಿವರಣೆ:

“ವಧೆ” ಎನ್ನುವ ಪದವು ಹೆಚ್ಚಿನ ಪ್ರಾಣಿಗಳನ್ನು ಅಥವಾ ಜನರನ್ನು ಕೊಲ್ಲುವುದನ್ನು ಸೂಚಿಸುತ್ತದೆ, ಅಥವಾ ಹಿಂಸಾತ್ಮಕವಾದ ವಿಧಾನದಲ್ಲಿ ಕೊಲ್ಲುವುದನ್ನು ಸೂಚಿಸುತ್ತದೆ. ತಿನ್ನುವ ಉದ್ದೇಶಕ್ಕಾಗಿ ಪ್ರಾಣಿಯನ್ನು ಕೊಲ್ಲುವುದನ್ನು ಈ ಪದವು ಸೂಚಿಸುತ್ತದೆ. ಕೊಲ್ಲುವ ಕ್ರಿಯೆಯನ್ನು “ವಧೆ” ಎಂದೂ ಕರೆಯುತ್ತಾರೆ.

- ಅಬ್ರಾಹಾಮನು ಅರಣ್ಯದಲ್ಲಿ ತನ್ನ ಗುಡಾರದ ಹತ್ತಿರ ಮೂವರು ಸಂದರ್ಶಕರನ್ನು ಸೇರಿಸಿಕೊಂಡಾಗ, ಆತನು ತನ್ನ ಅತಿಥಿಗಳಿಗಾಗಿ ಕರುವನ್ನು ಕೊಂದು, ಅದನ್ನು ಅಡುಗೆ ಮಾಡಬೇಕೆಂದು ತನ್ನ ದಾಸರಿಗೆ ಆಜ್ಞಾಪಿಸಿದನು.
- ದೇವರ ವಾಕ್ಯವನ್ನು ಅನುಸರಿಸದವರೆಲ್ಲರನ್ನು ವಧಿಸಬೇಕೆಂದು ದೇವರು ತನ್ನ ದೂತನನ್ನು ಕಳುಹಿಸುವನೆಂದು ಪ್ರವಾದಿಯಾದ ಯೆಹೆಜ್ಕೇಲನು ಪ್ರವಾದಿಸಿದನು.
- ದೇವರಿಗೆ ಅವಿಧೇಯತೆಯನ್ನು ತೋರಿಸುವುದರ ಮೂಲಕ ಇಸ್ರಾಯೇಲ್ಯರು ಸುಮಾರು 30,000 ಮಂದಿ ವಧಿಸಲ್ಪಟ್ಟಿರುವ ದೊಡ್ಡ ಸಂಘಟನೆಯು 1 ಸಮುವೇಲ ಗ್ರಂಥದಲ್ಲಿ ದಾಖಲಿಸಲ್ಪಟ್ಟಿದೆ.
- “ವಧಿಸುವ ಆಯುಧಗಳು” ಎನ್ನುವ ಮಾತನ್ನು “ಕೊಲ್ಲುವುದಕ್ಕೆ ಉಪಯೋಗಿಸುವ ಆಯುಧಗಳು” ಎಂದೂ ಅನುವಾದ ಮಾಡಬಹುದು.
- “ವಧೆ ಎನ್ನುವುದು ದೊಡ್ಡ ಸಂಘಟನೆ” ಎನ್ನುವ ಮಾತನ್ನು “ಹೆಚ್ಚಿನ ಜನರು ಕೊಲ್ಲಲ್ಪಡುವುದು” ಅಥವಾ “ಹೆಚ್ಚಿನ ಸಂಖ್ಯೆಯಲ್ಲಿ ಮರಣಗಳು ಉಂಟಾಗುವುದು” ಅಥವಾ “ಅತೀ ಭಯಾನಕವಾಗಿ ಹೆಚ್ಚಿನ ಜನರು ಕೊಲ್ಲಲ್ಪಟ್ಟಿರುವುದು” ಎಂದೂ ಅನುವಾದ ಮಾಡಬಹುದು.
- “ವಧೆ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಸಾಯಿಸು” ಅಥವಾ “ಕೊಲ್ಲು” ಅಥವಾ “ಕೊಲ್ಲುವುದು” ಎನ್ನುವ ಪದಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ದೂತ, ಹಸು, ಅವಿಧೇಯತೆ, ಯೆಹೆಜ್ಕೇಲ, ದಾಸನು, ಕೊಲ್ಲು)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.21:10-11
- ಇಬ್ರಿ.07:1-3
- ಯೆಶಯಾ.34:1-2
- ಯೆರೆ.25:34-36

ಪದ ಡೇಟಾ:

- Strong's: H2026, H2027, H2028, H2076, H2491, H2873, H2874, H2878, H4046, H4293, H4347, H4660, H5221, H6993, H7524, H7819, H7821, G2871, G4967, G4969, G5408

ವಯಸ್ಸು, ವೃದ್ಧ

ಪದದ ಅರ್ಥ ವಿವರಣೆ:

“ವಯಸ್ಸು” ಎನ್ನುವ ಪದವು ಒಬ್ಬ ವ್ಯಕ್ತಿ ಎಷ್ಟು ವರ್ಷಕಾಲ ಜೀವಿಸಿದ್ದಾನೆ ಎನ್ನುವುದನ್ನು ಸೂಚಿಸುತ್ತದೆ. ಇದನ್ನು ಸಹಜವಾಗಿ ಒಂದು ಕಾಲಾವದಿಯನ್ನು ಸೂಚಿಸುವುದಕ್ಕೆ ಕೂಡ ಉಪಯೋಗಿಸುತ್ತಾರೆ.

- ಒಂದು ವಿಸ್ತಾರವಾದ ಕಾಲಾವಧಿಯನ್ನು ಹೇಳುವುದಕ್ಕೆ ಕೂಡ ಇತರ ಪದಗಳನ್ನು ಉಪಯೋಗಿಸುತ್ತಾರೆ, ಅವು ಯಾವುವೆಂದರೆ, “ಯುಗ” ಮತ್ತು “ಋತು”.
- ದುಷ್ಟತನ, ಪಾಪ ಮತ್ತು ಅವಿಧೇಯತೆಯೆಲ್ಲವುಗಳು ತುಂಬಿದ ಈ ಪ್ರಸ್ತುತ ಭೂಮಿಯನ್ನು “ಈ ಯುಗ” ಎಂದು ಯೇಸು ಸೂಚಿಸಿದ್ದಾರೆ.
- ಹೊಸ ಯುಗ ಮತ್ತು ಹೊಸ ಭೂಮಿಯ ಮೇಲೆ ನೀತಿಯು ಆಳುವ ಭವಿಷ್ಯದ ಯುಗ ಇರುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಕ್ಕೆ ತಕ್ಕಂತೆ, “ವಯಸ್ಸು” ಎನ್ನುವ ಪದವನ್ನು “ಯುಗ” ಅಥವಾ “ಕಳೆದ ವರ್ಷಗಳ ಸಂಖ್ಯೆ” ಅಥವಾ “ಕಾಲಾವಧಿ” ಅಥವಾ “ಸಮಯ” ಎಂಬುದಾಗಿಯೂ ಅನುವಾದ ಮಾಡಬಹುದು.
- “ಅತೀ ವೃದ್ಧ ಕಾಲ” ಎನ್ನುವ ಪದವನ್ನು “ನಡೆದ ಅನೇಕ ವರ್ಷಗಳು” ಅಥವಾ “ಆತನು ವೃದ್ಧ ವಯಸ್ಸಿನಲ್ಲಿರುವಾಗ” ಅಥವಾ “ಆತನು ಬದುಕಿದ ತುಂಬಾ ಹೆಚ್ಚಿನ ಕಾಲ” ಎಂಬುದಾಗಿಯೂ ಅನುವಾದ ಮಾಡಬಹುದು.
- “ಈ ಪ್ರಸ್ತುತ ದುಷ್ಟ ಕಾಲ” ಎನ್ನುವ ಮಾತು “ಜನರೆಲ್ಲರು ಅತೀ ದುಷ್ಟರಾಗಿ ನಡೆದುಕೊಳ್ಳುವ ಈ ಪ್ರಸ್ತುತ ಸಮಯದಲ್ಲಿ ಅಥವಾ ಕಾಲದಲ್ಲಿ” ಎನ್ನುವ ಅರ್ಥವನ್ನು ಕೊಡುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.29:28
- 1 ಪೂರ್ವ.02:07
- ಇಬ್ರಿ.06:05
- ಯೋಬ.05:26

ಪದ ಡೇಟಾ:

- Strong's: G165, G1074

ವರ, ವರರು

ಪದದ ಅರ್ಥವಿವರಣೆ:

ವಿವಾಹ ಬಂಧನದಲ್ಲಿ ವಧುವನ್ನು ವಿವಾಹ ಮಾಡಿಕೊಳ್ಳುವ ಪುರುಷನೇ ವರ.

- ಸತ್ಯವೇದದ ಕಾಲದಲ್ಲಿ ಯೆಹೂದ್ಯರ ಸಂಸ್ಕೃತಿಯಲ್ಲಿ ಈ ಕಾರ್ಯಕ್ರಮವು ವರನು ತನ್ನ ವಧುವನ್ನು ಕರೆದುಕೊಂಡು ಹೋಗುವುದಕ್ಕೆ ಎಲ್ಲರ ಮಧ್ಯೆದಲ್ಲಿದ್ದು ಬರುತ್ತಾನೆ.
- ಸತ್ಯವೇದದಲ್ಲಿ ಯೇಸುವು ರೂಪಕಲಂಕಾರದಲ್ಲಿ "ಮದಲಿಂಗ" ಎಂದು ಕರೆಯಲ್ಪಟ್ಟಿದ್ದಾನೆ, ಆತನು ಒಂದಾನೊಂದು ದಿನ ತನ್ನ "ವಧು"ವಾಗಿರುವ ಸಭೆಗಾಗಿ ಬರುತ್ತಿದ್ದಾನೆ.
- ಯೇಸು ತನ್ನ ಶಿಷ್ಯರನ್ನು ಮದಲಿಂಗನೊಂದಿಗೆ ಇರುವ ಸ್ನೇಹಿತರಿಗೆ ಹೋಲಿಸಿ ಹೇಳಿದ್ದಾನೆ, ಅವರು ತಮ್ಮೊಂದಿಗೆ ವರನು ಅಥವಾ ಮದಲಿಂಗ ಇರುವಾಗ ಸಂತೋಷವಾಗಿರುತ್ತಾರೆಂದು ಹೇಳಿದನು. ಆದರೆ ಆತನು ಹೋದಾಗ ಯಾರು ದುಃಖದಿಂದ ಇರುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ವಧು)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಶಯ.62:5
- ಯೋವೇಲ.02:15-16
- ಯೋಹಾನ.03:29-30
- ಲೂಕ.05:33-35
- ಮಾರ್ಕ.02:18-19
- ಮಾರ್ಕ.02:20-21
- ಮತ್ತಾಯ.09:14-15

ಪದ ಡೇಟಾ:

- Strong's: H2860, G3566

ವರದಿ, ವರದಿ ಮಾಡುವುದು, ವರದಿ ಮಾಡಲಾಗಿದೆ

ಪದದ ಅರ್ಥವಿವರಣೆ:

“ವರದಿ” ಎನ್ನುವ ಪದಕ್ಕೆ ನಡೆದಿರುವ ಯಾವುದಾದರೊಂದರ ಕುರಿತಾಗಿ ಜನರಿಗೆ ಹೇಳುವುದು, ಅನೇಕಬಾರಿ ಸಂಘಟನೆಯ ಕುರಿತಾಗಿ ವಿವರ ಗಳನ್ನು ಕೊಡುವುದು ಎಂದರ್ಥವಾಗಿರುತ್ತದೆ. “ವರದಿ” ಎಂದರೆ ಹೇಳಲ್ಪಟ್ಟಿರುವ ವಿಷಯಗಳು ಎಂದರ್ಥ, ಮತ್ತು ಇವುಗಳನ್ನು ಮಾತುಗಳ ಮೂಲಕ ಹೇಳಬಹುದು ಅಥವಾ ಬರೆಯಬಹುದು.

- “ವರದಿ” ಎನ್ನುವ ಪದವನ್ನು “ಹೇಳು” ಅಥವಾ “ವಿವರಿಸು” ಅಥವಾ “ಇನ್ನೊಂದರ ಕುರಿತಾಗಿ ವಿವರಗಳನ್ನು ತಿಳಿಸುವುದು” ಎಂದೂ ಅನುವಾದ ಮಾಡಬಹುದು.
- “ಯಾರಿಗೂ ಈ ವರದಿಯನ್ನು ಹೇಳಬೇಡ” ಎನ್ನುವ ಮಾತಿಗೆ “ಯಾರೊಂದಿಗೂ ಈ ವಿಷಯದ ಕುರಿತಾಗಿ ಮಾತನಾಡಬೇಡ” ಅಥವಾ “ಇದರ ಕುರಿತಾಗಿ ಯಾರೊಂದಿಗೂ ಹಂಚಿಕೊಳ್ಳಬೇಡ” ಎಂದೂ ಅನುವಾದ ಮಾಡಬಹುದು.
- “ವರದಿ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ವಿವರಣೆ” ಅಥವಾ “ಕಥೆ” ಅಥವಾ “ವಿವರಣಾತ್ಮಕವಾದ ಮಾತುಗಳು” ಎಂದೂ ಸಂದರ್ಭಾನುಸಾರವಾಗಿ ಮಾತುಗಳನ್ನು ಉಪಯೋಗಿಸಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.05:22-23
- ಯೋಹಾನ.12:37-38
- ಲೂಕ.05:15-16
- ಲೂಕ.08:34-35
- ಮತ್ತಾಯ.28:14-15

ಪದ ಡೇಟಾ:

- Strong's: H1681, H1696, H1697, H5046, H7725, H8034, H8052, H8085, H8088, G189, G191, G312, G518, G987, G1225, G1310, G1426, G1834, G2036, G2162, G2163, G3004, G3056, G3140, G3141, G3377

ವರ್ಷ, ವರ್ಷಗಳು

ಪದದ ಅರ್ಥವಿವರಣೆ

ಅಕ್ಷರಾರ್ಥವಾಗಿ ಉಪಯೋಗಿಸಿದರೆ, ಸತ್ಯವೇದದಲ್ಲಿ "ವರ್ಷ" ಎನ್ನುವ ಪದ 354 ದಿನಗಳ ಕಾಲವನ್ನು ಸೂಚಿಸುತ್ತಿದೆ. ಭೂಮಿಯನ್ನು ಸುತ್ತುವದಕ್ಕೆ ಚಂದ್ರನು ತೆಗೆದುಕೊಳ್ಳುವ ಸಮಯದ ಅನುಸಾರವಾಗಿ ಚಂದ್ರಮಾನ ದಿನಾಂಕ ಪಟ್ಟಿ ಇರುತ್ತದೆ.

- ಅಧುನಿಕ ದಿನಗಳ ಸೂರ್ಯನ ದಿನಾಂಕ ಪಟ್ಟಿಯಲ್ಲಿ ಸೂರ್ಯನ ಸುತ್ತಲು ಭೂಮಿ ಸುತ್ತುವ ಕಾಲದ ಅನುಸಾರವಾಗಿ ಒಂದು ವರ್ಷದಲ್ಲಿ 365 ದಿನಗಳು ಇರುತ್ತವೆ ಅದು 12 ತಿಂಗಳುಗಳಾಗಿ ವಿಭಜಿಸಲ್ಪಟ್ಟಿರುತ್ತದೆ.
- ಈ ಎರಡು ದಿನಾಂಕ ಪಟ್ಟಿಗಳಲ್ಲಿ ಒಂದು ವರ್ಷದಲ್ಲಿ 12 ತಿಂಗಳುಗಳಿರುತ್ತವೆ. ಸೂರ್ಯನ ವರ್ಷಕ್ಕಿಂತ ಚಂದ್ರಮಾನ ಪದ್ಧತಿಯಲ್ಲಿ 11 ದಿನಗಳು ಕಡಿಮೆ ಇರುವ ಕಾರಣದಿಂದ ಕೆಲವೊಮ್ಮೆ ಚಾಂದ್ರಮಾನ ದಿನಾಂಕ ಪಟ್ಟಿಯಲ್ಲಿ 13ನೇ ತಿಂಗಳನ್ನು ಸೇರಿಸುತ್ತಾರೆ. ಇದು ಮಾಡುವದರ ಮೂಲಕ ಎರಡು ದಿನಾಂಕ ಪಟ್ಟಿಗಳು ಒಂದೇ ರೀತಿಯಲ್ಲಿ ಇರುತ್ತವೆ.
- ಸತ್ಯವೇದದಲ್ಲಿ, "ವರ್ಷ" ಎನ್ನುವ ಪದವನ್ನು ಒಂದು ವಿಶೇಷ ಕಾರ್ಯಕ್ರಮ ನಡೆಯಲು ತೆಗೆದುಕೊಳ್ಳುವ ಕಾಲವನ್ನು ಸೂಚಿಸಲು ಅಲಂಕಾರ ರೂಪದಲ್ಲಿ ಉಪಯೋಗಿಸಲ್ಪಟ್ಟಿದೆ. "ಯೆಹೋವನ ವರ್ಷ" ಅಥವಾ "ಬರಗಾಲದ ವರ್ಷ" ಅಥವಾ "ಕರ್ತನಿಗೆ ಪ್ರಿಯವಾದ ವರ್ಷ" ಎನ್ನುವವು ಇದಕ್ಕೆ ಉದಾಹರಣೆಗಳಾಗಿರುತ್ತವೆ. ಈ ಸಂದರ್ಭಗಳಲ್ಲಿ, "ವರ್ಷ" ಎನ್ನುವ ಪದವನ್ನು "ಸಮಯ" ಅಥವಾ "ಕಾಲ" ಅಥವಾ "ಸಮಯದ ಅವಧಿ" ಎಂದು ಅನುವಾದ ಮಾಡಬಹುದು.

(ಈ ಪದಗವನ್ನು ಸಹ ನೋಡಿರಿ : ತಿಂಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.23:31-33
- ಅಪೊ.ಕೃತ್ಯ.19:8-10
- ದಾನಿ.08:1-2
- ವಿಮೋ.12:1-2

ಪದ ಡೇಟಾ:

- Strong's: H3117, H7620, H7657, H8140, H8141, G1763, G2094

ವಾಕ್ಯ, ವಾಕ್ಯಗಳು

ಪದದ ಅರ್ಥವಿವರಣೆ:

“ವಾಕ್ಯ” ಎನ್ನುವ ಪದವು ಒಬ್ಬ ವ್ಯಕ್ತಿ ಹೇಳಿದ ಮಾತು ಅಥವಾ ಮಾತುಗಳನ್ನು ಸೂಚಿಸುತ್ತದೆ.

- ಈ ಪದಕ್ಕೆ ಉದಾಹರಣೆ ಹೇಳಬೇಕೆಂದರೆ, “ನೀನು ನನ್ನ ಮಾತುಗಳನ್ನು ನಂಬುವುದಿಲ್ಲ” ಎಂದು ದೂತನು ಜೆಕರ್ಯನಿಗೆ ಹೇಳಿದನು, ಈ ಮಾತಿಗೆ “ನಾನು ಹೇಳಿದ್ದನ್ನು ನೀನು ನಂಬಲಿಲ್ಲ” ಎಂದರ್ಥವಾಗಿರುತ್ತದೆ.
- ಈ ಪದವು ಅತೀ ಹೆಚ್ಚಾಗಿ ಒಂದು ವಾಕ್ಯವನ್ನು ಮಾತ್ರವೇ ಸೂಚಿಸದೇ, ಸಂಪೂರ್ಣವಾದ ಸಂದೇಶವನ್ನು ಸೂಚಿಸುತ್ತದೆ.
- “ವಾಕ್ಯ” ಎನ್ನುವ ಪದವು ಕೆಲವೊಂದುಬಾರಿ ಸಾಮಾನ್ಯವಾಗಿ ಹೇಳುವ ಮಾತುಗಳನ್ನು ಸೂಚಿಸುತ್ತದೆ, “ಮಾತಿನಲ್ಲಿ ಮತ್ತು ಕ್ರಿಯೆಗಳಲ್ಲಿ ಶಕ್ತಿ” ಎನ್ನುವ ಮಾತಿಗೆ “ಮಾತನಾಡುವುದರಲ್ಲಿ ಮತ್ತು ನಡೆದುಕೊಳ್ಳುವುದರಲ್ಲಿ ಶಕ್ತಿಯುತವಾಗಿರುವುದು” ಎಂದರ್ಥವಾಗಿರುತ್ತದೆ.
- “ವಾಕ್ಯ” ಎನ್ನುವ ಪದವು ಅನೇಕಬಾರಿ ಸತ್ಯವೇದದಲ್ಲಿ ದೇವರು ಹೇಳಿದ ಪ್ರತಿಯೊಂದು ಮಾತನ್ನು ಅಥವಾ ಆಜ್ಞೆಯನ್ನು ಸೂಚಿಸುವುದು, ಉದಾಹರಣೆಗೆ, “ದೇವರ ವಾಕ್ಯ” ಅಥವಾ “ಸತ್ಯ ವಾಕ್ಯ”
- ಯೇಸುವನ್ನು “ವಾಕ್ಯ” ಎಂದು ಕರೆಯಲ್ಪಟ್ಟ ಸಂದರ್ಭವೇ ಈ ಪದವನ್ನು ವಿಶೇಷವಾಗಿ ಉಪಯೋಗಿಸಲ್ಪಟ್ಟ ಸಂದರ್ಭವಾಗಿರುತ್ತದೆ. ಇದಕ್ಕೆ ಎರಡು ಅರ್ಥಗಳಿಗಾಗಿ ದೇವರ ವಾಕ್ಯ ಎನ್ನುವ ಪದವನ್ನು ನೋಡಿರಿ

ಅನುವಾದ ಸಲಹೆಗಳು:

- “ವಾಕ್ಯ” ಅಥವಾ “ವಾಕ್ಯಗಳು” ಎನ್ನುವ ಪದಗಳನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಬೋಧಿಸು” ಅಥವಾ “ಸಂದೇಶ” ಅಥವಾ “ಶುಭವಾರ್ತೆ” ಅಥವಾ “ಹೇಳಿಕೆ” ಅಥವಾ “ಹೇಳಿರುವ ವಿಷಯ” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ದೇವರ ವಾಕ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.04:1-2
- ಅಪೊ.ಕೃತ್ಯ.08:4-5
- ಕೊಲೊ.04:2-4
- ಯಾಕೋಬ.01:17-18
- ಯೆರೆ.27:1-4
- ಯೋಹಾನ.01:1-3
- ಯೋಹಾನ.01:14-15
- ಲೂಕ.08:14-15
- ಮತ್ತಾಯ.02:7-8
- ಮತ್ತಾಯ.07:26-27

ಪದ ಡೇಟಾ:

- Strong's: H561, H562, H565, H1697, H1703, H3983, H4405, H4406, H6310, H6600, G518, G1024, G3050, G3054, G3055, G3056, G4086, G4487, G4935, G5023, G5542

ವಾರ, ವಾರಗಳು

ಪದದ ಅರ್ಥವಿವರಣೆ

“ವಾರ” ಎನ್ನುವ ಪದವು ಏಳು ದಿನಗಳ ಕಾಲವನ್ನು ಸೂಚಿಸುತ್ತದೆ.

- ಯಹೂದಿಯರ ಪ್ರಕಾರ ಸಮಯವನ್ನು ಲೆಕ್ಕಿಸಲು, ವಾರದ ಮೊದಲನೆಯ ದಿನ ಶನಿವಾರ ಸೂರ್ಯಾಸ್ತದಿಂದ ಪ್ರಾರಂಭವಾಗಿ ಬರುವ ಶನಿವಾರ ಸೂರ್ಯಾಸ್ತಕ್ಕೆ ಮುಗಿಯುತ್ತದೆ.
- ಸತ್ಯವೇದದಲ್ಲಿ, “ವಾರ” ಎನ್ನುವ ಪದವನ್ನು ಏಳು ಸಮಯದ ಗಳಿಗೆಗಳಿಗೆ, ಅಂದರೆ ಏಳು ವರ್ಷಗಳು ಎನ್ನುವ ಕಾಲವನ್ನು ಸೂಚಿಸಲು ಅಲಂಕಾರ ರೂಪದಲ್ಲಿ ಉಪಯೋಗಿಸಲ್ಪಟ್ಟಿದೆ.
- “ಸುಗ್ಗಿ ಹಬ್ಬ” ಎನ್ನುವ ಹಬ್ಬವು ಪಸ್ಕ ಹಬ್ಬದ ನಂತರ ಏಳು ವಾರಗಳ ಕಾಲ ಆಚರಿಸುತ್ತಾರೆ. ಅದನ್ನು “ಪಂಚಾಶತ್ತಮ ದಿನ” ಎಂದು ಸಹ ಕರೆಯುತ್ತಾರೆ.

(ಈ ಪದವನ್ನು ಸಹ ನೋಡಿರಿ : ಪಂಚಾಶತ್ತಮ ದಿನ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.20:7-8
- ಧರ್ಮೋ.16:9-10
- ಲೇವಿ.23:15-16

ಪದ ಡೇಟಾ:

- Strong's: H7620, G4521

ವಾರಸುದಾರ

ಪದದ ಅರ್ಥವಿವರಣೆ:

ಒಬ್ಬ "ವಾರಸುದಾರ" ಎನ್ನುವ ಪದವು ಸತ್ತುಹೋಗಿರುವ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಿರುವ ಹಣವಾಗಲಿ ಅಥವಾ ಅಸ್ತಿಯನ್ನಾಗಲಿ ಕಾನೂನುಬದ್ಧವಾಗಿ ಪಡೆಯುವ ವ್ಯಕ್ತಿಯನ್ನು ಸೂಚಿಸುತ್ತದೆ.

- ಸತ್ಯವೇದ ಕಾಲಗಳಲ್ಲಿ ಮುಖ್ಯ ವಾರಸುದಾರನು ಮೊಟ್ಟ ಮೊದಲು ಹುಟ್ಟಿದ ಗಂಡು ಮಗನಾಗಿರುತ್ತಾನೆ, ಇವನೇ ತನ್ನ ತಂದೆಯ ಹಣವನ್ನು ಮತ್ತು ಆಸ್ತಿಯನ್ನು ಪಡೆದುಕೊಳ್ಳುತ್ತಾನೆ.
- ಆತ್ಮಿಯ ತಂದೆಯಾದ ದೇವರಿಂದ ಆತ್ಮಿಯ ಪ್ರಯೋಜನಗಳನ್ನು ಪಡೆದುಕೊಳ್ಳುವ ಕ್ರೈಸ್ತನಾದ ಒಬ್ಬ ವ್ಯಕ್ತಿಯನ್ನು ಸೂಚಿಸುವುದಕ್ಕೆ ಸತ್ಯವೇದವೂ "ವಾರಸುದಾರ" ಎನ್ನುವ ಪದವನ್ನು ಅಲಂಕಾರಿಕ ಭಾವನೆಯಲ್ಲಿ ಉಪಯೋಗಿಸುತ್ತದೆ.
- ದೇವರ ಮಕ್ಕಳಾಗಿ ಕ್ರೈಸ್ತರು ಯೇಸು ಕ್ರಿಸ್ತನೊಂದಿಗೆ "ಜೊತೆ ವಾರಸುದಾರು" ಎಂದು ಹೇಳಲ್ಪಟ್ಟಿದ್ದಾರೆ. ಇದನ್ನು "ಸಹ-ವಾರಸುದಾರರು" ಅಥವಾ "ಜೊತೆ ವಾರಸುದಾರರು" ಅಥವಾ "ಎಲ್ಲರು ಸೇರಿ ವಾರಸುದಾರರು" ಎಂದೂ ಅನುವಾದ ಮಾಡಬಹುದು.
- "ವಾರಸುದಾರ" ಎನ್ನುವ ಪದವನ್ನು "ಪ್ರಯೋಜನಗಳನ್ನು ಹೊಂದುವ ವ್ಯಕ್ತಿ" ಎಂದೂ ಅನುವಾದ ಮಾಡಬಹುದು ಅಥವಾ ತಂದೆತಾಯಿಗಳು/ ಇತರ ಬಂಧುಗಳು ಸತ್ತುಹೋದಾಗ ಇತರ ವಸ್ತುಗಳನ್ನು ಮತ್ತು ಆಸ್ತಿಪಾಸ್ತಿಗಳನ್ನು ಪಡೆದುಕೊಳ್ಳುವ ವ್ಯಕ್ತಿಯನ್ನು ಸೂಚಿಸುವುದಕ್ಕೆ ಅನುವಾದ ಭಾಷೆಯಲ್ಲಿ ಉಪಯೋಗಿಸುವ ಯಾವುದೇ ಪದವನ್ನು ಇಟ್ಟು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಚೊಚ್ಚಲು ಮಗ, ಸ್ವಾಸ್ಥ್ಯ)

ಸತ್ಯವೇದದ ಅನುಬಂಧ ವಾಕ್ಯಗಳು:

- ಗಲಾತ್ಯ.04:1-2
- ಗಲಾತ್ಯ 04:07
- ಆದಿ 15:01
- ಆದಿ.21:10-11
- ಲೂಕ.20:14
- ಮಾರ್ಕ.12:07
- ಮತ್ತಾಯ.21:38-39

ಪದ ಡೇಟಾ:

- Strong's: H1121, H3423, G2816, G2818, G2820, G4789

ವಿಕೃತ, ವಿಪರ್ಯಾಸವಾಗಿ, ವಕ್ರಮಾರ್ಗ, ವಕ್ರಮಾರ್ಗಗಳು, ವಿಪರೀತತೆಗಳು, ವಿರೂಪಗೊಳಿಸು, ಅಪ್ರಾಮಾಣಿಕ, ಅಸ್ಪಷ್ಟತೆ

ಪದದ ಅರ್ಥವಿವರಣೆ:

"ವಿಕೃತ" ಎನ್ನುವ ಪದವನ್ನು ನೈತಿಕವಾಗಿ ವಕ್ರವಾದ ಅಥವಾ ತಿರುಚಿದ ವ್ಯಕ್ತಿ ಅಥವಾ ಕ್ರಿಯೆಯನ್ನು ವಿವರಿಸಲು ಬಳಸಲಾಗುತ್ತದೆ. "ವಿಕೃತವಾಗಿ" ಎನ್ನುವ ಪದಕ್ಕೆ "ವಿಕೃತ ರೀತಿಯಲ್ಲಿ" ಎಂದು ಅರ್ಥೈಸುತ್ತದೆ. ಯಾವುದಾದರೊಂದನ್ನು "ವಿಕೃತಗೊಳಿಸುವುದು" ಎಂದರೆ ಸರಿಯಾದದ್ದರಿಂದ ಅಥವಾ ಒಳ್ಳೇಯ ವಿಷಯದಿಂದ ಪಕ್ಕಕ್ಕೆ ತಿರುಗಿಸುವುದು ಅಥವಾ ಅದನ್ನು ವಕ್ರೀಕರಣ ಮಾಡುವುದು ಎಂದರ್ಥ.

- ವಿಕೃತಿಯಾದ ಒಬ್ಬನು ಅಥವಾ ಯಾವುದೇ ಒಂದು ಸರಿಯಾದ ವಿಷಯದಿಂದ ಮತ್ತು ಒಳ್ಳೇಯ ಕಾರ್ಯದಿಂದ ವಿಂಗಡನೆ ಹೊಂದುವುದು ಎಂದರ್ಥ.
- ಸತ್ಯವೇದದಲ್ಲಿ ಇಸ್ರಾಯೇಲ್ಯರು ದೇವರಿಗೆ ಅವಿಧೇಯತೆಯನ್ನು ತೋರಿಸಿದಾಗ ವಿಕೃತಗಳಾಗಿ ನಡೆದುಕೊಂಡರು. ಅವರು ಇದನ್ನು ಸುಳ್ಳು ದೇವರುಗಳನ್ನು ಆರಾಧಿಸುವುದರ ಮೂಲಕ ಮಾಡಿ ತೋರಿಸಿದ್ದಾರೆ.
- ದೇವರ ಪ್ರಾಮಾಣಿಕತೆಗಳಿಗೆ ಅಥವಾ ವರ್ತನೆಗೆ ವಿರುದ್ಧವಾಗಿರುವ ಯಾವುದೇ ಕ್ರಿಯೆಯನ್ನು ವಿಕೃತವಾಗಿ ಪರಿಗಣಿಸಲಾಗುತ್ತದೆ.
- "ವಿಕೃತ" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ನೈತಿಕವಾಗಿ ವಕ್ರೀಕರಿಸಲ್ಪಡುವುದು" ಅಥವಾ "ಅನೈತಿಕತೆ" ಅಥವಾ "ದೇವರ ನೇರವಾದ ಮಾರ್ಗದಿಂದ ಪಕ್ಕಕ್ಕೆ ಹೋಗುವುದು" ಎಂದು ಸಂದರ್ಭಾನುಗುಣವಾಗಿ ಉಪಯೋಗಿಸಿಕೊಳ್ಳಬಹುದು.

"ವಿಕೃತಿಯ ಪ್ರಸಂಗ" ಎನ್ನುವ ಮಾತನ್ನು "ದುಷ್ಟತ್ವ ವಿಧಾನದಲ್ಲಿ ಮಾತನಾಡುವುದು" ಅಥವಾ "ಮೋಸಗೊಳಿಸುವ ಮಾತು" ಅಥವಾ "ವಿಕೃತವಾದ ವಿಧಾನದಲ್ಲಿ ಮಾತನಾಡುವುದು" ಎಂದೂ ಅನುವಾದ ಮಾಡಬಹುದು. "ವಿಕೃತ ಜನರು" ಎನ್ನುವ ಮಾತನ್ನು "ಅನೈತಿಕ ಜನರು" ಅಥವಾ "ನೈತಿಕವಾಗಿ ತಪ್ಪಿಹೋದ ಜನರು" ಅಥವಾ "ದೇವರಿಗೆ ಯಾವಾಗಲೂ ಅವಿಧೇಯತೆಯನ್ನು ತೋರಿಸುವ ಜನರು" ಎಂದೂ ವಿವರಿಸಬಹುದು.

- "ವಿಪರ್ಯಾಸವಾಗಿ ನಡೆದುಕೊಳ್ಳುವುದು" ಎನ್ನುವ ಮಾತನ್ನು "ದುಷ್ಟ ವಿಧಾನದಲ್ಲಿ ನಡೆದುಕೊಳ್ಳುವುದು" ಅಥವಾ "ದೇವರ ಆಜ್ಞೆಗಳಿಗೆ ವಿರುದ್ಧವಾಗಿ ಕಾರ್ಯಗಳನ್ನು ಮಾಡುವುದು" ಅಥವಾ "ದೇವರ ಬೋಧನೆಗಳನ್ನು ತಿರಸ್ಕರಿಸುವ ವಿಧಾನದಲ್ಲಿ ಜೀವಿಸುವುದು" ಎಂದೂ ಅನುವಾದ ಮಾಡಬಹುದು.
- "ವಕ್ರಮಾರ್ಗ" ಎನ್ನುವ ಪದವನ್ನು "ಭ್ರಷ್ಟದಲ್ಲಿರಲು ಕಾರಣವಾಗು" ಅಥವಾ "ಯಾವುದಾದರೊಂದನ್ನು ದುಷ್ಟತ್ವದೊಳಗೆ ನಡೆಸುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಭ್ರಷ್ಟ, ಮೋಸಗೊಳಿಸು, ಅವಿಧೇಯತೆ, ದುಷ್ಟ, ತಿರುಗಿಕೋ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.08:47
- 1 ಸಮು.20:30
- ಯೋಬ.33:27-28
- ಲೂಕ.23:02
- ಕೀರ್ತನೆ.101:4-6

ಪದ ಡೇಟಾ:

- Strong's: H1942, H2015, H3868, H4297, H5186, H5557, H5558, H5753, H5766, H5773, H5791, H6140, H6141, H8138, H8397, H8419, G1294

ವಿಘ್ನ, ವಿಘ್ನಗಳು, ಎಡವು ಕಲ್ಲು

ಪದದ ಅರ್ಥವಿವರಣೆ:

“ವಿಘ್ನ” ಅಥವಾ “ಎಡವು ಕಲ್ಲು” ಎನ್ನುವ ಪದವು ಒಬ್ಬ ವ್ಯಕ್ತಿಯನ್ನು ಬೀಳಿಸುವ ಮತ್ತು ಮುಗ್ಗರಿಸಿ ಬೀಳಿಸುವ ಒಂದು ಭೌತಿಕ ವಸ್ತುವನ್ನು ಸೂಚಿಸುತ್ತದೆ.

- ಅಲಂಕಾರಿಕ ಎಡವು ಕಲ್ಲು ಎನ್ನುವುದು ನೈತಿಕತೆಯಲ್ಲಿ ಅಥವಾ ಆತ್ಮೀಯ ಭಾವನೆಯಲ್ಲಿ ಬೀಳಿಸುವುದಕ್ಕೆ ಒಬ್ಬ ವ್ಯಕ್ತಿಗೆ ಕಾರಣವಾಗುವ ಯಾವುದೇ ವಿಷಯವನ್ನು ಸೂಚಿಸುತ್ತದೆ.
- ಅಲಂಕಾರಿಕವಾಗಿಯೂ, “ವಿಘ್ನ” ಅಥವಾ “ಎಡವು ಕಲ್ಲು” ಎನ್ನುವುದು ಯೇಸುವಿನಲ್ಲಿ ವಿಶ್ವಾಸವನ್ನಿಡದೆ ಯಾರಾದರೊಬ್ಬರನ್ನು ತಪ್ಪಿಸುವ ಯಾವುದೇ ಒಂದು ವಿಷಯವನ್ನು ಅಥವಾ ಯಾರಾದರೊಬ್ಬರನ್ನು ಆತ್ಮೀಯಕವಾಗಿ ಬೆಳೆಯದಂತೆ ಮಾಡುವುದು ಎಂದರ್ಥವಾಗಿರುತ್ತದೆ.
- ಅನೇಕಬಾರಿ ಒಬ್ಬರಿಗೆ ಅಥವಾ ಅನೇಕರಿಗೆ ವಿಘ್ನವನ್ನು ಮಾಡುವ ರೀತಿಯಲ್ಲಿಯೇ ಇದು ಪಾಪವಾಗಿರುತ್ತದೆ.
- ಕೆಲವೊಂದುಬಾರಿ ದೇವರು ತನಗೆ ವಿರುದ್ಧವಾಗಿ ತಿರಸ್ಕಾರ ಮಾಡುವ ಜನರ ಮಾರ್ಗಗಳಲ್ಲಿ ವಿಘ್ನವನ್ನುಂಟು ಮಾಡುತ್ತಾರೆ.

ಅನುವಾದ ಸಲಹೆಗಳು:

- ಎಡವಿ ಬೀಳಿಸುವಂತೆ ಮಾಡುವ ಒಂದು ವಸ್ತುವಿಗೆ ಅನುವಾದ ಭಾಷೆಯಲ್ಲಿ ಪದ ಇದ್ದಾಗ, ಈ ಪದವನ್ನು ಅನುವಾದ ಮಾಡುವುದಕ್ಕೆ ಉಪಯೋಗಿಸಬಹುದು.
- ಈ ಪದವನ್ನು ಅಥವಾ ಮಾತನ್ನು “ಎಡವಿ ಬೀಳುವಂತೆ ಮಾಡುವ ಕಲ್ಲು” ಅಥವಾ “ಯಾರಾದರೊಬ್ಬರು ನಂಬದಂತೆ ಮಾಡದಿರುವುದು” ಅಥವಾ “ಸಂದೇಹವನ್ನುಂಟು ಮಾಡುವ ಅಡೆತಡೆ” ಅಥವಾ “ನಂಬಿಕೆಗೆ ಅಡ್ಡಿ” ಅಥವಾ “ಯಾರಾದರೊಬ್ಬರು ಪಾಪ ಮಾಡುವಂತೆ ಮಾಡುವ ವಿಷಯ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಎಡಬಿ ಬೀಳುವುದು, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.01:22-23
- ಗಲಾತ್ಯ.05:11-12
- ಮತ್ತಾಯ.05:29-30
- ಮತ್ತಾಯ.16:21-23
- ರೋಮಾ.09:32-33

ಪದ ಡೇಟಾ:

- Strong's: H4383, G3037, G4349, G4625

ವಿಚಾರಣೆ, ವಿಚಾರಣೆಗಳು

ಪದದ ಅರ್ಥವಿವರಣೆ:

“ವಿಚಾರಣೆ” ಎನ್ನುವ ಪದವು ಯಾವುದಾದರೊಂದು ಅಥವಾ ಯಾರಾದರೊಬ್ಬರು “ವಿಚಾರಿಸಲ್ಪಡುವ” ಅಥವಾ “ಪರೀಕ್ಷಿಸಲ್ಪಡುವ” ಸ್ಥಿತಿಯನ್ನು ಸೂಚಿಸುತ್ತದೆ.

- ವಿಚಾರಣೆಯು ನ್ಯಾಯಾಂಗ ಕೇಳಿಕೆಯಾಗಿರಬಹುದು, ಇದರಲ್ಲಿ ಒಬ್ಬ ವ್ಯಕ್ತಿ ನಿರ್ದೋಷಿಯೋ ಅಥವಾ ತಪ್ಪು ಮಾಡಿದ ಅಪರಾಧಿಯೆಂದು ನಿರೂಪಣೆ ಮಾಡುವುದಕ್ಕೆ ಆಧಾರವು ಕೊಡಲ್ಪಟ್ಟಿರುತ್ತದೆ.
- “ವಿಚಾರಣೆ” ಎನ್ನುವ ಪದವು ದೇವರು ಜನರ ನಂಬಿಕೆಯನ್ನು ಪರೀಕ್ಷಿಸುವುದರ ಮೂಲಕ ಹಾದು ಹೋಗುವ ಕಠಿಣ ಪರಿಸ್ಥಿತಿಗಳನ್ನು ಸೂಚಿಸುತ್ತದೆ. ಈ ಪದಕ್ಕೆ ಇನ್ನೊಂದು ಪರ್ಯಾಯ ಪದವು “ಪರೀಕ್ಷಿಸುವುದು” ಅಥವಾ “ಶೋಧಿಸುವುದು” ಆಗಿರುತ್ತದೆ, ಇದು ಒಂದು ರೀತಿಯ ವಿಚಾರಣೆಯ ಪದ್ಧತಿಯಾಗಿರುತ್ತದೆ.
- ಸತ್ಯವೇದದಲ್ಲಿ ಅನೇಕಮಂದಿ ದೇವರ ನಂಬಿಕೆಯಲ್ಲಿರುತ್ತಾರೋ ಇಲ್ಲವೋ ಮತ್ತು ದೇವರಿಗೆ ವಿಧೇಯರಾಗಿರುತ್ತಾರೋ ಇಲ್ಲವೋ ಎಂದು ನೋಡುವುದಕ್ಕೆ ಪರೀಕ್ಷಸಲ್ಪಟ್ಟಿರುತ್ತಾರೆ. ಅವರು ಅನೇಕ ವಿಚಾರಣೆಗಳ ಮೂಲಕ ಹಾದು ಹೋಗಿರುತ್ತಾರೆ, ಇವುಗಳಲ್ಲಿ ಹೊಡೆಸಿಕೊಳ್ಳುವುದು, ಸೆರೆಗೊಯ್ಯುವುದು, ಅಥವಾ ಅವರ ನಂಬಿಕೆಗಾಗಿ ಸಾಯಿಸಲ್ಪಡುವುದು ಎನ್ನುವ ವಿಷಯಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಶೋಧಿಸು, ಪರೀಕ್ಷಿಸು, ನಿರ್ದೋಷಿ, ಅಪರಾಧ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.04:34
- ಯೆಹೆ.21:12-13
- ಪ್ರಲಾಪ.03:58-61
- ಜ್ಞಾನೋ.25:7-8

ಪದ ಡೇಟಾ:

- Strong's: H974, H4531, H4941, H7378, G178, G1382, G1383, G2919, G3984, G3986, G4451

ವಿಚಾರಣೆ, ವಿಚಾರಿಸು, ವಿಚಾರಿಸಲಾಗಿದೆ, ವಿಚಾರಣೆಗಳು

ಸತ್ಯಾಂಶಗಳು:

“ವಿಚಾರಣೆ” ಎನ್ನುವಪದಕ್ಕೆ ಮಾಹಿತಿಗಾಗಿ ಯಾರಾದರೊಬ್ಬರನ್ನು ಕೇಳು ಎಂದರ್ಥ. “ಯಾವುದಾದರೊಂದರ ಕುರಿತಾಗಿ ವಿಚಾರಿಸು” ಎನ್ನುವ ಮಾತು ಅನೇಕಸಲ ಸಹಾಯಕ್ಕಾಗಿ ಅಥವಾ ಜ್ಞಾನಕ್ಕಾಗಿ ದೇವರನ್ನು ಬೇಡಿಕೊಳ್ಳುವುದನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ದೇವರ ಕುರಿತಾಗಿ ವಿಚಾರಿಸಿದ ಅನೇಕರ ಸಂಘಟನೆಗಳನ್ನು ದಾಖಲಿಸಲಾಗಿರುತ್ತದೆ.
- ಅಧಿಕಾರಿಕ ಬರವಣಿಗೆಯ ದಾಖಲಾತಿಗಳ ಮೂಲಕ ಪರಿಶೋಧನೆ ಮಾಡುವ ಅಧಿಕಾರಿಕ ಪ್ರಭುತ್ವದಿಂದ ಅಥವಾ ಅರಸನಿಂದ ಈ ಪದವು ಉಪಯೋಗಿಸಲ್ಪಡುತ್ತದೆ.
- ಸಂದರ್ಭಾನುಸಾರವಾಗಿ “ವಿಚಾರಣೆ” ಎನ್ನುವ ಪದವನ್ನು “ಕೇಳು” ಅಥವಾ “ಮಾಹಿತಿಗಾಗಿ ಕೇಳು” ಎಂದೂ ಅನುವಾದ ಮಾಡಬಹುದು.
- “ಯೆಹೋವನ ವಿಚಾರಣೆ” ಎನ್ನುವ ಮಾತನ್ನು “ಮಾರ್ಗದರ್ಶನಕ್ಕಾಗಿ ಯೆಹೋವನನ್ನು ಕೇಳು” ಅಥವಾ “ಏನು ಮಾಡಬೇಕೆಂದು ಯೆಹೋವನನ್ನು ಕೇಳು” ಎಂದೂ ಅನುವಾದ ಮಾಡಬಹುದು.
- ಒಂದು ವಿಷಯದ “ನಂತರ ವಿಚಾರಿಸಿ” ಎನ್ನುವ ಮಾತನ್ನು “ಅದರ ಕುರಿತಾಗಿ ಪ್ರಶ್ನೆಗಳನ್ನು ಕೇಳು” ಅಥವಾ “ಅದರ ಕುರಿತಾಗಿ ಮಾಹಿತಿಯನ್ನು ಪಡೆಯಲು ಕೇಳು” ಎಂದೂ ಅನುವಾದ ಮಾಡಬಹುದು.
- “ನಿನ್ನಿಂದ ನಾನು ವಿಚಾರಿಸಲ್ಪಡುವುದಿಲ್ಲ” ಎಂದು ಯೆಹೋವನು ಹೇಳಿದಾಗ, ಇದನ್ನು “ಮಾಹಿತಿಗಾಗಿ ನನ್ನನ್ನು ಕೇಳುವುದಕ್ಕೆ ನಿನಗೆ ಅನುಮತಿ ನೀಡುವುದಿಲ್ಲ” ಅಥವಾ “ನನ್ನಿಂದ ಸಹಾಯ ಪಡೆದುಕೊಳ್ಳುವುದಕ್ಕೆ ನಿನಗೆ ಅನುಮತಿ ಕೊಡುವುದಿಲ್ಲ” ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.19:17-19
- ಯೆಹೆ.20:1
- ಯೆಹೆ.20:30-32
- ಎಜ್ರಾ.07:14-16
- ಯೋಬ.10:4-7

ಪದ ಡೇಟಾ:

- Strong's: H1240, H1245, H1875, G1830

ವಿಚ್ಛೇದನ

ಪದದ ಅರ್ಥವಿವರಣೆ:

ವಿಚ್ಛೇದನ ಎನ್ನುವುದು ವಿವಾಹವನ್ನು ಕೊನೆಗೊಳಿಸುವುದಕ್ಕೆ ಕಾನೂನುಕ್ರಮವಾದ ಕ್ರಿಯೆಯಾಗಿರುತ್ತದೆ. "ವಿಚ್ಛೇದನ" ಎನ್ನುವ ಪದಕ್ಕೆ ಮದುವೆಯನ್ನು ಕೊನೆಗೊಳಿಸಿಕೊಳ್ಳುವುದಕ್ಕೆ ಗಂಡ ಹೆಂಡತಿಯರಿಬ್ಬರು ಸಾಂಪ್ರದಾಯಿಕವಾಗಿ ಮತ್ತು ಕಾನೂನುಕ್ರಮವಾಗಿ ಬೇರ್ಪಡುವುದು ಎಂದರ್ಥ.

- ವಿಚ್ಛೇದನ ಎನ್ನುವ ಪದಕ್ಕೆ "ಹೊರ ಕಳುಹಿಸು" ಅಥವಾ "ಸಾಂಪ್ರದಾಯಿಕವಾಗಿ ಬೇರ್ಪಾಟಾಗುವುದು" ಎಂದು ಅಕ್ಷರಾರ್ಥ. ವಿಚ್ಛೇದನ ಎನ್ನುವ ಪದವನ್ನು ಸೂಚಿಸಲು ಇತರ ಭಾಷೆಗಳು ಬಹುಶಃ ಸಮಾನವಾದ ಪದಗಳನ್ನು ಬಳಸುತ್ತಿರಬಹುದು.
- "ವಿಚ್ಛೇದನ ಪತ್ರ" ಎನ್ನುವ ಪದವನ್ನು "ಮದುವೆ ಕೊನೆಯಾಗಿಸಲ್ಪಟ್ಟಿದೆ ಎಂದು ವ್ಯಾಖ್ಯಾನಿಸುವ ಪತ್ರ" ಎಂದೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.08:8-11
- ಯಾಜಕ.21:7-9
- ಲೂಕ.16:18
- ಮಾರ್ಕ.10:1-4
- ಮತ್ತಾಯ.05:31-32
- ಮತ್ತಾಯ.19:3-4

ಪದ ಡೇಟಾ:

- Strong's: H1644, H3748, H5493, H7971, G630, G647, G863

ವಿಧೇಯತೆ, ಇಟ್ಟುಕೋ

ಪದದ ಅರ್ಥವಿವರಣೆ:

“ವಿಧೇಯನಾಗು” ಎನ್ನುವ ಪದಕ್ಕೆ ಆದೇಶಿಸಲ್ಪಟ್ಟಿದ್ದನ್ನು ಅಥವಾ ಬೇಕಾಗಿರುವುದನ್ನು ಮಾಡುವುದು ಎಂದರ್ಥ. “ವಿಧೇಯನು” ಎನ್ನುವ ಪದವು ಒಳಗಾಗುವ ಒಬ್ಬ ವ್ಯಕ್ತಿಯನ್ನು ವಿವರಿಸುತ್ತದೆ. “ವಿಧೇಯತೆ” ಎನ್ನುವುದು ವಿಧೇಯನಾಗಿರುವ ಒಬ್ಬ ವ್ಯಕ್ತಿಯ ಗುಣಲಕ್ಷಣವಾಗಿರುತ್ತದೆ, ಕೆಲವೊಂದು ಬಾರಿ “ಕದಿಯಬಾರದು” ಎನ್ನುವ ಮಾತಿನಲ್ಲಿರುವಂತೆ ಯಾವುದಾದರೊಂದನ್ನು ಮಾಡಬಾರದು ಎನ್ನುವುದರ ಕುರಿತಾದ ಆಜ್ಞೆಯೂ ಆಗಿರುತ್ತದೆ.

- ಸಹಜವಾಗಿ “ಒಳಗಾಗು” ಎನ್ನುವ ಪದವನ್ನು ಅಧಿಕಾರದಲ್ಲಿರುವ ಒಬ್ಬ ವ್ಯಕ್ತಿಯ ಕಾನೂನುಗಳಿಗೆ ಅಥವಾ ಆಜ್ಞೆಗಳಿಗೆ ವಿಧೇಯನಾಗುವ ಸಂದರ್ಭದಲ್ಲಿ ಉಪಯೋಗಿಸಲಾಗಿರುತ್ತದೆ.
- ಉದಾಹರಣೆಗೆ, ಒಂದು ಸಂಸ್ಥೆಯ, ಒಂದು ರಾಜ್ಯದ ಅಥವಾ ಒಂದು ದೇಶದ ನಾಯಕರಿಂದ ತಯಾರಿಸಲ್ಪಟ್ಟ ನಿಯಮಗಳಿಗೆ ಜನರು ಒಳಗಾಗುತ್ತಾರೆ.
- ಮಕ್ಕಳು ತಮ್ಮ ತಂದೆತಾಯಿಗಳಿಗೆ ಒಳಗಾಗುತ್ತಾರೆ, ಗುಲಾಮರು ತಮ್ಮ ಯಜಮಾನಿಗಳಿಗೆ ಒಳಗಾಗುತ್ತಾರೆ, ಜನರು ದೇವರಿಗೆ ಒಳಗಾಗುತ್ತಾರೆ, ಮತ್ತು ಪೌರರು ತಮ್ಮ ದೇಶದ ಕಾನೂನುಗಳಿಗೆ ಒಳಗಾಗುತ್ತಾರೆ.
- ಅಧಿಕಾರದಲ್ಲಿದ್ದ ಒಬ್ಬ ವ್ಯಕ್ತಿ ಏನಾದರೊಂದನ್ನು ಮಾಡಬಾರದೆಂದು ಜನರಿಗೆ ಆಜ್ಞಾಪಿಸಿದಾಗ, ಅದನ್ನು ಮಾಡದಂತೆ ಅವರು ಆಜ್ಞೆಗೆ ಒಳಗಾಗುತ್ತಾರೆ.
- ಒಳಗಾಗು ಎನ್ನುವ ಪದವನ್ನು ಅನುವಾದ ಮಾಡುವ ವಿಧಾನಗಳಲ್ಲಿ “ಆಜ್ಞಾಪಿಸಲ್ಪಟ್ಟದ್ದನ್ನು ಮಾಡು” ಅಥವಾ “ಆಜ್ಞೆಗಳನ್ನು ಅನುಸರಿಸು” ಅಥವಾ “ದೇವರು ಏನು ಮಾಡಬೇಕೆಂದು ಹೇಳಿದ್ದಾರೋ ಅದನ್ನು ಮಾಡು” ಎಂದು ಅರ್ಥ ಅಬ್ರುವ ಮಾತುಗಳು ಅಥವಾ ಪದಗಳು ಒಳಗೊಂಡಿರುತ್ತವೆ.
- “ವಿಧೇಯನು” ಎನ್ನುವ ಪದವನ್ನು “ಆದೇಶಿಸಲ್ಪಟ್ಟದ್ದನ್ನು ಮಾಡುವುದು” ಅಥವಾ “ನಿಯಮಗಳನ್ನು ಅನುಸರಿಸುವುದು” ಅಥವಾ “ದೇವರು ಆಜ್ಞಾಪಿಸಿದ್ದನ್ನು ಮಾಡುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪೌರ, ಆಜ್ಞೆ, ಅವಿಧೇಯತೆ, ರಾಜ್ಯ, ಕಾನೂನು)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.05:32
- ಅಪೊ.ಕೃತ್ಯ.06:7
- ಆದಿ.28:6-7
- ಯಾಕೋಬ.01:25
- ಯಾಕೋಬ.02:10-11
- ಲೂಕ.06:47
- ಮತ್ತಾಯ.07:26
- ಮತ್ತಾಯ.19:20-22
- ಮತ್ತಾಯ.28:20

ಸತ್ಯವೇದದಿಂದ ಉದಾಹರಣೆಗಳು:

- **03:04** ನೋಹನು ದೇವರಿಗೆ _ ವಿಧೇಯನಾದನು _ . ಈತನು ಮತ್ತು ತನ್ನ ಮೂವರು ಗಂಡು ಮಕ್ಕಳು ದೇವರು ಹೇಳಿದ ಪ್ರಕಾರ ನಾವೆಯನ್ನು ನಿರ್ಮಿಸಿದನು.
- **05:06** ಮತ್ತೊಮ್ಮೆ ಅಬ್ರಾಹಾಮನು ದೇವರಿಗೆ _ ವಿಧೇಯನಾದನು _ ಮತ್ತು ತನ್ನ ಮಗನನ್ನು ಸರ್ವಾಂಗ ಹೋಮ ಮಾಡುವುದಕ್ಕೆ (ಬಲಿ ಕೊಡುವುದಕ್ಕೆ) ಸಿದ್ಧ ಮಾಡಿದನು.
- **05:10** “ನೀನು (ಅಬ್ರಾಹಾಮನು) ನನಗೆ _ ವಿಧೇಯನಾಗಿದ್ದರಿಂದ _, ಲೋಕದಲ್ಲಿರುವ ಎಲ್ಲಾ ಕುಟುಂಬಗಳು ನಿನ್ನ ಕುಟುಂಬದ ಮೂಲಕ ಆಶೀರ್ವಾದ ಹೊಂದುತ್ತವೆ.
- **05:10** ಆದರೆ ಐಗುಪ್ತರು ದೇವರಲ್ಲಿ ನಂಬಿಕೆಯನ್ನಿಡಲಿಲ್ಲ ಅಥವಾ ಆತನ ಆಜ್ಞೆಗಳಿಗೆ _ ಒಳಗಾಗಲಿಲ್ಲ _.
- **13:07** ಈ ಎಲ್ಲಾ ಆಜ್ಞೆಗಳಿಗೆ ಜನರು _ ವಿಧೇಯರಾಗುವುದಾದರೆ _ , ದೇವರು ಅವರನ್ನು ಸಂರಕ್ಷಿಸಿ, ಆಶೀರ್ವಾದ ಮಾಡುವನೆಂದು ದೇವರು ವಾಗ್ದಾನ ಮಾಡಿದ್ದಾರೆ.

ಪದ ಡೇಟಾ:

- Strong's: H1697, H2388, H3349, H4928, H6213, H7181, H8085, H8086, H8104, G191, G3980, G3982, , G5083, G5084, G5218, G5219, G5255, G5292, G5293, G5442

ವಿದ್ವಾಂಸರು, ಜೋಯಿಸರು

ಪದದ ಅರ್ಥವಿವರಣೆ:

ಯೇಸುವಿನ ಜನನ ಕ್ರಮದಲ್ಲಿ ದಾಖಲಿಸಿದ ಮತ್ತಾಯನ ಸುವಾರ್ತೆಯಲ್ಲಿ "ಕಲಿತವರು" ಅಥವಾ "ವಿದ್ಯಾವಂತರು" ಆಗಿರುವ ಮನುಷ್ಯರಾಗಿರುವ "ಜೋಯಿಸರು" ಯೇಸುವು ಬೆತ್ಲೆಹೇಮಿನಲ್ಲಿ ಜನಿಸಿದನಂತರ ಆತನಿಗೆ ಬಹುಮಾನಗಳನ್ನು ತೆಗೆದುಕೊಂಡುಬಂದಿದ್ದರು. ನಕ್ಷತ್ರಗಳನ್ನು ಅಧ್ಯಯನ ಮಾಡಿದ ಅನೇಕಮಂದಿ "ಜೋಯಿಸರು" ಇದ್ದಿರುತ್ತಾರೆ.

- ಈ ಮನುಷ್ಯರು ಎಷ್ಟೋ ದೂರದಲ್ಲಿರುವ ಬೇರೊಂದು ದೇಶದಿಂದ ಇಸ್ರಾಯೇಲ್ ಪೂರ್ವ ದಿಕ್ಕಿಗೆ ಪ್ರಯಾಣ ಮಾಡಿಕೊಂಡು ಬಂದಿದ್ದರು. ಅವರು ಯಾರೆಂದು ಅಥವಾ ಅವರು ಎಲ್ಲಿಂದ ಬಂದವರೆಂದು ಖಚಿತವಾಗಿ ಗೊತ್ತಿಲ್ಲ. ಆದರೆ ಅವರು ಖಂಡಿತವಾಗಿ ನಕ್ಷತ್ರಗಳನ್ನು ಅಧ್ಯಯನ ಮಾಡಿದ ಪಂಡಿತರಾಗಿರುತ್ತಾರೆ.
- ಅವರು ಬಹುಶಃ ದಾನಿಯೇಲನ ಕಾಲದಲ್ಲಿ ಬಾಬೆಲೋನಿಯ ಅರಸರಿಗೆ ಸೇವೆ ಮಾಡಿದ ಜ್ಞಾನಿಗಳ ಸಂತಾನದವರಾಗಿರಬಹುದು ಮತ್ತು ಅವರು ಅನೇಕ ವಿಷಯಗಳಲ್ಲಿ ತರಬೇತಿಯನ್ನು ಪಡೆದಿರಬಹುದು, ಅದರಲ್ಲಿ ನಕ್ಷತ್ರಗಳ ಅಧ್ಯಯನವು ಮತ್ತು ಕನಸುಗಳಿಗೆ ಅರ್ಥವಿವರಣೆ ಹೇಳುವುದೂ ಇರಬಹುದು.
- ಸಾಂಪ್ರದಾಯಿಕವಾಗಿ ಮೂವರು ಜೋಯಿಸರು ಅಥವಾ ವಿದ್ಯಾವಂತರು ಇದ್ದಾರೆಂದು ಹೇಳಲ್ಪಟ್ಟಿದೆ, ಯಾಕಂದರೆ ಅವರು ಮೂರು ಬಹುಮಾನಗಳನ್ನು ಮಾತ್ರವೇ ಯೇಸುವಿಗೆ ತೆಗೆದುಕೊಂಡು ಬಂದಿದ್ದರು. ಏನೇಯಾಗಲಿ, ಸತ್ಯವೇದದಲ್ಲಿ ಮಾತ್ರ ಅವರು ಎಷ್ಟು ಮಂದಿ ಬಂದಿದ್ದಾರೆಂದು ಸಂಖ್ಯೆಗೆ ಅಧಾರಗಳಿಲ್ಲ.

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನಿಯ, ಬೆತ್ಲೆಹೇಮ್, ದಾನಿಯೇಲ)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.02:27-28
- ದಾನಿ.05:7
- ಮತ್ತಾಯ.02:1-3
- ಮತ್ತಾಯ.02:7-8
- ಮತ್ತಾಯ.02:16

ಪದ ಡೇಟಾ:

- Strong's: H1505, G3097

ವಿಧ, ವಿಧಗಳು, ದಯೆ, ದಯಾಳುತನ

ಪದದ ಅರ್ಥವಿವರಣೆ:

“ವಿಧ” ಮತ್ತು “ವಿಧಗಳು” ಎನ್ನುವ ಪದಗಳು ಗುಣಲಕ್ಷಣಗಳನ್ನು ಹಂಚಿಕೊಳ್ಳುವುದರ ಮೂಲಕ ಸಂಪರ್ಕಿಸಲಾಗುವ ವಿಷಯಗಳ ಗುಂಪುಗಳನ್ನು ಅಥವಾ ವರ್ಗೀಕರಣಗಳನ್ನು ಸೂಚಿಸುತ್ತದೆ.

- ಸತ್ಯವೇದದಲ್ಲಿ ಈ ಪದವು ವಿಶೇಷವಾಗಿ ದೇವರು ಈ ಸರ್ವ ಪ್ರಪಂಚವನ್ನು ಸೃಷ್ಟಿ ಮಾಡಿದಾಗ ಪ್ರಾಣಿಗಳನ್ನು ಮತ್ತು ಮರಗಳ ವಿಶಿಷ್ಟ ರೀತಿಯನ್ನು ಸೂಚಿಸುವುದಕ್ಕೆ ಉಪಯೋಗಿಸಲಾಗಿರುತ್ತದೆ.
- ಅನೇಕಬಾರಿ ಪ್ರತಿಯೊಂದು “ವಿಧದಲ್ಲಿಯು” ಅನೇಕ ವಿಧವಾದ ವ್ಯತ್ಯಾಸಗಳು ಅಥವಾ ವರ್ಗಗಳು (ಅಥವಾ ಜಾತಿಗಳು) ಇರುತ್ತವೆ. ಉದಾಹರಣೆಗೆ, ಕುದುರೆಗಳು, ಜೀಬ್ರಾಗಳು ಮತ್ತು ಕತ್ತೆಗಳು ಒಂದೇ “ವಿಧಕ್ಕೆ” ಸಂಬಂಧಪಟ್ಟ ಪ್ರಾಣಿಗಳಾಗಿರುತ್ತವೆ, ಆದರೆ ಅವು ಒಂದಕ್ಕೊಂದು ವಿಭಿನ್ನ ವರ್ಗಗಳಿಗೆ ಸಂಬಂಧಪಟ್ಟವುಗಳಾಗಿರುತ್ತವೆ.
- ಪ್ರತಿಯೊಂದು ಗುಂಪನ್ನಾಗಿ ಪ್ರತಿಯೊಂದು “ವಿಧವನ್ನು” ವ್ಯತ್ಯಾಸಗೊಳಿಸುವ ಮುಖ್ಯವಾದ ವಿಷಯವೇನೆಂದರೆ ಆ ಗುಂಪಿಗೆ ಸಂಬಧಪಟ್ಟವುಗಳು ಅದೇ “ವಿಧವಾದ” ಪ್ರಾಣಿಗಳನ್ನು ಹುಟ್ಟಿಸುತ್ತವೆ. ಬೇರೆ ಬೇರೆ ವಿಧವಾದ ಪ್ರಾಣಿಗಳು ಒಂದಕ್ಕೊಂದು ಏನು ಮಾಡುವುದಿಲ್ಲ.

ಅನುವಾದ ಸಲಹೆಗಳು:

- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಬಗೆ” ಅಥವಾ “ತರಗತಿ” ಅಥವಾ “ಗುಂಪು” ಅಥವಾ “ಪ್ರಾಣಿ (ಮರ) ಗುಂಪು” ಅಥವಾ “ವರ್ಗ” ಎನ್ನುವ ಪದಗಳು ಸೇರಿರುತ್ತವೆ.

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.01:20-21
- ಆದಿ.01:24-25
- ಮಾರ್ಕ.09:28-29
- ಮತ್ತಾಯ.13:47-48

ಪದ ಡೇಟಾ:

- Strong's: H2178, H3978, H4327, G1085, G5449

ವಿಧಾನಸಭೆ, ವಿಧಾನಸಭೆಗಳು, ಗುಂಪುಸೇರಿಸು, ಗುಂಪು ಗೂಡಿಸಲ್ಪಟ್ಟಿದೆ

ಪದದ ಅರ್ಥವಿವರಣೆ:

ಹಳೇ ಒಡಂಬಡಿಕೆ

"ವಿಧಾನಸಭೆ" ಎನ್ನುವ ಪದವನ್ನು ಸಹಜವಾಗಿ ಜನರೆಲ್ಲರು ಸಮಸ್ಯೆಗಳನ್ನು ಚರ್ಚಿಸುವುದಕ್ಕೆ, ಸಲಹೆ ಕೊಡುವುದಕ್ಕೆ ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಸೇರಿ ಬರುವ ಒಂದು ಗುಂಪನ್ನು ಸೂಚಿಸುತ್ತದೆ. ಹಳೇ ಒಡಂಬಡಿಕೆ

- ಸ್ಥಿರವಾಗಿರಲು ಮತ್ತು ಅಧೀಕೃತವಾಗಿ ಕ್ರಮಪಡಿಸಿದ ಗುಂಪು ವಿಧಾನಸಭೆಯಾಗಿರಬಹುದು ಅಥವಾ ಒಂದು ಉದ್ದೇಶಕ್ಕಾಗಿ ತಾತ್ಕಾಲಿಕವಾಗಿ ಜನರು ಸೇರಿ ಬರುವ ಗುಂಪು ಸಭೆಯಾಗಿರಬಹುದು.
- ಹಳೇ ಒಡಂಬಡಿಕೆಯಲ್ಲಿ ಯೆಹೋವಾನನ್ನು ಆರಾಧನೆ ಮಾಡುವುದಕ್ಕೆ ಇಸ್ರಾಯೇಲ್ ಜನರೆಲ್ಲರು ಸೇರಿಬರುವ ಒಂದು ವಿಶೇಷವಾದ ಸಭೆಯನ್ನು "ಪರಿಶುದ್ಧ ವಿಧಾನಸಭೆ" ಎಂದು ಕರೆಯುತ್ತಾರೆ.
- "ವಿಧಾನಸಭೆ" ಎನ್ನುವ ಪದವು ಕೆಲವೊಂದುಬಾರಿ ಸಾಧಾರಣವಾಗಿ ಒಂದು ಗುಂಪಾಗಿರುವ ಇಸ್ರಾಯೇಲ್ಯರಿಗೆ ಸೂಚಿಸುತ್ತದೆ.
- ಶತ್ರು ಸೈನಿಕರು ದೊಡ್ಡ ಗುಂಪಾಗಿ ಕೂಡಿಬರುವುದನ್ನು ಕೆಲವೊಂದುಸಲ "ವಿಧಾನಸಭೆ"ಯನ್ನಾಗಿ ಸೂಚಿಸುತ್ತದೆ. ಇದನ್ನು "ಸೈನ್ಯ" ಎಂದು ಅನುವಾದ ಮಾಡಬಹುದು.

ಹೊಸ ಒಡಬಡಿಕೆ

- ಹೊಸ ಒಡಂಬಡಿಕೆಯಲ್ಲಿ 70 ಮಂದಿ ಯೆಹೂದ್ಯ ನಾಯಕರ ಸಭೆ ಯೆರೂಸಲೇಮ್ ಎನ್ನುವ ದೊಡ್ಡ ಪಟ್ಟಣಗಳಲ್ಲಿ ಇರುತ್ತಿತ್ತು, ಆ ಸಭೆ ಜನರ ಮಧ್ಯೆದಲ್ಲಿರುವ ವಿವಾದಗಳನ್ನು ಪರಿಷ್ಕರಿಸಲು ಮತ್ತು ಕಾನೂನುಬದ್ಧವಾದ ವಿಷಯಗಳಿಗೆ ತೀರ್ಪು ಮಾಡುವುದಕ್ಕೆ ಕೂಡಿಕೊಳ್ಳುತ್ತಿದ್ದರು. ಈ ವಿಧಾನಸಭೆಯನ್ನು "ಸೇನ್ಹೆಡ್ರಿನ್" ಅಥವಾ "ಕೌನ್ಸಿಲ್" ಎಂಬುದಾಗಿ ಕರೆಯುತ್ತಾರೆ.

ಅನುವಾದ ಸಲಹೆಗಳು

- ಸಂದರ್ಭಕ್ಕೆ ತಕ್ಕಂತೆ, "ವಿಧಾನಸಭೆ" ಎನ್ನುವುದನ್ನು "ವಿಶೇಷವಾದ ಗುಂಪು" ಅಥವಾ "ಗುಂಪುಸೇರಿಸುವುದು" ಅಥವಾ "ಕೌನ್ಸಿಲ್" ಅಥವಾ "ಸೈನ್ಯ" ಅಥವಾ "ದೊಡ್ಡ ಗುಂಪು" ಎಂದೂ ಅನುವಾದ ಮಾಡಬಹುದು.
- "ವಿಧಾನಸಭೆ" ಎನ್ನುವ ಪದವು ಇಸ್ರಾಯೇಲ್ಯರೆಲ್ಲರನ್ನು ಸೂಚಿಸುವಾಗ, ಅದನ್ನು "ವರ್ಗ" ಅಥವಾ "ಇಸ್ರಾಯೇಲ್ ಜನರು" ಎಂಬುದಾಗಿಯೂ ಅನುವಾದ ಮಾಡಬಹುದು.
- "ವಿಧಾನಸಭೆಗಳು" ಎನ್ನುವ ಮಾತನ್ನು "ಜನರೆಲ್ಲರು" ಅಥವಾ "ಇಸ್ರಾಯೇಲ್ಯರ ಸರ್ವ ಸಮಾಜ" ಅಥವಾ "ಪ್ರತಿಯೊಬ್ಬರು" ಎಂಬುದಾಗಿಯೂ ಅನುವಾದ ಮಾಡಬಹುದು. (ನೋಡಿರಿ: ಅತಿಶಯೋಕ್ತಿ)

(ಈ ಪದಗಳನ್ನು ಸಹ ನೋಡಿರಿ : ಕೌನ್ಸಿಲ್)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.08:14-16
- ಅಪೊ.ಕೃತ್ಯ.07:38-40
- ಎಜ್ರಾ.10:12-13
- ಇಬ್ರಿ.12:22-24
- ಯಾಜಕ.04:20-21
- ನೆಹೆ.08:1-3

ಪದ ಡೇಟಾ:

- Strong's: H622, H627, H1413, H1481, H2199, H3259, H4150, H4186, H4744, H5475, H5712, H5789, H6116, H6633, H6908, H6950, H6951, H6952, H7284, G1577, G1997, G3831, G4863, G4864, G4871, G4905

ವಿರೋಧಿ, ವಿರೋಧಿಗಳು, ಶತ್ರು, ಶತ್ರುಗಳು

ಪದದ ಅರ್ಥ ವಿವರಣೆ:

ಒಬ್ಬ "ವಿರೋಧಿ" ಎಂಬುವುದು ಬೇರೋಬ್ಬರನ್ನು ವಿರೋಧಿಸುವ ವ್ಯಕ್ತಿ (ಅಥವಾ ಜನರ ಗುಂಪು). “ಶತ್ರು” ಎನ್ನುವ ಪದಕ್ಕೆ ಕೂಡ ಅದೇ ಅರ್ಥ ಬರುತ್ತದೆ.

- ನಿಮ್ಮ ವಿರೋಧಿ ಇನ್ನೊಬ್ಬ ವ್ಯಕ್ತಿಯನ್ನು ವಿರೋಧಿಸಲು ಅಥವಾ ಹಾನಿ ಮಾಡಲು ಪ್ರಯತ್ನಿಸುವ ವ್ಯಕ್ತಿಯಾಗಿರಬಹುದು.
- ಎರಡು ದೇಶಗಳು ಒಂದಕ್ಕೊಂದು ಯುದ್ಧ ಮಾಡುತ್ತಿರುವಾಗ ಅವರೆಡನ್ನು ಒಂದಕ್ಕೊಂದು “ವಿರೋಧಿ” ಎಂದು ಕರೆದುಕೊಳ್ಳುತ್ತಾರೆ.
- ಸತ್ಯವೇದದಲ್ಲಿ ಸೈತಾನನನ್ನು “ವಿರೋಧಿಯಾಗಿ” ಮತ್ತು ಒಬ್ಬ “ಶತ್ರುವನ್ನಾಗಿ” ಸೂಚಿಸಲ್ಪಟ್ಟಿದೆ.
- ವಿರೋಧಿಯನ್ನು ಬಹುಶಃ “ಎದುರಾಳಿ” ಎಂದು ಅಥವಾ “ಶತ್ರು” ಎಂದು ಅನುವಾದ ಮಾಡಬಹುದು, ಆದರೆ ಇದು ಬಲವಾದ ಪ್ರತಿಪಕ್ಷದ ರೂಪವನ್ನು ತೋರಿಸುತ್ತಿದೆ.

(ಈ ಪದಗಳನ್ನು ಸಹ ನೋಡಿರಿ : /ಸೈತಾನ್)

ಸತ್ಯವೇದದ ಅನುಬಂಧ ವಾಕ್ಯಗಳು :

- /1 ತಿಮೊಥೆ.05:14-16
- /ಯೆಶಯಾ.09:11-12
- /ಯೋಬ.06:21-23
- /ಪ್ರಲಾಪ.04:12-13
- /ಲೂಕ.12:57-59
- /ಮತ್ತಾಯ.13:24-26

ಪದ ಡೇಟಾ:

- Strong's: H341, H6146, H6887, H6862, H6965, H7790, H7854, H8130, H8324, G476, G480, G2189, G2190, G4567, G5227

ವಿವೇಚಿಸು, ವಿವೇಚಿಸಲ್ಪಟ್ಟಿದೆ, ವಿವೇಚಿಸಲ್ಪಡುತ್ತಿದೆ, ವಿವೇಚನೆ

ಪದದ ಅರ್ಥವಿವರಣೆ:

“ವಿವೇಚಿಸು” ಎನ್ನುವ ಪದಕ್ಕೆ ಏನಾದರೊಂದು ವಿಷಯವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು ಎಂದರ್ಥ, ವಿಶೇಷವಾಗಿ ಏನಾದರೊಂದು ವಿಷಯವು ಸರಿಯೋ ಅಥವಾ ತಪ್ಪೋ ಎಂದೂ ತಿಳಿದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು ಎಂದರ್ಥ.

- “ವಿವೇಚಿಸಲ್ಪಡುತ್ತಿದೆ” ಎನ್ನುವ ಪದವು ಒಂದು ನಿರ್ದಿಷ್ಠವಾದ ವಿಷಯದ ಕುರಿತಾಗಿ ಜ್ಞಾನವುಳ್ಳ ರೀತಿಯಲ್ಲಿ ನಿರ್ಣಯಿಸುವುದನ್ನು ಮತ್ತು ಅರ್ಥಮಾಡಿಕೊಳ್ಳುವುದನ್ನು ಸೂಚಿಸುತ್ತದೆ.
- ಇದಕ್ಕೆ ಜ್ಞಾನವನ್ನು ಮತ್ತು ಒಳ್ಳೆಯ ತೀರ್ಪು ಮಾಡುವ ಶಕ್ತಿಯನ್ನು ಹೊಂದಿರುವುದು ಎಂದರ್ಥ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ವಿವೇಚಿಸು” ಎನ್ನುವ ಪದವನ್ನು “ಅರ್ಥಮಾಡಿಕೋ” ಅಥವಾ “ಅವುಗಳ ಮಧ್ಯೆದಲ್ಲಿರುವ ವ್ಯತ್ಯಾಸವನ್ನು ತಿಳಿ” ಅಥವಾ “ಒಳ್ಳೇಯದನ್ನು ಮತ್ತು ಕೆಟ್ಟದ್ದನ್ನು ತಿಳಿ” ಅಥವಾ “ಅದರ ಕುರಿತಾಗಿ ಸರಿಯಾಗಿ ತೀರ್ಪು ಮಾಡು” ಅಥವಾ “ಕೆಟ್ಟದ್ದರಿಂದ ಒಳ್ಳೇಯದನ್ನು ಗ್ರಹಿಸು” ಎಂದೂ ಅನುವಾದ ಮಾಡಬಹುದು.
- “ವಿವೇಚಿಸಲ್ಪಡುತ್ತಿದೆ” ಎನ್ನುವ ಪದವನ್ನು “ಅರ್ಥಮಾಡಿಕೊಳ್ಳುವುದು” ಅಥವಾ “ಒಳ್ಳೇಯದನ್ನು ಮತ್ತು ಕೆಟ್ಟದ್ದನ್ನು ವ್ಯತ್ಯಾಸಗೊಳಿಸುವ ಸಾಮರ್ಥ್ಯ ಹೊಂದಿರುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ತೀರ್ಪು, ಜ್ಞಾನ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.03:7-9
- ಆದಿ.41:33-34
- ಜ್ಞಾನೋ.01:4-6
- ಕೀರ್ತನೆ.019:11-12

ಪದ ಡೇಟಾ:

- Strong's: H995, H2940, H4209, H5234, H8085, G350, G1252, G1253, G1381, G2924

ವಿಶ್ರಾಂತಿ, ವಿಶ್ರಾಂತಿ ಕೊಡುವುದು, ವಿಶ್ರಾಂತಿ ತೆಗೆದುಕೊಳ್ಳಲಾಗಿದೆ, ವಿಶ್ರಮಿಸುವುದು, ವಿಶ್ರಾಂತಿ ಇಲ್ಲದ

ಪದದ ಅರ್ಥವಿವರಣೆ:

"ವಿಶ್ರಾಂತಿ" ಎನ್ನುವ ಪದಕ್ಕೆ ಅಕ್ಷರಾರ್ಥವಾಗಿ ಬಲವನ್ನು ತಿರುಗಿ ಹೊಂದಿಕೊಳ್ಳುವುದಕ್ಕೆ ಅಥವಾ ವಿರಾಮ ತೆಗೆದುಕೊಳ್ಳುವ ಕ್ರಮದಲ್ಲಿ ಕೆಲಸವನ್ನು ನಿಲ್ಲಿಸುವುದು ಎಂದರ್ಥ. "ಇನ್ನೊಂದರಿಂದ ವಿಶ್ರಾಂತಿ" ಎನ್ನುವ ಮಾತು ಯಾವುದಾದರೊಂದರ ಉಳಿಕೆಯನ್ನು ಸೂಚಿಸುತ್ತದೆ. "ವಿಶ್ರಾಂತಿ" ಎನ್ನುವ ಪದಕ್ಕೆ ಕೆಲಸವನ್ನು ನಿಲ್ಲಿಸು ಎಂದರ್ಥ.

- ಯಾವುದಾದರೊಂದರ ಸ್ಥಳದಲ್ಲಿ "ವಿಶ್ರಾಂತಿ" ತೆಗೆದುಕೊಳ್ಳುವುದು ಎಂದರೆ ಒಂದು ಸ್ಥಳದಲ್ಲಿ "ನಿಂತಿರುವುದು" ಅಥವಾ "ಕುಳಿತಿರುವುದು" ಎಂದರ್ಥವಾಗಿರುತ್ತದೆ.
- ಒಂದು ಹಡಗು ಯಾವುದಾದರೊಂದರ ಸ್ಥಳಕ್ಕೆ "ಬಂದು ವಿಶ್ರಮಿಸಿದೆ" ಎಂದರೆ ಅದನ್ನು ಆ ಸ್ಥಳದಲ್ಲಿ "ನಿಲ್ಲಿಸಿದೆ" ಅಥವಾ "ತಲುಪಿದೆ" ಎಂದರ್ಥವಾಗಿರುತ್ತದೆ.
- ಒಬ್ಬ ವ್ಯಕ್ತಿ ಅಥವಾ ಒಂದು ಪ್ರಾಣಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ, ತಮ್ಮನ್ನು ತಾವು ತಂಪುಗೊಳಿಸಿಕೊಳ್ಳುವ ಕ್ರಮದಲ್ಲಿ ಅವರು ಕುಳಿತಿದ್ದಾರೆ, ಮಲಗಿದ್ದಾರೆ ಅಥವಾ ಅವು ಕುಳಿತಿವೆ ಅಥವಾ ಮಲಗಿವೆ ಎಂದರ್ಥವಾಗಿರುತ್ತದೆ.
- ಇಸ್ರಾಯೇಲ್ಯರು ವಾರದ ಏಳನೇಯ ದಿನದಂದು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ದೇವರು ಆಜ್ಞಾಪಿಸಿದ್ದಾರೆ. ಕೆಲಸ ಮಾಡದ ಈ ದಿನವನ್ನು "ಸಬ್ಬತ್" ದಿನ ಎಂದು ಕರೆಯುತ್ತಾರೆ.
- ಯಾವುದಾದರೊಂದರ ಮೇಲೆ ಒಂದು ವಸ್ತುವನ್ನು ವಿಶ್ರಾಂತಿಗೊಳಿಸುವುದು ಎಂದರೆ ಆ ಸ್ಥಳದಲ್ಲಿ ಅದನ್ನು "ಇಡುವುದು" ಅಥವಾ "ನಿಲ್ಲಿಸುವುದು" ಎಂದರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, "(ತನ್ನನ್ನು ತಾನು) ವಿಶ್ರಾಂತಿಗೊಳಿಸಿಕೊಳ್ಳುವುದು" ಎನ್ನುವ ಮಾತನ್ನು "ಕೆಲಸವನ್ನು ನಿಲ್ಲಿಸುವುದು" ಅಥವಾ "ತನ್ನನ್ನು ತಾನು ತಂಪು ಮಾಡಿಕೊಳ್ಳುವುದು" ಅಥವಾ "ಭಾರಗಳನ್ನು ಒಯ್ಯುವುದನ್ನು ನಿಲ್ಲಿಸುವುದು" ಎಂದೂ ಅನುವಾದ ಮಾಡಬಹುದು.
- ಯಾವುದಾದರೊಂದರ ಮೇಲೆ ಒಂದು ವಸ್ತುವನ್ನು "ವಿಶ್ರಾಂತಿಗೊಳಿಸುವುದು" ಎನ್ನುವ ಮಾತನ್ನು ಯಾವುದಾದರೊಂದರ ಆ ವಸ್ತುವನ್ನು "ಇಡುವುದು" ಅಥವಾ "ನಿಲ್ಲಿಸುವುದು" ಅಥವಾ "ಜೋಡಿಸುವುದು" ಎಂದೂ ಅನುವಾದ ಮಾಡಬಹುದು.
- "ನಾನು ನಿನಗೆ ವಿಶ್ರಾಂತಿಯನ್ನು ಕೊಡುತ್ತೇನೆ" ಎಂದು ಯೇಸು ಹೇಳಿದಾಗ, ಇದಕ್ಕೆ "ನೀನು ಹೊತ್ತಿಕೊಂಡು ಹೋಗುವ ಭಾರವನ್ನು ನಾನು ನಿಲ್ಲಿಸುತ್ತೇನೆ" ಅಥವಾ "ಸಮಾಧಾನವಿರುವಂತೆ ನಾನು ನಿನಗೆ ಸಹಾಯ ಮಾಡುತ್ತೇನೆ" ಅಥವಾ "ನನ್ನಲ್ಲಿ ಭರವಸೆವಿಡುವುದಕ್ಕೆ ಮತ್ತು ನನ್ನಲ್ಲಿ ವಿಶ್ರಮಿಸುವುದಕ್ಕೆ ನಾನು ನಿನ್ನನ್ನು ಬಲಗೊಳಿಸುತ್ತೇನೆ" ಎಂದೂ ಅನುವಾದ ಮಾಡಬಹುದು.
- "ಅವರು ನನ್ನ ವಿಶ್ರಾಂತಿಯಲ್ಲಿ ಪ್ರವೇಶಿಸುವುದಿಲ್ಲ" ಎಂದು ದೇವರು ಹೇಳಿದಾಗ, ಈ ಮಾತನ್ನು "ಅವರು ವಿಶ್ರಾಂತಿಯ ನನ್ನ ಆಶೀರ್ವಾದಗಳನ್ನು ಅನುಭವಿಸುವುದಿಲ್ಲ" ಅಥವಾ "ನನ್ನಲ್ಲಿ ಭರವಸೆವಿಡುವುದರ ಮೂಲಕ ಬರುವಂತಹ ಸಂತೋಷ, ಸಮಾಧಾನಗಳನ್ನು ಅವರು ಅನುಭವಿಸುವುದಿಲ್ಲ" ಎಂದೂ ಅನುವಾದ ಮಾಡಬಹುದು.
- "ಶೇಷ" ಎನ್ನುವ ಪದವನ್ನು "ಉಳಿದಿರುವವುಗಳು" ಅಥವಾ "ಇತರ ಎಲ್ಲಾ ಜನರು" ಅಥವಾ "ಬಿಡಲ್ಪಟ್ಟಿರುವ ಪ್ರತಿಯೊಂದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಶೇಷ, ಸಬ್ಬತ್)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.06:40-42
- ಆದಿ.02:1-3
- ಯೆರೆ.06:16-19
- ಮತ್ತಾಯ.11:28-30
- ಪ್ರಕ.14:11-12

ಪದ ಡೇಟಾ:

- Strong's: H14, H1824, H1826, H2308, H3498, H3499, H4494, H4496, H4771, H5117, H5118, H5183, H5564, H6314, H7258, H7280, H7599, H7604, H7605, H7606, H7611, H7673, H7677, H7901, H7931, H7954, H8058, H8172, H8252, H8300, G372, G373, G425, G1515, G1879, G1954, G1981, G2270, G2663, G2664, G2681, G2838, G3062, G4520

ವಿಸ್ಮಯ, ಭಯಂಕರನು

ಪದದ ಅರ್ಥವಿವರಣೆ:

“ವಿಸ್ಮಯ” ಎನ್ನುವ ಪದವು ಬೆರಗಾಗುವ ಭಾವನೆಯನ್ನು ಮತ್ತು ಅತೀ ದೊಡ್ಡದಾಗಿರುವುದನ್ನು, ಶಕ್ತಿಯುತವಾದದ್ದನ್ನು ಮತ್ತು ಮಹತ್ತರವಾದದ್ದನ್ನು ನೋಡುವುದರಿಂದ ಉಂಟಾಗುವ ಆಳವಾದ ಭಾವನೆಯನ್ನು ಸೂಚಿಸುತ್ತದೆ.

- “ಭಯಂಕರನು” ಎನ್ನುವ ಪದವು ಭಯದ ಭಾವನೆಯನ್ನಾಗಲಿ ಅಥವಾ ವಿಸ್ಮಯ ಭಾವನೆಯನ್ನಾಗಲಿ ಉಂಟುಮಾಡುವದನ್ನಾಗಲಿ ಅಥವಾ ವ್ಯಕ್ತಿಯನ್ನಾಗಲಿ ವಿವರಿಸುತ್ತದೆ.
- ಪ್ರವಾದಿ ಯೆಹೆಜ್ಕೇಲನು ಕಂಡ ದೇವರ ಮಹಿಮೆಯ ದರ್ಶನಗಳು “ಭಯಂಕರವಾಗಿದ್ದವು” ಅಥವಾ “ವಿಸ್ಮಯವನ್ನುಂಟುಮಾಡಿದ್ದವು”.
- ವಿಶಿಷ್ಟವಾದ ಮನುಷ್ಯನ ಸ್ಪಂದನೆಗಳು ದೇವರ ಸನ್ನಿಧಿಯಲ್ಲಿ ವಿಸ್ಮಯವಾಗಿರುತ್ತವೆ, ಅದರಲ್ಲಿ, ಭಯ, ಬಾಗುವುದು ಅಥವಾ ಮೊಣಕಾಲೂರುವುದು, ಮುಖವನ್ನು ಮುಚ್ಚಿಕೊಳ್ಳುವುದು, ಮತ್ತು ಭಯಗೊಳ್ಳುವುದು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಭಯ, ಮಹಿಮೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.17:19-21
- ಆದಿ.28:16-17
- ಇಬ್ರಿ.12:27-29
- ಕೀರ್ತನೆ.022:22-23
- ಕೀರ್ತನೆ.147:4-5

ಪದ ಡೇಟಾ:

- Strong's: H366, H1481, H3372, H6206, H7227, G2124

ವೀಕ್ಷಿಸು, ವೀಕ್ಷಿಸುವುದು, ವೀಕ್ಷಿಸಿದೆ, ವೀಕ್ಷಿಸುತ್ತಿರುವುದು, ಕಾವಲುಗಾರ, ಕಾವಲುಗಾರರು, ಎಚ್ಚರವಾಗಿರುವುದು

ಪದದ ಅರ್ಥವಿವರಣೆ:

"ವೀಕ್ಷಿಸು" ಎನ್ನುವ ಪದಕ್ಕೆ ಯಾವುದಾದರೊಂದನ್ನು ತುಂಬಾ ಹತ್ತಿರವಾಗಿ ಮತ್ತು ಜಾಗೃತಿಯಾಗಿ ನೋಡುವುದು ಎಂದರ್ಥ. ಇದಕ್ಕೆ ಅನೇಕವಾದ ಅಲಂಕಾರಿಕ ಅರ್ಥಗಳು ಇರುತ್ತವೆ. "ಕಾವಲುಗಾರ" ಎಂದರೆ ಪಟ್ಟಣದಲ್ಲಿರುವ ಜನರಿಗೆ ಯಾವ ಅಪಾಯವು ಅಥವಾ ಹಾನಿಯೂ ಉಂಟಾಗದಂತೆ ತನ್ನ ಸುತ್ತಮುತ್ತಲು ತುಂಬಾ ಜಾಗೃತಿಯಾಗಿ ನೋಡುವುದರ ಮೂಲಕ ಪಟ್ಟಣವನ್ನು ಕಾಯುವ ಉದ್ಯೋಗವನ್ನು ಹೊಂದಿರುವ ವ್ಯಕ್ತಿ ಎಂದರ್ಥ.

- "ನಿನ್ನ ಜೀವನವನ್ನು ನೋಡಿಕೊಂಡು, ಸಿದ್ಧಾಂತೆಯನ್ನು ಹತ್ತಿರವಾಗಿ ನೋಡು" ಎಂದೆನ್ನುವ ಆಜ್ಞೆಗೆ ನಿನ್ನ ಜೀವನವನ್ನು ಜ್ಞಾನದಿಂದ ನಡೆಸಿಕೊ, ಯಾವ ಸುಳ್ಳು ಬೋಧನೆಗಳನ್ನು ನಂಬದಿರು ಎಂದರ್ಥವಾಗಿರುತ್ತದೆ.
- "ಎಚ್ಚರವಾಗಿರು" ಎನ್ನುವದಕ್ಕೆ ಹಾನಿಯಂಟನ್ನು ಮಾಡುವ ಪ್ರಭಾವದಿಂದ ಅಥವಾ ಅಪಾಯವನ್ನು ತಪ್ಪಿಸಿಕೊಳ್ಳುವುದಕ್ಕೆ ಎಚ್ಚರಿಕೆಯಿಂದಿರುವುದಕ್ಕೆ ಕೊಡುವ ಎಚ್ಚರಿಕೆ ಎಂದರ್ಥ.
- "ವೀಕ್ಷಿಸು" ಅಥವಾ "ವೀಕ್ಷಿಸುತ್ತಿರು" ಎನ್ನುವ ಪದಕ್ಕೆ ಯಾವಾಗಲೂ ಎಚ್ಚರಿಕೆಯಿಂದಿರು ಮತ್ತು ಪಾಪ ದುಷ್ಟ ಕಾರ್ಯಗಳಿಗೆ ವಿರುದ್ಧವಾಗಿ ನಿನ್ನನ್ನು ಕಾಪಾಡಿಕೋ ಎಂದರ್ಥ. ಇದಕ್ಕೆ "ಸಿದ್ಧವಾಗಿರು" ಎಂದರ್ಥವೂ ಇದೆ.
- "ಎಲ್ಲಾವುದರ ಮೇಲೆ ಎಚ್ಚರಿಕೆಯಿಂದಿರು" ಅಥವಾ "ತುಂಬಾ ಹತ್ತಿರವಾಗಿದ್ದು ವಿಕ್ಷೀಸುತ್ತಾ ಇರ್ರಿ" ಎನ್ನುವ ಈ ಮಾತುಗಳಿಗೆ ಯಾವುದಾದರೊಂದರ ಕುರಿತಾಗಿ ಅಥವಾ ಯಾರಾದರೊಬ್ಬರ ಕುರಿತಾಗಿ ಜಾಗೃತಿ ತೆಗೆದುಕೋ, ಸಂರಕ್ಷಿಸು, ಕಾಪಾಡು ಎಂದೆನ್ನುವ ಅರ್ಥಗಳಿವೆ.
- ವೀಕ್ಷಿಸು" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ತುಂಬಾ ಹತ್ತಿರವಾಗಿ ಶ್ರದ್ಧೆಯನ್ನು ಕೊಡು" ಅಥವಾ "ದೃಢಪ್ರಯತ್ನದಿಂದಿರು" ಅಥವಾ "ತುಂಬಾ ಜಾಗೃತಿಯಾಗಿರು" ಅಥವಾ "ಕಾಪಾಡುವುದರಲ್ಲಿರು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಕಾವಲುಗಾರ" ಎನ್ನುವುದಕ್ಕೆ ಇತರ ಪದಗಳು "ರಕ್ಷಣೆ ಕೊಡುವ ಸೈನಿಕ" ಅಥವಾ "ಸಿಬ್ಬಂದಿ" ಎಂದಾಗಿರುತ್ತವೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.05:4-7
- ಇಬ್ರಿ.13:15-17
- ಯೆರೆ.31:4-6
- ಮಾರ್ಕ.08:14-15
- ಮಾರ್ಕ.13:33-34
- ಮತ್ತಾಯ.25:10-13

ಪದ ಡೇಟಾ:

- Strong's: H821, H2370, H4929, H4931, H5027, H5341, H5894, H6486, H6822, H6836, H6974, H7462, H7789, H7919, H8104, H8108, H8245, G69, G70, G991, G1127, G1492, G2334, G2892, G3525, G3708, G3906, G4337, G4648, G5083, G5438

ವೈಭವ

ಪದದ ಅರ್ಥವಿವರಣೆ:

“ವೈಭವ” ಎನ್ನುವ ಪದವು ಅತೀ ಹೆಚ್ಚಾದ ಸೌಂದರ್ಯ ಮತ್ತು ಸೊಬಗನ್ನು ಸೂಚಿಸುತ್ತದೆ, ಇದು ಅನೇಕಬಾರಿ ಸಂಪತ್ತು ಮತ್ತು ಶೋಭಾಯಮಾನಗಳೊಂದಿಗೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುತ್ತದೆ.

- ಅನೇಕಬಾರಿ ವೈಭವ ಎನ್ನುವುದು ಅರಸನಿಗೆ ಇರುವ ಸಂಪತ್ತನ್ನು ವಿವರಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ, ಅಥವಾ ತನ್ನ ಬೆಲೆಯುಳ್ಳ ಜೀವನದಲ್ಲಿ, ಸುಂದರವಾದ ಮನಸ್ಸಿನಲ್ಲಿ ಹೇಗೆ ಕಾಣಿಸಿಕೊಲ್ಲುತ್ತಾನೆ ಎನ್ನುವುದನ್ನು ವಿವರಿಸುತ್ತದೆ.
- “ವೈಭವ” ಎನ್ನುವ ಪದವನ್ನು ಮರಗಳ, ಪರ್ವತಗಳ, ಮತ್ತು ದೇವರು ಸೃಷ್ಟಿ ಮಾಡಿದ ಪ್ರತಿಯೊಂದರ ಸುಂದರವನ್ನು ವಿವರಿಸುವುದಕ್ಕೂ ಉಪಯೋಗಿಸಲ್ಪಟ್ಟಿರುತ್ತದೆ.
- ನಿರ್ದಿಷ್ಟವಾದ ನಗರಗಳು ತಮ್ಮಲ್ಲಿ ಸಿಗುವ ಸ್ವಾಭಾವಿಕ ಸಂಪನ್ಮೂಲಗಳಿಂದ, ಭವನಗಳನ್ನು ಮತ್ತು ರಹದಾರಿಗಳನ್ನು ನಿರ್ಮಿಸುವುದರಿಂದ, ಶ್ರೀಮಂತಿಕೆಯ ಬಟ್ಟೆಗಳು, ಬಂಗಾರ ಮತ್ತು ಬೆಳ್ಳಿ ಲೋಹಗಳನ್ನು ಒಳಗೊಂಡಿರುವ ಜನರ ಸಂಪತ್ತು ಇರುವದರಿಂದ ಅವುಗಳು ವೈಭವನ್ನು ಪಡೆದುಕೊಂಡಿವೆಯೆಂದು ಹೇಳಲಾಗುತ್ತದೆ.
- ಸಂದರ್ಭಾನುಸಾರವಾಗಿ, ಈ ಪದವನ್ನು “ಭವ್ಯವಾದ ಸೌಂದರ್ಯ” ಅಥವಾ “ಅದ್ಭುತವಾದ ಘನತೆ” ಅಥವಾ “ಅರಸನ ದೊಡ್ಡತನ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಮಹಿಮೆ, ಅರಸ, ಘನತೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.16:25-27
- ವಿಮೋ.28:1-3
- ಯೆಹೆ.28:6-7
- ಲೂಕ.04:5-7
- ಕೀರ್ತನೆ.089:44-45
- ಪ್ರಕ.21:26-27

ಪದ ಡೇಟಾ:

- Strong's: H1925, H1926, H1927, H1935, H2091, H2122, H2892, H3314, H3519, H6643, H7613, H8597

ವ್ಯರ್ಥ್ಯ, ವ್ಯರ್ಥವಾಗಿ

ಅರ್ಥವಿವರಣೆ:

“ವ್ಯರ್ಥ” ಎನ್ನುವ ಪದವು ಯಾವ ಉದ್ದೇಶವಿಲ್ಲದ್ದು ಅಥವಾ ಯಾವ ಉಪಯೋಗಕ್ಕೆ ಬಾರದದ್ದು ಎಂದರ್ಥ. ವ್ಯರ್ಥ್ಯ ವಿಷಯಗಳು ಖಾಲಿಯಾಗಿರುತ್ತವೆ ಮತ್ತು ಅಯೋಗ್ಯವಾಗಿರುತ್ತವೆ.

- “ವ್ಯರ್ಥವಾಗಿ” ಎನ್ನುವ ಪದವು ನಿಷ್ಪ್ರಯೋಜಕ ಅಥವಾ ಶೂನ್ಯತೆಯನ್ನು ಸೂಚಿಸುತ್ತದೆ. ಈ ಪದವು ಗರ್ವ ಅಥವಾ ಅಹಂಕಾರವನ್ನೂ ಸೂಚಿಸುತ್ತದೆ.
- ಹಳೇ ಒಡಂಬಡಿಕೆಯಲ್ಲಿ ವಿಗ್ರಹಗಳು ಬಿಡುಗಡೆ ಕೊಡದ ಅಥವಾ ರಕ್ಷಿಸದ ವ್ಯರ್ಥ ವಸ್ತುಗಳನ್ನಾಗಿ ವಿವರಿಸಲ್ಪಟ್ಟಿವೆ. ಅವು ನಿಷ್ಪ್ರಯೋಜಕವಾಗಿರುತ್ತವೆ ಮತ್ತು ಅವುಗಳಿಂದ ಯಾವ ಉಪಯೋಗವೂ ಇರುವುದಿಲ್ಲ ಅಥವಾ ಅವುಗಳಿಗೆ ಯಾವ ಉದ್ದೇಶವೂ ಇರುವುದಿಲ್ಲ.
- “ವ್ಯರ್ಥ್ಯವಾಗಿ” ಯಾವುದಾದರೊಂದು ಮಾಡಿದರೆ, ಇದರಿಂದ ಯಾವ ಒಳ್ಳೇಯ ಫಲಿತಾಂಶವು ಉಂಟಾಗುವುದಿಲ್ಲ ಎಂದರ್ಥ. ಪ್ರಯಾಸೆ ಅಥವಾ ಕ್ರಿಯೆ ಎನ್ನುವವು ಯಾವುದನ್ನೂ ಪೂರ್ತಿಯಾಗಿ ಮುಗಿಸುವುದಿಲ್ಲ.
- “ವ್ಯರ್ಥದಲ್ಲಿ ನಂಬುವುದು” ಎನ್ನುವ ಮಾತಿಗೆ ಸುಳ್ಳಿನ ನಿರೀಕ್ಷೆಯಾಗಿರುವುದರಲ್ಲಿ ಮತ್ತು ನಿಜವಲ್ಲದ ವಿಷಯಗಳಲ್ಲಿ ನಂಬಿಕೆ ಇಡುವುದು ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ಸುಳ್ಳು ದೇವರು, ಯೋಗ್ಯ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.15:1-2
- 1 ಸಮು.25:21-22
- 2 ಪೇತ್ರ.02:18
- ಯೆಶಯಾ.45:19
- ಯೆರೆ.02:29-31
- ಮತ್ತಾಯ.15:09

ಪದ ಡೇಟಾ:

- Strong's: H1891, H1892, H2600, H7307, H7385, H7387, H7723, H8193, H8267, H8414, G945, G1500, G2756, G2758, G2761, G3151, G3152, G3153, G3155

ಶಂಕುಮರ (ಸೈಪ್ರಿಸ್ ಮರ)

ಪದದ ಅರ್ಥವಿವರಣೆ

“ಶಂಕುಮರ” ಎನ್ನುವ ಪದವು ಒಂದು ವಿಧವಾದ ತುರಾಯಿ ಮರವಾಗಿದೆ. ಈ ಮರವು ಸತ್ಯವೇದದ ಕಾಲದಲ್ಲಿ ಜನರು ವಾಸಿಸುತ್ತಿದ್ದ ಸ್ಥಳದಲ್ಲಿ ಹೆಚ್ಚಾಗಿ ಬೆಳೆದಿದ್ದವು, ವಿಶೇಷವಾಗಿ ಮೆಡಿಟರೇನಿಯನ್ ಸಮುದ್ರದ ದಡದಲ್ಲಿದ್ದ ದೇಶಗಳಲ್ಲಿ ಹೆಚ್ಚಾಗಿದ್ದವು.

- ಕುಪ್ರ ಮತ್ತು ಲೆಬನೋನ್ ಎಂಬ ಎರಡು ಪ್ರಾಂತ್ಯಗಳಲ್ಲಿ ಶಂಕುಮರಗಳು ಹೆಚ್ಚಾಗಿವೆ ಎಂದು ಸತ್ಯವೇದದಲ್ಲಿ ವಿಶೇಷವಾಗಿ ಬರೆಯಲ್ಪಟ್ಟಿದೆ
- ನೋಹ ನಾವೆಯನ್ನು ಕಟ್ಟಲು ಉಪಯೋಗಿಸಿದ ಮರದಲ್ಲಿ ಶಂಕುಮರ ಇದ್ದಿರಬಹುದು.
- ಯಾಕಂದರೆ ಶಂಕುಮರ ತುಂಬ ದೃಢವಾದದ್ದು ಮತ್ತು ಹೆಚ್ಚಿನ ಬಾಲಿಕೆಯುಳದ್ದು, ನಾವೆಯನ್ನು ಕಟ್ಟಲು ಮತ್ತು ಇತರ ಕಟ್ಟಡಗಳನ್ನು ನಿರ್ಮಿಸಲು ಜನರು ಅದನ್ನು ಉಪಯೋಗಿಸುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ನಾವೆ, ಕುಪ್ರ, ತುರಾಯಿ, ಲೆಬನೋನ್)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.11:19-21
- ಆದಿ.06:13-15
- ಹೊಶಯ.14:7-8
- ಯೆಶಯ.44:14
- ಯೆಶಯ.60:12-13
- ಜೆಕರ್ಯ.11:1-3

ಪದ ಡೇಟಾ:

- Strong's: H8645

ಶಕ್ತಿ, ಶಕ್ತಿಯುಳ್ಳ, ಶಕ್ತಿಯುತ ಕೆಲಸ

ಪದದ ಅರ್ಥವಿವರಣೆ:

“ಶಕ್ತಿಯುಳ್ಳ” ಮತ್ತು “ಶಕ್ತಿ” ಎನ್ನುವ ಪದಗಳು ಹೆಚ್ಚಿನ ಬಲವನ್ನು ಅಥವಾ ಶಕ್ತಿಯನ್ನು ಹೊಂದಿಕೊಂಡಿರುವುದನ್ನು ಸೂಚಿಸುತ್ತದೆ.

- “ಶಕ್ತಿ” ಎನ್ನುವ ಪದವು ಅನೇಕಬಾರಿ “ಬಲ” ಎನ್ನುವ ಇನ್ನೊಂದು ಪದವನ್ನು ಸೂಚಿಸುತ್ತದೆ. ದೇವರ ಕುರಿತಾಗಿ ಮಾತನಾಡುವಾಗ, ಇದು “ಶಕ್ತಿ” ಎಂಬುದಾಗಿ ಸೂಚಿಸಲ್ಪಡುತ್ತದೆ.
- “ಶಕ್ತಿಯುಳ್ಳ ಮನುಷ್ಯರು” ಎನ್ನುವ ಮಾತು ಅನೇಕಸಲ ಯುದ್ಧದಲ್ಲಿ ಜಯವನ್ನು ಹೊಂದಿದ ಮತ್ತು ಧೈರ್ಯವನ್ನು ಪಡೆದ ಮನುಷ್ಯರನ್ನು ಸೂಚಿಸುತ್ತದೆ. ದಾವೀದನನ್ನು ಸಂರಕ್ಷಿಸಲು ಸಹಾಯ ಮಾಡಿದ ಆತನ ನಂಬಿಗಸ್ತ ಗುಂಪಿನ ಜನರನ್ನು ಅನೇಕಸಲ “ಶಕ್ತಿಯುಳ್ಳ ಮನುಷ್ಯರು” ಎಂದು ಕರೆಯಲ್ಪಟ್ಟಿದ್ದರು.
- ದೇವರನ್ನು ಕೂಡ “ಶಕ್ತಿಯುಳ್ಳವರೆಂದು” ಸೂಚಿಸಲ್ಪಟ್ಟಿದ್ದಾರೆ.
- “ಶಕ್ತಿಯುಳ್ಳ ಕಾರ್ಯಗಳು” ಎನ್ನುವ ಮಾತು ಸಹಜವಾಗಿ ದೇವರು ಮಾಡಿದ ಅನೇಕ ಅದ್ಭುತ ಕಾರ್ಯಗಳನ್ನು, ವಿಶೇಷವಾಗಿ ಆಶ್ಚರ್ಯ ಕಾರ್ಯಗಳನ್ನು ಸೂಚಿಸುತ್ತದೆ.
- ಈ ಪದವು “ಸರ್ವಶಕ್ತಿಯುಳ್ಳ” ಎನ್ನುವ ಪದಕ್ಕೆ ಸಂಬಂಧಪಟ್ಟಿರುತ್ತದೆ, ಇದು ಸಾಧಾರಣವಾಗಿ ದೇವರನ್ನು ಮಾತ್ರವೇ ವಿವರಿಸುವ ಪದವಾಗಿರುತ್ತದೆ, ಈ ಪದಕ್ಕೆ ಆತನಿಗೆ ಸಂಪೂರ್ಣ ಶಕ್ತಿಯಿದೆ ಎಂದರ್ಥ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, “ಶಕ್ತಿಯುಳ್ಳ” ಎನ್ನುವ ಪದವನ್ನು “ಬಲವುಳ್ಳ” ಅಥವಾ “ಅದ್ಭುತವಾಗಿ” ಅಥವಾ “ತುಂಬಾ ಹೆಚ್ಚಿನ ಬಲವುಳ್ಳ” ಎಂದೂ ಅನುವಾದ ಮಾಡಬಹುದು.
- “ಆತನ ಶಕ್ತಿ” ಎನ್ನುವ ಮಾತು “ಆತನ ಬಲ” ಅಥವಾ “ಆತನ ಅಧಿಕಾರ” ಎಂದೂ ಅನುವಾದ ಮಾಡಬಹುದು.
- ಅಪೊಸ್ತಲರ ಕೃತ್ಯ 7ನೇ ಅಧ್ಯಾಯದಲ್ಲಿ ಮೋಶೆಯನ್ನು “ಮಾತಿನಲ್ಲಿಯು ಮತ್ತು ಕ್ರಿಯೆಗಳಲ್ಲಿಯೂ ಶಕ್ತಿಯನ್ನು” ಹೊಂದಿದ ಮನುಷ್ಯನೆಂದು ವಿವರಿಸಲ್ಪಟ್ಟಿದೆ. ಈ ಮಾತನ್ನು “ಮೋಶೆ ದೇವರಿಂದ ಬಂದಿರುವ ಶಕ್ತಿಯುಳ್ಳ ಮಾತುಗಳನ್ನು ಮಾತನಾಡಿದ್ದಾನೆ ಮತ್ತು ಅನೇಕವಾದ ಅದ್ಭುತ ಕಾರ್ಯಗಳನ್ನು ಮಾಡಿದ್ದಾನೆ” ಅಥವಾ “ಮೋಶೆ ದೇವರ ವಾಕ್ಯವನ್ನು ಶಕ್ತಿಯುತವಾಗಿ ಮಾತನಾಡಿದನು ಮತ್ತು ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಗುಣವಾಗಿ, “ಶಕ್ತಿಯುಳ್ಳ ಕಾರ್ಯಗಳು” ಎನ್ನುವ ಮಾತನ್ನು “ದೇವರು ಮಾಡಿದ ಅದ್ಭುತ ಕಾರ್ಯಗಳು” ಅಥವಾ “ಆಶ್ಚರ್ಯ ಕಾರ್ಯಗಳು” ಅಥವಾ “ದೇವರು ಶಕ್ತಿಯುತವಾಗಿ ಮಾಡುವ ಕಾರ್ಯಗಳು” ಎಂದೂ ಅನುವಾದ ಮಾಡಬಹುದು.
- “ಶಕ್ತಿ” ಎನ್ನುವ ಪದವನ್ನು “ಬಲ” ಅಥವಾ “ಅಧಿಕ ಬಲ” ಎಂದೂ ಅನುವಾದ ಮಾಡಬಹುದು.
- ಆಂಗ್ಲ ಭಾಷೆಯಲ್ಲಿ " ಮಳೆ ಬರಬಹುದು" ಎಂದು ಹೇಳುವ ಮಾತಿನಲ್ಲಿರುವ ಒಂದು ವೇಳೆ ಎನ್ನುವ ಪದದೊಂದಿಗೆ ಈ ಪದವು ಗೊಂದಲಪಡಿಸಬಾರದು.

(ಈ ಪದಗಳನ್ನು ಸಹ ನೋಡಿರಿ : ಸರ್ವಶಕ್ತಿಯುಳ್ಳ, ಆಶ್ಚರ್ಯ, ಶಕ್ತಿ, ಬಲ)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.07:22
- ಆದಿ.06:4
- ಮಾರ್ಕ.09:38-39
- ಮತ್ತಾಯ.11:23

ಪದ ಡೇಟಾ:

- Strong’s: H46, H47, H117, H202, H386, H410, H430, H533, H650, H1219, H1368, H1369, H1396, H1397, H1419, H2220, H2389, H2428, H3201, H3524, H3581, H3966, H4101, H5794, H5797, H6099, H6105, H6108, H6184, H7227, H7580, H8623, H8624, G1411, G1415, G1498, G2478, G2479, G2900, G2904, G3167, G3173

ಶಮೆದಮೆ, ಶಮೆದಮೆ ಹೊಂದಿರುವ

ಪದದ ಅರ್ಥವಿವರಣೆ:

ಶಮೆದಮೆ ಎಂದರೆ ಪಾಪವನ್ನು ಮಾಡದಂತೆ ಒಬ್ಬರ ನಡತೆಯನ್ನು ನಿಯಂತ್ರಿಸುವ ಸಾಮರ್ಥ್ಯವಾಗಿರುತ್ತದೆ.

- ಇದು ಒಳ್ಳೆಯ ನಡತೆಯನ್ನು ಸೂಚಿಸುತ್ತದೆ, ಹೇಗೆಂದರೆ ಪಾಪ ಸ್ವಭಾವದ ಆಲೋಚನೆಗಳನ್ನು, ಮಾತುಗಳನ್ನು ಮತ್ತು ಕ್ರಿಯೆಗಳನ್ನು ಮಾಡದಂತೆ ಸಹಾಯ ಮಾಡುತ್ತದೆ.
- ಶಮೆದಮೆ ಎನ್ನುವುದು ಪವಿತ್ರಾತ್ಮನು ಕ್ರೈಸ್ತರಿಗೆ ಅನುಗ್ರಹಿಸುವ ಫಲವಾಗಿರುತ್ತದೆ ಅಥವಾ ಗುಣಲಕ್ಷಣವಾಗಿರುತ್ತದೆ.
- ಶಮೆದಮೆಯನ್ನು ಉಪಯೋಗಿಸುವ ವ್ಯಕ್ತಿ ತಾನು ಮಾಡಬೇಕಿಂದಿರುವ ಪಾಪವನ್ನು ಮಾಡದೇ ತನ್ನನ್ನು ತಾನು ನಿಯಂತ್ರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಒಬ್ಬ ವ್ಯಕ್ತಿ ಶಮೆದಮೆಯನ್ನು ಹೊಂದಿಕೊಳ್ಳಲು ದೇವರೊಬ್ಬನೇ ಬಲಪಡಿಸುವವನಾಗಿರುತ್ತಾನೆ.

(ಈ ಪದಗಳನ್ನು ಸಹ ನೋಡಿರಿ : ಫಲ, ಪವಿತ್ರಾತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.07:8-9
- 2 ಪೇತ್ರ.01:5-7
- 2 ತಿಮೊಥೆ.03:1-4
- ಗಲಾತ್ಯ.05:23

ಪದ ಡೇಟಾ:

- Strong's: H4623, H7307, G192, G193, G1466, G1467, G1468, G4997

ಶಾಸನ, ಶಾಸನಗಳು

ಪದದ ಅರ್ಥವಿವರಣೆ:

ಶಾಸನ ಎನ್ನುವುದು ಜನರು ಹೇಗೆ ಜೀವಿಸಬೇಕೆನ್ನುವುದರ ಕುರಿತಾಗಿ ಮಾರ್ಗದರ್ಶನವನ್ನು ಕೊಡುವ ವಿಶೇಷವಾಗಿ ಬರೆದುಕೊಂಡಿರುವ ಕಾನೂನುಕ್ರಮವಾಗಿರುತ್ತದೆ.

- "ಶಾಸನ" ಎನ್ನುವ ಪದವು "ನಿಯಮ" ಮತ್ತು "ಆಜ್ಞೆ" ಮತ್ತು "ಕಾನೂನು" ಮತ್ತು "ಕಟ್ಟಳೆ" ಎನ್ನುವ ಪದಗಳಿಗೆ ಇರುವ ಅರ್ಥಗಳಿಗೆ ಸಮಾನಾಂತರವಾಗಿ ಇರುತ್ತದೆ. ಜನರಿಗೆ ಕೊಡುವದಕ್ಕೆ ದೇವರು ತನ್ನ ಪಾಲಕರಿಗೆ ಅಥವಾ ಜನರಿಗೆ ಕೊಟ್ಟಿರುವ ಅಗತ್ಯತೆಗಳನ್ನು ಮತ್ತು ಸೂಚನೆಗಳನ್ನು ಈ ಪದಗಳೆಲ್ಲವೂ ಒಳಗೊಂಡಿರುತ್ತವೆ.
- ಅರಸನಾದ ದಾವೀದನು ಯೆಹೋವನ ಶಾಸನಗಳಲ್ಲಿ ಆನಂದಪಟ್ಟಿದ್ದಾನೆಂದು ಆತನು ಹೇಳಿಕೊಂಡಿದ್ದಾನೆ.
- "ಶಾಸನ" ಎನ್ನುವ ಪದವನ್ನು "ವಿಶೇಷವಾದ ಆಜ್ಞೆ" ಅಥವಾ "ವಿಶೇಷವಾದ ಕಟ್ಟಳೆ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆಜ್ಞೆ, ಕಟ್ಟಳೆ, ಕಾನೂನು, ನಿಯಮ, ಯೆಹೋವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.11:11-13
- ಧರ್ಮೋ.06:20-23
- ಯೆಹೆ.33:14-16
- ಅರಣ್ಯ..19:1-2

ಪದ ಡೇಟಾ:

- Strong's: H2706, H2708, H6490, H7010

ಶಿಕ್ಷಿಸು, ಶಿಕ್ಷಿಸುವುದು, ಶಿಕ್ಷಿಸಿದೆ, ಶಿಕ್ಷಿಸುತ್ತಾ ಇರುವುದು, ಶಿಕ್ಷೆ, ಶಿಕ್ಷಿಸದಿರುವುದು

ಪದದ ಅರ್ಥವಿವರಣೆ:

"ಶಿಕ್ಷಿಸು" ಎನ್ನುವ ಪದಕ್ಕೆ ಎನಾದಾರೊಂದು ತಪ್ಪು ಮಾಡಿದ್ದಕ್ಕಾಗಿ ನಕಾರಾತ್ಮಕವಾದ ಪರಿಣಾಮವನ್ನು ಹೊಂದುವಂತೆ ಯಾರಾದರೊಬ್ಬರನ್ನು ಗುರಿ ಮಾಡುವುದು ಎಂದರ್ಥ. "ಶಿಕ್ಷೆ" ಎನ್ನುವ ಪದವು ತಪ್ಪು ನಡತೆಗೆ ಫಲವಾಗಿ ಕೊಡುವ ನಕಾರಾತ್ಮಕವಾದ ಪರಿಣಾಮವನ್ನು ಸೂಚಿಸುತ್ತದೆ.

- ಅನೇಕಬಾರಿ ಶಿಕ್ಷೆ ಎನ್ನುವುದು ಒಬ್ಬ ವ್ಯಕ್ತಿ ಪಾಪವನ್ನು ಮಾಡದಂತೆ ಪ್ರೇರೇಪಿಸುವುದಕ್ಕೆ ಉದ್ದೇಶಿಸಲಾಗಿರುತ್ತದೆ.
- ಇಸ್ರಾಯೇಲ್ಯರು ದೇವರಿಗೆ ಅವಿಧೇಯರಾದಾಗ ಆತನು ಅವರನ್ನು ಶಿಕ್ಷಿಸಿದನು, ವಿಶೇಷವಾಗಿ ಅವರು ಸುಳ್ಳು ದೇವರುಗಳಿಗೆ ಆರಾಧನೆ ಮಾಡಿದಾಗ ಹೆಚ್ಚಾಗಿ ಶಿಕ್ಷಿಸಿದರು. ಅವರ ಪಾಪದ ಕಾರಣದಿಂದ ಅವರ ಮೇಲೆ ಧಾಳಿ ಮಾಡಿ, ಅವರನ್ನು ಸೆರೆಗೊಯ್ಯುವುದಕ್ಕೆ ದೇವರು ಅವರ ಶತ್ರುಗಳಿಗೆ ಅನುಮತಿ ಕೊಟ್ಟನು.
- ದೇವರು ನೀತಿವಂತನು ಮತ್ತು ನ್ಯಾಯವಂತನು, ಆದ್ದರಿಂದ ಆತನು ತಪ್ಪದೇ ಪಾಪವನ್ನು ಶಿಕ್ಷಿಸಲೇ ಬೇಕು. ಪ್ರತಿಯೊಬ್ಬ ಮನುಷ್ಯನು ದೇವರಿಗೆ ವಿರುದ್ಧವಾಗಿ ಪಾಪ ಮಾಡಿದ್ದಾನೆ ಮತ್ತು ಶಿಕ್ಷೆಗೆ ಅರ್ಹನಾಗಿದ್ದಾನೆ.
- ಪ್ರತಿಯೊಬ್ಬ ಮನುಷ್ಯನು ಮಾಡಿದ ದುಷ್ಟ ಕಾರ್ಯಗಳಿಗೋಸ್ಕರ ಯೇಸುವು ಶಿಕ್ಷೆಯನ್ನು ಅನುಭವಿಸಿದ್ದಾನೆ. ಆತನು ಯಾವ ಪಾಪವೂ ಮಾಡದಿದ್ದರೂ, ಯಾವ ಶಿಕ್ಷೆಗೂ ಅರ್ಹನಾಗದಿದ್ದರೂ ಪ್ರತಿಯೊಬ್ಬರ ಶಿಕ್ಷೆಯನ್ನು ತನ್ನ ಮೇಲೆ ಹಾಕಿಕೊಂಡನು.
- "ಶಿಕ್ಷೆಯಿಲ್ಲದಂತೆ ಹೋಗು" ಮತ್ತು "ಶಿಕ್ಷೆಯಿಲ್ಲದಂತೆ ಬಿಡು" ಎನ್ನುವ ಮಾತುಗಳಿಗೆ ಜನರು ಮಾಡಿದ ತಪ್ಪು ಕಾರ್ಯಗಳಿಗೆ ಅವರನ್ನು ಶಿಕ್ಷಿಸಬಾರದೆಂದು ನಿರ್ಣಯಿಸಿಕೊಳ್ಳುವುದು ಎಂದರ್ಥ. ದೇವರು ತನ್ನ ಜನರು ಪಶ್ಚಾತ್ತಾಪಪಡಬೇಕೆಂದು ಎದುರುನೋಡುತ್ತಾ ಇರುವಾಗ ಪಾಪವು ಶಿಕ್ಷೆ ಹೊಂದದಂತೆ ಹೋಗುವುದಕ್ಕೆ ಆತನು ಅನೇಕಬಾರಿ ಪಾಪಕ್ಕೆ ಅನುಮತಿ ಕೊಡುತ್ತಾನೆ.

(ಈ ಪದಗಳನ್ನು ಸಹ ನೋಡಿರಿ : ನ್ಯಾಯ, ಪಶ್ಚಾತ್ತಾಪ, ನೀತಿ, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.04:17-18
- 2 ಥೆಸ್ಸ.01:9-10
- ಅಪೊ.ಕೃತ್ಯ.04:21-22
- ಅಪೊ.ಕೃತ್ಯ.07:59-60
- ಆದಿ.04:13-15
- ಲೂಕ.23:15-17
- ಮತ್ತಾಯ.25:44-46

ಸತ್ಯವೇದದಿಂದ ಉದಾಹರಣೆಗಳು:

- **13:07** ಅನುಸರಿಸುವುದಕ್ಕೆ ದೇವರು ಅನೇಕವಾದ ನಿಯಮಗಳನ್ನು ಮತ್ತು ಆಜ್ಞೆಗಳನ್ನು ಕೂಡ ಕೊಟ್ಟಿದ್ದಾರೆ. ಈ ಆಜ್ಞೆಗಳಿಗೆ ಜನರು ವಿಧೇಯರಾದರೆ, ಆತನು ಅವರನ್ನು ಆಶೀರ್ವಾದ ಮಾಡುತ್ತೇನೆಂದು ಮತ್ತು ಅವರನ್ನು ಸಂರಕ್ಷಿಸುತ್ತಾನೆಂದು ದೇವರು ವಾಗ್ದಾನ ಮಾಡಿದ್ದಾರೆ. ಒಂದುವೇಳೆ ಅವರು ಅವಿಧೇಯರಾದರೆ, ದೇವರು ಅವರನ್ನು _ ಶಿಕ್ಷಿಸುತ್ತಾನೆ _.
- **16:02** ಇಸ್ರಾಯೇಲ್ಯರು ದೇವರಿಗೆ ಅವಿಧೇಯರಾಗುತ್ತಾ ಬಂದಿದ್ದ ಕಾರಣದಿಂದ, ಅವರನ್ನು ಸೋಲಿಸುವುದಕ್ಕೆ ಅವರ ಶತ್ರುಗಳನ್ನು ಅನುಮತಿಸುವುದರ ಮೂಲಕ ಆತನು ಅವರನ್ನು _ ಶಿಕ್ಷಿಸಿದ್ದಾನೆ _.
- **19:16** ಜನರು ದುಷ್ಟ ಕಾರ್ಯಗಳನ್ನು ಮಾಡುವುದನ್ನು ಬಿಟ್ಟು, ದೇವರಿಗೆ ವಿಧೇಯರಾಗುವುದಕ್ಕೆ ಆರಂಭಿಸದಿದ್ದರೆ, ದೇವರು ಅವರನ್ನು ಅಪರಾಧಿಗಳೆಂದು ತೀರ್ಪು ಮಾಡಿ, ಆತನು ಅವರನ್ನು _ ಶಿಕ್ಷಿಸುತ್ತಾನೆ _ ಎಂದು ಪ್ರವಾದಿಗಳು ಜನರನ್ನು ಎಚ್ಚರಿಸಿದರು.
- **48:06** ಯೇಸು ಪರಿಪೂರ್ಣನಾದ ಮಹಾ ಯಾಜಕನಾಗಿದ್ದಾನೆ, ಯಾಕಂದರೆ ಪ್ರತಿಯೊಬ್ಬನು ಮಾಡಿದ ಪ್ರತಿಯೊಂದು ಪಾಪಕ್ಕಾಗಿ ಆತನು _ ಶಿಕ್ಷೆಯನ್ನು _ ಪಡೆದುಕೊಂಡನು.
- **48:10** ಯೇಸುವಿನಲ್ಲಿ ಯಾರಾದಾರು ನಂಬಿದಾಗ, ಯೇಸುವಿನ ರಕ್ತವು ಆ ವ್ಯಕ್ತಿ ಮಾಡಿದ ಪಾಪವನ್ನು ತೆಗೆದು ಹಾಕುವುದು, ಮತ್ತು ದೇವರ _ ಶಿಕ್ಷೆಯು _ ಅವನ ಮೇಲೆ ಇರುವುದಿಲ್ಲ.
- **49:09** ಆದರೆ ದೇವರು ತನ್ನ ಒಬ್ಬನೇ ಮಗನನ್ನು ಕೊಡುವಷ್ಟು ಹೆಚ್ಚಾಗಿ ಲೋಕದಲ್ಲಿರುವ ಪ್ರತಿಯೊಬ್ಬರನ್ನು ಪ್ರೀತಿಸಿದ್ದಾನೆ. ಆದ್ದರಿಂದ ಯೇಸುವಿನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರು ತಮ್ಮ ಪಾಪಗಳಿಗೆ _ ಶಿಕ್ಷೆಯನ್ನು _ ಹೊಂದಿಕೊಳ್ಳದೆ, ದೇವರೊಂದಿಗೆ ನಿತ್ಯವೂ ಜೀವಿಸುತ್ತಾರೆ.
- **49:11** ಯೇಸು ಪಾಪ ಮಾಡಲಿಲ್ಲ, ಆದರೆ ಆತನು _ ಶಿಕ್ಷೆಯನ್ನು _ ಅನುಭವಿಸುವುದಕ್ಕೆ ಆಯ್ಕೆ ಮಾಡಿಕೊಂಡನು ಮತ್ತು ಲೋಕದಲ್ಲಿ ಪ್ರತಿಯೊಬ್ಬರ ಪಾಪಗಳನ್ನು ತೆಗೆದು ಹಾಕಲು ಮತ್ತು ನಿಮ್ಮ ಪಾಪಗಳನ್ನು ತೆಗೆದು ಹಾಕಲು ಆತನು ತನ್ನನ್ನು ಪರಿಪೂರ್ಣವಾದ ಯಜ್ಞವನ್ನಾಗಿ ಅರ್ಪಿಸಿಕೊಂಡಿದ್ದಾನೆ.

ಪದ ಡೇಟಾ:

- Strong's: H3027, H3256, H4148, H4941, H5221, H5414, H6031, H6064, H6213, H6485, H7999, H8199, G1349, G1556, G1557, G2849, G3811, G5097

ಶೋಕಿಸು, ದುಃಖಿಸುತ್ತಾನೆ, ಪ್ರಲಾಪಿಸಿದೆ, ಪ್ರಲಾಪಿಸುವುದು, ದುಃಖಿಸುವನು, ದುಃಖಿಸುವವರು, ದುಃಖಭರಿತ, ದುಃಖಭರಿತವಾಗಿ

ಸತ್ಯಾಂಶಗಳು:

"ಶೋಕಿಸು" ಮತ್ತು "ಶೋಕಿಸುವುದು" ಎನ್ನುವ ಪದಗಳು ಆಳವಾದ ಕೊರಗನ್ನು ಸೂಚಿಸುತ್ತದೆ, ಸಾಧಾರಣವಾಗಿ ಒಬ್ಬರ ಮರಣಕ್ಕೆ ಪ್ರತಿಸ್ಪಂದನೆಯಾಗಿ ತೋರಿಸುವ ಮನೋಭಾವವಾಗಿರುತ್ತದೆ.

- ಅನೇಕ ಸಂಸ್ಕೃತಿಗಳಲ್ಲಿ ಶೋಕಿಸುವುದನ್ನು ಈ ಬಾಧೆಯನ್ನು ಮತ್ತು ಕೊರಗನ್ನು ತೋರಿಸುಕೊಳ್ಳುವ ನಿರ್ದಿಷ್ಟವಾದ ಬಾಹ್ಯ ವರ್ತನೆಗಳಾಗಿರುತ್ತವೆ.
- ಇಸ್ರಾಯೇಲ್ಯರು ಮತ್ತು ಪುರಾತನ ಕಾಲಗಳಲ್ಲಿರುವ ಇತರ ಗುಂಪುಗಳು ಈ ಪ್ರಲಾಪವನ್ನು ಜೋರಾಗಿ ಅಳುತ್ತಾ ಮತ್ತು ದುಃಖಿಸುತ್ತಾ ವ್ಯಕ್ತಪಡಿಸುತ್ತಾರೆ. ಅವರು ಗೋಣಿ ತಟ್ಟುಗಳನ್ನು ಧರಿಸಿಕೊಂಡು, ಅವರ ಮೇಲೆ ಬೂದಿಯನ್ನು ಹಾಕಿಕೊಳ್ಳುತ್ತಿದ್ದರು.
- ಸಾಧಾರಣವಾಗಿ ಬಾಡಿಗೆಗೆ ಕರೆ ಕಳುಹಿಸಲ್ಪಟ್ಟ ಪ್ರಲಾಪಿಸುವವರು ತಮ್ಮ ಮುಂದಿರುವ ಶವವನ್ನು ಸಮಾಧಿಯೊಳಗೆ ಇಡುವುದಕ್ಕೆ ತೆಗೆದುಕೊಂಡು ಹೋಗುವವರೆಗೂ ಜೋರಾಗಿ ಅಳುತ್ತಾ, ದುಃಖಿಸುತ್ತಾ ಇರುತ್ತಾರೆ.
- ಶೋಕಿಸುವ ಕಾಲಾವಧಿಯು ಏಳು ದಿನಗಳು ಇರುತ್ತಿತ್ತು, ಹೆಚ್ಚಾದರೆ ಮೂವತ್ತು ದಿನಗಳವರೆಗೆ ಪ್ರಲಾಪಿಸುತ್ತಿದ್ದರು (ಮೋಶೆ ಮತ್ತು ಆರೋನನ ಕುರಿತಾಗಿ ದುಃಖಪಟ್ಟಿದ್ದರು) ಅಥವಾ ಇನ್ನೂ ಹೆಚ್ಚಂದರೆ ಎಪ್ಪತ್ತು ದಿನಗಳು ಅಳುತ್ತಿದ್ದರು (ಯಾಕೋಬಿನಗಾಗಿ ದುಃಖಪಟ್ಟಿದ್ದರು).
- ಪಾಪದ ಕಾರಣದಿಂದ "ಶೋಕಿಸುವುದರದ" ಕುರಿತಾಗಿ ಮಾತನಾಡುವುದಕ್ಕೆ ಸತ್ಯವೇದವು ಅಲಂಕಾರಿಕ ಪದವನ್ನು ಉಪಯೋಗಿಸುತ್ತಿತ್ತು. ಪಾಪವು ದೇವರನ್ನು ಮತ್ತು ಜನರನ್ನು ನೋಯಿಸಿರುವ ಕಾರಣದಿಂದ ಇದು ತುಂಬಾ ಹೆಚ್ಚಾದ ಕೊರಗುಪಡುವುದನ್ನು ಸೂಚಿಸುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಗೋಣಿ ತಟ್ಟು, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.15:34-35
- 2 ಸಮು.01:11-13
- ಆದಿ.23:1-2
- ಲೂಕ.07:31-32
- ಮತ್ತಾಯ.11:16-17

ಪದ ಡೇಟಾ:

- Strong's: H56, H57, H60, H205, H578, H584, H585, H1058, H1065, H1068, H1669, H1671, H1897, H1899, H1993, H4553, H4798, H5092, H5098, H5110, H5594, H6937, H6941, H6969, H7300, H8386, G2354, G2875, G3602, G3996, G3997

ಶ್ರಮೆ, ಶ್ರಮೆಗಳು, ಕೆಲಸ, ಕಠಿಣ ಕೆಲಸ

ಪದದ ಅರ್ಥವಿವರಣೆ:

“ಶ್ರಮೆ” ಎನ್ನುವ ಪದವು ಯಾವುದೇ ಒಂದು ಕೆಲಸದಲ್ಲಿ ಹೆಚ್ಚಾಗಿ ಕಷ್ಟಪಡುವುದನ್ನು ಸೂಚಿಸುತ್ತದೆ.

- ಸಾಧಾರಣವಾಗಿ, ಶಕ್ತಿಯನ್ನು ಉಪಯೋಗಿಸಿಕೊಳ್ಳುವ ಯಾವುದೇ ಒಂದು ಕೆಲಸ ಕಾರ್ಯವನ್ನು ಶ್ರಮೆ ಎನ್ನುತ್ತಾರೆ. ಈ ಪದವು ಕೊಟ್ಟ ಕೆಲಸವು ತುಂಬಾ ಕಠಿಣವಾಗಿರುತ್ತದೆ ಎನ್ನುವುದನ್ನು ಅನೇಕಸಾರಿ ತೋರಿಸುತ್ತದೆ.
- ಯಾವುದೇ ರೀತಿಯ ಶ್ರಮೆಯನ್ನು ಮಾಡುವ ಒಬ್ಬ ವ್ಯಕ್ತಿಯನ್ನು ಕಾರ್ಮಿಕ ಎನ್ನುತ್ತಾರೆ.
- ಆಂಗ್ಲ ಭಾಷೆಯಲ್ಲಿ “ಶ್ರಮೆ (ಅಥವಾ ಲೇಬರ್)” ಎನ್ನುವ ಪದವನ್ನು ಜನನ ಕೊಡುವ ವಿಧಾನದ ಭಾಗದಲ್ಲಿ ಉಪಯೋಗಿಸುತ್ತಾರೆ. ಈ ಸಂದರ್ಭಕ್ಕೆ ಇತರ ಭಾಷೆಗಳಲ್ಲಿ ಸಂಪೂರ್ಣವಾಗಿ ಬೇರೆ ಬೇರೆ ಪದಗಳನ್ನು ಉಪಯೋಗಿಸುತ್ತಾರೆ.
- “ಶ್ರಮೆ” ಎನ್ನುವ ಪದವನ್ನು ಅನುವಾದ ಮಾಡುವ ವಿಧಾನದಲ್ಲಿ “ಕೆಲಸ” ಅಥವಾ “ಕಠಿಣ ಕೆಲಸ” ಅಥವಾ “ಕಷ್ಟಕರವಾದ ಕೆಲಸ” ಅಥವಾ “ಕೆಲಸವನ್ನು ಹೆಚ್ಚಾಗಿ ಮಾಡುವುದು” ಎನ್ನುವ ಪದಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಕಠಿಣ, ಪ್ರಸವ ವೇದನೆಗಳು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಥೆಸ್ಸ.02:09
- 1 ಥೆಸ್ಸ.03:05
- ಗಲಾತ್ಯ.04:10-11
- ಯಾಕೋಬ.05:04
- ಯೋಹಾನ.04:38
- ಲೂಕ.10:02
- ಮತ್ತಾಯ.10:10

ಪದ ಡೇಟಾ:

- Strong’s: H3018, H3021, H3022, H3205, H4522, H4639, H5447, H5450, H5647, H5656, H5998, H5999, H6001, H6089, H6468, H6635, G75, G2038, G2040, G2041, G2872, G2873, G4866, G4904

ಸಂಕಟ, ಸಂಕಟಗಳು, ಸಂಕಟಪಟ್ಟಿದೆ, ಸಂಕಟಪಡುವುದು, ಸಂಕಟಗಾರ, ಸಂಕಟ ಕೊಡು

ಪದದ ಅರ್ಥವಿವರಣೆ:

“ಸಂಕಟ” ಎನ್ನುವುದು ಅತೀ ಹೆಚ್ಚಾದ ಕಷ್ಟಕರ ಮತ್ತು ದುಃಖಕರವಾದ ಜೀವನದಲ್ಲಿನ ಅನುಭವ. ಒಬ್ಬ ವ್ಯಕ್ತಿಗೆ “ಸಂಕಟ” ಕೊಡು ಎಂದರೆ ಆ ವ್ಯಕ್ತಿಯನ್ನು “ಬಾಧೆಗೆ’ ಒಳಗಾಗಿಸು ಅಥವಾ ಯಾರಾದರೊಬ್ಬರು ಯಾತನೆಪಡುವಂತೆ ಮಾಡು ಎಂದರ್ಥವಾಗಿರುತ್ತದೆ. “ಸಂಕಟಪಡು” ಎನ್ನುವ ಪದಕ್ಕೆ ಯಾವುದಾದರೊಂದರ ಕುರಿತಾಗಿ ಯಾತನೆಪಡುವುದು ಅಥವಾ ಕುಗ್ಗಿ ಹೋಗುವ ಭಾವನೆಯನ್ನು ಹೊಂದಿರುವುದು ಎಂದರ್ಥ.

- ಸಂಕಟಗಳು ಒಬ್ಬ ವ್ಯಕ್ತಿಯನ್ನು ನೋಯಿಸುವ ಭೌತಿಕ, ಭಾವನಾತ್ಮಕ ಅಥವಾ ಆತ್ಮೀಯ ಸಂಗತಿಗಳಾಗಿರಬಹುದು.
- ಸತ್ಯವೇದದಲ್ಲಿ ಅನೇಕಬಾರಿ ಸಂಕಟಗಳು ವಿಶ್ವಾಸಿಗಳು ತಮ್ಮ ನಂಬಿಕೆಯಲ್ಲಿ ಬೆಳೆಯುವುದಕ್ಕೆ ಮತ್ತು ಪರಿಪಕ್ವವುಳ್ಳವರಾಗಿರುವುದಕ್ಕೆ ಸಹಾಯ ಮಾಡಲು ದೇವರು ಉಪಯೋಗಿಸುವ ಪರೀಕ್ಷೆಯ ಸಮಯಗಳಾಗಿರುತ್ತವೆ.
- ಹಳೇ ಒಡಂಬಡಿಕೇ ಉಪಯೋಗಿಸುವ “ಸಂಕಟ” ಎನ್ನುವ ಪದವು ದೇವರನ್ನು ತಿರಸ್ಕರಿಸಿದ ಮತ್ತು ನೈತಿಕವಾಗಿ ಕೆಟ್ಟುಹೋಗಿರುವ ಜನರ ಗುಂಪುಗಳ ಮೇಲೆ ಬಂದಿರುವ ತೀರ್ಪನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.

ಅನುವಾದ ಸಲಹೆಗಳು:

- “ಸಂಕಟ” ಅಥವಾ “ಸಂಕಟಗಳು” ಎನ್ನುವ ಪದವು “ಅಪಾಯ” ಅಥವಾ “ನಡೆದ ನೋವಿನ ವಿಷಯಗಳು” ಅಥವಾ “ಹಿಂಸೆ” ಅಥವಾ “ಕಷ್ಟಕರವಾದ ಅನುಭವಗಳು” ಅಥವಾ “ಯಾತನೆ” ಎಂದೂ ಅನುವಾದ ಮಾಡಬಹುದು.
- “ಸಂಕಟ ಹೊಂದಿದೆ” ಎನ್ನುವ ಪದವು “ಯಾತನೆಯಿಂದ ಹಾದುಹೋಗುವುದು” ಅಥವಾ “ಭಯಾನಕವಾದ ಯಾತನೆಯನ್ನು ಭಾವಿಸುವುದು” ಅಥವಾ “ಚಿಂತಿಸುವುದು” ಅಥವಾ “ಕಳವಳ” ಅಥವಾ “ಯಾತನೆಪಟ್ಟಿದೆ” ಅಥವಾ “ಭಯಭೀತಿಗೊಳಗಾದೆ” ಅಥವಾ “ತೊಂದರೆ ಮಾಡಿದೆ” ಎಂದು ಅರ್ಥಗಳು ಕೊಡುವ ಮಾತುಗಳನ್ನು ಅಥವಾ ಪದಗಳನ್ನು ಉಪಯೋಗಿಸಿ ಅನುವಾದ ಮಾಡಬಹುದು.
- “ಆಕೆಗೆ ಸಂಕಟ ಕೊಡಬೇಡ” ಎನ್ನುವ ಮಾತನ್ನು “ಆಕೆಯನ್ನು ಬಾಧಿಸಬೇಡ” ಅಥವಾ “ಆಕೆಯನ್ನು ವಿಮರ್ಶಿಸಬೇಡ” ಎಂದೂ ಅನುವಾದ ಮಾಡಬಹುದು.

“ಸಂಕಟ ದಿನ” ಅಥವಾ “ಸಂಕಟ ಸಮಯಗಳು” ಎನ್ನುವ ಮಾತನ್ನು “ನೀನು ಯಾತನೆಯನ್ನು ಅನುಭವಿಸುವ ಸಮಯ” ಅಥವಾ “ನಿನಗೆ ಸಂಕಷ್ಟಗಳು ಬಂದ ಸಮಯ” ಅಥವಾ “ಯಾತನೆಯನ್ನು ಹುಟ್ಟಿಸುವ ಸಂಘಟನೆಗಳು ದೇವರು ಉಂಟು ಮಾಡಿದಾಗ” ಎಂದೂ ಅನುವಾದ ಮಾಡಬಹುದು.

- “ಸಂಕಟಪಡಿಸು” ಅಥವಾ “ಸಂಕಟ ತರು” ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನದಲ್ಲಿ “ಯಾತನೆಪಡಿಸುವ ವಿಷಯಗಳು ನಡೆಯುವಂತೆ ಮಾಡು” ಅಥವಾ “ಸಂಕಷ್ಟಗಳನ್ನು ಉಂಟು ಮಾಡು” ಅಥವಾ “ಅತೀ ಕಷ್ಟಕರವಾದ ವಿಷಯಗಳು ಅವರು ಅನುಭವಿಸುವಂತೆ ಮಾಡು” ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ತೊಂದರೆ ಕೊಡು, ಹಿಂಸಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.18:18-19
- 2 ಪೂರ್ವ.25:18-19
- ಲೂಕ.24:38-40
- ಮತ್ತಾಯ.24:6-8
- ಮತ್ತಾಯ.26:36-38

ಪದ ಡೇಟಾ:

- Strong's: H205, H598, H926, H927, H928, H1204, H1205, H1607, H1644, H1804, H1993, H2000, H2113, H2189, H2560, H2960, H4103, H5590, H5753, H5916, H5999, H6031, H6040, H6470, H6696, H6862, H6869, H6887, H7264, H7267, H7451, H7481, H7489, H7515, H7561, H8513, G387, G1298, G1613, G1776, G2346, G2347, G2350, G2360, G2553, G2873, G3636, G3926, G3930, G3986, G4423, G4660, G5015, G5016, G5182

ಸಂತಾನದವರು

ಪದದ ಅರ್ಥವಿವರಣೆ:

“ಸಂತಾನದವರು” ಎನ್ನುವ ಪದವು ಜನರ ಅಥವಾ ಪ್ರಾಣಿಗಳ ಜೈವಿಕ ಸಂತಾನದವರನ್ನು ಸಾಧಾರಣವಾಗಿ ಸೂಚಿಸುತ್ತದೆ.

- ಸತ್ಯವೇದದಲ್ಲಿ ಅನೇಕಬಾರಿ “ಸಂತಾನದವರು’ ಎನ್ನುವ ಪದಕ್ಕೆ “ಮಕ್ಕಳು” ಅಥವಾ “ವಂಶಸ್ಥರು” ಎನ್ನುವ ಪದಗಳಿಗೆ ಬರುವ ಅರ್ಥವನ್ನೇ ಹೊಂದಿರುತ್ತದೆ.
- “ಬೀಜ” ಎನ್ನುವ ಪದವನ್ನು ಕೆಲವೊಂದುಬಾರಿ ಸಂತಾನದವರನ್ನು ಸೂಚಿಸುವುದಕ್ಕೆ ಅಲಂಕಾರಿಕ ಭಾಷೆಯಲ್ಲಿ ಉಪಯೋಗಿಸಿರುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ವಂಶಸ್ಥರು, ಬೀಜ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.17:28-29
- ವಿಮೋ.13:11-13
- ಆದಿ.24:5-7
- ಯೆಶಯಾ.41:8-9
- ಯೋಬ.05:23-25
- ಲೂಕ.03:7
- ಮತ್ತಾಯ.12:33-35

ಪದ ಡೇಟಾ:

- Strong's: H1121, H2233, H5209, H6363, H6529, H6631, G1081, G1085

ಸಂದೇಶವಾಹಕ, ಸಂದೇಶವಾಹಕರು

ಸತ್ಯಾಂಶಗಳು:

“ಸಂದೇಶವಾಹಕ” ಎನ್ನುವ ಪದವು ಇತರರಿಗೆ ಹೇಳುವದಕ್ಕೆ ಒಂದು ಸಂದೇಶವನ್ನು ಹೊಂದಿರುವ ವ್ಯಕ್ತಿಯನ್ನು ಸೂಚಿಸುತ್ತದೆ.

- ಪುರಾತನ ಕಾಲಗಳಲ್ಲಿ ಸಂದೇಶವಾಹಕನನ್ನು ಯುದ್ಧದಲ್ಲಿ ನಡೆದ ಸಂಗತಿಗಳನ್ನು ಪಟ್ಟಣದಲ್ಲಿರುವ ಜನರಿಗೆ ಹೇಳಲು ಯುದ್ಧರಂಗದಿಂದ ಕಳುಹಿಸಲ್ಪಡುತ್ತಿದ್ದರು.
- ದೂತನು ದೇವರಿಂದ ಕಳುಹಿಸಲ್ಪಟ್ಟ ಒಂದು ವಿಶೇಷವಾದ ಸಂದೇಶವಾಹಕನಾಗಿರುತ್ತಾನೆ, ಈ ದೂತನು ಜನರಿಗೆ ದೇವರ ಸಂದೇಶಗಳನ್ನು ಹೇಳುತ್ತಾನೆ. “ದೂತನು” ಎನ್ನುವ ಪದವನ್ನು ಕೆಲವೊಂದು ಭಾಷೆಗಳಲ್ಲಿ ‘ಸಂದೇಶವಾಹಕ” ಎಂದೂ ಅನುವಾದ ಮಾಡುತ್ತಾರೆ.
- ಮೆಸ್ಸೀಯನನ್ನು ಜನರೆಲ್ಲರು ಸ್ವೀಕರಿಸುವುದಕ್ಕೆ ಮತ್ತು ಮೆಸ್ಸೀಯನು ಬರುತ್ತಿದ್ದಾನೆಂದು ಪ್ರಕಟಿಸುವುದಕ್ಕೆ ಯೇಸುವಿನಗಿಂತ ಮುಂಚಿತವಾಗಿ ಬಂದ ಸಂದೇಶವಾಹಕನೆಂದು ಸ್ನಾನೀಕನಾದ ಯೋಹಾನ ಕರೆಯಲ್ಪಟ್ಟಿದ್ದನು.
- ಯೇಸುವಿನ ಅಪೊಸ್ತಲರೆಲ್ಲರು ಆತನ ಸಂದೇಶವಾಹಕರಾಗಿದ್ದರು, ಇವರು ದೇವರ ರಾಜ್ಯದ ಕುರಿತಾಗಿರುವ ಸುವಾರ್ತೆಯನ್ನು ಇತರ ಜನರೊಂದಿಗೆ ಹಂಚಿಕೊಳ್ಳುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ದೂತನು, ಅಪೊಸ್ತಲ, ಯೋಹಾನ (ಸ್ನಾನಿಕನು))

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.19:1-3
- 1 ಸಮು.06:21
- 2 ಅರಸ.01:1-2
- ಲೂಕ.07:27-28
- ಮತ್ತಾಯ.11:9-10

ಪದ ಡೇಟಾ:

- Strong's: H1319, H4397, H4398, H5046, H5894, H6735, H6737, H7323, H7971, G32, G652

ಸಂಪ್ರದಾಯ

ಪದದ ಅರ್ಥವಿವರಣೆ:

“ಸಂಪ್ರದಾಯ” ಎನ್ನುವ ಪದವು ಅನೇಕ ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಅಭ್ಯಾಸ ಅಥವಾ ಆಚಾರವನ್ನು ಸೂಚಿಸುತ್ತದೆ ಮತ್ತು ಇದು ಮುಂದೆ ಬರುವಂತಹ ತಲೆಮಾರುಗಳ ಜನರಿಗೆ ಕೊಡಲ್ಪಡುತ್ತದೆ.

- ಅನೇಕಬಾರಿ ಸತ್ಯವೇದದಲ್ಲಿ “ಸಂಪ್ರದಾಯಗಳು” ಎನ್ನುವ ಪದವು ದೇವರ ಆಜ್ಞೆಗಳನ್ನು ಬಿಟ್ಟು, ಜನರು ತಯಾರಿಸಿಕೊಂಡಿರುವ ಹವ್ಯಾಸಗಳನ್ನು ಮತ್ತು ಬೋಧನೆಗಳನ್ನು ಸೂಚಿಸುತ್ತದೆ. “ಮನುಷ್ಯರ ಸಂಪ್ರದಾಯಗಳು” ಅಥವಾ “ಮನುಷ್ಯ ಸಂಪ್ರದಾಯ” ಎನ್ನುವ ಮಾತು ಇದನ್ನು ಸ್ಪಷ್ಟ ಮಾಡುತ್ತದೆ.
- “ಹಿರಿಯರ ಸಂಪ್ರದಾಯಗಳು” ಅಥವಾ “ನನ್ನ ಪಿತೃಗಳ ಸಂಪ್ರದಾಯಗಳು” ಎನ್ನುವ ಮಾತುಗಳು ದೇವರು ಮೋಶೆಯ ಮೂಲಕ ಇಸ್ರಾಯೇಲ್ಯರಿಗೆ ಕೊಟ್ಟಿರುವ ಧರ್ಮಶಾಸ್ತ್ರಕ್ಕೆ ಯೆಹೂದ್ಯರ ನಾಯಕರು ಇನ್ನೂ ಹೆಚ್ಚಾಗಿ ಜೋಡಿಸಿದ ಅಭ್ಯಾಸಗಳು ಮತ್ತು ಯೆಹೂದ್ಯ ಆಚಾರಗಳನ್ನು ವಿಶೇಷವಾಗಿ ಸೂಚಿಸುತ್ತದೆ. ಜೋಡಿಸಲ್ಪಟ್ಟ ಈ ಆಚಾರಗಳು ದೇವರಿಂದ ಬರದಿದ್ದರೂ, ನೀತಿವಂತರಾಗುವುದಕ್ಕೆ ಅವುಗಳಿಗೂ ವಿಧೇಯರಾಗಿರಬೇಕೆಂದು ಜನರು ಆಲೋಚನೆ ಮಾಡಿದ್ದರು.
- ದೇವರಿಂದ ಬಂದಿರುವ, ಪೌಲನು ಮತ್ತು ಇತರ ಅಪೊಸ್ತಲರು ಹೊಸ ವಿಶ್ವಾಸಿಗಳಿಗೆ ಬೋಧಿಸಿರುವ ಕ್ರೈಸ್ತ ಅಭ್ಯಾಸದ ಕುರಿತಾದ ಬೋಧನೆಗಳನ್ನು ಸೂಚಿಸುವುದಕ್ಕೆ ವಿಭಿನ್ನವಾದ ವಿಧಾನದಲ್ಲಿ “ಸಂಪ್ರದಾಯ” ಎನ್ನುವ ಪದವನ್ನು ಅಪೊಸ್ತಲನಾದ ಪೌಲನು ಉಪಯೋಗಿಸಿದ್ದಾನೆ.
- ಆಧುನಿಕ ಕಾಲದಲ್ಲಿ, ಅನೇಕಮಂದಿ ಕ್ರೈಸ್ತರು ಅನುಸರಿಸುತ್ತಿರುವ ಸಂಪ್ರದಾಯಗಳು ಸತ್ಯವೇದದಲ್ಲಿಲ್ಲ, ಆದರೆ ಚಾರಿತ್ರಾತ್ಮಕವಾಗಿ ಆಚಾರಗಳ ಮತ್ತು ಅಭ್ಯಾಸಗಳ ಫಲವಾಗಿರುತ್ತವೆ. ಈ ಸಂಪ್ರದಾಯಗಳು ತಪ್ಪದೇ ಸತ್ಯವೇದದಲ್ಲಿ ದೇವರು ನಮಗೆ ಬೋಧಿಸಿರುವ ಬೆಳಕಿನಲ್ಲಿ ಪರಿಶೀಲನೆಯಲ್ಲಿಡಬೇಕಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಅಪೊಸ್ತಲ, ನಂಬು, ಕ್ರೈಸ್ತ, ಪೂರ್ವಜ, ತಲೆಮಾರು, ಯೆಹೂದ್ಯ, ಧರ್ಮಶಾಸ್ತ್ರ, ಮೋಶೆ)

ಸತ್ಯವೇದದ ವಾಕ್ಯಗಳು:

- 2 ಥೆಸ್ಸ 3:6-9
- ಕೊಲೊ 2:8
- ಗಲಾತ್ಯ 1:13-14
- ಮಾರ್ಕ 7:2
- ಮತ್ತಾಯ 15:3

ಪದ ಡೇಟಾ:

- Strong's: G38620

ಸಂಬಂಧಗಳನ್ನು ಹೊಂದಿರುವುದು, ಪ್ರೀತಿ ಮಾಡುವುದು, ಇನ್ನೊಬ್ಬರೊಂದಿಗೆ ಮಲಗುವುದು, ಮಲಗಿಸುವುದು, ಇನ್ನೊಬ್ಬರೊಂದಿಗೆ ಮಲಗಿದೆ, ಇನ್ನೊಬ್ಬರೊಂದಿಗೆ ಮಲಗುತ್ತಾಯಿರುವುದು

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ ಈ ಪದಗಳೆಲ್ಲವೂ ಲೈಂಗಿಕ ಸಂಬಂಧಗಳನ್ನು ಸೂಚಿಸುವುದಕ್ಕೆ ಉಪಯೋಗಿಸಿರುವ ಸವ್ಯೋಕ್ತಿಗಳಾಗಿರುತ್ತವೆ. (ನೋಡಿರಿ; ಸವ್ಯೋಕ್ತಿಗಳು)

- "ಒಬ್ಬರೊಂದಿಗೆ ಮಲಗುವುದು" ಎನ್ನುವ ಮಾತು ಸಾಧಾರಣವಾಗಿ ಆ ವ್ಯಕ್ತಿಯೊಂದಿಗೆ ಲೈಂಗಿಕ ಸಂಬಂಧಗಳನ್ನು ಹೊಂದಿರುವುದನ್ನು ಸೂಚಿಸುತ್ತದೆ. ಈ ಮಾತಿಗೆ ಭೂತಕಾಲದ ಮಾತು "ಮಲಗಿದೆ" ಎಂದಾಗಿರುತ್ತದೆ.
- ಹಳೇ ಒಡಂಬಡಿಕೆ ಪುಸ್ತಕವಾಗಿರುವ "ಪರಮಗೀತೆಗಳು" ಎನ್ನುವ ಪುಸ್ತಕದಲ್ಲಿ "ಪ್ರೀತಿ" ಎನ್ನುವ ಪದವನ್ನು ಅನುವಾದ ಮಾಡುವುದಕ್ಕೆ "ಪ್ರೀತಿ ಮಾಡುವುದು" ಎನ್ನುವ ಪದವನ್ನು ಯುಎಲ್.ಬಿ ಉಪಯೋಗಿಸುತ್ತದೆ, ಇದು ಲೈಂಗಿಕ ಸಂಬಂಧಗಳಿಗೆ ಸೂಚಿಸುವ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ. "ಇನ್ನೊಬ್ಬರೊಂದಿಗೆ ಪ್ರೀತಿಯನ್ನು ಮಾಡು" ಎನ್ನುವ ಮಾತಿಗೆ ಈ ಪದವು ಸಂಬಂಧಪಟ್ಟಿರುತ್ತದೆ.

ಅನುವಾದ ಸಲಹೆಗಳು:

- ಈ ಮಾತುಗಳು ಮದುವೆ ಮಾಡಿಕೊಂಡವರಿಗೆ ಅಥವಾ ಮದುವೆ ಮಾಡಿಕೊಳ್ಳದೇ ಇರುವವರೆಗೂ ಅನೇಕವಾದ ಸಂಬಂಧಗಳ ಮೇಲೆ ಆಧಾರಪಟ್ಟು, ಅನೇಕವಾದ ಸಂದರ್ಭಗಳಲ್ಲಿ ಈ ಪದಗಳಿಗೆ ಅನೇಕವಾದ ಮಾತುಗಳನ್ನು ಕೆಲವೊಂದು ಭಾಷೆಗಳಲ್ಲಿ ಉಪಯೋಗಿಸಿರುತ್ತಾರೆ, ಈ ಪದಗಳಿಗೆ ಮಾಡುವ ಅನುವಾದವು ಪ್ರತಿಯೊಂದು ಸಂದರ್ಭದಲ್ಲಿ ಸರಿಯಾದ ಅರ್ಥವನ್ನು ಹೊಂದಿರುವಂತೆ ನೋಡಿಕೊಳ್ಳುವುದು ತುಂಬಾ ಪ್ರಾಮುಖ್ಯವಾದ ವಿಷಯ.
- ಸಂದರ್ಭಾನುಸಾರವಾಗಿ ಈ ರೀತಿಯ ಮಾತುಗಳನ್ನು "ಒಬ್ಬರೊಂದಿಗೆ ಮಲಗು" ಎನ್ನುವದನ್ನು ಅನುವಾದ ಮಾಡುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತವೆ: "ಮಲಗು" ಅಥವಾ "ಪ್ರೀತಿ ಮಾಡು" ಅಥವಾ "ಒಬ್ಬರೊಂದಿಗೆ ಸಹವಾಸ ಮಾಡು"
- "ಒಬ್ಬರೊಂದಿಗೆ ಸಂಬಂಧಗಳನ್ನು ಹೊಂದಿರು" ಎನ್ನುವ ಮಾತನ್ನು ಅನುವಾದ ಮಾಡುವ ವಿಧಾನಗಳಲ್ಲಿ "ಲೈಂಗಿಕ ಸಂಬಂಧಗಳನ್ನು ಹೊಂದಿರು" ಅಥವಾ "ವೈವಾಹಿಕ ಸಂಬಂಧಗಳನ್ನು ಹೊಂದಿರು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ಪ್ರೀತಿ ಮಾಡು" ಎನ್ನುವ ಮಾತನ್ನು "ಪ್ರೀತಿ ಮಾಡುವುದು" ಅಥವಾ "ಸಹವಾಸದಲ್ಲಿರುವುದು" ಎಂದೂ ಅನುವಾದ ಮಾಡಬಹುದು, ಅಥವಾ ಅನುವಾದ ಭಾಷೆಯಲ್ಲಿ ಈ ಪದವನ್ನು ಅನುವಾದ ಮಾಡುವ ಸ್ವಾಭಾವಿಕ ವಿಧಾನದಲ್ಲಿರುವ ಮಾತು ಇರಬಹುದು.
- ಈ ಉದ್ದೇಶವನ್ನೇ ಅನುವಾದಿಸಲು ಉಪಯೋಗಿಸಲ್ಪಟ್ಟಿರುವ ಪದಗಳು ಬೈಬಲ್ ಅನುವಾದವನ್ನು ಮಾಡುವ ಜನರಿಗೆ ಅಂಗೀಕೃತವಾಗಿರುತ್ತವೆಯೆಂದು ಪರಿಶೀಲನೆ ಮಾಡುವುದು ತುಂಬಾ ಪ್ರಾಮುಖ್ಯ.

(ಈ ಪದಗಳನ್ನು ಸಹ ನೋಡಿರಿ : ಲೈಂಗಿಕ ಅನೈತಿಕತೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಕೊರಿಂಥ.05:1-2
- 1 ಸಮು.01:19-20
- ಧರ್ಮೋ.21:13-14
- ಆದಿ.19:4-5
- ಮತ್ತಾಯ.01:24-25

ಪದ ಡೇಟಾ:

- Strong's: H160, H935, H1540, H2181, H2233, H3045, H3212, H6172, H7250, H7901, H7903, G1097

ಸಂಹರಿಸು, ಸಂಹರಿಸುವುದು, ನಿರ್ಮೂಲನ

ಪದದ ಅರ್ಥವಿವರಣೆ:

ಏನಾದರೊಂದನ್ನು ಸಂಹರಿಸು ಎಂದರೆ ಅದನ್ನು ಸಂಪೂರ್ಣವಾಗಿ ಕೊನೆಗೊಳ್ಳುವಂತೆ ಮಾಡು ಎಂದರ್ಥ. ಇದರಿಂದ ಅದು ಇನ್ನೆಂದಿಗೂ ಅಸ್ತಿತ್ವದಲ್ಲಿರಬಾರದು.

- "ಸಂಹಾರಕ" ಎನ್ನುವದಕ್ಕೆ "ಸಂಹರಿಸುವ ವ್ಯಕ್ತಿ" ಎಂದು ಅಕ್ಷರಾರ್ಥವಿದೆ.
- ಈ ಪದವನ್ನು ಹಳೇ ಒಡಂಬಡಿಕೆಯಲ್ಲಿ ಅನೇಕಬಾರಿ ಇತರ ಜನರನ್ನು ಅಂದರೆ ಆಕ್ರಮಿಸುವ ಸೈನ್ಯವನ್ನು ಸಂಹರಿಸುವ ಪ್ರತಿಯೊಬ್ಬರಿಗೆ ಸಾಧಾರಣವಾಗಿ ಉಪಯೋಗಿಸಲಾಗಿರುತ್ತದೆ,
- ಐಗುಪ್ತದಲ್ಲಿ ಚೊಚ್ಚಲ ಸಂತಾನವನ್ನು ಸಾಯಿಸುವುದಕ್ಕೆ ದೇವರು ದೂತನನ್ನು ಕಳುಹಿಸಿದಾಗ, ಆ ದೂತನನ್ನು "ಚೊಚ್ಚಲ ಸಂತಾನದ ಸಂಹಾರಕ" ಎಂದು ಸೂಚಿಸಲಾಗಿದೆ. ಇದನ್ನು "ಚೊಚ್ಚಲ ಸಂತಾನವಾಗಿರುವ ಗಂಡು ಮಕ್ಕಳನ್ನು ಸಾಯಿಸುವ ದೂತ" ಎಂದೂ ಅನುವಾದ ಮಾಡಬಹುದು.
- ಅಂತ್ಯ ಕಾಲದ ಕುರಿತಾಗಿ ಪ್ರಕಟನೆ ಗ್ರಂಥದಲ್ಲಿ ಸೈತಾನನನ್ನು ಅಥವಾ ಇತರ ದುಷ್ಟ ಆತ್ಮವನ್ನು "ಸಂಹಾರಕ" ಎಂದು ಕರೆಯಲಾಗಿದೆ. ಇವನೇ "ಸಂಹಾರಕನು" ಯಾಕಂದರೆ ದೇವರು ಉಂಟು ಮಾಡಿದ ಪ್ರತಿಯೊಂದನ್ನು ನಾಶಗೊಳಿಸುವುದು ಮತ್ತು ಸಂಹರಿಸುವುದೇ ಅವನ ಮುಖ್ಯ ಉದ್ದೇಶ.

(ಈ ಪದಗಳನ್ನು ಸಹ ನೋಡಿರಿ: ದೂತ, ಐಗುಪ್ತ, ಪಸ್ಕ)

ಸತ್ಯವೇದದ ವಾಕ್ಯಗಳು:

- ವಿಮೋ 12:23
- ಇಬ್ರಿ 11:28
- ಯೆರೆ 6:26
- ನ್ಯಾಯಾ 16:24

ಪದ ಡೇಟಾ:

- Strong's: H0006, H0007, H0622, H0398, H1104, H1197, H1820, H1826, H1942, H2000, H2015, H2026, H2040, H2254, H2255, H2717, H2718, H2763, H2764, H3238, H3341, H3381, H3423, H3582, H3615, H3617, H3772, H3807, H4191, H4229, H4591, H4658, H4889, H5218, H5221, H5307, H5362, H5420, H5422, H5428, H5595, H5642, H6365, H6789, H6979, H7665, H7667, H7703, H7722, H7760, H7843, H7921, H8045, H8074, H8077, H8316, H8552, G03550, G03960, G06220, G08530, G13110, G18420, G20490, G25060, G25070, G26470, G26730, G27040, G30890, G36450, G41990, G53510, G53560

ಸದಸ್ಯ, ದೇಹದ ಭಾಗಗಳು

ಪದದ ಅರ್ಥವಿವರಣೆ:

“ಸದಸ್ಯ” ಎನ್ನುವ ಪದವು ಸಂಕೀರ್ಣ ಗುಂಪಿನ ಅಥವಾ ದೇಹದ ಒಂದು ಭಾಗವನ್ನು ಸೂಚಿಸುತ್ತದೆ.

- ಹೊಸ ಒಡಂಬಡಿಕೆಯು ಕ್ರೈಸ್ತರನ್ನು ಕ್ರಿಸ್ತ ದೇಹದ “ಸದಸ್ಯರೆಂದು” ವಿವರಿಸುತ್ತದೆ. ಕ್ರಿಸ್ತನಲ್ಲಿ ವಿಶ್ವಾಸಿಗಳು ಅನೇಕಮಂದಿ ಇರುವ ಸದಸ್ಯರಾಗಿರುವ ಒಂದು ಗುಂಪಿಗೆ ಸಂಬಂಧಪಟ್ಟಿರುತ್ತದೆ.
- ದೇಹಕ್ಕೆ ಯೇಸು ಕ್ರೀಸ್ತನೇ “ತಲೆಯಾಗಿರುತ್ತಾನೆ” ಮತ್ತು ದೇಹದಲ್ಲಿರುವ ಅಂಗಗಳಂತೆ ವಿಶ್ವಾಸಿಗಳಾಗಿರುವ ಪ್ರತಿಯೊಬ್ಬರೂ ವೈಯುಕ್ತಿಕವಾಗಿ ಕೆಲಸ ಮಾಡಬೇಕು. ದೇಹವೆಲ್ಲವೂ ಚೆನ್ನಾಗಿ ನಡೆದುಕೊಳ್ಳುವುದಕ್ಕೆ ಸಹಾಯ ಮಾಡಲು ದೇಹದಲ್ಲಿರುವ ಪ್ರತಿಯೊಬ್ಬರಿಗೂ ಪವಿತ್ರಾತ್ಮ ದೇವರು ಒಂದು ವಿಶೇಷವಾದ ಪಾತ್ರೆಯನ್ನು ಕೊಡುತ್ತಾನೆ.
- ಯೆಹೂದ್ಯ ಮತ್ತು ಫರಿಸಾಯರ ಆಲೋಚನಾ ಸಭೆಯ ಹಾಗೆಯೇ ಬೇರೊಂದು ಗುಂಪುಗಳಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಈ ಗುಂಪುಗಳ “ಸದಸ್ಯರಾಗಿ” ಕರೆಯಲ್ಪಡುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ದೇಹ, ಫರಿಸಾಯ, ಕೌನ್ಸಿಲ್)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.06:15
- 1 ಕೊರಿಂಥ.12:14-17
- ಅರಣ್ಯ.16:02
- ರೋಮಾ.12:05

ಪದ ಡೇಟಾ:

- Strong's: H1004, H1121, H3338, H5315, H8212, G1010, G3196, G3609

ಸಮಯ, ಅಕಾಲಿಕ, ದಿನಾಂಕ

ಸತ್ಯಾಂಶಗಳು:

ಸತ್ಯವೇದದಲ್ಲಿ "ಸಮಯ" ಎನ್ನುವ ಪದವನ್ನು ಅನೇಕ ಬಾರಿ ಒಂದು ಪ್ರತ್ಯೇಕವಾದ ಋತುವನ್ನು ಅಥವಾ ಕೆಲವೊಂದು ನಿರ್ದಿಷ್ಟವಾದ ಘಟನೆಗಳು ನಡೆಯುವ ಕಾಲಾವಧಿಯನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಿರುತ್ತಾರೆ. ಈ ಪದಕ್ಕಿರುವ ಅರ್ಥವು "ಕಾಲ" ಅಥವಾ "ಯುಗ" ಅಥವಾ "ಋತು" ಎನ್ನುವ ಪದಗಳ ಅರ್ಥಗಳಿಗೆ ಸಮಾನವಾಗಿರುತ್ತವೆ.

- ದಾನಿಯೇಲ ಮತ್ತು ಪ್ರಕಟನೆ ಗ್ರಂಥಗಳಲ್ಲಿ "ಸಮಯ" ಎನ್ನುವುದರ ಕುರಿತಾದ ಸಂದರ್ಭ ಬಂದರೆ ಭೂಲೋಕದ ಮೇಲಕ್ಕೆ ಬರುವ ಮಹಾ ಸಂಕಟ ಅಥವಾ ಶ್ರಮೆಗಳ ಕುರಿತಾಗಿ ಮಾತನಾಡುತ್ತದೆ.
- "ಸಮಯ, ಸಮಯಗಳು, ಮತ್ತು ಅರ್ಧ ಸಮಯ" ಎನ್ನುವ ಮಾತಿನಲ್ಲಿ "ಕಾಲ" ಎನ್ನುವ ಪದಕ್ಕೆ "ವರ್ಷ" ಎಂದರ್ಥ. ಈ ಪದವು ಈ ಯುಗಾಂತದ ಅಂತ್ಯದಲ್ಲಿ ಮಹಾ ಶ್ರಮೆಗಳಲ್ಲಿ ಕಾಲದಲ್ಲಿ ಮೂರುವರೆ ವರ್ಷಗಳನ್ನು ಸೂಚಿಸುತ್ತದೆ.
- "ಸಮಯ" ಎನ್ನುವುದು "ಸಂದರ್ಭ" ಎನ್ನುವ ಅರ್ಥವನ್ನು ಸೂಚಿಸುತ್ತದೆ, ಉದಾಹರಣೆಗೆ, "ಮೂರನೇ ಸಲ" ಎನ್ನುವ ಮಾತನ್ನು ನೋಡಬಹುದು. "ಅನೇಕಬಾರಿ" ಎನ್ನುವ ಮಾತಿಗೆ "ಅನೇಕ ಸಂದರ್ಭಗಳಲ್ಲಿ" ಎಂದೆನ್ನುವ ಅರ್ಥವೂ ಬರುತ್ತದೆ.
- "ಖಚಿತವಾದ "ಸಮಯದಲ್ಲಿ" ಎನ್ನುವ ಮಾತಿಗೆ ಆಲಸ್ಯ ಮಾಡದೇ ಎದುರುನೋಡಿದ ಸಮಯಕ್ಕೆ ಬರುವುದು ಎಂದರ್ಥವಾಗಿರುತ್ತದೆ.
- ಸಂದರ್ಭಾನುಸಾರವಾಗಿ, "ಕಾಲ" ಎನ್ನುವ ಪದವನ್ನು "ಋತು" ಅಥವಾ "ಕಾಲಾವದಿ" ಅಥವಾ "ಕ್ಷಣ" ಅಥವಾ "ಸಂಭವ" ಎಂದೂ ಅನುವಾದ ಮಾಡಬಹುದು.
- "ಸಮಯ ಮತ್ತು ಸಂದರ್ಭಗಳು" ಎನ್ನುವ ಮಾತು ಒಂದೇ ಆಲೋಚನೆಯನ್ನು ಎರಡುಸಲ ವ್ಯಾಖ್ಯಾನಿಸಿ ಹೇಳುವ ಅಲಂಕಾರಿಕ ಮಾತಾಗಿರುತ್ತದೆ. ಇದನ್ನು "ನಿರ್ದಿಷ್ಟ ಕಾಲಾವದಿಗಳಲ್ಲಿ ಕೆಲವೊಂದು ನಿರ್ದಿಷ್ಟವಾದ ಸಂಭವನೆಗಳು ನಡೆಯುತ್ತವೆ" ಎಂದೂ ಅನುವಾದ ಮಾಡಬಹುದು." (ನೋಡಿರಿ: ಅಂಗಿಯ ಮೇಲೆ ಹಾಕಿಕೊಳ್ಳುವ ವಸ್ತ್ರಗಳು)

(ಈ ಪದಗಳನ್ನು ಸಹ ನೋಡಿರಿ : ವಯಸ್ಸು, ಶ್ರಮೆಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.01:07
- ದಾನಿ.12:1-2
- ಮಾರ್ಕ.11:11
- ಮತ್ತಾಯ.08:29
- ಕೀರ್ತನೆ.068:28-29
- ಪ್ರಕ .14:15

ಪದ ಡೇಟಾ:

*

Strong's: H116, H227, H310, H1697, H1755, H2165, H2166, H2233, H2465, H3027, H3117, H3118, H3119, H3259, H3427, H3967, H4150, H4279, H4489, H4557, H5331, H5703, H5732, H5750, H5769, H6235, H6256, H6440, H6471, H6635, H6924, H7105, H7138, H7223, H7272, H7281, H7637, H7651, H7655, H7659, H7674, H7992, H8027, H8032, H8138, H8145, H8462, H8543, G744, G530, G1074, G1208, G1441, G1597, G1626, G1909, G2034, G2119, G2121, G2235, G2250, G2540, G3461, G3568, G3764, G3819, G3956, G3999, G4178, G4181, G4183, G4218, G4287, G4340, G4455, G5119, G5151, G5305, G5550, G5551, G5610

ಸಮಾಧಾನ ಯಜ್ಞ, ಸಮಾಧಾನ ಯಜ್ಞಗಳು

ಸತ್ಯಾಂಶಗಳು:

- "ಸಮಾಧಾನ ಯಜ್ಞ" ಎನ್ನುವುದು ದೇವರು ಇಸ್ರಾಯೇಲ್ಯರಿಗೆ ಅಜ್ಞಾಪಿಸಿದ ಅನೇಕ ತ್ಯಾಗಪೂರಿತವಾದ ಯಜ್ಞಗಳಲ್ಲಿ ಒಂದಾಗಿರುತ್ತದೆ. ಇದನ್ನು ಕೆಲವೊಂದುಬಾರಿ "ಕೃತಜ್ಞತೆಯ ಯಜ್ಞ" ಅಥವಾ "ಸಹವಾಸ ಯಜ್ಞ" ಎಂದು ಕರೆಯುತ್ತಾರೆ.
- ಈ ಯಜ್ಞಗಳಲ್ಲಿ ಯಾವ ದೋಷಗಳೂ ಇಲ್ಲದ ಪ್ರಾಣಿಯನ್ನು ಬಲಿ ಕೊಡುವುದು, ಪ್ರಾಣಿಯ ರಕ್ತವನ್ನು ಯಜ್ಞದ ಮೇಲೆ ಚಿಮುಕಿಸುವುದು, ಮತ್ತು ಪ್ರಾಣಿಯ ಕೊಬ್ಬನ್ನು ದಹಿಸುವುದು, ಅದೇ ರೀತಿಯಾಗಿ ಉಳಿದ ಪ್ರಾಣಿಯ ಭಾಗವನ್ನು ಪ್ರತ್ಯೇಕಿಸುವುದು ಒಳಗೊಂಡಿರುತ್ತದೆ.
- ಇನ್ನೂ ಈ ಯಜ್ಞದಲ್ಲಿ ಹುಳಿಯಿರುವ ಮತ್ತು ಹುಳಿಯಿಲ್ಲದ ರೊಟ್ಟಿಯನ್ನು ಅರ್ಪಿಸುವುದು ಒಳಗೊಂಡಿರುತ್ತದೆ, ಇವುಗಳನ್ನು ದಹನಬಲಿ ಯಜ್ಞದ ಮೇಲೆ ಸುಡುತ್ತಾರೆ.
- ಯಾಜಕನು ಮತ್ತು ಯಜ್ಞದ ಅರ್ಪಿಸುವವನು ಅರ್ಪಿಸಿರುವ ಆಹಾರವನ್ನು ತಿನ್ನುವುದರಲ್ಲಿ ಹಂಚಿಕೊಳ್ಳುವುದಕ್ಕೆ ಅನುಮತಿ ನೀಡಲಾಗಿರುತ್ತದೆ.
- ಈ ಯಜ್ಞವು ದೇವರು ತನ್ನ ಜನರೊಂದಿಗೆ ಹೊಂದಿರುವ ಸಹವಾಸಕ್ಕೆ ಗುರುತಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ದಹನ ಬಲಿ, ಸಹವಾಸ, ಸಹವಾಸ ಯಜ್ಞ, ಧಾನ್ಯ ಯಜ್ಞ, ಯಾಜಕ, ಸರ್ವಾಂಗ ಹೋಮ, ಹುಳಿಯಿಲ್ಲದ ರೊಟ್ಟಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಸಮು.13:8-10
- ಯೆಹೆ.45:16-17
- ಯೆಹೋ.08:30-32
- ಯಾಜಕ.09:3-5
- ಜ್ಞಾನೋ.07:13-15

ಪದ ಡೇಟಾ:

- Strong's: H8002

ಸಮಾಧಾನ, ಸಮಾಧಾನಭರಿತ, ಸಮಾದಾನಪಡಿಸುವವರು

ಪದದ ಅರ್ಥವಿವರಣೆ:

“ಸಮಾಧಾನ” ಎನ್ನುವ ಪದವು ಯಾವ ಭಯವಿಲ್ಲದ, ಯಾವ ಕಳವಳವಿಲ್ಲದ, ಯಾವ ಹೋರಾಟವಿಲ್ಲದ ಭಾವನೆಯನ್ನು ಅಥವಾ ಸ್ಥಿತಿಯನ್ನು ಸೂಚಿಸುತ್ತದೆ. “ಸಮಾಧಾನಭರಿತ”ನಾಗಿರುವ ಒಬ್ಬ ವ್ಯಕ್ತಿ ಯಾವಾಗಲೂ ಶಾಂತಿಯುತವಾಗಿ, ಸಂರಕ್ಷಿತವಾಗಿ ಮತ್ತು ಭದ್ರತೆಯುಳ್ಳ ವಾತಾವರಣವನ್ನು ಅನುಭವಿಸುತ್ತಾ ಇರುತ್ತಾನೆ.

- ಹಳೇಯ ಒಡಂಬಡಿಕೆಯಲ್ಲಿ, "ಶಾಂತಿ" ಎಂಬ ಪದವು ಸಾಮಾನ್ಯವಾಗಿ ವ್ಯಕ್ತಿಯ ಯೋಗಾಕ್ಷೇಮ, ಸೌಖ್ಯ ಅಥವಾ ಸಂಪೂರ್ಣತೆಯ ಸಾಮಾನ್ಯ ಅರ್ಥವನ್ನು ಅರ್ಥೈಸುತ್ತದೆ.
- "ಶಾಂತಿ" ಎಂಬುವುದು ಜನರ ಗುಂಪುಗಳು ಮತ್ತು ದೇಶಗಳು ಪರಸ್ಪರ ಯುದ್ಧವಿಲ್ಲದಿರುವುದನ್ನು ಉಲ್ಲೇಖಿಸಬಹುದು. ಈ ಜನರು "ಶಾಂತಿಯುತ ಸಂಬಂಧ" ಹೊಂದಿದ್ದಾರೆಂದು ಹೇಳಲಾಗುತ್ತದೆ.
- ಯಾರಾದರೊಬ್ಬರೊಂದಿಗೆ ಅಥವಾ ಜನರ ಗುಂಪಿನೊಂದಿಗೆ “ಸಮಾಧಾನವನ್ನುಂಟು ಮಾಡು” ಎನ್ನುವ ಮಾತಿಗೆ ಯುದ್ಧವನ್ನು ನಿಲ್ಲಿಸುವುದಕ್ಕೆ ಕಾರ್ಯಗಳನ್ನು ಕೈಗೊಳ್ಳು ಎಂದರ್ಥ.
- “ಸಮಾಧಾನವನ್ನುಂಟು ಮಾಡುವವನು” ಎನ್ನುವ ಮಾತು ಒಬ್ಬರೊಂದಿಗೆ ಒಬ್ಬರು ಸಮಾಧಾನದಿಂದ ಜೀವಿಸಬೇಕೆಂದು ಜನರನ್ನು ಪ್ರಭಾವಗೊಳಿಸುವುದಕ್ಕೆ ಮಾತುಗಳನ್ನು ಹೇಳುವ ಅಥವಾ ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ.
- ಇತರ ಜನರೊಂದಿಗೆ “ಸಮಾಧಾನದಿಂದಿರುವುದು” ಎನ್ನುವುದಕ್ಕೆ ಆ ಜನರೊಂದಿಗೆ ವಿರುದ್ಧವಾಗಿ ಹೋರಾಟ ಮಾಡದಿರದ ಸ್ಥಿತಿಯಲ್ಲಿರುವುದು ಎಂದರ್ಥ.
- ದೇವರು ಜನರ ಪಾಪಗಳಿಂದ ಬಿಡಿಸಿದಾಗ ದೇವರು ಮತ್ತು ಜನರ ಮಧ್ಯದಲ್ಲಿ ಒಳ್ಳೇಯ ಅಥವಾ ಸರಿಯಾದ ಸಂಬಂಧವು ಹೊಂದಿಕೊಂಡಿರುತ್ತಾರೆ. ಇದನ್ನೇ “ದೇವರೊಂದಿಗೆ ಸಮಾಧಾನ ಹೊಂದಿಕೊಳ್ಳುವುದು” ಎಂದು ಕರೆಯುತ್ತಾರೆ.
- “ಕೃಪೆ ಮತ್ತು ಸಮಾಧಾನ” ಶುಭಾಷಯಗಳನ್ನು ಆಶೀರ್ವಾದ ವಚನಗಳಾಗಿ ಅಪೊಸ್ತಲರು ತಮ್ಮ ಸಹ ವಿಶ್ವಾಸಿಗಳಿಗೆ ಬರೆಯುವ ಪತ್ರಿಕೆಗಳಲ್ಲಿ ಉಪಯೋಗಿಸಿದ್ದಾರೆ.
- “ಸಮಾಧಾನ” ಎನ್ನುವ ಪದವನ್ನು ದೇವರೊಂದಿಗೆ ಅಥವಾ ಇತರ ಜನರೊಂದಿಗೆ ಒಳ್ಳೇಯ ಸಂಬಂಧದಲ್ಲಿ ಇರುವ ಸ್ಥಿತಿಯನ್ನು ಸೂಚಿಸುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಥೆಸ್ಸ.05:1-3
- ಅಪೊ.ಕೃತ್ಯ.07:26
- ಕೊಲೊಸ್ಸ.01:18-20
- ಕೊಲೊಸ್ಸ.03:15
- ಗಲಾತ್ಯ.05:23
- ಲೂಕ.07:50
- ಲೂಕ.12:51
- ಮಾರ್ಕ.04:39
- ಮತ್ತಾಯ.05:09
- ಮತ್ತಾಯ.10:13

ಸತ್ಯವೇದದಿಂದ ಉದಾಹರಣೆಗಳು:

- **15:06** ಕಾನಾನಿನಲ್ಲಿರುವ ಇತರ ಜನಾಂಗಗಳೊಂದಿಗೆ ಯಾವುದೇ ರೀತಿಯ _ ಸಮಾಧಾನವನ್ನು _ ಮಾಡಿಕೊಳ್ಳಬಾರದೆಂದು ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದರು.
- **15:12** ದೇವರು ಇಸ್ರಾಯೇಲ್ ಗಡಿಗಳೊಳಗೆ ಇರುವ ಜನರೆಲ್ಲರಿಗೆ _ ಸಮಾಧಾನವನ್ನು _ ಕೊಟ್ಟನು.
- **16:03** ಇಸ್ರಾಯೇಲ್ಯರನ್ನು ತಮ್ಮ ಶತ್ರುಗಳಿಂದ ಬಿಡಿಸುವ ನಾಯಕನನ್ನು ದೇವರು ಅನುಗ್ರಹಿಸಿದರು ಮತ್ತು ಲೋಕಕ್ಕೆ _ ಸಮಾಧಾನವನ್ನು _ ಕೊಟ್ಟರು.
- **21:13** ಇತರ ಜನರು ಮಾಡಿದ ಪಾಪಗಳಿಗೋಸ್ಕರ ಶಿಕ್ಷೆಯನ್ನು ಪಡೆದುಕೊಳ್ಳುವುದಕ್ಕೆ ಆತನು (ಮೆಸ್ಸೀಯ) ಮರಣ ಹೊಂದಿದನು. ಆತನ ಶಿಕ್ಷೆಯು ದೇವರು ಮತ್ತು ಜನರ ಮಧ್ಯದೊಳಗೆ _ ಸಮಾಧಾನವನ್ನು _ ತಂದಿತ್ತು.
- **48:14** ದಾವೀದನು ಇಸ್ರಾಯೇಲಿಗೆ ಅರಸನಾಗಿದ್ದನು, ಆದರೆ ಯೇಸು ಸರ್ವ ಸೃಷ್ಟಿಗೆ ಅರಸನಾಗಿದ್ದಾನೆ. ಆತನು ತಿರುಗಿ ಬಂದು, ತನ್ನ ರಾಜ್ಯವನ್ನು ನ್ಯಾಯದಿಂದ ಮತ್ತು _ ಸಮಾಧಾನದಿಂದ _ ಸದಾಕಾಲವೂ ಆಳುತ್ತಾನೆ.
- **50:17** ಯೇಸು ತನ್ನ ರಾಜ್ಯವನ್ನು ನ್ಯಾಯದಿಂದ ಮತ್ತು _ ಸಮಾಧಾನದಿಂದ _ ಆಳುತ್ತಾನೆ ಮತ್ತು ಆತನು ತನ್ನ ಜನರೊಂದಿಗೆ ಸದಾಕಾಲವೂ ಇರುತ್ತಾನೆ.

ಪದ ಡೇಟಾ:

- Strong's: H5117, H7961, H7962, H7965, H7999, H8001, H8002, H8003, H8252, G269, G31514, G1515, G1516, G1517, G1518, G2272

ಸಮಾಧಿ, ಸಮಾಧಿ ತೋಡುವವನು, ಸಮಾಧಿಗಳು, ಗೋರಿ, ಗೋರಿಗಳು, ಹೂಣಿಡುವ ಸ್ಥಳ

ಪದದ ಅರ್ಥವಿವರಣೆ:

"ಗೋರಿ" ಮತ್ತು "ಸಮಾಧಿ" ಎನ್ನುವ ಪದಗಳು ಸತ್ತಂತ ವ್ಯಕ್ತಿಯ ದೇಹವನ್ನು ಜನರು ಇಡುವ ಸ್ಥಳವನ್ನು ಸೂಚಿಸುತ್ತದೆ. "ಹೂಣಿಡುವ ಸ್ಥಳ" ಎಂದರೆ ಈ ವಿಷಯವನ್ನೇ ಸೂಚಿಸುವ ಸರ್ವ ಸಾಧಾರಣ ಪದವಾಗಿರುತ್ತದೆ.

- ಯೆಹೂದ್ಯರು ಕೆಲವೊಂದುಬಾರಿ ಗುಹೆಗಳನ್ನು ಸಮಾಧಿಗಳನ್ನಾಗಿ ಉಪಯೋಗಿಸುತ್ತಿದ್ದರು, ಮತ್ತು ಕೆಲವೊಂದುಬಾರಿ ದೊಡ್ಡ ಕಲ್ಲು ಬಂಡೆಗಳನ್ನು ಗುಹೆಗಳನ್ನಾಗಿ ಅಗೆದು ಅವುಗಳನ್ನು ಸಮಾಧಿಗಳನ್ನಾಗಿ ಉಪಯೋಗಿಸುತ್ತಿದ್ದರು.
- ಹೊಸ ಒಡಂಬಡಿಕೆಯ ಕಾಲದಲ್ಲಿ ಸಮಾಧಿಯಾಗಿರುವ ಗುಹೆಯನ್ನು ಮುಚ್ಚುವುದಕ್ಕೆ ಒಂದು ದೊಡ್ಡ ಕಲ್ಲನ್ನು ಉರುಳಿಸುವುದು ಸಾಧಾರಣವಾಗಿ ನಡೆಯುವ ವಿಷಯವಾಗಿತ್ತು.
- ಅನುವಾದ ಮಾಡುವ ಭಾಷೆಯಲ್ಲಿ ಸಮಾಧಿಗೆ ಉಪಯೋಗಿಸುವ ಪದವು ನೆಲವನ್ನು ಅಗೆದು ಶವವನ್ನು ಇಡುವ ಸ್ಥಳವನ್ನು ಮಾತ್ರ ಸೂಚಿಸುವುದಾಗಿದ್ದರೆ, ಇದನ್ನು "ಗುಹೆ" ಅಥವಾ "ಬೆಟ್ಟದ ಪಕ್ಕದಲ್ಲಿ ರಂಧ್ರವನ್ನು ಅಗೆಯುವುದು" ಎಂದೂ ಅನುವಾದ ಮಾಡಬಹುದು.
- "ಸಮಾಧಿ" ಎನ್ನುವ ಮಾತು ಅನೇಕಬಾರಿ ಸತ್ತಂತ ಜನರ ಆತ್ಮಗಳು ಇರುವ ಸ್ಥಳ ಅಥವಾ ಸತ್ತಂತ ಸ್ಥಿತಿಯನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಮತ್ತು ಸಾಧಾರಣವಾಗಿ ಉಪಯೋಗಿಸಲ್ಪಟ್ಟಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಹೂಣಿಡುವುದು, ಮರಣ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.02:29-31
- ಆದಿ.23:5-6
- ಆದಿ.50:4-6
- ಯೋಹಾನ.19:40-42
- ಲೂಕ.23:52-53
- ಮಾರ್ಕ.05:1-2
- ಮತ್ತಾಯ.27:51-53
- ರೋಮಾ.03:13-14

ಸತ್ಯವೇದದಿಂದ ಉದಾಹರಣೆಗಳು:

- **32:04** ಆ ಪ್ರಾಂತ್ಯದಲ್ಲಿ _**ಸಮಾಧಿಗಳ** _ ಮಧ್ಯೆದಲ್ಲಿ ಆ ಮನುಷ್ಯನು ಜೀವಿಸಿದ್ದನು.
- **37:06** "ಲಾಜರನನ್ನು ಎಲ್ಲಿ ಇಟ್ಟಿದ್ದೀರಿ?" ಎಂದು ಯೇಸು ಅವರನ್ನು ಕೇಳಿದನು. "_ **ಸಮಾಧಿಯಲ್ಲಿ** _ , ಬಂದು, ನೋಡಿ" ಎಂದು ಅವರು ಆತನಿಗೆ ಹೇಳಿದರು.
- **37:07** _ **ಸಮಾಧಿಯು** _ ಗುಹೆಯಾಗಿದ್ದಿತ್ತು, ಈ ಗುಹೆಯ ದ್ವಾರದ ಮುಂದೆ ಒಂದು ದೊಡ್ಡ ಕಲ್ಲನ್ನು ಉರುಳಿಸಿರುತ್ತಾರೆ.
- **40:09** ಆದನಂತರ ಯೋಸೇಫ ಮತ್ತು ನಿಕೊದೇಮ ಎನ್ನುವ ಇಬ್ಬರು ಯೆಹೂದ್ಯರ ನಾಯಕರು ಯೇಸುವು ಮೆಸ್ಸೀಯನೆಂದು ನಂಬಿದ್ದರು, ಇವರು ಯೇಸುವಿನ ದೇಹಕ್ಕಾಗಿ ಪಿಲಾತನ ಬಳಿಗೆ ಬಂದು ಕೇಳಿಕಂಡರು ಅವರು ಆತನ ದೇಹವನ್ನು ಬಟ್ಟೆಯಲ್ಲಿ ಸುತ್ತಿ, ಬಂಡೆಯ ಗುಹೆಯಂತಿರುವ _ **ಸಮಾಧಿಯೊಳಗೆ** ಇಟ್ಟರು. ಆದನಂತರ ಆ **ಸಮಾಧಿಯನ್ನು** _ ತೆರೆಯುವುದಕ್ಕಾಗದಿರುವಂತೆ ಅದರ ಮುಂಭಾಗದಲ್ಲಿ ಒಂದು ದೊಡ್ಡ ಕಲ್ಲನ್ನು ಉರುಳಿಸಿದರು.
- **41:04** ಅವನು (ದೂತನು)_ **ಸಮಾಧಿಯ** ಪ್ರವೇಶ ದ್ವಾರವನ್ನು ಮುಚ್ಚಿರುವ ದೊಡ್ಡ ಕಲ್ಲು ಬಂಡೆಯನ್ನು ಉರುಳಿಸಿ, ಅದರ ಮೇಲೆ ಕುಳಿತುಕೊಂಡನು. **ಸಮಾಧಿಗೆ** _ ಕಾವಲು ಇರುವರು ತುಂಬಾ ಭಯಭ್ರಾಂತಿಗೆ ಗುರಿಯಾದರು ಮತ್ತು ಅವರು ಸತ್ತ ಮನುಷ್ಯರಂತೆ ನೆಲದ ಮೇಲೆ ಬಿದ್ದರು.
- **41:05** ಸ್ತ್ರೀಯರು _ ಸಮಾಧಿಯ _ ಬಳಿಗೆ ಬಂದಾಗ, "ಹೆದರಬೇಡಿರಿ, ಯೇಸು ಇಲ್ಲಿಲ್ಲ. ಆತನು ಹೇಳಿದ ಪ್ರಕಾರವೇ ಆತನು ಮರಣದಿಂದ ಎದ್ದಿದ್ದಾನೆ _ **ಸಮಾಧಿಯೊಳಗೆ** ಹೋಗಿ, ನೋಡಿರಿ" ಎಂದು ದೂತ ಅವರಿಗೆ ಹೇಳಿದನು. ಸ್ತ್ರೀಯರು **ಸಮಾಧಿಯೊಳಗೆ** _ ಹೋಗಿ, ಯೇಸುವಿನ ದೇಹವನ್ನು ಇಟ್ಟಿರುವ ಸ್ಥಳವನ್ನು ನೋಡಿದರು. ಆತನ ದೇಹವು ಅಲ್ಲಿರಲಿಲ್ಲ!

ಪದ ಡೇಟಾ:

- Strong's: H1164, H1430, H6900, H6913, H7585, H7845, G86, G2750, G3418, G3419, G5028

ಸಮುದ್ರ ಹಸು

ಪದದ ಅರ್ಥವಿವರಣೆ:

“ಸಮುದ್ರ ಹಸು” ಎನ್ನುವ ಪದವು ಸಮುದ್ರದ ತಳ ಭಾಗದಲ್ಲಿ ತರಕಾರಿಯನ್ನು ಮತ್ತು ಸಮುದ್ರದ ಹುಲ್ಲನ್ನು ತಿನ್ನುವ ದೊಡ್ಡ ಸಮುದ್ರದ ಪ್ರಾಣಿಯನ್ನು ಸೂಚಿಸುತ್ತದೆ.

- ಸಮುದ್ರ ಹಸು ದಪ್ಪ ಚರ್ಮವನ್ನು ಹೊಂದಿರುವ ಬೂದಿ ಬಣ್ಣದಲ್ಲಿರುತ್ತದೆ. ಇದು ನೀರಿನಲ್ಲಿ ಈಜುತ್ತಾ ಹೋಗುತ್ತಿರುವುದು.
- ಸಮುದ್ರ ಹಸುವಿನ ಚರ್ಮಗಳನ್ನು ಅಥವಾ ಚಕ್ಕಳಗಳನ್ನು ಗುಡಾರಗಳನ್ನು ಮಾಡುವುದಕ್ಕೆ ಸತ್ಯವೇದದಲ್ಲಿರುವ ಅನೇಕ ಜನರು ಉಪಯೋಗಿಸುತ್ತಿದ್ದರು. ಈ ಪ್ರಾಣಿಗಳ ಚಕ್ಕಳಗಳು ಗುಡಾರವನ್ನು ಕಟ್ಟುವದಕ್ಕೋಸ್ಕರ ಉಪಯೋಗಿಸುತ್ತಿದ್ದರು.
- “ಸಮುದ್ರ ಹಸು” ಎನ್ನುವ ಹೆಸರನ್ನು ಇಡುವುದಕ್ಕೆ ಕಾರಣವೇನೆಂದರೆ ಇದು ಹಸುವಿನಂತೆ ಹುಲ್ಲನ್ನು ತಿನ್ನುತ್ತಿತ್ತು, ಆದರೆ ಇದು ನಿಜವಾದ ಹಸುವಿಗೆ ಹೋಲಿಕೆಯಾಗಿರುವುದಿಲ್ಲ.
- ಸಂಬಂಧಪಟ್ಟಿರುವ ಪ್ರಾಣಿಗಳ ಹೆಸರುಗಳು ಯಾವುವೆಂದರೆ “ಕಡಲು ಪ್ರಾಣಿ” ಮತ್ತು “ಕಡಲು ಪ್ರಾಣಿಯ ತೊಗಲು”

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಗುಡಾರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅರಣ್ಯ.04:5-6
- ಅರಣ್ಯ.04:12-14
- ಅರಣ್ಯ.04:24-26

ಸುರುಳಿಯನ್ನು ಪಡೆದುಕೊಳ್ಳುವ ವ್ಯಕ್ತಿ ಈ ಮುದ್ರೆಯನ್ನು ಯಾರು ಮುರಿದಿಲ್ಲವೆಂದು ಮತ್ತು ಇದನ್ನು ಯಾರೂ ತೆರೆದಿಲ್ಲವೆಂದು ತಿಳಿದುಕೊಳ್ಳುವನು.

ಪದ ಡೇಟಾ:

- Strong's: H8476

ಸರ್ಪ, ಸರ್ಪಗಳು, ಹಾವು, ಹಾವುಗಳು, ವಿಷಸರ್ಪ, ವಿಷಸರ್ಪಗಳು

ಸತ್ಯಾಂಶಗಳು:

ಈ ಎಲ್ಲಾ ಪದಗಳು ತೆಳುವಾದ ಆಕಾರವಿದ್ದು, ವಿಷದ ಹಲ್ಲುಗಳನ್ನು ಒಳಗೊಂಡಿರುವ ಉದ್ದವಾಗಿರುವ ಹರಿದಾಡುವ ಜಂತುವನ್ನು ಸೂಚಿಸುತ್ತವೆ ಮತ್ತು ಇದು ನೆಲದ ಮೇಲೆ ಹರಿದಾಡುತ್ತ ಹಿಂದಕ್ಕೆ, ಮುಂದಕ್ಕೆ ಚಲಿಸುತ್ತಾ ಹೋಗುತ್ತಿರುತ್ತದೆ. "ಸರ್ಪ" ಎನ್ನುವ ಪದವು ಸಾಧಾರಣವಾಗಿ ದೊಡ್ಡ ಹಾವನ್ನು ಸೂಚಿಸುತ್ತದೆ ಮತ್ತು "ವಿಷಸರ್ಪ" ಎನ್ನುವ ಪದವು ಹಾವು ತನ್ನ ಬೇಟೆಯಲ್ಲಿ ವಿಷವನ್ನು ಉಪಯೋಗಿಸುವ ಒಂದು ವಿಧವಾದ ಹಾವನ್ನು ಸೂಚಿಸುತ್ತದೆ.

- ಈ ಪ್ರಾಣಿಯನ್ನು ಸಾಂಕೇತಿಕವಾಗಿ ದುಷ್ಟ ವ್ಯಕ್ತಿಯನ್ನು ಉಲ್ಲೇಖಿಸಲು ಬಳಸಲಾಗುತ್ತದೆ, ವಿಶೇಷವಾಗಿ ಮೋಸಗಾರ.
- "ವಿಷಸರ್ಪಗಳ ಸಂತಾನದವರು" ಎಂದು ಯೇಸುವು ಧರ್ಮದ ನಾಯಕರನ್ನು ಕರೆದನು, ಯಾಕಂದರೆ ಅವರು ನೀತಿವಂತರೆಂದು ನಟಿಸುತ್ತಾ, ಜನರನ್ನು ಮೋಸಗೊಳಿಸುತ್ತಿದ್ದರು ಮತ್ತು ಜನರಲ್ಲಿ ಅಸಹ್ಯವಾಗಿ ನಡೆದುಕೊಳ್ಳುತ್ತಿದ್ದರು.
- ಎದೆನ್ ತೋಟದಲ್ಲಿ ಸೈತಾನನು ಹವ್ವ ಜೊತೆಯಲ್ಲಿ ಮಾತನಾಡಿದಾಗ ಮತ್ತು ಆಕೆಯನ್ನು ದೇವರಿಗೆ ಅವಿಧೇಯಳನ್ನಾಗಿ ಶೋಧಿಸಿದಾಗ ಅವನು ಸರ್ಪದ ರೂಪದಲ್ಲಿದ್ದನು.
- ಹವ್ವಳು ಪಾಪ ಮಾಡುವಂತೆ ಸರ್ಪವು ಆಕೆಯನ್ನು ಶೋಧಿಸಿದನಂತರ, ಹವ್ವ ಮತ್ತು ತನ್ನ ಗಂಡನಾದ ಆದಾಮನು ಪಾಪ ಮಾಡಿದರು, ದೇವರು ಆ ಹಾವನ್ನು ಶಪಿಸಿ, ಎಲ್ಲಾ ಹಾವುಗಳು ಇನ್ನು ಮೇಲೆ ನೆಲದ ಮೇಲೆ ಹರಿದಾಡುತ್ತವೆ ಎಂದು ಹೇಳಿದನು, ಇದರ ಆಧಾರದಿಂದ ಹಾವುಗಳು ಶಾಪವನ್ನು ಹೊಂದುವುದಕ್ಕೆ ಮುಂಚಿತವಾಗಿ ಅವು ನಡೆಯುತ್ತಿದ್ದವು ಎಂದು ಅರ್ಥವಾಗುತ್ತಿದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಶಪಿಸು, ಮೋಸಗೊಳಿಸು, ಅವಿಧೇಯತೆ, ಎದೆನ್, ದುಷ್ಟ, ಸಂತಾನ, ಬೇಟೆ, ಸೈತಾನ, ಪಾಪ, ಶೋಧಿಸು)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.03:1-3
- ಆದಿ.03:4-6
- ಆದಿ.03:12-13
- ಮಾರ್ಕ.16:17-18
- ಮತ್ತಾಯ.03:7-9
- ಮತ್ತಾಯ.23:32-33

ಪದ ಡೇಟಾ:

- Strong's: H660, H2119, H5175, H6620, H6848, H8314, H8577, G2191, G2062, G3789

ಸರ್ವಾಂಗಹೋಮ, ಸರ್ವಾಂಗಹೋಮಗಳು

ಸತ್ಯಾಂಶಗಳು:

ಹಳೆ ಒಡಂಬಡಿಕೆಯಲ್ಲಿ, ಯೆಹೋವನಿಗೆ ಕೃತಜ್ಞತಾರ್ಪಣಕ್ಕಾಗಿ ಅಥವಾ ಹರಕೆಯನ್ನು ಪೂರೈಸುವಂತ ಅನೇಕ ಕಾರಣಗಳಿಗಾಗಿ ಅರ್ಪಿಸುವ ಬಲಿಗಳಲ್ಲಿ "ಸರ್ವಾಂಗಹೋಮ" ಒಂದು.

- ಈ ಹೋಮಕ್ಕಾಗಿ ಗಂಡಾಗಲಿ ಹೆಣ್ಣಾಗಲಿ ಒಂದು ಜೀವಿಯ ಅವಶ್ಯಕತೆ ಇತ್ತು. ಗಂಡು ಪ್ರಾಣಿಯೇ ಬೇಕಾಗುವ ದಹನ ಬಲಿಯಂತೆ ಈ ಬಲಿಯಿರುವದಿಲ್ಲ.
- ದೇವರಿಗೆ ಬಲಿಯರ್ಪಣೆಯನ್ನು ಅರ್ಪಿಸಿದ ಮೇಲೆ ಸರ್ವಾಂಗಹೋಮವನ್ನು ತಂದವರು ಮಾಂಸವನ್ನು ಯಾಜಕರು ಮತ್ತು ಇತರ ಇಸ್ರಾಯೇಲರ ಜೊತೆ ಹಂಚಿಕೊಳ್ಳುತ್ತಿದ್ದರು.
- ಹುಳಿಯಿಲ್ಲದ ರೊಟ್ಟಿ ಸೇರಿಸಲ್ಪಟ್ಟ ಭೋಜನೆ ಈ ಕಾಣಿಕೆಯಲ್ಲಿ ಭಾಗವಾಗಿತ್ತು.
- ಇದನ್ನು ಕೆಲವೊಮ್ಮೆ "ಸಮಾಧಾನ ಬಲಿ" ಎಂದು ಕರೆಯುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ದಹನ ಬಲಿ, ನೆರವೇರಿಸು, ದಾನ್ಯಾರ್ಪಣೆ, ಅಪರಾದ ಪರಿಹಾರಾರ್ಥ ಬಲಿ, ಸಮಾಧಾನ ಬಲಿ, ಯಾಜಕನು, ಬಲಿ, ಹುಳಿಯಿಲ್ಲದ ರೊಟ್ಟಿ, ಹರಕೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.21:25-27
- 2 ಪೂರ್ವ.29:35-36
- ವಿಮೋ.24:5-6
- ಯಾಜಕ.03:3-5
- ಅರಣ್ಯ.06:13-15

ಪದ ಡೇಟಾ:

- Strong's: H8002

ಸಲಹೆ, ಸೂಚನೆ, ಸಲಹೆಗಾರ, ಸಲಹೆಗಾರರು, ಜ್ಞಾನದ ಆಲೋಚನೆ, ಆಲೋಚನೆ ಹೇಳುವಾತ

ಪದದ ಅರ್ಥವಿವರಣೆ:

“ಆಲೋಚನೆ” ಮತ್ತು “ಸಲಹೆ” ಎನ್ನುವ ಪದಗಳು ಒಂದೇ ಅರ್ಥವನ್ನು ಹೊಂದಿರುತ್ತವೆ, ಒಂದು ನಿರ್ದಿಷ್ಟವಾದ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂದೆನ್ನುವದರ ಕುರಿತಾಗಿ ಒಬ್ಬರಿಗೆ ಜ್ಞಾನದ ನಿರ್ಣಯವನ್ನು ತೆಗೆದುಕೊಳ್ಳಲು ಸಹಾಯ ಮಾಡುವುದನ್ನು ಸೂಚಿಸುತ್ತದೆ. ಜ್ಞಾನವುಳ್ಳ “ಆಲೋಚನೆ ಹೇಳುವಾತನು” ಅಥವಾ “ಸಲಹೆಗಾರನು” ಎಂದರೆ ಒಬ್ಬ ವ್ಯಕ್ತಿ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಸಲಹೆಗಳನ್ನು ಅಥವಾ ಜ್ಞಾನದ ಆಲೋಚನೆಗಳನ್ನು ಕೊಡುವ ವ್ಯಕ್ತಿ ಎಂದರ್ಥ.

- ಅರಸರು ತಾವು ಆಳುತ್ತಿರುವ ಜನರ ಮೇಲೆ ಪ್ರಭಾವ ಬೀರುವಂತಹ ಪ್ರಾಮುಖ್ಯವಾದ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಸಹಾಯ ಮಾಡಲು ತಮ್ಮ ಬಳಿ ಅಧೀಕೃತ ಸಲಹೆಗಾರರನ್ನು ಅಥವಾ ಜ್ಞಾನದ ಆಲೋಚನೆಗಳನ್ನು ಹೇಳುವವರನ್ನು ಇಟ್ಟುಕೊಳ್ಳುತ್ತಿದ್ದರು.
- ಕೆಲವೊಂದುಬಾರಿ ಕೊಡಲ್ಪಟ್ಟ ಸಲಹೆ ಅಥವಾ ಜ್ಞಾನದ ಆಲೋಚನೆಯು ಸರಿಯಾಗಿರುವುದಿಲ್ಲ. ದುಷ್ಟ ಸಲಹೆಗಾರರು ಅರಸನಿಗೂ ಅಥವಾ ತನ್ನ ಜನರಿಗೂ ಹಾನಿಯನ್ನುಂಟು ಮಾಡುವ ನಿರ್ಣಯಗಳನ್ನು ತೆಗೆದುಕೊಳ್ಳುವಂತೆ ಅಥವಾ ಕಾರ್ಯಗಳನ್ನು ಮಾಡುವಂತೆ ಅರಸನನ್ನು ಒತ್ತಾಯ ಮಾಡುತ್ತಾರೆ.
- ಸಂದರ್ಭಾನುಸಾರವಾಗಿ “ಸಲಹೆ” ಅಥವಾ “ಜ್ಞಾನದ ಆಲೋಚನೆ” ಎನ್ನುವ ಪದಗಳನ್ನು “ನಿರ್ಣಯ ತೆಗೆದುಕೊಳ್ಳುವುದರಲ್ಲಿ ಸಹಾಯ ಮಾಡುವುದು” ಅಥವಾ “ಎಚ್ಚರಿಕೆಗಳು” ಅಥವಾ “ಸೂಚನೆಗಳು” ಅಥವಾ “ಮಾರ್ಗದರ್ಶನಗಳು” ಎಂದೂ ಅನುವಾದ ಮಾಡಬಹುದು.
- “ಜ್ಞಾನದ ಆಲೋಚನೆ” ಎನ್ನುವ ಪದಕ್ಕೆ “ಸಲಹೆ” ಅಥವಾ “ಸಲಹೆಗಳನ್ನು ಕೊಡು” ಅಥವಾ “ಎಚ್ಚರಿಸು” ಎನ್ನುವ ಪರ್ಯಾಯ ಪದಗಳುಂಟು.
- “ಜ್ಞಾನದ ಆಲೋಚನೆ” (ಕೌನ್ಸಲ್) ಎನ್ನುವ ಪದವು ಮತ್ತು ಜನರ ಗುಂಪನ್ನು ಸೂಚಿಸುವ “ಹಿರಿಸಭೆ” (ಕೌನ್ಸಿಲ್) ಎನ್ನುವ ಪದವು ಬೇರೆ ಬೇರೆಯಾಗಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಎಚ್ಚರಿಸು, ಪವಿತ್ರಾತ್ಮ, ಜ್ಞಾನಿ)

ಸತ್ಯವೇದದ ಅನುಬಂಧ ವಾಕ್ಯಗಳು:

ಪದ ಡೇಟಾ:

- Strong's: H1697, H1847, H1875, H1884, H1907, H3272, H3289, H3982, H4156, H4431, H5475, H5779, H6440, H6963, H6098, H7592, H8458, G1011, G1012, G1106, G4823, G4825

ಸಸಿ ನಡು, ಸಸಿ ನೆಡುವುದು, ಸಸಿ ನೆಡಲಾಗಿದೆ, ಸಸಿ ನೆಡುತ್ತಾಯಿರುವುದು, ಸಸಿ ಹಚ್ಚಲ್ಪಟ್ಟರಿತ್ತದೆ, ಪುನರ್ ನೆಡಲಾಗಿದೆ, ವರ್ಗಾಯಿಸಲಾಯಿತು, ಬಿತ್ತು, ಬಿತ್ತುವುದು, ಬಿತ್ತಿದೆ, ಬಿತ್ತನೆಯ, ಬಿತ್ತುತ್ತಿರುವುದು

ಪದದ ಅರ್ಥವಿವರಣೆ:

"ಸಸಿ ನಡು" ಎನ್ನುವುದು ಸಾಧಾರಣವಾಗಿ ಬೆಳೆಯುವಂತದ್ದನ್ನು ಮತ್ತು ನೆಲದಲ್ಲಿ ನಾಟಿದ್ದನ್ನು ಸೂಚಿಸುತ್ತದೆ. "ಬಿತ್ತು" ಎನ್ನುವ ಪದಕ್ಕೆ ಸಸ್ಯಗಳನ್ನು ಬೆಳೆಸುವ ಕ್ರಮದಲ್ಲಿ ನೆಲದಲ್ಲಿ ಬೀಜಗಳನ್ನು ನಾಟುವುದು ಎಂದರ್ಥ. "ಬಿತ್ತುವವನು" ಎಂದರೆ ಸಸಿಗಳ ಬೀಜಗಳನ್ನು ಅಥವಾ ಬಿತ್ತುವ ವ್ಯಕ್ತಿ ಎಂದರ್ಥ.

- ಬಿತ್ತುವ ಅಥವಾ ನೆಡುವ ವಿಧಾನವು ಬೇರೆ ಬೇರೆಯಾಗಿರುವುದು, ಆದರೆ ಒಂದು ವಿಧಾನವೇನೆಂದರೆ ಕೈತುಂಬ ಬೀಜಗಳನ್ನು ತೆಗೆದುಕೊಂಡು, ಅವುಗಳನ್ನು ನೆಲದ ಮೇಲೆ ಚೆಲ್ಲುವುದಾಗಿರುತ್ತದೆ.
- ಬೀಜಗಳನ್ನು ನೆಡುವುದಕ್ಕೆ ಇನ್ನೊಂದು ವಿಧಾನ ಏನೆಂದರೆ ನೆಲದಲ್ಲಿ ರಂಧ್ರಗಳನ್ನು ಮಾಡಿ, ಆ ರಂಧ್ರಗಳಲ್ಲಿ ಬೀಜಗಳನ್ನು ಹಾಕುವುದಾಗಿರುತ್ತದೆ.
- "ಬಿತ್ತು" ಎನ್ನುವ ಪದವನ್ನು ಅಲಂಕಾರಿಕವಾಗಿಯೂ ಉಪಯೋಗಿಸಿಕೊಳ್ಳಬಹುದು, ಉದಾಹರಣೆಗೆ, "ಒಬ್ಬ ವ್ಯಕ್ತಿ ಏನನ್ನು ಬಿತ್ತುವವನೋ ಅದನ್ನೇ ಕೊಯ್ಯುವವನು." ಅಂದರೆ ಆ ವ್ಯಕ್ತಿ ಏನಾದರೊಂದು ದುಷ್ಟ ಕಾರ್ಯವನ್ನು ಮಾಡಿದರೆ, ಅವನು ನಕಾರಾತ್ಮಕವಾದ ಫಲವನ್ನು ಹೊಂದಿಕೊಳ್ಳುವನು, ಆದರೆ ಆ ವ್ಯಕ್ತಿ ಒಳ್ಳೇಯ ಕಾರ್ಯವನ್ನು ಮಾಡಿದರೆ, ಅವನು ಸಕಾರಾತ್ಮಕ ಫಲವನ್ನು ಪಡೆಯುವನು.

ಅನುವಾದ ಸಲಹೆಗಳು:

- "ಬಿತ್ತು" ಎನ್ನುವ ಪದವನ್ನು "ಸಸಿ ನೆಡು" ಎಂದೂ ಅನುವಾದ ಮಾಡಬಹುದು. ಈ ಪದವನ್ನು ಅನುವಾದ ಮಾಡುವದಕ್ಕೆ ಉಪಯೋಗಿಸಿದ ಪದವು ಬೀಜಗಳನ್ನು ಬಿತ್ತುವುದೂ ಒಳಗೊಂಡಿರುವಂತೆ ನೋಡಿಕೊಳ್ಳಿರಿ.
- "ಬಿತ್ತುವವನು" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ತೋಟದ ಮಾಲಿಕ" ಅಥವಾ "ರೈತ" ಅಥವಾ "ಬೀಜಗಳನ್ನು ನೆಡುವ ವ್ಯಕ್ತಿ" ಎನ್ನುವ ಅನೇಕ ಮಾತುಗಳು ಒಳಗೊಂಡಿರುತ್ತವೆ.
- ಆಂಗ್ಲ ಭಾಷೆಯಲ್ಲಿ "ಬಿತ್ತು" ಎನ್ನುವ ಪದವನ್ನು ಕೇವಲ ಬೀಜಗಳನ್ನು ಬಿತ್ತುವುದಕ್ಕೆ ಮಾತ್ರವೇ ಉಪಯೋಗಿಸುತ್ತಾರೆ, ಆದರೆ "ಸಸಿ ನಡು" ಎನ್ನುವ ಮಾತನ್ನು ಕೂಡ ಬೀಜಗಳನ್ನು ಬಿತ್ತುವುದಕ್ಕೆ ಉಪಯೋಗಿಸುತ್ತಾರೆ, ಹಾಗೆಯೇ ಮರಗಳನ್ನು ನೆಡುವುದಕ್ಕೂ ಉಪಯೋಗಿಸುತ್ತಾರೆ. ಯಾವುದು ನೆಡಲ್ಪಟ್ಟಿದೆ ಎನ್ನುವುದರ ಮೇಲೆ ಆಧಾರಪಟ್ಟು ಇತರ ಭಾಷೆಗಳು ಅನೇಕ ವಿಭಿನ್ನ ಪದಗಳನ್ನು ಉಪಯೋಗಿಸುತ್ತಿರಬಹುದು.
- "ಒಬ್ಬ ವ್ಯಕ್ತಿ ತಾನು ಬಿತ್ತಿದ್ದನ್ನೇ ಕೊಯ್ಯುವನು" ಎನ್ನುವ ಮಾತನ್ನು "ಕೆಲವೊಂದು ನಿರ್ದಿಷ್ಟವಾದ ಬೀಜಗಳೇ ಕೆಲವೊಂದು ಸಸ್ಯಗಳನ್ನು ಉಂಟುಮಾಡುತ್ತದೆ, ಇದೇ ರೀತಿಯಲ್ಲಿ ಒಬ್ಬ ವ್ಯಕ್ತಿಯ ಒಳ್ಳೇಯ ಕಾರ್ಯಗಳು ಒಳ್ಳೇಯ ಫಲವನ್ನು ಕೊಡುತ್ತವೆ ಮತ್ತು ಒಬ್ಬ ವ್ಯಕ್ತಿಯ ದುಷ್ಟ ಕಾರ್ಯಗಳು ದುಷ್ಟ ಫಲವನ್ನೇ ತೆಗೆದುಕೊಂಡು ಬರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ದುಷ್ಟ, ಒಳ್ಳೇಯ, ಕೊಯ್ಯು)

ಸತ್ಯವೇದದ ಅನುಬಂಧ ವಾಕ್ಯಗಳು :

- ಗಲಾತ್ಯ.06:6-8
- ಲೂಕ.08:4-6
- ಮತ್ತಾಯ.06:25-26
- ಮತ್ತಾಯ.13:3-6
- ಮತ್ತಾಯ.13:18-19
- ಮತ್ತಾಯ.25:24-25

ಪದ ಡೇಟಾ:

- Strong's: H2221, H2232, H2233, H2236, H4218, H4302, H5193, H7971, H8362, G4687, G4703, G5300, G5452, G6037

ಸಹಿಸು, ತಾಳಿಕೊಳ್ಳುವವನು, ಹೊತ್ತುಕೊ

ಸತ್ಯಾಂಶಗಳು:

“ಹೊತ್ತುಕೊ” ಎನ್ನುವ ಪದಕ್ಕೆ ಏನ್ನನಾದರು “ಒಯ್ಯು” ಎಂದು ಅಕ್ಷರಾರ್ಥವಾದ ಅರ್ಥ. ಈ ಪದವನ್ನು ಅನೇಕ ಅಲಂಕಾರ ರೂಪದಲ್ಲಿ ಉಪಯೋಗಗಳುಂಟು.

- ಮಗುವನ್ನು ಹೆರುವ ಮಹಿಳೆಯ ಬಗ್ಗೆ ಮಾತನಾಡುವಾಗ, ಮಗುವಿಗೆ "ಜನ್ಮ ನೀಡುವುದು" ಎಂಬುವುದನ್ನು ಅರ್ಥೈಸುತ್ತದೆ.
- “ಭಾರವನ್ನು ” ಹೊತ್ತುಕೊಳ್ಳು ಎಂದರೆ “ಕಷ್ಟಗಳನ್ನು ಅನುಭವಿಸುವದು” ಎಂದರ್ಥ. ಈ ಕಷ್ಟಗಳು ಮಾನಸಿಕವಾಗಿ ಅಥವಾ ಭೌತಿಕವಾಗಿರಬಹುದು.
- ಸತ್ಯವೇದದಲ್ಲಿ ಸಾಧಾರಣವಾಗಿ “ಫಲವನ್ನು ಕೊಡು” ಎನ್ನುವ ಮಾತಿಗೆ “ಫಲಿಸು” ಅಥವಾ “ಫಲ ಹೊಂದಿರು” ಎಂದರ್ಥ.
- “ಸಾಕ್ಷಿಯಾಗಿರು” ಎನ್ನುವ ಮಾತಿಗೆ “ಒಬ್ಬನು ಅನುಭವಿಸಿದ ಅಥವಾ ನೋಡಿದ ಸಂಗತಿಗಳನ್ನು ಕುರಿತು ವರದಿ ಮಾಡುವುದು” ಎಂದರ್ಥ.
- “ತನ್ನ ತಂದೆ ಮಾಡಿದ ಪಾಪಗಳಿಗೆ ಮಗನು ದೋಷವನ್ನು ಹೊತ್ತುಕೊಳ್ಳುವನು ” ಎನ್ನುವ ವಾಕ್ಯಕ್ಕೆ “ಅವನು ಭದ್ಯನಲ್ಲ” ಅಥವಾ ತಂದೆಯ ಪಾಪಗಳಿಗೆ “ಅವನು ಶಿಕ್ಷೆಯನ್ನು ಹೊಂದುವದಿಲ್ಲ” ಎಂದರ್ಥ.
- ಸರ್ವಸಾಮಾನ್ಯವಾಗಿ, ಈ ಪದವನ್ನು “ಹೊತ್ತುಕೊ” ಅಥವಾ “ಭಾದ್ಯನಾಗು” ಅಥವಾ “ಫಲಿಸು” ಅಥವಾ “ಹೊಂದಿರುವುದು” ಅಥವಾ “ತಾಳಿಕೊಳ್ಳುವುದು” ಎಂದು ಸಂದರ್ಭಕ್ಕೆ ಅನುಸಾರವಾಗಿ ಅನುವಾದ ಮಾಡಬಹುದು.

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಭಾರ, ಎಲೀಷ, ಸಹಿಸು, ಫಲ, ದೋಷ, ವರದಿ, ಕುರಿ, ಬಲ, ಸಾಕ್ಷಿ, ಸಾಕ್ಷಿ)

ಸತ್ಯವೇದದ ಅನುಬಂಧ ವಾಕ್ಯಗಳು:

- ವಿಲಾಪ.03:25-29

ಪದ ಡೇಟಾ:

- Strong’s: H2232, H3201, H3205, H5375, H5445, H5449, H6030, H6509, H6779, G142, G430, G941, G1080, G1627, G2592, G3140, G4160, G4722, G4828, G5041, G5088, G5342, G5409, G5576

ಸಹಿಸು, ಸಹಿಸುಕೊಳ್ಳುವುದು, ಸಹಿಸಿಕೊಂಡಿದೆ, ಸಹಿಸುಕೊಳ್ಳುತ್ತಾಯಿರು, ಸಹನೆ

ಪದದ ಅರ್ಥವಿವರಣೆ:

“ಸಹಿಸು” ಎನ್ನುವ ಪದವು ದೀರ್ಘಕಾಲ ಉಳಿಯುವುದು ಅಥವಾ ತಾಳ್ಮೆಯಿಂದ ಕಷ್ಟಕರವಾದದ್ದನ್ನು ಸಹಿಸಿಕೊಳ್ಳುವುದು ಎಂದು ಅರ್ಥೈಸುತ್ತದೆ. .

- ಇದಕ್ಕೆ ಪರೀಕ್ಷೆ ಸಮಯ ಬಂದಾಗ ಬಿಟ್ಟುಬಿಡದೆ ಸ್ಥಿರವಾಗಿರು ಎನ್ನುವ ಅರ್ಥವೂ ಬರುತ್ತದೆ.
- “ಸಹನೆ” ಎನ್ನುವ ಪದಕ್ಕೆ “ತಾಳ್ಮೆ” ಅಥವಾ “ವಿಚಾರಣೆ ಕೆಳಗೆ ಸಹಿಸಿಕೊಂಡಿರುವುದು” ಅಥವಾ “ಹಿಂಸೆಗಳಲ್ಲಿರುವಾಗ ದೃಢವಾಗಿರುವುದು” ಎಂದರ್ಥ.
- “ಅಂತ್ಯದವರೆಗೂ ಸಹಿಸಿಕೊಂಡಿರುವುದಕ್ಕೆ” ಕ್ರೈಸ್ತರಿಗೆ ಪ್ರೋತ್ಸಾಹ ಕೊಡುವುದು ಎನ್ನುವುದಕ್ಕೆ ಯೇಸುವಿಗೆ ವಿಧೇಯರಾಗಿರೆಂದು ಅವರಿಗೆ ಹೇಳುವುದು ಎಂದರ್ಥ, ಅಂದರೆ ಅವರಿಗೆ ಶ್ರಮೆಗಳು ಬಂದರೂ ಸಹಿಸಿಕೊಂಡಿರ್ರಿ ಎಂದು ಹೇಳುವುದು ಎಂದರ್ಥ.
- “ಶ್ರಮೆಗಳನ್ನು ಸಹಿಸಿಕೊಳ್ಳಿರಿ” ಎನ್ನುವ ಮಾತಿಗೆ “ಶ್ರಮೆಗಳನ್ನು ಅನುಭವಿಸಿರಿ” ಎಂದರ್ಥವೂ ಬರುತ್ತದೆ.

ಅನುವಾದ ಸಲಹೆಗಳು:

- “ಸಹಿಸು” ಎನ್ನುವ ಪದವನ್ನು ಅನುವಾದಿಸುವ ಬೇರೊಂದು ವಿಧಾನಗಳಲ್ಲಿ “ದೃಢ ನಿಶ್ಚಯತೆಯಿಂದಿರು” ಅಥವಾ “ನಂಬಿಕೆಯಿಂದಿರು” ಅಥವಾ “ನೀನು ಮಾಡಬೇಕೆಂದು ದೇವರು ಹೇಳಿದ್ದನ್ನು ಮಾಡುವುದರಲ್ಲಿ ಮುಂದಕ್ಕೆ ಸಾಗು” ಅಥವಾ “ಸ್ಥಿರವಾಗಿರು” ಎನ್ನುವ ಮಾತುಗಳನ್ನು ಉಪಯೋಗಿಸುತ್ತಾರೆ.
- ಕೆಲವೊಂದು ಸಂದರ್ಭಗಳಲ್ಲಿ “ಸಹಿಸು” ಎನ್ನುವ ಪದವನ್ನು “ಅನುಭವಿಸು” ಅಥವಾ “ಅದರ ಮೂಲಕ ಹಾದು ಹೋಗು” ಎಂದೂ ಅನುವಾದ ಮಾಡುತ್ತಾರೆ.
- ಅಂತಿಮವರೆಗೂ ಜೀವಿಸು ಎನ್ನುವ ಮಾತಿನ ಅರ್ಥದೊಂದಿಗೆ, “ಸಹಿಸು” ಎನ್ನುವ ಪದವನ್ನು “ಅಂತಿಮವರೆಗೂ” ಅಥವಾ “ಮುಂದುವರೆ” ಎಂದೂ ಅನುವಾದ ಮಾಡುತ್ತಾರೆ. “ಸಹಿಸಿಕೊಳ್ಳುವುದಿಲ್ಲ” ಎನ್ನುವ ಮಾತಿಗೆ “ಅಂತಿಮವರೆಗೂ ಇರುವುದಿಲ್ಲ” ಅಥವಾ “ಜೀವಿಸುವುದಕ್ಕೆ ಮುಂದುವರೆಯುವುದಿಲ್ಲ” ಎಂದೂ ಅನುವಾದ ಮಾಡಬಹುದು.
- “ಸಹನೆ” ಎನ್ನುವ ಪದವನ್ನು ಅನುವಾದ ಮಾಡುವ ಅನೇಕ ವಿಧಾನಗಳಲ್ಲಿ “ದೃಢ ನಿಶ್ಚಯತೆಯಿಂದಿರು” ಅಥವ “ನಂಬುತ್ತಾಯಿರು” ಅಥವಾ “ನಂಬಿಗಸ್ಥನಾಗಿರು” ಎನ್ನುವ ಮಾತುಗಳನ್ನು ಸೇರಿಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ದೃಢ ನಿಶ್ಚಯತೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ತಿಮೊಥೆ.02:11-13
- ಯಾಕೋಬ.01:1-3
- ಯಾಕೋಬ.01:12-13
- ಲೂಕ.21:16-19
- ಮತ್ತಾಯ.13:20-21
- ಪ್ರಕ.01:9-11
- ರೋಮಾ.05:3-5

ಪದ ಡೇಟಾ:

- Strong's: H386, H3201, H3557, H3885, H5331, H5375, H5975, G430, G907, G1526, G2005, G2076, G2553, G2594, G3114, G3306, G4722, G5278, G5281, G5297, G5342

ಸಹೋದರಿ, ಸಹೋದರಿಯರು

ಪದದ ಅರ್ಥವಿವರಣೆ:

ಸಹೋದರಿ ಎನ್ನುವ ಪದವು ಇನ್ನೊಬ್ಬ ವ್ಯಕ್ತಿಯೊಂದಿಗೆ ಕನಿಷ್ಟ ಒಬ್ಬ ಪೋಷಕರನ್ನು ಹೊಂದಿರುವ ಇನ್ನೊಬ್ಬ ಹೆಣ್ಣುವ್ಯಕ್ತಿ ಎಂದರ್ಥವಾಗಿರುತ್ತದೆ. ಈಕೆಯನ್ನು ಇನ್ನೊಬ್ಬ ವ್ಯಕ್ತಿಯ ಸಹೋದರಿಯೆಂದು ಹೇಳಲ್ಪಡುತ್ತದೆ ಅಥವಾ ಇತರ ವ್ಯಕ್ತಿಯ ಸಹೋದರಿ ಎಂದು ಹೇಳಲ್ಪಡುತ್ತದೆ.

- ಹೊಸ ಒಡಂಬಡಿಕೆಯಲ್ಲಿ "ಸಹೋದರಿ" ಎನ್ನುವ ಪದವನ್ನು ಕ್ರಿಸ್ತ ಯೇಸುವಿನಲ್ಲಿರುವ ಸಹ ವಿಶ್ವಾಸಿಯಾದ ಸ್ತ್ರೀಯಳನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.
- "ಸಹೋದರರು ಮತ್ತು ಸಹೋದರಿಯರು" ಎನ್ನುವ ಮಾತು ಕೆಲವೊಂದುಬಾರಿ ಕ್ರಿಸ್ತನಲ್ಲಿರುವ ವಿಶ್ವಾಸಿಗಳಾಗಿರುವ ಸ್ತ್ರೀ ಪುರುಷರೆಲ್ಲರನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.
- ಹಳೇ ಒಡಂಬಡಿಕೆ ಪುಸ್ತಕವಾಗಿರುವ ಪರಮಗೀತೆಗಳು ಎನ್ನುವ ಪುಸ್ತಕದಲ್ಲಿ "ಸಹೋದರಿ" ಎನ್ನುವ ಪದವು ಪ್ರೀತಿ ಮಾಡುವ ಸ್ತ್ರೀಯಳನ್ನು ಅಥವಾ ಹೆಂಡತಿಯನ್ನು ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಈ ಪದವು ಬೇರೆ ಅರ್ಥವನ್ನು ಅಂದರೆ ತಪ್ಪು ಅರ್ಥವನ್ನು ಕೊಡದವರೆಗೂ ಸ್ವಂತ ಸಹೋದರಿಯನ್ನು ಸೂಚಿಸುವುದಕ್ಕೆ ಅನುವಾದ ಮಾಡುವ ಭಾಷೆಯಲ್ಲಿ ಉಪಯೋಗಿಸುವ ಅಕ್ಷರಾರ್ಥವಾದ ಪದದೊಂದಿಗೆ ಈ ಪದವನ್ನು ಅನುವಾದ ಮಾಡುವುದು ಉತ್ತಮ.
- ಈ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನದಲ್ಲಿ "ಕ್ರಿಸ್ತನಲ್ಲಿ ಸಹೋದರಿ" ಅಥವಾ "ಅತ್ಮೀಕವಾದ ಸಹೋದರಿ" ಅಥವಾ "ಯೇಸುವಿನಲ್ಲಿ ನಂಬಿಕೆಯಿಟ್ಟಿರುವ ಸ್ತ್ರೀ" ಅಥವ "ಸಹ ಸ್ತ್ರೀ ವಿಶ್ವಾಸಿ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- ಸಾಧ್ಯವಾದರೆ ಕುಟುಂಬದಲ್ಲಿ ಉಪಯೋಗಿಸುವ ಪದವನ್ನು ಉಪಯೋಗಿಸುವುದು ಒಳ್ಳೇಯದು.
- "ವಿಶ್ವಾಸಿ" ಎನ್ನುವ ಪದಕ್ಕೆ ಭಾಷೆಯಲ್ಲಿ ಸ್ತ್ರೀಯನ್ನು ಸೂಚಿಸುವ ಪದವು ಇದ್ದರೆ, ಅದನ್ನೇ ಉಪಯೋಗಿಸುವುದು ಒಳ್ಳೇಯದು.
- ಈ ಪದವನ್ನು ಪ್ರೇಮಿಗೆ ಅಥವಾ ಹೆಂಡತಿಗೆ ಸೂಚಿಸಿದಾಗ, "ಇಷ್ಟಪಟ್ಟವಳು" ಅಥವಾ "ಪ್ರೀತಿಯ" ಎಂದೂ ಸ್ತ್ರೀಯನ್ನು ಸೂಚಿಸುವ ಅನುವಾದವನ್ನು ಬಳಸಬಹುದು..

(ಈ ಪದಗಳನ್ನು ಸಹ ನೋಡಿರಿ : ಸಹೋದರ, ಕ್ರಿಸ್ತನಲ್ಲಿ, ಆತ್ಮ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.02:16-17
- ಧರ್ಮೋ.27:22-23
- ಫಿಲೇ.01:1-3
- ರೋಮಾ.16:1-2

ಪದ ಡೇಟಾ:

- Strong's: H269, H1323, G27, G79

ಸಾತ್ವಿಕ, ಸಾಧುತ್ವ

ಪದದ ಅರ್ಥವಿವರಣೆ:

“ಸಾತ್ವಿಕ” ಎನ್ನುವ ಪದವು ಒಳ್ಳೆಯವನಾಗಿ, ಅಧೀನದಲ್ಲಿರಲು ಮತ್ತು ಅನ್ಯಾಯವನ್ನು ಅನುಭವಿಸಲು ಸಿದ್ಧನಾಗಿರುವ ಒಬ್ಬ ವ್ಯಕ್ತಿಯನ್ನು ವಿವರಿಸುತ್ತದೆ. ಸಾಧುತ್ವ ಎನ್ನುವುದು ಕಠಿಣತ್ವ ಅಥವಾ ಬಲವಂತಿಕೆ ಕಾಣಿಸಿಕೊಂಡಾಗಲೂ ಒಳ್ಳೆಯತನದಿಂದ ಇರುವ ಸಾಮರ್ಥ್ಯವನ್ನು ಹೊಂದಿರುವುದು ಎಂದರ್ಥ.

- ಸಾಧುತ್ವ ಎನ್ನುವುದು ಅನೇಕಬಾರಿ ದೀನತ್ವದೊಂದಿಗೆ ಸಂಬಂಧಿಸಲ್ಪಟ್ಟಿರುತ್ತದೆ.
- ಈ ಪದವನ್ನು “ಮೃದುವಾದ” ಅಥವಾ “ಸೌಮ್ಯ-ವರ್ತನೆ” ಅಥವಾ “ಸಿಹಿ-ಸ್ವಭಾವ” ಎಂದೂ ಅನುವಾದ ಮಾಡಬಹುದು.
- “ಸಾಧುತ್ವ” ಎನ್ನುವ ಪದವು “ಮೃದುತ್ವ” ಅಥವಾ “ದೀನತ್ವ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದೀನತ್ವ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೇತ್ರ.03:15-17
- 2 ಕೊರಿಂಥ.10:1-2
- 2 ತಿಮೊಥೆ.02:24-26
- ಮತ್ತಾಯ.05:5-8
- ಮತ್ತಾಯ.11:28-30
- ಕೀರ್ತನೆ.037:11-13

ಪದ ಡೇಟಾ:

- Strong's: H6035, H6037, H6038, G4235, G4236, G4239, G4240

ಸಾಧಿಸು, ಪರಿಶ್ರಮ

ಪದದ ಅರ್ಥವಿವರಣೆ:

“ಸಾಧಿಸು” ಮತ್ತು “ಪರಿಶ್ರಮ” ಎನ್ನುವ ಪದಗಳು ಎಷ್ಟೇ ಕಷ್ಟವಿದ್ದರೂ ಅಥವಾ ಎಷ್ಟೇ ಸಮಯ ತೆಗೆದುಕೊಂಡರೂ ಯಾವುದಾದರೊಂದನ್ನು ಮಾಡುವುದಕ್ಕೆ ಮುಂದೆವರಿಸುತ್ತಾ ಇರುವುದನ್ನು ಸೂಚಿಸುತ್ತದೆ.

ಸಾಧಿಸು ಎನ್ನುವ ಮಾತಿಗೆ ಅನೇಕ ವಿಧವಾದ ಕಷ್ಟ, ಹಿಂಸೆಗಳ ಮುಖಾಂತರ ಅಥವಾ ಕಠಿಣ ಪರಿಸ್ಥಿತಿಗಳ ಮುಖಾಂತರ ಹಾದು ಹೋಗುತ್ತಿದ್ದರೂ ಕ್ರಿಸ್ತನ ವಿಧಾನದಲ್ಲಿಯೇ ನಡೆದುಕೊಳ್ಳುವುದನ್ನೂ ಸೂಚಿಸುತ್ತದೆ.

- “ಪರಿಶ್ರಮ”ವನ್ನು ಒಬ್ಬ ವ್ಯಕ್ತಿ ಹೊಂದಿದ್ದಾನೆಂದರೆ, ಇದಕ್ಕೆ ಆ ವ್ಯಕ್ತಿ ಮಾಡಬೇಕಾದ ಕಾರ್ಯವನ್ನು ಎಷ್ಟೇ ಕಷ್ಟವಾಗಿದ್ದರೂ ಅಥವಾ ಎಷ್ಟೇ ನೋವನ್ನುಂಟು ಮಾಡಿದರೂ ಆ ಕಾರ್ಯವನ್ನು ಮಾಡುತ್ತಾ ಇರುವುದಕ್ಕೆ ಸಾಮರ್ಥ್ಯವನ್ನು ಹೊಂದಿದ್ದಾನೆ ಎಂದರ್ಥ,
- ವಿಶೇಷವಾಗಿ ಸುಳ್ಳು ಬೋಧನೆಗಳನ್ನು ಎದುರುಗೊಳ್ಳುತ್ತಾ, ದೇವರು ಬೋಧಿಸುವುದನ್ನು ನಂಬುವುದನ್ನು ಮುಂದುವರಿಸಲು ಪರಿಶ್ರಮದ ಅಗತ್ಯವಿದೆ.
- ನಕಾರಾತ್ಮಕವಾದ ಅರ್ಥವನ್ನು ಹೊಂದಿದ “ಮೊಂಡು” ಎನ್ನುವ ಪದವನ್ನು ಸೂಚಿಸದಂತೆ ನೋಡಿಕೊಳ್ಳಿರಿ.

(ಈ ಪದಗಳನ್ನು ಸಹ ನೋಡಿರಿ : ಸಹನೆ, ವಿಚಾರಣೆ)

ಸತ್ಯವೇದದ ಅನುಬಂಧ ವಾಕ್ಯಗಳು:

- ಕೊಲೊಸ್ಸ.01:11
- ಎಫೆಸ.06:18
- ಯಾಕೋಬ.05:9-11
- ಲೂಕ.08:14-15

ಪದ ಡೇಟಾ:

- Strong's: G3115, G4343, G5281

ಸಾಷ್ಟಾಂಗ ನಮಸ್ಕರಿಸು, ಸಾಷ್ಟಾಂಗ ನಮಸ್ಕರಿಸಿದೆ

ಪದದ ಅರ್ಥವಿವರಣೆ:

"ಸಾಷ್ಟಾಂಗ ನಮಸ್ಕರಿಸು" ಎನ್ನುವ ಮಾತಿಗೆ ಮುಖವನ್ನು ನೆಲದ ದಿಕ್ಕಿಗೆ ತಿರುಗಿಸಿ ನೆಲದ ಮೇಲೆ ಉದ್ದಕ್ಕೆ ಮಲಗಿ ಕೈಗಳನ್ನು ಮುಂದಕ್ಕೆ ಚಾಚಿ ನಮಸ್ಕರಿಸುವುದು ಎಂದರ್ಥ.

- ಯಾರಾದರೊಬ್ಬರ ಮುಂದೆ "ಅಡ್ಡಬಿದ್ದು ಸಾಷ್ಟಾಂಗ ಮಾಡು" ಅಥವಾ "ತನ್ನಷ್ಟಕ್ಕೆ ತಾನು ಸಾಷ್ಟಾಂಗ ಮಾಡುವುದು" ಎನ್ನುವ ಮಾತಿಗೆ ಆ ವ್ಯಕ್ತಿಯ ಮುಂದೆ ಆಕಸ್ಮಿಕವಾಗಿ ತುಂಬಾ ಕೆಳಕ್ಕೆ ಬಿದ್ದು ಬಾಗಿ ನಮಸ್ಕರಿಸುವುದು ಎಂದರ್ಥ.
- ಸಾಧಾರಣವಾಗಿ ಈ ರೀತಿಯ ಸಾಷ್ಟಾಂಗ ನಮಸ್ಕಾರ ಮಾಡುವ ಸ್ಥಿತಿಯು ಯಾವುದಾದರೊಂದು ಅದ್ಭುತವನ್ನು ನಡೆದ ಕಾರಣದಿಂದ ಆಶ್ಚರ್ಯವನ್ನು, ಅಂಜುತನವನ್ನು ಮತ್ತು ವಿಸ್ಮಯವನ್ನು ತೋರಿಸುವ ಸ್ಪಂದನೆಯಾಗಿರುತ್ತದೆ. ಬಾಗಿ ಸಾಷ್ಟಾಂಗ ನಮಸ್ಕಾರ ಮಾಡಿರುವ ವ್ಯಕ್ತಿಗೆ ಘನವನ್ನು ಮತ್ತು ಗೌರವವನ್ನು ಕೂಡ ಈ ಪದವು ಸೂಚಿಸುತ್ತದೆ.
- ಸಾಷ್ಟಾಂಗ ನಮಸ್ಕಾರ ಮಾಡುವುದೆನ್ನುವುದು ದೇವರನ್ನು ಆರಾಧಿಸುವ ಒಂದು ವಿಧಾನವಾಗಿರುತ್ತದೆ. ಯೇಸುವು ಅದ್ಭುತವನ್ನು ಮಾಡಿದ್ದಕ್ಕಾಗಿ ಆರಾಧನೆಯಲ್ಲಿ ಮತ್ತು ಕೃತಜ್ಞತೆಯನ್ನು ಸಲ್ಲಿಸುವುದರಲ್ಲಿ ಜನರು ಯೇಸುವಿಗೆ ಈ ವಿಧಾನದಲ್ಲಿ ಸ್ಪಂದನೆ ಮಾಡುತ್ತಿರುತ್ತಾರೆ ಅಥವಾ ಆತನು ದೊಡ್ಡ ಬೋಧಕನನ್ನಾಗಿ ಆತನನ್ನು ಘನಪಡಿಸಲು ಈ ರೀತಿಯಾಗಿ ಮಾಡುತ್ತಿರುತ್ತಾರೆ.
- ಸಂದರ್ಭಾನುಸಾರವಾಗಿ "ಸಾಷ್ಟಾಂಗ ನಮಸ್ಕಾರ" ಎನ್ನುವ ಮಾತನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ನೆಲಕ್ಕೆ ಮುಖವನ್ನಿಟ್ಟು ಕೆಳಭಾಗಕ್ಕೆ ಬಾಗಿ ನಮಸ್ಕರಿಸುವುದು" ಅಥವಾ "ಆತನ ಮುಂದೆ ಮುಖವನ್ನು ಕೆಳಕ್ಕೆ ಬಾಗಿಸಿ ಆತನನ್ನು ಆರಾಧನೆ ಮಾಡುವುದು" ಅಥವಾ "ಆಶ್ಚರ್ಯಕರವಾದ ರೀತಿಯಲ್ಲಿ ನೆಲಕ್ಕೆ ಬಾಗಿ ನಮಸ್ಕರಿಸುವುದು" ಅಥವಾ "ಆರಾಧನೆ ಮಾಡುವುದು" ಎನ್ನುವ ಮಾತುಗಳು ಒಳಗೊಂಡಿರುತ್ತವೆ.
- "ನಮಗೆ ನಾವು ಸಾಷ್ಟಾಂಗ ನಮಸ್ಕರಿಸುವುದಕ್ಕೆ ಆಗುವುದಿಲ್ಲ" ಎನ್ನುವ ಮಾತನ್ನು "ಆರಾಧನೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ" ಅಥವಾ "ಆರಾಧನೆಯಲ್ಲಿ ಮುಖವನ್ನು ಬಾಗಿಸಿ ನಮಸ್ಕರಿಸಿಕೊಳ್ಳುವುದಕ್ಕಾಗುವುದಿಲ್ಲ" ಅಥವಾ "ಕೆಳಕ್ಕೆ ಬಾಗಿ ಆರಾಧನೆ ಮಾಡಿಕೊಳ್ಳುವುದುದಕ್ಕಾಗುವುದಿಲ್ಲ" ಎಂದೂ ಅನುವಾದ ಮಾಡಬಹುದು.
- "ತನ್ನಷ್ಟಕ್ಕೆ ಸಾಷ್ಟಾಂಗ ನಮಸ್ಕರಿಸು" ಎನ್ನುವ ಮಾತನ್ನು "ಆರಾಧನೆ" ಅಥವಾ "ಅವರ ಮುಂದೆ ಕೆಳಕ್ಕೆ ಬಾಗು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ವಿಸ್ಮಯ, ಬಾಗು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.17:36-38
- ಆದಿ.43:28-29
- ಪ್ರಕ.19:3-4

ಪದ ಡೇಟಾ:

- Strong's: H5307, H5457, H6440, H6915, H7812

ಸಿಂಹಗಳು, ಸಿಂಹ, ಹೆಣ್ಣು ಸಿಂಹ, ಹೆಣ್ಣು ಸಿಂಹಗಳು

ಪದದ ಅರ್ಥವಿವರಣೆ:

ಸಿಂಹ ಎನ್ನುವುದು ಬೆಕ್ಕಿನ ಹಾಗೆ ಇರುವ ದೊಡ್ಡ ಪ್ರಾಣಿಯಾಗಿರುತ್ತದೆ, ಇದು ಬೇಟೆಯಾಡುವಾಗ ಕಡಿಯುವುದಕ್ಕೆ ಮತ್ತು ಸಾಯಿಸುವುದಕ್ಕೆ ಶಕ್ತಿಯುಳ್ಳ ಹಲ್ಲುಗಳನ್ನು ಮತ್ತು ಉಗುರುಗಳನ್ನು ಹೊಂದಿರುತ್ತದೆ.

- ಸಿಂಹಗಳಿಗೆ ಬಲವಾದ ದೇಹಗಳಿರುತ್ತವೆ ಮತ್ತು ಅವುಗಳ ಬೇಟೆಯಲ್ಲಿ ಹಿಡಿಯುವಕ್ಕೆ ತುಂಬಾ ವೇಗವಾಗಿ ಓಡುತ್ತವೆ. ಅವುಗಳ ಕೂದಲುಗಳು ತುಂಬಾ ಚಿಕ್ಕದಾಗಿದ್ದು, ಅವು ಬಂಗಾರದ ಗೋಧಿ ಕಂದು ಬಣ್ಣದಲ್ಲಿರುತ್ತವೆ.
- ಗಂಡು ಸಿಂಹಗಳ ತಲೆಯ ಮೇಲೆ ವೃತ್ತಾಕಾರದಲ್ಲಿ ಉದ್ದನೆಯ ಕೂದಲುಗಳನ್ನು ಒಳಗೊಂಡಿರುತ್ತದೆ.
- ಸಿಂಹಗಳು ತಿನ್ನುವುದಕ್ಕೆ ಇತರ ಪ್ರಾಣಿಗಳನ್ನು ಕೊಲ್ಲುತ್ತವೆ ಮತ್ತು ಅವು ಮನುಷ್ಯರಿಗೆ ತುಂಬಾ ಹಾನಿಕರವಾಗಿರುತ್ತವೆ.
- ಅರಸನಾದ ದಾವೀದನು ಚಿಕ್ಕವನಾಗಿದ್ದಾಗ, ಅವನು ಕಾಯುತ್ತಿರುವ ಕುರಿಗಳ ಮೇಲೆ ಸಿಂಹಗಳು ಧಾಳಿ ಮಾಡಿದಾಗ, ಆ ಸಿಂಹಗಳನ್ನು ಕೊಂದಿದ್ದನು.
- ಸಂಸೋನನು ಕೂಡ ತನ್ನ ಬರಿದ ಕೈಗಳಿಂದಲೇ ಸಿಂಹವನ್ನು ಕೊಂದಿದ್ದನು.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ದಾವೀದ, ಚಿರತೆ, ಸಂಸೋನ, ಕುರಿಗಳು)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.11:22-23
- 1 ಅರಸ.07:27-29
- ಜ್ಞಾನೋ.19:11-12
- ಕೀರ್ತನೆ.017:11-12
- ಪ್ರಕ.05:3-5

ಪದ ಡೇಟಾ:

- Strong's: H738, H739, H744, H3715, H3833, H3918, H7826, H7830, G3023

ಸಿಂಹಾಸನ, ಸಿಂಹಾಸನಗಳು, ಸಿಂಹಾಸನದಲ್ಲಿರುವುದು

ಪದದ ಅರ್ಥವಿವರಣೆ:

ಸಿಂಹಾಸನ ಎನ್ನುವುದು ಪಾಲಕನು ಕುಳಿತುಕೊಳ್ಳುವುದಕ್ಕೆ ವಿಶೇಷವಾಗಿ ತಯಾರು ಮಾಡಿಸಿರುವ ಕುರ್ಚಿಯಾಗಿರುತ್ತದೆ, ಪಾಲಕನು ಅದರಲ್ಲಿ ಕುಳಿತುಕೊಂಡು ಜನರು ಹೇಳಿಕೊಳ್ಳುವ ಪ್ರತಿಯೊಂದು ಮನವಿಯನ್ನು ಕೇಳಿ, ಪ್ರಾಮುಖ್ಯವಾದ ವಿಷಯಗಳಲ್ಲಿ ನಿರ್ಣಯ ತೆಗೆದುಕೊಲ್ಲುತ್ತಾನೆ.

- ಸಿಂಹಾಸನ ಎನ್ನುವುದು ಪಾಲಕನಿಗಿರುವ ಶಕ್ತಿಗೆ ಮತ್ತು ಅಧಿಕಾರಕ್ಕೆ ಗುರುತಾಗಿರುತ್ತದೆ.
- "ಸಿಂಹಾಸನ" ಎನ್ನುವ ಪದವು ಅನೇಕಬಾರಿ ಅಲಂಕಾರಿಕವಾಗಿ ಪಾಲಕನನ್ನು, ಆತನ ಆಳ್ವಿಕೆಯನ್ನು, ಅಥವಾ ತನ್ನ ಶಕ್ತಿಯನ್ನು ಸೂಚಿಸುತ್ತದೆ. (ನೋಡಿರಿ: ಲಾಕ್ಷಣಿಕ ಪ್ರಯೋಗ)
- ಸತ್ಯವೇದದಲ್ಲಿ ದೇವರನ್ನು ಅನೇಕಬಾರಿ ಸಿಂಹಾನದಲ್ಲಿ ಕುಳಿತಿರುವ ಅರಸನನ್ನಾಗಿ ಚಿತ್ರೀಕರಿಸಲ್ಪಟ್ಟಿದ್ದಾನೆ. ತಂದೆಯಾದ ದೇವರ ಬಲಗೈಯಲ್ಲಿರುವ ಸಿಂಹಾಸನದ ಮೇಲೆ ಕುಳಿತಿದ್ದವನನ್ನಾಗಿ ಚಿತ್ರೀಕರಿಸಲ್ಪಟ್ಟಿದ್ದಾನೆ.
- ಆಕಾಶವು ದೇವರ ಸಿಂಹಾಸನವಾಗಿದೆಯೆಂದು ಯೇಸು ಹೇಳಿದ್ದಾರೆ. ಈ ಪದವನ್ನು ಅನುವಾದ ಬೇರೊಂದು ವಿಧಾನಗಳಲ್ಲಿ "ದೇವರು ಅರಸನಾಗಿ ಆಳುವ ಸ್ಥಳ" ಎನ್ನುವ ಮಾತು ಗೊಂಡಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಅಧಿಕಾರ, ಶಕ್ತಿ, ಅರಸ, ಆಳ್ವಿಕೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಕೊಲೊಸ್ಸೆ.01:15-17
- ಆದಿ.41:39-41
- ಲೂಕ.01:30-33
- ಲೂಕ.22:28-30
- ಮತ್ತಾಯ.05:33-35
- ಮತ್ತಾಯ.19:28
- ಪ್ರಕ.01:4-6

ಪದ ಡೇಟಾ:

- Strong's: H3427, H3676, H3678, H3764, H7675, G968, G2362

ಸಿದ್ಧಾಂತ, ಬೋಧನೆ, ನಂಬಿಕೆಗಳು, ಸೂಚನೆಗಳು, ಜ್ಞಾನ

ಪದದ ಅರ್ಥವಿವರಣೆ:

“ಸಿದ್ಧಾಂತೆ” ಎನ್ನುವ ಪದಕ್ಕೆ “ಬೋಧನೆ” ಎಂದು ಅಕ್ಷರಾರ್ಥವಿರುತ್ತದೆ. ಇದು ಧರ್ಮ ಸಂಬಂಧವಾದ ಬೋಧನೆಯನ್ನು ಸೂಚಿಸುತ್ತದೆ.

- ಕ್ರೈಸ್ತ ಬೋಧನೆಗಳ ಸಂದರ್ಭದಲ್ಲಿ ನೋಡಿದಾಗ, “ಸಿದ್ಧಾಂತ” ಎನ್ನುವ ಪದವು ತಂದೆಯಾದ ದೇವರನ್ನು, ಮಗನಾದ ದೇವರನ್ನು ಮತ್ತು ಪವಿತ್ರಾತ್ಮ ದೇವರನ್ನು ಕುರಿತು ಹೇಳುವ ಬೋಧನೆಗಳೆಲ್ಲವನ್ನು, ಅಷ್ಟೇ ಅಲ್ಲದೇ ಅವರ ಗುಣಲಕ್ಷಣಗಳೆಲ್ಲವನ್ನು ಮತ್ತು ಅವರು ಮಾಡಿದ ಪ್ರತಿಯೊಂದು ಕಾರ್ಯವನ್ನು ಸೂಚಿಸುತ್ತದೆ
- ಅಷ್ಟೇ ಅಲ್ಲದೆ ಇದು ದೇವರಿಗೆ ಮಹಿಮೆ ತರುವಂತಹ ಪರಿಶುದ್ಧವಾದ ಜೀವನವನ್ನು ಯಾವ ರೀತಿ ಜೀವಿಸಬೇಕೆಂದೆನ್ನುವುದರ ಕುರಿತಾಗಿ ದೇವರು ಬೋಧಿಸುವ ಪ್ರತಿಯೊಂದನ್ನು ಸೂಚಿಸುತ್ತದೆ.
- “ಸಿದ್ಧಾಂತೆ” ಎನ್ನುವ ಪದವು ಕೆಲವೊಂದುಬಾರಿ ಮನುಷ್ಯರಿಂದ ಬರುವ ಲೌಕಿಕವಾದ ಧರ್ಮ ಬೋಧನೆಗಳನ್ನು ಅಥವಾ ತಪ್ಪು ಬೋಧನೆಗಳನ್ನು ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ. ಸಂದರ್ಭವು ಸರಿಯಾದ ಅರ್ಥವನ್ನು ಸ್ಪಷ್ಟಪಡಿಸುತ್ತದೆ.
- ಈ ಪದವನ್ನು “ಬೋಧನೆ” ಎಂದೂ ಅನುವಾದ ಮಾಡುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಬೋಧನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.01:03
- 2 ತಿಮೊಥೆ.03:16-17
- ಮಾರ್ಕ.07:6-7
- ಮತ್ತಾಯ.15:7-9

ಪದ ಡೇಟಾ:

- Strong's: H3948, G1319, G1322, G2085

ಸೀಮೆ, ಸೀಮೆಗಳು, ಪ್ರಾಂತೀಯ

ಸತ್ಯಾಂಶಗಳು:

ಸೀಮೆ ಎನ್ನುವುದು ಒಂದು ದೇಶದ ಅಥವಾ ಒಂದು ಸಾಮ್ರಾಜ್ಯದ ಭಾಗವಾಗಿರುತ್ತದೆ ಅಥವಾ ವಿಭಾಗ ವಾಗಿರುತ್ತದೆ. “ಪ್ರಾಂತೀಯ” ಎನ್ನುವ ಪದವು ಸೀಮೆಗೆ ಸಂಬಂಧಪಟ್ಟಿರುವ ಯಾವುದಾದರೊಂದನ್ನು ವಿವರಿಸುತ್ತದೆ, ಉದಾಹರಣೆಗೆ ಪ್ರಾಂತೀಯ ಪಾಲಕನು.

- ಉದಾಹರಣೆಗೆ, ಪುರಾತನ ಪಾರಸಿಯ ಸಾಮ್ರಾಜ್ಯವು ಪ್ರಾಂತ್ಯಗಳಾಗಿ ವಿಭಾಗಸಿಲ್ಪಟ್ಟಿದ್ದವು, ಉದಾಹರಣೆಗೆ, ಮಿದ್ಯಾ, ಪಾರಸಿಯ, ಸಿರಿಯಾ ಮತ್ತು ಐಗುಪ್ತ.
- ಹೊಸ ಒಡಂಬಡಿಕೆಯ ಕಾಲದಲ್ಲಿ ರೋಮಾ ಸಾಮ್ರಾಜ್ಯ ಅನೇಕ ಪ್ರಾಂತ್ಯಗಳಾಗಿ ವಿಭಾಗಿಸಲ್ಪಟ್ಟಿದ್ದವು, ಉದಾಹರಣೆ, ಮೆಕೆದೋನ್ಯ, ಆಸ್ಯ, ಸಿರಿಯಾ, ಯೂದಾ, ಸಮಾರ್ಯ, ಗಲಿಲಾಯ ಮತ್ತು ಗಲಾತ್ಯ.
- ಪ್ರತಿಯೊಂದು ಸೀಮೆಯು ತನ್ನದೇಯಾದ ಪಾಲಿಸುವ ಅಧಿಕಾರವನ್ನು ಹೊಂದಿರುತ್ತದೆ, ಇವರೆಲ್ಲರೂ ಅರಸನಿಗೆ ಅಥವಾ ಆ ಸಾಮ್ರಾಜ್ಯದ ಪಾಲಕನಿಗೆ ಒಳಗಾಗಿರುತ್ತಾರೆ. ಈ ಪಾಲಕನನ್ನು ಕೆಲವೊಂದುಬಾರಿ “ಸೀಮೆಯ ಅಧಿಕಾರಿ” ಅಥವಾ “ಪ್ರಾಂತ್ಯದ ಪಾಲಕ” ಎಂದೂ ಕರೆಯುತ್ತಾರೆ.
- “ಸೀಮೆ” ಮತ್ತು “ಪ್ರಾಂತ್ಯ” ಎನ್ನುವ ಪದಗಳನ್ನು “ಪ್ರದೇಶ” ಮತ್ತು “ಪ್ರಾದೇಶಿಕ” ಎಂದೂ ಕರೆಯುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಆಸ್ಯ, ಐಗುಪ್ತ, ಎಸ್ತೇರಳು, ಗಲಾತ್ಯ, ಗಲಿಲಾಯ, ಯೂದಾ, ಮೆಕದೋನ್ಯ, ಮೇದ್ಯ, ರೋಮಾ, ಸಮಾರ್ಯ, ಸಿರಿಯಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.19:30-32
- ದಾನಿ.03:1-2
- ದಾನಿ.06:1-3
- ಪ್ರಸಂಗಿ.02:7-8

ಪದ ಡೇಟಾ:

- Strong's: H4082, H4083, H5675, H5676, G1885

ಸುಂಕ, ಸುಂಕಗಳು, ಸುಂಕ ಹಾಕಿದೆ, ಸುಂಕ ಹಾಕುವುದು, ತೆರಿಗೆ, ಸುಂಕವನ್ನು ಕಟ್ಟುವವರು, ತೆರಿಗೆ ಅಧಿಕಾರಿ, ತೆರಿಗೆ ಅಧಿಕಾರಿಗಳು

ಪದದ ಅರ್ಥವಿವರಣೆ:

"ಸುಂಕ" ಮತ್ತು "ಸುಂಕಗಳು" ಎನ್ನುವ ಪದಗಳು ಜನರ ಮೇಲೆ ಅಧಿಕಾರದಲ್ಲಿರುವ ಪ್ರಭುತ್ವಕ್ಕೆ ಜನರು ಸಲ್ಲಿಸುವ ಹಣವನ್ನು ಅಥವಾ ವಸ್ತುಗಳನ್ನು ಸೂಚಿಸುತ್ತದೆ. "ತೆರಿಗೆ ಅಧಿಕಾರಿ" ಪ್ರಭುತ್ವದ ಕೆಲಸಗಾರನಾಗಿರುತ್ತಾನೆ, ಜನರು ತೆರಿಗೆಗಳನ್ನು ಪ್ರಭುತ್ವಕ್ಕೆ ಸಲ್ಲಿಸಬೇಕಾದ ಹಣವನ್ನು ಪಡೆದುಕೊಳ್ಳುವ ಕೆಲಸವನ್ನು ಹೊಂದಿರುತ್ತಾನೆ.

- ತೆರಿಗೆಯಾಗಿ ಕೊಟ್ಟ ಹಣದ ಮೊತ್ತವು ಸಾಧಾರಣವಾಗಿ ಒಬ್ಬ ವ್ಯಕ್ತಿಯ ಆಸ್ತಿ ಅಥವಾ ಒಂದು ವಸ್ತುವಿನ ಬೆಲೆಯ ಮೇಲೆ ಆಧಾರಪಟ್ಟಿರುತ್ತದೆ.
- ಯೇಸು ಮತ್ತು ಅಪೊಸ್ತಲರ ಕಾಲದಲ್ಲಿ ರೋಮಾ ಪ್ರಭುತ್ವವು ರೋಮಾ ಸೀಮೆಯಲ್ಲಿ ನಿವಾಸವಾಗಿರುವ ಪ್ರತಿಯೊಬ್ಬರಿಂದ ಸುಂಕವನ್ನು ಕಟ್ಟಿಸಿಕೊಳ್ಳುತ್ತಿದ್ದರು, ಇವರಲ್ಲಿ ಯೆಹೂದ್ಯರು ಇದ್ದಿದ್ದರು.
- ಒಂದುವೇಳೆ ಸುಂಕವನ್ನು ಕಟ್ಟದ ವ್ಯಕ್ತಿಯ ವಿರುದ್ಧವಾಗಿ ಪ್ರಭುತ್ವವು ಕಾನೂನುಬದ್ಧವಾದ ಕ್ರಮವನ್ನು ಕೈಗೊಂಡು, ಅವನು ಸಲ್ಲಿಸಬೇಕಾದ ಹಣವನ್ನು ಹಿಂಪಡೆಯಬಹುದು.
- ರೋಮಾ ಸಾಮ್ರಾಜ್ಯದಲ್ಲಿ ನಿವಾಸವಾಗಿರುವ ಪ್ರತಿಯೊಬ್ಬರಿಗೆ ಸುಂಕವನ್ನು ಹಾಕುವುದಕ್ಕೆ ಜನಗಣತಿಯನ್ನು ನಿರ್ವಹಿಸಿದ್ದರು, ಇದಕ್ಕೆ ಯೋಸೇಫನು ಮತ್ತು ಮರಿಯಳು ಕೂಡ ಜನಗಣತಿಯಲ್ಲಿ ತಮ್ಮ ಹೆಸರುಗಳನ್ನು ಸೇರಿಸಲು ಬೆತ್ಲೆಹೇಮಿಗೆ ಪ್ರಯಾಣ ಮಾಡಿದರು.
- "ಸುಂಕ" ಎನ್ನುವ ಪದವನ್ನು "ಕಟ್ಟಬೇಕಾದ ಪಾವತಿ" ಅಥವಾ "ಪ್ರಭುತ್ವದ ಹಣ" ಅಥವಾ "ದೇವಾಲಯದ ಹಣ" ಎಂದು ಸಂದರ್ಭಾನುಗುಣವಾಗಿ ಅನುವಾದ ಮಾಡಬಹುದು.
- "ಸುಂಕವನ್ನು ಪಾವತಿಸು" ಎನ್ನುವ ಮಾತನ್ನು "ಪ್ರಭುತ್ವಕ್ಕೆ ಹಣವನ್ನು ಕಟ್ಟು" ಅಥವಾ "ಪ್ರಭುತ್ವಕ್ಕಾಗಿ ಹಣವನ್ನು ಪಡೆದುಕೋ" ಅಥವಾ "ಕಟ್ಟಬೇಕಾದ ಹಣವನ್ನು ಸಲ್ಲಿಸು" ಎಂದೂ ಅನುವಾದ ಮಾಡಬಹುದು. "ಸುಂಕಗಳನ್ನು ಸಂಗ್ರಹಿಸು" ಎನ್ನುವ ಮಾತನ್ನು "ಪ್ರಭುತ್ವಕ್ಕಾಗಿ ಹಣವನ್ನು ಸಂಗ್ರಹಿಸು" ಎಂದೂ ಅನುವಾದ ಮಾಡಬಹುದು.
- "ತೆರಿಗೆ ಅಧಿಕಾರಿ" ಎನ್ನುವ ಮಾತು ಪ್ರಭುತ್ವಕ್ಕಾಗಿ ಕೆಲಸ ಮಾಡುವ ವ್ಯಕ್ತಿಯನ್ನು ಮತ್ತು ಜನರು ಕಟ್ಟಬೇಕಾದ ಹಣವನ್ನು ಕಟ್ಟಿಸಿಕೊಳ್ಳುವ ವ್ಯಕ್ತಿಯನ್ನು ಸೂಚಿಸುತ್ತದೆ.
- ರೋಮಾ ಪ್ರಭುತ್ವಕ್ಕೆ ತೆರಿಗೆಗಳನ್ನು ಸಂಗ್ರಹಿಸುವ ಜನರು ಅನೇಕಬಾರಿ ಪ್ರಭುತ್ವಕ್ಕೆ ಕಟ್ಟಬೇಕಾದ ಹಣಕ್ಕಿಂತ ಹೆಚ್ಚಿನ ಹಣವನ್ನು ಜನರಿಂದ ಪಡೆದುಕೊಳ್ಳುತ್ತಿದ್ದರು. ತೆರಿಗೆ ಅಧಿಕಾರಿಗಳು ಬರುವಂತಹ ಹೆಚ್ಚಿನ ಮೊತ್ತವನ್ನು ತಮಗಾಗಿಯೇ ಇಟ್ಟುಕೊಳ್ಳುತ್ತಿದ್ದರು.
- ತೆರಿಗೆ ಅಧಿಕಾರಿಗಳು ಈ ರೀತಿಯಾಗಿ ಜನರನ್ನು ಮೋಸಗೊಳಿಸುವುದರಿಂದ, ಯೆಹೂದ್ಯರು ಅವರನ್ನು ಪಾಪಿಗಳಲ್ಲಿ ಅತೀ ಕೆಟ್ಟವರೆಂದು ಪರಿಗಣಿಸಿದ್ದರು.
- ಯೆಹೂದ್ಯರು ಕೂಡ ಯೆಹೂದ್ಯ ಸುಂಕದ ಅಧಿಕಾರಿಗಳನ್ನು ತಮ್ಮ ಸ್ವಂತ ಜನರ ದ್ರೋಹಿಗಳನ್ನಾಗಿ ಪರಿಗಣಿಸಿದ್ದರು, ಯಾಕಂದರೆ ಯೆಹೂದ್ಯ ಜನರನ್ನು ಒತ್ತಡಕ್ಕೆ ಗುರಿ ಮಾಡಿದ ರೋಮಾ ಪ್ರಭುತ್ವಕ್ಕೆ ಅವರು ಕೆಲಸ ಮಾಡಿದ್ದರು.
- "ಸುಂಕ ಅಧಿಕಾರಿಗಳು ಮತ್ತು ಪಾಪಿಗಳು" ಎನ್ನುವ ಮಾತು ಹೊಸ ಒಡಂಬಡಿಕೆಯಲ್ಲಿ ತುಂಬಾ ಸಾಧಾರಣವಾದ ಮಾತಾಗಿದ್ದಿತ್ತು, ಇದು ಯೆಹೂದ್ಯರು ತೆರಿಗೆ ಅಧಿಕಾರಿಗಳನ್ನು ಎಷ್ಟು ಹೆಚ್ಚಾಗಿ ತೊರೆಯುತ್ತಿದ್ದರೆನ್ನುವುದನ್ನು ತೋರಿಸುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಯೆಹೂದ್ಯ, ರೋಮ್, ಪಾಪ)

ಸತ್ಯವೇದದ ಅನುಬಂಧ ವಾಕ್ಯಗಳು :

- ಲೂಕ.20:21-22
- ಮಾರ್ಕ.02:13-14
- ಮತ್ತಾಯ.09:7-9
- ವಿಮೋ.31:28-29
- ರೋಮಾ.13:6-7
- ಲೂಕ.03:12-13
- ಲೂಕ.05:27-28
- ಮತ್ತಾಯ.05:46-48
- ಮತ್ತಾಯ.09:10-11
- ಮತ್ತಾಯ.11:18-19
- ಮತ್ತಾಯ.17:26-27
- ಮತ್ತಾಯ.18:17

ಸತ್ಯವೇದದಿಂದ ಉದಾಹರಣೆಗಳು:

34:06 "ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಬ್ಬರು ವ್ಯಕ್ತಿಗಳು ದೇವಾಲಯಕ್ಕೆ ಹೋದರು. ಅವರಲ್ಲಿ ಒಬ್ಬರು ತೆರಿಗೆ ವಸೂಲಿದಾರನಾಗಿದ್ದನು, ಮತ್ತು ಇನ್ನೊಬ್ಬ ವ್ಯಕ್ತಿ ಧರ್ಮದ ನಾಯಕನಾಗಿದ್ದನು." 34:07 "ನಾನು ಇತರ ಮನುಷ್ಯರಂತೆ - ಅಂದರೆ ಕಳ್ಳರು, ಅನ್ಯಾಯಸ್ತರು, ವ್ಯಭಿಚಾರಿಗಳು ಅಥವಾ

ಸುಂಕದವನಂತೆ ನಾನು ಪಾಪಿಯಾಗಿರುವುದಿಲ್ಲದಿದ್ದಕ್ಕಾಗಿ ದೇವರೇ ನಿಮಗೆ ವಂದನೆಗಳು" ಎಂದು ಧರ್ಮದ ನಾಯಕನು ಪ್ರಾರ್ಥನೆ ಮಾಡಿದನು. 34:09 "ಆದರೆ ಸುಂಕದವನು ಧರ್ಮದ ನಾಯಕನಿಗೆ ತುಂಬಾ ದೂರವಾಗಿ ನಿಂತಿದ್ದನು, ಕನಿಷ್ಟ ಪರಲೋಕದ ಕಡೆಗೆ ಕಣ್ಣುಗಳನ್ನು ಎತ್ತಿ ನೋಡಲಿಲ್ಲ. ಆದರೆ ಅವನು ತನ್ನ ಎದೆಯನ್ನು ನೆಲಕ್ಕೆ ಬಾಗಿಸಿ, "ದೇವರೆ ನಾನು ಪಾಪಿಯಾಗಿದ್ದರಿಂದ ನನ್ನನ್ನು ಕರುಣಿಸು" ಎಂದು ಪ್ರಾರ್ಥನೆ ಮಾಡಿದನು." 34:10 "ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ದೇವರು ಸುಂಕದವನ ಪ್ರಾರ್ಥನೆಯನ್ನು ಕೇಳಿ, ಅವನನ್ನು ನೀತಿವಂತನೆಂದು ಪ್ರಕಟಿಸಿದನು" ಎಂದು ಯೇಸು ಹೇಳಿದನು. 35:01 ಒಂದು ದಿನ ಯೇಸು ಅನೇಕಮಂದಿ ಸುಂಕದವರಿಗೆ ಮತ್ತು ಅಲ್ಲಿಗೆ ಬಂದಿರುವ ಪಾಪಿಗಳಿಗೆ ಬೋಧನೆ ಮಾಡುತ್ತಿದ್ದನು.

ಪದ ಡೇಟಾ:

- Tax Collector: Strong's: H5065, H5674, G5057, G5058

ಸುರುಳಿ, ಸುರುಳಿಗಳು

ಪದದ ಅರ್ಥವಿವರಣೆ:

ಪುರಾತನ ಕಾಲಗಳಲ್ಲಿ ಸುರುಳಿ ಎನ್ನುವುದು ಚರ್ಮದಿಂದ ಅಥವಾ ಪಾಪಿರಸ್ (ಮರದ ತೊಗಟೆ) ಎನ್ನುವುದರಿಂದ ತಯಾರಿಸಲ್ಪಟ್ಟ ಉದ್ದವಾದ, ಸುತ್ತಿರುವ ಹಾಳೆಯಾಗಿರುತ್ತದೆ.

- ಸುರುಳಿಯ ಮೇಲೆ ಬರೆದನಂತರ ಅಥವಾ ಸುರುಳಿಯಲ್ಲಿರುವುದನ್ನು ಓದಿದನಂತರ, ಈ ಸುರುಳಿಯ ಎರಡು ಬದಿಗೆ ಕಟ್ಟಿರುವ ಕಟ್ಟಿಗೆಗಳನ್ನು ಉಪಯೋಗಿಸುವುದರಿಂದ ಜನರು ಸುತ್ತಿರುತ್ತಾರೆ.
- ಸುರುಳಿಗಳು ಲೇಖನಗಳಿಗೆ ಮತ್ತು ಕಾನೂನುಬದ್ಧವಾದ ಪತ್ರಗಳಿಗೆ ಉಪಯೋಗಿಸುತ್ತಿದ್ದರು.
- ಕೆಲವೊಂದುಬಾರಿ ಸುರುಳಿಗಳಲ್ಲಿ ಸಂದೇಶಗಳನ್ನು ಬರೆದು, ಮೇಣದಿಂದ ಮುದ್ರಿಸಿ ಅವುಗಳನ್ನು ಸಂದೇಶವಾಹಕರಿಂದ ಕಳುಹಿಸುತ್ತಿದ್ದರು. ಸುರುಳಿಯನ್ನು ಪಡೆದುಕೊಳ್ಳುತ್ತಿರುವಾಗ ಮೇಣವು ಇನ್ನೂ ಇರುತ್ತಿದ್ದರೆ, ಆ ಸುರುಳಿಯನ್ನು ತೆಗೆದುಕೊಳ್ಳುವವನು ಅದನ್ನು ಯಾರು ತೆರೆದಿಲ್ಲವೆಂದು, ಆ ಸುರುಳಿಯನ್ನು ಓದಲಿಲ್ಲವೆಂದು ತಿಳಿದುಕೊಳ್ಳುವನು.
- ಈ ಸುರುಳಿಗಳಲ್ಲಿ ಇಬ್ರಿ ಲೇಖನಗಳನ್ನು ಒಳಗೊಂಡಿರುತ್ತವೆ, ಇವುಗಳನ್ನು ಸಮಾಜ ಮಂದಿರಗಳಲ್ಲಿ ಗಟ್ಟಿಯಾಗಿ ಓದುತ್ತಿದ್ದರು.

(ಈ ಪದಗಳನ್ನು ಸಹ ನೋಡಿರಿ : ಮುದ್ರೆ, ಸಮಾಜ ಮಂದಿರ, ದೇವರ ವಾಕ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆರೆ.29:1-3
- ಲೂಕ.04:16-17
- ಅರಣ್ಯ.21:14-15
- ಪ್ರಕ.05:1-2

ಪದ ಡೇಟಾ:

- Strong's: H4039, H4040, H5612, G974, G975

ಸುಳ್ಳು ಪ್ರವಾದಿ, ಸುಳ್ಳು ಪ್ರವಾದಿಗಳು

ಪದದ ಅರ್ಥವಿವರಣೆ

ತನ್ನ ಸಂದೇಶ ದೇವರಿಂದ ಅವನು ಪಡೆದಿದ್ದಾನೆಂದು ಸುಳ್ಳಾಗಿ ಹೇಳಿಕೊಳ್ಳುವವನನ್ನು ಸುಳ್ಳು ಪ್ರವಾದಿಯೆಂದು ಕರೆಯುತ್ತಾರೆ.

- ಸಹಜವಾಗಿ ಸುಳ್ಳು ಪ್ರವಾದಿಗಳ ಪ್ರವಾದನೆ ನೆರವೇರುವುದಿಲ್ಲ. ಅಂದರೆ, ಅವು ನಿಜವಾಗುವದಿಲ್ಲ.
- ಸುಳ್ಳು ಪ್ರವಾದಿಗಳು ಬೋಧಿಸುವ ಸಂಗತಿಗಳು ಸತ್ಯವೇದಕ್ಕೆ ಪಾಕ್ಷಿಕವಾಗಿ ಅಥವಾ ಸಂಪೂರ್ಣವಾಗಿ ವಿರೋದವಾಗಿರುತ್ತವೆ.
- ಈ ಪದವನ್ನು "ದೇವರ ಪ್ರತಿನಿಧಿ ಎಂದು ಸುಳ್ಳಾಗಿ ಹೇಳಿಕೊಳ್ಳುವ ವ್ಯಕ್ತಿ" ಅಥವಾ "ದೇವರ ಮಾತುಗಳನ್ನು ಹೇಳುತ್ತಿದ್ದೇನೆಂದು ಸುಳ್ಳು ಹೇಳುವವನು" ಎಂದು ಅನುವಾದ ಮಾಡಬಹುದು.
- ತಾವು ದೇವರಿಂದ ಬಂದಿದ್ದೇವೆಂದು ಜನರನ್ನು ಮೋಸಮಾಡುವ ಅನೇಕ ಸುಳ್ಳು ಪ್ರವಾದಿಗಳು ಅಂತ್ಯಕಾಲದಲ್ಲಿ ಬರುತ್ತಾರೆಂದು ಹೊಸ ಒಡಂಬಡಿಕೆ ಭೋದಿಸುತ್ತಿದೆ.

(ಈ ಪದಗಳನ್ನು ಸಹ ನೋಡಿರಿ : ನೆರವೇರಿಸು, ಪ್ರವಾದಿ, ಸತ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಯೋಹಾನ.04:1-3
- 2 ಪೇತ್ರನು.02:1-3
- ಅಪೊ.ಕೃತ್ಯ.13:6-8
- ಲೂಕ.06:26
- ಮತ್ತಾಯ.07:15-17
- ಮತ್ತಾಯ.24:23-25

ಪದ ಡೇಟಾ:

- Strong's: G5578

ಸುಳ್ಳುಸುದ್ದಿ, ಅಪನಿಂದೆ ಮಾಡುವವರು, ನಿಂದಿಸುವುದು, ಅವಮಾನಿಸುವುದು

ಪದದ ಅರ್ಥವಿವರಣೆ:

ಸುಳ್ಳು ಸುದ್ದಿ ಎನ್ನುವುದು ನಕಾರಾತ್ಮಕದಿಂದ ತುಂಬಿರುತ್ತದೆ, ಒಬ್ಬರ ಕುರಿತಾಗಿ (ಬರವಣಿಗೆಯ ಮೂಲಕವಲ್ಲದೆ) ವಿರೋಧಿಸುವ ಮಾತುಗಳನ್ನಾಡುವುದು. ಒಬ್ಬರ ಕುರಿತಾಗಿ (ಅಂಥವುಗಳನ್ನು ಬರೆಯೆದೆ) ಹೇಳುವುದು ಎಂದರೆ ಆ ವ್ಯಕ್ತಿಯ ಕುರಿತಾಗಿ ಚಾಡಿ ಹೇಳುವುದು ಎಂದರ್ಥ. ಅಂಥಹ ವಿಷಯಗಳನ್ನು ಹೇಳುವ ವ್ಯಕ್ತಿ ಚಾಡಿ ಹೇಳುವವನು ಎಂದರ್ಥವಾಗಿರುತ್ತದೆ.

- ಸುಳ್ಳು ಸುದ್ದಿ ಎನ್ನುವುದು ನಿಜವಾದ ವರದಿಯಾಗಿರಬಹುದು ಅಥವಾ ಸುಳ್ಳು ಆರೋಪವೂ ಆಗಿರಬಹುದು, ಆದರೆ ಚಾಡಿ ಹೇಳಲ್ಪಟ್ಟಿರುವ ವ್ಯಕ್ತಿಯ ಕುರಿತಾಗಿ ನಕಾರಾತ್ಮಕವಾಗಿ ಇತರರು ಆಲೋಚನೆ ಮಾಡುವಂತೆ ಪ್ರಭಾವ ಬೀರುತ್ತದೆ.
- “ಸುಳ್ಳು ಸುದ್ದಿ” ಎನ್ನುವ ಪದವನ್ನು “ವಿರುದ್ಧವಾಗಿ ಮಾತನಾಡು” ಅಥವಾ “ದುಷ್ಟ ವರದಿಯನ್ನು ಹರಡಿಸು” ಅಥವಾ “ದೂಷಿಸು” ಎಂದೂ ಅನುವಾದ ಮಾಡಬಹುದು.
- ಚಾಡಿ ಹೇಳುವವನ್ನು “ವರದಿಗಾರ” ಅಥವಾ “ಚರ್ಚೆ-ಧಾರಕ” ಎಂದೂ ಕರೆಯುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ದೂಷಣೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.04:13
- 1 ತಿಮೊಥೆ.03:11
- 2 ಕೊರಿಂಥ.06:8-10
- ಮಾರ್ಕ.07:20-23

ಪದ ಡೇಟಾ:

- Strong's: H1681, H1696, H1848, H3960, H5791, H7270, H7400, H8267, G987, G988, G1228, G1426, G2636, G2637, G3059, G3060,

ಸೂಳೆ, ಸೂಳೆತನ ಮಾಡಿದೆ, ಸೂಳೆಯಾಗಿಸು, ವೇಶ್ಯೆ, ಹಾದರಗಿತ್ತಿ

ಪದದ ಅರ್ಥವಿವರಣೆ:

“ಸೂಳೆ” ಮತ್ತು “ವೇಶ್ಯೆ” ಎನ್ನುವ ಪದಗಳೆರಡು ಭಕ್ತಿಪರವಾದ ಹಕ್ಕುಗಳಿಗೋಸ್ಕರ ಅಥವಾ ಹಣಕ್ಕಾಗಿ ಲೈಂಗಿಕ ಕ್ರಿಯೆಗಳನ್ನು ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ. ಸೂಳೆಯರು ಅಥವಾ ವೇಶ್ಯರು ಎನ್ನುವವರು ಸಾಧಾರಣವಾಗಿ ಸ್ತ್ರೀಯರಾಗಿರುತ್ತಾರೆ, ಆದರೆ ಕೆಲವುಮಂದಿ ಪುರುಷರೂ ಇರುತ್ತಾರೆ.

- ಸತ್ಯವೇದದಲ್ಲಿ “ಸೂಳೆ” ಎನ್ನುವ ಪದವು ಕೆಲವೊಂದುಬಾರಿ ಕಣಿಯನ್ನು ಅಭ್ಯಾಸ ಮಾಡುವ ಅಥವಾ ಸುಳ್ಳು ದೇವರುಗಳನ್ನು ಆರಾಧಿಸುವ ವ್ಯಕ್ತಿಯನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.
- “ವೇಶ್ಯಯಾಗಿ ನಡೆದುಕೋ” ಎನ್ನುವ ಮಾತಿಗೆ ಅನೈತಿಕವಾದ ಲೈಂಗಿಕತೆಯಿಂದ ವೇಶ್ಯಯಂತೆ ನಡೆದುಕೋ ಎಂದರ್ಥವಾಗಿರುತ್ತದೆ. ಈ ಮಾತನ್ನು ವಿಗ್ರಹಗಳನ್ನು ಆರಾಧನೆ ಮಾಡುವ ವ್ಯಕ್ತಿಯನ್ನು ಸೂಚಿಸುವುದಕ್ಕೆ ಬೈಬಲಿನಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ.
- ಯಾವುದಾದರೊಂದಕ್ಕೆ “ಸೂಳೆ ಸ್ವತಃವಾಗಿ” ಹೋಗುವುದು ಎನ್ನುವ ಮಾತಿಗೆ ಲೈಂಗಿಕವಾಗಿ ಅನೈತಿಕತೆ ಎಂದರ್ಥ ಅಥವಾ ಅಲಂಕಾರಿಕವಾಗಿ ಸೂಚಿಸಿದಾಗ, ಸುಳ್ಳು ದೇವರುಗಳನ್ನು ಆರಾಧನೆ ಮಾಡುವುದರ ಮೂಲಕ ದೇವರಿಗೆ ಅಪನಂಬಿಗಸ್ತರಾಗಿರುವುದು ಎಂದರ್ಥ.
- ಪುರಾತನ ಕಾಲಗಳಲ್ಲಿ ಕೆಲವೊಂದು ಅನ್ಯ ದೇವಾಲಯಗಳಲ್ಲಿ ತಮ್ಮ ಪೂಜೆಗಳಲ್ಲಿರುವಂತೆ ಪುರುಷ ಮತ್ತು ಸ್ತ್ರೀ ಸೂಳೆಯರನ್ನು ಉಪಯೋಗಿಸುತ್ತಿದ್ದರು.
- ಈ ಪದವನ್ನು ಸೂಳೆಯನ್ನು ಸೂಚಿಸುವುದಕ್ಕೆ ಅನುವಾದ ಭಾಷೆಯಲ್ಲಿ ಉಪಯೋಗಿಸುವ ಬೇರೊಂದು ಪದದೊಂದಿಗೆ ಅಥವಾ ಮಾತಿನೊಂದಿಗೆ ಅನುವಾದ ಮಾಡಬಹುದು. ಕೆಲವೊಂದು ಭಾಷೆಗಳಲ್ಲಿ ಈ ಪದಕ್ಕೆ ನಯನುಡಿಯ ಪದವನ್ನು ಉಪಯೋಗಿಸಲ್ಪಟ್ಟಿರುತ್ತಾರೆ. (ನೋಡಿರಿ: ಸಮ್ಯೋಕ್ತಿ)

(ಈ ಪದಗಳನ್ನು ಸಹ ನೋಡಿರಿ : ವ್ಯಭಿಚಾರ, ಸುಳ್ಳು ದೇವರು, ಲೈಂಗಿಕ ಅನೈತಿಕತೆ, ಸುಳ್ಳು ದೇವರು)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.34:30-31
- ಆದಿ.38:21-23
- ಲೂಕ.15:28-30
- ಮತ್ತಾಯ.21:31-32

ಪದ ಡೇಟಾ:

- Strong's: H2154, H2181, H2183, H2185, H6945, H6948, H8457, G4204

ಸೃಷ್ಟಿಸು, ಸೃಷ್ಟಿಸಲ್ಪಟ್ಟ, ಸೃಷ್ಟಿ, ಸೃಷ್ಟಿಕರ್ತ

ಪದದ ಅರ್ಥವಿವರಣೆ:

"ಸೃಷ್ಟಿಸು" ಎನ್ನುವ ಪದಕ್ಕೆ ಏನನ್ನಾದರೂ ಮಾಡುವುದು ಅಥವಾ ಏನಾದರು ಉಂಟುಮಾಡುವುದು ಎಂದು ಅರ್ಥ. ಏನಾದರು ಸೃಷ್ಟಿಸಲ್ಪಟ್ಟಿದ್ದರೆ ಅದನ್ನು "ಸೃಷ್ಟಿ" ಎಂದು ಕರೆಯುತ್ತಾರೆ. ದೇವರನ್ನು "ಸೃಷ್ಟಿಕರ್ತ" ಎಂದು ಕರೆಯುತ್ತಾರೆ ಯಾಕಂದರೆ ಈ ವಿಶ್ವವನ್ನೆಲ್ಲ ಅಸ್ತಿತ್ವಕ್ಕೆ ಬರುವಂತೆ ಆತನೇ ಮಾಡಿದ್ದಾನೆ.

- ದೇವರು ಲೋಕವನ್ನು ಸೃಷ್ಟಿಸಿದ್ದಾನೆ ಎಂದು ಸೂಚಿಸಲು ಈ ಪದವನ್ನು ಉಪಯೋಗಿಸಿದರೆ, ಆತನು ಶೂನ್ಯದಿಂದ ಅದನ್ನು ಮಾಡಿದ್ದಾನೆ ಎಂದು ಅದು ಅರ್ಥನೀಡುತ್ತದೆ.
- ಮನುಷ್ಯರು ಏನಾದರು "ಸೃಷ್ಟಿಸಿದರೆ", ಅವರು ಈಗಾಗಲೇ ಇರುವ ವಸ್ತುವುಗಳನ್ನು ಉಪಯೋಗಿಸಿ ಬೇರೆ ವಸ್ತುವನ್ನು ಮಾಡಿದ್ದರೆ ಎಂದು ಅದರ ಅರ್ಥವಾಗಿರುತ್ತದೆ.
- ಕೆಲವೊಮ್ಮೆ "ಸೃಷ್ಟಿಸು" ಎನ್ನುವ ಪದವನ್ನು ಅಮೂರ್ತವಾದ ವಸ್ತುಗಳನ್ನು ವಿವರಿಸಲು ಉಪಯೋಗಿಸುತ್ತಾರೆ, ಉದಾಹರಣೆಗೆ ಶಾಂತಿಯನ್ನು ಸೃಷ್ಟಿಸುವುದು, ಅಥವಾ ಯಾರಲ್ಲಾದರೂ ಪವಿತ್ರವಾದ ಹೃದಯವನ್ನು ಉಂಟುಮಾಡುವುದು.
- ದೇವರು ಮೊಟ್ಟಮೊದಲು ಲೋಕದಲ್ಲಿರುವ ಎಲ್ಲವನ್ನು ಸೃಷ್ಟಿಸಿದನ್ನು ಸೂಚಿಸುವಂತೆ "ಸೃಷ್ಟಿ" ಎನ್ನುವ ಪದವನ್ನು ಉಪಯೋಗಿಸಬಹುದು. ದೇವರು ಸೃಷ್ಟಿಸಿದ ಎಲ್ಲವನ್ನು ಸೂಚಿಸಲು ಈ ಪದವನ್ನು ಉಪಯೋಗಿಸಬಹುದು. ಕೆಲವೊಮ್ಮೆ "ಸೃಷ್ಟಿ" ಎನ್ನುವ ಪದವು ಲೋಕದಲ್ಲಿರುವ ಮನುಷ್ಯರನ್ನು ಮಾತ್ರವೇ ಸೂಚಿಸುತ್ತದೆ.

ಅನುವಾದ ಸಲಹೆಗಳು:

- ಕೆಲವೊಂದು ಭಾಷೆಗಳಲ್ಲಿ ದೇವರು ಲೋಕವನ್ನು "ಶೂನ್ಯದಿಂದ" ಸೃಷ್ಟಿಸಿದನು ಎನ್ನುವ ಅರ್ಥವನ್ನು ಸ್ಪಷ್ಟಪಡಿಸಲು ಆ ರೀತಿ ನೇರವಾಗಿ ಹೇಳಬೇಕಾಗಿರುತ್ತದೆ.
- "ಲೋಕದ ಸೃಷ್ಟಿಯಾದ ಕಾಲದಿಂದ" ಎನ್ನುವ ವಾಕ್ಯಕ್ಕೆ "ದೇವರು ಲೋಕವನ್ನು ಸೃಷ್ಟಿಸಿದ ಕಾಲದಿಂದ" ಎಂದರ್ಥ.
- ಅದೇರೀತಿಯಾಗಿ, "ಸೃಷ್ಟಿಯ ಪ್ರಾರಂಭದಲ್ಲಿ" ಎನ್ನುವ ವಾಕ್ಯವನ್ನು "ದೇವರು ಆದಿಯಲ್ಲಿ ಲೋಕವನ್ನು ಸುಷ್ಟಿಸಿದಾಗ", ಅಥವಾ "ಲೋಕವು ಪ್ರಪ್ರಥಮವಾಗಿ ಸೃಷ್ಟಿಸಲ್ಪಟ್ಟಾಗ" ಎಂದು ಅನುವಾದ ಮಾಡಬಹುದು.
- "ಸರ್ವ ಸೃಷ್ಟಿಗೆ" ಶುಭವಾರ್ತೆಯನ್ನು ಹೇಳಬೇಕು ಅಂದರೆ "ಭೂಲೋಕದಲ್ಲಿ ಇರುವ ಎಲ್ಲಾ ಜನರಿಗೆ" ಶುಭವಾರ್ತೆ ಹೇಳಬೇಕು ಎಂದರ್ಥ.
- "ಸಮಸ್ತ ಸೃಷ್ಟಿ ಆನಂದಿಸಲಿ" ಎಂದರೆ "ದೇವರು ಸೃಷ್ಟಿಸಿದ ಸಮಸ್ತವು ಆನಂದಿಸಲಿ" ಎಂದರ್ಥ.
- ಸಂಧರ್ಭಾನುಸಾರವಾಗಿ, "ಸೃಷ್ಟಿಸು" ಎನ್ನುವ ಪದವನ್ನು "ಮಾಡು" ಅಥವಾ "ಉಂಟುಮಾಡು" ಅಥವಾ "ಶೂನ್ಯದಿಂದ ಉಂಟುಮಾಡು" ಎಂದು ಅನುವಾದ ಮಾಡಬಹುದು.
- "ಸೃಷ್ಟಿಕರ್ತ" ಎನ್ನುವ ಪದವನ್ನು "ಎಲ್ಲವನ್ನು ಸೃಷ್ಟಿಸಿದಾತನು" ಅಥವಾ "ಸರ್ವ ಪ್ರಪಂಚವನ್ನು ಉಂಟುಮಾಡಿದ ದೇವರು" ಎಂದು ಅನುವಾದ ಮಾಡಬಹುದು.
- "ನಿಮ್ಮ ಸೃಷ್ಟಿಕರ್ತ" ಎನ್ನುವ ಪದಗಳನ್ನು "ನಿಮ್ಮನ್ನುಂಟುಮಾಡಿದ ದೇವರು" ಅಥವಾ "ನಿಮ್ಮನ್ನು ಸೃಷ್ಟಿಸಿದ ದೇವರು" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದೇವರು, ಶುಭವರ್ತೆ, ಲೋಕ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.11:9-10
- 1 ಪೇತ್ರನು.04:17-19
- ಕೊಲೊಸ್ಸೇ.01:15
- ಗಲಾತ್ಯ.06:15
- ಆದಿ.01
- ಆದಿ.14:19-20

ಪದ ಡೇಟಾ:

- Strong's: H3335, H4639, H6213, H6385, H7069, G2041, G2602, G2675, G2936, G2937, G2939, G4160, G5480

ಸೆರೆ ಸಿಕ್ಕುವುದು, ಬಂಧಿತರು, ಬಂಧಿಸುವುದು, ಸೆರೆ ಸಿಕ್ಕಿದ್ದಾರೆ, ಸೆರೆಯಲ್ಲಿ

ಪದದ ಅರ್ಥವಿವರಣೆ:

“ಸೆರೆ ಸಿಕ್ಕುವುದು” ಮತ್ತು "ಬಂಧಿತರು” ಎನ್ನುವ ಪದಗಳು ಜನರನ್ನು ಹಿಡಿದುಕೊಂಡು ಹೋಗುವುದನ್ನು ಮತ್ತು ಅವರು ನಿವಾಸ ಮಾಡುವುದಕ್ಕೆ ಇಷ್ಟಪಡದ ಸ್ಥಳದಲ್ಲಿ ಅಂದರೆ ವಿದೇಶದಲ್ಲಿ ನಿವಾಸ ಮಾಡುವಂತೆ ಬಲವಂತಿಕೆ ಮಾಡುವುದನ್ನು ಸೂಚಿಸುತ್ತದೆ.

- ಯೂದಾ ರಾಜ್ಯದಿಂದ ಬಂದಿರುವ ಇಸ್ರಾಯೇಲ್ಯರು ಸುಮಾರು ಎಪ್ಪತ್ತು ವರ್ಷಗಳ ಕಾಲ ಬಾಬೆಲೋನಿಯದಲ್ಲಿ ಸೆರೆಯಲ್ಲಿದ್ದರು.
- ಯಾವ ದೇಶವು ಸೆರೆಗೊಯ್ಯಲ್ಪಟ್ಟಿರುತ್ತದೋ, ಆ ದೇಶಕ್ಕಾಗಿ ಅಥವಾ ಆ ಜನರಿಗಾಗಿ ಬಂಧಿತರಾಗಿರುವ ಜನರು ಕೆಲಸ ಮಾಡಬೇಕಾಗಿರುತ್ತದೆ.
- ದಾನಿಯೇಲ ಮತ್ತು ನೆಹೆಮೀಯನು ಬಾಬೆಲೋನಿಯ ಅರಸನಾಗಿ ಕೆಲಸ ಮಾಡಿದ ಬಂಧಿತರಾಗಿದ್ದರು (ಅಥವಾ ಸೆರೆಗೊಯ್ಯಲ್ಪಟ್ಟವರಾಗಿದ್ದರು).
- “ಸೆರೆ ಹಿಡಿಯುವುದು” ಎನ್ನುವ ಮಾತಿನ ಭಾವವ್ಯಕ್ತೀಕರಣ ಏನಂದರೆ ಒಬ್ಬರನ್ನು ಹಿಡಿದುಕೊಂಡು ಹೋಗುವುದರ ಕುರಿತಾಗಿ ಇನ್ನೊಂದು ರೀತಿಯಲ್ಲಿ ಮಾತನಾಡುವ ವಿಧಾನವಾಗಿರುತ್ತದೆ.
- “ನಿಮ್ಮನ್ನು ಸೆರೆ ಹಿಡಿದುಕೊಂಡು ಹೋಗುತ್ತೇವೆ” ಎನ್ನುವ ಭಾವವ್ಯಕ್ತೀಕರಣವನ್ನು “ಬಂಧಿತರಾಗಿ ಜೀವಿಸುವುದಕ್ಕೆ ನಿಮ್ಮನ್ನು ಬಲವಂತಿಕೆ ಮಾಡುತ್ತೇವೆ” ಅಥವಾ “ನಿಮ್ಮ ಖೈದಿಗಳನ್ನಾಗಿ ಇನ್ನೊಂದು ದೇಶಕ್ಕೆ ಸೆರೆ ಹಿಡಿದುಕೊಂಡು ಹೋಗುತ್ತೇವೆ” ಎಂದೂ ಅನುವಾದ ಮಾಡಬಹುದು.
- ಅಲಂಕಾರ ಭಾವನೆಯಲ್ಲಿ, ಪ್ರತಿಯೊಂದು ಆಲೋಚನೆಯನ್ನು “ಸೆರೆಹಿಡಿದು”, ಕ್ರಿಸ್ತನಿಗೆ ವಿಧೇಯರಾಗುವಂತೆ ಮಾಡಬೇಕು ಎಂದು ಅಪೊಸ್ತಲನಾದ ಪೌಲನು ಕ್ರೈಸ್ತರಿಗೆ ಹೇಳಿದ್ದಾನೆ.
- ಪಾಪ ಮಾಡುವದರಿಂದ ಯಾವರೀತಿ ಒಬ್ಬ ವ್ಯಕ್ತಿ “ಸೆರೆಗೊಯ್ಯಲ್ಪಡುತ್ತಾನೋ” ಎನ್ನುವುದರ ಕುರಿತಾಗಿಯೂ ಆತನು ಮಾತನಾಡಿದ್ದಾನೆ. ಇದಕ್ಕೆ ಅವನು ಪಾಪದಿಂದ “ನಿಯಂತ್ರಿಸಲ್ಪಡುತ್ತಿದ್ದಾನೆ” ಎಂದರ್ಥ.

ಅನುವಾದ ಸಲಹೆಗಳು

- ಸಂದರ್ಭಕ್ಕೆ ತಕ್ಕಂತೆ, “ಸೆರೆ ಹಿಡಿ” ಎನ್ನುವ ಮಾತನ್ನು, “ಸ್ವತಂತ್ರದಿಂದಿರುವುದಕ್ಕೆ ಅನುಮತಿಸಬೇಡಿ” ಅಥವಾ “ಸೆರೆಯಲ್ಲಿ ಹಾಕಿರಿ” ಅಥವಾ “ವಿದೇಶದಲ್ಲಿ ಜೀವಿಸುವುದಕ್ಕೆ ಬಲವಂತಿಕೆ ಮಾಡಿರಿ” ಎಂದೂ ಅನುವಾದ ಮಾಡಬಹುದು.
- “ಸೆರೆ ಹಿಡಿದಿದ್ದೇವೆ” ಅಥವಾ “ಸೆರೆ ತೆಗೆದುಕೊಂಡಿದ್ದೇವೆ” ಎನ್ನುವ ಭಾವವನ್ನು ಕೊಡುವ ಮಾತುಗಳನ್ನು “ಬಂಧಿಸಿದ್ದೇವೆ” ಅಥವಾ “ಸೆರೆಗೆ ಹಾಕಿದ್ದೇವೆ” ಅಥವಾ “ವಿದೇಶಿ ಭೂಮಿಗೆ ಹೋಗುವುದಕ್ಕೆ ಬಲವಂತಿಕೆ ಮಾಡಿದ್ದೇವೆ” ಎಂದೂ ಅನುವಾದ ಮಾಡಬಹುದು.
- “ಬಂಧಿತರು” ಎನ್ನುವ ಪದವನ್ನು “ಸೆರೆಗೆ ಸಿಕ್ಕಿದ ಜನರು” ಅಥವಾ “ಬಾನಿಸರಾದ ಜನರು” ಎಂದೂ ಅನುವಾದ ಮಾಡಬಹುದು.
- ಸಂದರ್ಭಾನುಸಾರವಾಗಿ “ಸೆರೆ ಸಿಕ್ಕಿದ್ದಾರೆ” ಎನ್ನುವ ಪದವನ್ನು “ಸೆರೆವಾಸ” ಅಥವಾ “ಹೊರ ಹಾಕಲ್ಪಡುವುದು” ಅಥವಾ “ವಿದೇಶದಲ್ಲಿ ಜೀವಿಸುವುದಕ್ಕೆ ಬಲವಂತಿಕೆ ಮಾಡುವುದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಬಾಬೆಲೋನ, ಹೊರದೂಡು, ಸೆರೆ, ಮುಟ್ಟುಗೋಲು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೂರ್ವ.10:5-6
- ಯೆಶಯಾ.20:3-4
- ಯೆರೆ.43:1-3
- ಲೂಕ.04:18-19

ಪದ ಡೇಟಾ:

- Strong's: H1123, H1473, H1540, H1546, H1547, H2925, H6808, H7617, H7622, H7628, H7633, H7686, H7870, G161, G162, G163, G164, G2221

ಸೆರೆ, ಖೈದಿಗಳು, ಬಂಧನ

ಪದದ ಅರ್ಥವಿವರಣೆ:

"ಸೆರೆ" ಎನ್ನುವ ಪದವು ಖೈದಿಗಳು ತಾವು ಮಾಡಿದ ಅಪರಾಧಗಳಿಗೆ ಶಿಕ್ಷೆಯಾಗಿ ಅವರನ್ನು ಒಂದು ಇರಿಸುವ ಒಂದು ಕೊಠಡಿ ಸ್ಥಳವನ್ನು ಸೂಚಿಸುತ್ತದೆ. "ಖೈದಿ" ಎಂದರೆ ಸೆರೆಯಲ್ಲಿ ಹಾಕಲ್ಪಟ್ಟ ವ್ಯಕ್ತಿ ಎಂದರ್ಥ.

- ನ್ಯಾಯ ವಿಚಾರಣೆಯಲ್ಲಿ ತೀರ್ಪು ಹೊಂದುವುದಕ್ಕೆ ನಿರೀಕ್ಷಿಸುತ್ತಿರುವಾಗ ಒಬ್ಬ ವ್ಯಕ್ತಿಯನ್ನು ಇರಿಸಬಹುದು.
- "ಬಂಧಿಸಲ್ಪಟ್ಟಿದೆ" ಎನ್ನುವ ಪದಕ್ಕೆ "ಸೆರೆಮನೆಯಲ್ಲಿ ಹಾಕಲ್ಪಡುವುದು" ಅಥವಾ "ಸೆರೆಯಲ್ಲಿ ಇಟ್ಟಿರುವುದು" ಎಂದರ್ಥ.
- ಅನೇಕಮಂದಿ ಪ್ರವಾದಿಗಳು ಮತ್ತು ಇತರ ದೇವರ ದಾಸರು ಏನೂ ತಪ್ಪು ಮಾಡದಿದ್ದರೂ ಅವರನ್ನು ಸೆರೆಯಲ್ಲಿ ಹಾಕಿದ್ದರು.

ಅನುವಾದ ಸಲಹೆಗಳು:

- "ಸೆರೆ" ಎನ್ನುವ ಪದಕ್ಕೆ ಇನ್ನೊಂದು ಪರ್ಯಾಯ ಪದ "ಜೈಲು" ಆಗಿರುತ್ತದೆ.
- ಈ ಪದವನ್ನು "ನೆಲಮನೆ" ಎಂದೂ ಅನುವಾದ ಮಾಡಬಹುದು, ಅನೇಕ ಸಂದರ್ಭಗಳಲ್ಲಿ ಸೆರೆಯು ನೆಲ ಭಾಗದಲ್ಲಿದ್ದಿರಬಹುದು ಅಥವಾ ಭವನದ ಮುಖ್ಯ ಅಳ ಭಾಗದಲ್ಲಿರಬಹುದು ಅಥವಾ ಇಂತರ ಭವನದಲ್ಲಿರಬಹುದು.
- "ಖೈದಿಗಳು" ಎನ್ನುವ ಪದವನ್ನು ಶತ್ರುವಿನಿಂದ ಸೆರೆ ಹಿಡಿಯಲ್ಪಟ್ಟ ಜನರನ್ನು ಸಾಧಾರಣವಾಗಿ ಸೂಚಿಸುತ್ತದೆ, ಸೆರೆಗೊಯ್ದವರನ್ನು ಅವರ ಇಷ್ಟಕ್ಕೆ ವಿರುದ್ಧವಾಗಿ ಬೇರೊಂದು ಸ್ಥಳದಲ್ಲಿ ಇಡುತ್ತಾರೆ. ಈ ಅರ್ಥವನ್ನು ಅನುವಾದ ಮಾಡುವ ಇನ್ನೊಂದು ವಿಧಾನದಲ್ಲಿ "ಬಂಧಿತರು" ಎನ್ನುವ ಪದವನ್ನು ಉಪಯೋಗಿಸುತ್ತಾರೆ.
- "ಬಂಧಿಸಲಾಗಿದೆ" ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ "ಖೈದಿಯಾಗಿ ಇಡಲಾಗಿದೆ" ಅಥವಾ "ಸೆರೆಗೊಯ್ಯಲಾಗಿದೆ" ಅಥವಾ "ಸೆರೆ ಹಿಡಿದಿದೆ" ಎನ್ನುವ ಮಾತುಗಳು ಒಳಗೊಂಡಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ಬಂಧಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.25:04
- ಎಫೆಸ.04:01
- ಲೂಕ.12:58
- ಲೂಕ.22:33-34
- ಮಾರ್ಕ.06:17
- ಮತ್ತಾಯ.05:26
- ಮತ್ತಾಯ.14:03
- ಮತ್ತಾಯ.25:34-36

ಪದ ಡೇಟಾ:

- Strong's: H612, H613, H615, H616, H631, H1004, H1540, H3608, H3628, H3947, H4115, H4307, H4455, H4525, H4929, H5470, H6495, H7617, H7622, H7628, G1198, G1199, G1200, G1201, G1202, G1210, G2252, G3612, G4788, G4869, G5084, G5438, G5439

ಸೆರೆ, ಸೆರೆಹೊಯ್ಯುವುದು

ಅರ್ಥವಿವರಣೆ:

“ಸೆರೆ” ಎನ್ನುವ ಪದವು ಜನರನ್ನು ತಮ್ಮ ಸ್ವದೇಶದಿಂದ ದೂರದಲ್ಲಿರುವ ಇನ್ನೊಂದು ಕಡೆಯಲ್ಲಿ ವಾಸ ಮಾಡುವುದಕ್ಕೆ ಬಲವಂತ ಮಾಡುವುದನ್ನು ಸೂಚಿಸುತ್ತದೆ.

- ರಾಜಕೀಯ ಕಾರಣಗಳಿಂದ ಅಥವಾ ಶಿಕ್ಷಿಸುವ ಕಾರಣದಿಂದ ಜನರು ಸಹಜವಾಗಿ ಸೆರೆಗೆ ಹೊಯ್ಯಲ್ಪಡುತ್ತಾರೆ.
- ವಶಪಡಿಸಿಕೊಂಡಿರುವ ಜನರನ್ನು ವಶಪಡಿಸಿಕೊಳ್ಳುವ ಸೈನ್ಯದ ದೇಶಕ್ಕೆ ಅವರಿಗಾಗಿ ಕೆಲಸ ಮಾಡಿಸಿಕೊಳ್ಳುವುದಕ್ಕೆ ಸೆರೆಯಾಗಿ ಕರೆದುಕೊಂಡು ಹೋಗುತ್ತಿದ್ದರು.
- “ಬಾಬೆಲಿನ ಸೆರೆ” (ಅಥವಾ “ಗಡಿಪಾರು”) ಎನ್ನುವುದು ಸತ್ಯವೇದದ ಇತಿಹಾಸದಲ್ಲಿ ಯೂದಾಯ ಪ್ರಾಂತ್ಯದಲ್ಲಿರುವ ಯೆಹೂದ್ಯರನ್ನು ಅವರ ಮನೆಗಳಿಂದ ಸೆರೆಹೊಯ್ದು ಮತ್ತು ಬಾಬೆಲಿನಲ್ಲಿ ವಾಸವಾಗಿರಬೇಕೆಂದು ಬಲವಂತ ಮಾಡಿದ ಅವಧಿಯಾಗಿದೆ. ಇದು ಸುಮಾರು 70 ವರ್ಷಗಳ ಕಾಲ ಇತ್ತು.
- “ಸೆರೆಹೊಯ್ಯಲ್ಪಟ್ಟವರು” ಎನ್ನುವ ನುಡಿಗಟ್ಟು ಸೆರೆಯಲ್ಲಿರುವ ಜನರನ್ನು ಸೂಚಿಸುತ್ತದೆ, ಅಂದರೆ ತಮ್ಮ ಮನೆಗಳಿಂದ ಗಡಿಪಾರಾಗಿದ್ದವರು ಎಂದರ್ಥ.

ಅನುವಾದ ಸಲಹೆಗಳು:

- “ಸೆರೆ” ಎನ್ನುವ ಪದವನ್ನು"ಹೊರ ಕಳುಹಿಸು” ಅಥವಾ “ಬಲವಂತದಿಂದ ಹೊರದೊಬ್ಬು” ಅಥವಾ “ಬಹಿಷ್ಕಾರ ಮಾಡು” ಎಂದೂ ಅನುವಾದ ಮಾಡಬಹುದು.
- “ಸೆರೆ” ಎನ್ನುವ ಪದವನ್ನು “ಹೊರ ಕಳುಹಿಸಲ್ಪಟ್ಟ ಸಮಯ” ಅಥವಾ “ಬಹಿಷ್ಕಾರ ಮಾಡಿದ ಸಮಯ” ಅಥವಾ “ಬಲವಂತಮಾಡಿದ ಸಮಯ” ಅಥವಾ “ಬಹಿಷ್ಕಾರ ಮಾಡಿದ ಸಮಯ” ಎಂದು ಅರ್ಥಬರುವ ಮಾತುಗಳೊಂದಿಗೆ ಅನುವಾದ ಮಾಡಬಹುದು.
- “ಸೆರೆಹೊಯ್ಯಲ್ಪಟ್ಟವರು” ಎಂದು ಅನುವಾದ ಮಾಡುವ ವಿಧಾನಗಳಲ್ಲಿ “ಸೆರೆಹೊಯಲ್ಪಟ್ಟ ಜನರು” ಅಥವಾ “ಬಹಿಷ್ಕರಿಸಲ್ಪಟ್ಟ ಜನರು” ಅಥವಾ “ಬಾಬೆಲಿಗೆ ಸೆರೆಹೊಯ್ಯಲ್ಪಟ್ಟ ಜನರು” ಸೇರಿರುತ್ತಾರೆ.

(ಇವುಗಳನ್ನು ಸಹ ನೋಡಿರಿ : ಬಾಬೆಲ್, ಯೂದಾಯ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಅರಸ. 24:14
- ದಾನಿ. 2:25-26
- ಯೆಹೆ. 1:1-3
- ಯೆಶಾಯ. 20:4
- ಯೆರೆ. 29:1-3

ಪದದ ಡೇಟಾ:

- Strong's: H1123, H1473, H1540, H1541, H1546, H1547, H3212, H3318, H5080, H6808, H7617, H7622, H8689, G39270

ಸೆಲಾ

ಪದದ ಅರ್ಥವಿವರಣೆ:

“ಸೆಲಾ” ಎನ್ನುವ ಪದವು ಹೆಚ್ಚಾಗಿ ಕೀರ್ತನೆಗಳ ಗ್ರಂಥದಲ್ಲಿ ಕಂಡುಬರುವ ಇಬ್ರಿ ಭಾಷೆಯ ಪದವಾಗಿರುತ್ತದೆ, ಇದಕ್ಕೆ ಅನೇಕವಾದ ಅರ್ಥಗಳಿರುತ್ತವೆ.

- ಈ ಪದಕ್ಕೆ “ವಿರಾಮ ಮತ್ತು ಸ್ತುತಿಸು” ಎನ್ನುವ ಅರ್ಥಗಳಿವೆ, ಅಂದರೆ ಅದುವರೆಗೂ ಹೇಳಲ್ಪಟ್ಟಿರುವ ಮಾತುಗಳ ಕುರಿತಾಗಿ ಪ್ರೇಕ್ಷಕರು ಆಲೋಚನೆ ಮಾಡುವುದಕ್ಕೆ ಆಹ್ವಾನಿಸಲ್ಪಡುತ್ತಾರೆ.
- ಕೀರ್ತನೆಗಳಲ್ಲಿ ಅನೇಕವು ಹಾಡುಗಳಾಗಿ ಬರೆಯಲ್ಪಟ್ಟಿವೆ, “ಸೆಲಾ” ಎನ್ನುವುದು ಹಾಡಿನಲ್ಲಿರುವ ಪದಗಳ ಕುರಿತಾಗಿ ಆಲೋಚನೆ ಮಾಡುವುದಕ್ಕೆ ಕೇಳುವವರಿಗೆ ಪ್ರೋತ್ಸಾಹವನ್ನು ಕೊಡುವುದಕ್ಕೆ ಅಥವಾ ಸಂಗೀತವನ್ನು ಬಾರಿಸುವುದಕ್ಕೆ ಅನುಮತಿಸಲು ಗಾಯಕರು ಹಾಡುವುದನ್ನು ಸ್ವಲ್ಪ ಹೊತ್ತು ನಿಲ್ಲಿಸಿ ಗಾಯಕನಿಗೆ ಸೂಚನೆಯನ್ನು ಕೊಡುವುದಕ್ಕೆ ಉಪಯೋಗಿಸುವ ಸಂಗೀತದ ಪದವಾಗಿರಬಹುದು.

(ಈ ಪದಗಳನ್ನು ಸಹ ನೋಡಿರಿ : ಕೀರ್ತನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಕೀರ್ತನೆ.003:3-4
- ಕೀರ್ತನೆ.024:5-6
- ಕೀರ್ತನೆಗಳು.046:6-7

ಪದ ಡೇಟಾ:

- Strong's: H5542

ಸೇನಾಧಿಪತಿ

ಅರ್ಥವಿವರಣೆ:

“ಸೇನಾಧಿಪತಿ” ಎನ್ನುವ ಪದವು ಒಂದು ನಿರ್ದಿಷ್ಟವಾದ ಸೈನಿಕರ ಗುಂಪನ್ನು ಆದೇಶಿಸುವುದಕ್ಕೆ ಮತ್ತು ನಡೆಸುವುದಕ್ಕೆ ಬಾಧ್ಯತೆ ತೆಗೆದುಕೊಂಡ ಒಬ್ಬ ಸೈನ್ಯದ ನಾಯಕನನ್ನು ಅಥವಾ ಮುಖಂಡನನ್ನು ಸೂಚಿಸುತ್ತದೆ.

- ಒಬ್ಬ ಸೇನಾಧಿಪತಿ ಸೈನಿಕರ ಚಿಕ್ಕ ಗುಂಪಿಗೂ ನಾಯಕನಾಗಿರಬಹುದು ಅಥವಾ ಸಾವಿರಮಂದಿ ಇರುವ ದೊಡ್ಡ ಸೈನಿಕ ಗುಂಪಿಗೂ ನಾಯಕನಾಗಿರಬಹುದು.
- ಈ ಪದವನ್ನು ದೂತರ ಸೇನೆಗಳ ಅಧಿಪತಿ ಎಂದು ಯೆಹೋವನಿಗೂ ಸೂಚಿಸುವುದಕ್ಕೆ ಉಪಯೋಗಿಸುತ್ತಿದ್ದರು.
- “ಸೇನಾಧಿಪತಿ” ಎನ್ನುವ ಪದವು ಇತರ ಅನುವಾದಗಳಲ್ಲಿ “ನಾಯಕ” ಅಥವಾ “ದಳ ಸಾರಥಿ” ಅಥವಾ “ಅಧಿಕಾರಿ” ಎಂಬುವುಗಳನ್ನು ಒಳಗೊಂಡಿರಬಹುದು.
- ಸೈನ್ಯಕ್ಕೆ “ಆಜ್ಞಾಪಿಸು” ಎನ್ನುವ ಪದವನ್ನು “ನಡೆಸು” ಅಥವಾ “ಬಾಧ್ಯತೆ ವಹಿಸು” ಎನ್ನುವ ಪದಗಳಿಂದ ಅನುವಾದ ಮಾಡಬಹುದು.

(ಇವುಗಳನ್ನು ಸಹ ನೋಡಿರಿ : ಆಜ್ಞೆ, [ಅರಸನು] **ಆಡಳಿತ, ಆಡಳಿತಗಾರ, ಪ್ರಾಧ್ಯಾಪಕ, ಅಧಿಕೃತ, ನಾಯಕ (p.681)**,ಶತಾಧಿಪತಿ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.11:4-6
- 2 ಪೂರ್ವ.11:11-12
- ದಾನಿ.2:14
- ಮಾರ್ಕ.6:21-22
- ಜ್ಞಾನೋಕ್ತಿ 6:7

ಪದದ ಡೇಟಾ:

- Strong's: H2710, H2951, H1169, H4929, H5057, H6346, H7101, H7262, H7218, H7227, H7229, H7990, H8269, G55060

ಸೇವಕ, ಸೇವೆ, ಗುಲಾಮ, ಕೆಲಸಗಾರ, ಯುವಕ, ಯುವತಿಯರು

ಪದದ ಅರ್ಥವಿವರಣೆ:

"ಸೇವಕ" ಎನ್ನುವ ಪದಕ್ಕೆ "ಗುಲಾಮ" ಎಂದರ್ಥವೂ ಇದೆ, ಇದು ಒಬ್ಬ ವ್ಯಕ್ತಿಯ ಕೆಳಗೆ ಕೆಲಸ ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ, ಈ ಕೆಲಸವನ್ನು ಇಷ್ಟಪೂರ್ವಕವಾಗಿ ಮಾಡಿದರು ಅಥವಾ ಬಲವಂತಿಕೆಯಿಂದ ಮಾಡಿದರು ಈ ಪದದ ಅರ್ಥದ ಕೆಳಗೆ ಬರುತ್ತದೆ. ಈ ಪದಗಳನ್ನೂಳಗೊಂಡ ವಾಕ್ಯವು ಸಾಧಾರಣವಾಗಿ ಒಬ್ಬ ವ್ಯಕ್ತಿ ಸೇವಕನಾಗಿದ್ದಾನೋ ಅಥವಾ ಗುಲಾಮನಾಗಿದ್ದಾನೋ ಸ್ಪಷ್ಟವಾಗಿ ತಿಳಿಯಪಡಿಸುತ್ತದೆ. "ಸೇವೆ " ಎನ್ನುವ ಪದಕ್ಕೆ ಇತರ ಜನರಿಗೆ ಸಹಾಯಕವಾಗುವ ಕಾರ್ಯಗಳನ್ನು ಮಾಡುವುದು ಎಂದರ್ಥ. ಇದಕ್ಕೆ "ಆರಾಧನೆ" ಎಂದೂ ಅರ್ಥವುಂಟು. ಸತ್ಯವೇದದ ಕಾಲಗಳಲ್ಲಿ ಸೇವಕ ಮತ್ತು ಗುಲಾಮನು ಎನ್ನುವ ಪದಗಳ ಮಧ್ಯದಲ್ಲಿ ವ್ಯತ್ಯಾಸವು ಪ್ರಸ್ತುತ ದಿನಗಳಲ್ಲಿರುವ ವ್ಯತ್ಯಾಸಕ್ಕಿಂತಲೂ ತುಂಬಾ ಕಡಿಮೆಯಾಗಿರುತ್ತದೆ, ಸೇವಕ ಮತ್ತು ಗುಲಾಮರು ತಮ್ಮ ಯಜಮಾನನ ಮನೆಯಲ್ಲಿ ಪ್ರಾಮುಖ್ಯವಾದ ಭಾಗವನ್ನು ಹೊಂದಿರುತ್ತಾರೆ ಮತ್ತು ಅವರು ಕುಟುಂಬ ಸದಸ್ಯರಂತೆಯೇ ಅವರ ಮಧ್ಯೆದಲ್ಲಿ ಬೆರೆತುಕೊಂಡಿರುತ್ತಾರೆ. ಕೆಲವೊಂದುಬಾರಿ ಸೇವಕ ತನ್ನ ಯಜಮಾನನಿಗೆ ಜೀವಮಾನವೆಲ್ಲಾ ದಾಸನಾಗಿರುತ್ತಾರೆ.

- ಗುಲಾಮನು ತಾನು ಕೆಲಸ ಮಾಡುತ್ತಿರುವ ಯಜಮಾನನಿಗೆ ಅಸ್ತಿಯಾಗಿರುವ ಒಂದು ವಿಧವಾದ ದಾಸನಾಗಿರುತ್ತಾನೆ. ಗುಲಾಮನನ್ನು ಕೊಂಡುಕೊಂಡು ಬಂದಿರುವ ವ್ಯಕ್ತಿಯನ್ನು "ಮಾಲೀಕ" ಅಥವಾ "ಯಜಮಾನ" ಎಂದು ಕರೆಯುತ್ತಾರೆ. ಕೆಲವೊಂದು ಯಜಮಾನರು ತಮ್ಮ ಗುಲಾಮರಲ್ಲಿ ತುಂಬಾ ಭಯಂಕರವಾಗಿ ನಡೆದುಕೊಂಡಿದ್ದಾರೆ, ಇನ್ನೂ ಕೆಲವರು ತಮ್ಮ ಗುಲಾಮರನ್ನು ಮನೆತನದ ಬೆಲೆಯುಳ್ಳ ದಾಸನಾಗಿರುವಾಗ ಚೆನ್ನಾಗಿ ನೋಡಿಕೊಳ್ಳುತ್ತಾರೆ,
- ಪುರಾತನ ಕಾಲಗಳಲ್ಲಿ ಒಬ್ಬ ವ್ಯಕ್ತಿಗೆ ಸಾಲವನ್ನು ಕಟ್ಟುವ ಕ್ರಮದಲ್ಲಿ ಹಣವನ್ನು ಕೊಟ್ಟ ವ್ಯಕ್ತಿಗೆ ಕೆಲವೊಂದು ಜನರು ಇಷ್ಟಪೂರ್ವಕವಾಗಿ ಆ ವ್ಯಕ್ತಿಗೆ ಗುಲಾಮರಾಗಿ ಮಾರ್ಪಡುತ್ತಿದ್ದರು,
- ಒಬ್ಬ ವ್ಯಕ್ತಿ ಅತಿಥಿಗಳಿಗೆ ಸೇವೆ ಮಾಡುವ ಸಂದರ್ಭದಲ್ಲಿ, ಈ ಮಾತಿಗೆ "ಚೆನ್ನಾಗಿ ನೋಡಿಕೋ" ಅಥವಾ "ಆಹಾರವನ್ನು ಬಡಿಸು" ಅಥವಾ "ಆಹಾರವನ್ನು ಒದಗಿಸಿಕೊಡು" ಎಂದರ್ಥಗಳಿರುತ್ತವೆ. ಜನರಿಗೆ ಮೀನುಗಳನ್ನು "ಹಂಚಿರಿ" ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದಾಗ, ಇದನ್ನು "ವಿತರಣೆಗೊಳಿಸಿರಿ" ಅಥವಾ "ಕೈಗಳಿಗೆ ಕೊಡಿರಿ" ಅಥವಾ "ಕೊಡಿರಿ" ಎಂದೂ ಅನುವಾದ ಮಾಡಬಹುದು.
- ಸತ್ಯವೇದದಲ್ಲಿ "ನಾನು ನಿನ್ನ ಸೇವಕನು ಅಥವಾ ದಾಸನು" ಎನ್ನುವ ಮಾತನ್ನು ಅರಸ ಎನ್ನುವಂತವರಿಗೆ ಉನ್ನತ ಶ್ರೇಣಿಯನ್ನು ಪಡೆದವರಿಗೆ ಸೇವೆಯನ್ನು ಮಾಡುವುದಕ್ಕೆ ಮತ್ತು ಗೌರವ ಚಿಹ್ನೆಯಾಗಿ ಉಪಯೋಗಿಸುತ್ತಿದ್ದರು. ಮಾತನಾಡುತ್ತಿರುವ ವ್ಯಕ್ತಿ ಸಾಧಾರಣವಾದ ದಾಸನಾಗಿರುತ್ತಾನೆಂದು ನಾನು ಹೇಳುತ್ತಾಯಿಲ್ಲ.
- "ಸೇವೆ ಮಾಡು" ಎನ್ನುವ ಮಾತನ್ನು "ಸೇವೆಯನ್ನು ಸಲ್ಲಿಸು" ಅಥವಾ "ಕೆಲಸ ಮಾಡು" ಅಥವಾ "ಚೆನ್ನಾಗಿ ನೋಡಿಕೋ" ಅಥವಾ "ವಿಧೇಯತೆ ತೋರಿಸು" ಎಂದು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.
- ಹಳೇ ಒಡಂಬಡಿಕೆಯಲ್ಲಿ ದೇವರ ಪ್ರವಾದಿಗಳನ್ನು ಮತ್ತು ದೇವರನ್ನು ಆರಾಧಿಸುವ ಇತರ ಜನರನ್ನು ಆತನ "ಸೇವಕರು ಅಥವಾ ದಾಸರು" ಎಂಬುದಾಗಿ ಸೂಚಿಸಲ್ಪಟ್ಟಿದ್ದಾರೆ.
- ದೇವರನ್ನು ಸೇವಿಸುವುದು" ಎನ್ನುವ ಮಾತನ್ನು "ದೇವರನ್ನು ಆರಾಧಿಸಿ, ಆತನಿಗೆ ವಿಧೇಯತೆಯಿಂದ ಇರುವುದು" ಅಥವಾ "ದೇವರು ಆಜ್ಞಾಪಿಸಿದ ಕೆಲಸವನ್ನು ಮಾಡುವುದು" ಎಂದರ್ಥವಾಗಿರುತ್ತದೆ.
- ಹೊಸ ಒಡಂಬಡಿಕೆಯಲ್ಲಿ, ಕ್ರಿಸ್ತನಲ್ಲಿ ನಂಬಿಕೆ ಇಡುವುದರ ಮೂಲಕ ದೇವರಿಗೆ ವಿಧೇಯರಾಗಿರುವ ಜನರನ್ನು ಅನೇಕಬಾರಿ "ದಾಸರು ಅಥವಾ ಸೇವಕರು" ಎಂದು ಕರೆಯಲ್ಪಟ್ಟಿದ್ದಾರೆ.
- "ಮೇಜುಗಳ ಬಳಿ ಸೇವೆ ಮಾಡು" ಎನ್ನುವ ಮಾತಿಗೆ ಮೇಜುಗಳ ಬಳಿ ಕುಳಿತಿರುವ ಜನರಿಗೆ ಆಹಾರವನ್ನು ಕೊಡು, ಅಥವಾ ತುಂಬಾ ಸಾಧಾರಣವಾಗಿ "ಆಹಾರವನ್ನು ವಿತರಣೆಗೊಳಿಸು" ಎಂದರ್ಥ.
- ದೇವರ ಕುರಿತಾಗಿ ಇತರರಿಗೆ ಬೋಧನೆ ಮಾಡುವ ಜನರನ್ನು ದೇವರಿಗೆ ಮತ್ತು ಬೋಧನೆ ಕೇಳುವ ಜನರಿಗೆ ಸೇವೆ ಮಾಡುವವರೆಂದು ಹೇಳಲ್ಪಟ್ಟಿದ್ದಾರೆ.
- ಅಪೊಸ್ತಲನಾದ ಪೌಲನು ಹಳೇ ಒಡಂಬಡಿಕೆಗೆ ಯಾವ ರೀತಿ ಸೇವೆ ಮಾಡಿದ್ದಾರೆ ಎನ್ನುವುದರ ಕುರಿತಾಗಿ ಕೊರಿಂಥದಲ್ಲಿರುವ ಕ್ರೈಸ್ತರಿಗೆ ಪತ್ರವನ್ನು ಬರೆದಿದ್ದಾರೆ. ಇದು ಮೋಶೆಯ ಧರ್ಮಶಾಸ್ತ್ರಕ್ಕೆ ವಿಧೇಯತೆಯನ್ನು ತೋರಿಸುವುದನ್ನು ಸೂಚಿಸುತ್ತದೆ. ಈಗ ಅವರು ಹೊಸ ಒಡಂಬಡಿಕೆಗೆ "ಸೇವೆ ಮಾಡುತ್ತಿದ್ದಾರೆ." ಅಂದರೆ ಶಿಲುಬೆಯ ಮೇಲೆ ಯೇಸುವಿನ ತ್ಯಾಗದ ಕಾರಣದಿಂದ, ಯೇಸುವನ್ನು ನಂಬಿರುವವರು ಪರಿಶುದ್ಧವಾದ ಜೀವನಗಳನ್ನು ಜೀವಿಸುವುದಕ್ಕೆ ಮತ್ತು ದೇವರನ್ನು ಮೆಚ್ಚಿಸುವುದಕ್ಕೆ ಪವಿತ್ರಾತ್ಮನ ಮೂಲಕ ಬಲವನ್ನು ಹೊಂದಿಕೊಂಡಿದ್ದಾರೆ.
- ಹಳೇ ಅಥವಾ ಹೊಸ ಒಡಂಬಡಿಕೆಗೆ ತಮ್ಮ "ಸೇವೆಯನ್ನು ಮಾಡುವ" ಪದಗಳಲ್ಲಿಯೇ ಅವರ ಕ್ರಿಯೆಗಳ ಕುರಿತಾಗಿ ಅಪೊಸ್ತಲನಾದ ಪೌಲನು ಮಾತನಾಡುತ್ತಿದ್ದಾನೆ. ಇದನ್ನು "ಸೇವೆ ಮಾಡುವುದು" ಅಥವಾ "ವಿಧೇಯತೆ ತೋರಿಸುವುದು" ಅಥವಾ "ಭಕ್ತಿ ತೋರಿಸುವದು ಎಂದು ಅನುವಾದ ಮಾಡಬಹುದು

(ಈ ಪದಗಳನ್ನು ಸಹ ನೋಡಿರಿ : ಬದ್ಧನಾಗು, ಗುಲಾಮಗಿರಿ, ಮನೆತನ, ಒಡೆಯ, ವಿಧೇಯನಾಗು, ನೀತಿ, ಒಡಂಬಡಿಕೆ, ಧರ್ಮಶಾಸ್ತ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.04:29-31
- ಅಪೊ.ಕೃತ್ಯ.10:7-8
- ಕೊಲೊಸ್ಸ.01:7-8
- ಕೊಲೊಸ್ಸ.03:22-25
- ಆದಿ.21:10-11
- ಲೂಕ.12:47-48

- ಮಾರ್ಕ.09:33-35
- ಮತ್ತಾಯ.10:24-25
- ಮತ್ತಾಯ.13:27-28
- 2 ತಿಮೊಥೆ.02:3-5
- ಅಪೊ.ಕೃತ್ಯ.06:2-4
- ಆದಿ.25:23
- ಲೂಕ.04:8
- ಲೂಕ.12:37-38
- ಲೂಕ.22:26-27
- ಮಾರ್ಕ.08:7-10
- ಮತ್ತಾಯ.04:10-11
- ಮತ್ತಾಯ.06:24

ಸತ್ಯವೇದದಿಂದ ಉದಾಹರಣೆಗಳು:

- **06:01** ಅಬ್ರಾಹಾಮನು ತುಂಬಾ ವೃದ್ಧನಾಗಿದ್ದಾಗ, ತನ್ನ ಮಗನಾಗಿರುವ ಇಸಾಕನು ದೊಡ್ಡವನಾದಾಗ, ಅಬ್ರಹಾಮನು ತನ್ನ _ ಸೇವಕರಲ್ಲಿ _ ಒಬ್ಬರನ್ನು ಕರೆದು ತನ್ನ ಮಗನಾಗಿರುವ ಇಸಾಕನಿಗೆ ಹೆಂಡತಿಯನ್ನು ಹುಡುಕಿಕೊಂಡು ಬರುವುದಕ್ಕೆ ತನ್ನ ಬಂಧುಗಳು ಇರುವ ಸ್ಥಳಕ್ಕೆ ಕಳುಹಿಸಿದನು.
- **08:04** ಗುಲಾಮ ವ್ಯಾಪಾರಿಗಳು ಯೋಸೇಫನನ್ನು ಒಬ್ಬ _ ದಾಸನನ್ನಾಗಿ _ ಶ್ರೀಮಂತ ಪ್ರಭುತ್ವ ಅಧಿಕಾರಿಗೆ ಮಾರಿದರು.
- **09:13** “ಫರೋಹನ ಬಳಿಗೆ ನಾನು (ದೇವರು) ನಿನ್ನನ್ನು (ಮೋಶೆಯನ್ನು) ಕಳುಹಿಸುತ್ತೇನೆ, ಇದರಿಂದ ಐಗುಪ್ತದಲ್ಲಿ _ ಗುಲಾಮಗಿರಿಯಲ್ಲಿರುವ _ ಇಸ್ರಾಯೇಲ್ಯರನ್ನು ನೀನು ಹೊರಗೆ ಕರೆದುಕೊಂಡು ಬರುವಿ.”
- **19:10**”ಯೆಹೋವನೆ, ಅಬ್ರಾಹಾಮ, ಇಸಾಕ ಮತ್ತು ಯಾಕೋಬ ದೇವರೇ, ಇವತ್ತು ನೀವು ಇಸ್ರಾಯೇಲ್ ದೇವರೆಂದು ಮತ್ತು ನಾನು ನಿನ್ನ _ ಸೇವಕನೆಂದು _ ತೋರಿಸಿಕೋ” ಎಂದು ಎಲೀಯ ಪ್ರಾರ್ಥನೆ ಮಾಡಿದನು.
- **29:03** ದಾಸನು ಸಾಲವನ್ನು ತೀರಸದೇ ಇರುವಾಗ, “ಈ ಮನುಷ್ಯನನ್ನು ಮತ್ತು ತನ್ನ ಕುಟುಂಬದವರನ್ನು _ ಗುಲಾಮರನ್ನಾಗಿ _ ಮಾರಿ, ಅವನು ಸಲ್ಲಿಸಬೇಕಾದ ಹಣವನ್ನು ಕಟ್ಟಿಸಿಕೋ ಎಂದು ಅರಸನು ಹೇಳಿದನು.”
- **35:06** “ನನ್ನ ತಂದೆಯ _ ದಾಸರೆಲ್ಲರು _ ತಿನ್ನುವುದಕ್ಕೆ ತುಂಬಾ ಹೆಚ್ಚಾಗಿದೇ, ಆದರೂ ನಾನು ಇಲ್ಲಿ ಹಸಿವಿನಿಂದ ಬಳಲುತ್ತಿದ್ದೇನೆ.”
- **47:04** ಅವರು ಬರುತ್ತಿರುವಾಗ, ಈ _ ದಾಸಿಯಾದ _ ಹುಡಿಗಿ, “ಈ ಮನುಷ್ಯರು ಮಹೋನ್ನತನಾದ ದೇವರ ಸೇವಕರು ಅಥವಾ ದಾಸರು” ಎಂದೂ ಕೂಗಿದಳು.
- **50:04** ''ದಾಸನು ತನ್ನ ಯಜಮಾನನಿಗಿಂತ ದೊಡ್ಡವನಲ್ಲ” ಎಂದು ಯೇಸು ಕೂಡ ಹೇಳಿದ್ದಾರೆ.

ಪದ ಡೇಟಾ:

- (Serve)

Strong’s:

H5288, H5647, H5649, H5650, H5657, H7916, H8198, H8334, G1249, G1401, G1402, G2324, G3407, G3411, G3610, G3816, G4983, G5257

- (Serve) H327, H3547, H4929, H4931, H5647, H5656, H5673, H5975, H6213, H6399, H6402, H6440, H6633, H6635, H7272, H8104, H8120, H8199, H8278, H8334, G1247, G1248, G1398, G1402, G1438, G1983, G2064, G2212, G2323, G2999, G3000, G3009, G4337, G4342, G4754, G5087, G5256

ಸೇವಿಸು, ಸೇವಿಸುವುದು, ಸೇವಿಸಲ್ಪಟ್ಟಿದೆ, ಸೇವಿಸುವ

ಪದದ ಅರ್ಥವಿವರಣೆ:

“ಸೇವಿಸು” ಎನ್ನುವ ಪದಕ್ಕೆ ಎನಾದರೊಂದನ್ನು ಉಪಯೋಗಿಸುವುದು ಎಂದು ಅಕ್ಷರಾರ್ಥವಾಗಿರುತ್ತದೆ. ಇದಕ್ಕೆ ಹಲವಾರು ಅಲಂಕಾರಿಕ ಅರ್ಥಗಳಿರುತ್ತವೆ.

- ಸತ್ಯವೇದದಲ್ಲಿ “ಸೇವಿಸು” ಎನ್ನುವ ಪದವು ಅನೇಕಬಾರಿ ಜನರನ್ನು ಅಥವಾ ವಸ್ತುಗಳನ್ನು ನಾಶಗೊಳಿಸುವ ಕ್ರಿಯೆಯನ್ನು ಸೂಚಿಸುತ್ತದೆ.
- ಅಗ್ನಿ ಎಂದರೆ ವಸ್ತುಗಳನ್ನು ದಹಿಸುವುದೆಂದು ಹೇಳಲ್ಪಟ್ಟಿದೆ, ಇದಕ್ಕೆ ಅದು ಅವುಗಳನ್ನು ದಹಿಸುವುದರ ಮೂಲಕ ಅವುಗಳನ್ನು ನಾಶಗೊಳಿಸುವುದು ಎಂದರ್ಥ.
- ದೇವರು “ದಹಿಸುವ ಅಗ್ನಿ” ಎಂದು ಹೇಳಲ್ಪಟ್ಟಿದೆ, ಇದು ಪಾಪಕ್ಕೆ ವಿರುದ್ಧವಾಗಿ ಆತನ ಕೋಪವನ್ನು ಸೂಚಿಸುತ್ತದೆ. ಪಶ್ಚಾತ್ತಾಪ ಹೊಂದದ ಪಾಪಿಗಳ ವಿಷಯದಲ್ಲಿ ಆತನ ಕೋಪವು ಭಯಂಕರವಾಗಿ ಶಿಕ್ಷಿಸುವುದರಲ್ಲಿ ಕಾಣಿಸಿಕೊಳ್ಳುತ್ತದೆ.
- ಆಹಾರವನ್ನು ಸೇವಿಸು ಎಂದರೆ ಎನಾದರೊಂದನ್ನು ತಿನ್ನು ಅಥವಾ ಕುಡಿ ಎಂದರ್ಥ.
- “ಭೂಮಿಯನ್ನು ದಹಿಸು” ಎನ್ನುವ ಮಾತನ್ನು “ಭೂಮಿಯನ್ನು ನಾಶಪಡಿಸು” ಎಂದೂ ಅನುವಾದ ಮಾಡಬಹುದು.

ಅನುವಾದ ಸಲಹೆಗಳು:

- ಜನರನ್ನು ಅಥವಾ ಭೂಮಿಯನ್ನು ದಹಿಸುವ ಸಂದರ್ಭದಲ್ಲಿ ಈ ಪದವನ್ನು “ನಾಶಗೊಳಿಸು” ಎಂದೂ ಅನುವಾದ ಮಾಡಬಹುದು.
- ಅಗ್ನಿಯನ್ನು “ದಹಿಸು” ಎಂದು ಸೂಚಿಸಿದಾಗ, “ಸುಟ್ಟು ಹಾಕು” ಎಂದೂ ಅನುವಾದ ಮಾಡಬಹುದು.
- ಮೋಶೆ ನೋಡಿದ ಉರಿಯುತ್ತಿರುವ ಪೊದೆಯು “ಸುಟ್ಟುಹೋಗಲಿಲ್ಲ”, ಇದನ್ನು “ಅದು ಸುಟ್ಟು ಹೋಗಲಿಲ್ಲ” ಅಥವಾ “ಅದು ಸುಡಲ್ಪಟ್ಟಿಲ್ಲ” ಎಂದೂ ಅನುವಾದ ಮಾಡಬಹುದು.
- ಆಹಾರ ತಿನ್ನುವುದಕ್ಕಾಗಿ ಉಪಯೋಗಿಸಿದಾಗ, “ಸೇವಿಸು” ಎನ್ನುವದನ್ನು “ತಿನ್ನು” ಅಥವಾ “ನುಂಗು” ಎಂದೂ ಅನುವಾದ ಮಾಡಬಹುದು.
- ಒಬ್ಬರ ಬಲವು “ಸೇವಿಸಲ್ಪಟ್ಟಿದೆ”, ಈ ಮಾತಿಗೆ ಆತನ ಬಲವನ್ನು “ಉಪಯೋಗಿಸಲಾಗಿದೆ” ಅಥವಾ ಆತನ ಬಲವು “ಹೋಗಿದೆ” ಎಂದರ್ಥ.
- “ದೇವರು ದಹಿಸುವ ಅಗ್ನಿ” ಎನ್ನುವ ಮಾತನ್ನು “ದೇವರು ವಸ್ತುಗಳನ್ನು ಸುಡುವ ಅಗ್ನಿಯಂತೆ ಇದ್ದಾರೆ” ಅಥವಾ “ದೇವರು ಪಾಪ ವಿಷಯದಲ್ಲಿ ಕೋಪಗೊಳ್ಳುತ್ತಾರೆ ಮತ್ತು ಅಗ್ನಿ ಸುಟ್ಟು ಹಾಕುವಂತೆ ಆತನು ಪಾಪಿಗಳನ್ನು ನಾಶಮಾಡುತ್ತಾನೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನುಂಗು, ಕೋಪಾಗ್ನಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.18:38-40
- ಧರ್ಮೋ.07:16
- ಯೆರೆ.03:23-25
- ಯೋಬ.07:8-10
- ಅರಣ್ಯ.11:1-3

ಪದ ಡೇಟಾ:

- Strong's: H398, H402, H1086, H1104, H1197, H1497, H1846, H2000, H2628, H3615, H3617, H3631, H3857, H4127, H4529, H4743, H5486, H5487, H5595, H6244, H6789, H7332, H7646, H7829, H8046, H8552, G355, G1159, G2618, G2654, G2719, G5315, G5723

ಸೈನಿಕ, ಸೈನಿಕರು, ಯೋಧ, ಯೋಧರು

ಸತ್ಯಾಂಶಗಳು:

“ಯೋಧ” ಮತ್ತು “ಸೈನಿಕ” ಎನ್ನುವ ಪದಗಳೆರಡು ಸೈನ್ಯದಲ್ಲಿ ಹೋರಾಟ ಮಾಡುವ ವ್ಯಕ್ತಿಯನ್ನು ಸೂಚಿಸುತ್ತವೆ. ಆದರೆ ಈ ಎರಡು ಪದಗಳ ನಡುವೆ ಕೆಲವೊಂದು ವ್ಯತ್ಯಾಸಗಳಿವೆ.

- ಸಾಧಾರಣವಾಗಿ “ಯೋಧ” ಎನ್ನುವುದು ಸಾರ್ವತ್ರಿಕ, ವಿಶಾಲವಾದ ಪದವು ಯುದ್ಧದಲ್ಲಿ ಧೈರ್ಯಶಾಲಿಯಾದ ಮತ್ತು ವರವನ್ನು ಪಡೆದ ಒಬ್ಬ ಮನುಷ್ಯನನ್ನು ಸೂಚಿಸುತ್ತದೆ.
- ಯೆಹೋವನನ್ನು ಅಲಂಕಾರಿಕವಾಗಿ “ಯೋಧ” ಎಂದು ಕರೆಯಲಾಗಿರುತ್ತದೆ.
- “ಸೈನಿಕ” ಎನ್ನುವ ಪದವು ಹೆಚ್ಚಾಗಿ ವಿಶೇಷವಾಗಿ ಒಂದು ನಿರ್ದಿಷ್ಟವಾದ ಸೈನ್ಯಕ್ಕೆ ಸಂಬಂಧಪಟ್ಟ ವ್ಯಕ್ತಿಯನ್ನು ಅಥವಾ ನಿರ್ದಿಷ್ಟವಾದ ಯುದ್ಧದಲ್ಲಿ ಹೋರಾಟ ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ.
- ಯೆರೂಸಲೇಮಿನಲ್ಲಿರುವ ರೋಮಾ ಸೈನಿಕರು ಖೈದಿಗಳನ್ನು ಸಾಯಿಸುವಂತಹ ಕರ್ತವ್ಯಗಳನ್ನು ಮಾಡುವುದಕ್ಕೂ ಮತ್ತು ಆದೇಶಗಳನ್ನು ಕೈಗೊಳ್ಳುವುದಕ್ಕೂ ಇರುತ್ತಾರೆ. ಅವರು ಯೇಸುವನ್ನು ಶಿಲುಬೆಗೆ ಏರಿಸುವುದಕ್ಕೆ ಮುಂಚಿತವಾಗಿ ಆತನಿಗೆ ಕಾವಲು ಇದ್ದರು, ಮತ್ತು ಆತನ ಸಮಾಧಿಯ ಬಳಿ ನಿಲ್ಲುವುದಕ್ಕೆ ಇನ್ನೂ ಕೆಲವರು ಆದೇಶಗಳನ್ನು ಹೊಂದಿಕೊಂಡಿದ್ದರು.
- ಅನುವಾದ ಮಾಡುವ ಭಾಷೆಯಲ್ಲಿ “ಯೋಧ” ಮತ್ತು “ಸೈನಿಕ” ಎನ್ನುವ ಎರಡು ಪದಗಳು ಒಂದೇಯಾಗಿದ್ದಾವೋ ಇಲ್ಲವೋ ಅಥವಾ ಅವುಗಳು ಅರ್ಥದಲ್ಲಿ ಬೇರೆ ಬೇರೆಯಾಗಿದ್ದಾವೋ ಇಲ್ಲವೋ ಎಂದು ನೋಡಬೇಕಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಧೈರ್ಯ, ಶಿಲುಬೆಗೆ ಹಾಕು, ರೋಮ್, ಸಮಾಧಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.21:4-5
- ಅಪೊ.ಕೃತ್ಯ.21:32-33
- ಲೂಕ.03:14
- ಲೂಕ.23:11-12
- ಮತ್ತಾಯ.08:8-10

ಪದ ಡೇಟಾ:

- Strong's: , H352, H510, H1368, H1416, H1995, H2389, H2428, H2502, H3715, H4421, H5431, H5971, H6518, H6635, H7273, H7916, G4686, G4753, G4754, G4757, G4758, G4961

ಸ್ತಂಭ, ಸ್ತಂಭಗಳು, ಕಂಬ, ಕಂಬಗಳು

ಪದದ ಅರ್ಥವಿವರಣೆ:

“ಕಂಬ” ಎನ್ನುವ ಪದವನ್ನು ಸಾಧಾರಣವಾಗಿ ಒಂದು ಭವನದ ಮೇಲ್ಛಾವಣಿಯನ್ನು ಅಥವಾ ಭವನದ ಇತರ ಭಾಗವನ್ನು ಹಿಡಿದುಕೊಂಡಿರುವುದಕ್ಕೆ ಉಪಯೋಗಿಸುವ ಉದ್ದವಾಗಿರುವ ನಿರ್ಮಾಣವನ್ನು ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ. “ಕಂಬ” ಎನ್ನುವ ಪದಕ್ಕೆ “ಸ್ತಂಭ” ಎನ್ನುವ ಪದವನ್ನು ಉಪಯೋಗಿಸುತ್ತಾರೆ.

- ಸತ್ಯವೇದ ಕಾಲಗಳಲ್ಲಿ ಕಂಬಗಳನ್ನು ಭವನಗಳನ್ನು ನಿರ್ಮಾಣ ಮಾಡುವುದರಲ್ಲಿ ಬೆಂಬಲ ಕೊಡುವುದಕ್ಕಾಗಿ ಉಪಯೋಗಿಸುತ್ತಿದ್ದರು, ಇವುಗಳನ್ನು ಸಾಧಾರಣವಾಗಿ ಒಂದೇ ಬಂಡೆಯಿಂದ ಕೆತ್ತನೆ ಮಾಡುತ್ತಿದ್ದರು..
- ಹಳೇ ಒಡಂಬಡಿಕೆಯಲ್ಲಿ ಸಂಸೋನನನ್ನು ಫಿಲಿಷ್ಟಿಯನ್ನರು ಹಿಡಿದುಕೊಂಡಾಗ, ಅವನು ಸ್ತಂಭಗಳ ಆಧಾರದಿಂದ ದೇವಾಲಯವನ್ನು ಕೆಡಿಸುವುದರ ಮೂಲಕ ಅವರ ಅನ್ಯ ದೇವಾಲಯವನ್ನು ನಾಶಗೊಳಿಸಿದ್ದನು.
- “ಕಂಬ” ಎನ್ನುವ ಪದವು ಕೆಲವೊಂದುಬಾರಿ ಒಂದು ವಿಶೇಷವಾದ ಸಂಘಟನೆಯು ನಡೆದದ್ದನ್ನು ನೆನಪಿಸುವ ಸ್ಥಳವನ್ನು ಗುರುತಿಸುವುದಕ್ಕೆ ಅಥವಾ ಒಂದು ಸಮಾಧಿಯನ್ನು ಗುರುತಿಸಲು ನೆನಪಿಸಿಕೊಳ್ಳುವುದಕ್ಕಾಗಿ ಇಟ್ಟಿರುವ ಒಂದು ದೊಡ್ಡ ಬಂಡೆಯನ್ನು ಸೂಚಿಸುತ್ತದೆ.
- ಈ ಪದವು ಸುಳ್ಳು ದೇವರನ್ನು ಆರಾಧನೆ ಮಾಡುವುದಕ್ಕೆ ತಯಾರು ಮಾಡಿಟ್ಟಿರುವ ವಿಗ್ರಹವನ್ನು ಸೂಚಿಸುತ್ತದೆ. ಇದಕ್ಕೆ ಇನ್ನೊಂದು ಹೆಸರು “ಕೆತ್ತಿದ ರೂಪ” ಎಂದಾಗಿರುತ್ತದೆ ಮತ್ತು ಇದನ್ನು “ಪ್ರತಿಮೆ” ಎಂದು ಅನುವಾದ ಮಾಡುತ್ತಾರೆ.
- “ಕಂಬ” ಎನ್ನುವ ಪದವನ್ನು ಕಂಬಾಕಾರದಲ್ಲಿರುವ ಯಾವುದಾದರೊಂದನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ, ಅರಣ್ಯದ ಮೂಲಕ ರಾತ್ರಿಯಲ್ಲಿ ಇಸ್ರಾಯೇಲ್ಯರನ್ನು ನಡೆಸುವುದಕ್ಕೆ “ಅಗ್ನಿ ಸ್ತಂಭ” ಎಂದು ಕರೆದಿದ್ದಾರೆ ಅಥವಾ ಲೋಟನ ಹೆಂಡತಿ ಪಟ್ಟಣವನ್ನು ಹಿಂದುರಿಗಿ ನೋಡಿದಾಗ “ಉಪ್ಪು ಸ್ತಂಭ” ಎಂದು ಕರೆಯಲಾಗಿದೆ.
- ಒಂದು ಭವನವನ್ನು ಬೆಂಬಲಿಸುವುದಕ್ಕೆ ಕಟ್ಟುವ ನಿರ್ಮಾಣವನ್ನು ಕರೆಯುವ “ಕಂಬ” ಅಥವಾ “ಸ್ತಂಭ” ಎನ್ನುವ ಪದಗಳನ್ನು “ತೊಲೆಯನ್ನು ಬೆಂಬಲಿಸುವುದಕ್ಕೆ ಉಪಯೋಗಿಸುವ ಉದ್ದವಾದ ಕಲ್ಲು” ಅಥವಾ “ಬೆಂಬಲಿಸುವ ಕಲ್ಲಿನ ನಿರ್ಮಾಣ” ಎಂದೂ ಅನುವಾದ ಮಾಡಬಹುದು.
- “ಕಂಬ” ಎನ್ನುವ ಪದದ ಇತರ ಪದಗಳು “ಪ್ರತಿಮೆ” ಅಥವಾ “ಎತ್ತರವಾಗಿರುವ ದೊಡ್ಡ ಕಟ್ಟಡ” ಅಥವಾ “ದಿಬ್ಬ” ಅಥವಾ “ಸ್ಮಾರಕ” ಅಥವಾ “ಎತ್ತರದ ಕಟ್ಟಡ” ಎಂದು ಸಂದರ್ಭಾನುಗುಣವಾಗಿ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಸ್ಥಾಪನೆ, ಸುಳ್ಳು ದೇವರು, ರೂಪ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.18:4-5
- ವಿಮೋ.13:19-22
- ವಿಮೋ.33:7-9
- ಆದಿ.31:45-47
- ಜ್ಞಾನೋ.09:1-2

ಪದ ಡೇಟಾ:

- Strong's: H352, H547, H2106, H2553, H3730, H4552, H4676, H4678, H4690, H5324, H5333, H5982, H8490, G4769

ಸ್ತುತಿ, ಸ್ತುತಿಗಳು, ಸ್ತುತಿಸಿದೆ, ಸ್ತುತಿಗೆ ಯೋಗ್ಯನು

ಪದದ ಅರ್ಥವಿವರಣೆ:

ಯಾರಾದರೊಬ್ಬರನ್ನು ಸ್ತುತಿಸಬೇಕೆಂದರೆ ಆ ವ್ಯಕ್ತಿಯನ್ನು ಗೌರವಿಸುವುದನ್ನು ಮತ್ತು ಮೆಚ್ಚಿಕೊಳ್ಳುವುದನ್ನು ವ್ಯಕ್ತಪಡಿಸುವುದು ಎಂದರ್ಥ.

- ಜನರು ದೇವರನ್ನು ಸ್ತುತಿಸುತ್ತಾರೆ ಯಾಕಂದರೆ ಆತನು ಎಷ್ಟು ದೊಡ್ಡವನೋ ಎಂದು ತಿಳಿದು, ಲೋಕ ರಕ್ಷಕನನ್ನಾಗಿ ಮತ್ತು ಸೃಷ್ಟಿಕರ್ತನನ್ನಾಗಿ ಆತನು ಮಾಡಿದ ಅನೇಕ ಅದ್ಭುತಕಾರ್ಯಗಳನ್ನು ತಿಳಿದು ಆತನನ್ನು ಸ್ತುತಿಸುತ್ತಾರೆ.
- ದೇವರಿಗಾಗಿ ಸಲ್ಲಿಸುವ ಸ್ತುತಿ ಅನೇಕಬಾರಿ ಆತನು ಮಾಡಿದ ಕಾರ್ಯಗಳಿಗೆ ಕೃತಜ್ಞತೆಯನ್ನು ಸಲ್ಲಿಸುವುದಾಗಿರುತ್ತದೆ.
- ಸಂಗೀತ ಮತ್ತು ಹಾಡುವುದೆನ್ನುವುದು ಅನೇಕಬಾರಿ ದೇವರನ್ನು ಸ್ತುತಿಸುವ ವಿಧಾನವನ್ನಾಗಿ ಉಪಯೋಗಿಸಲಾಗುತ್ತದೆ.
- ದೇವರನ್ನು ಸ್ತುತಿಸುವುದೆನ್ನುವುದು ಆತನನ್ನು ಆರಾಧಿಸುವುದರಲ್ಲಿ ಒಂದು ಭಾಗವಾಗಿರುತ್ತದೆ.
- "ಸ್ತುತಿ" ಎನ್ನುವ ಪದವನ್ನು "ಚೆನ್ನಾಗಿ ಮಾತನಾಡು" ಅಥವಾ "ಮಾತುಗಳೊಂದಿಗೆ ಉನ್ನತವಾಗಿ ಗೌರವಿಸು" ಅಥವಾ "ಆತನ ಕುರಿತು ಒಳ್ಳೇಯ ವಿಷಯಗಳನ್ನು ಹೇಳು" ಎಂದೂ ಅನುವಾದ ಮಾಡಬಹುದು.
- "ಸ್ತುತಿ" ಎನ್ನುವ ನಾಮಪದವನ್ನು "ಹೇಳುವುದರ ಮೂಲಕ ಗೌರವ" ಅಥವಾ "ಗೌರವಿಸುವುದಕ್ಕೆ ಮಾತನಾಡುವುದು" ಅಥವಾ "ಒಬ್ಬರ ಕುರಿತಾಗಿ ಒಳ್ಳೇಯ ವಿಷಯಗಳನ್ನು ಹೇಳುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 2 ಕೊರಿಂಥ.01:3-4
- ಅಪೊ.ಕೃತ್ಯ.02:47
- ಅಪೊ.ಕೃತ್ಯ.13:48
- ದಾನಿ.03:28
- ಎಫೆಸ.01:03
- ಆದಿ.49:8
- ಯಾಕೋಬ.03:9-10
- ಯೋಹಾನ.05:41-42
- ಲೂಕ.01:46
- ಲೂಕ.01:64-66
- ಲೂಕ.19:37-38
- ಮತ್ತಾಯ.11:25-27
- ಮತ್ತಾಯ.15:29-31

ಸತ್ಯವೇದದಿಂದ ಉದಾಹರಣೆಗಳು:

- **12:13** ಇಸ್ರಾಯೇಲ್ಯರು ತಮ್ಮ ಹೊಸ ಸ್ವಾತಂತ್ರ್ಯವನ್ನು ಆಚರಿಸಿಕೊಳ್ಳುವುದಕ್ಕೆ ಮತ್ತು ದೇವರನ್ನು _ ಸ್ತುತಿಸುವುದಕ್ಕೆ _ ಅನೇಕ ಹಾಡುಗಳನ್ನು ಹಾಡಿದರು, ಯಾಕಂದರೆ ಐಗುಪ್ತ ಸೈನ್ಯದಿಂದ ಆತನು ಅವರನ್ನು ರಕ್ಷಿಸಿದನು.
- **17:08** ಈ ಮಾತುಗಳನ್ನು ದಾವೀದನು ಕೇಳಿಸಿಕೊಂಡಾಗ, ಆತನು ತಕ್ಷಣವೇ ಕೃತಜ್ಞತೆಗಳನ್ನು ಸಲ್ಲಿಸಿ, ದೇವರನ್ನು _ ಸ್ತುತಿಸಿದನು _, ಯಾಕಂದರೆ ಈ ಎಲ್ಲಾ ಉನ್ನತವಾದ ಮತ್ತು ಅನೇಕ ಆಶೀರ್ವಾದಗಳೊಂದಿಗೆ ಆತನು ದಾವೀದನು ವಾಗ್ದಾನ ಮಾಡಿದ್ದನು.
- **22:07** "ದೇವರನ್ನು _ ಸ್ತುತಿಸಿ _, ಯಾಕಂದರೆ ಆತನು ತನ್ನ ಜನರನ್ನು ಜ್ಞಾಪಕ ಮಾಡಿಕೊಂಡನು!" ಎಂದು ಜೆಕರ್ಯನು ಹೇಳಿದನು.
- **43:13** ಅವರು (ಶಿಷ್ಯರು) ಎಲ್ಲರು ಸೇರಿ ದೇವರನ್ನು _ ಸ್ತುತಿಸುವುದರಲ್ಲಿ _ ಸಂತೋಷಪಟ್ಟರು ಮತ್ತು ಅವರೊಂದಿಗೆ ಇರುವ ಎಲ್ಲವುಗಳನ್ನು ಒಬ್ಬರೊಂದಿಗೆ ಒಬ್ಬರು ಹಂಚಿಕೊಂಡರು.
- **47:08** ಅವರು ಪೌಲ ಮತ್ತು ಸೀಲರನ್ನು ಸೆರೆಯ ಅತೀ ಭದ್ರವಾದ ಭಾಗದಲ್ಲಿ ತಮ್ಮ ಕಾಲುಗಳನ್ನು ಕಟ್ಟಿ ಹಾಕಿದ್ದರು. ಆದರೂ ಮಧ್ಯರಾತ್ರಿಯಲ್ಲಿ ಅವರು ದೇವರನ್ನು _ ಸ್ತುತಿಸುವ _ ಹಾಡುಗಳನ್ನು ಹಾಡುತ್ತಾ ಇದ್ದರು.

ಪದ ಡೇಟಾ:

- Strong's: H1319, H7121, G2980, G3853,

ಸ್ಥಾಪಿಸು, ಸ್ಥಾಪಕರು, ಅಸ್ಥಿವಾರ

ಪದದ ಅರ್ಥವಿವರಣೆ:

ಕ್ರಿಯಾ ಪದವಾದ "ಸ್ಥಾಪಿಸು" ಎನ್ನುವ ಪದಕ್ಕೆ ನಿರ್ಮಿಸು, ಸೃಷ್ಟಿಸು, ಅಥವಾ ಅಡಿಪಾಯ ಹಾಕು ಎಂದರ್ಥ. "ಅದರ ಮೇಲೆ ಸ್ಥಾಪಿಸಲಾಗಿದೆ" ಎನ್ನುವ ಮಾತಿಗೆ ಅದರ ಆಧಾರದ ಮೇಲೆ ಅಥವಾ ಅದರಿಂದ ಬೆಂಬಲಿತವಾಗಿದೆ ಎಂದರ್ಥ. "ಅಸ್ಥಿವಾರ" ಎನ್ನುವುದು ಎನಾದರೊಂದು ನಿರ್ಮಿಸಲ್ಪಡುವುದಕ್ಕೆ ಅಥವಾ ಸೃಷ್ಟಿಸುವುದಕ್ಕೆ ಹಾಕುವ ಅಡಿಪಾಯ ಎಂದರ್ಥ.

- ಒಂದು ಮನೆಯ ಅಥವಾ ಭವನದ ಅಸ್ಥಿವಾರ ತುಂಬಾ ಬಲವಾಗಿರಬೇಕು ಮತ್ತು ನಿರ್ಮಿಸುವ ಕಟ್ಟಡಕ್ಕೆಲ್ಲಾ ಅದೇ ಬೆಂಬಲವಾಗಿರುತ್ತದೆ.
- "ಅಸ್ಥಿವಾರ" ಎನ್ನುವ ಪದವು ಯಾವುದಾದರೊಂದರ ಆರಂಭವನ್ನು ಅಥವಾ ಮೊಟ್ಟ ಮೊದಲು ಸೃಷ್ಟಿಸಲ್ಪಟ್ಟ ಯಾವುದಾದರೊಂದರ ಸಮಯವನ್ನು ಕೂಡ ಸೂಚಿಸುತ್ತದೆ.
- ಅಲಂಕಾರಿಕ ಭಾಷೆಯಲ್ಲಿ ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಪ್ರವಾದಿಗಳ ಮತ್ತು ಅಪೊಸ್ತಲರ ಬೋಧನೆಗಳ ಮೇಲೆ ಸ್ಥಾಪಿಸಲ್ಪಟ್ಟಿರುವ ಭವನಕ್ಕೆ ಹೊಲಿಸಲಾಗಿದೆ, ಮತ್ತು ಆ ಭವನಕ್ಕೆ ಮೂಲೆಗಲ್ಲು ಯೇಸು ಕ್ರಿಸ್ತನಾಗಿರುತ್ತಾನೆ.
- "ಅಸ್ಥಿವಾರ ಕಲ್ಲು" ಎನ್ನುವುದು ಸ್ಥಾಪನೆ ಮಾಡುವಾಗ ಹಾಕುವ ಮೂಲೆಗಲ್ಲು ಆಗಿರುತ್ತದೆ. ಈ ಕಲ್ಲುಗಳನ್ನು ಕಟ್ಟಡವನ್ನು ಸಂಪೂರ್ಣವಾಗಿ ಬೆಂಬಲಿಸಲು ಶಕ್ತವಾಗಿವೆಯೇ ಎಂದು ಖಚಿತಪಡಿಸಿಕೊಳ್ಳಲು ಪರೀಕ್ಷಿಸಿಸಲಾಗಿರುತ್ತದೆ.

ಅನುವಾದ ಸಲಹೆಗಳು:

"ಲೋಕ ಅಸ್ಥಿವಾರದ ಮುಂಚಿತವಾಗಿ" ಎನ್ನುವ ಮಾತನ್ನು "ಲೋಕವು ಸೃಷ್ಟಿಸಲ್ಪಡುವುದಕ್ಕೆ ಮುಂಚಿತವಾಗಿ" ಅಥವಾ "ಲೋಕವು ಮೊಟ್ಟ ಮೊದಲು ಅಸ್ತಿತ್ವದಲ್ಲಿರುವುದಕ್ಕೆ ಮುಂಚಿತವಾಗಿ" ಅಥವಾ "ಪ್ರತಿಯೊಂದು ಮೊಟ್ಟ ಮೊದಲು ಸೃಷ್ಟಿಸಲ್ಪಡುವುದಕ್ಕೆ ಮುಂಚಿತವಾಗಿ" ಎಂದೂ ಅನುವಾದ ಮಾಡಬಹುದು.

- "ಅದರ ಮೇಲೆ ಸ್ಥಾಪಿಸಲ್ಪಟ್ಟಿದೆ" ಎನ್ನುವ ಮಾತನ್ನು "ಭದ್ರವಾಗಿ ನಿರ್ಮಿಸಲಾಗಿದೆ" ಅಥವಾ "ಸ್ಥಿರವಾಗಿ ಹಾಕಲ್ಪಟ್ಟಿದೆ" ಎಂದೂ ಅನುವಾದ ಮಾಡಬಹುದು.
- ಸಂದರ್ಭಕ್ಕೆ ತಕ್ಕಂತೆ, "ಅಸ್ಥಿವಾರ" ಎನ್ನುವ ಪದವನ್ನು "ಬಲವಾದ ಅಡಿಪಾಯ" ಅಥವಾ "ಗಟ್ಟಿಯಾದ ಬೆಂಬಲ" ಅಥವಾ "ಆರಂಭ" ಅಥವಾ "ಸೃಷ್ಟಿ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಮೂಲೆಗಲ್ಲು, ಸೃಷ್ಟಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಅರಸ.06:37-38
- 2 ಪೂರ್ವ.03:1-3
- ಯೆಹೆ.13:13-14
- ಲೂಕ.14:29
- ಮತ್ತಾಯ.13:35
- ಮತ್ತಾಯ.25:34

ಪದ ಡೇಟಾ:

- Strong's: H134, H787, H2713, H3245, H3247, H3248, H4143, H4144, H4146, H4328, H4349, H4527, H8356, G2310, G2311, G2602

ಸ್ವರ, ಸ್ವರಗಳು

ಪದದ ಅರ್ಥವಿವರಣೆ:

“ಸ್ವರ” ಎನ್ನುವ ಪದವು ಅನೇಕಬಾರಿ ಮಾತನಾಡುವುದನ್ನು ಅಥವಾ ಏನಾದರೊಂದನ್ನು ಸಂಭಾಷಿಸುವುದನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.

- ಮನುಷ್ಯರು ಮಾತನಾಡುವ ರೀತಿಯಲ್ಲಿ ದೇವರು ಮಾತನಾಡದಿದ್ದರೂ, ಆತನು ತನ್ನ ಸ್ವರವನ್ನು ಉಪಯೋಗಿಸಿದ್ದಾನೆಂದು ಹೇಳಲ್ಪಟ್ಟಿದೆ.
- “ಕರ್ತನ ಮಾರ್ಗವನ್ನು ಸಿದ್ಧಪಡಿಸಿರಿ” ಎಂದು ಹೇಳುವ ಸ್ವರವನ್ನು ಅರಣ್ಯದಲ್ಲಿ ಕೇಳಿದೆನು” ಎನ್ನುವ ಮಾತಿನಲ್ಲಿರುವಂತೆಯೇ, ಈ ಪದವು ಸಂಪೂರ್ಣ ವ್ಯಕ್ತಿಯನ್ನು ಸೂಚಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ. ಈ ಮಾತನ್ನು “ಒಬ್ಬ ವ್ಯಕ್ತಿ ಅರಣ್ಯದೊಳಗಿಂದ ಕೂಗುತ್ತಿರುವ ಸ್ವರವನ್ನು ಕೇಳಿಸಿಕೊಳ್ಳುವುದು” ಎಂದೂ ಅನುವಾದ ಮಾಡಬಹುದು. (ನೋಡಿರಿ: ಲಾಕ್ಷಣಿಕ ಪ್ರಯೋಗ)
- “ಯಾರಾದರೊಬ್ಬರ ಸ್ವರವನ್ನು ಕೇಳು” ಎನ್ನುವ ಮಾತನ್ನು “ಯಾರಾದರೊಬ್ಬರು ಮಾತನಾಡುತ್ತಿರುವಾಗ ಕೇಳು” ಎಂದೂ ಅನುವಾದ ಮಾಡಬಹುದು.
- ಕೆಲವೊಂದುಬಾರಿ “ಸ್ವರ” ಎನ್ನುವ ಪದವನ್ನು ನಿಜವಾಗಿ ಮಾತನಾಡದ ವಸ್ತುಗಳಿಗೋಸ್ಕರ ಉಪಯೋಗಿಸಲ್ಪಟ್ಟಿರಬಹುದು, ಆಕಾಶಗಳ “ಸ್ವರವು” ದೇವರ ಅದ್ಭುತ ಕಾರ್ಯಗಳನ್ನು ವಿವರಿಸುತ್ತಿದೆ ಎಂದು ದಾವೀದನು ತನ್ನ ಕೀರ್ತನೆಗಳಲ್ಲಿ ವಿವರಿಸಿದ ಸಂದರ್ಭವನ್ನು ನೋಡಬಹುದು. ಇದನ್ನು “ಅವುಗಳ ವೈಭವವು ದೇವರು ಎಷ್ಟು ದೊಡ್ಡವನೆಂದು ಸ್ಪಷ್ಟವಾಗಿ ತೋರಿಸುತ್ತವೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕರೆ, ಪ್ರಕಟನೆ, ವೈಭವ)

ಸತ್ಯವೇದದ ಅನುಬಂಧ ವಾಕ್ಯಗಳು :

- ಯೋಹಾನ.05:36-38
- ಲೂಕ.01:42-45
- ಲೂಕ.09:34-36
- ಮತ್ತಾಯ.03:16-17
- ಮತ್ತಾಯ.12:19-21

ಪದ ಡೇಟಾ:

- Strong's: H6963, H7032, H7445, H8193, G2906, G5456, G5586

ಸ್ವರಮಂಡಲ, ಕಿನ್ನರಿ, ಕಿನ್ನರಿಗಳು

ಪದದ ಅರ್ಥವಿವರಣೆ:

ಸ್ವರಮಂಡಲ ಮತ್ತು ಕಿನ್ನರಿ ಎನ್ನುವವುಗಳು ತಂತಿಗಳಿಂದ ಮಾಡಿದ ಚಿಕ್ಕ ಚಿಕ್ಕ ಸಂಗೀತ ಉಪಕರಣಗಳಾಗಿರುತ್ತವೆ, ಅವು ದೇವರನ್ನು ಆರಾಧನೆ ಮಾಡುವುದಕ್ಕೆ ಇಸ್ರಾಯೇಲ್ಯರಿಂದ ಉಪಯೋಗಿಸಲ್ಪಡುತ್ತಿದ್ದವು.

- ಕಿನ್ನರಿ ಎನ್ನುವುದು ಚಿಕ್ಕ ತಂತಿವಾದ್ಯದಂತಿರುತ್ತದೆ, ಇದಕ್ಕೆ ಚೌಕಟ್ಟಿನ ಸುತ್ತ ತಂತಿಗಳು ಇರುತ್ತವೆ.
- ಸ್ವರಮಂಡಲ ಎನ್ನುವುದು ಆಧುನಿಕ ದಿನಗಳಲ್ಲಿರುವ ಅಕುಸ್ಟಿಕ್ ಗಿಟಾರ್.ಗೆ ತುಂಬಾ ಹೋಲಿಕೆಯಾಗಿರುತ್ತದೆ, ಇದಕ್ಕೆ ಕಟ್ಟಿಗೆಯಿಂದ ಮಾಡಿದ ಶಬ್ದ ಪೆಟ್ಟಿಗೆ ಇರುತ್ತದೆ ಮತ್ತು ಆ ಪೆಟ್ಟಿಗೆ ಉದ್ದವಾದ ಕಟ್ಟಿಗೆ ಇದ್ದು, ಅದರ ಮೇಲೆ ತಂತಿಗಳನ್ನು ಕಟ್ಟಿರುತ್ತಾರೆ.
- ಸ್ವರಮಂಡಲವನ್ನು ಅಥವಾ ಒಂದು ಕಿನ್ನರಿಯನ್ನು ಬಾರಿಸುವುದರಲ್ಲಿ ಕೆಲವೊಂದು ತಂತಿಗಳನ್ನು ಒಂದು ಕೈ ಬೆರಳುಗಳಿಂದ ಹಿಡಿದುಕೊಂಡು, ಮತ್ತೊಂದು ಕೈಯಿಂದ ಇತರ ತಂತಿಗಳನ್ನು ಎಳೆಯುತ್ತಾರೆ ಅಥವಾ ನಾದ ಹೊಡೆಯುತ್ತಾರೆ.
- ಸ್ವರಮಂಡಲ, ಕಿನ್ನರಿ ಮತ್ತು ತಂತಿವಾದ್ಯಗಳನ್ನು ಅವುಗಳ ತಂತಿಗಳನ್ನು ಎಳೆಯುವುದರ ಮೂಲಕ ಬಾರಿಸುತ್ತಾರೆ.
- ತಂತಿಗಳ ಸಂಖ್ಯೆ ಬದಲಾಗುತ್ತದೆ, ಆದರೆ ಹಳೇ ಒಡಂಬಡಿಕೆಯಲ್ಲಿ ವಿಶೇಷವಾಗಿ ಹತ್ತು ತಂತಿಗಳ ಉಪಕರಣಗಳನ್ನೇ ದಾಖಲಿಸಲಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ತಂತಿವಾದ್ಯ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.10:11-12
- 1 ಸಮು.10:5-6
- 2 ಪೂರ್ವ.05:11-12

ಪದ ಡೇಟಾ:

- Strong's: H3658, H5035, H5443

ಸ್ವಾಧೀನಪಡಿಸಿಕೊ, ಸ್ವಾಧೀನ ಮಾಡಿಕೊಳ್ಳಲಾಗಿದೆ, ಸ್ವಾಸ್ಥ್ಯ, ಸ್ವಾಸ್ಥ್ಯಗಳು ಹೊರದೂಡು

ಸತ್ಯಾಂಶಗಳು:

"ಸ್ವಾಧೀನಪಡಿಸಿಕೊ" ಮತ್ತು "ಸ್ವಾಧೀನ ಮಾಡಿಕೊಳ್ಳುವುದು" ಎನ್ನುವ ಪದಗಳು ಸಾಧಾರಣವಾಗಿ ಯಾವುದಾದರೊಂದನ್ನು ಸ್ವಂತ ಮಾಡಿಕೊಳ್ಳುವುದನ್ನು ಸೂಚಿಸುತ್ತದೆ. ಒಂದು ಭೂಭಾಗವನ್ನು ವಶಪಡಿಸಿಕೊಳ್ಳುವುದನ್ನು ಅಥವಾ ಯಾವುದಾದರೊಂದರ ಮೇಲೆ ನಿಯಂತ್ರಣ ಪಡೆದುಕೊಳ್ಳುವುದನ್ನು ಆ ಪದಗಳು ವಿವರಿಸುತ್ತವೆ.

- ಹಳೇ ಒಡಂಬಡಿಕೆಯಲ್ಲಿ ಈ ಪದವು ಅನೇಕಬಾರಿ ಒಂದು ಭೂಮಿಯನ್ನು "ಸ್ವಾಧೀನಪಡಿಸಿಕೊಳ್ಳುವುದು" ಅಥವಾ " ಸ್ವಾಸ್ಥ್ಯವನ್ನು ಹೊಂದಿಕೊಳ್ಳುವುದು" ಎನ್ನುವ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ.
- ಕಾನಾನ್ ಭೂಮಿಯನ್ನು "ಸ್ವಾಧೀನಮಾಡಿಕೊಳ್ಳಬೇಕೆಂದು" ಯೆಹೋವನು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದಾಗ, ಇದಕ್ಕೆ ಅವರು ಆ ಭೂಮಿಯೊಳಗೆ ಪ್ರವೇಶಿಸಿ, ಅಲ್ಲಿ ನಿವಾಸವಾಗಿರಬೇಕೆಂದು ಅದರ ಅರ್ಥವಾಗಿರುತ್ತದೆ. ಇದರಲ್ಲಿ ಮೊಟ್ಟ ಮೊದಲು ಆ ಭೂಮಿಯಲ್ಲಿ ಜೀವಿಸುತ್ತಿರುವ ಕಾನಾನ್ ಜನರನ್ನು ಜಯಿಸುವ ಕಾರ್ಯವು ಒಳಗೊಂಡಿರುತ್ತದೆ.
- "ಇಸ್ರಾಯೇಲ್ಯರ ಸ್ವಾಸ್ಥ್ಯವಾಗಿ" ಕಾನಾನ್ ಭೂಮಿಯನ್ನು ನಾನು ಅವರಿಗೆ ಕೊಡುತ್ತೇನೆ ಎಂದು ಯೆಹೋವನು ಇಸ್ರಾಯೇಲ್ಯರಿಗೆ ಹೇಳಿದನು. ಈ ಮಾತನ್ನು "ಜೀವಿಸುವುದಕ್ಕೆ ಅವರಿಗೆ ಹಕ್ಕಿರುವ ಸ್ಥಳ" ಎಂಬುದಾಗಿಯೂ ಅನುವಾದ ಮಾಡಬಹುದು.
- ಇಸ್ರಾಯೇಲ್ ಜನರು ಯೆಹೋವನ "ವಿಶೇಷವಾದ ಸ್ವತ್ತು ಅಥವಾ ಸ್ವಾಸ್ಥ್ಯ" ಎಂದು ಕರೆಯಲ್ಪಟ್ಟಿದ್ದರು. ಆತನನ್ನು ಆರಾಧನೆ ಮಾಡುವುದಕ್ಕೆ ಮತ್ತು ಆತನನ್ನು ಸೇವಿಸುವುದಕ್ಕೆ ವಿಶೇಷವಾಗಿ ಕರೆಯಲ್ಪಟ್ಟ ತನ್ನ ಜನರಾಗಿ ಅವರು ಆತನಿಗೆ ಸಂಬಂಧಪಟ್ಟವರು ಎಂದು ಇದಕ್ಕೆ ಅರ್ಥವಿರುತ್ತದೆ.

ಅನುವಾದ ಸಲಹೆಗಳು:

- "ಸ್ವಾಧೀನಪಡಿಸಿಕೋ" ಎನ್ನುವ ಪದವನ್ನು "ಸ್ವಂತಮಾಡಿಕೊ" ಅಥವಾ "ಹೊಂದಿಕೊ" ಅಥವಾ "ಎಲ್ಲಾವುದರ ಮೇಲೆ ಅಧಿಕಾರ ಹೊಂದಿರು" ಎಂದೂ ಅನುವಾದ ಮಾಡಬಹುದು.
- "ಸ್ವಾಸ್ಥ್ಯವನ್ನು ತೆಗೆದುಕೋ" ಎನ್ನುವ ಮಾತನ್ನು "ನಿಯಂತ್ರಣ ತೆಗೆದುಕೋ" ಅಥವಾ "ವಶಪಡಿಸಿಕೋ" ಅಥವಾ "ಆ ಸ್ಥಳದಲ್ಲಿ ಜೀವಿಸು" ಎಂದು ಸಂದರ್ಭಾನುಸಾರವಾಗಿ ಅನುವಾದ ಮಾಡಬಹುದು.
- ಜನರು ಸ್ವಂತ ಮಾಡಿಕೊಂಡಿರುವ ವಸ್ತುಗಳನ್ನು ಸೂಚಿಸಿದಾಗ, "ಸ್ವಾಸ್ಥ್ಯಗಳು" ಎನ್ನುವ ಪದವನ್ನು "ಸಂಬಂಧಪಟ್ಟವುಗಳು" ಅಥವಾ "ಆಸ್ತಿ" ಅಥವಾ "ಸ್ವಂತಮಾಡಿಕೊಂಡಿರುವ ವಿಷಯಗಳು" ಅಥವಾ "ಸ್ವಾಧೀನ ಮಾಡಿಕೊಂಡಿರುವ ವಿಷಯಗಳು" ಎಂದೂ ಅನುವಾದ ಮಾಡಬಹುದು.
- ಯೆಹೋವನು ಇಸ್ರಾಯೇಲ್ಯರನ್ನು ಕರೆದಾಗ, "ನನ್ನ ವಿಶೇಷವಾದ ಸ್ವಾಸ್ಥ್ಯ" ಎನ್ನುವ ಈ ಮಾತನ್ನು "ನನ್ನ ವಿಶೇಷವಾದ ಜನರು" ಅಥವಾ "ನನಗೆ ಸಂಬಂಧಪಟ್ಟ ಜನರು" ಅಥವಾ "ನಾನು ಪ್ರೀತಿಸಿದ ಮತ್ತು ಪಾಲಿಸಿದ ನನ್ನ ಜನರು" ಎಂದೂ ಅನುವಾದ ಮಾಡಬಹುದು.
- "ಅವರು ಅವರ ಸ್ವಾಸ್ಥ್ಯವಾಗಿ ಮಾರ್ಪಟ್ಟಿದ್ದರು" ಎಂದು ಭೂಮಿಯನ್ನು ಸೂಚಿಸಿದಾಗ, ಈ ಮಾತಿಗೆ "ಅವರು ಭೂಮಿಯನ್ನು ವಶಪಡಿಸಿಕೊಂಡಿದ್ದಾರೆ" ಅಥವಾ "ಭೂಮಿ ಅವರಿಗೆ ಸಂಬಂಧಪಟ್ಟಿದ್ದಾಗಿರುತ್ತದೆ" ಎಂದರ್ಥ.
- "ಆತನ ಸ್ವಾಸ್ಥ್ಯದಲ್ಲಿ ಕಂಡುಬಂದಿದೆ" ಎನ್ನುವ ಮಾತನ್ನು "ಆತನು ಹಿಡಿದುಕೊಂಡಿರುವ" ಅಥವಾ "ಆತನೊಂದಿಗೆ ಅವನಿದ್ದಾನೆ" ಎಂದೂ ಅನುವಾದ ಮಾಡಬಹುದು.
- "ನಿಮ್ಮ ಸ್ವಾಸ್ಥ್ಯವಾಗಿ" ಎನ್ನುವ ಮಾತನ್ನು "ನಿನಗೆ ಸಂಬಂಧಪಟ್ಟ ವಿಷಯವನ್ನಾಗಿ" ಅಥವಾ "ನಿಮ್ಮ ಜನರು ಜೀವಿಸುವ ಸ್ಥಳವನ್ನಾಗಿ" ಎಂದೂ ಅನುವಾದ ಮಾಡಬಹುದು.
- "ಆತನ ಸ್ವಾಸ್ಥ್ಯದಲ್ಲಿ" ಎನ್ನುವ ಮಾತನ್ನು "ಆತನು ಸ್ವಂತ ಮಾಡಿಕೊಂಡಿರುವ" ಅಥವಾ "ಆತನಿಗೆ ಸಂಬಂಧಪಟ್ಟಿರುವ" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಕಾನಾನ್, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಪೂರ್ವ.06:70
- 1 ಅರಸ.09:17-19
- ಅಪೊ.ಕೃತ್ಯ.02:45
- ಧರ್ಮೋ.04:5-6
- ಆದಿ.31:36-37
- ಮತ್ತಾಯ.13:44

ಪದ ಡೇಟಾ:

- Strong's: H270, H272, H834, H2505, H2631, H3027, H3423, H3424, H3425, H3426, H4180, H4181, H4672, H4735, H4736, H5157, H5159, H5459, H7069, G1139, G2192, G2697, G2722, G2932, G2933, G2935, G4047, G5224, G5564

ಸ್ವೀಕರಿಸು, ಸ್ವಾಗತ, ಕೈಗೆತ್ತಿಕೊಳ್ಳುವುದು, ಸ್ವೀಕಾರ

ಪದದ ಅರ್ಥವಿವರಣೆ:

"ಸ್ವೀಕರಿಸು" ಎನ್ನುವ ಪದವು ಸಾಧಾರಣವಾಗಿ ಕೊಡಲ್ಪಟ್ಟವುಗಳನ್ನು, ಕಾಣಿಕೆಗಳನ್ನು ಅಥವಾ ಉಡುಗೊರೆಗಳನ್ನು ಅಂಗೀಕರಿಸುವುದು ಅಥವಾ ಪಡೆದುಕೊಳ್ಳುವುದು ಎಂದರ್ಥ.

- "ಸ್ವೀಕರಿಸು" ಎನ್ನುವ ಪದವು ಯಾವುದಾದರೊಂದನ್ನು ಅನುಭವಿಸು ಅಥವಾ ನರಳು ಎಂದರ್ಥವನ್ನೂ ಕೊಡುತ್ತದೆ, ಉದಾಹರಣೆಗೆ, "ಅವನು ಮಾಡಿದ ಕೆಲಸಗಳಿಗೆ ತಕ್ಕ ಶಿಕ್ಷೆಯನ್ನು ಹೊಂದಿಕೊಂಡಿದ್ದಾನೆ" ಎನ್ನುವ ಮಾತಿನಂತೆ ಇರುತ್ತದೆ.
- ನಾವು ಒಬ್ಬ ವ್ಯಕ್ತಿಯನ್ನು "ಪಡೆದುಕೊಳ್ಳುವುದರಲ್ಲಿ" ಒಂದು ವಿಶೇಷವಾದ ಭಾವನೆಯೂ ಒಳಗೊಂಡಿರುತ್ತದೆ. ಉದಾಹರಣೆಗೆ, ಅತಿಥಿಗಳನ್ನು ಅಥವಾ ಸಂದರ್ಶಕರನ್ನು "ಸ್ವಾಗತಿಸುವದು" ಎಂದರೆ ಅವರನ್ನು ಆಹ್ವಾನಿಸುವುದು ಮತ್ತು ಅವರೊಂದಿಗೆ ಸಂಬಂಧವನ್ನು ಬೆಳಸಿಕೊಳ್ಳುವ ಕ್ರಮದಲ್ಲಿ ಅವರನ್ನು ಘನಪಡಿಸುವುದು ಎಂದರ್ಥ.

"ಪವಿತ್ರಾತ್ಮನ ವರವನ್ನು ಪಡೆದುಕೊಳ್ಳುವುದು" ಎಂದರೆ ಪವಿತ್ರಾತ್ಮನು ನಮಗೆ ಕೊಡಲ್ಪಟ್ಟಿದ್ದಾನೆ ಮತ್ತು ನಮ್ಮ ಜೀವನಗಳ ಮೂಲಕ ನಮ್ಮಲ್ಲಿ ಕೆಲಸ ಮಾಡುವುದಕ್ಕೆ ಆತನನ್ನು ಆಹ್ವಾನಿಸಿದ್ದೇವೆ ಎಂದರ್ಥ.

- "ಯೇಸುವನ್ನು ಸ್ವೀಕರಿಸು" ಎಂದರೆ ಯೇಸು ಕ್ರಿಸ್ತನ ಮೂಲಕ ದೇವರು ಕೊಡುವ ರಕ್ಷಣೆಯನ್ನು ಸ್ವೀಕರಿಸುವುದು ಎಂದರ್ಥವಾಗಿರುತ್ತದೆ.
- ಒಬ್ಬ ಕುರುಡನು "ತನ್ನ ದೃಷ್ಟಿಯನ್ನು ತಿರುಗಿ ಪಡೆದುಕೊಂಡನು" ಎಂದರೆ ದೇವರು ಅವನನ್ನು ಸ್ವಸ್ಥಪಡಿಸಿದ್ದಾನೆ ಮತ್ತು ನೋಡುವುದಕ್ಕೆ ಅವನಿಗೆ ದೃಷ್ಟಿಯನ್ನು ಕೊಟ್ಟಿದ್ದಾನೆ ಎಂದರ್ಥವಾಗಿರುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ "ಪಡೆದುಕೋ" ಎನ್ನುವ ಪದವನ್ನು "ಅಂಗೀಕರಿಸು" ಅಥವಾ "ಆಹ್ವಾನಿಸು" ಅಥವಾ 'ಅನುಭವ" ಅಥವಾ "ಕೊಡಲ್ಪಟ್ಟಿರುವ" ಎಂದೂ ಅನುವಾದ ಮಾಡಬಹುದು.
- "ನೀವು ಶಕ್ತಿಯನ್ನು ಪಡೆದುಕೊಳ್ಳುವಿರಿ" ಎನ್ನುವ ಮಾತನ್ನು "ನಿಮಗೆ ಶಕ್ತಿ ಕೊಡಲ್ಪಡುವುದು" ಅಥವಾ "ದೇವರು ನಿಮಗೆ ಶಕ್ತಿಯನ್ನು ನೀಡುವರು" ಅಥವಾ "(ದೇವರಿಂದ) ನಿಮಗೆ ಶಕ್ತಿ ಅನುಗ್ರಹಿಸಲ್ಪಡುವುದು" ಅಥವಾ "ನಿಮ್ಮಲ್ಲಿ ಶಕ್ತಿಯುತವಾಗಿ ಕೆಲಸ ಮಾಡುವುದಕ್ಕೆ ದೇವರು ನಿಮಗೆ ಪವಿತ್ರಾತ್ಮನನ್ನು ಅನುಗ್ರಹಿಸುವರು" ಎಂದೂ ಅನುವಾದ ಮಾಡಬಹುದು.
- "ತನ್ನ ದೃಷ್ಟಿಯನ್ನು ಪಡೆದುಕೊಂಡನು" ಎನ್ನುವ ಮಾತು "ಅವನು ನೋಡುತ್ತಿದ್ದಾನೆ" ಅಥವಾ "ಅವನು ತಿರುಗಿ ನೋಡುವವನಾದನು" ಅಥವಾ "ದೇವರಿಂದ ಗುಣವನ್ನು ಹೊಂದಿ, ಅವನು ನೋಡುವ ವ್ಯಕ್ತಿಯಾದನು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಪವಿತ್ರಾತ್ಮ, ಯೇಸು, ಒಡೆಯ, ರಕ್ಷಿಸು)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಯೋಹಾನ.05:09
- 1 ಥೆಸ್ಸ.01:06
- 1 ಥೆಸ್ಸ.04:01
- ಅಪೊ.ಕೃತ್ಯ.08:15
- ಯೆರೆ.32:33
- ಲೂಕ.09:05
- ಮಲಾಕಿ.03:10-12
- ಕೀರ್ತನೆ.049:14-15

ಸತ್ಯವೇದದಿಂದ ಉದಾಹರಣೆಗಳು:

- **21:13** ಮೆಸ್ಸೀಯ ಪರಿಪೂರ್ಣನಾಗಿರುತ್ತಾನೆ, ಆತನು ಯಾವ ಪಾಪ ಮಾಡಿರುವುದಿಲ್ಲ ಎಂದು ಪ್ರವಾದಿಗಳು ಹೇಳಿದ್ದರು. ಇತರ ಜನರ ಪಾಪಗಳಿಗಾಗಿ ಶಿಕ್ಷೆಯನ್ನು _ ಪಡೆದುಕೊಳ್ಳುವುದಕ್ಕೆ _ ಆತನು ಸತ್ತನು. ಆತನ ಶಿಕ್ಷೆಯು ದೇವರಿಗೆ ಮತ್ತು ಜನರಿಗೆ ಮಧ್ಯದಲ್ಲಿ ಸಮಾಧಾನವನ್ನುಂಟು ಮಾಡುತ್ತದೆ.
- **45:05** ಸ್ತೆಫನನು ಸಾಯುತ್ತಿರುವಾಗ, "ಯೇಸುವೆ, ನನ್ನ ಆತ್ಮವನ್ನು _ ತೆಗೆದುಕೋ _ " ಎಂದು ಅಳುತ್ತಾ ಕೂಗಿದನು.
- **49:06** ನನ್ನನ್ನು ಕೆಲವರು ಅಂಗೀಕರಿಸಿ, ರಕ್ಷಣೆ ಹೊಂದುತ್ತಾರೆ, ಆದರೆ ಕೆಲವರು ನಂಬದೆ ರಕ್ಷಣೆ ಹೊಂದುವುದಿಲ್ಲ ಎಂದು ಆತನು (ಯೇಸು) ಹೇಳಿದನು.
- **49:10** ಯೇಸು ಶಿಲುಬೆಯಲ್ಲಿ ಮರಣ ಹೊಂದುತ್ತಿರುವಾಗ, ಆತನು ನಿನ್ನ ಶಿಕ್ಷೆಯನ್ನು _ ಪಡೆದುಕೊಂಡಿದ್ದಾನೆ _.
- **49:13** ಯೇಸುವಿನಲ್ಲಿ ನಂಬಿಕೆಯಿಟ್ಟು, ಆತನನ್ನು ತಮ್ಮ ಯಜಮಾನನನ್ನಾಗಿ _ ಸ್ವೀಕರಿಸುವ _ ಪ್ರತಿಯೊಬ್ಬರನ್ನು ದೇವರು ರಕ್ಷಿಸುವನು.

ಪದ ಡೇಟಾ:

- Strong's: H3557, H3947, H6901, H6902, H8254, G308, G324, G353, G354, G568, G588, G618, G1183, G1209, G1523, G1653, G1926, G2865, G2983, G3028, G3335, G3336, G3549, G3858, G3880, G4327, G4355, G4356, G4687, G5264, G5562

ಹಂದಿ, ಹಂದಿಗಳು, ಹಂದಿಮಾಂಸ, ಹಂದಿಗಳ ಗುಂಪು

ಪದದ ಅರ್ಥವಿವರಣೆ:

ಹಂದಿ ಎನ್ನುವುದು ಮಾಂಸಕ್ಕಾಗಿ ಬೆಳೆಸುವ ನಾಲ್ಕು ಕಾಲುಗಳುಳ್ಳ ಗೊರಸು ಪ್ರಾಣಿಯಾಗಿರುತ್ತದೆ. ಇದರ ಮಾಂಸವನ್ನು "ಹಂದಿಮಾಂಸ (ಪೋರ್ಕ್)" ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಹಂದಿಗಳಿಗೆ ಮತ್ತು ಸಂಬಂಧಪಟ್ಟ ಪ್ರಾಣಿಗಳನ್ನು "ಸ್ವೈನ್" ಎಂದು ಕರೆಯುತ್ತಾರೆ.

- ಹಂದಿಮಾಂಸವನ್ನು ತಿನ್ನಬಾರದೆಂದು ದೇವರು ಇಸ್ರಾಯೇಲ್ಯರಿಗೆ ಹೇಳಿದರು ಮತ್ತು ಅದನ್ನು ಅಶುದ್ಧವೆಂದು ಪರಿಗಣಿಸಲು ಹೇಳಿದ್ದಾರೆ. ಇವತ್ತಿನ ಯೆಹೂದ್ಯರು ಕೂಡ ಹಂದಿಗಳನ್ನು ಅಶುದ್ಧವೆಂದು ಮತ್ತು ಅವುಗಳನ್ನು ತಿನ್ನಬಾರದೆಂದು ಪರಿಗಣಿಸುತ್ತಾರೆ.
- ಹಂದಿಮಾಂಸವನ್ನು ಜನರಿಗೆ ಮಾರುವುದಕ್ಕೆ ಕೃಷಿ ಕ್ಷೇತ್ರಗಳಲ್ಲಿ ಹಂದಿಗಳನ್ನು ಬೆಳೆಸುತ್ತಾರೆ.
- ಕೃಷಿ ಕ್ಷೇತ್ರಗಳಲ್ಲಿ ಬೆಳೆಸದ ಹಂದಿಗಳ ಗುಂಪು ಒಂದಿರುತ್ತದೆ, ಆದರೆ ಇವು ಅರಣ್ಯಗಳಲ್ಲಿ ಜೀವಿಸುತ್ತವೆ; ಇವುಗಳನ್ನು "ಕಾಡು ಹಂದಿಗಳು" ಎಂದು ಕರೆಯುತ್ತಾರೆ. ಕಾಡು ಹಂದಿಗಳು ಕೋರೆ ಹಲ್ಲುಗಳನ್ನು ಹೊಂದಿರುತ್ತವೆ ಮತ್ತು ಇವುಗಳನ್ನು ಅಪಾಯಕರವಾದ ಪ್ರಾಣಿಗಳೆಂದು ಪರಿಗಣಿಸಲಾಗುತ್ತದೆ.
- ಕೆಲವೊಂದುಬಾರಿ ದೊಡ್ಡ ಹಂದಿಗಳನ್ನು "ಹೊಟ್ಟೆ ಬಾಕ ಹಂದಿಗಳು" ಎಂದು ಸೂಚಿಸುತ್ತಾರೆ.

(ಅನುವಾದ ಸಲಹೆಗಳು: ಗೊತ್ತಿಲ್ಲದವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಪೇತ್ರ.02:20-22
- ಮಾರ್ಕ.05:11-13
- ಮತ್ತಾಯ.07:6
- ಮತ್ತಾಯ.08:30-32

ಪದ ಡೇಟಾ:

- Strong's: H2386, G5519

ಹಕ್ಕಲಾಯು, ಹಕ್ಕಲಾಯುವುದು, ಹಕ್ಕಲಾಯ್ದದ್ದು, ಹಕ್ಕಲಾಯುತ್ತಿರುವುದು

ಪದದ ಅರ್ಥವಿವರಣೆ

"ಹಕ್ಕಲಾಯು" ಎನ್ನುವ ಪದಕ್ಕೆ ಹೊಲದಲ್ಲಿ ಅಥವಾ ಹಣ್ಣುತೋಟದಲ್ಲಿ ಕೊಯ್ಯುವವರು ಬಿಟ್ಟಿರುವ ಧಾನ್ಯವನ್ನು ಅಥವಾ ಹಣ್ಣುಗಳನ್ನು ಎತ್ತಿಕೊಳ್ಳುವುದನ್ನು ಸೂಚಿಸುತ್ತದೆ.

- ವಿಧವೆಯರು, ಬಡವರು ಮತ್ತು ಪರದೇಶಿಯರು ಮಿಕ್ಕಿರುವ ಧಾನ್ಯವು ಅವರಿಗೆ ಆಹಾರವಾಗುವ ಹಾಗೆ ಹಕ್ಕಲಾಯಲಿ ಎಂದು ಯೆಹೋವನು ಇಸ್ರಾಯೇಲ್ಯರಿಗೆ ಅಪ್ಪಣೆ ಕೊಟ್ಟಿದ್ದನು.
- ಕೆಲವೊಮ್ಮೆ ಹೊಲದ ಯಜಮಾನರು ಕೊಯ್ಯುವವರ ಹಿಂದೆಯೇ ಹಕ್ಕಲಾಯುವವರು ಹೋಗುವಂತೆ ಅನುಮತಿಕೊಡುತ್ತಿದ್ದರು ಅದು ಅವರಿಗೆ ಹೆಚ್ಚಿನ ಧಾನ್ಯ ಎತ್ತಿಕೊಳ್ಳುವುದಕ್ಕೆ ಅವಕಾಶವಾಗಿತ್ತು.
- ಇದು ಹೇಗೆ ನಡೆಯುತ್ತಿತ್ತು ಎನ್ನುವದಕ್ಕೆ ಒಳ್ಳೆಯ ಉದಾಹರಣೆ ರೂತಳ ಕಥೆಯಲ್ಲಿದೆ. ಅವಳ ಬಂಧುವಾದ ಬೋವಜನ ಹೊಲದಲ್ಲಿ ಆಕೆ ಕೊಯ್ಯುವವರ ನಡುವೆ ಹಕ್ಕಲಾಯುವದಕ್ಕೆ ಅನುಮತಿಹೊಂದಿದ್ದಳು.
- "ಹಕ್ಕಲಾಯು" ಎನ್ನುವ ಪದವನ್ನು "ಎತ್ತಿಕೋ" ಅಥವಾ "ಸೇರಿಸು" ಅಥವಾ "ಸೇಕರಿಸು" ಎಂದು ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಬೋವಜ, ಧಾನ್ಯ, ಕೊಯ್ಲು, ರೂತಳು)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.24:21-22
- ಯೆಶಯ.17:4-5
- ಯೋಬ.24:5-7
- ರೂತಳು.02:1-2
- ರೂತಳು.02:15-16

ಪದ ಡೇಟಾ:

- Strong's: H3950, H3951, H5953, H5955

ಹತ್ತನೆಯ, ಹತ್ತರಲ್ಲಿ, ದಶಮಾಂಶ, ದಶಮಾಂಶಗಳು

ಪದದ ಅರ್ಥವಿವರಣೆ:

“ಹತ್ತನೆಯ” ಮತ್ತು “ದಶಮಾಂಶ” ಎನ್ನುವ ಪದಗಳು “ಶೇಕಡಾ ಹತ್ತು” ಅಥವಾ ಒಬ್ಬರ ಹಣದಲ್ಲಿ, ಬೆಳೆಗಳಲ್ಲಿ, ಪಶುಪ್ರಾಣಿಗಳಲ್ಲಿ, ಅಥವಾ ಅವರ ಆಸ್ತಿಪಾಸ್ತಿಗಳಲ್ಲಿ ದೇವರಿಗೆ ಕೊಡುವ “ಹತ್ತನೆಯ ಭಾಗ” ಎನ್ನುವದನ್ನು ಸೂಚಿಸುತ್ತದೆ.

- ಹಳೇ ಒಡಂಬಡಿಕೆಯಲ್ಲಿ ದೇವರು ತನಗೆ ಕೃತಜ್ಞತೆಯ ಅರ್ಪಣೆಯನ್ನಾಗಿ ತಮಗೆ ಸಂಬಂಧಪಟ್ಟ ಪ್ರತಿಯೊಂದರಲ್ಲಿಯೂ ದಶಮಾಂಶಗಳನ್ನು ಕೊಡಬೇಕೆಂದು ಆತನು ಇಸ್ರಾಯೇಲ್ಯರಿಗೆ ಸೂಚಿಸಿದ್ದನು.
- ಗುಡಾರವನ್ನು ಮತ್ತು ಸ್ವಲ್ಪ ಕಾಲವಾದ ನಂತರ ದೇವಾಲಯವನ್ನು ನೋಡಿಕೊಳ್ಳುತ್ತಾ ಸೇವೆ ಮಾಡುತ್ತಾ, ಯಾಜಕರಾಗಿರುವ ಇಸ್ರಾಯೇಲ್ಯರಿಗೆ ಸೇವೆ ಮಾಡುವ ಇಸ್ರಾಯೇಲ್ ಕುಲವಾದ ಲೇವಿಗೆ ಬೆಂಬಲ ಕೊಡುವುದಕ್ಕೆ ಈ ಅರ್ಪಣೆಯನ್ನು ಉಪಯೋಗಿಸುತ್ತಿದ್ದರು.
- ಹೊಸ ಒಡಂಬಡಿಕೆಯಲ್ಲಿ ದೇವರಿಗೆ ದಶಮಾಂಶಗಳನ್ನು ಕೊಡುವ ಅವಶ್ಯಕತೆಯಿದ್ದಿಲ್ಲ, ಆದರೆ ಕ್ರೈಸ್ತ ಸೇವೆಯ ಕೆಲಸವನ್ನು ಬಲಪಡಿಸುವುದಕ್ಕೆ ಮತ್ತು ಅಗತ್ಯತೆಯಲ್ಲಿರುವ ಜನರಿಗೆ ಧಾರಾಳವಾಗಿ, ಸಂತೋಷವಾಗಿ ಸಹಾಯ ಮಾಡಬೇಕೆಂದು ವಿಶ್ವಾಸಿಗಳಿಗೆ ಆಜ್ಞಾಪಿಸಿದ್ದಾರೆ.
- ಇದನ್ನು “ಹತ್ತನೆಯ ಭಾಗ” ಅಥವಾ “ಹತ್ತರಲ್ಲಿ ಒಂದು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ನಂಬು, ಇಸ್ರಾಯೇಲ್, ಲೇವಿ, ಕುರಿದನಗಳು, ಮೆಲ್ಕಿಚೆದೆಕ, ಹೋಮ, ಗುಡಾರ, ದೇವಾಲಯ)

ಸತ್ಯವೇದದ ಅನುಬಂಧ ವಾಕ್ಯಗಳು :

- ಆದಿ.14:19-20
- ಆದಿ.28:20-22
- ಇಬ್ರಿ.07:4-6
- ಯೆಶಯಾ.06:13
- ಲೂಕ.11:42
- ಲೂಕ.18:11-12
- ಮತ್ತಾಯ.23:23-24

ಪದ ಡೇಟಾ:

- Strong's: H4643, H6237, H6241, G586, G1181, G1183

ಹತ್ತು ಆಜ್ಞೆಗಳು

ಸತ್ಯಾಂಶಗಳು:

“ಹತ್ತು ಆಜ್ಞೆಗಳು” ಎಂದರೆ ಇಸ್ರಾಯೇಲ್ಯರು ಕಾನಾನ್ ಭೂಮಿಗೆ ಹೋಗುವ ಪ್ರಯಾಣದಲ್ಲಿ ಅವರು ಅರಣ್ಯದಲ್ಲಿರುವಾಗ ಸೀನಾಯಿ ಬೆಟ್ಟದ ಮೇಲೆ ದೇವರು ಮೋಶೆಗೆ ಕೊಟ್ಟಿರುವ ಆಜ್ಞೆಗಳಾಗಿದ್ದವು. ದೇವರು ಈ ಆಜ್ಞೆಗಳನ್ನು ಎರಡು ದೊಡ್ಡ ಶಿಲಾಶಾಸನಗಳ ಮೇಲೆ ಬರೆದಿದ್ದರು.

- ಇಸ್ರಾಯೇಲ್ಯರು ವಿಧೇಯತೆ ತೋರಿಸುವುದಕ್ಕೆ ದೇವರು ಆವರಿಗೆ ಅನೇಕ ಆಜ್ಞೆಗಳನ್ನು ಕೊಟ್ಟಿದ್ದರು, ಆದರೆ ಇಸ್ರಾಯೇಲ್ಯರು ದೇವರನ್ನು ಆರಾಧಿಸುವುದಕ್ಕೆ, ಪ್ರೀತಿಸುವುದಕ್ಕೆ ಮತ್ತು ಇತರ ಜನರನ್ನು ಪ್ರೀತಿ ಮಾಡುವುದಕ್ಕೆ ಸಹಾಯ ಮಾಡಲು ಹತ್ತು ಆಜ್ಞೆಗಳು ತುಂಬಾ ವಿಶೇಷವಾಗಿದ್ದವು.
- ಈ ಆಜ್ಞೆಗಳು ದೇವರು ತನ್ನ ಜನರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಲ್ಲಿಯೂ ಭಾಗವಾಗಿದ್ದವು. ಅವರು ಏನು ಮಾಡಬೇಕೆಂದು ದೇವರು ಆಜ್ಞಾಪಿಸಿದ್ದಾರೋ ಅವುಗಳಿಗೆ ವಿಧೇಯತೆಯನ್ನು ತೋರಿಸುವುದರ ಮೂಲಕ, ಇಸ್ರಾಯೇಲ್ ಜನರು ದೇವರನ್ನು ಪ್ರೀತಿಸುತ್ತಿದ್ದಾರೆಂದು ಮತ್ತು ಆತನಿಗೆ ಸಂಬಂಧಪಟ್ಟವರಾಗಿರುತ್ತಾರೆಂದು ತೋರಿಕೆಯಾಗುತ್ತದೆ.
- ಶಿಲಾಶಾಸನಗಳ ಮೇಲೆ ಬರೆಯಲ್ಪಟ್ಟಿರುವ ಆಜ್ಞೆಗಳನ್ನು ಒಡಂಬಡಿಕೆಯ ಮಂಜೂಷದ ಮೇಲೆ ಇಟ್ಟಿದ್ದರು, ಈ ಮಂಜೂಷವನ್ನು ಗುಡಾರದಲ್ಲಿ ಅತೀ ಪರಿಶುದ್ಧ ಸ್ಥಳದಲ್ಲಿ ಇಟ್ಟಿದ್ದರು ಮತ್ತು ಇದಾದನಂತರ, ದೇವಾಲಯದಲ್ಲಿ ಇಟ್ಟಿದ್ದರು.

(ಈ ಪದಗಳನ್ನು ಸಹ ನೋಡಿರಿ : ಒಡಂಬಡಿಕೆಯ ಮಂಜೂಷ, ಆಜ್ಞೆ, ಒಡಂಬಡಿಕೆ, ಅರಣ್ಯ, ಧರ್ಮಶಾಸ್ತ್ರ, ವಿಧೇಯತೆ ತೋರಿಸು, ಸೀನಾಯಿ, ಆರಾಧನೆ)

ಸತ್ಯವೇದದ ಅನುಬಂಧ ವಾಕ್ಯಗಳು :

- ಧರ್ಮೋ.04:13-14
- ಧರ್ಮೋ.10:3-4
- ವಿಮೋ.34:27-28
- ಲೂಕ.18:18-21

ಸತ್ಯವೇದದಿಂದ ಉದಾಹರಣೆಗಳು:

- **13:07** ದೇವರು ಎರಡು ಶಿಲಾಶಾಸನಗಳ ಮೇಲೆ ಈ _ ಹತ್ತು ಆಜ್ಞೆಗಳನ್ನು _ ಬರೆದು, ಮೋಶೆಗೆ ಅವುಗಳನ್ನು ಕೊಟ್ಟನು.
- **13:13** ಮೋಶೆಯು ಪರ್ವತದಿಂದ ಕೆಳಗೆ ಇಳಿದು ಬಂದಾಗ, ಇಸ್ರಾಯೇಲ್ಯರು ಇಟ್ಟುಕೊಂಡಿರುವ ಪ್ರತಿಮೆಯನ್ನು ನೋಡಿ, ತುಂಬಾ ಕೋಪಗೊಂಡು, ದೇವರು ಬರೆದು ಕೊಟ್ಟಿರುವ _ ಹತ್ತು ಆಜ್ಞೆಗಳ _ ಶಿಲಾಶಾಸನಗಳನ್ನು ತುಂಡು ತುಂಡುಗಳಾಗಿ ಮಾಡಿದನು.
- **13:15** ಮೋಶೆ ಮುರಿದ ಶಿಲಾಶಾಸನಗಳಿಗೆ ಬದಲಾಗಿ, ಹೊಸ ಶಿಲಾಶಾಸನಗಳ ಮೇಲೆ_ ಹತ್ತು ಆಜ್ಞೆಗಳನ್ನು _ ತಿರುಗಿ ಬರೆದನು.

ಪದ ಡೇಟಾ:

- Strong's: H1697, H6235

ಹದ್ದು, ಹದ್ದುಗಳು

ಪದದ ಅರ್ಥವಿವರಣೆ

ಹದ್ದು ಶಕ್ತಿವಂತವಾದ ದೊಡ್ಡ ಪಕ್ಷಿ, ಅದು ಮೀನು, ಇಲಿ, ಹಾವು, ಮತ್ತು ಕೋಳಿಯಂತಹ ಸಣ್ಣ ಪ್ರಾಣಿಗಳನ್ನು ಆಹಾರವಾಗಿ ತಿನ್ನುತ್ತದೆ.

- ಹದ್ದು ಯಾವ ರೀತಿಯಲ್ಲಿ ಬೇಗನೆ ಮತ್ತು ಅಕಸ್ಮಾತಾಗಿ ತನ್ನ ಆಹಾರವನ್ನು ಎತ್ತಿಕೊಂಡು ಹೋಗುವುದು ಅದನ್ನು ಸತ್ಯವೇದದಲ್ಲಿ ಒಂದು ಸೈನ್ಯದ ಬಲ ಮತ್ತು ವೇಗಕ್ಕೆ ಹೋಲಿಸಲಾಗಿದೆ.
- ಯೆಹೋವನನ್ನು ನಿರೀಕ್ಷಿಸುವವರೋ ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು ಏರುವರು ಎಂದು ಯೆಶಯ ಹೇಳಿದ್ದಾನೆ. ಇದು ದೇವರನ್ನು ನಂಬಿದವರಿಗೆ ಮತ್ತು ಆತನಿಗೆ ವಿಧೇಯರಾಗಿದ್ದವರಿಗೆ ಸಿಗುವ ಸ್ವಾತಂತ್ರ ಮತ್ತು ಬಲವನ್ನು ಸೂಚಿಸುವ ಅಲಂಕಾರಿಕ ಭಾಷೆಯಾಗಿದೆ.
- ದಾನಿಯೇಲ್ ಪುಸ್ತಕದಲ್ಲಿ, ನೆಬುಕದ್ನೆಚರನ ಕೂದಲಿನ ಉದ್ದವನ್ನು ಹದ್ದಿನ ಗರಿಗಳ ಉದ್ದಕ್ಕೆ ಹೋಲಿಸಲಾಗಿದೆ, ಅವು 50 ಸೆಂಟಿಮೀಟರುಗಳಿಗಿಂತ ಉದ್ದವಾಗಿರುತ್ತವೆ.

(ಈ ಪದಗಳನ್ನು ಸಹ ನೋಡಿರಿ : ದಾನಿಯೇಲ್, ಉಚಿತ, ನೆಬುಕದ್ನೆಚರ್, ಬಲ)

(ಈ ಪದಗಳನ್ನು ಸಹ ನೋಡಿರಿ : ಗೊತ್ತಿಲ್ಲದ ವಿಷಯಗಳನ್ನು ಹೇಗೆ ಅನುವಾದ ಮಾಡಬೇಕು)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಸಮು.01:23-24
- ದಾನಿ.07:4-5
- ಯೆರೆ.04:13-15
- ಯಾಜಕ.11:13-16
- ಪ್ರಕಟನೆ.04:7-8

ಪದ ಡೇಟಾ:

- Strong's: H5403, H5404, H7360, G105

ಹಬ್ಬ, ಹಬ್ಬಗಳು

ಪದದ ಅರ್ಥವಿವರಣೆ:

ಸಾಧಾರಣವಾಗಿ ಹಬ್ಬ ಎನ್ನುವುದು ಸಮುದಾಯದಲ್ಲಿರುವ ಜನರಿಂದ ಆಚರಿಸಲ್ಪಡುತ್ತದೆ.

- ಹಳೇ ಒಡಂಬಡಿಕೆಯಲ್ಲಿ "ಹಬ್ಬ" ಎನ್ನುವ ಪದಕ್ಕೆ "ನೇಮಿಸಲ್ಪಟ್ಟ ಸಮಯ" ಎಂದು ಅಕ್ಷರಾರ್ಥವಿದೆ.
- ಇಸ್ರಾಯೇಲ್ಯರು ಆಚರಿಸುವ ಹಬ್ಬಗಳು ವಿಶೇಷವಾಗಿ ನೇಮಿಸಲ್ಪಟ್ಟ ಸಮಯಗಳು ಅಥವಾ ಕಾಲಗಳು ಆಗಿರುತ್ತವೆ, ಇವುಗಳನ್ನು ಆಚರಿಸಬೇಕೆಂದು ದೇವರು ಅವರಿಗೆ ಆಜ್ಞಾಪಿಸಿದ್ದರು.
- ಕೆಲವೊಂದು ಆಂಗ್ಲ ಅನುವಾದಗಳಲ್ಲಿ ಹಬ್ಬ ಎನ್ನುವ ಪದವನ್ನು ಉಪಯೋಗಿಸುವುದಕ್ಕೆ ಬದಲಾಗಿ "ಔತಣ" ಎಂದು ಉಪಯೋಗಿಸಿದ್ದಾರೆ, ಯಾಕಂದರೆ ಆಚರಿಸುವ ಹಬ್ಬಗಳಲ್ಲಿ ಎಲ್ಲರು ಸೇರಿ ಊಟ ಮಾಡುವ ಕಾರ್ಯಕ್ರಮವು ಇರುತ್ತದೆ.
- ಪ್ರತೀ ವರ್ಷ ಇಸ್ರಾಯೇಲ್ಯರು ಆಚರಿಸುವ ಅನೇಕ ಮುಖ್ಯ ಹಬ್ಬಗಳಿವೆ:
- ಪಸ್ಕ
- ಹುಳಿಯಿಲ್ಲದ ರೊಟ್ಟಿಯ ಹಬ್ಬ
- ಪ್ರಥಮ ಫಲಗಳು
- ವಾರಗಳ ಹಬ್ಬ (ಪಂಚಾಶತ್ತಮ)
- ತುತೂರಿಗಳ ಹಬ್ಬ
- ಪಾಪ ಪರಿಹಾರಕ ದಿನ
- ಗುಡಾರಗಳ ಹಬ್ಬ
- ಈ ಎಲ್ಲಾ ಹಬ್ಬಗಳ ಉದ್ದೇಶವು ದೇವರಿಗೆ ವಂದನೆಗಳನ್ನು ಸಲ್ಲಿಸುವುದು ಮತ್ತು ತನ್ನ ಜನರನ್ನು ರಕ್ಷಿಸಿದ, ಸಂರಕ್ಷಿಸಿದ, ಮತ್ತು ಅವರಿಗೆ ಅನುಗ್ರಹಿಸಿದ ಅನೇಕ ಅದ್ಭುತ ಕಾರ್ಯಗಳನ್ನು ನೆನಪಿಸಿಕೊಳ್ಳುವುದು ಆಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಔತಣ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.23:30-31
- 2 ಪೂರ್ವ.08:12-13
- ವಿಮೋ.05:1-2
- ಯೋಹಾನ.04:43-45
- ಲೂಕ.22:1-2

ಪದ ಡೇಟಾ:

- Strong's: H1974, H2166, H2282, H2287, H6213, H4150, G1456, G1858, G1859

ಹಸ್ತ, ಹಸ್ತಗಳು, ಕೈಗೆ ಕೊಡಲ್ಪಟ್ಟಿದೆ, ಹಸ್ತಾಂತರ, ಹಸ್ತದಿಂದ, ಮೇಲೆ ಹಸ್ತವನ್ನಿಡು, ಮೇಲೆ ತನ್ನ ಹಸ್ತವನ್ನಿಡುವುದು, ಬಲಗೈ, ನೀತಿ ಹಸ್ತಗಳು, ಹಸ್ತದಿಂದ

ಪದದ ಅರ್ಥವಿವರಣೆ:

ಸತ್ಯವೇದದಲ್ಲಿ "ಹಸ್ತ" ಎನ್ನುವ ಪದವನ್ನು ಅನೇಕವಾದ ಅಲಂಕಾರಿಕ ವಿಧಾನಗಳಲ್ಲಿ ಉಪಯೋಗಿಸಲಾಗಿರುತ್ತದೆ.

- ಒಬ್ಬರಿಗೆ "ಕೈಯನ್ನು" ಕೊಡುವುದು ಎನ್ನುವುದಕ್ಕೆ ಒಬ್ಬರ ಕೈಗಳಲ್ಲಿ ಏನಾದರೊಂದನ್ನು ಕೊಡುವುದು ಎನ್ನುವ ಅರ್ಥ ಬರುತ್ತದೆ.
- "ಹಸ್ತ" ಎನ್ನುವ ಪದವು ದೇವರ ಶಕ್ತಿಯನ್ನು ಮತ್ತು ಆತನ ಕಾರ್ಯವನ್ನು ಸೂಚಿಸುವುದರಲ್ಲಿ ಅನೇಕಬಾರಿ ಉಪಯೋಗಿಸಲ್ಪಟ್ಟಿದೆ, "ಈ ಎಲ್ಲಾ ಕಾರ್ಯಗಳನ್ನು ನನ್ನ ಹಸ್ತವು ಮಾಡಲಿಲ್ಲವೋ?" ಎಂದು ದೇವರು ಹೇಳಿದ ಸಂದರ್ಭಗಳಿವೆ. (ನೋಡಿರಿ: ಲಾಕ್ಷಣಿಕ ಪ್ರಯೋಗ)
- "ಕೈಗೆ ಒಪ್ಪಿಸಲಾಗಿದೆ" ಅಥವಾ "ಕೈಗಳಲ್ಲಿ ಇಡಲಾಗಿದೆ" ಎನ್ನುವ ಮಾತುಗಳು ಒಬ್ಬರ ಶಕ್ತಿಯ ಕೆಳಗೆ ಅಥವಾ ನಿಯಂತ್ರಣದ ಕೆಳಗೆ ಇನ್ನೊಬ್ಬರನ್ನಿರಿಸುವುದನ್ನು ಸೂಚಿಸುತ್ತದೆ.
- "ಹಸ್ತ" ಎನ್ನುವ ಪದವನ್ನು ಅಲಂಕಾರಿಕವಾಗಿ ಉಪಯೋಗಿಸಿದ ಕೆಲವೊಂದು ಉದಾಹರಣೆಗಳು:
- "ಮೇಲೆ ಹಸ್ತವನ್ನಿಡು" ಎನ್ನುವದಕ್ಕೆ " ಹಾನಿ ಮಾಡುವುದು" ಎಂದರ್ಥ.
- "ಅವನ ಹಸ್ತದಿಂದ ರಕ್ಷಿಸು" ಎನ್ನುವ ಮಾತಿಗೆ ಇನ್ನೊಬ್ಬರನ್ನು ಹಾನಿ ಮಾಡುವುದರಿಂದ ಒಬ್ಬರನ್ನು ರಕ್ಷಿಸು ಎಂದರ್ಥ.
- "ಬಲಗೈ ಮೇಲೆ" ಇರುವ ಸ್ಥಾನ ಎನ್ನುವದಕ್ಕೆ "ಬಲಗಡೆಯಲ್ಲಿರುವುದು" ಅಥವಾ "ಬಲ ಬದಿಗೆ" ಎಂದರ್ಥ.
- ಇನ್ನೊಬ್ಬರ "ಹಸ್ತದಿಂದ" ಎನ್ನುವ ಮಾತಿಗೆ ಒಬ್ಬ ವ್ಯಕ್ತಿಯ ಕ್ರಿಯೆಯ "ಮೂಲಕ" ಅಥವಾ ಕ್ರಿಯೆ "ದಿಂದ" ಎಂದರ್ಥ. ಉದಾಹರಣೆಗೆ, "ಕರ್ತನ ಹಸ್ತದಿಂದ" ಎನ್ನುವ ಮಾತಿಗೆ ಏನಾದರೊಂದು ಮಾಡುವುದಕ್ಕೆ ಕರ್ತನೊಬ್ಬನೇ ಎಂದರ್ಥ.
- ಒಬ್ಬರ ಮೇಲೆ ಹಸ್ತಗಳನ್ನಿಡುವುದೆನ್ನುವುದು ಅನೇಕಬಾರಿ ಆ ವ್ಯಕ್ತಿಯನ್ನು ಆಶೀರ್ವಾದ ಮಾಡುವಾಗ ಮಾಡುವ ಕ್ರಿಯೆಯಾಗಿರುತ್ತದೆ.
- "ಹಸ್ತಗಳನ್ನಿಡುವುದು" ಎನ್ನುವ ಮಾತು ಸ್ವಸ್ಥತೆಗಾಗಿ ಪ್ರಾರ್ಥನೆ ಮಾಡುವುದಕ್ಕೆ ಅಥವಾ ದೇವರ ಸೇವೆಗೆ ಒಬ್ಬ ವ್ಯಕ್ತಿಯನ್ನು ಪ್ರತಿಷ್ಠೆ ಮಾಡುವ ಕ್ರಮದಲ್ಲಿ ಆ ವ್ಯಕ್ತಿಯ ಮೇಲೆ ಹಸ್ತಗಳನ್ನಿಡುವುದನ್ನು ಸೂಚಿಸುತ್ತದೆ.
- "ನನ್ನ ಹಸ್ತಗಳಿಂದ ಬರೆಯುತ್ತಿದ್ದೇನೆ" ಎಂದು ಪೌಲನು ಹೇಳಿದಾಗ, ಆ ಮಾತಿಗೆ ಈ ಪತ್ರವನ್ನು ನಾನು ಹೇಳುತ್ತಿರುವಾಗ ಇನ್ನೊಬ್ಬರು ಬರೆಯದೇ, ನನ್ನ ಸ್ವಂತ ಹಸ್ತಗಳಿಂದ ಬರೆಯಲ್ಪಟ್ಟಿದೆ ಎಂದರ್ಥ,

ಅನುವಾದ ಸಲಹೆಗಳು:

- ಈ ಮಾತುಗಳು ಮತ್ತು ಇತರ ಅಲಂಕಾರಿಕ ಹೇಳಿಕೆಗಳು ಒಂದೇ ಅರ್ಥ ಬರುವ ಇತರ ಅಲಂಕಾರಿಕ ಮಾತುಗಳನ್ನು ಉಪಯೋಗಿಸಿ ಅನುವಾದ ಮಾಡಬಹುದು. ಅಥವಾ ಅರ್ಥವನ್ನು ನೇರವಾದ, ಅಕ್ಷರಾರ್ಥ ಭಾಷೆಯನ್ನೂ ಉಪಯೋಗಿಸಿ ಅನುವಾದ ಮಾಡಬಹುದು (ಉದಾಹರಣೆಗಳನ್ನು ಮೇಲೆ ನೋಡಿರಿ).
- "ಅವನಿಗೆ ಗ್ರಂಥದ ಸುರಳಿಯನ್ನು ಕೊಡಲಾಗಿದೆ" ಎನ್ನುವ ಮಾತಿಗೆ "ಸುರಳಿಯನ್ನು ಅವನಿಗೆ ಕೊಡಲಾಗಿದೆ" ಅಥವಾ "ಅವನ ಕೈಯಲ್ಲಿ ಸುರಳಿಯನ್ನಿಡು" ಎಂದೂ ಅನುವಾದ ಮಾಡಬಹುದು. ಅದನ್ನು ಅವನಿಗೆ ಶಾಶ್ವತವಾಗಿ ಕೊಡಲ್ಪಟ್ಟಿಲ್ಲ, ಆದರೆ ಆ ಸಮಯದಲ್ಲಿ ಅದನ್ನು ಉಪಯೋಗಿಸುವುದರ ಉದ್ದೇಶಕ್ಕಾಗಿ ಕೊಡಲ್ಪಟ್ಟಿರುತ್ತದೆ.
- " "ದೇವರ ಹಸ್ತವು ಇದನ್ನು ಮಾಡಿದೆ" ಎನ್ನುವ ಮಾತಿನಲ್ಲಿರುವಂತೆ ಹಸ್ತ" ಎನ್ನುವ ಪದವು ಒಬ್ಬ ವ್ಯಕ್ತಿಗೆ ಸೂಚಿಸಿದಾಗ, ಇದನ್ನು "ಇದನ್ನು ದೇವರು ಮಾಡಿದ್ದಾನೆ" ಎಂದು ಅನುವಾದ ಮಾಡಿದ್ದಾನೆ.
- "ಅವರ ಶತ್ರುಗಳ ಹಸ್ತಗಳಿಗೆ ಅವರನ್ನು ಒಪ್ಪಿಸಲಾಗಿದೆ" ಅಥವಾ "ಅವರ ಶತ್ರುಗಳಿಗೆ ಅವರನ್ನು ಕೈವಶಮಾಡಲಾಗಿದೆ" ಎನ್ನುವ ಮಾತುಗಳನ್ನು "ಅವರನ್ನು ಜಯಿಸುವುದಕ್ಕೆ ಅವರ ಶತ್ರುಗಳಿಗೆ ಅನುಮತಿ ಕೊಡಿರಿ" ಅಥವಾ "ಅವರ ಶತ್ರುಗಳಿಂದ ಅವರೆಲ್ಲರು ಸೆರೆಗೊಯ್ಯುವಂತೆ ಕಾರಣವಾಗಿರಿ" ಅಥವಾ "ಅವರ ಮೇಲೆ ನಿಯಂತ್ರಣವನ್ನು ತೆಗೆದುಕೊಳ್ಳಲು ಅವರ ಶತ್ರುಗಳನ್ನು ಬಲಪಡಿಸಿರಿ" ಎಂದೂ ಅನುವಾದ ಮಾಡಬಹುದು.
- "ಅವರ ಹಸ್ತದಿಂದ ಸಾಯುವುದು" ಎನ್ನುವ ಮಾತನ್ನು "ಅವರಿಂದ ಕೊಲ್ಲಲ್ಪಡುವುದು" ಎಂದರ್ಥ.
- "ಅವರ ಬಲಗೈ ಮೇಲೆ" ಎನ್ನುವ ಮಾತನ್ನು "ಅವರ ಬಲ ಬದಿಗೆ" ಎಂದೂ ಅನುವಾದ ಮಾಡಬಹುದು.
- ಯೇಸು "ದೇವರ ಬಲಗಡೆಯಲ್ಲಿ ಆಸೀನನಾಗಿರುವನು" ಎನ್ನುವ ಮಾತಿಗೆ ಸಂಬಂಧಪಟ್ಟು, ಒಂದು ವೇಳೆ ಈ ಮಾತು ಸಮಾನ ಅಧಿಕಾರ ಮತ್ತು ಉನ್ನತ ಗೌರವ ಸ್ಥಾನ ಎನ್ನುವ ಅರ್ಥ ಅನುವಾದ ಭಾಷೆಯಲ್ಲಿ ಬರದಿದ್ದರೆ, ಆ ಅರ್ಥ ಬರುವ ಬೇರೊಂದು ಮಾತನ್ನು ಉಅಪಯೋಗಿಸಬಹುದು. ಅಥವಾ ಒಂದು ಚಿಕ್ಕ ವಿವರಣೆಯನ್ನು ಜೋಡಿಸಿ ಹೇಳಬಹುದು: "ದೇವರ ಬಲಗಡೆಯಲ್ಲಿ, ಅತ್ಯುನ್ನತ ಅಧಿಕಾರದ ಸ್ಥಾನದಲ್ಲಿ ಆಸೀನನಾಗಿರುವನು" ಎಂದು ಹೇಳಬಹುದು.

(ಈ ಪದಗಳನ್ನು ಸಹ ನೋಡಿರಿ : ವಿರೋಧಿ, ಆಶೀರ್ವದಿಸು, ಸೆರೆ, ಘನಪಡಿಸು, ಶಕ್ತಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:22-25
- ಅಪೊ.ಕೃತ್ಯ.08:14-17
- ಅಪೊ.ಕೃತ್ಯ.11:19-21
- ಆದಿ.09:5-7

- ಆದಿ.14:19-20
- ಯೋಹಾನ.03:34-36
- ಮಾರ್ಕ.07:31-32
- ಮತ್ತಾಯ.06:3-4

ಪದ ಡೇಟಾ:

- Strong's: H405, H2026, H2651, H2947, H2948, H3027, H3028, H3225, H3231, H3233, H3709, H7126, H7138, H8040, H8042, H8168, G710, G1188, G1448, G1451, G1764, G2021, G2092, G2176, G2902, G4084, G4474, G4475, G5495, G5496, G5497

ಹಾಳು ಮಾಡು, ವಿನಾಶ, ಹಾಳುಬಿದ್ದ

ಪದದ ಅರ್ಥವಿವರಣೆ:

“ಹಾಳುಮಾಡು” ಮತ್ತು “ವಿನಾಶ” ಎನ್ನುವ ಪದಗಳು ಜನರು ನಿವಾಸವಾಗಿರುವ ಪ್ರಾಂತ್ಯಗಳನ್ನು ನಾಶಗೊಳಿಸುವುದನ್ನು ಸೂಚಿಸುತ್ತವೆ, ಇದರಿದ ಅವು ವಾಸಯೋಗ್ಯವಲ್ಲದ ಪ್ರಾಂತ್ಯಗಳಾಗಿ ಮಾರ್ಪಡುತ್ತವೆ.

- ಈ ಪದವನ್ನು ಒಬ್ಬ ವ್ಯಕ್ತಿಗೆ ಸೂಚಿಸಿದಾಗ, “ಹಾಳುಮಾಡು” ಎನ್ನುವ ಪದವು ಪ್ರಲಾಪವನ್ನು, ಒಬ್ಬಂಟಿಗತನವನ್ನು, ನಾಶವಾದ ಸ್ಥಿತಿಯನ್ನು ವಿವರಿಸುತ್ತದೆ.
- “ವಿನಾಶ” ಎನ್ನುವ ಪದವು ನಾಶವಾಗಿರುವ ಸ್ಥಿತಿಯನ್ನು ಸೂಚಿಸುತ್ತದೆ.
- ಹೊಲಗದ್ದೆಗಳಲ್ಲಿ ಬೆಳೆಯುತ್ತಿರುವ ಬೆಳೆಗಳು ನಾಶವಾದರೆ, ಈ ಬೆಳೆಗಳನ್ನು ನಾಶಪಡಿಸಿದ್ದು ಯಾವುದಾದರೊಂದು ಅಂದರೆ ಕ್ರಿಮಿ ಕೀಟಗಳು ಅಥವಾ ಆಕ್ರಮಣಕಾರಿ ಸೈನ್ಯ ಇರುತ್ತದೆ ಎಂದರ್ಥ.
- “ಹಾಳುಬಿದ್ದ ಪ್ರಾಂತ್ಯವು” ಅತೀ ಕಡಿಮೆ ಜನರು ನಿವಾಸವಾಗಿರುವ ಪ್ರಾಂತ್ಯವನ್ನು ಸೂಚಿಸುತ್ತದೆ, ಯಾಕಂದರೆ ಅಲ್ಲಿ ಕೇವಲ ಕೆಲವೊಂದು ಬೆಳೆಗಳನ್ನು ಅಥವಾ ಇತರ ತರಕಾರಿ ಬೆಳೆಗಳನ್ನು ಬೆಳೆಸುತ್ತಾರೆ.
- “ಹಾಳುಬಿದ್ದ ಪ್ರಾಂತ್ಯ” ಅಥವಾ “ಬಂಜರಿ ಭೂಮಿ” ಎನ್ನುವ ಪದಗಳು ಅನೇಕಬಾರಿ ಹೊರ ಹಾಕಿದ ಜನರು (ಕುಷ್ಟು ರೋಗಿಗಳಾಗಿರುವ ಜನರನ್ನು) ಮತ್ತು ಅಪಾಯಕರವಾದ ಪ್ರಾಣಿಗಳು ನಿವಾಸ ಮಾಡುವ ಸ್ಥಳವನ್ನು ಸೂಚಿಸುತ್ತದೆ.
- ಒಂದುವೇಳೆ ಪಟ್ಟಣವನ್ನು “ಹಾಳು ಮಾಡಲ್ಪಟ್ಟಿದೆ” ಎಂದಾಗ ಅದರಲ್ಲಿರುವ ಭವನಗಳು ಮತ್ತು ವಸ್ತುಗಳು ನಾಶಗೊಳಿಸಲ್ಪಟ್ಟಿವೆ ಅಥವಾ ಕದಿಯಲ್ಪಟ್ಟಿವೆ ಎಂದರ್ಥ ಮತ್ತು ಆ ಪಟ್ಟಣದಲ್ಲಿರುವ ಜನರನ್ನು ಕೊಂದಿದ್ದಾರೆ ಅಥವಾ ಸೆರೆಗೆ ಹೊಯ್ಯಲ್ಪಟ್ಟಿದ್ದಾರೆ ಎಂದರ್ಥ. ಆ ಪಟ್ಟಣವು “ಖಾಲಿ” ಆಗುತ್ತದೆ ಮತ್ತು “ನಾಶವಾಗುತ್ತದೆ”. “ವಿನಾಶಕಾರಿ” ಅಥವಾ “ವಿನಾಶ ಮಾಡಲ್ಪಟ್ಟಿದೆ” ಎನ್ನುವ ಪದಗಳಿಗೆ ಸಮಾನಾರ್ಥಕವಾದ ಪದವಾಗಿರುತ್ತದೆ, ಆದರೆ ಖಾಲಿಯಾಗಿರುವುದರ ಮೇಲೆ ಹೆಚ್ಚಿನ ಒತ್ತು ಇರುತ್ತದೆ.
- ಸಂದರ್ಭಕ್ಕೆ ತಕ್ಕಂತೆ, ಈ ಪದವನ್ನು “ನಾಶಮಾಡಲಾಗಿದೆ” ಅಥವಾ “ವಿನಾಶವಾಗಿದೆ” ಅಥವಾ “ವ್ಯರ್ಥ ಸ್ಥಳದಂತೆ ಮಾಡಲಾಗಿದೆ” ಅಥವಾ “ಒಂಟಿಯಾಗಿ ಮತ್ತು ಬಹಿಷ್ಕೃತ ಮಾಡಲಾಗಿದೆ” ಅಥವಾ “ಬಂಜರುಗೊಳಿಸಲಾಗಿದೆ” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಮರುಭೂಮಿ, ವಿನಾಶ, ನಾಶಗೊಳಿಸು, ವ್ಯರ್ಥ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.22:17-19
- ಅಪೊ.ಕೃತ್ಯ.01:20
- ದಾನಿ.09:17-19
- ಪ್ರಲಾಪ.03:9-11
- ಲೂಕ.11:16-17
- ಮತ್ತಾಯ.12:24-25

ಪದ ಡೇಟಾ:

- Strong's: H490, H816, H820, H910, H1327, H1565, H2717, H2720, H2721, H2723, H3173, H3341, H3456, H3582, H4875, H4876, H4923, H5352, H5800, H7582, H7612, H7701, H7722, H8047, H8074, H8076, H8077, G2048, G2049, G2050, G3443

ಹಾಳು, ಹಾಳುಮಾಡುವುದು, ಹಾಳು ಮಾಡಿದೆ, ಹಾಳು ಮಾಡುತ್ತಿರುವುದು, ಹಾಳು ಭೂಮಿ, ಹಾಳು ಭೂಮಿಗಳು

ಪದದ ಅರ್ಥವಿವರಣೆ:

ಯಾವುದಾದರೊಂದನ್ನು ಹಾಳು ಮಾಡುವುದು ಎಂದರೆ ಇದನ್ನು ಯಾವ ಆಲೋಚನೆಯಿಲ್ಲದೆ ಬಿಸಾಡುವುದು ಅಥವಾ ಅಜ್ಞಾನವನ್ನು ಇದನ್ನು ಉಪಯೋಗಿಸುವುದು ಎಂದರ್ಥ. "ಹಾಳು ಭೂಮಿ" ಅಥವಾ "ಹಾಳು" ಮಾಡಲ್ಪಟ್ಟಿರುವುದು ಎನ್ನುವ ಪದಗಳು ನಾಶ ಮಾಡಲ್ಪಟ್ಟ ಪಟ್ಟಣವನ್ನು ಅಥವಾ ಭೂಮಿಯನ್ನು ಸೂಚಿಸುತ್ತದೆ, ಆದ್ದರಿಂದ ಅಂಥಹ ಪಟ್ಟಣದಲ್ಲಿ ಇನ್ನಾವುದೂ ಜೀವಿಸುವುದಿಲ್ಲ.

- "ಹಾಳಾಗುವುದು" ಎನ್ನುವ ಮಾತಿಗೆ ಇನ್ನೂ ಹೆಚ್ಚಚ್ಚಾಗಿ ರೋಗದಿಂದ ನರಳುವುದು ಅಥವಾ ನಾಶವಾಗುತ್ತಿರುವುದು ಎಂದರ್ಥವಾಗಿರುತ್ತದೆ. ಹಾಳಾಗುತ್ತಿರುವ ಒಬ್ಬ ವ್ಯಕ್ತಿ ಸಾಧಾರಣವಾಗಿ ಆಹಾರವಿಲ್ಲದ ಕಾರಣದಿಂದ ಅಥವಾ ರೋಗದ ಕಾರಣದಿಂದ ತುಂಬಾ ತೆಳುವಾಗುತ್ತಿರುತ್ತಾನೆ.
- ಪಟ್ಟಣವನ್ನು ಅಥವಾ ಒಂದು ಸ್ಥಳವನ್ನು "ಹಾಳು ಮಾಡು" ಎನ್ನುವ ಮಾತಿಗೆ ಅದನ್ನು ನಾಶಮಾಡು ಎಂದರ್ಥ.
- "ಹಾಳುಭುಉಮಿ" ಎನ್ನುವ ಪದಕ್ಕೆ ಇನ್ನೊಂದು ಪದವು "ಅಡವಿ" ಅಥವಾ "ಅರಣ್ಯ" ಎಂದಾಗಿರುತ್ತದೆ. ಆದರೆ ಹಾಳುಭೂಮಿಯು ಅಲ್ಲಿ ನಿವಾಸವಾಗುತ್ತಿರುವ ಜನರನ್ನೂ ಮತ್ತು ಫಲಗಳನ್ನು ಕೊಡುವ ಗಿಡ ಮರಗಳನ್ನು ಹೊಂದಿರುವ ಭೂಮಿಯೆಂದೂ ಸೂಚಿಸಲ್ಪಟ್ಟಿರುತ್ತದೆ.

ಸತ್ಯವೇದದ ಅನುಬಂಧ ವಾಕ್ಯಗಳು :

- ಯೆಹೆ.06:6-7
- ಯಾಜಕ.26:37-39
- ಮತ್ತಾಯ.26:6-9
- ಪ್ರಕ.18:15-17
- ಜೆಕರ್ಯ.07:13-14

ಪದ ಡೇಟಾ:

- Strong's: H535, H1086, H1104, H1110, H1197, H1326, H2100, H2490, H2522, H2717, H2720, H2721, H2723, H3615, H3765, H3856, H4087, H4127, H4198, H4592, H4743, H4875, H5307, H5327, H7334, H7582, H7703, H7722, H7736, H7843, H8047, H8074, H8077, H8414, H8437, G684, G1287, G2049, G2673, G4199

ಹಿಂಡು, ಹಿಂಡುಗಳು, ಸಮೂಹ, ಮಂದೆ, ಮಂದೆಗಳು

ಪದದ ಅರ್ಥವಿವರಣೆ

ಸತ್ಯವೇದದಲ್ಲಿ, "ಹಿಂಡು" ಎನ್ನುವ ಪದವು ಕುರಿಗಳ ಅಥವಾ ಮೇಕೆಗಳ ಗುಂಪನ್ನು ಸೂಚಿಸುತ್ತದೆ ಮತ್ತು "ಮಂದೆ" ಎನ್ನುವ ಪದವು ಜಾನುವಾರು, ಎತ್ತುಗಳು ಅಥವಾ ಹಂದಿಗಳ ಗುಂಪನ್ನು ಸೂಚಿಸುತ್ತದೆ.

- ಪಶುಗಳ ಅಥವಾ ಪಕ್ಷಿಗಳ ಗುಂಪುಗಳಿಗೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಪದಗಳು ಇರುತ್ತವೆ.
- ಉದಾಹರಣೆಗೆ, ಅಂಗ್ಲ ಭಾಷೆಯಲ್ಲಿ "ಮಂದೆ" ಎನ್ನುವ ಪದವನ್ನು ಕುರಿ ಅಥವಾ ಮೇಕೆಗಳ ಗುಂಪಿಗೆ ಉಪಯೋಗಿಸಬಹುದು ಆದರೆ ಸತ್ಯವೇದದ ಸಂಧರ್ಭದಲ್ಲಿ ಆ ರೀತಿಯಲ್ಲಿ ಉಪಯೋಗಿಸುವುದು ಸರಿಯಲ್ಲ.
- "ಹಿಂಡು" ಎನ್ನುವ ಪದವನ್ನು ಅಂಗ್ಲ ಭಾಷೆಯಲ್ಲಿ ಪಕ್ಷಿಗಳ ಗುಂಪಿಗೆ ಉಪಯೋಗಿಸಬಹುದು ಆದರೆ ಅದು ಹಂದಿಗಳು, ಎತ್ತುಗಳು ಅಥವಾ ಜಾನುವಾರುಗಳಿಗೆ ಉಪಯೋಗಿಸಲು ಸಾಧ್ಯವಿಲ್ಲ.
- ನಿಮ್ಮ ಭಾಷೆಯಲ್ಲಿ ಪ್ರಾಣಿಗಳ ಗುಂಪುಗಳನ್ನು ಸೂಚಿಸುವ ಅನೇಕ ಹೆಸರುಗಳನ್ನು ಕುರಿತು ಗಮನಿಸಿರಿ.
- "ಹಿಂಡು ಮತ್ತು ಮಂದೆ" ಎನ್ನುವ ಪದಗಳಿರುವ ವಚನಗಳಲ್ಲಿ "ಕುರಿಗಳ" ಅಥವಾ "ಜಾನುವಾರುದ" ಎಂತ ಪದಗಳನ್ನು ಜೋಡಿಸುವುದು ಉತ್ತಮ, ಉದಾಹರಣೆಗೆ ಒಂದು ಭಾಷೆಯಲ್ಲಿ ಬೇರೆ ಬೇರೆ ಪ್ರಾಣಿಗಳ ಗುಂಪುಗಳಿಗೆ ಬೇರೆ ಬೇರೆ ಹೆಸರುಗಳು ಇಲ್ಲದಿದ್ದರೆ ಈ ರೀತಿ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಮೇಕೆ, ಎತ್ತು, ಹಂದಿ, ಕುರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಅರಸ.10:28-29
- 2 ಪೂರ್ವ.17:10-11
- ಧರ್ಮೋ.14:22-23
- ಲೂಕ.02:8-9
- ಮತ್ತಾಯ.08:30-32
- ಮತ್ತಾಯ.26:30-32

ಪದ ಡೇಟಾ:

- Strong's: H951, H1241, H2835, H4029, H4735, H4830, H5349, H5739, H6251, H6629, H7399, H7462, G34, G4167, G4168

ಹಿಂತಿರುಗಿ, ಹಿಂತಿರುಗುವುದು, ಹಿಂತಿರುಗಿದೆ, ಹಿಂತಿರುಗುತ್ತಾಯಿದೆ

ಪದದ ಅರ್ಥವಿವರಣೆ:

“ಹಿಂತಿರುಗಿ” ಎನ್ನುವ ಪದಕ್ಕೆ ಹಿಂದಕ್ಕೆ ಹೋಗುವುದು ಅಥವಾ ಯಾವುದಾದರೊಂದನ್ನು ಹಿಂದಕ್ಕೆ ಕೊಡುವುದು ಎಂದರ್ಥ.

ಯಾವುದಾದರೊಂದಕ್ಕೆ “ಹಿಂತಿರುಗುವುದು” ಎಂದರೆ ಆ ಕಾರ್ಯವನ್ನು ತಿರುಗಿ ಮಾಡುವುದಕ್ಕೆ ಪ್ರಾರಂಭಿಸುವುದು ಎಂದರ್ಥ. ಒಂದು ಸ್ಥಳಕ್ಕೆ ಅಥವಾ ಒಬ್ಬ ವ್ಯಕ್ತಿಯ ಬಳಿಗೆ “ಹಿಂತಿರುಗುವುದು” ಎಂದರೆ ಆ ಸ್ಥಳಕ್ಕೆ ಅಥವಾ ಆ ವ್ಯಕ್ತಿಯ ಬಳಿಗೆ ಮತ್ತೊಮ್ಮೆ ಹಿಂತಿರುಗಿ ಹೋಗುವುದು ಎಂದರ್ಥವಾಗಿರುತ್ತದೆ.

- ಇಸ್ರಾಯೇಲ್ಯರು ಸುಳ್ಳು ದೇವರುಗಳ ಬಳಿಗೆ ಹಿಂತಿರುಗಿ ಹೋದಾಗ, ಅವರು ಆ ವಿಗ್ರಹಗಳನ್ನು ಆರಾಧಿಸುವುದಕ್ಕೆ ಪ್ರಾರಂಭಿಸಿದರು.
- ಅವರು ಯೆಹೋವನ ಬಳಿಗೆ ಹಿಂತಿರುಗಿ ಬರುವಾಗ, ಅವರು ಪಶ್ಚಾತ್ತಾಪಪಟ್ಟರು ಮತ್ತು ತಿರುಗಿ ಯೆಹೋವನನ್ನು ಆರಾಧನೆ ಮಾಡಿದರು.
- ಇನ್ನೊಬ್ಬರಿಂದ ಪಡೆದುಕೊಂಡ ಅಥವಾ ತೆಗೆದುಕೊಂಡ ವಸ್ತುಗಳನ್ನು ಅಥವಾ ಭೂಮಿಯನ್ನು ಹಿಂತಿರುಗಿಸುವುದು ಎಂದರೆ ಅವುಗಳು ಯಾವ ವ್ಯಕ್ತಿಗೆ ಸಂಬಂಧಪಟ್ಟಿರುತ್ತವೋ ಅವರಿಗೆ ಆ ಆಸ್ತಿಯನ್ನು ಕೊಡುವುದು ಎಂದರ್ಥವಾಗಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ತಿರುಗು)

ಸತ್ಯವೇದದ ಅನುಬಂಧ ವಾಕ್ಯಗಳು :

ಪದ ಡೇಟಾ:

- Strong's: H5437, H7725, H7729, H8421, H8666, G344, G360, G390, G1877, G1880, G1994, G5290

ಹಿಂಸಿಸು, ಹಿಂಸಿಸಿದೆ, ಹಿಂಸಿಸುತ್ತಾ ಇರುವುದು, ಹಿಂಸೆ, ಹಿಂಸೆಗಳು, ಹಿಂಸಕನು, ಹಿಂಸಕರು

ಪದದ ಅರ್ಥವಿವರಣೆ:

“ಹಿಂಸಿಸು” ಮತ್ತು “ಹಿಂಸೆ” ಎನ್ನುವ ಪದಗಳು ಜನರಿಗೆ ಹಾನಿಯನ್ನುಂಟು ಮಾಡುವ ಕಠಿಣ ಮಾರ್ಗದಲ್ಲಿ ಒಂದು ನಿರ್ದಿಷ್ಟವಾದ ಜನರ ಗುಂಪನ್ನು ಅಥವಾ ಒಬ್ಬ ವ್ಯಕ್ತಿಯನ್ನು ನಿರಂತರವಾಗಿ ಹಿಂಸೆಗೆ ಗುರಿ ಮಾಡುತ್ತಿರುವುದನ್ನು ಸೂಚಿಸುತ್ತದೆ.

- ಹಿಂಸೆ ಎನ್ನುವುದು ಒಬ್ಬರಿಗೆ ವಿರುದ್ಧವಾಗಿ ಅಥವಾ ಅನೇಕ ಜನರ ಗುಂಪಿಗೆ ವಿರುದ್ಧವಾಗಿ ಮಾಡುವಂಥದ್ದು ಮತ್ತು ಸಹಜವಾಗಿ ಇದರಲ್ಲಿ ನಿರಂತರವಾಗಿ ದಾಳಿ ಮಾಡುವುದು ಒಳಗೊಂಡಿರುತ್ತದೆ.
- ಇಸ್ರಾಯೇಲ್ಯರು ಅನೇಕ ಗುಂಪುಗಳ ಜನರ ಮೂಲಕ ದಾಳಿ ಮಾಡಲ್ಪಟ್ಟು, ಹಿಂಸೆಸಲ್ಪಟ್ಟಿರುತ್ತದೆ, ಅನೇಕ ವಸ್ತುಗಳನ್ನು ಅವರಿಂದ ಕದಿಯಲ್ಪಟ್ಟಿರುತ್ತದೆ.
- ಜನರು ಅನೇಕಬಾರಿ ವಿಭಿನ್ನವಾದ ಧರ್ಮ ವಿಶ್ವಾಸಗಳನ್ನೊಳಗೊಂಡ ಅಥವಾ ಬಲಹೀನವಾದ ಇತರ ಜನರನ್ನು ಹಿಂಸೆಗೆ ಗುರಿ ಮಾಡಿರುತ್ತಾರೆ.
- ಯೆಹೂದ್ಯ ಧರ್ಮದ ನಾಯಕರು ಯೇಸುವನ್ನು ಹಿಂಸಿಸಿದರು, ಯಾಕಂದರೆ ಆತನು ಬೋಧನೆ ಮಾಡುತ್ತಿರುವುದನ್ನು ಅವರು (ಯೆಹೂದ್ಯರ ನಾಯಕರು) ಇಷ್ಟಪಟ್ಟಿದ್ದಿಲ್ಲ.
- ಯೇಸು ಹಿಂದಿರುಗಿ ಪರಲೋಕಕ್ಕೆ ಹೋದನು, ಯೆಹೂದ್ಯರ ಧರ್ಮದ ನಾಯಕರು ಮತ್ತು ರೋಮಾ ಪ್ರಭುತ್ವವು ಆತನ ಹಿಂಬಾಲಕರನ್ನು ಹಿಂಸಿಸಿದರು.
- “ಹಿಂಸಿಸು” ಎನ್ನುವ ಪದವನ್ನು “ತುಳಿಯುತ್ತಾ ಇರುವುದು” ಅಥವಾ “ಕಠಿಣವಾಗಿ ನಡೆದುಕೊಳ್ಳುವುದು” ಅಥವಾ “ನಿರಂತರವಾಗಿ ತಪ್ಪಾಗಿ ನಡೆದುಕೊಳ್ಳುವುದು” ಎಂದೂ ಅನುವಾದ ಮಾಡಬಹುದು.

“ಹಿಂಸೆ” ಎನ್ನುವ ಪದವನ್ನು ಅನುವಾದ ಮಾಡುವ ಬೇರೊಂದು ವಿಧಾನಗಳಲ್ಲಿ “ಕಠಿಣವಾದ ದೌರ್ಜನ್ಯ” ಅಥವಾ “ದಬ್ಬಾಳಿಕೆ” ಅಥವಾ “ಕಠಿಣವಾದ ದೌರ್ಜನ್ಯವನ್ನು ಮುಂದೆವರಿಸುವುದು” ಎನ್ನುವ ಮಾತುಗಳನ್ನು ಒಳಗೊಂಡಿರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಕ್ರೈಸ್ತ, ಸಭೆ, ದಬ್ಬಾಳಿಕೆ, ರೋಮಾ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:51-53
- ಅಪೊ.ಕೃತ್ಯ.13:50-52
- ಗಲಾತ್ಯ.01:13-14
- ಯೋಹಾನ.05:16-18
- ಮಾರ್ಕ.10:29-31
- ಮತ್ತಾಯ.05:9-10
- ಮತ್ತಾಯ.05:43-45
- ಮತ್ತಾಯ.10:21-23
- ಮತ್ತಾಯ.13:20-21
- ಫಿಲಿಪ್ಪಿ.03:6-7

ಸತ್ಯವೇದದಿಂದ ಉದಾಹರಣೆಗಳು:

- **33:07** “ಬಂಡೆಯ ನೆಲವು ದೇವರ ವಾಕ್ಯವನ್ನು ಕೇಳಿದ ವ್ಯಕ್ತಿಯನ್ನು ಮತ್ತು ಅದನ್ನು ಸಂತೋಷದಿಂದ ಸ್ವೀಕರಿಸುವ ವ್ಯಕ್ತಿಯನ್ನು ಸೂಚಿಸುತ್ತದೆ. ಆದರೆ ಅವನು ಕಠಿಣವಾದ ಪರಿಸ್ಥಿತಿಗಳನ್ನು ಅಥವಾ _ **ಹಿಂಸೆಗಳನ್ನು** _ ಅನುಭವಿಸಿದಾಗ, ಅವನು ಪಕ್ಕಕ್ಕೆ ತೊಲಗಿ ಹೋಗುವನು.
- **45:06** ಆ ದಿನದಂದು ಯೆರೂಸಲೇಮಿನಲ್ಲಿರುವ ಅನೇಕ ಜನರು ಯೇಸುವಿನ ಹಿಂಬಾಲಕರನ್ನು _ **ಹಿಂಸಿಸುವುದನ್ನು** _ ಆರಂಭಿಸುತ್ತಾರೆ, ಇದರಿಂದ ವಿಶ್ವಾಸಿಗಳು ಅನೇಕ ಸ್ಥಳಗಳಿಗೆ ಚೆದುರಿಹೋದರು.
- **46:02** “ಸೌಲಾ! ಸೌಲಾ! ನನ್ನನ್ನು ಯಾಕೆ _ **ಹಿಂಸೆ** ಪಡಿಸುತ್ತೀಯಾ?” ಎಂದು ಯಾರೋ ಮಾತನಾಡುತ್ತಿರುವಂತೆ ಸೌಲನು ಕೇಳಿಸಿಕೊಂಡನು. “ನೀನು ಯಾರು, ಬೋಧಕನೇ?” ಎಂದು ಸೌಲನು ಕೇಳಿದನು. “ನೀನು ನನ್ನನ್ನು _ **ಹಿಂಸೆ ಪಡಿಸುತ್ತಿರುವ** __, ಯೇಸು” ಎಂದು ಯೇಸು ಅವನಿಗೆ ಉತ್ತರ ಕೊಟ್ಟನು.
- **46:04** ಆದರೆ “ಬೋಧಕನೆ, ಈ ಮನುಷ್ಯನು ಯಾವರೀತಿ ವಿಶ್ವಾಸಿಗಳನ್ನು _ **ಹಿಂಸೆಗೆ** _ ಗುರಿ ಮಾಡಿದ್ದನೆನ್ನುವ ವಿಷಯವನ್ನು ನಾನು ಕೇಳಿಸಿಕೊಂಡಿದ್ದೆನು” ಎಂದು ಅನನೀಯ ಹೇಳಿದನು.

ಪದ ಡೇಟಾ:

- Strong's: H1814, H4783, H7291, H7852, G1375, G1376, G1377, G1559, G2347

ಹಿಂಸೆ, ಯಾತನೆ, ತೊಂದರೆ

ಪದದ ಅರ್ಥವಿವರಣೆ:

“ಹಿಂಸೆ” ಎನ್ನುವ ಪದವು ಸಂಕಷ್ಟ, ನೋವು, ಮತ್ತು ಯಾತನೆಯ ಸಮಯವನ್ನು ಸೂಚಿಸುತ್ತದೆ.

- ಕ್ರೈಸ್ತರು ಹಿಂಸೆಯ ಕಾಲವನ್ನು ಮತ್ತು ಅನೇಕ ವಿಧವಾದ ಶ್ರಮೆಯ ಕಾಲವನ್ನು ಎದುರಿಸುತ್ತಾರೆಂದು ಹೊಸ ಒಡಂಬಡಿಕೆಯಲ್ಲಿ ಈ ಪದದ ಕುರಿತು ವಿವರಿಸಲ್ಪಟ್ಟಿದೆ, ಯಾಕಂದರೆ ಈ ಲೋಕದಲ್ಲಿರುವ ಅನೇಕಮಂದಿ ಜನರು ಯೇಸುವಿನ ಬೋಧನೆಗಳನ್ನು ತಿರಸ್ಕಾರ ಮಾಡಿದ್ದಾರೆ.
- “ಮಹಾ ಹಿಂಸೆ” ಎನ್ನುವ ಪದವು ಅನೇಕ ವರ್ಷಗಳ ಕಾಲ ಭೂಮಿಯ ಮೇಲೆ ದೇವರ ಕ್ರೋಧವನ್ನು ಸುರಿಸುವಾಗ ಯೇಸುವಿನ ಬರೋಣ ಬರುವುದಕ್ಕೆ ಮುಂಚಿತವಾಗಿ ಒಂದು ನಿರ್ದಿಷ್ಟ ಕಾಲವನ್ನು ವಿವರಿಸುವುದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ.
- “ಹಿಂಸೆ” ಎನ್ನುವ ಪದವು “ಮಹಾ ಶ್ರಮೆಗಳ ಸಮಯ” ಅಥವಾ “ಆಳವಾದ ನೋವು” ಅಥವಾ “ತೀವ್ರವಾದ ಸಂಕಷ್ಟಗಳು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಭೂಮಿ, ಬೋಧಿಸು, ಕ್ರೋಧ)

ಸತ್ಯವೇದದ ಅನುಬಂಧ ವಾಕ್ಯಗಳು:

- ಮಾರ್ಕ.04:17
- ಮಾರ್ಕ.13:19
- ಮತ್ತಾಯ.13:20-21
- ಮತ್ತಾಯ.24:09
- ಮತ್ತಾಯ.24:29
- ರೋಮಾ.02:09

ಪದ ಡೇಟಾ:

- Strong's: H6869, G2347, G4423

ಹಿಮ, ಹಿಮ ಬಿದ್ದಿದೆ, ಹಿಮ ಬೀಳುತ್ತಿದೆ

ಸತ್ಯಾಂಶಗಳು:

“ಹಿಮ” ಎನ್ನುವ ಪದವು ವಾಯು ತಾಪಮಾನವು ತಣ್ಣಗಾಗಿರುವ ಸ್ಥಳಗಳಲ್ಲಿ ಮೇಘಗಳಿಂದ ಕೆಳಗೆ ಬೀಳುವ ಹೆಪ್ಪುಗಟ್ಟಿದ ನೀರಿನ ಬಿಳಿ ಪದರುಗಳನ್ನು ಸೂಚಿಸುತ್ತದೆ.

- ಇಸ್ರಾಯೇಲಿನಲ್ಲಿ ಎತ್ತರ ಸ್ಥಳಗಳಲ್ಲಿ ಹಿಮವು ಬೀಳುತ್ತಾ ಇರುತ್ತದೆ, ಆದರೆ ಅದು ನೆಲದ ಮೇಲೆ ಬಿದ್ದಾಗ ಹೆಚ್ಚಿನ ಸಮಯವಿರದೆ, ಅತೀ ಶೀಘ್ರವಾಗಿ ಕರಗಿ ಹೋಗುತ್ತದೆ. ಪರ್ವತಗಳ ಶಿಖರ ಭಾಗಗಳಲ್ಲಿ ಹೆಚ್ಚಿನ ಕಾಲದವರೆಗೆ ಹಿಮವು ಇರುತ್ತಿರಬಹುದು. ಸತ್ಯವೇದದಲ್ಲಿ ದಾಖಲು ಮಾಡಿದ ಹಿಮವು ಹೆಚ್ಚಾಗಿರುವ ಸ್ಥಳವು ಲೆಬಾನೋನ್ ಪರ್ವತವಾಗಿತ್ತು.
- ಬಿಳಿಯ ಬಣ್ಣವನ್ನು ಅನೇಕಬಾರಿ ಹಿಮದ ಬಣ್ಣಕ್ಕೆ ಹೋಲಿಸುತ್ತಾರೆ. ಉದಾಹರಣೆಗೆ, ಪ್ರಕಟನೆ ಗ್ರಂಥದಲ್ಲಿ ಯೇಸುವು ಧರಿಸಿದ್ದ ವಸ್ತ್ರಗಳು ಮತ್ತು ಕೂದಲುಗಳು “ಹಿಮದಂತೆ ಬಿಳಿಯಾಗಿವೆ” ಎಂದು ವಿವರಿಸಲ್ಪಟ್ಟಿವೆ.
- ಹಿಮದ ಬಿಳುಪು ಕೂಡ ಪವಿತ್ರತೆಗೆ ಮತ್ತು ಶುದ್ಧತೆಗೆ ಚಿಹ್ನೆಯಾಗಿರುತ್ತದೆ. ಉದಾಹರಣೆಗೆ, “ಹಿಮದಂತೆ ನಮ್ಮ ಪಾಪಗಳು ತೊಳೆಯಲ್ಪಟ್ಟಿವೆ” ಎನ್ನುವ ಮಾತಿಗೆ ದೇವರು ತನ್ನ ಜನರನ್ನು ಸಂಪೂರ್ಣವಾಗಿ ತಮ್ಮ ಪಾಪಗಳಿಂದ ಶುದ್ಧೀಕರಣೆ ಮಾಡುವನು ಎಂದರ್ಥ.
- ಕೆಲವೊಂದು ಭಾಷೆಗಳಲ್ಲಿ ಹಿಮವನ್ನು “ಹೆಪ್ಪುಗಟ್ಟಿದ ಮಳೆ” ಅಥವಾ “ಮಂಜುಗಡ್ಡೆ ಪರದಗಳು” ಅಥವಾ “ಹೆಪ್ಪುಗಟ್ಟಿದ ಪರದಗಳು” ಎಂದೂ ಸೂಚಿಸುತ್ತಾರೆ.
- “ಹಿಮದ ನೀರು” ಎನ್ನುವ ಮಾತು ಕರಗಿದ ಹಿಮದಿಂದ ಬಂದಿರುವ ನೀರನ್ನು ಸೂಚಿಸುತ್ತದೆ.

(ನೋಡಿರಿ: ಗೊತ್ತಿಲ್ಲವುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಅನುವಾದ ಸಲಹೆಗಳು: ಹೆಸರುಗಳನ್ನು ಅನುವಾದ ಮಾಡಿರಿ)

(ಈ ಪದಗಳನ್ನು ಸಹ ನೋಡಿರಿ : ಲೆಬಾನೋನ್, ಪವಿತ್ರ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.04:6-7
- ಯೋಬ.37:4-6
- ಮತ್ತಾಯ.28:3-4
- ಕೀರ್ತನೆ.147:15-16
- ಪ್ರಕ.01:14-16

ಪದ ಡೇಟಾ:

- Strong's: H7949, H7950, H8517, G5510

ಹಿರಿಯ, ಹಳೆಯದು, ಹಳೆಯ

ಪದದ ಅರ್ಥವಿವರಣೆ:

ಹಿರಿಯರು ಎನ್ನುವವರು ದೇವರ ಪ್ರಜೆಗಳ ಮಧ್ಯೆದಲ್ಲಿ ಪ್ರಾಯೋಗಾತ್ಮಕವಾದ ನಾಯಕತ್ವವನ್ನು ಮತ್ತು ಆತ್ಮೀಕವದ ಬಾಧ್ಯತೆಗಳನ್ನು ಹೊಂದಿರುವ ಆತ್ಮಿಯಕವಾದ ಪರಿಪಕ್ವವುಳ್ಳ ಮನುಷ್ಯರಾಗಿರುತ್ತಾರೆ.

- "ಹಿರಿಯ" ಎನ್ನುವ ಪದವು ವೃದ್ಧರಾದ ಮನುಷ್ಯರಿಂದ ಬಂದ ಪದವಾಗಿರುತ್ತದೆ, ಯಾಕಂದರೆ ಅವರ ವಯಸ್ಸು ಮತ್ತು ಅನುಭವವು ಹೆಚ್ಚಾದ ಜ್ಞಾನವನ್ನು ಹೊಂದಿರುತ್ತದೆ.
- ಹಳೇ ಒಡಂಬಡಿಕೆಯಲ್ಲಿ ಮೋಶೆಯ ಧರ್ಮಶಾಸ್ತ್ರ ವಿಷಯದಲ್ಲಿ ಮತ್ತು ಸಾಮಾಜಿಕ ನ್ಯಾಯ ಮಾಡುವ ವಿಷಯಗಳಲ್ಲಿ ಇಸ್ರಾಯೇಲ್ಯರನ್ನು ನಡೆಸುವದರಲ್ಲಿ ಹಿರಿಯರು ಸಹಾಯ ಮಾಡಿದ್ದರು.
- ಹೊಸ ಒಡಂಬಡಿಕೆಯಲ್ಲಿ ಯೆಹೂದ್ಯ ಹಿರಿಯರು ತಮ್ಮ ಸಮುದಾಯಗಳಲ್ಲಿ ನಾಯಕರಾಗಿ ಮುಂದೆವರಿದರು ಮತ್ತು ತಮ್ಮ ಜನರಿಗೆ ನ್ಯಾಯಾಧೀಶರಾಗಿದ್ದರು.
- ಆದಿ ಕ್ರೈಸ್ತ ಸಭೆಗಳಲ್ಲಿ ಕ್ರೈಸ್ತ ಹಿರಿಯರು ಸ್ಥಳೀಯ ಸಭೆಗಳಲ್ಲಿರುವ ವಿಶ್ವಾಸಿಗಳಿಗೆ ಒಳ್ಳೇಯ ಆತ್ಮಿಯ ನಾಯಕತ್ವವನ್ನು ಕೊಟ್ಟರು.
- ಈ ಸಭೆಗಳಲ್ಲಿರುವ ಹಿರಿಯರಲ್ಲಿ ಆತ್ಮಿಕವಾದ ಪರಿಪಕ್ವತೆಯನ್ನು ಹೊಂದಿರುವ ಯೌವನಸ್ಥರೂ ಒಳಗೊಂಡಿದ್ದರು.
- ಈ ಪದವನ್ನು "ವೃದ್ಧ ಮನುಷ್ಯರು" ಅಥವಾ "ಸಭೆಯನ್ನು ನಡೆಸುವುದಕ್ಕೆ ಆತ್ಮಿಯಕವಾಗಿ ಪರಿಪಕ್ವತೆಯನ್ನು ಹೊಂದಿರುವ ಮನುಷ್ಯರು" ಎಂಬುದಾಗಿಯೂ ಅನುವಾದ ಮಾಡಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.11:1-3
- 1 ತಿಮೊಥೆ.03:1-3
- 1 ತಿಮೊಥೆ.04:14
- ಅಪೊ.ಕೃತ್ಯ.05:19-21
- ಅಪೊ.ಕೃತ್ಯ.14:23
- ಮಾರ್ಕ.11:28
- ಮತ್ತಾಯ.21:23-24

ಪದ ಡೇಟಾ:

- Strong's: H1419, H2205, H7868, G1087, G3187, G4244, G4245, G4850

ಹಿರಿಸಭೆ, ಹಿರಿಸಭೆಗಳು

ಪದದ ಅರ್ಥವಿವರಣೆ:

ಹಿರಿಸಭೆ (ಕೌನ್ಸಿಲ್) ಎನ್ನುವ ಪದಕ್ಕೆ ಪ್ರಾಮುಖ್ಯವಾದ ವಿಷಯಗಳ ಕುರಿತಾಗಿ ಚರ್ಚೆ ಮಾಡಲು, ಸಲಹೆಗಳನ್ನು ಕೊಡಲು ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳಲು ಭೇಟಿಯಾಗುವ ಜನರ ಗುಂಪು ಎಂದರ್ಥ.

- ಹಿರಿಸಭೆ (ಕೌನ್ಸಿಲ್) ಎನ್ನುವದನ್ನು ಸಹಜವಾಗಿ ಒಂದು ವಿಶೇಷವಾದ ಉದ್ದೇಶಕ್ಕಾಗಿ ಯಾವಾಗಲೂ ಸ್ಥಿರವಾಗಿರಲು ಮತ್ತು ಅಧೀಕೃತವಾಗಿರಲು ಆಯೋಜನೆಮಾಡಲಾಗುತ್ತದೆ. ಅಷ್ಟೇಅಲ್ಲದೇ ಕಾನೂನುಬದ್ಧವಾದ ವಿಷಯಗಳ ಕುರಿತಾಗಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ.
- ಯೆರೂಸಲೇಮಿನಲ್ಲಿರುವ "ಯೆಹೂದ್ಯ ಕೌನ್ಸಿಲ್ (ಹಿರಿಸಭೆ)" ಅಥವಾ 70 ಸದಸ್ಯರು ಇರುವ "ಸೆನ್ಹೆದ್ರಿನ್" ಸಭೆಯಲ್ಲಿ ಪ್ರಧಾನ ಯಾಜಕರು, ಹಿರಿಯರು, ಶಾಸ್ತ್ರಿಗಳು, ಫರಿಸಾಯರು, ಮತ್ತು ಸದ್ದುಕಾಯರು ಯೆಹೂದ್ಯರ ಧರ್ಮಶಾಸ್ತ್ರ ವಿಷಯಗಳನ್ನು ನಿರ್ಣಯಿಸಲು ನಿಯಮಿತವಾಗಿ ಕೂಡಿಕೊಳ್ಳುತ್ತಿದ್ದರು. ಈ ಹಿರಿಸಭೆಯ (ಕೌನ್ಸಿಲ್) ಧರ್ಮದ ನಾಯಕರೆಲ್ಲರು ಸೇರಿ ಯೇಸುವನ್ನು ತೀರ್ಪಿಗೆ ನಿಲ್ಲಿಸಿದರು ಮತ್ತು ಆತನು ಕೊಂದುಹಾಕಬೇಕೆಂದು ನಿರ್ಣಯಿಸಿದರು.
- ಇತರ ಪಟ್ಟಣಗಳಲ್ಲಿ ಚಿಕ್ಕ ಚಿಕ್ಕ ಯೆಹೂದ್ಯ ಹಿರಿಸಭೆಗಳು (ಕೌನ್ಸಿಲ್.ಗಳು) ಇದ್ದಿದ್ದವು.
- ಸುವಾರ್ತೆಯನ್ನು ಬೋಧಿಸುತ್ತಿದ್ದಕ್ಕೆ ಅಪೊಸ್ತಲನಾದ ಪೌಲನನ್ನು ಸೆರೆಮನೆ ಹಾಕಿದಾಗ, ಆತನನ್ನು ರೋಮಾ ಕೌನ್ಸಿಲ್ ಮುಂದಕ್ಕೆ ಕರೆದುಕೊಂಡು ಬಂದಿದ್ದರು.
- ಸಂದರ್ಭಕ್ಕೆ ತಕ್ಕಂತೆ, "ಹಿರಿಸಭೆ (ಕೌನ್ಸಿಲ್)" ಎನ್ನುವ ಪದವನ್ನು "ಕಾನೂನು ಸಭೆ" ಅಥವಾ "ರಾಜಕೀಯ ಸಭೆ" ಎಂದೂ ಅನುವಾದ ಮಾಡಬಹುದು.
- "ಹಿರಿಸಭೆಯಲ್ಲಿ ಎನ್ನುವ ಪದಕ್ಕೆ ಏನಾದರೊಂದು ವಿಷಯವನ್ನು ನಿರ್ಣಯಿಸುವುದಕ್ಕೆ ಭೇಟಿಯಾಗುವ ವಿಶೇಷವಾದ ಕೂಟ ಎಂದರ್ಥ.
- ಆಂಗ್ಲ ಭಾಷೆಯಲ್ಲಿ "ಕೌನ್ಸಲ್ (counsel)" ಎಂದು ಇನ್ನೊಂದು ಪದವುಂಟು, ಆದರೆ ಈ ಪದಕ್ಕೆ "ಜ್ಞಾನವುಳ್ಳ ಸಲಹೆ" ಎಂದರ್ಥ. `

(ಈ ಪದಗಳನ್ನು ಸಹ ನೋಡಿರಿ : ವಿಧಾನಸಭೆ, ಜ್ಞಾನದ ಜ್ಞಾನದ ಆಲೋಚನೆ, ಫರಿಸಾಯ, ಧರ್ಮಶಾಸ್ತ್ರ, ಯಾಜಕ, ಸದ್ದುಕಾಯ, ಶಾಸ್ತ್ರಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.07:57-58
- ಅಪೊ.ಕೃತ್ಯ.24:20-21
- ಯೋಹಾನ.03:1-2
- ಲೂಕ.22:66-68
- ಮಾರ್ಕ.13:9-10
- ಮತ್ತಾಯ.05:21-22
- ಮತ್ತಾಯ.26:59-61

ಪದ ಡೇಟಾ:

- Strong's: H4186, H5475, H7277, G1010, G4824, G4892

ಹುಡುಕು, ಹುಡುಕುವುದು, ಹುಡುಕುತ್ತಾ ಇರುವುದು, ಪಡೆ

ಪದದ ಅರ್ಥವಿವರಣೆ:

“ಹುಡುಕು” ಎನ್ನುವ ಪದಕ್ಕೆ ಯಾರಾದರೊಬ್ಬರಿಗಾಗಿ ಅಥವಾ ಯಾವುದಾದರೊಂದಕ್ಕಾಗಿ ನೋಡುವುದು ಎಂದರ್ಥ. ಇದಕ್ಕೆ ಭೂತ ಕಾಲ ಪದವು “ಪಡೆ” ಎಂದಾಗಿರುತ್ತದೆ. ಈ ಪದಕ್ಕೆ ಯಾವುದಾದರೊಂದನ್ನು ಮಾಡುವುದಕ್ಕೆ “ಹೆಚ್ಚಾಗಿ ಪ್ರಯತ್ನಿಸು” ಅಥವಾ “ಪ್ರಯಾಸೆಪಡು” ಎಂದರ್ಥ.

- ಯಾವುದಾದರೊಂದನ್ನು ಮಾಡುವುದಕ್ಕೆ ಅವಕಾಶಕ್ಕಾಗಿ “ಹುಡುಕು” ಅಥವಾ “ಎದುರುನೋಡು” ಎನ್ನುವುದಕ್ಕೆ ಇದನ್ನು ಮಾಡುವುದಕ್ಕೆ “ಸಮಯವನ್ನು ಕಂಡುಕೊಳ್ಳುವುದಕ್ಕೆ ಪ್ರಯತ್ನಿಸು” ಎಂದರ್ಥ.
- “ಯೆಹೋವನನ್ನು ಎದುರುನೋಡು” ಎಂದರೆ “ಯೆಹೋವನನ್ನು ತಿಳಿದುಕೊಳ್ಳುವುದಕ್ಕೆ ಮತ್ತು ಆತನಿಗೆ ವಿಧೇಯತೆ ತೋರಿಸಲು ಕಲಿತುಕೊಳ್ಳುವುದಕ್ಕೆ ಶಕ್ತಿಯನ್ನು ಪಡೆದು, ಸಮಯವನ್ನು ಕಳೆ” ಎಂದರ್ಥವಾಗಿರುತ್ತದೆ.
- “ಸಂರಕ್ಷಣೆಗಾಗಿ ಹುಡುಕು” ಎಂದರೆ “ಅಪಾಯದಿಂದ ನಿನ್ನನ್ನು ಸಂರಕ್ಷಿಸುವ ಸ್ಥಳವನ್ನು ಅಥವಾ ವ್ಯಕ್ತಿಯನ್ನು ಕಂಡುಕೊಳ್ಳುವುದಕ್ಕೆ ಪ್ರಯತ್ನಿಸು” ಎಂದರ್ಥವಾಗಿರುತ್ತದೆ.
- “ನ್ಯಾಯಕ್ಕಾಗಿ ಹುಡುಕು” ಎಂದರೆ “ಜನರು ನ್ಯಾಯವನ್ನು ಹೊಂದುವಂತೆ ಅಥವಾ ಚೆನ್ನಾಗಿರಲು ನೋಡುವುದಕ್ಕೆ ಪ್ರಯಾಸಪಡು” ಎಂದರ್ಥವಾಗಿರುತ್ತದೆ.
- “ಸತ್ಯವನ್ನು ಹುಡುಕು” ಎಂದರೆ “ಸತ್ಯವು ಏನೆಂಬುವುದನ್ನು ಕಂಡುಕೊಳ್ಳುವುದಕ್ಕೆ ಪ್ರಯಾಸೆಪಡು” ಎಂದರ್ಥವಾಗಿರುತ್ತದೆ.
- “ದಯೆಗಾಗಿ ಹುಡುಕು” ಎಂದರೆ “ದಯೆಯನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನಿಸು” ಅಥವಾ “ಯಾರಾದರೊಬ್ಬರು ನಿಮಗೆ ಸಹಾಯ ಮಾಡುವಂತೆ ಕಾರ್ಯಗಳನ್ನು ಮಾಡು” ಎಂದರ್ಥ.

(ಈ ಪದಗಳನ್ನು ಸಹ ನೋಡಿರಿ : ನ್ಯಾಯ, ನಿಜ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.10:13-14
- ಅಪೊ.ಕೃತ್ಯ.17:26-27
- ಇಬ್ರಿ.11:5-6
- ಲೂಕ.11:9-10
- ಕೀರ್ತನೆ.027:7-8

ಪದ ಡೇಟಾ:

- Strong's: H579, H1156, H1239, H1243, H1245, H1556, H1875, H2470, H2603, H2658, H2664, H2713, H3289, H7125, H7592, H7836, H8446, G327, G1567, G1934, G2052, G2212

ಹುಳಿ, ಹುದುಗು ಹಿಟ್ಟು, ಹುದುಗುವುದು, ಹುದುಗಿದೆ, ಹುದುಗಿಲ್ಲ

ಪದದ ಅರ್ಥವಿವರಣೆ:

“ಹುದುಗು ಹಿಟ್ಟು” ಎನ್ನುವ ಪದವು ಸಾಧಾರಣವಾಗಿ ನಾದಿದ ರೊಟ್ಟಿ ಹಿಟ್ಟು ಉಬ್ಬುವುದಕ್ಕೆ ಮತ್ತು ಇನ್ನೂ ಆ ಹಿಟ್ಟು ಹೆಚ್ಚಾಗುವುದಕ್ಕೆ ಉಪಯೋಗಿಸುವ ಪದಾರ್ಥಕ್ಕಾಗಿ ಉಪಯೋಗಿಸುವ ಪದವಾಗಿರುತ್ತದೆ. “ಹುಳಿ” ಎನ್ನುವುದು ಒಂದು ವಿಧವಾದ ಹುದುಗು ಹಿಟ್ಟಾಗಿರುತ್ತದೆ.

- ಕೆಲವೊಂದು ಆಂಗ್ಲ ಅನುವಾದಗಳಲ್ಲಿ, ಹುದುಗು ಹಿಟ್ಟು ಎನ್ನುವ ಮಾತಿಗೆ “ಹುಳಿ” ಎಂದೂ ಅನುವಾದ ಮಾಡಿದ್ದರೆ, ಇದು ಅಧುನಿಕವಾಗಿ ಹುದುಗಿಸುವ ಕ್ರಿಯೆ ಮಾಡುವಂಥದ್ದು, ಇದು ನಾದಿದ ಹಿಟ್ಟನ್ನು ಅನಿಲ ಗುಳ್ಳೆಗಳಿಂದ ತುಂಬಿಸುತ್ತದೆ, ಆ ನಾದಿದ ಹಿಟ್ಟನ್ನು ಸುಡುವುದಕ್ಕೆ ಮುಂಚಿತವಾಗಿ ಅದನ್ನು ಉಬ್ಬುವಂತೆ ಮಾಡುತ್ತದೆ. ಹುಳಿ ಎನ್ನುವುದು ನಾದಿದ ಹಿಟ್ಟಿನಲ್ಲಿ ಹಾಕಿ ಹಿಸುಕುಬೇಕಾಗಿರುತ್ತದೆ, ಇದರಿಂದ ಆ ಹಿಟ್ಟಿನಲ್ಲಿ ಇದು ಎಲ್ಲಾ ಕಡೆಗೆ ವಿಸ್ತರಿಸಲ್ಪಡುತ್ತದೆ.
- ಹಳೇ ಒಡಂಬಡಿಕೆಯ ಕಾಲದಲ್ಲಿ ಹುಳಿಯುವಂತೆ ಮಾಡುವುದು ಅಥವಾ ಉಬ್ಬುವಂತೆ ವಾಗುವುದೆನ್ನುವುದು ನಾದಿದ ಹಿಟ್ಟನ್ನು ಸ್ವಲ್ಪ ಹೊತ್ತು ಹಾಗೆಯೇ ಇಡುವುದರ ಮೂಲಕ ನಡೆಯುತ್ತದೆ. ನಾದಿದ ಹಿಟ್ಟಿನಿಂದ ತೆಗೆದುಕೊಂಡಿರುವ ಚಿಕ್ಕ ಚಿಕ್ಕ ಚೂರುಗಳನ್ನು ಭದ್ರಪಡಿಸಿ, ಮತ್ತೊಮ್ಮೆ ಹಿಟ್ಟನ್ನು ಹುಳಿಯುವಂತೆ ಮಾಡುವುದಕ್ಕೆ ಉಪಯೋಗಿಸುತ್ತಾರೆ.
- ಇಸ್ರಾಯೇಲ್ಯರು ಐಗುಪ್ತದಿಂದ ಬಿಡುಗಡೆ ಹೊಂದಿದಾಗ, ಅವರ ಬಳಿ ಇರುವಂಥಹ ರೊಟ್ಟಿಯ ಹಿಟ್ಟು ಉಬ್ಬುವವರೆಗೂ ಎದುರುನೋಡುವ ಸಮಯವಿದ್ದಿರಲಿಲ್ಲ, ಇದರಿಂದ ಅವರ ಪ್ರಯಾಣದಲ್ಲಿ ಆ ನಾದಿದ ಹಿಟ್ಟಿನಿಂದ ಹುಳಿಯದ ರೊಟ್ಟಿಗಳನ್ನು ಮಾಡಿಕೊಂಡಿರುತ್ತಾರೆ. ಇದರ ನೆನಪಿಗಾಗಿ, ಯೆಹೂದ್ಯ ಜನರು ಪ್ರತಿ ವರ್ಷ ಹುಳಿಯಿಲ್ಲದ ರೊಟ್ಟಿಗಳನ್ನು ಮಾಡಿಕೊಂಡು ತಿನ್ನುವುದರ ಮೂಲಕ ಪಸ್ಕ ಹಬ್ಬವನ್ನು ಆಚರಿಸಿಕೊಳ್ಳುತ್ತಾರೆ.
- “ಹುದುಗಿಸುವ” ಅಥವಾ “ಹುಳಿ” ಎನ್ನುವ ಪದವು ಒಬ್ಬ ವ್ಯಕ್ತಿಯ ಜೀವನದ ಮೂಲಕ ಪಾಪವು ಹೇಗೆ ಹರಡುತ್ತದೆ ಅಥವಾ ಪಾಪವು ಇತರ ಜನರನ್ನು ಹೇಗೆ ಪ್ರಭಾವಗೊಳಿಸುತ್ತದೆ ಎನ್ನುವ ಚಿತ್ರಣವನ್ನು ತೋರಿಸುವುದಕ್ಕೆ ಸತ್ಯವೇದದಲ್ಲಿ ಅಲಂಕಾರಿಕವಾಗಿ ಉಪಯೋಗಿಸಲ್ಪಟ್ಟಿರುತ್ತದೆ.
- ಇದು ಅನೇಕಮಂದಿಯನ್ನು ಪ್ರಭಾವಗೊಳಿಸುವ ಮತ್ತು ಅನೇಕ ಜನರಿಗೆ ಅತೀ ಸುಲಭವಾಗಿ ಹರಡಿಸುವ ಸುಳ್ಳು ಬೋಧನೆಯನ್ನು ಕೂಡ ಸೂಚಿಸುತ್ತದೆ.
- “ಹುದುಗಿಸುವುದು” ಎನ್ನುವ ಪದವು ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಯ ಕಡೆಗೆ ದೇವರ ರಾಜ್ಯವು ಯಾವರೀತಿ ಪ್ರಭಾವ ಬೀರುತ್ತದೆಯೆಂದು ವಿವರಿಸುವುದಕ್ಕೆ ಸಕಾರಾತ್ಮಕವಾದ ವಿಧಾನದಲ್ಲಿಯೂ ಉಪಯೋಗಿಸಲಾಗುತ್ತದೆ.

ಅನುವಾದ ಸಲಹೆಗಳು:

- “ಹುದುಗಿಸುವ” ಅಥವಾ “ನಾದಿದ ಹಿಟ್ಟನ್ನು ಉಬ್ಬಿಸುವ ಪದಾರ್ಥ” ಅಥವಾ “ಹರಡಿಸುವ ಕಾರ್ಯಕಾರಿ” ಎಂದೂ ಅನುವಾದ ಮಾಡಬಹುದು. “ಉಬ್ಬುವುದು” ಎನ್ನುವ ಪದವು “ವಿಸ್ತರಿಸುವುದು” ಅಥವಾ “ದೊಡ್ಡದಾಗಿ ಮಾಡುವುದು” ಅಥವಾ “ಉಬ್ಬಿಕೊಳ್ಳುವುದು” ಎಂದೂ ವ್ಯಕ್ತೀಕರಿಸ ಬಹುದು.
- ಒಂದುವೇಳೆ ಸ್ಥಳೀಯವಾಗಿ ಹುದುಗಿಸುವ ಪದಾರ್ಥವನ್ನು ಉಪಯೋಗಿಸಿ ನಾದಿದ ಹಿಟ್ಟನ್ನು ಉಬ್ಬಿಕೊಳ್ಳುವಂತೆ ಮಾಡುವಂತಿದ್ದರೆ, ಆ ಪದಾರ್ಥದ ಹೆಸರನ್ನೇ ನೀವು ಉಪಯೋಗಿಸಬಹುದು. “ಹುದುಗಿಸುವ” ಎನ್ನುವ ಅರ್ಥ ಬರುವ ಪದವು ಭಾಷೆಯಲ್ಲಿ ಚೆನ್ನಾಗಿ ಗೊತ್ತಿದ್ದರೆ, ಈ ಪದವನ್ನೇ ಉಪಯೋಗಿಸುವುದು ಒಳ್ಳೆಯದು.

(ಈ ಪದಗಳನ್ನು ಸಹ ನೋಡಿರಿ : ಐಗುಪ್ತ, ಪಸ್ಕ, ಹುಳಿಯಿಲ್ಲದ ರೊಟ್ಟಿ)

ಸತ್ಯವೇದದ ಅನುಬಂಧ ವಾಕ್ಯಗಳು :

- ವಿಮೋ.12:5-8
- ಗಲಾತ್ಯ.05:9-10
- ಲೂಕ.12:1
- ಲೂಕ.13:20-21
- ಮತ್ತಾಯ.13:33
- ಮತ್ತಾಯ.16:5-8

ಪದ ಡೇಟಾ:

- Strong's: H2556, H2557, H4682, H7603, G106, G2219, G2220

ಹೂಳಿಡುವುದು, ಸಮಾಧಿ ಮಾಡುವುದು, ಸಮಾಧಿ ಮಾಡಿದೆ, ಸಮಾಧಿ ಮಾಡುತ್ತಿದ್ದೇವೆ, ಸಮಾಧಿ ಕ್ರಿಯೆ

ಪದದ ಅರ್ಥವಿವರಣೆ:

"ಹೂಳಿಡುವುದು" ಎನ್ನುವ ಪದವು ಸಾಧಾರಣವಾಗಿ ಒಂದು ಗುಂಡಿಯಲ್ಲಿ ಶವವನ್ನು ಇಡುವುದನ್ನು ಅಥವಾ ಇತರ ಸಮಾಧಿ ಮಾಡುವ ಸ್ಥಳದಲ್ಲಿ ಸತ್ತಂತವರನ್ನಿಡುವುದನ್ನು ಸೂಚಿಸುತ್ತದೆ. "ಸಮಾಧಿ ಕ್ರಿಯೆ" ಎನ್ನುವ ಪದವು ಯಾವುದಾದರೊಂದನ್ನು ಸಮಾಧಿ ಮಾಡುವ ಕ್ರಿಯೆಯನ್ನು ಸೂಚಿಸುತ್ತದೆ ಅಥವಾ ಯಾವುದಾದರೊಂದನ್ನು ಸಮಾಧಿ ಮಾಡುವುದಕ್ಕೆ ಉಪಯೋಸಿಸುವ ಸ್ಥಳವನ್ನು ವಿವರಿಸಲು ಉಪಯೋಗಿಸಲ್ಪಡಬಹುದು.

- ಅನೇಕಬಾರಿ ಜನರು ನೆಲದಲ್ಲಿ ಒಂದು ಆಳವಾದ ಗುಂಡಿಯನ್ನು ಅಗೆದು, ಅದರೊಳಗೆ ಶವವನ್ನಿಟ್ಟು ಸಮಾಧಿ ಮಾಡುತ್ತಾರೆ ಮತ್ತು ಆದರ ಮೇಲೆ ಮಣ್ಣನ್ನು ಹಾಕುತ್ತಾರೆ.
- ಕೆಲವೊಂದುಬಾರಿ ಶವವನ್ನು ಸಮಾಧಿ ಕ್ರೀಯೆಯ ಮುಂಚಿತವಾಗಿ ಒಂದು ಶವ ಪೆಟ್ಟಿಗೆಯಲ್ಲಿ ಇಟ್ಟಿರುತ್ತಾರೆ.
- ಸತ್ಯವೇದದ ಕಾಲದಲ್ಲಿ ಸತ್ತವರನ್ನು ಒಂದು ಗುಹೆಯಲ್ಲಿ ಅಥವಾ ಗುಹೆಯಂಥಿರುವ ಸ್ಥಳಗಳಲ್ಲಿ ಸಮಾಧಿ ಮಾಡುತ್ತಿದ್ದರು. ಯೇಸು ಮರಣ ಹೊಂದಿದನಂತರ, ಆತನ ದೇಹವನ್ನು ಬಟ್ಟೆಗಳಿಂದ ಸುತ್ತಿ, ಅದನ್ನು ಕಲ್ಲಿನ ಸಮಾಧಿಯಲ್ಲಿಟ್ಟಿದ್ದರು, ಆ ಸಮಾಧಿಗೆ ಒಂದು ದೊಡ್ಡ ಕಲ್ಲನ್ನು ಹೊರೆಸಿ ಮೊಹರು ಮಾಡಿದ್ದರು.
- "ಸಮಾಧಿ ಸ್ಥಳ" ಅಥವಾ "ಸಮಾಧಿ ಕೊಠಡಿ" ಅಥವಾ "ಸಮಾಧಿ ಕೋಣೆ" ಅಥವಾ "ಸಮಾಧಿ ಗುಹೆ" ಎನ್ನುವ ಪದಗಳೆಲ್ಲವೂ ಶವಗಳನ್ನು ಸಮಾಧಿ ಮಾಡುವ ಸ್ಥಳವನ್ನು ಸೂಚಿಸುತ್ತವೆ.
- ಆಕಾನನು ಯೆರಿಕೋಯಿಂದ ಕದ್ದಿರುವ ಬೆಳ್ಳಿ ಮತ್ತು ಇತರ ವಸ್ತುಗಳನ್ನು ಸಮಾಧಿ ಮಾಡಿದ ಹಾಗೆ ಇತರ ಬೇರೆ ವಸ್ತುಗಳನ್ನು ಸಮಾಧಿ ಮಾಡಬಹುದು,
- "ತನ್ನ ಮುಖವನ್ನು ಸಮಾಧಿಮಾಡಿದ್ದಾನೆ" ಎನ್ನುವ ಮಾತಿಗೆ "ತನ್ನ ಕೈಗಳಿಂದ ತನ್ನ ಮುಖವನ್ನು ಬಚ್ಚಿಟ್ಟುಕೊಂಡಿದ್ದಾನೆ" ಎಂದರ್ಥ.
- ಆಕಾನನು ಯೆರಿಕೋಯಿಂದ ಕದ್ದಿರುವ ವಸ್ತುಗಳನ್ನು ನೆಲದಲ್ಲಿ ಬಚ್ಚಿಟ್ಟಿರುವ ಹಾಗೆಯೇ "ಬಚ್ಚಿಡುವುದು" ಎನ್ನುವ ಪದವು ಕೆಲವೊಂದುಬಾರಿ "ಸಮಾಧಿ" ಎಂದು ಅರ್ಥವನ್ನು ತರುತ್ತದೆ. ಅವನು ನೆಲದಲ್ಲಿ ಅವುಗಳನ್ನು ಸಮಾಧಿ ಮಾಡಿದನು ಎಂದರ್ಥ ಬರುತ್ತದೆ.

(ಈ ಪದಗಳನ್ನು ಸಹ ನೋಡಿರಿ : ಯೆರಿಕೋ, ಸಮಾಧಿ)

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಅರಸ.09:9-10
- ಆದಿ.35:4-5
- ಯೆರೆ.25:32-33
- ಲೂಕ.16:22-23
- ಮತ್ತಾಯ.27:6-8
- ಕೀರ್ತನೆ.079:1-3

ಪದ ಡೇಟಾ:

- Strong's: H6900, H6912, H6913, G1779, G1780, G2290, G4916, G5027

ಹೆಣ್ಣುಕುರಿ, ಹೆಣ್ಣುಕುರಿಗಳು, ಟಗರು, ಟಗರುಗಳು, ಕುರಿ, ಕುರಿಮರಿ, ಕುರಿಮರಿಗಳು, ಕುರಿಗಳ ಕುರುಬರು, ಕುರಿ ಚರ್ಮಗಳು

ಪದದ ಅರ್ಥವಿವರಣೆ:

"ಕುರಿ" ಎನ್ನುವುದು ಮಧ್ಯಮ ಗಾತ್ರದ ನಾಲ್ಕುಗಳ ಪ್ರಾಣಿಯಾಗಿರುತ್ತದೆ, ಇದರ ದೇಹದ ಸುತ್ತಲೂ ಉಣ್ಣೆಯನ್ನು ಹೊಂದಿರುತ್ತದೆ. ಗಂಡು ಕುರಿಯನ್ನು "ಟಗರು" ಎಂದು ಕರೆಯುತ್ತಾರೆ. ಹೆಣ್ಣು ಕುರಿಯನ್ನು "ಮೇಷಿ" ಎಂದು ಕರೆಯುತ್ತಾರೆ. "ಕುರಿ" ಎನ್ನುವ ಪದಕ್ಕೆ ಬಹುವಚನ ಪದವು "ಕುರಿಗಳು" ಎಂದಾಗಿರುತ್ತದೆ.

- ಕುರಿಗೆ ಹುಟ್ಟಿದ ಮರಿಯನ್ನು "ಕುರಿಮರಿ" ಎಂದು ಕರೆಯುತ್ತಾರೆ.
- ಇಸ್ರಾಯೇಲ್ಯರು ಅನೇಕಬಾರಿ ಕುರಿಗಳನ್ನು ಸರ್ವಾಂಗ ಹೋಮಗಳಿಗಾಗಿ ಉಪಯೋಗಿಸುತ್ತಿದ್ದರು, ವಿಶೇಷವಾಗಿ ಗಂಡು ಕುರಿಯನ್ನು ಮತ್ತು ಕುರಿಮರಿಯನ್ನು ಹೆಚ್ಚಾಗಿ ಬಳಸುತ್ತಿದ್ದರು.
- ಜನರು ಕುರಿಯ ಮಾಂಸವನ್ನು ತಿನ್ನುತ್ತಾರೆ ಮತ್ತು ಅದರ ಉಣ್ಣೆಯನ್ನು ಬಟ್ಟೆಗಳನ್ನು ಮಾಡುವದಕ್ಕೆ ಮತ್ತು ಇತರ ವಸ್ತುಗಳನ್ನು ಮಾಡುವುದಕ್ಕೆ ಉಪಯೋಗಿಸುತ್ತಾರೆ.
- ಕುರಿಗಳು ನಂಬಿಗಸ್ತವುಗಳಾಗಿದ್ದವು, ಬಲಹೀನವಾಗಿದ್ದವು ಮತ್ತು ಹೆದರುವ ಪ್ರಾಣಿಗಳಾಗಿದ್ದವು. ಅವು ತುಂಬಾ ಸುಲಭವಾಗಿ ಮಾರ್ಗವನ್ನು ತಪ್ಪುತ್ತಾ ಹೋಗುತ್ತಾ ಇರುತ್ತವೆ. ಅವುಗಳನ್ನು ನಡೆಸುವುದಕ್ಕೆ, ಸಂರಕ್ಷಿಸುವುದಕ್ಕೆ, ಮತ್ತು ಅವುಗಳಿಗೆ ಆಹಾರವನ್ನು, ನೀರನ್ನು, ತಂಗುದಾಣವನ್ನು ಒದಗಿಸಿಕೊಡುವುದಕ್ಕೆ ಒಬ್ಬ ಕುರುಬನ ಅಗತ್ಯತೆ ಇದ್ದಿತ್ತು.
- ಸತ್ಯವೇದದಲ್ಲಿ ದೇವರು ಕುರುಬನಾಗಿ ಮತ್ತು ಆತನಿಗೆ ಸಂಬಂಧಪಟ್ಟ ಜನರು ಕುರಿಗಳಾಗಿ ಹೋಲಿಸಲಾಗಿರುತ್ತದೆ.

(ಅನುವಾದ ಸಲಹೆಗಳು: ಹೆಸರುಗಳನ್ನು ಯಾವರೀತಿ ಅನುವಾದ ಮಾಡಬೇಕು)

(ಈ ಪದಗಳನ್ನು ಸಹ ನೋಡಿರಿ : ಇಸ್ರಾಯೇಲ್, ಕುರಿಮರಿ, ಹೋಮ, ಕುರುಬ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.08:32-33
- ಆದಿ.30:31-32
- ಯೋಹಾನ.02:13-14
- ಲೂಕ.15:3-5
- ಮಾರ್ಕ.06:33-34
- ಮತ್ತಾಯ.09:35-36
- ಮತ್ತಾಯ.10:5-7
- ಮತ್ತಾಯ.12:11-12
- ಮತ್ತಾಯ.25:31-33

ಸತ್ಯವೇದದಿಂದ ಉದಾಹರಣೆಗಳು:

- **09:12** ಒಂದು ದಿನ ಮೋಶೆ ತನ್ನ _ **ಕುರಿಗಳನ್ನು** _ ಕಾಯುತ್ತಿರುವಾಗ, ಆತನು ಉರಿಯುತ್ತಿರುವ ಒಂದು ಪೊದೆಯನ್ನು ನೋಡಿದನು.
- **17:02** ಬೆತ್ಲೆಹೇಮಿನಲ್ಲಿ ದಾವೀದನು ಕುರುಬನಾಗಿದ್ದನು. ಅನೇಕ ಸಂದರ್ಭಗಳಲ್ಲಿ ತನ್ನ ತಂದೆ _ **ಕುರಿಗಳನ್ನು** ಕಾಯುತ್ತಿರುವಾಗ, ತನ್ನ **ಕುರಿಗಳ** _ ಮೇಲೆ ಧಾಳಿ ಮಾಡಿದ ಸಿಂಹವನ್ನು ಮತ್ತು ಕರಡಿಯನ್ನು ಕೊಂದು ಹಾಕಿದನು.
- **30:03**ಈ ಜನರೆಲ್ಲರು ಕುರುಬನಿಲ್ಲದ _ **ಕುರಿಗಳಾಗಿದ್ದಾರೆ** _ ಎಂದು ಯೇಸು ಹೇಳಿದನು.
- **38:08** "ಈ ರಾತ್ರಿ ನೀವೆಲ್ಲರೂ ನನ್ನನ್ನು ಕೈ ಬಿಡುತ್ತೀರಿ, "ನಾನು ಕುರುಬನನ್ನು ಹೊಡೆಯುತ್ತೇನೆ ಮತ್ತು ಎಲ್ಲಾ _ **ಕುರಿಗಳು** _ ಚೆದರಿಹೋಗುತ್ತವೆ" ಎಂದು ಬರೆಯಲ್ಪಟ್ಟಿದೆಯೆಂದು ಯೇಸು ಹೇಳಿದ್ದಾನೆ.

ಪದ ಡೇಟಾ:

- Strong's: H352, H1494, H1798, H2169, H3104, H3532, H3535, H3733, H3775, H5739, H5763, H6260, H6629, H6792, H7353, H7462, H7716, G4165, G4262, G4263

ಹೆಮ್ಮೆ, ಹೆಮ್ಮೆಯ, ಗರ್ವ, ಗರ್ವದ

ಪದದ ಅರ್ಥವಿವರಣೆ:

"ಹೆಮ್ಮೆ" ಮತ್ತು "ಗರ್ವ" ಎನ್ನುವ ಪದಗಳು ಒಬ್ಬ ವ್ಯಕ್ತಿ ತನ್ನ ಕುರಿತಾಗಿ ಅತೀ ಉನ್ನತವಾಗಿ ಆಲೋಚನೆ ಮಾಡಿಕೊಳ್ಳುವುದನ್ನು, ವಿಶೇಷವಾಗಿ, ಇತರ ಜನರಿಗಿಂತ ತಾನು ಉತ್ತಮನೆಂದು ಆಲೋಚನೆ ಮಾಡಿಕೊಳ್ಳುವುದನ್ನು ಸೂಚಿಸುತ್ತದೆ.

- ಹೆಮ್ಮೆಯುಳ್ಳ ವ್ಯಕ್ತಿ ಅನೇಕಬಾರಿ ತನ್ನ ತಪ್ಪುಗಳನ್ನು ಗುರುತಿಸುವುದಿಲ್ಲ. ಇವನು ವಿನಯವುಳ್ಳವನಲ್ಲ.
- ಗರ್ವವು ಇತರ ಮಾರ್ಗಗಳಲ್ಲಿ ದೇವರಿಗೆ ಅವಿಧೇಯತೆಯನ್ನು ತೋರಿಸುವುದಕ್ಕೆ ನಡೆಸುತ್ತದೆ.
- "ಹೆಮ್ಮೆ" ಮತ್ತು "ಗರ್ವ" ಎನ್ನುವ ಪದಗಳು ಸಕಾರಾತ್ಮಕ ಭಾವನೆಯಲ್ಲಿಯೂ ಉಪಯೋಗಿಸಲ್ಪಡುತ್ತವೆ, ಉದಾಹರಣೆಗೆ, ಯಾರಾದರೊಬ್ಬರು ಏನಾದರೊಂದು ಸಾಧನೆ ಮಾಡಿದಾಗ ಅವರ ವಿಷಯದಲ್ಲಿ "ಹೆಮ್ಮೆ" ಪಡುತ್ತೇವೆ ಮತ್ತು ನಿಮ್ಮ ಮಕ್ಕಳನ್ನು ನೋಡಿ "ಗರ್ವ" ಪಡುತ್ತೇವೆ. "ನಿನ್ನ ಕೆಲಸದಲ್ಲಿ ಹೆಮ್ಮೆ ಪಡು" ಎನ್ನುವ ಮಾತಿಗೆ ನೀನು ನಿನ್ನ ಕೆಲಸವನ್ನು ಮಾಡುತ್ತಿರುವಾಗ ಸಂತೋಷವನ್ನು ಹೊಂದಿಕೊಳ್ಳುವುದು ಎಂದರ್ಥ.
- ಒಬ್ಬ ವ್ಯಕ್ತಿ ತಾನು ಸಾಧನೆ ಮಾಡಿರುವುದರ ವಿಷಯದಲ್ಲಿ ಅದರ ಕುರಿತಾಗಿ ಗರ್ವದಿಂದರದಂತೆ ಹೆಮ್ಮೆ ಪಡಬಹುದು. "ಗರ್ವ" ಎನ್ನುವ ಈ ಎರಡು ವಿಭಿನ್ನವಾದ ಅರ್ಥಗಳಿಗೆ ಕೆಲವೊಂದು ಭಾಷೆಗಳಲ್ಲಿ ವಿಭಿನ್ನವಾದ ಪದಗಳನ್ನು ಒಳಗೊಂಡಿರುತ್ತವೆ.
- "ಗರ್ವಭರಿತ" ಎನ್ನುವ ಪದವು ಯಾವಾಗಲೂ ನಕಾರಾತ್ಮಕವಾಗಿರುತ್ತದೆ, ಈ ಪದಕ್ಕೆ "ಅಹಂಕಾರಿ" ಅಥವಾ "ಸ್ವಯಂ ಚಿಂತನೆ" ಅಥವಾ "ಸ್ವಯಂ ಪ್ರಾಮುಖ್ಯತೆ" ಎನ್ನುವ ಅರ್ಥಗಳಿಂದ ಕೂಡಿರುತ್ತದೆ.

ಅನುವಾದ ಸಲಹೆಗಳು:

- "ಗರ್ವ" ಎನ್ನುವ ಪದವನ್ನು "ಅಹಂಕಾರ" ಅಥವಾ "ಜಂಭ" ಅಥವಾ "ಸ್ವಯಂ-ಪ್ರಾಮುಖ್ಯತೆ" ಎಂದೂ ಅನುವಾದ ಮಾಡಬಹುದು.
- ಇತರ ಸಂದರ್ಭಗಳಲ್ಲಿ "ಗರ್ವ" ಎನ್ನುವ ಪದವನ್ನು "ಸಂತೋಷ" ಅಥವಾ "ತೃಪ್ತಿ" ಅಥವಾ "ಹರ್ಷ" ಎಂದೂ ಅನುವಾದ ಮಾಡಬಹುದು.
- "ಗರ್ವದಿಂದ ಇರುವುದು" ಎನ್ನುವ ಮಾತನ್ನು "ಆರೊಂದಿಗೆ ಸಂತೋಷದಿಂದ ಇರುವುದು" ಅಥವಾ "ಅದರೊಂದಿಗೆ ತೃಪ್ತಿಪಡುವುದು" ಅಥವಾ "(ಸಾಧನೆಗಳನ್ನು ಮಾಡಿದವುಗಳ) ಕುರಿತಾಗಿ ಸಂತೋಷಪಡುವುದು" ಎಂದೂ ಅನುವಾದ ಮಾಡಬಹುದು.
- "ನಿನ್ನ ಕೆಲಸಲ್ಲಿ ಗರ್ವಪಡು" ಎನ್ನುವ ಮಾತನ್ನು "ಚೆನ್ನಾಗಿ ಮಾಡುತ್ತಿರುವ ನಿನ್ನ ಕೆಲಸದಲ್ಲಿ ತೃಪ್ತಿಯನ್ನು ಪಡೆದುಕೊಳ್ಳು" ಎಂದೂ ಅನುವಾದ ಮಾಡಬಹುದು.
- "ಯೆಹೋವನಲ್ಲಿ ಹೆಮ್ಮೆಪಡು" ಎನ್ನುವ ಮಾತನ್ನು "ಯೆಹೋವನು ಮಾಡಿದ ಅದ್ಭುತವಾದ ಕಾರ್ಯಗಳ ಕುರಿತಾಗಿ ಸಂತೋಷಪಡುವುದು" ಅಥವಾ "ಯೆಹೋವನು ಎಷ್ಟು ಆಶ್ಚರ್ಯಕರನೆನ್ನುವುದರ ಕುರಿತಾಗಿ ಆನಂದಪಡುವುದು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಅಹಂಕಾರಿ, ತಗ್ಗಿಸಿಕೋ, ಸಂತೋಷ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ತಿಮೊಥೆ.03:6-7
- 2 ಕೊರಿಂಥ.01:12-14
- ಗಲಾತ್ಯ.06:3-5
- ಯೆಶಯಾ.13:19-20
- ಲೂಕ.01:50-51

ಸತ್ಯವೇದದಿಂದ ಉದಾಹರಣೆಗಳು:

- **04:02** ಅವರು ತುಂಬಾ _ **ಅಹಂಕಾರಿಗಳಾಗಿದ್ದರು** _ , ಮತ್ತು ಅವರು ದೇವರು ಹೇಳಿದ ಮಾತುಗಳ ಕುರಿತಾಗಿ ಅವರು ಎಚ್ಚರಿಕೆ ತೆಗೆದುಕೊಳ್ಳಲಿಲ್ಲ.
- **34:10** "ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ತೆರಿಗೆದಾರನ ಪ್ರಾರ್ಥನೆಯನ್ನು ದೇವರು ಕೇಳಿದನು ಮತ್ತು ನೀತಿವಂತರಾಗಿರಬೇಕೆಂದು ಪ್ರಕಟಿಸಿದನು. ಆದರೆ ಆತನು ಧರ್ಮದ ನಾಯಕ ಪ್ರಾರ್ಥನೆಯನ್ನು ಇಷ್ಟಪಡಲಿಲ್ಲ. ದೇವರು _ **ಅಹಂಕಾರಿಗಳನ್ನು** _ ತಿರಸ್ಕರಿಸುವನು, ಮತ್ತು ಆತನು ತಗ್ಗಿಸಿಕೊಂಡಿರುವವರನ್ನು ಮೇಲಕ್ಕೆ ಎತ್ತುವನು."

ಪದ ಡೇಟಾ:

- Strong's: H1341, H1343, H1344, H1346, H1347, H1348, H1349, H1361, H1362, H1363, H1364, H1396, H1466, H1467, H1984, H2086, H2087, H2102, H2103, H2121, H3093, H3238, H3513, H4062, H1431, H4791, H5965, H7293, H7295, H7312, H7342, H7311, H7407, H7830, H8597, G212, G1391, G1392, G2744, G2745, G2746, G3173, G5187, G5229, G5243, G5244, G5308, G5309, G5426, G5450

ಹೊಟ್ಟು

ಪದದ ಅರ್ಥವಿವರಣೆ:

ಹೊಟ್ಟು ಎನ್ನುವುದು ಧಾನ್ಯ ಬೀಜದ ಮೇಲೆ ಸುತ್ತಲೂ ಒಣಗಿದ ಸಂರಕ್ಷಣೆಯ ಕವಚ ಎಂದು ಹೇಳಬಹುದು. ಹೊಟ್ಟು ಆಹಾರಕ್ಕೆ ಒಳ್ಳೆಯದಲ್ಲ, ಆದ್ದರಿಂದ ಜನರು ಇದನ್ನು ಬೀಜಗಳಿಂದ ಅಥವಾ ಕಾಳುಗಳಿಂದ ಬೇರ್ಪಡಿಸಿ, ಅದನ್ನು ಬಿಸಾಡುತ್ತಾರೆ.

- ಅನೇಕಸಲ ಧಾನ್ಯವನ್ನು ಗಾಳಿಯಲ್ಲಿ ಹಾರಿಸುವುದರ ಮೂಲಕ ಕಾಳುಗಳಿಂದ ಈ ಹೊಟ್ಟನ್ನು ಬೇರ್ಪಡಿಸುತ್ತಾರೆ. ಆ ಗಾಳಿಯು ಹೊಟ್ಟೆಲ್ಲಾ ಪಕ್ಕಕ್ಕೆ ಹೋಗುವಂತೆ ಮಾಡಿ, ಕಾಳುಗಳು ಮಾತ್ರ ನೆಲದ ಮೇಲೆ ಬೀಳುವಂತೆ ಮಾಡುತ್ತದೆ. ಈ ಪದ್ಧತಿಯನ್ನೇ “ತೂರಾಡುವುದು ಅಥವಾ ತೂರು ಎತ್ತುವುದು” ಎಂದು ಕರೆಯುತ್ತಾರೆ.
- ಸತ್ಯವೇದದಲ್ಲಿ ಈ ಪದವನ್ನು ದುಷ್ಟ ಜನರಿಗೆ ಮತ್ತು ದುಷ್ಟತನಕ್ಕೆ, ವ್ಯರ್ಥ್ಯವಾದ ವಿಷಯಗಳಿಗೆ ಅಲಂಕಾರ ರೂಪಕವಾಗಿ ಬಳಸುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಧಾನ್ಯ, ಗೋಧಿ, ತೂರು)

ಸತ್ಯವೇದದ ಅನುಬಂಧ ವಾಕ್ಯಗಳು :

- ದಾನಿ.02:34-35
- ಯೋಬ.21:16-18
- ಲೂಕ.03:17
- ಮತ್ತಾಯ.03:10-12

ಪದ ಡೇಟಾ:

- Strong's: H2842, H4671, H5784, H8401, G892

ಹೊಟ್ಟೆಕಿಚ್ಚು, ಆಸೆಪಡುವುದು

ಪದದ ಅರ್ಥವಿವರಣೆ:

“ಹೊಟ್ಟೆಕಿಚ್ಚು” ಎನ್ನುವ ಪದವು ಒಬ್ಬ ವ್ಯಕ್ತಿಗಿರುವ ಸಂಪತ್ತನ್ನು ನೋಡಿ ಅಥವಾ ಅವನಿಗಿರುವ ಒಳ್ಳೆ ಸದ್ಗುಣಗಳ ಕಾರಣ ಅವನನ್ನು ನೋಡಿ ಅಸೂಯೆ ಪಡುವುದನ್ನು ಸೂಚಿಸುತ್ತದೆ. “ಆಸೆಪಡುವುದು” ಎನ್ನುವ ಪದಕ್ಕೆ ಏನಾದರು ಬೇಕೆಂದು ಬಲವಾಗಿ ಬಯಸುವುದು ಎಂದರ್ಥ.

- ಬೇರೆಯವರ ಯಶಸ್ವಿಯನ್ನು, ಸಿರಿ ಸಂಪತ್ತು ಅಥವಾ ಒಳ್ಳೆ ಭಾಗ್ಯವನ್ನು ನೋಡಿ ಅಸಮಧಾನ ಹೊಂದಿರುವ ನಕಾರಾತ್ಮಕವಾದ ಭಾವನೆಯನ್ನು ಹೊಟ್ಟೆಕಿಚ್ಚು ಎನ್ನುತ್ತಾರೆ.
- ಬೇರೆಯವರ ಆಸ್ತಿ, ಅಥವಾ ಬೇರೆಯವರ ಹೆಂಡತಿಯನ್ನು ಸಹ ಬೇಕೆಂದು ಬಲವಾಗಿ ಬಯಸುವದನ್ನು ಆಸೆಪಡುವುದು ಎನ್ನುತ್ತಾರೆ.

(ಈ ಪದಗಳನ್ನು ಸಹ ನೋಡಿರಿ : ಅಸೂಯೆ)

ಸತ್ಯವೇದದ ಅನುಬಂಧ ವಾಕ್ಯಗಳು:

- 1 ಕೊರಿಂಥ.13:4-7
- 1 ಪೇತ್ರನು.02:01
- ವಿಮೋ.20:17
- ಮಾರ್ಕ.07:20-23
- ಜ್ಞಾನೋ.03:31-32
- ರೋಮಾ.01:29

ಪದ ಡೇಟಾ:

- Strong's: H183, H1214, H1215, H2530, H3415, H5869, H7065, H7068, G866, G1937, G2205, G2206, G3713, G3788, G4123, G4124, G4190, G5354, G5355, G5366

ಹೊರ ಹಾಕು, ಹೊರಗೆ ಎಸೆ, ಹೊರಗೆ ಬಿಸಾಡು

ಪದದ ಅರ್ಥವಿವರಣೆ:

ಒಬ್ಬರನ್ನು ಅಥವಾ ಯಾವುದಾದರೊಂದನ್ನು "ಹೊರ ಹಾಕು" ಅಥವಾ "ಹೊರ ಎಸೆ" ಎನ್ನುವದಕ್ಕೆ ಒಬ್ಬ ವ್ಯಕ್ತಿಯನ್ನಾಗಲಿ ಅಥವಾ ಯಾವುದಾದರೊಂದು ವಸ್ತುವನ್ನಾಗಲಿ ಹೊರ ಹಾಕುವುದಕ್ಕೆ ಬಲವಂತಿಕೆ ಮಾಡುವುದು ಎಂದರ್ಥ.

- "ಹಾಕು" ಎನ್ನುವ ಪದಕ್ಕೆ "ಎಸೆ" ಎಂದು ಹೇಳುವ ಅರ್ಥವೇ ಇರುತ್ತದೆ. ಬಲೆಯನ್ನು ಹಾಕು ಎಂದರೆ ನೀರಿನೊಳಗೆ ಬಲೆಯನ್ನು ಎಸೆ ಎಂದರ್ಥ.
- ಅಲಂಕಾರ ಭಾವನೆಯಲ್ಲಿ ಒಬ್ಬರನ್ನು "ಹೊರ ಹಾಕು" ಅಥವಾ "ಹೊರ ಕಳುಹಿಸು" ಎನ್ನುವದಕ್ಕೆ ಆ ವ್ಯಕ್ತಿಯನ್ನು ಪಕ್ಕಕ್ಕೆ ಕಳುಹಿಸು ಮತ್ತು ಆ ವ್ಯಕ್ತಿಯನ್ನು ತಿರಸ್ಕರಿಸು ಎನ್ನುವ ಅರ್ಥವು ಬರುತ್ತದೆ.

ಅನುವಾದ ಸಲಹೆಗಳು:

- ಸಂದರ್ಭಾನುಸಾರವಾಗಿ, ಇದನ್ನು ಇನ್ನೊಂದು ರೀತಿಯಲ್ಲಿ ಅನುವಾದ ಮಾಡುವುದಾದರೆ, "ಬಲವಂತ ಮಾಡು" ಅಥವಾ "ಪಕ್ಕಕ್ಕೆ ಕಳುಹಿಸು" ಅಥವಾ "ತೊಲಗಿಸು" ಎಂದು ಅನುವಾದ ಮಾಡಬಹುದು.
- "ದೆವ್ವಗಳನ್ನು ಹೊರ ಹಾಕು" ಎನ್ನುವ ಮಾತನ್ನು "ದೆವ್ವಗಳು ಬಿಟ್ಟು ಹೋಗುವಂತೆ ಮಾಡು" ಅಥವಾ "ದುಷ್ಟ ಆತ್ಮಗಳನ್ನು ಹೊರ ನಡೆಸು" ಅಥವಾ "ದೆವ್ವಗಳನ್ನು ಹೊರತಳ್ಳು" ಅಥವಾ "ಹೊರ ಬರುವುದಕ್ಕೆ ದೆವ್ವಗಳಿಗೆ ಆಜ್ಞಾಪಿಸು" ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ದೆವ್ವ, ದೆವ್ವ ಪೀಡಿತ)

[lots] **ಚೀಟು, ಚೀಟುಗಳು ಹಾಕುವುದು (p.794)**

ಸತ್ಯವೇದದ ಅನುಬಂಧ ವಾಕ್ಯಗಳು:

- ಅಪೊ.ಕೃತ್ಯ.07:17-19
- ಮಾರ್ಕ.03:13-16
- ಮಾರ್ಕ.09:29
- ಮತ್ತಾಯ.07:21-23
- ಮತ್ತಾಯ.09:32-34
- ಮತ್ತಾಯ.12:24
- ಮತ್ತಾಯ.17:19-21

ಪದ ಡೇಟಾ:

- Strong's: H1272, H1644, H1920, H3423, H7971, H7993, G1544

ಹೊರೆ, ಹೊರೆಗಳು, ಭಾರವಾದ, ಪ್ರಯಾಸಕರವಾದ

ಪದದ ಅರ್ಥವಿವರಣೆ:

ಹೊರೆ ಎನ್ನುವ ಪದಕ್ಕೆ ಭಾರವಾದದ್ದು ಎಂದರ್ಥ. ಈ ಪದವು ಅಕ್ಷರಾರ್ಥವಾಗಿ ಭಾರ ಹೊತ್ತಿಕೊಂಡು ಹೋಗುವ ಒಂದು ಪ್ರಾಣಿಯಂತೆ ಭೌತಿಕವಾದ ಭಾರವನ್ನು ಸೂಚಿಸುತ್ತದೆ. "ಹೊರೆ" ಎನ್ನುವ ಪದಕ್ಕೆ ಅನೇಕವಾದ ಸಾಂಕೇತಿಕ ಅರ್ಥಗಳಿವೆ:

- ಹೊರೆ ಎನ್ನುವುದು ಒಂದು ಕಠಿಣವಾದ ಕರ್ತವ್ಯವನ್ನು ಸೂಚಿಸುತ್ತದೆ ಅಥವಾ ಒಬ್ಬ ವ್ಯಕ್ತಿ ಮಾಡಬಹುದಾದ ತುಂಬಾ ಪ್ರಾಮುಖ್ಯವಾದ ಬಾಧ್ಯತೆಯನ್ನು ಸೂಚಿಸುತ್ತದೆ. ಅದಕ್ಕೆ ಆ ಹೊರೆಯನ್ನು ಹೊತ್ತಿಕೊಂಡು ಹೋಗುವ ವ್ಯಕ್ತಿಯನ್ನು ಕುರಿತು "ತಾಳಿಕೊಳ್ಳುತ್ತಿದ್ದಾನೆ" ಅಥವಾ "ಅತೀ ಹೆಚ್ಚಾದ ಭಾರವನ್ನು" "ಹೊತ್ತಿಕೊಂಡು ಹೋಗುತ್ತಿದ್ದಾನೆ" ಎಂದು ಹೇಳುತ್ತಾರೆ.
- ಒಬ್ಬ ಕ್ರೂರ ನಾಯಕನು ತಾನು ಆಳುತ್ತಿರುವ ಜನರ ಮೇಲೆ ಕಠಿಣವಾದ ಭಾರಗಳನ್ನು ಇಡಬಹುದು, ಉದಾಹರಣೆಗೆ ಬಹು ಹೆಚ್ಚಾದ ತೆರಿಗೆಗಳನ್ನು ಕಟ್ಟಬೇಕೆಂದು ಅವರನ್ನು ಬಲವಂತಿಕೆ ಮಾಡಬಹುದು.
- ಇನ್ನೊಬ್ಬರಿಗೆ ಭಾರವಾಗಿರಬಾರದೆಂದು ಬಯಸುವ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ತೊಂದರೆ ಕೊಡುವ ವ್ಯಕ್ತಿಯಾಗಿರಬಾರದು.
- ಒಬ್ಬ ವ್ಯಕ್ತಿಯ ಪಾಪದ ಅಪರಾಧವು ಅವನಿಗೆ ತುಂಬಾ ಹೊರೆಯಾಗಿರುತ್ತದೆ.
- "ಕರ್ತನ ಹೊರೆ" ಎನ್ನುವ ಪದವನ್ನು ಪ್ರವಾದಿ ತಪ್ಪದೇ ಜನರಿಗೆ ತಿಳಿಸುವ "ದೇವರಿಂದ ಸಂದೇಶ" ಎನ್ನುವದನ್ನು ಸೂಚಿಸುವುದಕ್ಕೆ ಅಲಂಕಾರಿಕವಾಗಿ ಉಪಯೋಗಿಸಲಾಗಿದೆ.
- "ಹೊರೆ" ಎನ್ನುವ ಪದವನ್ನು "ಬಾಧ್ಯತೆ" ಅಥವಾ "ಕರ್ತವ್ಯ" ಅಥವಾ "ಅತೀ ಹೆಚ್ಚಾದ ಭಾರ" ಅಥವಾ "ಸಂದೇಶ" ಎಂದು ಸಂದರ್ಭಕ್ಕೆ ತಕ್ಕಂತೆ ಅನುವಾದ ಮಾಡಿಕೊಳ್ಳಬಹುದು.

ಸತ್ಯವೇದದ ಅನುಬಂಧ ವಾಕ್ಯಗಳು :

- 2 ಥೆಸ್ಸ.03:6-9
- ಗಲಾತ್ಯ.06:1-2
- ಗಲಾತ್ಯ.06:3-5
- ಆದಿ.49:14-15
- ಮತ್ತಾಯ.11:28-30
- ಮತ್ತಾಯ.23:4-5

ಪದ ಡೇಟಾ:

- Strong's: H92, H3053, H4614, H4853, H4858, H4864, H4942, H5445, H5447, H5448, H5449, H5450, H6006, G4, G916, G922, G1117, G2347, G2599, G2655, G5413

ಹೊಲೆ, ಹೊಲೆಮಾಡಿದೆ, ಹೊಲೆ ಮಾಡುತ್ತಿದ್ದೇವೆ

ಪದದ ಅರ್ಥವಿವರಣೆ:

“ಹೊಲೆ” ಎನ್ನುವ ಪದಕ್ಕೆ ಆರಾಧನೆಯಲ್ಲಿ ಉಪಯೋಗಿಸುವುದಕ್ಕೆ ಅಂಗೀಕೃತವಾಗದ ವಿಧಾನದಲ್ಲಿ ವಸ್ತುಗಳನ್ನಾಗಲಿ ಅಥವಾ ಪರಿಶುದ್ಧವಾದ ಸ್ಥಳವನ್ನು ಕಲುಷಿತಗೊಳಿಸುವುದಾಗಲಿ ಅಥವಾ ಹಾನಿ ಮಾಡುವುದಾಗಲಿ ಎಂದರ್ಥ.

- ಅನೇಕಬಾರಿ ಯಾವುದನ್ನಾದರು ಹೊಲೆ ಮಾಡುವುದರಲ್ಲಿ ಅದನ್ನು ಅತೀ ಹೆಚ್ಚಾಗಿ ಅವಮಾನಕ್ಕೆ ಗುರಿಮಾಡುವುದನ್ನು ಒಳಗೊಂಡಿರುತ್ತದೆ.
- ಉದಾಹರಣೆಗೆ, ಅನ್ಯ ಅರಸರು ತಾವು ತಮ್ಮ ಅರಮನೆಗಳಲ್ಲಿ ಔತಣ ಕೂಟಗಳಲ್ಲಿ ಉಪಯೋಗಿಸುವುದರ ಮೂಲಕ ದೇವರ ಆಲಯದಿಂದ ವಿಶೇಷವಾದ ಆಹಾರ ಪದಾರ್ಥಗಳನ್ನು ಹೊಲೆ ಮಾಡುತ್ತಿದ್ದರು.
- ದೇವರ ಆಲಯದಲ್ಲಿ ಯಜ್ಞವೇದಿಯನ್ನು ಹೊಲೆ ಮಾಡುವುದಕ್ಕೆ ಶತ್ರುಗಳು ಸತ್ತವರಿಂದ ತೆಗೆದ ಎಲುಬುಗಳನ್ನು ಉಪಯೋಗಿಸುತ್ತಿದ್ದರು.
- ಈ ಪದವನ್ನು “ಅಪರಿಶುದ್ಧವಾಗುವುದಕ್ಕೆ ಕಾರಣವಾಗು” ಅಥವಾ “ಅಪವಿತ್ರಗೊಳಿಸುವದರಿಂದ ಅವಮಾನ ಮಾಡು” ಅಥವಾ “ಅಗೌರವದಿಂದ ಅಶುದ್ಧ ಮಾಡುವುದು” ಅಥವಾ “ಅಪವಿತ್ರವಾಗುವುದಕ್ಕೆ ಕಾರಣವಾಗು” ಎಂದೂ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಯಜ್ಞವೇದಿ, ಮೈಲಿಗೆ, ಅವಮಾನ, ಅಶುದ್ಧ, ಪವಿತ್ರ, ದೇವಾಲಯ, ಪರಿಶುದ್ಧ)

ಸತ್ಯವೇದದ ಅನುಬಂಧ ವಾಕ್ಯಗಳು :

- ಅಪೊ.ಕೃತ್ಯ.24:4-6
- ಯೆಶಯಾ.30:22
- ಕೀರ್ತನೆ.074:7-8
- ಕೀರ್ತನೆ.089:38-40

ಪದ ಡೇಟಾ:

- Strong's: H2490, H2610, H2930, G953

ಹೊಸ್ತಿಲು, ಹೊಸ್ತಿಲುಗಳು

ಪದದ ಅರ್ಥವಿವರಣೆ:

“ಹೊಸ್ತಿಲು” ಎನ್ನುವ ಪದವು ಬಾಗಿಲಲ್ಲಿ ಕೆಳಭಾಗವನ್ನು ಸೂಚಿಸುತ್ತದೆ ಅಥವಾ ಬಾಗಿಲಿನ ಒಳಗಿರುವ ಭವನದ ಚಿಕ್ಕ ಭಾಗವನ್ನು ಸೂಚಿಸುತ್ತದೆ.

- ಕೆಲವೊಂದುಬಾರಿ ಹೊಸ್ತಿಲು ಎನ್ನುವುದು ಕೊಠಡಿಯೊಳಗೆ ಅಥವಾ ಭವನದೊಳಗೆ ಪ್ರವೇಶಿಸುವುದಕ್ಕೆ ಹೆಜ್ಜೆ ಹಾಕಬೇಕಾದಗ ತಪ್ಪದೇ ದಾಟ ಬೇಕಾದ ಕಟ್ಟಿಗೆಯ ತುಂಡಾಗಿರುತ್ತದೆ ಅಥವಾ ಕಲ್ಲಾಗಿರುತ್ತದೆ.
- ಬಾಗಿಲು ಮತ್ತು ಗುಡಾರ ದ್ವಾರಗಳೆರಡಕ್ಕೂ ಹೊಸ್ತಿಲು ಇಟ್ಟಿರುತ್ತಾರೆ.
- ಒಬ್ಬ ವ್ಯಕ್ತಿ ದಾಟಿ ಹೋಗುವುದಕ್ಕೆ ಮನೆಯ ಮೊದಲ ಪ್ರವೇಶ ದ್ವಾರದ ಸ್ಥಳವನ್ನು ಸೂಚಿಸುವುದಕ್ಕೆ ಅನುವಾದ ಭಾಷೆಯಲ್ಲಿ ಉಪಯೋಗಿಸುವ ಪದದೊಂದಿಗೆ ಈ ಪದವನ್ನು ಅನುವಾದ ಮಾಡಬಹುದು.
- ಒಂದು ಈ ಪದಕ್ಕೆ ಯಾವ ಪದವೂ ಇಲ್ಲದಿದ್ದರೆ, “ಹೊಸ್ತಿಲು” ಎನ್ನುವ ಪದವನ್ನು “ಬಾಗಿಲು ಮಾರ್ಗ” ಅಥವಾ “ತೆರೆದಿರುವ” ಅಥವಾ “ಪ್ರವೇಶ ಮಾರ್ಗ” ಎಂದು ಸಂದರ್ಭಕ್ಕೆ ತಕ್ಕಂತೆ ಅನುವಾದ ಮಾಡಬಹುದು.

(ಈ ಪದಗಳನ್ನು ಸಹ ನೋಡಿರಿ : ಬಾಗಿಲು, ಗುಡಾರ)

ಸತ್ಯವೇದದ ಅನುಬಂಧ ವಾಕ್ಯಗಳು :

- 1 ಪೂರ್ವ.09:17-19
- ಯೆಹೆ.09:3-4
- ಯೆಶಯಾ.06:4-5
- ಜ್ಞಾನೋ.17:19-20

ಪದ ಡೇಟಾ:

- Strong's: H624, H4670, H5592

translationAcademy

ಸಂವಹನ 24.1

ಅತಿಶಯೋಕ್ತಿ

ವಿವರಣೆ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ಅತಿಶಯೋಕ್ತಿಗಳು ಎಂದರೇನು? ಸಾಮಾನ್ಯೀಕರಣ ಎಂದರೇನು? ನಾನು ಅವುಗಳನ್ನು ಹೇಗೆ ಭಾಷಾಂತರಿಸಬಹುದು?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಅಲಂಕಾರಗಳು. (UTA PDF)

ಮಾತನಾಡುವವನು ಅಥವಾ ಬರಹಗಾರನು ತಾನು ಸಂಪೂರ್ಣವಾಗಿ ನಿಜವಾದ, ಅಥವಾ ಸಾಮಾನ್ಯವಾಗಿ ನಿಜವಾದ ಅಥವಾ ಅತಿಶಯೋಕ್ತಿಯಾಗಿರುವ ಎಂದು ಉದ್ದೇಶಿಸುವಂಥದ್ದನ್ನು ಹೇಳಲು ನಿರ್ದಿಷ್ಟವಾಗಿ ಅದೇ ರೀತಿಯಿರುವ ಪದಗಳನ್ನು ಬಳಸಬಹುದು. ಇದರಿಂದಲೇ ಇದನ್ನು ಅರ್ಥಮಾಡಿಕೊಳ್ಳಲು ಬೇಕಾದ ಪದವನ್ನು ನಿರ್ಧರಿಸುವುದು ಕಷ್ಟವಾಗಬಹುದು. ಉದಾಹರಣೆಗೆ, ಕೆಳಗಿರುವ ವಾಕ್ಯವನ್ನು ಮೂರು ರೀತಿಯ ಅರ್ಥ ಕೊಡಬಹುದು.

- ಇಲ್ಲಿ ಪ್ರತಿ ರಾತ್ರಿ ಮಳೆ ಬರುತ್ತದೆ.

ಮಾತನಾಡುವವನು ಇಲ್ಲಿ ಪ್ರತಿ ರಾತ್ರಿ ಮಳೆ ಬರುತ್ತದೆ ಎಂಬುದನ್ನು ಉದ್ದೇಶಿಸುವಾಗ ಅದು ಅಕ್ಷರಶಃವಾಗಿ ನಿಜವಾಗಿದೆ ಎಂಬುದು ಅವನು ಹೇಳುತ್ತಿರುವುದರ ಅರ್ಥವಾಗಿದೆ.
ಮಾತನಾಡುವವನು ಇಲ್ಲಿ ಪ್ರತಿ ರಾತ್ರಿ ಮಳೆ ಬರುತ್ತದೆ ಎಂಬುದನ್ನು ಉದ್ದೇಶಿಸುವಾಗ ಅದು **ಸಾಮಾನ್ಯೀಕರಣ** ಆಗಿದೆ ಎಂಬುದು ಅವನು ಹೇಳುತ್ತಿರುವುದರ ಅರ್ಥವಾಗಿದೆ.
ಮಳೆಯ ಹೆಚ್ಚಿನ ಪ್ರಮಾಣದ ಕಡೆಗೆ ಸಾಮಾನ್ಯವಾಗಿ ಬಲವಾದ ಭಾವನೆಗಳಾದ ಕಿರಿಕಿರಿಯನ್ನು ಅಥವಾ ಅತಿಯಾದ ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ಸಹಜವಾಗಿ ಬರುವ ಮಳೆಗಿಂತ ಹೆಚ್ಚಾಗಿ ಮಳೆ ಬರುತ್ತಿದೆ ಎಂದು ಹೇಳಲು ಮಾತನಾಡುವವನು **ಅತಿಶಯೋಕ್ತಿ** ಆಗಿ ಅದನ್ನು ಹೇಳಿರಬಹುದು.

ಅತಿಶಯೋಕ್ತಿ: ಇದು **ಉತ್ಪ್ರೇಕ್ಷೆ** ಯನ್ನು ತಿಳಿಸಲು ಬಳಸುವ ಅಲಂಕಾರವಾಗಿದೆ. ಕೆಲವೊಮ್ಮೆ ಮಾತನಾಡುವವನು ವಿಷಯದ ಬಗ್ಗೆ ಇರುವ ತನ್ನ ಕಡುವಾದ ಭಾವನೆ ಅಥವಾ ಅಭಿಪ್ರಾಯಗಳನ್ನು ತೋರಿಸಲು ಉದ್ದೇಶಪೂರ್ವಕವಾಗಿ ಅತಿಶಯೋಕ್ತಿ ಅಥವಾ ನಿಜವಲ್ಲದ ವಿಷಯವನ್ನು ವಿವರಿಸುತ್ತಾನೆ. ಅವನು ಹೇಳುವ ಉತ್ಪ್ರೇಕ್ಷಿತ ವಿಷಯಗಳನ್ನು ಜನರು ಅರ್ಥಮಾಡಿಕೊಳ್ಳಬೇಕೆಂದು ನಿರೀಕ್ಷಿಸುತ್ತಾನೆ.

> ಅವರು **ಕಲ್ಲಿನ ಮೇಲೆ ಕಲ್ಲು ಇರುವುದಕ್ಕೆ** ಬಿಡುವುದಿಲ್ಲ (ಲೂಕ 19:44 ULT)

- ಇದೊಂದು ಉತ್ಪ್ರೇಕ್ಷೆ. ಇದರ ಅರ್ಥ ಶತ್ರುಗಳು ಯೆರೂಸಲೇಮನ್ನು ಸಂಪೂರ್ಣವಾಗಿ ನಾಶಮಾಡುವರು.

> ಮೋಶೆಯು **ಐಗುಪ್ತದವರ ಸರ್ವ ವಿದ್ಯೆಗಳಲ್ಲಿ** ಶಿಕ್ಷಿತನಾದನು (ಅಪೊ.ಕೃತ್ಯ. 7:22 ULT)

- ಈ ಅತಿಶಯೋಕ್ತಿ ಅರ್ಥವೇನಂದರೆ ಅವನು ಐಗುಪ್ತದವರಿಗೆ ತಿಳಿದಿರುವ ಮತ್ತು ಅವರು ಕಲಿಸುವ ಬಹುತೇಕ ಎಲ್ಲವನ್ನು ಕಲಿತುಕೊಂಡನು, ಆದ್ದರಿಂದ ಒಬ್ಬ ಐಗುಪ್ತದವನಂತೆಯೇ ಶಿಕ್ಷಿತನಾದನು.

ಸಾಮಾನ್ಯೀಕರಣ: ಈ ಹೇಳಿಕೆಯು ಅನ್ವಯವಾಗುವಂಥ ಬಹುತೇಕ ಸಮಯದಲ್ಲಿ ಅಥವಾ ಬಹುತೇಕ ಪರಿಸ್ಥಿತಿಗಳಲ್ಲಿ ನಿಜವಾಗಿರುತ್ತದೆ.

> ಶಿಕ್ಷೆಯನ್ನು ನಿರ್ಲಕ್ಷಿಸುವವನಿಗೆ **ಬಡತನ ಮತ್ತು ಅವಮಾನ ಆಗುತ್ತದೆ,** ಆದರೆ ತಿದ್ದುವಿಕೆಯಿಂದ ಕಲಿತುಕೊಳ್ಳುವವನಿಗೆ **ಮಾನವು ಬರುತ್ತದೆ**. (ಜ್ಞಾನೋಕ್ತಿಗಳು 13:18)

- ಶಿಕ್ಷೆಯನ್ನು ನಿರ್ಲಕ್ಷಿಸುವ ಜನರಿಗೆ ಸಾಮಾನ್ಯವಾಗಿ ಏನಾಗುತ್ತದೆ ಮತ್ತು ತಿದ್ದುವಿಕೆಯಿಂದ ಕಲಿತುಕೊಳ್ಳುವ ಜನರಿಗೆ ಏನಾಗುತ್ತದೆ ಎಂಬುದನ್ನು ಈ ಸಾಮಾನ್ಯೀಕರಣದ ಹೇಳಿಕೆಗಳು ಹೇಳುತ್ತವೆ. ಈ ಹೇಳಿಕೆಗಳಿಗೆ ಕೆಲವು ಆಕ್ಷೇಪಣೆಗಳು ಇರಬಹುದು, ಆದರೆ ಸಾಮಾನ್ಯವಾಗಿ ಅವು ನಿಜವಾಗಿವೆ.

> ಆದರೆ ನೀವು ಪ್ರಾರ್ಥನೆಮಾಡುವಾಗ ಅನ್ಯಜನಗಳ ಹಾಗೆ ಹೇಳಿದ್ದನ್ನೇ ಸುಮ್ಮನೆ ಮತ್ತೆ ಮತ್ತೆ ಹೇಳಬೇಡಿ; **ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ಭಾವಿಸುತ್ತಾರೆ.** (ಮತ್ತಾಯ 6:7)

- ಸಾಮಾನ್ಯೀಕರಣ ಹೇಳಿಕೆಯು ಅನ್ಯಜನರು ಯಾವುದಕ್ಕೆ ಹೆಸರುವಾಸಿಯಾಗಿದ್ದರು ಎಂಬುದನ್ನು ಹೇಳುತ್ತದೆ. ಅನೇಕ ಅನ್ಯಜನರು ಇದನ್ನು ಮಾಡುತ್ತಿದ್ದರು. ಸ್ವಲ್ಪ ಜನರು ಅದನ್ನು ಮಾಡದೆ ಹೋದರೂ ಅದು ಪ್ರಾಮುಖ್ಯವೇನು ಅಲ್ಲ. ಶ್ರೋತೃಗಳು ಹೆಸರುವಾಸಿಯಾಗಿರುವ ಈ ಆಚರಣೆಯಲ್ಲಿ ಪಾಲುಗಾರರಾಗಬಾರದು ಎಂಬುದು ಇದರಲ್ಲಿನ ವಿಷಯವಾಗಿದೆ.

"ಎಲ್ಲ," "ಯಾವಾಗಲೂ," "ಯಾವುದೂ ಇಲ್ಲ," ಅಥವಾ "ಎಂದಿಗೂ ಇಲ್ಲ" ಎಂಬ ಬಲಪ್ರಯೋಗ ಇರುವ ಪದಗಳು ಅತಿಶಯೋಕ್ತಿ ಅಥವಾ ಸಾಮಾನ್ಯೀಕರಣ ಹೇಳಿಕೆಗಳಲ್ಲಿ ಇದ್ದರೂ, ಇದು **ನಿರ್ದಿಷ್ಟವಾಗಿ** "ಎಲ್ಲಾ," "ಯಾವಾಗಲೂ," "ಯಾವುದೂ ಇಲ್ಲ," ಅಥವಾ "ಎಂದಿಗೂ ಇಲ್ಲ" ಎಂಬ ಅರ್ಥವನ್ನು ಕೊಡುತ್ತವೆ ಎಂದರ್ಥವಲ್ಲ. ಇದು ಸರಳವಾಗಿ "ಬಹುತೇಕ," "ಬಹುತೇಕ ಸಮಯ," "ಕನಿಷ್ಟ ಯಾವುದಾದರೂ" ಅಥವಾ "ವಿರಳವಾಗಿ" ಎಂಬ ಅರ್ಥ ನೀಡುತ್ತದೆ.

ಕಾರಣವೇನಂದರೆ ಇದು ಭಾಷಾಂತರದ ಸಮಸ್ಯೆಯಾಗಿದೆ

ಓದುಗರು ಹೇಳಿಕೆಯು ಅಕ್ಷರಶಃವಾಗಿ ನಿಜವೋ, ಅಲ್ಲವೋ ಎಂದು ಅರ್ಥಮಾಡಿಕೊಳ್ಳಲು ಶಕ್ತರಾಗಿರಬೇಕು.

ಓದುಗರು ಹೇಳಿಕೆಯು ಅಕ್ಷರಶಃವಾಗಿ ನಿಜವಲ್ಲ ಎಂದು ತಿಳಿದುಕೊಂಡರೆ ಈ ಹೇಳಿಕೆಯು ಅತಿಶಯೋಕ್ತಿಯೇ, ಸಾಮಾನ್ಯೀಕರಣ ವಾಕ್ಯವೇ ಅಥವಾ ಅಸತ್ಯವೇ ಎಂದು ಅರ್ಥಮಾಡಿಕೊಳ್ಳಲು ಶಕ್ತರಾಗಿರಬೇಕು. (ಸತ್ಯವೇದವು ಸಂಪೂರ್ಣವಾಗಿ ನಿಜವೇ ಆಗಿದ್ದರೂ, ಸತ್ಯವೇದವು ಯಾವಾಗಲೂ ಸತ್ಯವನ್ನು ಹೇಳದ ಜನರ ಬಗ್ಗೆ ಹೇಳುತ್ತದೆ.)

ಸತ್ಯವೇದದಲ್ಲಿನ ಉದಾಹರಣೆಗಳು

ಅತಿಶಯೋಕ್ತಿಯ ಉದಾಹರಣೆಗಳು

> ಇದಲ್ಲದೆ ನಿನ್ನ ಕೈ ಪಾಪ ಮಾಡಲು ನಿನಗೆ ಕಾರಣವಾದರೆ, **ಅದನ್ನು ಕತ್ತರಿಸಿಬಿಡು.** ಅಂಗಹೀನನಾಗಿ ನಿತ್ಯಜೀವದಲ್ಲಿ ಸೇರುವುದು ನಿನಗೆ ಉತ್ತಮ... (ಮಾರ್ಕ 9:43 ULT)

ಯೇಸು ಕೈಯನ್ನು ಕತ್ತರಿಸಿಬಿಡು ಎಂದು ಹೇಳುವಾಗ ಆತನು ಉದ್ದೇಶಿಸಿದ್ದೇನಂದರೆ ನಾವು ಪಾಪ ಮಾಡದೇ ಇರುವುದಕ್ಕಾಗಿ **ಏನೆಲ್ಲಾ ತೀವ್ರವಾದ ಕಾರ್ಯವನ್ನು ಮಾಡಬೇಕೋ** ಅದನ್ನು ಮಾಡಿರಿ. ಪಾಪ ಮಾಡುವುದನ್ನು ನಿಲ್ಲಿಸಲು ಪ್ರಯತ್ನಿಸುವುದು ಎಷ್ಟು ಪ್ರಾಮುಖ್ಯ ಎಂಬುದನ್ನು ತಿಳಿಸುವುದಕ್ಕಾಗಿ ಆತನು ಅತಿಶಯೋಕ್ತಿಯನ್ನು ಬಳಸಿದನು.

> ಆಗ ಫಿಲಿಷ್ಟಿಯರು ಇಸ್ರಾಯೇಲರಿಗೆ ವಿರುದ್ಧವಾಗಿ ಯುದ್ಧಮಾಡುವುದಕ್ಕೋಸ್ಕರ ಕೂಡಿಬಂದರು: ಮೂವತ್ತು ಸಾವಿರ ರಥಗಳನ್ನು, ರಥಗಳನ್ನು ಓಡಿಸಲು ಆರು ಸಾವಿರ ಜನರನ್ನು ಮತ್ತು **ಸಮುದ್ರ ತೀರದ ಮರಳಿನಷ್ಟು ಅಸಂಖ್ಯಾತ** ಕಾಲ್ಬಲವನ್ನೂ ತೆಗೆದುಕೊಂಡು ಬಂದರು. (1 ಸಮುವೇಲ 13:5 ULT)

ಗುರುತು ಮಾಡಿರುವ ನುಡಿಗಟ್ಟು, ಫಿಲಿಪ್ಪಿಯರ ಸೈನ್ಯವು ಸಂಖ್ಯೆಯಲ್ಲಿ ಅಸಂಖ್ಯಾತವಾಗಿದೆ ಎಂಬ ಭಾವನೆಯನ್ನು ವ್ಯಕ್ತಪಡಿಸುವ ಉದ್ದೇಶಕ್ಕಾಗಿ ಬಳಸಿರುವ ಉತ್ಪ್ರೇಕ್ಷೆಯಾಗಿದೆ. ಫಿಲಿಪ್ಪಿಯರ ಸೈನ್ಯದಲ್ಲಿ **ಅನೇಕಾನೇಕ** ಸೈನಿಕರು ಇದ್ದರು ಎಂಬುದು ಇದರರ್ಥವಾಗಿದೆ.

> ಆದರೆ ಆತನ ಅಭಿಷೇಕವು **ಎಲ್ಲ ವಿಷಯಗಳ** ಬಗ್ಗೆ ನಿಮಗೆ ಬೋಧಿಸಿದಂತೆಯೇ ಅದು ನಿಜವಾಗಿದೆ, ಅದು ಸುಳ್ಳಲ್ಲ, ಮತ್ತು ಅದು ನಿಮಗೆ ಬೋಧಿಸಿದ ಪ್ರಕಾರವೇ ಆತನಲ್ಲಿ ನೆಲೆಗೊಳ್ಳಿರಿ. (1 ಯೋಹಾನ 2:27 ULT)

ಇದು ಅತಿಶಯೋಕ್ತಿಯಾಗಿದೆ. **ನಾವು ತಿಳಿದುಕೊಳ್ಳಬೇಕಾದ ಎಲ್ಲ ವಿಷಯಗಳ** ಬಗ್ಗೆ ದೇವರ ಆತ್ಮನು ನಮಗೆ ಬೋಧಿಸುತ್ತಾನೆ ಎಂಬ ಭರವಸೆಯನ್ನು ಇದು ವ್ಯಕ್ತಪಡಿಸುತ್ತದೆ. ತಿಳಿದುಕೊಳ್ಳಲು ಸಾಧ್ಯವಿರುವ ಎಲ್ಲದರ ಬಗ್ಗೆ ದೇವರ ಆತ್ಮನು ನಮಗೆ ಬೋಧಿಸುವುದಿಲ್ಲ.

> ಅವರು ಆತನನ್ನು ಕಂಡುಕೊಂಡು ಅತನಿಗೆ, "**ಎಲ್ಲರೂ** ನಿನ್ನನ್ನು ಹುಡುಕುತ್ತಿದ್ದಾರೆ" ಎಂದು ಹೇಳಿದರು. (ಮಾರ್ಕ 1:37 ULT)

ಪಟ್ಟಣದಲ್ಲಿರುವ ಪ್ರತಿಯೊಬ್ಬರೂ ಯೇಸುವನ್ನು ಹುಡುಕುತ್ತಿದ್ದಾರೆಂಬದು ಬಹುಶಃ ಶಿಷ್ಯರ ಮಾತಿನ ಅರ್ಥವಲ್ಲ, ಆದರೆ **ಅನೇಕ ಜನರು** ಆತನನ್ನು ಹುಡುಕುತ್ತಿದ್ದಾರೆ, ಅಥವಾ ಅಲ್ಲಿ ಯೇಸುವಿಗೆ ಅಪ್ತರಾಗಿದ್ದ ಸ್ನೇಹಿತರೆಲ್ಲರೂ ಆತನನ್ನು ಹುಡುಕುತ್ತಿದ್ದಾರೆಂಬ ಅರ್ಥವಾಗಿರಬಹುದು. ಇದು ಅವರು ಮತ್ತು ಇತರರು ಆತನ ಬಗ್ಗೆ ಚಿಂತಿತರಾಗಿದ್ದಾರೆ ಎಂಬ ಭಾವನೆಯನ್ನು ವ್ಯಕ್ತಪಡಿಸುವ ಉದ್ದೇಶದಿಂದ ಬಳಸಿರುವ ಉತ್ಪ್ರೇಕ್ಷೆಯಾಗಿದೆ.

ಸಾಮಾನ್ಯೀಕರಣದ ಉದಾಹರಣೆಗಳು

> **ನಜರೇತಿನಿಂದ ಒಳ್ಳೆಯದೇನಾದರೂ ಬರಲು ಸಾಧ್ಯವೋ?** (ಯೋಹಾನ 1:46 ULT)

ಈ ಭಾವೋತ್ತೇಜಕ ಪ್ರಶ್ನೆಯು ನಜರೇತಿನಲ್ಲಿ ಒಳ್ಳೆಯದು ಯಾವುದೂ ಇಲ್ಲ ಎಂಬ ಸಾಮಾನ್ಯೀಕರಣವನ್ನು ವ್ಯಕ್ತಪಡಿಸುವ ಉದ್ದೇಶವುಳ್ಳದ್ದಾಗಿದೆ. ಅಲ್ಲಿನ ಜನರು ಅಶಿಕ್ಷಿತರು ಮತ್ತು ಕಟ್ಟುನಿಟ್ಟಾಗಿ ಧರ್ಮವನ್ನು ಪಾಲಿಸುವವರಲ್ಲ ಎಂಬ ಅಪಖ್ಯಾತಿ ಉಳ್ಳವರಾಗಿದ್ದರು. ಖಂಡಿತವಾಗಿ, ಇದಕ್ಕೆ ಆಕ್ಷೇಪಣೆಗಳು ಇದ್ದವು.

> "**ಕ್ರೇತದವರು ಯಾವಾಗಲೂ ಸುಳ್ಳುಗಾರರೂ, ದುಷ್ಟ ಮೃಗಗಳೂ, ಸೋಮಾರಿಗಳಾದ ಹೊಟ್ಟೆಬಾಕರೂ**" ಆಗಿದ್ದಾರೆಂದು ಅವರಲ್ಲಿ ಒಬ್ಬನಾದ ಅವರ ಸ್ವಂತ ಪ್ರವಾದಿಯೇ ಹೇಳಿದ್ದಾನೆ. (ತೀತ 1:12 ULT)

ಇದು ಸಾಮಾನ್ಯೀಕರಣವಾಗಿದೆ, ಇದರರ್ಥ ಕ್ರೇತದವರಿಗೆ ಈ ರೀತಿಯಾದ ಅಪಖ್ಯಾತಿ ಇತ್ತು, ಏಕೆಂದರೆ ಸಾಮಾನ್ಯವಾಗಿ ಕ್ರೇತದವರು ಈ ರೀತಿಯಾಗಿ ವರ್ತಿಸುತ್ತಿದ್ದರು. ಇದಕ್ಕೂ ಆಕ್ಷೇಪಣೆಗಳು ಇರುವ ಸಾಧ್ಯತೆಯಿದೆ.

> **ಸೋಮಾರಿತನದ ಕೈ ಬಡತನವನ್ನು ಉಂಟುಮಾಡುತ್ತದೆ, ಆದರೆ ಚುರುಕುಗೈ ಅವನನ್ನು ಶ್ರೀಮಂತನನ್ನಾಗಿ ಮಾಡುತ್ತದೆ**. (ಜ್ಞಾನೋಕ್ತಿ 10:4 ULT)

ಇದು ಸಾಮಾನ್ಯವಾಗಿ ನಿಜವಾದ ಸಂಗತಿ, ಮತ್ತು ಬಹುತೇಕ ಜನರ ಅನುಭವವನ್ನು ತೋರಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಆಕ್ಷೇಪಣೆಗಳಿರುವ ಸಾಧ್ಯತೆಯಿದೆ.

ಎಚ್ಚರಿಕೆ

ಅಸಾಧ್ಯವೆಂದು ತೋರುವ ಕಾರಣ ಒಂದು ವಿಷಯವು ಉತ್ಪ್ರೇಕ್ಷೆಯಾಗಿದೆ ಎಂದು ಊಹಿಸಿಕೊಳ್ಳಬೇಕಾಗಿಲ್ಲ. ದೇವರು ಅದ್ಭುತಕಾರ್ಯಗಳನ್ನು ಮಾಡುತ್ತಾನೆ.

> ...ಯೇಸು **ಸಮುದ್ರದ ಮೇಲೆ ನಡೆಯುತ್ತಾ** ದೋಣಿಯ ಸಮೀಪಕ್ಕೆ ಬರುವುದನ್ನು ಅವರು ನೋಡಿದರು... (ಯೊಹಾನ 6:19 ULT)

ಇದು ಅತಿಶಯೋಕ್ತಿಯಲ್ಲ. ಯೇಸು ನಿಜವಾಗಲೂ ಸಮುದ್ರದ ನೀರಿನ ಮೇಲೆ ನಡೆದು ಬಂದನು. ಇದು ಅಕ್ಷರಶಃ ನಿಜವಾದ ಹೇಳಿಕೆ.

"ಎಲ್ಲಾ" ಎಂಬ ಪದ ಯಾವಾಗಲೂ ಸಾಮಾನ್ಯೀಕರಣದ ಪದವಾಗಿದ್ದು "ಬಹುತೇಕ" ಎಂಬ ಅರ್ಥಕೊಡುತ್ತದೆ ಎಂದು ಊಹಿಸಿಕೊಳ್ಳಬೇಡಿರಿ.

> ಯೆಹೋವನ ತನ್ನ **ಎಲ್ಲಾ** ಮಾರ್ಗಗಳಲ್ಲಿ ನೀತಿಯುಳ್ಳವನು; ಆತನು ಮಾಡುವ **ಎಲ್ಲಾ** ಕಾರ್ಯಗಳಲ್ಲಿ ಕೃಪೆಯುಳ್ಳವನು. (ಕೀರ್ತನೆ. 145:17 ULT)

ಯೆಹೋವನು ಯಾವಾಗಲೂ ನೀತಿಯುಳ್ಳವನು. ಇದು ಸಂಪೂರ್ಣವಾಗಿ ನಿಜವಾದ ಹೇಳಿಕೆಯಾಗಿದೆ.

ಭಾಷಾಂತರದ ಕಾರ್ಯತಂತ್ರಗಳು

ಅತಿಶಯೋಕ್ತಿ ಅಥವಾ ಸಾಮಾನ್ಯೀಕರಣದ ಹೇಳಿಕೆಗಳು ಸಹಜವಾಗಿದ್ದು, ಜನರಿಗೆ ಅರ್ಥವಾಗಲು ಸುಲಭವಾಗಿದ್ದರೆ ಮತ್ತು ಅದು ಸುಳ್ಳು ಎಂದು ಜನರು ಅಂದುಕೊಳ್ಳದಿದ್ದರೆ ಅದನ್ನೇ ಬಳಸಲು ಪರಿಗಣಿಸಿರಿ. ಇಲ್ಲದಿದ್ದರೆ, ಇಲ್ಲಿ ಕೆಲವು ಆಯ್ಕೆಗಳಿವೆ ಗಮನಿಸಿ.

ಯಾವುದೇ ಉತ್ಪ್ರೇಕ್ಷೆ ಇಲ್ಲದೆ ಅರ್ಥವನ್ನು ವ್ಯಕ್ತಪಡಿಸಿರಿ.
ಸಾಮಾನ್ಯೀಕರಣದ ವಿಷಯದಲ್ಲಿ, "ಸಾಮಾನ್ಯವಾಗಿ" ಅಥವಾ "ಹೆಚ್ಚಿನ ಪ್ರಕರಣಗಳಲ್ಲಿ" ಎಂಬಂಥ ಪದಗಳನ್ನು ಬಳಸಿ ಸಾಮಾನ್ಯೀಕರಣವನ್ನು ತೋರಿಸಿಕೊಡಿರಿ.
ಅತಿಶಯೋಕ್ತಿ ಅಥವಾ ಸಾಮಾನ್ಯೀಕರಣ ಅಷ್ಟೊಂದು ಖಚಿತವಾಗಿ ಇರುವುದಿಲ್ಲ ಎಂಬುದನ್ನು ತೋರಿಸಲು "ಅನೇಕ" ಅಥವಾ "ಬಹುತೇಕ" ಎಂಬ ಪದಗಳನ್ನು ಅತಿಶಯೋಕ್ತಿ ಅಥವಾ ಸಾಮಾನ್ಯೀಕರಣಕ್ಕೆ ಸೇರಿಸಿರಿ.
ಅತಿಶಯೋಕ್ತಿ ಅಥವಾ ಸಾಮಾನ್ಯೀಕರಣದಲ್ಲಿರುವ "ಎಲ್ಲಾ", "ಯಾವಾಗಲೂ," "ಯಾವುದೂ ಇಲ್ಲ," ಅಥವಾ "ಎಂದಿಗೂ ಇಲ್ಲ," ಎಂಬ ಪದಗಳು ತೆಗೆದುಹಾಕಲು ಪರಿಗಣಿಸಿರಿ.

ಭಾಷಾಂತರದ ಕಾರ್ಯತಂತ್ರಗಳನ್ನು ಅನ್ವಯಿಸಲಾಗಿರುವ ಉದಾಹರಣೆಗಳು

(1) ಯಾವುದೇ ಉತ್ಪ್ರೇಕ್ಷೆ ಇಲ್ಲದೆ ಅರ್ಥವನ್ನು ವ್ಯಕ್ತಪಡಿಸಿರಿ.

> ಆಗ ಫಿಲಿಷ್ಟಿಯರು ಇಸ್ರಾಯೇಲರಿಗೆ ವಿರುದ್ಧವಾಗಿ ಯುದ್ಧಮಾಡುವುದಕ್ಕೋಸ್ಕರ ಕೂಡಿಬಂದರು: ಮೂವತ್ತು ಸಾವಿರ ರಥಗಳನ್ನು, ರಥಗಳನ್ನು ಓಡಿಸಲು ಆರು ಸಾವಿರ ಜನರನ್ನು ಮತ್ತು **ಸಮುದ್ರ ತೀರದ ಮರಳಿನಷ್ಟು ಅಸಂಖ್ಯಾತ** ಕಾಲ್ಬಲವನ್ನೂ ತೆಗೆದುಕೊಂಡು ಬಂದರು. (1 ಸಮುವೇಲ 13:5 ULT)
>
> > ಆಗ ಫಿಲಿಷ್ಟಿಯರು ಇಸ್ರಾಯೇಲರಿಗೆ ವಿರುದ್ಧವಾಗಿ ಯುದ್ಧಮಾಡುವುದಕ್ಕೋಸ್ಕರ ಕೂಡಿಬಂದರು: ಮೂವತ್ತು ಸಾವಿರ ರಥಗಳನ್ನು, ರಥಗಳನ್ನು ಓಡಿಸಲು ಆರು ಸಾವಿರ ಜನರನ್ನು ಮತ್ತು **ಬಹು ಸಂಖ್ಯೆಯಲ್ಲಿ ಕಾಲ್ಬಲವನ್ನೂ** ತೆಗೆದುಕೊಂಡು ಬಂದರು.

(2) ಸಾಮಾನ್ಯೀಕರಣದ ವಿಷಯದಲ್ಲಿ, "ಸಾಮಾನ್ಯವಾಗಿ" ಅಥವಾ "ಹೆಚ್ಚಿನ ಪ್ರಕರಣಗಳಲ್ಲಿ" ಎಂಬಂಥ ಪದಗಳನ್ನು ಬಳಸಿ ಸಾಮಾನ್ಯೀಕರಣವನ್ನು ತೋರಿಸಿಕೊಡಿರಿ.

> ಶಿಕ್ಷೆಯನ್ನು ನಿರ್ಲಕ್ಷಿಸುವವನಿಗೆ ಬಡತನ ಮತ್ತು ಅವಮಾನ ಆಗುತ್ತದೆ... (ಜ್ಞಾನೋಕ್ತಿಗಳು 13:18 ULT)
>
> > **ಸಾಮಾನ್ಯವಾಗಿ,** ಶಿಕ್ಷೆಯನ್ನು ನಿರ್ಲಕ್ಷಿಸುವವನಿಗೆ ಬಡತನ ಮತ್ತು ಅವಮಾನ ಆಗುತ್ತದೆ.
>
> ಆದರೆ ನೀವು ಪ್ರಾರ್ಥನೆಮಾಡುವಾಗ ಅನ್ಯಜನಗಳ ಹಾಗೆ ಹೇಳಿದ್ದನ್ನೇ ಸುಮ್ಮನೆ ಮತ್ತೆ ಮತ್ತೆ ಹೇಳಬೇಡಿ; ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ಭಾವಿಸುತ್ತಾರೆ. (ಮತ್ತಾಯ 6:7)
>
> > ಆದರೆ ನೀವು ಪ್ರಾರ್ಥನೆಮಾಡುವಾಗ **ಸಾಮಾನ್ಯವಾಗಿ** ಅನ್ಯಜನಗಳು ಹೇಳುವ ಹಾಗೆ ಹೇಳಿದ್ದನ್ನೇ ಸುಮ್ಮನೆ ಮತ್ತೆ ಮತ್ತೆ ಹೇಳಬೇಡಿ; ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ಭಾವಿಸುತ್ತಾರೆ.

(3) ಅತಿಶಯೋಕ್ತಿ ಅಥವಾ ಸಾಮಾನ್ಯೀಕರಣ ಅಷ್ಟೊಂದು ಖಚಿತವಾಗಿ ಇರುವುದಿಲ್ಲ ಎಂಬುದನ್ನು ತೋರಿಸಲು "ಅನೇಕ" ಅಥವಾ "ಬಹುತೇಕ" ಎಂಬ ಪದಗಳನ್ನು ಅತಿಶಯೋಕ್ತಿ ಅಥವಾ ಸಾಮಾನ್ಯೀಕರಣಕ್ಕೆ ಸೇರಿಸಿರಿ.

> ಆಗ **ಇಡೀ** ಯೂದಾಯ ಸೀಮೆಯು ಮತ್ತು ಯೆರೂಸಲೇಮಿನ **ಎಲ್ಲಾ** ಜನರು ಆತನ ಬಳಿಗೆ ಹೋದರು. (ಮಾರ್ಕ 1:5 ULT)
>
> > **ಬಹುತೇಕ ಎಲ್ಲ** ಯೂದಾಯ ಸೀಮೆಯು ಮತ್ತು ಯೆರೂಸಲೇಮಿನ **ಬಹುತೇಕ ಎಲ್ಲಾ** ಜನರು ಆತನ ಬಳಿಗೆ ಹೋದರು."
> > ಅಥವಾ:
> > ಯೂದಾಯ ಸೀಮೆಯ **ಅನೇಕರು** ಮತ್ತು ಯೆರೂಸಲೇಮಿನ **ಅನೇಕ** ಜನರು ಆತನ ಬಳಿಗೆ ಹೋದರು."

(4) ಅತಿಶಯೋಕ್ತಿ ಅಥವಾ ಸಾಮಾನ್ಯೀಕರಣದಲ್ಲಿರುವ "ಎಲ್ಲಾ", "ಯಾವಾಗಲೂ," "ಯಾವುದೂ ಇಲ್ಲ," ಅಥವಾ "ಎಂದಿಗೂ ಇಲ್ಲ," ಎಂಬ ಪದಗಳು ತೆಗೆದುಹಾಕಲು ಪರಿಗಣಿಸಿರಿ.

> ಆಗ **ಇಡೀ** ಯೂದಾಯ ಸೀಮೆಯು ಮತ್ತು ಯೆರೂಸಲೇಮಿನ **ಎಲ್ಲಾ** ಜನರು ಆತನ ಬಳಿಗೆ ಹೋದರು. (ಮಾರ್ಕ 1:5 ULT)
>
> > ಯೂದಾಯ ಸೀಮೆಯವರು ಮತ್ತು ಯೆರೂಸಲೇಮಿನ ಜನರು ಆತನ ಬಳಿಗೆ ಹೋದರು.

"

ಹಿಂತಿರುಗಿ ಹೋಗಿ: ವಿಧಾನಸಭೆ, ವಿಧಾನಸಭೆಗಳು, ಗುಂಪುಸೇರಿಸು, ಗುಂಪು ಗೂಡಿಸಲ್ಪಟ್ಟಿದೆ

ಉಪಮಾಲಂಕಾರ.

ಉಪಮಾಲಂಕಾರ ಎಂದರೆ ಎರಡು ವಸ್ತುಗಳ, ನಡುವೆ ಇರುವ ಹೋಲಿಕೆಯನ್ನು ಕುರಿತು ಹೇಳುವುದು, ಆದರೆ ಸಾಮಾನ್ಯವಾಗಿ ಒಂದೇ ಆಗಿರುವುದಿಲ್ಲ

ಒಂದು ವಸ್ತು ಅಥವಾ ವ್ಯಕ್ತಿ ಇನ್ನೊಂದರಂತೆ ಇದೆ, ಇನ್ನೊಬ್ಬರಂತೆ ಇದ್ದಾರೆ ಎಂದು ಹೇಳಲು ಬಳಸುವಂತದ್ದು. ಎರಡು ವಸ್ತುಗಳ ನಡುವೆ, ಇಬ್ಬರು ವ್ಯಕ್ತಿಗಳ ನಡುವೆ ಹೋಲಿಕೆ ಇರುವ ಲಕ್ಷಣಗಳು/ ಅಂಶಗಳು ಇದ್ದರೆ ಅವುಗಳನ್ನು "ಅಂತೆ," "ಹಾಗೆ" ಎಂಬ ಪದಗಳನ್ನು ಬಳಸಲಾಗುವುದು.

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ಉಪಮಾಲಂಕಾರ ಎಂದರೇನು ?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಅಲಂಕಾರಗಳು. (UTA PDF)

ವಿವರಣೆ

ಉಪಮಾಲಂಕಾರ ಎಂದರೆ ಎರಡು ವಸ್ತು, ಇಬ್ಬರು ವ್ಯಕ್ತಿಗಳ ನಡುವೆ ಇರುವ ಹೋಲಿಕೆಯನ್ನು ಕುರಿತು ಹೇಳುವುದು, ಆದರೆ ಸಾಮಾನ್ಯವಾಗಿ ಒಂದೇ ಆಗಿರುವುದಿಲ್ಲ

ಇದು ಎರಡು ವಸ್ತುಗಳು ಅಥವಾ ಇಬ್ಬರು ವ್ಯಕ್ತಿಗಳು ಸಮಾನ ಗುಣಲಕ್ಷಣಗಳನ್ನು ಹೊಂದಿದ್ದರೆ ಮತ್ತು "ಅಂತೆ," "ಹಾಗೆ " ಎಂಬ ಪದಗಳನ್ನುಹೊಂದಿರುವಂತೆ ಗಮನವಹಿಸಲಾಗುತ್ತದೆ.

> ಜನರ ಗುಂಪುಗಳನ್ನು ನೊಡಿ ಅವರು ಕುರುಬನಿಲ್ಲದ ಕುರಿಗಳ ಹಾಗೆ ತೊಳಲಿ ಬಳಲಿ ಹೋಗಿದ್ದಾರಲ್ಲಾ .ಎಂದು ಅವರ ಮೇಲೆ ಕನಿಕರಪಟ್ಟನು. (ಮತ್ತಾಯ 9:36)

ಯೇಸುವು ಜನರ ಗುಂಪನ್ನು ಕುರುಬನಿಲ್ಲದ ಕುರಿಗಳಿಗೆ ಹೋಲಿಕೆ ಮಾಡಿದ್ದಾನೆ. ತಮ್ಮನ್ನು ಮುನ್ನಡೆಸುವ ಕುರುಬನಿಲ್ಲದಿದ್ದರೆ ಕುರಿಗಳು ಭಯದಿಂದ ಇರುತ್ತವೆ. ಜನರ ಗುಂಪು ಸಹ ಕುರಿಗಳಂತೆ ದಿಕ್ಕಿಲ್ಲದವರಾಗುತ್ತಾರೆ.ಏಕೆಂದರೆ ಅವರನ್ನು ಮುನ್ನಡೆಸಲು ಉತ್ತಮ ಧಾರ್ಮಿಕ ನಾಯಕರು ಇಲ್ಲದೆ ಕಂಗೆಡುತ್ತಾರೆ.

> ನೋಡಿರಿ,ತೋಳಗಳ ನಡುವೆ ಕುರಿಗಳನ್ನು ಕಳುಹಿಸುವಂತೆ ನಾನು ನಿಮ್ಮನ್ನು ಕಳಿಸಿಕೊಡುತ್ತೇನೆ.ಆದುದರಿಂದ ಸರ್ಪಗಳಂತೆ ಜಾಣರು . ಪಾರಿವಾಳಗಳಂತೆನಿಷ್ಕಪಟಿಗಳು ಆಗಿರಿ , (ಮತ್ತಾಯ10:16 ULB)

ಯೇಸು ಆತನ ಶಿಷ್ಯರನ್ನು ಕುರಿಗಳಿಗೆ, ಅವರ ಶತೃಗಳನ್ನು ತೋಳಗಳಿಗೆ ಹೋಲಿಸಿದ್ದಾನೆ. ತೋಳಗಳು ಕುರಿಗಳ ಮೇಲೆ ದಾಳಿ ಮಾಡುತ್ತವೆ. ಯೇಸುವಿನ ನಿಂದಕರು ಆತನ ಶಿಷ್ಯರನ್ನು ಎದುರಿಸುತ್ತಾರೆ.

> ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು . (ಇಬ್ರಿಯ 4:12 ULB)

ದೇವರ ವಾಕ್ಯವನ್ನು ಇಬ್ಬಾಯಿ ಕತ್ತಿಗೆ ಹೋಲಿಸಿದೆ. ಇಬ್ಬಾಯಿ ಕತ್ತಿಯು ಮನುಷ್ಯನ ಮಾಂಸವನ್ನು ಭೇದಿಸಿ ತೂರಿಹೋಗುವಂತಹ ಆಯುಧ. ದೇವರ ವಾಕ್ಯವು ಅತ್ಯಂತ ಪರಿಣಾಮಕಾರಿಯಾದ ವಾಕ್ಯ, ಪ್ರತಿಯೊಬ್ಬ ವ್ಯಕ್ತಿಯ ಹೃದಯವನ್ನು ಮತ್ತು ಆಲೋಚನೆಗಳನ್ನು ಸ್ಪಷ್ಟವಾಗಿ ತಿಳಿಸುವಂತದ್ದು.

ಉಪಮಾಲಂಕಾರದ ಉದ್ದೇಶ.

- ಉಪಮಾಲಂಕಾರದ ವಿಶೇಷತೆ ಎಂದರೆ ಅದು ಗೊತ್ತಿಲ್ಲದೆ ಇರುವ ವಿಚಾರಗಳನ್ನು ಗೊತ್ತಿರುವ ವಿಚಾರಗಳೊಂದಿಗೆ ಇರುವ ಸಮಾನ ಅಂಶಗಳನ್ನು ಗುರುತಿಸಿ ಹೇಳುವ ಮೂಲಕ ಉಪಮಾಲಂಕಾರ ತಿಳಿಸುತ್ತದೆ.
- ಉಪಮಾಲಂಕಾರ ಒಂದು ನಿರ್ದಿಷ್ಟ ವಿಚಾರದ ಬಗ್ಗೆ ವಿಶೇಷ ಒತ್ತು ನೀಡಿ ಹೇಳುತ್ತದೆ. ಕೆಲವೊಮ್ಮೆ ಜನರ ಗಮನವನ್ನು ತನ್ನೆಡೆ ಸೆಳೆದುಕೊಳ್ಳುವ ಉದ್ದೇಶವಿದೆ.
- ಉಪಮಾಲಂಕಾರ ಓದುಗರ ಮತ್ತು ಅವರ ಮನಸ್ಸಿನಲ್ಲಿ ಮೂಡುವ ಚಿತ್ರಗಳನ್ನು ಮತ್ತು ಅವರು ಓದುವಾಗ ಅನುಭವಕ್ಕೆ ಬರುವ ವಿಚಾರಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಸಹಾಯಮಾಡುತ್ತದೆ.

ಏಕೆಂದರೆ ಇದೊಂದು ಭಾಷಾಂತರದ ತೊಡಕು.

- ಓದುವವರಿಗೆ ಈ ಎರಡು ವಿಚಾರಗಳು ಸಮಾನವಾಗಿವೆ ಎಂಬುದು ತಿಳಿಯದೆ ಇರಬಹುದು.
- ಕೆಲವೊಮ್ಮೆ ಓದುಗರಿಗೆ ಈ ಹೋಲಿಕೆಯ ವಿಚಾರಗಳು ಅಪರಿಚಿತವಾಗಿರಬಹುದು.

ಸತ್ಯವೇದದಿಂದ ಉದಾಹರಣೆಗಳು

> ಕ್ರಿಸ್ತ ಯೇಸುವಿನ ಒಳ್ಳೆಸೈನಿಕನಂತೆ ನನ್ನೊಂದಿಗೆ ಶ್ರಮೆಯನ್ನು ಅನುಭವಿಸು . (2 ತಿಮೋಥಿ2:3 ULB)

ಈ ಉಪಮಾಲಂಕಾರದ ವಾಕ್ಯದಲ್ಲಿ ಪೌಲನು ಸೈನಿಕರು ಹೇಗೆ ಶ್ರಮೆಯನ್ನು ಸಹಿಸಿಕೊಳ್ಳುತ್ತಾರೋ ಹಾಗೆ ತಿಮೋಥಿಯೂ ಇರಬೇಕೆಂದು ಉದಾಹರಣೆ ಹೇಳಿ ತಿಳಿಸುತ್ತಾನೆ.

> ಮನುಷ್ಯಕುಮಾರನು ಮಿಂಚು ಮಿಂಚುತ್ತಾ ಆಕಾಶದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೂ ಹೇಗೆ ಹೊಳೆಯುವುದೋ .ಹಾಗೆಯೇ ತನ್ನ ದಿನದಲ್ಲಿ ಕಾಣಿಸಿಕೊಳ್ಳುವನು. (ಲೂಕ17:24 ULB)

ಈ ವಾಕ್ಯದ ಮೂಲಕ ದೇವರ ಮಗನು ಮಿಂಚಿನಂತೆ ಎಂದು ನೇರವಾಗಿ ಹೇಳಿಲ್ಲ

ಆದರೆ ವಾಕ್ಯ ಹೇಳಿರುವ ಸಂದರ್ಭದಿಂದ ಮಿಂಚು ಹೇಗೆ ಇದ್ದಕ್ಕಿದ್ದಂತೆ ಆಕಾಸದಲ್ಲಿ ಮೂಡಿ ಬರುತ್ತದೋ ಹಾಗೇ ಮನುಷ್ಯಕುಮಾರನೂ ಸಹ ನಮ್ಮ ಮಧ್ಯೆ ಕಾಣಿಸಿಕೊಳ್ಳುವನು ಮತ್ತು ಆತನನ್ನು ಎಲ್ಲರೂ ನೋಡುವರು. ಯಾರಿಗೂ ಅದನ್ನು ವಿವರಿಸುವ ಅಗತ್ಯವಿಲ್ಲ.

ಭಾಷಾಂತರ ಕೌಶಲ್ಯಗಳು

ಓದುಗರು ಉಪಮಾಲಂಕಾರದ ಅರ್ಥವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಾದರೆ ಅದನ್ನೇ ಪರಿಗಣಿಸಿ. ಅವರು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಕೆಳಗೆ ನಮೂದಿಸಿರುವ ತಂತ್ರಗಳನ್ನು ಬಳಸಬಹುದು :

ಎರಡು ವಸ್ತು ಅಥವಾ ಇಬ್ಬರು ವ್ಯಕ್ತಿಗಳು ಸಮಾನವಾಗಿದ್ದಾರೆ ಎಂದು ಓದುಗರು ಅರ್ಥಮಾಡಿಕೊಳ್ಳದಿದ್ದರೆ ಅವು ಹೇಗೆ ಸಮಾನವಾಗಿದೆ ಎಂದು ವಿವರಿಸಬೇಕು. ಮೂಲ ಓದುಗರಿಗೆ ಇದರ ಅರ್ಥ ಸ್ಪಷ್ಟವಾಗದಿದ್ದರೆ ಇದನ್ನು ಉಪಯೋಗಿಸಬಾರದು.
ಓದುಗರಿಗೆ ನೀವು ಹೋಲಿಕೆಗೆ ಬಳಸಿರುವ ವಾಕ್ಯ ಸ್ಪಷ್ಟವಾಗದಿದ್ದರೆ, ಅಪರಿಚಿತವಾಗಿದ್ದರೆ ನೀವು ಭಾಷಾಂತರ ಮಾಡುತ್ತಿರುವ ಭಾಷೆಯ ಸಂಸ್ಕೃತಿಗೆ ಅನುಗುಣವಾಗಿ ಉದಾಹರಣೆ ಬಳಸಿಕೊಳ್ಳಿ. ಆದರೆ ಸತ್ಯವೇದದ ಸಂಸ್ಕೃತಿಗೆ ತಕ್ಕಂತೆ ಬಳಸಿರುವ ಉದಾಹರಣೆಗಳನ್ನು ಮೀರಿ ಬೇರೆಯ ಉದಾಹರಣೆಗಳನ್ನು, ವಾಕ್ಯಗಳನ್ನು ಬಳಸಬಾರದು.
ಇಲ್ಲಿ ಇನ್ನೊಂದರೊಂದಿಗೆ ಹೋಲಿಸದೆ ಸರಳವಾಗಿ ವಿವರಿಸಿದೆ.

ಭಾಷಾಂತರ ಕೌಶಲ್ಯಗಳನ್ನು ಅಳವಡಿಸಿರುವ ಬಗ್ಗೆ ಉದಾಹರಣೆಗಳು.

ಓದುಗರಿಗೆ ಎರಡು ವಸ್ತುಗಳು, ಇಬ್ಬರು ವ್ಯಕ್ತಿಗಳು ಹೇಗೆ ಸಮಾನವಾಗಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಆಗದಿದ್ದರೆ ನೀವು ಅವರಿಗೆ ಅರ್ಥವಾಗುವಂತೆ ತಿಳಿಸಿ. ಮೂಲ ಓದುಗರಿಗೆ ಇದರ ಅರ್ಥ ಸ್ಪಷ್ಟವಾಗದಿದ್ದರೆ ಅವರಿಗೆ ಸಮಾನ ಗುಣವನ್ನು ತಿಳಿಸುವ ಅಗತ್ಯವಿಲ್ಲ

- **ನೋಡಿರಿ, ನಾನು ನಿಮ್ಮನ್ನು ತೋಳಗಳ ನಡುವೆ ಕುರಿಗಳನ್ನು ಕಳುಹಿಸುವಂತೆ , ನಿಮ್ಮನ್ನು ಕಳುಹಿಸುವೆನು.!** (ಮತ್ತಾಯ 10:16 ULB) – ಈ ವಾಕ್ಯದ ಮೂಲಕ ಕುರಿಗಳನ್ನು ತೋಳಗಳ ನಡುವೆ ಕಳುಹಿಸಿ ಅಪಾಯಕ್ಕೆ ಗುರಿಮಾಡಿದಂತೆ ತನ್ನ ಶಿಷ್ಯರನ್ನು ಶತ್ರುಗಳ ಮಧ್ಯದಲ್ಲಿ ಕಳುಹಿಸಿ ಅಪಾಯಕ್ಕೆ ಗುರಿಯಾಗುವ ಬಗ್ಗೆ ಹೋಲಿಸಿ ಹೇಳಿದ್ದಾನೆ.
    - ನೋಡಿ ನಾನು ನಿಮ್ಮನ್ನು ಕಪಟಿಗಳ, ದುಷ್ಟರ ನಡುವೆ ಕಳುಹಿಸುತ್ತೇನೆ ಇದರಿಂದ ನೀವು ಅಪಾಯಕ್ಕೆ ಗುರಿಯಾಗುವಿರಿ ಹೇಗೆಂದರೆ ತೋಳಗಳಿಂದ ಆವರಿಸಲ್ಪಟ್ಟ ಕುರಿಗಳಂತೆ ಆಗುವಿರಿ ಎಂದನು. .
- **ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು ಇಬ್ಬಾಯಿ ಕತ್ತಿಗಿಂತಲೂ ಹರಿತವಾಗಿಯೂ ಹದವಾದದ್ದು , !** (ಇಬ್ರಿಯ 4:12 ULB)
    - ದೇವರ ವಾಕ್ಯವು ಸಜೀವವಾಗಿಯೂ, ಕಾರ್ಯತತ್ಪರವಾಗಿಯೂ ಇರುವುದು ಮತ್ತು ಇಬ್ಬಾಯಿ ಕತ್ತಿಗಿಂತ ಹರಿತವಾಗಿಯೂ ಹದವಾಗಿಯೂ ಇರುವಂತದ್ದು .

ಓದುಗರಿಗೆ ನೀವು ಹೋಲಿಕೆಗೆ ಬಳಸಿರುವ ವಾಕ್ಯ ಸ್ಪಷ್ಟವಾಗದಿದ್ದರೆ, ಅಪರಿಚಿತವಾಗಿದ್ದರೆ ನೀವು ಭಾಷಾಂತರ ಮಾಡುತ್ತಿರುವ ಭಾಷೆಯ ಸಂಸ್ಕೃತಿಗೆ ಅನುಗುಣವಾಗಿ ಉದಾಹರಣೆಯನ್ನು ಬಳಸಿಕೊಳ್ಳಿ. ಆದರೆ ಸತ್ಯವೇದದ ಸಂಸ್ಕೃತಿಗೆ ತಕ್ಕಂತೆ ಬಳಸಿರುವ ಉದಾಹರಣೆಗಳನ್ನು ಮೀರಿ ಬೇರೆಯ ಉದಾಹರಣೆಗಳನ್ನು, ವಾಕ್ಯಗಳನ್ನು ಬಳಸಬಾರದು.

- **ನಿಮ್ಮ ಓದುಗರಿಗೆ ತೋಳಗಳು ಕುರಿಗಳನ್ನು ಕೊಂದು ತಿನ್ನುತ್ತವೆ ಎಂದು ತಿಳಿದುಕೊಳ್ಳಲು ಅಸಮರ್ಥರಾದರೆ ಯಾವ ಪ್ರಾಣಿ ಇನ್ನೊಂದು ಪ್ರಾಣಿಯನ್ನು ಕೊಲ್ಲುತ್ತದೆಯೋ ಅದರ ಉದಾಹರಣೆ ಕೊಡಬಹುದು. ನೋಡಿರಿ, ನಾನು ನಿಮ್ಮನ್ನು ಬೇಟೆನಾಯಿಗಳ ಮಧ್ಯದಲ್ಲಿ ಕೋಳಿಮರಿಗಳನ್ನು ಕಳಿಸಿದಂತೆ ಕಳುಹಿಸುವೆನು. , !** (ಮತ್ತಾಯ 10:16 ULB)
- **ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವುದಕ್ಕೆ , ನನಗೆ ಎಷ್ಟೋಸಲ ಮನಸ್ಸಿತ್ತು, ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು!.** (ಮತ್ತಾಯ 23:37 ULB)
    - ತಾಯಿ ತನ್ನ ಮಕ್ಕಳನ್ನು ಹೇಗೆ ರಕ್ಷಿಸುತ್ತಾಳೋ ಹಾಗೆ ನಾನು ನಿಮ್ಮನ್ನು ರಕ್ಷಿಸಬೇಕೆಂದು ಕಾಯುತ್ತಿದ್ದೆ ಆದರೆ ನೀವು ಅದನ್ನು ನಿರಾಕರಿಸಿದಿರಿ.

- **ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ ಸಾಸಿವೆ ಕಾಳಷ್ಟು ನಂಬಿಕೆ ನಿಮಗೆ ಇರುವುವದಾದರೆ , !** (ಮತ್ತಾಯ 17:20ULB)
  - ನಿಮಗೆ ಸಣ್ಣ ಕಾಳಿನಷ್ಟಾದರೂ ನಂಬಿಕೆ ಇದ್ದರೆ .

ಯಾವುದೇ ಹೋಲಿಕೆಗಳಿಲ್ಲದೆ ಇದನ್ನು ಸರಳವಾಗಿ ವಿವರಿಸಿ.

- **ನೋಡಿರಿ ನಾನು ನಿಮ್ಮನ್ನು ತೋಳಗಳ ನಡುವೆಕುರಿಗಳನ್ನು ಕಳುಹಿಸುವಂತೆ ಕಳುಹಿಸುತ್ತೇನೆ , !** (ಮತ್ತಾಯ 10:16 ULB)
  - ನೋಡಿ ನಾನು ನಿಮ್ಮನ್ನು ನಿಮಗೆ ಕೆಟ್ಟದ್ದನ್ನು ಮಾಡುವ ಜನರ ಮಧ್ಯೆ ಕಳುಹಿಸುತ್ತೇನೆ .
- **ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವುದಕ್ಕೆ , ನನಗೆ ಎಷ್ಟೋ ಸಲ ಮನಸ್ಸಿತ್ತು, ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು!.** (ಮತ್ತಾಯ 23:37 ULB)
  - ನಾನು ಎಷ್ಟು ಸಲ ನಿಮ್ಮನ್ನು ರಕ್ಷಿಸಲು , ಪ್ರಯತ್ನಿಸಿದರೂ ನೀವು ನಿರಾಕರಿಸಿದಿರಿ.

"

ಮುಂದೆ ನೀವು ಕಲಿಯಲು ಶಿಫಾರಸು ಮಾಡುತ್ತೇವೆ:

ರೂಪಕ ಅಲಂಕಾರ (UTA PDF)

ಸತ್ಯವೇದದ /ಉದಾಹರಣೆಗಳು – ಸಾಮಾನ್ಯ ಮಾದರಿಗಳು. (UTA PDF)

ಹಿಂತಿರುಗಿ ಹೋಗಿ: ಜೇನು, ಜೇನು ಗೂಡು; ಇಷ್ಟ, ಒಂದೇರೀತಿಯಾದ ಮನಸ್ಸು, ಹೋಲಿಸು, ಹೋಲಿಕೆ, ಹೋಲುತ್ತದೆ, ಅದರಂತೆಯೇ, ಸಮಾನವಾಗಿ, ಭಿನ್ನವಾಗಿ

ಉಪಲಕ್ಷಣಾಲಂಕಾರ

ವಿವರಣೆ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ಉಪಲಕ್ಷಣಾಲಂಕಾರ ಇದರ ಅರ್ಥವೇನು ಮತ್ತು ನಾನು ಅಂತಹ ವಿಷಯವನ್ನು ನನ್ನ ಭಾಷೆಗೆ ಹೇಗೆ ಭಾಷಾಂತರಿಸಬಹುದು?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಅಲಂಕಾರಗಳು. (UTA PDF)

ಉಪಲಕ್ಷಣಾಲಂಕಾರ ಎಂಬುದು ಅಲಂಕಾರವಾಗಿದೆ, ಮಾತನಾಡುವವನು ಈ ಅಲಂಕಾರದಲ್ಲಿ ಪೂರ್ಣ ವಸ್ತುವಿಗೆ ಬದಲು ಭಾಗವನ್ನು ಅಥವಾ ಭಾಗಕ್ಕೆ ಬದಲು ಪೂರ್ಣ ವಸ್ತವನ್ನು ಸೂಚಿಸುತ್ತಾನೆ.

> **ನನ್ನ ಆತ್ಮವು** ಕರ್ತನನ್ನು ಕೊಂಡಾಡುತ್ತದೆ. (ಲೂಕ 1:46 ULT)

ಮರಿಯಳು ಕರ್ತನು ಮಾಡುತ್ತಿರುವ ಕಾರ್ಯಕ್ಕಾಗಿ ತುಂಬಾ ಸಂತೋಷಭರಿತಳಾಗಿದ್ದಳು, ಆದ್ದರಿಂದ "ನನ್ನ ಆತ್ಮವು/ ಪ್ರಾಣವು" ಎಂದರೆ ಅವಳ ಭಾವನಾತ್ಮಕ ಅಂಗವಾದ ಅಂತರಂಗವು, ಪೂರ್ಣವಾಗಿ ಅವಳನ್ನೇ ಸೂಚಿಸುತ್ತದೆ.

> **ಫರಿಸಾಯರು** ಆತನಿಗೆ, "ನೋಡು ಇವರು ಧರ್ಮಸಮ್ಮತವಲ್ಲದ ಕೆಲಸವನ್ನು ಏಕೆ ಮಾಡುತ್ತಾರೆ..?" ಎಂದು ಕೇಳಿದರು. (ಮಾರ್ಕ 2:24 ULT)

ಅಲ್ಲಿ ನಿಂತಿದ್ದ ಎಲ್ಲಾ ಫರಿಸಾಯರು ಒಂದೇ ಸಮಯದಲ್ಲಿ ಅದೇ ಮಾತುಗಳನ್ನು ಹೇಳಲಿಲ್ಲ. ಅದರ ಬದಲು, ಆ ಗುಂಪಿನಿಂದ ಒಬ್ಬ ಪ್ರತಿನಿಧಿಸಿ ಈ ಮಾತುಗಳನ್ನು ಆಡಿದನು.

ಕಾರಣವೇನಂದರೆ ಇದು ಭಾಷಾಂತರದ ಸಮಸ್ಯೆಯಾಗಿದೆ

- ಕೆಲವು ಓದುಗರು ಉಪಲಕ್ಷಣಾಲಂಕಾರವನ್ನು ಗುರುತಿಸುವುದಿಲ್ಲ ಆದ್ದರಿಂದ ಇದನ್ನು ವಾಚ್ಯಾರ್ಥಯುಳ್ಳ ವಾಕ್ಯವೆಂದು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾರೆ.
- ಕೆಲವು ಓದುಗರು ತಾವು ಪದಗಳನ್ನು ವಾಚ್ಯಾರ್ಥವಾಗಿ ಅರ್ಥಮಾಡಿಕೊಳ್ಳಬಾರದು ಎಂದು ತಿಳಿದುಕೊಳ್ಳುವರು, ಆದರೂ ಇದರ ಅರ್ಥವೇನೆಂದು ಅವರು ತಿಳಿದುಕೊಳ್ಳದಿರಬಹುದು.

ಸತ್ಯವೇದದಲ್ಲಿನ ಉದಾಹರಣೆಗಳು

> **ನನ್ನ ಕೈಗಳು** ಮಾಡಿ ಮುಗಿಸಿದಂಥ ಎಲ್ಲಾ ಕಾರ್ಯಗಳನ್ನು ನಾನು ನೋಡಿದೆನು (ಪ್ರಸಂಗಿ 2:11 ULT)

"ನನ್ನ ಕೈಗಳು" ಎಂಬುದು ಇಡೀ ವ್ಯಕ್ತಿಯನ್ನು ಪ್ರತಿನಿಧಿಸುವ ಉಪಲಕ್ಷಣಾಲಂಕಾರವಾಗಿದೆ. ಏಕೆಂದರೆ ಒಬ್ಬ ವ್ಯಕ್ತಿಯು ಮಾಡಿ ಮುಗಿಸುವ ಕಾರ್ಯಗಳಲ್ಲಿ ಅವನ ತೋಳುಗಳು ಮತ್ತು ದೇಹದ ಎಲ್ಲಾ ಅಂಗಾಂಗಗಳು, ಮನಸ್ಸು ಎಲ್ಲವೂ ಒಳಗೊಂಡಿರುತ್ತವೆ. ವ್ಯಕ್ತಿಯನ್ನು ಪ್ರತಿನಿಧಿಸಲು ಕೈಗಳನ್ನು ಆರಿಸಿಕೊಳ್ಳಲಾಗಿದೆ ಏಕೆಂದರೆ ಅವುಗಳು ಕೆಲಸದಲ್ಲಿ ನೇರವಾಗಿ ಭಾಗಿಯಾಗಿರುವ ದೇಹದ ಭಾಗಗಳಾಗಿವೆ.

ಭಾಷಾಂತರದ ಕಾರ್ಯತಂತ್ರಗಳು

ನಿಮ್ಮ ಭಾಷೆಯಲ್ಲಿ ಉಪಲಕ್ಷಣಾಲಂಕಾರ ಪ್ರಯೋಗವು ಸಹಜವಾಗಿರುವುದಾದರೆ ಮತ್ತು ಸರಿಯಾದ ಅರ್ಥ ಕೊಡುವುದಾದರೆ ಅದನ್ನು ಬಳಸಿಕೊಳ್ಳಿರಿ. ಇಲ್ಲದಿದ್ದರೆ ಇಲ್ಲಿ ಇನ್ನೊಂದು ಆಯ್ಕೆಯಿದೆ:

ಉಪಲಕ್ಷಣಾಲಂಕಾರವು ಯಾವುದನ್ನು ಸೂಚಿಸುತ್ತದೋ ಅದನ್ನು ನಿರ್ದಿಷ್ಟವಾಗಿ ತಿಳಿಸಿರಿ.

ಭಾಷಾಂತರ ತಂತ್ರಗಳನ್ನು ಅಳವಡಿಸಿದ ಬಗ್ಗೆ ಉದಾಹರಣೆಗಳು.

(1) ಉಪಲಕ್ಷಣಾಲಂಕಾರವು ಯಾವುದನ್ನು ಸೂಚಿಸುತ್ತದೋ ಅದನ್ನು ನಿರ್ದಿಷ್ಟವಾಗಿ ತಿಳಿಸಿರಿ.

> "**ನನ್ನ ಆತ್ಮವು** ಕರ್ತನನ್ನು ಕೊಂಡಾಡುತ್ತದೆ." (ಲೂಕ 1:46 ULT)
>
> > "**ನಾನು** ಕರ್ತನನ್ನು ಕೊಂಡಾಡುತ್ತೇನೆ.
>
> ...**ಫರಿಸಾಯರು** ಆತನಿಗೆ ಹೇಳಿದರು (ಮಾರ್ಕ 2:24 ULT)
>
> > ...**ಫರಿಸಾಯರ ಒಬ್ಬ ಪ್ರತಿನಿಧಿಯು** ಆತನಿಗೆ ಹೇಳಿದರು...
>
> ....**ನನ್ನ ಕೈಗಳು** ಮಾಡಿ ಮುಗಿಸಿದಂಥ ಎಲ್ಲಾ ಕಾರ್ಯಗಳನ್ನು ನಾನು ನೋಡಿದೆನು (ಪ್ರಸಂಗಿ 2:11 ULT)

> > ನಾನು ಮಾಡಿ ಮುಗಿಸಿದಂಥ ಎಲ್ಲಾ ಕಾರ್ಯಗಳನ್ನು ನಾನು ನೋಡಿದೆನು

"

ಮುಂದೆ ನೀವು ಕಲಿಯಲು ಶಿಫಾರಸು ಮಾಡುತ್ತೇವೆ:

ಲಕ್ಷಣಾಲಂಕಾರ (UTA PDF)
ಸತ್ಯವೇದದ ಚಿತ್ರಣಗಳು ಸಾಮಾನ್ಯ ಮಿಟೋನಿಮಿಗಳು. (UTA PDF)

ಹಿಂತಿರುಗಿ ಹೋಗಿ: ಪ್ರವಾದಿ, ಪ್ರವಾದಿಗಳು, ಪ್ರವಾದನೆ, ಪ್ರವಾದಿಸು, ದರ್ಶಿ, ಪ್ರವಾದಿನಿ; ಅಮಾಲೇಕ, ಅಮಾಲೇಕ್ಯ, ಅಮಾಲೇಕ್ಯರು; ಬಾಬೆಲ್, ಬಾಬೆಲು, ಬಾಬೆಲಿನವರು; ನಫ್ತಾಲಿ; ರೊಟ್ಟಿ; ಡೇರೆ, ಡೇರೆಗಳು, ಗುಡಾರ ಮಾಡುವವರು; ನಾಲಿಗೆ, ನಾಲಿಗೆಗಳು; ಸ್ವರ, ಸ್ವರಗಳು

ಕಲ್ಪಿತ ಜ್ಞಾನ ಮತ್ತು ಸೂಚ್ಯ ಮಾಹಿತಿ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ನಾನು ಮಾಡಿರುವ ಭಾಷಾಂತರ ಕಲ್ಪಿತ ಜ್ಞಾನ ಮತ್ತು ಸೂಚ್ಯ ಮಾಹಿತಿಯೊಂದಿಗೆ ಮೂಲ ಸಂದೇಶದ ಸ್ಪಷ್ಟವಾದ ಮಾಹಿತಿಯನ್ನು ತಿಳಿಸುತ್ತದೆ ಎಂಬುದನ್ನು ಹೇಗೆ ದೃಢಪಡಿಸಿಕೊಳ್ಳಲಿ?

- ಮಾತನಾಡುವವನು ತಾನು ಮಾತನಾಡುವ ಮತ್ತು ಅವರಿಗೆ ಕೆಲವೊಂದು ಮಾಹಿತಿಯನ್ನು ನೀಡುವ ಮೊದಲೇ **ತನ್ನ ಶ್ರೋತೃಗಳಿಗೆ ಅದು ತಿಳಿದಿದೆ ಎಂದು ಊಹಿಸಿಕೊಳ್ಳುವಂಥ** ಎಲ್ಲವು **ಕಲ್ಪಿತ ಜ್ಞಾನ** ಆಗಿದೆ. ಮಾತನಾಡುವವನು ಈ ಮಾಹಿತಿಯನ್ನು ಶ್ರೋತೃಗಳಿಗೆ ಕೊಡುವುದಿಲ್ಲ ಏಕೆಂದರೆ ಅದು ಈಗಾಗಲೇ ಅವರಿಗೆ ತಿಳಿದಿದೆ ಎಂದು ಅವನು ಭಾವಿಸುತ್ತಾನೆ.
- **ಮಾತನಾಡುವವನು ಶ್ರೋತೃಗಳಿಗೆ ಮಾಹಿತಿಯನ್ನು ಕೊಡುವಾಗ** ಅವನು ಎರಡು ರೀತಿಯಲ್ಲಿ ಮಾಹಿತಿಯನ್ನು ನೀಡುತ್ತಾನೆ:
- **ಸ್ಪಷ್ಟವಾದ ಮಾಹಿತಿ** ಎಂದರೆ ಮಾತನಾಡುವವನು ನೇರವಾಗಿ ವಿಷಯವನ್ನು ತಿಳಿಸುತ್ತಾನೆ.
- **ಸೂಚ್ಯ ಮಾಹಿತಿ** ಎಂದರೆ ಮಾತನಾಡುವವನು ವಿಷಯವನ್ನು ನೇರವಾಗಿ ಹೇಳದೆ ತಾನು ಹೇಳುತ್ತಿರುವ ವಿಷಯವನ್ನು ತನ್ನ ಶ್ರೋತೃಗಳು ಕಲಿತುಕೊಳ್ಳಬೇಕೆಂದು ನಿರೀಕ್ಷಿಸುತ್ತಾನೆ.

ವಿವರಣೆ

ಒಬ್ಬನು ಬರೆಯುವಾಗ ಅಥವಾ ಮಾತನಾಡುವಾಗ ಯಾವುದಾದರೂ ನಿರ್ದಿಷ್ಟ ವಿಷಯವನ್ನು ಜನರು ತಿಳಿದುಕೊಳ್ಳಬೇಕು, ಮಾಡಬೇಕು ಅಥವಾ ಅದರ ಬಗ್ಗೆ ಯೋಚಿಸಬೇಕು ಎಂದು ಬಯಸುತ್ತಾನೆ. ಸಾಮಾನ್ಯವಾಗಿ ಅವನು ಇದನ್ನು ನೇರವಾಗಿ ಹೇಳುತ್ತಾನೆ. ಇದು **ಸ್ಪಷ್ಟವಾದ ಮಾಹಿತಿ** ಆಗಿದೆ.

ಇಲ್ಲಿ ಮಾತನಾಡುವ ವ್ಯಕ್ತಿ ತನ್ನ ಶ್ರೋತೃಗಳು ತಾನು ಹೇಳಬೇಕಾಗಿರುವ ವಿಷಯದ ಬಗ್ಗೆ ಈಗಾಗಲೇ ತಿಳಿದಿರುತ್ತಾರೆ ಮತ್ತು ತಾನು ಹೇಳುವ ಮಾಹಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳ ಬಲ್ಲರು ಎಂದು ತಿಳಿದಿರುತ್ತಾನೆ. ಸಾಮಾನ್ಯವಾಗಿ ಅವನು ನೇರವಾಗಿ ಈ ವಿಚಾರವನ್ನು ತನ್ನ ಶ್ರೋತೃಗಳಿಗೆ ಹೇಳುವುದಿಲ್ಲ ಏಕೆಂದರೆ ಈಗಾಗಲೇ ಅವರಿಗೆ ಈ ವಿಷಯ ತಿಳಿದಿರುತ್ತದೆ. ಇದನ್ನು **ಕಲ್ಪಿತ ಜ್ಞಾನ** ಎಂದು ಕರೆಯುತ್ತಾರೆ.

ಮಾತನಾಡುವವನು ಎಲ್ಲವನ್ನು ಯಾವಾಗಲೂ ನೇರವಾಗಿ ಹೇಳುವುದಿಲ್ಲ ಅವನು ಹೇಳುವ ವಿಷಯದ ಒಳಾರ್ಥವನ್ನು ಅವರು ತಿಳಿಯಬೇಕು ಎಂದು ಭಾವಿಸುತ್ತಾನೆ. ಅವನು ನೇರವಾಗಿ ವಿಷಯವನ್ನು ಹೇಳದಿದ್ದರೂ ತಾನು ಹೇಳಿರುವ ವಿಚಾರಗಳಿಂದ ತಿಳಿದುಕೊಳ್ಳಬೇಕಾದ ಮಾಹಿತಿಗಳನ್ನು ಅವರು ತಿಳಿದುಕೊಳ್ಳಬೇಕೆಂದು ನಿರೀಕ್ಷಿಸುತ್ತಾನೆ, ಇದೇ **ಸೂಚ್ಯ ಮಾಹಿತಿ** ಆಗಿದೆ.

ಸಾಮಾನ್ಯವಾಗಿ ಶ್ರೋತೃಗಳು ಈ **ಸೂಚ್ಯ ಮಾಹಿತಿಯನ್ನು** ಅವರು ಈಗಾಗಲೇ ತಿಳಿದುಕೊಂಡಿರುವ ಮತ್ತು ಮಾತನಾಡುವವನು ನೇರವಾಗಿ ಹೇಳಿರುವಂಥ (**ಕಲ್ಪಿತ ಜ್ಞಾನ**) **ಸ್ಪಷ್ಟವಾದ ಮಾಹಿತಿ** ಜೊತೆಗೆ ಸೇರಿಸಿ ಅರ್ಥಮಾಡಿಕೊಳ್ಳುತ್ತಾರೆ.

ಕಾರಣವೇನಂದರೆ ಇದು ಭಾಷಾಂತರದ ಸಮಸ್ಯೆಯಾಗಿದೆ

ಈ ಎಲ್ಲಾ ಮೂರು ಮಾಹಿತಿಗಳು ಮಾತನಾಡುವವನ ಸಂದೇಶಗಳ ಭಾಗವಾಗಿದೆ. ಈ ಮೂರರಲ್ಲಿ ಒಂದು ತಪ್ಪಿದರೂ ಶ್ರೋತೃಗಳು ಮಾತನಾಡುವವನ ಸಂದೇಶದ ಉದ್ದೇಶವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಸತ್ಯವೇದವನ್ನು ಭಾಷಾಂತರಿಸುತ್ತಿರುವ ಭಾಷೆಯು ಸತ್ಯವೇದದ ಉದ್ದೀಷ್ಟ ಭಾಷೆಗಿಂತ ಭಿನ್ನವಾಗಿರುತ್ತದೆ ಮತ್ತು ಸದರಿ ಶ್ರೋತೃಗಳು ಸತ್ಯವೇದದ ಕಾಲಕ್ಕಿಂತ ವಿಭಿನ್ನವಾದ ಸಮಯ ಮತ್ತು ಬೇರೆ ಸ್ಥಳದಲ್ಲಿ ವಾಸಿಸುತ್ತಿರುವುದರಿಂದ ಇದು ಸಾಧ್ಯವಾಗುವುದಿಲ್ಲ ಅನೇಕಸಲ **ಕಲ್ಪಿತ ಜ್ಞಾನ** ಅಥವಾ **ಸೂಚ್ಯ ಮಾಹಿತಿ** ಸಂದೇಶದಿಂದ ಮರೆಯಾಗುವ ಸಾಧ್ಯತೆ ಇರುತ್ತದೆ. ಸತ್ಯವೇದ ಕಾಲದ ಮೂಲ ಲೇಖಕರು, ಶ್ರೋತೃಗಳು ತಿಳಿದಿರುವಂತೆ ಆಧುನಿಕ ಕಾಲದ ಓದುಗರಿಗೆ, ಶ್ರೋತೃಗಳಿಗೆ ಎಲ್ಲವೂ ತಿಳಿದಿರುವುದಿಲ್ಲ. ಸಂದೇಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಈ ಸಂಗತಿಗಳನ್ನು ನೀವು ವಾಕ್ಯಗಳ ಭಾಗದಲ್ಲಿ ಅಥವಾ ಅಡಿಟಿಪ್ಪಣಿಯಲ್ಲಿ ಸೇರಿಸಬಹುದು.

ಸತ್ಯವೇದದಲ್ಲಿನ ಉದಾಹರಣೆಗಳು

> ಆಗ ಒಬ್ಬ ಶಾಸ್ತ್ರಿಯು ಆತನ ಬಳಿಗೆ ಬಂದು, "ಗುರುವೇ, ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂಬಾಲಿಸುತ್ತೇನೆ" ಎಂದು ಹೇಳಿದನು. ಯೇಸು ಅವನಿಗೆ "ನರಿಗಳಿಗೆ **ಗುದ್ದುಗಳಿವೆ**, ಆಕಾಶದಲ್ಲಿ ಹಾರಾಡುವ ಹಕ್ಕಿಗಳಿವೆ **ಗೂಡುಗಳಿವೆ**, ಆದರೆ ಮನುಷ್ಯಕುಮಾರನಿಗೆ ತಲೆ ಇಡುವಷ್ಟು ಸ್ಥಳವೂ ಇಲ್ಲ" ಎಂದು ಹೇಳಿದನು. (ಮತ್ತಾಯ 8:20 ULT)

ಯೇಸು ನರಿಗಳು ಮತ್ತು ಪಕ್ಷಿಗಳು ಗುದ್ದುಗಳನ್ನು, ಗೂಡುಗಳನ್ನು ಏಕೆ ಉಪಯೋಗಿಸುತ್ತವೆ ಎಂಬುದನ್ನು ಹೇಳಲಿಲ್ಲ, ಏಕೆಂದರೆ ನರಿಗಳು ಗವಿ ಗುದ್ದುಗಳಲ್ಲಿ ಪಕ್ಷಿಗಳು ಗೂಡುಗಳಲ್ಲಿ ವಾಸಿಸುತ್ತವೆ ಎಂದು ಆ ಶಾಸ್ತ್ರಿಗೆ ತಿಳಿದಿದೆ ಎಂದು ಆತನು ಕಲ್ಪಿಸಿಕೊಂಡನು. ಇದು **ಕಲ್ಪಿತ ಜ್ಞಾನ** ಅಗಿದೆ.

ಯೇಸು ಇಲ್ಲಿ "ನಾನೇ ಮನುಷ್ಯಕುಮಾರನು" ಎಂದು ನೇರವಾಗಿ ಹೇಳಲಿಲ್ಲ, ಆದರೆ ಆ ಶಾಸ್ತ್ರಿಗೆ ಇದು ತಿಳಿಯದೇ ಇದ್ದರೆ, ಆಗ ಈ ವಿಷಯವು ಯೇಸು ತನ್ನ ಕುರಿತಾಗಿ ಈ ರೀತಿಯಾಗಿ ಸೂಚಿಸಿದನು ಎಂದು ಅವನು ಕಲಿತುಕೊಳ್ಳಬಹುದಾದ **ಸೂಚ್ಯ ಮಾಹಿತಿ** ಆಗುವುದು. ಇದಲ್ಲದೆ ಯೇಸು ಇಲ್ಲಿ ಪ್ರಯಾಣ ಮಾಡಿದ ಕಡೆಗಳಲ್ಲೆಲ್ಲಾ ರಾತ್ರಿಯಲ್ಲಿ ಮಲಗಲು ತನಗಾಗಿ ಮನೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಲಿಲ್ಲ. ಇದು ತಲೆ ಇಡುವಷ್ಟು ಸ್ಥಳವೂ ಇಲ್ಲ ಎಂದು ಯೇಸು ಹೇಳಿದಾಗ ಆ ಶಾಸ್ತ್ರೀಯು ಕಲಿತುಕೊಳ್ಳಬಹುದಾದಂಥ **ಸೂಚ್ಯ ಮಾಹಿತಿ** ಆಗಿದೆ.

> ಅಯ್ಯೋ ಖೊರಾಜಿನೇ! ಅಯ್ಯೋ ಬೇತ್ಸಾಯಿದವೇ! ನಿನ್ನಲ್ಲಿ ನಡೆದ ಮಹತ್ಕಾರ್ಯಗಳು **ತೂರ್ ಮತ್ತು ಸಿದೋನ್** ಪಟ್ಟಣಗಳಲ್ಲಿ ನಡೆದಿದ್ದರೆ ಅಲ್ಲಿಯವರು ಆಗಲೆ ಗೋಣಿತಟ್ಟು ಹೊದ್ದುಕೊಂಡು ಬೂದಿಯಲ್ಲಿ ಕುಳಿತುಕೊಂಡು ದೇವರ ಕಡೆಗೆ

> ತಿರುಗಿಕೊಳ್ಳುತ್ತಿದ್ದರು. ಆದರೆ **ನ್ಯಾಯ ವಿಚಾರಣೆಯ ದಿನದಲ್ಲಿ** ನಿಮ್ಮ ಗತಿಗಿಂತಲೂ ತೂರ್, ಸಿದೋನ್ ಪಟ್ಟಣಗಳ ಗತಿಯು ಮೇಲಾಗಿರುವುದು ಎಂದು ನಿಮಗೆ ಹೇಳುತ್ತೇನೆ. (ಮತ್ತಾಯ 11:21, 22 ULT)

ತಾನು ಮಾತನಾಡುತ್ತಿರುವ ಜನರಿಗೆ ತೂರ್ ಮತ್ತು ಸಿದೋನ್ ಪಟ್ಟಣಗಳು ತುಂಬಾ ದುಷ್ಟ ಪಟ್ಟಣಗಳಾಗಿದ್ದವು ಮತ್ತು ನ್ಯಾಯವಿಚಾರಣೆಯ ದಿನ ಎಂದರೆ ಎಲ್ಲಾ ಜನರಿಗೆ ನ್ಯಾಯತೀರ್ಪು ಮಾಡುವ ಸಮಯ ಎಂದು ಆ ಜನರಿಗೆ ತಿಳಿದಿದೆ ಎಂದು ಯೇಸು ಭಾವಿಸಿದ್ದನು. ಯೇಸುವಿಗೆ ತಾನು ಯಾರೊಂದಿಗೆ ಮಾತನಾಡುತ್ತಿದ್ದೇನೋ ಆ ಜನರು ಒಳ್ಳೆಯವರು ಮತ್ತು ಪಶ್ಚಾತ್ತಾಪ ಪಡುವ ಅವಶ್ಯಕತೆ ಇಲ್ಲ ಎಂದು ನಂಬುವವರಾಗಿದ್ದರು ಎಂದು ತಿಳಿದಿತ್ತು. ಯೇಸು ಈ ವಿಷಯಗಳನ್ನು ಅವರಿಗೆ ಹೇಳುವ ಅವಶ್ಯಕತೆ ಇರಲ್ಲಿಲ್ಲ. ಇದೆಲ್ಲವೂ **ಕಲ್ಪಿತ ಜ್ಞಾನ** ಆಗಿದೆ.

ಈ **ಸೂಚ್ಯ ಮಾಹಿತಿ** ಯ ಬಹು ಮುಖ್ಯವಾದ ಅಂಶವೆಂದರೆ, ಆತನು ಮಾತನಾಡುತ್ತಿರುವ ಜನರು ಪಶ್ಚಾತ್ತಾಪ ಪಡದಿದ್ದರೆ ನ್ಯಾಯ ವಿಚಾರಣೆಯ ಸಂದರ್ಭದಲ್ಲಿ ತೂರ್ ಮತ್ತು ಸಿದೋನ್ ಪಟ್ಟಣದ ಜನರಿಗಿಂತ ಬಹು ಘೋರವಾದ ನ್ಯಾಯ ತೀರ್ಪು ಆಗುತ್ತದೆ ಎಂಬುದು.

> ನಿನ್ನ ಶಿಷ್ಯರು ಹಿರಿಯರ ಸಂಪ್ರದಾಯವನ್ನು ಏಕೆ ಉಲ್ಲಂಘಿಸುತ್ತಾರೆ? **ಅವರು ಊಟ ಮಾಡುವಾಗ ಅವರು ತಮ್ಮ ಕೈ ತೊಳೆದುಕೊಳ್ಳುವುದಿಲ್ಲ**. (ಮತ್ತಾಯ 15:2 ULT)

ಹಿರಿಯರಿಂದ ಬಂದ ಸಂಪ್ರದಾಯಗಳ ಪೈಕಿ ಒಂದು ಜನರು ತಾವು ಧಾರ್ಮಿಕ ಸಂಸ್ಕಾರದ ರೀತಿಯಲ್ಲಿ ಸ್ವಚ್ಛವಾಗಿರುವುದಕ್ಕಾಗಿ ಊಟಮಾಡುವ ಮೊದಲು ತಮ್ಮ ಕೈಗಳನ್ನು ತೊಳೆದುಕೊಳ್ಳುತ್ತಿದ್ದರು. ನೀತಿವಂತರಾಗಿರುವುದಕ್ಕಾಗಿ ಹಿರಿಯರ ಸಂಪ್ರದಾಯವನ್ನು ಪಾಲಿಸಬೇಕು ಎಂದು ಜನರು ಅಂದುಕೊಂಡಿದ್ದರು. ಇದು **ಕಲ್ಪಿತ ಜ್ಞಾನ** ಆಗಿದೆ, ಯೇಸುವಿನೊಂದಿಗೆ ಮಾತನಾಡುತ್ತಿದ್ದ ಫರಿಸಾಯರು ಈ ವಿಷಯದ ಬಗ್ಗೆ ಆತನು ತಿಳಿದುಕೊಳ್ಳಬೇಕೆಂದು ಬಯಸಿದರು. ಇದನ್ನು ಹೇಳುವ ಮೂಲಕ ಆತನ ಶಿಷ್ಯರು ಸಂಪ್ರದಾಯವನ್ನು ಪಾಲಿಸುತ್ತಿಲ್ಲ ಆದ್ದರಿಂದ ನೀತಿವಂತರಾಗಿಲ್ಲ ಎಂದು ಅವರು ಆರೋಪಿಸುತ್ತಿದ್ದರು. ಇದು ಅವರು ಹೇಳುತ್ತಿರುವುದನ್ನು ಆತನು ಅರ್ಥಮಾಡಿಕೊಳ್ಳಬೇಕೆಂದು ಬಯಸಿದ್ದಂಥ **ಸೂಚ್ಯ ಮಾಹಿತಿ** ಅಗಿದೆ.

ಭಾಷಾಂತರದ ಕಾರ್ಯತಂತ್ರಗಳು

ಓದುಗರಿಗೆ ಸ್ಪಷ್ಟವಾದ ಮಾಹಿತಿಯೊಂದಿಗೆ ಬರುವಂಥ ಮುಖ್ಯ ಸೂಚ್ಯ ಮಾಹಿತಿಯ ಮೂಲಕ ಸಂದೇಶವನ್ನು ಅರ್ಥಮಾಡಿಕೊಳ್ಳುವಷ್ಟು ಕಲ್ಪಿತ ಜ್ಞಾನ ಇರುವುದಾದರೆ, ಆಗ ಜ್ಞಾನವನ್ನು ವಿವರಿಸದೆ ಹಾಗೆಯೇ ಉಳಿಸಿಕೊಳ್ಳಬಹುದು ಮತ್ತು ಸೂಚ್ಯ ಮಾಹಿತಿಯನ್ನು ಸೂಚ್ಯವಾಗಿಯೇ ಉಳಿಸಿಕೊಳ್ಳಬಹುದು. ಇವುಗಳಲ್ಲಿ ಒಂದು ಇಲ್ಲದಿರುವುದ್ದರಿಂದ ಓದುಗರಿಗೆ ಈ ಸಂದೇಶವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಆಗ ಈ ಕೆಳಗಿರುವ ಕಾರ್ಯತಂತ್ರಗಳನ್ನು ಬಳಸಿರಿ:

ಓದುಗರಿಗೆ ಕಲ್ಪಿತ ಜ್ಞಾನವಿಲ್ಲದ ಕಾರಣ ಸಂದೇಶವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಆಗ ಸ್ಪಷ್ಟವಾದ ಮಾಹಿತಿಯನ್ನು ಒದಗಿಸಿಕೊಡಬಹುದು.
ಓದುಗರಿಗೆ ಸೂಚ್ಯ ಮಾಹಿತಿಯಿಲ್ಲದ ಕಾರಣ ಸಂದೇಶವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಆಗ ಸ್ಪಷ್ಟವಾದ ಮಾಹಿತಿ ನೀಡಿ ಅರ್ಥವಾಗುವಂತೆ ಮಾಡಬೇಕು. ಆದರೆ ಮೂಲ ಓದುಗರಿಗೆ ಈ ಮಾಹಿತಿಯು ಹೊಸದಾಗಿತ್ತು ಎಂಬ ಅರ್ಥವನ್ನು ಕೊಡದಂತೆ ಪ್ರಯತ್ನಿಸಬೇಕು.

ಭಾಷಾಂತರದ ಕಾರ್ಯತಂತ್ರಗಳನ್ನು ಅನ್ವಯಿಸಲಾಗಿರುವ ಉದಾಹರಣೆಗಳು

(1) ಓದುಗರಿಗೆ ಕಲ್ಪಿತ ಜ್ಞಾನವಿಲ್ಲದ ಕಾರಣ ಸಂದೇಶವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಆಗ ಸ್ಪಷ್ಟವಾದ ಮಾಹಿತಿಯನ್ನು ಒದಗಿಸಿಕೊಡಬಹುದು.

> ಯೇಸು ಅವರಿಗೆ, "ನರಿಗಳಿಗೆ **ಗುದ್ದುಗಳಿವೆ**, ಮತ್ತು ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ **ಗೂಡುಗಳಿವೆ**, ಆದರೆ ಮನುಷ್ಯಕುಮಾರನಿಗೆ ತಲೆ ಇಡುವಷ್ಟು ಸ್ಥಳವೂ ಇಲ್ಲ" ಎಂದು ಹೇಳಿದನು. (ಮತ್ತಾಯ 8:20 ULT) ನರಿಗಳು ಗುದ್ದುಗಳಲ್ಲಿ ಮಲಗುತ್ತವೆ, ಮತ್ತು ಪಕ್ಷಿಗಳು ಗೂಡುಗಳಲ್ಲಿ ಮಲಗುತ್ತವೆ ಎಂಬುದು ಕಲ್ಪಿತ ಜ್ಞಾನವಾಗಿದೆ.
>
> > ಯೇಸು ಅವರಿಗೆ, "ನರಿಗಳಿಗೆ **ವಾಸಿಸುವುದಕ್ಕೆ ಗುದ್ದುಗಳಿವೆ**, ಮತ್ತು ಆಕಾಶದಲ್ಲಿ ಹಾರಾಡುವ ಪಕ್ಷಿಗಳಿಗೆ **ವಾಸಿಸುವುದಕ್ಕೆ ಗೂಡುಗಳಿವೆ**, ಆದರೆ ಮನುಷ್ಯಕುಮಾರನಿಗೆ ತಲೆ ಇಟ್ಟು ನಿದ್ರಿಸಲು ಸ್ಥಳವಿಲ್ಲ" ಎಂದು ಹೇಳಿದನು.

> ನ್ಯಾಯ ವಿಚಾರಣೆಯ ದಿನದಲ್ಲಿ ನಿಮ್ಮ ಗತಿಗಿಂತಲೂ **ತೂರ್, ಸಿದೋನ್** ಪಟ್ಟಣಗಳ ಗತಿಯು ಮೇಲಾಗಿರುವುದು (ಮತ್ತಾಯ 11:22 ULT) - ತೂರ್ ಮತ್ತು ಸಿದೋನ್ ಜನರು ತುಂಬಾ ತುಂಬಾ ದುಷ್ಟರಾಗಿದ್ದಾರೆ ಎಂಬುದು ಕಲ್ಪಿತ ಜ್ಞಾನವಾಗಿದೆ. ಇದನ್ನು ಸ್ಪಷ್ಟವಾಗಿ ಹೇಳಬಹುದು.
>
> > ... ನ್ಯಾಯ ವಿಚಾರಣೆಯ ದಿನದಲ್ಲಿ ನಿಮ್ಮ ಗತಿಗಿಂತಲೂ **ತುಂಬಾ ದುಷ್ಟರಾಗಿದ್ದ ತೂರ್ ಮತ್ತು ಸಿದೋನ್ ಪಟ್ಟಣಗಳ ಜನರ**, ಗತಿಯು ಮೇಲಾಗಿರುವುದು.
> > ಅಥವಾ:
> > ...ನ್ಯಾಯ ವಿಚಾರಣೆಯ ದಿನದಲ್ಲಿ ನಿಮ್ಮ ಗತಿಗಿಂತಲೂ **ದುಷ್ಟ ಪಟ್ಟಣಗಳಾದ ತೂರ್ ಮತ್ತು ಸಿದೋನ್**, ಗತಿಯು ಮೇಲಾಗಿರುವುದು.

> ನಿನ್ನ ಶಿಷ್ಯರು ಹಿರಿಯರ ಸಂಪ್ರದಾಯವನ್ನು ಏಕೆ ಉಲ್ಲಂಘಿಸುತ್ತಾರೆ? ಏಕೆಂದರೆ **ಅವರು ಊಟ ಮಾಡುವಾಗ ಅವರು ತಮ್ಮ ಕೈ ತೊಳೆದುಕೊಳ್ಳುವುದಿಲ್ಲ**. (ಮತ್ತಾಯ 15:2 ULT) – ಇದರಲ್ಲಿ ಕಲ್ಪಿತ ಜ್ಞಾನವೆಂದರೆ ಹಿರಿಯರಿಂದ ಬಂದ

> ಸಂಪ್ರದಾಯಗಳ ಪೈಕಿ ಒಂದು ಜನರು ತಾವು ಧಾರ್ಮಿಕ ಸಂಸ್ಕಾರದ ರೀತಿಯಲ್ಲಿ ಸ್ವಚ್ಛವಾಗಿರುವುದಕ್ಕಾಗಿ ಊಟಮಾಡುವ ಮೊದಲು ತಮ್ಮ ಕೈಗಳನ್ನು ತೊಳೆದುಕೊಳ್ಳುತ್ತಿದ್ದರು. ನೀತಿವಂತರಾಗಿರುವುದಕ್ಕಾಗಿ ಹಿರಿಯರ ಸಂಪ್ರದಾಯವನ್ನು ಮಾಡಬೇಕಾಗಿತ್ತು. ಆಧುನಿಕ ಕಾಲದ ಓದುಗರು ತಿಳಿದಂತೆ ಊಟಮಾಡುವ ಮೊದಲು ಕೈ ತೊಳೆಯುವುದರಿಂದ ಕೈಗಳಲ್ಲಿರುವ ಕ್ರಿಮಿ, ಬ್ಯಾಕ್ಟೀರಿಯಾಗಳಿಂದ ಮುಕ್ತವಾಗುವುದಕ್ಕಾಗಿ ಅಲ್ಲ.
>
> > ನಿನ್ನ ಶಿಷ್ಯರು ಹಿರಿಯರ ಸಂಪ್ರದಾಯವನ್ನು ಏಕೆ ಉಲ್ಲಂಘಿಸುತ್ತಾರೆ? ಏಕೆಂದರೆ ಅವರು ಊಟಮಾಡುವಾಗ **ಅವರು ನೀತಿಯ ಕರ್ಮಾಚರಣೆಯ ಪ್ರಕಾರ ವಿಧ್ಯುಕ್ತವಾದ ರೀತಿಯಲ್ಲಿ ಅನುಸರಿಸುವುದಿಲ್ಲ.**

(2) ಓದುಗರಿಗೆ ಸೂಚ್ಯ ಮಾಹಿತಿಯಿಲ್ಲದ ಕಾರಣ ಸಂದೇಶವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಆಗ ಸ್ಪಷ್ಟವಾದ ಮಾಹಿತಿ ನೀಡಿ ಅರ್ಥವಾಗುವಂತೆ ಮಾಡಬೇಕು. ಆದರೆ ಮೂಲ ಓದುಗರಿಗೆ ಈ ಮಾಹಿತಿಯು ಹೊಸದಾಗಿತ್ತು ಎಂಬ ಅರ್ಥವನ್ನು ಕೊಡದಂತೆ ಪ್ರಯತ್ನಿಸಬೇಕು.

> ಆಗ ಒಬ್ಬ ಶಾಸ್ತ್ರಿಯು ಆತನ ಬಳಿಗೆ ಬಂದು, "ಗುರುವೇ, ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂಬಾಲಿಸುತ್ತೇನೆ" ಎಂದು ಹೇಳಿದನು. ಯೇಸು ಅವನಿಗೆ "ನರಿಗಳಿಗೆ **ಗುದ್ದುಗಳಿವೆ**, ಆಕಾಶದಲ್ಲಿ ಹಾರಾಡುವ ಹಕ್ಕಿಗಳಿವೆ **ಗೂಡುಗಳಿವೆ**, ಆದರೆ ಮನುಷ್ಯಕುಮಾರನಿಗೆ ತಲೆ ಇಡುವಷ್ಟು ಸ್ಥಳವೂ ಇಲ್ಲ" ಎಂದು ಹೇಳಿದನು. (ಮತ್ತಾಯ 8:20 ULT) – ಇಲ್ಲಿ ಯೇಸು ಮನುಷ್ಯಕುಮಾರನಾಗಿದ್ದಾನೆ ಎಂಬುದು ಸೂಚ್ಯ ಮಾಹಿತಿಯಾಗಿದೆ. ಆ ಶಾಸ್ತ್ರಿಯು ಯೇಸುವನ್ನು ಹಿಂಬಾಲಿಸಲು ಬಯಸಿದರೆ ಅವನು ಯೇಸುವಿನಂತೆ ಮನೆ ಇಲ್ಲದೆ ಜೀವಿಸಬೇಕು ಎಂಬುದು ಇನ್ನೊಂದು ಸೂಚ್ಯ ಮಾಹಿತಿಯಾಗಿದೆ.
>
> > ಯೇಸು ಅವನಿಗೆ, "ನರಿಗಳಿಗೆ ಗುದ್ದುಗಳಿವೆ ಮತ್ತು ಆಕಾಶದಲ್ಲಿ ಹಾರಾಡುವ ಪಕ್ಷಿಗಳಿಗೆ ಗೂಡುಗಳಿವೆ ಮತ್ತು **ಮನುಷ್ಯಕುಮಾರನಾದ ನನಗೆ, ವಿಶ್ರಾಂತಿ ಪಡೆಯಲು ಮನೆ ಇಲ್ಲ. ನೀನು ನನ್ನನ್ನು ಹಿಂಬಾಲಿಸಿ ಬಯಸುವುದಾದರೆ ನನ್ನಂತೆಯೇ ನೀನು ಜೀವಿಸಬೇಕು**" ಎಂದು ಹೇಳಿದನು.

> ನ್ಯಾಯ ವಿಚಾರಣೆಯ ದಿನದಲ್ಲಿ ನಿಮ್ಮ ಗತಿಗಿಂತಲೂ ತೂರ್, ಸಿದೋನ್ ಪಟ್ಟಣಗಳ ಗತಿಯು ಮೇಲಾಗಿರುವುದು (ಮತ್ತಾಯ 11:22 ULT) – ದೇವರು ಜನರಿಗೆ ನ್ಯಾಯತೀರ್ಪು ಮಾಡುವುದು ಮಾತ್ರವಲ್ಲ ಆತನು ಅವರನ್ನು ಶಿಕ್ಷಿಸುತ್ತಾನೆ ಎಂಬುದು ಸೂಚ್ಯ ಮಾಹಿತಿ. ಇದನ್ನು ಸ್ಪಷ್ಟಪಡಿಸಿ ಹೇಳಬಹುದು.
>
> > ನ್ಯಾಯ ವಿಚಾರಣೆಯ ದಿನದಂದು ದೇವರು ತುಂಬಾ ದುಷ್ಟರಾಗಿರುವ **ತೂರ್ ಮತ್ತು ಸಿದೋನ್ ಪಟ್ಟಣದ ಜನರನ್ನು ಶಿಕ್ಷಿಸುವನು**, ಆದರೆ **ನಿಮ್ಮನ್ನು ಶಿಕ್ಷಿಸುವುದಕ್ಕಿಂತ ಅತಿ ಕಡಿಮೆಯಾಗಿ ಶಿಕ್ಷಿಸುವನು**.
> > ಅಥವಾ:
> > ನ್ಯಾಯ ವಿಚಾರಣೆಯ ದಿನದಲ್ಲಿ ದುಷ್ಟರಾದ ತೂರ್ ಮತ್ತು ಸಿದೋನ್ ಪಟ್ಟಣದ ಜನರಿಗಿಂತ **ನಿಮ್ಮನ್ನು ದೇವರು ಬಹು ಘೋರವಾಗಿ ಶಿಕ್ಷಿಸುವನು**.

ಆಧುನಿಕ ಕಾಲದ ಜನರಿಗೆ ಸತ್ಯವೇದ ಕಾಲದ ಜನರಿಗೆ ಮತ್ತು ಮೊದಲ ಓದುಗರಿಗೆ ಗೊತ್ತಿರುವ ವಿಷಯಗಳು ತಿಳಿಯದೆ ಇರಬಹುದು. ಇದು ಮಾತನಾಡುವವನು ಅಥವಾ ಬರಹಗಾರನು ಹೇಳುವಂಥದ್ದನ್ನು ಅರ್ಥಮಾಡಿಕೊಳ್ಳಲು ಮತ್ತು ಸೂಚ್ಯ ಮಾಹಿತಿಗಳನ್ನು ತಿಳಿದುಕೊಳ್ಳಲು ಕಷ್ಟವಾಗಬಹುದು. ಭಾಷಾಂತರಗಾರರು ಭಾಷಾಂತರ ಮಾಡುವಾಗ ಮೂಲ ಲೇಖಕನು ಅಥವಾ ಮಾತನಾಡುವವನು ಸೂಚ್ಯವಾಗಿ ಇಟ್ಟಿರುವ ಕೆಲವು ವಿಷಯಗಳನ್ನು ಸ್ಪಷ್ಟವಾಗಿ ತಿಳಿಸಬೇಕು.

"

ಮುಂದೆ ನೀವು ಕಲಿಯಲು ಶಿಫಾರಸು ಮಾಡುತ್ತೇವೆ:

ಸ್ಪಷ್ಟವಾದ ಮಾಹಿತಿಯನ್ನು ಸೂಚ್ಯವಾಗಿ ಹೇಳುವುದು. (UTA PDF)

ಹಿಂತಿರುಗಿ ಹೋಗಿ: ಚೊಚ್ಚಲು

ದ್ವಿರುಕ್ತಿಗಳು

ವಿವರಣೆ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ದ್ವಿರುಕ್ತಿಗಳು ಎಂದರೇನು? ಅವುಗಳನ್ನು ನಾನು ಹೇಗೆ ಅನುವಾದಿಸಬಹುದು?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಅಲಂಕಾರಗಳು. (UTA PDF)

ಒಟ್ಟಿಗೆ ಬಳಸುವ ಮತ್ತು ಒಂದೇ ಅರ್ಥಕೊಡುವ ಅಥವಾ ಒಂದೇ ವಿಷಯಕ್ಕೆ ಹತ್ತಿರವಾದ ಅರ್ಥವಿರುವ ಎರಡು ಪದಗಳನ್ನು ಅಥವಾ ಪದಗುಚ್ಛಗಳನ್ನು ಸೂಚಿಸುವುದಕ್ಕಾಗಿ ದ್ವಿರುಕ್ತಿಯನ್ನು ನಾವು ಬಳಸುತ್ತೇವೆ. ಕೆಲವೊಮ್ಮೆ ಈ ಪದಗಳನ್ನು "ಮತ್ತು" ಎಂಬ ಪದದ ಸಹಿತ ಒಂದು ಪದವಾಗಿ ಬಳಸುತ್ತೇವೆ. ಇದು ದ್ವಿಪದಾಲಂಕಾರಗಳ ಹಾಗಲ್ಲ, ದ್ವಿಪದಾಲಂಕಾರದಲ್ಲಿ ಒಂದು ಪದವು ಇನ್ನೊಂದನ್ನು ಮಾರ್ಪಡಿಸುತ್ತದೆ, ದ್ವಿರುಕ್ತಿಯಲ್ಲಿ ಎರಡು ಪದಗಳು ಅಥವಾ ಪದಗುಚ್ಛಗಳು ಸಮಾನವಾಗಿರುತ್ತವೆ ಮತ್ತು ಎರಡು ಪದಗಳು ಅಥವಾ ಪದಗುಚ್ಛಗಳ ಮೂಲಕ ವ್ಯಕ್ತಪಡಿಸಿದ ವಿಚಾರವನ್ನು ಒತ್ತಿಹೇಳಲು ಅಥವಾ ತೀವ್ರಗೊಳಿಸಲು ಬಳಸಲಾಗುತ್ತದೆ.

ಕಾರಣವೇನಂದರೆ ಇದು ಭಾಷಾಂತರದ ಸಮಸ್ಯೆಯಾಗಿದೆ

ಕೆಲವು ಭಾಷೆಗಳಲ್ಲಿ ಜನರು ದ್ವಿರುಕ್ತಿಗಳನ್ನು ಉಪಯೋಗಿಸುವುದಿಲ್ಲ, ಅಥವಾ ಅವರು ದ್ವಿರುಕ್ತಿಗಳನ್ನು ಕೆಲವು ಸನ್ನಿವೇಶಗಳಲ್ಲಿ ಮಾತ್ರ ಬಳಸಬಹುದು, ಆದ್ದರಿಂದ ಅವರ ಭಾಷೆಯಲ್ಲಿ ಕೆಲವೊಂದು ವಚನಗಳಲ್ಲಿ ದ್ವಿರುಕ್ತಿಯು ಅರ್ಥಹೀನವಾಗಿರುತ್ತದೆ. ಈ ವಚನವು ಒಂದೇ ವಿಚಾರವನ್ನು ಅಥವಾ ಕ್ರಿಯೆಯನ್ನು ವಿವರಿಸುತ್ತಿರುವಾಗಲೂ, ಜನರು ಇದುಎರಡು ವಿಚಾರಗಳನ್ನು ಅಥವಾ ಕ್ರಿಯೆಗಳನ್ನು ವಿವರಿಸುತ್ತಿದ್ದೆ ಎಂದು ಭಾವಿಸಬಹುದು. ಈ ಸಂಗತಿಯಲ್ಲಿ, ಭಾಷಾಂತರ ಮಾಡುವವರು ದ್ವಿರುಕ್ತಿಯು ವ್ಯಕ್ತಪಡಿಸಿರುವ ಅರ್ಥವನ್ನು ವ್ಯಕ್ತಪಡಿಸುವುದಕ್ಕೆ ಬೇರೆ ಯಾವುದಾದರೂ ಮಾರ್ಗವಿದೆಯೋ ಎಂದು ಕಂಡುಕೊಳ್ಳಬೇಕು.

ಸತ್ಯವೇದದಲ್ಲಿನ ಉದಾಹರಣೆಗಳು

> ಅರಸನಾದ ದಾವೀದನು **ದಿನತುಂಬಿದ ಮುದುಕ**ನಾಗಿದ್ದನು. (1 ಅರಸುಗಳು 1:1 ULT)

ದೊಡ್ಡ ಅಕ್ಷರಗಳಲ್ಲಿ ಇರುವ ಪದಗಳು ಒಂದೇ ಅರ್ಥವನ್ನು ಹೊಂದಿವೆ. ಎರಡೂ ಪದಗಳು ಅವನು ತುಂಬಾ ವಯಸ್ಸಾದವನು ಎಂಬುದನ್ನು ಸೂಚಿಸುತ್ತದೆ.

> ...ಅವನು ತನಗಿಂತ **ಉತ್ತಮರೂ** ಮತ್ತು **ನೀತಿವಂತರು** ಆದ ಇಬ್ಬರನ್ನು ಕೊಂದನು (1 ಅರಸುಗಳು 2:32 ULT)

ಇದರ ಅರ್ಥ ಅವರು ಅವನಿಗಿಂತ "ಹೆಚ್ಚು ನೀತಿವಂತರಾಗಿದ್ದರು."

> ನೀವು **ಸುಳ್ಳು** ಮತ್ತು **ಮೋಸದ** ಮಾತುಗಳನ್ನು ಹೇಳಲು ನಿರ್ಧರಿಸಿ ಸಿದ್ಧವಾಗಿದ್ದೀರಿ (ದಾನಿಯೇಲ 2:9 ULT)

ಇದರ ಅರ್ಥವೇನಂದರೆ ಅವರು ಸುಳ್ಳು ಹೇಳುವುದಕ್ಕೆ ನಿರ್ಧರಿಸಿಕೊಂಡಿದ್ದರು, ಇದು ಅವರು ಜನರನ್ನು ಮೋಸಗೊಳಿಸಲು ಬಯಸಿದ್ದರು ಎಂದು ಹೇಳುವುದಕ್ಕಿರುವ ಮತ್ತೊಂದು ರೀತಿಯಾಗಿದೆ.

> ... **ಪೂರ್ಣಾಂಗವಾದ** ಮತ್ತು **ನಿಷ್ಕಳಂಕವಾದ** ಕುರಿಯಾಗಿರುವ. (1 ಪೇತ್ರ 1:19 ULT)

ಆತನು ಯಾವುದೇ ಕುಂದುಕೊರತೆ ಇಲ್ಲದ ಕುರಿಯಂತೆ ಇದ್ದಾನೆ ಎಂಬುದು ಇದರ ಅರ್ಥವಾಗಿದೆ.

ಭಾಷಾಂತರದ ಕಾರ್ಯತಂತ್ರಗಳು

ನಿಮ್ಮ ಭಾಷೆಯಲ್ಲಿ ದ್ವಿರುಕ್ತಿಗಳನ್ನು ಬಳಸುವುದು ಸಹಜವಾಗಿದ್ದರೆ ಮತ್ತು ಅವು ಸರಿಯಾದ ಅರ್ಥಕೊಡುವುದಾದರೆ ಅದನ್ನು ಬಳಸಿರಿ. ಇಲ್ಲದಿದ್ದರೆ ಈ ಕೆಳಗೆ ಸೂಚಿಸಿರುವ ಕಾರ್ಯತಂತ್ರಗಳನ್ನು ಬಳಸಬಹುದು.

ಎರಡರಲ್ಲಿ ಒಂದು ಪದವನ್ನು ಅಥವಾ ಪದಗುಚ್ಛವನ್ನು ಭಾಷಾಂತರ ಮಾಡಿರಿ.
ಅರ್ಥವನ್ನು ತೀವ್ರಗೊಳಿಸಲು ದ್ವಿರುಕ್ತಿಯನ್ನು ಬಳಸಿದ್ದಲ್ಲಿ, ಎರಡರಲ್ಲಿ ಒಂದು ಪದವನ್ನು ಅಥವಾ ಪದಗುಚ್ಛವನ್ನು ಭಾಷಾಂತರ ಮಾಡಿರಿ ಮತ್ತು ಅದಕ್ಕೆ ತೀವ್ರಗೊಳಿಸುವ ಪದಗಳಾದ "ತುಂಬಾ", "ಅಧಿಕ" ಅಥವಾ "ಬಹಳ" ಎಂಬ ಪದಗಳನ್ನು ಸೇರಿಸಿರಿ.
ಅರ್ಥವನ್ನು ತೀವ್ರಗೊಳಿಸಲು ಅಥವಾ ಒತ್ತಿಹೇಳಲು ದ್ವಿರುಕ್ತಿಗಳನ್ನು ಬಳಸಿದ್ದಲ್ಲಿ, ನಿಮ್ಮ ಭಾಷೆಯಲ್ಲಿ ಅದಕ್ಕನುಗುಣವಾಗಿರುವ ಉತ್ತಮ ರೀತಿಯನ್ನು ಬಳಸಿ ಭಾಷಾಂತರ ಮಾಡಿರಿ.

ಭಾಷಾಂತರದ ಕಾರ್ಯತಂತ್ರಗಳನ್ನು ಅನ್ವಯಿಸಲಾಗಿದೆ

(1) ಎರಡರಲ್ಲಿ ಒಂದು ಪದವನ್ನು ಭಾಷಾಂತರಿಸಿರಿ.

> ನೀವು **ಸುಳ್ಳು** ಮತ್ತು **ಮೋಸದ** ಮಾತುಗಳನ್ನು ಹೇಳಲು ನಿರ್ಧರಿಸಿ ಸಿದ್ದವಾಗಿದ್ದೀರಿ (ದಾನಿಯೇಲ 2:9 ULT)
>
> > "ನೀವು **ಸುಳ್ಳು** ವಿಚಾರಗಳನ್ನು ಹೇಳಲು ನಿರ್ಧರಿಸಿದ್ದೀರೀ."

(2) ಅರ್ಥವನ್ನು ತೀವ್ರಗೊಳಿಸಲು ದ್ವಿರುಕ್ತಿಯನ್ನು ಬಳಸಿದ್ದಲ್ಲಿ, ಎರಡರಲ್ಲಿ ಒಂದು ಪದವನ್ನು ಅಥವಾ ಪದಗುಚ್ಛವನ್ನು ಭಾಷಾಂತರ ಮಾಡಿರಿ ಮತ್ತು ಅದಕ್ಕೆ ತೀವ್ರಗೊಳಿಸುವ ಪದಗಳಾದ "ತುಂಬಾ", "ಅಧಿಕ" ಅಥವಾ "ಬಹಳ" ಎಂಬ ಪದಗಳನ್ನು ಸೇರಿಸಿರಿ.

> ಅರಸನಾದ ದಾವೀದನು **ದಿನತುಂಬಿದ ಮುದುಕ**ನಾಗಿದ್ದನು. (1 ಅರಸುಗಳು 1:1 ULT)
>
> > "ಅರಸನಾದ ದಾವೀದನು **ತುಂಬಾ ವಯಸ್ಸಾದವನಾಗಿದ್ದನು**."

(3) ಅರ್ಥವನ್ನು ತೀವ್ರಗೊಳಿಸಲು ಅಥವಾ ಒತ್ತಿಹೇಳಲು ದ್ವಿರುಕ್ತಿಗಳನ್ನು ಬಳಸಿದ್ದಲ್ಲಿ, ನಿಮ್ಮ ಭಾಷೆಯಲ್ಲಿ ಅದಕ್ಕನುಗುಣವಾಗಿರುವ ಉತ್ತಮ ರೀತಿಯನ್ನು ಬಳಸಿ ಭಾಷಾಂತರ ಮಾಡಿರಿ.

> ... **ಪೂರ್ಣಾಂಗವಾದ** ಮತ್ತು **ನಿಷ್ಕಳಂಕವಾದ** ಕುರಿ. (1 ಪೇತ್ರ 1:19 ULT) – ಆಂಗ್ಲ ಭಾಷೆಯಲ್ಲಿ ಇವುಗಳನ್ನು ಹೆಚ್ಚು ಒತ್ತು ಕೊಟ್ಟು ಹೇಳಲು "ಯಾವುದೇ" ಮತ್ತು "ಇಲ್ಲದ" ಎಂದು ಬಳಸಿದ್ದಾರೆ.
>
> > "...**ಯಾವುದೇ ಕಳಂಕವಿಲ್ಲದೆ** ಕುರಿಮರಿ..."

"

ಹಿಂತಿರುಗಿ ಹೋಗಿ: ಸಮಯ, ಅಕಾಲಿಕ, ದಿನಾಂಕ

ನಾಮವಾಚಕ ಗುಣವಾಚಕಗಳು.

ವಿವರಣೆ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ಗುಣವಾಚಕಗಳು ನಾಮಪದಗಳಾಗಿ ಬರುವಾಗ ನಾನು ಹೇಗೆ ಭಾಷಾಂತರ ಮಾಡಬೇಕು ?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಪಾರ್ಟ್ಸ್ ಆಫ್ ಸ್ಪೀಚ್. (UTA PDF)

ಕೆಲವು ಭಾಷೆಯಲ್ಲಿ ಗುಣವಾಚಕಗಳನ್ನು ವಿವರಿಸಲು ಕೆಲವು ವರ್ಗದ ವಿಷಯಗಳನ್ನು ತಿಳಿಸವ ಗುಣವಾಚಕಗಳನ್ನು ಬಳಸಲಾಗುತ್ತದೆ. ಆ ರೀತಿಯಾದಾಗ ಅದು ನಾಮಪದದಂತೆ ಬಳಸಲಾಗುತ್ತದೆ. ಉದಾಹರಣೆಗೆ ಐಶ್ವರ್ಯವಂತ ಒಂದು ಗುಣವಾಚಕ ಪದ. ಇಲ್ಲಿ ಕೊಟ್ಟಿರುವ ಎರಡು ಉದಾರಹಣೆಗಳು " ಶ್ರೀಮಂತ " ಎಂಬ ಪದ ಗುಣವಾಚಕ ಎಂಬುದನ್ನು ತಿಳಿಸುತ್ತದೆ.

> .. ಒಬ್ಬ ಐಶ್ವರ್ಯವಂತನಿಗೆ ತುಂಬಾ ಕುರಿಗಳು ಮತ್ತು ದನಗಳು ಇದ್ದವು. (2ನೇ ಸಮುವೇಲ 12:2 ULB)

ಗುಣವಾಚಕ ಪದ ಮನುಷ್ಯ/ವ್ಯಕ್ತಿ ಪದದ ಮೊದಲು ಬರುವುದರಿಂದ ಅದು ಆವ್ಯಕ್ತಿಯ ವಿಶೇಷತೆಯನ್ನು ವರ್ಣಿಸುತ್ತದೆ/ ತಿಳಿಸುತ್ತದೆ.

> ಇಂತವನು ಐಶ್ವರ್ಯವಂತನಾಗುವುದಿಲ್ಲ, ಅವನ ಸಿರಿಯು ನಿಲ್ಲುವುದಿಲ್ಲ ; (ಯೋಬ 15:29 ULB)

ಇಲ್ಲಿ "ಐಶ್ವರ್ಯವಂತ" ಎಂಬ ಗುಣವಾಚಕದ ನಂತರ ಬರುವ ಪದ ಅವನ ಬಗ್ಗೆ ವಿವರಿಸುತ್ತದೆ. ಇಲ್ಲೊಂದು ವಾಕ್ಯ ಹೇಗೆ " ಐಶ್ವರ್ಯವಂತ " ಎಂಬ ಪದ ನಾಮಪದವಾಗಿ ಬಳಕೆಯಾಗಿದೆ ಎಂಬುದನ್ನು ತೋರಿಸುತ್ತದೆ.

> ...ಐಶ್ವರ್ಯವಂತರು ಅರ್ಧ ಶೆಕಲ್ ಗಿಂತ ಹೆಚ್ಚು ಕೊಡಬಾರದು.ಮತ್ತು ಬಡವರು ಅರ್ಧ ಶೆಕಲ್ ಗಿಂತ ಕಡಿಮೆ ಕೊಡಬಾರದು. (ವಿಮೋಚನಾಕಾಂಡ 30:15 ULB)

ವಿಮೋಚನಾಕಾಂಡ 30:15ರಲ್ಲಿ ಬರುವ " ಐಶ್ವರ್ಯವಂತ " ಎಂಬ ಪದ ನಾಮಪದವಾಗಿದೆ. " ಐಶ್ವರ್ಯವಂತ "ಎಂಬ ಪದ " ಐಶ್ವರ್ಯವಂತ " ಜನರನ್ನು ಪ್ರತಿನಿಧಿಸುತ್ತದೆ. "ಬಡವರು" ಎಂಬ ಪದ ಸಹ ಇಲ್ಲಿ ನಾಮಪದವಾಗಿ ಬಡಜನರನ್ನು ಪ್ರತಿನಿಧಿಸುತ್ತದೆ.

ಕಾರಣ ಇದೊಂದು ಭಾಷಾಂತರ ತೊಡಕು.

- ಸತ್ಯವೇದದಲ್ಲಿ ಅನೇಕ ಸಲ ಗುಣವಾಚಕಗಳನ್ನು ನಾಮಪದಗಳನ್ನಾಗಿ ಬಳಸಿ ಒಂದು ಗುಂಪಿನ ಜನರ ಬಗ್ಗೆ ವಿವರಿಸಲಾಗಿದೆ.
- ಕೆಲವು ಭಾಷೆಯಲ್ಲಿ ಗುಣವಾಚಕಗಳನ್ನು ಹೀಗೆ ಬಳಸುವುದಿಲ್ಲ.
- ಈ ಭಾಷೆಗಳ ಓದುಗರು ವಾಕ್ಯಭಾಗಗಳು ಒಬ್ಬ ವ್ಯಕ್ತಿಯ ಬಗ್ಗೆ ವಿವರಿಸುತ್ತಿದ್ದರೂ ಅದು ಒಂದು ಗುಂಪಿನ / ಸಮೂಹದ ಜನರನ್ನು ಕುರಿತು ಹೇಳುತ್ತಿದೆ ಮತ್ತು ಗುಣವಾಚಕವನ್ನು ವಿವರಿಸುತ್ತಿದೆ ಎಂದು ತಿಳಿದುಕೊಳ್ಳುವರು.

ಸತ್ಯವೇದದಿಂದ ಉದಾಹರಣೆಗಳು.

> ದುಷ್ಟರ ದಂಡಾಧಿಕಾರವು ನೀತಿವಂತರ ನಾಡಿನಲ್ಲಿ .ಉಳಿಯಬಾರದು. (ದಾ.ಕೀ. 125:3 ULB)

"ನೀತಿವಂತರು " ಎಂಬುದು ಇಲ್ಲಿ ಜನರು ಯಾರು ನೀತಿಪರರಾಗಿದ್ದಾರೋ ಅವರು ಯಾರೋ ಒಬ್ಬ ನೀತಿವಂತನಲ್ಲ.

> ಶಾಂತರು ಧನ್ಯರು (ಮತ್ತಾಯ 5:5 ULB)

“ ಶಾಂತರು “ ಎಂಬುದು ಯಾರು ಶಾಂತಿಯನ್ನು ಬಯಸುತ್ತಾರೋ ಅವರು. ಶಾಂತಿ ಬಯಸುವ ಕೇವಲ ಒಬ್ಬ ವ್ಯಕ್ತಿ ಅಲ್ಲ

ಭಾಷಾಂತರ ಕೌಶಲ್ಯಗಳು.

ನಿಮ್ಮ ಭಾಷೆಯಲ್ಲಿ ಒಂದು ವರ್ಗದ ಜನರನ್ನು ಕುರಿತು ಹೇಳುವಾಗ ಗುಣವಾಚಕಗಳನ್ನು ನಾಮಪದವನ್ನಾಗಿ ಬಳಸುವ ಪದ್ಧತಿ ಇದ್ದರೆ ಅದನ್ನು ಪರಿಗಣಿಸಬಹುದು. ಇದು ಸರಿಹೊಂದದಿದ್ದರೆ, ಅರ್ಥ ಸ್ಪಷ್ಟವಾಗಿದ್ದರೆ ಅಥವಾ ತಪ್ಪಾದರೆ ಅದರ ಬದಲು ಇಲ್ಲಿ ಕೆಲವು ಮಾರ್ಗಗಳನ್ನು ಸೂಚಿಸಲಾಗಿದೆ.

ಗುಣವಾಚಕಗಳನ್ನು ಬಹುವಚನ ರೂಪದಲ್ಲಿ ಬಳಸಿದರೆ ನಾಮಪದ ಅದನ್ನು ವಿವರಿಸುತ್ತದೆ.

ಭಾಷಾಂತರ ತಂತ್ರಗಳನ್ನು ಅಳವಡಿಸಿದ ಬಗ್ಗೆ ಉದಾಹರಣೆಗಳು.

ಗುಣವಾಚಕಗಳನ್ನು ಬಹುವಚನ ರೂಪದಲ್ಲಿ ಬಳಸಿದರೆ ನಾಮಪದ ಅದನ್ನು ವಿವರಿಸುತ್ತದೆ.

- **ದುಷ್ಟರ ದಂಡಾಧಿಕಾರವು ನೀತಿವಂತರ ನಾಡಿನಲ್ಲಿ ಉಳಿಯಬಾರದು .** (ದಾ.ಕೀ. 125:3 ULB)
  - ದುಷ್ಟರ ದಂಡಾಧಿಕಾರವು ನೀತಿವಂತರ ನಾಡಿನಲ್ಲಿ ಆಳ್ವಿಕೆ ನಡೆಸಬಾರದು.
- **ಶಾಂತರು ಧನ್ಯರು..** (ಮತ್ತಾಯ 5:5 ULB)
  - ಶಾಂತಿಪ್ರಿಯರಾದ ಜನರು ಆಶೀರ್ವದಿಸಲ್ಪಡುವವರು / ಧನ್ಯರು ..

"

ಹಿಂತಿರುಗಿ ಹೋಗಿ: ದೈವಭಕ್ತಿಯುಳ್ಳ, ದೈವಭಕ್ತಿ, ದೈವಭಕ್ತಿಯಿಲ್ಲದ, ದೈವಹೀನ, ಭಕ್ತಿಹೀನತೆ, ದೇವರಿಲ್ಲದಿರುವಿಕೆ; ಮರಣಿಸು, ಮರಣಿಸುತ್ತಾನೆ, ಮರಣಕರವಾದ, ಮರಣ,

ನುಡಿಗಟ್ಟುಗಳು.

"ನುಡಿಗಟ್ಟುಗಳು" ಇವು ಸಹಅಲಂಕಾರವಾಗಿದ್ದು ಪದಗಳು ಗುಂಪಾಗಿ ಕಂಡು ಬರುತ್ತವೆ. ಒಂದು ಪದಕ್ಕೆ ಅರ್ಥವಿರುವಂತೆ ಈ ಪದದ ಗುಂಪಿಗೆ ಕೆಲವೊಮ್ಮೆ ವಿಭಿನ್ನವಾದ ಅರ್ಥವನ್ನು ಕೊಟ್ಟು ಅರ್ಥಮಾಡಿಕೊಳ್ಳಬಹುದು.

ಬೇರೆ ಸಂಸ್ಕೃತಿಯಲ್ಲಿನ ಜನರಿಗೆ ಇಂತಹ ನುಡಿಗಟ್ಟು, (ಕೆಲವೊಮ್ಮೆ ನಾಣ್ನುಡಿ) ಅರ್ಥವಾಗದೇ ಇರಬಹುದು. ನುಡಿಗಟ್ಟು ಯಾವಭಾಷೆಯಲ್ಲಿದೆಯೋ ಆ ಭಾಷೆಯ/ ಸಂಸ್ಕೃತಿಯ ಜನರಿಗೆ ಇದು ಸುಲಭವಾಗಿ ಸರಿಯಾಗಿ ಅರ್ಥವಾಗುತ್ತದೆ. ಎಲ್ಲಾ ಭಾಷೆಯಲ್ಲೂ ಇಂತಹ ನುಡಿಗಟ್ಟು/ ನಾಣ್ನುಡಿಗಳ ಬಳಕೆಯಿದೆ. ಇಂಗ್ಲೀಷ್ ಭಾಷೆಯಲ್ಲಿನ ಕೆಲವು ಉದಾಹರಣೆಗಳು.

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ನುಡಿಗಟ್ಟುಗಳು ಎಂದರೇನು ? ಮತ್ತು ನಾನು ಅವುಗಳನ್ನು ಹೇಗೆ ಭಾಷಾಂತರ ಮಾಡಬಹುದು ?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಅಲಂಕಾರಗಳು. (UTA PDF)

- "ನೀನು ನನ್ನ ಕಾಲು ಏಳೆಯುತ್ತಿದ್ದೀಯಾ", ಇದರ ಅರ್ಥ(ನೀನು ನನಗೆ ಸುಳ್ಳು ಹೇಳುತ್ತಿರುವಿ)
- ಈ ಲಕೋಟೆಯನ್ನು (envelope) ನೂಕಬೇಡ (ಇದರ ಅರ್ಥ ವಿಷಯವನ್ನು ಅತಿರೇಕಕ್ಕೆ ತೆಗೆದುಕೊಡು ಹೋಗಬೇಡ)
- ಈ ಮನೆ ನೀರಿನಲ್ಲಿ ಮುಳುಗಿದೆ (ಇದರ ಅರ್ಥ ಈ ಮನೆಗೆ ತೆಗೆದುಕೊಂಡಿರುವ ಸಾಲದ ಮೊತ್ತ ಮನೆಯ ನಿಜವಾದ ಮೌಲ್ಯಕ್ಕಿಂತ ಹೆಚ್ಚಾಗಿದೆ).
- ನಾವು ನಗರವನ್ನು ಕೆಂಪುಬಣ್ಣದಿಂದ ಬಳೆಯುತ್ತೇವೆ, ಇದರ ಅರ್ಥ ಈ ರಾತ್ರಿ ನಾವು ನಗರದ ಸುತ್ತ ಸಂಭ್ರಮಾಚರಣೆಗಳಿಂದ ಸಂತೋಷಿಸುತ್ತೇವೆ, ಎಂದು.

ವಿವರಣೆಗಳು.

ಒಂದು ಭಾಷೆಯ/ ಸಂಸ್ಕೃತಿಯ ಜನರಿಗೆ ವಿಶೇಷ ಅರ್ಥವನ್ನು ನೀಡುವ ನುಡಿಗಟ್ಟು/ ನಾಣ್ನುಡಿ ಬಳಸಲು ಅವಕಾಶ ಮಾಡಿಕೊಡುವುದು. ಈ ಪದಗಳ ಅರ್ಥವನ್ನು ಒಬ್ಬ ವ್ಯಕ್ತಿ ಒಂದು ಪದವನ್ನು ಅರ್ಥಮಾಡಿಕೊಳ್ಳುವುದಕ್ಕಿಂತ ಭಿನ್ನವಾಗಿ ಅರ್ಥಮಾಡಿಕೊಳ್ಳಬಹುದು.

> ಆತನು ಯೆರೂಸಲೇಮಿಗೆ ಹೋಗಲು ಮನಸ್ಸನ್ನು ದೃಢಮಾಡಿಕೊಂಡನು (ಮೂಲದಲ್ಲಿ ಮನಸ್ಸು ಬದಲು ಮುಖ ಎಂದಿದೆ) (ಲೂಕ 9:51 ULB)

ಇಲ್ಲಿ " ಮನಸ್ಸನ್ನು ದೃಢಮಾಡಿಕೊಂಡನು " ಎಂಬುದು ನಿರ್ಧರಿಸಿದನು ಎಂಬ ಅರ್ಥ ಕೊಡುತ್ತದೆ. ಕೆಲವೊಮ್ಮೆ ಜನರು ಬೇರೆ ಸಂಸ್ಕೃತಿಯ ಆಧಾರದ ಮೇಲೆ ನುಡಿಗಟ್ಟುಗಳನ್ನು ಅರ್ಥಮಾಡಿಕೊಳ್ಳುವುದುಂಟು. ಆದರೆ ಆಗ ಇದು ವಿಭಿನ್ನ ರೀತಿಯ ಅರ್ಥವನ್ನು ವ್ಯಕ್ತಮಾಡಬಹುದು.

> ನೀನು ನನ್ನ ಛಾವಣಿಗೆ ಬರತಕ್ಕಷ್ಟು ಯೋಗ್ಯತೆ ನನಗಿಲ್ಲ . (ಲೂಕ 7:6 ULB)

" ನನ್ನ ಛಾವಣಿಗೆ ಬರಲು" ಎಂದರೆ "ನನ್ನ ಮನೆಗೆ ಬರಲು" ಎಂದು ಅರ್ಥ

> ಮಾತುಗಳು ನಿಮ್ಮ ಕಿವಿಯಲ್ಲಿ ಮನಸ್ಸಿನಲ್ಲಿ ಆಳವಾಗಿ ಪ್ರವೇಶಿಸಲಿ . (ಲೂಕ 9:44 ULB)

ಈ ನುಡಿಗಟ್ಟಿನ ಅರ್ಥ ನನ್ನ ಮಾತುಗಳನ್ನು " ಎಚ್ಚರಿಕೆಯಿಂದ ಆಲಿಸಿ ಮತ್ತು ನೆನಪಿನಲ್ಲಿಡಿ ಎಂದು "

ಉದ್ದೇಶ:

ಈ ನುಡಿಗಟ್ಟುಗಳನ್ನು ಆಯಾ ಸಂಸ್ಕೃತಿಯಲ್ಲಿ ಬಹುಶಃ ಜನರು ತಾವು ಹೇಳುವ ವಿಷಯಗಳು ಇತರರಿಗೆ ಮನದಟ್ಟಾಗುವಂತೆ ವಿವರಿಸಲು ಇಂತಹ ಪದಗಳನ್ನು ಬಳಸಿರಬಹುದು. ಅಥವಾ ಕೆಲವೊಮ್ಮೆ ಆಕಸ್ಮಿಕವಾಗಿಯೂ ಬಳಸಿರಬಹುದು. ಆದರೆ ಯಾವಾಗ ಇಂತಹ ಪದಗಳು ಪರಿಣಾಮಕಾರಿಯಾದ ಅರ್ಥವನ್ನು ಜನರಿಗೆ ತಿಳಿಸಿದರೆ, ಅವರಿಗೆ ಸುಲಭವಾಗಿ ಅರ್ಥವಾದರೆ ಮಾತ್ರ ಜನರು ಅದನ್ನು ಬಳಸಲು ಪ್ರಾರಂಭಿಸುತ್ತಾರೆ. ಕ್ರಮೇಣ ಇಂತಹ ಪದಗಳನ್ನು ಎಲ್ಲಾ ಜನರು ಸಹಜವಾಗಿ ಉಪಯೋಗಿಸುತ್ತಾರೆ.

ಕಾರಣ ಇದೊಂದು ಭಾಷಾಂತರದ.

- ಸತ್ಯವೇದದ ಮೂಲಭಾಷೆಯಲ್ಲಿನ ನುಡಿಗಟ್ಟುಗಳನ್ನು ಜನರು ಕೆಲವೊಮ್ಮೆ ಸುಲಭವಾಗಿ ಅಪಾರ್ಥಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ.(ಅವರಿಗೆ ಅಂದಿನ ಸಂಸ್ಕೃತಿಯ ಪರಿಚಯವಿಲ್ಲದಿದ್ದರೆ) ಮತ್ತು ಆ ಸಂಸ್ಕೃತಿಯ ಸತ್ಯವೇದವನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗಬಹುದು.
- ಮೂಲಭಾಷೆಯ ಸತ್ಯವೇದದಲ್ಲಿರುವ ನುಡಿಗಟ್ಟುಗಳನ್ನು ಸರಿಯಾಗಿ ಭಾಷಾಂತರ ಮಾಡದಿದ್ದರೆ ಮತ್ತು ಅಂದಿನ ಸಂಸ್ಕೃತಿಯ ಪರಿಚಯ ಇಲ್ಲದಿದ್ದರೆ ಓದುವ ಜನರು ಇದನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾಗುತ್ತಾರೆ.
- ಭಾಷಾಂತರವಾಗುತ್ತಿರುವ ಭಾಷೆಯ ಜನರಿಗೆ ಈ ನುಡಿಗಟ್ಟುಗಳು (ಪ್ರತಿಯೊಂದು ಪದದ ಅರ್ಥ) ನುಡಿಗಟ್ಟುಗಳನ್ನು ಭಾಷಾಂತರಿಸುವುದು ವ್ಯರ್ಥ

ಸತ್ಯವೇದದಲ್ಲಿನ ಉದಾಹರಣೆಗಳು.

> ಅನಂತರ ಇಸ್ರಾಯೇಲರೆಲ್ಲರೂ ಹೆಬ್ರೋನಿನಲ್ಲಿದ್ದ ದಾವೀದನ ಬಳಿ ಬಂದು ನೋಡು ನಾವು ನಿನ್ನ ದೇಹದ ರಕ್ತ ಮಾಂಸ ಮತ್ತು ಮೂಳೆಗಳಾಗಿದ್ದೇವೆ (ರಕ್ತಸಂಬಂಧಿಗಳು) ಆಗಿದ್ದೇವೆ ಎಂದರು . " (1 ಪೂರ್ವಕಾಲ ವೃತ್ತಾಂತ 11:1 ULB)

ಇದರ ಅರ್ಥ " ನಾವು ನಿನ್ನ ಕುಲವನ್ನು ಸೇರಿದವರು, ನಿನ್ನ ಕುಟುಂಬದ ಸದಸ್ಯರು ಆಗಿದ್ದೇವೆ ಎಂದು ಅರ್ಥ."

> ಇಸ್ರಾಯೇಲಿನ ಮಕ್ಕಳೆಲ್ಲರೂ ಮೇಲುಗೈ ಆಗಿ ಅಟ್ಟಹಾಸದಿಂದ ಹೊರಗೆ ಹೊರಟರು . (ವಿಮೋಚನಾಕಾಂಡ14:8 ASV)

ಇಸ್ರಾಯೇಲರೆಲ್ಲರೂ " ಪ್ರತಿಭಟಿಸಿ ಅಟ್ಟಹಾಸದಿಂದ, ಹೊರಟರು ಎಂದು ಅರ್ಥ."

> ನನ್ನ ತಲೆಯನ್ನು ಮೇಲಕ್ಕೆ ಎತ್ತುವಂತೆ ಮಾಡುವವನು ಆಗಿದ್ದೀ (ದಾ.ಕೀ.3:3 ULB)

ಇದರ ಅರ್ಥ ನನ್ನ ಗೌರವಕ್ಕೆ ಕಾರಣನೂ, " ನನಗೆ ಸಹಾಯ ಮಾಡುವವನು " ಎಂದು

ಭಾಷಾಂತರ ಕೌಶಲ್ಯಗಳು.

ನಿಮ್ಮ ಭಾಷೆಯಲ್ಲಿ ನುಡಿಗಟ್ಟುಗಳು ಸುಲಭವಾಗಿ ಅರ್ಥವಾಗುವುದಾದರೆ ಅದನ್ನೇ ಪರಿಗಣಿಸಿ. ಇಲ್ಲದಿದ್ದರೆ ಇಲ್ಲಿ ಇಂತಹ ಕೆಲವು ಅವಕಾಶವಿರುವ ಅಂಶಗಳನ್ನು ತಿಳಿಸಿದೆ.

ನುಡಿಗಟ್ಟು ಬಳಸದೆ ಸರಳವಾದ ಅರ್ಥವನ್ನು ಕೊಡುವಂತೆ ಭಾಷಾಂತರಿಸಿ.
ನಿಮ್ಮ ಭಾಷೆಯಲ್ಲಿ ಇದೇ ಅರ್ಥಕೊಡುವ ನುಡಿಗಟ್ಟುಗಳಿದ್ದರೆ ಅದನ್ನು ಬಳಿಸಿಕೊಳ್ಳಿ.

ಭಾಷಾಂತರ ಕೌಶಲ್ಯಗಳು ಅಳವಡಿಸಿರುವ ಉದಾಹರಣೆಗಳು.

ನುಡಿಗಟ್ಟು ಬಳಸದೆ ಸರಳವಾದ ಅರ್ಥವನ್ನು ಕೊಡುವಂತೆ ಭಾಷಾಂತರಿಸಿ.

- **ಅನಂತರ ಇಸ್ರಾಯೇಲರೆಲ್ಲರೂ ಹೆಬ್ರೋನಿನಲ್ಲಿದ್ದ ದಾವಿದನ ಬಳಿ ಬಂದು ನೋಡು ನಾವು ನಿನ್ನ ದೇಹದ ರಕ್ತ ಮಾಂಸ ಮತ್ತು ಮೂಳೆಗಳಾಗಿದ್ದೇವೆ (ರಕ್ತಸಂಬಂಧಿಗಳು) ಆಗಿದ್ದೇವೆ ಎಂದರು ." "** (1 ಪೂರ್ವಕಾಲದ ವೃತ್ತಾಂತ 11:1 ULB)
  - ..ನೋಡು ನಾವೆಲ್ಲರೂ ಒಂದೇ ರಾಷ್ಟ್ರಕ್ಕೆ ಸೇರಿದವರು .
- **ಆತನು ಯೆರೋಸಲಮಿಗೆ ಹೋಗಲು ತನ್ನ ಮುಖವನ್ನು /ಮನಸ್ಸನ್ನು ತಿರುಗಿ ನಿರ್ಧರಿಸಿದನು .** (ಲೂಕ 9:51 ULB)
  - ಆತನು ಯೆರೋಸಲಮಿನ ಕಡೆ ಪ್ರಯಾಣಿಸಲು ಯೋಚಿಸಿ ಅದನ್ನು ತಲುಪಲು ನಿರ್ಧರಿಸಿದನು .
- **ನೀನು ನನ್ನ ಛಾವಣಿಯನ್ನು ಪ್ರವೇಶಿಸಲು ಯೋಗ್ಯನಲ್ಲ.** (ಲೂಕ 7:6 ULB)
  - ನೀನು ನನ್ನ ಮನೆಗೆ ಬರುವಷ್ಟು .ಯೋಗ್ಯತೆ ನನಗಿಲ್ಲ.

ನಿಮ್ಮ ಭಾಷೆಯಲ್ಲಿರುವ ಸಮಾನ ಅರ್ಥಕೊಡುವ ಪದಗಳನ್ನು ಬಳಸಿ ನುಡಿಗಟ್ಟುಗಳನ್ನು ಅರ್ಥಮಾಡಿಕೊಳ್ಳಲು ಅವಕಾಶವನ್ನು ನಿಮ್ಮ ಜನರಿಗೆ ಕೊಡಿ.

- **ಈ ಮಾತುಗಳು ನಿಮ್ಮ ಕಿವಿಯೊಳಗೆ ಆಳವಾಗಿ ಹೋಗಲಿ** (ಲೂಕ 9:44 ULB)
  - ನಿಮ್ಮ ಕಿವಿಗಳಿಗೂ ನಾನು ಹೇಳುವ ಮಾತುಗಳು ಕೇಳಿಸಲಿ.
- **ದುಃಖದಿಂದ ನನ್ನ ಕಣ್ಣುಗಳು ಮಬ್ಬಾಯಿತು** (ದಾ.ಕೀ. 6:7 ULB)
  - ನಾನು ಅಳುತ್ತಿರುವುದರಿಂದ ನನ್ನ ಕಣ್ಣುಗಳು ಕಣ್ಣೀರಿನಿಂದ ತುಂಬಿವೆ.

"

ಹಿಂತಿರುಗಿ ಹೋಗಿ: ಉಬ್ಬಿಕೊಂಡಿದೆ

ಪರಿಚಯವಿಲ್ಲದ ವಿಷಯಗಳನ್ನು ಅನುವಾದಿಸುವುದು / ಭಾಷಾಂತರಿಸುವುದು.

ಸಿಂಹ, ಅಂಜೂರದ ಮರ, ಬೆಟ್ಟ, ಯಾಜಕ/ ಪಾದ್ರಿ, ದೇವಾಲಯ ಎಂಬ ಪದಗಳನ್ನು ನನ್ನ ಸಂಸ್ಕೃತಿಯ ಜನರಿಗೆ ಪರಿಚಯವಿಲ್ಲದಿದ್ದರೆ, ನಮ್ಮ ಭಾಷೆಯಲ್ಲಿ ಅದಕ್ಕೆ ಸಮನಾದ ಪದಗಳು ಇಲ್ಲದಿದ್ದರೆ ನಾನು ಅವುಗಳನ್ನು ಹೇಗೆ ಅನುವಾದ/ ಭಾಷಾಂತರ ಮಾಡಬಹುದು?

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ನನ್ನ ಓದುಗರಿಗೆ ಪರಿಚಯವಿಲ್ಲದ ವಿಷಯಗಳನ್ನು ಹೇಗೆ ಅನುವಾದಿಸಬಹುದು / ಭಾಷಾಂತರಿಸ ಬಹುದು?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ವಾಕ್ಯದ ರಚನೆ. (UTA PDF)

ವಿವರಣೆ.

ಮೂಲ ಪ್ರತಿಯಲ್ಲಿ ಇರುವ ಕೆಲವು ಪದಗಳಿದ್ದು ಅವು ನಿಮ್ಮ ಸಂಸ್ಕೃತಿಯ ಜನರಿಗೆ ತಿಳಿಯದಿದ್ದರೆ ಅದನ್ನು ಅಪರಿಚಿತ ಪದಗಳು ಎಂದು ಕರೆಯುತ್ತಾರೆ. ಈ ಪದಗಳನ್ನು ಅರ್ಥಮಾಡಿಕೊಳ್ಳಲು 'ಅನುವಾದದ ಪದಗಳ ಪುಟಗಳು' ಮತ್ತು 'ಅನುವಾದದ ಟಿಪ್ಪಣಿಗಳು' ಸಹಾಯ ಮಾಡುತ್ತದೆ. ಅದನ್ನು ನೀವು ಅರ್ಥಮಾಡಿಕೊಂಡ ನಂತರ ನಿಮ್ಮ ಅನುವಾದವನ್ನು ಓದುವ ಜನರಿಗೆ ಅದನ್ನು ಹೇಗೆ ಅರ್ಥೈಸಬೇಕು ಎಂಬುದನ್ನು ನೀವು ತಿಳಿಯಬೇಕು.

> ಇಲ್ಲಿ ನಮ್ಮ ಬಳಿ ಕೇವಲ ಐದು ರೊಟ್ಟಿಮತ್ತು ಎರಡು ಮೀನುಗಳಿವೆ (ಮತ್ತಾಯ 14:17 ULT)

ಧಾನ್ಯಗಳನ್ನು ಸಣ್ಣಗೆ ಪುಡಿಮಾಡಿ ಅದನ್ನು ಎಣ್ಣೆಯಲ್ಲಿ ಮಿಶ್ರಮಾಡಿ ಸಿದ್ಧಪಡಿಸುವ ಆಹಾರವೇ ರೊಟ್ಟಿ. (ಇಲ್ಲಿ ಧಾನ್ಯ ಎಂದರೆ ಹುಲ್ಲಿನ ಬೀಜಗಳು). ಕೆಲವಾರು ಸಂಸ್ಕೃತಿಯಲ್ಲಿ ಈ ರೀತಿಯಾದ ರೊಟ್ಟಿಯನ್ನು ಜನರು ತಿಳಿಯದೆ ಇರಬಹುದು.

- **ಕಾರಣ ಇದೊಂದು ಭಾಷಾಂತರ ಸಮಸ್ಯೆ**
  - ಸತ್ಯವೇದದಲ್ಲಿ ಇರುವ ಕೆಲವಾರು ವಸ್ತುಗಳು ಜನರಿಗೆ ತಿಳಿಯದೆ ಇರಬಹುದು ಇದಕ್ಕೆ ಕಾರಣ ಜನರು ಆ ಹಿಂದಿನ ಸಂಸ್ಕೃತಿಗೆ ಸಂಬಂಧಪಟ್ಟವರಲ್ಲ.
  - ಪಠ್ಯದಲ್ಲಿರುವ ಕೆಲವಾರು ಜನರಿಗೆ ತಿಳಿಯದಿದ್ದರೆ ಅವರು ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

ಭಾಷಾಂತರ ತತ್ವಗಳು

- ನಿಮ್ಮ ಭಾಷೆಯಲ್ಲಿರುವ ಪದಗಳನ್ನೇ ಉಪಯೋಗಿಸಲು ಆದಷ್ಟು ಪ್ರಯತ್ನಪಡಿರಿ.
- ಸಾಧ್ಯವಾದರೆ ಅಭಿವ್ಯಕ್ತಿಗಳು ಸಣ್ಣದಾಗಿರಲಿ.
- ದೇವರ ಆಜ್ಞೆಗಳನ್ನು ಮತ್ತು ಐತಿಹಾಸಿಕ ಸಂಗತಿಗಳನ್ನು ಸ್ಪಷ್ಟವಾಗಿ ಪ್ರಕಟಿಸಿರಿ.

ಸತ್ಯವೇದಿಂದ ಉದಾಹರಣೆಗಳು

> ನಾನು ಯೆರೂಸಲೇಮನ್ನು ಹಾಳುದಿಬ್ಬಗಳನ್ನಾಗಿಯೂ ನರಿಗಳ ಹಕ್ಕೆಯನ್ನಾಗಿಯೂ ಮಾಡುವೆನು (ಯೆರೆಮೀಯ 9:11 ULT)

ನರಿಗಳು ವಿಶ್ವದ ಕೆಲವು ಭಾಗಗಳಲ್ಲಿ ಕಂಡು ಬರುವ ನಾಯಿಯಂತಹ ಕಾಡು ಪ್ರಾಣಿ. ಕೆಲವು ಪ್ರದೇಶದಲ್ಲಿ ಅವುಗಳ ಪರಿಚಯವಿಲ್ಲದೆ ಇರಬಹುದು.

> ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ, ಅವರು ಕುರಿ ವೇಷ ಹಾಕಿಕೊಂಡು ನಿಮ್ಮ ಬಳಿ ಬರುತ್ತಾರೆ ಆದರೆ ಒಳಗೆ ನೋಡಿದರೆ ಅವರು ಹಿಡಿದುಕೊಂಡು ಹೋಗುವ ತೋಳಗಳೇ. (ಮತ್ತಾಯ 7:15 ULT)

ನಿಮ್ಮ ಅನುವಾದವನ್ನು ಓದುವ ಸ್ಥಳದಲ್ಲಿ ತೋಳ ಇಲ್ಲದಿದ್ದರೆ ಅಲ್ಲಿಯ ಜನರು ಇದು ನಾಯಿಯ ಹಾಗೆ ಇರುವ ಒಂದು ಉಗ್ರ ಕಾಡು ಪ್ರಾಣಿ, ಅವು ಕುರಿಗಳನ್ನು ಹಿಡಿಯುತ್ತವೆ ಎಂದು ಅವರಿಗೆ ತಿಳಿಯುವುದಿಲ್ಲ.

> ಅಲ್ಲಿ ಆತನಿಗೆ ರಕ್ತಬೋಳಬೆರೆಸಿದ ದ್ರಾಕ್ಷಾರಸವನ್ನು ಕುಡಿಯುವುದಕ್ಕೆ ಕೊಟ್ಟರು. ಆದರೆ ಆತನು ಅದನ್ನು ಕುಡಿಯಲ್ಲಿಲ್ಲ. (ಮಾರ್ಕ 15:23 ULT)

ರಕ್ತಬೋಳ ಎಂದರೇನು ಅದನ್ನು ಔಷಧಕ್ಕೆ ಬಳಸಲಾಗುವುದು ಎಂದು ಜನರಿಗೆ ತಿಳಿಯದೆ ಇರಬಹುದು

> ಆತನು ಮಹಾಜ್ಯೋತಿರ್ಮಂಡಲಗಳನ್ನುಸೃಷ್ಟಿಸಿದ್ದಾನೆ (ಕೀರ್ತನೆ 136:7 ULT)

ಬೆಳಕು ಕೊಡುವ ಸಂಗತಿಗಳಿಗೆ ಕೆಲವು ಭಾಷೆಗಳಲ್ಲಿ ಬೆಳಕು, ಸೂರ್ಯ ಮತ್ತು ಬೆಂಕಿ ಪದಗಳಿದ್ದು ಅದಕ್ಕೆ ಆದ ಸಾಮಾನ್ಯವಾದ ಒಂದು ಪದವಿಲ್ಲ.

> ನಿಮ್ಮ ಪಾಪಗಳು.. ಹಿಮದ ಹಾಗೆ ಬಿಳುಪಾಗುವುದು (ಯೆಶಾಯ. 1:18 ULT)

ಪ್ರಪಂಚದ ಅನೇಕ ಬಾಗಗಳಲ್ಲಿ ಜನರಿಗೆ ಹಿಮವನ್ನು ಕಂಡಿರುವುದಿಲ್ಲ. ಅದನ್ನು ಕೇವಲ ಚಿತ್ರಗಳಲ್ಲಿ ನೋಡಿರುತ್ತಾರೆ

ಭಾಷಾಂತರ ಕೌಶಲ್ಯಗಳು.

ನಿಮ್ಮ ಭಾಷೆಗೆ ಅಪರಿಚಿತವಾದ ಪದಗಳನ್ನು ಈ ರೀತಿಯಲ್ಲಿ ನೀವು ಅನುವಾದ ಮಾಡಬಹುದು.

ಅಪರಿಚಿತ ವಸ್ತುವನ್ನು ಪರಿಚಯಿಸಲು ಒಂದು ನುಡಿಗುಚ್ಚವನ್ನು ಉಪಯೋಗಿಸಿರಿ ಅಥವಾ ಆ ವಾಕ್ಯವನ್ನು ಅನುವಾದ ಮಾಡುವಲ್ಲಿ ಆ ಅಪರಿಚಿತ ವಸ್ತುವಿನ ಎಷ್ಟು ಪ್ರಾಮುಖ್ಯತೆ ಎಂದು ತಿಳಿಸಿರಿ.
ನಿಮ್ಮ ಭಾಷೆಯಲ್ಲಿ ಅದೇ ಅರ್ಥವನ್ನು ನೀಡುವ ಮತ್ತೊಂದು ಪದವನ್ನು ಉಪಯೋಗಿಸಿರಿ, ಹಾಗೆ ಮಾಡಿದರೆ ಅದು ಐತಿಹಾಸಿಕ ವಾಸ್ತವವನ್ನು ತಪ್ಪಾಗಿ ತಿಳಿಸುವುದಿಲ್ಲ.
ಬೇರೆ ಭಾಷೆಯಿಂದ ಒಂದು ಪದವನ್ನು ತೆಗೆದುಕೊಳ್ಳಿರಿ. ಜನರಿಗೆ ಅರ್ಥವಾಗುವಂತೆ ಅದಕ್ಕೆ ಒಂದು ಸಾಮಾನ್ಯ ಪದವನ್ನು ಅಥವಾ ವಿವರಣಾತ್ಮಕ ನುಡಿಗಟ್ಟನ್ನು ಉಪಯೋಗಿಸಿ ವಿವರಿಸಿರಿ.
ಸರಳ ಅರ್ಥವನ್ನು ನೀಡುವ ಪದವನ್ನು ಉಪಯೋಗಿಸಿರಿ.
ನಿರ್ದಿಷ್ಟವಾದ ಅರ್ಥವನ್ನು ನೀಡುವ ನುಡಿಗಟ್ಟನ್ನು ಉಪಯೋಗಿಸಿರಿ

ಅನುವಾದದ ಕೌಶಲ್ಯಗಳನ್ನು ಅಳವಡಿಸಿಕೊಂಡಿರುವ ಉದಾಹರಣೆಗಳು

ಅಪರಿಚಿತ ವಸ್ತುವನ್ನು ಪರಿಚಯಿಸಲು ಒಂದು ನುಡಿಗುಚ್ಚವನ್ನು ಉಪಯೋಗಿಸಿರಿ ಅಥವಾ ಆ ವಾಕ್ಯವನ್ನು ಅನುವಾದ ಮಾಡುವಲ್ಲಿ ಆ ಅಪರಿಚಿತ ವಸ್ತುವಿನ ಎಷ್ಟು ಪ್ರಾಮುಖ್ಯತೆ ಎಂದು ತಿಳಿಸಿರಿ.

- **ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ, ಅವರು ಕುರಿ ವೇಷ ಹಾಕಿಕೊಂಡು ನಿಮ್ಮ ಬಳಿ ಬರುತ್ತಾರೆ ಆದರೆ ಒಳಗೆ ನೋಡಿದರೆ ಅವರು ಹಿಡಿದುಕೊಂಡು ಹೋಗುವ ತೋಳಗಳೇ.** (ಮತ್ತಾಯ 7:15 ULT)

ಕುರಿ ವೇಷವನ್ನು ಹಾಕಿಕೊಂಡರೂ ಹಸಿದಿರುವ ಅಪಾಯಕಾರಿ ಪ್ರಾಣಿಗಳಹಾಗೆ ಬರುವ ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ
ಇಲ್ಲಿ ನಾವು ಕಾಣುವ "ಕ್ರೂರವಾದ ತೋಳಗಳು" ರೂಪಕದ ಒಂದು ಭಾಗವಾಗಿದೆ. ಈ ತೋಳಗಳು ಕುರಿಗಳಿಗೆ ಬಹಳ ಅಪಾಯಕಾರಿಯಾದ ಪ್ರಾಣಿಗಳು ಎಂದು ಶೋತೃಗಳು ತಿಳಿದಿದ್ದರೆ ಆಗ ಮಾತ್ರ ಈ ರೂಪಕವನ್ನು ಅರ್ಥಮಾಡಿಕೊಳ್ಳಲು ಸಾಧ್ಯ. (ಕುರಿಯು ಷ ಜನರಿಗೆ ಅಪರಿಚಿತವಾಗಿದ್ದ ಪಕ್ಷದಲ್ಲಿ ಅದನ್ನು ಅರ್ಥೈಸಲು ಭಾಷಾಂತರ ಕೌಶಲ್ಯವನ್ನು ಉಪಯೋಗಿಸಿ ಕುರಿ ಎಂಬ ಪದದ ಪದವನ್ನು ಅನುವಾದ ಮಾಡಿರಿ ಅಥವಾ ಭಾಷಾಂತರ ಕೌಶಲ್ಯವನ್ನು ಉಪಯೋಗಿಸಿರೂಪಕವನ್ನು ಬದಲಾಯಿಸಿರಿ. ವಿವರಗಳಿಗಾಗಿ ನೋಡಿರಿ Translating Metaphors.)

- **ಇಲ್ಲಿ ನಮ್ಮ ಬಳಿ ಕೇವಲ ಐದು ರೊಟ್ಟಿಯ ತುಂಡುಗಳುಮತ್ತು ಎರಡು ಮೀನುಗಳಿವೆ** (ಮತ್ತಾಯ 14:17 ULT)
  - ಇಲ್ಲಿ ನಮ್ಮ ಬಳಿ ಕೇವಲ ಐದು ಧಾನ್ಯಗಳಿಂದ ಮಾಡಿರುವರೊಟ್ಟಿಯ ತುಂಡುಗಳುಮತ್ತು ಎರಡು ಮೀನುಗಳಿವೆ.

ನಿಮ್ಮ ಭಾಷೆಯಲ್ಲಿ ಅದೇ ಅರ್ಥವನ್ನು ನೀಡುವ ಮತ್ತೊಂದು ಪದವನ್ನು ಉಪಯೋಗಿಸಿರಿ, ಹಾಗೆ ಮಾಡಿದರೆ ಅದು ಐತಿಹಾಸಿಕ ವಾಸ್ತವವನ್ನು ತಪ್ಪಾಗಿ ತಿಳಿಸುವುದಿಲ್ಲ.

- **ನಿಮ್ಮ ಪಾಪಗಳು.. ಹಿಮದಹಾಗೆ ಬಿಳುಪಾಗುವುದು** (ಯೆಶಾಯ. 1:18 ULT). ಈ ವಾಕ್ಯ ಹಿಮದ ಕುರಿತಾಗಿಲ್ಲ. ಆದರೆ ಜನರು ಅದು ಎಷ್ಟರ ಮಟ್ಟಿಗೆ ಬೆಳ್ಳಗಿದೆ ಎಂದು ತೋರಿಸಲು ಅಲಂಕಾರದ ಮೂಲಕ ಹಿಮದ ಚಿತ್ರವನ್ನು ನೀಡಲಾಗಿದೆ.
  - ನಿಮ್ಮ ಪಾಪಗಳು.. ಹಾಲಿನಹಾಗೆ ಬಿಳುಪಾಗಿರುವುದು
  - ನಿಮ್ಮ ಪಾಪಗಳು.. ಚಂದ್ರನಹಾಗೆ ಬಿಳುಪಾಗಿರುವುದು

ಬೇರೆ ಭಾಷೆಯಿಂದ ಒಂದು ಪದವನ್ನು ತೆಗೆದುಕೊಳ್ಳಿರಿ. ಜನರಿಗೆ ಅರ್ಥವಾಗುವಂತೆ ಅದಕ್ಕೆ ಒಂದು ಸಾಮಾನ್ಯ ಪದವನ್ನು ಅಥವಾ ವಿವರಣಾತ್ಮಕ ನುಡಿಗಟ್ಟನ್ನು ಉಪಯೋಗಿಸಿ ವಿವರಿಸಿರಿ.

- **ಅಲ್ಲಿ ಆತನಿಗೆ ರಕ್ತಬೋಳಬೆರೆಸಿದ ದ್ರಾಕ್ಷಾರಸವನ್ನು ಕುಡಿಯುವುದಕ್ಕೆ ಕೊಟ್ಟರು. ಆದರೆ ಆತನು ಅದನ್ನು ಕುಡಿಯಲ್ಲಿಲ್ಲ** (ಮಾರ್ಕ 15:23 ULT). ರಕ್ತಬೋಳವನ್ನು ಅರ್ಥಮಾಡಿಸಲು ಅದನ್ನು ಔಷಧಿ ಎಂಬ ಸಾಮಾನ್ಯ ಪದವನ್ನು ಉಪಯೋಗಿಸಿರಿ.
  - ಅಲ್ಲಿ ಆತನಿಗೆ ರಕ್ತಬೋಳ ಎಂಬ ಔಷಧಿಯನ್ನುಬೆರೆಸಿದ ದ್ರಾಕ್ಷಾರಸವನ್ನು ಕುಡಿಯುವುದಕ್ಕೆ ಕೊಟ್ಟರು. ಆದರೆ ಆತನು ಅದನ್ನು ಕುಡಿಯಲ್ಲಿಲ್ಲ

- **ಇಲ್ಲಿ ನಮ್ಮ ಬಳಿ ಕೇವಲ ಐದು ರೊಟ್ಟಿಯ ತುಂಡುಗಳುಮತ್ತು ಎರಡು ಮೀನುಗಳಿವೆ** (ಮತ್ತಾಯ 14:17 ULT). ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಇದನ್ನು ಧಾನ್ಯದಿಂದ ಮಾಡಿದ ರೊಟ್ಟಿ ಎಂದು ತಿಳಿಸಬೇಕು.
    - ಇಲ್ಲಿ ನಮ್ಮ ಬಳಿ ಕೇವಲ ಐದು ರೊಟ್ಟಿಯ ತುಂಡುಗಳುಮತ್ತು ಎರಡು ಮೀನುಗಳಿವೆ*

ಸರಳ ಅರ್ಥವನ್ನು ನೀಡುವ ಪದವನ್ನು ಉಪಯೋಗಿಸಿರಿ.

- **ನಾನು ಯೆರೂಸಲೇಮನ್ನು ಹಾಳುದಿಬ್ಬಗಳನ್ನಾಗಿಯೂ ನರಿಗಳ ಹಕ್ಕೆಯನ್ನಾಗಿಯೂ ಮಾಡುವೆನು** (ಯೆರೆಮೀಯ 9:11 ULT)
- **ನಾನು ಯೆರೂಸಲೇಮನ್ನು ಹಾಳುದಿಬ್ಬಗಳನ್ನಾಗಿಯೂ ನರಿಗಳ ಹಕ್ಕೆಯನ್ನಾಗಿಯೂ ಮಾಡುವೆನು**
- **ಇಲ್ಲಿ ನಮ್ಮ ಬಳಿ ಕೇವಲ ಐದು ರೊಟ್ಟಿಯ ತುಂಡುಗಳುಮತ್ತು ಎರಡು ಮೀನುಗಳಿವೆ** (ಮತ್ತಾಯ 14:17 ULT)
    - ಇಲ್ಲಿ ನಮ್ಮ ಬಳಿ ಕೇವಲ ಐದು ರೊಟ್ಟಿಯ ತುಂಡುಗಳುಮತ್ತು ಎರಡು ಮೀನುಗಳಿವೆ.

ನಿರ್ದಿಷ್ಟ ಅರ್ಥವನ್ನು ನೀಡುವ ನುಡಿಗಟ್ಟು ಮತ್ತು ಪದವನ್ನು ಉಪಯೋಗಿಸಿರಿ

- **ಆತನು ಮಹಾಜ್ಯೋತಿರ್ಮಂಡಲಗಳನ್ನುಸೃಷ್ಟಿಸಿದ್ದಾನೆ** (ಕೀರ್ತನೆ 136:7 ULT)
    - ಆತನು ಸೂರ್ಯ ಮತ್ತು ಚಂದ್ರನನ್ನುಸೃಷ್ಟಿಸಿದ್ದಾನೆ

"

ಮುಂದೆ ನೀವು ಕಲಿಯಲು ಶಿಫಾರಸು ಮಾಡುತ್ತೇವೆ:

ನಕಲು ಮಾಡು ಅಥವಾ ಪದಗಳನ್ನು ಪಡೆದುಕೋ. (UTA PDF)

ಹೆಸರುಗಳನ್ನು ಹೇಗೆ ಭಾಷಾಂತರಿಸುವುದು (UTA PDF)

ಹಿಂತಿರುಗಿ ಹೋಗಿ: ದೇವದೂತ, ಪ್ರಧಾನದೂತ; ಕ್ರಿಸ್ತವಿರೋಧಿ, ಕ್ರಿಸ್ತವಿರೋಧಿಗಳು; ಅಪೊಸ್ತಲ, ಅಪೊಸ್ತಲತ್ವ; ದೀಕ್ಷಾಸ್ನಾನ ಮಾಡಿಸು, ದೀಕ್ಷಾಸ್ನಾನ ಮಾಡಿಸಿಕೊಳ್ಳಲಾದೆ, ದೀಕ್ಷಾಸ್ನಾನ; ಕ್ರಿಸ್ತ, ಮೆಸ್ಸೀಯ; ಕ್ರೈಸ್ತನು; ಸಭೆ, ಸಭೆಗಳು; ಸುನ್ನತಿ ಮಾಡು, ಸುನ್ನತಿ ಮಾಡಲಾಗಿದೆ, ಸುನ್ನತಿ, ಸುನ್ನತಿಯಿಲ್ಲದವರು, ಸುನ್ನತಿಯಾಗದವರು; ಶಿಲುಬೆ; ದೆವ್ವ, ದುಷ್ಟಾತ್ಮ, ಅಶುದ್ಧ ಆತ್ಮ; ನಿತ್ಯತೆ, ಅಮರತ್ವ, ನಿತ್ಯ, ನಿರಂತರ; ಪಾತಾಳ (ಹೇಡೆಸ್), ಸಮಾಧಿ (ಷಿಯೋಲ್); ಕುರಿಮರಿ, ದೇವರ ಕುರಿಮರಿ; ಮನ್ನ; ರಬ್ಬಿ; ಸಬ್ಬತ್; ಸೈತಾನ, ದೆವ್ವ, ದುಷ್ಟ; ಜಾಲೀಮರ; ರಾಯಭಾರಿ, ಪ್ರತಿನಿಧಿ; ಜವೆಗೋದಿ; ಕಂಚು; ಒಂಟೆ, ಒಂಟೆಗಳು; ರಥ, ರಥಗಳು, ಸಾರಥಿಗಳು; ಕೆರೂಬಿ, ಕೆರೂಬಿಗಳು, ಕೆರೂಬಿಯರು; ಆಕಳು, ಆಕಳುಗಳು, ದನ, ದನಗಳು, ಕರು, ಕರುಗಳು, ಜಾನುವಾರು, ಪಡ್ಡೆ, ಎತ್ತು, ಎತ್ತುಗಳು; ಜಿಂಕೆ, ಹೆಣ್ಣು ಜಿಂಕೆ, ಹೆಣ್ಣು ಜಿಂಕೆಗಳು, ಜಿಂಕೆ ಮರಿಗಳು, ಗಂಡು ಜಿಂಕೆ, ಗಂಡು ಜಿಂಕೆಗಳು; ಕತ್ತೆ, ಹೆಸರುಗತ್ತೆ; ಪಾರಿವಾಳ, ಕಪೋತ; ಹದ್ದು, ಹದ್ದುಗಳು; ತುರಾಯಿ; ಗೊರಸ, ಗೊರಸಗಳು, ಕಾಲ್ಗೊರಸು; ಚಿರತೆ, ಚಿರತೆಗಳು; ಸಿಂಹಗಳು, ಸಿಂಹ, ಹೆಣ್ಣು ಸಿಂಹ, ಹೆಣ್ಣು ಸಿಂಹಗಳು; ಏಲಾ, ಏಲಾಗಳು; ಹಂದಿ, ಹಂದಿಗಳು, ಹಂದಿಮಾಂಸ, ಹಂದಿಗಳ ಗುಂಪು; ಗೋಣಿ; ಸಮುದ್ರ ಹಸು; ಹೆಣ್ಣುಕುರಿ, ಹೆಣ್ಣುಕುರಿಗಳು, ಟಗರು, ಟಗರುಗಳು, ಕುರಿ, ಕುರಿಮರಿ, ಕುರಿಮರಿಗಳು, ಕುರಿಗಳ ಕುರುಬರು, ಕುರಿ ಚರ್ಮಗಳು; ಹಿಮ, ಹಿಮ ಬಿದ್ದಿದೆ, ಹಿಮ ಬೀಳುತ್ತಿದೆ; ಖಡ್ಗ, ಖಡ್ಗಗಳು, ಖಡ್ಗಗಳನ್ನು ಹಿಡಿಯುವವರು; ಒಳ ಅಂಗಿ, ಒಳ ಅಂಗಿಗಳು; ದ್ರಾಕ್ಷರಸ, ಬುದ್ದಲಿ, ಹೊಸ ದ್ರಾಕ್ಷಾರಸ; ತೂರು, ತೂರುವುದು, ತೂರಲ್ಪಟ್ಟಿದೆ, ತೂರುತ್ತಾಯಿರುವುದು, ಸೋಸು, ಸೋಸುವುದು

ಭಾವವಾಚಕ ನಾಮಪದಗಳು

ವಿವರಣೆ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ಭಾವವಾಚಕ ನಾಮಪದಗಳೆಂದರೆ ಏನು? ಅವುಗಳನ್ನು ಭಾಷಾಂತರದಲ್ಲಿ ಹೇಗೆ ಬಳಸಬಹುದು?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಪಾರ್ಟ್ಸ್ ಆಫ್ ಸ್ಪೀಚ್. (UTA PDF)
ವಾಕ್ಯದ ರಚನೆ. (UTA PDF)

ಮನೋಭಾವಗಳು, ಗುಣಗಳು, ಸಂಗತಿಗಳು ಅಥವಾ ಪರಿಸ್ಥಿತಿಗಳನ್ನು ಸೂಚಿಸುವ ನಾಮಪದಗಳೇ ಭಾವವಾಚಕ ನಾಮಪದಗಳಾಗಿವೆ. ಈ ವಿಷಯಗಳು ಕಣ್ಣಿನಿಂದ ನೋಡುವುದಕ್ಕಾಗಲೀ, ಶಾರೀರಿಕ ಇಂದ್ರಿಯಗಳಿಂದ ಸ್ಪರ್ಶಿಸುವುದಕ್ಕಾಗಲೀ ಸಾಧ್ಯವಿಲ್ಲದಂಥ ಸಂತೋಷ, ತೂಕ, ಒಗ್ಗಟ್ಟು, ಸ್ನೇಹ, ಆರೋಗ್ಯ, ಮತ್ತು ಯುಕ್ತಿ ಎಂಬಂಥವುಗಳಾಗಿವೆ. ಇದೊಂದು ಅನುವಾದದ ಸಮಸ್ಯೆಯಾಗಿದೆ. ಏಕೆಂದರೆ ಕೆಲವು ಭಾಷೆಗಳಲ್ಲಿ ಭಾವವಾಚಕ ನಾಮಪದಗಳನ್ನು ವ್ಯಕ್ತಪಡಿಸಲು ನಿರ್ದಿಷ್ಟ ವಿಷಯಗಳನ್ನು ಬಳಸಬಹುದು, ಇನ್ನೂ ಕೆಲವು ಭಾಷೆಗಳಲ್ಲಿ ವಿಭಿನ್ನ ರೀತಿಯಲ್ಲಿ ವ್ಯಕ್ತಪಡಿಸುವ ಬಗ್ಗೆ ಯೋಚಿಸಬೇಕಾಗಬಹುದು.

ನಾಮಪದಗಳು ಒಬ್ಬ ವ್ಯಕ್ತಿಯನ್ನು, ಸ್ಥಳವನ್ನು, ವಸ್ತುವನ್ನು ಅಥವಾ ಕಲ್ಪನೆಗಳನ್ನು ಸೂಚಿಸುವಂಥವುಗಳಾಗಿವೆ. ಭಾವವಾಚಕ ನಾಮಪದಗಳು ಕಲ್ಪನೆಗಳನ್ನು ಸೂಚಿಸುತ್ತದೆ. ಇವು ಮನೋಭಾವಗಳು, ಗುಣಗಳು, ಸಂಗತಿಗಳು, ಸನ್ನಿವೇಶಗಳು ಅಥವಾ ಈ ವಿಚಾರಗಳ ನಡುವಿನ ಸಂಬಂಧಗಳು ಆಗಿರಬಹುದು. ಇವು ನೋಡಲು, ಅಥವಾ ಶಾರೀರಿಕ ಇಂದ್ರಿಯಗಳಿಂದ ಸ್ಪರ್ಶಿಸಲು ಸಾಧ್ಯವಿಲ್ಲದಂಥಗಳಾದ ಸಂತೋಷ, ಸಮಾಧಾನ, ಸೃಷ್ಟಿ, ಒಳ್ಳೆತನ, ತೃಪ್ತಿ, ನ್ಯಾಯ, ಸತ್ಯ, ಸ್ವಾತಂತ್ರ, ದ್ವೇಷ, ಮಂದಬುದ್ಧಿ, ಎತ್ತರ, ಉದ್ದ, ತೂಕ ಇತ್ಯಾದಿ.

ಸತ್ಯವೇದಾತ್ಮಕ (ಬಿಬ್ಲಿಕಲ್) ಗ್ರೀಕ್ ಮತ್ತು ಅಂಗ್ಲ ಭಾಷೆಗಳಂತಹ ಕೆಲವೊಂದು ಭಾಷೆಗಳು ಬಹಳಷ್ಟು ಭಾವವಾಚಕ ನಾಮಪದಗಳನ್ನು ಬಳಸುತ್ತವೆ. ಈ ಭಾವವಾಚಕ ನಾಮಪದಗಳು ಕ್ರಿಯೆಗಳಿಗೆ ಅಥವಾ ಗುಣಗಳಿಗೆ ಹೆಸರನ್ನು ನೀಡುವ ರೀತಿಯಾಗಿರುವುದ್ದರಿಂದ ಈ ಭಾಷೆಗಳನ್ನು ಮಾತನಾಡುವ ಜನರು ಅವುಗಳನ್ನು ವಸ್ತುಗಳೋ ಎಂಬಂತೆ ಹೇಳಬಹುದು. ಉದಾಹರಣೆಗೆ, ಭಾವವಾಚಕ ನಾಮಪದಗಳನ್ನು ಬಳಸುವ ಭಾಷೆಗಳಲ್ಲಿ "ನಾನು ಪಾಪ ಕ್ಷಮಾಪಣೆಯನ್ನು ನಂಬುತ್ತೇನೆ" ಎಂದು ಜನರು ಹೇಳಬಹುದು. ಆದರೆ ಕೆಲವೊಂದು ಭಾಷೆಗಳು ಭಾವವಾಚಕ ನಾಮಪದಗಳನ್ನು ಹೆಚ್ಚಾಗಿ ಬಳಸುವುದಿಲ್ಲ. ಈ ಭಾಷೆಗಳಲ್ಲಿ "ಕ್ಷಮಾಪಣೆ" ಮತ್ತು "ಪಾಪ," ಎಂಬ ಎರಡು ಭಾವವಾಚಕ ನಾಮಪದಗಳು ಇಲ್ಲದಿರಬಹುದು, ಆದರೆ ಅವರು ಅದೇ ಅರ್ಥವನ್ನು ಬೇರೆ ರೀತಿಗಳಲ್ಲಿ ವ್ಯಕ್ತಪಡಿಸಬಹುದು. ಉದಾಹರಣೆಗೆ, ಅವರು ಆ ವಿಚಾರಗಳಿಗೆ ನಾಮಪದಗಳನ್ನು ಬಳಸುವ ಬದಲು ಕ್ರಿಯಾಪದಗಳನ್ನು ಬಳಸಿಕೊಂಡು, "ಜನರು ಪಾಪ ಮಾಡಿದ ಮೇಲೆ ದೇವರು ಅವರನ್ನು ಕ್ಷಮಿಸಲು ಇಚ್ಛೆಯುಳ್ಳವನಾಗಿರುತ್ತಾನೆ" ಎಂದು ಹೇಳಬಹುದು.

ಕಾರಣವೇನಂದರೆ ಇದು ಭಾಷಾಂತರದ ಸಮಸ್ಯೆಯಾಗಿದೆ

ನೀವು ಯಾವ ಬೈಬಲಿನಿಂದ ಭಾಷಾಂತರ ಮಾಡುತ್ತಿರುವಿರೋ ಅದು ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಲು ಭಾವವಾಚಕ ನಾಮಪದಗಳನ್ನು ಉಪಯೋಗಿಸಬಹುದು. ಆ ವಿಚಾರಗಳನ್ನು ವ್ಯಕ್ತಪಡಿಸಲು ನಿಮ್ಮ ಭಾಷೆಯಲ್ಲಿ ಭಾವವಾಚಕ ನಾಮಪದಗಳನ್ನು ಬಳಸದಿರಬಹುದು; ಅದಕ್ಕೆ ಬದಲಾಗಿ, ಆ ವಿಚಾರಗಳನ್ನು ವ್ಯಕ್ತಪಡಿಸಲು ಪದಗುಚ್ಛಗಳನ್ನು ಬಳಸಬಹುದು. ಇಂತಹ ಪದಗುಚ್ಛಗಳು ಬೇರೆ ರೀತಿಯ ಪದಗಳನ್ನು ಬಳಸಬಹುದು. ಅಂತಹ ಪದಗಳು ಯಾವುದೆಂದರೆ ಗುಣವಾಚಕ, ಕ್ರಿಯಾಪದಗಳು, ಕ್ರಿಯಾವಿಶೇಷಣ ಇವುಗಳನ್ನು ಭಾವವಾಚಕ ನಾಮಪದದ ಅರ್ಥವನ್ನು ವ್ಯಕ್ತಪಡಿಸಲು ಬಳಸಬಹುದು. ಉದಾಹರಣೆಗೆ, “ಅದರ **ತೂಕ** ಎಷ್ಟು?” "ಇದು ಎಷ್ಟು ತೂಕ ಇರಬಹುದೆಂದು **ತೂಗಿ ನೋಡು**?" ಅಥವಾ “ಅದು ಎಷ್ಟು **ಭಾರ** ಇರಬಹುದು?”

ಸತ್ಯವೇದದಲ್ಲಿನ ಉದಾಹರಣೆಗಳು

> **ಬಾಲ್ಯದಿಂದಲೂ** ನಿನಗೆ ಪರಿಶುದ್ಧ ಗ್ರಂಥಗಳ ಪರಿಚಯವಾಗಿದೆಯಲ್ಲಾ... (2 ತಿಮೊಥೆ 3:15 ULT)

"ಬಾಲ್ಯ" ಎಂಬ ಭಾವಸೂಚಕ ನಾಮಪದವು ಒಬ್ಬ ವ್ಯಕ್ತಿ ಮಗುವಾಗಿದ್ದ ಸಮಯವನ್ನು ಸೂಚಿಸುತ್ತದೆ.

> ಆದರೆ **ಸಂತುಷ್ಟಿ** ಸಹಿತವಾದ **ದೈವಭಕ್ತಿ** ದೊಡ್ಡ **ಲಾಭವೇ** ಆಗಿದೆ. (1 ತಿಮೊಥೆ 6:6 ULT)

"ದೈವಭಕ್ತಿ" ಮತ್ತು "ಸಂತುಷ್ಟಿ" ಎಂಬ ಭಾವಸೂಚಕ ನಾಮಪದಗಳು ಭಕ್ತಿಯುಳ್ಳವರು ಮತ್ತು ತೃಪ್ತಿಯುಳ್ಳವರು ಆಗಿರುವುದನ್ನು ಸೂಚಿಸುತ್ತದೆ. "ಲಾಭ" ಎಂಬ ಭಾವಸೂಚಕ ನಾಮಪದವು ಕೆಲವರಿಗೆ ಉಂಟಾಗುವಂಥ ಪ್ರಯೋಜನಗಳನ್ನು ಅಥವಾ ಸಹಾಯವನ್ನು ಸೂಚಿಸುತ್ತದೆ.

> ಇಂದು ಈ ಮನೆಗೆ **ರಕ್ಷಣೆ** ಉಂಟಾಯಿತು, ಏಕೆಂದರೆ ಇವನು ಸಹ ಅಬ್ರಹಾಮನ ವಂಶಿಕನಾಗಿದ್ದಾನೆ (ಲೂಕ 19:9 ULT)

ಇಲ್ಲಿ **ರಕ್ಷಣೆ** ಎಂಬ ಭಾವಸೂಚಕ ನಾಮಪದವು ರಕ್ಷಿಸಲ್ಪಡುತ್ತಿರುವನು ಎಂಬುದನ್ನು ಸೂಚಿಸುತ್ತದೆ.

> ಕೆಲವರು **ತಡ** ವಾಗಿದೆ ಎಂದು ಭಾವಿಸುವ ಪ್ರಕಾರ, ಕರ್ತನು ತನ್ನ ವಾಗ್ದಾನಗಳ ವಿಷಯದಲ್ಲಿ ತಡಮಾಡುವುದಿಲ್ಲ (2 ಪೇತ್ರ 3:9 ULT)

ತಡ ಎಂಬ ಭಾವಸೂಚಕ ನಾಮಪದವು ಮುಗಿಸಬೇಕಾದ ಕೆಲಸವನ್ನು ನಿಧಾನವಾಗಿ ಮಾಡುವಂಥದ್ದನ್ನು ಸೂಚಿಸುತ್ತದೆ.

> ಆತನು ಕತ್ತಲೆಯಲ್ಲಿ ಅಡಗಿರುವ ಗುಪ್ತ ವಿಚಾರಗಳನ್ನು ಬೆಳಕಿಗೆ ತರುವನು ಮತ್ತು ಹೃದಯದ **ಉದ್ದೇಶಗಳನ್ನು** ಬಹಿರಂಗಪಡಿಸುವನು. (1 ಕೊರಿಂಥ 4:5 ULT)

ಉದ್ದೇಶಗಳು ಎಂಬ ಭಾವಸೂಚಕ ನಾಮಪದವು ಜನರು ಮಾಡಬೇಕೆಂದಿರುವ ಮತ್ತು ಅವುಗಳನ್ನು ಏಕೆ ಮಾಡಬೇಕೆಂದಿರುವರು ಎಂಬ ಕಾರಣಗಳನ್ನು ಸೂಚಿಸುತ್ತದೆ.

ಭಾಷಾಂತರದ ಕಾರ್ಯತಂತ್ರಗಳು

ನಿಮ್ಮ ಭಾಷೆಯಲ್ಲಿ ಭಾವವಾಚಕ ನಾಮಪದದಂತಹ ಪದಗಳು ಇದ್ದು, ಅವು ಸರಿಯಾದ ಅರ್ಥ ನೀಡುವಂತಾಗಿದ್ದರೆ ಅಂತಹ ಪದಗಳನ್ನೇ ಉಪಯೋಗಿಸಬಹುದು. ಹಾಗೆ ಬಳಸಲು ಪದಗಳು ಇಲ್ಲದಿದ್ದರೆ ಬೇರೊಂದು ಆಯ್ಕೆಯಿದೆ:

ಭಾವವಾಚಕ ನಾಮಪದದ ಅರ್ಥವನ್ನು ವ್ಯಕ್ತಪಡಿಸುವಂಥ ಪದಗುಚ್ಛದೊಂದಿಗೆ ಬೇರೆ ಪದಗಳಲ್ಲಿ ವಾಕ್ಯವನ್ನು ರಚಿಸಿರಿ. ಭಾವವಾಚಕ ನಾಮಪದದ ಉದ್ದೇಶವನ್ನು ವ್ಯಕ್ತಪಡಿಸಲು ಕೆಲವೊಮ್ಮೆ ನಾಮಪದಕ್ಕೆ ಬದಲಾಗಿ ಹೊಸ ಪದಗುಚ್ಛವು ಕ್ರಿಯಾಪದವನ್ನು, ಕ್ರಿಯಾವಿಶೇಷಣವನ್ನು ಮತ್ತು ಗುಣವಾಚಕವನ್ನು ಬಳಸಬಹುದು.

ಭಾಷಾಂತರದ ಕಾರ್ಯತಂತ್ರಗಳನ್ನು ಅನ್ವಯಿಸಲಾಗಿರುವ ಉದಾಹರಣೆಗಳು

(1) ಭಾವವಾಚಕ ನಾಮಪದದ ಅರ್ಥವನ್ನು ವ್ಯಕ್ತಪಡಿಸುವಂಥ ಪದಗುಚ್ಛದೊಂದಿಗೆ ಬೇರೆ ಪದಗಳಲ್ಲಿ ವಾಕ್ಯವನ್ನು ರಚಿಸಿರಿ. ಭಾವವಾಚಕ ನಾಮಪದದ ಉದ್ದೇಶವನ್ನು ವ್ಯಕ್ತಪಡಿಸಲು ಕೆಲವೊಮ್ಮೆ ನಾಮಪದಕ್ಕೆ ಬದಲಾಗಿ ಹೊಸ ಪದಗುಚ್ಛವು ಕ್ರಿಯಾಪದವನ್ನು, ಕ್ರಿಯಾವಿಶೇಷಣವನ್ನು ಮತ್ತು ಗುಣವಾಚಕವನ್ನು ಬಳಸಬಹುದು.

> ...**ಬಾಲ್ಯದಿಂದಲೂ** ನಿನಗೆ ಪರಿಶುದ್ಧ ಗ್ರಂಥಗಳ ಪರಿಚಯವಾಗಿದೆಯಲ್ಲಾ... (2 ತಿಮೊಥೆ 3:15 ULT)
>
> > **ನೀನು ಚಿಕ್ಕ ಮಗುವಾಗಿದ್ದಾಗಿನಿಂದಲೂ** ಪರಿಶುದ್ಧ ಗ್ರಂಥಗಳು ನಿನಗೆ ತಿಳಿದುಕೊಂಡಿದೆ.
>
> ಆದರೆ **ಸಂತುಷ್ಟಿ** ಸಹಿತವಾದ **ದೈವಭಕ್ತಿ** ದೊಡ್ಡ **ಲಾಭವೇ** ಆಗಿದೆ. (1 ತಿಮೊಥೆ 6:6 ULT)
>
> > ಆದರೆ **ಭಕ್ತಿಯುಳ್ಳವರು** ಮತ್ತು **ಸಂತೃಪ್ತಿಯುಳ್ಳವರು** ಆಗಿರುವುದು ತುಂಬಾ ಲಾಭಕರವಾದುದು ಆಗಿದೆ.
> > ಆದರೆ ನಾವು **ಭಕ್ತಿಯುಳ್ಳವರು** ಮತ್ತು **ಸಂತೃಪ್ತರು** ಆಗಿರುವಾಗ ನಮಗೆ ಹೆಚ್ಚು ಪ್ರಯೋಜನವಾಗುತ್ತದೆ. ಆದರೆ ನಾವು **ದೇವರನ್ನು ಗೌರವಿಸಿ ವಿಧೇಯರಾಗುವಾಗ** ಮತ್ತು ನಾವು **ನಮಗೆ ಇರುವುದರಲ್ಲಿ ಸಂತೋಷ** ಪಡುವಾಗ ನಮಗೆ ಹೆಚ್ಚು ಲಾಭವಾಗುತ್ತದೆ.
>
> ಇಂದು ಈ ಮನೆಗೆ **ರಕ್ಷಣೆ** ಉಂಟಾಯಿತು, ಏಕೆಂದರೆ ಇವನು ಸಹ ಅಬ್ರಹಾಮನ ವಂಶಿಕನಾಗಿದ್ದಾನೆ (ಲೂಕ 19:9 ULT)
>
> > ಇಂದು ಈ ಮನೆಯಲ್ಲಿರುವ ಜನರು **ರಕ್ಷಣೆ ಹೊಂದಿದರು**... ಇಂದು ದೇವರು ಈ ಮನೆಯಲ್ಲಿರುವ ಜನರನ್ನು **ರಕ್ಷಿಸಿದನು**...
>
> ಕೆಲವರು **ತಡ** ವಾಗಿದೆ ಎಂದು ಭಾವಿಸುವ ಪ್ರಕಾರ, ಕರ್ತನು ತನ್ನ ವಾಗ್ದಾನಗಳ ವಿಷಯದಲ್ಲಿ ತಡಮಾಡುವುದಿಲ್ಲ (2 ಪೇತ್ರ 3:9 ULT)
>
> > ಕೆಲವರು **ನಿಧಾನ ಮಾಡುತ್ತಾನೆ** ಎಂದು ಭಾವಿಸುವ ಪ್ರಕಾರ, ಕರ್ತನು ತನ್ನ ವಾಗ್ದಾನಗಳ ವಿಷಯದಲ್ಲಿ ನಿಧಾನ ಮಾಡುವುದಿಲ್ಲ
>
> ಆತನು ಕತ್ತಲೆಯಲ್ಲಿ ಅಡಗಿರುವ ಗುಪ್ತ ವಿಚಾರಗಳನ್ನು ಬೆಳಕಿಗೆ ತರುವನು ಮತ್ತು ಹೃದಯದ **ಉದ್ದೇಶಗಳನ್ನು** ಬಹಿರಂಗಪಡಿಸುವನು. (1 ಕೊರಿಂಥ 4:5 ULT)
>
> > ಕತ್ತಲೆಯಲ್ಲಿರುವ ಗುಪ್ತ ವಿಚಾರಗಳನ್ನು ಬೆಳಕಿಗೆ ತರುವನು ಮತ್ತು **ಜನರು ಮಾಡಬೇಕೆಂದಿರುವ ಕಾರ್ಯಗಳನ್ನು ಮತ್ತು ಅವರು ಮಾಡಬೇಕೆಂದಿರುವುದಕ್ಕೆ ಕಾರಣವನ್ನು** ಬಹಿರಂಗ ಪಡಿಸುವನು.

"

ಹಿಂತಿರುಗಿ ಹೋಗಿ: ವಿಶ್ವಾಸ; ನ್ಯಾಯ, ನ್ಯಾಯವಾದ, ಅನ್ಯಾಯ, ಅನ್ಯಾಯವಾಗಿ, ಸಮರ್ಥಿಸಿ, ಸಮರ್ಥನೆ ಮಾಡುವುದು

ರೂಪಕ ಅಲಂಕಾರ

ವಿವರಣೆ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ರೂಪಕ ಅಲಂಕಾರ ಎಂದರೇನು? ಸತ್ಯವೇದದ ವಾಕ್ಯದಲ್ಲಿರುವ ರೂಪಕ ಅಲಂಕಾರವನ್ನು ನಾನು ಹೇಗೆ ಭಾಷಾಂತರಿಸಬಹುದು?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಅಲಂಕಾರಗಳು. (UTA PDF)
ಉಪಮಾಲಂಕಾರ. (UTA PDF)

ರೂಪಕ ಎಂಬುದು ಅಲಂಕಾರವಾಗಿದೆ, ಈ ಅಲಂಕಾರದಲ್ಲಿ ಒಬ್ಬನು ಒಂದು ವಸ್ತುವಿನ ಕುರಿತು ಮಾತನಾಡುವಾಗ ಅದನ್ನು ವಿಭಿನ್ನ ವಸ್ತುವೋ ಎಂಬಂತೆ ಮಾತನಾಡುತ್ತಾನೆ ಏಕೆಂದರೆ ಜನರು ಆ ಎರಡು ವಸ್ತುಗಳು ಹೇಗೆ ಸಮಾನವಾಗಿವೆ ಎಂಬುದರ ಬಗ್ಗೆ ಯೋಚಿಸಬೇಕೆಂದು ಅವನು ಬಯಸುತ್ತಾನೆ.

ಉದಾಹರಣೆಗೆ, ಒಬ್ಬನು ಹೀಗೆ ಹೇಳಬಹುದು:

- ನಾನು ಪ್ರೀತಿಸುವ ಹುಡುಗಿ ಕೆಂಪಾದ ಗುಲಾಬಿ.

ಹುಡುಗಿ ಮತ್ತು ಗುಲಾಬಿ ಎಂಬ ವಸ್ತುಗಳು ತುಂಬಾ ವಿಭಿನ್ನವಾದ ವಸ್ತುಗಳಾಗಿವೆ, ಆದರೆ ಮಾತನಾಡುವವನು ಅವುಗಳು ಯಾವುದೋ ಒಂದು ರೀತಿಯಲ್ಲಿ ಸಮಾನವಾಗಿವೆ ಎಂದು ಪರಿಗಣಿಸುತ್ತಾನೆ. ಅವುಗಳು ಯಾವ ರೀತಿಯಲ್ಲಿ ಸಮಾನವಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದದ್ದು ಕೇಳುಗರ ಕರ್ತವ್ಯವಾಗಿದೆ.

ರೂಪಕ ಅಲಂಕಾರದ ಭಾಗಗಳು

ಮೇಲಿನ ಉದಾಹರಣೆಯು ಒಂದು ರೂಪಕಾಲಂಕಾರದಲ್ಲಿ ಮೂರು ಭಾಗಗಳಿವೆ ಎಂಬುದನ್ನು ತೋರಿಸುತ್ತದೆ. ಈ ರೂಪಕ ಅಲಂಕಾರದಲ್ಲಿ, ಮಾತನಾಡುವವನು “ತಾನು ಪ್ರೀತಿಸುವ ಹುಡುಗಿಯ” ಬಗ್ಗೆ ಮಾತನಾಡುತ್ತಿದ್ದಾನೆ. ಇದು **ಉಪಮೇಯ**. ಮಾತನಾಡುವವನು ಅವಳಿಗೂ ಮತ್ತು "ಕೆಂಪಾದ ಗುಲಾಬಿಗೂ" ನಡುವೆಯಿರುವ ಸಾಮ್ಯತೆ ಏನು ಎಂಬುದರ ಬಗ್ಗೆ ಕೇಳುಗನು ಯೋಚಿಸಬೇಕೆಂದು ಬಯಸುತ್ತಾನೆ. ಕೆಂಪಾದ ಗುಲಾಬಿಯು ಅವನು ಹುಡುಗಿಯನ್ನು ಹೋಲಿಸುತ್ತಿರುವುದರ **ಉಪಮಾನ** ಆಗಿದೆ. ಬಹುಶಃ, ಕೇಳುಗನು ಅವೆರಡೂ **ಸುಂದರವಾಗಿವೆ** ಎಂದು ಯೋಚಿಸಬೇಕೆಂದು ಅವನು ಬಯಸುತ್ತಾನೆ. ಇದು ಹುಡುಗಿ ಮತ್ತು ಗುಲಾಬಿ ಇವೆರಡರಲ್ಲಿರುವ **ಗುಣ** ಆಗಿದೆ, ಆದ್ದರಿಂದ ನಾವು ಇದನ್ನು **ಹೋಲಿಕೆಯ ಅಂಶ** ಎಂದೂ ಕರೆಯಬಹುದು.

ರೂಪಕ ಅಲಂಕಾರದಲ್ಲಿ ಮೂರು ಭಾಗಗಳಿವೆ:

- **ಉಪಮೇಯ**, ಎಂಬುದು ಬರಹಗಾರನು/ಮಾತನಾಡುವವನು ಕೂಡಲೇ ಚರ್ಚಿಸುವಂಥ ವಿಷಯವಾಗಿದೆ.
- **ಉಪಮಾನ** - ಉಪಮೇಯನ್ನು ವಿವರಿಸಲು ಮಾತನಾಡುವವನು ಬಳಸುವ ಭೌತಿಕ ವಿಷಯವಾಗಿದೆ (ವಸ್ತು, ಘಟನೆ, ಕಾರ್ಯ, ಇತ್ಯಾದಿ).
- **ಉಪಮಾನ** ಮತ್ತು **ಉಪಮೇಯ** ಹೇಗೆ ಸಾಮ್ಯತೆ ಉಳ್ಳವುಗಳಾಗಿವೆ ಎಂಬುದನ್ನು ಯೋಚಿಸುವಾಗ ಭೌತಿಕ **ಉಪಮಾನವು** ಕೇಳುಗರ ಮನಸ್ಸಿನಲ್ಲಿ ಉಂಟುಮಾಡುವ ಭಾವವಾಚಕ ಪರಿಕಲ್ಪನೆ ಅಥವಾ ಲಕ್ಷಣವೇ **ಗುಣ** ಆಗಿದೆ. ಅನೇಕಸಾರಿ, ರೂಪಕ ಅಲಂಕಾರದಲ್ಲಿರುವ **ಗುಣವನ್ನು** ಸತ್ಯವೇದದಲ್ಲಿ ಸ್ಪಷ್ಟವಾಗಿ ಬರೆಯಲಾಗಿಲ್ಲ, ಆದರೆ ಸಂದರ್ಭವೇ ಇದನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಕೇಳುಗರು ಅಥವಾ ಓದುಗರು ತಾವೇ **ಗುಣದ** ಕುರಿತು ಯೋಚಿಸಬೇಕಾಗುತ್ತದೆ.

ರೂಪಕ ಅಲಂಕಾರ ಎಂಬುದು ಭೌತಿಕ **ಉಪಮಾನವನ್ನು** ಬಳಸಿಕೊಂಡು ಮಾತನಾಡುವವನು ಹೇಳುತ್ತಿರುವ **ಉಪಮೇಯಕ್ಕೆ** ಭಾವವಾಚಕ **ಗುಣವನ್ನು** ಅನ್ವಯಿಸುವ ಅಲಂಕಾರವಾಗಿದೆ ಎಂದು ಈ ಪದಗಳನ್ನು ಬಳಸಿಕೊಂಡು ನಾವು ಹೇಳಬಹುದು.

ಸಾಮಾನ್ಯವಾಗಿ, **ಉಪಮೇಯದ** ಬಗ್ಗೆ ಏನನ್ನಾದರೂ ವ್ಯಕ್ತಪಡಿಸಲು ಬರಹಗಾರನು ಅಥವಾ ಮಾತನಾಡುವವನು **ಉಪಮೇಯ** ಮತ್ತು **ಉಪಮಾನದ** ನಡುವೆಯಿರುವ ಕನಿಷ್ಠ ಒಂದು **ಹೋಲಿಕೆಯ ಅಂಶದ** (**ಗುಣ**) ಒಟ್ಟಿಗೆ ರೂಪಕ ಅಲಂಕಾರವನ್ನು ಬಳಸುತ್ತಾನೆ. ಸಾಮಾನ್ಯವಾಗಿ ರೂಪಕ ಅಲಂಕಾರಗಳಲ್ಲಿ, **ಉಪಮೇಯವನ್ನು** ಮತ್ತು **ಉಪಮಾನವನ್ನು** ಸ್ಪಷ್ಟವಾಗಿ ತಿಳಿಸುತ್ತಾರೆ, ಆದರೆ **ಗುಣವನ್ನು** ಮಾತ್ರ ಸೂಚಿಸುತ್ತಾರೆ. **ಉಪಮೇಯ** ಮತ್ತು **ಉಪಮಾನದ** ನಡುವೆಯಿರುವ ಸಾಮ್ಯತೆಯ ಬಗ್ಗೆ ಯೋಚಿಸುವುದಕ್ಕೆ ಮತ್ತು ತಿಳಿಸಲ್ಪಟ್ಟಿರುವ **ಗುಣವನ್ನು** ತಾವೇ ಗ್ರಹಿಸಿಕೊಳ್ಳುವುದಕ್ಕೆ ಓದುಗರನ್ನು/ಕೇಳುಗರನ್ನು ಆಹ್ವಾನಿಸಲು ಬರಹಗಾರನು/ಮಾತನಾಡುವವನು ಹೆಚ್ಚಾಗಿ ರೂಪಕ ಅಲಂಕಾರವನ್ನು ಬಳಸುತ್ತಾನೆ.

ಮಾತನಾಡುವವರು ತಮ್ಮ ಸಂದೇಶವನ್ನು ಬಲಗೊಳಿಸಲು, ತಮ್ಮ ಭಾಷೆಯನ್ನು ಹೆಚ್ಚು ಸ್ಪಷ್ಟಗೊಳಿಸಲು, ತಮ್ಮ ಭಾವನೆಗಳನ್ನು ಉತ್ತಮವಾಗಿ ವ್ಯಕ್ತಪಡಿಸಲು, ಬೇರೆ ರೀತಿಯಲ್ಲಿ ಹೇಳಲು ಕಷ್ಟಕರವಾದದ್ದನ್ನು ಹೇಳಲು ಅಥವಾ ಜನರು ತಮ್ಮ ಸಂದೇಶವನ್ನು ನೆನಪಿಟ್ಟುಕೊಳ್ಳಲು ಸಹಾಯ ಮಾಡಲು ರೂಪಕ ಅಲಂಕಾರಗಳನ್ನು ಹೆಚ್ಚಾಗಿ ಬಳಸುತ್ತಾರೆ.

ಕೆಲವೊಮ್ಮೆ ಮಾತನಾಡುವವರು ತಮ್ಮ ಭಾಷೆಯಲ್ಲಿ ಬಹಳ ಸಾಮಾನ್ಯವಾಗಿರುವ ರೂಪಕ ಅಲಂಕಾರಗಳನ್ನು ಬಳಸುತ್ತಾರೆ. ಆದಾಗ್ಯೂ, ಕೆಲವೊಮ್ಮೆ ಮಾತನಾಡುವವರು ಅಸಾಮಾನ್ಯವಾದ ರೂಪಕ ಅಲಂಕಾರಗಳನ್ನು, ವಿಶಿಷ್ಟವಾಗಿರುವ ಇನ್ನೂ ಕೆಲವು ರೂಪಕ ಅಲಂಕಾರಗಳನ್ನು ಸಹ ಬಳಸುತ್ತಾರೆ. ಒಂದು ರೂಪಕ ಅಲಂಕಾರವು ಒಂದು ಭಾಷೆಯಲ್ಲಿ ಬಹಳ ಸಾಮಾನ್ಯವಾಗಿ ಬಿಟ್ಟಾಗ, ಅದು “ನಿಷ್ಕ್ರಿಯ” ರೂಪಕ ಅಲಂಕಾರವಾಗುತ್ತದೆ, ಅಸಾಮಾನ್ಯವಾದ ರೂಪಕ ಅಲಂಕಾರಗಳಿಗೆ ವ್ಯತಿರಿಕ್ತವಾಗಿ, ಇದನ್ನು ನಾವು “ಸಕ್ರಿಯ” ರೂಪಕ ಅಲಂಕಾರ ಎಂದು ವಿವರಿಸುತ್ತೇವೆ. ಪ್ರತಿಯೊಂದು ನಿಷ್ಕ್ರಿಯ ರೂಪಕ ಅಲಂಕಾರಗಳು ಮತ್ತು ಸಕ್ರಿಯ ರೂಪಕ ಅಲಂಕಾರಗಳು ವಿಭಿನ್ನ ರೀತಿಯ ಭಾಷಾಂತರದ ಸಮಸ್ಯೆಯನ್ನು ತಂದೊಡ್ಡುತ್ತವೆ, ಅದನ್ನು ನಾವು ಮುಂದೆ ಚರ್ಚಿಸಲಿದ್ದೇವೆ.

ನಿಷ್ಕ್ರಿಯ ರೂಪಕ ಅಲಂಕಾರಗಳು

ಈ ನಿಷ್ಕ್ರಿಯ ರೂಪಕ ಅಲಂಕಾರವು ಒಂದು ಭಾಷೆಯಲ್ಲಿ ಹೆಚ್ಚಾಗಿ ಬಳಸಲ್ಪಡುವ ಅಲಂಕಾರವಾಗಿದೆ, ಆ ಭಾಷೆಯನ್ನು ಮಾತನಾಡುವವರು ಅದನ್ನು ಒಂದು ಪರಿಕಲ್ಪನೆಗೆ ಬದಲಾಗಿ ಇನ್ನೊಂದು ಪರಿಕಲ್ಪನೆಯನ್ನು ಸೂಚಿಸುತ್ತದೆ ಎಂದು ಪರಿಗಣಿಸುವುದಿಲ್ಲ. ಭಾಷಾಶಾಸ್ತ್ರಜ್ಞರು ಸಾಮಾನ್ಯವಾಗಿ ಇವುಗಳನ್ನು "ಮೃತ ರೂಪಕಗಳು" ಎಂದು ಕರೆಯುತ್ತಾರೆ. ನಿಷ್ಕ್ರಿಯ ರೂಪಕ ಅಲಂಕಾರಗಳು ಸರ್ವೇ ಸಾಧಾರಣವಾಗಿವೆ. ಇದಕ್ಕೆ ಇಂಗ್ಲೀಷ್ ಭಾಷೆಯಲ್ಲಿನ ಉದಾಹರಣೆಗಳೆಂದರೆ “ಮೇಜಿನ **ಕಾಲು**“ "ವಂಶ **ವೃಕ್ಷ**" "ಪುಸ್ತಕದ **ಎಲೆ**" (ಅಂದರೆ ಒಂದು ಪುಸ್ತಕದ ಹಾಳೆ), ಅಥವಾ "ಕ್ರೇನ್" (ಭಾರವಾದ ವಸ್ತುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವ ಯಂತ್ರ). ಇಂಗ್ಲೀಷ್ ಮಾತನಾಡುವವರು ಇಂತಹ ಪದಗಳಿಗೆ ಒಂದು ಅರ್ಥಕ್ಕಿಂತ ಹೆಚ್ಚು ಅರ್ಥವಿದೆ ಎಂದು ಯೋಚಿಸುವರು. ಉದಾಹರಣೆಗೆ ಸತ್ಯವೇದದ ಹಿಬ್ರೂ ಭಾಷೆಯಲ್ಲಿ "ಕೈ" ಎನ್ನುವುದು "ಬಲವನ್ನು" ಸೂಚಿಸುತ್ತದೆ, "ಮುಖ" ಎನ್ನುವುದು "ಪ್ರಸನ್ನತೆಯನ್ನು" ಸೂಚಿಸುತ್ತದೆ ಮತ್ತು ಭಾವನೆಗಳನ್ನು ಅಥವಾ ನೈತಿಕ ಗುಣಲಕ್ಷಣಗಳನ್ನು ಬಗ್ಗೆ ತಿಳಿಸುವಾಗ "ವಸ್ತ್ರ ಧರಿಸುವುದು" ಎಂಬಂತೆ ಬಳಸುತ್ತಾರೆ.

ವಿನ್ಯಾಸಿತ ಜೋಡಿ ಪರಿಕಲ್ಪನೆಗಳು ರೂಪಕ ಅಲಂಕಾರದಂತೆ ಕಾರ್ಯನಿರ್ವಹಿಸುತ್ತವೆ

ರೂಪಕವಾಗಿ ಮಾತನಾಡುವ ರೀತಿಗಳು ಜೋಡಿ ಪರಿಕಲ್ಪನೆಗಳನ್ನು ಅವಲಂಬಿಸಿರುತ್ತದೆ, ಅದರಲ್ಲಿರುವ ಒಂದು ಪರಿಕಲ್ಪನೆಯು ಅದರಲ್ಲಿರುವ ಇನ್ನೊಂದು ಪರಿಕಲ್ಪನೆಯನ್ನು ಸೂಚಿಸುತ್ತದೆ. ಉದಾಹರಣೆಗೆ ಇಂಗ್ಲೀಷಿನಲ್ಲಿ ಮೇಲೆ/ಏರು (ಆಪ್) ಎಂಬ ದಿಕ್ಕು ಸೂಚಿ ಹೆಚ್ಚು ಅಥವಾ ಉತ್ತಮ (ಕಲ್ಪನೆ) ಎಂಬ ಪರಿಕಲ್ಪನೆಗಳನ್ನು ಸೂಚಿಸುತ್ತದೆ. ಏಕೆಂದರೆ ಈ ಅದರಲ್ಲಿರುವ ಜೋಡಿ ಪರಿಕಲ್ಪನೆಗಳ ಮೂಲಕ ನಾವು ಈ ಕೆಳಗಿನಂತಹ ವಾಕ್ಯಗಳ ರಚನೆಗಳನ್ನು ಮಾಡಬಹುದು: "ಇಂಧನದ ಬೆಲೆ ಏರಿಕೆ ಆಗುತ್ತಿದೆ," "ಒಬ್ಬ ಅತಿ ಬುದ್ಧಿವಂತನಾದ ಮನುಷ್ಯ," ಮತ್ತು ಕೆಲವೊಮ್ಮೆ ವ್ಯತಿರಿಕ್ತವಾದ ವಿಚಾರಗಳನ್ನು ಮಾಡಬಹುದು: "ತಾಪಮಾನ ಕುಸಿಯುತ್ತಿದೆ" ಮತ್ತು "ನಾನು ತುಂಬಾ ಕುಗ್ಗಿದವನಂತೆ ಭಾವಿಸುತ್ತಿದ್ದೇನೆ."

ಜಾಗತಿಕವಾಗಿ ಬಳಸುವ ಭಾಷೆಗಳಲ್ಲಿ ವಿನ್ಯಾಸಿತ ಜೋಡಿ ಪರಿಕಲ್ಪನೆಗಳನ್ನು ರೂಪಕವಾದ ಉದ್ದೇಶಗಳಿಗಾಗಿ ನಿರಂತರವಾಗಿ ಬಳಸುತ್ತಾರೆ, ಯಾಕೆಂದರೆ ಆಲೋಚನೆಯನ್ನು ಕ್ರಮವಾಗಿಡಲು ಇವು ಅನುಕೂಲವಾಗಿವೆ. ಸಾಮಾನ್ಯವಾಗಿ ಜನರು ಭಾವವಾಚಕ ಗುಣಗಳನ್ನು ಕುರಿತು ಮಾತನಾಡುವಾಗ (ಬಲ , ಅಸ್ಥಿತ್ವ , ಭಾವನೆಗಳು, ನೈತಿಕಗುಣಗಳು) ಇವುಗಳನ್ನು ದೇಹದ ಅಂಗಾಂಗಗಳೋ, ಅಥವಾ ಕಣ್ಣಿಗೆ ಕಾಣುತ್ತಿರುವ ಅಥವಾ ಮುಟ್ಟಬಹುದಾದಂಥ ವಸ್ತುಗಳೋ, ಅಥವಾ ನೋಡಬಹುದಾದಂಥ ನಡೆಯುತ್ತಿರುವ ಘಟನೆಗಳೋ ಎಂಬಂತೆ ಮಾತನಾಡುತ್ತಾರೆ.

ಈ ಅಲಂಕಾರಗಳನ್ನು ಸಾಮಾನ್ಯ ರೀತಿಯಲ್ಲಿ ಬಳಸುವಾಗ ಮಾತನಾಡುವ ವ್ಯಕ್ತಿ ಅಥವಾ ಶ್ರೋತೃಗಳು ಇವುಗಳನ್ನು ಅಲಂಕಾರಿಕ ಭಾಷೆಯೆಂದು ಎಣಿಸುವರು. ಇಂಗ್ಲೀಷ್ ಭಾಷೆಯಲ್ಲಿ ಕೆಲವು ರೂಪಕ ಅಲಂಕಾರಗಳು ಪರಿಗಣನೆಗೆ ಬಾರದೆ ಉಳಿದಿರುವ ಅಂತಹವು:

- "ಶಾಖವನ್ನು ಏರಿಸು. ಏರಿಸು ಎಂಬ ಪದವನ್ನು ಹೆಚ್ಚಿಸು ಎಂಬಂತೆ ಮಾತನಾಡುತ್ತಾರೆ.
- "ನಾವು ನಮ್ಮ ವಾದವನ್ನು ಮುಂದುವರೆಸೋಣ". ಯೋಜಿಸಿದಂತೆ ಮಾಡುವುದನ್ನು ಮುನ್ನಡೆಯೋಣ ಅಥವಾ ಮುಂದುವರೆಸೋಣ ಎಂಬಂತೆ ಮಾತನಾಡುತ್ತಾರೆ.
- "ನೀವು ನಿಮ್ಮ ವಾದವನ್ನು ಚೆನ್ನಾಗಿ ಸಮರ್ಥಿಸಿಕೊಂಡಿರಿ". ಕೆಲವೊಮ್ಮೆ ವಾದವಿವಾದವನ್ನು ಯುದ್ಧವು ಎಂಬಂತೆ ಪರಿಗಣಿಸಿ ಮಾತನಾಡುವರು.
- "ಪದಗಳ ಹರಿವು" ಎಂಬುದರಲ್ಲಿ ಪದಗಳನ್ನು ದ್ರವ್ಯವೋ ಎಂಬಂತೆ ಮಾತನಾಡುತ್ತಾರೆ.

ಇಂಗ್ಲೀಷ್ ಭಾಷೆ ಮಾತನಾಡುವವರು ಇವುಗಳನ್ನು ರೂಪಕವಾದ ಅಭಿವ್ಯಕ್ತಿಗಳಾಗಿ ಅಥವಾ ಅಲಂಕಾರಿಕ ಭಾಷೆಯಾಗಿ ಪರಿಗಣಿಸುವುದಿಲ್ಲ, ಹಾಗಾಗಿ ಇವುಗಳನ್ನು ಜನರು ಅಲಂಕಾರಿಕ ಭಾಷೆಯ ಎಂದು ವಿಶೇಷ ಗಮನ ನೀಡುವಂತೆ ಇತರ ಭಾಷೆಗಳಲ್ಲಿ ಭಾಷಾಂತರಿಸುವುದು ತಪ್ಪಾಗಿರುತ್ತದೆ. ಇಂತಹ ಪ್ರಮುಖ ವಿನ್ಯಾಸವುಳ್ಳ ರೂಪಕ ಅಲಂಕಾರಗಳು ಸತ್ಯವೇದದ ಭಾಷೆಯಲ್ಲಿ ವಿವರಿಸಲಾಗಿದೆ, ಅವುಗಳನ್ನು ಮತ್ತು ಇದು ನಿಮ್ಮನ್ನು ಕರೆದೊಯ್ಯುವ ಪುಟಗಳನ್ನು ದಯವಿಟ್ಟು ನೋಡಿರಿ ಸತ್ಯವೇದದಲ್ಲಿನ ಅಲಂಕಾರಗಳು – ಸಾಮಾನ್ಯ ವಿನ್ಯಾಸಗಳು.

ನಿಷ್ಕ್ರಿಯ ಅಲಂಕಾರಗಳನ್ನು ಇನ್ನೊಂದು ಭಾಷೆಗೆ ಭಾಷಾಂತರಿಸುವಾಗ ಅದನ್ನು ರೂಪಕ ಎಂದು ಪರಿಗಣಿಸಬಾರದು. ಅದರ ಬದಲು ಉದ್ದಿಷ್ಟ ಭಾಷೆಯಲ್ಲಿ ಆ ವಿಷಯಕ್ಕೆ ಅಥವಾ ಪರಿಕಲ್ಪನೆಗೆ ಯಾವ ಅತ್ಯುತ್ತಮ ಭಾವನೆಯನ್ನು ವ್ಯಕ್ತಪಡಿಸಲು ಸಾಧ್ಯವೋ ಅದನ್ನು ಬಳಸಿ.

ಸಕ್ರಿಯ ರೂಪಕ ಅಲಂಕಾರಗಳು

ಇಂತಹ ರೂಪಕ ಅಲಂಕಾರಗಳು ಒಂದು ಪರಿಕಲ್ಪನೆಗೆ ಬದಲಾಗಿ ಇನ್ನೊಂದು ಪರಿಕಲ್ಪನೆಯನ್ನು ಅಥವಾ ಒಂದು ವಸ್ತುವಿಗೆ ಬದಲಾಗಿ ಇನ್ನೊಂದು ವಸ್ತುವನ್ನು ಸೂಚಿಸುತ್ತದೆ ಎಂದು ಜನರು ತಿಳಿದುಕೊಳ್ಳುತ್ತಾರೆ. ಇವುಗಳು ಒಂದು ವಸ್ತು ಇನ್ನೊಂದರಂತೆ ಇರಲು ಹೇಗೆ ಸಾಧ್ಯ ಎಂದು ಜನರು ಯೋಚಿಸುವಂತೆ ಮಾಡುತ್ತದೆ, ಏಕೆಂದರೆ ಅನೇಕ ಸಲ ಈ ಎರಡೂ ವಸ್ತುಗಳು ಭಿನ್ನವಾಗಿರುತ್ತದೆ. ಈ ರೂಪಕ ಅಲಂಕಾರಗಳು ಸಂದೇಶಕ್ಕೆ ಹೆಚ್ಚು ಬಲ ನೀಡುತ್ತದೆ ಮತ್ತು ಸಂದೇಶದಲ್ಲಿ ಅಸಾಧಾರಣ ಗುಣಲಕ್ಷಣಗಳನ್ನು ನೀಡುತ್ತವೆ ಎಂದು ಜನರು ಸುಲಭವಾಗಿ ಗುರುತಿಸುತ್ತಾರೆ. ಈ ಕಾರಣದಿಂದಲೇ ಜನರು ಈ ರೂಪಕ ಅಲಂಕಾರಗಳ ಕಡೆ ಗಮನಹರಿಸುತ್ತಾರೆ. ಉದಾಹರಣೆಗೆ,

> ನನ್ನ ನಾಮದಲ್ಲಿ ಭಯಭಕ್ತಿ ಇಟ್ಟಿರುವ ನಿಮಗೋ ಧರ್ಮವೆಂಬ ನೀತಿಸೂರ್ಯನು ತನ್ನ ಕಿರಣಗಳುಳ್ಳ ರೆಕ್ಕೆಯಿಂದ ಸ್ವಸ್ಥತೆಯನ್ನು ಉಂಟುಮಾಡುವನು. (ಮಲಾಕಿ 4:2 ULT)

ಇಲ್ಲಿ ದೇವರು ಆತನ ರಕ್ಷಣೆಯ ಬಗ್ಗೆ ಮಾತನಾಡುವಾಗ ಸೂರ್ಯನು ತನ್ನ ಕಿರಣಗಳನ್ನು ಆತನು ಪ್ರೀತಿಸುವ ಜನರ ಮೇಲೆ ಹೊಳೆಯುವಂತೆ ಮಾಡಲು ಉದಯಿಸುತ್ತಾನೋ ಎಂಬಂತೆ ಮಾತನಾಡುತ್ತಾನೆ. ಆತನು ಸೂರ್ಯನ ಕಿರಣಗಳನ್ನು ರೆಕ್ಕೆಗಳೋ ಎಂಬಂತೆ ಮಾತನಾಡುತ್ತಿದ್ದಾನೆ, ಈ ರೆಕ್ಕೆಗಳು ಆತನ ಜನರನ್ನು ಗುಣಪಡಿಸುವ ಔಷಧಿಯನ್ನು ತರುತ್ತಿವೆಯೋ ಎಂಬಂತೆ ಹೇಳುತ್ತಿದ್ದಾನೆ. ಇಲ್ಲಿ ಇನ್ನೊಂದು ಉದಾಹರಣೆ ಇದೆ:

> "ಹೋಗಿ ಆ ನರಿಗೆ ಹೇಳಿರಿ" ಎಂದು ಯೇಸು ಹೇಳಿದನು. (ಲೂಕ 13:32 ULT)

ಇಲ್ಲಿ, "ಆ ನರಿ" ಎಂಬುದು ಹೇರೋದನನ್ನು ಸೂಚಿಸುತ್ತಿದೆ. ಯೇಸುವಿನ ಮಾತನ್ನು ಆಲಿಸುತ್ತಿದ್ದ ಜನರು ಖಂಡಿತವಾಗಿಯೂ ಹೇರೋದನಲ್ಲಿ ನರಿಯಂತಹ ಗುಣಲಕ್ಷಣಗಳಿವೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಬಯಸಿದನು ಎಂದು ಅರ್ಥಮಾಡಿಕೊಂಡರು. ಇದನ್ನು ಕೇಳಿದ ಜನರು ಹೇರೋದನು ನಾಶಮಾಡುವವನು, ಕೊಲೆಗಡುಕನು ಅಥವಾ ಅವನಿಗೆ ಸೇರದ ವಸ್ತುಗಳನ್ನು, ಆಸ್ತಿಯನ್ನು ಮೋಸದಿಂದ ಕಬಳಿಸುವವನು ಅಥವಾ ಈ ಎಲ್ಲಾ ಗುಣಗಳನ್ನು ಹೊಂದಿರುವ ದುಷ್ಟನಾದ ವ್ಯಕ್ತಿ ಎಂದು ಹೇಳಲು ಯೇಸು ಉದ್ದೇಶಿಸಿದನು ಎಂದು ಅವರು ಅರ್ಥಮಾಡಿಕೊಂಡರು.

ಸಕ್ರಿಯ ರೂಪಕ ಅಲಂಕಾರಗಳನ್ನು ಬಹು ಎಚ್ಚರಿಕೆಯಿಂದ ಸರಿಯಾಗಿ ಭಾಷಾಂತರ ಮಾಡಬೇಕು. ಹಾಗೆ ಮಾಡುವುದಕ್ಕೆ ನಾವು ರೂಪಕ ಅಲಂಕಾರದ ಭಾಗಗಳನ್ನು, ಅವು ಹೇಗೆ ಒಟ್ಟಾಗಿ ಅರ್ಥಪೂರ್ಣವಾಗಿ ಕಾರ್ಯಮಾಡುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು.

> "ನಾನೇ ಜೀವ ಕೊಡುವ ರೊಟ್ಟಿ, ನನ್ನ ಬಳಿ ಬರುವವರಿಗೆ ಎಂದಿಗೂ ಹಸಿವೆಯಾಗುವುದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ" ಎಂದು ಯೇಸು ಅವರಿಗೆ ಹೇಳಿದನು. (ಯೋಹಾನ 6:35 ULT)

ಈ ರೂಪಕ ಅಲಂಕಾರದಲ್ಲಿ ಯೇಸು ತನ್ನನ್ನು ಜೀವ ಕೊಡುವ ರೊಟ್ಟಿ ಎಂದು ಹೇಳಿದ್ದಾನೆ. ಇಲ್ಲಿ "ನಾನು" ಎಂಬುದು **ಉಪಮೇಯ** ಮತ್ತು "ರೊಟ್ಟಿ" ಎಂಬುದು **ಉಪಮಾನ**. ರೊಟ್ಟಿ ಎಂಬುದು ಆಗಿನ ಕಾಲದ ಮತ್ತು ಆ ಸ್ಥಳದ ಜನರ ಪ್ರಮುಖ ಆಹಾರವಾಗಿತ್ತು. ಇಲ್ಲಿ ರೊಟ್ಟಿ ಮತ್ತು ಯೇಸುವಿನ ನಡುವೆ ಇರುವ ಸಾಮ್ಯತೆ ಏನೆಂದರೆ ಜನರಿಗೆ ಬದುಕಲು ಇವೆರಡು ಅವಶ್ಯವಾಗಿವೆ ಎಂಬುದೇ. ಶಾರೀರಿಕವಾದ ಜೀವನವನ್ನು ಹೊಂದಲು ಹೇಗೆ ರೊಟ್ಟಿಯನ್ನು ಜನರು ತಿನ್ನುವುದರ ಅವಶ್ಯಕತೆಯಿದೆಯೋ ಹಾಗೆಯೇ ನಿತ್ಯ ಜೀವವನ್ನು ಹೊಂದಲು ಯೇಸುವನ್ನು ನಂಬಬೇಕು. ಈ ರೂಪಕ ಆಲಂಕಾರದ **ಗುಣವು** "ಜೀವ" ಆಗಿದೆ. ಈ ಸಂಗತಿಯಲ್ಲಿ ಯೇಸು ರೂಪಕ ಆಲಂಕಾರದ ಮುಖ್ಯ ಗುಣವನ್ನು ತಿಳಿಸಿದನು, ಆದರೆ ಅನೇಕಸಾರಿ ಗುಣವನ್ನು ಸೂಚಿಸಲಾಗುತ್ತದೆ.

ರೂಪಕ ಅಲಂಕಾರಗಳ ಉದ್ದೇಶಗಳು

- ಜನರಿಗೆ ತಿಳಿಯದ ವಿಷಯವನ್ನು (**ಉಪಮೇಯ**), ಈಗಾಗಲೇ ಅವರಿಗೆ ತಿಳಿದಿರುವ ವಿಷಯದ ಮೂಲಕ (**ಉಪಮಾನ**) ಬೋಧಿಸುವುದು ರೂಪಕ ಅಲಂಕಾರದ ಒಂದು ಉದ್ದೇಶವಾಗಿದೆ.
- ಒಂದು ವಿಷಯದಲ್ಲಿ (**ಉಪಮೇಯ**) ವಿಶೇಷವಾದ ಗುಣಲಕ್ಷಣ (**ಗುಣ**) ಎತ್ತಿ ತೋರಿಸುವುದು ಅಥವಾ ಅದರಲ್ಲಿ ತೀವ್ರವಾದ ರೀತಿಯಲ್ಲಿ ಗುಣಲಕ್ಷಣಗಳಿವೆ ಎಂದು ತೋರಿಸುವುದು ಇನ್ನೊಂದು ಉದ್ದೇಶವಾಗಿದೆ.
- ಜನರು **ಉಪಮಾನದ** ಬಗ್ಗೆ ಹೇಗೆ ಭಾವಿಸುತ್ತಾರೋ ಹಾಗೆಯೇ *ಉಪಮೇಯ ಬಗ್ಗೆಯೂ ಭಾವಿಸುವುದಕ್ಕಾಗಿ ಜನರನ್ನು ಮುನ್ನಡೆಸುವುದು ಇನ್ನೊಂದು ಉದ್ದೇಶವಾಗಿದೆ.

ಕಾರಣವೇನಂದರೆ ಇದು ಭಾಷಾಂತರದ ಸಮಸ್ಯೆಯಾಗಿದೆ

- ಕೆಲವೊಮ್ಮೆ ಜನರು ರೂಪಕ ಅಲಂಕಾರವೆಂಬುದನ್ನು ಗುರುತಿಸಲು ಸಮರ್ಥರಾಗಿರುವುದಿಲ್ಲ. ಅವರು ರೂಪಕ ಅಲಂಕಾರದ ವಾಕ್ಯವನ್ನು ವಾಚ್ಯಾರ್ಥದ ವಾಕ್ಯದಂತೆ ತಿಳಿದುಕೊಳ್ಳುವುದರಿಂದ ನಿಜವಾದ ಅರ್ಥವನ್ನು ಅಪಾರ್ಥ ಮಾಡಿಕೊಳ್ಳುವರು.
- ಜನರಿಗೆ ಉಪಮಾನವಾಗಿ ಬಳಸಿರುವ ವಸ್ತುವಿನ ಬಗ್ಗೆ ಗೊತ್ತಿಲ್ಲದಿರುವುದರಿಂದ ರೂಪಕ ಅಲಂಕಾರವನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ.
- ಉಪಮೇಯವನ್ನು ತಿಳಿಸದಿದ್ದರೆ ಉಪಮೇಯ ಏನೆಂಬುದು ಜನರಿಗೆ ತಿಳಿಯುವುದಿಲ್ಲ.
- ಮಾತನಾಡುವವನು ಜನರು ಅರ್ಥಮಾಡಿಕೊಳ್ಳಬೇಕೆಂದು ಬಯಸುವ ಹೋಲಿಕೆಯ ಅಂಶಗಳನ್ನು ಜನರು ಅರ್ಥಮಾಡಿಕೊಳ್ಳದಿರಬಹುದು. ಅವರು ಹೋಲಿಕೆಯ ಅಂಶಗಳ ಬಗ್ಗೆ ಯೋಚಿಸದಿದ್ದರೆ ಅವರು ರೂಪಕ ಅಲಂಕಾರವನ್ನು ಅರ್ಥಮಾಡಿಕೊಳ್ಳಲಾರರು.
- ಜನರು ತಾವು ರೂಪಕ ಅಲಂಕಾರಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲೆವು ಎಂದು ಭಾವಿಸುತ್ತಾರೆ ಆದರೆ ಅದು ಅವರಿಗೆ ಅರ್ಥವಾಗಿರುವುದಿಲ್ಲ. ಇಂತಹ ಸನ್ನಿವೇಶ ಅವರು ಸತ್ಯವೇದದ ಸಾಂಸ್ಕೃತಿಕ ಹಿನ್ನಲೆಯಲ್ಲಿ ಹೋಲಿಕೆಗಳನ್ನು ಬಳಸದೆ ತಮ್ಮ ಸಾಂಸ್ಕೃತಿಕ ಹಿನ್ನಲೆಯಲ್ಲಿ ಬಳಸಿದಾಗ ಉಂಟಾಗಬಹುದು.

ಭಾಷಾಂತರದ ತತ್ವಗಳು

- ಮೂಲ ಭಾಷೆಯ ಶ್ರೋತೃಗಳಿಗೆ ಹೇಗೆ ತಿಳಿಸಿದ್ದಾರೋ ಅದೇ ರೀತಿ ಉದ್ದಿಷ್ಟ ಭಾಷೆಯ ಶ್ರೋತೃಗಳಿಗೂ ಅರ್ಥವಾಗುವಂತೆ ರೂಪಕ ಅಲಂಕಾರಗಳ ಅರ್ಥ ಸ್ಪಷ್ಟವಾಗಿ ತಿಳಿಸಿರಿ.
- ರೂಪಕ ಅಲಂಕಾರದ ಅರ್ಥವು ಮೂಲ ಭಾಷೆಯ ಶ್ರೋತೃಗಳಿಗೆ ತಿಳಿಸಿದಂತೆ ಉದ್ದಿಷ್ಟ ಭಾಷೆಯ ಜನರಿಗೆ ತಿಳಿಸಬೇಕೇ ಹೊರತು ತೀರಾ ಸ್ಪಷ್ಟವಾಗಿ ತಿಳಿಸಬಾರದು.

ಸತ್ಯವೇದದಲ್ಲಿನ ಉದಾಹರಣೆಗಳು

> **ಭಾಷಾನಿನ ಆಕಳುಗಳಾದ ನೀವು**, ಈ ಮಾತಿಗೆ ಕಿವಿಗೊಡಿರಿ (ಅಮೋಸ 4:1 ULT)

ಈ ರೂಪಕ ಅಲಂಕಾರದ ಮೂಲಕ ಆಮೋಸನು ಸಮಾರ್ಯದ ಉನ್ನತ ವರ್ಗದ ಮಹಿಳೆಯರನ್ನು ಕುರಿತು ಮಾತನಾಡುವಾಗ ("ನೀವು" ಎಂಬುದು ಉಪಮೇಯ) ಅವರು ಆಕಳು ಎಂಬಂತೆ ಮಾತನಾಡುತ್ತಾನೆ (ಉಪಮಾನ). ಆಮೋಸನು ಇಲ್ಲಿ ಮಹಿಳೆಯರು ಮತ್ತು ಆಕಳುಗಳ ನಡುವೆ ಯಾವ ಸಾಮ್ಯತೆ ಇದೆ ಎಂಬುದನ್ನು ಹೇಳುತ್ತಿಲ್ಲ. ಶ್ರೋತೃಗಳು ತಾವೇ ಅದರ ಬಗ್ಗೆ ತಿಳಿದುಕೊಳ್ಳಬೇಕು ಮತ್ತು ತಮ್ಮ ಸಾಂಸ್ಕೃತಿಕ ಹಿನ್ನೆಲೆಯ ಜ್ಞಾನದಿಂದ

ಸುಲಭವಾಗಿ ತಿಳಿದು ಕೊಳ್ಳುವರು ಎಂದು ನಿರೀಕ್ಷಿಸುತ್ತಾನೆ. ಈ ವಿಷಯ ಸಂದರ್ಭದ ಮೂಲಕ ಆಮೋಸನು ಆಕಳು ಮತ್ತು ಮಹಿಳೆಯರು ಇಬ್ಬರೂ ಒಂದೇ ಗುಣವುಳ್ಳವರು, ಇಬ್ಬರೂ ದಪ್ಪ ಇದ್ದಾರೆ ಮತ್ತು ಹೆಚ್ಚು ಹೆಚ್ಚು ತಿನ್ನಲು ಆಸಕ್ತಿ ಉಳ್ಳವರು ಎಂದು ಹೇಳಿದ್ದಾನೆ. ಇದರಲ್ಲಿ ನಾವು ಸಾಂಸ್ಕೃತಿಕ ಹೋಲಿಕೆಯ ಅಂಶಗಳನ್ನು ನೋಡಿದರೆ ಹಸುಗಳನ್ನು ಪವಿತ್ರವಾದುವು ಎಂದು ಪೂಜಿಸುವರಿಗೆ ಇಂತಹ ಸಂದರ್ಭದಲ್ಲಿ ಆಮೋಸನ ಹೋಲಿಕೆ ತಪ್ಪಾಗಬಹುದು.

ಗಮನಿಸಿರಿ: ಆಮೋಸನು ನಿಜವಾಗಿಯೂ ಮಹಿಳೆಯರನ್ನು ಆಕಳುಗಳು ಎಂದು ಹೇಳಿಲ್ಲ. ಅವನು ಅವರನ್ನು ಮನುಷ್ಯರಂತೆ ಗುರುತಿಸಿ ಮಾತನಾಡುತ್ತಿದ್ದಾನೆ.

> ಈಗಲಾದರೋ ಯೆಹೋವನೇ ನೀನು ನಮ್ಮ ತಂದೆಯಾಗಿದ್ದೀ **ನಾವು ಜೇಡಿಮಣ್ಣು**, **ನೀನು ನಮ್ಮ ಕುಂಬಾರನು**, ನಾವೆಲ್ಲರೂ ನಿನ್ನ ಕೈಕೆಲಸವೇ. (ಯೆಶಾಯ 64:8 ULT)

ಮೇಲಿನ ಉದಾಹರಣೆಯಲ್ಲಿ ಸಂಬಂಧಿತ ಎರಡು ರೂಪಕ ಅಲಂಕಾರಗಳಿವೆ. ಇಲ್ಲಿ "ನಾವು" ಮತ್ತು "ನೀನು" ಎಂಬುದು ಉಪಮೇಯಗಳು ಮತ್ತು "ಜೇಡಿಮಣ್ಣು" ಹಾಗೂ "ಕುಂಬಾರ" ಎಂಬುದು ಉಪಮಾನಗಳು ಆಗಿವೆ. ಇಲ್ಲಿ ಕುಂಬಾರನಿಗೂ ಮತ್ತು ದೇವರಿಗೂ ನಡುವೆಯಿರುವ ಸಾಮ್ಯತೆ ಎಂದರೆ ಇಬ್ಬರೂ ತಮ್ಮ ಸಾಮಾಗ್ರಿಗಳಿಂದ ತಾವು ಉದ್ದೇಶಿಸಿದ್ದನ್ನು ಉಂಟುಮಾಡುತ್ತಾರೆ. ಕುಂಬಾರನು ಜೇಡಿಮಣ್ಣಿನಿಂದ ತಾನು ಬಯಸಿದ ರೀತಿಯಲ್ಲಿ ಮಾಡುತ್ತಾನೆ, ದೇವರು ತನ್ನ ಜನರಿಂದ ತಾನು ಬಯಸಿದಂತೆ ಮಾಡುತ್ತಾನೆ. ಇಲ್ಲಿ ಕುಂಬಾರನ ಜೇಡಿಮಣ್ಣು ಮತ್ತು **ನಾವು** ಎಂಬುದರ ನಡುವಿನ ಹೋಲಿಕೆಯ ಅಂಶಗಳನ್ನು ಜೇಡಿಮಣ್ಣಾಗಲೀ ಅಥವಾ ನಾವು ಯಾವ ರೀತಿ ಸೃಷ್ಟಿಯಾದರೂ ಅದನ್ನು ಪ್ರಶ್ನಿಸುವ ಅಧಿಕಾರವಾಗಲೀ ಅಥವಾ ಹಕ್ಕಾಗಲೀ ನಮಗೆ ಇರುವುದಿಲ್ಲ ಎಂಬ ವಿಚಾರವನ್ನು ವ್ಯಕ್ತಪಡಿಸಲಾಗಿದೆ.

> ಯೇಸು ಅವರಿಗೆ "**ಫರಿಸಾಯರ ಮತ್ತು ಸದ್ದುಕಾಯರ ಹುಳಿಹಿಟ್ಟಿನ** ವಿಷಯದಲ್ಲಿ ಜಾಗರೂಕರಾಗಿರಿ" ಎಂದು ಹೇಳಿದನು. ಅದಕ್ಕೆ ಶಿಷ್ಯರು, "ನಾವು ರೊಟ್ಟಿಬುತ್ತಿಗಳನ್ನು ಕಟ್ಟಿಕೊಳ್ಳದೇ ಬಂದೆವಲ್ಲಾ" ಅದಕ್ಕೆ ಎಂದು ತಮ್ಮತಮ್ಮೊಳಗೆ ಮಾತನಾಡಿಕೊಂಡರು. (ಮತ್ತಾಯ 16:6-7 ULT)

ಯೇಸು ಇಲ್ಲಿ ರೂಪಕ ಅಲಂಕಾರವನ್ನು ಬಳಸಿದನು, ಆದರೆ ಆತನ ಶಿಷ್ಯರು ಅದನ್ನು ಅರ್ಥಮಾಡಿಕೊಳ್ಳಲಿಲ್ಲ. ಇಲ್ಲಿ ಯೇಸು "ಹುಳಿಹಿಟ್ಟು" ಎಂದು ಹೇಳಿದಾಗ ಆತನು ರೊಟ್ಟಿಯ ಬಗ್ಗೆ ಮಾತನಾಡುತ್ತಿದ್ದಾನೆ ಎಂದು ಅವರು ಭಾವಿಸಿದರು, ಆದರೆ ಈ ರೂಪಕ ಆಲಂಕಾರದಲ್ಲಿ "ಹುಳಿಹಿಟ್ಟು" ಎಂಬುದು ಉಪಮಾನವಾಗಿತ್ತು, ಫರಿಸಾಯರ ಮತ್ತು ಸದ್ದುಕಾಯರ ಬೋಧನೆಯು ಉಪಮೇಯವಾಗಿತ್ತು. ಇಲ್ಲಿ ಆತನ ಶಿಷ್ಯರು (ಮೂಲ ಶ್ರೋತೃಗಳು) ಯೇಸು ಯಾವ ಉದ್ದೇಶದಿಂದ ಇದನ್ನು ಹೇಳಿದ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದೇ ಹೋದುದರಿಂದ ಇಲ್ಲಿ ಅದನ್ನು ತೀರಾ ಸ್ಪಷ್ಟವಾಗಿ ಹೇಳುವುದು ಸರಿಯಲ್ಲ.

ಭಾಷಾಂತರದ ಕಾರ್ಯತಂತ್ರಗಳು

ಮೂಲ ಓದುಗರು ರೂಪ ಅಲಂಕಾರವನ್ನು ಸರಿಯಾಗಿ ಅರ್ಥಮಾಡಿಕೊಂಡ ಪ್ರಕಾರವೇ ಜನರು ಅದನ್ನು ಅರ್ಥಮಾಡಿಕೊಳ್ಳುವುದಾದರೆ ಅದನ್ನು ಹಾಗೆಯೇ ಬಳಕೆ ಮಾಡಿರಿ. ನೀವು ಭಾಷಾಂತರ ಮಾಡಿದ ಮೇಲೆ ನಿಮ್ಮ ಜನರು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿದೆಯೇ ಎಂಬುದನ್ನು ಪರೀಕ್ಷಿಸಿ ತಿಳಿದುಕೊಳ್ಳಿರಿ.

ಹಾಗೆ ಓದುಗರು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಕೆಳಗೆ ಕೊಟ್ಟಿರುವ ಕಾರ್ಯತಂತ್ರಗಳನ್ನು ಬಳಸಿ ಅರ್ಥಮಾಡಿಕೊಳ್ಳಲು ಸಹಾಯ ಮಾಡಬಹುದು.

ಮೂಲ ಭಾಷೆಯಲ್ಲಿ ರೂಪಕ ಅಲಂಕಾರವು ಸಾಮಾನ್ಯರೀತಿಯಲ್ಲಿ ಅಭಿವ್ಯಕ್ತವಾದರೆ ಅಥವಾ ಸತ್ಯವೇದದ ಭಾಷೆಯಲ್ಲಿ ವಿನ್ಯಾಸಿತ ಜೋಡಿ ಪರಿಕಲ್ಪನೆಗಳನ್ನು ವ್ಯಕ್ತಪಡಿಸಿದರೆ (ನಿಷ್ಕ್ರಿಯ ರೂಪಕ ಅಲಂಕಾರ), ಆಗ **ಗುಣವನ್ನು** ನಿಮ್ಮ ಭಾಷೆಯಲ್ಲಿ ಸರಳವಾದ ರೀತಿಯಲ್ಲಿ ವ್ಯಕ್ತಪಡಿಸಬಹುದು.
ರೂಪಕ ಅಲಂಕಾರವು ಸಕ್ರಿಯ ರೂಪಕವಾಗಿದ್ದರೆ, **ಸತ್ಯವೇದದಲ್ಲಿರುವ ಅದೇ ಅರ್ಥವನ್ನು ಕೊಡುವ ರೀತಿಯಲ್ಲಿ ಉದ್ದಿಷ್ಟ ಭಾಷೆಯಲ್ಲೂ ರೂಪಕ ಅಲಂಕಾರವನ್ನು ಬಳಸಲಾಗಿದೆ ಎಂದು ನೀವು ಭಾವಿಸುವುದಾದರೆ** ನೀವು ಅದನ್ನು ಯಥಾವತ್ತಾಗಿ ಭಾಷಾಂತರಿಸಬಹುದು.
ನೀವು ಈ ರೀತಿ ಮಾಡಿದರೆ ನಿಮ್ಮ ಭಾಷಾ ಸಮುದಾಯದವರು ಇದನ್ನು ಸರಿಯಾಗಿ ಅರ್ಥಮಾಡಿ ಕೊಳ್ಳುತ್ತಾರೆಯೇ ಎಂಬುದನ್ನು ಪರೀಕ್ಷಿಸಿ ತಿಳಿದುಕೊಳ್ಳಿರಿ.
ಉದ್ದಿಷ್ಟ ಭಾಷೆಯ ಶ್ರೋತೃವು ಅದು ರೂಪಕ ಅಲಂಕಾರವಾಗಿದೆ ಎಂದು ಅರ್ಥಮಾಡಿಕೊಳ್ಳದಿದ್ದರೆ ಆಗ ಅದನ್ನು ಉಪಮಾ ಅಲಂಕಾರವನ್ನಾಗಿ ಬದಲಾಯಿಸಿ. ಕೆಲವು ಭಾಷೆಯಲ್ಲಿ ಇಂತಹ ವಾಕ್ಯಗಳಿಗೆ "ಅಂತೆ" ಅಥವಾ "ಹಾಗೆ" ಎಂಬ ಪದಗಳನ್ನು ಬಳಸಿ ವಾಕ್ಯಮಾಡುತ್ತಾರೆ. ನೋಡಿರಿ ಉಪಮಾಲಂಕಾರ.
ಉದ್ದಿಷ್ಟ ಭಾಷೆಯ ಶ್ರೋತೃಗಳಿಗೆ **ಉಪಮಾನದ** ಬಗ್ಗೆ ತಿಳಿಯದಿದ್ದರೆ ಆ ಗುಣವನ್ನು ಹೇಗೆ ಭಾಷಾಂತರಿಸಬೇಕು ಎಂಬ ವಿಷಯಗಳನ್ನು ತಿಳಿಯಲು. ಇದನ್ನು ನೋಡಿರಿ ಗೊತ್ತಿಲ್ಲದುದರ ಭಾಷಾಂತರ
ಉದ್ದಿಷ್ಟ ಭಾಷೆಯ ಶ್ರೋತೃಗಳು ಆ ಅರ್ಥಕ್ಕಾಗಿ ಆ **ಉಪಮಾನವನ್ನು** ಬಳಸದಿರುವುದಾದರೆ ನಿಮ್ಮ ಸಂಸ್ಕೃತಿಯಲ್ಲಿ ಬಳಸುವ ಉಪಮಾನವನ್ನು ಬಳಸಿಕೊಳ್ಳಿರಿ. ಆದರೆ ಇಂತಹ ಉಪಮಾನವು ಸತ್ಯವೇದದ ಕಾಲದಲ್ಲಿ ಬಳಕೆಯಾದ ವಿಷಯಗಳಾಗಿದ್ದವು ಎಂಬುದನ್ನು ಖಚಿತಪಡಿಸಿಕೊಳ್ಳಿರಿ.
ಉದ್ದಿಷ್ಟ ಭಾಷೆಯ ಶ್ರೋತೃಗಳಿಗೆ **ಉಪಮೇಯದ** ಬಗೆ ತಿಳಿಯದೆ ಇದ್ದರೆ ನೀವು ಉಪಮೇಯವನ್ನು ಸ್ಪಷ್ಟವಾಗಿ ತಿಳಿಸಿರಿ. (ಆದರೆ ಮೂಲ ಭಾಷೆಯ ಶ್ರೋತೃಗಳಿಗೆ ಉಪಮೇಯ ಬಗ್ಗೆ ತಿಳಿಯದೆ ಇದ್ದರೆ ಹೀಗೆ ಮಾಡಬೇಡಿ)
ಉದ್ದಿಷ್ಟ ಭಾಷೆಯ ಶ್ರೋತೃಗಳಿಗೆ ಉಪಮೇಯ ಮತ್ತು ಉಪಮಾನದ ನಡುವೆಯಿರುವ ಸಾಮ್ಯತೆಯು (**ಗುಣ**) ತಿಳಿಯದಿರುವುದಾದರೆ ಆಗ ಸ್ಪಷ್ಟವಾಗಿ ತಿಳಿಸುವುದು ಅಗತ್ಯವಾಗಿರುತ್ತದೆ.
ಈ ಎಲ್ಲಾ ಕಾರ್ಯತಂತ್ರಗಳು ತೃಪ್ತಿಕರವಾಗದಿದ್ದರೆ **ಗುಣವನ್ನು** ರೂಪಕಗಳನ್ನು ಬಳಸದೆ ಸರಳವಾಗಿ ವಾಕ್ಯದಲ್ಲಿ ತಿಳಿಸಿರಿ.

ಭಾಷಾಂತರದ ಕಾರ್ಯತಂತ್ರಗಳನ್ನು ಅನ್ವಯಿಸಲಾಗಿರುವ ಉದಾಹರಣೆಗಳು

(1) ಮೂಲ ಭಾಷೆಯಲ್ಲಿ ರೂಪಕ ಅಲಂಕಾರವು ಸಾಮಾನ್ಯರೀತಿಯಲ್ಲಿ ಅಭಿವ್ಯಕ್ತವಾದರೆ ಅಥವಾ ಸತ್ಯವೇದದ ಭಾಷೆಯಲ್ಲಿ ವಿನ್ಯಾಸಿತ ಜೋಡಿ ಪರಿಕಲ್ಪನೆಗಳನ್ನು ವ್ಯಕ್ತಪಡಿಸಿದರೆ (ನಿಷ್ಕ್ರಿಯ ರೂಪಕ ಅಲಂಕಾರ), ಆಗ **ಗುಣವನ್ನು** ನಿಮ್ಮ ಭಾಷೆಯಲ್ಲಿ ಸರಳವಾದ ರೀತಿಯಲ್ಲಿ ವ್ಯಕ್ತಪಡಿಸಬಹುದು.

> ಆಗ ಸಭಾಮಂದಿರದ ಅಧಿಕಾರಿಗಳಲ್ಲಿ ಒಬ್ಬನಾದ ಯಾಯೀರನೆಂಬುವವನು ಬಂದು ಆತನನ್ನು ಕಂಡು **ಆತನ ಪಾದಗಳಿಗೆ ಬಿದ್ದು**. (ಮಾರ್ಕ 5:22 ULT)
>
> > ಆಗ ಸಭಾಮಂದಿರದ ಅಧಿಕಾರಿಗಳಲ್ಲಿ ಒಬ್ಬನಾದ ಯಾಯೀರನೆಂಬುವವನು ಬಂದು ಆತನನ್ನು ಕಂಡಾಗ, **ಆತನ ಮುಂದೆ ತಲೆಬಾಗಿ ನಮಸ್ಕರಿಸಿದನು**.

(2) ರೂಪಕ ಅಲಂಕಾರವು ಸಕ್ರಿಯ ರೂಪಕವಾಗಿದ್ದರೆ, **ಸತ್ಯವೇದದಲ್ಲಿರುವ ಅದೇ ಅರ್ಥವನ್ನು ಕೊಡುವ ರೀತಿಯಲ್ಲಿ ಉದ್ದಿಷ್ಟ ಭಾಷೆಯಲ್ಲೂ ರೂಪಕ ಅಲಂಕಾರವನ್ನು ಬಳಸಲಾಗಿದೆ ಎಂದು ನೀವು ಭಾವಿಸುವುದಾದರೆ** ನೀವು ಅದನ್ನು ಯಥಾವತ್ತಾಗಿ ಭಾಷಾಂತರಿಸಬಹುದು. ನೀವು ಈ ರೀತಿ ಮಾಡಿದರೆ ನಿಮ್ಮ ಭಾಷಾ ಸಮುದಾಯದವರು ಇದನ್ನು ಸರಿಯಾಗಿ ಅರ್ಥಮಾಡಿ ಕೊಳ್ಳುತ್ತಾರೆಯೇ ಎಂಬುದನ್ನು ಪರೀಕ್ಷಿಸಿ ತಿಳಿದುಕೊಳ್ಳಿರಿ.

> ನಿಮ್ಮ **ಕಠಿಣ ಹೃದಯಗಳ** ನಿಮಿತ್ತ ಅವನು ನಿಮಗೆ ಇಂತಹ ಆಜ್ಞೆ ಬರೆದನು (ಮಾರ್ಕ 10:5 ULT)
>
> > ನಿಮ್ಮ **ಕಠಿಣ ಹೃದಯಗಳ** ನಿಮಿತ್ತ ಅವನು ನಿಮಗೆ ಇಂತಹ ಆಜ್ಞೆ ಬರೆದನು.

ಇದರಲ್ಲಿ ಯಾವ ಬದಲಾವಣೆಯನ್ನು ಮಾಡಿಲ್ಲ, ಆದರೆ ಉದ್ದಿಷ್ಟ ಭಾಷೆಯ ಶ್ರೋತೃಗಳು ಈ ರೂಪಕವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವರು ಎಂದು ಪರೀಕ್ಷಿಸಿ ತಿಳಿದುಕೊಳ್ಳಬೇಕು.

(3) ಉದ್ದಿಷ್ಟ ಭಾಷೆಯ ಶ್ರೋತೃವು ಅದು ರೂಪಕ ಅಲಂಕಾರವಾಗಿದೆ ಎಂದು ಅರ್ಥಮಾಡಿಕೊಳ್ಳದಿದ್ದರೆ ಆಗ ಅದನ್ನು ಉಪಮಾ ಅಲಂಕಾರವನ್ನಾಗಿ ಬದಲಾಯಿಸಿ. ಕೆಲವು ಭಾಷೆಯಲ್ಲಿ ಇಂತಹ ವಾಕ್ಯಗಳಿಗೆ "ಅಂತೆ" ಅಥವಾ "ಹಾಗೆ" ಎಂಬ ಪದಗಳನ್ನು ಬಳಸಿ ವಾಕ್ಯಮಾಡುತ್ತಾರೆ.

> ಈಗಲಾದರೋ ಯೆಹೋವನೇ, ನೀನು ನಮ್ಮ ತಂದೆಯಾಗಿದ್ದಿ, ನಾವು **ಜೇಡಿಮಣ್ಣು** ನೀನು ನಮ್ಮ* *ಕುಂಬಾರನು; ಮತ್ತು ನಾವು ನಿನ್ನ ಕೈ ಕೆಲಸವೆ (ಯೆಶಾಯ 64:8 ULT)
>
> > ಯೆಹೋವನೇ, ನೀನು ನಮ್ಮ ತಂದೆ; ನಾವು ಜೇಡಿಮಣ್ಣಿನ **ಹಾಗೆ** ಇದ್ದೇವೆ. ನೀನು ಕುಂಬಾರ **ಹಾಗೆ** ಇದ್ದಿ; ನಾವೆಲ್ಲರೂ ನಿನ್ನ ಕೈ ಕೆಲಸವೆ.

(4) ಉದ್ದಿಷ್ಟ ಭಾಷೆಯ ಶ್ರೋತೃಗಳಿಗೆ **ಉಪಮಾನದ** ಬಗ್ಗೆ ತಿಳಿಯದಿದ್ದರೆ ಆ ಗುಣವನ್ನು ಹೇಗೆ ಭಾಷಾಂತರಿಸಬೇಕು ಎಂಬ ವಿಷಯಗಳನ್ನು ತಿಳಿಯಲು ಇದನ್ನು ನೋಡಿರಿ ಗೊತ್ತಿಲ್ಲದುದರ ಭಾಷಾಂತರ

> ಸೌಲನೇ, ಸೌಲನೇ, ನನ್ನನ್ನು ಏಕೆ ಹಿಂಸಿಸುತ್ತೀ? **ಮುಳ್ಳುಗೋಲನ್ನು ಒದೆಯುವುದು** ನಿನಗೆ ಕಷ್ಟವಾಗುತ್ತದೆ. (ಅ.ಕೃ. 26:14 ULT)
>
> > ಸೌಲನೇ, ಸೌಲನೇ, ನನ್ನನ್ನು ಏಕೆ ಹಿಂಸೆಪಡಿಸುತ್ತೀ? **ಮೊನಚಾದ ಕೋಲನ್ನು ಒದೆಯುವುದು** ನಿನಗೆ ತುಂಬಾ ಕಷ್ಟವಾಗುತ್ತದೆ.

(5) ಉದ್ದಿಷ್ಟ ಭಾಷೆಯ ಶ್ರೋತೃಗಳು ಆ ಅರ್ಥಕ್ಕಾಗಿ ಆ **ಉಪಮಾನವನ್ನು** ಬಳಸದಿರುವುದಾದರೆ ನಿಮ್ಮ ಸಂಸ್ಕೃತಿಯಲ್ಲಿ ಬಳಸುವ ಉಪಮಾನವನ್ನು ಬಳಸಿಕೊಳ್ಳಿರಿ. ಆದರೆ ಇಂತಹ ಉಪಮಾನವು ಸತ್ಯವೇದದ ಕಾಲದಲ್ಲಿ ಬಳಕೆಯಾದ ವಿಷಯಗಳಾಗಿದ್ದವು ಎಂಬುದನ್ನು ಖಚಿತಪಡಿಸಿಕೊಳ್ಳಿರಿ.

> ಈಗಲಾದರೋ ಯೆಹೋವನೇ , ನೀನು ನಮ್ಮ ತಂದೆಯಾಗಿದ್ದಿ ನಾವು **ಜೇಡಿಮಣ್ಣು** ನೀನು ನಮ್ಮ **ಕುಂಬಾರನು**; ಮತ್ತು ನಾವು ನಿನ್ನ ಕೈ ಕೆಲಸವೆ (ಯೆಶಾಯ 64:8 ULT)
>
> > "ಯೆಹೋವನೇ, ನೀನೇ ನಮ್ಮ ತಂದೆ, ನಾವು **ಮರ**. ನೀನೇ ನಮ್ಮ **ಕೆತ್ತನೆಗಾರ** ನಾವು ನಿನ್ನ ಕೈಕೆಲಸ."
> > "ಯೆಹೋವನೇ, ನೀನೇ ನಮ್ಮ ತಂದೆ, ನಾವು **ದಾರದ ಎಳೆ**. ನೀನೇ ನಮ್ಮ **ನೇಕಾರ**; ನಾವೆಲ್ಲರೂ ನಿನ್ನ ಕೈಕೆಲಸ.

(6) ಉದ್ದಿಷ್ಟ ಭಾಷೆಯ ಶ್ರೋತೃಗಳಿಗೆ **ಉಪಮೇಯದ** ಬಗೆ ತಿಳಿಯದೆ ಇದ್ದರೆ ನೀವು ಉಪಮೇಯವನ್ನು ಸ್ಪಷ್ಟವಾಗಿ ತಿಳಿಸಿರಿ. (ಆದರೆ ಮೂಲ ಭಾಷೆಯ ಶ್ರೋತೃಗಳಿಗೆ ಉಪಮೇಯ ಬಗ್ಗೆ ತಿಳಿಯದೆ ಇದ್ದರೆ ಹೀಗೆ ಮಾಡಬೇಡಿ)

> ಯೆಹೋವನು ಜೀವಸ್ವರೂಪನು; **ನನ್ನ ಬಂಡೆಯೇ** ನಿನಗೆ ಸ್ತೋತ್ರವಾಗಲಿ. ನನ್ನನ್ನು ರಕ್ಷಿಸುವ ದೇವರಿಗೆ ಕೊಂಡಾಟವಾಗಲಿ. (ಕೀರ್ತನೆ. 18:46 ULT)
>
> > ಯೆಹೋವನು ಜೀವಸ್ವರೂಪನು; **ಆತನು ನನ್ನ ಬಂಡೆಯು**. ಆತನಿಗೆ ಸ್ತೋತ್ರವಾಗಲಿ. ನನ್ನನ್ನು ರಕ್ಷಿಸುವ ದೇವರಿಗೆ ಕೊಂಡಾಟವಾಗಲಿ.

(7) ಉದ್ದಿಷ್ಟ ಭಾಷೆಯ ಶ್ರೋತೃಗಳಿಗೆ ಉಪಮೇಯ ಮತ್ತು ಉಪಮಾನದ ನಡುವೆಯಿರುವ ಸಾಮ್ಯತೆಯು ತಿಳಿಯದಿರುವುದಾದರೆ ಆಗ ಸ್ಪಷ್ಟವಾಗಿ ತಿಳಿಸುವುದು ಅಗತ್ಯವಾಗಿರುತ್ತದೆ.

> ಯೆಹೋವನು ಜೀವಸ್ವರೂಪನು; **ನನ್ನ ಬಂಡೆಯೇ** ನಿನಗೆ ಸ್ತೋತ್ರವಾಗಲಿ. ನನ್ನನ್ನು ರಕ್ಷಿಸುವ ದೇವರಿಗೆ ಕೊಂಡಾಟವಾಗಲಿ. (ಕೀರ್ತನೆ. 18:46 ULT)
>
> > ಯೆಹೋವನು ಜೀವಸ್ವರೂಪನು; ಆತನು **ನಾನು ನನ್ನ ಶತ್ರುಗಳಿಂದ ಮರೆಯಾಗಿರುವಂತೆ ಅಡಗಿಕೊಳ್ಳುವ** ಬಂಡೆಯಾಗಿರುವುದ್ದರಿಂದ ಆತನು ಸ್ತುತಿಸಲ್ಪಡಲಿ. ನನ್ನನ್ನು ರಕ್ಷಿಸುವ ದೇವರಿಗೆ, ಕೊಂಡಾಟವಾಗಲಿ.

> ಸೌಲನೇ, ಸೌಲನೇ, ನನ್ನನ್ನು ಏಕೆ ಹಿಂಸಿಸುತ್ತೀ? **ಮುಳ್ಳುಗೋಲನ್ನು ಒದೆಯುವುದು** ನಿನಗೆ ಕಷ್ಟವಾಗುತ್ತದೆ. (ಅ.ಕೃ. 26:14 ULT)
>
> > ಸೌಲನೇ , ಸೌಲನೇ , ನನ್ನನ್ನು ಏಕೆ ಹಿಂಸಿಸುತ್ತೀ? ನೀನು **ಎತ್ತು ಹೇಗೆ ಮಾಲೀಕನ ಮೊನಚಾದ ಕೋಲಿಗೆ ಒದು ಗಾಯಮಾಡಿಕೊಳ್ಳುತ್ತದೋ ಹಾಗೆ ನೀನು ನನ್ನ ವಿರುದ್ಧ ಹೋರಾಡಿ ಗಾಯಗೊಳ್ಳುವಿ**.

(8) ಈ ಎಲ್ಲಾ ಕಾರ್ಯತಂತ್ರಗಳು ತೃಪ್ತಿಕರವಾಗದಿದ್ದರೆ **ಗುಣವನ್ನು** ರೂಪಕಗಳನ್ನು ಬಳಸದೆ ಸರಳವಾಗಿ ವಾಕ್ಯದಲ್ಲಿ ತಿಳಿಸಿರಿ.

> ನಾನು ನಿಮ್ಮನ್ನು **ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ** ಮಾಡುವೆನು (ಮಾರ್ಕ 1:17 ULT)
>
> > ನಾನು ನಿಮ್ಮನ್ನು **ಜನರನ್ನು ಒಂದುಗೂಡಿಸುವ ಜನರನ್ನಾಗಿ** ಮಾಡುತ್ತೇನೆ.
> > ಈಗ ನೀವು ಮೀನುಗಳನ್ನು ಹಿಡಿದು ಒಟ್ಟುಗೂಡಿಸುತ್ತಿದ್ದಿರಿ. ನಾನು ನಿಮ್ಮನ್ನು **ಜನರನ್ನು ಒಟ್ಟುಗೂಡಿಸುವವರನ್ನಾಗಿ** ಮಾಡುವೆನು.

ನಿರ್ದಿಷ್ಟವಾದ ರೂಪಕ ಅಲಂಕಾರಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಸತ್ಯವೇದದ ಅಲಂಕಾರದ – ಸಾಮಾನ್ಯ ರಚನೆಗಳು ಇದನ್ನು ನೋಡಿರಿ.

"

ಹಿಂತಿರುಗಿ ಹೋಗಿ: ಮೃಗ; ವಧು, ವಧುವಿನ; ಕತ್ತಲು; ಪ್ರಳಯ, ಪ್ರಳಯಗಳು, ಪ್ರಳಯ ಬಂದಿದೆ, ಪ್ರಳಯವಾಗುತ್ತಿದೆ, ಪ್ರಳಯದ ನಿರು; ಜೇನು, ಜೇನು ಗೂಡು; ಕೊಯ್ಯು, ಕೊಯ್ಯುತ್ತದೆ, ಕೊಯ್ದಿದೆ, ಕೊಯ್ಯುವವನು, ಕೊಯ್ಯುವವರು, ಕೊಯ್ಯುತ್ತಿರುವುದು; ಕುರುಬ, ಕುರುಬರು, ಕಾಯುಕೊಂಡಿದ್ದೇನೆ, ಕಾಯುತ್ತಿರುವುದು; ದುರ್ಗ, ದುರ್ಗಗಳು, ಕೋಟೆ ನಿರ್ಮಾಣಗಳು, ಬಲವಾದ, ಕೋಟೆ, ಕೋಟೆಗಳು; ಖಡ್ಗ, ಖಡ್ಗಗಳು, ಖಡ್ಗಗಳನ್ನು ಹಿಡಿಯುವವರು; ಬಳ್ಳಿ, ಬಳ್ಳಿಗಳು; ದ್ರಾಕ್ಷಿತೋಟ, ದ್ರಾಕ್ಷಿತೋಟಗಳು; ಕಾವಲು ಗೋಪುರ, ಕಾವಲು ಗೋಪುರಗಳು, ಗೋಪುರ; ದ್ರಾಕ್ಷಾರಸ ಗಾಣ

ಲಕ್ಷಣಾಲಂಕಾರ

ವಿವರಣೆ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ಲಕ್ಷಣಾಲಂಕಾರ ಎಂದರೇನು?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಅಲಂಕಾರಗಳು. (UTA PDF)

ಲಕ್ಷಣಾಲಂಕಾರ ಎಂಬುದು ಅಲಂಕಾರವಾಗಿದೆ, ಇದರಲ್ಲಿ ಒಂದು ವಸ್ತು ಅಥವಾ ವಿಷಯವನ್ನು ಅದರ ಹೆಸರಿನಿಂದ ಗುರುತಿಸಿ ಹೇಳದೆ ಅದಕ್ಕೆ ಸಂಬಂಧಿಸಿದ, ಹತ್ತಿರವಾದ ಪದದಿಂದ ಗುರುತಿಸಿ ಹೇಳುವುದು. ಅದಕ್ಕೆ ಸಂಬಂಧಿಸಿದ ಯಾವುದಾದರು ಒಂದು ಪದದ ಬದಲಾಗಿ ಉಪಯೋಗಿಸುವ ಪದ ಅಥವಾ ನುಡಿಗುಚ್ಛವೆ **ಲಕ್ಷಣಾಲಂಕಾರ**.

> ಮತ್ತು ಆತನ ಮಗನಾದ ಯೇಸು ಕ್ರಿಸ್ತನ **ರಕ್ತವು** ಸಕಲ ಪಾಪದಿಂದ ನಮ್ಮನ್ನು ಶುದ್ಧಿಮಾಡುತ್ತದೆ. (1 ಯೊಹಾನ 1:7 ULT)

ಇಲ್ಲಿ ರಕ್ತ ಎಂಬ ಪದವು ಯೇಸುವಿನ ಮರಣವನ್ನು ಪ್ರತಿನಿಧಿಸುತ್ತದೆ.

> ಊಟವಾದ ಮೇಲೆ ಆತನು ಅದೇ ರೀತಿಯಾಗಿ **ಪಾತ್ರೆಯನ್ನು** ತೆಗೆದುಕೊಂಡು **ಈ ಪಾತ್ರೆಯು** ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯಾಗಿದೆ ಎಂದು ಹೇಳಿದನು. (ಲೂಕ 22:20 ULT)

ಪಾತ್ರೆ ಅದರಲ್ಲಿರುವ ದ್ರಾಕ್ಷಾರಸವನ್ನು ಪ್ರತಿನಿಧಿಸುತ್ತದೆ.

ಲಕ್ಷಣಾಲಂಕಾರವನ್ನು ಕೆಳಗೆ ಕೊಟ್ಟಿರುವ ರೀತಿಯಲ್ಲಿ ಉಪಯೋಗಿಸಬಹುದು.

- ಒಂದು ವಿಷಯವನ್ನು ಸಂಕ್ಷೇಪವಾದ ರೀತಿಯಲ್ಲಿ ಸೂಚಿಸಲು
- ಭಾವವಾಚಕ ಕಲ್ಪನೆಯನ್ನು ಹೆಚ್ಚು ಅರ್ಥಪೂರ್ಣವಾಗಿ ಸೂಚಿಸಲು ಅದಕ್ಕೆ ಹತ್ತಿರವಿರುವ ಭೌತಿಕ ವಸ್ತುವಿನ ಹೆಸರನ್ನು ಬಳಸುವುದು.

ಕಾರಣವೇನಂದರೆ ಇದು ಭಾಷಾಂತರದ ಸಮಸ್ಯೆಯಾಗಿದೆ

ಸತ್ಯವೇದದಲ್ಲಿ ಲಕ್ಷಣಾಲಂಕಾರವನ್ನು ಪದೇಪದೇ ಬಳಸಲಾಗಿದೆ. ಕೆಲವು ಭಾಷೆಯ ಜನರು ಲಕ್ಷಣಾಲಂಕಾರವನ್ನು ಬಳಸುವುದಿಲ್ಲ ಮತ್ತು ಅವರು ಸತ್ಯವೇದವನ್ನು ಓದುವಾಗ ಅದರಲ್ಲಿರುವ ಲಕ್ಷಣಾಲಂಕಾರವನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸಾಧ್ಯವಾಗುವುದಿಲ್ಲ. ಅವರು ಲಕ್ಷಣಾಲಂಕಾರವನ್ನು ಅರ್ಥಮಾಡಿಕೊಳ್ಳದಿದ್ದರೆ ಸತ್ಯವೇದದ ವಾಕ್ಯಭಾಗವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಅಸಮರ್ಥರಾಗಿ, ತಪ್ಪಾಗಿ ಅರ್ಥಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ. ಲಕ್ಷಣಾಲಂಕಾರವನ್ನು ಉಪಯೋಗಿಸಿದಾಗಲ್ಲೆಲ್ಲಾ ಜನರು ಅದು ಏನನ್ನ ಪ್ರತಿನಿಧಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗಿರಬೇಕು.

ಸತ್ಯವೇದದಲ್ಲಿನ ಉದಾಹರಣೆಗಳು

> ಕರ್ತನಾದ ದೇವರು ಆತನ ಮೂಲ ಪಿತನಾದ ದಾವೀದನ **ಸಿಂಹಾಸನವನ್ನು** ಆತನಿಗೆ ಕೊಡುವನು. (ಲೂಕ 1:32 ULT)

ಸಿಂಹಾಸನ ಎಂಬುದು ರಾಜನ ಆಧಿಕಾರವನ್ನು ಪ್ರತಿನಿಧಿಸುತ್ತದೆ. "ಸಿಂಹಾಸನ" ಎಂಬುದು "ರಾಜನ ಆಧಿಕಾರ," "ರಾಜತ್ವ" ಅಥವಾ "ಆಳ್ವಿಕೆ" ಎಂಬ ಪದಗಳಿಗಾಗಿ ಬಳಸಿದ ಲಕ್ಷಣಾಲಂಕಾರವಾಗಿದೆ. ಇದರ ಅರ್ಥ ದಾವೀದನು ರಾಜನಾಗಿದ್ದಂತೆ ಈತನನ್ನು ರಾಜನನ್ನಾಗಿ ಮಾಡುತ್ತಾನೆ ಎಂದಾಗಿದೆ.

> ತಕ್ಷಣವೇ ಅವನ **ಬಾಯಿ** ತೆರೆಯಿತು (ಲೂಕ 1:64 ULT)

ಇಲ್ಲಿ “ಬಾಯಿ“ ಎಂಬುದು ಮಾತನಾಡುವ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಇದರ ಅರ್ಥ ಮಾತನಾಡಲು ಪುನಃ ಅವನಿಗೆ ಸಾಧ್ಯವಾಯಿತು.

> .. ಮುಂದೆ ಕಾಣಬರುವ **ಕೋಪದಿಂದ** ತಪ್ಪಿಸಿಕೊಳ್ಳುವುದಕ್ಕೆ ನಿಮಗೆ ಉಪದೇಶ ಮಾಡಿದವರು ಯಾರು? (ಲೂಕ 3:7 ULT)

ಇಲ್ಲಿ "ಕೋಪ" ಅಥವಾ "ಸಿಟ್ಟು" ಎಂಬ ಪದವು "ಶಿಕ್ಷೆ" ಎಂಬ ಪದಕ್ಕೆ ಲಕ್ಷಣಾಲಂಕಾರವಾಗಿದೆ. ದೇವರು ಜನರ ಬಗ್ಗೆ ತುಂಬಾ ಕೋಪಗೊಂಡಿದ್ದನು ಅದರ ಪರಿಣಾಮವಾಗಿ ಆತನು ಅವರನ್ನು ಶಿಕ್ಷಿಸುವನು.

ಭಾಷಾಂತರದ ಕಾರ್ಯತಂತ್ರಗಳು

ಜನರು ಲಕ್ಷಣಾಲಂಕಾರವನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವುದಾದರೆ ಅದನ್ನೇ ಬಳಸಬಹುದು. ಇಲ್ಲದಿದ್ದರೆ, ಇಲ್ಲಿ ಕೆಲವು ಆಯ್ಕೆಗಳಿವೆ.

ಲಕ್ಷಣಾಲಂಕಾರವನ್ನು ಬಳಸುವಾಗ ಅದು ಯಾವ ವಸ್ತುವನ್ನು ಪ್ರತಿನಿಧಿಸುತ್ತಿದೆಯೋ ಅದರ ಹೆಸರಿನೊಂದಿಗೆ ಬಳಸಬಹುದು.
ಲಕ್ಷಣಾಲಂಕಾರವನ್ನು ಪ್ರತಿನಿಧಿಸುವ ವಸ್ತುವಿನ ಹೆಸರನ್ನು ಮಾತ್ರ ಬಳಸಬಹುದು.

ಭಾಷಾಂತರದ ಕಾರ್ಯತಂತ್ರಗಳನ್ನು ಅನ್ವಯಿಸಲಾಗಿರುವ ಉದಾಹರಣೆಗಳು

ಲಕ್ಷಣಾಲಂಕಾರವನ್ನು ಬಳಸುವಾಗ ಅದು ಯಾವ ವಸ್ತುವನ್ನು ಪ್ರತಿನಿಧಿಸುತ್ತಿದೆಯೋ ಅದರ ಹೆಸರಿನೊಂದಿಗೆ ಬಳಸಬಹುದು.

> ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು **ಈ ಪಾತ್ರೆಯು** ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯಾಗಿದೆ ಎಂದು ಹೇಳಿದನು. (ಲೂಕ 22:20 ULT)
>
> > "ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು **ಈ ಪಾತ್ರೆಯಲ್ಲಿರುವ ದ್ರಾಕ್ಷಾರಸವು** ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯಾಗಿದೆ ಎಂದು ಹೇಳಿದನು."

(2) ಲಕ್ಷಣಾಲಂಕಾರವನ್ನು ಪ್ರತಿನಿಧಿಸುವ ವಸ್ತುವಿನ ಹೆಸರನ್ನು ಮಾತ್ರ ಬಳಸಬಹುದು.

> ಕರ್ತನಾದ ದೇವರು ಆತನ ಮೂಲ ಪಿತನಾದ ದಾವೀದನ **ಸಿಂಹಾಸನವನ್ನು** ಆತನಿಗೆ ಕೊಡುವನು. (ಲೂಕ 1:32 ULT)
>
> > "ಕರ್ತನಾದ ದೇವರು ಆತನಿಗೆ ಅವನ ತಂದೆಯಾದ ದಾವೀದನ **ರಾಜತ್ವ ಅಧಿಕಾರವನ್ನು** ಕೊಡುವನು." ಅಥವಾ: "ಕರ್ತನಾದ ದೇವರು ಆತನ ಪೂರ್ವಿಕನಾದ ದಾವೀದನಂತೆ ಆತನನ್ನು **ರಾಜನನ್ನಾಗಿ** ಮಾಡುವನು.
> >
> > ಮುಂದೆ ಕಾಣಬರುವ **ಕೋಪದಿಂದ** ತಪ್ಪಿಸಿಕೊಳ್ಳುವುದಕ್ಕೆ ನಿಮಗೆ ಎಚ್ಚರಿಕೆ ಕೊಟ್ಟವರು ಯಾರು? (ಲೂಕ 3:7 ULT)
> >
> > • ಬರಲಿರುವ ದೇವರ **ಶಿಕ್ಷೆಯಿಂದ** ತಪ್ಪಿಸಿಕೊಳ್ಳಲು ಎಚ್ಚರಿಕೆ ಕೊಟ್ಟವರು ಯಾರು?"

ಕೆಲವು ಸಾಮಾನ್ಯ ಲಕ್ಷಣಾಲಂಕಾರಗಳ ಬಗ್ಗೆ ಕಲಿಯಲು, ಇದನ್ನು ನೋಡಿರಿ Biblical Imagery-Common Metonymies.

"

ಹಿಂತಿರುಗಿ ಹೋಗಿ: ದೇವರ ರಾಜ್ಯ, ಪರಲೋಕ ರಾಜ್ಯ; ಹೆಸರು; ಚೀಯೋನ್, ಚೀಯೋನ್ ಪರ್ವತ; ಹಸ್ತ, ಹಸ್ತಗಳು, ಕೈಗೆ ಕೊಡಲ್ಪಟ್ಟಿದೆ, ಹಸ್ತಾಂತರ, ಹಸ್ತದಿಂದ, ಮೇಲೆ ಹಸ್ತವನ್ನಿಡು, ಮೇಲೆ ತನ್ನ ಹಸ್ತವನ್ನಿಡುವುದು, ಬಲಗೈ, ನೀತಿ ಹಸ್ತಗಳು, ಹಸ್ತದಿಂದ; ಆನಂದ, ಆನಂದಭರಿತ, ಆನಂದದಾಯಕತೆ, ಆನಂದಿಸು; ಸಿಂಹಾಸನ, ಸಿಂಹಾಸನಗಳು, ಸಿಂಹಾಸನದಲ್ಲಿರುವುದು; ನಾಲಿಗೆ, ನಾಲಿಗೆಗಳು

ಸಾದೃಶ್ಯತೆ.

ವಿವರಣೆಗಳು

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ಸಾದೃಶ್ಯತೆ ಎಂದರೇನು ?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಅಲಂಕಾರಗಳು. (UTA PDF)

ಸಾದೃಶ್ಯತೆ ಎರಡು ಪದಗುಚ್ಛಗಳು ಅಥವಾ ವಾಕ್ಯಭಾಗಗಳು ರಚನೆಯಲ್ಲಿ ಒಂದೇ ಆಗಿರುತ್ತವೆ ಹಾಗೂ ಒಂದೇ ಉದ್ದೇಶಕ್ಕಾಗಿ ಬಳಸಲಾಗುತ್ತದೆ. ಇಲ್ಲಿ ವಿವಿಧ ರೀತಿಯ ಸಾದೃಶ್ಯಗಳಿವೆ. ಅವುಗಳಲ್ಲಿ ಕೆಲವನ್ನು ಕೆಳಗೆ ನೀಡಿದೆ.

ಎರಡನೇ ವಾಕ್ಯಭಾಗವು ಅಥವಾ ಪದಗುಚ್ಛಗಳು ಮೊದಲ ವಾಕ್ಯಭಾಗ ಅಥವಾ ಪದಗುಚ್ಛಗಳು ಇದೇ ಆಗಿರುತ್ತದೆ. ಇದನ್ನು ಪರ್ಯಾಯ ಪದದ ಸಾದೃಶ್ಯತೆ ಅಥವಾ ಏಕಾರ್ಥ ಸಾದೃಶ್ಯತೆ ಎಂದು ಕರೆಯುತ್ತಾರೆ.
ಎರಡನೇ ವಾಕ್ಯಭಾಗ ಮೊದಲ ವಾಕ್ಯಭಾಗದ ಅರ್ಥವನ್ನು ವಿವರಿಸುತ್ತದೆ ಮತ್ತು ಬಲಪಡಿಸುತ್ತದೆ.
ಎರಡನೇ ವಾಕ್ಯಭಾಗ ಮೊದಲ ಭಾಗದಲ್ಲಿ ಹೇಳಿದ್ದನ್ನು ಸಂಪೂರ್ಣಗೊಳಿಸುತ್ತದೆ.
ಎರಡನೇ ವಾಕ್ಯ ಮೊದಲ ಪದಕ್ಕೆ ವಿಭಿನ್ನವಾದುದುದನ್ನು ಕೆಲವೊಮ್ಮೆ ಹೇಳಿದರೂ ಒಂದೇ ಉದ್ದೇಶವನ್ನು ಸೇರಿಸಿ ಹೇಳುತ್ತದೆ.

ಇಂತಹ ಸಾದೃಶ್ಯ ವಾಕ್ಯಗಳು ಸಾಮಾನ್ಯವಾಗಿ ಹಳೆಯ ಒಡಂಬಡಿಕೆಯ ಪದ್ಯಭಾಗಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ದಾವೀದನ ಕೀರ್ತನೆಗಳು ಮತ್ತು ಜ್ಞಾನೋಕ್ತಿಗಳಲ್ಲಿ. ಗ್ರೀಕ್ ಭಾಷೆಯ ಹೊಸ ಒಡಂಬಡಿಕೆಯ ಭಾಗದಲ್ಲೂ ಕಂಡುಬರುತ್ತದೆ. ಅಂದರೆ ನಾಲ್ಕು ಸುವಾರ್ತೆಗಳಲ್ಲಿ ಹಾಗೂ ಅಪೋಸ್ತಲರ ಪತ್ರಗಳಲ್ಲಿ ಕಂಡುಬರುತ್ತದೆ. ಪರ್ಯಾಯ ಪದದ ಸಾದೃಶ್ಯತೆ ಅಥವಾ ಏಕಾರ್ಥ ಪದದ ಸಾದೃಶ್ಯತೆ (ಎರಡು ಪದಗಳು ಒಂದೇ ಅರ್ಥಕೊಡುವಂತದ್ದು) ಪದಗಳು ಮೂಲಭಾಷೆಯ ಪದ್ಯಭಾಗದಲ್ಲಿ ಅನೇಕ ಪ್ರಭಾವವನ್ನು ಬೀರುತ್ತದೆ.

- ಇದು ಕೆಲವು ವಿಷಯ ತುಂಬಾ ಮುಖ್ಯವಾದುದು ಎಂದು ತೋರಿಸಲು ಒಂದುಸಲಕ್ಕಿಂತ ಹೆಚ್ಚುಸಲ ಹೆಚ್ಚು ರೀತಿಯಲ್ಲಿ ಬಳಸಲಾಗುತ್ತದೆ.
- ಇದರಿಂದ ಶ್ರೋತೃಗಳಿಗೆ, ಓದುಗರಿಗೆ ವಿವಿಧರೀತಿಯಲ್ಲಿ ಹೇಳುವ ವಿಚಾರಗಳು ಹೆಚ್ಚು ಪರಿಣಾಮಕಾರಿ ಎಂದು ಅರ್ಥವಾಗುತ್ತದೆ.
- ಇಂತಹ ಬಳಕೆಯಿಂದ ಸಾಮಾನ್ಯವಾದ ಮಾತುಗಳಿಗಿಂತ ಪದಗಳಿಗಿಂತ ಭಾಷೆಯ ಸೌಂದರ್ಯವನ್ನು ಕಾವ್ಯ ಸೌಂದರ್ಯವನ್ನು ಹೆಚ್ಚಿಸುತ್ತದೆ.

ಕಾರಣ ಇದೊಂದು ಭಾಷಾಂತರ ವಿಷಯ.

ಕೆಲವು ಭಾಷೆಯಲ್ಲಿ ಪರ್ಯಾಯ ಪದದ ಸಾದೃಶ್ಯತೆ /ಏಕಾರ್ಥ ಸಾದೃಶ್ಯತೆ ಯನ್ನು ಬಳಸುವುದಿಲ್ಲ. ಏಕೆಂದರೆ ಎರಡೆರಡುಸಲ ಬಳಸಿದ ಪದಗಳು ವಾಕ್ಯಗಳು ಅವರಿಗೆ ಅಸಹಜವಾಗಿ ಕಂಡುಬರಬಹುದು. ಇಲ್ಲವೇ ಎರಡು ಪದಗಳು ಅಥವಾ ವಾಕ್ಯಗಳು ಅರ್ಥದಲ್ಲಿ ವಿಭಿನ್ನವಾಗಿರಬಹದು.ಎಂದು ಭಾವಿಸಬಹುದು. ಅವರಿಗೆ ಭಾಷೆಯ ಸೌಂದರ್ಯವನ್ನು ತಿಳಿದುಕೊಳ್ಳುವ ಬದಲು ಗೊಂದಲ ಉಂಟಾಗಬಹುದು.

ಗಮನಿಸಿ : ನಾವು ಈ ಪರ್ಯಾಯಸಾದೃಶ್ಯ ಪದಗಳನ್ನು /ಏಕಾರ್ಥ ಸಾದೃಶ್ಯ ಪದಗಳನ್ನು ದೀರ್ಘವಾದ ಪದಗುಚ್ಛ ಅಥವಾ ವಾಕ್ಯಭಾಗಗಳಲ್ಲಿ ಒಂದೇ ಅರ್ಥವಿರುವಂತೆ ಉಪಯೋಗಿಸುತ್ತೇವೆ. ನಾವು ಕೆಲವೊಮ್ಮೆ ದ್ವಿರುಕ್ತಿಗಳನ್ನು ಪದಗಳಿಗಾಗಿ ಮತ್ತು ಚಿಕ್ಕಪದಗಳನ್ನು ಮೂಲಭೂತವಾಗಿ ಒಂದೇ ಅರ್ಥಕೊಡುವಂತೆ ಒಟ್ಟಾಗಿ ಬಳಸುತ್ತೇವೆ.

ಸತ್ಯವೇದದಿಂದ ಉದಾಹರಣೆಗಳು.

ಎರಡನೇ ವಾಕ್ಯಭಾಗ ಅಥವಾ ಪದಗುಚ್ಛಗಳು ಮೊದಲ ವಾಕ್ಯಭಾಗದಂತೆ ಒಂದೇ ಅರ್ಥವನ್ನು ಕೊಡುತ್ತದೆ.

> ನಿನ್ನ ವಾಕ್ಯ ನನ್ನ ಕಾಲಿಗೆ ದೀಪವು.
> ನನ್ನ ಮಾರ್ಗಕ್ಕೆ ಬೆಳಕು (Psalm 119:105 ULB)

ಎರಡೂ ವಾಕ್ಯಗಳಲ್ಲಿರುವ ರೂಪಕ ಪದವು ದೇವರ ವಾಕ್ಯವು ಜನರಿಗೆ ಹೇಗೆ ಜೀವನ ನಡೆಸಬೇಕೆಂದು ಬೋಧಿಸುತ್ತವೆ.

> ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿರಿ.
> ಎಲ್ಲವನ್ನೂ ಅವನಿಗೆ ಅಧೀನ ಮಾಡಿ ಅವನ ಪಾದದಡಿಗೆ ಸೇರಿಸಿರಿ (ದಾ.ಕೀ. 8:6 ULB)

ಎರಡೂ ವಾಕ್ಯಗಳು ದೇವರು ಮನುಷ್ಯನಿಗೆ ಎಲ್ಲದರ ಮೇಲಿನ ಒಡೆತನವನ್ನು ನೀಡಿದ್ದಾನೆ ಎಂದು ತಿಳಿಸುತ್ತವೆ.

ಎರಡನೇ ವಾಕ್ಯ ಮೊದಲನೇ ವಾಕ್ಯದ ಅರ್ಥವನ್ನು ಹೆಚ್ಚು ಸ್ಪಷ್ಟವಾಗಿ ಬಲಪಡಿಸುತ್ತದೆ.

> ಯೆಹೋವನ ದೃಷ್ಟಿಯು ಎಲ್ಲಾ ಕಡೆಯೂ ವ್ಯಾಪಿಸುವುದು.
> ಆತನು ಕೆಟ್ಟವರನ್ನು, ಒಳ್ಳೆಯವರನ್ನು ನೋಡುತ್ತಲೇ ಇರುವನು. (ಜ್ಞಾನೋಕ್ತಿಗಳು 15:3 ULB)

ಎರಡನೇ ವಾಕ್ಯ ಯೆಹೋವನು ವಿಶೇಷವಾಗಿ ಏನನ್ನು ನೋಡುತ್ತಾನೆ / ಗುರುತಿಸುತ್ತಾನೆ ಎಂಬುದನ್ನು ಸೂಚಿಸುತ್ತದೆ.

ಎರಡನೇ ವಾಕ್ಯ ಮೊದಲ ವಾಕ್ಯದಲ್ಲಿ ಹೇಳಿರುವುದನ್ನು ಸಂಪೂರ್ಣಗೊಳಿಸುತ್ತದೆ.

> ನಾನು ಯೆಹೋವನಿಗೆ ಮೊರೆ ಇಡುವಾಗ.
> ಆತನು ತನ್ನ ಪರಿಶುದ್ಧ ಪರ್ವತದಿಂದ ಸದುತ್ತರವನ್ನು ಅನುಗ್ರಹಿಸುತ್ತಾನೆ. (ದಾ.ಕೀ. 3:4 ULB)

ಮೊದಲ ವಾಕ್ಯದಲ್ಲಿ ಮನುಷ್ಯನು ಮಾಡಿದ ಕ್ರಿಯೆಗೆ ತಕ್ಕಂತೆ ಯೆಹೋವನು ಹೇಗೆ ಪ್ರತಿಕ್ರಿಯೆ ನೀಡುತ್ತಾನೆ ಎಂಬುದನ್ನು ಎರಡನೇ ವಾಕ್ಯ ಸೂಚಿಸುತ್ತದೆ.

ಎರಡನೇ ವಾಕ್ಯ ಮೊದಲ ವಾಕ್ಯದೊಂದಿಗೆ ಭಿನ್ನವಾಗಿ ತೋರಿದರೂ ಒಂದೇ ಉದ್ದೇಶವಿರುವುದನ್ನು ತೋರಿಸುತ್ತದೆ.

> ಯೆಹೋವನು ನೀತಿವಂತ ಮಾರ್ಗವನ್ನು ಲಕ್ಷಿಸುವನು.
> ದುಷ್ಟರ ಮಾರ್ಗವು ನಾಶವಾಗುವುದು. (ದಾ.ಕೀ 1:6 ULB)

ಎರಡು ಭಿನ್ನ ವಾಕ್ಯಗಳಿದ್ದರೂ ಒಂದೇ ಉದ್ದೇಶ ಹೊಂದಿದೆ.ಅಂದರೆ ನೀತಿವಂತರಿಗೆ ಆಗುವ ಮೇಲು, ದುಷ್ಟರಿಗೆ ಆಗುವ ದುಃಸ್ಥಿತಿ ಬಗ್ಗೆ ತಿಳಿಸುತ್ತದೆ. (ನೀತಿವಂತರಿಗೂ, ದುಷ್ಟರಿಗೂ ಆಗುವ ಪರಿಣಾಮದ ಬಗ್ಗೆ).

> ಮೃದುವಾದ ಪ್ರತ್ಯುತ್ತರವು ಸಿಟ್ಟನ್ನು ತಣಿಸುತ್ತದೆ.
> ಬಿರುನುಡಿಗಳು ಸಿಟ್ಟನ್ನು ಕೆರಳಿಸುತ್ತದೆ. (ಜ್ಞಾನೋಕ್ತಿಗಳು 15:1 ULB)

ಈ ವಾಕ್ಯಗಳು ಮೃದುವಾಗಿ ಮಾತನಾಡುವುದರಿಂದ ಮತ್ತು ಬಿರುಸಾಗಿ ನುಡಿಯುವ ಮಾತುಗಳಿಂದ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ತಿಳಿಸುತ್ತದೆ.

ಭಾಷಾಂತರ ತಂತ್ರಗಳು.

ಎಲ್ಲಾ ರೀತಿಯ ಏಕಾರ್ಥ ಸಾದೃಶ್ಯತೆ ಇರುವ ವಾಕ್ಯಗಳನ್ನು ಮತ್ತು ಪದಗಳನ್ನು ಭಾಷಾಂತರ ಮಾಡುವುದು ಒಳ್ಳೆಯದು. ಪರ್ಯಾಯ ಪದದ ಸಾದೃಶ್ಯತೆ/ ಏಕಾರ್ಥ ಸಾದೃಶ್ಯತೆ ವಾಕ್ಯಭಾಗದಲ್ಲಿ ಅಥವಾ ಪದಗುಚ್ಛಗಳಲ್ಲಿ ಇರುವ ಪದಗಳನ್ನು ನಿಮ್ಮ ಭಾಷೆಯಲ್ಲಿ ಭಾಷಾಂತರಿಸುವಾಗ ನಿಮ್ಮ ಜನರು ಸರಿಯಾಗಿ ಅರ್ಥಮಾಡಿಕೊಂಡು ಇಂತಹ ಪದಗಳನ್ನು ಎರಡೆರಡುಸಲ ಬಳಸಿದಾಗ ಅದರ ಅರ್ಥವನ್ನು ಒಂದೇ ಉದ್ದೇಶವನ್ನು ಮನದಟ್ಟು ಮಾಡಲು ಇಲ್ಲವೇ ಬಲಪಡಿಸಲು ಹೇಳಲಾಗಿದೆ ಎಂದು ತಿಳಿದುಕೊಳ್ಳಬೇಕು. ನಿಮ್ಮ ಭಾಷೆಯಲ್ಲಿ ಇಂತಹ ಏಕಾರ್ಥ ಸಾದೃಶ್ಯ ಪದಗಳ ಬಳಕೆ ಇಲ್ಲದಿದ್ದರೆ ಕೆಳಗೆ ನೀಡಿರುವ ಭಾಷಾಂತರ ತಂತ್ರಗಳಲ್ಲಿ ಯಾವುದಾದರೂ ಒಂದನ್ನು ಬಳಸಿಕೊಳ್ಳಬಹುದು.

ಎರಡೂ ವಾಕ್ಯಭಾಗಗಳಲ್ಲಿ ಇರುವ ಉದ್ದೇಶವನ್ನು ಒಟ್ಟುಗೂಡಿಸಿ ಒಂದೇವಾಕ್ಯಮಾಡಿ.
ಇಲ್ಲಿರುವ ವಾಕ್ಯಭಾಗಗಳು ಜೊತೆಯಾಗಿ ಉಪಯೋಗಿಸಿಕೊಂಡಾಗ ಅದು ನಿಜವಾದುದು ಎಂದು ಕಂಡುಬಂದರೆ ಅದನ್ನು ಪ್ರತಿಪಾದಿಸುವಂತೆ "ನಿಜವಾಗಿ," "ಖಂಡಿತವಾಗಿ," ಎಂಬ ಪದಗಳನ್ನು ಬಳಸಬಹುದು.
ಅದೇರೀತಿ ವಾಕ್ಯಭಾಗಗಳಲ್ಲಿ ಜೊತೆಯಾಗಿ ಬಳಸಿದ ಉದ್ದೇಶಗಳನ್ನು ಬಲಪಡಿಸಲು, ದೃಢಪಡಿಸಲು, "ತುಂಬಾ," "ಸಂಪೂರ್ಣವಾಗಿ," ಅಥವಾ "ಎಲ್ಲಾ," ಎಂಬ ಪದಗಳನ್ನು ಬಳಸಬಹುದು.

ಭಾಷಾಂತರ ತಂತ್ರಗಳನ್ನು ಬಳಸಿದ ಬಗ್ಗೆ ಉದಾಹರಣೆಗಳು

ಎರಡೂ ವಾಕ್ಯಭಾಗಗಳಲ್ಲಿ ಇರುವ ಉದ್ದೇಶವನ್ನು ಒಂದುಗೂಡಿಸಬೇಕು

- **ಇದುವರೆಗೂ ನೀನು ನನ್ನನ್ನು ವಂಚಿಸಿದಿ ಮತ್ತು ನನಗೆ ಸುಳ್ಳು ಹೇಳಿದಿ.** (ನ್ಯಾಯಸ್ಥಾಪಕರು 16:13, ULB) – ದೆಲಿಲಾಳು ಒಂದೇ ಉದ್ದೇಶವನ್ನು ಎರಡು ಸಲ ಹೇಳುವ ಉದ್ದೇಶವೆಂದರೆ ತಾನು ಇದರಿಂದ ತುಂಬಾ ಬೇಸರಗೊಂಡಿದ್ದೇನೆ ಎಂಬುದನ್ನು ತಿಳಿಸಲು.
    - " ಇದುವರೆಗೂ ನೀನು ಸುಳ್ಳು ಹೇಳುವ ಮೂಲಕ ನನ್ನನ್ನು ವಂಚಿಸಿರುವೆ. "
- **ಯೆಹೋವನು ಮನುಷ್ಯನು ಮಾಡುವ ಎಲ್ಲವನ್ನೂ ನೋಡುತ್ತಾನೆ ಮತ್ತು ಅವನು ನಡೆಯುವ ಎಲ್ಲಾ ಮಾರ್ಗಗಳನ್ನು ಗಮನಿಸುತ್ತಾನೆ.** (ಜ್ಞಾನೋಕ್ತಿಗಳು 5:21 ULB) – ಇಲ್ಲಿ ಬಳಸಿರುವ ಪದ " ಅವನು ನಡೆಯುವ ಎಲ್ಲಾ ಮಾರ್ಗಗಳು " ಎಂಬುದು ಅವನು ಮಾಡುವ ಎಲ್ಲಾ ಕೆಲಸಗಳು ಎಂಬುದಕ್ಕೆ ರೂಪಕವಾಗಿ ಬರುತ್ತದೆ.
    - "ಮನುಷ್ಯನು ಮಾಡುವ ಕಾರ್ಯಗಳನ್ನು ಯೆಹೋವನು ಗಮನಿಸುತ್ತಾನೆ. "

- **ಯೆಹೋವನಿಗೆ ಆತನ ಪ್ರಜೆಗಳೊಂದಿಗೆ ವ್ಯಾಜ್ಯವಿದೆ ಮತ್ತು ಆತನು ಇಸ್ರಾಯೇಲಿನೊಂದಿಗೆ ವಾದಿಸುತ್ತಾನೆ.** (ಮೀಕ 6:2 ULB) - ಈ ಸಾದೃಶ್ಯತೆ ಯೆಹೋವನಿಗೆ ಒಂದು ಗುಂಪಿನ ಜನರ ಬಗ್ಗೆ ಇರುವ ಅಸಮಧಾನವನ್ನು ಸೂಚಿಸುತ್ತದೆ. ಇದು ಅಸ್ಪಷ್ಟವಾದ ಪದಗುಚ್ಛಗಳನ್ನು ಸೇರಿಸಿ ಹೇಳಬಹುದು.
  - " ಯೆಹೋವನಿಗೆ ಆತನ ಜನರೊಂದಿಗೆ, ಇಸ್ರಾಯೇಲರೊಂದಿಗೆ ವ್ಯಾಜ್ಯವಿದೆ.

ಇಲ್ಲಿರುವ ವಾಕ್ಯಭಾಗಗಳು ಜೊತೆಯಾಗಿ ಉಪಯೋಗಿಸಿಕೊಂಡಾಗ ಅದು ನಿಜವಾದುದು ಎಂದು ಕಂಡುಬಂದರೆ ಅದನ್ನು ಪ್ರತಿಪಾದಿಸುವಂತೆ "ನಿಜವಾಗಿ," "ಖಂಡಿತವಾಗಿ," ಎಂಬ ಪದಗಳನ್ನು ಬಳಸಬಹುದು.

- **ಯೆಹೋವನು ಮನುಷ್ಯನು ಮಾಡುವ ಎಲ್ಲವನ್ನೂ ನೋಡುತ್ತಾನೆ ಮತ್ತು ಅವನು ನಡೆಯುವ ಮಾರ್ಗವನ್ನು ಗಮನಿಸುತ್ತಾನೆ.** (ಜ್ಞಾನೋಕ್ತಿಗಳು 5:21 ULB)
  - " ಯೆಹೋವನು ಮನುಷ್ಯನು ಮಾಡುವ ಎಲ್ಲವನ್ನೂ ಖಂಡಿತವಾಗಿ ನೋಡುತ್ತಾನೆ. "

ಅದೇರೀತಿ ವಾಕ್ಯಭಾಗಗಳಲ್ಲಿ ಜೊತೆಯಾಗಿ ಬಳಸಿದ ಉದ್ದೇಶಗಳನ್ನು ಬಲಪಡಿಸಲು, ದೃಢಪಡಿಸಲು, " ತುಂಬಾ," " ಸಂಪೂರ್ಣವಾಗಿ," ಅಥವಾ "ಎಲ್ಲಾ," ಎಂಬ ಪದಗಳನ್ನು ಬಳಸಬಹುದು.

- **ನೀನು ನನ್ನನ್ನು ವಂಚಿಸಿರುವೆ ಮತ್ತು ನನಗೆ ಸುಳ್ಳುಹೇಳಿರುವೆ.** (ನ್ಯಾಯಸ್ಥಾಪಕರು 16:13 ULB)
  - " ನೀನು ಮಾಡಿದ್ದೇನೆಂದರೆ ನನಗೆ ಸುಳ್ಳುಹೇಳಿರುವುದು."
- **ಯೆಹೋವನು ಮನುಷ್ಯನು ಮಾಡುವ ಎಲ್ಲವನ್ನೂ ನೋಡುತ್ತಾನೆ ಮತ್ತು ಅವನು ನಡೆಯುವ ಮಾರ್ಗವನ್ನು ಗಮನಿಸುತ್ತಾನೆ.** (ಜ್ಞಾನೋಕ್ತಿಗಳು 5:21 ULB)
  - " ಯೆಹೋವನು ಖಂಡಿತವಾಗಿ ಮನುಷ್ಯನು ಮಾಡುವ ಎಲ್ಲವನ್ನೂ ನೋಡುತ್ತಾನೆ. "

"

ಮುಂದೆ ನೀವು ಕಲಿಯಲು ಶಿಫಾರಸು ಮಾಡುತ್ತೇವೆ:

ವ್ಯಕ್ತೀಕರಣ (UTA PDF)

ಹಿಂತಿರುಗಿ ಹೋಗಿ: ನೀತಿ, ನೀತಿಯುತ, ಅನೀತಿ, ಅನೀತಿಯುತ, ನೀತಿ, ನೀತಿಯುತ; ಬಲಗೈ; ಅತಿಕ್ರಮಣ, ಅತಿಕ್ರಮಣಗಳು, ಉಲ್ಲಂಘನೆ

ಸೌಮ್ಯೋಕ್ತಿಗಳು.

ವಿವರಣೆ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ಸೌಮ್ಯೋಕ್ತಿ ಎಂದರೇನು ?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಅಲಂಕಾರಗಳು. (UTA PDF)

ಸಾಹಿತ್ಯದಲ್ಲಿ ಕೆಲವೊಮ್ಮೆ ಅಹಿತಕರ ಘಟನೆಗಳು, ಗಲಿಬಿಲಿಗೊಳಿಸುವ ಮಾತುಗಳು ಸಂಕೋಚಕ್ಕೆ ಗುರಿಮಾಡುವ ಸಂಗತಿಗಳು, ಸಾಮಾಜಿಕವಾಗಿ ಸಮ್ಮತವಲ್ಲದ, ಎಲ್ಲರೆದುರಿಗೆ ಹೇಳಲಾರದಂಥ ಮಾತುಗಳಿದ್ದರೆ ಅವುಗಳನ್ನು ನಯವಾದ ಮಾತುಗಳಲ್ಲಿ ತಿಳಿಸುವುದನ್ನು ಸೌಮ್ಯೋಕ್ತಿಗಳೆಂದು ಕರೆಯುತ್ತೇವೆ. ಉದಾಹರನೆಗೆ ಸಾವಿನ ಬಗ್ಗೆ ಬಹಿರಂಗವಾಗಿ ಹೇಳದೆ ಅಥವಾ ಕೆಲಸಗಳ ಬಗ್ಗೆ ಹೇಳುವಾಗ ಉಪಯೋಗಿಸಬಹುದಾದ ನಯ ನುಡಿಗಳು.

> ... ಅವರು ಸೌಲನು ಮತ್ತು ಅವನ ಮೂವರು ಗಂಡುಮಕ್ಕಳು ಗಿಲ್ಬೋವಾ ಬೆಟ್ಟದ ಮೇಲೆ **ಬಿದ್ದಿರುವುದನ್ನು** ಕಂಡರು. (1 ನೇ ಪೂರ್ವಕಾಲ ವೃತ್ತಾಂತ 10:8 ULT)

ಸೌಲ ಮತ್ತು ಅವನ ಗಂಡುಮಕ್ಕಳು "ಸತ್ತುಹೋಗಿದ್ದರು" ಎಂಬುದು ಇದರ ಅರ್ಥ. ಇದೊಂದು ಸೌಮ್ಯೋಕ್ತಿ, ಏಕೆಂದರೆ ಇಲ್ಲಿ ಮುಖ್ಯ ವಿಷಯವೆಂದರೆ ಸೌಲ ಮತ್ತು ಅವನ ಮಕ್ಕಳ ಮರಣಹೊಂದಿರುವುದನ್ನು ಆದರೆ ಅಲ್ಲಿ ಅವರು ಬಿದ್ದಿದ್ದರು ಎಂದು ಹೇಳಲಾಗಿದೆ. ಕೆಲವೊಮ್ಮೆ ಜನರು ಸಾವಿನ ಬಗ್ಗೆ ನೇರವಾಗಿ ಮಾತನಾಡಲು ಹಿಂಜರಿಯುತ್ತಾರೆ. ಏಕೆಂದರೆ ಅದೊಂದು ಅಹಿತಕರವಾದ ಅನುಭವ.

ಕಾರಣವೇನಂದರೆ ಇದೊಂದು ಭಾಷಾಂತರ ಸಮಸ್ಯೆ

ಬೇರೆ ಬೇರೆ ಭಾಷೆಗಳಲ್ಲಿ ಬೇರೆಬೇರೆ ರೀತಿಯ ಸೌಮ್ಯೋಕ್ತಿಗಳನ್ನು ಬಳಸುತ್ತಾರೆ. ಮೂಲ ಭಾಷೆಯಲ್ಲಿರುವ ಸೌಮ್ಯೋಕ್ತಿಗಳಂತೆ ಭಾಷಾಂತರಿಸುವ ಭಾಷೆಯಲ್ಲಿ ಸೌಮ್ಯೋಕ್ತಿಗಳನ್ನು ಬಳಸಲು ಸಾಧ್ಯವಾಗದಿದ್ದರೆ, ಓದುಗರಿಗೆ ಸರಿಯಾದ ಅರ್ಥ ತಿಳಿಯದೆ ಹೋಗಬಹುದು. ಬರಹಗಾರರು ಬರೆದ ಕೇವಲ ಪದಶಃ ಅರ್ಥ ತಿಳಿಯಲು ಸಾಧ್ಯವಾಗುತ್ತದೆಯೇ ಹೊರತು ಅದರ ಒಳಾರ್ಥ ತಿಳಿಯದೆ ಹೋಗಬಹುದು.

ಸತ್ಯವೇದದಲ್ಲಿನ ಉದಾಹರಣೆಗಳು

> ... ಅಲ್ಲಿದ್ದ ಗುಹೆಯಿತ್ತು. ಸೌಲನು **ತನ್ನ ಪಾದಗಳನ್ನು ಮುಚ್ಚುವುದಕ್ಕಾಗಿ** ಗುಹೆಯೊಳಗೆ ಹೋದನು. (1 ಸಮುವೇಲ 24:3 ULT)

ಮೂಲ ಓದುಗರು ಸೌಲನು ಆ ಗುಹೆಯೊಳಗೆ ತನ್ನ ಶೌಚಕಾರ್ಯಕ್ಕಾಗಿ ಹೋದನು ಎಂದು ಅರ್ಥಮಾಡಿಕೊಂಡಿದ್ದರು. ಆದರೆ ಇದನ್ನು ಬರೆದ ಲೇಖಕನು ಓದುಗರಿಗೆ ಮುಜುಗರವನ್ನು ಉಂಟುಮಾಡುವುದನ್ನಾಗಲಿ ಅಥವಾ ಗಮನವನ್ನು ಹಾಳಮಾಡುವುದನ್ನಾಗಲಿ ತಪ್ಪಿಸುವುದಕ್ಕಾಗಿ, ಸೌಲನು ಗುಹೆಯೊಳಗೆ ಏನು ಮಾಡಿದನು ಅಥವಾ ಅವನು ಅಲ್ಲಿ ಏನು ಬಿಟ್ಟು ಬಂದನು ಎಂದು **ಅವನು ಅದನ್ನು ನಿರ್ದಿಷ್ಟವಾಗಿ ಹೇಳಲಿಲ್ಲ**.

> ಆದರೆ ಮರಿಯಳು ದೇವದೂತನಿಗೆ, “ಇದು ಹೇಗೆ ಸಾಧ್ಯ ನಾನು **ಪುರುಷನನ್ನು ಅರಿತವಳಲ್ಲವಲ್ಲಾ**?” ಎಂದು ಹೇಳಿದಳು. ಲೂಕ 1:34 ULT

ನಯವಾಗಿ ಹೇಳಲು, ಮರಿಯಳು ಸೌಮ್ಯೋಕ್ತಿಯನ್ನು ಬಳಸಿ, ಆಕೆ ಇದುವರೆಗೂ ಯಾವ ಪುರುಷನ ದೈಹಿಕ ಸಂಪರ್ಕ ಮಾಡಿಲ್ಲ ಎಂದು ಹೇಳಿದಳು.

ಭಾಷಾಂತರದ ಕಾರ್ಯತಂತ್ರಗಳು

ಸೌಮ್ಯೋಕ್ತಿಗಳು ನಿಮ್ಮ ಭಾಷೆಯಲ್ಲಿ ಸಹಜವಾದ ಮತ್ತು ಸರಿಯಾದ ಅರ್ಥವನ್ನು ಕೊಡುವುದಾದರೆ ಅವುಗಳನ್ನೇ ಬಳಸಿರಿ. ಇಲ್ಲದಿದ್ದರೆ ಇಲ್ಲಿ ಕೊಟ್ಟಿರುವ ಕೆಲವು ಅಂಶಗಳನ್ನು ಗಮನಿಸಿರಿ:

(1) ನಿಮ್ಮ ಸಂಸ್ಕೃತಿಯಲ್ಲಿರುವ ಸೌಮ್ಯೋಕ್ತಿಯನ್ನು ಬಳಸಿರಿ.

(2) ಸೌಮ್ಯೋಕ್ತಿಯು ಅವಮಾನಕರವಾಗಿದೆ ಎಂದು ಅನ್ನಿಸುವುದಾದರೆ, ಅದರಲ್ಲಿರುವ ಮಾಹಿತಿಯನ್ನು ಸೌಮ್ಯೋಕ್ತಿಯನ್ನು ಬಳಸದೆ ಸರಳವಾಗಿ ಹೇಳಬಹುದು.

ಭಾಷಾಂತರದ ಕಾರ್ಯತಂತ್ರಗಳನ್ನು ಅನ್ವಯಿಸಿಯಿರುವ ಉದಾಹರಣೆಗಳು

(1) ನಿಮ್ಮ ಸಂಸ್ಕೃತಿಯಲ್ಲಿರುವ ಸೌಮ್ಯೋಕ್ತಿಯನ್ನು ಬಳಸಿರಿ.

> ... ಅಲ್ಲಿ ಗುಹೆಯಿತ್ತು. ಸೌಲನು **ತನ್ನ ಪಾದಗಳನ್ನು ಮುಚ್ಚುವುದಕ್ಕಾಗಿ** ಗುಹೆಯೊಳಗೆ ಹೋದನು. (1 ಸಮುವೇಲ 24:3 ULT) — ಕೆಲವು ಭಾಷೆಗಳಲ್ಲಿ ಹೀಗೆ ಸೌಮ್ಯೋಕ್ತಿಯನ್ನು ಬಳಬಹುದು:

> > "...ಅಲ್ಲಿ ಗುಹೆಯಿತ್ತು. ಸೌಲನು ಗುಹೆಯೊಳಗೆ ಹೋಗಿ **ಅಲ್ಲಿ ಒಂದು ಗುಂಡಿಯನ್ನು ತೋಡಿದನು**"
>
> > "...ಅಲ್ಲಿ ಗುಹೆಯಿತ್ತು. ಸೌಲನು ಗುಹೆಯೊಳಗೆ ಹೋದನು **ಅಲ್ಲಿ ಸ್ವಲ್ಪ ಸಮಯ ಏಕಾಂತವಾಗಿದ್ದನು**"
>
> ಆದರೆ ಮರಿಯಳು ದೇವದೂತನಿಗೆ, "ಇದು ಹೇಗೆ ಸಾಧ್ಯ ನಾನು **ಪುರುಷನನ್ನು ಅರಿತವಳಲ್ಲವಲ್ಲಾ**?" ಎಂದು ಹೇಳಿದಳು. ಲೂಕ 1:34 ULT
>
> > ಆದರೆ ಮರಿಯಳು ದೇವದೂತನಿಗೆ, " ಇದು ಹೇಗೆ ನಡೆಯಲು ಸಾಧ್ಯ?, **ನಾನು ಪುರುಷನೊಂದಿಗೆ ಮಲಗಿಲ್ಲವಲ್ಲಾ**?" ಅಂದಳು.

(2) ಸೌಮ್ಯೋಕ್ತಿಯು ಅವಮಾನಕರವಾಗಿದೆ ಎಂದು ಅನ್ನಿಸುವುದಾದರೆ, ಅದರಲ್ಲಿರುವ ಮಾಹಿತಿಯನ್ನು ಸೌಮ್ಯೋಕ್ತಿಯನ್ನು ಬಳಸದೆ ಸರಳವಾಗಿ ಹೇಳಬಹುದು.

> ಅವರು ಸೌಲನು ಮತ್ತು ಅವನ ಗಂಡು ಮಕ್ಕಳು ಗಿಲ್ಬೋವಾ ಬೆಟ್ಟದ ಮೇಲೆ **ಬಿದ್ದಿರುವುದನ್ನು** ಕಂಡರು. (1 ನೇ ಪೂರ್ವಕಾಲವೃತ್ತಾಂತ 10:8 ULB)
>
> > "ಅವರು ಸೌಲನು ಮತ್ತು ಅವನ ಗಂಡು ಮಕ್ಕಳು ಗಿಲ್ಬೋವಾ ಬೆಟ್ಟದ ಮೇಲೆ **ಸತ್ತು ಬಿದ್ದಿರುವುದನ್ನು** ಕಂಡರು."

"

ಹಿಂತಿರುಗಿ ಹೋಗಿ: ವ್ಯಭಿಚಾರ, ಹಾದರ, ವ್ಯಭಿಚಾರಿ, ವ್ಯಭಿಚಾರಿಣಿ; ಶರೀರ; ನಡುವು (ಅಥವಾ ಸೊಂಟ); ಸೂಳೆ, ಸೂಳೆತನ ಮಾಡಿದೆ, ಸೂಳೆಯಾಗಿಸು, ವೇಶ್ಯೆ, ಹಾದರಗಿತ್ತಿ; ಬೀಜ, ವೀರ್ಯ; ಬಂಧಿಸು, ಬಂಧಿಸುವುದು, ಬಂಧಿಸಲಾಗಿದೆ, ಸ್ವಾಧೀನ; ಸಂಬಂಧಗಳನ್ನು ಹೊಂದಿರುವುದು, ಪ್ರೀತಿ ಮಾಡುವುದು, ಇನ್ನೊಬ್ಬರೊಂದಿಗೆ ಮಲಗುವುದು, ಮಲಗಿಸುವುದು, ಇನ್ನೊಬ್ಬರೊಂದಿಗೆ ಮಲಗಿದೆ, ಇನ್ನೊಬ್ಬರೊಂದಿಗೆ ಮಲಗುತ್ತಾಯಿರುವುದು; ಕನ್ನಿಕೆ, ಕನ್ನಿಕೆಗಳು, ಕನ್ಯತ್ವ; ಗರ್ಭ, ಗರ್ಭಗಳು

ಹೆಸರುಗಳನ್ನು ಹೇಗೆ ಭಾಷಾಂತರಿಸುವುದು

ವಿವರಣೆ

ಈ ಪುಟವು ಪ್ರಶ್ನೆಗೆ ಉತ್ತರಿಸುತ್ತದೆ: ನನ್ನ ಸಂಸ್ಕೃತಿಗೆ ಹೊಸದಾಗಿರುವ ಹೆಸರುಗಳನ್ನು ನಾನು ಹೇಗೆ ಭಾಷಾಂತರಿಸಹುದು?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು, ಅದು ಓದುವುದು ಒಳ್ಳೆಯದು:

ಪರಿಚಯವಿಲ್ಲದ ವಿಷಯಗಳನ್ನು ಅನುವಾದಿಸುವುದು / ಭಾಷಾಂತರಿಸುವುದು. (UTA PDF)

ಸತ್ಯವೇದದಲ್ಲಿ ಅನೇಕ ಜನರ ಹೆಸರುಗಳಿವೆ, ಅನೇಕ ಜನಾಂಗಗಳ ಮತ್ತು ಸ್ಥಳಗಳ ಹೆಸರುಗಳಿವೆ. ಇವುಗಳಲ್ಲಿ ಕೆಲವು ಹೆಸರುಗಳು ವಿಚಿತ್ರವೆನ್ನಿಸಬಹುದು ಮತ್ತು ಹೇಳಲು ಕಷ್ಟವಾಗಬಹುದು. ಕೆಲವೊಮ್ಮೆ ಓದುಗರಿಗೆ ಹೆಸರುಗಳು ಏನನ್ನು ಸೂಚಿಸುತ್ತವೆ ಎಂದು ತಿಳಿಯದಿರಬಹುದು ಮತ್ತು ಕೆಲವೊಮ್ಮೆ ಹೆಸರುಗಳ ಅರ್ಥವೇನೆಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತೆ. ಈ ಪುಟವು ಅಂತಹ ಕೆಲವು ಹೆಸರುಗಳನ್ನು ಹೇಗೆ ಭಾಷಾಂತರಿಸಬಹುದು ಮತ್ತು ಜನರು ಸುಲಭವಾಗಿ ಅರ್ಥಮಾಡಿಕೊಳ್ಳುವಂತೆ ಹೇಗೆ ಭಾಷಾಂತರಿಸಬಹುದು ಎಂಬುದನ್ನು ತಿಳಿಯಲು ಸಹಾಯಕವಾಗಿರುತ್ತದೆ.

ಹೆಸರುಗಳ ಅರ್ಥ

ಸತ್ಯವೇದದಲ್ಲಿರುವ ಬಹುತೇಕ ಎಲ್ಲಾ ಹೆಸರುಗಳಿಗೆ ಅರ್ಥವಿದೆ. ಹೆಚ್ಚಿನ ಸಮಯದಲ್ಲಿ, ಸತ್ಯವೇದದಲ್ಲಿರುವ ಹೆಸರುಗಳು ಜನರನ್ನು ಮತ್ತು ಸ್ಥಳಗಳನ್ನು ಗುರುತಿಸುವುದಕ್ಕಾಗಿ ಬಳಸಿರುವಂಥವುಗಳಾಗಿವೆ. ಆದರೆ ಕೆಲವೊಮ್ಮೆ ಹೆಸರುಗಳ ಅರ್ಥಗಳು ವಿಶೇಷ ಪ್ರಾಮುಖ್ಯತೆಯನ್ನು ಹೊಂದಿರುತ್ತವೆ.

> ಈ **ಮೆಲ್ಕಿಜೆದೇಕನು** ಸಾಲೇಮಿನ ಅರಸನೂ ಮಹೋನ್ನತನಾದ ದೇವರ ಯಾಜಕನೂ ಆಗಿದ್ದನು. ಈತನು ರಾಜರನ್ನು ಸಂಹಾರ ಮಾಡಿ ಹಿಂದಿರುಗಿ ಬರುತ್ತಿದ್ದ ಅಬ್ರಹಾಮನನ್ನು ಎದುರುಗೊಂಡು ಅವನನ್ನು ಆಶೀರ್ವದಿಸಿದನು. (ಇಬ್ರಿಯ 7:1 ULT)

ಇಲ್ಲಿನ ಲೇಖಕನು "ಮೆಲ್ಕಿಜೇದೇಕ" ಎಂಬ ಹೆಸರನ್ನು ಬಳಸಿದ್ದಾನೆ. ಮೊದಲನೆಯದಾಗಿ ಇದು ಈ ಹೆಸರನ್ನು ಹೊಂದಿದ ಒಬ್ಬ ಮನುಷ್ಯ ಎಂಬುದನ್ನು ತೋರಿಸುತ್ತದೆ. "ಸಾಲೇಮಿನ ಅರಸ" ಎಂಬ ಪದ ಅವನು ಸಾಲೇಮ್ ಎಂಬ ಪಟ್ಟಣವನ್ನು ಆಳುತ್ತಿದ್ದನು ಎಂಬುದನ್ನು ಸೂಚಿಸುತ್ತದೆ.

> ಆತನ ಹೆಸರು "ಮೆಲ್ಕಿಜೆದೇಕ" ಇದರ ಅರ್ಥವೇನಂದರೆ "ನೀತಿಯ ರಾಜ" ಎಂದೂ ಮತ್ತು "ಸಾಲೇಮಿನ ರಾಜ" ಎಂದರೆ "ಸಮಾಧಾನದ ರಾಜ." (ಇಬ್ರಿಯ 7:2 ULT)

ಇಲ್ಲಿ ಲೇಖಕನು ಮೆಲ್ಕಿಜೇದೇಕನ ಬಿರುದು ಮತ್ತು ಹೆಸರಿನ ಅರ್ಥವನ್ನು ವಿವರಿಸುತ್ತಿದ್ದಾನೆ, ಏಕೆಂದರೆ ಆ ವಿಷಯಗಳು ಆ ವ್ಯಕ್ತಿಯ ಬಗ್ಗೆ ನಮಗೆ ಹೆಚ್ಚಿನ ವಿಷಯಗಳನ್ನು ತಿಳಿಸುತ್ತವೆ. ಕೆಲವೊಮ್ಮೆ ಲೇಖಕನು ಹೆಸರಿನ ಅರ್ಥವನ್ನು ವಿವರಿಸದೆ ಹೋಗಬಹುದು ಏಕೆಂದರೆ ಓದುಗರು ಈಗಾಗಲೇ ಅದರ ಅರ್ಥವನ್ನು ತಿಳಿದುಕೊಂಡಿರುತ್ತಾರೆ ಎಂದು ಭಾವಿಸಿರುತ್ತಾನೆ. ವಾಕ್ಯಭಾಗವನ್ನು ಅರ್ಥ ಮಾಡಿಕೊಳ್ಳಲು ಹೆಸರಿನ ಅರ್ಥ ಹೇಳುವುದು ಮುಖ್ಯವಾದರೆ ಅದನ್ನು ವಾಕ್ಯಭಾಗದಲ್ಲಿ ಸೇರಿಸಬಹುದು ಇಲ್ಲವೇ ಅಡಿಟಿಪ್ಪಣಿಯಲ್ಲಿ ಬರೆಯಬಹುದು.

ಕಾರಣವೇನಂದರೆ ಇದು ಭಾಷಾಂತರದ ಸಮಸ್ಯೆಯಾಗಿದೆ

- ಓದುಗರಿಗೆ ಸತ್ಯವೇದದಲ್ಲಿರುವ ಕೆಲವು ಹೆಸರುಗಳು ಗೊತ್ತಿರುವುದಿಲ್ಲ. ಕೆಲವೊಮ್ಮೆ ಈ ಹೆಸರುಗಳು ವ್ಯಕ್ತಿಯನ್ನು ಇಲ್ಲವೆ ಸ್ಥಳವನ್ನು ಅಥವಾ ಬೇರೆ ಏನನ್ನಾದರೂ ಸೂಚಿಸುತ್ತವೇಯೋ ಎಂದು ಅವರಿಗೆ ತಿಳಿದಿರುವುದಿಲ್ಲ
- ಓದುಗರು ವಾಕ್ಯಭಾಗವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಇದರಲ್ಲಿ ಬರುವ ಹೆಸರುಗಳ ಅರ್ಥ ತಿಳಿದುಕೊಳ್ಳುವ ಅವಶ್ಯಕತೆ ಇದೆ.
- ಕೆಲವು ಹೆಸರುಗಳ ಧ್ವನಿ ಉಚ್ಚಾರಣೆಯಲ್ಲಿ ಅಥವಾ ಧ್ವನಿ ಉಚ್ಚಾರಣೆಯ ಸಂಯೋಜನೆಯಲ್ಲಿ ವಿಭಿನ್ನತೆ ಇರಬಹುದು. ಇವುಗಳನ್ನು ಕೆಲವೊಮ್ಮೆ ನಿಮ್ಮ ಭಾಷೆಯಲ್ಲಿ ಅಸಹಜವಾಗಿ, ಅಪ್ರಿಯವಾಗಿ ಕಂಡುಬರಬಹುದು. ಈ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು ಎಂಬುದಕ್ಕೆ ಅಳವಡಿಸಿಕೊಳ್ಳಬಹುದಾದ ಕಾರ್ಯತಂತ್ರಗಳಿಗಾಗಿ ನೋಡಿರಿ ಪದಗಳನ್ನು ತೆಗೆದುಕೊಳ್ಳಿರಿ.
- ಕೆಲವು ವ್ಯಕ್ತಿಗಳಿಗೆ ಮತ್ತು ಸ್ಥಳಗಳಿಗೆ ಎರಡೆರಡು ಹೆಸರುಗಳು ಸತ್ಯವೇದದಲ್ಲಿದೆ. ಕೆಲವೊಮ್ಮೆ ಓದುಗರು ಎರಡು ಹೆಸರುಗಳು ಒಬ್ಬನೇ ವ್ಯಕ್ತಿ ಅಥವಾ ಒಂದೇ ಸ್ಥಳವನ್ನು ಕುರಿತು ಹೇಳಿದೆ ಎಂದು ತಿಳಿದುಕೊಳ್ಳಲಾರರು.

ಸತ್ಯವೇದದಲ್ಲಿನ ಉದಾಹರಣೆಗಳು

> ನೀವು **ಯೋರ್ದಾನನನ್ನು** ದಾಟಿ **ಯೆರಿಕೋವಿಗೆ** ಹೋಗಿದ್ದೀರಿ. ಆಗ ಯೆರಿಕೋವಿನ ನಾಯಕರು **ಅಮೋರಿಯರ** ಜೊತೆ ಸೇರಿ ನಿಮ್ಮ ವಿರುದ್ಧ ಯುದ್ಧ ಮಾಡಿದರು. (ಯೆಹೋಶುವ 24:11 ULT)

ಓದುಗರಿಗೆ "ಯೋರ್ದಾನ್ " ಎಂಬುದು ಒಂದು ನದಿಯ ಹೆಸರು, "ಯೆರಿಕೋ" ಎಂಬುದು ಒಂದು ಪಟ್ಟಣದ ಹೆಸರು, "ಅಮೋರಿಯರು" ಎಂಬುದು ಒಂದು ಜನಾಂಗದ ಹೆಸರು ಎಂದು ತಿಳಿದಿರುವುದಿಲ್ಲ.

> ..."ಆತನು ನನ್ನನ್ನು ನೋಡಿದ ನಂತರವೂ ನಾನು ನಿಜವಾಗಿಯೂ ನಿರಂತರವಾಗಿ ನೋಡುತ್ತಿದ್ದೇನಲ್ಲಾ?" ಎಂದು ಅವಳು ಹೇಳಿದಳು. ಆದುದರಿಂದ ಆ ಬಾವಿಯನ್ನು **ಬೀರ್‌ಲಹೈರೋಯಿ** ಎಂದು ಕರೆಯುತ್ತಾರೆ; (ಆದಿಕಾಂಡ 16:13-14 ULT)

ಓದುಗರು "ಬೀರ್‌ಲಹೈರೋಯಿ" ಎಂದರೆ "ನನ್ನನ್ನು ನೋಡುವ ಜೀವಸ್ವರೂಪನಾದ ಬಾವಿ" ಎಂದು ಅರ್ಥವೆಂದು ತಿಳಿದುಕೊಳ್ಳದಿದ್ದರೆ ಎರಡನೇ ವಾಕ್ಯದ ಅರ್ಥವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ.

> "ನಾನು ಅವನನ್ನು ನೀರಿನಿಂದ ಸೆಳೆದುಕೊಂಡಿದ್ದರಿಂದ" ಅವನಿಗೆ **ಮೋಶೆ** ಎಂದು ಹೆಸರಿಟ್ಟೆನು ಎಂದಳು. (ವಿಮೋಚನಾಕಾಂಡ 2:11 ULT)

ಓದುಗರಿಗೆ ಹಿಬ್ರು ಭಾಷೆಯಲ್ಲಿ ಮೋಶೆ ಎಂಬ ಹೆಸರಿಗೆ "ಹೊರಗೆ ಎಳೆ" ಎಂದು ಅರ್ಥವುಂಟು ಎಂದು ತಿಳಿಯದಿದ್ದರೆ ಅವಳು ಏಕೆ ಇದನ್ನು ಹೇಳಿದಳು ಎಂದು ಅವರಿಗೆ ಅರ್ಥವಾಗುವುದಿಲ್ಲ.

> **ಸೌಲನು** ಅವನ ಮರಣಕ್ಕೆ ಸಮ್ಮತಿ ನೀಡುವವನಾಗಿದ್ದನು (ಅಪೊಸ್ತಲರ ಕೃತ್ಯಗಳು 8:1 ULT)

> ಇಕೋನ್ಯದಲ್ಲಿ **ಪೌಲನು** ಮತ್ತು ಬಾರ್ನಬನು ಯೆಹೂದ್ಯರ ಸಭಾಮಂದಿರದೊಳಗೆ ಪ್ರವೇಶಿಸಿದರು (ಅಪೊಸ್ತಲರ ಕೃತ್ಯಗಳು 14:1 ULT)

ಓದುಗರಿಗೆ ಸೌಲ ಮತ್ತು ಪೌಲ ಎರಡೂ ಒಬ್ಬನೇ ವ್ಯಕ್ತಿಯ ಹೆಸರು ಎಂದು ತಿಳಿಯದೇ ಇರಬಹುದು.

ಭಾಷಾಂತರದ ಕಾರ್ಯತಂತ್ರಗಳು

ಓದುಗರಿಗೆ ಸಂದರ್ಭದಿಂದ ಹೆಸರು ಏನನ್ನು ಸೂಚಿಸುತ್ತಿದ್ದೆ ಎಂದು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ, ಅದನ್ನು ಸ್ಪಷ್ಟಗೊಳಿಸಲು ನೀವು ಅದಕ್ಕೆ ಪದವನ್ನು ಸೇರಿಸಬಹುದು.
ಹೆಸರಿನ ಬಗ್ಗೆ ಏನನ್ನು ಹೇಳಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಓದುಗರು ಅದರ ಅರ್ಥವನ್ನು ಅರ್ಥಮಾಡಿಕೊಳ್ಳಬೇಕಾದರೆ, ಹೆಸರನ್ನು ನಕಲಿಮಾಡಿ ಮತ್ತು ಅದರ ಅರ್ಥವನ್ನು ವಾಕ್ಯಭಾಗದಲ್ಲಿ ತಿಳಿಸಬಹುದು ಇಲ್ಲವೇ ಅಡಿ ಟಿಪ್ಪಣಿಯಲ್ಲಿ ಅದನ್ನು ವಿವರಿಸಬಹುದು.
ಅಥವಾ ಹೆಸರಿನ ಬಗ್ಗೆ ಏನನ್ನು ಹೇಳಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಓದುಗರು ಅದರ ಅರ್ಥವನ್ನು ಅರ್ಥಮಾಡಿಕೊಳ್ಳಬೇಕಾದರೆ ಮತ್ತು ಆ ಹೆಸರು ಒಂದೇ ಒಂದು ಸಾರಿ ಉಪಯೋಗಿಸಲಾಗಿದ್ದರೆ, ಹೆಸರನ್ನು ಪ್ರತಿ ಮಾಡುವ ಬದಲು ಹೆಸರಿನ ಅರ್ಥವನ್ನು ಭಾಷಾಂತರ ಮಾಡಬೇಕು.
ಒಬ್ಬ ವ್ಯಕ್ತಿಗೆ ಅಥವಾ ಒಂದು ಸ್ಥಳಕ್ಕೆ ಎರಡು ವಿಭಿನ್ನ ಹೆಸರು ಇದ್ದರೆ ಒಂದು ಹೆಸರನ್ನು ಎಲ್ಲಾ ಸಮಯದಲ್ಲಿ ಬಳಸಿರಿ, ಮತ್ತು ಒಂದಕ್ಕಿಂತ ಹೆಚ್ಚು ಹೆಸರಿರುವ ವ್ಯಕ್ತಿ ಅಥವಾ ಸ್ಥಳದ ಬಗ್ಗೆ ವಾಕ್ಯಭಾಗವು ತಿಳಿಸುವಾಗ ಅಥವಾ ಒಬ್ಬ ವ್ಯಕ್ತಿಗೆ ಅಥವಾ ಸ್ಥಳಕ್ಕೆ ಈ ಹೆಸರನ್ನು ಏಕೆ ನೀಡಲಾಯಿತು ಎಂದು ತಿಳಿಸುವಾಗ ಮಾತ್ರ ಇನ್ನೊಂದು ಹೆಸರನ್ನು ಬಳಸಿರಿ. ಮೂಲ ವಾಕ್ಯಭಾಗದಲ್ಲಿ ಈ ಹೆಸರುಗಳನ್ನು ಅಷ್ಟೇನು ಹೆಚ್ಚು ಸಲ ಬಳಸದಿದ್ದರೆ ಅಡಿ ಟಿಪ್ಪಣಿಯಲ್ಲಿ ಈ ಬಗ್ಗೆ ನಮೂದಿಸಿರಿ.
ಅಥವಾ ಒಬ್ಬ ವ್ಯಕ್ತಿ ಅಥವಾ ಒಂದು ಸ್ಥಳಕ್ಕೆ ಎರಡು ವಿಭಿನ್ನ ಹೆಸರುಗಳಿದ್ದರೆ ಮೂಲ ವಾಕ್ಯಭಾಗದಲ್ಲಿರುವ ಹೆಸರನ್ನು ಬಳಸಿಕೊಳ್ಳಿರಿ ಮತ್ತು ಇನ್ನೊಂದು ಹೆಸರಿನ ಬಗ್ಗೆ ಅಡಿ ಟಿಪ್ಪಣಿಯಲ್ಲಿ ವಿವರಿಸಿ ಬರೆದಿಡಿ.

ಭಾಷಾಂತರದ ಕಾರ್ಯತಂತ್ರಗಳನ್ನು ಅನ್ವಯಿಸಲಾಗಿರುವ ಉದಾಹರಣೆಗಳು

(1) ಓದುಗರಿಗೆ ಸಂದರ್ಭದಿಂದ ಹೆಸರು ಏನನ್ನು ಸೂಚಿಸುತ್ತಿದ್ದೆ ಎಂದು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ, ಅದನ್ನು ಸ್ಪಷ್ಟಗೊಳಿಸಲು ನೀವು ಅದಕ್ಕೆ ಪದವನ್ನು ಸೇರಿಸಬಹುದು.

> ನೀವು **ಯೋರ್ದಾನನನ್ನು** ದಾಟಿ **ಯೆರಿಕೋವಿಗೆ** ಹೋಗಿದ್ದೀರಿ. ಆಗ ಯೆರಿಕೋವಿನ ನಾಯಕರು **ಅಮೋರಿಯರ** ಜೊತೆ ಸೇರಿ ನಿಮ್ಮ ವಿರುದ್ಧ ಯುದ್ಧ ಮಾಡಿದರು. (ಯೆಹೋಶುವ 24:11 ULT)
>
> > ನೀವು **ಯೋರ್ದಾನ್ ನದಿಯನ್ನು** ದಾಟಿ **ಯೆರಿಕೋ ಪಟ್ಟಣಕ್ಕೆ** ಹೋಗಿದ್ದೀರಿ. ಆಗ ಯೆರಿಕೋವಿನ ನಾಯಕರು **ಅಮೋರಿಯರೆಂಬ ಎಂಬ ಕುಲದವರ** ಜೊತೆ ಸೇರಿ ನಿಮ್ಮ ವಿರುದ್ಧ ಯುದ್ಧ ಮಾಡಿದರು.
>
> ಸ್ವಲ್ಪ ಹೊತ್ತಿನ ನಂತರ ಕೆಲವು ಮಂದಿ ಫರಿಸಾಯರು ಯೇಸುವಿನ ಬಳಿ ಬಂದು ಆತನಿಗೆ, "ನೀನು ಇಲ್ಲಿಂದ ಹೊರಟು ಹೋಗು ಏಕೆಂದರೆ **ಹೆರೋದನು** ನಿನ್ನನ್ನು ಕೊಲ್ಲಬೇಕೆಂದಿದ್ದಾನೆ" ಎಂದು ಹೇಳಿದರು. (ಲೂಕ 13:31 ULT)
>
> > ಸ್ವಲ್ಪ ಹೊತ್ತಿನ ನಂತರ ಕೆಲವು ಮಂದಿ ಫರಿಸಾಯರು ಯೆಸುವಿನ ಬಳಿ ಬಂದು ಆತನಿಗೆ, "ನೀನು ಇಲ್ಲಿಂದ ಹೊರಟು ಹೋಗು ಏಕೆಂದರೆ **ರಾಜನಾದ ಹೆರೋದನು** ನಿನ್ನನ್ನು ಕೊಲ್ಲ ಬೇಕೆಂದಿದ್ದಾನೆ" ಎಂದು ಹೇಳಿದರು.

(2) ಹೆಸರಿನ ಬಗ್ಗೆ ಏನನ್ನು ಹೇಳಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಓದುಗರು ಅದರ ಅರ್ಥವನ್ನು ಅರ್ಥಮಾಡಿಕೊಳ್ಳಬೇಕಾದರೆ, ಹೆಸರನ್ನು ನಕಲಿಮಾಡಿ ಮತ್ತು ಅದರ ಅರ್ಥವನ್ನು ವಾಕ್ಯಭಾಗದಲ್ಲಿ ತಿಳಿಸಬಹುದು ಇಲ್ಲವೇ ಅಡಿ ಟಿಪ್ಪಣಿಯಲ್ಲಿ ಅದನ್ನು ವಿವರಿಸಬಹುದು.

> "ನಾನು ಅವನನ್ನು ನೀರಿನಿಂದ ಸೆಳೆದುಕೊಂಡಿದ್ದರಿಂದ" ಅವನಿಗೆ **ಮೋಶೆ** ಎಂದು ಹೆಸರಿಟ್ಟೆನು ಎಂದಳು. (ವಿಮೋಚನಾಕಾಂಡ 2:11 ULT)

> > ನಾನು ಅವನನ್ನು ನೀರಿನಿಂದ ಸೆಳೆದುಕೊಂಡಿದ್ದರಿಂದ" ಅವನಿಗೆ **ಮೋಶೆ (ಇದರ ಅರ್ಥ 'ಹೊರ ಎಳೆದ')** ಎಂದು ಹೆಸರಿಟ್ಟೆನು ಎಂದಳು.

(3) ಅಥವಾ ಹೆಸರಿನ ಬಗ್ಗೆ ಏನನ್ನು ಹೇಳಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಓದುಗರು ಅದರ ಅರ್ಥವನ್ನು ಅರ್ಥಮಾಡಿಕೊಳ್ಳಬೇಕಾದರೆ ಮತ್ತು ಆ ಹೆಸರು ಒಂದೇ ಒಂದು ಸಾರಿ ಉಪಯೋಗಿಸಲಾಗಿದ್ದರೆ, ಹೆಸರನ್ನು ಪ್ರತಿ ಮಾಡುವ ಬದಲು ಹೆಸರಿನ ಅರ್ಥವನ್ನು ಭಾಷಾಂತರ ಮಾಡಬೇಕು.

> ..."ಆತನು ನನ್ನನ್ನು ನೋಡಿದ ನಂತರವೂ ನಾನು ನಿಜವಾಗಿಯೂ ನಿರಂತರವಾಗಿ ನೋಡುತ್ತಿದ್ದೇನಲ್ಲಾ?" ಎಂದು ಅವಳು ಹೇಳಿದಳು. ಆದುದರಿಂದ ಆ ಬಾವಿಯನ್ನು **ಬೀರ್‌ಲಹೈರೋಯಿ** ಎಂದು ಕರೆಯುತ್ತಾರೆ; (ಆದಿಕಾಂಡ 16:13-14 ULT)

> > ..."ಆತನು ನನ್ನನ್ನು ನೋಡಿದ ನಂತರವೂ ನಾನು ನಿಜವಾಗಿಯೂ ನಿರಂತರವಾಗಿ ನೋಡುತ್ತಿದ್ದೇನಲ್ಲಾ?" ಎಂದು ಅವಳು ಹೇಳಿದಳು. ಆದುದರಿಂದ ಆ ಬಾವಿಯನ್ನು **ನನ್ನನ್ನು ನೋಡುವ ಜೀವಸ್ವರೂಪನ ಬಾವಿ** ಎಂದು ಕರೆಯುತ್ತಾರೆ.

(4) ಒಬ್ಬ ವ್ಯಕ್ತಿಗೆ ಅಥವಾ ಒಂದು ಸ್ಥಳಕ್ಕೆ ಎರಡು ವಿಭಿನ್ನ ಹೆಸರು ಇದ್ದರೆ ಒಂದು ಹೆಸರನ್ನು ಎಲ್ಲಾ ಸಮಯದಲ್ಲಿ ಬಳಸಿರಿ, ಮತ್ತು ಒಂದಕ್ಕಿಂತ ಹೆಚ್ಚು ಹೆಸರಿರುವ ವ್ಯಕ್ತಿ ಅಥವಾ ಸ್ಥಳದ ಬಗ್ಗೆ ವಾಕ್ಯಭಾಗವು ತಿಳಿಸುವಾಗ ಅಥವಾ ಒಬ್ಬ ವ್ಯಕ್ತಿಗೆ ಅಥವಾ ಸ್ಥಳಕ್ಕೆ ಈ ಹೆಸರನ್ನು ಏಕೆ ನೀಡಲಾಯಿತು ಎಂದು ತಿಳಿಸುವಾಗ ಮಾತ್ರ ಇನ್ನೊಂದು ಹೆಸರನ್ನು ಬಳಸಿರಿ. ಮೂಲ ವಾಕ್ಯಭಾಗದಲ್ಲಿ ಈ ಹೆಸರುಗಳನ್ನು ಅಷ್ಟೇನು ಹೆಚ್ಚು ಸಲ ಬಳಸದಿದ್ದರೆ ಅಡಿ ಟಿಪ್ಪಣಿಯಲ್ಲಿ ಈ ಬಗ್ಗೆ ನಮೂದಿಸಿರಿ. ಉದಾಹರಣೆಗೆ ಪೌಲನನ್ನು "ಸೌಲ" ಎಂದು ಆ.ಕೃ. 13ನೇ ಅಧ್ಯಾಯದವರೆಗೆ ಕರೆದು 13ನೇ ಅಧ್ಯಾಯದ ನಂತರ ಪೌಲ ಎಂದು ಕರೆಯಲಾಗಿದೆ. ನೀವು ಭಾಷಾಂತರಿಸುವಾಗ ಅವನ ಹೆಸರನ್ನು ಪೌಲನೆಂದೇ ಎಲ್ಲಾ ಸಮಯದಲ್ಲೂ ಬಳಸಬಹುದು ಆದರೆ ಆ.ಕೃ 13:9 ರಲ್ಲಿ ಅವನಿಗೆ ಎರಡು ಹೆಸರುಗಳಿವೆ ಎಂದು ಹೇಳುವಾಗ ಮಾತ್ರ ಎರಡು ಹೆಸರುಗಳನ್ನು ಬಳಸಿರಿ.

> ...**ಸೌಲ** ಎಂಬ ಹೆಸರುಳ್ಳ ಒಬ್ಬ ಯೌವನಸ್ಥನು (ಅಪೊಸ್ತಲರ ಕೃತ್ಯಗಳು 7:58 ULT)

> > ...**ಪೌಲ** ಎಂಬ ಹೆಸರುಳ್ಳ ಒಬ್ಬ ಯೌವನಸ್ಥನು

ಅಡಿಟಿಪ್ಪಣಿಯಲ್ಲಿ ಈ ರೀತಿ ಕಂಡುಬರಬಹುದು:

> > [1] ಇಲ್ಲಿ ಅನೇಕ ಪ್ರತಿಗಳಲ್ಲಿ ಸೌಲ ಎಂದು ಇದೆ. ಆದರೆ ಅನೇಕ ಸಮಯದಲ್ಲಿ ಸತ್ಯವೇದದಲ್ಲಿ ಅವನನ್ನು ಪೌಲನೆಂದು ಕರೆಯಲಾಗಿದೆ.

> ಆದರೆ **ಪೌಲ** ಎಂದು ಕರೆಯಲ್ಪಡುವ **ಸೌಲನು** ಪವಿತ್ರಾತ್ಮಭರಿತನಾದನು, (ಅಪೊಸ್ತಲರ ಕೃತ್ಯಗಳು 13:9)

> > ಆದರೆ **ಪೌಲ** ಎಂದು ಕರೆಯಲ್ಪಡುವ **ಸೌಲನು** ಪವಿತ್ರಾತ್ಮಭರಿತನಾದನು,

(5) ಅಥವಾ ಒಬ್ಬ ವ್ಯಕ್ತಿ ಅಥವಾ ಒಂದು ಸ್ಥಳಕ್ಕೆ ಎರಡು ವಿಭಿನ್ನ ಹೆಸರುಗಳಿದ್ದರೆ ಮೂಲ ವಾಕ್ಯಭಾಗದಲ್ಲಿರುವ ಹೆಸರನ್ನು ಬಳಸಿಕೊಳ್ಳಿರಿ ಮತ್ತು ಇನ್ನೊಂದು ಹೆಸರಿನ ಬಗ್ಗೆ ಅಡಿ ಟಿಪ್ಪಣಿಯಲ್ಲಿ ವಿವರಿಸಿ ಬರೆದಿಡಿ.

> ...**ಸೌಲ** ಎಂಬ ಹೆಸರುಳ್ಳ ಒಬ್ಬ ಯೌವನಸ್ಥನು (ಅಪೊಸ್ತಲರ ಕೃತ್ಯಗಳು 7:58 ULT)

> > ...**ಪೌಲ** ಎಂಬ ಹೆಸರುಳ್ಳ ಒಬ್ಬ ಯೌವನಸ್ಥನು

ಅಡಿಟಿಪ್ಪಣಿಯಲ್ಲಿ ಈ ರೀತಿ ಕಂಡುಬರಬಹುದು:

> > [1] ಇದೇ ಮನುಷ್ಯನನ್ನು ಅಪೋಸ್ತಲರ ಕೃತ್ಯಗಳ 13 ನೇ ಅಧ್ಯಾಯ ಪ್ರಾರಂಭದಿಂದ ಪೌಲನೆಂದು ಕರೆಯಲಾಗಿದೆ.

ಅನಂತರದ ಕಥೆಯಲ್ಲಿ ನೀವು ರೀತಿ ಭಾಷಾಂತರಿಸಬಹುದು:

> ಆದರೆ **ಪೌಲ** ಎಂದು ಕರೆಯಲ್ಪಡುವ **ಸೌಲನು** ಪವಿತ್ರಾತ್ಮಭರಿತನಾದನು, (ಅಪೊಸ್ತಲರ ಕೃತ್ಯಗಳು 13:9)

> > ಆದರೆ **ಪೌಲ** ಎಂದು ಕರೆಯಲ್ಪಡುವ **ಸೌಲನು** ಪವಿತ್ರಾತ್ಮಭರಿತನಾದನು,

ಕಥೆಯಲ್ಲಿ ಹೆಸರು ಬದಲಾವಣೆ ಮಾಡಿರುವಂಥದ್ದನ್ನು ವಿವರಿಸಿದ ನಂತರ, ನೀವು ಈ ರೀತಿ ಭಾಷಾಂತರಿಸಬಹುದು.

> ಇಕೋನ್ಯದಲ್ಲಿ **ಪೌಲನು** ಮತ್ತು ಬಾರ್ನಬನು ಯೆಹೂದ್ಯರ ಸಭಾಮಂದಿರದೊಳಗೆ ಪ್ರವೇಶಿಸಿದರು (ಅಪೋಸ್ತಲರ ಕೃತ್ಯಗಳು 14:1 ULT)

> > ಇಕೋನ್ಯದಲ್ಲಿ **ಪೌಲನು** 1 ಮತ್ತು ಬಾರ್ನಬನು ಯೆಹೂದ್ಯರ ಸಭಾಮಂದಿರದೊಳಗೆ ಪ್ರವೇಶಿಸಿದರು

ಅಡಿಟಿಪ್ಪಣಿಯು ಈ ರೀತಿ ಕಂಡುಬರುತ್ತದೆ:

> [1] ಈ ಮನುಷ್ಯನನ್ನೇ ಅಪೊಸ್ತಲರ ಕೃತ್ಯಗಳ 13 ನೇ ಅಧ್ಯಾಯಕ್ಕಿಂತ ಮೊದಲು ಸೌಲನೆಂದು ಕರೆಯಲಾಗಿತ್ತು.

"

ಮುಂದೆ ನೀವು ಕಲಿಯಲು ಶಿಫಾರಸು ಮಾಡುತ್ತೇವೆ:

ನಕಲು ಮಾಡು ಅಥವಾ ಪದಗಳನ್ನು ಪಡೆದುಕೋ. (UTA PDF)

ಹಿಂತಿರುಗಿ ಹೋಗಿ: ಸರ್ವಶಕ್ತನು; ಕ್ರಿಸ್ತ, ಮೆಸ್ಸೀಯ; ವಿಶ್ವಾಸರಹಿತ, ವಿಶ್ವಾಸಘಾತುಕತೆ; ದೇವರು; ತಂದೆಯಾದ ದೇವರು, ಪರಲೋಕದ ತಂದೆ, ತಂದೆ; ಇಬ್ರಿ, ಇಬ್ರಿಯರು; ಯೇಸು, ಯೇಸು ಕ್ರಿಸ್ತ, ಕ್ರಿಸ್ತ ಯೇಸು; ಕರ್ತನಾದ ಯೆಹೋವ, ಯೆಹೋವ ದೇವರು; ನಾಜಿರ, ನಾಜಿರರು, ನಾಜಿರ ಪ್ರತಿಜ್ಞೆ; ಪಂಚಾಶತ್ತಮ, ವಾರಗಳ ಹಬ್ಬಗಳ; ಸೈತಾನ, ದೆವ್ವ, ದುಷ್ಟ; ದೇವರ ಮಗ, ಮಗ; ಯೆಹೋವ; ಆರೋನ; ಹೇಬೆಲ; ಅಬೀಯ; ಅಬೀಮೆಲೆಕ; ಅಬ್ನೇರ; ಅಬ್ರಹಾಮ, ಅಬ್ರಾಮ; ಅಬ್ಷಾಲೋಮ; ಆದಾಮ; ಅದೋನಿಯ; ಅಹಾಬ; ಅಹಷ್ವೇರೋಷ; ಆಹಾಜ; ಅಹಜ್ಯ; ಅಹೀಯ; ಆಯಿ; ಅಮಾಲೇಕ, ಅಮಾಲೇಕ್ಯ, ಅಮಾಲೇಕ್ಯರು; ಅಮಚ್ಯ; ಅಮ್ಮೋನ್, ಅಮ್ಮೋನಿಯ, ಅಮ್ಮೋನಿಯರು; ಆಮೋಸ; ಆಮೋಚ; ಅಂದ್ರೆಯ; ಅನ್ನ; ಅಂತಿಯೋಕ್ಯ; ಅಪೊಲ್ಲೋಸ; ಅಕ್ವಿಲ; ಆರಾಬಾ; ಅರಬ್ಬೀ, ಅರಬಿಯನು, ಅರಬ್ಬೀ ದೇಶದವರು; ಆರಾಮ್, ಅರಾಮ್ಯನು, ಅರಾಮ್ಯರು, ಅರಾಮ್ಯ ಲಿಪಿ (ಭಾಷೆ); ಅರಾರಟ್; ಅರ್ತಷಸ್ತ; ಆಸ; ಆಸಾಫ; ಅಷ್ಡೋದ್, ಅಜೋತ್; ಆಶೇರ್; ಅಷ್ಕೆಲೋನ್; ಆಸ್ಯ; ಅತಲ್ಯ; ಅಜರ್ಯ; ಬಾಳ್; ಬಾಷ; ಬಾಬೆಲ್; ಬಿಳಾಮ; ಬರಬ್ಬ; ಬಾರ್ನಬ; ಬಾರ್ತೊಲೊಮಾಯ; ಬಾರೂಕ; ಬಾಷಾನ್; ಬತ್ಷೆಬೆ; ಬೆಲ್ಟೆಬೂಲನು; ಬೇರ್ಷೆಬ; ಬೆನ್ಯಾಮೀನ, ಬೆನ್ಯಾಮೀನ್ಯರು; ಬೆರೋಯ; ಬೇಥಾನ್ಯ; ಬೇತೇಲ್; ಬೇತ್ ಷೆಮೆಷ್; ಬೆತೂವೇಲ್; ಬೋವಜ; ಕೈಸರ; ಕೈಸರ್ಯ, ಫಿಲಿಪ್ಪನ ಕೈಸರ್ಯ; ಕಾಯಫ; ಕಾಯಿನ; ಕಾಲೇಬ್; ಕಾನಾನ್, ಕಾನಾನ್ಯ, ಕಾನಾನ್ಯರು; ಕಪೆರ್ನೌಮ; ಕರ್ಮೆಲ್, ಕರ್ಮೆಲ್ ಪರ್ವತ; ಕಲ್ದೀಯ, ಕಲ್ದೀಯನು, ಕಲ್ದೀಯರು; ಕೆರೇತ್ಯರು; ಕಿಲಿಕ್ಯ; ದಾವೀದ ನಗರ; ಕೊಲೊಸ್ಸೆ, ಕೊಲೊಸ್ಸೆಯದವರು; ಕೊರಿಂಥ, ಕೊರಿಂಥದವರು; ಕೊರ್ನೇಲ್ಯ; ಕ್ರೇತ, ಕ್ರೇತ್ಯರು; ಕೂಷ್; ಕುಪ್ರ; ಕುರೇನೆ; ಕೋರೆಷನ್; ದಮಸ್ಕ; ದಾನ್; ದಾನಿಯೇಲ; ದಾರ್ಯಾವೇಷ; ದಾವೀದ; ದೆಲೀಲಾ; ಏದೆನ್, ಏದೆನ್ ಉದ್ಯಾನವನ; ಎದೋಮ್, ಎದೋಮಿ, ಎದೋಮಿಯರು, ಇಡುಮಿಯ; ಐಗುಪ್ತ, ಐಗುಪ್ತ್ಯನು; ಎಕ್ರೋನ್, ಎಕ್ರೋನಿಯರು; ಏಲಾಮ್, ಏಲಾಮೀಯರು; ಎಲ್ಲಾಜಾರ್; ಎಲ್ಯಾಕೀಮ್; ಎಲೀಯ; ಎಲೀಷ; ಎಲಿಸಬೇತಳು; ಹನೋಕ, ಎನೋಷ; ಎಫೆಸ, ಎಫೆಸದವನು; ಎಫ್ರಾಯೀಮನು, ಎಫ್ರಾಯೀಮ್ಯರು; ಎಫ್ರಾತ, ಎಫ್ರಾತದವನು, ಎಫ್ರಾತದವರು; ಏಸಾವ; ಎಸ್ತೇರಳು; ಇಥಿಯೋಪ್ಯ, ಇಥಿಯೋಪ್ಯದವನು; ಯೂಫ್ರೇಟೀಸ್ ನದಿ, ಮಹಾ ನದಿ; ಹವ್ವ; ಯೆಹೆಜ್ಕೇಲನು; ಎಜ್ರ; ಗಬ್ರಿಯೇಲ; ಗಾದ್; ಗಲಾತ್ಯ, ಗಲಾತ್ಯದವರು; ಗತೂರು, ಗತ್ ಊರಿನವನು, ಗತ್ ಊರಿನವರು; ಗಾಜಾ; ಗೆರಾರ್; ಗೆತ್ಸೇಮನೆ; ಗೆಬೆಯಾ; ಗಿದ್ಯೋನ; ಗಿಲ್ಯಾದ್, ಗಿಲ್ಯಾದ್ಯನು, ಗಿಲ್ಯಾದ್ಯರು; ಗಿಲ್ಗಾಲ್; ಗಿರ್ಗಾಷಿಯರು; ಗೊಲ್ಗೊಥಾ; ಗೊಲ್ಯಾತನು; ಗೊಮೋರ; ಗೋಷೆನ್; ಗ್ರೀಸ್, ಗ್ರೀಕರು; ಗ್ರೀಕ್, ಗ್ರೀಕನು ಗ್ರೀಕ್ ಪಂಡಿತ; ಹಬಕ್ಕೂಕ; ಹಾಗರಳು; ಹಗ್ಗಾಯ; ಹಾಮ್; ಹಮಾತ್, ಹಮಾತಿಯರು, ಲೆಬೋ ಹಮಾತ್; ಹಮೋರ; ಹನನ್ಯ; ಹನ್ನ; ಖರಾನ್; ಹೆಬ್ರೋನ್; ಹೆರೋದ, ಹೆರೋದ ಅಂತಿಪ; ಹೆರೋದ್ಯಳು; ಮಹಾ ಹೆರೋದ್; ಹಿಲ್ಕೀಯ; ಹಿವ್ವಿಯನು, ಹಿವ್ವಿಯರು; ಹೋಶೇಯ; ಹೋಶೇಯ; ದಾವೀದನ ಮನೆ; ಇಕೋನ್ಯ; ಇಸಾಕ; ಯೆಶಯಾ; ಇಷ್ಮಾಯೇಲ್, ಇಷ್ಮಾಯೇಲನು, ಇಷ್ಮಾಯೇಲರು; ಇಸ್ಕಾಕಾರ್; ಇಸ್ರಾಯೇಲ್, ಇಸ್ರಾಯೇಲನು, ಇಸ್ರಾಯೇಲ್ಯರು, ಯಾಕೋಬ; ಯಾಕೋಬ (ಯೇಸು ಸಹೋದರ); ಯಾಕೋಬ (ಅಲ್ಫಾಯ ಮಗ); ಯಾಕೋಬ (ಜೆಬೆದಾಯನ ಮಗ); ಯೆಫೆತ್; ಯೆಬೂಸ್, ಯೆಬೂಸಿ, ಯೆಬೂಸಿಯರು; ಯೆಹೋಯಾಖೀನ; ಯೆಹೋಯಾದ; ಯೆಹೋಯಾಕೀಮ; ಯೆಹೋರಾಮ, ಯೋರಾಮ; ಯೆಹೋಷಾಫಾಟ @; ಯೇಹು; ಯೆಫ್ತಾಹ; ಯೆರೆಮೀಯ; ಯಾರೊಬ್ಬಾಮ; ಇಷಯ; ಇತ್ರೋ, ರೆಗೂವೇಲ; ಈಜೆಬೆಲ್; ಯೋವಾಷ; ಯೋಬ; ಯೋವೇಲ; ಯೋಹಾನ ಮಾರ್ಕ; ಯೋಹಾನ (ಅಪೊಸ್ತಲನು); ಯೋಹಾನ (ಸ್ನಾನಿಕನು); ಯೋನ; ಯೋನಾತಾನ; ಯೊಪ್ಪ; ಯೋರಾಮ; ಯೋಸೇಫ (ಹೊಸ ಒಡಂಬಡಿಕೆ); ಯೋಸೇಫ (ಹಳೇ ಒಡಂಬಡಿಕೆ); ಯೆಹೋಶುವ; ಯೋಷೀಯ; ಯೂದಾ; ಇಸ್ಕರಿಯೋತ ಯೂದ; ಯಾಕೋಬನ ಮಗನಾದ ಯೂದ; ಯೂದಯ ಸೀಮೆ; ಕಾದೇಶ್, ಕಾದೇಶ್-ಬರ್ನೇಯ, ಕಾದೇಶಿನ ಮೆರೀಬಾ; ಕೇದಾರ್; ಕಾದೇಶ್; ಕಿದ್ರೋನ್ ಕಣಿವೆ; ಲಾಬಾನ; ಲೆಮೆಕ; ಲಾಜರನು; ಲೇಯಾ; ಲೆಬನೋನ್; ಲಿವ್ಯಾತಾನ್; ಲೋಟ; ಲೂಕ; ಲೂಸ್ತ್ರ; ಮಾಕಾ; ಮಕೆದೋನ್ಯ; ಸೃಷ್ಟಿಸುವಾತನು; ಮಲಾಕಿ; ಮನಸ್ಸೆ; ಮಾರ್ಥಳು; ಮರಿಯಳು, ಯೇಸುವಿನ ತಾಯಿ; ಮಗ್ದಲದ ಮರಿಯ; ಮರಿಯ (ಮಾರ್ಥಳ ಸಹೋದರಿ); ಮತ್ತಾಯ, ಲೇವಿ; ಮೇದ್ಯರು, ಮೇದ್ಯ; ಸಮುದ್ರ, ಮಹಾ ಸಮುದ್ರ, ಪಶ್ಚಿಮ ಸಮುದ್ರ, ಮೆಡಿಟರೇನಿಯನ್ ಸಮುದ್ರ; ಮೆಲ್ಕಿಚೆದೆಕ; ಮೋಫ್; ಮೇಶೆಕ್; ಮೆಸಪೋತಾಮ್ಯ, ಆರಾಮ್ ನಹರೆಮ್; ಮೀಕ; ಮೀಕಾಯೇಲ; ಮಿರ್ಯಾಮಳು; ಮೀಶಾಯೇಲ; ಮಿಚ್ಪೆ; ಮೋವಾಬ್, ಮೋವಾಬ್ಯನು, ಮೋವಾಬ್ಯರು; ಮೋಲೆಕ್; ಮೊರ್ದೆಕೈ; ಮೋಶೆ; ಹೆರ್ಮೋನ್ ಪರ್ವತ; ಎಣ್ಣೆಮರಗಳ ಪರ್ವತ; ನಾಮಾನ್; ನಾಹೋರ್; ನಹೂಮ; ನಫ್ತಾಲಿ; ನಾತಾನ್; ನೆಬುಕದ್ನೆಚರ; ದಕ್ಷಿಣ ಪ್ರಾಂತ್ಯ (ನೆಗೆವ್); ನೆಹೆಮೀಯ; ನೈಲ್ ನದಿ, ಐಗುಪ್ತ ನದಿ, ನೈಲ್; ನಿನೆವೆ, ನಿನೆವೆಯನು; ನೋಹ; ಓಬದ್ಯ; ಒಮ್ರಿ; ಪದ್ದನ್ ಅರಾಮ್; ಪಾರಾನ್; ಪೌಲ, ಸೌಲ; ಪೆಗೋರ್, ಪೆಗೋರ್ ಪರ್ವತ, ಬಾಳ್ ಪೆಗೋರ್; ಪೆರೆಜೀಯರು; ಪೇತ್ರ, ಸೀಮೋನ ಪೇತ್ರ, ಕೇಫ; ಫರೋಹ, ಐಗುಪ್ತ ಅರಸ; ಫಿಲಿಪ್ಪ, ಸುವಾರ್ತಿಕನು; ಫಿಲಿಪ್ಪ, ಅಪೊಸ್ತಲ; ಫಿಲಿಷ್ಟಿಯನರು; ಫಿನೇಹಾಸ; ಫೊಯಿನೀಕೆ; ಪಿಲಾತ; ಪೊಂತ; ಪೋಟೀಫರ; ಪ್ರಿಸ್ಕಿಲ್ಲ; ರಾಹೇಲ; ರಾಹಾಬಳು; ರಾಮಾ; ರಾಮೋತ್; ರೆಬೆಕ್ಕ; ರೆಹಬ್ಬಾಮ; ರೂಬೇನ್; ರಿಮ್ಮೋನ್; ರೂತಳು; ಲವಣ ಸಮುದ್ರ, ಮೃತ ಸಮುದ್ರ; ಸಂಸೋನ; ಸಮುವೇಲ; ಸಾರಳು, ಸಾರಯಳು; ಸೌಲ (ಹಳೇ ಒಡಂಬಡಿಕೆ); ಗಲಿಲಾಯ ಸಮುದ್ರ, ಕಿನ್ನೆರೆತ್ ಸಮುದ್ರ, ಗೆನೆಜರೇತ್ ಕೆರೆ, ತಿಬೇರಿಯ ಸಮುದ್ರ; ಸೆನ್ನೆರೀಬ; ಸೇಥ; ಶಾರೋನ್, ಶಾರೋನ್ ಬಯಲು; ಸೇಬ; ಶೇಮ್; ಶಿಲೋವ; ಶಿನಾರ್; ಸೀದೋನ್; ಸೀಲ, ಸಿಲ್ವಾನ; ಸಿಮೆಯೋನ್; ಮತಾಭಿಮಾನಿ ಎಂದು ಹೆಸರುಗೊಂಡ ಸೀಮೋನ; ಸೊಲೊಮೋನ; ಸ್ತೆಫನ್; ಸಿರಿಯಾ; ತಾಮಾರ; ತಾರ್ಷಿಷ್; ತಾರ್ಸ; ತೆರಹ; ಥೆಸ್ಸಲೋನಿಕ, ಥೆಸ್ಸಲೋನಿಕದವನು, ಥೆಸ್ಸಲೋನಿಕಾದವರು; ತೋಮ; ತಿಮೊಥೆ; ತಿರ್ಜಾ; ತೀತ; ತ್ರೋವ; ತೂಬಲ್; ತುಖಿಕ; ತೂರ್, ತೂರಿನವರು; ಊರ್; ಊರೀಯ; ಉಜ್ಜೀಯ, ಅಜರ್ಯ; ವಷ್ಟಿ; ಜಕ್ಕಾಯ; ಸದೋಕ; ಜೆಬೆದಾಯ; ಜೆಬುಲೋನ; ಜೆಕರ್ಯ (ಹೊಸ ಒಡಂಬಡಿಕೆ); ಜೆಕರ್ಯ (ಹಳೇ ಒಡಂಬಡಿಕೆ); ಚಿದ್ಕೀಯ; ಚೆಫನ್ಯ; ಜೆರುಬ್ಬಾಬೆಲ್; ಚೋಗರ; ಧೂಪವೇದಿ, ಧೂಪದ ವೇದಿಕೆ; ಒಪ್ಪಿಸು, ಒಪ್ಪಿಸಲಾಗಿದೆ, ನಿಯಮಿತ ಕಾರ್ಯಗಳು, ತಿರುಗಿ ಒಪ್ಪಿಸು; ಸಹಿಸು, ತಾಳಿಕೊಳ್ಳುವವನು, ಹೊತ್ತುಕೊ; ಆನೆಕಲ್ಲು, ಆನೆಕಲ್ಲುಗಳು, ಆಲಿಕಲ್ಲು, ಆಲಿಕಲ್ಲುಗಳು, ಆಲಿಕಲ್ಲಿನ ಮಳೆ; ಚಿರತೆ, ಚಿರತೆಗಳು; ಕುರಿದನಗಳು; ಮಿಡತೆ, ಮಿಡತೆಗಳು; ನೇರಳೆ ಬಣ್ಣ; ಜಂಡು, ಜಂಡುಗಳು; ಸರ್ಪ, ಸರ್ಪಗಳು, ಹಾವು, ಹಾವುಗಳು, ವಿಷಸರ್ಪ, ವಿಷಸರ್ಪಗಳು; ಹಿಮ, ಹಿಮ ಬಿದ್ದಿದೆ, ಹಿಮ ಬೀಳುತ್ತಿದೆ

ಕೊಡುಗೆದಾರರು

translationWords ಕೊಡುಗೆದಾರರು

Acsah Jacob
Antoney Raj
Cdr. Thomas Mathew
Dr. Bobby Chellapan
Hind Prakash
Jinu Jacob
M.V. Sunny
Shojo John
Vipin Bhadran
Zipson George

translationAcademy ಕೊಡುಗೆದಾರರು

Acash Jacob
Dr. Bobby Chllappan
Dr. Joseph Jekab
Hind Prakash
Jinu Jacob
Vipin Bhadran